REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಕ್ರಿ ೧೯೧೪ ನೇ ಇಸವಿ ಜನವರಿ ತಾರೀಖು ೧ ನೇ ಗುರುವಾರ. ಸಂಚಿಕೆ ೩೧

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು, ನಬಿಡವಾದ ನೀಲಚ್ಛಾಯೆಯಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ಬುರುಡೆಯನ್ನು ಶುದ್ಧಮಾಡುತ್ತೆ. ಹುಂಡಿನ ಹೊಟ್ಟನ್ನು ಅಣಗಿಸುತ್ತೆ. ಅತ್ಯುತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಯವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತರಬೇಕು.

3 ಸೀಸೆಗಳಿಗೆ ರೂ. 2-10-0. ಅಂಚೆಯ ವೆಚ್ಚ 0-7-0

ಮಾದರಿಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಸಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ದೊಡ್ಡವರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ತೈಲದ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ. ಮನ್ನಾರ್‌ಗುಡಿ ಡಿಸ್ಟ್ರಿಕ್ಟ್ ಸಿಕ್ರಟರಿ ಮ|| ಡಿ. ಸಾಲೊಮನ್ ರವರು ಬರೆಯುವದು—"ದಯಮಾಡಿ ಈ ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಇದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ನಮ್ಮ ಮನೆ ಹೆಂಗಸರು ಇದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ.—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ತೈಲ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಕೊಟ್ಟು ಕಿಫಾಯತುಕೊಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವುದು, ಸಂಧಿವಾತ, ಮಸ್ತಕಶೂಲೆ, ಹೆಚ್ಚಾಗಿ ಮಥನತ್ತುಪಟ್ಟದ್ದರಿಂದ ಕ್ಷೀಣವಾಗುವದು, ತಲೆನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲಿ 1ಕ್ಕೆ ಕ್ರಯ 0-8-0 ಟ.ಖ. ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ್.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ. ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಾರದು. ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಔಷಧಗಳನ್ನು ತೆಗೆದುಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನಲ್ಲಿ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0. 3 ಬಾಟ್ಲಿಗಳಿಗೆ ರೂ. 2-8-0 ಟ.ಖ. ಖರ್ಚು ಪ್ರತ್ಯೇಕ.

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ :— [8-51]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಬಿ. ಉಲಫ್ ಮಾರ್ಕ್, ಮಂಗಳೂರು.

ಅಮೃತಾಂಜನವನ್ನು

ಪಡಕೊಳ್ಳುವವರಿಗೆ ನಮ್ಮ ಸುಂದರವಾದ ೧೯೧೪ ನೇ ವರ್ಷದ ಕೆಲೆಂಡರ್ ಪುಗಸಟ್ಟೆಯಾಗಿ ರವಾನಿಸುವೆವು.

ಇತರರಿಗೆ 6 ಕ್ಕೆ 0-12-0; 12 ಕ್ಕೆ 1-8-0. ವಿ. ಪಿ. ಮಾಫಿ.

ವಾತ, ಸಂಧಿವಾತ, ಜಖಮು, ಘಾಯು, ಉರಿ, ತಲೆನೋವು, ತಲೆಶಿಡಿತ, ಹಲ್ಲುನೋವು, ಸೊಂಟದನೋವು, ಎದೆನೋವು ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದ. ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದಕ್ಕೆ 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಖರ್ಚು ಪ್ರತ್ಯೇಕ. ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು [42-45]

ವಿಳಾಸ :—ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.
೯ ಜಹಂಗೀರ್ ಸ್ಟ್ರೀಟ್ ಮದ್ರಾಸು.

ಆಂಗ್ಲಭಾಷಾ ಪ್ರವೇಶಿದಾಯಿನಿ.

೧ನೆ ಪುಸ್ತಕ ೨ನೆ ಪುಸ್ತಕ. ೩ನೆ ಪುಸ್ತಕ.

ಪ್ರಥಮಾಭ್ಯಾಸಿಗಳಿಗೆ ಪರಮೋಪಯೋಗಿ.	ಪ್ರೌಢಸಾರಪುಸ್ತಕ.	ಸರ್ವಜನೋಪಯೋಗಿ !
ಹನ್ನೊಂದು ಭಾಗಗಳು.	ಆರು ಭಾಗಗಳು.	ಮೂವತ್ತು ಭಾಗಗಳು.
ನಾಲ್ಕನೆಯ ಮುದ್ರಣ.	ನಾಲ್ಕನೆಯ ಮುದ್ರಣ.	ಅತ್ಯುಪಯೋಗ !!
ಕ್ರಯ ಒಂದು ರೂಪಾಯಿ ಮೂರಾಣೆ.	ಒಂದು ರೂಪಾಯಿ ಮೂರಾಣೆ.	ಒಂದು ರೂಪಾಯಿ ಮೂರಾಣೆ.

ಇವುಗಳನ್ನೋದುವುದರಿಂದ ಇಂಗ್ಲಿಷ್ ಭಾಷೆಯಲ್ಲಿ ಓದಿ ಬರೆದು ಮಾತಾಡುವುದನ್ನು ಬೋಧಕರ ಸಹಾಯವಿಲ್ಲದೆ ತಾವಾಗಿ ಕಲಿಯಬಹುದು. ಮೂರು ಪುಸ್ತಕಗಳನ್ನೂ ಒಂದೇ ಭಾಂಗಿಯಲ್ಲಿ ತರಿಸಿಕೊಳ್ಳುವರಿಗೆ ಬೇರೆ ವೆಚ್ಚವಿಲ್ಲದೆ ಮೂರು ರೂಪಾಯಿಗಳಿಗೆ ಕಳುಹಲ್ಪಡುವುದು. [6-1] ನಮ್ಮ ವಿಳಾಸ ಬದಲಾಗಿದೆ :—

ಭಾರತಿ ಸಂಪಂಗಿರಾಮ; ಅಥವಾ, ಎಸ್. ಆರ್. ಭಾರತಿ,
"ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

The National Insurance & Banking Co., Ltd., Amristsar.

Madras Branch—33 Armenian Street, Madras.

Authorised and Subscribed Capital Rs. 10,00,000.

Paid up Capital only about Rs. 1,50,000.

POSSESSES GOVERNMENT SECURITY.

The Company has deposited Rs. 1,00,000 (one lakh) with the Government of India for the Security of the Policy-holders in compliance with the Government of India Insurance Company's Act of 1912.

"The Searchlight", a Monthly Journal of Insurance and Finance, published in London, writes:—"Evidently the company covers a lot of ground. And while we consider that so far the company has done quite as well as it could fairly except, we must add that it is engaged in so admirable a work that it deserves the best wishes of all upholders of life assurance throughout the world. We are sure that it will have these, for there is nothing that knits the fabric of society together more closely than the successful carrying on of life assurance by a sound office." [216-11]

Statement of Progress:—

Year	Subscribed Capital	Paid up Capital	Working Capital	Government Papers and Debentures	Diposits
1907	2,28,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29,000	62,470	4,15,213	18,100	3,09,726
1910	5,56,300	74,787	6,44,490	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,18,771	14,24,902	1,12,100	9,71,232
1912 „ 2nd	10,00,000	1,41,594	15,42,419	1,32,600	10,39,916

For further particulars apply to—

T. S. R. Iyer, Secretary (Madras Branch),

Camp, Amirtsar National Insurance Buildings, Mysore.

English Papers with L. S. Text Summary, Special Papers, and Monthly Tests, etc Subscription Rupees 2 (in advance) **Students' Spelling Book** As 4. (Postage Extra) **Postal Tution**—Monthly Fees English **Rs. 2**; Arithmetic **Re. 1, the rest As 8** (all in advance) *Apply to,*

[273-3] **M. N SITARAMA RAO,**
Krishnaraja Mohalla, Mysore

ಜೈರವರ ಸ್ವದೇಶೀ ಬಾಮ್.

ರೆಜಿಸ್ಟರಾದ ಟ್ರೇಡ್ ಮಾರ್ಕು



ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡು ನೋವು, ಶೀತ, ಸೆಳತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆ ನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ ಜಡ್ಜಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ, ಬೇರೆ ಯಾವ ಕೆಟ್ಟಪದಾರ್ಥವಾಗಲಿ ಮಿಶ್ರಮಾಡಿಲ್ಲ ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯಕ್ಷಿಣಿಯಂಥಾ ಮದ್ದು ಲಕ್ಷಾಂತರ ಜನನನ್ನೆಲ್ಲಾ ವಾಸಿಮಾಡಿದೆ ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೀ ಇರಬೇಕು ಇದು ಚಿನ್ನದಂಥಾ ಔಷಧ ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ ಇರುವುದನ್ನು ನೋಡಿ ಕೊಂಡುಕೊಳ್ಳಿ ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟದೆ 1 ಬಾಟ್ಲಿಗೆ 12 ಆಣೆ, 3 ಕ್ಕೆ ಪೋಸ್ಟೇಜ್ ಮಾಫಿ ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ [7 1]

ವಿಳಾಸ—ಜೆ ಗುಲಾಬ್‌ಚಂದ್ ಪೌವಾರ್,
30 ನೈನಪ್ಪನಾಯಕ್ ಬೀದಿ, ಪಾರ್ಕ ಟೌನ್, ಮದರಾಸ್

ಅತ್ಯುತ್ತಮವಾದ ನೀಲಿ ಕಪ್ಪು ಶಾಯಿಪುಡಿ.

ಮೊದಲು ಸ್ವಲ್ಪ ತರಿಸಿನೋಡಿ ಒಂದು ಪೊಟ್ಟಣದಲ್ಲಿ ಒಂದು ಕುಡಿಕೆ ಶಾಯಿ ಆಗುತ್ತೆ ಚಿಲ್ಲರೆ ಮಾರುವರಿಗೆ ಒಳ್ಳೇ ಲಾಭವಿದೆ ಬೆಲೆ ಸುಲಭ! 100 ಪೊಟ್ಟಣ 6 ಆಣೆ, 200 ಕ್ಕೆ 11 ಆಣೆ, 500 ಕ್ಕೆ 1 9-0, 1,000ಕ್ಕೆ 2 8-0 ಹಾಸಲು ಬೇರೆ

ವಿಳಾಸ—“ ವಿಕಟಪ್ರತಾಪ ” ಆಫೀಸ್, ಕುಪ್ಪಂ ಪೋಸ್ಟು.

ಜಪಾನರ

ಉನ್ನತಿಗೆ ಮೂಲಾಧಾರ—ನವನಾಗರಿಕ ಜನಾಂಗದವರಂತೆ ಸ್ವರ್ಗದ ವನ ನೀಗಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಈ ಕನ್ನಡ ವಚನ ಗ್ರಂಥವನ್ನು ಓದಬೇಕು ಶ್ರೀಮನ್ಮಹಾರಾಜರ ಮತ್ತು ಶ್ರೀಮದ್ಯುವರಾಜರ ರಮ್ಯ ಭಾವಚಿತ್ರಗಳೂ, ಕಥೆಯ ಸಂದರ್ಭಕ್ಕನುಕೂಲಿಸುವಂತೆ ನೇತ್ರಾನಂದಕರವಾದ 12 ಹಾಫ್‌ಟೋನ್ ಚಿತ್ರಗಳೂ ಇದರಲ್ಲಿವೆ ಇದರಂತೆ ಕಣ್ಮನಗಳಿಗೆ ಉಲ್ಲಾಸವನ್ನುಂಟುಮಾಡುವ ನೀತಿಬೋಧಕವಾದ ಕಥೆಯು ಕನ್ನಡದಲ್ಲಿ ಇನ್ನಾವುದೂ ಮುದ್ರಿತವಾಗಿಯೂ ಇಲ್ಲ ಶ್ರೀಮನ್ಮಹಾರಾಜರವರಿಗೆ ಅನುಮತಿಯನ್ನು ಪಡೆದು ಅರ್ಪಿಸಲ್ಪಟ್ಟಿದೆ ಮತ್ತು ನಮ್ಮ ಚೀಫ ಇಂಜನಿಯರ್ ಮ|| ಕರ್ಪೂರ್ ಶ್ರೀನಿವಾಸರಾಯರು ಪ್ರೌಢತರವಾದ ಉಪೋದ್ಘಾತವನ್ನು ಬರೆದಿರುವರು. ಪುಸ್ತಕವನ್ನು ಸಂಪೂರ್ಣವಾಗಿ ಓದಿದಹೊರತು ನೀವದನ್ನು ಕೆಳಗಿಡುವುದಿಲ್ಲ. ಕ್ರಯ ವಿ ಪಿ, ಸಹಿತ—ಚಿನ್ನದ ಗಿಲ್ಟಿನದು ರೂ 2 4 0, ಅವ್ವಲ್ ಗ್ಲೇಜ್ ರೂ 1-8-0, ದುಯ್ಯಂ ರೂ 1-4 0 [274 3]

ಧರ್ಮಪದ —ಸಾವಿರಾರು ಗ್ರಂಥಗಳಿಂದ ಪಡೆಯಬಹುದಾದ ಜ್ಞಾನವನ್ನು ಈ ಕನ್ನಡಗ್ರಂಥವೊಂದರಿಂದಲೇ ಪಡೆಯಬಹುದು ಆಬಾಲವೃದ್ಧರಿಗೂ ಆನಂದವನ್ನುಂಟುಮಾಡುವುದು ನೇತ್ರಾನಂದಕರವಾದ ಮಹಾರಾಜರ, ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಗೌತಮಮುನಿಯ ವಿಗ್ರಹದ ಭಾವಚಿತ್ರಗಳಿವೆ ಕ್ರಯ ವಿ ಪಿ ಸಹಿತ 1 ರೂಪಾಯಿ ವಿಳಾಸ—

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು, ಅಥವಾ,
ಬಿ ಅಶ್ವತ್ಥನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು

೧೯೧೪ನೇ ಇಸವಿಯ ಪಾಕೆಟ್ ಡೈರಿ

[137 28]

ಇದರಂತೆ 6 ನಮೂನೆಯ ಡೈರಿಗಳು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ, ವಿಲಾಯಿತಿ ಯಂತ್ರಗಳಲ್ಲಿ ಬೈಂಡು ಮಾಡಿ ಮೇಲುಗಡೆಯಲ್ಲಿ ಆರ್ನಮೆಂಟಲ್ ಅಕ್ಷರಗಳನ್ನು ಬಡಿಸಿದೆ

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸ್ ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ ನಂ|| ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ 1 ಕ್ಕೆ 3 ಆಣೆ | ಸಿ ನಂ|| ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ 1ಕ್ಕೆ 6 ಆಣೆ.
ಬಿ ನಂ|| ಪೆನ್ಸಿಲ್ ಇಟ್ಟಿರುವ ಚಿಕ್ಕ ಫ್ಲಾಪು ಡೈರಿ 1 ಕ್ಕೆ 5 ಆಣೆ | ಡಿ ನಂ|| ಪೆನ್ಸಿಲ್ ಇಟ್ಟಿರುವ ದೊಡ್ಡ ಫ್ಲಾಪು ಡೈರಿ 1 ಕ್ಕೆ 8 ಆಣೆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ “ ಜಿನಿವಾ ಡೈರಿ ”

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಉತ್ತಮ, ದಪ್ಪಕಾಗದ, ತರ್ಸ ಬೈಂಡು

“ ಜಿನಿವಾ ” ನಂ|| 1 ಚಿಕ್ಕ ಡೈರಿ 1 ಕ್ಕೆ 4 ಆಣೆ | ಜಿನಿವಾ ” ನಂ|| 2 ಚಿಕ್ಕ ಫ್ಲಾಪು ಡೈರಿ 1 ಕ್ಕೆ 6 ಆಣೆ

12 ಪ್ರತಿಗಳು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಉಚಿತವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION.—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present day provident companies in India, and enables you to select a good institution, where your hard earned money will be safe

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

BANKING:—Every sort of banking business transacted. The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses, etc., please apply to

Mr. M. L. NAGANNAH,
Managing Agent, MYSORE.

[161-22]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5—12—1913 ರಿಂದ 12—12—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	3	0	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	9	6	0	0
ಮೈಸೂರು ,,	69	38	0	0
ಕೋಲಾರ್ ,,	3	3	1	1
ಕೋಲಾರ್ ಚಿನ್ನದ ಗಣಿಗಳು	5	3	0	0
ತುಂಕೂರು ಡಿಸ್ಟ್ರಿಕ್ಟು	8	7	0	0
ಹಾಸನ ,,	3	2	0	0
ಚಿತ್ರದುರ್ಗ ,,	0	0	5	1
ಕಡೂರ್ ,,	10	10	0	0
ಶಿವಮೊಗ್ಗಾ ,,	27	20	2	2
ಜುಮ್ಲಾ	129	90	8	4

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಪುಷ್ಯ ಶುದ್ಧ ಷಷ್ಠಿ ಶುಕ್ರವಾರದಿಂದ ಪುಷ್ಯ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನುಸ್ಸು ಕೇಡಿ
2	ಶುಕ್ರ ,	ಷಷ್ಠಿ	46-16	ಪೂಭಾ	57 43	19
3	ಶನಿ †	ಸಪ್ತಮಿ	51 41	ಉತ್ತ್ರಭಾ	60 0	20
4	ಭಾನು ✠	ಅಷ್ಟಮಿ	57 50	ಉತ್ತ್ರಭಾ	4-29	21
5	ಸೋಮ	ನವಮಿ	60 0	ರೇವತಿ	11 0	22
6	ಮಂಗಳ *	ನವಮಿ	22-22	ಅಶ್ವಿನಿ	17 7	23
7	ಬುಧ	ದಶಮಿ	6 49	ಭರಣಿ	22 32	24
8	ಗುರು ‡	ಏಕಾದಶಿ	10-11	ಕೃತ್ತಿಕೆ	26 53	25

, ತುಳುಷಷ್ಠಿ, ಮಳೆ ನಕ್ಷತ್ರ—ಪೂಷಾ 3 ನೇ ಪಾದ † ಕೊಡಾರೋಹಣಾರಂಭ ✠ ಉಡುಪಿ ಕೃಷ್ಣೋತ್ಸವ * ಅಮೃತಸಿದ್ಧಿಯೋಗ, ಮಳೆ ನಕ್ಷತ್ರ ಪೂಷಾ 4 ನೇ ಪಾದ ‡ ಸರ್ವತ್ರ ಏಕಾದಶಿ, ಶ್ರೀರಂಗದಲ್ಲಿ ಕೊಡಾರೋಹಣಾರಂಭ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೪-೦-೦	೧೬ ೦
ಕೆಂಬೂತಿ ಅಕ್ಕಿ ಅವಲ್	೧೫ ೮-೦	೧೭ ೮
ಜಾಪತ್ರಿಣಿ ಅಕ್ಕಿ	೧೪-೮-೦	೧೬ ೮
ಸಣ್ಣಕ್ಕಿ ಅವಲ್	೧೭-೦-೦	೧೭-೮
,, ದುಯಂ	೧೬ ೦ ೦	೧೬ ೧೨
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೬-೦-೦	೧೬ ೪
,, ದುಯಂ ,,	೧೪ ೦-೦	೧೪ ೦
ಹೈಕ್ ರಾಗಿ ಪಲ್ಲಾ ೧ಕ್ಕೆ	೭ ೬ ೦	೫ ೧೦
ಕಾಡ್ರಾಗಿ ,,	೬ ೮-೦	೪-೧೨
ಜೋಳ ,,	೭-೪-೦	೭ ೪
ಹಲಸಂದೆ ಪಲ್ಲಾ ೧ಕ್ಕೆ	೨೩-೪-೦	೧೪ ೦
ಬೇಳೆ ಅವರೆ ,,	೧೦ ೦-೦	೧೨ ೦
ಹೆಸರು ,,	೨೩-೪-೦	೧೪ ೦
ಉದ್ದು ,,	೧೪ ೦-೦	೧೬-೮
ಕಡಲೆ ,,	೧೪-೦-೦	೧೯ ೦
ಎಳ್ಳು ಸೇರು ೧೨೭ಕ್ಕೆ	೨೨ ೦-೦	೨೪-೦
ಹುರುಳಿ ಪಲ್ಲಾ ೧ಕ್ಕೆ	೮-೦-೦	೭ ೧೦
ಹರಳು ೧೨೭ ಸೇರಿಗೆ	೧೩-೦-೦	೧೪ ೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-[illegible]
ಮೆಣಸಿನಕಾಯಿ ,,	೩-೪ ೦	೩ [illegible]
,, ಮಯಂ	೩-೦-೦	೧ [illegible]
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬-[illegible]
ಒಳ್ಳೆಣ್ಣೆ ಮಣ ೧ಕ್ಕೆ	೫ ೧೨ ೦	೬-[illegible]
ಹರಳೆಣ್ಣೆ ,, ,,	೫ ೨-೦	೬ [illegible]
ಕಡಲೇಕಾಯಿ ಯೆಣ್ಣೆ	೫-೦ ೦	೬ [illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦-೦	೬-[illegible]
ಉಪ್ಪು ,, ,,	೬-೪-೦	೬-[illegible]
ಹುಣಸೇ ಹಣ್ಣು ಮಣ ೧ಕ್ಕೆ	೨ ೮-೦	೧೧ [illegible]
ತುಪ್ಪ–ಧಾರಾಪುರದ್ದು ಮಣ ೧ಕ್ಕೆ	೧೬-೦-೦	೨೨ [illegible]
,, ಬೆಣ್ಣೆ ಕಾಸಿದ್ದು ,, ,,	೧೯-೦-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೨ ೦	೫ [illegible]
ತೆಂಗಿನಕಾಯಿ ೧೦೦ಕ್ಕೆ	೭-೮ ೦	೬ [illegible]
ಅಳಲೇಕಾಯಿ ಮಣ ೧ಕ್ಕೆ	೧-೦-೦	೧ [illegible]
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨-೦	೧[illegible]
ಚಿನ್ನ (ಪೌನ್) ಕೆಂಪು	೧೫ ೮-೦	೧೫-[illegible]
,, ,, ಪಸಿಮೆ	೧೫ ೧೪-೬	೧೫-೧[illegible]
,, ,, ಗಟ್ಟಿ ತೊಲ ೧ಕ್ಕೆ	೨೪-೩ ೦	೨೪
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧

ಶಬ್ದಾದರ್ಶದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ !!

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ « ಶಬ್ದಾದರ್ಶ"ಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ 1 ಪ್ರತಿ ಒಟ್ಟಾಗಿ ತರಿಸಿಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಣ್ಯಪುರಾಧಿಪತ್ಯವೆಂಬ ನಕಲಿ ಉಚಿತ 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯೆಂಬ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ

[166-3] ವಿಳಾಸ–ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಪ್ರಾಕೃತಿಕ್ ಜಿಯಾಗ್ರಫೀ

೨ ನೆಯ ಮುದ್ರಣ.

1 ನೆಯ ಭಾಗ 0 4 6 (ಕೆಲವು ಮಾತ್ರ ಉಳಿದಿವೆ)

2 ನೆಯ ಭಾಗ 0 1 6 (ಜನವರಿ ತಿಂಗಳಲ್ಲಿ ಬಿಕರಿಗೆ ಸಿದ್ಧವಾಗುವುದು ಫಿಸಿಕಲ್, ಕಮರ್ಷಿಯಲ್, ಪೊಲಿಟಿಕಲ್, ಮತ್ತು ಪರೀಕ್ಷೆಯ ಪ್ರಶ್ನೋತ್ತರಗಳು ಹೆಚ್ಚಾಗಿ ಸೇರಿಸಲ್ಪಟ್ಟಿರುವವು) [276 3]

ಲೇಖನ ಪುಸ್ತಕಗಳು

ವಿದ್ಯಾಭ್ಯಾಸದ ಇಲಾಖೆಯವರು ಸರ್ಕಾರೀ ಪುಸ್ತಕಗಳಿಗೆ ಪ್ರತಿಯಾಗಿ ಈ ಖಾಸಗಿ ಪುಸ್ತಕಗಳನ್ನೂ ಎಲ್ಲಾ ಸ್ಕೂಲುಗಳಲ್ಲೂ ಉಪಯೋಗಿಸಬಹುದೆಂದು ಒಪ್ಪಿಕೊಂಡಿರುತ್ತಾರೆ ನಂ 1, 2, 3, 4 ಹೊಸ ಕನ್ನಡ ಲೇಖನ ಪುಸ್ತಕಗಳು—1 ಕ್ಕೆ 0-1-3 ಮೇಲ್ಪಟ್ಟಿಗಳು ಕೈಬರವಣಿಗೆಯಂತೆ ಅಂದವಾಗಿ ಪ್ರಿಂಟಾಗಿರುತ್ತವೆ

10 ರೂ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ರೂ 1 ಕ್ಕೆ 1 ಆಣೆಯಂತೆಯೂ, 50 ಪುಸ್ತಕಗಳಿಗೆ ಕಡಮೆ ಇಲ್ಲದಂತೆ ತರಿಸಿಕೊಳ್ಳುವವರಿಗೆ ರೂ. 1 ಕ್ಕೆ 1 ಆಣೆಯಂತೆಯೂ ಡಿಸ್ಕೌಂಟು ಕೊಡಲ್ಪಡುತ್ತದೆ

ವಿಳಾಸ–ಎಂ ಶಿ ಲಿಂಗಪ್ಪಯ್ಯ, ಹೆಡ್ ಮಾಸ್ಟರ್,
ಇಟ್ಟಿಗೆಗೂಡು ಎ ವಿ ಸ್ಕೂಲ್, ಮೈಸೂರು

ಅನುಭವಸಿದ್ಧವಾದ ಷರಬತ್ತುಗಳು

ಸೊಗದೆಬೇರಿನ ಷರಬತ್ತು —ರಕ್ತವನ್ನು ಶುದ್ಧಿಮಾಡಿ ದೇಹವನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಂಡಿರುವುದಕ್ಕೆ ಶ್ರೇಷ್ಠವಾದದ್ದು ರಕ್ತ ಕೆಡುವುದರಿಂದ ಹುಟ್ಟುವ ಕಜ್ಜಿ, ತುರಿ, ಮೈತಿನಸು, ಹುರುಪು, ಹುಳಕಡ್ಡಿ ಮೊದಲಾದ ಚರ್ಮರೋಗಗಳು, ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ಉರಿ, ಅರಕಲೆನೋವು, ಪ್ರದರರೋಗ, ವಾಯುವಿನಿಂದುಂಟಾಗುವ ಆತಿಸಾರ, ಬಾಯಿ ದುರ್ವಾಸನೆ, ಕೈಕಾಲು ಉರಿ, ಗರ್ಭಪಿಟ್ಟೆ, ಮುಂತಾದ ರೋಗಗಳೂ ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ಇದು ಕುಡಿಯುವುದಕ್ಕೆ ಸುವಾಸನೆ, ಮಧುರ, ಹಿತಕರ, ಮೇಲ್ಕಂಡ ರೋಗಗಳಿಗೆ ಗುಣಕಾರಿ ಕ್ರಯ–8 ಔನ್ಸ್ ಬಾಟ್ಲಿಗೆ 8 ಆಣೆ, 12 ಔನ್ಸ್ ಬಾಟ್ಲಿಗೆ 12 ಆಣೆ

ಅಮೃತ ಸಿರಪ್ —ರಕ್ತಕೆಡುವಿಕೆ, ಧಾತುನಷ್ಟ, ದುರ್ಬಲತ್ವ, ಮಲಬದ್ಧ, ಅಗ್ನಿಮಾಂದ್ಯ, ಜಡತ್ವ, ಪಿತ್ತದಿಂದುಂಟಾಗುವ ಸಂಕಟ, ಅರತಲೆನೋವು, ಬಾಯಿ ದುರ್ವಾಸನೆ, ಮೊದಲಾದವು ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ಕ್ರಯ 8 ಔನ್ಸ್ ಬಾಟ್ಲಿಗೆ 8 ಆಣೆ, 12 ಔನ್ಸ್ ಬಾಟ್ಲಿಗೆ 12 ಆಣೆ

ಪ್ರಸಿದ್ಧವೂ ಶ್ರೇಷ್ಠವೂ ಆದ ಊದುಬತ್ತಿಗಳು —ಸೇರು 1 ಕ್ಕೆ ರೂ 21, 13, 10, 8, 6, 4, 3, 2½, 2, 1½ ಬಿಲ್ಲಗಳು 1 ಕ್ಕೆ 1½ ಆಣೆ ಲಾಗಾಯ್ತು 12 ಆಣೆ ವರೆಗೆ ಹಸಿಗಂಧ ತೊಲ 1 ಕ್ಕೆ ರೂ 2, 1, ಮತ್ತು 12 ಆಣೆ ಇವು ಅಲ್ಲದೆ ಅನೇಕ ಅತ್ತರುಗಳೂ ನಮ್ಮಲ್ಲಿ ಸಿಗುತ್ತೆ ಅರಮನೆಗೆ ಒಪ್ಪಿಸತಕ್ಕ ಸುಗಂಧಗಳು ಇವೇ ಇಂಥಾ ಶ್ರೇಷ್ಠವಾದ ಬತ್ತಿಗಳೂ ಬಿಲ್ಲೆಗಳೂ ಇನ್ನೆಲ್ಲಿಯೂ ದೊರೆಯುವರಿಲ್ಲ ಅರ್ಧಾಣೆ ಸ್ಟಾಂಪು ಕಳಿಸಿ ನಮ್ಮ ಕ್ಯಾಟ್ಲಾಗು ತರಿಸಿಕೊಳ್ಳಿ

ವಿಳಾಸ —ಶ್ರೀ ವೆಂಕಟೇಶ್ವರ ಕಂಪನಿ,

[180-2] 171 ಚಾಮರಾಜ ರೋಡ್, ಮೈಸೂರು.

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಕಲ್ಕತ್ತಾ ಪಟ್ಟಣದ ಸರ್ಕಾರದ ಭರವಸೆಯುಳ್ಳ "ದಿ ಕೋಆಪರೇಟಿವ್ ಹಿಂದುಸ್ತಾನ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮದುವೆ ಮತ್ತು ಜೀವ ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ವಾರ್ಷಿಕದ ರೂ 1 8 0, ರೂ 1-0 0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಅಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳದ್ದಾಗಿರುತ್ತೆ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳವಾದ ಕಮಿಷನ್ ಏರ್ಪಾಡು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿ ವರ್ಷವೂ ಮದುವೆ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿ ಕಟ್ಟಲ್ಪಡುತ್ತೆ ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರೆಯಿರಿ [213 6]

Hindustan Co-operative Insurance Society, Limited,

Hindustan Buildings, Calcutta

Authorized capital One Crore. Policies effect ed—over Rs 2,20 00 00 Subscribed capital—Rs 67 00 000 Funds exceed—Rs 20 50 000

Paid up Capital—over Rs 10,00,000

This famous Society's Premiums are the lowest and the Assurance value therefore, the highest Rules exceptionally advantageous and preferential Financial conditions based on sound principles Rs 2 00 000 deposited with the Govern ment, as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards, a speciality This is the only business which requires no capital or higher education to earn a handsome amount daily For further particulars and agency prospectus &c, apply with one anna stamp to

Messrs. Venkatachalam & Son,
Chief Agents,
166, Dodpeta, Mysore.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ
(ಅಡ್ವಾನ್ಸು) ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ಒಂದು ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦
" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ಪ್ರಕಟನೆ ಮತ್ತು ನೋಟೀಸುಗಳ ದರಗಳು

"ವೃತ್ತಾಂತ ಪತ್ರಿಕೆ"ಯಲ್ಲಿ ಐದು ಪಂಕ್ತಿಗೆ ಮೀರದ ಪ್ರಕಟನೆ ಅಥವಾ ನೋಟೀಸಿಗೆ ಒಂದು ವಾರಕ್ಕೆ ಒಂದು ರೂಪಾಯಿ ಛಾರ್ಜು ಬೀಳುವುದು, ಅಂದರೆ ಪ್ರತಿ ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೂ ಒಂದು ಸಲಕ್ಕೆ ಒಂದು ರೂಪಾಯಿನಂತೆ ಕೊಡಬೇಕು ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ಕಂಟ್ರಾಕ್ಟು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

Office of the Military Secretary to
H. H. the Maharajah of Mysore,

Dated, Bangalore, the 20th December, 1913

NOTICE.

Sealed tenders for the supply of good and cleaned gram, required for the ponies and harness horses of the Mysore Imperial Service Transport Corps and Government Stables at Bangalore and Mysore, will be received up to 2 P M on Monday, the 19th January, 1914, in the Office of the Military Secretary to His Highness the Maharajah of Mysore, Bangalore The contract for the said supply of gram will be from 1st March, 1914, to 28th February, 1915

Intending tenderers may apply to the Military Secretary to His Highness the Maharajah of Mysore, Bangalore, for further particulars

(Sd) **A A Jones, Lt Col,**
[1 1] *Offg Military Secretary*

50 ಬಹುಮಾನದೊಡಗೂಡಿದ

ಜನವರಿ ಮಹೋತ್ಸವದ ಕೈ ಗಡಿಯಾರ

ಕೆಳಗೆ ಕಾಣಿಸಿರುವ ಗಡಿಯಾರದ ಬೆಲೆ 7 ರೂಪಾಯಿಗಳು ಇದು ಬರುವ ಜನವರಿ ಆವ್ವರುವರೆಗೆ 3 15 0 ಗೆ 50 ಬಹುಮಾನಗಳೊಡನೆ ಬಿಕರಿಮಾಡಲ್ಪಡುತ್ತೆ

ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ ೨ ವರುಷಗಳ ವರೆಗೆ ಕೆಡದೆ ನಡೆಯುತ್ತೆ ಇದೊಂದು ಹೊಸ ನಮೂನೆಯಾಗಿರುತ್ತೆ ಇದು ಒಳ್ಳೇ ಚೆನ್ನಾಗಿ ಹದ ಕೊಟ್ಟ ಉಕ್ಕಿನ ಮುಚ್ಚಳವನ್ನು ಹೊಂದಿರುವುದರಿಂದ ಧೂಳು ಸೇರಲು ಅವಕಾಶವಿಲ್ಲ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಲಭವಾಗಿ ಸರಿಮಾಡಲು ಅನುಕೂಲವಾಗಿರುತ್ತೆ ಇದಕ್ಕೆ ಬಹಳವಾಗಿ ಆರ್ಡರುಗಳು ಬರುತ್ತಿರುವುದರಿಂದ ಜಾಗ್ರತೆಮಾಡಿರಿ ವಿಳಂಬಮಾಡಿದರೆ ದೊರಕಲಾರದು ಇದನ್ನು ತರಿಸಿಕೊಳ್ಳತಕ್ಕವರಿಗೆ ಈ ಕೆಳಗೆ ಕಾಣಿಸಿರುವ 50 ಸಾಮಾನುಗಳು ಉಚಿತವಾಗಿ ಕೊಡಲ್ಪಡುವುವು ಇವು ಪೆಟ್ಟಾದ ಬೆಲೆಯುಳ್ಳವು

1 ವಾಸನೆಯಾದ ಅತ್ತರು ಬಿಲ್ಲೆ 3 ಆಣೆ 2 ಎಲೆಕ್ಟ್ರಿಕ್ ಭಂಗಾರದ ರೇಖಿನ ಸ್ಪ್ರಾಮಂತಿಗೆ ಹುವ್ವು ಬೆಲೆ 12 ಆಣೆ 3 ಗಡಿಯಾರದ ಸರಪಣಿಗೆ ಕ್ರಯ 1 ಆಣೆ 4 ಪರಟು ಗುಂಡಿ ಬೆಲೆ 3 ಆಣೆ 5 ಒಂದು ಹಸನಾದ ಕತ್ತರಿ ಬೆಲೆ 4 ಆಣೆ 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆ 3 8 ಆಣೆ 7 ಭಂಗಾರದ ಗಿಲ್ಟಿನ ತಿರುಪಿನ ಜಡೆಹುವ್ವು ಬೆಲೆ 6 ಆಣೆ 8 ಜರ್ಮನ್ ಬೆಳ್ಳಿಯ ಸಾದಿನ ಚಿಪ್ಪು ಬೆಲೆ 1 ಆಣೆ 9 ಅಂದವಾದ ಹಾದ ಚೀಲ ಬೆಲೆ 4 ಆಣೆ 10 ಜರ್ಮನ್ ಬೆಳ್ಳಿಯ ಕಣ್ಣುಕಪ್ಪಿನ ಭರಣಿ ಬೆಲೆ 2 ಆಣೆ 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 8 ಆಣೆ, 13 ಹೆಂಗಸರ ನಗಗಳನ್ನಿಡಲು ಅನುಕೂಲವಾಗಿರುವ ಕೈಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಹಾಲಿನ ಒಳಲೆ ಬೆಲೆ 6 ಆಣೆ 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟಿನ ಮೂಗುಬೊಟ್ಟು ಬೆಲೆ 8 ಆಣೆ 16 ಸ್ಟೀಲು ಪಿಬ್ಬುಗಳು 12—1 ಆಣೆ ನಿಕ್ಕಲ್ ಬೆಳ್ಳಿ ಪಿಗಿಲ್ 1, ಉತ್ತರಮುಖಿ 1, ಸ್ತ್ರೀಗಳು ಧರಿಸುವ ಗಿಣಿಗಳು 6, ಫೋಸ್ಟ ಕಾರ್ಡು 10 [9 1]

ಬಹಳ ಮೇಲಾದ ಅಚ್ಚ ಕರೀಬಣ್ಣದ ಮಧುರೆ ಚುನ್ನಡಿ ಅಂಚಿನ ಸೀರೆಗಳು

ಇವೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ 2 6 0 ಕ್ರಯವುಳ್ಳ ಸೀರೆಯನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ 2-1-0 ಆಣೆ ಕ್ರಯಕ್ಕೆ ಕೊಡಲ್ಪಡುತ್ತೆ ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಯಪಡಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮದುರೆ ಚುನ್ನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ನೆರಿಗುಗಳು ಬಹು ಪಸಂದಾಗಿವೆ ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಿಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು —ಡಿಫ್ಲೆ ಆಲ್ ರೈಲ್ವೆ ರೆಗ್ಯುಲೇಟರ್ ವಾಚ್ ರೂ 1 10 0 ಪ್ರಿಸ್ಟಲಿಂತ ಹೇರಾಯಿಲ್ ಬುಡ್ಡಿ 1 ಕ್ಕೆ 0 8 0 ವಿಳಾಸ — ಬಿ ಶೇಷಾ ಅಂಡ್ ಬ್ರದರ್ಸ್,



ನಂದಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್.

ಸಾಗುವಾನಿ ಮುಂತಾದ ಎಲ್ಲಾ ಜಾತಿಯ ಮರಗಳೂ ಬಹಳ ಅನುಕೂಲವಾದ ಕ್ರಯಕ್ಕೆ ದೊರೆಯುತ್ತೆ ಕೊಡಗು ಸುಂಟಿಕೊಪ್ಪದ ಹರದೂರು ಎಸ್ಟೇಟ್ ರೈಟರಿಗೆ ಬರೆದು ಕೇಳಬಹುದು [8–1]

ಸನ್ ೧೮೭೬ ರಿಂದ ೧೯೦೩ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 5-1

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,
ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ,
ಆಹಾರದಲ್ಲಿ ಅರುಚಿ.

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಶ್ರೀಮದ್ಯುವರಾಜರವರೂ ಕುಣಿಗಲ ಮಹಮದೀಯರೂ

ಕುಣಗಲ್ ಅಂಜುಮನೆ ಬಾದಿ ಮುತ್ತಲಬಾ ಸೆಕ್ರೆಟರಿ ಮಿ|| ಮಹಮದ್ ಅಬ್ದುಲ್ಲತೀಫ್ ಯವರು ಬರೆಯುವದೇನೆಂದರೆ —

ಈಗ್ಗೆ ಎರಡು ತಿಂಗಳ ಮುಂಚೆ ತುಮಕೂರ್ ಜನರಲ್ ಅ|| ಕಮಿಷನರ್ ಮಿ|| ಸೈಯದ್ ತಾಜ್ ಪೀರಾನ್ ಸಾಹೇಬರವರು ಕುಣಿಗಲ್ ಗ್ರಾಮದ ಮಹಮ್ಮದೀಯರನ್ನೆಲ್ಲಾ ಸೇರಿಸಿ ಒಂದು ಕಮಿಟಿಯನ್ನು ಏರ್ಪಾಡು ಮಾಡಿ ಕುಣಿಗಲ್ ಸ್ಟೇಡ್‌ಫಾರಂ ಇನ್‌ಛಾರ್ಜ್ ಆಫೀಸರ್ ಮು|| ಆಗಾ ಮಹಮ್ಮದ್ ಜಾಫರ್ ಸಾಹೇಬರವರನ್ನು ಸದರಿ ಕೂಟದ ಪ್ರೆಸಿಡೆಂಟರಾಗಿ ನಿಯಮಿಸಿ ಇಂಗ್ಲಿಷ್ ವ್ಯಾಸಂಗ ಮಾಡತಕ್ಕ ಬಡವರಾದ ಮಹಮ್ಮದೀಯ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಚಂದಾ ಹಣ ಜೋಡಿಸಿ ಅದರಲ್ಲಿ ಬರತಕ್ಕ ಆದಾಯದಿಂದ ಸಹಾಯ ಮಾಡುವುದಾಗಿ ತೀರ್ಮಾನ ಮಾಡಿದರು

ಶುಭಕಾರ್ಯದ ವರ್ತಮಾನವು ಶ್ರೀಮನ್ ಯುವರಾಜ ಬಹದ್ದೂರ್ ರವರ ದಿವ್ಯ ಚಿತ್ತಕ್ಕೆ ವೇದ್ಯವಾದ ಕೂಡಲೆ ದರ್ಮ ಪ್ರಭುಗಳು ಸದರಿ ಕೂಟವು ಅಭಿವೃದ್ಧಿಯಾಗಿ ವಿದ್ಯಾಪ್ರಚಾರ ಆಗುವ ಉದ್ದೇಶ ಕಳೆದ 22 ನೇ ಸೋಮವಾರ ದಯಮಾಡಿ, ಈ ಮೇಲ್ಕಂಡ ಫಂಡಿಗೆ 1000 ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿದರು ಕೂಡಲೆ ಇಲ್ಲಿನ ಮಹಮದೀಯರೆಲ್ಲಾ ಆನಂದ ಭರಿತರಾಗಿ ಮಸೀತಿಯಲ್ಲಿ ಸೇರಿ ಶ್ರೀಮನ್ ಯುವರಾಜ ಬಹದ್ದೂರರವರಿಗೆ ಅಪ್ರೀನ್ ಕೊಟ್ಟು ಸಭೆಕೊನೆಗಾಣಿಸಿ, ತಮಗುಂಟಾದ ಆನಂದವನ್ನು ತಂತಿಯ ಮೂಲಕ ತಿಳಿಯಪಡಿಸಿದರು ಈ ಶುಭಕಾರ್ಯದ ಸಂಗತಿಯನ್ನು ತಮ್ಮ ಪತ್ರಿಕೆಯಲ್ಲಿ ಛಾಪಿಸಿ ಸಂತೋಷಗೊಳಿಸಬೇಕಾಗಿ ಕೋರುತ್ತೇವೆ

ಸರ್ಕಾರಿ ಸೂಲಗಿತ್ತಿಯರು

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತೂ ಸ್ಯಾನಿಟರಿ ಆಫೀಸರ್ ಮು|| ವಿ ಮುತ್ತುಸ್ವಾಮಿದಾಸ್‌ರವರು ಬರೆಯುವುದು —

ಗ್ರಾಮಾಂತರಗಳಲ್ಲಿ ಸ್ತ್ರೀಯರ ಹೆರಿಗೆ ಕಾಲದಲ್ಲಿ ಸರ್ಕಾರಿ ಸೂಲಗಿತ್ತಿಯರನ್ನು ಕರೆಯದೆ ಸ್ಥಳೀಯ ಹಜಾಮರ ಹೆಂಗಸರನ್ನಾಗಲೀ, ಅಥವಾ ವಯಸ್ಕರಾದ ಹೆಂಗಸರನ್ನಾಗಲೀ ಕರಸಿ ಹೆರಿಗೆ ನಡಿಸುತ್ತಾರೆ ಇವರಿಗೆ ಪ್ರಸವ ಸಂಬಂಧವಾದ ಅಪಾಯಗಳು ಇಂಥವೆಂದು ತಿಳಿಯದು ಆದ್ದರಿಂದ ಅನೇಕ ಸ್ತ್ರೀಯರು ಪ್ರಸುವಿನ ಅವಸ್ಥೆಗೆ ಒಳಪಟ್ಟು ಪ್ರಾಣವನ್ನು ಕಳೆದು ಕೊಳ್ಳುವವರಾಗಿದ್ದಾರೆ ಸರ್ಕಾರಿ ಸೂಲಗಿತ್ತಿಯರು ಪ್ರತಿ ಒಂದು ತಾಲ್ಲೂಕಿನ ಆಸ್ಪತ್ರೆಯಲ್ಲಿಯೂ ಇದ್ದೇ ಇರುತ್ತಾರೆ ಇವರುಗಳನ್ನು ಕರಸಿ ಹೆರಿಗೆ ಮಾಡಿಸಿದ್ದೇ ಆದರೆ ಅನ್ಯಾಯವಾಗಿ ಸಾಯುವಂಥಾ ಅನೇಕ ಬಾಣಂತಿಯರು ಬದುಕಿಕೊಂಡಾರು ಈ ಸೂಲಗಿತ್ತಿಯನ್ನು ಕರಸಿದ್ದೇ ಆದರೆ ಅವರಿಗೆ ಫೀಜು ಕೊಡಬೇಕೆಂಬ ಅಭಿಪ್ರಾಯವು ನೆಲೆಗೊಂಡಿದೆ. ಇವರು ಯಾವತರವಾದ ಫೀಜಿಗೂ ಮತ್ತು ರುಸುಂಗಳಿಗೂ ಒದ್ದರಲ್ಲ ಅವರ ಸಹಾಯವು ಬೇಕಾದರೆ ಆಸ್ಪತ್ರೆಯ ಡಾಕ್ಟರ್ ಮೂಲಕ ಅವರನ್ನು ಕರಸಿದ್ದೇ ಆದರೆ ಅವರು ಕೂಡ್ಲೆ ಹೊರಟು ಬರುವರು ಸ್ಥಳದಿಂದಲೇ ಗಾಡಿ ತೆಗೆದುಕೊಂಡು ಹೋದರೆ ಅವರು ಕೂಡ್ಲೆ ಹೊರಟು ಬರುತ್ತಾರೆ ಇಲ್ಲವಾದರೆ ಸ್ಥಳದಿಂದ ಒಂದು ಗಾಡಿ ಬಾಡಿಗೆ ಮಾಡಿಕೊಂಡು ಹೋಗಬೇಕು ಈ ಗಾಡಿ ಬಾಡಿಗೆಯನ್ನು ಸರ್ಕಾರದವರೇ ವಹಿಸುವರು. ಈ ಲೇಖನವನ್ನು ಓದಿದಂಥ ಎಲ್ಲಾ ವಿದ್ಯಾವಂತರೂ ಈ ಸಂಗತಿಯನ್ನು ವಿಸ್ತಾರವಾಗಿ ಪ್ರಕಟಿಸುವರೆಂದು ಹಾರೈಸುತ್ತೇನೆ.

ಸಾವಿರದೊಂದುರಾತ್ರಿ ಅರೇಬಿಯನ್ ನೈಟ್ಸ್.

ಸಾವಿರ ಪುಟಗಳಾದ ಈ ಗ್ರಂಥ ಹತ್ತು ಭಾಗಗಳಲ್ಲಿ ಪ್ರಿಂಟಾಗುತ್ತಿದೆ ಚಂದಾದಾರರಿಗೆ 1 ಭಾಗಕ್ಕೆ 1 ಆಣೆ, ಇತರರಿಗೆ 6 ಆಣೆ ಹಾಸ್ಟು ಬೇರೆ. 1 ನೇ ಭಾಗ ಸಿದ್ಧವಾಗಿದೆ ಎಲ್ಲಾ ತರದ ಕನ್ನಡ ಪುಸ್ತಕಗಳೂ, 1914 ರ ಡೈರಿಗಳೂ ನಮ್ಮಲ್ಲುಂಟು. ಪ್ರತಿ ಭಾಗ ಮಾತ್ರ ವಿ ಪಿ ಮಾಡಲ್ಪಡುತ್ತೆ. [276 3]

ವಿಳಾಸ—ಮರ್ಕೆಂಟೈಲ್ ಯೂನಿಯನ್, ಮೈಸೂರು ,

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ಜನವರಿ, ತಾ ೧ ನೇ ಗುರುವಾರ

ಹಿಂದುಸ್ಥಾನದ ಈಗಿನ ಸ್ಥಿತಿಯು.

ಈಗ ತಾನೇ ಮುಕ್ತಾಯವಾದ ವರುಷದಲ್ಲಿ ಹಿಂದುಸ್ಥಾನದೊಳಗೆ ಹಲವು ಬದಲಾವಣೆಗಳೂ ಅನೇಕ ಅಭಿವೃದ್ಧಿಕಾರ್ಯಗಳೂ ನಡೆದಿರುತ್ತವೆ. ನಮ್ಮ ರಾಷ್ಟ್ರವು ಮುಂದು ಮುಂದಕ್ಕೆ ಹೋಗುತ್ತಿರುವುದು ; ಹೀಗೆ ಮುಂದರಿದು ಹೋಗುತ್ತಿರುವಲ್ಲಿ ಅಹಿತವಾದ ಹಲವು ಪ್ರತಿಬಂಧಕಗಳು ತಾಣಬರುತ್ತಲಿವೆ ನಾನಾ ತರದ ಗಲಭೆಗಳೂ ಕಷ್ಟಗಳೂ ಅಡಚಣೆಗಳೂ ಪ್ರಾಪ್ತವಾಗುತ್ತಿದ್ದಾಗ್ಯೂ ಹಿಂದುಸ್ಥಾನವು ಏಳಿಗೆ ಹೊಂದುತ್ತಿದೆ ಎಂದು ಧಾರಾಳವಾಗಿ ಹೇಳಬಹುದು

ದೇಶದಲ್ಲಿ ರಾಜಕೀಯ ವಿಚಾರವಾದ ಕಷ್ಟ ತೊಡಕುಗಳು ಕೊನೆಗಾಣಲಿಲ್ಲ, ಮತ್ತು ಬಂಗಾಳಾ ಆಧಿಪತ್ಯದ ವಿದ್ಯಮಾನಗಳು ಎಲ್ಲಾ ಭಾಗಗಳಲ್ಲೂ ತೃಪ್ತಿಕರವಾಗಿರುವವೆಂದು ಹೇಳಲಾಗದು ಕೊಲೆಗಳೂ ಡಕಾಯಿತಿಗಳೂ ಈಗಲೂ ಆಗಿಂದಾಗ್ಗೆ ನಡೆಯುತ್ತಲೇ ಬಂದಿವೆ ಇದನ್ನು ನೋಡಿದರೆ ಬಂಗಾಳಾ ವಿಭಜನೆಯನ್ನು ರದ್ದು ಮಾಡಿದ್ದಾಗ್ಯೂ ಬಂಗಾಳಿಯ ಮನೋಧರ್ಮಕ್ಕೆ ಇನ್ನೂ ನೆಮ್ಮದಿಯಾಗಲಿ ತೃಪ್ತಿಯಾಗಲಿ ಉಂಟಾಗಲಿಲ್ಲವೆಂದು ಗೊತ್ತಾಗುತ್ತದೆ. ಅರಾಜಕ ಲಕ್ಷಣಗಳು ಇನ್ನೂ ಇದ್ದೇ ಇರೋಣದರಿಂದ ಇದರ ಪರಿಣಾಮವು ಕಷ್ಟ ನಷ್ಟ ಮನೋವ್ಯಥೆಗಳಲ್ಲದೆ ನೆಮ್ಮದಿ ಸುಖ ಸಮಾಧಾನಗಳೆನಿಸುವುದಿಲ್ಲ.

ಕಳೆದ ವರುಷ ಬಂಗಾಳಾ ಮತ್ತು ಮದರಾಸ್ ಆದಿಪತ್ಯಗಳೊಳಗೆ ನದಿಗಳಲ್ಲಿ ಪ್ರವಾಹಗಳು ಬಂದು, ಕೆಲವು ಪ್ರಾಣನಷ್ಟಗಳೂ ವಿಶೇಷ ಆಸ್ತಿಪಾಸ್ತಿಗಳ ನಷ್ಟವೂ ಸಂಭವಿಸಿದವು ಹಿಂದುಸ್ಥಾನದ ಇತರ ವಿಭಾಗಗಳಲ್ಲಿ ವರ್ಷಗಳು ಸರಿಯಾಗಿ ನಡೆಯಲಿಲ್ಲವಾದಕಾರಣ ಪ್ರಜೆಗಳಿಗೆ ಕ್ಷಾಮದ ಭೀತಿಯೂ ಕಳವಳವೂ ಪ್ರಾಪ್ತವಾಗಿರುತ್ತವೆ. ಬೊಂಬಾಯಿ ಮತ್ತು ಪಂಜಾಬ್ ಆಧಿಪತ್ಯಗಳೊಳಗೆ ಕಲವು ಕಾಲದಿಂದ ಲೇವಾದೇವಿ ನಡಿಸುತ್ತಾ ಪ್ರಜೆಗಳಲ್ಲಿ ತುಂಬಾ ನಂಬಿಕೆಯನ್ನು ಸಂಪಾದಿಸಿಕೊಂಡಿದ್ದ ಬ್ಯಾಂಕುಗಳು ದಿವಾಳಿಯಾಗಿ ಬಹಳ ನಷ್ಟ ಸಂಭವಿಸಿತು ಅನೇಕ ಜನರು ಇದರಿಂದ ನಿರ್ಗತಿಕರಾಗಿ ಕೆಟ್ಟುಹೋದರು. ಇದರಿಂದ ಈಗಲಾದರೂ ಜನಗಳಿಗೆ ವಿವೇಕವುಂಟಾಯಿತೆಂದೂ, ಇನ್ನು ಮುಂದೆ ಯೋಗ್ಯರಾದವರಿಂದ ನಡಿಸಲ್ಪಡದ ಇರುವಂಥಾ ಬ್ಯಾಂಕುಗಳಿಗೆ ತಮ್ಮ ಕಷ್ಟಾರ್ಜಿತವನ್ನು ಹಾಕಲಾರರೆಂದೂ ನಿರೀಕ್ಷಿಸಬೇಕಾಗಿದೆ ಹೀಗೆ ಬ್ಯಾಂಕುಗಳು ದಿವಾಳಿಯಾದದ್ದು ಪರಸ್ಪರ ಸಹಾಯ ಕೂಟಗಳ ಅಭಿವೃದ್ಧಿಗೆ ಅಡಚಣೆಯಾದರೂ ಆಗಬಹುದು, ಹೀಗಿದ್ದರೂ ಬಂಡವಾಳ (ಮೂಲಧನ) ವನ್ನು ಕೂಡಿಸುವುದಕ್ಕೂ, ಕೂಡಿಸಿದ್ದನ್ನು ಋಜುವಾದ ಮಾರ್ಗಗಳಲ್ಲಿ ವಿನಿಯೋಗಿಸುವುದಕ್ಕೂ ಈ ಪರಸ್ಪರ ಸಹಾಯವೇ ಮುಖ್ಯ ಸಾಧನವಾಗಿ ಪರಿಣಮಿಸಬೇಕೆಂದು ನಮಗೆ ಉಚಿತವಾಗಿದೆ ಯಾಕಂದರೆ ಜನರಲ್ಲಿ ಯಾರು ಬೇಗನೆ ಐಶ್ವರ್ಯವನ್ನು ಸಂಪಾದಿಸಬೇಕೆಂದು ಹೊರಡುತ್ತಾರೆಯೋ ಅಂಥವರು ಸ್ವಲ್ಪಕಾಲದೊಳಗೇ ತಮ್ಮಲ್ಲಿದ್ದದ್ದನ್ನೆಲ್ಲಾ ಕಳೆದುಕೊಂಡು ಕೆಟ್ಟುಹೋಗಿರುವುದೇನೂ ಅಪರೂಪವಲ್ಲ

ದಕ್ಷಿಣ ಆಫ್ರಿಕದಲ್ಲಿ ಸರ್ಕಾರದವರು ನಮ್ಮ ದೇಶೀಯರನ್ನು ಕಷ್ಟನಷ್ಟ ಮನೋವ್ಯಥೆಗಳಿಗೆ ಗುರಿಮಾಡಿರುವ ವಿಚಾರವು ವಿಶೇಷವಾದ ಆಗ್ರಹವನ್ನೂ ಸಂತಾಪವನ್ನೂ ಉಂಟುಮಾಡಿರುವುದು ಈ ವಿಚಾರವನ್ನು ತನಿಖೆಮಾಡಬೇಕಾದದ್ದು ಅವಶ್ಯವೆಂಬುವುದು ದಕ್ಷಿಣ ಆಫ್ರಿಕಾ ಗವರ್ನಮೆಂಟಿಗೇ ವೇದ್ಯವಾಯಿತು ಇದಕ್ಕಾಗಿ ಅವರು ನೇಮಕಮಾಡಿರುವ ಪಂಚಾಯಿತಿದಾರರ ನಿಷ್ಪಕ್ಷಪಾತತೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟೆಂಬುವುದು ಹೊರಪಟ್ಟಿದೆ, ಆದಾಗ್ಯೂ ಇಂಡಿಯಾ ಗವರ್ನಮೆಂಟಿನವರು ಇಲ್ಲಿಂದ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಟ್ಟಿರೋಣದರಿಂದ ಈ ಪಂಚಾಯತರ ವಿಚಾರಣೆಯಿಂದ ಮೇಲಾದೀತೆಂದು ನಮಗೆ ತೋರುತ್ತದೆ. ಈ ಹೋರಾಟಗಳಲ್ಲಿ ಎರಡು ಪಕ್ಷಗಳ ಕಾರ್ಯಗಳೂ ನಡದದ್ದು ನಡೆದಹಾಗೇ ಪ್ರಕಟವಾಗಿಲ್ಲವೆಂದೂ, ಬಹುಮಟ್ಟಿಗೆ ಉತ್ಪ್ರೇಕ್ಷೆ ಮಾಡಲಾಗಿವೆಯೆಂದೂ ಧಾರಾಳವಾಗಿ ಹೇಳಬಹುದು ಇದು ಹ್ಯಾಗಾದರೂ ಇರಲಿ, ಮುಖ್ಯವಾಗಿ ನಮ್ಮ ದೇಶೀಯರ ಪಾಡೂ ಅವರ ಸ್ಥಿತಿಯೂ ದಕ್ಷಿಣ ಆಫ್ರಿಕದಲ್ಲಿ ಈಗ ತೃಪ್ತಿಕರವಾಗಿಲ್ಲವೆನ್ನುವುದೇನೋ ಖಂಡಿತ. ಈಗ ನಡೆಯತಕ್ಕ ವಿಚಾರಣೆಯಿಂದ ಅಲ್ಲಿ ನಮ್ಮ ದೇಶೀಯರ ಸ್ಥಿತಿ ಚೆನ್ನಾಗಿ, ಅವರು ಅಭಿವೃದ್ಧಿಹೊಂದುವಂತಾಗುವುದೆಂದು ನಂಬಿ ನಿರೀಕ್ಷಿಸುತ್ತೇವೆ

ಹಿಂದುಸ್ಥಾನದೊಳಗೆ ವರುಷಾಂತ್ಯದಲ್ಲಿ ಜರುಗುವ ಕೂಟಗಳೂ ಸಭೆಗಳೂ ಸಮಾಜಗಳೂ ಕಳೆದ ವಾರ ಕರಾಚಿ, ಆಗ್ರಾ ಮುಂತಾದ ಬೇರೆಬೇರೆ ಸ್ಥಳಗಳಲ್ಲಿ ನಡೆದು ಮುಕ್ತಾಯಹೊಂದಿದವು, ಮತ್ತು ಉಪನ್ಯಾಸಗಳೂ ವಾಗಾಡಂಬರಗಳೂ ಇನ್ನೂ ವಿಶೇಷವಾಗಿದ್ದಾಗ್ಯೂ ಕೆಲವು ವಿಚಾರಗಳಲ್ಲಿ ಉದ್ದೇಶಪಟ್ಟ ಕಾರ್ಯಗಳು ನೆರವೇರಿರುತ್ತವೆ ಕರಾಚಿಯಲ್ಲಿ ನಡೆದ ರಾಷ್ಟ್ರಕೂಟಕ್ಕೆ (ನ್ಯಾಷನಲ್ ಕಾಂಗ್ರೆಸ್) ಆ ಮಹಾಸಭಿಕರು ಒಬ್ಬ ಮಹಮದಿಯ ದೊಡ್ಡಮನುಷ್ಯನನ್ನು ಅಧ್ಯಕ್ಷನನ್ನಾಗಿ ನೇಮಿಸಿದ್ದು ನಮಗೆ ತುಂಬಾ ಸಂತೋಷವನ್ನುಂಟುಮಾಡಿದೆ ಇದೇ ಪ್ರಕಾರ ಇನ್ನು ಮುಂದೆ ಈ ರಾಷ್ಟ್ರದ ಬೇರೆಬೇರೆ ಪಂಗಡಗಳಿಗೆ ಸೇರಿದ ಹಿಂದು, ಮುಸಲ್ಮಾನ್, ಕ್ರೈಸ್ತ, ಪಾರ್ಸಿ ಜನಾಂಗಗಳೆಲ್ಲಾ ಏಕೀಭವಿಸುತ್ತಾರೆಂದೂ, ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತು ನಮ್ಮ ದೇಶದ ಶ್ರೇಯೋಭಿವೃದ್ಧಿಯನ್ನು ನೆಲೆಗೊಳಿಸುತ್ತಾರೆಂದೂ ನಂಬಿ ಹಾರೈಸುತ್ತೇವೆ

ನಮ್ಮ ಶ್ರೇಯಸ್ಸಿಗೆ ಅನೇಕ ಪ್ರತಿಬಂಧಕಗಳು ಕಾಣಬರುತ್ತಿದ್ದಾಗ್ಯೂ ನಾವು ಅಧೈರ್ಯಪಡಬಾರದು, ನಮ್ಮ ಮನಸ್ಸು ಕುಂದಬಾರದು. ಶ್ರೇಯಸ್ಸೆಂಬುವುದು ಸುಲಭವಾಗಿ ಲಭಿಸತಕ್ಕದ್ದಲ್ಲ; ಕಷ್ಟ ಪ್ರತಿಬಂಧಕಗಳನ್ನು ನಾವು ಉತ್ಸಾಹದಿಂದಲೂ ಧೈರ್ಯವಾಗಿಯೂ ಜಯಿಸಬೇಕು. ನಮ್ಮ ಉದ್ದೇಶವು ಸಹಜವೂ ಸತ್ಯವೂ ಆಗಿವೆಯೆಂದೂ, ನಮ್ಮ ಕಾರ್ಯಸಾಧನೆಗಳು ಯೋಗ್ಯವಾಗಿವೆಯೆಂದೂ, ನಾವು ಮಾಡುವ ಕಾರ್ಯವು ದೇವರಿಂದ ನಿಯಾಮಕವಾದದ್ದೆಂದೂ ನಮ್ಮಲ್ಲಿ ಉಚಿತವಾದ ನಿಶ್ಚಯವುಂಟಾಗಬೇಕು ; ಹೀಗಾದ ಪಕ್ಷದಲ್ಲಿ ನಮ್ಮ ದೇಶವು ಯಥಾರ್ಥವಾದ ಅಭಿವೃದ್ಧಿಯನ್ನು ಹೊಂದುವುದೆಂತಲೂ, ನಮ್ಮ ಜನರಿಗೆ ನೆಮ್ಮದಿಯೂ, ಸುಖವೂ, ಶ್ರೇಯಸ್ಸೂ ಲಭ್ಯವಾಗುವವೆಂತಲೂ ನಾವು ದೃಢವಾಗಿ ನಂಬಿಕೊಂಡಿರಬಹುದು

ಹೊಸ ವರುಷ

ಹೊಸ ವರುಷವು ನಮ್ಮ ವಾಚಕಮಹಾಶಯರುಗಳಿಗೆಲ್ಲಾ ಶುಭವರುಷವಾಗಲೆಂದು ಹಾರೈಸುತ್ತೇವೆ ಗಂಟೆಗಳು, ದಿನಗಳು, ವಾರಗಳು, ತಿಂಗಳುಗಳು, ವರುಷಗಳು ಇವುಗಳ ಮೂಲಕವಾಗಿ ನಾವು ಕಾಲಗತಿಯನ್ನು ಲೆಖ್ಖಿಸುತ್ತೇವೆ ವರುಷಗಳು ಒಂದರ ಹಿಂದೆ ಮತ್ತೊಂದು ಬರುತ್ತಲೇ ಇರುವುವು ಇವುಗಳಿಗೆ ಅಂತ್ಯವೇ ಇಲ್ಲವೋ ಎಂಬಂತೆ ತೋರುವುದು 1913 ನೆಯ ವರುಷವು ಕಳೆದು ಹೋಗಿ, 1914 ನೆಯ ವರುಷವು ಬಂದಿರುತ್ತದೆ ಈ ಹೊಸ ವರುಷವು ನನಗೆ ಯಾವುದನ್ನು ತಂದುಕೊಡುವುದಕ್ಕಿರುವುದು ? ಈ ಮುಂದಿನ ವರುಷದಲ್ಲಿ ನನಗೆ ಲಭ್ಯವಾಗಬೇಕೆಂದು ನಾನು ಕೋರಬಹುದಾದ ಅತ್ಯುತ್ತಮವಾದ ವರವು ಯಾವುದು ?

ಬೇಡಿದ ಮಾತ್ರಕ್ಕೆ ಇಷ್ಟಸಿದ್ಧಿಯಾಗುವ ಪಕ್ಷದಲ್ಲಿ ಅಪೂರ್ವವಾದ ವರಗಳಿಗಾಗಿ ನಾವು ಪ್ರಾರ್ಥಿಸುವವು ಏಕೆಂದರೆ ಅನೇಕ ಸಂದರ್ಭಗಳಲ್ಲಿ ನಾವು ಚಿಕ್ಕ ಮಕ್ಕಳಿಗಿಂತಲೂ ಹೆಚ್ಚು ಬುದ್ಧಿವಂತರಾಗಿರುವುದಿಲ್ಲ ನಾವು ಬಯಸತಕ್ಕಂಥ ವಸ್ತುಗಳ ಬೆಲೆಯಾದರೂ ನಮಗೆ ತಿಳಿದಿರುವುದಿಲ್ಲ ಮಹಾಮಹಿಮನೂ ಜ್ಞಾನಿಯೂ ಆಗಿರುವಂಥಾ ನಮ್ಮನ್ನು ಸೃಷ್ಟಿಸಿ ಈ ಲೋಕದಲ್ಲಿ ಇಟ್ಟಿರುವಂಥಾ ದೇವರು ನಮಗೆ ಅತ್ಯಾವಶ್ಯಕವಾದುದು ಏನೆಂಬುವನ್ನು ತಿಳಿದಿರುತ್ತಾನೆ ನಾವು ಆತನಲ್ಲಿ ನಂಬಿಕೆಯಿಟ್ಟು ಆತನನ್ನು ಪ್ರೀತಿಸಿ, ಸೇವೆಮಾಡಿದರೆ, ಆತನು ನಮಗೆ ಯಾವುದು ಒಳ್ಳೆಯದೋ ಅದನ್ನು ದಯಪಾಲಿಸುವನು. ದೇವರು ನಮ್ಮನ್ನು ಯಾವ ಕೆಲಸವನ್ನು ಮಾಡುವುದಕ್ಕಾಗಿ ಈ ಲೋಕದಲ್ಲಿ ಇಟ್ಟಿರುತ್ತಾನೋ ಆ ಕೆಲಸವನ್ನು ಮಾಡುವಂಥ ಆತನ ಮಕ್ಕಳಾಗಿರುತ್ತೇವೆ ಎಂಬೀ ನಿಶ್ಚಯತ್ವವೇ ನಮ್ಮಲ್ಲಿ ಯಾರಾದರೂ ಹೊಂದಬಹುದಾದ ಅತ್ಯುತ್ತಮವಾದ ವರವಾಗಿರುತ್ತದೆ

ಕೆಲವರಿಗೆ ತಮ್ಮ ಇಷ್ಟಸಿದ್ಧಿಯನ್ನು ಹೊಂದುವ ಸಂದರ್ಭವು ಸಿಕ್ಕಿದರೆ, ಅವರು ಐಶ್ವರ್ಯವನ್ನೂ ಪದವಿಯನ್ನೂ ಕೀರ್ತಿಯನ್ನೂ ಬೇಡಿಕೊಳ್ಳಲಪೇಕ್ಷಿಸುವರು ಆದರೆ ಇವುಗಳು ಕ್ಷಣಿಕವಾದುವುಗಳು ಇವುಗಳು ಒಳ್ಳೆಯವುಗಳೇ ಆದಾಗ್ಯೂ ಕಾಲಕ್ರಮೇಣ ನಶಿಸಿಹೋಗುವುವು ನಮಗೆ ಸಹಜವಾದ ಸಂತೋಷವು ಲಭ್ಯವಾಗಬೇಕಾದರೆ ಇದಕ್ಕಿಂತಲೂ ಹೆಚ್ಚು ಶಾಶ್ವತವಾದುದು ಬೇಕಾಗಿರುವುದು ಮಾಯವಾಗಿ ಹೋಗುವಂಥ ಐಹಿಕ ವಸ್ತುಗಳು ನಮಗೆ ಕೆಲವು ಕಾಲದ ವರೆಗೂ ಸುಖವನ್ನೂ ಸಂತೋಷವನ್ನೂ ಕೊಡುತ್ತವೆ ಆದರೆ ಅವುಗಳು ನಮ್ಮ ಆತ್ಮಗಳಿಗೆ ಶಾಶ್ವತವಾದ ಸಂತೋಷವನ್ನು ಕೊಡಲಾರವು. ಮಾಯವಾಗಿ ಹೋಗತಕ್ಕಂಥ ಸಂತೋಷಗಳು ಸತ್ತು ಇಲ್ಲದೆ ಹೋಗುವಂಥ ನಮ್ಮ ಶರೀರಗಳಂತೆ ಇರುತ್ತವೆ ಆದರೆ ಶಾಶ್ವತವಾದ ಸಂತೋಷವನ್ನು ಕೊಡುವಂಥವುಗಳು ಸಹಜವಾಗಿಯೂ ಶಾಶ್ವತವಾಗಿಯೂ ನಿತ್ಯವಾಗಿಯೂ ಇರುವಂಥ ನಮ್ಮ ಆತ್ಮಗಳಂತೆ ಇರುತ್ತವೆ ಹೊಸ ವರುಷವು ನಮಗೆ ಸಂತೋಷವನ್ನು ತಂದು ಕೊಡಬೇಕಾದರೆ, ನಾವು ಯಾವ ಸ್ಥಳದಲ್ಲಿರುತ್ತೇವೆ, ಯಾವ ಉದ್ಯೋಗವನ್ನು ಮಾಡುತ್ತೇವೆ ಅಥವಾ ನಮಗೆ ಎಷ್ಟರ ಮಟ್ಟಿಗೆ ಆಸ್ತಿಪಾಸ್ತಿಗಳು ಇರುತ್ತವ ಎಂಬೀ ವಿಷಯಗಳನ್ನು ಅದು ಲಕ್ಷಿಸುವುದಿಲ್ಲ, ಆದರೆ ನಾವು ಎಷ್ಟರ ಮಟ್ಟಿಗೆ ದೇವರನ್ನು ತಿಳಿದುಕೊಂಡು ಆತನಿಗೆ ವಿಧೇಯರಾಗಿರುತ್ತೇವೆಂಬುದನ್ನು ನೋಡಿ ಕೊಡುವುದು ನಾವು ಲೋಕಭೋಗಿಗಳಾಗಿಯೂ ವಿಷಯಾಸಕ್ತರಾಗಿಯೂ ಬದುಕಿದರೆ, ಹೊಸ ವರುಷವು ನಮಗೆ ಶಾಶ್ವತವಾದ ಸುಖವನ್ನು ತಂದುಕೊಡಲಾರದು ದ್ರವ್ಯಾರ್ಜನೆಮಾಡಬೇಕು, ಪದವಿಯನ್ನು ಸಂಪಾದಿಸಬೇಕು ಎಂಬೀ ಉದ್ದೇಶಗಳಿಂದ ಜೀವಿಸುತ್ತಾ ಬಗುವವರಾದರೆ, ಐಶ್ವರ್ಯದಲ್ಲಿ ಸಂತೃಪ್ತಿಯಿಲ್ಲ, ಪದವಿಯಲ್ಲಿ ಮನಶ್ಶಾಂತಿಯಿಲ್ಲ ಎಂಬುದನ್ನು ಕಂಡುಕೊಳ್ಳುವೆವು

ನಾವು ಮಾಡತಕ್ಕ ಅನುದಿನದ ಕಾರ್ಯಗಳನ್ನು ದೇವರು ಮೆಚ್ಚುವಂಥ ರೀತಿಯಲ್ಲಿ ಮಾಡುವುದರಲ್ಲಿಯೇ ಸಹಜವಾದ ಸಂತೋಷವು ಇರುತ್ತದೆ ಆತನು ನಮ್ಮ ಸೃಷ್ಟಿಕರ್ತನಾಗಿಯೂ ನಮ್ಮ ಪರಿಪಾಲಕನಾಗಿಯೂ ನಮ್ಮ ವಿಮೋಚಕನಾಗಿಯೂ ನಮ್ಮ ತಂದೆಯಾಗಿಯೂ ಇರುತ್ತಾನೆ ನಾವು ಆತನನ್ನು ಬಿಟ್ಟುಬಿಟ್ಟು ನಮ್ಮ ಇಷ್ಟ ಬಂದ ಪ್ರಕಾರ ನಡೆದುಕೊಳ್ಳುವವರಾದರೆ, ಆ ಸಹಜವಾದ ಸಂತೋಷವು ನಮ್ಮನ್ನು ಬಿಟ್ಟು ತೊಲಗುವುದನ್ನು ನಾವು ನೋಡುವೆವು ಆದರೆ ನಾವು ಏನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆಂದು ಪ್ರತಿದಿನದಲ್ಲಿಯೂ ವಿಚಾರಮಾಡುತ್ತಲೂ ನಮ್ಮ ಸ್ಥಿತಿಗತಿಗಳು ಹೇಗಿದ್ದಾಗ್ಯೂ ಆತನನ್ನು ಮೆಚ್ಚಿಸುವುದಕ್ಕೆ ದೈನ್ಯಭಾವದಿಂದ ಪ್ರಯತ್ನಪಡುತ್ತಲೂ ಬದುಕುವವರಾದರೆ, ನಾವು ಒಂದು ಗುಡಿಸಲಿನಲ್ಲಿ ವಾಸಮಾಡುವವರೇ ಆದಾಗ್ಯೂ ನಮ್ಮ ಉದ್ಯೋಗವು ಕಷ್ಟಕರವಾದುದೂ ನಿಕೃಷ್ಟವಾದುದೂ ಆಗಿದ್ದರೂ ದೇವರೇ ನಮ್ಮ ಬಳಿಗೆ ಬಂದು ನಮ್ಮೊಳಗೆ ವಾಸಮಾಡುತ್ತಾನೆಂಬುದನ್ನು ತಿಳಿದುಕೊಳ್ಳುವೆವು ದೇವರು ನಮ್ಮೊಂದಿಗೆ ಇರುವನಾದರೆ, ಸಕಲ ಸೌಭಾಗ್ಯವೂ ನಮ್ಮದೇ ಆಗಿರುವುದು ಏಕೆಂದರೆ ಆತನು ಎಲ್ಲಾ ಸುವರಗಳ ನಿಧಿಯಾಗಿರುತ್ತಾನೆ

ಇಂತಹ ಜೀವಮಾನವೇ ಸಹಜವಾದುದು ಈ ಲೋಕವು ಒಂದು ಪಾಠಶಾಲೆಯಂತೆ ಇರುತ್ತದೆ ಈ ದೊಡ್ಡ ಶಾಲೆಯಲ್ಲಿ ನಾವು ದೇವರನ್ನು ತಿಳಿದು ಸೇವಿಸುವುದಕ್ಕೆ ಕಲಿಯಬೇಕಾಗಿರುತ್ತದೆ ಈ ಕೆಲಸವು ಕೆಲವು ಸಮಯಗಳಲ್ಲಿ ಕಷ್ಟಕರವಾಗಿರುವುದು ಆದರೆ ಕಲಿಯಬೇಕೆಂಬ ಯಥಾರ್ಥವಾದ ಕಾಂಕ್ಷೆಯು ನಮ್ಮಲ್ಲಿರುವುದಾದರೆ, ನಾವು ಕಲಿತುಕೊಳ್ಳುವೆವು ದೇವರೇ ನಮಗೆ ಕಲಿಸಿಕೊಡುವನು ನಾವು ಆತನ ಶಿಕ್ಷೆಗೆ ಒಳಪಟ್ಟವರಾಗಿದ್ದರೆ, ಈ ಹೊಸ ವರುಷವು ನಮಗೆ ಅಮೋಘವಾದ ಸುವರಗಳನ್ನು ನೀಡುವ ಶುಭವರುಷವಾಗಿಯೇ ಇರುವುದೆಂದು ತಿಳುಕೊಳ್ಳುವೆವು ನಮ್ಮ ವಾಚಕ ಮಹಾಶಯರುಗಳಲ್ಲಿ ಪ್ರತಿಯೊಬ್ಬರೂ ಈ ಹೊಸ ವರುಷದಲ್ಲಿ ದೇವರ ನಡಿಸುವಿಕೆಯೂ ಆತನಿಂದ ಬರುವ ಸಹಾಯವೂ ಎಷ್ಟು ಭಾಗ್ಯಕರವಾದುವುಗಳೆಂಬುದನ್ನು ಅನುಭವಪೂರ್ವಕವಾಗಿ ತಿಳಿದುಕೊಳ್ಳುವವರಾಗಲೆಂದು ಹಾರೈಸುತ್ತೇವೆ

ಮೈಸೂರಿನ ಹೊಸ ತಹನಾಮೆಯ ಕೆಲವು ಮುಖ್ಯ ವಿಷಯಗಳು.

ಬ್ರಿಟಿಷ್ ಸರ್ಕಾರದವರಿಗೂ ಮತ್ತು ನಮ್ಮ ಶ್ರೀಮನ್ ಮಹಾರಾಜರವರಿಗೂ ನಡೆದ ತಹನಾಮೆಯ ನಿಬಂಧನೆಗಳು ಪ್ರಕಟವಾಗಿರುತ್ತವೆ ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರು ಮೈಸೂರಿನ ಬ್ರಿಟಿಷ್ ರೆಸಿಡೆಂಟ್ ಲೆಫ್ಟಿನೆಂಟ್ ಕರ್ನಲ್ ಸರ್ ಹ್ಯೂ ಡೇಲಿಯವರಿಗೆ ವಹಿಸಿದ ಸಂಪೂರ್ಣಾಧಿಕಾರದ ಮಹಿಮೆಯಿಂದ ರೈಟ್ ಆನರಬಲ್ ಸರ್ ಹ್ಯೂ ಡೇಲಿಯವರಿಗೂ, ಮೈಸೂರಿನ ಶ್ರೀಮನ್ ಮಹಾರಾಜರವರಿಗೂ 1913 ನೇ ವರ್ಷದ ನವಂಬರು ಮಾಹೆಯ 26 ನೇ ತಾರೀಖಿನಲ್ಲಿ ಈ ತಹನಾಮೆಯು ನಡೆದು ಡಿಸೆಂಬರ್ ಮಾಹೆಯ ಗುರ್‍ರೇ ತಾರೀಖಿನಲ್ಲಿ ವೈಸ್ರಾಯಿ ಮತ್ತು ಗೌರ್ನರ್ ಜನರಲ್ ಸಾಹೇಬರವರಿಂದ ಬಂಕೀಪುರದಲ್ಲಿ ಮುಂಜೂರ್ಮಾಡಲ್ಪಟ್ಟದ್ದಾಗಿ ವಿವರಿಸಲ್ಪಟ್ಟಿದೆ ತಹನಾಮೆಯ ವಿವರಣೆಯು ಈ ರೀತಿಯಲ್ಲಿ ಪ್ರಾರಂಭಿಸಲ್ಪಟ್ಟಿದೆ —

ಮೈಸೂರಿನ ಸಂಸ್ಥಾನಾಧಿಗಳು 1881 ರಲ್ಲಿ ಅವರಿಗೆ ಮೈಸೂರು ಸಂಸ್ಥಾನದ ಆಡಳಿತವು ಪುನಃ ಒಪ್ಪಿಸಲ್ಪಟ್ಟಾಗಲಿಂದ ಸಾರ್ವಭೌಮ ಸರ್ಕಾರದಲ್ಲಿ ದೃಢಭಕ್ತಿಯನ್ನೂ, ಮೈತ್ರಿಯನ್ನೂ ಪ್ರಕಟಪಡಿಸಿರುವುದರಿಂದಲೂ, ಕಳೆದ 33 ವರ್ಷಗಳಿಂದ ಮೈಸೂರು ಸಂಸ್ಥಾನದ ರಾಜ್ಯಭಾರವು ಬ್ರಿಟಿಷ್ ಸರ್ಕಾರದವರ ಸಂತೋಷಕ್ಕೂ, ಮೆಚ್ಚಿಕೆಗೂ ಪಾತ್ರವಾಗುವಂತೆ ನಡಿಸಲ್ಪಟ್ಟಿರುವುದರಿಂದಲೂ ಬ್ರಿಟಿಷ್ ಸರ್ಕಾರದವರು ಆಳುವ ಶ್ರೀಮನ್ ಮಹಾರಾಜರವರನ್ನು ಎಷ್ಟೊಂದು ಗೌರವದಿಂದ ಪರಿಗಣಿಸುತ್ತಾರೆಂಬುವುದನ್ನು ವ್ಯಕ್ತಪಡಿಸುವುದಕ್ಕೂ, ಸಂಸ್ಥಾನದ ರಾಜ್ಯಭಾರವು ಆಳುವ ಮಹಾರಾಜರವರ ಆಳಿತಕ್ಕೆ ಒಪ್ಪಿಸಲ್ಪಟ್ಟಾಗ ಮಾಡಲ್ಪಟ್ಟ ಕರಾರಿನ ನಿಬಂಧನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರು ಇಷ್ಟವುಳ್ಳವರಾಗಿರುತ್ತಾರೆ ಇದರಡಿ ಸೂಚಿಸಲ್ಪಡುವ ನಿಬಂಧನೆಗಳು ಇದರಿಂದ ಒಪ್ಪಿಕೊಳ್ಳಲ್ಪಟ್ಟವೆ —

1881 ನೇ ವರ್ಷದ ಕರಾರಿನಲ್ಲಿ 24 ನಿಬಂಧನೆಗಳು ಬರೆಯಲ್ಪಟ್ಟಿದ್ದವು ಈ ಹೊಸ ತಹನಾಮೆಯಲ್ಲಿ 22 ನಿಬಂಧನೆಗಳು ಮಾತ್ರ ಇರುತ್ತವೆ ತಹನಾಮೆಯ ಮುಖ್ಯಭಾಗವು ಹಿಂದಿನ ಕರಾರಿನಂತೆಯೇ ಇರುತ್ತದೆ ಹಿಂದಿನ ಕರಾರಿನಲ್ಲಿ ಸಂಸ್ಥಾನವು ಆಗಿನ ಮಹಾರಾಜರವರಿಗೆ ಒಪ್ಪಿಸಲ್ಪಟ್ಟು ಅವರು ರಾಜ್ಯಾಡಳಿತವನ್ನು ಮಾಡಲು ಅಧಿಕಾರ ವಹಿಸಲ್ಪಟ್ಟಿರುವರೆಂದು ನಮೂದಿಸಲ್ಪಟ್ಟಿತ್ತು ಈಗಿನ ಕರಾರಿನಲ್ಲಿ ರಾಜ್ಯಭಾರವನ್ನು ವಹಿಸಿ ನಡಿಸುತ್ತಲಿರುವ ಶ್ರೀಮನ್ ಮಹಾರಾಜರವರೊಂದಿಗೆ ಕರಾರು ನಡೆಯಿತೆಂದು ಸೂಚಿಸಲ್ಪಟ್ಟಿರುವುದೇನೇ ಈಗಿನ ತಹನಾಮೆಗೂ ಹಿಂದಿನ ಕರಾರಿಗೂ ಇರುವ ವ್ಯತ್ಯಾಸ ಈ ವ್ಯತ್ಯಾಸಕ್ಕನುಸಾರವಾಗಿ ಹಿಂದಿನ ಕರಾರಿನ ಮೊದಲನೇ ನಿಬಂಧನೆಯು ಈಗ ರದ್ದು ಮಾಡಲ್ಪಟ್ಟಿದೆ.

ಹಿಂದಿನ ಕರಾರಿನ ಎರಡನೆ ನಿಬಂಧನೆಯಲ್ಲಿ ಆಳಿದ ಶ್ರೀಮನ್ ಮಹಾರಾಜರವರೂ, ಅವರ ಸಂತತಿಯವರೂ ಅದರಡಿಯಲ್ಲಿ ನಮೂದಿಸಲ್ಪಟ್ಟಿದ್ದ ಷರತ್ತುಗಳಿಗೆ ಅನುಸಾರವಾಗಿ ನಡೆದುಕೊಳ್ಳುವ ವರೆವಿಗೂ ಸಂಸ್ಥಾನವು ಅವರ ಮತ್ತು ಅವರ ಸಂತತಿಯವರ ಸ್ವಾಧೀನದಲ್ಲಿದ್ದು, ಅವರೂ ಮತ್ತು ಅವರ ಸಂತತಿಯವರೂ ರಾಜ್ಯಾಡಳಿತವನ್ನು ನಡಿಸಲು ಬಾಧ್ಯತೆಯುಳ್ಳವರೆಂದು ನಮೂದಾಗಿತ್ತು

ಈಗಿನ ತಹನಾಮೆಯ ಮೊದಲನೇ ನಿಬಂಧನೆಯು ಈ ರೀತಿಯಲ್ಲಿ ಬದಲಾಯಿಸಲ್ಪಟ್ಟಿದೆ —ಆಳುವ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರರವರೂ, ಮುಂದೆ ನಮೂದಾಗುವ ರೀತಿಗನುಸಾರವಾಗಿ ಅವರನ್ನು ಹಿಂಬಾಲಿಸಿ ಬರುವ ಅವರ ಸಂತತಿಯವರೂ ಅದರಡಿ ನಮೂದಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಸಂಸ್ಥಾನವನ್ನು ವಹಿಸಿ ಅದರ ರಾಜ್ಯಾಡಳಿತವನ್ನು ಸಾರೋದ್ಧಾರವಾಗಿ ನಡಿಸಿಕೊಂಡು ಬರಲು ಬಾಧ್ಯತೆಯುಳ್ಳವರು. "ಸಾರೋದ್ಧಾರವಾಗಿ" ಎಂಬ ಪದವು ಸೇರಿಸಲ್ಪಟ್ಟಿರುವುದಲ್ಲದೆ ಶೈಲಿಯು ಸ್ವಲ್ಪಮಟ್ಟಿಗೆ ವ್ಯತ್ಯಸ್ತವಾಗಿ ಮಾಡಲ್ಪಟ್ಟಿರುವುದು ವಾಚಕರುಗಳು ಗಮನಿಸತಕ್ಕ ವಿಷಯವು —

ಮೈಸೂರು ಸಂಸ್ಥಾನದೊಳಗೆ ಬ್ರಿಟಿಷ್ ಸರ್ಕಾರದಿಂದ ಹಾಕಲ್ಪಡುವ ಅಥವಾ ನಡಿಸಲ್ಪಡುವ ರೈಲುಗಳ ವಿಚಾರವಾಗಿ 1881 ನೇ ವರ್ಷದ ಕರಾರಿನಲ್ಲಿ ಅಂಥಾ ರೈಲುಗಳಿಗಾಗಿ ಉಪಯೋಗಿಸಲ್ಪಡುವ ಜಮೀನನ್ನು ಮೈಸೂರು ಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ಮುಫತ್ತಾಗಿ ಬಿಟ್ಟುಕೊಡಬೇಕೆಂದು ನಮೂದಾಗಿತ್ತು "ಮುಫತ್ತಾಗಿ" ಎಂಬ ಪದವು ಈಗಿನ ಹೊಸ ತಹನಾಮೆಯಲ್ಲಿ ತೆಗೆದುಹಾಕಲ್ಪಟ್ಟಿದೆ.

ಸಾಮಾನ್ಯವಾದ ಎರಡು ನಿಬಂಧನೆಗಳಲ್ಲಿ "ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರ ಪೂರ್ವಭಾವಿಯಾದ ಮುಂಜೂರಾತಿಯ ಪ್ರಕಾರ" ಎಂಬುವುದು "ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರ ಪೂರ್ವಭಾವಿಯಾದ ಸಮ್ಮತಿಗನುಸಾರವಾಗಿ" ಎಂದು ವಾಕ್ಯಶೈಲಿಯಲ್ಲಿ ವ್ಯತ್ಯಾಸ ಮಾಡಲ್ಪಟ್ಟಿರುವುದು.

ಕೊನೆಕೊನೆಯ ನಿಬಂಧನೆಗಳಲ್ಲೇ ಬಹು ಮುಖ್ಯವಾದ ಬದಲಾವಣೆಗಳು ಮಾಡಲ್ಪಟ್ಟವೆ. ಹಿಂದಿನ ಕರಾರಿನಲ್ಲಿ 22 ನೇ ನಿಬಂಧನೆಯು ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರು ಆಗಿಂದಾಗ್ಗೆ ಸಂಸ್ಥಾನದ ಆಯವ್ಯಯಗಳ ವಿಚಾರ, ಕಂದಾಯವನ್ನು ಹಾಕುವುದು, ಮತ್ತು ಕಂದಾಯಗಳ ವಸೂಲಿ, ತೆರಿಗೆಯನ್ನು ವಿಧಿಸುವುದು, ನ್ಯಾಯವಿಚಾರಣೆ, ವ್ಯಾಪಾರವನ್ನು ಹೆಚ್ಚಿಸುವುದು, ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮುಂತಾದವುಗಳನ್ನು ಪ್ರೋತ್ಸಾಹಿಸುವುದು, ಮತ್ತು ಶ್ರೀಮನ್ ಮಹಾರಾಜರವರ ಸ್ವಂತಕ್ಕೆ ಸಂಬಂಧಪಟ್ಟ ಆದಾಯವಿಚಾರ, ಪ್ರಜೆಗಳ ಸುಖಸಂತೋಷಗಳನ್ನು ಕುರಿತ ವಿಚಾರ, ಮತ್ತು ಬ್ರಿಟಿಷ್ ಸರ್ಕಾರದವರೊಂದಿಗೆ ಶ್ರೀಮನ್ ಮಹಾರಾಜರವರಿಗೆ ಇರುವ ಸಂಬಂಧ, ಈ ವಿಚಾರಗಳೆಲ್ಲೆಲ್ಲಾ ತಿಳಿಸುವ ಬುದ್ಧಿವಾದಗಳಿಗನುಸಾರವಾಗಿ ಯಾವಾಗ್ಯೂ ಮೈಸೂರಿನ ಶ್ರೀಮನ್ ಮಹಾರಾಜರವರು ನಡೆದುಕೊಳ್ಳತಕ್ಕದ್ದು ಎಂದು ಬರೆಯಲ್ಪಟ್ಟಿತ್ತು

ಹಿಂದಿನ ಕರಾರಿನ 23 ನೇ ನಿಬಂಧನೆಯು ಇದರ ಹಿಂದೆ ನಮೂದಿಸಲ್ಪಟ್ಟಿರುವ ನಿಬಂಧನೆಗಳಲ್ಲಿ—ಯಾವ ನಿಬಂಧನೆಯನ್ನಾದರೂ ಮೈಸೂರಿನ ಶ್ರೀಮನ್ ಮಹಾರಾಜರವರು ಉಲ್ಲಂಘಿಸಿ ನಡೆದಾಗ್ಯೂ ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರು ಸಂಸ್ಥಾನವನ್ನು ವಹಿಸಿಕೊಳ್ಳಬಹುದು, ಮತ್ತು ರಾಜ್ಯಾಡಳಿತವನ್ನು ತಾವೇ ಖುದ್ದಾಗಿ ವಹಿಸಬಹುದು, ಅಥವಾ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಒಳ್ಳೇ ಪರಿಪಾಲನೆಯನ್ನುಂಟುಮಾಡುವುದಕ್ಕೂ, ಸಂಸ್ಥಾನದೊಳಗೆ ಬ್ರಿಟಿಷ್‌ನವರ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದಕ್ಕೂ ಅವಶ್ಯಕವಾದದ್ದೆಂದು ಅವರ ಮನಸ್ಸಿಗೆ ಕಂಡುಬರುವಂಥಾ ಏರ್ಪಾಡುಗಳನ್ನು ಮಾಡಬಹುದು ಎಂದು ವಿಧಾಯಕವಾಗಿತ್ತು.

ಹಿಂದಿನ ಕರಾರಿನ 22—23 ನೇ ನಿಬಂಧನೆಗಳಾದ ಇವೆರಡೂ ಈ ಹೊಸ ತಹನಾಮೆಯಲ್ಲಿ ವಜಾ ಮಾಡಲ್ಪಟ್ಟು, ಇವುಗಳಿಗೆ ಬದಲಾಗಿ ಈ ಕೆಳಗೆ ಸೂಚಿಸಲ್ಪಡುವ ನಿಬಂಧನೆಯು ನಮೂದಿಸಲ್ಪಟ್ಟಿದೆ.

ಕರಾರಿನಲ್ಲಿ ನಮೂದಿಸಲ್ಪಡದೇ ಇರುವ, ಮೈಸೂರು ಸಂಸ್ಥಾನದ ಒಳ ಆಡಳಿತಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಶ್ರೀಮನ್ಮಹಾರಾಜರವರ ಸ್ವಾತಂತ್ರ್ಯದಲ್ಲಿ ಪ್ರವೇಶಿಸಲು ತಮಗೆ ಇಷ್ಟವಿಲ್ಲವೆಂಬುವುದನ್ನು ತಿಳಿಸುವುದರೊಂದಿಗೆ ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರು ಅವರಿಗಿರುವ ಶ್ರೇಷ್ಠತ್ವ ಮತ್ತು ಹೆಚ್ಚಿನ ಅಧಿಕಾರದ ಮಹಿಮೆಯಿಂದ ಶ್ರೀಮನ್ಮಹಾರಾಜರವರ ಆಡಳಿತದ ವಿಚಾರದಲ್ಲಿ ಪ್ರವೇಶಿಸುವುದಕ್ಕೂ ಮತ್ತು ಬ್ರಿಟಿಷ್ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಸಂಸ್ಥಾನದಲ್ಲಿ ಕಾಪಾಡುವುದಕ್ಕೂ, ಪ್ರಜೆಗಳಿಗೆ ಹಿತಕರವಾಗಿರುವಂತೆ ರಾಜ್ಯಭಾರವನ್ನು ಮಾಡುವುದಕ್ಕೂ ಸಂದರ್ಭಾನುಸಾರವಾಗಿ ಯಾವ ಕಾಲದಲ್ಲಿ ಯಾವ ಏರ್ಪಾಡುಗಳು ಆವಶ್ಯಕವೆಂದು ತೋರಿ ಬರುವುದೋ ಅಂಥಾ ಪರಿಹಾರರೂಪವಾದ ಏರ್ಪಾಡುಗಳನ್ನು ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ

ತಹನಾಮೆಯ ಕೊನೇ ನಿಬಂಧನೆಯು ಹಿಂದಿನ ಕರಾರಿನ ಕೊನೇ ನಿಬಂಧನೆಯಂತೆಯೇ ಇರುತ್ತದೆ ಅದರ ಸಾರಾಂಶವೇನೆಂದರೆ —

ಯಾವ ಕಾಗದಪತ್ರಗಳಿಂದ ಬ್ರಿಟಿಷ್ ಆಡಳಿತಕ್ಕೊಳಪಟ್ಟ ದೇಶಗಳ ಸ್ಥಿತಿಯು ಪದ್ಧತಿಗನುಸಾರವಾಗಿ ಬರವಣಿಗೆಯ ರೂಪದಲ್ಲಿ ನಮೂದಿಸಲ್ಪಟ್ಟಿದೆಯೋ ಅಂಥಾ ಇತರ ಎಲ್ಲಾ ಕಾಗದಪತ್ರಗಳನ್ನೂ ಈ ತಹನಾಮೆಯು ರದ್ದು ಮಾಡುವಂಥದ್ದಾಗಿರುವುದು ಮತ್ತು ಮೇಲೆ ನಮೂದಾಗಿರುವ ನಿಬಂಧನೆಗಳಲ್ಲಿ ಯಾವ ನಿಬಂಧನೆಯು ನಂಬಿಕೆಯಾಗಿ ಅನುಸರಿಸಲ್ಪಟ್ಟಿದೆಯೋ ಇಲ್ಲವೋ, ಅಥವಾ ಮೈಸೂರು ಸಂಸ್ಥಾನವನ್ನು ವಹಿಸಿ ಅದರ ರಾಜ್ಯಾಡಳಿತವನ್ನು ನಡಿಸಲು ಯಾವ ಪುರುಷನಾದರೂ ಹಕ್ಕು ಮತ್ತು ಯೋಗ್ಯತೆ ಇದೆಯೋ ಇಲ್ಲವೋ ಎಂಬ ಪ್ರಶ್ನೆಗಳು ಹುಟ್ಟುವಾಗ ಅದರ ಮೇಲೆ ಕೌನ್ಸಿಲ್ಲಿನ ಸಾಮಾಜಿಕರಿಂದೊಡಗೂಡಿದ ಗೌರ್ನರ್ ಜನರಲ್‌ರವರ ತೀರ್ಮಾನವೇ ಆಖೈರು ಫೈಸಲಾಗಿರತಕ್ಕದ್ದು —ಸಾಧ್ವಿ

ಭಾವಸಾರಕ್ಷತ್ರಿಯರ ಎರಡನೇ ಮಹಾಸಭೆಯು

ರಾಜಧಾನಿಯಲ್ಲಿ ನಡೆದದ್ದು

ಕಳೆದ ಗುರುವಾರ ಮಧ್ಯಾಹ್ನ 11 ಗಂಟೆಗೆ ಮೈಸೂರು ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಹಿಂದುಸ್ಥಾನದ ಭಾವಸಾರ ಕ್ಷತ್ರಿಯರ ಎರಡನೆಯ ಮಹಾ ಸಭೆಯು ಪ್ರಾರಂಭವಾಗಿ ಮೂರುದಿನ ನಡೆಯಿತು ಟೌನ್ ಹಾಲ್ ಬಂಗಲೆಯನ್ನು ಒಳಗೂ ಹೊರಗೂ ಅಲಂಕರಿಸಿದ್ದರು ಬೊಂಬಾಯಿ, ಬಿಜಾಪುರ, ಖಾಂದೇಷ್, ಚಾಳಿಸ್‌ಗಾವ, ಬರೋಚ್, ಬೆಳ್ಗಾವ, ಪೂನ, ಷೋಲಾಪುರ, ಧಾರ್ವಾಡ, ಹೈದರಾಬಾದ್, ರಾಯಚೂರು, ಮದ್ರಾಸ್, ಬಳ್ಳಾರಿ, ಕೊಲ್ಲಾಪುರ, ಹರಪನಹಳ್ಳಿ, ಕುಂಭಕೋಣ, ತಂಜಾವೂರು, ಈರೋಡು, ಕೊಯಮತ್ತೂರು, ನೀಲಗಿರಿ, ಈ ಮುಂತಾದ ಪರ ಸ್ಥಳಗಳಿಂದ ಸುಮಾರು 150 ಮಂದಿ ಪ್ರತಿನಿಧಿಗಳೂ, ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಿಂದ ಸುಮಾರು 170 ಪ್ರತಿನಿಧಿಗಳೂ ಮಹಾ ಸಭೆಗೆ ಬಂದಿದ್ದರಲ್ಲದೆ ಮೈಸೂರು ಪಟ್ಟಣದ ಭಾವಸಾರ ಕ್ಷತ್ರಿಯ ಮುಖಂಡರುಗಳೆಲ್ಲಾ ಹಾಜರಾಗಿದ್ದರು ಮತ್ತು ರಾಜಧಾನಿಯಲ್ಲಿರುವ ಎಲ್ಲಾ ಕೋಮಿನ ಮತ್ತು ಕಸಬುಗಳ ದೊಡ್ಡ ಮನುಷ್ಯರು ಕರೆಸಲ್ಪಟ್ಟು ಸಭೆಯನ್ನಲಂಕರಿಸಿದ್ದರು ಪುರೋಹಿತ ವೇ ಲಕ್ಷ್ಮೀನರಸಿಂಹ ಭಟ್ಟರು ಮೂರು ನಾಲ್ಕು ಸಂಸ್ಕೃತ ಶ್ಲೋಕಗಳನ್ನು ಹೇಳಿ ದೇವರ ಪ್ರಾರ್ಥನೆಮಾಡಿ ಸಭೆಯ ಕಾರ್ಯವನ್ನು ಪ್ರಾರಂಭಮಾಡಿದರು

ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾದ ಮ|| ಬಿ ಎಸ್ ರಾಜೋಜಿರಾವ್, ಬಿ ಎ ಯವರು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿ ಸಮಾಜದ ಮೆಂಬರುಗಳಿಗೆ ಸುಸ್ವಾಗತವನ್ನು ಬಯಸಿದರು ಅವರ ಭಾಷಣದ ಮುಖ್ಯಾಭಿಪ್ರಾಯವೇನೆಂದರೆ—ನಮ್ಮ ಜನರು ಜನಾಂಗಗಳಲ್ಲಿ ಬಹಳ ಹೀನಸ್ಥಿತಿಯಲ್ಲಿರುತ್ತಾರೆ ಆದರೂ ನಮ್ಮ ಮಹಾರಾಜರವರ ಪ್ರೀತಿಯುಕ್ತವಾದ ಆಳ್ವಿಕೆಯಲ್ಲಿ ನಮಗೆ ಸಂಪೂರ್ಣವಾದ ನೆಮ್ಮದಿಯೂ ಸುಖ ಸಂತೋಷಗಳೂ ಲಭ್ಯವಾಗಿರುವುವು ನಮ್ಮ ಜನರು ಈ ದೇಶದಲ್ಲಿ ಬಹಳ ಕೊಂಚವಾಗಿದ್ದರೂ ಬೇರೆ ಬೇರೆ ಸ್ಥಳಗಳಿಂದ ತಾವೆಲ್ಲಾ ಬಂದು ನಮ್ಮ ಜನರ ಪುರೋಭಿವೃದ್ಧಿಗಾಗಿ ಮಾರ್ಗಗಳನ್ನು ನಡಿಸಬೇಕೆಂದು ಪ್ರಯತ್ನಪಟ್ಟಿರುವುದು ಸ್ತೋತ್ರಾರ್ಹವಾದದ್ದು 1911 ನೇ ಏಪ್ರಿಲ್ ತಿಂಗಳಲ್ಲಿ ನಮ್ಮ ಮೊದಲನೇ ಮಹಾಸಭೆಯು ಧಾರ್ವಾಡದಲ್ಲಿ ನಡೆದಾಗ, ಮೈಸೂರಿನಲ್ಲಿ ಎರಡನೇ ಸಭೆ ನಡೆಯಬೇಕೆಂದು ನಿಶ್ಚಯಿಸಿತು ಒಂದು ಜಾತಿಯು ಇನ್ನೊಂದು ಜಾತಿಗಿಂತ ಹೆಚ್ಚಾದದ್ದು ಅಥವಾ ನಿಕೃಷ್ಟವಾದದ್ದು ಎಂಬ ದುರಭಿಮಾನವನ್ನು ಹುಟ್ಟಿಸುವುದಾದರೆ ಇಂಥಾ ಮಹಾಸಭೆಗಳಿಂದ ಯಾವ ಸಲವೂ ಆಗುವುದಿಲ್ಲ ನಮ್ಮ ಜನರು ಎಲ್ಲಾ ವಿಷಯಗಳಲ್ಲೂ ಈಗಿನ ಕಾಲಕ್ಕೆ ತಕ್ಕಹಾಗೆ ಅಭಿವೃದ್ಧಿ ಸ್ಥಿತಿಗೆ ಬರುವಹಾಗೆ ಮಾಡಬೇಕೆಂಬುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಸಂಘವನ್ನು ಅಭಿವೃದ್ಧಿಗೆ ತರಬೇಕಾದರೆ ಅದರಲ್ಲಿರುವ ಪ್ರತಿ ಒಬ್ಬರೂ ಸಾಹಸಪಡಬೇಕು ನಮ್ಮ ಜನರು ಈಗ ನಡಿಸುತ್ತಿರುವ ಕಸಬುಗಳು ಸಾಮಾನ್ಯವಾದವುಗಳಲ್ಲ ಆದ್ದರಿಂದಲೇ ಅವರು ಈಗಿನ ಕಾಲಕ್ಕೆ ತಕ್ಕಹಾಗೆ ಬದಲಾವಣೆಮಾಡಿಕೊಂಡು ಅಭಿವೃದ್ಧಿಗೆ ಬರಬೇಕು ಅವರ ಕಸಬಿಗೆ ಬೇಕಾಗುವ ಸರಕುಗಳನ್ನು ಸೀದಾ ತರಿಸಿಕೊಳ್ಳುವಂತಾಗಬೇಕು ಬೊಂಬಾಯಿನ ಮ|| ವೈ ಪಿ ಸುಲಾಖೆಯವರು ಬಂದು ಈ ಸಭೆಯ ಅಗ್ರಸ್ಥಾನವನ್ನು ವಹಿಸಲು ಅನಾನುಕೂಲವಾಯಿತೆಂದು ತಿಳಿಸಲು ವಿಷಾದಿಸುತ್ತೇನೆ ಆದರೆ ಬೆಳ್ಗಾವದ ಮ|| ಎಂ ವಿ ತೇಲ್ಕರ್ ರವರು ಪ್ರೆಸಿಡೆಂಟರಾಗಿ ನಿಲ್ಲುತ್ತೇವೆಂದು ಒಪ್ಪಿಕೊಂಡು ಬಂದಿರುವುದಕ್ಕಾಗಿ ನಾವುಗಳೆಲ್ಲಾ ಅವರನ್ನು ವಂದಿಸಬೇಕಾಗಿದೆ

ಮ|| ಎಂ ವಿ ತೇಲ್ಕರ್ ರವರು ಅಗ್ರಸ್ಥಾನವನ್ನು ಅಲಂಕರಿಸಿ ದೀರ್ಘವೂ ಸ್ವಾರಸ್ಯಕರವೂ ಆದ ಭಾಷಣವನ್ನು ಮಾಡಿದರು ಈ ಭಾಷಣದ ಮುಖ್ಯಾಂಶಗಳೇನೆಂದರೆ—ಇಲ್ಲಿ ನಮ್ಮ ಜನಗಳು ಶ್ರೀಮನ್ಮಹಾರಾಜರವರ ಪ್ರೀತಿಯುಕ್ತವಾದ ಆಳ್ವಿಕೆಯಲ್ಲಿ ಶ್ರೇಯಸ್ಸು ಪಡೆದಿದ್ದಾರೆಂದು ತಿಳಿದು ನಾವು ಆನಂದಪಡುತ್ತೇವೆ ನಮ್ಮ ಜನರಲ್ಲಿ ವಿದ್ಯಾಭಿವೃದ್ಧಿಯನ್ನು ನೆಲೆಗೊಳಿಸಬೇಕು ಮತ್ತು ನಮ್ಮ ಕಸಬುಗಳ ದೆಸೆಯಿಂದ ಅವರ ಸಂಪಾದನೆಯು ಹೆಚ್ಚುವಂತೆ ಮಾಡಬೇಕು ಇವೇ ನಮ್ಮ ಈ ಸಭೆಯ ಮುಖ್ಯ ಉದ್ದೇಶ ನಮ್ಮ ಜನರಲ್ಲಿ ವಿದ್ಯೆಯಿಲ್ಲ ವಿದ್ಯಾಸಂಪಾದನೆಗೆ ದೇಶೀಯ ಸಂಸ್ಥಾನಗಳಲ್ಲೂ ಬ್ರಿಟಿಷ್ ಸರ್ಕಾರದವರೂ ಅನೇಕ ಹಿತಕರವೂ ಸುಲಭಸಾಧ್ಯವೂ ಆದ ಏರ್ಪಾಡುಗಳನ್ನು ಮಾಡಿದ್ದರೂ ನಮ್ಮ ಜನರು ಅದರ ಪ್ರಯೋಜನವನ್ನು ಹೊಂದದೆ ಇರುವುದು ದುಃಖಕರ ಬಟ್ಟೆ ಸೀರೆಗಳನ್ನು ತಯಾರ್ಮಾಡುವುದು, ಬಣ್ಣಗಳನ್ನು ಹಾಕುವುದು, ಉಡುಪುಗಳನ್ನು ಸಿದ್ಧಪಡಿಸುವುದು, ಇವೇ ಮೊದಲಾದ ಕಸಬುಗಳನ್ನು ನಮ್ಮ ಜನರು ಅನೇಕ ಶತಮಾನಗಳಿಂದಲೂ ನಡಿಸುತ್ತಾ ಬಂದಿದ್ದಾರೆ ಈಚೆಗೆ ಕೆಲವರು ವ್ಯಾಪಾರದಲ್ಲೂ ತೊಡಗಿರುವರು ಆದರೆ ಯಂತ್ರ ಮೊದಲಾದ ಸಾಧನಗಳು ಬಂದು ಅವುಗಳ ವೃತ್ತಿಗೆ ಸೌಲಭ್ಯ ಹೆಚ್ಚಿದ್ದರಿಂದಲೂ, ನಮ್ಮ ಜನರು ವಿದ್ಯಾದಿ ವಿಷಯಗಳಲ್ಲಿ ಹಿಂದೆ ಬಿದ್ದದ್ದರಿಂದಲೂ ಈ ಕಸಬುಗಳು ಹೀನಸ್ಥಿತಿಗೆ ಬಂದಿರುತ್ತವೆ. ನಮ್ಮ ಜನರು ಕಸಬಿನಲ್ಲಿ ಪೂರ್ವ ಪದ್ಧತಿಗಳನ್ನು ತ್ಯಜಿಸಿ ನೂತನ ಸಾಧನಗಳನ್ನು ಕಲಿತುಕೊಳ್ಳಬೇಕು, ಇಲ್ಲವಾದರೆ ಅವರ ಜೀವನ ನಡೆಯುವುದೇ ಕಷ್ಟವಾಗುತ್ತದೆ ಎಲ್ಲಾ ವಿಧವಾದ ಅಭಿವೃದ್ಧಿಗೂ ವಿದ್ಯೆಯೇ ಮುಖ್ಯವಾದ ಸಾಧನ ಅದನ್ನು ನಮ್ಮ ಮಕ್ಕಳಿಗೆ ಕಲಿಸಲು ಸಂಘದ ಮೂಲಕ ಏರ್ಪಾಡುಮಾಡಬೇಕು ಇದರ ದೆಸೆಯಿಂದ ಎಲ್ಲಾ ಕಸಬುಗಳನ್ನೂ ಚೆನ್ನಾಗಿ ನಡೆಸಿಕೊಳ್ಳಬಹುದು ವ್ಯಾಪಾರದಲ್ಲಿ ಸತ್ಯತೆ ಇಲ್ಲದಿದ್ದರೆ ಅಭಿವೃದ್ಧಿಯಾಗುವುದಿಲ್ಲ ಸ್ವಲ್ಪ ಲಾಭವಿಟ್ಟು ಬೇಗಬೇಗನೆ ಹಣವನ್ನು ಸುತ್ತಿಸುವುದರಲ್ಲಿ ತುಂಬಾ ಕ್ಷೇಮವುಂಟು ಇದಕ್ಕೂ ವಿದ್ಯೆಯಿಲ್ಲದಿದ್ದರೆ ಪ್ರಯೋಜನವಿಲ್ಲ ನಮ್ಮ ಹುಡುಗರಿಗೆ ವಿದ್ಯಾರ್ಥಿನಿಲಯಗಳನ್ನು ಮಾಡಿಕೊಡಬೇಕು ಪ್ರೌಢವಿದ್ಯಾಭ್ಯಾಸಮಾಡತಕ್ಕವರಿಗೆ ವೇತನಗಳನ್ನು ಕಲ್ಪಿಸಬೇಕು ಇದಲ್ಲದೆ ನಮ್ಮ ಮಾತೃಭಾಷೆಯಲ್ಲೇ ನಮ್ಮ ಪೂರ್ವ ಗ್ರಂಥಗಳೆಲ್ಲಾ ಬರೆದಿರೋಣದರಿಂದ ನಮ್ಮ ಮಕ್ಕಳಿಗೆ ಮೊದಲು ನಮ್ಮ ಮಾತೃಭಾಷೆಯಾದ ಮಹಾರಾಷ್ಟ್ರವನ್ನು ಕಲಿಸಬೇಕು ನಾವು ನಮ್ಮ ಸಂಸಾರಗಳಲ್ಲೂ ಸಂಘದಲ್ಲೂ ಇರತಕ್ಕ ಕೆಟ್ಟ ಪದ್ಧತಿ, ಆಚಾರ, ದುರಭ್ಯಾಸಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು ಮದುವೆ ಮೊದಲಾದ ಕಾಲಗಳಲ್ಲಿ ವಿಶೇಷವಾಗಿ ದುಂದುಖರ್ಚುಮಾಡುವುದನ್ನು ಬಿಟ್ಟುಬಿಡಬೇಕು ನಮ್ಮ ಕಸಬಿನ ಪುರೋಭಿವೃದ್ಧಿಗಾಗಿ ಪರಸ್ಪರಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡು ಉತ್ಸಾಹದಿಂದ ನಡೆಯುತ್ತಾ ಬಂದರೆ ನಮ್ಮ ಜನರೆಲ್ಲಾ ಬೇಗನೆ ಮುಂದಕ್ಕೆ ಬರುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಈ ಪ್ರಕಾರ ಅನೇಕ ವಿಷಯಗಳನ್ನು ಕುರಿತು ಪ್ರೆಸಿಡೆಂಟರು ಭಾಷಣ ಮಾಡಿ ಆ ದಿನದ ಸಭೆಯನ್ನು ಮುಕ್ತಾಯಮಾಡಿದರು ಶುಕ್ರವಾರ, ಶನಿವಾರ, ಭಾನುವಾರಗಳಲ್ಲಿ ಮೆಂಬರುಗಳು ಸಭೆ ಸೇರಿ ಚರ್ಚೆಯಿಂದ ತೀರ್ಮಾನ ಮಾಡಿದ ವಿಷಯಗಳೇನೆಂದರೆ—(1) ವಿದ್ಯಾಭಿವೃದ್ಧಿಗಾಗಿ ಒಂದು ಫಂಡು ಏರ್ಪಾಡಾಯಿತು ಇದಕ್ಕೆ ಧರ್ಮಿಷ್ಠರು ಕೊಡುವ ಹಣ ಸೇರುತ್ತೆ ಮತ್ತು ಪ್ರತಿ ಒಂದು ಮದುವೆಯಲ್ಲೂ ಗಂಡಿನವರು 3 ರೂಪಾಯನ್ನೂ, ಹೆಣ್ಣಿನವರು 2 ರೂಪಾಯನ್ನೂ ಈ ಫಂಡಿಗೆ ಕೊಡಬೇಕು ಈ ಒಟ್ಟು ಫಂಡಿನಲ್ಲಿ ಶೇಕಡ 20 ರೂಪಾಯನ್ನು ಎಫ್ ಎ, ಬಿ ಎ ಮೊದಲಾದ ಪ್ರೌಢ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುತ್ತಾರೆ ಉಳಿದ ಶೇಕಡಾ 80 ರೂಪಾಯನ್ನು ವಸೂಲಾದ ಸ್ಥಳದಲ್ಲೇ ಮಕ್ಕಳ ಪ್ರಥಮ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುವರು ಈ ಫಂಡಿಗೆ ಮ|| ಆರ್ ಟಿ ಮಹದೇವರಾಯರು ಪ್ರೆಸಿಡೆಂಟರು, ಮ|| ಬಿ ಎಸ್ ರಾಜೋಜಿರಾಯರು ವೈಸ್ ಪ್ರೆಸಿಡೆಂಟರು, ಮ|| ಬೆಳ್ಗಾವದ ಎಂ ವಿ ತೇಲ್ಕರ್ ರವರು ಸೆಕ್ರಿಟರಿ, ಕಮಿಟಿಗೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ 22 ಮಂದಿ ಮೆಂಬರುಗಳನ್ನು ಚುನಾಯಿಸಿದರು (2) ಮದುವೆಗಳನ್ನು ಒಂದೇ ದಿನದಲ್ಲಿ ಮಾಡಿ ಪೂರೈಸಬೇಕು, ಇದರಿಂದ ಶ್ರಮವೂ ಖರ್ಚೂ ಕಡಮೆಯಾಗುತ್ತೆ (3) ಎರಡು ಲಕ್ಷ ರೂಪಾಯಿ ಮೂಲಧನವುಳ್ಳ 10 ರೂಪಾಯಿನ ಷೇರುಗಳನ್ನು ಕೂಡಿಸಿ ಕೋಆಪರೇಟಿವ್ ವ್ಯಾಪಾರ ಸಂಘವನ್ನು ಪ್ರಾರಂಭಿಸಿ, ಸೀಮೆಯಿಂದ ಕಸಬುಗಳಿಗೆ ಬೇಕಾಗುವ ಸರಕುಗಳನ್ನೆಲ್ಲಾ ಸೀದಾ ತರಿಸಿ ಷೇರುದಾರರಿಗೆ ಬಿಕರಿಮಾಡುವಂತೆ ಏರ್ಪಾಡಾಯಿತು ಆಗಲೇ ಈ ಸಂಘದಲ್ಲಿ 39,000 ರೂಪಾಯಿನ ಷೇರುಗಳನ್ನು ಕೊಂಡುಕೊಳ್ಳುವುದಾಗಿ ಮೆಂಬರುಗಳು ಒಪ್ಪಿಕೊಂಡಿದ್ದಾರೆ ಮೇಲ್ಕಂಡ ವಿದ್ಯಾವರ್ಧಕ ಫಂಡಿಗೆ ಮಹಾಸಭಿಕರೂ, ಇತರ ಸ್ಥಳಗಳಿಂದಲೂ ಒಟ್ಟು 18,000 ರೂಪಾಯಿ ತನಕ ಚಂದಾ ವಸೂಲಾಯಿತು ಮತ್ತು ಹಲವರು ವರುಷಾಶನಗಳನ್ನೂ ಕೊಡುವುದಾಗಿ ವಾಗ್ದಾನ ಮಾಡಿದರು

ಮಹಾ ಸಭೆಯು ಭಾನುವಾರಕ್ಕೆ ಮುಕ್ತಾಯವಾಯಿತು ಈ ಮಹಾ ಸಭೆಯೂ, ಪ್ರತಿನಿಧಿಗಳ ಸತ್ಕಾರವೂ ಬಹಳ ತೃಪ್ತಿಕರವಾಗಿ ನಡೆದವು ಮ|| ರಾಜೋಜಿರಾಯರೂ, ಮ|| ಎನ್ ಸಟ್ವಾಜಿರಾಯರೂ, ಮ|| ಎಲ್ ಯಶವಂತರಾಯರೂ ತುಂಬಾ ಶ್ರಮಪಟ್ಟು ಎಲ್ಲಾ ವಿಚಾರಗಳನ್ನೂ ಬಹು ಮುತುವರ್ಜಿಯಾಗಿ ನೋಡಿಕೊಂಡದ್ದು ವಿಶೇಷ ಸಂತೋಷವೂ ಸ್ತೋತ್ರಾರ್ಹವೂ ಆಗಿದೆ

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಸರ್ಕಾರದವರು ಮ|| ಡಿ ಕೆ ಪಾಂಡುರಂಗರಾಯರವರನ್ನು ಸಂಸ್ಥಾನದ ಸರ್ವೆ ಸೂಪರಿಂಟೆಂಡೆಂಟರಾಗಿ ನೇಮಿಸಿರುತ್ತಾರೆ

ಅ|| ಅ|| ಸರ್‌ಜನ್ ರಾಗಿರುವ ಮ|| ಪಿ ಎಸ್ ರಾಮಚಂದ್ರ ಅಯ್ಯರವರು ಐದು ವಾರಗಳ ರಜಾ ಪಡೆದು ರಂಗೂನ್ ಪಟ್ಟಣದಲ್ಲಿ ನಡೆಯುವ ವೈದ್ಯರ ಸಭೆಗೆ ಮೆಂಬರಾಗಿ ಹೋಗಿರುತ್ತಾರೆ

ದಿವಾನ್ ಮ|| ವಿಶ್ವೇಶ್ವರಯ್ಯನವರು ಮೊನ್ನೆ ಭಾನುವಾರ ಬೆಳಿಗ್ಗೆ ರಾಜಧಾನಿಗೆ ದಯಮಾಡಿ 1 ೯ ಗಂಟೆಹೊತ್ತು ಇದ್ದು ಆ ದಿನವೇ ಮೆಯಿಲ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು

ಬೆಂಗಳೂರು ಸಿಟಿಯ ದೊಡ್ಡ ವರ್ತಕರಾದ ಮಿ|| ಎಲ್ ಎ ಪೌವಾಳ್ ಕಂಪನಿಯವರು ತಮ್ಮ ವ್ಯಾಪಾರ ಸರಕುಗಳ ಪ್ರಕಟನೆಯುಳ್ಳ ಹೊಸ ವರುಷದ ಕ್ಯಾಲೆಂಡರನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ

ಕಳೆದ ವಾರ ಬೆಂಗಳೂರು ಸಿಟಿ ಮಲ್ಲೇಶ್ವರದಲ್ಲಿರುವ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನಕ್ಕೆ ಕಳ್ಳರು ಬಿದ್ದು ಸುಮಾರು 900 ರೂಪಾಯಿನ ನಗ ನಾಣ್ಯ ಬಟ್ಟೆ ಪಾತ್ರೆ ಮೊದಲಾದವುಗಳನ್ನು ಅಪಹರಿಸಿದರು

ಬೆಂಗಳೂರು ಸಿಟಿ ಹೈಸ್ಕೂಲಿನಲ್ಲಿ ಕಳೆದ ಶನಿವಾರ ಬ್ರಿಟಿಷ್ ರೆಸಿಡೆಂಟರವರೂ, ಶ್ರೀಮದ್ಯುವರಾಜರವರೂ ಅಗ್ರಾಸನವನ್ನು ವಹಿಸಿ ಪ್ರಜೆಗಳ ಸಹಾಯ ಮತ್ತು ಪ್ರೋತ್ಸಾಹದಿಂದ ಏರ್ಪಾಡಾಗಿದ್ದ ವಿದ್ಯಾವಿಷಯಕವಾದ ಪ್ರದರ್ಶನವನ್ನು ಪ್ರಾರಂಭಮಾಡಿದರು

ಸರ್ಕಾರದವರು ಮುಂದೆ ಹೇಳುವ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದ್ದಾರೆ—ಮಿ|| ಜೆ ಇ ರೋಜೇರಿಯೊ ರವರನ್ನು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ, ಮಿ|| ಅಬ್ದುಲ್ ಹಕೀಂ ಯವರನ್ನು ಚಿತ್ರದುರ್ಗದಿಂದ ತುಮಕೂರಿಗೆ, ಮ|| ಟಿ ರಾಯಲು ಚೆಟ್ಟಿಯವರನ್ನು ತುಮಕೂರಿನಿಂದ ಬೆಂಗಳೂರಿಗೆ

ದಾವಣಗೆರೆಯಲ್ಲಿ ಯಂತ್ರಗಳನ್ನಿಟ್ಟು ಶುದ್ಧವಾದ ಹತ್ತಿಯ ತುಪ್ಪವನ್ನು ತಯಾರ್ಮಾಡಿ ಬಿಕರಿಮಾಡುವುದಕ್ಕೋಸ್ಕರ ಮೂರು ಲಕ್ಷ ರೂಪಾಯಿ ಬಂಡವಾಳವುಳ್ಳ ಕಂಪನಿಯನ್ನು ಪ್ರಾರಂಭಿಸಬೇಕೆಂದು ಮ|| ಎ ಇ ಭಾಟರಾಟನ್ ರವರು ಏರ್ಪಾಡುಮಾಡಿದ್ದಾರೆ ಮೈಸೂರು ಸರ್ಕಾರದವರು ಈ ಕಂಪನಿಯಲ್ಲಿ 60,000 ರೂಪಾಯಿನ ಷೇರುಗಳನ್ನು ಕೊಂಡುಕೊಳ್ಳುವರೆಂದು ತಿಳಿದುಬಂದಿದೆ

ಕಳೆದ ವಾರ ಮೈಸೂರು 3 ನೇ ಪಟಾಲಮಿನ ಹುದ್ದೇದಾರರೂ ಸಿಪಾಯಿಗಳೂ ಸೇರಿ ತಮ್ಮ ಜನಗಳ ಉಪಯೋಗಕ್ಕಾಗಿ ಒಂದು ರೀಡಿಂಗ್ ರೂಮನ್ನು ಪ್ರಾರಂಭಿಸಿದರು ಕಮ್ಯಾಂಡಿಂಗ್ ಆಫೀಸರೇ ಅಗ್ರಾಸನವನ್ನು ವಹಿಸಿ, ವಾಚಕಶಾಲೆಯ ಪ್ರಯೋಜನವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸ ಮಾಡಿದರು ಜಮೇದಾರ್ ಎಂ ಶ್ರೀನಿವಾಸಮೂರ್ತಿಯವರು ಸೆಕ್ರಿಟರಿಯಾಗಿ ಚುನಾಯಿಸಲ್ಪಟ್ಟಿದ್ದಾರೆ

ಕಳೆದ ಆರು ತಿಂಗಳಿಂದ ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿ ಬದಲಿನೋಡುತ್ತಿದ್ದ ಮ|| ಟಿ ಹನುಮಂತರಾಯರಿಗೆ ಕುಣಿಗಲ್ ತಾಲ್ಲೂಕು ಅಮಲ್ದಾರಿ ಕೆಲಸಕ್ಕೆ ವರ್ಗವಾಯಿತು ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳು ಸೇರಿ ಅವರನ್ನು ಇಲ್ಲೇ ಅದೇ ಕೆಲಸದಲ್ಲಿ ಇಟ್ಟಿರಬೇಕೆಂದು ಸರ್ಕಾರಕ್ಕೆ ಅರ್ಜಿ ಬರೆದುಕೊಂಡದ್ದಲ್ಲದೆ ಮೊನ್ನೆ ದಿವಾನ್ ರವರು ದಯಮಾಡಿಸಿದ್ದಾಗ್ಗೆ ಹೋಗಿ ಮೊಖ್ತಾ ಕಂಡು ಅವರನ್ನು ಕೇಳಿಕೊಂಡರೂ ಅವರ ಇಷ್ಟಾರ್ಥವು ನೆರವೇರದೆ ಹೋಯಿತು ಚಾಮರಾಜನಗರದ ಅಮಲ್ದಾರವರಾದ ಮ|| ಜಿ ನಾರಾಯಣರಾಯರನ್ನು ಸರ್ಕಾರದವರು ಅ|| ಕಮೀಷನರ ದರ್ಜೆಗೆ ಬಡ್ತಿಮಾಡಿ, ರಾಜಧಾನಿಯ ವೈಸ್ ಪ್ರೆಸಿಡೆಂಟ್ ಕೆಲಸಕ್ಕೆ ವರ್ಗಮಾಡಿದ್ದಾರೆ

ರಾಜಕಾರ್ಯ ಪ್ರಸಕ್ತ ರಾವ್ ಬಹದೂರ್ ಮ|| ದೇಶಮುಖ ರಾಮರಾಯರವರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಕೆಲಸದಿಂದ ಈಗತಾನೇ ನಿವೃತ್ತರಾದರು ಇವರು ಕಳೆದ 1870ನೇ ಇಸವಿಯಲ್ಲಿ ಫಾರೆಸ್ಟ್ ಇಲಾಖೆಯೊಳಗೆ ಒಬ್ಬ ಗುಮಾಸ್ತೆಯಾಗಿ ಸೇರಿ, 8 ವರುಷಗಳ ಮೇಲೆ ಅಮಲ್ದಾರಿಗೆ ಹತ್ತಿ 1885ನೇ ಇಸವಿಯಲ್ಲಿ ಸರ್ವೆ ಇಲಾಖೆಗೆ ಬಂದು ಸ್ವಸಾಮರ್ಥ್ಯದಿಂದ 1907 ರಲ್ಲಿ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟರು ಇವರಿಗೆ ಈಗ 60ನೇ ವರುಷ ನಡೆಯುತ್ತಿದೆ, 43 ವರುಷ ಸರ್ವಿಸ್ ಮಾಡಿ, ಈ ಸಂಸ್ಥಾನದ ವಿದ್ವಾಂಸಗಳಲ್ಲಿ ತುಂಬಾ ಅನುಭವಶಾಲಿಗಳಾಗಿರುತ್ತಾರೆ ಈಗ ಲಭಿಸಿರುವ ವಿಶ್ರಾಂತಿಯನ್ನು ಅವರು ದೀರ್ಘಕಾಲ ಸುಖದಿಂದ ಅನುಭವಿಸಲೆಂದು ಹಾರೈಸುತ್ತೇವೆ

ಬೆಂಗಳೂರು ಸಿಟಿಯ ಮತ್ತು ದಂಡಿನ ಯೂರೋಪ್ಪಿಯನ್ ಮತ್ತು ದೇಶೀಯ ದೊಡ್ಡಮನುಷ್ಯರುಗಳು ಕ್ರಿಸ್ಮಸ್ ಫೀಟ್ ಎಂಬ ತಮಾಷೆಯನ್ನೂ, ಕೈಗಾರಿಕೆಗಳ ಪ್ರದರ್ಶನವನ್ನೂ ಏರ್ಪಾಡುಮಾಡಿದ್ದಾರೆ ಇವನ್ನು ನಮ್ಮ ಮಹಾರಾಜರವರು ಮೊನ್ನೆ ಶುಕ್ರವಾರ ದಯಮಾಡಿ ಪ್ರಾರಂಭಿಸಿ ಎಲ್ಲಾ ಭಾಗಗಳನ್ನೂ ಪರಾಂಬರಿಸಿದರು. ಈಚೆಗೆ ಸಾವಿರಾರು ಜನರು ಗಂಡಸರು, ಹೆಂಗಸರು, ಮಕ್ಕಳು ಫೀಜುಕೊಟ್ಟು ಈ ವಿನೋದಗಳನ್ನು ನೋಡಿಬರುತ್ತಿರುವರು ಈ ವಿನೋದಗಳಲ್ಲಿ ಸೂಳೆಯರ ಕೋಲಾಟವನ್ನೂ, ಜೂಜುಕೋರರ ಅಂಗಡಿಗಳನ್ನೂ ಇಡಿಸಿರುವುದು ಎಷ್ಟುಮಾತ್ರಕ್ಕೂ ಯಾರಿಗೂ ಯೋಗ್ಯವಾದದ್ದಲ್ಲವೆಂದು ತಿಳಿಸಲು ವಿಷಾದಪಡುತ್ತೇವೆ ಸರ್ಕಾರದವರು ಈ ಭಾಗವನ್ನು ದರ್ಪವಿಟ್ಟು ನಿಲ್ಲಿಸಿದ್ದರೆ ಸ್ತೋತ್ರಾರ್ಹವಾಗಿತ್ತು.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ಬೆಂಗಳೂರಿನಲ್ಲಿ ಲೇಟ್ ಮಹಾರಾಜರವರ ಯಡೇಕಟ್ಟೆಯನ್ನು ತೀರಿಸಿಕೊಂಡು, ಸೋಮವಾರ ಮಧ್ಯಾಹ್ನ 3½ ಗಂಟೆಗೆ ಮೋಟರಿನಲ್ಲಿ ಮಿ|| ವಿಜಾರ್‌ಸಾಹೇಬರ ಮತ್ತು ಮ|| ಗೋಪಾಲರಾಯರ ಸಮೇತ ರಾಜಧಾನಿಗೆ ದಯಮಾಡಿ, ಮಾರನೇ ಬೆಳಿಗ್ಗೆ ಸುಮಾರು 11½ ಗಂಟೆಗೆ ಇಲ್ಲಿಂದ ನೀಲಗಿರಿಗೆ ಚಿತ್ತೈಸಿದರು ಅವರು ಅಲ್ಲೇ ಇನ್ನೂ 10–12 ದಿನ ಇದ್ದು ವಾಪಸು ದಯಮಾಡಿ ಬೆಂಗಳೂರನ್ನು ತಲುಪಿ, 15 ನೇ ತಾ ಕಡೂರು ಡಿಸ್ಟ್ರಿಕ್ಟಿನಲ್ಲಿ ಸಂಚಾರ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ ಮಹಾಮಾತೃಶ್ರೀಯವರೂ ಅರಮನೆಯ ರಾಣೀವಾಸದವರೂ ಮೊನ್ನೆ ಸೋಮವಾರ ಬೆಂಗಳೂರಿಂದ ನಂದಿಬೆಟ್ಟಕ್ಕೆ ದಯಮಾಡಿದರು ಅವರು ಈ ವಾರ ವಾಪಸು ಬೆಂಗಳೂರಿಗೆ ಬರುವವರಾಗಿದ್ದಾರೆಂದು ತಿಳಿಯುತ್ತದೆ

ಮುಂದೆ ಹೇಳಿರುವ ವರ್ಗಾವರ್ಗಿಗಳನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ — ಮ|| ಗಳಾದ ಎಸ್ ವೆಂಕಟರಂಗಯ್ಯನವರನ್ನು ಸಾಗರದ ಸಬ್ ಡಿವಿಜನ್‌ಗೆ, ಎಸ್ ನಾರಾಯಣರಾಯರನ್ನು ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ, ಸಿ ದೇವರಾಜೆಅರಸಿನವರನ್ನು ಕೋಲಾರದ ಪೊಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ, ಬಿ ರಾಮಸ್ವಾಮಯ್ಯನವರನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಕೆಲಸಕ್ಕೆ, ಬಿ ಎಸ್ ರಾಜೋಜಿರಾಯರನ್ನು ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟ್ ಕೆಲಸಕ್ಕೆ, ಬಿ ವೆಂಕೋಬರಾಯರನ್ನು ಮೈಸೂರು ಸಬ್ ಡಿವಿಜನ್‌ಗೆ, ಟಿ ಜಿ ರಾಮಅಯ್ಯರನ್ನು ತುಮಕೂರು ಡಿಸ್ಟ್ರಿಕ್ಟ್ ಖಜಾನೆಗೆ, ಬಿ ಟಿ ಕೇಶವಯ್ಯಂಗಾರ್ರು ಕಡೂರು ಸಬ್ ಡಿವಿಜನ್‌ಗೆ, ಕೃಷ್ಣಸ್ವಾಮಿ ಅಯ್ಯಂಗಾರ್ರು ಫ್ರಂಟಿಯರ್ ಡಿವಿಜನ್‌ಗೆ, ಎನ್ ರಾಮರಾಯರನ್ನು ಬೆಂಗಳೂರು ಗೌ|| ಸೆಕ್ರಿಟರಿ ಆಫೀಸಿಗೆ, ಬಿ, ಬಸವಾರಾಧ್ಯರನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೆಲಸಕ್ಕೆ ವರ್ಗಮಾಡಿದ್ದಾರೆ

ವಿದೇಶ ವೃತ್ತಾಂತಗಳು

ಅಮೇರಿಕ ಖಂಡದ ಎಮಿರಿ ಎಂಬ ಸ್ತ್ರೀಯು ಎರಡನೇ ಫಿಲಿಪ್ ಎಂಬ ಪೂರ್ವಕಾಲದ ದೊರೆಯ ತಸ್ವೀರನ್ನು ಹತ್ತೊಂಬತ್ತು ಲಕ್ಷ ರೂಪಾಯಿಗೆ ಕೊಂಡುಕೊಂಡಿರುತ್ತಾಳೆ ಈ ಪಟವು ಸುಮಾರು ಐನೂರು ವರುಷಗಳ ಹಿಂದೆ ಬರೆಯಲ್ಪಟ್ಟದ್ದು

ಜಪಾನ್ ರಾಜ್ಯದ ಕೆಲವು ಭಾಗಗಳಲ್ಲಿ ಕ್ಷಾಮವು ಪ್ರಾಪ್ತವಾಗಿದೆ ಎಂತಲೂ, ಜನರೆಲ್ಲರೂ ವಿಶೇಷವಾಗಿ ನಷ್ಟಹೊಂದುತ್ತಿದ್ದಾರೆಂತಲೂ, ದುಷ್ಟರಾದ ಕೆಲವು ವ್ಯಾಪಾರಿಗಳು ಕಷ್ಟಪಡುತ್ತಲಿರುವ ಜನರಿಂದ ಬಹಳ ಲಾಭ ಹೊಂದುತ್ತಿದ್ದಾರೆಂತಲೂ ತಿಳಿದುಬಂದಿದೆ

ಬ್ರಿಟಿಷ್ ಗಯಾನಾ ಸ್ವಾಸ್ಥ್ಯದ ಒಂದು ಪಟ್ಟಣದಲ್ಲಿ ಭೂಕಂಪವೂ, ಅನಂತರ ಬೆಂಕಿಯೂ ಹುಟ್ಟಿ ಅನೇಕ ಮನೆಗಳು ಸುಟ್ಟುಹೋದವು ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿನಷ್ಟು ಪದಾರ್ಥಗಳು ನಷ್ಟವಾಗಿರುತ್ತವೆ ಇದಲ್ಲದೆ 8,000 ಟನ್ನಿನಷ್ಟು ಸಕ್ಕರೆಯು ಬೆಂಕಿಯ ಪಾಲಾಯಿತು

ಆಸ್ಟ್ರೇಲಿಯಾದಲ್ಲಿರುವ ಮೆಲ್ಬೋರ್ನ್ ಪಟ್ಟಣದಲ್ಲಿ ಒಂದು ಮನೆಗೆ ಬೆಂಕಿ ತಗಲಿತು ಆರಿಸುವುದಕ್ಕೆ ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಬೆಂಕಿಯ ಕಿಡಿಗಳು ಮನೆಯಿಂದ ಮನೆಗೆ ವ್ಯಾಪಿಸಿ ಸುಮಾರು 200 ಮನೆಗಳನ್ನು ನಾಶಮಾಡಿದವು ನೂರಾರು ಜನರು ಮನೆಗಳನ್ನು ಕಳೆದುಕೊಂಡು ಆಶ್ರಯವಿಲ್ಲದೆ ಶ್ರಮಪಡುತ್ತಿದ್ದಾರೆ

ಈ ವರುಷ ಕ್ರಿಸ್ಮಸ್‌ಹಬ್ಬದ ದಿವಸ ಅಮೇರಿಕದ ಒಂದು ಪಟ್ಟಣದಲ್ಲಿ ಭಯಂಕರವಾದ ಅನಾಹುತ ನಡೆಯಿತು ಹಬ್ಬದ ಸಂತೋಷಾರ್ಥವಾಗಿ ಹುಡುಗರಿಂದ ಆಟಪಾಟಗಳನ್ನು ನಡಿಸಿ ಬಹುಮಾನಗಳನ್ನು ಕೊಡುವ ಉದ್ದೇಶಕ್ಕೆ ಬಹುಮಂದಿ ಹುಡುಗರೂ ಕೆಲವು ಮಂದಿ ಗಂಡಸರು ಹೆಂಗಸರೂ ಸೇರಿದ್ದರು ಆಟಗಳೆಲ್ಲಾ ಮುಗಿದನಂತರ ಬಹುಮಾನಗಳನ್ನು ಹಂಚುವುದಕ್ಕೆ ಎಲ್ಲರೂ ಒಂದು ಕಡೆ ಸೇರಿರುವಾಗ ಯಾವನೋ ಒಬ್ಬ ಮನುಷ್ಯನು ಆ ಸ್ಥಳಕ್ಕೆ ಬಂದು ಬೆಂಕಿಹತ್ತಿಕೊಂಡಿತೆಂದು ಸುಮ್ಮನೆ ಕೂಗಿ ಹೊರಟುಹೋದನು ತಕ್ಷಣವೇ ಗಾಬರಿಯಿಂದ ಎಲ್ಲರೂ ಬಾಗಿಲಿನ ಕಡೆಗೆ ನುಗ್ಗಿದರು ನುಗ್ಗುವ ಅವಸರದಲ್ಲಿ ಅನೇಕರು ನೆಲಕ್ಕೆ ಬಿದ್ದುಬಿಟ್ಟರು ಹಿಂದಿನಿಂದ ಬಂದವರು ಇವರನ್ನು ತುಳಿದುಕೊಂಡೇ ಹೋಗಬೇಕಾಯಿತು ಸ್ವಲ್ಪಹೊತ್ತಿನಲ್ಲೇ ಮರಣಹೊಂದಿದವರ ದೇಹಗಳು ಬಾಗಿಲನ್ನು ಮುಚ್ಚಿಬಿಟ್ಟದ್ದರಿಂದ ಒಳಗೆ ಪ್ರವೇಶಿಸುವುದೂ, ಒಳಗಿನವರು ಈಚೆಗೆ ಬರುವುದೂ ಅಸಾಧ್ಯವಾಯಿತು ಸತ್ತುಹೋದವರು 27 ಜನ ಹುಡುಗಿಯರು, 19 ಜನ ಹುಡುಗರು, 13 ಜನ ಹೆಂಗಸರು, 5 ಜನ ಗಂಡಸರು. ಜನರು ಗುರ್ತಿಸುವುದಕ್ಕೆ ಮೊದಲೇ ಕೆಲವು ಹೆಣಗಳನ್ನು ಸಾಗಿಸಿಬಿಟ್ಟರು. ಅನೇಕ ಜನರು ಮಕ್ಕಳನ್ನು ಕಳೆದುಕೊಂಡು ವಿಶೇಷವಾಗಿ ವ್ಯಸನಪಡುತ್ತಿದ್ದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1913 ನೇ ಇಸವಿ ಡಿಸೆಂಬರ್ 18 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	... ... ರೂ	5,00,075
,, (2) ಡಿಪಾಜಿಟ್ಟುಗಳು	... ... ,,	3,09,099
,, (3) ಇತರೆ	... ... ,,	3,040
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,62,171
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	1,78,221
,, (2) ಖಾತೆ ಮತ್ತು ಇತರ ಸಾಲಗಳು	... ,,	3,47,672
,, (3) ಡಿಸ್ಕೌಂಟು ಮಾಡಿದ ನಾಯಿದೆ ಹುಂಡಿಗಳು	,,	1,19,250
,, (4) ಇನ್ವೆಸ್ಟ್‌ಮೆಂಟುಗಳು	... ,,	2,25,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	... ,,	74,396
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	... ,,	6,670
,, (7) ಇತರೆ	... ,,	10,965
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,62,174

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಪರಸ್ಪರಸಹಾಯಸಂಘ ಸ್ಥಾಪನೆ

ಚಿಕ್ಕಬಳ್ಳಾಪುರ ತಾಲ್ಲೂಕು ದಿಬ್ಬೂರು.

ಈ ಗ್ರಾಮದಲ್ಲಿ ಒಂದು ಪರಸ್ಪರಸಹಾಯಸಂಘವನ್ನು ಸ್ಥಾಪನೆಮಾಡಲು ಮೊದಲೇ ರಜಿಸ್ಟ್ರಾರವರಿಂದ ರಿಜಿಸ್ಟರ್ ಆಗಿ "ಶ್ರೀ ಚನ್ನಕೇಶವಸ್ವಾಮಿ ಪರಸ್ಪರಸಹಾಯಸಂಘ (ಅನ್‌ಲಿಮಿಟೆಡ್), ದಿಬ್ಬೂರು" ಎಂಬ ಹೆಸರಿನಿಂದ ಬಂದಿದ್ದಂತೆ ಸ್ಥಾಪಿಸಿ, ಜನರಲ್ ಮೀಟಿಂಗು ಇದೇ ಮಾಹೆ 18 ನೇ ತಾ, ಗುರುವಾರ ನಡೆಯಲು ಏರ್ಪಟ್ಟಿದಂತೆ ಆ ದಿನ ಬೆಳಿಗ್ಗೆ ಸುಮಾರು 8 ಗಂಟೆಗೆ ಈ ತಾಲ್ಲೂಕಿನ ಅಮಲ್ದಾರರಾದ ಮ|| ಶ್ರೀ ನರಸಿಂಹಶಾಸ್ತ್ರಿಗಳವರೂ ಸೊಸೈಟಿಗಳ ಇನ್ಸ್‌ಪೆಕ್ಟರವರಾದ ಮ|| ಮಹದೇವರಾಯರವರೂ ದಯಮಾಡಿಸಿದರು ಅಮಲ್ದಾರ್ರವರು ಅಗ್ರಾಸನಾಧಿಪತಿಗಳಾಗಿರಬೇಕೆಂದು ಪ್ರಾರ್ಥಿಸಲಾಗಿ ಅಗ್ರಾಸನವನ್ನು ವಹಿಸಿ, ಮೀಟಿಂಗನ್ನು ಸಾಂಗವಾಗಿ ನೆರವೇರಿಸಿದೊಡನೆ ಅಗ್ರಾಸನಾಧಿಪತಿಗಳಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದನಂತರ ಸಭೆಯು ಬರಖಾಸ್ತು ಮಾಡಲಾಯಿತು ಮಧ್ಯಾಹ್ನ ಭೋಜನಾನಂತರ ಅಮಲ್ದಾರ್ರವರೂ, ಸೊಸೈಟಿಗಳ ಇನ್ಸ್‌ಪೆಕ್ಟರವರೂ ಪೆರೇಸಂದ್ರ, ಮಣ್ಣೆಕಲ್ ಗ್ರಾಮಗಳಲ್ಲಿ ಇಲ್ಲಿನಂತೆಯೇ ಸಂಘಗಳನ್ನು ಸ್ಥಾಪಿಸಿ, ಮೀಟಿಂಗು ನಡಿಸಲು ಚಿತ್ತೈಸಿದರು

ಈ ಅಮಲ್ದಾರ್ರವರು ಈ ತಾಲ್ಲೂಕಿಗೆ ಬಂದು ಕೇವಲ ಸ್ವಲ್ಪ ತಿಂಗಳುಗಳೇ ಆದಾಗ್ಯೂ ಪ್ರಜಾಹಿತಕರವಾದ ಈ ಪರಸ್ಪರಸಹಾಯಕ ಸಂಘಗಳು, ಧಾನ್ಯದ ಬ್ಯಾಂಕುಗಳು, ಊರಿಂದೂರಿಗೆ ರಸ್ತೆಗಳು, ವ್ಯವಸಾಯ ವಿಷಯಗಳಿಗೆ ಪ್ರೋತ್ಸಾಹ ವಗೈರೆ ಅನೇಕ ಉಪಯೋಗಕರವಾದ ಕೆಲಸಗಳನ್ನು ಜನಗಳಿಗೆ ಪ್ರೋತ್ಸಾಹಿಸಿ ಮಾಡಿಸುತ್ತಿರುವದಲ್ಲದೆ ಸರ್ಕಾರಿ ಕಾಗದ ಪತ್ರಗಳೇನಿದ್ದಾಗ್ಯೂ ಆಯಾ ಗ್ರಾಮಗಳ ಜಮಾಬಂದಿ ವೇಳೆಯಲ್ಲೇ ಬೇಬಾಕಾಗಿ ಫೈಸಲ್ಮಾಡಿ ಜನಗಳಿಗೆ ಸಂತೋಷಪಡಿಸುತ್ತಿರುವರು ಎಲ್ಲಾ ತಾಲ್ಲೂಕು ಅಧಿಕಾರಿಗಳೂ ಈ ರೀತಿಯಾಗಿ ಜನಗಳನ್ನು ಉಪಯುಕ್ತ ವಿಷಯಗಳಲ್ಲಿ ಪ್ರೋತ್ಸಾಹ ಪಡಿಸಿ ಕೆಲಸಗಳನ್ನು ಮಾಡಿಸುತ್ತಾ ಬಂದಲ್ಲಿ ಎಷ್ಟೋ ಗ್ರಾಮಗಳು ನಿದ್ರಾವಸ್ಥೆಯಿಂದ ಎಚ್ಚೆತ್ತುಕೊಂಡು ಪೂರ್ವದಂತೆ ಗ್ರಾಮಕ್ಕೆ ಬೇಕಾದ ಏಕಮತ್ಯವೇ ಮೊದಲಾದ ಸದ್ಗುಣಗಳನ್ನು ಕಲಿಯಬಹುದು

ಪ್ರಾಣಿಗಳ ಹಿಂಸೆ ನಿವಾರಣೋಪಾಯ.

ಪ್ರಾಣಿಗಳ ಹಿತಚಿಂತಕರಿಗೆ ವಿಜ್ಞಾಪನೆ

ನಮ್ಮ ಮೈಸೂರು ಸರ್ಕಾರದವರು ದೇಶೋನ್ನತಿಗಾಗಿ ಮಾಡುತ್ತಿರುವ ಏರ್ಪಾಡುಗಳು ಬಹಳ ಶ್ಲಾಘ್ಯವಾಗಿವೆ ಆದರೆ ಮೂಗುಪ್ರಾಣಿಗಳ ಕಷ್ಟ ನಿವಾರಣೆ ಮಾಡಲು ಸರಿಯಾದ ಏರ್ಪಾಡನ್ನು ಮಾಡಿಲ್ಲವೆಂದು ತೋರುತ್ತೆ ಈ ಶೋಚನೀಯವಾದ ವಿಷಯದಲ್ಲಿ ಮೂಗುಪ್ರಾಣಿಗಳಿಗೆ ದಯೆಯನ್ನು ತೋರಿಸಬೇಕೆಂಬುವರೆಲ್ಲರೂ ಯಾವುದಾದರೂ ಒಂದು ಏರ್ಪಾಡು ಮಾಡತಕ್ಕದ್ದು ಅತ್ಯಾವಶ್ಯಕವಾಗಿದೆ ಮೂಗುಪ್ರಾಣಿಗಳು ಅನುಭವಿಸತಕ್ಕ ಅಸಂಖ್ಯಾತಗಳಾದ ತೊಂದರೆಗಳಲ್ಲಿ ಮುಖ್ಯವಾದ ಮೂರು ನಾಲ್ಕು ವಿಷಯಗಳನ್ನು ಮಾತ್ರ ಇಲ್ಲಿ ಉದಾಹರಿಸುತ್ತೇನೆ —(1) ವಯಸ್ಸು ಮೀರಿದ ಎತ್ತು ಕುದುರೆಗಳನ್ನು ಬಲಾತ್ಕಾರದಿಂದ ಕೆಲಸಕ್ಕೆ ಎಳೆಯುವುದು, (2) ಪಶುಗಳನ್ನು ಗಾಡಿಗಳಿಗೆ ಕಟ್ಟಿ ಅವುಗಳ ಶಕ್ತಿಮೀರಿದಷ್ಟು ಭಾರವನ್ನು ಬಲಾತ್ಕಾರಪಡಿಸಿ ಬಹಳ ಹಿಂಸೆಯಿಂದ ಎಳೆಯಿಸುವುದು, (3) ಕುಂಟು, ಹೆಜ್ಜರಳು, ಇವೇ ಮೊದಲಾದ ಕಾಯಿಲೆ ಅನುಭವಿಸುವ ಪ್ರಾಣಿಗಳನ್ನು ದುಡ್ಡಿನಾಸೆಗೋಸ್ಕರ ಸಹಿಸಲಸಾಧ್ಯವಾದ ತೊಂದರೆಗಳಿಗೆ ಗುರಿಪಡಿಸುವುದು ಇವುಗಳೆಲ್ಲವೂ ಅಲ್ಲದೆ ಘೋರರಾಕ್ಷಸ ರೂಪವಾದಂಥಾ ಕೆಲವು ಜನಗಳಿಂದ ದ್ರವ್ಯಾರ್ಜನೆಗಾಗಿ ನೋಡಲಸಾಧ್ಯವಾದ ಚಿತ್ರಹಿಂಸೆಗಳನ್ನು ಅನುಭವಿಸತಕ್ಕ ಪ್ರಾಣಿಗಳ ಕಷ್ಟಗಳನ್ನು ಎಷ್ಟುತಾನೆ ವರ್ಣಿಸೋಣ ಆ ಬಡ ಮೂಗು ಪ್ರಾಣಿಗಳು ಅನುಭವಿಸತಕ್ಕ ರಣಬಾಧೆಗಳನ್ನು ಇನ್ನು ವಿಶದವಾಗಿ ಬರೆಯತಕ್ಕ ಅವಶ್ಯವಿಲ್ಲವೆಂದು ಊಹಿಸುತ್ತೇನೆ ಯಾತಕ್ಕೆಂದರೆ ದೈವಸೃಷ್ಟಿಯಲ್ಲಿ ನಮಗಿರತಕ್ಕ ಕಿವಿ, ಕಣ್ಣುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಪ್ರತಿಕ್ಷಣವಲ್ಲಿಯೂ ಅಸಂಖ್ಯಾತವಾದ ಉದಾಹರಣೆಗಳನ್ನು ನೋಡಬಹುದು

ಈ ವಿಷಯದಲ್ಲಿ ಬೊಂಬಾಯಿ, ಕಲ್ಕತ್ತ, ಮದ್ರಾಸು ಮುಂತಾದ ದೊಡ್ಡ ಪಟ್ಟಣಗಳಲ್ಲಿ ಏರ್ಪಡಿಸಿರತಕ್ಕ ಅನುಕೂಲತೆಗಳನ್ನು ನನಗೆ ತಿಳಿದ ಮಟ್ಟಿಗೆ ವಿವರಿಸುತ್ತೇನೆ ಆ ಸ್ಥಳಗಳಲ್ಲಿ ಸರ್ಕಾರದವರೂ, ಪ್ರಜೆಗಳೂ ಸೇರಿ ಪ್ರಾಣಿಸಂರಕ್ಷಣಾರ್ಥವಾಗಿ ಒಂದೊಂದು ಧರ್ಮಾಲಯವನ್ನು ಕಟ್ಟಿಸಿ ಅಲ್ಲಿ ಕೆಲಸ ಮಾಡಲಾರದ ಪಶುಗಳನ್ನು ಇಟ್ಟು ಅವುಗಳ ಜೀವನ ಪರ್ಯಂತರವೂ ಪೋಷಿಸುತ್ತಾರೆ ಇದೂ ಅಲ್ಲದೆ ಪ್ರಾಣಿಗಳ ಕಷ್ಟನಿವಾರಣಾರ್ಥವಾಗಿರುವ ಸಂಘಗಳು ಅನೇಕವಾಗಿವೆ ಈ ಸಂಘದವರು ಕೆಲವು ಜನಗಳನ್ನು ಪಶುವೈದ್ಯರಾಗಿ ತರಪೇತು ಮಾಡಿಸಿ ಬುದ್ಧಿವಂತರಾದವರನ್ನು ವೆಟರ್ನರಿ ಪೋಲೀಸ್ ನೌಕರರೆಂಬ ಹೆಸರಿಟ್ಟು ನೇಮಿಸಿಕೊಂಡು ಒಂದು ಪಶುವೈದ್ಯಶಾಲೆಯನ್ನೂ, ಪಶುವೈದ್ಯನನ್ನೂ ಏರ್ಪಡಿಸಿರುತ್ತಾರೆ ಈ ಪೋಲೀಸ್ ನೌಕರರು ಯಾವಾಗಲೂ ಬೀದಿಗಳಲ್ಲಿ ತಿರುಗುತ್ತಾ, ಯಾವದಾದರೂ ಕಾಯಿಲೆಯಿಂದ ಅನುಭವಿಸುತ್ತಿರುವ ಪ್ರಾಣಿಯು ಹಿಂಸಿಸಲ್ಪಡುತ್ತಿರುವದನ್ನು ಕಂಡೊಡನೆಯೇ ಆ ಪ್ರಾಣಿಯನ್ನು ಅದರ ಯಜಮಾನನೊಡನೆ ಸಿಟಿ ಮ್ಯಾಜಿಸ್ಟ್ರೇಟರಲ್ಲಿ ಕರೆದುಕೊಂಡು ಹೋಗುತ್ತಾರೆ ಕೋರ್ಟಿನಲ್ಲಿ ನ್ಯಾಯಾಧಿಪತಿಯು ಆ ಹಿಂಸಕನಿಗೆ ಸರಿಯಾದ ದಂಡವನ್ನು ವಿಧಿಸಿ ಆ ಪ್ರಾಣಿಯನ್ನು ಈ ಮೇಲ್ಕಂಡ ಸಂಘದ ವೈದ್ಯಶಾಲೆಗೆ ಕಳುಹಿಸುತ್ತಾರೆ ಅಲ್ಲಿ ಅದಕ್ಕೆ ಸರಿಯಾದ ಔಷಧ ಆಹಾರಗಳನ್ನು ಕೊಟ್ಟು ಚೆನ್ನಾಗಿ ಗುಣವಾದ ನಂತರ ಮಾಲೀಕನಿಗೆ ಹೇಳಿ ಕಳುಹಿಸುತ್ತಾರೆ ಒಡನೆಯೇ ಆ ಮಾಲೀಕನು ವೈದ್ಯಶಾಲೆಗೆ ಹೋಗಿ ಅದುವರೆಗೆ ಆಗಿರತಕ್ಕ ಖರ್ಚನ್ನು ಸಂಘದವರಿಗೆ ಕೊಟ್ಟು ತನ್ನ ಪ್ರಾಣಿಯನ್ನು ಸುಪರ್ದುಮಾಡಿಕೊಳ್ಳಬೇಕು, ಹಾಗೆ ಮಾಲೀಕನು ಬಾರದಿದ್ದರೆ ಸಂಘದವರು ಕ್ಲಿಪ್ತವಾದ ಕಾಲಾನಂತರ ಆ ಪ್ರಾಣಿಯನ್ನು ಹರಾಜು ಮಾಡಿ ಬಂದ ಹಣವನ್ನು ಸಂಘದ ಖರ್ಚಿಗೆ ಉಪಯೋಗಿಸಿಕೊಳ್ಳುತ್ತಾರೆ ನಂತರ ಆಕ್ಷೇಪಣೆ ಮಾಡಲು ಮಾಲೀಕನಿಗೆ ಯಾವ ಅಧಿಕಾರವೂ ಇರುವುದಿಲ್ಲ ಇಂಥಾ ಅಧಿಕಾರವನ್ನು ಆ ಸಂಘದವರು ಸರ್ಕಾರದವರಿಂದ ಪಡೆದಿರುತ್ತಾರೆ

ಇದೇ ರೀತಿ ದಯಾಳುಗಳಾದ ನಮ್ಮ ಸರ್ಕಾರದವರು ಪ್ರಜೆಗಳನ್ನು ಪ್ರೋತ್ಸಾಹಪಡಿಸಿ ಏರ್ಪಾಡುಗಳನ್ನು ಮಾಡಿದರೆ ಬಹಳ ಅನುಕೂಲ ಆದರೆ ಪ್ರಜೆಗಳು ಪ್ರಯತ್ನಿಸದೆ ಸರ್ಕಾರದವರು ಏನುತಾನೇ ಮಾಡಬಲ್ಲರು? ನಾವುಗಳು ಪ್ರಯತ್ನಪಟ್ಟಲ್ಲಿ ಸರ್ಕಾರದವರು ಬಹಳ ಸಂತೋಷದಿಂದ ಬೇಕಾದ ಸಲಕರಣೆಗಳನ್ನು ಒದಗಿಸುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಇದೇ ರೀತಿ ನಮ್ಮ ಸಂಸ್ಥಾನದ ದಿವಾನರವರಾದ ಮ|| ವಿಶ್ವೇಶ್ವರಯ್ಯನವರು ತಮ್ಮ ಉಪನ್ಯಾಸಗಳಲ್ಲಿ ಹೇಳುತ್ತಿರುವುದನ್ನು ನಾವುಗಳೆಲ್ಲರೂ ಕೇಳಿರುತ್ತೇವೆ ಅಲ್ಲದೆ ಮಹನೀಯರು ಯಾರಾದರೂ ಮುಂದರಿದು ಈ ಉಪನ್ಯಾಸ ಕೆಲಸಕ್ಕೆ ಪ್ರಾರಂಭಿಸಿದ್ದೇ ಆದರೆ ಅನೇಕ ಜನಗಳು ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಲು ಹಿಂಜರಿಯುವುದಿಲ್ಲ ಮತ್ತು ಕೆಲವು ವೆಟರ್ನರಿ ಡಾಕ್ಟರುಗಳೂ ಕೂಡ ತಮ್ಮ ವಿರಾಮಕಾಲಗಳಲ್ಲಿ ದ್ರವ್ಯಾಪೇಕ್ಷೆಯಿಲ್ಲದೆ ಕೆಲಸಮಾಡುವುದಾಗಿ ಹೇಳುತ್ತಾರೆಂದು ತಿಳಿಯಬರುತ್ತೆ ಆದರೆ ಈ ಕೆಲಸವನ್ನು ಒಬ್ಬ ಮನುಷ್ಯನು ಪ್ರಾರಂಭಿಸಲು ಅಸಾಧ್ಯ ದಯಾಳುಗಳಾದ ಜನಗಳೆಲ್ಲರೂ 'ಏಕಮತ್ಯವೇ ಬಲ' ಎಂಬ ಗಾದೆಗನುಸಾರವಾಗಿ ಒಟ್ಟುಗೂಡಿ ಪ್ರಾರಂಭಿಸಿದರೆ ಆ ಕೆಲಸವು ಸರಿಯಾಗಿ ನಡೆಯುತ್ತೆನ್ನುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ

ಆದ್ದರಿಂದ ಮಹನೀಯರು ಚೆನ್ನಾಗಿ ಪರ್ಯಾಲೋಚಿಸಿ, ದೇಶಾಭಿವೃದ್ಧಿಗಾಗಿ ಹೇಗೆ ಶ್ರಮವನ್ನು ವಹಿಸಿರುತ್ತಾರೆಯೋ ಹಾಗೆಯೇ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬಾರದ ಬಡಮೂಗು ಪ್ರಾಣಿಗಳು ಅನುಭವಿಸತಕ್ಕ ತೊಂದರೆಗಳನ್ನು ಸ್ವಲ್ಪ ಮಟ್ಟಿಗಾದರೂ ಕಡಮೆಮಾಡಲು ಸರಿಯಾದ ಏರ್ಪಾಡುಗಳನ್ನು ಮಾಡಲು ಪ್ರಯತ್ನಿಸಿ ಕೀರ್ತಿಪಡೆಯುತ್ತಾರಾಗಿ ನಂಬುತ್ತೇನೆ ಈ ವಿಚಾರವಾಗಿ ಬರೆಯತಕ್ಕ ಬಾತ್ಮಿಗಳನ್ನು ಬಹಳ ಆದರದಿಂದ ಕೇಳಲು ಸಿದ್ಧನಾಗಿದ್ದೇನೆ

ಪ್ರಾಣಿಗಳ ಹಿತಚಿಂತಕ

ಹೊಳೇ ನರಸೀಪುರದ ಕಾರೋನೇಷನ್ ಹಾಲ್ ಗೃಹಪ್ರವೇಶೋತ್ಸವವು

ಈ ಊರಿನಲ್ಲಿ ಚಕ್ರವರ್ತಿಗಳಾದ ಕಿಂಗ್ ಜಾರ್ಜ್ ರವರ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಕಾರೊನೇಷನ್ ಹಾಲ್ ಎಂಬ ಭವನಕ್ಕೆ 1911 ನೇ ಇಸವಿ ಡಿಸೆಂಬರ್ 13 ನೇ ತಾರೀಖು ನಮ್ಮ ಅಮಲ್ದಾರ್ ಮ|| ಆರ್ ತಿರುನಾರಣಯ್ಯಂಗಾರ್ಯರಿಂದ ಅಸ್ತಿಭಾರ ಹಾಕಲ್ಪಟ್ಟು, ಇದೇ ಡಿಸೆಂಬರ್ ತಾ 12 ನೇ ಶುಕ್ರವಾರ ಗೃಹಪ್ರವೇಶ ಮಹೋತ್ಸವವು ಜರುಗಿಸಲ್ಪಟ್ಟಿತು ಈ ಭವನವನ್ನು ಕಟ್ಟಲು ಪ್ರಜೆಗಳಿಗೆ ಉಲ್ಲಾಸಕೊಟ್ಟು ಸುಮಾರು 6-7 ಸಾವಿರ ರೂಪಾಯಿನವರೆಗೆ ಚಂದಾ ಕೂಡಿಸಿ ಈ ಕಟ್ಟಡವು ಪೂರೈಸಲ್ಪಟ್ಟಿತು ಗೃಹಪ್ರವೇಶ ಮಹೋತ್ಸವ ಕಾಲದಲ್ಲಿ ನಮ್ಮ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮಿ|| ವೆದರಾಲ್ ಸಾಹೇಬರವರ ಧರ್ಮಪತ್ನಿ ವೆದರಾಲ್ ದೊರೆಸಾನಿಯವರು ಗೃಹಪ್ರವೇಶಮಹೋತ್ಸವವನ್ನು ನೆರವೇರಿಸಲು ಒಪ್ಪಿ ದಯಮಾಡಿಸಿದ್ದರು ಈ ಮಹೋತ್ಸವಕ್ಕೆ ಹಾಸನ ಡಿಸ್ಟ್ರಿಕ್ಟಿನ ಆಫೀಸರುಗಳೂ, ಎಲ್ಲಾ ತಾಲ್ಲೂಕುಗಳ ಅಮಲ್ದಾರ್ರುಗಳೂ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳೂ ಕರೆಸಲ್ಪಟ್ಟಿದ್ದರು ಇಳಿಯುವ ಸ್ಥಳವೂ ಭೋಜನವಗೈರೆಗೆ ಅನುಕೂಲವೂ ನಮ್ಮ ಅಮಲ್ದಾರರಿಂದ ಮಾಡಲ್ಪಟ್ಟಿದ್ದವು ಈ ಮಹೋತ್ಸವದ ದಿವಸ ಬೆಳಿಗ್ಗೆ ಹೊಸದಾಗಿ ಕಟ್ಟಿರುವ ಕಿಂಗ್ ಜಾರ್ಜ್ ಕಾರೊನೇಷನ್ ಹಾಲಿನ ಮುಂಭಾಗದಲ್ಲಿ ವಿರಚಿಸಿದ್ದ ಮಂಟಪಕ್ಕೆ ಎಲ್ಲಾ ಅಧಿಕಾರಿಗಳೂ, ಲಾಯರುಗಳೂ, ಸ್ಥಳೀಕ ದೊಡ್ಡಮನುಷ್ಯರುಗಳೂ, ವೈದಿಕಶಿಖಾಮಣಿಗಳೂ ದಯಮಾಡಿಸಿದ್ದರು ನಮ್ಮ ಅಮಲ್ದಾರ್ರು ಮತ್ತು ಮುನ್‌ಸೀಫರುಗಳು ಪರಿವಾರದೊಡನೆ ಟ್ರಾವಲರ್ಸ್ ಬಂಗ್ಲಾದಿಂದ ಮಿ|| ವೆದರಾಲ್ ಸಾಹೇಬರವರನ್ನು ಪತ್ನಿಯುತ ಸಮೇತ ಬಾಜಾ ಬಜಂತ್ರಿಯೊಡನೆ ಕರೆದುಕೊಂಡು ಬಂದು ಆ ಮಂಟಪದಲ್ಲಿ ಅಗ್ರಾಸನವನ್ನು ಕೊಟ್ಟು ಕೂರಿಸಿದನಂತರ ನಮ್ಮ ಅಮಲ್ದಾರ್ ಮ|| ಆರ್ ತಿರುನಾರಣಯ್ಯಂಗಾರ್ರವರು ತಾಲ್ಲೂಕು ರೈತರುಗಳೂ, ಟೌನ್ ನಿವಾಸಿಗಳೂ ಶ್ರದ್ಧಾಭಕ್ತಿಯಿಂದ ಈ ಕಟ್ಟಡವನ್ನು ಕಟ್ಟಿಸಿದ್ದಕ್ಕಾಗಿ ತುಂಬಾ ಕೃತಜ್ಞರಾಗಿರುವದಲ್ಲದೆ ಈ ಮಹೋತ್ಸವವನ್ನು ನೆರವೇರಿಸಲು ಬಂದ ಡೆಪ್ಯುಟಿ ಕಮೀಷನರವರು ಮತ್ತು ಅವರ ಧರ್ಮಪತ್ನಿ ವೆದರಾಲ್ ದೊರೆಸಾನಿಯವರನ್ನು ವಂದಿಸುವದಾಗಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ವೇ|| ಹರಿಭಟ್ಟರು ಸಂಸ್ಕೃತದಲ್ಲಿಯೂ, ಪ್ಲೀಡರ್ ಮ|| ಕೃಷ್ಣಯ್ಯಂಗಾರ್ರು ಕನ್ನಡದಲ್ಲಿಯೂ, ಮಿ|| ಅಬ್ದುಲ್ ಸತ್ತಾರಲ್ಲಿಸಾಹೇಬರು ಹಿಂದುಸ್ಥಾನಿಯಲ್ಲಿ ನಮ್ಮ ಅಮಲ್ದಾರ್ರವರ ಗುಣ ಕಥನವನ್ನೂ ಮಿ|| ವೆದರಾಲ್ ಸಾಹೇಬರವರ ಗುಣಕಥನವನ್ನೂ ಮಾಡಿದರು

ಮಿ|| ವೆದರಾಲ್ ಸಾಹೇಬರವರು ತಮ್ಮ ಪತ್ನಿಯವರಿಗೋಸ್ಕರ ತಾವೇ ಉಪನ್ಯಾಸಮಾಡುವದಾಗಿ ಹೇಳಿ ಎದ್ದು ನಿಂತು ಈ ಕಟ್ಟಡವು ಆಹ್ಲಾದಕರವಾಗಿಯೂ, ಅಂದವಾಗಿಯೂ ಕಟ್ಟುವಂತೆ ಮಾಡಿದ್ದು ನಮ್ಮ ಅಮಲ್ದಾರ್ ಮ|| ಆರ್ ತಿರುನಾರಣಯ್ಯಂಗಾರ್ಯರ ಸಾಹಸದಿಂದ ಆದದ್ದಕ್ಕಾಗಿಯೂ, ಇಲ್ಲಿನ ಪ್ರಜೆಗಳ ರಾಜಭಕ್ತಿಗಾಗಿಯೂ ವಂದನೆಮಾಡುವದಾಗಿ ತಿಳಿಸಿ, ಜಯಘೋಷವಾಗುತ್ತಿರುವಾಗ್ಗೆ ದೊರೆಸಾನಿಯವರು ಸುಮುಹೂರ್ತದಲ್ಲಿ ಗೃಹಪ್ರವೇಶಮಾಡಿದರು ಅಗ್ರಾಸನವನ್ನು ದೊರೆಸಾನಿಯವರು ಅಲಂಕರಿಸಿದ ಬಳಿಕ ಸ್ಕೂಲ್ ಬಾಲಕಿಯರಿಂದ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಮತ್ತು ನಮ್ಮ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ, ಅಗ್ರಾಸನಾಧಿಪತಿಗಳ ಮತ್ತು ಅಮಲ್ದಾರರ ಶ್ರೇಯಃ ಪ್ರಾರ್ಥನೆಯೂ ನಡೆದವು ಬಳಿಕ ಹಿಂದೂ ಪದ್ಧತಿ ಅನುಸರಿಸಿ ಅಗ್ರಾಸನಾಧಿಪತಿಗಳಿಗೆ ಆರತಿಯನ್ನು ಎತ್ತಿದರು ಅವರು ಬಹುಮಾನವಾಗಿ ಒಂದು ದೊಡ್ಡ ಪೌನನ್ನು ದಯಪಾಲಿಸಿದ್ದು ಬಹಳ ಶ್ಲಾಘನೀಯವಾಗಿದೆ

ಅನಂತರ ಮ|| ಸುಬ್ಬಣ್ಣನವರಿಂದ ಸಂಗೀತವು ನಡಿಸಲ್ಪಟ್ಟಿತು ಅಗ್ರಾಸನಾಧಿಪತಿಗಳಿಗೆ ಹೆಣ್ಣು ಮಕ್ಕಳೂ, ಅಮಲ್ದಾರರೂ ಹಾರಾ ತುರಾಯಿ, ಗಂಧ ಪುಷ್ಪ ತಾಂಬೂಲಗಳನ್ನು ಒಪ್ಪಿಸಿದ ಬಳಿಕ ಸಭಿಕರಿಗೆಲ್ಲಾ ಹಾರಾ, ತುರಾಯಿ, ತಾಂಬೂಲಗಳು ಹಂಚಲ್ಪಟ್ಟವು ಅನಂತರ ಅಗ್ರಾಸನಾಧಿಪತಿಗಳನ್ನು ಬಾಜಾ ಬಜಂತ್ರಿ ಮರ್ಯಾದೆಗಳೊಡನೆ ಟ್ರಾವಲರ್ಸ್ ಬಂಗ್ಲಾಕ್ಕೆ ಕಳುಹಿಸಿಕೊಟ್ಟರು

ಈ ತಾಲ್ಲೂಕಿನ ಪ್ರತಿ ಗ್ರಾಮದ ಪಟೇಲ್, ಶಾನುಭೋಗರೂ, ಗ್ರಾಮಸ್ಥರೂ ಅಮಲ್ದಾರ್ರ ಅಪ್ಪಣೆಯ ಪ್ರಕಾರ ಬಂದು ಗಂಧ ಪುಷ್ಪ ಮೊದಲಾದ ಮರ್ಯಾದೆಗಳನ್ನು ಪಡೆದು, ಸಕಲರೂ ಆನಂದದಲ್ಲಿದ್ದರು ಸಾಯಂಕಾಲ ಎ ವಿ ಸ್ಕೂಲು ಕಟ್ಟಡದ ಮೈದಾನದಲ್ಲಿ ಹುಡುಗರಿಂದಲೂ, ಹುಡುಗಿಯರಿಂದಲೂ ವಿನೋದವಾದ ಆಟಗಳೂ ಪಂದ್ಯಗಳೂ ನಡಿಸಲ್ಪಟ್ಟವು ಬಳಿಕ ಕಲಿಭೀಮನೆಂದು ಹೆಸರುಪಡೆದಿರುವ ಪಲ್ಲಿಮೂರ್ತಿಯವರಿಂದ ಟವನ್ ಹಾಲ್ ಮುಂಭಾಗದಲ್ಲಿ ಅಪೂರ್ವವಾದ ಸಾಹಸಕಾರ್ಯಗಳು ಜರುಗಿದವು ಆ ಮೇಲೆ ಅಮೋಘವಾದ ಬಾಣ ಬಿರುಸುಗಳು ಸುಡಲ್ಪಟ್ಟವು ಎಲ್ಲಾ ದೇವಸ್ಥಾನಗಳಲ್ಲಿಯೂ ಉತ್ಸವಾದಿಗಳು ನಡಿಸಲ್ಪಟ್ಟು ದೇವಸ್ಥಾನದಲ್ಲಿ ಶ್ರೀ ಚಕ್ರವರ್ತಿ ಸಾರ್ವಭೌಮರವರ ಮತ್ತೂ ಶ್ರೀಮನ್ ಮಹಾರಾಜಾ ಮತ್ತು ಯುವರಾಜರವರ ಶ್ರೇಯಃ ಪ್ರಾರ್ಥನೆಯು ನಡಿಸಲ್ಪಟ್ಟಿತು ರಾತ್ರಿ ಹಾಸನದಿಂದ ಬಂದಿದ್ದ ಇಂಗ್ಲಿಷ್ ನಾಟಕ ಸಂಘದವರು ಚಂದ್ರಹಾಸ ನಾಟಕವನ್ನು ಅಭಿನಯಿಸಿ ನೋಟಕರ ಮನಸ್ಸನ್ನು ಸಂತೋಷಪಡಿಸಿದರು ಸುಮಾರು 6-7 ಸಹಸ್ರ ಪ್ರಜೆಗಳ ಮೇಳ ಸೇರಿ ಈ ಮಹೋತ್ಸವವನ್ನು ನೋಡಿ ಸಂತೋಷದಿಂದ ನಮ್ಮ ಅಮಲ್ದಾರ್ರವರನ್ನು ಬಹಳವಾಗಿ ಕೊಂಡಾಡಿದರು

ಮಾರನೇ ದಿವಸ ಈ ಹಾಲಿನಲ್ಲಿಯೇ ಡೆಪ್ಯುಟಿ ಕಮೀಷನರ್ ಸಾಹೇಬರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು ನಡೆಯಿತು ಸಾಯಂಕಾಲ 5 ಘಂಟೆಗೆ ಈ ಹಾಲಿನ ಪೂರ್ವ ದಿಕ್ಕಿನಲ್ಲಿ ಹೊಸದಾಗಿ ಕಟ್ಟಬೇಕೆಂದಿರುವ ವೆದರಾಲ್ ಬಜಾರ್ ಸ್ಟ್ರೀಟ್ ಎಂದು ಹೆಸರುಗೊಂಡ ಅಂಗಡಿ ಮಳಿಗೆ ಜಾಗಕ್ಕೆ ಮಿಸೆಸ್ ವೆದರಾಲ್ ಸಾಹೇಬರವರ ಪತ್ನಿಯವರು ಅಸ್ತಿಭಾರವನ್ನು ಹಾಕಿದರು ಆಗ್ಗೆ ಮ ಪ್ಲೀಡರ್ ರಾಮಣ್ಣನವರು ಸಾಹೇಬರವರ ಗುಣಕಥನವನ್ನು ಮಾಡಿ ಕೊಂಡಾಡಿ ಇಂಗ್ಲಿಷಿನಲ್ಲಿ ಉಪನ್ಯಾಸಮಾಡಿದರು

ಆ ದಿವಸ ಸಂಧ್ಯಾಕಾಲದಲ್ಲಿ ಈ ಹಾಲಿಗೆ ಸಾಹೇಬರವರು ಪತ್ನೀ ಸಮೇತ ದಯಮಾಡಿಸಿ ಪಂದ್ಯಗಳಲ್ಲಿ ಗೆದ್ದ ಬಾಲಕ ಬಾಲಕಿಯರಿಗೂ ನೆಯಿಗೇ ಫೋಟೋ ಫೋಟಿಯಲ್ಲಿ ಗೆದ್ದ ಬಾಲಕ ಬಾಲಕಿಯರಿಗೂ ಬಹುಮಾನಗಳನ್ನು ಹಂಚಿದ್ದಲ್ಲದೆ ಈ ಟವನ್ ಹಾಲ್ ಕಟ್ಟಡವನ್ನು ಮೆಹನತ್ತಿನಿಂದ ಕಟ್ಟಿ ಪೂರೈಸಿದ್ದಕ್ಕಾಗಿ ಕಂಟ್ರಾಕ್ಟುದಾರರಾದ ಮಾಣಿಕ್ಯಮೊದಲಿಯಾರ್ರಿಗೆ ಒಂದು ಚಿನ್ನದ ಮೆಡಲು ಸಹ ದಯಪಾಲಿಸಿದರು

ಅತಿಥಿಗಳಿಗೆ ತಕ್ಕ ಅನುಕೂಲಗಳೆಲ್ಲಾ ಏರ್ಪಾಡಾಗಿತ್ತು ಈ ಊರಿನ ಲಾಯರುಗಳೂ, ಅಫಿಸಿಯಲ್‌ಗಳೂ ಬಹಳ ಸಾಹಸಪಟ್ಟು ನಿಯಮಿತವಾದ ಕೆಲಸಗಳನ್ನು ತೃಪ್ತಿಕರವಾಗಿ ನೆರವೇರಿಸಿದರು ನಮ್ಮ ಅಮಲ್ದಾರ್ರವರೂ, ಮುನ್‌ಸೀಫರು ಮ ಎನ್ ಕೆ ಶ್ರೀನಿವಾಸರಾಯರೂ ಪಟ್ಟ ಶ್ರಮವು ಸಾರ್ಥಕವಾದ್ದಕ್ಕಾಗಿ ಸಂತೋಷಪಡುತ್ತೇವೆ ಮುಖ್ಯವಾಗಿ ಈ ತಾಲ್ಲೂಕಿಗೆ ವರ್ಗವಾಗಿ ಬಂದ 3 ½ ದಿವಸದಲ್ಲೇ ಈ ಭಾರಿ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿ ಎರಡು ವರುಷದೊಳಗಾಗಿ ಜನಗಳಿಗೆ ಪ್ರೋತ್ಸಾಹಕೊಟ್ಟು ಅವಶ್ಯವಾದ ದ್ರವ್ಯಸಹಾಯದಿಂದ ಕಟ್ಟಡವನ್ನು ಪೂರೈಸಿ ಗೃಹಪ್ರವೇಶವನ್ನೂ ಸಹಾ ವಿಜೃಂಭಣೆಯಿಂದ ನಡಿಸಿದ ನಮ್ಮ ಅಮಲ್ದಾರ್ ಮ|| ಆರ್ ತಿರುನಾರಣಯ್ಯಂಗಾರ್ಯರಿಗೆ ಸ್ಥಳ ನಿವಾಸಿಗಳಾದ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದ್ದಾಗಿದೆ

ನಮ್ಮ ಪುಸ್ತಕ ಭಂಡಾರವು

"ಇಂದು ಕಳಾ"—ಇದು ಮೈಸೂರು ಕೃಷ್ಣಮೂರ್ತಿಪುರದಲ್ಲಿರುವ ವೇ|| ಎ ವೆಂಕಟಕೃಷ್ಣಶಾಸ್ತ್ರಿಗಳೆಂಬವರಿಂದ ಐದು ಅಂಕಗಳಾಗಿ ರಚಿಸಲ್ಪಟ್ಟ ನಾಟಕವಾಗಿದೆ ಇದಕ್ಕೆ ವಿಲಿಯಂ ಷೇಕ್ಸ್‌ಪಿಯರೆಂಬ ಆಂಗ್ಲ ಮಹಾಕವಿಯಿಂದ ರಚಿಸಲ್ಪಟ್ಟ ಇಂಗ್ಲಿಷ್ ನಾಟಕವೇ ಆಧಾರ ಇದು ಇನ್ನೂ ಎರಡು ಮೂರು ವಿವಾಹ ವಿಷಯಗಳನ್ನೊಳಗೊಂಡಿದ್ದರೂ ಮುಖ್ಯವಾಗಿ ಧನದನೆಂಬ ಹೇಗಾರನ ಮಗನಾದ ನಳಿನಾಕ್ಷನೆಂಬುವನಿಗೂ, ಯಶೋದನನೆಂಬ ರಾಜನ ಪುತ್ರಿಯಾದ ಇಂದುಕಳೆಯೆಂಬವಳಿಗೂ ನಡೆಯುವ ಮದುವೆಯ ಸಾರಾಂಶವಾಗಿದೆ. ಸಂವಿಧಾನವು ಚಮತ್ಕಾರವಾಗಿ ಘಟನೆಯು ರಸಯುಕ್ತವಾಗಿದೆ ಭಾಷೆಯು ಲಲಿತವಾಗಿದೆ ಶುದ್ಧಾಶುದ್ಧ ಪತ್ರಿಕೆಯಿದ್ದರೂ ಇನ್ನೂ ಅಲ್ಲಲ್ಲಿ ಶಬ್ದದೋಷಗಳಿರುವವೆಂದು ಸೂಚಿಸುತ್ತೇವೆ ತೊಂಭತ್ತಾರು ಪುಟಗಳುಳ್ಳ ಈ ಪುಸ್ತಕದ ಕ್ರಯ 6 ಆಣೆಗಳು

"ಮರುತ್ನಂದನಶತಕ"—ರಾಜಮಹೇಂದ್ರಿಯ ಮ|| ಆರ್ ತಾತಾ, ಎಂ ಎ ಎಲ್ ಟಿ ಇವರಿಂದ ವೃತ್ತರೂಪವಾಗಿ ರಚಿಸಲ್ಪಟ್ಟು ಮೈಸೂರು ಮಧುವಾಣೀ ಗ್ರಂಥಮಾಲೆಗೆ ಸೇರಿದ್ದಾಗಿದೆ ಇದು ಮುಖ್ಯವಾಗಿ ಹದಿನೆಂಟು ಪದ್ಯಗಳುಳ್ಳದ್ದಾಗಿ ಅಷ್ಟು ಸರಳವಲ್ಲದ ಭಾಷೆಯಿಂದಲೂ, ಸುಲಭಗ್ರಾಹ್ಯವಲ್ಲದ ಅಭಿಪ್ರಾಯದಿಂದಲೂ ಕೂಡಿ, ಆಂಜನೇಯನೆಂಬ ದೇವರನ್ನು ಅಧಿಕರಿಸಿ ಮಾತಾಡುವುದಾಗಿ, ಕೆಲವು ಲೋಕಾನುಭವಗಳನ್ನು ತಿಳಿಸುತ್ತದೆ

ಮುಖ್ಯವಾಗಿ ಹಿಂದೂ ವಿದ್ವಾಂಸರ ಗ್ರಂಥಗಳನ್ನು ನೋಡುವಾಗ ನಮಗೆ ಎರಡು ವಿಷಯಗಳು ಜ್ಞಾಪಕಕ್ಕೆ ಬರುವವು (1) ಹಿಂದುಗಳ ಲೌಕಿಕ ಪಾರಮಾರ್ಥಿಕ ವಿಷಯಗಳು ಸಂಸ್ಕೃತ ಕರ್ಣಾಟಕಾದಿ ಭಾಷೆಗಳ ಕಠಿಣ ಪದ್ಯರೂಪದಲ್ಲೇ ನಿಂತು, ಸರ್ವರಿಗೂ ಸುಲಭಗ್ರಾಹ್ಯವಲ್ಲದೆ ಹೋಗಿದೆ (2) ಪ್ರತಿಕ್ಷಣದಲ್ಲೂ ನಮ್ಮನ್ನು ಅನುಗ್ರಹಿಸಿ ಕಾಯುತ್ತಿರುವ ಕೃಪೆಯುಳ್ಳ ದೇವರು ಪಕ್ಷನಿಗ್ರಹರೂಪನೆಂದು ಸಾಧಿಸುತ್ತಾ ಬರುವುದರಿಂದ ಯಥಾರ್ಥ ದೇವರ ವಿಷಯದಲ್ಲಿ ಸಂದೇಹವುಂಟಾಯಿತು ಈ ಕಾರಣದಿಂದಲೇ ಅನೇಕ ಕೋಟಿ ದೇವರುಗಳೂ, ಅವರನ್ನು ಆಶ್ರಯಿಸಿಕೊಂಡಿರುವವರೊಳಗೆ ತಮ್ಮ ತಮ್ಮ ದೇವರುಗಳ ಹೆಚ್ಚು ಕಡಮೆ ವಿಷಯದಲ್ಲಿ ಹೋರಾಟಗಳೂ, ಆಧಾರಗ್ರಂಥಗಳೂ ಕಂಡು

ಪ್ರೀತಿ ಶಂಕರಾಚಾರ್ಯಾದಿಗಳು ಗತಿಸಿಹೋದ ಮೇಲೆ ಮನುಷ್ಯನ ಅಂತ ರ್ಯದಲ್ಲಿ ಅಡಗಿಕೊಂಡಿರುವ ಪಾಪವೆಂಬ ಘೋರವ್ಯಾಧಿಯನ್ನು ನಿವಾರಿಸಿ, ಅವನ ಅಂತರಂಗಕ್ಕೆ ವಿಶ್ರಾಂತಿಯನ್ನೂ ನೆಮ್ಮದಿಯನ್ನೂ ಕೊಡುವ ಜ್ಞಾನೌಷಧಗಳನ್ನೊಳಗೊಂಡಿರುವ ಪುಸ್ತಕಗಳು ಹುಟ್ಟುವ ಕಾಲವೂ ಗತಿಸಿ ಹೋಯಿತೆಂದು ವ್ಯಸನಪಟ್ಟು ಹೇಳುತ್ತೇವೆ ಈ ಲೋಕದಲ್ಲಿ ಮೂಢಂ ಗಳೂ ಅಜ್ಞಾನಿಗಳಿಗೆ ಜವಾಬ್ದಾರಿ ಜಾಸ್ತಿಯಾಗಿದೆಯೆಂದು ನಾವು ಬಲ್ಲೆವು ಜ್ಞಾನಿಗಳು ತಮ್ಮ ವಾಗಾಡಂಬರದಿಂದ ಜೊತೆಯವರನ್ನು ಹಿಂದೆ ನೂಕಿ ಮೇಲ್ಪ ಙ್ತಿಯನ್ನು ಎದುರಿಸುವ ಭಾವದಿಂದಲೇ ಗ್ರಂಥಗಳನ್ನು ಬರೆಯದೆ, ನೀತಿ ಧರ್ಮಾರ್ಥಕ್ಕವೆಂಬ ಮೆಟ್ಟಿಲುಗಳಿಂದಿಳಿದು ಸ್ವಾರ್ಥದಿಂದ ಒರಟಾಗಿರುವ ದಿಕ್ಕು ಹೊಸ್ತಿದ ಮೂಢರನ್ನು ಉದ್ಧಾರಮಾಡುವ ಉದ್ದೇಶದಿಂದಲೇ ಬರೆವುದನ್ನು ನಾವು ಕುತೂಹಲದಿಂದ ಎದುರುನೋಡುತ್ತೇವೆ

"ಸುರುನ್ನಂದನವತಕ" ದಲ್ಲಿ ಯೋಗ್ಯತಾಪಕ್ಷಪಾತವೂ ನಿರ್ಮಾತೃ ರ್ಯವೂ ಇರುವುದನ್ನು ಕಂಡು ನಾವು ಸಂತೋಷಪಡುವೆವು ಈ ಗ್ರಂಥ ಕರ್ತೃಗಳು ಮನುಷ್ಯನಿಗೆ ಜಾತಿಯಿಂದುಂಟಾಗುವ ನೀಚೋಚ್ಚ ಭಾವಗಳು ದುರ್ಗುಣಮೂಲಗಳೆಂದೂ ವ್ಯರ್ಥವೆಂದೂ ಭಾವಿಸಿ ಜೈನ, ವೀರಶೈವ, ಬ್ರಾಹ್ಮಣ ಮುಂತಾದ ಪುರಾತನಾಧುನಿಕ ಕವಿಗಳಿಗೆ ಸಮಗೌರವವನ್ನು ಕೊಟ್ಟಿರುವುದರಿಂದ ಇವರ ಅಭಿಪ್ರಾಯದ ಅಭಿವೃದ್ಧಿಗೋಸ್ಕರ ಪ್ರೋತ್ಸಾಹಕರಾಗಿದೇವೆ ಇವರ ಸಂಪೂರ್ಣವಾಗಿ ಕಾಣದೆ ಹೋಗಿರುವ ಐಕಮತ್ಯ ದೇಶೋನ್ನತಿಗಳು ಇವರಿಂದಲೇ ತಲೆಯೆತ್ತಬೇಕಾಗಿದೆ

"ಸರ್ ಕೆ ಶೇಷಾದ್ರಿ ಅಯ್ಯರವರು"—ಬೆಂಗಳೂರು "ಕರ್ನಾಟಕ" ಪತ್ರಿಕಾ ಸಂಪಾದಕರಾದ ಮ॥ ಡಿ ವಿ ಗುಂಡಪ್ಪನವರು ಇಂಗ್ಲಿಷಿನಲ್ಲಿ ಈ ಸಣ್ಣ ಪುಸ್ತಕವನ್ನು ರಚಿಸಿದಾರೆ ಆ ಮಹನೀಯರ ಚರಿತ್ರೆಯನ್ನು ಸಂಪೂರ್ಣವಾಗಿ ಇದರಲ್ಲಿ ಬರೆದಿಲ್ಲವಾದರೂ ಗ್ರಂಥಕರ್ತರು ತುಂಬಾ ಶ್ರಮಪಟ್ಟು ನಿಷ್ಪಕ್ಷಪಾತವಾಗಿಯೂ ವಿವೇಕಪೂರ್ವಕವಾಗಿಯೂ ಸಂಗತಿಗಳನ್ನು ಬರೆದಿರೋಣದ ರಿಂದ ಅದು ಓದುವುದಕ್ಕೆ ತುಂಬಾ ಸ್ವಾರಸ್ಯವಾಗಿದೆ ಇದರ ಕ್ರಯ 8 ಆಣೆ, ಗ್ರಂಥಕರ್ತರಲ್ಲಿ ದೊರೆಯುವುದು

"ಧನಾರ್ಜನ ಪದ್ಧತಿ"—ಈ ವಿಷಯದಲ್ಲಿ ಬೆಂಗಳೂರು ಕಮರ್ಷಿ ಯಲ್ ಹೈಸ್ಕೂಲ್ ಪ್ರಿನ್ಸಿಪಲ್‌ರಾದ ಮ ಗುಬ್ಬಿ ಚಿ ಲಕ್ಷ್ಮೀನಾರಣಾಯ್ಯ ನವರು ರಚಿಸಿರುವ ಕನ್ನಡ ಪುಸ್ತಕವು ಬಹಳ ಪ್ರಯೋಜನಕರವಾಗಿರುತ್ತದೆ ಈ ಜಾತಿಯ ಪುಸ್ತಕಗಳಲ್ಲಿ ನಾವು ನೋಡಿರುವುದು ಇದೇ ಮೊದಲನೆಯ ಪುಸ್ತಕವಾಗಿದೆ ಮಾತುಗಳು ಬಹಳ ಸುಲಭವಾಗಿವೆ ಅಚ್ಚಾಗಿರುವ ಕ್ರಮವೂ ಚೆನ್ನಾಗಿದೆ ಲೆಕ್ಕಗಳನ್ನು ಬರೆದಿಡತಕ್ಕವರು ಇದನ್ನು ಓದಿಕೊಂಡರೆ ತುಂಬಾ ಸಹಾಯವಾಗುವದೆಂದು ನಂಬುತ್ತೇವೆ ಇದರ ಬೆಲೆ 12 ಆಣೆ

"ಜಪಾನೀಯರು ರಾಜ್ಯವು ಸುಕರ್ಮಚಕ್ರಾಧಿಪತ್ಯವಾದದ್ದು"—ಲೈಬ್ರರಿ ಸಬ್ ಎಡಿಟರು ಮ॥ ಎಸ್ ವರದರಾಜ ಅಯ್ಯಂಗಾರ್ರವರು ಜಪಾನ್ ರಾಜ್ಯವನ್ನು ಕುರಿತು ಕನ್ನಡದಲ್ಲಿ ಈ ಸಣ್ಣ ಪುಸ್ತಕವನ್ನು ಬರೆದು, ಇದಕ್ಕೆ 8 ಆಣೆ ಬೆಲೆ ಇಟ್ಟಿದಾರೆ ಅವರು ಬರೆದಿರುವ ಈ ಸಂಕ್ಷೇಪವಾದ ವೃತ್ತಾಂತದಿಂದ ಆ ರಾಜ್ಯವು ಈಚೆಗೆ ಕೆಲವು ವರುಷಗಳೊಳಗಾಗಿ ಬದಲಾವಣೆ ಹೊಂದಿ ಅಭಿವೃದ್ಧಿಯಾಗಿರುವುದನ್ನು ತಕ್ಕಮಟ್ಟಿಗೆ ಗ್ರಹಿಸಿಕೊಳ್ಳಬಹುದು ಜಪಾನೀಯರು ವಿದ್ಯಾವಂತರಾಗಿ ಪಶ್ಚಿಮ ರಾಜ್ಯಗಳಿಗೆ ಹೋಗಿ ಅಲ್ಲಿನ ವಿದ್ಯಾಭ್ಯಾಸಗಳನ್ನು ನೋಡಿ, ಅಲ್ಲಿನ ಕಲಾಕೌಶಲ್ಯಾದಿಗಳನ್ನು ಕಲಿತು ಬಂದದ್ದರಿಂದ ಈ ರಾಜ್ಯವು ಇಷ್ಟು ಬೇಗನೆ ಉಚ್ಛ್ರಾಯಸ್ಥಿತಿಗೆ ಬಂದಿತೆಂದು ಮ॥ ವರದರಾಜ ಅಯ್ಯಂಗಾರರು ಸ್ಪಷ್ಟವಾಗಿ ತೋರಿಸಿರುತ್ತಾರೆ ಅವರು ಈ ಪುಸ್ತಕವನ್ನು ನಮ್ಮ ಶ್ರೀಮದ್ಯುವರಾಜರವರಿಗೆ ಅರ್ಪಿಸಿರುವರು ಇದರಲ್ಲಿ ಕೆಲವು ಚಿತ್ರಗಳೂ ಇವೆ

"ಧರ್ಮಸಾಮ್ರಾಜ್ಯ" ಇದು ಬೌದ್ಧರ ಕೆಲವು ಜಾತಕಗಳ ಕನ್ನಡ ಭಾಷಾಂತರವಾಗಿದೆ ಸಮ್ಮಿ ಸಚ್ಚರಿತ್ರಗಳನ್ನು ನಮ್ಮ ಜನರಿಗೆ ಕಲಿಸಬೇಕೆಂ ಬುದೇ ಈ ಪುಸ್ತಕದ ಉದ್ದೇಶವೆಂದು ಕಾಣುತ್ತದೆ ಗ್ರಂಥಕಾರರಾದ ವೇ॥ ಶ್ರೀ ಅಷ್ಟಕ ನಾರಾಯಣ ಶಾಸ್ತ್ರಿಯವರು ಈ ಕಥೆಗಳನ್ನು ಓದಿಕೊಂಡೇ ಜಪಾನ್‌ನವರು ಈಗಿನಷ್ಟು ಉಚ್ಛ್ರಾಯಸ್ಥಿತಿಗೆ ಬಂದಿದಾರೆಂದು ಎಣಿಸಿರುವಂತೆ ತೋರುತ್ತದೆ ಇದರಲ್ಲಿ ಕಂಡ ಕಥೆಗಳೇನೋ ಬಹಳ ಚೆನ್ನಾಗಿಯೂ, ಉತ್ಸಾಹ ಕರವಾಗಿಯೂ ಸಂತೋಷಪ್ರದವಾಗಿಯೂ ಇವೆ, ಆದರೆ ಈ ಕಥೆಗಳ ದೆಸೆಯಿಂದ ಜಪಾನು ಶ್ರೇಯಸ್ಸನ್ನು ಪಡೆದರೆಂಬುವುದನ್ನು ನಾವು ನಂಬಲಿಕ್ಕಾಗದು ಬುದ್ಧನ ಉಕ್ತಿತತ್ವಗಳಿಂದಲೇ ಅವರು ಮುಂದಕ್ಕೆ ಬಂದರೆಂದು ಹೇಳಿದರೆ ಎಷ್ಟೋ ವರುಷಗಳ ಹಿಂದೆಯೇ ಅವರು ಅಭಿವೃದ್ಧಿ ಹೊಂದಬಹುದಾಗಿತ್ತಲ್ಲಾ ಎಂಬ ಸಂಶಯ ಉಂಟಾಗುತ್ತದೆ ನಮಗೆ ತಿಳಿಯುವ ಮಟ್ಟಿಗೆ ಜಪಾನ್‌ನವರು ಪಾಶ್ಚಾತ್ಯ ರಾಜ್ಯಗಳಿಗೆ ಹೋಗಿಬರುತ್ತಾ, ಅಲ್ಲಿನ ಜನಾಂಗಗಳ ಕೂಡ ಬೆರೆದು ಅವರ ಉಚಿತ ಕಾರ್ಯಕ್ರಮ ಸಾಮರ್ಥ್ಯಾದಿಗಳನ್ನು ಸಾಕ್ಷಾತ್ತಾಗಿ ನೋಡಿ ಅವನ್ನು ಕಲಿತು ಆಚರಣೆಯಲ್ಲಿ ತಂದದ್ದರಿಂದಲೇ ಅವರು ಈಗಿನಷ್ಟು ಉಚ್ಛ್ರಾಯ ಸ್ಥಿತಿಗೆ ಬಂದಿರುತ್ತಾರಲ್ಲದೆ ಈ ಜಾತಕ ಕಥೆಗಳಿಂದ ಅಲ್ಲ ಈ ಪುಸ್ತಕವು ಚೆನ್ನಾಗಿ ಅಚ್ಚಾಗಿರುತ್ತದೆ ಇದರಲ್ಲಿ ಬಹಳ ಸೊಗಸಾದ ಹಲವು ಚಿತ್ರಗಳು ಕೊಡಲ್ಪಟ್ಟಿವೆ ಇದರ ಬೆಲೆ ಒಂದು ರೂಪಾಯಿ ಇಟ್ಟಿದಾರೆ

"ವಿಯೋಗವಿಧಿಯ ವಿಚಾರ"—ಸ್ತ್ರೀಸಂಸ್ಕಾರ ಪ್ರಕಾಶಿಕೆಯೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿರುವ ಮ॥ ರಾ ರಘುನಾಥರಾಯರು ಅನೇಕ ವೇದ ಪ್ರಮಾಣಗಳನ್ನು ಉದಾಹರಿಸಿ, ವಿಧವಾ ಪುನರ್ವಿವಾಹವನ್ನೂ, ವಿದುರರ ವಿವಾಹ ವನ್ನು ಸ್ಥಾಪಿತಪಡಿಸುವುದಕ್ಕಾಗಿ ಕನ್ನಡದಲ್ಲಿ ಈ ಹೊಸ ಪುಸ್ತಕವನ್ನು ಬರೆ ದಿದ್ದಾರೆ ಸಂಘಪರಿಷ್ಕರಣೆಯ ಕಾರ್ಯಗಳಲ್ಲಿ ಪ್ರವರ್ತಿಸಿರುವ ವಿದ್ಯಾವಂತರೂ, ಸಾಮಾನ್ಯವಾಗಿ ಎಲ್ಲಾ ಜನರೂ ಈ ಸಣ್ಣ ಪುಸ್ತಕವನ್ನು ತರಿಸಿ ಓದುವುದರಿಂದ ಪ್ರಯೋಜನಹೊಂದಿಯಾರೆಂದು ನಂಬುತ್ತೇವೆ ಸಮಾಜಸುಧಾರಣೆಗೆ ಮ॥ ರಘು ನಾಥರಾಯರು ಸಾಹಸಪಡುತ್ತಿರುವುದು ಶ್ಲಾಘ್ಯವಾಗಿದೆ ಬಹಳ ಚೆನ್ನಾಗಿ ಅಚ್ಚಾಗಿರುವ ಈ ಸಣ್ಣ ಪುಸ್ತಕದ ಬೆಲೆ 3 ಆಣೆ

"ಲೆಖ್ಖಪ್ರದರ್ಶಿನಿ"—ಮಾಗಡಿಯ ಎ. ವಿ ಸ್ಕೂಲ್ ಹೆಡ್ ಮಾಸ್ಟರು ಮ॥ ಕೆ ರಾಮಸ್ವಾಮಯ್ಯಂಗಾರ್ರು ಸ್ಕೂಲುಗಳಲ್ಲಿ ಓದುವ ಬಾಲಕ ಬಾಲಕಿ ಯರಿಗೆ ಅನುಕೂಲವಾಗಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತಾರೆ ಇದರಲ್ಲಿ ಮೂರು ಭಾಗಗಳಿರುವವು ಲೇವಾದೇವಿಯ ಪತ್ರಗಳು, ಸರ್ಕಾರಿ ಕಾಗದಗಳು, ಸ್ವಂತ ಸಮಾಚಾರ ಕಾಗದಗಳು—ಈ ಬಾಬುಗಳಲ್ಲಿ ನಾನಾ ಬಗೆಯ ನಮೂನೆ ಗಳನ್ನೂ, ಪೋಸ್ಟ್ ಆಫೀಸಿಗೆ ಸಂಬಂಧಪಟ್ಟ ನಿಯಮಗಳನ್ನೂ, ವಿಳಾಸಗಳ ಮಾದರಿಗಳನ್ನೂ, ಲೇವಾದೇವಿ ಪತ್ರಗಳ ಸ್ಟಾಂಪು ನಿರ್ಣಯವನ್ನೂ ಸಂಕ್ಷೇಪ ವಾಗಿಯೂ ಸುಲಭಗ್ರಾಹ್ಯವಾಗಿಯೂ ಬರೆದಿರುತ್ತಾರೆ ವಿದ್ಯಾರ್ಥಿಗಳು ಲೋಕ ವ್ಯವಹಾರವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಲು ಈ ಎರಡು ಆಣೆ ಬೆಲೆಯುಳ್ಳ ಸಣ್ಣ ಪುಸ್ತಕವು ಸಹಾಯಕವಾಗಿದೆ

"ಬಾಯಿಪಾಠ ಪುಸ್ತಕ"—ಶಿವಸಮುದ್ರದ ಎ. ವಿ ಸ್ಕೂಲ್ ಮಾಸ್ಟರು ಮ॥ ಎನ್ ಎಸ್ ಸುಬ್ಬಾಜೋಶ್ಯರವರು ಈ ಸಣ್ಣ ಪುಸ್ತಕದಲ್ಲಿ ಸ್ತೋತ್ರಗಳು, ಎಣಿಕೆ, ಕೂಡುವುದು, ಕಳೆಯುವುದು, ಮಗ್ಗಿ, ಹಾಗ ಮುಪ್ಪಾಗಗಳು, ಭಿನ್ನ ರಾಶಿಗಳು, ಈ ಮೊದಲಾದ ವಿಚಾರಗಳನ್ನು ಚೆನ್ನಾಗಿ ಬರೆದು ಮಕ್ಕಳಿಗೋಸ್ಕರ ದೊಡ್ಡ ಅಕ್ಷರದಿಂದ ಸ್ಪಷ್ಟವಾಗಿ ಮುದ್ರಿಸಿರುತ್ತಾರೆ ಇದರ ಕ್ರಯ 1½ ಆಣೆ

"ಪ್ರಾಕೃತಿಕ ಭೂಗೋಳ, 1 ನೆಯ ಬಾಗ"—ಈ ಸಣ್ಣಪುಸ್ತಕವು ಎತ ದನೆಯಾವರ್ತಿ ಅಚ್ಚಾಗಿರುವುದರಿಂದಲೇ ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾ ಗಿದೆ ಎಂದು ಗೊತ್ತಾಗುವುದು ಮ॥ ಎಂ ಪಿ ಲಿಂಗಪ್ಪಯ್ಯನವರು ಇದರ ಜೊತೆಗೆ ಎರಡನೆಯ ಭಾಗವನ್ನೂ ಪ್ರಕಟಿಸುವವರಾಗಿದಾರೆ ಮೊದಲನೆಯ ಭಾಗ ದಲ್ಲಿ ಮೈಸೂರು ದೇಶದ ಚಿತ್ರಪಟವೂ, 15 ವಿವಿಧ ಭೂಗೋಳನಕ್ಷೆಗಳೂ ಸೇರಿ ಸಲ್ಪಟ್ಟು, ವಿಷಯಗಳನ್ನು ಪ್ರಶ್ನೋತ್ತರರೂಪವಾಗಿ ವಿವರಿಸುತ್ತಾರೆ ಇದರ ಬೆಲೆ 41 ಆಣೆ

ಮಾಸಪತ್ರಿಕೆಗಳು—ನಂಜನಗೂಡಿನಲ್ಲಿ "ಆರ್ಯಮಹಿಳಾ" ಎಂಬ ಕರ್ನಾಟಕ ಮಾಸಪತ್ರಿಕೆಯು ಹೊರಡಲಾರಂಭವಾಗಿದೆ ಇದರಲ್ಲಿ ಸ್ತ್ರೀಯ ರಿಗೆ ಉಪಯುಕ್ತವಾದ ಹಲವು ವಿಷಯಗಳನ್ನು ಬರೆದಿರುವರು—ಬೆಂಗಳೂರು ಸಿಟಿ ವೇದ ಕಾರ್ಯಾಲಯದಿಂದ "ವೇದಾರ್ಥಪ್ರಕಾಶ" ವೆಂಬ ಪತ್ರಿಕೆಯ ಮೊದಲನೆ ಸಂಚಿಕೆ ನಮಗೆ ತಲಪಿದೆ ಇದರಲ್ಲಿ ಋಗ್ವೇದ ಭಾಷ್ಯದ ಕನ್ನಡ ಭಾಷಾನುವಾದಕ್ಕೆ ಸಂಬಂಧಪಟ್ಟ ವಿದ್ಯಾ ಮತ್ತು ವೇದವಿಚಾರವೂ, ಭಾಷ್ಯದ ಉಪೋದ್ಘಾತವೂ ಪ್ರಕಟವಾಗಿದೆ—ಮೈಸೂರು "ಭಾರತೀವಿಲಾಸ" ವೆಂಬ ಪತ್ರಿಕೆಯ ಎರಡನೇ ಸಂಪುಟದ ಮೊದಲನೇ ಸಂಚಿಕೆಯಲ್ಲಿ ಸಂಪಾದಕರು ಸ್ವವಿಷಯ, ವಿದ್ಯಾಭಿವೃದ್ಧಿ, ಸ್ನೇಹಮಯ ಎಂಬ ಸ್ವಾರಸ್ಯವಾದ ಕಥೆ, ಅಧ್ಯಾತ್ಮ ರಾಮಾಯಣದ ಮೂಲ ಮತ್ತು ತಾತ್ಪರ್ಯ, ಜಯಚಂದ್ರಿಕೆ, ಕಲಹಪ್ರಿಯಾ ಪ್ರಹಸನ ಎಂಬಿವು ಕೆಲವು ಬಾಗ ಪ್ರಕಟವಾಗಿರುತ್ತವೆ

ವಾರ್ತಾದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ವಾರ್ತೆಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ದೇವರ ಭಕ್ತ, ಹೊಸದುರ್ಗ—ನೀವು ಬರೆದಿರುವ ವಾರ್ತೆಗೆ ನಿಮ್ಮ ಹೆಸರು ವಿಳಾಸವನ್ನು ಕಾಣಿಸಿ ಪ್ರಕಟಿಸಬಹುದೇ?

ಪುರೋದಯ, ಚಿತ್ರದುರ್ಗ, ಪ್ರಜಾಹಿತಚಿಂತಕ, ಚಿತ್ರದುರ್ಗ, ದೀವ ಟಿಗೆ, ಮದ್ದಗಿರಿ, ಕೆ ಲಿಂಗಪ್ಪ, ಆಗಟಗಾವಡನಹಳ್ಳಿ ಕಂಟ್ರ್ಯಾಕ್ಟ್‌ದಾರ್, ಚನ್ನಗಿರಿ, ಹಾಸನದ ವೃತ್ತಾಂತ, ಗೂಳೂರು ವಾರ್ತೆ, ಕಂಟ್ರ್ಯಾಕ್ಟರ್, ಹಾಸನ, ಎಂ ಗುಂಡುರಾವ್, ಬೆಂಗಳೂರು—ಈ ವಾರ್ತೆಗಳಲ್ಲಿ ಪ್ರಕಟನೆಗೆ ಅರ್ಹ ವಾದ ವಿಚಾರಗಳೇನೂ ಕಂಡುಬರುವದಿಲ್ಲ

"ದರ್ಬಾರ್ ಡೇ" ಉತ್ಸವದ ವೃತ್ತಾಂತಗಳನ್ನು ಶ್ರಮಪಟ್ಟು ನಮ್ಮಲ್ಲಿ ಪ್ರಕಟನೆಗಾಗಿ ಬರೆದು ಕಳುಹಿಸಿರುವ ವಾರ್ತಾದಾರರನ್ನು ವಂದಿಸುವೆವು ಕಾಲಾ ತೀತವಾಗಿ ಬರೆದು ಬರುವ ವಾರ್ತೆಗಳನ್ನು ಪ್ರಕಟಿಸುವುದಕ್ಕೆ ನಮಗಾಗಲಿ, ಓದುವವರಿಗಾಗಲಿ ಉತ್ಸಾಹವೂ ಸಂತೋಷವೂ ಇರಲಾರದೆಂದು ಸೂಚಿಸಿ ಆ ವಾರ್ತೆಗಳನ್ನು ಪ್ರಕಟಮಾಡಲಿಲ್ಲವೆಂದು ಈ ಮೂಲಕ ವ್ಯಕ್ತಪಡಿಸುತ್ತೇವೆ ಈ ವಾರ್ತೆಗಳು ಯಾವ ಸ್ಥಳಗಳಿಂದ ಬಂದಿರುವವೆಂದರೆ—ನೆಲಮಂಗಲದ ತಾ॥ ಬೈರನಹಳ್ಳಿ, ಶಿಕಾರಿಪುರ, ಶಿವಮೊಗ್ಗಾ ತಾ॥ ಹೊಳೆಹೊನ್ನೂರು, ಚಾಮರಾಜ ನಗರದ ತಾ॥ ಹರವೆಗ್ರಾಮ, ಹರಿಹರ, ಕೋಲಾರ ತಾ॥ ಘಂಟಿಗಡಿಗ್ರಾಮ, ಶ್ರವಣ ಬೆಳಗುಳ, ಹಗ್ಗದದೇವನಕೋಟೆ ತಾ ಸರ್ವ ಮಾನ್ಯನಾಗೂಡ್ಲುಗ್ರಾಮ

—ಎಡಿ]

ಕರೆಸ್‌ಪಾಂಡೆನ್ಸ್.

ಪುನರ್ವಿವಾಹಕ್ಕೆ ಹೆಣ್ಣು ಬೇಕು

ಅಯ್ಯಾ,

ವಿಧವಾ ವಿವಾಹವನ್ನು ಮಾಡಿಕೊಡುವ ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ಜವಾಬುಹೊಂದದುವರೆಗೆ ನಂಬಿರುವೆನು ವರನು ವೈಷ್ಣವ ದೇಶಸ್ಥಬ್ರಾಹ್ಮಣ, ಮೈಸೂರು ದೇಶದವನು, 30 ವರುಷ ವಯಸ್ಸು, ಸರ್ಕಾರಿ ಉದ್ಯೋಗದಲ್ಲಿ 10 ರೂಪಾಯಿ ತಲಬುಳ್ಳವನು ಲಗ್ನವಾಗತಕ್ಕ ಕನ್ಯೆಯು ಮೇಲ್ಕಂಡ ಮತಪಂಗಡಕ್ಕೆ ಸೇರಿ 20 ವರುಷದೊಳಗೆ ವಯಸ್ಸಾಗಿರಬಹುದು ಖರ್ಚು ಕಾಲಸ್ಥಿತಿಯಂತೆ ನಾಜೂಕಾಗಿಯೂ ಇರಬೇಕು

ನನ್ನ ವಿಳಾಸ—ಹ ಕೆ ರ, ವೃತ್ತಾಂತ ಪತ್ರಿಕೆ ಆಫೀಸ್, ಮೈಸೂರು

ತುಂಗಭದ್ರಾನದಿಗೆ ಅಣೆಕಟ್ಟಬೇಕು

ಅಯ್ಯಾ,

ಹರಿಹರ ಸಬ್ ತಾಲ್ಲೂಕು ಮಲೆಬೆನ್ನೂರು ಹೋಬಳಿಗೆ ಸಮೀಪ 3-4 ಮೈಲಿ ಫಾಸಲೆಯಲ್ಲಿ ಭೈರನಪಾದ ಎಂಬುವದು ಇದೆ ಈ ಬಳಿ ತುಂಗಭದ್ರಾ ನದಿ ಹರಿಯುತ್ತಾ ಇದೆ ಹಿಂದೆ ನಮ್ಮ ಸರ್ಕಾರದವರು ಇದರ ಸಮೀಪದಲ್ಲಿ ಅಣೆಕಟ್ಟುವ ವಿಚಾರದಲ್ಲಿ ಆಲೋಚನೆ ನಡಿಸಿದಂತೆ ಇಲ್ಲಿನ ವಾಚಕರಿಂದ ಗೊತ್ತಾಯಿತು ಅದು ಯಾತಕ್ಕಾಗಿ ಹಾಗೆಯೇ ನಿಲ್ಲಿಸಿದರೆಂಬ ಸಂಗತಿ ತಿಳಿ ಯಲಿಲ್ಲ ಈಗಲಾದರೂ ನಮ್ಮ ಮಹಾರಾಜಾ ಸರ್ಕಾರದವರು ಇದನ್ನು ಗಮನಕ್ಕೆ ತಂದುಕೊಂಡು ಇಲ್ಲಿ ಅಣೆಕಟ್ಟು ಮಾಡಿಸಿಕೊಟ್ಟರೆ ಹರಿಹರ, ದಾವಣಗೆರೆ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಿಗೆ ಅನುಕೂಲವಾಗಿ ಅನೇಕ ನೀರಾವರಿ ಫಸಲ್‌ಮಾಡಿಕೊಳ್ಳಲೂ ಜನಗಳಿಗೆ ತುಂಬಾ ಅನುಕೂಲವಾಗಿ ಈ ತಾಲ್ಲೂಕುಗಳು ಜಾಗ್ರತೆ ಅಭಿವೃದ್ಧಿಹೊಂದಲು ಏನೂ ಅನುಮಾನವಿಲ್ಲ. ಇದರ ಖರ್ಚು ಎರಡು ವರ್ಷಗಳೊಳಗಾಗಿ ಉತ್ಪತ್ತಿ ಆಗಬಹುದು ನಮ್ಮ ಸರ್ಕಾರಕ್ಕೆ ನಷ್ಟವೇನೂ ಇಲ್ಲ. ಸರಾಸರಿ ಉತ್ಪತ್ತಿಯು ಸಹ ಜಾಸ್ತಿ ಆಗುತ್ತಾ ಬರಬಹುದೆಂದು ನಿರೀಕ್ಷಿಸುತ್ತೇನೆ ಅನೇಕ ಗ್ರಾಮಗಳಿಗೆ ನೀರಿನ ತೊಂದರೆ ಸಹ ತಪ್ಪುತ್ತೆ ಇದನ್ನು ಕ್ಷಿಪ್ರದಲ್ಲಿಯೇ ನಮ್ಮ ಸರ್ಕಾರದವರು ಆಲೋಚನೆಗೆ ತೆಗೆದುಕೊಂಡು ನಡಿಸುವರಾಗಿ ನಂಬಿದೇನೆ

ಹಿತಚಿಂತಕ

ಮಂಡ್ಯದ ತಾಲ್ಲೂಕಿನಲ್ಲಿ ಪೋಸ್ಟಿನ ಅನನುಕೂಲಗಳು

ಅಯ್ಯಾ,

ಮಂಡ್ಯದ ತಾಲ್ಲೂಕು ಕಸಬಾ ಹೋಬಳಿ ಗುಡುಗೋನಹಳ್ಳಿ ಗ್ರಾಮದ ಅರಳೀಚನ್ನಪ್ಪನು ತಮ್ಮ ಪತ್ರಿಕೆ ಮೂಲಕ ತಿಳಿಸುವುದೇನೆಂದರೆ—ನಾನು ತಮ್ಮ ಪತ್ರಿಕೆಗೆ ಚಂದಾದಾರನಾಗಿ ಕೆಲವು ದಿವಸವಾಯಿತು ಪ್ರತಿ ಗುರುವಾರ ತಮ್ಮ ಆಫೀಸಿನಿಂದ ಪತ್ರಿಕೆಗಳು ಮಂಡ್ಯದ ಪೋಸ್ಟ್ ಆಫೀಸಿಗೆ ರವಾನಿಸಲ್ಪಡುತ್ತಿದ್ದರೂ ನನಗೆ ಅವು ತಲಪುವುದು 5 6 ದಿನ ತಾವಕಾಶವಾಗುತ್ತದೆ ಈ ವಿಷಯದಲ್ಲಿ ಕೆಲವು ವಾರಗಳ ಹಿಂದೆ ಒಂದು ವಾರ್ತೆಯನ್ನು ಸಹ ಕೊಟ್ಟಿದ್ದೆನು ಮತ್ತು ಕಸಬಾ ಏಜಂಟರಲ್ಲೂ, ಪೋಸ್ಟ್ ಮಾಸ್ಟರಲ್ಲೂ ಅರಿಕೆಮಾಡಿಕೊಂಡೆನು. ಹಾಗಾದರೂ ಪತ್ರಿಕೆಗಳು ಸಲೀಸಾಗಿ ನನಗೆ ಬರುವದಿಲ್ಲ ಪತ್ರಿಕೆಯನ್ನು ಓದು ವುದರಲ್ಲಿ ನನಗೆ ಬಹಳ ಇಷ್ಟವುಂಟು, ಆದಕಾರಣ ಈ ವಿಷಯದಲ್ಲಿ ತಾವು ತಕ್ಕ ಅನುಕೂಲವನ್ನು ಒದಗಿಸಿಕೊಡುವಿರೆಂದು ಹಾರೈಸುವ ತಮ್ಮ ವಿಧೇಯ

ಅ ಚನ್ನಪ್ಪ

[ಪತ್ರಿಕೆಗಳೂ ಕಾಗದಗಳೂ ಸಕಾಲದಲ್ಲಿ ತಲಪದೆಹೋದರೆ ಗ್ರಾಮದ ಮುಖಂಡರು ಸೇರಿ ಠರಾವುಮಾಡಿ ಅಂಚೆ ಇಲಾಖೆಗೆ ಅರ್ಜಿ ಬರೆದುಕೊಂಡರೆ ಅವರು ತನಿಖೆಮಾಡಿ ಕ್ರಮಪಡಿಸುತ್ತಾರೆ ಮಂಡ್ಯದ ಪೋಸ್ಟ್ ಆಫೀಸಿನಿಂದ ಗ್ರಾಮಾಂತರ ಕಾಗದಗಳನ್ನು ಗುರುವಾರ ಬೆಳಗ್ಗೆ 11-12 ಗಂಟೆಗೆ ಪಿವನ್‌ಗಳಿಗೆ ಕೊಡದೆ ಮಧ್ಯಾಹ್ನ 3 ಗಂಟೆಗೆ ಕೊಡುವಂತೆ ಸ್ವಲ್ಪ ಬದಲಾವಣೆಮಾಡಬೇಕಾದ ದ್ದು ಅವಶ್ಯವೆಂದು ತಿಳಿಯುತ್ತೇವೆ ಅಂಚೆ ಇಲಾಖೆಯವರು ವಿಚಾರಣೆಮಾಡಿ ಆ ರೀತಿ ಬದಲಾಯಿಸುತ್ತಾರೆಂದು ನಿರೀಕ್ಷಿಸುವೆವು—ಎಡಿ]

ಚಿತ್ರದುರ್ಗಕ್ಕೆ ರೈಲು ಆಗಬೇಕು

ಅಯ್ಯಾ,

ಕೋಲಾರ, ಚಿಕ್ಕಬಳ್ಳಾಪುರ, ಇನ್ನೂ ಅನೇಕ ಕಡೆಗೆ ರೈಲುಗಳ ಏರ್ಪಾಟು ನಡೆದು, ಈ ದೊಡ್ಡ ಷಹರೆಂಬ ಚಿತ್ರದುರ್ಗಕ್ಕೆ ಎಷ್ಟೋ ದಿನಗಳಿಂದಲೂ ನಿರೀಕ್ಷಿಸುತ್ತಾ ಇದ್ದಾಗ್ಯೂ ದೈವ ಬಲವು ಒದಗಿದಂತೆ ಕಾಣಲಿಲ್ಲ ಕೆಲವು ದಿವಸಗಳ ಕೆಳಗೆ ಮುಂದೂರಿ ಬಗ್ಗೆ ಗವರ್ನಮೆಂಟಿಗೆ ಹೋಗಿದೆ ಎಂಬದಾಗಿ ನಮೂದಿತ್ತು. ದಾವಣಗೆರೆ ಎಂಬ ಊರು ಬಹಳ ಹೀನಸ್ಥಿತಿಯಲ್ಲಿತ್ತು ರೈಲು ಬಂದದ್ದರಿಂದ ದೊಡ್ಡ ಷಹರು ಪಟ್ಟಣವಾಯಿತು ಚಿತ್ರದುರ್ಗಕ್ಕೆ ರೈಲು ಇಲ್ಲ ದ್ದರಿಂದ ದೊಡ್ಡ ದೊಡ್ಡ ವ್ಯಾಪಾರಗಳು ಹೆಚ್ಚುವದಕ್ಕೆ ಅವಕಾಶವಿಲ್ಲದೆ ಹಳ್ಳಿ ಗಿಂತ ಕಡೆಯಾಗಿದೆ ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗ, ಇನ್ನೂ ಅನೇಕ ಕಡೆಗಳಿಂದ ಹತ್ತಿಯ ಗಾಡಿಗಳ ಎತ್ತಿನ ಶ್ರಮೆಯನ್ನು ಎಷ್ಟು ವರ್ಣಿಸಿದರೂ ತೀರದು ಪೂರ್ವದಲ್ಲಿ ರೂಪಾಯಿ ಒಂದಕ್ಕೆ ಜವಿನ್ ಕಂದಾಯವನ್ನು ರೈಲಿ ಗೋಸ್ಕರ ಒಂದಾಣೆಯಂತೆ ಹೆಚ್ಚಿಸಿದ್ದರು ಈಗ ರೈಲು ಬಂದರೆ ಸಾಕು, ಒಂದೂವರೆ ಆಣೆಯಂತಾದರೂ ಅಥವಾ ಎರಡಾಣೆಯಂತಾದರೂ ಕೊಟ್ಟೇವಲ್ಲಾ, ಎತ್ತು ಗಾಡಿ ಶ್ರಮೆಯು ಎಂದಿಗೆ ನಿವಾರಣೆಯಾಗುವದೋ ಎಂಬದಾಗಿ ಎಲ್ಲರೂ ಹಗಲು ರಾತ್ರಿ ರೈಲು ನಿರೀಕ್ಷಣೆಯಲ್ಲೇ ಇದೇವೆ ಹಿಂದೆ ಡೆಪ್ಟಿ ಕಮಿಷನ್ ರಾಗಿದ್ದ ಮ॥ ಚಾಂಡಿ ಸಾಹೇಬರು ಚಾಜೂರಿನಿಂದ ಹದಿನೇಟು ಮೈಲು ನೆಲ ಸರ್ವೆ ಸುದ ಮಾಡಿಸಿ ಅದೇ ಚಿಂತೆಯಲ್ಲಿದ್ದರು ಈಚೆಗೆ ಯಾವ ಮಹಾನು ಭಾವರ ಚಿತ್ತಕ್ಕೂ ಬರಲಿಲ್ಲ ಇಲ್ಲಿಗೆ ರೈಲು ಬರುವದಿಲ್ಲವೆಂದು ಖಂಡಿತವಾದರೆ ಈ ದೊಡ್ಡ ಪಟ್ಟಣವು ಒಂದು ಹಳ್ಳಿಯ ಸಮಾನವೆಂದು ತಿಳಿದುಕೊಂಡು ಬಡತನ ವನ್ನೇ ಅನುಭವಿಸಿಕೊಂಡು, ರೈಲು ಬಂದ ಸ್ಥಳದ ಪುಣ್ಯಾತ್ಮರೇ ಸುಖವಾಗಿರಲಿ ಎಂದು ಅವರ ವ್ಯಸನವನ್ನೇ ಬಿಟ್ಟಿರುವೆವು ಮಿಕ್ಕಾದ ಎಲ್ಲಾ ತಾಲ್ಲೂಕಿನವರೂ ಕಂದಾಯದ ಮೇಲೆ ರೂಪಾಯಿಗೆ ಎರಡಾಣೆಯಂತಾದರೂ ಕೊಟ್ಟೇವು, ನಮ್ಮ ಕಷ್ಟಗಳೂ ನಮ್ಮ ಎತ್ತುಗಳ ಕಷ್ಟವೂ ತಪ್ಪಿದರೆ ಸಾಕು ಎನ್ನುತ್ತಾರೆ ಯಾವ ಮಹಾನುಭಾವರು ಇದನ್ನು ಪರಿಹರಮಾಡುವರೋ ಕಾಣೆವು ಅವರ ಉಪಕಾರ ವನ್ನು ಎಂದೆಂದಿಗೂ ಮರೆಯಲಾರೆವೆಂದು ಅರಿಕೆಮಾಡಿಕೊಳ್ಳುತ್ತೇವೆ

ಸಾ ಗುರುಸಿದ್ದಪ್ಪ

ಪರಸ್ಪರವಿರೋಧಕ್ಕಿಂತಲೂ ಪರಸ್ಪರಸಹಾಯವೇ ಕ್ಷೇಮ

ಅಯ್ಯಾ,

ಮೇಲ್ಕಂಡ ವಿಷಯವಾಗಿ ನಿಮ್ಮ ಕಳೆದ ವಾರಗಳ ಪತ್ರಿಕೆಗಳಲ್ಲಿ ಬರೆದಿರು ವದನ್ನು ಓದಿದೆನು ಮೊದಲಿನಿಂದ ಗ್ರಾಮದಲ್ಲಿದ್ದ ದ್ವೇಷವನ್ನು ತಪ್ಪಿಸುವದ ಕ್ಕಾಗಿ ಮ॥ ಪಟೇಲ್ ಚನ್ನೇಗೌಡರೂ, ಮ॥ ಪಟಾಪಟ ಚನ್ನೇಗೌಡರೂ ಪುಟ್ಟ ಇದ್ದನೆಂಬುವನ ಕೊಲೆ ಮೊಕದ್ದಮೆಯಲ್ಲಿ ಮಿಹನತ್ತು ಮಾಡಿದ್ದಕ್ಕಾಗಿ ಗವರ್ನ ಮೆಂಟಿನಿಂದ ಬಂದ ಬಿರುದುಗಳನ್ನು ಪಡೆದುಕೊಂಡು ಬೆಂಗಳೂರಿನಿಂದ ಬಂದಾರಭ್ಯ ಸ್ನೇಹಭಾವದಿಂದ ಹಿತವಾಗಿ ನಡೆಯುತ್ತಿರುವದು ಸಂತೋಷವಾಗಿದೆ ಈ ದೇಶದ ಏಳಿಗೆಗಾಗಿ ನಮ್ಮ ಮೈಸೂರು ಗವರ್ನಮೆಂಟಿನವರು ಮಾಡುತ್ತಿರುವ ಏರ್ಪಾಟುಗಳು ಆತಿಶಯವಾದವುಗಳಾಗಿವೆ ನಮ್ಮ ವೀರಶೈವ ಜನಾಂಗದವರು ಚಿಕ್ಕಮಗಳೂರಿನಲ್ಲಿ ಶ್ರೀಮನ್ ಮಹಾರಾಜಾಸಾಹೇಬ್ ಒಡೆಯರವರ ಅಮೃತ ಹಸ್ತದಿಂದ ವಿದ್ಯಾರ್ಥಿನಿಲಯದ ಸುಪ್ರತಿಷ್ಠಾಪನಾ ತಿಥಿಯನ್ನು ಸ್ಥಾಪಿಸುವಂತೆ ಬೇಡಿದ ದಿವಸದಾರಭ್ಯ ವಿದ್ಯಾಭಿವೃದ್ಧಿಯ ಮೂಲಕ ವೀರಶೈವ ಜನಾಂಗದವರಾದ ನಮ್ಮಗಳ ಏಳಿಗೆಗಾಗಿ ಶ್ರಮಪಡುತ್ತಿರುವದನ್ನು ಹೇಳುವದಕ್ಕೆ ಅಸಾಧ್ಯ ಅಜು ಬಾಜು ಗ್ರಾಮಗಳವರು ಐಕಮತ್ಯದಿಂದ ಸುಖಸಂತೋಷಗಳನ್ನು ಅನುಭವಿಸು ತ್ತಿರುವಲ್ಲಿ ಮಾರನೆಗೆರೆ ಗ್ರಾಮದಲ್ಲಿ ಕೆಲವರು ತಮ್ಮಗಳಿಗೆ ಕುಂದಕವುಂಟಾಗು ವದನ್ನು ಸಹ ಯೋಚಿಸದೆ ಸಜ್ಜನರಿಗೆ ವಿರೋಧವಾಗಿ ನಡೆಯುವದು ನ್ಯಾಯ ವಲ್ಲ ಮತ್ತು ಪಾಶ್ಚಾತ್ಯ ದೇಶದವರು ಆಕಾಶದಲ್ಲಿ ಸಂಚರಿಸುತ್ತಿದ್ದಾಗ್ಯೂ

ನಾವುಗಳು ಎಳೆಯಮಕ್ಕಳಂತೆ ತೊಟ್ಟಿನಲ್ಲಿ ಬಿದ್ದಿರುವದನ್ನು ಗ್ರಾಮಮುಖಂಡರಾದ ಮ॥ ಪಟೇಲ್ ಚನ್ನೇಗೌಡರೂ, ಮ॥ ಪಟ್ವಾರಿ ಚನ್ನೇಗೌಡರೂ ಅರಿತು ಏಕಮತ್ಯದಿಂದ ನಡೆಯುವದೂ, ಇವರ ಮಕ್ಕಳುಗಳು ಸ್ವಜನರಲ್ಲಿ ಏಕಮತ್ಯವನ್ನು ನೆಲೆಗೊಳಿಸಬೇಕೆಂಬದಾಗಿ ವ್ಯಥೆಪಡುವದನ್ನು ಸಹ ಯೋಚಿಸದೆ, ಸ್ವಜನರಲ್ಲಿಯೇ ವಿರೋಧವನ್ನುಂಟುಮಾಡುವವರ ಮಾತಿಗೆ ಕಿವಿಗೊಟ್ಟು, ದೇಶಕಾಲ ವರ್ತಮಾನಗಳನ್ನು ಯೋಚಿಸದೆ, ಸ್ವೇಚ್ಛೆಯಾಗಿ ವರ್ತಿಸುತ್ತಿರುವದು ಒಂದೇ ಜನಾಂಗದವರಾದ ನಮ್ಮಗಳಿಗೆ ಅಗೌರವವಾದದ್ದೆಂದು ಈ ಮೂಲಕ ಒತ್ತಿ ಹೇಳುತ್ತೇನೆ. ಹಿತಚಿಂತಕ.

ಕುಲೀನ್‌ಪೇಟೆಯ ದೇವಸ್ಥಾನ—ಜವಾಬ್.

ಅಯ್ಯಾ,

ಕಳೆದ ನವಂಬರ್ ತಾ. 6 ನೇ ತಮ್ಮ ಪತ್ರಿಕೆಯಲ್ಲಿ ನಮೂದಿಸಿರುವ ಅಭಿಪ್ರಾಯದಿಂದ ಲಿಂಗಾಯಿತರಿಗೂ ವೈಶ್ಯರಿಗೂ ತಕರಾರು ನಡೆದದ್ದರಿಂದ ಕನಕಮ್ಮನ ದೇವಸ್ಥಾನದ ಕಾಮಗಾರಿ ನಿಲ್ಲಿಸಲ್ಪಟ್ಟಿತೆಂದು ತಿಳಿಯಬರುತ್ತೆ. ಇದು ಹದಿನೆಂಟು ಕೋಮಿನವರ ತಕರಾರಿನಿಂದ ನಿಲ್ಲಲು ಕಾರಣವಾಗಿರುತ್ತದೆ ಈ ಟವನಿನಲ್ಲಿರುವ ಎಲ್ಲಾ ಕೋಮಿನವರಿಗೂ ಈ ನೂತನದೇವಾಲಯದ ವಿಷಯದಲ್ಲಿ ಅಸಮಾಧಾನವಿದೆ ಎಂದು ಶ್ರೀಮನ್ಮಹಾರಾಜರವರಿಗೂ, ದಿವಾನ್‌ರವರಿಗೂ, ಡೆಪ್ಯುಟಿ ಕಮಿಷನರಿಗೂ ಅರ್ಜಿಕೊಟ್ಟು ತಕರಾರ್‌ಮಾಡಿದಾಗ ಗವರನ್‌ಮೆಂಟಿನವರು ಆ ಅರ್ಜಿಯನ್ನು ವ್ಯವಸ್ಥೆಮಾಡಲು ಡೆಪ್ಯುಟಿ ಕಮೀಷನರಿಗೂ, ಇಲ್ಲಿನ ಸಬ್ ಡಿವಿಜನ್ ಆಫೀಸರಿಗೂ ಹುಕುಂ ದಯಪಾಲಿಸಿದ್ದರ ಮೇಲೆ ಅವರು ಹದಿನೆಂಟು ಕೋಮಿನ ಪೊತ್ತೇಸರರನ್ನು ಕರೆದು ವಿಚಾರಿಸಿದಾಗ ಮಾಮೂಲಿಲ್ಲದ ಮತ್ತು ಜನಗಳಿಗೆ ಅಸಮಾಧಾನಕರವಾದ ದೇವಸ್ಥಾನವನ್ನು ನಿರ್ಮಾಣಮಾಡಕೂಡದೆಂದು ಮುಚ್ಚಳಿಕೆ ಕೊಟ್ಟರು. ಅದರ ಮೇಲೆ ಮುಜರಾಯಿ ಸೆಕ್ರೆಟರಿಯವರೂ ಡೆಪ್ಯುಟಿ ಕಮೀಷನರವರೂ ಸ್ಥಳ ಅಜಮಾಯಿಷಿ ಬಗ್ಗೆ ಬಂದು ಈ ಟವನಿನಲ್ಲಿರುವ ಎಲ್ಲಾ ಜನಗಳನ್ನೂ ಕರೆಯಿಸಿ ಅವರುಗಳ ಹೇಳಿಕೆಯನ್ನು ಬರೆದುಕೊಂಡು ತಕರಾರು ಫೈಸಲಾಗುವ ತನಕ ದೇವಾಲಯವನ್ನು ಕಟ್ಟಕೂಡದೆಂದು ಆರ್ಡರು ದಯಪಾಲಿಸಿದರು. ಆ ಸಂಗತಿಗಳೆಲ್ಲಾ ವಿಶದಪಡಿಸಲು ನಮ್ಮ ಬಾತ್ಮಿಯೇ ತಮ್ಮ ಪತ್ರಿಕೆಯನ್ನೆಲ್ಲಾ ಆವರಿಸುವಂತೆ ಕಾಣುತ್ತೆ ಯಾಗಿ ಇಪ್ಪತ್ತೈದು ವರ್ಷಗಳಿಂದಲೂ ದೇವಸ್ಥಾನವಿತ್ತೆಂದು ತಮ್ಮ ಪತ್ರಿಕೆಯಲ್ಲಿ ತಿಳಿಸಿರುವುದು ಶುದ್ಧಸುಳ್ಳಾಗಿರುತ್ತೆ ಈಗ ನೂತನವಾಗಿ ಕಟ್ಟಬೇಕೆಂದಿರುವ ಸ್ಥಳವು ಮೊದಲು ಕೆಲವು ಜನಗಳ ಮನೆಯಾಗಿದ್ದು ನಂತರ ಅವರಿಂದ ಬಾಡಿಗೆಗೆ ಪಡೆದು ಎಷ್ಟೋ ಸಂಸಾರಸ್ಥರು ವಾಸವಾಗಿದ್ದರು. ಇದರ ರಿಕಾರ್ಡು ದೇಶದವರಲ್ಲಿಯೂ, ಸರ್ಕಾರದ ಖಾನೇಷುಮಾರಿ ಲೆಕ್ಕದಲ್ಲಿಯೂ ನೋಡಿದರೆ ದೇವಸ್ಥಾನವಿತ್ತು ಇಲ್ಲವೆಂಬುದು ಚೆನ್ನಾಗಿ ಗೊತ್ತಾಗುತ್ತೆ. ಹಾಗೆ ಅದು ದೇವಾಲಯವಾಗಿದ್ದಲ್ಲಿ ಕಂದಾಯವುಂಟೆಂಬುವುದು ಯೋಚಿಸಬೇಕಾಗಿದೆ. ಈ ನೂತನ ಕನಕಮ್ಮನೆಂಬ ದೇವತೆಯನ್ನು ವೈಶ್ಯರು ವಿನಹ ಯಾವ ಮತಸ್ಥರೂ ಪೂಜಿಸುವುದಿಲ್ಲ. ಅವರು ಕಟ್ಟಬೇಕೆಂದಿರುವ ಸ್ಥಳವು ಹೈರೋಡಾಗಿಯೂ, ದೇಶದ ಪೇಟೆಯಾಗಿಯೂ, ಎಲ್ಲಾ ಕೋಮಿನವರ ಮೆರವಣಿಗೆ ಮುಂತಾದ ಸಂತೋಷ ಕಾರ್ಯನಡೆಯಬೇಕಾದ ಸ್ಥಳವಾಗಿಯೂ ಇರುವುದರಿಂದ ಪ್ರತಿಯೊಬ್ಬರಿಗೂ ತೊಂದರೆಯಾದ ಕಾರಣ ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಲು ಹಿಂದೆ ಸದರಿ ವೈಶ್ಯರಿಗೂ ದೇಶದವರಿಗೂ ನಡೆದಿದ್ದ ವ್ಯಾಜ್ಯದ ರಿಕಾರ್ಡುಗಳನ್ನೆಲ್ಲಾ ಪರಾಂಬರಿಸಿ ಈ ದೇವಾಲಯವನ್ನು ಕಟ್ಟದಂತೆ ತಡೆಮಾಡಿರುತ್ತಾರೆ ತಮಗೇನಾದರೂ ಈ ವಿಷಯಕ್ಕೆ ಸಂಬಂಧಪಟ್ಟ ರಿಕಾರ್ಡುಗಳು ಅವಶ್ಯಕವಿದ್ದಲ್ಲಿ ಕಳುಹಿಸಲು ಸಿದ್ಧನಾಗಿರುತ್ತೇನೆ. ಕೆ. ನಾರಾಯಣಸ್ವಾಮಿಮುದಲಿಯಾರ್.

ತಾಲ್ಲೋಕು ವರ್ತಮಾನಗಳು.

ತೀರ್ಥಹಳ್ಳಿ.—ಇಲ್ಲಿ ಪ್ರತಿವರುಷವು ನಡೆಯುತ್ತಿರುವ ಎಳ್ಳಮಾವಾಸ್ಯೆಯ ಜಾತ್ರೆಯು ಈ ಸಾರಿ ಬಹಳ ವಿಜೃಂಭಣೆಯಿಂದ ನಡೆದಿರುತ್ತದೆ ಪ್ರಜಾಸಮುದಾಯವೆಂತು ಪ್ರತಿವರುಷಕ್ಕಿಂತ ಹೆಚ್ಚಾಗಿಯೇ ಕಿಕ್ಕಿರಿಯುವಂತಿದೆ ಇದಕ್ಕೆ ತಕ್ಕಂತೆ ನಮ್ಮ ಮೈಸೂರು ಆರ್. ಟಿ ಕಂಪನಿಯವರ ನಾಟಕ ಶಾಲೆಯಲ್ಲಿ ಪ್ರತಿನಾಟಕದಲ್ಲೂ ಹೆಚ್ಚಾದ ಜನರು ಸೇರುತ್ತಿದ್ದಾರೆ ಕಂಪನಿಯವರು ಇಲ್ಲಿಂದ ಮುಂದಕ್ಕೆ ಉಡುಪಿಯ ಪ್ರಾಂತ್ಯಕ್ಕೆ ತೆರಳುವರಾಗಿದ್ದಾರೆ. ದಿನಸಿ ಧಾರಣೆಯು ದಿನ ದಿನಕ್ಕೆ ಏರುತ್ತಿದೆ. ಅಡಿಕೆ ಧಾರಣೆ ಈಗ 1-8 ದಿವಸದಿಂದ ಇಳಿತಕ್ಕೆ ಬರುತ್ತಿದೆ —ಈ ಊರ ಪೋಸ್ಟ್ ಮಾಸ್ಟರಾಗಿರುವ ಮ॥ ದಾಮೋದರನಾಯುಡುರವರು ತೀರ್ಥಹಳ್ಳಿಗೆ ಬಂದಲಾಗಾಯಿತು ತಕ್ಕ ಮಟ್ಟಿನ ಪ್ರಜಾ ಹಿತಚಿಂತಕನಿಗೆ ಒಳಪಟ್ಟಿದ್ದರು ಈಚೆಗೆ ಸೇವಿಂಗ್ಸ್ ಬ್ಯಾಂಕ್ ವಿಷಯದಲ್ಲಿ ಡಿಪಾಜಿಟ್ಟುದಾರರಿಗೆ ಹೆಚ್ಚಾದ ಬುದ್ಧಿವಾದವನ್ನು ಹೇಳುತ್ತಿದ್ದಾರೆ.

ಶಿವಮೊಗ್ಗಾ ತಾ॥ ಕೂಡ್ಲಿ.—ಈ ಸಾರಿ ಒಂದು ಹದ ಮಳೆ ಸಾಲದೆ ತರಿ ಫಸಲು ಸುಮಾರಾಯಿತು. ರಾಗಿ ಬೆಳೆ ಚೆನ್ನಾಗಿದೆ ಈಗ 5_6 ದಿವಸಗಳಿಂದ ಮೋಡಕವಿಯುತ್ತಾ ಇದೆಯೇ ಹೊರತು ಮಳೆ ಬರಲಿಲ್ಲ.—ಈ ಊರಿನ ಸುತ್ತುಮುತ್ತಣ ಗ್ರಾಮಗಳಲ್ಲಿ ಪ್ಲೇಗ್ ಉಪದ್ರವಿತ್ತು ಈಗ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತಾ ಇದೆ. ವೈಷ್ಣವ ಕೇರಿ ಜನರು ಇಲ್ಲಿ ಗಲಾಟೆಯಾಗಿದ್ದಾಗ ಇಲ್ಲಿಂದ ಶಿವಮೊಗ್ಗೆಗೆ ಹೋಗಿದ್ದರು. ಅಲ್ಲಿ ಗಲಾಟೆ ಹೆಚ್ಚಾದ್ದರಿಂದ ವಾಪಸು ಬರುತ್ತಿದ್ದಾರೆ —ಇಲ್ಲಿನ ಸ್ಕೂಲಿನಲ್ಲಿ ಹೆಡ್ ಮಾಸ್ಟರು ಮ॥ ಕೆ. ಸೋಮೇಶ್ವರಶಾಸ್ತ್ರಿಗಳು ಜನರಿಗೆ ಪ್ರೋತ್ಸಾಹಮಾಡಿ ಹುಡುಗರ ಸಂಖ್ಯೆಯನ್ನು ಹೆಚ್ಚಿಸಿದರು. ಇವರ ಮಿತಭಾಷಿತ್ವವೂ, ಬೋಧನಾಕ್ರಮವೂ ಈ ಅಭಿವೃದ್ಧಿಯ ಕಾರಣ ವೇ॥ ಜಟಾವಲ್ಲಭರ ವೆಂಕಟರಮಣಾವಧಾನಿಗಳ ಹಿರೇ ಮಗ ರಾಮಾವಧಾನಿಯು ಒಂದು ವರ್ಷದಿಂದ ಖಾಯಿಲೆ ಇದ್ದು, ಶಿವಮೊಗ್ಗೆಗೆ ಹೋಗಿ ಅಲ್ಲಿಯೂ ಗುಣವಾಗದೆ ಆಸ್ಪತ್ರೆಯಲ್ಲೇ ಹಿಂದಿನ ಭಾನುವಾರ ಕಾಲವಾದರು. ಇವರ ತಂದೆ ತಾಯಿಗಳ ಮತ್ತು ಹೆಂಡತಿಯ ದುಃಖಕ್ಕೆ ಪಾರವೇ ಇಲ್ಲ. ಅಮಲ್ದಾರ್ರು ಹೊಳೆ ಹೊನ್ನೂರು, ಆನವೇರಿ ಮೊದಲಾದ ಹೋಬಳಿಗಳ ಜಮಾಬಂದಿಯನ್ನು ಮಾಡುತ್ತಿದ್ದಾರೆ

ಚಿತ್ರದುರ್ಗ.—ಆಹಾರ ಪದಾರ್ಥಗಳ ಮತ್ತು ಹುಲ್ಲಿನ ಧಾರಣೆ ಏರುತ್ತಲೇ ಇವೆ ಚಳಿ ಕಮ್ಮಿಯಾದರೂ ಕಾಯಿಲೆಗಳು ಇದ್ದೇ ಇವೆ.—ಸ್ಕೂಲ್ ಡಿಪ್ಟಿ ಇನ್ಸ್‌ಪೆಕ್ಟರ್ ಮ॥ ತಿರುಮಲಾಚಾರ್ಯರು ಚಳ್ಳಕೆರೆ ತಾಲ್ಲೂಕಿನಲ್ಲಿ ಸರ್ಕೀಟು ಹೋಗಿದ್ದಾಗ ಹಿಂದಿನ ವಾರ ಅವರ ಗಾಡಿಗೆ ಕಳ್ಳರು ಬಿದ್ದು ನೂರಾರು ರೂಪಾಯಿ ನಗನೂ ಮಾಲೂ ತೆಗೆದುಕೊಂಡು ಹೋದರು. ಆಗ ಡೆಪ್ಟಿ ಇನ್ಸ್‌ಪೆಕ್ಟರಿಗೂ ಕಳ್ಳರಿಗೂ ನಡೆದ ಸಂಭಾಷಣೆಯನ್ನು ಕೇಳಿದರೆ ಗ್ರಾಮಸ್ಥರೇ ಈ ಕೃತ್ಯ ನಡಿಸಿದಂತೆ ತೋರುತ್ತೆ —ಶ್ರೀ ಶಿವಗಂಗಾಸ್ವಾಮಿಗಳವರು 17 ನೇ ತಾ. ಇಲ್ಲಿಗೆ ದಯಮಾಡಿ ಮಾರನೇ ದಿನ ಮೊಕ್ಕಾಂಮಾಡಿ ಸಾಯಂಕಾಲ ಧರ್ಮ ವಿಚಾರದ ಉಪನ್ಯಾಸಮಾಡಿ, ಶುಕ್ರವಾರ ಹಿರಿಯೂರು ಪ್ರಾಂತ್ಯ ದಯಮಾಡಿಸಿದರು ಅವರ ಸೇವೆಯನ್ನು ಅ॥ ಕಮಿಷನರ್ ಮ॥ ರಾಮಚಂದ್ರರಾಯರೂ, ಅಮಲ್ದಾರ್ ಮ॥ ವಿ. ವೆಂಕಟರಾಯರೂ ಖುದ್ದು ನಿಂತು ಬಹಳ ವಿಶದಣೆಯಾಗಿ ನಡಿಸಿದರು. ಕಳೆದ ತಾ. 24 ನೇ ಬುಧವಾರ ಬೆಳಗ್ಗೆ ಸಿವಿಂಗ್ ಮೇಸ್ತ್ರಿ ಮ॥ ದೇವಿಡ್ಡರ ಮಗಳು ಸೌ॥ ಮೇರಿ ಡೇವಿಡ್‌ಗೂ ಮ॥ ಥಾಮಸ್ ಡೇವಿಡ್‌ಗೂ ಹೈ ಸ್ಕೂಲ್ ಕಟ್ಟಡದಲ್ಲಿ ವಿವಾಹ ನಡೆಯಿತು. ಆಗ ಕ್ರೈಸ್ತ, ಹಿಂದೂ, ಮಹಮದಿಯ ದೊಡ್ಡ ಮನುಷ್ಯರು ಹಾಜರಿದ್ದರು. ವೆಸ್ಲಿಯನ್ ಮಿಷನ್ ರೆವ್. ಪರಸ್ಪನ್ ದೊರೆಯವರು ಬಂದು ಈ ಶುಭಕಾರ್ಯಗಳನ್ನು ನೆರವೇರಿಸಿದರು —ಈ ಊರಲ್ಲಿ ನೆನ್ನೆಯಿಂದ ಮೂರು ದಿವಸದ ವರೆಗೂ ಟೀಚರ್ಸ್ ಅಸೋಸಿಯೇಷನ್ ವಾರ್ಷಿಕೋತ್ಸವ ನಡೆಯುತ್ತಾ ಇದೆ. ಅದಕ್ಕಾಗಿ ಈ ಡಿಸ್ಟ್ರಿಕ್ಟಿನ ಟೀಚರುಗಳೆಲ್ಲಾ ಬಂದಿದ್ದಾರೆ. ಇವರ ಭೋಜನ ವಸತಿಗಳನ್ನು, ಬ್ರಾಹ್ಮಣರಿಗೆ ಸರ್ಕಾರಿ ಛತ್ರದಲ್ಲೂ ಇತರರಿಗೆ ಸಾಹುಕಾರ್ ಮ॥ ಕಾಡಪ್ಪನವರ ಗೃಹದಲ್ಲೂ ಏರ್ಪಾಡುಮಾಡಿದ್ದಾರೆ

ಕಾವೇರಿ ರಿಜರ್ವಾಯರ್.—ಹೂಜ್ ಮುಂಚಾದ್ದು ಸುಮಾರಾಗಿದ್ದು ಕಳೆದ 3-4 ದಿನಗಳಿಂದ ಮಂಜು ಸುರಿಯುತ್ತಿದೆ. ಬಿಸಿಲಿನ ತಾಪ ಸಹಿಸಕೂಡದು.—ತಾ. 27 ನೇ ಶನಿವಾರ ನಮ್ಮ ದಿವಾನ್ ಸಾಹೇಬರವರೂ, ಚೀಫ್ ಇಂಜಿನಿಯರ್‌ರವರೂ ಸಹಾ ದಯಮಾಡಿ ಇಲ್ಲಿನ ಕಾಮಗಾರಿ ಮುಂತಾದ್ದನ್ನು ಪರಾಂಬರಿಸಿಕೊಂಡು ಮಾರನೇ ದಿನ ಮೈಸೂರಿಗೆ ಪ್ರಯಾಣಮಾಡಿದರು —ಇಲ್ಲಿಯ ನಾರ್ತ್ ಬ್ಯಾಂಕ್ ಪೊಲೀಸ್ ಜಮಾದಾರ್ ಸುಬ್ಬರಾಯರಿಗೆ ಮಂಡ್ಯದ ಇನ್ಸ್‌ಪೆಕ್ಟರ ಕೆಲಸಕ್ಕೆ ವರ್ಗವಾಯಿತು. ಇವರು ತುಂಬಾ ನಿಧಾನಿಗಳು. ಇಲ್ಲಿಗೆ ಬಂದ ಕೊಂಚ ಕಾಲದಲ್ಲೇ ವರ್ಗವಾದ್ದಕ್ಕೆ ವ್ಯಥಪಡುತ್ತೇವಾದರೂ ಪ್ರಮೋಷನ್ ದೊರಕಿದ ಭಾಗ ಸಂತೋಷಕರವಾಗಿದೆ. ಇವರ ಸ್ಥಾನಕ್ಕೆ ಫ್ರೆಂಚ್‌ರಾಕ್ಸಿನಿಂದ ಶಿವರಾಮರಾಯರು ಬಂದಿರುತ್ತಾರೆ. ಇವರು ಸದರಿಯವರ ಮೇಲ್ಪಂಕ್ತಿಯನ್ನು ಅನುಸರಿಸುತ್ತಾರೆಂದು ನಿರೀಕ್ಷಿಸುತ್ತೇನೆ.—ಇಲ್ಲಿನ ಕೋ ಆಪರೇಟಿವ್ ಸೊಸೈಟಿಗಾಗಿ ಕಟ್ಟುತ್ತಿದ್ದ ಹೊಸ ಕಟ್ಟಡದ ಕೆಲಸವು ಪೂರ್ತಿಯಾಗಿ ತಾ. 22 ನೇ ಸೋಮವಾರ ಸೆಕ್ರೆಟರಿಯವರಾದ ಮ॥ ಎಸ್. ಕೃಷ್ಣಮೂರ್ತಿರಾಯರಿಂದ ಬಹಳ ವಿಜೃಂಭಣೆಯಾಗಿ ಗೃಹಪ್ರವೇಶೋತ್ಸವವು ನೆರವೇರಿಸಲ್ಪಟ್ಟಿತು.—ಇಲ್ಲಿನ ಸೌತ್ ಬ್ಯಾಂಕ್ ಅಂಗಡಿ ಬೀದಿಯವರ ಉಪಯೋಗಕ್ಕಾಗಿ ಎರಡು ನಲ್ಲಿಗಳನ್ನು ಮಾತ್ರ ಕೊಟ್ಟಿರುತ್ತಾರೆ ಇದು ಸಾಲದು. ಯಾವಾಗ ನೋಡಿದರೂ ಜನಗಳು ತುಂಬಿಕೊಂಡಿರುತ್ತಾರೆ. ಆದ್ದರಿಂದ ನಮ್ಮ ಸೂಪ್ರೆಂಟೆಂಡೆಂಟಿಂಗ್ ಇಂಜನಿಯರವರು ಹಾಲಿ ಇರುವ ನಾಲ್ಕು ಬೀದಿಗಳಿಗೂ ಬೀದಿಗೆ ಎರಡೆರಡು ನಲ್ಲಿಗಳ ಮೇರೆ ಇಡಿಸಿಕೊಟ್ಟಲ್ಲಿ ತುಂಬಾ ಉಪಕಾರವಾಗುತ್ತೆ. ಅಲ್ಲದೆ ರಾತ್ರಿವೇಳೆ ಎಲ್ಲಾ ಕಡೆಯಲ್ಲೂ ಹಚ್ಚುವಂತೆ ಇಲ್ಲಿಯೂ ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚಲು ಏರ್ಪಾಡು ಮಾಡಿಕೊಡಬೇಕು.

ಶ್ರವಣಬೆಳಗುಳ.—ಈ ಜೈನ ಮಹಾಕ್ಷೇತ್ರದಲ್ಲಿ ವೇ॥ ದೋರ್ಬಲಿಜಿನದಾಸ್ ಶಾಸ್ತ್ರಿಗಳವರಿಗೆ ಸ್ಥಳೀಯ ನಿವಾಸಿಗಳು ಅಡ್ರೆಸ್ಸನ್ನು ಒಪ್ಪಿಸಿದರು ಮ॥ ಚ. ಧರಮಯ್ಯನವರು ಅಗ್ರಾಸನವನ್ನು ವಹಿಸಿದ್ದ ದೇವರ್ಮಾನ್ ದೇವಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಸಮೀಪದಲ್ಲಿ ನಿ ತು ವೇ॥ ದೋರ್ಬಲಿ ಜಿನದಾಸ ಶಾಸ್ತ್ರಿಗಳವರನ್ನು ಕಳೆದ ವರುಷ ಶ್ರೀಮನ್ಮಹಾರಾಜರವರು ಆಸ್ಥಾನದ ವಿದ್ವಾಂಸ ಮಂಡಲಿಯಲ್ಲಿ ಮಾಹೆಯಾನ 9 ರೂಪಾಯಿ ತಲಬಿನ ಮೇಲೆ ನೇಮಿಸಿಕೊಂಡಿದ್ದು ಈ ವರುಷ 10 ರೂಪಾಯಿಗೆ ಹೆಚ್ಚಿಸಿದ ಸಂತೋಷವನ್ನು ಪ್ರಭುಗಳಲ್ಲಿ ವಿಜ್ಞಾಪಿಸಿಕೊಳ್ಳುವುದಕ್ಕೂ, ವೇ॥ ಶಾಸ್ತ್ರಿಗಳವರಿಗೆ ಅಡ್ರೆಸ್ ಕೊಡುವುದಕ್ಕೂ ಈ ಸಭೆ ಸೇರಿರುತ್ತೆಂಬ ಅಂಶವನ್ನು ಸೂಚಿಸಿದರು ಅನಂತರ ಮ॥ ಗ. ಚಂದ್ರಯ್ಯನವರು ವೇ॥ ಗಳಿಗೆ ಒಪ್ಪಿಸಬೇಕಾಗಿದ್ದ ಅಡ್ರೆಸ್ಸನ್ನು ಓದಿದರು. ಆ ನಂತರ ಮ॥ ಚಂದ್ರಗುಪ್ತಯ್ಯನವರು ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೆ ವಿಜ್ಞಾಪಿಸಿಕೊಳ್ಳಬೇಕಾದ ವಿಜ್ಞಾಪನಾ ಪತ್ರಿಕೆಯನ್ನು ಇಂಗ್ಲಿಷಿನಲ್ಲಿ ಓದಿ ಅದರ ತಾತ್ಪರ್ಯವನ್ನು ಕನ್ನಡದಲ್ಲಿ ತಿಳಿಸಿದರು. ಬಳಿಕ ವೇ॥ ದೋ ಜಿ ಶಾಸ್ತ್ರಿಗಳವರು ತಮ್ಮಿಂದ ರಚಿಸಲ್ಪಟ್ಟ ಅವರ ವಂಶಾವಳಿಯನ್ನು ಓದಿ ಹೇಳಿದರು. ಅನಂತರ ವಿದ್ಯಾರ್ಥಿಗಳು ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷಾ ಸಂವಾದಗಳನ್ನು ನಡಿಸಿ ಸಭಿಕರನ್ನು ಆನಂದಗೊಳಿಸಿದರು ಆ ಮೇಲೆ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನೂ, ವಿದ್ಯಾರ್ಥಿಗಳಿಗೆ ಮಿಠಾಯಿ ಮೊದಲಾದದ್ದನ್ನೂ ಕೊಟ್ಟರು. ಫೋಟೋಗ್ರಾಫರ್ ಮ॥ ಪದ್ಮಯ್ಯನವರು ಸಭೆಯವರ ಫೋಟೋ ತೆಗೆದರು ಆಮೇಲೆ ಮಂಗಳವಾದ್ಯದಿಂದ ಸಭೆಯನ್ನು ಮುಕ್ತಾಯಮಾಡಿ ಶ್ರೀಯವರನ್ನು ಮರಕ್ಕೂ, ವೇದಮೂರ್ತಿಗಳನ್ನು ಗ್ರಾಮದಲ್ಲಿ ಮೆರವಣಿಗೆಯ ಮೂಲಕ ಅವರ ಗೃಹಕ್ಕೂ ಕಳುಹಿಸಿ ತೆರಳಿದರು

ಅರಸೀಕೆರೆ —ದಿನಸಿಗಳ ಧಾರಣೆ ಹೆಚ್ಚುತ್ತಿರುವದರಿಂದ ಬಡವರ ಜೀವನೋಪಾಯ ಬಹಳ ಕಷ್ಟವಾಗಿದೆ.—ಇಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರು ಇದ್ದಾಗ್ಯೂ ಊರಿನ ಸ್ಯಾನಿಟೇಷನ್ ಸ್ವಲ್ಪವೂ ಚೆನ್ನಾಗಿಲ್ಲ. ಮ್ಯುನಿಸಿಪಲ್ ಲಾಂದ್ರ ದೀಪಗಳು ತೃಪ್ತಿಕರವಾಗಿಲ್ಲ.—ಇಲ್ಲಿ ಈಚೆಗೆ ಖೂನಿ ಮೊಕದ್ದಮೆಗಳೂ ಕಳುವುಗಳೂ ದಿನೇದಿನೇ ಹೆಚ್ಚುತ್ತಿವೆ. ಕೆಲವು ಖೂನಿ ಕೇಸುಗಳಲ್ಲೂ, ಇಲ್ಲಿಯ ವೈಶ್ಯರ ಪೈಕಿ ಒಬ್ಬರು ನೇಣುಹಾಕಿಕೊಂಡು ಸತ್ತ ಕೇಸಿನಲ್ಲೂ ಏನಾಯಿತೋ ಸ್ಥಳಾಧಿಕಾರಿಗಳಿಗೇ ಗೊತ್ತು. ತಾಲ್ಲೂಕು ಆಫೀಸಿನ ಕೆಲಸ ಕಾರ್ಯಗಳ ಅಕ್ರಮವನ್ನೂ ಇವರಿಂದುಂಟಾಗುತ್ತಿರುವ ಬಡ ರೈತರ ಕಷ್ಟಗಳನ್ನೂ ವರ್ಣಿಸಲಸಾಧ್ಯವಾಗಿದೆ. ಇದಕ್ಕೆಲ್ಲಾ ಅಧಿಕಾರಿಗಳು ಊರಿನಲ್ಲಿಲ್ಲದಿರುವುದೇ ಕಾರಣ ಅಧಿಕಾರಿಗಳು ತಿಂಗಳಿಗೆ 8-10 ದಿನ ಕೂಡ ಹೆಡ್ ಕ್ವಾರ್ಟರಿನಲ್ಲಿರುವದೇ ಅಪರೂಪವಾಗಿದೆ. ಇಲ್ಲಿನ ಮಹಾರಾಜರವರ ಛತ್ರವಿರುವುದು ಖಾಯಂ ಆಗಿ ಹೋಟಲಿದುವುದಕ್ಕೂ, ಕೆಲವು ಸಾಹುಕಾರರಿಗೆ ಖಾಯಂ ವಾಸಗೃಹವಾಗಿರುವುದಕ್ಕೂ ಛತ್ರದ ಹಣವು ದುರ್ವಿನಿಯೋಗವಾಗುವುದಕ್ಕೂ ಎಂದು ಹೇಳಬೇಕಾಗಿದೆ. ಪರಸ್ಥಳೀಯರಿಗೆ ಸೌಕರ್ಯ ಕಾಣುವುದಿಲ್ಲ ಹೊಸ ಸೇರುಗಳು ಬಂದಾಗ್ಯೂ ಇಲ್ಲಿನ ಕಂಪನಿಯರು ಮತ್ತು ಅಂಗಡಿಯವರು ಮಾತ್ರ ಬೂಟಕದ ಸೇರುಗಳನ್ನು ಉಪಯೋಗಿಸುತ್ತಿರುವುದು ತಪ್ಪಲಿಲ್ಲ ಇವರ ವಿಷಯದಲ್ಲಿ ಅಧಿಕಾರಿಗಳು ಹೆಚ್ಚಾಗಿ ಗಮನ ಕೊಟ್ಟಾರೆಂದು ನಂಬಲ್ಪಟ್ಟಿದೆ ದೊಡ್ಡ ದೊಡ್ಡ ಆಫೀಸರೇ ಇಸ್ಪೀಟ್ ಆಡಿ ದುಡ್ಡು ಕಳೆದುಕೊಳ್ಳುತ್ತಿರುವಾಗ ಇತರರನ್ನು ಯಾಕೆ ದೂಷಿಸಬೇಕೋ ತಿಳಿಯದು. ರಾತ್ರಿ ಟ್ರೈನ್ ಬಂದಾಗ್ಯೂ ಟಿಕೇಟು ದೊರೆಯುವದು ತುಂಬಾ ಸಾವಕಾಶ

ಸಿಕಾರಿಪುರ.—ಸಕಾಲಗಳಲ್ಲಿ ಮಳೆ ಬಾರದ್ದರಿಂದ ಈ ಬಾರಿಯ ಪೈರುಗಳು ಸರಿಯಾಗಿ ಆಗಲಿಲ್ಲ ಧಾರಣೆಗಳು ಛಡಾವಾಗಿಯೇ ಇರುತ್ತೆ ಅಕ್ಕಿ ರೂಪಾಯಿಗೆ 6¼ ಸೇರು, ರಾಗಿ 18 ಸೇರು, ಬೇಳೆ 5 ಸೇರು ಇರುತ್ತೆ ಬಡವರ ಕಷ್ಟ ಬಹಳವಾಯಿತು.—ಎರಡು ಮೂರು ತಿಂಗಳಿಂದಲೂ ಇಲಿಗಳು ಬೀಳುತ್ತಾ ಮರಣಗಳಾಗುತ್ತಾ ಇವೆ. ಇದೇ ಕಾಲದಲ್ಲಿ 8-10 ಮದುವೆಗಳನ್ನು ನಡಿಸುವ ಉದ್ದಿಶ್ಯ ಊರು ಬಿಡಲಾರದೆ ಮದುವೆಕಾರ್ಯಗಳು ಜರುಗಿದವು. ಇಷ್ಟರಲ್ಲಿ ಇಲಿಗಳ ಮರಣವೂ, ಕೊಳೆತ ನಾತವೂ ವಿಶೇಷವಾಗಿ ಬೀಗರ ಪೈಕಿ 12 ವರುಷದ ಒಂದು ಹೆಣ್ಣು ಮಗುವು ಕಾಲವಾಯ್ತು. ಈ ಊರಿನಲ್ಲಿ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದ ಮುನ್‌ಸಿಪಲ್ ಮೆಂಬರು ಮ॥ ಮಲ್ಲಪ್ಪನವರು ಪ್ಲೇಗಿನಲ್ಲಿ ಕಾಲವಾದದ್ದು ಎಲ್ಲರ ಕಣ್ಣಿನಲ್ಲೂ ನೀರು ಸುರಿಸಿತು ಇವರ ವಿಯೋಗ ತಾಪವನ್ನು ಅನುಭವಿಸಲು ಅವರ ಸಂಸಾರವೂ, ಇಬ್ಬರು ಸಣ್ಣ ಮಕ್ಕಳೂ, ತಾಯಿಯೂ, 100 ವರುಷದ ಅಜ್ಜಮ್ಮನೂ ಇದ್ದಾರೆ. ಇದರಿಂದ ಆಗಬೇಕಾದ ಮದುವೆಯ ಕೊನೇ ಮೆರವಣಿಗೆ ಮೊದಲಾದ ಉತ್ಸವಗಳನ್ನೆಲ್ಲಾ ನಿಲ್ಲಿಸಿ, ಮರುದಿನ ಬೆಳಗ್ಗೆಯಿಂದ ಜನರು ಅವಸರವಾಗಿ ಕ್ಯಾಂಪು ಸೇರುತ್ತಿರುವರು ಇನಾಕ್ಯುಲೇಷನ್‌ಗಾಗಿ ಸಿದ್ಧವಾದ ಔಷಧವನ್ನು 18 ತಿಂಗಳಾದ ನಂತರ ಉಪಯೋಗಿಸಬಾರದೆಂದು ಗೊತ್ತಾಗುತ್ತೆ ಮೊನ್ನೆ ಕಾಲವಾದ ಮಲ್ಲಪ್ಪನವರು ಒಂದೆರಡು ತಿಂಗಳ ಕೆಳಗೆ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರೂ ಅವರಿಗೆ ಪ್ಲೇಗ್ ಬಂದದ್ದು ಹ್ಯಾಗೋ, ಹಾಕಿದವರ ದೋಷವೋ, ಔಷಧದ ನಿಸ್ಸಾರವೋ ತಿಳಿಯಲಿಲ್ಲ.—ನಮ್ಮ ಅಮಲ್ದಾರ್ರು ಸೊರಬಕ್ಕೆ ಹೋಗಿರುವರು. ಜನರು ಕ್ಯಾಂಪು ಹಾಕಲು ಅಲೆದಾಡುತ್ತಿರುವ ಈ ಸಮಯದಲ್ಲಿ ಇಲ್ಲಿ ಕ್ಯಾಂಪಿಗೆ ಅವಶ್ಯವಾದ ಸಾಮಗ್ರಿಗಳಿಲ್ಲದ್ದು ತುಂಬಾ ಕಷ್ಟ. ವರ್ತಕರೂ, ರೈತರೂ ಹಾಗೂ ಹೀಗೂ ಬಚಾಯಿಸಿಕೊಳ್ಳುವರು. ಏನೂ ಇಲ್ಲದ ಬಡವರೂ, ಸಣ್ಣ ನೌಕರರೂ ಸಾಮಾನುಗಳಿಗೆ ಅವಸ್ಥೆಪಡುತ್ತಿದ್ದಾರೆ. ಇಲ್ಲಿನ ಡಿಪೋದಲ್ಲಿ ಸಾಮಾನುಗಳನ್ನು ದಾಸ್ತಾನ್ ಇಟ್ಟಿರುವಂತೆ ಮಾಡಿದರೆ ತುಂಬಾ ಉಪಯೋಗವಾದೀತು.

ಕುಣಿಗಲ್ ತಾ॥ ಶೆಟ್ಟಗೆರೆ.—ಈ ವರುಷ ಈ ಗ್ರಾಮವೇ ಆದ್ಯರಾಗಿ ಸುತ್ತುಮುತ್ತಣ ಗಿಡದಪಾಳ್ಯ ಹೆಬ್ಬೂರು ಪ್ರಾಂತ್ಯ ವಗೈರೆ ರಾಗಿ ಬೆಳೆ ಸುತರಾಂ ಕೊಯ್ಯಲೇ ಇಲ್ಲ. ಹುರುಳಿ ಹಸ್ತಚಿತ್ತೆ ಮಳೆಯಲ್ಲಿ ಪೇರಾವು ಮಾಡಿದ್ದಲಾಗಾಯ್ತು ಮಳೆ ಬಾರದ್ದರಿಂದ ಅದೂ ಸಹ ಕೈಸೇರುವಹಾಗಿಲ್ಲ. ದುರ್ಭಿಕ್ಷವು ಆವರಿಸಿಕೊಂಡು ಜನಗಳು ಹಾಹಾಕಾರ ಪಡುತ್ತಿದ್ದಾರೆ. ಜಾನುವಾರುಗಳು ಮೇವೂ ನೀರೂ ಇಲ್ಲದೆ ಮಾಪಟ್ಟರು ಗಿಡ ಮುಂತಾದ ಸ್ಥಳಗಳಿಗೆ ಸಾಗಿಸುತ್ತಾರೆ. ರಾಗಿ ಗಾಡಿ 1 ಕ್ಕೆ 48-49 ರೂಪಾಯಿ ಮೇರೆ ನಾಗಮಂಗಲದವರು ಬಂದು ಕೊಳ್ಳುತ್ತಿದ್ದಾರೆ ಧಾರಣೆಯು ದಿನೇ ದಿನೇ ಏರುತ್ತಿದೆ. ಬಡವರು ಜೀವಿಸುವುದು ಕಷ್ಟವಾಗಿರುತ್ತೆ. ಪೂರ್ವಿಕರು 40-50 ವರ್ಷಕ್ಕೊಂದು ಕ್ಷಾಮವೆಂದು ಹೇಳುತ್ತಾರೆ. ನಮ್ಮ ಕಾಲಕ್ಕಾದರೋ ವರ್ಷವರ್ಷವೂ ಕ್ಷಾಮವೇ ತಲೆದೋರುತ್ತಿದೆ. ಇಲ್ಲಿನ ಮ॥ ರುದ್ರಯ್ಯನವರು ತಮ್ಮ ತಂಗಿಯನ್ನು ದೊಡ್ಡಬೆಳವಂಗಲದ ಮ॥ ನಂಜಪ್ಪನವರ ಕುಮಾರನಿಗೆ ಕೊಟ್ಟು ವಿವಾಹ ಮಾಡಿದರು. ಆಗಂತುಕರಿಗೆ ಭೂರಿ ಭೋಜನಗಳನ್ನೇರ್ಪಡಿಸಿದ್ದು ಸ್ತೋತ್ರಾರ್ಹವಾಗಿತ್ತು.—ಕೆಂಪಸಾಗರದ ಕೆರೆಕಟ್ಟಿಸಿಕೊಡಬೇಕೆಂದು ಪಟೇಲ್ ನಂಜೇಗೌಡರು, ಶೆಟ್ಟಗೆರೆ ಪಾ॥ ನಂಜಪ್ಪನವರು ವಗೈರೆ ರೈತರೆಲ್ಲಾ ತಾಲ್ಲೂಕು ಮೊದಲುಗೊಂಡು ನಮ್ಮನ್ನಾಳುವ ಮಹಾಸ್ವಾಮಿಯವರ ಮಹಾ ಸನ್ನಿಧಾನದವರಿಗೂ 3 4 ವರ್ಷಗಳಿಂದ ಅರ್ಜಿಗಳು 40-50 ರ ವರಿಗೂ ಗುಜರಾಯಿಸಿಕೊಂಡದ್ದಲ್ಲದೆ ಕೆರೆ ಹಿಂದಣ ರೈತರೆಲ್ಲಾ ಎಕರೆಗೆ 10 ರೂಪಾಯಿ ಕಂಟ್ರಿಬ್ಯೂಷನ್ ಸಹ ಕೊಡುವಂತೆ ಮುಚ್ಚಳಿಕೆ ಕೊಟ್ಟಿರುತ್ತಾರೆ ಘನವನ್ನು ಹೊಂದಿದ ಸರ್ಕಾರದವರು ಕೆರೆಯನ್ನು ಕಟ್ಟಿಸಿಕೊಟ್ಟು ಚಿರಕಾಲವೂ ಸ್ಮರಣೆಗೆ ಪಾತ್ರರಾಗಬೇಕಾಗಿ ಕೋರಿಕೆ.—ಇಲ್ಲಿಗೆ ಮೂರು ಮೈಲಿ ಫಾಸಲೆ ಇರತಕ್ಕ ಮಾಗಡಿ ತಾ॥ ಬಗಿನಕೆರೆಯಲ್ಲಿ ಮಾದಿಗರವಳು ಗರ್ಭಿಣಿಯಾಗಿದ್ದು ಎರಡು ತಲೆ, ನಾಲ್ಕು ತೋಳು, ನಾಲ್ಕು ಕಾಲು ಉಳ್ಳ ಗಂಡನ್ನು ಹೆತ್ತಳು. ಅದು ಒಂದು ದಿನ ಬದುಕಿದ್ದು ಸತ್ತುಹೋಯಿತು.—ನಮ್ಮ ಅಮಲ್ದಾರ್ರಿಗೆ ಚಾಮರಾಜನಗರಕ್ಕೆ ವರ್ಗವಾಯಿತು ದಯಾಳುಗಳಾಗಿಯೂ, ಪ್ರಜಾಹಿತೈಷಿಗಳಾಗಿಯೂ, ಸತ್ಯಸಂಧರಾಗಿಯೂ ಇದ್ದ ಇವರಿಗೆ ಜಾಗ್ರತ ವರ್ಗವಾದದ್ದಕ್ಕೆ ಬಹು ಜನರು ವಿಷಾದಿಸುತ್ತಾರೆ.— ನಮ್ಮ ಡಾಕ್ಟರವರು ಬಡವರು ಬಲ್ಲಿದರೆಂಬ ತಾರತಮ್ಯವಿಡದೆ ಔಷಧೋಪಚಾರ ಮಾಡುವದು ಸ್ತೋತ್ರಾರ್ಹವಾಗಿರುತ್ತೆ.

ದೇವನಹಳ್ಳಿ.—ಎರಡು ತಿಂಗಳಿಂದ ಮಳೆ ಸುತರಾಂ ಇಲ್ಲದೆ ಕುಚ್ಚಿ ಪೈರೆಲ್ಲಾ ನಲುವಿನಲ್ಲಿ ಒಣಗಿ ಹೋಗಿದೆ. ಅಲ್ಪಸ್ವಲ್ಪವನ್ನು ಕೊಯ್ದು ಗುಡ್ಡೆ ಹಾಕಿರುತ್ತಾರೆ. ಎರಡು ಹದ ಮಳೆಯಾಗಿದ್ದರೆ ಅರ್ಧ ಬೆಳೆಯಾದರೂ ಆಗುತ್ತಿತ್ತು. ಈ ದುರ್ಭಿಕ್ಷಕ್ಕೆ ಅನುಸಾರವಾಗಿ ಧಾರಣೆವಾಸಿಗಳಾದರೋ ಹೇಳತೀರದು, ಅಕ್ಕಿ ರೂಪಾಯಿಗೆ 6-6½ ಸೇರೂ, ರಾಗಿ 12 ಸೇರೂ ಕೊಡುತ್ತಿದ್ದಾರೆ. ಬಡಬಗ್ಗರ ಗೋಳಾಟ ಅಸಾಧ್ಯವಾಗಿರುತ್ತೆ.—ಗವರನ್‌ಮೆಂಟಿನವರು ರೈಲ್ವೆ ಕೆಲಸವನ್ನು ಮುಂಜೂರು ಮಾಡಿ ಸುಮಾರು 8 ತಿಂಗಳಾದಾಗ್ಯೂ ಕೆಲಸವು ಷುರುಯಲು ಅನಾದರಣೆ ಮಾಡಿರುತ್ತಾರೆ. ಮೇಲಿನ ಅಧಿಕಾರಿಗಳು ಗಮನವಿಟ್ಟರೆ ಕೆಲಸ ಜಾಗ್ರತೆಯಾಗಿ ನಡೆಯಬಹುದು ಇದರಿಂದ ಅನೇಕ ಜನಗಳು ಕೂಲಿ ಮಾಡಿ ಜೀವಿಸುತ್ತಿದ್ದರು ಸರ್ಕಾರದ ರೇಟಿಗಿಂತಲೂ ಒಂದಾಣೆ ಜಾಸ್ತಿ ಮಾಡಿದರೆ ಅನೇಕ ಜನಗಳು ಸೇರಿ ಕಾಮಗಾರಿ ಜಾಗ್ರತೆ ಪೂರೈಸಬಹುದು ಈ ಕೆಲಸವು ತೂಕಡಿಸುತ್ತಾ ನಡೆಯುತ್ತಿದೆ.—ಗವರನ್‌ಮೆಂಟ್ ಎ ವಿ ಸ್ಕೂಲಿಗೆ ಮಾತ್ರ ಸಂತೆ ದಿನ ಮಧ್ಯಾಹ್ನ ರಜವೂ, ಶನಿವಾರ ಮಧ್ಯಾಹ್ನವೂ, ಭಾನುವಾರ ಪೂರ್ತಾ ರಜಾ ಕೊಡುತ್ತಿದ್ದಾರೆ ಬಾಕಿ ಸ್ಕೂಲುಗಳಲ್ಲಿ ಶನಿವಾರ ಮಧ್ಯಾಹ್ನವೂ ಕೆಲಸ ನಡೆಯುತ್ತಿದೆ ಎಲ್ಲಾ ಸ್ಕೂಲುಗಳಿಗೂ ಒಂದೇ ವಿಧವಾದ ಸರ್ಕ್ಯುಲರ್ ಹುಕುಂ ಉಂಟೋ ಪ್ರತ್ಯೇಕವಾಡಿದ್ದಾರೋ ಗೊತ್ತಾಗಲಿಲ್ಲ. ಶನಿವಾರ ಮಧ್ಯಾಹ್ನ ರಜಾ ಏಕೆ ಕೊಡುತ್ತಾರೋ ತಿಳಿಯದು. ವಿದ್ಯಾಭ್ಯಾಸದ ಇಲಾಖೆಯವರು ಇದನ್ನು ಕ್ರಮಪಡಿಸಿ, ಎಲ್ಲಾ ಸ್ಕೂಲುಗಳಲ್ಲೂ ಶನಿವಾರ ಮಧ್ಯಾಹ್ನದ ರಜಾ ಕೊಡದೆ ಕೆಲಸಮಾಡಬೇಕೆಂತ ಕೂಡಲೆ ತಕ್ಕ ಏರ್ಪಾಟು ಮಾಡುವರೆಂತ ನಂಬುತ್ತೇನೆ ಮತ್ತು ಯಾವ ವಿದ್ಯಾರ್ಥಿಯಾದರೂ ಒಂದು ಸ್ಕೂಲಿನಲ್ಲಿ ಓದುತ್ತಿದ್ದು ಕೆಲವು ದಿನಗಳನಂತರ ಮತ್ತೊಂದು ಸ್ಕೂಲಿಗೆ ಹೋದರೆ ಆ ಸ್ಕೂಲಿನಿಂದ ಸರ್ಟಿಫಿಕೇಟು ತಂದ ಹೊರತು ಮಾಸ್ತರುಗಳು ಸೇರಿಸಿಕೊಳ್ಳಕೂಡದೆಂದು ಹುಕುಂ ಇದ್ದರೂ ಅದು ಆಚರಣೆಯಲ್ಲಿಲ್ಲ —ಇಲ್ಲಿನ ದೇವಸ್ಥಾನದಲ್ಲಿ ಅತಿ ವಿಜೃಂಭಣೆಯಿಂದಲೂ, ಬಾಣ ಬಿರುಸು ಮಂಗಳವಾದ್ಯಗಳಿಂದಲೂ ಲಕ್ಷ ದೀಪೋತ್ಸವವನ್ನು ಮ॥ ಎರಿ ಕೃಷ್ಣಪ್ಪನವರು ನಡಿಸಿದರು ಸ್ಥಳಪರಸ್ಥಳದ ಸಾವಿರಾರು ಜನರು ಬಂದು ನೋಡಿದರು, ಬಡಪಾಯಿಗಳಿಗೆ ಅನ್ನದಾನ ಮಾಡಿದ್ದರೆ ಶ್ಲಾಘನೀಯವಾಗುತ್ತಿತ್ತು.—ಮ್ಯುನಿಸಿಪಲ್ ಲಾಂದ್ರಗಳಲ್ಲಿ ಹೊಗೆ ಮುಚ್ಚಿಕೊಂಡು ಉರಿಯುವದಿಲ್ಲ ಸಂತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳಿರುತ್ತೆ. ಇವುಗಳಲ್ಲಿ ಸತ್ತುಹೋದ ನಾಯಿಗಳನ್ನು ತಂದು ಹಾಕುತ್ತಾರೆ. ಇದರಿಂದ ಅನಾರೋಗ್ಯಕ್ಕೆ ಕಾರಣವಾಗಿರುತ್ತೆ.—ಕುಂಬಾರರ ಆವಿಗೆಗಳನ್ನು ಊರಹೊರಗೆ ಇಡಿಸುವಂತೆ ತಕ್ಕ ಏರ್ಪಾಟು ಮಾಡಬೇಕು ಇದರಿಂದ ಊರಿನಲ್ಲಿ ಹೊಗೆ ತುಂಬಿಕೊಂಡು ಜನಗಳಿಗೆ ತುಂಬಾ ತೊಂದರೆಯಾಗಿರುತ್ತೆ.

ಚನ್ನಪಟ್ಟಣ —ತಾ. 24 ರಲ್ಲಿ ತರಕಾರಿ ಬೀದಿಯಲ್ಲಿ ಮಹಮದಿಯರೊಳಗೆ ಪೂರಾ ಮಾರಾಮಾರಿಯಾಯಿತು ಈ ಜಗಳದಲ್ಲಿ ಒಂದು ಅಂಗಡಿ ಲೂಟಿಯಾಯಿತು ಸಾಮಾನುಗಳೆಲ್ಲಾ ಇಟ್ಟಾಡಿ ಈಡಾಡುತ್ತಿದ್ದವು ಬೀಟು ಕೊಡುತ್ತಿದ್ದ ಜವಾನನು ಇತರರ ಸಹಾಯದಿಂದ ಕಲಹವನ್ನು ನಿಲ್ಲಿಸಿದನು ಆದಾಗ್ಯೂ ಇನ್ನು ಕೆಲವುದಿನಗಳಲ್ಲಿ ಇದೇ ಸಂಬಂಧದಲ್ಲಿ ಕ್ರೂರಕೃತ್ಯಗಳು ನಡೆಯಬಹುದೆಂದು ಜನರು ಮಾತನಾಡಿಕೊಳ್ಳುತ್ತಾರೆ ಇಲ್ಲಿಗೆ ಆರು ಮೈಲಿಯಲ್ಲಿರುವ ಸಂತೆಮೊಗ್ಗೆಯಲ್ಲಿ ಕೆಲವರಿಗೆ ಒಬ್ಬನ ಮೇಲೆ ವೈರವಿತ್ತೆಂದು 3-4 ದಿನಗಳ ಹಿಂದೆ ಅವರು ಅವನನ್ನು ಪಂಚಾಯಿತಿ ಮಾಡುವದಕ್ಕೆಂದು ನಂಬಿಸಿ ಒಂದು ತೋಟಕ್ಕೆ ಕರೆದೊಯ್ದರೆಂದೂ. ಅಲ್ಲಿ ಕ್ರೂರ ವಾಕ್ಯಗಳನ್ನಾಡಿ ರೇಗಿಸಿ ಕೊಂದು ಸುಟ್ಟುಬಿಟ್ಟರೆಂದೂ ವಿಚಾರ ಕಾಲದಲ್ಲಿ ಅವನು ತೆಂಗಿನ ಮರದಮೇಲಿನಿಂದ ಬಿದ್ದು ಸತ್ತಹಾಗೂ ಅವರು ಸುಟ್ಟುಬಿಟ್ಟಹಾಗೂ ಕೈಫಿಯತ್ತು ಕೊಟ್ಟರೆಂದೂ ಈ ತಾಲ್ಲೂಕಿನಲ್ಲಿ ಇಂಥಾ ದುಷ್ಟ ಕೃತ್ಯಗಳಿಗೆ ಅಡ್ಡಿಯೇ ಕಾಣಲಿಲ್ಲ. ನಿಜಸ್ಥಿತಿಯನ್ನು ಕಂಡು ಹಿಡಿದು ತಕ್ಕ ಬಂದೋಬಸ್ತು ಮಾಡ್ಯಾರೆಂದು ನಿರೀಕ್ಷಿಸಲಾಗಿದೆ —ಇಲ್ಲಿನ ಜನಾನಾ ಮಿಷನ್ ಅನಾಥಾಶ್ರಮದಲ್ಲಿ ಕ್ರಿಸ್ಮಸ್ ಹಬ್ಬದ ಸಂತೋಷ ಕಾರ್ಯಗಳು ವಿಶೇಷವಿಜೃಂಭಣೆಯಿಂದ ಜರುಗಿದವು ಮುಖ್ಯರಾದ ಮಿಸ್ ಹವರ್ತ್‌ರವರೂ, ಲೇಡಿ ಡಾಕ್ಟರಾದ ಮಿಸ್ ಪಾಯಿಂಡರವರೂ ಸ್ವಂತ ಖರ್ಚಿನಿಂದ ಪ್ರಯೋಜನಕರವಾದ ಸಾಮಾನುಗಳನ್ನು ತರಿಸಿ ಒಂದು ಮರಕ್ಕೆ ಅವುಗಳನ್ನು ಕಟ್ಟಿ, ಬಿಸ್ತರ ಸ್ಕೂಲ್, ಮಂಗಳವಾರಪೇಟೆ ಪಂಚಮರ ಸ್ಕೂಲ್, ಗರ್ಲ್ಸ್ ಸ್ಕೂಲ್‌ಗಳ ಬಾಲ ಬಾಲಕಿಯರಿಗೆಲ್ಲಾ ಬಹುಮಾನಗಳನ್ನು ಕೊಟ್ಟರು ಕೆಲವರಿಗೆ ಬಟ್ಟೆಗಳು ಸಿಕ್ಕಿದವು. ಹಾಗೆ ಒಬ್ಬ ಬಡಹುಡುಗನಿಗೆ ಬಹಳ ವಿಜೃಂಭಣೆಯಿಂದ ಲಗ್ನಮಾಡಿಸಿದರು. ಈ ಜನಾನಾ ಮಿಷನ್ ಆಸ್ಪತ್ರೆಯ ಸುದ್ದಿಯು ಬಹಳ ದೂರದವರಿಗೆ ಹಬ್ಬಿದೆ. ಜನರು ತಂಡತಂಡವಾಗಿ ಬರುತ್ತಿರುವರು. ಯಾತಕ್ಕೆ ಅಂತ ಕೇಳಿದರೆ—ಇವರು ಬಹಳ ದಯಾಳುಗಳು, ಪರೋಪಕಾರಿಗಳು, ಲಂಚತಕ್ಕೊಳ್ಳುವದಿಲ್ಲ, ಒಳ್ಳೇ ಔಷದ ಕೊಡುತ್ತಾರೆ, ವಿವೇಕಹೇಳುತ್ತಾರೆ ಎಂದು ಹೇಳುವರು ಆಸ್ಪತ್ರೆಗಳಲ್ಲಿ ಒಳ್ಳೇ ಔಷಧಗಳುಂಟು ಅಂಥ ಔಷದಗಳನ್ನು ತಮ್ಮ ಸ್ವಂತ ದುಡ್ಡು ಸಂಪಾದನೆಗಾಗಿ ಇಟ್ಟುಕೊಂಡಿದ್ದಾರೆ ಕೆಲವರು ಮಾತಿಗೆ ಮುಂಚೆ ಕೈ ನೀಡುತ್ತಾರೆ.—ಇಲ್ಲಿಗೆ ಒಂದು ಮೈಲಿ ದೂರದಲ್ಲಿರುವ ಚಿಕ್ಕಮಗಳೂರಲ್ಲಿ 13 ವರುಷದ ಒಬ್ಬ ಒಕ್ಕಲಿಗರ ಹುಡುಗನು ತೆಂಗಿನಕಾಯಿ ಕೀಳುವ ಕೋತಿಗಳನ್ನು ಕೊಲ್ಲಬೇಕೆಂದು ತುಪಾಕಿ ತೆಗೆದುಕೊಂಡು ಹೋಗಿ ಸೇಂದಿವನ ಕೆಳಗೆ ಲೋಡುಮಾಡುತ್ತಿರುವಾಗ ತುಪಾಕಿ ಹಾರಿ ಅವನ ಎರಡು ಕೈಗಳೂ ಹಾರಿ ಹೋದವು ಎದೆಗೂ, ಮೈಗೂ ಚರೆಗಳು ತಗಲಿ ಗಾಯಗಳಾಗಿವೆ. ಆಸ್ಪತ್ರೆಯಲ್ಲಿ ಅವನ ಎರಡು ಕೈಗಳನ್ನೂ ಕಟ್ಟಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದೆ.

ಮಾಸ ಪತ್ರಿಕೆ! ದ್ವಿತೀಯ ವರ್ಷಾರಂಭ.

ಭಾರತೀವಿಲಾಸ.

ಇದೊಂದು ಕನ್ನಡ ಮಾಸ ಪತ್ರಿಕೆ. ಪ್ರತಿಮಾಸದಲ್ಲಿಯೂ ಕ್ರಮವಾಗಿಸ್ವತಾ ಕಥೆಯು, ಕಾದಂಬರಿಗಳೂ, ನಕಲಿಗಳೂ, ವಚನಗ್ರಂಥಗಳೂ ನೀತಿವಿದ್ಯಾವಿಷಯ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡ್‌ಕಟ್ಟಿಸಿಕೊ ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಉಪಯುಕ್ತವಾದುದು ವಾರ್ಷಿಕ ಚಂದಾ 1-8-0; ಮಾದರಿ ಸಂಚಿಕೆ 2 ಆ.

[278-3] ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳು ಉತ್ತಮೋತ್ತಮವಾಗಿವೆ. ಈ ಕಂಪನಿಗೆ 60 ವರುಷದ ಅನುಭವ ಉಂಟು. ಅವರೇ ಪ್ರಪಂಚದ ಕಾರೇಗಾರರಲ್ಲಿ ಬಹಳ ಪ್ರಖ್ಯಾತಿಪಡೆದವರು. ಈ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ.

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್,

ಕೊಯಮತ್ತೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರೇಗಾರರನ್ನು ಕಳುಹಿಸುತ್ತಾರೆ ಎಲ್ಲಾ ತರದ ಯಂತ್ರ (ಮೆಷಿನು) ಗಳನ್ನೂ ಒದಗಿಸಬಲ್ಲರು. [255-6]

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು... .. ..ರೂ. 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಪ್ರಾಸ್ಪೆಕ್ಟಸ್ ಮುಂತಾದವನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಚಿ... ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ. ಎಸ್. ಸಂಜಪ್ಪನವರು ... ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[114-14] ಬ್ರಾಂಚ್ ಸೆಕ್ರೆಟರಿ, ಮದರಾಸ್

ಶ್ವಾಸಕೇಸರಿ ಲೇಹ.

ಶ್ವಾಸಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಶ್ವಾಸಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಇದನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣವಾಗುತ್ತೆ. ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಇದರಿಂದ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ತಲಪಿದ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ. ಓದಿನೋಡಿ

ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ. 1-8-0.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

177 ಜೇನಾ ಬಜಾರ್ ರೋಡ್, ಮದ್ರಾಸು.

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸ್ ಕ್ಲಾರ್ಕ್ ಮಿ ಎ ಭೀಮರಾವ್ ಮೊದಲಿಯಾರವರು ತಾ... 1913 ರಲ್ಲಿ ಬರೆಯುತ್ತಾರೆ — ನಾನು ಬಹುಕಾಲದಿಂದ ಆಸ್ತ್ಮಾರೋಗದಿಂದ ಪೀಡಿತನಾಗಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ವಕೀಲರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಗುಣವಾಗಲಿಲ್ಲ, ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡಿದೋಣ ... ಗುಣಹೊಂದಿಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ್ಯ ... ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ಸಂತೋಷಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ. [82-33]

ಕೆಲವು ದಿನಗಳು ಮಾತ್ರ! ಕೊಂಚ ದಿನಗಳು ಮಾತ್ರ!!

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ.

ಒಳ್ಳೇ ವಾಚ್! ಖಾತ್ರಿಯಾದ ಕಂಪನಿ!! ಖಾತ್ರಿಯಾದ ವಿರೀದಿ!!!

ಸ್ಪ್ರಿಂಗ್ ಮೋಟಾರ್ ರೆಗ್ಯುಲೇಟರ್ ವಾಚ್.

... ಕ್ರಯ ಬೆಲೆಯುಳ್ಳ 3 ಬಹುಮಾನ ಸಮೇತ ರೂ 3 8-0 ಮಾತ್ರ.

[77-37]

ಈ ವಾಚ್ ಈಗತಾನೇ ಬಂದಿರುತ್ತದೆ, ಬಲವಾದದ್ದು ಬಲಿಷ್ಟವಾದ ಚಕ್ರಗಳಿಂದಲೂ, ಮತ್ತು ಬಲಿಷ್ಟವಾದ ಯಂತ್ರಗಳಿಂದಲೂ, ಸುಪ್ರಸಿದ್ಧವಾದ ಲೀವರ್ ಕೆಲಸಗಳಿಂದಲೂ ತಯಾರಾದದ್ದು, ಸರಿಯಾದ ಕಾಲವನ್ನು, ಸ್ವಲ್ಪವೂ ವ್ಯತ್ಯಾಸವಿಲ್ಲದೇ ತೋರಿಸತಕ್ಕದ್ದು. ಖಾತ್ರಿಯಾದ ವಾಚ್. ಸುಂದರವಾದದ್ದು.

ಇದರ 3 ಬಹುಮಾನಗಳ ತಪ್ಸೀಲು.

1. ಸುಂದರವಾದ ಉತ್ತರಮುಖಿ.
2. ನಾಜೂಕಾದ ವಾಚ್ ಸರಪಣಿ
3. 1914 ನೇ ಇಸವಿಯ ಪಾಕೆಟ್ ಡೈರಿ.

ಈಗಲೇ ಬರೆದು ತರಿಸಿಕೊಳ್ಳಿ,

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

1, ಕೋಪ್ ವೆಂಕಟಾಚಲ್ಯೆಯರ್ ಬೀದಿ, ಮದರಾಸು.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



3-1

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಡೋಂಗರೆ

ಇವರ ಬಾಲಾಮೃತ

[160 24]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ. ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ಸೆಳುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷೈಶಕ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-18]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಯಿಂದಕೈಯಿಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿದ್ಯಾನಾಗರ ಬುಕ್ ಡಿಪೊ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ. (1) ವೈದ್ಯಸಾರಸಂಗ್ರಹ—ದೊಡ್ಡವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3-6 0. (2) ಶಿವಾನಂದ ಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ಶ್ರೀಮುಖಭಾಷ್ಯದೊಡನೆ ಸಹ—3 ರೂ. (5) ಶುಕಸಪ್ತತಿ (ಉ ಪ್ರತಿ.—2 ರೂ (6) ಸೂರ್ಯನಮಸ್ಕಾರ—2 ಆಣೆ (7) ಉದಕಶಾಂತಿ ಮಾತ್ರ—2 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1-8-0 (9) ಜಮಾ ಖರ್ಚಿನ ಪದ್ಧತಿ 12 ಆಣೆ. [265-4]

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-31] ಎಸ್. ಕಟ್ಟೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಪ್ಯಾಕೆಟ್ ಸಿಗರೆಟ್ ಲೈಟರ್.

ಕ್ರಯ ರೂ. 2-8-0.

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು. ದೀಪದ ಕಡ್ಡಿಯೇ ಬ್ಯಾಡ. ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ. ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ.' ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು. [259-4]

ವಿಲಾಸ:—ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,

93, ಮಿಂಟ್ ಸ್ಟ್ರೀಟ್, ಮದರಾಸು.

ಕನ್ನಡ ಲಾ ಪುಸ್ತಕಗಳು

ಗೌನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ. 2-0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಿಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ. 3-0-0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1-8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ. 2 0-0, ಪ್ರಶ್ನೋತ್ತರ ಲೇಖ್ಯಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು. ಕ್ರಯ ರೂ. 1-4-0, ಶಾಸಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ. 1-8-0. ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ. [160-21]

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್" ಬೆಂಗಳೂರು.

Mellin's Food

[1-1]

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು. ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದವರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟಿನ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [104-32]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-1

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ. ೬ ಆ;

ಚುಕ್ಕಿಯುಳ್ಳ ಟೋಪಿಗಳು ರೂ. ೧—೮, ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

ಕುಂತಳಾನಂದ ತೈಲವು.

192-15

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್.

ದರ್ಬಾರಿಗೋಸ್ಕರವೇ ತಯಾರ್ಮಾಡಿದ್.

ಈ ಸಮಯವನ್ನು ಕಳೆದುಕೊಳ್ಳಬೇಡಿ, ಬಹಳ ಸ್ವಲ್ಪವೇ ಉಳಿದಿವೆ.
ರೈಲ್ವೆ ರೆಗ್ಯುಲೇಟರ್ ವಾಚ್.



ಬಹಳ ಒಳ್ಳೇ ವಾಚು, ಸರವನೆ ಉತ್ತರಮುಖಿ ಸಮೇತ ಕ್ರಯ ರೂ 2-1-0. ಐದು ವರುಷ ಜಾಮೀನ್. ಗುಂಡಿಗೆ ಸರಿಯಾದ ಕಾಲ ತೋರಿಸುತ್ತದೆ. ಒರಟಾದ ಉಪಯೋಗಕ್ಕೆ ತಡೆಯುತ್ತೆ ಎರಡು ಕಡೆಗಳಲ್ಲೂ ಮಂದವಾದ ಕನ್ನಡಿ ಹಾಕಿದೆ ಇಷ್ಟು ಸುಲಭ ಕ್ರಯಕ್ಕೆ ಇಂಥಾ ಉತ್ಕೃಷ್ಟವಾದ ವಾಚ್ ಇನ್ನೆಲ್ಲೂ ಸಿಕ್ಕುವದಿಲ್ಲ ಬೇಗ ಬರೆಯಿರಿ [277-2]

ವಿಳಾಸ—ಪಿ ಎ. ರಜಾಕ್ ಕಂಪನಿ, ಗವರ್ನಮೆಂಟ್ ಕಂಟ್ರಾಕ್ಟರ್ಸ್, ರತನ್ ಬಜಾರ್, ಮದರಾಸ್.

ಬಿ. ವಿ. ಪಂಡಿತರ ಶ್ರೀಕರ ಕಸ್ತೂರಿಮಾತ್ರೆ.

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣ-ಭೇದಿ-ಜ್ವರ-ಕೆಮ್ಮು-ನೆಗಡಿ-ಸೆಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವದೂ ಆರೋಗ್ಯವನ್ನು ಕಾಪಾಡಲಾರದು. [220-10]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಗುಣಕಂಡ

ಮೂರು ಮಹೌಷಧಗಳು.

ಮೇಧೋವರ್ಧಿನಿ (Brain Tonic)—ಮಿದುಳಿನಿಂದ ಕೆಲಸಮಾಡುವವರಿಗೆ ಬಹು ಫಲಕಾರಿಯಾದುದು. ಮಿದುಳಿಗೆ ಸೇರಿರುವ ಉಷ್ಣವನ್ನು ತಗ್ಗಿಸಿ, ಬುದ್ಧಿಗೆ ಸೂಕ್ಷ್ಮತೆಯನ್ನೂ, ದೃಷ್ಟಿಗೆ ಪಾಟವವನ್ನೂ ಕೊಡುವುದಲ್ಲದೆ ಬಹಳ ಕಾಲದಿಂದ ಅನುಸರಿಸಿಬಂದ ನೋವುಗಳು ಈ ತೈಲವನ್ನುಪಯೋಗಿಸುವುದರಿಂದ ಖಂಡಿತವಾಗಿಯೂ ತೊಲಗುವುವು ಸಾಧಾರಣಕಾಲದಲ್ಲಿ ನೆತ್ತಿಗೆ ಇದನ್ನು ಹಚ್ಚಿಕೊಂಡು ಸ್ನಾನಮಾಡಿದರೆ 3-4 ಅಭ್ಯಂಗನಗಳಿಂದಾಗುವ ಪ್ರಯೋಜನವಾಗುವದು.

ಕ್ರಯ 1 ಸೀಸೆಗೆ 1 ರೂಪಾಯಿ; 6 ಸೀಸೆಗೆ 5 ರೂಪಾಯಿ

ಗೋರೋಜನಮಾತ್ರೆ (Children's Laxative Pills)—8 ವರ್ಷದೊಳಗಿನ ಮಕ್ಕಳಿಗೆ ಸುಖಭೇದಿಮಾಡಿಸುತ್ತೆ ಎಲ್ಲರೂ ನಿರ್ಭಯವಾಗಿ ಮಕ್ಕಳಿಗೆ ಉಪಯೋಗಿಸಿರಿ 1-2-3 ಮಾತ್ರೆಗಳನ್ನು ಜೇನಿನಲ್ಲಿ ಕಲಸಿ ಕೊಟ್ಟರೆ 2-3 ಸಲ ಸುಖಭೇದಿಯಾಗುತ್ತೆ. ಕ್ರಯ 75 ಮಾತ್ರೆಗೆ 4 ಆಣೆ; 5 ಸೀಸೆಗೆ 1 ರೂಪಾಯಿ.

ರೋಗನಾಶಿನಿ (Intimate Friend)—ಜಲದೋಷ, ಹವಾದೋಷ, ಅತಿಯಾಗಿ ಮಳೆ, ಬಿಸಲು, ಮಂಜಿನಲ್ಲಿ ಸುತ್ತುವುದರಿಂದಾಗುವ ಕೆಮ್ಮು, ಗಂಟಲನೋವು, ಹುಣ್ಣು, ಕೆರೆತ, ಮೈ, ಕೈ, ಕಾಲು, ತಲೆ, ಸೊಂಟ ಇವುಗಳ ನೋವು, ಕಣ್ಣುರಿ, ಅಜೀರ್ಣ ಮುಂತಾಗಿ ಎಲ್ಲಾ ಗುಣವಾಗುತ್ತೆ ಇಟ್ಟಾಪಥ್ಯ. ಹೊತ್ತಿಗೆ 1 ಮಾತ್ರೆ ದಿನಕ್ಕೆ 3-4 ಸಲ ಸೇವಿಸುವುದು. ಕ್ರಯ 40 ಮಾತ್ರೆಗೆ 4 ಆಣೆ; 5 ಸೀಸೆಗೆ 1 ರೂಪಾಯಿ. [222-10]

ವಿಳಾಸ-ಓರಿಯಂಟಲ್ ಫಾರ್ಮಸಿ, ಮೈಸೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.
ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು ನೋಡುವವಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ವಿಕ್ರಯಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,
[129-27] ಪೋಸ್ಟ್ ಬಾಕ್ಸ್, ನಂ 167, ಮದರಾಸು.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂವೆಕ್ಸ್ ಗ್ಲಾಸ್ ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5-0-0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,
[129-27] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ,



(೧೨ ಆಣೆ ಬುಡ್ಡಿ ಪರಿಮಾಣ)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ; ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ; ಗಾಬರಿ, ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181-17]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 1/1/1914.

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ | ಮೈಸೂರು—೧೯೧೪ ನೇ ಇಸವಿ ಜನವರಿ ತಾರೀಖು ೮ ನೇ ಗುರುವಾರ. | ಸಂಚಿಕೆ ೩೨

೩ ಪುಸ್ತಕಗಳೂ ಅಡಗಿರುವ ಒಂದೇ ದೊಡ್ಡ ಪುಸ್ತಕ.

ಕ್ರಯ ೧-೮-೦ **ಆಂಗ್ಲಭಾಷಾಪ್ರಕಾಶಕ** ಪೋಸ್ಟೇಜು ೦-೨-೦

English Self Instructor.

(ಸ್ವತಃ ಇಂಗ್ಲೀಷು ಕಲಿಯಲು ಇದೊಂದೇ ದೊಡ್ಡ ಪುಸ್ತಕವು ಸಾಕಾಗಿದೆ)

೨೦೦ ಪುಟಗಳುಳ್ಳದ್ದು ಹೊಸ ನಮೂನೆ ಸುಲಭ ಮಾರ್ಗ ವರ್ತಕರು, ಗುಮಾಸ್ತೆಯರು, ಮೇಸ್ತ್ರಿಗಳು, ಪಟೇಲ ಶಾನುಭೋಗರು, ವಿದ್ಯಾರ್ಥಿಗಳು ಸಹ ಇಂಗ್ಲೀಷು ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು ಸರ್ವವಿಷಯಗಳೂ ಇದೊಂದರಲ್ಲೇ ಅಡಗಿವೆ ನಿಮ್ಮ ಅನುಕೂಲಕ್ಕಾಗಿ ಪೋಸ್ಟೇಜು ಮಾಫಿ ಕಳುಹಿಸುತ್ತೇವೆ ನಿಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ [10-1]

ವಿಳಾಸ:—ಬಿ. ಕೆ ಬುಕ್ ಡಿಪೋ, ೬೦, ಅವಿನ್ಯೂ ರೋಡು, ಬೆಂಗಳೂರು ಸಿಟಿ,

ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಮತ್ತು ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸು—ಮೈಸೂರು.

ಕಳೆದ 1913 ನೇ ಡಿಸೆಂಬರ್ ತಾ 11 ನೇ "ವೃತ್ತಾಂತ ಪತ್ರಿಕೆ" ಸಂಚಿಕೆಯಲ್ಲಿ ಅಮೃತಸಾರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಬ್ರಾಂಚ್ ಸೆಕ್ರೆಟರಿ ಮ|| ಟಿ ಎಸ್ ಆರ್ ಅಯ್ಯರವರು ಆ ಕಂಪನಿಯ ಇನ್ಷುರೆನ್ಸ್ ಮತ್ತು ಪಾಲಸಿಹೋಲ್ಡರುಗಳ ತಿಳುವಳಿಕೆ ಬಗ್ಗೆ ನೋಟೀಸನ್ನು ಪ್ರಕಟಪಡಿಸಿರುತ್ತಾರಷ್ಟೆ ಈ ಸಂಬಂಧದಲ್ಲಿ ಕೆಳಗೆ ರುಜುಮಾಡಿರುವವರು ಎಲ್ಲಾ ಪಾಲಿಸಿ ಹೋಲ್ಡರುಗಳಿಗೂ ಸಾಮಾನ್ಯವಾಗಿ ಎಲ್ಲಾ ಪಬ್ಲಿಕ್ ಜನಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಯಾವ ಪಾಲಿಸಿ ಹೋಲ್ಡರುಗಳ ಬೋನಸ್ಸುಗಳನ್ನೂ ಕ್ಲೇಮುಗಳನ್ನೂ ವ್ಯವಸ್ಥೆಮಾಡಬೇಕೆಂದು ಅನೇಕ ದಫಾ ಟೆಲಿಗ್ರಾಫುಗಳನ್ನೂ ರೆಜಿಸ್ಟರ್ ನೋಟೀಸುಗಳನ್ನೂ ಕೊಟ್ಟಿದ್ದಾಗ್ಯೂ ಅಮೃತಸಾರದ ಕಂಪನಿಯವರು ಇನ್ನೂ ಇತ್ಯರ್ಥಪಡಿಸದೆ ಇರುತ್ತಾರೆಯೋ ಅಂಥಾ ಮೆಂಬರುಗಳಿಗೆ ಆ ನೋಟೀಸು ಸಂಬಂಧಪಡುವುದಿಲ್ಲ ಈ ಪಾಲಿಸಿ ಹೋಲ್ಡರುಗಳು ತಿಳಿದು ಆಶ್ಚರ್ಯಪಡದೆ ಇರಲಾರರು ಕೆಳಗೆ ರುಜುಮಾಡಿರುವವರು ಹಣ ಪಡೆದು ಪ್ರಿಂಟ್ ರಸೀತಿಗಳನ್ನು ಕೊಟ್ಟಿದ್ದು, ಅಂಥಾ ರಸೀತಿಗಳಿಗೆ ಹೆಡ್ ಆಫೀಸಿನಿಂದ ಕ್ರಮವಾದ ಹಣಸಂದ ರಸೀತಿಗಳನ್ನು ಪಡೆಯದೆ ಇರುವ ಪಾಲಿಸಿ ಹೋಲ್ಡರುಗಳು ಅಂಥಾ ಪ್ರಿಂಟ್ ರಸೀತಿಗಳನ್ನು ತಮ್ಮಲ್ಲಿಗೆ ಹಿಂತಿರುಗಿಸತಕ್ಕದ್ದೆಂದು ಮ. ಅಯ್ಯರವರು ಕೇಳಿರುತ್ತಾರೆ ಕೆಳಗೆ ರುಜುಮಾಡಿರುವವರು ಆ ಕಂಪನಿಯ ವಿಷಯದಲ್ಲಿ ಸಹಜವಾದ ಮತ್ತೂ ಧರ್ಮವಾದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂಬ ಕಾರಣ ಮ|| ಅಯ್ಯರವರು ಮಾಡುತ್ತಿರುವ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾಗಿರುವವೆಂದೂ, ಸಾಯುವ ತನಕ ಪ್ರಯತ್ನಪಟ್ಟಾಗ್ಯೂ ಅವರು ಒಂದು ದೋಷದೋಷವನ್ನಾದರೂ ಕಂಡುಹಿಡಿಯಲಾರರೆಂದೂ ಪಾಲಿಸಿ ಹೋಲ್ಡರುಗಳು ಖಚಿತವಾಗಿ ತಿಳಿಯತಕ್ಕದ್ದು ನಾನು ಚೀಫ್ ಏಜೆನ್ಸಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬರೆದಿರುವ 1913 ನೇ ಆಗಸ್ಟ್ ತಾ 12 ರ ಲೆಟರನ್ನೂ, ನಮ್ಮ ಹೊಸ ಕಂಪನಿಯಲ್ಲಿ ಇನ್ಷುರೆನ್ಸ್ ಬಾಬನ್ನು ಪ್ರಾರಂಭಿಸಬೇಕೆಂದೂ ಅಮೃತಸಾರದ ಕಂಪನಿಯ ಇನ್ಷುರೆನ್ಸ್ ಬಾಬಿನ ಚೀಫ್ ಏಜೆನ್ಸಿಯನ್ನು ವಹಿಸಿ ಕೆಲಸಮಾಡುತ್ತಾ ಬರಬೇಕೆಂದೂ ಮ|| ಪಿ ಎಲ್ ರಾಜರಾಂರವರು ನನ್ನನ್ನು ಬರೆದು ಕೇಳಿಕೊಂಡಿರುವ ಅವರ 30 ೯ 1913—1 ೧೦ 1913 ನೇ ತಾರೀಖುಳ್ಳ ಲೆಟರನ್ನೂ ಮ|| ಟಿ ಎಸ್ ಆರ್ ಅಯ್ಯರವರು ನೋಡಿದ ಪಕ್ಷದಲ್ಲಿ ಕಂಪನಿಯವರು ತಾವಾಗಿಯೇ ನನ್ನನ್ನು ಕೆಲಸದಿಂದ ವಿಡಿಸಿರುತ್ತಾರೆಂಬ ಭಾವನೆಯು ನಿಜವಲ್ಲವೆಂದೂ, ಅದು ತಪ್ಪಾದ ತಿಳುವಳಿಕೆಯೆಂದೂ ಮ|| ಅಯ್ಯರವರೇ ಒಪ್ಪಿಕೊಳ್ಳಬೇಕಾಗುತ್ತದೆ

ನಮ್ಮ ಹೊಸ ಕಂಪನಿಯ 19 ನೇ ನಂಬರುಳ್ಳ ಆರ್ಟಿಕಲ್ಲನ್ನು ನೋಡಿದ ಪಕ್ಷದಲ್ಲಿ ಇನ್ಷುರೆನ್ಸ್ ಪಾಲಿಸಿಗಳನ್ನು ಈ ಹೊಸ ಕಂಪನಿಗೆ ವರ್ಗಾಯಿಸಿ ದಾಖಲ್ ಮಾಡಿಕೊಳ್ಳಬಹುದೆಂದು ನನಗೆ ಅಧಿಕಾರ ವಹಿಸಲ್ಪಟ್ಟಿರುವುದು ನಿರಾಧಾರವಾಗಿರುತ್ತದೆ ಎಂದು ಮ|| ಟಿ ಎಸ್ ಆರ್ ಅಯ್ಯರವರು ಹೇಳುವ ಮಾತು ತಪ್ಪಾಗಿದೆಯೆಂಬುದಾಗಿ ಅವರೇ ಒಪ್ಪಿಕೊಳ್ಳಬೇಕಾಗುತ್ತದೆ

ಈ ಸಂದರ್ಭದಲ್ಲಿ "ಗವರ್ನ್‌ಮೆಂಟ್ ಸೆಕ್ಯೂರಿಟಿ" ಎಂಬ ಪದಗಳ ಸಹಿತವಾದ ಇನ್ಷುರೆನ್ಸ್ ಕಂಪನಿಗೂ, ಈ ಪದಗಳನ್ನು ಪಡೆಯದೆ ಇರತಕ್ಕ ಕಂಪನಿಗೂ ಇರುವ ಜಾಜ್ವಲ್ಯಮಾನವಾದ ವ್ಯತ್ಯಾಸವೇನೆಂಬುವುದನ್ನು ನಮ್ಮ ಅನುಭವದಾರರಾದ ಪಾಲಿಸಿ ಹೋಲ್ಡರುಗಳೂ, ಏಜಂಟರುಗಳೂ ಇನ್ನು ಮುಂದೆ ನಮ್ಮ ಕಂಪನಿ ಸಂಬಂಧ ಸೇರತಕ್ಕವರೂ ದಯವಿಟ್ಟು ಸ್ಪಷ್ಟವಾಗಿ ತಿಳಿದುಕೊಂಡಿರಬೇಕೆಂದು ಸೂಚಿಸದೆ ಇರಲಾರೆವು ನಮ್ಮ ಮತ್ತು "ಓರಿಯಂಟಲ್" ನಂಥಾ ಗವರ್ನ್‌ಮೆಂಟ್ ಸೆಕ್ಯೂರಿಟಿಯುಳ್ಳ ಕಂಪನಿಗಳು ವಸೂಲಾಗುವ ಪ್ರೀಮಿಯಂ ಹಣಗಳಲ್ಲಿ ಶೇಕಡಾ ಇಷ್ಟೆಂದು ವಿಧಾಯಕವಾದ ಭಾಗವನ್ನು ಪ್ರತಿ ವರುಷವೂ ಗವರ್ನ್‌ಮೆಂಟ್ ಸೆಕ್ಯೂರಿಟಿಯಲ್ಲಿ ಇಟ್ಟೇ ತೀರಬೇಕು ಆದರೆ "ಗವರ್ನ್‌ಮೆಂಟ್ ಸೆಕ್ಯೂರಿಟಿ" ಎಂಬ ಪದಗಳನ್ನು ಪಡೆಯದೆ ಇರುವಂಥಾ ಎರಡನೇ ಜಾತಿಯ ಕಂಪನಿಗಳಲ್ಲಿ ಡೈರೆಕ್ಟರುಗಳು ಯಥೇಚ್ಛವಾಗಿ ವರಮಾನದಲ್ಲಿ ತಮಗೆ ತೋರಿದಷ್ಟು ಅಂಶವನ್ನು ರಿಜರ್ವ್ ಇಟ್ಟುಕೊಳ್ಳಬಹುದು ಮತ್ತು "ಗವರ್ನ್‌ಮೆಂಟ್ ಸೆಕ್ಯೂರಿಟಿ" ಎಂಬ ಹೆಸರು ಪಡೆಯದೆ ಇರತಕ್ಕ ಕಂಪನಿಗಳು ಇನ್ಷುರೆನ್ಸ್ ಕಾನೂನಿಗನುಸಾರವಾಗಿ ಇಂಡಿಯಾ ಗವರ್ನ್‌ಮೆಂಟ್ ಸೆಕ್ಯೂರಿಟಿಯಲ್ಲಿ ಎರಡು ಲಕ್ಷ ರೂಪಾಯನ್ನು ರಿಜರ್ವ್ ಇಟ್ಟು ಸುಮ್ಮನೆ ಕೂತುಕೊಳ್ಳಬಹುದು ಆದರೆ ಆ ಕಾನೂನಿನ ಪ್ರಕಾರ ಕಂಪನಿಯ ವರಮಾನವು 30 ಲಕ್ಷ, 50 ಲಕ್ಷ, ಇನ್ನೂ ಎಷ್ಟು ಲಕ್ಷ ರೂಪಾಯಿಗಳೇ ಆದಾಗ್ಯೂ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಗವರ್ನ್‌ಮೆಂಟಿನಲ್ಲಿ ರಿಜರ್ವ್ ಇಡಬೇಕಾದದ್ದಾಗಿರುತ್ತದೆ "ಗವರ್ನ್‌ಮೆಂಟ್ ಸೆಕ್ಯೂರಿಟಿ" ಯುಳ್ಳ ಕಂಪನಿಗಳಾದರೋ ವಸೂಲಾಗುವ ಒಟ್ಟು ಹಣಗಳಲ್ಲಿ ಪ್ರತಿ ವರುಷವೂ ಶೇಕಡಾ ಇಷ್ಟೆಂದು ತೆಗೆದು ಗವರ್ನ್‌ಮೆಂಟಿನಲ್ಲಿ ರಿಜರ್ವ್ ಇಟ್ಟೇ ತೀರಬೇಕೆಂಬ ನಿಯಮುಂಟು ಇದೂ ಅಲ್ಲದೆ ನಮ್ಮ ಒಂದು ಕಂಪನಿಯನ್ನು ಬಿಟ್ಟರೆ ಹಿಂದುಸ್ಥಾನದಲ್ಲಿರುವ ಇನ್ಯಾವದೊಂದು ಕಂಪನಿಯಾದಾಗ್ಯೂ ಹಣವನ್ನು ನಮ್ಮ ಮೈಸೂರು ಗವರ್ನ್‌ಮೆಂಟಿನಲ್ಲಿ ರಿಜರ್ವ್ ಇಡುವುದಿಲ್ಲ [161 23]

ಮ್ಯಾರಿಯೇಜ್ ಪಾಲಿಸಿ ಹೋಲ್ಡರುಗಳಿಗೆ ಅವರಿಂದ ಕೊಡಲ್ಪಡುವ ಪ್ರೀಮಿಯಂ ಹಣಕ್ಕೆ ಕಡೇ ಪಕ್ಷ ಎರಡರಷ್ಟಾದರೂ ಬೋನಸ್ ಪಾವತಿಮಾಡಲಾಗುವುದೆಂದು ಕಂಪನಿಯವರು ನಿಷ್ಕರ್ಷೆಮಾಡಿದಾಗ್ಗ್ ಮ|| ಟಿ ಎಸ್ ಆರ್ ಅಯ್ಯರವರು ಇನ್ನೂ ಕಂಪನಿಯ ನೌಕರಿಗೇನೇ ಸೇರಿರಲಿಲ್ಲ ಈ ವಿಚಾರವನ್ನು ಪ್ರಾವಿಡೆಂಟ್ ಪಾಲಿಸಿ ಹೋಲ್ಡರುಗಳು ಕೇಳಿ ಆಶ್ಚರ್ಯಪಡದೆ ಇರಲಾರರು ಕಂಪನಿಯವರು ತಮ್ಮ ಪ್ರಾಸ್ಪೆಕ್ಟಸುಗಳನ್ನು ಅನೇಕ ವೇಳೆ ಬದಲಾವಣೆ ಮಾಡಿರುತ್ತಾರೆ ಮ|| ಅಯ್ಯರವರು ತಮ್ಮ ಕಡೇ ಪ್ಯಾರಾದಲ್ಲಿ ಹೇಳಿರುವ ವಿಚಾರಗಳೆಲ್ಲಾ ಕಂಪನಿಯಿಂದ ಕಡೇ ಸಲ ಬದಲಾಯಿಸಿ ಪ್ರಕಟಿಸಿರುವ ಪ್ರಾಸ್ಪೆಕ್ಟಸ್ಸಿನಲ್ಲಿ ಕಂಡುಬರತಕ್ಕವಾಗಿವೆ ಇನ್ನೊಂದು ಸಂಗತಿಯನ್ನು ಪಾಲಿಸಿ ಹೋಲ್ಡರುಗಳು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಸೂಚಿಸುತ್ತೇನೆ ಪ್ರೀಮಿಯಂಗಿಂತ ಎರಡರಷ್ಟು ಬೋನಸ್ಸನ್ನು ಮದುವೆಯ ದಿನ ಪಾವತಿಮಾಡುವಂತೆ ಕಂಪನಿಯ ಹೆಡ್ ಆಫೀಸಿನಿಂದ ನನಗೆ ಅಧಿಕಾರಕೊಟ್ಟಿರುವ ಲೆಟರು ನನ್ನಲ್ಲುಂಟು ಹಾಗೆ ಎರಡರಷ್ಟು ಬೋನಸ್ಸು ಕೊಡುವುದೆಂದು ನನಗೆ ತಿಳಿದಿದ್ದರೂ, ಪ್ರೀಮಿಯಂ ಒಟ್ಟು ಹಣಕ್ಕಿಂತಲೂ ಬೋನಸ್ಸು ಮೊಬಲಗು ಕಡಮೆಯಾಗುತ್ತದೆಂದು ನನಗೆ ಗೊತ್ತಾಗಿದ್ದರೂ ನಾನು ಆ ಕಂಪನಿಯನ್ನು ಪ್ರೋತ್ಸಾಹಪಡಿಸಿ ಮೆಂಬರುಗಳಾಗಿ ಸೇರಿಸುತ್ತಲೇ ಇರಲಿಲ್ಲವೆಂಬುದನ್ನೂ ಪಾಲಿಸಿ ಹೋಲ್ಡರುಗಳು ಚೆನ್ನಾಗಿ ತಿಳಿಯಬೇಕು

ಮುಖ್ಯವಾಗಿ ಮ|| ಟಿ ಎಸ್ ಆರ್ ಅಯ್ಯರವರು ಪ್ರಕಟಮಾಡಿರುವ ನೋಟೀಸನ್ನೆಲ್ಲಾ ನೋಡಿದಾಗ್ಯೂ ಅವರು ಬ್ರಾಂಚ್ ಸೆಕ್ರೆಟರಿಯಾಗಿರುವಂಥಾ ಕಂಪನಿಯ ವಿಷಯದಲ್ಲಿ ಯಾವುದೊಂದು ಸಂಗತಿಯಾದರೂ ಹೊರಪಡುವುದಿಲ್ಲ ಮ|| ಅಯ್ಯರವರು ಅಮೃತಸಾರದ ಕಂಪನಿಯಿಂದ ಪ್ರಕಟನೆಯ ಛಾರ್ಜು ಕೊಟ್ಟು, ಹೊಸದಾಗಿ ಪ್ರಾರಂಭಿಸಲ್ಪಟ್ಟಿರುವ ನಮ್ಮ ಕಂಪನಿಯ ವಿಚಾರವನ್ನು ನಿರುದ್ದೇಶವಾಗಿಯೂ ಪ್ರಾಮುಖ್ಯವಾಗಿಯೂ ಪಬ್ಲಿಕ್ ಜನಗಳ ದೃಷ್ಟಿಗೆ ಪ್ರಕಟಪಡಿಸಿರುವುದಕ್ಕಾಗಿ ಕೆಳಗೆ ರುಜುಮಾಡಿರುವವರು ಅವರನ್ನು ವಂದಿಸಬೇಕಾಗಿದೆ

ಮೈಸೂರು,
18 ನೇ ಡಿಸೆಂಬರ್, 1913

ಎಂ. ಎಲ್. ನಾಗಣ್ಣ,
ಮ್ಯಾನೇಜಿಂಗ್ ಡೈರೆಕ್ಟರ್

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವಂತೆ ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಳಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅಧಾಣೆಯ ಚೀಟನ್ನು ಕಳುಹಿಸಿರಿ ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನನ್ನ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂದುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟ ಪಿ. ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0-0 3 ಬಾಟ್ಲಿಗಳಿಗೆ ರೂ 2-8-0 ವಿ ಪಿ ಛಾರ್ಜು ಪ್ರತ್ಯೇಕ

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಸ್ಥಳ — [8-52]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉರ್ಲ್ ಮಾರ್ಟ್, ಮಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—12—1913 ರಿಂದ 19—12—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	0	1	0	0
ಮೈಸೂರು ,,	3	0	0	0
ಬೆಂಗಳೂರು ಡಿಸ್ಟ್ರಿಕ್ಟ್	10	10	0	0
ಮೈಸೂರು ,,	52	47	0	0
ಕೋಲಾರ್ ,,	21	11	0	0
ಕೋಲಾರ್ ಚಿನ್ನದ ಗಣಿಗಳು	6	6	0	0
ತುಂಕೂರು ಡಿಸ್ಟ್ರಿಕ್ಟ್	11	3	0	0
ಹಾಸನ ,,	1	1	0	0
ಚಿತ್ರದುರ್ಗ ,,	2	2	2	1
ಕಡೂರ್ ,,	23	11	0	0
ಶಿವಮೊಗ್ಗಾ ,,	9	7	0	0
ಜುಮ್ಲಾ	137	99	2	1

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಪುಷ್ಯ ಶುದ್ಧ ದ್ವಾದಶಿ ಶುಕ್ರವಾರದಿಂದ ಪುಷ್ಯ ಬಹುಳ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನಸ್ಸು ಮಕರ ತೇದಿ
9	ಶುಕ್ರ ,,	ದ್ವಾದಶಿ	12 23	ರೋಹಿಣಿ	30 7	26
10	ಶನಿ †	ತ್ರಯೋದಶಿ	13 16	ಮೃಗಶಿರ	32-1	27
11	ಭಾನು §	ಚತುರ್ದಶಿ	13 57	ಆರಿದ್ರಾ	32 39	28
12	ಸೋಮ	ಪೌರ್ಣಮಿ	11 17	ಪುನರ್ವಸು	31 18	29
13	ಮಂಗಳ *	ಪಾಡ್ಯಮಿ	8-27	ಪುಷ್ಯ	30 36	1
14	ಬುಧ	ಬಿದಿಗೆ	4 43	ಆಶ್ಲೇಷ	28 3	2
15	ಗುರು ‡	ತದಿಗೆ	0 9	ಮಘ	55-15	3

,, ಪ್ರದೋಷ, ಮುಕ್ಕೋಟಿದ್ವಾದಶಿ, ಮೂಗೂರುತೊಟೆ † ಅಂಧಕಾಸುರ ಸಂಹಾರ, ಶಾಕಂಬರೀವ್ರತ § ಮೂಗೂರು ಥಂಡೀ ಉತ್ಸವ, ಆರಿದ್ರೋತ್ಸವ, ಬನಶಂಕರೀ ವ್ರತ * ಮೂಗೂರು ರಥ, ಭೋಗೀಹಬ್ಬ, ಮಳೆ ನಕ್ಷತ್ರ—ಉತ್ತರಾಷಾಢ 2 ನೇ ಪಾದ ಉತ್ತರಾಯಣಪುಣ್ಯಕಾಲ, ಶಿವಗಂಗಾ ಗಂಗೋತ್ಪತ್ತಿ ‡ ಮೂಗೂರು ತಿಗುರುಕಡಿಯುವುದು, ಕನೂಹಬ್ಬ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೪-೦-೦	೧೬-೦-೦
ಕೆಂಬೂತಿ ಅಕ್ಕಿ ಅವಲ್	೧೫-೮-೦	೧೭-೮-೦
ಚಾಪ್ರಾಣಿ ಅಕ್ಕಿ	೧೪-೮-೦	೧೬-೮-೦
ಸಣ್ಣಕ್ಕಿ ಅವಲ್	೧೬-೮-೦	೧೭-೮-೦
,, ದುಯಂ	೧೫-೮-೦	೧೬-೧೨-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೬-೦-೦	೧೬-೪-೦
,, ದುಯಂ ,,	೧೪-೦-೦	೧೪-೦-೦
ಹೈರ್ ರಾಗಿ ಪಲ್ಲಾ ೧ಕ್ಕೆ	೭-೬-೦	೫-೧೦-೦
ಕಾರ್ರಾಗಿ ,,	೬-೮-೦	೪-೧೨-೦
ಜೋಳ ,,	೭-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೨-೮-೦	೧೪-೦-೦
ಬೀ ಅವರೆ ,,	೯-೮-೦	೧೨-೦-೦
ಹೆಸರು ,,	೧೩-೪-೦	೧೪-೦-೦
ಉದ್ದು ,,	೧೪-೦-೦	೧೬-೮-೦
ಕಡಲೆ ,,	೧೯-೦-೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೨-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೮-೬-೦	೭-೧೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬-೦
ಮೆಣಸಿನಕಾಯಿ ,,	೩-೪-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೫-೧೨-೦	೬-೯-೦
ಹರಳೆಣ್ಣೆ ,, ,,	೫-೨-೦	೬-೦-೦
ಕಡಲೇಕಾಯಿ ಯೆಣ್ಣೆ	೫-೦-೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೦-೦	೬-೪-೦
ಉಪ್ಪು ,, ,,	೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨-೮-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೬-೦-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೧೮-೦-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೮-೦	೬-೪-೦
ಅಡಿಕೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮು	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು



32

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಚಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಡೋಂಗರೆ

ಇವರ ಬಾಲಾಮೃತ

[150 25]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತ



ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೈಶಕ್ತಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179 19]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾಂತರದ ಕೋಣಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2–4–0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[130-28] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಟಿಸ್ ಲೀವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್‌ಸ ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0 0 ಇದನ್ನು ಸೆಪ್ಟಂಬರ್ ಅಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 28] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚುಂನಡಿ ಅಂಚಿನ ಸೀರೆಗಳು.

ಅವಲ್ ರಕಂ ಕ್ರಯ ರೂ 2 6 0



ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮದುರೆ ಚುಂನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟು ಸಲ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ಸೆರಗುಗಳು ಬಹು ಪಸಂದಾಗಿವೆ ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ ಸ್ಯಾಂಪಲ್‌ಕ್ಕಾಗಿ ಒಂದನ್ನು ತರಿಸಿದಲ್ಲಿ ನಿಮ್ಮ ನೆರೆಹೊರೆಯವರು ಅನೇಕ ಸೀರೆಗಳು ಬರೆಯುವರು —ಡಿಸ್ಟೆ ಆಲ್ ಕ್ವೆಲ್ಪೆ ರೆಗ್ಯುಲೇಟೆಡ್ ವಾಚ್ ರೂ 1 16-0 ಪುಷ್ಪಕಾಂತಿ ಹೇರಾಯಿಲ್ ಒಡ್ಡಿ 1 ಕ್ಕೆ 0 8 0 [161]

ವಿಳಾಸ—ಸುಬ್ಬರಾವ್, ಜನರಲ್ ಮರ್ಚೆಂಟ್,

ನಂ 16 ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸ್

ಪ್ರಾಕೃತಿಕ ಭೂಗೋಳ

೨ ನೆಯ ಮುದ್ರಣ.

1ನೆಯ ಭಾಗ 0-4 0 (ಕೆಲವು ಮಾತ್ರ ಉಳಿದಿವೆ.)
2ನೆಯ ಭಾಗ 0-4 0 (ಜನವರಿ ತಾ|| 20 ರಲ್ಲಿ ಬಿಕರಿಗೆ ಸಿದ್ಧವಾಗುವುದು
...ಲ್, ಕಮರ್ಷಿಯಲ್, ಪೊಲಿಟಿಕಲ್, ಮತ್ತು ಪರೀಕ್ಷೆಯ ಪ್ರಶ್ನೋತ್ತರಗಳು
...ಸೇರಿಸಲ್ಪಟ್ಟಿರುವವು) [276-4]

ಲೇಖನ ಪುಸ್ತಕಗಳು

ವಿದ್ಯಾಭ್ಯಾಸದ ಇಲಾಖೆಯವರು ಸರ್ಕಾರೀ ಪುಸ್ತಕಗಳಿಗೆ ಪ್ರತಿಯಾಗಿ ಈ ...ಪುಸ್ತಕಗಳನ್ನು ಎಲ್ಲಾ ಸ್ಕೂಲುಗಳಲ್ಲೂ ಉಪಯೋಗಿಸಬಹುದೆಂದು ಒಪ್ಪಿ...ರುತ್ತಾರೆ. ನಂ. 1, 2, 3, 4 ಹೊಸ ಕನ್ನಡ ಲೇಖನ ಪುಸ್ತಕಗಳು—1 ಕ್ಕೆ ...ಮೇಲ್ಪಂಕ್ತಿಗಳು ಕೈಬರವಣಿಗೆಯಂತೆ ಅಂದವಾಗಿ ಪ್ರಿಂಟಾಗಿರುತ್ತವೆ.

10 ರೂ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ರೂ 1 ಕ್ಕೆ ...ಆಣೆಯಂತೆಯೂ, 60 ಪುಸ್ತಕಗಳಿಗೆ ಕಡಮೆ ಇಲ್ಲದಂತೆ ತರಿಸಿಕೊಳ್ಳುವವರಿಗೆ ...1 ಕ್ಕೆ 1 ಆಣೆಯಂತೆಯೂ ಡಿಸ್ಕೌಂಟು ಕೊಡಲ್ಪಡುತ್ತದೆ

ವಿಳಾಸ—ಎಂ. ಪಿ. ಲಿಂಗಪ್ಪಯ್ಯ, ಹೆಡ್ ಮಾಸ್ಟರ್,
ಇಟ್ಟಿಗೆಗೂಡು ಎ. ವಿ ಸ್ಕೂಲ್, ಮೈಸೂರು.

ಪೈರವರ ಉತ್ತಮೋತ್ತಮ ಆಯಿಂಟ್‌ಮೆಂಟು.

...ಈ ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ...ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳು

ಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಣಗಳು, ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ...ಮೊದಲಾದ ಪ್ರಾಣಿಗಳ ಗಾಯಗಳಿಗೂ ಚಿಕಿತ್ಸೆಯುಳ್ಳಂಥಾ ಔಷಧ ಈ ಔಷದವನ್ನು ...ಮಾಡು ತಯಾರ್ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣ...ವನ್ನು ಖರ್ಚುಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ...ವಾಗುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ...ವನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ...ಕ್ರಯ 1 ಬಾಟ್ಲಿಗೆ ರೂ 1, ಸಣ್ಣ ಬಾಟ್ಲಿಗೆ 10 ಆಣೆ ವಿ. ಪಿ. ...ಚಾರ್ಜ್ ಬೇರೆ [7-2]

...ರ್ ಗುಲಾಬ್ ಬಲಕಾರಿ—ಇದು ನರಗಳನ್ನು ಬಲಪಡಿಸುವುದರಲ್ಲಿ ...ಪ್ರಸಿದ್ಧವಾದದ್ದು ಕ್ರಯ ರೂ 2 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ

ವಿಳಾಸ—ಜೆ. ಗುಲಾಬ್ ಚಂದ್ ಪೌವಾಳ್,
30 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಪರಮಾಶ್ಚರ್ಯವಾಗಿದೆ.

ಹೋಲಿಕೆ ಅಸಾಧ್ಯ. ಗ್ಯಾರಂಟಿ ಉಳ್ಳದ್ದು.

ನಮ್ಮ ಸರ್ವೋತ್ತಮವಾದ ನಿಕ್ಕಲ್ ರೈಲ್ವೆ ವಾಚು ...ರು ಬಹುಮಾನಗಳೊಂದಿಗೆ ರೂ. 2-4 0 ಗೆ ಸಿಗುತ್ತೆ.



ಬಹುಮಾನಗಳು—1 ನಿಕ್ಕಲ್ ಸರಪಣಿ, 2. ಉತ್ತರ...ಯ; 3. ಗಡಿಯಾರದ ಸುಂದರವಾದ ಪೆಟ್ಟಿಗೆ; 4 ಕರವಸ್ತ್ರ; ...ಸೊಗಸಾದ ಉಂಗುರ, 6. ಹೊಳೆಯುವ ಬೀಸಣಿಗೆ.

...ನ್ನು ವಿಳಾಸವನ್ನು ಇಂಗ್ಲಿಷಿನಲ್ಲಿ ಸ್ಪಷ್ಟವಾಗಿ ಬರೆಯಿರಿ.

ವಿಳಾಸ—ಪಿ. ಎ ರಜಾಕ್ ಕಂಪನಿ,
[87-3] ರತ್ನ ಬಜಾರ್, ಮದರಾಸ್

ಅನುಭವಸಿದ್ಧವಾದ ಪರಬತ್ತುಗಳು

ಸೊಗದೇಬೇರಿನ ಪರಬತ್ತು.—ರಕ್ತವನ್ನು ಶುದ್ಧಮಾಡಿ ದೇಹವನ್ನು ಉತ್ತ...ಮಸ್ಥಿತಿಯಲ್ಲಿಟ್ಟುಕೊಂಡಿರುವುದಕ್ಕೆ ಶ್ರೇಷ್ಠವಾದದ್ದು ರಕ್ತ ಕೆಡುವುದರಿಂದ ...ಗುವ ಕಜ್ಜಿ, ತುರಿ, ವೃಣಗಳು, ಹುರುಪು, ಹುಳಕಡ್ಡಿ ಮೊದಲಾದ ಚರ್ಮ...ರೋಗಗಳೂ, ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ಉರಿ, ಅರತಲೆನೋವು, ...ಬಾಯಾರಿಕೆ, ವಾಯುವಿನಿಂದುಂಟಾಗುವ ಅತಿಸಾರ, ಬಾಯಿ ದುರ್ವಾ...ಸನೆ, ಕೈಕಾಲು ಉರಿ, ಗರ್ಭವೆಟ್ಟು, ಮುಂತಾದ ರೋಗಗಳೂ ಇದರ ಸೇವನೆ...ಯಿಂದ ಖಾತ್ರಿಯಾಗಿ ಗುಣವಾಗುತ್ತವೆ ಇದು ಕುಡಿಯುವುದಕ್ಕೆ ಸುವಾಸನೆ, ...ಹಿತಕರ, ಮೊಲ್ಕಂಠ ರೋಗಗಳಿಗೆ ಗುಣಕಾರಿ. ಕ್ರಯ- 8 ಔನ್ಸ್ ...ಗೆ 8 ಆಣೆ, 12 ಔನ್ಸ್ ಬಾಟ್ಲಿಗೆ 12 ಆಣೆ

ಅಮೃತ ಸಿರಪ್—ರಕ್ತಕೆಡುವಿಕೆ, ಧಾತುನಷ್ಟ, ದುರ್ಬಲತ್ವ, ಮಲಬದ್ಧ, ...ಮಂದ್ಯ, ಜಡತ್ವ, ಪಿತ್ಥದಿಂದುಂಟಾಗುವ ಸಂಕಟ, ಅರತಲೆನೋವು. ...ದುರ್ವಾಸನೆ, ಮೊದಲಾದವು ಇದರ ಸೇವನೆಯಿಂದ ಖಾತ್ರಿಯಾಗಿ ಗುಣ...ವಾಗುವವು. ಕ್ರಯ 8 ಔನ್ಸ್ ಬಾಟ್ಲಿಗೆ 8 ಆಣೆ; 12 ಔನ್ಸ್ ಬಾಟ್ಲಿಗೆ 12 ಆಣೆ

ಪ್ರಸಿದ್ಧವೂ ಶ್ರೇಷ್ಠವೂ ಆದ ಊದುಬತ್ತಿಗಳು—ಸೇರು 1 ಕ್ಕೆ ರೂ 24, 10, 8, 6, 4, 3, 2½, 2, 1½. ಬಿಲ್ಲೆಗಳು 1 ಕ್ಕೆ 1½ ಆಣೆ ಲಾಗಾಯ್ತು ...ವರೆಗೆ. ಪಸಿಗಂಧ ತೊಲ 1 ಕ್ಕೆ ರೂ 2, 1, ಮತ್ತು 12 ಆಣೆ. ಇವು ...ಅನೇಕ ಅತ್ತರುಗಳೂ ನಮ್ಮಲ್ಲಿ ಸಿಗುತ್ತೆ. ಅರಮನೆಗೆ ಒಪ್ಪಿಸತಕ್ಕ...ವುಗಳು ಇವೇ. ಇಂಥಾ ಶ್ರೇಷ್ಠವಾದ ಬತ್ತಿಗಳೂ ಬಿಲ್ಲೆಗಳೂ ಇನ್ನೆಲ್ಲಿಯೂ ...ಯುವುದಿಲ್ಲ ಅರ್ಧಾಣೆ ಸ್ಟಾಂಪು ಕಳಿಸಿ ನಮ್ಮ ಕ್ಯಾಟ್ಲಾಗು ತರಿಸಿಕೊಳ್ಳಿ.

ವಿಳಾಸ—ಶ್ರೀ ವೆಂಕಟೇಶ್ವರ್ ಕಂಪನಿ,
...3] 174 ಚಾಮರಾಜ ರೋಡ್, ಮೈಸೂರು.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 5-2

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಚಿತ್ರದುರ್ಗದ ಡಿಸ್ಟ್ರಿಕ್ಟಿನ ವಿದ್ಯಾವರ್ಧಕ ಸಂಘವು.

ನಾಲ್ಕನೇ ವಾರ್ಷಿಕ ಮಹೋತ್ಸವ.

ಕಳೆದ ಡಿಸೆಂಬರ್ ತಾ 25 ಮತ್ತು 26 ಈ ಎರಡು ದಿವಸಗಳಲ್ಲಿ ಮೇಲ್ಕಂಡ ಸಂಘದ ಎಲ್ಲಾ ಮೆಂಬರುಗಳೂ ಸೇರಿ ಎ. ವಿ ಸ್ಕೂಲ್ ಕಟ್ಟಡದಲ್ಲಿ 4 ನೇ ವಾರ್ಷಿಕೋತ್ಸವವನ್ನು ನಡಿಸಿದರು. ಸ್ಕೂಲ್ ಕಟ್ಟಡಗಳನ್ನು ತೋರಣ ಬಾವುಟಗಳಿಂದ ಶೃಂಗರಿಸಿದ್ದರು. ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಸುಮಾರು 100 ಜನಕ್ಕೆ ಕಡಮೆಯಿಲ್ಲದೆ ಉಪಾಧ್ಯಾಯರುಗಳು ಬಂದು ಕೂಡಿದ್ದರು. ತಾ 25 ನೇ ಗುರುವಾರ ಪ್ರಾತಃಕಾಲ ಸಂಘದ ಪ್ರೆಸಿಡೆಂಟರು ತಿರುಮಲಾಚಾರ್ರವರು, ವೈಸ್ ಪ್ರೆಸಿಡೆಂಟರವರು ಮ|| ಪಿ ವೆಂಕಟರಾಯರವರು, ತಾಲ್ಲೂಕು ಎ. ವಿ ಸ್ಕೂಲ್ ಹೆಡ್ ಮಾಸ್ಟರುಗಳು, ಚಿತ್ರದುರ್ಗದ ಟೌನ್‌ನಲ್ಲಿರುವ ಲಾಯರುಗಳು, ಶಿಟ್ಟಿವರ್ತಕರು, ಪಬ್ಲಿಕ್ ಆಫೀಸರುಗಳು, ಮಿಷನ್ ಇನ್ಸ್‌ಪೆಕ್ಟರವರು, ಇವರೇ ಮೊದಲಾದ ಅನೇಕ ಜನ ದೊಡ್ಡ ಮನುಷ್ಯರುಗಳು 8 ಘಂಟೆಗೆ ಬಂದು ಸೇರಿದರು

ಸಂಘದ ಪ್ರೆಸಿಡೆಂಟರವರು ಅಗ್ರಾಸನಾಧಿಪತ್ಯವನ್ನು ವಹಿಸಿದ ಮೇಲೆ ಸಭೆಯು ಪ್ರಾರಂಭವಾಯಿತು ಸೆಕ್ರೆಟರಿಯವರೂ ಸಭಿಕರಿಗೂ, ಪ್ರೆಸಿಡೆಂಟರವರಿಗೂ ವಂದನೆಗಳನ್ನು ಸಮರ್ಪಿಸಿ, ಕಳೆದ ವರ್ಷದ ರಿಪೋರ್ಟನ್ನು ಓದಿದರು ಅದರಲ್ಲಿ ಕಂಡ ಮುಖ್ಯಾಂಶಗಳೇನೆಂದರೆ—ಒಟ್ಟು ಈ ಡಿಸ್ಟ್ರಿಕ್ಟು ಅಸೋಸಿಯೇಷನ್‌ಗೆ (163 ಹೋಬಳಿ ಸ್ಕೂಲುಗಳು) 221 ಸ್ಕೂಲ್ ಮಾಸ್ಟರುಗಳೂ, 710 ಜನ ನೌಕರರಲ್ಲದ ಮೆಂಬರುಗಳೂ ಈ ಸಂಘದ ಕಾರ್ಯಗಳನ್ನು ನಡಿಸಲು ಬದ್ಧರಾಗಿರುತ್ತಾರೆ. ಕಳೆದ ವರ್ಷ ಸರಾಸರಿ 7 ಮೀಟಿಂಗುಗಳು ನಡೆದಿರುತ್ತವೆಂತಲೂ, ಇನ್ನು ಮುಂದಕ್ಕೆ ಪ್ರತಿ ತಿಂಗಳಿಗೂ ಪುಸ್ತಕ ಭಂಡಾರದಿಂದ ಓದುವದಕ್ಕೆ ಪುಸ್ತಕಗಳನ್ನು ಕೊಡಬೇಕೆಂತಲೂ, ಟೀಚರ್ಸ್ ವಾಲಂಟಿಯರ ವಿಚಾರ, ಇದರ ಪ್ರಯೋಜನ, ಉಪಾಧ್ಯಾಯರ ಕರ್ತವ್ಯ, ಯೋಗ್ಯತಾ ಯೋಗ್ಯತೆಗಳು, ಜ್ಞಾನಾಭಿವೃದ್ಧಿಗೆ ಸಾಧನಗಳು, ಇದಕ್ಕಾಗಿ ಗೌರ್ನಮೆಂಟಿನವರ ಸಹಾಯ, ಎಕನಾಮಿಕ್ ಕಾನ್‌ಫರೆನ್ಸಿನವರು ಮಾಡುವ ಸಹಾಯ ಮತ್ತು ಸಲಹೆಗಳು, ಇವುಗಳನ್ನು ಕುರಿತು ದೀರ್ಘವಾದ ರಿಪೋರ್ಟನ್ನು ಓದಿ ಮುಗಿಸಿದರು. ಬಳಿಕ ಮೀಟಿಂಗು ಬರಖಾಸ್ತಾಯಿತು

ಮಧ್ಯಾಹ್ನ 3 ಘಂಟೆಯಿಂದ ಪುನಃ ಸಭೆ ಸೇರಿತು ಅಡ್ವೋಕೇಟ್ ಮ|| ಚೆನ್ನಕೇಶವಯ್ಯ, ಬಿ ಎ ಯವರು ಅಗ್ರಾಸನವನ್ನು ವಹಿಸಿದರು ಮ|| ವೆಂಕಟರಾಯರು ಚಿಕ್ಕ ಮಕ್ಕಳಿಗೆ ಅಕ್ಷರಾಭ್ಯಾಸಕ್ರಮವನ್ನೂ ಗಣಿತವನ್ನೂ ಕುರಿತು ಉಪನ್ಯಾಸ ರೀತಿಯಾಗಿ ಬೋಧೆ ಮಾಡಿದರು ತರುವಾಯ ಅಗ್ರಾಸನಾಧಿಪತಿಗಳು ಉಪಾಧ್ಯಾಯರಿಂದಾಗುವ ಪ್ರಯೋಜನ ಮತ್ತು ಅವರು ಮಾಡುವ ಕೆಲಸದ ರೀತಿಗಳನ್ನು ಬಹಳ ಉತ್ತಮವಾದ ರೀತಿಯಲ್ಲಿ ಸರ್ವರಿಗೂ ಪ್ರಯೋಜನವಾಗುವಂತೆ ತಿಳಿಸಿದರು ಸರ್ವರೂ ಅವರಿಗೆ ತಮ್ಮ ಕೃತಜ್ಞತೆಯನ್ನು ತೋರಿಸಿದರು ಸಾಯಂಕಾಲ 6½ ಘಂಟೆಯಿಂದ ಸಂಗೀತ ವಿದ್ವಾನ್ ವೆಂಕಟೇಶಶಾಸ್ತ್ರಿಗಳವರ ಗಾನವೂ, ಮ|| ಕೃಷ್ಣಪ್ಪನವರ ಬೋಧಕವಾದ ಹರಿಕಥೆಯೂ ಸರ್ವರಿಗೂ ಮನೋರಂಜಕವಾಗಿ ನಡೆದವು ವೈದಿಕ ಲೌಕೀಕರು ಅತ್ಯಂತ ಹರ್ಷದೊಡನೆ ತೆರಳಿದರು.

ಮರುದಿನ ಪ್ರಾತಃಕಾಲ 7½ ಘಂಟೆಯಿಂದ ಸಂಘದ ಪ್ರೆಸಿಡೆಂಟರವರ ಅಗ್ರಾಸನಾಧಿಪತ್ಯದಲ್ಲಿ ಜನರಲ್ ಮೀಟಿಂಗು ನಡಿಯಿತು. ಮುಖ್ಯವಾಗಿ ಒಂಭತ್ತು ಅಂಶಗಳನ್ನು ಚರ್ಚಿಸಿ ಇತ್ಯರ್ಥಪಡಿಸಿದರು ಡಿಸ್ಟ್ರಿಕ್ಟು ಎಡ್ಯುಕೇಷನಲ್ ಅಸೋಸಿಯೇಷನ್, ತಾಲ್ಲೂಕು ಅಸೋಸಿಯೇಷನ್, ವಿಲೇಜ್ ಅಸೋಸಿಯೇಷನ್, ಇವುಗಳ ಕಾರ್ಯ, ಇವುಗಳಿಗೆ ಬೇಕಾಗುವ ಫಂಡು, ಸೆಲೆಕ್ಷನ್ ಪರೀಕ್ಷೆ, ಟೈಮ್‌ಟೇಬಲ್‌ಗಳು, ಪಾಠಗಳ ಹಂಚಿಕೆ, ಇವುಗಳೇ ಮುಖ್ಯಾಂಶಗಳಾಗಿದ್ದವು. ಬಳಿಕ ಡಿಸ್ಟ್ರಿಕ್ಟು ಎಕನಾಮಿಕ್ ಕಾನ್‌ಫರೆನ್ಸಿನ ಮೆಂಬರುಗಳು ಮತ್ತು ಸೆಕ್ರೆಟರಿಗಳಾದ ಜನರಲ್ ಅ|| ಕಮಿಷನರ್ ಮ|| ರಾಮಚಂದ್ರರಾಯರವರೂ, ಅಡ್ವೊಕೇಟ್ ಶಾಮಣ್ಣನವರೂ ದಯಮಾಡಿಸಿದರು ನಮ್ಮ ದೇಶಾಭಿವೃದ್ಧಿಗಾಗಿ ಎಕನಾಮಿಕ್ ಕಾನ್‌ಫರೆನ್ಸಿನ ಎಡ್ಯುಕೇಷನಲ್ ಬ್ರಾಂಚಿನವರು ಮಾಡುತ್ತಿರುವ ಕಾರ್ಯಗಳು, ಇದಕ್ಕಾಗಿ ಉಪಾಧ್ಯಾಯರು ಹಳ್ಳಿಗಳಲ್ಲಿ ಮಾಡಬೇಕಾದ ಸಹಾಯ, ಇದಕ್ಕಾಗಿ ಕಾನ್‌ಫರೆನ್ಸಿನವರು ಒದಗಿಸುವ ಉಪಕರಣಗಳು, ಇವುಗಳನ್ನು ಕುರಿತು ದೀರ್ಘವಾದ ಉಪನ್ಯಾಸಗಳ ಮುಖಾಂತರ ನಾನಾ ವಿಧವಾದ ತಿಳುವಳಿಕೆಗಳನ್ನು ಕೊಟ್ಟರು. ಮತ್ತು ಕಾನ್‌ಫರೆನ್ಸಿನವರು 10-15 ಪ್ರಶ್ನೆಗಳನ್ನು ತಿಳಿಸಿ, ಉಪಾಧ್ಯಾಯರುಗಳು ಸ್ಥಳಾನುಕೂಲ ಪ್ರತಿಕೂಲಗಳನ್ನು ಕುರಿತು ಉತ್ತರ ಬರೆದು ಕಳುಹಿಸಬೇಕೆಂದು ಹೇಳಿ ಮುಕ್ತಾಯಮಾಡಿದರು ಎಕನಾಮಿಕ್ ಕಾನ್‌ಫರೆನ್ಸಿನಿಂದ ವಿಶೇಷ ಪ್ರಯೋಜನವಿದೆ ಎಂಬುವದೂ, ವಿದ್ಯೆಯು ಜಾಗ್ರತೆ ಹರಡುವದೆಂದೂ ಈ ಡಿಸ್ಟ್ರಿಕ್ಟಿನ ಜನಗಳಿಗೆ ಈಗ ಗೊತ್ತಾಗುವದಕ್ಕೆ ಅವಕಾಶವಾಯಿತು.

ಆ ದಿನ ಮಧ್ಯಾಹ್ನ ಸಂಘದವರು ಎಡ್ಯುಕೇಷನಲ್ ಮ್ಯೂಜಿಯಮ್ಮನ್ನು ಪ್ರದರ್ಶಿಸುವ ಕಾರ್ಯವನ್ನು ಇಟ್ಟುಕೊಂಡಿದ್ದರು. ಮಧ್ಯಾಹ್ನ 3 ಘಂಟೆಯಿಂದ ಅನೇಕ ಜನ ಉಪಾಧ್ಯಾಯರುಗಳು, ಲಾಯರುಗಳು, ವರ್ತಕರು, ರೈತಾಪಿಜನಗಳು, ಹೈಸ್ಕೂಲು, ಎ. ವಿ. ಸ್ಕೂಲು ವಿದ್ಯಾರ್ಥಿಗಳು, ಸ್ಕೂಲು ಹಾಲು ಭರ್ತಿಯಾಗಿ ಸೇರಿದ್ದರು. ಆಗ ಅಡ್ವೊಕೇಟ್ ಮ|| ವೆಂಕಟಸಾಮಣ್ಣ, ಬಿ ಎ., ಬಿ ಎಲ್. ರವರು ಅಗ್ರಾಸನಾಧಿಪತ್ಯವನ್ನು ವಹಿಸಿದರು. ಸಂಘದ ಸೆಕ್ರೆಟರಿಯವರು ಈಗಿನ ವಿದ್ಯಾಭ್ಯಾಸಕ್ರಮ, ಪೂರ್ವಕಾಲಸ್ಥಿತಿ, ಕೈಗಾರಿಕೆಯ ಅವಶ್ಯಕತೆ, ಅದಕ್ಕಾಗಿ ವಿದ್ಯಾಭ್ಯಾಸಕ್ರಮದಲ್ಲಿ ಮುಂದಿನ ಜೀವನೋಪಾಯಕ್ಕೆ ಸಹಾಯವಾಗುವಂತೆ ಚಿಕ್ಕದಾದ ಕೈಕೆಲಸಗಳನ್ನು ಸೇರಿಸಿರುತ್ತಾರೆಂತಲೂ, ಇನ್ನೂ ನಾನಾ ವಿಧವಾದವುಗಳನ್ನು ಸೇರಿಸುವುದರಲ್ಲಿರುತ್ತಾರೆಂತಲೂ ಅಲ್ಲಲ್ಲಿ ಜನಗಳ ಪ್ರೋತ್ಸಾಹಕ್ಕಾಗಿ ಉತ್ತಮವಾದ ವಸ್ತುಗಳನ್ನಿಟ್ಟು ಪ್ರದರ್ಶಿಸುತ್ತಾರೆಂತಲೂ, ವಿದ್ಯಾಭ್ಯಾಸದ ವಿಷಯಗಳಲ್ಲೂ ಅಂಥಾ ವಸ್ತುಗಳನ್ನಿಟ್ಟು ಇರುವುದಾಗಿಯೂ ಅದನ್ನು ಈ ದಿನ ತೆರೆಯುವ ವಿಚಾರದಲ್ಲಿ ಅಗ್ರಾಸನಾಧಿಪತಿಗಳು ಘನವಾದ ಔದಾರ್ಯದಿಂದ ಸರ್ವರಿಗೂ ಜ್ಞಾನಾಭಿವೃದ್ಧಿಯಾಗುವಂತೆ ಪ್ರೋತ್ಸಾಹಿಸಬೇಕೆಂದು ಬೇಡಿಕೊಂಡರು.

ಈ ವಿಚಾರದಲ್ಲಿ ಅಗ್ರಾಸನಾಧಿಪತಿಗಳು ಪೂರ್ವಕಾಲದ, ಈಗಿನಕಾಲದ ಸಂಗತಿಗಳನ್ನು ಕುರಿತು ವಿವರಿಸಿ, ಅಮೇರಿಕ, ಇಂಗ್ಲೆಂಡು, ಜಪಾನ್ ದೇಶಗಳ ಅಭಿವೃದ್ಧಿಗೆ ಕಾರಣಗಳನ್ನು ಹೇಳಿ ನಾನಾ ವಿಧವಾದ ಉದಾಹರಣೆಗಳಿಂದ ಸರ್ವರೂ ಕೈಗಾರಿಕೆಗೆ ಪ್ರೋತ್ಸಾಹ ಕೊಡುವ ವಿಚಾರದಲ್ಲಿ ಅಮೋಘವಾದ ಉಪನ್ಯಾಸಕೊಟ್ಟು ಸರ್ವರೊಡನೆ ದಯಮಾಡಿ ಬಂದು ಪ್ರದರ್ಶನಶಾಲೆಯನ್ನು ಪ್ರವೇಶಿಸಿದರು ಸಂಘದ ಸೆಕ್ರೆಟರಿಯವರು ಕ್ರಮವಾಗಿ ವಿವರಿಸುತ್ತಾ ಇದ್ದರು. ನಾನಾವಿಧವಾದ ಡ್ರಾಯಿಂಗುಗಳು (ಮ್ಯಾಪ್ ಡ್ರಾಯಿಂಗ್, ಪೆನ್ಸಿಲ್ ಡ್ರಾಯಿಂಗ್, ಮ್ಯಾಪ್ ಡ್ರಾಯಿಂಗ್, ಬ್ರಷ್ ಡ್ರಾಯಿಂಗ್), 2 ನೇದಾದ ನಾನಾವಿಧವಾದ ಚಿತ್ರಗಳನ್ನು, 3 ನೇ ಸೆಕ್ಷನ್‌ನಲ್ಲಿರುವ ಕಾಪಿ ಪುಸ್ತಕಗಳನ್ನೂ, ಒಳ್ಳೇ ಅಕ್ಷರಗಳನ್ನೂ, 4 ನೇ ಸೆಕ್ಷನ್‌ನಲ್ಲಿ ಕಾಗದದಲ್ಲಿ ಮಾಡಿರುವ ಪೇಪರ್ ಫೋಲ್ಡಿಂಗು, ಕಾಗದದ ಹೂವುಗಳು, ಗಿಡಗಳು, ಚಿತ್ರಗಳು, ಬಣ್ಣದ ಕಾಗದದ ಚಾಪೆಗಳು; 5 ನೇ ಸೆಕ್ಷನ್‌ನಲ್ಲಿ ಮಣ್ಣಿನಿಂದ ಮಾಡಿ ಬಣ್ಣಹಾಕಿ ತಯಾರಾದ ಸಾಮಾನುಗಳು; 6 ನೇ ಸೆಕ್ಷನ್‌ನಲ್ಲಿ ಕಡ್ಡಿ, ಹುಲ್ಲಿನಿಂದ ಮಾಡಿದ ಚಾಪೆಗಳು, ಬೊಂಬೆಗಳು, 7 ನೇ ಸೆಕ್ಷನ್‌ನಲ್ಲಿ ಬ್ರಷ್‌ವರ್ಕ್, 8 ನೇ ಸೆಕ್ಷನ್‌ನಲ್ಲಿ ಮಗ್ಗಗಳಿಂದ ತಯಾರಾದ ತಟ್ಟೆ, ಬಟ್ಟೆಗಳು, ನಾನಾವಿಧವಾದ ಬೊಂಬೆಗಳು, 9 ನೇ ಸೆಕ್ಷನ್ ಉಪಾಧ್ಯಾಯರಿಂದ ತಯಾರಿಸಿದ ಉಪನ್ಯಾಸಗಳು, ಮತ್ತು ಟೈಮ್‌ಟೇಬಲ್‌ಗಳು; 10 ನೇ ಸೆಕ್ಷನ್‌ನಲ್ಲಿ ಇತರ ವಿಧವಾದ ಆಟಗಳ ವಿಷಯ, ವ್ಯವಸಾಯದ ಚಿಕ್ಕ ಚಿಕ್ಕ ಸಾಮಗ್ರಿಗಳು, ತೋಟದ ಸಾಮಗ್ರಿಗಳು ಇವೆಲ್ಲಾ ಪ್ರದರ್ಶಿಸಲ್ಪಟ್ಟಿದ್ದವು ರಾತ್ರಿ 8 ಘಂಟೆವರಿವಿಗೆ ಸರ್ವರೂ ಹೋಗಿ ನೋಡಿಬರುತ್ತಲೇ ಇದ್ದರು.

ಮತ್ತೊಂದು ಭಾಗದಲ್ಲಿ 5 ಘಂಟೆಯಿಂದ ಸರ್ವರಿಗೂ ಕೊಂಚ ಫಲಾಹಾರಕ್ಕೆ ಏರ್ಪಡಿಸಿದ್ದರು 7½ ಘಂಟೆಯಿಂದ ಅದೇ ಹಾಲಿನಲ್ಲಿ ಮ|| ವಿದ್ವಾನ್ ರಾಮಸ್ವಾಮಯ್ಯನವರ ಸ್ವಾರಸ್ಯವಾದ ಹರಿಕಥೆಯು ನಡಿಯಿತು ಅಗ್ರಾಸನಾಧಿಪತಿಗಳಿಗೆ ಸಂಘದ ಪರವಾಗಿ ವಂದನೆಗಳು ಸಮರ್ಪಿಸಲ್ಪಟ್ಟವು. ಈ ಕಾರ್ಯಗಳಿಗೆಲ್ಲಾ ಪ್ರೋತ್ಸಾಹಕರಾದ ನಮ್ಮ ಪ್ರೆಸಿಡೆಂಟ್ ಮ|| ತಿರುಮಲಾಚಾರ್ರವರಿಗೆ ಸಂಘದ ಎಲ್ಲಾ ಮೆಂಬರುಗಳೂ ಕೃತಜ್ಞತೆಯನ್ನು ಸೂಚಿಸಿದರು. ವಿದ್ಯಾಭಿವೃದ್ಧಿಯಿಂದ ದೇಶದ ಏಳಿಗೆಗೆ ಅವಕಾಶಮಾಡುತ್ತಿರುವ ನಮ್ಮ ಶ್ರೀಮನ್ ಮಹಾರಾಜರವರಿಗೆ ದೇವರು ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂದು ದೇವರನ್ನು ಪ್ರಾರ್ಥಿಸಿದರು ಸರ್ವರೂ ಶ್ರೇಷ್ಠರುಗಳಿಗೆಲ್ಲಾ ಜಯಘೋಷಗಳನ್ನು ಕೊಟ್ಟು ಅತ್ಯಂತ ಹರ್ಷದೊಡನೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು ತಾ. 27 ನೇ ಪ್ರಾತಃಕಾಲ ಊರಿನಲ್ಲಿರುವ ಎಲ್ಲಾ ಗಂಡಸರಿಗೂ ಹುಡುಗರಿಗೂ ಪ್ರದರ್ಶನವನ್ನು ನೋಡುವುದಕ್ಕೆ ಅವಕಾಶಕೊಟ್ಟಿದ್ದರು. ಮಧ್ಯಾಹ್ನ ಗರಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್‌ರವರು ಊರಿನ ಎಲ್ಲಾ ಹೆಂಗಸರನ್ನೂ ಕರಸಿಕೊಂಡು ಪ್ರದರ್ಶಿಸಿ ತೋರಿದರೆ ತೆಗೆದುಕೊಂಡದ್ದಕ್ಕಾಗಿ ಎಲ್ಲಾ ಹೆಂಗಸರೂ ಅವರಿಗೆ ಕೃತಜ್ಞರಾಗಿರುತ್ತಾರೆ. ಸುಮಾರು 1,100 ಜನ ಗಂಡಸರೂ, 400 ಜನಗಳವರಿವಿಗೂ ಹೆಂಗಸರೂ ಪ್ರದರ್ಶನೋತ್ಸವವನ್ನು ನೋಡಿ ಪ್ರಯೋಜನವನ್ನು ಹೊಂದಿದರೆಂದು ತಿಳಿಸಲು ಸಂತೋಷಿಸುತ್ತೇನೆ.

ಚಿತ್ರದುರ್ಗ. ವೀಣಾ ಭಿಕ್ಷಪ್ಪ, ಸೆಕ್ರೆಟರಿ.

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ಇನ್ನು ಮೇಲೆ ಕಸಾಬರು ಕೊಯ್ಯುವ ಪ್ರತಿ ಒಂದು ಹಸುವಿಗೂ ಮ್ಯುನಿಸಿಪಾಲಿಟಿಗೆ 20 ರೂಪಾಯಿನಂತೆ ಸುಂಕ ಕೊಡಬೇಕೆಂದು ರೂಲುಮಾಡಿ ಜಾರಿಗೆ ತಂದರು ಅದು ಬಹಳ ದುಬಾರಿ ದರವೆಂದೂ, ಅದನ್ನು ವಜಾ ಮಾಡದಿದ್ದರೆ ಇನ್ನು ಮುಂದೆ ಹಸುಗಳನ್ನು ಕೊಯ್ಯುವುದೇ ನಿಲ್ಲಿಸಬಿಡುತ್ತೇವೆಂದೂ ಅಲ್ಲಿನ ಕಸಾಬರು ಹಟಹಿಡಿದು ನಿಂತು ಇರುತ್ತಾರೆ. ಇದರಿಂದ ಮಾರ್ಕೆಟ್ಟಿನಲ್ಲಿ ಹಸುವಿನ ಮಾಂಸಕ್ಕೆ ಕ್ಷಾಮವುಂಟಾಗಿರುವುದಲ್ಲದೆ ಇತರ ಜಾತಿಯ ಮಾಂಸದ ಧಾರಣೆಗಳೂ ಒಂದೂವರೆಯಷ್ಟು ಹೆಚ್ಚಾಗಿರುತ್ತದೆ.

***

ದೊರೆಸಾಮಿ ಎಂಬೊಬ್ಬ ಮದರಾಸಿಯು ಬೊಂಬಾಯಿ ಪಟ್ಟಣದಲ್ಲಿ ಅನಂತ ಆನಪ್ಪನೆಂಬೊಬ್ಬ ಟೆಲಿಗ್ರಾಫ್ ಆಫೀಸ್ ನೌಕರನಿಗೆ ಸ್ನೇಹಿತನಾಗಿ ಅವನ ಮನೆಗೆ ಹೋಗಿಬರುತ್ತಿದ್ದು, ಕೆಲವು ದಿನಗಳ ಮೇಲೆ ಅನಂತನ ಕೊಠಡಿಯಲ್ಲಿದ್ದ ಸುಮಾರು 100 ರೂಪಾಯಿನ ಪಟ್ಟೆಸೀರೆಯನ್ನು ಅಪಹರಿಸಿ, ಅದನ್ನು ದಕ್ಕಿಸಿಕೊಳ್ಳುವುದು ಸಾಧ್ಯವಲ್ಲವೆಂದು ಗೊತ್ತಾದಾಗ ಅದನ್ನು ವಾಪಸು ತನ್ನ ಸ್ನೇಹಿತನ ಕೊಠಡಿಗೆ ಕಿಟಕಿಯಿಂದ ಹಾಕುತ್ತಿದ್ದದ್ದನ್ನು ಒಬ್ಬ ಸಾಕ್ಷಿಯು ನೋಡಿದನು. ಕೋರ್ಟಿನಲ್ಲಿ ಮೊಕದ್ದಮೆ ನಡೆದು ಮ್ಯಾಜಿಸ್ಟ್ರೇಟರು ಅಪರಾಧಿಯಿಂದ ಆರು ತಿಂಗಳ ನೇಕಚಾಲಿಗೆ 25 ರೂಪಾಯಿನ ಜಾಮೀನ್ ಪತ್ರವನ್ನು, ಬರಸಿಕೊಂಡು ಎಚ್ಚರಿಕೆ ಹೇಳಿ ಬಿಟ್ಟುಬಿಟ್ಟರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜನವರಿ, ತಾ. ೮ ನೇ ಗುರುವಾರ.

ಹಿಂದುಸ್ಥಾನದ ರಾಷ್ಟ್ರ ಸಭೆಯು.

ಕಳೆದ ವರುಷದ ಅಂತ್ಯಭಾಗದಲ್ಲಿ ಹಿಂದುಸ್ಥಾನದ ಹಲವು ದೊಡ್ಡ ನಗರಗಳಲ್ಲಿ ಪದ್ಧತಿಯ ಪ್ರಕಾರ ಸಭೆಗಳೂ, ಕೂಟಗಳೂ ನಡೆದು, ಉತ್ಸಾಹಶೀಲರಾದ ಬಹು ಮಂದಿ ವಿದ್ಯಾವಂತರೂ ಪರಹಿತಚಿಂತಕರೂ ಉಪನ್ಯಾಸಗಳನ್ನು ಮಾಡಿದರು; ಆಯಾ ಸಭೆಯ ಉದ್ದೇಶಗಳಿಗೆ ಅನುಸಾರವಾದ ತೀರ್ಮಾನಗಳೂ ಮಾಡಲಾಗಿರುತ್ತದೆ. ನಾವು ಈ ಸಭೆಗಳಿಂದಲೂ, ಅವುಗಳಲ್ಲಿ ನಡೆದಿರುವ ಚರ್ಚೆಗಳಿಂದಲೂ, ಅವುಗಳ ತೀರ್ಮಾನಗಳಿಂದಲೂ ಈ ರಾಷ್ಟ್ರಕ್ಕೆ ಹಿತಫಲವೇನೂ ಆಗಲಿಲ್ಲವೆಂದು ಹೇಳುವುದಿಲ್ಲ. ಪ್ರಜೆಗಳ ಮುಖಂಡರಾಗಿಯೂ ವಿದ್ಯಾವಂತರಾಗಿಯೂ ಇರತಕ್ಕ ಮಹಾಜನರು ಸೇರಿ ಸಭೆಗಳನ್ನು ನಡಿಸಿ ತಮ್ಮ ಉದ್ದೇಶವಾದ ವಿಚಾರಗಳನ್ನು ಕುರಿತು ಚರ್ಚೆಮಾಡುವುದರಲ್ಲಿ ತುಂಬಾ ಪ್ರಯೋಜನವುಂಟು. ಈಗಲಾದರೋ ಹಿಂದುಸ್ಥಾನದಲ್ಲಿ ಉಪನ್ಯಾಸಗಳನ್ನು ಮಾಡತಕ್ಕ ಕಾಲವು ಮೀರಿಹೋಗಿ ಇದುವರೆಗೆ ಚರ್ಚಿಸಿ ತೀರ್ಮಾನಮಾಡಿರುವಂತೆ ಕಾರ್ಯತಃ ನಡೆದು ತೋರಿಸುವ ಸಮಯವು ಪ್ರಾಪ್ತವಾಗಿರುವುದೆಂದು ಧಾರಾಳವಾಗಿ ಹೇಳಬಹುದು. ತೀರ್ಮಾನಗಳನ್ನು ಮಾಡತಕ್ಕ ಕಾಲವು ಕಳೆಯಿತು; ಈಗ ಆ ತೀರ್ಮಾನಗಳನ್ನು ಆಚರಣೆಯಲ್ಲಿ ತರಬೇಕಾಗಿರುತ್ತದೆ.

ಇನ್ನು ಸಭೆಗಳೂ ಸಮಾಜಗಳೂ ಕೂಡಿದ ಪಕ್ಷದಲ್ಲಿ ವಿಷಯಗಳನ್ನು ಕುರಿತು ಚರ್ಚೆಮಾಡಬೇಕಾದ ಅಗತ್ಯವಿಲ್ಲ; ಯಾವಯಾವ ವಿಷಯ ಯಾವಯಾವ ರೀತಿಯಲ್ಲಿ ಆಚರಣೆಗೆ ಬಂದಿದೆ ಎಂಬುವುದನ್ನು ಪ್ರಚಾರಮಾಡುವುದಕ್ಕಾಗಿ ಸಭೆಗಳು ಆಗಬೇಕು ರಾಜಕೀಯವೂ, ಧಾರ್ಮಿಕವೂ, ಸಾಮಾಜಿಕವೂ ಆದ ವಿಚಾರಗಳಲ್ಲಿ ಹಲವು ವಿಶೇಷವಾದ ಬದಲಾವಣೆಗಳು ಆಗಬೇಕಾದದ್ದುಂಟು. ಯಾವ ಬದಲಾವಣೆಗಳು ಯಾವ ಪ್ರಕಾರ ರೂಢಿಸಲ್ಪಡಬೇಕೆಂಬುವುದು ಚರ್ಚೆಯಾಗಿ ನಿಷ್ಕರ್ಷೆಯಾಗಿರುತ್ತದೆ. ಸಭೆಗಳಲ್ಲಿ ಚರ್ಚೆಮಾಡಿ ತೀರ್ಮಾನಗಳಿಗೆ ಸಮ್ಮತಿ ಹಾಕಿರುವಂಥವರು ಆ ತೀರ್ಮಾನಗಳನ್ನು ಆಚರಣೆಯಲ್ಲಿ ತರಬೇಕೆಂದು ಉದ್ದೇಶಪಡುತ್ತಾರೆಯೋ ? ಅಂಥಾ ಉದ್ದೇಶವಿಲ್ಲದ ಪಕ್ಷಕ್ಕೆ ಅವರು ವಾಚಾ ಹೇಳುವುದೊಂದಾಗಿ, ನಡೆಯುವುದು ಬೇರೆಯಾಗಿ ಬರೀ ನಟನೆವಂತರಾಗಿ ಪರಿಣಮಿಸುತ್ತಾರಲ್ಲಾ?

ನಮ್ಮ ದೇಶದಲ್ಲಿ ಬೇರೆ ಬೇರೆ ಜಾತಿ ಕುಲಗಳ ಪ್ರಜೆಗಳು ಪರಸ್ಪರ ಪ್ರೀತಿ ಸಹಸಗಳನ್ನು ಪಡೆದವರಾಗಬೇಕೆಂದು ಹಾರೈಸುತ್ತೇವೆ. ನಮ್ಮ ಈ ರಾಷ್ಟ್ರವನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ತರುವುದಕ್ಕಾಗಿ ಹಿಂದು, ಮುಸಲ್ಮಾನ್, ಕ್ರೈಸ್ತ, ಪಾರಸಿ ಜನಾಂಗಗಳೂ; ದೇಶೀಯರೂ ಮತ್ತೂ ಅನ್ಯದೇಶೀಯರಾದ ಇಂಗ್ಲಿಷರೂ ಏಕೀಭವಿಸಿ ಕಾರ್ಯಗಳನ್ನು ನಡಿಸುತ್ತಾ ಬರಬೇಕಾಗಿದೆ. ಈ ಉದ್ದೇಶವು ನೆರವೇರುವ ಭಾಗದಲ್ಲಿ ನಾವುಗಳು ಎಂದಿಗೆ ಯಾವ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದು ? ನಮ್ಮಲ್ಲಿ ಪ್ರತಿ ಒಬ್ಬನೂ ಪರಹಿತವನ್ನು ಲಕ್ಷ್ಯಮಾಡದೆ ಸ್ವಾರ್ಥಪರನಾಗಿ ಹೊರಟರೆ ಈ ದೇಶಕ್ಕೆ ಶ್ರೇಯಸ್ಸು ಉಂಟಾಗುವುದಿಲ್ಲವೆಂಬುವುದು ಖಂಡಿತ. ಈ ರಾಷ್ಟ್ರದ ಐಕ್ಯತೆಯು ಪ್ರಜೆಗಳಿಗೆ ಹಿತಕರವಾಗಿಯೂ ಶ್ರೇಯಸ್ಕರವಾಗಿಯೂ ಪರಿಣಮಿಸಬೇಕಾದಲ್ಲಿ ಸಮಸ್ತ ಪ್ರಜೆಗಳೂ ಒಂದಾಗಿ ಸರ್ಕಾರು ನೌಕರರುಗಳ ಮತ್ತೂ ಗಣ್ಯಪ್ರಜೆಗಳ ನಡವಳಿಕೆಗಳಲ್ಲಿ ಕಂಡು ಬರುತ್ತಿರುವಂಥಾ ಲಂಚವನ್ನೂ, ವಂಚನೆಯನ್ನೂ, ಅಧರ್ಮವನ್ನೂ, ಸೋಮಾರಿತನವನ್ನೂ, ಅಲಕ್ಷ್ಯಸ್ವಭಾವವನ್ನೂ ದೃಢಸಂಕಲ್ಪದಿಂದ ಸಂಪೂರ್ಣವಾಗಿ ತೊಡೆದು ಬಿಡಬೇಕಾಗಿದೆ, ಮತ್ತೂ ಯಥಾರ್ಥವಾಗಿಯೂ ದೇಶವತ್ಸಲರಾದಂಥಾ, ಪ್ರಜೆಗಳ ಮೇಲೆ ಸತ್ಯವಾದ ಪ್ರೀತಿಯನ್ನುಳ್ಳಂಥಾ, ಸಕಲರ ಹಿತಕ್ಕೋಸ್ಕರ ಸರ್ವಸ್ವವನ್ನೂ ಧಾರಾಳವಾಗಿ ವಿನಿಯೋಗಿಸುವಂಥಾ ಪುರುಷರೇ ಅಧಿಕಾರ ಸ್ಥಾನಗಳಿಗೆ ಬರುವಂತೆ ಮಾಡಿಕೊಳ್ಳಬೇಕಾಗಿದೆ.

ಸಾಂಸರ್ಗಿಕವಾದ ಆಚಾರ ವ್ಯವಹಾರಗಳಲ್ಲಿ ಬದಲಾವಣೆಗಳು ರೂಢಿಗೆ ಬರುತ್ತಲಿವೆ. ಅನೇಕ ಮಹನೀಯರು ವಾಗಾಡಂಬರವೇನೂ ಇಲ್ಲದೆ ತಮ್ಮಷ್ಟಿಗೆ ತಾವೇ ಆಚಾರಗಳನ್ನು ಬದಲಾವಣೆ ಮಾಡಿ, ಜನರ ಸಾಂಸರ್ಗಿಕ ಸ್ಥಿತಿಯನ್ನು ತಿದ್ದುತ್ತಿದಾರೆ. ಈ ಬದಲಾವಣೆಗಳು ನಿಧಾನವಾಗಿ ಆಗುತ್ತಿರುವವು; ಬಹುಶಾ ನಿಧಾನವಾಗಿ ಆಗತಕ್ಕ ಬದಲಾವಣೆಗಳೇ ಶಾಶ್ವತವಾಗಿ ನಿಲ್ಲತಕ್ಕವುಗಳು. ಜಾತಿಯ ಒಳಪಂಗಡಗಳಲ್ಲಿ ಕೊಟ್ಟು ತರುವುದೂ, ವಿಧವಾ ಪುನರ್ವಿವಾಹಗಳೂ ಆಗಿಂದಾಗ್ಗೆ ನಡೆಯುತ್ತವೆ. ಸಹಪಙ್ಕ್ತಿಭೋಜನಕ್ಕೇನೋ ಜಾತಿಗಳೊಳಗೆ ಕಟ್ಟು ತಪ್ಪಿಹೋಯಿತೆಂದೇ ಹೇಳಬಹುದು. ಸ್ತ್ರೀವಿದ್ಯಾಭ್ಯಾಸವು ಹೆಚ್ಚು ಹೆಚ್ಚಾಗಿ ಹರಡುತ್ತಲಿದೆ. ಹೀಗೆಯೇ ಇನ್ನೂ ಹಲವು ಬದಲಾವಣೆಗಳು ಅನೇಕ ಸ್ಥಳಗಳಲ್ಲಿ ಆಚರಣೆಗೆ ಬಂದರಾದೀತೆಂದು ಆಶಿಸಡುತ್ತೇವೆ. ಆಗ್ಗೆ ಈ ಶ್ರೇಯಸ್ಕರವಾದ ಕಾರ್ಯಭಾಗವು ಜಾಗ್ರತೆಯಿಂದಲೂ ಸಾರ್ಥಕವಾಗಿಯೂ ಎಲ್ಲಾ ಕಡೆಗಳಲ್ಲೂ ಹರಡಿಕೊಂಡೀತೆನ್ನುವುದಕ್ಕೆ ಸಂಶಯವಿಲ್ಲ.

ಸಭೆಗಳಲ್ಲಿ ನಡೆದಿರುವ ತೀರ್ಮಾನಗಳಿಗೆ ಸಮ್ಮತಿ ಹಾಕಿರತಕ್ಕ ಮಹನೀಯರುಗಳೆಲ್ಲಾ ಈ ಹೊಸ ವರುಷದಲ್ಲಿ ಆ ತೀರ್ಮಾನಗಳ ಪ್ರಕಾರ ಆಚರಿಸುವುದಕ್ಕೆ ತಮ್ಮ ಕೈಲಾಗುವ ಮಟ್ಟಿಗೂ ಸಾಹಸಪ್ರಯತ್ನಗಳನ್ನು ಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ. ದೇಶದ ಶ್ರೇಯಸ್ಸಿಗೆ ಇದೇ ಸುರಕ್ಷಿತವಾದ ರಾಜಮಾರ್ಗವು.

ಹೊಸ ವರುಷದ ಬಿರುದುಗಳು.

ಕಳೆದ ಗುರುವಾರ ದೆಹಲಿ ನಗರದಲ್ಲಿ ಪ್ರಕಟಮಾಡಲ್ಪಟ್ಟ ಈ ಹೊಸ ವರುಷದ ಬಿರುದುಗಳಲ್ಲಿ ನಮ್ಮ ಸಂಸ್ಥಾನಕ್ಕೆ ನಾಲ್ಕು ದೊರಕಿದವೆಂದು ತಿಳಿಸಲು ಸಂತೋಷವಾಗಿದೆ. ಮೈಸೂರು ಸಂಸ್ಥಾನದ ರಾಜ್ಯಭಾರದ ಕೌನ್ಸಿಲ್‌ನಲ್ಲಿ ಮೆಂಬರಾಗಿದ್ದುಕೊಂಡು ಬಹಳ ಅನುಭವದಿಂದಲೂ ಶ್ಲಾಘ್ಯವಾಗಿಯೂ ನೌಕರಿ ಮಾಡುತ್ತಾ ಬಂದಿರುವ ಮ|| ಎಚ್. ವಿ. ನಂಜುಂಡಯ್ಯ ಎಂ. ಎ., ಎಂ. ಎಲ್. ರವರಿಗೆ ತುಂಬಾ ಗೌರವವುಳ್ಳ ಸಿ. ಐ. ಇ. ಎಂಬ ಬಿರುದನ್ನು ಸಾರ್ವಭೌಮ ಸರ್ಕಾರದವರು ದಯಪಾಲಿಸಿದರು. ನಮ್ಮ ಸಂಸ್ಥಾನದಲ್ಲಿ ಕಂಟ್ರೋಲರಾಗಿದ್ದುಕೊಂಡು ಜಮಾಖರ್ಚು ಬಾಬುಗಳನ್ನು ಕ್ರಮಪಡಿಸಿ ತುಂಬಾ ಮಹತ್ತುಳ್ಳ ನೌಕರಿಯನ್ನು ಮಾಡುತ್ತಾ ಬಂದಿರುವ ಮ|| ಜ್ಞಾನಶರಣ ಚಕ್ರವರ್ತಿಯವರಿಗೆ ದಿವಾನ್ ಬಹದ್ದೂರ್ ಎಂಬ ಬಿರುದು ದೊರಕಿತು. ರೋಗಿಗಳ ಸಂಕಟಗಳನ್ನು ಪರಿಹರಿಸುವುದರಲ್ಲೂ ಶಸ್ತ್ರ ಚಿಕಿತ್ಸೆಯಲ್ಲೂ ಹೆಸರುವಾಸಿಯನ್ನು ಪಡೆದು ಇರುವ ಮ|| ಟಿ. ವಿ. ಆರುಮುಗಂ ಮುದಲಿಯಾರ್ರವರಿಗೂ, ಮೈಸೂರು ಸಂಸ್ಥಾನದಲ್ಲಿ ಕೋಆಪರೆಟಿವ್ ಸಂಘಗಳ ತತ್ವಗಳನ್ನು ಹರಡಿ ಸಂಘಗಳನ್ನು ಕಲ್ಪಿಸಿ ಪ್ರಜೆಗಳು ದುಬಾರಿ ಬಡ್ಡಿಯನ್ನು ತೆರುವುದನ್ನು ಬಹುಮಟ್ಟಿಗೆ ತಪ್ಪಿಸಬೇಕೆಂದು ಸಾಹಸಪಟ್ಟು, ಈಗ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯಾಗಿರುವ ಮ|| ಎಂ. ಶಾಮರಾವ್, ಎಂ. ಎ. ರವರಿಗೂ ರಾವ್ ಬಹದ್ದೂರ್ ಎಂಬ ಬಿರುದು ಬಂದಿರುತ್ತದೆ.

ಮೇಲ್ಕಂಡ ದೊಡ್ಡ ಮನುಷ್ಯರಿಗೆ ಈ ಬಿರುದುಗಳು ದೊರಕಿದ್ದಕ್ಕಾಗಿ ಸಕಲ ಪ್ರಜೆಗಳ ಕೂಡ ನಾವೂ ಸಂತೋಷಪಟ್ಟು ಅವರು ಬಹುಕಾಲ ಪ್ರಜಾ ಹಿತಕಾರ್ಯಗಳನ್ನು ಮಾಡುತ್ತಾ ಬಂದು ಇನ್ನೂ ಹೆಚ್ಚಿನ ಘನತೆಗಳನ್ನು ಸಂಪಾದಿಸಿಕೊಳ್ಳುವಂತಾಗಲೆಂದು ಹಾರೈಸುತ್ತೇವೆ.

ಭಕ್ತನಾಗುವುದು ಹೇಗೆ?

ಮಾನವ ಜೀವಮಾನವು ಅನೇಕ ಶಾಖೆಗಳುಳ್ಳದಾಗಿರುತ್ತದೆ. ಮೊದಲನೆಯದಾಗಿ ಮನುಷ್ಯನಿಗೆ ಒಂದು ದೇಹವು ಇರುತ್ತದೆ. ಈ ವಿಷಯದಲ್ಲಿ ಅವನಿಗೂ ಮೃಗಗಳಿಗೂ ಯಾವ ವ್ಯತ್ಯಾಸವಾದರೂ ಇರುವುದಿಲ್ಲ. ಮೃಗಗಳು ಹೇಗೋ ಹಾಗೆಯೇ ಮನುಷ್ಯನೂ ಉಣ್ಣುತ್ತಾನೆ, ಕುಡಿಯುತ್ತಾನೆ, ಸಂಚರಿಸುತ್ತಾನೆ, ಮಲಗುತ್ತಾನೆ. ಇಂತಹ ಜೀವಮಾನವು ಕಷ್ಟಕರವಾದುದಲ್ಲ. ಇವರಲ್ಲಿರುವ ಒಂದೇ ಕಷ್ಟವೇನೆಂದರೆ ಉದರಪೋಷಣೆಮಾಡಿಕೊಳ್ಳುವುದೇ.

ಇದು ಮಾತ್ರವಲ್ಲದೆ ಮನುಷ್ಯನು ಮಾತನಾಡುವುದಕ್ಕೂ, ವಿದ್ಯಾಭ್ಯಾಸ ಮಾಡುವುದಕ್ಕೂ, ಕಲಿಯುವುದಕ್ಕೂ ಸಮರ್ಥನಾಗಿರುತ್ತಾನೆ. ಮೃಗಗಳಿಗೆ ಇವು ಅಸಾಧ್ಯ. ಅವನ ಬುದ್ಧಿಯು ವೃದ್ಧಿಯಾಗಬಲ್ಲದು. ಅವನು ತನ್ನ ಬುದ್ಧಿಯ ಶಕ್ತಿಗಳನ್ನು ಉಪಯೋಗಿಸಿ, ಅತ್ಯಂತ ಕಷ್ಟಕರವಾದ ವಿಷಯಗಳನ್ನು ಪರಿಶೋಧಿಸಿ, ತಿಳಿದುಕೊಂಡು, ಅದರಲ್ಲಿ ತುಂಬಾ ಸಂತೋಷಪಡಬಲ್ಲನು. ಅವನು ಭೂಮಂಡಲದಲ್ಲಿಯೂ ವಾಯುಮಂಡಲದಲ್ಲಿಯೂ ಆಕಾಶಮಂಡಲದಲ್ಲಿಯೂ ದೇವರ ಕಾರ್ಯಗಳ ಮಹತ್ವವನ್ನೂ ಸೌಂದರ್ಯವನ್ನೂ ಕಂಡು ಹರ್ಷಿತನಾಗಬಲ್ಲನು. ಅವನು ತನ್ನ ಬುದ್ಧಿಕುಶಲತೆಯಿಂದ ಈ ಸುಖಗಳನ್ನೆಲ್ಲಾ ಅನುಭವಿಸ ಸಮರ್ಥನಾಗಿದ್ದಾಗ್ಯೂ ಭಕ್ತಿ ಇಲ್ಲದವನಾಗಿರಬಹುದು.

ಇದು ಮಾತ್ರವಲ್ಲದೆ ಒಬ್ಬನು ಯಥಾರ್ಥವಂತನಾಗಿಯೂ ಸತ್ಯಸಂಧನಾಗಿಯೂ ತನ್ನ ಬಂಧುಮಿತ್ರರುಗಳಿಗೆ ಸಲ್ಲಿಸಬೇಕಾದ ಧರ್ಮಗಳನ್ನು ತಪ್ಪದೆ ಸಲ್ಲಿಸುತ್ತಾ ಬರುವವನಾಗಿಯೂ ಇರಬಹುದು. ಜನಗಳು ಅವನ ಯಥಾರ್ಥತ್ವವನ್ನೂ ಸತ್ಯತೆಯನ್ನೂ ನೋಡಿ ಅವನಲ್ಲಿ ನಂಬಿಕೆಯಿಡಬಹುದು. ಹೀಗಿದ್ದಾಗ್ಯೂ ಅವನು ಭಕ್ತಿರಹಿತನಾಗಿರಬಹುದು.

ಒಬ್ಬ ಮನುಷ್ಯನು ಎಷ್ಟರ ಮಟ್ಟಿಗೆ ಉತ್ತಮನಾಗಿ ಜೀವಿಸುವುದು ಸಾಧ್ಯವಾಗಿರುತ್ತದೋ ಅಷ್ಟರ ಮಟ್ಟಿಗೆ ಅವನು ಜೀವಿಸಬೇಕಾದರೆ, ಅವನು ದೇವರ ಸಂಗಡ ಅನ್ಯೋನ್ಯವಾಗಿ ಜೀವಿಸಬೇಕಾಗಿದೆ. ಅವನ ಜೀವಮಾನಕ್ಕೂ ಅದೃಶ್ಯವಾದುವುಗಳಿಗೂ ಸಂಬಂಧವು ಇರಬೇಕು. ದೇವರು ಒಬ್ಬ ಮನುಷ್ಯನಲ್ಲಿ ಬಂದು ಅವನ ಮನೋವಾಕ್ಕಾಯಗಳನ್ನು ಕ್ರಮಪಡಿಸಿ, ಅವನನ್ನು ನಡಿಸುತ್ತಾ ಬರುವನಾದರೆ, ಅಂಥವನು ಸನ್ಯಾಸಿಯಾಗಿ, ಬಂಧು ಮಿತ್ರಾದಿಗಳನ್ನು ತೊರೆದು ಬಿಟ್ಟು, ಎಲ್ಲಾ ತರದ ದೇಹದಂಡನೆಗಳನ್ನನುಭವಿಸುತ್ತಾ, ಗೊತ್ತು ಗುರಿ ಕೂಡ ಇಲ್ಲದೆ ಅಲೆದಾಡುತ್ತಾ ಇರುವುದಿಲ್ಲ. ಆದರೆ ಒಬ್ಬ ಮನುಷ್ಯನು ದೇವರನ್ನು ತಿಳಿದು, ಆತನನ್ನು ಪ್ರೀತಿಸಿ, ಆತನಿಗೆ ವಿಧೇಯನಾದರೆ, ಆವನು ಭಕ್ತನಾಗುತ್ತಾನೆ.

ಅವನು ಯಥಾರ್ಥವಾಗಿ ದೇವರನ್ನು ತಿಳಿದು, ಪ್ರೀತಿಸಿ, ಆತನಿಗೆ ವಿಧೇಯನಾಗಿ ನಡೆದುಕೊಳ್ಳುವವನಾದರೆ, ದೇವರು ತನಗೆ ಕೊಟ್ಟಿರುವ ದೇಹದ ವಿಷಯ ಚಿಂತಪಟ್ಟು ಅದನ್ನು ದೃಢವಾಗಿಯೂ ಆರೋಗ್ಯವುಳ್ಳುದಾಗಿಯೂ ಕಾಪಾಡಿಕೊಳ್ಳುತ್ತಾ ಬರುವನು. ಅವನು ತನ್ನ ಬುದ್ಧಿ ಕೌಶಲ್ಯವನ್ನು ತನ್ನ ಶಕ್ತಿಯಿರುವಷ್ಟರ ಮಟ್ಟಿಗೆ ಉಪಯೋಗಿಸಿ, ಈ ಸುಂದರವಾದ ಮತ್ತು ವಿಶಾಲವಾದ ಲೋಕದಲ್ಲಿ ತನ್ನ ಅನುಕೂಲಕ್ಕಾಗಿ ದೇವರು ಒದಗಿಸಿ ಕೊಟ್ಟಿರುವ ಎಲ್ಲವುಗಳನ್ನು ನೋಡಿ ಸಂತೋಷ ಪಡುವನು. ಅವನು ಅನುತಾಪದಿಂದಲೂ ಕಾರುಣ್ಯದಿಂದಲೂ ತುಂಬಿದವನಾಗಿ, ನೆರೆಹೊರೆಯವರಿಗೆ ತನ್ನ ಕೈಲಾಗುವ ಎಲ್ಲಾ ಸತ್ಕಾರ್ಯಗಳನ್ನು ಮಾಡುತ್ತಾ ಬರುವನು. ಅವನು ದೈನ್ಯಭಾವದಿಂದ ದೇವರ ಆಜ್ಞೆಯನ್ನು ಶಿರಸಾವಹಿಸಿ ನಡೆಯುತ್ತಾ ತನ್ನ ಸುತ್ತುಮುತ್ತಲು ಇರುವವರೆಲ್ಲರಿಗೆ ಸುಪ್ರೇರಣೆಯನ್ನು ಹುಟ್ಟಿಸುತ್ತಾ ಬರುವನು.

ಅವನು ಹೀಗೆ ಜೀವಿಸಬೇಕಾಗಿದ್ದರೆ, ಅವನು ದೇವರಲ್ಲಿ ದೃಢವಾದ ನಂಬಿಕೆ ಇಟ್ಟಿರಬೇಕು. ಅದೃಶ್ಯವಾದುವುಗಳ ಸಹಾಯದಿಂದ ನಾವು ಹೀಗೆ ಜೀವಿಸಬಹುದೇ ಹೊರತು ದೃಶ್ಯವಾದುವುಗಳ ಸಹಾಯದಿಂದ ಹೀಗೆ ಜೀವಿಸಲಾರೆವು. ನಾವು ದೇವರಲ್ಲಿ ನಂಬಿಕೆ ಇಡಬೇಕು. ಆಗ ಆತನು ಬಂದು, ನಮ್ಮನ್ನು ನಡಿಸಿ, ನಮಗೆ ಸಹಾಯಮಾಡುವನು. ದೇವರು ನಮ್ಮನ್ನು ಹೀಗೆ ನಡಿಸಿ, ನಮಗೆ ಸಹಾಯಮಾಡುತ್ತಾನೆಂಬುದು ಯೇಸು ಕ್ರಿಸ್ತನ ಬೋಧನೆಯಿಂದಲೂ ಮಾದರಿಯಿಂದಲೂ ನಮಗೆ ತಿಳಿದು ಬರುತ್ತದೆ. ದೇವರು ಒಬ್ಬ ಮನುಷ್ಯನನ್ನು ಹೇಗೆ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅವನ ಪಾಪದ ಮಲಿನತ್ವದಿಂದ ಅವನನ್ನು ಶುದ್ಧೀಕರಿಸಿ, ಭಕ್ತನಾಗುವಂತೆ ಮಾಡುತ್ತಾನೆಂದು ಆತನು ನಮಗೆ ತೋರಿಸಿಕೊಟ್ಟಿರುತ್ತಾನೆ. ಯೇಸು ಕ್ರಿಸ್ತನು ಒಬ್ಬ ಸನ್ಯಾಸಿಯಾಗಿರಲಿಲ್ಲ. ಅಥವಾ ಆತನು ಲೋಕಭೋಗಿಯಾಗಿಯೂ ಇರಲಿಲ್ಲ. ಆತನು ಪರಲೋಕದಲ್ಲಿರುವ ತನ್ನ ತಂದೆಯ ಚಿತ್ತಾನುಸಾರವಾಗಿ ಜೀವಿಸಿ, ಎಲ್ಲಾ ಮನುಷ್ಯರಿಗೂ ಉಪಕಾರ ಮಾಡುತ್ತಾ ಸಂಚರಿಸಿದನು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ; ಮತ್ತು ನಮ್ಮ ಚಂದಾದಾರರಿಗೆ ಹೊಸ ವರುಷದಲ್ಲಿ ಶ್ರೇಯಸ್ಸುಂಟಾಗಲೆಂದು ಬಯಸಿ ಈ ಪತ್ರಿಕೆಯ ಕೂಡ ಬಹು ನೇತ್ರಾನಂದಕರವಾದ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಕಳುಹಿಸಿರುವೆವು. ಈ ತಿಂಗಳ ಆಖೈರಿನೊಳಗಾಗಿ ಚಂದಾದಾರರಾಗತಕ್ಕವರಿಗೆಲ್ಲಾ ಈ ಸುಂದರವಾದ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಕೆಲವು ಪ್ರತಿಗಳು ಮಾತ್ರ ಉಳಿಯುವುದರಿಂದ ಮೊದಲು ಚಂದಾ ಕಟ್ಟಿದವರಿಗೆ ಕ್ಯಾಲೆಂಡರು ದೊರಕುವವು.

* * *

ರಾಜಧಾನಿಯ ಕಾರಂಜಿಕೆರೆ ಕೆಳಗೆ ಇರುವ ತೋಟಗಳಲ್ಲಿ ಬಹು ಭಾಗವನ್ನೆಲ್ಲಾ ಕೊಂಡುಕೊಂಡು ಖಾಸಾ ಬಂಗಲೆ ಮತ್ತು ಜೂ ತೋಟದೊಳಕ್ಕೆ ಸೇರಿಸಿಕೊಳ್ಳುವ ಏರ್ಪಾಡು ನಡೆದಿದೆ.

* * *

ಇದೇ ಜನವರಿ ತಾ 15 ರ ಲಾಗಾಯತು ಮೈಸೂರು ಸಂಸ್ಥಾನಕ್ಕೆ ಆಮದಾಗುವಂಥಾ ಭಂಗೀಗೆ 80 ತೊಲಾ ಸೇರಿಗೆ 3 ರೂಪಾಯಿನಂತೆ ಸುಂಕ ವಸೂಲ್ಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರುವರು.

* * *

ರಾಜಧಾನಿಯ ಕರ್ಸನ್ ಪಾರ್ಕಿನ ಪೂರ್ವ ಬಾಗಿಲ ಹೊರಪಾರ್ಶ್ವದಲ್ಲಿ ಕಾಮಗಾರಿಯನ್ನು ಮಾಡಿಸಿ ಹೊಸ ಚೌಕವನ್ನು ಕಟ್ಟಿಸುವುದಕ್ಕೆ ಒಟ್ಟು 21,1?? ರೂಪಾಯಿ ಖರ್ಚಾದದ್ದನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

* * *

ಶ್ರೀಮನ್ ಮಹಾರಾಜರವರು ಅರಮನೆಯ ರಾಣಿವಾಸದವರ ಸಮೇತ ತಾ. 15 ನೇ ಸೋಮವಾರ ಬೆಂಗಳೂರಿಂದ ಚಿಕ್ಕೈಸಿ ಕಲ್ಹತ್ತಿಗಿರಿ, ಬಾಬಾಬುಡನ್ ಗಿರಿ, ಮಾರಿಕಣಿವೆ ತಲಾವು ಮುಂತಾದ ಭಾಗಗಳಲ್ಲಿ ಸಂಚಾರ ಮಾಡುವವರಾಗಿದಾರೆ.

* * *

ಶ್ರೀ ಶೃಂಗೇರಿ ಸಚ್ಚಿದಾನಂದ ಸರಸ್ವತೀ ಸಭೆಯವರು ಪುರಜನರ ಕೂಟವನ್ನು ನಡಿಸಿ, ಭಾರತೀಯರಿಗೆ ದಕ್ಷಿಣ ಆಫ್ರಿಕದಲ್ಲಿ ಪ್ರಾಪ್ತವಾಗಿರುವ ಕಷ್ಟದೆಸೆಯನ್ನು ವಿವರಿಸಿ, ರಿಲೀಫ್ ಫಂಡಿಗೆ ಸುಮಾರು 200 ರೂಪಾಯಿ ಚಂದಾ ಕೂಡಿಸಿದರೆಂದು ಕೇಳುತ್ತೇವೆ.

* * *

ದಾವಣಗೆರೆ ಮುಸಾಫರಖಾನೆಯಲ್ಲಿ ಸಬ್ ರೆಜಿಸ್ಟ್ರಾರ್ ಆಫೀಸು ಮಾಡುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು 5 ರೂಪಾಯಿ ಬಾಡಿಗೆ ವಸೂಲ್ಮಾಡಬೇಕೆಂದು ಗೊತ್ತುಮಾಡಿದಾರೆ. ಪರಸ್ಥಳಕರು ಹೋದರೆ ಅಲ್ಲಿ ಇಳಿಯುವುದಕ್ಕೆ ಬೇರೆ ಸ್ಥಳವಸತಿ ಇರಬಹುದೆಂದು ನಿರೀಕ್ಷಿಸುತ್ತೇವೆ.

* * *

ಮೈಸೂರು ಕಾಳಮ್ಮನ ಗುಡಿ ಬೀದಿ ಬುಕ್ ಬೈಂಡರ್ ಮ|| ಎಂ. ಎಸ್. ಶ್ರೀಕಂಠಯ್ಯನವರು ಸುಂದರವಾದ ಚಿತ್ರಗಳುಳ್ಳ ಹೊಸ ವರುಷದ ಕ್ಯಾಲೆಂಡರನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇದರ ಕ್ರಯ 2½ ಆಣೆ. ಇದಲ್ಲದೆ ಮದರಾಸಿನ ಓಕ್ಸ್ ಕೆಂಪನಿಯವರು ಭಂಗಾರದ ಗಿಲ್ಟುಮಾಡಿದ ಬಹು ಸೊಗಸಾದ ಚಿತ್ರಗಳುಳ್ಳ ಮೂರು ತರಹಾ ಕ್ಯಾಲೆಂಡರುಗಳನ್ನು ಕಳುಹಿಸಿರುವರು.

* * *

ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಪ್ರಜೆಗಳ ಮುಖಂಡರು ಸೇರಿ ತಾಲ್ಲೂಕಿನ ಅಭಿವೃದ್ಧಿಗಾಗಿ ಒಂದು ಕಮಿಟಿಮಾಡಿಕೊಂಡು, ತಮ್ಮಲ್ಲೇ ಚಂದಾ ಹಾಕಿ 100 ರೂಪಾಯನ್ನು ಕೂಡಿಸಿದರು. ಇದನ್ನು ಡೆಪ್ಯುಟಿ ಕಮಿಷನರವರು ಸರ್ಕಾರದವರಿಗೆ ತಿಳಿಯಪಡಿಸಿ ಅವರಿಗೆ ಸರ್ಕಾರದಿಂದ 100 ರೂಪಾಯಿ ಸಹಾಯ ದ್ರವ್ಯವನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದರ ಮೇಲೆ ಸರ್ಕಾರದವರು ಅದರಂತೆ ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಬೆಂಗಳೂರು ಪೇಟೆಯಲ್ಲಿ ಭಾಗೀರಥಮ್ಮ, ಗೌರಮ್ಮ ಎಂಬಿಬ್ಬರು ಬ್ರಾಹ್ಮಣ ವಿಧವೆಯರು ಮ. ಬಿ. ಹನುಮಪ್ಪನವರ ಜವಳಿ ಅಂಗಡಿಗೆ ಹೋಗಿ ವ್ಯಾಪಾರ ಕೊಂಡುಕೊಳ್ಳುವುದಾಗಿ ನಟಿಸಿ ಎರಡು ಸೀರೆಗಳನ್ನು ಅಪಹರಿಸಿದರೆಂದು ಮೊಕದ್ದಮೆ ಆಗಿ ರುಜುವಾತಾದ್ದರಿಂದ ಕಳೆದ ಸೋಮವಾರ ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ ತಲಾ ಕೋರ್ಟು ಬರಖಾಸ್ತಾಗುವ ತನಕ ಸಜವನ್ನೂ, 50 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಅವರಿಬ್ಬರೂ ಸಾಯಂಕಾಲದ ತನಕ ಕೋರ್ಟಿನ ಸಬರ್ಂಧದಲ್ಲಿದ್ದು ಜುಲ್ಮಾನೆ ಪಾವತಿಮಾಡಿ ಹೊರಟುಹೋದರು.

* * *

ಟಿ. ನರಸೀಪುರದ ತಾಲ್ಲೂಕು ಬನ್ನೂರಿನಲ್ಲಿ ಸುಮಾರು ಒಂದೂವರೆ ವರುಷದ ಹಿಂದೆ ಒಕ್ಕಲಿಗರಿಗೂ ಬೆಸ್ತರಿಗೂ ದೊಂಬಿ ಕಲಹ ನಡೆದಿದ್ದರಲ್ಲಿ ಪೋಲೀಸಿನವರು 30 ಮಂದಿ ಒಕ್ಕಲಿಗರಮೇಲೂ 18 ಮಂದಿ ಬೆಸ್ತರಮೇಲೂ ಮೊಕದ್ದಮೆ ಮಾಡಿದ್ದರು. ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ ಕಳೆದ ಬುಧವಾರ ಜಡ್ಜಮೆಂಟು ಹೇಳಿದರು. ಒಕ್ಕಲಿಗರ ಪೈಕಿ 23 ಮಂದಿಗೆ ತಲಾ 6 ತಿಂಗಳೂ, ಇಬ್ಬರಿಗೆ ಮೂರು ತಿಂಗಳಂತೆಯೂ, 18 ಮಂದಿ ಬೆಸ್ತರಿಗೆ ತಲಾ 2 ತಿಂಗಳಂತೆಯೂ ಕಠಿಣ ಸಜಾ ವಿಧಿಸಲಾಯಿತು. ಅವರನ್ನೆಲ್ಲಾ ಬಲವಾದ ಪೋಲೀಸ್ ಬಂದೋಬಸ್ತುವಾರಿ ಇಟ್ಟು ಅಲ್ಲಿಂದ ರಾಜಧಾನಿಯ ಬಂದೀಖಾನೆಗೆ ಕಳೆದ ಗುರುವಾರ ಕರೆದುಕೊಂಡು ದಾಖಲ್ ಮಾಡಿದರೆಂದು ತಿಳಿಯುತ್ತೇವೆ.

* * *

ಕಳೆದ ತಾ. ೨೮ ನೇ ಬಾನುವಾರ ಮಧ್ಯಾಹ್ನ ಚಿಕ್ಕಬಳ್ಳಾಪುರದ ಸ್ಕೂಲ್ ಮಂದಿರದೊಳಗೆ ಮ|| ಬಿ. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ಬಹು ಮಂದಿ ಜೋಡಿದಾರ್ರು, ಇನಾಂದಾರರು, ಶ್ರೋತ್ರಿಯಂದಾರರೇ ಮೊದಲಾದ ಜಮೀನ್‌ದಾರರು ಒಂದು ಸಭೆಯನ್ನು ನಡಿಸಿದರು. ಇನಾಂದಾರರಿಗೂ ಅವರ ರೈತರಿಗೂ ಇರುವ ಕಷ್ಟ ಅನನುಕೂಲಗಳನ್ನು ಕುರಿತು ಅಧ್ಯಕ್ಷರು ಸ್ವಲ್ಪ ಮಟ್ಟಿಗೆ ವಿವರಿಸಿದರು. ಬಳಿಕ ಇತರ ಇನಾಂದಾರರೂ ಉಪನ್ಯಾಸಗಳನ್ನು ಮಾಡಿದರು. ಕಡೆಗೆ ಮೇ ತಿಂಗಳ ತಾ. 7 ನೇ ಗುರುವಾರ ಬೆಂಗಳೂರಿನಲ್ಲಿ ಇನಾಂದಾರರ ಮಹಾಸಭೆಯು ನಡೆಯತಕ್ಕದ್ದೆಂದು ತೀರ್ಮಾನವಾಗಿ ಅದರ ಏರ್ಪಾಡಿಗೆ ಒಂದು ಕಮಿಟಿಯು ನೇಮಕವಾಯಿತು. ಈ ಕಮಿಟಿಗೆ ಮ|| ಬಿ. ಸೂರ್ಯನಾರಾಯಣರಾಯರು ಪ್ರೆಸಿಡೆಂಟರು; ಮ|| ಇ. ರಾಮರಾಯರೂ ಮ|| ರಾಮಯ್ಯ ವರಾಚಾರ್ರು, ಮ|| ಬಿ. ಸಿ. ನಂಜುಂಡಯ್ಯನವರೂ ಜಾಯಿಂಟ್ ಸೆಕ್ರೆಟರಿಗಳಾಗಿದಾರೆ.

* * *

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಅಲ್ಬರ್ಟ್ ವಿಕ್ಟರ್ ಹಾಲ್ ಎಂಬ ಕಟ್ಟಡದೊಳಗೆ ನಮ್ಮ ಮಹಾರಾಜರವರ ಕೃಪಾಪೋಷಣೆಯಿಂದ ನಡೆಯುವ ಕುಸ್ತಿಗಳ ಕೊನೆಯ ಕಾಳಗವು (ಫೈನಲ್) ನಡೆಯಿತು. ಬ್ರಿಟಿಷ್ ರೆಸಿಡೆಂಟರವರೂ, ಶ್ರೀಮದ್ಯುವರಾಜರವರೂ ದಯಮಾಡಿದ್ದರು. ಮೈಸೂರು

...ಮ್ಮಯ್ಯನಿಗೂ ಫಿಲಾರಿ ಸಾಬ್‌ಜಾನನಿಗೂ ಕುಸ್ತಿಯು ಸುಮಾರು 20 ನಿಮಿಷ ...ತನಕ ಬಹಳ ಕಠಿಣವಾಗಿ ನಡೆದು ಕಡೆಗೆ ತಿಮ್ಮಯ್ಯನು ಗೆದ್ದನು ನೋಟಕ ...ರೆಲ್ಲರಿಗೂ ಇದು ಅಪೂರ್ವವಾಗಿತ್ತು ಗೆದ್ದ ತಿಮ್ಮಯ್ಯನಿಗೆ ಯುವರಾಜರವರು ...ಯ ಜರಿಯ ಬೆಳ್ಳಿ ಬಟ್ಟೆಯನ್ನು ಬಹುಮಾನಕೊಟ್ಟರು, ಇದಲ್ಲದೆ ಶ್ರೀಮನ್ ಮಹಾರಾಜರವರು ದಯಪಾಲಿಸಿದ ನಗದು 1,000 ರೂಪಾಯಿ ಇನಾಮನ್ನು ...ಪ್ರೆಸಿಡೆಂಟರವರು ತಿಮ್ಮಯ್ಯನಿಗೆ ಕೊಟ್ಟರು ಸಾಬ್‌ಜಾನನಿಗೂ 150 ರೂಪಾಯಿ ನಗದು ಇನಾಂ ಸಿಕ್ಕಿತು ಸರ್ದಾರ್ ಗೋಪಾಲರಾವ್ ಅರಸಿನವರು ...ಗ ನಿಂತು ಈ ಕುಸ್ತಿಗಳನ್ನು ಬಹು ತೃಪ್ತಿಕರವಾಗಿ ನಡಿಸಿರುತ್ತಾರೆ

* * *

ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿದ್ದು ವರ್ಗಪಟ್ಟ ...ಟಿ ಹನುಮಂತರಾಯರಿಗೆ ಅವರ ಕಚೇರಿಯ ನೌಕರಮಾನ್ಯರುಗಳೆಲ್ಲಾ ...ಕಳೆದ ಭಾನುವಾರ ಬಹಳ ಪ್ರೀತಿ ಪೂರ್ವಕವಾದ ಔತನವನ್ನು ಮಾಡಿ ...ಕೃತಜ್ಞತೆಯನ್ನು ಪ್ರಕಾಶ ಪಡಿಸಿದರು ಈ ಔತನಕ್ಕೆ ಪ್ರೆಸಿಡೆಂಟರೂ ಮ್ಯುನಿಸಿಪಲ್ ಕೌನ್ಸಿಲರುಗಳೂ ಕರೆಸಲ್ಪಟ್ಟಿದ್ದರು ಭೋಜನಾನಂತರ ...ಗೀತವೂ, ಹರಿಕಥೆಯೂ, ಮ|| ಹನುಮಂತರಾಯರ ಗುಣ ಕಥನವೂ ...ನಂತರ ಸಾಯಂಕಾಲ ಎಲ್ಲರೂ ಕುಳಿತು ಫೋಟೋ ತೆಗಿಸಿದರು ಮೊನ್ನೆ ಮಂಗಳವಾರ ಸಾಯಂಕಾಲ ಪುರಜನರು ಟೌನ್ ಹಾಲ್ ಮಂದಿರದಲ್ಲಿ ಸೇರಿ ...ಹನುಮಂತರಾಯರಿಗೆ ಒಂದು ಎಂಟರ್‌ಟೇನ್‌ಮೆಂಟನ್ನು ಮಾಡಿ ...ಎಲ್ಲಾ ಕೋಮುಗಳ ಮತ್ತೂ ಕಸಬುಗಳ ಪ್ರತಿನಿಧಿಗಳೂ ಹಾಜರಾ ...ದ್ದರು ವಿದ್ವಾನ್ ಸುಬ್ಬಣ್ಣನವರ ವೀಣಾಗಾನವೂ, ಮ|| ಚಿಕ್ಕರಾಮರಾ ...ಯರ ಹಾಡುಗಾರಿಕೆಯೂ ಮನೋಹರವಾಗಿ ನಡೆದ ಮೇಲೆ ರಾಜಧಾನಿಯಲ್ಲಿ ಸುಮಾರು ಮೂರು ತಿಂಗಳಿಂದಲೂ ನಾಟಕಗಳನ್ನಾಡುತ್ತಿರುವ ಗುಬ್ಬಿಯ ಶ್ರೀ ಚನ್ನಬಸವೇಶ್ವರ ಸ್ವಾಮಿ ಕಂಪನಿಯವರು ಪ್ರಮೀಳಾರ್ಜುನೀಯ ನಾಟಕ ...ಲ್ಲಿ ಎರಡು ಅಂಕಗಳನ್ನು ಶ್ಲಾಘ್ಯತರವಾಗಿ ಅಭಿನಯಿಸಿ ಸಭೆಯನ್ನು ...ನಂದ ಪಡಿಸಿದರು ಬಳಿಕ ಮೌಲ್ವಿ ದರ್ವೇಷ್ ಮೀರ್ ಸಾಹೇಬರೂ, ಮ|| ...ವೆಂಕಟಕೃಷ್ಣಯ್ಯನವರೂ ಮ|| ಟಿ ಹನುಮಂತರಾಯರ ಗುಣ ಕಥನವನ್ನು ಮಾಡಿದರು ಮ|| ಹನುಮಂತರಾಯರ ಸಮಯೋಚಿತವಾದ ಪ್ರತ್ಯು ...ರವನ್ನು ಕೇಳಿ, ಪುರಜನರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ...ಲ್ಲಿಸಿದರು ಮ|| ಟಿ ಹನುಮಂತರಾಯರು ನೆನ್ನೆ ಮೆಯಿಲ್ ಗಾಡಿಯಲ್ಲಿ ರಾಜಧಾನಿಯಿಂದ ಪ್ರಯಾಣ ಮಾಡಿದರು ಅವರು ತಾ 10 ನೇ ಶನಿವಾರ ...ಗಿ ಕುಣಿಗಲ್ ತಾಲ್ಲೂಕ್ ಅಮಲ್ದಾರಿ ಕೆಲಸದ ಛಾರ್ಜನ್ನು ವಹಿಸಿ ಕೊಳ್ಳುವರೆಂದು ತಿಳಿಯುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ

ಜಗಳೂರು ಮ್ಯುನಿಸಿಪಲ್ ಸರಹದ್ದಿನೊಳಗೆ ಬಲಾತ್ಕರಿಸಿ ಶಿಡುಬುಹಾಕ ಬೇಕೆಂಬ ಕಾನೂನನ್ನು 1914 ನೇ ಜನವರಿ ತಾ 1 ರಿಂದ ಒಂದುವರುಷದ ತನಕ ಜಾರಿಗೆ ತರಲಾಗಿದೆ

ಕೋಲಾರ, ಶ್ರೀನಿವಾಸಪುರ, ಮಾಲೂರು ಟವನ್‌ಗಳ ಮ್ಯುನಿಸಿಪಲ್ ಸರಹದ್ದಿನೊಳಗೆ ಬಲಾತ್ಕರಿಸಿ ಶಿಡುಬುಹಾಕುವ ಕಾನೂನನ್ನು 1914 ನೇ ಜನವರಿ ತಾ 1 ರಿಂದ ಒಂದು ವರುಷ ಜಾರಿಗೆ ತಂದಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆ ಚಾರ್ಜನ್ನು ವಹಿಸಿರುವ ಅ|| ಕಮಿಷನರ್ ಮಿ|| ಟಿ ಹನುಮಂತರಾಯರಿಗೆ ಜನವರಿ ತಾ 7 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ತಿಂಗಳ ರಜಾ ಕೊಟ್ಟಿದೆ ಅಮಲ್ದಾರ್ ಮಿ|| ಸಿ ನಾರಾಯಣರಾಯರನ್ನು ಅ ಕಮಿಷನರಾಗಿ ಬದಲಿ ನೇಮಿಸಿ ಶಿವಮೊಗ್ಗಾ ಖಜಾನೆ ಛಾರ್ಜಿಗೆ ವರ್ಗಮಾಡಿದೆ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಮಿ|| ಬಿ ಎಸ್ ...ರಾಯರಿಗೆ ಡಿಸೆಂಬರ್ ತಾ 14 ರಿಂದ ನಾಲ್ವತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಸ್ಪೆನ್ಸರುಗಳ ಚೀಫ್ ಕಾಮಂಡಾಂಟರಾದ ಕರ್ನಲ್ ಜೆ ದೇಶರಾಜೆ ಅರಸಿನವರಿಗೆ ಕೊಟ್ಟಿರುವ ಇಪ್ಪತ್ತೊಂದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ಮೂರು ವಾರಗಳ ಕಾಲ ಜಾಸ್ತಿ ಮಾಡಲಾಗಿದೆ

ಅ|| ಕಂಟ್ರೋಲರ್ ಮಿ|| ಬಿ ಶ್ರೀನಿವಾಸಯ್ಯಂಗಾರ್ರಿಗೆ ನೊವೆಂಬರ್ ತಾ 27 ರಿಂದ ಎರಡು ತಿಂಗಳು ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅಸಿಸ್ಟೆಂಟ್ ಎಗ್ಜಾಮಿನರ್ ಮಿ|| ಎಂ ಎ ರಂಗಾಚಾರ್ಯರು ಅ|| ಕಂಟ್ರೋಲರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮಿ|| ಎಚ್ ಶ್ರೀನಿವಾಸರಾಯರನ್ನು ಜನವರಿ ತಾ 1 ರಿಂದ ಡೆಪ್ಯುಟಿ ಕಲೆಕ್ಟರ್ ವರ್ಗಕ್ಕೆ ಬಡ್ತಿ ಮಾಡಲಾಗಿದೆ

ಚನ್ನಪಟ್ಟಣದ ಅಮಲ್ದಾರ್ ಮಿ|| ಸಿ ಆರ್ ನಾರಾಯಣಸ್ವಾಮಿ ಮುದಲಿಯಾರ್ರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಮಿ|| ಎ ಎ ನಂಜಪ್ಪನವರನ್ನು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿ ಬದಲಿ ನೇಮಕಮಾಡಿದೆ

ಶ್ರೀಮನ್ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟನ ಜಮಾದಾರ್ ಶಿವರಾಂ ಸಿಂಗರನ್ನು 1 13 ನೇ ಸಪ್ಟಂಬರ್ ತಾ 10 ರಿಂದ 1 ನೇ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿ ಬಡ್ತಿ ಮಾಡಿರುತ್ತಾರೆ

ಸಬ್ ಅ ಇಂಜಿನಿಯರ್ ಮಿ|| ವೈ ಕೆ ರಾಮಚಂದ್ರರಾಯರನ್ನು ಶಿವಮೊಗ್ಗ ಡಿವಿಜನ್‌ನಿಂದ ರೈಲ್ವೆ ಇಲಾಖೆಗೆ ವರ್ಗಮಾಡಿದೆ

ಇಂಜಿನಿಯರ್ ಇಲಾಖೆಯಲ್ಲಿ ಹಾಸನ ಡಿವಿಜನನ್ನು ಉತ್ತರ ಸರ್ಕಲ್‌ನಿಂದ ದಕ್ಷಿಣ ಸರ್ಕಲಿಗೆ ವರ್ಗಮಾಡಿ ಸೇರಿಸಿರುತ್ತಾರೆ

ಮದ್ದಗಿರಿ ತಾಲ್ಲೂಕು ಅಮಲ್ದಾರ್ ಮಿ|| ಎಚ್ ಪಿ ಗಂಗಾಧರಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೇದಾರ್ ಮ|| ವಾಸುದೇವರಾಯರು ತಾಲ್ಲೂಕಿನ ಛಾರ್ಜ್ ವಹಿಸಿರತಕ್ಕದ್ದು

ಬಹುಮಾನ ವಿನಿಯೋಗವು

ಮಾಲೂರು ಟವನ್ ಬಾಲಿಕಾ ಪಾಠಶಾಲೆ

ಕಳೆದ ಮಾಹೆ 23 ನೇ ತಾ ಮಂಗಳವಾರ ಮಾಲೂರು ಟವನ್ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರಿಗೆ ಬಹುಮಾನ ಕೊಡುವುದಕ್ಕಾಗಿ ಪಾಠಶಾಲೆಯು ಅಲಂಕರಿಸಲ್ಪಟ್ಟಿತ್ತು ಅಮಲ್ದಾರ್ ಮ|| ಬಿ ಕೇಸರಸಿಂಗ್ ರವರು ಅಗ್ರಾಸನವನ್ನು ವಹಿಸಿದ್ದರು ಸಾಯಂಕಾಲ 4½ ಗಂಟೆಗೆ ಬಾಲಕಿಯರ ತಂದೆತಾಯಿಗಳೂ, ಸರ್ಕಾರಿಯ ಉದ್ಯೋಗಸ್ಥರೂ ಸಭೆಯನ್ನು ಅಲಂಕರಿಸಿದರು 5 ಗಂಟೆಗೆ ರೆವ್, ಎಫ್ ಎ ಸ್ಟೀವೆಲ್ ದೊರೆಯವರು ಪತ್ನಿ ಸಮೇತ ಪಾಠಶಾಲೆಗೆ ದಯಮಾಡಿಸಿದರು ಬಾಲಕಿಯರು ದೇವರ ಸ್ತೋತ್ರವನ್ನು ಪದ್ಯರೂಪವಾಗಿ ಹೇಳಿದ ತರುವಾಯ ನಾಲ್ಕು ಹುಡುಗಿಯರು ವಿದ್ಯಾವಿಚಾರವಾದ ಸಂಭಾಷಣೆಯನ್ನು ಮಾಡಿದರು ಇಬ್ಬರು ವಿದ್ಯಕ್ಕೂ ಐಶ್ವರ್ಯಕ್ಕೂ ಇರುವ ತಾರತಮ್ಯವನ್ನು ಕುರಿತು ಸಂಭಾಷಣೆಯನ್ನು ಬೆಳಸಿದರು ೩ ತರಗತಿಯವರಿಂದ ಬಂದು ಅಭಿನಯಗೀತವೂ, ಒಬ್ಬ ಹುಡುಗಿಯಿಂದ ಲಕ್ಷ್ಮೀ ಸ್ತೋತ್ರವೂ, ಇನ್ನೂ ಕೆಲವು ಅಭಿನಯಗೀತಗಳೂ, ಅಭಿನಯಕಥೆಗಳೂ ಹೇಳಿ ಸಭಿಕರ ಮನಸ್ಸು ಸಂತೋಷಪಡಿಸಿದರು ಮಹಾರಾಜರ ಪರವಾಗಿ ಮಂಗಳ ಹೇಳಿದ ತರುವಾಯ ಮ|| ಬಿ ಹೆಚ್ ಶ್ರೀನಿವಾಸರಾಯರು ಸ್ತ್ರೀ ವಿದ್ಯಾಭ್ಯಾಸದ ಪ್ರಯೋಜನವನ್ನು ಕುರಿತು ಒಂದು ಪ್ರಬಂಧವನ್ನು ಓದಿದರು ಹೆಡ್ ಮಿಸ್ಟ್ರೆಸ್ ಎ ಶೇಷಮ್ಮನವರು ಸ್ಕೂಲ್ ರಿಪೋರ್ಟನ್ನು ಓದಿದರು ಹೋದ ವರುಷಕ್ಕಿಂತ ಈ ವರುಷ 16 ಹುಡುಗಿಯರು ಹೆಚ್ಚಿರುವಂತೆ ಗೊತ್ತಾಯಿತು ಅಗ್ರಾಸನರು ಸ್ತ್ರೀವಿದ್ಯಾಭ್ಯಾಸವು ಆವಶ್ಯಕವೆಂತಲೂ, ಅದನ್ನು ಅಭಿವೃದ್ಧಿಗೆ ತರಬೇಕೆಂತಲೂ ಕೆಲವು ಮಾತುಗಳನ್ನು ಸಭಿಕರಿಗೆ ತಿಳಿಸಿದ ಬಳಿಕ ಸ್ಟೀವೆಲ್ ದೊರೆಸಾನಿಯವರು ಹುಡುಗಿಯರಿಗೆ ಬಹುಮಾನಗಳನ್ನು ದಯಪಾಲಿಸಿದರು ಮ್ಯಾನೇಜರ್ ಮ|| ಬಿ ಎ ಆರೋಗ್ಯಂ ಅಯ್ಯನವರು ಈ ಪಾಠಶಾಲೆಗಿರುವ ಕೆಲವು ಕೊರತೆಗಳನ್ನೂ, ಸ್ತ್ರೀವಿದ್ಯಾ ಪ್ರಯೋಜನವನ್ನೂ ಕೆಲವು ಮಾತುಗಳಲ್ಲಿ ತಿಳಿಸಿದರು ಮ|| ವ್ಯಾಸಾಚಾರ್ಯರೂ, ಮ|| ಎಲ್. ವೀರಾರೆಡ್ಡಿಯವರೂ ಒಂದೊಂದು ಭಾಷಣವನ್ನು ಹೇಳಿದರು ತರುವಾಯ ಬಾಲಕಿಯರಿಗೆ ಮಿಠಾಯಿ ಹಂಚಿದರು ಕೆಲವು ಬಾಲಕಿಯರು ಚಕ್ರವರ್ತಿಯವರ ಪರವಾಗಿ ಮಂಗಳವನ್ನು ಹಾಡಿದರು ಈ ಮಕ್ಕಳ ತಿಂಡಿ ಖರ್ಚಿಗಾಗಿ ನಮ್ಮ ಅಮಲ್ದಾರ್ರೂ, ಡಾಕ್ಟರವರೂ ದ್ರವ್ಯ ಸಹಾಯ ಮಾಡಿದರು. ತರುವಾಯ ಎಲ್ಲರಿಗೂ ಹೂವು ಗಂಧ ಕೊಟ್ಟು ಸಭೆ ಮುಕ್ತಾಯಮಾಡಲ್ಪಟ್ಟಿತು

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ಕಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ನಂಜುಂಡಪ್ಪ, ಕೊಂಡವಾಡಿ, ಬಾತ್ಮಿದಾರ್, ಬೇಲೂರು, ಚನ್ನಬಸಪ್ಪ, ಕುದೇರು, ವಸ್ತುಪ್ರದರ್ಶನ, ಚಿತ್ರದುರ್ಗ, ಅರ್ಕಸಾಲೆ ವೀರಾಚಾರಿ, ಚಿತ್ರದುರ್ಗ —ಈ ಬಾತ್ಮಿಗಳಲ್ಲಿ ವರ್ತಮಾನಗಳೇನೂ ಕಂಡುಬರುವುದಿಲ್ಲ —ಎಡಿ]

ಕರೆಸ್‌ಪಾಂಡೆನ್ಸ್.

ವಿಲಕ್ಷಣವಾದ ಮಗು

ಅಯ್ಯಾ,

ನಾನು ಈಗ್ಗೆ 8 ದಿನದಲ್ಲಿ ಗುಬ್ಬಿ ತಾಲ್ಲೂಕು ಅದಲಗೆರೆ ಎಂಬ ಗ್ರಾಮಕ್ಕೆ ಹೋಗಿರಲು ಅಲ್ಲಿ ನಾಯಕರ ಜಾತಿ ಒಬ್ಬ ಸ್ತ್ರೀಯು ಹೆತ್ತಿರುವ ಗಂಡುಶಿಶುವನ್ನು ನೋಡಿದೆನು ಅದು ಹುಟ್ಟಿ ಈಗ 8 ತಿಂಗಳು ತುಂಬಿ ಬಹಳ ಚೆನ್ನಾಗಿಯೂ ಚಟುವಟಿಕೆಯುಳ್ಳದ್ದಾಗಿಯೂ ಇದೆ ಇದಕ್ಕೆ ಉಭಯ ಪಾರ್ಶ್ವಗಳಲ್ಲಿರಬೇಕಾದ ಭುಜಗಳೆರಡೂ ತೋಳೂ ಇರುವದಿಲ್ಲ ಇದಕ್ಕೆ ಈಗ ಹಾಲು ಮುಂತಾದದ್ದನ್ನು ಇತರರು ಹಾಕುತ್ತಾರೆ ಮುಂದೆ ಇದು ಯಾವ ಕಾರ್ಯ ಮಾಡುವದಕ್ಕೂ ಬಾರದೇ ಜೀವಿಸುವದೇ ಕಷ್ಟವಾಗಿ ಕಾಣುತ್ತಿದೆ

ರಾಘವೇಂದ್ರರಾವ್

ವೈದ್ಯರ ಮಹಾಸಭೆಯು

ಅಯ್ಯಾ,

ಹಾಸನದ ಡಿಸ್ಟ್ರಿಕ್ಟು ಅರಕಲಗೂಡು ತಾಲ್ಲೋಕಿನಲ್ಲಿರುವ ಹಿಂದೂ ವೈದ್ಯರುಗಳು 1913ನೇ ಇಸವಿ ಡಿಸೆಂಬರ್ ತಾ 29ನೇ ಸೋಮವಾರದಲ್ಲು ಅರಕಲಗೂಡಿನಲ್ಲಿ ಸ್ಥಾಪಿತವಾಗಿರುವ ವೆದರಾಲ್ ಹಿಂದೂ ವೈದ್ಯಶಾಲೆಯಲ್ಲಿ ಸಭೆ ಸೇರಿ ಆಯುರ್ವೇದ ಹಿಂದೂ ವೈದ್ಯ ಸಂಬಂಧವಾಗಿ ಅನೇಕ ವಿಷಯಗಳನ್ನು ಚರ್ಚಿಸಿದರು ಈ ಮಹಾಸಭೆಗೆ ಅನೇಕ ದೊಡ್ಡ ಮನುಷ್ಯರೂ ಬಂದಿದ್ದರು ಈ ಸಭೆಗೆ ಶ್ರೀಮತ್ ಕಂಠೀರವ ಪೋಷಿತ ಆಯುರ್ವೇದ ವೈದ್ಯ ಕಾನ್ ಫರೆನ್ಸು ಎಂಬ ಹೆಸರನ್ನು ಕೊಟ್ಟರು ಆಯುರ್ವೇದೀಯ ವೈದ್ಯರು ಸೇರಿ ನಡಿಸಿದ ಸಭೆಯು ಈ ಪ್ರಾಂತ್ಯದಲ್ಲಿ ಇದೇ ಮೊದಲನೆಯದೆಂದು ತೋರಿಬರುತ್ತೆ ಈ ರೀತಿಯಾಗಿ ಈ ವೈದ್ಯರುಗಳು ಐಕಮತ್ಯದಿಂದ ಪ್ರವರ್ತಿಸುತ್ತಾ ಬಂದಲ್ಲಿ ಆಯುರ್ವೇದವು ಪುನಃ ಪೂರ್ವದ ಔನ್ನತ್ಯವನ್ನು ಪಡೆಯಬಹುದೆಂದು ಧಾರಾಳವಾಗಿ ನಂಬಬಹುದು, ಆಯುರ್ವೇದ ವೈದ್ಯಾಭಿಮಾನಿಗಳು ಈ ಸಂಘವು ಪುರೋಭಿವೃದ್ಧಿಗೆ ಬರಲು ಉಪಯೋಗವಾಗುವ ವಿಷಯಗಳನ್ನು ತಿಳಿಸುತ್ತಾ ಬಂದಲ್ಲಿ ಬಹಳ ಆನಂದದಿಂದ ಸ್ವೀಕರಿಸಿ ಅದರಂತೆ ಆಚರಿಸಲು ಬೇಕಾಗಬಹುದಾದ ಸಲಕರಣೆಗಳನ್ನು ಒದಗಿಸಿಕೊಳ್ಳಲು ತುಂಬಾ ಅನುಕೂಲ ಉಂಟಾಗಿ, ಈ ವೈದ್ಯ ಸಭೆಯು ತುಂಬಾ ಅಭಿವೃದ್ಧಿಗೆ ಬರುವದರಲ್ಲಿ ಸಂದೇಹವಿಲ್ಲವೆಂದು ನಂಬುತ್ತೇನೆ

ವೈದ್ಯಾಭಿಮಾನಿ,

ಇಂಡಿಯಾ ದೇಶದ ವೃತ್ತಾಂತಗಳು

ಸೇಲಂ ಪಟ್ಟಣದಲ್ಲಿ ಒಂದು ಕಾಲೇಜನ್ನು ಕಟ್ಟಿಕೊಳ್ಳಬಹುದೆಂದು ಮದರಾಸ್ ಗವರ್ನಮೆಂಟನವರು ಒಪ್ಪಿ ಅದರ ಖರ್ಚಿಗಾಗಿ 80,000 ರೂಪಾಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

* * *

ಕಳೆದ ಭಾನುವಾರ ರಾತ್ರಿ 9 ಸಮಯದಲ್ಲಿ ಸಿಂಲಾ ಪಟ್ಟಣದಿಂದ ಸುಮಾರು 1,700 ಮೈಲಿ ದೂರದಲ್ಲಿ ಎಲ್ಲೋ ಸಾಮಾನ್ಯವಾದ ಭೂಕಂಪವು ನಡೆದಿರುತ್ತದೆಂದು ಸಿಂಲಾ ಪಟ್ಟಣದಲ್ಲಿರುವ ಯಂತ್ರಗಳಿಂದ ತಿಳಿದು ಬರುತ್ತದೆ

* * *

ಪಂಜಾಬಿನಲ್ಲಿ ಬೈರಾಬಾದ್ ಎಂಬ ರೈಲ್ವೆ ಸ್ಟೇಷನಿಗೆ ಕಳೆದ ವಾರ ಅಫ್ರಿದಿಯರೆಂಬ ಬೆಟ್ಟ ಜನರು ನುಗ್ಗಿ ಸ್ಟೇಷನ್ ಮಾಸ್ಟರನ್ನೂ, ಅಲ್ಲಿದ್ದ ಸುಮಾರು 25 ರೂಪಾಯನ್ನೂ ಕಳುವು ಮಾಡಿರುತ್ತಾರೆ ಅನೇಕ ಸಿಪಾಯರು ಆಯಾ ಥಾಣೆಗಳಾಗಿ ಕಳ್ಳರನ್ನು ಹುಡುಕಲು ಹೊರಟಿರುತ್ತಾರೆ

* * *

ಹಿಂದುಸ್ಥಾನದ ಹೊಸ ರಾಜಧಾನಿಯಾದ ಡೆಹಲಿ ಪಟ್ಟಣದಲ್ಲಿ ವೈಸ್‌ರಾಯರವರು ವಾಸಮಾಡತಕ್ಕ ಗವರನ್‌ಮೆಂಟ್ ಬಂಗಲೆಯೊಂದನ್ನು ಕಟ್ಟುವುದಕ್ಕೆ 75 ಲಕ್ಷ ರೂಪಾಯೂ, ಹಿಂದುಸ್ಥಾನದ ಸರ್ವ ಸೇನಾಪತಿಯ ಬಂಗಲೆಗೆ 1-5 ಲಕ್ಷ ರೂಪಾಯೂ ಖರ್ಚು ಮಾಡುವರೆಂದು ತಿಳಿದುಬಂದಿದೆ

* * *

ಮದರಾಸಿನಲ್ಲಿ ಕಬ್ಬಿಣದ ಸಾಮಾನನ್ನು ಮಾರುತ್ತಿದ್ದ ಷೇಕ್ ಮಹಮದ್ ಅಲ್ಲಿ ಎಂಬ ಕಂಪನಿಯು ದಿವಾಳಿಯಾಯಿತು ಕೋರ್ಟಿನವರು ಅವರ ಆಸ್ತಿಯನ್ನು ವಹಿಸಿಕೊಂಡಿರುತ್ತಾರೆ ಈ ಕಂಪನಿಯ ದೇಣಗಳು ಸುಮಾರು ಒಂದುವರೆ ಲಕ್ಷ ರೂಪಾಯಿನಷ್ಟು ಆಗುವವೆಂದು ತಿಳಿದುಬಂದಿದೆ

* * *

ಭಾವನಗರದ ಒಂದು ಜಮೀನಿನ ವಿಷಯವಾಗಿ ಎರಡು ಪಂಗಡದವರಿಗೆ ವಿವಾದ ಹುಟ್ಟಿ ಎರಡು ಕಡೆಯವರೂ ದೊಣ್ಣೆಗಳನ್ನೂ ಕತ್ತಿಗಳನ್ನೂ ಇತರ ಆಯುಧಗಳನ್ನೂ ಉಪಯೋಗಿಸಿ ಜಗಳಮಾಡಿದ್ದರಿಂದ ಉಭಯ ಪಕ್ಷದಲ್ಲೂ ಅನೇಕರಿಗೆ ಬಹಳ ಗಾಯಗಳಾಗಿವೆ ಎಲ್ಲರನ್ನೂ ಸರ್ಕಾರದವರು ಕೈಸೆರೆ ಹಿಡಿದು ವಿಚಾರಣೆ ಮಾಡುತ್ತಿದ್ದಾರೆ

* * *

ಈಜಿಪ್ಟ್ ದೇಶದ ಸುಲ್ತಾನರ ಮನೆತನಕ್ಕೆ ಸೇರಿದ ಯೂಸಫ್ ಕಮಾಲ್ ಪಾಷಾ ಎಂಬ ರಾಜಪುತ್ರನು ಕಳೆದ ವಾರ ಬೊಂಬಾಯಿಗೆ ಬಂದಿರುತ್ತಾನೆ ಈತನು ಬೇಟೆಯಾಡುವುದರಲ್ಲಿ ಬಹಳ ಆಸಕ್ತನಾಗಿರುವುದರಿಂದ ಆಫ್ರಿಕಾ ಖಂಡದ ಅನೇಕ ಭಾಗಗಳಲ್ಲಿ ಸಂಚಾರಮಾಡಿ ಬೇಟೆಮಾಡಿರುತ್ತಾನೆ. ಬೊಂಬಾಯಿನಲ್ಲಿ ಕೆಲವು ದಿನ ಇದ್ದು ನಂತರ ಬೇಟೆಯಾಡುವ ಉದ್ದೇಶ್ಯ ಹೊರಡುತ್ತಾನೆ

* * *

ಕಳೆದ ಡಿಸೆಂಬರ್ ತಾ 27 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 1,457 ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾಗಿದ್ದಾರೆ ಈ ಮರಣ ಸಂಖ್ಯೆಯ ವಿವರವೇನೆಂದರೆ—ಬೊಂಬಾಯಿ ಅಧಿಪತ್ಯ 471, ಮದರಾಸ್ 250, ಬೀಹಾರ್ 822, ಸಂಯುಕ್ತ ಅಧಿಪತ್ಯಗಳು 2,339, ಪಂಜಾಬ್ 132, ಬರ್ಮಾ 131, ಮೈಸೂರು 90, ಹೈದರಾಬಾದ್ 134, ರಾಜಪುಟಾನಾ 18

* * *

ಕೆಲವು ದಿನಗಳ ಹಿಂದೆ ಲಾಹೋರಿನ ಹತ್ತಿರ ಯಾರೋ ದುರಾತ್ಮರು ರೈಲು ಗಾಡಿಯ ಅಧಿಕಾರಿಗಳನ್ನು ಕೊಂದುಹಾಕಿದರಷ್ಟೆ ಸೈನಿಕರೂ ಪೋಲೀಸಿನವರೂ ಅವರ ಬೆನ್ನುಹತ್ತಿದರು ಆದರೂ ಯಾರೂ ಸಿಕ್ಕಲಿಲ್ಲ ಬಾನು ಎಂಬ ಪ್ರಾಂತ್ಯದಲ್ಲಿನ ಹಿಂದೂ ಜನರು ಒಂದು ಸಭೆಯನ್ನು ಮಾಡಿ ತಮಗೆ ಆಗಿಂದಾಗ್ಗೆ ಉಂಟಾಗುವ ಕಾಡುಜನರ ತೊಂದರೆಯನ್ನು ತಪ್ಪಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು

* * *

ಲಕ್ನೋ ಪಟ್ಟಣದ ಹತ್ತಿರ ಗೋಮತಿ ನದಿಯ ಮೇಲೆ ಬಹಳ ದಿನದಿಂದಲೂ ಕಳ್ಳತನಮಾಡಿ ಜೀವಿಸುತ್ತಿದ್ದ ಒಂದು ಗುಂಪಿನವರನ್ನು ಪೋಲೀಸಿನವರು ಕಳೆದ ವಾರ ಹಿಡಿದಿರುತ್ತಾರೆ ಅವರೆಲ್ಲರೂ ಒಂದು ದೋಣಿಯಲ್ಲಿ ಕುಳಿತು ದಡವನ್ನು ಸೇರಿದಾಗ ಪೋಲೀಸಿನವರು ಅವರನ್ನು ಹಿಡಿಯುವುದಕ್ಕೆ ಹೋದರು ಕಳ್ಳರಿಗೂ ಪೋಲೀಸಿನವರಿಗೂ ಬಹಳ ಹೊತ್ತಿನವರೆಗೂ ಹೋರಾಟ ನಡೆದು ಕೊನೆಗೆ ಎಲ್ಲರೂ ಸಿಕ್ಕಿಬಿದ್ದರು ಕಳ್ಳರ ಪೈಕಿ ಒಬ್ಬನು ಮಾತ್ರ ಹೊಳೆಯಲ್ಲಿ ಧುಮುಕಿ ಈಜಿಕೊಂಡುಹೋಗಿ ಆಚೇ ದಡವನ್ನು ಸೇರಿದನು.

* * *

ಬಿಕ್ಯಾನಿಯರ್ ಸಂಸ್ಥಾನದ ಮಹಾರಾಜರು ಜಿ ಸಿ ಎಸ್ ಐ ಬಿರುದಿನ ಮರ್ಯಾದೆಗಳಿಂದ ಕೂಡಿದ ತಮ್ಮ ಚಿತ್ರಪಟವನ್ನು ತಯಾರಿಸಿ ಕೊಡುವಂತೆ ಇಂಗ್ಲೆಂಡಿನ ಪ್ರಸಿದ್ಧ ಕಾರೇಗಾರರಾದ ಜೇಕಬ್ ಹುಡ್ ಎಂಬವರಿಗೆ ಅಪ್ಪಣೆ ಕೊಟ್ಟರು ಆ ಪಟವನ್ನು ಹಿಂದುಸ್ಥಾನಕ್ಕೆ ಕಳುಹಿಸುವುದಕ್ಕೆ ಮುಂಚೆ ಚಕ್ರವರ್ತಿಯವರೂ ಮಹಾರಾಜ್ಞಿಯವರೂ ನೋಡಬೇಕೆಂದು ಇಷ್ಟಪಟ್ಟರು ಮಹಾರಾಜ್ಞಿಯವರು ಆ ಪಟವನ್ನು ನೋಡಿ ಅತ್ಯಂತ ಸಂತೋಷಪಟ್ಟು ಆ ಪಟದ ಒಂದು ಪ್ರತಿಯನ್ನು ತಮಗೆ ತಯಾರುಮಾಡಿ ಕೊಡಬೇಕೆಂದು ಆ ಕಾರೇಗಾರರಿಗೆ ಹೇಳಿರುತ್ತಾರೆ

* * *

ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳೂ ಅವರ ಪತ್ನಿಯವರೂ ಇದೇ ತಿಂಗಳು 9 ನೇ ತಾರೀಖಿನ ದಿನ ಲಕ್ನೋ ಪಟ್ಟಣಕ್ಕೆ ದಯಮಾಡಿಸಿ ಮಾರನೇ ದಿನ ಅಲ್ಲಿನ ಮೆಡಿಕಲ್ ಕಾಲೇಜ್ ಆಸ್ಪತ್ರೆಯನ್ನೂ, ಗೋಮತಿ ನದಿಯ ಮೇಲೆ ಹೊಸದಾಗಿ ಕಟ್ಟಿರುವ ಸೇತುವೆಯನ್ನೂ ಜನಗಳ ಉಪಯೋಗಾರ್ಥವಾಗಿ ತೆರೆಯುವರು ಅನಂತರ ಕೆಲವು ದಿವಸ ವೈಸರಾಯರವರು ಬೇಟೆಯಾಡುವ ಉದ್ದೇಶ್ಯ ಹೋಗಿ 15 ನೇ ತಾರೀಖಿನ ದಿನ ಲಕ್ನೊಪಟ್ಟಣಕ್ಕೆ ವಾಪಸು ದಯಮಾಡುವರು ಮುಂದಿನ ಮಾರ್ಚಿ ತಿಂಗಳು ಮೂರನೇ ವಾರದಲ್ಲಿ ವೈಸರಾಯರವರು ಬೊಂಬಾಯಿಗೆ ಭೇಟಿ ಕೊಡುತ್ತಾರೆ ಅದೇ ತಿಂಗಳು 21 ನೇ ತಾರೀಖಿನ ದಿನ ಲೇಡಿ ಹಾರ್ಡಿಂಗ್ ರವರು ಸೀಮೆಗೆ ಹೊರಡುವ ಉದ್ದೇಶ್ಯ ಬೊಂಬಾಯಿನಲ್ಲಿ ಜಹಜು ಹತ್ತುವರು

* * *

ಬಂಗಾಳಾದಲ್ಲಿ ಕಳೆದ ವಾರ ದುಷ್ಕರ್ಮ್ಯರೋ ಇನ್ನೊಂದು ಸಿಡಿಮದ್ದಿನ ಗುಂಡನ್ನು ಪೋಲೀಸಿನವರ ಮೇಲೆ ಎಸೆದಿರುತ್ತಾರೆ ಕಲ್ಕತ್ತಾ ಪಟ್ಟಣದಿಂದ 20 ಮೈಲಿ ದೂರದಲ್ಲಿರುವ ಭದ್ರೇಶ್ವರವೆಂಬ ಊರಿನ ಪೋಲೀಸ್ ಠಾಣದಲ್ಲಿ ಹಿಂದಿನ ಮಂಗಳವಾರ ಸಾಯಂಕಾಲ 7 ಗಂಟೆ ಹೊತ್ತಿನಲ್ಲಿ ಇಬ್ಬರು ಪೋಲೀಸ್ ಆಫೀಸರುಗಳು ಕುಳಿತುಕೊಂಡು ಮಾತನಾಡುತ್ತಿದ್ದರು ಹೊರಗಡೆಯಿಂದ ಕಿಟಕಿಯ ಮೂಲಕ ಒಂದು ಸಿಡಿಮದ್ದಿನಗುಂಡು ಬರು ಬರುಸಾಗಿ ಬಂದು ಅವರ ಬಳಿ ನೆಲಕ್ಕೆ ಬಿದ್ದಿತು ದೇವರ ದಯದಿಂದ ಅದು ಒಡೆಯಲಿಲ್ಲ ಕೂಡಲೇ ಪೋಲೀಸಿನವರು ಹೊರಕ್ಕೆ ಓಡಿಹೋಗಿ ಸುತ್ತುಮುತ್ತಲೂ ಅಜಮಾಯಿಸಿ ಮಾಡಿದಾಗ್ಯೂ, ಕತ್ತಲಾಗಿದ್ದ ಕಾರಣ ಕ್ರೂರಾತ್ಮಗಳ್ಯಾರೆಂಬುವುದು ಗೊತ್ತಾಗದೆ ಹೋಯಿತು ಗುಪ್ತ ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿದ್ದಾರೆ

* * *

ಕಳೆದ ವಾರ ಆಗ್ರಾ ನಗರದಲ್ಲಿ ನಡೆದ ರಾಜಪುತ್ರ ಮಹಾಜನಗಳ ಸಭೆಯಲ್ಲಿ ಕಾಶ್ಮೀರದ ಮಹಾರಾಜರವರು ಅಗ್ರಾಸನವನ್ನು ವಹಿಸಿದ್ದರು ಮಾಳ್ವರದ ರಾಜರವರು ರಿಸೆಪ್‌ಷನ್ ಕಮಿಟಿಯ ಚೇರ್‌ಮನ್‌ರಾಗಿ ಮಂಡಲಿಯ ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿದರು ಈ ಸಭೆಯಲ್ಲಿ ಮಹಾರಾಜರವರ ಪ್ರೋತ್ಸಾಹದಿಂದ ತೀರ್ಮಾನವಾಗಿರುವ ಮುಖ್ಯ ವಿಷಯಗಳ್ಯಾವವೆಂದರೆ—ರಾಜರುಗಳು ರಾಜಪುತ್ರರ ಯೋಗಕ್ಷೇಮವನ್ನು ಕಾಪಾಡುವುದಕ್ಕೆ ಏರ್ಪಾಡು ಮಾಡಬೇಕು ಮದುವೆ ಕಾಲಗಳಲ್ಲಿ ದುಂದು ಖರ್ಚು ಮಾಡುವುದನ್ನೂ ಸೂಳೆಯರ ಕಾಪೆ ಕಟ್ಟಿಸುವುದನ್ನೂ ನಿಲ್ಲಿಸಬೇಕು, ಹೆಣ್ಣುಮಕ್ಕಳಿಗೂ ಗಂಡುಮಕ್ಕಳಿಗೂ ಏಕರೀತಿಯಾಗಿ ವಿದ್ಯೆ ಕಲಿಸಬೇಕು ರಾಜಪುತ್ರ ಯೌವನಸ್ಥರಿಗೆ ಇನ್ನೂ ಹೆಚ್ಚಾಗಿ ಸರ್ಕಾರದವರು ನೌಕರಿಮಾಡಿಕೊಡಬೇಕು, ಇತ್ಯಾದಿ

* * *

ಮದರಾಸಿನ ಜಾರ್ಜ್ ಟವನ್ ಎಂಬ ಭಾಗದಲ್ಲಿ ಹತ್ತಿಯ ಮೂಟೆಗಳನ್ನು ಅಡಗಿಸುವ ಒಂದು ಕಾರ್ಖಾನೆಗೆ ಕಳೆದ ಬುಧವಾರ ರಾತ್ರಿ 3 ಗಂಟೆಯಲ್ಲಿ ಬೆಂಕಿ ತಗಲಿ ಒಳಗೆ ಭರ್ತಿಮಾಡಿದ್ದ ಹತ್ತಿ ಮೂಟೆಗಳೂ, ಚರ್ಮದ ಮೂಟೆಗಳೂ, ತುಬಟದ ಬಟ್ಟೆಗಳೂ ಎಲ್ಲಾ ಸೇರಿ 6,000 ರೂಪಾಯಿನಷ್ಟು ಪದಾರ್ಥಗಳು ಸುಟ್ಟುಹೋದದ್ದಲ್ಲದೆ ಸುಮಾರು 15,000 ರೂಪಾಯಿ ಬೆಲೆಯುಳ್ಳ ಮನೆಯೂ ಬೆಂದುಹೋಯಿತು ಪೋಲೀಸ್ ಅಧಿಕಾರಿಗಳಿಗೆ ವರ್ತಮಾನ ತಿಳಿಯಲು ಅವರು ಬೆಂಕಿ ಆರಿಸುವ ಯಂತ್ರವನ್ನು ತಂದು ಸ್ವಲ್ಪಹೊತ್ತಿನೊಳಗಾಗಿ ಉರಿಯನ್ನು ಶಮನಮಾಡಿದರು ಆ ಕಂಪನಿಯ ಗುಮಾಸ್ತನನ್ನು ವಿಚಾರಿಸುವಾಗ್ಗೆ ಎಣ್ಣೆಯಲ್ಲಿ ನೆನೆದಿದ್ದ ಹತ್ತಿಯ ತುಂಡನ್ನು ಒಣಗುವುದಕ್ಕೆ ಹಾಕಿದ್ದರೆಂತಲೂ, ಯಾರೋ ಹೊಗೆಬತ್ತಿಯನ್ನು ಸೇದಿ ಎಸೆದದ್ದರಿಂದ ಅದು ಹತ್ತಿಕೊಂಡು ಇತರ ಕಡೆಗೂ ವ್ಯಾಪಿಸಿರಬಹುದೆಂದೂ ತಿಳಿಸಿರುತ್ತಾನೆ ಆ ಕಾರ್ಖಾನೆಯ ಯಜಮಾನನಾದ ನಾರಾಯಣರೆಡ್ಡಿ ಎಂಬಾತನು ರಾಮೇಶ್ವರಕ್ಕೆ ಹೋಗಿರುತ್ತಾನೆಂದು ವರ್ತಮಾನ ಬಂದಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1913 ನೇ ಇಸವಿ ಡಿಸೆಂಬರ್ 31 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ.

ಲೆಕ್ಕ—(1) [illegible]	— —	ರೂ. 5,96,775
,, (2) [illegible]	— —	,, 3,70,225
,, (3) ಇತರೆ	— —	,, 3,145
([illegible])		ಒಟ್ಟು ರೂ 9,70,145

ಲೆಕ್ಕ—(1) [illegible]		ರೂ. 1,11,537
,, (2) [illegible]	—	,, 3,85,906
,, (3) [illegible]		,, 1,51,900
,, (4) [illegible]	—	,, 2,25,000
,, (5) [illegible]	—	,, 1,85,?53
,, (6) [illegible]	—	,, 6,[illegible]
,, (7) ಇತರೆ	— —	,, 11,947
([illegible])		ಒಟ್ಟು ರೂ. 9,70,145

[illegible], ಮ್ಯಾನೇಜರ್

[illegible]

[illegible]

[illegible]

[illegible]

[illegible]

ಕಾರ್ಯೋತ್ತರ ವರ್ತಮಾನಗಳು.

[illegible]

ಚಾಮರಾಜನಗರ.—ನಮ್ಮ ತಾಲ್ಲೋಕಿನ ಅಮಲ್ದಾರ್ ಮ|| ಬಿ. ನಾರಾ ಯಣರಿಗೆ ಇಲ್ಲಿಂದ ವರ್ಗವಾಯಿತೆಂದು ಕೇಳಿ ಈ ತಾಲ್ಲೋಕಿನ ಮತ್ತು ... ಕಸಬಿನ ಪ್ರಜೆಗಳೂ, ಪ್ರತಿಕೋಮಿನವರೂ ದುಃಖಪಟ್ಟರು. ಆದರೆ ಈ ವಾರ ... ವೇಪರಿನಲ್ಲಿ ಅವರಿಗೆ ಅ|| ಕಮಿಷನರ್ ದರ್ಜೆಗೆ ಬಡ್ತಿ ಆಯಿತೆಂದು ತಿಳಿ ... ಎಲ್ಲರೂ ಮಹದಾನಂದ ಪಡುತ್ತಿದಾರೆ. ಅವರು ಇಲ್ಲಿಂದ ದಯಮಾಡಿಸುವು ... ಮುಂಚೆ ಆಯಾ ಕೋಮಿನವರು ಒಬ್ಬರ ಪ್ರೇರಣೆಯೂ ಇಲ್ಲದೆ ... ಮೀಟಿಂಗುಗಳನ್ನು ನಡಿಸಿ ಯಾವ ವಿಧವಾಗಿ ಅವರಿಗೆ ಮರ್ಯಾದೆ ... ಬೇಕೆಂದು ತೀರ್ಮಾನಿಸಿ ಕೊಂಡರು. ಮಹಮ್ಮದಿಯರು ಬಹು ವಿಜೃಂಭಣೆ ... ಸಭೆ ನಡಿಸಿ ಅಡ್ರೆಸ್ಸುಗಳನ್ನು ಒಪ್ಪಿಸಿ ಹಾರಾ ತುರಾಯಿ ಪಾರ್ಕ ಸುವಾರಿ ... ಗಳಿಂದ ಭೂಷಿಸಿದ್ದಲ್ಲದೆ ಅನೇಕರು ಕಣ್ಣೀರುಸುರಿಸಿದರು. ಈ ಗುಂಪಿನ ... ಮುಖ್ಯವಾಗಿ ತಾ|| ಶಿರಸ್ತೇದಾರ್ ಮಿ|| ಎಸ್. ಅಬ್ದುಲ್ ಖಾಲಿಕ್‌ರವ ... ಸಾಹುಕಾರ್ ಉಮ್ಮರ್‌ಸಾಹೇಬರೂ ಮುಂದಾಳಾಗಿ ನಿಂತು ಕಾರ್ಯ ನಿರ್ವಾಹ ... ವರು ವರ್ತಕ ಮಂಡಲಿಯಲ್ಲಿ ಮ|| ಗಳಾದ ದೊರೆಸಾಮಯ್ಯಂಗಾರ್ರು, ... ಬಟ್ ಸುಬ್ರಾಯಶೆಟ್ರು, ವೆಂಕಟರಾಯರೂ, ಲಾಯರ್ ವೆಂಕಟಸಾ ... ಮಯ್ಯನವರು, ಇನ್ನೂ ಅನೇಕರು ತುಂಬಾ ಮುತುವರ್ಜಿ ವಹಿಸಿ ಟೀ ಪಾರ್ಟಿ, ... ಮುಂತಾದದ್ದನ್ನು ನಡಿಸಿ ಅಡ್ರೆಸ್ ಓದಿ ಬಹುಮಾನ ಮಾಡಿದರು ... ಕಛೇರಿ ನೌಕರಮಾನೇರೆಲ್ಲಾ ಸೇರಿ ಭೋಜನ ಫಲಾಹಾರಗಳಿಂದ ಸಂತೋ ... ದರು. ಪರಿವಾರದವರಲ್ಲಿ ಭದ್ರನಾಯ್ಕ, ಸಿದ್ದನಾಯ್ಕ, ಮಾದನಾಯ್ಕ, ... ರಂಗನಾಯ್ಕ ಮುಂತಾದವರು ಮುಂದಾಳಾಗಿ ನಿಂತು ಅಡ್ರೆಸ್ಸು ಒಪ್ಪಿಸಿ ... ಹಾರ, ಪುಷ್ಪ, ತಾಂಬೂಲಾದಿಗಳಿಂದ ಸಂತೋಷಪಡಿಸಿದರು ಅಮಲ್ದಾರ್ರವ ... ಪ್ರೀತಿಯಿಂದ ಸದುತ್ತರಗಳನ್ನು ದಯಪಾಲಿಸಿ ಅವರ ಸಂತೋಷಕ್ಕೆ ಪಾತ್ರರಾದ ... ಕಡೆಯಲ್ಲಿ ಎಲ್ಲರೂ ಎ ವಿ. ಸ್ಕೂಲಿನಲ್ಲಿ ಸೇರಿ ಬ್ಯಾಂಡ್ ವಾದ್ಯದೊಡನೆ ... ಅಮಲ್ದಾರರ ಸಮೇತ ಹಾರಾ ತುರಾಯಿಗಳಿಂದ ಊರೆಲ್ಲಾ ಮೆರವಣಿಗೆ ... ಅವರಿಗೆ ಸುಖಾಗಮನವನ್ನು ಬಯಸಿದರು. ಇದೆಲ್ಲಾ ಎಷ್ಟೋ ಆನಂದ ... ವಾಗಿತ್ತು ಈ ತಾಲ್ಲೋಕಿಗೆ ಇದುವರಿಗೂ ಇಂಥಾ ಅಮಲ್ದಾರರು ಬಂದಿರಲಿ ... ಲ್ಲವೆಂದು ಎಲ್ಲರೂ ಹೇಳುತ್ತಾರೆ ಇವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ... ಮುಖ್ಯವಾಗಿ ಮ|| ನಾರಾಯಣರಾಯರು ಸತ್ಯವಂತರಾಗಿಯೂ, ಬಡವರಿಗೂ ... ಬಾಧ್ಯರಿಗೂ ನಿಷ್ಪಕ್ಷಪಾತಿಗಳಾಗಿಯೂ, ಪೂರ್ಣ ದಯಾಳುಗಳಾಗಿಯೂ, ಪ್ರಜಾ ... ಹಿತಚಿಂತಕರಾಗಿಯೂ, ವಿಶೇಷವಾಗಿ ಸ್ವಾಮಿಕಾರ್ಯ ಧುರಂಧರರಾಗಿಯೂ ಇದ್ದ ... ದ್ದುದಕ್ಕೆ ಏನೂ ಸಂದೇಹವಿಲ್ಲ ಈಗ ಹೊಸದಾಗಿ ಬಂದಿರುವ ಅಮಲ್ದಾರ್ ... ಮ|| ಕೆ. ವೆಂಕಟಸಾಮಿ ಅಯ್ಯರವರೂ ಅದೇ ರೀತಿ ಪ್ರಜಾಪರಿಪಾಲನೆ ಮಾಡಿ ... ಬರುವರೆಂದು ನಿರೀಕ್ಷಿಸಿಕೊಂಡಿದೇವೆ.—ಇಲ್ಲಿನ ಪೋಲೀಸ್ ಇನ್ಸ್ಪೆ ... ಕ್ಟರಿಗೆ ಬಳ್ಳಾರಿಗೆ ವರ್ಗವಾಗಿದೆ ಇನ್ನೂ ಹೊಸಬರು ಬರಲಿಲ್ಲ. ಪೋಲೀಸ್ ... ಜಮಾದಾರ್ ಕೃಷ್ಣರಾಮರಿಗೆ ಮೈಸೂರಿಗೆ ವರ್ಗವಾಗಿ ಅವರಿಗೆ ಬದಲಾಗಿ ... ಸಂಪಂಗಿರಾಜೆ ಅರಸಿನವರು ಬಂದಿದಾರೆ. ಇಲ್ಲಿದ್ದ ಸೂಲಗಿತ್ತಿಗೆ ವರ್ಗವಾಗಿ ... ಹುಣಸೂರಿಗೆ ಬಂದಿರುವಳು.—ಸದ್ಯ ಪ್ಲೇಗ್ ನಿಂತಿದೆ. ಮಾದಿಹಳ್ಳಿ, ಹಂದ್ರಕ ... ಹಳ್ಳಿಯಲ್ಲಿ ಉಪದ್ರ ಪ್ರಾರಂಭವಾಗಿದೆ. ಜನರು ಊರು ಬಿಡುತ್ತಿದಾರೆ. ಬೇಸಿಗೆ ... ಯಾಗುತ್ತಿದೆ. ಮಳೆ ಇಲ್ಲ. ಪದಾರ್ಥ ಧಾನ್ಯಗಳು ಯಥಾ ಪ್ರಕಾರ ಅಕ್ಕಿ 7 ಸೇರು, ... 16 ಸೇರು ಮಾರುತ್ತೆ ಹಳ್ಳಿಗಳಲ್ಲೂ ಪ್ಲೇಗ್ ಮತ್ತು ವಾಂತಿ ಭೇದಿ ಉಪ ... ದ್ರವು ಒಂದು ವರ್ಷದಿಂದ ಜನರನ್ನು ಬಹಳ ಕಾಡಿಸುತ್ತಿದ್ದರೂ ನಮ್ಮ ಡಾಕ್ಟ ... ರು ಹನುಮಂತ ... ಪಟ್ಟಣವರು ಪ್ರತಿ ಸ್ಥಳಕ್ಕೂ ಹೋಗಿಬರುತ್ತಾ ತುಂಬಾ ... ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ

ಗೋಣಿಬೀಡನೂರು ತಾ|| ಮರಳೂರು.—ಈ ಗ್ರಾಮದ ಕೆರೆಯು ಎರಡು ... ವರ್ಷಗಳಿಂದ ಕಾಮಗಾರಿ ಆಗುತ್ತಾ ಇದೆ ಇನ್ನೂ ಪೂರೈಸಲಿಲ್ಲ. ಕೆರೆಯಲ್ಲಿ ... 3 ವರ್ಷಗಳಿಂದ ನೀರು ನಿಲ್ಲಿಸಲಿಲ್ಲ. ಈ ಗ್ರಾಮದ ಜಮೀನುಗಳಲ್ಲಿ ಜಲಾಧಾ ... ರವಿಲ್ಲ. 2 ವರ್ಷಗಳಿಂದ ಜಮೀನುಗಳಲ್ಲಿ ಫಸಲು ಆಗದೆ ಜನಗಳಿಗೆ ತುಂಬಾ ... ಕಷ್ಟವಾಯ್ತು. ಕೆರೆಯ ಕಾಮಗಾರಿ ನಡಿಸುತ್ತಾ ಇದ್ದದ್ದರಿಂದ ಕೂಲಿ ಮಾಡಿ ... ಪ್ರಜೆಗಳು ಜೀವಿಸುವದಕ್ಕೆ ಮಾರ್ಗವಾಗಿತ್ತು ಈಗ ಯಾಕೋ 7-8 ತಿಂಗಳಿಂದ ... ಈ ಕಾಮಗಾರಿ ಮಾಡಿಸದೆ ನಿಲ್ಲಿಸಿದಾರೆ ಈ ಸಲ ಮಳೆಗಳು ಸಕಾಲಕ್ಕೆ ಬಾರದೆ ... ಹೋದ್ದರಿಂದ ಜಮೀನುಗಳಲ್ಲಿ ಇಟ್ಟ ಫಸಲು ಎಲ್ಲಾ ಒಣಗಿಹೋಯ್ತು. ಕೆರೆ ... ಯಲ್ಲಿ ನೀರು ನಿಲ್ಲಿಸುವುದಿಲ್ಲವೆಂದು ಹೇಳುತ್ತಾ ಇದ್ದದ್ದರಿಂದ ಕೆರೆಕೆಳಗಣ ... ಜಮೀನುಗಳನ್ನೆಲ್ಲಾ ಬಂಜರಾಗಿ ಬಿಟ್ಟು ಇದ್ದರು. ಕೆರೆಗೆ ಬಂದಿದ್ದ ನೀರೆಲ್ಲಾ ... ಕೋಡಿಬಿದ್ದು ಹೋಗಿ ಒಂದು ತಿಂಗಳ ನೀರು ನಿಂತಿದೆ. ಈ ನೀರನ್ನು ನಂಬಿಕೊಂಡು ... ಜಮೀನಿಗೆ ಜೋಳವನ್ನು ಈಗ ಬಿತ್ತಿರುತ್ತಾರೆ. ಈ ಸಲ ರಾಗಿ ಫಸಲು ಆಗದ್ದ ... ರಿಂದ ತುಂಬಾ ಕಷ್ಟಕ್ಕೆ ಕಾರಣವಾಯ್ತು. ಆದ್ದರಿಂದ ಕೂಡಲೆ ಕೆರೆಯ ಕಾಮ ... ಗಾರಿಯನ್ನು ಮಾಡಿಸಿ ನೀರು ನಿಲ್ಲುವಂತೆ ಮಾಡಿಸಿದಲ್ಲಿ ಪ್ರಜೆಗಳಿಗೆ ಮುಂದೆ ... ಬರುವ ಕಷ್ಟ ತಪ್ಪಿತು.—ಈ ಗ್ರಾಮದಲ್ಲಿ ವರ್ತಕರು 3 ಪಂಗಡವಾಗಿ ... ಹುಣಿಸೇಕಾಯಿ ಗಿಡಗಳನ್ನು ಆಯಿಸುತ್ತಾರೆ. 6 ಸೇರು ಹಿಡಿಯುವ ಕೊಳಗಕ್ಕೆ ... 6 ಪೈಸಂತೆ ಕೂಲಿ ಕೊಡುತ್ತಾರೆ. ದಿನವೂ 200 ಮಂದಿಯವರಿಗೂ ಕೂಲಿ ಜನ ... ರು ಬರುತ್ತಾರೆ.—ಈ ಗ್ರಾಮದಲ್ಲಿ 8 ವರ್ಷಗಳ ಕೆಳಗೆ ಭಾವಿಯಲ್ಲಿ ಸಿಕ್ಕಿದ ... ಬೆಳ್ಳಿ ಹಸ್ತವನ್ನು ಚೌಕದಲ್ಲಿರುವ ಚಾವಡಿಯಲ್ಲಿ ಮಕರತೋರಣಗಳಿಂದಲೂ ... ವರ್ಣದಿಂದ ಚಿತ್ರ ಕೆಲಸಮಾಡಿದ್ದ ಮಂಟಪವನ್ನು ರಚಿಸಿ ಮೂರು ಅಂತಸ್ತಿನ ... ಕಮಾನುಗಳನ್ನು ರಚಿಸಿ ಅಲಂಕಾರಪೂರಿತಮಾಡಿ ಇಟ್ಟು ಉತ್ಸವ ನಡಿಸಿದರು. ... ತಾ 18 ನೇ ಗುರುವಾರ ಸಾಯಂಕಾಲ ಚಾವಡಿ ಎದುರಿಗೆ ಮಾಡಿದ್ದ ಅಗ್ನಿಗುಂ ... ಡಕ್ಕೆ ನಾಲ್ಕು ಗಾಡಿ ಸೌದೆ ಹಾಕಿ ಬೆಂಕಿ ಹತ್ತಿಸಿದರು 8 ಗಂಟೆಗೆ ಸೌದ ... ಸುಟ್ಟು ಬೆಂದು ಅಗ್ನಿಗುಂಡವು ಬೆಂಕಿ ಕೆಂಡಗಳಿಂದ ತುಂಬಿತ್ತು. ಬೆಳ್ಳಿ ಹಸ್ತ ... ವನ್ನು 6 ವರುಷದ ಹುಡುಗನ ಕೈಗೆ ಕೊಟ್ಟು ಪೇಟೆಯಲ್ಲಿ ಉತ್ಸವವನ್ನು ... ಮಾಡಿದರು ಆ ಸಣ್ಣ ಹುಡುಗನು ಅಗ್ನಿಗುಂಡದಲ್ಲಿ ಇಳಿದನು. ಹುಡುಗನೂ, ... ಕಾರಿಯೂ, ನೋಡುವುದಕ್ಕೆ ಬಂದಿದ್ದವರಲ್ಲಿ ಕೆಲವು ಜನಗಳೂ ಬೆಂಕಿಯಲ್ಲಿ ... ಇತ್ತ ಈಚೆಗೂ ಆಚೆಗೂ ಸಾವಿರಾರು ದಫಾ ನಡೆದಾಡಿದರು. ನೋಡುವದಕ್ಕಾಗಿ ... ಸುತ್ತಳಿಂದ 2-3 ಸಾವಿರ ಪ್ರಜೆಗಳ ವರಿಗೂ ಬಂದುಯಿತ್ತು. 200 ಜನಗಳ ... ವರಿಗೂ ಮುಸಲ್ಮಾನ್ ಪ್ರಜೆಗಳು ಸೇರಿದ್ದರು. ತಾ 20 ನೇ ಶನಿವಾರ ಸಾಯಂ ... ಕಾಲ ಅಗ್ನಿಗುಂಡದಲ್ಲಿ 8-10 ಗಾಡಿ ಸೌದೆಯನ್ನು ತಂದುಹಾಕಿ ಬೆಂಕಿ ಹತ್ತಿ ... ಸಿದರು. ಈ ಗ್ರಾಮದ ಜನಗಳೂ ಪರಸ್ಥಳಗಳಿಂದ ಬಂದಿದ್ದವರೂ ಸೇರಿ ಚಡ್ಡಿ ... ಬನೀಯನ್ನು ಪೇಟಾ ರುಮಾಲುಗಳಿಂದ ಅಲಂಕಾರ ಮಾಡಿಕೊಂಡುರ ರಾತ್ರಿಯೆಲ್ಲಾ ... ಅಗ್ನಿಗುಂಡದ ಸುತ್ತಲೂ ವಾದ್ಯಗಳಿಂದ ಕುಣಿದರು. ರಾತ್ರಿ 12 ಗಂಟೆಗೆ ಇದು ... ರಿಂದ ಬಂದಿದ್ದ ಕೆಲವು ಜನಗಳು ಅಂಗಸಾಧನೆಗಳನ್ನೂ ಜಟ್ಟೀ ಸಾಧನೆಯನ್ನೂ ಪಟ್ಟಾವರಿಸೆಯನ್ನೂ ಬಹಳ ಚಮತ್ಕಾರವಾಗಿ ಕಸರತ್ತುಗಳನ್ನೂ ಮಾಡಿ ಜನಗಳಿಗೆ ವಿನೋದವನ್ನು ತೋರ್ಪಡಿಸಿದರು. ಪರಸ್ಥಳಗಳಿಂದ ನಾಲ್ಕು ಸಾವಿರ ಪ್ರಜೆಗಳ ವರಿಗೂ ನೋಡುವದಕ್ಕೆ ಬಂದು ಇತ್ತು. ಬೆಳಗಿನ ಝಾಮದ 3 ಗಂಟೆ ಸಮಯದಲ್ಲಿ ಹರಿಕೆಮಾಡಿಕೊಂಡಿದ್ದ ಇಬ್ಬರು ಮಂಟಪದ ಹಿಂದೆ ಮಲಗಿದ್ದವರು ಎದ್ದುಹೋಗಿ ಭಾವಿಯಲ್ಲಿ ಮುಳುಗಿ ಬಂದು ಅಗ್ನಿಗುಂಡದಲ್ಲಿ ಬೆಂಕಿಯ ಕೆಂಡಗಳು ತುಂಬಿದ್ದ ಕಾಲದಲ್ಲಿ ಇಳಿದು ನಿಂತುಕೊಂಡು ಮುಂಗಾರುಮಳೆ ಸುರಿದಂತೆ ಎರಡು ಹಸ್ತಗಳಿಂದಲೂ ಕೆಂಡಗಳನ್ನು ಎರಚಿದರು. ಇದು ಬಹಳ ಆಶ್ಚರ್ಯವಾಗಿತ್ತು. ಅನಂತರ 30 ಜನ ಹೆಂಗಸರು ಅಗ್ನಿಗುಂಡದ ಸುತ್ತಲೂ ಕೂತುಕೊಂಡು ಸೌಟುಗಳಿಂದ ಕೆಂಡಗಳನ್ನು ತಲೆಗೆ ಹೊಯಿಸಿಕೊಂಡರು. ಬಳಿಕ 4 ಗಂಟೆಗೆ 3 ಹಸ್ತಗಳನ್ನೂ 6-8 ವರುಷದ ಹುಡುಗರ ಕೈಗೆ ಕೊಟ್ಟು ಉತ್ಸವದಿಂದ ಅಗ್ನಿಗುಂಡದ ಬಳಿಗೆ ಬಂದು ಮೂರು ದಫಾ ಅಗ್ನಿಗುಂಡದಲ್ಲಿ ಇಳಿದು ಉತ್ಸವಾದಿಗಳನ್ನು ತೀರಿಸಿಕೊಂಡು ಮರಿಯಮ್ಮನ ಗುಡಿ ದಿಬ್ಬದ ಬಳಿಗೆ ಹೋಗಿ ವಾಪಸು ಬಂದು ಅಗ್ನಿಗುಂಡದಲ್ಲಿ ಮೂರು ದಫಾ ಇಳಿದು ಆ ಮೇಲೆ ಮಂಟಪಕ್ಕೆ ಬಂದರು. ರಾತ್ರಿಯೆಲ್ಲಾ ದೇವರಿಗೆ ಒಪ್ಪಿಸಿದ ಚಿರವು ಸಕ್ಕರೆ ಮಂಟಪದ ಮುಂಭಾಗದಲ್ಲಿ ಬೆಟ್ಟದೋಪಾದಿಯಲ್ಲಿ ರಾಶಿ ಬಿದ್ದಿತ್ತು. ಭಾನುವಾರ ಬೆಳಗ್ಗೆ ಹುಲಿ ವೇಷಗಳಿಂದಲೂ, ನಾನಾ ತರಹೆ ಆಟಗಳಿಂದಲೂ ಜನಗಳು ಪೇಟೆಯೆಲ್ಲಾ ತುಂಬಿಕೊಂಡಿದ್ದರು. ಮಧ್ಯಾಹ್ನ 3 ಗಂಟೆಗೆ ಅನೇಕ ಜನಗಳು ಗೆಜ್ಜೆಗಳನ್ನು ಕಟ್ಟಿಕೊಂಡು ಮಜೀನರಾಗಿ ಬಂದು ಅಗ್ನಿಗುಂಡದ ಬಳಿಯಲ್ಲಿ ತಮಟೆ ಕೊಂಬು ವಾದ್ಯಗಳಿಂದ ಕುಣಿದಾಡುತ್ತಿದ್ದರು. 4 ಗಂಟೆಗೆ ಮಂಟಪದಲ್ಲಿದ್ದ 3 ಬೆಳ್ಳಿ ಹಸ್ತಗಳನ್ನು 7-8 ವರುಷದ ಹುಡುಗರ ಕೈಗೆ ಕೊಟ್ಟು ಅಗ್ನಿಗುಂಡದ ಬಳಿಗೆ ಬಂದು ಅಗ್ನಿಗುಂಡದಲ್ಲಿ 3-4 ದಫಾ ಆಚೆಗೂ ಈಚೆಗೂ ಇಳಿದುಹೋದ ನಂತರ ಅಗ್ನಿಗುಂಡವನ್ನು ಮುಚ್ಚಿಸಿ 3 ಸುತ್ತು ಪ್ರದಕ್ಷಿಣೆ ಬಂದರು 2 ಫರ್ಲಾಂಗು ದೂರದಲ್ಲಿರುವ ಚನ್ನಕೇಶವಪ್ಪನ ಬಾವಿ ಬಳಿಗೆ ಹೋಗಿ ಜಲ್ದಿಯನ್ನು ಮಾಡಿದರು. 23 ನೇ ಮಂಗಳವಾರ ಉತ್ಸವ ನಡಿಯಿತು. ಈ ಕಾರ್ಯಗಳೆಲ್ಲವನ್ನೂ ಶೀನಪ್ಪನವರೂ, ಸಾ|| ಚಂದ್ರಯ್ಯನವರೂ, ಉಗ್ರಿನರಸಪ್ಪನವರೂ ಖುದ್ದು ನಿಂತು ಗಲಾಟೆ ಆಗದಂತೆ ಜನಗಳಿಗೆ ಪ್ರೋತ್ಸಾಹಿಸಿ ಸಾಂಗವಾಗಿ ಸಂತೋಷದಿಂದ ನಡಿಸಿದರು.—ಈ ಗ್ರಾಮದಲ್ಲಿ ಕೆಲವು ಜನರು 200 ಹಂದಿಗಳ ವರಿಗೂ ಸಾಕಿದಾರೆ. ಇವರು ಊರಿನಲ್ಲಿ ಮನೆಗಳ ಮಗ್ಗುಲಲ್ಲಿ ಗೂಡುಗಳನ್ನು ಕಟ್ಟಿಕೊಂಡು ಅವುಗಳನ್ನು ಯಾವಾಗ್ಯೂ ಗ್ರಾಮದಲ್ಲಿ ಬೀದಿಗಳಲ್ಲೆಲ್ಲಾ ತಿರುಗಿಃಕೊಂಡು ಹದ್ದಿಲ್ಲದಂತೆ ಬಿಡುತ್ತಾರೆ. ಇವುಗಳು ಗ್ರಾಮದ ಸುತ್ತಲೂ ಇರುವ ಫಸಲುಗಳನ್ನು ಕೆಡಿಸುತ್ತವೆ ಗ್ರಾಮದ ಪಟೇಲ್ ಶ್ಯಾನುಭೋಗರು ಹಂದಿಗಳನ್ನು ಸಾಕುವವರಿಗೆ ಎಚ್ಚರಿಕೆ ಕೊಟ್ಟು ಅವುಗಳ ಕಾಟವನ್ನು ತಪ್ಪಿಸುತ್ತಾರೆಂದು ಪ್ರಜೆಗಳು ಕೋರುತ್ತಾರೆ.

ವಿದೇಶ ವೃತ್ತಾಂತಗಳು.

ಚೀಣಾರಾಜ್ಯಕ್ಕೆ ಸೇರಿದ ಜೇಚುವಾನ್ ಎಂಬ ವಿಭಾಗದೊಳಗೆ ದರೋಡೆಕೋರರ ಹಾವಳಿಯು ಕಳೆದ ವರುಷ ವಿಶೇಷವಾಗಿದ್ದದ್ದರಿಂದ ಸರ್ಕಾರದವರು 21,000 ಜನರನ್ನು ಹಿಡಿದು ಕಡಿಸಿಹಾಕಿದರೆಂದು ಹೇಳುತ್ತಾರೆ.

ಫ್ರೆಂಚರ ಟಾಲ್ಸ್ ಎಂಬಾತನು 39 ದಿನಗಳು ತನ್ನ ವಿಮಾನದಲ್ಲಿ ಪ್ರಯಾಣಮಾಡಿ ಅಂತರಿಕ್ಷದಲ್ಲಿ 13,000 ಮೈಲಿ ಸಂಚಾರಮಾಡಿರುತ್ತಾನೆ. ಇದುವರೆಗೆ ವಿಮಾನ ಸಂಚಾರಮಾಡಿರುವವರಲ್ಲಿ ಈತನೇ ಅಪಾಯಹೊಂದದೆ ಬಹು ದೂರ ಪ್ರಯಾಣಮಾಡಿದವನು

ಸೂರ್ಯ ಬಿಂಬದಲ್ಲಿ ಅನೇಕ ಮಚ್ಚೆಗಳಿರುವವೆಂದು ಬಹಳ ಜನ ಖಗೋಳ ಶಾಸ್ತ್ರಜ್ಞರು ನಂಬುತ್ತಾರೆ. ಅವುಗಳ ಪೈಕಿ ಒಂದು ಮಚ್ಚೆಯು 100,936,700 ಚದರ ಮೈಲಿಗಳಷ್ಟು ವಿಸ್ತಾರವಾಗಿರುವದೆಂದು ಅಮೇರಿಕ ದೇಶದ ಒಬ್ಬ ಶಾಸ್ತ್ರಜ್ಞನು ಕಂಡುಹಿಡಿದಿರುತ್ತಾನೆ

ಫಾರ್ಮೋಸಾ ದ್ವೀಪದಲ್ಲಿ ವೈಸ್‌ರಾಯರನ್ನು ಕೊಲ್ಲಬೇಕೆಂದು ಕೆಲವು ಜನರು ಸೇರಿ ಫಿತೂರಿ ಮಾಡಿದರು. ಜಪಾನ್ ಸರ್ಕಾರದವರು ಆ ಪೈಕಿ 20 ಜನರನ್ನು ಹಿಡಿದು ಕೆಲವು ವಾರಗಳ ಹಿಂದೆ ಕೊಲ್ಲಿಸಿದ್ದರು. ಈಚೆಗೆ ಸಿಕ್ಕಿದ 13 ಜನರನ್ನು ಕಳೆದ ವಾರ ಗಲ್ಲಿಗೆ ಹಾಕಿಸಿರುತ್ತಾರೆ.

ಇಂಗ್ಲೆಂಡಿನಲ್ಲಿ ಆಡತಕ್ಕ ಪ್ರತಿಯೊಂದು ನಾಟಕವನ್ನೂ ಪರಿಶೀಲನೆ ಮಾಡಿ ಬಹಿರಂಗವಾಗಿ ಆಡುವದಕ್ಕೆ ಯೋಗ್ಯವಾಗಿದೆಯೋ ಇಲ್ಲವೋ ಎಂಬುದನ್ನು ಗೊತ್ತುಮಾಡುವದಕ್ಕಾಗಿ ಇಂಗ್ಲಿಷ್ ಸರ್ಕಾರದವರು ಜಾರ್ಜ್ ಸ್ಟ್ರೀಕ್ ಸ್ಟ್ರೀಟ್ ಎಂಬಾತನನ್ನು ನೇಮಿಸಿರುತ್ತಾರೆ.

ಕಳೆದ ವರುಷ ಪ್ರಪಂಚದ ಎಲ್ಲಾ ಗಣಿಗಳಲ್ಲೂ 126¾ ಕೋಟಿ ರೂಪಾಯಿನ ಚಿನ್ನ ಉತ್ಪತ್ತಿಯಾಯಿತೆಂದೂ (ಅಂದರೆ, ಹಿಂದಿನ ವರುಷದ ಸುಮಾರು 3¼ ಕೋಟಿಯಷ್ಟು ಕಡಮೆ), ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೊಳಗೆ 170 ಲಕ್ಷ ರೂಪಾಯಿ ತೂಕದಷ್ಟು ಬೆಳ್ಳಿಯನ್ನು ಗಣಿಗಳಿಂದ ತೆಗೆದರೆಂದೂ ಪ್ರಕಟವಾಗಿದೆ.

ಬಲ್ಗೇರಿಯಾ ಪಾರ್ಲಿಮೆಂಟು ಕಳೆದ ಶುಕ್ರವಾರ ಪ್ರಾರಂಭವಾದಾಗ ದೊರೆಯು ಸಭೆಮನೆಗೆ ಹೋಗಿ ಶ್ರೀಸಿಂಹಾಸನವನ್ನು ಅಲಂಕರಿಸಿದನು. ಸಭೆ ಮನೆಯಲ್ಲಿದ್ದ ಒಂದು ಗುಂಪಿನ ಮೆಂಬರುಗಳು ಏಕಕಾಲದಲ್ಲಿ ಎದ್ದು ನಿಂತು “ದೊರತನವು ನಿರ್ಮೂಲವಾಗಲಿ” ಎಂದು ಕೂಗಿಕೊಂಡು, ಸಭೆಮನೆಯಿಂದ ಹೊರಟುಹೋದರು.

ಚೀಣಾರಾಜ್ಯದಲ್ಲಿ ಅನಾಯಕ ಪಾಳ್ಯದವರು ಹೆಚ್ಚಿ ಪುನಃ ಅಲ್ಲಲ್ಲಿ ಗಲಭೆಯಾಗುತ್ತಿದೆ ಸರ್ಕಾರದವರಿಗೂ ಅವರಿಗೂ ಅನೇಕ ಕಡೆ ಯುದ್ಧವಾಯಿತು. ಉಭಯ ಪಕ್ಷದವರೂ ಶತ್ರುಗಳನ್ನು ಕೊಂದುಹಾಕುತ್ತಿರುವರು. ಚೀಣಾರಾಜ್ಯದಲ್ಲಿ ರೈಲುರಸ್ತೆ ಹಾಕಿಕೊಳ್ಳಬಹುದೆಂದು ಚೀಣೆಯವರಿಗೂ ಜರ್ಮನಿಯವರಿಗೂ ಒಪ್ಪಂದವು ನಡೆದಿರುತ್ತದೆ.

ಯುದ್ಧಕಾಲದಲ್ಲಿ ಶತ್ರುಗಳ ಮೇಲೆ ಹೊಡೆಯುವ ಗುಂಡುಗಳಿಗೆ ತುಂಬುವದಕ್ಕಾಗಿ ಒಂದು ವಿಧ ಮದ್ದನ್ನು ಕಂಡುಹಿಡಿದಿರುತ್ತಾರೆ. ಈ ಗುಂಡುಗಳು ಒಡೆದ ಕೂಡಲೆ ಸುತ್ತಮುತ್ತ ಇರುವ ಜನರನ್ನು ಕೊಂದುಹಾಕದೆ ಅವರಿಗೆ ಕೆಲವು ಗಂಟೆಯ ಕಾಲ ನಿದ್ರೆಬರುವಂತೆ ಮಾಡುವವು ಈ ಸಂಗತಿಯನ್ನು ಪ್ರಷ್ಯಾರಾಜ್ಯದ ಯುದ್ಧದ ಇಲಾಖೆಯವರು ವಿಚಾರಮಾಡುತ್ತಿದಾರೆ.

ಟರ್ಕಿಯವರು ಫ್ರಾನ್ಸ್ ರಾಜ್ಯದವರಿಂದ ಸಾಲವನ್ನು ಪಡೆದು ಆ ಹಣದಿಂದ ಯುದ್ಧದ ಹಡಗುಗಳನ್ನು ಕೊಂಡು ಕೊಂಡಿರುತ್ತಾರೆ. ಅವರು ಮುಂದಿನ ಏಪ್ರೆಲ್ ತಿಂಗಳಲ್ಲಿ ಗ್ರೀಸ್ ರಾಜ್ಯದವರ ಮೇಲೆ ಪುನಃ ಯುದ್ಧವನ್ನು ಮಾಡಬೇಕೆಂದಿರುವದರಿಂದ ತಾವು ಸಾಲಕೊಟ್ಟಿರುವ ಹಣವು ವಾಪಸು ಬರುವದೋ ಇಲ್ಲವೋ ಎಂದು ಫ್ರಾನ್ಸಿನವರು ಆತಂಕಪಡುತ್ತಿದಾರೆ.

ಇಂಗ್ಲಾಂಡಿನಲ್ಲಿ ಕ್ರಾಫರ್ಡ್ ಎಂಬ ಶ್ರೀಮಂತನು ತಾನು ಬದುಕಿದ್ದಾಗ್ಗೆ ತಮ್ಮ ಸೀಮೆಯಲ್ಲಿ ಕಾಲಾನುಗುಣ್ಯವಾಗಿ ಉಪಯೋಗಿಸುತ್ತಿದ್ದ ಬೇರೆ ಬೇರೆ ಜಾತಿಯ ತಲೆಚೀಟಿ (ಸ್ಟಾಂಪು) ಗಳನ್ನು ಕೂಡಿಸಿಟ್ಟಿದ್ದನು. ಆತನ ಮರಣಾನಂತರ ಅವನ ವಾರಸುದಾರರು ಅವುಗಳನ್ನು ಮಾರಿಬಿಟ್ಟರು. ಒಬ್ಬ ವ್ಯಾಪಾರಿಯು ಮೂರು ಲಕ್ಷ ರೂಪಾಯಿಗೆ ಅವುಗಳನ್ನೆಲ್ಲಾ ಕೊಂಡುಕೊಂಡಿರುತ್ತಾನೆ.

ಟ್ರಿಪೋಲಿಯಲ್ಲಿ ಇಟಲಿಯವರಿಗೆ ಅರಬ್ಬೀ ಪ್ರಜೆಗಳು ಇನ್ನೂ ಸರಿಯಾಗಿ ಸ್ವಾಧೀನವಾಗಲಿಲ್ಲ. ಆಗಾಗ್ಗೆ ಯುದ್ಧಗಳೂ ಕಡಿದಾಟಗಳೂ ನಡೆಯುತ್ತಲೇ ಇರುವವು. ಮಹರೂಗ ಎಂಬ ಸ್ಥಳದಲ್ಲಿ ಹಿಂದಿನ ವಾರ ಯುದ್ಧ ನಡೆದು ಅರಬ್ಬಿಯವರು ಸಂಪೂರ್ಣವಾಗಿ ಸೋಲಿಸಲ್ಪಟ್ಟರು. ಇಟಲಿಯವರ ಕಡೆ ಒಬ್ಬ ಹುದ್ದೇದಾರನೂ, 16 ಮಂದಿ ಸಿಪಾಯಿರೂ ಮೃತಪಟ್ಟರು; 80 ಮಂದಿಗೆ ಗಾಯಗಳಾದವು.

ಅಮೇರಿಕದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ಮನೆಯು ಹತ್ತಿಕೊಂಡಿತು. ಆ ಮನೆಯಲ್ಲಿದ್ದವರು ಗಾಬರಿಪಟ್ಟು ಕಿಟಕಿಯ ಮೂಲಕ ಎತ್ತರವಾದ ಮಹಡಿಯಿಂದ ಕೆಳಕ್ಕೆ ಧುಮುಕಿದರು. ಕೆಳಗೆ ಬಿದ್ದವರ ಪೈಕಿ ಬಹಳ ಪೆಟ್ಟುತಗಲಿದ್ದರಿಂದ ಐದು ಜನ ಗಂಡಸರೂ, ಮೂವರು ಹೆಂಗಸರೂ ಮೃತಪಟ್ಟರು. ಕಷ್ಟಕಾಲದಲ್ಲಿ ವಿವೇಕಶೂನ್ಯರಾಗಿ ಕೆಲಸ ಮಾಡುವದರಿಂದ ಇಂಥಾ ಅನರ್ಥಗಳು ಸಂಭವಿಸುತ್ತವೆ.

ಫ್ರಾನ್ಸ್ ದೇಶದ ಒಬ್ಬ ಯುವಕನು ಮದುವೆ ಮಾಡಿಕೊಳ್ಳಬೇಕೆಂಬ ಅಭಿಲಾಷೆಯಿಂದ ಒಬ್ಬ ಹೆಂಗಸನ್ನು ತನ್ನ ಮನೆಗೆ ಕರೆದುಕೊಂಡು ಬಂದನು. ಅವಳನ್ನು ಮದುವೆಯಾಗುವದು ಆ ಯುವಕನ ತಂದೆಗೆ ಇಷ್ಟವಿಲ್ಲದ್ದರಿಂದ ಒಂದು ದಿನ ಜಗಳ ಬಂದಾಗ ತಂದೆಯು ಬಂದೂಕವನ್ನು ತೆಗೆದುಕೊಂಡೂ ತನ್ನ ಮಗನನ್ನು ಗುಂಡಿನಿಂದ ಹೊಡೆದನು. ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದರು, ಅವನ ಗಾಯಗಳು ಗುಣಹೊಂದದೆ ಆ ಯುವಕನು ಮರಣವನ್ನು ಹೊಂದಿದನು.

ದಕ್ಷಿಣ ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ಸಂಸ್ಥಾನದಲ್ಲಿ ಈಗ್ಗೆ ಕೆಲವು ಕಾಲದಿಂದ ದಂಗೆಯುಂಟಾಗಿ ನಾನಾವಿಧದ ಕಷ್ಟನಷ್ಟಗಳು ಸಂಭವಿಸಿರುತ್ತವೆ. ಗವರ್ನ್‌ಮೆಂಟ್ ಪಕ್ಷದವರಿಗೂ, ದಂಗೆಯೆದ್ದಿರುವ ಪ್ರಜೆಗಳ ಮುಖಂಡರಿಗೂ ಕಳೆದ ವಾರ ಮೂರು ದಿನ ಏಕಪ್ರಕಾರವಾದ ಯುದ್ಧ ನಡಿಯಿತು. ಅದರಲ್ಲಿ 1,000 ಜನರು ಮೃತಪಟ್ಟರು. ಯುದ್ಧವು ಓಜಿನಾಗಾ ಎಂಬ ಸ್ಥಳದಲ್ಲಿ ಇನ್ನೂ ನಡೆಯುತ್ತಲೇ ಇದೆ. ಪ್ರಜಾಪಕ್ಷದವರು ನುವೇವಾ ಲಾರೆಡೋ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು, ಹಲ್ಲಾ ಹತ್ತುವುದಕ್ಕೆ ಬಹಳ ಸಾಹಸಪಡುತ್ತಿರುವರು.

ಇಂಗ್ಲೆಂಡಿಗೆ ಸೇರಿದ ಬರ್ಮಿಂಗ್ಹಾಂ ಪಟ್ಟಣದಲ್ಲಿ 12 ವಯಸ್ಸಿನ ಒಬ್ಬ ಹುಡುಗಿಗೆ ಎಷ್ಟು ಪ್ರಯತ್ನಪಟ್ಟು ಶಿಕ್ಷೆಮಾಡಿ ಹೇಳಿಕೊಡುತ್ತಾ ಬಂದಾಗ್ಯೂ ಅವಳು ಬಲಗಡೆಯಿಂದ ಎಡಗಡೆಗೇನೇ ಬರೆಯುತ್ತಾ ಬಂದಳು ಅದಕ್ಕೆ ಕಾರಣವೇನಾಗಿರಬಹುದೆಂದು ಡಾಕ್ಟರುಗಳು ಎಕ್ಸ್ ರೇಸ್ ಎಂಬ ನವೀನ ಯಂತ್ರ ಸಹಾಯದಿಂದ ಆ ಹುಡುಗಿಯ ಅಂಗಾಂಗಗಳನ್ನೆಲ್ಲಾ ಪರೀಕ್ಷೆ ಮಾಡಿ ನೋಡಿದಾಗ ಆ ಹುಡುಗಿಗೆ ಹೃದಯವು ಬಲ ಎದೆಯಲ್ಲಿದೆ ಎಂದೂ ಇತರ ಕೋಶಗಳೂ ಕೂಡ ಸ್ಥಳ ಬದಲಾವಣೆಯಾಗಿರುವವೆಂದೂ ಗೊತ್ತಾಯಿತು. ಇದಕ್ಕಾಗಿಯೇ ಅವಳು ಆ ರೀತಿ ಬರೆಯುವಳೆಂದು ತಿಳಿಸಿದರು.

ಉತ್ತರ ಅಮೇರಿಕದ ಒಂದು ಪಟ್ಟಣದಲ್ಲಿ ನೀರಿನ ಕ್ಷಾಮವು ಪ್ರಾಪ್ತವಾಗಿ ಐದು ದಿನಗಳವರೆಗೂ ಪ್ರಜೆಗಳ ಸ್ನಾನಪಾನಾದಿಗಳಿಗೆ ಒಂದು ತೊಟ್ಟು ನೀರು ಸಿಕ್ಕದೆ ಬಹಳ ತೊಂದರೆ ಪಟ್ಟರು. ಹೀಗಿರುವಲ್ಲಿ ಆ ಪಟ್ಟಣದ ಒಂದು ಭಾಗದಲ್ಲಿ ಬೆಂಕಿ ಬಿದ್ದು ಒಂದು ಮೈಲಿ ದೂರದಿಂದ ನೀರನ್ನು ಒದಗಿಸಿದರೂ ಅವರ ಶ್ರಮವು ಸಾರ್ಥಕವಾಗದೆ ಸುಮಾರು ಇಪ್ಪತ್ತು ಭಾರೀ ಮನೆಗಳು ಸುಟ್ಟು ಬೂದಿಯಾದವು ಇದರಿಂದ ಮೂವತ್ತು ಲಕ್ಷ ರೂಪಾಯಿನ ಆಸ್ತಿ ನಷ್ಟವಾಗಿರುವದೆಂದು ತಿಳಿದು ಬಂದಿರುತ್ತದೆ. ಐದನೇ ದಿನ ಸಾಯಂಕಾಲ ನೀರಿನ ಸಹಾಯವು ದೊರೆತದ್ದರಿಂದ ಜನರಿಗೆ ಸ್ವಲ್ಪ ನೆಮ್ಮದಿಯುಂಟಾಯಿತು.

ಇಂಗ್ಲೆಂಡಿನ ಎಲ್ಲಾ ಭಾಗಗಳಲ್ಲಿಯೂ ಯೂರೋಪ್ ಖಂಡದ ಕೆಲವು ಕಡೆಗಳಲ್ಲೂ ವಿಶೇಷವಾಗಿ ಹಿಮ ಸುರಿದು ಜನರಿಗೆ ಅಪಾರವಾದ ಕಷ್ಟನಷ್ಟಗಳು ಸಂಭವಿಸಿರುತ್ತವೆ. ಕೆಲವು ಭಾಗಗಳಲ್ಲಿ ರಸ್ತೆಗಳು ಸಂಪೂರ್ಣವಾಗಿ ಕೆಟ್ಟುಹೋಗಿ ಕೆಲಸಕಾರ್ಯಗಳಿಗೂ ಜನಗಳ ಸಂಚಾರಕ್ಕೂ ಅಡ್ಡಿಯಾಗಿದೆ. ಒಂದು ಕಡೆ ಚಳಿಯ ಕೊರೆತವನ್ನು ತಡೆಯಲಾರದೆ ಹದಿನಾಲ್ಕು ಜನರು ಮೃತಪಟ್ಟರು. ಸ್ವಿಟ್ಜರ್‌ಲ್ಯಾಂಡಿನಲ್ಲಿ ವಿನೋದಾರ್ಥವಾಗಿ ಸಂಚಾರ ಮಾಡುತ್ತಿದ್ದವರ ಪೈಕಿ ನಾಲ್ಕು ಜನರು ಹಿಮಗಡ್ಡೆಯ ಪ್ರವಾಹಕ್ಕೆ ಸಿಕ್ಕಿ ಸತ್ತುಹೋದರು. ಫ್ರಾನ್ಸ್ ಮತ್ತು ಜರ್ಮನಿ ರಾಜ್ಯಗಳಲ್ಲಿಯೂ ಈ ವಿಧವಾದ ಅನಾಹುತಗಳು ಸಂಭವಿಸಿರುತ್ತವೆ.

ಜಪಾನ್ ರಾಜ್ಯಕ್ಕೆ ಸೇರಿದ ಆಮೋರಿ ಮತ್ತು ಹೊಕ್ಕೈಡೋ ಎಂಬ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮವು ಪ್ರಾಪ್ತವಾಗಿದೆ. ಕಳೆದ 1869ನೇ ಇಸವಿಯಿಂದೀಚೆಗೆ ಇಂಥಾ ಭಯಂಕರವಾದ ಕ್ಷಾಮವು ಪ್ರಾಪ್ತವಾಗಿರಲಿಲ್ಲವಂತೆ. ಸಾವಿರದಲ್ಲಿ ಒಂದು ಪಾಲಿನಷ್ಟಾದರೂ ಈ ಸಲ ಬೆಳೆ ಆಗಲಿಲ್ಲ. ಸಮುದ್ರದಲ್ಲಿ ಮೀನುಗಳು ಸಿಕ್ಕುವುದೂ ಪ್ರಯಾಸವಾಗಿದೆ. ಜೀವನಕ್ಕೆ ಮಾರ್ಗವಿಲ್ಲದೆ ತಂದೆತಾಯಿಗಳು ತಮ್ಮ ಹೆಣ್ಣುಮಕ್ಕಳನ್ನು ಮಾರಾಟ ಮಾಡುತ್ತಿದಾರೆ. ಅನೇಕ ಹೆಣ್ಣುಮಕ್ಕಳು ಆ ಪ್ರಾಂತ್ಯದಿಂದ ಅನ್ಯದೇಶಗಳಿಗೆ ಹೋಗುವುದಕ್ಕೋಸ್ಕರ ರಾಜಧಾನಿಗೆ ಹೋಗುತ್ತಿರುವರು ಸರ್ಕಾರದವರು ಈ ಕ್ಷಾಮ ನಿವಾರಣೆಗಾಗಿ 90 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆಂದು ತಿಳಿಯುವುದು

ಕಳೆದ ವಾರ ನ್ಯೂಯಾರ್ಕ್ ಪಟ್ಟಣದ ಒಂದು ಹೋಟಲಿನೊಳಕ್ಕೆ ಐದು ಜನ ಆಯುಧಪಾಣಿಗಳಾದ ಕಳ್ಳರು ನುಗ್ಗಿ ಎದುರುಗೊಳ್ಳುವದಕ್ಕೆ ಬಂದ ಹೋಟಲಿನ ಯಜಮಾನನನ್ನು ಬಂದೂಕದಿಂದ ಹೊಡೆಯುತ್ತೇವೆಂದು ಹೆದರಿಸಿದರು. ಅವರು ಒಂದು ಕೊಠಡಿಯನ್ನು ಪ್ರವೇಶಿಸಿ ಅಲ್ಲಿ ಊಟ ಮಾಡುತ್ತಿದ್ದ ಹದಿನೈದು ಜನರನ್ನು ಕೊಂದುಹಾಕುತ್ತೇವೆಂದು ಹೆದರಿಸಿ ನಿಲ್ಲಿಸಿದರು. ಕಳ್ಳರ ಪೈಕಿ ಇಬ್ಬರು ಬಂದೂಕವನ್ನು ಬಾರುಮಾಡಿ ಹಿಡಿದುಕೊಂಡರು. ಉಳಿದ ಮೂವರು ಎಲ್ಲರನ್ನೂ ಶೋಧನೆಮಾಡಿ ಅವರಲ್ಲಿದ್ದ ಬೆಲೆಬಾಳುವ ವಸ್ತುಗಳನ್ನೂ, ಹಣವನ್ನೂ, ಗಡಿಯಾರಗಳನ್ನೂ ಕಸಿದುಕೊಂಡು ಕ್ಷಣಮಾತ್ರದಲ್ಲಿ ಎಲ್ಲರೂ ಓಡಿಹೋದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1913 ನೇ ಇಸವಿ ಡಿಸೆಂಬರ್ 24 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	ರೂ	5,96,775
,, (2) ಡಿಪಾಜಟ್ಟುಗಳು	,,	3,70,225
,, (3) ಇತರೆ	,,	3,145
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,70,145

ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	1,11,527
,, (2) ಖಾತೆ ಮತ್ತು ಇತರ ಸಾಲಗಳು	,,	3,85,996
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,20 900
,, (4) ಇನ್ವೆಸ್ಟ್‌ಮೆಂಟುಗಳು	,,	3,25,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	1,08,083
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6,632
,, (7) ಇತರೆ	,,	11,917
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,70,145

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಪುರೋಭಿವೃದ್ಧಿಯ ಕೂಟವು.

ದಾವಣಗೆರೆ ತಾಲ್ಲೂಕು ಮುದಹದಡಿಗ್ರಾಮ

ಶ್ರೀಮನ್ ದಿವಾನ್ ಸಾಹೇಬ್ ಬಹದ್ದೂರವರ ಸನ್ನಿಧಾನದಿಂದ ದಯಪಾಲಿಸೋಣವಾದ ಕಾಗದ ಈ 18 ರಲ್ಲಿ ಪಾವತಿ ಆದದ್ದನ್ನು ನಮ್ಮ ಗ್ರಾಮದ ಮುಖಂಡರಿಂದಲೂ, ಆಸ್‌ಪಾಸ್ ಪಟೇಲರುಗಳಿಂದಲೂ ಮ॥ ಹುಜಗಿಮಠದ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಸ್ಕೂಲಿನಲ್ಲಿ ಒಂದು ಸಭೆ ಏರ್ಪಡಿಸಲ್ಪಟ್ಟು ಸದರಿ ಕಾಗದ ಒಡೆದು ನೋಡಲು, ಮೊದಲೇ ದಿವಾನ್ ಬಹದ್ದೂರವರು ಈ ಗ್ರಾಮಕ್ಕೆ ದಯಮಾಡಿಸಿದ ಜ್ಞಾಪಕಾರ್ಥವಾಗಿ ಮಾಡಲ್ಪಟ್ಟ ಸಮಾರಾಧನೆಯ ವರ್ತಮಾನವನ್ನು ಕೇಳಿ ಪ್ರೀತಿಪೂರ್ವಕವಾಗಿ ದಯಪಾಲಿಸಿದ ಸದರಿ ಕಾಗದವನ್ನು ಬಡರೈತರಾದ ನಾವು ಆಹ್ಲಾದರದಿಂದ ಶಿರೋಧಾರಣಮಾಡಿಕೊಂಡೆವು

ಮ॥ ಸ್ಕೂಲ್ ಮಾಸ್ಟರ್ ಆರ್ ಸಿದ್ದಲಿಂಗಯ್ಯನವರು ಗ್ರಾಮದ ಮತ್ತು ಮನುಷ್ಯನ ಪುರೋಭಿವೃದ್ಧಿಗೆ ವಿದ್ಯೆಯೇ ಮೂಲಾಧಾರವೆಂಬುದನ್ನು ಪ್ರತ್ಯಕ್ಷ ತೋರ್ಪಡಿಸಿ, ಈ ಗ್ರಾಮವು ವಿದ್ಯಾವಿಷಯದಲ್ಲಿ ಕೇವಲ ಹಿಂದುಳಿದಿರುವುದರಿಂದ ಸಮಸ್ತರೂ ತಮ್ಮ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿಕೊಳ್ಳಬೇಕೆಂಬ ಕಟ್ಟಳೆಯನ್ನು ಅಂಗೀಕಾರಮಾಡಿಕೊಂಡದ್ದಕ್ಕೆ ಅಧ್ಯಕ್ಷರವರು ಹಾಗೂ ಸಭೆಯವರೆಲ್ಲಾ ಅನುಮೋದಿಸಿದರು

ಅದೇ ಸಮಯದಲ್ಲಿ ಆಗಮಿಸಿದ್ದ ಹರಿಹರದ ಮ॥ ತಿರುಪತಿ ವಾಸುದೇವಾಚಾರ್ಯರು ಸರಸವಾದ ಭಾಷಣದಿಂದ ವ್ಯವಸಾಯಕ್ಕೆ ಮುಖ್ಯಸಾಧನವಾದ ಸ್ಟೀಮ್ ಪ್ಲೋ ಎಂಬ ಯಂತ್ರವನ್ನು ಉಪಯೋಗಿಸುವುದರಿಂದಾಗುವ ಪ್ರಯೋಜನವನ್ನೂ, ಇದನ್ನು ಹೊಂದತಕ್ಕ ಬಗೆಯನ್ನೂ ತಿಳಿಸಿದ್ದಕ್ಕೆ ಅಧ್ಯಕ್ಷರಾದ ಮಹದೇವಯ್ಯನವರು ತಾವು ಈ ಯಂತ್ರವನ್ನು ತರಿಸುವ ಬಗೆ ಸ್ವತಹ 5,000 ರೂಪಾಯನ್ನೂ, ತಮ್ಮ ಸಹಾಯದಿಂದ 5,000 ರೂಪಾಯನ್ನೂ, ಅಂದರೆ ಜುಮ್ಲಾ 10,000 ರೂಪಾಯನ್ನು ಕೊಡಲು ವಾಗ್ದಾನಮಾಡಿದರು ಇದಕ್ಕೆ ಸದರಿ ಮ॥ ವಾಸುದೇವಾಚಾರ್ಯರು—ಹಾಗಾದರೆ ನಾನು ಸುತ್ತಮುತ್ತಲಿರುವ ಗ್ರಾಮಸ್ಥರಿಂದ ಷೇರುಗಳನ್ನು ಹಾಕಿಸಿ ನನ್ನ ಕೈಯಲ್ಲಾದ ಮಟ್ಟಿಗೆ ಧನವನ್ನು ಶೇಖರಿಸುವೆನೆಂತಲೂ, ಉಳಿದ ಹಣಕ್ಕೆ ಸರ್ಕಾರದವರ ಪ್ರೀತಿಯನ್ನು ಸಂಪಾದಿಸಿ ಪಡೆಯಬೇಕೆಂತಲೂ, ಇದಕ್ಕಾಗಿ ಒಂದು ಲಿಮಿಟೆಡ್ ಸಂಘವನ್ನು ಏರ್ಪಡಿಸಿ ಮೂಲಧನದ ಆಧಾರಕ್ಕಾಗಿ ಸರ್ಕಾರದಲ್ಲಿ ರಿಜಿಸ್ಟರ್ ಆಗಬೇಕೆಂತಲೂ ಅಂಗೀಕಾರ ಮಾಡಿಕೊಂಡದ್ದಕ್ಕೆ ಸಮಸ್ತರೂ ಅನುಮೋದಿಸಿದರು

ಮ॥ ಪಟೇಲ್ ವೀರಪ್ಪನವರು ಏಕಮತ್ಯದಿಂದಾಗುವ ಸುಖವನ್ನೂ, ಸರ್ಕಾರದವರಲ್ಲಿ ವರ್ತಿಸಬೇಕಾದ ವರ್ತನೆಗಳನ್ನೂ, ಹೊರಗಣ ಪತ್ರಿಕೆಗಳನ್ನು ತರಿಸುವುದರಿಂದಾಗುವ ಪ್ರಯೋಜನಗಳನ್ನೂ ಕುರಿತು ಉಪನ್ಯಾಸ ಮಾಡಿದ್ದಕ್ಕೆ ಅಧ್ಯಕ್ಷರು ಮೊದಲಾಗಿ ಸಮಸ್ತರೂ ಒಪ್ಪಿ ಅಧ್ಯಕ್ಷರ ಅಪ್ಪಣೆ ಪ್ರಕಾರ ಪತ್ರಿಕೆಗಳನ್ನು ತರಿಸಲು ಈ ದಿನವೇ ತಮಗೆ ಬೇಕಾಬೇಕಾದ ಪತ್ರಿಕೆಗಳಿಗೆ ಬರೆಸಿರುತ್ತಾರೆ ಆಗ ಸ್ಕೂಲ್ ಮಾಸ್ಟರು ಅಧ್ಯಕ್ಷರಾದ ಮ॥ ಮಹದೇವಯ್ಯನವರು ತಮ್ಮ ಗ್ರಾಮದಲ್ಲಿ ಈ ಮೊದಲೇ ಕಟ್ಟಿಸಿರುವ ಧರ್ಮಛತ್ರದ ಜೊತೆಗೆ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿಕೊಡುವರೆಂದು ನಂಬಿರುತ್ತೇನೆಂಬವಾಗಿ ಅಂಗೀಕಾರ ಮಾಡಿಕೊಂಡರು ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಶ್ರೇಯಃ ಪ್ರಾರ್ಥನೆಗಳ ಹಾಡುಗಳನ್ನು ಸ್ಕೂಲ್ ವಿದ್ಯಾರ್ಥಿಗಳಿಂದ ಹಾಡಿಸಲ್ಪಟ್ಟು ಗಂಧ ಪುಷ್ಪ ತಾಂಬೂಲಾದಿಗಳಿಂದ ಸಭೆಯು ವಿಸರ್ಜಿಸಲ್ಪಟ್ಟಿತು

ಅರಸುಮಕ್ಕಳ ಸಂಚಾರ

ಮೈಸೂರು ಸಂಸ್ಥಾನದ ರಾಜವರ್ಗದ ಅರಸುಮಕ್ಕಳ ಕುವರರುಗಳಾದ ಸ್ಕೂಲ್ ವಿದ್ಯಾರ್ಥಿಗಳಾದ ಲೇಟ್ ದೇವಪಾಧೀವರ ಮೊಮ್ಮಕ್ಕಳಾದ ಡಿ ಸಿ ನಂಜರಾಜ ಬಹದ್ದೂರ್ ಯವರು, ಎಂ ಡಿ ವೆಂಕಟೆ ಅರಸಿನವರು, ಪಿ ಬಸವರಾಜೆಅರಸಿನವರು, ಎಂ ಲಿಂಗರಾಜೆ ಅರಸಿನವರು, ಆರ್ ಪುಟ್ಟರಾಜೆ ಅರಸಿನವರು, ಕೆ ಬಸವರಾಜೆ ಅರಸಿನವರು, ಪಿ ಲಿಂಗರಾಜೆ ಅರಸಿನವರು, ಕೆ ನಂಜರಾಜೆ ಅರಸಿನವರು, ಟಿ ಎಸ್ ಗೋಪಾಲರಾಜೆ ಅರಸಿನವರು, ಎ ಸಿ ಚಾಮರಾಜೆ ಅರಸಿನವರು, ತಮ್ಮ ಉಪಾಧ್ಯಾಯರಾದ ಮ॥ ಡಿ ವೆಂಕಟನಂಜಪ್ಪನವರೇ ಮುಂತಾದ ಮಿತ ಪರಿವಾರದೊಡನೆ ಡಿಸೆಂಬರ್ ತಾ 28 ರಲ್ಲಿ ಸಕಲೇಶಪುರಕ್ಕೆ ಚಿತ್ತೈಸಿ ತಮ್ಮ ಈ ನೂತನವಾದ ಮೈಸೂರು ದೇಶವನ್ನು ಪೂರ್ವ ಭಾಗದಿಂದ ಪಶ್ಚಿಮ ಗಡಿ ವರೆಗೆ ನೋಡತಕ್ಕ ಮುಖ್ಯಸ್ಥಳಗಳನ್ನು ಆಯಾಯ ಮಲ್ನಾಡು ದೇಶದ ಜನಗಳ ಸ್ಥಿತಿ ಗತಿಗಳನ್ನು ಖುದ್ದು ನೋಡಲು 3 ಘಂಟೆಗೆ ಮಂಜರಾಬಾದು ಕೋಟೆಗೆ ಸಕಲೇಶಪುರದ ಡಾಕ್ಟರ್ ಎಫ್ ಪರ್ನಾಂಡಿಸರು ತಾಲ್ಲೂಕು ಆಫೀಸರುಗಳೊಡಗೂಡಿ ದಯಮಾಡಿದರು ದೋಣಿಗಲ್ ಕಾಫಿ ಪ್ಲಾಂಟರು ಮ॥ ಡಿ ನಂಜೇಗೌಡರು ಮುಂತಾಗಿ ಕೋಟೆಗೆ ಬಹು ವಿಶ್ವಾಸದಿಂದ ಮರ್ಯಾದಾ ಪೂರ್ವಕವಾಗಿ ಬರಮಾಡಿ ಕರೆದುಕೊಂಡು ಹೋಗಿ ನೋಡತಕ್ಕ ಸ್ಥಳ ಮುಂತಾದ ಕೋಟೆ ಚರಿತ್ರೆ ಮುಂತಾದ ವಿಷಯ ಹೇಳಿ ತೋರಿಸಿದನಂತರ ಸರ್ವರೂ ಬಹು ಸಂತೋಷದಿಂದ ವಾಪಸು ತಿರುಗಿ ದೋಣಿಗಲ್ ಕಾಫಿ ಪ್ಲಾಂಟರು ಮ॥ ಡಿ ನಂಜೇಗೌಡ್ರ ಮನೆಗೆ ದಯಮಾಡಿದರು ಮನೆ ಬಳಿ ಮ॥ ಡಿ ನಂಜೇಗೌಡ್ರ ಅಣ್ಣಂದಿರಾದ ಕಾಫಿ ಪ್ಲಾಂಟರು ಮ॥ ಡಿ ಶಾಂತಮಲ್ಲೇಗೌಡರು ಮರ್ಯಾದೆ ಪೂರ್ವಕವಾಗಿ ಮನೆಗೆ ಬರಮಾಡಿಕೊಂಡು ಕುಶಲ ಪ್ರಶ್ನೆಯಂ ಬೆಳಸುತ್ತಾ ಸರ್ವರನ್ನೂ ಉಚಿತಾಸನಗಳಲ್ಲಿ ಮರ್ಯಾದಿಸಿ ಮಧುರವಾದ ಅಲ್ಪ ಆಹಾರದಿಂದ ತೃಪ್ತಿ ಪಡಿಸಿ ಪೂ ಗಂಧ ತಾಂಬೂಲವನ್ನಿತ್ತು ಸಹೋದರರೀರ್ವರೂ ಅರಸು ಮಕ್ಕಳನ್ನು ಕುರಿತು—ತಾವುಗಳು ಮೈಸೂರು ಸಂಸ್ಥಾನದಿಂದ ಈ ಚಿಕ್ಕವಯಸ್ಸಿನಲ್ಲಿ ವಿದ್ಯಾಭ್ಯಾಸಂಗವನ್ನು ಮಾಡುತ್ತಾ ಇರುವ ಸಮಯದಲ್ಲಿ ಕಾಲವನ್ನು ನಿರೀಕ್ಷಿಸಿ ಇಷ್ಟುದೂರದವರೆಗೆ ದಯಮಾಡಿಸಿ ಈಗಿನಿಂದಲೂ ಅಭಿವೃದ್ಧಿಗೆ ತಕ್ಕಂತೆ ಮಲೆನಾಡು ಪ್ರಜೆಗಳ ಕಷ್ಟಸುಖವನ್ನು ದೇಶಸಂಚಾರಮಾಡಿ ತಿಳಿದುಕೊಂಡು ನಮ್ಮಗಳಿಗೆ ದರುಶನವಿತ್ತುದಕ್ಕಾಗಿ ಸಂತೋಷಿಸಿ, ತಾವುಗಳು ಸಕಲ ವಿದ್ಯೆಯಲ್ಲಿಯೂ ಉತ್ತೀರ್ಣರಾಗಿ ಮುಂದೆ ರಾಜಕಾರ್ಯ ನಿರ್ವಾಹ ಶಕ್ತರಾಗುವಂತೆ ಮೊದಲೆಂದು ಶ್ರೀ ಪರಮೇಶ್ವರನನ್ನು ಪ್ರಾರ್ಥಿಸಿ ತಮ್ಮಗಳನ್ನು ಸ್ವಸ್ಥಳಕ್ಕೆ ಸುಖವಾಗಿ ತಲುಪುವಂತೆ ಅನುಗ್ರಹಿಸಲೆಂದು ಕೋರಿದರು ಅದಕ್ಕೆ ಅರಸು ಕುಮಾರರುಗಳು ತಕ್ಕ ಉತ್ತರವನ್ನಿತ್ತು—ಇಷ್ಟು ದೊಡ್ಡ ಕುಟುಂಬದ ಸಹೋದರರುಗಳಾದ ತಾವು ನಮಗೆ ಮಾಡಿದ ಮರ್ಯಾದೋಪಚಾರಕ್ಕೆ ನಾವು ತುಂಬಾ ಸಂತೋಷ ಭರಿತರಾದೆವು ಎಂದು ಬಹುಸಂತೋಷದಿಂದ ವಂದಿಸಿ ಯಾಲಕ್ಕಿ ಕಾಫಿ ಮೆಣಸು ಮುಂತಾದ್ದು ಬೆಳೆಯತಕ್ಕ ವಿಚಾರವನ್ನೆಲ್ಲಾ ತೋಟಕ್ಕೆ ದಯಮಾಡಿಸಿ ಖುದ್ದು ಪರಾಂಬರಿಸಿ ಬಹಳ ಹರುಷಚಿತ್ತರಾಗಿ ವಂದನೆ ಪ್ರತಿವಂದನೆಗಳಿಂದ ವಾಪಸು ಸಕಲೇಶಪುರಕ್ಕೆ ಪ್ರಯಾಣ ಮಾಡಿದರು

ಮೇಲ್ಕಂಡ ಪ್ಲಾಂಟರುಗಳಾದ ಸಹೋದರರುಗಳು ಭೂರಿ ಜಮೀನ್‌ದಾರರಾಗಿಯೂ, ಡಿಸ್ಟ್ರಿಕ್ಟು ಕಮಿಟಿ ಮೆಂಬರಾಗಿಯೂ, ಹಾರ್ನ್ ಕ್ಯಾಟಲ್ ಷೋವಿನ ಜಡ್ಜರಾಗಿಯೂ, ಸದಾಕಾಲದಲ್ಲಿಯೂ ರಾಜಕಾರ್ಯ ಹಿತಚಿಂತರಾಗಿಯೂ ಬಡಜನಗಳ ಪೋಷಕರಾಗಿಯೂ, ಏಕಮತ್ಯದಿಂದಿರುವದು ಬಹು ಸಂತೋಷಕರವಾಗಿರುತ್ತೆ

ತಾಲ್ಲೋಕು ವರ್ತಮಾನಗಳು

ತರೀಕೆರೆ — ಈ ತಿಂಗಳು 16 ನೇ ತಾರೀಖಿಗೆ ಮಹಾರಾಜರವರು ಕಲ್ಲತ್ತಿಗಿರಿಗೆ ಈ ಮಾರ್ಗವಾಗಿ ಪ್ರಯಾಣಮಾಡುವುದರಿಂದ ಊರಿನ ಪಾರೀಜಾ ಬಹು ಚೆನ್ನಾಗಿ ಮಾಡುತ್ತಾರೆ ರಸ್ತೆ, ಚರಂಡಿಗಳನ್ನೂ, ಪಾಳು ನಿವೇಶನಗಳನ್ನೂ ಶುದ್ಧವಾಗಿಡಲು ಪ್ರಯತ್ನ ಬಹು ತರಾತುರಿಯಿಂದ ನಡೆಯುತ್ತಲಿದೆ ಅಲ್ಲದೆ ಮಹಾಸ್ವಾಮಿಯವರ ಸವಾರಿ ಹೋಗುವ ದಾರಿಯ ಮನೆಗಳಿಗೆ ಸುಣ್ಣ, ಬಣ್ಣ ಬಳಿಯಲು ಅಪ್ಪಣೆಯಾಗಿದೆ ಮತ್ತು ಮರ್ಯಾದೆಯನ್ನು ತೋರಿಸಲು ಅಲ್ಲಲ್ಲೇ ಚಪ್ಪರ ತೋರಣಗಳನ್ನು ಕಟ್ಟಿಸುತ್ತಲೂ, ಇಳುಕೊಳ್ಳುವ ಸ್ಥಳವನ್ನು ನಾನಾ ರೀತಿಯಲ್ಲಿ ಶೃಂಗರಿಸಿ, ಅನುಕೂಲವಾಗುವ ಏರ್ಪಾಡುಗಳನ್ನು ನಡಿಸುತ್ತಲೂ ಇದ್ದಾರೆ ಅಲ್ಲದೆ ಮಹಾಮಾತೃಶ್ರೀಯವರೇ ಮೊದಲಾದ ಪರಿವಾರದವರ ಪೋಷಾಕು ಸವಾರಿಯು ದಯಮಾಡುವದರಿಂದ ಸ್ಟೇಷನ್ನಲ್ಲಿ ಗಾಡಿಯಿಂದ ಮೋಟಾರಿನಲ್ಲಿ ಕುಳಿತು ಮುಸಾಫರಖಾನೆಗೆ ಹೋಗಲು ಅನುಕೂಲಿಸುವಂತೆ ಅವಕ್ಕೆ ತಕ್ಕ ಸನ್ನಾಹಗಳು ನಡೆಯುತ್ತಲಿವೆ—ಈ ಊರಿನ ಕೋರ್ಟಿನಲ್ಲಿ ಬರ ಬರ ಹೆಚ್ಚು ಹೆಚ್ಚಾಗಿ ಕೇಸುಗಳು ದಾಖಲಾಗುತ್ತಲಿವೆ

ಹಾಸನ —ಇಲ್ಲಿ ನಾಳೆಯಿಂದ ಗೋಕಾಯಿಗಳ ಪ್ರದರ್ಶನ ನಡೆಯುವುದು ಮೊನ್ನೆಯಿಂದಲೂ ಎತ್ತು ಹಸು ಮುಂತಾದ ಪ್ರಾಣಿಗಳು ಪ್ರದರ್ಶನಕ್ಕೆ ಬರಲಾರಂಭಿಸಿವೆ ಇದುವರೆಗೆ ಎಷ್ಟು ರಾಸುಗಳು ಬಂದಿವೆ ಎಂಬುದನ್ನು ಪರೀಕ್ಷಿಸಿದರೆ ರಾಸು ಒಂದಕ್ಕೆ ಒಂದಾಣೆ ಸುಂಕ ವಿಧಿಸಿರುವುದು 60 ರೂಪಾಯಿ ಆಗಿರುವುದರಿಂದ ಗೊತ್ತಾಗುತ್ತದೆ ರಾಸುಗಳು ಇನ್ನೂ ಹೆಚ್ಚಾಗಿ ಬಂದು ಸೇರುವವು ನಾಳೆ ಬೆಳಿಗ್ಗೆ ನಮ್ಮ ಡೆಪ್ಯುಟಿ ಕಮಿಷನರವರು ಪ್ರದರ್ಶನವನ್ನು ಪ್ರಾರಂಭಿಸುವರು ಇದು ನಾಳೆಯೂ, ನಾಳಿದ್ದೂ ನಡೆಯುವುದು ಈ ಡಿಸ್ಟ್ರಿಕ್ಟಿನ ಏಳು ತಾಲ್ಲೂಕುಗಳ ಅಮಲ್ದಾರ್ರುಗಳೂ, ಲೋಕಲ್ ಬೋರ್ಡ್ ಮೆಂಬರುಗಳೂ, ಶೇಕ್ದಾರರುಗಳೂ ಕರೆಸಲ್ಪಟ್ಟಿದಾರೆ ಈ ಪ್ರದರ್ಶನಾಂಗವಾಗಿ ನಾನಾ ಪಂದ್ಯದ ವಿನೋದಗಳೂ, ಗೆದ್ದವರಿಗೆ ಬಹುಮಾನಗಳೂ ಉಂಟು ಉತ್ಕೃಷ್ಟವಾದ ರಾಸುಗಳಿಗೆ ಇನಾಮು ಕೊಡಲ್ಪಡುವುವು ವ್ಯಾಪಾರವು ಹೆಚ್ಚಿ ಇಂದಿನವರೆಗೆ ಸುಮಾರು ಹತ್ತು ಸಾವಿರ ರೂಪಾಯಿಗಳ ವನಕ ನಡೆದಿದೆ ಎಂದು ಹೇಳುತ್ತಾರೆ ಈ ವರ್ಷದ ಪ್ರದರ್ಶನವು ಹಿಂದಿನ ನಾಲ್ಕು ಪ್ರದರ್ಶನಗಳಿಗಿಂತಲೂ ವಿಶೇಷವೆನಿಸುತ್ತೆಂದು ಹೇಳಬಹುದು —ಭತ್ತದ ಬೆಲೆ ರೇಖೆಯಾಯಿತು ರೈತರು ಈ ಸುಗ್ಗಿಕಾಲದಲ್ಲಿ ಸಂತೋಷವಿಂದಿರುವದಕ್ಕೆ ಬದಲಾಗಿ ಅರ್ಧ, ಮುಕ್ಕಾಲು ಬೆಳೆಗಳನ್ನು ಪಡೆದೆವಲ್ಲಾ ಎಂಬ ದುಃಖದಿಂದಿರುತ್ತಾರೆ —ಪ್ಲೇಗಿನ ಹಾವಳಿ ಕಡಮೆಯಾಗಿದ್ದು ಕಳೆದ ವಾರ ಮತ್ತೆ ಕಾಣಿಸಿಕೊಂಡು ಒಬ್ಬನು ತೀರಿಹೋದನು ಗುಡಿಸಲುಗಳಿಂದ ಮನೆಗಳಿಗೆ ಹೋಗುತ್ತಿದ್ದ ಜನರು ಪುನಹ ಹಾಗೇ ನಿಲ್ಲಲಾರಂಭವಾಗಿದೆ —ಪ್ರದರ್ಶನಕ್ಕಾಗಿ ಹೊರಗಿನಿಂದ ಸರ್ಕಸ್ ಕಂಪನಿಗಳೆರಡೂ, ನಾಟಕದ ಕಂಪನಿಗಳೆರಡೂ, ಇತರ ಮಾಯಾವಿನೋದ ನೋಟಗಳೂ, ಜೂಜುಕೋರರ ಗುಂಪೂ ತುಂಬಿವೆ ಅಧಿಕಾರಿಗಳು ಇವರಿಗೆ ಕೆಲವು ದಿನಗಳ ವರೆಗೆ ಮಾತ್ರ ಅವಕಾಶಕೊಟ್ಟು ಬೇಗ ಹೋಗಬೇಕೆಂಬ ನಿರ್ಬಂಧವಿಟ್ಟಿರೆ ಬಡವರಿಗೆ ಮಹೋಪಕಾರವಾಗುವುದು

ಹುಣಸೂರು —ಈ ಊರು ವೆಸ್ಲಿಯನ್ ಮಿಷನ್ ಬಾಲಕಿಯರ ಪಾಠಶಾಲೆಯಲ್ಲಿ ಕ್ರಿಸ್ಮಸ್ ಮತ್ತು ಹೊಸ ವರುಷದ ಸಂತೋಷಕ್ಕಾಗಿ ಸ್ಕೂಲ್‌ಹುಡುಗಿಯರಿಗೆ ಒಂದು ಸಂತೋಷಕೂಟವನ್ನು ನಡಿಸಿದರು ಇದಕ್ಕಾಗಿ ಮಿಷನ್ ಫಂಡಿನಿಂದಲೂ ಇಲ್ಲಿನ ಕೆಲವು ಮಹನೀಯರುಗಳಿಂದಲೂ ಚಂದಾಹಣ ಕೂಡಿಸಿ ಹೆಡ್ ಮಾಸ್ಟರ್ ಮ॥ ಟಿ ಡಾನಿಯೇಲಯ್ಯನವರೂ, ಸಹಾಯೋಪಾಧ್ಯಾಯರೂ, ಉಪದೇಶಿಯವರೂ ತುಂಬಾ ಮೆಹನತ್ತುಪಟ್ಟರು ಸ್ಕೂಲ್ ಹೊರಪ್ರಾಕಾರವನ್ನೂ ಮುಂದಿರವನ್ನೂ ನಾನಾ ಚಿತ್ರಗಳಿಂದ ಅಲಂಕರಿಸಿದ್ದರು ನಮ್ಮ ಅಮಲ್ದಾರರೇ ಮುಂತಾದ ಸ್ಥಳಾಧಿಕಾರಿಗಳೂ, ಪ್ರಜೆಗಳ ಮುಖಂಡರೂ, ವಿದ್ಯಾಭಿಮಾನಿಗಳೂ ದಯಮಾಡಿಸಿದ್ದರು ಮ॥ ಆರ್ ಎ ನರಸಿಂಹಯ್ಯಂಗಾರ್ರು ಅಗ್ರಾಸನವನ್ನು ವಹಿಸಿ ಈ ಕಾರ್ಯವನ್ನು ನೆರವೇರಿಸಿದರು ದೇವತಾ ಪ್ರಾರ್ಥನೆಯೂ ಸಂಗೀತವೂ ಆಗಿ ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಮ॥ ಚಿದಂಬರರಾಯರು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಮಕ್ಕಳು ಎದ್ದುನಿಂತು ಅಭಿನಯಗೀತವನ್ನು ಹಾಡಿದರು ಬಂದ ಮಹನೀಯರುಗಳಿಗೆ ಮರ್ಯಾದೆಗಳು ನಡೆದವು ತರುವಾಯ ಅಗ್ರಾಸನಾಧಿಪತಿಗಳು ಹುಡುಗಿಯರೆಲ್ಲರಿಗೂ ವಿದ್ಯಾಪ್ರೋತ್ಸಾಹಕವಾದ ಮಾತುಗಳನ್ನು ಅಪ್ಪಣೆಕೊಡಿಸಿದರು ಬ್ರಿಟಿಷ್ ಮತ್ತು ಮೈಸೂರು ಸಲಾಂ ಬಾಜಾ ಪಾಡಿ ಮೂರು ಸಾರಿ ಸಭಿಕರು ಜಯಘೋಷಗಳನ್ನು ಮಾಡುತ್ತಾ ತೆರಳಿದರು—ಕಳೆದ ವಾರ ಸುಬ್ಬಣ್ಣನೆಂಬವರು ಹೊಳೆಯಲ್ಲಿ ಸ್ನಾನಮಾಡುತ್ತಿರುವಾಗ್ಗೆ ಅವರ ಕೃಷ್ಣಾಜಿನ, ಶಾಸ್ತ್ರ, ಬಟ್ಟೆಗಳನ್ನು ಯಾರೋ ಅಪಹರಿಸಿರುತ್ತಾರೆ ಆ ಸ್ಥಳದಲ್ಲಿ ಹೀಗೆ ಚೋರಿ ನಡದದ್ದೇ ಇಲ್ಲ —ಕಳೆದ ವಾರ ಮಿಲಿಟರಿ ಗ್ರಾಫಾರಮ್ಮಿನಲ್ಲಿ ಕೆಲಸಮಾಡಿ ಪೆನ್ಷನ್ ಪಡೆಯುತ್ತಿದ್ದ ಮುಸಲ್ಮಾನ್ ದಫೆಗರೂ, ಆರ್ಕಸಾಲಿ ನಾಗಚಾರಿಯವರೂ ಕಾಲವಾದರು ಇವರು ಇಲ್ಲಿ ಹಳಬರಿದ್ದರು ಅವರ ವಿಯೋಗದುಃಖವನ್ನು ಅವರ ಮಕ್ಕಳೂ ಅನುಬಂಧಿಗಳೂ ಅನುಭವಿಸುತ್ತಿರುವರು —ಕಳೆದ ವಾರ ಕಂಪ್ಲಾಪುರದಲ್ಲಿ ಅಕಸ್ಮಾತ್ತಾಗಿ ಒಬ್ಬನ ಮನೆಯು ಸುಟ್ಟು ಅನರ್ಥವಾಯಿತು ಆ ಬಡವನ ನಷ್ಟಕ್ಕೆ ಕರುಳು ಕರಗಿದವರಾಗಿ ಕೆಲವು ಪುಣ್ಯಾತ್ಮರು 200 ರೂಪಾಯಿತನಕ ಚಂದಾ ವಸೂಲ್ಮಾಡಿ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷವಾಗಿದೆ

ಚಿತ್ರದುರ್ಗ —ಈಗ ಒಳ್ಳೇ ಸುಗ್ಗೀ ಕಾಲವಾಗಿದ್ದರೂ ಧಾರಣೆವಾಸಿಯು ಕ್ಷಾಮಕಾಲದಲ್ಲಿದ್ದಂತೆಯೇ ಇದೆ ಬಡವರು ಜೀವನ ಮಾಡುವದು ತುಂಬ ಕಷ್ಟ ಊರಿನಲ್ಲಿ ವೈಸ್ ಪ್ರೆಸಿಡೆಂಟ್ ಸಾಹೇಬರು ತಿರುಗಾಡುವ ದೊಡ್ಡ ಬೀದಿ ಮತ್ತು ಕೆಲವು ಮುಖ್ಯಸ್ಥಳಗಳು ಗಲೀಜಿಲ್ಲದೆ ಚೆನ್ನಾಗಿವೆ ಕೆಲವು ಸೊಂದಿಗೊಂದುಗಳೂ ಇದೇ ರೀತಿ ಆದರೆ ಊರೆಲ್ಲಾ ಆರೋಗ್ಯವಾದೀತು —ಸಂತೆಯಲ್ಲಿ ಚೀಟಿಗಳನ್ನು ಕೊಡುವವರ ತೊಂದರೆ ಹೆಚ್ಚಾಗಿದೆ ಹೋದ ಸೋಮವಾರ ಸಂತೆ ದಿನ ಮೊಸರು ವಗೈರೆ ಊರಿನಲ್ಲಿ ಮಾರಾಟ ಮಾಡಿಕೊಂಡು ಹೋಗುತ್ತಿದ್ದವರನ್ನು ದಾರಿಯಲ್ಲಿ ತಡೆದು ತಲೆಚೀಟಿ ತೆಗೆದುಕೊಳ್ಳಬೇಕೆಂದು ತೊಂದರೆ ಪಡಿಸಿದರು ಸಂತೆಯಲ್ಲಿ ಸಾಮಾನು ಇಟ್ಟು ಬಿಕರಿ ಮಾಡತಕ್ಕವರಿಂದ ತೆರಿಗೆ ವಸೂಲ್ ಮಾಡಬೇಕೆಂದು ಸರ್ಕಾರದ ವಿಧಿ ಇದೆ ಕಂಟ್ರ್ಯಾಕ್ಟರು ಊರೊಳಕ್ಕೆ ಬರುವವರಿಂದ ತೆರಿಗೆ ತೆಗೆದುಕೊಳ್ಳುವದು ನ್ಯಾಯವಾಗಿಲ್ಲ ಈ ವಿಷಯವನ್ನು ಕುರಿತು ಅದೇ ದಿವಸ ಕೆಲವರು ವೈಸ್ ಪ್ರೆಸಿಡೆಂಟರಲ್ಲಿ ಹೇಳಿಕೊಂಡಾಗ ಅವರು ಕೊಡ್ಲೆ ಬಡವರ ಅಹವಾಲವನ್ನು ಕೇಳಿ ನ್ಯಾಯರೀತ್ಯಾ ಅವರನ್ನೆಲ್ಲಾ ಬಿಡುಗಡೆ ಮಾಡಿಸಿದರು ಇನ್ನು ಮುಂದೆ ಕಂಟ್ರ್ಯಾಕ್ಟರು ನ್ಯಾಯರೀತ್ಯಾ ತೆರಿಗೆ ವಸೂಲ್ ಮಾಡುವರೆಂದು ನಂಬಬೇಕಾಗಿದೆ —ಇಲ್ಲಿನ ತರಕಾರಿ ಮಾರ್ಕೆಟ್ಟು ಶಿಥಿಲವಾಗಿ, ಕಟ್ಟದ ಲಾಗಾಯಿತು ರಿಪೇರಿ ಇಲ್ಲದ್ದನ್ನು ನಮ್ಮ ವೈಸ್ ಪ್ರೆಸಿಡೆಂಟರವರು ದುರಸ್ತು ಮಾಡಿಸಿರುವದು ಜನಗಳಿಗೆ ತುಂಬಾ ಅನುಕೂಲವಾಯಿತು ಈ ವರುಷ ಮಳೆ ಆಗದೆ ಕೆರೆಯಲ್ಲಾ ಒಣಗಿ ಹೋಗಿದೆ ಒಡ್ಡಿನಲ್ಲಿ ಮಾತ್ರ ಸುಮಾರು ಒಂದು ತಿಂಗಳ ವರಿಗೆ ಆಗುವಷ್ಟು ನೀರಿದೆ ಊರಿನಲ್ಲಿ ಅನೇಕ ಕಡೆ ನೀರು ಸರಿಯಾಗಿ ಬರುವದಿಲ್ಲ ಆದ್ದರಿಂದ ನಮ್ಮ ವೈಸ್ ಪ್ರೆಸಿಡೆಂಟರವರು ಊರಿನ ಭಾವಿಯ ಕೊಳೆ ವಗೈರೆ ಗಲೀಜು ತೆಗಿಸಿ ನೀರು ಉಪಯೋಗಿಸಿಕೊಳ್ಳುವಂತೆ ಮಾಡಿಸಿಕೊಟ್ಟಿದೆ ಅನೇಕರಿಗೆ ತುಂಬಾ ಸಹಾಯವಾದೀತು—ರಾಮರಾಯರ ಮನೆಯಲ್ಲಿ ಕಳುವುಮಾಡಿದ್ದ ರಾಮಚಾರಿ ಎಂಬುವನಿಗೆ ಮ್ಯಾಜಿಸ್ಟ್ರೇಟರು ಎರಡು ತಿಂಗಳು ಕಠಿಣಶಿಕ್ಷಾ 50 ರೂಪಾಯಿ ಜುಲ್ಮಾನೆ ವಿಧಿಸಿದರು ಅಲ್ಲದೆ ಈ ಮೊಕದ್ದಮೆಯಲ್ಲಿ ವೀರಣ್ಣ ಶ್ಯಾ ವೆಂಕಣ್ಣನವರು, ಜಗಳೂರು ತಾಲ್ಲೋಕು ಅಸಿಸ್ಟೆಂಟ್ ಶ್ಯಾ ಗುರುಬಸಪ್ಪ, ಚಿತ್ರದುರ್ಗದಲ್ಲಿರುವ ಕುರುಬರ ಗ-ಗ ಇವರು ಅಪರಾಧಿ ಪರ ಸುಳ್ಳು ಸಾಕ್ಷಿ ಹೇಳಿದರೆಂದು ಪ್ರಾಸಿಕ್ಯೂಷನ್ ನಡಿಸತಕ್ಕ ವಿಚಾರವಲ್ಲಿ ನೋಟೀಸ್ ಕೊಟ್ಟಿದಾರೆ ಅಪರಾಧಿ ರಾಮಚಾರಿಯು ಶಿವಮೊಗ್ಗಾ ಸೆಷನ್ ಕೋರ್ಟಿನಲ್ಲಿ ಅಪೀಲ್ ಮಾಡಲಾಗಿ ಅದು ಪಜಾ ಸಜಾ ಖಾಯಂ ಮಾಡಿದಾರೆ

ಹೊಸಕೋಟೆ —ನಮ್ಮ ಮಹಾರಾಜರವರು ಇಲ್ಲಿಗೆ ಡಿಸೆಂಬರ್ 16ನೇ ತಾ ದಯಮಾಡಿದರು ಜನಗಳು ಹೇಳಕೂಡದಷ್ಟು ಸಂತೋಷಪಟ್ಟು ತಮ್ಮ ಭಕ್ತಿ ವಿಶ್ವಾಸಗಳನ್ನು ತೋರಿಸುವದಕ್ಕೆ ಮುಖ್ಯವಾದ ಬೀದಿಗಳವರು ತಮ್ಮ ಮನೆ ಅಂಗಡಿಗಳ ಮುಂದೆ ಚಪ್ಪರ ತೋರಣಗಳಿಂದ ಅಲಂಕಾರಮಾಡಿಕೊಂಡು ಸಾಲುಸಾಲಾಗಿ ಜನಗಳು ಮಹಾರಾಜರವರ ದರ್ಶನವನ್ನು ಮಾಡುವುದಕ್ಕೆ ಮುಖ್ಯ ಬೀದಿಗಳಲ್ಲಿ ನಿಂತುಕೊಂಡಿದ್ದರು ಮಹಾರಾಜರವರ ಸವಾರಿಯು ಮೋಟಾರುಗಾಡಿಯಲ್ಲಿ ಚಿತ್ತೈಸಿ ಕ ರಿಯ ಮುಂದುಗಡೆ ಬಹು ನೇತ್ರಾನಂದಕರವಾಗಿ ನಮ್ಮ ಅಮಲ್ದಾರ್ ಮ ಸೋಮೇಶ್ವರಯ್ಯರವರಿಂದ ತಯರಿಸಲ್ಪಟ್ಟ ಮುನಿಸಿಪಲ್ ಕೋರ್ಟಿನ ಪಕ್ಕದಲ್ಲಿರುವ ರೀಡಿಂಗ್ ರೂಮಿನ ಎದುರಾಗಿ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ಮೋಟಾರ್‌ಗಾಡಿಯನ್ನು ನಿಲ್ಲಿಸಿದರು ಆಗ ಅಮಲ್ದಾರರು, ಮ್ಯುನಿಸಿಪಲ್ ಮೆಂಬರುಗಳು ಕಚೇರಿ ಉದ್ಯೋಗಸ್ಥರೇ ಮುಂತಾದವರು ಮಹಾಸ್ವಾಮಿಯವರ ದರ್ಶನವನ್ನು ಮಾಡಿ ಪಾರಾ ತುರಾಯಿಗಳಿಂದ ಮರ್ಯಾದೆಗಳನ್ನು ಸಲ್ಲಿಸಿದ ತರುವಾಯ ಪ್ರಭುಗಳು ಪ್ರಜೆಗಳ ಯೋಗಕ್ಷೇಮಗಳನ್ನು ಬಹು ಆದರಪೂರ್ವಕವಾಗಿ ವಿಚಾರಿಸಿದ್ದಲ್ಲದೆ ಅವರ ಅಹವಾಲುಗಳನ್ನು ಸಾವಧಾನದಿಂದ ಕೇಳಿ ತಕ್ಕ ಉತ್ತರವನ್ನಿತ್ತು ಸಂತೋಷಪಡಿಸಿದರು ತರುವಾಯ ರೀಡಿಂಗ್ ರೂಮ್ ಪಕ್ಕದಲ್ಲಿ ಕಟ್ಟಬೇಕಾಗಿರುವ ಮಾರ್ಕೆಟ್ಟಿಗೆ ಮಹಾರಾಜರವರ ಹೆಸರನ್ನು ಶಾಶ್ವತಪಡಿಸುವ ಹಾಗೆ ಅವರ ಹೆಸರನ್ನು ಕೆತ್ತಿದ ಸುಂದರವಾದ ಹಲಿಗೆ ಕಲ್ಲನ್ನು ಅಮಲ್ದಾರರು ಮಹಾರಾಜರಿಗೆ ತಂದು ಒಪ್ಪಿಸಿದರು ಮಹಾರಾಜರವರು ಅದನ್ನು ಬಹು ಸಂತೋಷದಿಂದ ಮುಟ್ಟಿ ವಾಪಸುಕೊಟ್ಟರು ಆ ಕ್ಷಣವೇ ಮಹಾರಾಜರವರ ಎದುರಿನಲ್ಲಿಯೇ ಆ ಕಲ್ಲನ್ನು ಅಸ್ತಿವಾರದ ಗೋಡೆಗೆ ಸೇರಿಸಿದರು ಈಗ ಈ ಮಾರ್ಕೆಟ್ಟು ಮಹಾರಾಜರವರ ಹೆಸರಿನ ಮೇಲೆ ಕಟ್ಟಲ್ಪಡುತ್ತೆ ತರುವಾಯ ಮಹಾರಾಜರವರು ಮುಖ್ಯವಾದ ಬೀದಿಯಲ್ಲಿ ಸಾಲುಸಾಲಾಗಿ ಎರಡು ಕಡೆಯಲ್ಲೂ ಕಿಕ್ಕಿರಿಯುವಂತೆ ನಿಂತುಕೊಂಡಿದ್ದ ಜನಗಳ ಮಧ್ಯದಲ್ಲಿ ಮೋಟಾರುಗಾಡಿಯನ್ನು ನಿಧಾನವಾಗಿ ನಡಿಸಿಕೊಂಡು ಜನಗಳಿಗೆ ಪ್ರತಿವಂದನೆಗಳನ್ನು ಮಾಡುತ್ತಾ ಬಹು ಸಂತೋಷದಿಂದ ಕೋಲಾರದ ರೈಲುಗಾಡಿಯನ್ನು ಆರಂಭಿಸುವುದಕ್ಕೆ ಕೋಲಾರ್ ಮಾರ್ಗವನ್ನು ಹಿಡಿದು ದಯಮಾಡಿದರು ಈ ಮ್ಯುನಿಸಿಪಲ್ ತೋಟಕ್ಕೆ ರೀಡಿಂಗ್ ರೂಮ್ ಮತ್ತು ಮಾರ್ಕೆಟ್ಟು ಸೇರಿ ಒಂದೇ ಉದ್ದವಾದ ಪೌಳಿಗೋಡೆಯನ್ನುಳ್ಳ ಚತುರವಾಗಿ ಕಛೇರಿ ಮುಂದುಗಡೆ ಬಹು ಅಲಂಕಾರವಾಗಿ ಕಾಣುತ್ತದೆ ಇವುಗಳಿಗಾಗಿ ನಮ್ಮ ಅಮಲ್ದಾರರು ಪಟ್ಟ ಸಾಹಸಪ್ರಯತ್ನವು ಶ್ಲಾಘನೀಯವಾಗಿಯೂ ಪ್ರಜೆಗಳಿಗೆ ಬಹು ಅನುಕೂಲವಾಗಿಯೂ ಪ್ರಯೋಜನವೂ ಆಗಿವೆ ಎಂಬುವುದಕ್ಕೆ ಯಾವ ಸಂದೇಹವೂ ಇಲ್ಲ —ಇಲ್ಲಿನ ಪೊಲೀಸ್ ಜಮಾದಾರ್ ಲಕ್ಷ್ಮೀನರಸಿಂಹಯ್ಯನವರಿಗೆ ಚನ್ನಪಟ್ಟಣಕ್ಕೆ ವರ್ಗವಾದ್ದರಿಂದ ಇಲ್ಲಿಯ ಪುರನಿವಾಸಿಗಳು ಬಹಳ ವಿಷಾದಪಡುತ್ತಾರೆ ಇವರು ತಮ್ಮ ಕೆಲಸದಲ್ಲಿ ಬಹು ಮುಷುವರ್ಜಿಯುಳ್ಳವರಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇದ್ದದ್ದು ಮಾತ್ರವೇ ಅಲ್ಲದೆ ಜನಗಳಲ್ಲಿ ಸ್ನೇಹಪರರಾಗಿಯೂ ವಿಶ್ವಾಸ ಮತ್ತವುಳ್ಳವರಾಗಿಯೂ ಇದ್ದದ್ದರಿಂದ ನಮ್ಮ ಅಮಲ್ದಾರರು ಮತ್ತು ಇನ್ಸ್‌ಪೆಕ್ಟರು ಸೇರಿ ಒಂದು ಕೂಟವನ್ನು ನಡಿಸಿ ಫಲಾಹಾರಾದಿಗಳಿಂದ ತೃಪ್ತಿಪಡಿಸಿದುದಲ್ಲದೆ ಗಂಧಪುಷ್ಪತಾಂಬೂಲಾದಿಗಳಿಂದ ಸಂತೋಷಪಡಿಸಿ ಜಮಾದಾರರಿಗೆ ಸನ್ಮಾನ ಮಾಡಿ ಕೂಟವನ್ನು ಮುಕ್ತಾಯಮಾಡಿದರು ಒಂದು ವಾರದ ತರುವಾಯ ಇದೇ ಪ್ರಕಾರ ಪೊಲೀಸ್ ಸಿಬ್ಬಂದಿಯವರು ತಮ್ಮ ಪ್ರೀತಿವಿಶ್ವಾಸಗಳನ್ನು ತೋರ್ಪಡಿಸುವುದಕ್ಕೆ ಪೊಲೀಸ್ ಚಾವಡಿಯಲ್ಲಿಯೂ, ಅಂಜುಮಾನ್‌ಗೆ ಸೇರಿದ ಮುಸಲ್ಮಾನರು ತಮ್ಮ ಸ್ಥಳದಲ್ಲಿಯೂ ಬ್ಯಾಂಡ್ ವಾದ್ಯಗಳಿಂದ ಅವರನ್ನು ಕರೆಕಳುಹಿಸಿ ಗಂಧಪುಷ್ಪತಾಂಬೂಲಾದಿಗಳಿಂದ ಸಂತೋಷಪಡಿಸಿ, ಅವರ ಗುಣಕಥನವನ್ನು ಓದಿ ಕೂಟವನ್ನು ಮುಕ್ತಾಯಮಾಡಿದರು ತರುವಾಯ ಜಮಾದಾರರು ಎಲ್ಲರಿಗೂ ಕೃತಜ್ಞತಾವಂದನೆಗಳನ್ನು ಸಲ್ಲಿಸಿ ಮನೆಗೆ ತೆರಳಿದರು ಗರಡಿಮನೆಯವರೂ ಸಹ ತಮ್ಮ ವಿಶ್ವಾಸವನ್ನು ತೋರಿಸುವುದಕ್ಕೆ ಬ್ಯಾಂಡ್ ವಾದ್ಯಗಳಿಂದ ಜಮಾದಾರರನ್ನು ಮನೆಯಲ್ಲಿ ಕಂಡು ನಾನಾ ಮರ್ಯಾದೆಗಳಿಂದ ಸತ್ಕರಿಸಿ ಹಿಂತಿರುಗಿದರು

ಚಾಮರಾಜನಗರ —ನಮ್ಮ ತಾಲ್ಲೋಕಿನ ಅಮಲ್ದಾರ್ ಮ|| ಬಿ ನಾರಾಯಣರಾಯರಿಗೆ ಇಲ್ಲಿಂದ ವರ್ಗವಾಯಿತೆಂದು ಕೇಳಿ ಈ ತಾಲ್ಲೋಕಿನ ಮತ್ತು ಊರಿನ ಪ್ರಜೆಗಳೂ, ಪ್ರತಿಕೋಮಿನವರೂ ದುಃಖಪಟ್ಟರು ಆದರೆ ಈ ವಾರ ಪೇಪರಿನಲ್ಲಿ ಅವರಿಗೆ ಅ|| ಕಮಿಷನರ್ ದರ್ಜೆಗೆ ಬಡ್ತಿ ಆಯಿತೆಂದು ತಿಳಿದು ಎಲ್ಲರೂ ಮಹದಾನಂದ ಪಡುತ್ತಿದ್ದಾರೆ ಅವರು ಇಲ್ಲಿಂದ ದಯಮಾಡಿಸುವ ಮುಂಚೆ ಆಯಾ ಕೋಮಿನವರು ಒಬ್ಬರ ಪ್ರೇರಣೆಯೂ ಇಲ್ಲದೆ ಯಾವ ವಿಧವಾಗಿ ಅವರಿಗೆ ಮರ್ಯಾದೆ ಮಾಡಬೇಕೆಂದು ತೀರ್ಮಾನಿಸಿ ಕೊಂಡರು ಮಹಮ್ಮದಿಯರು ಬಹು ವಿಜೃಂಭಣೆಯಿಂದ ಸಭೆ ನಡಿಸಿ ಅಡ್ರೆಸ್ಸುಗಳನ್ನು ಒಪ್ಪಿಸಿ ಹಾರಾ ತುರಾಯಿ ಪಾನ್ ಸುಪಾರಿ ಗಳಿಂದ ತೃಪ್ತಿಪಡಿಸಿದ್ದಲ್ಲದೆ ಅನೇಕರು ಕಣ್ಣೀರುಸುರಿಸಿದರು ಈ ಗುಂಪಿನ ಮುಖ್ಯವಾಗಿ ತಾ|| ಶಿರಸ್ತೇದಾರ್ ಮಿ|| ಎಸ್ ಅಬ್ದುಲ್ ಖಾಲಿಕ್‌ರವರು ಉಮ್ಮರ್‌ಸಾಹೇಬರೂ ಮುಂದಾಳಾಗಿ ನಿಂತು ಕಾರ್ಯ ನಿರ್ವಾಹ ಮಾಡಿದರು ವರ್ತಕ ಮಂಡಲಿಯಲ್ಲಿ ಮ|| ಗಳಾದ ದೊರೆಸಾಮಯ್ಯಂಗಾರ‍್ರು, ಸಾಹುಕಾರ್ ಬಟ್ ಸುಬ್ರಾಯಶೆಟ್ರು, ವೆಂಕಟರಾಯರೂ, ಲಾಯರ್ ವೆಂಕಟಸಾಮಯ್ಯನವರು, ಇನ್ನೂ ಅನೇಕರು ತುಂಬಾ ಮುತುವರ್ಜಿ ವಹಿಸಿ ಟೀ ಪಾರ್ಟಿ, ಮುಂತಾದದ್ದನ್ನು ನಡಿಸಿ ಅಡ್ರೆಸ್ ಓದಿ ಬಹುಮಾನ ಮಾಡಿದರು ನೌಕರವರ್ಗನೇರೆಲ್ಲಾ ಸೇರಿ ಭೋಜನ ಫಲಾಹಾರಗಳಿಂದ ಸಂತೋಷಪಡಿಸಿದರು ಪರಿವಾರದವರಲ್ಲಿ ಭದ್ರನಾಯ್ಕ, ಸಿದ್ದನಾಯ್ಕ, ಮಾದನಾಯ್ಕ, ರಂಗನಾಯ್ಕ ಮುಂತಾದವರು ಮುಂದಾಳಾಗಿ ನಿಂತು ಅಡ್ರೆಸ್ಸು ಒಪ್ಪಿಸಿ ಹಾರ, ಪುಷ್ಪ, ತಾಂಬೂಲಾದಿಗಳಿಂದ ಸಂತೋಷಪಡಿಸಿದರು ಅಮಲ್ದಾರ‍್ರವರು ತಕ್ಕಹಾಗೆ ಸದುತ್ತರಗಳನ್ನು ದಯಪಾಲಿಸಿ ಅವರ ಸಂತೋಷಕ್ಕೆ ಪಾತ್ರರಾದರು ಕಡೆಯಲ್ಲಿ ಎಲ್ಲರೂ ಎ ವಿ ಸ್ಕೂಲಿನಲ್ಲಿ ಸೇರಿ ಬ್ಯಾಂಡ್ ವಾದ್ಯದೊಡನೆ ಅಮಲ್ದಾರರ ಸಮೇತ ಹಾರಾ ತುರಾಯಿಗಳಿಂದ ಊರೆಲ್ಲಾ ಮೆರವಣಿಗೆ ಮಾಡಿ ಅವರಿಗೆ ಸುಖಾಗಮನವನ್ನು ಬಯಸಿದರು ಇದೆಲ್ಲಾ ಎಷ್ಟೋ ಆನಂದಕರವಾಗಿತ್ತು ಈ ತಾಲ್ಲೋಕಿಗೆ ಇದುವರಿಗೂ ಇಂಥಾ ಅಮಲ್ದಾರರು ಬಂದಿರಲಿಲ್ಲವೆಂದು ಎಲ್ಲರೂ ಹೇಳುತ್ತಾರೆ ಇವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು ಮುಖ್ಯವಾಗಿ ಮ|| ನಾರಾಯಣರಾಯರು ಸತ್ಯವಂತರಾಗಿಯೂ, ಬಡವರಿಗೂ ಶ್ರೀಮಂತರಿಗೂ ನಿಷ್ಪಕ್ಷಪಾತಿಗಳಾಗಿಯೂ, ಪೂರ್ಣ ದಯಾಳುಗಳಾಗಿಯೂ, ಪ್ರಜಾಹಿತಚಿಂತಕರಾಗಿಯೂ, ವಿಶೇಷವಾಗಿ ಸ್ವಾಮಿಕಾರ್ಯ ಧುರಂಧರರಾಗಿಯೂ ಇದ್ದದ್ದರ ವಿಷಯದಲ್ಲಿ ಏನೂ ಸಂದೇಹವಿಲ್ಲ ಈಗ ಹೊಸದಾಗಿ ಬಂದಿರುವ ಅಮಲ್ದಾರ್ ಮ|| ಕೆ ವೆಂಕಟಸಾಮಿ ಅಯ್ಯರವರೂ ಅದೇ ರೀತಿ ಪ್ರಜಾಪರಿಪಾಲನೆ ಮಾಡಿ ಕೀರ್ತಿ ಪಡೆಯುವರೆಂದು ನಿರೀಕ್ಷಿಸಿಕೊಂಡಿದ್ದೇವೆ —ಇಲ್ಲಿನ ಪೋಲೀಸ್ ಇನ್‌ಸ್ಪೆಕ್ಟರ್ ಚಳ್ಳಕೆರೆಗೆ ವರ್ಗವಾಗಿದೆ ಇನ್ನೂ ಹೊಸಬರು ಬರಲಿಲ್ಲ ಪೋಲೀಸ್ ಜಮೇದಾರ್ ಕೃಷ್ಣರಾಯರಿಗೆ ಮೈಸೂರಿಗೆ ವರ್ಗವಾಗಿ ಅವರಿಗೆ ಬದಲಾಗಿ ಚನ್ನಪಟ್ಟಣದ ಅರಸಿನವರು ಬಂದಿದ್ದಾರೆ ಇಲ್ಲಿದ್ದ ಸೂಲಗಿತ್ತಿಗೆ ವರ್ಗವಾಗಿ ಚಿತ್ರದುರ್ಗಕ್ಕೆ ಬಂದಿರುವಳು —ಸದ್ಯ ಪ್ಲೇಗ್ ನಿಂತಿದೆ ಮಾದಿಹಳ್ಳಿ, ಹಂಡ್ರಕಹಳ್ಳಿಯಲ್ಲಿ ಉಪದ್ರವ ಪ್ರಾರಂಭವಾಗಿದೆ ಜನರು ಊರು ಬಿಡುತ್ತಿದ್ದಾರೆ ಮೋಡ ಕವಿಯುತ್ತವೆ ಮಳೆ ಇಲ್ಲ ದವಸ ಧಾನ್ಯಗಳು ಯಥಾ ಪ್ರಕಾರ ಅಕ್ಕಿ 7 ಸೇರು, ರಾಗಿ 10 ಸೇರು ಮಾರುತ್ತೆ ಹಳ್ಳಿಗಳಲ್ಲೂ ಪ್ಲೇಗ್ ಮತ್ತು ವಾಂತಿ ಭೇದಿ ಉಪದ್ರವ ಒಂದು ವರ್ಷದಿಂದ ಜನರನ್ನು ಬಹಳ ಕಾಡಿಸುತ್ತಿದ್ದರೂ ನಮ್ಮ ಡಾಕ್ಟರು ತಿರುವೆಂಗಡಂ ಶೆಟ್ಟಿಯವರು ಪ್ರತಿ ಸ್ಥಳಕ್ಕೂ ಹೋಗಿಬರುತ್ತಾ ಬಹು ಶ್ರದ್ಧೆಯಿಂದ ಕೆಲಸಮಾಡಿರುತ್ತಾರೆ

ಗೋಪಿನಾಥಂ ತಾ ಮರಳವಾಡಿ —ಈ ಗ್ರಾಮದ ಕೆರೆಯು ಎರಡು ವರ್ಷಗಳಿಂದ ಕಾಮಗಾರಿ ಆಗುತ್ತಾ ಇದೆ ಇನ್ನೂ ಪೂರೈಸಲಿಲ್ಲ ಕೆರೆಯಲ್ಲಿ 3 ವರ್ಷಗಳಿಂದ ನೀರು ನಿಲ್ಲಿಸಲಿಲ್ಲ ಈ ಗ್ರಾಮದ ಜಮೀನುಗಳಲ್ಲಿ ಜಲಾಭಾವದಿಂದ 2 ವರ್ಷಗಳಿಂದ ಜಮೀನುಗಳಲ್ಲಿ ಫಸಲು ಆಗದೆ ಜನಗಳಿಗೆ ತುಂಬಾ ಕಷ್ಟವಾಯ್ತು ಕೆರೆಯ ಕಾಮಗಾರಿ ನಡಿಸುತ್ತಾ ಇದ್ದದ್ದರಿಂದ ಕೂಲಿ ಮಾಡಿ ರೈತರು ಜೀವಿಸುವದಕ್ಕೆ ಮಾರ್ಗವಾಗಿತ್ತು ಈಗ ಯಾಕೋ 7 8 ತಿಂಗಳಿಂದ ಕೆರೆ ಕಾಮಗಾರಿ ಮಾಡಿಸದೆ ನಿಲ್ಲಿಸಿದ್ದಾರೆ ಈ ಸಲ ಮಳೆಗಳು ಸಕಾಲಕ್ಕೆ ಬಾರದೆ ಹೋದ್ದರಿಂದ ಜಮೀನುಗಳಲ್ಲಿ ಇಟ್ಟ ಫಸಲು ಎಲ್ಲಾ ಒಣಗಿಹೋಯ್ತು ಕೆರೆಯಲ್ಲಿ ನೀರು ನಿಲ್ಲಿಸುವುದಿಲ್ಲವೆಂದು ಹೇಳುತ್ತಾ ಇದ್ದದ್ದರಿಂದ ಕೆರೆಕೆಳಗಣ ಜಮೀನುಗಳನ್ನೆಲ್ಲಾ ಬಂಜರಾಗಿ ಬಿಟ್ಟು ಇದ್ದರು ಕೆರೆಗೆ ಒಂದಿಷ್ಟು ನೀರೆಲ್ಲಾ ಹರಿದುಹೋಗಿ ಒಂದು ತಿಂಗಳ ನೀರು ನಿಂತಿದೆ ಈ ನೀರನ್ನು ನಂಬಿಕೊಂಡು ಜಮೀನಗಳಿಗೆ ಜೋಳವನ್ನು ಈಗ ಬಿತ್ತಿರುತ್ತಾರೆ ಈ ಸಲ ರಾಗಿ ಫಸಲು ಆಗದ್ದರಿಂದ ತುಂಬಾ ಕಷ್ಟಕ್ಕೆ ಕಾರಣವಾಯ್ತು ಆದ್ದರಿಂದ ಕೂಡ್ಲೆ ಕೆರೆಯ ಕಾಮಗಾರಿಯನ್ನು ಮಾಡಿಸಿ ನೀರು ನಿಲ್ಲುವಂತೆ ಮಾಡಿಸಿದಲ್ಲಿ ಪ್ರಜೆಗಳಿಗೆ ಮುಂದೆ ಬರುವ ಕಷ್ಟ ತಪ್ಪಿತು —ಈ ಗ್ರಾಮದಲ್ಲಿ ವರ್ತಕರು 3 ಪಂಗಡವಾಗಿ ಹುಣಿಸೇಕಾಯಿ ಗಿಡಗಳನ್ನು ಆಯಿಸುತ್ತಾರೆ 6 ಸೇರು ಹಿಡಿಯುವ ಕೊಳಗಕ್ಕೆ 8 ಪೈಸಂತೆ ಕೂಲಿ ಕೊಡುತ್ತಾರೆ ದಿವಸ 200 ಮಂದಿಯವರಿಗೂ ಕೂಲಿ ಜನಗಳು ಬರುತ್ತಾರೆ —ಈ ಗ್ರಾಮದಲ್ಲಿ 8 ವರ್ಷಗಳ ಕೆಳಗೆ ಭಾವಿಯಲ್ಲಿ ಸಿಕ್ಕಿದ ಬೆಳ್ಳಿ ಹಸ್ತವನ್ನು ಚೌಕದಲ್ಲಿರುವ ಚಾವಡಿಯಲ್ಲಿ ಮಕರತೋರಣಗಳಿಂದಲೂ ನಾನಾ ಬಗೆಯಿಂದ ಚಿತ್ರ ಕೆಲಸಮಾಡಿದ್ದ ಮಂಟಪವನ್ನು ರಚಿಸಿ ನೂರು ಅಂತಸ್ತಿನ ಕಮಾನುಗಳನ್ನು ರಚಿಸಿ ಅಲಂಕಾರಪೂರಿತಮಾಡಿ ಇಟ್ಟು ಉತ್ಸವ ನಡಿಸಿದರು ತಾ 18 ನೇ ಗುರುವಾರ ಸಾಯುಂಕಾಲ ಚಾವಡಿ ಎದುರಿಗೆ ಮಾಡಿದ್ದ ಅಗ್ನಿಗುಂಡದಲ್ಲಿ ನಾಲ್ಕು ಗಾಡಿ ಸೌದೆ ಹಾಕಿ ಬೆಂಕಿ ಹತ್ತಿಸಿದರು 8 ಗಂಟೆಗೆ ಸೌದೆ ಎಲ್ಲಾ ಬೆಂದು ಅಗ್ನಿಗುಂಡವು ಬೆಂಕಿ ಕೆಂಡಗಳಿಂದ ತುಂಬಿತ್ತು ಬೆಳ್ಳಿ ಹಸ್ತವನ್ನು 6 ವರುಷದ ಹುಡುಗನ ಕೈಗೆ ಕೊಟ್ಟು ಪೇಟೆಯಲ್ಲಿ ಉತ್ಸವವನ್ನು ಮಾಡಿದರು ಆ ಸಣ್ಣ ಹುಡುಗನು ಅಗ್ನಿಗುಂಡದಲ್ಲಿ ಇಳಿದನು ಹುಡುಗನೂ, ಬೆಸ್ತರೂ, ನೋಡುತ್ತಿರುವದಕ್ಕೆ ಬಂದಿದ್ದವರಲ್ಲಿ ಕೆಲವು ಜನಗಳೂ ಬೆಂಕಿಯಲ್ಲಿ ಇಳಿದು ಈಚೆಗೂ ಆಚೆಗೂ ಸಾವಿರಾರು ದಫಾ ನಡೆದಾಡಿದರು ನೋಡುವದಕ್ಕಾಗಿ ಪರಸ್ಥಳಗಳಿಂದ 2 3 ಸಾವಿರ ಪ್ರಜೆಗಳ ವರಿಗೂ ಬಂದುಯಿತ್ತು 200 ಜನಗಳ ವರಿಗೂ ಮುಸಲ್ಮಾನ್ ಪ್ರಜೆಗಳು ಸೇರಿದ್ದರು ತಾ 20 ನೇ ಶನಿವಾರ ಸಾಯಂಕಾಲ ಅಗ್ನಿಗುಂಡದಲ್ಲಿ 8 10 ಗಾಡಿ ಸೌದೆಯನ್ನು ತಂದುಹಾಕಿ ಬೆಂಕಿ ಹತ್ತಿಸಿದರು ಈ ಗ್ರಾಮದ ಜನಗಳೂ ಪರಸ್ಥಳಗಳಿಂದ ಬಂದಿದ್ದವರೂ ಸೇರಿ ಚಡ್ಡಿ ತೊಟ್ಟು ಪೇಟಾ ರುಮಾಲುಗಳಿಂದ ಅಲಂಕಾರ ಮಾಡಿಕೊಂಡು ರಾತ್ರಿಯೆಲ್ಲಾ ಅಗ್ನಿಗುಂಡದ ಸುತ್ತಲೂ ವಾದ್ಯಗಳಿಂದ ಕುಣಿದರು ರಾತ್ರಿ 12 ಗಂಟೆಗೆ ಇದು ಪರಸ್ಥಳದಿಂದ ಬಂದಿದ್ದ ಕೆಲವು ಜನಗಳು ಅಂಗಸಾಧನೆಗಳನ್ನೂ ಜಟ್ಟೀ ಸಾಧನೆಯನ್ನೂ ಪಟ್ಟಾವರಿಸೆಯನ್ನೂ ಬಹಳ ಚಮತ್ಕಾರವಾಗಿ ಕಸರತ್ತುಗಳನ್ನೂ ಮಾಡಿ ಜನಗಳಿಗೆ ವಿನೋದವನ್ನು ತೋರಿಸಿದರು ಪರಸ್ಥಳಗಳಿಂದ ನಾಲ್ಕು ಸಾವಿರ ಪ್ರಜೆಗಳ ವರಿಗೂ ನೋಡುವದಕ್ಕೆ ಬಂದು ಇತ್ತು ಬೆಳಗಿನ ಝಾಮದ 3 ಗಂಟೆ ಸಮಯದಲ್ಲಿ ಹರಿಕೆಮಾಡಿಕೊಂಡಿದ್ದ ಇಬ್ಬರು ಮಂಟಪದ ಹಿಂದೆ ಮಲಗಿದ್ದವರು ಎದ್ದುಹೋಗಿ ಭಾವಿಯಲ್ಲಿ ಮುಳುಗಿ ಬಂದು ಅಗ್ನಿಗುಂಡದಲ್ಲಿ ಬೆಂಕಿಯ ಕೆಂಡಗಳು ತುಂಬಿದ್ದ ಕಾಲದಲ್ಲಿ ಇಳಿದು ನಿಂತುಕೊಂಡು ಮುಂಗಾರು ಮಳೆ ಸುರಿದಂತೆ ಎರಡು ಹಸ್ತಗಳಿಂದಲೂ ಕೆಂಡಗಳನ್ನು ಎರಚಿದರು ಇದು ಬಹಳ ಆಶ್ಚರ್ಯವಾಗಿತ್ತು ಅನಂತರ 30 ಜನ ಹೆಂಗಸರು ಅಗ್ನಿಗುಂಡದ ಸುತ್ತಲೂ ಕೂತುಕೊಂಡು ಸೌಟುಗಳಿಂದ ಕೆಂಡಗಳನ್ನು ತಲೆಗೆ ಹೊಯಿಸಿಕೊಂಡರು ಬಳಿಕ 5 ಗಂಟೆಗೆ 3 ಹಸ್ತಗಳನ್ನೂ 6-8 ವರುಷದ ಹುಡುಗರ ಕೈಗೆ ಕೊಟ್ಟು ಉತ್ಸವದಿಂದ ಅಗ್ನಿಗುಂಡದ ಬಳಿಗೆ ಬಂದು ಮೂರು ದಫಾ ಅಗ್ನಿಗುಂಡದಲ್ಲಿ ಇಳಿದು ಉತ್ಸವಾದಿಗಳನ್ನು ತೀರಿಸಿಕೊಂಡು ಮರಿಗಮ್ಮನ ಗುಡಿ ದಿಬ್ಬದ ಬಳಿಗೆ ಹೋಗಿ ವಾಪಸು ಬಂದು ಅಗ್ನಿಗುಂಡದಲ್ಲಿ ಮೂರು ದಫಾ ಇಳಿದು ಆ ಮೇಲೆ ಮಂಟಪಕ್ಕೆ ಬಂದರು ರಾತ್ರಿಯೆಲ್ಲಾ ದೇವರಿಗೆ ಒಪ್ಪಿಸಿದ ಚರವು ಸಕ್ಕರೆ ಮಂಟಪದ ಮುಂಭಾಗದಲ್ಲಿ ಬೆಟ್ಟದೋಪಾದಿಯಲ್ಲಿ ರಾಶಿ ಬಿದ್ದಿತ್ತು ಭಾನುವಾರ ಬೆಳಿಗ್ಗೆ ಹುಲಿ ವೇಷಗಳಿಂದಲೂ, ನಾನಾ ತರಹೆ ಆಟಗಳಿಂದಲೂ ಜನಗಳು ಪೇಟೆಯಲ್ಲಾ ತುಂಬಿಕೊಂಡಿದ್ದರು ಮಧ್ಯಾಹ್ನ 3 ಗಂಟೆಗೆ ಅನೇಕ ಜನಗಳು ಗೆಜ್ಜೆಗಳನ್ನು ಕಟ್ಟಿಕೊಂಡು ಮಜೀನರಾಗಿ ಬಂದು ಅಗ್ನಿಗುಂಡದ ಬಳಿಯಲ್ಲಿ ತಮಟೆ ಕೊಂಬು ವಾದ್ಯಗಳಿಂದ ಕುಣಿದಾಡುತ್ತಿದ್ದರು 4 ಗಂಟೆಗೆ ಮಂಟಪದಲ್ಲಿದ್ದ 3 ಬೆಳ್ಳಿ ಹಸ್ತಗಳನ್ನು 7 8 ವರುಷದ ಹುಡುಗರ ಕೈಗೆ ಕೊಟ್ಟು ಅಗ್ನಿಗುಂಡದ ಬಳಿಗೆ ಬಂದು ಅಗ್ನಿಗುಂಡದಲ್ಲಿ 3-4 ದಫಾ ಆಚೆಗೂ ಈಚೆಗೂ ಇಳಿದುಹೋದ ನಂತರ ಅಗ್ನಿಗುಂಡವನ್ನು ಮುಚ್ಚಿಸಿ 3 ಸುತ್ತು ಪ್ರದಕ್ಷಿಣೆ ಬಂದರು 2 ಫರ್ಲಾಂಗು ದೂರದಲ್ಲಿರುವ ಚನ್ನಕೇಶವಪ್ಪನ ಬಾವಿ ಬಳಿಗೆ ಹೋಗಿ ಜಲ್ದಿಯನ್ನು ಮಾಡಿದರು 23 ನೇ ಮಂಗಳವಾರ ಉತ್ಸವ ನಡಿಯಿತು ಈ ಕಾರ್ಯಗಳೆಲ್ಲವನ್ನೂ ಶೀನಪ್ಪನವರೂ, ಸಾ|| ಚಂದ್ರಯ್ಯನವರೂ, ಉಗ್ರಿನರಸಪ್ಪನವರೂ ಖುದ್ದು ನಿಂತು ಗಲಾಟೆ ಆಗದಂತೆ ಜನಗಳಿಗೆ ಪ್ರೋತ್ಸಾಹಿಸಿ ಸಾಂಗವಾಗಿ ಸಂತೋಷದಿಂದ ನಡಿಸಿದರು —ಈ ಗ್ರಾಮದಲ್ಲಿ ಕೆಲವು ಜನರು 200 ಹಂದಿಗಳ ವರಿಗೂ ಸಾಕಿದ್ದಾರೆ, ಇವರು ಊರಿನಲ್ಲಿ ಮನೆಗಳ ಮಗ್ಗುಲಲ್ಲಿ ಗೂಡುಗಳನ್ನು ಕಟ್ಟಿಕೊಂಡು ಅವುಗಳನ್ನು ಯಾವಾಗ್ಲೂ ಗ್ರಾಮದಲ್ಲಿ ಬೀದಿಗಳಲ್ಲೆಲ್ಲಾ ತಿರುಗಿಕೊಂಡು ಹದ್ದಿಲ್ಲದಂತೆ ಬಿಡುತ್ತಾರೆ ಇವುಗಳು ಗ್ರಾಮದ ಸುತ್ತಲೂ ಇರುವ ಫಸಲುಗಳನ್ನು ಕೆಡಿಸುತ್ತವೆ ಗ್ರಾಮದ ಪಟೇಲ್ ಶ್ಯಾನುಭೋಗರು ಹಂದಿಗಳನ್ನು ಸಾಕುವವರಿಗೆ ಎಚ್ಚರಿಕೆ ಕೊಟ್ಟು ಅವುಗಳ ಕಾಟವನ್ನು ತಪ್ಪಿಸುತ್ತಾರೆಂದು ಪ್ರಜೆಗಳು ಕೋರುತ್ತಾರೆ

ವಿದೇಶ ವೃತ್ತಾಂತಗಳು

ಚೀನಾರಾಜ್ಯಕ್ಕೆ ಸೇರಿದ ಜೀಚುವಾನ್ ಎಂಬ ವಿಭಾಗದೊಳಗೆ ದರೋಡೆ ಕೋರರ ಹಾವಳಿಯು ಕಳೆದ ವರುಷ ವಿಶೇಷವಾಗಿದ್ದದ್ದರಿಂದ ಸರ್ಕಾರದವರು 24,000 ಜನರನ್ನು ಹಿಡಿದು ಕಡಿಸಿಹಾಕಿದರೆಂದು ಹೇಳುತ್ತಾರೆ

* * *

ಫ್ರೆಂಚರ ಬಾಲನ್ ಎಂಬಾತನು 39 ದಿನಗಳು ತನ್ನ ವಿಮಾನದಲ್ಲಿ ಪ್ರಯಾಣ ಮಾಡಿ ಅಂತರಿಕ್ಷದಲ್ಲಿ 13,000 ಮೈಲಿ ಸಂಚಾರಮಾಡಿರುತ್ತಾನೆ ಇದುವರೆಗೆ ವಿಮಾನ ಸಂಚಾರಮಾಡಿರುವವರಲ್ಲಿ ಈತನೇ ಅಪಾಯಹೊಂದದೆ ಬಹು ದೂರ ಪ್ರಯಾಣಮಾಡಿದವನು

* * *

ಸೂರ್ಯ ಬಿಂಬದಲ್ಲಿ ಅನೇಕ ಮಚ್ಚೆಗಳಿರುವವೆಂದು ಬಹಳ ಜನ ಖಗೋಳ ಶಾಸ್ತ್ರಜ್ಞರು ನಂಬುತ್ತಾರೆ ಅವುಗಳ ಪೈಕಿ ಒಂದು ಮಚ್ಚೆಯು 107,136,700 ಚದರ ಮೈಲಿಗಳಷ್ಟು ವಿಸ್ತಾರವಾಗಿರುವದೆಂದು ಅಮೇರಿಕ ದೇಶದ ಒಬ್ಬ ಶಾಸ್ತ್ರಜ್ಞನು ಕಂಡುಹಿಡಿದಿರುತ್ತಾನೆ

* * *

ಫಾರ್ಮೋಸಾ ದ್ವೀಪದಲ್ಲಿ ವೈಸ್‌ರಾಯರನ್ನು ಕೊಲ್ಲಬೇಕೆಂದು ಕೆಲವು ಜನರು ಸೇರಿ ಫಿತೂರಿ ಮಾಡಿದರು ಜಪಾನ್ ಸರ್ಕಾರದವರು ಆ ಪೈಕಿ 20 ಜನರನ್ನು ಹಿಡಿದು ಕೆಲವು ವಾರಗಳ ಹಿಂದೆ ಕೊಲ್ಲಿಸಿದ್ದರು ಈಚೆಗೆ ಸಿಕ್ಕಿದ 13 ಜನರನ್ನು ಕಳೆದ ವಾರ ಗಲ್ಲಿಗೆ ಹಾಕಿಸಿರುತ್ತಾರೆ

* * *

ಇಂಗ್ಲೆಂಡಿನಲ್ಲಿ ಆಡತಕ್ಕ ಪ್ರತಿಯೊಂದು ನಾಟಕವನ್ನೂ ಪರಿಶೀಲನೆ ಮಾಡಿ ಬಹಿರಂಗವಾಗಿ ಆಡುವದಕ್ಕೆ ಯೋಗ್ಯವಾಗಿದೆಯೋ ಇಲ್ಲವೇ ಎಂಬುದನ್ನು ಗೊತ್ತುಮಾಡುವದಕ್ಕಾಗಿ ಇಂಗ್ಲಿಷ್ ಸರ್ಕಾರದವರು ಜಾರ್ಜ್ ಸ್ಟ್ರೀಟ್ ಎಂಬಾತನನ್ನು ನೇಮಿಸಿರುತ್ತಾರೆ

* * *

ಕಳೆದ ವರುಷ ಪ್ರಪಂಚದ ಎಲ್ಲಾ ಗಣಿಗಳಲ್ಲಿ 126½ ಕೋಟಿ ರೂಪಾಯಿನ ಚಿನ್ನ ಉತ್ಪತ್ತಿಯಾಯಿತೆಂದೂ (ಅಂದರೆ, ಹಿಂದಿನ ವರುಷದ ಸುಮಾರು 3½ ಕೋಟಿಯಷ್ಟು ಕಡಮೆ), ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೊಳಗೆ 170 ಲಕ್ಷ ರೂಪಾಯಿ ತೂಕದಷ್ಟು ಬೆಳ್ಳಿಯನ್ನು ಗಣಿಗಳಿಂದ ತೆಗೆದರೆಂದೂ ಪ್ರಕಟವಾಗಿದೆ

* * *

ಬಲ್ಗೇರಿಯಾ ಪಾರ್ಲಿಮೆಂಟು ಕಳೆದ ಶುಕ್ರವಾರ ಪ್ರಾರಂಭವಾದಾಗ ದೊರೆಯು ಸಭೆಮನೆಗೆ ಹೋಗಿ ಶ್ರೀಸ್ವಾಸನವನ್ನು ಅಲಂಕರಿಸಿದನು ಸಭೆ ಮನೆಯಲ್ಲಿದ್ದ ಒಂದು ಗುಂಪಿನ ಮೆಂಬರುಗಳು ಏಕಕಾಲದಲ್ಲಿ ಎದ್ದು ನಿಂತು "ದೊರೆತನವು ನಿರ್ಮೂಲವಾಗಲಿ" ಎಂದು ಕೂಗಿಕೊಂಡು, ಸಭೆಮನೆಯಿಂದ ಹೊರಟುಹೋದರು

* * *

ಚೀನಾರಾಜ್ಯದಲ್ಲಿ ಅನಾಯಕ ಪಾಳ್ಯದವರು ಹೆಚ್ಚಿ ಪುನಃ ಅಲ್ಲಲ್ಲಿ ಗಲಭೆಯಾಗುತ್ತಿದೆ ಸರ್ಕಾರದವರಿಗೂ ಅವರಿಗೂ ಅನೇಕ ಕಡೆ ಯುದ್ಧವಾಯಿತು ಉಭಯ ಪಕ್ಷದವರೂ ಶತ್ರುಗಳನ್ನು ಕೊಂದುಹಾಕುತ್ತಿರುವರು ಚೀನಾರಾಜ್ಯದಲ್ಲಿ ರೈಲುರಸ್ತೆ ಹಾಕಿಕೊಳ್ಳಬಹುದೆಂದು ಚೀನೆಯವರಿಗೂ ಜರ್ಮನಿಯವರಿಗೂ ಒಪ್ಪಂದವು ನಡೆದಿರುತ್ತದೆ

* * *

ಯುದ್ಧಕಾಲದಲ್ಲಿ ಶತ್ರುಗಳ ಮೇಲೆ ಹೊಡೆಯುವ ಗುಂಡುಗಳಿಗೆ ತುಂಬುವದಕ್ಕಾಗಿ ಒಂದು ವಿಧ ಮದ್ದನ್ನು ಕಂಡುಹಿಡಿದಿರುತ್ತಾರೆ ಈ ಗುಂಡುಗಳು ಒಡೆದ ಕೂಡಲೆ ಸುತ್ತಮುತ್ತ ಇರುವ ಜನರನ್ನು ಕೊಂದುಹಾಕದೆ ಅವರಿಗೆ ಕೆಲವು ಗಂಟೆಯ ಕಾಲ ನಿದ್ದೆಬರುವಂತೆ ಮಾಡುವವು ಈ ಸಂಗತಿಯನ್ನು ಪ್ರಸ್ಯಾ ರಾಜ್ಯದ ಯುದ್ಧದ ಇಲಾಖೆಯವರು ವಿಚಾರಮಾಡುತ್ತಿದ್ದಾರೆ

* * *

ಟರ್ಕಿಯವರು ಫ್ರಾನ್ಸ್ ರಾಜ್ಯದವರಿಂದ ಸಾಲವನ್ನು ಪಡೆದು ಆ ಹಣದಿಂದ ಯುದ್ಧದ ಜಹಜುಗಳನ್ನು ಕೊಂಡು ಕೊಂಡಿರುತ್ತಾರೆ ಅವರು ಮುಂದಿನ ಏಪ್ರೆಲ್ ತಿಂಗಳಲ್ಲಿ ಗ್ರೀಸ್ ರಾಜ್ಯದವರ ಮೇಲೆ ಪುನಃ ಯುದ್ಧವನ್ನು ಮಾಡಬೇಕೆಂದಿರುವದರಿಂದ ತಾವು ಸಾಲಕೊಟ್ಟಿರುವ ಹಣವು ವಾಪಸು ಬರುವದೋ ಇಲ್ಲವೋ ಎಂದು ಫ್ರಾನ್ಸಿನವರು ಅತಂಕಪಡುತ್ತಿದ್ದಾರೆ.

* * *

ಇಂಗ್ಲಾಂಡಿನಲ್ಲಿ ಕ್ರಾಫರ್ಡ್ ಎಂಬ ಶ್ರೀಮಂತನು ತಾನು ಬದುಕಿದ್ದಾಗ್ಗೆ ತಮ್ಮ ಸೀಮೆಯಲ್ಲಿ ಕಾಲಾನುಗುಣ್ಯವಾಗಿ ಉಪಯೋಗಿಸುತ್ತಿದ್ದ ಬೇರೆ ಬೇರೆ ಜಾತಿಯ ತಲೆಚೀಟಿ (ಸ್ಟಾಂಪು) ಗಳನ್ನು ಕೂಡಿಸಿಟ್ಟಿದ್ದನು ಆತನ ಮರಣಾನಂತರ ಅವನ ವಾರಸುದಾರರು ಅವುಗಳನ್ನು ಮಾರಿಬಿಟ್ಟರು ಒಬ್ಬ ವ್ಯಾಪಾರಿಯು ಮೂರು ಲಕ್ಷ ರೂಪಾಯಿಗೆ ಅವುಗಳನ್ನೆಲ್ಲಾ ಕೊಂಡುಕೊಂಡಿರುತ್ತಾನೆ

* * *

ಟ್ರಿಪೋಲಿಯಲ್ಲಿ ಇಟಲಿಯವರಿಗೆ ಅರಬ್ಬೀ ಪ್ರಜೆಗಳು ಇನ್ನೂ ಸರಿಯಾಗಿ ಸ್ವಾಧೀನವಾಗಲಿಲ್ಲ ಆಗಾಗ್ಗೆ ಯುದ್ಧಗಳೂ ಕಾದಾಟಗಳೂ ನಡೆಯುತ್ತಲೇ ಇರುವವು ಮಹರೂಗ ಎಂಬ ಸ್ಥಳದಲ್ಲಿ ಹಿಂದಿನ ವಾರ ಯುದ್ಧ ನಡೆದು ಅರಬ್ಬಿಯವರು ಸಂಪೂರ್ಣವಾಗಿ ಸೋಲಿಸಲ್ಪಟ್ಟರು. ಇಟಲಿಯವರ ಕಡೆ ಒಬ್ಬ ಹುದ್ದೇದಾರನೂ, 16 ಮಂದಿ ಸಿಪಾಯರೂ ಮೃತಪಟ್ಟರು, 80 ಮಂದಿಗೆ ಗಾಯಗಳಾದವು

* * *

ಅಮೇರಿಕದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ಮನೆಯು ಹತ್ತಿಕೊಂಡಿತು. ಆ ಮನೆಯಲ್ಲಿದ್ದವರು ಗಾಬರಿಪಟ್ಟು ಕಿಟಕಿಯ ಮೂಲಕ ಎತ್ತರವಾದ ಮಹಡಿಯಿಂದ ಕೆಳಕ್ಕೆ ಧುಮುಕಿದರು ಕೆಳಗೆ ಬಿದ್ದವರ ಪೈಕಿ ಬಹಳ ಏಟುಗಳಿದ್ದರಿಂದ ಐದು ಜನ ಗಂಡಸರೂ, ಮೂವರು ಹೆಂಗಸರೂ ಮೃತಪಟ್ಟರು ಕಷ್ಟಕಾಲದಲ್ಲಿ ವಿವೇಕಶೂನ್ಯರಾಗಿ ಕೆಲಸ ಮಾಡುವದರಿಂದ ಇಂಥಾ ಅನರ್ಥಗಳು ಸಂಭವಿಸುತ್ತವೆ

* * *

ಫ್ರಾನ್ಸ್ ದೇಶದ ಒಬ್ಬ ಯುವಕನು ಮದುವೆ ಮಾಡಿಕೊಳ್ಳಬೇಕೆಂಬ ಅಭಿಲಾಷೆಯಿಂದ ಒಬ್ಬ ಹೆಂಗಸನ್ನು ತನ್ನ ಮನೆಗೆ ಕರೆದುಕೊಂಡು ಬಂದನು ಅವಳನ್ನು ಮದುವೆಯಾಗುವದು ಆ ಯುವಕನ ತಂದೆಗೆ ಇಷ್ಟವಿಲ್ಲದ್ದರಿಂದ ಒಂದು ದಿನ ಜಗಳ ಬಂದಾಗ ತಂದೆಯು ಬಂದೂಕವನ್ನು ತೆಗೆದುಕೊಂಡು ತನ್ನ ಮಗನನ್ನು ಗುಂಡಿನಿಂದ ಹೊಡೆದನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದರು. ಅವನ ಗಾಯಗಳು ಗುಣಹೊಂದದೆ ಆ ಯುವಕನು ಮರಣವನ್ನು ಹೊಂದಿದನು

* * *

ದಕ್ಷಿಣ ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ಸಂಸ್ಥಾನದಲ್ಲಿ ಈಗ್ಗೆ ಕೆಲವು ಕಾಲದಿಂದ ದಂಗೆಯುಂಟಾಗಿ ನಾನಾವಿಧದ ಕಷ್ಟನಷ್ಟಗಳು ಸಂಭವಿಸಿರುತ್ತವೆ ಗವರನ್‌ಮೆಂಟ್ ಪಕ್ಷದವರಿಗೂ, ದಂಗೆಯೆದ್ದಿರುವ ಪ್ರಜೆಗಳ ಮುಖಂಡರಿಗೂ ಕಳೆದ ವಾರ ಮೂರು ದಿನ ಏಕಪ್ರಕಾರವಾದ ಯುದ್ಧ ನಡಿಯಿತು ಅದರಲ್ಲಿ 1,000 ಜನರು ಮೃತಪಟ್ಟರು ಯುದ್ಧವು ಓಜಿನಾಗಾ ಎಂಬ ಸ್ಥಳದಲ್ಲಿ ಇನ್ನೂ ನಡೆಯುತ್ತಲೇ ಇದೆ ಪ್ರಜಾಪಕ್ಷದವರು ಸುಮೇವಾ ಲಾರೆಡೋ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು, ಹಲ್ಲಾ ಹತ್ತುವುದಕ್ಕೆ ಬಹಳ ಸಾಹಸಪಡುತ್ತಿರುವರು

* * *

ಇಂಗ್ಲೆಂಡಿಗೆ ಸೇರಿದ ಬರ್ಮಿಂಗ್ಹಾಂ ಪಟ್ಟಣದಲ್ಲಿ 12 ವಯಸ್ಸಿನ ಒಬ್ಬ ಹುಡುಗಿಗೆ ಎಷ್ಟು ಪ್ರಯತ್ನಪಟ್ಟು ಶಿಕ್ಷೆಮಾಡಿ ಹೇಳಿಕೊಡುತ್ತಾ ಬಂದಾಗ್ಯೂ ಅವಳು ಬಲಗಡೆಯಿಂದ ಎಡಗಡೆಗೇನೇ ಬರೆಯುತ್ತಾ ಬಂದಳು ಆದಕ್ಕೆ ಕಾರಣವೇನಾಗಿರಬಹುದೆಂದು ಡಾಕ್ಟರುಗಳು ಎಕ್ಸ್ ರೇಸ್ ಎಂಬ ನವೀನ ಯಂತ್ರ ಸಹಾಯದಿಂದ ಆ ಹುಡುಗಿಯ ಅಂಗಾಂಗಗಳನ್ನೆಲ್ಲಾ ಪರೀಕ್ಷೆ ಮಾಡಿ ನೋಡಿದಾಗ ಆ ಹುಡುಗಿಗೆ ಹೃದಯವು ಬಲ ಎಡೆಯಲ್ಲಿದೆ ಎಂದೂ ಇತರ ಕೋಶಗಳೂ ಕೂಡ ಸ್ಥಳ ಬದಲಾವಣೆಯಾಗಿರುವವೆಂದೂ ಗೊತ್ತಾಯಿತು ಇದಕ್ಕಾಗಿಯೇ ಅವಳು ಆ ರೀತಿ ಬರೆಯುವಳೆಂದು ತಿಳಿಸಿದರು

* * *

ಉತ್ತರ ಅಮೇರಿಕದ ಒಂದು ಪಟ್ಟಣದಲ್ಲಿ ನೀರಿನ ಕ್ಷಾಮವು ಪ್ರಾಪ್ತವಾಗಿ ಐದು ದಿನಗಳವರೆಗೂ ಪ್ರಜೆಗಳ ಸ್ನಾನಪಾನಾದಿಗಳಿಗೆ ಒಂದು ತೊಟ್ಟು ನೀರು ಸಿಕ್ಕದೆ ಬಹಳ ತೊಂದರೆ ಪಟ್ಟರು ಹೀಗಿರುವಲ್ಲಿ ಆ ಪಟ್ಟಣದ ಒಂದು ಭಾಗದಲ್ಲಿ ಬೆಂಕಿ ಎದ್ದು ಒಂದು ಮೈಲಿ ದೂರದಿಂದ ನೀರನ್ನು ಒದಗಿಸಿದರೂ ಅವರ ಶ್ರಮವು ಸಾರ್ಥಕವಾಗದೆ ಸುಮಾರು ಇಪ್ಪತ್ತು ಭಾರೀ ಮನೆಗಳು ಸುಟ್ಟು ಬೂದಿಯಾದವು ಇದರಿಂದ ಮೂವತ್ತು ಲಕ್ಷ ರೂಪಾಯಿನ ಆಸ್ತಿ ನಷ್ಟವಾಗಿರುವದೆಂದು ತಿಳಿದು ಬಂದಿರುತ್ತದೆ ಐದನೇ ದಿವಸ ಸಾಯಂಕಾಲ ನೀರಿನ ಸಹಾಯವು ದೊರೆತದ್ದರಿಂದ ಜನರಿಗೆ ಸ್ವಲ್ಪ ನೆಮ್ಮದಿಯುಂಟಾಯಿತು

* * *

ಇಂಗ್ಲೆಂಡಿನ ಎಲ್ಲಾ ಭಾಗಗಳಲ್ಲಿಯೂ ಯೂರೋಪ್ ಖಂಡದ ಕೆಲವು ಕಡೆಗಳಲ್ಲೂ ವಿಶೇಷವಾಗಿ ಹಿಮ ಸುರಿದು ಜನರಿಗೆ ಅಪಾರವಾದ ಕಷ್ಟನಷ್ಟಗಳು ಸಂಭವಿಸಿರುತ್ತವೆ ಕೆಲವು ಭಾಗಗಳಲ್ಲಿ ರಸ್ತೆಗಳು ಸಂಪೂರ್ಣವಾಗಿ ಕೆಟ್ಟುಹೋಗಿ ಕೆಲಸಕಾರ್ಯಗಳಿಗೂ ಜನಗಳ ಸಂಚಾರಕ್ಕೂ ಅಡ್ಡಿಯಾಗಿದೆ ಒಂದು ಕಡೆ ಚಳಿಯ ಕ್ರೂರತೆಯನ್ನು ತಡೆಯಲಾರದೆ ಹದಿನಾಲ್ಕು ಜನರು ಮೃತಪಟ್ಟರು ಸ್ವಿಟ್ಜರ್‌ಲ್ಯಾಂಡಿನಲ್ಲಿ ವಿನೋದಾರ್ಥವಾಗಿ ಸಂಚಾರ ಮಾಡುತ್ತಿದ್ದವರ ಪೈಕಿ ನಾಲ್ಕು ಜನರು ಹಿಮಗಡ್ಡೆಯ ಪ್ರವಾಹಕ್ಕೆ ಸಿಕ್ಕಿ ಸತ್ತುಹೋದರು ಫ್ರಾನ್ಸ್ ಮತ್ತು ಜರ್ಮನಿ ರಾಜ್ಯಗಳಲ್ಲಿಯೂ ಈ ವಿಧವಾದ ಅನಾಹುತಗಳು ಸಂಭವಿಸಿರುತ್ತವೆ

* * *

ಜಪಾನ್ ರಾಜ್ಯಕ್ಕೆ ಸೇರಿದ ಅವೋರಿ ಮತ್ತು ಹೊಕ್ಕೈಡೋ ಎಂಬ ಡಿಸ್ಟ್ರಿಕ್ಟುಗಳಲ್ಲಿ ವಿಶೇಷ ಕ್ಷಾಮವು ಪ್ರಾಪ್ತವಾಗಿದೆ ಕಳೆದ 1869ನೇ ಇಸವಿಯಿಂದೀಚೆಗೆ ಇಂಥಾ ಭಯಂಕರವಾದ ಕ್ಷಾಮವು ಪ್ರಾಪ್ತವಾಗಿರಲಿಲ್ಲವಂತೆ ಸಾವಿರದಲ್ಲಿ ಒಂದು ಪಾಲಿನಷ್ಟಾದರೂ ಈ ಸಲ ಬೆಳೆ ಆಗಲಿಲ್ಲ ಸಮುದ್ರದಲ್ಲಿ ಮೀನುಗಳು ಸಿಕ್ಕುವುದೂ ಪ್ರಯಾಸವಾಗಿದೆ. ಜೀವನಕ್ಕೆ ಮಾರ್ಗವಿಲ್ಲದೆ ತಂದೆತಾಯಿಗಳು ತಮ್ಮ ಹೆಣ್ಣುಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ ಅನೇಕ ಹೆಣ್ಣುಮಕ್ಕಳು ಆ ಪ್ರಾಂತ್ಯದಿಂದ ಅನ್ಯದೇಶಗಳಿಗೆ ಹೋಗುವುದಕ್ಕೋಸ್ಕರ ರಾಜಧಾನಿಗೆ ಹೋಗುತ್ತಿರುವರು ಸರ್ಕಾರದವರು ಈ ಕ್ಷಾಮ ನಿವಾರಣೆಗಾಗಿ 90 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆಂದು ತಿಳಿಯುವುದು

* * *

ಕಳೆದ ವಾರ ನ್ಯೂಯಾರ್ಕ್ ಪಟ್ಟಣದ ಒಂದು ಹೋಟಲಿನೊಳಕ್ಕೆ ಐದು ಜನ ಆಯುಧಪಾಣಿಗಳಾದ ಕಳ್ಳರು ನುಗ್ಗಿ ಎದುರುಗೊಳ್ಳುವದಕ್ಕೆ ಬಂದ ಹೋಟಲಿನ ಯಜಮಾನನನ್ನು ಬಂದೂಕದಿಂದ ಹೊಡೆಯುತ್ತೇವೆಂದು ಹೆದರಿಸಿದರು ಅವರು ಒಂದು ಕೊಠಡಿಯನ್ನು ಪ್ರವೇಶಿಸಿ ಅಲ್ಲಿ ಊಟ ಮಾಡುತ್ತಿದ್ದ ಹದಿನೈದು ಜನರನ್ನು ಕೊಂದುಹಾಕುತ್ತೇವೆಂದು ಹೆದರಿಸಿ ನಿಲ್ಲಿಸಿದರು. ಕಳ್ಳರ ಪೈಕಿ ಇಬ್ಬರು ಒಂದೂಳವನ್ನು ಬಾರುಮಾಡಿ ಹಿಡಿದು ಕೊಂಡರು ಉಳಿದ ಮೂವರು ಎಲ್ಲರನ್ನೂ ಶೋಧನೆಮಾಡಿ ಅವರಲ್ಲಿದ್ದ ಬೆಲೆಬಾಳುವ ವಸ್ತುಗಳನ್ನೂ, ಹಣವನ್ನೂ, ಗಡಿಯಾರಗಳನ್ನೂ ಕಸಿದು ಕೊಂಡು ಕ್ಷಣಮಾತ್ರದಲ್ಲಿ ಎಲ್ಲರೂ ಓಡಿಹೋದರು

ಶಬ್ದಾದರ್ಶದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ !!

ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ “ಶಬ್ದಾದರ್ಶ”ಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ. 4 ಪ್ರತಿ ಒಟ್ಟಾಗಿ ತರಿಸಿಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಣ್ಯಪುರಾಧಿಪನ್ಯವೆಂಬ ನಕಲಿ ಉಚಿತ. 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯೆಂಬ ಕಥೆಯ ಪುಸ್ತಕ ಉಚಿತ, ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ.

[266–1] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.



ಜನವರಿ ಮಹೋತ್ಸವದ ಕೈ ಗಡಿಯಾರ.

[16-1]

ಅರ್ಧ ಕ್ರಯ ರೂ. 1–14 0.

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಐವತ್ತರ ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ.

ವಿಳಾಸ—ಸುಬ್ಬರಾವ್, ಜನರಲ್ ಮರ್ಚೆಂಟ್, ನಂ 16 ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸ್.

ಗೃಹಕೃತ್ಯದ ನೋಟೀಸ್.

ಮೂಡಗೆರೆ ತಾಲ್ಲೂಕು ಕಳಸಾ ಮಾಗಣೆ ಇಡ್ಕಣಿ ಗ್ರಾಮದ ಸರ್ವೆ ನಂಬರು 121-122-123-124-125 ನೇ ಕಂಕನಪಡ್ಲು ಎಂಬ ತರೀ ಜಮೀನಿನಲ್ಲಿ ನನಗೆ ಹಕ್ಕು ಇರುವದರಿಂದ ನನ್ನ ಅನುಮತಿ ವಿನಹ ಯಾರಾದರೂ ಕ್ರಯಕ್ಕೆ ಕೊಂಡರೆ ಅದು ಕಾಯಂ ಆಗದೆ ರದ್ದಾಗಿರುತ್ತದೆ

[15-1]

ಐ. ಸಾಲ್ಡನಾ, ಮ್ಯಾನೇಜರ್, ಕೊಗುಣಸಳ್ಳಿ ಎಸ್ಟೇಟ್, ಬಾಳೆಹೊನ್ನೂರು.

Office of the Military Secretary to
H. H. the Maharajah of Mysore,

Dated, Bangalore, the 20th December, 1913.

NOTICE.

Sealed tenders for the supply of good and cleaned grain, required for the ponies and harness horses of the Mysore Imperial Service Transport Corps and Government Stables at Bangalore and Mysore, will be received up to 2 P. M. on Monday, the 19th January, 1914, in the Office of the Military Secretary to His Highness the Maharajah of Mysore, Bangalore. The contract for the said supply of grain will be from 1st March, 1914, to 28th February, 1915.

Intending tenderers may apply to the Military Secretary to His Highness the Maharajah of Mysore, Bangalore, for further particulars.

(Sd.) A. A. Jones, Lt.-Col.,

[1-1] *Offg. Military Secretary.*

ಗುಣಕಂಡ
ಮೂರು ಮಹೌಷಧಗಳು.

ಮೇಧೋವರ್ಧಿನಿ (Brain Tonic)—ಮೆದುಳಿನಿಂದ ಕೆಲಸಮಾಡುವವರಿಗೆ ಬಹು ಫಲಕಾರಿಯಾದುದು. ಮೆದುಳಿಗೆ ಸೇರಿರುವ ಉಷ್ಣವನ್ನು ತಗ್ಗಿಸಿ, ಬುದ್ಧಿಗೆ ಸೂಕ್ಷ್ಮತೆಯನ್ನೂ, ದೃಷ್ಟಿಗೆ ಪಾಟವವನ್ನೂ ಕೊಡುವುದಲ್ಲದೆ ಬಹಳ ಕಾಲದಿಂದ ಅನುಸರಿಸಿಬಂದ ನೋವುಗಳು ಈ ತೈಲವನ್ನುಪಯೋಗಿಸುವುದರಿಂದ ಖಂಡಿತವಾಗಿಯೂ ತೊಲಗುವವು ಸಾಧಾರಣಕಾಲದಲ್ಲಿ ನೆತ್ತಿಗೆ ಇದನ್ನು ಹಚ್ಚಿಕೊಂಡು ಸ್ನಾನಮಾಡಿದರೆ 3–4 ಅಭ್ಯಂಗನಗಳಿಂದಾಗುವ ಪ್ರಯೋಜನವಾಗುವದು

ಕ್ರಯ 1 ಶೀಷೆಗೆ 1 ರೂಪಾಯಿ, 6 ಶೀಷೆಗೆ 5 ರೂಪಾಯಿ

ಗೋರೋಚನಮಾತ್ರೆ (Children's Laxative Pills)—8 ವರ್ಷದೊಳಗಿನ ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ಎಲ್ಲರೂ ನಿರ್ಭಯವಾಗಿ ಮಕ್ಕಳಿಗೆ ಉಪಯೋಗಿಸಿರಿ 1-2-3 ಮಾತ್ರೆಗಳನ್ನು ಜೇನಿನಲ್ಲಿ ಕಲಸಿ ಕೊಟ್ಟರೆ 2-3 ಸಲ ಸುಖಭೇದಿಯಾಗುತ್ತೆ, ಕ್ರಯ 75 ಮಾತ್ರೆಗೆ 4 ಆಣೆ, 5 ಶೀಷೆಗೆ 1 ರೂಪಾಯಿ.

ರೋಗನಾಶಿನಿ (Intimate Friend)—ಜಲದೋಷ, ಹವಾದೋಷ, ಅತಿಯಾಗಿ ಮಳೆ, ಬಿಸಲು, ಮಂಜಿನಲ್ಲಿ ಸುತ್ತುವುದರಿಂದಾಗುವ ಕೆಮ್ಮು, ಗಂಟಲುನೋವು, ಹುಣ್ಣು, ಕೆರೆತ, ಮೈ, ಕೈ, ಕಾಲು, ತಲೆ, ಸೊಂಟ ಇವುಗಳ ನೋವು, ಕಣ್ಣುರಿ, ಅಜೀರ್ಣ ಮುಂತಾಗಿ ಎಲ್ಲಾ ಗುಣವಾಗುತ್ತೆ ಇಚ್ಛಾ ಪಥ್ಯ. ಹೊತ್ತಿಗೆ 1 ಮಾತ್ರೆ. ದಿನಕ್ಕೆ 3-4 ಸಲ ಸೇವಿಸುವುದು ಕ್ರಯ 10 ಮಾತ್ರೆಗೆ 4 ಆಣೆ, 5 ಶೀಷೆಗೆ 1 ರೂಪಾಯಿ [222-11]

ವಿಳಾಸ—ಓರಿಯಂಟಲ್ ಫಾರ್ಮಸಿ, ಮೈಸೂರು.

“ವಾಸಿಮಾಡಿಕೊಳ್ಳುತ್ತೇನೆಂದು ಹೇಳು.”

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮು, ಗಳ, ಶೀತನೆಗಡಿ, ಶ್ವಾಸರೋಗ, ಚಚ್ಚು, ಉಳಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [104-43]

“ಕ್ಲೆಮೆಂಟರ ಮ್ಯಾಜಿಕ್ ಬಾಂ” ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್. ಪೀಟರ್ಸ್, 31 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ. ಎಸ್. ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಹೊಸವರ್ಷದ ಲಾಭ

ಈ ಕೆಳಗೆ ಕಾಣಿಸಲ್ಪಟ್ಟಿರುವ ಸಾಮಾನುಗಳು ಕೆಳಗೆ ವಿವರಿಸಿರುವಂತೆ ಇಷ್ಟು ಸುಲಭ ಕ್ರಯಕ್ಕೆ ಹೊಸವರ್ಷದ ಕೊಂಡಾಟಕ್ಕೋಸ್ಕರ ಈ ಜನವರಿ ತಿಂಗಳು ಆಖೈರುವರೆಗೆ ಕೊಡಲ್ಪಡುತ್ತೆ. ಆದುದರಿಂದ ಬೇಕಾದವರು ಒಡನೆಯೇ ಬರೆದು ತರಿಸಿಕೊಳ್ಳಿರಿ. ಒಳ್ಳೇ ಸಮಯ ಮುಂದೆ ಇಷ್ಟು ಬೆಲೆಗೆ ಸಿಕ್ಕಲಾರದು

ಅಮೆರಿಕಾ ದೇಶದ ಇಮಿಟೇಷನ್
ವಜ್ರದ ಆಭರಣಗಳು

ಇದು ಪ್ರಖ್ಯಾತಿಯನ್ನು ಪಡೆದ ಮರ್ಕಾಸಿ ಹೆಸರುಳ್ಳದ್ದು ಎಷ್ಟು ವರ್ಷಗಳಾದರೂ ಕೆಡುವದೇ ಇಲ್ಲ. ಭಾಗ್ಯವಂತರೂ ಸಹ ಉಪಯೋಗಿಸಲು ಲಾಯಕಾದದ್ದು. ಕಮ್ಮಲು ಜೊತೆಗೆ 1-1-0, ಹತ್ತಕಡಕು ಜೊತೆಗೆ 1-0-0 ಕೆಂಪುಬಾವಲಿ ಜೊತೆಗೆ 1-8-0 ಮೂಗುಬಟ್ಟಿಗೆ 0-1-0 ಬೇಸರಿಗೆ 0-10-0, ಬುಲಾಕಿಗೆ 1-0-0 ಎಲೆಕ್ಟ್ರೋ ಚಿನ್ನದಗಿಲ್ಟು ತಂಜಾವೂರು ಗೆಜ್ಜೆ ಅಡ್ಡಿಕೆ ಈಗ ಇದು ಹೊಸ ನಮೂನೆಯಾಗಿ ನಮ್ಮ ಖುದ್ದು ಅಜಮಾಯಿಷಿಯಿಂದ ತಯಾರು ಮಾಡಲ್ಪಟ್ಟಿರುತ್ತೆ. ಇದಕ್ಕೆ ಬಲವಾದ ಚಿನ್ನದ ಗಿಲ್ಟು ಹಾಕಿರುತ್ತೆ ಹೆಂಗಸರು ಹುಡುಗಿಯರು ಮಕ್ಕಳು ಎಲ್ಲರೂ ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಲಾಯಕಾದದ್ದು ಅಡ್ಡಿಕೆ ಕ್ರಯ 1-8-0. [14-1]





ವಿಳಾಸ—ಎ. ಮುನಿಸಾಮಿನಾಯುಡು, ನಂ. 3 ಆರುಮುಗಚೆಟ್ಟಿ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದಿರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಥಳುಕು; ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ, ಆಲಸಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು; ತಲೆ ತಿರುಗುವಿಕೆ, ಮೈನೋವು; ಕೀಲುನೋವು; ಮರವು, ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-16]

ಆರೋಗ್ಯವು ಬೇಕಾದವರ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಏಜಂಟರೊಬ್ಬರು ಬೇಕಾಗಿದೆ.

ಮೈಸೂರು ಟವನ್ನಿನಲ್ಲಿ ಸ್ಥಾಪಿಸಲ್ಪಡಬೇಕೆಂದಿರುವ ಮೈಸೂರು ಬ್ಯಾಂಕಿನ ಬ್ರಾಂಚ್ ಆಫೀಸಿಗೆ ಏಜಂಟರೊಬ್ಬರು ಬೇಕಾಗಿರುತ್ತೆ. ಈ ಕೆಳಗೆ ನಮೂದು ಮಾಡಿರುವ ನಿಬಂಧನೆಗಳಿಗೆ ಒಳಪಟ್ಟು ಕೆಲಸಮಾಡಲು ಇಷ್ಟವುಳ್ಳವರು 1914 ನೇ ಇಸವಿ ಜನವರಿ ಮಾಹೆ 25 ರ ಒಳಗಾಗಿ ಮೈಸೂರು ಸಂತೆಪೇಟೆಯಲ್ಲಿರುವ ಸದರಿ ಬ್ಯಾಂಕಿನ ಡೈರೆಕ್ಟರವರಾದ ಮ|| ಡಿ. ಬನುಮಯ್ಯನವರಲ್ಲಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. [13 1]

ಏಜಂಟಾಗತಕ್ಕವರು ನಡಿಸಬೇಕಾದ ಷರತ್ತುಗಳು

1 ಆಧಾರ—ನಗದಾಗಿ ಆಗಲಿ, ಸ್ಥಿರಸ್ವತ್ತಿನ ಮೂಲಕವಾಗಿಯಾಗಲಿ ಇರತಕ್ಕದ್ದು.

2. ಯೋಗ್ಯತೆ—ಸಂಘದವರಾಗಲಿ, ಒಬ್ಬಂಟಿಗನಾಗಲಿ, ಆಯಾಯ ಪ್ರದೇಶದ ವರ್ತಕರಿಗೆ ಬೇಕಾದವನಾಗಿ ವಿಶೇಷ ದ್ರವ್ಯಸ್ಥನಾಗಿರಬೇಕು. ಮುಖ್ಯವಾಗಿ ಆಯಾಯ ಪ್ರದೇಶದ ವ್ಯಾಪಾರಗಳಲ್ಲಿ ಮುಖಂಡನಾಗಿ ಇರಕೂಡದು, ಮತ್ತು ಸ್ವಂತವಾದ ಲೇವಾದೇವಿ ನಡಿಸತಕ್ಕವನಾಗಿಯೂ ಇರಕೂಡದು

3. ಮಾಡತಕ್ಕ ಕೆಲಸಗಳು—ನಿಯಮಿತವಾದ ಏಜಂಟಾದವನು ಮ್ಯಾನೇಜರವರ ಅಪ್ಪಣೆಪ್ರಕಾರ ಕೆಲಸಮಾಡತಕ್ಕದ್ದು. ಹುಂಡಿ ಕೆಲಸ ನಡಿಸುವದರಲ್ಲಿಯೂ, ತನ್ನ ಜವಾಬ್ದಾರಿ ಮೇಲೆ ಕೊಡತಕ್ಕ ಸಾಲಗಳ ವಿಷಯದಲ್ಲಿಯೂ ಸಂಪೂರ್ಣವಾದ ಜವಾಬ್ದಾರನಾಗಿರತಕ್ಕದ್ದು. ಹುಂಡಿಗಳ ಮತ್ತು ಇತರ ದಸ್ತೈವಜುಗಳ ಹಿಂಭಾಗದಲ್ಲಿ ಈತನ ಇಂಡಾರಸುಮೆಂಟು ಅತ್ಯವಶ್ಯಕವಾದದ್ದು. ಸರಿಯಾದ ಮನುಷ್ಯರಿಗೆ ಚಕ್ಕುಗಳ ಮೇಲೆ ಹಣ ಪಾವತಿ ಮಾಡುವುದರಲ್ಲಿಯೂ, ಅವರಿಂದ ಮಾಡಲ್ಪಡುವ ಸೈನ್ ಮತ್ತು ಇಂಡಾರಸುಗಳಿಗೂ ಮತ್ತು ಖಾತೆಗೆ ಸೇರಿದ ಹಣ, ಲೆಕ್ಕಪತ್ರಗಳ ವಿಷಯದಲ್ಲಿಯೂ ಜವಾಬ್ದಾರನಾಗಿರತಕ್ಕದ್ದು.

4 ಪ್ರತಿಫಲ—ಈತನ ಏಜಂಟು ಕೆಲಸ ಕಾಲದಲ್ಲಿ ಉತ್ಪತ್ತಿಯಾದ ಒಟ್ಟು ಲಾಭದಲ್ಲಿ ಶೇಕಡ ಹತ್ತರ ಮೇರೆಗೆ ಇವನಿಗೆ ಸಲ್ಲತಕ್ಕದ್ದು. ಅಲ್ಲದ ಈ ಕೆಳಗೆ ನಮೂದುಮಾಡುವ ಮೇರೆಗೆ ದಳ್ಳಾಳಿಯು, ಈತನು ಹುಂಡಿ ಲೇವಾದೇವಿ-ಸಾಲಾಕೊಡುವದು—ಅಥವಾ ಇಬ್ಬರು ಮೂವರುಗಳ ಜವಾಬ್ದಾರಿ ಮೇಲೆ ಮುಂಗಡ ಕೊಡುವದು-ಇವುಗಳಿಗೆ ಇವನು ಜವಾಬ್ದಾರನಾದ್ದರಿಂದ ಸಲ್ಲತಕ್ಕದ್ದು ದಳ್ಳಾಳಿ ದರಗಳೇನೆಂದರೆ—(1) ದರ್ಶನಹುಂಡಿ ಉತ್ಪತ್ತಿಯಲ್ಲಿ $\frac{1}{4}$, (2) 2 ಅಥವಾ 3 ತಿಂಗಳ ಹುಂಡಿ ಉತ್ಪತ್ತಿಯಲ್ಲಿ $\frac{1}{10}$; (3) 1 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{10}$; (4) 2 ಅಥವಾ 3 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{8}$; (5) 6 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{6}$.

5. ಬ್ಯಾಂಕಿನವರು ಕಬ್ಬಿಣದ ಪೆಟ್ಟಿಗೆ, ಬರವಣಿಗೆಗೆ ಬೇಕಾಗುವ ಸಾಮಿಗ್ರಿಗಳು, ಲೆಕ್ಕಗಳ ಪುಸ್ತಕಗಳು, ಒಬ್ಬ ಗುಮಾಸ್ತೆಗೆ ಕೊಡಬೇಕಾದ ಸಂಬಳ, ಬ್ಯಾಂಕಿನ ಉಸ್ತುವಾರಿಗೋಸ್ಕರ ಬೇಕಾಗಿರುವ ಒಬ್ಬ ಜವಾನನಿಗೆ ಮಾಹೇಯಾನಾ ಕೊಡಬೇಕಾದ ಸಂಬಳ, ಇವುಗಳನ್ನು ಸರಬರಾಜು ಮಾಡುತ್ತಾರೆ.

6. ಈ ಕರಾರು ವಜಾ ಆಗಬೇಕಾದರೆ ಉಭಯತ್ರರೂ ಒಂದೊಂದು ತಿಂಗಳಿಗೆ ಮೊದಲೇ ತಿಳಿಸತಕ್ಕದ್ದು.

ಪ್ರೊಫೆಸರ್ ಬ್ರೇಸ್ಲರ್
ಎಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋಪೆಯಿನಾಡೈನ್ ತೈಲದಿಂದ ಗುಣವಡುವ ವ್ಯಾದಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದದ್ದರು, ಕರಿಸಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಆಳ್ಳಿ) ಶೈತ್ಯದೋಷಗಳೂ, ವಿಷಮುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12–1]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0–8–0. ವಿ. ಪಿ. ಖರ್ಚು 0–4–0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಅಮೃತಾಂಜನ ವಸ್ತು

ಕೇಳಿಕೊಳ್ಳುವವರಿಗೆ ನಮ್ಮ ಸುಂದರವಾದ ೧೯೧೪ನೇ ವರ್ಷದ ಕೆಲೆಂಡರ್ ಪುಗಸಟ್ಟೆಯಾಗಿ ರವಾನಿಸುವೆವು.

ಇತರರಿಗೆ 6 ಕ್ಕೆ 0 12-0; 12 ಕ್ಕೆ 1-8-0. ವಿ. ಪಿ. ಮಾಫಿ.

ವಾತ, ಸಂಧಿವಾತ, ಜಖಮು, ಘಾಯ, ಉರಿ, ತಲೆನೋವು, ತಲೆಶೂಲೆ, ಹಲ್ಲುನೋವು, ಸೊಂಟದನೋವು, ಎದೆನೋವು ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧ ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟಿವೆ ಬಾಟ್ಲಿ ಒಂದಕ್ಕೆ 0-8 0. ಡಜನ್ 1 ಕ್ಕೆ 6 1 0. ವಿ. ಪಿ. ಖರ್ಚು ಪ್ರತ್ಯೇಕ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು [42-46]

ವಿಳಾಸ:—ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

೯ ಜಹಂಗೀರ್ ಸ್ಟ್ರೀಟ್ ಮದ್ರಾಸು

ಆಂಗ್ಲಭಾಷಾ ಪ್ರವೇಶದಾಯಿನಿ.

ಥಳಥಳಿಸುವ ದಪ್ಪಕಾಗದ ಮುದ್ದಾದ ಮುದ್ರಣ. **೧ನೆ ಪುಸ್ತಕ** ಬಲು ಗಟ್ಟಿ ಅಟ್ಟೆ ಹೊಸಪರಿ !!!

ಕ್ರಯ ಒಂದು ರೂಪಾಯಿ ಮೂರಾಣೆ.

ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್ ಭಾಷೆಯನ್ನು ಕಲಿಸುವುದು. ಪ್ರಥಮಾಭ್ಯಾಸಿಗಳಿಗೆ ಪರಮೋಪಯೋಗಿ. ಹ್ಲೆದು ಭಾಗಗಳುಳ್ಳ ಪುಸ್ತಕ. ನಾಲ್ಕನೆಯ ಮುದ್ರಣ. [6-2] ನಮ್ಮ ವಿಳಾಸ ಬದಲಾಗಿದೆ.—

ಭಾರತಿ ಸಂಪಂಗಿರಾಮ; ಅಥವಾ, ಎಸ್. ಆರ್. ಭಾರತಿ,

"ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದೆ ಮಾಡಿದೆ. ಬರೀ ಸಸ್ಯಾಹಾರ.

1914ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು ಈಗ ಸಿದ್ಧವಾಗಿದೆ

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್. ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು [1-2]

ಮಕ್ಕಳತಾಯಿಗೆ—"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ"—ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ.

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಸಾಗುವಾನಿ ಮುಂತಾದ ಎಲ್ಲಾ ಜಾತಿಯ ...ಗಳೂ ಬಹಳ ಅನುಕೂಲವಾದ ಕ್ರಯಕ್ಕೆ ದೊರೆಯುತ್ತ... ...ವಾಗು ಸುಂಟಿಕೊಪ್ಪದ ಪರದೂರು ಎಸ್ಟೇಟ್ ರೈಟರಿಗೆ ...ದು ಕೇಳಬಹುದು. [8-2]

1906ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ...ಶಪಟ್ಟಣದ ಸರ್ಕಾರದ ಭರವಸೆಯುಳ್ಳ "ದಿ ಕೋರೋಮಾಂ...ಲ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮದುವೆ ಮತ್ತು ...ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ಮಾಹೆಯಾನ ರೂ. 1-8-0, ...4 0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ...ಪ್ಪು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳ ...ಷ್ಟು ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳ ...ಸಂಬಳ ವಿಚಾರದ ಮೇರೆ ಬೇಕಾಗಿದೆ. ಮತ್ತು ಇದರಲ್ಲಿ ಪ್ರತಿ ...ವು ಮದುವೆ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿ ...ಹಲ್ಪಡುತ್ತ. ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ...ಜೊತೆ ಕಾಗದ ಬರೆಯಿರಿ [313 7]

Hindustan Co-operative Insurance Society, Limited,
Hindustan Buildings, Calcutta.

Authorized capital—**One Crore.** Policies effect...over Rs. 2,20,00,00. Subscribed capital—Rs. ...00,000. Funds exceed—Rs. 20,80,000.

Paid up Capital—over Rs 10,00,000.

This famous Society's Premiums are the lowest and the ...rance value, therefore, the highest Rules exceptionally ...ntageous and preferential Financial conditions based ...sound principles Rs 2,00,000 deposited with the Govern...ment, as per new Insurance Act of 1912.

Wanted Immediately

Active and influential District and Taluk Agents on ...al terms of commission or pay Bonus and rewards, ...speciality. This is the only business which requires no ...ial or higher education to earn a handsome amount ...For further particulars and agency prospectus, &c., ...ly with one anna stamp to

Messrs. Venkatachalam & Son,

Chief Agents,

166, Dodpete, Mysore.

ಗೃಹಕೃತ್ಯದ ನೋಟೀಸು.

ಮೈಸೂರು ಸಿಟಿ ಕೃಷ್ಣರಾಜಮೊಹಲ್ಲಾ ಪಿಲಿಪಿಲಿ ಪುಟ್ಟಯ್ಯನವರ ಬೀದಿ ಗೊಲ್ಲರ ಯಜಮಾನ್ ವಾಸಪ್ಪನ ಮಗ ಯಜಮಾನ್ ಕದರಯ್ಯನು ತಿಳಿಯಪ ಡಿಸುವದೇನೆಂದರೆ—ಡಿಟೋ ಮೊಹಲ್ಲಾ ಮ್ಯುನಿಸಿಪಲ್ 1950 ನೇ ಡೋರ್ ನಂಬರ್ ಮನೆ ನಮ್ಮ ಪಿತ್ರಾರ್ಜಿತ ಅದನ್ನು ನನ್ನ ಅತ್ತಿಗೆ ನಾರಾಯಣಮ್ಮನು ನನಗೆ ಮೋಸಮಾಡಬೇಕೆಂದು ಪರಭಾರೆಮಾಡುವಂತೆ ಕೇಳುತ್ತೇನೆ. ಅವಳಿಗೆ ಯಾವ ಹಕ್ಕೂ ಇಲ್ಲ ನನ್ನ ಅನುಮತಿ ಇಲ್ಲದೆ ಯಾರಾಗಲಿ ಅವಳಿಂದ ಆ ಮನೆಯನ್ನು ಕ್ರಯ, ಬೋಗ್ಯ, ಆಧಾರ ಮುಂತಾದ್ದು ಮಾಡಿಕೊಂಡರೆ ಅದು ಸಿದ್ಧವಾಗದೆ ನನ್ನ ಎಲ್ಲಾ ನಷ್ಟಕ್ಕೂ ಗುರಿಯಾಗುತ್ತಾರೆಂದು ಈಗಲೇ ಎಚ್ಚರಿಸಿದೇನೆ.

[11-1] 2-1-14 ಯಜಮಾನ್ ಕದರಯ್ಯನ ಶ್ರೀ ಗುರುತಿನ ರುಜು.

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ ; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳು 1-2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣುವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು. ಬಾಯಿ ನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ತಾಂಬೂಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು-ದಮ್ಮು-ಅರೋಚಕ ಹೊಟ್ಟೆನೋವು-ಮಲಬಂಧ-ಶರೀರದಲ್ಲಿ ದೌರ್ಬಲ್ಯ-ಇವುಗಳನ್ನು ಗುಣಮಾಡುವ ಆರೋಗ್ಯವಾದ ಗುಣವನ್ನು ಹೊಂದಿರುವದು ಮಲೆನಾಡಿನಲ್ಲಿರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮವಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ [220 11]

ಶ್ರೀಕರ ಕಸ್ತೂರಿ ಮಾತ್ರೆ.—ಅನುಪಾನಪತ್ರ ಸಹಿತ 250 ಮಾತ್ರೆ. 4 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಕುಂತಳಾನಂದ ತೈಲವು.

192-16

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಪಿ. ಎಮ್. ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ಜಪಾನರ

ಉನ್ನತಿಗೆ ಮೂಲಾಧಾರ—ನವನಾಗರಿಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಈ ಕನ್ನಡ ವಚನ ಗ್ರಂಥವನ್ನು ಓದಬೇಕು. ಶ್ರೀಮನ್ಮಹಾರಾಜರ ಮತ್ತು ಶ್ರೀಮದ್ಯುವರಾಜರ ರಮ್ಯ ಭಾವಚಿತ್ರಗಳೂ, ಕಥೆಯ ಸಂದರ್ಭಕ್ಕನುಕೂಲಿಸುವಂತೆ ನೇತ್ರಾನಂದಕರವಾದ 12 ಹಾಫ್‌ಟೋನ್ ಚಿತ್ರಗಳೂ ಇದರಲ್ಲಿವೆ ಇದರಂತೆ ಕಥ್ಯನಗಳಿಗೆ ಉಲ್ಲಾಸವನ್ನುಂಟುಮಾಡುವ ನೀತಿಬೋಧಕವಾದ ಕಥೆಯು ಕನ್ನಡದಲ್ಲಿ ಇನ್ನಾವುದೂ ಖಂಡಿತವಾಗಿಯೂ ಇಲ್ಲ. ಶ್ರೀಮನ್ಮಹಾರಾಜರವರಿಗೆ ಅನುಮತಿಯನ್ನು ಪಡೆದು ಅರ್ಪಿಸಲ್ಪಟ್ಟಿದೆ, ಮತ್ತು ನಮ್ಮ ಚೀಫ್ ಇಂಜನಿಯರ್ ಮ|| ಕರ್ಪೂರ್ ಶ್ರೀನಿವಾಸರಾಯರು ಪ್ರೌಢತರವಾದ ಉಪೋದ್ಘಾತವನ್ನು ಬರೆದಿರುವರು. ಪುಸ್ತಕವನ್ನು ಸಂಪೂರ್ಣವಾಗಿ ಓದಿದಹೊರತು ನೀವದನ್ನು ಕೆಳಗಿಡುವುದಿಲ್ಲ. ಕ್ರಯ ವಿ. ಪಿ. ಸಹಿತ—ಚಿನ್ನದ ಗಿಲ್ಟಿನದು ರೂ. 2-4-0 ; ಅವ್ವಲ್ ಗ್ಲೇಜ್ ರೂ. 1 8-0, ದುಯ್ಯಂ ರೂ. 1-4-0. [274-4]

ಧರ್ಮಪದ:—ಸಾವಿರಾರು ಗ್ರಂಥಗಳಿಂದ ಪಡೆಯಬಹುದಾದ ಜ್ಞಾನವನ್ನು ಈ ಕನ್ನಡಗ್ರಂಥವೊಂದರಿಂದಲೇ ಪಡೆಯಬಹುದು ಆಬಾಲವೃದ್ಧರಿಗೂ ಆನಂದವನ್ನುಂಟುಮಾಡುವುದು. ನೇತ್ರಾನಂದಕರವಾದ ಮಹಾರಾಜರ, ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಗೌತಮಮುನಿಯ ವಿಗ್ರಹದ ಭಾವಚಿತ್ರಗಳಿವೆ. ಕ್ರಯ. ವಿ. ಪಿ. ಸಹಿತ 1 ರೂಪಾಯಿ. ವಿಳಾಸ—

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು ; ಅಥವಾ,

ಬಿ. ಅಶ್ವತ್ಥನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-3

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೪ ಆ ; ೧ ರೂ. ೬ ಆ ;

ಚುಕ್ಕಿಯುಳ್ಳ ಟೋಪಿಗಳು ರೂ. ೧—೮, ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ., ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

ಪ್ಯಾಕೆಟ್ ಶಿಗರೆಟ್ ಲೈಟರ್.

ಕ್ರಯ ರೂ 2-8-0.

ಶಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದ ಕಡ್ಡಿಯೇ ಬ್ಯಾಡ ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [269-5]

ವಿಲಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ 2 0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ 3-0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1-8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2 0 0, ಪ್ರಶ್ನೋತ್ತರ ಲೀಪ್ಸಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 4 0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1-8 0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟ್‌ಲಾಗಿಗೆ ಬರೆಯಿರಿ [160-22]

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜಿಟ್" ಬೆಂಗಳೂರು.

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ (1) ವೈದ್ಯಸಾರಸಂಗ್ರಹ—ದೊಡ್ಡವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6-0 (2, ಶಿವಾನಂದ ಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ಕ್ರಿಮುಕಭಾಷ್ಯದೊಡನೆ ಸಹ—3 ರೂ (5) ಕುಶಸಪ್ತತಿ (ಉ ಪ್ರತಿ –3 ರೂ (6) ಸೂರ್ಯನಮಸ್ಕಾರ–3 ಆಣೆ (7) ಉದಕಶಾಂತಿ ಮಾತ್ರ—2 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1 8 0 (9) ಜಮಾ ಖರ್ಚಿನ ಪದ್ಧತಿ 12 ಆಣೆ [265-5]

ಆಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಆಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆದೀತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 32] ಎಸ್ ಕಟ್ಟ್ಯಾರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

೧೯೧೪ನೇ ಇಸವಿಯ ಪಾಕೆಟ್ ಡೈರಿ

[137-29]

ಇದರಂತೆ 6 ನಮೂನೆಯ ಡೈರಿಗಳು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ, ವಿಲಾಯಿತಿ ಯಂತ್ರಗಳಲ್ಲಿ ಬೈಂಡು ಮಾಡಿ ಮೇಲುಗಡೆಯಲ್ಲಿ ಆರ್ನಮೆಂಟಲ್ ಅಕ್ಷರಗಳನ್ನು ಬಿಡಿಸಿದೆ

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸ್ ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ ನಂ॥ ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ 1 ಕ್ಕೆ 4 ಆಣೆ | ಸಿ ನಂ॥ ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ 1ಕ್ಕೆ 6 ಆಣೆ
ಬಿ ನಂ॥ ಪೆನ್ಸಿಲ್ ಇಟ್ಟಿರುವ ಚಿಕ್ಕ ಫ್ಲ್ಯಾಪು ಡೈರಿ 1 ಕ್ಕೆ 6 ಆಣೆ. | ಡಿ ನಂ॥ ಪೆನ್ಸಿಲ್ ಇಟ್ಟಿರುವ ದೊಡ್ಡ ಫ್ಲ್ಯಾಪು ಡೈರಿ 1 ಕ್ಕೆ 8 ಆಣೆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ "ಜಿನಿವಾ ಡೈರಿ"

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಉತ್ತಮ, ದಪ್ಪ ಕಾಗದ, ಹರ್ಸ್ ಬೈಂಡು

"ಜನಿವಾ" ನಂ॥ 1 ಚಿಕ್ಕ ಡೈರಿ 1 ಕ್ಕೆ 4 ಆಣೆ | ಜನಿವಾ" ನಂ॥ 2 ಚಿಕ್ಕ ಫ್ಲ್ಯಾಪು ಡೈರಿ 1 ಕ್ಕೆ 6 ಆಣೆ

12 ಪ್ರತಿಗಳು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಉಚಿತವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ನೋಟೀಸು

ಅಮೃತಸಾರದ ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವುದೇನಂದರೆ:

ಪೀಪಲ್ಸ್ ಬ್ಯಾಂಕ್ ಆಪ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು–ಇವೆರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿಬಿಟ್ಟವೆಂದು ನಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ನಂಬಿಕೆಯಾಗಿ ಹೇಳುವುದೇನೆಂದರೆ—ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು ಎಷ್ಟುಮಟ್ಟಿನ ದೇಣಿಗೆಗಳು ಬಂದಾಗ್ಯೂ ಪಾವತಿಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ ಈ ಭಾಗದಲ್ಲಿ ನಿಮ್ಮ ಬ್ಯಾಂಕಿಗೆ ಯಾವ ಕಷ್ಟದೆಸೆಯೂ ಬರುವಹಾಗಿಲ್ಲವೆಂದು ಖಂಡಿತವಾಗಿ ತಿಳಿಯಿರಿ ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಈಚೆಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರನ್‌ಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ.

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಪ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್–ಇವೆರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ಹಣವೂ ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು.

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರ್ ಆಪೀಸುಗಳನ್ನು ಪಡೆದಿರೋಣದರಿಂದ ಕೆಲವು ಜನರು ಅದೇ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದಾರೆ ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ, ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿದೆಯಲ್ಲದೆ ಇನ್ನ್ಯಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡಿಸುತ್ತಾ ಬಂದಿದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆಗಳನ್ನಿಟ್ಟುಕೊಂಡು ಬಂದಿದೀರೋ ಇನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದಾರೆ

[216–12]

ಟಿ. ಎಸ್. ಆರ್. ಅಯ್ಯರ್.
ಸೆಕ್ರೆಟರಿ, ಮದರಾಸ್ ಬ್ರಾಂಚ್.

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್

ಹೊಸ ಮಾಸ ಪತ್ರಿಕೆ! ದ್ವಿತೀಯ ವರ್ಷಾರಂಭ

ಭಾರತೀವಿಲಾಸ.

ಇದೊಂದು ಕನ್ನಡ ಮಾಸ ಪತ್ರಿಕೆ, ಪ್ರತಿಮಾಸದಲ್ಲಿಯೂ ಕ್ರಮವಾಗಿ ಪ್ರಕಟವಾಗುವುದು ಕಾದಂಬರಿಗಳೂ, ನಕಲಿಗಳೂ, ಪಟನಗ್ರಂಥಗಳೂ ನೀತಿದಾಯಕವಾದ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡ್ ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದುದು ವಾರ್ಷಿಕ ಚಂದಾ 1 8-0, ಮಾದರಿ ಸಂಚಿಕೆ 2 ಆ

[272 4] ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾಗಿವೆ ಈ ಕಂಪನಿಗೆ 60 ವರುಷದ ಅನುಭವುಂಟು ಅವರೇ ಪ್ರಪಂಚದ ಕಾರೇಗಾರರಲ್ಲಿ ಬಹಳ ಪ್ರಖ್ಯಾತಿಪಡೆದವರು ಅವರ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ
ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್, ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ

ಅವರು ನಿಪುಣರಾದ ಕಾರೇಗಾರರನ್ನು ಕಳುಹಿಸುತ್ತಾರೆ ಎಲ್ಲಾ ಕಸುಮಿಲ್ಲು (ಯಂತ್ರ) ಗಳನ್ನೂ ಒದಗಿಸಬಲ್ಲರು [200-6]

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ. ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .. . ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಬಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ಟಿಲೊ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194 10] ಬ್ರಾಂಚ್ ಸೆಕ್ರೆಟರಿ, ಮದರಾಸ್

ಕೆಲವು ದಿನಗಳು ಮಾತ್ರ ಕೊಂಚ ದಿನಗಳು ಮಾತ್ರ

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ

ಖಾತ್ರಿಯಾದ ವಾಚ್ ! ಖಾತ್ರಿಯಾದ ಕಂಪನಿ ಖಾತ್ರಿಯಾದ ಪಿರಿಡಿ

ನ್ಯಾರೋಗ್ ಮೋಟಾರ್ ರೆಗ್ಯುಲೇಟರ್ ವಾಚ್

ಇದರ ಕ್ರಯ ಬೆಲೆಯುಳ್ಳ 3 ಬಹುಮಾನ ಸಮೇತ ರೂ 3 8 0 ಮಾತ್ರ ಘನವಂತರೇ, [77 38]



ಈ ವಾಚ್ ಈಗತಾನೇ ಬಂದಿರುತ್ತದೆ, ಬಲವಾದದ್ದು ಚಿಕ್ಕ ಚಕ್ರಗಳಿಂದಲೂ, ಮತ್ತು ಬಲವಾದ ಯಂತ್ರಗಳಿಂದಲೂ ಸಿದ್ಧವಾದ ಲೀವರ್ ಕೆಲಸಗಳಿಂದಲೂ ಕೂಡಿದದ್ದು ಸರಿಯಾದ ಟೈಮನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೆ ತೋರಿಸತಕ್ಕದ್ದು ಖಾತ್ರಿಯಾದ ವಾಚ್ ಸುಂದರವಾದದ್ದು

ಇದರ 3 ಬಹುಮಾನಗಳ ಪಟ್ಟಿ
1 ಸುಂದರವಾದ ಉಂಗುರ
2 ನಾಜೂಕಾದ ವಾಚ್ ಸರ
3 1914 ನೇ ಇಸವಿಯ ಪಾಕೆಟ್ ಡೈರಿ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ವಿಳಾಸ—ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,
ನಂ 7, ಕೋಪ್ ವೆಂಕಟಾಚಲ್ಲೈಯರ್ ಬೀದಿ, ಮದರಾಸು

ಶ್ವಾಸಕೇಸರಿ ಲೇಹ.

ಆಸ್ತ್ಮಕ್ಕೆ ತಪ್ಪದೆ ತತ್ಕ್ಷಣ ಗುಣಕೊಡುತ್ತೆ

ಆಸ್ತ್ಮಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಸುಖಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನ ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇನೆ ಓದಿನೋಡಿ

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1-8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
177 ಚೀನಾ ಬಜಾರ್ ರೋಡ್, ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ॥ ಎ ಭೀಮರಾವ್ ಮೊದಲಿಯಾರ್ 21-10-1913 ರಲ್ಲಿ ಬರೆಯುತ್ತಾರೆ —"ನಾನು ಬಹುಕಾಲದಿಂದ ಆಸ್ತ್ಮರೋಗದಲ್ಲಿ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗ ಹರಿಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ" [89 31]

Printed and Published by the Rev. H Gulliford, Proprietor and Manager, Wesleyan Mission Press, Mysore, 8/1/1914.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು. ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ

1914

ಚಂದಾ ವಿವರ —೧೨ ತಿಂಗಳಿಗೆ (ಮುಂಗಡ) ರೂ. ೧-೦-೦
,, ,, ಪೋಸ್ಟೇಜು ಸೇರಿ ,, ೧-೧೪-೦
ಬಿಡಿ ಪತ್ರಿಕೆ ೧ಕ್ಕೆ ೪ ಕಾಸು

ಟಪ್ಪಾಲ್ ಹಾಸಲು.

		ಆ ಪೈ.
ಕವರ್	ಒಂದು ತೋಲಾ ಒಳಗಿದ್ದರೆ	೦-೬
,,	೧ ತೋಲಾ ಮೇಲೆ ೧೦ ತೋಲಾ ಒಳಗೆ	೧-೦
,,	ಅಲ್ಲಿಂದ ಪ್ರತಿ ೧೦ ತೋಲಾ ಅಥವಾ ಅದರ ಭಿನ್ನಾಂಶಕ್ಕೆ	೧-೦
ಭಾಂಗಿ	ಪ್ರತಿ ೪೦ ತೋಲಾಗೂ	೨-೦
,,	ಅಲ್ಲಿಂದ ಪ್ರತಿ ೪೦ ತೋಲಾ ಅಥವಾ ಅದರ ಬಿನ್ನಾಂಶಕ್ಕೆ	೨-೦

ಮಣಿಯಾರ್ಡರ್ ಮತ್ತು ವ್ಯಾಲ್ಯೂ ಪೇಬಲ್

ನೋಬಲಗು	೫ ರೂಪಾಯಿಗೆ ಒಳಗಿದ್ದರೆ			೧ ಆಣೆ.
,,	೧೦	,,	,,	೨ ,,
,,	೧೫	,,	,,	೩ ,,
,,	೨೫ ವರೆಗೆ		,,	೪ ,,

ಬೆಂಗಳೂರಿನಲ್ಲಿ ಸೇರಿ ... ಮಿಷನರಿಗಳ ಕೂಟವು

ಮೈಸೂರು ಸರ್ಕಾರದಿಂದ ಸ್ಯಾಂಕ್ಷನ್ ಆಗಿರುವ ರಜಾ ದಿನಗಳು.

ಜನವರಿ —1 2 ಕ್ರಿಸ್ಮಸ್, 14 ಉತ್ತರಾಯಣಪುಣ್ಯಕಾಲ
ಫೆಬ್ರವರಿ —23 ಮಹಾ ಶಿವರಾತ್ರಿ
ಮಾರ್ಚಿ —27 ಚಾಂದ್ರಮಾನ ಯುಗಾದಿ (ಆನಂದ ಸಂವತ್ಸರಾರಂಭ)
ಜೂನ್ —3 ಚಕ್ರವರ್ತಿ ಯವರ ವರ್ಧಂತಿ, 4 ಶ್ರೀಮನ್ಮಹಾರಾಜರವರ ವರ್ಧಂತಿ.
ಆಗಸ್ಟ್ —5 ಅಮಸ್ತಂಭ ಶ್ರಾವಣ, 6 ಅಶ್ವಲಾಯನ ಶ್ರಾವಣ, 24 (ಗೌರಿ ಮತ್ತು) ಗಣೇಶ
ಸೆಪ್ಟಂಬರ್.—19 ಮಹಾಲಯ, 20 ನವರಾತ್ರಿ ಆರಂಭ 25-30 ದಸರಾ ರಜಾ
ಅಕ್ಟೋಬರ್ —1-6 ದಸರಾ ರಜಾ, 18 ದೀಪಾವಳಿ 20 ಬಲಿಪಾಡ್ಯಮಿ
ನೊವೆಂಬರ್ —21 ಕಾರ್ತಿಕ ಕಡೇ ದಿನ.
ಡಿಸೆಂಬರ್ —24-31 ಕ್ರಿಸ್ಮಸ್ ರಜಾ

ಜನವರಿ / ಫೆಬ್ರವರಿ / ಮಾರ್ಚಿ / ಏಪ್ರಿಲ್

	ಜನವರಿ	ಫೆಬ್ರವರಿ
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]
ಬುಧವಾರ	[illegible]	[illegible]

	ಮಾರ್ಚಿ	ಏಪ್ರಿಲ್
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]
ಬುಧವಾರ	[illegible]	[illegible]
ಗುರುವಾರ	[illegible]	[illegible]
ಶುಕ್ರವಾರ	[illegible]	[illegible]
ಶನಿವಾರ	[illegible]	[illegible]

	ಮೇ	ಜೂನ್
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]
ಬುಧವಾರ	[illegible]	[illegible]
ಗುರುವಾರ	[illegible]	[illegible]
ಶುಕ್ರವಾರ	[illegible]	[illegible]
ಶನಿವಾರ	[illegible]	[illegible]



ಮೈಸೂರು ಹೊಸ ಅರಮನೆ

	ಜೂಲೈ	ಆಗಸ್ಟ್
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]

	ಸೆಪ್ಟಂಬರ್	ಅಕ್ಟೋಬರ್
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]
ಬುಧವಾರ	[illegible]	[illegible]
ಗುರುವಾರ	[illegible]	[illegible]
ಶುಕ್ರವಾರ	[illegible]	[illegible]
ಶನಿವಾರ	[illegible]	[illegible]

	ನೊವೆಂಬರ್	ಡಿಸೆಂಬರ್
ಆದಿತ್ಯವಾರ	[illegible]	[illegible]
ಸೋಮ	[illegible]	[illegible]
ಮಂಗಳ	[illegible]	[illegible]
ಬುಧವಾರ	[illegible]	[illegible]
ಗುರುವಾರ	[illegible]	[illegible]
ಶುಕ್ರವಾರ	[illegible]	[illegible]
ಶನಿವಾರ	[illegible]	[illegible]

ನೋಟ್ —(1) ಗರುಡಪಂಚಮಿ, ವರಮಹಾಲಕ್ಷ್ಮಿ ಹಬ್ಬಗಳಲ್ಲಿ ಕಚೇರಿಗಳು ವೇಳೆಗೆ ಸರಿಯಾಗಿ ತಕ್ಕದ್ದು (2) ಅಮಾವಾಸ್ಯೆ ದಿನ ಅವಶ್ಯವಿದ್ದವರ್ ಮಧ್ಯಾಹ್ನ 1 ಗಂಟೆಗೆ ಕಚೇರಿ ಬಿಡುವರ್ ಅನುಕೂಲಕೊಡಬಹುದು (3) ನಾಗಪಂಚಮಿ, ಹೋಳಿಹಬ್ಬ, ಶ್ರೀರಾಮನವಮಿ, ಸೌರಮಾನ ಯುಗಾದಿ, ರಾಮಾನುಜಾಚಾರ್ಯರ ತಿರುನಕ್ಷತ್ರ, ಶ್ರೀಶಂಕರಾಚಾರ್ಯರ ಜಯಂತಿ, ಮಧ್ವಾಚಾರ್ಯರ ಪುಣ್ಯದಿನ, ಗೌರಿ, ಅನಂತಚತುರ್ದಶಿಗಳಿಗೂ ಮತ್ತು ಮೊಹರಂ, ಕ್ರಿಸ್ತರ ಹಬ್ಬಗಳಿಗೂ ಆಯಾ ಮತಗಳವರಾದ ನೌಕರರಿಗೆ ಮಾತ್ರ ರಜಾ ಕೊಡಬಹುದು (4) ವಿದ್ಯಾಶಾಲೆಗಳಲ್ಲಿ ಸಂಗಡದ ದಿನವನ್ನು ಅರ್ಧ ದಿನದ ರಜದಂತೆ ಭಾವಿಸತಕ್ಕದ್ದು, ಮತ್ತು ಹಾಜರಾತಿಯ ಕಾಲವನ್ನು ಮುಖ್ಯಾಧಿಕಾರಿಯು ನಿರ್ಣಯಿಸತಕ್ಕದ್ದು (5) ಆಗಸ್ಟ್ 21 ನೇ ಶುಕ್ರವಾರ ಸೂರ್ಯಗ್ರಹಣದ ನಿಮಿತ್ತ ಕಚೇರಿಗಳಿಗೆಲ್ಲಾ ರಜಾ ಕೊಡತಕ್ಕದ್ದು (6) - ದರ್ಬಾರ್ ಡೇ (ಡಿಸೆಂಬರ್ ತಾ. 12) ಸ್ಕೂಲುಗಳಿಗೆ ರಜಾ

ವಿಶೇಷ ದಿನಗಳು

ಜನವರಿ —21 ಶಬಿ ಬರಾತ್.
ಫೆಬ್ರವರಿ —2 ರಥಸಪ್ತಮಿ, ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ದಿನ 4 ಮಧ್ವನವಮಿ 8 ಮಹಮ್ಮದರ ಜನ್ಮದಿನ, 10 ವ್ಯಾಸಪೂರ್ಣಿಮಾ 25 ಪೂರಿಮ್ ...
ಮಾರ್ಚಿ —11 ಹೋಳಿಹಬ್ಬ
ಏಪ್ರಿಲ್ —4 ಶ್ರೀರಾಮನವಮಿ 10 ಗುಡ್ ಫ್ರೈಡೇ 9-14 ಈಸರ್ ರಜಾ, 13 ಸೌರಮಾನ ಯುಗಾದಿ, 19 ರಾಮಾನುಜಾಚಾರ್ಯರ ತಿರುನಕ್ಷತ್ರ ಶ್ರೀಶಂಕರಾಚಾರ್ಯರ ಜಯಂತಿ
ಮೇ —1 ಶ್ರೀಶಂಕರಾಚಾರ್ಯರ ಆರಾಧನೆ 9 ವ್ಯಾಸಪೂರ್ಣಿಮಾ 20 ಶ್ರೀಮದ್ಯುವರಾಜರವರ ವರ್ಧಂತಿ 21 ದಿವಾನರವರ ದಿನ
ಜೂನ್ —23 ಪ್ರಿನ್ಸ್ ಆಫ್ ವೇಲ್ಸ್ ರವರ ವರ್ಧಂತಿ
ಜೂಲೈ —7 ವ್ಯಾಸಪೂರ್ಣಿಮಾ, 8, 9 ಶಬ್ ಎ ಬರಾತ್, 13 ಮಧ್ವಾಚಾರ್ಯರ ಪುಣ್ಯದಿನ, 16 ದಕ್ಷಿಣಾಯನಪುಣ್ಯಕಾಲ 22 ಭೀಮನ ಅಮಾವಾಸ್ಯೆ 27 ನಾಗಪಂಚಮಿ 31 ವರಮಹಾಲಕ್ಷ್ಮಿ ವ್ರತ
ಆಗಸ್ಟ್ —11 ಕೃಷ್ಣಜನ್ಮಾಷ್ಟಮಿ, 21 ಸೂರ್ಯಗ್ರಹಣ 24 ಮುದ್ದು ... 21 ಸಾಮವೇದೋಪಾಕರ್ಮ
ಸೆಪ್ಟಂಬರ್ —1 ಅನಂತಚತುರ್ದಶಿ 4 ಚಂದ್ರಗ್ರಹಣ 9 ಮಹಾಭರಣಿ 12 ಮಧ್ಯಾಷ್ಟಮಿ 14 ಶ್ರೀ ಕೃಷ್ಣಜಯಂತಿ 26 ಸರಸ್ವತಿ ಆವಾಹನ 27 ದುರ್ಗಾಷ್ಟಮಿ 28 ಮಹಾನವಮಿ 29 ವಿಜಯದಶಮಿ
ಅಕ್ಟೋಬರ್ —17 ನರಕಚತುರ್ದಶಿ 29, 30 ಬಕ್ರೀದ್
ನೊವೆಂಬರ್ —2 ವ್ಯಾಸಪೂರ್ಣಿಮಾ 26 28 ಮೊಹರಂ ರಜಾ ದಿನಗಳು
ಡಿಸೆಂಬರ್ —12 ದರ್ಬಾರ್ ಡೇ



ಅಲಸೂರಿನಲ್ಲಿರುವ ಹೊಸ ದೇವಸ್ಥಾನ

ಹಳ್ಳಿ ಜನರು ನಾಟ್ಯವಾಡುವುದು

Printed at the Wesleyan Mission Press Mysore



ಜನವರಿ ಮಹೋತ್ಸವದ ಕೈ ಗಡಿಯಾರ.

[16 2]

ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 11-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ಸುಬ್ಬರಾವ್, ಜನರಲ್ ಮರ್ಚೆಂಟ್, ನಂ 16 ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸ್

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು . ರೂ 4 25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವ್ಗನ್ನು ಕಳುಹಿಸುತ್ತಾರೆ —ಮ॥ ಎಂ ಎಸ್ ರೆಬೆಲೊ, ಚೀಫ್ ಏಜೆಂಟ್, ಬೆಂಗಳೂರು ಮ| ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[194 16] ಬ್ರಾಂಚ್ ಸೆಕ್ರೆಟರಿ, ಮದರಾಸ್

Office of the Military Secretary to His Highness the Maharaja of Mysore.

NOTIFICATION

Dated Bangalore, 7th January, 1914

85 ponies and 24 bullocks, of the Mysore Imperial Service Transport Corps will be sold by public auction at the Queen's Statue, Cubbon Park, Bangalore, at 8 30 a m on 30th and 31st January, 1914

TERMS CASH

(Sd) M A SINGRACHAR,

[18—1] For *Officiating Military Secretary*



CHAMBERLAIN'S COLIC, CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

33

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದು ಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಅಮೃತಾಂಜನವನ್ನು

ಪಡಕೊಳ್ಳುವವರಿಗೆ ನಮ್ಮ ಸುಂದರವಾದ ೧೯೧೪ ನೇ ವರ್ಷದ ಕೆಲೆಂಡರ್ ಪುಗಸಟ್ಟೆಯಾಗಿ ರವಾನಿಸುವೆವು.

ಇತರರಿಗೆ 6 ಕ್ಕೆ 0 12-0, 12 ಕ್ಕೆ 1-8-0 ವಿ ಪಿ ಮಾಫಿ

ವಾತ, ಸಂಧಿವಾತ, ಜಖಮು, ಘಾಯ, ಉರಿ, ತಲೆನೋವು, ತಲೆಸಿಡಿತ, ಹಲ್ಲುನೋವು, ಸೊಂಟದನೋವು, ಎದೆನೋವು ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧ ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು ಬಾಟ್ಲಿ ಒಂದಕ್ಕೆ 0-8-0 ಡಜನ್ 1 ಕ್ಕೆ ೦ 4-0 ವಿ ಪಿ ಖರ್ಚು ಪ್ರತ್ಯೇಕ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು [42 47]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

೯ ಜಹಂಗೀರ್ ಸ್ಟ್ರೀಟ್ ಮದ್ರಾಸು.

Mellin's Food

[1-3]

ಮೆಲ್ಲಿನ್ಸ್ ಆಹಾರವು.

ಕ್ರೈಸ್ತೋಕದ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕ್ರಯವಾಗುತ್ತವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

ಉತ್ತಮ ಗ್ರಂಥಗಳು.

(1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6 0 (2) ಶಿವಾನಂದಲಹರಿ ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ತ್ರಿಮತಭಾಷ್ಯದೊಡನೆ ಸಹ—3 ರೂ (5) ಶುಕಸಪ್ತತಿ (ಉ ಪ್ರತಿ)—2 ರೂ (6) ಸೂರ್ಯನಮಸ್ಕಾರ—2 ಆಣೆ (7) ಉದಕಶಾಂತಿ ಮಂತ್ರ—2 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1-8 0 (9) ಜಮಾ ಖರ್ಚಿನ ಪದ್ಧತಿ 12 ಆಣೆ ರಂಗಾಚಾರ್ಲು ಜೀವನ ಚರಿತೆ 6 ಆಣೆ ಕನಕಾಲುಕಾ ಅಥವ ಕಮಲಿನೀ ಚರಿತಂ 6 ಆಣೆ ಬಿಕ್ಕೋಜಿ ಸಾಹಸಗಳು 3 ಆಣೆ ಇಂದ್ರವಜ್ರ 3 ಆಣೆ ಸುರಸಾ 4 ಆಣೆ ಕಾಮಿನೀ 4 ಆಣೆ

ನಮ್ಮಲ್ಲಿ ಸರ್ಕಾರಿ ಸ್ಕೂಲುಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ವೈದ್ಯ, ವೇದಾಂತ, ಜೋತಿಷ್ಯ ಗ್ರಂಥಗಳು, ಮತ್ತು ಉತ್ತಮವಾದ ಕಾದಂಬರಿಗಳು ಇಂಗ್ಲೀಷು ಮತ್ತು ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ [265 6]

INSTRUMENT BOXES ARE ALSO HERE

ವಿದ್ಯಾಸಾಗರ ಬುಕ್ ಡಿಪೋ,

ಚಿಕ್ಕಪೇಟೆ, ಬೆಂಗಳೂರು ಸಿಟಿ

ಅಪೂರ್ವ ಗ್ರಂಥ ರತ್ನಗಳು.

1 ಧರ್ಮಸಾಂರಾಜ್ಯ ಅಥವಾ ಜಪಾನರುನ್ನತಿಗೆ ಮೂಲಾಧಾರ —ಆಶ್ಚರ್ಯಕರವಾದೀ ನಾಟಕದ ಕನ್ನಡ ಕಥೆಯನ್ನೂ ಆ ನಾಟಕದ ಪಾತ್ರಗಳು ಅಭಿನಯಿಸಿ ತೋರಿರುವ "ಸೀನ್" ಗಳ ಫೋಟೋಚಿತ್ರಗಳಿಂದ ವ್ಯಕ್ತಪಡುವಂತೆ ಮಹಾ ಪತಿವ್ರತೆಯಾದ ಉನ್ಮಾದಯಂತೀ ಎಂಬ ಕನ್ಯೆಯು ರಾಜನನ್ನು ವರಿಸಲು ಬಹು ಯತ್ನಿಸಿ, ಸಾಗದೆ ಪ್ರಾಣತ್ಯಾಗವಮಾಡುವುದನ್ನೂ ಬಳಿಕ ಪಶ್ಚಾತ್ತಾಪಗೊಂಡ ರಾಜ, ಸದ್ಭೃತ್ಯನಾದ ಸೇನಾಪತಿ, ಹತಾಶರಾದ ಕನ್ಯೆಯ ತಂದೆತಾಯ್ಗಳು, ರಾಜಭಕ್ತಿಯುಳ್ಳ ಕುರುಬ ಪುರೋಹಿತ ಸ್ತ್ರೀ ಲಕ್ಷಣಜ್ಞ ಸಹ ಪ್ರಾಣತ್ಯಾಗಮಾಡುವುದನ್ನೂ, ಅನಂತರ ಇವರುಗಳೆಲ್ಲ ಅಪ್ಸರೆಯರಿಂದ ಬದುಕಿಸಲ್ಪಟ್ಟ ಬಳಿಕ, ರಾಜನಿಗೂ ಕನ್ಯೆಗೂ ವಿವಾಹವೂ ದೇವರಾಜ್ಯಾಭಿಷೇಕವೂ ಆಗುವುದನ್ನೂ ಸಹ ಓದಿ ನೋಡುವ ವಾಚಕರ ಕಣ್ಗಳಿಂದ ಮೊದಲು ದುಃಖಾಶ್ರುವೂ ಬಳಿಕ ಆನಂದ ಜಲವೂ ಸುರಿಯದೇ ಇರದು ಇದು ಮೈಸೂರ್ ಮಹಾರಾಜರವರಿಗೆ "ಡೆಡಿಕೇಟ್" ಮಾಡಲ್ಪಟ್ಟು, ಅವರ ಶ್ರೀಮದ್ಯುವರಾಜರ ಗ್ರಂಥಕರ್ತರ ಭಾವ ಚಿತ್ರಗಳಿಂದಲೂ ಶೋಭಿಸುವುದು ನಮ್ಮ ಚೀಫ್ ಇಂಜನಿಯರ್ ಮ॥ ಕರ್ಪೂರ್ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು ಕ್ರಯ ವಿ ಪಿ ಸಹಿತ —ಚಿನ್ನದ ಗಿಲ್ಟಿನದು 2 4 0, ಅವಲ್ ಗ್ಲೇಜ್ 1-8 0 ದುಯ್ಯಂ 1 4 0 2 ಧರ್ಮಪದ —11 ಕೋಟಿ ಮುಸಲ್ಮಾನರಿಗೆ "ಖೊರಾನೂ," 22 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ", 10 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯಗ್ರಂಥವೋ 55 ಕೋಟಿ ಬೌದ್ಧರಿಗೆ ಇದು ಹಾಗಿದೆ ಕನ್ನಡ ಗದ್ಯರೂಪವಾಗೀಗ ರಚಿಸಲ್ಪಟ್ಟಿದೆ ಮಹಾರಾಜರ ಗ್ರಂಥಕರ್ತರ ಬುದ್ಧ ವಿಗ್ರಹದ ರಮ್ಯ ಭಾವಚಿತ್ರಗಳಿವೆ ಕ್ರಯ ವಿ ಪಿ ಸಹಿತ 1 0 0

3 ಬೌದ್ಧಾವತಾರ —ಲೋಕೈಕ ಬಂಧುವಾದ ಬುದ್ಧ ಭಗವಂತನ ಜನ್ಮ ಚರಿತ್ರೆ ವಿ ಪಿ ಸಹ 0 6-0 [274 6] ವಿಳಾಸ —

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು , ಅಥವಾ,

ಬಿ ಅಶ್ವತ್ಥನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು

English Papers with L S Text Summary Special Papers, and Monthly Tests, etc Subscription Rupees 2 (in advance) **Students' Spelling Book** As 4 (Postage Extra) **Postal Tution**—Monthly Fees English **Rs 2** Arithmetic **Re 1, the rest As 8** (all in advance) *Apply to*—**M N Sitarama Rao,**

[273 4] **Krishnaraja Mohalla, Mysore**

ಅನುಭವಸಿದ್ಧವಾದ ಷರಬತ್ತುಗಳು

ಶ್ರೀಗಂಧದ ಷರಬತ್ತು — ಶರೀರದಲ್ಲಿ ಉರಿ ಬಾಯಾರಿಕೆ, ಉಷ್ಣಾಧಿಕ್ಯ, ಧಾತು ನಷ್ಟದಿಂದುಂಟಾಗುವ ಬಲಹೀನತೆ ಈ ಮೊದಲಾದ ರೋಗಗಳು ಇದರ ಸೇವನೆಯಿಂದ ನಾಶವಾಗುವುದರಲ್ಲಿ ಏನೂ ಸಂದೇಹವಿಲ್ಲ ಕ್ರಯ 12 ಔನ್ಸು ಬಾಟ್ಲಿಗೆ 12 ಆಣೆ 8 ಔನ್ಸು ಬಾಟ್ಲಿಗೆ 8 ಆಣೆ

ಗುಲಾಬಿ ಷರಬತ್ತು — ಇದು ಶರೀರದ ಉಷ್ಣವನ್ನು ಹೋಗಲಾಡಿಸಿ ದೇಹಾರೋಗ್ಯವನ್ನೂ ಮನೋಲ್ಲಾಸವನ್ನೂ ಉಂಟು ಮಾಡುವುದು ಕ್ರಯ 12 ಔನ್ಸು ಬಾಟ್ಲಿಗೆ 12 ಆಣೆ 8 ಔನ್ಸು ಬಾಟ್ಲಿಗೆ 8 ಆಣೆ

ಶುಂಠಿ ಷರಬತ್ತು — ಅಜೀರ್ಣವನ್ನೂ ಶೀತವಾಯುವಿನಿಂದ ಉಂಟಾಗತಕ್ಕ ಎಲ್ಲಾ ಕಡುಕುಗಳನ್ನೂ ಹೋಗಲಾಡಿಸುವುದು ಕ್ರಯ 12 ಔನ್ಸು ಬಾಟ್ಲಿಗೆ 0 12 0 8 ಔನ್ಸು ಬಾಟ್ಲಿಗೆ 0 8-0

ಜೀರಿಗೆ ರಸಾಯನ —ಪಿತ್ತರೋಗಗಳು—ಪಿತ್ತ, ಪಿತ್ತದ ಅಜೀರ್ಣ, ನಿಶ್ಶಕ್ತಿ, ತಲೆ ತಿರುಗುವಿಕೆ, ಅರುಚಿ, ಹುಳಿತೇಗು, ವಮನ, ಇವು ಜೀರಿಗೆ ರಸಾಯನದ ಸೇವನೆಯಿಂದ ಅಡಗುವವು ಕ್ರಯ ಡಬ್ಬಿ 1 ಕ್ಕೆ 6 ಆಣೆ

ಪ್ರಸಿದ್ಧವೂ ಶ್ರೇಷ್ಠವೂ ಆದ ಊದುಬತ್ತಿಗಳು —ಸೇರು 1 ಕ್ಕೆ ರೂ 24, 12, 10, 8, 6, 4, 3, 2, 2, 1½ ಬಿಲ್ಲೆಗಳು 1 ಕ್ಕೆ 1½ ಆಣೆ ಲಾಗಾಯ್ತು 2 ರೂ ವರೆಗೆ ಜವಾಗಂಧ ತೊಲ 1 ಕ್ಕೆ ರೂ 2, 1, ಮತ್ತು 12 ಆಣೆ ಇವು ಅಲ್ಲದೆ ಅನೇಕ ಅತ್ತರುಗಳೂ ನಮ್ಮಲ್ಲಿ ಸಿಗುತ್ತೆ ಅರಮನೆಗೆ ಒಪ್ಪಿಸತಕ್ಕ ಸುಗಂಧಗಳು ಇವೇ ಇಂಥಾ ಶ್ರೇಷ್ಠವಾದ ಬತ್ತಿಗಳೂ ಬಿಲ್ಲೆಗಳೂ ಇನ್ನೆಲ್ಲಿಯೂ ದೊರೆಯುವದಿಲ್ಲ ಅರ್ಧಾಣೆ ಸ್ಟಾಂಪು ಕಳಿಸಿ ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ

ವಿಳಾಸ —ಶ್ರೀ ವೆಂಕಟೇಶ್ವರ ಕಂಪನಿ,

[280-4] 174 ಚಾಮರಾಜ ರೋಡ್, ಮೈಸೂರು

ಗೃಹಕೃತ್ಯದ ನೋಟೀಸು

ಮೂಡಿಗೆರೆ ತಾಲ್ಲೂಕು ಕಳಸಾ ಹೋಬಳಿ ಇಡ್ಕಿಣಿ ಗ್ರಾಮದ ಸರ್ವೆ ನಂಬರು 121 1... 123 124 125 ನೇ ಕಂಕನಹದ್ದು ಎಂಬ ತರೀ ಜಮೀನಿನಲ್ಲಿ ನನಗೆ ಹಕ್ಕು ಇರುವದರಿಂದ ನನ್ನ ಅನುಮತಿ ವಿನಹ ಯಾರಾದರೂ ಕ್ರಯಕ್ಕೆ ತೆಗೆದುಕೊಂಡರೆ ಅದು ಕಾಯಂ ಆಗದ ರದ್ದಾಗಿರುತ್ತದೆ [15-3]

ಐ ಸಾಲ್ಡನ್ಹಾ ಮ್ಯಾನೇಜರ್ ಕೊಗುಣಹಳ್ಳಿ ಎಸ್ಟೇಟ್, ಬಾಳೆಹೊನ್ನೂರು

ಗೃಹಕೃತ್ಯದ ನೋಟೀಸು

20 I

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿ ಜೋಡಿ ವೆಂಕಟಾಪುರದ ಜೋಡಿದಾರ್ ಕೆಂಪಸೆಟ್ಟರ ಹಿರಿಯಮಗ ಬಸಪ್ಪನ ಮಗ ನಂಜುಂಡಪ್ಪನಾದ ನಾನೂ ನನ್ನ ತಮ್ಮ ಮೈನರ್ ವೀರಭದ್ರಯ್ಯ ಸಹ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ, ಸದರೀ ವೆಂಕಟಾಪುರ ಜೋಡಿ ಗ್ರಾಮವೂ, ಕುಂದಾಣದ ಬಳಿ ಇರುವ 7½ ರೂಪಾಯಿ ಆಕಾರವುಳ್ಳ ಒಂದು ಹೊಲವೂ, ಒಂದು ಮನೆಯೂ ಸಹ ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ ನಮ್ಮ ತಾತ ಕೆಂಪಸೆಟ್ಟರು ಮೃತಪಟ್ಟ ಮೇಲೆ ನಮ್ಮ ಖಾಸಾ ಚಿಕ್ಕಪ್ಪಂದಿರಾದ ಚನ್ನಪ್ಪ, ಚನ್ನವೀರಪ್ಪ ಇವರಿಬ್ಬರೂ ನಮಗೆ ಅನ್ನವಸ್ತ್ರ ಕೊಡದೇಲೂ ನಮ್ಮ ಭಾಗವನ್ನು ನಮಗೆ ಕೊಡದೇಲೂ ದ್ರೋಹ ಮಾಡುತ್ತಾರೆ ನಾವು ಜೀವನಕ್ಕಾಗಿ ಪರಸ್ಥಳಗಳಲ್ಲಿ ಅಲೆಯುತ್ತಾ ಕಷ್ಟಜೀವನ ಮಾಡುತ್ತಾ ಇದ್ದೇವೆ ಮೇಲ್ಕಂಡ ಜೋಡಿಗ್ರಾಮ ಮುಂತಾದ ಸ್ವತ್ತುಗಳಲ್ಲಿ ನಮಗೆ ಜ್ಯೇಷ್ಠಾಂಶವಾದ ಮೂರನೇ ಒಂದುಭಾಗ ಬರಬೇಕಾಗಿರುತ್ತದೆ ಈಚೆಗೆ ಮೇಲ್ಕಂಡ ನಮ್ಮ ಚಿಕ್ಕಪ್ಪಂದಿರು ನಮಗೆ ವಂಚಿಸಿ ಡಿಟೋ ವೆಂಕಟಾಪುರ ಜೋಡಿಗ್ರಾಮ ಮುಂತಾದ ಸ್ವತ್ತುಗಳನ್ನು ವಿಕ್ರಯ ಮಾಡುವುದಾಗಿ ತಿಳಿಯಬರುವದರಿಂದ ಸದರೀ ಸ್ವತ್ತುಗಳನ್ನು ಯಾರೇ ಆಗಲಿ ನಮ್ಮನ್ನು ವಿನಾಯಿಸಿ ಕ್ರಯ, ಭೋಗ್ಯ ವಗೈರೆ ಮಾಡಿಕೊಂಡದ್ದಾದರೆ ಅದು ಖಂಡಿತವಾಗಿ ಊರ್ಜಿತವಾಗದವು ಮತ್ತು ಅಂಥವರು ನಮ್ಮ ಎಲ್ಲಾ ಡಾಮೇಜಿಗೂ ಬದ್ಧರಾಗಿರುವರೆಂದು ಈ ಮೂಲಕ ಖಚಿತವಾಗಿ ತಿಳಿಸಿದೇವೆ ನಂಜುಂಡಪ್ಪನ ರುಜು.

ವೀರಭದ್ರಯ್ಯನ ಮೈನರ್ ಗಾರ್ಡಿಯನ್ ನಂಜುಂಡಪ್ಪನ ರುಜು

ಮಧುರೆ ಚುನ್ನಡಿ ಅಂಚಿನ ಸೀರೆ ಆಸ್ಸಲ್ ರಬಿಂ ರೂ 2 6–0.

ಇದು ಉಡುವದಕ್ಕೆ ಧ ಡೂತಿಯಾಗಿಯೂ, ನೋಟಕ್ಕೆ ನವ ವಾಗಿಯೂ, ಬೆಲೆ ಸುಲಭ ವಾಗಿಯೂ ಇದೆ ಬಣ್ಣ ಹೋಗದು ಸೀರೆಯು ಉದ್ದ 18 ಮೊಳ ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ

ವಿಳಾಸ—ಸುಬ್ಬರಾವು, ಜನರಲ್ ಮರ್ಚಂಟ್, ನಂ 16, ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸ್

ಮೂಕೆ ಪರೀಕ್ಷಿಸಬಾರದು ? ಶೃಂಗಾರದ ಪದಕ ಬಂದಿದೆ

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಹೋ ಮೋಹಿನಿ

ಇದು ರೆಜಿಸ್ಟರ ಆಗಿದೆ ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆ ಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯಕ ಕರ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ, ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ

ಕ್ರಯ ½ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ 2 0 0

„ 1 ಡ್ರಾಂ ಕೊಳವೆ „ „ 0 12 0

ಆಹೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0 12 0

ಎಲ್ಲರಲ್ಲೂ ಸಿಕ್ಕಂಗ ಬಿಟ್ಟಿದೆ

ಮದರಾಸ್ ಅಧಿಕತಕ್ಕೆಲ್ಲಾ ಏಜೆಂಟರು

ಪಾ ವಗವಾನ್‌ದಾಸ್ ತುಲಸೀದಾಸ್ ಕಂಪನಿ,

[951–೨] ೧೭೩ ಬೈನಾಬಜಾರ್ ರೋಡ್, ಮದರಾಸ್

ಶ್ವಾಸಕೇಸರಿ ಲೇಹ.

ಅಭ್ಯಾಸಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಆಸ್ತ್ಮಾರೋಗವು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಉಪಯೋಗಿಸಿ ಸೌಖ್ಯವೊಂದಿದರೆಂದ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ತಲಪಿದ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸುತ್ತೇವೆ ಓದಿನೋಡಿ

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1–3–0

ವಿಳಾಸ ರಾಜವೈದ್ಯ ನಾರಾಯಣಜೀ ಕೇಶವಜೀ,
177 ಬೀನಾ ಬಜಾರ್ ರೋಡ್ ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ ಏ ಭೀಮರಾವ್ ಮೊದಲಿಯಾರ್ರು ತಾ 31 10 1913 ರಲ್ಲಿ ಬರೆಯುತ್ತಾರೆ — ನಾನು ಬಹುಕಾಲದಿಂದ ಆಸ್ತ್ಮಾರೋಗದಲ್ಲಿ ನರಳುತ್ತಿದ್ದೆನು ಅನೇಕ ಪ್ರಸಿದ್ಧವಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಕಡಿಮೆಯಾಗಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ಹೇಳಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ತಾವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ • [82–೨೦]

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರದ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ರಾತ್ರಿಯಲ್ಲಿ ಥಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಡವೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ ಮೈನೋವು ಕೀಲುನೋವು ಮದವು, ನಿತ್ರಾಣ, ಇವೇ ಮೊದಲಾದುವು ಉಷ್ಣವಾಡಿದರೆ ಮೂತ್ರೋಸದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 19]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧ ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪೆ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ರಂಗೂನು ಗೆಜ್ಜೆ ಅಡ್ಡಿಕೆ ಕ್ರಯ 0–8–0 ಆಣೆ

ವಿವೇಕವತಿ ವಿನಯಪೂರ್ವಕ ವಿಜ್ಞಾಪನೆ —



ಇದು ಅಪರಂಜಿ ಚಿನ್ನದ ಗೆಜ್ಜೆಯಂತಹ ಗೆಜ್ಜೆಯಿಂದ ಕರೀ ಬಣ್ಣದ ದಾರದಲ್ಲಿ ಸುಂದರವಾಗಿ ಗೆಜ್ಜೆಯನ್ನು ಪೋಣಿಸಿ ಬಹು ರಮಣೀಯವಾಗಿ ತಯಾರಿಸಿರುತ್ತೆ ರಂಗು ಎಂದಿಗೂ ಕೆಡದು ಸ್ತ್ರೀಯರು ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಬಹಳ ಲಾಯಕ್ಕಾದದ್ದು

ವಿಳಾಸ—ವಿವೇಕವತಿ, ನಂ 55, ಆಫೀಸು ವೆಂಕಟಾಚಲ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ವಿದೇಶ ವೃತ್ತಾಂತಗಳು

ಗ್ರೀಸ್ ರಾಜ್ಯಕ್ಕೆ ಸೇರಿದ ಎಲಿಸ್ ಮತ್ತು ಪೆಲೊಪೊನಿಸಸ್ ಎಂಬ ನಗರಗಳಲ್ಲಿ ಬಹಳ ಕಠಿಣವಾದ ಭೂಕಂಪಗಳು ಸಂಭವಿಸಿ ಬಹಳ ಕಷ್ಟನಷ್ಟಗಳು ಪ್ರಾಪ್ತವಾದವೆಂದು ತಂತೀವರ್ತಮಾನ ಬಂದಿದೆ

• • •

ಹಂಗೇರೀ ಸಂಸ್ಥಾನದ ಜೇಕೊಲಾ ಎಂಬಾತನು ಒಂದೂವರೆ ಲಕ್ಷ ರೂಪಾಯಿನ ಅಪೂರ್ವವಾದ ಸ್ಟಾಂಪುಗಳನ್ನು (ತಲೆಚೀಟಿ) ತೆಗೆದುಕೊಂಡು ಹೋಗಿ ಪ್ಯಾರಿಸ್ ಪಟ್ಟಣದ ಹೊಟೇಲಿನಲ್ಲಿ ಇಟ್ಟುಕೊಂಡಿದ್ದನು ಅದನ್ನು ಯಾರೋ ಅಪಹರಿಸಿಬಿಟ್ಟರು

• • •

ಅಮೇರಿಕಕ್ಕೆ ಸೇರಿದ ಸಂಯುಕ್ತಸಂಸ್ಥಾನಗಳ ಪೂರ್ವ ಸಮುದ್ರತೀರದಲ್ಲಿ ಅಪಾರವಾದ ಬಿರುಗಾಳಿಯೂ ಮಳೆಯೂ ಕಳೆದ ವಾರ ಪ್ರಾಪ್ತವಾದವು ಅನೇಕ ಹಡಗಳು ಅಲೆಗಳಿಂದ ಬಡಿಯಲ್ಪಟ್ಟು ದಡಕ್ಕೆ ಬಂದಿರುತ್ತವೆ ಸುಮಾರು ಎರಡು ಲಕ್ಷ ರೂಪಾಯಿ ಬೆಲೆಯುಳ್ಳ ಒಂದು ಜಹಜು ಹಾಳಾಯಿತು, 32 ಜನರು ಮೃತಪಟ್ಟರು

• • •

ಈಜಿಪ್ಟ್ ರಾಜ್ಯದಲ್ಲಿ ಹೊಗೆಸೊಪ್ಪನ್ನು ಬೆಳೆಮಾಡಬೇಕೆಂದು ಈಗ ಒಂದು ಸಂಘವು ಪ್ರಾರಂಭವಾಗಿದೆ ಪೂರ್ವದಲ್ಲಿ ಅಲ್ಲಿ ಹೊಗೆಸೊಪ್ಪು ಬೆಳೆಯುತ್ತಿದ್ದರು 1890 ನೇ ಇಸವಿಯಲ್ಲಿ ಟರ್ಕಿ ಗವರ್ನ್‌ಮೆಂಟಿನವರ ಕೂಡ ಮಾಡಿಕೊಂಡ ಕರಾರಿನ ಪ್ರಕಾರ ಅಂದಿನಿಂದ ಆ ಬೆಳೆಯನ್ನು ನಿಲ್ಲಿಸಿಬಿಟ್ಟರು ಈಗ ಮತ್ತೆ ಅದನ್ನು ಬೆಳೆಯಬೇಕೆಂದು ಪ್ರಯತ್ನಮಾಡುತ್ತಿದಾರೆ

• • •

ಲಂಡನ್ ಪಟ್ಟಣದಲ್ಲಿ ಉಷ್ಣರಾಜ್ಯಗಳ ರೋಗ ಚಿಕಿತ್ಸಾದಿಗಳನ್ನು ಪರಿಶೋಧನೆಯ ಮೂಲಕ ಕಂಡುಹಿಡಿಯುವುದಕ್ಕಾಗಿ ಒಂದು ವೈದ್ಯ ವಿದ್ಯಾಶಾಲೆಯನ್ನು ಪ್ರಾರಂಭಿಸುವವರಾಗಿದಾರೆ ಈ ಏರ್ಪಾಡಿಗೆ ಚಂದಾ ಹಣವನ್ನು ಮಿ|| ಆಸ್ಟಿನ್ ಚೇಂಬರ್‌ಲಿನ್‌ರವರು ಕೂಡಿಸಿದರು ಈ ಫಂಡಿಗೆ 10,80,000 ರೂಪಾಯಿ ವಸೂಲಾಗಿರುತ್ತೆಂದೂ, ಚಂದಾ ಪಟ್ಟಿಯು ಪೂರೈಸಿತೆಂದೂ, ತಿಳಿದು ಬಂದಿದೆ

• • •

ಸರ್ ವೋಲ್ಸ್‌ವರ್ತ್ ಮೆರ್ಸರ್‌ಸನ್ ಎಂಬ ಇಂಗ್ಲಿಷ್ ದೊಡ್ಡಮನುಷನು ಕಳೆದ ವಾರ ಲಂಡನ್ ಪಟ್ಟಣದಲ್ಲಿ ಬಹಳ ಬೇಗನೆ ಆತುರದಿಂದ ರೈಲು ಗಾಡಿ ಹತ್ತಬೇಕೆಂದು ಹೋಗುತ್ತಿದ್ದಾಗ ದಾರಿಯಲ್ಲಿ ಬಿದ್ದು ಪ್ರಾಣಬಿಟ್ಟನು ಡಾಕ್ಟರುಗಳು ಸೇರಿ ಶವವನ್ನು ಲಾಷ್ ಮಹಜರು ಮಾಡುವಾಗ್ಗೆ ಪರೀಕ್ಷೆಮಾಡಿ, ಆತನು ಅಷ್ಟು ಆತುರದಿಂದ ರೈಲಿಗೆ ಹೋಗದೇ ಇದ್ದ ಪಕ್ಷದಲ್ಲಿ ಇನ್ನೂ ಕೆಲವು ವರುಷ ಬದುಕುತ್ತಿದ್ದನು ಎಂಬದಾಗಿ ತಿಳಿಸಿದರು

• • •

ಈಜಿಪ್ಟ್ (ಐಗುಪ್ತ) ರಾಜ್ಯಕ್ಕೆ ಸೇರಿದ ಟೌರಾ ಎಂಬ ಊರಿನ ಬಂದೀಖಾನೆಯೊಳಗೆ ಕಳೆದ ಭಾನುವಾರ ಖೈದಿಗಳು ದಂಗೆಯೆದ್ದು ತಮ್ಮ ಕಾವಲುಗಾರರನ್ನು ಬಹಳವಾಗಿ ಹೊಡೆದು ಗಾಯಮಾಡಿದರು ಕಡೆಗೆ ಈ ದಂಗೆಯನ್ನು ಅಡಗಿಸುವುದಕ್ಕೆ ಬಂದೀಖಾನೆಯ ಪಹರೆಯವರು ಅವರ ಮೇಲೆ ಗುಂಡುಗಳನ್ನು ಹೊಡೆಯಬೇಕಾಯಿತು ಈ ಕಾದಾಟದಲ್ಲಿ 1 ಮಂದಿ ಬಂದೀವಾನರು ಮೃತಪಟ್ಟರು , 60 ಮಂದಿಗೆ ಗುಂಡೇಟು ತಗಲಿ ಗಾಯಗಳಾಗಿವೆ

• • •

ಜರ್ಮನಿ ರಾಜ್ಯದ ಚಕ್ರವರ್ತಿಯವರು ಮ್ಯೂನಿಚ್ ಪಟ್ಟಣಕ್ಕೆ ಹೋಗಿದ್ದಾಗ ಸುಮಾರು 1,400 ಜನ ಗಂಡಸರು, ಹೆಂಗಸರು, ಮಕ್ಕಳು ಸೇರಿ ಕಸರತ್ತುಗಳನ್ನು ಮಾಡಿದರು ಚಕ್ರವರ್ತಿಯವರು ಅವರು ಮಾಡಿದ ಅಂಗಸಾಧನೆಯನ್ನು ನೋಡಿ ತುಂಬಾ ಸಂತೋಷಪಟ್ಟು, ಅಂಗಸಾಧನೆಯು ಗಂಡಸರಿಗೆ ಮಾತ್ರವೇ ಅಲ್ಲ ಹೆಂಗಸರಿಗೂ ಹೆಣ್ಣು ಮಕ್ಕಳಿಗೂ ಕಾಯಪುಷ್ಟಿಗೆ ಬಹಳ ಅವಶ್ಯವಾದದ್ದೆಂದು ಅಪ್ಪಣೆ ಕೊಡಿಸಿ, ಆ ಪಟ್ಟಣದ ಪ್ರಜೆಗಳ ವಿನೋದವನ್ನು ಕೊಂಡಾಡಿದರು

• • •

ದಕ್ಷಿಣ ಆಫ್ರಿಕಕ್ಕೆ ಸೇರಿದ ಪೈನ್‌ಟೌನ್ ಡಿಸ್ಟ್ರಿಕ್ಟಿನೊಳಗೆ ಕಳೆದ ವಾರ ಸುಮಾರು 80 ಮಂದಿ ಹಿಂದುಸ್ಥಾನದ ಕೂಲಿ ಆಳುಗಳು ಪ್ರತಿಭಟಿಸಿ ಕೆಲಸ ಮಾಡುವುದಿಲ್ಲವೆಂದು ಮುಷ್ಕರ ಹಿಡಿದರು ಅವರ ಯಜಮಾನರು ಅವರ ಮೇಲೆಲ್ಲಾ ಫಿರ್ಯಾದು ಮಾಡಿದಾಗ ಮ್ಯಾಜಿಸ್ಟ್ರೇಟರು ಅವರಿಗೆ ತಲಾ 7 ರೂಪಾಯಿನಂತೆ ಜುಲ್ಮಾನೆ ಇಲ್ಲವೇ ಏಳೇಳು ದಿನ ಸಜಾ ಶಿಕ್ಷೆಯನ್ನು ವಿಧಿಸಿದರು ಕೂಲಿಕಾರರೊಬ್ಬರೂ ಜುಲ್ಮಾನೆ ಕೊಡದೆ ಸಜಾ ಅನುಭವಿಸುತ್ತೇವೆಂದು ಹೇಳಿದ್ದರಿಂದ ಅವರನ್ನು ಡರ್ಬನ್ ಪಟ್ಟಣದ ಬಂದೀಖಾನೆಗೆ ಹಾಕಿದರು

• • •

ಜರ್ಮನಿಯ ಬ್ಯಾರನ್ ಯೂಜೀನ್ ಚಾರಲ್ಸ್ ಪ್ರಾಟ್‌ಕಿ ಎಂಬುವನು 1904 ನೇ ಇಸವಿಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ಮದುವೆಮಾಡಿಕೊಂಡನು ಈಗ ಇವನಿಗೆ 65 ವರುಷ ವಯಸ್ಸಾಗಿದೆ, ಅವನು ಹನ್ನೆರಡು ಭಾಷೆಗಳನ್ನು ಕಲಿತುಕೊಂಡು ಅನೇಕ ರಾಜ್ಯಗಳಲ್ಲಿ ಸಂಚಾರಮಾಡುತ್ತಾ ಅಲ್ಲಲ್ಲಿರುವ ಕೆಲವು ದೊಡ್ಡಮನುಷ್ಯರ ಮನೆ ಹೆಮ್ಮಕ್ಕಳನ್ನು ಮೋಸಪಡಿಸಿ ಮದುವೆಮಾಡಿಕೊಂಡಿರುವುದಾಗಿ ಈಗ ಅವನ ಮೇಲೆ ಅಪರಾಧ ಬಂದಿದೆ ಲಂಡನ್ ಪಟ್ಟಣದ ಪೋಲೀಸಿನವರು ಇವನನ್ನು ಹಿಡಿಯಬೇಕೆಂದು ಸಾಹಸಪಡುತ್ತಿದಾರೆ, ಇದುವರೆಗೆ ಸಿಕ್ಕಲಿಲ್ಲ

• • •

ಟರ್ಕಿ ರಾಜ್ಯದಲ್ಲಿ ಗವರ್ನ್‌ಮೆಂಟಿನವರು ತಮ್ಮ ಸೈನ್ಯಗಳನ್ನು ಬದಲಾವಣೆ ಮಾಡಿ ಒಳ್ಳೇ ಸ್ಥಿತಿಗೆ ತಂದಿಡಬೇಕೆಂದು ಜರ್ಮನಿಯ ಒಬ್ಬ ಹುದ್ದೇದಾರನನ್ನು ಕರೆಸಿಕೊಂಡು ಆತನಿಗೆ ಸರ್ವ ಸೇನಾಧಿಪತ್ಯವನ್ನು ವಹಿಸಿದರು ಈ ವಿಷಯದಲ್ಲಿ ಕೆಲವು ದಿನಗಳ ತನಕ ಪರರಾಜ್ಯಗಳ ಅಧಿಕಾರಿಗಳು ಜಿಜ್ಞಾಸಮಾಡಿ ಕಡೆಗೆ ಅದಕ್ಕೆ ಸಮ್ಮತಿಪಟ್ಟರು ಈಗ ಟರ್ಕಿ ಸೈನ್ಯದಲ್ಲಿರುವ 280 ಮಂದಿ ಜನರಲ್‌ಗಳನ್ನೂ ಕರ್ನಲ್‌ಗಳನ್ನೂ ಕೆಲಸದಿಂದ ತೆಗೆದುಹಾಕಿದಾರೆ ಜಾದಿ ಪಾಷಾ ಎಂಬ ಹುದ್ದೇದಾರನೂ ಕೆಲಸಬಿಟ್ಟನು. ಇನ್ನೂ ಅನೇಕ ಬದಲಾವಣೆಗಳು ನಡೆಯುತ್ತಲಿವೆ.

• • •

ದಕ್ಷಿಣ ಆಫ್ರಿಕದ ಗಣಿಗಳಿಂದ ತೆಗೆಯುವ ವಜ್ರಗಳ ಪೈಕಿ ಇನ್ನು ಮೇಲೆ ಪ್ರತಿ ವರುಷವೂ ಇಷ್ಟೇ ವಜ್ರಗಳನ್ನು ಪೇಟೆಗೆ ಇಡಬೇಕೆಂದೂ, ಅದಕ್ಕಿಂತ ಹೆಚ್ಚಾಗಿ ಮಾರಾಟ ಮಾಡಕೂಡದೆಂದೂ ಜರ್ಮನಿ ಗವರ್ನ್‌ಮೆಂಟಿನವರು ವಿಧಾಯಕಮಾಡಿ ಇದೇ ಜನವರಿಯಿಂದ ಒಂದು ಕಾನೂನ್ ಜಾರಿಗೆ ತಂದಿದಾರೆ ಇದನ್ನು ನೋಡಿ ಗಣಿಗಳ ಯಜಮಾನರೆಲ್ಲಾ ಸೇರಿ ಬರ್ಲಿನ್ ನಗರದಲ್ಲಿ ಒಂದು ಸಭೆಯನ್ನು ನಡಿಸಿ, ಈ ಕಾನೂನನ್ನು ರದ್ದುಮಾಡಬೇಕೆಂದು ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಂಡರು ಸರ್ಕಾರದವರು ಯಾವ ರೀತಿ ಇತ್ಯರ್ಥಮಾಡುವರೋ ಮುಂದೆ ತಿಳಿಯಬೇಕು

• • •

ಈಚೆಗೆ ಆಸ್ಯಾಖಂಡದಿಂದ ಜನಗಳು ಅಮೇರಿಕಕ್ಕೆ ಹೋಗುವುದು ಹೆಚ್ಚಾಗಿರುವುದನ್ನು ನೋಡಿ ಅಮೇರಿಕದ ಸರ್ಕಾರದವರು ಅದನ್ನು ತಡೆಯಬೇಕೆಂದು ಇನ್ನೂ ಕಠಿಣವಾದ ಕಾನೂನು ಮಾಡುವವರಾಗಿದಾರೆ ಹಿಂದೂಜನಗಳು ವಿದ್ಯೆ ಕಲಿಯುವುದಕ್ಕೆಂಬ ನೆಪವನ್ನಿಟ್ಟುಕೊಂಡು ಸಂಯುಕ್ತರಾಜ್ಯಗಳಿಗೆ ವಿಶೇಷವಾಗಿ ಹೋಗುವರೆಂದೂ, ಅಲ್ಲಿಗೆ ಹೋದ ಮೇಲೆ ನಾನಾ ಕಸಬುಗಳನ್ನು ಅವಲಂಬಿಸಿ ಅಲ್ಲೇ ನಿಂತುಬಿಡುತ್ತಿದಾರೆಂದೂ ಆ ಸರ್ಕಾರದವರಿಗೆ ಅನುಮಾನವುಂಟಾಗಿದೆ ಆದಕಾರಣ ಇಂಥವರನ್ನು ಸೇರಿಸಿಕೊಳ್ಳದಂತೆ ಆ ಸರ್ಕಾರದವರು ತಡೆಯನ್ನು ಕಲ್ಪಿಸಬೇಕೆಂದು ಯೋಚಿಸಿದಾರೆ

• • •

ಹಿಂದುಸ್ಥಾನದಿಂದ ದೇಶಾಟನೆಗಾಗಿ ಹೋಗಿರುವ ಗಂಡಹೆಂಡಿರಿಬ್ಬರು ಕಳೆದ ವಾರ ಇಟಲಿ ರಾಜ್ಯಕ್ಕೆ ಸೇರಿದ ಫ್ಲಾರೆನ್ಸ್ ನಗರದಲ್ಲಿ ಸಂಚಾರಮಾಡುತ್ತಿದ್ದಾಗ ಇಬ್ಬರು ಹಿಂದುಸ್ಥಾನದವರಂತೆ ಬಂದು ಅವರನ್ನು ಒಂದು ತಿಂಡಿ ಅಂಗಡಿಗೆ ಕರೆದುಕೊಂಡುಹೋದರು ಗಂಡಸನ್ನು ತಿಂಡಿ ತರುವಂತೆ ಒಳಕ್ಕೆ ಕಳುಹಿಸಿದರು ಒಳಕ ನಾಲ್ವರು ಒಂದು ಕಡೆ ಸೇರಿದಾಗ ಅವರು ಆ ದಂಪತಿಗಳಿಗೆ ಸ್ಮರಣೆ ತಪ್ಪುವ ಔಷಧ ಕೊಟ್ಟು ಹೆಂಡತಿಯ ಕೈಚೀಲದಲ್ಲಿದ್ದ 9,600 ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿ, ತಲೆ ತಪ್ಪಿಸಿಕೊಂಡು ಇರುತ್ತಾರೆ ಆ ದಂಪತಿಗಳ ಹೆಸರು ಕಮಲಗಾವಲ್, ಕುರುವರ್ಜ

• • •

ನ್ಯೂಜೀಲೆಂಡ್ ಎಂಬ ಇಂಗ್ಲಿಷರ ಸ್ವಾಸ್ಥ್ಯದಲ್ಲಿ ಮಕ್ಕಳ ಸಾವು ಬಹಳ ಕಡಮೆ ಪ್ರಪಂಚದ ಇನ್ಯಾವ ಸ್ಥಳದಲ್ಲೂ ಇಷ್ಟು ಕಡಮೆಯಾಗಿಲ್ಲ ಅಲ್ಲಿ ಹುಟ್ಟುವ ಮಕ್ಕಳಲ್ಲಿ 100 ಕ್ಕೆ 5 ಮಂದಿ ಮಾತ್ರ ಸಾಯುವರು ಲಂಡನ್ ಪಟ್ಟಣದಲ್ಲಿ ಮಕ್ಕಳ ಸಾವು ಶೇಕಡ 11, ರಷ್ಯಾದಲ್ಲಿ 22 ನ್ಯೂಜೀಲೆಂಡಿನಲ್ಲಿರುವ ಡನೆಡಿನ್ ಎಂಬ ಪಟ್ಟಣದೊಳಗೆ ಹೆಂಗಸರ ಮತ್ತು ಮಕ್ಕಳ ಆರೋಗ್ಯವನ್ನು ನೋಡಿಕೊಂಡು ಕಾಪಾಡುವುದಕ್ಕಾಗಿ ಒಂದು ಸಂಘವು ಆರು ವರುಷಗಳ ಕೆಳಗೆ ಏರ್ಪಾಡಾಯಿತು ಇವರ ಸಾಹಸಪ್ರಯತ್ನಗಳಿಂದಲೂ ಸಹಾಯಪ್ರೋತ್ಸಾಹಗಳಿಂದಲೂ ಆ ಪಟ್ಟಣದೊಳಗೆ ಹುಟ್ಟುವ ಶಿಶುಗಳಲ್ಲಿ ಒಂದು ವರುಷದೊಳಗೆ ಸಾಯುವುದು ಶೇಕಡ ಮೂರಕ್ಕಿಂತ ಹೆಚ್ಚಾಗಿಲ್ಲ

• • •

ಜಪಾನ್ ಸ್ತ್ರೀಯರಲ್ಲಿ ಮದುವೆಮಾಡಿಕೊಳ್ಳದೆ ಇರತಕ್ಕವರು ಬಹಳ ಅಪರೂಪ ಸಾಮಾನ್ಯವಾಗಿ ಅವರು 21 ನೇ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳುವರು ಗಂಡಸರು 26ನೇ ವರುಷದಲ್ಲಿ ವಿವಾಹಮಾಡಿಕೊಳ್ಳುವುದೇ ರೂಢಿ, ಆದರೆ 15 ವರುಷದವರಿಗೆ ಮದುವೆಯಾಗುವುದು ಅಪರೂಪವಲ್ಲ ಕಳೆದ ವರುಷ 16 ವರುಷದ ಹೆಣ್ಣುಮಕ್ಕಳ 7,000 ಮದುವೆಗಳೂ, 17 ವಯಸ್ಸಿನ ಹುಡುಗರ 4,090 ವಿವಾಹಗಳೂ ನಡೆದಿರುತ್ತವೆ ಹೆಣ್ಣಿಗೆ 30 ವರುಷವಾಗಿದ್ದ ಮದುವೆಗಳು 8,000 ಚಿಲ್ಲರೆ, ಮತ್ತು 18,000 ಗಂಡಸರು 30 ವರುಷ ತುಂಬಿದ ಮೇಲೆ ವಿವಾಹವಾಗಿ ಸಂಸಾರವನ್ನು ಹೂಡಿದರು 40 ವರುಷಕ್ಕೆ ಮೇಲ್ಪಟ್ಟವರಲ್ಲಿ 3,700 ಗಂಡಸರೂ, 1 600 ಹೆಂಗಸರೂ ವಿವಾಹಿತರಾದರು

• • •

ಹಿಂದಿನ ಮಂಗಳವಾರ 200 ಮಂದಿ ಟರ್ಕಿ ಸೈನಿಕರೂ ಹುದ್ದೇದಾರರೂ ಇರುವ ಒಂದು ಟರ್ಕಿಯ ಜಹಜು ವೆಲೋನಾ ಎಂಬ ತೀರಪಟ್ಟಣಕ್ಕೆ ಟರ್ಕಿಯ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಿಂದ ಹೋಯಿತು ಮೊದಲು ಟರ್ಕಿ ರಾಜ್ಯದ ಯುದ್ಧದ ಇಲಾಖಾ ಮಂತ್ರಿಯಾಗಿದ್ದ ಇಜ್ಜತ್ ಪಾಷಾ ಎಂಬಾತನು ಆ ಜಹಜಿನಲ್ಲಿ ಇದ್ದನಾಗೂ, ಆತನು ಸೈನಿಕರ ಸಮೇತ ಜಹಜು ಇಳಿದು ಊರೊಳಗೆ ಪ್ರವೇಶಿಸಿ ತಾನೇ ಆಲ್ಬೇನಿಯದ ದೊರೆಯೆಂದು ಸಾರಿಸಿಕೊಂಡು ಆ ಸಂಸ್ಥಾನವನ್ನು ಆಕ್ರಮಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟನಾಗೂ, ಅದರ ಮೇಲೆ ಆ ಸ್ಥಳದ ಅಧಿಕಾರಿಗಳು ಸದ ರಾತ್ರಿಯಲ್ಲಿ ಯುದ್ಧಕಾಲದ ಕಾನೂನನ್ನು ಜಾರಿಗೆ ತಂದು ಸೈನ್ಯಗಳ ಸಮೇತ ಆ ಟರ್ಕಿ ಸೈನಿಕರನ್ನು ಸೆರೆ ಹಿಡಿಯಲು ಹೋದರೆಂದೂ ತಂತೀವರ್ತಮಾನ ಬಂದಿದೆ

• • •

ಹೇಗ್ ಪಟ್ಟಣದಲ್ಲಿ ರಾಜ್ಯರಾಜ್ಯಗಳಿಗೆ ಉಂಟಾಗುವ ಮನಸ್ತಾಪಗಳನ್ನೂ ವ್ಯಾಜ್ಯಗಳನ್ನೂ ಚರ್ಚಿಸಿ ಇತ್ಯರ್ಥಪಡಿಸುವುದಕ್ಕೆ ನೋಬಲ್ ಎಂಬ ಪುಣ್ಯಾತ್ಮನ ಉದ್ದೇಶ ಮತ್ತೂ ಧನಸಹಾಯದಿಂದ ಒಂದು ಪಂಚಾಯತಿ ಕೋರ್ಟು ಏರ್ಪಾಡಾಗಿದೆಯಷ್ಟೆ ಈ ಪಂಚಾಯತಿ ಕೋರ್ಟಿನವರು ಈಗ ಎಲ್ಲಾ ರಾಜ್ಯಗಳವರಿಗೂ ಪರಸ್ಪರವಾದ ಸಹನ ಭಾವವೂ ಪ್ರೀತಿಯೂ ಉಂಟಾಗಿದ್ದಾಗ್ಯೂ ಪ್ರತಿ ಒಂದು ರಾಜ್ಯದವರೂ ಪ್ರತಿ ವರುಷವೂ ತಮ್ಮ ಸೈನ್ಯದ ಇಲಾಖೆಗೆ ಹೆಚ್ಚು ಹೆಚ್ಚಾಗಿ ರಂಜಾವಾಯವನ್ನು ವಿನಿಯೋಗಿಸುತ್ತ, ಸೈನ್ಯಗಳನ್ನೂ ಯುದ್ಧದ ಸಾಮಗ್ರಿಗಳನ್ನೂ ವೃದ್ಧಿಮಾಡಿ ಬಲಪಡಿಸಿಕೊಳ್ಳುತ್ತಾ ಬಂದಿರುವುದನ್ನು ನೋಡಿ, ಈ ವರ್ತನವು ಸಹಜವಾದದ್ದಲ್ಲವೆಂದೂ, ಈ ಭಾಗವು ಎಲ್ಲರೂ ಕಳವಳಪಡುವುದಕ್ಕೂ, ಗಾಬರಿಪಡುವುದಕ್ಕೂ ಕಾರಣವಾಗಿದೆ ಎಂದೂ, ರಾಜ್ಯಾಧಿಪತಿಗಳು ಚೆನ್ನಾಗಿ ಪರ್ಯಾಲೋಚನೆಮಾಡಿ ಆ ಯುದ್ಧದ ಇಲಾಖೆಗಳ ಅಪಾರವಾದ ವೆಚ್ಚಗಳನ್ನು ಕಟ್ಟುನಿಟ್ಟಾಗಿ ಕಡಮೆಮಾಡುತ್ತಾ ಬರಬೇಕಾದದ್ದು ಅವಶ್ಯವೆಂದೂ ತಿಳಿಸುತ್ತಾರೆ.

ಅಜ್ಮೀರ್ ಜನರಲ್ ಇನ್ಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್. ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-33] ಎಸ್. ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

"ವೃತ್ತಾಂತ ಪತ್ರಿಕೆ" ಮ್ಯಾನೇಜರವರ ನೋಟೀಸು.

ಹೊಸ ವರುಷದ ಕ್ಯಾಲೆಂಡರನ್ನು ಹೊಸ ಅರಮನೆಯೇ ಮೊದಲಾದ ಐದು ದೊಡ್ಡ ನೇತ್ರಾನಂದಕರವಾದ ಚಿತ್ರಗಳೊಡನೆ ಮೈಸೂರು ಸರಕಾರಿ ರಜಾ, ಹಿಂದೂ ಮುಸಲ್ಮಾನ್ ಕ್ರೈಸ್ತ ಹಬ್ಬಗಳ ಸಮೇತ ತಯಾರ್ಮಾಡಿ ನಮ್ಮ ಖಾಯಂ ಚಂದಾದಾರರಿಗೆಲ್ಲಾ ಕಳುಹಿಸಿದ್ದಾಯಿತು. ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿರುವುದರಿಂದ ಬೇಗನೆ ಖಾಯಂ ಚಂದಾದಾರರಾಗತಕ್ಕವರಿಗೆ ಈ ಕ್ಯಾಲೆಂಡರನ್ನು ಬಹುಮಾನವಾಗಿ ಕಳುಹಿಸುತ್ತೇವೆ

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜನವರಿ, ತಾ. ೧೫ ನೇ ಗುರುವಾರ.

ಮೈಸೂರು ನ್ಯಾಯವಿಧಾಯಕ ಸಭೆಯು.

ಮೈಸೂರು ಸಂಸ್ಥಾನದೊಳಗೆ ಕಾನೂನುಗಳನ್ನು ರಚಿಸಿ ಚರ್ಚಿಸುವುದಕ್ಕಾಗಿ ಗವರ್ನ್‌ಮೆಂಟಿನವರು ಒಂದು ನ್ಯಾಯ ವಿಧಾಯಕ ಸಭೆಯನ್ನು ಮಾಡಿ, ಮೆಂಬರುಗಳ ಸಂಖ್ಯೆಯು 10 ಕ್ಕಿಂತ ಕಡಮೆಯಾಗಿಯೂ, 15 ಕ್ಕಿಂತ ಹೆಚ್ಚಾಗಿಯೂ ಇರಕೂಡದೆಂದು ವಿಧಾಯಕಮಾಡಿಕೊಂಡಿದ್ದಾರೆ ಇದಲ್ಲದೆ ಈ ಸಭೆಯ ಮೆಂಬರುಗಳಿಗೆ ನ್ಯಾಯ ನಿಬಂಧನೆಗಳ ವಿಚಾರವನ್ನಲ್ಲದೆ ಸಂಸ್ಥಾನದ ಆಳ್ವಿಕೆಗೆ ಸಂಬಂಧಪಟ್ಟ ಇನ್ನಾವ ವಿಷಯಗಳನ್ನೂ ಕುರಿತು ಚರ್ಚೆ ಮಾಡುವುದಕ್ಕೆ ಅಧಿಕಾರ ವಿರುವುದಿಲ್ಲ. ಪ್ರತಿ ವರುಷವೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಈ ನ್ಯಾಯ ವಿಧಾಯಕ ಸಭೆಗೆ ಪ್ರಜಾಪಕ್ಷದ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಿಕೊಡಬೇಕೆಂತಲೂ, ಈ ಸಭೆಗೆ ಸಂಸ್ಥಾನದ ಜಮಾಖರ್ಚು ಲೆಕ್ಕಗಳನ್ನು ಕುರಿತು ಚರ್ಚೆ ಮಾಡುವುದಕ್ಕೂ, ಆಳ್ವಿಕೆಗೆ ಸಂಬಂಧಪಡುವ ವಿಚಾರಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವುದಕ್ಕೂ ಅಧಿಕಾರ ವಹಿಸಬೇಕೆಂತಲೂ ಗವರ್ನ್‌ಮೆಂಟಿನವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದರು. ಕಳೆದ ವರುಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಗವರ್ನ್‌ಮೆಂಟಿನವರು ಆಳ್ವಿಕೆಯನ್ನು ಇನ್ನೂ ಪ್ರಜಾರಂಜಕವಾಗಿ ಮಾಡಬೇಕೆಂಬ ಅಭಿಲಾಷೆಯುಳ್ಳವರಾಗಿ ಪ್ರಜಾ ಪ್ರತಿನಿಧಿ ಸಭೆಯಿಂದ ಇನ್ನು ಮುಂದೆ ನಾಲ್ಕು ಮಂದಿಯನ್ನು ಮೆಂಬರಾಗಿ ತೆಗೆದುಕೊಳ್ಳುವುದಾಗಿಯೂ, ಎಂಟು ಡಿಸ್ಟ್ರಿಕ್ಟುಗಳಿಂದಲೂ ಬೇರೆ ನಾಲ್ಕು ಮಂದಿ ಮೆಂಬರಾಗುವಂತ ಅವಕಾಶವನ್ನು ಕಲ್ಪಿಸಿ ಕೊಡುವುದಾಗಿಯೂ, ಇನ್ನು ಮೇಲೆ ನ್ಯಾಯವಿಧಾಯಕ ಸಭೆಯಲ್ಲಿ ಸಂಸ್ಥಾನದ ಜಮಾಖರ್ಚುಬಾಬುಗಳನ್ನು ಕುರಿತು ಚರ್ಚೆ ಮಾಡುವುದಕ್ಕೂ, ಪ್ರಜೆಗಳಿಗುಂಟಾಗುವ ಕಷ್ಟನಷ್ಟಗಳ ವಿಷಯದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೂ ಮೆಂಬರುಗಳಿಗೆ ಅಧಿಕಾರ ವಹಿಸುವುದಾಗಿಯೂ ದಿವಾನರವರು ಅಪ್ಪಣೆಕೊಡಿಸಿದರು. ಅದರಂತೆ ನಮ್ಮ ಸರ್ಕಾರದವರು ಈ ಸಭೆಯ ಮೆಂಬರುಗಳ ಸಂಖ್ಯೆಯನ್ನು 15 ರಿಂದ 21 ರ ವರೆಗೆ ಹೆಚ್ಚುಮಾಡಿ ಮೇಲ್ಕಂಡ ಸ್ವಾತಂತ್ರ್ಯಗಳೂ ವಹಿಸಬೇಕೆಂದು ತೀರ್ಮಾನಮಾಡಿ, ಇದಕ್ಕಾಗಿ ಒಂದು ಮಸೂದೆಯನ್ನು ರಚಿಸಿ ಪ್ರಕಟಮಾಡಿರುತ್ತಾರೆ. ನಮ್ಮ ಗವರ್ನ್‌ಮೆಂಟಿನವರು ಸಾರ್ವಭೌಮ ಸರ್ಕಾರದವರ ಮೇಲ್ಪಂಕ್ತಿಯನ್ನು ಅನುಸರಿಸಿ ಈ ಪ್ರಜಾರಂಜಕವಾದ ಏರ್ಪಾಡುಗಳನ್ನು ರೂಢಿಗೆ ತರಬೇಕೆಂದು ಕುತೂಹಲಪಡುತ್ತಿರುವುದು ಸಂತೋಷಕರವಾಗಿಯೂ, ನಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಸಹಕಾರಿಯಾಗಿಯೂ ಇದೆ.

ಹೊಸದಾಗಿ ಯಾವುದಾದರೊಂದು ಕಾನೂನು ಆಗಬೇಕಾಗಿದ್ದರೆ ಅದನ್ನು ಯೋಗ್ಯತೆ ವಿವೇಕ ಸಾಮರ್ಥ್ಯಾದಿಗಳನ್ನು ಪಡೆದಿರುವಂಥಾ ಜನರು ಎಷ್ಟುಮಂದಿ ಪರಿಶೋಧಿಸಿ ಚರ್ಚೆ ಮಾಡಿದರೂ ಅಷ್ಟೂ ಅಷ್ಟು ಒಳ್ಳೆಯದೇ ಎನ್ನುವುದಕ್ಕೆ ಸಂಶಯವಿಲ್ಲ. ಕಾನೂನು ರಚಿಸುವುದರಲ್ಲಿ ನಿಪುಣನಾದ ಮೆಂಬರು ಮಸೂದೆಯನ್ನು ರಚಿಸುತ್ತಾನೆ; ಆ ಕಾನೂನ್ ಅನುಸರಿಸಿ ನಡೆಯತಕ್ಕ ಪ್ರತಿ ಒಬ್ಬ ಪ್ರಜೆಗೂ ಅದರ ಸಾಧಕಬಾಧಕಗಳನ್ನು ಕುರಿತು ಚರ್ಚೆಮಾಡುವುದಕ್ಕೆ ಅವಕಾಶವಿರಬೇಕು. ಹೀಗೆ ಮಾಡಲು ತಕ್ಕಮಟ್ಟಿನ ಯೋಗ್ಯತೆ ವಿವೇಕ ಅನುಭವಾದಿಗಳನ್ನೂ ವ್ಯವಧಾನವನ್ನೂ ಪಡೆದಿರುವಂಥಾ ಜನಗಳು ದೊರಕುವುದು ಸದ್ಯದಲ್ಲಿ ಸುಲಭವಲ್ಲವೆಂದು ಸಂಶಯಪಡುತ್ತೇವೆ. ಆಲೋಚನೆಗೂ ಚರ್ಚೆಗೂ ಅವಕಾಶವಿಲ್ಲದೆ ಬಹಳ ಆತುರದಿಂದ ರಚಿಸಲ್ಪಡತಕ್ಕ ಕಾನೂನುಗಳು ಅನೇಕವೇಳೆ ತೃಪ್ತಿಕರವಾಗಿರುವುದಿಲ್ಲ. ಕಾನೂನನ್ನು ಕಾಲ ದೇಶ ವರ್ತಮಾನಗಳಿಗೆ ಅನುಸಾರವಾಗಿ ಬದಲಾವಣೆ ಮಾಡಿಕೊಳ್ಳುತ್ತಾ ಬರಬೇಕಾದದ್ದೇ ಧರ್ಮವು. ನ್ಯಾಯ ವಿಧಾಯಕ ಸಭೆಯ ಮೆಂಬರುಗಳಿಗೆ ನಮ್ಮ ಸೀಮೆಯ ಸ್ಥಿತಿಗತಿಯೆಲ್ಲಾ ಬಹು ಪರಿಷ್ಕಾರವಾಗಿ ತಿಳಿದಿರಬೇಕು; ಮತ್ತೂ ಆಗಿಂದಾಗ್ಗೆ ಚರ್ಚೆಗೆ ತರಲ್ಪಡುವ ಕಾನೂನಿನ ಮಸೂದೆಗಳನ್ನು ಕುರಿತು ಸಾವಧಾನವಾಗಿಯೂ ಪ್ರಜಾಹಿತಚಿಂತನೆಯಿಂದಲೂ ಆಲೋಚನೆ ಮಾಡುವುದಕ್ಕೆ ಅವರಿಗ ಇತರ ಕೆಲಸಕಾರ್ಯಗಳ ಚಿಂತೆಗಳೂ ಅಡಚಣೆಗಳೂ ಇರಕೂಡದು.

ಕಾನೂನು ಯಾವ ಪಾರ್ಟಿಗಾಗಲಿ ಯಾವ ಪಂಗಡಕ್ಕಾಗಲಿ ಪಕ್ಷಪಾತಮಾಡತಕ್ಕದ್ದಾಗಿರುವುದು ಧರ್ಮವಲ್ಲ. ಅದರಲ್ಲಿ ಉದಾಹರಿಸಲ್ಪಟ್ಟ ಅಂಶಗಳು ಸಕಲ ಪ್ರಜೆಗಳಿಗೂ ಅನ್ವಯಿಸತಕ್ಕವುಗಳಾಗಿರಬೇಕು. ಪಕ್ಷವರ್ತಿಯಾಗುವಂಥಾ ಯಾವ ಕಾನೂನನ್ನೂ ಮಾಡದಂತೆ ತಡೆಯಬೇಕು, ಯಾಕಂದರೆ ಕಾನೂನೆಂಬುವುದು ಪ್ರತಿ ಮನುಷ್ಯನ ಮತ್ತೂ ಹೆಂಗಸಿನ ಹಕ್ಕು ಬಾಧ್ಯತೆಯನ್ನು ನಿಷ್ಪಕ್ಷಪಾತವಾಗಿ ಕಾಪಾಡತಕ್ಕದ್ದಾಗಿರುವುದು. ಇವರೆಲ್ಲರಿಗಿಂತಲೂ ವಿಶೇಷವಾಗಿ ಕಾನೂನನ್ನು ರಚಿಸತಕ್ಕವರು ಮೊದಲು ಕಾನೂನಿನ ಪ್ರಕಾರ ಸ್ವಲ್ಪವೂ ತಪ್ಪದೆ ನಡೆದುಕೊಳ್ಳುವವರಾಗಬೇಕು. ಹಲವು ಸಂದರ್ಭಗಳಲ್ಲಿ ಅಧಿಕಾರ ಸ್ಥಾನಗಳನ್ನು ಅಲಂಕರಿಸಿರತಕ್ಕವರು ನಿರ್ಭೀತಿಯಾಗಿ ಅಕ್ರಮಕಾರ್ಯಗಳನ್ನು ನಡಿಸಬಹುದೇನೋ ಎನ್ನುವಂತೆ ಕಾಣುತ್ತದೆ. ಈ ವಿಚಾರಗಳಲ್ಲೆಲ್ಲಾ ನಮ್ಮ ನ್ಯಾಯವಿಧಾಯಕ ಸಭೆಯ ಮೆಂಬರುಗಳೂ, ಪ್ರಜೆಗಳ ಪರಿಪಾಲನೆಗಾಗಿ ನೇಮಕವಾಗಿರುವ ಅಧಿಕಾರಿಗಳೂ ಇತರರಿಗೆ ಸತ್ಯವಾದ ಮತ್ತೂ ನಿರ್ದುಷ್ಟವಾದ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕಾಗಿದೆ. ಅವರು ಧರ್ಮವಾದ ಸಮಸ್ತ ಕಂದಾಯ ಕೊಳಿಗೆಗಳನ್ನೂ ಮೊದಲು ಪಾವತಿಮಾಡಿ, ಸರ್ಕಾರದ ಕಟ್ಟು ಕಾನೂನುಗಳನ್ನೆಲ್ಲಾ ಸ್ವಲ್ಪವೂ ಮೀರದಂತೆ ನಡೆದುಕೊಳ್ಳುವವರಾಗಬೇಕು. ಅವರು ಈ ರೀತಿ ವರ್ತಿಸುತ್ತಿರುವುದನ್ನು ನೋಡಿ ಸಕಲ ಪ್ರಜೆಗಳೂ ತೃಪ್ತರಾಗಿ ಅವರಂತೆ ನಡೆದುಕೊಳ್ಳಲು ತುಂಬಾ ಸಹಾಯವಾದೀತೆನ್ನುವುದಕ್ಕೆ ಸಂಶಯವಿಲ್ಲ. ಕಾನೂನುಗಳನ್ನೂ ನಿಬಂಧನೆಗಳನ್ನೂ ಮಾಡತಕ್ಕವರೂ, ಅವುಗಳನ್ನು ಜಾರೀಲಿ ತರತಕ್ಕವರೂ ಅವುಗಳಿಗೆ ವಿರೋಧವಾಗಿಯೂ, ಅವುಗಳನ್ನು ಮೀರಿಯೂ ನಡೆಯುತ್ತಾ ಬರುವುದನ್ನು ಕಂಡರೆ ಸಾಮಾನ್ಯ ಪ್ರಜೆಗಳು ಕಾನೂನಿಗನುಸಾರವಾಗಿ ನಡೆದುಕೊಂಡಾರೆಂದು ನಿರೀಕ್ಷಿಸುವುದು ಸಾಧ್ಯವಲ್ಲ. ಎಲ್ಲಾ ವಿಚಾರಗಳಲ್ಲೂ ಹೇಗೋ ಈ ವಿಚಾರದಲ್ಲೂ ಹಾಗೇ ವಿಧಿಗಿಂತಲೂ ವರ್ತನವೇ ಪ್ರಾಧಾನ್ಯವೆನಿಸುತ್ತದ.

ಇನ್ನು ಮುಂದೆ ನಮ್ಮ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳಿಗೆ ಗವರ್ನ್‌ಮೆಂಟಿನವರನ್ನು ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವ ಅಧಿಕಾರ ದೊರಕುವುದೆಂದು ಸಂತೋಷಪಡುತ್ತೇವೆ ಇದು ಸಹಜವಾಗಿ ಆಗಬೇಕಾದದ್ದೇ ಸರಿ. ಹೀಗೆ ಪ್ರಶ್ನೆ ಕೇಳತಕ್ಕವರು ತಮ್ಮ ಪ್ರಶ್ನೆಯ ಪೂರ್ವಾಪರಗಳನ್ನೂ ಸಾಧಕಬಾಧಕಗಳನ್ನೂ ಚೆನ್ನಾಗಿ ಯೋಚಿಸಿ ತಿಳಿದುಕೊಂಡಿರಬೇಕು, ಮತ್ತೂ ತಮ್ಮ ಪ್ರಶ್ನೆಗೆ ಸಮಂಜಸವಾದ ಪ್ರತ್ಯುತ್ತರವನ್ನು ಪಡೆಯುವ ಭಾಗದಲ್ಲಿ ತಮ್ಮ ಕೈಲಾಗುವಷ್ಟು ಸಾಹಸ ಪ್ರಯತ್ನಗಳನ್ನು ಮಾಡಬೇಕು. ಅವರು ಕೇಳತಕ್ಕ ಪ್ರಶ್ನೆಗಳು ಯಥಾರ್ಥವಾಗಿಯೂ, ಪ್ರಜಾ ಹಿತಕರವಾಗಿಯೂ, ಸಂದಿಗ್ಧವಾಗಿರತಕ್ಕ ವಿಷಯಗಳು ಖಂಡಿತವಾಗುವಂತೆಯೂ, ಕಷ್ಟವಾಗಿರುವ ವಿಚಾರಗಳು ಸುಲಭವಾಗುವಂತೆಯೂ, ದುರ್ಮಾರ್ಗ ದುಷ್ಟತನ ಲಂಚ ಮೋಸ ಹಿಂಸೆ ಇವಲ್ಲಾ ನಿರ್ಮೂಲವಾಗುವಂತೆಯೂ ಇರಬೇಕು. ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೆ ಕೇಳುವ ಅಧಿಕಾರವು ಸಾಮಾನ್ಯವಾದ ಅಧಿಕಾರವಲ್ಲ. ಮೆಂಬರುಗಳು ಈ ಸ್ವಾತಂತ್ರ್ಯವನ್ನು ವಿವೇಕಪೂರ್ವಕವಾಗಿಯೂ, ಜಾಗರೂಕತೆಯಿಂದಲೂ, ಪ್ರಜೆಗಳ ಶ್ರೇಯಸ್ಸಿಗಾಗಿಯೂ ವಿನಿಯೋಗಿಸುವಂತಾಗಲೆಂದು ಪ್ರಾರ್ಥಿಸುತ್ತೇವೆ.

ದೇವರನ್ನು ಹುಡುಕುವುದು.

ಮನುಷ್ಯನು ಯಾವಾಗಲೂ ದೇವರನ್ನು ಹುಡುಕುತ್ತಾ ಇರುತ್ತಾನೆ ಮನುಷ್ಯರು ಬಹು ಪುರಾತನ ಕಾಲದಿಂದಲೂ ದೇವರ ವಿಷಯವಾಗಿ—"ನಾನು ಆತನನ್ನು ತಿಳಿದುಕೊಂಡು, ಆತನನ್ನು ಕಂಡುಕೊಂಡರೆ, ಎಷ್ಟೋ ಒಳ್ಳೆಯದು" ಎಂದು ಹೇಳಿಕೊಳ್ಳುತ್ತಾ ಬಂದಿರುತ್ತಾರೆ. ಅವರು ಆತನನ್ನು ಕುರಿತು ಧ್ಯಾನ ಮಾಡುತ್ತಾ ವಿಚಾರಮಾಡುತ್ತಾ ಚರ್ಚಿಸುತ್ತಾ ಪ್ರಾರ್ಥಿಸುತ್ತಾ ಇದ್ದುದರಿಂದ ದೇವರು ಸ್ವಲ್ಪ ಮಟ್ಟಿಗೆ ತನ್ನನ್ನು ಅವರಿಗೆ ತಿಳಿಯಪಡಿಸಿಕೊಂಡನು. ಅವರು ದೇವರನ್ನು ಕಂಡುಕೊಂಡರು, ಆದರೆ ಸಂಪೂರ್ಣವಾಗಿ ಅಲ್ಲ; ಅದು ಅಸಂಪೂರ್ಣವಾಗಿ ಮಾತ್ರ ಇದ್ದಿತು

ನಾವು ಅನೇಕಗ್ರಂಥಗಳನ್ನು ಓದುತ್ತಾ ಬರುವಲ್ಲಿ ಮನುಷ್ಯರು ದೇವರ ವಿಷಯ ಎಂತಹ ಅಭಿಪ್ರಾಯಗಳನ್ನು ಮಾಡಿಕೊಂಡಿದ್ದರೆಂಬುದು ನಮಗೆ ಕಂಡುಬರುವುದು ಅವುಗಳಲ್ಲಿ ಕೆಲವು ಕೇವಲ ಒರಟಾದುವುಗಳಾಗಿಯೂ ಅಸಂಪೂರ್ಣವಾದುವುಗಳಾಗಿಯೂ ಸಂಪೂರ್ಣವಾಗಿ ಸತ್ಯವಲ್ಲದುವುಗಳಾಗಿಯೂ ಇದ್ದುವು. ಅವರು ದೇವರು ತಮ್ಮ ಹಾಗೆ ಅಸಂಪೂರ್ಣನಾಗಿಯೂ ಅಸ್ಥಿರನಾಗಿಯೂ ಇರುತ್ತಾನೆ; ರಾಜರಾಕ್ಷಸನ ಹಾಗೆ ನಿರಂಕುಶಶಕ್ತಿಯುಳ್ಳವನು, ಆತನನ್ನು ಮುಖಸ್ತುತಿಮಾಡಬಹುದು, ಆತನಿಗೆ ಲಂಚಕಟ್ಟಬಹುದು; ಮೊರೆಯಿಡುವುದರಿಂದಲೂ ಕಣ್ಣೀರನ್ನು ಸುರಿಸುವುದರಿಂದಲೂ ಜಪತಪಗಳನ್ನು ಮಾಡುವುದರಿಂದಲೂ ಆತನಲ್ಲಿ ಅಂತಃಕರಣವನ್ನು ಹುಟ್ಟಿಸಬಹುದು ಎಂದು ಅಭಿಪ್ರಾಯ ಮಾಡಿಕೊಂಡಿದ್ದರು, ಆದಕಾರಣ ಮನುಷ್ಯರು ದೇವರನ್ನು ತಿಳಿಯುವುದಕ್ಕೂ ಆತನ ದಯವನ್ನು ಸಂಪಾದಿಸಿಕೊಳ್ಳುವುದಕ್ಕೂ ತಮಗೆ ತೋರಿದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾ ಬಂದರು.

ಆದರೆ ದೇವರು ಮಹಾ ದೊಡ್ಡವನಾಗಿಯೂ ಸರ್ವಶಕ್ತನಾಗಿಯೂ ಇದ್ದಾಗ್ಯೂ ಆತನು ಪವಿತ್ರನಾಗಿರುತ್ತಾನೆ ಎಂಬೀ ತಿಳುವಳಿಕೆಯು ಕೆಲವು ಮಂದಿಗೆ ಮಾತ್ರ ಬಂದಿತ್ತು. ಇವರು ಆತನು ಒಬ್ಬ ರಾಜರಾಕ್ಷಸನಂತೆ ಇರುತ್ತಾನೆ; ಆತನು ಒಳ್ಳೆಯದನ್ನು ಹೇಳಿದಾಗ್ಗೂ ಕೆಟ್ಟದನ್ನು ಹೇಳಿದಾಗ್ಗೂ ಆತನ ಮಾತಿಗೆ ನಾವು ವಿಧೇಯರಾಗಲೇ ಬೇಕು ಎಂದು ಎಂದಿಗಾದರೂ ಭಾವಿಸಲಿಲ್ಲ, ಆತನು ಸಂಪೂರ್ಣವಾಗಿ ಪರಿಶುದ್ಧನಾಗಿಯೂ ನೀತಿವಂತನಾಗಿಯೂ ಪವಿತ್ರನಾಗಿಯೂ ಇರುತ್ತಾನೆ; ಆದಕಾರಣ ಆತನನ್ನು ಮುಖಸ್ತುತಿಮಾಡುವುದಕ್ಕಾಗುವುದಿಲ್ಲ; ಆತನಿಗೆ ಲಂಚ ಕೊಡುವುದಕ್ಕಾಗುವುದಿಲ್ಲ; ಯಜ್ಞ, ಜಪತಪ, ಕಾಣಿಕೆ ಮುಂತಾದುವುಗಳಿಂದ ಆತನ ದಯವನ್ನು ಸಂಪಾದಿಸಿಕೊಳ್ಳುವುದಕ್ಕಾಗುವುದಿಲ್ಲ ಎಂದು ತಿಳಿದುಕೊಂಡಿದ್ದರು. ದೇವರನ್ನು ತಿಳಿದುಕೊಳ್ಳಬೇಕಾದರೆ, ಆತನಂತೆ ಪವಿತ್ರರೂ ನೀತಿವಂತರೂ ಪರಿಶುದ್ಧರೂ ಆಗುವುದೊಂದೇ ಮಾರ್ಗವಾಗಿರುತ್ತದೆ.

ಮನುಷ್ಯನು ತನ್ನ ಬುದ್ಧಿಶಕ್ತಿಯನ್ನು ಯಾವುದಾದರೊಂದು ರೀತಿಯಲ್ಲಿ ಪ್ರಯೋಗಿಸಿ, ದೇವರನ್ನು ಕಂಡುಕೊಳ್ಳುವುದು ಸಾಧ್ಯವಾಗಿದೆ ಎಂದು ಭಾವಿಸುವುದು ನಿಷ್ಪ್ರಯೋಜನವಾಗಿರುತ್ತದೆ ನಮಗೆ ಬುದ್ಧಿಯನ್ನು ಕೊಟ್ಟಿರುವವನು ಆತನೇ ಆದರೆ ಅದರಿಂದ ನಾವು ಆತನನ್ನು ಕಂಡುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಚರ್ಚೆಮಾಡುವುದರಿಂದಲೂ ನ್ಯಾಯಗಳನ್ನು ಎತ್ತಿ ತೋರಿಸುವುದರಿಂದಲೂ ಅನೇಕ ಸಮಯಗಳಲ್ಲಿ ನಮ್ಮ ಮನಸ್ಸಿಗೆ ತುಂಬಾ ಗಲಿಬಿಲಿಯುಂಟಾಗುವುದು. ಇವು ಪ್ರಯೋಜನಕರವಾದವುಗಳೇ ಹೌದು. ಆದರೆ ಇವು ದೇವರನ್ನು ಕಂಡುಕೊಳ್ಳುವ ಪ್ರಾಮುಖ್ಯವಾದ ವಿಧಾನಲ್ಲ. ಶಾಸ್ತ್ರಜ್ಞರು ಉಪಯೋಗಿಸುವ ಸೂಕ್ಷ್ಮದರ್ಶಕಯಂತ್ರ ದೂರದರ್ಶಕಯಂತ್ರ ಮುಂತಾದ ಆಯುಧಗಳನ್ನು ಪ್ರಯೋಗಿಸಿ, ನಾವು ಆತನನ್ನು ಹುಡುಕಿದಾಗ್ಗೂ ಆತನು ನಮಗೆ ಸಿಕ್ಕದೇ ಇರಬಹುದು. ಆತನು ಹೇಗಾದರೂ ನಮ್ಮ ಮನಸ್ಸಾಕ್ಷಿಗೂ ನಮ್ಮ ಮನಸ್ಸಿಗೂ ಗೋಚರನಾದರೆ, ನಾವು ಆತನ ಕಾರ್ಯಗಳಲ್ಲೆಲ್ಲಾ ಆತನನ್ನು ನೋಡುವೆವು.

ದೇವರು ನಮಗೆ ಸಿಕ್ಕಬೇಕಾದರೆ, ನಾವು ಕೆಟ್ಟದನ್ನು ವಿಸರ್ಜಿಸುವದಕ್ಕೂ ಒಳ್ಳೆಯದನ್ನು ಮಾಡುವುದಕ್ಕೂ ಕಲಿತುಕೊಳ್ಳಬೇಕು. ಸೂಕ್ಷ್ಮಬುದ್ಧಿಯಿಂದಲ್ಲ, ಆದರೆ ದೀನಮನಸ್ಸಿನಿಂದ ನಾವು ಆತನನ್ನು ಕಂಡುಕೊಳ್ಳುತ್ತೇವೆ. ನಾವು ಸತ್ಯತೆ, ನೀತಿ, ಶುದ್ಧತೆ, ಒಳ್ಳೇತನ ಇವುಗಳನ್ನು ಪ್ರೀತಿಸಬೇಕು. ಮತ್ತು ನಾವು ಸತ್ಯವಂತರಾಗಿಯೂ, ನೀತಿವಂತರಾಗಿಯೂ, ಶುದ್ಧರಾಗಿಯೂ ಒಳ್ಳೆಯವರಾಗಿಯೂ ಇರಬೇಕೆಂಬ ಚಿಂತೆಯು ನಮ್ಮಲ್ಲಿರಬೇಕು. ಆಗ ದೇವರು ನಮಗೆ ಸಿಕ್ಕುವನು. ಆತನು ಹೇಗಿದ್ದಾನೆಂಬುದು ನಮಗೆ ತಿಳಿದುಬರುವುದು.

ದೇವರನ್ನು ಹುಡುಕುವ ಕಾರ್ಯದಲ್ಲಿ ನಮಗೆ ಸಿಕ್ಕುವ ಅತ್ಯಂತ ದೊಡ್ಡ ಸಹಾಯವು ಯಾವುದೆಂದರೆ ಯೇಸು ಕ್ರಿಸ್ತನೇ. ಸತ್ಯತೆ, ನೀತಿ, ಶುದ್ಧತೆ, ಒಳ್ಳೇತನ ಇವುಗಳು ಪರಿಪೂರ್ಣವಾಗಿ ಪ್ರಕಟಿಸಲ್ಪಟ್ಟಿರುವುದನ್ನು ಯೇಸು ಕ್ರಿಸ್ತನಲ್ಲಿ ನಾವು ನೋಡುತ್ತೇವೆ ದೇವರು ಎಂಥವನಾಗಿರುತ್ತಾನೆಂಬುದನ್ನು ಆತನು ನಮಗೆ ತೋರಿಸಿಕೊಟ್ಟಿರುತ್ತಾನೆ. ದೇವರು ಪವಿತ್ರನಾಗಿ ಮಾತ್ರವೇ ಅಲ್ಲ, ಒಳ್ಳೆಯವನಾಗಿಯೂ ಇರುತ್ತಾನೆ, ಆತನು ನಮ್ಮ ತಂದೆ; ಆದಕಾರಣ ನಾವು ಆತನ ಮಕ್ಕಳಾಗಬಹುದು ಎಂಬೀ ವಿಷಯಗಳನ್ನು ಆತನು ನಮಗೆ ಹೊರಪಡಿಸಿರುತ್ತಾನೆ ಸತ್ಯವೇದದಲ್ಲಿರುವ ಸುವಾರ್ತೆಗಳೆಂಬ ಪುಸ್ತಕಗಳಲ್ಲಿ ಬರೆಯಲ್ಪಟ್ಟಿರುವ ಆತನ ಜೀವಚರಿತ್ರೆಯು ದೇವರು ಎಂಥವನಾಗಿರುತ್ತಾನೆಂಬುವನ್ನು ನಮಗೆ ತೋರಿಸುತ್ತವೆ. ಲೋಕದವರಿಗೆ ತಿಳಿದು ಬಂದಿರುವಷ್ಟರ ಮಟ್ಟಿಗೆ ದೇವರು ತನ್ನನ್ನು ಪ್ರಕಟಪಡಿಸಿಕೊಂಡಿರುವ ಎಲ್ಲಾ ವಿಧಾನಗಳಲ್ಲಿ ಇದೇ ಅತ್ಯುತ್ತಮವಾದುದು ಯಾರು ಯೇಸು ಕ್ರಿಸ್ತನನ್ನು ಕಂಡುಕೊಂಡು, ಆತನನ್ನು ತಿಳಿದಿರುತ್ತಾರೋ ಅವರು ದೇವರು ಎಂಥವನಾಗಿರುತ್ತಾನೆಂಬುದನ್ನು ತಿಳಿದು ಆತನನ್ನು ಕಂಡುಕೊಂಡಿರುತ್ತಾರೆ. ಎಲ್ಲಾ ಜಾತಿಗಳಲ್ಲಿಯೂ ವಂಶಗಳಲ್ಲಿಯೂ ಇರುವ ಎಲ್ಲಾ ಮನುಷ್ಯರು ಈ ರೀತಿಯಲ್ಲಿ ದೇವರನ್ನು ಕಂಡುಕೊಳ್ಳುವವರಾಗಲಿ.

ಒಳಸೇರಿದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ರಾಜಧಾನಿಯ ಟ್ರಿಸ್ಟ್ ಬೋರ್ಡಿನ ತಿಂಗಳುಗಟ್ಲೆ ಮೀಟಿಂಗು ನಾಳೆಯೂ, ಮ್ಯುನಿಸಿಪಲ್ ಮೀಟಿಂಗು ನಾಡಿದ್ದೂ ನಡೆಯುವಂತೆ ಗೊತ್ತಾಗಿದೆ

* * *

ಶ್ರೀಮನ್ ಮಹಾರಾಜರವರು ಕಳೆದ ಶುಕ್ರವಾರ ಮಧ್ಯಾಹ್ನ ನೀಲಗಿರಿಯಿಂದ ಮೋಟಿರಿನಲ್ಲಿ ರಾಜಧಾನಿಗೆ ದಯಮಾಡಿ ಎರಡು ದಿನ ಇದ್ದು ಭಾನುವಾರ ಸಾಯಂಕಾಲ 3½ ಗಂಟೆಗೆ ಇಲ್ಲಿಂದ ಬೆಂಗಳೂರಿಗೆ ಚಿತ್ತೈಸಿದರು.

* * *

ನಮ್ಮ ಮಹಾರಾಜರವರು ಬೊಂಬಾಯಿನಲ್ಲಿರುವ ಘನವನ್ನೈದಿದ ಆಗಾಖಾನ್‌ರವರ ರಕ್ತಸಂಬಂಧಿಗಳಾದ ಮ|| ಆಗಾ ಸಾದಕ್ ಷಾ, ಬಿ.ಎ. ಯವರನ್ನು ತಮ್ಮ ಏಡಿಕಾಂಗರಾಗಿ ನೇಮಿಸಿಕೊಳ್ಳುವರೆಂದು ವರ್ತಮಾನವಿದೆ.

* * *

ಸರ್ದಾರ್ ಎಂ. ಬಾಳರಾಜೆಅರಸಿನವರಿಗೆ ನಮ್ಮ ಮಹಾರಾಜರವರ ಚೀಫ್ ಅಸಿಸ್ಟೆಂಟ್ ಹುಜೂರ್ ಸೆಕ್ರೆಟರಿ ಕೆಲಸವೂ, ಆನೆಕಲ್ ತಾಲ್ಲೂಕು ಅಮಲ್ದಾರ್ ಮ|| ಪಿ. ಗೋಪಾಲರಾಜೆಅರಸಿನವರಿಗೆ ಅ|| ಕಮಿಷನರ ಕೆಲಸವೂ ನೇಮಕವಾಗುವುವೆಂದು ಹೇಳುವರು.

* * *

ತ್ಯಾಮಗೊಂಡ್ಲದ ಸರಹದ್ದಿಗೆ ಸೇರಿದ ದೊಡ್ಡಬೆಲೆಯಲ್ಲಿ ಕಳೆದ 7ನೇ ತಾರೀಖಿನ ರಾತ್ರಿ ಜಬ್ಬಲನೆಂಬುವನು ಚಿಕ್ಕಮುನಿಯನೆಂಬುವನನ್ನು ಹೊಡೆದು ಗಾಯ ಮಾಡಿದನೆಂದೂ, ಅವನು ಆಸ್ಪತ್ರೆಯಲ್ಲಿ ಸತ್ತುಹೋದದ್ದರ ಮೇಲೆ ಅಪರಾಧಿಯನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆಂದೂ ತಿಳಿದು ಬರುತ್ತದೆ.

* * *

ಮೊನ್ನೆ ಸೋಮವಾರ ಸಾಯಂಕಾಲ ನಮ್ಮ ಮಹಾಮಾತೃಶ್ರೀ ಯವರೂ ಅರಮನೆಯ ರಾಣೀವಾಸದವರೂ ಬೆಂಗಳೂರು ದಂಡಿನಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಮಾಡಿ ತೋರಿಸಿದ ಚಿತ್ರಪಟಗಳ ನೋಟಕ್ಕೆ ದಯಮಾಡಿ, ಎರಡು ಗಂಟೆ ಹೊತ್ತು ಇದ್ದು ನೋಡಿಕೊಂಡು ಬಂದರು.

* * *

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಸಂಗೀತ ಸಮಾಜದವರು ಇಲ್ಲಿನ ಟೌನ್ ಹಾಲ್ ಮಂದಿರದಲ್ಲಿ ವೇ|| ಬೇಲೂರು ಕೇಶವಮೂರ್ತಿದಾಸ

ಽಐದ ಧ್ರುವಚರಿತ್ರೆ ಎಂಬ ಕಥೆಯನ್ನು ಮಾಡಿಸಿದರು ಅನೇಕ ಮಂದಿ ವಿದ್ಯಾವಂತರೂ, ವರ್ತಕರೂ, ಸ್ತ್ರೀಯರೂ ಹಾಜರಾಗಿ ಕಥೆಯನ್ನು ಕೇಳಿ ಸಂತೋಷಪಟ್ಟರು

* * *

ಈಜಿಪ್ಟ್ ರಾಜ್ಯದ ರಾಜವಂಶಕ್ಕೆ ಸೇರಿದ ಒಬ್ಬ ಕುಮಾರರೂ, ಇಂಗ್ಲಿಷ್ ಸರದಾರರಿಬ್ಬರೂ ಕಳೆದ ವಾರ ರಾಜಧಾನಿಗೆ ಬಂದಿದ್ದು, ಇಲ್ಲಿನ ಎಲ್ಲಾ ಭಾಗಗಳನ್ನೂ ನೋಡಿಕೊಂಡು ಹೋದರು ನಮ್ಮ ಮಹಾರಾಜರವರು ಅವರನ್ನು ಸತ್ಕರಿಸಿ ಅರಮನೆಗೆ ಕರೆಸಿಕೊಂಡು ದೀಪೋತ್ಸವಾದಿಗಳನ್ನು ನಡಿಸಿ ಸಂತೋಷಪಡಿಸಿ ಕಳುಹಿಸಿಕೊಟ್ಟರು

* * *

ಬೆಂಗಳೂರು ದಂಡಿನಲ್ಲಿ ಗುಜರಿ ಮಾರ್ಕೆಟ್ಟಿನಲ್ಲಿ ಮಹಮದ್ ಕಾಸಿಂ ಎಂಬೊಬ್ಬ ಮಹಮದೀಯನು ಒಂದಾಣೆಯ ಬಾಬತು ನಿಕ್ಕಲ್ ಖೋಟಾ ನಾಣ್ಯಗಳನ್ನು ಚಲಾವಣೆ ಮಾಡಬೇಕೆಂದು ಪ್ರಯತ್ನಪಟ್ಟು ಸಿಕ್ಕಿಬಿದ್ದನು ಮ್ಯಾಜಿಸ್ಟ್ರೇಟರು ಅವನಿಗೆ ಆರು ತಿಂಗಳ ಕಠಿಣ ಸಜವನ್ನೂ, 25 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

* * *

ಡಿಸ್ಟ್ರಿಕ್ಟ್ ಲಾಕಪ್ಪುಗಳಲ್ಲಿರುವ ಖೈದಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುವುದಕ್ಕೂ, ಅವರು ಆಸ್ಪತ್ರೆಯಲ್ಲಿರುವಾಗಲೂ ಪೋಲೀಸಿನವರು ಪಹರೆ ಇರಬೇಕೆಂದೂ, ಪೊಲೀಸ್ ಹುದ್ದೇದಾರರು ಲಾಕಪ್ ಅಧಿಕಾರಿಗಳು ಕೇಳಿದಾಗ ಖೈದಿಗಳನ್ನು ಕಳುಹಿಸಬೇಕೆಂದೂ ಸರ್ಕಾರದವರು ಹುಕುಂ ಕೊಟ್ಟಿದಾರೆ

* * *

ಬೆಂಗಳೂರು ಸಿಟಿ ಜನೋಪಕಾರಿ ದೊಡ್ಡಣ್ಣನವರ ಸ್ಕೂಲ್ ಕಟ್ಟಡದಲ್ಲಿ ಫಲಪುಷ್ಪಾದಿಗಳ ಪ್ರದರ್ಶನವು ಮೊನ್ನೆ ಮಂಗಳವಾರ ಬೆಳಿಗ್ಗೆ ನಡಿಸಲಾಯಿತು ಶ್ರೀಮನ್ಮಹಾರಾಜರವರೂ ಯುವರಾಜರವರೂ ಬ್ರಿಟಿಷ್ ರೆಸಿಡೆಂಟರವರೂ ದಯಮಾಡಿದ್ದರು ದಿವಾನ್ ಬಹದ್ದೂರ್ ಕೆ ಪಿ ಪುಟ್ಟಣ್ಣಶೆಟ್ಟರವರು ಎದುರುಗೊಂಡು ಅವರನ್ನು ಪ್ರದರ್ಶನಶಾಲೆಯೊಳಕ್ಕೆ ಕರೆದುಕೊಂಡು ಹೋಗಿ ಎಲ್ಲಾ ಭಾಗಗಳನ್ನೂ ತೋರಿಸಿದರು.

* * *

ರಾಜಧಾನಿಯ ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆಯ ಹೆಡ್ ಮಾಸ್ಟರ್ ಮ| ಬಿ ಕೃಷ್ಣಪ್ಪನವರು ತಮ್ಮ ವಿದ್ಯಾರ್ಥಿಗಳನ್ನು ಮದರಾಸಿಗೆ ಕರೆದುಕೊಂಡು ಹೋಗಿ ಅಲ್ಲಿ ಕೆಲವು ಸ್ಥಳಗಳಲ್ಲಿ ಅವರ ವಿದ್ಯಾಭಿವೃದ್ಧಿಯನ್ನೂ ಅವರು ಮಾಡುವ ಕೆಲಸಗಳನ್ನೂ ಪ್ರದರ್ಶನಮಾಡಿದರು ಮದರಾಸಿನ ಬಹು ಮಂದಿ ದೊಡ್ಡಮನುಷ್ಯರೂ ವಿದ್ಯಾವಂತರೂ ಅಧಿಕಾರಿಗಳೂ ಈ ವಿದ್ಯಾರ್ಥಿಗಳ ವಿಷಯದಲ್ಲಿ ತುಂಬಾ ಪ್ರೀತಿಯನ್ನೂ ಕನಿಕರವನ್ನೂ ತೋರಿಸಿ ಅಕ್ಕಮ್ಮನಿಗೆ ದ್ರವ್ಯಸಹಾಯಮಾಡಿದರು

* * *

ರಾಜಧಾನಿಯ ಜನರಲ್ ಆಸ್ಪತ್ರೆಯಲ್ಲಿರುವ ಡಾಕ್ಟರ್ ಎಸ್ ಸುಬ್ಬರಾಯರು ಸರ್ಕಾರದವರ ಅಪ್ಪಣೆ ಪ್ರಕಾರ ಎಕ್ಸ್ ರೇಸ್ ಎಂಬ ನವೀನ ಏರ್ಪಾಡಿನ ಮೂಲಕ ರೋಗಿಗಳಿಗೆ ಚಿಕಿತ್ಸೆಮಾಡುವ ವಿಧಾನವನ್ನು ಕಲಿತು ಅಭ್ಯಾಸಮಾಡಿಕೊಂಡು ಬರುವುದಕ್ಕಾಗಿ ಉತ್ತರದೇಶದಲ್ಲಿರುವ ಡೀರಾ ಡೂನ್ ನಗರಕ್ಕೆ ಹೋಗಬರುವವರಾಗಿದಾರೆ ಇವರು ಮುಂದಿನ ಮಂಗಳವಾರ ರಾಜಧಾನಿಯಿಂದ ಅಲ್ಲಿಗೆ ಹೊರಡುತ್ತಾರೆಂದೂ, ವಾಪಸು ಬರುವುದಕ್ಕೆ ಸುಮಾರು ಮೂರು ತಿಂಗಳು ಹಿಡಿಯುವುದೆಂದೂ ಕೇಳುತ್ತೇವೆ

* * *

ಅಮೃತಸಾರದ ನಾ ಪನಲಾ ಕಂಪನಿಯ ಪರವಾಗಿ ಮ|| ಟಿ ಎಸ್ ಆರ್ ಅಯ್ಯರವರು ಮ| ಎಂ ಎಲ್ ನಾಗಣ್ಣನವರ ಮೇಲೆ ತಂದಿರುವ ಕ್ರಿಮಿನಲ್ ಮೊಕದ್ದಮೆಯು ಕಳೆದ ಶನಿವಾರ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬಂತು ಅಪರಾಧಿಯ ತರಫಿನ ಅಡ್ವೊಕೇಟ್ ಮ|| ಬಿ ಕೃಷ್ಣರಾಯರು ಆ ಮೊಕದ್ದಮೆಯಲ್ಲಿ ಕಂಡ ಎರಡು ಫಿರ್ಯಾದುಗಳನ್ನೂ ಬೇರೆಬೇರೆಯಾಗಿ ವಿಚಾರಣೆಮಾಡಬೇಕೆಂದು ಸೂಚಿಸಿದ್ದರ ಮೇಲೆ ಮ್ಯಾಜಿಸ್ಟ್ರೇಟರು ಅದೇ ಪ್ರಕಾರ ಬೇರೆಮಾಡಿ, ಈ ದಿನ ವಿಚಾರಣೆ ನಡೆಯತಕ್ಕದ್ದೆಂದು ಹೀರಿಂಗು ಇಟ್ಟರು ಫಿರ್ಯಾದಿಯ ತರಫು ಅಡ್ವೊಕೇಟ್ ಮ|| ಎಂ ಶ್ರೀನಿವಾಸಯ್ಯಂಗಾರ್ರು ವಕಾಲತ್ತನ್ನು ವಹಿಸುತ್ತಾರೆ

* * *

ಬೆಂಗಳೂರಿನಲ್ಲಿ ಮುನಿಸಿಪಲ್ ಕಮಿಷನರಾಗಿಯೂ ಆ|| ಮ್ಯಾಜಿಸ್ಟ್ರೇಟಾಗಿಯೂ ಇರುವ ಮ|| ಬಿ ಪಿ ವೆಂಕಟಸಾಮಿ ನಾಯುಡುಯವರು ಕಳೆದ ಭಾನುವಾರ ಯಲ್ಲಗೌಡನ ಪಾಳ್ಯದಲ್ಲಿ ಸುಮಾರು 300 ಮಂದಿ ಮಕ್ಕಳನ್ನು ಸೇರಿಸಿ ಅವರಿಗೆಲ್ಲಾ ತಿಂಡಿಪದಾರ್ಥಗಳನ್ನೂ ಆಟದ ಸಾಮಾನುಗಳನ್ನೂ ಪುಸ್ತಕ ಮುಂತಾದ್ದನ್ನೂ ಕೊಟ್ಟಿದ್ದಲ್ಲದೆ ಮ್ಯಾಜಿಕ್ ಲ್ಯಾಂಟ್ರನ್ ಚಿತ್ರಗಳನ್ನು ತೋರಿಸಿ ಸಂತೋಷಪಡಿಸಿದರು ಮತ್ತು ಅವರಿಗೆಲ್ಲಾ ಸನ್ಮಾರ್ಗದ ವಿಷಯದಲ್ಲೂ ವಿದ್ಯೆ ಕಲಿಯಬೇಕೆಂಬ ವಿಚಾರದಲ್ಲೂ ಬುದ್ಧಿವಾದಗಳನ್ನು ಹೇಳಿ ಕಳುಹಿಸಿಕೊಟ್ಟರು ಮಕ್ಕಳನ್ನು ಒಳ್ಳೇ ರೀತಿಯಲ್ಲಿ ಬೆಳಸುವುದಕ್ಕೆ ಅವರು ಮಾಡಿದ ಈ ಪ್ರೀತಿಪೂರ್ವಕವಾದ ಪ್ರೋತ್ಸಾಹಕಾರ್ಯವು ಸ್ತೋತ್ರಾರ್ಹವಾಗಿರುತ್ತದೆ

* * *

ರಾಜಧಾನಿಯ ಟ್ರಸ್ಟ್ ಬೋರ್ಡಿನ ಛೇರ್ಮನ್‌ರೂ, ಮ್ಯುನಿಸಿಪಲ್ ಕಮಿಷನರೂ ಆದ ಮ|| ಟಿ ಜಿ ಲಕ್ಷ್ಮೀನರಾಯರವರು ಸರ್ಕಾರದವರ ಅನುಮತಿಯ ಪ್ರಕಾರ ಬೊಂಬಾಯಿ, ಅಹಮದಾಬಾದು, ಪೂನಾ ನಗರಗಳಿಗೆ ಹೋಗಿ, ಆಯಾ ಪಟ್ಟಣಗಳಲ್ಲಿ ಯಾವಯಾವ ನಗರಪುರಾಭಿವೃದ್ಧಿ ಕಾರ್ಯಗಳನ್ನು ನಡಿಸುತ್ತಾರೆಂಬುವುದನ್ನು ನೋಡಿ ತಿಳಿದುಕೊಂಡು ಬರುವವರಾಗಿದಾರೆ ಇವರು ತಾ 18 ನೇ ಭಾನುವಾರ ರಾಜಧಾನಿಯಿಂದ ಹೊರಟು ಸುಮಾರು ಒಂದು ತಿಂಗಳಲ್ಲಿ ವಾಪಸು ಬರುತ್ತಾರೆಂದೂ, ಅದುವರೆಗೆ ಮ್ಯುನಿಸಿಪಾಲಿಟಿಯ ಮತ್ತು ಟ್ರಸ್ಟ್ ಬೋರ್ಡಿನ ಮುಖ್ಯವಾದ ಕಾಗದಪತ್ರಗಳನ್ನು ಅವರು ಹಾವಿರುವ ಸ್ಥಳಕ್ಕೇ ತರಿಸಿಕೊಂಡು ವ್ಯವಸ್ಥೆಮಾಡುತ್ತಾ ಬರುವರೆಂದೂ ಕೇಳುತ್ತೇವೆ

* * *

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಮ|| ಬಿ ಕೃಷ್ಣರಾಯರು ಮೈಸೂರು ಸ್ಟಾರ್ ಪತ್ರಿಕೆಯ ಸಂಪಾದಕರ ಮೇಲೆ ತಂದಿರುವ ಮಾನನಷ್ಟದ ಮೊಕದ್ದಮೆಯು ಕಳೆದ ಶನಿವಾರ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಪ್ರಾರಂಭವಾಯಿತು ಸಿಟಿ ಮ್ಯಾಜಿಸ್ಟ್ರೇಟ್ ಮ|| ಬಿ ಬಸವಾರಾಧ್ಯರವರಿಗೂ ಸ್ಟಾರ್ ಪತ್ರಿಕೆಯ ಸಂಪಾದಕರಿಗೂ ಮಿತ್ರತ್ವವಿರುವುದಾಗಿ ತಿಳಿದುಬಂದದ್ದರ ಮೇಲೆ ಫಿರ್ಯಾದಿ ತರಫಿನ ಅಡ್ವೊಕೇಟ್ ಮ|| ರಾಮಚಂದ್ರಯ್ಯನವರು ಈ ಮೊಕದ್ದಮೆಯ ದರ್ಯಾಫ್ತಿಯನ್ನು ಬೇರೆ ಕೋರ್ಟಿಗೆ ವರ್ಗಮಾಡಿಸಿಕೊಳ್ಳುವುದಾಗಿ ಮ್ಯಾಜಿಸ್ಟ್ರೇಟರಿಗೆ ಹೇಳಿಕೊಂಡದ್ದರಿಂದ ಅವರು ಸಮ್ಮತಿಪಟ್ಟು ತಾ 19 ಕ್ಕೆ ಹೀರಿಂಗು ಇಟ್ಟರು ಫಿರ್ಯಾದಿ ತರಫಿನ ಲಾಯರು ಅದೇ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅರ್ಜಿ ಹಾಕಿದರು ಅವರು ಮೊನ್ನೇ ದಿನ ವಿಚಾರಣೆ ನಡಿಸಿ, ಬೇರೆ ಕೋರ್ಟಿಗೆ ಮೊಕದ್ದಮೆಯನ್ನು ವರ್ಗಮಾಡುವ ವಿಷಯದಲ್ಲಿ ಆ ಪತ್ರಿಕೆಯ ಸಂಪಾದಕರ ಅಭಿಪ್ರಾಯವನ್ನು ತಿಳಿಯಲು ಅವರಿಗೆ ನೋಟೀಸು ಕೊಡಬೇಕೆಂದು ಹುಕುಂ ಮಾಡಿದಾರೆ

ಮೈಸೂರು ಗೆಜೆಟ್ ಸಂಗ್ರಹ

ಮಿ|| ಮುಸ್ತಾಫರ್ ಖಾನ್‌ರವರನ್ನು ಕೋಲಾರ್‌ಪೇಟೆ ಸಬ್ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ

ಮಿ|| ಸಿ ವಿ ನರಸಿಂಹಯ್ಯಂಗಾರ್ರು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ಚುನಾಯಿಸಲ್ಪಟ್ಟಿದಾರೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಅ|| ಸರ್ಜನ್ ಮಿ|| ಎಂ. ಜಗನ್ನಾಥಂಪಿಳ್ಳೆಯವರಿಗೆ ಜನವರಿ ತಾ 20 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಇವರು ವಾಪಸು ಬರುವ ತನಕ ಅ|| ಸರ್ಜನ್ ಮಿ|| ಸಿ ಅಪ್ಪಾದುರೈ ಮುದಲಿಯಾರ್ರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಮಾಡಲ್ಪಟ್ಟಿದಾರೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮಿ|| ಬಿ ಬಸವಾರಾಧ್ಯರವರಿಗೂ, ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮಿ| ಬಿ ಎಸ್ ರಾಜೋಜಿರಾಯರಿಗೂ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ, ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರವನ್ನೂ ವಹಿಸಲಾಗಿದೆ

ಕಳೆದ ಸೆಪ್ಟಂಬರ್ ತಾ 17 ರಿಂದ ಮುಂದೆ ಹೇಳುವವರನ್ನು ಸೀನಿಯರ್ ಅ|| ಕಮಿಷನರಾಗಿ ಖಾಯಂ ಮಾಡಿದೆ — ಮಿ|| ಗಳಾದ ಎಲ್. ಕೃಷ್ಣರಾಯರು, ಪಿ ಜಿ ಡಿಸೌಜಾಯವರು, ನಗರ್ ಸುಬ್ಬರಾಯರು

ಮಿ|| ಬಿ ರಾಮಸ್ವಾಮಯ್ಯನವರು ಮಿ|| ಕೆ ಕೃಷ್ಣಅಯ್ಯರವರಿಂದ ಕಡೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಡಿಸೆಂಬರ್ ತಾ 20 ರಲ್ಲಿ ವಹಿಸಿಕೊಂಡಿದಾರೆ

ಬೆಂಗಳೂರು ಡಿವೀಜನ್ ಸಬ್ ಅ|| ಇಂಜನಿಯರ್ ಮಿ|| ಎನ್ ಸುಬ್ಬರಾಯರಿಗೆ ಜನವರಿ ತಾ 3 ರಿಂದ ಮೂರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿನವರು 1ನೇ ಕ್ಲಾಸ್ ಸೂಪರ್‌ವೈಸರ್ ಮಿ|| ಸಿ ರಾಮಕೃಷ್ಣಯ್ಯನವರಿಗೆ ಆನರರಿ ಅ|| ಇಂಜನಿಯರ್ ಎಂಬ ಹೆಸರನ್ನು ದಯಪಾಲಿಸಿರುತ್ತಾರೆ ಇವರಿಗೆ ಡಿಸೆಂಬರ್ ತಾ 13 ರಿಂದ ತಿಂಗಳಿಗೆ 300 ರೂಪಾಯಿನಂತೆ ಸಂಬಳ ಬಡ್ತಿ ಮಾಡಲಾಗಿದೆ

ಶ್ರೀಮನ್ ಮಹಾರಾಜರವರ ಸರ್ಕೀಟು.

ಶಿವಮೊಗ್ಗಾ ಡಿಸ್ಟ್ರಿಕ್ಟು

ನಮ್ಮ ಶ್ರೀಮನ್ ಮಹಾರಾಜರವರು ಈಗ ಏರ್ಪಾಡಾಗಿರುವಂತೆ ಈ ದಿನ ರಾತ್ರಿ 9½ ಗಂಟೆಗೆ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ತರೀಕೆರೆಗೆ ದಯಮಾಡಿ, ಅಲ್ಲಿ ಬೆಳಗಾಗುವ ತನಕ ಗಾಡಿಯಲ್ಲೇ ಇದ್ದು, ನಾಳೆ ಬೆಳಿಗ್ಗೆ 7 ಗಂಟೆಗೆ ಮೋಟರುಗಳಲ್ಲಿ ಹೊರಟು 8 ಗಂಟೆಗೆ ಸಂತ್ವೇರಿಯನ್ನು ತಲುಪಿ, ಅಲ್ಲಿಂದ ಕುದುರೆ ಸವಾರಿಮಾಡಿಕೊಂಡು 10 ಗಂಟೆಗೆ ಕಲ್ಹತ್ತಿಬೆಟ್ಟವನ್ನು ಸೇರಿ ಒಂದು ದಿನ ಅಲ್ಲಿ ರಿಕಾಣಿಮಾಡುತ್ತಾರೆ ತಾ 18 ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಟಾಂಜಾನಿನ ಮೇಲೆ ಹೊರಟು ಸಾಯಂಕಾಲ 3 ಗಂಟೆಗೆ ದತ್ತಾತ್ರೇಯ ಪೀಠಕ್ಕೆ ಚಿತ್ತೈಸಿ ಆ ಪ್ರಾಂತ್ಯದಲ್ಲೆಲ್ಲಾ ಸಂಚಾರಮಾಡಿಕೊಂಡು ಸಾಯಂಕಾಲ 5½ ಗಂಟೆಗೆ ಅಲ್ಲಿಂದ ಹಿಂತಿರುಗಿ, ರಾತ್ರಿ 7 ಗಂಟೆಗೆ ತರೀಕೆರೆಗೆ ದಯಮಾಡಿ ಆರೋಗಣೆಯನ್ನು ತೀರಿಸಿಕೊಂಡು, ಅಲ್ಲಿ ಕಾದಿರುವ ಸ್ಪೆಷಲ್ ರೈಲನ್ನು ರಾತ್ರಿ 10 ಗಂಟೆಗೆ ಹತ್ತಿ ಬೆಂಗಳೂರನ್ನು ಕುರಿತು ಹೊರಟು ಬೆಳಗಿನ ಝಾವ 1½ ಗಂಟೆಗೆ ಬೆಂಗಳೂರು ತಲಪುವವರಾಗಿದಾರೆ ಸೋಮವಾರ ಬೆಳಿಗ್ಗೆ 6 ಗಂಟೆಗೆ ರೈಲ್ ಗಾಡಿಯಿಂದ ಅರಮನೆಗೆ ಚಿತ್ತೈಸುವರು

ಚಿತ್ರದುರ್ಗದ ಡಿಸ್ಟ್ರಿಕ್ಟು

ಶ್ರೀಮನ್ಮಹಾರಾಜರವರು ಈ ತಿಂಗಳು ತಾ 29 ನೇ ಗುರುವಾರ ಮಧ್ಯಾಹ್ನ 11½ ಗಂಟೆಗೆ ಬೆಂಗಳೂರಿನಿಂದ ಮೋಟರಿನಲ್ಲಿ ಹೊರಟು ತುಮಕೂರು, ಸೀರ್ಯ, ಹಿರಿಯೂರಿನ ಮೇಲೆ ಹಾಸಿ ಸಾಯಂಕಾಲ 6 ಗಂಟೆಗೆ ಮಾರಿಕಣಿವೆಯನ್ನು ತಲಪುತ್ತಾರೆ ಮಧ್ಯೆ ಸೀರ್ಯದ ಟ್ರಾವಲರ್ಸ್ ಬಂಗಲೆಯಲ್ಲಿ ಅವರಿಗೆ ಫಲಾಹಾರ ವಿಳೆಯುವುದು ಮಹಾರಾಜರವರು ಎರಡು ದಿನ (ಅಂದರೆ, ಶುಕ್ರವಾರವೂ ಶನಿವಾರವೂ) ಮಾರಿಕಣಿವೆಯಲ್ಲಿ ತಂಗಿ ಜಮೀನುಗಳಿಗೆ ಬೇರೆಬೇರೆ ತಾಕುಗಳಿಗೆ ನೀರು ಹಾಯಿಸುವ ಹೊಸ ವಿಧಾನವನ್ನು ಪರಾಂಬರಿಸಿಕೊಂಡು, ಫೆಬ್ರವರಿ ತಾ 1 ನೇ ಭಾನುವಾರ 11½ ಗಂಟೆಗೆ ಅಲ್ಲಿಂದ ವಾಪಸು ಮೋಟರಿನಲ್ಲಿ ಹೊರಟು ಹಿರಿಯೂರು, ಸೀರ್ಯ, ತುಮಕೂರು ಮೂಲಕ ಪ್ರಯಾಣಮಾಡಿಕೊಂಡು ರಾತ್ರಿ 8 ಗಂಟೆಗೆ ಬೆಂಗಳೂರು ಅರಮನೆಯನ್ನು ತಲಪುವಂತೆ ಏರ್ಪಾಡಾಗಿದೆ ದಾರಿಯಲ್ಲಿ ಆ ದಿನ ತುಮಕೂರು ಡೆಪ್ಟಿ ಕಮಿಷನರವರ ಬಂಗಲೆಯಲ್ಲಿ ಮಹಾರಾಜರವರು ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಫಲಾಹಾರವನ್ನು ಸ್ವೀಕರಿಸುವರು.

ಬಾತ್ಮಿದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪೋಸ್ಟಿನ ಅಕ್ರಮ — ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಪೋಸ್ಟು ತಿಮ್ಮಪ್ಪನಹಳ್ಳಿ ಗ್ರಾಮದ ರೈತರು ಸೇರಿ ಪೋಸ್ಟಿನ ಡಿಲಿವರಿ ಏರ್ಪಾಡು ಸರಿಯಾಗಿ ನಡೆಯುವುದಿಲ್ಲವೆಂದೂ, ಕಾಗದಗಳೂ ನ್ಯೂಸ್ ಪೇಪರುಗಳೂ ಬಹಳ ನಾವಕಾಶವಾಗಿ ತಲಪೋಣದರಿಂದ ಅನೇಕ ವೇಳೆ ವಿಳಾಸದಾರರಿಗೆ ಕಷ್ಟ ನಷ್ಟಗಳು ಸಂಭವಿಸುತ್ತವೆಂದೂ, ಇದನ್ನೆಲ್ಲಾ ತಿದ್ದಿ ಕ್ರಮಪಡಿಸಬೇಕೆಂದೂ ಇಲಾಖೆಯವರಿಗೆ ಗ್ರಾಮಸ್ಥರು ಅರ್ಜಿ ಬರೆದುಕೊಂಡಾಗ್ಯೂ ಇನ್ನೂ ಅವರು ತನಿಖೆಮಾಡಿ ಕ್ರಮಪಡಿಸಲಿಲ್ಲವೆಂದೂ ಅಲ್ಲಿನ ಒಬ್ಬ ಬಾತ್ಮೀದಾರರು ಬರೆಯುತ್ತಾರೆ ಮತ್ತು ಪೋಸ್ಟ್ ಜವಾನನು 4-6 ವಾರದ ಪತ್ರಿಕೆಗಳನ್ನು ಒಂದೇ ಸಲ ಬಟವಡೆಮಾಡುತ್ತಾನಂತೆ ಅಂಚೆ ಇಲಾಖೆಯವರು ಇದನ್ನು ಕ್ರಮಪಡಿಸದಿದ್ದರೆ ಗ್ರಾಮಸ್ಥರಲ್ಲಿ ಇಲಾಖೆಗೆ ಒಳ್ಳೇ ಹೆಸರೂ ನಂಬಿಕೆಯೂ ಉಂಟಾಗಲಾರದು —ಎಡಿ]

ಕರೆಸ್ಪಾಂಡೆನ್ಸ್.

ಕಂಪನಿಯ ವಿಚಾರದಲ್ಲಿ ಎಚ್ಚರಿಕೆ.

ಅಯ್ಯಾ,

ಬಸವರಾಜ ಅಂಡ್ ಕಂಪನಿ, ನಂ 133 ಏಲಾ ಕಂದಪ್ಪನ್ ಬೀದಿ, ಮದ್ರಾಸು, ಇವರು ತಮ್ಮ ಕ್ಯಾಟಲಾಗಿನಲ್ಲಿ ಒಂದು ಡಜನ್ ಬಿ ಸಿ ಸುಗಂಧ ನಶ್ಯದಪುಡಿ ಡಬ್ಬಿಗಳನ್ನು ತರಿಸಿಕೊಂಡರೆ ಒಂದು ರೈಲ್ವೆ ಟೈಂ ವಾಚನ್ನು ಬಹುಮಾನ ಕಳುಹಿಸುತ್ತೇವೆಂದು ಪ್ರಕಟಿಸಿದ್ದರು ನಾನು ಅದನ್ನು ಓದಿ ನಿಜವೆಂದು ತಿಳಿದು ತಾ 8 9 12 ರಲ್ಲಿ ಈ ಬಹುಮಾನಕ್ಕಾಗಿ ಆ ಕಂಪನಿಗೆ ಒಂದು ಕಾಗದ ಹಾಕಿದೆನು ಅವರು ತಾ 10 8 12 ರಲ್ಲಿ ಭಾಂಗಿಮಾಡಿ ಕಳುಹಿಸಿದ್ದು ನನಗೆ ಅದೇ ತಾ 11 ರಲ್ಲಿ ತಲಪಿತು ಪೋಸ್ಟು ಮ್ಯಾನಗೇ ಮೊದಲಾದ ಜನಗಳು ನಮ್ಮ ಮನೆಯಲ್ಲಿರುವಾಗ ಆ ಭಾಂಗಿ ಒಡೆದು ನೋಡಲಾಗಿ ಅದರಲ್ಲಿ ನಶ್ಯದ ಡಬ್ಬಿಗಳಿದ್ದವು ಅವರು ಪ್ರಕಟಿಸಿದ ರೈಲ್ವೆ ಟೈಂ ವಾಚನ್ನು ರವಾನಿಸದೆ ಬಜಾರುಗಳಲ್ಲಿ 2½ ಆಣೆಗೆ ಮಾರುವ ಮಕ್ಕಳು ಮಕ್ಕಳಾಡುವ ಮುರುಕಲು ಗಡಿಯಾರವನ್ನು ಆ ಭಾಂಗಿಯಲ್ಲಿಟ್ಟಿದ್ದರು ನನಗೆ ಈ ರೀತಿ ಮೋಸ ಮಾಡಿರುತ್ತಾರೆ. ಇನ್ನು ಮುಂದೆ ಅವರಲ್ಲಿ ವ್ಯಾಪಾರ ಮಾಡತಕ್ಕವರು ಎಚ್ಚರಿಕೆಯಾಗಿರಬೇಕಾಗಿ ಕೋರುತ್ತೇನೆ

ಜಿ ಎಸ್. ವೆಂಕಟರಮಣ ಮೂರ್ತಿ,

ನಂ, 13, ಸುಂದರೈಯರ್ ಬೀದಿ, ಹಳೇ ಅಗ್ರಹಾರ, ಮೈಸೂರು.

ಪೌರಕಾರ್ಯ ನಿರ್ವಾಹಕ ಸಂಘಗಳಿಗೆ ಸೂಚನೆ

ಅಯ್ಯಾ,

ಪ್ಯಾರಿಸ್ ಪಟ್ಟಣದ ನಿರ್ವಾಹಕ ಸಂಘವು ಮಾಡುತ್ತಿರುವ ಕೆಲಸವನ್ನು ನೋಡಿ ಅವರ ಪ್ರೀತಿಭರಿತವಾದ ಮನೋಭಾವವು ನಮ್ಮಲ್ಲಿಯೂ ಉದಯಿಸಲೆಂದು ಈ ಲೇಖನವನ್ನು ಬರೆದಿರುತ್ತೇನೆ ಪ್ಯಾರಿಸ್ ಪಟ್ಟಣದಲ್ಲಿ ಬಡಮಕ್ಕಳಿಗೆ ಸಹಾಯಮಾಡುವುದಕ್ಕೆ ಕಾರ್ಯನಿರ್ವಾಹಕ ಸಂಘದವರು ಅನೇಕ ಏರ್ಪಾಡುಗಳನ್ನು ಮಾಡಿರುತ್ತಾರೆ ಆರೋಗ್ಯವಾಗಿರುವುದಕ್ಕೆ ನಿರ್ಮಲವಾದ ಗಾಳಿಯೂ, ಅಂಗಸಾಧನೆಯೂ ಆವಶ್ಯಕ ಆದರೆ ಬಡಮಕ್ಕಳು ಯಾವಾಗಲೂ ನಿರ್ಮಲವಾದ ಗಾಳಿಯಲ್ಲಿ ಆಟಗಳನ್ನಾಡುವುದಕ್ಕೆ ಆಗುವುದಿಲ್ಲ ಆದುದರಿಂದ ಈಗ ಪ್ಯಾರಿಸ್ ಪಟ್ಟಣದಲ್ಲಿ ಈ ಬಡ ಮಕ್ಕಳನ್ನು ರಜಾ ದಿವಸಗಳಲ್ಲಿ ಹೊರಕ್ಕೆ ಕರೆದುಕೊಂಡು ಹೋಗುವುದಕ್ಕೂ, ಬಲಬರತಕ್ಕ ಆಟಗಳನ್ನು ಆಡಿಸುವುದಕ್ಕೂ ಜನರನ್ನು ನೇಮಿಸಿರುತ್ತಾರೆ, ಇದಲ್ಲದೆ, ಕಾಯಿಲೆಯಾಗಿರುವ ಮಕ್ಕಳನ್ನು ಬೇಸಗೆಯಲ್ಲಿ ಹಳ್ಳಿಗಳಿಗೆ ಕಳುಹಿಸುವುದಕ್ಕೂ ಪೌರಕಾರ್ಯನಿರ್ವಾಹಕ ಸಭೆಯವರು ಪ್ರತಿವರ್ಷವೂ ಹಣವನ್ನು ಕೊಡುತ್ತಾರೆ ಪ್ರತಿಯೊಂದು ಶಾಲೆಯಲ್ಲಿಯೂ ಪ್ರತಿ ಹುಡುಗನೂ ಅಂಗಸಾಧನೆ ಮಾಡುವಂತೆ ಕಾರ್ಯನಿರ್ವಾಹಕ ಸಭೆಯವರೂ, ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳೂ ನಿರ್ಬಂಧ ಮಾಡಿರುತ್ತಾರೆ ಕೈಯಿಂದ ಆಯುಧಗಳನ್ನು ಉಪಯೋಗಿಸುವುದನ್ನು ಕಲಿಯುವುದರಿಂದ ಜ್ಞಾನವು ಹೆಚ್ಚುತ್ತೆಂಬುವೆನ್ನು ತಿಳಿದುಕೊಂಡು ಗಂಡುಮಕ್ಕಳಿಗೆ ಕೈಗಾರಿಕೆಯನ್ನು ಕಲಿಸುವುದಕ್ಕೂ ಹೆಣ್ಣುಮಕ್ಕಳಿಗೆ ಕಸೂತಿ ಕೆಲಸವನ್ನು ಕಲಿಸುವುದಕ್ಕೂ ಶಾಲೆಗಳನ್ನು ಸ್ಥಾಪಿಸಿರುತ್ತಾರೆ. ಪ್ರತಿಯೊಂದು ಪಾಠಶಾಲೆಗಳಿಗೂ ಹೋಗಿ ಅಲ್ಲಿ ಇರತಕ್ಕ ಮಕ್ಕಳ ಆರೋಗ್ಯ ಸ್ಥಿತಿಯನ್ನು ಪರೀಕ್ಷಿಸುವುದಕ್ಕೂ ಅಂಟುರೋಗಗಳು ಬಾರದಹಾಗೆ ನೋಡಿಕೊಳ್ಳುವುದಕ್ಕೂ ವೈದ್ಯರನ್ನು ನೇಮಿಸಿರುತ್ತಾರೆ ತಂದೆತಾಯಿಗಳು ಕೆಲಸಕ್ಕೆ ಹೋಗಿರುವಾಗ ಅವರ ಚಿಕ್ಕಮಕ್ಕಳನ್ನು ನೋಡಿಕೊಳ್ಳುವುದಕ್ಕೋಸ್ಕರ ಒಂದು ಸಭೆಯು ಏರ್ಪಾಡಾಗಿದೆ ಶಾಲೆಯನ್ನು ಸಾಯಂಕಾಲ 4 ಗಂಟೆಗೆ ಮುಚ್ಚಿದರೆ ಮಕ್ಕಳನ್ನು ಅವರ ತಂದೆತಾಯಿಗಳು ಬರುವವರೆಗೂ ಶಾಲೆಯಲ್ಲಿಯೇ ಆಟವಾಡಿಸುವುದಕ್ಕೂ ಹೊತ್ತಿಗೆ ಸರಿಯಾಗಿ ಮನೆಗೆ ಕರೆದುಕೊಂಡುಹೋಗಿ ಬಿಡುವುದಕ್ಕೂ ಕೆಲವು ಉಪಾಧ್ಯಾಯರನ್ನು ನೇಮಿಸಿರುತ್ತಾರೆ ಕೆಲವು ಸ್ಥಳಗಳಲ್ಲಿ ಮಕ್ಕಳನ್ನು ರಾತ್ರಿಯೂ ಕೂಡ ನೋಡಿಕೊಳ್ಳುತ್ತಾರೆ ಈ ಸಭೆಯು 1889ನೇ ವರ್ಷದಲ್ಲಿ ಪ್ರಾರಂಭವಾಯಿತು 1891ನೇ ವರ್ಷದಲ್ಲಿ 4,318 ಇಂಥಾ ಮಕ್ಕಳೂ, ಇವರನ್ನು ನೋಡಿಕೊಳ್ಳುವುದಕ್ಕೆ 73 ಜನ ಉಪಾಧ್ಯಾಯರೂ ಇದ್ದರು ಮಕ್ಕಳಿಗೆ ಒಳ್ಳೆಯ ಆಹಾರವು ಬೇಕಾದಷ್ಟು ಇಲ್ಲದಿದ್ದರೆ ಕೆಲಸಮಾಡುವುದು ಕಷ್ಟ ಆದರೆ ಬಡಮಕ್ಕಳಿಗೆ ಮಧ್ಯಾಹ್ನದ ಊಟಕ್ಕೆ ಅನುಕೂಲವಿರುವುದಿಲ್ಲ ಇದನ್ನು ತಿಳಿದು ಒಂದು ಸಭೆಯವರು ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಊಟಕ್ಕೆ ಏರ್ಪಾಡುಮಾಡಿರುತ್ತಾರೆ ಹಣಕೊಡುವುದಕ್ಕೆ ಶಕ್ತಿ ಇದ್ದವರಿಗೆ ಒಂದು ಊಟಕ್ಕೆ ಒಂದು ಆಣೆ ಪ್ರಕಾರವೂ, ಹಣವಿಲ್ಲದವರಿಗೆ ಧರ್ಮಾರ್ಥವಾಗಿಯೂ ತಿಂಡಿಕೊಡುತ್ತಾರೆ ಆಹಾರಕೊಡುವುದರಲ್ಲಿ ಇಂಥಾವರು ಹಣವನ್ನು ಕೊಡುತ್ತಾರೆಂಬುದೂ, ಇಂಥಾವರು ಕೊಡುವುದಿಲ್ಲವೆಂಬುದೂ ತಿಳಿಯದಹಾಗೆ ಸಭೆಯವರು ಏರ್ಪಾಡು ಮಾಡಿರುತ್ತಾರೆ ಮಕ್ಕಳಿಗೆ ಮಧ್ಯಾಹ್ನದಲ್ಲಿ ಹೀಗೆ ಊಟಮಾಡಿಸುವ ಪದ್ಧತಿಯು 1883 ಪ್ರಾರಂಭವಾಯಿತು ಇದು ನ್ಯಾಯವಾಗಿಯೂ ಬಡವರಿಗೆ ಸಹಾಯವಾಗಿಯೂ ಇರುವುದರಿಂದ ಇದು ಎಂದಿಗೂ ನಿರಾಕರಿಸತಕ್ಕದ್ದಲ್ಲ ಏಕೆಂದರೆ ಹುಡುಗರಿಗೆ ಆಹಾರವಿಲ್ಲದೆ ಒಳ್ಳೆ ಪುಸ್ತಕಗಳನ್ನು ಕೊಟ್ಟು ಚೆನ್ನಾಗಿ ಪಾಠಹೇಳಿಕೊಟ್ಟರೆ ಏನೂ ಪ್ರಯೋಜನ ಉಂಟಾಗುವುದಿಲ್ಲ ಹೀಗೆ ಊಟಮಾಡಿಸುವುದಕ್ಕೆ ಅವರು ಚಂದಾ ಎತ್ತಿ ಹಣವನ್ನು ಸಂಪಾದಿಸುತ್ತಾರೆ 30 ಅಥವಾ 50 ರೂಪಾಯಿ ಕೊಟ್ಟವರು ಸಂಘದ ಮೆಂಬರಾಗುವರು ಬಡಮಕ್ಕಳ ಮನೆಯು ಯಾವ ಸ್ಥಿತಿಯಲ್ಲಿದೆ ಎಂಬುದನ್ನು ವಿಚಾರಿಸುವುದಕ್ಕೆ ಒಂದು ಸಭೆಯು ಏರ್ಪಾಡಾಗಿದೆ ಮಕ್ಕಳಿಗೆ ಕಾಲಿಗೆ ಜೋಡುಗಳಿಲ್ಲದಿದ್ದರೆ ಜೋಡುಗಳನ್ನೂ, ಬಟ್ಟೆಗಳಿಲ್ಲದಿದ್ದರೆ ಬಟ್ಟೆಗಳನ್ನೂ ಈ ಸಭೆಯವರು ಒದಗಿಸುತ್ತಾರೆ

ಬೆಂಗಳೂರು ಸಿಟಿ — ಎಂ ಜಿ ಆರ್

...ಂದ ಕೊಡ್ಡೆ ಆ ಕರೆಯ ರೊಚ್ಚೆಲ್ಲಾ ಇದಕ್ಕೆ ಸೇರುತ್ತದೆ ಇದೇ ನೀರು ಊ...ಲ್ಲಾ ಕುಡಿಯುವರು ಅಲ್ಲಿ ಯಾರೂ ಮುಖ ಕೈಕಾಲುಗಳನ್ನೂ, ಮುಸುರೆ...ನ್ನೂ ತೊಳೆಯ ಬಾರದೆಂದು ಕಾವಲು ಇಟ್ಟಿದ್ದಾರೆ ಆದರೂ ಅನೇಕರು ...ಲ್ಲಿಯೇ ತೊಳೆಯುವರು ಈ ಕಾವಲು ನಿಷ್ಪಕ್ಷಪಾತವಾಗಿ ನಡೆಯುವದಿಲ್ಲ ...ವುಗಳನ್ನೆಲ್ಲಾ ಕ್ರಮಪಡಿಸದೆ ಹೋದರೆ ಆರೋಗ್ಯ ಹ್ಯಾಗೆ ಇರುತ್ತೋ ಗೊತ್ತಿ... ಈಗ ಹೊಸದಾಗಿ ಬಂದಿರುವ ನಮ್ಮ ಅಮಲ್ದಾರರು ಈ ವಿಚಾರಗಳನ್ನೆಲ್ಲಾ ...ಮ್ಮ ಚಿತ್ತಕ್ಕೆ ತಂದುಕೊಂಡು ತಕ್ಕ ಏರ್ಪಾಟುಗಳನ್ನು ಮಾಡಿ ಪ್ರಜೆಗಳ ಕ್ಷೇ...ವನ್ನು ಕಾಪಾಡಿ ಕೀರ್ತಿಯನ್ನು ಸಂಪಾದಿಸಿಕೊಳ್ಳುವರೆಂದು ನಿರೀಕ್ಷಿಸುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು

ಮಾಮೋರಾ ಎಂಬ ಜಹಜು 90,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ

* * *

ಕಾಶೀ ಪಟ್ಟಣದಲ್ಲಿ ಸ್ಥಾಪಿಸಲ್ಪಡುವ ಹಿಂದೂ ಸರ್ವವಿದ್ಯಾನಿಲಯದ (ಯೂನಿವರ್ಸಿಟಿ) ಫಂಡಿಗೆ ಇದುವರೆಗೆ 11,60,961 ರೂಪಾಯಿ ಚಂದಾ ಕೊಡಿರುತ್ತದೆ

* * *

ಹೈದರಾಬಾದ್ ಸಂಸ್ಥಾನದಲ್ಲಿ ಗುಪ್ತಪೊಲೀಸ್ ಇಲಾಖೆಯನ್ನು ಕಳೆದ ...ರ ಪ್ರಾರಂಭ ಮಾಡಿದರು ಈ ಬಾಬಿನಲ್ಲಿ 13 ಮಂದಿ ಗಟ್ಟಿಗರನ್ನು ಸೇರಿಸಿ...ತ್ತಾರೆ

* * *

ಸಿಂಲಾ ಪಟ್ಟಣದಿಂದ 300 ಮೈಲಿ ಸುತ್ತಿನಲ್ಲಿಲ್ಲೋ ಕಳೆದ ಸೋಮವಾರ ...ಗ್ಗೆ 9½ ಗಂಟೆಯಲ್ಲಿ ಭೂಕಂಪವಾದಂತೆ ಅಲ್ಲಿಟ್ಟಿರುವ ಯಂತ್ರದ ಮೂಲಕ ...ಗು ಬಂದಿದೆ

* * *

ಕಲ್ಕತ್ತಾ ಪಟ್ಟಣದಲ್ಲಿ ಮೌರ್ಭಂಗ್ ಮಹಾರಾಜರವರ ಕುಮಾರನು ...ಬಂದೂಕಿನೊಳಗಿದ್ದ ಗುಂಡನ್ನು ತೆಗೆಯುತ್ತಿದ್ದಾಗ ಅದು ಅಕಸ್ಮಾತ್ತಾಗಿ ಹಾರಿ...ಕು ಕುಮಾರನ ಕಾಲಿಗೆ ಗುಂಡು ತಗುಲಿ ಗಾಯವಾದದ್ದರಿಂದ ಈಗ ಅವನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದಾರೆ

* * *

ಕಲ್ಕತ್ತಾ ಪಟ್ಟಣದಲ್ಲಿ ರಾಯ ಬದ್ರಿದಾಸ್ ಬಹದೂರ್ ಯವರ ಬಾಬತು 19,000 ರೂಪಾಯಿನ ವಜ್ರದ ಆಭರಣವು ಕಳುವಾಯಿತು ಪೊಲೀಸಿನವರು ಒಬ್ಬ ಜವಾನನನ್ನೂ, ಅಂಚೆ ಜವಾನನನ್ನೂ ದಸ್ತಗಿರಿ ಮಾಡಿದಾಗ ಅವರ ಬಳಿ ಕೆಲವು ವಜ್ರಗಳು ಸಿಕ್ಕಿದವು ಇನ್ನೂ ತನಿಖೆ ಮಾಡುತ್ತಿದ್ದಾರೆ

* * *

ಮುಂದಿನ ಮಾರ್ಚಿ ತಿಂಗಳಲ್ಲಿ ವೈಸ್‌ರಾಯಿ ಪ್ರಭುಗಳು ಒಂದು ಪ್ರಖ್ಯಾತವಾದ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಲು ಬೊಂಬಾಯಿಗೆ ದಯಮಾಡುವರು ಆಗ್ಗೆ ಅವರಿಗೆ ಬೊಂಬಾಯಿ ಮ್ಯುನಿಸಿಪಾಲಿಟಿಯವರು ದಿವ್ಯವಾದ ಔತನವನ್ನು ಮಾಡಬೇಕೆಂದು ತೀರ್ಮಾನಮಾಡಿ ಏರ್ಪಾಡು ಮಾಡುತ್ತಿದ್ದಾರೆ

* * *

ಮದರಾಸ್ ಆಧಿಪತ್ಯದಲ್ಲಿರುವ ಪ್ರಥಮ (ಎಲಿಮೆಂಟರಿ) ಪಾಠಶಾಲೆಗಳ ವಿದ್ಯಾರ್ಥಿಗಳಿಗೆ ಕೈತೋಟಗಳನ್ನು ಕಲ್ಪಿಸುವುದಕ್ಕೂ, ಅವುಗಳಿಗೆ ಬೇಕಾಗುವ ಆದುವ ಬೀಜ ಮುಂತಾದವುಗಳನ್ನು ಕೊಂಡು ತರಿಸುವುದಕ್ಕೂ ಆ ಸರಕಾರದವರು 20,000 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹಂಚಿ ಕೊಟ್ಟಿದ್ದಾರೆ

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಾಯಿತಟ್ಟಿ ಎಂಬ ಊರಿನಲ್ಲಿ ಸರ್ಕಸ್ ಕಂಪನಿ ಮ್ಯಾನೇಜರ ಹುಡುಗನು ಆ ಕಂಪನಿಯವರು ಬೋನಿನಲ್ಲಿಟ್ಟುಕೊಂಡಿರುವ ಸಿಂಹದ ಬಳಿಗೆ ಹೋದಾಗ ಅದು ಅವನನ್ನು ಕಚ್ಚಿ ಪರಚಿತು ಆ ಹುಡುಗನಿಗೆ ಸ್ಮರಣೆ ತಪ್ಪಿ ಚಿಕಿತ್ಸೆಗೆ ಆಸ್ಪತ್ರೆಗೆ ಸಾಗಿಸಿದರೂ ಅಲ್ಲಿ ನಾಸಿಯಾಗದೆ ಮೃತಪಟ್ಟನು

* * *

ಬರ್ಮಾ ಆಧಿಪತ್ಯಕ್ಕೆ ಸೇರಿದ ದಳ್ವಾ ಎಂಬ ಊರಿನಲ್ಲಿ ಒಂದು ಟೀ ಅಂಗಡಿಯಲ್ಲಿ ಕಳೆದ ವಾರ ಬೆಂಕಿಬಿದ್ದು, ಉರಿಯು ಊರಿಗೆಲ್ಲಾ ವ್ಯಾಪಿಸಿಕೊಂಡು ಒಂದು ಲಕ್ಷ ರೂಪಾಯಿ ನನಕ ಮನೆಮಠಾದಿಗಳೂ ಆಸ್ತಿಪಾಸ್ತಿಗಳೂ ಸುಟ್ಟುಹೋದವು ಸುಮಾರು 1 500 ಪ್ರಜೆಗಳು ಎಲ್ಲವನ್ನೂ ಕಳೆದುಕೊಂಡು ಸಂಕಟಪಡುತ್ತಿದ್ದಾರೆ

* * *

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಬಂಡಲ್‌ಖಂಡ್ ಡಿಸ್ಟ್ರಿಕ್ಟಿನಲ್ಲಿ ಕ್ಷಾಮಪ್ರಾಪ್ತವಾಗಿದೆ ಝಾನ್ಸಿ, ಹಮೀರ್‌ಪುರ, ಬಾಂಡಾ ಈ ಸ್ಥಳಗಳಲ್ಲಿ ರಿಲೀಫ್ ಕಾಮಗಾರಿಗಳನ್ನೂ ಧರ್ಮಸತ್ರಗಳನ್ನೂ ಇಟ್ಟು ನಡೆಸುತ್ತಿದ್ದಾರೆ ಈಗ ಒಟ್ಟು 15,770 ಜನರು ಕಾಮಗಾರಿಗಳಲ್ಲೂ ಸತ್ರಗಳಲ್ಲೂ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ

* * *

ಬರ್ಮಾ ಆಧಿಪತ್ಯದಲ್ಲಿ ರಾಲ್‌ಸ್ಟನ್ ಎಂಬೊಬ್ಬ ಚಟ್ಟೆಗಾರನೂ ಇಬ್ಬರು ಬರ್ಮೀಯರೂ ಸೇರಿ ಒಬ್ಬ ಹೆಂಗಸಿನ ಮನೆಗೆ ನುಗ್ಗಿ ದವಸಧಾನ್ಯಾದಿಗಳನ್ನೂ ಬಟ್ಟೆಬರೆಗಳನ್ನೂ ಸುಟ್ಟುಹಾಕಿ ಆಕೆಯ ನಗನಾಣ್ಯಗಳನ್ನೆಲ್ಲಾ ಹೊತ್ತುಕೊಂಡು ಹೋದರು ಕಳೆದ ವಾರ ಚೀಫ್ ಕೋರ್ಟಿನಲ್ಲಿ ಅವರಿಗೆ ತಲಾ ಹತ್ತು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿತು

* * *

ಬರ್ಮಾ ಆಧಿಪತ್ಯಕ್ಕೆ ಸೇರಿದ ಮೇಮಿಯೋ ಎಂಬ ಸ್ಥಳದಲ್ಲಿ ಕಳೆದ ವಾರ ಬಹು ಅಪೂರ್ವವಾದ ಚಳಿ ಪ್ರಾಪ್ತವಾಯಿತು ಇಂಥಾ ಚಳಿಯನ್ನು ಇಲ್ಲಿ ಹಿಂದೆ ಯಾರೂ ಅನುಭವಿಸಿದಲಿಲ್ಲ ಕಳೆದ ಗುರುವಾರ ಮಧ್ಯಾಹ್ನ 4 ಗಂಟೆ ಸಮಯದಲ್ಲಿ ಆ ಪಟ್ಟಣದೊಳಗೆ ಭೂಕಂಪವುಂಟಾಗಿ ಅರ್ಧ ನಿಮಿಷದ ತನಕ ಭೂಮಿಯು ಅಲುಗಿತು

* * *

ಕಳೆದ ತಾ 3 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 6,896 ಜನರಿಗೆ ಪ್ಲೇಗ್ ಉಪದ್ರ ತಗಲಿ 5,971 ಮರಣಗಳಾದವು ಇದರ ಕಂಡಿಕೆ ಹ್ಯಾಗೆಂದರೆ—ಬೊಂಬಾಯಿ ಆಧಿಪತ್ಯ 570, ಮದರಾಸ್ 163, ಬೇಹಾರ್ 1,078, ಸಂಯುಕ್ತ ಆಧಿಪತ್ಯಗಳು 3,040, ಪಂಜಾಬ್ 181, ಬರ್ಮಾ 86, ಮೈಸೂರು 108, ಹೈದರಾಬಾದ್ 106, ರಾಜಪುಟಾನಾ 37

ಡೆಪ್ಯುಟಿ ಕಮಿಷನರ್‌ರೂ, ಅವರ ಕೈಕೆಳಗಿನ ಇತರ ದೊಡ್ಡ ಅಧಿಕಾರಿಗಳೂ ಗ್ರಾಮಾಂತರಗಳ ಮೇಲೆ ಸಂಚಾರ ಹೋದಾಗ ಆಯಾ ಸ್ಥಳದ ಮುಖಂಡರನ್ನು ಕರಸಿಕೊಂಡು ಅವರಿಗೆ ಇರುವ ಕಷ್ಟನಷ್ಟಗಳನ್ನೂ ಅನನುಕೂಲಗಳನ್ನೂ ವಿಚಾರಿಸಿ ತಿಳಿದು ಅಂಥವುಗಳನ್ನು ಪರಿಹರಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಎಲ್ಲಾ ಅಧಿಕಾರಿಗಳಿಗೂ ತಿಳಿಸಿರುತ್ತಾರೆ

* * *

ಸತ್ಯಮಂಗಲದ ಮಿರಾಸೆದಾರನಾದ ಲಕ್ಷ್ಮಣ ಅಯ್ಯರೆಂಬುವನು ತನ್ನ ಒಂದು ಕ್ರಿಮಿನಲ್ ಮೊಕದ್ದಮೆಯು ವಲಂಗಿಮನದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿದ್ದಾಗ ಮ್ಯಾಜಿಸ್ಟ್ರೇಟಿಗೆ 100 ರೂಪಾಯಿನ ಕರೆನ್ಸಿ ನೋಟನ್ನು ಲಂಚವಾಗಿ ಕಳುಹಿಸಿದ್ದು ರುಜುವಾತಾದದ್ದರಿಂದ ಆ ಅಯ್ಯರಿಗೆ ಒಂಭತ್ತು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು ಈಗ ಅವನು ಅದರ ಮೇಲೆ ಅಪೀಲ್ ಮಾಡಿರುತ್ತಾನೆ

* * *

ಕಳೆದ ಸೋಮವಾರ ಬೆಳಗಿನ ಝಾಮದ 2½ ಗಂಟೆ ಹೊತ್ತಿನಲ್ಲಿ ಪೂರ್ವ ಬಂಗಾಳ ಸ್ಟೇಟ್ ರೈಲ್ವೆಯಲ್ಲಿ ಕತೆಯಾರ್ ಡಿಸ್ಟ್ರಿಕ್ಟಿಗೆ ಸೇರಿದ ಕರಿಯಾಲಿ ಎಂಬ ಸ್ಟೇಷನ್ನಲ್ಲಿ ಎರಡು ರೈಲ್‌ಗಾಡಿಗಳು ಎದುರು ಬದರಾಗಿ ಬಂದು ಬಡಿದು ಅನಾಹುತವಾಯಿತು ದೇವರ ದಯದಿಂದ ಪ್ರಯಾಣಿಕರ್‍ಯಾರಿಗೂ ಅಪಾಯವೇನೂ ಸಂಭವಿಸಲಿಲ್ಲ ಮೂರನೇ ತರಗತಿಯ ಎರಡು ಗಾಡಿಗಳು ಮಾತ್ರ ಒಡೆದು ಕೆಟ್ಟುಹೋದವು

* * *

ನೇಪಾಳದ ಮಹಾರಾಜರವರು ಲಂಡನ್ ಪಟ್ಟಣದ ಬ್ರಾಮ್‌ಟನ್ ಆಸ್ಪತ್ರೆಯಲ್ಲಿ ಕ್ಷಯರೋಗದ ಪೂರ್ವೋತ್ತರವನ್ನೂ ಅದರ ಪರಿಹಾರವನ್ನೂ ಪರಿಶೋಧನೆಗಳ ಮೂಲಕ ಕಂಡುಹಿಡಿಯಬೇಕೆಂದು 20,000 ರೂಪಾಯನ್ನು ಧರ್ಮಾರ್ಥವಾಗಿ ಕಳುಹಿಸಿಕೊಟ್ಟರು ಆ ಆಸ್ಪತ್ರೆಯ ಪ್ರಸಿದ್ಧ ವೈದ್ಯರಾದ ಡಾ॥ ವ್ಯಾಕ್‌ರವರು ಈ ಪರಹಿತ ಕಾರ್ಯವನ್ನು ಸಾರ್ಥಕವಾಗಿ ನಡಿಸುವುದಕ್ಕೆ ಇನ್ನೂ 75,000 ರೂಪಾಯಿ ಬೇಕಾಗುವುವೆಂದು ತಿಳಿಸಿದ್ದಾರೆ

* * *

ಮದರಾಸ್ ಆಧಿಪತ್ಯಕ್ಕೆ ಸೇರಿದ ಸಣ್ಣ ಪಾಳೇಪಟ್ಟುಗಳ ಮತ್ತು ಜಮೀನ್‌ದಾರಿಗಳ ಹಕ್ಕುದಾರರಾಗಿಯೂ ವಿದ್ಯಾರ್ಥಿಗಳಾಗಿಯೂ ಇರುವಂಥಾ ಯೌವನಸ್ಥರನ್ನು ನ್ಯೂಯಿಂಗ್‌ಟನ್ ಎಂಬ ಸ್ಥಳದಲ್ಲಿ ಇಟ್ಟು ವಿದ್ಯಾದಿಗಳನ್ನು ಕಲಿಸುತ್ತಲಿದ್ದಾರೆ ಆ ಪಾಠಶಾಲೆಯ ಮುಖ್ಯಾಧಿಕಾರಿಯಾದ ಮಿ॥ ಡಿಲಾಹೇ ಯವರು ವಿದ್ಯಾರ್ಥಿಗಳಿಗೆ ಪ್ರಪಂಚಜ್ಞಾನ ಉಂಟಾಗುವುದಕ್ಕಾಗಿ ಆ ಪೈಕಿ ಹತ್ತು ಮಂದಿಯನ್ನು ದೇಶಾಟನೆಗಾಗಿ ಕರೆದುಕೊಂಡು ಬರ್ಮಾ ಸೀಮೆಗೆ ಹೋಗಿರುತ್ತಾರೆ

* * *

ಬೊಂಬಾಯಿನಲ್ಲಿ ದಿವಾಳಿಯಾದ ಕ್ರೆಡಿಟ್ ಬ್ಯಾಂಕಿನ ಧಸ್ತ್ಯಾತೆ ಬ್ಯಾಲೆನ್ಸ್ ಷೀಟನ್ನು ಸುಳ್ಳುಸುಳ್ಳಾಗಿ ತಯಾರ್ಮಾಡಿ ಪ್ರಕಟಿಸಿದರೆಂದು ಜಾಫರ್ ಜೋಸೆಫ್, ಆಡಿಟರ್ ಎನ್ ಆರ್ ಮಿಸ್ತ್ರಿ, ಅಕೌಂಟೆಂಟ್ ಎ ರಸ್ತಾ ಎಂಬೀ ಮೂರು ಜನಗಳ ಮೇಲೂ ಮೊಕದ್ದಮೆ ಬಂದು, ಅವರನ್ನು ವಾರಂಟಿನಿಂದ ಹಿಡಿದು ವಿಚಾರಣೆ ಮಾಡುತ್ತಿದ್ದಾರೆ ಇದಲ್ಲದೆ ಜಾಸರ್ ಜೋಸೆಫ್ ಎಂಬುವನು ನಿರಾಧಾರಿಗಳಾದ ಇಬ್ಬರಿಗೆ ಬ್ಯಾಂಕಿನಿಂದ 90,000 ರೂಪಾಯಿ ಸಾಲ ಕೊಟ್ಟನೆಂದು ಬೇರೆ ಮೊಕದ್ದಮೆ ಬಂದಿದೆ

* * *

ಮದರಾಸ್ ಆಧಿಪತ್ಯಕ್ಕೆ ಸೇರಿದ ಶಿವಗಿರಿಯ ಜಮೀನ್‌ದಾರರು ಕಳೆದ ಶುಕ್ರವಾರ ರಾತ್ರಿ ಮದರಾಸಿನಲ್ಲಿ ಅಕಸ್ಮಾತ್ತಾಗಿ ಕಾಲವಾದರು ಇವರಿಗೆ ಇನ್ನೂ ವಿವಾಹವಾಗಿರಲಿಲ್ಲ ಆರು ವರುಷಗಳ ಕೆಳಗೆ ಇವರು ಜಮೀನ್‌ದಾರಿಯ ಕಾರುಬಾರನ್ನು ವಹಿಸಿಕೊಂಡು, ಬಹುಕಾಲದಿಂದ ಮದರಾಸಿನಲ್ಲೇ ವಾಸಮಾಡುತ್ತಿದ್ದರು ಕುದುರೆ ಜೂಜಿನಲ್ಲೂ ಷಿಕಾರಿ ಮಾಡುವುದರಲ್ಲೂ ಇವರಿಗೆ ತುಂಬಾ ಪ್ರೀತಿಯಿತ್ತು ಇವರು ಈಚೆಗೆ ಸೀಮೆಗೆ ಹೋಗಿ ಬಂದಿದ್ದರು ಈಗ ಅವರಿಗೆ ವೃದ್ಧರಾದ ತಾಯಿ ಒಬ್ಬರೇ ಇರುತ್ತಾರೆ

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್ ಪಟ್ಟಣದಲ್ಲಿ ಬಾಬು ಮನೋರಂಜನ ಚೌಧ್ರಿ ಎಂಬುವನು ವಾಂತಿಭೇದಿ ಉಪದ್ರ ತಗಲಿ ಸತ್ತುಹೋದನು ಅವನ ಹೆಂಡತಿಯು ಗಂಡನ ವಿಯೋಗಸಂಕಟವನ್ನು ಸೈರಿಸಲಾರದೆ ಉಟ್ಟ ಸೀರೆಗೆಲ್ಲಾ ದೀಪದೆಣ್ಣೆಯನ್ನು ಸುರಿದುಕೊಂಡು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಬಟ್ಟೆಗೆ ದೀಪಹಚ್ಚಿಬಿಟ್ಟಳು ಬಟ್ಟೆ ಹತ್ತಿಕೊಂಡು ಉರಿಯುತ್ತಿದ್ದಾಗ ಅವಳ ನೆಂಟರು ನೋಡಿ ಗಾಬರಿಬಿದ್ದು ಬೆಂಕಿಯನ್ನಾರಿಸಿ ಉಪಚರಿಸಿದರು ಆದರೂ ಮೈಯೆಲ್ಲಾ ಸುಟ್ಟ ಗಾಯಗಳಾಗಿದ್ದ ಕಾರಣ ಆ ಸಣ್ಣ ವಯಸ್ಸಿನ ಹೆಂಗಸು ಸತ್ತುಹೋದಳು

* * *

ಮೌಲ್ವಿ ಲೀಯಕತ್ ಹುಸೇನ್ ಎಂಬ ವಿದ್ವಾಂಸನಿಗೆ ಆರು ತಿಂಗಳು ಕಾಲ ಎಲ್ಲೂ ಬಹಿರಂಗದಲ್ಲಿ ನಿಂತು ಉಪನ್ಯಾಸ ಮಾಡಕೂಡದೆಂದು ಕಲ್ಕತ್ತಾ ಪಟ್ಟಣದ ಪೊಲೀಸ್ ಕಮಿಷನರ್‌ರವರು ಆಜ್ಞೆ ಮಾಡಿದ್ದರು ಆದರೆ ಆ ವಿದ್ವಾಂಸನು ಕಳೆದ ಡಿಸೆಂಬರ್ ತಾ 25 ರಲ್ಲಿ ಕಾಲೇಜ್ ಸ್ಕ್ವೇರ್ ಎಂಬ ಚೌಕದಲ್ಲಿ ನಿಂತು ಉಪನ್ಯಾಸ ಮಾಡಿದನು ಪೊಲೀಸಿನವರು ಈಗ ಆ ಮಹಮದೀಯ ವಿದ್ವಾಂಸನ ಮೇಲೆ ಕಮಿಷನರ್‌ರವರ ಆಜ್ಞೆಯನ್ನು ಮೀರಿ ಉಪನ್ಯಾಸ ಮಾಡಿದನೆಂದು ಫಿರ್ಯಾದು ತಂದಿದ್ದರು ಕಳೆದ ಶನಿವಾರ ಮ್ಯಾಜಿಸ್ಟ್ರೇಟರು ಆತನಿಗೆ ಒಂದು ತಿಂಗಳ ಸಾದಾ ಸಜಾ ವಿಧಿಸಿದರು

* * *

ಕಲ್ಕತ್ತಾ ಪಟ್ಟಣದ ಬಳಿ ಮಂಜಿನ ಗಡ್ಡೆಯನ್ನು ತಯಾರ್ಮಾಡುವ ಕಾರ್ಖಾನೆಯೊಳಗೆ ಕಳೆದ ಮಂಗಳವಾರ ಅಮೋನಿಯಾ ಎಂಬ ಔಷಧದ ಹೊಗೆಯು ಬರುತ್ತಿದ್ದ ನಲ್ಲಿಯು ಅಕಸ್ಮಾತ್ತಾಗಿ ಒಡೆದು ಹೋಯಿತು ಆ ಸುತ್ತುಮುತ್ತಿನಲ್ಲಿದ್ದ ಗೋಕಾಯಿಗಳಿಗೂ, ಅನೇಕ ಜನಗಳಿಗೂ ಆ ಹೊಗೆಯು ಬಡಿದು, ಅವರೆಲ್ಲಾ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟರು ಕೂಡಲೇ ಆ ಕಾರ್ಖಾನೆಯ ನೌಕರರು ಆಕ್ಸಿಜನ್ ಎಂಬ ಪ್ರಾಣವಾಯುವನ್ನು ತೆಗೆದುಕೊಂಡುಹೋಗಿ ಜ್ಞಾನವಿಲ್ಲದೇ ಬಿದ್ದಿದ್ದ ಜನಗಳಿಗೂ ಗೋಕಾಯಿಗಳಿಗೂ ತೋರಿಸಿ ಚಿಕಿತ್ಸೆಮಾಡಿದರು ಆ ಜನಗಳೆಲ್ಲಾ ಪ್ರಜ್ಞೆಬಂದು ಬದುಕಿಕೊಂಡರು ಆದರೆ ಗೋಕಾಯಿಗಳಿಗೆ ಜ್ಞಾನವೇ ಬಾರದೆ ಎಲ್ಲಾ ಸತ್ತುಹೋದವು

ಹಿಂದುಸ್ಥಾನದಿಂದ ಮಕ್ಕಾ, ಮದೀನಾಗಳಿಗೆ ಯಾತ್ರೆ ಹೋಗುವ ಮಹಮದೀಯ ಪ್ರಜೆಗಳಿಗೆ ಆ ಪ್ರಾಂತ್ಯದಲ್ಲಿ ದಾರಿಯ ಉದ್ದಕ್ಕೂ ಠಿಕಾಣಿಗಳನ್ನೂ ಉಸ್ತುವಾರಿ ಏರ್ಪಾಡುಗಳನ್ನೂ ಏರ್ಪಾಡು ಮಾಡುವುದಕ್ಕಾಗಿ ನಮ್ಮ ವೈಸ್‌ರಾಯರವರ ಮಂತ್ರಾಲೋಚನಾ ಸಭೆಯ ಮೆಂಬರಾದ ಮಿ॥ ಫಜ್ಲಾಯಿಯವರು ಈಗ ಅರಬ್ಬೀ ಸಂಸ್ಥಾನದಲ್ಲಿ ಸಂಚಾರಮಾಡುತ್ತಿದ್ದಾರೆ ದಾಮಾಸ್ ಎಂಬ ಸ್ಥಳದಲ್ಲಿ ಸಿರಿಯಾ ಸೀಮೆಯ ಗವರ್ನರವರು ಅವರನ್ನು ಬಹಳವಾಗಿ ಸತ್ಕಾರಮಾಡಿ, ಅವರ ಉದ್ದೇಶದಂತೆ ಹಾಜ್ ಕಮಿಟಿಗಳನ್ನು ದಾಮಾಸ್, ಮದೀನಾ, ದಮಾಸ್ಕಸ್ ಎಂಬೀ ಸ್ಥಳಗಳಲ್ಲಿ ಏರ್ಪಾಡು ಮಾಡಿದರೆಂದು ತಿಳಿಯುವುದು

* * *

ಕಲ್ಲಿಕೋಟೆಗೆ ಸೇರಿದ ಆಲತ್ತೂರ್ ಎಂಬಲ್ಲಿ ಒಂದು ವಿಕೋಪ ಸಂಗತಿ ನಡೆಯಿತು ಕೆಲವು ಜನ ಪೊಲೀಸು ಅಧಿಕಾರಿಗಳು ಕಳುವಾದ ಕೆಲವು ಸಾಮಾನುಗಳನ್ನು ಹುಡುಕುವುದಕ್ಕೋಸ್ಕರ ಒಂದು ಮನೆಯನ್ನು ಪ್ರವೇಶಿಸಿದರು ಅವರು ಮನೆಯನ್ನು ಶೋಧನೆ ಮಾಡುತ್ತಿದ್ದಾಗ ಯಾರೋ ದುಷ್ಟರು ಆ ಮನೆಯ ಬಾಗಿಲುಗಳನ್ನೂ ಕಿಟಿಕಿಗಳನ್ನೂ ಹೊರಗಡೆಯಿಂದ ಹಾಕಿ ಭದ್ರಪಡಿಸಿದರು ಈ ಸಂಗತಿಯು ಒಳಗಿದ್ದವರ್‍ಯಾರಿಗೂ ತಿಳಿಯದೆಹೋದ್ದರಿಂದ ಸುಮಾರು ಇಪ್ಪತ್ತು ಗಂಟೆಗಳ ಕಾಲ ಪೊಲೀಸ್ ಅಧಿಕಾರಿಗಳು ಆಹಾರವಿಲ್ಲದೆ ಆ ಮನೆಯೊಳಗೇ ಇರಬೇಕಾಯಿತು ಈ ಸಂಗತಿಯನ್ನು ತನಿಖೆಮಾಡುತ್ತಿದ್ದಾರೆ

* * *

ಪ್ರಾಯದಲ್ಲಿರುವ ಹಸುವನ್ನು ಮಾಂಸಕ್ಕಾಗಿ ಕಟುಗರು ಕತ್ತರಿಸಿದರೆ ಅಂಥಾ ಹಸು ಒಂದಕ್ಕೆ 20 ರೂಪಾಯಿ ಸುಂಕವನ್ನು ಮ್ಯುನಿಸಿಪಾಲಿಟಿಗೆ ಕೊಡಬೇಕೆಂದು ಕಲ್ಕತ್ತಾ ಪಟ್ಟಣದಲ್ಲಿ ರೂಲಸು ಮಾಡಿ ಜಾರಿಗೆ ತಂದ ನಿಮಿತ್ತ ಕಟುಗರೆಲ್ಲಾ ಮುಷ್ಕರಹಿಡಿದು ಮಾಂಸವನ್ನೇ ಬಿಕರಿಮಾಡದೆ ಅಂಗಡಿ ಮುಚ್ಚಿಬಿಟ್ಟರೆಂದು ಕಳೆದ ವಾರ ತಿಳಿಸಿದೆವಷ್ಟೆ ಈಚೆಗೆ ಮ್ಯುನಿಸಿಪಾಲಿಟಿಯವರು ಈ ತೆರಿಗೆಯನ್ನು 20 ರಿಂದ 10 ರೂಪಾಯಿಗೆ ಇಳಿಸಿದರು ಇದು ಕಟುಗರಿಗೆ ಸಮಾಧಾನವನ್ನುಂಟುಮಾಡಿದೆ ಈ ರೂಲಸಿನ ವಿಷಯದಲ್ಲಿ ಮುಂದೇನಾದರೂ ಕಷ್ಟ ಸಂಭವಿಸಿದರೆ ಮ್ಯುನಿಸಿಪಾಲಿಟಿಯವರು ಬೇಗ ಸರಿಪಡಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾರೆ ಆದದ್ದರಿಂದ ಅಲ್ಲಿ ಉಂಟಾಗಿದ್ದ ಮಾಂಸದ ಕ್ಷಾಮವು ನಿವಾರಣೆಯಾಯಿತು ಕಳೆದ ಶನಿವಾರ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಈ 20 ರೂಪಾಯಿ ಸುಂಕವನ್ನು ಸದ್ಯ ಜಾರಿಗೆ ತರಬೇಕಾದ ಅವಶ್ಯಕವಿಲ್ಲವೆಂದು ತೀರ್ಮಾನ ಮಾಡಿದ್ದಾರೆ

* * *

ವಾಯುವ್ಯ ಸರಹದ್ದು ಪ್ರಾಂತ್ಯಕ್ಕೆ ಸೇರಿ ಪ್ರಾಚೀನ ಮಗಧ ರಾಜ್ಯಕ್ಕೆ ರಾಜಧಾನಿಯಾಗಿದ್ದ ಟ್ಯಾಕ್ಸಿಲಾ ಪಟ್ಟಣವನ್ನು ಹಿಂದುಸ್ಥಾನದ ಪ್ರಾಚೀನ ಚರಿತ್ರಾನ್ವೇಷಕ ಇಲಾಖೆಗೆ ಸೇರಿದ ಡಾಕ್ಟರ್ ಜೆ ಎಚ್ ಮಾರ್ಷಾಲ್‌ರವರೂ ಮ॥ ವಿನಟೇಶಅಯ್ಯರವರೂ ಸೇರಿ ಪಾಳು ನಿವೇಶನಗಳನ್ನು ತೋಡಿಸಿ ಪರಿಶೋಧನೆಮಾಡುತ್ತಿದ್ದಾರೆ ಈ ಶೋಧನೆಯಲ್ಲಿ ಅವರಿಗೆ ಗಟ್ಟಿ ಭಂಗಾರದಲ್ಲಿ ಯರಕಹೊಯಿದು ನವರತ್ನಖಚಿತವಾದ ಕೆಲವು ವಿಗ್ರಹಗಳು ದೊರಕಿದವೆಂದೂ, ಆ ಭಂಗಾರವೊಂದೇ 30,000 ರೂಪಾಯಿ ಆಗುವುದೆಂದೂ ಉತ್ತರ ದೇಶದ ಪತ್ರಿಕೆಗಳು ಕೆಲವು ದಿವಸಗಳ ಕೆಳಗೆ ಪ್ರಕಟಮಾಡಿದವು ಈಚೆಗೆ ವಿಚಾರಿಸಿದ್ದರಲ್ಲಿ ಅಷ್ಟೆಲ್ಲಾ ನಿಜವಲ್ಲವೆಂದೂ, ಕೆಲವು ಭಂಗಾರದ ಆಭರಣಗಳೇ ಮುಂತಾದವು ಅಲ್ಲಿ ಸಿಕ್ಕಿದವೆಂದೂ, ಇವುಗಳ ಬೆಲೆಯು ಸುಮಾರು 1,000 ರೂಪಾಯಿ ಆಗಬಹುದಾದರೂ, ಅವುಗಳ ಪ್ರಾಚೀನ ಸ್ವಭಾವವು ಚರಿತ್ರಕಾರರಿಗೆ ತುಂಬಾ ಅಮೂಲ್ಯವಾದದ್ದೆಂದೂ, ಈ ಆಭರಣಗಳೂ ವಿಗ್ರಹಾದಿಗಳೂ ಮಾಡಿ ಇಲ್ಲಿಗೆ ಸುಮಾರು 21 23 ಶತಮಾನಗಳಾಗಿರಬಹುದೆಂದೂ ಗೊತ್ತಾಗುತ್ತದೆ

* * *

ಮದರಾಸ್ ಪಟ್ಟಣದ ಬಳಿ ಪೆರಂಬೂರು ಕಾರ್ಖಾನೆಯ ಎದುರು ಪಾರ್ಕದಲ್ಲಿ ಒಂದು ಆಳವಾದ ಕೆರೆ ಇದೆ ಪಿಗಟ್ ಎಂಬಾತನ 4, 6 ವರುಷ ವಯಸ್ಸಿನ ಇಬ್ಬರು ಮಕ್ಕಳು ಏರಿಯ ಮೇಲೆ ಕೂತು ಮೀನು ಹಿಡಿಯುತ್ತಿದ್ದರು ಎದುರು ದಡದಲ್ಲಿ ಜರಾಲ್ಡ್ ಎಂಬ 10 ವರುಷದ ಹುಡುಗನು ಕೂತು ಆ ಇಬ್ಬರೂ ಮೀನು ಹಿಡಿಯುವುದನ್ನು ನೋಡುತ್ತಿದ್ದನು ಅಷ್ಟರಲ್ಲಿ ಒಂದು ಮೀನು 4 ವರುಷದ ಹೆಣ್ಣುಮಗುವಿನ ಕಣ್ಣಿಗೆ ಬಿದ್ದಿತು ಅದನ್ನು ಹಿಡಿಯಬೇಕೆಂದು ಆ ಹುಡುಗಿ ಕೈ ನೀಡುವ ಸಂದರ್ಭದಲ್ಲಿ ಲಂಗಾ ಜಾರಿ ನೀರಿನೊಳಕ್ಕೆ ಬಿದ್ದುಬಿಟ್ಟಳು ಅವಳ ಹತ್ತಿರ ಕೂತಿದ್ದ 6 ವರುಷದ ಅವಳ ಅಣ್ಣನು ತಂಗಿಯನ್ನು ಹಿಡಿಯೋಣವೆಂದು ನೀರಿನಲ್ಲಿ ಇಳಿದನು ಇವರಿಬ್ಬರೂ ನೀರಿನಪಾಲಾದರು ಎದುರಿಗೆ ಕೂತಿದ್ದ 10 ವರುಷದ ಜರಾಲ್ಡನು ತತ್‌ಕ್ಷಣ ಓಡಿಬಂದು ನೀರಿನಲ್ಲಿಳಿದು ಗಂಡು ಹುಡುಗನನ್ನು ಎತ್ತಿ ದಡಕ್ಕೆ ತಳ್ಳಿ ಬದುಕಿಸಿ, ಮತ್ತೆ ಕೆರೆಯೊಳಕ್ಕೆ ಇಳಿದು ಹೋಗಿ ಹುಡುಕುವಾಗ್ಗೆ ಹೆಣ್ಣುಮಗು ಸಿಕ್ಕಲಿಲ್ಲ ಅಷ್ಟರಲ್ಲೇ ಆ ಹೆಣ್ಣುಮಗು ಮುಳುಗಿ ಕಡೇ ಸಲ ಮೇಲಕ್ಕೆ ಬಂದಳು ಅವಳ ಕೈಗಳು ಜರಾಲ್ಡನಿಗೆ ನೀರಿನ ಮೇಲೆ ಕಂಡುಬಂದವು ಅವನು ಕೂಡಲೇ ಆ ಸ್ಥಳಕ್ಕೆ ಹೋಗಿ ಮುಳುಗಿ ಆ ಹುಡುಗಿಯನ್ನು ಎತ್ತಿಕೊಂಡುಬಂದು ದಡವನ್ನು ಸೇರಿಸಿ ಬದುಕಿಸಿದನು ಈ ಮಕ್ಕಳ ತಂದೆಯಾದ ಪಿಗಟ್ಟನು ಮಹದಾನಂದಪಟ್ಟು ತನ್ನ ಮಕ್ಕಳನ್ನು ಅಕಾಲಮರಣದಿಂದ ತಪ್ಪಿಸಿ ಕಾಪಾಡಿದ 10 ವರುಷದ ಜರಾಲ್ಡನನ್ನು ಅಪ್ಪಿಕೊಂಡು ಮುದ್ದಾಡಿ ಆ ಪರಾಕ್ರಮಕಾರ್ಯದ ಜ್ಞಾಪಕಾರ್ಥವಾಗಿ ಆ ಹುಡುಗನಿಗೆ ಒಂದು ಬೆಳ್ಳಿ ಗಡಿಯಾರವನ್ನೂ ಬೆಳ್ಳಿ ಸರಪಣಿಯನ್ನೂ ಅಕ್ಷರ ಕೆತ್ತಿಸಿ ಬಹುಮಾನ ಮಾಡಿರುತ್ತಾನೆ.

* * *

ಮದರಾಸ್ ಆಧಿಪತ್ಯದೊಳಗೆ ಫಾರೆಸ್ಟ್ ಬಾಬಿನಲ್ಲಿ ರೈತಪ್ರಜೆಗಳಿಗೆ ನಾನಾ ಕಷ್ಟನಷ್ಟಗಳಿರುವವೆಂದು ಮದರಾಸ್ ಗವರ್ನ್‌ಮೆಂಟಿನವರಿಗೆ ತಿಳಿದು, ಅದರ ನಿಜಸ್ಥಿತಿಯನ್ನು ಗೊತ್ತುಮಾಡಿ ಪರಿಹಾರಗಳನ್ನು ಸೂಚಿಸಬೇಕೆಂದು ಪಂಚಾಯತರನ್ನು ಕೆಲವು ದಿನಗಳ ಕೆಳಗೆ ನೇಮಕಮಾಡಿದರು ಈ ಪಂಚಾಯತಿದಾರರು ಕಾಡುಗಳಿರುವ ಪ್ರದೇಶಗಳಲ್ಲೆಲ್ಲಾ ಸಂಚಾರಮಾಡಿ ಆ ಸುತ್ತುಮುತ್ತಿನ ಮುಖಂಡ ಜಮೀನ್‌ದಾರರನ್ನೂ ಸಾಮಾನ್ಯರೈತರನ್ನೂ ಕರಸಿಕೊಂಡು ಅವರುಗಳಿಗೂ ಅವರ ಗೋಕಾಯಿಗಳ ಮೇವಿಗೂ ಫಾರೆಸ್ಟ್ ಸಣ್ಣ ನೌಕರರುಗಳಿಂದ ಉಂಟಾಗುತ್ತಿರುವ ಕಷ್ಟನಷ್ಟಗಳನ್ನೆಲ್ಲಾ ಕೇಳಿ ತಿಳಿದುಕೊಂಡು, ಒಂದು ರಿಪೋರ್ಟು ಬರೆದು ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟರು ಮದರಾಸ್ ಗವರ್ನ್‌ಮೆಂಟಿನವರು ಆ ಕಮಿಟಿಯವರ ಶಿಫಾರಸನ್ನು ಅಂಗೀಕರಿಸಿ ಈಗ ಆಯಾ ಫಾರೆಸ್ಟುಗಳ ಮೇಲ್ವಿಚಾರಣೆಯನ್ನು ಸ್ಥಳೀಯ ಮುಖ್ಯ ಪ್ರಜೆಗಳ ಪಂಚಾಯಿತಿಗೆ ವಹಿಸಿ,

ಈ ಏರ್ಪಾಡಿನಿಂದ ರೈತರಿಗಿರುವ ಕಷ್ಟಗಳನ್ನು ಪರಿಹರಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ. ಸದ್ಯದಲ್ಲಿ ಪರೀಕ್ಷಾರ್ಥವಾಗಿ ಚಂಗಲ್ಪಟ್ಟು, ನೆಲ್ಲೂರು, ವೇಲೂರು, ಸೇಲಂ, ಕೊಯಮುತ್ತೂರ್, ತಂಜಾವೂರು, ತಿರುಚನಾಪಳ್ಳಿ, ಕೃಷ್ಣಾ ಡಿಸ್ಟ್ರಿಕ್ಟುಗಳಲ್ಲಿ ಈ ಪಂಚಾಯತಿಗಳನ್ನು ನೇಮಕಮಾಡಿ ಪ್ರಜೆಗಳ ಮುಖಂಡರ ವಶಕ್ಕೆ ಆಯಾ ಕಾಡುಗಳನ್ನು ವಹಿಸಿಬಿಡುವಂತೆ ಹುಕುಂ ಕೊಟ್ಟಿದಾರೆ. ಈ ಪಂಚಾಯತರ ಮೇಲ್ವಿಚಾರಣೆಯಿಂದ ಜಮೀನ್‌ದಾರರ ಮತ್ತು ರೈತಪ್ರಜೆಗಳ ಗೋಕಾಯಿಗಳಿಗೂ, ಸೌದೆ ಮರಮುಟ್ಟು ಸೊಪ್ಪಿನ ವಿಷಯದಲ್ಲಿ ಕಷ್ಟನಷ್ಟಗಳು ತಪ್ಪಿ, ಫಾರೆಸ್ಟ್ ನೌಕರರ ಲಂಚಕೋರತನವೂ ಪಕ್ಷಪಾತವೂ ನಿವಾರಣೆಯಾದರೆ ಸರ್ಕಾರದವರು ಅಂಥಾ ಕಮಿಟಿಗಳನ್ನು ಇತರ ಕಡೆಗಳಲ್ಲೂ ಏರ್ಪಾಡು ಮಾಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 5-3

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕ್ವೈಸೋಕದೆ ತಯಾರಾದದ್ದು.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ರಬ್ಬರ್ ಸ್ಟಾಂಪು ರೂ. 1-12-0.

ಇದುವರಿಗೆ ವಿಕ್ರಯಿಸುತ್ತಲಿದ್ದ 3-8-0 ಕ್ರಯದ ಈ ರಬ್ಬರ್ ಸ್ಟಾಂಪನ್ನು ಈ ತಿಂಗಳು ಒಳಗಾಗಿ ತರಿಸಿಕೊಳ್ಳುವವರಿಗೆ 1 ಶೀಷೆ ಶಾಯಿ, 1 ಪೆಟ್ಟಿಗೆ, 1 ಬ್ರಿಸ್, 1 ಪ್ಯಾಡ್ ಸಮೇತ 1-12-0 ಗೆ ತಯಾರಿಸಿ ಕಳುಹಿಸುತ್ತೇವೆ ಕ್ಯಾಟಲಾಗ್ ಬೇಕಾದರೆ ನಮಗೆ ಏಜಂಟರು ಬೇಕು ತಿಂಗಳಿಗೆ ಸಂಬಳ ರೂ. 15 ಬೇಕಾದವರು ಈ ವಿಳಾಸಕ್ಕೆ ಬರೆಯಿರಿ—

ಎಸ್. ಎನ್. ಮೂರ್ತಿ,

ರಬ್ಬರ್ ಸ್ಟಾಂಪು ಮೇಕರ್, ತಿರುವಲ್ಲಿಕ್ಕೇಣಿ, ಮದರಾಸು.

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ. 2-0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ 3-0-0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ. 1-8-0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ. 2-0-0, ಪ್ರದ್ನೋತ್ತರ ಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು. ಕ್ರಯ ರೂ. 1-4-0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ. 1-8-0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ. ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ. [160-23]

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜಿಟ್" ಬೆಂಗಳೂರು.

ಬಿ. ವಿ. ಪಂಡಿತರ ಶ್ರೀಕರ ಕಸ್ತೂರಿಮಾತ್ರೆ.

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇದರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಬಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕುರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವದೂ ಆರೋಗ್ಯವನ್ನು ಕಾಪಾಡಲಾರದು. [220-12]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ದಿ ಜನರಲ್ ಏಜನ್ಸಿ, ಮೈಸೂರು. 23-1

Lower Secondary Texts for 1915—(1) The Fairy Tales 0 4 0, (2) The Tanglewood Tales 0 4 0. Notes for the above two books by Mr. A Rangaswami Iyengar, B.A., Maharani's College, will be ready by the 1st of next month.

ನಾಟಕಗಳು—ವೇಣೀಸಂಹಾರ 1-0-0, ರಾಮಾಯಣ 1-0-0, ರೂಪಸೇನ 1-0-0, ಪ್ರತಾಪರುದ್ರದೇವ 1-0-0, ವಸಂತಮಿತ್ರ 0-8-0, ಮದಾಲಸಾ ಪರಿಣಯ 1-1-0, ಪಲೀಮುಖ ವಿಲಾಸ 0-8-0, ಉತ್ತರರಾಮಚರಿತ್ರೆ 0-12-0, ಸಾವಿತ್ರಿ ನಾಟಕ 0-10-0, ಪ್ರಬೋಧ ಚಂದ್ರೋದಯ 1-0-0, ಧ್ರುವ ವಿಜಯ 0-4-0, ನರುಪಮಾ 0-12-0, ಉತ್ಪಲಕುಮಾರಿ 0-8-0, ಸೀತಾಪರಿಣಯ 0-4-0.

ಪಾಕೆಟ್ ಶಿಗರೆಟ್ ಲೈಟರ್.

ಕ್ರಯ ರೂ. 2-8-0.

ಶಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು. ದೀಪದ ಕಡ್ಡಿಯೇ ಬ್ಯಾಡ. ಜರ್ಮನ್ ಸಿಲ್ವರ್‌ನಲ್ಲಿ ನಸ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ. ಜನರು ನೋಡಿದರೆ ನಸ್ಯದ ಡಬ್ಬಿ ಎಂದೇ ಭಾವಿಸುವರು. ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ. ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು. [259-6]

ವಿಳಾಸ.—ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,

93, ಮಿಂಟ್ ಸ್ಟ್ರೀಟ್, ಮದರಾಸು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ (ಅಡ್ವಾನ್ಸು) . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ಒಂದು ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ಪ್ರಕಟನೆ ಮತ್ತು ನೋಟೀಸುಗಳ ದರಗಳು.

"ವೃತ್ತಾಂತ ಪತ್ರಿಕೆ"ಯಲ್ಲಿ ಐದು ಪಂಕ್ತಿಗೆ ಮೀರದ ಪ್ರಕಟನೆ ಅಥವಾ ನೋಟೀಸಿಗೆ ಒಂದು ವಾರಕ್ಕೆ ಒಂದು ರೂಪಾಯಿ ಛಾರ್ಜು ಬೀಳುವುದು; ಅಂದರೆ ಪ್ರತಿ ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೂ ಒಂದು ಸಲಕ್ಕೆ ಒಂದು ರೂಪಾಯಿನಂತೆ ಕೊಡಬೇಕು. ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ಕಂಟ್ರಾಕ್ಟು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

The National Insurance & Banking Coy., Ltd., Amritsar.

The following are the extracts of correspondence between the Head Office and Mr. M. L. Nagannah, late Chief Agent, of the above Company.

From the Head Office to Mr. M. L. Nagannah, over the signature of P. L. Rajpal, Esq., Chief Manager :—

"No 46162, dated 16—3—1911.

* * * * * * *

3. I am extremely pained to find that you have not submitted proofs of the Abridged prospectus to me, which contains the following mistakes —

(a) Patrons' names should not appear.

(b) Comparative table should have given rates of the other new offices.

(c) The words "This profit will be equal to the premiums paid plus compound interest @ 4 % per annum on the same" are absolutely wrong. Study over full prospectus and if necessary quote the same.

(d) "Policies are non-forfeitable" should have specified the Tables to which the same applies.

(e) You have reproduced the old P. F. Prospectus, whereas the latest as enclosed, is in force and has been supplied to you. I thank you for your not having gone in for more than 500 copies. You should have suffered a great loss as I should have ordered the destruction of the same.

Please note the Company is not bound by the abridged prospectus issued by you. Please issue literature in accordance with our literature and submit the final proofs for approval to us.

4. You may go in for a Canarese prospectus, but please rectify the above mistakes.

* * * * * * *

The above letter was acknowledged by Mr. M. L. Nagannah in his No. 1, dated the 23rd March, 1911, to the Chief Manager, Amritsar.

(To be continued.)

T. S. R. IYER,

[24-1] Secretary, Madras Branch

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಎಚ್ಚರಿಕೆ :—(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸ್ಸನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ನೋಡಿ. ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ; ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಆರಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚೆನ್ನಾಗಿ ಗೊತ್ತಾಗುತ್ತದೆ.)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು. ಇದರಲ್ಲಿ ದೃಷ್ಟಿಪಾತ್ರವಾದ ಭಾಗಗಳೂ, ಉಚಿತವಾದ ಕ್ರಮಗಳೂ. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ. ಅವರಿಗೆ ಸಂಬಳವೂ, ಕಮಿಷನ್ನೂ ಕೊಡಲಾಗುವುದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ :—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1896ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಲೇವಾದೇವಿ :—ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ. ಕಂಪನಿಯ ಷೇರುಗಳು ಬಹು ಅಮೂಲ್ಯವಾದವು; ಮತ್ತು ಎಲ್ಲರೂ ಪಡಕೊಳ್ಳುವಷ್ಟು ಸುಲಭವಾಗಿ ಮಾಡಲಾಗಿದೆ. [161-24]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ. ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು.

ಬೇಕಾಗಿದೆ :—ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕುಮಂದಿ ಸ್ಥಳೀಯ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು. ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ :—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಶಬ್ದಾದರ್ಶದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ !!

ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ « ಶಬ್ದಾ ... ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ. 1 ಪ್ರತಿ ಒಟ್ಟು ... ಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ. 6 ಪ್ರತಿ ತರಿಸಿ ... ಮಹಾರಾಷ್ಟ್ರಪುರಾಧಿಪತ್ಯವೆಂಬ ನಕಲಿ ಉಚಿತ. 8 ಪ್ರತಿ ತರಿಸಿಕೊಂ ... ಚಂದ್ರಮುಖಿಯೆಂಬ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನು ... ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ.

[...6-5] ಪ್ರಕಾಶ-ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂಗುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸುತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯಶ್ವಾಸಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 5 ಕುಪ್ಪಿಗೆ ಒಂದು ಕುಪ್ಪಿ ಬಿಟ್ಟು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-20]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಟ್ಟಿರೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪ್ರಾಣದಾಯಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Office of the Military Secretary to

H. H. the Maharajah of Mysore,

Dated, Bangalore, the 20th December, 1913

NOTICE.

Sealed tenders for the supply of good and cleaned gram, required for the ponies and harness horses of the Mysore Imperial Service Transport Corps and Government Stables at Bangalore and Mysore, will be received up to 2 P. M. on Monday, the 19th January, 1914, in the Office of the Military Secretary to His Highness the Maharajah of Mysore, Bangalore. The contract for the supply of gram will be from 1st March, 1914, to 28th February, 1915.

Intending tenderers may apply to the Military Secretary to His Highness the Maharajah of Mysore, Bangalore, for further particulars.

(Sd.) A. A. Jones, Lt. Col.,

[13] *Offg. Military Secretary*

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯೆನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವವರೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಉತ್ಪನ್ನವಾಗುವವೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯ ಶಾಸ್ತ್ರ ಪಂಡಿತರು ವೈದ್ಯ ಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯ ನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗಿಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡ್ಯೆನ್ ತೈಲದಿಂದ ಗುಣವಡುವ ವ್ಯಾಧಿಗಳು.—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕರಿನಕ್ವಾಸ, ಸೊಂಟನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಲಳ್ಳಿ) ಶೈತ್ಯದೋಷಗಳೂ, ವಿಷಜುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕಿಂತಾ ಬಹಳ ಶ್ಲಾಘನೀಯವಾದದ್ದು. [12-2]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಏಜಂಟರೊಬ್ಬರು ಬೇಕಾಗಿದೆ

ಮೈಸೂರು ಟನ ... ಸ್ಥಾಪಿಸಲ್ಪಡಬೇಕೆಂದಿರುವ ... ಬ್ಯಾಂಕಿನ ಬ್ರಾಂಚ್ ... ಏಜಂಟರೊಬ್ಬರು ಬೇಕಾಗಿದ್ದು. ಈ ಕೆಳಗೆ ... ಮಾಡಿರುವ ನಿಬಂಧನೆಗಳಿಗೆ ಒಳಪಟ್ಟು ಕೆಲಸಮಾಡಲು ... 1914 ನೇ ... ಮಾರ್ಚಿ 2... ರ ಒಳಗಾಗಿ ಮೈಸೂರು ... ಬ್ಯಾಂಕಿನ ... ಅಪ್ಲಿಕೇಷನ್ ... [1+ 2]

ಏಜಂಟಾಗತಕ್ಕವರು ನಡಿಸಬೇಕಾದ ಷರತ್ತುಗಳು

1. **ಆಧಾರ** ... ರಸ್ತೆಯ ... ಮೂಲಕವಾಗಿ ಇರತಕ್ಕದ್ದು.

2. **ಯೋಗ್ಯತೆ** ... ಒಪ್ಪಂಟಿಗನಾಗಲಿ, ... ಪ್ರದೇಶದ ವರ್ತಕರಿಗೆ ಬೇಕಾದವನಾಗಿ ಪರಿಚಿತ ದ್ರವ್ಯವಂತನಾಗಿರಬೇಕು ... ಪ್ರದೇಶದ ವ್ಯಾಪಾರ ... ಮುಖಂಡನಾಗಿ ... ಮತ್ತು ಸ್ವಂತವಾದ ... ನಡಿಸತಕ್ಕವನಾಗಿಯೂ ...

3. **ಮಾಡತಕ್ಕ ಕೆಲಸಗಳು** ... ಏಜಂಟಾದ ... ಮ್ಯಾನೇಜರವರ ... ಕೆಲಸಮಾಡತಕ್ಕದ್ದು ... ಕೆಲಸ ... ದಲ್ಲಿಯೂ, ತನ್ನ ಜವಾಬಾ... ಸಾಲ ... ದಲ್ಲಿಯೂ ಸಂಪೂರ್ಣವಾದ ಜವಾಬ್ದಾರನಾಗಿರತಕ್ಕದ್ದು. ... ಮತ್ತು ... ದಸ್ತಾವೇಜು ... ವಿಭಾಗದಲ್ಲಿ ... ಸಿಯಾದ ... ಗಳ ... ದರಲ್ಲಿಯೂ, ... ಮತ್ತು ... ಗಳಿಗೂ ಮತ್ತು ... ಪತ್ರ ... ವಿಷಯದಲ್ಲಿಯೂ ಜವಾಬ್ದಾರನಾಗಿರತಕ್ಕದ್ದು.

4. **ಪ್ರತಿಫಲ** — ... ಕಾಲದಲ್ಲಿ ಉತ್ಪತ್ತಿ ... ಒಟ್ಟು ಲಾಭದಲ್ಲಿ ಶೇಕಡ ಪತ್ತರ ... ಅಲ್ಲದೆ ಈ ಕೆಳಗೆ ನಮೂದುಮಾಡುವ ಮೇರೆಗೆ ದಸ್ತೂರಿ ... ಈತನು ಮುಂದೆ ... ಇಬ್ಬರು ಮೂವರುಗಳ ಜವಾಬ್ದಾರಿ ಮೇಲೆ ಮುಂಗಡ ... ಇವುಗಳಿಗೆ ಇವನು ಜವಾಬ್ದಾರನಾದ್ದರಿಂದ ... ದಸ್ತೂರಿ ದರಗಳೇನಂದರೆ (1) ದರ್ಶನಮುಂಡಿ ಉತ್ಪತ್ತಿ ... (2) 2 ಅಥವಾ 4 ತಿಂಗಳ ಮುಂಡಿ ಉತ್ಪತ್ತಿ ... (3) 1 ತಿಂಗಳ ಸಾಲದ ಉತ್ಪತ್ತಿಯಲ್ಲಿ ... (1) ... 3 ತಿಂಗಳ ಸಾಲದ ಉತ್ಪತ್ತಿಯಲ್ಲಿ ... (5) 6 ತಿಂಗಳ ... ಉತ್ಪತ್ತಿಯಲ್ಲಿ ;

5. ಬ್ಯಾಂಕಿನವರು ಕಬ್ಬಿಣದ ಪೆಟ್ಟಿಗೆ, ಬರವಣಿಗೆಗೆ ಬೇಕಾದ ಸಾಮಾನುಗಳು, ಲೆಕ್ಕಗಳ ಪುಸ್ತಕಗಳು, ಒಬ್ಬ ಗುಮಾಸ್ತೆಗೆ ಬೇಕಾದ ಸಂಬಳ, ಬ್ಯಾಂಕಿನ ಉಸ್ತುವಾರಿಗೋಸ್ಕರ ಬೇಕಾದ ಒಬ್ಬ ಜವಾನನಿಗೆ ಮಾಹೆಯಾನಾ ಕೊಡಬೇಕಾದ ಸಂಬಳ ಇವುಗಳನ್ನು ಸರಫರಾಜು ಮಾಡುತ್ತಾರೆ.

6. ಈ ಕರಾರು ವಜಾ ಆಗಬೇಕಾದರೆ ಉಭಯತ್ರರೂ ಒಂದು ತಿಂಗಳಿಗೆ ಮೊದಲೇ ತಿಳಿಸತಕ್ಕದ್ದು.

The National Insurance & Banking Co., Ltd., Amritsar.

Madras Branch—33 Armenian Street, Madras.

Authorised and Subscribed Capital Rs. 10,00,000.

Paid up Capital only about Rs. 1,50,000.

POSSESSES GOVERNMENT SECURITY.

The Company has deposited Rs. 1,00,000 (one lakh) with the Government of India for the Security of the Policy-holders in compliance with the Government of India Insurance Company's Act of 1912.

"The Searchlight", a Monthly Journal of Insurance and Finance, published in London writes:—"Evidently the company covers a lot of ground. And while we consider that so far the company has done quite as well as it could fairly expect, we must add that it is engaged in so admirable a work that it deserves the best wishes of all upholders of life assurance throughout the world. We are sure that it will have these, for there is nothing that knits the fabric of society together more closely than the successful carrying on of life assurance by a sound office." [216-13]

Statement of Progress —

Year	Subscribed Capital	Paid up Capital	Working Capital	Government Papers and Debentures	Diposits
1907	2,28,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29000	62,470	4,15,213	18,100	3,09,726
1910	5 56,300	74,787	6,44,490	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,18,771	14,24,902	1,12,100	9,71,232
1912 " 2nd	10,00,000	1,41,594	15,42,419	1,32,600	10,39,916

For further particulars apply to—

T. S. R. Iyer, Secretary (Madras Branch),

Camp, Amirtsar National Insurance Buildings, Mysore.

ಡೋಂಗರೆ

ಇವರ ಬಾಲಾಮೃತ

[150 26]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

20—12—1913 ರಿಂದ 2—1—1914 ರ ವರೆಗೆ

ಸ್ಥಳ	ಪ್ಲೇಗ್: ಬಂದಿದ್ದು	ಪ್ಲೇಗ್: ಸತ್ತದ್ದು	ಕಾಲರಾ: ಬಂದಿದ್ದು	ಕಾಲರಾ: [illegible]
ಬೆಂಗಳೂರು ಪಟ್ಟಣ	1	1	0	[illegible]
ಮೈಸೂರು ,,	5	4	0	[illegible]
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	22	18	0	0
ಕೋಲಾರ್ ,,	64	37	0	0
ಕೋಲಾರ್ ಚಿನ್ನದ ಗಣಿಗಳು	18	11	0	[illegible]
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	4	4	0	0
ಚಿತ್ರದುರ್ಗ ,,	7	3	0	0
ಕಡೂರ್ ,,	11	6	0	0
ಶಿವಮೊಗ್ಗ ,	6	7	0	0
ಜುಮ್ಲಾ	138	91	0	0

ಶಾಲಿವಾಹನ ಶಕ ವರುಷಂಗಳು 1835 ನೇ ಪ್ರಮಾದೀಚ ಸಂವತ್ಸರದ ದಕ್ಷಿಣಾಯನೆ ಹೇಮಂತಋತೌ ಪುಷ್ಯ ಬಹುಳ ಪಂಚಮಿ ಶುಕ್ರವಾರದಿಂದ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
16	ಶುಕ್ರ ೩	ಪಂಚಮಿ	19 41	ಪುಬ್ಬಾ	21 12	4
17	ಶನಿ	ಷಷ್ಠಿ	13 30	ಉತ್ತರಾ	17 5	5
18	ಭಾನು	ಸಪ್ತಮಿ	7 34	ಹಸ್ತ	1 53	6
19	ಸೋಮ	ಅಷ್ಟಮಿ	31 47	ಚಿತ್ತ	8 17	7
20	ಮಂಗಳ *	ನವಮಿ	20 2	ಸ್ವಾತಿ	5 0	8
21	ಬುಧ †	ದಶಮಿ	21 40	ವಿಶಾಖ	1 12	9
22	ಗುರು ‡	ಏಕಾದಶಿ	17 35	ಜ್ಯೇಷ್ಠ	56 40	10

೩ ಅಮೃತಸಿದ್ಧಿಯೋಗ * ನವಮಿತಿಥಿ, ಮಳೆ ನಕ್ಷತ್ರ ಉತ್ತರಾಭಾ 1ನೇ [illegible]
† ತಿಥಿಕ್ಷಯಂ, ಅಮೃತಸಿದ್ಧಿಯೋಗ ‡ ದ್ವಾದಶೀತಿಥಿ ಸರ್ವತ್ರ ಏಕಾದಶಿ [illegible]

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಶೂಲೆ, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104 36]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಗುಣಕಂಡ

ಮೂರು ಮಹೌಷಧಗಳು.

ಮೇಧೋವರ್ಧಿನಿ (Brain Tonic)—ಮೆದುಳಿನಿಂದ ಕೆಲಸಮಾಡುವವರಿಗೆ ಬಹು ಫಲಕಾರಿಯಾದುದು ಮೆದುಳಿಗೆ ಸೇರಿರುವ ಉಷ್ಣವನ್ನು ತಗ್ಗಿಸಿ, ಬುದ್ಧಿಗೆ ಸೂಕ್ಷ್ಮತೆಯನ್ನೂ, ದೃಷ್ಟಿಗೆ ಪಾಟವವನ್ನೂ ಕೊಡುವುದಲ್ಲದೆ ಬಹಳ ಕಾಲದಿಂದ ಅನುಸರಿಸಿಬಂದ ನೋವುಗಳು ಈ ತೈಲವನ್ನುಜ್ಜುವುದರಿಂದ ಖಂಡಿತವಾಗಿಯೂ ತೊಲಗುವವು ಸಾಧಾರಣಕಾಲದಲ್ಲಿ ನೆತ್ತಿಗೆ ಇದನ್ನು ಹಚ್ಚಿಕೊಂಡು ಸ್ನಾನಮಾಡಿದರೆ 3–4 ಅಭ್ಯಂಗನಗಳಿಂದಾಗುವ ಪ್ರಯೋಜನವಾಗುವದು

ಕ್ರಯ 1 ಶೀಷೆಗೆ 1 ರೂಪಾಯಿ, 6 ಶೀಷೆಗೆ ೫ ರೂಪಾಯಿ

ಗೋರೋಜನಮಾತ್ರೆ (Children s Laxative Pills)—8 ವರ್ಷದೊಳಗಿನ ಮಕ್ಕಳಿಗೆ ಸುಖಭೇದಿಮಾಡಿಸುತ್ತೆ ಎಲ್ಲರೂ ನಿರ್ಭಯವಾಗಿ ಮಕ್ಕಳಿಗೆ ಉಪಯೋಗಿಸಿರಿ 1 2 3 ಮಾತ್ರೆಗಳನ್ನು ಜೇನಿನಲ್ಲಿ ಕಲಸಿ ಕೊಟ್ಟರೆ 2 3 ಸಲ ಸುಖಭೇದಿಯಾಗುತ್ತೆ ಕ್ರಯ 75 ಮಾತ್ರೆಗೆ 4 ಆಣೆ 5 ಶೀಷೆಗೆ 1 ರೂಪಾಯಿ

ರೋಗನಾಶಿನಿ (Intimate Friend)—ಜಲದೋಷ, ಹವಾದೋಷ, ಅತಿಯಾಗಿ ಮಳೆ, ಬಿಸಲು, ಮಂಜಿನಲ್ಲಿ ಸುತ್ತುವುದರಿಂದಾಗುವ ಕೆಮ್ಮು, ಗಂಟಲನೋವು, ಹುಣ್ಣು, ಕೆರೆತ, ಮೈ, ಕೈ, ಕಾಲು, ತಲೆ, ಸೊಂಟ ಇವುಗಳ ನೋವು, ಕಣ್ಣುರಿ, ಅಜೀರ್ಣ ಮುಂತಾಗಿ ಎಲ್ಲಾ ಗುಣವಾಗುತ್ತೆ ಇಚ್ಛಾಪಥ್ಯ ಹೊತ್ತಿಗೆ 1 ಮಾತ್ರೆ ದಿನಕ್ಕೆ 3 4 ಸಲ ಸೇವಿಸುವುದು ಕ್ರಯ 10 ಮಾತ್ರೆಗೆ 4 ಆಣೆ, 5 ಶೀಷೆಗೆ 1 ರೂಪಾಯಿ [222 12]

ವಿಳಾಸ-ಓರಿಯಂಟಲ್ ಫಾರ್ಮಸಿ, ಮೈಸೂರು

ಪರಮಾಶ್ಚರ್ಯವಾಗಿದೆ.

ಹೋಲಿಕೆ ಅಸಾಧ್ಯ ಗ್ಯಾರಂಟಿ ಉಳ್ಳದ್ದು.

ನಮ್ಮ ಸರ್ವೋತ್ತಮವಾದ ನಿಕ್ಕಲ್ ರೈಲ್ವೆ ವಾಚು

ಆರು ಬಹುಮಾನಗಳೊಂದಿಗೆ ರೂ 2–4–0 ಗೆ ಸಿಗುತ್ತೆ

ಬಹುಮಾನಗಳು—1 ನಿಕ್ಕಲ್ ಸರಪಣಿ, 2 ಉತ್ತರ ಮುಖಿ, 3 ಗಡಿಯಾರದ ಸುಂದರವಾದ ಪೆಟ್ಟಿಗೆ, 4 ಕರವಸ್ತ್ರ, 5 ಸೊಗಸಾದ ಉಂಗುರ, 6 ಹೊಳೆಯುವ ಬೀಸಣಿಗೆ

ನಿಮ್ಮ ವಿಳಾಸವನ್ನು ಇಂಗ್ಲಿಷಿನಲ್ಲಿ ಸ್ಪಷ್ಟವಾಗಿ ಬರೆಯಿರಿ

ವಿಳಾಸ—ಪಿ ಎ ರಜಾಕ್ ಕಂಪನಿ,

[277-4] ರತ್ನ ಬಜಾರ್, ಮದರಾಸ್

ಸಾಗುವಾನಿ ಮುಂತಾದ ಎಲ್ಲಾ ಜಾತಿಯ ಮರಗಳೂ ಬಹಳ ಅನುಕೂಲವಾದ ಕ್ರಯಕ್ಕೆ ದೊರೆಯುತ್ತೆ ಕೊಡಗು ಸುಂಟಿಕೊಪ್ಪದ ಪರಮೂರು ಎಸ್ಟೇಟ್ ರೈಟರಿಗೆ ಬರೆದು ಕೇಳಬಹುದು [1—1]

ಕುಂತಳಾನಂದ ತೈಲವು

102 17

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲಿಯೂ ಇರತಕ್ಕದ್ದಾಗಿದೆ ಪೆಟಿ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 3

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ,

ಚುಕ್ಕಿಯುಳ್ಳ ಟೋಪಿಗಳು ರೂ ೧—೮ ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

' In addition to cap making we are giving special attention to knitting stockings. All our stockings for adults and children, are hand made Prices will be sent on enquiry '

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS
GIRLS' INDUSTRIAL SCHOOL HASSAN

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ ರೂ	೧೪ ೦ ೦	[illegible]
ಕೆಂಬೂತಿ ಅಕ್ಕಿ ಆವಲ್	೧೫ ೮ ೦	[illegible]
ದಾಪ್ರಾಣಿ ಅಕ್ಕಿ	೧೪ ೮-೦	[illegible]
ಸಣ್ಣಕ್ಕಿ ಆವಲ್	೧೬ ೮ ೦	[illegible]
,, ದುಯಂ	೧೫ ೮ ೦	[illegible]
ತೊಗರೀ ಬೇಳೆ ಆವಲ್ ಪಲ್ಲ ೧ಕ್ಕೆ	೧೬ ೯ ೦	[illegible]
,, ದುಯಂ ,,	೧೪ ೦ ೦	[illegible]
ಮೈಸೂರ್ ಭಾಗಿ ಪಲ್ಲ ೧ಕ್ಕೆ	೭ ೬ ೦	[illegible]
ಕಾರ್ರಾಗಿ ,,	೬ ೮ ೦	[illegible]
ಜೋಳ ,,	೭ ೮ ೦	[illegible]
ಹಲಸಂದೆ ಪಲ್ಲ ೧ಕ್ಕೆ	೧೨ ೦ ೦	[illegible]
ಬಿಳೀ ಅವರೆ ,,	೯ ೦ ೦	[illegible]
ಹೆಸರು ,,	೧೩ ೪ ೦	[illegible]
ಉದ್ದು ,,	೧೪ ೨ ೦	[illegible]
ಕಡಲೆ ,,	೧೩ ೦ ೦	[illegible]
ಎಳ್ಳು ಸೇರು ೧೨೭ಕ್ಕೆ	೨೨ ೦ ೦	[illegible]
ಹುರುಳಿ ಪಲ್ಲ ೧ಕ್ಕೆ	೮ ೧೨ ೦	[illegible]
ಹರಳು ೧೨೭ ಸೇರಿಗೆ	೧೩ ೨ ೦	[illegible]
ಸೀಗೇಕಾಯಿ ಮಣ ೧ಕ್ಕೆ	೨ ೪ ೦	[illegible]
ಮೆಣಸಿನಕಾಯಿ ,,	೩ ೫ ೦	[illegible]
,, ದುಯಂ	೩ ೦ ೦	[illegible]
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ [illegible]
ಒಳ್ಳೆಣ್ಣೆ ಮಣ ೧ಕ್ಕೆ	೫ ೧೨ ೦	[illegible]
ಹರಳೆಣ್ಣೆ ,, ,,	೫ ೨ ೦	[illegible]
ಕಡಲೇಕಾಯಿ ಎಣ್ಣೆ	೫ ೦ ೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೬ ೦-೦	[illegible]
ಉಪ್ಪು ,, ,,	೬ ೪ ೦	[illegible]
ಹುಣಸೇ ಹಣ್ಣು ಮಣ ೧ಕ್ಕೆ	೨ ೮ ೦	[illegible]
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೬ ೦ ೦	[illegible]
,, ಬೆಣ್ಣೆ ಕಾಸಿದ್ದು ,, ,,	೧೮ ೮ ೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೨ ೦	[illegible]
ತೆಂಗಿನಕಾಯಿ ೧೦೦ಕ್ಕೆ	೭ ೮ ೦	[illegible]
ಆಳಲೇಕಾಯಿ ಮಣ ೧ಕ್ಕೆ	೧ ೦-೦	[illegible]
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨ ೦	[illegible]
ಚಿನ್ನ (ಪೌನ್) ಕೆಂಪು	೧೫ ೮ ೦	[illegible]
,, ,, ಪಸಿಮೆ	೧೫ ೧೪-೬	[illegible]
,, ,, ಗಟ್ಟಿ ತೊಲ ೧ಕ್ಕೆ	೨೪-೩ ೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦ ೦	[illegible]

Printed and Published by the Rev H Gu[illegible] Proprietor and Manager, Wesleyan Mission [illegible] Mysore 15/1/1914

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸ ೧೯೧೮ ನೇ ಇಸವಿ ಜನವರಿ ತಾರೀಖು ೨೨ ನೇ ಗುರುವಾರ. ಸಂಚಿಕೆ ೩೪

HINDUSTAN CO-OPERATIAE INSUANCE SOCIETY, LTD.,
HINDUSTAN BUILDINGS, CALCUTTA.

Authorized capital—**One Crore** Policies effected—over Rs 2,30,00,00 Subscribed capital—Rs. 87,00,000 Funds exceed—Rs 20,80,000

Paid up Capital—over Rs. 10,50,000.

This famous Society's Premium is are the lowest and the ... therefore the highest Rules exceptionally advantageous and preferential ... conditions based on sound principles Rs 2 00 000 deposited with the Government as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards a speciality This is the only business which requires no capital or higher education to earn a handsome amount daily For further particulars and agency prospectus &c apply with one anna stamp to

[243-9] **Messrs Venkatachalam & Sons,**
Chief Agents,
166, Dodpeta, Mysore

ಡೋಂಗರೆ

ಇವರ ಬಾಲಾಮೃತ [150 27]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಆಂಗ್ಲಭಾಷಾ ಪ್ರವೇಶಿದಾಯಿನಿ.

ಮುದ್ದಾದ ಮುದ್ರಣ. **ಕಿನಿಪುಸ್ತಕ.** ಬಲುಗಟ್ಟಿ ಬೈಂಡು.
ಥಳಥಳಿಸುವ ದಪ್ಪಕಾಗದ ಪ್ರಶ್ನೋತ್ತರ ಸಂಭಾಷಣೆ.

ಕ್ರಯ ಒಂದು ರೂಪಾಯಿ ಮೂರಾಣೆ.

ಬೋಧಕರ ಸಹಾಯವಿಲ್ಲದೆ ಬರೆಯುವುದು, ಓದುವುದು, ಮಾತಾಡುವುದು ಸಹ ಕಲಿಯಬಹುದು ಮುವ್ವತ್ತು ಭಾಗಗಳುಳ್ಳ ಅನೇಕ ಸಂಗತಿಗಳಡಗಿರ ಬಲು ದೊಡ್ಡ ಪುಸ್ತಕ ಅಗತ್ಯವಾಗಿ ಎಲ್ಲರೂ ಸಂಗ್ರಹಿಸತಕ್ಕದ್ದು
ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಪಂಗಿರಾಮು; ಅದವಾ, ಎಸ್. ಆರ್. ಭಾರತಿ,
[6-1] "ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕ ಮಹಾಶಯರಿಗೆ ತಿಳಿಯಪಡಿಸುವದೇನಂದರೆ—

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ 1860 ನೇ ಇಸವಿಯಲ್ಲಿ ಮುಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಗ್ರಂಥವನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಕ್ರಮಗಳೇನೆಂದರೆ —ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು ? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ ? ಜಾಮೀನ್ ತೆಗೆದುಕೊಂಡು ಬಿಡಬಹುದೇ ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ ? ಎಂಬ ತಖ್ತೆಗಳಾಗಿ ಚೆನ್ನಾಗಿ ವಿವರಿಸಲ್ಪಟ್ಟಿರುವದು ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮುನ್‌ಷಿಫ್ ಜನಗಳಿಗೂ ಉಪಯೋಗಕರವಾದದು

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು ಅಂತಹ ಮೊಕದ್ದಮೆಗಳು ಬಹು ತರದೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಆಸಾಮಿ ಕೊಲೆ ಗಂಡನು ಹೆಂಡತಿ 12 ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟ ತೀರ್ಪು ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು

ಕನ್ನಡದಲ್ಲಿ ಇದುವರೆಗೆ ಇಂತಾ ಪುಸ್ತಕವು ಎಲ್ಲಿಯೂ ಇಲ್ಲವು

ಕ್ರಯ ಪ್ರತಿ 1 ಕ್ಕೆ 2 ರೂಪಾಯಿ , ಟಪ್ಪಾಲ್ ಛಾರ್ಜ್ 4 ಆಣೆ

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 51]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆಸೋಪು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಥಳಥಳಿಸುವವು , ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹಂಚು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಸಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿರ್ಸ್ ಸೆಕ್ರೆಟರಿ ಮಿ॥ ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ತೇವಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂದುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ ನ್ಯಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0 3 ಬಾಟ್ಲಿಗಳಿಗೆ ರೂ. 2-8-0 ವಿ. ಪಿ ಖರ್ಚು ಪ್ರತ್ಯೇಕ

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [19-2]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜೆಂಟ್, ಡಿ ಉಲ್ಕ್ ನೂರ್, ಮಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—12—1913 ರಿಂದ 2—1—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	5	4	0	0
ಬೆಂಗಳೂರು ಡಿಸ್ಟ್ರಿಕ್ಟ್	0	0	0	0
ಮೈಸೂರು ,,	22	18	0	0
ಕೋಲಾರ್ ,,	64	37	0	0
ಕೋಲಾರ್ ಚಿನ್ನದ ಗಣಿಗಳು	18	11	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	4	4	0	0
ಚಿತ್ರದುರ್ಗ ,,	7	3	0	0
ಕಡೂರ್ ,,	11	6	0	0
ಶಿವಮೊಗ್ಗಾ ,,	6	7	0	0
ಜುಮ್ಲಾ .	138	91	0	0

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ಉತ್ತರಾಯಣೆ ಹೇಮಂತಋತೌ ಪುಷ್ಯ ಬಹುಳ ದ್ವಾದಶಿ ಶುಕ್ರವಾರದಿಂದ ಮಾಘ ಶುದ್ಧ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
23	ಶುಕ್ರ §	ದ್ವಾದಶಿ	14 26	ಮೂಲ	55-46	11
24	ಶನಿ ,,	ತ್ರಯೋದಶಿ	12 24	ಪೂಷಾ	56-2	12
25	ಭಾನು	ಚತುರ್ದಶಿ	11-33	ಉ॥ಷಾ	57-0	13
26	ಸೋಮ †	ಅಮಾವಾಸ್ಯೆ	11-47	ಶ್ರವಣ	60-0	14
27	ಮಂಗಳ *	ಪಾಡ್ಯಮಿ	13-38	ಶ್ರವಣ	1-0	15
28	ಬುಧ ,,	ಬಿದಿಗೆ	16-32	ಧನಿಷ್ಟ	5-3	16
29	ಗುರು ‡	ತದಿಗೆ	20 39	ಶತಭಿಷ	10-6	17

§ ಪ್ರದೋಷ, ಮಳೆ ನಕ್ಷತ್ರ—ಶ್ರವಣ 1 ನೇ ಪಾದ. , ಮಾಸಶಿವರಾತ್ರಿ. .. ಸರ್ವತ್ರ ಅಮಾವಾಸ್ಯೆ † ಗರುಡಜಯಂತಿ, ಪುರಂದರದಾಸರ ಪುಣ್ಯದಿನ, ಅಮೃತಸಿದ್ಧಿಯೋಗ, ಪದ್ಮಕ, ಮಳೆ ನಕ್ಷತ್ರ—ಶ್ರವಣ 3 ನೇ ಪಾದ * ಚಂದ್ರೋದಯ, ರಬ್ಬಿಉಲವಲ್ ಚಂದ್ 1 ,, ತೃಥೀಯಾ ತಿಥಿ ‡ ಶೂನ್ಯತಿಥಿ, ಮಳೆ ನಕ್ಷತ್ರ—ಶ್ರವಣ 3 ನೇ ಪಾದ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೪ ೦ ೦	೧೨-೦-೦
ಕೆಂಬೂತಿ ಅಕ್ಕಿ ಅವಲ್		೧೫ ೮-೦	೧೨ ೮-೦
ಜಾಪ್ರಾಣಿ ಅಕ್ಕಿ		೧೪ ೮-೦	೧೬-೮-೦
ಸಣ್ಣಕ್ಕಿ ಅವಲ್		೧೬-೮-೦	೧೨-೮-೦
,, ದುಯಂ		೧೫-೮ ೦	೧೬-೧೩-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೬-೦-೦	೧೬-೪-೦
,, ದುಯಂ ,,		೧೪ ೦-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ		೨ ೦-೦	೫-೧೦-೦
ಕಾರ್ರಾಗಿ ,,		೬ ೮ ೦	೪-೧೩-೦
ಜೋಳ ,,		೨-೪-೦	೨-೪-೦
ಹಲಸಂದೆ ಪಲ್ಲಾ ೧ಕ್ಕೆ		೧೩-೦-೦	೧೪-೦-೦
ಅವರೆ ,,		೯-೮-೦	೧೩-೦-೦
ಹೆಸರು ,,		೧೩ ೮-೦	೧೪-೦-೦
ಉದ್ದು ,,		೧೪-೦-೦	೧೬-೮ ೦
ಕಡಲೆ ,,		೧೧-೦-೦	೧೫-೦-೦
ಎಳ್ಳು ಸೇರು ೧೩೨ಕ್ಕೆ		೩೩-೦ ೦	೩೪-೦-೦
ಹುರುಳಿ ಪಲ್ಲಾ ೧ಕ್ಕೆ		೮ ೧೩-೦	೨-೧೦-೦
ಹರಳು ೧೩೨ ಸೇರಿಗೆ		೧೫-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೩-೪-೦	೫-೬-೦
ಮೆಣಸಿನಕಾಯಿ ,,		೫-೮-೦	೫-೪-೦
,, ದುಯಂ		೫-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ		೫ ೧೩-೦	೬-೮-
ಹರಳೆಣ್ಣೆ ,, ,,		೫-೩-೦	೬-೦-೦
ಕಡಲೇಕಾಯಿ ಎಣ್ಣೆ		೫-೦-೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೦-೦	೬-೪-೦
ಉಪ್ಪು ,, ,,		೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೩-೮-೦	೧ ೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ		೧೬-೦-೦	೩೩ ೮-೦
,, ಬೆಣ್ಣೆ ಕಾಸಿದ್ದು ,, ,,		೧೯-೦-೦	
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		೫-೧೩-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೨-೮ ೦	೬-೪ ೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧-೧೩-೦	೧-೮-೦
ಚಿನ್ನ (ಪ°ಟ್) ಕೆಂಪು		೧೫-೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೩೪-೫-೦	೩೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೫-೦

ಶ್ವಾಸಕೇಸರಿ ಲೇಹ್.

ಅಸ್ತ್ಮಾಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಅಸ್ತ್ಮಾ ಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ ಓದಿನೋಡಿ.

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1–8–0.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
177 ಚೇನಾ ಬಜಾರ್ ರೋಡ್, ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿನ್ ಟೆಂಡಿಂಗ್ ಇಂಜಿನಿಯರ್ ಆಫೀಸ್ ಕ್ಲಾರ್ಕ್ ಮ॥ ಎ ಭೀಮರಾವ್ ಮೊದಲಿಯಾರ್ರು ತಾ 21 10 1913 ರಲ್ಲಿ ಬರೆಯುತ್ತಾರೆ — ನಾನು ಬಹುಕಾಲದಿಂದ ಅಸ್ತ್ಮಾ ರೋಗದಲ್ಲಿ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ವೈದ್ಯರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ್ಯ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ " [82—36]

ಜೈರ್ಕರವರ ಉತ್ತಮೋತ್ತಮ ಆಯಿಂಟ್ ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಜ್ಜಿ, ತುರಿ, ಹುಣ್ಣು



ಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರೋಗಗಳು, ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯಕ್ಷಿಣಿಯಂಥಾ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1, ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಛಾರ್ಜು ಬೇರೆ ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ ಕ್ರಯ ಬಾಟ್ಲಿಗೆ ರೂ 1 0 0 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [25-1]

ವಿಳಾಸ—ಜೆ ಗುಲಾಬ್ ಚಂದ್ ಪೌವಾರ್,
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡಿತ (ಭಾರ), ಮೈ ನಡುಕ, ಶೀತದ

ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಪಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿಕೃತ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲುವಿಕೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜುಜ್ವರ, ಕೃತತ್ವಗಳನ್ನು ಗುಣಪಡಿಸುತ್ತದೆ ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —30 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [179-21]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ಷಿಮಿರಿಕಂಮ ತೋರಿಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತವೆ ಖಂಡಿತವಾಗಿ ಇವರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಹೆಡ್ ಆಫೀಸ್—ಅಮೃತಸಾರ.

ಕೆಳಗೆ ನಮೂದು ಮಾಡಿರುವ ಸಂಗತಿಯು ನಮ್ಮ ಕಂಪನಿಯ ಹೆಡ್ ಆಫೀಸಿಗೂ, ಮೇಲ್ಕಂಡ ಕಂಪನಿಯ ಚೀಫ್ ಏಜಂಟರಾಗಿದ್ದ ಮ॥ ಎಂ ಎಲ್ ನಾಗಣ್ಣನವರಿಗೂ ನಡೆದದ್ದಾಗಿರುತ್ತದೆ

ಈ ಕಾಗದವು ಹೆಡ್ ಆಫೀಸಿನ ಚೀಫ್ ಮ್ಯಾನೇಜರಾ ಮ॥ ಪಿ ಎಲ್ ರಾಜಪಾಲ್‌ರವರ ರುಜುವಿನ ಮೇಲೆ ಮ॥ ಎಂ ಎಲ್ ನಾಗಣ್ಣನವರಿಗೆ ಬರೆದದ್ದರ ನಕಲಾಗಿರುವುದು ಅದರಲ್ಲಿ ಕೆಲವು ಮುಖ್ಯಭಾಗಗಳನ್ನು ಇಲ್ಲಿ ಪ್ರಕಟಿಸುತ್ತೇನೆ—

" ನಂಬರ್ 46162, ತಾರೀಖು 16 ನೇ ಮಾರ್ಚಿ 1911 ನೇ ಇಸವಿ

* * * * * * * *

3 ನೀವು ಕ್ರೋಢೀಕರಿಸಿ ತಯಾರುಮಾಡಿಸಿರುವ ಪ್ರಾಸ್ಪೆಕ್ಟಸ್ಸನ್ನು ಪ್ರಿಂಟು ಮಾಡಿಸುವುದಕ್ಕೆ ಮುಂಚೆ ಅದರ ನಕಲನ್ನು (ಪ್ರೂಫ್) ನೀವು ನನ್ನ ಬಳಿಗೆ ಕಳುಹಿಸಿಕೊಡದೆಹೋದ ವಿಷಯವು ನನಗೆ ತುಂಬಾ ಮನೋವ್ಯಥೆಯನ್ನು ಉಂಟುಮಾಡಿರುತ್ತದೆ ಅದರಲ್ಲಿ ಮುಂದೆ ಹೇಳುವ ತಪ್ಪುಗಳು ಇರುವವು ಯಾವವೆಂದರೆ—

(ಎ) ಡೈರೆಕ್ಟರುಗಳ (ಪೋಷಕರ) ಹೆಸರುಗಳು ತೋರಿಸಕೂಡದು.

(ಬಿ) ಚಂದಾ ದರಗಳ ಪಟ್ಟಿ (ಟೇಬಲ್) ಗಳ ಜೊತೆಗೆ ಬೇರೆ ಕೂಸ ಆಫೀಸುಗಳ ಚಂದಾ ದರಗಳುಳ್ಳ ಪಟ್ಟಿಗಳನ್ನೂ ಹೋಲಿಸಿ ನೋಡಿಕೊಳ್ಳುವಂತೆ ಪ್ರಕಟಿಸಬೇಕಾಗಿತ್ತು

(ಸಿ) " ಶಾಶ್ವತ ಮಾಡಲ್ಪಡುವ ಪ್ರೀಮಿಯಂ (ಚಂದಾ) ಜೊತೆಗೆ ಅದರ ಚಕ್ರಬಡ್ಡಿಯನ್ನು ಶೇಕಡಾ ವರುಷಕ್ಕೆ 4 ರಂತೆ ಕೂಡಿಸಿ ಲಾಭ ಕೊಡಲಾಗುವುದು " ಎಂಬ ಮಾತುಗಳು ಶುದ್ಧ ತಪ್ಪಾಗಿರುವವು ಪ್ರಾಸ್ಪೆಕ್ಟಸ್ಸನ್ನು ಪೂರ್ತಾ ಚೆನ್ನಾಗಿ ಓದಿ ಮುಂದಿಟ್ಟುಮಾಡಿಕೊಂಡು, ಅವಶ್ಯ ತೋರಿದಲ್ಲಿ ಅದನ್ನೇ ಎತ್ತಿ ಪ್ರಕಟಮಾಡಿ

(ಡಿ) " ಕಂಪನಿಯವರು ಪಾಲಿಸಿ (ವಿಮ ಪತ್ರ) ಗಳನ್ನು ರದ್ದುಮಾಡುವುದಿಲ್ಲ " ಎಂಬದಾಗಿ ಕಾಣಿಸಿರುತ್ತೀರಷ್ಟೆ ಯಾವ ಯಾವ ತರಹಾ ಪಾಲಿಸಿಗಳನ್ನು ರದ್ದುಮಾಡುವುದಿಲ್ಲವೋ ಅಂಥವುಗಳಿಗೆ ಸಂಬಂಧಪಟ್ಟ ಚಂದಾ ದರಗಳ ಪಟ್ಟಿ (ಟೇಬಲ್) ಗಳನ್ನು ಅಲ್ಲೇ ದೃಷ್ಟಾಂತಮಾಡಿ ಉದಾಹರಿಸಿ ತೋರಿಸಬೇಕಾಗಿತ್ತು

(ಇ) ನೀವು ಕಂಪನಿಯ ಪ್ರಾವಿಡೆಂಟ್ ಫಂಡಿನ ಹಳೇ ಪ್ರಾಸ್ಪೆಕ್ಟಸ್ಸನ್ನು ಎತ್ತಿ ಪ್ರಕಟಮಾಡಿರುತ್ತೀರಿ, ಆದರೆ ಇದರ ಕೂಡ ಕಳುಹಿಸಿರುವ ಹೊಸ ಪ್ರಾಸ್ಪೆಕ್ಟಸ್ಸು ಈಗ ಜಾರಿಯಲ್ಲಿರುತ್ತದೆ, ಇದನ್ನು ನಿಮಗೆ ಕಳುಹಿಸಿಕೊಟ್ಟದ್ದಾಗಿದೆ ನೀವು ಪ್ರಾಸ್ಪೆಕ್ಟಸ್ ಕಾಪಿಗಳನ್ನು 100 ಕ್ಕಿಂತ ಹೆಚ್ಚಾಗಿ ಪ್ರಿಂಟುಮಾಡದಹೋದದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ, ನಾನು ನಿಮಗೆ ಅವುಗಳನ್ನೆಲ್ಲಾ ನಾಶಪಡಿಸಬೇಕೆಂದು ಆರ್ಡರ್ ಕಳುಹಿಸುತ್ತಿದ್ದೆನಾದಕಾರಣ ನಿಮಗೆ ತುಂಬಾ ನಷ್ಟ ಸಂಭವಿಸುತ್ತಿತ್ತು

ನೀವು ಈಗ ಪ್ರಕಟಿಸಿಕೊಂಡಿರುವ ಕ್ರೋಢೀಕರಿಸಿದ ಪ್ರಾಸ್ಪೆಕ್ಟಸ್ಸಿನಲ್ಲಿ ನಮೂದು ಮಾಡಿರುವ ವಿಚಾರಗಳಿಗೆ ಕಂಪನಿಯವರು ಬದ್ಧರಾಗುವುದಿಲ್ಲ ಎಂಬ ಸಂಗತಿಯನ್ನು ದಯವಿಟ್ಟು ಜ್ಞಾಪಕದಲ್ಲಿಟ್ಟುಕೊಳ್ಳಿ ನಾವು ಪ್ರಕಟಿಸಿರುವ ವಿದ್ಯಮಾನಗಳಿಗೆ ಅನುಸಾರವಾಗಿರುವಂಥಾ ವಿದ್ಯಮಾನಗಳನ್ನು ಕಾಣಿಸಿ ಪ್ರಕಟಮಾಡಿ, ಅದರ ನಕಲು (ಪ್ರೂಫ್) ಗಳನ್ನು ಮುಂದಾಗಿಯೇ ನಮ್ಮ ಅನುಮತಿಯನ್ನು ಪಡೆಯುವುದಕ್ಕೋಸ್ಕರ ನಮ್ಮಲ್ಲಿಗೆ ಕಳುಹಿಸಿಕೊಡಿ.

4 ನೀವು ಕನ್ನಡದಲ್ಲಿ ಪ್ರಾಸ್ಪೆಕ್ಟಸ್ಸನ್ನು ಮಾಡಿಸಿಕೊಳ್ಳಬಹುದು, ಆದರೆ ದಯವಿಟ್ಟು ಮೇಲ್ಕಂಡ ತಪ್ಪುಗಳನ್ನು ತಿದ್ದಿಬಿಡಬೇಕು

* * * * * * * *

ಈ ಮೇಲ್ಕಂಡ ಕಾಗದವು ತಮಗೆ ತಲುಪಿದುತ್ತದೆಂದು ಮ॥ ಎಂ ಎಲ್ ನಾಗಣ್ಣನವರು ಅಮೃತಸಾರಕ್ಕೆ ಚೀಫ್ ಮ್ಯಾನೇಜರವರಿಗೆ 1911 ನೇ ಇಸವಿ ಮಾರ್ಚಿ ತಾ 21 ರಲ್ಲಿ 1 ನೇ ನಂಬರುಳ್ಳ ಜವಾಬನ್ನು ಬರೆದು ಒಪ್ಪಿಕೊಂಡಿರುತ್ತಾರೆ

(ಸರಿ°ಪ) [24-3]

ಟಿ. ಎಸ್. ಆರ್. ಅಯ್ಯರ್,
ಸೆಕ್ರೆಟರಿ, ಮದರಾಸ್ ಬ್ರಾಂಚ್.

ಅಮೃತಾಂಜನವನ್ನು

ಪಡಕೊಳ್ಳುವವರಿಗೆ ನಮ್ಮ ಸುಂದರವಾದ ೧೯೧೪ನೇ ವರ್ಷದ ಕೆಲೆಂಡರ್ ಪುಗಸಟ್ಟೆಯಾಗಿ ರವಾನಿಸುವೆವು.

ಇತರರಿಗೆ 6 ಕ್ಕೆ 0-12-0, 12 ಕ್ಕೆ 1-8-0 ವಿ ಪಿ ಮಾಪಿ

ವಾತ, ಸಂಧಿವಾತ, ಜಖಮು, ಘಾಯ, ಉರಿ, ತಲೆನೋವು, ತಲೆಶೂಲೆ ಹಲ್ಲುನೋವು, ಸೊಂಟದನೋವು, ಎದೆನೋವು ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧ ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು ಬಾಟ್ಲಿ ಒಂದಕ್ಕೆ 0 8 0 ಡಜನ್ 1 ಕ್ಕೆ 5 1 0 ವಿ ಪಿ ಖರ್ಚು ಪ್ರತ್ಯೇಕ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು [42 48]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್. ಬೊಂಬಾಯಿ.
೯ ಜಹಂಗೀರ್ ಸ್ಟ್ರೀಟ್ ಮದ್ರಾಸು.

ದಿ ಜನರಲ್ ಏಜನ್ಸಿ. ಮೈಸೂರು

23 2

Lower Secondary Texts for 1915—(1) The Fairy Tales 0-4-0 (2) The Tanglewood Tales 0 4 0 Notes for the above two books by Mr A Rangaswami Iyengar B A Maharaja's College will be ready by the 1st of next month

ನಾಟಕಗಳು—ವೇಣೀಸಂಹಾರ 1 0-0, ರಾಮಾಯಣ 1-0 0 ಶೂರಸೇನ 1-0-0, ಪ್ರತಾಪರುದ್ರದೇವ 1 0 0 ವಸಂತಮಿತ್ರ 0 8 0, ಮದಾಲಸಾ ವಿಜಯ 1 4-0, ವಲೀಮುಖ ವಿಲಾಸ 0-8 0, ಉತ್ತರರಾಮಚರಿತ್ರೆ 0 12 0, ಸಾವಿತ್ರಿ ನಾಟಕ 0 10-0, ಪ್ರಬೋಧ ಚಂದ್ರೋದಯ 1-0 0, ಧ್ರುವ ವಿಜಯ 0-4-0, ನಿರುಪಮಾ 0 12 0, ಉತ್ಪಲಕುಮಾರಿ 0 8 0 ಸೀತಾಪರಿಣಯ 0-4 0

ಶಬ್ದಾದರ್ಶದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ !!

ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ ಶಬ್ದಾದರ್ಶಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ 1 ಪ್ರತಿ ಒಟ್ಟಾಗಿ ತರಿಸಿಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಣ್ಯಪುರಾಧಿಪತ್ಯವೆಂಬ ನಕಲಿ ಉಚಿತ 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯೆಂಬ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ

[306-6] ವಿಲಾಸ-ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಏಜಂಟರೊಬ್ಬರು ಬೇಕಾಗಿದೆ

ಮೈಸೂರು ಟವುನ್ನಲ್ಲಿ ಸ್ಥಾಪಿಸಲ್ಪಡಬೇಕೆಂದಿರುವ ಮೈಸೂರು ಬ್ಯಾಂಕಿನ ಬ್ರಾಂಚ್ ಆಫೀಸಿಗೆ ಏಜಂಟರೊಬ್ಬರು ಬೇಕಾಗಿದ್ದಾರೆ. ಈ ಕೆಳಗೆ ನಮೂದು ಮಾಡಿರುವ ನಿಬಂಧನೆಗಳಿಗೆ ಒಳಪಟ್ಟು ಕೆಲಸಮಾಡಲು ಇಷ್ಟವುಳ್ಳವರು 1914 ನೇ ಇಸವಿ ಜನವರಿ ಮಾಹೆ 31 ರ ಒಳಗಾಗಿ ಮೈಸೂರು ಸಂತಪೇಟೆಯಲ್ಲಿರುವ ಸದರಿ ಬ್ಯಾಂಕಿನ ಸೆಕ್ರೆಟರಿಯವರಾದ ಮ|| ಬಿ ಒನುಮಯ್ಯನವರಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು [13 3]

ಏಜಂಟಾಗತಕ್ಕವರು ನಡಿಸಬೇಕಾದ ಷರತ್ತುಗಳು

1 ಆಧಾರ—ನಗದಾಗಿ ಆಗಲಿ, ಸ್ಥಿರಸ್ವತ್ತಿನ ಮೂಲಕವಾಗಿಯಾಗಲಿ ಇರತಕ್ಕದ್ದು

2 ಯೋಗ್ಯತೆ—ಸಂಪಾದನೆದಾಗಲಿ, ಒಬ್ಬಂಟಿಗನಾಗಲಿ, ಆಯಾಯ ಪ್ರದೇಶದ ವರ್ತಕರಿಗೆ ಬೇಕಾದವನಾಗಿ ವಿಶೇಷ ದ್ರವ್ಯಸ್ಥನಾಗಿರಬೇಕು ಮುಖ್ಯವಾಗಿ ಆಯಾಯ ಪ್ರದೇಶದ ವ್ಯಾಪಾರಗಳಲ್ಲಿ ಮುಖಂಡನಾಗಿ ಇರಕೂಡದು, ಮತ್ತು ಸ್ವಂತವಾದ ಲೇವಾದೇವಿ ನಡಿಸತಕ್ಕವನಾಗಿಯೂ ಇರಕೂಡದು

3 ಮಾಡತಕ್ಕ ಕೆಲಸಗಳು—ನಿಯಮಿತವಾದ ಏಜಂಟಾದವನು ಮ್ಯಾನೇಜರವರ ಅಪ್ಪಣೆಪ್ರಕಾರ ಕೆಲಸಮಾಡತಕ್ಕದ್ದು ಹುಂಡಿ ಕೆಲಸ ನಡಿಸುವದರಲ್ಲಿಯೂ ತನ್ನ ಜವಾಬ್ದಾರಿ ಮೇಲೆ ಕೊಡತಕ್ಕ ಸಾಲಗಳ ವಿಷಯದಲ್ಲಿಯೂ ಸಂಪೂರ್ಣವಾದ ಜವಾಬ್ದಾರನಾಗಿರತಕ್ಕದ್ದು ಹುಂಡಿಗಳ ಮತ್ತು ಇತರ ದಸ್ತೈವಜುಗಳ ಹಿಂಭಾಗದಲ್ಲಿ ಈತನ ಇಂಡಾರಸುಮೆಂಟು ಅತ್ಯವಶ್ಯಕವಾದದ್ದು ಸರಿಯಾದ ಮನುಷ್ಯರಿಗೆ ಚೆಕ್ಕುಗಳ ಮೇಲೆ ಹಣ ಪಾವತಿ ಮಾಡುವುದರಲ್ಲಿಯೂ ಅವನಿಂದ ಮಾಡಲ್ಪಡುವ ಸೈನ್ ಮತ್ತು ಇಂಡಾರಸುಗಳಿಗೂ ಮತ್ತು ಖಾತೆಗೆ ಸೇರಿದ ಹಣ, ಲೆಕ್ಕಪತ್ರಗಳ ವಿಷಯದಲ್ಲಿಯೂ ಜವಾಬ್ದಾರನಾಗಿರತಕ್ಕದ್ದು

4 ಪ್ರತಿಫಲ—ಈತನ ಏಜಂಟು ಕೆಲಸ ಕಾಲದಲ್ಲಿ ಉತ್ಪತ್ತಿಯಾದ ಒಟ್ಟು ಲಾಭದಲ್ಲಿ ಶೇಕಡ ಪತ್ತರ ಮೇರೆಗೆ ಇವನಿಗೆ ಸಲ್ಲತಕ್ಕದ್ದು ಒಲ್ಲದ ಈ ಕೆಳಗೆ ನಮೂದುಮಾಡುವ ಮೇರೆಗೆ ದಳ್ಳಾಳಿಯು, ಈತನು ಹುಂಡಿ ಲೇವಾದೇವಿ—ಸಾಲಾ ಕೊಡುವದು—ಅಥವಾ ಇಬ್ಬರು ಮೂವರುಗಳ ಜವಾಬ್ದಾರಿ ಮೇಲೆ ಮುಂಗಡ ಕೊಡುವದು—ಇವುಗಳಿಗೆ ಇವನು ಜವಾಬ್ದಾರನಾದ್ದರಿಂದ ಸಲ್ಲತಕ್ಕದ್ದು ದಳ್ಳಾಳಿ ದರಗಳೇನೆಂದರೆ—(1) ದರ್ಶನಹುಂಡಿ ಉತ್ಪತ್ತಿಯಲ್ಲಿ $\frac{1}{16}$, (2) 2 ಅಥವಾ 3 ತಿಂಗಳ ಹುಂಡಿ ಉತ್ಪತ್ತಿಯಲ್ಲಿ $\frac{1}{12}$, (3) 1 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{16}$, (4) 2 ಅಥವಾ 3 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{8}$, (5) 6 ತಿಂಗಳ ಸಾಲದ ಉತ್ಪತ್ತಿಯಲ್ಲಿ $\frac{1}{4}$

5 ಬ್ಯಾಂಕಿನವರು ಕಬ್ಬಿಣದ ಪೆಟ್ಟಿಗೆ, ಬರವಣಿಗೆಗೆ ಬೇಕಾಗುವ ಸಾದಿಲ್ವಾರು, ಲೆಕ್ಕಗಳ ಪುಸ್ತಕಗಳು, ಒಬ್ಬ ಗುಮಾಸ್ತೆಗೆ ಕೊಡಬೇಕಾದ ಸಂಬಳ, ಬ್ಯಾಂಕಿನ ಉಸ್ತುವಾರಿಗೋಸ್ಕರ ಬೇಕಾಗುವ ಒಬ್ಬ ಜವಾನನಿಗೆ ಮಾಮೂಲಾಗಿ ಕೊಡಬೇಕಾದ ಸಂಬಳ, ಇವುಗಳನ್ನು ಸರಬರಾಜು ಮಾಡುತ್ತಾರೆ

6 ಈ ಕರಾರು ವಜಾ ಆಗಬೇಕಾದರೆ ಉಭಯತ್ರರೂ ಒಂದೊಂದು ತಿಂಗಳಿಗೆ ಮೊದಲೇ ತಿಳಿಸತಕ್ಕದ್ದು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 3 4

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

Always get the Emulsion with this mark—the Fishman —the mark of the "Scott" process!

ಮೀನುಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್

ತಾಲ್ಲೋಕು ವರ್ತಮಾನಗಳು

ಚಿಕ್ಕಬಳ್ಳಾಪುರದ ತಾ|| ಮಂಡಿಕಲ್ಲು —ನಮ್ಮ ಸಚಿವ ಶಿಖಾಮಣಿಗಳಾದ ಮ|| ಎಂ ವಿಶ್ವೇಶ್ವರಯ್ಯ, ಸಿ ಐ ಇ ಯವರು ಡೆಪ್ಯುಟಿ ಕಮಿಷನರೇ ಮುಂತಾದ ಅಧಿಕಾರಿಗಳೊಡನೆ ಈ ತಿಂಗಳು 9 ನೇ ತಾ ಸಾಯಂಕಾಲ 4 ಘಂಟೆಗೆ ಇಲ್ಲಿಗೆ ದಯಮಾಡಿಸಿದರು ಊರಿನ ಪ್ರಮುಖರು ಅಮಲ್ದಾರವರೊಡನೆ ಶ್ರೀಯವರನ್ನು ಮರ್ಯಾದಾಪೂರ್ವಕವಾಗಿ ಎದುರುಗೊಂಡು ಈಗ ಕಟ್ಟುವ ಸ್ಕೂಲನ್ನು ಇನ್ನೂ ವಿಸ್ತರಿಸಿಕೊಡಬೇಕೆಂದೂ, ಸ್ಕೂಲಿನ ತೋಟಕ್ಕೂ ಹುಡುಗರ ಆಟಕ್ಕೂ ಬೇರೆ ಬೇರೆ ಸ್ಥಳಗಳನ್ನು ದಯಪಾಲಿಸಬೇಕೆಂದೂ ಪ್ರಾರ್ಥಿಸಿಕೊಂಡರು ದಿವಾನ್ ಸಾಹೇಬರವರು ಈ ಪ್ರಾರ್ಥನೆಗಳನ್ನು ನೆರವೇರಿಸಿಕೊಡುವಂತೆ ಸರ್ಕಲ್ ಇನ್ಸ್‌ಪೆಕ್ಟರವರಿಗೆ ಅಪ್ಪಣೆ ಮಾಡಿ ಊರೊಳಕ್ಕೆ ದಯಮಾಡಿಸಿದರು ಈ ಊರಿನ ಜನಗಳು ನಾಲ್ಕೈದು ವೃತ್ತಾಂತ ಪತ್ರಿಕೆಗಳನ್ನು ತರಿಸುತ್ತಿರುವುದನ್ನೂ, ಇಲ್ಲಿನ ಇಂಗ್ಲಿಷ್, ಕನ್ನಡ, ಸಂಸ್ಕೃತ ಸ್ಕೂಲುಗಳು ಏಳಿಗೆಯಲ್ಲಿರುವುದನ್ನೂ ಕೇಳಿ ಇದು ಸಣ್ಣ ಗ್ರಾಮವಾದರೂ ಈ ರೀತಿ ನಾಗರಿಕತೆಯಲ್ಲಿ ಮುಂದರಿಯುತ್ತಿರುವುದನ್ನು ಬಹಳವಾಗಿ ಶ್ಲಾಘಿಸಿ, ಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ ಹನುಮಂತರಾಯರು ಓದಿದ ಪರಸ್ಪರ ಸಹಾಯಕ ಸಂಘದ ರಿಪೋರ್ಟನ್ನು ಆತ್ಮಾದರದಿಂದ ಕೇಳಿ, ಸ್ಕೂಲನ್ನು ಪರಾಂಬರಿಸಿ ಅಲ್ಲಿಂದ ಕುಂಬಾರರ ಮನೆಗೆ ದಯಮಾಡಿ ಹೆಂಚಿನ ಕಾರ್ಖಾನೆಯನ್ನು ಪರೀಕ್ಷಿಸಿ ಆ ಹೆಂಚುಗಳನ್ನೇ ಈ ಗ್ರಾಮದ ಸ್ಕೂಲ್ ಕಟ್ಟಡಕ್ಕೆ ಉಪಯೋಗಿಸಬೇಕೆಂದು ಅಪ್ಪಣೆ ಮಾಡಿದ್ದೂ ಅಲ್ಲದೆ ಬೇಕಾದ ಯಂತ್ರಗಳನ್ನು ಅರ್ಧ ಬೆಲೆಗೆ ಕೊಡಿಸುವಂತೆ ಹೇಳಿ ಅಲ್ಲಿಂದ ಒಂಟೂರು ಎಂಬ ಹಳ್ಳಿಯನು ನೋಡಲು ಕಾಲ್ನಡಿಗೆಯಿಂದಲೇ ಹೊರಟು ದಾರಿಯಲ್ಲಿ ಕಂಬಾಲಹಳ್ಳಿಯಲ್ಲಿ ಒಬ್ಬ ಒಕ್ಕಲಿಗನ ಗುಡಿಸಲಿಗೆ ಪ್ರವೇಶಿಸಿ ಆ ಬಡರೈತರ ಕ್ಷೇಮಲಾಭಗಳನ್ನು ವಿಚಾರಿಸಿ ರಾತ್ರಿ 9½ ಗಂಟೆಗೆ ಗುಡಿಬಂಡೆಗೆ ದಯಮಾಡಿಸಿದರು

ನೀಲಗಿರಿ —ನೀಲಗಿರಿ ಜಿಲ್ಲಾ ಗೂಡ್ಲೂರು ತಾಲ್ಲೂಕು ಆಟಲೋನ್ ಕಣಿವೆಯಲ್ಲಿ ಕೇಮಲಕಾಡು ಎಂಬ ಕಾಫಿ ತೋಟದಲ್ಲಿ ಮಿ|| ಮಿಂಚಿನ್ ದೊರೆಯವರು ಇದೇ ಜನವರಿ ತಾ 9 ರಲ್ಲಿ ಬೆಳಗ್ಗೆ 7 ಗಂಟೆಗೆ ನೀಲಗಿರಿ ಬ್ಯಾಂಕಿನಿಂದ ಒಂದು ಸಾವಿರ ರೂಪಾಯಿ ತರುವದಕ್ಕೆ ನಂಜ, ಎದ್ದ ಎಂಬ ಇಬ್ಬರು ಆಳುಗಳನ್ನು ಕಳುಹಿಸಿದ್ದರು ಅವರಿಬ್ಬರೂ ಹಣ ತೆಗೆದುಕೊಂಡು ಬರುತ್ತಿರುವಾಗ ಮುಕರ್ಜಿ ಸುಂಕದ ಕಟ್ಟೆ ಆಚೆ ಸರ್ಕಾರದ ರಸ್ತೆಯಲ್ಲಿ ಯಾರೋ ದುರಾತ್ಮರು ಇಬ್ಬರು ಕೊಡಲಿಯನ್ನು ಹಿಡಿದುಕೊಂಡು ಆ ರಸ್ತೆಯಲ್ಲಿ ಬಂದು ಇವರನ್ನು ಕಂಡು ಅಡ್ಡಿಮಾಡಿ, ಮೊದಲು ನಂಜ ಎಂಬವನನ್ನು ಕೊಡಲಿ ಅಡ್ಡಿನಿಂದ ಹೊಡೆದರು ಅವನು ಮೂರ್ಛೆಹೋಗಿ ಬಿದ್ದುಕೊಂಡನು ಬಳಿಕ ಆ ದುರಾತ್ಮರು ಎದ್ದ ಎಂಬವನನ್ನು ಹೊಡೆದು ಕೊಂದುಬಿಟ್ಟರು ಅವನ ಬಳಿ ಇದ್ದ ಹಣವನ್ನು ಎತ್ತಿಕೊಂಡು ಪರಾರಿಯಾದರು ಮೂರ್ಛೆಬಿದ್ದಿದ್ದ ನಂಜನು ಎದ್ದುಬಂದು ಸದರಿ ಬಟ್ಟದ ಸ್ಟೇಷನ್‌ನಲ್ಲಿ ಈ ಸಂಗತಿಯನ್ನೆಲ್ಲಾ ತಿಳಿಸಿದನು ತಕ್ಷಣವೇ ಸಬ್ ಇನ್ಸ್‌ಪೆಕ್ಟರವರು ಪೋಲೀಸಿನವರ ಸಮೇತ ಮೋಟರಿನಲ್ಲಿ ಆ ಸ್ಥಳಕ್ಕೆ ಹೋಗಿ ಮಾಲು ಮುಚ್ಚಿ ನೋಡಿಕೊಂಡು ಬಂದರು ಈಚೆಗೆ ಅವರು ಪತ್ತೆ ಹಚ್ಚುವ ಕೆಲಸವನ್ನು ನಡಿಸಿ ತಾ 13 ನೇ ಮಂಗಳವಾರ ಆಸಾಮಿಗಳನ್ನು ಹಿಡಿದು ಠಾಣಾದಲ್ಲಿ ಇಟ್ಟಿದ್ದಾರೆ ಇನ್ನೂ ವಿಚಾರಣೆ ಆಗಲಿಲ್ಲ —ತಾ 10 ನೇ ಶನಿವಾರ 3 ಗಂಟೆಗೆ ಆಟಲೋನ್ ಕಣಿವೆಗೆ ಒಬ್ಬ ಯೂರೋಪಿಯನ್ ಧೊರೆಸಾನಿಯವರು ಬಂದರು ಅವರನ್ನು ಎದುರುಗೊಳ್ಳುವದಕ್ಕೆ ಒಂದು ಸಾವಿರ ರೂಪಾಯಿ ಮುಟ್ಟಿಸಿ ರೇಳು ಕಾಣದವಲ್ಲಿ ಕತ್ತರಿಕೆಲಸವು ಬಹುರಮ್ಯವಾಗಿ ಮಾಡಿದ್ದರು ಈ ನೋಟ ನೋಡುವದಕ್ಕೆ ಹದಿನೆಂಟು ಕಾಫಿತೋಟದ ಧೊರೆಗಳೂ, ಧೊರೆಸಾನಿಗಳು, ಉದ್ಯೋಗಸ್ಥರು, ರೈಟರುಗಳು, ಮೇಸ್ತ್ರಿಗಳು, ಕೂಲಿಜನರು ಸಹ ಸುಮಾರು ಹತ್ತು ಸಾವಿರ ಜನರು ಸೇರಿ ಬಹು ಸಂದಣಿಯಿಂದ ವಾದ್ಯಘೋಷವು ವಿಶೇಷವಾಗಿತ್ತು ರಾತ್ರಿ 9 ಗಂಟೆಗೆ ಸಕ್ಕರೆ ಪಾನ್ ಸುಪಾರಿ ಹಂಚಿದಮೇಲೆ ಜನಸಮೂಹವೆಲ್ಲಾ ಚದರಿಹೋಯಿತು

ಹೊಸಕೋಟೆ —ಜನವರಿ ತಾ 14 ರಲ್ಲು ರೆವಿನ್ಯೂ ಕಮಿಷನರ್ ಮ|| ದೊರೆಸ್ವಾಮಿ ಅಯ್ಯರವರು ಇಲ್ಲಿಗೆ ದಯಮಾಡಿಸಿ ಊರಿನ ಯೋಗಕ್ಷೇಮಗಳನ್ನು ವಿಚಾರಿಸಿದ್ದಲ್ಲದೆ ಹೊಸಕೋಟೆಯ ಸುತ್ತುಮುತ್ತಲಿರುವ ಕೆರೆಗಳು, ಅದರಿಂದಾಗುವ ಸಾಗುವಳಿ ಮತ್ತು ರೈತಾಪಿ ಜನಗಳಿಗಿರುವ ಅನುಕೂಲ ಪ್ರತಿಕೂಲಗಳು, ಇತ್ಯಾದಿ ವಿಷಯಗಳನ್ನು ಕುರಿತು ವಿಚಾರಿಸಿದರು ತರುವಾಯ ಇಲ್ಲಿನ ಕೆಲವು ಮುಖ್ಯಸ್ಥರು ತಮ್ಮ ಅಹವಾಲ್‌ಗಳನ್ನು ಹೇಳಿಕೊಂಡಾಗ ಅವರು ಅದಕ್ಕೆ ಪುನಹ ಬಂದಾಗ ಎಲ್ಲವುಗಳನ್ನೂ ನೋಡುತ್ತೇನೆಂದು ಹೇಳಿ, ಬೆಂಗಳೂರು ಕಡೆ ಹೊರಟುಹೋದರು —ಇಲ್ಲಿ ಕೆರೆಗಳಲ್ಲಿ ನೀರು ಕಮ್ಮಿಯಾಗುತ್ತಾ ಬಂತು ಸುಮಾರು ಒಂದೂವರೆ ತಿಂಗಳಲ್ಲಿ ಕೆರೆಗಳು ಒಣಗಿಹೋಗಬಹುದು ಈ ಸಲ ಗದ್ದೆಗಳ ಸಾಗುವಳಿ ಸಹ ನಿಂತುಹೋಯಿತು ದನಗಳ ಮೇವಿಗೆ ಬಹಳ ಕಷ್ಟ ಆದ್ದರಿಂದ ಸರ್ಕಾರದವರು ದಯವಿಟ್ಟು ತರೀ ಬಾಗಾಯತು ಕಂದಾಯವನ್ನು ರಿಮಿಷನ್ ಮಾಡುವರಾದರೆ ಬಹಳ ಯಶಸ್ಸುಂಟಾಗುವುದು —ಧಾರಣೆವಾಸಿಯೋ ಇಲ್ಲಿ ದಿನೇ ದಿನೇ ಹೆಚ್ಚುತ್ತಾ ಇದೆ ಅಕ್ಕಿ ರೂಪಾಯಿಗೆ 5½ 6 ಸೇರು, ರಾಗಿ 12 ಸೇರು ಮಾರುತ್ತಾರೆ ಈ ಕಾಲದಲ್ಲಿ ಕಮ್ಮಿ ಸಂಬಳದ ನೌಕರರಿಗೂ, ಬಡವರಿಗೂ ಮತ್ತು ಕೂಲಿ ಜನಗಳಿಗೂ ಜೀವನೋಪಾಯ ನಡೆಯುವದು ದುರ್ಲಭವಾಗಿದೆ ದಯಾಳುಗಳಾದ ಸರ್ಕಾರದವರು ಕಮ್ಮಿ ಸಂಬಳದ ನೌಕರರ ಮೇಲೆ ಅನುಕಂಪವಿಟ್ಟು ಕಾಲಕ್ಕನುಸಾರವಾಗಿ ಹೆಚ್ಚು ಸಂಬಳವನ್ನಾಗಲಿ, ಇಲ್ಲವೇ ಕ್ಷಾಮಕಾಲದ ಅಲೋಯನ್ಸಾಗಲಿ ಕೊಟ್ಟು ಸಂರಕ್ಷಣೆ ಮಾಡುವರಾದರೆ ಬಹಳ ಕೀರ್ತಿಯುಂಟಾಗಿ ಬಡವರ ವ್ಯಥೆಯು ನೀಗಿಹೋಗುವದು —ತಾ 12 ರಲ್ಲಿ ಬಿದರಹಳ್ಳಿ ಹೋಬಳಿಗೆ ಸೇರಿದ ಕಮ್ಮಸಂದ್ರದಲ್ಲಿ ಗೊಲ್ಲರ ಜಾತಿ ಪಿಲ್ಲಗಂಗನೆಂಬುವನು ಏನೋ ಕಾರಣದಿಂದ 6 ವರ್ಷ ಪ್ರಾಯವುಳ್ಳ ತನ್ನ ಚಿಕ್ಕ ವಯಸ್ಸಿನ ಹೆಂಡತಿಯ ಬಲಕಿವಿಯನ್ನು ಸಂಪೂರ್ಣವಾಗಿ ಕೊಯಿದುಬಿಟ್ಟು, ಕಿವಿಯ ಸಮೇತ ಎಲ್ಲೋ ಪರಾರಿಯಾದನು ಪೋಲೀಸಿನವರು ತನಿಖೆಮಾಡಿ ಆಕೆಯನ್ನು ಆಸ್ಪತ್ರೆಗೆ ತಂದುಬಿಟ್ಟರು ಇಲ್ಲಿನ ಡಾಕ್ಟರವರು ಬಹಳ ಮುತುವರ್ಜಿಯಿಂದ ಆಕೆಗೆ ಇಲಾಜುಮಾಡುತ್ತಾ ಇದ್ದಾರೆ ಇವರು ಸ್ವಾಭಾವಿಕವಾಗಿ ಒಂದೇ ರೀತಿಯಾಗಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ತಕ್ಕ ಔಷಧೋಪಚಾರಗಳಿಂದ ತೃಪ್ತಿಪಡಿಸಿ ಎಲ್ಲರಿಂದ ಹೊಗಳಿಕೆಯನ್ನು ಸಂಪಾದಿಸುವದಕ್ಕೆ ಅರ್ಹರಾಗಿದ್ದಾರೆ ಪರಾರಿಯಾದ ಆಸಾಮಿ ಸಿಕ್ಕಿದ ಮೇಲೆ ಏನಾಗುವದೋ ನೋಡಬೇಕು —ತಾ 16 ನೇ ಶುಕ್ರವಾರ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಇಲ್ಲಿಗೆ ಬಂದು ಎಲ್ಲಾ ಸ್ಕೂಲುಗಳನ್ನೂ ಮೇಲ್ವಿಚಾರಣೆಮಾಡಿದರು ಮತ್ತು ಹೊಸಕೋಟೆ ತಾಲ್ಲೋಕಿಗೆ ಸೇರಿದ ಗ್ರಾಮಾಂತರಗಳಲ್ಲಿ ಹತ್ತು ಹೊಸ ಸ್ಕೂಲುಗಳನ್ನು ಅವಶ್ಯವಾದ ಗ್ರಾಮಗಳಲ್ಲಿ ಸ್ಥಾಪಿಸುವ ಹಾಗೆ ಏರ್ಪಾಡುಮಾಡತಕ್ಕದ್ದೆಂದು ಅಮಲ್ದಾರರಿಗೆ ಮೌಖಿಕ ಅಪ್ಪಣೆಕೊಟ್ಟು ಬೆಂಗಳೂರಿಗೆ ಪ್ರಯಾಣ ಬೆಳಸಿದರು ಈ ಸಮಾಚಾರವನ್ನು ಕೇಳಿ ಎಲ್ಲರೂ ತುಂಬಾ ಸಂತೋಷಪಡುತ್ತಾರೆ

ಚಾಮರಾಜನಗರ —ಈ ತಿಂಗಳು 9ನೇ ತಾ ಇಲ್ಲಿ ಒಂದು ಸಂಗತಿ ನಡೆಯಿತು ಬೆಂಗಳೂರು ಡಿವಿಜನ್ ಟೆಲಿಗ್ರಾಫ್ ಇನ್ಸ್‌ಪೆಕ್ಟಿಂಗ್ ಆಫೀಸರ್ ಮಿ|| ಪಿ ಆರ್ ಫಾಕ್ಸ್ ಸಾಹೇಬರು ಇಲ್ಲಿನ ಪೋಸ್ಟ್ ಇನ್ಸ್‌ಪೆಕ್ಷನ್ ಮಾಡಿಕೊಂಡು ವಾಪಸು ಮೋಟರ್ ಸೈಕಲ್ ಮೇಲೆ ಹೋಗುವಾಗ್ಗೆ ಚಾಮರಾಜೇಶ್ವರ ದೇವಾಲಯದ ಒಳ ಇದ್ದ 4-5 ಸಿಪಾಯಿಗಳು ದೊಣ್ಣೆಯಿಂದ ಅವರ ಗಾಡಿಯನ್ನು ನಿಲ್ಲಿಸಿ ಹಿಂದುಗಡೆಯಿಂದ ಅವರನ್ನು ಹೊಡೆಯುವಾಗ ಇಲ್ಲಿನ ಪೋಸ್ಟು ಮಾಸ್ಟರ್ ಮುಂತಾದವರು ಓಡಿಹೋಗಿ ಯಾಕೆ ಅವರನ್ನು ಹೊಡೆಯುತ್ತೀರೆಂದು ಕೇಳಲು ಗದರಿಸಿ ಓಡಾಯಿಸಿಬಿಟ್ಟರು ಕೂಡಲೆ ಆ ಸಾಹೇಬರು ಸಮಾಧಾನ ತಂದುಕೊಂಡು ಪೋಸ್ಟ್ ಮಾಸ್ಟರ ಸಮೇತ ಅಮಲ್ದಾರ್ರ ಬಳಿಗೆ ಹೋಗಿ ಸಂಗತಿಯನ್ನು ತಿಳಿಸಿದರು ಅವರು ಫಿರ್ಯಾದು ಅರ್ಜಿ ಕೊಟ್ಟರೆ ವಿಚಾರಿಸುತ್ತೇನೆಂದು ಹೇಳಿದ್ದರ ಮೇರೆ ಸಾಹೇಬರು ಸದ್ಯ ಹೋಗಬೇಕಾಗಿದೆ ಎಂದು ತಿಳಿಸಿದರು ಆಗ ಅಮಲ್ದಾರ್ರು ಸಮಯೋಚಿತವಾಗಿ ಅವರ ಕೋಪವನ್ನು ಶಮನಮಾಡುವ ಹಾಗೆ ಆ ವಿಚಾರವನ್ನು ಮನಸ್ಸಿಗೆ ತೆಗೆದುಕೊಳ್ಳದೆ ಕ್ಷಮಿಸಿಬಿಡುವಂತೆ ಹೇಳಿ ಕಳುಹಿಸಿಕೊಟ್ಟರು ಆ ಸಿಪಾಯಿಗಳು ಯಾಕೆ ಹಾಗೆ ಮಾಡಿದರೋ ತಿಳಿಯಲಿಲ್ಲ ಒಂದು ವೇಳೆ ವಾಹನಾರೂಢರಾಗಿ ಯಾರೂ ದೇವಸ್ಥಾನದ ಎದುರಿಗೆ ಹೋಗಬಾರದೆಂಬ ಕಟ್ಟು ಇದ್ದರೆ ಅದು ಎಲ್ಲರಿಗೂ ತಿಳಿಯುವಂತೆ ಒಂದು ದೊಡ್ಡ ಬೋರ್ಡನ್ನು ಬರೆದು ಎದುರಿಗೆ ನೆಡಬೇಕು, ಅಥವಾ ಕೂಗಿ ಹೇಳಬೇಕು ಒಬ್ಬ ಯೂರೋಪಿಯನ್ ಆಫೀಸರನ್ನು ಈ ರೀತಿ ಹೊಡೆಯುವುದು ಉಭಯತ್ರರಿಗೂ ಅವಮಾನಕರವಾಗಿದೆ —ಚಿದಂಬರಾಚಾರಿಯ ಹೆಂಡತಿಯ ಘಾಯವು ಚೆನ್ನಾಗಿ ವಾಸಿಯಾಗುತ್ತಾ ಬರುತ್ತಿದೆ —ಒಬ್ಬನು ಹರದನ ಹಳ್ಳಿಯಿಂದ ದನ ಕಳುವುಮಾಡಿಕೊಂಡು ಬಂದು ಇಲ್ಲಿ ಸಿಕ್ಕಿಬಿದ್ದ ಕಾರಣ ಆ ಮೊಕದ್ದಮೆಯು ಇಲ್ಲಿನ ಅಮಲ್ದಾರರಲ್ಲಿ ನಡೆಯುತ್ತಾ ಇದೆ —ಮೊನ್ನೆ ಅಮಲ್ದಾರ್ರು ಸಾಯಂಕಾಲ ಊರೊಳಗೆ ಹೊರಟು ವೆಸ್ಲಿಯನ್ ಮಿಷನ್ ಮನೆಯ ಹಿಂಭಾಗದಲ್ಲಿ ಒಬ್ಬಾತನು ತಕರಾರು ಮಾಡುತ್ತಿದ್ದದ್ದನ್ನು ವಿಚಾರಿಸಿಕೊಂಡು ಮಿಷನವರು ಕುಡಿಯುವ ನೀರಿನ ಭಾವಿ ಬಳಿಗೆ ಹೋಗಿ ಅದರ ರಿಪೇರಿ ವಿಷಯವನ್ನು ತಿಳಿಸಿ ಆ ಸ್ಥಳದಲ್ಲಿ ಯಾರೂ ಗಲೀಜು ಮಾಡದಂತೆ ಬೋರ್ಡು ಹಾಕಬೇಕೆಂದು ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ಹೇಳಿ, ಕೊಳವನ್ನು ನೋಡಿಕೊಂಡು ಮೇಲ್ಪೇಟೆಗೆ ನುಗ್ಗಿ ನಾರಾಯಣಸ್ವಾಮಿ ದೇವಾಲಯದ ಬಳಿ ಬಂದು ಅಲ್ಲಿನ ಸಂಗತಿಗಳನ್ನು ವಿಚಾರಿಸಿಕೊಂಡು ಹೊರಟುಹೋದರು ಹೀಗೆಯೇ ಅವರು ಸಣ್ಣಸಣ್ಣ ಗಲ್ಲಿಗಳನ್ನೂ ಆಗಾಗ್ಗೆ ನುಗ್ಗಿ ನೋಡುತ್ತಾ ಪ್ರಜಾ ಸೌಖ್ಯಕ್ಕೆ ಅನುಕೂಲಪಡಿಸುತ್ತಾರೆಂದು ನಿರೀಕ್ಷಿಸುತ್ತೇವೆ —ಇಲ್ಲಿನ ಮುಸಾಫರಿ ಬಂಗಲೆ ಎದುರಿಗೆ ಇರುವ ಅಪ್ಪಯ್ಯಚೆಟ್ಟಿಯವರ ಹೊಲ, ಆಶೀರ್ವಾದಿನ ತೋಟ ಮುಂತಾದ್ದನ್ನೆಲ್ಲಾ ಸರ್ಕಾರದವರು ಸ್ಕೂಲ್ ಕಟ್ಟುವದಕ್ಕಾಗಿ ಆತನಿಂದ ಕ್ರಯಕ್ಕೆ ತೆಗೆದುಕೊಂಡು ಅದನ್ನು ಬಿಡಿಸಿಬಿಟ್ಟು ವರ್ಷಗಟ್ಲೆ ಕಳೆಯಿತು ಆದರೆ ಆತನಿಗೆ ಇನ್ನೂ ಕ್ರಯದ ಬಾಬಲ್ಲೂ ಬರಲಿಲ್ಲ, ಆ ಹೊಲವನ್ನಾದರೂ ಬಿಟ್ಟುಕೊಡಲಿಲ್ಲ ಆತ ಯಾರ್ಯಾರಿಗೋ ಅರ್ಜಿ ಬರೆಕೊಂಡಾಯಿತು. ಉತ್ತರವೇ ಇಲ್ಲ. ಆತನಿಗೆ ಬೆಳೆಯಾಗುವುದೂ ತಪ್ಪಿಹೋಯಿತು

ಕಂಟ್ರಾಕ್ಟುದಾರರು ಬೇಕು.

ಮೈಸೂರು ಸಂತೇಪೇಟೆಯಲ್ಲಿರುವ ಮ|| ಬಿ. ಬನುಮಯ್ಯನವರು 400 ಜನ ವಿದ್ಯಾರ್ಥಿಗಳು ಓದುವುದಕ್ಕೆ ಅನುಕೂಲಿಸುವ ಹಾಗೆ ಒಂದು ಕಟ್ಟಡವನ್ನು ಬಸ್ತಿಗುಡಿ ದಕ್ಷಿಣ ಪಾರ್ಶ್ವದಲ್ಲಿರುವ ಖಾಲೀ ಜಾಗಾದಲ್ಲಿ ಕಟ್ಟಿಸುವುದರಿಂದ ಸದರೀ ಕಟ್ಟಡವನ್ನು ಕಟ್ಟಲು ಇಷ್ಟವುಳ್ಳವರು ಇದೇ ಮಾಹೆ ಆಖೈರೊಳಗಾಗಿ ರೇಟುಗಳ ಸಮೇತ ಮೇಲ್ಕಂಡ ಮ|| ಬನುಮಯ್ಯನವರಿಗೆ ಟೆಂಡರುಗಳನ್ನು ಕಳುಹಿಸಬಹುದು ಪ್ಲಾನ್ ಮತ್ತು ಆಬ್‌ಸ್ಟ್ರಾಕ್ಟ್ ವಗೈರೆ ಸದರಿಯವರಲ್ಲಿ ಹೋಗಿ ನೋಡಬಹುದು. [26-1]

ವೃತ್ತಾಂತ ಪತ್ರಿಕೆ.

ಸರ್ ೧೯೧೪ ನೇ ಇಸವಿ ಜನವರಿ, ತಾ. ೨೨ ನೇ ಗುರುವಾರ.

ಪ್ರಪಂಚದಲ್ಲಿ ಈಗ ನಡೆಯುತ್ತಿರುವ ವಿದ್ಯಮಾನಗಳು.

ಪ್ರಪಂಚದ ಮೇಲೆ ಅನೇಕ ಕಡೆಗಳಲ್ಲಿ ಈಗ ಪ್ರಜೆಗಳ ನೆಮ್ಮದಿ ಸುಖ ಸಂತೋಷಕ್ಕೆ ನಾನಾ ಪ್ರಕಾರವಾದ ಈತಿಬಾಧೆಗಳು ಉಂಟಾಗಿರುತ್ತವೆ; ಅದರಲ್ಲೂ ಜೀವನಕ್ಕೆ ಕಷ್ಟಪಡಬೇಕಾಗಿರುವ ಜನಗಳಿಗೆ ವಿಶೇಷ ಕಷ್ಟ ಸಂಕಟಗಳು ಪ್ರಾಪ್ತವಾಗಿರುವವು. ಪೂರ್ವದಲ್ಲಿ ಅಲ್ಪಸ್ವಲ್ಪ ಕಷ್ಟಪಟ್ಟಲ್ಲಿ ಜೀವನವು ನೆಮ್ಮದಿಯಾಗಿ ನಡೆಯುತ್ತಿತ್ತು; ಈಗ ಎಲ್ಲೆಲ್ಲೂ ಸುಲಭವಾಗಿ ಜೀವನ ನಡೆಯುವುದು ಪ್ರಯಾಸವಾಗಿದೆ. ಜನಗಳ ಆಹಾರ ವಿಹಾರಾದಿಗಳಿಗೆ ಮೊದಲಿಗಿಂತ ಹೆಚ್ಚು ಪದಾರ್ಥಗಳು ಬೇಕಾಗಿರುವವು. ಭೋಜನಕ್ಕೂ ಉಡಿಗೆ ತೊಡಿಗೆಗೂ ಮೇಲಾದ ವಸ್ತುಗಳೂ, ವಾಸಕ್ಕೆ ಉತ್ತಮವಾದ ಮನೆಮಠಗಳೂ, ಪ್ರಯಾಣ ನೋಟ ವಿನೋದಾದಿಗಳಿಗೆ ಹಣವೂ ಈಗ ಎಲ್ಲರಿಗೂ ಅವಶ್ಯಕವಾಗುತ್ತಾ ಬಂದಿದೆ ಸರ್ವಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಕೂಲಿನಾಲಿನ ದರಗಳೆಲ್ಲಾ ಹೆಚ್ಚುತ್ತಾ ಬಂದಿವೆಯಾದರೂ ಗಂಡಸರು ಹೆಂಗಸರು ಈಗ ಖರ್ಚುಮಾಡಲಾರಂಭಿಸಿರುವಷ್ಟು ಮಟ್ಟಿಗೂ ಅವು ಹೆಚ್ಚಿ ಇಲ್ಲ. ಇದರ ಫಲಪರಿಣಾಮವೇನಾಗಿದೆಯೆಂದರೆ, ಗಂಡಸರುಹೆಂಗಸರುಗಳಿಗೆ ತೃಪ್ತಿಯಾಗಲಿ, ಸಂತೋಷವಾಗಲಿ, ಸಮಾಧಾನವಾಗಲಿ ಇಲ್ಲ; ಅವರು ತಮ್ಮ ವರಮಾನಗಳಲ್ಲೇ ತಮ್ಮ ಖರ್ಚುಗಳನ್ನೆಲ್ಲಾ ಮಾಡಿಕೊಳ್ಳಲಾರದೆ ಇರುವುದೇ ಮುಖ್ಯ ಕಾರಣ. ಹಿಂದುಸ್ಥಾನದೊಳಗಾದರೋ ಸದ್ಯದಲ್ಲಿ ಕೂಲಿನಾಲಿನವರು ವಿಶೇಷವಾಗಿ ಮುಷ್ಕರಹಿಡಿದು ಗಲಭೆಯನ್ನೆಬ್ಬಿಸುವುದು ಇನ್ನೂ ರೂಢಿಗೆ ಬರಲಿಲ್ಲ, ಆದರೂ ಅಂಥಾ ಸ್ಥಿತಿಯು ನಮ್ಮ ರಾಷ್ಟ್ರದಲ್ಲಿ ಇನ್ನು ಮುಂದೆ ಪ್ರಾಪ್ತವಾದರೂ ಆಗಬಹುದು.

ದಕ್ಷಿಣ ಆಫ್ರಿಕದಲ್ಲಿ ಅನೇಕ ಗಲಭೆಗಳುಂಟಾಗಿರುತ್ತವೆ. ಅಲ್ಲಿ ಹೋಗಿರುವ ಹಿಂದುಸ್ಥಾನದ ಸಹೋದರರು ಕೆಲಸಗಳಿಗೆ ಹೋಗದೆ ಹಟಹಿಡಿದು ನಿಂತುಬಿಟ್ಟಿದ್ದಾರೆ; ಆದರೆ ಇವರಿಗಿರುವ ಕಷ್ಟಗಳೂ ನಿರ್ಬಂಧಗಳೂ ಕೂಡಿದಮಟ್ಟಿಗೂ ಇಷ್ಟರೊಳಗೇ ನಿವಾರಣೆಯಾಗುವ ಸಂಭವ ಕಾಣಬರುತ್ತದೆ ಇದು ಹಾಗಿರಲಿ ಈಚೆಗೆ ಅಲ್ಲಿನ ರೈಲ್ವೆಗಳಲ್ಲಿ ಕೆಲಸಮಾಡತಕ್ಕವರು ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ನಾಲ್ಕಾರು ದಿನ ರೈಲ್ ಗಾಡಿಗಳ ಸಂಚಾರಕ್ಕೆ ಕುಂದಕವಾಗಿ, ಎಲ್ಲಾ ಪ್ರಾಂತ್ಯಗಳಲ್ಲೂ ಸರ್ಕಾರದವರು ಯುದ್ಧ ಕಾಲದ ಕಠಿಣತರವಾದ ಕಾನೂನುಗಳನ್ನು ಜಾರಿಗೆ ತಂದು, ಪ್ರಜೆಗಳ ಮುಖಂಡರನ್ನೇ ಗಲಭೆಯನ್ನು ಅಣಗಿಸುವುದಕ್ಕೆ ಮುಂದಾಳಾಗಿ ಮಾಡಿಕೊಂಡರು. ಹ್ಯಾಗೂ ಈಗ ಗಲಭೆಯು ತಕ್ಕಮಟ್ಟಿಗೆ ಕಡಮೆಯಾಗಿ ಮುಷ್ಕರಹಿಡಿದಿದ್ದ ಜನಗಳು ಮತ್ತೆ ಕೆಲಸಗಳನ್ನು ಮಾಡಿಕೊಂಡು ಬರುವಂತೆ ಆಗಿದೆ. ಇದು ದೀರ್ಘಕಾಲ ನಡೆದುಬಂದೀತೆಂದು ತೋರುವುದಿಲ್ಲ. ದಕ್ಷಿಣ ಆಫ್ರಿಕದಲ್ಲಿ ಕೂಲಿನಾಲಿನವರ ಮನಸ್ಸು ಇನ್ನೂ ಸ್ಥಿಮಿತಕ್ಕೆ ಬಂದಿಲ್ಲವಾದಕಾರಣ ಪುನಃ ಅವರು ಒಗ್ಗಟ್ಟಾಗಿ ಹೊರಟು ಗಲಭೆಮಾಡಿದರೂ ಮಾಡಬಹುದು.

ಗ್ರೇಟ್ ಬ್ರಿಟನ್‌ನಲ್ಲಿ ಯಾವುದಾದರೊಂದು ಭಾಗದೊಳಗೆ ಕೂಲಿನಾಲಿನವರು ಮುಷ್ಕರಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವುದು ಇದ್ದೇ ಇದೆ. ಹೀಗೆ ಮುಷ್ಕರಹಿಡಿಯುವುದರಿಂದ ಅವರ ಇಷ್ಟಾರ್ಥವೆಲ್ಲಾ ನೆರವೇರುವುದಿಲ್ಲವೆಂಬುವುದನ್ನು ನಾವೆಲ್ಲಾ ಕಂಡುಬಲ್ಲೆವು. ಲೀಡ್ಸ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯ ಸೇವಕಾಳಿಗಳು ಏಕವಾಗಿ ಹಟಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು, ಆದರೇನು, ಪುರಜನರು ಆ ಸೇವಕಾಳಿಗಳ ಆಶೆಯು ದುರಾಶೆಯೆಂದು ಪುರಸ್ಕಾರವಾಗಿ ಗೊತ್ತಾಯಿತಾದದ್ದರಿಂದ ತಾವೇ ಹೊರಟು ಆ ಸೇವಕರ ಕೆಲಸಗಳನ್ನು ವಹಿಸಿಕೊಂಡು ಮಾಡುತ್ತಾ ಬಂದರು. ಆಗ ಸೇವಕರು ಇದನ್ನು ನೋಡಿ ತಮ್ಮ ಹೋರಾಟವು ನಿರರ್ಥಕವೆಂದು ತಿಳಿದು ಮತ್ತೆ ತಾವಾಗಿಯೇ ತಮ್ಮ ಕೆಲಸಗಳ ಮೇಲೆ ಬರುವಂತಾಯಿತು.

ಯೂರೋಪಿನ ದಕ್ಷಿಣ ಪ್ರಾಂತ್ಯದಲ್ಲಿ ಅಲ್ಬೇನಿಯಾ ಎಂಬ ನೂತನವಾದ ಸಂಸ್ಥಾನದ ವಿಚಾರವಾಗಿ ಟರ್ಕಿಯವರಿಗೂ ಬಾಲ್ಕನ್ ಸಂಸ್ಥಾನಗಳಿಗೂ ಮನಃಕಷಾಯಗಳುಂಟಾಗಿರುವವು; ಮತ್ತೂ ಟರ್ಕಿಯವರ ಕೆಲವು ದ್ವೀಪಗಳನ್ನು ಕಿತ್ತು ಗ್ರೀಸ್ ರಾಜ್ಯದವರಿಗೆ ವಹಿಸಿರುವುದೂ ಮನೋವ್ಯಥೆಗೆ ಕಾರಣವಾಗಿದೆ. ಬಹುಶಾ ಇಷ್ಟರಲ್ಲೇ ಈ ಕಷ್ಟನಷ್ಟಗಳೆಲ್ಲಾ ನಿವಾರಣೆಯಾಗಿ, ನೆಮ್ಮದಿಯೂ ಸುಖ ಸಂತೋಷವೂ ಮತ್ತೆ ಲಭ್ಯವಾಗುವವೆಂದು ಕಾಣುತ್ತದೆ. ಆದರೇನು, ಈಗ ನಡೆದಿರುವ ವ್ಯವಸ್ಥೆಯು ಆ ಪ್ರಾಂತ್ಯದಲ್ಲಿ ಶಾಶ್ವತವಾದ ನೆಮ್ಮದಿಯನ್ನು ಕಾಪಾಡಿಕೊಂಡು ಬರುವಂಥಾದ್ದೆಂದು ತೋರುವುದಿಲ್ಲ.

ಉತ್ತರ ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ಸಂಸ್ಥಾನಕ್ಕೆ ಸಂಸ್ಥಾನವೇ ಗಲಭೆಯಲ್ಲಿ ಮುಳುಗಿ ತೇಲುತ್ತಿದೆ. ಪ್ರಜೆಗಳ ಮುಖಂಡರು ದಂಡುಕಟ್ಟಿ ಗವರ್ನ್‌ಮೆಂಟನ್ನು ತಲೆಕೆಳಗು ಮಾಡಬೇಕೆಂದು ಹೋರಾಡುತ್ತಲೂ ಕಡಿದಾಡುತ್ತಲೂ ಬಂದಿದ್ದಾರೆ. ಗವರ್ನ್‌ಮೆಂಟಿನವರು ತಮ್ಮ ಸಾಲಗಳನ್ನು ಕೊಟ್ಟು ತೀರಿಸಲಾರದೆ ಇದ್ದಾರೆ. ಈಗಿನ ವಿದ್ಯಮಾನಗಳನ್ನು ನೋಡಿದರೆ ಪ್ರಜಾ ಪಕ್ಷದವರೇ ಗವರ್ನ್‌ಮೆಂಟಿನವರಿಗಿಂತ ಬಲಿಷ್ಠರಾಗಿದ್ದಾರೆಂದೂ, ಅವರು ಕೆಳಗೆ ಬೀಳುತ್ತಿದ್ದಾರೆಂದೂ ತೋರುವುದು. ಈ ಮೆಕ್ಸಿಕೋ ರಾಜ್ಯಕ್ಕೆ ನೆಮ್ಮದಿ ಸುಖ ಸಂತೋಷಗಳು ಲಭ್ಯವೇ ಇಲ್ಲವೋ ಏನೋ. ದರ್ಪ ಪರಾಕ್ರಮಗಳುಳ್ಳ ಗವರ್ನ್‌ಮೆಂಟು ಏರ್ಪಡಾದ ಹೊರತು ಆ ರಾಜ್ಯಕ್ಕೆ ಏಕಗೆಯುಂಟಾಗುವುದಿಲ್ಲ. ಈಗ ಅಲ್ಲಿರುವ ದೊಡ್ಡ ಕಷ್ಟವೇನೆಂದರೆ, ಸಕಲ ಪ್ರಜೆಗಳಿಗೂ ಸಮ್ಮತನಾಗಿಯೂ ಸಂಸ್ಥಾನವನ್ನು ಧರ್ಮದಿಂದಲೂ ಪ್ರೀತಿಪೂರ್ವಕವಾಗಿಯೂ ಆಳಿ ನಿರ್ವಹಿಸತಕ್ಕ ಪುರುಷನ್ಯಾರೂ ಇನ್ನೂ ದೊರಕಲಿಲ್ಲ.

ಈ ರೀತಿ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಕಷ್ಟ ಮನೋವ್ಯಥೆಗಳು ಕಾಣಬರುತ್ತಲಿದ್ದಾಗ್ಯೂ ಮುಂದೇನು ಗತಿ ಎಂದು ಚಿಂತಿಸುವುದಕ್ಕೆ ಕಾರಣವಿರುವುದಿಲ್ಲ ಪ್ರಪಂಚವು ದಿನೇದಿನೇ ಅಭಿವೃದ್ಧಿಯಾಗುತ್ತಿದೆ. ಗಂಡಸರೂ ಹೆಂಗಸರೂ ತಮ್ಮ ಕಷ್ಟಸ್ಥಿತಿಯನ್ನು ನಿವಾರಣೆಮಾಡಿಕೊಂಡು ಮೇಲಕ್ಕೆ ಹತ್ತಬೇಕೆಂದು ಸಾಹಸಪ್ರಯತ್ನಗಳನ್ನು ಮಾಡುತ್ತಿದ್ದಾರೆ, ಹೋರಾಟವೂ ಶ್ರಮವೂ ಪಟ್ಟ ಹೊರತು ಯಾರೂ ಯಾವ ಭಾಗದಲ್ಲೂ ಅಭಿವೃದ್ಧಿ ಹೊಂದಲಾರರು. ಎದುರು ಪಕ್ಷವನ್ನು ನೋಡದೇನೇ ಜಾರಿಸತಕ್ಕ ಶಕ್ತಿಗಳು ಪರಸ್ಪರ ಒಪ್ಪುವುದು ವಿಫಲ ಪ್ರಯಾಸ ಆದರೆ ವಿಷಯಗಳ ಜ್ಞಾನವೂ ತಿಳುವಳಿಕೆಯೂ ಹೆಚ್ಚಿ, ಸನ್ಮಾರ್ಗಾವಲಂಬನೆಯು ಹರಡಿದ ಹಾಗೆಲ್ಲಾ ಜನಗಳು ದುರಭಿಮಾನಗಳನ್ನೂ ಹೋರಾಟಗಳನ್ನೂ ವರ್ಜಮಾಡಿ ಗುದ್ದಾಟ ಕಡಿದಾಟಗಳನ್ನೂ ಬಿಟ್ಟುದೇನೇ ವ್ಯಾಜ್ಯ ವ್ಯವಹಾರಗಳನ್ನೆಲ್ಲಾ ಇತ್ಯರ್ಥಪಡಿಸಿಕೊಳ್ಳುವರು ಪ್ರಪಂಚದಲ್ಲಿ ಸ್ವಾತಂತ್ರ್ಯವೂ ಸಹೋದರತ್ವವೂ ಪರರ ಇಂಗಿತವನ್ನು ಅರಿತು ನಡೆಯತಕ್ಕವರೂ ಇನ್ನೂ ಹೆಚ್ಚಾಗಬೇಕು ಅಂಥಾ ದಿನವು ಹೆಚ್ಚಿದ ಪಕ್ಷದಲ್ಲಿ ಅವರು— "ಇತರರು ನಿಮ್ಮ ವಿಷಯದಲ್ಲಿ ಯಾವ ರೀತಿ ವರ್ತಿಸಬೇಕೆಂದು ಅಪೇಕ್ಷಿಸುತ್ತೀರೋ ನೀವೂ ಅವರ ವಿಷಯದಲ್ಲಿ ಅದೇ ರೀತಿ ವರ್ತಿಸುವವರಾಗಿ" ಎಂಬ ಸರ್ವೋತ್ಕೃಷ್ಟವಾದ ವಿಧಿಯನ್ನನುಸರಿಸಿ ನಡೆಯುತ್ತಾ ಬಂದಾರು.

ದೇವರನ್ನು ಸೇವಿಸುವುದು ಹೇಗೆ?

ಕೆಲವು ವರುಷಗಳ ಹಿಂದೆ ಉತ್ತರ ಹಿಂದುಸ್ಥಾನದ ಒಂದು ಪ್ರಾಮುಖ್ಯವಾದ ಸಂಸ್ಥಾನದಲ್ಲಿ ಮಹಾ ವಿದ್ವಾಂಸರೂ ಸಮರ್ಥರೂ ಆಗಿದ್ದ ಒಬ್ಬ ದಿವಾನರು ಇದ್ದರು. ಅವರು ತುಂಬಾ ಕಾರ್ಯದಕ್ಷತೆಯೂ ವೈರಾಗ್ಯವೂ ಉಳ್ಳ ಅಧಿಕಾರಿಗಳಾಗಿ, ತಾವು ಕೈಕೊಂಡಿದ್ದ ಕೆಲಸಕ್ಕೆ ತಮ್ಮ ತನುಮನಗಳನ್ನೊಪ್ಪಿಸಿ, ಸ್ವಾಮಿಭಕ್ತಿಪರಾಯಣರಾಗಿದ್ದರು ಒಂದು ದಿನ ಒಬ್ಬ ಯೂರೋಪಿಯನ್ ಆಫೀಸರು ಅವರ ಬಳಿಗೆ ಬಂದು, ಸಂಭಾಷಣೆಮಾಡಲು ತೊಡಗಿದರು ಅವರು ಮಾತನಾಡಿದ ಅನೇಕ ವಿಷಯಗಳಲ್ಲಿ, ದೇವರನ್ನು ಸೇವಿಸುವುದು ಹೇಗೆ? ಮನುಷ್ಯನು ಆತನಿಗೆ ಸಲ್ಲಿಸಬೇಕಾದ ಧರ್ಮವೇನು? ಎಂಬೀವಿಷಯಗಳೂ ಸೇರಿದ್ದುವು. ಆಗ ಆ ದಿವಾನರು—ಒಂದು ಸಂಸ್ಥಾನದಲ್ಲಿ ಕೆಲಸಮಾಡುತ್ತಿರುವ ಕಾಲದಲ್ಲಿಯೇ ದೇವರನ್ನು ಸೇವಿಸುತ್ತಾ ಬರುವುದು ಅಸಾಧ್ಯ, ರಾಜ್ಯದ ಕಾರ್ಯಗಳನ್ನೂ ಮಹಾರಾಜರವರಿಗೆ ಸಲ್ಲಿಸತಕ್ಕ ಧರ್ಮಗಳನ್ನೂ ಕೈಕೊಳ್ಳುವುದಕ್ಕಾಗಿ ನನ್ನ ಬುದ್ಧಿಸಾಮರ್ಥ್ಯಗಳನ್ನೆಲ್ಲಾ ವಿನಿಯೋಗಿಸುತ್ತಲಿರುವೆನು; ಈ ಮಧ್ಯೆ ದೇವರನ್ನೂ ಸೇವಿಸುವುದಕ್ಕೆ ನನಗೆ ಸಮಯ ಸಿಕ್ಕುವುದಿಲ್ಲ; ನನ್ನ ಉದ್ಯೋಗದ ಅವಧಿಯು ಗತಿಸದನಂತರ ನಾನು ವಿರಕ್ತನಾಗಿ, ಸನ್ಯಾಸತ್ವವನ್ನು ಧರಿಸಿ, ನನ್ನ ಕಾಲ, ಜ್ಞಾನ, ಸಾಮರ್ಥ್ಯ ಇವುಗಳನ್ನೆಲ್ಲಾ ದೇವರ ಸೇವೆಗೆ ವಿನಿಯೋಗಿಸುತ್ತಾ ಬರುವೆನೆಂದು ಹೇಳಿದರು ಮತ್ತು ಆ ಸಮರ್ಥರಾದ ದಿವಾನರು ತಾವು ಹೇಳಿದಂತೆಯೇ ತಮ್ಮ ಉದ್ಯೋಗವನ್ನು ಬಿಟ್ಟ ಮೇಲೆ ಸನ್ಯಾಸಿಗಳಾದರು

ದೇವರನ್ನು ಸೇವಿಸುವುದರ ವಿಷಯ ಇಂತಹ ಅಭಿಪ್ರಾಯವು ನಮ್ಮ ಭಾರತೀಯಲ್ಲಿ ಸರ್ವಸಾಧಾರಣವಾಗಿರುತ್ತದೆ. ಮನುಷ್ಯನನ್ನೂ ದೇವರನ್ನೂ ಏಕ ಕಾಲದಲ್ಲಿ ಸೇವಿಸುತ್ತಾ ಬರುವುದು ಅಸಾಧ್ಯವಾದ ಕಾರ್ಯವೆಂದು ಅನೇಕಾನೇಕರು ಭಾವಿಸುತ್ತಿರುವರು. ಲೌಕಿಕ ಕಾರ್ಯಗಳು ಬೇರೆ, ದೇವರನ್ನು ಸೇವಿಸುವುದು ಬೇರೆ ಎಂದು ಅವರು ಹೇಳುವರು ಜನಗಳಲ್ಲಿ ಇಂತಹ ಅಭಿಪ್ರಾಯವು ಇರುವುದರಿಂದ ಸಾಧಾರಣವಾಗಿ ವ್ಯಾವಹಾರಿಕ ಕಾರ್ಯಗಳಲ್ಲಿ ಅವರನ್ನು ನಂಬುವುದು ಕಷ್ಟ. ಕೆಲಸವನ್ನು ಜಾರಿಗೆ ತರುವುದಕ್ಕೂ ದೇವರನ್ನು ಸೇವಿಸುವುದಕ್ಕೂ ಬೇರೆ ಬೇರೆ ಸೂತ್ರಗಳನ್ನು ಇಟ್ಟುಕೊಂಡಿರುವರು ಕೆಲಸಗಾರರಲ್ಲಿ ಅನೇಕರು—ಸುಳ್ಳು ಹೇಳದಿದ್ದರೆ ನಮ್ಮ ಕೆಲಸವು ಸಾಗುವುದಿಲ್ಲವೆಂದು ಬಹು ಧೈರ್ಯವಾಗಿ ಹೇಳುವುದನ್ನು ನಾವೆಲ್ಲರೂ ಕೇಳುತ್ತೇವೆ ಸುಳ್ಳು ಹೇಳುವುದೇ ಮುಂತಾದ ದುರಭ್ಯಾಸಗಳು ದೇವರ ಸೇವೆಗೆ ಅಯೋಗ್ಯವಾದ ಕಾರ್ಯಗಳಾಗಿರುತ್ತವೆಂದು ಅವರು ಸ್ಪಷ್ಟವಾಗಿ ತಿಳಿದುಕೊಂಡಿದ್ದಾಗ್ಯೂ ಅವುಗಳು ವ್ಯಾಪಾರಕ್ಕೆ ಆವಶ್ಯಕವಾದುವುಗಳೆಂದು ಭಾವಿಸಿಕೊಂಡಿರುವರು.

ವ್ಯಾವಹಾರಿಕ ಕಾರ್ಯವನ್ನೂ ದೇವರ ಸೇವೆಯನ್ನೂ ಈ ರೀತಿಯಲ್ಲಿ ಪ್ರತ್ಯೇಕಿಸುವುದರಿಂದ ತುಂಬಾ ಅನರ್ಥಗಳುಂಟಾಗುತ್ತವೆ. ಇದರಿಂದ ಮನುಷ್ಯನಲ್ಲಿರುವ ಸುಗುಣಗಳು ಹೋಗಿಬಿಡುತ್ತವೆ, ದೇಶವು ಕ್ಷೀಣಗತಿಗೆ ಬರುತ್ತದೆ. ಅವನು ನಂಬಿಕೆಗರ್ಹನಲ್ಲದೆ ಇರುವುದರಿಂದ ಅವನು ಸುಳ್ಳುಹೇಳುತ್ತಾನೆ, ಮೋಸಮಾಡುತ್ತಾನೆ, ಕಡಮೆ ತೂಕವನ್ನೂ ಅಳತೆಯನ್ನೂ ಕೊಡುತ್ತಾನೆ, ಜನಗಳನ್ನು ಮೋಸಪಡಿಸುವುದಕ್ಕೆ ಇನ್ನೂ ಹಲವು ಪ್ರಯತ್ನಗಳನ್ನು ಮಾಡುತ್ತಾನೆಂಬ ದೂರುಗಳು ಅವನಿಗೆ ವಿರೋಧವಾಗಿ ಇದ್ದೇ ಇರುತ್ತವೆ ಹೀಗೆ ಮನುಷ್ಯನ ಗುಣನಡತೆಗಳು ಕೆಟ್ಟುಹೋಗುವುದಲ್ಲದೆ ದೇಶದಲ್ಲಿ ನಡೆಯುವ ವ್ಯಾಪಾರಕ್ಕೆ ಬಹಳ ಮಟ್ಟಿಗೆ ಕುಂದಕವುಂಟಾಗುವುದು. ಇಂಥವರು ತಮ್ಮ ಕೆಲಸದಿಂದ ನಿವೃತ್ತರಾದ ಮೇಲೆ ತಾವು ಮಾಡಿದ ಪಾಪಗಳಿಗಾಗಿ ಪ್ರಾಯಶ್ಚಿತ್ತಮಾಡಬೇಕೆಂಬ ಉದ್ದೇಶದಿಂದ ದೇವಸ್ಥಾನಗಳನ್ನೂ, ಛತ್ರಗಳನ್ನೂ ಜಲಾಶ್ರಯಗಳನ್ನೂ ಕಟ್ಟಿಸುವರು.

ವ್ಯಾವಹಾರಿಕ ಕಾರ್ಯಗಳನ್ನು ನಡಿಸುತ್ತಿರುವ ಕಾಲದಲ್ಲಿಯೇ ದೇವರನ್ನು ಸೇವಿಸುತ್ತಾ ಬರುವುದು ಅತ್ಯುತ್ತಮವಾದ ಬಾಳಾಗಿರುತ್ತದೆ ವಿದ್ಯಾರ್ಥಿಯು ವಿದ್ಯಾಭ್ಯಾಸಮಾಡುತ್ತಿರುವ ಕಾಲದಲ್ಲಿಯೇ ದೇವರನ್ನು ಸೇವಿಸಬೇಕು. ಕೂಲಿಯವನು ತನ್ನ ಕೆಲಸವನ್ನು ಮಾಡುವಾಗ ದೇವರು ಮೆಚ್ಚುವಂತೆ ಅದನ್ನು ಮಾಡಬೇಕು. ರೈತನು ತನ್ನ ಹೊಲವನ್ನು ಉಳುತ್ತಿರುವಲ್ಲಿ ದೇವರು ಸೃಷ್ಟಿಸಿರುವ ಈ ಸೌಂದರ್ಯವಾದ ಲೋಕವನ್ನು ಮತ್ತಷ್ಟು ಹೆಚ್ಚು ಸುಂದರವಾಗಿಯೂ ಫಲಭರಿತವಾದುವಾಗಿಯೂ ಮಾಡುವಂತೆ ತನ್ನ ಕೆಲಸವನ್ನು ಮಾಡಬೇಕು. ವರ್ತಕರೂ ವ್ಯಾಪಾರಿಗಳೂ ಇತರರ ಪ್ರಯೋಜನಾರ್ಥವಾಗಿ ಪದಾರ್ಥಗಳನ್ನು ಕೊಂಡು ಮಾರುತ್ತಿರುವಲ್ಲಿ ಸತ್ಯಸಂಧರಾಗಿಯೂ ನೀತಿವಂತರಾಗಿಯೂ ನಡೆದು ದೇವರನ್ನು ಸೇವಿಸುತ್ತಿರಬೇಕು. ಸರಕಾರದ ಉದ್ಯೋಗಸ್ಥನು ಸ್ವಾಮಿಭಕ್ತಿಯುಳ್ಳವನಾಗಿರುವುದಲ್ಲದೆ ಜನೋಪಕಾರಿಯಾಗಿದ್ದು ದೇವರನ್ನು ಸೇವಿಸಬೇಕು.

ನಾವು ದೇವರನ್ನು ಪ್ರೀತಿಸಿ, ಆತನನ್ನು ಸೇವಿಸಬೇಕೆಂಬ ಮನಸ್ಸುಳ್ಳವರಾದರೆ, ಹಾಗೆ ಮಾಡುವುದಕ್ಕೆ ನಮ್ಮ ಅನುದಿನದ ನಡತೆಯಲ್ಲಿ ಪ್ರಯತ್ನಪಡುತ್ತಿರುವೆವು. ಲೋಕವು ಕೆಟ್ಟದ್ದು, ನಾವು ಇದರಲ್ಲಿ ಇರುವಷ್ಟು ಕಾಲ ದೇವರನ್ನು ಸೇವಿಸುವುದಕ್ಕಾಗುವುದಿಲ್ಲವೆಂದು ಹೇಳುವುದು ಒಳ್ಳೆಯದಲ್ಲ. ಲೋಕವು ಕೆಟ್ಟದ್ದಲ್ಲ, ಆದರೆ ಅದರಲ್ಲಿರುವ ಜನಗಳು ಕೆಟ್ಟವರಾಗಿರುತ್ತಾರೆ. ದೇವರನ್ನು ಸೇವಿಸುತ್ತಿರುವವರು ದುಷ್ಟರನ್ನು ಶಿಷ್ಟರನ್ನಾಗಮಾಡುವುದಕ್ಕೆ ಅವರ ಮಧ್ಯದಲ್ಲಿ ಜೀವಿಸುತ್ತಿರಬೇಕು. ದೇವರನ್ನು ಸೇವಿಸುವುದಕ್ಕೆ ಸನ್ಯಾಸಿಯಾಗುವುದು ಲೋಕವು ಕೆಟ್ಟದಾಗಿಯೇ ಇರಲಿ, ಅಥವಾ ಅದು ಮತ್ತಷ್ಟು ಹೆಚ್ಚಾಗಿ ಕೆಟ್ಟರೂ ಕೆಡಲಿ ಎಂದು ಅದನ್ನು ಬಿಟ್ಟಂತೆ ಇರುವುದು, ನಾವು ಜನಗಳ ಮಧ್ಯದಲ್ಲಿಯೇ ಜೀವಿಸಿ, ದೇವರಲ್ಲಿ ನಮಗಿರುವ ಭಕ್ತಿಯಿಂದ ನಮ್ಮ ಅನುದಿನದ ನಡತೆಯಲ್ಲಿ ಅವರನ್ನು ಉತ್ತಮರನ್ನಾಗಮಾಡಬೇಕು. ಒಬ್ಬ ಮಹಾ ಭಕ್ತನು ಹೇಳಿರುವುದೇನೆಂದರೆ— "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ವಿಹಾಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" ಎಂಬುವುದೇ.

ಸ್ವದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಕೋಲಾರ್ ಚಿನ್ನದ ಗಣಿಗಳಲ್ಲಿ ಕಳೆದ ವಾರ ಎರಡು ಅನಾಹುತಗಳು ನಡೆದು ನಾಲ್ಕು ಮಂದಿ ಯೂರೋಪಿಯನ್ ಕಾರೀಗಾರರು ಮೃತಪಟ್ಟರೆಂದೂ, 6-7 ಕೂಲೀ ಜನರಿಗೆ ತುಂಬಾ ಗಾಯಗಳಾದವೆಂದೂ ಪ್ರಕಟವಾಗಿದೆ.

* * *

ರಾಜಧಾನಿಯ ಪೂರ್ವ ಭಾಗದಲ್ಲಿರುವ ಆಲನಹಳ್ಳಿ ಬಂಗಲೆ ರಸ್ತೆಯ ಬಾಜೂ ಒಡ್ಡರ ಪಾಳ್ಯದಲ್ಲಿ ಸರ್ಕಾರದ ಸಿಲ್ಲೇದಾರ್ ಕುದುರೆಗಳ ಲೈನ್ ಮನೆಗಳನ್ನು ಕಟ್ಟಿ 1915 ನೇ ಜೂನ್ ಆಖೈರಿನಲ್ಲಿ ಪೂರೈಸಬೇಕೆಂದು ಸ್ಯಾಂಕ್ಷನ್ ಆಗಿದೆ

* * *

ಮೈಸೂರು ಸಂಸ್ಥಾನದಲ್ಲಿ ದೊರಕಿರುವ ಪ್ರಾಚೀನ ಚಾಳುಕ್ಯರಾಜರ ಕಾಲದ ಒಂದು ಶಾಸನದ ಅರ್ಥವನ್ನು ಬಿಡಿಸಿ ಬರೆದುಕೊಡುವುದಕ್ಕಾಗಿ ನಮ್ಮ ಸರ್ಕಾರದವರು ಮದರಾಸಿನಿಂದ ಮಿ॥ ಎ. ರೀ ಎಂಬ ಪಂಡಿತರನ್ನು ಬೆಂಗಳೂರಿಗೆ ಕರಸಿಕೊಂಡಿದ್ದಾರೆ.

* * *

ಬೆಂಗಳೂರಿನಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡಿರುವುದರಿಂದ ಸ್ಯಾನಿಟರಿ ಕಮಿಷನರ ಅಪ್ಪಣೆ ಪ್ರಕಾರ ಅಲ್ಲಿನ ಅರಳೇಪೇಟೆ ಡಿಸ್ಪೆನ್ಸರಿಯಲ್ಲಿ ದಿವಹಿ ಸಾಯಂಕಾಲ 3 ಗಂಟೆಯ ಮೇಲೆ ಡಾಕ್ಟರು ಪ್ಲೇಗ್ ಇನಾಕ್ಯುಲೇಷನ್ ಹಾಕುವಂತೆ ಏರ್ಪಾಡುಮಾಡಿದ್ದಾರೆ

* * *

ಬೆಂಗಳೂರಿನಲ್ಲಿ ಮ॥ ರಂಗಸ್ವಾಮಿನಾಯುಡುರವರ ಹೆಂಡತಿ 18 ವರುಷದ ಪಂಚಲಕ್ಷ್ಮಮ್ಮನೆಂಬಾಕೆಯು ಸೋಮವಾರ ಬೆಳಿಗ್ಗೆ ಮನೆಯಲ್ಲಿ ಕಾಫಿ ಮಾಡುತ್ತಿದ್ದಾಗ ಆಕೆಯ ಸೀರೆಗೆ ಬೆಂಕಿಹತ್ತಿಕೊಂಡು ಮೈಯೆಲ್ಲಾ ಸುಟ್ಟು ಅಕಾಲ ಮರಣವನ್ನು ಹೊಂದಿದಳು.

* * *

ಸೀಮೆಯಿಂದ ಅಳಿಯನನ್ನು ನೋಡುವುದಕ್ಕಾಗಿ ಬೆಂಗಳೂರು ದಂಡಿಗೆ ಬಂದಿದ್ದ 70 ವರುಷದ ಮಿ॥ ಜಾರ್ಜ್ ಮಾರ್ಷಲ್ ಎಂಬಾತನು ಕಳೆದ ವಾರ ಕಾಯಿಲೆಯಾಗಿ ಮೊನ್ನೆ ಬುಧವಾರ ತೀರಿಹೋದನು. ಆತನ ಅಪೇಕ್ಷೆಯ ಪ್ರಕಾರ ಶವವನ್ನು ಸಾಗಿಸಿ ದಹನ ಮಾಡಿದರು.

* * *

ರಾಜಧಾನಿಯ ಮಂಡಿ ಮೊಹಲ್ಲೆಯಲ್ಲಿ ಸಿಂಗ್ರಯ್ಯನೆಂಬುವನ ಮನೆಗೆ ಕಳುವು ಮಾಡಬೇಕೆಂದು ನುಗ್ಗಿದ ಪುಟ್ಟ ಎಂಬ ಮಾದಿಗರವನನ್ನು ಹಿಡಿದು ವಿಚಾರಣೆ ಮಾಡುವಲ್ಲಿ ಅವನಿಗೆ ಹಿಂದೆ ಸಜಾ ಆಗಿತ್ತೆಂಬುವುದನ್ನು ತಿಳಿದು ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ 18 ತಿಂಗಳ ಕಠಿಣ ಸಜಾ, 10 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು.

* * *

ಹಿಂದೆ ನಮ್ಮ ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದು ಈಚೆಗೆ ಲಂಡನ್ ಪಟ್ಟಣದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲ್ಲಿನಲ್ಲಿ ಮೆಂಬರಾಗಿದ್ದ ಸರ್ ವಿಲ್ಲಿಯಂ ಲೀವಾರ್ನರ್, ಜಿ.ಸಿ.ಎಸ್.ಐ. ರವರು ಕಾಲವಾದರೆಂದು ಕಳೆದ ಸೋಮವಾರ ಸೀಮೆಯಿಂದ ಬಂದಿರುವ ವರ್ತಮಾನವನ್ನು ಪ್ರಕಟಿಸಲು ನಮಗೆ ವಿಷಾದವಾಗುತ್ತದೆ.

* * *

ಮೈಸೂರು ಗವರ್ನ್‌ಮೆಂಟ್ ಛಾಪಖಾನೆಯವರು ಬಹು ನೇತ್ರಾನಂದಕರವಾಗಿ ರಚಿಸಿರುವ ಚಿತ್ರಗಳುಳ್ಳ ಕ್ಯಾಲೆಂಡರು ನಮಗೆ ತಲುಪಿರುತ್ತದೆ ಮತ್ತು ರಾಜಧಾನಿಯ ಎಸ್. ಎಸ್ ಆರ್. ವೈದ್ಯಶಾಲಾ ಪಂಡಿತರು ಮ|| ಪಿ. ವೆಂಕಟಾಚಲ ಪಂಡಿತರವರು ತಾವು ಮಾರುವ ಔಷಧಗಳ ವಿವರಣೆಯುಳ್ಳ ಚಿತ್ರಸಹಿತವಾದ ಹೊಸ ವರುಷದ ಕ್ಯಾಲೆಂಡರನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ.

* * *

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಕಿವುಡುಮೂಗರ ಮತ್ತು ಕುರುಡರ ಪಾಠಶಾಲೆಯ ವಿದ್ಯಾರ್ಥಿಗಳು ತಾವು ಕಲಿತಿರುವ ವಿದ್ಯೆ ಸಂಗೀತ ಓದುಗಾರಿಕೆ ಮೊದಲಾದವುಗಳನ್ನು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಪ್ರದರ್ಶನ ಮಾಡಿದರು. ಡೆಪ್ಯುಟಿ ಕಮಿಷನರೇ ಮೊದಲಾದ ಅನೇಕ ಅಧಿಕಾರಿಗಳೂ ವರ್ತಕ ಮಂಡಲಿಯವರೂ ಹಾಜರಾಗಿದ್ದು ಪ್ರೋತ್ಸಾಹ ಪಡಿಸಿದರು ಆ ದಿನ ಹುಟ್ಟುವಳಿ ಆದ ಹಣವನ್ನು ದಕ್ಷಿಣ ಆಫ್ರಿಕಾ ರಿಲೀಫ್ ಫಂಡಿಗೆ ಕೊಟ್ಟುಬಿಟ್ಟರು.

ರಾಜಧಾನಿಯ ದೊಡ್ಡ ಕೆರೆ ಏರಿಯ ಹಿಂದೆ ಪೊಲೀಸ್ ಸ್ಟೇಷನ್ ಪಕ್ಕದಲ್ಲಿ ಟ್ರಸ್ಟ್ ಬೋರ್ಡಿನಿಂದ 6-7 ಸಾವಿರ ರೂಪಾಯಿ ಮುಟ್ಟಿಸಿ ಸಿಮೆಂಟ್ ಇಟ್ಟಿಗೆಯಿಂದ ಕಟ್ಟಿಸಿದ್ದ ಕಮಾನ್ ಸೇತುವೆಯು ಕಳಚಿ ಬಿದ್ದುಹೋಗಿ ಆ ಹಣವೆಲ್ಲಾ ನಷ್ಟವಾಯಿತು. ಈಗ ಮತ್ತೆ ಅದನ್ನು ಕಟ್ಟಿ 4-5 ತಿಂಗಳಲ್ಲಿ ಪೂರೈಸಿಕೊಡುವ ಸ್ಯಾಂಕ್ಷನ್ ಮಾಡಿದಾರೆ ಮೊದಲಿನ ನಷ್ಟವನ್ನು ಟ್ರಸ್ಟ್ ಬೋರ್ಡಿನವರೇ ವಹಿಸಿಕೊಂಡರೆಂದು ತಿಳಿಯುತ್ತದೆ

* * *

ಅರಮನೆಯ ನಾಟಕಸಭೆಯವರು ಮುಂದಿನ ಸೋಮವಾರ ಬೆಂಗಳೂರಿಗೆ ಹೋಗಿ ಅಲ್ಲಿ ಆರು ವಾರಗಳ ತನಕ ಇದ್ದು ನಾಟಕಗಳನ್ನು ಅಭಿನಯಿಸುವರು. ಹತ್ತಾರು ವರುಷಗಳಿಂದ ಈ ಕಂಪನಿಯವರು ಸ್ಥಳಾಂತರಕ್ಕೆ ಸಂಚಾರ ಹೊರಟಿರಲಿಲ್ಲ. ಸರ್ದಾರ್ ಗೋಪಾಲರಾಜೆ ಅರಸಿನವರ ಮೇಲ್ವಿಚಾರಣೆ ಮತ್ತು ತಿದ್ದುಪಾಟಿನಿಂದ ನೆಂಬರುಗಳ ವರ್ತನೆಯೂ ನಾಟಕಾಭಿನಯವೂ ಸೀನರಿಗಳ ವೈಖರಿಯೂ ತೃಪ್ತಿಕರವಾಗುತ್ತಾ ಬಂದಿರುವವು.

* * *

ವೈಟ್ ಫೀಲ್ಡ್ ನಿವಾಸಿಯಾದ ಮೇಜರ್ ಜಿ. ರಿಚರ್ಡ್ಸ್ ಎಂಬಾತನು ಕಳೆದ ಭಾನುವಾರ ಬೆಂಗಳೂರು ಸಿಟಿ ರಸ್ತೆಯಲ್ಲಿ ಸಂಚರಿಸುತ್ತಿದ್ದಾಗ ತನ್ನ ಜೇಬಿನಲ್ಲಿದ್ದ 100 ರೂಪಾಯಿನ ಕರೆನ್ಸಿ ನೋಟುಗಳು ಕಳುವಾದವೆಂದು ಪೊಲೀಸಿಗೆ ತಿಳಿಸಿದನು. ಪತ್ತೆ ತರದೂದು ನಡಿಸಿದ್ದರಲ್ಲಿ ಸಿಟಿ ಪೊಲೀಸಿನ ಡಿಟೆಕ್ಟಿವ್ ಕಾನ್ಸ್ಟೇಬಲ್ ಗೋವಿಂದು ಎಂಬುವನ ಬಳಿ ಆ ಪೈಕಿ 380 ರೂಪಾಯಿನ ನೋಟುಗಳು ಸಿಕ್ಕಿವೆ. ಇನ್ನೂ ಪತ್ತೆ ತರದೂದು ನಡೆಯುತ್ತಾ ಇದೆ.

* * *

ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿ ಜವಳಿ ಅಂಗಡಿಯನ್ನಿಟ್ಟಿದ್ದ ಆದು ಲಯ್ಯನೆಂಬುವನು ಮೊದಲನೇ ಹೆಂಡತಿ ಸತ್ತಮೇಲೆ ಸಂಜೀವಮ್ಮನೆಂಬ ಎರಡನೇ ಹೆಂಡತಿಯನ್ನು ಮದುವೆಮಾಡಿಕೊಂಡು ಅವಳು ಹೆತ್ತು ಸುಮಾರು ಒಂದು ತಿಂಗಳಾಗುವಲ್ಲಿ ಯಾವ ಕಾರಣಕ್ಕಾಗಿಯೋ ಅವಳಿಗೆ ಔಷಧದಲ್ಲಿ ವಿಷವನ್ನು ಬೆರಸಿ ಕೊಟ್ಟು ಕೊಂದುಹಾಕಿದನೆಂದು ಮೊಕದ್ದಮೆ ಬಂದು ಸೆಷನ್ಸ್ ಜಡ್ಜರು ಹಿಂದಿನ ವಾರ ಅವನಿಗೆ ಯಾವಜ್ಜೀವವೂ ಕಠಿಣ ಸಜಾ ಅನುಭವಿಸುವಂತೆ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಗೌರವ ಪ್ರೆಸಿಡೆಂಟರಾದ ದಿವಾನ್ ಬಹದೂರ್ ಮ|| ಕೆ. ಪಿ. ಪುಟ್ಟಣ್ಣಶೆಟ್ಟಿರವರು ಮ್ಯುನಿಸಿಪಾಲಿಟಿಯ ಬೀದಿ ಗುಡಿಸುವವರೇ ಮೊದಲಾದ ಬಡವರಿಗೆ ಸಹಾಯವಾಗುವಂತೆ ಒಂದು ಕೋಆಪರೇಟಿವ್ ಸೊಸೈಟಿಯನ್ನು ಕಳೆದ ವಾರ ಪ್ರಾರಂಭಿಸಿದರು ಅವರಲ್ಲಿ ಗಂಡಸರೂ ಹೆಂಗಸರೂ ಬಹಳ ಜನರು ಬಡ್ಡಿಗೆ 10,000 ರೂಪಾಯಿ ತನಕ ಸಾಲಮಾಡಿ, ಸಾಹುಕಾರರ ಸಂಕೋಲೆಗೆ ಸಿಕ್ಕಿ ಸಂಕಟಪಡುತಿದ್ದರು ಈ ಸೊಸೈಟಿಯು ಏರ್ಪಾಡಿನಿಂದ ಅವರ ಕಷ್ಟ ನಿವಾರಣೆಯಾದೀತೆನ್ನುವುದಕ್ಕೆ ಸಂಶಯವಿಲ್ಲ.

* * *

ರಾಜಧಾನಿಯಲ್ಲಿ ಲಿಂಗಯ್ಯನೆಂಬೊಬ್ಬ ಸೂಳಿಗರವನು ಗಬ್ಬದ ಹಸುವನ್ನು ಕದ್ದು ಇನ್ನೊಬ್ಬನ ಗಾಡಿಗೆ ಕಟ್ಟಿಕೊಂಡು ಹೋಗುತ್ತಿದ್ದವನನ್ನು ಜವಾದಾರ್ ಚಂದ್ರಶೇಖರಯ್ಯನವರು ಅನುಮಾನದ ಮೇಲೆ ಹಿಡಿದಿಟ್ಟುಕೊಂಡರು. ಆ ಹಸುವಿನ ಮಾಲೀಕನೂ, ಗಾಡಿಯ ಮಾಲೀಕನೂ ತಮ್ಮ ಮಾಲು ಕಳುವಾಯಿತೆಂದು ಹೇಳಿಕೊಂಡಾಗ ಅಪರಾಧಿಯ ಮೇಲೆ ಮೊಕದ್ದಮೆ ಮಾಡಿದ್ದರಲ್ಲಿ ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ತಪ್ಪುಗಳಿಗೂ ಹತ್ತು ಹತ್ತು ರೂಪಾಯಿನಂತೆ ಜುಲ್ಮಾನೆ ವಿಧಿಸಿದರು ಈ ಜವಾದಾರರು ಹೀಗೆಯೇ ಇಂಥಾ ದನದನ ಕಳುವನ್ನು ಕೆಲವು ಪತ್ತೆಮಾಡಿ, ಮೂಗುಪ್ರಾಣಿಗಳ ಕೊಲೆಯನ್ನು ತಪ್ಪಿಸಿರುತ್ತಾರೆ.

* * *

ಶ್ರೀಮನ್ ಮಹಾರಾಜರವರ ಆಜ್ಞಾನುಸಾರ ಸೆಕ್ರೆಟರಿ ಸರ್ದಾರ್ ಎಂ. ಗೋಪಾಲರಾಜೆ ಅರಸಿನವರು ಈ ವರುಷದ ಟೋರ್ನಮೆಂಟ್ ಕುಸ್ತಿಗಳ ಪಂದ್ಯವನ್ನು ಕಳೆದ ಸೋಮವಾರವೂ ಮಂಗಳವಾರವೂ ನಡಿಸಿ ಪೂರೈಸಿದರು ಜಟ್ಟಿಗಳ ಕುಸ್ತಿಯಲ್ಲಿ ಮೈಸೂರು ಕೃಷ್ಣಾಜಟ್ಟಿಯು ಬೆಂಗಳೂರು ವೆಂಕಟರಂಗಾಜಟ್ಟಿಯನ್ನು ಸೋಲಿಸಿದನು ಕರ್ನಾಟಕದವರಲ್ಲಿ ಬಸವಯ್ಯನು ರಾಂಪ್ರಸಾದನನ್ನೂ, ಚಿಕ್ಕಯ್ಯನು ಮಹಮದ್ ಸಾಬಿಯನ್ನೂ, ಕುಳ್ಳಯ್ಯನು [illegible]ನ್ನೂ ಕೆಡವಿದ್ದು ಕಡೆಯಲ್ಲಿ ಸರ್ದಾರರು ಗೆದ್ದವರಿಗೆ ತಲಾ ಒಂದು [illegible]ಯ ಕಪ್ಪನ್ನೂ 300 ರೂಪಾಯನ್ನೂ, ಸೋತವರಿಗೆ ತಲಾ 100 ರೂಪಾಯನ್ನೂ ಬಹುಮಾನವಾಗಿ ಕೊಟ್ಟರು ಗೆದ್ದವರು ಎಂದಿನಂತೆ ಊರಲ್ಲಿ ಮೆರವಣಿಗೆ ಮಾಡಿಸಿಕೊಂಡು ಹೋದರು.

* * *

ಕಣ್ಣಾಗಾಲದ ದಂಗೆ ಮೊಕದ್ದಮೆಯ ಅಪೀಲ್ ಮೊಕದ್ದಮೆಯು ಕಳೆದವಾರ ಬೆಂಗಳೂರು ಚೀಫ್ ಕೋರ್ಟಿನಲ್ಲಿ ಇತ್ಯರ್ಥವಾಯಿತು ಅಪರಾಧಿಗಳಾದ ಕಾಶೀಪತಯ್ಯ ಮತ್ತು ಪುಟ್ಟಸ್ವಾಮಿಗೌಡನಿಗೆ ಕೆಳಕೋರ್ಟಿನಲ್ಲಿ ವಿಧಿಸಲ್ಪಟ್ಟ ಏಳು ಮತ್ತು ನಾಲ್ಕು ವರುಷಗಳ ಕಠಿಣ ಸಜಾ ಖಾಯಂ ಮಾಡಲಾಗಿದೆ ಚೆನ್ನಯ್ಯ, ಕೆರೆಮನೆಭದ್ರ, ಮಾದ, ನಂಜುಂಡ, ವೀರತ್ತಯ್ಯ, ಮಾದ, ಬಿಡ್ಡ, ಗುರುಸಿದ್ದ ಎಂಬೀ ಎಂಟು ಮಂದಿ ಅಪರಾಧಿಗಳನ್ನು ಬಂದೀಖಾನೆಯಿಂದ ಬಿಡಿಸಿರುತ್ತಾರೆ ಇನ್ನು ಕೆಲವು ಅಪರಾಧಿಗಳ ಶಿಕ್ಷೆಯನ್ನು ಅಲ್ಪಸ್ವಲ್ಪ ಕಡಿಮೆ ಮಾಡಿದರು ಈ ಮೊಕದ್ದಮೆಯ ಪ್ರಾರಂಭದಲ್ಲಿ ಅಪರಾಧಿಗಳನ್ನೆಲ್ಲಾ ಪೈಕಿ ಸಾಕ್ಷಿಗಳಿಂದ ಗುರುತು ಹಿಡಿಸಿದ ಕ್ರಮವು ಪೊಲೀಸರಿಂದ ಸರಿಯಾಗಿ ನಡೆಸಲ್ಪಡಲಿಲ್ಲವೆಂದೂ, ಕಳುವಾಯಿತೆಂದೂ ದೋಚಲ್ಪಟ್ಟಿತೆಂದೂ ಹೇಳಿದ ವಸ್ತುಗಳನ್ನು ಮಾಲೀಕರು ಬಂದು ಗುರ್ತಿಸಿದ ಕ್ರಮವೂ, ಮನೆಗಳನ್ನು ನುಗ್ಗಿ ಶೋಧನೆ ಮಾಡಿದ ಕ್ರಮವೂ ತಪ್ಪುತಪ್ಪಾಗಿ ನಡಿಸಲ್ಪಟ್ಟಿವೆಂದೂ ಜಡ್ಜಿಯವರು ಕೆಳ ಸೆಷನ್ಸ್ ಜಡ್ಜರವರ ಅಭಿಪ್ರಾಯವನ್ನು ಒಪ್ಪಿಕೊಂಡಿದಾರೆ.

* * *

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಮೂರು ವಿಭಾಗಗಳನ್ನು ಅಭಿವೃದ್ಧಿ ಮಾಡುವುದಕ್ಕೆ 71,727 ರೂಪಾಯಿ ಖರ್ಚಾಗುವುದೆಂದು ಅಂದಾಜಾ ಪತ್ರಗಳನ್ನು ಟ್ರಸ್ಟ್ ಬೋರ್ಡಿನವರು ತಯಾರುಮಾಡಿ ಸೆಂಟ್ರಲ್ ಸ್ಯಾನಿಟರಿ ಬೋರ್ಡಿನವರ ಅಭಿಮತವನ್ನು ತಿಳಿಯುವುದಕ್ಕಾಗಿ ಕಳುಹಿಸಿದ್ದರು. ಆ ಬೋರ್ಡಿನವರು ಕಳೆದ 7ನೇ ತಾ ನಲ್ಲಿ ತೀರ್ಮಾನ ಮಾಡಿರುವುದೇನೆಂದರೆ--ಈ ಯೋಜನೆಯು ತೃಪ್ತಿಕರವಾಗಿರುವುದರಿಂದ ಗವರ್ನ್‌ಮೆಂಟಿನವರು ಇದರಂತೆ ಸ್ಯಾಂಕ್ಷನ್ ಮಾಡಬಹುದು ಅಭಿವೃದ್ಧಿ ಮಾಡುವುದಕ್ಕೋಸ್ಕರ ಮನೆಗಳನ್ನು ಒಡೆದು ಹಾಕಬೇಕಾಗಿರೋಣದರಿಂದ ಮನೆ ಕಳೆದುಕೊಳ್ಳುವವರು ಪಟ್ಟಣದಲ್ಲಿರುವ ಬೇರೆ ಮನೆಗಳೊಳಗೆ ಹೋಗಿ ಸೇರಿಕೊಂಡು ಅನಾರೋಗ್ಯವಾಗುವುದನ್ನು ತಪ್ಪಿಸುವುದಕ್ಕೆ ಟ್ರಸ್ಟ್ ಬೋರ್ಡಿನವರು ಯೋಗ್ಯವಾದ ಮನೆಗಳನ್ನು ಬೇಗನೆ ಕಟ್ಟಿಸಿ ಬಡಜನಗಳಿಗೆ ಬಿಕರಿ ಮಾಡಿ ಅವರಿಂದ ಕ್ರಯದ ಹಣವನ್ನು ಸುಲಭವಾದ ಕಂತುಗಳ ಪ್ರಕಾರ ವಸೂಲು ಮಾಡಿಕೊಳ್ಳಬೇಕು ಎಂಬದಾಗಿ ಸೂಚಿಸಿದಾರೆ. ಈ ಸಲಹೆಯನ್ನು ಟ್ರಸ್ಟ್ ಬೋರ್ಡಿನವರು ಹಿಂದೆಯೇ ಗವರ್ನ್‌ಮೆಂಟಿಗೆ ತಿಳಿಸಿದ್ದಾಗ ಅವರು ಅದು ಸಾಧ್ಯವಲ್ಲವೆಂದು ತಿರಸ್ಕರಿಸಿದ್ದರು. ಈಗ ಗವರ್ನ್‌ಮೆಂಟಿನವರು ಏನು ಮಾಡುವರೋ ನೋಡಬೇಕು.

ಮೈಸೂರು ಗೆಜೆಟ್ ಸಂಗ್ರಹ.

ಯಡಹಳ್ಳಿ ಟವನನ್ನು 1914 ನೇ ಫೆಬ್ರವರಿ ಲಾಗಾಯಿತು ಹೊಸ ರೆಗ್ಯುಲೇಷನ್ ಪ್ರಕಾರ ಮ್ಯುನಿಸಿಪಾಲಿಟಿಯಾಗಿ ಮಾಡಿದೆ.

ಮಳವಳ್ಳಿ ಟವನು 1911 ನೇ ಜನವರಿ ತಾ. 1 ರ ಲಾಗಾಯಿತು ಹೊಸ ರೆಗ್ಯುಲೇಷನ್ ಪ್ರಕಾರ ಇನ್ನಾರುತಿಂಗಳು ಮ್ಯುನಿಸಿಪಾಲಿಟಿಯಾಗಿರತಕ್ಕದ್ದು.

ಶ್ರೀರಂಗಪಟ್ಟಣದ ತಾಲ್ಲೂಕು ಚಂದಗೌಡನ ಕೊಪ್ಪಲನ್ನೂ ಮಂಡ್ಯದ ಕೊಪ್ಪಲನ್ನೂ ಅರಕೆರೆ ಯೂನಿಯನ್ ಪಂಚಾಯತಿಯಿಂದ ತೆಗೆದುಹಾಕಿದೆ.

ಚಿಣ್ಣಗದ ಪೋಸ್ಟ್ ಮೇಸರ್ ಪಟೇಲ್ ಮಿ|| ದ್ಯಾವಪ್ಪಗೌಡರನ್ನು ಮೂಡಿಗೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಿರುತ್ತಾರೆ

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮಿ|| ಟಿ. ಲಕ್ಷ್ಮೀನರಸಿಂಹರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಮಿ|| ಎಂ. ಪಿ. ವಿಶ್ವನಾಥರಾಯರನ್ನು ಅ|| ಕಮಿಷನರ ದರ್ಜೆಯಲ್ಲಿ 1912 ನೇ ಜೂಲೈ ಲಾಗಾಯಿತು 3 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಅ|| ಕಮಿಷನರ್ ಮಿ|| ಎಸ್. ವೆಂಕಟರಂಗಯ್ಯವರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೂ, ಮಿ|| ಸಿ. ನಾರಾಯಣರನ್ನು ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿನ್‌ಟೆಂಡೆಂಟರ ಕೆಲಸಕ್ಕೂ ವರ್ಗಮಾಡಿದೆ.

ರಾಜಕಾರ್ಯಪ್ರಸಕ್ತ ರಾವ್ ಬಹದೂರ್ ಮಿ|| ಡಿ. ರಾಮರಾಯರಿಂದ ಮಿ|| ಡಿ. ಕೆ. ಡಾರಾಷಾರವರು ಡಿಸೆಂಬರ್ ತಾ. 31 ರಲ್ಲಿ ಸರ್ವೆ ಸೂಪರಿನ್‌ಟೆಂಡೆಂಟ್ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ.

ಮಿ|| ಪಿ. ಎಸ್. ಅಚ್ಯುತರಾಯರಿಂದ ಮಿ|| ಟಿ. ಪಿ. ಆರುಮುಗಂ ಮುದಲಿಯಾರ್ರು ಡಿಸೆಂಬರ್ ತಾ. 31 ರಲ್ಲಿ ಸೀನಿಯರ್ ಸರ್ಜನ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಮುಲ್ತಾನ್‌ನಿಂದ ಲಾಹೋರಿಗೆ ಕಳೆದ ವಾರ ಬಂದ ರೈಲಿನಲ್ಲಿ 61 ಚೀಲಗಳಲ್ಲಿದ್ದ ಸುಮಾರು 16,000 ರೂಪಾಯನ್ನೂ ಯಾರೋ ಕಳುವು ಮಾಡಿದಾರೆ

* * *

ವೈಸ್‌ರಾಯರವರು ಖೇರಿ ಎಂಬ ಕಾಡಿನಲ್ಲಿ ಮೂರು ಚಿರತೆಗಳನ್ನೂ ಇತರ ಮೃಗಗಳನ್ನೂ ಷಿಕಾರಿ ಮಾಡಿಕೊಂಡು ಕಳೆದ ವಾರ ಲಕ್ನೋ ನಗರಕ್ಕೆ ದಯಮಾಡಿದರು,

* * *

ಕಲ್ಕತ್ತಾ ಪಟ್ಟಣದ ಸಮುದ್ರತೀರದಲ್ಲಿ ಒಂದು ಸರ್ಕಾರಿ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ಸುಮಾರು ನಾಲ್ಕು ಲಕ್ಷ ರೂಪಾಯಿನ ಆಸ್ತಿಪಾಸ್ತಿಗಳು ನಾಶವಾದವು.

* * *

ಕರಾಚಿ ಪಟ್ಟಣದಲ್ಲಿ ಸಿಂದ್ ಬ್ಯಾಂಕಿನ ಮ್ಯಾನೆಜರಾಗಿದ್ದ ಮ|| ಪೀತಾಂಬರದಾಸ್ ವಲ್ಲಭದಾಸ್ ಎಂಬಾತನು ಬ್ಯಾಂಕಿನ ಹಣವನ್ನು ಅಪಹರಿಸಿರುತ್ತಾನೆಂದು ಮೊಕದ್ದಮೆ ಆಗಿದೆ.

* * *

ಇಂಗ್ಲಾಂಡಿನಲ್ಲಿರುವಂಥಾ ಪಬ್ಲಿಕ್ ಸ್ಕೂಲುಗಳಂಥಾ ಒಂದು ಸ್ಕೂಲನ್ನು ಕಲ್ಕತ್ತಾಪಟ್ಟಣದಲ್ಲಿ ಸ್ಥಾಪಿಸಿ ನಡಿಸಬೇಕೆಂದು ದೇಶೀಯ ದೊಡ್ಡಮನುಷ್ಯರು ಏರ್ಪಾಡುಮಾಡುತ್ತಿದಾರೆ. ಇದಕ್ಕೆ ಬೇಕಾಗುವ ಸಹಾಯವನ್ನು ಒದಗಿಸತಕ್ಕದೆಂದು ಲೆಫ್ಟಿನೆಂಟ್ ಗವರ್ನರವರು ಅಪ್ಪಣೆ ಕೊಡಿಸಿರುವರು.

* * *

ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮ ನಿವಾರಣೆಗೋಸ್ಕರ ಲೆಫ್ಟಿನೆಂಟ್ ಗವರ್ನರವರು ಪಬ್ಲಿಕ್ ಪ್ರಜೆಗಳಿಂದ ಧರ್ಮದ ಫಂಡನ್ನು ಕೂಡಿಸಬೇಕೆಂದು ಗೊತ್ತುಮಾಡಿದಾರೆ. ಹಿಂದುಸ್ಥಾನದ ಕ್ಷಾಮನಿವಾರಣೆಯ ಫಂಡಿನ ಕಮಿಟಿಯವರು ಕಳೆದ ವಾರ ಆ ಫಂಡಿನಿಂದ 50,000 ರೂಪಾಯಿಗಳನ್ನು ಸಂಯುಕ್ತ ಆಧಿಪತ್ಯದ ಕ್ಷಾಮನಿವಾರಣೆಗೆ ವಿನಿಯೋಗಿಸುವಂತೆ ಒಪ್ಪಿ ತೀರ್ಮಾನಮಾಡಿದರು.

* * *

ಹಿಂದುಸ್ಥಾನದಿಂದ ಸಿಲೋನ್ ದ್ವೀಪಕ್ಕೆ ರೈಲ್ ರಸ್ತೆ ಹಾಕಿರುವುದನ್ನು ಫೆಬ್ರವರಿ ತಾ. 24 ಕ್ಕೆ ಪ್ರಾರಂಭಮಾಡುತ್ತಾರೆ ಸಿಲೋನ್‌ನಿಂದ ಆ ದಿನ ರೈಲ್ ಗಾಡಿಯು ಹೊರಟು ತಲಮನ್ನಾರ್ ಸ್ಟೇಷನ್‌ಗೆ ಬರುವುದು ಅಲ್ಲಿ ಪ್ರಯಾಣಿಕರು ಸಾಮಾನ್ ಸಮೇತ ಹಡಗಿನಲ್ಲಿ ಕುಳಿತು ಒಂದು ಗಂಟೆ ಹೊತ್ತಿನಲ್ಲಿ ಸಮುದ್ರವನ್ನು ದಾಟಿ ರಾಮೇಶ್ವರದ ಬಳಿ ಇರುವ ಧನುಷ್ಕೋಟಿಯಲ್ಲಿ ಇಳಿಯುತ್ತಾರೆ.

* * *

ಕಳೆದ ತಾ. 10ಕ್ಕೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ 6,955 ಜನರಿಗೆ ಪ್ಲೇಗ್ ತಗಲಿತು, 5,737 ಜನರು ಆ ರೋಗದಲ್ಲಿ ಕಾಲವಾದರು. ಇದರ ದಂಡಿಕೆ ಹ್ಯಾಗೆಂದರೆ— ಬೊಂಬಾಯಿ ಆಧಿಪತ್ಯ 782, ಮದ್ರಾಸ್ 375, ಬೀಹಾರ್ 1,036, ಸಂಯುಕ್ತ ಆಧಿಪತ್ಯ 2,866, ಪಂಜಾಬ್ 172, ಬರ್ಮ 219, ಮೈಸೂರು 128, ಹೈದರಾಬಾದ್ 135, ರಾಜಪುಟಾನಾ 13, ಆಸ್ಸಾಂ 1, ಈ ರೀತಿ ಮರಣಗಳಾಗಿವೆ.

* * *

ಬೊಂಬಾಯಿ ಪಟ್ಟಣದ ವಿಲ್ಲೆ ಪಾರ್ಲೆ ಎಂಬ ಬಂಗಲೆಯಲ್ಲಿದ್ದ ಆರ್ಯಸಮಾಜದ ಪ್ರಸಿದ್ಧ ಮುಖಂಡರಾದ ಸ್ವಾಮಿ ನಿತ್ಯಾನಂದಜಿ ಯವರು ಕಳೆದ ತಾ 9 ನೇ ಶುಕ್ರವಾರ ಬೆಳಿಗ್ಗೆ ಕಾಲವಾದರು ಇವರು ಅನೇಕ ದೊಡ್ಡ ಪುಸ್ತಕಗಳನ್ನು ರಚಿಸಿರುತ್ತಾರಲ್ಲದೆ ಎಲ್ಲಾ ಭಾಗಗಳಲ್ಲೂ ಸಂಚಾರ ಮಾಡಿ ಆರ್ಯಸಮಾಜದ ತತ್ವಗಳನ್ನು ಬೋಧಮಾಡುತ್ತಾ ಎಲ್ಲರಲ್ಲೂ ಭಕ್ತಿ ಪ್ರೀತಿಗಳನ್ನು ಸಂಪಾದಿಸಿಕೊಂಡಿದ್ದರು.

* * *

ಪೂನಾ ಪಟ್ಟಣದಲ್ಲಿ ವಕೀಲರಾಗಿರುವ ಮ|| ಆರ್. ಎಚ್. ಶಿಂತ್ರೆ, ಬಿ.ಎ., ಎಲ್.ಎಲ್.ಬಿ. ಯವರು ಕೃಷ್ಣಾಜಿ ವಿಶ್ವನಾಥ ಬಾಪಟ್ ಎಂಬಾತನ ಮನೆಗೆ ರಾತ್ರಿ ಹೊತ್ತು ನುಗ್ಗಿ ಸುಮಾರು 1,000 ರೂಪಾಯಿನ ನಗನಾಣ್ಯಗಳನ್ನು ಕದ್ದರೆಂದೂ, ಇನ್ನೊಬ್ಬರ ಆಭರಣಗಳನ್ನು ಅಪಹರಿಸಿದರೆಂದೂ ಕಳೆದ ವಾರ ದಸ್ತಗಿರಿ ಮಾಡಲ್ಪಟ್ಟರು. ಈ ಮೊಕದ್ದಮೆಯು ಆ ಪ್ರಾಂತ್ಯದಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ.

* * *

ತಿನ್ನವೆಲ್ಲಿ ಜಿಲ್ಲಾ ಕಡಾಯಂ ಸ್ಟೇಷನ್ ಪೊಲೀಸ್ ಇನ್ಸ್‌ಪೆಕ್ಟರಾದ ಎ. ಎಸ್. ಲಕ್ಷ್ಮೀನಾರಾಯಣಅಯ್ಯರ್ ಎಂಬುವನು ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಅಪರಾಧಿಗಳಾಗಬೇಕಾದವರಿಂದ 175 ರೂಪಾಯಿ ಲಂಚತೆಗೆದುಕೊಂಡನೆಂದು ಫಿರ್ಯಾದಾಗಿ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಆ ಇನ್ಸ್‌ಪೆಕ್ಟರಿಗೆ ಒಂಭತ್ತು ತಿಂಗಳ ಕಠಿಣಸಜವನ್ನೂ, 300 ರೂಪಾಯಿ ಜುಲ್ಮಾನೆಯನ್ನೂ ಕಳೆದ ಸೋಮವಾರ ವಿಧಿಸಿರುತ್ತಾರೆ.

* * *

ಟಿಬೆಟ್ ರಾಜ್ಯದಲ್ಲಿ ಬೇರೆಬೇರೆ ಆಧಿಪತ್ಯಗಳ ಗವರ್ನರುಗಳ ನಾಲ್ಕು ಮಂದಿ ಕುಮಾರರುಗಳನ್ನು ಇಂಗ್ಲಿಷ್ ಗವರ್ನ್‌ಮೆಂಟಿನವರು ವಿಲಾಯಿತಿಗೆ ಕರೆದುಕೊಂಡುಹೋಗಿ ಅಲ್ಲಿನ ವಿದ್ಯಾಶಾಲೆಗಳಲ್ಲಿ ತರಬೇತು ಮಾಡುತ್ತಿದಾರೆ. ಇವರು ಕಳೆದ ಏಳು ತಿಂಗಳಲ್ಲಿ ಬಹಳ ಚೆನ್ನಾಗಿ ವಿದ್ಯೆ ಕಲಿತು ತುಂಬಾ ಚಟುವಟಿಕೆಯಾಗಿದಾರೆಂತಲೂ, ಇನ್ನು ಮುಂದೆ ಅವರನ್ನು ಸೈನ್ಯದಲ್ಲಿ ಸೇರಿಸಿಕೊಂಡು ಶಿಕ್ಷಣವನ್ನು ಮಾಡಬೇಕೆಂದಿರುವುದಾಗಿಯೂ ತಿಳಿಯುತ್ತದೆ

* * *

ತಿರುಪತಿಯಿಂದ ಸ್ವಲ್ಪ ದೂರದಲ್ಲಿರುವ ಕಂಚಂಪರಿಪಲ್ಲಿ ಎಂಬ ಗ್ರಾಮದೊಳಗೆ ಸುಬ್ಬಯ್ಯನೆಂಬುವನೂ ಇನ್ನು ಕೆಲವರೂ ಆಯುಧಗಳನ್ನು ಇಟ್ಟುಕೊಂಡು ಆಗಾಗ್ಗೆ ಡಕಾಯಿತಿಗಳನ್ನು ನಡಿಸುತ್ತಾರೆಂಬು ತಿಳಿದದ್ದರಿಂದ ಅವರ ಮನೆಗಳನ್ನು ಶೋಧನೆಮಾಡುವುದಕ್ಕೆ ಮ್ಯಾಜಿಸ್ಟ್ರೇಟರು ಪೊಲೀಸಿನವರ ಸಮೇತ ಗ್ರಾಮಕ್ಕೆ ಹೋದರು. ಸುಬ್ಬಯ್ಯನೂ ಅವನ ಜೊತೆಗಾರರೂ ಸೇರಿ ಸರ್ಕಾರದವರನ್ನು ಮನೆಯಲ್ಲಿ ಸೇರಿಸಿಕೊಂಡು ಹಿಂಸೆಮಾಡಿದರೆಂದು ಈಗ 21 ಜನರ ಮೇಲೆ ಮೊಕದ್ದಮೆ ಆಗಿ ವಿಚಾರಣೆಯಲ್ಲಿದೆ.

* * *

ತಿರುವಾಂಕೂರು ಸಂಸ್ಥಾನದ ರಾಜಧಾನಿಯಲ್ಲಿ ಕಳೆದ ವಾರ ಒಂದು ಸರ್ಕಾರಿ ಆನೆಯು ಮಸ್ತಾಗಿ ತನ್ನ ಮಾವುತನನ್ನು ಓಡಿಸಿಕೊಂಡುಹೋಗಿ ಬಹು ಭಯಂಕರವಾದ ರೀತಿಯಲ್ಲಿ ಕೊಂದುಹಾಕಿ, ಇನ್ನೊಬ್ಬನನ್ನು ತುಳಿದು ಪ್ರಾಣಸಂಕಟಪಡಿಸಿ ಸಮೀಪದಲ್ಲಿರುವ ತೋಟಗಳಿಗೆ ನುಗ್ಗಿ ಬೆಳೆ ಫಲಗಿಡಗಳನ್ನು ಕಿತ್ತು ಹಾಳುಮಾಡಿ ನದಿಯೊಳಗೆ ಹೋಗಿ ನಿಂತುಕೊಂಡಿತು ಅಲ್ಲಿಗೆ ಕೆಲವು ಕುಮಕಿ ಆನೆಗಳನ್ನು ತೆಗೆದುಕೊಂಡು ಹೋದರು. ಮಸ್ತಿ ಆನೆಯು ಅವುಗಳನ್ನೆಲ್ಲಾ ಓಡಿಸಿ, ನದಿಯಿಂದ ಹೊರಕ್ಕೆ ಬಂತು. ಕಡೆಗೆ ಅದನ್ನು ಬಹಳ ಸಾಹಸಪಟ್ಟು ಹಿಡಿದರು.

* * *

ಅಟ್ಟಾಕ್ ಡಿಸ್ಟ್ರಿಕ್ಟಿಗೆ ಸೇರಿದ ಸೂಗರ್ವೆಂಬ ಗ್ರಾಮದಲ್ಲಿ ಕರಣಸಿಂಗ್ ಎಂಬ ಸಾಹುಕಾರನ ಮನೆಗೆ ಹದಿನೆಂಟು ಮಂದಿ ಡಕಾಯಿತಿ ಕಳ್ಳರು ಮದ್ದುಗುಂಡು ಕತ್ತಿ ದೊಣ್ಣೆಗಳ ಸಮೇತ ನುಗ್ಗಿ ಕರಣಸಿಂಗ್, ಅವನ ಹೆಂಡತಿ, ಅವನ ಮಗ, ಮನೆ ಆಳುಗಳನ್ನೆಲ್ಲಾ ಗಾಯಮಾಡಿ ಹೊಡೆದು ಕೆಡವಿ ಮನೆಯನ್ನು ಸೂರೆಮಾಡಿಕೊಂಡು ಹೋಗುವಾಗ್ಗೆ ಗ್ರಾಮಸ್ಥರು ಅವರನ್ನು ಹಿಡಿಯಬೇಕೆಂದು ಸಾಹಸಪಟ್ಟದ್ದನ್ನು ನೋಡಿ ಕಳ್ಳರು ಅವರನ್ನೆಲ್ಲಾ ಗುಂಡಿನಿಂದ ಹೊಡೆದು ಕೊಲ್ಲುವುದಾಗಿ ಗಾಬರಿಪಡಿಸಿ, ತಲೆ ತಪ್ಪಿಸಿಕೊಂಡು ಹೋಗಿಬಿಟ್ಟರು. ಪೊಲೀಸಿನವರು ಪತ್ತೆ ತರದೂದು ನಡಿಸುತ್ತಿದಾರೆ.

* * *

ಹರ್ಬರ್ಟ್ ಹ್ಯಾಂಪ್ಟನ್ ಎಂಬ ಶಿಲ್ಪಿಯು ವಿಕ್ಟೋರಿಯಾ ಮಹಾರಾಣೀರವರ, ಎಡ್ವರ್ಡ್ ಚಕ್ರವರ್ತಿಯವರ, ಮತ್ತು ಜಾರ್ಜ್ ಸಾರ್ವಭೌಮರ ಲೋಹ ಪ್ರತಿಮೆಗಳನ್ನು ಚೆನ್ನಾಗಿ ಮಾಡಿ ಹಿಂದುಸ್ಥಾನಕ್ಕೆ ಕಳುಹಿಸಿ ಹೆಸರುವಾಸಿಯನ್ನು ಪಡೆದಿರುತ್ತಾನೆ ಬೆಂಕಿಪುರದ ಪ್ರಜೆಗಳು ಚಂದಾ ಕೂಡಿಸಿರುವ ಹಣದಲ್ಲಿ ನಮ್ಮ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಛಾಯಾ ಪ್ರತಿಮೆಯನ್ನು ಮಾಡಿಸಬೇಕೆಂದು ಗೊತ್ತುಮಾಡಿ ಆ ಶಿಲ್ಪಿಗೆ ತಿಳಿಸಿದ್ದರಿಂದ ಅತನು ಸೀಮೆಯಿಂದ ಈ ವಾರ ಹೊರಟು ಹಿಂದುಸ್ಥಾನಕ್ಕೆ ಬಂದು, ವೈಸ್‌ರಾಯಿಯವರ ನಕ್ಕಲ್ ಆಕೃತಿಯನ್ನು ಸಾಕ್ಷಾತ್ತಾಗಿ ತಯಾರುಮಾಡಿಕೊಂಡು ಹೋಗುವನು.

* * *

ಲಾಹೋರ್ ಪಟ್ಟಣದಲ್ಲಿ ಪ್ರಕಟವಾಗುವ ಜಮೀನ್‌ದಾರ್ ಎಂಬ ಮಹಮದೀಯರ ಪತ್ರಿಕೆಯ ಸಂಪಾದಕರು ಸರ್ಕಾರದ ಹುಕುಂ ಪ್ರಕಾರ 2,000 ರೂಪಾಯಿ ಠೇವಣಿ ಕಟ್ಟಿದ್ದರು. ಆ ಪತ್ರಿಕೆಯಲ್ಲಿ ದುಷ್ಟ ವಿಷಯಗಳನ್ನು ಪ್ರಕಟಮಾಡಿದರೆಂದು ಸರ್ಕಾರದವರು ಆ ಠೇವಣಿ ಹಣವನ್ನು ಜುಲ್ಮಾನೆಯಾಗಿ ತೆಗೆದುಕೊಂಡರು. ಅದರ ಮೇಲೆ ಎಡಿಟರವರು 4,000 ರೂಪಾಯಿ ಠೇವಣಿ ಕಟ್ಟಿ ಆ ಪತ್ರಿಕೆಯನ್ನು ನಡಿಸುತ್ತಾ ಬಂದದ್ದರಲ್ಲಿ ಸರ್ಕಾರಕ್ಕೆ ವಿರೋಧವಾದ ಸಂಗತಿಗಳನ್ನು ಪ್ರಕಟಿಸಿದರೆಂದು ಸರ್ಕಾರದವರು ಆ ಹಣವನ್ನು ಖಜಾನೆಗೆ ತೆಗೆದುಕೊಂಡುಬಿಟ್ಟರು. ಈಚೆಗೆ ಕೆಲವು ತಿಂಗಳ ಹಿಂದೆ ಎಡಿಟರು 10,000 ರೂಪಾಯಿ ಠೇವಣಿ ಕಟ್ಟಿದ್ದರು. ಈಗ ಮತ್ತೆ ಆ ಪತ್ರಿಕೆಯಲ್ಲಿ ದುಷ್ಟವಾದ ಸಂಗತಿಗಳನ್ನು ಪ್ರಕಟಿಸಿದ್ದಕ್ಕಾಗಿ ಪಂಜಾಬ್ ಗವರ್ನ್‌ಮೆಂಟಿನವರು ಕಳೆದ ವಾರ ಆ ಠೇವಣಿ ಹಣವನ್ನು ಜುಲ್ಮಾನೆಯಾಗಿ ತೆಗೆದುಕೊಂಡದ್ದಲ್ಲದೆ ಸುಮಾರು 15,000 ರೂಪಾಯಿನ ಸಾಮಾನುಗಳುಳ್ಳ ಆ ಅಚ್ಚಿನ ಕಾರ್ಖಾನೆಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡಿರುತ್ತಾರೆ.

* * *

ಪೂರ್ವ ಬಂಗಾಳಾ ರೈಲ್ವೆಯಲ್ಲಿ ಬಹು ಅಪೂರ್ವವೂ ಭಯಂಕರವೂ ಆದ ಎರಡು ಕೊಲೆಗಳು ನಡೆದಿರುತ್ತವೆ. ಮಿಲ್ಲಾ ಡಿಸ್ಟ್ರಿಕ್ಟಿಗೆ ಸೇರಿದ ನಾಲ್ಕು ಜನ ಮಹಮದೀಯರು ಗೋಕಾಯಿಗಳನ್ನು ಕೊಂಡುತರಬೇಕೆಂದು ಫುಸ್ತನಾ ಸ್ಟೇಷನ್‌ನಿಂದ ಠಾಕರ್‌ಗಟ್ಟಾ ಸ್ಟೇಷನ್‌ಗೆ ಹೊರಟರು ಆ ಪೈಕಿ ಇಬ್ಬರು ನಾಲ್ಕು ಮಂದಿ ಕಾಬೂಲಿಗಳು ಕುಳಿತಿದ್ದ ಗಾಡಿಯಲ್ಲೂ, ಇಬ್ಬರು ಮತ್ತೊಂದು ಗಾಡಿಯಲ್ಲೂ ಕುಳಿತುಕೊಂಡು ಪ್ರಯಾಣಮಾಡಿದರು ಆ ನಾಲ್ಕುಜನ ಕಾಬೂಲಿಗಳೂ ತಮ್ಮ ಕೂಡ ಕುಳಿತಿದ್ದ ಮಹಮದೀಯರಿಬ್ಬರನ್ನೂ ಕೊಂದು ತಮ್ಮ ಬಳಿ ಇದ್ದ ಚೀಲಗಳಲ್ಲಿ ತುಂಬಿಟ್ಟುಕೊಂಡರು. ಮತ್ತೊಂದು ಗಾಡಿಯಲ್ಲಿ ಕುಳಿತಿದ್ದ ಇಬ್ಬರು ಮಹಮದೀಯರು ತಮ್ಮ ಜೊತೆಗಾರರು ಎಲ್ಲಿ ಹೋದರೋ ತಿಳಿಯಲಿಲ್ಲವೆಂದು ಸ್ಟೇಷನ್ ಮಾಸ್ಟರಿಗೆ ಹೇಳಿಕೊಂಡರು. ಸ್ಟೇಷನ್ ಮಾಸ್ಟರು ನೋಡುವುದಕ್ಕೆ ಹೋದಾಗ ಆ ನಾಲ್ಕು ಜನ ಕಾಬೂಲಿಗಳು ಅವರನ್ನು ಹೆದರಿಸಿ ಓಡಿಸಿಬಿಟ್ಟರು. ಬಳಿಕ ಗಾರ್ಡನು ಗಾಡಿಯೊಳಕ್ಕೆ ನುಗ್ಗಿ ಕಾಬೂಲಿಗಳ ಸಾಮಾನುಗಳನ್ನೆಲ್ಲಾ ಅಜಮಾಯಿಷಿಮಾಡಿದಾಗ ಚೂರುಚೂರಾಗಿ ಕತ್ತರಿಸಿದ್ದ ಮಹಮದೀಯರ ಶವಗಳು ಒಂದು ಚೀಲದಲ್ಲಿ ಸಿಕ್ಕಿದವು. ಈಗ ಆ ನಾಲ್ಕು ಮಂದಿ ಕಾಬೂಲಿಗಳನ್ನೂ ಹಿಡಿದು ತನಿಖೆ ಮಾಡುತ್ತಿದಾರೆ

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಜನವರಿ 15 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	ರೂ	5,97,960
,, (2) ಡಿಪಾಜಿಟ್ಟುಗಳು	,,	4,70,269
,, (3) ಇತರೆ	,,	4,385
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	10,72,614

ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	1,66,345
,, (2) ಖಾತೆ ಮತ್ತು ಇತರ ಸಾಲಗಳು	,,	4,72,469
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,07,250
,, (4) ಇನ್‌ವೆಸ್ಟ್‌ಮೆಂಟುಗಳು	,,	1,50,829
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	1,58,145
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6,416
,, (7) ಇತರೆ	,,	11,160
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	10,72,614

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಬಹುಮಾನ ವಿನಿಯೋಗ

ಚನ್ನರಾಯಪಟ್ಟಣದ ಎ ವಿ ಸ್ಕೂಲು

ಕಳೆದ ತಾ 11ನೇ ಭಾನುವಾರ ಇಲ್ಲಿ ಗೌರ್ನಮೆಂಟ್ ಎ ವಿ ಸ್ಕೂಲಿನಲ್ಲಿ ಬಹುಮಾನಗಳನ್ನು ವಿನಿಯೋಗಿಸಿದರು ಬೆಳಿಗ್ಗೆ 10 ಘಂಟೆಯಿಂದ ಟ್ರಾವೆಲರ್ಸ್ ಬಂಗಲೆ ಮೈದಾನಿನಲ್ಲಿ ಫುಟ್‌ಬಾಲ್ ಪಂದ್ಯ ನಡೆಯಿತು ಸಾಯಂಕಾಲ 6 ಘಂಟೆಗೆ ಅ|| ಕಮಿಷನರಾದ ಮ|| ಅಪ್ಪಣ್ಣಯ್ಯಂಗಾರ್ರವರೂ, ಮ|| ಅಮಲ್ದಾರ್ ಸುಂದರರಾಜಯ್ಯಂಗಾರ್ರೂ, ಇಂಜನಿಯರ್ ಮ|| ಕೃಷ್ಣಸ್ವಾಮಯ್ಯಂಗಾರ್, ಪಬ್ಲಿಕ್ ಪ್ರಾಸಿಕ್ಯೂಟರ್ ಮ|| ವೆಂಕಟಕೃಷ್ಣಯ್ಯನವರೂ, ಪೋಸ್ಟ್ ಇನ್‌ಸ್ಪೆಕ್ಟರೂ, ಪೋಲೀಸ್ ಇನ್‌ಸ್ಪೆಕ್ಟರೂ, ಶಿರಸ್ತೇದಾರ್ರು ಸಬ್ ರೆಜಿಸ್ಟ್ರಾರ್ರು, ಡಾಕ್ಟರು, ಪೋಸ್ಟ್ ಮಾಸ್ಟರೇ ಮೊದಲಾದ ಆಫೀಸರುಗಳೂ, ಅನೇಕ ಸ್ಥಳೀಯ ದೊಡ್ಡಮನುಷ್ಯರೂ ಎ ವಿ ಸ್ಕೂಲಿನಲ್ಲಿ ಸೇರಿದರು ಮ|| ಅಪ್ಪಣ್ಣ ಅಯ್ಯಂಗಾರ್ರವರು ಅಗ್ರಾಸನವನ್ನಲಂಕರಿಸಿದರು

ಇಂಗ್ಲಿಷು, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಬಾಲಕರು ದೇವರ ಪ್ರಾರ್ಥನೆಗಳನ್ನು ಮಾಡಿದನಂತರ ಸಭೆಯವರೆಲ್ಲರೂ ಕೇಳಿಕರು ಸಂಚಾರಿಯಾದ ಧೊರೆಯೂ ರೈತನೂ, ಅಲೆಕ್ಸಾಂಡರನೂ ಕಳ್ಳನೂ ಎಂಬವುಗಳನ್ನು ಇಂಗ್ಲಿಷಿನಲ್ಲೂ, ಆಟ ಮತ್ತು ಕೆಲಸ ಎಂಬುವುದನ್ನು ಇಂಗ್ಲಿಷು ಮತ್ತು ಕನ್ನಡದಲ್ಲೂ ಬಾಲಕರು ಅಭಿನಯಿಸಿದ ಮೇಲೆ ಇಂಗ್ಲಿಷ್, ಸಂಸ್ಕೃತ, ಕನ್ನಡ ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ಪದ್ಯಗಳನ್ನು ಬಹಳ ಇಂಪಾಗಿ ಹೇಳಿದರು ಬಳಿಕ ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಇಂಗ್ಲಿಷಿನಲ್ಲೂ, ಮಹಾರಾಜ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಕನ್ನಡದಲ್ಲೂ ಬಾಲಕರು ಬಹಳ ಮಧುರವಾಗಿ ಗಾನಮಾಡಿದರು ಹೆಡ್ ಮಾಸ್ಟರವರು ಈಚೆಗೆ ಈ ಸ್ಕೂಲಿನ ಬಾಲಕರ ಸಂಖ್ಯೆಯು 108 ರಿಂದ 190 ರ ವರೆಗೆ ಹೆಚ್ಚಿರುವುದಾಗಿಯೂ, 5 ಕೊಟಡಿಗಳುಳ್ಳ ಈಗಿನ ಕಟ್ಟಡದಲ್ಲಿ 9 ತರಗತಿಗಳನ್ನು ನಡಿಸುತ್ತಿರುವುದು ಪ್ರಯಾಸವಾಗಿರುವುದೆಂದೂ, ಸ್ಕೂಲಿಗೆ ಪ್ಲೇಗ್ರೌಂಡ್ ಇಲ್ಲದಿರುವುದರಿಂದ ಬಾಲಕರ ಆಟಪಾಟಗಳಿಗೂ ತೊಂಟ ಮುಂತಾದ್ದನ್ನು ಮಾಡಿಸುವುದಕ್ಕೂ ಅನುಕೂಲವಿಲ್ಲವೆಂದೂ, ಇಲ್ಲಿ ಕೆಳಗಿನ ಮೂರು ಇಂಗ್ಲಿಷ್ ತರಗತಿಗಳಲ್ಲಿ ಪಾಠ ಹೇಳಲು ಒಬ್ಬ ಇಂಗ್ಲಿಷ್ ಮಾಸ್ಟರ ಸಹಾಯ ಅವಶ್ಯವಾಗಿ ಬೇಕಾಗಿರುವುದೆಂದೂ, ಸ್ಕೂಲಿನಲ್ಲಿ ವಾರಕ್ಕೊಂದಾವರ್ತಿ ನಡೆಯುವ ಬಾಲಕರ ವಾಚಕಮಂದಿರದ ಅಭಿವೃದ್ಧಿಗೆ ಪುರಜನರ ಸಹಾಯವೂ ಪ್ರೋತ್ಸಾಹವೂ ಬೇಕಾಗಿದೆ ಎಂದೂ, ಇವೇ ಮೊದಲಾದ ವಿಷಯಗಳನ್ನು ಇಂಗ್ಲಿಷಿನಲ್ಲಿ ಉಪನ್ಯಾಸಮಾಡಿ, ಈ ಸ್ಕೂಲಿನಲ್ಲಿ ಬಾಲಕರಿಗಾಗಿ ಒಂದು ಪುಸ್ತಕ ಭಂಡಾರವನ್ನು ಏರ್ಪಾಡುಮಾಡಿದ ಮಾಜಿ ಹೆಡ್ ಮಾಸ್ಟರನ್ನು ವಂದಿಸಿ ಸ್ಕೂಲ್ ರಿಪೋರ್ಟು ಮುಕ್ತಾಯಮಾಡಿ, ಅಗ್ರಾಸನಾಧಿಪತಿಗಳಿಗೂ ಸಭಿಕರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿದ ಬಳಿಕ ಸ್ಕೂಲಿನ ವಾರ್ಷಿಕ ಪರೀಕ್ಷೆಯಲ್ಲಿ ಪ್ಯಾಸಾದ ಹುಡುಗರಲ್ಲಿ ಕೆಲವರಿಗೆ ಮೊಕ್ಕದ್ದ ಬಹುಮಾನದ ಪುಸ್ತಕಗಳನ್ನು ಹೆಡ್ ಮಾಸ್ಟರು ಆಯಾ ಬಾಲಕರಿಗೆ ಅಗ್ರಾಸನಾಧಿಪತಿಗಳ ಹಸ್ತದಿಂದ ಕೊಡಿಸಿದರು

ಬಳಿಕ ಅಗ್ರಾಸನಾಧಿಪತಿಗಳು ಬಾಲಕರ ಸಂತೋಷಕರವಾದ ಅಭಿನಯಗಳನ್ನೂ, ಹೆಡ್ ಮಾಸ್ಟರು ಹೇಳಿದ ಸ್ವಾರಸ್ಯವಾದ ಉಪನ್ಯಾಸವನ್ನೂ ಕೇಳಿ ತಮಗೆ ಬಹಳ ಹರ್ಷವಾಯಿತೆಂದೂ, ಸ್ಕೂಲಿಗೆ ಬೇಕಾದ ಸಲಕರಣೆಗಳು ಶೀಘ್ರದಲ್ಲೇ ಇಲಾಖೆಯವರಿಂದ ಒದಗಿಸಲ್ಪಡುವುದೆಂಬ ನಂಬಿಕೆ ಇರುತ್ತೆಂದೂ ಇಂಗ್ಲಿಷ್‌ನಲ್ಲಿ ಬಹಳ ರಂಜನೆಯಾಗುವಂತೆ ಹೇಳಿ, ಬಾಲಕರಿಗೆ ಕೆಲವು ಬುದ್ಧಿವಾದಗಳನ್ನೂ ಅಪ್ಪಣೆಕೊಡಿಸಿದರಲ್ಲದೆ ಹೆಡ್ ಮಾಸ್ಟರನ್ನೂ ಬಹಳ ಚಟುವಟಿಕೆಯಾಗಿ ಸ್ಕೂಲ್ ಕೆಲಸಮಾಡುತ್ತಿರುವ ಅ|| ಮಾಸ್ಟರುಗಳೆಲ್ಲರನ್ನೂ ಶ್ಲಾಘಿಸಿದರು ಅನಂತರ ಅಗ್ರಾಸನಾಧಿಪತಿಗಳೇ ಮೊದಲಾದ ಸಭಿಕರೆಲ್ಲರಿಗೂ ಹಾರಾ ಹಾಕಿ ತಾಂಬೂಲ ಕೊಟ್ಟು ಆ ದಿನದ ಸಭೆಯನ್ನು ಮುಕ್ತಾಯಮಾಡಿದರು

ಮಾರನೇ ದಿನ ಸಾಯಂಕಾಲ ಬಂಗಲೆಯ ಮೈದಾನಿನಲ್ಲಿ ಪುನಹ ಫುಟ್‌ಬಾಲ್ ಪಂದ್ಯ ಜರುಗಿತು. ಆಟ ಪೂರೈಸುವದರಲ್ಲೇ ಅಮಲ್ದಾರ್ರು, ಸಬ್ ರೆಜಿಸ್ಟ್ರಾರ್ರು, ಇನ್‌ಸ್ಪೆಕ್ಟರೇ ಮೊದಲಾದ ದೊಡ್ಡಮನುಷ್ಯರೆಲ್ಲಾ ಬಂದು ಸಭೆ ಸೇರಿದರು ಫುಟ್‌ಬಾಲ್ ಕ್ಲಬ್ಬಿನಿಂದ ಒದಗಿಸಲ್ಪಟ್ಟ ಬಹುಮಾನಗಳೂ ಮಾಸ್ಟರುಗಳು ಉಚಿತವಾಗಿ ಕೊಟ್ಟ ಬಹುಮಾನ ಪುಸ್ತಕಗಳೂ ಆಯಾ ಬಾಲಕರಿಗೆ ಅಮಲ್ದಾರ್ರ ಹಸ್ತದಿಂದ ಕೊಡಿಸಲ್ಪಟ್ಟವು ಬಳಿಕ ಸಭಿಕರಿಗೂ ಬಾಲಕರೆಲ್ಲರಿಗೂ ಫಲಾಹಾರಬೆಳೆದು ತಾಂಬೂಲ ಕೊಟ್ಟಮೇಲೆ ಸಭೆ ಮುಕ್ತಾಯವಾಯಿತು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ರವಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಪ್ಸೇರಿ ತಿಂಗಳು ಕಡ್ಡಿಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಕಳೆದ ಡಿಸೆಂಬರ್ ತಿಂಗಳ ಲೆಕ್ಕಗಳು ಓದಲ್ಪಟ್ಟವು ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ 13,109 ಚಿಲ್ಲರೆ ರೂಪಾಯಿ ವಸೂಲಾಯಿತೆಂದೂ, 16,787 ಚಿಲ್ಲರೆ ರೂಪಾಯಿ ಖರ್ಚಾಯಿತೆಂದೂ ತಿಳಿಯಿತು ಜನನ 239, ಮರಣ ಒಟ್ಟು 151 ರಲ್ಲಿ ಒಂದು ವರುಷದೊಳಗಿನ ಶಿಶುಗಳು 26 ಮಂದಿಯೂ, ಐದು ವರುಷದೊಳಗಿನ ಮಕ್ಕಳು 19 ಮಂದಿಯೂ ಕಾಲವಾಗಿರುವಂತೆ ಗೊತ್ತಾಯಿತು ಆಡಿಟರುಗಳ ರಿಪೋರ್ಟಿನಿಂದ ಮ್ಯುನಿಸಿಪಾಲಿಟಿಯ ಇಂಜನಿಯರ್ ಇಲಾಖೆಯಲ್ಲಿ ಸಿ ರೆಜಿಸ್ಟರ್ ಎಂಬ ಬಹು ಮುಖ್ಯವಾದ ಪುಸ್ತಕವನ್ನು ಆರು ತಿಂಗಳಿಂದ ಬರೆದೇ ಇಲ್ಲವೆಂದು ಗೊತ್ತಾಯಿತು ಇದಕ್ಕೆ ಪ್ರೆಸಿಡೆಂಟರು ಈ ಲೆಕ್ಕವನ್ನು ಎರಡು ವರುಷಗಳಿಂದ ಬರೆದಿರಲಿಲ್ಲವೆಂದೂ, ಅವನ್ನೆಲ್ಲಾ ಈಗ ಕ್ರಮವಾಗಿ ಬರಸುತ್ತಾ ಬಂದಿದೇವೆಂದೂ, ಈಗ ಬಾಕಿ ಇರುವ ಲೆಕ್ಕವನ್ನು ಮುಂದಿನ ತಿಂಗಳೊಳಗಾಗಿ ಬರಸಿಡುವುದಾಗಿಯೂ ಸಮಾಧಾನ ಹೇಳಿದರು ಆಡಿಟರುಗಳು ಅಕ್ರಾಯಿ ಉತ್ಪತ್ತಿಯು ಸರಿಯಾದ ಮೇಲ್ತನಿಖೆ ಇಲ್ಲದ್ದರಿಂದ ಕ್ರಮೇಣ ಕಡಮೆಯಾಗುತ್ತಿದೆ ಎಂದು ಸೂಚಿಸಿದ್ದಕ್ಕೆ ಪ್ರೆಸಿಡೆಂಟರು ಆ ಇಲಾಖೆಯ ವಿದ್ಯಮಾನಗಳನ್ನೆಲ್ಲಾ ಬೇಗನೆ ಪರಿಶೀಲಿಸಿ ಕ್ರಮಪಡಿಸುತ್ತೇವೆಂದು ತಿಳಿಸಿದರು ಆಡಿಟರುಗಳು ಅಕ್ರಾಯಿ ಇಲಾಖೆಯಲ್ಲಿ ಹಣಕಾಸು ಕೊಟ್ಟು ತೆಗೆದುಕೊಂಡು ಇರತಕ್ಕ ನೌಕರರಿಂದ ಜಾಮೀನ್ (ಸಿಕ್ಯೂರಿಟಿ) ತೆಗೆದುಕೊಳ್ಳಬೇಕೆಂದು ಸೂಚಿಸಿದ್ದನ್ನು ಪ್ರೆಸಿಡೆಂಟರು ಆ ರೀತಿ ಮಾಡುವುದಾಗಿ ತಿಳಿಸಿದರು

ತೆರಿಗೆ ಮುಂತಾದದ್ದನ್ನು ವಸೂಲ್ಮಾಡುವುದಕ್ಕೆ ಹೆಚ್ಚು ಸಿಬ್ಬಂದಿಯನ್ನು ಹಂಗಾಮಿಯಾಗಿ ನೇಮಕಮಾಡಿದಾಗ ವಸೂಲಾಗಬೇಕಾದ ಬಾಕಿ ಹಣ 56,000 ರೂಪಾಯಿ ಉಳಿದಿತ್ತು ಈ ಪೈಕಿ ಕಾರಣಾಂತರಗಳಿಂದ ವಸೂಲಾಗತಕ್ಕದ್ದಲ್ಲವೆಂದು ಮ್ಯುನಿಸಿಪಲ್ ಕೌನ್ಸಲರುಗಳ ಶಿಫಾರಸಿನಂತೆ ಸರ್ಕಾರದವರು 32,000 ರೂಪಾಯಿತನಕ ರಿಮಿಷನ್ ಮಾಡಿದರು ಈಗ ಇನ್ನೂ 22,000 ರೂಪಾಯಿ ಬಾಕಿ ಉಳಿದಿರುವುದರಿಂದ ಈ ಹೆಚ್ಚು ಸಿಬ್ಬಂದಿಯವರು ಸರಿಯಾಗಿ ವಸುಲಾತಿಯನ್ನು ನಡಿಸಿಲ್ಲವೆಂಬುವದು ಗೊತ್ತಾಗುತ್ತದೆಂದು ಮ|| ರಂಗಯ್ಯಂಗಾರ್ಯರೇ ಮುಂತಾದವರು ಸೂಚಿಸಿದರು ಪ್ರೆಸಿಡೆಂಟರು ಬೊಂಬಾಯಿನ ಕಡೆ ಸಂಚಾರವನ್ನು ತೀರಿಸಿಕೊಂಡು ಬಂದ ತರುವಾಯ ಈ ಬಾಬನ್ನು ತನಿಖೆಮಾಡಿ ಕ್ರಮಪಡಿಸುವುದಾಗಿ ತಿಳಿಸಿದರು —ದೇವರಾಜ ಮಾರ್ಕೆಟ್ಟಿನ ಪೂರ್ವಭಾಗದ ಹೊರಪಾರ್ಶ್ವವನ್ನು ಬಿಸಿಲುಮಚ್ಚು ಕಟ್ಟಿ ತಾರಸಿಹಾಕಿ ಉದ್ದಕ್ಕೂ ಅಲಂಕಾರವಾಗಿ ಕಟ್ಟಿ ಅಂಗಡಿಗಳು ಇಡುವುದಕ್ಕೆ ಅನುಕೂಲಿಸುವಂತೆ ಮಾಡಿಸುವುದಕ್ಕೆ 6,770 ರೂಪಾಯನ್ನು ಖರ್ಚುಮಾಡಬಹುದೆಂದೂ, ಮುಂದಿನ ವರುಷದಲ್ಲಿ ಈ ಹಣವನ್ನು ವಿಶೇಷ ದ್ರವ್ಯ ಸಹಾಯವಾಡಿದಂತೆ ಭಾವಿಸಬೇಕೆಂದೂ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿದ್ದದ್ದನ್ನು ಮೆಂಬರುಗಳು ರಿಕಾರ್ಡುಮಾಡಿಕೊಂಡರು —ಮ್ಯುನಿಸಿಪಾಲಿಟಿಯ ಮರಾಮತ್ತ್ ಕಾಮಗಾರಿ ನಡೆದದ್ದರ ಕಂಟ್ರಾಕ್ಟುದಾರರ ಬಿಲ್ಲುಗಳಿಗೆ ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಕೌನ್ಸಲರುಗಳ ರುಜು ತೆಗೆದುಕೊಂಡಮೇಲೆ ಹಣ ಪಾವತಿಮಾಡಬೇಕೆಂದು ಸೂಚಿಸಲ್ಪಟ್ಟಿತು ಪ್ರೆಸಿಡೆಂಟರು ಆಫೀಸಿನಲ್ಲಿದ್ದ ಹಿಂದಿನ ನಡವಳಿಕೆಗಳನ್ನು ಹುಡುಕಿಸಿ ನೋಡಿದ್ದರಲ್ಲಿ ಅಂಥಾ ರುಜು ಆಗಬೇಕೆಂಬ ವಿಧಿಯಾಗಲಿ, ಆಚರಣೆಯಾಗಲಿ ಇರಲಿಲ್ಲವೆಂದು ತಿಳಿಸಿದರು ಈ ವಿಚಾರವು ದೀರ್ಘವಾಗಿ ಚರ್ಚೆಯಾಯಿತು ಕಡೆಗೆ ಆಯಾ ಮೊಹಲ್ಲೆಯಲ್ಲಿ ನಡೆಯುವ ಮರಾಮತ್ ಕೆಲಸಗಳನ್ನು ಮೊದಲೇ ಆಯಾ ಕೌನ್ಸಲರುಗಳಿಗೆ ತಿಳಿಸಿದರೆ ಸಾಕೆಂದು ಇತ್ಯರ್ಥಮಾಡಿದರು

ಈದ್ಗಾ ಬಡಾವಣೆಯಲ್ಲಿ ಒಂದಾದರೂ ಪಾಠಶಾಲೆ ಇಲ್ಲದ್ದರಿಂದ ಅಲ್ಲಿನ ಮ|| ಸಯ್ಯದ್ ಅಹಮದ್ ಸಾಹೇಬರು ತಮ್ಮ ಹೊಸ ಮನೆಯನ್ನು ಸ್ಕೂಲಿಗೆ ಕೊಡುತ್ತೇವೆಂದು ಒಪ್ಪಿ ಅರ್ಜಿ ಬರೆದುಕೊಂಡಿದ್ದರು ಸ್ಕೂಲ್ ಕಮಿಟಿ ಮೆಂಬರುಗಳು ಅಲ್ಲಿಗೆ ಹೋಗಿ ಸ್ಥಳ ಅಜಮಾಯಿಷಿ ಮಾಡಿ ಆ ಕಟ್ಟಡದಲ್ಲಿ ಒಂದು ಹುಡುಗರ ಸ್ಕೂಲನ್ನೂ ಒಂದು ಹುಡುಗಿಯರ ಸ್ಕೂಲನ್ನೂ ಮಾಡುವುದಕ್ಕೆ ತುಂಬಾ ಅನುಕೂಲವಾಗಿದೆ ಎಂದೂ, 100 ಮಂದಿ ಹುಡುಗರೂ ಹುಡುಗಿಯರೂ ಬರುವುದಕ್ಕೆ ಸಿದ್ಧವಾಗಿದಾರೆಂದೂ ತಿಳಿಸಿದರು ಕೌನ್ಸಲರುಗಳು ಈ ವಿಚಾರವನ್ನು ಚರ್ಚೆಮಾಡಿ ಕಡೆಗೆ ಪ್ರೆಸಿಡೆಂಟರು ಅದನ್ನೆಲ್ಲಾ ವಿಚಾರಣೆಮಾಡಿ ಕೌನ್ಸಿಲ್‌ನವರ ತಿಳುವಳಿಕೆಗೆ ತರತಕ್ಕದ್ದೆಂದು ತೆಗೆದಿಟ್ಟರು —ಮಹಾರಾಣಿಯವರ ಹೆಂಗಸರ ಆಸ್ಪತ್ರೆಯಲ್ಲಿ ರೋಗಿಗಳ ಹಿತಕ್ಕೋಸ್ಕರ ಒಬ್ಬ ಬ್ರಾಹ್ಮಣ ಅಡಿಗೆಯವಳನ್ನೂ ಒಬ್ಬ ಲಿಂಗಾಯತರ ಅಡಿಗೆಯವಳನ್ನೂ ತಲಾ 10 ರೂಪಾಯಿ ಸಂಬಳದ ಮೇಲೆ ನೇಮಿಸುವಂತೆಯೂ, ಈ ಸಂಬಳದಲ್ಲಿ ರೂಲಸಿನಂತೆ ಮೂರನೇ ಒಂದು ಅಂಶವನ್ನು ಮ್ಯುನಿಸಿಪಾಲಿಟಿಯಿಂದ ಕೊಡಬೇಕೆಂದೂ ಸೀನಿಯರ್ ಸರ್ಜನ್ ರವರಿಂದ ಕಾಗದ ಬಂದಿತ್ತು ಮೆಂಬರುಗಳು ಈ ಏರ್ಪಾಡು ಬಹಳ ಅವಶ್ಯವಾದದ್ದರಿಂದ ಆ ಖರ್ಚನ್ನು ಮ್ಯುನಿಸಿಪಾಲಿಟಿಯಿಂದ ಕೊಡಬಹುದೆಂದು ಒಪ್ಪಿಕೊಂಡರು —ತಾಲ್ಲೂಕ್ ಆಫೀಸಿನ ಒಬ್ಬ ಗುಮಾಸ್ತೆಯು ಮ್ಯುನಿಸಿಪಾಲಿಟಿಗೆ ಎಕ್ಸೈಸ್ ಬಾಬಿನಲ್ಲಿ ಸಲ್ಲಬೇಕಾದ ತೆರಿಗೆಯನ್ನು ವಸೂಲ್ಮಾಡಿ ಕೊಟ್ಟದ್ದಕ್ಕಾಗಿ ಆತನಿಗೆ ಕಳೆದ ಎರಡು ಸಾಲಿಗೆ ತಿಂಗಳೊಂದಕ್ಕೆ 1½ ರೂಪಾಯಿಯಂತೆ ಪ್ರತಿಫಲ ಕೊಡಬಹುದೆಂದೂ, ಚಾಲ್ತಿಯಲ್ಲಿ ತಿಂಗಳಿಗೆ 3 ರೂಪಾಯಿಯಂತೆ ಕೊಡಬಹುದೆಂದೂ ಮೆಂಬರುಗಳು ಒಪ್ಪಿ ತೀರ್ಮಾನಮಾಡಿದರು

ಚಾಮರಾಜ ರೋಡ್ ಅಂದರೆ ನೂರಡಿ ರಸ್ತೆಯನ್ನು ಹಸುವಿನ ಕೆರೆಯ ಹಟ್ಟಿಯಿಂದ ಕಾಲೇಜ್ ಸ್ಟೂಡೆಂಟ್ಸ್ ಹೋಮಿನ ತನಕ 30 ಅಥವಾ 40 ಅಡಿ ಅಗಲಕ್ಕೆ ಇಳಿಸಿ ಕಿರಿದು ಮಾಡಿ ಈಗ ರಸ್ತೆ ನಡುವೆ ಉದ್ದಕ್ಕೂ ಹಾಕಿರುವ ದೀಪದ ಕಂಭಗಳನ್ನು ಕಿತ್ತು ರಸ್ತೆಯ ಒಂದು ಪಕ್ಕದಲ್ಲಿ ನಿಲ್ಲಿಸಿ, ಮಧ್ಯೆ ಮ್ಯುನಿಸಿಪಲ್ ಆಸ್ಪತ್ರೆಯ ಬಳಿ ಇರುವ ಹಳ್ಳವನ್ನು ಭರ್ತಿಮಾಡಿ, ಈ ರಸ್ತೆಯ ಉದ್ದಕ್ಕೂ ಒಂದು ಪಾರ್ಶ್ವದಲ್ಲಿ ಕುದುರೆ ಸವಾರಿಗೆ ಅನುಕೂಲಿಸುವಂತೆ ಹಾದಿಯನ್ನು ಕಲ್ಪಿಸಬೇಕಾಗಿದೆ ಎಂದೂ, ಇದಕ್ಕೆಲ್ಲಾ 12,000 ರೂಪಾಯಿ ಬೇಕಾಗುವುದೆಂದೂ ಪ್ರೆಸಿಡೆಂಟರು ಸೂಚಿಸಿದರು ಮೆಂಬರುಗಳು ಇದನ್ನು ಮಾಡಿಸಬಹುದೆಂದೂ, ಆದರೆ ಇದಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದ ಸಬಬು ಟ್ರಸ್ಟ್ ಬೋರ್ಡಿನ ಹಣದಿಂದ ಈ ಅಭಿವೃದ್ಧಿ ಕಾರ್ಯವನ್ನು ಮಾಡಿಸತಕ್ಕದ್ದೆಂದೂ ಅಭಿಪ್ರಾಯಪಟ್ಟರು —ಜನವರಿ, ಫೆಬ್ರುವರಿ, ಮಾರ್ಚಿ ತಿಂಗಳ ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಮಾಡುವುದಕ್ಕೆ ಮೆಂಬರುಗಳು ಮ|| ಎಂ ವೆಂಕಟಸ್ವಾಮಿಯವರನ್ನೂ, ತಿರುವೆಂಗಡಂ ಮುದಲಿಯಾರ್ರನ್ನೂ ಆಡಿಟರಾಗಿ ಗೊತ್ತುಮಾಡಿದರು

ಮ|| ತ್ರಿವೇಂಕಟರಯ್ಯನವರು ಕೌನ್ಸಿಲಿಗೆ ವರ್ಗಪಟ್ಟ ಮ|| ಟಿ ಹನುಮಂತರಾಯರು ಕಳೆದ ಐದು ವರುಷಗಳಿಂದ ಮ್ಯುನಿಸಿಪಾಲಿಟಿಯಲ್ಲಿ ಬಹಳ ಒಳ್ಳೇ ಸರ್ವೀಸ್ ಮಾಡಿರುತ್ತಾರೆಂಬ ಸಂಗತಿಯನ್ನು ಮ್ಯುನಿಸಿಪಲ್ ಮೀಟಿಂಗಿನ ಪ್ರೊಸೀಡಿಂಗ್ಸಿನಲ್ಲಿ ಕಾಣಿಸಿ ಅವರಿಗೆ ವಂದನೆಗಳನ್ನು ಸಮರ್ಪಿಸಿದಂತೆ ರಿಕಾರ್ಡುಮಾಡಬೇಕೆಂದು ಸೂಚಿಸಿದರು ಪ್ರೆಸಿಡೆಂಟರೂ ಮ|| ರಂಗಯ್ಯಂಗಾರ್ರವರೂ, ಮ|| ಎ ಅಣ್ಣಯ್ಯಪಂಡಿತರವರೂ ಆ ರೀತಿ ರಿಕಾರ್ಡುಮಾಡುವುದು ಸಧ್ಯ ಆಗಲಾರದೆಂದೂ, ಅವರು ಕೆಲವು ಕಾಲ ಮಾತ್ರ ವೈಸ್ ಪ್ರೆಸಿಡೆಂಟರಾಗಿ ಬದಲಿ ನೋಡಿದರೆಂದೂ, ಅವರ ಹಿಂದೆ ಐದು ವರುಷ ಬಹು ತೃಪ್ತಿಕರವಾಗಿ ವೈಸ್ ಪ್ರೆಸಿಡೆಂಟ್ ಕೆಲಸಮಾಡಿ ವರ್ಗಪಟ್ಟು ಹೋದ ಮ|| ಎಂ ಜಿ ಕೃಷ್ಣಸ್ವಾಮಿರಾಯರ ವಿಷಯದಲ್ಲೇ ಅಂಥಾ ರಿಕಾರ್ಡನ್ನೂ ಮಾಡದೆ ಇರುವಾಗ ಮ|| ಹನುಮಂತರಾಯರ ಸರ್ವೀಸನ್ನು ರಿಕಾರ್ಡು ಮಾಡುವುದು ಸಹಜವಾಗಿರುವಂತೆ ಕಾಣುವುದಿಲ್ಲವೆಂದೂ ಹೇಳಿದ್ದರ ಮೇಲೆ ಇತರ ಮೆಂಬರುಗಳೂ ಅದರಂತೆ ಅನುಮೋದಿಸಿದರು

ಲೋಕಲ್ ಬೋರ್ಡುಗಳ ಕಾನ್‌ಫರೆನ್ಸು

ಮ್ಯುನಿಸಿಪಲ್ ಕೌನ್ಸಲರ್ ಮ|| ಎಂ ಸಿ ರಂಗಯ್ಯಂಗಾರ್ರವರು ಮ್ಯುನಿಸಿಪಲ್ ಕೌನ್ಸಲರುಗಳಿಗೆ ಈ ಸಂಸ್ಥಾನದ ಲೋಕಲ್ ಬೋರ್ಡುಗಳ ಸಮಾಜವನ್ನು ನಡಿಸಬೇಕಾದದ್ದು ಅವಶ್ಯವೆಂಬ ಅರ್ಥಕ್ಕೆ ಒಂದು ಸಲಹೆಯನ್ನು ಕೊಟ್ಟರು ಅವರು ತಿಳಿಸಿದ ಮುಖ್ಯಾಭಿಪ್ರಾಯವೇನಂದರೆ—ಹೊಸ ರೆಗ್ಯುಲೇಷನ್ ಪ್ರಕಾರ ನಮ್ಮ ಸಂಸ್ಥಾನದಲ್ಲಿ ಏರ್ಪಾಡಾಗಿರುವ ಎಲ್ಲಾ ಮ್ಯುನಿಸಿಪಲ್ ಮತ್ತೂ ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರತಿನಿಧಿಗಳನ್ನೂ ರಾಜಧಾನಿಗೆ ಕರಸಿಕೊಂಡು ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವ ನಡೆಯುವ ವಾರದಲ್ಲಿ ಒಂದು ಸಭೆಯನ್ನು ನಡಿಸಬೇಕು ಇದಕ್ಕೆ ಬೋರ್ಡುಗಳವರು ಇಷ್ಟಪಡುವಷ್ಟು ಪ್ರತಿನಿಧಿಗಳನ್ನು ಕಳುಹಿಸಬಹುದು ಮೈಸೂರು ಮ್ಯುನಿಸಿಪಾಲಿಟಿಯವರು ಅವರನ್ನೆಲ್ಲಾ ಸೇರಿಸಿ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಲ್ಲಿ ನಡೆಯಬೇಕಾದ ವಿಚಾರಗಳನ್ನು ಕುರಿತು ಚರ್ಚೆಮಾಡಿ, ಎಲ್ಲಾ ಕಡೆಗಳಲ್ಲೂ ಒಂದೇ ತರವಾದ ಕಾರ್ಯಗಳು ಜಾರಿಗೆ ಬರುವಂತೆ ಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ ಮತ್ತು ಇಂಥಾ ಸಭೆಯವರು ತಮ್ಮ ಅಭಿಮತವನ್ನು ಗವರ್ನ್‌ಮೆಂಟಿಗೆ ಸೂಚಿಸಿದರೆ ಅದರಿಂದ ಸರ್ಕಾರಕ್ಕೆ ತುಂಬಾ ಪ್ರಯೋಜನವಾಗುವುದು ಈ ವಿಚಾರವನ್ನು ಗವರ್ನ್‌ಮೆಂಟಿನವರಿಗೆ ಅರಿಕೆಮಾಡಿ, ಅವರ ಸಮ್ಮತಿ ದೊರಕಿದ ಪಕ್ಷದಲ್ಲಿ ಪ್ರತಿ ಒಂದು ಮ್ಯುನಿಸಿಪಾಲಿಟಿಗೂ, ಲೋಕಲ್ ಬೋರ್ಡಿಗೂ ಪ್ರತಿನಿಧಿಗಳನ್ನು ಕಳುಹಿಸುವಂತೆ ಬರೆಯಬಹುದು ಈ ರೀತಿಯಾದ ಅಭಿಪ್ರಾಯವನ್ನು ಮ|| ರಂಗಯ್ಯಂಗಾರ್ರವರು ಸೂಚಿಸಿದ ಮೇಲೆ ಮ|| ಎ ಅಣ್ಣಯ್ಯಪಂಡಿತರವರು ಈ ಸೂಚನೆಯು ಬಹಳ ಫಲಕಾರಿಯಾದದ್ದರಿಂದ ಅದರಂತೆ ಒಂದು ಸಭೆಯನ್ನು ನಡಿಸುವ ಏರ್ಪಾಡು ಮಾಡಬೇಕೆಂದು ಹೇಳಿದರು ಇತರ ಮೆಂಬರುಗಳೆಲ್ಲಾ ಈ ವಿಷಯವನ್ನು ಒಪ್ಪಿಕೊಂಡರು ಪ್ರೆಸಿಡೆಂಟರು ಈ ಅಭಿಪ್ರಾಯಗಳನ್ನು ಬರೆದುಕೊಂಡು ಗವರ್ನ್‌ಮೆಂಟಿಗೆ ಅರಿಕೆಮಾಡಿ ಅವರ ಅಪ್ಪಣೆ ಪಡೆಯುವುದಾಗಿ ತಿಳಿಸಿದರು

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್

ಭದ್ರಾನದಿಗೆ ಸೇತುವೆ ಬೇಕಾಗಿದೆ

ಅಯ್ಯಾ,

ಮೂಡಿಗೆರೆ ತಾಲ್ಲೂಕು ಕಳಸಾ ಹೋಬಳಿ ಕಸಬಾಕ್ಕೆ ಸಮೀಪ ಇರುವ 2 ಮೈಲಿ ಫಾಸಲೆಯಲ್ಲಿ ಭದ್ರಾ ನದಿ ಇದೆ ಜನಗಳು ಮತ್ತು ಗಾಡಿಗಳು ತಿರುಗಾಡಬೇಕಾದರೆ ನದಿಯಲ್ಲಿಯೇ ಹೋಗಬೇಕಾಗಿದೆ ಆದರೆ ಬೇಸಗೆಯಲ್ಲಿ ಮಾತ್ರ ಹೋಗಬಹುದು ಮಳೆಗಾಲದಲ್ಲಿ ಐದು ತಿಂಗಳು ಗಾಡಿಗಳು ತಿರುಗಾಡುವದೇ ಇಲ್ಲ ಜನಗಳು ಮಾತ್ರ ತಿರುಗಾಡುವದಕ್ಕೆ ದೋಣಿ ಹಾಕಿಕೊಂಡು ಹೋಗುತ್ತಾರೆ ಭಾರೀ ಪ್ರವಾಹ ಬಂದರೆ ಜನಗಳಿಗೆ ಬಹಳ ಹೆದರಿಕೆಯಾಗುತ್ತಾ ಇದೆ ಆಗಿಂದಾಗ್ಗೆ ಅಪಾಯವೂ ಸಂಭವಿಸುತ್ತಾ ಇದೆ ಹಿಂದೆ ನಮ್ಮ ಸರ್ಕಾರದವರು ಈ ನದಿಗೆ ಸೇತುವೆ ಕಟ್ಟಬೇಕೆಂತ ಆಲೋಚನೆ ಮಾಡಿದ ಸಂಗತಿಯು ಇಲ್ಲಿಯ ಜನಗಳಿಂದ ತಿಳಿಯಬರುತ್ತೆ ಈಚೆಗೆ ಯಾತಕ್ಕಾಗಿ ಹಾಗೆಯೇ ನಿಲ್ಲಿಸಿದರೆಂಬುವ ಸಂಗತಿಯು ತಿಳಿಯಲಿಲ್ಲ ಜಾಗ್ರತೆಯಾಗಿ ನಮ್ಮ ಸರ್ಕಾರದವರು ಇದನ್ನು ಏರ್ಪಾಡುಮಾಡಿದರೆ ಈ ಕಳಸವು ತುಂಬಾ ಅಭಿವೃದ್ಧಿಗೆ ಬರಲು ಯಾವ ಸಂದೇಹವೂ ಇಲ್ಲ ಇದನ್ನು ಕ್ಷಿಪ್ರದಲ್ಲಿಯೇ ನಮ್ಮ ಸರ್ಕಾರದವರು ಆಲೋಚನೆಗೆ ತೆಗೆದುಕೊಂಡು ನಡಿಸುವರಾಗಿ ನಂಬಿರುತ್ತೇವೆ

ಶ್ಯಾ ಅನಂತಭಟ್ಟ

[ಮೈಸೂರು ಗವರ್ನ್‌ಮೆಂಟಿನವರ ಈಗ ಪ್ರಾರಂಭಿಸುವ ಭಾರೀ ಕಾಮಗಾರಿಗಳನ್ನೂ ಇತರ ದೇಶೋನ್ನತಿಯ ಕಾರ್ಯಗಳನ್ನೂ ಪೂರೈಸುವ ತನಕ ಈ ಸೇತುವೆ ಕಾಮಗಾರಿಗೆ ಗಮನಕೊಡುವಂತೆ ತೋರುವುದಿಲ್ಲ ಈ ಸೇತುವೆಯು ಆ ಪ್ರಾಂತ್ಯದ ಅಭಿವೃದ್ಧಿಗೆ ತುಂಬಾ ಅವಶ್ಯ ಆ ಸುತ್ತುಮುತ್ತಿನಲ್ಲಿರುವ ಪ್ರಜೆಗಳ ಮುಖಂಡರು ಒಂದು ಕಂಪನಿಯನ್ನು ಮಾಡಿಕೊಂಡು, ಷೇರುಗಳ ಮೂಲಕ ಹಣವನ್ನು ಒದಗಿಸುವುದಾದರೆ ಸರ್ಕಾರದವರು ಕೋಲಾರ್—ಬೌರಿಂಗ್‌ಪೇಟೆ ರೈಲ್ ರಸ್ತೆಯನ್ನು ಮಾಡಿಸಿದಂತೆ ಈ ಸೇತುವೆಯನ್ನೂ ಕಟ್ಟಿಸಿಕೊಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ ಈ ಭಾಗವನ್ನು ಆ ಪ್ರಾಂತ್ಯಗಳ ದೊಡ್ಡ ಮನುಷ್ಯರೂ ಪ್ರಜಾಹಿತಚಿಂತಕರೂ ದೇಶವತ್ಸಲರೂ ಪರ್ಯಾಲೋಚಿಸಿ, ಸ್ವತಹ ಸಾಹಸಪಟ್ಟು ಅದರ ಫಲವನ್ನು ತಾವೂ ಆ ಸುತ್ತುಮುತ್ತಿನ ಪ್ರಜೆಗಳೂ ಅನುಭವಿಸುವಂತಾಗಬೇಕೆಂದು ಹಾರೈಸುತ್ತೇವೆ —ಎಡಿ]

ಶ್ರೀಕೃಷ್ಣರಾಜೇಂದ್ರ ವಾಚಕ ಮಂದಿರ, ತೀರ್ಥಹಳ್ಳಿ

ಅಯ್ಯಾ,

ಇಂಥಾ ದೊಡ್ಡ ಹೆಸರಿನ ಮೇಲೆ ಅನೇಕ ಮಹನೀಯರು ಸುಮಾರು ಸಾವಿರಾರು ರೂಪಾಯಿ ದ್ರವ್ಯಸಹಾಯಮಾಡಿ ಜನಸಾಮಾನ್ಯಕ್ಕೆಲ್ಲಾ ಅನುಕೂಲವಾಗುವಂತೆ ವಾಚಕಮಂದಿರವನ್ನು ಸ್ಥಾಪನೆ ಮಾಡಿ, ಅನೇಕ ಕನ್ನಡ ಇಂಗ್ಲಿಷ್ ಪತ್ರಿಕೆಗಳು ಬರುವಂತೆ ಮಾಡಿ ಲೈಬ್ರರಿ ಸಹಾ ಮಾಡಿ, ಟೇಬಲ್, ಕುರ್ಚಿ, ಬೀರು, ಟೇಬಲ್ ಲ್ಯಾಂಪುಗಳು ಸಹಾ ಪರ್ನಿಚರುಗಳನ್ನು ಒದಗಿಸಿ, ಇವಕ್ಕೆ ತಿಂಗಳುಗಟ್ಟಲೆ ಕೆಲವು ಮಹನೀಯರು ಚಂದಾ ಸಹಾ ಕೊಡುತ್ತಾ, ಡೈರೆಕ್ಟರು, ಸೆಕ್ರಟರಿಯವರು ಈ ರೀತಿ ಏರ್ಪಾಡುಮಾಡಿರುವುದೇನೋ ಸರಿಯಾಗಿದೆ ಆದರೆ ಇಂಗ್ಲಿಷ್ ಬಾರದವರೂ, ಸಾಹುಕಾರರಲ್ಲದವರೂ, ಒಳ್ಳೇ ಉಡುಪುಗಳನ್ನು ಮಾಡಿಕೊಂಡು ಬಾರದವರೂ ಮತ್ತು ಬಡವರೂ ತಮಗೆ ಸಂಬಂಧಪಡದವರೂ ವಾಚಕಕ್ಕೆ ಅಂದರೆ ವಾಚಕಮಂದಿರಕ್ಕೆ ಯಾವ ರೂಪದಲ್ಲಿಯೂ ಹಣ ಕೊಡದವರು ಇಂಥಾವರನ್ನು ವಾಚಕಮಂದಿರದ ಒಳಗೆ ಬರಕೂಡದಾಗಿಯೂ, ಇವರು ಪತ್ರಿಕೆಗಳನ್ನು ಓದುವದಕ್ಕೆ ಅಯೋಗ್ಯರೆಂತಲೂ, ಅಂಥಾವರನ್ನು ವಾಚಕಮಂದಿರದ ಒಳಗೆ ಬಿಡಕೂಡದಾಗಿ ನಿಷೇಧಿಸುವಂತೆ ವಾಚಕಮಂದಿರದ ಸೆಕ್ರೆಟರಿ ಸಾಹೇಬರವರ ಅಪ್ಪಣೆಯಾಗಿರುವಂತೆ ವಾಚಕಮಂದಿರದಲ್ಲಿ ಯಾವನೋ ಒಬ್ಬನು ಅನೇಕ ವೇಳೆಗಳಲ್ಲಿ ತಡೆಮಾಡಿ ಜನಗಳಿಗೆ ತುಂಬಾ ತೊಂದರೆ ಕೊಡುತ್ತಾನೆ ಅನೇಕ ವೇಳೆಗಳಲ್ಲಿ ಬಾಗಿಲು ಹಾಕಿಯೇ ಇರುತ್ತೆ ಸೆಕ್ರಟರಿಯವರು ಆ ರೀತಿ ಅಪ್ಪಣೆಮಾಡಿರುವದೇ ನಿಜವಾಗಿದ್ದರೆ ಇವರಿಗೆ ವಾಚಕಮಂದಿರದ ಉದ್ದೇಶವೇ ತಿಳಿದವರಲ್ಲವೆಂದೂ, ದೇಶೋನ್ನತಿಗೆ ಸಹಾಯಕರಲ್ಲವೆಂದೂ, ಏನೋ ಸಾಹುಕಾರರೆಂದು ನಾಮಮಾತ್ರ ಇದ್ದರೂ, ಸ್ವಪ್ರಯೋಜನದಲ್ಲಿ ದೃಷ್ಟಿ ಇಟ್ಟು ದೊಡ್ಡ ಮನುಷ್ಯರೆಂದು ಹೆಸರುಪಡೆಯಬೇಕೆಂಬುವದರಲ್ಲಿ ಮಾತ್ರ ತೃಪ್ತರಾಗುವರೆಂದೂ ಸಹಾ ವೃಥವಾಗಿ ಹೇಳಬಹುದು ಹಾಗೆ ಅಪ್ಪಣೆಮಾಡದೆ ಇದ್ದಲ್ಲಿ ಇಂಥಾ ಗಲಾಟೆಗೆ ಅವಕಾಶ ಕೊಡುವ ನದರಿ ಜವಾನನ ವಿಷಯದಲ್ಲಿಯೂ, ಇತರ ಇದಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನ್ಯಾಯವಾದ ಏರ್ಪಾಡು ಮಾಡದೆಹೋದದ್ದು ಸೆಕ್ರಟರಿಯವರ ಲೋಪವಾಗಿರುತ್ತೆ ಇಂಥಾ ಮಹನೀಯರೇ ಈಗಿನ ಕಾಲದಲ್ಲಿ ವೇದಪುರುಷರು

ಕಾಳಿಂಗಯ್ಯನ ರಾಘವೇಂದ್ರರಾವ್

[ಇದು ಧರ್ಮಾರ್ಥವಾದ ರೀಡಿಂಗ್ ಅಲ್ಲವಾದ್ದರಿಂದ ಚಂದಾ ಕೊಡದವರು ಹೋಗಲಪೇಕ್ಷಿಸುವುದೂ, ಬಿಡದೆ ತಡೆದರೆ ಆಕ್ಷೇಪಣೆಮಾಡುವುದೂ ತರವಲ್ಲ ನಮ್ಮ ಬಾತ್ಮಿದಾರರು ಶಿಡ್ಲಘಟ್ಟದ ರೀಡಿಂಗ್ ರೂಮಿನ ವಿಚಾರವನ್ನು ಇನ್ನೊಂದು ಕಡೆ ಓದಿದಲ್ಲಿ ಅವರ ಆಕ್ಷೇಪಣೆ ನ್ಯಾಯವಾದದ್ದಲ್ಲವೆಂದು ತಿಳಿದಾರು ಪುಣ್ಯವಂತರು ದ್ರವ್ಯಸಹಾಯಮಾಡಿ, ಸಕಲ ಪ್ರಜೆಗಳಿಗೂ ಓದಿಕೊಳ್ಳುವುದಕ್ಕೆ ಅನುಕೂಲವಾದ ವಾಚಕಮಂದಿರಗಳನ್ನು ಇಡಿಸುವುದು ಅವಶ್ಯ —ಎಡಿ]

ಧರ್ಮದ ರೀಡಿಂಗ್ ರೂಮ್, ಶಿಡ್ಲಘಟ್ಟ

ಅಯ್ಯಾ,

ಈ ಊರಿನಲ್ಲಿ ತಾ 11 11 1913 ರಲ್ಲು ಜನಸಾಮಾನ್ಯಕ್ಕೂ ಅನುಕೂಲವಾಗಿರುವ ರೀತಿ ಒಂದು ರೀಡಿಂಗ್ ರೂಮು ಸ್ಥಾಪಿತವಾಯಿತು ಇದರ ಪ್ರಾರಂಭಕಾಲದಲ್ಲಿ ಅಗ್ರಿಕಲ್ಚರಲ್ ಸೆಕ್ರಟರಿಯವರಾದ ಮ|| ಕೆ ಸುಬ್ಬರಾಯರು ಸಭಾಧ್ಯಕ್ಷರಾಗಿದ್ದು, ಸಂಘದ ಮೆಂಬರುಗಳಿಗೆ ಹಿತೋಕ್ತಿಗಳನ್ನು ತಿಳಿಸಿದ ಮೇರೆಗೆ ಪ್ರತಿ ಗುರುವಾರವೂ ಉಪನ್ಯಾಸವನ್ನು ಕೊಡುವ ಏರ್ಪಾಡು ಮಾಡಿಕೊಂಡಿದಾರೆ ವಿದ್ಯೆ, ವ್ಯಾಪ್ಯಾರ, ವ್ಯವಸಾಯ, ವೈದ್ಯ ಮುಂತಾದ ವಿಷಯಗಳಲ್ಲಿ ವಿದ್ವಾಂಸರಿಂದ ಅನುಕೂಲವಾದ ಬೋಧೆಯು ದೊರಕುತ್ತಿದೆ ಎಲ್ಲಾ ಕನ್ನಡ ವರ್ತಮಾನ ಪತ್ರಿಕೆಗಳೂ ಇಲ್ಲಿಗೆ ತರಿಸಲ್ಪಡುತ್ತಿರುವದರಿಂದ ಅವುಗಳ ಸ್ವಾರಸ್ಯ ಸಂಗತಿಗಳನ್ನು ವಿವರವಾಗಿ ಹೇಳಲ್ಪಡುತ್ತಿದೆ ಜನವರಿ ತಾ 5 ನೇ

ಸೋಮವಾರ ಘನವನ್ನು ಹೊಂದಿದ ನಮ್ಮ ದಿವಾನ್ ಸಾಹೇಬರವರ ಸವಾರಿಯು ಈ ಊರಿಗೆ ದಯಮಾಡಿಸಿದ್ದು, ಈ ರೀಡಿಂಗ್ ರೂಮನ್ನು ಪರಾಂಬರಿಸಿದ್ದಲ್ಲದೆ ಅಲ್ಲಿನ ಕಾರ್ಯ ಕ್ರಮಗಳಿಗೆ ಸಂತೋಷಿಸಿ, ಸರ್ಕಾರಿಯಾಗಿ ಹೊರಡುವ ಮೈಸೂರು ಗೆಜೆಟ್ ಮುಂತಾದವುಗಳನ್ನೂ, ಎಕನಾಮಿಕ್ ಸಂಬಂಧವಾದ ಪುಸ್ತಕಗಳನ್ನೂ ಉಚಿತವಾಗಿ ರವಾನಿಸುವ ರೀತ್ಯಾ ಅಪ್ಪಣೆಕೊಡಿಸಿದರು ಸಾಯಂಕಾಲ ೬½ ಗಂಟೆಗೆ ಈ ರೂಮಿಗೆ ಸಂಬಂಧಪಟ್ಟ ಫ್ರೆಂಡ್ಸ್ ಯೂನಿಯನ್ ಫುಟ್ ಬಾಲ್ ಕ್ಲಬ್ ಮೈದಾನಕ್ಕೂ ಆ ಮಹನೀಯರ ಸವಾರಿಯು ದಯಮಾಡಿಸಿತ್ತು, ಸಂಘಕ್ಕಾಗಿ ವರ್ತಕ ಮುಖಂಡರಿಂದ ಬಹುಮಾನಿಸಲು ತರಿಸಿದ್ದ ಟ್ರೋಫಿಯ ಬಟ್ಲನ್ನು ಶ್ರೀಯವರ ಹಸ್ತದಿಂದ ಕ್ಲಬ್ಬಿನ ಪ್ರೆಸಿಡೆಂಟರಾದ ರೂಮ್ ಸೆಕ್ರೆಟರಿ ಮ|| ಎಸ್ ಹಂಪಯ್ಯನವರ ವಶಕ್ಕೆ ದಯಪಾಲಿಸಲ್ಪಟ್ಟಿತು, ಮತ್ತೂ ಇದುವರಿ ತಾವು ಈ ಊರಿಗೆ ಸರ್ಕೀಟು ಬರುವಾಗ್ಗೆ ಸಂಸ್ಥೆಯು ಬಹಳ ಅಭಿವೃದ್ಧಿಸ್ಥಿತಿಯಲ್ಲಿರಬೇಕೆಂದು ಅಪ್ಪಣೆ ಕೊಡಿಸಿ ದಯಮಾಡಿದರು ಬಳಿಕ ತಾ 10ನೇ ಸೋಮವಾರ ವಿದ್ಯಾಭ್ಯಾಸ ಇಲಾಖೆಯ ಇನ್ಸ್ಪೆಕ್ಟರ್ ಜನರಲ್‌ರವರಾದ ರಾವ್ ಬಹದ್ದೂರ್ ರಾಮರಾಯರು ಸಹ ಈ ರೀಡಿಂಗ್ ರೂಮಿಗೂ, ಫುಟ್ ಬಾಲ್ ಮೈದಾನಕ್ಕೂ ದಯಮಾಡಿಸಿದ್ದು, ರೀಡಿಂಗ್ ರೂಮಿಗೆ ತಮ್ಮ ಲೈಬ್ರರಿಯಿಂದ ಅನುಕೂಲವಾದ ಗ್ರಂಥಗಳನ್ನು ಕಳುಹಿಸುವುದಾಗಿಯೂ, ಕೆಲವು ಕಾಲ ಕಳೆದ ನಂತರ ಇದಕ್ಕೆ ಗ್ರಾಂಟು ದೊರೆಯುವ ರೀತಿ ಮಾಡುವುದಾಗಿಯೂ ಅಪ್ಪಣೆ ಕೊಡಿಸಿದಕ್ಕಾಗಿ ಸಂಘದವರು ಬಹಳ ಉತ್ಸಾಹಿಗಳಾಗಿ ವಂದಿಸುತ್ತಿದಾರೆ ಈ ಊರಿನಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತರುವ ಏರ್ಪಾಡು ಮಾಡಿದ್ದಲ್ಲದೆ ಆವರು ಎ ವಿ ಸ್ಕೂಲ್ ಅ|| ಮಾಸ್ತರು ರಾ|| ಮುನಿಸ್ವಾಮಯ್ಯನವರು ಬಾಲಕರಿಗೆ ಅಕ್ಷರಾಭ್ಯಾಸವನ್ನು ಬಹು ಸುಲಭ ರೀತಿಯಿಂದ ಕಲಿಸುವ ಏರ್ಪಾಡನ್ನೂ ಕಿಂಡರ್‌ಗಾರ್ಟನ್ ಸಂಬಂಧವಾದ ಚಿತ್ರಕೆಲಸಗಳನ್ನು ಸಣ್ಣ ಬಾಲಕರಿಂದ ಮಾಡಿಸಿದ್ದನ್ನೂ ಪರಾಂಬರಿಸಿ ಸದರಿ ಮಾಸ್ತರಿಗೆ ವೇತನವನ್ನು ಹೆಚ್ಚು ಮಾಡುವುದಾಗಿಯೂ, ಇವರ ಸ್ವಂತ ಖರ್ಚಿನಿಂದ ಸ್ಕೂಲು ಉಪಯೋಗಕ್ಕೆ ತರಿಸಿ ಕೆಲಸ ನಡಿಸುತ್ತಿರುವ ಹಾರ್ಮೋನಿಯಂ ಹಣವನ್ನು ಸರ್ಕಾರದಿಂದ ಕೊಡುವುದಾಗಿಯೂ ಅಪ್ಪಣೆ ಕೊಡಿಸಿರುವರು ಹೀಗೆ ಕಷ್ಟಕ್ಕೆ ತಕ್ಕ ಬಹುಮಾನವನ್ನು ಮಾಡಿರುವ ಈ ಮಹನೀಯರುಗಳ ಪರೋಪಕಾರ ಬುದ್ಧಿಯು ಸ್ತೋತ್ರಾರ್ಹವಾಗಿರುತ್ತೆ

ವಿದ್ಯಾಭಿಮಾನಿ

ಮ್ಯುನಿಸಿಪಾಲಿಟಿಗಳಿಗೆ ಗೌರವ ವೈಸ್ ಪ್ರೆಸಿಡೆಂಟರು

ಅಯ್ಯಾ,


ಗೃಹಕ್ಷೇತ್ರದ ನೋಟೀಸ್.

ಇದರಿಂದ ಸಮಸ್ತ ಜನರಿಗೂ ಶ್ರೀರಂಗಪಟ್ಟಣದ ಕಟ್ಟರಾಘವೇಂದ್ರಾಚಾರ್ಯರ ಮಗ [illegible] ಎಸ್ ಜಿ ರಾಘವೇಂದ್ರಾಚಾರ್ [illegible] ಕೆಟ್ಟಿಗುರುರಾಜಾಚಾರ್ಯನು ತಿಳಿಯಪಡಿಸುವದೇನೆಂದರೆ—ಶ್ರೀರಂಗಪಟ್ಟಣದ ಕಟ್ಟಿ [illegible] ಕಟ್ಟಿ [illegible] ಜನಗಳ ದುರ್ಬೋಧನೆಗೆ ಒಳಪಟ್ಟು ನನಗೆ ಮೋಸಪಡಿಸಬೇಕೆಂಬ ಉದ್ದೇಶದಿಂದ ಕೆಲವು ಪಿತ್ರಾರ್ಜಿತವಾದ ಆಸ್ತಿಗಳನ್ನು ಪರಭಾರೆಮಾಡಿದರ ಮೇಲೆ ಉತ್ತರ ನಾರಸದಾರನಾದ ನಾನು ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನ 1911 12 ನೇ ಇಸವಿ ಒರಿಜಿನಲ್ 1 ನೇ ನಂಬರು ದಾವಾ [illegible] ಸದರಿಯವರು ಉಳಿದಿರುವ ಜಮೀನನ್ನು ಜೀವಿತಕಾಲಪರ್ಯಂತರವೂ ಅನುಭವಿಸಿಕೊಂಡು ಬರುತ್ತೇನೆಯೇ ಹೊರತು ಮುಂದೆ ಯಾವ ವಿಧವಾಗಿ ಪರಭಾರೆಮಾಡಿದರೂ ಊರ್ಜಿತವಾಗತಕ್ಕದ್ದಲ್ಲವೆಂತ ಒಪ್ಪಿ ರಿವಿನ್ಯುದಸ್ತಾವೇಜನ್ನು ಬರೆದುಕೊಟ್ಟಿರುತ್ತಾರೆ. ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಹೊಸ ಕೊಪ್ಪಲಲ್ಲಿರುವ ಸರ್ವೆ 13 ನೇ ತರಿ ಜಮೀನನ್ನೂ ಮತ್ತು [illegible] ಪೂರ್ವಕ್ಕೆ ಬರಮಣ್ಣನ ಮನೆಯ ಹಿಂಭಾಗದ ಓಣಿ, ಪಶ್ಚಿಮಕ್ಕೆ ನನಗಿದ್ದ 115 ನೇ ನಂಬರು ಮನೆಯ ಹಿಂಭಾಗದ ಓಣಿ, ಉತ್ತರಕ್ಕೆ ಹೊಳೆಗೆ ಹೋಗುವ ದೊಡ್ಡ ರಸ್ತೆ, ದಕ್ಷಿಣಕ್ಕೆ ತಿಮ್ಮಣ್ಣನ ಮನೆ [illegible] ಈ ಮಧ್ಯೆ ಇರುವ 113 111 ನೇ ನಂಬರು ಮನೆಯನ್ನೂ ಪರಭಾರೆಮಾಡಲು ಇವರಿಗೆ ಯಾವ ಅಧಿಕಾರವೂ ಇರುವದಿಲ್ಲ. ನನ್ನ ಅನುಮತಿ ವಿನಾ ಯಾರು ತೆಗೆದುಕೊಂಡರೂ ಊರ್ಜಿತವಾಗತಕ್ಕದ್ದಲ್ಲವೆಂತಲೂ, ಹಾಗೂ ತೆಗೆದುಕೊಳ್ಳುವವರು ನಷ್ಟಪಡುವರಲ್ಲದೆ ನನ್ನ ವ್ಯಾಜ್ಯಕ್ಕೂ ಸಹಾ ಗುರಿಯಾಗಬೇಕಾಗುತ್ತೆಂಬ ವಿವರವನ್ನು ಈ ಮೂಲಕ ಎಚ್ಚರಿಸಿದೆ. [31]

ತಾ|| 27-1 1914, ಎಸ್ ಜಿ. ರಾಘವೇಂದ್ರಾಚಾರ್,
ಮೈಸೂರು ಕಿಲೇದಾರ್.

WANTED

Clerks and Canvassers by the Singer Manfg Co, in Kadur, Shimoga, Sagar and Thirthahalli

Apply to **Singer Manufacturing Co,**
BANGALORE.

[31-1]

ವೃತ್ತಾಂತ ಪತ್ರಿಕೆ ವಿಲೇವಾರಿ ಪ್ರಕಟನೆ.

ಕಾವೇರಿ ರಿಜರ್ವಾಯರ್‌ನಲ್ಲೂ ಅದರ ಸುತ್ತುಮುತ್ತಲಿನ ಗ್ರಾಮದವರಿಗೂ ವೃತ್ತಾಂತ ಪತ್ರಿಕೆಯು ಅನುಕೂಲವಾಗಿ ದೊರೆಯಲು ಏರ್ಪಾಡಾಗಿರುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸದಾರರಲ್ಲಿ ಪತ್ರಿಕೆಗಳನ್ನು ಪಡೆಯಬಹುದು

ಸಿ ಎಸ್ ರಾಮಯ್ಯ,
ಕಾವೇರಿ ರಿಜರ್ವಾಯರ್ ಸೌತ್‌ಬ್ಯಾಂಕ್ ಪೋಸ್ಟ್ ಆಫೀಸು

ಜನವರಿ ಮಹೋತ್ಸವದ ಕೈ ಗಡಿಯಾರ

[31-2]



ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ಸುಬ್ಬರಾವ್, ಜನರಲ್ ಮರ್ಚಂಟ್, ನಂ 16 ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸ್

ರಬ್ಬರ್ ಸ್ಟ್ಯಾಂಪು ರೂ 1-12-0.

ಇದುವರೆಗೆ ವಿಕ್ರಯಿಸುತ್ತಲಿದ್ದ 1-8-0 ಕ್ರಯದ ಈ ರಬ್ಬರ್ ಸ್ಟ್ಯಾಂಪನ್ನು ಜನಗಳು ಒಡನೆ ತರಿಸಿಕೊಳ್ಳುವವರಿಗೆ 1 ಶೀಶೆ ಶಾಯಿ, 1 ಪೆಟ್ಟಿಗೆ 1 ಬ್ರಷ್, 1 ಪ್ಯಾಡ್ ಸಮೇತ 1-12-0 ಗೆ ತಯಾರಿಸಿ ಕಳುಹಿಸುತ್ತೇವೆ. ಕ್ಯಾಟಲಾಗ್ ಬೇಕೇ? ನಮಗೆ ಏಜಂಟರು ಬೇಕು. ತಿಂಗಳಿಗೆ ಸಂಬಳ ರೂ 15. ಬೇಕಾದವರು ಈ ವಿಳಾಸಕ್ಕೆ ಬರೆಯಿರಿ —

ಎಸ್ ಎನ್ ಮೂರ್ತಿ,
ರಬ್ಬರ್ ಸ್ಟ್ಯಾಂಪು ಮೇಕರ್ ತಿರುವಲ್ಲಿಕ್ಕೇಣಿ ಮದರಾಸು

ನನ್ನ ಪ್ರಿಯ ಸಹೋದರಿಯರುಗಳಿಗೆ ವಿಶೇಷವಾಗಿ ವಿನಯಪೂರ್ವಕ ವಿಜ್ಞಾಪನೆ ಮನೋಹರವಾದ ಆಭರಣವನ್ನು ಅತ್ಯಂತ ಸ್ವಲ್ಪ ಕ್ರಯದಲ್ಲಿ ತಯಾರಿಸಿದೆ. ಇದನ್ನು ತರಿಸಿ ನೋಡಿ ನನ್ನನ್ನು ಪ್ರೋತ್ಸಾಹಪಡಿಸುವಿರೆಂದು ನಂಬಿದ್ದೇನೆ

ರಂಗೂನು ಗೆಜ್ಜೆ ಅಡ್ಡಿಗೆ ಕ್ರಯ ರೂ 0-6-0 ಆಣೆ



ಇದು ಸರಿ ಅಪರಂಜಿ ಬಂಗಾರದ ಗೆಜ್ಜೆ ಯಂತಹ ಗೆಜ್ಜೆ ಯು ದಕೆಂಪು ಬಣ್ಣದ ದಾರದಲ್ಲಿ ಗೆಜ್ಜೆ ಯನ್ನು ಸುಂದರವಾಗಿ ಸುತ್ತಿ ಬಹು ಅಂದವಾಗಿಯೂ ರಮಣೀಯವಾಗಿಯೂ ತಯಾರಿಸಲ್ಪಟ್ಟಿರುತ್ತೆ. ಇದರ ಚಿನ್ನದ ರಂಗು ಎಂದಿಗೂ ಕೆಡುವದಿಲ್ಲ. ಇದನ್ನು ಭಾಗ್ಯವಂತರು ಬಡವರು ಮಕ್ಕಳು ಹುಡುಗಿಯರು ಸಹ ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಲಾಯಖ್ಖಾದದ್ದು

ವಿಳಾಸ ಸರೋಜವತಿ, ನಂ 15, ಕೃಷ್ಣಸ್ವಾಮಿ ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕ್ಕೇಣಿ ಮದರಾಸು

ಆಜ್ಮೀರ್ ಜನರಲ್ ಅಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್   ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೈಸೂರು ಸಂಸ್ಥಾನದ ವಿಮಾ ಸಂಘದ ಅಧಿಕಾರಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಸೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಿ ಮೊಬಲಗು ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ಪಾಲಿಸಿದಾರರು ಪಾವತಿಮಾಡುವ ಮೊಬಲಗಿಗೇ ಆಗಲಿ, ಅಥವಾ ವಿಮಾ ಸಂಘದ ಸ್ಥಿರತೆಯ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾಗಲ್ಪಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು. ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತಾರೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[101-30]   ಎಸ್ ಕಬ್ಬೂರ್ ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್ ಬೆಂಗಳೂರು ಸಿಟಿ

A GREAT CONCESSION!
ಅಪೂರ್ವ ಲಾಭ!

ಚಂದ್ರಪ್ರಭಾ ಬೆಲೆ —೪ ಅ. ಶೋಭನ —೧೨ ಅ.
ಕಲಿನಾಥ— ೪ ಅ., ಚಂದ್ರಕಾಂತ ೬ ಅ.

೨ ರೂ. ಬೆಲೆ ಬಾಳುವ ಈ ನಾಲ್ಕು ಅತ್ಯುತ್ತಮವಾದ ಕಾದಂಬರಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಬಹು ಸ್ವಲ್ಪ ದಿನಗಳ ಮಟ್ಟಿಗೆ ಟಪಾಲು ಖರ್ಚು ಸೇರಿಸಿ ೨ ರೂ ಗೆ ವಿ ಪಿ ಯನ್ನು ಕಳುಹಿಸುವೆವು. ಅಲ್ಲದೆ ೧೯೧೪ನೇ ವರುಷದ ಉತ್ತಮವಾದ ಪಾಕೆಟ್ ೧ ಡೈರಿಯನ್ನು ಬಹುಮಾನ ಕೊಡುವೆವು

ವಂಗವಿಜೇತ—ಬೆಲೆ ರೂ. ೧—೮—೦

ಬಿ ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಹೊಸ ಬಂಗಾಳಿ ನಾವೆಲ್ ಇವರ ಎಲ್ಲಾ ಕಾದಂಬರಿಗಳು ನಮ್ಮಲ್ಲಿ ದೊರೆಯುವವು ಕ್ರಯದ ಪಟ್ಟಿ ಉಚಿತ   ವಿಳಾಸ—

ಯಂ. ಸುಬ್ಬರಾವ್,
[30-1] ಬುಕ್ ಸೆಲ್ಲರ್, ಶಂಕರಪುರಂ, ಬೆಂಗಳೂರು

ಪ್ಯಾಕೆಟ್ ಸಿಗರೇಟ್ ಲೈಟರ್.

ಕ್ರಯ ರೂ. 2-8-0

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು. ದೀಪದ ಕಡ್ಡಿಯೇ ಬೇಕಾದ ಜರ್ಮನ್ ಸಿಲ್ವರ್‌ನಲ್ಲಿ ನಸ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ. ಜನರು ನೋಡಿದರೆ ನಸ್ಯದ ಡಬ್ಬಿ ಎಂದೇ ಭಾವಿಸುವರು. ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಟರಿನಲ್ಲಿ ವಿವರಿಸಿರುತ್ತೇವೆ. ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [259-8]

ವಿಳಾಸ.—ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು.

Office of the Military Secretary to His Highness the Maharaja of Mysore.

NOTIFICATION

Dated Bangalore, 7th January, 1914.

85 ponies and 24 bullocks, of the Mysore Imperial Service Transport Corps, will be sold by public auction at the Queen's Statue, Cubbon Park, Bangalore, at 8-30 a.m. on 30th and 31st January, 1914

TERMS CASH

(Sd) M A SINGRACHAR,
[18-3]   *For Officiating Military Secretary.*

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ನಿಮ್ಮ ಮಕ್ಕಳು ಯೋಗ್ಯವಂತೆ ಕೇಳದೆ ಎಟ್ಟಿಗೆ ಬಳಸದುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 5-7

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

Always get the Emulsion with this mark—the Fishman—the mark of the "Scott" process!

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವವಾಗಿ ಆಹಾರದ ರುಚಿ ಹೊಂದಿಸುವ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಶ್ರೀಪದ್ಮವ, ವಾಯು, ಪಕ್ಷವಾತ, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳಿಂದು ಸಹ ಪೀಡಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-21]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦-೮-೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

English Papers with L. S. Text Summary, Special Papers, and Monthly Tests, etc. Subscription Rupees 2 (in advance) **Students' Spelling Book** As 4. (Postage Extra) **Postal Tution**—Monthly Fees: English **Rs. 2**, Arithmetic **Re. 1; the rest As 8** (all in advance) *Apply to*—**M. N. Sitarama Rao,**
[273-6] **Krishnaraja Mohalla, Mysore.**

ಗೃಹಕೃತ್ಯದ ನೋಟೀಸ್.

ಮೂಡಗೆರೆ ತಾಲ್ಲೂಕು ಕಳಸಾ ಹೋಬಳಿ ಇದ್ದಿಣಿ ಗ್ರಾಮದ ಸರ್ವೆ ನಂಬರು 121-122-123-124-125 ನೇ ಕಂಕನಹಡ್ಲು ಎಂಬ ತರೀ ಜಮೀನಿನಲ್ಲಿ ನನಗೆ ಹಕ್ಕು ಇರುವದರಿಂದ ನನ್ನ ಅನುಮತಿ ವಿನಹ ಯಾರಾದರೂ ಕ್ರಯಕ್ಕೆ ಪಡೆದುಕೊಂಡರೆ ಅದು ಕಾಯಂ ಆಗದ ರದ್ದಾಗಿರುತ್ತದೆ [15-4]

ಐ ಸಾಲ್ಡನ್ಹಾ, ಮ್ಯಾನೇಜರ್, ಕೊಗುಣಿಹಳ್ಳ ಎಸ್ಟೇಟ್, ಬಾಳೆಹೊನ್ನೂರು.

ಕನ್ನಡ ಭಾಷಾಭಿವೃದ್ಧಿಗೆ ನವೀನಮಾರ್ಗ.

ನಮ್ಮ ಮಾತೃಭೂಮಿಯಾದ ಭರತಖಂಡದ ವಂಗ(ಬಂಗಾಳ) ದೇಶದಲ್ಲಿ ಜನಿಸಿದ ಡಾಕ್ಟರ್ ರವೀಂದ್ರನಾಥಟಾಗೋರ್ ಎಂಬ ಮಹನೀಯರಿಗೆ ಪಾಶ್ಚಾತ್ಯದೇಶದ ಸ್ವೀಡಿಷ್ ಅಕ್ಯಾಡೆಮಿ ಎಂಬ ವಿದ್ವತ್ ಸಭೆಯಿಂದ ಇತರ ತಮ್ಮ ದೇಶದ ಪ್ರಸಿದ್ಧರಾದ ಪಂಡಿತೋತ್ತಮರ ಒಪ್ಪಿಗೆಯಿಂದ "ನೋಬೆಲ್ ಪ್ರೈಜ್" ಎಂಬ (ಲಕ್ಷದ ಇಪತ್ತುಸಾವಿರ ರೂಪಾಯಿ ಮೌಲ್ಯದ) ಬಹುಮಾನವು ಕೊಡಲ್ಪಟ್ಟಿತು. ಈ ಕರ್ಣಾನಂದವನ್ನುಂಟುಮಾಡುವ ಸಮಾಚಾರವು ಭಾರತ ಪುತ್ರರಿಗೆ ತಿಳಿದಾಗ ಎಲ್ಲರೂ ಆನಂದದಲ್ಲಿ ಮುಳುಗಿ ಕೇಲಾಡಿದರು. ಸಂಕವಿಗಳಾದ ಇವರು "ಗೀತಾಂಜಲಿ" ಎಂಬ ಗ್ರಂಥವನ್ನು ಆಂಗ್ಲೇಯ ಭಾಷೆಗೆ ಮೂಲಭಾಷೆಯ ಸ್ವಾಭಾವಿಕವಾದ ಸ್ವಾರಸ್ಯವು ಮಲಿನವಾಗದಂತೆ ಸುಲಭವಾಗಿ ಭಾಷಾಂತರ ಮಾಡಿದ್ದಕ್ಕಲ್ಲವೇ ಕವಿ ಶಿರೋಮಣಿಯಾದ ಇವರಿಗೆ ಪಾಶ್ಚಾತ್ಯರಿಂದ ಪುರಸ್ಕಾರವೂ, ತನ್ಮೂಲಕ ನಮ್ಮ ಜನ್ಮಭೂಮಿಯಾದ ಭರತ ಖಂಡಕ್ಕೆ ಗೌರವವೂ, ಕೀರ್ತಿಯೂ ಬಂದಿರುತ್ತದೆ. ಪರದೇಶೀಯರು ನಮ್ಮ ಗ್ರಂಥಗಳನ್ನು ಅವರ ಭಾಷೆಗೆ ಭಾಷಾಂತರ ಮಾಡಿದ ಮಾತ್ರದಿಂದಲೇ ನಮ್ಮಲ್ಲಿರತಕ್ಕ ಸುಗುಣವನ್ನು ಗ್ರಹಿಸಿ ತಾವು ಗುಣಗ್ರಾಹಿಗಳೆಂಬ ತಮ್ಮ ಸ್ವಾಭಾವಿಕ ತತ್ವವನ್ನು ಇನ್ನೂ ಸ್ಥಿರಗೊಳಿಸಿದರು.

ಹೀಗಿರುವಲ್ಲಿ ನಮ್ಮ ದೇಶೀಯರು ಸ್ವಭಾಷೆಗೆ ಅಂದರೆ ಕನ್ನಡ ಭಾಷೆಗೆ ತಕ್ಕಷ್ಟು ಉತ್ತೇಜನ ಕೊಡದಿರುವುದನ್ನು ನೋಡಿದರೆ ದೇಶಾಭಿಮಾನಿಗಳಿಗೆ ಚಿಂತೆಯೂ, ಸಂಕಟವೂ ಉಂಟಾಗುವದೇನಾಶ್ಚರ್ಯ? ತಿಳಿಗನ್ನಡಕ್ಕೆ ಮಾತೃಭೂಮಿಯಾದ ನಮ್ಮ ಮಹಿಶೂರು ಸಂಸ್ಥಾನದಲ್ಲಿಯೂ ಇಂಥಾ ಶೋಚನೀಯವಾದ ಸ್ಥಿತಿಯನ್ನು ನೋಡಿದರೆ ಪ್ರತಿ ಒಬ್ಬ ಕನ್ನಡ ಭಾಷಾಭಿಮಾನಿಯೂ ಸ್ತಂಭೀಭೂತನಾಗಿ ಕೂಡುವನು.

ಅನೇಕ ಮಂದಿ ಕನ್ನಡ ಭಾಷೆಯಲ್ಲಿ ಮಾತನಾಡುವುದೇ ತಮ್ಮ ಗೌರವಕ್ಕೆ ಕುಂದೆಂದು ತಮ್ಮ ಸ್ವಭಾಷೆಯನ್ನೇ ಮರೆತಿರುವರು. ಮತ್ತೆ ಕೆಲವರು ಕನ್ನಡ ಭಾಷೆಯಲ್ಲಿ ತಕ್ಕ ಮಾತುಗಳು ದೊರಕಿದಾಗ್ಯೂ ಆಂಗ್ಲೇಯ ಭಾಷಾ ಪದಗಳನ್ನೇ ಬರೆಯುವದರಲ್ಲಿಯೂ, ಮಾತನಾಡ ಪದದಲ್ಲಿಯೂ ಪ್ರಯೋಗಿಸುತ್ತಾರೆ. ಹಲವು ಮಂದಿ ಕನ್ನಡ ಪುಸ್ತಕಗಳನ್ನು ಸ್ಪರ್ಶಿಸುವ ಮಾತ್ರಕ್ಕೇ "ಮಹಾ ದೋಷ"ವೆಂದು ಅದನ್ನು ದೂರೀಕರಿಸಿರುವರು. ಹೀಗಿರುವಲ್ಲಿ ಕನ್ನಡ ಭಾಷೆಯು ಹೇಗೆ ವೃದ್ಧಿಗೆ ಬಂದೀತು?

ಜಪಾನ್ ದೇಶವು ಅರ್ಧ ಶತಮಾನದ ಹಿಂದೆ ಕೇವಲ ಹೀನಸ್ಥಿತಿಯಲ್ಲಿದ್ದು ಅಲ್ಲಿನ ದೇಶಾಭಿಮಾನಿಗಳು ಪಾಶ್ಚಾತ್ಯ ದಿಗ್ಗಜಗಳೆಂಬ ಮಿಲ್, ಸ್ಪೆನ್ಸರ್, ಬೆಂಥಾಮ್ ಮೊದಲಾದವರು ಬರೆದ ಗ್ರಂಥಗಳನ್ನು ಜಪಾನ್ ಭಾಷೆಗೆ ಭಾಷಾಂತರಮಾಡಿ, ಆ ಅಭಿಪ್ರಾಯಗಳನ್ನು ಸರ್ವಸಾಮಾನ್ಯ ಜನಗಳಿಗೂ ಹಂಚಿದ್ದರಿಂದ ಆ ದೇಶವು ಏಳಿಗೆಯಾಗುವುದಕ್ಕೆ ಅವಕಾಶವಾಯಿತು. ಪ್ರಕೃತದಲ್ಲಿ ಕಾಲಗತಿಯನ್ನು ಅನುಸರಿಸಿ ಕರ್ಣಾಟಕ ಭಾಷೆಗೆ ಉತ್ತೇಜನವನ್ನು ಕೊಡಬೇಕಾದರೆ ಪಾಶ್ಚಾತ್ಯ ದೇಶಸಂಚಾರಮಾಡಿ ಅನುಭವಶಾಲಿಗಳಾದ ಗಾಯಕವಾಡ ಮಹಾರಾಜರವರು ತಮ್ಮ ದೇಶದಲ್ಲಿ "ಸಯಾಜಿ ಸೀರೀಸ್" ಎಂಬ ಹೆಸರಿನಲ್ಲಿ ಪಾಶ್ಚಾತ್ಯ ಪುರಾತನ ದೇಶಗಳ ಚರಿತ್ರೆಗಳನ್ನು ಮಹಾರಾಷ್ಟ್ರ ಭಾಷೆಗೆ ಭಾಷಾಂತರಮಾಡಲು ಅಲ್ಲಿನ ನೂತನಕಾಲದ ವಿದ್ಯಾವಂತರಾದ ಅಂದರೆ ಬಿ.ಎ., ಎಂ.ಎ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ಗಟ್ಟಿಗರಿಗೆ ವಹಿಸಿ ಸಾವಿರಾರು ರೂಪಾಯಿಗಳನ್ನು ಸಹಾಯದ್ರವ್ಯ ಕೊಟ್ಟು ಪ್ರೋತ್ಸಾಹಪಡಿಸುತ್ತಿರುವಂತೆ ನಮ್ಮ ದೇಶವನ್ನಾಳುವ ಶ್ರೀ ಶ್ರೀಮನ್ ಮಹಾರಾಜರವರೂ, ಅನಾತ್ಯರಾದ ಶ್ರೀಮನ್ ವಿಶ್ವೇಶ್ವರಯ್ಯನವರೂ ಆಲೋಚಿಸಿದರೆ ಈ ಭಾಷೆಯ ವೃದ್ಧಿಗೆ ಯಾವ ಕೊರತೆಯೂ ಇರಲಾರದೆಂದು ನಿಸ್ಸಂದೇಹವಾಗಿ ಹೇಳಬಹುದು.

ಗತಿಸಿದ ಪ್ರೇಮ್‌ಚಂದರಾಜ ಬಹದೂರವರೆಂಬ ಧರ್ಮಾತ್ಮರು ಹಾಕಿದ ಪಂಥಿನಿಂದ ಹೊಸ ಗ್ರಂಥಗಳನ್ನು ಬರೆಯತಕ್ಕವರಿಗೂ, ವಿಧವಾ ವಿದ್ಯಾಭ್ಯಾಸ ಪ್ರೋತ್ಸಾಹಕ್ಕೂ ಕೊಡುತ್ತಿದ್ದಾರೆ. ಈ ಹಣದಲ್ಲಿ ಸ್ವಲ್ಪ ಭಾಗವನ್ನು "ನಂಜರಾಜ ಬಹದೂರ್ ಬಹುಮಾನ" ಎಂಬ ಹೆಸರಿನಿಂದ ಪ್ರತಿ ವರ್ಷದಲ್ಲಿಯೂ ಪಾಶ್ಚಾತ್ಯ ಚರಿತ್ರೆಗಳನ್ನೂ, ಇತರ ಅನುಭವದಿಂದ ಗ್ರಂಥಗಳನ್ನೂ ಅತ್ಯುತ್ತಮವಾದ ತಿಳಿಗನ್ನಡದಲ್ಲಿ ಭಾಷಾಂತರಮಾಡುವ ನಮ್ಮ ದೇಶದ ಬಿ.ಎ., ಎಂ.ಎ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದಂಥಾ ಕನ್ನಡಿಗರಿಗೆ ಪ್ರೋತ್ಸಾಹಿಸುವದೂ ಒಂದು ನವೀನ ಮಾರ್ಗವಲ್ಲವೇ? ಇಂತಹ ಗ್ರಂಥಗಳನ್ನು ಆಂಗ್ಲೇಯ ಭಾಷಾ ಪರಿಚಯವಿಲ್ಲದ ಸಾಮಾನ್ಯ ಜನರೂ ಮತ್ತು ಪಂಡಿತರೂ ಓದಿದರೆ ಪಾಶ್ಚಾತ್ಯರ ಮನೋಧರ್ಮವೂ, ಅವರ ಬುದ್ಧಿಶಾಲಿತೆಯೂ, ಕಲ್ಪನಾಶಕ್ತಿಯೂ ಎಷ್ಟು ಮಟ್ಟಿಗಿದೆ ಎಂದು ಅವರು ಕೂಪಕೂರ್ಮನ್ಯಾಯವನ್ನು ಅನುಸರಿಸದಿರತಕ್ಕ ನಮ್ಮ ಒಳದೇಶದ ಮಹನೀಯರೆಲ್ಲರಿಗೂ ತಿಳಿದು, ಪಾಶ್ಚಾತ್ಯರಿಗೂ ನಮಗೂ ಇರುವ ಸಹೋದರ ಭಾವವು ಹೆಚ್ಚು ಪ್ರಕಾಶಕ್ಕೆ ಬಂದೀತು. ಈ ಭಾಷಾ ಗ್ರಂಥಗಳು ನಮ್ಮ ಮಹಿಶೂರು ಸಂಸ್ಥಾನದಲ್ಲಿ ಮುಂದೆ ಹಳ್ಳಿ ಹಳ್ಳಿಯಲ್ಲಿಯೂ ಸ್ಥಾಪಿಸಲ್ಪಡುವ ಪುಸ್ತಕ ಭಂಡಾರಗಳನ್ನು ಅಲಂಕರಿಸಿ, ಪ್ರತಿಯೊಬ್ಬರನ್ನು ಪರಿಸಿ ವಿದ್ಯಾವಂತರಾದ ಪಕ್ಷದಲ್ಲಿ ತನ್ಮೂಲಕ ದೇಶಭಾಷೆಯೂ ಮೋಕ್ಷವನ್ನು ಹೊಂದದೆ ಇರಲಾರದು.

ಕನ್ನಡ ಭಾಷಾಭಿಮಾನಿ

ಕೊಚ್ಚಿ ಸಂಸ್ಥಾನದಲ್ಲಿ ಸಂಸ್ಕೃತ ವಿದ್ಯೆಯನ್ನು ಅಂದರೆ ಮುಖ್ಯವಾಗಿ ವ್ಯಾಕರಣ, ನ್ಯಾಯ, ವೇದಾಂತ ಶಾಸ್ತ್ರಗಳನ್ನು ಪ್ರಾಚೀನಪದ್ಧತಿಯನ್ನನುಸರಿಸಿ ಕಲಿಸಬೇಕೆಂಬ ಉದ್ದೇಶದಿಂದ ಕಳೆದ ವಾರ ಶ್ರೀರಾಮವರ್ಮ ಸಂಸ್ಕೃತ ಪಾಠಶಾಲೆಯನ್ನು ರಾಜಾರವರೇ ಪ್ರತಿಷ್ಠೆ ಮಾಡಿ ಪ್ರಾರಂಭಿಸಿದರು. ಇದಕ್ಕೆ ಕೆಲವು ವರುಷಗಳ ಹಿಂದೆ ಕೊಚ್ಚಿ ರಾಜರು 11,000 ರೂಪಾಯಿ ಕೊಟ್ಟಿದ್ದರು. ಮೊನ್ನೆ ಅವರಿಗೆ ಷಷ್ಟಿಪೂರ್ತಿ ಶಾಂತಿ ಉತ್ಸವ ಜರುಗಿದಾಗ ಅವರು ಅದರ ಜೊತೆಗೆ 40,000 ರೂಪಾಯಿ ದಯಪಾಲಿಸಿದರು. ಈ ಕಾಲೇಜಿನಲ್ಲಿ 18 ಜನ ವಿದ್ಯಾರ್ಥಿಗಳಿಗೆ ಮಾತ್ರ ಪಾರಪ್ರವಚನಗಳು ನಡೆಯುವಂತೆಯೂ, ಆ ಸ್ಕೂಲು 24 ಮಂದಿಗೆ ಸ್ಥಳ ಭೋಜನಾದಿಗಳ ವಸತಿಯನ್ನು ಕಲ್ಪಿಸುವಂತೆಯೂ ಏರ್ಪಾಡಾಗಿದೆ. ಆ ಶಾಸ್ತ್ರಗಳನ್ನು ಅಭ್ಯಾಸಮಾಡುವುದಕ್ಕೆ ತಕ್ಕಮಟ್ಟಿಗೆ ಸಂಸ್ಕೃತದಲ್ಲಿ ಸಾಮರ್ಥ್ಯವನ್ನು ಪಡೆದಿರತಕ್ಕವರನ್ನು ಮಾತ್ರ ಪರೀಕ್ಷೆ ಮಾಡಿ ಸೇರಿಸಿಕೊಳ್ಳುತ್ತಾರೆ. ಇದಕ್ಕೆ ವರುಷಕ್ಕೆ 6,800 ರೂಪಾಯಿ ವಿನಿಯೋಗವಾಗುವುದು. ಈ ಹಣವನ್ನು ಸರ್ಕಾರದ ಗ್ರಾಂಟಿನಿಂದಲೂ, ಮೇಲ್ಕಂಡ ಮೂಲಧನದ ಉತ್ಪತ್ತಿಯಿಂದಲೂ, ಅಲ್ಲಿರುವ ಮಠದೇವಸ್ಥಾನಗಳಿಂದಲೂ ಒದಗಿಸುವರೆಂದು ತಿಳಿದುಬರುತ್ತದೆ

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ಜನವರಿ ತಾ ೨೯ ನೇ ಗುರುವಾರ

ಕನ್ನಡ ಭಾಷಾಭಿವೃದ್ಧಿಯು

ನಮ್ಮ ದೇಶದ ಕನ್ನಡ ಭಾಷೆಯನ್ನು ಅಭಿವೃದ್ಧಿಮಾಡಬೇಕೆಂಬ ವಿಚಾರವಾಗಿ ಒಬ್ಬ ಚಾತ್ರಿದಾರರು ಕಳುಹಿಸಿರುವ ಲೇಖನವನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ ಪ್ರಸಿದ್ಧ ಬಂಗಾಳಿ ಕವಿಯಾದ ರವೀಂದ್ರನಾಥ ಟ್ಯಾಗೋರರಿಗೆ ಮಹಾ ಘನತರವಾದ ನೋಬಲ್ ಬಹುಮತಿಯು ದೊರೆಯಿತೆಂಬ ಸಂಗತಿಯನ್ನು ಈ ಲೇಖಕರು ಸೂಚಿಸಿರುತ್ತಾರೆ ಆ ಕವಿಯು ತನ್ನ ಕವನವನ್ನು ಬಂಗಾಳಿಯಿಂದ ಇಂಗ್ಲಿಷ್ ಭಾಷೆಗೆ ಪರಿವರ್ತನ ಮಾಡದೆಹೋಗಿದ್ದರೆ ಆತನ ಕವಿತಾಸಾಮರ್ಥ್ಯವೂ ಮನೋವೃತ್ತಿಯೂ ಪಾಶ್ಚಾತ್ಯರಿಗೆ ಗೋಚರವಾಗುತ್ತಿರಲಿಲ್ಲವೆಂದು ನಮಗೆ ತೋರುವುದು ಹಿಂದುಸ್ಥಾನದ ದೇಶಭಾಷೆಗಳೆಲ್ಲಾ ಪಾಶ್ಚಾತ್ಯರಿಗೆ ತಿಳಿಯಲೇ ತಿಳಿಯದೆಂದು ಹೇಳಬಹುದು ಅಲ್ಲಿನ ಪಂಡಿತಶ್ರೇಷ್ಠರು ಸಂಸ್ಕೃತ, ಪಾರಸಿ, ಅರಬ್ಬಿ ಭಾಷೆಗಳನ್ನು ಕಲಿತು ಗ್ರಂಥಗಳನ್ನು ಓದುವುದುಂಟು, ಆದರೆ ಬಂಗಾಳಿ, ಹಿಂದಿ, ತಮಿಳು, ತೆಲುಗು, ಕನ್ನಡ ಭಾಷೆಗಳನ್ನು ಕಲಿತವರು ಬಹಳ ಸ್ವಲ್ಪ ಆದಕಾರಣ ಕನ್ನಡದಲ್ಲಿ ಗ್ರಂಥಗಳೇ ಮೊದಲಾದವುಗಳನ್ನು ಬರೆಯತಕ್ಕವರು ಆಯಾ ಕನ್ನಡ ಭಾಷೆ ಬಲ್ಲವರಲ್ಲಿ ಮಾತ್ರವೇ ಪ್ರಚಾರವಾಗಬೇಕೇ ಹೊರತು ಇತರರ ಗೋಚರಕ್ಕೆ ಬರುವುದು ಪ್ರಯಾಸವೆಂಬುವುದನ್ನು ಚನ್ನಾಗಿ ತಿಳಿಯಬೇಕು ಇದಲ್ಲದೆ ಗ್ರಂಥಕರ್ತರು ಸರ್ಕಾರು ಪಾಠಶಾಲೆಗಳಲ್ಲಿ ಉಪಯೋಗಿಸಬಹುದಾದ ಪುಸ್ತಕಗಳನ್ನು ಬರೆಯದೆಹೋಗುವ ಪಕ್ಷಕ್ಕೆ ಪುಸ್ತಕ ಪ್ರಚಾರದಿಂದ ಅವರಿಗೆ ದ್ರವ್ಯನಷ್ಟವಾಗುವುದಲ್ಲದೆ ಸಂಪಾದನೆಯೂ ಆಗಲಾರದೆಂಬ ಅಂಶವನ್ನೂ ಚನ್ನಾಗಿ ತಿಳಿದುಕೊಳ್ಳಬೇಕು

ಕನ್ನಡ ಗ್ರಂಥಕರ್ತರಿಗೆ ಪ್ರೋತ್ಸಾಹವಿರುವುದು ನಮ್ಮಲ್ಲಿ ಬಹಳ ಸ್ವಲ್ಪ ಹಾಗೆ ಬರೆಯತಕ್ಕವರು ತಮಗಿರುವ ಭಾಷಾ ಪ್ರೀತಿಯಿಂದಲೋ ಅಥವಾ ಕನ್ನಡಿಗರ ಹಿತವನ್ನು ಬಯಸಿಯೋ ಬರೆಯಬೇಕೇ ಹೊರತು ಅನ್ಯಥಾ ಅಲ್ಲ ಕೆಲವು ವರುಷಗಳ ಹಿಂದೆ ದಿವಂಗತ ಎಚ್ಚರ್ ಥರ್ಸ್ಟನ್ ಅವರಿಂದ ಗ್ರಂಥಕರ್ತರಿಗೆ ಸ್ವಲ್ಪಸ್ವಲ್ಪ ದ್ರವ್ಯಸಹಾಯ ದೊರಕುತ್ತಿತ್ತು ಆದರೆ ಈಗ ಆ ಫಂಡಿನ ಹಣವೆಲ್ಲಾ ಬೇರೆ ಉಪಯೋಗಕ್ಕೆ ವಿನಿಯೋಗವಾಗುತ್ತಿದೆ ಈಗ ಮೈಸೂರು ಗವರ್ನಮೆಂಟಿನವರು ತಮಗೆ ಯುಕ್ತತೋರುವಂಥಾ ಗ್ರಂಥಗಳ ಕೆಲವು ಪ್ರತಿಗಳನ್ನು ಕೊಂಡುಕೊಳ್ಳುವುದೇ ಗ್ರಂಥಕರ್ತರಿಗೆ ಪ್ರೋತ್ಸಾಹವಾಗಿ ಸೂಚಿಸುತ್ತಿರುವುದು ಆದರೇನು, ಪುಸ್ತಕಗಳನ್ನು ಬರೆದು ಪ್ರಕಟಿಸಿ ಅವುಗಳ ಮಾರಾಟದಿಂದ ಜೀವನಮಾಡುವುದು ಯಾರಿಗೂ ಸಾಧ್ಯವಲ್ಲವೆಂತಲೇ ಹೇಳಬಹುದು ಪ್ರಾರಂಭ ದಸೆಯಲ್ಲಿ ಎಲ್ಲಾ ದೇಶಗಳಲ್ಲೂ ಆಗುವುದೇ ಹೀಗೆ ಮಿಲ್ಟನ್ ಎಂಬ ಪ್ರಾಚೀನ ಕವಿಶ್ರೇಷ್ಠನು ಲೋಕೋತ್ತರವಾದ "ಪ್ಯಾರಡೈಸ್ ಲಾಸ್ಟ್" ಎಂಬ ಗ್ರಂಥವನ್ನು ರಚಿಸಿದಕ್ಕೆ ಆತನಿಗೆ ೮೦ ರೂಪಾಯಿ ಮಾತ್ರ ದೊರಕಿತು ಪ್ರೀತಿ ಉತ್ಸಾಹಗಳ ಪ್ರೇರಣೆಯಿಂದ ಆತನು ಗ್ರಂಥವನ್ನು ರಚಿಸಿದನಲ್ಲದೆ ದ್ರವ್ಯಾಶೆಯಿಂದ ಬರೆಯಲಿಲ್ಲ

ಕನ್ನಡದಲ್ಲಿ ಪುಸ್ತಕಗಳನ್ನು ರಚಿಸುವವರಿಗೆ ಇರತಕ್ಕ ದೊಡ್ಡ ಕಷ್ಟವೇನೆಂದರೆ, ಕನ್ನಡಿಗರು ಕನ್ನಡ ಪುಸ್ತಕಗಳನ್ನು ಕೊಂಡು ಓದುತ್ತಾ ಇಲ್ಲ ಕನ್ನಡವನ್ನು ಓದಿ ಹಿಟ್ಟಿಗರಾಗಬೇಕೆಂಬುವರು ಬಹಳ ಕಡಿಮೆ ಮುಂದೆ ಪ್ರತಿ ವರುಷವೂ ನಮ್ಮ ಸ್ಕೂಲುಗಳಲ್ಲಿ ಗಂಡು ಹೆಣ್ಣು ಮಕ್ಕಳು ಕನ್ನಡವನ್ನು ಓದಿ ತೇರ್ಗಡೆಯಾಗುವುದೇನೋ ಸರಿ, ಆದರೆ ಅವರು ಆದರ ಅಭ್ಯಾಸವನ್ನೂ ಆಲೋಚನೆಯನ್ನೂ ಅಲ್ಲಿಗೇ ಬಿಟ್ಟುಬಿಡುತ್ತಾರಾದಕಾರಣ ಕನ್ನಡದಲ್ಲಿ ಅವರಿಗೆ ಅಕ್ರಮವುಂಟಾಗದೆ ಕಲಿತದ್ದನ್ನೂ ಮರೆಯುವುದಕ್ಕೆ ಅವಕಾಶವಾಗುತ್ತದೆ

ಒಳ್ಳೆಯ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಮಾಡಿ ಪ್ರಚಾರಮಾಡುವುದು ಅಷ್ಟೇನೂ ಕಷ್ಟವೆಂದು ತೋರುವುದಿಲ್ಲ ಐಶ್ವರ್ಯವಂತರೂ ಗವರ್ನಮೆಂಟಿನವರೂ ನಮ್ಮ ಸಂಸ್ಥಾನದಲ್ಲಿ ವಿದ್ಯಾವಂತರಾಗಿ ಬಿ ಎ ಅಥವಾ ಎಂ ಎ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವಂಥಾ ಜನರನ್ನು ಸಂಬಳಕ್ಕೆ ಇಟ್ಟುಕೊಂಡು ಅವರಿಂದ ಇಂಗ್ಲಿಷ್, ಜರ್ಮನ್, ಫ್ರೆಂಚ್ ಮೊದಲಾದ ಭಾಷೆಗಳಲ್ಲಿರುವ ಗ್ರಂಥಗಳನ್ನು ಕನ್ನಡಕ್ಕೆ ಸುಲಭವಾಗಿ ಪರಿವರ್ತನಮಾಡಿಸಬಹುದು ಬರೋಡಾ ಸಂಸ್ಥಾನದವರು ಇಂಥಾ ಕಾರ್ಯವನ್ನು ಪ್ರಾರಂಭ ಮಾಡಿರುತ್ತಾರೆ ಆದರೆ ಪ್ರಜೆಗಳಲ್ಲಿ ಓದಿ ವಿಷಯ ಜ್ಞಾನವನ್ನು ಪಡೆಯಬೇಕೆಂಬ ಕುತೂಹಲವೂ ಉತ್ಸಾಹವೂ ಇಲ್ಲದಿದ್ದ ಪಕ್ಷದಲ್ಲಿ ರಚಿಸಲ್ಪಟ್ಟ ಪುಸ್ತಕಗಳು ಅಂಗಡಿಗಳೊಳಗೇ ಬಿದ್ದು ಕೊಳೆಯುವವು

ಕನ್ನಡ ಭಾಷಾಭಿವೃದ್ಧಿಗೋಸ್ಕರ ಆಗಾಗ್ಗ ಕೆಲವು ಸಂಘಗಳನ್ನು ಏರ್ಪಾಡು ಮಾಡಿಕೊಂಡಿದ್ದರು, ಆದರೆ ಅವುಗಳಿಗೆ ಬಹು ಪ್ರಜೆಯ ಪ್ರೋತ್ಸಾಹವೂ ಒತ್ತಾಸೆಯೂ ಲಭಿಸದೆ ಹಾಗೇ ನಿಂತುಹೋದವು ಈಗ ಹೊಸ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳಲ್ಲಿ ಬಹು ಭಾಗ ಹಿತಕರವಾಗಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ ಗ್ರಂಥಕರ್ತರು ಪ್ರಾಚೀನ ಸಂಸ್ಕೃತ ಗ್ರಂಥಗಳಿಂದ ವಿಷಯಗಳನ್ನು ಎತ್ತಿ ಪುಸ್ತಕಗಳನ್ನು ಪ್ರಕಟಿಸುತ್ತಾರೆ, ಕೆಲವು ಪದ್ಯಕಾವ್ಯಗಳಾಗಿರುತ್ತವೆ, ಹಲವು ಬರಿಯ ಭಾಷಾಂತರಗಳಾಗಿರುತ್ತವೆ ಇವು ಈಗಿನ ಸ್ಥಿತಿಗತಿ ವಿದ್ಯಮಾನಗಳಿಗೆ ಸಂಬಂಧಪಡತಕ್ಕವುಗಳಾಗಿಲ್ಲ. ಕನ್ನಡ ಪಂಡಿತರು ಜನಸಾಮಾನ್ಯಕ್ಕೆ ಅನ್ವಯಿಸಿ ಹಿತಕರವಾಗಿರತಕ್ಕ ವಿಷಯಗಳನ್ನು ಪರಿಶ್ರಮಮಾಡಿಕೊಂಡು ಸಾಮಾನ್ಯ ಪ್ರಜೆಗಳೂ ತಿಳಿದುಕೊಳ್ಳುವಂಥಾ ತಿಳಿಗನ್ನಡದಲ್ಲಿ ಗ್ರಂಥಗಳನ್ನು ರಚಿಸಿ ಪ್ರಚಾರಮಾಡಬೇಕೆಂದು ಸೂಚಿಸುತ್ತೇವೆ

ಕನ್ನಡಭಾಷೆಯಲ್ಲಿ ಅಭಿರುಚಿಯನ್ನು ಪಡೆದಿರುವಂಥಾ ಕೆಲವು ವಿದ್ಯಾವಂತರು ಏಕೀಭವಿಸಿ ಒಂದು ಸಂಘವನ್ನು ಮಾಡಿಕೊಂಡು ಕನ್ನಡ ಭಾಷಾಭಿವೃದ್ಧಿಗೂ ಪ್ರಜೆಗಳಲ್ಲಿ ಕುತೂಹಲ ವಿವೇಕಾದಿಗಳು ಹಬ್ಬುವುದಕ್ಕೂ ಸಾಧಕವಾದ ಪುಸ್ತಕಗಳನ್ನು ರಚಿಸಿ ಪ್ರಕಟಿಸುತ್ತಾ ಬರಬೇಕಾಗಿದೆ ಅವರು ಚಿತ್ತಮನಸ್ಸಿನಿಂದಲೂ ಉತ್ಸಾಹಶಾಲಿಗಳಾಗಿಯೂ ಕೆಲವು ವರುಷಗಳ ತನಕ ನಡಿಸುತ್ತಾ ಬಂದರೆ ಹಲವು ಶ್ರೇಷ್ಠಗ್ರಂಥಗಳು ಪ್ರಚಾರವಾಗುವವು ಈಗ ಅಂಥಾ ಪುಸ್ತಕಗಳು ಸಹಜವಾಗಿ ದೊರಕುವುದಿಲ್ಲ ಆದಕಾರಣ ಕನ್ನಡದಲ್ಲಿ ಪರಿಶ್ರಮವುಳ್ಳವರು ಕನ್ನಡಿಗರ ಮೇಲೆ ಪ್ರೀತಿಯನ್ನಿಟ್ಟು ಈ ಹಿತಕರವಾದ ಕಾರ್ಯವನ್ನು ಪ್ರಾರಂಭಿಸಿ ನಡಿಸುತ್ತಾರೆಂದು ನಂಬಿ ಹಾರೈಸುತ್ತೇವೆ

ದ್ವಿಜನನ್ನಾಗಮಾಡುವ ಶಕ್ತಿ

ಮನುಷ್ಯರನ್ನು ದ್ವಿಜರನ್ನಾಗಮಾಡುವ ಶಕ್ತಿಯು, ಅಂದರೆ ಪಾಪದ ಕಡೆಗೆ ಇರುವ ಅವರ ಮನಸ್ಸನ್ನು ದೇವರ ಕಡೆಗೆ ತಿರುಗಿಸುವಂಥ ಶಕ್ತಿಯು ಯಾವುದು ಎಂಬೀ ವಿಚಾರವು ಅತ್ಯಂತ ಪ್ರಾಮುಖ್ಯವಾದುದು ಅನೇಕಾನೇಕರು ಇಂಥ ಅನುಭವವನ್ನು ಪಡೆದುಕೊಂಡಿದ್ದಾಗ್ಯೂ ಅದನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಿರುವವರು ಕೇವಲ ವಿರಳ ಏಕೆಂದರೆ ಹಾಗೆ ಮಾಡುವುದು ಸುಲಭ ಸಾಧ್ಯವಲ್ಲ ಹೀಗಿದ್ದರೂ ಕೆಲವರು ಈ ವಿಷಯದಲ್ಲಿ ತಮ್ಮ ಅನುಭವವನ್ನು ಸ್ವಲ್ಪಮಟ್ಟಿಗೆ ಪ್ರಕಾಶಪಡಿಸಿರುತ್ತಾರೆ

ಮೂರು ಶತಮಾನಗಳ ಹಿಂದೆ ಉತ್ತರ ಆಫ್ರಿಕದಲ್ಲಿ ಕಾರ್ಥೇಜ್ ಎಂಬ ಲೋಕಪ್ರಸಿದ್ಧವಾದ ಜನಭರಿತವಾದ ಒಂದು ದೊಡ್ಡ ಪಟ್ಟಣವು ಇದ್ದಿತು ಅದರ ನಿವಾಸಿಗಳು ಗ್ರೀಸ್ ಮತ್ತು ರೋಮ್ ರಾಜ್ಯಗಳ ಎಲ್ಲಾ ದೇವರುಗಳನ್ನೂ ದೇವತೆಗಳನ್ನೂ ಆರಾಧಿಸುತ್ತಾ ಬರುವವರಾಗಿದ್ದರು ಆ ಪಟ್ಟಣದಲ್ಲಿ ಸಿಪ್ರಿಯನ್ ಎಂಬ ಒಬ್ಬ ಪ್ರಸಿದ್ಧನಾದ ಹೈಕೋರ್ಟ್ ವಕೀಲನಿದ್ದನು ಇವನು ತುಂಬಾ ಐಶ್ವರ್ಯವಂತನೂ ಪ್ರಸಿದ್ಧವಾಸಕ್ಕೆ ಬರುತ್ತಿದ್ದವನೂ ಆಗಿದ್ದನು ಇವನನ್ನು ಅವನ ವಕೀಲ ವಿಕ್ರಮ ದಲಿಯವರಲ್ಲಿ ಬಹು ಸತ್ಯನಾದ ಒಬ್ಬ ಕ್ರೈಸ್ತ ಆರ್ಚಕನು ಇದ್ದನು ಇವನಿಗೂ ಸಿಪ್ರಿಯನಿಗೂ ತುಂಬಾ ಸ್ನೇಹವು ಇದ್ದಿತು ಇವರು ಆಗಾಗ್ಗೆ ಮತ ವಿಷಯಗಳಲ್ಲಿ ದೀರ್ಘವಾದ ಸಂಭಾಷಣೆಗಳನ್ನು ಮಾಡುತ್ತಾ ಇದ್ದರು ಹೀಗಿದ್ದಾಗ್ಗ್ಯೂ ತನಗೆ ಹಿತಕರವಾಗಿದ್ದ ಲೌಕಿಕ ಭೋಗಿಯಾಗಿ ಮನಸ್ಸಿನ ಜೀವನದ ನಡತೆಯನ್ನು ಬಿಟ್ಟು ಸದ್ಧರ್ಮಪ್ರವರ್ತಕನಾಗಿ ನಡೆಯುವುದು ಸಿಪ್ರಿಯನಿಗೆ ಅಸಾಧ್ಯವೆಂದು ತೋರುತ್ತಾ ಇದ್ದಿತು ಹೀಗಿರುತ್ತಿರುವಲ್ಲಿ ಇದ್ದಕ್ಕಿದ್ದ ಹಾಗೆ ಅವನಲ್ಲಿ ಒಂದು ಮಾರ್ಪಾಡು ಉಂಟಾಯಿತು ಇದರ ವಿಷಯವಾಗಿ ಅವನು ತಾನೇ ತನ್ನ ಸ್ನೇಹಿತರಲ್ಲಿ ಒಬ್ಬನಿಗೆ ಒಂದು ಕಾಗದದಲ್ಲಿ ಬರೆದಿರುವುದೇನೆಂದರೆ—ನನ್ನ ಸಮವಯಸ್ಕನಾಗಿ, ದುರಭ್ಯಾಸಗಳು ಚೆನ್ನಾಗಿ ಬೇರೂರಿರುವಂಥ ಯಾವ ಮನುಷ್ಯನಲ್ಲದರೂ ಇಂತಹ ಬದಲಾವಣೆಯಾಗುವುದು ಅಸಾಧ್ಯವೆಂದು ನಾನು ಭಾವಿಸಿಕೊಂಡಿದ್ದೆನು ಏಕೆಂದರೆ ಹಿಂದೆ ನಾನು ನಡೆಸುತ್ತಾ ಬಂದಿದ್ದ ಅಗಣಿತವಾದ ಅಧರ್ಮಗಳು ಪಾದದಂತೆ ನನ್ನನ್ನೇ ಬಂಧಿಸಿದ್ದುವು ಬಂಧವಿಮೋಚನೆಯಾಗುತ್ತದೆಂಬ ನಂಬಿಕೆ ನನ್ನಲ್ಲಿರಲಿಲ್ಲ ಆದಕಾರಣ ನನ್ನನ್ನು ಅಂಟಿಕೊಂಡಿದ್ದ ನನ್ನ ಪಾಪಗಳಲ್ಲೇ ಹೊರಳಾಡುತ್ತಿರುವದಕ್ಕೆ ಮನಸ್ಸು ಮಾಡಿಕೊಂಡಿದ್ದೆನು ಉತ್ತಮನಾಗುವ ನಿರೀಕ್ಷೆಯು ತಿಲಾಂಶವಾದರೂ ನನ್ನಲ್ಲಿರಲಿಲ್ಲವಾದುದರಿಂದ ನನ್ನ ಪಾಪಗಳು ಸಹಜವಾಗಿ ನನ್ನಲ್ಲೇ ಹುಟ್ಟಿ, ನನ್ನಲ್ಲಿ ಒಂದು ಅಂಗವಾಗಿರುತ್ತವೆಯೋ ಎಂಬಂತೆ ಅವುಗಳಲ್ಲಿಯೇ ಲೋಲನಾಗಿದ್ದೆನು ಆದರೆ ನಾನು ದೀಕ್ಷಿತನಾದ ಮೇಲೆ ಹಿಂದೆ ಇದ್ದ ಪಾಪದ ಇಚ್ಛೆಯು ತೊಡೆದುಹೋಗಿ, ನನ್ನ ಮನದಲ್ಲಿ ಪರಲೋಕದ ದಿವ್ಯವಾದ ಬೆಳಕು ಬಂದು ಮನಶ್ಶಾಂತಿಯನ್ನುಂಟುಮಾಡಿತು ತರುವಾಯ ಪರಲೋಕದಿಂದ ಇಳಿದುಬಂದ ಪವಿತ್ರಾತ್ಮನ ವಶದಿಂದ ನಾನು ದ್ವಿಜನಾಗಿ ಹೊಸಬನಾದೆನು ಆ ಮೇಲೆ ಆಶ್ಚರ್ಯಕರವಾದ ರೀತಿಯಲ್ಲಿ ಹಿಂದೆ ಸಂಶಯವಾಗಿದ್ದವುಗಳು ನಿಶ್ಚಯವಾಗುವುದಕ್ಕೂ ಮರೆಯಾಗಿದ್ದವುಗಳು ವ್ಯಕ್ತವಾಗುವುದಕ್ಕೂ ಮೊಬ್ಬಾಗಿದ್ದವುಗಳು ಪ್ರಕಾಶವುಳ್ಳವುಗಳಾಗುವುದಕ್ಕೂ ಪ್ರಾರಂಭವಾಯಿತು ಹಿಂದೆ ಯಾವುದು ನನಗೆ ಕಷ್ಟಕರವಾಗಿದ್ದಿತೋ ಅದೇ ಎದ್ದಿಗೆ ಬರುವ ಮಾರ್ಗವಾಗಿ ಕಂಡಿತು, ಯಾವುದನ್ನು ಅಸಾಧ್ಯವೆಂದು ಭಾವಿಸಿಕೊಂಡಿದ್ದೆನೋ ಅದರ ಮೂಲಕವಾಗಿಯೇ ನಾನು ನನ್ನ ಗುರಿಗೆ ಮುಟ್ಟಬೇಕೆಂದೂ ನನಗೆ ತೋರುವುದಕ್ಕೆ ಪ್ರಾರಂಭವಾಯಿತು ಹೀಗೆ ನಾನು ಹಿಂದೆ ನನ್ನಲ್ಲಿ ಹುಟ್ಟಿದ ದುರಿಚ್ಛೆಗಳಿಗೆ ಅಧೀನನಾಗಿ ಪಾಪದಲ್ಲಿ ಜೀವಿಸುತ್ತಾ ಕುದ್ರ ಸ್ವಾರ್ಥಜೀವನಾಗಿದ್ದೆನು, ಆದರೆ ಈಗ ಪವಿತ್ರಾತ್ಮನಿಂದ ಚೈತನ್ಯವನ್ನು ಹೊಂದಿ ದೇವರಿಗೆ ಅಧೀನನಾಗಿ ಜೀವಿಸುವದಕ್ಕೆ ಪ್ರಾರಂಭಿಸಿರುತ್ತೇನೆಂದು ತಿಳಿದುಕೊಂಡೆನು ದೇವರು ನಮಗೆ ಜೀವವನ್ನೂ ಶಕ್ತಿಯನ್ನೂ ದಯಪಾಲಿಸಿರುತ್ತಾನೆ ಆತನು ನಮಗೆ ಕೊಟ್ಟಿರುವ ಶಕ್ತಿಯಿಂದ ನಾವು ಈ ಲೋಕದಲ್ಲಿರುವಾಗಲೇ ಮುಂದಾಗುವ ಕಾರ್ಯಗಳ ಸೂಚನೆಯನ್ನು ನೋಡುತ್ತೇವೆ ದೇವರು ನಮಗೆ ಇಂಥ ತಿಳುವಳಿಕೆಯನ್ನು ದಯಪಾಲಿಸಿರುವದರಿಂದ ನಿರಂತರಾಗಿ ತಿರಿಗಿ ಪಾಪದ ಸೆರೆಗೆ ಬೀಳದೆ ದೇವರಿಗೆ ಅಧೀನರಾಗಿ ಜೀವಿಸುತ್ತಾ ಬರೋಣ ಎಂಬುವುದೇ

ಕೆಲವು ಕಾಲದ ತರುವಾಯ ಇವನು ಕ್ರಿಸ್ತನಿಗಾಗಿ ಹತಸಾಕ್ಷಿಯಾದನು ಆದಕಾರಣ ಜನರು ಇವನನ್ನು ಶ್ರೀ ಸಿಪ್ರಿಯನೆಂದು ಕರೆಯುವುದಕ್ಕೆ ಪ್ರಾರಂಭಿಸಿದರು ಕ್ರೈಸ್ತ ಮತದಲ್ಲಿ ನೂತನ ಜೀವವನ್ನು ಕೊಡುವ ಒಂದು ಶಕ್ತಿಯು ಇದೆ ಎಂದು ಅವನು ಅನುಭವಪೂರ್ವಕವಾಗಿ ತಿಳಿದುಕೊಂಡುದರಿಂದಲೇ ಬೇರೆ ಎಲ್ಲವುಗಳಿಗಿಂತ ಅದನ್ನು ಹೆಚ್ಚಾಗಿ ಪ್ರೀತಿಮಾಡಿದನು

ಹಿಂದೆ ಬ್ರಾಹ್ಮಣನಾಗಿದ್ದು ಈಗ ಕ್ರೈಸ್ತ ಮತವನ್ನು ಅವಲಂಬಿಸಿರುವ ಒಬ್ಬರನ್ನು ಕುರಿತು—ನೀನು ಆ ಮತದಲ್ಲಿ ಕಂಡ ವಿಶೇಷತ್ವವೇನೆಂದು ಕೇಳಿದ ಜನರಿಗೆ ಅವರು ಉತ್ತರಕೊಟ್ಟಿರುವುದೇನಂದರೆ—ನಾನು ನೀತಿಭ್ರಷ್ಟನಾಗಿ ಜೀವಿಸುತ್ತಾ ಬಂದಿರುತ್ತೇನೆ, ನಾನು ಹೇಗಾದರೂ ನೀತಿವಂತನಾಗಬೇಕು ಎಂಬೀ ಲವಲವಿಕೆಯು ಪ್ರತಿ ಮನುಷ್ಯನಲ್ಲಿಯೂ ಇದ್ದೇ ಇರುತ್ತದೆ ಅಧರ್ಮವನ್ನು ಬಿಟ್ಟು ಧರ್ಮವನ್ನು ಕೈಕೊಳ್ಳಬೇಕೆಂದು ನಾವು ಸರ್ವ ಪ್ರಯತ್ನಪಟ್ಟಾಗ್ಯೂ ಹಾಗೆ ಮಾಡುವುದಕ್ಕೆ ನಾವು ಕೇವಲ ಅಶಕ್ತರಾಗಿದ್ದೇವೆಂಬುದು ಮಾತ್ರ ನಮ್ಮ ಅನುಭವಕ್ಕೆ ಬರುವುದು ಆದಕಾರಣ ನಾವು ಈ ಕಾರ್ಯವನ್ನು ಮಾಡುವಂತೆ ನಮ್ಮನ್ನು ಬಲಪಡಿಸುವಂಥ ಯಾವುದಾದರೂ ಒಂದು ಶಕ್ತಿಯು ಇರುತ್ತದೆಯೋ ಎಂದು ಪೂರ್ಣ ಕುತೂಹಲದಿಂದ ಹುಡುಕುತ್ತೇವೆ ಇಷ್ಟೇ ಅಲ್ಲ ಇದುವರೆಗೂ ನಾವು ಮಾಡಿರುವ ಪಾಪಗಳಿಗೆ ಕ್ಷಮಾಪಣೆಯಾಗುವ ಯಾವದಾದರೊಂದು ಮಾರ್ಗವು ಇರುತ್ತದೋ ಎಂದು ತಿಳಿದುಕೊಳ್ಳಲು ತವಕಪಡುತ್ತೇವೆ ಮನುಷ್ಯನಿಗಿರುವ ಈ ಎರಡು ಅಗಾಧವಾದ ಕೊರತೆಗಳನ್ನು ನೀಗಿಸುವ ವಾಗ್ದಾನವು ಕ್ರೈಸ್ತ ಮತದಲ್ಲಿ ಅಥವಾ ಕ್ರಿಸ್ತನಲ್ಲಿ ನಮಗೆ ಸಿಕ್ಕುತ್ತದೆ ಆದರೆ ಹಿಂದು ಮತದಲ್ಲಿ ಕರ್ಮ, ಜನ್ಮಾಂತರ ಎಂಬೀ ಬೋಧನೆಗಳೇ ಪ್ರಾಮುಖ್ಯವಾದುವುಗಳಾಗಿರುವುದರಿಂದ ಈ ಕೊರತೆಗಳನ್ನು ನೀಗಿಸುವ ಯಾವ ವಾಗ್ದಾನವಾದರೂ ಸಿಕ್ಕುವುದೇ ಇಲ್ಲ ಹಿಂದಿನ ಪಾಪಗಳಿಗೆ ಕ್ಷಮಾಪಣೆಯನ್ನೂ ಮುಂದೆ ಪಾಪ ಮಾಡದೆ ಇರುವಂತೆ ಪವಿತ್ರಾತ್ಮನ ಶಕ್ತಿಯನ್ನೂ ಪೂರ್ಣ ಮನಸ್ಸಿನಿಂದ ಸ್ವೀಕಾರಮಾಡಿಕೊಳ್ಳುವುದೇ ನಿಜವಾದ ದ್ವಿಜತ್ವವಾಗಿರುತ್ತದೆ

ನನ್ನನ್ನು ದ್ವಿಜನನ್ನಾಗಮಾಡುವ ಒಂದು ಶಕ್ತಿಯು ನನಗೆ ಬೇಕು ಎಂಬೀ ಕೊರತೆಯು ಕಾರ್ಥೇಜ್ ಪಟ್ಟಣದ ಆ ವಕೀಲನಿಗೂ ಹಿಂದು ದೇಶದ ಆ ಬ್ರಾಹ್ಮಣನಿಗೂ ಮಾತ್ರವೇ ಅಲ್ಲ, ಎಲ್ಲಾ ಯುಗಗಳವರಲ್ಲಿಯೂ ಇದ್ದೇ ಇರುತ್ತದೆ ಇವರಂತೆಯೇ ಇನ್ನೂ ಲಕ್ಷೋಪಲಕ್ಷ ಜನರು ತಮ್ಮ ಅಗಾಧವಾದ ಕೊರತೆಯು ಯೇಸು ಕ್ರಿಸ್ತನ ಮೂಲಕವಾಗಿ ನೀಗುತ್ತದೆಂಬುದನ್ನು ಅನುಭವಪೂರ್ವಕವಾಗಿ ತಿಳಿದು ಕೊಂಡಿರುತ್ತಾರೆ

ಸ್ವದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಫೆಬ್ರವರಿ ತಾ ೩ ನೇ ಮಂಗಳವಾರ ಮೈಸೂರು ನ್ಯಾಯವಿಧಾಯಕ ಸಭೆಯ ಮಿಟಿಂಗು ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ ನಡೆಯುವುದಾಗಿದೆ

ಕಪೂರ್ಥಲ ಸಂಸ್ಥಾನದ ಮಹಾರಾಜರವರೂ, ಬಲರಾಂಪುರದ ಮಹಾರಾಜಾ ಸರ್ ಭಗವತಿಪ್ರಸಾದ ಸಿಂಗರವರೂ ಕಳೆದ ವಾರ ಬೆಂಗಳೂರಿಗೆ ಬಂದಿರುತ್ತಾರೆ

ಸಣ್ಣ ವಯಸ್ಸಿನವರು ಬೀಡಿ ಸೇದದಂತೆ ನಿರ್ಬಂಧಪಡಿಸುವ ಕಾನೂನನ್ನು ಸರ್ಕಾರದವರು ದ ಪಾಳೆತಿ ಟೌನ್‌ನಲ್ಲಿ ಫೆಬ್ರವರಿ ಲಾಗಾಯಿತು ಜಾರಿಗೆ ತರುವಂತೆ ಹುಕುಂ ಕೊಟ್ಟಿದಾರೆ

ಕಳೆದ ವಾರ ಬೆಂಗಳೂರು ದಂಡಿನಲ್ಲಿ ಕೋತಿಗಳು ಇಪ್ಪತ್ತು ಮೂರು ಸೋಲ್ಜರುಗಳನ್ನು ಕಡಿದು ಗಾಯಮಾಡಿದ್ದರಿಂದ ಅವರನ್ನೆಲ್ಲಾ ಚಿಕಿತ್ಸೆಗಾಗಿ ಕಸೂಲಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ

ಮೈಸೂರು ಸಂಸ್ಥಾನದಲ್ಲಿ ನಡೆಯತಕ್ಕ ಚಿತ್ರಕೆಲಸಗಳ ವಸ್ತುಗಳನ್ನು ನಮ್ಮ ಸರ್ಕಾರದವರು ಪ್ರದರ್ಶನಮಾಡುವುದಕ್ಕಾಗಿ ಬೆಂಗಳೂರು ಸೆಂಟ್ ಮಾರ್ಕ್ ಬೀದಿಯಲ್ಲಿ ಒಂದು ಡಿಪೋವನ್ನು ಪ್ರಾರಂಭಿಸಿರುತ್ತಾರೆ

ಬೆಂಗಳೂರು ಚಾಮರಾಜಪೇಟೆಯಲ್ಲಿ ಕಳೆದ ಎಂಟು ವರುಷಗಳಿಂದ ಇದ್ದ ಶ್ರೀ ಶಿ ಕರಭಾರತಿ ಸ್ವಾಮಿಗಳು ಕಳೆದ ವಾರ ದೈವಾಧೀನರಾದರು ಶಿಷ್ಯವರ್ಗದವರು ಸೇರಿ ಶವವನ್ನು ಸಾಗಿಸಿ ಸಂಸ್ಕಾರಮಾಡಿದರು

ಪ್ರಜಾ ಪಕ್ಷದ ಮೆಂಬರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿದ್ದು ಅವರಿಗೆ ರಜಾ ಬೇಕಾಗಿದ್ದರೆ ಡೆಪ್ಯುಟಿ ಕಮಿಷನರ್ ರವರೇ ಕೊಡಬಹುದೆಂತಲೂ, ಅಂಥ ರಜವು ೧೫ ದಿನಗಳಿಗೆ ಮೇಲ್ಪಟ್ಟರೆ ಸರ್ಕಾರಕ್ಕೆ ತಿಳಿಸಬೇಕೆಂತಲೂ ಹುಕುಂ ಆಗಿದೆ

ತ್ರಿಪುರ ಮಹಾರಾಜರವರು ಪರಿವಾರ ಸಮೇತ ಈ ದಿನ ಬೆಂಗಳೂರಿಂದ ಮಾರಿಕುಪ್ಪೆ ಕ್ಯಾಂಪಿಗೆ ಹೊರಟು ಮೂರು ದಿನ ಅಲ್ಲಿನ ವಿದ್ಯಮಾನಗಳನ್ನು ಪರಾಂಬರಿಸಿಕೊಂಡು ಮುಂದಿನ ಭಾನುವಾರ ವಾಪಸು ಬೆಂಗಳೂರಿಗೆ ದಯಮಾಡುವವರಾಗಿದಾರೆ

ರಾಜಧಾನಿಯ ವರ್ತಕರಲ್ಲಿ ಗಣ್ಯರಾಗಿಯೂ, ಬಡಬಗ್ಗರ ಹಿತಚಿಂತಕರಾಗಿಯೂ ಇದ್ದ ಪೋಲೀಸ್ ಕಂಟ್ರಾಕ್ಟರು ಮ॥ ಟಿ ಕೆ ನರಸಿಂಹಯ್ಯನವರು ಕೆಲವು ದಿನಗಳಿಂದ ಕಾಯಿಲೆ ಇದ್ದು ಮೊನ್ನೆ ಮಂಗಳವಾರ ಮಧ್ಯಾಹ್ನ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

ಶಂಕರಮ್ಮನೆಂಬೊಬ್ಬ ಬ್ರಾಹ್ಮಣ ವಿಧವೆಯು ಶಿಶುವನ್ನು ಕೊಂದಳೆಂಬ ಅಪರಾಧಕ್ಕೆ ಶಿವಮೊಗ್ಗ ಸೆಷನ್ಸ್ ಜಡ್ಜಿಯವರು ಅವಳಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದ್ದರು ಮೊನ್ನೆ ಚೀಫ್ ಜಡ್ಜಿಯವರು ಆ ಶಿಕ್ಷೆಯನ್ನು ಬದಲಾಯಿಸಿ ಅವಳಿಗೆ ಮೂರು ತಿಂಗಳ ಸಾದಾ ಸಜಾ ವಿಧಿಸಿರುತ್ತಾರೆ

ರಾಜಧಾನಿಗೆ ಬಂದಿರುವ ಗುಬ್ಬಿ ನಾಟಕದ ಕಂಪನಿಯಲ್ಲಿ ಮೂರು ಮಂದಿಗೆ ಮ॥ ಎಂ ಬಿ ಮಾದಪ್ಪನವರೂ, ಮ॥ ಎಂ ಸಿಂಗ್ರಯ್ಯನವರೂ ಮುಂದಾಳಾಗಿ ನಿಂತು ಟ್ರಿಬ್ರಿ ಕ್ಯುರೇಟರ್ ಮ॥ ಎ ಮಹದೇವಶಾಸ್ತ್ರಿಗಳ ಹಸ್ತದಿಂದ ಮೂರು ಬಂಗಾರದ ಮೆಡಲುಗಳನ್ನು ಕಳೆದ ಶನಿವಾರ ರಾತ್ರಿ ಕೊಡಿಸಿ ಸಂತೋಷಪಡಿಸಿದರು

ರಾಜಧಾನಿಯಲ್ಲಿರುವ ಕ್ರೌನ್ ಪ್ರೆಸ್ಸಿನ ಪ್ರೊಪ್ರೈಟರು ಮ॥ ಎಂ ಬಿ ಮಾದಪ್ಪನವರು ಚಿತ್ರ ಸಹಿತವಾಗಿ ಅಚ್ಚು ಹಾಕಿಸಿರುವ ಸುಂದರವಾದ ಕ್ಯಾಲೆಂಡರೂ, ಸುಗಂಧಕಾರಿ ಮ॥ ಟಿ ಎಲ್ ಉಪಾಧ್ಯಾಯರವರು ತಮ್ಮ ವ್ಯಾಪಾರ ಸರಕುಗಳ ಚಿಟಿ ಸಹಿತವಾಗಿ ತಯಾರುಮಾಡಿಸಿರುವ ಅಲಂಕಾರವಾದ ಕ್ಯಾಲೆಂಡರೂ ನಮಗೆ ತಲುಪಿರುತ್ತವೆ

ಬೆಂಗಳೂರು ಬಸವನಗುಡಿ ರಾಮಕೃಷ್ಣಾಶ್ರಮದಲ್ಲಿ ಕಳೆದ ಭಾನುವಾರ ಲೇಟ್ ವಿವೇಕಾನಂದಸ್ವಾಮಿಗಳ ಜನ್ಮೋತ್ಸವವನ್ನು ಮಾಡಿದರು ಅಗ್ಗಿ ಶ್ರೀಯುದ್ಯುವರಾಜರವರು ದಯಮಾಡಿಸಿ, ಆ ಸ್ವಾಮಿಗಳ ಪರಹಿತಕಾರ್ಯಗಳನ್ನೂ ಧರ್ಮಬೋಧನೆಯನ್ನೂ ಕುರಿತು ಉಪನ್ಯಾಸಮಾಡಿ, ಬೆಂಗಳೂರಿನ ಬಾಲಕರು

ಅವರ ಹಿತೋಪದೇಶವನ್ನು ಕೈಕೊಂಡು ಸದ್ಭಕ್ತರಾಗಿಯೂ ಸಚ್ಚರಿತ್ರರಾಗಿಯೂ ಶೀಘ ಹಿತೈಷಿಗಳಾಗಿಯೂ ಬೆಳೆಯಬೇಕೆಂದು ಹಾರೈಸಿದರು

• •

ಪಟೇಲ್ ಶ್ಯಾನುಭೋಗರುಗಳಿಗೆ ಅವರ ಕೆಲಸಕಾರ್ಯಗಳನ್ನು ಕಲಿಸಿಕೊಡುವುದಕ್ಕೆ ಏರ್ಪಾಡುಮಾಡಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗಿತ್ತು ಸ್ವರ್ಗ ಕೆಲಸಗಳನ್ನು ಕಲಿಸುವುದಕ್ಕೆ ಏರ್ಪಾಡುಮಾಡಿದೆ ಎಂದೂ, ಸದ್ಯದಲ್ಲಿ ಅಕ್ಕೆಂತ ಹೆಚ್ಚು ವಿಷಯಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕಾದ ಆವಶ್ಯಕತೆ ಕಾಣುವುದಿಲ್ಲವೆಂದೂ, ಯೋಗ್ಯತೆಯುಳ್ಳವರನ್ನೇ ಇನ್ನು ಮುಂದೆ ನೇಮಿಸುತ್ತಾದ್ದರಿಂದ ಅಂಥಾ ಯೋಗ್ಯತೆಯನ್ನು ಅವರವರೇ ಸಂಪಾದಿಸಿಕೊಳ್ಳಬೇಕೆಂದೂ ಸರ್ಕಾರದವರು ತಿಳಿಸಿದಾರೆ

• •

ಒಬ್ಬ ಬಾತ್ಮಿದಾರರಿಂದ—ಅರಕಲಗೂಡು ತಾಲ್ಲೂಕು ಹೆಬ್ಬಾಲೆ ಗ್ರಾಮದ ಹೊಲಗೇರಿಯು ತಾ 17ರಲ್ಲಿ ಬೆಂಕಿಬಿದ್ದು ಬೆಂದುಹೋಯಿತಷ್ಟೆ, ತಾ 22 ರಲ್ಲಿ ಅಮಲ್ದಾರರು ಅಲ್ಲಿಗೆ ದಯಮಾಡಿ ಸುಟ್ಟುಹೋದ ಭಾಗಗಳನ್ನು ನೋಡಿ ಜನನ್ನೆಲ್ಲಾ ಕರೆಸಿಕೊಂಡು ಬೆಂಕಿಬಿದ್ದ ಕಾರಣವನ್ನು ವಿಚಾರಿಸಿದರು ಬಳಿಕ ಅವರಿಗೆ ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಬೊಂಬು ಮುಂತಾದ ಸಾಮಾನು ಕೊಡಿಸುವುದಾಗಿಯೂ, ತರುವಾಯ ಸರಿಯಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರ ಜಂಗಲಿನಿಂದ ಮರಮುಟ್ಟನ್ನು ಕೊಡಿಸುತ್ತೇವೆಂತಲೂ ಅಪ್ಪಣೆ ಕೊಡಿಸಿ ಪ್ರಯಾಣಮಾಡಿದಾರೆ

• •

ಒಬ್ಬ ಬಾತ್ಮಿದಾರರು ಬರೆಯುವುದು —ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖೆಯಲ್ಲಿ ಕಳೆದ ತಾ 17 ನೇ ಶನಿವಾರ ಸೌ॥ ಹಿತೈಷಿಗಳವರು ಸಂಗೀತವನ್ನು ಕುರಿತು ಶ್ರಾವ್ಯವಾದ ಉಪನ್ಯಾಸಮಾಡಿದರು ತಾ 24 ನೇ ಶನಿವಾರ ಮಧ್ಯಪ್ರಾಂತದಿಂದ ಬಂದಿರುವ ಮ॥ ಎಂ ರಾಮಯ್ಯನವರ ಪತ್ನಿ ಸೌ॥ ಸುಬ್ಬಮ್ಮನವರು ಕಾಲದ ಮೌಲ್ಯವನ್ನು ಕುರಿತು ಉತ್ಕೃಷ್ಟವಾದ ಉಪನ್ಯಾಸ ಮಾಡಿದರು ಇದಲ್ಲದೆ ಅವರು ಸ್ವಂತವಾಗಿ ಮಾಡಿರತಕ್ಕ ಕೆಲವು ಶ್ರೇಷ್ಠವಾದ ಕೈಗಾರಿಕೆ ಕೆಲಸಗಳನ್ನು ಸಭಿಕರಿಗೆ ತೋರಿಸಿ, ಆಕೆಯಮನ ಸಹೋದರಿಯರಿಗೆ ಅವನ್ನು ಕಲಿಸಿಕೊಡುವುದಾಗಿ ಹೇಳಿದರು ಸಮಾಜದಲ್ಲಿ ಸೇರಿದ್ದವರು ಅವರ ಕುಶಲವಿದ್ಯೆಗಳನ್ನು ನೋಡಿ ಬಹಳ ಸಂತೋಷಪಟ್ಟು ಶ್ರೇಯಃಪ್ರಾರ್ಥನೆಮಾಡಿ ಅವರ ಧಾರಾಳಬುದ್ಧಿಯನ್ನು ಕೊಂಡಾಡುತ್ತಾ ತೆರಳಿದರು

ಮೈಸೂರು ಗಜೆಟ್ ಸಂಗ್ರಹ

ಮುಳಬಾಗಲ ಮ್ಯುನಿಸಿಪಲ್ ಸರಹದ್ದಿನೊಳಗೆ 1914 ನೇ ಫೆಬ್ರವರಿ ತಾ 1 ರಿಂದ ಇನ್ನೆರಡು ವರುಷ ಬಲಾತ್ಕರಿಸಿ ಲಸಿಕೆ ಹಾಕುವ ಕಾನೂನು ಚಾರಿಯ ಲ್ಲಿರತಕ್ಕದ್ದು

ಮುಂದೆ ಹೇಳುವವರು ಮೈಸೂರು ಮಹಾರಾಜರವರ ಸಂಸ್ಕೃತಕಾಲೇಜಿನ ಮಾಲ್ಟಿ ಬಾಂಗಾ ಕಮಿಟಿ ಮೆಂಬರುಗಳಾಗಿ ನೇಮಿಸಲ್ಪಟ್ಟಿದಾರೆ—ಅರಮನೆ ಛಂ ಡಿತ್ತಾಲರವರು, ಮ ಎಸ್ ರಂಗಾಚಾರ್ಯರವರು, ಪಂಡಿತ್ ಸೋಸಲೆ ರಾಮಾ ನುಜಾಚಾರ್ಯ ಪಂಡಿತ್ ಕುಣಿಗಲ್ ರಾಮಶಾಸ್ತ್ರಿಗಳು, ಪಂಡಿತ್ ಹೊಳವನ ಹಳ್ಳಿ ಕೇಶವಾಚಾರ್ಯ, ಪಂಡಿತ್ ಕವಿತಿಲಕ ವೆಂಕಟಸುಬ್ಬಾಶಾಸ್ತ್ರಿ ಉಗ್ರಪ್ಪ ಮಧ್ವಶಾಸ್ತ್ರಿಗಳು, ಮ ಎಂ ಎಸ್ ಯಣ್ಣಯ್ಯನವರು, ಮ॥ ವಿ ವೆಂಕಟರಾ ಮಯ್ಯನವರು

ಮ॥ ಟಿ ಜಿ ಲಕ್ಷ್ಮೀನರಸಿಂಹಯ್ಯನವರು ಸರ್ಕಾರ ಕೆಲಸದ ಮೇಲೆ ಕಳುಹ ಲ್ಪಟ್ಟಿರುವಾಗ ಡಿಸ್ಟ್ರಿಕ್ಟ್ ಆಫೀಸರ್ ಮಿ ಎ ಕೆ ಪಾಣೆಯವರು ಟ್ರೈನಿಂಗ್ ಟೀಚರ್ ಟೆಂಪೊರರಿ ಆಗಿ ಏಜೆಂಟರಾಗಿ ಎಪಲಿನೋಡತಕ್ಕದ್ದು

ಶೃಂಗೇರಿ ಶಿಶು ಗೃಹ ಮೆಸ್ಟ ಅಮಲ್ದಾರ್ ಮ॥ ಕೆ ಕೆನ್ನಯ್ಯಶಾಸ್ತ್ರಿಯವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿ ಕೊಳ್ಳಲಿಲ್ಲವಾಗಿ ರದ್ದು ಮಾಡಿದೆ

ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮ॥ ಕೆ ನಾರಾಯಣರಾಯರಿಗೆ ಕೊಟ್ಟಿದ್ದ ಎರಡು ತಿಂಗಳ ಕಾಯಿಲೆ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ

ಮೈಸೂರು ದೇಶಗಳ ಡೆಪ್ಯುಟಿ ಕಮಾಂಡ್ಯಾಂಟರಾದ ಕರ್ನಲ್ ಜೆ ದೇಸರಾಜೆ ಅರಸಿನವರಿಗೆ ಕೊಟ್ಟಿರುವ ನಾಲ್ವತ್ತೆರಡು ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ನಾಲ್ವತ್ತೆಂಟುದಿನ ಜಾಸ್ತಿಮಾಡಿದೆ

ಕ್ರೌನ್ ಡಿಪಾರ್ಟ್ಮೆಂಟ್ ಪ್ರೋಲೀಸ್ ಸೂಪರಿಂಟೆಂಡೆಂಟ್ ಮಿ ಎ ವೇದಾಂತ ದೇಶಿಕ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮ॥ ಎಸ್ ರೂಬರ್ಟರವರು ಫ್ರೆಷ್ ರಾಕ್ ಪ್ರೋಲೀಸ್ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿದಾರೆ

ಫಾರೆಸ್ಟ್ ರೇಂಜರ್ ಮಿ ಎಚ್ ಎಸ್ ನಾರಾಯಣರಾಯರನ್ನು ಕಳೆದ ಅಕ್ಟೋಬರ್ ತಾ 7 ರಿಂದ ಫ್ರೊ । ಆ ಕನ್ಸರ್ವೇಟರಾಗಿ ನೇಮಕಮಾಡಿದೆ

ಶ್ರೀಮನ್ಮಹಾರಾಜರವರು ಮಿ । ಸ ದರ್ಗ ಜನ್ ಷಾ ರವರನ್ನು ಜನವರಿ ತಾ 1 ರಿಂದ ತಮ್ಮ ಏಡಿಕಾಂಗರಾಗಿ ನೇಮಕಮಾಡಿರುತ್ತಾರೆ

ಸಬ್ ರೆಜಿಸ್ಟ್ರಾರ್ ಮ ವಿ ಶ್ರೀನಿವಾಸಮೂರ್ತಿಯವರನ್ನು ಹಂಗಾಮಿ ಯಾಗಿ ಕೋಆಪರೇಟಿವ್ ಸೊಸೈಟಿಗಳ ಇನ್ಸ್ಪೆಕ್ಟರಾಗಿ ನೇಮಿಸಿಕೊಂಡಿರುವ ಕಾರಣ ಸಬ್ ರೆಜಿಸ್ಟ್ರಾರ್ ಮ॥ ಎಂ ರಾಘವೇಂದ್ರರಾಯರನ್ನು ಚಿಂತಾಮಣಿಗೆ ಮುದೆ ಬದಲಾಯಿಸಿ, ಮ । ಎ ರಾಮರಾಯರನ್ನು ಚಿಂತಾಮಣಿಗೂ ನಗರ ಮಾಡಿದೆ

ಅ । ಇಂಜನಿಯರ್ ಮಿ । ಎಸ್ ಶ್ರೀನಿವಾಸ ಅಯ್ಯರವರಿಗೆ ಹದಿನೈದು ದಿನ ಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ॥ ನಾಡವರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿರುವುದರಿಂದ ಸ । ಇಂಜನಿಯರ್ ಮಿ । ವಿ ರಂಗಸ್ವಾಮಿಅಯ್ಯಂಗಾರ್ರು ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು

ಕೃಷ್ಣರಾಜ ಪೇಟೆತಾಲ್ಲೂಕ್ ಅಮಲ್ದಾರ್ ಮ॥ ಟಿ ವೆಂಕಟರಾಮಯ್ಯನವರಿಗೆ ಎರಡು ವಾರಗಳೂ, ಕೊಪ್ಪ ತಾಲ್ಲೂಕ್ ಅಮಲ್ದಾರ್ ಮಿ । ಎಚ್ ಶ್ರೀನಿವಾಸರಾಯರಿಗೆ ಮೂರು ವಾರಗಳೂ ಪ್ರಿವಿಲೆಜ್ ರಜಾ ಕೊಟ್ಟಿದೆ

ಉಪಾಧ್ಯಾಯರ ಸಂಘ, ಹೊಸಕೋಟೆ

ಕಳೆದ 18 ನೇ ತಾ ಭಾನುವಾರ ಹೊಸಕೋಟೆ ಗೌರ್ನಮೆಂಟ್ ಎ ವಿ ಸ್ಕೂಲಿನಲ್ಲಿ ಹೆಡ್ ಮಾಸ್ಟರು ಮ॥ ಟಿ ರಾಮಕೃಷ್ಣಯ್ಯನವರು ಬೆಂಗಳೂರು ಡಿಪ್ಯುಟಿ ಇನ್ಸ್ಪೆಕ್ಟರ್ ಮ॥ ಅನಂತ ಸುಬ್ಬರಾಯರ ಮೂಲಕ ಉಪಾಧ್ಯಾಯರ ಸಂಘವನ್ನು ಪ್ರಾರಂಭಿಸಿದರು ಮ॥ ಅಮಲ್ದಾರ್ ಸೋಮೇಶ್ವರ ಅಯ್ಯರವರು, ಶಿರಸ್ತೇದಾರರು, ಡಾಕ್ಟರವರು, ಸಬ್ ರೆಜಿಸ್ಟ್ರಾರವರೇ ಮೊದಲಾದ ಅಧಿಕಾರಿಗಳೂ, ಮ್ಯುನಿಸಿಪಲ್ ಮೆಂಬರುಗಳೂ, ಹೊಸಕೋಟೆ ಟವನ್ ಮಾಸ್ಟರುಗಳೂ, ಈ ತಾಲ್ಲೂಕಿನ ಎ ವಿ ಸ್ಕೂಲ್ ಮಾಸ್ಟರುಗಳೂ, ಅನೇಕ ಪ್ರಜೆಗಳೂ ಸಭೆಯನ್ನು ಅಲಂಕರಿಸಿದ್ದರು ಮ॥ ಅನಂತ ಸುಬ್ಬರಾಯರು ಗಣಿತ ಮತ್ತು ಗದ್ಯ ಪಾಠಗಳನ್ನೂ, ಎ ವಿ ಸ್ಕೂಲ್ ಹೆಡ್ ಮಾಸ್ಟರು ಮ॥ ರಾಮಕೃಷ್ಣಯ್ಯನವರು ಭೂಗೋಳ ಮತ್ತು ಕಿಂಡರ್‌ಗಾರ್ಟನ್ ಪಾಠಗಳನ್ನೂ ನಿದರ್ಶನರೂಪವಾಗಿ ಬಾಲಕರಿಗೆ ಬೋಧಿಸತಕ್ಕ ಮಾರ್ಗಗಳನ್ನು ಬೋಧನೆಗಳ ಮೂಲಕ ಯುಕ್ತಿಯುಕ್ತವಾಗಿ ತಿಳಿಸಿದರು, ಹೆಡ್ ಮಾಸ್ಟರವರು ಈ ವಿಷಯವಾಗಿ ಎಲ್ಲಾ ಮಾಸ್ಟರುಗಳಿಗೂ ಸ್ವಾರಸ್ಯವಾದ ಉಪನ್ಯಾಸಮಾಡಿದರು ಮುಂದೆ ಪ್ರತಿ ತಿಂಗಳಲ್ಲಿಯೂ ಒಂದೊಂದು ದಿವಸ ಇದೇ ರೀತಿ ನಡೆಯುತ್ತಾ ಇರುತ್ತದೆ ಈ ಹೆಡ್ ಮಾಸ್ಟರವರು ಈ ಊರಿಗೆ ಬಂದ ಮೂರು ತಿಂಗಳಾರಭ್ಯ ಸರ್ವದಾ ಸ್ಕೂಲಿನಲ್ಲಿಯೇ ಇದ್ದು ಬಹಳ ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಕೆಲಸಮಾಡಿ ಹೊಸದಾದ ಕಿಂಡರ್‌ಗಾರ್ಟನ್ ಪದ್ಧತಿಯನ್ನು ಆಚರಣೆಯಲ್ಲಿ ತಂದು ಈ ಸ್ಕೂಲಿನ ಮಾಸ್ಟರುಗಳನ್ನು ಮತ್ತೂ ಬಾಲಕರನ್ನು ತರಬೇತುಮಾಡಿ ಪ್ರಜೆಗಳಲ್ಲಿಯೂ ಮಾಸ್ಟರುಗಳಲ್ಲಿಯೂ ಬಾಲಕರಲ್ಲಿಯೂ ತುಂಬಾ ವಿಶ್ವಾಸಪಟ್ಟು ಇರುವರು

ಕಲ್ಕತ್ತೆಯಲ್ಲಿ ನಡೆದ ಕ್ರೂರಕೃತ್ಯ

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ತಾ 19ನೇ ಸೋಮವಾರ ರಾತ್ರಿ ದುಃಖಕರವಾದ ಇನ್ನೊಂದು ಕ್ರೂರಕೃತ್ಯ ನಡೆಯಿತು ಅಲ್ಲಿನ ಗುಪ್ತ ಪೋಲೀಸ್ ಇನ್ಸ್ಪೆಕ್ಟರಾಗಿದ್ದ ಬಾಬು ನೃಪೇಂದ್ರನಾಥ ಘೋಸ್ ಎಂಬಾತನು ಆ ದಿನ ತನ್ನ ಕಚೇರಿ ಕೆಲಸ ತೀರಿಸಿಕೊಂಡು ತನ್ನ ಮನೆಗೆ ಬರುವ ಉದ್ದೇಶ ಎಂದಿನಂತೆ ಟ್ರಾಂ ಗಾಡಿಯಲ್ಲಿ ಬಂದು ರಾತ್ರಿ 8 ಗಂಟೆಗೆ ಎರಡು ರಸ್ತೆಗಳು ಕೂಡುವ ಚೌಕದಲ್ಲಿ ಇಳಿದು ಹೋಗುತ್ತಿದ್ದನು ಅವನ ಸಂಗಡ ಒಬ್ಬ ಪೋಲೀಸ್ ಜವಾನನೂ ಹೋಗುತ್ತಿದ್ದನು ಅಕಸ್ಮಾತ್ತಾಗಿ ಯಾವನೋ ಒಬ್ಬನು ಇನ್ಸ್ಪೆಕ್ಟರಿಗೆ ಗುರಿಕಟ್ಟಿ ನಾಲ್ಕಾವರ್ತಿ ಪಿಸ್ತೂಲಿನಿಂದ ಗುಂಡು ಹೊಡೆದು ಓಡಿಹೋದನು ಅವೆಲ್ಲಾ ಆತನ ಕುತ್ತಿಗೆ, ಎದೆ, ಕಂಕುಳು ಮುಂತಾದ ಭಾಗಗಳಿಗೆ ಬಡಿದು ಇನ್ಸ್ಪೆಕ್ಟರು ಅಲ್ಲೇ ಬಿದ್ದು ಸ್ವಲ್ಪ ಹೊತ್ತಿನೊಳಗಾಗಿ ಪ್ರಾಣಬಿಟ್ಟನು ಆತನ ಜೊತೆಯಲ್ಲಿದ್ದ ಜವಾನನು ಪಿಸ್ತೂಲು ಹಾರಿಸಿದ ಕ್ರೂರಾತ್ಮನನ್ನು ಹಿಂದಟ್ಟಿಹೋಗಿ ಒಬ್ಬ ಮೋಚಿಯ ಸಹಾಯದಿಂದ ಹಿಡಿದಿರುತ್ತಾನೆ ಕೂಡಲೇ ಸಮೀಪದಲ್ಲಿ ತಿರುಗಾಡುತ್ತಿದ್ದ ಜನರು ಕೂಡ ಹೋಗಿ ಆ ಪಾತಕಿಯನ್ನು ಠಾಣಾದಲ್ಲಿಟ್ಟರು ಇವನು ತಲೆ ತಪ್ಪಿಸಿಕೊಂಡು ಓಡಿಹೋಗುತ್ತಿದ್ದಾಗ ಪೋಲೀಸಿನವನೂ ಇತರರೂ ಹಿಡಿಯಬೇಕೆಂದು ಹಿಂಬಾಲಿಸಿ ಹೋದ ಸಂದರ್ಭದಲ್ಲಿ ಆಕ್ರೂರಿಯು ಹಿಂತಿರುಗಿ ತನ್ನ ಕೈಲಿದ್ದ ಪಿಸ್ತೂಲನ್ನು ತೋರಿಸಿ ಹಾರಿಸಿದನು ಒಂದು ಗುಂಡು ಬೀದಿಯಲ್ಲಿದ್ದ ಅನಂತ ಲಾಲ ಎಂಬ ಹುಡುಗನ ತಲೆಗೆ ಬಡಿದು ಘೋರಾ ಗಾಯವಾಯಿತು ಈ ಹುಡುಗನನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದಾಗ್ಯೂ ಪ್ರಯೋಜನವಾಗದೆ ಅವನು ಸತ್ತುಹೋದನು ಈಚೆಗೆ ಪೋಲೀಸಿನವರು ವಿಚಾರಣೆಮಾಡಿದ್ದರಲ್ಲಿ ಆ ಕೊಲೆಗಾರನ ಹೆಸರು ನಿರ್ಮಲಕಾಂತರಾಯಿ ಎಂದೂ, ಅವನಿಗೆ 18-20 ವರುಷವಾಗಿರಬಹುದೆಂದೂ ಅವನು ಎಫ್ ಎ ಪರೀಕ್ಷೆಗೆ ಓದಿ ಎರಡಾವರ್ತಿ ಹಣ ಕಟ್ಟಿ ತೇರ್ಗಡೆಹೊಂದದೆ ಇನ್ನೂ ವಿದ್ಯಾರ್ಥಿಯಾಗಿದ್ದನೆಂದೂ ಗೊತ್ತಾಯಿತು ಮತ್ತು ಅವನ ಜೊತೆಯಲ್ಲೇ ದಸ್ತಗಿರಿಮಾಡಿದ್ದ ಇನ್ನೊಬ್ಬನನ್ನು ಈಚೆಗೆ ಬಿಟ್ಟುಬಿಟ್ಟು, ಅವನ ಸಂಗಡ ವಿದ್ಯಾರ್ಥಿಯಾಗಿ ಒಂದೇ ಕೋಣೆಯಲ್ಲಿ ಇದ್ದ ಘೋಸ್ ಎಂಬ ಹುಡುಗನನ್ನು ಹಿಡಿದು ಇಟ್ಟುಕೊಂಡು ತನಿಖೆಮಾಡುತ್ತಿದಾರೆ ಪೋಲೀಸಿನವರು ಗುಮಾನಿಯ ಮೇಲೆ ಅನೇಕ ಮನೆಗಳನ್ನು ಶೋಧನೆಮಾಡಿ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು

ಕೊಲೆಯಾದ ಪೋಲೀಸ್ ಇನ್ಸ್ಪೆಕ್ಟರು ಪೋಲೀಸ್ ಇಲಾಖೆಯಲ್ಲಿ 23 ವರುಷ ನೌಕರಿ ಮಾಡಿ, ಆ ಪೈಕಿ 15 ವರುಷದಿಂದ ಕಲ್ಕತ್ತೆಯಲ್ಲೇ ನೌಕರಿ ಮಾಡುತ್ತಿದ್ದನು ಇವನ ಹೆಂಡತಿ ಮಕ್ಕಳ ಸ್ಥಿತಿಯು ಅಪಾರವಾಗಿರುತ್ತದೆ ಇವನು ತುಂಬಾ ದಕ್ಷನೆಂತಲೂ, ಸತ್ಯವಂತನೆಂತಲೂ ಇಲಾಖೆಯಲ್ಲಿ ಹೆಸರು ಪಡೆದಿದ್ದನು ಬಂಗಾಳಾ ಗವರ್ನರವರು ಈ ಕ್ರೂರಕೃತ್ಯವನ್ನು ಕೇಳಿ ದುಃಖಪಟ್ಟು ಮರುದಿನವೇ ಆ ಎರಡು ಮರಣಗಳ ವಿಷಯದಲ್ಲೂ ಅವರ ಬಂಧುಗಳಿಗೆ ಸಂತಾಪಸೂಚಕವಾದ ಅನುಜ್ಞೆಯನ್ನು ದಯಪಾಲಿಸಿದರು ಈ ಕೊಲೆ ನಡೆದದ್ದನ್ನು ನೋಡಿ ಆ ಪಟ್ಟಣದ ದೇಶೀಯ ಪೋಲೀಸ್ ಹುದ್ದೆದಾರರಿಗೆಲ್ಲಾ ತಮಗೇನಾದೀತೋ ಎಂಬ ಭೀತಿಯೂ, ಕಳವಳವೂ ಉಂಟಾಗಿದೆ

ಕಲ್ಕತ್ತೆಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕಳೆದ ಶುಕ್ರವಾರವೂ ಶನಿವಾರವೂ ಅಂತರಂಗದಲ್ಲೇ ಅಪರಾಧಿಯನ್ನು ನಿಲ್ಲಿಸಿಕೊಂಡು ಕೊಲೆ ನಡೆದ ಕಾಲದಲ್ಲಿ ಜರುಗಿದ ವರ್ತಮಾನಗಳನ್ನು ಕುರಿತು ಪೋಲೀಸಿನವರ ಕೈಫಿಯತ್ತುಗಳನ್ನು ಬರೆದುಕೊಂಡು, ಅಪರಾಧಿಯ ಕೈಫಿಯತ್ತ ಕೇಳದೆ, ಅಪರಾಧಿಯನ್ನು ಸೆಷನ್ಸ್ ವಿಚಾರಣೆಗೆ ಗುರುಪಡಿಸಿದಾರೆ

ಅತ್ತಬಾಗ ಪೋಲೀಸ್ ಕಮಿಷನರಾದ ಸರ್ ಪ್ರೆಡ್ರಿಕ್ ಹ್ಯಾಲಿಡೆ ಯವರು ಕಳೆದ ಸೋಮವಾರ ಕಲ್ಕತ್ತಾ ಮೈದಾನದಲ್ಲಿ ಅಪರಾಧಿಯನ್ನು ಓಡಿಹೋಗುತ್ತಿದ್ದಾಗ ಹಿಡಿದ ಪೋಲೀಸಿನವರಿಗೂ, ಪ್ರಜೆಗಳಿಗೂ ಬಹುಮಾನಗಳನ್ನು ಹಂಚಿ ಕೊಟ್ಟರು ಐದು ಮಂದಿ ಪೋಲೀಸಿನವರಿಗೆ ತಲಾ 700 ರೂಪಾಯಿ, ಪ್ರಜೆಗಳಲ್ಲಿ ಇಬ್ಬರಿಗೆ ತಲಾ 100 ರೂಪಾಯಿ, ಇನ್ನೊಬ್ಬನಿಗೆ 50 ರೂಪಾಯಿ ಇನಾಮು ಸಿಕ್ಕಿತು

"ನನ್ನ ಅನುಭವವು"

[ನಮ್ಮ ದಿವಾನ್ ಸಾಹೇಬರವರು ನಮ್ಮ ದೇಶದ ರೈತರ ಮತ್ತೂ ವರ್ತಕರ ಉಪಯೋಗಾರ್ಥವಾಗಿ ನನ್ನ ಅನುಭವವನ್ನು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತಿರಬೇಕೆಂದು ಅಪ್ಪಣೆಕೊಡಿಸಿರುತ್ತಾರೆ ಆದ್ದರಿಂದ ಇನ್ನು ಮೇಲೆ ತಿಂಗಳಿಗೆ ಒಂದು ಭಾಗವನ್ನಾದರೂ ತಪ್ಪದೆ ಬರೆಯಲು ಯತ್ನಿಸುತ್ತೇನೆ ನನಗೆ ಮುದ್ದಾಗಿ ಕಾಗದ ಬರೆದು ಯಾವ ಸಂಗತಿಯನ್ನಾದರೂ ತಿಳಿಯಬೇಕೆಂದುಳ್ಳ ವಾಚಕರ ಉಪಯೋಗಾರ್ಥವಾಗಿ ನನ್ನ ಅಡ್ರೆಸ್ಸನ್ನು ಈ ಕೆಳಗೆ ಕೊಟ್ಟಿದ್ದೇನೆ — Mr K H RAMAYYA, London School of Economics, London

ಪ್ರಿಯ ಮಿತ್ರರೇ,—ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ನಾವು ಸೇರಿದವರಾದಾಗ್ಯೂ ಬ್ರಿಟಿಷರ ಗುಣಗಳನ್ನು ನಾವು ಇನ್ನೂ ಚೆನ್ನಾಗಿ ಗ್ರಹಿಸಿಲ್ಲವೆಂಬುವ ವಿಷಯವನ್ನು ಸ್ವಲ್ಪ ಮಟ್ಟಿಗೆ ತಿಳಿಸುತ್ತೇನೆ ಪ್ರತಿ ಒಬ್ಬ ಮನುಷ್ಯನಲ್ಲಿಯೂ ಗುಣದೋಷಗಳೆರಡೂ ಸಾಧಾರಣವಾಗಿರುವಂತೆ ಪ್ರತಿ ಜನಾಂಗದಲ್ಲಿಯೂ ಗುಣಾವಗುಣಗಳೆರಡೂ ಇರುವುದು ಸರ್ವರಿಗೂ ತಿಳಿದ ವಿಷಯವಾಗಿಯೇ ಇದೆ ಒಬ್ಬರ ಅವಗುಣಗಳ ಪ್ರಸ್ತಾಪದಿಂದ ನಮಗೆ ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂಬುದನ್ನು ನಾನು ಹೇಳಬೇಕಾಗಿಲ್ಲ ಯಾವ ವಿಧದಿಂದಲಾದರೂ ಗುಣಗ್ರಾಹಿತ್ವವೇ ನಮ್ಮ ಮುಖ್ಯ ಧರ್ಮವಾದ್ದರಿಂದಲೂ, ನಮಗಿಂತ ಉತ್ತಮಸ್ಥಿತಿಯಲ್ಲಿರುವವರ ಮೇಲ್ಪಂಕ್ತಿಯನ್ನನುಸರಿಸತಕ್ಕದ್ದು ನ್ಯಾಯವಾಗಿರುವುದರಿಂದಲೂ ಬ್ರಿಟಿಷರ ಕೆಲವು ಮುಖ್ಯಗುಣಗಳನ್ನು ನಮ್ಮ ಜನರ ಅವಗಾಹನೆಗಾಗಿ ಈ ಮೂಲಕ ವ್ಯಕ್ತಪಡಿಸುತ್ತೇನೆ

ಯಾವ ದೇಶದಲ್ಲಿ ಮೌಢ್ಯವೂ, ಬಡತನವೂ ಹೆಚ್ಚಿರುವವೋ ಆ ದೇಶವು ಅಭಿವೃದ್ಧಿಗೆ ಬರುವುದು ಬಹಳ ಪ್ರಯಾಸ ಈ ಮರ್ಮವನ್ನು ನೂರಾರು ವರ್ಷಗಳ ಹಿಂದೆ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೇರಿಕ ಮುಂತಾದ ದೇಶಗಳ ಜನರು ತಿಳಿದುಕೊಂಡು, ಸಮಸ್ತ ಜನರೂ ವಿದ್ಯಾವಂತರಾಗುವುದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿ, ಬಲಾತ್ಕಾರದಿಂದ ಸರ್ವರನ್ನೂ ವಿದ್ಯಾವಂತರನ್ನಾಗಿ ಮಾಡಲು ಯತ್ನಿಸಿದರು ಈ ದೇಶಗಳು ಬಹಳ ಅಭಿವೃದ್ಧಿಸ್ಥಿತಿಗೆ ಈಗ ಬಂದಿದ್ದಾಗ್ಯೂ ಇವುಗಳಲ್ಲಿ ಬಲಾತ್ಕಾರದಿಂದ ವಿದ್ಯಾಭ್ಯಾಸಮಾಡಿಸುವ ಕಾನೂನು ಇನ್ನೂ ಚಾರಿಯಲ್ಲಿರುವುದನ್ನು ನೋಡಿದರೆ ಜನರು ತಾವಾಗಿ ವಿದ್ಯಾವಂತರಾಗಬೇಕೆಂದು ಎತ್ನಿಸುವುದು ಅಪರೂಪವೆಂದು ತೋರುತ್ತದೆ ಸರ್ಕಾರದ ನಿರ್ಬಂಧವಿಲ್ಲದೆ ಹೋಗಿದ್ದರೆ ಈ ದೇಶಗಳಲ್ಲಿ ವಿದ್ಯಾಪ್ರಾಚುರ್ಯವು ಬಹಳ ಮಟ್ಟಿಗೆ ಕಡಮೆಯಾಗಿ ನಮ್ಮ ದೇಶದಲ್ಲಿದ್ದಂತೆಯೇ ಇರುತ್ತಲಿತ್ತು. ರೋಗಪೀಡಿತರಾದ ಮಕ್ಕಳು ತಾವಾಗಿ ಔಷಧವನ್ನು ಸೇವಿಸಿ ರೋಗವನ್ನು ನಾಶಮಾಡಿಕೊಳ್ಳಬೇಕೆಂದು ಕುತೂಹಲಪಡುವುದು ಬಹಳ ಅಪರೂಪವೇ ಸರಿ ಅಲ್ಲದೆ ಅನೇಕ ಮಕ್ಕಳು ಔಷಧವನ್ನು ಸೇವಿಸಲು ನಿರ್ಬಂಧಪಡಿಸಲ್ಪಡಬೇಕಾದುದು ತಂದೆತಾಯಿಗಳಿಗೆ ತಿಳಿಯದ ವಿಷಯವಲ್ಲ ಅದರಂತೆಯೇ ಮೌಢ್ಯವೆಂಬ ರೋಗಪೀಡಿತರಾದ ಸಾಮಾನ್ಯ ಜನರೆಂಬ ದೊಡ್ಡಮಕ್ಕಳು ತಾವಾಗಿ ವಿದ್ಯೆ ಎಂಬ ಔಷಧವನ್ನು ಸೇವಿಸಲು ಯತ್ನಿಸುವುದಿಲ್ಲ ಪ್ರಜೆಗಳಿಗೆ ತಂದೆಯೋಪಾದಿಯಲ್ಲಿರುವ ಸರ್ಕಾರವು ಇಂಥಾ ಮಕ್ಕಳನ್ನು ಬಲಾತ್ಕಾರದಿಂದ ವಿದ್ಯಾವಂತರನ್ನಾಗಿಮಾಡಲು ಯತ್ನಿಸುವುದು ಮುಖ್ಯವಾದ ಮತ್ತು ಮೊದಲನೇ ಕರ್ತವ್ಯವೆಂದು ಅರಿತಿರಬೇಕು.

ಈ ವಿಚಿತ್ರವಾದ ಮತ್ತು ಅದ್ಭುತವಾದ ಲಂಡನ್ ಪಟ್ಟಣದಲ್ಲಿ ಓದು ಬರಹ ಬಾರದೆ ಇರುವ ಗಂಡಸನ್ನಾಗಲಿ, ಹೆಂಗಸನ್ನಾಗಲಿ ನೋಡಬೇಕೆಂದಪೇಕ್ಷಿಸಿದರೆ ಇಲ್ಲಿನ ಜನರು ನಮ್ಮ ಮುಖಗಳನ್ನು ಆಶ್ಚರ್ಯದಿಂದ ನೋಡುವುದಲ್ಲದೆ ಅಂಥಾ ಪ್ರಶ್ನೆಯನ್ನು ಕೇಳುವ ಮನುಷ್ಯರು ಬಹಳ ಹಿಂದುಳಿದ ಯಾವ ದೇಶದಿಂದಲೋ ಬಂದಿರಬಹುದೆಂದು ಭಾವಿಸಿ ನಗುವರು ವಾಚಕರೇ, ಈ ದೇಶಗಳಲ್ಲಿ ವಿದ್ಯೆಯು ಎಷ್ಟು ಅಭಿವೃದ್ಧಿಸ್ಥಿತಿಯಲ್ಲಿರುವುದೆಂಬುದನ್ನು ಇದರಿಂದ ನೀವೇ ಊಹಿಸಿಕೊಳ್ಳಿ ನಮ್ಮ ದೇಶದಲ್ಲಿ ಮೆಟ್ರಿಕ್ಯುಲೇಷನ್, ಎಫ್ ಎ, ಬಿ ಎ ಮೊದಲಾದ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವಂತಹ ಕಾಲೇಜುಗಳು ಇಲ್ಲೂ ಅನೇಕವಾಗಿವೆ ಆದರೆ ನಮ್ಮ ದೇಶದಲ್ಲಿ ಒಬ್ಬ ಹುಡುಗನು ಮೆಟ್ರಿಕ್ಯುಲೇಷನ್ ಪರೀಕ್ಷೆ ಮಾಡದೆ ಹೋದಲ್ಲಿ ಸೆನ್ಸಸ್ ಆಫೀಸಿಗೂ ಸಹ ಲಾಯಕ್ಕಿಲ್ಲವೆಂದು ಭಾವಿಸಲ್ಪಡುತ್ತಾನೆ ಮಿಕ್ಕ ಯಾವ ವಿದ್ಯೆಯನ್ನು ಕಲಿಯಲೂ ಅವನಿಗೆ ಅವಕಾಶವಿಲ್ಲದ್ದರಿಂದಲೂ, ಯಾವ ವಿಧವಾದ ಕಸಬನ್ನೂ ತಿಳಿಯದವನಾದ್ದರಿಂದಲೂ ತನ್ನ ಜೀವನವನ್ನು ಸಹ ಸಂಪಾದಿಸಲು ಶಕ್ತಿ ಸಾಲದವನಾಗಿ, ಇಂಥಾ ಹುಡುಗನು ಸರ್ವದ ಅಪಹಾಸ್ಯಕ್ಕೆ ಗುರಿಯಾಗುವನು ಇಲ್ಲಿನ ಸ್ಥಿತಿ ಹಾಗಿಲ್ಲ ಎಲ್ಲಾ ಕಸಬುಗಳಿಗೂ ಬೇರೆಬೇರೆ ಸ್ಕೂಲುಗಳಿವೆ ಒಂದು ವಿದ್ಯೆ ಬಾರದೆಹೋದರೆ ಮತ್ತೊಂದರಲ್ಲಿ ನಿಪುಣತೆಯನ್ನು ಪಡೆಯಬಹುದು ವ್ಯವಸಾಯ, ವ್ಯಾಪಾರ ಮುಂತಾದವುಗಳನ್ನು ಕಲಿಸತಕ್ಕ ಸ್ಕೂಲುಗಳೂ ಕೂಡ ಅನೇಕವಾಗಿವೆ ಯಾವ ವಿಧವಾದ ವಿದ್ಯೆಯನ್ನು ಕಲಿಯಬೇಕೆಂದು ಅಪೇಕ್ಷಿಸಿದರೂ ಅದಕ್ಕೆ ತಕ್ಕ ಅನುಕೂಲಗಳು ಮೊದಲೇ ಸಿದ್ಧಪಡಿಸಲ್ಪಟ್ಟಿವೆ ಇಷ್ಟು ಸಹಾಯ ಸಂಪತ್ತಿಯು ಈ ದೇಶಗಳಲ್ಲಿರುವಾಗ ವಿದ್ಯಾವಿಹೀನರಾಗಿ ಯಾರುತಾನೇ ಇದ್ದಾರು ? ಇಂಥಾ ದೇಶಗಳಲ್ಲಿ ವಾಸಮಾಡುವುದೇ ಒಂದು ವಿದ್ಯೆ ಎಂದು ನಾನು ಭಾವಿಸುತ್ತೇನೆ

ನಮ್ಮ ದೇಶದಲ್ಲಿ ಬಡತನ ಕಡಮೆಯಾಗಬೇಕಾದರೆ ನಮ್ಮ ಜನರು ಕಷ್ಟಪಟ್ಟು ಕೆಲಸ ಮಾಡಿ, ಧನಾರ್ಜನೆಯನ್ನು ಮಾಡಬೇಕೆಂಬ ಕುತೂಹಲವುಳ್ಳವರಾಗಬೇಕು ಬರೀ ವ್ಯವಸಾಯವನ್ನೇ ನಂಬಿಕೊಂಡಿದ್ದರೆ ನಮ್ಮ ದೇಶೀಯರು ಧನವಂತರಾಗಲು ಅವಕಾಶವು ಬಹಳಮಟ್ಟಿಗೆ ಕಡಮೆಯಾಗುವುದರಲ್ಲಿ ಸಂದೇಹವಿಲ್ಲ ಧನಸಂಪಾದನೆಗೆ ವಾಣಿಜ್ಯವು ಬಹಳ ಮುಖ್ಯವಾದದ್ದು. ಈ ಪಾಶ್ಚಿಮಾತ್ಯ ರಾಜ್ಯಗಳು ಕೇವಲ ಅಭಿವೃದ್ಧಿಸ್ಥಿತಿಗೆ ಬಂದಿರುವುದು ವಿಶೇಷವಾಗಿ ವ್ಯಾಪಾರದಿಂದಲೇ ಎಂದು ಖಂಡಿತವಾಗಿ ಹೇಳಬಹುದು ಈ ಲಂಡನ್ ಪಟ್ಟಣದಲ್ಲಿ ಎಲ್ಲಿ ನೋಡಿದಾಗ್ಯೂ ಅಂಗಡಿಗಳು ತುಂಬಿವೆ ವರ್ತಕರಿಗೆ ಈ ದೇಶಗಳಲ್ಲಿ ಬಹಳ ಗೌರವವುಂಟು ಇದು ವರ್ತಕರ ಸ್ವಸಾಮರ್ಥ್ಯದಿಂದಲೇ ಅವರಿಗೆ ಲಭಿಸಿದೆ ಈ ದೇಶಗಳ ವರ್ತಕರು ನಮ್ಮ ದೇಶದ ಅನೇಕ ವೈಶ್ಯರಂತೆ ವಿದ್ಯಾವಿಹೀನರಾಗಿಲ್ಲ ಭಾರೀ ವರ್ತಕರೆಲ್ಲಾ ಪ್ರೌಢ ವಿದ್ಯಾಭ್ಯಾಸವನ್ನು ಮಾಡಿದವರಾಗಿರುತ್ತಾರೆ ಇಲ್ಲಿನ ವರ್ತಕರ ಸಾಮರ್ಥ್ಯವನ್ನು ಅಷ್ಟರಿಂದ ಹೇಳಲು ಅಸಾಧ್ಯ ಸರ್ಕಾರವೂ ಸಹ ವಿಶೇಷವಾಗಿ ಅವರ ಅನುಮತಿಯಂತೆ ನಡೆಯುತ್ತಲಿದೆ ಇವರು ತಮ್ಮ ಧನಶಕ್ತಿಯಿಂದ ರಾಜಕೀಯ ವಿಷಯಗಳ ಅಸಮಾಧಾನದಿಂದ ಉಂಟಾಗಬಹುದಾದ ಯುದ್ಧಗಳನ್ನೂ ಸಹ ನಿಲ್ಲಿಸಲು ಸಮರ್ಥರಾಗಿರುತ್ತಾರೆ ಒಬ್ಬೊಬ್ಬರೇ ಸ್ವಂತ ವ್ಯಾಪಾರಗಳನ್ನು ಮಾಡಿಕೊಂಡು ಕಾಲಕ್ಷೇಪ ಮಾಡುವುದು ಅಷ್ಟು ರೂಢಿಯಲ್ಲಿಲ್ಲ ಪರಸ್ಪರ ಐಕಮತ್ಯದಿಂದ ದೊಡ್ಡದೊಡ್ಡ ಕಂಪನಿಗಳನ್ನು ಏರ್ಪಡಿಸಿಕೊಂಡು, ತನ್ಮೂಲಕ ಭಾರೀ ವರ್ತಕತನವನ್ನು ನಡಿಸುವುದು ಸಾಧಾರಣವಾಗಿದೆ ಇಲ್ಲಿನ ಮುಖ್ಯ ವರ್ತಮಾನ ಪತ್ರಿಕೆಗಳೂ ಸಹ ಭಾರಿ ಕಂಪನಿಗಳಿಂದ ನಡಿಸಲ್ಪಡುತ್ತಲಿವೆ ಇಂಥಾ ಭಾರಿ ಕಂಪನಿಯೊಂದು ನಮ್ಮ ಕೋಲಾರದ ಚಿನ್ನದ ಗಣಿಯ ಕೆಲಸವನ್ನೆಲ್ಲಾ ಪಕೋಟೆಯಲ್ಲಿಟ್ಟುಕೊಂಡು ನಡಿಸುತ್ತಿದೆ ನಮ್ಮ ದೇಶದಲ್ಲೇ ನಮ್ಮ ಕಣ್ಣೆದುರಿಗಿರುವ ಒಂದು ಕಾರ್ಖಾನೆಯನ್ನು ಸರಿಯಾಗಿ ನಡಿಸುವ ಸಾಮರ್ಥ್ಯವನ್ನೇ ನಾವು ಪಡೆಯದಿರುವಾಗ ಲಂಡನ್ ಪಟ್ಟಣದಲ್ಲಿರುವ ಒಂದು ಕಂಪನಿಯು ನಮ್ಮ ಕೋಲಾರದ ಚಿನ್ನದ ಗಣಿಯ ಕೆಲಸವನ್ನು ವರ್ಷಾನುಗಟ್ಟಲೆ ಯಾವ ತೊಂದರೆಯೂ ಇಲ್ಲದೆ ನಡಿಸುತ್ತಿರುವುದನ್ನು ನೋಡಿದರೆ ಈ ಇಂಗ್ಲಿಷ್ ಜನರಲ್ಲಿರುವ ಪರಸ್ಪರ ನಂಬಿಕೆಯೂ, ಐಕಮತ್ಯವೂ ನಮಗೆ ಗೋಚರವಾಗದೆ ಇರಲಾರದು ಪಾಶ್ಚಿಮಾತ್ಯ ದೇಶಗಳಲ್ಲಿರುವ ನಮ್ಮ ಭ್ರಾತೃಗಳಂತೆ ನಾವೂ ಸಹ ಐಶ್ವರ್ಯವಂತರಾಗಬೇಕಾದರೆ ನಮ್ಮಲ್ಲಿರುವ ಪರಸ್ಪರ ವಿರುದ್ಧಸ್ವಭಾವವೂ, ಅಸೂಯೆಯೂ ನಿರ್ಮೂಲವಾಗಿ ಹೋಗಿ ಪರಸ್ಪರ ನಂಬಿಕೆಯೂ, ಐಕಮತ್ಯವೂ ಹೆಚ್ಚಬೇಕು

ಸ್ವಾರ್ಥಪರತೆಯು ಮನುಷ್ಯನಲ್ಲಿ ವಿಶೇಷವಾಗಿ ಬೆಳೆದರೆ ಅವನು ತನ್ನ ಸುಖವನ್ನೇ ಸದಾ ಚಿಂತಿಸಲು ಯತ್ನಿಸುವುದಲ್ಲದೆ ಪರರ ವಿಷಯದಲ್ಲಿ ಅಸೂಯೆಯನ್ನು ತೋರಿಸುವುದು ಕೂಡ ಸ್ವಭಾವವಾಗಿ ಅವನಲ್ಲಿ ತಲೆದೋರುತ್ತದೆ ಸಾಮಾನ್ಯವಾಗಿ ವಿಚಾರಮಾಡಿ ನೋಡಿದರೆ ಸ್ವಸಾಮರ್ಥ್ಯ ವಿಹೀನರೇ ವಿಶೇಷವಾಗಿ ಪರರಲ್ಲಿ ದೋಷಗಳನ್ನು ಆರೋಪಿಸುತ್ತಾ ಅವರನ್ನು ನಿಂದಿಸುತ್ತಿರುವರು ಶಕ್ತಿವಂತರು ತಮ್ಮ ದೋಷಗಳನ್ನು ತಿಳಿದವರಾದ್ದರಿಂದ ಪರರಲ್ಲಿ ಗುಣಗಳನ್ನೇ ಮುಖ್ಯವಾಗಿ ಗ್ರಹಿಸಿ, ಅವರಲಿ ಸ್ನೇಹವನ್ನು ಬೆಳಸುವರು. ಸ್ವಾಮಿಭಕ್ತಿಯೂ, ದೇಶಾಭಿಮಾನವೂ, ನಿಷ್ಕಪಟವಾದ ನಡತೆಯೂ ನಮ್ಮಲ್ಲಿ ಹೆಚ್ಚುವವರೆಗೂ ನಮ್ಮ ದೇಶವು ಉನ್ನತ ಸ್ಥಿತಿಗೆ ಬರಲಾರದು ಈ ಪಾಶ್ಚಿಮಾತ್ಯ ರಾಜ್ಯಗಳಲ್ಲಿರುವಂತೆ ಸತ್ಯವಂತರೂ, ಪ್ರಜಾನುರಾಗಿಗಳೂ, ಕಾರ್ಯೋದ್ಯುಕ್ತರೂ ಆದಂಥಾ ದೇಶಬಾಂಧವರು ಇನ್ನೂ ಅನೇಕವಾಗಿ ನಮ್ಮ ಭರತಖಂಡದಲ್ಲಿ ಹುಟ್ಟಬೇಕು ಪರರಿಗಾಗಿ ತಮ್ಮ ಪ್ರಾಣಗಳನ್ನಾದರೂ ಕೊಟ್ಟು, ಅವರನ್ನು ಉಚ್ಛ್ರಾಯಸ್ಥಿತಿಗೆ ತರಬೇಕೆಂಬ ದೃಢಸಂಕಲ್ಪವುಳ್ಳ ವೀರರನೇಕರು ಈ ದೇಶಗಳಲ್ಲಿರುವರು ವಿಶೇಷ ಧನಾರ್ಜನೆಯನ್ನು ಮಾಡತಕ್ಕ ವರ್ತಕರೇ ಮುಂತಾದವರು ತಾವು ಸಂಪಾದಿಸಿದ ದ್ರವ್ಯಕ್ಕೆ ತಮ್ಮ ಹೆಂಡತಿ ಮಕ್ಕಳು ಮಾತ್ರವೇ ಬಾಧ್ಯಸ್ಥರೆಂದು ಭಾವಿಸದೆ, ಪ್ರಜೆಗಳ ಅಭ್ಯುದಯಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ದಾನವಾಗಿ ಕೊಡುವರು ಇಂಥಾ ಉದಾರ ಸಹಾಯದಿಂದಲೇ ಇಲ್ಲಿನ ಅನೇಕ ಸ್ಕೂಲುಗಳೂ, ಆಸ್ಪತ್ರೆಗಳೂ, ಅನಾಥಾಲಯಗಳೂ ಮತ್ತು ನಮ್ಮ ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಮಿಷನ್ ಸ್ಕೂಲುಗಳೂ, ಆಸ್ಪತ್ರೆಗಳೂ ನಡಿಸಲ್ಪಡುತ್ತಲಿವೆ

ಲಂಡನ್. ಕೆ ಎಚ್. ರಾಮಯ್ಯ.

ಸ್ಮಾಲ್ ಪಾಕ್ಸ್ ಯಾನೆ ದೊಡ್ಡಮ್ಮ.

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಮ|| ವಿ. ಮತ್ತು ಸ್ವಾಮಿದಾಸ್‌ರವರು ಬರೆಯುವುದೇನಂದರೆ.—

ಮೈಸೂರು ಸಂಸ್ಥಾನದ ಅನೇಕ ಕಡೆಗಳಲ್ಲಿ ಸ್ಮಾಲ್‌ಪಾಕ್ಸ್ ಯಾನೆ ದೊಡ್ಡಮ್ಮನು ಪ್ರಾಪ್ತವಾಗಿರುವುದರಿಂದ ಇದರ ನಿವಾರಣೆಗೋಸ್ಕರ ಸರ್ವರೂ ತಿಳಿದುಕೊಳ್ಳಬೇಕಾದ ವಿಷಯಗಳು ಯಾವವೆಂದರೆ .—

(1) ದೊಡ್ಡಮ್ಮನು ಎದ್ದವರಿಗೆ ಅದು ಪುನಃ ಏಳುವುದು ಕಡಮೆ (2) ದೊಡ್ಡಮ್ಮ ಎದ್ದವರಿಗೆ ಸೀತಾಳಮ್ಮ, ದಡಾರ, ಗೋಣಕಟ್ಟು ಎಂಬ ಸಿಡುಬುಗಳು ಏಳದೆ ತಪ್ಪುವುದಿಲ್ಲ. (3) ವ್ಯಾಕ್ಸಿನೇಷನ್ ಯಾನೆ ಸಿಡುಬು ಹಾಕಿಸುವುದರಿಂದ ದೊಡ್ಡಮ್ಮನು ಏಳುವುದನ್ನು ಬಹಳ ಮಟ್ಟಿಗೂ ಕಡಮೆಮಾಡುತ್ತೆ. (4) ವ್ಯಾಕ್ಸಿನೇಷನ್ ದೊಡ್ಡಮ್ಮನಿಗೆ ಹೇಳಿದ್ದೇ ಹೊರ್ತು ಇತರ ತರಹವಾದ ಸಿಡುಬುಗಳಿಗೆ ಪ್ರಯೋಜನವಿಲ್ಲ. (5) ಮಕ್ಕಳಿಗೆ ಮೂರು ತಿಂಗಳು ತುಂಬಿ ಆರು ತಿಂಗಳು ಒಳಗಾಗಿ ವ್ಯಾಕ್ಸಿನೇಷನ್ ಮಾಡುವುದು ಉತ್ತಮ. ಮಕ್ಕಳು ದೊಡ್ಡವರಾದನಂತರ ಅವು ಹುಣ್ಣಿನ ನವೆ ಯಾ ಕಡಿತವನ್ನು ತಾಳಲಾರದ ಕೆರೆದುಕೊಂಡು ಮೈಯೆಲ್ಲಾ ಹುಣ್ಣುಮಾಡಿಕೊಳ್ಳುತ್ತವೆ (6) ದೊಡ್ಡಮನು ಏಳುವ ಕಾಲದಲ್ಲಿ ವ್ಯಾಕ್ಸಿನೇಷನ್ ಮಕ್ಕಳಿಗೆ ಖಂಡಿತವಾಗಿ ಹಾಕಿಸಬೇಕು ಯಾಕೆಂದರೆ ವ್ಯಾಕ್ಸಿನೇಷನ್ ಮಾಡಿಸಿದರೆ ಅದರ ಫಲಿತಾಂಶವು 8-9 ದಿನಗಳಲ್ಲಿ ತೋರಿಸಲ್ಪಡುವುದು ದೊಡ್ಡಮ್ಮನ ಸೊಂಕು ಮೈಯಲ್ಲಿ ವ್ಯಾಪಿಸಿ ಇದ್ದರೆ ಅದರ ಸೂಚನೆ ಹೊರಗೆ ತೋರ್ಪಡಿಸಲಿಕ್ಕೆ 12 ದಿನಗಳು ಆಗುವವು. ವ್ಯಾಕ್ಸಿನೇಷನಿನ ಫಲವು ದೊಡ್ಡಮ್ಮನಿಗಿಂತಲೂ ಮುಂಚಿತವಾಗಿ ಬರುವುದರಿಂದ ಈ ಸಮಯವನ್ನು ಕಳೆಯ ಬಾರದು, ಹಳ್ಳಿಗಳಲ್ಲಿ ಎದುರಮ್ಮ ಇರುವ ಕಾಲದಲ್ಲಿ ವ್ಯಾಕ್ಸಿನೇಷನ್ ಹಾಕಿಸಕೂಡದೆಂಬದಾಗಿ ಕ್ರೂರ ಅನ್ಯಾಯವಾಗಿ ಅನೇಕ ಮಕ್ಕಳನ್ನು ಅಮ್ಮನಿಗೆ ಬಲಿಕೊಡುವುದು ನೋಡಿದರೆ ವಿಷಾದಾಸ್ಪದವಾಗಿದೆ. (7) ವ್ಯಾಕ್ಸಿನೇಷನ್ ಮಾಡಿದನಂತರ ಅದು ಚೆನ್ನಾಗಿ ಉಬ್ಬಿದೆಯೋ ಇಲ್ಲವೋ ಎಂಬುವುದನ್ನು ತಂದೆ ತಾಯಿಗಳು ನೋಡಬೇಕು. ಒಂದು ವೇಳೆ ಹುಣ್ಣುಗಳು ಏಳದಿದ್ದರೆ ಮತ್ತೊಂದಾವರ್ತಿ ಹಾಕಿಸಬೇಕು, ದೇಪಿ ಹಾಕಿದ್ದ ಮಕ್ಕಳಿಗೆ ದೇಪಿ ಹಾಕಿದ್ದನ್ನು ಮಾತ್ರ ಜ್ಞಾಪಕದಲ್ಲಿ ಇಟ್ಟದ್ದು ಅದರ ಫಲವನ್ನು ನೋಡದಿದ್ದರೆ ಅಂಥ ಮಕ್ಕಳಿಗೆ ಸಿಡುಬು ಏಳುವುದು ತಪ್ಪುವುದಿಲ್ಲ

(8) ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಿಸಿದರೆ ನಾಲ್ಕು ಅಥವಾ ಆರು ಹುಣ್ಣುಗಳೊಂದಿಗೆ ಎರಡು ವಾರಗಳ ಮಟ್ಟಿಗೆ ಅವು ಸ್ವಲ್ಪ ಕಷ್ಟವನ್ನು ಅನುಭವಿಸುವವು ಸಿಡುಬು ಎದ್ದರೆ ಮೈಯಲ್ಲಿ ಹುಣ್ಣು ಎದ್ದು ಪ್ರಾಣಕ್ಕೇನೇ ಮೋಸ ಬರುವ ವ್ಯಥೆಯನ್ನು 16 ವಾರಗಳು ಅನುಭವಿಸುವುದಲ್ಲದೆ ಅನೇಕ ಅಂಗಹೀನಗಳಿಗೆ ಗುರಿಯಾಗುವವು (9) "ಎದುರಮ್ಮ ಸಿಟ್ಟುಮಾಡಿಕೊಂಡಾಳು, ಮಕ್ಕಳಿಗೆ ಜ್ವರ ಬಂದೀತು" ಎಂಬ ಇತ್ಯಾದಿ ಸಬಬುಗಳನ್ನು ಹೇಳಿ ಸರ್ಕಾರಿ ವ್ಯಾಕ್ಸಿನೇಟರುಗಳು ಮನೆ ಬಾಗಿಲುಗಳಿಗೆ ಬಂದರೆ ಅವರನ್ನು ಕಳುಹಿಸಿಬಿಡುವುದರಿಂದ ಮಕ್ಕಳಿಗೆ ಆಗತಕ್ಕ ಕಷ್ಟ ನಷ್ಟಗಳನ್ನು ಸ್ವಲ್ಪವೂ ಯೋಚಿಸದೆ ಇರುವುದು ಬಹು ವಿಷಾದಕರವಾದ್ದಾಗಿದೆ. (10) ಮಕ್ಕಳಲ್ಲಿ ಒಂದು ಸಾರಿ ವ್ಯಾಕ್ಸಿನೇಷನ್ ಮಾಡಿಸಿದರೆ ಅದರ ಶಕ್ತಿಯು ಜೀವವಿರುವ ಪರಿಯಂತರವೂ ಇರುತ್ತೆಂಬದಾಗಿ ಅನೇಕರು ತಿಳಿದಿರುವರು ಇದು ಸಷ್ಟ ತಪ್ಪು ಅಭಿಪ್ರಾಯ ವ್ಯಾಕ್ಸಿನೇಷನಿನ ಶಕ್ತಿಯು 7 ವರುಷ ಮಾತ್ರ ಇರುವುದು ಈ ವಿಷಯ ತಿಳಿದಂಥಾವರು 7 ವರುಷಕ್ಕೆ ಒಂದಾವರ್ತಿ ಹಾಕಿಸಿಕೊಳ್ಳುವರು ಹಾಗೆ ಹಾಕಿಸಿಕೊಳ್ಳಲು ಸಾಧ್ಯವಿಲ್ಲದಿದ್ದವರು ದೊಡ್ಡಮ್ಮ ಏಳತಕ್ಕ ಕಾಲದಲ್ಲಾದರೂ ಖಂಡಿತವಾಗಿ ಹಾಕಿಸಿಕೊಳ್ಳಬೇಕು (11) ಒಂದು ವರುಷದ ಮಕ್ಕಳಿಗೂ, 40 ವರುಷ ವಯಸ್ಸುಳ್ಳ ದೊಡ್ಡವರಿಗೂ ದೊಡ್ಡಮ್ಮನು ಎದ್ದರೆ ಅಂಥವರು ಬದುಕುವದು ದುರ್ಲಭ

ಪ್ರಜೆಗಳ ಕ್ಷೇಮಕ್ಕಾಗಿ ವ್ಯಾಕ್ಸಿನೇಷನ್ ಇಲಾಖೆಯನ್ನು ಸಾಲೀಯಾನಾ 20-22 ಸಾವಿರ ರೂಪಾಯಿಗಳು ಖರ್ಚು ಇಟ್ಟು ಸರ್ಕಾರದವರು ಸ್ಥಾಪಿಸಿ ಇರುವರು. ವಿದ್ಯಾವಂತರಾಗಿಯೂ, ದೇಶಾಭಿಮಾನಿಗಳಾಗಿಯೂ ಇರುವಂಥಾ ಮಹನೀಯರು ಈ ಲೇಖನವನ್ನು ಚೆನ್ನಾಗಿ ಓದಿ ಗ್ರಹಣಮಾಡಿಕೊಂಡು ತಮ್ಮ ತಮ್ಮ ಸ್ಥಳೀಯ ಜನಗಳಿಗೆ ಮುಖ್ಯವಾಗಿ ಸ್ತ್ರೀಯರಿಗೆ ತಿಳುವಳಿಕೆ ಕೊಟ್ಟದ್ದಾದರೆ ಸರ್ಕಾರದವರು ಮಾಡುವಂಥಾ ಉಪಕಾರವು ಸಂಘಟಕವಾಗುವುದು.

ಮಲೆನಾಡಿನಲ್ಲಿನ ಪ್ರಜೆಗಳು ತಿಳಿಯಬೇಕಾದ ವಿಷಯವೇನೆಂದರೆ—ವ್ಯಾಕ್ಸಿನೇಟರುಗಳು ಮಕ್ಕಳಿಗೆ ವ್ಯಾಕ್ಸಿನೇಷನ್ ಹಾಕಿಸುವ ಉದ್ದೇಶ್ಯ ಮನೆ ಬಾಗಿಲಿಗೆ ಹೋದರೆ ಅಥವಾ ಅವರು ಬರುತ್ತಾರೆ ಎಂಬ ಸುದ್ದಿಯನ್ನು ಕೇಳಿದರೆ ಆ ಕೂಡಲೆ ಮಕ್ಕಳನ್ನು ಎತ್ತಿಕೊಂಡು ಕಾಡುಬಿದ್ದು ಹೋಗುವರು. ಇದು ಅನೇಕರಿಗೆ ಅನುಭವದಲ್ಲಿ ಬಂದಿರುವುದು ಸರ್ಕಾರಕ್ಕೂ ಪ್ರಜೆಗಳಿಗೂ ಇರುವ ಸಂಬಂಧವು ತಂದೆಮಕ್ಕಳಂತೆ ಇರುವುದು ತಂದೆಯು ಮಕ್ಕಳನ್ನು ಯಾವ ತರಹವಾದ ಅಪಾಯಗಳಿಗೂ ಗುರಿಯಾಗದಂತೆಯೂ, ವಿದ್ಯೆ ಬುದ್ಧಿಗಳನ್ನು ಕಲಿಸಿ ತಾನು ಒಳ್ಳೇ ಸ್ಥಿತಿಗೆ ಬರಬೇಕೆಂಬ ಕುತೂಹಲವು ಯಾವ ರೀತಿ ಇರುವುದೋ ಅದರಂತೆಯೇ ಪ್ರಜೆಗಳು ಸರ್ಕಾರಕ್ಕೆ ಇರುವರು ಸರ್ಕಾರದವರು ಮಾಡುವದೆಲ್ಲಾ ಪ್ರಜೆಗಳ ಸುಖಕ್ಕೆ ಎಂಬದಾಗಿ ತಿಳಿದು ಮಲೆನಾಡಿನ ಪ್ರಜೆಗಳು ನಡೆದುಕೊಳ್ಳುವರೆಂದು ಹಾರೈಸುತ್ತೇನೆ

ಖಾತ್ರಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಆ ಶಯವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಅಧಿಕಾರಿಗಳಿಗೆ ಏಳಿಗೆ, ಬಡರೈತರಿಗೆ ಗೋಳಿಗೆ.

ಅಯ್ಯಾ,

ಈ [illegible] ಕಾಲಸ್ಥಿತಿಯನ್ನು ನೋಡಲಾಗಿ ಅತಿ ಭಯಂಕರವಾಗಿದೆ [illegible] ಬೆಳೆ ಇಲ್ಲವೋ ಇಲ್ಲ ಅಲ್ಲಲ್ಲಿ ಅವರೆ ಹುರುಳಿ ಬೆಳೆ ಆಗು [illegible], ಆದರೆ ಮಳೆ ಇಲ್ಲದ್ದರಿಂದ ಅದೂ ಒಣಗಿಹೋಯಿತು [illegible] ರೂಪಾಯಿಗೆ 10 [illegible] ಸೇರು ರಾಗಿ, 5-5½ ಸೇರು [illegible] ಕೈತುಂಬಾ ಹಣ, ಮೈತುಂಬಾ ಸೊಣ [illegible] ಸ್ವಲ್ಪ ಅಗ್ಗವಾಗಿದೆ ಕಬ್ಬು ಪೈರುಗಳು [illegible] ಈಗಾಗಲೇ ಕಾಲ ಚಕ್ರವು ಓಗಿದ್ದರೆ [illegible] ಮುಗ್ಗರ ಗೋಳನ್ನೂ ಎಷ್ಟೆಂದು ಹೇಳೋಣ! [illegible] ಭಾವಿಸಲ್ಪಟ್ಟಿದೆ; [illegible] ಅತಿ ಭಯಂಕರವಾದ ವ್ಯಾಧಿಯೊಂದು ಎಲ್ಲಿಕೆ [illegible] ಅವರದೂ ಮನುಷ್ಯನನ್ನೂ ಜೀವರಾಶಿಗಳನ್ನೂ [illegible] ದಲ್ಲಿ ಬಿಡಿಸುವ ಸುಲಭ ಸಾಧನಗಳೆಂದೂ, [illegible] ಕಾಲಸ್ಥಿತಿಯು ಕ್ಷಯರೋಗಕ್ಕೆ [illegible] ಮನುಷ್ಯರನ್ನೂ ಕೊಂದ ಹಾಗೂ ಇಲ್ಲದೆ, [illegible] ಕಾಟಕ್ಕೆ ಕಾರಣವಾಗಿದೆ ಎಂಬುದು ವಾಚಕರ [illegible] ನಂಬುತ್ತೇನೆ

[illegible] ದಯಾಳುಗಳಾದ ಗೌರ್ನಮೆಂಟಿನವರು ಪ್ರಜೆಗಳಿಗೆ ಕೌಲನ್ನು [illegible] ಪ್ರಜೆಗಳ ಏಳಿಗೆಯೇ ಅರಸನ ಕೀರ್ತಿ ಎಂದು [illegible] ಯೋಚಿಸುವಂತ ಪ್ರಜೆಗಳು ನಾನಾ ವಿಷಯಗಳಲ್ಲೂ ಅಭಿವೃದ್ಧಿಹೊಂದಬೇಕೆಂಬ ಕುತೂಹಲವುಳ್ಳವರಾಗಿ, ನಾನಾ ಬಾಬುಗಳನ್ನು ವಿಂಗಡಿಸಿ, ಆಯಾ ಬಾಬುಗಳಿಗೆ ಸಿಬ್ಬಂದಿಯನ್ನು ಕಲ್ಪಿಸಿವಾರೆ. ಈಗ ಎಲ್ಲಾ ಬಾಬುಗಳ ಖರ್ಚುಗಳನ್ನೂ ನೋಡಿದರೆ ಅವು ಬಡ ರೈತರನ್ನು ನೋಗಕ ಮಾಡತಕ್ಕವುಗಳಾಗಿವೆ ಎಂದು ಅತಿ ವ್ಯಸನದಿಂದ ತಿಳಿಸಬೇಕಾಗಿದೆ ಒಬ್ಬರೂ ಲಂಚ, ಒದೆ ತಿಂದರೂ ಲಂಚ, ಕದ್ದರೂ ಲಂಚ, ಕಳಕೊಂಡರೂ ಲಂಚ, ಫಿರ್ಯಾದಿಯಾದರೂ ಲಂಚ, ಅಪರಾಧಿಯಾದರೂ ಲಂಚ, ಮನೆ ಕಟ್ಟಬೇಕಾದರೂ ಲಂಚ, ಪಾಳು ಭೂಮಿ ಇದ್ದರೂ ಲಂಚ, ಭೂಮಿ ಸಾಗುವಳಿಗೆ ದರಖಾಸ್ತುಕೊಟ್ಟರೂ ಲಂಚ, ದರಖಾಸ್ತಿಗೆ ಸ್ಯಾಸುಭಜಿಸನು ನಂಬರು ತಿಳಿಸಬೇಕಾದರೂ ಲಂಚ, ಪತ್ರಕ್ಕೆ ಸ್ಟಾಂಪು ಬೇಕಾದರೂ ಲಂಚ, ರಿಜಿಸ್ಟರ್ ಮಾಡಿಸಲು ಆಫೀಸಿಗೆಲ್ಲ ಲಂಚ, ತೋಟಿಗೆ ಲಂಚ, ತಳವಾರನಿಗೆ ಲಂಚ, ಪಟೇಲನಿಗೆ ಲಂಚ, ಶಾನುಭೋಗನಿಗೆ ಲಂಚ, ಶೇಕದಾರನಿಗೆ ಲಂಚ, ಜವಾನದಾರನಿಗೆ ಲಂಚ, ಹೀಗೆಲ್ಲಾ ಆಗಿ ಮಿಕ್ಕದ್ದು ಕೋರ್ಟುಗಳಿಗೂ ಲಾಯರುಗಳಿಗೂ ಹಂಚಬೇಕು ರೈತನಿಗೆ ಉಳಿಕೆ ಏನೆಂದರೆ ಬ್ಯಾಂಕಿನಲ್ಲಿ ಸಾಲ, ಮನೆವಾರು ಭೂಮಿಕಾಣಿ ಆಧಾರ; ಕಡೆಯಲ್ಲಿ ಚಿಕ್ಕನಾಯ್ಕನಹಳ್ಳಿ ಚಿಪ್ಪು, ಇಲ್ಲವೇ ಜೋಗಿಗಳ ಜೋಳಿಗೆಯೇ ಉಳಿಯುತ್ತೆ

ಇಂಥಾ ಕಷ್ಟಕ್ಕೊಳಪಟ್ಟ ರೈತರು ತಮ್ಮನ್ನು ಕಷ್ಟದೆಸೆಯಿಂದ ಬಿಡಿಸಿ ಕಾಪಾಡಬೇಕೆಂತಲೋ, ಇಲ್ಲವೇ ತಮಗೆ ಅನ್ಯಾಯವಾಗಿದೆ ಎಂತಲೋ ಅರ್ಜಿ ಬರೆದುಕೊಂಡಲ್ಲಿ ಅದು ಕಾವೇರಿಯಲ್ಲಿ ಹಾಕಿದಂತಿರುವುದು; ಇಲ್ಲವೇ ಅದು ಇತ್ಯರ್ಥವಾಗುವುದರೊಳಗಾಗಿ ಅರ್ಜಿದಾರನೇ ಫೌತಿಯಾಗಿರುವನು, ಅಂತು 10-11 ವರುಷಗಳೇ ಕಳೆದು ಹೋಗುವುದು ಆಯಾ ಬಾಬುವಾರು ವಿಂಗಡಿಸಿ ಅಧಿಕಾರಿಗಳನ್ನು ನೇಮಿಸಿದ್ದರಿಂದ ಗೌರ್ನಮೆಂಟಿನವರು ಮಾಡಿಕೊಂಡ ಉದ್ದೇಶ್ಯವು ನೆರವೇರದೆ ರೈತರ ಕಷ್ಟವೂ, ಸುಲಿಗೆಯೂ ಹೆಚ್ಚಲು ಅವಕಾಶವಾಗಿದೆ ಮುಸಲಾ, ಶಿಡ್ಲಘಟ್ಟದ ತಾಲ್ಲೂಕು ಕಸಬಾ ಅಮ್ಮನಕೆರೆಗೆ ಒಂದು ನಾಲಾ ಕಾಮಗಾರಿ ಮಾಡಿಸಿಕೊಡಬೇಕೆಂತಲೂ, ಮೇಲೂರಿಗೆ ಹೋಗುವ ದಾರಿಯಲ್ಲಿರುವ ದಾಳ್ಯ ಕೆರೆಯನ್ನು ದುರಸ್ತು ಮಾಡಿಸಿಕೊಡಬೇಕೆಂತಲೂ, ವೃಥಾ ಕಂದಾಯಕಟ್ಟಿ ಬಡವರಾಗಿದೇವೆಂತಲೂ ಗ್ರಾಮಸ್ಥರೆಲ್ಲರೂ ಎಲ್ಲಾ ಅಧಿಕಾರಿಗಳಲ್ಲಿಯೂ ಅರ್ಜಿಗಳ ಮೂಲಕವೂ, ಮುಖಾಮುಖಿಯಾಗಿಯೂ ಮೊರೆಯಿಡುತ್ತಾ ಬಂದಿರುವರು ನಮ್ಮನ್ನಾಳುವ ಮಹಾಸ್ವಾಮಿಯವರ ಸವಾರಿಯು ಇಲ್ಲಿಗೆ ಚಿತ್ತೈಸಿರುವ ಕಾಲದಲ್ಲಿ ಅರ್ಜಿಯ ಮೂಲಕ ಅರಿಕೆಮಾಡಿಕೊಂಡೆವು ಮಹಾಸ್ವಾಮಿಯವರು ಚೀಫ್ ಇಂಜನಿಯರಿಗೆ ನಮ್ಮ ಅರ್ಜಿಯನ್ನು ಕಳುಹಿಸಿರುತ್ತೇವೆಂದು ಇಂದಾದರು ಅಪ್ಪಣೆ ಕೊಡಿಸಿರುತ್ತಾರೆ ಇದಾಗಿ ಸುಮಾರು ಏಳು ವರುಷಗಳಾದರೂ ಇದುವರೆಗೂ ಆಗುತ್ತೆಂಬದರಲ್ಲಿಯೇ ಹೊರ್ತು ಆದದ್ದನ್ನು ಕಾಣೆವು, ನಮ್ಮನ್ನಾಳುವ ಮಹಾಸ್ವಾಮಿಯವರಿಗೆ ರೈತರ ಮೇಲೆ ಇರುವ ಮಮತೆ ಇತರ ಅಧಿಕಾರಿಗಳಿಗೆ ಇದ್ದೀತೇ? ಹೀಗಿದ್ದರೆ ಬಾಬುವಾರ್ ಅಧಿಕಾರಿಗಳಿಗೆ ಕೊಡುವ ಸಂಬಳಗಳನ್ನು ತಗ್ಗಿಸಿ ದೇಶದ ಆಬಾದಿಗಾಗಿ ವಿನಿಯೋಗಿಸಿ, ಗುಪ್ತಕ್ಷಯವೆಂಬ ಲಂಚದಿಂದಲೂ ಕ್ಷಾಮಡಾಮರಗಳ ಲಯದಿಂದಲೂ ಪ್ರಜೆಗಳನ್ನು ತಪ್ಪಿಸಿ ಕಾಪಾಡಬೇಕೆಂದು ನಮ್ಮ ಮಹಾಸ್ವಾಮಿಯವರನ್ನೂ ದಿವಾನ್ ಸಾಹೇಬರನ್ನೂ ಬಡ ರೈತರು ಬಹಳವಾಗಿ ಅರಿಕೆಮಾಡಿ ಬೇಡುವವರಾಗಿದಾರೆ.

ಶಿಡ್ಲಘಟ್ಟ. ರೈತರ ಹಿತವಾದಿ

ಅಧಿಕಾರಿಗಳ ಸಂದರ್ಶನದಿಂದಾದ ಫಲಗಳು

ಅಯ್ಯಾ,

ಮೈಸೂರು ದೇಶದ ಮಂತ್ರಿಶ್ರೇಷ್ಠರಾದ ಮ|| ವಿಶ್ವೇಶ್ವರಯ್ಯನವರ ಸವಾರಿಯು ಚಿಂತಾಮಣಿ, ಶ್ರೀನಿವಾಸಪುರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಗೋರಿಬಿದನೂರು ತಾಲ್ಲೂಕುಗಳಿಗೆ ದಯಮಾಡಿಸತ್ತು ಎಲ್ಲೆಲ್ಲಿಯೂ ನಡೆದಂತೆಯೇ ಈ ಊರಿನಲ್ಲಿಯೂ ಅವರು ಸ್ಕೂಲುಗಳನ್ನೂ, ಮುಖ್ಯ ಮುಖ್ಯ ಸ್ಥಳಗಳನ್ನೂ ಪರಾಂಬರಿಸಿದರು. ಅಂಡರ್ ಮಿಡ್ಲ್ ಹಿಂದುಮಾರ ಸ್ಕೂಲಿಗೂ ದಯವಿಟ್ಟು ದಯಮಾಡಿಸಿ, ಹುಡುಗರ ಹಾಡಿಕೆಯನ್ನು ಸಾವಧಾನದಿಂದ ಆಲಿಸಿ, ಸ್ಕೂಲಿನ ವಿಷಯವಾಗಿಯೂ ಇತರ ವಿಷಯವಾಗಿಯೂ ಸ್ಕೂಲ್ ಮ್ಯಾನೇಜರ ಕೂಡ ಸ್ವಲ್ಪ ಹೊತ್ತು ಸಂಭಾಷಣೆಮಾಡಿ ಬಾಲಕರಿಗೆ ಸ್ವಲ್ಪ ಬಹುಮಾನವನ್ನು ದಯಪಾಲಿಸಿ ಹೊರಡಲು, ಮಾದಿಗರು ತಮ್ಮ ದೇವಸ್ಥಾನಕ್ಕೆ ಸಹಾಯ ಮಾಡಬೇಕೆಂತಲೂ, ಅದು ಎರಡು ವರುಷಗಳಿಂದ ಪಾಳುಬಿದ್ದಿದೆ ಎಂತಲೂ ಕೇಳಿಕೊಂಡರು, ಮಾದಿಗರ ಕೇರಿ ಮಧ್ಯದಲ್ಲಿದ್ದ ಸ್ಥಳಕ್ಕೆ ದಯಮಾಡಿ ನೋಡಿ, 50 ರೂಪಾಯಿ ಸರ್ಕಾರದಿಂದ ಸಹಾಯ ದಯಪಾಲಿಸುವುದಾಗಿ ಅಪ್ಪಣೆ ಕೊಡಿಸಿದರು. ಈ ಸ್ಥಳವು ತುಂಬಾ ಹೇಸಿಕೆಯಾಗಿದ್ದಾಗ್ಯೂ ಬಡವರ ಹಿತಚಿಂತಕರಾದ ನಮ್ಮ ಮಂತ್ರಿವರ್ಯರು ಅಲ್ಲಿಗೆ ದಯಮಾಡಿದ್ದರಲ್ಲಿ ಬಡವರಿಗೆ ಸಹಾಯಮಾಡುವುದಕ್ಕೆ ಅವರು ಎಂಥಾ ಸ್ಥಳಕ್ಕಾದರೂ ಹೋಗಲು ಹಿಂದೆಗೆಯುವವರಲ್ಲವೆಂದು ಕಾರ್ಯತಃ ತೋರಿಸಿ ಇತರ ಅಧಿಕಾರಿಗಳಿಗೆ ಉತ್ತಮವಾದ ಮೇಲ್ಪಂಕ್ತಿ ಹಾಕಿಕೊಟ್ಟರು ಇಷ್ಟಲ್ಲದೆ ರೈತರು ಎಲ್ಲಿ ಇದ್ದರು ಯಾವರು ಕಾಣಿದ್ದರೋ ಅಲ್ಲಿ ತಮ್ಮ ಮೋಟರನ್ನು ನಿಲ್ಲಿಸಿ ಅವರು ಹೇಳುವದನ್ನು ಸಾವಧಾನದಿಂದ ಆಲಿಸಿ, ಅವರಿಂದ ಅರ್ಜಿ ಗಳನ್ನು ತೆಗೆದುಕೊಂಡು ಬಹು ಪ್ರೀತಿಯಾಗಿ ಅವರನ್ನು ಸಮಾಧಾನಿಸುತ್ತಾ ಹೋದರು ಅಮ್ಮನಕೆರೆಯ ಮೇಲೆ ರೈತರು ದೊಡ್ಡ ಗುಂಪು ಸೇರಿ, ಕಿರೀಟವನ್ನು ತೋರಿಸಿ, ಈ ಮೋರೆಗೆ ಪಾಳುಭೂಮಿಗಳಿಗೆ ನಾವು ಕಂದಾಯ ಕೊಟ್ಟುಕೊಟ್ಟು ತುಂಬಾ ಬಡತನಕ್ಕೆ ಬಂದೆವು ಮಹಾಸ್ವಾಮಿ ಎಂದು ಗೋಳೋ ಎಂತ ಅತ್ತು ತಮ್ಮ ಕಷ್ಟವನ್ನು ಅರಿಕೆಮಾಡಿಕೊಂಡದ್ದನ್ನು ದಿವಾನ್‌ರವರು ಕೇಳಿ ಬಹು ವ್ಯಸನದಿಂದ ರೈತರನ್ನು ಸಮಾಧಾನಿಸಿದರು ಹೀಗೆಯೇ ಎಲ್ಲಾ ಸ್ಥಳಗಳಲ್ಲಿಯೂ ಎಲ್ಲರಿಂದಲೂ ಅರ್ಜಿಗಳನ್ನು ಖುದ್ದು ತೆಗೆದುಕೊಂಡರೆಂದು ರೈತರು ಹೇಳುತ್ತಾ ತುಂಬಾ ಸಂತೋಷವುಳ್ಳವರಾಗಿ ಇಂಥಾ ಪ್ರಭು ಈ ವರೆಗೆ ನಮಗೆ ಸಿಕ್ಕಲಿಲ್ಲವೆಂದು ಹೇಳಿಕೊಳ್ಳುತ್ತಿರುವರು

ಸ್ಕೂಲುಗಳ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ದಯಮಾಡಿಸಿ ಎಲ್ಲಾ ಸ್ಕೂಲುಗಳನ್ನೂ ಪರಾಂಬರಿಸಿ ಸಂತೋಷಗೊಂಡರು ಮುಖ್ಯವಾಗಿ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಬಹುಕಾಲ ನಿಂತು ಇಲ್ಲಿಯ ಕಿಂಡರ್‌ಗಾರ್ಟನ್ ಮತ್ತು ಹೊಸ ನಮೂನೆಯಲ್ಲಿ ಬಾಲಕರಿಗೆ ಅಕ್ಷರಾಭ್ಯಾಸ ಮಾಡಿಸುವ ವಿಧವನ್ನು ಪರಾಂಬರಿಸಿದರು ಮ|| ನಾರಾಯಣಯ್ಯನವರು ನಮ್ಮ ದೇಶದಲ್ಲಿರುವ ಕಿಂಡರ್‌ಗಾರ್ಟನ್ ವಿದ್ಯೆಯಲ್ಲಿಯೂ, ಹೊಸ ನಮೂನೆಯಲ್ಲಿ ವಿದ್ಯಾಭ್ಯಾಸ ಮಾಡಿಸುವ ಕ್ರಮವನ್ನು ಕಲ್ಪಿಸುವುದರಲ್ಲಿಯೂ ಮೊದಲನೇ ಸ್ಥಾನವನ್ನು ಹೊಂದಿರುವರೆಂದು ಅನೇಕ ಪ್ರಮುಖ ಅಧಿಕಾರಿಗಳ ದಲೂ, ಮಿಷನರಿಗಳ ದಲೂ, ಮಹಾರಾಜರವರಿಂದಲೂ ಪಡೆದಿರುವ [illegible] ಪತ್ರಗಳೇ ವ್ಯಕ್ತಗೊಳಿಸುತ್ತವೆ ಹೀಗಿರಲು ಇವರನ್ನು ಇನ್ನೂ 10 ರೂಪಾಯಿ [illegible] ಇಟ್ಟಿರುವುದು ಸ್ವಾಭಾವಿಕವಲ್ಲ ಕಷ್ಟಪಡುವವರಿಗೆ ಪ್ರೋತ್ಸಾಹ ಕೊಟ್ಟು ಅಭಿವೃದ್ಧಿಯನ್ನು ಕೋರುವ ವಿಷಯದಲ್ಲಿ ಇ|| ಜನರಲ್‌ರವರು ಪರಾಮರ್ಶಿಸುವರೆಂದು ನಂಬುತ್ತೇನೆ ಇಲ್ಲಿಯ ಹೆಡ್ ಮಾಸ್ಟರ್ ಮ|| ಜೀವಣ್ಣರಾಯರು ಈ ಸಂಸ್ಥಾನದಲ್ಲಿ ಈ ಸ್ಕೂಲನ್ನು ಉತ್ತಮ ತರಗತಿಗೆ ತಂದಿಟ್ಟಿರುವ ಭಾಗದಲ್ಲಿ ಸರ್ವರೂ ಸಂತೋಷಿಸಬೇಕಾಗಿದೆ

ರೆವಿನ್ಯೂ ಕಮಿಷನರ್ ಸಾಹೇಬರವರು ಜನವರಿ ತಾ 13ರಲ್ಲಿ ಸಾಯಂಕಾಲ 6½ ಘಂಟೆಗೆ ಮೋಟರಿನಲ್ಲಿ ದಯಮಾಡಿ [illegible] ಅವರು ಪ್ರಸ್ತು [illegible] ಪ್ರಯಾಣ [illegible] 7½ ಘಂಟೆಗೆ [illegible] ಚಿಕ್ಕಬಳ್ಳಾಪುರಕ್ಕೆ ಹೊರಟುಹೋದರು ಈ ದೊಡ್ಡ ಅಧಿಕಾರಿಗಳು ದಯಮಾಡಿಸಿದ್ದರಿಂದ ಯಾರಿಗೆ ಪ್ರಯೋಜನವಾಯಿತೋ ಅರಿಯದು ಸಂಸ್ಥಾನದ ಎಲ್ಲಾ ಬಾಬುಗಳಲ್ಲೂ ರೆವಿನ್ಯೂ ಬಾಬೇ ಅತ್ಯಂತ ಪ್ರಧಾನವಾದದ್ದು, ನ್ಯಾಯವಾದದ್ದೂ ಆಗಿರಲು ಇದರ ಕಮಿಷನರುಗಳು ರಾತ್ರಿಯಲ್ಲಿ ಒಂದು ಊರಲ್ಲಿಯೂ ಮಾತನಾಡದೆ ರೈತರ ಕಷ್ಟನಷ್ಟಗಳನ್ನು ವಿಚಾರಿಸದೆ ಗಾಳಿಸವಾರಿ ಮಾಡಿದ್ದೇ ಹೊರಟುಹೋದರೆ ಯಾರು ತಾನೇ ಏನು ಮಾಡಬಹುದು? ಇಂಥಾ ಸಂಚಾರದಿಂದ ರೈತರಿಗೆ ಏನು ಉಪಕಾರ? ಬೆಂಗಳೂರಿನಿಂದ ಚಿಂತಾಮಣಿಯ ವರೆಗೆ ಉದ್ದಕ್ಕೂ ಪ್ರಯಾಣ ಬೆಳಸಿ ವಾಪಸು ಬಳ್ಳಾಪುರಕ್ಕೆ ಹೊರಟುಹೋದ್ದರಿಂದ ಏನು ಪ್ರಯೋಜನತಾನೇ ಆಯಿತೋ ತಿಳಿಯದು. ದಿವಾನ್‌ರವರು ರೈತರ ಅಹವಾಲುಗಳನ್ನು ಆಲಿಸಿದಷ್ಟುಮಟ್ಟಿಗಾದರೂ ಮಾಡದೆಹೋದರಲ್ಲಾ ಎಂದು ಕಷ್ಟದಲ್ಲಿ ಸಿಕ್ಕಿಕೊಂಡು ಕೊರಗುತ್ತಿರುವ ರೈತರೆಲ್ಲಾ ವ್ಯಸನಪಡುತ್ತಾರೆ. ರೈತರು ಈ ಬಾಬಿನಲ್ಲಿ ತಮ್ಮ ಅನೇಕ ತೊಂದರೆಗಳನ್ನು ಸಾಕ್ಷಾತ್ತಾಗಿ ರೆವಿನ್ಯೂ ಕಮಿಷನರವರಲ್ಲಿ ಅರಿಕೆಮಾಡಿಕೊಳ್ಳಬೇಕೆಂದು ಇದ್ದಾಗ್ಯೂ ಅವರಿಗೆ ಅವಕಾಶ ದೊರೆಯದೆಹೋದದ್ದು ತುಂಬಾ ವ್ಯಸನಕ್ಕೆ ಕಾರಣವಾಗಿದೆ

ಶಿಡ್ಲಘಟ್ಟ. ಪ್ರತ್ಯಕ್ಷದರ್ಶಿ

ತಾಲ್ಲೂಕು ವರ್ತಮಾನಗಳು.

ಚಿಂತಾಮಣಿ ತಾ|| ಮುರಗಮಲ್ಲಾ.—ಈ ಗ್ರಾಮವು ಎಂದು ವರ್ಷಗಳಿಂದ ಯೂನಿಯನ್ ಆಗಿದ್ದರೂ ಗ್ರಾಮಸಾರೋಜು ವಗೈರೆಗಳು ಯಾವೂ ಸಮರ್ಪಕವಾಗಿಲ್ಲ ಹಣದ ಪಟ್ಟವೇನೂ ಕಡಮೆಯಾಗಲಿಲ್ಲ. ತಾಲ್ಲೂಕು ಅಧಿಕಾರಿಗಳು ಇದಕ್ಕೆ ಸರಿಯಾದ ಏರ್ಪಾಟನ್ನು ಕೊಡುವರೆಂದು ಹಾರೈಸುತ್ತೇವೆ — ಈ ಗ್ರಾಮವು ಬೆಟ್ಟದ ಬುಡದಲ್ಲೇ ಇರುವುದರಿಂದ, ದನಕರುಗಳಿಗೆ ಕಾಡುಮೃಗಗಳ ಭೀತಿಯೂ, ಜನಗಳಿಗೆ ಕಳ್ಳಕಾಕರರ ಹಾವಳಿಯೂ ಜಾಸ್ತಿಯಾಗಿರುತ್ತವೆ

ಮಾಗಡಿ.—ಈ ಕಸಬೆಯಲ್ಲೂ ಗ್ರಾಮಾಂತರಗಳಲ್ಲೂ ಮಕ್ಕಳಿಗೆ ಸಿಡುಬು, ದಡಾರ ಹೆಚ್ಚಾಗಿ ಏಳುತ್ತಿವೆ ಇವುಗಳಿಂದ ಕೆಲವು ಮಕ್ಕಳು ಸಾಯುತ್ತಿವೆ ಸರ್ಕಾರದವರು ಬಲಾತ್ಕಾರದಿಂದ ಹಚ್ಚುಹಾಕಿಸಲು ಆಜ್ಞಾಪಿಸಿದ್ದರೂ ನಮ್ಮವರು ಅದನ್ನು ಉಪೇಕ್ಷೆಮಾಡಿ ಮಕ್ಕಳನ್ನು ಕಳೆದುಕೊಳ್ಳುತ್ತಿರುವರು — ಈ ತಾಲ್ಲೂಕು ಅಮಲ್ದಾರ್ ಮ|| ರಂಗನಾಥರಾಯರಿಗೆ ಕಡೂರಿಗೆ ವರ್ಗವಾಗಿ, ಅಲ್ಲಿಂದ ಮ|| ರಾಚಾರಾಯರು ಬಂದು ಛಾರ್ಜು ತೆಗೆದುಕೊಂಡರು ಪದಾರ್ಥಗಳ ಧಾರಣೆ ಸ್ವಲ್ಪ ಸ್ವಲ್ಪವಾಗಿ ಏರುತ್ತಲಿದೆ. ಈ ಊರಿಗೆ ತಂತಿ ಟಪಾಲಿನ ಸಂಬಂಧವನ್ನು ಕಲ್ಪಿಸಬೇಕೆಂದು ಅಧಿಕಾರಿಗಳು ಯತ್ನಿಸಿದರೂ ಸ್ಥಳದ ಆಶ್ರಯ ಸಿಕ್ಕದೆ ಇದೆ ಪೋಸ್ಟು ಮಾಸ್ಟರಿಗೆ ದೊಡ್ಡಬಳ್ಳಾಪುರಕ್ಕೆ ವರ್ಗವಾಗಿ ಹೊಸಬರು ಬಂದರು.

ಕಾವೇರಿ ರಿಜರ್ವಾಯರ್.—ಕಳೆದ ಮೂರು ನಾಲ್ಕು ದಿನದಿಂದಲೂ ಛಳಿ ಜಾಸ್ತಿಯಾಗಿ ಬಿಸಿಲನ್ನು ಸಹಿಸಲಸಾಧ್ಯವಾಗಿದೆ — ಕಟ್ಟೆ ಕಾಮಗಾರಿಯು ಹೊಳೆಯಲ್ಲಿ ನೀರು ಕಡಮೆಯಾಗಿರೋಣದರಿಂದ ಬಹಳ ಚುರುಕಾಗಿ ನಡೆಯುತ್ತಿರುವದು — ಇಲ್ಲಿ ಬಹು ಜನರು ಸೇರಿ ಪ್ರತಿ ಶನಿವಾರವೂ ಭಜನೆ ಮಾಡಲು ಏರ್ಪಾಡು ಮಾಡಿಕೊಂಡು ನಡಿಸುತ್ತಾ ಇದಾರೆ. ಇದಕ್ಕಾಗಿ ಎಲ್ಲರಿಂದ ಚಂದಾ ವಸೂಲುಮಾಡಿ ಬೇರೆ ಕಟ್ಟಡವನ್ನು ಕಟ್ಟಿಸಿಕೊಳ್ಳುವದಕ್ಕೆ ಪ್ರಯತ್ನ ನಡೆದಿದೆ.— ಕಳೆದ ವಾರ ಒಳಗುಂದ ಪಟೇಲ್ ಕೆಂಪೇಗೌಡ ವಗೈರೆಯು ಪಾಲಹಳ್ಳಿಗೆ ಹೋಗಿದ್ದು ವಾಪಸು ಬರುವಾಗ್ಗೆ ಪಾಲಹಳ್ಳಿ ಬಳಿ ಇವರುಗಳನ್ನು ಯಾರೋ ದುಷ್ಟರು ಹೊಡೆದು ಸುಮಾರು 300-400 ರೂಪಾಯಿ ಬಳಿಗೂ ಒಡವೆಗಳನ್ನು ಅಪಹರಿಸಿಕೊಂಡು ಪರಾರಿಯಾದರು ಮೂರು ಜನಗಳಿಗೆ ಮಾತ್ರ ಏಟು ತುಂಬಾ ಬಿದ್ದಿರುತ್ತವೆ. ಸರ್ಕಾರದವರು ಆ ದುಷ್ಟರನ್ನು ಪತ್ತೆಮಾಡಿ ಶಿಕ್ಷೆಗೆ ಗುರಿಪಡಿಸುತ್ತಾರೆಂದು ನಂಬಿರುತ್ತೇನೆ ಧಾರಣೆವಾಸಿಗಳು ತುಂಬಾ ಪ್ರಿಯವಾಗಿರುತ್ತವೆ.

ಚಿಂತಾಮಣಿ — ಊರಿಗೆ ಕಳ್ಳರ ಅವಾಂತ್ರಗಳು ಹೆಚ್ಚಾಗುತ್ತಾ ಒಂದಿರುವವು ರಾತ್ರಿಗಳಲ್ಲಿ ಮಾಳಿಗೆಗಳ ಮೇಲೂ ಸಹ ಕಳ್ಳರ ಸಂಚಾರ ತಪ್ಪಿದ್ದೇ ಇಲ್ಲ ಜನರಲ್ಲಿ ಮಾತ್ರ ಗಾಬರಿಯೂ, ಕಳವಳವೂ ಹೆಚ್ಚುತ್ತಾ ಬಂದಿರುವುದು. ನಮ್ಮ ಸರ್ಕಾರದವರ ಮನಸ್ಸಿಗೆ ಈ ವಿಚಾರಗಳು ತಿಳಿಯದ ಇಲ್ಲ —ಮೊನ್ನೆ ಅಂದರೆ ತಾ 23 ನೇ ಗುರುವಾರ ದಿನ ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡಿನ ರೈಲ್ವೆ ಇನ್ಸ್‌ಪೆಕ್ಟರು ಮ|| ಕೃಷ್ಣಮೂರ್ತಿರಾಯರು ದಯಮಾಡಿ ಈ ಚಿಂತಾಮಣಿಯ ವರ್ತಕ ಮಂಡಲಿಯವರನ್ನು ಕರಸಿಕೊಂಡು ಶ್ರೀ ಹರಿಹರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಮಾಟಿಂಗು ಮಾಡಿದ್ದರಲ್ಲಿ ಹಾಲಿ ಚಿಂತಾಮಣಿಯಲ್ಲಿ ಒಂದು ರೈಲ್ವೆ ಬುಕಿಂಗ್ ಆಫೀಸನ್ನು ಏರ್ಪಡಿಸಿದಲ್ಲಿ ಈ ಗ್ರಾಮದಿಂದ ಬೌರಿಂಗ್‌ಪೇಟೆ ರೈಲ್ ಮುಖಾಂತ್ರ ರವಾನೆ ಆಗತಕ್ಕ ಸಾಮಾನುಗಳು ಇಲ್ಲಿ ಸ್ಥಾಪಿಸಲ್ಪಡುವ ಆಫೀಸಿನಲ್ಲೇ ಪಾವತಿಮಾಡಿ ರಸೀದಿಯನ್ನು ಪಡೆದರೆ ಜವಾಬ್ದಾರಿಯೆಲ್ಲಾ ಕಂಪನಿಯವರದೇ ಎಂತಲೂ, ರೈಲಿನಲ್ಲಿ ಬರುವ ಸಾಮಾನುಗಳು ಇದೇ ಆಫೀಸು ಮೂಲಕ ಜನಗಳಿಗೆ ಡಿಲಿವರಿ ಆಗುತ್ತವೆಂತಲೂ ವಿವರವಾಗಿ ತಿಳಿಸಿ ಜನರ ಅಭಿಪ್ರಾಯವನ್ನು ಕೇಳಿದರು. ಜನಗಳು ಈಗ ಹಾಲಿ ವರ್ತಕರಿಂದ ಕೊಡಲ್ಪಡುತ್ತಿರುವ ಬಾಡಿಗೆ ರೇಟಿಗೆ ಸರಿಯಾಗಿ ಆದರೂ, ಅಥವಾ ಕಮ್ಮಿಯಾದರೂ ಏರ್ಪಡಿಸಿದಲಿ ಅವರ ಸಾಮಾನುಗಳೆಲ್ಲವನ್ನೂ ಈ ಆಫೀಸು ಮೂಲಕ ಆಮದುರಫ್ತು ಮಾಡುವದಕ್ಕೆ ಅನುಕೂಲವಾಗುವುದೆಂದು ಹೇಳಿಯುತ್ತಾರೆ ಇದು ಮುಂದೆ ಜನಗಳ ಉಪಯೋಗ-ಘರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ

ಸಿರಿಪುರ ಈ ಊರಿನಲ್ಲಿ ಪ್ಲೇಗ್ ಮಾರಿಗಳೇನೂ ಕಾಣುವದಿಲ್ಲ. ಆದರೆ ಊರುಮನೆಗಳಲ್ಲಿ ಇಲಿಗಳು ಸಾಯುತ್ತಾ ಇವೆ ಎಂದು ಹೇಳುವರು — ಈ ಸಂವತ್ಸರ ಇಲ್ಲಿ ಬೆಂಕಿಯಿಂದಾದ ನಷ್ಟಗಳು ಬಹಳ ಒಂದು ತಿಂಗಳ ಕೆಳಗೆ ಇಲ್ಲಿ ಕುಂಬರ ಕಾಲೊನಿಯ ಪೈಕಿ 8 10 ಗುಡಿಸಲುಗಳು ಸುಟ್ಟುಹೋದವು ನೆನ್ನೆ ತಾ 24 ನೇ ಶನಿವಾರ ಬೆಳಗ್ಗೆ 9 ಗಂಟೆ ಸಮಯದಲ್ಲಿ ಇಲ್ಲಿನ ಉಪ್ಪಾರ ವಗೈರೆ ಜನಗಳ ಗುಡಿಸಲುಗಳ ಪೈಕಿ ಸುಮಾರು 25 30 ಗುಡಿಸಲುಗಳು ಮುಕ್ಕಾಲು ಗಂಟೆಯೊಳಗಾಗಿ ಉರಿದುಹೋದವು. ಜನರ ಮತ್ತು ನೀರಿನ ಸಹಾಯ ಬೇಕಾದಷ್ಟು ಇದ್ದರೂ ಏನೂ ಪ್ರಯೋಜನವಾಗಲಿಲ್ಲ ಗಾಳಿ ವಿಶೇಷದಿಂದ ಸಮೀಪ ಹೋಗಲು ಅವಕಾಶವಿಲ್ಲದೆಹೋಯ್ತು. ಸುಮಾರು ಐನೂರು ಆರು ನೂರು ರೂಪಾಯಿಗಳ ಪದಾರ್ಥಗಳು ನಷ್ಟವಾಗಿರುವವು ಈ ತಿಂಗಳ ಮೊದಲನೇ ವಾರದ ತಮ್ಮ ಪತ್ರಿಕೆಯಲ್ಲಿ ಇಲ್ಲಿನ ಮಲ್ಲಿಕಾರ್ಜುನಪ್ಪನವರು ಪ್ಲೇಗಿನಿಂದ ಕಾಲವಾದ ವಿಚಾರದಲ್ಲಿ ಇನಾಕ್ಯುಲೇಷನ್ ಹಿಡಿದ ನಿಸ್ಸಾರವೋ ಅಥವಾ ಹಾಕಿದವರ ದೋಷವೋ ಎಂಬ ವಿಚಾರವನ್ನು ಓದಿದೆನು ಅದನ್ನು ಪೂರ್ವಾಪರ ವಿಚಾರವಿಲ್ಲದೆ ಬರೆದಂತೆ ತೋರುತ್ತದೆ ಸದರಿ ಮಲ್ಲಿಕಾರ್ಜುನಪ್ಪನವರು ಇನಾಕ್ಯುಲೇಷನ್ ಹಾಕಿಸಿಕೊಂಡು ಆರು ತಿಂಗಳ ಮೇಲಾಗಿತ್ತು ಆದರೆ ಊರಿನಲ್ಲಿ ಪ್ಲೇಗ್ ಸೂಚನೆಗಳೂ, ಪರರಿಗೆ ಆಸ್ಪತ್ರೆ ಪ್ರೇರಣೆಗಳೂ ಹೆಚ್ಚಾಗಿದ್ದರೂ ಜನರು ಲಕ್ಷ್ಯವಿಲ್ಲದೆ ನಿತ್ಯ ಮನೆ ಬಿಡಲು ನಿರಾಕರಿಸಿದ್ದು ಪ್ಲೇಗ್ ಬರುವದಕ್ಕೆ ಕಾರಣವೇ ಹೊರ್ತು ಮತ್ತಿನ್ನೇನೂ ಅಲ್ಲವೆಂದು ಗೊತ್ತಾಗುತ್ತದೆ ಇಲ್ಲಿ ಇನಾಕ್ಯುಲೇಷನ್ ಮಾಡಿದವರು ಇಲ್ಲಿನ ಡಾಕ್ಟರಾದ ಗಂಗಾಧರ ರಾಯರು ಇವರು ಇಲ್ಲಿ ಸುಮಾರು 170 ಜನಗಳಿಗೆ ಪ್ಲೇಗ್ ಸಿಡುಬು ಹಾಕಿರುತ್ತಾರೆ ಆ ಪೈಕಿ ಯಾರಿಗೂ ಕೆಡುಕೇನೂ ಆಗಲಿಲ್ಲ ಆದ್ದರಿಂದ ಆ ರೀತಿ ಬರೆದದ್ದು ಯಾರ ಊಹೆಯೋ ಹೊರ್ತು ಸಮಂಜಸವಾಗಿ ಇರುವದಿಲ್ಲ.

ಶೈಂಟ್‌ಲ್ಯಾಂಡ್ಸ್ — ಪವ ತಕ್ಕಮಟ್ಟಿಗೆ ಇದೆ. ಧಾರಣೆವಾಸಿಗಳಂತೂ ಏಕರೀತಿ ಇದ್ದಂತಿವೆ ಇಲ್ಲಿಗೆ ಸುಮಾರು ನಾಲ್ಕು ಮೈಲಿ ದೂರದಲ್ಲಿರುವ [illegible] ಯಲ್ಲಿ ಪ್ಲೇಗ್ ಪ್ರಾರಂಭವಾಗಿ ಆಗಲೇ ಕೆಲವು ಜನಗಳು ಈ ರೋಗದಲ್ಲಿ ತೀರಿಹೋದರು. ಇನ್ನೂ ಇಲಿಗಳು ಸಾಯುತ್ತಿವೆ ಎಂದು ವರ್ತಮಾನ [illegible] ನ ರೋಗವು ಸಂಪೂರ್ಣ ಒಣಗಿಂದೇ ಹೇಳಬಹುದು ಇನ್ನು ಮುಂದೆ ಜನಗಳಿಗೆ ಕುರಿಯು ನೀರಿಗೆ ಬಹಳ ತೊಂದರೆಯಾಗುತ್ತೆ ಸರ್ಕಾರದವರು ಕೆಲವು ಜಂಗಲದಲ್ಲಿ ಅನುಕೂಲವಾದ ಭಾವಿಗಳನ್ನು ತೆಗಿಸಿಕೊಟ್ಟರೆ ಉತ್ತಮ ಇಲ್ಲವಾದರೆ ಕಳೆದ ವರ್ಷದಲ್ಲಿ ಜೊಗ್ಗದ ನೀರು ಕುಡಿದು ದನ

...ನಾನಾ ರೋಗಗಳಲ್ಲಿ ನರಳುತ್ತ ಈ ಸಾರಿಯೂ ಆಧೀನನ್ನುವುದಕ್ಕೆ ...ಮುಲ್ಲ ಈ ಊರಿಗೆ ಕಾಲರಾ ರೋಗವು ಬಂದು ಇನ್ನೂ ಒಂದು ವರ್ಷ ...ಗಲಿಲ್ಲ —ಸಂತೆ ಮೈದಾನದ ಬಜಾರಿಗೆ ಹೋಗುವ ರಸ್ತೆಯಲ್ಲಿ ಹಾವುಗಳ ...ಟಿ ಹುಟ್ಟಿಗಿದೆ ಈ ರಸ್ತೆಯಲ್ಲಿ ಮ್ಯುನಿಸಿಪಲ್ ಲಾಂದ್ರಗಳನ್ನು ಇಡುವದು ...ವಶ್ಯವೆಂದು ಕೆಲವು ಸಾರಿ ಸೂಚಿಸಿದ್ದಾಯಿತು ದುಷ್ಟ ಜಂತುಗಳಿಂದ ಯಾರಿ ...ಗಾದರೂ ನಷ್ಟ ಸಂಭವಿಸುವ ವರೆಗೂ ಇದಕ್ಕೆ ಗಮನ ಕೊಡಲಾರರೆಂದು ಕಾಣು ...ತ್ತದೆ ಈ ಸಂತೆ ಮೈದಾನದಲ್ಲಿ ಜಾಗ್ರತೆಯಾಗಿ ಭಾವಿ ತೆಗೆಯದೆ ಹೋದರೆ ಮುಂದೆ ಬೇಸಿಗೆಯಲ್ಲಿ ಜನಗಳೂ ದನಕರುಗಳೂ ನೀರಿಲ್ಲದೆ ಸಂಕಟಪಡುವ ಗತಿ ಬಂದೀತು ಯಾಕಂದರೆ ಈ ಊರಿಗೆಲ್ಲಾ ಆಧಾರವಾಗಿರುವ ಕೆರೆಯಲ್ಲೀಗ ನೀರು ಸಂಪೂರ್ಣವಾಗಿ ಒಣಗಿಹೋಗುತ್ತದೆ ನಮ್ಮ ಸ್ಥಳಾಧಿಕಾರಿಗಳು ...ದಕ್ಕೆ ಗಮನಕೊಡುವರೆಂದು ನಂಬಿದೇವೆ —ಸಂತೆಯಲ್ಲಿ ಪಿಚ್ಚು ಸೇರುಗಳ ...ಮ್ಮೆ ವಾರವಾರಕ್ಕೂ ಹೆಚ್ಚುತ್ತಲೇ ಇದೆ ಕಾರಣವೇನೋ ತಿಳಿಯದು ನಮ್ಮ ...ಪೋಲೀಸಿನವರೂ ಸಂತೆಯಲ್ಲಿ ಭಯಂಕರವಾದ ತೊಂದರೆ ...ಡುತ್ತಿದ್ದ ಮೂಂಡರನ್ನು ಅಡಗಿಸಿದ್ದು ಸ್ತೋತ್ರಾರ್ಹವಾಗಿದೆ

ನಾರಿಕೇಳಾಂಜನ—ವಂಶಪಾರಂಪರ್ಯವಾಗಿ ಕೇವಲ ರಹಸ್ಯದಿಂದ ಉಪದೇಶಿಸಲ್ಪಟ್ಟದು ಖಂಡಿತವಾಗಿಯೂ ಈಂತಹ ಅಂಜನವನ್ನು ನೋಡಿರಲಾರಿರಿ ಸ್ವಲ್ಪವೂ ಉರಿಯನ್ನುಂಟುಮಾಡದೆ ಕಣ್ಣುಗಳಲ್ಲಿನ ಕೆಟ್ಟ ನೀರನ್ನು ಸುಲಭವಾಗಿ ಈಚೆಗೆ ಹೊರಡಿಸಿ ಸಮಸ್ತ ವಿಧವಾದ ತಲೆನೋವು, ಶಿರೋಭಾರ, ಕಣ್ಣುರಿಗಳನ್ನು ತಕ್ಷಣ ಪರಿಹರಿಸಿ ಕಣ್ಣುಗಳು ಬಹಳ ಹೊಳಪು ತಣ್ಣಗಿರುವಂತೆ ಮಾಡಿ ರಾತ್ರಿ ಸುಖವಾಗಿ ನಿದ್ರೆಬರುವಂತೆ ಮಾಡುವುದು ಕಣ್ಣುಮಂಜು, ರೆಪ್ಪೆಭಾರ, ಕಣ್ಣುನೋವು, ದುರ್ಮಾಂಸಗಳನ್ನು ಖಾತರಿ ಗುಣಪಡಿಸುತ್ತದೆ—ಬೆಲೆ ಸೀಸೆ 1 ಕ್ಕೆ 0 1 0 ಶ್ರೀಕರ ಕಸ್ತೂರಿಮಾತ್ರೆ—ಮಕ್ಕಳ ಸಮಸ್ತ ರೋಗಗಳಿಗೂ—ತಾಂಬೂಲದೊಡನೆ ಉಪಯೋಗಿಸುವುದಕ್ಕೂ, ಅಜೀರ್ಣ ಮತ್ತು ಜಲದೋಷಗಳಿಗೂ ಸರ್ವೋತ್ಕೃಷ್ಟವಾದುದು ಬೆಲೆ—250 ಮಾತ್ರೆ ಉಳ್ಳ ಸೀಸೆಗೆ 0 1-0 ಅಪಸ್ವರ—ಸಂಗೀತಗಾರರಿಗೆ ಅವ್ಯಶಪ್ರಾಯವಾದುದು ಬಾಯಿನ ದುರ್ಗಂಧ, ಬಾಯಿಹಾರಿಕೆ, ಶರೀರದ ಆಯಾಸ, ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸುವುದು ಬೆಲೆ 150 ಮಾತ್ರೆಯ ಸೀಸೆಗೆ 0-4 0 ದಂತಧಾವನಚೂರ್ಣ—ಸುವಾಸನೆಯಾಗಿರುವ ಈ ಚೂರ್ಣವನ್ನು ನಿತ್ಯವೂ ಉಪಯೋಗಿಸಿದರೆ ಹಲ್ಲು ಸಂಬಂಧವಾದ ಯಾವ ರೋಗಗಳಿಗೂ ಅವಕಾಶವಾಗದೆ ಹಲ್ಲುಗಳು ಬೆಳ್ಳಗಾಗಿಯೂ ಗಟ್ಟಿಯಾಗಿಯೂ ಆಗುತ್ತವೆ ಆರು ಪಟ್ಟಿಗಳಿಗಿಂತಕಡಮೆ ಕಳುಹಿಸಲಾಗದು ಬೆಲೆ ಪೊಟ್ಟಣ 1ಕ್ಕೆ 0 1-0 1 ನೇ ನಂಬರು ಚೂರ್ಣದಿಂದ ರಕ್ತಸೋರುವುದು, ವಸಡುನೋವು, ಥಳಕು, ಕ್ರಿಮಿಗಳು ಒಂದೇ ದಿನದಲ್ಲಿ ಗುಣವಾಗುತ್ತವೆ ಬೆಲೆ ಸೀಸೆ 1 ಕ್ಕೆ 0 4 0 ನಾಲ್ಕಾಣೆ ಬೆಲೆ ಬಾಳುವ ಏಷು ಸೀಸೆ ತರಿಸಿದರೂ ಒಂದು ಇನಾಮು ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ ಟ ಖ ಪ್ರತ್ಯೇಕ [220 15]

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

ಚದುರಂಗ ಬೋಧಿನಿ.

ಚದುರಂಗವಾಡುವುದನ್ನು ಕಲಿಸಿಕೊಡುವ ಪುಸ್ತಕ 1 ಕ್ಕೆ ವಿ ಪಿ ಸಹ 1 ಆಣೆ ಇಂಥಾ ಪುಸ್ತಕ ಇದುವರೆಗೆ ಕನ್ನಡದಲ್ಲಿ ಯಾರೂ ಪ್ರಕಟಮಾಡಿಲ್ಲ

ವಿಳಾಸ—ಎಂ ಸುಬ್ಬರಾವ್, ಚದುರಂಗಶಾಲಾ,

[29 2] 12 ಸಿದ್ಧಿಕಟ್ಟೆ, ಬೆಂಗಳೂರು ಸಿಟಿ

ಪ್ಯಾಕೆಟ್ ಶಿಗರೆಟ್ ಲೈಟರ್.

ಕ್ರಯ ರೂ 2 8—0

ಶಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದಕಡ್ಡಿಯೇ ಬೇಡ ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ತಯಾರು ಬಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಸ್ಪೆಸಿಫಿಕೇಷನ್‌ನಲ್ಲಿ ವಿವರಿಸಿರುತ್ತೇವೆ ಬೇಗ ಒಂದನ್ನು ತರಿಸಿ ಪರೀಕ್ಷಿಸಬಹುದು [258 9]

ವಿಳಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,

93, ಮಿಂಟ್ ಸ್ಟ್ರೀಟ್, ಮದರಾಸು



ಜನವರಿ ಮಹೋತ್ಸವದ ಕೈ ಗಡಿಯಾರ

[40 1]

ಅರ್ಧ ಕ್ರಯ ರೂ 1—14—0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಈ ತಿಂಗಳು ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 14-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ರಾಮದಾಸ್, ಜನರಲ್ ಮರ್ಚೆಂಟ್

ತಿರುವಲ್ಲಿಕ್ಕೇಣಿ, ಮದರಾಸ್

MADEENA WATCH Co , MADRAS
No 21, ANEKARKONAN STREET
EIGHT-DAY'S WINDING WATCH

ನಾಣ್ಯವಾದ ಮಾಲು

ಒಂದಾವರ್ತಿ ಬೀಗದ ಕೈ ಕೊಟ್ಟರೆ ಅನೇಕ ಘಳಿಗೆಯಾದರೂ ಹೆಚ್ಚು ಕಡಿಮೆಯಾಗದೆ ಬೀಗದ ಕೈ ಕೊಟ್ಟ ಬಾಗಾಯಿತು ಎಂಟು ದಿವಸಗಳ ವರೆಗೂ ಸರಿಯಾಗಿ



ಹೊತ್ತನ್ನು ತೋರಿಸುತ್ತದೆ ನೋಡಲು ಅಂದವಾದ ಮುಖ ನಾವು ಈ ಗಡಿಯಾರವನ್ನು ಖಾತರಿಯಾಗಿ ಶಿಫಾರಸು ಮಾಡಬಲ್ಲೆವು ಎಲ್ಲರಿಗೂ ಸಾಧ್ಯವಾಗಿರಬೇಕೆಂದು ಇದಕ್ಕೆ ಅತ್ಯಲ್ಪವಾದ ಬೆಲೆಯನ್ನಿಟ್ಟಿರುತ್ತೇವೆ [36-1]

ಕ್ರಯ ಪೋಸ್ಟೇಜು ಸಹ

ರೂ. 6-8-0.

7 ವರುಷ ಗ್ಯಾರಂಟಿ.

ಪ್ಯಾಕಿಂಗು ಛಾರ್ಜು ಮಾಫಿ. ನಮ್ಮ ಸು ಪಸಂದುಬಾರದೆಹೋದಲ್ಲಿ 15 ದಿನದೊಳಗೆ ಬದಲಾಯಿಸಿಕೊಳ್ಳಬಹುದು

ಅಡ್ರೆಸ್—ಮೆಡೀನಾ ವಾಚ್ ಕಂಪೆನಿ

ನಂ 21, ಅನೇಕಾರಕೋಣನ್ ಬೀದಿ, ಜಿ ಟಿ, ಮದರಾಸು

ನನ್ನ ಪ್ರಿಯ ಸಹೋದರಿಯರುಗಳಿಗೆ ಪದ್ಮಾವತಿ ವಿನಯಪೂರ್ವಕ ವಿಜ್ಞಾಪನೆ. ಮನೋಹರವಾದ ಆಭರಣವನ್ನು ಅತ್ಯಂತ ಸ್ವಲ್ಪ ಕ್ರಯದಲ್ಲಿ ತಯಾರಿಸಿ ಇದನ್ನು ತರಿಸಿ ನೋಡಿ ನನ್ನನ್ನು ಪ್ರೋತ್ಸಾಹಪಡಿಸುವಿರೆಂದು ನಂಬಿದೇನೆ.

ರಂಗೂನು ಗೆಜ್ಜೆ ಅಡ್ಡಿಗೆ ಕ್ರಯ ರೂ. 0-6-0 ಆಣೆ.



ಇದು ಸ್ವಚ್ಛ ಅಪರಂಜಿ ಭಂಗಾರದ ಗೆಜ್ಜೆಯಂತಹ ಗೆಜ್ಜೆಯಿಂದ ಕರೀ ಬಣ್ಣದ ದಾರದಲ್ಲಿ ಗೆಜ್ಜೆಯನ್ನು ಸುಂದರವಾಗಿ ಸುತ್ತಿ ಬಹು ಅಂದವಾಗಿಯೂ ರಮಣೀಯವಾಗಿಯೂ ತಯಾರಿಸಲ್ಪಟ್ಟಿರುತ್ತೆ ಇದರ ಚಿನ್ನದ ರಂಗು ಎಂದಿಗೂ ಕೆಡುವದಿಲ್ಲ. ಇದನ್ನು ಭಾಗ್ಯವಂತರು ಬಡವರು ಮಕ್ಕಳು ಹುಡುಗಿಯರು ಸಹ ಕೊರಳಲ್ಲಿ ಕಟ್ಟಿಕೊಳ್ಳುವದಕ್ಕೆ ಲಾಯಖಾದದ್ದು.

ಪದ್ಮಾವತಿ, ನಂ. 55, ಆಫೀಸು ವೆಂಕಟಾ ಚಲಮೊದಲಿ ಬೀದಿ, ತಿರುವಲ್ಲಕೇಣಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಕಣ್ಣಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬಿಳುಪಾಗಿಯೋ ಇಳಿಯುವುದು; ಬಡವೆ ಬಾಯಾರಿಕೆ, ಬಳಲಿಕೆ, ಎವೆ ತಲ್ಲಣಿಸುವುದು; ತಲೆನೋವು; ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು, ಕೀಲುನೋವು; ಮರವು, ನಿತ್ರಾಣ; ಇವೇ ಮೊದಲಾದುವು ಉಲ್ಬಣವಾದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-22]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧವನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 5-6

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಗಟ್ಟಿಯಾಗಿ ಬೆಳೆಸುತ್ತದೆ.

ಇದು ತುಂಬಾ ರುಚಿಯನಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸೆನಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅರಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಈ ಮೀನುಮನುಷ್ಯ ಇರುವ ಗುರ್ತನ್ನೇ ಕೊಂಡುಕೊಳ್ಳಿ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಶ್ರೀಮನ್ ಮಹಾರಾಜರವರ ಸರ್ಕೀಟು.

ಮಾರೀಕಣಿವೆಗೂ ಚಿತ್ರದುರ್ಗಕ್ಕೂ ದಯಮಾಡಿಸಿದ್ದು.

ಶ್ರೀಮನ್ ಮಹಾರಾಜರವರು ತಾ 28 ನೇ ಬುಧವಾರ ಸಾಯಂಕಾಲ 3 ಘಂಟೆ ಸಮಯಕ್ಕೆ ಪರಿವಾರ ಸಹಿತ ಮಾರೀಕಣಿವೆಗೆ ದಿವ್ಯವಾದ ಮೋಟರ್ ಕಾರಿನಲ್ಲಿ ದಯಮಾಡಿಸಿದರು ನಮ್ಮ ಮಹಾಮಾತೃಶ್ರೀಗಳಾದ ಮಹಾರಾಣಿಯವರು ನಮ್ಮ ಡಿಸ್ಟ್ರಿಕ್ಟಿಗೆ ದಯಮಾಡಿಸಿದ್ದು ಇದೇ ಮೊದಲು. ಅಲ್ಲಿನ ಹಳ್ಳಿಗಳಲ್ಲಿ ಮುಖ್ಯರಾದವರು ಮಹಾರಾಣಿಯವರಿಗೆ ಒಪ್ಪಿಸಿದ ಫಲಪುಷ್ಪಗಳನ್ನು ಸಂತೋಷದಿಂದ ಸ್ವೀಕರಿಸಿ ತಕ್ಕ ಪ್ರೀತಿಪುರಸ್ಸರವಾದ ಉತ್ತರವನ್ನು ದಯಪಾಲಿಸಿದ್ದನ್ನು ಎಲ್ಲರೂ ಕೊಂಡಾಡಿದರು. ಮಹಾರಾಜರವರನ್ನೂ, ಕೆರೆಯನ್ನೂ ನೋಡಲು ಬಳ್ಳಾರಿ, ಅನಂತಪುರ, ರಾಯದುರ್ಗ ಮೊದಲಾದ ದೂರ ದೇಶಗಳಿಂದಲೂ ಮತ್ತು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಹಳ್ಳಿಗಳಿಂದಲೂ ಸಾಧಾರಣವಾಗಿ 25-30 ಸಾವಿರ ಪ್ರಜೆಗಳು ಬಂದು ಇದ್ದರು. ಆದರೆ ಅವರು ನೋಡಬೇಕೆಂದು ಇದ್ದ ಎರಡು ಆಶೆಗಳೂ ಆಫೀಸರುಗಳ ನಿರ್ಬಂಧದಿಂದ ಈಡೇರಲಿಲ್ಲ. ಶ್ರೀಮನ್ ಮಹಾರಾಣಿಯವರು ಕೆರೆ ಮೊದಲಾದ ಪ್ರದೇಶಗಳನ್ನು ನೋಡಲಿಕ್ಕೆ ಹೋಗದೆ ಇದ್ದಾಗ ಬಂದ ಪ್ರಜೆಗಳಿಗೆ ಪ್ರತ್ಯೇಕವಾದ ರಸ್ತೆ ಮತ್ತು ಕಾಲವನ್ನು ನಿಯಮಿಸಲಿಲ್ಲ. ತಾ. 29 ರಲ್ಲಿ ಈ ನಿರ್ಬಂಧದ ವಿಷಯ ಪೋಲೀಸ್ ಸೂಪರಿನ್‌ಟೆಂಡೆಂಟ್ ರವರಿಗೆ ತಿಳಿದು ಸಾಯಂಕಾಲ ಮೂರು ಗಂಟೆಯಿಂದ ಕೊಂಚ ಕಾಲ ಕೊಟ್ಟರು, ಆಗ ಮಾತ್ರ ಕೆಲವರು ಹೋಗಿ ನೋಡಿದರು ಸಾವಿರಾರು ಜನರು ಹಿಂತಿರುಗಿ ತಮ್ಮ ಗ್ರಾಮಗಳಿಗೆ ಹೊರಟುಹೋದರು. ಶ್ರೀಮನ್ ಮಹಾರಾಜರವರಿಗೆ ಈ ವಿಷಯ ತಿಳಿದಿದ್ದ ಪಕ್ಷ ತಮ್ಮ ಪ್ರಜೆಗಳು ಈ ರೀತಿ ತೊಂದರೆಪಡುವದು ನೋಡಿ ಸಹಿಸುತ್ತಿರಲಿಲ್ಲ.

ತಾ 30 ನೇ ಶುಕ್ರವಾರ ಮಹಾಸ್ವಾಮಿಯವರ ಸವಾರಿಯು ಮಹಾರಾಣಿಯವರು ರಾಜವರ್ಗದವರೊಡನೆ ಚರಿತ್ರಾರ್ಹವಾದ ಚಿತ್ರದುರ್ಗಕ್ಕೆ ಬಿಜಯ ಮಾಡಿಸಿತು. ಮ್ಯುನಿಸಿಪಾಲಿಟಿಯವರು ಲಾಯರ್ ಗುಂಪು ಸಹ ಮೆಮೋರಿಯಲ್ ಹಾಲಿನ ಬಳಿ ಹಾಕಿದ್ದ ಚಪ್ಪರದಲ್ಲಿ ಶ್ರೀಮನ್ ಮಹಾರಾಜರ ಆಗಮನವನ್ನು ನಿರೀಕ್ಷಿಸುತ್ತಿದ್ದರು ಬೂತನ ತೋಪು ಎಂಬ ಮನೋಹರವಾದ ಸ್ಥಳದಲ್ಲಿ ಈ ಪುರದ ಕೆಲವು ಮುಖಂಡ ಪ್ರಜೆಗಳೂ, ಶ್ರೀಜಗದ್ಗುರು ಮುರುಘಾ ರಾಜೇಂದ್ರ ಸ್ವಾಮಿಗಳವರ ಮಠದ ಚರಂತಿಗಳು ಶ್ರೀಸ್ವಾಮಿಗಳವರ ಅಪ್ಪಣೆ ಪ್ರಕಾರ ಫಲ ಪುಷ್ಪಗಳನ್ನು ಒಪ್ಪಿಸಲು ಕಾದಿದ್ದರು. ಕೆಲವು ಕಾಲದೊಳಗಾಗಿ ಈ ಮನೋಹರವಾದ ಸ್ಥಳದಲ್ಲಿ ಸಾವಿರಾರು ಪ್ರಜೆಗಳು ಸೇರಿದರು. ಸವಾರಿಯು ಸುಮಾರು 2 ಗಂಟೆ ಸಮಯಕ್ಕೆ ದಯಮಾಡಿಸಿ, ಶ್ರೀಮಠದವರು ಮತ್ತು ಪುರದ ಮುಖಂಡ ಪ್ರಜೆಗಳು ಒಪ್ಪಿಸಿದ ಫಲ ಪುಷ್ಪವನ್ನು ಸ್ವೀಕರಿಸಿ ತಕ್ಕ ಉತ್ತರಗಳನ್ನು ಕೊಟ್ಟು ಮುಂದೆ ಮ್ಯುನಿಸಿಪಲ್ ಚಪ್ಪರಕ್ಕೆ ಮಹಾಸವಾರಿಯು ದಯಮಾಡಿಸಿತು ಇಲ್ಲಿ ನೋಡತಕ್ಕ ಸ್ಥಳಗಳು ಚರಿತ್ರಾರ್ಹವಾದ ಬೆಟ್ಟಗಳಲ್ಲಿನ ಕೋಟೆ ಕೊತ್ತಲ ಅರಮನೆ ದೇವಸ್ಥಾನಗಳು ಇಂಥಾ ಪ್ರದೇಶಗಳನ್ನು ಶ್ರೀಮನ್ ಮಹಾರಾಜರವರಿಗೂ, ಶ್ರೀಮನ್ ಮಹಾರಾಣಿಯವರಿಗೂ ತೋರಿಸದೆ ಜೋಗಿಮಟ್ಟಿ ಎಂಬ ಪ್ರದೇಶಕ್ಕೆ ಕರೆದುಕೊಂಡು ಹೋದರು. ಇಲ್ಲಿನ ಪುರಜನರಲ್ಲಿ ಮುಖಂಡರನ್ನು ಡೆಪ್ಯುಟಿ ಕಮಿಷನರವರು ಬರಮಾಡಿಕೊಂಡು ನೋಡತಕ್ಕ ಸ್ಥಳಗಳನ್ನು ಗೊತ್ತು ಮಾಡಬಹುದಾಗಿತ್ತು. ನಮ್ಮ ಸ್ಥಳಕ್ಕೆ ನಮ್ಮ ಶ್ರೀಮನ್ ಮಹಾರಾಜರವರೂ, ಶ್ರೀಮನ್ ಮಹಾರಾಣಿಯವರೂ ದಯಮಾಡಿಸಿ ಬೆಟ್ಟದಲ್ಲಿನ ಪ್ರಸಿದ್ಧ ಸ್ಥಳಗಳನ್ನು ಪರಾಂಬರಿಸಿ ಸಂತೋಷಿಸಿದ್ದಲ್ಲಿ ಚೆನ್ನಾಗಿತ್ತು. ಸವಾರಿಯು ಜೋಗಿಮಟ್ಟಿಗೆ ದಯಮಾಡಿಸಿ ಸಾಯಂಕಾಲ ಸುಮಾರು 4½ ಘಂಟೆಗೆ ಹಿಂತಿರುಗಿ ಟ್ರಾವೆಲರ್ಸ್ ಬಂಗ್ಲೆಯಲ್ಲಿ ವಿಶ್ರಮಿಸಿಕೊಂಡು ಪುನಃ ಪುರಪ್ರವೇಶವನ್ನು ಮಾಡಿ ಅಲ್ಲಲ್ಲಿ ವರ್ತಕರೂ, ಪುರಪ್ರಮುಖರೂ ಅರ್ಪಿಸಿದ ಫಲಪುಷ್ಪಗಳನ್ನು ಸ್ವೀಕರಿಸುತ್ತಾ ಸಾಯಂಕಾಲ ಸುಮಾರು 6½ ಘಂಟೆಗೆ ಮಾರೀಕಣಿವೆಗೆ ಚಿತ್ತೈಸಿತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಕಳ್ಳರ ಕಾಟ ತಪ್ಪಬೇಕು.

ಅಯ್ಯಾ,

ಮತಿಗಟ್ಟದಿಂದ ತಿಪ್ಟೂರಿಗೆ ಹೋಗತಕ್ಕ ದಾರೀಲಿ ಹಾಲ್ಕುರಿಕೆಗೂ ಮತಿಗಟ್ಟಕ್ಕೂ ಮಧ್ಯೆ, ತಿಪ್ಟೂರು ತಾಲ್ಲೂಕು ಕೊಡಗಿಹಳ್ಳಿ ಎಂಬ ಗಿಡ ಇರುತ್ತೆ. ಈ ಪ್ರಾಂತ್ಯದಿಂದಲೂ ಮತ್ತು ಹುಳಿಯಾರು ವಗೈರೆ ಪ್ರಾಂತ್ಯದಿಂದ ಸಾವಿರಾರು ಗಾಡಿಗಳು ಸಂತೆಗಾಗಿ ಅಮದು ರಫ್ತು ಆಗುತ್ತಾ ಇವೆ ಇಂಥಾದ್ದರಲ್ಲಿ ಜತೆ ಗಾಡಿಗಳಿಲ್ಲದೆ ಒಂಟಿಯಾಗಿ ಬರುವ ಗಾಡಿಗಳನ್ನು ಸದರಿ ಗಿಡದಲ್ಲಿ ವಿಚಾರಕ್ಕೆ ತೆಗೆದುಕೊಂಡು ಅಪಹರಿಸಿ ಕಳುಹಿಸುತ್ತಾ ಇದಾರೆ. ಕಳೆದುಕೊಂಡವರು ಸರ್ಕಾರಕ್ಕೆ ತಿಳಿಸಲು ಭಯಸ್ಥರಾಗಿ ಮಾಲು ಕಳೆದುಕೊಂಡು ವಾಪಸು ಮನೆ ಸೇರಿಕೊಳ್ಳುತ್ತಾ ಇರುತ್ತಾರೆ. ಈ ರೀತಿ ಆಗಿರುವದನ್ನು ನಮ್ಮ ಸರ್ಕಾರದವರು ಗಮನಕ್ಕೆ ತಂದುಕೊಂಡು ಪ್ರಯಾಣಿಕರಿಗೆ ಆಗುವ ತೊಂದರೆಯನ್ನು ತಪ್ಪಿಸಿಕೊಡಬೇಕು ಇದೇ ರೀತಿ ಈಗ್ಗೆ 3 ನೇ ವರುಷದಲ್ಲಿ ಸದರಿ ಕಾಡಿನಲ್ಲಿ ಇರುವ ವಡ್ರಹಳ್ಳಿ ಬಳಿ ದರೋಡೆ ನಡೆದು 200 300 ರೂಪಾಯಿನ ವರೆಗೆ ಮಾಲುಗಳು ಕಳೆದುಕೊಂಡು ಅನೇಕರು ಏಟುಗಳು ತಿಂದು ಸಂಕಟಪಟ್ಟದ್ದಾಯಿತು ಅದು ವಿಚಾರಣೆ ನಡೆದು ಮೊಕದ್ದಮೆ ವಜಾ ಆಯಿತು. ಆಗ ಸರ್ಕಾರದವರು ಬಂದೋಬಸ್ತು ಮಾಡಿದ್ದರೆ ಈ ರೀತಿ ಕಷ್ಟನಷ್ಟಗಳು ಉಂಟಾಗುತ್ತಿರಲಿಲ್ಲ. ಹಾಲಿ ಕ್ಷಾಮವೆಂಬುವ ನೆಪ ಮಾಡಿಕೊಂಡು ಬಂದವರನ್ನೆಲ್ಲಾ ಹೊಡೆದು ತಂಟೆಮಾಡುತ್ತಾ ಇದಾರೆ. ಸರ್ಕಾರದವರು ಈ ವಿಷಯದಲ್ಲಿ ಪೂರಾ ನಿಗ ತೆಗೆದುಕೊಂಡು ಸರಿಯಾದ ಬಂದೋಬಸ್ತು ಮಾಡಿದಲ್ಲಿ ಬಡ ರೈತರಿಗೆ ತುಂಬಾ ಅನುಕೂಲವಾಗುತ್ತೆ.

ನಿಮ್ಮ ಚಂದಾದಾರ.

ಬಾತ್ಮಿದಾರರ ಯೋಗ್ಯತೆ.

ಅಯ್ಯಾ,

ಸರ್ಕಾರದ ಕೆಲವು ಅಧಿಕಾರಿಗಳಂತೆ ವರ್ತಮಾನ ಪತ್ರಿಕೆಗೆ ಬಾತ್ಮಿಗಳನ್ನು ಕಳುಹಿಸುವವರು ಲಂಚಕೋರರೆಂಬ ಅಪವಾದವು ಇದುವರೆವಿಗೂ ಹುಟ್ಟಿರಲಿಲ್ಲ. ವರ್ತಮಾನ ಪತ್ರಿಕೆಯು ಜನಗಳ ಅಭಿವೃದ್ಧಿಗಾಗಿಯೇ ಇದೆ ಎಂಬುದನ್ನು ಎಲ್ಲರೂ ಬಲ್ಲರು ಆದರೆ ಮೈಸೂರಿನ ನಿಮ್ಮ ಜನವರಿ 29 ನೇ ತಾ. ಸಂಚಿಕೆಯಲ್ಲಿ ಮ|| ವಿ. ಎನ್. ಆರ್. ರವರು ಕೊಟ್ಟಿರುವ ಒಂದು ಪ್ರಕಟಣೆಯಲ್ಲಿ ಅಪಾದನೆಯು ಪ್ರಾಪ್ತವಾದ್ದಕ್ಕಾಗಿ ಎಲ್ಲಾ ಪತ್ರಿಕಾ ಬಾತ್ಮಿದಾರರೂ, ಸಂಪಾದಕರೂ ವಿಷಾದಿಸಬೇಕಾಗಿದೆ ಆ ದೋಷವನ್ನು ಹೊರಿಸಿರುವ ಪ್ರಕಟನೆಯ ಪ್ರಕಾಶಕರು ಹೇಳುವಂತೆ ಇದುವರೆಗೂ ಯಾರೂ ಮಾಡಿರುವಂತೆ ನಮಗೆ ಕಾಣಲಿಲ್ಲ. ಆದರೆ ಬಾತ್ಮಿದಾರರೇ ಮ|| ನಾಗಣ್ಣನವರ ಪಕ್ಷವನ್ನು ವಹಿಸಿ, ಎಷ್ಟೋ ದ್ರವ್ಯನಷ್ಟದಿಂದ ಪ್ರಕಟನೆಯನ್ನು ಏಕೆ ಕೊಟ್ಟರೋ ತಿಳಿಯದು. ಮೊಕದ್ದಮೆಯ ವಿಷಯ ಹಾಗಿರಲಿ. ಒಂದು ಪಕ್ಷವನ್ನು ಪ್ರೋತ್ಸಾಹಿಸುವ, ಮತ್ತೊಂದನ್ನು ನಾಶಪಡಿಸುವ ಸುಳ್ಳುಬಾತ್ಮಿಗಳಿಗೆ ಪತ್ರಿಕೆಯ ಸಂಪಾದಕರು ಸ್ಥಳಕೊಡುವುದಿಲ್ಲವೆಂಬುದನ್ನು ಜೋಪಡಿಸಲು ಈ ಲೇಖಕರು ದುಡ್ಡುಕೊಟ್ಟು ಪ್ರಕಟನೆಯ ಭಾಗದಲ್ಲಿ ಹಾಕಿರುವದೇ ಸಾಕಾಗಿಲ್ಲವೆ? ಇಲ್ಲದೆ ಕೀಳು ವ್ಯಾಜ್ಯಗಳನ್ನು ಹಚ್ಚಿ ತಮಾಷೆನೋಡಲು ಈ ಬಾತ್ಮಿದಾರರು ಭಾವಿಸಿರುವಂತೆ ಪತ್ರವ್ಯವಹಾರಕರೂ, ಪತ್ರಿಕಾ ಸಂಪಾದಕರೂ ತಮ್ಮಂತೆ ನಿರುದ್ಯೋಗಿಗಳೆಂದೂ, ಸ್ವಾರ್ಥಪರರೆಂದೂ ನಂಬಿರುವುದು ತಪ್ಪು. ಹಾಗೆ ತಮ್ಮ ಲೇಖನವು ನಿಜವಾಗಿ ನಿಷ್ಪಕ್ಷಪಾತವಾಗಿದ್ದರೆ ದುಷ್ಟನ್ನೇಕೆ ತೆರಬೇಕಾಗಿತ್ತು? ಅವರು ತಮ್ಮ ಪ್ರಕಟನೆಯಲ್ಲಿ ಹೇಳಿರುವಂತೆ ಕೆಲಸ ಮಾಡತಕ್ಕವರಾಗಿರಬಹುದು. ಈ ರೀತಿ ಮೂಗು ಬರವಣಿಗೆಯಿಂದ ಫಲವೇನು? ಧೈರ್ಯವಾಗಿ ಅಂಥವರು ತಮ್ಮ ಹೆಸರನ್ನು ಕೊಟ್ಟು ನಿಲ್ಲಬಹುದಾಗಿತ್ತಲ್ಲ? ಇದುವರೆವಿಗೆ ಯಾರೂ ಹಾಗೆ ಕೆಲಸಮಾಡಿ ದುಡ್ಡುಕೊಟ್ಟು ಒಂದು ಪಕ್ಷವನ್ನು ವಹಿಸಿ ಮಾತನಾಡಿದವರನ್ನೂ ಬಹಿರಂಗದಲ್ಲಿ ನಿಂತವರನ್ನೂ ನೋಡಿಲ್ಲ. ಕೇಸು ಸುಳ್ಳೋ, ನಿಜವೋ ಕೋರ್ಟಿನಲ್ಲೇ ತೋರಿಬರುವದು ಕೋರ್ಟಿನಲ್ಲಿ ಫೈಸಲಾಗುವವರೆವಿಗೂ ಸುಳ್ಳೆನ್ನುವುದಕ್ಕೆ ಧೈರ್ಯವ್ಯಾರಿಗೆ? ಈ ಬಾತ್ಮಿದಾರರು ಎಷ್ಟು ನಿಸ್ಪೃಹರು! ಅವರ ಪಕ್ಷವನ್ನು ವಹಿಸಿದವರಲ್ಲವಾದರೆ ಮೊದಲು ವಾದಿಯ ಕೈಫೀತನ್ನು ಕೊಟ್ಟು, ಪ್ರತಿವಾದಿಯ ಕೈಫೀತನ್ನು ಕೊಡಬೇಕಾಗಿತ್ತು. ಹಾಗೇಕೆ ಮಾಡಲಿಲ್ಲ? ಹಾಗೆ ಮಾಡಲು ಮ|| ಅಯ್ಯಂಗಾರರಿಗೆ ತಿಳಿಯದೇನೋ? ಅಥವಾ, ಅವರಿಗೆ ದುಡ್ಡಿರಲಿಲ್ಲವೋ? ಮುಖ್ಯವಾಗಿ ಈ ಲೇಖಕರು ತಮ್ಮ ತಪ್ಪಾದ ಅಭಿಪ್ರಾಯಗಳನ್ನು ತಿದ್ದಿಕೊಂಡು ಪತ್ರಿಕೆಗಳು ಪತ್ರವ್ಯವಹಾರಕರೂ, ದೇಶೋದ್ಧಾರಕರೂ ಎಂದು ನಂಬಿನಡೆಯುವುದು ಶ್ರೇಯಸ್ಕರವು.

ನಿಷ್ಪಕ್ಷಪಾತಿ.

[ಇವರು ಉಕಿವಾಡುವ ವಿಚಾರಗಳಿಗೆ ಆಧಾರವೇನುಂಟೋ, ಈ ವಿಷಯವು ಇವರಿಗೆ ಯಾಕೆ ಚಿಂತೆಯನ್ನುಂಟುಮಾಡಿತೋ, ಧೈರ್ಯವಾಗಿ ಹೆಸರುಕೊಡಲಿಲ್ಲವೆಂದು ಆಕ್ಷೇಪಣೆ ಮಾಡುವ ಇವರು ತಮ್ಮ ಹೆಸರನ್ನು ಯಾಕೆ ಗೋಪ್ಯಮಾಡಿದರೋ ತಿಳಿಯದು —ಎಡಿ.]

ತಾಲ್ಲೂಕು ವರ್ತಮಾನಗಳು.

ತೀರ್ಥಹಳ್ಳಿ.—ಈಚೆಗೆ ದಿನದಿನಕ್ಕೂ ದಿನಸಿ ಧಾರಣೆಗಳೆಲ್ಲಾ ಏರುತ್ತಾ ಇದೆ. ಭತ್ತದ ಧಾರಣೆ ಬಹಳ ಕಡಮೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿತ್ತು. ದಕ್ಷಿಣ ಕನ್ನಡಾ ಮತ್ತು ಶಿವಮೊಗ್ಗಾ ಪ್ರಾಂತಗಳಿಗೆ 8 ದಿನಗಳಿಂದ ಸಾಗುತ್ತಾ ಇದೆ. ಈ ತಾಲ್ಲೂಕಿನ ಸುತ್ತುಮುತ್ತಲೂ ಮೈಲಿ ಉಪದ್ರವದ ಹಾವಳಿ ಬಹಳ ಇದೆ. ಕಮ್ಮರಡಿ ಪ್ರಾಂತ್ಯವಂತೂ ಬಹಳ ಜಾಸ್ತಿಯಾಗಿ ಜನರಲ್ಲಿ ತುಂಬಾ ವ್ಯಸನವನ್ನುಂಟುಮಾಡಿದೆ. ಜನರು ಮನೆ ಮಠಗಳನ್ನು ಬಿಟ್ಟು ದಿಕ್ಕಾಪಾಲಾಗಿ ಓಡಿಹೋಗುತ್ತಿದಾರೆ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳೋಣ ಎಂದರೆ ಆ ಹಳ್ಳಿಪಳ್ಳಿಗಳಿಗೆ ವ್ಯಾಕ್ಸಿನೇಟರು ಹೋಗುವದೇ ಕಷ್ಟ. ಈಗಲಂತೂ ಜನರು ವ್ಯಾಕ್ಸಿನೇಟರನ್ನು ಬಹಳವಾಗಿ ಅಪೇಕ್ಷಿಸುವದರಿಂದ ಇದೇ ಸಮಯವೆಂದು ಅವರಿಗೂ ನಾಲ್ಕು ಕಾಸು ಫಾಯಿದೆ ಮಾಡಿಕೊಳ್ಳಬೇಕೆಂಬಾಸೆ. ಬಡಬಗ್ಗರು ಏನು ಕೊಟ್ಟಾರು? ಈ ತಾಲ್ಲೂಕಿನಲ್ಲಿ ಒಬ್ಬರೇ ವ್ಯಾಕ್ಸಿನೇಟರು ಇರುವದರಿಂದ ಪ್ರಯೋಜನ ಸಿಕ್ಕುವಲ್ಲಿಗೆ ಅವರು ಹೋಗುವದಾಗಿದೆ. ದಯವುಳ್ಳ ಸರ್ಕಾರದವರು ಇನ್ನೂ ಕೆಲವರನ್ನು ಈ ಕೆಲಸಕ್ಕೆ ನೇಮಿಸಿದರೆ ಅನೇಕ ಪ್ರಜೆಗಳು ಈ ಮಹಾರೋಗದಿಂದ ನಿವೃತ್ತರಾದಾರು ಈ ತೀರ್ಥಹಳ್ಳಿ ಪೇಟೆಯಲ್ಲಿ 1 ಮನೆಯಲ್ಲಿ 2 ಜನರು ಅದೇ ರೋಗದಿಂದ ಮೃತರಾದರು ಈಚೆಗೆ ಸರ್ಕಾರದವರು ಬೆಂಗಳೂರಿನಿಂದ ಒಬ್ಬ ವ್ಯಾಕ್ಸಿನೇಟರನ್ನು ಕಳುಹಿಸಿರುವದಾಗಿ ವದಂತಿ ಇದೆ ಅವರು ಈ ಪ್ರಾಂತ್ಯ ಎಲ್ಲಿರುವರೋ ತಿಳಿಯದು ಅವರಾದರೂ ತಾಲ್ಲೂಕು ಆಫೀಸರುಗಳೊಂದಿಗೆ ಎಲ್ಲಾ ಹಳ್ಳಿಗಳಲ್ಲಿಯೂ ತಿರುಗಿ ಜನರಿಗೆ ಉಪಕಾರಮಾಡಿ ಕೀರ್ತಿಸಂಪಾದಿಸ್ಯಾರಾಗಿ ನಂಬುತ್ತೇವೆ. ಹಳ್ಳಿಯವರು ಆಸ್ಪತ್ರೆಗೆ ಬಂದರೆ ಇಲ್ಲಿ ವ್ಯಾಕ್ಸಿನೇಷನ್ ಹಾಕಲಾಗುವದಿಲ್ಲವೆಂದು ಡಾಕ್ಟರು ಅಪ್ಪಣೆ ಕೊಡಿಸುತ್ತಾರೆ. ನಮ್ಮ ಊರಿನ ಆಸ್ಪತ್ರೆ ಡಾಕ್ಟರಾದರೂ ಮುತುವರ್ಜಿಯಿಂದ ಆಸ್ಪತ್ರೆಗೆ ಹೋದವರಿಗೆಲ್ಲಾ ವಾಪಸು ಕಳುಹಿಸದೆ ವ್ಯಾಕ್ಸಿನೇಷನ್ ಹಾಕಿ ಉಪಕಾರಮಾಡಿ ಕೀರ್ತಿಸಂಪಾದಿಸಬೇಕು.—ಈಚೆಗೆ ಮೆಸ್ಸರ್ಸ್ ಬಿ ವಿ. ಕಂಪನಿಗೆ ಬಂದಿರುವ ಡಾಕ್ಟರ್ ಜೆ ಸ್ಯಾಮ್ಯುಯಲ್‌ರವರು ಈ ಊರಲ್ಲಿದ್ದು ಬಹಳವಾಗಿ ಜನರ ವಿಶ್ವಾಸವನ್ನು ಸಂಪಾದಿಸಿದರು. ಪುನಃ ಇಲ್ಲಿಯೇ ಬಂದಿರುವದು ನಮ್ಮ ತಾಲ್ಲೂಕಿನವರಿಗೆ ಬಹಳ ಪ್ರಯೋಜನವಾಗಿದೆ ಸರ್ಕಾರದವರು ಇವರಲ್ಲಿಗೂ ವ್ಯಾಕ್ಸಿನೇಷನ್ ಹಾಲನ್ನು ಕಳುಹಿಸಿಕೊಟ್ಟರೆ ಅವರು ಜನರಿಗೆ ಧರ್ಮಾರ್ಥವಾಗಿ ಹಾಕಿಯಾರು. ಈ ಮುಖ್ಯ ವಿಷಯ ಸರ್ಕಾರದವರ ಆಲೋಚನೆಗೆ ಹೋಗಬೇಕಾಗಿದೆ. ತಾಲ್ಲೂಕಿನ ಪ್ರತಿ ಹಳ್ಳಿಯಲ್ಲಿಯೂ ಮೈಲಿ ಇರುವದು ಬಹಳ ಪ್ರಜೆಗಳಿಗೆ ತೊಂದರೆಯಾಗಿದೆ —ಹೋದ ವಾರದ ಪತ್ರಿಕೆಯಲ್ಲಿ ತೀರ್ಥಹಳ್ಳಿ ಶ್ರೀಕೃಷ್ಣರಾಜೇಂದ್ರ ರೀಡಿಂಗ್ ರೂಂ ವಿಷಯದಲ್ಲಿ ಪತ್ರಿಕಾ ಎಡಿಟರವರು ಬರೆದ ನೋಟ್ ನೋಡಿ ಆಶ್ಚರ್ಯವಾಗಿದೆ ಸದರಿ ರೀಡಿಂಗ್ ರೂಂ ಕೆಲವು ದೊಡ್ಡ ಮನುಷ್ಯರ ಸ್ವಂತದ್ದೆಂದು ಭಾವಿಸಲ್ಪಟ್ಟಿದೆ ಈ ರೀಡಿಂಗ್ ರೂಮಿಗೆ ಈ ತಾಲ್ಲೂಕಿನ ಪ್ರಭುಗಳೆಲ್ಲರಿಂದಲೂ ಚಂದಾ ವಸೂಲ್ ಮಾಡಲ್ಪಟ್ಟಿದೆ ಇದು ಕೆಲವರಿಗೆ ಮಾತ್ರ ಪ್ರಯೋಜನವಾಗಿ ಇತರರಿಗೆ ಅನುಕೂಲವಿಲ್ಲದೆ ಇರುವದು ಕೇಳಿ ಬಹಳ ವ್ಯಸನಪಡಬೇಕಾಗಿದೆ. ಮೇಲ್ಕಂಡ ರೀಡಿಂಗ್ ರೂಂ ಸೆಕ್ರಿಟರಿಯವರು ಇನ್ನು ಮುಂದಾದರೂ ವಿನೋದಕರವಾದ ಈ ರೀಡಿಂಗ್ ರೂಮಿಗೆ ಎಲ್ಲರೂ ಹೋಗಿ ಓದಲು ಅವಕಾಶಕೊಟ್ಟಾರಾಗಿ ನಿರೀಕ್ಷಿಸುತ್ತೇವೆ

ದೇವನಹಳ್ಳಿ.—ಇಲ್ಲಿ ಸಿಹಿನೀರು ಕೆರೆಯಲ್ಲಿ ಕುಡಿಯುವದಕ್ಕೆ ನೀರು ಇಲ್ಲದೆ ಇರುವದರಿಂದ ಕೋಟೆಬಾಗಿಲ ಬಳಿ ಶಿಕಸ್ತಾಗಿದ್ದ ಎರಡು ಸಿಹಿನೀರಿನ ಭಾವಿಗಳನ್ನು ನಮ್ಮ ವೈಸ್ ಪ್ರೆಸಿಡೆಂಟರವರು ದುರಸ್ತುಮಾಡಿಸಿ ಗಾಲಿ ಹಾಕಿಸಿ ನೀರು ಬಳಸುವಂತೆ ಏರ್ಪಾಡು ಮಾಡಿದ್ದಾರೆ.—ಧಾರಣೆವಾಸಿಗಳು ಯಥಾಪ್ರಕಾರ ಅಕ್ಕಿ ರೂಪಾಯಿಗೆ 6¼ 6½ ಸೇರೂ, ರಾಗಿ 12 ಸೇರೂ ಮಾರುತ್ತಿದೆ ಬಡಬಗ್ಗರ ಗೋಳಾಟವಂತೂ ಹೇಳತೀರದು ಈ ಮದ್ಯೆ ದುರ್ಭಿಕ್ಷಕ್ಕೆ ಅನುಸಾರವಾಗಿ ಎಲ್ಲಾ ಕಡೆಯಲ್ಲಿಯೂ ಹೊಸ ತೂಕದ ಬಟ್ಟುಗಳೂ ಅಳತೆ ಸೇರುಗಳೂ ಚಲಾವಣೆಗೆ ಬರಲಿಲ್ಲ. ಹಳೇದನ್ನೇ ಕೆಲವರು ವಾಡಿಕೆಯಲ್ಲಿ ಇಟ್ಟುಕೊಂಡಿರುತ್ತಾರೆ. ಇದನ್ನು ಪೋಲೀಸ್ ಅಧಿಕಾರಿಗಳು ಗಮನಕ್ಕೆ ತಂದುಕೊಂಡ ಕೂಡಲೆ ಸರಿಯಾದ ಏರ್ಪಾಡು ಮಾಡಬೇಕಾಗಿದೆ.—ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಹಾಕುವ ಲೈಟ್‌ರೈಲ್ವೆ ಕಾಮಗಾರಿಯು ಇನ್ನೂ ತೂಕಡಿಸುತ್ತಾ ಇದೆ. ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ಇರುವ 12 ಮೈಲಿ ರಸ್ತೆಯನ್ನು ಒಂದು ವರ್ಷದಲ್ಲೇ ಕಾಮಗಾರಿಮಾಡಿಸಿ ರೈಲ್ ನಡೆಯುವಂತೆ ತಕ್ಕ ಏರ್ಪಾಡು ಮಾಡಿದರು. ಈ ರೈಲ್ ಮಟ್ಟ ಕಾಮಗಾರಿಯೇ ಪೂರೈಸಲಿಲ್ಲ. ಕಂಟ್ರಾಕ್ಟುದಾರರಿಗೆ ಕೆಲಸ ಒಪ್ಪಿಸಿದರಿಂದಲೂ, ಅವರು ಹೆಚ್ಚು ಸಿಬ್ಬಂದಿಯನ್ನು ಇಟ್ಟು ಕೆಲಸಮಾಡಿಸದೇನೂ, ಇಲಾಖೆಯವರು ಮೇಲ್ವಿಚಾರಣೆ ನೋಡಿಕೊಳ್ಳದೇನೂ ಇದ್ದದ್ದರಿಂದ ನಾವ ಕಾಶಕ್ಕೆ ಕಾರಣವಾಗಿದೆ. ಈಗಲೂ ಹೆಚ್ಚು ಸಿಬ್ಬಂದಿ ಇಟ್ಟು ಸರಿಯಾದ ರೇಟಿನಂತೆ ಕೂಲಿ ಕೊಡುತ್ತಾ ಬಂದಲ್ಲಿ ಕಾಮಗಾರಿಯು ಕ್ಷಿಪ್ರದಲ್ಲೇ ನಡೆಯಲು ಏನೂ ಸಂದೇಹವಿಲ್ಲ. ಮತ್ತು ಜನರ ಉಪಯೋಗಾರ್ಥವಾಗಿ ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಮೂರು ಮೋಟರ್ ಗಾಡಿಗಳನ್ನು ಬಿಡುತ್ತಾ ಇದಾರೆ. ಇವು ಏಕಕಾಲದಲ್ಲಿಯೇ ಬಂದುಬಿಡುವವರಿಂದ ಜನಗಳಿಗೆ ಅನುಕೂಲ ಕಡಮೆಯಾಗಿರುತ್ತೆ. ಟೈಮ್ ಬದಲಾಯಿಸಿ ಬಿಡುತ್ತಾ ಬಂದರೆ ಟಪ್ಪಾಲ್ ಗಾಡಿಯಲ್ಲಿ ಕೂಡದ ಸರ್ವರೂ ಈ ಗಾಡಿಯಲ್ಲಿಯೇ ಪ್ರಯಾಣ ಮಾಡುತ್ತಾರೆ —ವಿದ್ಯಾ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರು ಕೋಲಾರ್ ಡಿಸ್ಟ್ರಿಕ್ಟಿನ ಮೇಲೆ ಸರ್ಕೀಟುಮಾಡಿ ಚಿಕ್ಕಬಳ್ಳಾಪುರಕ್ಕೆ ದಯಮಾಡಿಸಿ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಚರ್ಚಿಸಿ ಬಲಾತ್ಕಾರವಾಗಿ ವಿದ್ಯೆ ಕಲಿಯಬೇಕೆಂಬ ಕಾನೂನ್ ಜಾರಿಗೆ ತಂದ ಸಂಗತಿಯನ್ನು ಕೇಳಿ ತುಂಬಾ ಸಂತೋಷವಾಯ್ತು. ಅದರಂತೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿಯೂ ಜಾರೀಲಿ ತಂದು ಜೀವನಕ್ಕೆ ಮಾರ್ಗವಿಲ್ಲದೆ ಬಡಪಾಯಿಗಳಾದಂಥಾ ಪಂಚಮರಿಗೆ ಸ್ಕಾಲರ್‌ಷಿಪ್ ಕೊಟ್ಟು ವಿದ್ಯಾಭಿವೃದ್ಧಿಗೆ ತಕ್ಕ ಏರ್ಪಾಟು ಮಾಡಿದಲ್ಲಿ ಸರ್ವರೂ ವಿದ್ವಾಂಸರಾಗಲು ಏನೂ ಸಂದೇಹವಿಲ್ಲ. ಸರ್ಕಾರದವರು ಈ ಪಂಚಮರ ವಿಷಯವನ್ನು ಬೇಗ ಗಮನಕ್ಕೆ ತಂದುಕೊಂಡು ತಕ್ಕ ಏರ್ಪಾಟುಮಾಡುವರೆಂತ ಯೋಚಿಸುತ್ತೇನೆ —ಮತ್ತು ಈ ಊರಿನ ಕೋಟೆಪೇಟೆ ಮಧ್ಯೆ ಇರುವ ಮಾರ್ಕೆಟ್ ಬೈಲಿನಲ್ಲಿ ಯಾವ ನಾಟಕ, ಸರ್ಕಸ್ ವಗ್ಯೆರೆ ಬಂದಾಗ್ಯೂ ಲೈಸೆನ್ಸು ಕೊಟ್ಟುಬಿಡುತ್ತಾರೆ. ಅವರು ಡೇರಾ ಹಾಕಿ ಆಡುವವರಿಂದ ಸ್ತ್ರೀಪುರುಷರು ನೋಡುವದಕ್ಕೆ ಹೋಗಿ ರಸ್ತೆಯ ಉಭಯಪಾರ್ಶ್ವಗಳಲ್ಲಿಯೂ ಜಲಮಲಾದಿಗಳನ್ನು ವಿಸರ್ಜಿಸಿ ತುಂಬಾ ಅನಾರೋಗ್ಯಕ್ಕೆ ಕಾರಣವಾಗುತ್ತೆ ಮುಂದೆ ಇಂಥಾ ಜನರಿಗೆ ಅವಕಾಶಕೊಡದಂತೆಯೂ, ಬೆಂಗಳೂರು ಚಿಕ್ಕಬಳ್ಳಾಪುರದಲ್ಲಿ ಕಟ್ಟಿರುವಂತೆ ಮಾರ್ಕೆಟ್ಟು ಕಟ್ಟಡ ಕಟ್ಟುವಂತೆ ತಕ್ಕ ಏರ್ಪಾಡು ಮಾಡಿದಲ್ಲಿ ಸರ್ವರಿಗೂ ಅನುಕೂಲವೆಂತ ನಂಬುತ್ತೇನೆ.

ವೃತ್ತಾಂತ ಪತ್ರಿಕೆ

— ೦ —

ಸನ್ ೧೯೧೪ ನೇ ಇಸವಿ ಫೆಬ್ರವರಿ ತಾ ೫ ನೇ ಗುರುವಾರ

ಪಾಠಶಾಲೆಗಳಿಗೆ ಸರ್ಕಾರದ ಗ್ರಾಂಟುಗಳು.

ಮೈಸೂರು ಸರ್ಕಾರದವರು ಈ ಸೀಮೆಯಲ್ಲಿರುವ ಸಾಹುಕಾರಿ ಪಾಠಶಾಲೆಗಳಿಗೆ ದ್ರವ್ಯಸಹಾಯಮಾಡುವ ಕ್ರಮಗಳನ್ನು ಬದಲಾವಣೆಮಾಡಿ ಹೊಸ ರೂಲುಸುಗಳನ್ನು ಕಳೆದ ವಾರದ ಗಜೆಟ್ಟಿನಲ್ಲಿ ಪ್ರಕಟಮಾಡಿರುತ್ತಾರೆ ಈ ರೂಲುಸುಗಳ ಉದ್ದೇಶವೇನೋ ಸಹಜವಾದವುಗಳಂತಲೇ ಕಾಣುತ್ತದೆ, ಆದರೆ ಕೆಲವು ವಿಚಾರಗಳನ್ನು ನೋಡುವಲ್ಲಿ ಗವರ್ನಮೆಂಟಿನವರ ಉದ್ದೇಶವು ನಮಗೆ ಚೆನ್ನಾಗಿ ಗೊತ್ತಾಗುವುದಿಲ್ಲ ಇದಕ್ಕೆ ಗ್ರಾಮಾಂತರ ಪಾಠಶಾಲೆಗಳೊಳಗೆ ಇಂಗ್ಲಿಷ್ ತರಗತಿಯನ್ನಿಟ್ಟಲ್ಲಿ ಇವುಗಳಿಗೆ ಗ್ರಾಂಟು ಸಲ್ಲತಕ್ಕ ರೂಲುಸು ತುಂಬಾ ಕಠಿಣವಾಗಿರುವದೆಂದು ನಮಗೆ ತೋರುವುದು. ಆದರೆ ಅಂಥಾ ಸ್ಕೂಲುಗಳಲ್ಲಿ ಇಂಗ್ಲಿಷ್ ಕ್ಲಾಸುಗಳನ್ನು ಸಾಧ್ಯವಾಗುವ ಮಟ್ಟಿಗೂ ಇಡದಂತೆ ನಿರ್ಬಂಧಪಡಿಸಬೇಕೆಂಬುವುದೇ ಗವರ್ನಮೆಂಟಿನವರ ಉದ್ದೇಶವಾಗಿದ್ದು ಆ ಭಾಗದ ರೂಲುಸನ್ನು ಕಠಿಣ ಮಾಡಿರುವಂತೆ ಊಹಿಸುತ್ತೇವೆ ಹಾಗಿದ್ದಪಕ್ಷದಲ್ಲಿ ಗವರ್ನಮೆಂಟಿನವರು ಅಂಥಾ ತರಗತಿಗಳಿಗೆ ಗ್ರಾಂಟು ಕೊಡುವುದೇ ಇಲ್ಲವೆಂದು ಹೇಳಿಬಿಟ್ಟಿದ್ದರೆ ಚೆನ್ನಾಗಿತ್ತು ಒಂದುವೇಳೆ ಗವರ್ನಮೆಂಟಿನವರ ಉದ್ದೇಶವು ಅಂಥಾದ್ದಲ್ಲವಾಗಿದ್ದರೆ ಅವರ ಅಭಿಮತವನ್ನು ವಿವರವಾಗಿ ಪ್ರಕಟಮಾಡುವುದು ಒಳ್ಳೆಯದು

ಗವರ್ನಮೆಂಟಿನವರು ಪ್ರಥಮ ಪಾಠಶಾಲೆಗಳಿಗೂ, ಆಂಗ್ಲೊವರ್ನಾಕ್ಯುಲರ್ ಸ್ಕೂಲುಗಳಿಗೂ, ಹೈ ಸ್ಕೂಲುಗಳಿಗೂ, ಗ್ರಾಮಪಾಠಶಾಲೆಗಳಿಗೂ, ರಾತ್ರಿ ಪಾಠಶಾಲೆಗಳಿಗೂ, ಮನೆಗಳಲ್ಲಿ ವಿದ್ಯೆ ಕಲಿಸುವವರಿಗೂ, ಕಸಬುದಾರಿ ಸ್ಕೂಲುಗಳಿಗೂ, ವ್ಯಾಪಾರಶಿಕ್ಷಣ ಶಾಲೆಗಳಿಗೂ, ಸಂಸ್ಕೃತ ಪಾಠಶಾಲೆಗಳಿಗೂ ಗ್ರಾಂಟುಗಳನ್ನು ಸರ್ಕಾರದಿಂದ ಕೊಡುವುದಲ್ಲದೆ ಕಸಬುಗಳನ್ನು ಕಲಿಯುವಂಥಾ ವಿದ್ಯಾರ್ಥಿಗಳಿಗೂ ದ್ರವ್ಯಸಹಾಯ ಮಾಡುವುದಾಗಿ ಒಪ್ಪಿಕೊಂಡಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ ಈ ಭಾಗದಲ್ಲಿ ಗವರ್ನಮೆಂಟಿನವರ ಉದ್ದೇಶವು ಕುತೂಹಲವೂ ಸ್ತೋತ್ರಾರ್ಹವಾಗಿರುತ್ತದೆ

ಈ ಹೊಸ ರೂಲುಸುಗಳ ವಿಷಯದಲ್ಲಿ ನಮ್ಮ ಮುಖ್ಯವಾದ ಆಕ್ಷೇಪಣೆ ಏನೆಂದರೆ, ಗ್ರಾಂಟುಗಳನ್ನು ಕೊಡುವುದರಲ್ಲಿ ಗವರ್ನಮೆಂಟಿನವರ ಮನಸ್ಸು ಧಾರಾಳವಾಗಿಲ್ಲವೆಂದೂ, ಜಿಪುಣತನವೇ ಪ್ರಕಾಶವಾಗುತ್ತಿದೆ ಎಂದೂ ಕಾಣುವುದು ಸರ್ಕಾರದವರ ಸಹಾಯವು ಇಷ್ಟು ಮಿತವುಳ್ಳದ್ದಾಗಿದ್ದರೆ ಸ್ಕೂಲುಗಳನ್ನಿಟ್ಟು ಮಕ್ಕಳಿಗೆ ವಿದ್ಯೆ ಕಲಿಸುವ ವಿಷಯದಲ್ಲಿ ಅನೇಕ ಜನರು ಮುಂದೆಂದು ಸರ್ಕಾರದವರಿಗೆ ಸಹಾಯಕರಾಗಿ ನಿಲ್ಲುತ್ತಾರೆಂದು ನಮಗೆ ತೋರುವುದಿಲ್ಲ ಈ ನಮ್ಮ ಅಭಿಪ್ರಾಯವನ್ನು ದೃಷ್ಟಾಂತಪಡಿಸುವೆವು ಮನಸಿಲಾ, ಒಬ್ಬಾನೊಂದು ಪಾಠಶಾಲೆಗೆ ಗ್ರಾಂಟು ಕೊಡಬೇಕಾಗಿದೆ ಎಂದೂ, ಅದರಲ್ಲಿ ಒಬ್ಬ ಉಪಾಧ್ಯಾಯನೂ, ಕೀಳು ದರ್ಜೆಗಳಲ್ಲಿ ವಿದ್ಯೆ ಕಲಿಯುವಂಥಾ ಮೂವತ್ತು ಮಂದಿ ಮಕ್ಕಳೂ ಇದಾರೆಂದೂ ಇಟ್ಟುಕೊಳ್ಳೋಣ ಗವರ್ನಮೆಂಟಿನವರು ಮಾಡಿರುವ ರೂಲುಸಿನ ಪ್ರಕಾರ ಈ ಪಾಠಶಾಲೆಯು ಯಾವ ಸ್ಥಿತಿಯಲ್ಲಿರಬೇಕೆಂದರೆ—ಉಪಾಧ್ಯಾಯನ ಸಂಬಳ 10 ರೂಪಾಯಿ, ಇದು ವರುಷಕ್ಕೆ 120 ರೂಪಾಯಿ ಆಗಬೇಕು, ಮನೆ ಬಾಡಿಗೆ ವರುಷಕ್ಕೆ 30 ರೂಪಾಯಿ, ಸಾದಿಲ್ವಾರು ಖರ್ಚು 10 ರೂಪಾಯಿ, ಜುಮ್ಲಾ ವರುಷಕ್ಕೆ 160 ರೂಪಾಯಿ ಖರ್ಚು ಇರಬೇಕು ಹೀಗಿರುವ ಪಕ್ಷದಲ್ಲಿ ಸರ್ಕಾರದವರು ಉಪಾಧ್ಯಾಯನ ಸಂಬಳ ಎಷ್ಟೇ ಆಗಿದ್ದರೂ ಅದಕ್ಕಾಗಿಯೇ 48 ರೂಪಾಯನ್ನೂ, ಪ್ರತಿ ಒಬ್ಬ ಹುಡುಗನಿಗೂ 8 ಆಣೆಯನ್ನೂ (ಅಂದರೆ, 30 ಹುಡುಗರಿಗೆ 15 ರೂಪಾಯಿ)—ಒಟ್ಟು ವರುಷಕ್ಕೆ 63 ರೂಪಾಯನ್ನು ಗ್ರಾಂಟು ಕೊಡುತ್ತಾರೆ ಈ ರೀತಿ ಅಲ್ಪವಾದ ಗ್ರಾಂಟನ್ನು ಪಡೆಯುವುದಕ್ಕಾಗಿ ಪಾಠಶಾಲೆಗಳನ್ನಿಟ್ಟು ಸರ್ಕಾರದವರ ಮೇಲ್ವಿಚಾರಣೆಗೆ ಒಪ್ಪಿಸುವಂಥವರು ಈ ಸೀಮೆಯಲ್ಲಿ ಅನೇಕರು ಇದ್ದಾರೆಂದು ನಮಗೆ ತೋರುವುದಿಲ್ಲ

ಸಕಲ ಪ್ರಜೆಗಳಿಗೂ ವಿದ್ಯೆ ಕಲಿಸಬೇಕೆಂಬ ಕಾರ್ಯಭಾರವನ್ನು ವಹಿಸುವುದಕ್ಕೂ, ಅದಕ್ಕೆ ಅವಶ್ಯವೂ ಅನುಕೂಲವೂ ಆದ ಏರ್ಪಾಡುಗಳನ್ನು ತೃಪ್ತಿಕರವಾಗಿ ಮಾಡುವುದಕ್ಕೂ ಈಗಾಗಲೇ ನಮ್ಮ ಸರ್ಕಾರದವರಿಗೆ ಸಾಧ್ಯವೆಂದು ನಾವು ಹೇಳಲಾರೆವು ಸದ್ಯದಲ್ಲಿ ಪ್ರಜೆಗಳು ಮುಂದೆ ಒಂದು ಪಾಠಶಾಲೆಗಳನ್ನು ಸ್ಥಾಪಿಸಿ ನಡಿಸುವುದಕ್ಕೆ ಸರ್ಕಾರದವರು ಅವರಿಗೆ ಧಾರಾಳವಾಗಿ ದ್ರವ್ಯಸಹಾಯ ಮಾಡಿ ಪ್ರೋತ್ಸಾಹಪಡಿಸುವ ವಿಷಯದಲ್ಲಿ ಕುತೂಹಲವುಳ್ಳವರಾಗಬೇಕೆಂದು ತೋರುತ್ತದೆ ಒಂದು ಗ್ರಾಮ ಪಾಠಶಾಲೆಯನ್ನಿಟ್ಟು ನಡಿಸುವುದಕ್ಕೆ ಗವರ್ನಮೆಂಟಿನವರಿಗೆ 160 ರೂಪಾಯಿ ಖರ್ಚಾಗುವುದಾದರೆ ಸಾಹುಕಾರಿ ಪಾಠಶಾಲೆಗೆ ಅವರು 63 ರೂಪಾಯಿ ಮಾತ್ರ ಗ್ರಾಂಟು ಕೊಡುತ್ತೇವೆನ್ನುವುದು ಎಷ್ಟು ಮಾತ್ರಕ್ಕೂ ಸಾಲದು, ಇನ್ನೂ ಹೆಚ್ಚಾಗಿ ಕೊಟ್ಟಲ್ಲಿ ಸಾಹುಕಾರಿ ಸ್ಕೂಲುಗಳು ಹುಟ್ಟಲೂ, ಚೆನ್ನಾಗಿ ನಡೆಯಲೂ ಅನುಕೂಲವಾಗುತ್ತದೆ. ಈಗ ಗವರ್ನಮೆಂಟಿನವರು ಕೊಡುತ್ತೇವೆಂದು ಹೇಳಿರುವ ಸಹಾಯವು ಅಷ್ಟೇನೂ ಪ್ರೋತ್ಸಾಹಕರವಾಗಿಲ್ಲ. ಅದರಲ್ಲೂ ಈಗ ಪ್ರಥಮ ವಿದ್ಯಾಭ್ಯಾಸವನ್ನು ಬಾಲಕರಿಂದ ಫೀಜು ತೆಗೆದುಕೊಳ್ಳದೆ ನಡಿಸಬೇಕಾಗಿದೆ ಸಾಹುಕಾರಿ ಸ್ಕೂಲುಗಳನ್ನಿಟ್ಟವರಿಗೆ ಫೀಜಿನಿಂದ ಬರುವ ವರಮಾನವೂ ತಪ್ಪಿಹೋಗುವಾಗ್ಗೆ ಅವರು ಸ್ಕೂಲಿನ ಖರ್ಚನ್ನು ಹ್ಯಾಗೆ ಎತ್ತಿಕೊಳ್ಳಬೇಕೋ ತಿಳಿಯುವುದಿಲ್ಲ.

ಆಂಗ್ಲೊವರ್ನಾಕ್ಯುಲರ್ ಮತ್ತು ಹೈ ಸ್ಕೂಲುಗಳಿಗೆ ಸಂಬಂಧಪಟ್ಟ ರೂಲುಸುಗಳು ಸರಿಯಾಗಿ ಅರ್ಥವಾಗುವುದಿಲ್ಲ ಗ್ರಾಂಟು ಕೊಡುವ ವಿಷಯದಲ್ಲಿ ಕಾಣಿಸಿರುವ ಕ್ರಮಗಳು ಸುಲಭವಾಗಿಲ್ಲವಾದ ಕಾರಣ ಮನಸ್ತಾಪಗಳಿಗೂ ಪಕ್ಷಪಾತಕ್ಕೂ ಅವಕಾಶವಾಗಬಹುದು ಈ ಸ್ಕೂಲುಗಳಿಗೂ ಇತರ ಪಾಠಶಾಲೆಗಳಿಗಿಟ್ಟಿರುವ ಕ್ರಮಗಳನ್ನೇ ಅನ್ವಯಿಸುವಂತೆ ಮಾಡಿಟ್ಟಿದ್ದರೆ ಚೆನ್ನಾಗಿತ್ತು ಈ ಭಾಗದಲ್ಲೂ ಕೂಡ ಗವರ್ನಮೆಂಟಿನವರು ಕೊಡುತ್ತೇವೆಂದು ಹೇಳುವ ಗ್ರಾಂಟುಗಳು ಪ್ರೋತ್ಸಾಹಕರವಾದಷ್ಟು ಧಾರಾಳವಾಗಿಲ್ಲ

ಈ ರೂಲುಸುಗಳನ್ನು ಓದುತ್ತಾ ಬಂದರೆ ಗವರ್ನಮೆಂಟಿನವರು ಗ್ರಾಂಟ್ ಸ್ಕೂಲುಗಳನ್ನು ಪ್ರೋತ್ಸಾಹಪಡಿಸುವ ಭಾಗದಲ್ಲಿ ಅಷ್ಟೇನೂ ಕುತೂಹಲವುಳ್ಳವರಾಗಿರುವಂತೆ ಕಾಣುವುದಿಲ್ಲ ನಮ್ಮ ತಿಳುವಳಿಕೆಯು ಈ ಭಾಗದಲ್ಲಿ ಖಂಡಿತವಾದದ್ದೆಂದು ಹೇಳಲಾರೆವು, ಆದರೆ ಸ್ವಸಹಾಯದಿಂದ ಅಭಿವೃದ್ಧಿ ಹೊಂದಬೇಕೆಂದು ಶ್ರಮಪಡುವವರನ್ನು ನೋಡಿದರೆ ಅಂಥವರಿಗೆ ಗವರ್ನಮೆಂಟಿನವರು ಧಾರಾಳವಾಗಿ ಸಹಾಯಮಾಡುವುದಕ್ಕೆ ಸಿದ್ಧರಾಗಿದ್ದಾರೆಂದು ದಿವಾನ್‌ರವರು ಹಲವು ವೇಳೆಗಳಲ್ಲಿ ಹೇಳುತ್ತಾ ಬಂದಿರುವುದಕ್ಕೂ, ಈ ರೂಲುಸುಗಳ ಉದ್ದೇಶಕ್ಕೂ ಸಮಂಜಸವಾಗಿರುವಂತೆ ತೋರುವುದಿಲ್ಲ

ವಿದ್ಯೆಯನ್ನು ಸರ್ಕಾರದವರೇ ಸಂಪೂರ್ಣವಾಗಿ ವಹಿಸಿಕೊಂಡು ನಡಿಸಿದ ಪಕ್ಷದಲ್ಲಿ ಅದು ಯಾವ ದೇಶದಲ್ಲೂ ಸಾರ್ಥಕವಾಗಿ ನಡೆಯುವುದಿಲ್ಲ. ವಿದ್ಯಾಶಿಕ್ಷಣದ ವಿಚಾರದಲ್ಲಿ ಬೇರೆ ಬೇರೆ ತರದ ಎಷ್ಟು ಏರ್ಪಾಡುಗಳಿದ್ದರೆ—ಇವು ಕ್ರಮವಾಗಿಯೂ ತೃಪ್ತಿಕರವಾಗಿಯೂ ನಡೆಯಬೇಕು—ಪ್ರಜೆಗಳ ವಿದ್ಯಾಭಿವೃದ್ಧಿಯು ಅಷ್ಟೊ ಹೆಚ್ಚು ಫಲದಾಯಕವಾಗುವುದು ಆದಕಾರಣ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡತಕ್ಕ ಪ್ರಯತ್ನಗಳಿಗೆ ಸರ್ಕಾರದವರ ಸಹಾಯವೂ ಪ್ರೋತ್ಸಾಹವೂ ತುಂಬಾ ಧಾರಾಳವಾಗಿರಬೇಕೆಂದು ಸೂಚಿಸುತ್ತೇವೆ

ದೇವರು ಪಾಪಗಳನ್ನು ಕ್ಷಮಿಸುತ್ತಾನೋ?

ಸರ್ವರೂ ಪಾಪಮಾಡಿರುತ್ತಾರೆ ನಾನು ನನ್ನ ಮನೋವಾಕ್ಕಾಯಗಳಲ್ಲಿ ಎಂದಾದರೂ ಪಾಪಮಾಡಿದವನೇ ಅಲ್ಲ ಧರ್ಮವನ್ನೇ ಕೈಕೊಂಡವನಾಗಿರುತ್ತೇನೆಂದು ಯಾವನಾದರೂ ಯಥಾರ್ಥವಾಗಿ ಹೇಳಲಾರನು ನಾವು ಪಾಪಾತ್ಮರೆಂದು ನಮ್ಮ ಮನವೇ ಒಪ್ಪಿಕೊಳ್ಳುತ್ತದೆ ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ತೋಡಿದ ಭಾವಿಗೆ ಜಲವೇ ಸಾಕ್ಷಿ

ದೇವರು ಪಾಪಗಳನ್ನು ಕ್ಷಮಿಸುವುದಕ್ಕೆ ಮನಸ್ಸುಳ್ಳವನಾಗಿರುತ್ತಾನೋ? ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುತ್ತವೆ ಎಂಬ ತಿಳುವಳಿಕೆಯನ್ನು ನಾವು ಹೊಂದಬಹುದೋ? ಅನೇಕರಿಗೆ ಪಾಪವು ಒಂದು ಹೊರಲಾರದ ಹೊರೆಯಂತಿರುತ್ತದೆ ಈ ಹೊರೆಯನ್ನು ಇಳಿಸಿಕೊಳ್ಳಬೇಕೆಂದು ಅವರು ಹಾರೈಸುತ್ತಲಿರುವರು ಬೇರೆ ಅನೇಕರಿಗೆ ಪಾಪವು ಬಾಧಕರವಾದ ಒಂದು ವ್ಯಾಧಿಯಾಗಿರುವುದು ಈ ವ್ಯಾಧಿಯು ಎಂದಿಗೆ ಗುಣವಾದೀತೆಂದು ಅವರು ತವಕಪಡುತ್ತಿರುವರು ಈ ಪಾಪದ ಹೊರೆಯನ್ನು ಇಳಿಸಬಲ್ಲಂಥ ರಕ್ಷಕನು ಇರುತ್ತಾನೋ ಈ ರೋಗವನ್ನು ಗುಣಮಾಡುವಷ್ಟು ಸಮರ್ಥನಾದ ವೈದ್ಯನು ಇರುತ್ತಾನೋ?

ದೇವರ ಕೃಪೆಯಿಂದ ಪಾಪಕ್ಷಮೆಯನ್ನು ಪಡೆದುಕೊಂಡಿರುವವರು ಕೊಡುವ ಅನುಭವಪೂರ್ವಕವಾದ ಸಾಕ್ಷಿಯಲ್ಲಿ ಮೇಲೆ ಕಂಡ ಪ್ರಶ್ನೆಗಳಿಗೆ ತಕ್ಕ ಉತ್ತರವು ಸಿಕ್ಕುತ್ತದೆ ಒಬ್ಬನು ತನ್ನ ತಲೆಯ ಮೇಲೆ ಹೊತ್ತಿರುವ ಹೊರೆಯನ್ನು ಯಾರಾದರು ಇಳಿಸಿದರೆ ಅದು ಅವನಿಗೆ ಖಂಡಿತವಾಗಿ ಗೊತ್ತಾಗುವುದು ಬಾಧಕರವಾದ ವ್ಯಾಧಿಯಿಂದ ನರಳುತ್ತಿದ್ದವನಿಗೆ ಗುಣವಾದರೆ ಅದು ಅವನಿಗೆ ತಿಳಿಯದೇ ಇರಲಾರದು

ಕೆಲವರ ಅನುಭವಪೂರ್ವಕವಾದ ಸಾಕ್ಷಿಗಳನ್ನು ಕೇಳಿರಿ ಪಶ್ಚಿಮ ಹಿಂದುಸ್ಥಾನದ ಒಬ್ಬ ಬ್ರಾಹ್ಮಣ ಸ್ತ್ರೀಯು ಬರೆಯುವುದು—"ಮನುಷ್ಯಕುಮಾರನು (ಯೇಸು ಕ್ರಿಸ್ತನು) ಕೆಟ್ಟುಹೋಗಿರುವವರನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು" ಎಂದು ಕ್ರಿಸ್ತನು ಉಪದೇಶಮಾಡಿದ್ದಲ್ಲದೆ ತಾನೇ ಪವಿತ್ರನಾಗಿ ಜೀವಿಸಿ, ಪಾಪಿಗಳನ್ನು ಪ್ರೀತಿಸುವುದರಿಂದ ಇದನ್ನು ದೃಷ್ಟಾಂತಪಡಿಸಿರುತ್ತಾನೆ ಇದಕ್ಕೆ ಸಮಾನವಾದ ಬೋಧನೆಯು ನನಗೆ ತಿಳಿದಿರುವ ಬೇರೆ ಯಾವ ಮತಗಳಲ್ಲಾದರೂ ಎಲ್ಲಿಯೂ ಕಾಣಲಿಲ್ಲ ಇದು ನನ್ನ ಮನಸ್ಸನ್ನು ಕೇವಲು ಆಕರ್ಷಿಸಿತು ಪೂರ್ವಾತ್ಮರ ಅಥವಾ ಪಶ್ಚಿಮಾತ್ಮರ ಯಾವ ರೀತಿಯಾದರೂ ಕ್ರೈಸ್ತಮತದಲ್ಲಿ ನನಗೆ ಕಂಡುಬರಲಿಲ್ಲ ನಮ್ಮ ಪೂರ್ವಿಕರ ಮತದಲ್ಲಿ ನನಗೆ ನಂಬಿಕೆ ತಪ್ಪಿಹೋಗಿದ್ದ ಕಾರಣ ನಾನು ಯಾವ ಧರ್ಮವನ್ನು ಕೈಕೊಂಡರೆ ನನ್ನ ಮನಸ್ಸಿಗೆ ಸಮಾಧಾನವು ಸಿಕ್ಕುವುದೆಂದು ಹುಡುಕುತ್ತಾ ಇದ್ದೆನು ಪಾಪಕ್ಷಮೆಯನ್ನೂ ಪಾಪಬಂಧವಿಮೋಚನೆಯನ್ನೂ ಪಡೆಯಬೇಕೆಂಬ ಕಾಂಕ್ಷೆಯು ಸತ್ಯವೇದದ ಮೂಲಕವಾಗಿ ಪವಿತ್ರಾತ್ಮನ ಶಕ್ತಿಯಿಂದ ನನ್ನಲ್ಲಿ ಹುಟ್ಟಿ, ಈ ದೊಡ್ಡ ರಕ್ಷಣೆಯ ಭಾಗ್ಯವನ್ನು, ಅದು ಬ್ರಾಹ್ಮಸಮಾಜದವರಿಂದ ನನಗೆ ಕೊಡಲ್ಪಟ್ಟಾಗ್ಗೆ, ಸ್ವೀಕರಿಸಿಕೊಳ್ಳುವಂತೆ ನನ್ನನ್ನು ಸಿದ್ಧಳನ್ನಾಗಮಾಡಿತು ಮತ್ತೊಬ್ಬನು ಹೇಳುವುದೇನೆಂದರೆ—ನಮ್ಮ ಪೂರ್ವಿಕರ ಮತದಲ್ಲಿ ನಾನು ಅತೃಪ್ತಿಪಟ್ಟವನಾಗಿ ಕ್ರೈಸ್ತ ಮತವು ನನಗೆ ಸಂತೃಪ್ತಿಯನ್ನು ಕೊಡಬಲ್ಲದೋ ಎಂದು ಶೋಧಿಸುವುದಕ್ಕೆ ಹೊಸ ಒಡಂಬಡಿಕೆಯನ್ನು ಓದುತಿದ್ದೆನು ಅದರಲ್ಲಿರುವ ಬೆಟ್ಟದ ಮೇಲೆ ಮಾಡಿದ ಪ್ರಸಂಗವೂ ಕೆಲವು ಸಾಮ್ಯಗಳೂ ನನಗೆ ಅದ್ವಿತೀಯವಾಗಿ ಕಂಡುವು ನಾನು ಪಾಪಾತ್ಮನಾಗಿದ್ದೇನೆಂಬ ಅರುಹು, ಮನುಷ್ಯರನ್ನು ಪಾಪವಿಮುಕ್ತರನ್ನಾಗಮಾಡುತ್ತೇನೆಂದು ಕ್ರಿಸ್ತನು ಹೇಳಿಕೊಳ್ಳುತ್ತಿರುವುದು, ಕ್ರಿಸ್ತನು ನನ್ನ ಪಾಪಗಳನ್ನು ಕ್ಷಮಿಸಿ ನನ್ನನ್ನು ವಿಮೋಚಿಸಿದ್ದಾನೆಂದು ಡಾಕ್ಟರ್ ಪಿ—ಯವರು ಈ ವಿಷಯದಲ್ಲಿ ಹೇಳಿದ ಅನುಭವಸಾಕ್ಷಿ ಇವುಗಳು ಕಡೆಗೆ ನಾನು ಕ್ರಿಸ್ತನನ್ನು ನನ್ನ ರಕ್ಷಕನನ್ನಾಗಿ ಅಂಗೀಕಾರಮಾಡಿಕೊಳ್ಳುವುದಕ್ಕೆ ಸಹಕಾರಿಗಳಾದುವು ಮತ್ತೊಬ್ಬನು ಹೇಳುವುದೇನೆಂದರೆ—ನಾನು ಹಿಂದುವಾಗಿದ್ದಾಗಲೇ ಕ್ರಿಸ್ತನು ಬೆಟ್ಟದ ಮೇಲೆ ಮಾಡಿದ ಪ್ರಸಂಗದ ಬೋಧನೆಯು ನನ್ನ ಮನಸ್ಸಿಗೆ ವಿಶೇಷವಾಗಿ ತಟ್ಟಿತು ಮತ್ತು ಕ್ರಿಸ್ತನು ಶಿಲುಬೆಯ ಮೇಲೆ ಸತ್ತುದೂ, ಸಾಯುವ ಸಮಯದಲ್ಲಿ ತನ್ನನ್ನು ಕೊಂದುಹಾಕುತ್ತಿದ್ದ ಕೊಲೆಪಾತಕರಿಗಾಗಿ—"ತಂದೆಯೇ, ಅವರಿಗೆ ಮನ್ನಿಸು, ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" ಎಂಬದಾಗಿ ಪ್ರಾರ್ಥಿಸಿದುದೂ ಇವು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸಿದುವು ನನ್ನಲ್ಲಿ ಹುಟ್ಟಿದ ನನ್ನ ಪಾಪದ ಅರುಹು ನಾನು ಕ್ರಿಸ್ತನನ್ನು ನನ್ನ ಒಡೆಯನನ್ನಾಗಿಯೂ ರಕ್ಷಕನನ್ನಾಗಿಯೂ ಅಂಗೀಕರಿಸಿಕೊಳ್ಳುವಂತೆ ನನ್ನನ್ನು ಒತ್ತಾಯಮಾಡಿತು ನನ್ನ ಪಾಪದ ಅರುಹೇ ಹೊರತು ಬೇರೆ ಯಾವುದಾದರೂ ನನ್ನನ್ನು ಕ್ರಿಸ್ತನೆಂಬ ಒಳ್ಳೇ ಕುರುಬನ ಮಂದೆಯೊಳಕ್ಕೆ ಕರೆದುಕೊಂಡು ಬರಲಿಲ್ಲ ಏಕೆಂದರೆ ನಾನು ಮೊದಲು ಬ್ರಹ್ಮಸಮಾಜಕ್ಕೆ ಸೇರಬೇಕೆಂದು ತರುವಾಯ ನಾನು ಯೋಗಿಯಾದೆನು ಆದರೆ ನನ್ನ ಪಾಪವೆಂಬ ರೋಗವನ್ನು ಕಳೆದುಕೊಳ್ಳುವುದಕ್ಕೆ ನನಗೋಸ್ಕರವಾಗಿ ತನ್ನ ಪ್ರಾಣದಾನಮಾಡಿದ ಯೇಸುಕ್ರಿಸ್ತನೇ ಹೊರತು ಬೇರೆ ಯಾವ ಔಷಧನಾದರೂ ನನಗೆ ಸಿಕ್ಕಲೇ ಇಲ್ಲ ಆತನ ಮರಣದ ದೆಸೆಯಿಂದ ನಾನು ಪಾಪಕ್ಷಮೆಯನ್ನು ಹೊಂದಿ ದೇವರ ಸಂಗಡ ಅನ್ಯೋನ್ಯವಾಗಿದ್ದೇನೆಂಬುದನ್ನು ತಿಳಿದುಕೊಂಡಿರುತ್ತೇನೆ

ಪಾಪದ ಭಾರದಿಂದ ಕಾಸಪಡುತ್ತಿರುವವರು ಇವರ ಮಾದರಿಯನ್ನು ಅನುಸರಿಸುವವರಾಗಲಿ

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

* * *

ಬ್ರಿಟಿಷ್ ರೆಸಿಡೆಂಟರವರು ಕಳೆದ ಶನಿವಾರ ಬೆಳಿಗ್ಗೆ ತಮ್ಮ ಅಸಿಸ್ಟೆಂಟರ ಸಮೇತ ಬೆಂಗಳೂರಿನಿಂದ ಕೊಡಗಿನ ಕಡೆ ಸರ್ಕೀಟು ದಯಮಾಡಿರುತ್ತಾರೆ

* * *

ಮಳವಳ್ಳಿ ತಾಲ್ಲೂಕಿಗೆ ವರ್ಗವಾಗಿರುವ ಅಮಲ್ದಾರ್ ಮ|| ಎಚ್. ಬಸವರಾಜೆ ಅರಸಿನವರು ನಾಲ್ಕು ತಿಂಗಳ ಕಾಯಿಲೆ ರಜಾ ಪಡೆದುಕೊಂಡಿದಾರೆ

* * *

ಬೆಂಗಳೂರು ಮಲ್ಲೇಶ್ವರದಲ್ಲಿ ಕಳೆದ ಸೋಮವಾರ ಸಾಯಂಕಾಲ ಒಂದು ಗುಡಿಸಲಿಗೆ ಬೆಂಕಿ ಬಿದ್ದು 3, 4 ವರುಷಗಳ ಹೆಣ್ಣುಮಕ್ಕಳಿಬ್ಬರು ಅಕಾಲಮರಣವನ್ನು ಹೊಂದಿದರೆಂದು ತಿಳಿದುಬಂದಿದೆ

* * *

ಶ್ರೀಮನ್ ಮಹಾರಾಜರವರು ರಾಣಿವಾಸದವರ ಸಮೇತ ಮಾರಿಕಣಿವೆಯ ಪ್ರಾಂತ್ಯ ಸರ್ಕೀಟು ತೀರಿಸಿಕೊಂಡು ಕಳೆದ ಸೋಮವಾರ ಸಾಯಂಕಾಲ ಮೋಟರುಗಳಲ್ಲಿ ವಾಪಸು ಬೆಂಗಳೂರಿಗೆ ಚಿತ್ತೈಸಿದರು

* * *

ಬೆಂಗಳೂರು ಶ್ರೀನಿವಾಸ ಮಂದಿರದ ಅನಾಥಾಲಯ ಪ್ರತಿಷ್ಠೆಯು ಈ ದಿನ ಬೆಳಿಗ್ಗೆ ನಡೆಯುವುದಾಗಿದೆ ಎಂದೂ, ಶ್ರೀಮದ್ಯುವರಾಜರವರು ದಯಮಾಡಿ ಈ ಕಾರ್ಯವನ್ನು ನೆರವೇರಿಸುವರೆಂದೂ ತಿಳಿಯುತ್ತದೆ

* * *

ವಿಡ್ಲಘಟ್ಟದ ತಾ|| ತಲಕಾಯಲ ಬೆಟ್ಟದ ಮೇಲೆ ರಥೋತ್ಸವವು, ಪೌರ್ಣಮಿಯಿಂದ ದನಗಳ ಪರಿಷೆಯೂ ನಡೆಯುತ್ತವೆಂದು ಅಮಲ್ದಾರ್ ಮ|| ಇ ಎಚ್ ತಾಮ್ಸನ್‌ರವರು ಪ್ರಕಟಮಾಡಿರುತ್ತಾರೆ

* * *

ತರೀಕೆರೆಯಲ್ಲಿ ಒಬ್ಬ ಮರಾಟ್ ಕಂಟ್ರಾಕ್ಟುದಾರನ ಶವವು ನಂದಿಬಟ್ಲು ಗ್ರಾಮದ ಬಳಿ ಸಿಕ್ಕಿ ಕಳೆದ ಶುಕ್ರವಾರ ಲಾಷ್ ಮಹಜರಿಗೆ ರವಾನಿಸಲ್ಪಟ್ಟಿತೆಂದು ತಿಳಿದುಬಂದಿದೆ. ಕೊಂದರೆಂತಲೂ, ಪೋಲೀಸಿನವರು ಆ ಗ್ರಾಮಕ್ಕೆ ಹೋಗಿ ವೆಂಕಟೆಗೌಡ, ರಂಗೇಗೌಡ ಎಂಬ ಇಬ್ಬರನ್ನು ದಸ್ತಗಿರಿ ಮಾಡಿಕೊಂಡು ಬಂದಿದಾರೆಂದೂ ಪ್ರಕಟವಾಗಿದೆ

* * *

ಬೆಂಗಳೂರು ಅರಳೇಪೇಟೆ ವೀರಶೆಟ್ಟಿ ಸ್ವಸೆಂಬಾತನ 19 ವರುಷದ ಕೆಂಪಹೊನ್ನಮ್ಮನೆಂಬ ಹೆಂಡತಿಯು ಹಿಂದಿನ ಮಂಗಳವಾರ ಮಧ್ಯಾಹ್ನ ಅಡಿಗೆ ಮಾಡುತ್ತಿರುವಾಗ್ಗೆ ಆಕೆಯ ಸೀರೆ ಹತ್ತಿಕೊಂಡು ಮೈಯೆಲ್ಲಾ ಸುಟ್ಟು ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿದರೂ ವಾಸಿಯಾಗದೆ ಮರುದಿನ ತೀರಿಹೋದಳು

* * *

ಒಬ್ಬ ಬಾತ್ಮಿದಾರರಿಂದ—ಕಡೂರು ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗನ್ನು ಇದೇ ಫೆಬ್ರವರಿ ತಾ 8 ನೇ ಭಾನುವಾರ ಮಧ್ಯಾಹ್ನ ನಡಿಸಬೇಕೆಂದು ನಿಶ್ಚಯಿಸಿರುತ್ತೆ ಆಗ್ಗೆ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರವರು ದಯಮಾಡಿಸುವದಾಗಿ ಹುಕುಂ ದಯಪಾಲಿಸಿರುವದರಿಂದ ಷೇರುದಾರರುಗಳೂ ಅಭಿಮಾನಶಾಲಿಗಳೂ ಆ ಕಾಲಕ್ಕೆ ದಯಮಾಡಿಸಿ ಪ್ರೋತ್ಸಾಹಿಸಬೇಕು

* * *

ಸರ್ಕಾರದವರು ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದಾರೆ—ಮ|| ಷೇಕ್ ಅಬ್ದುಲ್ಲಾರವರು ನಾಗಮಂಗಲದಿಂದ ಮೂಡಿಗೆರೆಗೆ, ಬೌರಿಂಗ್‌ಪೇಟೆ ಎಕ್ಸೈಸ್ ಇನ್‌ಸ್ಪೆಕ್ಟರ್ ಎ | ಎ ಪಿ ರಾಕ್ ಯವರು ನಾಗಮಂಗಲದ ಅಮಲ್ದಾರಿಗೆ, ಮ|| ಟಿ ಅಬ್ದುಲ್ ಖಾದರವರು ಸೀರ್ಯದಿಂದ ಕೊಪ್ಪಕ್ಕೆ ಮ|| ಎನ್ ಶ್ರೀನಿವಾಸರಾಯರು ಕೊಪ್ಪದಿಂದ ಸೀರ್ಯಕ್ಕೆ

* * *

ಬೆಂಗಳೂರು ದಂಡಿನಲ್ಲಿ ಕೋತಿಗಳು ಕಡಿದ 19 ಮಂದಿ ಸೋಜರುಗಳನ್ನು ಚಿಕಿತ್ಸೆಗಾಗಿ ಅಲ್ಲಿಂದ ಕೂನೂರು ಆಸ್ಪತ್ರೆಗೆ ಕಳುಹಿಸಿದರಷ್ಟೆ ಇನ್ನೊಬ್ಬ ಸೋಜರನು ಬೆಂಗಳೂರಿನಲ್ಲೇ ಕೋತಿ ಕಡಿದು ಬಹು ದುಃಖಕರವಾಗಿ ನರಳಿ ಕಳೆದ ಭಾನುವಾರ ರಾತ್ರಿ ಸತ್ತುಹೋದನು ಆತನ ಬಳಿ ಇದ್ದು ಉಪಚಾರ ಮಾಡುತ್ತಿದ್ದ ಆರು ಜನರನ್ನೂ ಮರುದಿನ ಚಿಕಿತ್ಸೆಗೋಸ್ಕರ ಕೂನೂರು ಆಸ್ಪತ್ರೆಗೆ ಕಳುಹಿಸಿರುತ್ತಾರೆ

* * *

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಇಲ್ಲಿಂದ ತುಮಕೂರಿಗೆ ವರ್ಗವಾದ ಅ|| ಕಮಿಷನರ್ ಮ|| ಟಿ ಜಿ ರಾಮಅಯ್ಯರವರಿಗೋಸ್ಕರ ಕಳೆದ ಗುರುವಾರ ಟೀ ಪಾರ್ಟಿ ನಡಿಸಿ ಅವರಲ್ಲಿ ತಮಗಿರುವ ಪ್ರೀತಿಸ್ನೇಹಭಾವವನ್ನು ಪ್ರಕಾಶಪಡಿಸಿದರು ರಾಯಬಹದ್ದೂರ್ ಎ ನರಸಿಂಹಯ್ಯಂಗಾರ್ರು, ಅಡ್ವೊಕೇಟ್ ಮ|| ಎಂ ಸಿ ರಂಗಯ್ಯಂಗಾರ್ರು, ಮ|| ಅಂಬಳೆ ಅಣ್ಣಯ್ಯಪಂಡಿತರೂ ಮ|| ರಾಮ ಅಯ್ಯರವರ ಗುಣಕಥವನ್ನು ಮಾಡಿದರು

* * *

ಬೆಂಗಳೂರು ಸಿಟಿಯ ಡಿಟೆಕ್ಟಿವ್ (ಪತ್ತೆದಾರಿ) ಪೋಲೀಸ್ ಕಾನ್‌ಸ್ಟೇಬಲ್ ಗೋವಿಂದನು ರಿಚರ್ಡ್ಸ್ ಎಂಬ ಸರದಾರನ ಬಾಬತು 400 ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿದನೆಂದೂ, ಪತ್ತೆ ಮಾಡುವಲ್ಲಿ ಅವನ ಬಳಿ 380 ರೂಪಾಯಿನ ನೋಟುಗಳು ಸಿಕ್ಕಿದವೆಂದೂ ತಿಳಿಸಿದ್ದೆವಷ್ಟೆ ಕಳೆದ ವಾರ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವನನ್ನು ವಿಚಾರಣೆ ಮಾಡಿ, ಅವನಿಗೆ ಒಂದು ತಿಂಗಳ ಕಠಿಣಶಿಕ್ಷೆ ವಿಧಿಸಿ, ಆ ನೋಟುಗಳನ್ನು ಆ ಸರದಾರರಿಗೇ ವಾಪಸು ಕೊಡಿಸಿದರು,

* * *

ಶ್ರೀಮನ್ ಮಹಾರಾಜರವರ ಎಗ್ಜಿಕ್ಯುಟಿವ್ ಕೌನ್ಸಿಲ್ಲಿಗೆ ಇಬ್ಬರೇ ಮೆಂಬರುಗಳು ಇರಬೇಕೆಂಬದಾಗಿ ವಿಧಿ ಇದ್ದದ್ದನ್ನು ಮಹಾರಾಜರವರು ತಿದ್ದಿ ಮೆಂಬರ ಸಂಖ್ಯೆಯನ್ನು ಹೆಚ್ಚುಮಾಡಿ, ಶ್ರೀಮನ್ ಯುವರಾಜ ಸರ್ ಶ್ರೀ ನರಸಿಂಹರಾಜ ಒಡೆಯರ್ ಬಹದ್ದೂರ್, ಕೆ ಸಿ ಐ ಇ ರವರನ್ನು ಮೂರನೆಯ ಮೆಂಬರಾಗಿ ನೇಮಕಮಾಡಿರುತ್ತಾರೆ ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರು ಪಬ್ಲಿಕ್ ಆಫೀಸ್ ಕೌನ್ಸಿಲ್ ಮಂದಿರದಲ್ಲಿ ದಿವಾನ್‌ರವರೂ, ಯುವರಾಜರವರೂ, ಮ|| ನಂಜುಂಡಯ್ಯನವರೂ, ಸರ್ದಾರ್ ಕಾಂತರಾಜೆ ಅರಸಿನವರೂ ಸೇರಿ ಆಳ್ವಿಕೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಕುರಿತು ಚರ್ಚೆಮಾಡಿದರು

ರಾಜಧಾನಿಯ ಸಂತೆಪೇಟೆಯಲ್ಲಿ ವರ್ತಕರಾಗಿದ್ದ ಮಿತ್ರನಾದ ತುರ್ಕ ವನ್ನು ಬಿಕರಿ ಮಾಡಿದರೆಂದು ಸ್ಯಾನಿಟರಿ ಇಲಾಖೆಯವರು ಮುದ್ದರಾಮಯ್ಯ, ಚನ್ನಪ್ಪ, ರಾಜಪ್ಪ, ಶಿರಾಣಿ ಬಸಪ್ಪ, ಸಯ್ಯದ್ ಖಾಸಿಂ ಎಂಬೀ ಐದು ಜನ ವರ್ತಕರ ಮೇಲೂ ಫಿರ್ಯಾದು ಮಾಡಿದರು. ಬೆಂಚ್ ಮ್ಯಾಜಿಸ್ಟ್ರೇಟರುಗಳಾದ ಮ|| ಡಿ. ನರಸಿಂಗರಾಯರೂ, ಮ|| ಎ. ನರಸಿಂಹಸ್ವಾಮಿಯವರೂ, ಮಿ|| ಮ್ಯಾಕ್ಮರ್ಡೋ ಹಿರ್ ರವರೂ ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ ಅವರಿಗೆ ತಲಾ 50 ರೂಪಾಯಿನಂತೆ ಜುಲ್ಮಾನೆ ವಿಧಿಸಿರುತ್ತಾರೆ.

* * *

ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕಿನ ಡೈರೆಕ್ಟರುಗಳು ಸಭೆ ಸೇರಿ ವಿಚಾರಗಳನ್ನು ನಡೆಸಿದರು. ದಾವಣಗೆರೆ, ತಿಪಟೂರು, ಚನ್ನಪಟ್ಟಣಗಳಲ್ಲಿ ಬ್ರಾಂಚ್ ಆಫೀಸುಗಳು ಪ್ರಾರಂಭವಾಗಿವೆ ಎಂದೂ, ಸರಿಯಾದ ಜನರು ದೊರೆತರೆ ಇಷ್ಟರಲ್ಲೇ ಮೈಸೂರಿನಲ್ಲೂ, ತುಮಕೂರಿನಲ್ಲೂ ಬ್ರಾಂಚುಗಳನ್ನು ಇಡಿಸುವುದಾಗಿಯೂ, ಕಳೆದ ಡಿಸೆಂಬರಿಗೆ ಆಖೈರಾದ ಮೂರು ತಿಂಗಳ ಲೇವಾದೇವಿಯ ವ್ಯವಹಾರದಲ್ಲಿ ಬ್ಯಾಂಕಿಗೆ ಸುಮಾರು 3,000 ರೂಪಾಯಿ ಉತ್ಪತ್ತಿ ಆಗಿದೆ ಎಂದೂ ಮ್ಯಾನೇಜರವರು ತಿಳಿಸಿದರು. ಡೈರೆಕ್ಟರುಗಳಿಗೆ ಬ್ಯಾಂಕಿನಿಂದ ಸಾಲ ಕೊಡತಕ್ಕದ್ದಲ್ಲ, ಇನ್ನೊಂದು ಬ್ಯಾಂಕಿನಲ್ಲಿ ಡೈರೆಕ್ಟರಾಗಿರತಕ್ಕವರನ್ನು ಈ ಬ್ಯಾಂಕಿನ ಡೈರೆಕ್ಟರಾಗಿ ಚುನಾಯಿಸಕೂಡದೆಂತಲೂ ಮ|| ಇಲ್ಲಿಯಪ್ ರವರು ಸೂಚಿಸಿದರು. ಈ ವಿಚಾರವು ಸ್ವಲ್ಪ ದೂರ ಚರ್ಚೆಯಾಗಿ ಬೋರ್ಡಿನವರೇ ಇತ್ಯರ್ಥ ಮಾಡಿಕೊಳ್ಳಲಿ ಎಂದು ಬಿಟ್ಟುಬಿಟ್ಟರು. ಈಗ ಬಂದಿರುವ ಲಾಭವನ್ನು ಬ್ಯಾಂಕಿಗೆ ಇದುವರೆಗೆ ಆಗಿರುವ ಖರ್ಚಿಗಾಗಿ ವಿನಿಯೋಗಿಸಿಕೊಳ್ಳಬೇಕೆಂದು ಇತ್ಯರ್ಥವಾಯಿತು.

* * *

ಕಳೆದ ಸುಮಾರು 20 ವರುಷಗಳಿಂದಲೂ ಅರಮನೆಯ ತೋಷಖಾನೆ ಮೊಖ್ತೇಸರರಾಗಿದ್ದ ಮ|| ಹಿಂದೂಪುರ ರಾಮರಾಯರು ಇಲ್ಲಿನ ದಿವಾನ್ ರ ಅಗ್ರಹಾರದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ 60 ವರುಷವಾಗಿತ್ತು. ಇವರು ಲೇಟ್ ಮಹಾರಾಜರವರ ಮತ್ತೂ ಈಗಿನ ಮಹಾರಾಜರವರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದವರಲ್ಲದೆ ಸಕಲರಲ್ಲೂ ಬಹಳ ಸರಸಗಳು ಸ್ನೇಹಪರರು ಎಂಬ ಹೆಸರು ಪಡೆದಿದ್ದರು. ಅನೇಕ ವರುಷಗಳಿಂದ ಇವರು ನಮ್ಮ ಪತ್ರಿಕೆಯ ಚಂದಾದಾರರಾಗಿದ್ದರು. ಅರಮನೆಯ ಕಂಟ್ರೋಲರರಾಗಿದ್ದ ಮ|| ವಿ. ಎಸ್. ಪುಟ್ಟಮಯ್ಯಂಗಾರರೂ, ಅರಮನೆಯ ಬಹು ಮಂದಿ ನೌಕರಮಾನ್ಯರುಗಳೂ ಶವಸಂಸ್ಕಾರಕ್ಕೆ ಹೋಗಿದ್ದು ಅವರಲ್ಲಿ ತಮಗಿದ್ದ ಭಕ್ತಿವಿಶ್ವಾಸಗಳನ್ನು ಪ್ರಕಾಶಪಡಿಸಿದರು. ವೃದ್ಧರಾದ ಪತ್ನಿಯೂ, ಮೂರು ಮಂದಿ ಗಂಡುಮಕ್ಕಳೂ, ಒಬ್ಬ ಹೆಣ್ಣುಮಗಳೂ, ಅನೇಕಾನೇಕ ಸ್ನೇಹಿತರೂ ಅವರ ವಿಯೋಗದುಃಖವನ್ನು ಅನುಭವಿಸುವಂತಾಯಿತು.

* * *

ಮೈಸೂರು ಸಂಸ್ಥಾನದ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾದ ಅ|| ಕಮಿಷನರ್ ಮ|| ಸಿ ವೆಂಕಟರಾಯರ ಕುಮಾರನಾದ ಮ|| ಸಿ ವಿ. ಶ್ರೀನಿವಾಸ ರಾಮನೆಂಬಾತನು ಕಳೆದ ವರುಷದ ಅಂತ್ಯಭಾಗದಲ್ಲಿ ನಡೆದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೂ, ಕಲ್ಕತ್ತಾ ಪಟ್ಟಣದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ನಡೆಸಿದ ಪರೀಕ್ಷೆಗೂ ಹಾಜರಾದದ್ದರಲ್ಲಿ ಮೈಸೂರು ಪರೀಕ್ಷೆಯಲ್ಲಿ ಮೂರನೆಯವನಾಗಿಯೂ, ಕಲ್ಕತ್ತಾ ಪರೀಕ್ಷೆಯಲ್ಲಿ ನಾಲ್ಕನೆಯವನಾಗಿಯೂ ತೇರ್ಗಡೆ ಹೊಂದಿದನು. ಮೈಸೂರು ಸರ್ಕಾರದವರು ಇನ್ನು ರಸ್ಸೇ ಅ|| ಕಮಿಷನರ್ ರ ದರ್ಜೆಗೆ ಚುನಾಯಿಸಿಕೊಂಡದ್ದರಿಂದ ಈತನಿಗೆ ಪ್ರೊ|| ಅ|| ಕಮಿಷನರ್ ರ ಕೆಲಸ ಕೊಡುವುದಾಗಿ ತಿಳಿದಂತೆ ಕೇಳುತ್ತೇವೆ. ಆದರೆ ಇಂಡಿಯಾ ಗವರ್ನ್‌ಮೆಂಟಿನವರು ಐದು ಮಂದಿಯನ್ನು ಚುನಾಯಿಸಿದ್ದರಿಂದ ಅಲ್ಲಿ ಈತನಿಗೆ ನಾಲ್ಕನೆಯ ಸ್ಥಾನ ದೊರಕಿತು. ಈಗ ಆತನು ಮೈಸೂರನ್ನು ಬಿಟ್ಟು ಇಂಡಿಯಾ ಗವರ್ನ್‌ಮೆಂಟ್ ಸರ್ವಿಸಿಗೆ ಸೇರಿಕೊಂಡಿರುತ್ತಾನೆ. ಆ ಗವರ್ನ್‌ಮೆಂಟಿನವರು ಮುಖಾಂತರದಲ್ಲಿ ಈತನನ್ನು ಸೇರಿಸಿಕೊಂಡು ತರಪೇತುಮಾಡಿ ಭಾರೀ ಸಂಬಳಕ್ಕೆ ನೇಮಿಸುವರು. ಈತನು ಬೇಗನೆ ಪ್ರವರ್ಧಮಾನಕ್ಕೆ ಬಂದು ನಮ್ಮ ಸಂಸ್ಥಾನಕ್ಕೆ ಕೀರ್ತಿತರಲೆಂದೂ, ಕಾಲಾನುಕಾಲದಲ್ಲಿ ನಮ್ಮ ಸಂಸ್ಥಾನದಲ್ಲಿ ಅದೇ ಇಲಾಖೆಯ ಭಾರೀ ಉದ್ಯೋಗಕ್ಕೆ ಬರುವಂತಾಗಲೆಂದೂ ಹಾರೈಸುತ್ತೇವೆ.

ಹಾಸನದ ವೆಸ್ಲಿಯನ್ ಮಿಷನ್ ಆಸ್ಪತ್ರೆ.

ಹಾಸನದಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ಸ್ಥಾಪಿಸಿ ನಡಿಸುತ್ತಾ ಬರುತ್ತಿರುವ ರೆಡ್‌ಫರ್ನ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಇಂಗ್ಲೆಂಡ್ ದೇಶದ ಉದಾರಿಗಳಾದ ಸ್ತ್ರೀಪುರುಷರ ಸಹಾಯದಿಂದ ಈಚೆಗೆ ಕಟ್ಟಿ ಪೂರೈಸಿರುವ ವಾರ್ಡುಗಳು ಮತ್ತು ಆಪರೇಷನ್ ಥಿಯೇಟರ್ ಎಂಬ ಕಟ್ಟಡಗಳನ್ನು ಕಳೆದ ತಾ 28ನೇ ಬುಧವಾರ ಪ್ರತಿಷ್ಠೆ ಮಾಡಿದರು. ಇದಕ್ಕಾಗಿ ಬೆಂಗಳೂರಿನಿಂದ ರೆವ್. ಡಿ ಎ ರೀಸ್ ದೊರೆಯವರು, ತುಮಕೂರಿನಿಂದ ರೆವ್ ಎಚ್. ಎಚ್. ನ್ಯೂಹಮ್ ದೊರೆಯವರು, ಮೈಸೂರಿನಿಂದ ರೆವ್ ಎಚ್ ಸ್ಪೆನ್ಸರ್ ದೊರೆಯವರು, ಗುಬ್ಬಿಯಿಂದ ರೆವ್. ಟಾಮ್ಲಿನ್‌ಸನ್ ದೊರೆಯವರು, ರೆವ್ ಥಾಮ್ಸನ್ ದೊರೆಯವರು ಇವರೆಲ್ಲಾ ಮೊದಲೇ ಬಂದರು. ಬುಧವಾರ ಬೆಳಿಗ್ಗೆ ಆಸ್ಪತ್ರೆಯ ಆವರಣದ ಪಶ್ಚಿಮ ಭಾಗದಲ್ಲಿ ಮೇಲೆ ಹೇಳಿದ ಮಿಷನರಿಗಳೂ, ಡೆಪ್ಯುಟಿ ಕಮಿಷನರ್ ಮಿ| ವೆದರಾಲ್ ರವರೂ, ಮೈಸೂರಿನ ಸೆಷನ್ಸ್ ಜಡ್ಜ್ ಮಿ|| ಹಂಚಾಟೆ ರನವರೂ, ರಿಟೈರ್ಡ್ ಅ|| ಕಮಿಷನರುಗಳಾದ ಮಿ|| ಅಬಿಬ್ ಜಂಗ್ ರವರೂ, ಮಿ|| ಮಹಮ್ಮದ್ ಉಮರರವರೂ, ಡಾ|| ಆನಂದರಾಯರವರೂ, ಅ|| ಕಮಿಷನರುಗಳಾದ ಮ|| ಅಪ್ಪಣ್ಣಯ್ಯಂಗಾರ್ಯರೂ, ಶ್ರೀನಿವಾಸಮೂರ್ತಿಯವರೂ, ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಪುಟ್ಟರಾಮಯ್ಯನವರೂ, ಮ್ಯುನಿಸಿಪಲ್ ಕಮಿಷನರುಗಳೂ, ಪುರಪ್ರಮುಖರೂ, ಇತರರನೇಕರೂ ದಯಮಾಡಿದ್ದರು. ಇಲ್ಲಿನ ಅನಾಥಶಾಲೆಯ ಬಾಲಕಿಯರೂ, ಕ್ರೈಸ್ತ ಮಂಡಲಿಯವರೂ ಬಹು ಮಂದಿ ಹಾಜರಾಗಿದ್ದರು.

ರೆವ್ ಬೆಸ್ಟ್ರೀಕ್ ಬ್ಯಾಂಕ್ ದೊರೆಯವರು ಸಂಗೀತ ಮತ್ತು ಪ್ರಾರ್ಥನೆ ಯಿಂದ ಕೂಟವನ್ನು ಪ್ರಾರಂಭಿಸಿ ವೈದ್ಯವಿದ್ಯೆಯ ಶ್ರೇಷ್ಠತೆಯನ್ನೂ, ಅದರಿಂದ ಲೋಕಕ್ಕಾಗುವ ಮಹೋಪಕಾರವನ್ನೂ ಕನ್ನಡ ಭಾಷೆಯಲ್ಲಿ ವಿಶದಪಡಿಸಿದರು. ಬಳಿಕ ರೆವ್ ಡಿ ಎ ರೀಸ್ ದೊರೆಯವರು ಇಂಗ್ಲಿಷ್ ಭಾಷೆಯಲ್ಲಿ ಈ ಆಸ್ಪತ್ರೆಯ ಸ್ಥಾಪನೆಗೆ ಕಾರಣಭೂತರಾಗಿದ್ದು ಕಾರ್ಯಾರಂಭದಲ್ಲಿಯೇ ಪರಲೋಕಗತರಾದ ರೆವ್ ರೆಡ್‌ಫರ್ನ್ ದೊರೆಯವರ ಚರಿತ್ರೆಯನ್ನು, ಆಸ್ಪತ್ರೆಯ ಸಂಸಾರಾದಿ ಸಂಗತಿಗಳನ್ನೂ, ಇನ್ನೂ ಆಗಬೇಕಾಗಿರುವ ಕಾರ್ಯಗಳನ್ನೂ ಕುರಿತು ಉಪನ್ಯಾಸಮಾಡಿದರು. ಬಳಿಕ ರೆವ್ ಥಾಮ್ಸನ್ ದೊರೆಯವರು ಲೇಟ್ ರೆಡ್‌ಫರ್ನ್ ದೊರೆಯವರ ಧೈರ್ಯ, ಸ್ಥೈರ್ಯ, ಸಾಹಸ, ಸದ್ಗುಣ, ಸದಾಚಾರಾದಿಗಳನ್ನು ಕುರಿತು ಸಭಿಕರ ಮನಸ್ಸು ಕರಗುವಂತೆ ಕನ್ನಡ ಭಾಷೆಯಲ್ಲಿ ಭಾಷಣಮಾಡಿದರು. ಇದಾದ ಮೇಲೆ ರೆವ್. ಡಿ. ಎ ರೀಸ್ ದೊರೆಯವರು ಪ್ರಾರ್ಥನಾಪೂರ್ವಕವಾಗಿ ಪ್ರತಿಷ್ಠಾ ಕಾರ್ಯವನ್ನು ನೆರವೇರಿಸಿದರು. ಕಡೆಯಲ್ಲಿ ಎಲ್ಲರೂ ಆಸ್ಪತ್ರೆಗೆ ಸಂಬಂಧಪಟ್ಟ ಕಟ್ಟಡಗಳೆಲ್ಲಾ ಪ್ರವೇಶಿಸಿ ನೋಡಿಕೊಂಡು ಸಂತೋಷಪಟ್ಟು ತೆರಳಿದರು. ಅಲ್ಲಿ ರೆವ್ ನ್ಯೂಹಮ್ ದೊರೆಯವರು ಫೋಟೋವನ್ನು ತೆಗೆದುಕೊಂಡರು. ಅಲ್ಲಿಗೆ ಬೆಳಗಿನ ಕಾರ್ಯವು ಮುಕ್ತಾಯವಾಯಿತು.

ಆ ದಿನ ಸಾಯಂಕಾಲ ಇಲ್ಲಿನ ಮಿಷನ್ ದೇವಾಲಯದಲ್ಲಿ ಈ ಸಕೀಟಿಗೆ ಸೇರಿದ ಎಲ್ಲಾ ಉಪದೇಶಿಗಳೂ, ಈ ಸ್ಥಳದ ಕ್ರೈಸ್ತ ಸಭೆಯವರೂ ಸೇರಿ ಒಂದು ವಿಶೇಷವಾದ ಆರಾಧನೆಯನ್ನು ನಡಿಸಿದರು. ಅಗ್ಗ ಕೆಲವು ಮಂದಿ ಸ್ಥಳೀಕ ಹಿಂದೂ ದೊಡ್ಡ ಮನುಷ್ಯರೂ ಬಂದಿದ್ದರು. ರೆವ್. ರೀಸ್ ದೊರೆಯವರು ಆ ದಿನ ಬೆಳಿಗ್ಗೆ ನಡೆದ ವೈದ್ಯಶಾಲೆಯ ವಿಚಾರವನ್ನು, ತಾವು ಈ ಸ್ಥಳದಲ್ಲಿ 30 ವರ್ಷಗಳ ಹಿಂದೆ ಇದ್ದಾಗಿನ ಸ್ಥಿತಿ ಮತ್ತು ಈಗಿನ ಅಭಿವೃದ್ಧಿಯ ವಿಚಾರವನ್ನೂ ಕುರಿತು ಸಂಕ್ಷೇಪವಾಗಿ ಉಪನ್ಯಾಸಮಾಡಿದರು. ತರುವಾಯ ರೆವ್ ನ್ಯೂಹಮ್ ದೊರೆಯವರು ಆ ವೈದ್ಯಶಾಲಾ ನಿರ್ಮಾಣಕಾರ್ಯಗಳನ್ನೂ, ಅದರ ಮೂಲಪುರುಷರಾದ ಲೇಟ್ ರೆಡ್‌ಫರ್ನ್ ದೊರೆಯವರ ಕಾರ್ಯದಕ್ಷತೆಯನ್ನೂ ವಿವರಿಸಿದರು. ಆ ಮೇಲೆ ರೆವ್ ಸ್ಪೆನ್ಸರ್ ದೊರೆಯವರು ಈ ಕಾರ್ಯವು ಮುಂದರಿದು ಹೇಗೆ ಹೇಗೆ ಹೆಚ್ಚುತ್ತಾ ಪ್ರಯೋಜನಕಾರಿಯಾಗಿ ಪರಿಣಮಿಸುತ್ತದೆ ಎಂಬುವದನ್ನು ಪ್ರಸ್ತಾಪಿಸಿ ವಿವರಿಸಿದರು. ಕಡೆಯಲ್ಲಿ ರೆವ್ ಬೆಸ್ಟ್ರೀಕ್ ಬ್ಯಾಂಕ್ ದೊರೆಯವರಿಂದ ಎಲ್ಲರೂ ಫಲವಿನಿಯೋಗವನ್ನು ಹೊಂದಿ ಸಂತೋಷಪಟ್ಟು ತೆರಳಿದರು.

ಕಳೆದ ತಾ 29 ನೇ ಗುರುವಾರ ಸಾಯಂಕಾಲ ರೆವ್. ಟಾಮ್ಲಿನ್‌ಸನ್ ದೊರೆಯವರು ಮಿಷನ್ ಆಸ್ಪತ್ರೆಯಲ್ಲಿ ಡಾಕ್ಟರ್ ಲಿವಿಂಗ್‌ಸ್ಟನ್ ಎಂಬ ಪುಣ್ಯಪುರುಷನ ಚರಿತ್ರೆಯನ್ನು ಚಿತ್ರಗಳೊಡನೆ ವಿವರಿಸಿ ಪ್ರದರ್ಶನಮಾಡಿದರು. ನೋಟಕರು ಸುಮಾರು 500 ಮಂದಿ ವರೆಗೂ ಸೇರಿದ್ದರು. ಇವರಲ್ಲಿ ಸ್ಥಳಾಧಿಕಾರಿಗಳೂ, ಅವರ ಪರಿವಾರದವರೂ, ಪುರಪ್ರಮುಖರೂ, ಬಾಲಕಬಾಲಕಿಯರೂ ಸೇರಿದ್ದು ಎಲ್ಲರೂ ನೋಡಿ ಸಂತೋಷಪಟ್ಟರು.

ಹುಲಿಕರಡಿಗಳ ಜಗಳ.

ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕು ಹೈದರಗಟ್ಟದ ಟೋಲ್‌ಗೇಟಿನ ಒಳಗೆ ಇರುವ ಸಿತಾರಿಪುರದ ಶಾಸಗಲ್ ಹನುಮಂತಪ್ಪನೆಂಬುವರು ಬರೆಯುವುದೇನೆಂದರೆ—ಇಲ್ಲಿ ಜನವರಿ ತಾ. 27 ನೇ ಮಂಗಳವಾರ ನಾನೊಬ್ಬನೇ ಟೋಲ್‌ಗೇಟಿನ ಒಳಗೆ ಇದ್ದೆ. ಆ ದಿನ ಅಲ್ಲಿ ಒಂದು ಹುಲಿಯೂ, ಒಂದು ಕರಡಿಯೂ ಬಂದು ನಮ್ಮ ಟೋಲ್‌ಗೇಟಿನ ಒಳಗೆ ನಿಂತುಕೊಂಡವು. ಸ್ವಲ್ಪ ಹೊತ್ತಿನ ಮೇಲೆ ಅವೆರಡೂ ಜಗಳವಾಡುವುದಕ್ಕೆ ಶುರುಮಾಡಿದವು. ಇದನ್ನು ನೋಡಿ ನನಗೆ ಗಾಬರಿಯಾಯಿತು. ಬಳಿಕ ಅವೆರಡೂ ಸೇರಿ ದೂರೀ ಆಡುತ್ತಾ ಒತ್ತಿಕೊಂಡು ಸಮೀಪಕ್ಕೆ ಬಂದವು. ಅದರ ಮೇಲೆ ನಾನು ಒಬ್ಬನೇ ಇದ್ದದ್ದಕ್ಕೆ ನನಗೆ ಪೂರಾ ಗಾಬರಿಯಾಯಿತು. ಆ ಕಾಲಕ್ಕೆ ನಮ್ಮ ಟೋಲ್‌ಗೇಟಿನ ಬಾಗಿಲ ಬಳಿ ದೊಡ್ಡ ದೊಣ್ಣೆ ಇಟ್ಟು ಇದ್ದೆ. ಆ ದೊಣ್ಣೆ ತೆಗೆದುಕೊಂಡು ಟೋಲ್‌ಗೇಟಿನ ಒಳಗೆ ಬಂದೆ. ಅಷ್ಟು ಆದರೂ ಇನ್ನೂ ಅವುಗಳು ಜಗಳ ಬಿಡಲಿಲ್ಲ. ಒಳ್ಳೇದು, ಇವುಗಳನ್ನು ಹೀಗೇ ಬಿಟ್ಟರೆ ನಾಳೆ ದಿನಸ ನಮಗೆ ಏನಾದರೂ ತೊಂದರೆ ಕೊಡುವವೇ ಸರಿ ಎಂದು ನಾನು ಮಲಗಿದ್ದ ಒಂದು ಪಾಟಿನ ಚೀಲದ ಕಟ್ಟನ್ನು ನನ್ನ ಮೈಗೆ ಕಟ್ಟಿಕೊಂಡು ಅಲ್ಲಿಗೆ ಹೋಗಿ ಒಂದು ಸಾರಿ ಬೀಸಿ ಹೊಡೆಯಲು ಆ ಹುಲಿಯು ಓಡಿಹೋಯಿತು; ಆ ಕರಡಿಯು ಹೋಗಲಿಲ್ಲ. ಅದರ ಮೇಲೆ ಆ ಕರಡಿಯನ್ನು ಅದೇ ದೊಣ್ಣೆ ತೆಗೆದುಕೊಂಡು ಹೊಡೆದೆ. ಅದು ನನ್ನ ಮೈಗೆ ಕಟ್ಟಿದ್ದ ತಟ್ಟನ್ನು ಹಿಡಿದು ಎಳೆಯಿತು. ಅದೇ ಹೊತ್ತಿಗೆ ಕುಂದವಾರದಿಂದ ಒಬ್ಬ ಬ್ರಾಹ್ಮಣನು ಬಂದ. ಆತನಲ್ಲಿ ಒಂದು ಕತ್ತಿ ಇತ್ತು. ಆತನು ಹೋ-ಅಯ್ಯೋ, ಇದೇನು ? ಎಂದು ನನಗೆ ಆ ಕತ್ತಿಯನ್ನು ಕೊಟ್ಟ. ಆ ಕತ್ತಿ ತೆಗೆದುಕೊಂಡು ಕರಡಿಯ ಕಾಲಿಗೆ ಹೊಡೆದೆ. ಅದರ ಒಂದು ಕಾಲಿಗೆ ಪೂರಾ ಪೆಟ್ಟು ಬಿದ್ದುಬಿಟ್ಟಿತು. ಅದರ ಮೇಲೂ ನೋವಿಗೆ ಹೆದರದೆ ಕರಡಿಯು ನನ್ನ ಮೈಗೆ ಕಟ್ಟಿಕೊಂಡಿದ್ದ ತಟ್ಟನ್ನು ಹಿಡಿದು ಮತ್ತೂ ಎಳೆಯುವುದಕ್ಕೆ ಶುರುಮಾಡಿತು. ಆಗ ನಾನು ಸುಮ್ಮನೆ ಇರದೆ ಅದೇ ಕತ್ತಿಯಿಂದ ಮತ್ತೂ ಒಂದು ಸಾರಿ ಅದೇ ಕಾಲಿಗೆ ಹೊಡೆದೆ. ಆ ಕಾಲು ಮುರಿದು ಜೋತಾಡುತ್ತಾ ಇತ್ತು. ಅದನ್ನು ನೋಡಿ ಬ್ರಾಹ್ಮಣನು ತಲೆಗೆ ಹೊಡೀರಿ ಎಂತ ಹೇಳಿದ. ಆದರ ಮೇಲೆ ನನ್ನಲ್ಲಿ ಇದ್ದ ದೊಣ್ಣೆ ತೆಗೆದುಕೊಂಡು 2-3 ಸಾರಿ ತಲೆ ಕೊಟ್ಟು ಹೊಡೆಯಲು ಅದು ಆವಾಗ ಕಾಲು ಎಳೆಯುತ್ತಾ ಓಡಿಹೋಗುತ್ತಾ ಗಿಡಕ್ಕೆ ಹೋಯಿತು ಮತ್ತು ಅದನ್ನು ನೋಡಬೇಕು ಎಂತ ಆ ಬ್ರಾಹ್ಮಣನೂ ನಾನೂ ಸೇರಿ ಹೊಂದೆವು, ಒಂದು ಫರ್ಲಾಂಗು ಆಗಬಹುದು. ಅದು ಅಲ್ಲಿ ಹೋಗಿ ಬಿದ್ದು ತಿರುಗಿ ನೋಡಿ ಸತ್ತುಹೋಯಿತು. ಮರಳಿ ಹುಲಿ ಬಂದೀತು ಎಂಬ ಗಾಬರಿಯಿಂದ ಬಂದುಬಿಟ್ಟೆವು. ಮಾರನೇ ಶನಿವಾರ ಒಂದು ಗಾಡಿ ಬಾಡಿಗೆಮಾಡಿಕೊಂಡು ನನ್ನ ಊರಿಗೆ ಹೊರಟುಬಂದೆನು. ಇಲ್ಲಿ ಜನಗಳು ನೋಡಿ—ಅಯ್ಯೋ, ಹ್ಯಾಗೆ ಹೊಡದಿರಿ ? ಎಂದು ಆಶ್ಚರ್ಯಪಟ್ಟರು.

ಚನ್ನಗಿರಿ ತಾಲ್ಲೋಕು 2 ನೇ ಕೋಆಪರೇಟಿವ್ ಕಾನ್ಫರೆನ್ಸ್.

ಚನ್ನಗಿರಿ ತಾಲ್ಲೋಕು ಪರಸ್ಪರ ಸಹಾಯ ಸಂಘಗಳ ಎರಡನೇ ಸಭೆಯು 1914 ನೇ ಇ-ವಿ ಫೆಬ್ರವರಿ ತಾ. 10-11-12 ರಲ್ಲಿ ಚನ್ನಗಿರಿ ಶ್ರೀರಂಗನಾಥ ದೇವಸ್ಥಾನದ ಆನಂದವಿಲಾಸ ಮಂಟಪದಲ್ಲಿ ನಡೆಯುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ|| ಮೆಥ್ಯಾನ್ ಸಾಹೇಬರು ಅಗ್ರಾಸನವನ್ನು ವಹಿಸಲು ಒಪ್ಪಿರುತ್ತಾರೆ. ಚರ್ಚಿಸಲ್ಪಡಬೇಕಾದ ವಿಷಯಗಳ ಪಟ್ಟಿಯನ್ನು ಇದರ ಕೊನೆಯಲ್ಲಿ ಸಮೂದಿಸಿರುತ್ತೆ. ನಡವಳಿಕೆಗಳು ಸಾಧ್ಯವಾದಮಟ್ಟಿಗೂ ಕನ್ನಡದಲ್ಲಿಯೇ ನಡಿಸಲ್ಪಡುತ್ತವೆ. ಈ ಸಭೆಗೆ ದಯಮಾಡಿಸುವ ಸಂಘಗಳ ಪ್ರತಿನಿಧಿಗಳೂ, ಇತರ ದೊಡ್ಡ ಮನುಷ್ಯರೂ ಈ ವಿಷಯಗಳನ್ನು ಕುರಿತು ಚರ್ಚಿಸಬಹುದು, ಅಲ್ಲದೆ, ತಮ್ಮ ಅಭಿಪ್ರಾಯಗಳನ್ನೂ ಸಹ ಸೂಚಿಸಿ ತೀರ್ಮಾನಿಸಬಹುದು. ಈ ಸಭೆಯಲ್ಲಿ ಓದಬೇಕೆಂದಿರುವ ಉಪನ್ಯಾಸದ ನಕಲುಗಳು ಈ ಸಂಘದ ಸೆಕ್ರೆಟರಿಯವರಿಂದ 1914 ನೇ ಫೆಬ್ರವರಿ ತಾ. 9 ರ ವರೆಗೂ ಅಂಗೀಕರಿಸಲ್ಪಡುತ್ತೆ. ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬೇಕೆಂದಿರುವ ವಿಷಯವನ್ನು ವಿಚಾರಿಗಿನ ಕಾಲಕ್ಕೆ 6 ಘಂಟೆಗಳ ಮುಂಚೆ ಕಾನ್ಫರೆನ್ಸ್ ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು. ಅಮಲ್ದಾರರವರು ಈ ತಾಲ್ಲೂಕಿನಲ್ಲಿರುವ ಎಲ್ಲಾ ಸೊಸೈಟಿಗಳಿಂದಲೂ, ದವಸದ ಬ್ಯಾಂಕುಗಳಿಂದಲೂ ಸಾಧ್ಯವಾದಷ್ಟು ಪ್ರತಿನಿಧಿಗಳನ್ನು ಈ ಸಭೆಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತಾರೆ. ಪ್ರತಿನಿಧಿಗಳಲ್ಲದೆ ಇರುವ ಇತರ ದೊಡ್ಡ ಮನುಷ್ಯರನ್ನೂ ಸಭೆಯವರು ಆದರಪೂರ್ವಕವಾಗಿ ಬರಮಾಡಿಕೊಳ್ಳಲು ಆಸಕ್ತರಾಗಿರುತ್ತಾರೆ. ಇದೇ ಕಾಲದಲ್ಲಿ ದನಗಳ ಪ್ರದರ್ಶನವೂ ಸಹ ನಡಿಸಲ್ಪಡುವುದು.

ವಿಷಯಗಳು —ಚನ್ನಗಿರಿ ಪ್ರಥಮ ಮತ್ತು ದ್ವಿತೀಯ ಕಾನ್ಫರೆನ್ಸುಗಳ ಏರ್ಪಾಡು ಮತ್ತು ಇವುಗಳ ಜವಾಬ್ದಾರಿ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರತಕ್ಕ ಸೊಸೈಟಿಗಳ ಸೆಕ್ರೆಟರಿಗಳೆಲ್ಲರೂ ತಮ್ಮ ತಮ್ಮ ಸೊಸೈಟಿಗಳ ವಿಷಯವಾಗಿ ಸಂಕ್ಷೇಪವಾದ ಒಂದು ರಿಪೋರ್ಟನ್ನು ಓದುವದು. ಈ ರಿಪೋರ್ಟಿನಲ್ಲಿ ಈ ಕೆಳಗೆ ಕಂಡ ವಿಷಯಗಳು ಅಡಕವಾಗಿರತಕ್ಕದ್ದು —ಸೊಸೈಟಿಯಲ್ಲಿರತಕ್ಕ ಮೆಂಬರುಗಳ ಸಂಖ್ಯೆ, ಜಮಾಯಿಸಿರುವ ಷೇರು ಮೊಬಲಗು ಮತ್ತು ಡಿಪಾಜಿಟ್ಟು ಹಣ, ಸಾಲಕೊಟ್ಟ ಮತ್ತು ವಾಪಸು ಬಂದ ಮೊಬಲಗುಗಳು, ನಡಿಸಲ್ಪಟ್ಟ ಮಿಟಿಂಗುಗಳ ಸಂಖ್ಯೆ ಮತ್ತು ಚರ್ಚಿಸಲ್ಪಟ್ಟ ವಿಷಯಗಳು, ಚನ್ನಗಿರಿಯಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಹತ್ತಿ ಕಾರ್ಖಾನೆ ಸಂಘ ಮತ್ತು ಇದರ ಪ್ರಯೋಜನಾಂಶಗಳು. ಚನ್ನಗಿರಿ ತಾಲ್ಲೂಕಿನಲ್ಲಿ ಪರಸ್ಪರ ಸಹಾಯಸಂಘಗಳ ಅಭಿವೃದ್ಧಿ ಮತ್ತು ಅವುಗಳು ನಡಿಸುತ್ತಿರುವ ಕೆಲಸಗಳು. ಹೋದ ವರುಷ ಚನ್ನಗಿರಿ ಕಾನ್ಫರೆನ್ಸ್ ನಡೆದಂದೀಚೆಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಪರಸ್ಪರ ಸಹಾಯಸಂಘಗಳು ಎಷ್ಟರಮಟ್ಟಿಗೆ ಪ್ರಬಲಿಸಿರುತ್ತವೆ ?

ಮೆಂಬರುಗಳಿಗೆ ಇತರಕ್ಕೆ ಸಾಲದ ವಿಚಾರವಾಗಿ ಸಂಘಗಳಿಂದ ಪೂರ್ವದ ಸಾಲಗಳನ್ನು ತೀರಿಸಲು ಎಷ್ಟರಮಟ್ಟಿಗೆ ಅನುಕೂಲವಾಗಿರುತ್ತೆ. ನಿಶ್ಯೇಷವಾಗಿ ಪೂರ್ವಾದಿಗಳನ್ನು ತೀರಿಸಲು ಯಾವ ರೀತಿ ಏರ್ಪಾಡು ಇರಬೇಕು. ಸೊಸೈಟಿಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು ಇಡಿಸುವುದು ಮತ್ತು ಹೆಚ್ಚು ಡಿಪಾಜಿಟ್ಟು ಇಡುವಂತೆ ಯಾವ ರೀತಿ ಪ್ರೋತ್ಸಾಹಿಸತಕ್ಕದ್ದು ? ಸೊಸೈಟಿಗೆ ಸೇರದ ಮೆಂಬರುಗಳು ಹೆಚ್ಚು ಸಂಪಾದನೆಮಾಡುವದಕ್ಕೂ, ಅವರ ಉತ್ಪತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೂ ಆವಶ್ಯಕವಾದ ಏರ್ಪಾಡುಗಳು. ಪ್ರತಿ ಸೊಸೈಟಿಗೂ ವರ್ತಮಾನ ಪತ್ರಿಕೆಗಳನ್ನು ತರಿಸಿಡುವದು ಮತ್ತು ಬೀಜ ಯಂತ್ರ ವಗೈರೆ ದಾಸ್ತಾನ್ ಇಡಿಸುವದು. ಮಿತವಿಲ್ಲದ ಜವಾಬ್ದಾರಿಯುಳ್ಳ ಸಂಘಗಳು ಮತ್ತು ಅವುಗಳ ಪ್ರಯೋಜನ. ಚನ್ನಗಿರಿ ತಾಲ್ಲೂಕಿನಲ್ಲಿ ಹೊಸ ಸೊಸೈಟಿಗಳು ಏರ್ಪಾಡಾಗುವುದಕ್ಕೆ ಲಾಯಖಾದ ಗ್ರಾಮಗಳು ಯಾವವು ?

ಕೋಆಪರೇಟಿವ್ ಯೂನಿಯನ್‌ಗಳು:—ಇವುಗಳ ಪ್ರಯೋಜನ ಮತ್ತು ಇಂಥಾ ಒಂದು ಯೂನಿಯನ್ನನ್ನು ಚನ್ನಗಿರಿ ತಾಲ್ಲೂಕಿನಲ್ಲಿ ಏರ್ಪಾಡುಮಾಡುವುದರ ಆವಶ್ಯಕತೆ. ದವಸದ ಬ್ಯಾಂಕುಗಳನ್ನು ಅಭಿವೃದ್ಧಿಪಡಿಸುವದು ಮತ್ತು ದವಸವನ್ನು ದಾಸ್ತಾನ್ ಇಡುವುದಕ್ಕೆ ಕಣಜಗಳನ್ನು ಕಟ್ಟಿಸುವುದು. ಮುಂದಿನ ವರುಷದ ಕಾನ್ಫರೆನ್ಸ್ ನಡೆಯುವದಕ್ಕೆ ಏರ್ಪಾಡುಮಾಡುವುದು. ದನಗಳನ್ನು ಇನ್‌ಷ್ಯೂರು ಮಾಡುವ ಕೋಆಪರೇಟಿವ್ ಸೊಸೈಟಿಗಳು. ಮ್ಯುನಿಸಿಪಲ್ ಮತ್ತು ತಾಲ್ಲೂಕು ಬೋರ್ಡುಗಳಿಗೆ ಹೆಡ್‌ಕ್ವಾರ್ಟರ್ ಸೊಸೈಟಿಯಿಂದ ಒಬ್ಬ ಮೆಂಬರನ್ನು ಚುನಾಯಿಸುವುದು. ಪ್ರತಿ ಗ್ರಾಮದಲ್ಲೂ ದವಸದ ಬ್ಯಾಂಕನ್ನು ಸ್ಥಾಪಿಸಿ ಆ ಗ್ರಾಮಕ್ಕೆ ಒಂದು ವರುಷಕ್ಕೆ ಸಾಕಾಗುವಷ್ಟು ದವಸವೇ ಮೂಲಧನವುಳ್ಳದ್ದಾಗಿ ರೆಜಿಸ್ಟರ್‌ಮಾಡಿ ಸೊಸೈಟಿಗೆ ಒಂದು ಬ್ರಾಂಚಾಗಿರುವಂತೆ ಮಾಡುವದು. ತಾಲ್ಲೂಕಾವಾರು ಕೋಆಪರೇಟಿವ್ ಸಂಘಗಳ ಸಭೆ, ಇವುಗಳ ಪ್ರಯೋಜನ, ಸೊಸೈಟಿಯ ಮೆಂಬರುಗಳ ಷೇರುಗಳನ್ನು ಅದೇ ಸೊಸೈಟಿಯ ಬೇರೇ ಮೆಂಬರರಿಗೆ ವರ್ಗಕೊಡುವದು. ಗ್ರಾಮಪಂಚಾಯತಿ ರೂಲಸನ್ನು ಸೊಸೈಟಿಯ ಅಧಿಕಾರಕ್ಕೆ ಒಳಪಡಿಸಬೇಕೆಂದು ಕೇಳಿಕೊಳ್ಳುವುದು. ಸೊಸೈಟಿಯ ಅಡಳಿತಕ್ಕೆ ಒಳಪಟ್ಟ ಗ್ರಾಮಗಳಲ್ಲಿ ವಾಸವಾಗಿಲ್ಲದಿದ್ದರೂ ಆ ಗ್ರಾಮಗಳಲ್ಲಿ ಸ್ಥಿರಸೊತ್ತು ಇರುವ ಪಕ್ಷದಲ್ಲಿ ಅಂಥಾವರನ್ನು ಮೆಂಬರಾಗಿ ಸೇರಿಸಿಕೊಳ್ಳುವದು. ಸೊಸೈಟಿಗಳ ಅಭಿವೃದ್ಧಿ ಮತ್ತು ಕ್ಷೀಣತೆಗೆ ಕಾರಣವೇನು ? ಬೆಂಗಳೂರು ಸೆಂಟ್ರಲ್ ಬ್ಯಾಂಕಿನಿಂದ ತರುವ ಸಾಲಗಳ ಮೇಲೆ ಬಡ್ಡಿ ದರ ಹಾಲಿ ಇರುವದಕ್ಕಿಂತಲೂ ಕಮ್ಮಿ ಆಗಬೇಕು. ಈಚೆಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಸೊಸೈಟಿಗಳ ಸಂಖ್ಯೆಯು ದಿನೇದಿನೇ ವೃದ್ಧಿಯಾಗುತ್ತಲಿರುವುದರಿಂದ ಕೋಆಪರೇಟಿವ್ ಸೊಸೈಟಿಗಳಿಂದಲೂ ಅವುಗಳ ಮೆಂಬರುಗಳಿಂದಲೂ ಸೊಸೈಟಿಗೆ ಬರೆಯತಕ್ಕ ಕಾಗದಗಳ ಮೇಲೆ ಟಪ್ಪಾಲ ಹಾಸಲ್ ವಿನಾಯಿತಿಮಾಡಬೇಕು. ಸೊಸೈಟಿ ಕಟ್ಟಡ ಪ್ರತ್ಯೇಕವಾಗಿರತಕ್ಕದ್ದು ನ್ಯಾಯ. ಸೊಸೈಟಿ ಸ್ಥಾಪಿತವಾದ 5 ವರ್ಷಗಳ ಅಖೈರ್ ಒಳಗಾಗಿ ಪ್ರತ್ಯೇಕ ಸೊಸೈಟಿ ಕಟ್ಟಡವನ್ನು ಆಯಾ ಸೊಸೈಟಿಯವರು ಕಟ್ಟಿಕೊಳ್ಳಲು ಅಶಕ್ತರಾಗಿದ್ದಲ್ಲಿ ಸರ್ಕಾರದವರು ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರದಂತೆ ಆಯಾ ಸೊಸೈಟಿಗೆ ಸಾಲ ಕೊಟ್ಟು ಕಂತು ಪ್ರಕಾರ ಹಣಕಟಾಯಿಸಿಕೊಳ್ಳುವದು. ಸರ್ಕಾರಿ ನೌಕರರಿಗೆ ಸ್ವಂತ ಜವಾಬ್ದಾರಿ ಮೇಲೆ ಸಾಲಕೊಡತಕ್ಕ ವಿಷಯ. ವ್ಯವಸಾಯ, ಕೈಗಾರಿಕೆಗಳ ಅಭಿವೃದ್ಧಿಗೆ ಹೊಸ ತರಹೆ ಯಂತ್ರೋಪಕರಣಗಳ ಆವಶ್ಯಕತೆ ಮತ್ತು ನಮ್ಮ ತಾಲ್ಲೋಕಿನಲ್ಲಿ ಅವುಗಳ ಪ್ರಚಾರಕ್ಕೋಸ್ಕರ ನಡಿಸಬೇಕಾದ ಕ್ರಮ. ಇತರ ವಿಷಯಗಳು.

ತಾಲ್ಲೂಕು ವರ್ತಮಾನಗಳು.

ಅರಸಿಕೆರೆ.—ಬಿಸಿಲಿನ ತಾಪವು ದಿನೇದಿನೇ ಹೆಚ್ಚುತ್ತಲಿದೆ, ಧಾರಣೆವಾಸಿಗಳು ಯಥಾಪ್ರಕಾರ ಹಿಂದಿನ ಸಾಲಿನಲ್ಲಿ ಮಳೆ ಬೆಳೆ ಅನುಕೂಲವಿಲ್ಲದ್ದರಿಂದ ಬಡಜನಗಳ ರೈತರ ಕಷ್ಟನಷ್ಟಗಳನ್ನು ಹೇಳಬೇಕಾದ್ದಿಲ್ಲ. ಆದರೆ ಸರ್ಕಾರದವರು ಅರಸಿಕೆರೆಯಿಂದ ಹಾಸನ್ ಮಾರ್ಗವಾಗಿ ಮೈಸೂರಿಗೆ ಹಾಕತಕ್ಕ ರೈಲ್ ರಸ್ತೆ ಕಾಮಗಾರಿಯು ನಡೆಯುವದರಿಂದ ಬಡವರ ಕಷ್ಟಪರಿಹಾರಕ್ಕೆ ಮಾರ್ಗವಾಯಿತು. ಕಂಟ್ರಾಕ್ಟರುಗಳು ಎಲ್ಲಾ ಕಡೆಯಿಂದ ಬಂದು ತಮತಮಗೆ ಆಗುವಷ್ಟು ಮೈಲುಗಳ ಕಂಟ್ರಾಕ್ಟು ತೆಗೆದುಕೊಂಡು ಕೆಲಸ ನಡಿಸುವದರಲ್ಲಿ ದಾರೆ.—ಟವನ್ ಸ್ಯಾನಿಟರಿ ಏರ್ಪಾಡುಗಳು ದಿನೇದಿನೇ ವೃದ್ಧಿ ಹೊಂದುತ್ತಿರುವದರಿಂದ ಸಾಂಕ್ರಾಮಿಕ ಜಾಡ್ಯಗಳ ತೊಂದರೆ ಏನೂ ಇಲ್ಲದೆ ಊರು ಸಮಾಧಾನ ಸ್ಥಿತಿಯಲ್ಲಿದ್ದು ವ್ಯಾಪಾರಕ್ಕೆ ಅನುಕೂಲವಿದೆ.—ರಂಗನ್ನನೆಂಬುವಳು ಸನಿಹದಲ್ಲಿರುವ ಬಾವಿಯೊಳಗೆ ಬಿದ್ದು ಮೃತಪಟ್ಟಳು —ಅಮಲ್ದಾರ್ ಮ|| ಬಿ. ಟಿ. ಸೀತಾರಾಮಯ್ಯನವರು ಸಂತೆ ಮಾಳಕ್ಕೆ ಸಮೀಪದಲ್ಲಿ ತೆಗಿಸಿರುವ ಹ್ಯಾಂಡ್ ಪಂಪ್ ಭಾವಿಯು ತಮ್ಮ ಸ್ವಂತಖರ್ಚಿನಿಂದ ಸಂತೆ ಜನ ದನಗಳ ಉಪಯೋಗಾರ್ಥವಾಗಿ ಕಟ್ಟಿಸಿದ್ದೆಂತ ತಿಳಿದು ಬರುತ್ತೆ. ಇದರಿಂದ ಅಮಲ್ದಾರರ ಉದಾರ ಗುಣವು ವ್ಯಕ್ತವಾಗುತ್ತದೆ. ಸದರಿ ಭಾವಿಯು ಪ್ರಜೆಗೆ ಉಪಯೋಗವಾಗಬೇಕಾದಲ್ಲಿ ಅದರ ಬಳಿ ಒಬ್ಬನನ್ನು ಇಟ್ಟೇ ಇರಬೇಕು.—ಸಾ|| ಚೌಡಪ್ಪನವರು ಆರೋನೇಷನ್ ಪಾರ್ಕನ್ನೂ ಅದಕ್ಕೆ ಸಂಬಂಧಪಟ್ಟ ಭಾವಿಯನ್ನೂ ಕಟ್ಟಿ ಮುಕ್ಕಾಲು ಭಾಗ ಪೂರೈಸುತ್ತಾ ಬಂದಿದೆ.—ಇಲ್ಲಿನ ಚಿಕ್ಕತಿರುಪತಿಯಲ್ಲಿ ಕುಟಾರಿ ಉತ್ಸವವು ವಿಜೃಂಭಣೆಯಿಂದ ಜರುಗಿತು. ಎಲ್ಲಾ ಭಕ್ತರೂ ತಮ್ಮ ಯೋಗ್ಯತಾನುಸಾರ ಉತ್ಸವದ ಖರ್ಚುಗಳನ್ನು ವಹಿಸಿಕೊಂಡು ನಡಿಸಿದರು.—ಸ್ಯಾನಿಟರಿ ಇನ್‌ಸ್ಪೆಕ್ಟರು, ಪಟೇಲರು ವಗೈರೇರು ಸಂತೆಯನ್ನು ಬಹುಮಟ್ಟಿಗೆ ಕ್ರಮಕ್ಕೆ ತಂದು ರಸ್ತೆಗಿದ್ದ ಅಡಚಣೆಯನ್ನು ತಪ್ಪಿಸಿದ್ದು ಸಂತೋಷವಾಗಿದೆ.

ಬೇಲೂರು —ಮೂರು ವರುಷಗಳಿಂದ ಇಲ್ಲಿ ಅಮಲ್ದಾರರಾಗಿದ್ದ ಮ|| ಎಂ. ಕೇಶವಯ್ಯನವರಿಗೆ ಚಿತ್ರದುರ್ಗಕ್ಕೆ ವರ್ಗವಾಯಿತು. ಇವರು ಇಲ್ಲಿಗೆ ಬಂದ ಮೇಲೆ ಕೇವಲ ಹೀನಸ್ಥಿತಿಯಲ್ಲಿದ್ದ ಇಲ್ಲಿನ ಮ್ಯುನಿಸಿಪಾಲಿಟಿಯನ್ನು ಅಭಿವೃದ್ಧಿಪಡಿಸಿ, ದಕ್ಷರಾದವರನ್ನು ಮ್ಯುನಿಸಿಪಲ್ ಮೆಂಬರು ಮಾಡಿ ಜನರ ಆರೋಗ್ಯಕ್ಕೆ ತಕ್ಕ ಏರ್ಪಾಡುಮಾಡಿ ಪ್ರಜೆಗಳ ಅನುರಾಗಕ್ಕೆ ಪಾತ್ರರಾದರು. ಇಲ್ಲಿ ಒಂದು ಟವನ್ ಹಾಲನ್ನು, ಟೆನ್ನಿಸ್ ಕೋರ್ಟನ್ನೂ, ಒಂದು ವಿಹಾರ ಸ್ಥಾನವನ್ನೂ ಕಟ್ಟಿಸಿಕೊಟ್ಟರು. ಅಲ್ಲದೆ ಈ ತಾಲ್ಲೂಕು ಪ್ರಜಾಸಾಮಾನ್ಯಕ್ಕೆ ಕೇವಲ ಸುಲಭರಾಗಿದ್ದರು. ಈ ಊರಿನ ಮುಖಂಡರೂ ಸರ್ಕಾರಿ ನೌಕರರೂ ಟವನ್ ಹಾಲಿನಲ್ಲಿ ಅವರ ಕೂಡ ಫೋಟೋ ತೆಗಿಸಿ ಅವರ ಗುಣಕಥನಮಾಡಿದರು. ಎ.ವಿ. ಸ್ಕೂಲಿಗೆ ಬರಮಾಡಿಕೊಂಡು ಮಕ್ಕಳ ವಿನೋದವಾದ ಸಂಭಾಷಣೆ, ಉಪನ್ಯಾಸ, ತಿಂಡಿ ವಗೈರೆ ಮಾಡಿ ವಿನೋದವಿಂದ ಒಂದು ದಿನವನ್ನೂ, ಸರ್ಕಾರೀ ನೌಕರರೇ ಸೇರಿ ಅವರನ್ನು ಬರಮಾಡಿಕೊಂಡು ಹರಿಕಥೆ, ತಿಂಡಿ ಮುಂತಾದ ವಿನೋದದಿಂದ ಒಂದು ದಿನವನ್ನೂ, ವೈಶ್ಯ ಮಂಡಲಿಯವರೂ, ಮಹಮದೀಯರ ಅಂಜುಮನ್ ಕ್ಲಬ್ಬಿನವರು ಒಂದೊಂದು ದಿನವೂ ಅವರೊಂದಿಗೆ ಕಳೆದು ಕನ್ನಡ, ಹಿಂದುಸ್ಥಾನಿ, ಇಂಗ್ಲಿಷ್ ಭಾಷೆಗಳಲ್ಲಿ ಅವರ ಗುಣಕಥನಮಾಡಿದರು. ಬಳಿಕ ದೇವಸ್ಥಾನದಲ್ಲಿ ಸಂತೋಷ ಕೂಟ ನಡಿಸಿ ಅವರನ್ನು ಕೇವಲ ಮರ್ಯಾದೆಯಿಂದ ಕಳುಹಿಸಿಕೊಟ್ಟರು. ಈ ತಾಲ್ಲೂಕಿಗೆ ಇದುವರೆಗೆ ಇಂಥಾ ದೇಶಾಭಿಮಾನಿಗಳೂ, ಪ್ರಜಾವತ್ಸಲರೂ ಆದ ಅಮಲ್ದಾರರು ಬಂದಿರಲಿಲ್ಲ.—ಈ ಊರಲ್ಲಿ ಪ್ಲೇಗ್ ಪ್ರಾರಂಭವಾಗಿ ಪೇಟೆಯಲ್ಲಿ 10-15 ಮಂದಿ ತೀರಿಹೋದರು. ಕೋಟೆಯಲ್ಲೂ ಇಲಿ ಬೀಳುವುದಕ್ಕೆ ಪ್ರಾರಂಭವಾಗಿತ್ತು. ಅಷ್ಟರಲ್ಲೇ ಪ್ರಜಾಭಿಮಾನಿಗಳಾದ ನಮ್ಮ ಡಾಕ್ಟರು ಮೇಹನತ್ತು ಮಾಡಿದ್ದರಿಂದ 15 ದಿವಸದಲ್ಲೇ ನಿಂತುಹೋಯಿತು.—ಇದು ಸುಗ್ಗೀ ಕಾಲವಾದರೂ ಅಕ್ಕಿ 7 ಸೇರೂ, ರಾಗಿ 18 ಸೇರೂ ಮಾರುತ್ತದೆ. ಸರ್ಕಾರದವರು ಸರಿಯಾದ ಬಟ್ಟು, ಸೇರು ಕೊಟ್ಟಿದ್ದಾಗ್ಯೂ ಈ ಕಡೆ ಇನ್ನೂ ಕ್ರಮಪಟ್ಟಿಲ್ಲ.—ಈ ಊರು ಪೋಸ್ಟಾಫೀಸು ಪೇಟೆಯಲ್ಲಿದ್ದು ಉಭಯಪಾರ್ಶ್ವದಲ್ಲಿಯೂ ತೇಂದಿ, ಪರಾಬು ಕೋಠಿಗಳಿವೆ. ಸದರಿ ಬೀದಿಯಲ್ಲಿ ಗಲಾಟೆ ಹೆಚ್ಚು. ಇದು ಕುತುಕರ ಗಲಾಟೆ ಎಂದು ಪೋಲೀಸಿನವರು ಗಮನಿಸದ್ದರಿಂದ ಆ ಬೀದಿಯು ಇಸಪೀಟ್ ಆಟದವರಿಗೆ ಸ್ಥಾನವಾಗಿದೆ.—ಇಲ್ಲಿನ ಛತ್ರದಲ್ಲಿ ಮ|| ಲಕ್ಷ್ಮಂದದ ಕೇಶವಯ್ಯಂಗಾರ್ರ ಅಧ್ಯಕ್ಷತೆಯಿಂದ ಎಲ್ಲಾ ಮತಸ್ಥರಿಗೂ ಅತಿಥ್ಯವು ನಡೆಯುತ್ತಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಕಬ್ಬಿನ ವ್ಯವಸಾಯ

ಇಂಡಿಯಾ ದೇಶದಲ್ಲಿ ಬಹು ಕಾಲದಿಂದ ಸಕ್ಕರೆಯೊಂದು ಮುಖ್ಯವಾದ ಆಹಾರವಾಗಿದೆ ಇತರ ದೇಶಗಳಲ್ಲಿ ಇನ್ನೂ ಅನೇಕ ಪೈರುಗಳಿಂದ ಸಕ್ಕರೆ ಉತ್ಪತ್ತಿಯಾದಾಗ್ಯೂ ಇಂಡಿಯಾ ದೇಶದಲ್ಲಿ ಕಬ್ಬಿನಿಂದಲೇ ವಿಶೇಷವಾಗಿ ಅದು ತಯಾರಾಗುವುದು

ಕಬ್ಬು ಬೆಳೆಯುವುದು ಲಾಭಕರವಾದುದು, ಆದರೆ ಅದಕ್ಕೆ ಬಹಳ ಲಾಗವಡು ತಗಲುವುದರಿಂದ ಭಾರಿ ರೈತರಿಂದ, ಸದಾಕಾಲವೂ ನೀರಿರುವ ಕೆರೆಗಳ ಕೆಳಗೆ ಅದು ಬೆಳೆಯುವುದು ಸಾಧ್ಯ ಆದುದರಿಂದ ನಮ್ಮ ಮೈಸೂರು ಸೀಮೆಯಲ್ಲಿ ಕಬ್ಬಿನ ವಿಸ್ತೀರ್ಣವು ಸಾಗುವಳೀ ನೆಲದ ಸಾವಿರಕ್ಕೆ ಏಳರಂತೆ ಬಹಳ ಅಲ್ಪವಾಗಿಯೇ ಇರುವುದು

ಎಲ್ಲಾ ವಿಷಯಗಳನ್ನು ನೋಡಲಾಗಿ ನಮ್ಮ ಮೈಸೂರು ಸೀಮೆಯ ಕಬ್ಬುಗಳಲ್ಲಿ ಪಟ್ಟಾಪಟ್ಟಿಯೇ ಶ್ರೇಷ್ಠವಾದುದೆಂದು ಹೇಳಬಹುದು ಆದರೆ ಅದು ಚೇಣೀ ಅಥವಾ ಮರಕಬ್ಬಿನಂತೆ ನೀರು ಕಡಮೆಯಾದರೆ ಬೆಳೆಯುವುದಿಲ್ಲ ನರಿ ಮುಂತಾದ ಕಾಡು ಮೃಗಗಳ ಕಾಟವೂ ಇದಕ್ಕೆ ಜಾಸ್ತಿ ಆದುದರಿಂದ ಚೇಣೀ ಕಬ್ಬು ಪಟ್ಟಾಪಟ್ಟಿ ಕಬ್ಬಿನಷ್ಟು ಸಿಹಿಯಾಗಿಲ್ಲದೇ ಇದ್ದರೂ, ಅಷ್ಟು ಹೆಚ್ಚಾದ ಫಲವನ್ನೂ ಸಹ ಕೊಡದೇ ಇದ್ದರೂ, ಅದನ್ನು ನೀರಿನ ಅನುಕೂಲ ಕಡಮೆಯಾದ ಸ್ಥಳಗಳಲ್ಲಿ ಬೆಳೆಯುವುದು ಉತ್ತಮ ಇತರ ದೇಶದ ಕಬ್ಬುಗಳನ್ನು ಹೆಬ್ಬಾಳದ ಫಾರಂನಲ್ಲಿ ಅಜಮಾಯಿಷಿ ಮಾಡುತ್ತಿದೆ ಅವುಗಳ ಗುಣದೋಷಗಳು ಒಂದೆರಡು ವರ್ಷಗಳಲ್ಲಿ ಗೊತ್ತಾಗುವುದು ಅವುಗಳಲ್ಲಿ ಕೆಲವು ಶ್ರೇಷ್ಠವಾದವೆಂದು ತೋರಿಬರುತ್ತದೆ ಈ ಕಬ್ಬಿನ ಬೀಜಗಳನ್ನು ತಮ್ಮ ಭೂಮಿಯಲ್ಲಿ ಪರೀಕ್ಷಿಸಬೇಕೆಂದು ಅಪೇಕ್ಷಿಸುವವರು ವ್ಯವಸಾಯದ ಇಲಾಖೆಯವರಿಂದ ಟನ್ನಿಗೆ ಇಪ್ಪತ್ತು ರೂಪಾಯಿಗಳಂತೆ ಪಡೆಯಬಹುದು ಕೆಳಗೆ ಇರುವ ಚಿತ್ರವು ಈ ಕಬ್ಬುಗಳ ಬೆಳವಣಿಗೆಯನ್ನು ತೋರಿಸುತ್ತದೆ ಅವುಗಳ ವಿಷಯವಾಗಿ ಇನ್ನೂ ವಿಶೇಷ ಸಂಗತಿಗಳನ್ನು ಇನ್ನೊಂದು ವೇಳೆ ವಿವರಿಸಲಾಗುವುದು

ಹೆಬ್ಬಾಳದ ಫಾರಂನಲ್ಲಿ ಬೆಳೆಯುವ ಕಬ್ಬು

ಮೈಸೂರು ಸೀಮೆಯ ಉತ್ತಮ ಬೆಲ್ಲದ ಫಸಲು ಎಕರೆಗೆ ಮುನ್ನೂರು ಮಣವೆಂದು ಹೇಳಬಹುದಾದರೂ ಸಾಧಾರಣ ಕೇಳಾದ ಉತ್ಪತ್ತಿಯು ತೊಂಭತ್ತು ಮಣಕ್ಕೆ ಕಡಮೆಯೇ ಕಬ್ಬಿನ ಫಸಲು ಹವಾ ಭೂಗುಣ ಇವುಗಳಿಂದ ಹೆಚ್ಚು ಕಡಮೆ ಆಗೇ ಆಗುತ್ತದೆ ಭೂಲೋಕದಲ್ಲಿ ಸಕ್ಕರೆ ಬೆಳೆಗೆ ಅತ್ಯುತ್ತಮ ಸ್ಥಳವಾಗಿರುವ ಹವಾಯಿ ದ್ವೀಪದಲ್ಲಿ ಎಕರೆಗೆ ನೂರು ನೂರಿಪ್ಪತ್ತು ಟನ್ನು ಕಬ್ಬು ಬರುತ್ತಿವೆ ಈಗಿನ ಸುಧಾರಿಸಿದ ಪದ್ಧತಿಯಿಂದ ಎಕರೆಗೆ ಅಲ್ಲಿ ಸಾವಿರದ ಇನ್ನೂರು ಮಣ ಸಕ್ಕರೆಯನ್ನು ಹೊಂದುತ್ತಿದ್ದಾರೆ ಪೂನಾ ಹತ್ತಿರ ಉತ್ತಮ ಸಾಗುವಳಿ ಬಲದಿಂದ ಆರುನೂರು ಮಣಕ್ಕೆ ಮೇಲೆಯೇ ಅನೇಕ ವೇಳೆ ಬಂದಿದೆ

ಗೋದಾವರಿ ಪ್ರಾಂತ್ಯದ ಗೋಡುಭೂಮಿಯಲ್ಲಿ ಇದೇ ಫಸಲು ಸಾಧಾರಣವೆಂದು ಹೇಳುತ್ತಾರೆ ಅಲ್ಲಲ್ಲಿ ಅನುಭವಸ್ಥರಾದ ಉತ್ತಮ ರೈತರು ಎಕರೆಗೆ ನಾನೂರು ಐನೂರು ಮಣದಂತೆ ಫಸಲು ಪಡೆಯುತ್ತಿದ್ದಾರೆಂಬ ಸಂಗತಿಯಿಂದ ನಮ್ಮ ಸಂಸ್ಥಾನದ ಕೀಳು ಬೆಳೆಗೆ ಇಲ್ಲಿನ ಅನಾನುಕೂಲವಾದ ಸ್ಥಿತಿಗತಿಗಳೇ ಕಾರಣವಲ್ಲವೆಂದು ತೋರುವುದು ಸಾಗುವಳಿಯ ಪದ್ಧತಿಗಳನ್ನು ಉತ್ತಮ ಸ್ಥಿತಿಗೆ ತರುವುದರಿಂದ ಫಸಲನ್ನು ನಿಸ್ಸಂದೇಹವಾಗಿ ಹೆಚ್ಚಿಸಬಹುದು

ಅಂಟಾದ ಎರೆ ಭೂಮಿಯಲ್ಲಿ ಕಬ್ಬು ಹೊರುವಾಗಿ ಬೆಳೆದರೂ ವಿಶೇಷವಾಗಿ ಗೊಬ್ಬರವಿಕ್ಕಿದ ಮರಳು ಭೂಮಿಯಲ್ಲಿ ಅದು ಚೆನ್ನಾಗಿ ಫಲಿಸುವುದು ಜೌಗಿಲ್ಲದಿರುವ ಹಸನಾದ ಫೂಳಿಗಿರುವ ಮೇಲ್ಮಣ್ಣು ಕಬ್ಬಿಗೆ ಅವಶ್ಯಕ ಕಬ್ಬಿನಿಂದಲೇ ವಿಶೇಷ ಫಾಯಿದೆ ಪಡೆಯುತ್ತಿರುವ ಕೆಲವು ಕಡೆಗಳಲ್ಲಿ ಎಕರೆಗೆ ನೂರಾರು ಬಂಡಿಗಳಂತೆ ಮರಳನ್ನು ಹೊಡೆಯುತ್ತಾರೆ ತಕ್ಷಣ ಭತ್ತದ ಗದ್ದೆಯಲ್ಲಿ ಕಬ್ಬು ಬೆಳೆಯಬೇಕಾದರೆ ಇದನ್ನು ಖಂಡಿತವಾಗಿ ಮಾಡುತ್ತಾರೆ ಉತ್ತಮವಾದ ಬೆಲ್ಲವೂ, ಶುಭ್ರವಾದ ಮಗದುಂ ಸಕ್ಕರೆಯೂ ಬರುವುದು ಮರಳುಮಿಶ್ರವಾದ ಭೂಮಿಯಲ್ಲಿಯೇ ಚೌಳು ಭೂಮಿಯಲ್ಲಿ ಉಪ್ಪುಪ್ಪಾಗಿರುವ ಮೆತ್ತಾದ ಬೆಲ್ಲವು ಬರುವುದು ಭತ್ತದ ತರುವಾಯ ಗದ್ದೆಯಲ್ಲಿ ಕಬ್ಬು ಬೆಳೆಯಬೇಕಾದರೆ ಉಳುಮೆ ಮಾಡಿದರೂ ಅಗೆದರೂ ಭೂಮಿಯಲ್ಲಿ ದೊಡ್ಡ ದೊಡ್ಡ ಹೆಂಟೆಗಳು ಏಳುತ್ತವೆ ಈ ಹಂಟೆ ಒಡೆದು ಭೂಮಿಯನ್ನು ಹಸನು ಬರುವುದಕ್ಕೆ ವಿಶೇಷ ಖರ್ಚು ತಗಲುವುದು ಈ ಕಷ್ಟ ತಪ್ಪಿಸಿಕೊಳ್ಳುವುದಕ್ಕೆ ಭೂಮಿಯು ಅಂಟಾಗದಿರುವ ಇನ್ಯಾವುದಾದರೂ ಬೆಳೆಯನ್ನು ಇಡುವುದು ಒಳ್ಳೆಯದು ವಿಶೇಷ ನೀರು ಬೇಕಾಗುವ ಎಳೆಯ ಸಸಿಗೆ ... ಕಬ್ಬಿನ ತರುವಾಯ ಬೆಳೆಯಲು ಯೋಗ್ಯವಾದ ಉತ್ತಮ ಫಸಲು ಕಡಲೇಕಾಯಿಯು ಭತ್ತದ ಅಕ್ಕಪಕ್ಕದಲ್ಲಿ ಕಬ್ಬನ್ನು ಬೆಳೆದರೆ, ಭೂಮಿಯು ಜವುಗಾಗಿ ಕಬ್ಬಿಗೆ ಅನಾನುಕೂಲವಾಗುವುದು ಆಹಾರಾರ್ಥವಾಗಿ ಕಬ್ಬಿನ ಬೇರುಗಳು ಮೂರಡಿ ಕೆಳಕ್ಕಿಳಿಯುತ್ತವೆ ಭೂಮಿಯು ಜವುಗಾಗಿ ಒಗಡು ಬಂದರೆ ಬೇರುಗಳು ಕೆಳಕ್ಕಿಳಿಯದೆ ಕೆಲವು ವೇಳೆ ಕೊಳೆತುಹೋಗುತ್ತವೆ ಗರಿಗಳು ಬಿಳುಪು ತಿರುಗಿ ಕಬ್ಬು ನರಟಿಕೊಂಡು ಹೋಗುವುದು ಈಗ ರೈತರು ತೆಗೆಯುವ ಒಂದಡಿ ಆಳದ ಕಡಗುಗಳಿಂದ ಜವುಗು ಸರಿಯಾಗಿ ಕತ್ತರಿಸದೆ ಇರುವುದರಿಂದ ಕಬ್ಬು ತಪ್ಪದೆ ಮಳೆಗಾಲದಲ್ಲಿ ತೇಲಿಹೋಗುವುದು ಜೌಗು ಪ್ರದೇಶಗಳಲ್ಲಿ ಕಡಗುಗಳು ಮೂರಡಿ ಆಳವಾಗಿರಬೇಕು ಹೆಬ್ಬಾಳದ ಫಾರಂನಲ್ಲಿ ಅತಿ ಉತ್ತಮವಾದ ಭತ್ತದ ಫಸಲು ಬಂದ ಒಂದು ತಾಕಿನಲ್ಲಿ ಜೌಗಾಗಿದ್ದುದರಿಂದ ಮಾತ್ರ ಅತಿ ಕೀಳಾದ ಕಬ್ಬಿನ ಫಸಲು ಬಂತು ಒಂದು ಪಕ್ಕದಲ್ಲಿ ಮಾತ್ರ ಚೆನ್ನಾಗಿ ಕಡಗು ಇದ್ದ ಇನ್ನೊಂದು ತಾಕಿನಲ್ಲಿ ಕಡಗಿನ ಪಕ್ಕದಲ್ಲಿರುವ ಮೂರನೇ ಭಾಗದಲ್ಲಿ ಎಕರೆಗೆ 31¼ ಟನ್ನಿನಂತೆಯೂ, ಮಧ್ಯಭಾಗದಲ್ಲಿ 32¾ ಟನ್ನಿನಂತೆಯೂ, ಜೌಗಾಗಿದ್ದ ಕೊನೆಯ ಮೂರನೆಯ ಭಾಗದಲ್ಲಿ 6¼ ಟನ್ನಿನಂತೆಯೂ ಬೆಳೆಯು ಬಂದಿದೆ

ಕಬ್ಬಿಗೆ ಆರೇಳು ಆವರ್ತಿ ಉಳುವರು ಇದಕ್ಕೆ ಹತ್ತು ಹನ್ನೊಂದು ರೂಪಾಯಿ ಬೇಳುವುದು ಇಲ್ಲವಾದರೆ 25 30 ರೂಪಾಯಿ ಖರ್ಚಿಟ್ಟು ಆಳವಾಗಿ ಅಗೆಸುವರು ಇಷ್ಟೇ ಆಳವಾದ ಉಳುಮೆಯು ಸೀಮೆಯ ಕಬ್ಬಿಣದ ನೇಗಿಲಿನಿಂದ ಎರಡು ಸಾರ್ತಿ ಉತ್ತು ಎರಡು ರೂಪಾಯಿ ಖರ್ಚಿನಿಂದ ಮಾಡಬಹುದು ವ್ಯವಸಾಯದ ಇಲಾಖೆಯವರಿಂದ ಈ ಮಾದರೀ ನೇಗಿಲು ಹದಿನೇಳು ರೂಪಾಯಿಗಳಿಗೆ ದೊರೆಯುವುದು ಉಳುಮೆಯಿಂದ ಭೂಮಿಯು ಹಸನಾದ ಮೇಲೆ ಅಡಿಗೊಂದರಂತೆ ಸಾಲುತಗೆದು, ಅದರಲ್ಲಿ ನೀರು ಬಿಟ್ಟು ಸಾಲು ಕಬ್ಬನ್ನು ಕೆಸರಿನಲ್ಲಿ ತುಳಿಯುತ್ತಾರೆ ಈ ಸಾಲುಗಳನ್ನು ಕಬ್ಬಿಣದ ನೇಗಿಲಿನಿಂದ ಬಹು ಚೆನ್ನಾಗಿ ಮಾಡಬಹುದು ಪ್ಲಾನೆಟ್ ಜೂನಿಯರ್ ಕಲ್ಟಿವೇಟರ್ ಎಂಬ ಹಲುಬೆಗೆ ಎರಡು ಪಕ್ಕದಲ್ಲಿಯೂ ಮಣ್ಣೇರುಹಾಕುವ ಗುಳವನ್ನು ಕಟ್ಟಿ ಅದರಿಂದಲೂ ಸುಲಭವಾಗಿಯೇ ಕೆಲಸವನ್ನು ಮಾಡಬಹುದು ಈ ಮಾದರಿಯ ಕಲ್ಟಿವೇಟರನ್ನು ಈ ಊರಿನಲ್ಲಿಯೇ ಹತ್ತು ರೂಪಾಯಿಗಳಿಗೆ ತಯಾರುಮಾಡಿಸಬಹುದು ಇದು ಕಬ್ಬು ಏರುಹಾಕುವುದಕ್ಕೂ ಉಪಯೋಗವಾಗುವುದು 1½-2 ಅಡಿ ದೂರ ಚಕ್ಕಚಿಕ್ಕ ಗುಳಿಗಳನ್ನು ಮಾಡಿ ಅದರಲ್ಲಿ ಎರಡೆರಡು ತುಂಡುಗಳನ್ನು ನೆಡುವುದು ಇನ್ನೊಂದು ಪದ್ಧತಿಯು ಉಂಟು ಈ ಪದ್ಧತಿಯಲ್ಲಿ ಏರುಹಾಕುವ ವರಿಗೂ ಕೈನೀರು ಹೊಯ ಬೇಕಾಗಿರುವುದರಿಂದ ಅದಕ್ಕೆ ಜಾಸ್ತಿಯಾದ ಖರ್ಚು ತಗಲುವುದು ಸಾಲುಕಬ್ಬು ಹಾಕಿದರೆ ಬೇಕಾದಾಗ ಹರಿಯುವ ನೀರು ಬಿಡುವ ಅನುಕೂಲವುಂಟು. ಮೇಲೆ ಹೇಳಿದ ಎರಡು ಪದ್ಧತಿಗಳಲ್ಲಿ ಕಬ್ಬು ಬಹಳ ಹತ್ತಿರ ನೆಡುವುದರಿಂದ ಪೈರು ಬೆಳೆದ ನಂತರ ಅದನ್ನು ಆಗಾಗ್ಗೆ ತೆಳವುಮಾಡಬೇಕಾಗುವುದಲ್ಲದೆ ಕಬ್ಬು ದಪ್ಪನಾಗಿ ಬೆಳೆಯುವುದಿಲ್ಲ ಮೂರಡಿಗೊಂದು ಸಾಲು ಬಹಳ ಪ್ರಯೋಜನಕರವಾಗಿ ಕಂಡು ಬಂದಿದೆ ಇದರಿಂದ ಬೀಜವೂ ಬಹಳ ಮಿಗುವುದು ಎತ್ತಿನಿಂದ ಕುಂಟೆ ಹೊಡೆದು ಕಳೆ ಕೀಳಬಹುದು ಸಾಲುಗಳು ದೂರವಾಗಿರುವುದರಿಂದ ಏರುಹಾಕುವುದು ಸಹಾ ನೇಗಿಲಿನಿಂದ ಅಥವಾ ಕಲ್ಟಿವೇಟರಿನಿಂದ ಮಾಡಬಹುದು ಪೈರು ಒಂದಡಿ ಬೆಳೆದ ನಂತರ ಏರುಹಾಕಿ ಸಾಲುಗಳ ಮಧ್ಯೆ ಕಾಲುವೆಗಳನ್ನು ಮಾಡುತ್ತಾರೆ ಈಗ 120-150 ಮಣದಂತೆ ಹಿಂಡಿಯನ್ನು ಇಡುತ್ತಾರೆ ಈ ಹಿಂಡಿಯನ್ನು ಗಾರೆ ಕಾಲುವೆಯಲ್ಲಿ ಪುಡಿಮಾಡಿ ಪುಡಿಯನ್ನು ಒಂದಾವರ್ತಿ ಅಥವಾ ಎರಡಾವರ್ತಿ ಹಾಕಬಹುದು

ಚೆನ್ನಾದ ಫಸಲು ಬರಬೇಕಾದರೆ ಶೀಘ್ರವಾಗಿ ಕೊಳೆತು ಬೆಳೆಗೆ ಚೆನ್ನಾಗಿ ಪೋಷಣೆ ಕೊಡುವ ಹಿಂಡಿ ಸಾಯಬಾನೆಗೊಬ್ಬರ ಮುಂತಾದವುಗಳನ್ನು ಕಬ್ಬಿಗೆ ಹಾಕಬೇಕು ದನದ ಗೊಬ್ಬರ ಮಾತ್ರವೇ ಹಾಕಿದರೆ ಹಿಂಡಿ ಮುಂತಾದ ಪೋಷಣೆ ಕೊಡುವ ಗೊಬ್ಬರದ ಜೊತೆಗೆ ಹಾಕಿದಷ್ಟು ಚೆನ್ನಾದ ಬೆಳೆಯು ಬರುವುದಿಲ್ಲ ರೈತರು ಎಕರೆಗೆ 60 ಬಂಡಿ ದನದ ಗೊಬ್ಬರವಾಗಲಿ, 35 ಬಂಡಿ ಸಾಯಬಾನೆಗೊಬ್ಬರವಾಗಲಿ ಹಾಕುತ್ತಾರೆ ಸಣಬು ಅಥವಾ ಅಲಸಂದೆ ಬೆಳೆದು ಅದರ ಸೊಪ್ಪು ಭೂಮಿಗೆ ಸೇರಿಸುವುದರಿಂದ ಗೊಬ್ಬರದ ಖರ್ಚನ್ನು ಬಹುಮಟ್ಟಿಗೆ ನಿಗಿಸಬಹುದು ಹಿಂಡಿಗಳಲ್ಲಿ ಹರಳುಹಿಂಡಿಯು ಬಹಳ ಶ್ರೇಷ್ಠವಾದುದು ಕರಿಯುಹರಳು ಹಿಂಡಿಯಲ್ಲಿ ನೂರಕ್ಕೆ ನಾಲ್ಕರಂತೆಯೂ, ಬೇಯ ಹರಳು ಹಿಂಡಿಯಲ್ಲಿ ನೂರಕ್ಕೆ 6½ ಯಂತೆಯೂ ನೈಟ್ರೋಜನಕವು ಇದೆ ಹೊಂಗೆ ಹಿಂಡಿಯಲ್ಲಿ ನೂರಕ್ಕೆ 3½ ಮಾತ್ರ ಇದೆ ಆದರೆ ಅದರಲ್ಲಿ ಬೇರು ಕತ್ತರಿಸುವ ಗೆಣ್ಣೆಹುಳಗಳನ್ನು ಕೊಲ್ಲುವ ಶಕ್ತಿಯುಂಟು ನೈಟ್ರೋಜನ್ ಅಲ್ಲದೆ ಇತರ ಪದಾರ್ಥಗಳನ್ನು ಕಬ್ಬಿಗೆ ಹಾಕುವುದಕ್ಕೆ ವಿಶೇಷ ಗಮನಕೊಡುವುದಿಲ್ಲ ಏಕೆಂದರೆ ಬಹು ಜಾಸ್ತಿಯಾಗಿ ನೈಟ್ರೋಜನ್ ಗೊಬ್ಬರ ಹಾಕುವುದರಲ್ಲಿ ಸಾಕಾದಷ್ಟು ಇತರ ಪದಾರ್ಥಗಳು ಅದರಲ್ಲಿ ಇದ್ದೇ ಇರುವುದು ಈ ಇತರ ಪದಾರ್ಥಗಳನ್ನು ಬೇರೆಯಾಗಿ ಹಾಕುವ ಪ್ರಯತ್ನವು ಮಾಡಬೇಕಾದುದಾಗಿರುತ್ತದೆ ಪೊಟ್ಯಾಷ್ ಜಾಸ್ತಿಯಾಗಿದ್ದು, ಮೆಣಸಿನಕಾಯಿ ಹೊಗೆಯಸೊಪ್ಪು ಮುಂತಾದ ಫಸಲು ಚೆನ್ನಾಗಿ ಬರುವ ಭೂಮಿಗಳಲ್ಲಿ ನೈಟ್ರೋಜನ್ ಗೊಬ್ಬರ ಕಡಮೆಯಾದರೂ ಸಹಾ ಉತ್ತಮ ಕಬ್ಬಿನ ಬೆಳೆಯು ಬರುವುದು

ಕಾಡು ವಿಶೇಷವಾಗಿದ್ದು ಸೌದೆಯು ವಿಶೇಷ ದೊರೆಯುವ ಸ್ಥಳಗಳಲ್ಲಿ ಕಬ್ಬು ಆಲೆಯಾಡಿದ ನಂತರ ಸಿಪ್ಪೆಯನ್ನು ಕೊಳೆಯಿಸಿ ಗೊಬ್ಬರನಾಗಿ ಉಪಯೋಗಿಸಬಹುದು ಆಲೆಯ ಮನೆಯ ಬೂದಿಯನ್ನಾದರೂ ಎಚ್ಚರಿಕೆಯಾಗಿ ಕೂಡಿಟ್ಟು ಅದನ್ನೂ ಭೂಮಿಗೆ ವಾಪಸ್ ಕೊಡುವುದು ಉತ್ತಮ ಕಬ್ಬಿನ ತರುವಾಯ ಕಡಲೆಕಾಯನ್ನು ಬೆಳೆದು, ಅದರ ಎಣ್ಣೆಯನ್ನು ತೆಗೆದು, ಹಿಂಡಿಯನ್ನು ದನಗಳಿಗೆ ಹಾಕಿ, ದನದ ಗೊಬ್ಬರವನ್ನು ಸ್ವಲ್ಪವೂ ಬಿಡದೆ ಭೂಮಿಗೆ ಸೇರಿಸುವುದು ಬಹು ಉತ್ತಮವಾದ ಪದ್ಧತಿ, ಅಥವಾ ಕಡಲೆಕಾಯಿ ಹಿಂಡಿಯನ್ನು ಕೊಟ್ಟುಬಿಟ್ಟು ಇತರ ದನ ತಿನ್ನದಿರುವ ಹಿಂಡಿಗಳನ್ನು ತೆಗೆದು ಭೂಮಿಗೆ ಹಾಕಬಹುದು ಆಕಾಶದಿಂದ ಕಡಲೆಕಾಯಿಯು ನೈಟ್ರೋಜನ್‌ನನ್ನು ತೆಗೆದುಕೊಳ್ಳುತ್ತದೆ ಬೂದಿ ವಾಪಸ್ ಹಾಕುವುದರಿಂದಲೂ, ಅದರ ಜೊತೆಗೆ ಉಪ್ಪುಗಳನ್ನು ಕೊಂಡುಕೊಂಡು ಭೂಮಿಗೆ ಕೊಡುವುದರಿಂದಲೂ ಇತರ ಪದಾರ್ಥಗಳನ್ನು ಭೂಮಿಗೆ ಒದಗಿಸಿಕೊಡಬಹುದು

ಕಬ್ಬು ಕೊಂಚ ದಿನ ಬೆಳೆದ ನಂತರ ಅದರ ಕೆಳಭಾಗದ ಎಲೆಗಳು ಒಣಗುತ್ತಾ ಬರುವವು ಇವುಗಳನ್ನು ರಾಳಿ ಬೆರಳು ಸಂಬಾರಕ್ಕೋಸ್ಕರವಾಗಿ ಕಿತ್ತುಹಾಕುತ್ತಾರೆ ಇದರಿಂದ ನೀರು ತೋಟದಲ್ಲಿ ಹರಿಯುವುದಕ್ಕೆ ಸರಾಗವಾಗುವುದು ಗೆದ್ದಲು ಇಲಿಗಳ ಕಾಟವು ಕಡಮೆಯಾಗುವುದು

ಪ್ರತಿ ಜಲ್ಲೆಯನ್ನೂ ಅದರ ಎಲೆಗಳಲ್ಲಿ ಸುತ್ತುವುದರಿಂದ ಕಬ್ಬಿನ ಬೆಳವಣಿಗೆಯು ಹೆಚ್ಚುವುದೆಂದು ಒಂದು ತಪ್ಪು ಅಭಿಪ್ರಾಯವುಂಟು ಅತ್ಯುತ್ತಮವಾಗಿ ಕಬ್ಬು ಬೆಳೆಯುವ ಪ್ರದೇಶದಲ್ಲಿ ಸುತ್ತುವ ವಾಡಿಕೆಯೇ ಇಲ್ಲದೆ ಇರುವುದರಿಂದ ಈ ಅಭಿಪ್ರಾಯವು ಸತ್ಯವಾಗಿರಲಾರದು ಸುತ್ತದೇ ಇದ್ದ ಕಬ್ಬೂ ಸುತ್ತಿದ ಕಬ್ಬೂ ಒಂದೇ ಕಣೆಯಲ್ಲಿದ್ದರೆ ಸುತ್ತದೇ ಇದ್ದ ಕಬ್ಬನ್ನು ನರಿಗಳು ಕಚ್ಚುವವು ಕೆಲವು ದಿನಗಳು ಎಡೆಬಿಡದೆ ರಾತ್ರಿ ಕಾವಲಿದ್ದು, ಕಲ್ಲು ಪಟಾಕಿ ಮುಂತಾದ ಶಬ್ದಗಳಿಂದ ನರಿಗಳನ್ನು ಸುಲಭವಾಗಿ ಓಡಿಸಿಬಿಡಬಹುದು ಆದುದರಿಂದ ಸುತ್ತುವುದರಿಂದ ವಿಶೇಷ ಪ್ರಯೋಜನವು ಇದೆಯೋ ಇಲ್ಲವೋ ಎಂಬ ವಿಷಯವು ಅನುಮಾನಾಸ್ಪದವಾಗಿದೆ

ಒಂದೇ ಗುಪ್ಪೆಯ ಕಬ್ಬುಗಳನ್ನೆಲ್ಲಾ ಸೇರಿಸಿ ಕಟ್ಟುವುದರಿಂದ ಕಬ್ಬನ್ನು ಬೀಳದ ಹಾಗೆ ಸ್ವಲ್ಪಮಟ್ಟಿಗೆ ಮಾಡಬಹುದು ಮರದ ಕವೆಗಳನ್ನು ಕೊಟ್ಟು ಕಬ್ಬನ್ನು ಕೆಲವು ಕಡೆಗಳಲ್ಲಿ ನಿಲ್ಲಿಸುತ್ತಾರೆ ಗೋದಾವರಿ ಡಿಸ್ಟ್ರಿಕ್ಟ್‌ನಲ್ಲಿ ಸಾಲುಸಾಲಾಗಿ ಜೊಂಡು ಕಟ್ಟಿ ಕಬ್ಬನ್ನು ನಿಲ್ಲಿಸುತ್ತಾರೆ ಕಬ್ಬು ಬಿದ್ದುಹೋಗುವುದರಿಂದ ಕೆಟ್ಟುಹೋಗುತ್ತದೆಯಾದುದರಿಂದ ಅದನ್ನು ಬೀಳಗೊಡಿಸಬಾರದು ಹೆಬ್ಬಾಳದ ಫಾರಂನಲ್ಲಿ ಒಂದಾವರ್ತಿ ಬಿದ್ದುಹೋದ ಕಬ್ಬಿನಲ್ಲಿ ಶೇಕಡಾ ಭಾಗದಷ್ಟು ಸಕ್ಕರೆಯು ನಷ್ಟವಾಗಿಹೋಗಿತ್ತು ಇದಲ್ಲದೆ ಇಲಿಗಳೂ ನರಿಗಳೂ ಬಹು ಸುಲಭವಾಗಿ ಕಬ್ಬನ್ನು ಕಚ್ಚಲು ಅವಕಾಶವಾಗುವುದು

ಕಬ್ಬು ಚೆನ್ನಾಗಿ ಬಲಿತ ಮೇಲೆಯೇ ಗಾಣವಾಡುವುದು ಬಹು ಮುಖ್ಯ ಏಕೆಂದರೆ ಕಬ್ಬು ಬಲಿತ ತರುವಾಯವೇ ಅದರಲ್ಲಿ ಸಕ್ಕರೆಯು ವಿಶೇಷವಾಗಿ ಉತ್ಪತ್ತಿಯಾಗಿ ಬೆಲ್ಲವೂ ಜಾಸ್ತಿಯಾಗಿ ಕಾಣುವುದು ಎಳೆಯ ಕಬ್ಬಿನ ಹಾಲು ನೀರಾಗಿರುವುದರಿಂದ ಅದರಲ್ಲಿ ಬೆಲ್ಲ ಹುಲುಸು ಕಡಮೆ ಇದಲ್ಲದೆ ಎಳೆಯ ಕಬ್ಬಿನಲ್ಲಿ ಸಕ್ಕರೆಯು ಕಡಮೆಯಾಗಿದ್ದು ಸೊನೆಯು ಜಾಸ್ತಿಯಾಗಿರುವುದು ಕಬ್ಬು ಬಲಿತ ಹಾಗೆಲ್ಲಾ ಸಕ್ಕರೆಯು ಹೆಚ್ಚಿ ಸೊನೆಯು ಕಡಮೆಯಾಗುವುದು

ಕಬ್ಬು ಒಂದಾವರ್ತಿ ಬಲಿತ ಮೇಲೆ ಅದೇ ಸ್ಥಿತಿಯಲ್ಲಿ ಎರಡು ತಿಂಗಳಿದ್ದು ನಂತರ ಬಹು ಬೇಗ ಕೆಡುತ್ತ ಬರುತ್ತದೆ ಕಬ್ಬು ಒಳ್ಳೆಯ ಸ್ಥಿತಿಯಲ್ಲಿರುವಾಗಲೇ ಅದನ್ನು ಆಲೆಯಾಡಬೇಕು ಕಬ್ಬನ್ನು ಒಂದೇ ಸಾರ್ತಿ ಹೂಣಿದರೆ ಆಲೆಕೊಪ್ಪರಿಗೆಗಳಿಂದ ಎರಡೇ ತಿಂಗಳು ಕೆಲಸಮಾಡಿ ನಿಲ್ಲಿಸಿಬಿಡಬೇಕಾಗುವುದು ಕಬ್ಬನ್ನು ಎರಡೆರಡು ತಿಂಗಳಿಗೊಂದೊಂದಾವರ್ತಿ ಹೂಣಿದರೆ ಆಲೆಯ ಕೆಲಸಗಳನ್ನು ಜಾಸ್ತಿ ದಿನ ನಡೆಸಬಹುದು ಹೆಬ್ಬಾಳದ ಫಾರಂನಲ್ಲಿ ವರ್ಷದ ಎಷ್ಟು ತಿಂಗಳಲ್ಲಿ ಕಬ್ಬು ಹೂಣಿದರೆ ಫಸಲು ಚೆನ್ನಾಗಿ ಬರುವುದು ಎಂಬುವುದನ್ನು ಪರೀಕ್ಷಿಸುತ್ತಿದೆ ಹವಾಯಿ ದ್ವೀಪದಲ್ಲಿ ವರ್ಷಕ್ಕೆ ಒಂಭತ್ತು ತಿಂಗಳು ಕಾಲ ಆಲೆಯ ಕೆಲಸವು ನಡೆಯುವುದು

ಆಲೆಯಾಡುವುದೂ ಬೆಲ್ಲಮಾಡುವುದೂ, ಈ ವಿಷಯಗಳು ಇನ್ನೊಂದಾವರ್ತಿ ಚರ್ಚಿಸಲ್ಪಡುವುದು

ರೈತರು ನೋಡಬೇಕಾದ ವಿಷಯ

ಈ ಕೆಳಗೆ ವಿವರಿಸಿರುವ ಬೀಜಗಳು ಹೆಬ್ಬಾಳದಲ್ಲಿರುವ ಸರ್ಕಾರದ ವ್ಯವಸಾಯದ ಇಲಾಖೆಯ ಅಜಮಾಯಿಷಿ ಕ್ಷೇತ್ರದಲ್ಲಿ ಖರೀದಿಗೆ ಸಿಗುತ್ತವೆ —

ನೆಲಗಡಲೆ —(1) ಮರಿಷಸ್ ನೆಲಗಡಲೆ 1,500 ಪೌಂಡುಗಳಿವೆ (25 ಎಕರೆಗಳಿಗೆ ಆಗುವಷ್ಟು) ರೂಪಾಯಿಗೆ 16 ಪೌಂಡುಗಳು (2) ವರ್ಜೀನಿಯಾ ನೆಲಗಡಲೆ 1,000 ಪೌಂಡುಗಳಿವೆ (25 ಎಕರೆಗಳಿಗೆ ಆಗುವಷ್ಟು) ರೂಪಾಯಿಗೆ 10 ಪೌಂಡುಗಳು

ತೋಟದ ತೊಗರಿ —20 ಸೇರುಗಳಿವೆ 1 ಆಣೆಗೆ 1 ಸೇರು

ಕಬ್ಬು —(1) ಆಸಿಮರಿಷಸ್ 1½ ಟನ್ (3,000 ಬೀಜ ಆಗುವಷ್ಟು) (2) ಬೀ 208 2 ಟನ್ (4,000 ಬೀಜ ಆಗುವಷ್ಟು) (3) ಜಾವಾ 1 ಟನ್ (2,000 ಬೀಜ ಆಗುವಷ್ಟು) (4) ಮರಿಷಸ್ ಪಟ್ಟಾಪಟ್ಟಿ 1½ ಟನ್ (3,000 ಬೀಜ ಆಗುವಷ್ಟು) ಇವನ್ನು ಕಳುಹಿಸುವದಕ್ಕೆ ತಗಲುವ ಲಾಗವಡು ಅಲ್ಲದೆ ಟನ್ ಒಂದಕ್ಕೆ 20 ರೂಪಾಯಿ ಈ ಕಬ್ಬು ಸಾಧಾರಣವಾಗಿ ನವಂಬರು ತಿಂಗಳಿಗೆ ಸೂಸಿಗೆ ಹೊರಡುವವರಿಂದ ಬೀಜವನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಹಾಕಬೇಕು

ಕೊಂಡುಕೊಳ್ಳಲಪೇಕ್ಷೆಯುಳ್ಳವರು ಜಾಗ್ರತೆಯಾಗಿ ಕೆಳಗೆ ಕೊಟ್ಟಿರುವ ವಿಳಾಸಕ್ಕೆ ಬರೆದುಕೊಳ್ಳಬೇಕು ವಿಳಾಸ—ಡಿ ಜಿ ರಾಮಚಂದ್ರರಾವ್,

ಮಾನೇಜರ್, ವ್ಯವಸಾಯದ ಇಲಾಖೆಯ ಪರೀಕ್ಷಾ ಕ್ಷೇತ್ರ,

ಹೆಬ್ಬಾಳ, ಬೆಂಗಳೂರು ತಾಲ್ಲೂಕು

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಜನವರಿ 31 ನೇ ತಾ ವರೆಗಿನ ಬ್ಯಾಂಕಿನ ಶಿಲ್ಕ

ಲೇಣಿ —	(1) ಷೇರು ಮೊಬಲಗು	ರೂ	5,99 670
,,	(2) ಡಿಪಾಜಿಟ್ಟುಗಳು	,,	4,98 580
,,	(3) ಇತರೆ	,,	6,040
	(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	11,04,290
ದೇಣಿ —	(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	1,33,857
,,	(2) ಖಾತೆ ಮತ್ತು ಇತರ ಸಾಲಗಳು	,,	5 94,103
,,	(3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,31,700
,,	(4) ಇನ್‌ವೆಸ್ಟ್‌ಮೆಂಟುಗಳು	,,	1,50,000
,,	(5) ಏಜನ್ಸಿಗಳಲ್ಲಿರುವ ಮೊಬಲಗು	,,	76,437
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6,789
,,	(7) ಇತರೆ	,,	11 404
	(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	11,04,290

ಡಬ್ಲಿಯು ಸಿ ರೋಜ್, ಮ್ಯಾನೇಜರ್

ತಾಲ್ಲೂಕು ವರ್ತಮಾನಗಳು.

ಹುಣಸೂರು ತಾ|| ಚಿಕ್ಕಾಡಿಗನಹಳ್ಳಿ —ಗಾವಡಗೆರೆಯಲ್ಲಿ ಮರಾಟಿ ಜಾತಿಯ ಅನಾಥ ಮುದುಕಿಯು ಸೀರೆಗೆ ಬೆಂಕಿ ತಗಲಿ ಆ ಬಾಧೆಯಿಂದ ಮೃತಪಟ್ಟಳು ಸೀರನಹಳ್ಳಿಯಲ್ಲಿ ಹೆಗ್ಗಡೆ ಜಾತಿಯ ಗಂಡಸು ನೇಣುಹಾಕಿಕೊಂಡು ಸತ್ತನು ಹೊಟ್ಟೆನೋವಿನಿಂದ ಈ ರೀತಿ ಆತ್ಮಹತ್ಯಮಾಡಿಕೊಂಡನಂತೆ ಈ ನವನಾಗರಿಕ ಕಾಲದಲ್ಲಿ ಹೀಗೆ ಪ್ರಾಣಕಳೆದುಕೊಳ್ಳುವದರಿಂದ ಮಿತ್ರಬಾಂಧವರಿಗೂ ಸರ್ಕಾರಕ್ಕೂ ತೊಂದರೆಯನ್ನುಂಟುಮಾಡುವದು ದುಃಖಕರವಾಗಿದೆ

ಹುಣಸೂರು ತಾ|| ಹುಲ್ಲೇಯಾಳು —ನಮ್ಮ ಗ್ರಾಮದಲ್ಲಿ ತಾ. 22 23 ರಿಂದ ಪ್ಲೇಗ್ ಜಾಯಿಲೆ ಶುರುವಾಗಿ 8-10 ದಿವಸದಿಂದ ಇಲಿಗಳು ಸಾಯುತ್ತಿದ್ದು ತಾ. 27 ರಲ್ಲಿ ಒಬ್ಬ ಹೆಂಗಸು ಮೃತಪಟ್ಟಳು ಜನರು ಊರು ಬಿಡಬೇಕು ಈ ಸಂದರ್ಭದಲ್ಲಿ ಬಡಬಗ್ಗರಿಗೆ ಷೆಡ್ ಹಾಕುವದಕ್ಕೆ ಗಳ ಕವೆಯನ್ನಾದರೂ ಸರ್ಕಾರದವರು ಕೊಟ್ಟರೆ ಬಹಳ ಉಪಕಾರಮಾಡಿದಂತೆ ಆಗುತ್ತೆ —ಗಾವಡಗೆರೆ ಸಂತೆಯಲ್ಲಿ ಕಮ್ಮಿ ಸೇರು ಇಟ್ಟು ಮಾರತಕ್ಕವರಿಗೆ ಸರ್ಕಾರದವರು ನಿಗಾಕೊಡುತ್ತಾರಾಗಿ ಪ್ರಾರ್ಥಿಸುತ್ತೇವೆ ಈ ಕಮ್ಮಿ ಸೇರಿನಲ್ಲಿ ಅಳೆಯುವದರಿಂದ ಬಡಬಗ್ಗರಿಗೆ ಬಹಳ ಕಷ್ಟ ಉಂಟು. ಈ ವರುಷ ಸರಿಯಾಗಿ ಮಳೆ ಇಲ್ಲದೆ ರಾಗಿ 11-15 ಸೇರೂ, ಅಕ್ಕಿ 7-7½ ಸೇರೂ ಮಾರುತ್ತಾರೆ ಗಾವಡಗೆರೆಯಲ್ಲಿ ಪ್ಲೇಗ್‌ನಿಂದ ಜನರು ಊರುಬಿಟ್ಟು ಇರುತ್ತಾರೆ ಊರು ಬಿಟ್ಟದ್ದರೂ 10 ನೇ ದಿವಸ ಒಂದು ಮರಣವಾಯಿತು

ಚನ್ನಪಟ್ಟಣದ ತಾ| ಬಿಟ್ಟಹಳ್ಳಿ —ಮಳೆ ಸರಿಯಾಗಿಲ್ಲ ಕೆರೆಯಲ್ಲಿ ನೀರು ತೀರಿಹೋಯಿತು ನೀರಿಗೆ ಕಷ್ಟವಾಗಿರತ್ತೆ —ಕಳೆದ ಮಾಹೆ 19 ನೇ ತಾ ಇಲ್ಲಿನ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ಮ|| ಇನ್‌ಸ್ಪೆಕ್ಟರ್ ಬಿ ಕೃಷ್ಣಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮೆಂಬರುಗಳೆಲ್ಲರೂ ಹಾಜರಾಗಿದ್ದರು ಇನ್‌ಸ್ಪೆಕ್ಟರವರು ಸೊಸೈಟಿಯ ವಿಷಯದಲ್ಲಿ ಜನಗಳಿಗೆ ಬೇಕಾದ ತಿಳುವಳಿಕೆಯನ್ನು ಕೊಟ್ಟರು —ಇಲ್ಲಿರುವ ವಿ ಇ ಸ್ಕೂಲು ಬಹಳ ಉತ್ತಮಸ್ಥಿತಿಯಲ್ಲಿದೆ 76 ಹುಡುಗರೂ, ಇಬ್ಬರು ಮಾಸ್ತರುಗಳೂ ಇದಾರೆ ಈಗಿನ ಕಟ್ಟಡವು ಸಾಲದ್ದರಿಂದ ಸರ್ಕಾರದವರು ದೊಡ್ಡ ಕಟ್ಟಡವನ್ನು ಕಟ್ಟಿಸಲು ಏರ್ಪಾಡು ಮಾಡಿದಾರೆ ಇದಕ್ಕೆ ಸುಮಾರು ಒಂದು ಎಕರೆ ಜಮೀನನ್ನು ಈ ಗ್ರಾಮದ ಮ, ಚಲುವೇಗೌಡರು, ಕರೀಗೌಡರು ವಗೈರೆಯರು ಧರ್ಮಾರ್ಥವಾಗಿ ಬಿಟ್ಟುಕೊಟ್ಟಿದಾರೆ —ಕಳೆದ ಮಾಹೆ 27 ನೇ ತಾ ಮಧ್ಯಾಹ್ನ ಗ್ರಾಮದ ಚಿಕ್ಕೇಗೌಡನ ಕಣದಲ್ಲಿದ್ದ ಆತನ ಬಾಬತು ರಾಗೀ ಹುಲ್ಲಿನ ಮೆದೆ ಸುಟ್ಟುಹೋಯಿತು ಕಾರಣವನ್ನು ವಿಚಾರಿಸುವಲ್ಲಿ ಈತನ ಸೋದರ ಮಾವನ ಮಗ ಸುಮಾರು 9 ವರ್ಷ ವಯಸ್ಸಿನ ಹುಡುಗನು ಕಣದಲ್ಲಿ ಬೀಡಿ ಸೇದಲು ಬೆಂಕಿ ಹಚ್ಚಲು ಅದು ಹುಲ್ಲಿಗೆ ತಗಲಿ ಈ ಕೃತ್ಯ ನಡೆಯಿತೆಂದು ಗೊತ್ತಾಯಿತು ಹಳ್ಳಿಗಾಡುಗಳಲ್ಲಿ ಹುಡುಗರು ಬೀಡಿ ಸಿಗರೆಟ್ ಸೇದುವದು ಬಹಳವಾಗಿದೆ ತಂದೆತಾಯಿಗಳು ಇದಕ್ಕೆ ಸರಿಯಾದ ನಿಗಾ ಕೊಡಬೇಕಾದದ್ದೂ ಅಲ್ಲದೆ ಸರ್ಕಾರದವರೂ ಇದಕ್ಕಾಗಿ ಏರ್ಪಡಿಸಿರುವ ವಿಧಿಯನ್ನು ಹಳ್ಳಿಗಳಲ್ಲಿಯೂ ಜಾರಿಗೆ ತರುವರೆಂದು ನಿರೀಕ್ಷಿಸುತ್ತೇನೆ —ಈ ಊರಿನ ಚಿಕ್ಕೇಗೌಡನೆಂಬುವನು ಚುಂಚನಕಟ್ಟೇ ಜಾತ್ರೆಗೆ ಎತ್ತುಗಳನ್ನು ಮಾರಲು ಹೋಗುತ್ತಿರುವಾಗ ಅಕಸ್ಮಾತ್ ಎತ್ತುಗಳು ಬೆದರಿ ಗಾಡಿಯಿಂದ ಕೆಳಕ್ಕೆ ಬಿದ್ದು ಚಕ್ರವು ಕಾಲಿನ ಮೇಲೆ ಹರಿದು ಕಾಲು ಮುರಿದುಹೋದ್ದರಿಂದ ಕೆಲವು ದಿವಸ ನರಳಿ ವಾಸಿಯಾಗದೆ ಮೃತಪಟ್ಟನು

ಕುಂಕೆರೆ —ಈ ಸಾರಿ ಹಿಂಗಾರು ಮಳೆ ಕಾಲಕ್ಕೆ ಸರಿಯಾಗಿ ಬಾರದ್ದರಿಂದ ಬೆಳೆಯಲ್ಲಿ ಸುಮಾರು ಮೂರರಲ್ಲಿ ಒಂದು ಭಾಗವಾಯಿತೆಂದು ಹೇಳಬಹುದು ಹುಲ್ಲುಗಾವಲುಗಳೂ ಪೈರುಗಳೂ ಒಣಗಿ ದನಕರುಗಳ ಮೇವಿಗೆ ತೊಂದರೆಯಾಗಿದೆ ಹತ್ತಿರದಲ್ಲಿರುವ ಗುಡ್ಡಗಳನ್ನಾದರೂ ಆಶ್ರಯಿಸಬಹುದು ಕೆಲವು ದಿವಸ ಅವೂ ಬೆಂಕಿಯಪಾಲಾಗುತ್ತೆ ಫಾರೆಸ್ಟ್ ಇಲಾಖೆಯವರು ತುಂಬಾ ನಿಗಾ ಇಟ್ಟರೆ ಮತ್ತು ಕಷ್ಟಪಟ್ಟರೆ ಈ ಪ್ರಾಂತ್ಯದ ಮತ್ತು ಮಳೆಬೀಳದೆ ಕಷ್ಟಪಡುವ ಅನೇಕ ತಾಲ್ಲೂಕುಗಳ ದನಕರುಗಳು ಬದುಕಬಹುದಾಗಿದೆ —ಈ ಊರಿನಲ್ಲಿ ಹೊಸ ಸೇರು, ತೂಕದ ವಟ್ಟುಗಳು ಬಹಳ ಅಪರೂಪವಾಗಿ ಕೆಲವರಲ್ಲಿ ಮಾತ್ರ ಇವೆ ಮತ್ತು ಈ ಊರಲ್ಲಿ ಸೇರು 1 ಕ್ಕೆ 2½ ರೂಪಾಯಿ ತೂಕವಿರುವದು ಅಧಿಕಾರಿಗಳ ಗಮನಕ್ಕೆ ಯಾತಕ್ಕೆ ಬರಲಿಲ್ಲವೋ ತಿಳಿಯದು ಸರ್ಕಾರದವರು ತರಿಸಿ ಜನರಿಗೆ ಬಲವಂತದಿಂದ ಯಾಕೆ ಬಿಕರಿ ಮಾಡಬಾರದು ಕೊಳ್ಳುವದಕ್ಕೆ ಕೆಲವರು—ದುಡ್ಡು ಕೊಡಬೇಕಲ್ಲಾ ಯಾಕೆ ಕಾಸು ಕಲ್ಲು, ಗುಂಡುಕಲ್ಲುಗಳಿದ್ದರೆ ಸಾಲದೋ ಎಂದು ಹೇಳುವದು ಸ್ವಭಾವ ಆದರೆ ವ್ಯಾಪಾರಿಗಳ ಹೇಳಿಕೆಯೋ ಸರ್ಕಾರದವರಿಗೆ ಸಾಕೋ ಖಂಡಿತವಾದ ಅಪ್ಪಣೆ ಕೊಡಬೇಕೆಂದು ಕೇಳುತ್ತೇವೆ —ಈಗ್ಗೆ 1-5 ವಾರದಿಂದ ಸಂತೆಯಲ್ಲಿ ಕಳ್ಳತನ ರಾಜಾರೋಷಾಗಿ ನಡೆಯುತ್ತೆ ಕಂಬಳಿ, ಚೀಲ, ಕೋಟು, ಪಂಚೆ, ದನ, ರೂಪಾಯಿ ಕಳಕೊಂಡ ಜನರು ಪ್ರತಿ ಸಂತೆಯಲ್ಲಿ 6-8 ಜನವನ್ನು ಹಿಡಿದು ಪೋಲೀಸಿಗೆ ಕೊಟ್ಟರೂ 1 ಘಂಟೆ ಕಳೆಯಲು ಅವರು ಪುನಃ ಸಂತೆಯಲ್ಲಿ ಕಾಣಿಸಿಕೊಳ್ಳುತ್ತಾರೆ ಪೋಲೀಸಿನವರೇ ಬಿಡುತ್ತಾರೋ, ಇಲ್ಲವೇ ಪೋಲೀಸಿನವರ ಕೈ ತಪ್ಪಿಸಿಕೊಂಡು ಬರುತ್ತಾರೋ ತಿಳಿಯದು —ಇಲ್ಲಿನ ಸೇಂದಿ, ಸಾರಾಯಿ ದುಕಾನುಗಳಲ್ಲಿ ನಡೆಯುವ ಅನ್ಯಾಯವನ್ನು ಕೇಳುವವರಿಲ್ಲ ನೀರು ಬೆರೆಸುವರು, ಸರಿಯಾದ ಅಳತೆ ಎಲ್ಲಿದೆಯೋ ತಿಳಿಯದು ಕ್ರಯವಾದರೋ ಸರ್ಕಾರದವರು ಗೊತ್ತುಮಾಡಿರುವ ಕ್ರಯವು ಎಷ್ಟೋ, ತಿಳಿಯದು ಈ ಊರಿನಲ್ಲಿ ಮಾತ್ರ ಬೇರೆ ದರ ಗೊತ್ತು ಮಾಡಿದಾರೋ ಏನೋ ಎಂದು ಜನಗಳಲ್ಲಿ ಬಹಳ ಅಸಮಾಧಾನ ಹುಟ್ಟಿದೆ ಇವುಗಳನ್ನು ಕ್ರಮಪಡಿಸುವದಕ್ಕೂ, ವಿಚಾರಿಸುವದಕ್ಕೂ ಅಧಿಕಾರಿ ಇದ್ದರೆ ನೋಡಲಿ, ಇಲ್ಲವಾದರೆ ಸರ್ಕಾರದವರು ಒಬ್ಬರನ್ನು ಇಡಲಿ ಎಂದು ಜನರು ಹೇಳುತ್ತಾರೆ ಇಲ್ಲಿನ ಸೋಡಾ ಕಂಪನಿಗಳಲ್ಲಿ ಸರಿಯಾದ ವಿಚಾರಣೆ ಇಲ್ಲ ಗ್ಲಾಸ್ ಕಡಮೆ ತುಂಬಿದ ಬಾಟ್ಲಿ ತೆಗೆದು ನೋಡಿದರೆ ಅದರಲ್ಲಿ ಎಷ್ಟೋ ಮಲಿನ, ಇರುವೆ, ಗೊಪ್ಪ ಇರುತ್ತವೆ ಕುಡಿಯುವದಕ್ಕೆ ಹ್ಯಾಗೆ ಆಗುತ್ತೆ ಒಂದು ವೇಳೆ ಕುಡಿದರೆ ಆರೋಗ್ಯ ಹ್ಯಾಗಿರಬಹುದು ಮಾಂಸದ ಅಂಗಡಿಗಳಲ್ಲಿ ಕೆಲವು ಸಮಯಗಳಲ್ಲಿ ಅನಾರೋಗ್ಯಕರವಾದ ಅಥವಾ ರೋಗ ಬರುವದಕ್ಕೂ ಅನುಕೂಲವಾದ ಮಾಂಸವನ್ನು ಬಿಕರಿ ಮಾಡುತ್ತಾರೆ ಕ್ರಯವೋ ಹೆಚ್ಚು ಬಿಳೀ ಬಟ್ಟೆಯವರಿಗೆ ಒಳ್ಳೇದು, ಮಾಸಿದ ಬಟ್ಟೆಯವರಿಗೆ ಇಲ್ಲದ್ದು, ಹೀಗಿದೆ ಈ ಸಂಗತಿಗಳನ್ನೆಲ್ಲ ನಮ್ಮ ಅಮಲ್ದಾರ್ರವರು ಸುಮಾರಿ, ತಕ್ಕ ಬಂದೋಬಸ್ತು ಮಾಡಿಸುವರೆಂದು ಈ ಮೂಲಕ ಪ್ರಾರ್ಥಿಸುತ್ತೇವೆ —ಪತ್ತರದ ತಂಟೆ ಕೋರ್ಟುಗಳಲ್ಲಿ ಎರಡು ಖೂನಿಗಳು ನಡೆದಿವೆ —ಕಳೆದವಾರದ ಅಧಿಕಾರಿಗಳ ಪಲಿಗೆ ಬಡವರ್ಗ ಜೋಳಿಗೆ ಎಂಬದನ್ನು ಇಲ್ಲಿಗೂ ಅನ್ವಯಿಸಬಹುದೋ ಅನ್ವಯಿಸಬಹುದೆಂದು ಮೇಲ್ಕಂಡ ಸಂಗತಿಗಳಿಂದ ತಿಳಿಯಬಹುದು ಒಬ್ಬನು ತನಗೆ ತಿಳಿಯದೇ ಇರುವ ಸಂಗತಿಯನ್ನು ವಿಚಾರಿಸುವದು ಹ್ಯಾಗೆ ಮಸಲಾ, ಇಲ್ಲಿನ ತೂಕ ಒಬ್ಬನಿಗೆ ತಿಳಿಯದು ಅವನು ಸುಮ್ಮನೆ ಹೋಗಿ, ಜನರನ್ನು ಬೆದರಿಸಿ ಕಳ್ಳರನ್ನು ಅಂದರೆ ತನಗೆ ಇಷ್ಟವಾಗಿರತಕ್ಕವರನ್ನು ಕರೆದುಕೊಂಡು ಬೇರೆ ಬೇರೆ ತೂಕಗಳನ್ನು ನೋಡಿ ಎರಡನ್ನೂ ಸರಿಯಾಗಿ ಹೋಲಿಸದೆ ಸುಮ್ಮನೆ ಗಲಾಟೆ ಮಾಡಿ, 1 ರೂಪಾಯಿ ತೆಗೆದುಕೊಂಡು ಸುಮ್ಮನೆ ಮನೆಗೆ ಹೋಗಿ ಕುಳಿತರೆ ಹ್ಯಾಗೆ ಸರ್ಕಾರದವರಿಗಾಗಿ ಪ್ರಜೆಗಳಾಗಲಿಲ್ಲ, ಪ್ರಜೆಗಳಿಗಾಗಿ ಸರ್ಕಾರವಾಗಿದೆ ಆದ್ದರಿಂದ ದೇಶಾಭಿವೃದ್ಧಿಗಾಗಿ ಹಣ ವ್ಯಯ ಮಾಡುವದಕ್ಕೆ ಕೆಲಸ ಕೆಡಿಸತಕ್ಕ ಅಧಿಕಾರಿಗಳನ್ನೂ, ಲಂಚಪ್ರಿಯರನ್ನೂ, ಲೌಕಿಕಕಾರ್ಯಗಳಲ್ಲಿ ತಿಳುವಳಿಕೆ ಇಲ್ಲದಿದ್ದರೂ ತಿಳಿದಿರುವವರಂತೆ ನಟಿಸುವವರನ್ನು ಕೆಲಸದಿಂದ ತೆಗೆದರೆ ದೇಶೋನ್ನತಿಗೆ ತುಂಬಾ ಸಹಾಯವಾಗುತ್ತೆಂದೂ, ಬೇಗ ಉಚ್ಛ್ರಾಯಸ್ಥಿತಿಗೆ ಬರುವದೆಂದೂ ನಂಬುತ್ತೇವೆ

IN THE COURT OF THE CITY MAGISTRATE, Mysore.

Criminal Case No. 267 of 1913-14.

Complainant: T. S. R. Iyer. | Accused. M. L. Naganna

(Concluded from last issue.)

Schedule E—(e) This contains a sum of Rs 43-13-1, and the charge is that this amount was deducted as commission by the accused after the termination of his agency and thus misappropriated. As to this, the complainant wants to make out a case incompatible with the conduct and correspondence of the Insurance Manager at the Head Office of the Company, who without saying anything about the termination of the accused's agency, has clearly indicated his admission regarding his right and title to the commission in question, which is wrongly characterised as misappropriated. Besides, Schedules "D & E" themselves acknowledge the open manner in which the accused has withheld the amount on account of specific claims and appropriations, and thereby preclude the possibility of any criminal intention on his part. The complainant, who is an admitted professional, should have been the last man to bolster up the charge against the accused, if he had been really actuated by honourable motives

8. Finally, the accused is very much grieved to think that his hard and honest services, which elicited special approbations during their continuance, should be requited by the vain glorious complainant (as the representative of the Company, to which they were rendered) with this false and malicious prosecution, in order to achieve the obvious object of annihilating all competition in this part of the country. Still, the accused hopes that, after all, the present prosecution may actually turn out to be a blessing in disguise to realise which, he once more prays the Honourable Court to please find means to commence and terminate the proceedings against him as soon as may be, in order to save the impending danger, awaiting at the threshold of the new and indigenous companies, which have been started with the best possible motive, and which deserve all encouragement as well at the hands of the intelligent and patriotic public as also at the generous hand of the benevolent Government and authorities of this advanced and enlightened State, as the same contain the most attractive and beneficial schemes showing their originality. [Advt]

MYSORE, (sd.) M. L. Nagannah.

26th January, 1914.

"ವೃತ್ತಾಂತ ಪತ್ರಿಕೆ" ಎಡಿಟರವರಿಗೆ.

ಅಯ್ಯಾ,—ಈಗಿನ ಕಾಲದಲ್ಲಿ ಕೆಲವು ವರ್ತಮಾನ ಪತ್ರಿಕಾ ಬಾತ್ಮೀದಾರರು ಪಬ್ಲಿಕ್ ಪ್ರಜೆಗಳ ಶ್ರೇಯಸ್ಸಿಗೂ ಅವರ ಹಿತಕ್ಕೂ ಸಂಬಂಧಪಡದೇನೂ, ಒಂದು ಪಾರ್ಟಿಯನ್ನು ಸಂತೋಷಪಡಿಸಿ ಎದುರುಪಾರ್ಟಿಗೆ ನಷ್ಟವನ್ನುಂಟುಮಾಡಬೇಕೆಂದೂ, ನಿಜಸ್ಥಿತಿಯನ್ನು ಕುರಿತು ಲಕ್ಷ್ಯಮಾಡದೇನೂ, ಜನರಲ್ಲಿ ದುರಿಚ್ಛೆಯನ್ನೂ ಕಳವಳವನ್ನೂ ಉಂಟುಮಾಡುವಂಥಾ ಮೊಕದ್ದಮೆಗಳನ್ನು ಕುರಿತು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು ವಾಡಿಕೆಯಾಗಿದೆ ಸಾಲದ್ದಕ್ಕೆ ಅಯೋಗ್ಯರಾಗಿಯೂ, ಕೆಲಸಕಾರ್ಯಗಳೇನೂ ಇಲ್ಲದೆ ಸೋಮಾರಿಗಳಾಗಿಯೂ, ದುಷ್ಟಸ್ವಭಾವವುಳ್ಳವರಾಗಿಯೂ, ಪ್ರಜೆಗಳಲ್ಲಿ ಯಾವವಿಧವಾದ ಗಣ್ಯತೆಯನ್ನೂ ಸ್ಥಾನವನ್ನೂ ಪಡೆಯದವರಾಗಿಯೂ ಇರುವಂಥಾ ಕೆಲವು ಜನಗಳು ತಮ್ಮ ಕೈಲಾಗುವ ಮಟ್ಟಿಗೂ ಸುಳ್ಳುಸುದ್ದಿಗಳನ್ನು ಹುಟ್ಟಿಸಿ ಉತ್ಪ್ರೇಕ್ಷೆಮಾಡಿ ಹರಡುವುದರಲ್ಲಿ ಸಂತೋಷಪಡುತ್ತಾರೆ ಇಂಥವರ ವರ್ತನದಿಂದ ಯೋಗ್ಯರಾದ ಜನಗಳ ಹೆಸರು ವೃಥಾ ಕೆಡುವುದಲ್ಲದೆ ಇನ್ಯಾವ ಪ್ರಯೋಜನವೂ ಆಗಲಾರದು

ಪಬ್ಲಿಕ್ ವಿಚಾರಗಳಲ್ಲಿ ನನಗೆ ಸ್ವಲ್ಪ ಆಸಕ್ತಿ ಇರುವುದರಿಂದ ಮ|| ಟಿ ಎಸ್. ಆರ್. ಅಯ್ಯರವರು ಮ|| ಎಂ ಎಲ್. ನಾಗಣ್ಣನವರ ಮೇಲೆ ಮಾಡಿರುವ ಮೊಕದ್ದಮೆ ವಿಷಯದಲ್ಲಿ ನಾನಾ ಪ್ರಕಾರವಾಗಿ ಹುಟ್ಟಿ ಹಬ್ಬುತ್ತಿರುವ ಸುದ್ದಿಯು ಎಷ್ಟುಮಟ್ಟಿಗೆ ಯಥಾರ್ಥವಾಗಿದ್ದೀತೆಂಬುವುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಅವರ ಮೊಕದ್ದಮೆಯ ಹೀರಿಂಗು ತಾರೀಖನ್ನು ವಿಚಾರಿಸಿಕೊಂಡು ಈ ದಿನ ನಾನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋದೆನು. ಫಿರ್ಯಾದಿಯ ವಕೀಲರು ಕೋರ್ಟಿಗೆ ಬಾರದೇಹೋದದ್ದನ್ನು ನೋಡಿ ಅಪರಾಧಿಯಾದ ಮ|| ಎಂ ಎಲ್ ನಾಗಣ್ಣನವರು ಹೀಗೆ ಮೊಕದ್ದಮೆ ಸಾವಕಾಶಕ್ಕೆ ಬೀಳುವ ವಿಷಯದಲ್ಲಿ ಸಮಾಧಾನಪಡದೆ ಕೋರ್ಟಿಗೆ ಒಂದು ಅರ್ಜಿಯನ್ನು ಹಾಜರ್ಮಾಡಿದರು ಅದರ ನಕಲನ್ನು ಕೆಳಗೆ ಬರೆದು ಕಳುಹಿಸಿರುತ್ತೇನೆ. ಮ್ಯಾಜಿಸ್ಟ್ರೇಟರು ಆ ಅರ್ಜಿಯನ್ನು ಅಂಗೀಕರಿಸಿ ಅಪರಾಧಿಯ ವಕೀಲರನ್ನು ಕುರಿತು ಈ ಮೊಕದ್ದಮೆಯನ್ನು ಸಾವಕಾಶಕ್ಕೆ ಬಿಡದೆ ಕೂಡಿದ ಮಟ್ಟಿಗೂ ಜಾಗ್ರತೆಯಿಂದ ನಡಿಸಿ ಮುಗಿಸುತ್ತೇವೆಂದು ಹೇಳಿ ಭರವಸೆ ಕೊಟ್ಟಿದಾರೆ.

ಈ ರೀತಿ ಅಪರಾಧಿಯು ಮೊಕದ್ದಮೆಯನ್ನು ಬೇಗನೆ ವಿಚಾರಣೆಮಾಡಿ ಪೂರೈಸಬೇಕೆಂದು ಕೋರ್ಟಿನವರನ್ನು ಒತ್ತಾಯಮಾಡಿ ಕೇಳಿಕೊಳ್ಳುತ್ತಾ ಬಂದಿರುವುದನ್ನು ನೋಡುವುದರಲ್ಲೂ, ಅವರು ಹಾಜರ್ಮಾಡಿರುವ ಮೇಲ್ಕಂಡ ಅರ್ಜಿಯನ್ನು ಓದುವುದರಲ್ಲೂ ಈ ಮೊಕದ್ದಮೆಯಲ್ಲಿ ಅಭಿಮಾನವಿರತಕ್ಕವರಿಗೆ ಆ ವಿಚಾರವಾಗಿ ಗಾಬರಿಪಡುವುದಕ್ಕಾಗಲಿ ಕಳವಳಪಡುವುದಕ್ಕಾಗಲಿ ಕಾರಣವೇನೂ ಇರಲಾರದೆಂದು ನನಗೆ ತೋರುತ್ತದೆ. [33-2]

ಮೈಸೂರು, ನಿಮ್ಮ ವಿಧೇಯ

26 ನೇ ಜನವರಿ, 1914 ವಿ ಎಸ್. ಆರ್.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ

ಕ್ರಿಮಿನಲ್ ಮೊಕದ್ದಮಾ ನಂ 267 (1913-14).

ಫಿರ್ಯಾದಿ: ಟಿ ಎಸ್. ಆರ್. ಅಯ್ಯರ್. | ಅಪರಾಧಿ: ಎಂ. ಎಲ್ ನಾಗಣ್ಣ.

ಅಪರಾಧಿಯ ಪ್ರಾರ್ಥನೆ ಏನೆಂದರೆ —

1 ಫಿರ್ಯಾದಿಯು ಪ್ರತಿನಿಧಿಯಾಗಿರುವಂಥಾ ಅಮೃತಸಾರದ ನ್ಯಾಷನಲ್ ಇನ್‌ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಇನ್ನೂ ಪ್ರಾರಂಭ ದೆಸೆಯಲ್ಲಿರುವಾಗ್ಗೆ ಅಪರಾಧಿಯು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಆ ಕಂಪನಿಯ ಚೀಫ್ ಏಜಂಟಾಗಿ ಸೇರಿಕೊಂಡನು ಅಪರಾಧಿಯು ತುಂಬಾ ಶ್ರಮಪಟ್ಟು ಈ ಪ್ರಾಂತ್ಯದ ಪ್ರಜೆಗಳನ್ನು ಪ್ರೋತ್ಸಾಹಪಡಿಸಿ ತಾನು ಏಜಂಟಾಗಿದ್ದ ಎರಡು ವರುಷ ಕಾಲದಲ್ಲಿ ಆ ಕಂಪನಿಯ ಇನ್‌ಷುರೆನ್ಸ್ ಬ್ರಾಂಚಿಗೆ ಸುಮಾರು ಆರುನೂರು ಮಂದಿ ಮೆಂಬರರನ್ನೂ, ಪ್ರಾವಿಡೆಂಟ್ ಜೀವನಾಂಶ ಮತ್ತು ಮದುವೆ ಬ್ರಾಂಚಿಗೆ ಸುಮಾರು ಎರಡುಸಾವಿರ ಮಂದಿಗಿಂತ ಹೆಚ್ಚಾಗಿ ಚಂದಾದಾರರನ್ನೂ ಸೇರಿಸಿ ಕಂಪನಿಯನ್ನು ವೃದ್ಧಿಪಡಿಸಿರುತ್ತಾನಲ್ಲದೆ, ವಿಶೇಷ ಸಾಹಸಪಟ್ಟು ಒಂದು ಲಕ್ಷವೂ ಮೂವತ್ತುಸಾವಿರ ರೂಪಾಯಿನಷ್ಟು ಕಂಪನಿ ಷೇರುಗಳನ್ನೂ ಬಿಕರಿ ಮಾಡಿಕೊಟ್ಟಿರುವನು ಈ ರೀತಿ ಅಪರಾಧಿಯ ಸಹಾಯವು ಬಹು ವಿಶೇಷವಾಗಿಯೂ, ತುಂಬಾ ಗಣ್ಯವಾಗಿಯೂ ಆದದ್ದನ್ನು ಕಂಪನಿಯವರು ಗಣನೆಗೆ ತಂದುಕೊಂಡದಲ್ಲದೆ ಹಿಂದುಸ್ಥಾನದಲ್ಲೂ, ಬರ್ಮಾದಲ್ಲೂ ಇರುವ ಈ ಕಂಪನಿಯ ಸಮಸ್ತ ಚೀಫ್ ಏಜಂಟರುಗಳು ಮತ್ತು ಬ್ರಾಂಚ್ ಸೆಕ್ರೆಟರಿಗಳಿಗಿಂತಲೂ (ಇವರಲ್ಲಿ ಫಿರ್ಯಾದಿಯೂ ಸೇರಿದ್ದಾರೆ) ಇನ್‌ಷುರೆನ್ಸ್ ಕೆಲಸ ಮಾಡಿದ್ದರಲ್ಲೂ ಷೇರುಗಳನ್ನು ಬಿಕರಿ ಮಾಡಿದ್ದರಲ್ಲೂ ಅಪರಾಧಿಯ ಸಾಹಸವೇ ಉತ್ತಮೋತ್ತಮವಾದದ್ದನ್ನು ಕಂಡುಕೊಂಡು ಕಂಪನಿಯವರು ತಮ್ಮ ಸಂತೋಷವನ್ನೂ ಮೆಚ್ಚಿಕೆಯನ್ನೂ ಪ್ರಕಾಶಪಡಿಸುವುದಕ್ಕೆ ಅಪರಾಧಿಗೆ ಒಂದು ಭಂಗಾರದ ಮೆಡಲನ್ನೂ, 100 ರೂಪಾಯಿನ ಒಂದು ಭಂಗಾರದ ಗಡಿಯಾರವನ್ನೂ ಬಹುಮಾನ ಕೊಟ್ಟಿರುತ್ತಾರೆ

2 ಈಚೆಗೆ, ಕಂಪನಿಯವರು ತಮ್ಮ ಮಾಮೂಲಿಗೆ ಅನುಸಾರವಾಗಿ ನಡೆದುಕೊಳ್ಳತಕ್ಕವರಾಗಿಲ್ಲವೆಂದೂ, ಮದುವೆ ಪಾಲಿಸಿ ಹೋಲ್ಡರುಗಳಿಗೆ ಮದುವೆಯ ದಿನ ಅಡ್ವಾನ್ಸು ಪಾವತಿ ಮಾಡುವ ವಿಚಾರದಲ್ಲಿ ಮಾತುಕೊಟ್ಟಂತೆ ಖಂಡಿತವಾಗಿ ನಡೆಯತಕ್ಕವರಾಗಿಲ್ಲವೆಂದೂ ಅಪರಾಧಿಗೆ ಕಂಡುಬಂದಿತು ವಾಗ್ದಾನದಂತೆ ನಡೆದುಕೊಳ್ಳಬೇಕೆಂದು ಕಂಪನಿಯವರನ್ನು ಒತ್ತಾಯ ಮಾಡಿದರೂ ಪ್ರಯೋಜನವಾಗದೆ ಹೋದಾಗ ಅಪರಾಧಿಯು ಆ ಕಂಪನಿಯ ಸಂಬಂಧವನ್ನು ತ್ಯಜಿಸಿ ಬಿಡುವುದು ಯುಕ್ತವೆಂದು ತಿಳಿದುಕೊಂಡನು ಅದರ ಮೇಲೆ ಆ ಕಂಪನಿಯು ದೂರದೇಶದಲ್ಲಿದ್ದುಕೊಂಡು, ಅದಕ್ಕೆ ವಿವೇಕ ಹೇಳುವುದಕ್ಕೂ ಅದರ ತಪ್ಪನ್ನು ತಿದ್ದುವುದಕ್ಕೂ ಸುಲಭಸಾಧ್ಯವಾಗಿರದೆ, ಕಂಪನಿಯು ಸ್ಥಿರವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡು ವರ್ತಿಸದೇನೂ, ಆಗಾಗ್ಗೆ ಬದಲಾವಣೆ ಮಾಡಿಕೊಳ್ಳುತ್ತಲೂ ಇರುವುದನ್ನು ನೋಡಿ, ಆ ಕಂಪನಿಯ ಮೇಲೆ ಭರವಸೆ ಇಡುವುದು ಈ ಪ್ರಾಂತ್ಯದ ಪಾಲಿಸಿ ಹೋಲ್ಡರುಗಳಿಗೆ ಕ್ಷೇಮಾಕರವಾದದ್ದಲ್ಲವೆಂದು ಅಪರಾಧಿಯು ಭಾವಿಸಿ, ಆ ಕಂಪನಿಗೆ ಸೇರಿ ನೊಂದಿದ್ದ ಪಾಲಿಸಿದಾರರ ಹಿತವನ್ನು ಕಾಪಾಡಬೇಕೆಂಬ ಬಹುತರವಾದ ಉದ್ದೇಶದಿಂದ ವಿಶೇಷವಾಗಿ ಈ ಸ್ಥಳದಲ್ಲೇ ಅಂಥಾ ಒಂದು ಕಂಪನಿಯನ್ನು ಹೊಸದಾಗಿ ಸ್ಥಾಪಿಸಿದನು

3 ಈ ಹೊಸ ಕಂಪನಿಯು ಏರ್ಪಾಟಾದಂದಿನಿಂದ ಅಮೃತಸಾರದ ಕಂಪನಿಯ ಕೆಲಸಗಳಿಗೂ ಅದರ ವರಮಾನಕ್ಕೂ ಬಹಳಮಟ್ಟಿಗೆ ಕುಂದಕ ಉಂಟಾಯಿತು ಇದನ್ನು ನೋಡಿ ಅಮೃತಸಾರದ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರು ತನ್ನ ಕೆಲಸದ ಇನ್‌ಷುರೆನ್ಸ್ ಶಾಖೆಯ ಚೀಫ್ ಏಜೆನ್ಸಿಯನ್ನು ಕೆಲವು ವಿಶೇಷತರವಾದ ರಿಯಾಯತಿಗಳ ಸಹಿತ ಅಪರಾಧಿಗೆ ವಹಿಸಿ, ಅಪರಾಧಿಯನ್ನು ತನ್ನ ಕಂಪನಿಯ ಸಂಬಂಧದಲ್ಲೇ ಇಟ್ಟುಕೊಳ್ಳಬೇಕೆಂದು ಸಾಹಸಪಟ್ಟನು ಅಪರಾಧಿಯು ಅದನ್ನು ತಿರಸ್ಕಾರಮಾಡಿದ್ದರಿಂದ ಕಂಪನಿಯವರು ಅಪರಾಧಿಯ ಸಂಬಂಧವನ್ನು ಬಿಡಿಸದೆ ಇಟ್ಟುಕೊಳ್ಳುವುದಕ್ಕೆ ಮಾರ್ಗವೇ ಇಲ್ಲದೆ ಅವನ ರಾಜೀನಾಮೆಯನ್ನು ಕಡೆಗೆ ಅಸಮಾಧಾನದಿಂದ ಒಪ್ಪಿಕೊಳ್ಳಬೇಕಾಯಿತು ಅದರ ಮೇಲೆ ತಾನೇ ಬದುಕಬೇಕು, ತಾನೇ ವೃದ್ಧಿಹೊಂದಬೇಕು ಎಂಬ ಸ್ವಾರ್ಥವಾದ ಉಂಟಾಗಿ ಈ ಸ್ವದೇಶೀ

ಕಂಪನಿಯನ್ನು ಅದರ ಪ್ರಾರಂಭದೆಸೆಯಲ್ಲೇ ಅಣಗಿಸಿಬಿಡಬೇಕೆಂಬ ಉದ್ದೇಶದಿಂದ ಅದರ ಮೂಲಪುರುಷನನ್ನು ಅಲ್ಲಾಳೆಯುವುದರಲ್ಲೂ, ತಲೆ ಸುತ್ತದಂತೆ ಮಾಡುವುದರಲ್ಲೂ ಪರಿಣಾಮವಾಯಿತು

1 ಈ ಪ್ರಕಾರವಾದ ಉದ್ದೇಶದಿಂದ ಫಿರ್ಯಾದಿಯು ಒಂದಾನೊಂದು ಒಳದೇಶದ ಪತ್ರಿಕೆಯಲ್ಲಿ ಒಂದು ಸುಳ್ಳು ನೋಟೀಸನ್ನು ಪ್ರಕಟಮಾಡಿದ್ದಲ್ಲದೆ ಅಪರಾಧಿಯ ಮೇಲೆ ಈ ಮೊಕದ್ದಮೆಯನ್ನು ಹುಟ್ಟಿಸಿಕೊಂಡು ತಂದಿರುತ್ತಾರೆ ಈ ಸಂದರ್ಭದಲ್ಲಿ ಹೇಳಬಹುದಾಗಿರುವ ಅಂಶವೇನೆಂದರೆ, ಈ ಫಿರ್ಯಾದನ್ನು ದಾಖಲ್‌ಮಾಡುವುದಕ್ಕೆ ಮೊದಲೇ ಅಪರಾಧಿಯು ಫಿರ್ಯಾದಿಯನ್ನು ಕುರಿತು ವಿವಾದದಲ್ಲಿರುವ ಎಲ್ಲಾ ವಿಷಯಗಳನ್ನೂ ಸಮಾಧಾನವಿಂದಲೂ ಯೋಗ್ಯವಾಗಿಯೂ ವ್ಯವಸ್ಥೆ ಮಾಡಿಕೊಳ್ಳೋಣವೆಂದೂ, ಇದರಲ್ಲಿ ಫಿರ್ಯಾದಿಯು ಕೇಳತಕ್ಕ ವಿಚಾರಗಳಿಗೆಲ್ಲಾ ತೃಪ್ತಿಕರವಾದ ಸಮಾಧಾನವನ್ನು ಒದಗಿಸಲು ಅಪರಾಧಿಯು ಸಿದ್ಧನಾಗಿರುತ್ತಾನೆಂದೂ ಸ್ನೇಹಭಾವದಿಂದ ಬರಹ ಮೂಲಕವಾಗಿ ತಿಳಿಸಿ ಕೇಳಿದ್ದಾಯಿತು ಈ ರೀತಿ ಮಾಡಿಬಿಟ್ಟರೆ ಸ್ವಪ್ರತಿಷ್ಠೆಗೂ ಹೊಟ್ಟೆಕಿಚ್ಚು ತೀರಿಸಿಕೊಳ್ಳುವುದಕ್ಕೂ ಅನುಕೂಲವಾಗಲಾರದೆಂದು ಎಣಿಸಬೇಕಾಗಿರೋಣದರಿಂದ ಫಿರ್ಯಾದಿಯು ಆ ಸಲಹೆಗೆ ಲಕ್ಷ್ಯವೇ ಕೊಡದೆ ಆಗ್ಗೆ ಅನುಕೂಲವಾಗಿದ್ದ ಸ್ಥಿತಿಯನ್ನು ಉಪಯೋಗಪಡಿಸಿಕೊಂಡು ಫಿರ್ಯಾದನ್ನು ದಾಖಲ್‌ಮಾಡಿದರು ಈ ಫಿರ್ಯಾದು ಹುರುಳಿಲ್ಲದ ಬರೀ ವಾಗಾಡಂಬರವುಳ್ಳದ್ದಾಗಿದೆ ಇದರಲ್ಲಿ ಆತ್ಮಸ್ತುತಿ, ಹುಚ್ಚುಪ್ರಾಪವಮಾನಕರವೂ ಆದ ವಾಕ್ಯಗಳು, ಊಹಾಪೋಹಗಳಾದ ಕರಾರುಗಳು, ಕುರ್ಚಿ ಮೇಜು ಮುಂತಾದ ಸಾಮಾನುಗಳ ಪ್ರಸ್ತಾಪಗಳು ಇಷ್ಟು ಮಾತ್ರ ವಿಶೇಷವಾಗಿ ಕಾಣಬರುವುದಲ್ಲದೆ ಪ್ರಾಧಾನ್ಯವೆನಿಸುವ ಸಹಜವಾದ ವಿದ್ಯಮಾನಗಳ್ಯಾವವೂ ಸ್ಪಷ್ಟವಾಗಿ ವಿವರಿಸಿರುವುದಿಲ್ಲ ಆದಕಾರಣ ಕಾನೂನಿಗೂ ಕ್ರಮಪದ್ಧತಿಗೂ ಅನುಸಾರವಾದ ರೀತಿಯಲ್ಲಿ ಈ ಫಿರ್ಯಾದನ್ನು ತಿದ್ದಿ, ಖಂಡಿತವಾದ ಮತ್ತು ಪರಿಸ್ಕಾರವಾದ ಆಪಾದನೆಗಳನ್ನು ಕಾಣಿಸಿ ಹಾಜರ್ಮಾಡುವಂತೆ ತಿಳಿಸಲ್ಪಟ್ಟದ್ದರಿಂದ ಮೊಕದ್ದಮೆಯು ಪ್ರಾರಂಭದಲ್ಲೇ ಸಾವಕಾಶಕ್ಕೆ ಬೀಳಲು ಕಾರಣವಾಗಿರುತ್ತದೆ

5 ಅಪರಾಧಿಯ ಮೇಲೆ ಖಂಡಿತವಾದ ಆಪಾದನೆಗಳು (ಪ್ರೈಮ ಫೇಸಿ ಚಾರ್ಜ್) ಉಂಟೇ ಇಲ್ಲವೇ ಎಂಬ ವಿಚಾರದಲ್ಲಿ ತನಿಖೆಮಾಡದೇನೂ, ಫಿರ್ಯಾದಿಯನ್ನು ವಿಚಾರಣೆಮಾಡದೇನೂ ಫಿರ್ಯಾದನ್ನು ಕೋರ್ಟಿನಲ್ಲಿ ದಾಖಲ್ ಮಾಡಿಕೊಂಡದ್ದರಿಂದ ಸಂಭವಿಸಿರುವ ಅಪರಿಹಾರ್ಯವಾದ ಕೆಡುಕೇನೆಂದರೆ, ಫಿರ್ಯಾದಿಯೂ ಅವರ ಕಡೆಯವರೂ ಅಪರಾಧಿಯ ವಿಷಯವಾಗಿಯೂ, ಆತನ ಹೊಸ ಕಂಪನಿಯ ವಿಷಯವಾಗಿಯೂ ಅಪಮಾನಕರವಾದ ಮತ್ತು ಕಳವಳಪಡಿಸುವ ಸುದ್ದಿಗಳನ್ನು ಹುಟ್ಟಿಸಿ ಹರಡುವುದಕ್ಕೂ, ಅಪರಾಧಿಯ ಮತ್ತು ಆತನ ಹೊಸ ಕಂಪನಿಯ ಕೆಲಸಕಾರ್ಯಗಳಿಗೆ ಕುಂದಕವುಂಟಾಗುವುದಕ್ಕೂ ಅವಕಾಶವಾಗಿರುತ್ತದೆ

6 ಮೊಕದ್ದಮೆ ನಡೆಯುವುದು ಹೀಗೆ ಸಾವಕಾಶವಾಗೋಣದರಿಂದ ಮೈಸೂರು ಕಂಪನಿಯು ಸ್ವಭಾವಸಿದ್ಧವಾದ ರೀತಿಯಲ್ಲಿ ಅಭಿವೃದ್ಧಿ ಹೊಂದದಿರುವುದಕ್ಕೆ ಅಷ್ಟು ಅಷ್ಟು ವಿಶೇಷವಾದ ಪ್ರತಿಬಂಧವಾಗುವುದು, ಮತ್ತು ಅಷ್ಟು ಅಷ್ಟು ಅಮೃತಸಾರದ ಕಂಪನಿಗೆ ಸಾರವತ್ತಾದ ಅನರ್ಥವಾದ ಪ್ರಯೋಜನವೂ ಆಗುವುದು ಆದಕಾರಣ ಫಿರ್ಯಾದಿಯು ಅಪರಾಧಿಯ ಮೇಲೆ ಇಷ್ಟಪಟ್ಟು ತರುವಂಥಾ ಮೊಕದ್ದಮೆ ಅಥವಾ ಮೊಕದ್ದಮೆಗಳ ದಯಾರಾಕ್ಷಿಯನ್ನು ಅಪರೋಕ್ಷವಾಗಿಯಾದರೂ ಫಿರ್ಯಾದಿಗೆ ಉಪಾಯಾಂತರಗಳನ್ನು ಹುಡುಕುವುದಕ್ಕೂ ತಂತ್ರಗಳನ್ನು ಮಾಡುವುದಕ್ಕೂ ಅವಕಾಶ ಕೊಡದಂತೆ ತತ್‌ಕ್ಷಣವೇ ಪ್ರಾರಂಭಿಸಿ ನಡಿಸಬೇಕಾದದ್ದು ಪರಮಾವಶ್ಯವಾಗಿರುತ್ತದೆ

7 ಅಪರಾಧಿಯು ಕ್ಷಮಾಪಣೆ ಬೇಡಿ ಅಂಕಿತಮಾಡುವುದೇನೆಂದರೆ, ಫಿರ್ಯಾದಿನ ಅರ್ಜಿಗೆ ಅಂಟಿಸಿರುವ ಲೆಕ್ಕಗಳ ಷೆಡ್ಯೂಲುಗಳು (ತಖ್ತೆಗಳು) ನಿಷ್ಪ್ರಯೋಜನವಾದ ಲೆಕ್ಕಾಚಾರಗಳಾಗಿರುವವು ಒಕ್ಕಾಚಾರವನ್ನು ಎಷ್ಟು ಸ್ವಲ್ಪವಾಗಿ ಬಲ್ಲಂಥವನನ್ನು ಕೂಡ ಅವು ಕ್ಷಣಮಾತ್ರವೂ ಮೋಸಪಡಿಸತಕ್ಕವುಗಳಾಗಿಲ್ಲ ಈ ಷೆಡ್ಯೂಲುಗಳನ್ನು ಓದಿನೋಡಿದ ಮಾತ್ರಕ್ಕೇ ಅವುಗಳಿಂದಲೇ ಎಲ್ಲಾ ವಿದ್ಯಮಾನಗಳೂ ಸ್ಪಷ್ಟವಾಗಿ ಹೊರಪಡುವ ಹಾಗಿದ್ದರೂ ಅವುಗಳ ವಿಷಯದಲ್ಲಿ ಅಪರಾಧಿಯು ವಿನಯಪೂರ್ವಕವಾಗಿ ವಿಜ್ಞಾಪಿಸುವುದೇನೆಂದರೆ—

ಷೆಡ್ಯೂಲ್ ಎ —(ಎ) ಫಿರ್ಯಾದಿನ ಅರ್ಜಿಯ ಕೂಡ ಹಾಜರ್ಮಾಡಿರುವ ಛಾರ್ಜಗಳ ಐದು ಷೆಡ್ಯೂಲುಗಳ ಪೈಕಿ ಮೊದಲನೆಯದಾದ ಎ ಷೆಡ್ಯೂಲಿನಲ್ಲಿ ನೂರಾರು ಮಂದಿ ಪ್ರೊಪೋಜರುಗಳಿಂದ (ಅರ್ಜಿದಾರರಿಂದ) ಪಾವತಿಯಾಗಿರುವ ಇನ್ಷೂರೆನ್ಸ್ ಡಿಪಾಜಟ್ಟುಗಳ ಪೈಕಿ ಅಲ್ಪವಾದ ಕೆಲವು ಪಟಾರಗಳು ನಮೂದಿರುತ್ತವೆ ಪ್ರೊಪೋಜರುಗಳ ಹೆಸರುಗಳೂ ಅವರಿಂದ ಬಂದ ಡಿಪಾಜಟ್ ಹಣಗಳೂ ಕಾಣಿಸಲಾಗಿವೆ ಅಪರಾಧಿಯ ಮೇಲೆ ತರಲ್ಪಟ್ಟಿರುವ ಛಾರ್ಜ್ ಏನೆಂದರೆ, ಅಂಥಾ ಅಲ್ಪವಾದ ಕೆಲವು ಐಟಂಗಳನ್ನು ಇನ್ಷೂರೆನ್ಸ್ ಪ್ರೀಮಿಯಂ ಕ್ಯಾಷ್ ಬುಕ್ಕಿಗೆ ಎತ್ತಿ ಬರೆದಿಲ್ಲವೆಂಬುವುದು ಈ ಕ್ಯಾಷ್ ಬುಕ್ಕಿನ ದಲೇ ಫಿರ್ಯಾದಿಯು ಹಣ ಬಂದ ತಾರೀಖುಗಳನ್ನೆತ್ತಿ ಹಾಗೆ ಜಮಾ ಬರೆದಿಲ್ಲವೆಂದು ತೋರಿಸಿ ಎ ಷೆಡ್ಯೂಲನ್ನು ತಯಾರ್ಮಾಡಿ ತಂದಿದ್ದಾರೆ ಈ ಛಾರ್ಜು ಬರೀ ಊಹೆಯಿಂದ ತಂದದ್ದಾಗಿದೆ ಅದರಲ್ಲಿ ಕಂಡ ಮೊಬಲಗುಗಳನ್ನು ಕ್ಯಾಷ್ ಬುಕ್ಕಿನಲ್ಲಿ ಜಮಾ ಹಿಡಿದಿಲ್ಲವೆಂಬುವುದು ಶುದ್ಧ ಅಪದ್ಧವಾದ ಮಾತು ಫಿರ್ಯಾದಿಯು ನಮೂದು ಮಾಡುವ ಪುಸ್ತಕವು ವಿಶೇಷತರವಾಗಿರುತ್ತದೆ ಅದಕ್ಕೆ ಇನ್ಷೂರೆನ್ಸ್ ಪ್ರೀಮಿಯಂ ಬುಕ್ ಎಂದು ಹೆಸರು ಈ ಪುಸ್ತಕದಲ್ಲಿ ಚೀಫ್ ಏಜೆಂಟ್ ಮೊದಲಾಗಲಿ, ಏಜಂಟರ ಲೆಕ್ಕಗಳ ಮೂಲಕವಾಗಲಿ ಪಾವತಿ ಬಂದ ಯಾವ ಡಿಪಾಜಟ್ ಐಟಮ್ಮೂ ಕಾಣಿಸಿರುವುದಿಲ್ಲ ಮತ್ತು ಹಾಗೆ ಜಮಾ ಹಿಡಿಯುವುದಕ್ಕೆ ಆ ಪುಸ್ತಕದಲ್ಲಿ ಅವಕಾಶವೂ ಇರುವುದಿಲ್ಲ

ಷೆಡ್ಯೂಲ್ ಬಿ —(ಬಿ) ಷೆಡ್ಯೂಲ್ ಬಿ ಎಂಬ ವುದರಲ್ಲಿ ಪ್ರೊಪೋಜರುಗಳ ಪೈಕಿ ಕೆಲವರ ಹೆಸರುಗಳೂ, ಅವರಿಂದ ಪಾವತಿಯಾದ ಮೊದಲನೇ ಪ್ರೀಮಿಯಂ (ಕಿಸ್ತು) ಹಣಗಳೂ ಕಾಣಿಸಿದೆ ಇವರಲ್ಲಿ ಫಿರ್ಯಾದಿಯ ಆಕ್ಷೇಪಣೆ ಏನೆಂದರೆ, ಪ್ರೊಪೋಜರುಗಳ ಹೆಸರುಗಳಿಗೆ ಕಟ್ಟಿರುವ ಹಣಗಳು ಆಯಾ ಏಜಂಟರುಗಳ ಮೂಲಕ ಬಂದಿರುವ ಹಣಗಳಿಗೆ ತಪ್ಪಾಗಿ ಜಮಾ ಹಾಕಿರೋಣದರಿಂದ ಈ ಲೆಕ್ಕ ತಪ್ಪಾಗಿದೆ ಎಂಬುವುದು ಮೇಲ್ಕಂಡ ಎ ಷೆಡ್ಯೂಲಿನಲ್ಲಿ ದಾಖಲಾಗಿಲ್ಲವೆಂದು ಆಕ್ಷೇಪಣೆ ಮಾಡಿರುವ ಹಣಗಳು ಈ ಲೆಕ್ಕದಲ್ಲಿ ದಾಖಲ್ಮಾಡಲ್ಪಟ್ಟಿವೆ ಎಂದೂ ಆ ಹಣಗಳನ್ನು ದುರುಪಯೋಗಪಡಿಸಿಕೊಂಡಿಲ್ಲವೆ ಮೂಲಕವಾಗಿ ಗೊತ್ತಾಗುತ್ತದೆ ಪದ್ಧತಿ ಪ್ರಕಾರ ಮೊದಲನೇ ಪ್ರೀಮಿಯಂ (ಕಿಸ್ತು) ಗೆ ಬಾಕಿಯಾಗಿರುವ ಮೊಬಲಗು ಬಂದ ದಿನವೇ ಅದನ್ನು ಆಯಾ ಏಜಂಟರ ಹೆಸರಿನಲ್ಲಿ ಕ್ಯಾಷ್ ಬುಕ್ಕಿಗೆ ದಾಖಲ್ ಮಾಡಲಾಗಿದೆ ಎ ಷೆಡ್ಯೂಲಿನಲ್ಲಿ ಕಾಣಿಸಿರುವ ಮೊದಲು ಪಾವತಿ ಬಂದ ಡಿಪಾಜಟ್ಟುಗಳನ್ನೂ, ಇತರ ಹಣಗಳನ್ನೂ ಮೊದಲನೇ ಕಂತಿನ (ಪ್ರೀಮಿಯಂ) ಬಾಕಿ ಹಣ ಬಂದಮೇಲೆ ಜೊತೆಗೆ ಆಯಾ ಪಾವತಿದಾರರ ಲೆಕ್ಕಗಳಿಗೆ ಮೊದಲು ದಾಖಲಾಗಿರುವುದನ್ನು ನೋಡಿ ಈ ಲೆಕ್ಕವು ತಪ್ಪೆಂದು ಹೇಳಲಾಗಿದೆ ಲೆಕ್ಕವನ್ನು ಈ ರೀತಿ ಇಡದೆ ಇರಲಿಕ್ಕಾಗದು ಯಾಕೆಂದರೆ ಈ ಲೆಕ್ಕದ ಪುಸ್ತಕವು ವಿಶೇಷತರವಾದದ್ದು ಅದರಲ್ಲಿ ಮೊದಲು ಡಿಪಾಜಟ್ಟುಗಳನ್ನು ಆ ರೀತಿ ಕಾಣಿಸಬೇಕೆಂಬುವುದು ಅದರ ಉದ್ದೇಶವಲ್ಲ ಆದಕಾರಣ ಎ ಷೆಡ್ಯೂಲಿನ ಅರ್ಥ ಬಿ ಷೆಡ್ಯೂಲಿನಿಂದಲೂ, ಬಿ ಷೆಡ್ಯೂಲಿನ ಅರ್ಥ ಎ ಷೆಡ್ಯೂಲಿನಿಂದಲೂ ಸ್ಪಷ್ಟವಾಗಿ ಗೊತ್ತಾಗುತ್ತದೆ

ಷೆಡ್ಯೂಲ್ ಸಿ —(ಸಿ) ಸಿ ಷೆಡ್ಯೂಲಿನಲ್ಲಿ 10 ರೂಪಾಯಿ ಬಾಬತು ನಾಲ್ಕು ಐಟಂಗಳಿವೆ ಇದರಲ್ಲಿ ಆಕ್ಷೇಪಣೆ ಏನೆಂದರೆ, ಅಪರಾಧಿಯು ಈ 10 ರೂಪಾಯಿಯನ್ನು ಏಜಂಟರಿಂದ 1913 ರಲ್ಲಿ ಪಡೆದು ದುರುಪಯೋಗಪಡಿಸಿಕೊಂಡಿದ್ದಾನೆ ಎಂಬುವುದು ಈ ಷೆಡ್ಯೂಲಿನಲ್ಲಿ ಫಿರ್ಯಾದಿಯು ಹೇಳುವ ತೆ ಅಪರಾಧಿಗೆ ಏಜಂಟರಿಂದ 40 ರೂಪಾಯಿ ಬಂದಿರುವುದಿಲ್ಲ ಆ ತಾರೀಖಿನಲ್ಲಿ ಡಿಪಾಜಟ್ಟು ಕಟ್ಟಿಕೊಳ್ಳಬೇಕೆಂದು 10 ರೂಪಾಯಿ ಮಾತ್ರ ಬಂದಿದೆ ಅದನ್ನು ಪಡೆದ ರಸೀತಿ ಆ ಏಜಂಟರ ಲೆಕ್ಕದಲ್ಲಿ ಜಮಾ ಹಿಡಿದಿದ್ದು, ಕಡೆಗೆ 10 8 1913 ರಲ್ಲಿ ಆ ಏಜಂಟರ ಲೆಕ್ಕಗಳೇ ಸಮುದಾಯವಾಗಿ ಪಾವತಿ ಆದ ವಿವರ ಅಪರಾಧಿಯು ಪ್ರತ್ಯೇಕವಾದ ರಸೀತಿಯನ್ನು ಆ ಏಜಂಟರಿಂದ ಪಡೆದಿರುತ್ತಾನೆ ಸಿ ಷೆಡ್ಯೂಲನ್ನು ನೋಡುವಲ್ಲಿ ಫಿರ್ಯಾದಿಯು ಕೋರ್ಟಿಗೆ ಹೋಗುವುದರಲ್ಲಿ ಎಷ್ಟು ಆತುರಪಟ್ಟರೆಂಬುವುದೂ, ಇಲ್ಲಿನ ಏಜನ್ಸಿ ಆಫೀಸಿನೊಳಗೆ ಯಾವ ರೀತಿಯಾಗಿ ಕೆಲಸಗಳು ನಡೆಯುತ್ತಿದ್ದವೆಂಬ ವಿಷಯದಲ್ಲೂ, ಯಥಾರ್ಥವಾದ ವಿದ್ಯಮಾನಗಳ ತಿಳುವಳಿಕೆಯ ವಿಷಯದಲ್ಲೂ ಅವರ ಅಜ್ಞತೆಯು ಎಷ್ಟು ಮಟ್ಟಿನದೆಂಬುವುದೂ ಸ್ಪಷ್ಟವಾಗಿ ತೋರಪಡುತ್ತದೆ

ಷೆಡ್ಯೂಲ್ ಡಿ —(ಡಿ) ಈ ಷೆಡ್ಯೂಲಿನಲ್ಲಿ ರೂ 187 1 3 ಪೈ ಎಂಬ ಒಂದು ಲೆಕ್ಕ ಕಾಣಿಸಿದೆ ಈ ಮೊಬಲಗನ್ನು ಅಪರಾಧಿಯು ಯಾವ ಅಧಿಕಾರವೂ ಇಲ್ಲದೆ ತನ್ನ ಬಳಿ ಇಟ್ಟುಕೊಂಡನೆಂದು ಆಕ್ಷೇಪಣೆ ಮಾಡಿದಾರೆ ಅಪರಾಧಿಯ ಹತ್ತಿರ ಮೇಲ್ಕಂಡ ಮೊಬಲಗು ಇದ್ದದ್ದೇನೋ ನಿಜ ಆದರೆ ಅಮೃತಸಾರ ಕಂಪನಿಯು ಪ್ರಾವಿಡೆಂಟ್ ಫಂಡಿನಿಂದ ಹೊಸ ಕಂಪನಿಗೆ ಹಣ ಬರಬೇಕಾಗಿದ್ದದ್ದರಿಂದ ಈ ಲೆಕ್ಕಾಚಾರ ಫೈಸಲಾಗಲಿ ಎಂದು ಅಪರಾಧಿಯು ಆ ಹಣವನ್ನು ತನ್ನ ಹೊಸ ಕಂಪನಿಯಲ್ಲಿ ಅಮೃತಸಾರ ಕಂಪನಿಯ ಹೆಸರಿನಲ್ಲಿ ಡಿಪಾಜಟ್ಟು ಇಟ್ಟುಕೊಂಡಿದ್ದನು ಅಪರಾಧಿಯು ಈ ವಿಚಾರವಾಗಿ ಇನ್ಷೂರೆನ್ಸ್ ಮ್ಯಾನೇಜರಿಗೆ ಎರಡಾವರ್ತಿ ಕಾಗದಗಳನ್ನು ಬರೆದು ತಿಳಿಸಿರುತ್ತಾನಲ್ಲದೆ ಇನ್ಷೂರೆನ್ಸ್ ಮ್ಯಾನೇಜರು ಚೀಫ್ ಮ್ಯಾನೇಜರ ಕೂಡ ಆಲೋಚನೆಮಾಡಿ ಆ ಹಣವನ್ನು ಹಾಗೆ ವ್ಯವಸ್ಥೆಮಾಡಬೇಕೆಂಬುವುದನ್ನು ತಿಳಿದು ಬರೆಯುವಂತೆ ಕೇಳಿಕೊಂಡನು ಈಚೆಗೆ ಅಪರಾಧಿಯು ಇದೇ ವಿಚಾರವನ್ನು ಕುರಿತು ಇನ್ಷೂರೆನ್ಸ್ ಮ್ಯಾನೇಜರಿಗೆ ಒಂದು ತಂತೀವರ್ತಮಾನವನ್ನೂ ಕೊಟ್ಟು ಚೀಫ್ ಮ್ಯಾನೇಜರ ತೀರ್ಮಾನವನ್ನು ತಿಳಿಸಬೇಕೆಂದು ಕೇಳಿದನು ಇನ್ಷೂರೆನ್ಸ್ ಮ್ಯಾನೇಜರು ಅದು ತಲುಪಿದ್ದಕ್ಕೆ ಜವಾಬು ಕೊಟ್ಟರಲ್ಲದೆ ಅವರು ಚೀಫ್ ಮ್ಯಾನೇಜರ ಕೂಡ ಆಲೋಚಿಸಿದ ವಿಷಯವೇನೂ ತಿಳಿಸಲಿಲ್ಲ ಆಗ ಇನ್ಷೂರೆನ್ಸ್ ಮ್ಯಾನೇಜರಿಗೆ ಇನ್ನೊಂದು ಕಾಗದ ಬರೆದು ಚೀಫ್ ಮ್ಯಾನೇಜರ ಕಡೆ ಆಲೋಚಿಸಿ ತೀರ್ಮಾನವನ್ನು ತಿಳಿಯುವಂತೆ ಕೇಳಲಾಯಿತು ಈ ಮಧ್ಯೆ ಇನ್ಷೂರೆನ್ಸ್ ಮ್ಯಾನೇಜರಿಂದ ಬಂದ ಕಾಗದದ ಪ್ರಕಾರ ಅಪರಾಧಿಯು ಹೊಸ ಕಂಪನಿ ಸೆಕ್ರಟರಿಯವರು ಮೇಲ್ಕಂಡ ಹಣದಲ್ಲಿ 61 ರೂಪಾಯಿಯನ್ನು ಡಾ॥ ಎ ಜಾನಕಿರಾಮ್ ಎಂಬವರಿಗೆ ಅವರ ಫೀಜಿಗಾಗಿ ಪಾವತಿಮಾಡಿ ಅವರಿಂದ ಸರಿಯಾದ ರಸೀತಿಯನ್ನು ಪಡೆದು ನೇರಾ ಇನ್ಷೂರೆನ್ಸ್ ಮ್ಯಾನೇಜರಿಗೆ ರವಾನೆ ಮಾಡಿದ್ದಾಯಿತು ಉಳಿದ ರೂ 131 1 3 ಪೈಯನ್ನು ಅವರ ಹೆಸರಿನಲ್ಲಿ ಡಿಪಾಜಟ್ಟು ಇಟ್ಟಿದೆ ಮೇಲ್ಕಂಡ ವಿದ್ಯಮಾನಗಳನ್ನು ನೋಡುವಲ್ಲಿ ಆ ಹಣವನ್ನು ವರ್ಗ ಮಾಡಿರುವ ವಿಚಾರವು ಇನ್ಷೂರೆನ್ಸ್ ಮ್ಯಾನೇಜರಿಗೆ ಸಮ್ಮತವಾಗಿರುತ್ತದೆಂದು ಒಪ್ಪಿಕೊಂಡಿರುವುದು ತಾನಾಗಿಯೇ ವೇದ್ಯವಾಗುತ್ತದೆ

ಷೆಡ್ಯೂಲ್ ಇ —(ಇ) ಈ ಷೆಡ್ಯೂಲಿನಲ್ಲಿ ರೂ 1311 ಪೈ ಕಾಣಿಸಿದೆ ಇದರ ವಿಷಯದಲ್ಲಿ ಅಪರಾಧಿಯ ಮೇಲೆ ಆಕ್ಷೇಪಣೆ ಮಾಡಿರುವುದೇನೆಂದರೆ, ಅಪರಾಧಿಯು ತನ್ನ ಸರ್ವೀಸಿಯ ಅವಧಿ ಮುಕ್ತಾಯವಾದ ಮೇಲೆ ಈ ಹಣವನ್ನು ತನ್ನ ಕಮಿಷನ್‌ಗಾಗಿ ಮುರುಕೊಟ್ಟುಕೊಂಡಿರುತ್ತಾನಾದ್ದರಿಂದ ಅವನು ಆ ಹಣವನ್ನು ದುರುಪಯೋಗಪಡಿಸಿರುವನು ಎಂಬುವುದು ಈ ಭಾಗದಲ್ಲಿ ಫಿರ್ಯಾದಿಯು ವಿಚಾರವಿಲ್ಲದೆ ಫಿರ್ಯಾದು ತಂದಿದ್ದಾರೆ ಹ್ಯಾಗೆಂದರೆ ಈ ವರ್ತಕ ಕಂಪನಿಯ ಹೆಡ್ ಆಫೀಸಿನಲ್ಲಿರುವ ಇನ್ಷೂರೆನ್ಸ್ ಮ್ಯಾನೇಜರವರ ನಡವಳಿಕೆ ಮತ್ತು ಅವರ ಕಾಗದಗಳಿಗೆ ಅಸಮಂಜಸವಾಗಿದೆ ಇನ್ಷೂರೆನ್ಸ್ ಮ್ಯಾನೇಜರವರು ಅಪರಾಧಿಯ ಸರ್ವೀಸು ಮುಕ್ತಾಯವಾದ ವಿಚಾರದಲ್ಲಿ ಏನೂ ಹೇಳದೆ ಆ ಕಮಿಷನ್ನು ಅಪರಾಧಿಗೆ ಸಲ್ಲತಕ್ಕದ್ದೆಂದು ಸ್ಪಷ್ಟವಾಗಿ ಹೇಳಿ ಒಪ್ಪಿಕೊಂಡಿದಾರೆ ಇದಲ್ಲದೆ ಡಿ ಮತ್ತು ಇ ಎಂಬೆರಡು ಷೆಡ್ಯೂಲುಗಳಿಂದಲೂ ಅಪರಾಧಿಯು ಆ ಹಣಗಳಿಗೆ ಹಕ್ಕುದಾರನಾಗಿರುತ್ತಾನೆಂಬುವುದನ್ನು ಸ್ಪಷ್ಟವಾಗಿಯೂ ಬಹಿರಂಗವಾಗಿಯೂ ತೋರಿಸಿ ಇಟ್ಟುಕೊಂಡಿರುತ್ತಾನೆ ಇದರಿಂದ ಅಪರಾಧಿಯಲ್ಲಿ ದ್ರೋಹಚಿಂತನೆ ಇಲ್ಲವೆಂಬುವುದು ವೇದ್ಯವಾಗುತ್ತದೆ ಇಂಥಾದ್ದನ್ನು ದುರುಪಯೋಗವಾಯಿತೆಂದು ಹೇಳುವುದು ಶುದ್ಧ ತಪ್ಪು ಫಿರ್ಯಾದಿಯು ಕೆಟ್ಟುದಾತರೆಂಬುವುದು ಸ್ವತಸ್ಸಿದ್ಧವಾಗಿರುವಲ್ಲಿ ಅವರು ನಿಜವಾಗಿಯೂ ಯೋಗ್ಯವಾದ ಉದ್ದೇಶವುಳ್ಳವರಾಗಿರುವ ಪಕ್ಷಕ್ಕೆ ಅಪರಾಧಿಯ ಮೇಲೆ ಈ ಆಪಾದನೆಯನ್ನು ಹೊರಿಸುತ್ತಿರಲಿಲ್ಲ

8 ಕಡೆಯಲ್ಲಿ ಅಪರಾಧಿಯು ಕಷ್ಟಪಟ್ಟು ಸತ್ಯಸಂಧತೆಯಿಂದ ಕೆಲಸಮಾಡಿ ವಿಶೇಷತರವಾದ ಮೆಚ್ಚಿಕೆಯನ್ನು ಸಂಪಾದಿಸಿದ್ದಕ್ಕೆ ಈ ಸ್ವಾಹಂಕಾರಿಯಾದ ಫಿರ್ಯಾದಿಯು (ಅಪರಾಧಿಯು ಕೆಲಸಮಾಡಿದ ಕಂಪನಿಯ ಪ್ರತಿನಿಧಿ) ಈ ದೇಶದಲ್ಲಿ ಪೋಟಾಪೋಟಿಯಿಲ್ಲದೆ ತುಳಿದು ಅಣಗಿಸಿಬಿಡಬೇಕೆಂಬ ಉದ್ದೇಶದಿಂದಲೋ ಎನ್ನುವಂತೆ ಕಾಯುತ್ತಿರುವ ಕಾರಣಕ್ಕಾಗಿ ಈ ಸುಳ್ಳಾದ ಮತ್ತೂ ಹೊಟ್ಟೆಕಿಚ್ಚು ತೋರಿಸುವ ಫಿರ್ಯಾದನ್ನು ತರುವುದರ ಮೂಲಕ ಅಪರಾಧಿಗೆ ಪ್ರತಿಫಲವನ್ನು ತೋರಿಸಿದರಲ್ಲಾ ಎಂಬುವುದು ಬಹಳ ಮನೋವ್ಯಥೆಯನ್ನು ಉಂಟುಮಾಡಿದೆ ಆದಾಗ್ಯೂ ಈ ಫಿರ್ಯಾದು ಕಡೆಯಲ್ಲಿ ಅಪರಾಧಿಗೆ ಸಂತೋಷದಾಯಕವಾಗಿ ಪರಿಣಮಿಸುವುದೆಂದು ಅಪರಾಧಿಯು ನಿರೀಕ್ಷಿಸಿಕೊಂಡಿದಾನೆ ಇದು ನೆರವೇರುವುದಕ್ಕೆ ಘನವನ್ನೈದಿದ ಈ ಕೋರ್ಟಿನವರು ಈ ಮೊಕದ್ದಮೆಯನ್ನು ಸಾಧ್ಯವಾಗುವ ಮಟ್ಟಿಗೂ ಜಾಗ್ರತೆಯಾಗಿ ಪ್ರಾರಂಭಿಸಿ ಪೂರೈಸಬೇಕೆಂದು ಪ್ರಾರ್ಥಿಸುತ್ತಾನೆ ಇದರಿಂದ ಸದುದ್ದೇಶದಿಂದ ಉದ್ದೇಶಪೂರ್ವಕವಾಗಿ ಪ್ರಾರಂಭಿಸಲ್ಪಟ್ಟಿರುವ ಹೊಸ ಮತ್ತೂ ಸ್ವದೇಶೀ ಕಂಪನಿಗಳಿಗೆ ಈಗ ಸಂಭವಿಸಿರುವಂಥಾ ಆಪತ್ತು ನಿವಾರಣೆಯಾದೀತು ಬಹಳ ಕುತೂಹಲವನ್ನು ಉಂಟುಮಾಡಿ ಅತ್ಯಂತ ಫಲದಾಯಕವಾದ ನೂತನ ಭಾಗಗಳನ್ನು (ಸ್ಕೀಮುಗಳು) ಪಡೆದಿರುವಂಥಾ ಈ ಸ್ವದೇಶೀ ಕಂಪನಿಗಳನ್ನು ಅಭಿವೃದ್ಧಿಗೊಂದುತ್ತಿರುವ ಮತ್ತೂ ನವನಾಗರಿಕವಾದ ಈ ಸಂಸ್ಥಾನದಲ್ಲಿ ವಿವೇಕಶಾಲಿಗಳೂ ಸ್ವದೇಶಾಭಿಮಾನಿಗಳೂ ಆದ ಪ್ರಜೆಗಳೂ, ಪರಹಿತಚಿಂತಕರಾದ ಗವರ್ನಮೆಂಟಿನವರೂ, ಅಧಿಕಾರಿಗಳೂ ಸಹಾಯ ಪ್ರೋತ್ಸಾಹಾದಿಗಳನ್ನು ಕೊಟ್ಟು ವೃದ್ಧಿಗೆ ತರಬೇಕಾಗಿದೆ.

[ಪ್ರಕಟನೆ]

ಮೈಸೂರು, (ಸೈನ್) ಎಂ. ಎಲ್ ನಾಗಣ್ಣ

26 ನೇ ಜನವರಿ, 1914.

ದನಕರುಗಳಿಗೆ—ಕುದುರೆಗಳಿಗೆ

ಬಹು ಪ್ರಯೋಜನಕರವಾದ ಅಹಾರ ಬೇಕೋ?

ಹತ್ತಿಯ ಹೊಟ್ಟು! ಹತ್ತಿಯ ಹಿಂಡಿ! ಇವುಗಳನ್ನು ಉಪಯೋಗಿಸಿರುವವರು ಹೇಳುವುದನ್ನು ತಿಳಿದುಕೊಳ್ಳಿ

ಮ॥ ಮೋಗರಳ್ಳಿ ಸಾಹುಕಾರ್ ಅಪ್ಪುಭಟ್ಟರವರು ಬರೆಯುವುದು —

ನೀವು ನಮಗೆ ರವಾನಿಸಿದ ಹತ್ತಿ ಕಾಳು ಹಿಂಡಿ ಮತ್ತು ಹೊಟ್ಟು ಸಹಾ ಜಾನ್ವಾರುಗಳಿಗೆ ಕ್ರಮದಂತೆ ಆಹಾರವಾಗಿ ಉಪಯೋಗಿಸುತ್ತಾ ಇದೇವೆ ಇದರಿಂದ ದನಕರುಗಳು ಎಮ್ಮೆ ಸಹಾ ಕೊಬ್ಬಿ ಪುಷ್ಟಿಯಾಗಿ ಹಾಲು ಸಹ ಅಭಿವೃದ್ಧಿಯಾಗುತ್ತಿದೆ

ಗಾಡಿ ಎತ್ತುಗಳಿಗೆ ಸಹ ಇದರಿಂದ ಆರೋಗ್ಯವುಂಟು ಇದು ಹತ್ತಿ ಕಾಳಿಗಿಂತಲೂ ಕಮ್ಮಿ ಕ್ರಯ ಬೀಳುವುದರಿಂದಲೂ ಒಳ್ಳೇ ಪ್ರಯೋಜನವಿರುವದರಿಂದಲೂ ಎಲ್ಲರೂ ಇದನ್ನು ಜಾನ್ವಾರುಗಳ ಆಹಾರಕ್ಕೆ ಧಾರಾಳವಾಗಿ ಉಪಯೋಗಿಸಬಹುದೆಂದು ನಾವು ದೃಢವಾಗಿ ಹೇಳುತ್ತೇವೆ 16-8-1913

ಹೊಟ್ಟನ್ನು ಬೆಂದ ಹುರಳಿಯ ಜತೆಯಲ್ಲಿ ಬೆರೆಯಿಸಿಕೊಟ್ಟರೆ ಕುದುರೆಗಳು ಹೆಚ್ಚು ಕೆಲಸ ಮಾಡುವವು ವೇಗ ದಣಿಯವು ಹೊಟ್ಟೆನೋವು, ಭೇದಿ ಸಹ ಆರೋಗ್ಯವಾಗಿರುವುದು ದೃಷ್ಟಾಂತಕ್ಕೆ ಬಂದಿದೆ ಹೊಟ್ಟು ಮೂಟೆ 1 ಕ್ಕೆ ರೂ 1 0 0 ಹಿಂಡಿ ಮೂಟೆ 1 ಕ್ಕೆ ರೂ 9 8 0 [28 2]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

151, ಕಿಲಾರಿ ರೋಡು (ಕುಂಚಿಗರಪೇಟೆ), ಬೆಂಗಳೂರು ಸಿಟಿ

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಜಿಸ್ಟರ್ಡ್)

ಅಗತ್ಯವಾಗಿ ಸಿಕ್ಕುವ ತೀಲು ಎಣ್ಣೆಯನು ತಲೆಗೆ ಒಂದು ವರ್ಷ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ ಚಕಚಕಿಸುವವು ಸಜಿತವಾದ ನೀಲವರ್ಣದಿಂದ ಕೂಡಿ ಆಗಾಗ್ಗೆ ಹಂದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಹುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಟಿಕೆಟನ್ನು ಕಳುಹಿಸಿರಿ

ಮೈಸೂರು ಎಗ್ಸಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸಹ ಪ್ರಶಂಸೆ ಮಾಡಿ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರಟರಿ ಎ ಡಿ ಸಾಲೋಮನ್ ರವರು ಬರೆಯುವದು—"ದಯಮಾಡಿ ಆರು ಬಾಟಲ್ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನನ್ನ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧಿವಾತ, ಮಸ್ತಕಶೂಲೆ, ಚಳಿಗೆ ಮೈಗೆ ಮೊತ್ತಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1 ಕ್ಕೆ ಕ್ರಯ 0 8 0 ಟಪಾಲ್ ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ —ಶೀತಜ್ವರ, ಥಂಡಿಯಿಂದ ಬರುವ ಜ್ವರ ಅಲ್ಪಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ಬಹುಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8 0 ವಿ ಪಿ ಖರ್ಚು ಪ್ರತ್ಯೇಕ

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [194]

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ದಿ ಬುಲಕ್ ಮಾರ್ಟ್, ಮಂಗಳೂರು

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದ ಮಾಡಿದೆ. ಬರೀ ಸಸ್ಯಾಹಾರ.

1914ನೇ ವರುಷದ ಮೆಲಿನ್ಸ್ ಕ್ಯಾಲೆಂಡರು ಈಗ ಸಿದ್ಧವಾಗಿದೆ

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು [4 6]

ಮಕ್ಕಳಕಾಯಿಗೆ — ಒ ದುಗ್ಧಾನವಲ್ಲಿ ಮಕ್ಕಳ ಪೋಷಣೆ —ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಕನ್ನಡ ಇಂಡಿಯನ್ ಪೀನಲ್ ಕೋಡ್

ಇದೊಂದು ಸೂರ್ ಮದ್ರಾಸ್, ಮೊ ಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕ ಮಹಾಶಯರಿಗೆ ತಿಳಿಯಪಡಿಸುವದೇನೆಂದರೆ—

ಶ್ರೀಮದ್ ಇಂಡಿಯಾ ಗೌವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ 18೬ ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೀನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟುಗಳೊಡನೆಯೂ ಆ ದನಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ ಪೋಲೀಸ್ ಅಧಿಕಾರಿಗಳೂ ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ — ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ಸ್ ಕೊಡತಕ್ಕದ್ದೇ ವಾರಂಟು ಕೊಡತಕ್ಕದ್ದೇ? ಜಾಮೀನು ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ ಪೋಲೀಸರಿಗೂ ವಕೀಲರಿಗೂ ವ್ಯಾಸಂಗಿಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮುಖ್ಯವಾಗಿ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಕೇಸುಗಳ ಮೊಕದ್ದಮೆಗಳು ಉದಾಹರಣೆಗಳಾಗಿ ಈ ಪುಸ್ತಕದಲ್ಲಿ ಅಡಗಿರುವವು.

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಅಸಾಧು ಚೋರಿ ಗಂಡನು ಹೆಂಡತಿ 12 ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟ ತೀರ್ಪು ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು.

ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ 1 ಕ್ಕೆ 2 ರೂಪಾಯಿ, ಟಪ್ಪಾಲ್ ಚಾರ್ಜು 4 ಆಣೆ

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127 31]

ನಮ್ಮ ವಿಳಾಸ— ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಸು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಒಂದಿದ

ಸೆಂಟ್ ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಅಟೋ ಮೋಹಿನಿ

ಇದು ರಿಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ಸಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಹೂವುಗಳ ದ್ರವಕ ಕರವಸ್ತ್ರಕ್ಕೆ ನಾಲ್ಕು ತೊಟ ಹಾಕಿದರೆ ನಾಲ್ಕು ದಿನಗಳು ತನಕ ಘಮಘಮಿಸುವ ಸುವಾಸನೆ ಇರುತ್ತೆ. ... ಕೊಡುವವರಿಗೆ ... ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆ ಮಾಡಿ ನೋಡಿ ... ಮಾಡಿಕೊಳ್ಳಿ.

ಕ್ರಯ ½ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ 2 0 0

" 1 ಡ್ರಾಂ ಕೊಳವೆ " 0 12 0

ಅಟೋಮೋಹಿನಿ ಪರಿಮಳದ ಕಡ್ಡಿಗಳು ಡಜನ್ 1 ಕ್ಕೆ ರೂ 0 12 0

ಎಲ್ಲಾ ಕಡೆ ಸಿಕ್ಕುತ್ತವೆ

ಮದರಾಸ್ ಅಧಿಕೃತ ಕ್ರಯ ... ಟರು

ಮಾ ... ದಾಸ್ ... ಕಂಪನಿ

[31 8] ... ತ್ಯಾಗರಾಜನ್ ರೋಡ್, ಮದರಾಸ್

A GREAT CONCESSION!

ಅಪೂರ್ವ ಲಾಭ!

ಚಂದ್ರಪ್ರಭಾ ಬೆಲೆ ೧೪ ಆ. ಶೋಭನಾ ೧೨ ಆ.

ಕೈಲಾಸನಾಥ— ೮ ಆ. ಚಂದ್ರಕಾಂತ—೬ ಆ.

೨ರೂ ಬೆಲೆ ಬಾಳುವ ಈ ನಾಲ್ಕು ಅತ್ಯುತ್ತಮವಾದ ಕಾದಂಬರಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಬಹು ಸ್ವಲ್ಪ ದಿನಗಳ ಮಟ್ಟಿಗೆ ಟಪಾಲು ಖರ್ಚು ಸೇರಿಸಿ ೧ರೂ ಗೆ ವಿ ಪಿ ಯನ್ನು ಕಳುಹಿಸುವೆವು. ಅಲ್ಲದೆ ೧೯೧೪ ನೇ ವರುಷದ ಉತ್ತಮವಾದ ಪಾಕೆಟ್ ಡೈರಿಯನ್ನು ಬಹುಮಾನ ಕೊಡುವೆವು.

ವಂಗವಿಜೇತ—ಬೆಲೆ ರೂ. ೧—೪—೦

ಬಿ ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಹೊಸ ಬಂಗಾಳಿ ನಾವೆಲ್ ಇವರ ಎಲ್ಲಾ ಕಾದಂಬರಿಗಳು ನಮ್ಮಲ್ಲಿ ದೊರೆಯುವವು. ಕ್ರಯದ ಪಟ್ಟಿ ಉಚಿತ. ವಿಳಾಸ—

ಯಂ. ಸುಬ್ಬರಾವ್,

[10–2] ಬುಕ್ ಸೆಲರ್, ಶಂಕರಪುರಂ, ಬೆಂಗಳೂರು

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 1 25,00,000

ಕಂಪನಿಯಿಂದ ಪಾವತಿ ಆಗಿರುವದು 1 60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ — ಮಿ ಎಂ ಎಸ್ ರೆಡ್ಡಿ ... ಮಿ ಎ ಎಸ್ ನಂಜಪ್ಪನವರು ಅಥವಾ ಮಿ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು ಮೈಸೂರು, ಅಥವಾ

[1 1 1] ಬ್ರಾಂಚ್ ಸೆಕ್ರೆಟರಿ, ಮದರಾಸ್

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮ ಸಂಘ ಲಿಮಿಟೆಡ್

ಹಿಂದೂಸ್ಥಾನ್ ಕಟ್ಟಡಗಳು ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ) 1,00 00 000

ಪಾವತಿಯಾದ ಮೊಬಲಗು 10,50,000

ವಸೂಲಾದ ಮೊಬಲಗು 87 00,000

ಈ ಕಂಪೆನಿಯಲ್ಲಿ ಪಾಲ್ಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸವಿಯ ಇಂಡಿಯಾ ಗವರ್ನಮೆಂಟಿನ ಜೀವವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿ ಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾಲ್ಸಿಯವರ ಮನೆಮುಂದೆ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ಸುಗಳು ಈ ಬ... ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [213 11]

ವಯಸ್ಸು	ಒಂದಾವರ್ತಿ ಕೊಡಬೇಕಾದ ವರುಷಗಳು	ವರುಷದ ಚಂದಾ ದರ		ಕೊನೆಯಿಂದ ಬರತಕ್ಕ ಮೊಬಲಗು: ಅವಧಿ ಒಳಗೆ ಸತ್ತರೆ		ಅವಧಿ ವಿರಿದಿ ಬದುಕಿದ್ದರೆ	
18 15	15 ವರುಷಗಳು	ರೂ	109	ರೂ	1000	ರೂ	2000
18 10	20 ವರುಷಗಳು	ರೂ	71	ರೂ	1000	ರೂ	2000
18–35	25 ವರುಷಗಳು	ರೂ	51	ರೂ	1000	ರೂ	2 00
18–30	30 ವರುಷಗಳು	ರೂ	13	ರೂ	1000	ರೂ	2 0

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ಸ್

166, ದೊಡ್ಡಪೇಟೆ, ಮೈಸೂರು

ಕುಂತಳಾನಂದ ತೈಲವು

192 20

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಕೂಲಿ ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು. "

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು ಆರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಕೀಕಸೆಗಡಿ, ಕ್ಷಯರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104 37]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಸ್ ಪೀಟರ್ಸ್, 37 ತಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರ ಬೇಗ ಬರೆದು ತರಿಸಿಕೊಳ್ಳಿ

2-6

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ, ೧ ರೂ ೬ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧–೮, ರೂ ೧–೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೪ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೪ ಆ, ೧ ರೂ ೬ ಆ

"In addition to cap making we are giving special attention to knitting stockings. All our stockings for adults and children are hand made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS,

GIRLS' INDUSTRIAL SCHOOL, HASSAN.

ಥಳಥಳಿಸುವ ದಪ್ಪ ಕಾಗದ, ಮುದ್ದಾದ ಮುದ್ರಣ.

ಭೂಮಿಯಅಳತೆ.

ಅಂದವಾದ ಆಕೃತಿ ಅತ್ಯುಪಯೋಗಿ!

ಬೋಧಕರ ಸಹಾಯವಿಲ್ಲದೆ ಸಂಕು ಮೋಜಣಿ ಎಂಬ ಸುಲಭಗಳತೆಯನ್ನು ಕಲಿಸುವ ಅತ್ಯುತ್ತಮವಾದ ಪುಸ್ತಕವು ಪಟೇಲ ಶ್ಯಾನುಭೋಗ ಶೇಕದಾರರುಗಳಿಗೂ, ಜಮೀನುದಾರರುಗಳಿಗೂ ಉತ್ಯುಪಯೋಗಿ ಕಲವು ಪ್ರತಿಗಳು ಉಳಿದಿವೆ

ಕ್ರಯ ಒಂದೇ ರೂಪಾಯಿ.

ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಪಂಗಿರಾಮ; ಅಥವಾ, ಎಸ್. ಆರ್. ಭಾರತಿ,

"ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

[೮-೪]

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ 2-0-0, ವ್ಯವಹಾರರ್ಣಯ ವಿಧಿ ಎಂಬ ಸಿವಲ್ ಪ್ರೊಸೀಜರ್ ಯಾನೆ 3 ಭಾಗಗಳಿದ್ದು ರೂ 3 0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1 8 0, ಇಂಡಿಯನ್ ಲಾ ಆಫ್ ಕಂಟ್ರ್ಯಾಕ್ಟ್ ರೂ 3-0 0, ಪ್ರಶ್ನೋತ್ತರ ಲಾಮ್ಯಬೋಧಿನೀ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 10, ಇದಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1 8 0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿ [160 26]

ವಿಳಾಸ—ಬಿ. ಸರಸಿಂಗರಾವ್,

ಎಡಿಟರ್, "ಲಾ ಗೆಜೆಟ್" ಬೆಂಗಳೂರು.

ಡೋಂಗರೆ

ಇವರ ಬಾಲಾಮೃತ

[150 21]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಬಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ. ಪಾರ್ಕ್ ಟವನ್, ಮದರಾಸು ಇವರಲ್ಲೂ ದೊರೆಯುವ್ರದು.

ಜೈಕ್‌ರವರ ಉತ್ತಮೋತ್ತಮ ಆಯಿಂಟ್ ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಎಷ್ಟು ದಿನಗಳಿಂದಲೂ ಇರತಕ್ಕ ವಿಷ, ಕೆಂಪು, ಕಪ್ಪು, ಕುರಿ, ಹುರು

ಕಜ್ಜಿ, ನವೆಯ ಕೆರತ, ಎಲ್ಲಾ ತರದ ರೋಗಗಳು, ಹುಣ್ಣುಗಳು ಬಹು ಬೇಗನಾಗಿ ವಾಸಿಯಾಗುತ್ತವೆ ... ಮೊದಲಾದ ಹ್ಯಾಗಳ ... ಈ ಔಷಧವನ್ನು ... ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ... ಉಂಟು ಕ್ರಯ 1 ಬಾಟ್ಲಿಗೆ ರೂ 1 ಸಣ್ಣ ಬಾಟ್ಲಿಗೆ 10 ಆಣೆ ... ಒಂದು ಸಲ ತರಿಸಿ ಪರೀಕ್ಷಿಸಿ [25 3]

ವಿಳಾಸ — ಜಿ ಗುಲಾಬ್ ಚಂದ್ ಪೌವಾಳ್,

50 ನೈನಪ್ಪನಾಯಕ್ ಬೀದಿ ಪಾರ್ಕ್ ಟೌನ್, ಮದರಾಸು

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲ ಏದು ಶಕ್ತಿ ವ್ಯಾಪಿತವಾಗಿರುವದೆಂತಲೂ, ಏದು ಶಕ್ತಿ ಕಡಿಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಉಂಟಾಗುವದೆಂತಲೂ ಅಂತಹ ವ್ಯಾಧಿಗಳನ್ನು ತೀವ್ರ ಗುಣಪಡಿಸಲು ಏದು ಶಕ್ತಿ ಯುಕ್ತವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವಾಸಿಯಾಗದೆ ಅವುಗಳನ್ನು ತೀವ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಸಂಶೋಧನದಿಂದ ಬಟ್ಟಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ಬೇಕಾದ ಶಾಖವಾಗುವಷ್ಟು ಏದು ಶಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ತೀವ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗಲ್ಲವು ಇದು ಅತ್ಯುತ್ತಮವಾದದ್ದು ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೊ ಪೆಯಿನಾಡೈನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ ಕಮ್ಮು, ನಗಡಿ, ವಾಯುನೋವು (ಕ್ರಾಂಪು ಹಿಡಿತ), ಉಳುಕುಹಿಡಿದದ್ದು, ತಲೆನೋವು, ಸಿಡುನೋವು (ಸೊಂಟನೋವು), ಪಕ್ಕದ ಹಲ್ಲುನೋವು, ಕರ್ಣನೋವು, ಅರೆತಲೆನೋವು, ಉಬ್ಬಸ, ಎದೆಬ್ಬರದ ಗಡ್ಡೆಗಳಿಗೂ ಮತ್ತು ಮುಕ್ಕ ಪಕ್ಷವಾತ (ಆಳ್ಳ) ಸ್ತ್ರೀರೋಗಗಳೂ, ಎಷ್ಟುಗಳ ಕಡಿತಗಳಿಗೂ (ಜೇಳು ಮುಂತಾದದ್ದು), ಇದಕ್ಕಿಲ್ಲ ಬಹಳ ಪ್ರಾಖ್ಯಾತಿಯಾದದ್ದು [12]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುತ್ತೆ

ಬುಡ್ಡಿಯ ಕ್ರಯ ರೂ 0 8 0 ವಿ ಪಿ ಖರ್ಚು 0 4 0 ಏಜಂಟರು ಬೇಕು

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಶ್ವಾಸಕೇಸರಿ ಲೇಹ.

ಈ ಔಷಧಕ್ಕೆ ತಪ್ಪದ ತತ್ಕ್ಷಣ ಗುಣಕೊಡುತ್ತೆ.

ಅಸ್ತ್ಮಾ ಕೆಮ್ಮು ಎಷ್ಟೇ ಹಳೇದಾಗಿದ್ದರೂ ಏನೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ನಾಲ್ಕು ದಿನ ಸೇವಿಸುವುದರೊಳಗೆ ನಿಖಿತವಾಗಿ ಪೂರ್ಣ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ ಸಾವಿರಾರು ಜನರು ಉಪಯೋಗಿಸಿ ... ನಮಗೆ ಬಹು ... [illegible]

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1 8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

177 ಜೈನಾ ಬಜಾರ ರೋಡ ಮದ್ರಾಸು

ಈ ಯೋಗ ಪತ್ರವನ್ನು ... ಸೂಪರಿಂಟೆಂಡಿಂಗ್ ... 31 10 1913 ರಲ್ಲಿ ಬರೆಯುತ್ತಾರೆ — ನಾನು ಬಹುಕಾಲದಿಂದ ಅಸ್ತ್ಮಾರೋಗದಲ್ಲಿ ನರಳುತ್ತಿದ್ದೆನು ... ಈ ಔಷಧವನ್ನು ... ಸಾರ್ವಜನಿಕರಿಗೆ ತಿಳಿಸುತ್ತೇನೆ [91-36]

ಕೆಲವು ದಿನಗಳು ಮಾತ್ರ ಕೆಲವು ದಿನಗಳು ಮಾತ್ರ!!

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಒಳ್ಳೆ ಇಂಗ್ಲಿಷ್ ಬ್ರೇಸ್‌ಲೆಟ್ ವಾಚ್

ಇದರ ಕ್ರಯ ರೂ 3 15 0 ಮಾತ್ರ

ಏದು ವರುಷಗಳ ಖಾತ್ರಿಯಾದ ಗ್ಯಾರಂಟಿ

ಘನವಂತರೇ

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ ವಾಚ್ ಸರಪಣಿಯ ಅವಶ್ಯಕತೆ ಇಲ್ಲ ಕೈಯಲ್ಲಿ ಧರಿಸಿಕೊಳ್ಳುವದಕ್ಕೆ ಬಹು ಅನುಕೂಲವಾದದ್ದು



ಕೈಯನ್ನು ನೋಡಿದ ಮಾತ್ರದಲ್ಲಿ ಟೈಮು ಸುಲಭವಾಗಿ ತಿಳಿಯತಕ್ಕದ್ದು ಬಹುದು ಗೌನಿನ ಬಲದ ಕೈಯಕಟ್ಟುಗಳನ್ನು ... ಸುಂದರವಾದ ವಾಚು ನೋಡುವವರು ಸಹಸ್ರ ರೂಪಾಯಿ ಬಾಳುವ ವಾಚ್ ಎಂದು ಆಶ್ಚರ್ಯಪಡುವಂತಿರುವದು ನೂತನ ನಮೂನೆ [77 41]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ವಿಳಾಸ—ಪಿ. ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಪ್ ವೆಂಕಟಾಚಲ್ಲೆಯರ್ ಬೀದಿ, ಮದರಾಸು

WANTED

Clerks and Canvassers by the Singer Manfg Co in Kadur Shimoga Sagar and Thirthahalli

Apply to —Singer Manufacturing Co

31-2 BANGALORE.

English Papers with L S Test Summaries, Special Papers, and Monthly Tests, etc Subscription Rupees 2 (in advance) **Students' Spelling Book** As 4 (Postage Extra) **Postal Tution** Monthly Fees English Rs 2 Arithmetic Re 1, the rest As 8 (all in advance) *Apply to* M N Sitarama Rao,

[273 7] Krishnaraja Mohalla, Mysore

ಶಬ್ದಾದರ್ಶದ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು! ಕನ್ನಡ ವ್ಯಾಕರಣದ ಸಾರವೆಲ್ಲ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಪಂಡಿತರ ಸಹಾಯದಿಂದ ಬರೆಯಲ್ಪಟ್ಟುದು! ಕ್ರಯ 1 ಆಣೆ, ಐದಕ್ಕೊಂದು ಉಚಿತ ವ್ಯಾಪಾರಗಾರರಿಗೆ ನೂರಕ್ಕೆ ಇಪ್ಪತ್ತೈದರಂತೆ ಡಿಸ್ಕೌಂಟ್!!

[260-4] ವಿಳಾಸ-ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಮನ ವಿಕ್ರಯದ ಪ್ರಕಟನ.

ಮೈಸೂರಿನಲ್ಲಿ ಜಗನ್ಮೋಹನ ಬಂಗ್ಲೆ ಬೀದಿಯಲ್ಲಿ ಎ ರಾಮಸ್ವಾಮಯ್ಯನವರ ಬೀದಿಯಲ್ಲಿರುವ ರಿಟೈರ್ಡ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಬಿ ರಾಮಸ್ವಾಮಿ ಅಯ್ಯಂಗಾರರ ಮನೆಯು ವಿಕ್ರಯವಾದಲ್ಲದುವುದು ತಪ್ಪಿಲವುಗಳನ್ನು ಮೈಸೂರು ಕೋಆಪರೆಟಿವ್ ಸೊಸೈಟಿ ಸೆಕ್ರೆಟರಿ ಮ. ಎಚ್ ಕೃಷ್ಣಾಚಾರ್ಯರವರಿಂದಾಗಲಿ, ಮಾರೇಕೆಂದವರಿಂದಾಗಲಿ ತಿಳಿಯುವುದು [8 1]

ಎ ರಾಮಸ್ವಾಮಿಯರ್, ಮಹಾರಾಣಿ ಕಾಲೇಜು, ಮೈಸೂರು

ದಿ ಜನರಲ್ ಏಜನ್ಸಿ, ಮೈಸೂರು

23 1

Lower Secondary Texts for 1913—(1) The Fairy Tales 0 1 0, (2) The Tanglewood Tales 0 1 0 Notes for the above two books by Mr A Rangaswami Iyengar B A Maharaja's College will be ready by the 1st of next month

ನಾಟಕಗಳು—ವೇಣೀಸಂಹಾರ 1 0-0, ರಾಮಾಯಣ 1 0 0, ಶೂರಸೇನ 1 0 0, ಪ್ರಸಾದರುದ್ರದೇವ 1 0 0, ವಸಂತಮಿತ್ರ 0 8 0, ಮದಾಲಸಾ ಪರಿಣಯ 1-1 0, ವಲೀಮುಖ ವಿಲಾಸ 0-8 0, ಉತ್ತರರಾಮಚರಿತ್ರೆ 0 12 0, ಸಾವಿತ್ರಿ ನಾಟಕ 0-10-0, ಪ್ರಬೋಧ ಚಂದ್ರೋದಯ 1-0 0, ಧ್ರುವ ವಿಜಯ 0-4-0, ನಿರುಪಮಾ 0-12-0, ಉತ್ತರಳಕುಮಾರ 0 8-0, ಸೀತಾಪರಿಣಯ 0-4 0

ಅಪೂರ್ವ ಕನ್ನಡ ಗ್ರಂಥಗಳು.

[39 1]

(1) ಜವಾನರುನ್ನತಿಗೆ ಮೂಲಾಧಾರ —11 ಸ್ವಭಾವ ಚಿತ್ರಗಳುಳ್ಳದ್ದು ದೇಶೋನ್ನತಿಗೆ ಬೇಕಾದ ವಿಷಯಗಳನ್ನೆಲ್ಲ ಕಥಾರೂಪದಿಂದ ಬೋಧಿಸುತ್ತದೆ ಕ್ರಯ ವಿ ಪಿ ಸಹ ಗಿಲ್ಟ್ ಬೈಂಡ್ 1-4-0, ಗ್ಲೇಜ್ 1 8 0, ದುಮ್ಯ 1 1 0 (2) ಧರ್ಮಪಥ —ಶ್ರೀ ಕೇಟ ಜನರಿಂದ ವಾರಾಯಿಯಾದಲ್ಪಡುವ ಗ್ರಂಥದ ಕನ್ನಡ ಭಾಷಾಂತರ ಕ್ರಯ —ವಿ ಪಿ ಸಹ 1 0 0 (3) ಬೌದ್ಧಾವತಾರ —ಭಗವಾನ್ ಬುದ್ಧನ ಆಶ್ಚರ್ಯಕರವಾದ ಜನ್ಮ ಚರಿತ್ರೆ ವಿ ಪಿ ಸಹ 0 6 0 ವಿಳಾಸಗಳು —(1) ಬಿ ಅಶ್ವತ ನಾರಾಯಣಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರ್ (2) ಶ್ರೀ ವಾಣೀವಿಲಾಸ ಬುಕ್ ಡಿಪೋ, ಮೈಸೂರ್, (3) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರ್, (4) ದಿ ಜನರಲ್ ಏಜನ್ಸಿ ಮೈಸೂರ್

Printed and Published by the Rev H Gulliford Proprietor and Manager, Wesleyan Mission Press, Mysore 5/2/1914

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೪ ನೇ ಇಸವಿ ಫೆಬ್ರವರಿ ತಾರೀಖು ೧೨ ನೇ ಗುರುವಾರ. ಸಂಚಿಕೆ ೭೭

MYSORE GOVERNMENT SECURITY

Life and Marriage Assurance Company, Ltd., Mysore.

NOTICE

With reference to the copies of letters written by Mr P L Rajpal and the undersigned, and reproduced in the *Vrittanta Patrike*, dated 15th 22nd and 29th ultimo over the signature of Mr T S R Iyer Branch Secretary of the National Insurance & Banking Company, Ltd, Amritsar, the undersigned begs to inform the public in general as follows —

Before the undersigned writes anything, he pities Mr Iyer, because he (Mr Iyer) publishes something in newspapers to support his false statements but the same publication directly supports the statement of the undersigned as explained hereunder

In the Article, published by Mr Iyer in this paper of 11th December 1913, it is stated that the Provident Fund Prospectus, containing "Bonus to the assured under the marriage scheme will not be less than double and not more than 15 times the premiums paid,' published by the undersigned, was unauthenticated, which is clearly proved to be false by referring to the Chief Manager's No 46162, dated 16-3-11, part 3 (E), which states to the effect that the undersigned has reproduced the old P F Prospectus So, Mr Iyer should admit that the prospectus was not unauthenticated as alleged by him The above letter makes it also clear that the Company had guaranteed the minimum bonus to be double the premiums paid Had the undersigned been supplied the subsequently changed Prospectus before the above was printed and at least known that it would be changed, he would not at all have submitted a copy to the Chief Manager for his information Nor did the subsequently supplied prospectus definitely say that the Company would not guarantee double the premiums paid up which is clearly proved by the letter No 1907, dated 4 12 1911 of the undersigned

The worth-noting and appreciable trick which Mr Iyer is playing is that he is comparing the above one published in March 1911, and the other prospectuses published before August 12 by the undersigned with the latest prospectus of the Head Office published in the month of August 12, in which alone the clause "when the state of funds permit' is added, and in no other prospectuses published by the Head Office previous to August 1912, does that clause appear Consequently, their adding that clause only in August 1912, clearly shows that their previous prospectuses, which contained no such clause, must have necessarily meant that the Company was to pay double the premiums paid on the marriage day, even if the state of funds did not permit Another trick which Mr Iyer is playing is that he omits the important part of the letters in his publication which discloses the innocence of the undersigned

Our policy holders and the public in general will please note that the undersigned after December 1911, when he came to know about the Company's not guaranteeing double the premiums paid, fought with the Company regarding the bonus-payment under the Marriage Scheme, and after a long correspondence and after the undersigned strictly informed the Head Office that he could turn out good business only if they were to give him authority of himself paying double the premiums paid up on the marriage day as advance, the Head Office gave the undersigned full authority of paying advances on the marriage day in March 1912 As intimated in previous publications relying on this authority alone the undersigned turned out good business and also stood first in the business over and above all the Chief Agents and Branch Secretaries (including Mr Iyer) throughout India and Burma Moreover the undersigned would not at all have canvassed any cases if that authority had not been given or if he had known that they would pay less than the actual amount paid up The undersigned is at a loss to know how the clause when the state of funds permit," included in the prospectus dated August 1912, would affect the above special authority possessed by the undersigned, when the said authority was granted to him in March 1912 and cancelled in February, 1913 The Provident Fund department of the Amritsar Company would never have failed, had the Company abided by the suggestions of the undersigned in granting the same special authority to the other Chief Agents and Branch Secretaries also, and in continuing paying advances on the marriage day in other parts of India also, as was being done in the jurisdiction of the undersigned until the 10th February 1913, soon after which, the undersigned resigned the Chief Agency of the Provident Fund Department on account of their cancelling the above authority and thus not keeping to their words of promise

In brief, Mr Iyer should bear in mind that such tricks, which he is playing, forgetting the proverbs ' Evil to him who evil thinks and "God helps those who help themselves, but not those who decry others,' as well is ignoring entirely that there is another world to go to and that there is One above, before Whom we have to answer for all our deeds, cannot affect the undersigned in the least as long as he (the undersigned) is honest and straightforward in his dealings all round Nor can he (Mr Iyer) derive any benefit from ' beating his own drum' and defaming the undersigned like this, when all know that the Company, which Mr Iyer is representing, has put thousands of Marriage Policy holders to a loss, whereas the Company of the undersigned has safe-guarded the interests of such injured policy holders in these parts In conclusion, Mr Iyer will do well if he moves his Company to settle the bonus of the Marriage Policy holders and the death claims of the Life Insurance Policy holders, which have not yet been settled and if he also gives his attention to promoting the cause of his own Company hereafter

161 28 M L. NAGANNA,
Managing Director.

ಶಬ್ದಾದರ್ಶದ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು! ಕನ್ನಡ ವ್ಯಾಕರಣದ ಸಾರವೆಲ್ಲ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಪಂಡಿತರ ಸಹಾಯದಿಂದ ಬರೆಯಲ್ಪಟ್ಟುದು! ಕ್ರಯ 3 ಆಣೆ; ಆರಕ್ಕೊಂದು ಉಚಿತ ವ್ಯಾಪಾರಗಾರರಿಗೆ ನೂರಕ್ಕೆ ಇಪ್ಪತ್ತೈದರಂತೆ ಡಿಸ್ಕೌಂಟ್ !!

[266—9] ವಿಳಾಸ-ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ದಿ ಜನರಲ್ ಏಜನ್ಸಿ, ಮೈಸೂರು

23-5

Lower Secondary Texts for 1915—(1) The Fairy Tales 0 4 0 (2) The Tanglewood Tales 0 4 0 Notes for the above two books by Mr A Rangaswami Iyengar, B A, Maharani s College, will be ready by the 1st of next month

ನಾಟಕಗಳು—ವೇಣೀಸಂಹಾರ 1-0-0, ರಾಮಾಯಣ 1-0 0, ಕುರುಸೇನ 1-0-0, ಪ್ರಕಾಶರುದ್ರದೇವ 1 0 0, ವಸಂತಮಿತ್ರ 0 8 0, ಮದಾಲಸಾ ಪರಿಣಯ 1-1-0, ಪಲೀಮುಖ ವಿಲಾಸ 0 8 0, ಉತ್ತರರಾಮಚರಿತ್ರ 0 12-0, ಸಾವಿತ್ರಿ ನಾಟಕ 0-10-0, ಪ್ರಬೋಧ ಚಂದ್ರೋದಯ 1-0 0, ಧ್ರುವ ವಿಜಯ 0-4-0, ನಿರುಪಮಾ 0 12 0, ಉತ್ಪಲಕುಮಾರಿ 0 8-0, ಸೀತಾಪರಿಣಯ 0-4-0

WANTED

An active and experienced clerk for keeping Insurance Accounts and Correspondence Salary Rs, 15, rising to Rs 30 with an annual increment of Rs 3 Only those who posses good knowledge in English and Kanarese need apply to

Messrs. VENKATACHALAM & SONS,
Chief Agents,
Hindustan Co-operative Insurance Society Ltd,
166, Dodpet, Near Old Taluk Cutchery,
243 12 *MYSORE*

ಜಾಹಿರ್ ನೋಟೀಸು.

ಇದರಿಂದ ಸರ್ವರಿಗೂ ಶೃತಪಡಿಸುವದೇನಂದರೆ—ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಸದುರ್ಗದ ತಾಲ್ಲೂಕು ಬೂದಿಹಾಳ್ ಕಸಬದಲ್ಲಿರುವ ರೀಸರ್ವೆ ನಂ 7 ನೇ ಬಾಗಾಯಿತು ಖುಷ್ಕಿಗಳು, ಖಾನೇಷುಮಾರಿ ನಂ 40 ನೇ ಮನೆ ಇವಕ್ಕೆ ಸೇರಿದ ಆವರಣಗಳು, ಈ ಸೊತ್ತುಗಳು ಫೌತಿ ನರಸಿಂಗಭಾನರು 13 5 03 ರಲ್ಲಿ ಹುಟ್ಟಿದ ದತ್ತು ಸ್ವೀಕಾರದಲ್ಲಿ ತನ್ನಯ ಸ್ಥಿರ ಚರ ಲೇವಾದೇವಿ ವಿಶಿಷ್ಟವನ್ನೂ ಗ್ರಾಮಪಂಚಾಯಿತರ ಮುಖಜರಿಂದ ನಮ್ಮ ತಂದೆಗೆ ವಹಿಸಿರುತ್ತಾರಾದ್ದರಿಂದ ಮೇಲೆ ಕಂಡ ಆಸ್ತಿಗಳು ನರಸಿಂಗಭೂಪನ ದತ್ತು ಮಗ ಕೃಷ್ಣಸಿಂಗಗೆ ಖಾತೆಯಾಗಿವೆ ಇವು ನಮ್ಮ ಸಮುಷ್ಟಿ ಕುಟುಂಬದ ಸ್ವಾಧೀನಾನುಭವದಲ್ಲಿರುವವುಗಳಾದ್ದರಿಂದ ಯಾರಿಂದಾಗಲಿ ಯಾವ ವಿಧದಿಂದಾಗಲಿ ಯಾರೇ ಆಗಲಿ ನನ್ನ ರುಜುವಿಲ್ಲದೆ ಆಸ್ತಿಗಳನ್ನು ಹೊಂದಿದರೆ ನನ್ನ ನಷ್ಟ ಕಷ್ಟಗಳಿಗೊಳಗಾಗಬೇಕಾಗುತ್ತೆ, ಮತ್ತು ಈ ಪತ್ರಿಕೆಯ ತಾ 1 5 13 ರಲ್ಲಿ ನೋಡಿ ಇವುಗಳ ಬಾಜೀಗೊಳಗಾಗಬೇಕಾಗುತ್ತೆಂದು ಶೃತಪಡಿಸಿರುತ್ತೇನೆ [33 1]

25 1 1914, ಮಾಜಿ ಶಿಲ್ಲೆದಾರ್ ಲಕ್ಷ್ಮಣಸಿಂಗರ ಮೊಮ್ಮಗ ಬ ರಾಂಸಿಂಗ್,
ಬೂದಿಹಾಳ್ ಬುಕ್ ಸೆಲರ್ ಮತ್ತು ಸಣ್ಣದ ಬೇಸಾಯ

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ, 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳು 1 2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣುವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು. ಬಾಯಿನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ಸಂಟಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು-ದಮ್ಮು-ಅರೋಚಕ ಹೊಟ್ಟೇನೋವು ಮಲಬಂಧ ಶರೀರದಲ್ಲಿ ದೌರ್ಬಲ್ಯ ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವದು ಮಲೆನಾಡಿನಲ್ಲಿರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮಾನವಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ [220 16]

ಶ್ರೀಕರ ಕಸ್ತೂರಿ ಮಾತ್ರೆ —ಅನುಪಾನಪತ್ರ ಸಹಿತ 250 ಮಾತ್ರೆ. 4 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,26,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ ಎಸ್. ರಟಿಲೊ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-20] ಬ್ರಾಂಚ್ ಸೆಕ್ರೆಟರಿ, ಮದರಾಸ್

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ " ಕಾಮಿನಿಯಾ ತೈಲ "ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ತಲೆ ಬುರುಡೆಯನ್ನು ಶುದ್ಧಮಾಡುತ್ತೆ, ಸುಂದಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ಕೊಡಬೇಕು

3 ಸೀಸೆಗಳಿಗೆ ರೂ 2-10-0. ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ॥ ಡಿ ಸಾಲೊಮನ್‌ರವರು ಬರೆಯುವದು—" ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ "

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ " ಇದು ಅಗ್ಗ, ಇದು ಒಳ್ಳೇದು " ಎಂದು ಹೇಳಿ ಮೋಸಮಾಡುವರು ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, " ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲಿ, ಹೆಚ್ಚಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲಿ 1ಕ್ಕೆ ಕ್ರಯ 0-8-0 ಟ.ಖ. ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ್.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ " ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0. 3 ಬಾಟ್ಲಿಗಳಿಗೆ ರೂ. 2-8-0 ವಿ. ಪಿ ಖರ್ಚು ಪ್ರತ್ಯೇಕ.

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ.— [19-5]

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜಂಟ್, ಡಿ. ಉಲ್ಲಿನ್ ಮಾರ್ಟೀನ, ಮಂಗಳೂರು.

CHAMBERLAIN'S PAIN BALM.

ಚೇಂಬರ್ಲೇನ ಯವರು ಮಾಡಿದ ನೋವುಹರ ಔಷಧವು.



3-7

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡಿತ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕ ಮಹಾಶಯರಿಗೆ ತಿಳಿಯಪಡಿಸುವದೇನೆಂದರೆ—

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ 1860 ನೇ ಇಸವಿಯಲ್ಲಿ ಮಂಜೂರಾದ " ಇಂಡಿಯನ್ ಪೆನಲ್ ಕೋಡ್ " ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಪಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು ? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ ? ಜಾಮೀನ್ ತೆಗೆದುಕೊಂಡು ಬಿಡಬಹುದೇ ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ ? ಎಂಬ ತಪ್ಶೀಲುಗಳನ್ನು ವಿವರಿಸಲ್ಪಟ್ಟಿರುವವು ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ನ್ಯಾಯಾಧಿಕಾರಿಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮುಖ್ಯವಾಗಿ ಜನಗಳಿಗೂ ಉಪಯೋಗಕರವಾದದ್ದು

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು ಅಂತಹ ಮೊಕದ್ದಮೆಗಳು ಉದಾಹರಣೆಗಳಾಗಿ ಈ ಪುಸ್ತಕದಲ್ಲಿ ಅಡಗಿರುವವು.

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಆಸಾಮಿ ಚೋರಿ, ಗಂಡನು ಹೆಂಡತಿ 12 ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟ ರಕಕ್ಕೆ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು

ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು

ಕ್ರಯ ಪ್ರತಿ 1 ಕ್ಕೆ 2 ರೂಪಾಯಿ , ಟಪ್ಪಾಲ್ ಛಾರ್ಜು 4 ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ, ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 31]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕುಂತಳಾನಂದ ತೈಲವು.

192 21

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿವೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕುದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ:—ಬಿ. ಎಮ್ ನಾಥ ಮತ್ತು ಕಂಪೆನಿ,

ಮೌಂಟ್ ರೋಡ್, ಮದರಾಸ್

ಕನ್ನಡ ಲಾ ಪುಸ್ತಕಗಳು. ಇಂಡಿಯನ್ ಪೆನಲ್ ಕೋಡು.

ಜಡ್ಜಿಗಳ ಟಿಪ್ಪಣಿ ಮತ್ತು ಆಚರಣೆ ಸಹಿತವಾದದ್ದು ರೂ 2, ಹೊಸನು ರೂ 2-8-0 ಸಿವಿಲ್ ಪ್ರೊಸೀಜರ್ ರೂ. 2-8-0 ವ್ಯವಹಾರ ಸಂಬಂಧವೆಂಬ ಕಂಟ್ರಾಕ್ಟ್ ಆಕ್ಟ್ ರೂ 2 ಪ್ರಶ್ನೋತ್ತರ ಶಾಸ್ತ್ರಬೋಧಿನಿ [41-1]

ವಿಳಾಸ—ಬಿ ನರಸಿಂಗರಾವ್, ಎಡಿಟರ್, " ಲಾ ಗೆಜೆಟ್, " ಬೆಂಗಳೂರು ಸಿಟಿ

English Papers with L S Text Summary, Special Papers, and Monthly Tests, etc Subscription Rupees 2 (in advance) **Students' Spelling Book** As 4. (Postage Extra) **Postal Tution** Monthly Fees' English **Rs 2**, Arithmetic **Re. 1; the rest As 8** (all in advance) ***Apply to*** **M N Sitarama Rao,**

[273 8] **Krishnaraja Mohalla, Mysore**

ಮನೆ ವಿಕ್ರಯದ ಪ್ರಕಟನೆ.

ಮೈಸೂರಲ್ಲಿ ಜಗನ್ಮೋಹನ ಬಂಗ್ಲೆ ಬಳಿಯಲ್ಲಿ ಎ ರಾಮಣ್ಣನವರ ಬೀದಿಯಲ್ಲಿರುವ ರಿಟೈರಡ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರವೇಟರ್ ಬಿ ರಾಮಸ್ವಾಮಿ ಅಯ್ಯರವರ ಮನೆಯು ವಿಕ್ರಯಮಾಡಲ್ಪಡುವುದು ತಪ್ಶೀಲುಗಳನ್ನು ಮೈಸೂರು ಕೋಆಪರೆಟಿವ್ ಸೊಸೈಟಿ ಸೆಕ್ರೆಟರಿ ಮ ಎಚ್ ಕೃಷ್ಣಾಚಾರ್ಯರವರಿಂದಾಗಲಿ, ಮಾಲೀಕರಿಂದಾಗಲಿ ತಿಳಿಯಬಹುದು [19 2]

ಬಿ ರಾಮಸ್ವಾಮಿಅಯ್ಯರ್, ಮಹಾರಾಣಿಕಾಲೇಜು, ಮೈಸೂರು.

ಜೈನರವರ ಸ್ವದೇಶೀ ಬಾಮ್

ರೆಜಿಸ್ಟರಾದ ಟ್ರೇಡ್ ಮಾರ್ಕು

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಸೆಳೆತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ ಜಟ್ಟಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರ್ಮಾಡಿದೇವೆ ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯಕ್ಷಿಣಿಯಂಥಾ ಮದ್ದು ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ. ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ, 3 ಕ್ಕೆ ರೂ. 1-14-0 ವಿ ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ. [25-4]

ವಿಳಾಸ—ಜಿ. ಗುಲಾಬ್ ಚಂದ್ ಸೌಕಾರ್,

50 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಶ್ವಾಸಕೇಸರಿ ಲೇಹ್.

ಅಸಲ್ಮಾಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಆಸ್ತ್ಮಾಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವ್ವದರೊಳಗೆ ಖಂಡಿತವಾಗಿ ಪೂರ್ಣ ಗುಣಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಸಲ್ಲಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ. ಓದಿನೋಡಿ

20 ತೊಲಾ ಲೇಹದ ಟಿನ್ ಡಬ್ಬಕ್ಕೆ ಕ್ರಯ ರೂ. 1-8-0.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

177 ಚೀನಾ ಬಜಾರ್ ರೋಡ್, ಮದ್ರಾಸು.

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ॥ ಎ. ಭೀಮರಾವ್ ಮೊದಲಿಯಾರ್ರು ತಾ 21-10-1913 ರಲ್ಲಿ ಬರೆಯುತ್ತಾರೆ —" ನಾನು ಬಹುಕಾಲದಿಂದ ಅಸ್ತ್ಮಾರೋಗದಲ್ಲಿ ನರಳುತ್ತಿದ್ದೆನು. ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ್ಯ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ. ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ " [82-39]

ಶ್ರೀವಿವೇಕಾನಂದೋಪನ್ಯಾಸಗಳು

ಬಂಗಾಳಿ ಭಾಷೆಯಿಂದ ತಿಳಿಗನ್ನಡಕ್ಕೆ ಪರಿವರ್ತನ.

೧ ಶ್ರೀ ವಿವೇಕಾನಂದ ಸ್ವಾಮಿ (ಸಚಿತ್ರ ಚರಿತ್ರ) .. ಕ್ರಯ ೦–೮–೦

ಚಿಕಾಗೋ ನಗರದ ಉಪನ್ಯಾಸಗಳು.

೨ ಹಿಂದೂ ಮತ . .. ಕ್ರಯ ೦–೪–೦
೩. ಮದೀಯ ಆಚಾರ್ಯದೇವ ... . ಕ್ರಯ ೦–೪–೦
೪ ಭಾರತೀಯರಿಗೆ ಸದುಪದೇಶ .. . . ಕ್ರಯ ೦–೪–೦

ಶ್ರೀ ರಾಮಕೃಷ್ಣ ಪರಮಹಂಸದೇವ, ಶ್ರೀವಿವೇಕಾನಂದ ಸ್ವಾಮಿಯ ಜೀವನಗಳು, ಕರ್ಮಯೋಗ, ಭಕ್ತಿಯೋಗ, ರಾಜಯೋಗ ಜ್ಞಾನಯೋಗ, ಇವು ಅಚ್ಚಿನಲ್ಲಿವೆ

ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಸಂಗಿರಾಮ; ಅಥವಾ, ಎಸ್. ಆರ್. ಭಾರತಿ,

[6–7] "ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವವೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯ ಶಾಸ್ತ್ರ ಪಂಡಿತರು ವೈದ್ಯ ಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮಿರುವಾಯುವಿನ ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ಸಗಟಿ, ವಾಯುನೋವು (ಕ್ಯಾಕಾರು ಹಿಡಿತ), ಉಳುಕುಹಿಡಿಸಿದ್ದರು, ಕರಿಸಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲ, ಹಲ್ಲುನೋವು, ತಲೆನೋವು, ಅರೆತಲೆನೋವು, ಬಾವು, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಆಳ್ಕೆ) ಕೃತ ದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದು [12–6]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ 0 8 0. ವಿ ಪಿ ಖರ್ಚು 0 4 0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ನೋಟೀಸು

ಅಮೃತಸಾರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಿಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವದೇನೆಂದರೆ:

ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು ಇವರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿಬಿಟ್ಟವೆಂದು ನಿಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ. ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ನಂಬಿಕೆಯಾಗಿ ಹೇಳುವುದೇನಂದರೆ ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು ಎಷ್ಟು ಮಟ್ಟಿನ ವೇಗಗಳು ಒಂದಾಗೂ ಧಾವಿತಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ ಈ ಬಾಗದಲ್ಲಿ ನಿಮ್ಮ ಬ್ಯಾಂಕಿನ ಯಾವ ಕಷ್ಟನಷ್ಟವೂ ಬರುವದಾಗಿಲ್ಲವೆಂದು ಖಂಡಿತವಾಗಿ ತಿಳಿಯಿರಿ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಗ್ ಕಂಪನಿಯು ಈಚೆಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರ್ನಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್ ಇವೆರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ಹಣವು ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು.

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರ್ ಆಫೀಸುಗಳನ್ನು ಪಡೆದಿರೋಣದರಿಂದ ಕೆಲವು ಜನರು ಅದೂ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದ್ದಾರೆ. ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ, ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿರುವುದರ ವಿನಾ ಯಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ [216–16]

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡಿಸುತ್ತಾ ಬಂದಿದ್ದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆಗಳನ್ನಿಟ್ಟುಕೊಂಡು ಬಂದಿದ್ದೀರೋ ಅನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದ್ದಾರೆ

ಟಿ. ಎಸ್. ಆರ್. ಅಯ್ಯರ್,
ಸೆಕ್ರೆಟರಿ, ಮದರಾಸ್ ಬ್ರಾಂಚ್.

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್.

ಪ್ಯಾಕೆಟ್ ಸಿಗರೆಟ್ ಲೈಟರ್.

ಕ್ರಯ ರೂ. 2–8–0.

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದ ಕಡ್ಡಿಯೇ ಬೇಕಾದ ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ತಯಾರಿಸಿ ಒಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು. ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ. ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [259-10]

ವಿಳಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು.

ಹಾಸನದ ಮುನ್ಸೀಫ್ ಕೋರ್ಟಿನಲ್ಲಿ

1913 14 ನೇ ಸಾಲಿನ ಮಿಸ್ ನಂಬರ್ 80

ಮೃತಪಟ್ಟ ಪಾಸಾ ರಾಮಚಂದ್ರರಾಯರ ಆಸ್ತಿ ವಿಷಯದಲ್ಲಿ

ಅರ್ಜಿದಾರರು ಧಾರವಾಡ್ ಡಿಸ್ಟ್ರಿಕ್ಟು ಹುಬ್ಬಳ್ಳಿ ಟೌನ್‌ನಲ್ಲಿರುವ ಅರಕಲಗೂಡು ಶೇಕದಾರರಾಗಿದ್ದ ಪಾಸಾ ರಾಮಚಂದ್ರರಾಯರ ಮಗ ಬಾಲಕೃಷ್ಣ, ಮೈನರ್ ಗಾರ್ಡಿಯನ್ ಚಿಕ್ಕಪ್ಪನಾದ ಬಾಲಕೃಷ್ಣರಾವ್ ಪಾಸಾಯವರ ಮಗ 651 ನೇ ನಂಬರ್ ಪೋಲೀಸ್ ಕಾನ್‌ಸ್ಟೇಬಲ್ ನಾರಾಯಣ ಬಾಲಕೃಷ್ಣ ಪಾಸಾ ಮೃತಪಟ್ಟ ಸದರೀ ಪಾಸಾ ರಾಮಚಂದ್ರರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇರೆ ಅರ್ಜಿದಾರ್‍ರು ಧಾರವಾಡ ಡಿಸ್ಟ್ರಿಕ್ಟು ಹಾವೇರಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಪಾಸಾ ರಾಮಚಂದ್ರರಾಯರ ಜಿಂದಗಿ ಬಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901 ನೇ ಇಸವಿ 7 ನೇ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ

ಸದರೀ ದರಖಾಸ್ತುದಾರರಾದ ಅರ್ಜಿದಾರ್‍ರ ಅರ್ಜಿಯನ್ನು ಸನ್ 1914 ನೇ ಇಸವಿ ಮಾರ್ಚಿ ತಿಂಗಳು ತಾರೀಖು 13 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಸಾ ರಾಮಚಂದ್ರರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ

ಸನ್ 1914 ನೇ ಇಸವಿ ಫೆಬ್ರವರಿ ತಿಂಗಳು 6 ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಸಹಿ ನಮ್ಮ ದಸ್ತಖತ್ತುಡನೆ ಕೊಡಲಾಗಿದೆ

T. Krishna Iyengar, B.A., B.L.,
[43-1] *Munsiff.*

A GREAT CONCESSION!

ಒಂದು ರೂಪಾಯಿ ರಿಯಾಯಿತಿ } ಅಪೂರ್ವ ಲಾಭ!

ಚಂದ್ರಪ್ರಭಾ—ಬೆಲೆ ೧೪ ಆ. ಶೋಭನೆ. ೧೨ ಆ.
ಕಲಲನಾಥ— ೮ ಆ. ಚಂದ್ರಕಳಾ ೬ ಆ.

೨॥ ರೂ. ಬೆಲೆ ಬಾಳುವ ಈ ನಾಲ್ಕು ಅತ್ಯುತ್ತಮವಾದ ಕಾದಂಬರಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಬಹು ಸ್ವಲ್ಪ ದಿನಗಳ ಮಟ್ಟಿಗೆ ಟಪಾಲು ಖರ್ಚು ಸೇರಿಸಿ ೨ ರೂ ಗೆ ವಿ ಪಿ. ಯನ್ನು ಕಳುಹಿಸುವೆವು ಅಲ್ಲದೆ ೧೯೧೪ ನೇ ವರುಷದ ಉತ್ತಮವಾದ ೧ ಪಾಕೆಟ್ ಡೈರಿಯನ್ನು ಬಹುಮಾನ ಕೊಡುವೆವು. ಮೇಲ್ಕಂಡ ಪುಸ್ತಕಗಳಲ್ಲಿ ಯಾವುದಾದರೂ ಒಂದನ್ನೇ ಅಪೇಕ್ಷಿಸಿದಾಗ್ಯೂ ಟಪಾಲು ಖರ್ಚು ಮಾಫಿ

ವಂಗವಿಜೇತ—ಬೆಲೆ ರೂ. ೧–೪–೦

ಬಿ. ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಬಂಗಾಳಿ ನಾವಿಲ್. ಇವರ ಎಲ್ಲಾ ಕಾದಂಬರಿಗಳೂ ನಮ್ಮಲ್ಲಿ ದೊರೆಯುವವು

ಯಂ. ಸುಬ್ಬರಾವ್,
[30 1] ಬುಕ್ ಸೆಲರ್, ಶಂಕರಪುರಂ, ಬೆಂಗಳೂರು.

ಬಹಿರಂಗವಾದ ನೋಟೀಸ್.

ನಂಜನಗೂಡು ಶ್ರೀಕಂಠೇಶ್ವರ ಬ್ಯಾಂಕ್, ಲಿಮಿಟೆಡ್, ಕಂಪೆನಿ

ಈ ಬ್ಯಾಂಕಿನಲ್ಲಿ ಮದ್ದೂರು ಕಪನಿಶೆಟ್ಟರ ಮಕ್ಕಳು ತಿಪ್ಪಯ್ಯಶೆಟ್ಟರು 1907 ನೇ ಇಸವಿ ಮಾರ್ಚಿ 19 ರಲ್ಲಿ 155 ನೇ ನಂಬರು ನಗಾಧಾರದ ಮೇಲೆ ಪಡೆದ 175 ರೂಪಾಯಿಗಳನ್ನೂ, ಅದೇ ತಾರೀಖಿನಲ್ಲಿ 156 ನೇ ನಂಬರು ನಗಾಧಾರದ ಮೇಲೆ ಪಡೆದ 10 ರೂಪಾಯಿಗಳನ್ನೂ, ಅದೇ ತಾರೀಖಿನಲ್ಲಿ 157 ನೇ ನಂಬರು ನಗಾಧಾರದ ಮೇಲೆ ಪಡೆದ 110 ರೂಪಾಯಿಗಳನ್ನೂ ಮತ್ತು ಅದೇ ತಾರೀಖಿನಲ್ಲಿ 158 ನೇ ನಂಬರು ನಗಾಧಾರದ ಮೇಲೆ ಪಡೆದ 125 ರೂಪಾಯಿಗಳನ್ನೂ ವಾಪಾ ವಾಯಿದೆ ಕಳೆದು ಬಹಳ ದಿನಗಳಾದರೂ ಅನೇಕಾವರ್ತಿ ನೋಟೀಸನ್ನು ಕೊಟ್ಟಿದ್ದಾಗ್ಯೂ ಬಿಡಿಸಿಕೊಳ್ಳದೆಹೋದದ್ದರ ಮೇಲೂ ಮತ್ತು 157 ನೇ ನಂಬರಿನಲ್ಲಿ ಇಟ್ಟು ಇರುವ ಆಸಾಮಿಯು ಮೋಸಕರವಾದದ್ದೆಂದು ನಂಜನಗೂಡು ಸಬ್ ಡಿವಿಜನ್ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ 1908 69 ನೇ ಇಸವಿಯಲ್ಲಿ ಮಾಡಿದ್ದ ಕೇಸಿನಲ್ಲಿ ಹುಟ್ಟಿದ ವಾರಂಟಿಗೆ ಸಿಕ್ಕದೆಯೂ ಇರುವದರಿಂದ ಮೋಕದ್ದಮೆ ತೀರ್ಮಾನವಾಗಿರುವಂತೆ 1914 ನೇ ಇಸವಿ ಫೆಬ್ರವರಿ 28 ನೇ ತಾರೀಖಿನ ಒಳಗಾಗಿ ಸದರಿ ತಿಪ್ಪಯ್ಯಶೆಟ್ಟರಾಗಲಿ, ಅವರ ನ್ಯಾಯವಾದ ಮತ್ತು ಅಧಿಕಾರದ ಪಡೆದ ಪ್ರತಿನಿಧಿಗಳಾಗಲಿ ಬಂದು ಬ್ಯಾಂಕಿಗೆ ಕೊಡಬೇಕಾದ ಅಸಲು ಮತ್ತು ಬಡ್ಡಿಯನ್ನು ಪಾವತಿಮಾಡಿ ತಮ್ಮ ಮಾಲುಗಳನ್ನು ವಾಪಸು ಪಡೆಯದಿದ್ದರೆ 1914 ನೇ ಇಸವಿ ಮಾರ್ಚಿ 22 ನೇ ತಾರೀಖು ಭಾನುವಾರದ ಲಾಗಾಯಿತು ಬ್ಯಾಂಕು ಹೌಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಈ ಮೂಲಕ ತಿಳಿಸಿದೆ. [12–1]

ತಾ॥ ೭–2–1914. ಎಂ. ತಿಂಗರಯ್ಯಂಗಾರ್, ಏಜಂಟ್.

ವೃತ್ತಾಂತ ಪತ್ರಿಕೆ
— ೦ —
ಸನ್ ೧೯೧೪ ನೇ ಇಸವಿ ಫೆಬ್ರವರಿ ತಾ ೧೨ ನೇ ಗುರುವಾರ

ಕೊಡಗಿನ ಆಳ್ವಿಕೆಯ ರಿಪೋರ್ಟು

ಕೊಡಗು ಸೀಮೆಯು ಪ್ರಜಾ ಸಂಖ್ಯೆಯಲ್ಲಿ ಬೆಂಗಳೂರಿನಷ್ಟು ಕೂಡ ದೊಡ್ಡದಾಗಿಲ್ಲ ಅದರ ವಿಸ್ತೀರ್ಣವು ೧,೫೮೨ ಚದರ ಮೈಲಿಯಾಗುತ್ತದೆ ಒಟ್ಟು ೧,೭೪,೯೭೬ ಪ್ರಜೆಗಳು ಅಲ್ಲಿ ವಾಸಮಾಡುವರು ಇಷ್ಟು ಸಣ್ಣದಾದ ಕೊಡಗು ಸೀಮೆಯನ್ನೇ ಪ್ರತ್ಯೇಕವಾದ ಸಣ್ಣ ಸಂಸ್ಥಾನದೋಪಾದಿಯಲ್ಲಿಟ್ಟುಕೊಂಡು ಪರಿಪಾಲನೆ ಮಾಡುತ್ತಾ ಬಂದಿದಾರೆ ಇದಕ್ಕೆ ಆ ಸೀಮೆಯ ಪೂರ್ವ ಚರಿತ್ರೆಯೇ ಮುಖ್ಯ ಕಾರಣ ಇಂಥಾ ಸಣ್ಣ ಸೀಮೆಯ ಆಳ್ವಿಕೆಯ ರಿಪೋರ್ಟು ನಮಗೆ ತಲಪಿರುವುದು ಕಳೆದ ೧೯೧೨ ೧೩ ನೇ ಸಾಲಿನಲ್ಲಿ ಕೊಡಗಿನ ರೆವಿನ್ಯೂ ವರಮಾನ ೮,೨೦,೩೧೪ ರೂಪಾಯಿಗಳೆಂದೂ, ಆಳ್ವಿಕೆಯ ಖರ್ಚು ೭,೪೮,೯೩೧ ರೂಪಾಯಿ ಮಾತ್ರ ಆಗಿದೆ ಎಂದೂ ತಿಳಿದು ಬರುತ್ತದೆ ಈ ಸೀಮೆಯ ಆಳ್ವಿಕೆಯು ತುಂಬಾ ತೃಪ್ತಿಕರವಾಗಿದೆ ಎಂದೂ, ಪ್ರಜಾಕಂಟಕಗಳಾದ ದುಷ್ಕಾರ್ಯಗಳು ಹೆಚ್ಚಾಗಿಲ್ಲವೆಂದೂ ಗೊತ್ತಾಗುವುದು.

ಕೊಡಗಿನಲ್ಲಿ ಕಾಫಿಯೇ ಮುಖ್ಯವಾದ ಬೆಳೆ, ಆದರೆ ಈ ವರುಷದ ಫಸಲು ಎಂದಿನಷ್ಟು ಹೆಚ್ಚಾಗಿಯೂ ಹುಲುಸಾಗಿಯೂ ಆಗಲಿಲ್ಲ ಆದಾಗ್ಯೂ ಬೆಳೆದ ಫಸಲಿಗೆ ಬಹಳ ಒಳ್ಳೇ ಧಾರಣೆ ದೊರಕಿರುತ್ತದೆ ಈಚೆಗೆ ಆ ಸೀಮೆಯೊಳಗೂ ಕಾಫಿ ವ್ಯವಸಾಯವು ಕಡಮೆಯಾಗುತ್ತಲೂ, ಅದಕ್ಕೆ ಪ್ರತಿಯಾಗಿ ಟೀ ಮತ್ತು ರಬ್ಬರ್ ವ್ಯವಸಾಯವು ಹೆಚ್ಚುತ್ತಲೂ ಬಂದಿದೆ ಈ ಹೊಸ ಬೆಳೆಗಳು ಇನ್ನೂ ಪ್ರಾರಂಭ ದಸೆಯಲ್ಲಿರೋಣದರಿಂದ ಸದ್ಯದಲ್ಲಿ ಅವುಗಳ ಲಾಭನಷ್ಟಗಳನ್ನು ಕುರಿತು ಹೆಚ್ಚು ಹೇಳುವುದು ಸಹಜವಲ್ಲ ಸರ್ಕಾರದವರು ಅಲ್ಲಿನ ರೈತರು ರಾಗಿ ಬೆಳೆಯುವಂತೆ ಮಾಡಬೇಕೆಂದು ಪ್ರಯತ್ನಪಟ್ಟರು ಇದು ಸಾರ್ಥಕವಾಗದೆಹೋಯಿತು ಈಗ ಕೊಡಗಿನಲ್ಲಿ ಕಿತ್ತಳೆಹಣ್ಣು, ಆಲೂಗೆಡ್ಡೆ, ಮೆಯಿಜ್ ಎಂಬ ಜೋಳ, ಇವುಗಳನ್ನು ಬೆಳೆಯುವಂತೆ ರೈತರನ್ನು ಪ್ರೋತ್ಸಾಹಪಡಿಸುತ್ತಿದಾರೆ

ವಿದ್ಯಾಭ್ಯಾಸವು ಆ ಸೀಮೆಯಲ್ಲಿ ಹರಡುತ್ತಿದೆ ಪ್ರೌಢ ವಿದ್ಯಾಶಾಲೆಗಳಿಗಿಂತ ಪ್ರಥಮ ಶಿಕ್ಷಣದ ಪಾಠಶಾಲೆಗಳೂ, ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿರುವವು ಸದ್ಯದಲ್ಲಿ ಸ್ಕೂಲಿಗೆ ಹೋಗತಕ್ಕ ವಯಸ್ಸಿನಲ್ಲಿರುವ ಮಕ್ಕಳ ಪೈಕಿ ಶೇಕಡ ೨೦ ಮಕ್ಕಳು ಪಾಠಶಾಲೆಗೆ ಹೋಗುತ್ತಿದಾರೆ

ಕೊಡಗಿನಲ್ಲಿ ಆಮದು ರಫ್ತಿಗೂ, ಜನಸಂಚಾರಕ್ಕೂ ಸರ್ಕಾರದವರು ಕ್ರಮೇಣ ಸೌಲಭ್ಯಗಳನ್ನು ಹೆಚ್ಚು ಮಾಡಿಕೊಡುತ್ತಿದಾರೆ ಹಲವು ಹೊಸ ರಸ್ತೆಗಳು ಹಾಕಿದ್ದಾಯಿತು, ಇನ್ನು ಕೆಲವು ಮಾರ್ಗಗಳು ಇಷ್ಟರಲ್ಲೇ ಆಗುವವು ಮುಖ್ಯವಾಗಿ ಅಲ್ಲಿಗೆ ರೈಲ್ ಮಾರ್ಗ ಇಲ್ಲದಿರುವುದು ದೊಡ್ಡಕೊರತೆಯಾಗಿದೆ ಇದರಿಂದ ಆ ಸೀಮೆಯ ಬೆಳೆಗಳು ಸುಲಭವಾಗಿ ಸಾಗಿ ಹೊರಕ್ಕೆ ಬರಲು ಬಹಳ ಪ್ರಯಾಸವಾಗಿರುವುದು.

ಈ ರಾಷ್ಟ್ರದ ಇತರ ಭಾಗಗಳಲ್ಲಿ ಹೇಗೋ ಹಾಗೆ ಕೊಡಗಿನಲ್ಲೂ ಮದ್ಯಪಾನವು ಹೆಚ್ಚುತ್ತಾ ಇರುವಂತೆ ಕಾಣುತ್ತದೆ ಎಕ್ಸೈಸ್ ಬಾಬಿನ ಉತ್ಪತ್ತಿಯು ವರುಷೇ ವರುಷ ಹೆಚ್ಚುತ್ತಿರುವುದೇ ಇದಕ್ಕೆ ದೃಷ್ಟಾಂತವೆಂದು ಹೇಳಬಹುದು.

ಲಾಂಟಾನೆ ಎಂಬ ಕೆಟ್ಟ (ಉಣ್ಣೆ ಕಾಡು) ಗಿಡದ ಪ್ರಬಲ ದೆಸೆಯನ್ನು ಅಣಗಿಸುವ ಭಾಗದಲ್ಲಿ ಸರ್ಕಾರದವರು ತುಂಬಾ ಸಾಹಸಪಡುತ್ತಿದಾರೆ ಕಳೆದ ವರುಷ ಈ ಕಾಡುಗಿಡಗಳನ್ನು ೩,೬೫೨ ಎಕರೆ ಜಮೀನುಗಳಲ್ಲಿ ಕೀಳಿಸಿ ಹಾಕುಮಾಡಿಸಿರುತ್ತಾರೆ ಆದರೆ ಅದು ಮತ್ತೆ ಬೆಳೆಯುವುದಕ್ಕೆ ಅವಕಾಶಕೊಟ್ಟಲ್ಲಿ ಇದು ವರೆಗೆ ಪಟ್ಟಶ್ರಮವೂ ಹಣದ ಖರ್ಚೂ ವ್ಯರ್ಥವಾಗುವವು

ಕಳೆದ ವರುಷ ಮರಣಸಂಖ್ಯೆಯು ಸ್ವಲ್ಪ ಹೆಚ್ಚಾಗಿದ್ದರೂ ಈ ಸೀಮೆಯು ಚೆನ್ನಾಗಿ ಅಭಿವೃದ್ಧಿಗೆ ಬರುತ್ತಿದೆ ಎಂದು ಹೇಳಬಹುದು

“ ನಿನ್ನ ಕೊರತೆಯು ನನ್ನದಕ್ಕಿಂತ ಹೆಚ್ಚಿನದು ”

ಈ ವಾಕ್ಯವನ್ನು ನುಡಿದವನು ಯಾರು ? ಯಾವಾಗ, ಯಾವ ಸಂದರ್ಭದಲ್ಲಿ ಅವನು ಅದನ್ನು ನುಡಿದನು ?

ಈಗ್ಗೆ ಸುಮಾರು ಇನ್ನೂರು ವರುಷಗಳ ಕೆಳಗೆ ಎಲಿಸಬೇತಳು ಎಂಬ ರಾಣಿಯು ಇಂಗ್ಲಂಡ್ ದೇಶವನ್ನು ಆಳುತ್ತಿರುವಾಗ ಸರ್ ಫಿಲಿಪ್ ಸಿಡ್ನಿ ಎಂಬ ಪ್ರಖ್ಯಾತಸೈನ್ಯಾಧಿಪತಿಯು ಆಸ್ಥಾನದಲ್ಲಿ ರಾಣಿಗೆ ಅತಿ ಪ್ರಿಯನಾಗಿದ್ದನು ಈತನು ಶೂರನಾದ ಸೈನ್ಯಾಧಿಪತಿಯಾಗಿದ್ದುದಲ್ಲದೆ ಮಹಾಪಂಡಿತನೂ ಕವಿಯೂ ಸದ್ಗುಣಸಂಪನ್ನನೂ ಆಗಿದ್ದನು ಇವನು ರಾಣಿಯ ಆಜ್ಞಾನುಸಾರವಾಗಿ ಹೊಲ್ಲಾಂಡ್ ದೇಶಕ್ಕೆ ಹೋಗಿ, ಅಲ್ಲಿ ಆಗ ಸ್ಪೇನ್ ದೇಶದವರಿಗೂ ಇಂಗ್ಲಿಷಿನವರಿಗೂ ನಡೆಯುತ್ತಿದ್ದ ಘೋರವಾದ ಯುದ್ಧದಲ್ಲಿ ಬಹು ಸಾಹಸವನ್ನು ಪ್ರಕಾಶಪಡಿಸಿದರೂ ಕಟ್ಟಕಡೆಗೆ ಪ್ರಾಣಾಪಾಯಕರವಾದ ಪೆಟ್ಟನ್ನು ಹೊಂದಿದನು ಸೈನಿಕರು ಅವನನ್ನು ರಣರಂಗದಿಂದ ಆಚೆಗೆ ವೈದು, ಶೈತ್ಯೋಪಚಾರವನ್ನು ಮಾಡುತ್ತಿರುವಲ್ಲಿ ಅವನು ಪಡೆದ ಪೆಟ್ಟಿನ ಘಾಯದಿಂದ ಅವನಿಗೆ ಬಹಳ ದಾಹವುಂಟಾಯಿತು ಆದರೇನು ಮಾಡುವದು ? ಸುತ್ತಲಿದ್ದ ಪ್ರಾಂತ್ಯದಲ್ಲಿ ನೀರು ಸಿಕ್ಕುವದು ಮಹಾಕಷ್ಟಕರವಾಗಿದ್ದಿತು ಆ ರಣರಂಗದ ಯಾವ ದಿಕ್ಕಿಗೆ ನೋಡಿದರೂ ಬರೀ ಬೆಂಗಾಡಿರುವದೇ ಹೊರತು ನೀರು ಸೆಲೆಯ ಸುಳಿವೇ ಕಾಣಲಿಲ್ಲ ಕಟ್ಟಕಡೆಗೆ ಬಹು ಪ್ರಯಾಸದಿಂದ ಒಂದು ಬಟ್ಟಲು ನೀರನ್ನು ಹೇಗೋ ತೆಗೆದುಕೊಂಡು ಬಂದು ಮರಣಸಂಕಟದಿಂದಲೂ ವಿಪರೀತವಾದ ನೀರಡಿಕೆಯಿಂದಲೂ ಕಷ್ಟಪಡುತ್ತಿದ್ದ ಈ ಸೈನ್ಯಾಧಿಪತಿಯ ಕೈಗೆ ಕೊಟ್ಟರು ಅವನು ಆ ಬಟ್ಟಲನ್ನು ಎತ್ತಿ ಅದರಲ್ಲಿದ್ದ ನೀರನ್ನು ತನ್ನ ತುಟಿಗೆ ಮುಟ್ಟಿಸುವ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಪೆಟ್ಟುತಿಂದು ಪ್ರಾಣಾಪಾಯದಲ್ಲಿ ಸಂಕಟಪಡುತ್ತಿದ್ದ ಒಬ್ಬ ಸಿಪಾಯಿಯನ್ನು ಹೊತ್ತುಕೊಂಡು ಬಂದು ಸರ್ ಫಿಲಿಪ್ ಸಿಡ್ನಿಯು ಸಾಯಲಾಗಿದ್ದ ಸ್ಥಳದಲ್ಲಿ ಮಲಗಿಸಿದರು ಈತನು ಹುದ್ದೇದಾರನಲ್ಲ ಸಾಧಾರಣವಾದ ಒಬ್ಬ ಸಿಪಾಯಿ ಇವನು ಸರ್ ಫಿಲಿಪ್ ಸಿಡ್ನಿಯು ಕೈಯಲ್ಲಿ ಎತ್ತಿ ಹಿಡಿದು ಕುಡಿಯುವದಕ್ಕಿರುವ ನೀರನ್ನು ನೋಡಿ ಅತ್ಯಾತುರದಿಂದ ಆ ನೀರು ತನಗೆ ಲಭ್ಯವಾದರೆ ಧನ್ಯನಾದೇನೆಂದು ಕೇಳುವದಕ್ಕೆ ಶಕ್ತಿಯೂ ಸ್ವರವೂ ಪ್ರಾಯಶಃ ಧೈರ್ಯವೂ ಇಲ್ಲದವನಾಗಿ ಆ ಪಾತ್ರೆಯನ್ನೆ ದೃಷ್ಟಿಸುತ್ತಿದ್ದನು ಉದಾರಗುಣಪೂರ್ಣ ಸೇನಾಪತಿಯು ಆ ಸಿಪಾಯಿಯ ಮನೋಭಿಲಾಷೆಯನ್ನು ತಿಳಿದು ಅತ್ಯಂತ ಕಾರುಣ್ಯಭಾವದಿಂದ—ಎಲೈ ಸಹೋದರನೇ ನಿನಗಿರುವ ದಾಹಪೀಡನೆಯು ನನಗಿರುವದಕ್ಕಿಂತ ಹೆಚ್ಚಾದದ್ದು ಎಂತ ಹೇಳಿ, ಆ ನೀರನ್ನು ಆ ಸಿಪಾಯಿಗೆ ಕೊಟ್ಟು ಅವನ ದಾಹವನ್ನು ಪರಿಹರಿಸಿದನು ಅನಂತರ ಬೇರೆ ನೀರು ಸಿಕ್ಕದಿರಲು ನೀರಡಿಕೆಯಿಂದಲೇ ಮೃತಪಟ್ಟನು

ಈ ಚರಿತ್ರೆಯನ್ನು ಓದುವವರು ಸರ್ ಫಿಲಿಪ್ ಸಿಡ್ನಿಯ ಅಸ್ವಾರ್ಥತೆಯನ್ನೂ ಪರೋಪಕಾರಕ್ಕಾಗಿ ಆತನು ಮಾಡಿದ ಆತ್ಮನಿವೇದನವನ್ನು ಧ್ಯಾನಿಸಿ ಆತನ ಸದ್ಗುಣಕ್ಕಾಗಿ ಆತನನ್ನು ಮಹನೀಯನೆಂದು ಕೊಂಡಾಡದಿರಲಾರರು ನಮ್ಮ ದೇಶದಲ್ಲಿಯೂ ಇಂತಹ ಸತ್ಪುರುಷರು ಪುಷ್ಕಳವಾಗಿ ಹುಟ್ಟಲಿ ಇಂಥವರಿಂದ ನಿಜವಾಗಿ ದೇಶೋನ್ನತಿಯು ಲಭ್ಯವಾಗುವದು ಆದರೆ ಇಂತಹ ಪುಣ್ಯವಂತರು ಹುಟ್ಟುವದು ಹೇಗೆ ? ನಾವು ಏನೂ ಪ್ರಯತ್ನಮಾಡದೆ ಸುಮ್ಮನೆ ಕೂತುಕೊಂಡು ನನಗೂ ಇಂತಹ ಪುಣ್ಯಕೀರ್ತಿಯಾದ ಮಕ್ಕಳು ದೊರೆಯಲಿ ಎಂದು ಹಾರೈಸಿದರೆ ನಮ್ಮ ಮನೋರಥವು ಸಿದ್ಧಿಸುವುದೇ ? ಸರ್ ಫಿಲಿಪ್ ಸಿಡ್ನಿಯ ತಂದೆಯು ತಾನೇ ಸಕಲ ಸದ್ಗುಣ ಸಂಪನ್ನನಾಗಿರುವುದಕ್ಕೆ ಪ್ರಯತ್ನಮಾಡುತ್ತಾ ತನ್ನ ಮಗನನ್ನು ಬಾಲ್ಯದಿಂದಲೂ ಸತ್ಪ್ರವರ್ತನೆಯಲ್ಲಿ ತಿದ್ದುತ್ತಾ ಬಂದಿದ್ದನು ಚಿಕ್ಕವಯಸ್ಸಿನವನಾಗಿರುವಾಗಲೇ ಅಂದರೆ ಹನ್ನೆರಡು ವರುಷದ ಮಗನನ್ನು ದೂರದಲ್ಲಿದ್ದ ಊರಿಗೆ ಕಳುಹಿಸಿ ಅಲ್ಲಿನ ಪಾಠಶಾಲೆಯಲ್ಲಿ ಅವನಿಗೆ ತಕ್ಕ ವಿದ್ಯಾಭ್ಯಾಸವನ್ನು ಮಾಡಿಸಿದನು ಅವನು ತನ್ನ ಮಗನನ್ನು ಎಂತಹ ಸುಶಿಕ್ಷಣದಲ್ಲಿ ಬೆಳಸಿದನೆಂಬುವದು ತಂದೆಗೂ ಮಗನಿಗೂ ಪರಸ್ಪರ ನಡೆಯುತ್ತಿದ್ದ ಪತ್ರಗಳ ಮುಖೇನ ತಿಳಿದುಬರುತ್ತದೆ ದೂರವಾದ ಪಾಠಶಾಲೆಯಲ್ಲಿ ಓದುತ್ತಿದ್ದ ಮಗನಿಗೆ ತಂದೆಯು ಬರೆದ ಪತ್ರಗಳಲ್ಲಿ ಒಂದನ್ನು ಕನ್ನಡಿಸಿ ಕೆಳಗೆ ಮುದ್ರಿಸಿರುತ್ತೇವೆ ವಾಚಕರು ಅದನ್ನೋದಿ ಸಂತೋಷಪಡುವರೆಂದು ನಂಬುತ್ತೇವೆ

“ ನನ್ನ ಕುಮಾರನಾದ ಫಿಲಪ್ಪನೆ, ನೀನು ಬರೆದ ಎರಡು ಪತ್ರಗಳು ನನಗೆ ತಲುಪಿದವು ನಾನು ನಿನಗೆ ಬರೆಯುವ ಪತ್ರಗಳಲ್ಲಿ ಇದೇ ಮೊದಲನೆಯದು ಇವರಲ್ಲಿ ನಿನಗೆ ತಕ್ಕ ಬುದ್ಧಿವಾದವು ಇಲ್ಲದಿದ್ದರೆ ನನಗೆ ಅಸಂತೋಷವಾಗುವದು ನೀನು ಮಾಡಬೇಕಾದ ಮೊದಲನೆಯ ಕೆಲಸವೇನಂದರೆ, ಸರ್ವಶಕ್ತನಾದ ದೇವರ ಕಡೆಗೆ ನಿನ್ನ ಮನಸ್ಸನ್ನು ತಿರುಗಿಸಿ ಪೂರ್ಣ ಹೃದಯದಿಂದ ಆತನನ್ನು ಪ್ರಾರ್ಥಿಸುವದು ದೇವರ ಪ್ರಾರ್ಥನೆಮಾಡುತ್ತಿರುವಾಗ ನೀನು ಯಾರ ಸಮ್ಮುಖದಲ್ಲಿದ್ದೀ ? ನೀನು ಆತನಿಗೆ ಹೇಳಿಕೊಳ್ಳುತ್ತಿರುವ ಬಿನ್ನಹಗಳೇನು ? ಎಂಬದನ್ನು ಚೆನ್ನಾಗಿ ಮನನಮಾಡು ನಿನ್ನ ಬೋಧಕನಿಗೆ ನಮ್ರಭಾವಿಯೂ ವಿಧೇಯನು ಆಗಿರು ಏಕೆಂದರೆ ನೀನು ನಿನ್ನ ಮೇಲ್ಪಟ್ಟವರಿಗೆ ವಿಧೇಯನಾಗಿರುವದನ್ನು ಕಲಿತ ವಿನಾ ಇತರರು ನಿನ್ನನ್ನು ವಿಧೇಯಿಸಿ ಸನ್ಮಾನಿಸುವದಕ್ಕೆ ಕಲಿಸಲಾರಿ ಮರ್ಯಾದೆಯುಳ್ಳವನಾಗಿರು ನಡತೆಯಲ್ಲಿ ಗಂಭೀರವಾಗಿಯೂ ಮಾತಿನಲ್ಲಿ ಯಥಾರ್ಥವಾಗಿಯೂ ಇರು ಮಿತಾಹಾರಿಯಾಗಿರು ಹೆಚ್ಚಾಗಿ ಊಟಮಾಡಿದರೆ ಬುದ್ಧಿ ಮಂದವಾಗಿ ಪಶುವಿನ ಹಾಗೆ ಬಿದ್ದಿರಬೇಕಾದೀತು ಮದದ್ರಾವಕಗಳನ್ನು ಪ್ರಯೋಗಿಸಬೇಡ ಅವು ಮನಸ್ಸನ್ನು ದೇಹವನ್ನು ಕಿಡಿಕಿಡಿಯಾಗ ಮಾಡುತ್ತವೆ ಅಂಗಸಾಧನೆ ಮಾಡುವದನ್ನು ಬಿಡಬೇಡ ಆದರೆ ಎಲುಬುಗಳಿಗೂ ಕೀಲುಗಳಿಗೂ ಅಪಾಯವಾಗದಂತೆ ನೋಡಿಕೋ ಯಾವಾಗಲೂ ಸಂತೋಷಚಿತ್ತನಾಗಿರುವದಕ್ಕೆ ಪ್ರಯತ್ನಪಡು ಆದರೆ ಅಪಹಾಸ್ಯದಿಂದಲೂ ಲಘುಮಾತುಗಳಿಂದಲೂ ಯಾರ ಚಿತ್ತವನ್ನು ಅಳಲಿಸಿ ಅವರಿಗೆ ಬೇಸರವನ್ನುಂಟುಮಾಡಬೇಡ ಕಠಿನೋಕ್ತಿಗಳಿಂದ ಮನುಷ್ಯರ ಮನಸ್ಸಿಗೆ ಮಾಡಿದ ಗಾಯವನ್ನು ಮಾಯಿಸುವದಕ್ಕಿಂತ ಕ್ರೂರವಾದ ಆಯುಧಗಳಿಂದ ಆದ ಗಾಯವು ಮಾಯುವದು ಸುಲಭ ಒಳ್ಳೇ ಮಾತುಗಳನ್ನೂ ನೀತಿವಾಕ್ಯಗಳನ್ನೂ ಕೇಳಿ ಅವುಗಳನ್ನು ಮನದಲ್ಲಿ ಭದ್ರಪಡಿಸಿಕೋ ಬಾಯಿಬಿಟ್ಟು ಯಾವ ಮಾತನ್ನಾದರೂ ನುಡಿಯುವದಕ್ಕೆ ಮುಂಚೆ ಚೆನ್ನಾಗಿ ಯೋಚಿಸು ನಾಲಗೆಯು ದುರುಕ್ತಿಗಳನ್ನು ನುಡಿಯುವ ಕೆಟ್ಟ ಅವಯವ ಅದು ಸುಲಭವಾಗಿ ನಿರ್ಭಯವಾಗಿ ಆಲುಗಾಡಬಾರದೆಂದು ಹಲ್ಲುಗಳು ತುಟಿಗಳು ಅದಕ್ಕೆ ಕಾವಲಿರುವಂತೆ ಕಾಣುತ್ತದೆ ನೀನಿರಲಾಗಿ ಕೋಪದಿಂದಲೂ ಹಗೆಯಿಂದಲೂ ಅದು ಉದ್ರೇಕವಾಗಿರುವಾಗ ಅದಕ್ಕಿನ್ನೆಷ್ಟು ಕಟ್ಟುಕಾವಲುಬೇಕು ! ಅನೃತವನ್ನು ಎಂದಿಗೂ ನುಡಿಯಬೇಡ ಸುಳ್ಳುಗಾರನೆನ್ನಿಸಿಕೊಳ್ಳುವ ಅಪಮಾನಕ್ಕಿಂತ ಹೆಚ್ಚಿನ ಅಪಮಾನವು ಮತ್ತಾವುದೂ ಇಲ್ಲ ನನ್ನ ಪ್ರಿಯ ಕುಮಾರನೇ, ನಮ್ಮ ವಂಶದಲ್ಲಿ ನಿನ್ನ ಪೂರ್ವಜರಲ್ಲಿ ಎಂತೆಂತಹ ತೇಜಸ್ವಿಗಳು ಪರಮಭಕ್ತರು ಪರೋಪಕಾರಿಗಳು ಇದ್ದರೋ ಅವರನ್ನು ಸ್ಮರಿಸಿಕೊಂಡು ಅವರ ಹೆಸರಿಗೆ ಕುಂದಕ ಬಾರದಂತೆ ನಡಿ ”

ದಿವಾನ್‌ರವರ ಸರ್ಕೀಟು

ಮೈಸೂರು ಮತ್ತು ಹಾಸನದ ಡಿಸ್ಟ್ರಿಕ್ಟುಗಳಲ್ಲಿ

ಇದೇ ಫೆಬ್ರವರಿ ತಾ 15 ನೇ ಭಾನುವಾರ ರಾತ್ರಿ ದಿವಾನ್ ಮ|| ಎಂ ವಿಶ್ವೇಶ್ವರಯ್ಯ, ಸಿ ಐ ಇ ರವರು ಬೆಂಗಳೂರಿನಲ್ಲಿ ರೈಲುಹತ್ತಿ ಮರುದಿನ ಬೆಳಿಗ್ಗೆ ಮೈಸೂರಿಗೆ ದಯಮಾಡಿ, ಇಲ್ಲಿಂದ 8½ ಗಂಟೆಗೆ ಮೋಟಾರಿನಲ್ಲಿ ಯಡತೊರೆಯನ್ನು ತಲಪುತ್ತಾರೆ ತಾ 17 ನೇ ಮಂಗಳವಾರ ಆ ಸುತ್ತಿನ ಗ್ರಾಮಗಳಿಗೆ ದಯಮಾಡಿ ಇನ್ಸ್‌ಪೆಕ್ಷನ್ ಮಾಡುವರು ತಾ 18 ನೇ ಬುಧವಾರ ಬೆಳಿಗ್ಗೆ 7 ಗಂಟೆಗೆ ಮೋಟಾರಿನಲ್ಲಿ ಹೆಗ್ಗಡದೇವನಕೋಟೆಗೂ, ಹುಣಸೂರಿಗೂ ದಯಮಾಡಿ ಅಲ್ಲಿಂದ ಸಾಯಂಕಾಲ 6 ಗಂಟೆಗೆ ವಾಪಸು ಯಡತೊರೆಗೆ ಬಂದು, ತಾ 19 ನೇ ಗುರುವಾರ ಗ್ರಾಮಗಳನ್ನು ಸುತ್ತಿಕೊಂಡು ಬರುತ್ತಾರೆ ತಾ 20 ನೇ ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಮೋಟರಿನಲ್ಲಿ ಹೊರಟು ಮಿರ್ಲೆ, ಸಾಲಿಗ್ರಾಮ, ರಾಮನಾಥಪುರಗಳನ್ನು ಹಾಸಿ ಅರಕಲಗೂಡಿಗೆ ದಯಮಾಡಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಹಿಂತಿರುಗಿ ಹೊಳೆನರಸಿಪುರದ ಮಾರ್ಗವಾಗಿ ಸಾಯಂಕಾಲ 7 ಗಂಟೆಗೆ ಯಡತೊರೆಯನ್ನು ತಲಪುವರು ತಾ 21 ನೇ ಶನಿವಾರ ಬೆಳಿಗ್ಗೆ ಮೋಟರಿನಲ್ಲಿ ಚಿಟ್ಟದಪುರಕ್ಕೆ ಹೋಗಿ 12 ಗಂಟೆಗೆ ವಾಪಸುಬಂದು, ತಾ 22 ನೇ ಭಾನುವಾರ ಬೆಳಿಗ್ಗೆ ಪೆರಿಯಾಪಟ್ಟಣಕ್ಕೆ ದಯಮಾಡಿ ಮಧ್ಯಾಹ್ನ ಹಿಂತಿರುಗುತ್ತಾರೆ

ತಾ 23 ನೇ ಸೋಮವಾರ ಬೆಳಿಗ್ಗೆ ನಂಜನಗೂಡಿಗೆ ದಯಮಾಡುವರು ಮಧ್ಯಾಹ್ನ 2 ಗಂಟೆಗೆ ಹೊರಟು ತಿರುಮಕೂಡ್ಲು ನರಸಿಪುರ, ತಲಕಾಡು ಪ್ರಾಂತ್ಯಕ್ಕೆ ದಯಮಾಡಿ ವಾಪಸು ಬರುವರು ತಾ 24 ನೇ ಮಂಗಳವಾರ ನಂಜನಗೂಡು ಪ್ರಾಂತ್ಯದಲ್ಲಿ ಗ್ರಾಮಗಳನ್ನು ಇನ್ಸ್‌ಪೆಕ್ಷನ್ ಮಾಡುತ್ತಾರೆ ತಾ 25 ನೇ ಬುಧವಾರ ಬೆಳಿಗ್ಗೆ ದಿವಾನ್‌ರವರು ನಂಜನಗೂಡಿನಿಂದ ಮೋಟರಿನಲ್ಲಿ ಹೊರಟು ಚಾಮರಾಜನಗರಕ್ಕೆ ದಯಮಾಡಿ ಸಾಯಂಕಾಲ ವಾಪಸು ಬಂದು ಮರುದಿನ (ಗುರುವಾರ) ನಂಜನಗೂಡು ಪ್ರಾಂತ್ಯದ ಕೆಲವು ಗ್ರಾಮಗಳನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಮಧ್ಯಾಹ್ನ ವಾಪಸು ಬರುವರು ತಾ 27 ನೇ ಶುಕ್ರವಾರ ಬೆಳಿಗ್ಗೆ ನಂಜನಗೂಡಿನಿಂದ ಗುಂಡ್ಲುಪೇಟೆಗೆ ಮೋಟರಿನಲ್ಲಿ ದಯಮಾಡಿ ಅಲ್ಲಿನ ವಿದ್ಯಮಾನಗಳನ್ನು ಪರಾಂಬರಿಸಿಕೊಂಡು ಮಧ್ಯಾಹ್ನ 1 ಗಂಟೆಗೆ ವಾಪಸು ದಯಮಾಡುತ್ತಾರೆ

ತಾ 27 ನೇ ಶುಕ್ರವಾರ ಸಾಯಂಕಾಲ ದಿವಾನ್‌ರವರು ನಂಜನಗೂಡಿನಿಂದ ರಾಜಧಾನಿಗೆ ದಯಮಾಡಿ ಆ ರಾತ್ರಿ ಇಲ್ಲಿ ತಂಗಿದ್ದು ಮರುದಿನ (ಶನಿವಾರ) ಬೆಳಿಗ್ಗೆ 9½ ಗಂಟೆಗೆ ರೈಲು ಹತ್ತಿ ಬೆಂಗಳೂರನ್ನು ಕುರಿತು ಪ್ರಯಾಣ ಮಾಡುವರು

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

• • •

ಶ್ರೀಮನ್ ಮಹಾರಾಜರವರು ನಾಳೆ ಶನಿವಾರ ಬೆಂಗಳೂರಿಂದ ಮೋಟರಿನಲ್ಲಿ ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ

• • •

ಶ್ರೀಮನ್ ಮಹಾರಾಜರವರು ಆಸ್ಥಾನದ ಧರ್ಮಾಧಿಕಾರಿಗಳ ಪದವಿಯನ್ನು ವೇ|| ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳಿಗೂ, ವೇ|| ಭಂಗನೂರು ರಾಘವೇಂದ್ರಾಚಾರ್ಯರಿಗೂ ದಯಪಾಲಿಸಿದರೆಂದು ತಿಳಿಯುತ್ತೇವೆ

• • •

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ “ ಎಪಿಫನಿ ” ಎಂಬ ವಾರ ಪತ್ರಿಕೆಯನ್ನು ರಾಜಧಾನಿಯಲ್ಲಿರುವ ರೆವ್ ಟಿ ಲ್ಯಾಂಕೆಸ್ಟರವರು ಒಟ್ಟಾಗಿ ತರಿಸುತ್ತಾರೆಂದೂ, ಅವರು ಅವನ್ನು ಕೇಳಿದವರಿಗೆಲ್ಲಾ ಒಂದೊಂದು ಪತ್ರಿಕೆಯನ್ನು ಪುಗಸಟ್ಟೆ ಕೊಡುವರೆಂದೂ ತಿಳಿದುಬಂದಿದೆ

• • •

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಬೆಟ್ಟದ ಮೇಲೆ ಈ ತಿಂಗಳ ಆಖೈರಿನಲ್ಲಿ (ತಾ 25, 26, 27 ರಲ್ಲಿ) ಕೋಆಪರೆಟಿವ್ ಸೊಸೈಟಿ ಮೆಂಬರುಗಳ ಸಭೆಯೊಂದು ನಡೆಯುವಂತೆ ಏರ್ಪಾಡಾಗಿದೆ ರಾತ್ರಿಕಾಲದಲ್ಲಿ ಕಸಬುಗಳ ಮತ್ತು ವ್ಯವಸಾಯದ ದೃಷ್ಟಾಂತಗಳೂ, ಗೋಕಾಯಿಗಳ ಪ್ರದರ್ಶನವೂ ನಡೆಯುವುವು

• • •

ಗತಿಸಿದ ಶ್ರೀ ಶಂಕರ ಭಾರತೀ ಸ್ವಾಮಿಗಳ ಹೆಸರಿನ ಮೇಲೆ ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿ ಮಹಾಶಿವರಾತ್ರಿಯ ದಿನ ಶಿವಪ್ರತಿಷ್ಠೆ ಮಾಡಬೇಕೆಂದು ಅಲ್ಲಿನ ಕೆಲವು ದೊಡ್ಡಮನುಷ್ಯರೂ ವರ್ತಕರೂ ನಿಶ್ಚಯಮಾಡಿದಾರೆಂತಲೂ, ಅನುಕೂಲವಿದ್ದವರು ಈ ಕಾರ್ಯಕ್ಕೆ ಧರ್ಮಸಹಾಯ ಮಾಡಬೇಕೆಂತಲೂ ಪ್ರಕಟಮಾಡಬೇಕೆಂದು ಮ|| ಇ ರಾಮರಾಯರು ನಮಗೆ ತಿಳಿಸಿದಾರೆ

• • •

ಕಳೆದ ವಾರ ರಾಜಧಾನಿಯಲ್ಲಿ ಒಂದು ಕೇರೀ ನಾಯಿ 10 12ಮಂದಿಯನ್ನು ಕಡಿದದ್ದರಿಂದ ಹೆಲ್ತ್ ಆಫೀಸರು ಕೇರೀನಾಯಿಗಳನ್ನು ವಿಷಹಾಕಿ ಕೊಲ್ಲಿಸಲಾರಂಭಿಸಿದಾರೆ ಆ ನಾಯಿ ಕಡಿದವರ ಪೈಕಿ ಕೆಲವರು ಚಿಕಿತ್ಸೆಗಾಗಿ ಕೂನೂರು ಆಸ್ಪತ್ರೆಗೆ ಹೋದರು ಉಳಿದವರೂ ಸರ್ಕಾರದವರ ರಿಯಾಯತಿಯನ್ನು ಪಡೆದು ಅಲ್ಲಿಗೆ ಹೋಗಿ ಚಿಕಿತ್ಸೆಮಾಡಿಸಿಕೊಂಡು ಬರುವುದೇ ಸರ್ವೋತ್ತಮವೆಂದು ಸೂಚಿಸುತ್ತೇವೆ

• • •

ಮಧುಗಿರಿ ತಾಲ್ಲೂಕಿನಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾದಾಗ ಕೆಲವು ಗ್ರಾಮಗಳ ಪಟೇಲ್ ನ್ಯಾಯಭಾಗರು ತುಂಬಾ ಸಾಹಸಪಟ್ಟು ಪ್ರೋತ್ಸಾಹಪಡಿಸಿ ಅನೇಕ ಪ್ರಜೆಗಳಿಗೆ ಇನಾಕ್ಯುಲೇಷನ್ ಮಾಡಿಸಿರುವುದರಿಂದ ಅವರಿಗೆ ಒಂದೊಂದು ಬಹುಮಾನ ಕೊಡಬೇಕೆಂದು ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗವರ್ನ್‌ಮೆಂಟಿಗೆ ಸಿಫಾರಸುಮಾಡಿ ಅದಕ್ಕಾಗಿ 60 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

• • •

ರಾಜಧಾನಿಯಲ್ಲಿರುವ ಜ್ಯೋತಿಷ ವಿದ್ವಾನ್ ವೇ|| ಯಜಾನ್ ಸಂತೆ ಕೃಷ್ಣಜೋಯಿಸರೂ, ವೇ|| ಅನಂತಜೋಯಿಸರೂ ಗುಣಿಸಿ ಬಹಳ ಚೆನ್ನಾಗಿ ಅಚ್ಚುಮಾಡಿಸಿರುವ ಆನಂದ ಸಂವತ್ಸರದ ಪಂಚಾಂಗಗಳೂ, ಸ್ಟಾಂಡರ್ಡ್ ಜೀವ ವಿಮೆ ಕಂಪನಿಯವರೂ, ತುಮಕೂರು ಜನರಲ್ ಮರ್ಚಂಟ್ ಮ|| ಜೆ ಎಸ್ ಕೆನ್ನಯ್ಯ ಶೆಟ್ಟರವರೂ ಸೊಗಸಾಗಿ ಚಿತ್ರಗಳ ಸಮೇತ ಪ್ರಿಂಟುಮಾಡಿರುವ ಹೊಸ ವರುಷದ ಕ್ಯಾಲೆಂಡರುಗಳೂ ನಮಗೆ ತಲಪಿರುತ್ತವೆ

• • •

ರಾಜಧಾನಿಯ ಅಗ್ರಹಾರದಲ್ಲಿರುವ ಗೋಪಾಲಕೃಷ್ಣಯ್ಯಂಗಾರ್ ಎಂಬ ವಿದ್ಯಾರ್ಥಿಯು ಇಲ್ಲಿನ ಕಾಲೇಜ್ ಸ್ಟುಡೆಂಟ್ ಹೋಮಿಗೆ ಹೋಗಿ ಒಬ್ಬ ವಿದ್ಯಾ

ಳಿಯ ಪೆಟ್ಟಿಗೆಯಲ್ಲಿದ್ದ ಕೆಲವು ಹಣವನ್ನು ಅಪಹರಿಸಿದನೆಂದು ಮೊಕದ್ದಮೆ ಆಗಿ, ಮ್ಯಾಜಿಸ್ಟ್ರೇಟರು ಅವನನ್ನು ಜಾಮೀನಿನ ಮೇಲೆ ಬಿಟ್ಟಿದಾರೆ ಈ ಹುಡುಗನು ಕಾಲೇಜಿನ ಜೂನಿಯರ್ ಇಂಟರ್‌ಮೀಡಿಯೆಟ್ ಕ್ಲಾಸಿನಲ್ಲಿ ವಿದ್ಯಾರ್ಥಿಯಾಗಿರುವನು ಮೊಕದ್ದಮೆಯು ತಾ 21 ನೇ ಶನಿವಾರ ವಿಚಾರಣೆಗೆ ಇಡಲಾಗಿದೆ

ಹುಜೂರು ಸೆಕ್ರೆಟರಿ ಮ|| ಪಿ. ರಾಘವೇಂದ್ರರಾಯರು ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಗೆ ಬಂದು ಆ ರಾತ್ರಿಯೇ ಸಂಸಾರ ಸಮೇತ ಬೆಂಗಳೂರಿಗೆ ಪ್ರಯಾಣ ಮಾಡಿದರು ಗವರ್ನ್‌ಮೆಂಟಿನವರು ಅವರನ್ನು ಸಂಸ್ಥಾನದ ಎಕ್ಸೈಸ್ ಕಮೀಷನರ್ ರಾಗಿ ನೇಮಕ ಮಾಡಿರುತ್ತಾರೆ ಅವರು ಬೆಂಗಳೂರಿನಲ್ಲಿ ನಾಳೆ ಬೆಳಗ್ಗೆ ಹೊಸ ಕೆಲಸದ ಛಾರ್ಜನ್ನು ವಹಿಸಿಕೊಳ್ಳುವರೆಂದು ತಿಳಿಯುತ್ತೇವೆ. ಇವರು 1890 ನೇ ಇಸವಿಯಲ್ಲಿ ನಮ್ಮ ಮಹಾರಾಜರವರಿಗೆ ವಿದ್ಯಾಗುರುಗಳಾಗಿ ಇದ್ದು 1903 ನೇ ಆಗಸ್ಟಿನಿಂದ ಮಹಾರಾಜರವರ ಅ|| ಪ್ರೈವೆಟ್ ಸೆಕ್ರೆಟರಿ ಕೆಲಸಕ್ಕೆ ನೇಮಕವಾದರು ಬಳಿಕ ಅವರು 1909 ನೇ ಏಪ್ರಿಲ್‌ನಿಂದ ಹುಜೂರು ಸೆಕ್ರೆಟರಿಗಳಾಗಿ ಶ್ರೀಮನ್ಮಹಾರಾಜರವರ ಬಳಿಯಲ್ಲೇ ನೌಕರಿ ಮಾಡಿದ್ದಲ್ಲದೆ ಕೆಲವು ಕಾಲ ಪ್ರೈವೆಟ್ ಸೆಕ್ರೆಟರಿಯಾಗಿಯೂ ಇದ್ದರು. ಕಳೆದ 24 ವರುಷಗಳಿಂದಲೂ ಮ|| ರಾಘವೇಂದ್ರರಾಯರು ಮಹಾರಾಜರವರ ಪಕ್ಕದಲ್ಲೇ ಇದ್ದು ನೌಕರಿ ಮಾಡಿರೋಣದರಿಂದ ಅವರಿಗೆ ಪ್ರಭುಗಳ ಚಿತ್ತವೃತ್ತಿಯು ಪರಿಷ್ಕಾರವಾಗಿ ಗೊತ್ತಾಗಿದೆ. ಈಗ ಅವರಿಗೆ ವಹಿಸಲ್ಪಟ್ಟಿರುವ ಅಧಿಕಾರವನ್ನು ಸಾಮರ್ಥ್ಯದಿಂದಲೂ, ಚಟುವಟಿಕೆಯಾಗಿಯೂ, ಪ್ರಜಾಹಿತಚಿಂತನೆಯಿಂದಲೂ ನಿರ್ವಹಿಸುತ್ತಾರೆಂದು ನಿರೀಕ್ಷಿಸಬಹುದಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ದಾವಣಗೆರೆ ಟವನ್ ಮ್ಯುನಿಸಿಪಲ್ ಸರಹದ್ದಿನೊಳಗೆ ಬಲಾತ್ಕಾರಿಸಿ ದೇವೀ ತಿಡುಲು ಹಾಕುವ ಕಾನೂನು 1914 ನೇ ಮಾರ್ಚಿ ಲಾಗಾಯಿತು ಎರಡು ವರುಷ ಜಾರಿಯಲ್ಲಿರತಕ್ಕದ್ದು.

ಹಾಸನದ ತಾಲ್ಲೂಕಿಗೆ ಸೇರಿದ ಸಾತನಹಳ್ಳಿ, ಚಿಕ್ಕಮಂಡಿಗನಹಳ್ಳಿ, ಹಳೆಬೀಡಿನ ಟವನ್; ಚೆನ್ನರಾಯಪಟ್ಟಣದ ತಾಲ್ಲೂಕು ಮಾತಗೊಂಡನಹಳ್ಳಿ; ಬೇಲೂರು ಟವನ್, ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಬೆಂಗಳೂರು ಸೆಷನ್ಸ್ ಜಡ್ಜ್ ಮಿ|| ಆರ್. ಬಿ. ಪ್ಲಮರ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಮ|| ಟಿ ವೆಂಕಟರಾಮಯ್ಯನವರಿಗೆ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸ್ಪೆಷಲ್ ಡೆಪ್ಯುಟಿ ಅಮಲ್ದಾರ್ ಮ|| ಸಿ ಬಿ ರಾಮರಾಯರು ಅಮಲ್ದಾರರಾಗಿಯೂ ಬದಲಿ ನೋಡತಕ್ಕದ್ದು

ಮುಂದೆ ಹೇಳುವ ಸಬ್ ರೆಜಿಸ್ಟ್ರಾರ್ರುಗಳ ವರ್ಗಾವರ್ಗೀ ಹುಕುಂ ಮಾಡಿದೆ—ಮ|| ಗಳಾದ ಬಿ ನರಸಿಂಹಯ್ಯಂಗಾರ್ರು ಮಂಜರಾಬಾದಿನಿಂದ ಗುಬ್ಬಿಗೆ, ಕೆ ರಾಮಾಚಾರ್ರು ಗುಬ್ಬಿಯಿಂದ ಮಂಜರಾಬಾದಿಗೆ, ಎ ಚಂದ್ರಶೇಖರ ಮುದಲಿಯಾರ್ರು ಅರಸೀಕೆರೆಯಿಂದ ತುಮಕೂರಿಗೆ, ಬಿ. ನರಸಿಂಹಯ್ಯಂಗಾರ್ರು ಶ್ರೀರಂಗಪಟ್ಟಣದಿಂದ ಅರಸೀಕೆರೆಗೆ, ಎನ್ ಜಿ ಸಂಪತ್ತಯ್ಯಂಗಾರ್ರು ಮಂಡ್ಯದಿಂದ ಸೀರ್ಯಕ್ಕೆ, ಸಿ ಶ್ರೀನಿವಾಸಮೂರ್ತಿಯವರು ಸೀರ್ಯದಿಂದ ಹೊಳೆನರಸೀಪುರಕ್ಕೆ, ಮೀರ್ ಕಾಸಿಂ ಅಲಿಯವರು ಹೊಳೆನರಸೀಪುರದಿಂದ ಹೊಸಕೋಟೆಗೆ, ಎಂ ರಾಮರಾಯರು ಹೊಸಕೋಟೆಯಿಂದ ನಾಗಮಂಗಲಕ್ಕೆ, ಎಸ್ ನರಸಿಂಹಯ್ಯಂಗಾರ್ರು ನಾಗಮಂಗಲದಿಂದ ಮಂಡ್ಯಕ್ಕೆ, ಎಸ್ ವೆಂಕಟರಮಣ ಅಯ್ಯರವರು ತುಮಕೂರಿನಿಂದ ಶ್ರೀರಂಗಪಟ್ಟಣಕ್ಕೆ

. ಡಿಸ್ಟ್ರಿಕ್ಟ್ ಜಡ್ಜ್ ಮಿ|| ಟಿ ಪರಮಶಿವಅಯ್ಯರವರು ರಜದಮೇಲಿರುವಾಗ್ಗೆ ಮಿ|| ಆರ್ ಬಿ ಪ್ಲಮರ್‌ಯವರನ್ನು 1 ನೇ ಕ್ಲಾಸಿಗೂ, ಮಿ|| ಮೀರ್ ಹಂಜಾ ಹುಸೇನ್‌ರವರನ್ನು 2 ನೇ ಕ್ಲಾಸಿಗೂ ಹಂಗಾಮಿಯಾಗಿ ಬಡ್ತಿ ಮಾಡಿದೆ,

ಆನೆಕಲ್ ತಾಲ್ಲೂಕು ಅಮಲ್ದಾರ್ ಮಿ|| ಪಿ ಗೋಪಾಲರಾಜೆ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೇದಾರ್ ಮ|| ವಿ ಸುಬ್ಬರಾಯರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ತಾಲ್ಲೂಕು ವರ್ತಮಾನ.

ಶೃಂಗೇರಿ —ಹವಾ ಉತ್ತಮವಾಗಿದೆ ಅಡಿಕೆ ಧಾರಣೆ ಮಣಕ್ಕೆ 12–13 ರೂಪಾಯಿ ಇದೆ. ದಿನಸಿ ಧಾರಣೆಗಳು ಕ್ಷಾಮಕಾಲವನ್ನು ಸೂಚಿಸುತ್ತವೆ. ಕಳೆದ ವರ್ಷದಂತೆ ಸಂತೆ ನಡೆಯಲು ಏರ್ಪಡಿಸಿದರೆ ಬಡವರಿಗೆ ಸಹಾಯವಾಗಬಹುದು —ಪರಂಘಾವುವಹ್ನೈದಿದ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರ ಸಮಾಧಿಯ ಮೇಲೆ ಶಿಲೆಯಿಂದ ಕಟ್ಟಡವು ಕಟ್ಟಲ್ಪಡುತ್ತಿದೆ —ಚಂದ್ರಮೌಳೀಶ್ವರ ದೇವಸ್ಥಾನವು ಪೂರೈಸುತ್ತಾ ಬಂದಿತು ಶಾರದಾಂಬಾ ದೇವಸ್ಥಾನವು ಪೂರೈಸಲು ಇನ್ನೂ ಒಂದು ವರ್ಷ ಬೇಕಾಗಬಹುದು ಬೆಂಗಳೂರು ಭವಾನಿ ಸೋಮಯಾಜಿಗಳೆಂಬುವರು ಮಠದಲ್ಲಿ ಬರುವ ಫಾಲ್ಗುಣ ಬ. 20 ರ ಲಾಗಾಯಿತು 11 ದಿನ ಗರುಡಚಯನವೆಂಬ ಮಹಾಯಾಗವನ್ನು ಮಾಡುವರಾಗಿ ನಿಶ್ಚಯವಾಗಿದೆ.—ಈಗಿನ ಶ್ರೀ ಜಗದ್ಗುರುಗಳವರು ವಿದೇಶೀ ಶಾಸ್ತ್ರವಚನಾದಿಗಳಿಂದ ಸತ್ಕೀರ್ತಿಯನ್ನು ಪಡೆಯುತ್ತಿರುವದು ಸಂತೋಷವಾಗುತ್ತಿದೆ —ಇಲ್ಲಿನ ಪೋಸ್ಟ್‌ಮಾಸ್ಟರ್ ಮ|| ಜಿ. ತಿಮ್ಮಪ್ಪಯ್ಯನವರು ಸರ್ಕಾರಿ ಕೆಲಸದಲ್ಲಿ ಮುತವರ್ಜಿ ಉಳ್ಳವರಾಗಿ ಜನಗಳ ಅನುರಾಗಕ್ಕೆ ಪಾತ್ರರಾಗಿರುತ್ತಾರೆ. ಇವರ ಪ್ರಯತ್ನದಿಂದಲೇ ಸಬ್ ಆಫೀಸು ಏರ್ಪಾಡಾಯಿತು ಜನವರಿಯಿಂದ ಟಪಾಲು ಗಾಡಿ ಸರ್ಕಾರಿ ಮುಂಜೂರಾಗಿ ಬಿಡಲ್ಪಟ್ಟಿದೆ —ಕೆಲವರು ಹಗಲು ರಾತ್ರಿಯೂ ಜೂಗಾರಿ ಆಟವಾಡುತ್ತಾರೆ ಇದಕ್ಕೆ ಸರ್ಕಾರದವರು ಸರಿಯಾಗಿ ನಿಗಾ ಕೊಡುವರೆಂತ ನಂಬಿದೇವೆ ಕೆಲವು ಕಡೆಗಳಲ್ಲಿ ಕಪಟತನವೂ, ಮೋಸವೂ ಹೆಚ್ಚುತ್ತಿದೆ. ಬಲಾತ್ಕಾರವಿದ್ಯಾಭ್ಯಾಸವನ್ನು ಈ ಮಲೆನಾಡು ಪ್ರಾಂತ್ಯದಲ್ಲಿ ಜಾರಿಗೆ ತಂದರೆ ಹಿತವಾಗಬಹುದು

ಇಂಡಿಯಾ ದೇಶದ ವೃತ್ತಾಂತಗಳು.

ಕೆಲಿಡೋನಿಯಾ ಎಂಬ ಜಹಜು 1,20,000 ರೂಪಾಯಿನ ಚಿನ್ನವನ್ನೂ, ಮೆಡೀನಾ ಎಂಬ ಜಹಜು 31,00,000 ರೂಪಾಯಿನ ಚಿನ್ನವನ್ನೂ ಹಿಂದುಸ್ಥಾನಕ್ಕೆ ತರುತ್ತಿದೆ

ಗೆಟಿಂಭರ್ ಮತ್ತು ಸ್ಟ್ಯಾನಾರ್ಡ್ ಎಂಬ ಇಬ್ಬರು ಯೂರೋಪ್ಪಿಯನ್ ಸ್ತ್ರೀಯರು ಬೊಂಬಾಯಿಗೆ ಬಂದು ಪಾರಸೀ ದೇಶದಲ್ಲಿರುವ ಬಾಹ್ಯ ಮತತತ್ವಗಳನ್ನು ಕುರಿತು ಜನರಿಗೆ ಬೋಧೆಮಾಡುತ್ತಿದಾರೆ.

ಸಣ್ಣ ಮಕ್ಕಳನ್ನು ಅವರ ತಂದೆತಾಯಿಗಳಾಗಲಿ ಪೋಷಕರಾಗಲಿ ಕೇರಿಗಳ ಮೇಲೆ ಭಿಕ್ಷೆಬೇಡುವುದಕ್ಕೆ ಬಿಡದಂತೆ ತಡೆಯುವುದಕ್ಕಾಗಿ ಪಂಜಾಬ್ ಆಧಿಪತ್ಯದ ನ್ಯಾಯವಿಧಾಯಕ ಸಭೆಯ ಮೆಂಬರುಗಳು ಒಂದು ಕಾನೂನನ್ನು ಮಾಡಬೇಕೆಂದು ಯೋಚಿಸಿರುತ್ತಾರೆ.

ಪೂರ್ವಬಂಗಾಳದಲ್ಲಿ ಈಚೆಗೆ ವಿಶೇಷವಾಗಿ ಹೆಚ್ಚಿರುವ ದರೋಡೆ ಕೃತ್ಯಗಳನ್ನು ಅಡಗಿಸುವುದಕ್ಕೆ ಸರ್ಕಾರದವರು ಪೋಲೀಸಿನವರಲ್ಲದೆ ಎರಡು ರಿಜಿಮೆಂಟಿನ ಸೈನಿಕರನ್ನೂ ಕಳುಹಿಸಿಕೊಟ್ಟು, ಇವರು ಖಜಾನೆಗಳಲ್ಲೂ ದೊಡ್ಡ ಪಟ್ಟಣಗಳಲ್ಲೂ ಪಹರೆ ಕೊಡುತ್ತಾ ಉಸ್ತುವಾರಿ ನೋಡುವಂತೆ ಹುಕುಂ ಕೊಟ್ಟಿದಾರೆ.

ಸೀಮೆಯಲ್ಲಿದ್ದು ಕಾಲವಾದ ಡಾಕ್ಟರ್ ಹಬೀಬ್ ಜಂಗ್ ಮಹಮುದ್ ಎಂಬಾತನ ಆಸ್ತಿಯನ್ನು ರಕ್ಷಿಸುವವರು ಬೊಂಬಾಯಿ ಪಟ್ಟಣದ ಎಡ್ವರ್ಡ್ ಆಸ್ಪತ್ರೆಯಲ್ಲಿ ಹೆಂಗಸರನ್ನು ನೋಡಿಸುವುದಕ್ಕೋ, ಶಸ್ತ್ರ ಚಿಕಿತ್ಸೆಯನ್ನು ಮಾಡುವುದಕ್ಕೋ ಅನುಕೂಲವಾದ ಏರ್ಪಾಡು ಮಾಡಬೇಕೆಂದು 60,000 ರೂಪಾಯನ್ನು ಆತನ ಆಸ್ತಿಯಿಂದ ಬೊಂಬಾಯಿ ಮ್ಯುನಿಸಿಪಾಲಿಟಿಯವರಿಗೆ ಕಳುಹಿಸಿಕೊಟ್ಟಿದಾರೆ.

ಲಾಹೋರ್ ಪಟ್ಟಣದಲ್ಲಿ “ ಪೈಸಾ ಅಕ್ಬರ್ ” ಎಂಬ ವರ್ತಮಾನ ಪತ್ರಿಕೆಯು ಪ್ರಕಟವಾಗುವ ಅಚ್ಚಿನ ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು ಎಡಿಟರ್ ಮುನ್ಷಿ ಮಹಬೂಬ್ ಆಲಂ ಎಂಬಾತನ ವಾಸದ ಮನೆಯೂ, ಆತನ ಸರಸ್ವತೀ ಭಂಡಾರವೂ, ಪುಸ್ತಕದ ಅಂಗಡಿಯೂ ಸುಟ್ಟುಹೋಗಿ ಸುಮಾರು ನಾಲ್ಕು ಲಕ್ಷ ರೂಪಾಯಿ ತನಕ ನಷ್ಟವಾಗಿರುತ್ತದೆ.

ಜಪಾನ್ ರಾಜ್ಯಕ್ಕೆ ಹೋಗಿ ಎಲ್ಲಾ ಪಟ್ಟಣಗಳಲ್ಲೂ ಸಂಚಾರಮಾಡುತ್ತಾ ಅಲ್ಲಿನ ಪ್ರಜೆಗಳಿಗೆ ಹಿಂದೂ ಮತತತ್ವಗಳನ್ನು ಬೋಧನೆಮಾಡುವುದಕ್ಕೋಸ್ಕರ ಯೋಗಿ ಶ್ರೀನಿವಾಸಸ್ವಾಮಿ ಎಂಬುವರು ಕಳೆದ ವಾರ ಮದರಾಸಿನಿಂದ ಪ್ರಯಾಣ ಮಾಡಿದರು ಇವರಿಗೆ ಈ ರಾಷ್ಟ್ರದಲ್ಲಿರುವ ಹಲವು ಹಿಂದೂ ಮಹಾರಾಜರುಗಳೂ, ರಾಜರೂ, ದೊಡ್ಡಮನುಷ್ಯರೂ ದ್ರವ್ಯಾದಿ ಸಹಾಯಗಳನ್ನು ಒದಗಿಸುವುದಕ್ಕೆ ಒಪ್ಪಿಕೊಂಡಿರುತ್ತಾರೆ

ಬೊಂಬಾಯಿನ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರ ಅಜಾಗರೂಕತೆಯಿಂದ ಮಿ|| ಬರ್‌ಟ್ರಂ ರಾಬರ್ಟ್ಸ್ ಎಂಬಾತನಿಗೆ ಬೈಸಿಕಲ್‌ನಿಂದ ಬಿದ್ದು ಗಾಯಗಳಾಗಿ ನಷ್ಟವಾಯಿತೆಂದು ಆತನು ಆ ಬೋರ್ಡಿನವರಿಂದ 30,000 ರೂಪಾಯಿ ಡಾಮೇಜು ಕೊಡಿಸಬೇಕೆಂದು ಹೈ ಕೋರ್ಟಿನಲ್ಲಿ ದಾವಾ ಮಾಡಿದ್ದಕ್ಕೆ ಜಸ್ಟಿಸ್ ದವಾರ್ ಯವರು ಆತನಿಗೆ ಬೋರ್ಡಿನಿಂದ 8,673 ಯನ್ನೂ, ಆತನ ಕೋರ್ಟು ಖರ್ಚನ್ನೂ ಕೊಡಿಸಿದರು.

ಕಳೆದ ತಾ 31 ಕ್ಕೆ ಅಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆಲ್ಲಾ ಒಟ್ಟು 10,183 ಜನರಿಗೆ ಪ್ಲೇಗ್ ತಗಲಿತು ; 8,376 ಜನರು ಆ ರೋಗದಲ್ಲಿ ಕಾಲವಾದರು ಈ ಮರಣಸಂಖ್ಯೆಯ ಹಂಚಿಕೆ ಹ್ಯಾಗಂದರೆ—ದೆಹಲಿ 4, ಬೊಂಬಾಯಿ ಆಧಿಪತ್ಯ 827, ಮದರಾಸ್ 411, ಬೀಹಾರ್ 1,468, ಬರ್ಮಾ 400, ಮಧ್ಯಪ್ರಾಂತ್ಯಗಳು 2, ಮೈಸೂರು 101, ಹೈದರಾಬಾದ್ 114, ರಾಜಪುಟಾನ 55, ಈ ರೀತಿ ಮರಣಗಳಾಗಿರುತ್ತವೆ.

ಬೊಂಬಾಯಿನ ಭಾಟಿಯಾ ಜನಗಳಲ್ಲಿ ಪುಣ್ಯವಂತರಾದ ಮ|| ಮುರಾರ್‌ಜಿ ನರೋತ್ತಮ ಗೋಕುಲದಾಸರವರೂ, ಮ|| ತುಲಸೀದಾಸರವರೂ ಕಳೆದ ವರುಷ ಸೀಮೆಗೆ ಹೋಗಿಬಂದರು ಇದಕ್ಕಾಗಿ ಅವರ ಕುಲದವರು ಅವರನ್ನು ಜಾತಿಯಿಂದ ಹೊರಗೆಹಾಕಿದರು. ಈಗ ಇವರ ಕೂಡ ಸುಮಾರು 400 ಜನರು ಸೇರಿಕೊಂಡು, ಸಮುದ್ರಯಾನದಲ್ಲಿ ದೋಷವೇನೂ ಇಲ್ಲವೆಂಬುವುದನ್ನು ಸ್ಥಿರಪಡಿಸಿದರು ಈಗ ಆ ಜನರಲ್ಲಿ ಇವರಿಂದ ಎರಡು ಗುಂಪುಗಳಾಗಿರುತ್ತವೆ

ಬೊಂಬಾಯಿನಲ್ಲಿರುವ ಮಿ|| ಮಹಮುದ್ ಯುಸೂಫ್ ಖಸಾಮಿ ಎಂಬ ಪುಣ್ಯಾತ್ಮನು ಎಂಟು ಲಕ್ಷ ರೂಪಾಯಿಗಳನ್ನು ಬೊಂಬಾಯಿ ಗವರ್ನ್‌ಮೆಂಟಿನ ವಶಕ್ಕೆ ಧರ್ಮಾರ್ಥವಾಗಿ ವಹಿಸಿ, ಈ ಹಣದಲ್ಲಿ ಬೊಂಬಾಯಿನಲ್ಲೋ ಅಥವಾ ಪೂನಾದಲ್ಲೋ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಿಸಬೇಕೆಂತಲೂ, ಅದರಲ್ಲಿ ಮಹಮದೀಯ ವಿದ್ಯಾರ್ಥಿಗಳಿಗೆ ಪ್ರೌಢವಿದ್ಯಾಭ್ಯಾಸಕ್ಕೆ ಸಲಿಕರಣಗಳನ್ನು ಕಲ್ಪಿಸಬೇಕೆಂತಲೂ ತಿಳಿಸಿರುತ್ತಾನೆ. ಬೊಂಬಾಯಿ ಗವರ್ನ್‌ಮೆಂಟಿನವರು ಆ ಧರ್ಮಫಂಡನ್ನು ಅಂಗೀಕರಿಸಿ, ಆತನನ್ನು ತಕ್ಕ ರೀತಿಯಲ್ಲಿ ವಂದಿಸಿರುತ್ತಾರೆ.

ಮಚಲೀಬಂದರು (ಮಸೂಲಿಪಟಾಮ್) ನಗರದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೆ 4,71,000 ರೂಪಾಯಿ ಬೇಕಾಗುವುದೆಂದು ಅಂದಾಜು ಆಗಿದೆ. ಮದರಾಸ್ ಸರ್ಕಾರದವರು ಆ ಪೈಕಿ 3,84,000 ರೂಪಾಯನ್ನು ರಾಜಾದಾಯದಿಂದ ಕೊಡುವಂತೆ ಒಪ್ಪಿಕೊಂಡು, ಬಾಕಿ ಹಣವನ್ನು ಆ ಪಟ್ಟಣದ ಮ್ಯುನಿಸಿಪಾಲಿಟಿಯವರು ಸಾಲ ಮಾಡಬೇಕೆಂದೂ, ಮುಂದಿನ ಏಪ್ರಿಲ್ ಲಾಗಾಯಿತು ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಪ್ರಜೆಗಳಿಂದ ನೀರಿನ ಮತ್ತು ಬಚ್ಚಲ ತೆರಿಗೆಯನ್ನು ಶೇಕಡ 8 ರೂಪಾಯಿನಂತೆ ಹಾಕಿ ವಸೂಲ್ಮಾಡಬೇಕೆಂದೂ ಹುಕುಂ ಕೊಟ್ಟಿದಾರೆ.

ದೆಹಲಿ ಪಟ್ಟಣದಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯವಿದ್ಯೆಯನ್ನು ಕ್ರಮವಾಗಿ ಕಲಿಸುವುದಕ್ಕೆ ಒಂದು ವಿದ್ಯಾಶಾಲೆಯು ಸ್ಥಾಪನೆಯಾಗುತ್ತದೆ. ಅದಕ್ಕೆ ನಿವೇಶನವನ್ನು ಸರ್ಕಾರದವರು ಕೊಡುವುದಾಗಿ ಒಪ್ಪಿರುತ್ತಾರೆಂದು ಕಳೆದ ವಾರ ಲಕ್ನೋ ಪಟ್ಟಣದಲ್ಲಿ ನಡೆದ ಒಂದು ಮಹಾ ಸಭೆಯಲ್ಲಿ ಹಜಿಕ್ ಉಲ್ ಮುಲ್ಕ್ ಅಜಿಮಲ್ ಖಾನ್‌ರವರು ತಿಳಿಸಿದರು ಈ ವಿದ್ಯಾಶಾಲೆಯನ್ನು ಕಟ್ಟುವುದಕ್ಕೆ ಆರು ಲಕ್ಷ ರೂಪಾಯಿ ಬೇಕಾಗಿರುವುದರ ಪೈಕಿ 1,65,000 ರೂಪಾಯಿ ಕೈಯಲ್ಲಿದೆ ಎಂದು ಹೇಳಿದರು. ಇತರ ಕಡೆಗಳಲ್ಲೂ ಚಂದಾ ವಸೂಲ್ಮಾಡುವುದಕ್ಕೆ ಒಂದು ಕಮಿಟಿಯು ಏರ್ಪಾಡಾಗಿದೆ.

ಕಲ್ಕತ್ತಾಪಟ್ಟಣದ ಹತ್ತಿರ ಉತ್ತರಪಾರಾ ಎಂಬ ಗ್ರಾಮದಲ್ಲಿ ಕಳೆದ ಶುಕ್ರವಾರ ಸಾಯಂಕಾಲ ನಾರಾಯಣದಾಸನೆಂಬುವನು ವಾಂತಿಭೇದಿ ರೋಗ ತಗಲಿ ಮರುದಿನ ಬೆಳಗ್ಗೆ ಸತ್ತುಹೋದನು. ಸುಮಾರು 42 ವರುಷದ ಅವನ ಹೆಂಡತಿಯು ತನ್ನ ಪತಿಯು ಸತ್ತುಹೋದದ್ದನ್ನು ನೋಡಿ ಕೊಠಡಿಯೊಳಕ್ಕೆ ಹೋಗಿ ಗಂಡನ ಕೋಟನ್ನು ಹಾಕಿಕೊಂಡು ಭಗವದ್ಗೀತೆಯನ್ನು ಮಡಿಲಲ್ಲಿಟ್ಟುಕೊಂಡು ತಲೆಕೂದಲಿಗೆ ಬೆಂಕಿಕೋರಿಸಿದಾಗ ಮೈಯೆಲ್ಲಾ ಉರಿಯು ವ್ಯಾಪಿಸಿತು. ಅಷ್ಟರಲ್ಲೇ ಜನರು ಹೋಗಿ ಬೆಂಕಿಯನ್ನಾರಿಸಿ ಇಲಾಜುಮಾಡಿದಾಗ್ಯೂ ಪ್ರಯೋಜನವಾಗದೆ ಅವಳು ಸತ್ತುಹೋದಳು. ಗಂಡಹೆಂಡರ ಶವಗಳನ್ನು ಸ್ಮಶಾನಕ್ಕೆ ಸಾಗಿಸಿ ಒಂದೇ ಚಿತಿಯಮೇಲಿಟ್ಟು ದಹನ ಮಾಡಿದರು

ಸಿಂಧುದೇಶಕ್ಕೆ ಸೇರಿದ ಲಾರ್ಖಾನಾ ಎಂಬ ಊರಿನಲ್ಲಿ ಒಬ್ಬನು ಒಂದು ಕೊಲೆಯನ್ನು ನಡಿಸಿದ್ದರೂ ಅವನ ಮೇಲೆ ಮೊಕದ್ದಮೆ ಮಾಡುವುದಕ್ಕೆ ಯಾವ ರುಜುವಾತೂ ಸಿಕ್ಕದೆ ಪೋಲೀಸಿನವರು ತುಂಬಾ ಕಳವಳಪಡುತ್ತಿದ್ದರು. ಒಬ್ಬಾನೊಬ್ಬ ದೇಶೀಯ ಪೋಲೀಸ್ ಹುದ್ದೇದಾರನು ಒಂದು ಉಪಾಯವನ್ನು ಹುಡುಕಿ ವಕೀಲನಂತೆ ವೇಷ ಹಾಕಿಕೊಂಡು ಆ ಅಪರಾಧಿಯ ಬಳಿಗೆ ಹೋಗಿ ಅವನ ಕೂಡ ಬೆರೆಯುತ್ತಾ ಅವನ ಮೇಲೆ ಬಂದಿರುವ ಕೊಲೆ ಮೊಕದ್ದಮೆಯಲ್ಲಿ ಅವನನ್ನು ಪಾರುಮಾಡುವುದಾಗಿಯೂ, 100 ರೂಪಾಯಿ ಫೀಜು ಕೊಡಬೇಕೆಂದೂ ಮಾತನಾಡಿ ಗೊತ್ತುಮಾಡಿಕೊಂಡು, ಆ ಮೂಲಕ ಎಲ್ಲಾ ರುಜುವಾತನ್ನೂ ಅವನಿಂದ ತೆಗೆದುಕೊಂಡು ಮೊಕದ್ದಮೆ ತಂದನು. ಸೆಷನ್ಸ್ ಜಡ್ಜರು ದರ್ಯಾಫ್ತುಮಾಡಿ ಕಡೆಗೆ ಮೊಕದ್ದಮೆಯು ಪರಿಷ್ಕಾರವಾಗಿ ರುಜುವಾತಾದದ್ದನ್ನು ಕಂಡು ಅಪರಾಧಿಗೆ ಮರಣ ಸಜವನ್ನು ವಿಧಿಸಿ, ಆ ಪೋಲೀಸ್ ಹುದ್ದೇದಾರನ ಸಾಹಸಪ್ರಯತ್ನವನ್ನು ಹೊಗಳಿರುತ್ತಾರೆ.

ಸುಮಾರು ಹದಿನೆಂಟು ತಿಂಗಳ ಹಿಂದೆ ಮಧುರೆಯ ಪೋಲೀಸಿನವರು ಮಲುಮಯಾಂಡಿ ದೇವನ್ ಎಂಬ ದರೋಡೆ ಕಳ್ಳರ ಮುಖಂಡನನ್ನು ಹಿಡಿಯಬೇಕೆಂದು ಸಾಹಸಪಟ್ಟು, ಅವನು ಸಕ್ಕಲಿಯಪಟ್ಟಿ ಎಂಬ ಗ್ರಾಮದಲ್ಲಿ ಮದುವೆ ಮಾಡಿಕೊಳ್ಳುತ್ತಿದಾನೆಂಬ ಸುದ್ದಿಯನ್ನು ತಿಳಿದು ಆಯುಧಪಾಣಿಗಳಾಗಿ ಅಲ್ಲಿಗೆ ಹೋದರು ಆಗ ಆ ಕಳ್ಳನು ಮದುವೆಮಾಡಿಕೊಂಡು ಕುದುರೆ ಮೇಲೆ ಕುಳಿತು ಮೆರವಣಿಗೆ ಹೋಗುತ್ತಿದ್ದನು. ಪೋಲೀಸಿನವರು ಸುತ್ತಿಕೊಂಡು ಅವನನ್ನು ಅಲ್ಲೇ ದಸ್ತಗಿರಿಮಾಡಿದರು. ಆ ಕಳ್ಳನ ಹಿಂಬಾಲಕರು ಪೋಲೀಸಿನವರ ಮೇಲೆ ಬಿದ್ದು ಅವರಲ್ಲಿ ನಾಲ್ಕಾರು ಜನರನ್ನು ಜಖಂ ಮಾಡಿ, ಕತ್ತಿಗಳನ್ನೂ ಇತರ ಆಯುಧಗಳನ್ನೂ ದಿರಸುಗಳನ್ನೂ ಕಿತ್ತುಕೊಂಡು, ತಮ್ಮ ಯಜಮಾನನನ್ನು ಬಿಡಿಸಿಕೊಂಡು ಓಡಿಹೋದರು. ಆಗ ಪೋಲೀಸಿನವರಿಗೆ ಬೆಂಬಲ ಸಾಲದೆ ವಾಪಸು ಬಂದುಬಿಟ್ಟರು ಈಚೆಗೆ ಪೋಲೀಸಿನರು ಸುಮ್ಮನಾದರೆಂದು ತಿಳಿದು ಆ ಕಳ್ಳರೆಲ್ಲಾ ಒಬ್ಬೊಬ್ಬರಾಗಿ ಆ ಗ್ರಾಮಕ್ಕೆ ವಾಪಸು ಬಂದು ಸೇರಿದರು. ಕಳೆದ ಪೊಂಗಲ್ ಹಬ್ಬದ ದಿನ ಪೋಲೀಸಿನವರು ವಿಶೇಷ ಸಹಾಯಗಳನ್ನು ತೆಗೆದುಕೊಂಡು ರಾತ್ರಿ ಹೋಗಿ ಆ ಗ್ರಾಮದ ಸುತ್ತಲೂ ಘೇರಾಯಿಸಿಕೊಂಡರು ಆಗ ಕಳ್ಳರಿಗೆ ಈ ವರ್ತಮಾನ ಹ್ಯಾಗೋ ತಿಳಿದು ಅವರೆಲ್ಲಾ ಒಂದು ಸ್ಥಳದಲ್ಲಿ ಸೇರಿ ಪೋಲೀಸಿನವರಿಗೆ ಸಿಕ್ಕದಂತೆ ತುಂಬಾ ಸಾಹಸಪಟ್ಟರೂ ಪ್ರಯೋಜನವಾಗಲಿಲ್ಲ. ಕಡೆಗೆ ಪೋಲೀಸಿನವರು 25 ಗಂಡಾಳುಗಳನ್ನು ಹಿಡಿದು ಮಧುರೆಗೆ ಸಾಗಿಸಿಕೊಂಡು ಹೋಗಿ ಈಗ ಅವರ ಮೇಲೆ ಮೊಕದ್ದಮೆ ಮಾಡಿವಾರೆ.

ಸಂಯುಕ್ತ ಆಧಿಪತ್ಯಗಳಲ್ಲಿ ಬರಗಾಲ ಪ್ರಾಪ್ತವಾಗಿರುವುದರಿಂದ ಲೆಫ್ಟಿನೆಂಟ್ ಗವರ್ನರ್ ಸರ್ ಜೇಮ್ಸ್ ಮೆಸ್ಟನ್‌ರವರು ಕ್ಷಾಮನಿವಾರಣೆಗೆ ಧರ್ಮಫಂಡನ್ನು ಕೂಡಿಸಬೇಕೆಂದು ಕಳೆದ ವಾರ ಪ್ರಯಾಗ (ಅಲಹಾಬಾದ್) ಪಟ್ಟಣದಲ್ಲಿ ಒಂದು ಮಹಾಜನ ಸಭೆಯನ್ನು ನಡಿಸಿದರು ಈ ಸಲದಷ್ಟು ಹಿಂದೆ ಯಾವಾಗಲೂ ಬೆಳೆಗಳು ಕೆಡಲಿಲ್ಲ. ಬುಂದಲ್‌ಖಂಡದಲ್ಲಿ ಐದನೇ ಒಂದು ಪಾಲು ಬೆಳೆಯಾದರೂ ಆಗಿಲ್ಲ ಕೆರೆ ಭಾವಿ ನದಿಗಳು ಒಣಗಿಹೋಗಿವೆ. ಪ್ರಜೆಗಳು ಈ ಬರಗಾಲದ ಕಷ್ಟವನ್ನು ಇನ್ನು ಮುಂದೆ ಸಹಿಸಲಾರದ ಸ್ಥಿತಿಯಲ್ಲಿದಾರೆ. ಕ್ಷಾಮವು ಈಗ 1907 ನೇ ಇಸವಿಯ ಕ್ಷಾಮಕ್ಕಿಂತಲೂ ತೀಕ್ಷ್ಣವಾಗಿರುವುದು. ಗವರ್ನ್‌ಮೆಂಟಿನವರು ಪ್ರಜೆಗಳನ್ನು ಕಾಪಾಡುವುದಕ್ಕೂ ತಕಾವಿ ಅಡ್ವಾನ್ಸುಗಳಿಗೂ 220 ಲಕ್ಷ ರೂಪಾಯಿ ಕೊಟ್ಟಿರುತ್ತಾರಲ್ಲದೆ 52 ಲಕ್ಷ ರೂಪಾಯಿ ಕಂದಾಯಗಳನ್ನು ಸುಭಿಕ್ಷದಲ್ಲಿ ವಸೂಲ್ಮಾಡಬಹುದೆಂದು ನಿಲ್ಲಿಸಿ ಬಿಟ್ಟರು. ಹೋದ ವರುಷ 62 ಲಕ್ಷ ರೂಪಾಯಿ ಕಂದಾಯವನ್ನು ರಿಮಿಷನ್ ಮಾಡಿದರು. 30,000 ಚದರ ಮೈಲಿ ವಿಸ್ತಾರವುಳ್ಳ ಪ್ರದೇಶದೊಳಗೆ ಎರಡು ಕೋಟಿ ಪ್ರಜೆಗಳು ಕಷ್ಟಕ್ಕೆ ಗುರಿಯಾಗಿದಾರೆ ಮೇವಿಗೆ ಕಷ್ಟ ಸಂಭವಿಸಿ ಗೋಕಾಯಿಗಳು ಸಂಕಟಪಡುತ್ತಿರುವವು ಬುಂದಲ್‌ಖಂಡದಲ್ಲಿ ಶೇಕಡ 80 ರಷ್ಟು ಗೋಕಾಯಿಗಳು ಬಿಕರಿಯಾಗಿವೆ, ಇಲ್ಲವೇ ಸತ್ತುಹೋಗಿವೆ. ಇಂಥಾ ಕ್ಷಾಮನಿವಾರಣೆಗೆ ಧರ್ಮಾತ್ಮರು ದ್ರವ್ಯಸಹಾಯ ಮಾಡಬೇಕೆಂದೂ, ಹಿಂದುಸ್ಥಾನದ ಕ್ಷಾಮನಿವಾರಣೆ ಫಂಡಿನಿಂದ 50,000 ರೂಪಾಯಿ ಕೊಡೋಣಾಗಿದೆ ಎಂದೂ ಲೆಫ್ಟಿನೆಂಟ್ ಗವರ್ನರವರು ತಿಳಿಸಿದರು. ಈ ಧರ್ಮ ಫಂಡಿಗೆ ಆ ದಿನ ಅರ್ಧಗಂಟೆಯೊಳಗಾಗಿ 60,000 ರೂಪಾಯಿ ಚಂದಾ ವಾಗ್ದಾನವಾಯಿತು.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಶಾಖೆ

ಜನವರಿ 31 ನೇ ತಾ ಶನಿವಾರ ಮೇಲ್ಕಂಡ ಶಾಖೆಯಲ್ಲಿ ಮಿಸ್ ಬಟ್ಲರ್, ಬಿ ಎ ಯವರು ದೇಶಾಭಿವೃದ್ಧಿಗೆ ಆಕರವಾದ ಮಕ್ಕಳ ಸುಶಿಕ್ಷಣೆ ಎಂಬ ವಿಷಯವನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು — ಈ ತಿಂಗಳು 4 ನೇ ತಾ ಶ್ರೌ| ಕೆ ಎಸ್ ಪಾರ್ವತಮ್ಮನವರು ವರ್ಷ ಪ್ರತಿ ಕೊಡತಕ್ಕ ಉಡುಗೆಗಳನ್ನು ಅನಾಥ ಬಾಲಕರಿಗೆ ಕೊಟ್ಟು ಬುದ್ಧಿವಾದಗಳನ್ನು ತಿಳಿಸಿದ್ದಲ್ಲದೆ ಕೈಗಾರಿಕೆಗಳಲ್ಲಿ ಕುಶಲರಾದವರಿಗೂ ಗುಣಶಾಲಿಗಳಾಗಿ ತರಗತಿಗಳಲ್ಲಿ ಪ್ರಥಮರಾಗಿರತಕ್ಕ ಬಾಲಕರಿಗೂ ಬಹುಮಾನಗಳನ್ನು ಮಾಡಿದರು —7 ನೇ ತಾ ಶನಿವಾರ ಮ|| ಪಿ ಮುತ್ತುಸಾಮಿದಾಸ್ ಯವರು ಸಿಡುಬಿನ ಉಪದ್ರವನ್ನು ಕುರಿತು ಉಪನ್ಯಾಸ ಮಾಡಿ, ಸಿಡುಬು ಹಾಕಿಸದೆ ಇರುವುದರಿಂದ ಉಂಟಾಗುವ ಅನರ್ಥಗಳನ್ನೂ ಹಾಕಿಸುವುದರಲ್ಲಿ ಇರುವ ಪ್ರಯೋಜನವನ್ನೂ ಕುರಿತು ಬಹಳ ಸ್ಪಷ್ಟವಾಗಿ ತಿಳಿಸಿದರು —ಬರುವ ವಾರ ಶ್ರೀ ಎಂ ಮಹಲಕ್ಷ್ಮಮ್ಮನವರು ಅನುಭವಚಿಂತನೆ ಎಂಬ ವಿಷಯವನ್ನು ಕುರಿತು ಉಪನ್ಯಾಸ ಕೊಡುವವರಾಗಿದಾರೆ

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಜನವರಿ 31 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು		ರೂ 6,21,670
,, (2) ಡಿಪಾಜಟ್ಟುಗಳು		,, 5,21,024
,, (3) ಇತರೆ		,, 1,073
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 11,40,727

ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 1,61,179
,, (2) ಖಾತೆ ಮತ್ತು ಇತರ ಸಾಲಗಳು		,, 6,19,698
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,20,650
,, (4) ಇನ್‌ವೆಸ್ಟ್‌ಮೆಂಟುಗಳು		,, 1,60,000
,, (5) ಏಜನ್ಸಿಗಳಲ್ಲಿರುವ ಮೊಬಲಗು		,, 19,190
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 6,787
,, (7) ಇತರೆ		,, 9,973
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 11,40,727

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು

ಫೆಬ್ರವರಿ ಮಾಹೆ ಮೀಟಿಂಗು

ಈ ಸಂಘದ ಮೆಂಬರುಗಳು ಫೆಬ್ರವರಿ ತಾ 1 ನೇ ಭಾನುವಾರ ಮಧ್ಯಾಹ್ನ ಚಿತ್ರದುರ್ಗದ ಎ ವಿ ಸ್ಕೂಲ್ ಕಟ್ಟಡದಲ್ಲಿ ತಿಂಗಳ ಕಟ್ಟೆ ಮೀಟಿಂಗನ್ನು ನಡಿಸಿದರು ಈ ತಾಲ್ಲೂಕು ಹೋಬಳಿ ಸ್ಕೂಲುಗಳಿಂದ 16 ಜನ ಉಪಾಧ್ಯಾಯರುಗಳೂ ಈ ಟೌನ್ ಎ ವಿ ಸ್ಕೂಲು, ಬ್ರಾಂಚ್ ಸ್ಕೂಲು, ಗರಲ್ಸ್ ಸ್ಕೂಲು ಉಪಾಧ್ಯಾಯರುಗಳೂ ಎಲ್ಲಾ ಒಟ್ಟು 25 ಜನಗಳಿಗೆ ಮೇಲೆ ಸೇರಿತ್ತು ಪ್ರೆಸಿಡೆಂಟ್ ಮ ತಿರುಮಲಾಚಾರ್ಯರೂ, ಷೆ ಸ್ಕೂಲಿನ ಮ|| ಲಕ್ಷ್ಮೀಪತಯ್ಯನವರೂ, ಮ|| ಕೃಷ್ಣಯ್ಯಂಗಾರವರು ದಯಮಾಡಿದ್ದರು ಮ|| ಕೃಷ್ಣಯ್ಯಂಗಾರವರು ಅಗ್ರಾಸನವನ್ನು ವಹಿಸಿ ಸಭೆಯನ್ನು ಪ್ರಾರಂಭಿಸಿದರು

ವಿಲೇಜ್ ಸ್ಕೂಲ್ ಕಮಿಟಿ ಆಟೆಂಡೆನ್ಸ್, ಟೈಂಟೇಬಲ್ ಸೆಲೆಕ್ಷನ್ ಪರೀಕ್ಷೆ, ಕೈತೋಟ, ಶುಚಿತ್ವ ಈ ವಿಷಯಗಳಲ್ಲಿ ಸ್ಕೂಲುಗಳಲ್ಲಿ ಎಷ್ಟರಮಟ್ಟಿಗೆ ಚಾರಿಗೆ ಬಂದಿರುವುದೆಂಬ ಬಗ್ಗೆ ಹೋಬಳಿ ಸ್ಕೂಲ್ ಉಪಾಧ್ಯಾಯರ ಅಭಿಪ್ರಾಯವನ್ನು ಕೇಳಿ ಸಾಧಕಬಾಧಕಗಳನ್ನು ಕುರಿತು ಚರ್ಚಿಸಿದ್ದಲ್ಲದೆ ಪ್ರತಿ ತಿಂಗಳಲ್ಲಿಯೂ ಅಭಿವೃದ್ಧಿ ವಿಷಯವನ್ನು ಕುರಿತು ಡೆಪ್ಯುಟಿ ಇನ್ಸ್‌ಪೆಕ್ಟರವರ ಆಫೀಸಿಗೆ ರಿಪೋರ್ಟು ಕಳುಹಿಸಬೇಕೆಂದು ನಿಶ್ಚಯವಾಯಿತು —ಸಂಘದ ಕಾರ್ಯಗಳು ಹೆಚ್ಚುತ್ತಾ ಬಂದಿರುವದರಿಂದ ಒಬ್ಬ ಕಾರ್ಯದರ್ಶಿಗಳಿಂದ ಕೆಲಸ ನಡೆಯುವುದಿಲ್ಲವೆಂದು ಹೇಳಿದ್ದರ ಮೇಲೆ ಇನ್ನು ಮುಂದೆ ಎ ವಿ ಸ್ಕೂಲ್ ಹೆಡ್ ಮಾಸ್ಟರವರು ಸೆಕ್ರೆಟರಿಯಾಗಿಯೂ, ಮ ವೀಣಾ ಭೀಮಪ್ಪನವರು ಜಾಯಿಂಟ್ ಸೆಕ್ರೆಟರಿಯಾಗಿಯೂ ಇರಬೇಕೆಂದು ಸೂಚಿಸಿದ್ದನ್ನು ಎಲ್ಲರೂ ಅನುಮೋದಿಸಿದರು ಷೆ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರು ಮ ಲಕ್ಷ್ಮೀಪತಯ್ಯನವರೂ, ಮ|| ಕೃಷ್ಣಯ್ಯಂಗಾರವರೂ ಈ ಸಂಘದ ಉಪನ್ಯಾಸಕರಾಗಿರಲು ಒಪ್ಪಿರುತ್ತಾರೆ

ಮುಂದಿನ ತಿಂಗಳ ಮೀಟಿಂಗು ಮಾರ್ಚಿ 1 ನೇ ತಾ ಭಾನುವಾರ ನಡೆಯತಕ್ಕದ್ದೆಂದು ನಿಷ್ಕರ್ಷೆಯಾಗಿದೆ ಆ ದಿನದ ಕಾರ್ಯಗಳೇನೆಂದರೆ—ಮಾದರಿಗಾಗಿ ಕ್ಲೇ ಮಾಡಲಿಂಗ್‌ನಲ್ಲಿ ಪ್ರಾಕ್ಟಿಕಲ್ ಕ್ಲಾಸು ನಡಸತಕ್ಕದ್ದು, ಗಣಿತಶಾಸ್ತ್ರ ಮತ್ತು ಬೋಧನಕ್ರಮ ಇದರಲ್ಲಿ ಒಂದು ಉಪನ್ಯಾಸ ನಡೆಯತಕ್ಕದ್ದು

ವೀಣಾ ಭೀಮಪ್ಪ, ಸಂಘದ ಸೆಕ್ರೆಟರಿ

ಮಹಮ್ಮದನ ಹುಟ್ಟಿದ ದಿನ

ಮೈಸೂರ್ ಮಹಮ್ಮದನ್ ಸ್ಟೂಡೆಂಟ್ಸ್ ಹೋಮಿನಲ್ಲಿ ಮೌಲೂದನ್ನಬಿಜಲ್ಸಾ

ಇದೇ ಫೆಬ್ರವರಿ ಮಾಹೆ 7 ನೇ ತಾರೀಖಿಗೆ ಸರಿಯಾದ ರಬಿಉಲ್ ಅವಲ್ ತಾ 11 ರಲ್ಲಿ ಮೈಸೂರ್ ಮಹಮ್ಮದನ್ ಸ್ಟೂಡೆಂಟ್ಸ್ ಹೋಮಿನಲ್ಲಿರುವ ಮುಸಲ್ಮಾನ್ ವಿದ್ಯಾರ್ಥಿಗಳು ತಮ್ಮ ಮತಸ್ಥಾಪಕರಾದ ಹಜರತ್ ಮಹಮ್ಮದ್ ಪೈಗಂಬರ್ ರವರ ಜನ್ಮದಿನದ ಜ್ಞಾಪಕಾರ್ಥವಾಗಿ ಸದರಿ ಹೋಮಿನ ಸುತ್ತುಮುತ್ತಲೂ ಮತ್ತು ಕರ್ಜನ್ ದರವಾಜದಿಂದ ಫೈಲೀಸ್ ಸ್ಪೇಸ್ ವರಿಗೂ ಬೀದಿಯಲ್ಲೆಲ್ಲಾ ನೀರು ಚಿಮುಕಿಸಿ ಚಿತ್ರವಿಚಿತ್ರವಾದ ತೋರಣಗಳಿಂದಲೂ, ಹೂವಿನ ಗಿಡಗಳ ಕುಂಡಗಳಿಂದಲೂ, ವಾಷಿಂಗ್ಟನ್ ಮತ್ತು ಲಾಂದರಗಳು ಮೋಂಬತ್ತಿ ದೀಪಗಳಿಂದಲೂ, ಪ್ರಕಾಶಗೊಳಿಸಿ ಸ್ಟೂಡೆಂಟ್ಸ್ ಹೋಂ ಒಳಗೂ ಹೊರಗೂ ಸಹ ವಿಧವಿಧವಾದ ಹಸುರು ಎಲೆಗಳಿಂದ ಅಕ್ಷರಾಕೃತಿಗಳಲ್ಲಿ ಮಾಡಿದ್ದ ಅಲಂಕಾರದಿಂದಲೂ, ಖುರಾನ್ ವಾಕ್ಯದ ಚಿತ್ರಪಟ ಮತ್ತು ಅನೇಕ ಮುಸಲ್ಮಾನ್ ದೊರೆಗಳ ತಸ್ವೀರುಗಳಿಂದಲೂ ಗೋಡೆಗಳು ಹೊಳೆಯುತ್ತಿದ್ದವು

ಮಹಮ್ಮದೀಯರ ಅನೇಕ ದೊಡ್ಡ ಮನುಷ್ಯರೂ, ಸ್ಕೂಲ್ ವಿದ್ಯಾರ್ಥಿಗಳೂ ಸೇರಿದ್ದರು ರಾತ್ರಿ 8 ಗಂಟೆ ಆರಂಭವಾಯಿತು ನಾರ್ಮಲ್ ಸ್ಕೂಲ್ ಹ|| ಮೌಲ್ವಿ ಸಾಹೇಬರುಗಳಿಂದ ವಾಜ್ (ಮಿಂಬರ್ ಪ್ರಸಂಗ) ಮತ್ತು ಪ್ರಸಿದ್ಧ ಸಂಗೀತಗಾರರಾದ ಈಸಾಸೇಟ್ ಸಾಹೇಬರ ಗಜಲ್ ನಾತಿಯಾಖಾನಿ ನಡೆಯಿತು ಮಧ್ಯೆ ಮಧ್ಯೆ ಟೀ ಹಂಚಲ್ಪಡುತ್ತಿತ್ತು ಬೆಳಗಿನ 1 ಗಂಟೆಯಲ್ಲಿ ಸಭಿಕರಿಗೆಲ್ಲಾ ಬಿಸ್ಕತ್ ಮಿಠಾಯಿ ಕೊಟ್ಟ ಮೇಲೆ ಸಭೆಯು ಬರಖಾಸ್ತಾಯಿತು

ಎರಡನೇ ಸಭೆಯು ತಾ 9 ನೇ ಭಾನುವಾರ ಮಧ್ಯಾಹ್ನ 3 ಗಂಟೆಗೆ ಮೇಲ್ಕಂಡ ಹೋಮಿನಲ್ಲಿ ಸೇರಿತು ಅನೇಕ ದೊಡ್ಡ ಮನುಷ್ಯರೂ, ಎಲ್ಲಾ ಸ್ಕೂಲುಗಳ ಮುಸಲ್ಮಾನ್ ವಿದ್ಯಾರ್ಥಿಗಳೂ ಕರೆಯಲ್ಪಟ್ಟಿದ್ದರು ಬೇಗ್‌ಮೆಕ್ ರವರು ವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸ ಮಾಡಿದನಂತರ ಹಿಂದುಸ್ಥಾನಿ ಪ್ರಾಕ್ಟಿಸಿಂಗ್ ಸ್ಕೂಲ್ ಇನ್‌ಫೆಂಟ್ ಕ್ಲಾಸ್ ವಿದ್ಯಾರ್ಥಿಗಳಿಂದ ಹೇಳಲ್ಪಟ್ಟ ಅನುಕರಣ ಸಂಗೀತವೂ, ಇತರ ಸ್ಕೂಲ್ ಮತ್ತು ಎ ಎಚ್ ಸ್ಕೂಲ್ ವಿದ್ಯಾರ್ಥಿಗಳಿಂದ ಹೇಳಲ್ಪಟ್ಟ ನಾತಿಯಾಗಜಲ್‌ಗಳೂ ಸಭಿಕರಿಗೆ ಆನಂದವನ್ನುಂಟುಮಾಡುತ್ತಿರುವಾಗ ಪ್ರತಿ ವಿದ್ಯಾರ್ಥಿಗೂ ದೊಡ್ಡ ಮನುಷ್ಯರಿಗೂ ಸುಮಾರು 10 ||| ಪ್ರತಿ ತೊಹಫಯೆ ಮಿಲಾದ್ ಅಹಮದಿಯ ಎಂಬ ಪುಸ್ತಕವು ಬಿಸ್ಕತ ಮಿಠಾಯಿ ಸಹಿತ ಸಮೇತ ಹಂಚಲ್ಪಟ್ಟ ಸಭೆಯು ಬರಖಾಸ್ತಾಯಿತು

ಶ್ರೀಮನ್ಮಹಾರಾಜರವರ ಸರ್ಕೀಟು

ಚಿತ್ರದುರ್ಗದ ತಾಲ್ಲೂಕು ದೊಡ್ಡಸಿದ್ದವ್ವನಹಳ್ಳಿ

ಈ ಪ್ರಾಂತ್ಯ ಬೆಳೆ ಜೋಳದ ಪೈರೆಲ್ಲಾ ಕಟಾವಿಗೆ ಬಂದಿರುತ್ತೆ ಅರ್ಧ ಬೆಳೆಯಾಗಬಹುದು ಆದರೆ ಧಾರಣೆವಾಸಿಗಳು ಮಾತ್ರ ದಿನೇ ದಿನೇ ಭಡಾವಾಗುತ್ತಾ ಇರುವುದರಿಂದ ಬಡಬಗ್ಗರು ಜೀವನಮಾಡುವುದು ಕಷ್ಟವಾಗಿದೆ ನೀರಿಗೆ ಮಾತ್ರ ಈಗಲೇ ತೊಂದರೆಯಾಗಿದೆ, ಮುಂದೆ ಬೇಸಗೆಗೆ ತುಂಬಾ ತೊಂದರೆಯಾಗಬಹುದು

ಮಾರಿಕಣಿವೆಯಿಂದ ಶ್ರೀಮನ್ಮಹಾರಾಜರವರು ಚಿತ್ರದುರ್ಗಕ್ಕೆ ದಯಮಾಡಿಸುವರೆಂದು ತಿಳಿದ ಪ್ರಯುಕ್ತ ಇಲ್ಲಿನ ಶ್ಯಾನುಭೋಗ ನೀಲಕಂಠಪ್ಪನವರು ಮುತವರ್ಜಿವಹಿಸಿ ಪಟೇಲ್ ಭೀಮಯ್ಯನವರ ಸಹಾಯದಿಂದ ಸವಾರಿಯು ಚಿತ್ತೈಸುವ ಮಾರ್ಗದಲ್ಲಿ ತಳಿರು ತೋರಣಾದಿಗಳಿಂದಲೂ, ಕದಳೀ ವೃಕ್ಷಗಳಿಂದಲೂ ಮೇಲ್ಕಟ್ಟಿನಿಂದಲೂ ನೋಡುವುದಕ್ಕೆ ಆನಂದವಾಗಿರುವಂತೆ ಒಂದು ಮಂಟಪವನ್ನು ಹಾಕಿಸಿದ್ದರು ತಾ 30 ರಲ್ಲಿ ಪಟೇಲ್ ಶ್ಯಾನುಭೋಗರೇ ಮೊದಲಾದ ದೊಡ್ಡ ಮನುಷ್ಯರೂ ಬಾಯ್ಸ್ ಸ್ಕೂಲ್ ಸಹಾಯೋಪಾಧ್ಯಾಯರೂ ವಿದ್ಯಾರ್ಥಿಗಳೊಂದಿಗೆ ಹೆಡ್ ಮಾಸ್ಟರೂ ಹೋಗಿ ಮಂಟಪದ ಬಳಿ ಮಹಾ ಪ್ರಭುಗಳವರ ಸುಖಾಗಮನವನ್ನೇ ನಿರೀಕ್ಷಿಸುತ್ತಾ ಕಾದಿದ್ದರು ಮಧ್ಯಾಹ್ನ 1 ಗಂಟೆಗೆ ಪ್ರಭುಗಳು ದಯಮಾಡಿಸಿದರು ಪಟೇಲ್ ಹನುಮಂತಪ್ಪನವರು ಆಗ ಹಾರಾ ತುರಾಯಿಗಳನ್ನು ಒಪ್ಪಿಸಿದರು ವೇ|| ರಂಗಾಚಾರ್ಯರು ಫಲಮಂತ್ರಾಕ್ಷತೆಗಳನ್ನು ಅರ್ಪಿಸಿದರು ಮತ್ತು ಬಡಗಿ ಭೀಮಯ್ಯನೆಂಬಾತನು ಗಟ್ಟಿ ಕಲ್ಲಿನಲ್ಲಿಯೇ ನಾಜೂಕಾಗಿ ಕೆತ್ತಲ್ಪಟ್ಟಿದ್ದ ಉಂಗುರವನ್ನು ತೋರಿಸಲಾಗಿ ಮಹಾರಾಜರವರು ನೋಡಿ ಆನಂದಹೊಂದಿ ಪ್ರತಿಗಳ ಯೋಗಕ್ಷೇಮವನ್ನು ಆದರದಿಂದ ವಿಚಾರಿಸಿಕೊಂಡು ಚಿತ್ರದುರ್ಗಕ್ಕೆ ಪ್ರಯಾಣ ಬೆಳಸಿ ಅಲ್ಲಿ ನೋಡತಕ್ಕ ಸ್ಥಳಗಳನ್ನು ಪರಾಂಬರಿಸಿಕೊಂಡು ಪುನಹ ವಾಪಸು 6 ಗಂಟೆಗೆ ಮಂಟಪದ ಬಳಿ ಕೂತಿದ್ದ ಪ್ರಜಾಸಮೂಹಕ್ಕೆಲ್ಲಾ ಸಂದರ್ಶನವನ್ನು ಅನುಗ್ರಹಿಸಿದ್ದಲ್ಲದೆ ಹಾರಾ ತುರಾಯಿಗಳನ್ನು ಸ್ವೀಕರಿಸಿ ಬಾಯ್ಸ್ ಸ್ಕೂಲ್ ವಿದ್ಯಾರ್ಥಿಗಳಿಂದ ಮಾಡಿಸಲ್ಪಟ್ಟಿದ್ದ ನಾನಾ ಬಣ್ಣದ ಕಾಗದದ ಹೆಣಿಕೆ ಕಿಂಡರ್‌ಗಾರ್ಟನ್‌ಗೆ ಸಂಬಂಧಪಟ್ಟ ಕೆಲವು ಮಾದರಿಗಳೂ, ಆ ಮ|| ಚಿ ಪಟ್ಟಾಭಿರಾಮಯ್ಯನವರು ಸುಮಾರು ಒಂದು ತಿಂಗಳಿಂದಲೂ ಕಷ್ಟಪಟ್ಟು ಕೈಯಿಂದ ಬರೆದಿದ್ದ ಅಂದವಾದ ಚಿತ್ರಪಟಗಳೂ, ಇವುಗಳನ್ನು ಹೆಡ್ ಮಾಸ್ಟರ್ ಟಿ ಸೂರಪ್ಪನವರು ಶ್ರೀಮನ್ಮಹಾರಾಜರವರಿಗೆ ತೋರಿಸಿದ್ದ ಮೇಲೆ ಅವರು ಅವುಗಳನ್ನೆಲ್ಲಾ ಬಹಳ ಆದರದಿಂದ ಪರಾಂಬರಿಸಿ ಆತ್ಮಾನಂದವನ್ನುಹೊಂದಿ, ಪಿ ಇ ಸ್ಕೂಲ್ ಮಾಸ್ಟರುಗಳ ವೇತನದ ಮತ್ತು ಮಾರೀಕಣಿವೆ ಕೆರೆಯ ನೀರು ಈ ಪ್ರಾಂತ ಬರುವ ವಿಚಾರವಾಗಿ ವಿಜ್ಞಾಪಿಸಿಕೊಂಡದ್ದಕ್ಕೆ ಹರ್ಷಚಿತ್ತರಾಗಿ ಸದುತ್ತರವನ್ನು ಬೆಳಸಿ ಬಾಲಕರು ಜಯಘೋಷಮಾಡುತ್ತಿರುವಲ್ಲಿ ಸಂತೋಷದಿಂದ ಮುಂದಕ್ಕೆ ಮಹಾಸ್ವಾಮಿಗಳವರ ಸವಾರಿಯು ಚಿತ್ತೈಸಿತು ಪ್ರಭುಗಳವರ ಸಂದರ್ಶನದಿಂದ ಅಲ್ಲಿ ಸೇರಿದ್ದ ಪ್ರಜೆಗಳೆಲ್ಲರೂ ಸಂತೋಷಾಂಬುಧಿಯಲ್ಲಿ ಮುಳುಗಿ ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡುವುದಲ್ಲದೆ ಇವರ ಪ್ರಭುತ್ವವೇ ಆಚಂದ್ರಾರ್ಕವಾಗಿರಬೇಕೆಂದು ಪ್ರಾರ್ಥಿಸುತ್ತಾ ಜಯಧ್ವನಿಯೊಡನೆ ಹರ್ಷದಿಂದ ಹೊರಟುಹೋದರು

ಡಿಸ್ಟ್ರಿಕ್ಟ್ ಬೋರ್ಡ್ ರೈಲ್ ರಸ್ತೆಗಳ ವಿಚಾರ

ತುಮಕೂರು ಡಿಸ್ಟ್ರಿಕ್ಟು —ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ತಮ್ಮ ಡಿಸ್ಟ್ರಿಕ್ಟಿನೊಳಗೆ ರೈಲ್ ರಸ್ತೆಗಳನ್ನು ಹಾಕಿಸಿ ಅಭಿವೃದ್ಧಿಗೆ ಬರುವಂತೆ ಮಾಡುವುದಕ್ಕೋಸ್ಕರ ತೀರ್ಮಾನ ಮಾಡಿಕೊಂಡಿರುವ ಅಂಶಗಳೇನೆಂದರೆ—(1) ಡಿಸ್ಟ್ರಿಕ್ಟಿನೊಳಗೆ ಸೆಸ್ ಹಾಕಬಹುದಾದ ಎಲ್ಲಾ ಬಾಬಿಯ ಆದಾಯಗಳ ಮೇಲೂ ರೈಲ್ವೆ ಸೆಸ್ ಹಾಕಿ ವಸೂಲು ಮಾಡುವುದಕ್ಕೆ ಗವರ್ನ್‌ಮೆಂಟಿನವರ ಮಂಜೂರಾತಿಯನ್ನು ಪಡೆಯಬೇಕು (2) ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡಿನವರು ಬೌರಿಂಗ್‌ಪೇಟೆ ಕೋಲಾರ್ ರೈಲ್ವೆ ಲೈನನ್ನು ಒಡಾವರ್ ಮಾಡಿ ಚಿಕ್ಕಬಳ್ಳಾಪುರಕ್ಕೆ ಜತೆಗೂಡಿಸಬೇಕೆಂದು ಉದ್ದೇಶಪಟ್ಟಿರುವುದರಿಂದಲೂ, ಸದರಿ ಡಿಸ್ಟ್ರಿಕ್ಟಿನಲ್ಲಿ ಧಾನ್ಯ ಬೆಳೆಯುವಂತಾ ಪ್ರದೇಶಗಳನ್ನು ಪೇಟೆಸ್ಥಳಗಳಿಗೆ ಜಂಟಿಸುವುದರ ಮೂಲಕ ವ್ಯಾಪಾರಾದಿಗಳನ್ನು ಅಭಿವೃದ್ಧಿಪಡಿಸಕೊಳ್ಳಬೇಕೆಂಬ ಉದ್ದೇಶದಿಂದಲೂ, ಆ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಡಿಸ್ಟ್ರಿಕ್ಟಿನ ಒಳಭಾಗದಲ್ಲಿ ರೈಲ್ವೆ ಲೈನುಗಳನ್ನು ಹಾಕಿಸಲು ಕುತೂಹಲವುಳ್ಳವರಾಗಿರುವುದರಿಂದಲೂ, ಚಿಕ್ಕಬಳ್ಳಾಪುರ ಕೊಂಡಿಗೆರೆ ಮಧುಗಿರಿ ಮಾರ್ಗವಾಗಿ ತುಮಕೂರಿಗೂ ಗೌರಿಬಿದನೂರಿಗೂ ರೈಲ್ವೆ ಲೈನನ್ನು ಹಾಕಿಸಿಕೊಡಬೇಕೆಂದು ಸರ್ಕಾರದವರಿಗೆ ಅರಿಕೆಮಾಡಬೇಕು ಕೋಲಾರ್ ಡಿಸ್ಟ್ರಿಕ್ಟಿನ ಮುಖ್ಯ ವ್ಯಾಪಾರ ಸ್ಥಳಗಳ ಪೈಕಿ ಕೆಲವಾದ ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ ಇವುಗಳ ಮೂಲಕ ಬೌರಿಂಗ್‌ಪೇಟೆ— ಕೋಲಾರ್ ಲೈನನ್ನು ಚಿಕ್ಕಬಳ್ಳಾಪುರಕ್ಕೆ ತಂದು ಸೇರಿಸುವುದು ಸಾಧ್ಯವಾಗಬಹುದು ಇದಲ್ಲದೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು, ಚಿತ್ರದುರ್ಗದ ಮಾರ್ಗವಾಗಿ ಚಿಕ್ಕಜಾಜೂರನ್ನು ಹಿರಿಯೂರಿಗೆ ಸೇರಿಸುವ ಪಕ್ಷದಲ್ಲೂ, ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಣ ಹೆಚ್ಚು ಒದಗುವ ಪಕ್ಷದಲ್ಲೂ, ಈಗ ಹಾಕಬೇಕೆಂದಿರುವ ಲೈನಿನಲ್ಲಿ ಸಾಕಷ್ಟು ಉತ್ಪತ್ತಿಯಾಗುವ ಪಕ್ಷದಲ್ಲೂ ತುಮಕೂರು ಮಧುಗಿರಿ ಲೈನನ್ನು ಶಿರಾ ಮಾರ್ಗವಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟು ಹಿರಿಯೂರು ವರೆಗೂ ವಿಸ್ತಾರ ಮಾಡಬೇಕಾಗುತ್ತದೆ (3) ಈಗ ಸಲಹೆ ಕೊಟ್ಟಿರುವ ಲೈನುಗಳಿಗೂ ಸಹ, ಅಥವಾ ರೈಲ್ವೆ ಬೋರ್ಡಿನವರಿಗೂ ಡಿಸ್ಟ್ರಿಕ್ಟ್ ಬೋರ್ಡಿನವರಿಗೂ ಯುಕ್ತವೆಂದು ಕಂಡುಬರುವ ಇನ್ಯಾವ ಲೈನಿಗಾದರೂ ಸರಿಯೆ ಅಂದಾಜು ಖರ್ಚು ಮೊಬಲಗು ಇಷ್ಟೇ ಎಂದು ನಿಷ್ಕರ್ಷೆಯಾದಾಗ ತುಮಕೂರು ಡಿಸ್ಟ್ರಿಕ್ಟಿನೊಳಗೆ ಸಾಲವನ್ನು ಎತ್ತಿ ಕೂಡಿಸಲು ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಗವರ್ನ್‌ಮೆಂಟಿನವರು ಅಧಿಕಾರವನ್ನು ದಯಪಾಲಿಸಬೇಕು (4) ಈ ರೀತಿ ವಸೂಲಾದ ಒಂದುಮಾದ ಮೊತ್ತಕ್ಕೆ ಶೇಕಡ 4 ರಂತೆ ಬಡ್ಡಿಗೆ ಖಾತರಿಕೊಡುವುದಕ್ಕೂ, ಅರ್ಧ ಖರ್ಚನ್ನು ವಹಿಸುವುದರ ಮೂಲಕ ಬೋರ್ಡಿಗೆ ಸಹಾಯಮಾಡುವುದಕ್ಕೂ, ಬೋರ್ಡಿನ ಆದಾಯದಲ್ಲಿ ಭಾಗಗಳಾಗುವುದಕ್ಕೂ ಗವರ್ನ್‌ಮೆಂಟಿನವರಿಗೆ ಅರಿಕೆ ಮಾಡಬೇಕೆಂದು ತೀರ್ಮಾನಮಾಡಿದಾರೆ

ಶಿವಮೊಗ್ಗಾ ಡಿಸ್ಟ್ರಿಕ್ಟು —ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡಿನವರು ಶಿವಮೊಗ್ಗೆಯಿಂದ ಹೊಸನಗರ ಪೇಟೆ ಮಾರ್ಗವಾಗಿ ತೀರ್ಥಹಳ್ಳಿಗೂ ಸಾಗರಕ್ಕೂ ರೈಲ್ ಹಾಕುವುದಕ್ಕೆ ವಿಷಯದಲ್ಲಿ ತೀರ್ಮಾನಮಾಡಿಕೊಂಡಿರುವುದೇನೆಂದರೆ ಶಿವಮೊಗ್ಗೆಯಿಂದ ಹುಮಚದಕಟ್ಟೆ ಮಾರ್ಗವಾಗಿ ತೀರ್ಥಹಳ್ಳಿಗೂ ಸಾಗರಕ್ಕೂ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆ ಹಾಕಬೇಕು ಈ ರೈಲಿನ ಅರ್ಧ ಖರ್ಚನ್ನು ಸರ್ಕಾರದವರು ವಹಿಸಿಕೊಂಡು ಕೊಡುವಂತೆ ಕೇಳಿಕೊಳ್ಳಬೇಕು ಬಾಕಿ ಅರ್ಧ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಡಿಬೆಂಚರ್ ಪತ್ರಗಳ ಮೂಲಕ ಕೂಡಿಸಬೇಕು ಇದಕ್ಕೆ ಗವರ್ನ್‌ಮೆಂಟಿನವರು ಶೇಕಡ 4 ರಂತೆ ಬಡ್ಡಿ ದರವನ್ನು ಕೊಡಲು ಜಾಮೀನ್ ದಯಪಾಲಿಸಬೇಕು ಲೈನಿನ ಆಳತೆ ಮುಂತಾದದ್ದನ್ನು ಗವರ್ನ್‌ಮೆಂಟಿನವರೇ ಇತ್ಯರ್ಥಮಾಡಬೇಕು ಈಗ ಹಣ ವಸೂಲಾಗುವುದಕ್ಕೆ ಕಾಲ ಅನುಕೂಲವಾಗಿರುವುದರಿಂದ ಸರ್ಕಾರದವರು ಇದನ್ನು ಜಾಗ್ರತೆಯಾಗಿ ಮಂಜೂರು ಮಾಡಿಕೊಡಬೇಕು ಎಂಬುವುದೇ

ಪ್ಲೇಗ್ ಸಂಕೆಸ್ನು ಹೋಗಲಾಡಿಸುವ ಉಪಾಯ

ಬೇವಿನ ಸೊಪ್ಪನ್ನು ಸುಟ್ಟು ಹೊಗೆ ಹಾಕುವುದು

ಬೀಹಾರ್ ಮತ್ತು ಒರಿಸ್ಸಾ ಆಧಿಪತ್ಯದ ಸ್ಯಾನಿಟರಿ ರಿಪೋರ್ಟಿನಲ್ಲಿ ಮೇಜರ್ ಜೆ ಎಚ್ ಡೆಲನಿ, ಎಂ ಡಿ , ಐ ಎಂ ಎಸ್ ರವರು ಪ್ಲೇಗ್ ಸೋಂಕನ್ನು ಹೋಗಲಾಡಿಸುವುದಕ್ಕೆ ಬೇವಿನ ಎಲೆಗಳನ್ನು ಸುಟ್ಟು ಹೊಗೆ ಹಾಕುವ ಕ್ರಮವನ್ನು ಕುರಿತು ಬರೆದಿರುವುದೇನೆಂದರೆ—

“ ಪ್ಲೇಗ್ ಸೋಂಕನ್ನು ಹೋಗಲಾಡಿಸತಕ್ಕ ಬಗ್ಗೆ ಒಂದು ಸುಲಭವಾದ ವಸ್ತುವನ್ನು ತಿಳಿಸಬೇಕೆಂದು ಈ (ಸಾರನ್) ಡಿಸ್ಟ್ರಿಕ್ಟಿನ ಯೂರೋಪಿಯನ್ ಜನಗಳೂ ಇಂಡಿಯನ್ ಜನರೂ ಸಹ ನನ್ನನ್ನು ಪದೇ ಪದೇ ಕೇಳುತ್ತಿದ್ದುದರಿಂದ ಪ್ಲೇಗ್ ಸೋಂಕು ಇರುವ ಮನೆಗಳಲ್ಲಿನ ಇಲಿಗಳನ್ನು ಪ್ರಾಯಶಃ ಕೊಲ್ಲಬಹುದಾದ ಪದಾರ್ಥಗಳಿಂದ ಅನೇಕ ಪರೀಕ್ಷೆಗಳನ್ನು ನಡಿಸುವುದಕ್ಕೆ 1912 ನೆಯ ಜನವರಿಯಲ್ಲಿ ಪ್ರಾರಂಭಿಸಿದೆನು ಇಲಿಗಳು ಬಿಡಕೊಂಡಿರುವ ಸ್ಥಳಗಳನ್ನೆಲ್ಲಾ ಹುಡುಕಿ ಅವುಗಳನ್ನು ಕೊಲ್ಲತಕ್ಕ ಬಗ್ಗೆ ಉಪಯೋಗಿಸಬಹುದಾದ ಒಂದು ಪದಾರ್ಥವನ್ನು ನಾನು ಅನ್ವೇಷಿಸುತ್ತಿದ್ದೆನು ತತ್‌ಕ್ಷಣದಲ್ಲಿಯೇ ಹೊಗೆ ಹಾಕತಕ್ಕ ಮಾರ್ಗವು ನನಗೆ ತೋರಿತು ನನ್ನ ಸೇವಕನಿರುವ ಮಳಿಗೆಯಲ್ಲಿ ಈ ಕೆಳಗೆ ಹೇಳುವಂತೆ ನಾನು ಪರೀಕ್ಷೆಯನ್ನು ನಡಿಸಿದೆನು ಒಂದು ಮಳಿಗೆಯಲ್ಲಿ ಬಟ್ಟೆಬರೆ ಮೊದಲಾದ ಮೂಟೆಗಳ ಕೆಳಗೆ ನೆಲದ ಮೇಲೆ ಇಟ್ಟಿದ್ದ ಇಲಿಗಳಿರುವ ಬೋನುಗಳನ್ನು ಮಾಳಿಗೆಗೆ ತಗುಲುಹಾಕಲಾಯಿತು (ಪ್ರತಿಯೊಂದು ಗ್ರಾಮದಲ್ಲಿಯೂ ಸಂದೇಹವಿಲ್ಲದೆ ಸುಲಭವಾಗಿ ದೊರೆಯುವ, ಬೆರಣಿಗಳನ್ನು 30 ರಿಂದ 60 ರ ವರೆಗೆ ಒಂದು ಗುಡಿಸಲಿನ ಚೊಕ್ಕಟವಾದ ಮಧ್ಯಭಾಗದಲ್ಲಿ ನೆಲದ ಮೇಲೆ ಗುಂಡಗೆ ಪೇರಿಸಿ ಅದಕ್ಕೆ ಸೀಮೆ ಎಣ್ಣೆಯಿಂದಲೂ, ಸೀಮೆ ಎಣ್ಣೆ ಇಲ್ಲದೆಯೂ ಬೆಂಕಿ ಇಡಲಾಯಿತು ಬೆರಣಿಗಳು ಚೆನ್ನಾಗಿ ಹತ್ತಿಕೊಂಡಾಗ ಅದರ ಮೇಲೆ ಪರೀಕ್ಷೆಗೆ ಸಿದ್ಧವಾದ ಅನೇಕ ಪದಾರ್ಥಗಳನ್ನು ಪೇರಿಸಿ ಬಾಗಿಲುಗಳನ್ನೂ, ಕಿಟಕಿಗಳನ್ನೂ ಮುಚ್ಚಿ, ಬೆಂಕಿಯು ಆದಷ್ಟಕ್ಕೆ ಅದೇ ಉರಿಯುವಂತೆ ಮಾಡಲಾಯಿತು ಈ ರೀತಿಯಾಗಿ ಕ್ರಮವಾಗಿ ಉರಿಯುವುದಕ್ಕೆ ಉಪಯೋಗಿಸಿದ ಅನೇಕ ಪದಾರ್ಥಗಳ ಹೊಗೆಗೆ ಇಲಿಗಳನ್ನು ಸಿಕ್ಕಿಸಲಾಯಿತು ಆದರೆ ಅನೇಕ ಪರೀಕ್ಷೆಗಳನ್ನು ನಡಿಸಿದರೂ, ಇಲಿಗಳು (ಒಡ್ಡಾದುವಂತೆ ಆಗಾಗ ಸೂಚನೆಗಳನ್ನು ತೋರಿಸಿದರೂ) ಸಾಧಾರಣವಾಗಿ ಸಾಯದೆ ಬದುಕಿಕೊಂಡವು ಪರೀಕ್ಷೆಗಳನ್ನು ನಡಿಸಿದ ತರುವಾಯ ಇಲಿಗಳನ್ನು ಅಜಮಾಯಿಷಿ ಮಾಡುವುದರಲ್ಲಿ ಬೇವಿನ ಎಲೆಗಳ ಹೊಗೆಗೆ ಸಿಕ್ಕಿಬಿದ್ದಿದ್ದ ಕೆಲವು ಇಲಿಗಳ ಮೇಲೆ ಕೆಲವು ಸತ್ತ ಸೊಳ್ಳೆಗಳನ್ನು ನಾನು ಕಂಡೆನು ಆ ಮೇಲೆ ಬೇವಿನ ಎಲೆಗಳಿಂದ ಪರೀಕ್ಷೆಗಳನ್ನು ನಾನು ಪದೇ ಪದೇ ನಡಿಸಿದೆನು ಆದರೆ ಹಾಗೆ ಮಾಡುವಾಗ ಮೇಲಣ ಭಾಗವನ್ನು ಬಿಟ್ಟು, ಸುತ್ತಲೂ ಆ ಇಲಿ ಬೋನುಗಳಿಗೆ ನಾರು ಬಟ್ಟೆಯನ್ನು ಸುತ್ತಿದೆನು ಆಗ ಸಾಮಾನ್ಯವಾಗಿ ಪ್ರತಿಯೊಂದು ಪರೀಕ್ಷೆಯಲ್ಲಿಯೂ ಇಲಿಗಳ ಮೇಲೆ ಸೊಳ್ಳೆಗಳಿಲ್ಲದೆ ಇರುವುದನ್ನು ಕಂಡೆನು ಆದರೆ ಬೋನುಗಳ ಕೆಳಗಿನ ನಾರುಬಟ್ಟೆಯಲ್ಲಿ ಅನೇಕ ಸತ್ತ ಸೊಳ್ಳೆಗಳಿದ್ದವು ಇಲಿಗಳನ್ನು ಎಷ್ಟೆಷ್ಟು ಕಾಲ ಹೆಚ್ಚಾಗಿ ಬೇವಿನ ಎಲೆಗಳ ಹೊಗೆಗೆ ಸಿಕ್ಕಿಸಿದರೆ ಅಷ್ಟಷ್ಟು ಹೆಚ್ಚಾಗಿ ಸತ್ತ ಸೊಳ್ಳೆಗಳು ಸಿಕ್ಕುವವೆಂದು ಇನ್ನೂ ಮುಂದೆ ನಡಿಸಿದ ಪರೀಕ್ಷೆಗಳಿಂದ ಗೊತ್ತಾಯಿತು ಎರಡು ಗಂಟೆಯ ಕಾಲದ ಮೇಲೆ ಮೂರು ಗಂಟೆ ಕಾಲದವರೆಗೆ ಈ ಮೇರೆಗೆ ಇಲಿಗಳಿಗೆ ಹೊಗೆ ಹಾಕುವುದರಿಂದ ಸಮರ್ಪಕವಾದ ಫಲಿತಾಂಶವು ಕಾಣಿಸಿತು

ಈ ಸಂದರ್ಭದಲ್ಲಿ ಅನೇಕ ಇತರ ಪದಾರ್ಥಗಳಿಂದಲೂ ಪರೀಕ್ಷೆಗಳನ್ನು ನಡಿಸಿದೆನು ಆದರೆ ಅಗತಾಸೆ? ಅತ್ತು ಕಂದಿ ಬೇವಿನ ಎಲೆಗಳ ಹೊಗೆಗಿಂತಲೂ ಚೆನ್ನಾಗಿ ಸೊಳ್ಳೆಗಳನ್ನು ಕೊಲ್ಲತಕ್ಕದ್ದು ಮತ್ತಾವುದೂ ಇಲ್ಲವೆಂದು ನನಗೆ ಕಂಡುಬಂದಿತು

ಆ ಮೇಲೆ, ಇಲಿಯಿಂದ ಮನುಷ್ಯನಿಗೆ ಹರಡುವ ಪ್ಲೇಗ್ ಸೋಂಕಿನ ಸಂಬಂಧವನ್ನು ನಾಶಮಾಡುವುದಕ್ಕೆ ಇದೇ ಅತ್ಯುತ್ತಮವಾದ ವಿಧಾನವೆಂದು ನಂಬಿ, ಸಣ್ಣ ಸಣ್ಣ ಪುಸ್ತಕಗಳ ರೂಪದಲ್ಲಿ ತಿರುಪಳಿಕೆಗಳನ್ನು ಅಚ್ಚುಹಾಕಿಸಿ, ಡಿಸ್ಟ್ರಿಕ್ಟುಗಳಲ್ಲೆಲ್ಲಾ ಕಳೆದ ಸಲ ಪ್ಲೇಗ್ ಇಲಾಖೆಯವರ ಮೂಲಕ ಸಾವಿರಾರು ಪ್ರತಿಗಳನ್ನು ಬಟವಾಡೆ ಮಾಡಿಸಿದೆನು

ಬೇವಿನ ಎಲೆಗಳನ್ನು ಒಣಗಿಸಬೇಕಾದ ಅಗತ್ಯವಿಲ್ಲವು ಅವುಗಳನ್ನು ಹಾಗೆಯೇ ಉಪಯೋಗಿಸಬಹುದು ನಿಜವಾಗಿಯೂ ಮರದಿಂದ ಆಗತಾನೆ ತಂದು ಸುಟ್ಟಾಗ ಆ ಎಲೆಗಳು ತುಂಬಾ ಕಾರ್ಯಕಾರಿಯಾಗುವವು ಒಣಗಿಕೊಳ್ಳುವ ಹೊಗೆಯು ಹಸಿಯ ಎಲೆಗಳಿಂದ ಗುಬ್ಬನೆ ಬಲವಾಗಿ ಏಳುತ್ತದೆ

ಪ್ಲೇಗ್ ಸೋಂಕನ್ನು ಹೋಗಲಾಡಿಸುವುದಕ್ಕೆ ಈ ಸುಲಭವಾದ, ಖರ್ಚಿಲ್ಲದ ವಿಧಾನದಿಂದ ತುಂಬಾ ಪ್ರಯೋಜನಗಳುಂಟಾಗುವವೆಂದು ನಾನು ನಂಬಿದ್ದೇನೆಯಲ್ಲದೆ ಈ ವಿಧಾನವನ್ನೇ ಈಗ ದೊರೆಯುವ ಸಾಧನಗಳಲ್ಲಿ ಅತ್ಯಂತ ಕಾರ್ಯಕಾರಿಯಾದುದೆಂದು ನಾನು ಭಾವಿಸುತ್ತೇನೆ”

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯ ಕೂಡದು ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಪ್ರಜಾಹಿತೈಷಿ, ಬಾಣಾವಾರ—ಸ್ಥಳದ ಮುಖಂಡರೂ, ಮ್ಯಾನೇಜಿಂಗ್ ಕಮಿಟಿಯವರೂ ಸೇರಿ ಇನ್ಸ್‌ಪೆಕ್ಟರ್ ಜನರಲ್‌ವರಿಗೆ ಅರ್ಜಿ ಬರೆದುಕೊಂಡರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ

ಬಿ ಕೆಟ್ರಿ ಶಿವರುದ್ರಪ್ಪನವರು, ತಿಮ್ಮಯ್ಯನಹಳ್ಳಿ, ಚಳ್ಳಕೆರೆ ತಾಲ್ಲೂಕು—(1) ನೀವು ನಮಗೆ ಮೋಸಮಾಡಿದ ಕಂಪನಿಯ ಮೇಲೆ ಕೋರ್ಟಿನಲ್ಲಿ ವ್ಯವಹಾರ ನಡಿಸಬೇಕು, (2) ಪೋಸ್ಟ್ ಆಫೀಸಿನ ಅಕ್ರಮದ ವಿಷಯದಲ್ಲಿ ಗ್ರಾಮದ ಮುಖಂಡರು ಸೇರಿ ಪೋಸ್ಟ್ ಇಲಾಖೆ ಸೂಪರಿಂಟೆಂಡೆಂಟಿಗೆ ಅರ್ಜಿಬರೆದು ಕೊಂಡರೆ ಅವರು ವಿಚಾರಿಸಿ ಸರಿಪಡಿಸುತ್ತಾರೆ

ಸತ್ಯವಾದಿ, ಚಿತ್ರದುರ್ಗ— ನೀವು ಖಂಡಿತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ವಿರಳವಾಗಿಯೂ ಬರೆದಿಲ್ಲವಾದದ್ದರಿಂದ ನಿಮ್ಮ ಮೊಗಂ ಆದ ಆಕ್ಷೇಪಣೆಯುಳ್ಳ ಬಾತ್ಮಿಗೆ ಅವಕಾಶ ದೊರಕಲಾರದು

ಬಿ ಎ ವೆಂಕಟಸುಬ್ಬಯ್ಯ, ದೊಡ್ಡಬಾಣಾವಾರ—ನೀವು ಸೂಚಿಸುವ ವಿಷಯವನ್ನು ನಿಮ್ಮ ಕಡೆಯ ಪ್ರತಿನಿಧಿಗಳ ಮೂಲಕ ಪ್ರಜಾಪ್ರತಿನಿಧಿ ಸಭೆಯಲ್ಲಿ ಗವರ್ನ್‌ಮೆಂಟಿಗೆ ಅರಿಕೆಮಾಡಿ ಚರ್ಚಿಸಿದರೆ ಒಳ್ಳೇದು

ಬಿ ಕೃ , ತಿಪಟೂರು ದೀವಟಿಗೆ, ಶ್ರೀರಂಗಪಟ್ಟಣ, ಪ್ರಯಾಣ, ಹಾಸನ ಎಂ ಗೋಪಾಲರಾವ್, ಶಿವಮೊಗ್ಗೆ, ಜನೋಪಕಾರಿಣಿ, ಕೊಡಿಯಾಲ, ಬಸವಯ್ಯ

ಚಿಕ್ಕನಾಯಕನಹಳ್ಳಿ, ನಿಪ್ಪಾಣಿ, ದೊಡ್ಡಪೇಟೆ, ಮೈಸೂರು —ಈ ವಾರ್ತೆಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್.

ಕಂಪನಿಯ ವಿಚಾರದಲ್ಲಿ ಎಚ್ಚರಿಕೆ

ಅಯ್ಯಾ,

ಸುಬ್ಬರಾವ್, ಜನರಲ್ ಮರ್ಚೆಂಟ್ ನಂ 16, ಕಾರ್ ಸ್ಟ್ರೀಟ್, ತಿರುವಲ್ಲಿಕ್ಕೇಣಿ, ಮದರಾಸು ಇವರು ತಮ್ಮ ಕ್ಯಾಟಲಾಗಿನಲ್ಲಿ ಮಧುರೆ ಚುನ್ನಡಿ ಅಂಚಿನ ಸೀರೆ ಘನಂದಾಗಿ 18 ಮೊಳವಿರುತ್ತದೆ ಕ್ರಯ ರೂ 3 1 0, ತರಿಸಿಕೊಂಡರೆ 1 ರವಿಕೆ ಕಣ ಇನಾಮಾಗಿ ಕಳುಹಿಸುತ್ತೇವೆ ಎಂದು ಪ್ರಕಟಿಸಿದ್ದರು ನಾನು ಅದನ್ನು ಓದಿ ನಿಜವೆಂದು ತಿಳಿದು ಈ ಬಹುಮಾನಕ್ಕಾಗಿ ಆ ಕಂಪನಿಗೆ ಒಂದು ಕಾಗದ ಹಾಕಿದೆನು ಅವರು ಭೂಂಗಿ ಮಾಡಿ ಕಳುಹಿಸಿದ್ದು ನನಗೆ ಕಲಶಿತು ಪೋಸ್ಟ್ ಮ್ಯಾನರೇ ಮೊದಲಾದ ಜನಗಳು ನಮ್ಮ ಮನೆಯಲ್ಲಿರುವಾಗ ಆ ಭೂಂಗಿ ಒಡೆದು ನೋಡಲಾಗಿ ಅದರಲ್ಲಿ ಸೀರೆ ಇತ್ತು ಮೊಳ ಹಾಕಿ ನೋಡುವಲ್ಲಿ 16 ಮೊಳವಿತ್ತು ಬಹುಮಾನದ ರವಿಕೆ ಬರಲಿಲ್ಲ ನನಗೆ ಈ ರೀತಿ ಮೋಸ ಮಾಡಿರ ತ್ತಾರೆ ಇನ್ನು ಮುಂದೆ ಅವರಲ್ಲಿ ವ್ಯಾಪಾರ ಮಾಡತಕ್ಕವರು ಎಚ್ಚರಿಕೆಯಾಗಿರಬೇಕಾಗಿ ಕೋರುತ್ತೇನೆ

ವೆಂಕಟನರಸಿಂಹಯ್ಯ, ದೊಡ್ಡಬೆಳವಂಗಲ, ದೊಡ್ಡಬಳ್ಳಾಪುರ ತಾಲ್ಲೂಕು

ಮದ್ದಗಿರಿ ತಾ| ಮಿಡಿಗೇಶಿ ಗ್ರಾಮದ ದುಃಸ್ಥಿತಿ.

ಅಯ್ಯಾ,

ಈ ಗ್ರಾಮವು ಮದ್ದಗಿರಿಯಿಂದ ಪಾವಗಡಕ್ಕೆ ಹೋಗುವ ಹೈ ರೋಡಿನ ಲ್ಲಿದ್ದು ಪ್ರಸಿದ್ಧ ಅಧಿಕಾರಿಗಳು ದಯಮಾಡಿ ಪ್ರಜೆಗಳ ಕ್ಷೇಮ ಸಮಾಚಾರಗಳನ್ನು ವಿಚಾರಿಸುತ್ತಿರುವುದು ತುಂಬಾ ಸಹಾಯವಾಗಿರುತ್ತೆ ಆದರೂ ಈ ಗ್ರಾಮಕ್ಕೆ ವರ್ಷವರ್ಷ ಒದಗುತ್ತಿರುವ ಕುಡಿಯುವ ನೀರಿನ ಕ್ಷಾಮಕ್ಕೆ ಮಾತ್ರ ಯಾರೊಬ್ಬರೂ ಗಮನ ಕೊಡದಿರುವುದು ತುಂಬಾ ವ್ಯಸನಕರವಾಗಿದೆ ಈಗ ನೀರಿನ ಒಂದೇ ಒಂದು ಭಾವಿಯಿಂದ ಈ 300 ಮನೆಗಳುಳ್ಳ ಗ್ರಾಮವು ಜೀವನ ಮಾಡಬೇಕಾಗಿದೆ ಅದರಲ್ಲಿ ಈಗ ನೀರು ಕೊಂಚವಾಗಿರುತ್ತೆ ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರ ಸವಾರಿಯು ಪ್ರತಿ ಒಂದು ತಾಲ್ಲೂಕಿಗೂ ದಯಮಾಡಿ ಪ್ರಜೆಗಳ ಕಷ್ಟನಷ್ಟಗಳನ್ನು ವಿಚಾರಿಸಿ ಸರಿಯಾದ ಏರ್ಪಾಟು ಮಾಡುತ್ತಿರುವುದನ್ನು ತಮ್ಮ ಪತ್ರಿಕಾ ಮುಖದಿಂದ ತಿಳಿದು ಸಂತೋಷಪಡುತ್ತೇನೆ ಅವರು ಈ ತಾಲ್ಲೂಕಿಗೆ ದಯಮಾಡಿ ಸಮಾಗುವ ಈ ವಿಧವಾದ ಕಷ್ಟವನ್ನು ಪರಿಹರಿಸಿಕೊಟ್ಟು ಕಾಪಾಡುತ್ತಾರೆಂದು ನಂಬಿರುತ್ತೇನೆ ಈ ಪ್ರಾಂತ್ಯ ಮುಷ್ಟಿಕ ಫಸಲುಗಳು ಸುತರಾಂ ಇಲ್ಲ ಕಂದಾಯದ ಕಾಲ ಬಂತಾಗಿ ಬಡ ರೈತರೆಲ್ಲರೂ ವ್ಯಥೆಪಡುತ್ತಿದ್ದಾರೆ

ಕಳೆದ ತಾ 1 ನೇ ಭಾನುವಾರ ನನ್ನ ಮನೆಗೆ ಸುಮಾರು 12 ವರ್ಷದ ಒಬ್ಬ ಮುಸಲ್ಮಾನ ಹುಡುಗನು ಬಂದಿರುತ್ತಾನೆ ಕೆಂಪು ಬಣ್ಣ, ಮುಖದ ಮೇಲೆ ಸಿಡುಬಿನ ಕಲೆ ಇರುತ್ತೆ ತನ್ನ ಸ್ಥಳ ಬೆಂಗಳೂರೆಂದೂ, ತನಗೆ ವಾರಸ್ದಾರರು ಯಾರೂ ಇಲ್ಲವೆಂದೂ ಹೇಳುತ್ತಾನೆ ಸರಿಯಾದ ವಾಖಿಲೆ ತಿಳಿಯುವವರೆಗೂ ಇವನನ್ನು ಇಲ್ಲಿಯೇ ಇಟ್ಟುಕೊಂಡಿರುತ್ತೇನೆ

ಸೈಯದ್ ಖಲಂದರ್ ಸಾಬ್

ಮುಳವಳ್ಳಿ ಕೆರೆಯ ನಾಲಾ ಕಾಮಗಾರಿ

ಅಯ್ಯಾ,

ಮುಳವಳ್ಳಿ ಕಸಬಾ ಗ್ರಾಮದ ಕೆರೆ ನಾಲೆಯು ಸರಿಯಾದ ಸ್ಥಿತಿಯಲ್ಲಿರದೆ ಕೆಳಗಿನ ಜಮೀನ್ದಾರರಿಗೆ ತುಂಬಾ ತೊಂದರೆಯೂ, ನಷ್ಟವೂ ಆಗುತ್ತಿತ್ತು ಇದಕ್ಕಾಗಿ ಸರ್ಕಾರದವರು ಎಲ್ಲಾ ರೈತರಿಗೂ ಅನುಕೂಲವಾಗುವಂತೆ ನಾಲೆಯನ್ನು ಕಾಮಗಾರಿ ಮಾಡಿಸಲು ಈಗ್ಗೆ ಸುಮಾರು 3 ವರ್ಷಗಳಲ್ಲಿ ಕೆರೆ ಕೆಳಗಿನ ರೈತರಿಂದ ಕಂಟ್ರಿಬ್ಯೂಷನ್ ವಸೂಲ್ಮಾಡಿಕೊಂಡರು ಅನಂತರ ಈಗ್ಗೆ 3 ವರ್ಷಗಳಲ್ಲಿ ಕಾಮಗಾರಿ ನಡಿಸಲು ಕಂಟ್ರಾಕ್ಟು ಕೊಟ್ಟರು ಕೆಲಸ ನಡಿಯಲು ಮಳೆಗಾಲ, ಗುಡಿಸಲಿನ ಕೂಲಿಗಳ ನೆಪಗಳಿಂದಲೂ, ದರ್ಖಾಸ್ತು ಜಮಾಯಿಸುವ ನೆಪದಿಂದಲೂ ಕೆಲವು ಕಾಲ ಕಳೆದು ಸುಮಾರು 1½ ವರ್ಷದಲ್ಲಿ ಅಲ್ಪಸ್ವಲ್ಪ ಕಾಮಗಾರಿ ನಡೆದು ನಿಂತುಹೋಯಿತು ಕೆಲಸ ಪೂರೈಸದೆಹೋದ್ದರಿಂದ ಕಳೆದ ಮಳೆಗಾಲದಲ್ಲಿ ನಾಲೆಯು ಹೆಚ್ಚು ಜಖಂ ಆಗಿ ರೈತರಿಗೆ ನಷ್ಟಕ್ಕೂ ಸರ್ಕಾರಕ್ಕೆ ಲುಕ್ಸಾನಿಗೂ ಕಾರಣವಾಯಿತು ಈಚೆಗೆ ರೈತರು ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರಲ್ಲೂ, ಮಂಡ್ಯದ ರೇಂಜು ಓವರ್‌ಸೀರ್ ಇಲಾಖಾ ಸುಪ್ರಿಂಟೆಂಡರಲ್ಲೂ ಅರಿಕೆ ಮಾಡಿದ್ದರ ಮೇಲೆ ಕಂಟ್ರಾಕ್ಟರಿಗೆ ಕಾಮಗಾರಿ ಪೂರೈಸಲು ಆಜ್ಞೆ ಮಾಡಿದರು ಅಜ್ಞೆ ಪ್ರಕಾರ ಸ್ವಲ್ಪ ಕೆಲಸ ನಡೆದು ನಿಂತುಹೋಯಿತು ರೈತರು ಈ ಅಕ್ರಮವಾದ ಕಾಲುವೆಯ ದೆಸೆಯಿಂದ ನಷ್ಟಹೊಂದಿದಾಗಿದ್ದಾರೆ ಮುಂದಾದರೂ ಕ್ರಮಪಡುವದೆಂದು ಸಾಲಗಾರರಾಗಿ ಕಂಟ್ರಿಬ್ಯೂಷನ್ ಕೊಟ್ಟು ಮೂರು ವರುಷಗಳಾಗುತ್ತಾ ಬಂದರೂ ಅತಿವೃಷ್ಟಿ ಅನಾವೃಷ್ಟಿಯಿಂದ ನಷ್ಟಪಟ್ಟು ಕಂದಾಯವನ್ನು ತೆತ್ತು ಸಂಕಟಪಡುತ್ತಿರುವರು ಮುಂದಣ ಕಾರ್ತೀ ಫಸಲು ಮಾಡುವ ಕಾಲವು ಇನ್ನು 1 5 ತಿಂಗಳು ಇದೆ ಸರ್ಕಾರದವರು ಈಗಲಾದರೂ ಜಾಗ್ರತೆ ಕೆಲಸ ಪೂರೈಸುವ ಏರ್ಪಾಡು ಮಾಡಿ ಬಡ ರೈತರನ್ನು ಕಾಪಾಡಿ ಯಶಸ್ಸಂಪಾದಿಸುವರೆಂದು ನಂಬಿದೆ

ಪ್ರಜಾ ಹಿತೈಷಿ

ತೀರ್ಥಹಳ್ಳಿ ಎ ವಿ ಸ್ಕೂಲು.

ಅಯ್ಯಾ,

ಇದು ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಿದ್ದು. ವಾಸನೆ 4 ದಿನಗಳ ತನಕ ಹೋಗದು. ಕೂದಲಿಗೆ ಹೆಚ್ಚು ಬೆಳವಳಿಗೆ, ನ್ಯುಮತ್ವ, ಮೆದುಳಿಗೂ, ಕಣ್ಣಿಗೂ ತಂಪು ಕೊಡುತ್ತೆ. ಒಂದು ಸಲ ದಯಮಾಡಿ ಪರೀಕ್ಷಿಸಿ. ಬೆಲೆ 1 ಬಾಟ್ಲಿಗೆ ರೂ 1, ಅಂಚೆ ವೆಚ್ಚ 4 ಆಣೆ. ರಿ ಮೈಸೂರಿಯರ್, ಮದರಾಸ್.

ಜನವರಿ ಮಹೋತ್ಸವದ ಕೈ ಗಡಿಯಾರ.



ಅರ್ಧ ಕ್ರಯ ರೂ. 1-14-0.

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. ವಿಳಾಸ—

ಜಿ. ಆರ್. ರಾವ್, ಜನರಲ್ ಮರ್ಚೆಂಟ್,
55 ಆಫೀಸು ವೆಂಕಟಾಚಲಮೊದಲಿ ಬೀದಿ,
ತಿರುವಲ್ಲಿಕೇಣಿ, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಬಂ ರೂ. 2-6-0

50-1

ಫೆಬ್ರವರಿ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ.

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ಕ್ಲಾತ್ ಮರ್ಚೆಂಟ್, 55 ಆಫೀಸು ವೆಂಕಟಾಚಲ ಮೊದಲಿ ಬೀದಿ ತಿರುವಲ್ಲಿಕೇಣಿ, ಮದರಾಸು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಚಳಿಕೆ, ಎದೆ ಕಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು; ಕೀಲುನೋವು, ಜ್ವರವು, ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸಂಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-24]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುದ್ದಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಅಷೂರೆನ್ಸ್ ಕಂಪನಿ, ಮೈಸೂರು.

ನೋಟೀಸ್.

ಅಮೃತಸಾರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಬ್ರಾಂಚ್ ಸೆಕ್ರೆಟರಿಯಾದ ಮ॥ ಟಿ ಎಸ್ ಆರ್ ಅಯ್ಯರವರು ಮ॥ ಪಿ ಎಲ್ ರಾಜಪಾಲ್ ರವರಿಗೂ ಈ ಕೆಳಗೆ ರುಜುಮಾಡಿರುವವರಿಗೂ ನಡೆದ ಕಾಗದಗಳ (ಕರೆಸ್ಪಾಂಡೆನ್ಸ್) ನಕಲುಗಳನ್ನು "ವೃತ್ತಾಂತ ಪತ್ರಿಕೆ" ಯ ಜನವರಿ 16, 22 ಮತ್ತು 29 ನೇ ತಾರೀಖು ಸಂಚಿಕೆಗಳಲ್ಲಿ ಎತ್ತಿ ತಮ್ಮ ರುಜುವಿನ ಮೇಲೆ ಪ್ರಕಟಮಾಡಿರುತ್ತಾರಷ್ಟೆ. ಈ ವಿಚಾರದಲ್ಲಿ ಕೆಳಗೆ ರುಜುಮಾಡಿರುವವರು ಸಮಸ್ತ ಪಬ್ಲಿಕ್ ಜನಗಳಿಗೂ ವ್ಯಕ್ತಪಡಿಸುವ ಸಂಗತಿಗಳೇನೆಂದರೆ—

ಯಾವ ಸಂಗತಿಯನ್ನೂ ತಿಳಿಸುವುದಕ್ಕೆ ಮೊದಲು ಈ ಕೆಳಗೆ ರುಜುಮಾಡಿರುವವರು ಮ॥ ಅಯ್ಯರವರ ವರ್ತನವನ್ನು ನೋಡಿ ಕನಿಕರವನ್ನೂ ವಿಷಾದವನ್ನೂ ಪಡುತ್ತಾರೆ. ಯಾಕೆಂದರೆ ಮ॥ ಅಯ್ಯರವರು ತಮ್ಮ ಸುಳ್ಳು ಬರವಣಿಗೆಗಳನ್ನು (ಸ್ಟೇಟ್‌ಮೆಂಟ್ಸ್) ಬಲಪಡಿಸುವುದಕ್ಕೆಂದು ವರ್ತಮಾನ ಪತ್ರಿಕೆಗಳಲ್ಲಿ ಕೆಲವು ಸಂಗತಿಗಳನ್ನು ಪ್ರಕಟಮಾಡಿರುತ್ತಾರೆ, ಆದರೆ ಅವರು ಪ್ರಕಟಮಾಡಿರುವ ಆ ಸಂಗತಿಗಳೇ ಮುಂದೆ ವಿವರಿಸಿರುವಂತೆ ಕೆಳಗೆ ರುಜುಮಾಡಿರುವವರ ಬರವಣಿಗೆಗೆ (ಸ್ಟೇಟ್‌ಮೆಂಟ್ಸ್) ವಿಶೇಷ ಸಹಾಯಕವಾಗಿಯೂ ರುಜುವಾತಾಗಿಯೂ ಪರಿಣಮಿಸಿರುತ್ತವೆ.

ಕಳೆದ 1913 ನೇ ಡಿಸೆಂಬರ್ ತಾ 11 ನೇ ಸಂಚಿಕೆಯ "ವೃತ್ತಾಂತ ಪತ್ರಿಕೆ" ಯಲ್ಲಿ ಮ॥ ಅಯ್ಯರವರು ಪ್ರಾವಿಡೆಂಟ್ ಫಂಡ್ ಪ್ರಾಸ್ಪೆಕ್ಟಸಿನ ವಿಚಾರವನ್ನು ಕುರಿತು ಕೆಳಗೆ ರುಜುಮಾಡುವವರು "ವಿವಾಹದ ಬೋನಸ್ ಹಾವು ವಿಸ್ತು (ಪ್ರೀಮಿಯಂ) ಮೂಲಕ ಪಾವತಿ ಬಂದ ಮೊಬಲಗಿಗೆ ಎರಡರಷ್ಟಕ್ಕಿಂತ ಕಡಮೆ ಇಲ್ಲದೇನೂ, 15 ರಷ್ಟಕ್ಕಿಂತ ಜಾಸ್ತಿ ಇಲ್ಲದೇನೂ ಕೊಡಲ್ಪಡುತ್ತದೆ" ಎಂಬದಾಗಿ ಪ್ರಕಟಮಾಡಿರುವುದಕ್ಕೆ ಆಧಾರವೇನೂ ಇರುವುದಿಲ್ಲವೆಂದು ತಿಳಿಸಿರುತ್ತಾರಷ್ಟೆ. ಇದಕ್ಕಾಗಿ ಮ॥ ಅಯ್ಯರವರು ಚೀಫ್ ಮ್ಯಾನೇಜರವರಿಂದ ಬರೆದು ಬಂದ 16-3-11 ನೇ ತಾರೀಖಿನ 16162 ನೇ ನಂಬರ್ ಕಾಗದದ 3 ನೇ ಪ್ಯಾರಾ (ಇ) ಎಂಬ ಭಾಗವನ್ನು ಕಾಣಿಸಿರುತ್ತಾರೆ. ಇದರಲ್ಲಿ ಕೆಳಗೆ ರುಜುಮಾಡಿರುವವರು ಹಳೆಯ (ಅಂದರೆ, ಮೊದಲಿನ) ಪ್ರಾವಿಡೆಂಟ್ ಫಂಡ್ ಪ್ರಾಸ್ಪೆಕ್ಟಸ್ಸನ್ನೇ ಎತ್ತಿ ಪ್ರಕಟಿಸಿರುತ್ತಾರೆ ಎಂಬದಾಗಿ ಮಾಡಿರುವ ಆಕ್ಷೇಪಣೆಯು ಆಕ್ಷೇಪಣೆಯಾಗದೆ "ಆಧಾರವೇನೂ ಇಲ್ಲ" ಎಂಬ ಮಾತನ್ನು ಪರಿಷ್ಕಾರವಾಗಿ ಸುಳ್ಳುಮಾಡುತ್ತದೆ. ಆದಕಾರಣ ಕೆಳಗೆ ರುಜುಮಾಡಿರುವವರು ಪ್ರಾಸ್ಪೆಕ್ಟಸ್ಸನ್ನು ಆಧಾರವೇನೂ ಇಲ್ಲದೆ ಪ್ರಕಟಿಸಲಿಲ್ಲವೆಂಬುವುದನ್ನು ಮ॥ ಅಯ್ಯರವರು ಒಪ್ಪಿಕೊಳ್ಳಲೇ ಬೇಕಾಗಿದೆ. ಇದಲ್ಲದೆ ಚೀಫ್ ಮ್ಯಾನೇಜರವರ ಮೇಲ್ಕಂಡ ಕಾಗದದಿಂದ ಮದುವೆ ವಿಮೇದಾರರಿಗೆ ಕಡೇ ಪಕ್ಷ ಪ್ರೀಮಿಯಂಗಳ ಎರಡರಷ್ಟಾದರೂ ಬೋನಸ್ ಕೊಡಲ್ಪಡುವುದು ಎಂಬ ಭಾಗವನ್ನು ಕಂಪನಿಯವರು ವಾಗ್ದಾನಮಾಡಿರುವ ಅಂಶವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಕೆಳಗೆ ರುಜುಮಾಡಿರುವವರಿಗೆ ಪ್ರಾಸ್ಪೆಕ್ಟಸ್ಸನ್ನು ಪ್ರಿಂಟುಮಾಡಿಸುವುದಕ್ಕೆ ಮುಂಚೆ ಕಂಪನಿಯವರು ಬದಲಾಯಿಸಿಕೊಂಡಿದ್ದ ಪ್ರಾಸ್ಪೆಕ್ಟಸ್ಸನ್ನು ಕಳುಹಿಸಿಕೊಟ್ಟಿದ್ದಾಗ್ಯೂ, ಮತ್ತು ಹಾಗೆ ಬದಲಾವಣೆಮಾಡುತ್ತಾರೆಂಬ ಸಂಗತಿಯಾದರೂ ತಿಳಿದಿದ್ದಾಗ್ಯೂ, ಕೆಳಗೆ ರುಜುಮಾಡಿರುವವರು ತಮ್ಮ ಪ್ರಾಸ್ಪೆಕ್ಟಸಿನ ಪ್ರತಿಯನ್ನು ಚೀಫ್ ಮ್ಯಾನೇಜರವರ ತಿಳುವಳಿಕೆಯ ಬಗ್ಗೆ ಎಂದಿಗೂ ಕಳುಹಿಸಿಕೊಡುತ್ತಿರಲಿಲ್ಲ. ಇದೂ ಅಲ್ಲದೆ ಆ ತರುವಾಯ ಹೆಡ್ ಆಫೀಸಿನಿಂದ ಕಳುಹಿಸೋಣವಾದ ಪ್ರಾಸ್ಪೆಕ್ಟಸಿನೊಳಗಾದರೂ ಪ್ರೀಮಿಯಂಗಳಿಗಿಂತ ಎರಡರಷ್ಟು ಬೋನಸ್ಸನ್ನು ಕಂಪನಿಯವರು ಕೊಡಲು ಜವಾಬ್ದಾರರಾಗುವುದಿಲ್ಲವೆಂಬ ಸಂಗತಿಯು ಖಂಡಿತವಾಗಿ ಕಾಣಿಸಿರುವುದಿಲ್ಲ. ಈ ಭಾಗವನ್ನು ಕೆಳಗೆ ರುಜುಮಾಡಿರುವವರು 4-12-1911 ನೇ ತಾರೀಖಿನ 1907 ನೇ ನಂಬರ್ ಕಾಗದದ ಮೂಲಕ ಸ್ಪಷ್ಟವಾಗಿ ತಿಳಿಸಿರುತ್ತಾರೆ.

ಮ॥ ಅಯ್ಯರವರು ಮಾಡುತ್ತಿರುವ ಕುಯುಕ್ತಿಯನ್ನು ನೋಡಿ ಆಶ್ಚರ್ಯಪಟ್ಟು ಮೆಚ್ಚಿಕೊಳ್ಳಬೇಕಾಗಿದೆ. ಹಾಗೆಂದರೆ ಕಂಪನಿಯವರು 1911 ನೇ ಇಸವಿ ಮಾರ್ಚಿಯಲ್ಲಿ ಪ್ರಕಟಿಸಿದ ಪ್ರಾಸ್ಪೆಕ್ಟಸ್ಸನ್ನೂ, ಕೆಳಗೆ ರುಜುಮಾಡಿರುವವರು 1912 ನೇ ಆಗಸ್ಟಿಗೆ ಮೊದಲೇ ಪ್ರಕಟಿಸಿರುವ ಪ್ರಾಸ್ಪೆಕ್ಟಸ್ಸನ್ನೂ, ಹೆಡ್ ಆಫೀಸಿನವರು "ಫಂಡಿನಲ್ಲಿ ಹಣ ಒದಗಿರುವ ಪಕ್ಷದಲ್ಲಿ" ಎಂಬ ಮಾತನ್ನು ಸೇರಿಸಿ 1912 ನೇ ಆಗಸ್ಟಿನಲ್ಲಿ ಪ್ರಕಟಿಸಿದ ಪ್ರಾಸ್ಪೆಕ್ಟಸಿನ ಸಂಗಡ ಇಟ್ಟು ಮ॥ ಅಯ್ಯರವರು ಹೋಲಿಕೆಮಾಡುವುದೇ ಆಶ್ಚರ್ಯವಾದ ಭಾಗವಾಗಿದೆ. ಈ ಮಾತನ್ನು ಕಂಪನಿಯವರು ಪ್ರಕಟಿಸಿರುವ ಇನ್ಯಾವ ಪ್ರಾಸ್ಪೆಕ್ಟಸಿನಲ್ಲೂ ನಮೂದುಮಾಡಿರುವುದಿಲ್ಲ. ಆದಕಾರಣ ಆ ಮಾತನ್ನು 1912 ನೇ ಆಗಸ್ಟಿನಲ್ಲಿ ಮಾತ್ರ ಸೇರಿಸಿಕೊಂಡಿರುವುದನ್ನೂ, ಅದಕ್ಕೆ ಹಿಂದಿನ ಪ್ರಾಸ್ಪೆಕ್ಟಸುಗಳ್ಯಾವುದರಲ್ಲೂ ಆ ಮಾತು ಇಲ್ಲದಿರುವುದನ್ನೂ ನೋಡಿದರೆ ಕಂಪನಿಯವರು ವಿಮೇದಾರರಿಗೆ ಮದುವೆಯ ದಿನ ಅವರ ಪ್ರೀಮಿಯಂ ಮೊತ್ತಕ್ಕಿಂತ ಎರಡರಷ್ಟು ಬೋನಸ್ಸನ್ನು ಫಂಡಿನಲ್ಲಿ ಹಣ ಒದಗದಿದ್ದಾಗ್ಯೂ ಪಾವತಿಮಾಡಬೇಕೆಂಬ ಅಂಶವು ಸ್ವತಸ್ಸಿದ್ಧವಾಗಿ ವೇದ್ಯವಾಗುತ್ತದೆ. ಈ ಸಂದರ್ಭದಲ್ಲಿ ಮ॥ ಅಯ್ಯರವರು ಮಾಡಿರುವ ಇನ್ನೊಂದು ಕುಯುಕ್ತಿಯನ್ನು ಇಲ್ಲಿ ಕಾಣಿಸದೆ ಇರಲಾಗದು. ಅದೇನೆಂದರೆ ಹೆಡ್ ಆಫೀಸಿಗೂ ಕೆಳಗೆ ರುಜುಮಾಡಿರುವವರಿಗೂ ನಡೆದಿರುವ ಕಾಗದಪತ್ರಗಳಲ್ಲಿ ಕೆಳಗೆ ರುಜುಮಾಡಿರುವವರ ಸತ್ಯಸಂಧತೆಯೂ ನಿರ್ದುಷ್ಟವಾದ ನಡವಳಿಕೆಯೂ ತೋರಪಡುವಂಥಾ ಪ್ರಾಮುಖ್ಯವಾದ ಭಾಗಗಳನ್ನೆಲ್ಲಾ ಮ॥ ಅಯ್ಯರವರು ಪ್ರಕಟಿಸದೆ ಬಿಟ್ಟು ಇರುತ್ತಾರೆ.

ನಮ್ಮ ಪಾಲಿಸಿ ಹೋಲ್ಡರುಗಳಿಗೂ ಇತರ ಪಬ್ಲಿಕ್ ಜನರಿಗೂ ಈ ಸಂದರ್ಭದಲ್ಲಿ ಕೆಳಗೆ ರುಜುಮಾಡಿರುವವರು ವ್ಯಕ್ತಪಡಿಸುವುದೇನೆಂದರೆ, 1911 ನೇ ಡಿಸೆಂಬರಿನಿಂದ ಈಚೆಗೆ ಕಂಪನಿಯವರು ಮದುವೆ ವಿಮೇದಾರರಿಗೆ ಅವರಿಂದ ಪಾವತಿಯಾದ ಪ್ರೀಮಿಯಂಗಿಂತ ಎರಡರಷ್ಟು ಬೋನಸ್ಸನ್ನು ಕೊಡುವ ಬಾಗದಲ್ಲಿ ಜವಾಬ್ದಾರಿ ವಹಿಸುವವರಾಗಿಲ್ಲವೆಂಬ ಅಂಶವು ತಿಳಿದುಬಂದಾಗ ಕೆಳಗೆ ರುಜುಮಾಡಿರುವವರು ಕಂಪನಿಯವರ ಕೂಡ ಮದುವೆ ಬೋನಸ್ಸಿನ ವಿಚಾರದಲ್ಲಿ ಹೋರಾಡಿ ಬಹಳ ದೀರ್ಘವಾಗಿ ಕಾಗದಪತ್ರಗಳನ್ನು ನಡಿಸಿದ್ದಲ್ಲದೆ, ಮದುವೆಯ ದಿನ ಅಡ್ವಾನ್ಸು ತರೀಖು ವಿಮೇದಾರರಿಗೆ ಎರಡರಷ್ಟು ಬೋನಸ್ಸನ್ನು ತಾವೇ ಪಾವತಿ ಮಾಡುವಂತೆ ತಮಗೆ ಅಧಿಕಾರ ವಹಿಸಿದ ಪಕ್ಷದಲ್ಲಿ ಕಂಪನಿಯ ಕೆಲಸವನ್ನು ಬಹಳ ಚೆನ್ನಾಗಿ ಅಭಿವೃದ್ಧಿ ಮಾಡುತ್ತೇವೆಂದು ಖಂಡಿತವಾಗಿ ಬರೆದದ್ದರ ಮೇಲೆ ಹೆಡ್ ಆಫೀಸಿನವರು 1912 ನೇ ಮಾರ್ಚಿಯಲ್ಲಿ ಮದುವೆಯ ದಿನ ಅಡ್ವಾನ್ಸು ಪಾವತಿಮಾಡಲು ಕೆಳಗೆ ರುಜುಮಾಡಿರುವವರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುತ್ತಾರೆ. ಹಿಂದೆ ಈ ಮೂಲಕ ಪ್ರಸಿದ್ಧಪಡಿಸಿರುವ ಮೇರೆಗೆ ಈ ಅಧಿಕಾರದ ಭರವಸೆಯನ್ನು ಅನುಸರಿಸಿ ಕೆಳಗೆ ರುಜುಮಾಡಿರುವವರು ಕಂಪನಿಯ ಕೆಲಸವನ್ನು ಬಹಳ ಚೆನ್ನಾಗಿ ಬಡಾಯಿಸಿದರಲ್ಲದೆ ಹಿಂದೂಸ್ಥಾನದಲ್ಲೂ, ಬರ್ಮಾದಲ್ಲೂ ಇದುವರೆಗೆ ಕಂಪನಿಯ ಎಲ್ಲಾ ಚೀಫ್ ಏಜಂಟರುಗಳಿಗಿಂತಲೂ ಬ್ರಾಂಚ್ ಸೆಕ್ರೆಟರಿಗಳಿಗಿಂತಲೂ (ಇವರಲ್ಲಿ ಮ॥ ಅಯ್ಯರವರೂ ಒಬ್ಬರು) ವಿಶೇಷತೆಯನ್ನು ಪಡೆದು ಎಲ್ಲರಿಗಿಂತ ಪ್ರಥಮಸ್ಥಾನವನ್ನು ಸಂಪಾದಿಸಿಕೊಂಡು ಕಂಪನಿಯವರ ಮೆಚ್ಚಿಕೆಗೂ ಬಹುಮಾನಕ್ಕೂ ಪಾತ್ರರಾದರು. ಇದಲ್ಲದೆ ಅಂಥಾ ಅಧಿಕಾರವನ್ನು ಪಡೆಯದೆ ಇದ್ದರೂ, ಪ್ರೀಮಿಯಂ ಹಣಕ್ಕಿಂತ ಬೋನಸ್ಸು ಕಡಮೆಯಾಗುವುದೆಂದು ತಿಳಿದಿದ್ದರೂ ಕೆಳಗೆ ರುಜುಮಾಡಿರುವವರು ಕಂಪನಿಗೆ ಹೊಸ ಪಾಲಿಸಿದಾರರನ್ನು ಪ್ರೋತ್ಸಾಹಪಡಿಸಿ ಸೇರಿಸುತ್ತಲೇ ಇರಲಿಲ್ಲ. ಆದಕಾರಣ 1912 ನೇ ಆಗಸ್ಟಿನ ಪ್ರಾಸ್ಪೆಕ್ಟಸಿನಲ್ಲಿ ಕಾಣಿಸಿರುವ "ಫಂಡಿನಲ್ಲಿ ಹಣ ಒದಗಿರುವ ಪಕ್ಷದಲ್ಲಿ" ಎಂಬ ಮಾತು 1912 ನೇ ಮಾರ್ಚಿಯಲ್ಲಿ ಕೊಟ್ಟು 1913 ನೇ ಫೆಬ್ರವರಿಯಲ್ಲಿ ರದ್ದುಮಾಡಿರುವಂಥಾ ಮೇಲ್ಕಂಡ ಸ್ಪೆಷಲ್ ಅಧಿಕಾರಕ್ಕೆ ಯಾವ ರೀತಿ ಸಂಬಂಧಪಡುವುದೋ ಕೆಳಗೆ ರುಜುಮಾಡಿರುವವರಿಗೆ ಅರ್ಥವಾಗುವುದಿಲ್ಲ. ಕೆಳಗೆ ರುಜುಮಾಡಿರುವವರು ಕಂಪನಿಯವರಿಗೆ ಸಲಹೆಕೊಟ್ಟ ಪ್ರಕಾರ ಇತರ ಚೀಫ್ ಏಜಂಟರುಗಳಿಗೂ ಬ್ರಾಂಚ್ ಸೆಕ್ರೆಟರಿಗಳಿಗೂ ಮೇಲ್ಕಂಡಂಥಾ ಸ್ಪೆಷಲ್ ಅಧಿಕಾರವನ್ನು ಕಂಪನಿಯವರು ವಹಿಸಿ ಹಿಂದೂಸ್ಥಾನದ ಇತರ ಭಾಗಗಳಲ್ಲೂ ವಿಮೇದಾರರಿಗೆ ಮದುವೆಯ ದಿನ ಎರಡರಷ್ಟು ಅಡ್ವಾನ್ಸುಗಳನ್ನು ಕೊಡಿಸುತ್ತಾ ಬಂದಿದ್ದ ಪಕ್ಷದಲ್ಲಿ ಈ ಅಮೃತಸಾರ ಕಂಪನಿಯ ಪ್ರಾವಿಡೆಂಟ್ ಫಂಡ್ ಬಾಬು ಎಂದಿಗೂ ನಿಂತುಹೋಗುತ್ತಾ ಇರಲಿಲ್ಲ. ಕೆಳಗೆ ರುಜುಮಾಡಿರುವವರು ತಮ್ಮ ಅಧಿಕಾರಕ್ಕೊಳಪಟ್ಟ ಸರಹದ್ದಿನಲ್ಲಿ ಮೇಲ್ಕಂಡ ಸ್ಪೆಷಲ್ ಅಧಿಕಾರದಿಂದ 1913 ನೇ ಫೆಬ್ರವರಿ ತಾ 10 ರ ತನಕ ವಿಮೇದಾರರಿಗೆ ಎರಡರಷ್ಟು ಅಡ್ವಾನ್ಸುಗಳನ್ನು ಪಾವತಿಮಾಡುತ್ತಲೇ ಬಂದರು. ಆ ತರುವಾಯ ಕಂಪನಿಯವರು ಆ ಅಧಿಕಾರವನ್ನು ರದ್ದುಮಾಡಿದ್ದನ್ನು ಕೆಳಗೆ ರುಜುಮಾಡಿರುವವರು ನೋಡಿ, ಅವರು ಕೊಟ್ಟ ವಾಗ್ದಾನದಂತೆ ಅವರೇ ನಡೆದುಕೊಳ್ಳುವವರಾಗಿಲ್ಲವೆಂಬುವುದನ್ನು ನಿಶ್ಚಿತಮಾಡಿಕೊಂಡು, ಕಂಪನಿಯ ಚೀಫ್ ಏಜನ್ಸಿ ಉದ್ಯೋಗವನ್ನೇ ರಾಜೀನಾಮೆ ಕೊಟ್ಟು ಬಿಟ್ಟುಬಿಟ್ಟರು.

ಮ॥ ಅಯ್ಯರವರು "ಇತರರಿಗೆ ಕೇಡು ಕೋರಿದರೆ ತಮಗೆ ಕೇಡು ಪ್ರಾಪ್ತವಾಗುತ್ತದೆ" ಎಂಬ ಗಾದೆಯನ್ನೂ "ದೇವರು ಸ್ವಸಹಾಯಿಗಳಿಗೆ ಸಹಾಯಕನಾಗುತ್ತಾನಲ್ಲದೆ ಪರನಿಂದಕರಿಗೂ ಪರರನ್ನು ಹಿಂಸಿಸುವವರಿಗೂ ಎಂದೆಂದಿಗೂ ಸಹಾಯಮಾಡತಕ್ಕವನಲ್ಲ" ಎಂಬ ಗಾದೆಯನ್ನೂ ಸ್ಮರಿಸಿಕೊಳ್ಳಬೇಕು, ಪರಲೋಕದಲ್ಲಿ ನಾವೆಲ್ಲಾ ಪರಮಾತ್ಮನ ಸನ್ನಿಧಾನದಲ್ಲಿ ನಿಂತು ನಮ್ಮ ಕೃತ್ಯಗಳ ವಿಷಯದಲ್ಲಿ ಆತನಿಗೆ ಸಮಾಧಾನ ಹೇಳಬೇಕಾಗಿದೆ ಎಂಬುವುದನ್ನು ಸ್ವಲ್ಪ ಮಾತ್ರವೂ ಲಕ್ಷ್ಯಮಾಡದೇನೂ ಈ ರೀತಿಯಾಗಿ ಕುಯುಕ್ತಿಗಳನ್ನು ಹುಡುಕಿಕೊಂಡು ಕೃತ್ಯಗಳನ್ನು ಮಾಡುತ್ತಿದ್ದಾಗ್ಯೂ ಇವುಗಳೆಲ್ಲಾ ಕೆಳಗೆ ರುಜುಮಾಡಿರುವವರಿಗೆ ಅವರ ಎಲ್ಲಾ ನಡವಳಿಕೆಗಳಲ್ಲೂ ಸತ್ಯಸಂಧರಾಗಿಯೂ, ಸನ್ಮಾರ್ಗ ಪ್ರವರ್ತಕರಾಗಿಯೂ ಇರುವ ತನಕ ಯಾವ ರೀತಿಯಲ್ಲಾ ಎಷ್ಟು ಮಾತ್ರಕ್ಕೂ ಕೆಡುಕನ್ನುಂಟುಮಾಡಲಾರವು. ಮತ್ತು ಮ॥ ಅಯ್ಯರವರು ಸ್ವಪ್ರತಿಷ್ಠೆಯನ್ನು ಕೆಟ್ಟಿಕೊಳ್ಳುವುದರಿಂದಲೂ, ಈ ರೀತಿಯಲ್ಲಿ ಕೆಳಗೆ ರುಜುಮಾಡಿರುವವರನ್ನು ಅಪಮಾನಪಡಿಸುವುದರಿಂದಲೂ ಯಾವ ಫಲವೂ ಲಭಿಸುವುದಿಲ್ಲ. ಅಲ್ಲದೆ, ಮ॥ ಅಯ್ಯರವರು ಪ್ರತಿನಿಧಿಯಾಗಿ ನಿಂತಿರುವ ಕಂಪನಿಯು ಸಾವಿರಾರು ಮಂದಿ ಮದುವೆ ಪಾಲಿಸಿದಾರರನ್ನು ನಷ್ಟಕ್ಕೆ ಗುರಿಮಾಡಿರುತ್ತದೆಂದೂ, ಅಂಥಾ ನಷ್ಟಪಟ್ಟ ಪಾಲಿಸಿದಾರರನ್ನು ಕೆಳಗೆ ರುಜುಮಾಡಿರುವವರ ಕಂಪನಿಯು ಉದ್ಧಾರಮಾಡಿರುತ್ತದೆಂದೂ ಪ್ರಪಂಚಕ್ಕೆಲ್ಲಾ ಇದುವರೆಗೆ ಸ್ಪಷ್ಟವಾಗಿ ವೇದ್ಯವಾಗಿದೆ. ಕಡೆಯ ಮಾತಾಗಿ ಕೆಳಗೆ ರುಜುಮಾಡಿರುವವರು ಮ॥ ಅಯ್ಯರವರಿಗೆ ತಿಳಿಸುವುದೇನೆಂದರೆ —ಅವರ ಕಂಪನಿಯು ಅನೇಕ ಮದುವೆ ಪಾಲಿಸಿದಾರರ ಹಣವನ್ನೂ, ಮರಣಹೊಂದಿದ ಲೈಫ್ ಪಾಲಿಸಿ ವಿಮೇದಾರರ ಹಣವನ್ನೂ ಇನ್ನೂ ವ್ಯವಸ್ಥೆ ಮಾಡಿರುವುದಿಲ್ಲ. ಮ॥ ಅಯ್ಯರವರು ಈ ವಿಚಾರದಲ್ಲಿ ತಮ್ಮ ಕಂಪನಿಯವರ ಕೂಡ ಹೋರಾಡಿ ಅವರುಗಳ ಹಣಗಳನ್ನು ಪಾವತಿಮಾಡಿಸುವುದರಲ್ಲೂ, ಇನ್ನು ಮುಂದೆ ಅವರ ಕಂಪನಿಯನ್ನು ಅಭಿವೃದ್ಧಿಗೆ ತರುವ ಭಾಗದಲ್ಲೂ ಗಮನಕೊಟ್ಟು ಸಾಹಸಪಡುವುದೇ ಅವರಿಗೂ ಅವರ ಕಂಪನಿಗೂ ಶ್ರೇಯಸ್ಕರವಾಗಿರುವುದು. [161-29]

ಎಂ. ಎಲ್. ನಾರಾಯಣ್,
ಮ್ಯಾನೇಜಿಂಗ್ ಡೈರೆಕ್ಟರ್.

ವಿದೇಶ ವೃತ್ತಾಂತಗಳು.

ಆಸ್ಟ್ರೇಲಿಯಾ ದ್ವೀಪದ ರಾಜಧಾನಿಯಾದ ಸಿಡ್ನಿನಗರದ ಒಂದು ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು ಏಳೂವರೆಲಕ್ಷ ರೂಪಾಯಿನ ಸೊತ್ತು ಸುಟ್ಟುಹೋಯಿತು.

ಪ್ರಾಚೀನಕಾಲದ ಪ್ರಖ್ಯಾತ ಚಿತ್ರಗಾರನಾದ ರಫೇಲ್ ಎಂಬಾತನು ಬರೆದಿರುವ ಪಾರ್ಕ್‌ಹಾಂಗರ್ ಮೆಡೋನಾ ಎಂಬ ತಸ್ವೀರಿಗೆ ಮಿ॥ ವಿಡೆನರ್ ಎಂಬ ಅಮೇರಿಕದ ದೊಡ್ಡಮನುಷ್ಯನು ಕಳೆದ ವಾರ ಇಪ್ಪತ್ತೊಂದು ಲಕ್ಷ ರೂಪಾಯಿ ಕೊಟ್ಟು ಕ್ರಯಕ್ಕೆ ತೆಗೆದುಕೊಂಡಿರುತ್ತಾನೆ.

ಇಂಗ್ಲೆಂಡಿಗೆ ಸೇರಿದ ಷೆಫೀಲ್ಡ್ ಪಟ್ಟಣದಲ್ಲಿ ಫುಟ್‌ಬಾಲ್ ಎಂಬ ಚಂಡಾಟದ ಪಂದ್ಯವನ್ನು ನೋಡುವುದಕ್ಕೆ ಅನೇಕ ಸಹಸ್ರ ಪ್ರಜೆಗಳು ಮೈದಾನದ ಸುತ್ತಲೂ ನಿಂತಿದ್ದರು. ಆಟದ ಮಧ್ಯೆ ಸಮೀಪದಲ್ಲಿ ಹೊಸದಾಗಿ ಹಾಕಿದ್ದ ಒಂದು ದೊಡ್ಡಗೋಡೆಯು ಅಕಸ್ಮಾತ್ತಾಗಿ ಕಳಚಿ ಉರುಳಿಕೊಂಡಿತು. ಎಂಭತ್ತು ಜನ ನೋಟಕರಿಗೆ ನಾನಾ ಬಗೆಯ ಗಾಯಗಳಾದವು, ಆ ಪೈಕಿ ಮೂರು ಮಂದಿ ಬದುಕುವಹಾಗಿಲ್ಲವೆಂದು ತಿಳಿಯುತ್ತೇವೆ.

ಉತ್ತರ ಅಮೇರಿಕಕ್ಕೆ ಸೇರಿದ ವಿಸ್‌ಕಾನ್ಸಿನ್ ಎಂಬ ಸಂಸ್ಥಾನದ ಸರ್ಕಾರದವರು ಗಂಡಸೂ ಹೆಂಗಸೂ ಆರೋಗ್ಯವಾಗಿದ್ದಾರೆಂಬ ಸರ್ಟಿಫಿಕೇಟನ್ನು ತಂದು ತೋರಿಸಿದ ಹೊರತು ಮದುವೆ ಮಾಡಿಕೊಳ್ಳಕೂಡದೆಂದು ಒಂದು ಕಾನೂನ್ ಮಾಡಿ ಜಾರಿಗೆ ತಂದಿದಾರೆ. ಈ ಕಾನೂನಿಗೆ ವಿರೋಧವಾಗಿ ಈಚೆಗೆ ಒಂದು ಮದುವೆ ನಡೆಯಿತು. ಸರ್ಕಾರದವರು ಆ ದಂಪತಿಗಳ ಮೇಲೆ ಮೊಕದ್ದಮೆ ತಂದು ಆ ವಿವಾಹವನ್ನು ರದ್ದುಮಾಡಬೇಕೆಂದು ಪ್ರಯತ್ನಪಟ್ಟರು. ಆದರೆ ಆ ಸಂಸ್ಥಾನದ ನ್ಯಾಯಾಧಿಪತಿಯು ಸರ್ಕಾರದವರು ಮಾಡಿರುವ ಕಾನೂನು ಧರ್ಮವಾದದ್ದಲ್ಲವೆಂದು ಹೇಳಿ ಮೊಕದ್ದಮೆಯನ್ನು ವಜಾಮಾಡಿಬಿಟ್ಟರು. ಈಗ ಆ ಸಂಸ್ಥಾನದ ಸರ್ಕಾರದವರು ಸಂಯುಕ್ತ ಸಂಸ್ಥಾನಗಳ ಅದಾಲತ್ ಕೋರ್ಟಿನಲ್ಲಿ ಅಪೀಲ್ ಮಾಡುವವರಾಗಿದಾರೆ.

ಸ್ವೀಡನ್ ರಾಜ್ಯದಲ್ಲಿ ಸುಮಾರು ಎರಡು ವರುಷಗಳ ಕೆಳಗೆ ಗವರ್ನಮೆಂಟಿನವರು ಯುದ್ಧದ ಹಡಗುಗಳನ್ನೂ ಫೌಜನ್ನೂ ಹೆಚ್ಚುಮಾಡಿ, ರಷ್ಯಾ ರಾಜ್ಯದವರು ತಮ್ಮ ಮೇಲೆ ಕೈ ಮಾಡದಂತೆ ಸಿದ್ಧಪಡಿಸಿಕೊಳ್ಳಬೇಕಾದದ್ದು ಅವಶ್ಯವೆಂದು ತೀರ್ಮಾನ ಮಾಡಿದರು. ಇದಾಗಿ ಎರಡು ವರುಷ ಕಳೆದರೂ ಸರ್ಕಾರದವರು ಆ ರೀತಿ ಸೈನ್ಯವನ್ನೂ ಹಡಗುಗಳನ್ನೂ ಹೆಚ್ಚಿಸದೆ ಇರುವುದನ್ನು ನೋಡಿ ಸ್ವೀಡನ್ ರಾಜ್ಯದ ಇಪ್ಪತ್ತನಾಲ್ಕು ಅಧಿಪತ್ಯಗಳ ಪ್ರಜೆಗಳ ಮುಖಂಡರು ಸುಮಾರು 30,000 ಜನರು ತಮ್ಮ ತಮ್ಮ ಅಧಿಪತ್ಯದ ಬಾವುಟಾ ಸಮೇತ ರಾಜಧಾನಿಯಾದ ಸ್ಟಾಕ್‌ಹಾಲಂ ಪಟ್ಟಣಕ್ಕೆ ಹೋಗಿ ಅರಮನೆಯ ಮುಂದೆ ನಿಂತು ದೊರೆಯವರಿಗೆ ಗವರ್ನಮೆಂಟಿನವರ ವಾಗ್ದಾನವನ್ನು ನೆರವೇರಿಸಲಿಲ್ಲವೆಂದು ತಿಳಿಸಿದರು. ದೊರೆಯವರು ಆ ರೈತಪ್ರಜೆಗಳ ಆಕ್ಷೇಪಣೆಯೂ ಪ್ರಾರ್ಥನೆಯೂ ನ್ಯಾಯವಾದದ್ದೆಂದು ತಿಳಿದು, ಸೈನ್ಯಗಳನ್ನು ಬೇಗನೆ ಹೆಚ್ಚಿಸಿ ರಾಜ್ಯದ ಬಿಗಿಯನ್ನು ಕಾಪಾಡುತ್ತೇವೆಂದು ಅವರಿಗೆಲ್ಲಾ ಪ್ರತ್ಯುತ್ತರವನ್ನು ಕೊಟ್ಟು ಕಳುಹಿಸಿದರು. ಈಚೆಗೆ ಸೈನ್ಯವನ್ನು ಹೆಚ್ಚಿಸುವ ವಿಚಾರವು ಆ ರಾಜ್ಯದ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಿತು. ಅನೇಕ ಮೆಂಬರುಗಳೂ ಅಧಿಕಾರಿಗಳೂ ಅದಕ್ಕೆ ಸಮ್ಮತಿಸದೆಹೋದರು. ಮಂತ್ರಿ ಸಭೆಯಲ್ಲಿ ಕೆಲವರು ದೊರೆಯವರ ಮೇಲೆ ಆಕ್ಷೇಪಣೆಮಾಡಿ, ಅವರು ರೈತ ಪ್ರಜೆಗಳಿಗೆ ಜವಾಬು ಕೊಡುವುದಕ್ಕಿಂತ ಮುಂಚೆ ಮಂತ್ರಿಸಭೆಯ ಅಭಿಮತವನ್ನು ತಿಳಿಯಬೇಕಾಗಿತ್ತೆಂದು ಅಭಿಪ್ರಾಯಪಟ್ಟರು. ದೊರೆಯವರಿಗೆ ಈ ಅಭಿಪ್ರಾಯವು ಸಮ್ಮತವಾಗಲಿಲ್ಲ. ಅವರು ಮಂತ್ರಿಗಳ ಕೂಡ ಮೊದಲೇ ಆಲೋಚಿಸಬೇಕಾದ ಆವಶ್ಯಕವಿಲ್ಲವೆಂದು ಹೇಳಿಬಿಟ್ಟರು. ಇದರ ಮೇಲೆ ಮಂತ್ರಿಸಭೆಯವರು ರಾಜೀನಾಮೆಕೊಟ್ಟು ತಮ್ಮ ಉದ್ಯೋಗಗಳನ್ನು ತ್ಯಜಿಸಿಬಿಟ್ಟರು. ಕಳೆದ ವಾರ ಬೇರೆ ದೊಡ್ಡಮನುಷ್ಯರು ದೊರೆಯವರ ಅನುಜ್ಞೆಯನ್ನು ಪಡೆದು ಮಂತ್ರಿಸಭೆಯನ್ನು ಕೂಡಿಸಿ ಗವರ್ನಮೆಂಟನ್ನು ನಡಿಸುತ್ತಿದ್ದಾರೆ.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.

ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1, 20 ಕ್ಕೆ 3, 50 ಕ್ಕೆ 8, 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ ಕ್ರಯ 2 ಆಣೆ , [49 1]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2¼ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1¼ ಆಣೆ ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ Notes on "Tanglewood Tales,' English Lower Secondary Text for 1915—As 3

ಯನ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಕ್ರಿಮಿನಲ್ ಲಾ ಸಂಗ್ರಹ

ಕೆಲವು ಕಾಪಿಗಳು ಮಾತ್ರ ಉಳಿದಿವೆ

ಈ ಪುಸ್ತಕದಲ್ಲಿ—1 ಪಿನಲ್‌ಕೋಡು, 2 ದೊಡ್ಡಿ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟು ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಕನ್ನಡದಲ್ಲಿ ಇದುವರೆಗೂ ಇಂಥಾ ಪುಸ್ತಕವಿರಲಿಲ್ಲವೆಂತಲೂ, ಇದರಲ್ಲಿ ವಿವರಿಸಿರುವ ಹೈಕೋರ್ಟು ತೀರ್ಮಾನಗಳು ವೊದಲಾದ ನೋಟ್‌ಗಳು ಕನ್ನಡಿಗರಿಗೆ ಬಹಳ ಉಪಯೋಗವೆಂದೂ ಅನೇಕ ಮ್ಯಾಜಿಸ್ಟ್ರೇಟರೂ, ಅಡ್ವೊಕೇಟರೂ, ಪೋಲೀಸಾಫೀಸರುಗಳೂ ಬಹಳ ಒಳ್ಳೇ ಅಭಿಪ್ರಾಯಪಟ್ಟಿರುವರು

ಪ್ರತಿ ಶಿಕ್ಷಾ ಸೆಕ್ಷನಿನ ಕೆಳಗೂ ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ ಕೂಡದೆ ಸಮನ್ ಹುಟ್ಟಬೇಕೆ ಯಾ ವಾರಂಟು ಹುಟ್ಟಬೇಕು ಜಾಮೀನ್ ತೆಗೆದುಕೊಳ್ಳಬಹುದೆ ಯಾ ಕೂಡದೆ ಕೇಸಿಗೆ ಸ್ಯಾಂಕ್ಷನ್ ಬೇಕೆ ಎಂಬ ಸಂಗತಿಗಳೆಲ್ಲಾ ವಿವರಿಸಲಾಗಿವೆ ನೋಡಿದ ಕೂಡಲೇ ಸಂಗತಿಗಳು ದೊರೆಯುವುದಕ್ಕಾಗಿ ವಿಷಯಸೂಚಿಕೆ ಬಹಳ ಚೆನ್ನಾಗಿ ಅನುಗೊಳಿಸಲ್ಪಟ್ಟಿದೆ ಇದರ ಕ್ರಯ ರೂ 2 0 0, ಹಾಸಲು 2 ಆಣೆ [48 1]

ವಿಳಾಸ—ಎಲ್ ವೇಮಾರೆಡ್ಡಿ, ಕ್ರಿಂಟ್ರಾಕ್ಟರ್ ಮತ್ತು
ಕ್ರಿ|| ಪ್ಲೀಡರ್, ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್

ವೃತ್ತಾಂತ ಪತ್ರಿಕೆ.

— ೦ —

ಸನ್ ೧೯೧೪ ನೇ ಇಸವಿ ಫೆಬ್ರವರಿ ತಾ ೧೯ ನೇ ಗುರುವಾರ

ಮೈಸೂರು ಸಂಸ್ಥಾನದ ಆಳ್ವಿಕೆಯ ರಿಪೋರ್ಟು

ಮೈಸೂರು ಸೀಮೆಯ ಆಳ್ವಿಕೆಯ ರಿಪೋರ್ಟು ನಮಗೆ ತಲುಪಿದೆ ಕಳೆದ ೧೯೧೨—೧೩ ನೇ ಸಾಲಿನಲ್ಲಿ ಪ್ರಜಾ ಹಿತಕರವಾದ ಮತ್ತೂ ದೇಶೋನ್ನತಿಯ ಕಾರ್ಯಗಳು ವಿಶೇಷವಾಗಿ ನಡೆದಿರುವವೆಂದು ಹೇಳುತ್ತೇವೆ ಆ ಸಾಲಿನಲ್ಲಿ ದಿವಾನರುಗಳ ಬದಲಾವಣೆಯಾಯಿತು, ೧೯೧೨ ನೇ ನವಂಬರ್ ೧೦ ರಲ್ಲಿ ಮ| ಆನಂದರಾಯರಿಂದ ಮ|| ವಿಶ್ವೇಶ್ವರಯ್ಯನವರು ನಮ್ಮ ಸಂಸ್ಥಾನದ ದಿವಾನಗಿರಿಯನ್ನು ವಹಿಸಿಕೊಂಡರು. ಮತ್ತು ಆ ಸಾಲಿನಲ್ಲಿ ನಮ್ಮ ಶ್ರೀಮದ್ಯುವರಾಜರವರು ಯೂರೋಪ್ ಖಂಡದಲ್ಲಿ ದೇಶಾಟನಮಾಡಿಕೊಂಡು ದಯಮಾಡಿದರು

ಸಂಸ್ಥಾನದ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸಕಾರ್ಯಗಳು ಎಂದಿನಂತೆ ನಡೆದಿರುತ್ತವೆ ಆದರೂ ಗವರ್ನಮೆಂಟಿನವರು ಈಗ ಇರುವಂಥಾ ಇಲಾಖೆಗಳ ಕಾರ್ಯಗಳನ್ನು ಇನ್ನೂ ಚುರುಕಾಗಿಯೂ ವಿತರಣೆಯಿಂದಲೂ ನಡಯುವ ಭಾಗಕ್ಕೆ ಸ್ವಲ್ಪ ಹೆಚ್ಚಾಗಿ ಗಮನಕೊಟ್ಟಿರಾದೀತೆಂದು ನಮಗೆ ಕುತೂಹಲವುಂಟಾಗಿದೆ ಸಂಸ್ಥಾನದ ಎಲ್ಲಾ ಇಲಾಖೆಗಳಲ್ಲೂ ರೆವಿನ್ಯೂ ಇಲಾಖೆಯೇ ಬಹಳ ಪ್ರಾಮುಖ್ಯವಾದದ್ದು ಈ ಇಲಾಖೆಯ ಕೆಲಸಕಾರ್ಯಗಳು ಬಹಳ ಚಟುವಟಿಕೆಯಾಗಿ ನಡೆಯುವಂತೆ ಮಾಡತಕ್ಕದ್ದು ವ್ಯವಸಾಯ ವಿಚಾರದಲ್ಲಿ ವಿಶೇಷ ಲಾಭಕರವಾಗಿ ಬೆಳೆಮಾಡತಕ್ಕ ವಿಧಾನಗಳನ್ನು ರೈತನಿಗೆ ತೋರಿಸಿಕೊಡುವುದಕ್ಕೆ ಬಗೆಬಗೆಯಾದ ಮಾರ್ಗಗಳನ್ನು ಕಲ್ಪಿಸಲಾಗಿದೆ ಆದರೆ ಅವನು ಹಿರಿಯರಿಂದ ಬಂದಿರುವ ಪದ್ಧತಿಗಳನ್ನೂ ಕ್ರಮಗಳನ್ನೂ ಬಿಟ್ಟು ಹೊಸ ವಿಧಾನಗಳನ್ನು ಹಿಡಿದು ರೂಢಿಸುವುದು ನಿಧಾನವಲ್ಲದೆ ಜಾಗ್ರತೆ ಆಗತಕ್ಕದ್ದಲ್ಲ ಕಳೆದ ಸಾಲಿನಲ್ಲಿ ಹೊಸ ಇಲಾಖೆಗಳು ಏರ್ಪಾಡಾದವು ಆ ಪೈಕಿ ಕಸಬುಗಳ ಮತ್ತು ವ್ಯಾಪಾರದ ಇಲಾಖೆಯು ಮುಖ್ಯವಾದದ್ದು ಇದಲ್ಲದೆ ಗವರ್ನಮೆಂಟಿನವರು ಡಾಕ್ಟರ್ ಕೋಲ್‌ಮನ್ ರವರನ್ನು ವ್ಯವಸಾಯ ಇಲಾಖೆಯ ಡೈರೆಕ್ಟರಾಗಿ ನೇಮಕಮಾಡಿಕೊಂಡರು

ನಮ್ಮ ಮುಂದಿರುವ ರಿಪೋರ್ಟಿನ ಪ್ರಾರಂಭಭಾಗದಲ್ಲಿ ಸಂಪದಭ್ಯುದಯ ಸಮಾಜದ ಕಾರ್ಯಗಳ ಪ್ರಶಂಸೆಯೇ ವಿಶೇಷವಾಗಿರುತ್ತದೆ ಈ ಸಮಾಜದಿಂದ ಬಹು ವಿಶೇಷವಾದ ಪ್ರಯೋಜನವಾಗುವುದೆಂದೂ, ನಾನಾ ಬಗೆಯ ಫಲಗಳು ಫಲಿಸುವವೆಂದೂ ಆಶೆ ಇದೆ, ಆದರೆ ಇದುವರೆಗೆ ಈ ಸಮಾಜದ ಕಾರ್ಯಗಳಿಂದ ಫಲಕಾರಿಯಾಗಿರುವ ಪ್ರಯೋಜನಗಳು ಇಂಥವುಗಳೆಂದು ಹೇಳಲು ಹುಡುಕಿ ನೋಡಬೇಕಾಗಿರುವುದು ಮೀಟಿಂಗುಗಳು ಅನೇಕವಾಗಿ ನಡೆದಿವೆ, ಏರ್ಪಾಡುಗಳು ಅನೇಕವಾಗಿ ಸೂಚಿಸಲ್ಪಟ್ಟಿವೆ, ಹಣವೂ ಅನೇಕವಾಗಿ ಖರ್ಚಾಗಿದೆ ಇಷ್ಟಾದರೂ ಫಲಕ್ಕಾಗಿ ನಾವು ತಾಳ್ಮೆಯಿಂದ ಕಾಯುವುದು ತಪ್ಪಲಿಲ್ಲ ನಮ್ಮ ಸಂಸ್ಥಾನದಲ್ಲಿ ಸಾಧನೆಮಾಡಿದರೆ ಐಶ್ವರ್ಯವನ್ನು ಹೆಚ್ಚಿಸುವಂಥಾ ಕಾರ್ಯಗಳು ಹಲವು ಇರುವವೆಂಬುವುದನ್ನು ನಾವು ಬಲ್ಲೆವು ಅಂಥಾ ಕಾರ್ಯಗಳನ್ನು ಹಿಡಿದು ಸಾಧಿಸಿದರೆ ಪ್ರಜೆಗಳು ಶ್ರೇಯಸ್ಸಿಗೆ ಬರುತ್ತಾರೆನ್ನುವುದಕ್ಕೆ ಸಂಶಯವಿಲ್ಲ ಇಂಥಾ ಮಹತ್ಕಾರ್ಯವನ್ನು ಸಿಕ್ಕಿದವರೆಲ್ಲಾ ಮಾಡಬಲ್ಲರೆಂಬುವುದನ್ನು ನಾವು ನಂಬಲಾರೆವು ಅವುಗಳನ್ನು ಸಾಧಿಸತಕ್ಕವರು ನಮ್ಮ ಸಂಸ್ಥಾನದ ಸ್ಥಿತಿಗತಿಯನ್ನು ಚೆನ್ನಾಗಿ ಬಲ್ಲವರಾಗಿಯೂ, ಪ್ರಜಾಹಿತದಲ್ಲಿ ಸತ್ಯವೂ ಯಥಾರ್ಥವೂ ಆದ ಉತ್ಸಾಹವುಳ್ಳವರಾಗಿಯೂ ಇರಬೇಕಲ್ಲದೆ ಅವರ ಪ್ರಯತ್ನಗಳು ಬಹು ಗಂಭೀರವಾಗಿಯೂ ಗಲಭೆಯಿಲ್ಲದೇನೂ ಜರುಗುತ್ತಾ ಬರಬೇಕು ಇದು ಸಾಧ್ಯವಲ್ಲದಿದ್ದರೆ ಹೊರಗಿನವರಿಗೆ ಕೋಲಾರದಲ್ಲಿ ಚಿನ್ನವನ್ನು ತೆಗೆಯುವುದಕ್ಕೆ ಅವಕಾಶ ಕೊಟ್ಟಿರುವಂತೆ ಪರದೇಶೀಯರಿಗೆ ವಹಿಸಿಬಿಡುವುದು ಒಳ್ಳೇದು. ಉತ್ಪತ್ತಿಮಾಡಿದ ಚಿನ್ನದ ಬೆಲೆಯಲ್ಲಿ ಮೈಸೂರು ಗವರ್ನಮೆಂಟಿಗೆ ರಾಜಭಾಗ ಬರುತ್ತಿದೆಯಷ್ಟೆ ಇದೇ ರೀತಿ ಸಂಸ್ಥಾನಕ್ಕೆ ಪ್ರಯೋಜನವಾಗಬಹುದು ಆದರೆ ಅವರ ಆದಾಯದಲ್ಲಿ ಬಹು ಭಾಗವೆಲ್ಲಾ ಇಂಗ್ಲೆಂಡಿಗೆ ಸಾಗಿ ಹೋಗುತ್ತದೆ, ಯಾಕೆಂದರೆ ಷೇರುದಾರರು ಮೈಸೂರಿನ ಪ್ರಜೆಗಳಲ್ಲ. ಅದಕಾರಣ ಆ ಗಣಿಗಳ ಬೆಸೆಯಿಂದ ಲಾಭ ಸಂಪಾದನೆಮಾಡತಕ್ಕವರೆಲ್ಲಾ ಅನ್ಯದೇಶೀಯರೇ ಹೊರತು ಮೈಸೂರಿನವರಲ್ಲ ಅಲ್ಲಿ ಕೂಲಿಮಾಡುವ ತಮಿಳು ಜನಗಳೂ ತೆಲುಗರೂ ನಮ್ಮ ಸೀಮೆಯವರಲ್ಲ ಗಣಿಗಳ ಯಜಮಾನರಾದರೋ ಎಲ್ಲಾ ಯೂರೋಪಿನವರು ಅದಕಾರಣ ಹೊಸ ಕಸುಬುಗಳಿಂದ ನಮ್ಮ ದೇಶಕ್ಕೆ ಯಥಾರ್ಥವಾದ ಪ್ರಯೋಜನವಾಗಬೇಕಾದಲ್ಲಿ ಅಂಥಾ ಕಾರ್ಯಗಳನ್ನು ನಮ್ಮ ಪ್ರಜೆಗಳೇ ಕೈಹಾಕಿ ನಡಿಸುವವರಾಗಬೇಕು ಈಗ ನೋಡುವುದರಲ್ಲಿ ನಮ್ಮವರೊಳಗೆ ಅಂಥಾ ಲಕ್ಷಣಗಳೇನೂ ನಮಗೆ ಕಂಡುಬರುವುದಿಲ್ಲ ಸಧ್ಯದಲ್ಲಿ ವಿದ್ಯೆ ಕಲಿತವರು ಸರ್ಕಾರಿ ನೌಕರಿಯನ್ನು ಹುಡುಕುವರು ಇಲ್ಲವೇ ವಕೀಲರಾಗುತ್ತಾರೆ ಅವರು ಇನ್ನೆಂದಿಗೆ ಕಸಬುಗಳಲ್ಲೂ ವ್ಯಾಪಾರದಲ್ಲೂ ಉತ್ಸಾಹಪಟ್ಟು ಹೊರಡುವರೋ ನಮಗೆ ತಿಳಿಯದು ವಿದ್ಯೆ ಕಲಿತವರು ಕಸಬುದಾರಿ ಕೆಲಸಗಳನ್ನು ಅವಲಂಬಿಸಿ ನಡಿಸುವ ತನಕ ಮೈಸೂರು ಸಂಸ್ಥಾನಕ್ಕೆ ಶ್ರೇಯಸ್ಸುಂಟಾದೀತೆಂದು ನಮಗೆ ತೋರುವುದಿಲ್ಲ

ಗತ ಸಾಲಿನ ಆಳ್ವಿಕೆಯ ರಿಪೋರ್ಟಿನಲ್ಲಿ ಇಲಾಖೆಗಳಿಗೆ ಸಂಬಂಧಪಟ್ಟ ಕಾರ್ಯಗಳ ವಿವರಣೆಯು ಓದುವುದಕ್ಕೆ ಬಹಳ ಸ್ವಾರಸ್ಯವಾಗಿದೆ ಆದರೆ ಅದರಲ್ಲಿ ಬರೆದಿರುವ ಲೆಕ್ಕಾಚಾರದ ಸಂಖ್ಯೆಗಳನ್ನು ನೋಡಿದರೆ 'ಈ ಲೆಕ್ಕಗಳೆಲ್ಲಾ ಸರಿಯಾಗಿಯೇ ಇರುವವೇ ? ಆ ಸಂಖ್ಯೆಗಳಿಂದ ಯಥಾರ್ಥವಾದ ವಿದ್ಯಮಾನಗಳನ್ನು ಗ್ರಹಿಸಿಕೊಳ್ಳಬಹುದೇ ?" ಎಂಬೀ ಸಂಶಯಗಳುಂಟಾಗುವವು ಅವೆಲ್ಲಾ ಒಂದೇ ರೀತಿ ಯಥಾರ್ಥವಾಗಿರುವ ಪಕ್ಷದಲ್ಲಿ ಮೈಸೂರು ಗವರ್ನಮೆಂಟಿನವರ ಆಳ್ವಿಕೆಯೂ ಅವರ ಕಾರ್ಯಗಳೂ ಕಳೆದ ಸಾಲಿನಲ್ಲಿ ತುಂಬಾ ತೃಪ್ತಿಕರವಾಗಿಯೂ ಸಂತೋಷಪ್ರದವಾಗಿಯೂ ಜರುಗಿದವೆಂದು ಧಾರಾಳವಾಗಿ ಹೇಳಬಹುದು

ಹಣ ಮತ್ತು ಕಾಲ

ಮ|| ಗ್ಲಾಡ್‌ಸ್ಟನ್ ಯವರ ಬುದ್ಧಿವಾದ

ಮ|| ಗ್ಲಾಡ್‌ಸ್ಟನ್ ಯವರು ಯಾರು ಎಂದು ನಮ್ಮ ವಾಚಕರಲ್ಲನೇಕರು ಓದಿ ತಿಳಿದಿದ್ದಾರೆ ಈತನು ಸುಮಾರು 25 ವರುಷಗಳು ಅಂದರೆ, 1868 ನೇ ಇಸವಿಯಿಂದ 1894 ನ ಇಸವಿಯ ವರೆಗೂ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಧಾನ ಮಂತ್ರಿಯಾಗಿದ್ದನು ಕೀರ್ತಿಶೇಷನಾದ ಈತನನ್ನು ಪ್ರಪಂಚದ ಸಕಲ ದಿಗ್ದೇಶದವರೂ ಹೊಗಳುವರು ಈ ಮಹಾಶಯನು ತನ್ನ ಬುದ್ಧಿಕುಶಲತೆಯನ್ನೂ ಕಾಲವನ್ನೂ ತಕ್ಕ ರೀತಿಯಲ್ಲಿ ಪ್ರಯೋಗಿಸುತ್ತಿದ್ದದ್ದರಿಂದ ಇಂಥಾ ಘನತರವಾದ ಪದವಿಗೆ ಬಂದು ಅಪ್ರತಿಮವಾದ ರೀತಿಯಲ್ಲಿ ರಾಜ್ಯಾಡಳಿತವನ್ನು ನಡಿಸಿದನು ಈತನು ಹಣವನ್ನು ಮತ್ತು ಕಾಲವನ್ನು ಸರಿಯಾದ ರೀತಿ ಪ್ರಯೋಗಿಸುವ ವಿಷಯದಲ್ಲಿ ಹೇಳಿರುವ ಬುದ್ಧಿವಾದವು ಸರ್ವರಿಗೂ ಪ್ರಯೋಜನಕಾರಿಯಾಗಿರುವದರಲ್ಲಿ ಅನುಮಾನವಿಲ್ಲ. ಈತನು ಹೇಳಿರುವದನ್ನು ಸಕಲರೂ ಲಕ್ಷ್ಯವಿಟ್ಟು ಓದಬೇಕು ಅದೇನೆಂದರೆ—

ಹಣವನ್ನು ನಾವು ಹೇಗೆ ಬಳಸಬೇಕೆಂಬ ವಿಷಯವನ್ನು ಕುರಿತು ನಿಶ್ಚಿಂತರಾಗಿರುವದು ತಪ್ಪು ದೇಹಾರೋಗ್ಯ, ಕಾಯಪುಷ್ಟಿ ಅಥವಾ ಬಲ, ಬುದ್ಧಿ ಇವುಗಳನ್ನು ಕುರಿತು—ಅವು ಹೇಗಾದರೂ ಇರಲಿ, ಅವು ಅಭಿವೃದ್ಧಿಯಾಗುತ್ತಲಿರಲಿ, ಅಥವಾ ನಷ್ಟಹೊಂದುತ್ತಲಿರಲಿ ಆ ವಿಷಯದಲ್ಲಿ ನನಗೇನೂ ಚಿಂತೆಯಿಲ್ಲವೆಂದು ಯಾರಾದರೂ ಹೇಳುವರೋ ಅಥವಾ ಆರೋಗ್ಯ, ಬುದ್ಧಿ, ಬಲಗಳು ಹೇಗಾದರೂ ವೆಚ್ಚವಾಗಲಿ ನಾನು ಅದನ್ನು ಕುರಿತು ಲಕ್ಷೀಕರಿಸುವದಿಲ್ಲವೆಂದು ಹೇಳುವವನು ಬುದ್ಧಿವಂತನೋ ! ಅಲ್ಲವಷ್ಟೆ ಆರೋಗ್ಯ, ಬುದ್ಧಿ, ಬಲಗಳು ದೇವರು ನಮ್ಮ ವಶಕ್ಕೆ ಕೊಟ್ಟಿರುವ ಸಾಹಿತ್ಯಗಳಾಗಿರುತ್ತವೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಅವು ನಮ್ಮ ಇಹಪರಲೋಕದ ಅಭಿವೃದ್ಧಿಗೆ ಸಾಧನಗಳಾಗಿವೆ. ಅವುಗಳನ್ನು ನಮ್ಮ ವಶಕ್ಕೆ ಕೊಟ್ಟಿರುವ ದೇವರಿಗೆ ನಾವು ಜವಾಬ್ದಾರರಾಗಿದ್ದೇವೆ ಅವುಗಳನ್ನು ನಮ್ಮ ಅಭಿವೃದ್ಧಿಗೆ ಪ್ರಯೋಗಿಸುವದು ನಮ್ಮ ಕರ್ತವ್ಯವಾಯಿತು ಹಣವೂ ಹಾಗೆಯೇ ನಮ್ಮ ಮೇಲ್ಮೆಯನ್ನೂ ಅಭಿವೃದ್ಧಿಯನ್ನೂ ಹೆಚ್ಚಿಸಿಕೊಳ್ಳುವದಕ್ಕೆ ಕೊಡೋಣಾದ ಉಪಕರಣವಾಗಿದೆ ಇದನ್ನು ನ್ಯಾಯವಾಗಿ ಪ್ರಯೋಗಿಸುವದರಿಂದ ನಮಗೆ ಅಭಿವೃದ್ಧಿಯೂ ನಮ್ಮ ಅಭಿವೃದ್ಧಿಯಿಂದ ಈ ಸಕಲ ಸಾಹಿತ್ಯಗಳನ್ನು ನಮಗೆ ಕೊಟ್ಟಿರುವ ದೇವರಿಗೆ ಮಹಿಮೆಯೂ ಉಂಟಾಗುವದು ಆದ್ದರಿಂದ ಹಣವನ್ನು ಹೇಗೆ ಫಲಿಸಿಕೊಳ್ಳಲಿಯೆಂದು ಚಿಂತಿಸುವದಕ್ಕಿಂತ ಇರುವ ಹಣವನ್ನು ನನ್ನ ಅಭಿವೃದ್ಧಿಗೆ ತಕ್ಕ ಸಾಧನವಾಗಿ ಹೇಗೆ ಪ್ರಯೋಗಿಸಿಕೊಳ್ಳಲಿಯೆಂದು ಚಿಂತಿಸುವದು ಅಗತ್ಯ ಆದ್ದರಿಂದ ಹಣವನ್ನು ಸದುದ್ದೇಶಕ್ಕಾಗಿಯೇ ಪ್ರಯೋಗಿಸಬೇಕು ಮತ್ತು ದೇವರು ನಮ್ಮ ಸುಕೃತ ದುಷ್ಕೃತಗಳನ್ನು ವಿಚಾರಿಸಿ ನ್ಯಾಯತೀರ್ಪು ಕೊಡುವ ಕಾಲದಲ್ಲಿ ನಾವು ನಮ್ಮ ಕೈಗೆ ದೊರೆತ ಹಣವನ್ನು ಕುರಿತು ಆತನು ಒಪ್ಪಿ ಮೆಚ್ಚತಕ್ಕ ರೀತಿಯಲ್ಲಿ ಲೆಕ್ಕವನ್ನು ಒಪ್ಪಿಸತಕ್ಕ ಕರ್ತವ್ಯ ನಮ್ಮೆಲ್ಲರ ಮೇಲೆಯೂ ಬಿದ್ದಿದೆ ಆ ಸಮಯದಲ್ಲಿ ಜೀವಿತಕಾಲದಲ್ಲಿ ನಮಗೆ ಸಿಕ್ಕಿದ ಹಣಕ್ಕೆ ನಾವು ಆತನ ಎದುರಿಗೆ ತಕ್ಕ ಸಂಜಾಯಿಷಿಯನ್ನು ಕೊಡುವ ಹಾಗೆ ಈಗಿನಿಂದಲೇ ತಕ್ಕ ರೀತಿಯಾಗಿ ಹಣವನ್ನು ಬಳಸುವದಕ್ಕೆ ಯತ್ನಿಸಬೇಕು

ನಮ್ಮ ವಶಕ್ಕೆ ಬಂದ ಹಣವನ್ನು ಒಂದೊಂದು ಕೆಲಸಕ್ಕೆ ಇಷ್ಟಿಷ್ಟೆಂತ ವಿಭಾಗಿಸಿ ಅದವನ್ನು ಆಯಾ ಕಾರ್ಯಕ್ಕೆ ಪ್ರಯೋಗಿಸುವುದು ಒಳ್ಳೆಯ ಕ್ರಮ ಇದರಿಂದ ಯಾವಯಾವ ಬಾಬುಗಳಿಗೆ ಎಷ್ಟೆಷ್ಟು ವಿನಿಯೋಗವಾಯಿತೆಂದು ಥಟ್ಟನೆ ತಿಳಿಯುವದು ಮತ್ತು ಹೀಗೆ ಮಾಡಿದ್ದರಿಂದ ಎರಡನೇ ಸರ್ತಿ ನಮಗೆ ಸಿಕ್ಕಿದ ಹಣವನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ವಿಭಾಗಿಸಿ ಪ್ರಯೋಗಿಸುವದಕ್ಕೆ ಸಹಾಯವಾಗುತ್ತದೆ ಹೇಗಂದರೆ—ಖರ್ಚಿನ ಬಾಬುಗಳಲ್ಲಿ ಅತ್ಯಂತ ಪ್ರಯೋಜನಕರವಾದದ್ದು ಯಾವದು ? ಹೆಚ್ಚು ಜನರಿಗೆ ಉಪಕಾರಾರ್ಥವಾದದ್ದು ಯಾವದು ? ಸಾಧಾರಣ ತರದ್ದು ಯಾವದು ? ಸಾಧಾರಣ ತರದ ಬಾಬಿಗೆ ಕಳೆದ ತಿಂಗಳು ವೆಚ್ಚಮಾಡಿದ ಹಣವನ್ನು ಕಡಿತಮಾಡಿ ಅದರಿಂದ ಉಳಿತಾಯವಾದ ಹಣವನ್ನು ಹೆಚ್ಚು ಮುಂದಿಗೆ ಪ್ರಯೋಜನಕಾರಿಯಾದ ಬಾಬಿಗೆ ಸೇರಿಸುವದಕ್ಕೆ ಆಗುವದಿಲ್ಲವೇ ? ಎಂಬೀ ತರವಾಗಿ ಯೋಚಿಸಿ ಕಡೆಕಡೆಗೆ ಹೆಚ್ಚು ಪ್ರಯೋಜನಕಾರಿಯಾದ ಮತ್ತು ಉಪಕಾರಾರ್ಥವಾದ ಬಾಬಿಗೇನೆ ಹೆಚ್ಚು ಹಣವು ವಿನಿಯೋಗವಾಗುವಂತೆ ಮಾಡಲಾದೀತು

ಕಣ್ಣಿಗಿಂತ ಹೆಚ್ಚು ಅಮೂಲ್ಯವಾದ ಇನ್ನೊಂದು ವಸ್ತುವು ನಮ್ಮ ಕೈಗೆ ಸಿಕ್ಕಾ ಬಯಲಿನಲ್ಲಿ ಬಿದ್ದು ವ್ಯರ್ಥವಾಗಿ ಹರಿದುಹೋಗುತ್ತಿರುವ ನೀರಿನಂತೆ ನಮ್ಮ ಕೈಬಿಟ್ಟು ಹೋಗುತ್ತಿರುವದು ಅದೇನಂದರೆ ಕಾಲ ವೆಚ್ಚವಾಗಿ ಹೋದ ಹಣವು ಪುನಹ ನಮ್ಮ ಕೈಗೆ ಸಿಕ್ಕಬಹುದು ಕಾಲವೋ ನಮ್ಮ ಬಳಿಯಿಂದ ಒಂದು ಸಾರಿ ವ್ಯಯವಾಗಿ ಹೋಯಿತೆಂದರೆ ಪುನಹ ಅದೆಂದಿಗೂ ಹಿಂದಕ್ಕೆ ಬರಲಾರದು ಇದರ ವಿಷಯ ಜನಗಳು ಲಕ್ಷ್ಯಕೊಡದಿರುವದೇತಕ್ಕೆ ಅದನ್ನು ಬೇರೆಬೇರೆ ಬಾಬುಗಳಿಗೆ ಇಂತಿಷ್ಟೆಂದು ವಿಭಾಗಿಸಿ ಸದ್ವಿನಿಯೋಗಕ್ಕೆ ವೆಚ್ಚಮಾಡಬಾರದ ಅಂಗಡಿಯವನು ಸಕ್ಕರೆ ತುಪ್ಪ ಮುಂತಾದ ದಿನಸುಗಳನ್ನು ಅಗ್ಗವಾದ ಪೇಟೆಯಿಂದ ಸುಲಭಕ್ರಯಕ್ಕೆ ಕೊಂಡು ತಂದು ತನ್ನ ಕಚೇರಿಯ ಮೇಲೆ ಪ್ರಯಾಸಕ್ಕೆ ತಕ್ಕ ಲಾಭ ಬರುವಂತೆ ಧಾರಣೆಯನ್ನು ಗೊತ್ತುಮಾಡಿ ಅಳತೆಯಲ್ಲಾಗಲಿ ತೂಕದಲ್ಲಿಯಾಗಲಿ ನಷ್ಟವಾಗದಂತೆ ನೋಡಿಕೊಳ್ಳುವದಿಲ್ಲವೇ ಕಾಲವನ್ನು ಸಹ ನಾವು ಹಾಗೆಯೇ ಬಳಸಬೇಕೆಂದು ಸತ್ಯವೇದದಲ್ಲಿ ಕಟ್ಟಳೆಯುಂಟು ಅದೇನಂದರೆ—ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ ನೀವು ಜ್ಞಾನಹೀನರಂತೆ ಇರದೆ ಜ್ಞಾನವಂತರಾಗಿ ದಿನಗಳು ಕೆಟ್ಟವುಗಳಾಗಿರುವದರಿಂದ ಕಾಲವನ್ನು ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳುವವರಾಗಿ ನಡಿಯಿರಿ ಅರ್ಥವೇನಂದರೆ ಕಾಲವನ್ನು ಕ್ರಯಕ್ಕೆ ಕೊಂಡುಕೊಂಡ ವಸ್ತು ಅಥವಾ ಸರಕು ಎಂದು ಭಾವಿಸಿ ವರ್ತಕನು ತನ್ನ ಸರಕಿನ ಮೇಲೆ ಆದಾಯ ಬರುವಂತೆ ಜಾಗ್ರತೆ, ಎಚ್ಚರಿಕೆ, ಬುದ್ಧಿ, ಮುಂದಾಲೋಚನೆಗಳನ್ನು ಪ್ರಯೋಗಿಸಿ ವ್ಯಾಪಾರಮಾಡುವಹಾಗೆಯೇ ನೀವೂ ನೀವೇ ಕಾಲವನ್ನು ಪ್ರಯೋಗಿಸುವದರಿಂದ ನಷ್ಟವನ್ನಲ್ಲ ಲಾಭವನ್ನೇ ಪಡೆಯಬೇಕೆಂದು ಯತ್ನಿಸಿರಿ

ಸ್ವದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

* * *

ಶ್ರೀಶಿವಗಂಗಾ ಮಠದ ಶ್ರೀಸ್ವಾಮಿಗಳವರು ಪರಿವಾರ ಸಮೇತ ಸುಮಾರು ಮಾರ್ಚಿ ತಾ 8 ಕ್ಕೆ ರಾಜಧಾನಿಗೆ ದಯಮಾಡುವರೆಂದು ತಿಳಿಯುತ್ತದೆ

* * *

ಮೈಸೂರು ಸಂಸ್ಥಾನದ ಗ್ರಾಮಾಂತರಗಳಲ್ಲಿ ಆರೋಗ್ಯ ನಿವಾರಣವನ್ನೂ ಕಾಯಿಲೆಗಳನ್ನೂ ಕುರಿತು ಪರೀಕ್ಷಿಸುವುದಕ್ಕೆ ಡಾಕ್ಟರುಗಳ ಸಭೆಯೊಂದು ನಡೆಯುವುದಾಗಿದೆ

ಈ ತಿಂಗಳು ಅಂತ್ಯಭಾಗದಲ್ಲಿ ಶ್ರೀಮದ್ಯುವರಾಜರವರು ರಾಜಧಾನಿಯ ಮುಖ್ಯಪ್ಪನವರ ಹೈಸ್ಕೂಲಿಗೆ ದಯಮಾಡಿ, ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸುವರೆಂದು ತಿಳಿಯುತ್ತೇವೆ.

* * *

ಕೌನ್ಸಲರ್ ಮ|| ಎಚ್ ವಿ. ನಂಜುಂಡಯ್ಯನವರು ಚೀಫ್ ಜಡ್ಜಿರಾಗಿಯೂ ಇರುವ ಕಾಲದಲ್ಲಿ ಅವರಿಗೆ 3,000 ರೂಪಾಯಿನಂತೆ ಒಟ್ಟು ತಲಬು ಕೊಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

* * *

ಸರ್ಕಾರದವರು ಅಮಲ್ದಾರ್ ಮ|| ಎಸ್ ವೆಂಕಟರಮಣಶಾಸ್ತ್ರಿಗಳನ್ನು ಮಾಗಡಿಗೂ, ಮ|| ಟಿ. ವಿ. ಎ ಈಶ್ವರ್‌ಯವರನ್ನು ಟಿ. ನರಸೀಪುರಕ್ಕೂ, ... ವೆಂಕಟರಮಣಯ್ಯನವರನ್ನು ಮಳವಳ್ಳಿಗೂ ವರ್ಗಮಾಡಿರುತ್ತಾರೆ.

* * *

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ರಂಗಮ್ಮನ ಪ್ಯಾಟೆ ತಿಮ್ಮಾಪುರದಲ್ಲಿ ... ವೇ|| ಕೆ ಎಂ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು ಆನಂದ ಸಂವತ್ಸರದ ಪಂಚಾಂಗವನ್ನು ಚೆನ್ನಾಗಿ ಅಚ್ಚುಹಾಕಿಸಿ ಒಂದು ಪ್ರತಿಯನ್ನು ನಮಗೆ ಕಳುಹಿಸಿರುತ್ತಾರೆ.

* * *

ಟಿ ನರಸೀಪುರದ ತಾಲ್ಲೂಕು ದಣಾಯಕನಪುರದಲ್ಲಿ ಒಬ್ಬ ಗೌಡನ ಶವವು ... ಉರಿದುಹೋದ ಹುಲ್ಲುಮೆದೆಯಲ್ಲಿ ಸಿಕ್ಕಿತೆಂದೂ, ಅದರ ಪೂರ್ವೋತ್ತರವನ್ನು ಅಮಲ್ದಾರರೂ ಪೊಲೀಸ್ ಸೂಪರೆಂಟರೂ ತನಿಖೆಮಾಡುತ್ತಿದ್ದಾರೆಂದೂ ತಿಳಿಯುತ್ತೇವೆ

* * *

ಬೆಂಗಳೂರು ಸಿಟಿ ಮ|| ಎಂ ಎನ್ ಲಿಂಗಪ್ಪನವರು "ಕುರುವಿಜಯ" ಎಂಬ ಪತ್ರಿಕೆಯನ್ನು ಮೊದಲು ತಿಳಿಸಿದ್ದಂತೆ ಫೆಬ್ರವರಿ ತಾ 9 ಕ್ಕೆ ಹೊರಡಿಸಲು ಆಗಲಿಲ್ಲವೆಂದೂ, ಮುಂದೆ ಏಪ್ರೆಲ್ ತಾ 30 ನೇ ಸೋಮವಾರದಿಂದ ಹೊರಡಿಸಲು ಉದ್ದೇಶಿಸುತ್ತೇವೆಂದೂ ತಿಳಿಸುವಂತೆ ನಮಗೆ ಬರೆಯುತ್ತಾರೆ

* * *

ಮೈಸೂರು ಸರ್ಕಾರದವರು ಈ ಸೀಮೆಯ ಕಾಡುಗಳಲ್ಲಿರುವ ಗಿಡಗಳಿಂದ ... ವಸ್ತುಗಳನ್ನು ತಯಾರುಮಾಡಬಹುದೇ ಎಂಬುವುದನ್ನು ಅಜಮಾಯಿಸಿ ಮಾಡುವುದಕ್ಕೆ ಮಿ ಇನ್ಗ್ಲಿಸ್ ಎಂಬುವರನ್ನು 1,000 ರೂಪಾಯಿ ತಲಬಿನ ಮೇಲೆ ನೇಮಕಮಾಡಿಕೊಳ್ಳುವವರಾಗಿದಾರೆಂದು ವರ್ತಮಾನವಿದೆ

* * *

ನಮ್ಮ ಸಂಸ್ಥಾನದಲ್ಲಿ ಪ್ರಥಮ ವಿದ್ಯೆಯನ್ನು ಯಾವ ರೀತಿ ಹರಡಬೇಕೆಂಬುವುದನ್ನು ಕುರಿತು ಬೊಂಬಾಯಿಗೆ ಸೀಮೆಯಿಂದ ಬಂದಿರುವ ಒಬ್ಬ ವಿದ್ಯಾವಂತರ ಕೂಡ ಕಲೆತು ಆಲೋಚನೆಮಾಡಿಕೊಂಡು ಬರುವುದಕ್ಕಾಗಿ ಇನ್‌ಸ್ಪೆಕ್ಟರ್ ಜನರಲ್ ಮ|| ಎ. ರಾಮರಾಯರು ಬೊಂಬಾಯಿಗೆ ಹೋಗಿಬರುವವರಾಗಿದಾರೆ

* * *

ಕಳೆದ ಶನಿವಾರ ಮಧ್ಯಾಹ್ನದ ಮೇಲೆ ಶ್ರೀಮನ್ ಮಹಾರಾಜರವರೂ, ... ಸಾಯಂಕಾಲ ಅರಮನೆಯ ರಾಣೀವಾಸದವರೂ ಮೋಟರುಗಳಲ್ಲಿ ಪರಿವಾರ ಸಮೇತ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು ಅವರೆಲ್ಲಾ ಮುಂದಿನ ತಿಂಗಳು ಎರಡನೆಯ ವಾರದಲ್ಲಿ ಬೇಸಿಗೆಯನ್ನು ಕಳೆಯುವುದಕ್ಕಾಗಿ ರಾಜಧಾನಿಯಿಂದ ನೀಲಗಿರಿಗೆ ತೆರಳುವರೆಂದು ವರ್ತಮಾನವಿದೆ

* * *

ಶ್ರೀಮನ್ ಮಹಾರಾಜರವರು ಸುಮಾರು 12 ದಿನಗಳ ಕೆಳಗೆ ಬೆಂಗಳೂರಿನ ... ಕ್ಲಬ್ಬಿಗೆ ಒಂದು ದಿನ ಅಲ್ಲಿನ ದೊಡ್ಡಮನುಷ್ಯರ ಮತ್ತು ಮುಖ್ಯಾಧಿಕಾರಿಗಳ ಮಕ್ಕಳಲ್ಲಿ ಸುಮಾರು 10-12 ವರುಷದೊಳಗಿನ ಮಕ್ಕಳನ್ನೆಲ್ಲಾ ಅರಮನೆಗೆ ಕರಸಿಕೊಂಡು, ಅವರಿಗೆ ವಿನೋದಾದಿಗಳನ್ನು ಕಲ್ಪಿಸಿ ಆಡಿಸಿದ್ದಲ್ಲದೆ ... ತೀರ್ಥಗಳನ್ನು ಕೊಟ್ಟು ಸಂತೋಷಪಡಿಸಿ, ಅವರ ಕೂಡ ಆನಂದಪಟ್ಟರೆಂದು ಕೇಳಿ ಹರ್ಷಪಡುತ್ತೇವೆ

* * *

ಶ್ರೀಮನ್ ಮಹಾರಾಜರವರು ಮುಂದೆ ಹೇಳುವವರನ್ನು ಅ|| ಕಮಿಷನ್ ... ಗಳಾಗಿ ನೇಮಿಸಿರುವಂತೆ ಸ್ಯಾಂಕ್ಷನ್ ದಯಪಾಲಿಸಿರುತ್ತಾರೆ — ಮ|| ಗಳಾದ ಎ ವೆಂಕಟೇಶಯ್ಯಂಗಾರ್ರು, ವೆಂಕಟನಾರಣಪ್ಪನವರು, ಎ ನರಸಿಂಹರಾಘವಾಚಾರ್ರು (ಎ ಕ್ಲಾಸಿಗೆ) ಪಿ ಗೋಪಾಲರಾಜೆ ಅರಸಿನವರು, ಗುಲಾಂ ಮೊಹದೀನ್ ಮೇಸ್ತ್ರಿಯವರು, ಜಿ ರುದ್ರಪ್ಪನವರು (ಬಿ. ಕ್ಲಾಸಿಗೆ), ಬಿ ಬಸವಾರಾಧ್ಯರು, ಎಂ ಕೃಷ್ಣಸ್ವಾಮಿ ಅಯ್ಯಂಗಾರ್ರು, ಸಿ ಮಾಚಯ್ಯನವರು, ಎನ್ ರಾಮರಾಯರು, ಎ ಹೇಸ್ ರವರು (ಬಿ ಕ್ಲಾಸಿನಲ್ಲಿ ಖಾಯಂ), ಮ|| ಎಂ ಎನ್ ... ದಾರಾಜೆ ಅರಸಿನವರನ್ನು ಮಹಾರಾಜರವರ ಬಳಿ ಅ ಸೆಕ್ರೆಟರಿಯಾಗಿ ನೇಮಿಸಿಕೊಂಡಿದಾರೆ.

* * *

ಸೀಮೆಯಿಂದ ವಾಪಸು ಬಂದಿರುವ ರೆವ್. ಜಿ ಡಬ್ಲಿಯು ಸಾಡೇಥೋರೆ ಯವರನ್ನು ಕಳೆದ ಬುದವಾರ ಸಾಯಂಕಾಲ ರಾಜಧಾನಿಯ ಶಿವರಾಮಪೇಟೆ ಮತ್ತು ಇತರ ಮಿಷನ್ ಗಂಡುಮಕ್ಕಳ ಪಾಠಶಾಲೆಗಳ ಉಪಾಧ್ಯಾಯರುಗಳು ಕರೆಸಿಕೊಂಡು, ಅವರಲ್ಲಿ ತಮಗಳಿಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿ ಒಂದು ಸಂತೋಷಕೂಟವನ್ನು ನಡಿಸಿದರು ಮ|| ಟಿ ಎಂ ರಾಮಸ್ವಾಮಯ್ಯನವರು ಉಪಾಧ್ಯಾಯರುಗಳ ಪರವಾಗಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಮಿ|| ಸಾಡೇಥೋರೆಯವರು ಸಮಯೋಚಿತವಾದ ಉತ್ತರವನ್ನು ಕೊಟ್ಟು, ಉಪಾಧ್ಯಾಯರುಗಳನ್ನೂ ಮಕ್ಕಳನ್ನೂ ಆ ದಿನದ ಸಂತೋಷ ಕೂಟಕ್ಕಾಗಿ ಬಹು ಪ್ರೀತಿಯಿಂದ ವಂದಿಸಿದರು

* * *

ಒಬ್ಬ ಬಾತ್ಮೀದಾರರಿಂದ—ಬೆಂಗಳೂರು ಜನೋಪಕಾರಿ ಮ|| ದೊಡ್ಡಣ್ಣನವರ ಫ್ರೀ ಸ್ಕೂಲಿನಲ್ಲಿ ಫೀಜು ಕೊಡಲು ಚೈತನ್ಯವಿಲ್ಲದ ಕೇವಲ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿರುವ ಸಲುವಾಗಿ ಸ್ಥಾಪಿಸಲ್ಪಟ್ಟಿರುವ ಜನೋಪಕಾರಿ ದೊಡ್ಡಣ್ಣನವರ ಸ್ಕೂಲನ್ನು ಈಗ ಆಳುತ್ತಲಿರುವ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರು ಪ್ರಾರಂಭಮಾಡಿದಾಗ ಈ ಸ್ಕೂಲಿನಲ್ಲಿ ಕೈಗಾರಿಕೆ ಮತ್ತು ಕೃಷಿಯನ್ನು ವಿದ್ಯೆಯ ಜೊತೆಗೆ ಕಲಿಸುವುದು ಬಹಳ ಉಪಯೋಗಕರವೆಂದು ಅಪ್ಪಣೆಕೊಟ್ಟ ಮೇರೆ ಡ್ರಾಯಿಂಗ್, ಕ್ಲೇ ಮಾಡಲಿಂಗ್, ಮರ ಮತ್ತು ಚಿತ್ರದ ಕೆಲಸಗಳನ್ನು ಈ ಸ್ಕೂಲಿನಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಲಿರುವ ಹುಡುಗರಿಗೆ ಕಲಿಸುತ್ತಲಿರುವುದು ಸರಿಯಷ್ಟೆ ಸದರಿ ಸ್ಕೂಲಿನಿಂದ ಕಳುಹಿಸಿದ 22 ಹುಡುಗರ ಪೈಕಿ 19 ಜನಗಳು ತೇರ್ಗಡೆಯಾದರು. ಅವರಲ್ಲಿ ಫ್ರೀ ಹ್ಯಾಂಡ್ ಔಟ್‌ಲೈನ್ ಡ್ರಾಯಿಂಗ್ ಎಲಿಮೆಂಟರಿ ಮತ್ತು ಇಂಟರ್ ಮೀಡಿಯೇಟ್ ಗ್ರೇಡುಗಳಲ್ಲಿ ತೇರ್ಗಡೆಯಾದವರು 15 ಜನ, ಪೇಂಟಿಂಗ್‌ನಲ್ಲಿ 2 ಜನ, ಜೊಮೆಟ್ರಿಕಲ್ ಡ್ರಾಯಿಂಗ್‌ನಲ್ಲಿ ಒಬ್ಬರು (ಫಸ್ಟ್ ಕ್ಲಾಸಿನಲ್ಲಿ) ಈ ರೀತಿಯಾಗಿ ತೇರ್ಗಡೆಯಾದರು. ಒಬ್ಬ ವಿದ್ಯಾರ್ಥಿ ಪ್ರೈವೇಟಿನಲ್ಲಿ ಹೋಗಿ ಇಂಟರ್ ಮೀಡಿಯೇಟ್ ಫ್ರೀ ಹ್ಯಾಂಡ್ ಔಟ್‌ಲೈನ್ ಡ್ರಾಯಿಂಗ್‌ನಲ್ಲಿ ತೇರ್ಗಡೆಯಾದರು ಉಪಾಧ್ಯಾಯರು ಮತ್ತು ಕಮಿಟಿಯವರು ಮುತುವರ್ಜಿಯಿಂದ ಕೆಲಸ ಮಾಡುತ್ತಲಿದ್ದಾರೆಂಬುವುದು ಈ ಪಲಿತಾಂಶದಿಂದ ಗೊತ್ತಾಗುತ್ತದೆ

ದಿವಾನ್‌ರವರು ತುಮಕೂರಿಗೆ ದಯಮಾಡಿದ್ದು.

ಇದೇ ಫೆಬ್ರವರಿ 12 ನೇ ತಾ. ಬೆಳಗ್ಗೆ 9¼ ಘಂಟೆಯ ರೈಲಿನಲ್ಲಿ ನಮ್ಮ ದಿವಾನ್ ಸಾಹೇಬರವರು ತುಮಕೂರಿಗೆ ದಯಮಾಡಿಸಿ ಸ್ವಲ್ಪ ವಿಶ್ರಮಿಸಿಕೊಂಡು ಒಡನೆಯೇ ಶಿಬಿ ದೇವಸ್ಥಾನಕ್ಕೆ ಮೋಟರ್ ಗಾಡಿಯಲ್ಲಿ ದಯಮಾಡಿ ಮಧ್ಯಾಹ್ನ 12¼ ಘಂಟೆಗೆ ವಾಪಸು ಬಂದರು 3 ಘಂಟೆಗೆ ಸರಿಯಾಗಿ ದಿವಾನ್‌ರವರು ಕ್ಲಬ್ಬಿಗೆ ದಯಮಾಡಿ ಸ್ಥಳೀಯ ವರ್ತಕರೂ ರೈತರೂ ಮತ್ತು ಆ ದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿಗಾಗಿ ಎಲ್ಲಾ ತಾಲ್ಲೂಕುಗಳಿಂದಲೂ ಬಂದಿದ್ದ ಮೆಂಬರುಗಳೂ, ಅಮಲ್ದಾರ್ರುಗಳೂ ಇವರುಗಳನ್ನು ಸಹ ಡಿಸ್ಟ್ರಿಕ್ಟ್ ಮುಖ್ಯ ಎಲ್ಲಾ ತಾಲ್ಲೂಕುಗಳ ಕೊರತೆಗಳ ವಿಷಯವಾಗಿಯೂ, ಅಂಥಾ ಕೊರತೆಗಳನ್ನು ಯಾವ ರೀತಿ ಸರಿಪಡಿಸಬೇಕೆಂಬ ವಿಷಯವಾಗಿಯೂ ಅನೇಕ ವಿಧವಾಗಿ ಪ್ರಶ್ನೆ ಮಾಡಿದರು ರೈತರುಗಳು ತಮಗೆ ಉಂಟಾದ ಕೊರತೆಗಳನ್ನು ಸರಕಾರದವರೇ ನಿವಾರಣೆಮಾಡಬೇಕೆಂಬ ಆಶಯವನ್ನು ತಿಳಿಸಲಾಗಿ, ದಿವಾನ್‌ರವರು ಪ್ರತಿ ಒಂದಕ್ಕೂ ಸರಕಾರದವರನ್ನೇ ಅಪೇಕ್ಷಿಸಿದರೆ ಯಾವ ಕೆಲಸವೂ ಆಗುವದಿಲ್ಲ ರೈತರುಗಳು ಒಗ್ಗಟ್ಟಾಗಿ ಕೆಲಸಮಾಡಲು ಆರಂಭಿಸಿ ಸ್ವಲ್ಪ ಮಟ್ಟಿಗೆ ಸರಕಾರದವರ ಸಹಾಯವನ್ನು ಅಪೇಕ್ಷಿಸಿದರೆ ಕೆಲಸ ನೆರವೇರುವದರಲ್ಲಿ ಏನೂ ಅಡ್ಡಿಯಿರುವದಿಲ್ಲವೆಂದು ಸೂಚಿಸಿದರು ಈ ಪೈಕಿ ಕೆರೆ ಕಾಮಗಾರಿ ವಿಷಯ ಒಂದು ನಾದುರಸ್ತಾದ ಕೆರೆಗಳ ಮಟ್ಟೀ ಕಾಮಗಾರಿಯನ್ನು ರೈತರು ಮಾಡಿಕೊಂಡರೆ ಕಲ್ಲು ಕಾಮಗಾರಿಯನ್ನು ಸರಕಾರದವರು ಮಾಡಿಸಿಕೊಡುವದಾಗಿಯೂ, ಇದಕ್ಕೆ ಪ್ರತಿಫಲವಾಗಿ ಕೆಲವು ವರುಷ ಕಂದಾಯ ರಿಮಿಷನ್ ಮಾಡಿಸುವದಾಗಿಯೂ ಅಪ್ಪಣೆ ಕೊಡಿಸಿದರು ಇದಕ್ಕೆ ರೈತರು ಅರ್ಧಮನಸ್ಸಿನಿಂದ ಯತ್ನವಿಲ್ಲದೆ ಒಪ್ಪಿಕೊಂಡರು ದಿವಾನ್ ಸಾಹೇಬರವರು ಕೆಲವು ವರುಷಕಾಲ ಕಂದಾಯ ಬಿಡುವದಲ್ಲದೆ ಕೆರೆ ತುಂಬದೆ ಸಬಬು ಫಸಲ್ ಆಗದೆ ಎಲ್ಲಾ ಸಾಲಿನಲ್ಲಿಯೂ ಕಂದಾಯ ರಿಮಿಷನ್ ಮಾಡಿಸುವದಾಗಿ ಅಪ್ಪಣೆಕೊಡಿಸಿದ್ದರೆ ನಾದುರಸ್ತಾದ ಎಲ್ಲಾ ಕೆರೆಗಳ ಕೆಳಗಿನ ರೈತರುಗಳೂ ಮುಕ್ಕಾಲು ಮೂರುವೀಸಪಾಲು ಮಟ್ಟಿ ಸಾಲಾವಾದು ವಗೈರೆ ಕಾಮಗಾರಿಗಳನ್ನು ಮಾಡಲು ಮನಃಪೂರ್ತಿಯಾಗಿ ಒಪ್ಪುತ್ತಿದ್ದರು ಮುಂದೆ ದಿವಾನ್ ಸಾಹೇಬರವರು ಈ ರೀತಿ ಪ್ರೋತ್ಸಾಹ ಗೊಳಿಸುವರೆಂದು ನಂಬಬೇಕಾಗಿದೆ

ತುಮಕೂರು ಮತ್ತು ತಿಪಟೂರು ಟವನ್‌ಗಳಿಗೆ ನಲ್ಲಿಗಳ ಮೂಲಕ ಪಾನಕ್ಕೆ ನೀರು ಸರಬರಾಯಿ ಮಾಡುವದಾಗಿ ತೀರ್ಮಾನಿಸಿದರು ತುಮಕೂರು ಟವನ್‌ನಲ್ಲಿ ಮ| ಸಾಹುಕಾರ್ ಚಂದ್ರಪ್ಪನವರು ಕೈಗಾರಿಕೆ ಕೆಲಸಗಳಿಗಾಗಿ ಮುಫತ್ತಾಗಿ ಕೊಡಲು ಉದ್ದೇಶಿಸಿರುವ ನಿವೇಶನ ಮತ್ತು ದ್ರವ್ಯದ ಜೊತೆಗೆ ಸರಕಾರದವರು ದ್ರವ್ಯಸಹಾಯ ಮಾಡಿ ಕೈಗಾರಿಕೆಯ ಶಾಲೆಯನ್ನು ಸ್ಥಾಪಿಸುವದಾಗಿ ಅಪ್ಪಣೆಕೊಟ್ಟರು. ಇದಲ್ಲದೆ ದಿವಾನ್ ಸಾಹೇಬರವರು ಸಂಪದಭ್ಯುದಯ ಸಂಘ, ಡಿಸ್ಟ್ರಿಕ್ಟ್ ಬೋರ್ಡ್, ವಿದ್ಯಾಭ್ಯಾಸ, ವ್ಯಾಪಾರ, ಪರಸ್ಪರಸಹಾಯಸಂಘ ವಗೈರೆ ನಾನಾ ಬಾಬುಗಳ ವಿಷಯವಾಗಿ ಅನೇಕ ಪ್ರಶ್ನೋತ್ತರಗಳನ್ನು ಒಂದು ಕ್ಷಣವೂ ವಿರಾಮವಿಲ್ಲದಂತೆ ಬೆಳಸಿದರು ಇದರಿಂದ ಅಲ್ಲಿ ಸೇರಿದ್ದವರೆಲ್ಲರಿಗೂ ಉಪಾಧ್ಯಾಯರು ಯಾವ ರೀತಿ ತಮ್ಮ ಬಾಲಕರಿಗೆ ವಿಷಯ ಗ್ರಾಹ್ಯಮಾರ್ಗವನ್ನು ಸೂಚಿಸುತ್ತಾರೆಯೋ ಆ ರೀತಿ ಸೂಚಿಸಿದಂತೆ ಇತ್ತು ಇದೆಲ್ಲಾ 5½ ಘಂಟೆ ವರಿವಿಗೆ ನಡೆಯಿತು ಅನಂತರ ದಿವಾನ್‌ರವರು ½ ಘಂಟೆಕಾಲ ಮೋಟರಿನಲ್ಲಿ ಕುಳಿತು ಟವನ್ ಎಲ್ಲಾ ಭಾಗಗಳನ್ನೂ ಪರಾಂಬರಿಸಿದರು ಅನಂತರ ಕ್ಲಬ್ಬಿಗೆ ದಯಮಾಡಿಸಿ ಅಗ ಆಫೀಸರುಗಳು ಮತ್ತು ಲಾಯರುಗಳು ಇವರುಗಳಿಂದ ಏರ್ಪಡಿಸಿದ್ದ ಟೀ ಪಾರ್ಟಿಯಲ್ಲಿ ಸೇರಿ ಅಲ್ಲಿದ್ದವರಿಗೆ ಸಂತೋಷಗೊಳಿಸಿ ಅನಂತರ ಕೆಲವು ದೊಡ್ಡಮನುಷ್ಯರುಗಳಿಗೆ ಅಂತರಂಗ ಭೇಟಿಯನ್ನು ಕೊಟ್ಟು ರಾತ್ರಿ 8½ ಘಂಟೆ ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿಸಿದರು

ಇದೇ ರೀತಿ ದಿವಾನ್‌ರವರು ಆಗಾಗ್ಗೆ ಡಿಸ್ಟ್ರಿಕ್ಟ್ ಕ್ವಾಟರ್‌ಗಳಿಗೆ ಬರುವ ತಾರೀಖುಗಳನ್ನು ಮುಂಚಿತವಾಗಿಯೇ ತಿಳಿಸಿ ಡಿಸ್ಟ್ರಿಕ್ಟ್ ಮುಖ್ಯ ಮುಖ್ಯವಾದ ರೈತರುಗಳನ್ನು ಬರುವಂತೆ ಮಾಡಿಕೊಂಡು ವಿಷಯಗಳನ್ನೆಲ್ಲಾ ವಿಚಾರಿಸುತ್ತಾ ಇದ್ದರೆ ರೆಪ್ರೆಜೆಂಟೆಟಿವ್ ಅಸೆಂಬ್ಲಿಯ ಕೆಲಸವು ಬಹಳಮಟ್ಟಿಗೂ ಕಮ್ಮಿ ಆಗುವದು ಇದಲ್ಲದೆ ಅನೇಕಮಂದಿ ಅವಿದ್ಯಾವಂತರು, ಧನಿಕರು, ದುರ್ಭಿಕ್ಷ್ಯವುಳ್ಳವರು ಪ್ರತಿಷ್ಠೆಗಾಗಿ ಮೆಂಬರುಗಳಾಗಿ ಬಂದು ತಮ್ಮ ಜನಗಳ ಪುರೋಭಿವೃದ್ಧಿಗೆ ಕುಂದಕವನ್ನುಂಟುಮಾಡುವದು ತಪ್ಪುತ್ತದೆ ದಿವಾನ್‌ರವರು ಚರ್ಚೆಮಾಡುತ್ತಿದ್ದ ಕಾಲದಲ್ಲಿ ಕದಬದ ಮ|| ಕೆ ರಾಮಾನುಜಯ್ಯಂಗಾರ್ ವಗೈರೆ ಕೆಲವು ದೊಡ್ಡರೈತರುಗಳು ಲಕ್ಷಾಂತರ ಗುಂಡಿ ಕಟ್ಟನ್ನು ಹಾಕಿ ಯಂತ್ರ ಸಾಧನಗಳಿಂದ ನೀರು ಎತ್ತಿ ಅಚ್ಚುಕಟ್ಟು ಆಗುವದಾಗಿ ವ್ಯಕ್ತಪಟ್ಟಿತು ಸರಕಾರದವರು ವ್ಯವಸಾಯ ಮತ್ತು ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ತಿಳುವಳಿಕೆಯುಳ್ಳ ನೌಕರರುಗಳನ್ನು ಕಟ್ಟು ಹಾಕಿರುವ ಪ್ರದೇಶಕ್ಕೆ ಆಗಾಗ್ಗೆ ಕಳುಹಿಸಿ, ಜಮೀನ್‌ದಾರರಿಗೆ ಜಮೀನಿಗೆ ಬೇಕಾದ ತಕ್ಕ ಗೊಬ್ಬರಗಳನ್ನು ತರಿಸಿ ಹಾಕಿಸುತ್ತಲೂ, ಕಬ್ಬಿಗೆ ಬೇಕಾದ ತರಹೇವಾರಿ ವ್ಯಾಸಂಗವನ್ನು ತಕ್ಕ ಕಾಲದಲ್ಲಿ ಮಾಡುವಂತೆ ಸಲಹೆ ಕೊಡುವಂತೆಯೂ, ಮಿಷನ್‌ಗಳನ್ನು ಉಪಯೋಗಿಸುವ ರೀತಿಯನ್ನು ತೋರ್ಪಡಿಸುವಂತೆಯೂ ಮಾಡುವದಲ್ಲದೆ ಅವರುಗಳಿಗೆ ದ್ರವ್ಯಸಹಾಯ ಬೇಕಾಗಿದ್ದಲ್ಲಿ ಅಂಥಾ ಸಹಾಯವನ್ನೂ ಮಾಡುತ್ತಾ ಬಂದರೆ ಸಂಪದಭಿವೃದ್ಧಿಯ ಸಂಘದ ಉದ್ದೇಶವು ಸುಲಭವಾಗಿ ನೆರವೇರಿದಂತೆ ಆಗುತ್ತೆ ಪುರನಿವಾಸಿ.

ಯಡತೊರೆ

ನಮ್ಮ ದಿವಾನ್‌ರವರು ಈ ತಿಂಗಳು ತಾ 16 ನೇ ಬೆಳಗ್ಗೆ 8½ ಘಂಟೆಗೆ ಯಡತೊರೆಗೆ ದಯಮಾಡಿಸಿ 23 ನೇ ತಾ ವರೆಗೂ ಯಡತೊರೆಯಲ್ಲಿ ಕ್ಯಾಂಪು ಮಾಡುತ್ತಾರೆ ಈ ಸಂದರ್ಭದಲ್ಲಿ ಇವರಿಗೆ ತಕ್ಕ ಸನ್ಮಾನವನ್ನು ಮಾಡಲು ಈ ತಿಂಗಳು 6 ನೇ ತಾ. ತಾಲ್ಲೂಕಿನ ಅನೇಕ ದೊಡ್ಡಮನುಷ್ಯರುಗಳು ಮೀಟಿಂಗ್‌ಮಾಡಿ, ಒಂದು ರಿಸೆಪ್‌ಷನ್ ಕಮಿಟಿಯನ್ನು ಏರ್ಪಾಡುಮಾಡಿರುತ್ತಾರೆ ಈ ಕಮಿಟಿಗೆ ಮ ಹೆಚ್ ವೆಂಕಟಾಚಲಯ್ಯಂಗಾರ್ರು ಚೇರ್‌ಮನ್‌ರಾಗಿಯೂ, ಮ|| ತಿಪ್ಪೂರು ಸುಬ್ಬರಾಯರೂ, ಮ ಮಂಚನಹಳ್ಳಿ ರಾಮಸ್ವಾಮಿ ಶಾಸ್ತ್ರಿಗಳೂ, ಮ| ಬಳೇ ಬಸವಣ್ಣನವರೂ ಸೆಕ್ರೆಟರಿಗಳಾಗಿಯೂ, ಮ| ಬಾದಂ ರಂಗಶೆಟ್ಟರು ಟ್ರೆಷರರಾಗಿಯೂ, ಮ|| ದೇಪೋಜರಾಯರು, ಸಂಗಣ್ಣನವರೇ ಮುಂತಾದ ದೊಡ್ಡಮನುಷ್ಯರು ಮೆಂಬರುಗಳಾಗಿಯೂ ನೇಮಿಸಲ್ಪಟ್ಟಿರುತ್ತಾರೆ ಈ ದೊಡ್ಡಮನುಷ್ಯರುಗಳೂ ಮತ್ತು ಇನ್ನೂ ಅನೇಕರು ಧಾರಾಳವಾಗಿ ಚಂದಾ ಕೊಟ್ಟಿರುವುದು ನಮ್ಮ ದಿವಾನ್ ಸಾಹೇಬರಲ್ಲಿ ಪ್ರಜೆಗಳಿಗಿರುವ ಭಕ್ತಿವಿಶ್ವಾಸಗಳು ಸ್ಪಷ್ಟವಾಗುತ್ತವೆ ದಿವಾನ್ ಸಾಹೇಬರನ್ನು ಯಡತೊರೆಯಲ್ಲಿರುವವರೆಗೂ ಸುಖಸಂತೋಷವಾಗಿಟ್ಟುಕೊಂಡು ಇರಲು ಬಹಳ ಆದರದಿಂದ ಅನೇಕ ಚಪ್ಪರಗಳನ್ನೂ ಹಾಕಿಸುವುದು ಬಹಳ ನೇತ್ರಾನಂದಕರವಾಗಿದೆ ಯಡತೊರೆ ಎಕ್ಸ್‌ಟೆನ್‌ಷನ್‌ನಲ್ಲಿ ಮಾಡುತ್ತಿರುವ ಏರ್ಪಾಡು ಬಹಳ ಮನೋಹರವಾಗಿದೆ ಅಲ್ಲದೆ ಮಂಚನಹಳ್ಳಿ ಗ್ರಾಮಸ್ಥರು ಅನೇಕರು ದಿವಾನ್ ಸಾಹೇಬರನ್ನು ತಮ್ಮ ಗ್ರಾಮಕ್ಕೆ ಬರಮಾಡಿಕೊಂಡು ಅಡ್ರೆಸ್ ಒಪ್ಪಿಸಬೇಕೆಂದು ಚಪ್ಪರ ಮುಂತಾದ ಏರ್ಪಾಡುಮಾಡಿರುವುದು ಬಹಳ ತೃಪ್ತಿಕರವಾಗಿದೆ ದಿವಾನ್ ಸಾಹೇಬರ ರಿಸೆಪ್‌ಷನ್‌ಗೆ ಪರಸ್ಥಳದ ಮತ್ತು ಸ್ಥಳೀಯ ದೊಡ್ಡಮನುಷ್ಯರು ಹಗಲು ರಾತ್ರಿ ಕೆಲಸಮಾಡುತ್ತಿರುವುದು ಬಹಳ ಸ್ತೋತ್ರಾರ್ಹವಾಗಿದೆ ತಾಲ್ಲೂಕು ಅಮಲ್ದಾರ್ರವರೂ, ಡೆಪ್ಯುಟಿ ಅಮಲ್ದಾರ್ರವರೂ ತಮ್ಮ ಸಿಬ್ಬಂದಿಗಳೊಡನೆ ಬಹಳ ಮೆಹನತ್ತಿನಿಂದ ಶ್ರೀಮನ್ ದಿವಾನ್‌ರವರ ಭೇಟಿಯು ಜಯಪ್ರದವಾಗುವಂತೆ ಯಾರಿಗೂ ತೊಂದರೆ ಇಲ್ಲದಂತೆ ಬಹಳ ಮೆಹನತ್ತು ಮಾಡುತ್ತಿರುವುದಕ್ಕೆ ತಾಲ್ಲೂಕಿನ ಪ್ರಜೆಗಳೆಲ್ಲರೂ ಇವರುಗಳಿಗೆ ಕೃತಜ್ಞರಾಗಿರಬೇಕಾಗಿದೆ ಡಿಸ್ಟ್ರಿಕ್ಟ್ ಆಫೀಸರುಗಳು ಅನೇಕರು ಬರುತ್ತಾರೆ, ಇತರರು ಬರುವವರಲ್ಲಿದಾರೆ

ಪ್ರತ್ಯಕ್ಷದರ್ಶಿ.

ತಾಲ್ಲೂಕು ವರ್ತಮಾನಗಳು.

ತುಮಕೂರು ತಾ|| ಗೂಳೂರು — ಈ ಪ್ರಾಂತ್ಯ ಸಕಾಲದಲ್ಲಿ ಮಳೆ ಬಾರದೆ ರಾಗಿ ಬೆಳೆ ಶಾಲುಭಾಗಕ್ಕಿಂತಲೂ ಕಮ್ಮಿಯಾಗಿದೆ. ಮತ್ತು 3-4 ದಿವಸಗಳಿಂದ ಕೆರೆಯಲ್ಲಿ ಸುತರಾಂ ನೀರು ಇಲ್ಲದೆ ಗದ್ದೆಗಳೆಲ್ಲಾ ಒಣಗುತ್ತಿವೆ ಧಾರಣೆವಾಸಿಗಳು ಕ್ಷಾಮಕಾಲವನ್ನು ಸೂಚಿಸುತ್ತಲಿವೆ. ದಯಾಳುಗಳಾದ ನಮ್ಮ ಸರ್ಕಾರದವರು ಈ ಊರಿಗೆ ಯೂನಿಯನ್ ಆಗಬೇಕೆಂತ ಅಪ್ಪಣೆಕೊಡಿಸಿರುವುದು ಪ್ರಜೆಗಳಿಗೆ ತುಂಬಾ ಉಪಯೋಗವಾಗಿದೆ — ಈ ಪ್ರಾಂತ್ಯ ಕಳ್ಳಕಾಕರ ಕಾಟವು ವಿಶೇಷವಾಗಿರುವುದರಿಂದ ಒಂದು ಪೊಲೀಸ್ ಸ್ಟೇಷನ್ ಕಲ್ಪಿಸಿಕೊಟ್ಟರೆ ತುಂಬಾ ಅನುಕೂಲ ನೀರಗೊಣ್ಣರ ಗೋಕಾಯಿಗಳು ಪಡುತ್ತಿರುವ ತೊಂದರೆಯನ್ನು ತಿಳಿಸಲು ತುಂಬಾ ವ್ಯಥೆಯಾಗಿದೆ — ಈಗ್ಗೆ 4 5 ದಿನಗಳ ಹಿಂದೆ ರಸ್ತೆ ಪಕ್ಕದ ಒಂದು ಭಾವಿಯಲ್ಲಿ ವೇ|| ಪೇಟೆ ಕೃಷ್ಣಶಾಸ್ತ್ರಿಗಳೆಂಬುವರು ಬಟ್ಟೆ ಒಗೆಯುತ್ತಿರುವಾಗ ಇದ್ದಕ್ಕಿದ್ದ ಹಾಗೇ ಭಾವಿಯ ಗೋಡೆ ಕಲ್ಲುಗಳು ಬಿದ್ದು, ಇಂಥಾ ಘೋರವಾದ ಮರಣಕ್ಕೆ ಸಿಕ್ಕಿಯೂ ಜೀವಿತರಾಗಿ ಬಂದದ್ದು ತುಂಬಾ ಆಶ್ಚರ್ಯವಾಗಿದೆ — ಇಲ್ಲಿಗೆ ಸುಮಾರು ಅರ್ಧ ಫರ್ಲಾಂಗಿನಲ್ಲಿ ಒಂದು ಬೇವಿನ ಮರದಲ್ಲಿ ಒಂದು ವಿಧವಾದ ದ್ರವವು ಸುರಿಯುತ್ತಿದೆ. ಅನೇಕ ಪ್ರಜೆಗಳು ಅಲ್ಲಿ ನಡಿಸುತ್ತಿರುವ ಪೂಜೆಪುನಸ್ಕಾರಗಳು ಆಶ್ಚರ್ಯವನ್ನುಂಟುಮಾಡುತ್ತಲಿವೆ.—ಇಲ್ಲಿ ಪಟೇಲರಾಗಿದ್ದ ಮ|| ಘನಗಿರಿಗೌಡರು ಪಾರ್ಶ್ವವಾಯುವಿನಿಂದ ಕಾಲವಾದದ್ದು ತುಂಬಾ ಸಂತಾಪವಾಗಿದೆ. ನಮ್ಮ ಪೋಸ್ಟ್ ಮಾಸ್ಟರ್ ಮ|| ವೆಂಕಟರಾಮಯ್ಯನವರು ಬಹು ತೃಪ್ತಿಕರವಾಗಿ ಕೆಲಸಮಾಡುತ್ತಾರಲ್ಲದೆ, ಇವರಿಗೆ ಅನ್ನದಾತರು ಎಂಬ ಹೆಸರು ಬಂದಿದೆ

ಹಾಸನ — ಸದ್ಯ ಅಲ್ಲಲ್ಲಿ ಸಿಡುಬು, ದಡಾರ ವ್ಯಾಪ್ತವಾಗಿದೆ ಮ್ಯುನಿಸಿಪಲ್ ಸರಹದ್ದಿನಲ್ಲಿ ಅನೇಕ ಸ್ಥಳಗಳು ಬಹು ಅಶುಚಿಯಾಗಿವೆ, ಅಧಿಕಾರಿಗಳು ಮುಖ್ಯವಾಗಿ ಆ ಸ್ಥಳಗಳನ್ನು ಗಮನಿಸಬೇಕು ಸಿವಿಲ್ ಆಸ್ಪತ್ರೆಯ ಆವರಣದಲ್ಲಿ ಆಪರೇಷನ್‌ಗಾಗಿಯೂ, ರೋಗಿಗಳಿಗಾಗಿಯೂ ಕಟ್ಟಡಗಳು ತಯಾರಾಗುತ್ತಲಿವೆ. ಈ ಆಸ್ಪತ್ರೆಯ ಎದುರುಭಾಗದಲ್ಲಿರುವ ಕೊಳಚೇನೀರಿನ ಹೊಂಡವನ್ನು ಶುಚಿ ಮಾಡಿಸಿ ಕಲ್ಲು ಕಟ್ಟಿಸಿ, ಅದರ ಸುತ್ತಲಿನ ಆವರಣವನ್ನು ಪಾರ್ಕಿನ ರೂಪಕ್ಕೆ ತಂದರೆ ಎಷ್ಟೋ ರಮ್ಯವೂ, ಆರೋಗ್ಯವೂ ಆಗಿದ್ದೀತು ಧಾರಣೆವಾಸಿಯಾದರೋ ಈ ಸುಗ್ಗೀಕಾಲದಲ್ಲೂ ಕ್ಷಾಮಕಾಲದಂತೆಯೇ ಇದೆ.— ಇಲ್ಲಿನ ವಾಣೀವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ಮೊನ್ನೆ ರಾತ್ರಿ ಅಲ್ಲಿನ ವಿದ್ಯಾರ್ಥಿನಿಯರು ಸಾವಿತ್ರೀ ಚರಿತ್ರೆಯನ್ನು ಅಭಿನಯಿಸಿ ಸಂಭಾಷಣೆ ನಡಿಸಿದರು. ಸರ್ಕಲ್ ಇನ್‌ಸ್ಪೆಕ್ಟರ್ ಮ|| ಎಂ ಶ್ರೀನಿವಾಸರಾಯರೂ, ಇತರ ಅಧಿಕಾರಿಗಳೂ, ದೊಡ್ಡಮನುಷ್ಯರೂ ದಯಮಾಡಿಸಿದ್ದರು ಸರ್ಕಲ್ ಇನ್‌ಸ್ಪೆಕ್ಟರವರು ಸಾವಿತ್ರೀ ಪಾತ್ರವನ್ನು ನಡಿಸಿದ ಸೌ|| ರಾಜಮ್ಮನೆಂಬ ಬಾಲಕಿಗೆ ಗಡಿಯಾರದ ಬೆಳ್ಳೀ ಸರಪಣಿಯನ್ನು ಚಿಕ್ಕ ಕೃಷ್ಣವಿಗ್ರಹ ಸಹಿತವಾಗಿ ಬಹುಮಾನ ಕೊಟ್ಟರು ಇವರೂ ಇತರರೂ ಸೇರಿ ಆ ಬಾಲಕಿಯರ ಸಮುದಾಯಕ್ಕೆ 20 ರೂಪಾಯಿ ಪಾರಿತೋಷಕಮಾಡಿದರು — ಇಲ್ಲಿ ಮೈಸೂರು—ಅರಸೀಕೆರೆ ರೈಲ್ವೆ ಲೈನ್ ಕಾಮಗಾರಿಯು ಸದ್ಯದಲ್ಲಿಯೇ ಪ್ರಾರಂಭವಾಗುವುದರಲ್ಲಿದೆ ರೈಲ್ವೆ ಎಗ್ಸಿಕ್ಯುಟಿವ್ ಇಂಜನಿಯರವರೂ ಅವರ ಸಿಬ್ಬಂದಿಯವರೂ ಬಂದು ಇದಾರೆ. ಮೈಲುಗಳು ವಿಂಗಡವಾಗಿ ಅಪೇಕ್ಷಿಸುವವರಿಗೆ ಕಂಟ್ರಾಕ್ಟ್ ಕೊಡಲ್ಪಡುತ್ತಿವೆ ಸರ್ಕಾರದವರು ಚುನಾಯಿಸಿರುವ ಚೋರಗೌಡನ ತೋಪಿನ ಮೈದಾನ ಪ್ರದೇಶವೇ ಸ್ಟೇಷನ್ ಕಟ್ಟಲಿಕ್ಕೆ ಅನುಕೂಲವೂ ಅಲಂಕಾರವೂ ಆಗಿದೆ — ಆಚೇ ವಾರ ಇಲ್ಲಿನ ಸೆಷನ್ಸ್ ವಿಚಾರಣೆಗಳು ಮುಕ್ತಾಯವಾದವು ಒಂದು ಮೊಕದ್ದಮೆಯನ್ನು ರುಜುವಾತು ಸಾಲದೆ ಬಿಟ್ಟು ಬಿಟ್ಟರು ಇನ್ನೊಂದು ಕೊಲೆ ಮೊಕದ್ದಮೆಯಲ್ಲಿ ರಂಗನೆಂಬ ಅಪರಾಧಿ ಜೀವಾವಧಿ ಸಜಾ ವಿಧಿಸಲ್ಪಟ್ಟು ಇತರರು ಬಿಡುಗಡೆ ಹೊಂದಿದರು

ತುಮಕೂರು — ಕಳೆದ ಶುಕ್ರವಾರ ಶ್ರೀಮನ್ ದಿವಾನ್ ಸಾಹೇಬರವರು ಈ ಊರಿನ ಮಾರ್ಗವಾಗಿ ಶಿಬಿಜಾತ್ರೆಗೆ ದಯಮಾಡಿಸಿ ಪುನಃ ಅದೇ ದಿನ ಮಧ್ಯಾಹ್ನ ಇಲ್ಲಿಗೆ ಬಂದು ದರ್ಬಾರುಮಾಡಿದರು. ಆಗ ಈ ಊರು ಪ್ರಜೆಗಳೂ, ತಿಪ್ಟೂರು ಪ್ರಜೆಗಳೂ, ಇತರೇ ಗ್ರಾಮಗಳ ಪ್ರಜೆಗಳೂ ತಮ್ಮಗಳ ಕೊರತೆಗಳನ್ನು ವಿಜ್ಞಾಪಿಸಿಕೊಂಡರು ತುಮಕೂರು ಗ್ರಾಮಕ್ಕೆ ನಲ್ಲಿಗಳ ಮೂಲಕ ನೀರು ಒದಗಿಸಿ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ ಇಲ್ಲಿನ ಆನರರಿ ವೈಸ್ ಪ್ರೆಸಿಡೆಂಟರಾದ ಮ|| ಶೇಷಾದ್ರಿ ಅಯ್ಯಂಗಾರ್ರವರ ಅಂದಾಜಾ ಮೇರೆಗೆ ಮೈದಾಳದ ಕೆರೆಯ ನೀರನ್ನು ನಲ್ಲಿಗಳ ಮೂಲಕ ಈ ಟವನಿಗೂ, ನಿರವರದ ಕೆರೆಯಿಂದ ತಿಪ್ಟೂರು ಟವನಿಗೂ ನೀರನ್ನು ಒದಗಿಸುವುದಾಗಿ ಅಪ್ಪಣೆ ದಯಪಾಲಿಸಿದರು ಈ ತಾಲ್ಲೂಕಿಗೆ ಸೇರಿದ ಮರಳೂರು ಕೆರೆಗೆ ನೀರು ಬರುವ ಮಾರ್ಗವನ್ನು 2-3 ಕಡೆ ಬಂಧಿಸಿದಾರೆಂದೂ, ಗೂಳೂರು ಅಚ್ಚುಕಟ್ಟಿಗೆ ಸೇರಿದ ಜಮೀನುಗಳಿಗೆ ಈ ಕೆರೆಯಿಂದ ನೀರನ್ನು ಬಲಾತ್ಕರಿಸಿ ಉಪಯೋಗಿಸಿಕೊಳ್ಳುತ್ತಿದಾರೆಂದೂ, ಒಂದು ಕೋಡಿಯನ್ನು ಪೂರ್ವದಲ್ಲಿದ್ದದ್ದಕ್ಕಿಂತಲೂ ಬಹಳ ಮಟ್ಟಿಗೆ ತಗ್ಗಿಸಿದಾರೆಂದೂ, ಈ ಕಾರಣಗಳಿಂದ ಮೇಲ್ಕಂಡ ಕೆರೆಗೆ ನೀರು ಬರುವದೇ ದುರ್ಲಭವಾಗಿ ಒಂದು ವೇಳೆ ಬಂದರೂ ಕೆರೆಯಲ್ಲಿ ನೀರು ನಿಲ್ಲುವದಕ್ಕೆ ಅವಕಾಶವಿಲ್ಲವೆಂದೂ, ಈ ವರ್ಷ ಕೆರೆಯು ತುಂಬಿ ಒಂದು ತಿಂಗಳುಕಾಲ ಕೋಡಿ ಹರಿದಾಗ್ಯೂ ಇಟ್ಟಿರುವ ಫಸಲೆಲ್ಲಾ ಮೇಲ್ಕಂಡ ಕಾರಣಗಳಿಂದ ಹೊಡೆಹೊರಡದೆ ಒಣಗಿರುವದೇ ತಕ್ಕ ದೃಷ್ಟಾಂತವೆಂದೂ, ಅನ್ಯಾಯವಾಗಿ ಭಾರಿಕಂದಾಯವನ್ನು ತೆತ್ತು ತಾವುಗಳು ಕೆಟ್ಟುಹೋಗುತ್ತಾ ಕಷ್ಟನಷ್ಟಗಳಿಗೆ ಗುರಿಯಾಗಿವೆಯೆಂದೂ ಬಹು ದೈನ್ಯದಿಂದ ಜಮೀನ್ದಾರರೂ ಸಾಗುವಳಿದಾರರೂ ಮೊರೆಯಿಟ್ಟರು. ಇದನ್ನು ದಯಾಶಾಲಿಗಳಾದ ದಿವಾನ್‌ರವರು ಕೇಳಿ, ಕನಿಕರದಿಂದ ಈ ರೈತ ಪ್ರಜೆಗಳು ಕೇಳುವ ಮೂರು ಸಂಗತಿಗಳೂ ಬಹು ಮುಖ್ಯವಾದವುಗಳೆಂದೂ, ಇವುಗಳನ್ನು ಕ್ಷಿಪ್ರದಲ್ಲಿ ಇತ್ಯರ್ಥ ಪಡಿಸಬೇಕೆಂದೂ ನಮ್ಮ ಡೆಪ್ಯುಟಿ ಕಮಿಷನ್‌ರವರಿಗೆ ಅಪ್ಪಣೆ ಮಾಡಿದರು — ಈ ಊರಲ್ಲಿ ಹೊಸದಾಗಿ ಸ್ಥಾಪಿಸಬೇಕೆಂದಿರುವ ಇಂಡಸ್ಟ್ರಿಯಲ್ ಸ್ಕೂಲಿಗೆ ದಿವಾನ್‌ರು ದಯಮಾಡಿಸಿ ಪರಾಮರಿಸಿದರು ಆದರೆ ಬಹುಕಾಲದಿಂದ ಬಹಳ ಮುತುವರ್ಜಿಯಿಂದಲೂ, ಅನೇಕ ಯಂತ್ರಸಾಮಗ್ರಿಗಳ ಸಹಾಯದಿಂದಲೂ ಕ್ರಮವಾಗಿ ನಡಿಸುತ್ತಾ ಬಂದಿರುವ ಗೌರ್ನಮೆಂಟಿನಿಂದ ಗ್ರಾಂಟನ್ನು ಹೊಂದಿ ಮಿಷನ್ ಇಲಾಖೆಯವರಿಂದ ನಡಿಸಲ್ಪಡುವ ಸ್ಕೂಲಿಗೆ ವಿರೋಧವಾಗಿ ಬೇರೊಂದು ಸ್ಕೂಲನ್ನು ಏರ್ಪಡಿಸಬೇಕೆಂಬುವದು ನಮ್ಮ ದಿವಾನ್ ಬಹದ್ದೂರವರ ಅಭಿಮತವಲ್ಲ.— ಈ ಊರು ಮುನ್‌ಸಿಫ್ ಕೋರ್ಟಿನಲ್ಲಿ ಈಗ ಅಸಲು, ಸ್ಮಾಲ್‌ಕಾಸ್, ಮಿಸ್ಲೇನಿಯಸ್ ಮತ್ತು ಅಮಲಾರಿ ನಡೆಸದ ಮೊಗಳು ಸೇರಿ ಎರಡು ಸಾವಿರಕ್ಕಿಂತ ಜಾಸ್ತಿಯಾಗಿರುತ್ತವೆ ಇವು ಸಕಾಲದಲ್ಲಿ ತೀರ್ಮಾನವಾಗಲು ಒಬ್ಬ ಮುನ್‌ಸಿಫರಿಂದ ಸಾಧ್ಯವಿಲ್ಲದ ಕಾರಣ ಮತ್ತೊಂದು ಅಡಿಷನಲ್ ಕೋರ್ಟನ್ನು ಮಾಡಿಸಿಕೊಡಬೇಕೆಂದು ಪ್ರಜೆಗಳು ಚೀಫ್ ಕೋರ್ಟಿಗೆ ಅರ್ಜಿ ಜಾಹಿರ್ ಮಾಡುವ ತಯಾರಿನಲ್ಲಿದಾರೆ ಮತ್ತು ಮೊಕದ್ದಮೆಗಳು 3 4 ವರ್ಷಗಳಾದಾಗ್ಯೂ ತೀರ್ಮಾನವಾಗದೆ, ಕಕ್ಷಿಗಾರರೂ ಸಾಕ್ಷಿಗಾರರೂ ಆಗಾಗ್ಗೆ ಮರಣ ಹೊಂದುತ್ತಾ ಬರುತ್ತಿರುವದರಿಂದ ನ್ಯಾಯವು ಸರಿಯಾದ ರೀತಿಯಲ್ಲಿ ತೀರ್ಮಾನವಾಗಲು ಅವಕಾಶವೇ ಇರುವುದಿಲ್ಲ. ಅಲ್ಲದೆ ಛತ್ರಗಳನ್ನು ಕಟ್ಟಿಕಟ್ಟಿ ಕಕ್ಷಿಗಾರರು ಬೇಸರುತ್ತಾ ಬರುವುದೂ, ದೂರ ಪ್ರದೇಶಗಳಿಂದ ಬಂದು ಅನ್ನಪಾನಾದಿಗಳಿಲ್ಲದೆ ಸಾಕ್ಷಿಗಾರರು ವ್ಯಥೆಪಡುತ್ತಿರುವುದೂ ತುಂಬಾ ಮರುಕರವಾಗಿದೆ ಈ ವಿಷಯವನ್ನು ಅನೇಕ ವೇಳೆ ಪ್ರಕಟಿಸುತ್ತಾ ಬಂದದ್ದಾಗಿದೆ ಘನತೆಯಿಂದಿದ ಚೀಫ್ ಕೋರ್ಟಿನವರು ಗಮನಕೊಡಬೇಕಾಗಿ ಪ್ರಾರ್ಥಿಸುತ್ತೇನೆ— ಈ ಊರಿನ ಅನೇಕ ಭಾಗಗಳಲ್ಲಿ ಜನರು ಪಬ್ಲಿಕ್ ರಸ್ತೆಗಳಲ್ಲಿ ಧಾನ್ಯಗಳನ್ನು ಒಣಗಲು ಹಾಕುತ್ತಿರುವುದರಿಂದ ಗಾಡಿಗಳಿಗೂ ಜನಸಮೂಹಗಳಿಗೂ ತುಂಬಾ ತೊಂದರೆಯಾಗಿದೆ ಇದಕ್ಕೆ ಸರ್ಕಾರದವರು ಗಮನಕೊಡಬೇಕಾದದ್ದು ಅವಶ್ಯಕ

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಫೆಬ್ರವರಿ 5 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣಿ.—(1) ಷೇರು ಮೊಬಲಗು	... ..	ರೂ. 6,79,750
,, (2) ಡಿಪಾಜಟ್ಟುಗಳು	... ...	,, 5,20,927
,, (3) ಇತರೆ	... ...	,, 4,356
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ	12,05,033

ದೇಣಿ:— (1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ ರೂ		1,70,113
,, (2) ಖಾತೆ ಮತ್ತು ಇತರ ಸಾಲಗಳು	... ,,	6,90,304
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,29,660
,, (4) ಇನ್ವೆಸ್ಟ್‌ಮೆಂಟುಗಳು	... ,,	1,60,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	... ,,	47,981
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	... ,,	6,791
,, (7) ಇತರೆ	... .. ,,	10,134
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	12,05,033

ಡಬ್ಲಿಯು ಸಿ. ರೋಜ್, ಮ್ಯಾನೇಜರ್.

ಚನ್ನಪಟ್ಟಣದ ಹೈ ಸ್ಕೂಲು.

ಪಾಠಪ್ರವಚನಗಳು ಬಹು ಚೆನ್ನಾಗಿ ನಡೆಯುತ್ತಿವೆ ಉಪಾಧ್ಯಾಯರೆಲ್ಲಾ ಬಹಳ ಉತ್ಸಾಹದಿಂದ ತಂತಮ್ಮ ಕೆಲಸಗಳನ್ನು ಮಾಡುತ್ತಲಿದಾರೆ. ಸಹಾಯೋಪಾಧ್ಯಾಯರಲ್ಲಿ ಅನೇಕರು ಎ. ವಿ. ಸ್ಕೂಲುಗಳಲ್ಲಿ ಹೆಡ್ ಮಾಸ್ಟರಾಗಿದ್ದು ಸ್ವತಂತ್ರರಾಗಿ ಕೆಲಸಮಾಡಿ ಒಳ್ಳೇ ಹೆಸರನ್ನು ಪಡೆದವರು ಪೆನ್ಷನ್‌ಗಾಗಿ ದಿನಗಳನ್ನೂ ತಿಂಗಳುಗಳನ್ನೂ ಎಣಿಸುತ್ತಿರುವ ಮುದಿಮೋಟುಗಳ್ಯಾರೂ ಇಲ್ಲ. ಹೆಡ್ ಮಾಸ್ಟರವರೂ ಈ ಸ್ಕೂಲನ್ನು ಹೇಗಾದರೂ ಮಾಡಿ ಅಭಿವೃದ್ಧಿಗೆ ತರಬೇಕೆಂದು ಬಹಳವಾಗಿ ಪ್ರಯತ್ನಮಾಡುತ್ತಿದಾರೆ

ಇವರು ಸ್ಕೂಲ್ ಛಾರ್ಜಿಗೆ ಬಂದ ಮೇಲೆ ಲೈಬ್ರೆರಿಯು ಕ್ರಮಪಟ್ಟಿತು. ಅನೇಕ ಪುಸ್ತಕಗಳೂ, ಮ್ಯಾಪುಗಳೂ, ಮರದ ಸಾಮಾನುಗಳೂ ಒದಗಿಸಲ್ಪಟ್ಟವು. ಬಹು ವರ್ಷಗಳಿಂದ ರಿಪೇರಿ ಇಲ್ಲದೆ ಹೊಲಸಾಗಿದ್ದ ಕಟ್ಟಡವು ರಿಪೇರಿಯಾಗಿ ಕೊಳೆಯೆಲ್ಲಾ ಹೋಗಿ ನಿರ್ಮಲವಾಗಿದೆ ಗುಬ್ಬಚ್ಚಿ ಪಕ್ಷಿಗಳ ಗದ್ದಲದಿಂದ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಉಂಟಾಗುತ್ತಲಿದ್ದ ಕಷ್ಟವನ್ನು ಹೇಳತೀರದ್ದಾಗಿತ್ತು ಅವು ಒಳಕ್ಕೆ ಬಾರದಂತೆ ತಕ್ಕ ಏರ್ಪಾಡು ಆಗುತ್ತಾ ಇದೆ ಸ್ಕೂಲ್ ಕಾಂಪೌಂಡೆಲ್ಲಾ ಹುತ್ತಗಳಿಂದ ತುಂಬಿ, ಘಟಸರ್ಪಗಳಿಗೆ ಬಿಡಾರವಾಗಿತ್ತು ಒಂದು ದಿನ ಪಾಠಗಳು ನಡೆಯುತ್ತಿರುವಾಗಲೇ ಒಂದು ನಾಗರಹಾವು ಒಳಕ್ಕೆ ನುಗ್ಗುವುದರಲ್ಲಿತ್ತು. ಜವಾನರೂ ಕೂಡ ಹಿಂಜರಿದು ನೋಡುತ್ತಿರಲಾಗಿ ಹದಿನಾರು ವರುಷದ ವಿದ್ಯಾರ್ಥಿಯೊಬ್ಬನು ಧೈರ್ಯದಿಂದ ಅದನ್ನು ಕೊಂದು ಹಾಕಿದನು. ಇಂಥ ಹುತ್ತಗಳೆಲ್ಲ ಈಗ ಮುಚ್ಚಲ್ಪಟ್ಟಿವೆ. ಕಟ್ಟಡವು ಸಾಲದೆ ತೊಂದರೆಯಾಗಿದೆ. ಅದೂ ಕೆಲವು ಕಾಲದ ಮೇಲೆ ತಪ್ಪದೆ ಇರಲಾರದು. ಆಟದ ಬಯಲು ತಕ್ಕಷ್ಟು ಇರಲಿಲ್ಲ. ಪಕ್ಕದಲ್ಲಿದ್ದ ಸುಮಾರು ನಾಲ್ಕುವರೆ ಎಕರೆಯಷ್ಟು ಭೂಮಿಯು ಈಚೆಗೆ ತೆಗೆದುಕೊಳ್ಳಲ್ಪಟ್ಟಿದೆ ವಿದ್ಯಾರ್ಥಿಗಳು ಒಂದು ಹೊತ್ತು ತಪ್ಪಿಸಿಕೊಳ್ಳದೆ ಕ್ರಮವಾಗಿ ಸ್ಕೂಲಿಗೆ ಬರುತ್ತಾರೆ ಸಾಯಂಕಾಲ 5 ಗಂಟೆಯಾದೊಡನೆಯೇ ಪ್ರತಿಯೊಬ್ಬ ವಿದ್ಯಾರ್ಥಿಯೂ ತಕ್ಕ ವ್ಯಾಯಾಮವನ್ನು ತೆಗೆದುಕೊಳ್ಳಲೇ ಬೇಕಾಗಿದೆ ಇಂಗ್ಲಿಷ್ ಭಾಷೆಯಲ್ಲಿ ಬಳಕೆಯೂ, ವಿಷಯ ಜ್ಞಾನವೂ ಉಂಟಾಗುವುದಕ್ಕೋಸ್ಕರ "ಡಿಬೇಟಿಂಗ್ ಸೊಸೈಟಿ" ಏರ್ಪಾಡಾಯಿತು ಇದೂ ಅಲ್ಲದೆ ಬೋಧನೆಯ ಕ್ರಮದಲ್ಲಿ ಈಗಿನ ಕಾಲಕ್ಕೆ ತಕ್ಕಂತೆ ನವೀನ ಪದ್ಧತಿಗಳನ್ನು ಚರ್ಚಿಸಿ ಆಚರಣೆಗೆ ತರುವ ಉದ್ದೇಶದಿಂದ "ಟೀಚರ್ಸ್ ಅಸೋಸಿಯೇಷನ್" ಎಂಬ ಉಪಾಧ್ಯಾಯರ ಸಂಘವೊಂದೂ ಏರ್ಪಟ್ಟಿದೆ

ಮೇಲ್ಕಂಡ ಸಕಲ ವಿಧದ ಸಹಾಯಸಂಪತ್ತುಗಳಿದ್ದರೂ ಸ್ಕೂಲಿನ ಹೈ ಸ್ಕೂಲ್ ಕ್ಲಾಸುಗಳಲ್ಲಿ ತಕ್ಕಷ್ಟು ಜನ ವಿದ್ಯಾರ್ಥಿಗಳಿಲ್ಲದಿರುವುದೊಂದೇ ದೊಡ್ಡ ಕೊರತೆಯಾಗಿದೆ ಇದಕ್ಕೆ ಉಪಾಧ್ಯಾಯರೇನು ಮಾಡ್ಯಾರು? ಸ್ವಾಭಾವಿಕವಾಗಿ ಈ ಊರಲ್ಲಿ ಹೈ ಸ್ಕೂಲ್ ತರಗತಿಗಳಲ್ಲಿ ಓದುವ ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆಯೇ ಕಡಮೆ ಇತರ ವರ್ಗದವರಲ್ಲಿ ಅಲ್ಲಿನ ವರೆಗೂ ಹತ್ತಿಬರುವವರು ವಿರಳ ಪರಸ್ಥಳದ ವಿದ್ಯಾರ್ಥಿಗಳಿಗೆ ತಕ್ಕ ಆನುಕೂಲ್ಯಗಳಿರಲಿಲ್ಲ. ಈ ನ್ಯೂನತೆಯನ್ನು ಪರಿಹರಿಸುವುದಕ್ಕೆ "ಸ್ಟೂಡೆಂಟ್ಸ್ ಹೋಂ" ಒಂದನ್ನು ಸ್ಥಾಪಿಸುವುದು ಅತ್ಯಾವಶ್ಯಕವಾಗಿತ್ತು ಅದಕ್ಕೋಸ್ಕರ ಕಳೆದ ವರ್ಷ ಈ ಊರಿನ ವಿದ್ಯಾಭಿಮಾನಿಗಳಾದ ಮುಖಂಡರೆಲ್ಲಾ ಸೇರಿ ಒಂದು ಮೀಟಿಂಗ್ ಮಾಡಿದಾಗ ಉದಾರಿಗಳಾದ ಮ|| ರೆಡ್ಡಿ ರಾಮಸಂಜೀವಯ್ಯನವರು ಸ್ಟೂಡೆಂಟ್ಸ್ ಹೋಮಿನ ಕಟ್ಟಡಕ್ಕೋಸ್ಕರ ಎರಡು ಸಾವಿರ ರೂಪಾಯಿ ಕೊಡುವುದಾಗಿ ವಾಗ್ದಾನಮಾಡಿದರು ಸಾಹುಕಾರ್ ಹ|| ಹೈದರ್ ಸಾಹೇಬರು ಇನ್ನೂರು ರೂಪಾಯಿ, ಮ|| ಯಜಮಾನ್ ನರಸಿಂಹಯ್ಯನವರು ಐವತ್ತು ರೂಪಾಯಿ ಆ ಕ್ಷಣವೇ ಕೊಟ್ಟುಬಿಟ್ಟರಲ್ಲದೆ, ಮ|| ಗಳಾದ ಬಸವರಾಜಯ್ಯನವರು, ಪ್ಲೀಡರ್ ನಂಜುಂಡಯ್ಯನವರು, ಗಂಡಾಚಾರ್ಯರು, ಹ|| ಅಬ್ದುಲ್ ಖುದೂಸ್ ಸಾಹೇಬರು, ಹ|| ಬಾವಾ ಸಾಹೇಬ್ ಮಿರ್ಜಾರವರೇ ಮೊದಲಾದ ಅನೇಕ ಉದಾರಿಗಳು ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನಮಾಡಿದರು. ಅಷ್ಟೇ ಅಲ್ಲ "ಪೂಅರ್ ಫಂಡ್" ಎಂಬುದಕ್ಕೆ ಅನೇಕರು ಪ್ರತಿ ತಿಂಗಳಲ್ಲೂ ಯಥಾಶಕ್ತಿ ಸಹಾಯಮಾಡುತ್ತಾ ಇದಾರೆ ಇವುಗಳ ಒತ್ತಾಸೆಯಿಂದ ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ಸ್ಟೂಡೆಂಟ್ಸ್ ಹೋಂ ಸ್ಥಾಪಿಸಲ್ಪಟ್ಟು, ಈಗಲೂ ನಡೆದು ಬರುತ್ತಿದೆ ತಿಂಗಳೊಂದಕ್ಕೆ ಏಳು ರೂಪಾಯಿ ಕೊಟ್ಟರೆ ವಿದ್ಯಾರ್ಥಿಗಳಿಗೆ ಭೋಜನ ಸ್ಥಳವಸತಿಗಳು ದೊರೆಯುವವು ಇದು ಪ್ರಾರಂಭವಾದಾಗ ಸಾಕ್ಷ್ಯ ಮೂರು ಮಂದಿ ಮಾತ್ರ ವಿದ್ಯಾರ್ಥಿಗಳಿದ್ದರು ಈಗ ಹನ್ನೆರಡು ಜನರಿದಾರೆ ಆದರೂ ಅದಕ್ಕೂ ತಕ್ಕ ಸಹಾಯವಿಲ್ಲ ಸರ್ಕಾರದವರು ಇನ್ನೂ ಗ್ರ್ಯಾಂಟ್ ಕೊಟ್ಟಿಲ್ಲ ಕೊಡುವ ತನಕ ಊರಿನ ಮಹನೀಯರು ದೃಢಮನಸ್ಸುಳ್ಳವರಾಗಿ ಸಹಾಯಮಾಡಿ, ಪರಸ್ಥಳದ ಹುಡುಗರಿಗೆ ಅನುಕೂಲಪಡಿಸಿ ಕೀರ್ತಿ ಸಂಪಾದಿಸಬೇಕಾಗಿದೆ ಹೈ ಸ್ಕೂಲನ್ನು ಸಂಪಾದಿಸುವುದು ಕಷ್ಟ, ಕಳೆದು ಕೊಳ್ಳುವುದು ಸುಲಭ ತಕ್ಕಷ್ಟು ಮಂದಿ ಹುಡುಗರಿಲ್ಲದಿದ್ದರೆ ಸರ್ಕಾರದವರು ತಾನೇ ಏನುಮಾಡಲಾಪರು? ಅವರು ಉದಾರ ಬುದ್ಧಿಯಿಂದ ಕೊಟ್ಟಿರುವ ಹೈ ಸ್ಕೂಲನ್ನು ಊರಿನವರು ಉಪಯೋಗಿಸಿಕೊಳ್ಳಲು ಪ್ರಯತ್ನಪಡಬೇಕು ಸರ್ಕಾರದವರೂ ಸಹಾಯಮಾಡಬೇಕು. ಜನಗಳ ಪ್ರಯತ್ನಕ್ಕೆ ಸರ್ಕಾರವು ಸಹಾಯಮಾಡದವೆ ಹೋಗುವುದಿಲ್ಲ

ಆದುದರಿಂದ ಮೇಲ್ಕಂಡ ಮಹನೀಯರೂ, ಇತರ ವಿದ್ಯಾಭಿಮಾನಿಗಳೂ ಈ ಸಮಯವನ್ನು ಕಳೆದುಕೊಳ್ಳದೆ ಮುಂದಕ್ಕೆ ಬಂದು ತಂತಮ್ಮಲ್ಲೇ ಒಂದು ಕಮಿಟಿಯನ್ನು ಏರ್ಪಡಿಸಿಕೊಂಡು ತಕ್ಕಷ್ಟು ದ್ರವ್ಯವನ್ನು ಪ್ರತಿ ತಿಂಗಳಲ್ಲೂ ಶೇಖರಿಸಿ ಪರಸ್ಥಳದ ಹುಡುಗರಿಗೆ ಸಹಾಯಮಾಡಬೇಕೆಂದೂ, ಮ|| ರೆಡ್ಡಿ ರಾಮಸಂಜೀವಯ್ಯನವರು ತಮ್ಮ ವಾಗ್ದಾನದಂತೆ ಸ್ಟೂಡೆಂಟ್ಸ್ ಹೋಮನ್ನು ಕಟ್ಟಿಸಿಕೊಡುವ ವಿಷಯದಲ್ಲಿ ಹಿಮ್ಮೆಟ್ಟಲಾಗದೆಂದೂ, ಸರ್ಕಾರದವರೂ ಅವರಿಗೆ ತಕ್ಕ ಆನುಕೂಲ್ಯಗಳನ್ನು ಒದಗಿಸಿಕೊಡುವುದಲ್ಲದೆ ಹೋಮಿನವೆಚ್ಚಕ್ಕೆ ತಕ್ಕಷ್ಟು ಗ್ರ್ಯಾಂಟ್ ಎಂಬ ಸಹಾಯದ್ರವ್ಯವನ್ನು ದಯವಿಟ್ಟು ಕೊಡಿಸಬೇಕೆಂದೂ ಹಲವರು ಪ್ರಾರ್ಥಿಸುತ್ತಾರೆ

ಯಥಾರ್ಥವಾದಿ.

ಮಕ್ಕಳ ವಿಷಯದಲ್ಲಿ ಹೆತ್ತವರ ಕರ್ತವ್ಯ.

ತೋಟದಲ್ಲಿ ಎಳೆಯ ಮರಗಳಿಗೆ ನೀರೆರೆದು ಕಾಪಾಡುವದಕ್ಕೆ ತೋಟಗಾರರನ್ನು ನೇಮಿಸಿಕೊಳ್ಳುವಂತೆ ಮಕ್ಕಳನ್ನು ಸಾಕಿ ಅವರಿಗೆ ಸುಗುಣಗಳನ್ನು ಹೇಳಿ ಕೊಡುವದಕ್ಕೆ ತಂದೆತಾಯಿಗಳೇ ರಕ್ಷಕರು. ಹಿಂದೂಶಾಸ್ತ್ರಗಳು ಹೀಗೆ ಹೇಳುತ್ತವೆ—

ಲಾಲಯೇತ್ ಪಂಚ ವರ್ಷಾಣಿ ದಶವರ್ಷಾಣಿ ತಾಡಯೇತ್ ||
ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರೇ ಮಿತ್ರವದಾಚರೇತ್

ಮತ್ತು ಪ್ರಥಮಾರ್ಧ ಶ್ಲೋಕಕ್ಕೆ ಬದಲಾಗಿ—

ದೇವವತ್ ಪಂಚವರ್ಷಾಣಿ ದಶವರ್ಷಾಣಿ ದಾಸವತ್

ಎಂಬಲೂ ಉಂಟು ಐದು ವರ್ಷಗಳ ವರೆಗೂ ಮಕ್ಕಳಿಗೆ ಹೊತ್ತು ಹೊತ್ತಿಗೆ ಅನ್ನನೀರುಗಳನ್ನು ಕೊಟ್ಟು ಆಟಪಾಟಗಳಿಗೆ ಆಸ್ಪದವಿತ್ತು ಅಂಗಾಂಗಗಳು ಪುಷ್ಟಿಯನ್ನು ಹೊಂದುವಂತೆ ಮಾಡಬೇಕು ಇಷ್ಟು ಮಟ್ಟಿಗೆ ಸಾಕುವದು ಅಷ್ಟು ಕಷ್ಟ ಕೆಲಸವಲ್ಲ ಇದಕ್ಕೆ ನಿಬಂಧನೆಗಳೇನೂ ಬೇಕಾಗಲಾರದು ಆದರೆ ಆರನೆಯ ವರ್ಷ ಆರಂಭವಾದ ಬಳಿಕ ಮಕ್ಕಳನ್ನು ವೃದ್ಧಿಗೆ ತರುವದು ತುಂಬಾ ಕಷ್ಟದ ಕೆಲಸವಾಗಿದೆ ಆದದರಿಂದ ಹದಿನಾರು ವರ್ಷದ ವರೆಗಿನ ಹತ್ತು ವರ್ಷದಲ್ಲಿ ಜೀವಮಾನಾವಧಿ ಬಾಳಲಿಕ್ಕೆ ಅಸ್ತಿವಾರ ಹಾಕುವ ಸಮಯವಾಗಿದೆ ಐದು ವರ್ಷ ಮೊಳೆತ ಚಿಗುರು ಎಲೆ ನೀಳವಾದರೂ ಆಗಬಹುದು, ಅಥವಾ ಹುಳ ಹಿಡಿದು ಸುತ್ತಿಕೊಂಡು ಹರಗಾದರೂ ಆಗಿ ಹೋಗಬಹುದು "ಬಾಲಸ್ತಾವತ್ ಕ್ರೀಡಾಸಕ್ತ" ಎನ್ನುವಂತೆ ಬಾಲ್ಯದಲ್ಲಿ ಕ್ರೀಡಾಭಿರುಚಿಯೂ ಕಾರ್ಯದಲ್ಲಿ ವಿಮುಖತೆಯೂ ಸಾಧಾರಣ ನೂರಕ್ಕೆ 80 ಮಂದಿಯಲ್ಲಿರುವವು ಇದು ಬೇಲಿ ರದಂತೆ ತೋಟದಲ್ಲಿ ಒಳ್ಳೇ ಗಿಡಗಳ ಮಧ್ಯದಲ್ಲಿ ಬೆಳೆಯುವ ಕಳೆಯನ್ನು ಕಿತ್ತುವ ಹಾಗೆ ದಂಡಿಸಬೇಕು ವಿದ್ಯಾತುರರಿಗೆ ಆಹಾರ ನಿದ್ರೆ ಇವುಗಳಲ್ಲಿ ಸ್ವಲ್ಪ ಮಟ್ಟಿಗೆ ಕಡಮೆಯಾದರೂ ಬಾಧಕವಿಲ್ಲ. ಅಕ್ಕರೆಯಿಂದ ಸಲಹಿದ ಮಗನಿಗೆ ಹೆತ್ತ ತಂದೆಯೇ ದಂಡಿಸಿ ಪಾಠ ಹೇಳಿಕೊಟ್ಟು ಕಲಿಯಲಿಕ್ಕೆ ತಡಮಾಡಿದರೆ, ದಂಡಿಸಲಿಕ್ಕೆ ಪುತ್ರಸ್ನೇಹದಿಂದ ಹಿಂತೆಗೆದುಬಿಟ್ಟಾನೆಂದು ಗುರುಗೃಹವಾಸ ಮಾಡಬೇಕೆಂದು ಏರ್ಪಡಿಸಿದರು ಗುರುಗಳ ಮನೆಯಲ್ಲಿದ್ದರೆ "ಯಾವಾಗ ನನ್ನ ಓದು ಮುಗಿದು ನಾನು ಗುರುಗಳ ಅಪ್ಪಣೆ ಪಡೆದು ನನ್ನ ಮನೆಗೆ ಹಿಂತಿರುಗುವೆನು" ಎಂದು ವಿದ್ಯಾರ್ಥಿಯು ಯೋಚಿಸಿ ಪಾಠಗಳಿಗೆ ಮತ್ತಷ್ಟು ಹೆಚ್ಚು ಗಮನ ಕೊಡುವನು ತಾಯಿತಂದೆಗಳಲ್ಲಿರುವ ದುರಾಚಾರಗಳನ್ನು ಕಲಿತರೂ ಕಲಿತು ಬಿಡಬಹುದು. ಇಲ್ಲವೇ ಗೃಹಕೃತ್ಯದಲ್ಲಿ ಬಡತನವಿದ್ದರೆ ಅದರ ವಿಷಯದಲ್ಲಿ ಹಿರಿಯರು ಮಾಡುವ ಆಲೋಚನೆಯಲ್ಲಿ ಮಕ್ಕಳು ತಲೆ ಹಾಕಿ ಬಾಲ್ಯದಲ್ಲಿಯೇ ಚಿಂತಾ ಲಲನೆಯ ಸ್ಪರ್ಶವಾದೀತೆಂಬ ಭಯದಿಂದಲೂ ಗುರುಗೃಹವಾಸ ಅವಶ್ಯವೆಂದು ಹೇಳಿದರೂ ಹೇಳಬಹುದು ಗುರುಗಳಿಗೆ ಪ್ರತಿ ಮಾಸದಲ್ಲಿಯೂ ವೇತನ ಕೊಡುವದಕ್ಕೆ ಬದಲಾಗಿ ವಿದ್ಯಾಭ್ಯಾಸ ಪೂರ್ತಿಯಾಗಿ ಸಂಸಾರಸಾಗರದಲ್ಲಿ ಈಜಾಡಲಿಕ್ಕೆ ಉಮ್ಮೆಕ್ಷನಾಗುವಾಗ ಗುರುದಕ್ಷಿಣಾ ರೂಪವಾಗಿ ವೇತನವನ್ನು ಒಟ್ಟಾಗಿ ಕೊಡತಕ್ಕದ್ದೆಂದು ನಿಬಂಧನೆ ಮಾಡಿದ್ದರು ಈ ಕಾಲದಲ್ಲಿ ವಿದ್ಯಾಶಾಲೆಯೇ ಗುರುಗೃಹವಾಸವು ಹೊಸ್ಟೆಲ್ ಎಂಬುವದೇ ಗುರುಗೃಹದ ಭೋಜನಶಾಲೆಯು. ಹೊಸ್ಟೆಲಿನ ಅಧ್ಯಕ್ಷರೇ ಗುರುಪತ್ನಿಯು ಎಂದ ಮೇಲೆ ಈಗಿನ ವಿದ್ಯಾರ್ಥಿಗಳೂ ಪೂರ್ವದ ವಿದ್ಯಾರ್ಥಿಗಳೂ ಸಮರೆಂದು ಹೇಳುವದಕ್ಕೆ ಅಡ್ಡಿಯೇನು? ಅಧ್ಯಕ್ಷರಾಗಲಿ ಪಾಠಶಾಲಾಧ್ಯಾಪಕರಾಗಲಿ ಸದ್ಗುಣಭರಿತರಾಗಿಯೂ ದೂರದೃಷ್ಟಿ ಪರರಾಗಿಯೂ ಇರಬೇಕೆಂದು ಒತ್ತಿ ಹೇಳಬೇಕಾಗಿಲ್ಲ. ಇದರೊಂದಿಗೆ ಸಹಾಧ್ಯಾಯಿಗಳು ಗುಣಾಢ್ಯರಾಗಿರುವದು ಮತ್ತೂ ಅತಿಶಯವಾದದ್ದು ಗ್ರಾಮಾಂತರಗಳಲ್ಲಿ ವಾಸಮಾಡುವ ದಂಪತಿಗಳು ಮಕ್ಕಳ ಪ್ರೌಢವಿದ್ಯಾಭ್ಯಾಸಕ್ಕೆ ತಮ್ಮ ಗ್ರಾಮದಲ್ಲಿಯೇ ಅವಕಾಶವಿಲ್ಲದೆ ಪಟ್ಟಣಕ್ಕೆ ಕಳುಹಿಸುವರುಂಟಷ್ಟೆ. ಎಂದಿಗೆ ತಮ್ಮ ಮಗನು ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ ಮುಂದಿರಕ್ಕೆ ಹಿಂತಿರುಗಿ ಬಂದಾನು ಎಂದು ಎದುರು ನೋಡುತ್ತಿರುವರು ವಿದ್ಯಾರ್ಥಿಗಳು ದುರುಳರೊಡನೆ ಸೇರಿ ದುರಾಚಾರವನ್ನು ಕಲಿತು ಉಪಾಧ್ಯಾಯರ ಒತ್ತಾಸೆಯಿಂದ ಸ್ತ್ರೀವ್ಯಾಮೋಹಲಂಪಟರಾಗಿ ವಾರಾಂಗನೆಯರ ಮನೆಗಳಿಗೆ ವಾರ ನಡೆಯುತ್ತಾ ಬರುವರು ಇಂಥವರು ಹೆತ್ತವರ ಅಧೀನಕ್ಕೆ ಬರುವರೇ? ಈಚೀಚೆಗೆ ಇಂಡಿಯಾ ದೇಶದಲ್ಲಿರುವ ಮುಖ್ಯ ಮುಖ್ಯ ಕಲಾಕೌಶಲಗಳನ್ನು ಹೇಳಿ ಕೊಡುವ ಯೂನಿವರ್ಸಿಟಿಗಳಲ್ಲಿ ಅಭ್ಯಾಸ ಮಾಡಿದ್ದು ಸಾಲದೆ ಇಂಗ್ಲೆಂಡ್, ಅಮೇರಿಕ, ಜರ್ಮನಿ ಮೊದಲಾದ ದೇಶಾಂತರಗಳಲ್ಲಿ ವಿದ್ಯಾ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬರಲು ಅನೇಕ ಯುವಕರು ಹೋಗುವ ಪದ್ಧತಿ ನೆಗಳಿರುವದಷ್ಟೆ. ಅಲ್ಲಿ ಕಾಲ ದೇಶದ ವಿದ್ಯಮಾನದಲ್ಲಿ ಭೇದವಿದ್ದು ಸಮೀಪದ ರಕ್ಷಕರಿಲ್ಲವೆ ಅನೇಕರು ಅಲ್ಲಿಯೇ ವಾಸಮಾಡಬೇಕೆಂದು ತೀರ್ಮಾನಿಸಿ ವಿದ್ಯಾಭ್ಯಾಸ ಮಾಡಿದ ಬಳಿಕ ಜೀವನೋಪಾಯಕ್ಕೆ ಅಲ್ಲಿಯೇ ಕೆಲಸವನ್ನು ಸಂಪಾದಿಸಿ ನಿಂತುಬಿಟ್ಟಿರುವರು ಇಂಥವರ ತಾಯಿತಂದೆ ಮುಂತಾದ ಅನುಬಂಧಿಗಳ ಕೊರಗು ಎಷ್ಟರ ಮಟ್ಟಿಗಿರಬಹುದೋ ವಾಚಕರೇ ಊಹಿಸಬೇಕು ವಿದ್ಯಾಭ್ಯಾಸ ಮಾಡಿಸಿ ಎಂದು ಯಾರಿಗೆ ಒಪ್ಪಿಸಿದರೋ ಅವರೇ ಇದಕ್ಕೆ ಜವಾಬುದಾರರಲ್ಲವೇ? ನಿಮ್ಮ ಮುಂದೆಯೇ ಕುಳಿತು ನಿಮ್ಮ ಮುಂದೆಯೇ ಮೈಗೆ ಬಟ್ಟೆಯಿಲ್ಲದೆ ಹೊಟ್ಟೆಗೆ ಇಟ್ಟು ಇಲ್ಲದೆ ತಿರುಕನಂತೆ ತಿರುಗಬೇಕೇ? ಧನಸಮೃದ್ಧಿಯಾಗಿರುವ ದೇಶದಲ್ಲಿ ವಿದ್ಯಾವಂತರಿಗೆ ಅವರ ವಿದ್ಯೆಗೆ ತಕ್ಕಂತೆ ಸನ್ಮಾನ ದೊರೆಯುವ ದೇಶದಲ್ಲಿ ಸುಖವಾಗಿರುವ ಮಗನ ಮೇಲೆ ನಿಮಗೇಕೆ ಹಂಬಲು ಎಂದು ಹೆತ್ತವರನ್ನೇ ಆಕ್ಷೇಪಿಸುವದು ಅವರ ತಪ್ಪಲ್ಲವೇ? ಮಕ್ಕಳಿಗೆ ರಕ್ಷಕರು ಹೆತ್ತವರಿಗಿಂತಲೂ ಹೆಚ್ಚಾದವರು ಯಾರೂ ಅಲ್ಲ ಅವರಿಗೆ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿಸಲೇಬೇಕೆಂದು ಕಟ್ಟುಮಾಡಿದ ದೊರೆತನದವರು ಸಹ ಅದು ಮಾಡದವಿದ್ದರೆ ಶಿಕ್ಷಿಸುತ್ತಾರಲ್ಲದ ಇಂಗ್ಲಾಂಡಿನಲ್ಲಾಗಲಿ ಬೇರೊಂದು ಕಡೆಯಾಗಲಿ ಹೋಗಿ ಓದಿ ಬರಬೇಕೆಂದು ನಿರ್ಬಂಧ ಪಡಿಸುವದಿಲ್ಲ ಅಲ್ಲಿ ಹೋಗಿ ಬರುವದರಿಂದ ಹೆಚ್ಚು ಮರ್ಯಾದೆ ಬರುವ ಅಧಿಕಾರ ದೊರೆಯುವದೆಂದು ಮೊದಲು ಮೊದಲು ಕೆಲವರು ಹೊರಟರು ಒಬ್ಬರಂತೆ ಮತ್ತೊಬ್ಬರು, ಅವರಂತೆ ಇನ್ನೊಬ್ಬರು, ಹೀಗೆ ಅನೇಕರು ಹೋಗಿ ಬರಲು ಪ್ರಾರಂಭಿಸಿದರು ಭಾರತ ಭೂಮಿಯಲ್ಲಿರುವ ಕಾಲೇಜುಗಳಿಗೆ ಬರುವ ಯುವಕರಲ್ಲಿ ಎಷ್ಟು ಮಂದಿ ಸ್ವಮತಸಿದ್ಧಾಂತಗಳಲ್ಲಿ ತಾಟಸ್ಥ್ಯವು ಹಿರಿಯರಲ್ಲಿ ಅಶ್ರದ್ಧೆಯೂ ಸಹವಾಸದಲ್ಲಿ ವಿಗತಾನುರಾಗವೂ ಉಳ್ಳವರಾಗುವರೋ ಹಾಗೆಯೇ ದೇಶಾಂತರಕ್ಕೆ ಹೋಗಿ ಬಂದವರಲ್ಲಿಯೂ ಅನಕೀರ್ತಿ ತರತಕ್ಕವರು ಹೊರಬೀಳುವರು ಏತೇ ಮಕ್ಕಳ ತಾಯಿತಂದೆಗಳು ತಮ್ಮ ಮಕ್ಕಳನ್ನು ಯಾರ ವಶಕ್ಕೆ ಒಪ್ಪಿಸುವರೋ ಅವರ ಪೂರ್ವ ಚಾರಿತ್ರ್ಯವನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಳ್ಳಬೇಕಲ್ಲವೆ ಮಕ್ಕಳ ಅಭಿರುಚಿಯು ಎಂಥಹುದು ಎಂಬುದನ್ನೂ ಪರೀಕ್ಷಿಸಬೇಕು ಜಿಲ್ಲದ ಅಂಗಡಿಯಲ್ಲಿ ಮುತ್ತಿನ ಸೊಡಗಳು ಕಮ್ಮಾರನ ಕುಲುಮೆಯ ಬಳಿಗೆ ಬರುವವೇ? ತಮ್ಮ ಬುದ್ಧಿಯನ್ನು ತಮ್ಮ ವಶದಲ್ಲಿರಿಸಿಕೊಳ್ಳುವವರನ್ನು ಧನದ ರಾಶಿಯು ಮೇಲಾಗಲಿ, ಕಾಮಿನಿಯರ ವೃಂದದಲ್ಲಿಯಾಗಲಿ ನಿಲ್ಲಿಸಿದಾಗ್ಯೂ ಅವರ ಮನಸ್ಸು ಚಲಿಸುವದಿಲ್ಲ ... ಹಾಗಿದ್ದ ಪಕ್ಷದಲ್ಲಿ ಬೀದಿಯಲ್ಲಿನ ಧೂಳೆಲ್ಲವೂ ಅವರ ಮೇಲೆ ಮುತ್ತಿಕೊಳ್ಳುವಂತೆ ಲೋಕದ ಕೆಟ್ಟ ... ಅವರಲ್ಲಿ ಅಂಟಿಕೊಳ್ಳುವವು ದೇಶಾಂತರಕ್ಕೆ ಕಳುಹಿಸುವದರಿಂದ ಅವರ ನಡತೆಯು ಕೆಡುವದೆ ... ದರಿಂದ ಸಂಸಾರವು ಏನಾಗುವದೆಂತಲೂ ಊಹಿಸಬಹುದಾದರೆ ಪರದೇಶ ಗಮನದಿಂದ ಲಭಿಸುವ ಆದಾಯವು ತಮ್ಮ ಮಕ್ಕಳ ಪಾಲಿಗೆ ಇಲ್ಲವೆಂದು ಸ್ಪಷ್ಟವಾಗಬೇಕಲ್ಲವೆ ಉಪಾಯವಿಲ್ಲ ಬೆಳೆಯುವ ಪೈರು ಮೊಳೆಯುವಾಗಲೇ ತಿಳಿಯುವಂತೆ ಮಕ್ಕಳು ಯಾವ ರೀತಿಯಲ್ಲಿ ದೊಡ್ಡವರಾದ ಮೇಲೆ ಇರುತ್ತಾರೆಂಬುದು ಸುಲಭವಾಗಿ ತಿಳಿಯಬಹುದು ಅದಕ್ಕೆ ವಿರೋಧವಾಗಿ ಬೇರೊಂದು ಮಾರ್ಗಕ್ಕೆ ತಿರುಗಿಸಬೇಕೆಂದು ಯತ್ನಿಸುವವರು ಸಮುದ್ರದ ಮೇಲೆ ನಡೆಯಲಿಕ್ಕೆ ಯತ್ನಿಸಿದಂತೆಯೇ ಸರಿ ಇದು ನಿಜವೆಂಬುವದಕ್ಕೆ ನೆಲ್ಸನ್, ಜಾರ್ಜ್ ವಾಷಿಂಗ್ಟನ್, ಶಿವಾಜಿ ಮುಂತಾದ ಮಹನೀಯರ ಜೀವಚರಿತ್ರೆಯೇ ಆಧಾರ ಬಾಲ್ಯದಲ್ಲಿಯೇ ಶಿವಾಜಿಯು ಹುಡುಗರ ಗುಂಪು ಸೇರಿಸಿ ತಾನು ಸೇನಾನಿ ಎನೆಂದು ಆಡುತ್ತಿದ್ದನೆಂದು ಓದಿರುವೆವಷ್ಟೆ. ಪಾಠಶಾಲೆಯಲ್ಲಿರುವಾಗಲೇ ಪೆನ್ಸಿಲು, ನಿಬ್ಬುಗಳನ್ನು ಒಂದೆರಡು ರೂಪಾಯಿಗೆ ತಂದು ಸಹಪಾಠಿಗಳಿಗೆ ಮಾರಿದ ಅನೇಕ ವಿದ್ಯಾರ್ಥಿಗಳು ಕಡೆಗೆ ಪ್ರಸಿದ್ಧ ವರ್ತಕರಾದದು ಕಣ್ಣಾರ ನೋಡಬಹುದು. ಆದ್ದರಿಂದ ಶಾಲಾಧ್ಯಕ್ಷರನ್ನು ... ಬಾರದು —ಸ ದಿ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ವೈ. ಶ್ರೀನಿವಾಸಶಾಸ್ತ್ರಿ, ತ್ಯಾಮಗೊಂಡ್ಲು, ಗೊಲ್ಲರ್ ವೆಂಕಟರಮಣ ಆಳಲಗಟ್ಟ; ಕಾಳಿಂಗಯ್ಯನ ರಾಘವೇಂದ್ರರಾವ್, ತೀರ್ಥಹಳ್ಳಿ; ಎಂ. ... ರಾವ್, ಮಧುಗಿರಿ, ಎಸ್. ನಂಜುಂಡಯ್ಯ, ಚಾಮರಾಜನಗರ —ಈ ... ಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ತುಮಕೂರು ತಾಲ್ಲೂಕು ಕೋಳಾಲದ ಹೋಬಳಿ ... ಗ್ರಾಮದ ಬಳಿ ಹೊಸದಾಗಿ ಕಟ್ಟಿರುವ ಕೆರೆಯ ನೀರನ್ನು ಸರ್ಕಾರಿ ... ಹಲಾಕುಮಾಡುತ್ತಾರೆಂದೂ, ರೈತರು ಅವರನ್ನು ತೃಪ್ತಿಪಡಿಸುವುದು ... ವಾಗಿದೆ ಎಂದೂ, ಆ ಕೆರೆಯ ನೀರಿನ ಹಂಚಿಕೆಯನ್ನು ಕ್ರಮಪಡಿಸುವ ಪಂಚಾಯತಿಯನ್ನು ಕಲ್ಪಿಸಿಕೊಡಬೇಕೆಂದೂ ಒಬ್ಬ ಬಾತ್ಮಿದಾರರು ... ತ್ತಾರೆ ಇದಕ್ಕೋಸ್ಕರವೇ ಸರ್ಕಾರದವರು ಕೆರೆಗಳ ಪಂಚಾಯತಿ ಕಾನೂನು ಮಾಡಿಟ್ಟಿದಾರೆ. ಆ ಗ್ರಾಮದ ಮುಖಂಡರು ಏಕೀಭವಿಸಿ ಆ ರೀತಿ ದೆಪ್ಯುಟಿ ಕಮಿಷನರವರಿಗೆ ಅರ್ಜಿ ಬರೆದುಕೊಂಡರೆ ಅವರು ತಾಖೀದುಮಾಡಿ ಆ ಕೆರೆಗೆ ಪಂಚಾಯತರನ್ನು ನೇಮಕಮಾಡಿಕೊಟ್ಟಾರೆನ್ನುವುದಕ್ಕೆ ಸಂಶಯವಿಲ್ಲ.—ಎಡಿ]

ಕರೆಸ್ಪಾಂಡೆನ್ಸ್

ನಿಜವನ್ನು ತಿಳುಹಿಸಿ

ಅಯ್ಯಾ,

ಆಧುನಿಕ ಕಾಲಗಳಲ್ಲಿ ವಂಚನೆಯೇ ಹೆಚ್ಚೆಂದು ಹೇಳಬಹುದು ... ಯೊಬ್ಬನು ಪರವಿತ್ತಾಪಹಾರ ಮನಸ್ಕನಾಗಿರುವನೆಂದು ತಿಳಿಯುತ್ತೇನೆ ... ದರೆ ಆರ್ಯಾವರ್ತದ ಆದ್ಯಂತವಾಗಿಯೂ ಅನೇಕ ವಿಧವಾದ ಬ್ಯಾಂಕುಗಳು ಹುಟ್ಟಿ ಅನೇಕ ಜನರ ದ್ರವ್ಯವಂ ಸೆಳೆದು ದಿವಾಳಿಯಾದುದು ಪ್ರತಿ ವಾರ ವಾರ್ತಾಪತ್ರಿಕೆಗಳಲ್ಲಿ ನೋಡುತ್ತಿದೇವೆ ನಾವು ಕೂಡ ತದನುಭವವನ್ನು ಹೊಂದುತ್ತೇವೆ ಅಮೃತಸರ, ಲಾಹೋರ್‌ನಲ್ಲೂ ಸ್ಥಾಪಿಸಲ್ಪಟ್ಟದ್ದು ಆಲ್ ಇಂಡಿಯ ಬ್ಯಾಂಕಿಗೆ ಮ್ಯಾರೇಜ್ ಸ್ಕೀಂನಲ್ಲು 2 ನೇ ತರಗತಿ ಮೆಂಬರಾಗಿ ಸೇರಿ ... ಪಾವತಿಮಾಡುತ್ತಿದ್ದೆವು ಈ ಪ್ರಾಂತ್ಯ ಅನೇಕ ಜನರು ಆ ಕಂಪನಿಯ ಮೆಂಬರಾದರು. ಏಜಂಟರ ಪ್ರೋತ್ಸಾಹವು ಹೆಚ್ಚಿತು ಏಜಂಟರುಗಳು ಕಂಪನಿ ಡೈರೆಕ್ಟರುಗಳು ವಜಾಮಾಡಿದರೂ ಮೆಂಬರರೇ ಸ್ವಂತವಾಗಿ ... ಪಾವತಿಮಾಡುತ್ತಾ ಬಂದರು ಕಡೆಗೆ ಒಂದೆರಡು ತಿಂಗಳ ಹಣ ... ಬಂದಿತು ಮೊದಲು ಕಟ್ಟಿದ ಹಣವೆಲ್ಲಾ ನಿಷ್ಫಲವಾಯಿತು, ಕಂಪನಿಗೆ ಕಾಗದ ಬರೆದರೆ ಜವಾಬೇ ಇಲ್ಲ ಅನೇಕ ಬಡಬಗ್ಗರೂ ಬಹು ದ್ರವ್ಯದಾಸೆಯಿಂದ ಅಲ್ಪಸ್ವಲ್ಪವಿದ್ದ ದ್ರವ್ಯವನ್ನು ಕಳೆದುಕೊಂಡರು ಆದರೆ ಕಂಪನಿಯು ದಿವಾಳಿಯಾದಂತೆ ಯಾವ ಪತ್ರಿಕೆಗಳಲ್ಲೂ ಕಾಣಲಿಲ್ಲ ಇದರ ಸ್ಥಿತಿ ಏನೆಂಬುದನ್ನು ತಾವಾಗಲಿ, ತಮ್ಮ ಪತ್ರದ ವಾಚಕರಾಗಲಿ ತಿಳಿಸುವರೆಂದು ನಂಬಿಕೊಂಡಿರುತ್ತೇನೆ

ತೀರ್ಥಮುತ್ತೂರು ಎಚ್ ವಿ ಕೃಷ್ಣಭಟ್ಟ

ಒಂದು ಕೋಆಪರೇಟಿವ್ ಸೊಸೈಟಿಯ ಮೇಲೆ ಆಕ್ಷೇಪಣೆ

ಅಯ್ಯಾ,

ದೊಡ್ಡಬಾಣಾವಾರದಲ್ಲಿ ಈಗ್ಗೆ ಒಂದು ವರ್ಷದ ಕೆಳಗೆ ಕೋಆಪರೇಟಿವ್ ಸೊಸೈಟಿ ಎಂಬುವುದು ಸ್ಥಾಪಿತವಾಯಿತು. ಸುಮಾರು 1 ಸಾವಿರ ರೂಪಾಯಿ ಜಮಾಯಿಸಿ ಇರಬಹುದು ಇದರ ಸೆಕ್ರೆಟರಿ ಕೆಲಸವು ಸ್ಟಾಂಪು ವೆಂಡರು ರಾಮಯ್ಯನವರದಾಗಿದೆ ಇವರು ಯಾವಾಗ್ಲೂ ಹಾಜರು ಇರುವುದಿಲ್ಲ ಬಂದ ಮೆಂಬರಿಗೆಲ್ಲ ಬಹಳ ತೊಂದರೆಯಾಗಿದೆ ಕಾರಣವೇನೆಂದರೆ ಸೊಸೈಟಿ ಮೊಬಲಗನ್ನೇ ತಾವು ಕಂಟ್ರ್ಯಾಕ್ಟುದಾರರಾಗಿ ಇರೋಣದರಿಂದ ಕಾಮಗಾರಿ ಮತ್ತು ಸ್ಟಾಂಪು ತರತಕ್ಕ ಬಗ್ಗೆ ಉಪಯೋಗಿಸಬಹುದೆಂಬ ವರ್ತಮಾನ ಈ ವಿಷಯವನ್ನು ರೆಜಿಸ್ಟ್ರಾರ್ ಸಾಹೇಬರಿಗೆ ಅನೇಕಾವರ್ತಿ ಬರೆದಾಗ್ಯೂ ಕೇಳಿದ ಹಾಗೆ ಕಾಣಲಿಲ್ಲ. ಆದ್ದರಿಂದ ಪತ್ರಿಕೆಗೆ ಕೊಡಬೇಕಾಗಿ ಬಂತು ಇವರು ಯಾವಾಗ್ಯು ಊರಲ್ಲಿರುವುದಿಲ್ಲ ಎಲ್ಲಾದರೂ ಹೋಗಬೇಕಾದರೆ ಜನರಲ್ ಸ್ಟಾಂಪಿನ ಕೆಳಗಡೆ ರುಜುಮಾಡಿ ಇಟ್ಟು ಹೋಗಿಬಿಡುತ್ತಾರೆ ಮನೆಯಲ್ಲಿದ್ದವರು ಯಾರಾದರೂ ಬರೆದುಕೊಡಬೇಕು, ಈ ಕಾರಣದಿಂದ ಜನಗಳಿಗೆ ಕಾಗದ ದೊರೆಯುವುದೇ ಕಷ್ಟವಾಗಿದೆ ಈ ವಿಚಾರಕ್ಕೂ ಸಹಾ ಅರ್ಜಿ ... ದ್ದಾಯಿತು ಇದಕ್ಕೂ ಯಾವುದೂ ಜವಾಬು ಇಲ್ಲ

ಜಿ ರಾಮಪ್ಪಾ, ಬಾಣಾವಾರ.

[ಸೊಸೈಟಿಯ ಕಮಿಟಿ ಮೆಂಬರುಗಳು ಈ ವಿಚಾರದಲ್ಲಿ ಶ್ರದ್ಧೆವಹಿಸಿ ಬೇರೆ ಇತರರನ್ನು ಸೆಕ್ರೆಟರಿಯಾಗಿ ನೇಮಿಸಿಕೊಳ್ಳಬಹುದು ಈಗಿರುವವರು ಸೊಸೈಟಿ ಹಣವನ್ನು ಆ ರೀತಿ ಉಪಯೋಗಿಸಿಕೊಳ್ಳುತ್ತಾರೆಂಬುದನ್ನು ನಾವು ನಂಬಲಾರೆವು ಜನರಲ್ ಸ್ಟಾಂಪಿನ ವಿಚಾರದಲ್ಲಿ ಗ್ರಾಮದ ಮುಖಂಡರು ಸೇರಿ ತಮಗುಂಟಾಗಿರುವ ತೊಂದರೆಯನ್ನು ಕುರಿತು ಡೆಪ್ಯುಟಿ ಕಮಿಷನರ್‌ಗೆ ಅರ್ಜಿ ಬರೆದುಕೊಂಡರೆ ಅವರು ತಾಖೀದುಮಾಡುತ್ತಾರೆ — ಎಡಿ]

ಶ್ರೀಮನ್ಮಹಾರಾಜರವರು ಮಾರಿಕಣಿವೆಗೂ ಚಿತ್ರದುರ್ಗಕ್ಕೂ ದಯಮಾಡಿಸಿದ ವಿಷಯ

ಅಯ್ಯಾ,

ಕಳೆದ ವಾರದ ಪತ್ರಿಕೆಯಲ್ಲಿ ಬರೆದಿರುವವರಲ್ಲಿ ಪ್ರಜೆಗಳು ತಮ್ಮ ಅಹವಾಲು ಅರ್ಜಿಗಳ ನಿರ್ಬಂಧದಿಂದ ಈಡೇರಲಿಲ್ಲವೆಂದು ಬರೆದಿರುವದು ತಪ್ಪು ಶ್ರೀಮನ್

ರಾಜರವರು ಕಳೆದ ಜನವರಿ 29 ನೇ ತಾ ಮಾರಿಕಣಿವೆಗೆ ಸವಾರಿ ದಯಮಾಡಿಸಿದಾಗ ತಿಳಿದುಕೊಂಡು ಅನಂತಪುರ, ಬಳ್ಳಾರಿ, ರಾಯದುರ್ಗ, ಮೊಳಕಾಲ್ಮೂರು ಮೊದಲಾದ ಪ್ರಾಂತ್ಯದಿಂದ ಹೆಂಗಸರು, ಮಕ್ಕಳು, ವೃದ್ಧರು ಮುಂತಾದ ಧಾಡಿಗಳ ಮೇಲೆ ನಮ್ಮನ್ನಾಳುವ ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರರವರನ್ನೂ, ನಮ್ಮ ಮಹಾಮಾತೃಶ್ರೀಯವರನ್ನೂ ನೋಡಲು ಸಾವಿರಾರು ಜನ ಬಂದು ಮಾರಿಕಣಿವೆ ರಸ್ತೆ ಬಾಜೂದಲ್ಲಿ ನಿಬಿಡಿತವಾಗಿ ನಿಂತಿತ್ತು ಏನಮೇ ರಾಜರವರ ಆಗಮನದಿಂದ ದರುಶನವಾಗುವದಕ್ಕೆ ಅವಕಾಶವಾಗದೆ ಅಲ್ಲಿ ಬಂದಿದ್ದ ಪ್ರಜೆಗಳು ತಾವು ಮಹಿಸೂರಿಗೆ ಹೋಗಿ ಅವರ ಪರಿವಾರ ಸಮೇತ ನೋಡುವದು ತಮ್ಮಿಂದ ಆಗುವದಿಲ್ಲ ಇಲ್ಲೇ ದರುಶನವಾಗಬೇಕೆಂದು ಮಿ|| ಮಿರ್ಜಾ ಸಾಹೇಬರವರನ್ನು ಕೇಳಿಕೊಂಡದ್ದಕ್ಕೆ ಆ ಮಹರಾ ಶ್ರೀಮನ್ ಮಹರಾಜರವರಿಗೆ ತಿಳಿಸಿ 30 ನೇ ತಾ ಶುಕ್ರವಾರ ದೊರೆಗಳೂ ಮಾತೃಶ್ರೀಯವರೂ ಪರಿವಾರ ಸಹಿತ ಮೋಟಾರು ಎಂಬುವ ರಥದಲ್ಲಿ ಕುಳಿತು ನಿಧಾನವಾಗಿ ರಥವನ್ನು ಬಿಡುತ್ತಾ ರಸ್ತೆ ಎರಡುಪಕ್ಕದಲ್ಲಿ ನಿಂತಿದ್ದ ನೋಟಕರಿಗೆ ದರುಶನವನ್ನು ಕೊಟ್ಟು ಅತ್ಯಂತ ಪ್ರೀತಿಯಿಂದ ಉತ್ತರವನ್ನು ದಯಪಾಲಿಸುತ್ತಾ ಚಿತ್ರದುರ್ಗಕ್ಕೆ ದಯಮಾಡಿದನಂತರ ಕೆರೆ ಯಾವತ್ತೂ ನೋಡುವುದಕ್ಕೆ ಅನುಕೂಲಮಾಡಿಕೊಂಡು, ಬಂದಿದ್ದ ಪ್ರಜೆಗಳು ತೆರಳಿದರು ಆದ್ದರಿಂದ ಪ್ರತಿ ನೋಡಬೇಕೆಂದು ಬಂದಿದ್ದ ಎರಡು ಆಶೆಗಳೂ ನೆರವೇರಿದಂತಾಯಿತು ಪ್ರತ್ಯೇಕವಾದ ಚಿತ್ರದುರ್ಗಕ್ಕೂ ಬಂದು ಸುಖಾಗಮನದಿಂದ ಸಮಸ್ತ ಪ್ರಜೆಗಳಿಗೂ ದರುಶನಕೊಟ್ಟು ಜೋಗಿಮಟ್ಟಿಬೆಟ್ಟದ ಪ್ರದೇಶವನ್ನು ನೋಡಿ ಮುನಿಸಿಪಲ್ ಪ್ರಜಾಪ್ರಮುಖರಿಗೂ ಮುನ್ಸಿಪಲ್ ಕೌನ್ಸಿಲರುಗಳಿಗೂ ಓವರ್ ನಲ್ಲಿ ಬಂದಾಗ್ಯೆ ಸಂತೋಷದಿಂದ ಪರಿಮಿತವಾದ ಸಮಸ್ಕಾರಗಳನ್ನು ದಯಪಾಲಿಸಿ ಮಾರಿಕಣಿವೆಗೆ ದಯಮಾಡಿಸುವಾಗ್ಗೆ ಹೊಸ ಮೈಲಿ ಬಳಿ ಮುಕ್ಕಾಂ ಮಾಡಿ ಮೋಟರಿನಿಂದ ಪ್ರಜೆಗಳ ಕಷ್ಟನಷ್ಟಗಳ ಅಹವಾಲು ಇತ್ಯಾದಿಯನ್ನೆಲ್ಲ ಸಹನೆಯಿಂದ ಕೇಳಿ ತೆರಳಿದರು

ನಿಷ್ಪಕ್ಷಪಾತಿ

ತಾಲ್ಲೂಕು ವರ್ತಮಾನಗಳು

ಹುಣಸೂರು ತಾ| ಚಿಕ್ಕಾಡಿಗನಹಳ್ಳಿ —ಶ್ರೀಮನ್ ದಿವಾನ್ ಸಾಹೇಬರು ಜನವರಿ ಮಾಹೆ 18 ನೇ ತಾ| ಎಡತೊರೆಯಿಂದ ಹುಣಸೂರಿಗೆ ದಯಮಾಡಿಸುತ್ತಾ ಇದ್ದಾಗ ಬಂದು ಕಂಟ್ರ್ಯಾಕ್ಟರು ಬಹಳ ಮುತುವರ್ಜಿಯಿಂದ ರಸ್ತೆಯ ಧೂಳನ್ನು ಗುಂಡಿಗಳಿಂದ ಬರ್ಡಿಗೆ ಗೋಡಿ ಹಾಕಿಸುತ್ತಿದಾರೆ 2 3 ವರ್ಷಗಳಿಂದ ಸರಿಯಾಗಿ ರಸ್ತೆಗೆ ಹೊಸ ಮಣ್ಣು ಹಾಕುತ್ತಿದ್ದರೆ ರಸ್ತೆ ಈ ರೀತಿ ಇರುತ್ತಿರಲಿಲ್ಲ ರಸ್ತೆಯ ಉಭಯಪಾರ್ಶ್ವದಲ್ಲಿ ರತಕ್ಕ ಗೊಬ್ಬರದ ಗುಂಡಿಗಳಿಂದ ಗೊಬ್ಬರವನ್ನು ಒಕ್ಕಲಿಗರ ಶಿರಸ್ತೇದಾರರು ಅಪ್ಪಣೆಯಂತೆ ಬೇರೆ ಕಡೆ ಸಾಗಿಸುತ್ತಿದಾರೆ —ಹೆದ್ದಾರಿ ಗದ ವಾಹನ ದಾರಸು ದಾವಣಗೆರೆಯವರು ಊರು ಸೇರುತ್ತಿದಾರೆ ಉತ್ತರಪಕ್ಕದಲ್ಲಿ ಇದ್ದ ಪಶುಗಳೂ ತೆಗಸಲ್ಪಟ್ಟವು ಹುಲ್ಲೆಹಾಳುಗ್ರಾಮಕ್ಕೆ ಡಾಕ್ಟರವರು ಬರಬೇಕಾಗಿ ಬುದ್ಧಿವಾದ ಹೇಳಿದರಷ್ಟೆ ಗಾವಡಗೆರೆ ಬಡಪಾಯಿಗಳ ಮೇಲೆ ಡಾಕ್ಟರವರಿಗೆ ಕನಿಕರ ಯಾಕೆ ಹುಟ್ಟಲಿಲ್ಲವೋ ತಿಳಿಯದು ಉಭಯಗ್ರಾಮಗಳ ಜನ ಸರ್ಕಾರದವರ ಪ್ರಜೆಗಳಾಗಿದ್ದೂ ಪಡಪಾಟಲಿಕೆ ಈ ರೀತಿಯಾಗಿದೆ

ಕೋಲಾರ —ಕೆಲವು ತಿಂಗಳಿಂದ ಕೋಲಾರಿಗೆ ಬಂದ ಪ್ಲೇಗಿನ ಗಲಾಟೆ ದೇಶದ ಕೋಲಾರದ ಕುರುಬರ ಪೇಟೆಯಿಂದ ಒಬ್ಬರು ಕೋಲಾರಕ್ಕೆ ಪಶ್ಚಿಮಕ್ಕೆ ಸುಮಾರು 2 ಮೈಲಿ ದೂರದಲ್ಲಿರುವ ಉರಿಗ ಎಂಬ ಗ್ರಾಮಕ್ಕೆ ಹೋಗಿ ಕೆಲವು ದಿವಸಗಳಲ್ಲಿ ಪ್ಲೇಗಿನಿಂದ ಸತ್ತುಹೋದರು ಆದಕಾರಣ ಆ ಊರಿನ ಜನರೆಲ್ಲ ಮನೆಗಳನ್ನು ಬಿಟ್ಟು ಗುಡಿಸಲುಗಳಿಗೆ ಹೋದರು ಹೀಗೆ ಎರಡು ಮೂರು ವಾರಗಳು ಸುಖವಾಗಿ ಕಳೆದ ಮೇಲೆ ಇದೇ ತಿಂಗಳು ಅಂದರೆ ಫೆಬ್ರವರಿ ತಿಂಗಳು ಶ ತಾ ಗುರುವಾರ 10½ ಗಂಟೆ ಸುಮಾರಿನಲ್ಲಿ ಒಬ್ಬ ಸಣ್ಣಹುಡುಗನು ವಯಸ್ಸು 5½ ವರ್ಷದವನು ತನ್ನ ಗುಡಿಸಲಿಗೆ ಬೆಂಕಿ ಇಟ್ಟು ಉರಿಯುವ ಜ್ವಾಲೆಯೂ ಆಕಾಶಕ್ಕೆ ಇನ್ನು ಉರಿ ಹೆಚ್ಚಾದ ಮೇಲೆ ಹೊರಗೆ ಹೋಗಿ ಸ್ವಲ್ಪ ದೂರ ಹೋಗಿ ನಿಂತುಕೊಂಡು, ಅದನ್ನು ನೋಡುತ್ತಾ ನಗುತ್ತಿದ್ದನು ಗಾಳಿಯು ಬಹಳ ಇದ್ದದರಿಂದ ಗುಡಿಸಲಿನ ಪಕ್ಕದಲ್ಲಿದ್ದ ಇನ್ನೂ ಎರಡು ಗುಡಿಸಲುಗಳಿಗೆ ಉರಿ ಹತ್ತಿ ಸ್ವಲ್ಪವೂ ಉಳಿಯದಂತೆ ಸುಟ್ಟುಹೋದವು ಒಂದೊಂದು ಗುಡಿಸಲುಗಳಲ್ಲಿ ನೂರು ನೂರು ರೂಪಾಯಿ ನಷ್ಟವಾಯಿತು ಇದಲ್ಲದೆ ಒಂದು ಗುಡಿಸಲಲ್ಲಿ ಇದ್ದ 60 ರೂಪಾಯಿ ಬೆಲೆ ಬಾಳತಕ್ಕ ಒಂದು ಹೋರಿಕರುವು ಬೆಂದು ಸತ್ತುಹೋಗಿತ್ತು ಇದು ಬಹಳ ವ್ಯಸನಕರವಾಗಿದೆ

ದೊಡ್ಡಬಳ್ಳಾಪುರ ಇಲ್ಲಿ ಮುನಿಸಿಪಲ್ ಮೆಂಬರುಗಳ ಚುನಾವಣೆಯು ತಾ ರಾತ್ರಿ 10 ಘಂಟೆಗೆ ಸಬ್ ಡಿವಿಜನ್ ಆಫೀಸರವರ ಮುಂದೆ ಮುಗಿಯಿತು ಚುನಾವಣೆ ಆದ ದೊಡ್ಡಮನುಷ್ಯರು ಯಾರೆಂದರೆ, ಮ|| ಗಳಾದ ವಕೀಲ್ ಕುಮಾರ್ ಚಂದ್ರಶೇಖರಯ್ಯನವರು, ಹೆಡ್ ಜಿ ಶ್ರೀಕಂಠಯ್ಯನವರು ಚಾಟಿ ಯಸುಖ ಭೂಲಿಂಗಪ್ಪನವರು, ದೇವಾಂಗದ ದಾಸಶೆಟ್ಟರು ರುಮಾಲೆ ರುದ್ರಪ್ಪನವರು ಅನೇಕ ವರ್ಷಗಳಿಂದ ಮ್ಯುನಿಸಿಪಲ್ ಕೌನ್ಸಿಲರಾಗಿದ್ದವರ ಪೈಕಿ ಮ್ಯುನಿಸಿಪಲ್ ಪ್ರೆಸಿಡೆಂಟರವರೊಬ್ಬರು ಹೊರತು ಮಿಕ್ಕವರಿಗೆ ವಿಶ್ರಾಂತಿ ಸುಖವು ಲಭ್ಯವಾಯಿತು ಇವರುಗಳೆಲ್ಲಾ ಪ್ರಜಾಭಿಮಾನಿಗಳಾಗಿ ದೊಡ್ಡಬಳ್ಳಾಪುರದ ಹಿತವನ್ನು ಮನಸ್ಸಿಟ್ಟು ತಮ್ಮಿಂದಾಗುವ ಮಟ್ಟಿಗೂ ನೂತನ ಸರಬರಾಯಿಗೆ ತಕ್ಕಷ್ಟು ಸಹಾಯ ಮಾಡಿದ್ದನ್ನು ಮತ್ತು ಉದಾರವಾಗಿಯೂ ಧರ್ಮದ ಮನಸ್ಸಿನಿಂದಲೂ ಮಾಡಿ ಕೀರ್ತಿ ಪಡೆಯುವವರಾಗಲೆಂತ ಕೋರಬೇಕಾಗಿದೆ ಸರ್ಕಾರ ತರಫಿನಲ್ಲಿ ಚುನಾಯಿಸ ಲಾಗುವ 5 ಮೆಂಬರುಗಳು ಯಾರೆಂದು ಪ್ರಕಟವಾಗಿಲ್ಲ ಈ ಸಾರಿ ಮೆಂಬರುಗಳನ್ನು ಚುನಾಯಿಸುವ ಹಕ್ಕು ವಿಶೇಷ ಪ್ರಜೆಗಳಿಗೆ ಲಭ್ಯವಾದ್ದರಿಂದ ಅವರೆಲ್ಲರೂ ಕಳೆದ ಶುಕ್ರವಾರ ಸಾಯಂಕಾಲ ಅಮಲ್ದಾರರವರ ರೂಬರೂಬು ಒಂದು ಮಹಾಸಭೆಯಲ್ಲಿ ಸೇರಿ ತಮಗಿಷ್ಟವಾದವರಿಗೆಲ್ಲಾ ಸಮ್ಮತಿಗಳನ್ನು ಕೊಡುವ ಮೂಲಕ ತಿಳಿಸಿದರು

ಕೋಲಾರ ತಾ ತೀರನಹಳ್ಳಿ —ಈ ಪ್ರಾಂತ್ಯ ಧಾನ್ಯಗಳೆಲ್ಲಾ ಒಕ್ಕಣೆಯಾಗಿ ಮೊದಲು ದವಸದ ಧಾರಣೆಯಿಂತೂ ಏರುತ್ತಿದೆ ಸಾಲದ್ದಕ್ಕೆ ಕಳ್ಳಕಾಕರ ಭಯವು ಮತ್ತು ಬೆಂಕಿಯ ಹಾವಳಿ ಜಾಸ್ತಿಯಾಗಿದೆ ಇಲ್ಲಿಯ ಒಂದು ಕ್ಯಾಂಪಿಗೆ ಬೆಂಕಿ ಹತ್ತಿ ಕೆಲವು ತಗಲಿತು ಆದರೆ ಜನಸಹಾಯ ಒದಗಿದ್ದರಿಂದ ಕೂಡ್ಲೆ ಆರಿಸಲ್ಪಟ್ಟಿತು ಕಳೆದ ವಾರ ಇಲ್ಲಿಗೆ ಸಮೀಪದಲ್ಲಿರುವ ಗೊಂದಿಹೊಸಹಳ್ಳಿ ಎಂಬ ಗ್ರಾಮದಲ್ಲಿ ಹಲವು ಮನೆಗಳು ಸುಟ್ಟುಹೋದವು ಸುತ್ತುಮುತ್ತು ಗ್ರಾಮಗಳಲ್ಲಿ ಸಿಡುಬಿನ ರೋಗವು ಜಾಸ್ತಿಯಾಗಿದೆ ಇಲ್ಲಿಯೂ ಪ್ರಾರಂಭಿಸಿದ್ದು, ವ್ಯಾಕ್ಸಿನೇಟರವರು ಸುಮಾರು 40 ಮಂದಿ ಬಾಲಕರಿಗೂ, ದೊಡ್ಡವರಿಗೂ ವ್ಯಾಕ್ಸಿನೇಷನ್ ಮಾಡಿದ್ದರ ಫಲವಾಗಿ ಸಿಡುಬಿನ ಹಾವಳಿ ನಿಂತುಹೋಗಿದೆ —ಮನುಷ್ಯನ ಆರೋಗ್ಯರಕ್ಷಣೆಗೆ ಮುಖ್ಯವಾದದ್ದು ನೀರು ಇಂಥಾದ್ದರಲ್ಲಿ ಈ ಊರಿನಲ್ಲಿ ನಾಯಕರೇ ಮುಂತಾದವರು ಬಳಸತಕ್ಕ ಹೊರಗಿನ ಸಿಹಿನೀರಿನ ಭಾವಿಯಲ್ಲಿ ಗ್ರಾಮದ ಜನರು ಬಟ್ಟೆ ಒಗೆದು ಮುಸುರೆ ತೊಳೆಯುವರು ಅದೇ ನೀರನ್ನು ಅಡಿಗೆ, ಕುಡಿಯುವದಕ್ಕೆ ಉಪಯೋಗಿಸುವರು ಇವನ್ನೆಲ್ಲಾ ನೋಡಿದರೆ ಈ ಗ್ರಾಮದವರಿಗೆ ಆರೋಗ್ಯ ವಿಚಾರವೇ ಗೊತ್ತಿಲ್ಲವೆಂದು ಕಂಡುಬರುತ್ತದೆ ಈ ವಿಷಯದಲ್ಲಿ ಗ್ರಾಮದ ಪಟೇಲರೇ ಮುಂತಾದ ಮುಖಂಡರು ಸಿಗಾ ತೆಗೆದುಕೊಂಡಾರೆಂದು ನಂಬುತ್ತೇನೆ —ತಾ 8 ನೇ ಭಾನುವಾರ ಇಲ್ಲಿನ ಗೌ ಸ್ಕೂಲಿನಲ್ಲಿ ನಡೆಯುವ ಯೂನಿಯನ್ ಆಸೋಸಿಯೇಷನ್ ಸಂಘಕ್ಕೆ ಸ್ಥಳ ಮತ್ತು ಪರಸ್ಥಳದ ಜನಗಳು ಸಹಾನಾಗಿ ಸೇರಿದ್ದರು ಸ್ಕೂಲ್ ಮಾಸ್ಟರು ಮ|| ಎನ್ ಕರಿಯಪ್ಪನವರು ವಿದ್ಯಾಭ್ಯಾಸದ ವಿಷಯವಾಗಿಯೂ, ಕೆಂಪಯ್ಯನೆಂಬ ವಿದ್ಯಾರ್ಥಿಯು ವಿದ್ಯಾ ಪ್ರಚಾರದ ವಿಷಯವಾಗಿಯೂ ಉಪನ್ಯಾಸಗಳನ್ನು ಹೇಳಿದರು ಆಗ ಮ| ತರೀಕೆರೆ ವೆಂಕಟರಾಯಪ್ಪನವರು ಆ ಉಪನ್ಯಾಸಗಳ ಮುಖ್ಯಾಂಶಗಳು ಸರ್ವರಿಗೂ ತಿಳಿಯುವಂತೆ ತಕ್ಕ ದೃಷ್ಟಾಂತಗಳೊಡನೆ ತಿಳಿಸಿದರಲ್ಲದೆ ಸ್ತ್ರೀಯರಿಗೆ ಮುಖ್ಯವಾಗಿ ವಿದ್ಯಾಸಂಸ್ಕಾರವನ್ನು ನಡೆಯಿಸಲೇ ಬೇಕೆಂದು ಹೇಳಿದ್ದರ ಮೇರೆ ಗ್ರಾಮದ ಕೆಲವರು ತಮ್ಮ ಹೆಣ್ಣುಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಾಗಿ ಹೇಳಿದ ಬಳಿಕ ಸಭೆ ಬರಖಾಸ್ತಾಯ್ತು

ಹಿಂದೂಪುರ ತಾ|| ಪವಳೂರು —ಇಲ್ಲಿ ಹವ ಚೆನ್ನಾಗಿದೆ ದಿನಸಿ ಧಾರಣೆಗಳು ಕ್ಷಾಮಕಾಲ ಸೂಚಿಸುತ್ತವೆ —ಇಲ್ಲಿ ಈ ವರ್ಷ ಅಷೂರ್‌ಖಾನೆ ಮುಂದೆ ಇರುವ ಸ್ಥಳದಲ್ಲಿ ಛಪ್ಪರವನ್ನು ಹಾಕಿ ರಬೀ ಉಲ್ ಅವಲ್ ತಾ 11 ನೇ ರಾತ್ರಿ ತಮ್ಮ ಮತಸ್ಥಾಪಕರಾದ ಹಜರತ್ ಮೊಹಮ್ಮದ್ ಪೈಗಂಬರ್ ರವರ ಜನ್ಮದಿನದ ಜ್ಞಾಪಕಾರ್ಥವಾಗಿ ಇಲ್ಲಿನ ಮೊಹಮ್ಮದಿಯರು ಚಂದಾ ಹಾಕಿ, ಬಂದಿದ್ದ ಪರಸ್ಥಳದವರಿಗೂ, ಗ್ರಾಮಸ್ಥರಿಗೂ ಸುಮಾರು 500 ಜನಗಳಿಗೆ ಸುಖಭೋಜನವನ್ನು ಮಾಡಿಸಿದರು ಈ ಕೆಲಸಕ್ಕೆ ಹ|| ಖಾಜಿ ಸಯ್ಯದ್ ಹುಸೇನ್ ಸಾಹೇಬರೇ ಮುಖಂಡರಾಗಿ ಅವರ ಮಂಡಿಯಲ್ಲಿಯೇ ಈ ಕೆಲಸ ನೆರವೇರಿಸಿದರು ಮತ್ತು ಸದರಿ ಛಪ್ಪರವನ್ನು ನಾನಾ ಬಗೆಯಿಂದ ಅಲಂಕರಿಸಿ ದೀಪಗಳಿಂದ ಪ್ರಕಾಶಗೊಳಿಸಿದ್ದರಿಂದ ಛಪ್ಪರವು ಹೊಳೆಯುತ್ತಿತ್ತು ಮತ್ತು ಆ ರಾತ್ರಿಯೆಲ್ಲಾ ದೇವರ ಧ್ಯಾನಗಳು ಹಾಡಿದ ನಂತರ ಬತ್ತಾಸು, ಹೂ ಎಲ್ಲರಿಗೂ ಹಂಚಲ್ಪಟ್ಟು ಸಭೆಯು ಬರ್ಖಾಸ್ತಾಯಿತು —ಇಲ್ಲಿ ಕಳೆದ ತಿಂಗಳು ತಾ 23 ರಲ್ಲಿ ಪೆನುಗೊಂಡೆಯಿಂದ ಇಬ್ಬರು ಮುನ್ಸಿಫರು, ಐದಾರು ವಕೀಲರು ಒಂದು ಭಂಡಿರಸ್ತೆ ವ್ಯಾಜ್ಯ ಮದರಾಸು ಹೈಕೋರ್ಟಿನಿಂದ ಇಲ್ಲಿಗೆ ಬಂದಿರುವದರಿಂದ ಸದರಿ ರಸ್ತೆಯ ಇನ್ಸ್‌ಪೆಕ್ಷನ್ ಗಾಗಿ ಬಂದು ತಾ 2 ರಲ್ಲಿ ಇನ್ಸ್‌ಪೆಕ್ಷನ್ ಮಾಡಿಕೊಂಡು ವಾಪಸು ಹೋದರು ಮುನ್ಸಿಫರೂ ವಕೀಲರೂ ಇಲ್ಲಿಗೆ ಬಂದಿದ್ದರಿಂದ ಹ|| ಖಾಜಿ ಸಯ್ಯದ್ ಹುಸೇನ್ ಸಾಬರು ಅವರಿಗೆ ಫಲಪುಷ್ಪಾದಿಗಳಿಂದ ಮರ್ಯಾದೆ ಮಾಡಿದರು

ಕಾವೇರಿ ರಿಜರ್ವಾಯರ್ —ಈಗಾಗಲೇ ಬಿಸಿಲಿನ ತಾಪ ಸಹಿಸಲಸಾಧ್ಯ ಧಾರಣೆವಾಸಿಗಳು ಮಾತ್ರ ತುಂಬಾ ಪ್ರಿಯವಾಗಿವೆ —ಹೊಳೆಯ ಒಳಭಾಗದ ನಾಯಾ ಕೆಲಸವು ಸಂಪೂರ್ಣವಾಗಿ, ಅಗಲ ಮೇಲಕ್ಕೆ 2-3 ಅಡಿ ಕಟ್ಟಡವು ಎದ್ದಿರುತ್ತದೆ ಕೆಲಸಗಳು ಮಾತ್ರ ಚುರುಕಾಗಿ ನಡೆಯುತ್ತಿವೆ —ಕಳೆದ 12 ನೇ ತಾರೀಖು ಗುರುವಾರ ಇಲ್ಲಿಯ ಸೌತ್ ಬ್ಯಾಂಕ್ ಮರಾಠಾ ಕ್ಯಾಂಪಿಗೆ ಬ್ಯಾಗೋ ಬೆಂಕಿಯು ಹತ್ತಿಕೊಂಡು ಸುಮಾರು 20 30 ಗುಡಿಸಲುಗಳು ನಾಶವಾದವು ಅಷ್ಟರೊಳಗೆ ಇಲ್ಲಿಯ ಸಬ್ ಓವರ್ಸಿಯರುಗಳೂ ಕೆಲಸಮಾಡುತ್ತಿದ್ದ ಜನಗಳೂ ಓಡಿ ಬಂದು ಬೆಂಕಿಯನ್ನು ಆರಿಸಿದರು ಅಲ್ಲಿ ನೀರಿಗೆ ಕೊಂಚ ಅನನುಕೂಲವಾದ್ದರಿಂದ ಇಷ್ಟು ಅನರ್ಥಕ್ಕೆ ಕಾರಣವಾಯ್ತು ಅಷ್ಟರೊಳಗೆ ಇಲ್ಲಿನ ವಾಟರ್ ಸಪ್ಲೈ, ಫೋರ್‌ಮನ್ ಮ|| ಬಿ ಹಯಗ್ರೀವಾಚಾರ್ರು, ಸಬ್ ಓವರ್ಸಿಯರ್ ಮ|| ಬೆಳವಾಡಿಯವರೂ ತ ಬಾ ಸಹ ಸಪಟ್ಟು ಹೊಸ್ ಪೈಪು ಹಾಕಿ ನೀರು ಒದಗಿಸಿಕೊಟ್ಟದ್ದು ಸ್ತೋತ್ರಾರ್ಹವಾಗಿರುತ್ತದೆ ಷೆಡ್ಡುಗಳನ್ನು ಕಳಕೊಂಡ ಜನಗಳಿಗೆ ನಮ್ಮ ಇಂಜನಿಯರ್ ಮ| ಬಿ ಬಿ ಗರುಡಾಚಾರ್ರು ಸಾಮಾನ್ ಮುಂತಾದವುಗಳನ್ನು ಕೊಡಿಸಿದ್ದರ ಮೇಲೆ ಅವರು ಹೊಸದಾಗಿ ಷೆಡ್ಡು ಹಾಕಿಕೊಂಡಿರುತ್ತಾರೆ ಈ ಅನಾಹುತದಿಂದ ಆ ಜನಗಳಿಗೆ ಸುಮಾರು 300 ರೂಪಾಯಿ ತನಕ ನಷ್ಟವಾಗಿರಬಹುದು —ರಾತ್ರಿವೇಳೆ ಕುಡುಕರ ಹಾವಳಿ ಅಂಗಡಿ ಬೀದಿಯಲ್ಲಿ ಜಾಸ್ತಿಯಾಗಿರುವಂತೆ ಕಾಣುತ್ತ ನಮ್ಮ ಇನ್ಸ್‌ಪೆಕ್ಟರ್ ಮ|| ಸುಬ್ಬರಾಯರು ಬಂದೋಬಸ್ತುಮಾಡಿಸುತ್ತಾರೆಂತ ನಂಬಿರುತ್ತೇನೆ —ಇಲ್ಲಿಯ ಟಪ್ಪಾಲಿಗೆ ಜವಾಬು ಇಡುತ್ತಾರೆಂಬ ವದಂತಿ ಮಾತ್ರ ಇರುತ್ತದೆಯೇ ಹೊರ್ತು ಇನ್ನೂ ಯಾವದೂ ನಡೆದಂತೆ ತೋರುವದಿಲ್ಲ —ತಾ 15 ನೇ ಭಾನುವಾರ ನಮ್ಮ ಸೂಪ್ರೆಂಟೆಂಡಿಂಗ್ ಇಂಜನಿಯರ್ ಮ ಎ ಸುಬ್ಬರಾಯರು ತಮ್ಮ ಮನೆಯಲ್ಲಿ ಇಲ್ಲಿಯ ನಾರ್ತ ಬ್ಯಾಂಕ್ ಮತ್ತು ಸೌತ್ ಬ್ಯಾಂಕಿನಲ್ಲಿರುವ ಎಲ್ಲಾ ಜನರುಗಳನ್ನೂ ಕರಸಿಕೊಂಡು ಒಂದು ಸಂತೋಷಕೂಟವನ್ನು ನಡಿಸುವದರ ಮೂಲಕ ಸಂತರ್ಪಣೆಯನ್ನು ಬಹಳ ವಿಜೃಂಭಣೆಯಾಗಿ ನೆರವೇರಿಸಿದರು —ಕಾಮಗಾರಿಯ ವಿಚಾರಣೆಮಾಡಲಿಕ್ಕೆ ಚೀಫ್ ಇಂಜನಿಯರವರು ದಯಮಾಡಿಸಿರುತ್ತಾರೆ

ಮಧುಗಿರಿ —ಈ ಟವನು ಭಾರಿ ತಾಲ್ಲೂಕ್ ಆಗಿಯೂ, ಸಬ್ ಡಿವಿಜನ್ ಆಫೀಸ್ ಇರತಕ್ಕ ಸ್ಥಳವಾಗಿಯೂ ಇದೆ ಜಲಾಧಾರವಾಗಿರುವ ಚೋಳೇನಹಳ್ಳಿ ತಲಾವ್ ಕಾಮಗಾರಿ ವಿಚಾರದಲ್ಲಿ ಪ್ರತಿ ಒಬ್ಬ ಆಫೀಸರವರೂ ಪರಾಂಬರಿಸಿದ್ದಾಗ್ಯೂ ಕಾಮಗಾರಿಗೆ ಪುರುಸೊತ್ತಾಗಲಿಲ್ಲ ಈಗ 10 15 ವರ್ಷಗಳ ಲಾಗಾಯಿತು ಕಾಮಗಾರಿ ವಿಚಾರದಲ್ಲಿ ರಿಪೋರ್ಟು ನಡೆಯುತ್ತಾ ಇದೆಯೇ ಶಿವಾಯಿ ರೈತಾಪಿ ಜನಗಳ ಗೋಳಾಟ ಬೇರೆ ತಪ್ಪಲಿಲ್ಲ ಕಂದಾಯದ ಬಿಸ್ತು ಪ್ರಾರಂಭವಾಯ್ತು ಈ ಸಲ ಕುಷ್ಕಿ ಫಸಲು ಸಹ ಆಗಲಿಲ್ಲ 100 ರೂಪಾಯಿ ಕಂದಾಯ ಕೊಡತಕ್ಕ ರೈತನಿಗೆ ಒಂದು ಪಲ್ಲ ರಾಗಿ ಸಹ ಆಗಿರುವುದಿಲ್ಲ ತರೀ ಫಸಲಿಗೆ ಮಾರ್ಗವೇ ಇಲ್ಲ ಈ ಕೆರೆಯ ನೀರು ಚೋಳೇನಹಳ್ಳಿ, ಹರಿಹರರೊಪ್ಪ ಮಿದ್ದಗಿರಿ, ಪಸ್ಕೆ ಈ ಗ್ರಾಮಗಳಿಗೆ ಸರಬರಾಯಿ ಆಗಬೇಕಾಗಿದೆ ಈ ಗ್ರಾಮಗಳ ರೈತರ ಗೋಳಾಟ ಹೆಚ್ಚಾಗಿರುತ್ತೆ ದಯಾಳುಗಳಾದ ದಿವಾನ್ ಸಾಹೇಬರವರು ಕೆಲವು ತಾಲ್ಲೂಕುಗಳಲ್ಲಿ ಸರ್ಕೀಟು ಹೊರಡುವುದಾಗಿ ವದಂತಿ ಇದೆ ಅವರು ಕಷ್ಟವನ್ನು ಪರಿಹರಿಸುವ ಉದ್ದಿಷ್ಟ ಈ ತಾಲ್ಲೂಕಿಗೂ ದಯಮಾಡಿಸಿ ರೈತರ ಗೋಳಾಟವನ್ನು ಹೋಗಲಾಡಿಸಬಹುದೆಂದು ಹಾರೈಸುತ್ತಿರುವರು —ಈ ಟೌನ್ ನಲ್ಲಿ ಮಾರಿ ಜಾತ್ರೆಯು ಮಾರ್ಚಿ ತಾ 10 ರಿಂದ ಪ್ರಾರಂಭವಾಗುತ್ತೆ ಜಾನ್ವಾರುಗಳ ಪ್ರದರ್ಶನವನ್ನು ಸ್ಥಾಪಿಸಿದ ಸಬ್ ಡಿವಿಜನ್ ಆಫೀಸರವರಾದ ಮ ಕೃಷ್ಣಸ್ವಾಮಯ್ಯಂಗಾರ್ರವರು ಈಗನಿಂದಲೇ ಜಾನ್ವಾರುಗಳಿಗೆ ತಕ್ಕ ನೀರು ಒದಗುವಂತೆ ಏರ್ಪಾಡು ಮಾಡಿಸುತ್ತಿರುವರು ಇವರು ಈ ಸಬ್ ಡಿವಿಜನ್ ನಲ್ಲಿರತಕ್ಕ ರೈತಾಪಿ ಜನಗಳಿಗೆ ಬಹಳ ಉಪಕಾರಿಗಳಾಗಿರುತ್ತಾರೆ ಜಾತ್ರೆಕಾಲದಲ್ಲಿ ಪರಸ್ಥಳಗಳಿಂದ ಬರತಕ್ಕ ಜನಗಳ ಅನ್ನೋದಕಗಳಿಗೆ ಅನುಕೂಲವಾಗುವಂತೆ ಪಟೇಲ್ ರಾಮೇಗೌಡರು ತಮ್ಮ ಕುಲಸ್ಥರ ಕಡೆಯಿಂದ ಚಂದಾ ಎತ್ತಿ ಈ ಧರ್ಮಕಾರ್ಯವನ್ನು ನಡಿಸುವ ಉದ್ದಿಷ್ಟ ಈಗಿನಿಂದ ಪ್ರಯತ್ನಮಾಡುತ್ತಿರುವರು —ಇಲ್ಲಿ ಟೌನ್ ಪಂಚಾಯತಿ ಬಹುಮಟ್ಟಿಗೆ ಕ್ರಮವಾಗಿರುತ್ತೆ ಇಲ್ಲಿನ ಆಸ್ಪತ್ರೆಗೆ ಬಹುದೂರ ಪಾಸಲೆಯಿಂದ ಗ್ರಾಮಸ್ಥರು ಒಂದು ಒಳ್ಳೇ ಖ್ಯಾತಿಯನ್ನು ಹೊಂದುತ್ತಿದಾರೆ —ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರಿಗೆ ತುಮಕೂರಿಗೆ ವರ್ಗವಾದ ಸಂಗತಿ ಅನೇಕರಿಗೆ ತುಂಬಾ ವ್ಯಸನ ಇವರು ತುಂಬಾ ಉಪಕಾರಿಗಳು, ನಿಧಾನಸ್ಥರು ಅಲ್ಲದೆ ಪೋಲೀಸ್ ಬಂದೋಬಸ್ತು ವಾರಿ ವಿಷಯ ಯಾವ ಪುಕಾರೂ ಇಲ್ಲದೆ ಅನೇಕರ ಪ್ರೀತಿಗೆ ಪಾತ್ರರಾಗಿದ್ದರು ಮುಂದೆ ಬರತಕ್ಕವರೂ ಇವರಂತೆಯೇ ಇದ್ದಾರೆಂದು ನಿರೀಕ್ಷಿಸುತ್ತೇವೆ

ದೇವನಹಳ್ಳಿ ಇಲ್ಲಿ ಧಾರಣೆವಾಸಿಗಳು ದಿನೇದಿನೇ ಏರುತ್ತಲಿವೆ ಬಿಸಿಲಿನ ಝಳವು ಜಾಸ್ತಿಯಾಗುತ್ತದೆ ಕೋಟೆಯ ಕೆರೆಯಲ್ಲಿ ಗಿಡಗಳು ಪಾಚಿ ವಗೈರೆ ತುಂಬಿಕೊಂಡು ಕುಡಿಯುವದಕ್ಕೆ ನೀರು ಇಲ್ಲದೆ ಒಣಗಿ ಹೋಗಿರುತ್ತೆ ಇದರ ಕಚಡಾ ವಗೈರೆ ತೆಗೆದುಹಾಕಿಸಿ ಪಾಕುಮಾಡಿಸುತ್ತೇನೆಂಬದಾಗಿಯೂ, ಎರಡು ಭಾವಿಗಳನ್ನು ತೆಗಸುವ ಯೋಚನೆಯಲ್ಲಿರುವೆಂಬದಾಗಿಯೂ ನಮ್ಮ ಅಮಲ್ದಾರ್ರವರು ಅಪ್ಪಣೆ ಕೊಡಿಸಿರುತ್ತಾರೆ ಮ| ವೆ ಶ್ರೀನಿವಾಸಯ್ಯಂಗಾರ್ರವರು ಇಲ್ಲಿಗೆ ಅಮಲ್ದಾರ್ರಾಗಿ ಬಂದ 3 ತಿಂಗಳ ಲಾಗಾಯ್ತು ಪ್ರಜೆಗಳಲ್ಲಿ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿ ತಮ್ಮ ಕೆಲಸದಲ್ಲಿ ಜಾಗರೂಕತೆಯುಳ್ಳವರಾಗಿರುತ್ತಾರೆ ಇವರು ಗ್ರಾಮಾಂತರಗಳಲ್ಲಿ ನೀರು ಇಲ್ಲದ ಸ್ಥಳಗಳನ್ನು ಪರಾಂಬರಿಸಿ ನೀರಿನ ತೊಂದರೆ ಪರಿಹರಿಸುವಂತೆ ಭಾವಿಗಳನ್ನು ತೆಗಿಯುವ ಏರ್ಪಾಟು ಮಾಡುತ್ತಲಿದಾರೆ ಮತ್ತು ಕೋಆಪರೇಟಿವ್ ಸೊಸೈಟಿ ಒಂದನ್ನು ಸ್ಥಾಪನೆ ಮಾಡಬೇಕೆಂದು ಸನ್ನಾಹಗಳನ್ನು ಮಾಡುತ್ತಲಿದಾರೆ ಈ ಸಂಘಗಳ ರಿಜಿಸ್ಟ್ರಾರ್ರು ಮ ಎ ಎ ನಾರಾಯಣಯ್ಯಂಗಾರ್ರವರು ತಾ 1೧ ಕ್ಕೆ ಚಿತ್ತೈಸಿ ಈ ವಿಷಯವಾಗಿ ವಿವರಿಸಿ ಗ್ ನಡಿಸುತ್ತಾರೆಂದು ತಿಳಿಸಿದಾರೆ —ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಕಳೆದ ತಾ 13 ರಲ್ಲಿ ಮೋಟರಿನಲ್ಲಿ ದಯಮಾಡಿ ಎ ವಿ ಸ್ಕೂಲಿಗೆ ಬಂದು ಬಲಾತ್ಕಾರ ವಿದ್ಯಾಭ್ಯಾಸದ ಕಾನೂನ್ ವಿಚಾರವಾಗಿ ಇಲ್ಲಿನ ಮುಖ್ಯ ಆಫೀಸರುಗಳ ಇತರ ದೊಡ್ಡ ಮನುಷ್ಯರುಗಳ ಸಂಗಡ ಕಲೆತು ಸಂಭಾಷಿಸಿ, ಅಲ್ಲಿಂದ ಗರಲ್ಸ್ ಸ್ಕೂಲಿಗೆ ದಯಮಾಡಿಸಿ ಬಾಲಕಿಯರ ಪೈಕಿ ಅಮಲ್ದಾರ್ರ ಕುಮಾರ್ತಿಯ ಹಾಡಿಕೆಯನ್ನು ಕೇಳಿ ತುಂಬಾ ಸಂತೋಷಪಟ್ಟರು ಬಳಿಕ ಹಿಂದುಸ್ತಾನಿ ಸ್ಕೂಲ್, ಕೊರಚರಪಾಳ್ಯದ ಸ್ಕೂಲುಗಳನ್ನು ಪರಾಂಬರಿಸಿ, ಲಂಡನ್ ಮಿಷನ್ ಸ್ಕೂಲಿಗೆ ದಯಮಾಡಿಸಿ, ಇಂಡಸ್ಟ್ರಿಯಲ್ ಸ್ಕೂಲ್ ಕೆಲಸವನ್ನು ಪರಾಂಬರಿಸಿ, ಗ್ರಾಂಟ್ ಹೆಚ್ಚಾಗಿ ಕೊಡಿಸುವದಾಗಿ ಹೇಳಿ ಸರ್ವರೊಂದಿಗೆ ದಯಮಾಡಿಸುತ್ತಾ, ಗೌ|| ಎ ವಿ ಸ್ಕೂಲು ಊರಿನೊಳಗಿರುವದರಿಂದ ಅನಾರೋಗ್ಯಕ್ಕೆ ಕಾರಣವಾಗಿರುತ್ತೆಂತಲೂ, ಪ್ಲೇಗ್ ವಗೈರೆ ಉಂಟಾದ ಕಾಲದಲ್ಲಿ ಜನಗಳಿಗೆ ತೊಂದರೆ ಎಂಬದಾಗಿ ತಿಳಿದು ಊರಿನ ಆಚೆ ಮುಸಾಫರಿ ಬಂಗ್ಲೆಗೆ ದಕ್ಷಿಣ ಭಾಗದಲ್ಲಿರುವ ಜಮೀನ್ ನಲ್ಲಿ ಕಟ್ಟಡ ಕಟ್ಟಿಸುವಂತೆ ಅಪ್ಪಣೆಕೊಟ್ಟು 11½ ಘಂಟೆಗೆ ಮೋಟರಿನಲ್ಲಿ ಬೆಂಗಳೂರಿಗೆ ತೆರಳಿದರು —ಈ ತಾಲ್ಲೂಕಿಗೆ ಹೊಸ ಪೋಲೀಸ್ ಇನ್ಸ್‌ಪೆಕ್ಟರವರು ಬಂದಲಾಗಾಯ್ತು ಊರಿನಲ್ಲಿ ಕಳ್ಳತನ ವಗೈರೆ ನಡೆಯದಂತೆಯೂ, ಪ್ರಜೆಗಳಲ್ಲಿ ತುಂಬಾ ವಿಶ್ವಾಸಪರರಾಗಿ ಲಂಚ ರುಷುವತ್ತುಗಳಿಗೆ ಅವಕಾಶವಿಲ್ಲದಂತೆಯೂ ರಾತ್ರಿಕಾಲದಲ್ಲಿ ಬೇರೆ ಡ್ರೆಸ್‌ನಲ್ಲಿ ಸಂಚರಿಸಿ ಗಸ್ತಿನ ವಿಚಾರಣೆ ಮಾಡುತ್ತಾ ಇರುವದು ಸಂತೋಷಕರವಾಗಿದೆ ಪೋಸ್ಟ್ ಮಾಸ್ಟರವರು ದೊಡ್ಡವರು ಚಿಕ್ಕವರು ಎಂಬ ತಾರತಮ್ಯವನ್ನಿಡದೆ ಸರ್ವರಲ್ಲಿಯೂ ಏಕಮತ್ಯವುಳ್ಳವರಾಗಿರಬೇಕೆಂತ ಕೋರುತ್ತೇನೆ

ಇಂಡಿಯಾ ದೇಶದ ವೃತ್ತಾಂತಗಳು

ವೈಸ್‌ರಾಯಿ ಪ್ರಭುಗಳು ಮುಂದೆ ನವೆಂಬರ್ ತಿಂಗಳಲ್ಲಿ ಮಣಿಪುರಕ್ಕೂ ಅಲ್ಲಿಂದ ಬರ್ಮಾ ಆಧಿಪತ್ಯಕ್ಕೂ ದಯಮಾಡುವವರಾಗಿದಾರೆ

* * *

ಸಿಲೋನ್ (ಲಂಕಾ) ದ್ವೀಪಕ್ಕೆ ಇದುವರೆಗೆ ಪ್ಲೇಗ್ ಉಪದ್ರವು ಹೋಗಿರಲಿಲ್ಲ ಎರಡು ವಾರಗಳಿಂದ ಅಲ್ಲೂ ಇಲಿಗಳು ಸಾಯುವುದೂ, ಜನರಿಗೆ ಪ್ಲೇಗ್ ತಗಲುವುದೂ ಪ್ರಾರಂಭವಾಗಿ ಇದುವರೆಗೆ ಸುಮಾರು 15 ಮರಣಗಳಾಗಿರುತ್ತವೆ

* * *

ಗಾಯಕವಾಡಿ ಮಹಾರಾಜರವರು ಮಹಾರಾಣಿಯವರ ಸಮೇತ ಕಳೆದ ವಾರ ದೆಹಲಿಗೆ ದಯಮಾಡಿದ್ದು ವಾಪಸು ಬರೋಡೆಗೆ ಬಂದರು ಆ ದಂಪತಿಗಳು ಪರಿವಾರ ಸಮೇತ ಇಷ್ಟರಲ್ಲೇ ಯೂರೋಪಿಗೆ ಹೋಗಿ ಬರುವವರಾಗಿದಾರೆಂದು ಪ್ರಕಟವಾಗಿದೆ

* * *

ಮದರಾಸ್ ಮತ್ತು ಸಿಲೋನ್ ಆಧಿಪತ್ಯಗಳ ಗವರ್ನರುಗಳು ಈ ತಿಂಗಳು 25ನೇ ತಾರೀಖು ಧನುಷ್ಕೋಟಿಯಲ್ಲಿ ಸೇರಿ ಹಿಂದುಸ್ಥಾನಕ್ಕೂ ಸಿಲೋನ್ ಗೂ ಹೋಗಿಬರುವ ಲೋಹ ಮತ್ತು ಜಲಮಾರ್ಗಗಳಲ್ಲಿ ಆಮದು ರಫ್ತನ್ನು ಪ್ರಾರಂಭಮಾಡುವವರಾಗಿದಾರೆ

* * *

ಬೊಂಬಾಯಿ ನಗರದಲ್ಲಿ ಪಟ್ಟಣದ ರೊಚ್ಚನ್ನು ಭೂಮಿಯೊಳಗೇ ಕೊಡಿಸಿ ನಲ್ಲಿಗಳ ಮೂಲಕ ಸಾಗಿಸಬೇಕೆಂದೂ, ಈ ನಲ್ಲಿಗಳನ್ನು ಹಾಕುವುದಕ್ಕೆ 35 ಲಕ್ಷದ 62 ಸಾವಿರ ರೂಪಾಯನ್ನು ಖರ್ಚು ಮಾಡತಕ್ಕದ್ದೆಂದೂ ಮ್ಯುನಿಸಿಪಾಲಿಟಿಯವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ

* * *

ಹಿಂದುಸ್ಥಾನದಿಂದ ವ್ಯಾಪಾರದ ಸರಕನ್ನು ಸಾಗಿಸಿಕೊಂಡು ಹೋಗುತ್ತಿದ್ದ ಎರಡು ಸಣ್ಣ ಹಡಗುಗಳಿಗೆ ಪಾರ್ಶಿಯಾ ಖಾರಿಯಲ್ಲಿ ಸಮುದ್ರದ ಕಳ್ಳರು ನುಗ್ಗಿದರು ಕೂಡಲೇ ಆ ಹಡಗುಗಳಲ್ಲಿದ್ದವರೆಲ್ಲಾ ಹೆದರಿ ದೋಣಿಗಳಲ್ಲಿ ಕುಳಿತು ತಪ್ಪಿಸಿಕೊಂಡು ಬಂದರು ಕಳ್ಳರು ಇಬ್ಬರನ್ನು ಗುಂಡಿನಿಂದ ಹೊಡೆದುಕೊಂದರು ಅಷ್ಟರೊಳಗೆ ಬುಸ್ರಾ ಎಂಬ ಪಟ್ಟಣದಿಂದ ಇಂಗ್ಲಿಷ್ ರಾಯಭಾರಿಯು ಸೈನಿಕರನ್ನು ಕಳುಹಿಸಿ ಕೆಲವರನ್ನು ಹಿಡಿಸಿ ಶಿಕ್ಷೆಮಾಡುತ್ತಿದಾರೆ

* * *

ಅಫ್ಘಾನಿಸ್ಥಾನದಲ್ಲಿ ಅಮೀರರವರು ಅಪರಾಧಿಗಳನ್ನು ಕ್ರೂರತರವಾದ ಶಿಕ್ಷೆಗೆ ಗುರಿಪಡಿಸುವುದನ್ನು ಕ್ರಮೇಣ ತಪ್ಪಿಸುತ್ತಾ ಬಂದಿದಾರೆ ಅಪರಾಧಿಗಳನ್ನು ಕಗ್ಗತ್ತಲು ತುಂಬಿದ ಭಾವಿಗಳೊಳಗೆ ಇಟ್ಟು ಅವರಿಗೆ ಮೇಲಿನಿಂದ ಆಹಾರವನ್ನು ಬುಟ್ಟಿಗಳಲ್ಲಿ ಇಳಿಸಿ ಕೊಡುವುದನ್ನು ನಿಲ್ಲಿಸಿಬಿಟ್ಟರು ಅಂಥಾ ಭಾವಿಗಳನ್ನು ಮುಚ್ಚಿಸಿರುತ್ತಾರೆ ಇದಲ್ಲದೆ ಅಪರಾಧಿಗಳನ್ನು ಹಿಡಿದು ಕೈ ಕಾಲುಗಳನ್ನು ಕತ್ತರಿಸುವುದೇ ಮೊದಲಾದ ಕ್ರೂರತರದ ಶಿಕ್ಷೆಗಳನ್ನು ತಪ್ಪಿಸಿಬಿಟ್ಟರು

* * *

1912 ನೇ ನವೆಂಬರ್ ತಿಂಗಳಲ್ಲಿ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಶಿವಪುರ ಘಾಟಿನಲ್ಲಿ ಒಂದು ದೋಣಿಯು ನದಿಯಲ್ಲಿ ಮಗುಚಿಕೊಂಡಾಗ ಮಿ || ವಿಲ್ಸರ್ ಎಂಬಾತನೂ ಆರು ಮಂದಿ ದೇಶೀಯರೂ ತುಂಬಾ ಸಾಹಸಪಟ್ಟು ತಮ್ಮ ಪ್ರಾಣದ ಮೇಲೆ ಅಂಜದೆ ಆ ನದಿಯಲ್ಲಿ ಮುಳುಗಿಕೊಂಡ ಹತ್ತಾರು ಜನವನ್ನು ಎತ್ತಿ ಬದುಕಿಸಿದ್ದಕ್ಕಾಗಿ ಬಂಗಾಳಾ ಗವರ್ನರವರು ಕಳೆದ ವಾರ ಒಂದು ದೊಡ್ಡ ಸಭೆಯಲ್ಲಿ ಅವರಿಗೆಲ್ಲಾ ಬಿರುದಿನ ಬಿಲ್ಲೆಗಳನ್ನು ಕೊಟ್ಟು, ಅವರ ಸಾಹಸಕಾರ್ಯವನ್ನು ಕೊಂಡಾಡಿದರು

* * *

ಕರಾಚಿ ಪಟ್ಟಣದಲ್ಲಿ ಕಳೆದ ಡಿಸೆಂಬರ್ ತಿಂಗಳ ಅಂತ್ಯದಲ್ಲಿ ನಡೆದ ಹಿಂದುಸ್ಥಾನದ ಸಾರ್ವಜನಿಕ (ನ್ಯಾಷನಲ್ ಕಾಂಗ್ರೆಸ್) ಮಹಾಸಭೆಯಲ್ಲಿ ಹಿಂದುಸ್ಥಾನದ ರಾಜಕೀಯ ವಿದ್ಯಮಾನಗಳನ್ನು ಇಂಗ್ಲಾಂಡಿನಲ್ಲಿರುವ ಪ್ರಜೆಗಳಿಗೂ ದೊಡ್ಡ ಮನುಷ್ಯರಿಗೂ ಚೆನ್ನಾಗಿ ತಿಳಿಯುವಂತೆ ಮಾಡುವುದಕ್ಕೋಸ್ಕರ ಈ ದೇಶದ ಕೆಲವು ವಿದ್ಯಾವಂತರನ್ನು ಅಲ್ಲಿಗೆ ಕಳುಹಿಸಬೇಕೆಂದು ತೀರ್ಮಾನಮಾಡಿದರು ಬೊಂಬಾಯಿ ಆಧಿಪತ್ಯದವರು ಇದಕ್ಕಾಗಿ ಮ|| ಗಳಾದ ಸಮರಥ, ಮಹಮದ್ ಅಲಿ ಜಿನ್ನಾ, ಗುಲಾಂ ಮಹಮದ್ ಭುರ್ಗ್ರಿ ಎಂಬೀ ಮೂರು ಮಂದಿಯನ್ನು ಸೀಮೆಗೆ ಹೋಗಿಬರಲು ಚುನಾಯಿಸಿದಾರೆ

* * *

ಬೊಂಬಾಯಿ ಪಟ್ಟಣದ ಯೂಷರ್ ಲಾಥಾಂ ಕಂಪನಿಯಲ್ಲಿ ಗುಮಾಸ್ತೆಯಾಗಿದ್ದ ವಿನಾಯಕ ಗಣಪತಿ ಎಂಬುವನು ಒಂದು ಛಕ್ಕಿಗೆ ಸುಳ್ಳುರುಜು ಮಾಡಿ 10,925 ರೂಪಾಯಿಯನ್ನು ಒಂದು ಬ್ಯಾಂಕಿನಿಂದ ತೆಗೆದುಕೊಂಡನೆಂದು ಮೊಕದ್ದಮೆ ಹುಟ್ಟಿ ವಿಚಾರಣೆಯ ಅಂತ್ಯಭಾಗದಲ್ಲಿ ಜೂರಿ ಪಂಚಾಯಿತರು ಅಪರಾಧಿಯ ಮೇಲೆ ಮೊಕದ್ದಮೆ ರುಜುವಾತಾಗಲಿಲ್ಲವೆಂದೂ ಅವನು ನಿರಪರಾಧಿಯೆಂದೂ ತೀರ್ಮಾನ ಹೇಳಿದರು ಜಡ್ಜಿಯವರು ಅಪರಾಧವು ಬಹಳ ಪರಿಷ್ಕಾರವಾಗಿ ರುಜುವಾತಾಗಿದ್ದರೂ ಪಂಚಾಯಿತರು ಈ ಅಭಿಪ್ರಾಯವನ್ನು ಕೊಟ್ಟಿರುವುದು ಬಹಳ ವಿಷಾದಕರವಾಗಿದೆ ಎಂದೂ, ಅವರು ಧರ್ಮವಾದ ಅಭಿಪ್ರಾಯ ಹೇಳಲಿಲ್ಲವೆಂದೂ ಜಡ್ಜ್ ಮೆಂಟಿನ ಬರೆದು, ಅವರ ಅಭಿಪ್ರಾಯದಂತೆ ಅಪರಾಧಿಯನ್ನು ಖುಲಾಸ್ ಮಾಡಿಸಿಬಿಟ್ಟರು

ಬೊಂಬಾಯಿ ಪಟ್ಟಣದ ಪರೇಲ್ ರೋಡಿನಲ್ಲಿ ಡೇವಿಡ್ ಹತ್ತಿ ಕಾರ್ಖಾನೆಗೆ ಕಳೆದ ಮಂಗಳವಾರ ಬೆಂಕಿಬಿದ್ದು ಅರ್ಧಗಂಟೆಯೊಳಗಾಗಿ 80,000 ರೂಪಾಯಿನ ಸೊತ್ತು ಸುಟ್ಟುಹೋಯಿತು

ದಕ್ಷಿಣ ಆಫ್ರಿಕದಲ್ಲಿರುವ ಹಿಂದುಸ್ಥಾನದ ಪ್ರಜೆಗಳ ಕಷ್ಟನಿವಾರಣೆಗಾಗಿ ಬೊಂಬಾಯಿ ಕಮಿಟಿಯವರು ಇದುವರೆಗೆ 3,39,853 ರೂಪಾಯನ್ನು ಚಂದಾ ಕೂಡಿಸಿ ಕಳುಹಿಸಿರುವಂತೆ ತಿಳಿದುಬಂದಿದೆ.

ಕಲ್ಕತ್ತಾಪಟ್ಟಣದಲ್ಲಿ ಸಯ್ಯದ್ ಖಿಲಾಫತ್ ಹುಸೇನ್ ಎಂಬೊಬ್ಬ ಬ್ಯಾರಿಸ್ಟರು ತನ್ನ ಕಕ್ಷಿಗಾರರಿಗೆ ಮೋಸಮಾಡಿದನೆಂಬ ಮೊಕದ್ದಮೆ ಬಂದು ಕಳೆದ ವಾರ ಆತನಿಗೆ ಒಂಭತ್ತು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು

ಹಿಂದುಸ್ಥಾನದ ವೈಸ್‌ರಾಯರಾಗಿದ್ದು ಸೀಮೆಗೆ ಹೋಗಿರುವ ಲಾರ್ಡ್ ಮಿಂಟೋ ಪ್ರಭುಗಳಿಗೆ ತುಂಬಾ ಕಾಯಿಲೆಯಾಗಿದೆ ಎಂದೂ, ಅವರ ಸಂಬಂಧಿಕರೆಲ್ಲಾ ಅವರ ಬಳಿಗೆ ಹೋಗಿರುತ್ತಾರೆಂದೂ ತಂತೀವರ್ತಮಾನ ಬಂದಿದೆ

ಕಲ್ಕತ್ತಾ ಪಟ್ಟಣದಿಂದ ಗಯೆಗೆ 290 ಮೈಲಿ ದೂರ ಮೋಟರ್ ಬೈಸಿಕಲ್‌ಗಳ ಜೂಜು ಬಿಡಬೇಕೆಂದೂ, ಗೆದ್ದವರಿಗೆ ಟಿಕ್ಕಾರಿ ಮಹಾರಾಜರವರು 1,500 ರೂಪಾಯಿ ಇನಾಮು ಕೊಡುತ್ತೇವೆಂದೂ ತಿಳಿಸಿದರು ಈ ಜೂಜು ಈ ತಿಂಗಳ ಕಡೇ ದಿನ ನಡೆಯುವಂತೆ ಏರ್ಪಾಡಾಗಿದೆ

ಆಸ್ಸಾಂ ಡಿಸ್ಟ್ರಿಕ್ಟಿಗೆ ಸೇರಿದ ಷಿಲ್ಲಾಂಗ್ ಬೆಟ್ಟದ ಮೇಲೆ ನಾಯಿ ನರಿ ಕಡಿದವರಿಗೆ ಚಿಕಿತ್ಸೆ ಮಾಡುವಂಥಾ ಒಂದು ಆಸ್ಪತ್ರೆಯನ್ನು ಇಟ್ಟು ನಡಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಸಿಫಾರಸು ಮಾಡಿದ್ದಾರೆ ಇದು ಸ್ಟೇಟ್ ಸೆಕ್ರೆಟರಿಯವರಿಂದ ಇಷ್ಟರಲ್ಲೇ ಸ್ಯಾಂಕ್ಷನ್ ಆಗಬಹುದು

ಲೂಧಿಯಾನಾ ಪಟ್ಟಣದಲ್ಲಿ ಸ್ತ್ರೀಯರಿಗಾಗಿ ಒಂದು ವೈದ್ಯವಿದ್ಯಾಶಾಲೆಯು ಸ್ಥಾಪಿಸಲ್ಪಟ್ಟು ನಡೆಯುತ್ತಿದೆ ಅದರ ಕಟ್ಟಡಕ್ಕೆ 25,000 ರೂಪಾಯಿ ಗ್ರ್ಯಾಂಟನ್ನೂ, ಮೂರು ವರುಷ ಕಾಲ ಪ್ರತಿ ಸಾಲಿನಲ್ಲೂ 84,000 ರೂಪಾಯಿ ನಂತೆ ಸಹಾಯದ್ರವ್ಯವನ್ನೂ ಸರ್ಕಾರದವರು ಕೊಡುವಂತೆ ಒಪ್ಪಿರುತ್ತಾರೆ

ಪ್ರೊಫೆಸರ್ ರಾಮಮೂರ್ತಿಯವರು ಸಮಸ್ತಿಪುರದಲ್ಲಿರುವಾಗ್ಗೆ ಕಳೆದ 2 ನೇ ತಾ ಕಳ್ಳರು ಬಿದ್ದು ಅವರ ಬಾಬತು 93 ಚಿನ್ನದ ಮೆಡಲುಗಳಿದ್ದ ಒಂದು ಕೋಟು, ಬಂಗಾರದ ಗಡಿಯಾರ ಮತ್ತು ಸರಪಣಿ, ೩,000 ರೂಪಾಯಿನ ಒಂದು ಚಂದ್ರಹಾರ, ಇಷ್ಟನ್ನೆಲ್ಲಾ ಕದ್ದುಕೊಂಡು ಹೋಗಿದ್ದಾರೆಂದು ಪ್ರಕಟವಾಗಿದೆ.

ದಕ್ಷಿಣ ಕನಡಾ ಜಿಲ್ಲೆಯೊಳಗಿರುವ ಸಮಸ್ತ ರೈತರಿಂದಲೂ ಆ ಜಿಲ್ಲೆಯೊಳಗೆ ಕೃಷಿ ಬಿಡಾವಣೆಗೋಸ್ಕರ ಕಂದಾಯದ ಪ್ರತಿ ರೂಪಾಯಿಗೂ ಮೂರು ಪೈನಂತೆ ಕೃಷಿ ಸೆಸ್ಸನ್ನು ಹಾಕಿ ಹಣಕೂಡಿಸುತ್ತಾ ಬರಬಹುದೆಂದು ಮದರಾಸ್ ಸರ್ಕಾರದವರು ಆ ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನವನ್ನು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ

ಪೂರ್ವ ಬಂಗಾಳಕ್ಕೆ ಸೇರಿದ ಸಿಲ್‌ಹಟ್ ಪ್ರಾಂತ್ಯದಲ್ಲಿ ಕ್ಷಾಮ ಪ್ರಾಪ್ತವಾಗಿರೋಣದರಿಂದ ಸರ್ಕಾರದವರು ಇದುವರೆಗೆ ಒಂದು ಲಕ್ಷ ರೂಪಾಯಿ ತನಕ ಖರ್ಚುಮಾಡಿದರು ಈಗ ಅಲ್ಲಿ ಡೆಪ್ಯುಟಿ ಕಮಿಷನರವರು ಒಂದು ಮಹಾಜನ ಸಭೆಯನ್ನು ನಡಿಸಿ, ಕ್ಷಾಮನಿವಾರಣೆಗಾಗಿ ಒಂದು ಧರ್ಮ ಫಂಡನ್ನು ಏರ್ಪಾಡುಮಾಡಿದರು ಪ್ರಜೆಗಳು ಚಂದಾ ಕೊಡಲಾರಂಭಿಸಿದ್ದಾರೆ

ಹಿಂದುಸ್ಥಾನದಲ್ಲಿ ಸ್ತ್ರೀಯರು ಜಂಗಲಿಗೆ ಹೋಗಿ ಷಿಕಾರಿ ಮಾಡಿದರೆಂಬ ಸುದ್ದಿ ಅಪರೂಪವಾಗಿದೆ ಧಾರ್ ಸಂಸ್ಥಾನದ ಮಹಾರಾಣಿ ಸಾಹೇಬರವರು ಕಳೆದ ತಿಂಗಳಲ್ಲಿ ಷಿಕಾರಿಗೆ ಹೋಗಿ ಒಂದು ಭಾರಿ ಹುಲಿಯನ್ನು ಹೊಡೆದು ಕೊಂದರು ಆಕೆ ಷಿಕಾರಿ ಮಾಡಿದ್ದು ಇದೇ ಮೊದಲಲ್ಲ ಈ ಹಿಂದೆ ವಿಂಧ್ಯಪರ್ವತದ ಕಣಿವೆಯಲ್ಲಿ ಅವರು ಅನೇಕವೇಳೆ ಷಿಕಾರಿಗೆ ಹೋಗಿ ಇತರ ದುಷ್ಟಮೃಗಗಳನ್ನು ಕೊಂದಿರುವುದುಂಟು

ಕಳೆದ 17 ನೇ ತಾ ಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ 11,131 ಜನರಿಗೆ ಪ್ಲೇಗ್ ತಗಲಿತು 9,308 ಮರಣಗಳಾದವು ಈ ಮರಣಗಳ ಪಂಕ್ತಿಕೆ ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯ 7,991 ಮದರಾಸ್ 292, ಬಂಗಾಳಾ 1,999, ಸಂಯುಕ್ತ ಅಧಿಪತ್ಯಗಳು ೮100, ಪಂಜಾಬ್ 560, ಬರ್ಮಾ 120, ಮೈಸೂರು 91, ಹೈದರಾಬಾದ್ 70, ರಾಜಪುಟಾಣಾ 63, ಕಾಶ್ಮೀರ 1, ಈ ರೀತಿ ಮರಣಗಳಾಗಿವೆ

ಅಯೋಧ್ಯಾ ಪಟ್ಟಣದಲ್ಲಿ ಕಳೆದ ವರುಷ ಹಿಂದೂ ಮಹಮದೀಯರಿಗೆ ದೊಂಬಿ ಕಲಹ ನಡೆದದ್ದರಲ್ಲಿ ಸರ್ಕಾರದವರು 23 ಮಹಮದೀಯರಿಗೆ ಸಜಾ ಶಿಕ್ಷೆಯನ್ನು ವಿಧಿಸಿದರು ವೈಸ್‌ರಾಯಿ ಪ್ರಭುಗಳು ಕರುಣವಿಟ್ಟು ಆ ಶಿಕ್ಷೆಯನ್ನು ಮಾಫ್‌ಮಾಡಿ, ಅವರನ್ನೆಲ್ಲಾ ಬಿಡುಗಡೆಮಾಡಿಸಿದ್ದಲ್ಲದೆ, ಆ ದೊಂಬಿ ಕಲಹದಲ್ಲಿ ನಷ್ಟಪಟ್ಟ ಮಹಮದೀಯರಿಗೆಲ್ಲಾ ತಕ್ಕ ಹಾಗೆ ದ್ರವ್ಯಸಹಾಯ ಮಾಡಬೇಕೆಂದು ೩00 ರ ಪಾಯಿ ಸ್ಯಾಂಕ್ಷನ್ ಮಾಡಿರುವರು

ವಾಯುವ್ಯಸರಹದ್ದು ಪ್ರಾಂತಕ್ಕೆ ಸೇರಿದ ಕೋಟ ಮರದಾನ್ ಎಂಬ ದೇಶೀಯ ಸಂಸ್ಥಾನದ ರಾಜಧಾನಿಯಲ್ಲಿ ಇಪ್ಪತ್ತು ಜನ ಕಳ್ಳರು ಒಬ್ಬ ಹಿಂದೂ ಐಶ್ವರ್ಯವಂತನ ಮನೆಗೆ ನುಗಿದರು ಯಜಮಾನಗಿತ್ತಿಯು ಕಳ್ಳರನ್ನು ನೋಡಿ ಕೂಗಿಕೊಂಡಳು ಎಂಟು ಮಂದಿ ಪೋಲೀಸಿನವರು ಕೂಡಲೇ ಹೋಗಿ ಆ ಕಳ್ಳರನ್ನು ಹಿಡಿಯಬೇಕೆಂದು ಸಾಹಸಪಟ್ಟು ಅವರ ಕೂಡ ಕಾದಿ ಒಬ್ಬ ಕಳ್ಳನನ್ನು ಕೊಂದುಹಾಕಿದರು ಉಳಿದವರೆಲ್ಲಾ ಸಿಕ್ಕದೆ ಓಡಿಹೋದರು

ಲಾಹೋರ್ ಪಟ್ಟಣದಲ್ಲಿ "ಜಮೀನ್‌ದಾರ್" ಎಂಬ ಮುಸಲ್ಮಾನರ ವರ್ತಮಾನ ಪತ್ರಿಕೆಯ ಛಾಪಖಾನೆಯನ್ನು ಸರ್ಕಾರದವರು ಮುಟ್ಟುಗೋಲುಹಿಡಿದು, ಅದು ಪ್ರಕಟವಾಗದಂತೆ ಮಾಡಿದ್ದರಷ್ಟೆ ಈಗ ಆ ಪತ್ರಿಕೆಯನ್ನು ಮತ್ತೆ ಹೊರಡಿಸಬೇಕೆಂದು ಸಂಪಾದಕರು ಅರ್ಜಿ ಹಾಕಿದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 3,000 ರೂಪಾಯಿ ಠೇವಣಿ ಇಟ್ಟರೆ ಅಪ್ಪಣೆಕೊಡುತ್ತೇವೆಂದು ತಿಳಿಸಿದರು ಸಂಪಾದಕರು ಆ ಹಣವನ್ನು ಸರ್ಕಾರದಲ್ಲಿ ಕಟ್ಟಿ, ಮುಂದಿನ ತಿಂಗಳಿಂದ ಪತ್ರಿಕೆಯನ್ನು ಹೊರಡಿಸುವವರಾಗಿದ್ದಾರೆಂದು ತಿಳಿದುಬರುತ್ತದೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮಾಂಘೀರ ಪಟ್ಟಣದಲ್ಲಿ ಮಹಮದೀಯರು ಎರಡು ಪಂಗಡವಾಗಿ ಒಂದೇ ಮಸೀತಿಯಲ್ಲಿ ಎರಡು ಪಂಗಡದವರೂ ನಮಾಜುಮಾಡಬೇಕೆಂದು ಹೋರಾಡಿ, ಈಗ ಕೋರ್ಟಿಗೆ ಹೋಗಿದ್ದಾರೆ ಅಹಮದಿಗಳೆಂಬ ಒಂದು ಗುಂಪಿನವರು ತಾವು ಆ ಮಸೀತಿಯಲ್ಲಿ ನಮಾಜುಮಾಡುವಂತೆ ತಮಗೆ ಅವಕಾಶಮಾಡಿಕೊಡಬೇಕೆಂದು ಕೇಳುತ್ತಾರೆ ಎದುರು ಪಾರ್ಟಿಯ ಮುಸಲ್ಮಾನರು ಹೇಳುವುದೇನೆಂದರೆ—ಆ ಅಹಮದೀಯರು ಕಾಫರಿಗಳು ಅವರು ಕ್ವಾದೀನ್ ನಿವಾಸಿ ಗುಲಾಂ ಅಹಮದ್ ಖಾನ್ ಎಂಬ ಮೌಲ್ವಿಯ ಹಿಂಬಾಲಕರಾದದ್ದರಿಂದ ಅವರು ಮಹಮದೀಯರಲ್ಲ ಆದಕಾರಣ ಅವರಿಗೆ ತಮ್ಮ ಮಸೀತಿಯಲ್ಲಿ ನಮಾಜುಮಾಡುವುದಕ್ಕೆ ಹಕ್ಕಿಲ್ಲ ಎಂದು ಹೇಳುತ್ತಾರೆ ಮೊಕದ್ದಮೆಯು ಇನ್ನೂ ವಿಚಾರಣೆಯಲ್ಲಿದೆ

ಪೂರ್ವಬಂಗಾಳಕ್ಕೆ ಸೇರಿದ ಸಿಲ್‌ಹಟ್ಟಿನಲ್ಲಿ ಅರುಣಾಚಲಾಶ್ರಮವೆಂಬ ಮಠದಲ್ಲಿ ಕಳೆದ ವರುಷ ಗಲಭೆ ನಡೆದದ್ದರ ಮೇಲೆ ಸರ್ಕಾರದವರು ಆ ಮಠದ ಸ್ವಾಮಿ ದಯಾನಂದರವರನ್ನೂ ಅವರ ಹಿಂಬಾಲಕರಲ್ಲಿ ಕೆಲವರನ್ನೂ ಹಿಡಿದು ದರ್ಯಾಫ್ತುಮಾಡಿ, ಅವರಿಗೆಲ್ಲಾ ಸಜಾ ವಿಧಿಸಿದರು ಅವರ ಶಿಕ್ಷೆಯ ಅವಧಿಯು ಪೂರೈಸಿದ್ದರಿಂದ ಹಿಂದಿನ ವಾರ ಅವರನ್ನು ಬಂದೀಖಾನೆಯಿಂದ ಬಿಟ್ಟುಬಿಟ್ಟರು ಇವರನ್ನು ಎದುರುಗೊಳ್ಳುವುದಕ್ಕೆಂದು ಸುಮಾರು ಹದಿನೇಳು ಮಂದಿ ಹಿಂದು ಜನರು ಪೂರ್ವಬಂಗಾಳದಿಂದ ಕಲ್ಕತ್ತೆಗೆ ಬಂದಾಗ ಪೋಲೀಸಿನವರು ಅವರನ್ನೆಲ್ಲಾ ಅನುಮಾನದ ಮೇಲೆ ಮುಂದಕ್ಕೆ ಹೋಗಗೊಡದೆ ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದ್ದು ಅವರುಗಳೆಲ್ಲರ ಪೂರ್ವೋತ್ತರವನ್ನು ತನಿಖೆಮಾಡಿ ಸಮಾಧಾನವಾದ ಮೇಲೆ ಬಿಟ್ಟುಬಿಟ್ಟರು ಇವರಲ್ಲಿ ಇಬ್ಬರು ಪ್ಲೀಡರುಗಳು ಸೇರಿದ್ದರೆಂದು ತಿಳಿಯುತ್ತದೆ

ಕೆಲವು ತಿಂಗಳುಗಳ ಹಿಂದೆ ರಾಜಪುತ್ರ ಸಂಸ್ಥಾನಗಳಲ್ಲಿರುವ ಭಿಲ್ಲರೆಂಬ ಕಾಡುಜನರು ದಂಗೆ ಎದ್ದು ಅನೇಕ ಕ್ರೂರಕೃತ್ಯಗಳನ್ನು ನಡಿಸಿದರು ಗುರು ಗೋವಿಂದನೆಂಬುವವರು ಮುಖಂಡನಾಗಿ ನಿಂತು ಅವರಿಗೆಲ್ಲಾ ತಾನೇ ದೊರೆಯೆಂದೂ, ತನ್ನಲ್ಲಿರುವ ಮಂತ್ರ ಶಕ್ತಿಯಿಂದ ಸಮಸ್ತ ಶತ್ರುಗಳನ್ನೂ ಕೊಂದುಹಾಕಿ ಅವರ ಆಯುಧ ಮದ್ದು ಗುಂಡುಗಳನ್ನು ನಾಶಪಡಿಸಬಲ್ಲೆನೆಂದೂ ನಂಬಿಕೆ ಹುಟ್ಟಿಸಿ ಆ ಭಿಲ್ಲರನ್ನು ತನ್ನ ಹಿಂಬಾಲಕರಾಗಿ ಸೇರಿಸಿಕೊಳ್ಳುತ್ತಾ ಅವರ ಮೂಲಕ ಕಳ್ಳತನ ಕ್ರೂರಕೃತ್ಯಾದಿಗಳನ್ನು ಮಾಡಿಸಿದ್ದಲ್ಲದೆ ಸುನ್ತಿ ಸಂಸ್ಥಾನದಲ್ಲಿರುವ ಪ್ರತಾಪಗಡವೆಂಬ ಕೋಟೆಗೆ ಕಳೆದ ನವಂಬರ್ ತಿಂಗಳಲ್ಲಿ ಮುತ್ತಿಗೆಹಾಕಿಸಿದನು ಈಗ ಸರ್ಕಾರದವರು ಆ ಮುಖಂಡನನ್ನೂ 29 ಮಂದಿ ಹಿಂಬಾಲಕರನ್ನೂ ಹಿಡಿದು ಮೊಕದ್ದಮೆ ಮಾಡಿದರು ಇಬ್ಬರು ಸ್ಪೆಷಲ್ ಜಡ್ಜಿಗಳು ಇದಕ್ಕಾಗಿ ನೇಮಕವಾಗಿ, ಈ ಮೊಕದ್ದಮೆಯು ಆರು ದಿನ ವಿಚಾರಣೆ ನಡೆದು ಸ್ಪೆಷಲ್ ಜಡ್ಜರು ಕಳೆದ ಗುರುವಾರ ತೀರ್ಮಾನವನ್ನು ಹೇಳಿದರು ಗುರುಗೋವಿಂದನೆಂಬ ಮುಖಂಡನಿಗೆ ಮರಣದಂಡನೆಯಾಯಿತು ಆದರೆ ಇವನಿಗೆ ಕ್ಷಮಾಪಣೆ ಕೊಡಬಹುದೆಂದು ಜಡ್ಜಿಗಳು ಗವರ್ನ್‌ಮೆಂಟಿಗೆ ಸಿಫಾರಸು ಮಾಡಿದ್ದಾರೆ ಪುಂಜನೆಂಬ 2 ನೇ ಅಪರಾಧಿಗೆ ಬಂಕೋಲ್ ಸಜಾ, ಉಳಿದ 26 ಮಂದಿಗೂ ತಲಾ ಮೂರು ಮೂರು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿತು

ಬೊಂಬಾಯಿ ಪಟ್ಟಣದ ಭೂಲೇಶ್ವರ ಬಜಾರಿನಲ್ಲಿ ಕಳೆದ ವಾರ ಆರು ಅಂತಸ್ತಿನ ಒಂದು ದೊಡ್ಡ ಮನೆಗೆ ಬೆಂಕಿಬಿದ್ದು ಬಹು ದುಃಖಕರವಾದ ರೀತಿಯಲ್ಲಿ ಎಂಟು ಪ್ರಾಣಗಳು ನಷ್ಟವಾದವು ಮಾರ್ವಾಡಿಗಳು ಮೇಲಣ ಅಂತಸ್ತುಗಳಲ್ಲಿ ವಾಸಮಾಡುತ್ತಾ ತಮ್ಮ ವ್ಯಾಪಾರ ಸರಕುಗಳನ್ನು ಕೆಳಗಡೆ ಇಟ್ಟು ವಿಕ್ರಯ ಮಾಡುತ್ತಿದ್ದರು ಆ ಮನೆಯ ಉಪ್ಪರಿಗೆಗೆ ಹತ್ತಲು ಒಂದೇ ಒಂದು ಹಂತವಿದ್ದಿತು ಪ್ರಾರಂಭದಲ್ಲೇ ಈ ಹಂತವು ಹತ್ತಿಕೊಂಡು ಉರಿದುಹೋಯಿತು ಸುಮಾರು 100 ಜನರು ಮೇಲಣ ಮಹಡಿಗಳಲ್ಲಿ ಸಿಕ್ಕಿಕೊಂಡುಬಿಟ್ಟರು ಅವರಲ್ಲೂ ಅನೇಕರು ಉರಿಯೊಳಗೇ ನುಗ್ಗಿ ಹೊರಕ್ಕೆ ಬಂದರು ಸುಮಾರು 30 ಜನರು ಮರಣದ ಬೋನಿನೊಳಗೆ ಸಿಕ್ಕಿಕೊಂಡು ಕೊರಗುತ್ತಿದ್ದರು ಕೆಲವರು ಹಾರಿ ಬಿದ್ದು ಉಪ್ಪರಿಗೆಯಿಂದಲೇ ಎದುರು ಮನೆಯ ಉಪ್ಪರಿಗೆಗೆ ಹಾರಿದರು ಇವರಲ್ಲಿ ಮೂರು ಮಂದಿ ಸರಿಯಾಗಿ ಹಾರಲಾರದೆ ಮೇಲಿಂದ ರಸ್ತೆಗೆ ಬಿದ್ದು ತಕ್ಷಣ ಬಹು ಭಯಂಕರವಾದ ಮರಣಕ್ಕೆ ಗುರಿಯಾದರು ಉಳಿದವರು ತಮ್ಮ ಪ್ರಾಣದ ಮೇಲಣ ಅಭಿಮಾನವನ್ನು ಬಿಟ್ಟು ಏಣಿ ಅಂತಸ್ತಿಗೆ ಹೋಗಿ ನಿಂತುಕೊಂಡರು ಇವರನ್ನು ಸರ್ಕಾರದ ಬೆಂಕಿ ಆರಿಸುವ ಸಿಬ್ಬಂದಿಯವರು ಬಹು ಪರಾಕ್ರಮದಿಂದ ಇಳಿಸಿ ಬದುಕಿಸಿದರು ಬೆಂಕಿಯನ್ನಾರಿಸಿ ನೋಡಿದಾಗ ಐದು ಜನರು ಒಳಗೆ ಸಿಕ್ಕಿ ಮೃತಪಟ್ಟಿದ್ದದ್ದು ಗೊತ್ತಾಯಿತು ಆ ಸರ್ಕಾರದ ಸಿಬ್ಬಂದಿಯವರು ತುಂಬಾ ಸಾಹಸಪಟ್ಟು ಬೆಂಕಿಯು ನೆರೆಹೊರೆ ಮನೆಗಳಿಗೆ ವ್ಯಾಪಿಸದಂತೆ ಬಹಳ ಬೇಗ ಅಷ್ಟಕ್ಕೇ ಅಡಗಿಸಿಬಿಟ್ಟರು ಆದಾಗ್ಯೂ ಸುಮಾರು ಒಂದೂವರೆ ಲಕ್ಷರೂಪಾಯಿನ ಸೊತ್ತು ನಷ್ಟವಾಯಿತು

ವರದಕ್ಷಿಣೆಕೊಡಬೇಕೆಂಬುವುದು ಬಂಗಾಳದಲ್ಲಿ ಬಹಳ ಕ್ರೂರವಾಗಿಯೂ, ತುಂಬಾ ದುಃಖಕರವಾಗಿಯೂ ಪರಿಣಮಿಸಿರುತ್ತದೆ ಕಳೆದ ವಾರ ಕಲ್ಕತ್ತಾ ಪಟ್ಟಣದೊಳಗೆ ಈ ವಿಷಯಕ್ಕಾಗಿ 14 ವರುಷದ ಒಬ್ಬ ಹೆಣ್ಣುಮಗಳು ಆತ್ಮಹತ್ಯವನ್ನೇ ಮಾಡಿಕೊಂಡಳು ರಾಜವಲ್ಲಭ ಎಂಬ ಬೀದಿಯಲ್ಲಿ ಹಾರೇಂದ್ರ ಚಂದ್ರಮುಖರ್ಜಿ ಎಂಬೊಬ್ಬ ಬ್ರಾಹ್ಮಣನು 14 ವರುಷದ ಸ್ನೇಹಲತಾ ಎಂಬ ತನ್ನ ಮಗಳನ್ನು ಒಬ್ಬ ವಿದ್ಯಾರ್ಥಿಗೆ ಕೊಟ್ಟು ವಿವಾಹ ಮಾಡಬೇಕೆಂದು ನಿಶ್ಚಯಿಸಿಕೊಂಡನು 2,000 ರೂಪಾಯಿ ವರದಕ್ಷಿಣೆ ಕೊಡಬೇಕಾಯಿತು ಅದನ್ನು ಹುಟ್ಟಿಸುವುದಕ್ಕೆ ಅವನಿಗೆ ಮಾರ್ಗವೇ ತೋರಲಿಲ್ಲ ತನ್ನ ಮನೆಯನ್ನು ಆಧೀನ ಒತ್ತೆ ಇಟ್ಟು ಸಾಲ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದನು ಈ ಸಂಗತಿಯನ್ನು ಆ ಕುಮಾರ್ತೆಯು ಕೇಳಿ ವ್ಯಸನಪಟ್ಟು, ಮನೆಯನ್ನು ಆಧಾರ ಮಾಡಬೇಡವೆಂದು ತಂದೆಗೆ ಎಷ್ಟಾಗಿಯೋ ಹೇಳಿಕೊಂಡರೂ ಆತನು ಮಗಳ ಮಾತನ್ನು ಲಕ್ಷ್ಯಮಾಡಲಿಲ್ಲ ಈ ವಿಚಾರವು ಆ ಹುಡುಗಿಗೆ ತುಂಬಾ ಮನೋವ್ಯಥೆಯನ್ನುಂಟುಮಾಡಿತು ಜನವರಿ ತಾ 30 ನೇ ರಾತ್ರಿ ಆ ಹುಡುಗಿ ಮನೆಯ ಅಟ್ಟದ ಕೊಠಡಿಯಲ್ಲಿ ಮಲಗಿದ್ದು ಮೈಗೆ ಸೀಮೆಯೆಣ್ಣೆ ಸುರಿದು ದೀಪಹತ್ತಿಸಿಕೊಂಡು ಉರಿದುಹೋಗುತ್ತಿದ್ದಳು ನೆರೆಮನೆಯವರು ಮನೆ ಹತ್ತಿಕೊಂಡಿತೆಂದು ಕೂಗಿದರು ತಂದೆತಾಯಿಗಳೆದ್ದು ನೋಡುವಲ್ಲಿ ತಮ್ಮ ಮಗಳ ಮೈಯೆಲ್ಲಾ ಸುಟ್ಟು ಸಂಕಟಪಡುತ್ತಿದ್ದಳು ಕೂಡಲೇ ಅವಳನ್ನು ಆಸ್ಪತ್ರೆಗೆ ಸಾಗಿಸಿದರು ಚಿಕಿತ್ಸೆಯು ಫಲಕಾರಿಯಾಗದೆ ಆ ಹುಡುಗಿ ಸತ್ತುಹೋದಳು ಇದರಿಂದ ಆ ತಂದೆ ವರದಕ್ಷಿಣೆಗಾಗಿ ಮನೆ ಅಡುವು ಒರೆಯುವುದು ತಪ್ಪಿಹೋಯಿತು ಈ ದುಃಖಕರವಾದ ಸುದ್ದಿಯು ಪ್ರಕಟವಾದ ಮೇಲೆ ಕಳೆದ ಶುಕ್ರವಾರ ಕಲ್ಕತ್ತಾ ಪಟ್ಟಣದ ಕೆಲವು ದೇಶೀಯ ವಿದ್ಯಾವಂತರೂ ದೊಡ್ಡಮನುಷ್ಯರೂ ಕಾಲೇಜ್ ಚೌಕದಲ್ಲಿ ಸೇರಿ ಒಂದು ದೊಡ್ಡ ಸಭೆಯನ್ನು ನಡಿಸಿದರು ಬಂಗಾಳಾ ವಿದ್ಯಾರ್ಥಿಗಳು ಸುಮಾರು 1,000 ಮಂದಿ ಹಾಜರಾಗಿದ್ದು, ಇವರಲ್ಲಿ ಅನೇಕರು ತಮ್ಮ ಮದುವೆಯಲ್ಲಿ ವರದಕ್ಷಿಣೆಯನ್ನು ಕೇಳುವುದೂ ಇಲ್ಲ, ಅಂಗೀಕರಿಸುವುದೂ ಇಲ್ಲವೆಂದು ಬಹಿರಂಗವಾಗಿ ವಾಗ್ದಾನಮಾಡಿರುತ್ತಾರೆ ಆ ದಿನ ಬಾಬು ಕೃಷ್ಣಕುಮಾರ ಮಿತ್ರ ಎಂಬ ದೊಡ್ಡಮನುಷ್ಯರು ಸಭೆಯ ಅಗ್ರಾಸನವನ್ನು ವಹಿಸಿ ವಿದ್ಯಾರ್ಥಿಗಳಿಗೆ ಬಹು ವಿಶೇಷವಾದ ಬುದ್ಧಿವಾದವನ್ನು ಹೇಳಿದರು

ದಿ ಜನರಲ್ ಏಜನ್ಸಿ ಮೈಸೂರು

1915 ನೆಯ ಕನ್ನಡ ಲೋವರ್ ಸೆಕೆಂಡರಿಯ ಟೆಕಸ್ಟ ಈ ತಿಂಗಳ 15 ಕ್ಕೆ ಸಿದ್ಧವಾಗುವುದು ಇಂಗ್ಲೀಷು ಟೆಕಸ್ಟ್ ಬಹಳ ಸ್ವಲ್ಪ ಮಾತ್ರ ಉಳಿದಿರುತ್ತೆ ಬೇಗನೆ ಬರೆದುಕೊಳ್ಳಿರಿ ಬಿ ವೆಂಕಟಾಚಾರ್ಯರ, ಶ್ರೀಕಂಠಶಾಸ್ತ್ರಿಗಳ ಮತ್ತು ಕನ್ನಡದಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ಸಿಗುತ್ತೆ ಪತ್ರಿಕೆಯಲ್ಲಿ ಪ್ರತಿ ವಾರವು ನೋಡುತ್ತಿರಿ ಹೊಸ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸುತ್ತಿರುವೆವು ಬಿ ವೆಂಕಟಾಚಾರ್ಯ—ದುರ್ಗೇಶನಂದಿನಿ 1-4-0, ದೇವಿಚೌಧುರಾಣಿ 1 4 0, ಪರಿಮಳಾ 0 10 0, ವಿಷವೃಕ್ಷ 1-8-0 ಸಾಧನೆ 0 4-0, ಲೀಲೆ 0 4 0, ಚಿತ್ರವಿಚಿತ್ರಾವಳಿ 0-8-0, ಅಕ್ಕತಂಗಿ 0-8-0 ಅಮೃತಪುಲಿನ 0 10 0, ಆನಂದಮಠ 1 0 0, ಕೃಷ್ಣಕಾಂತನ ಉಯಿಲು 1 0-0, ಕೊಹಿನೂರು 0 12-0, ಚಂದ್ರಶೇಖರ 1 0 0 [234]

ಶ್ವಾಸಕೇಸರಿ ಲೇಹ.

ಅಸ್ತಮಾಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ

ಅಸ್ತಮಾ ಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ತಿ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದ್ದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸುತ್ತೇವೆ ಓದಿನೋಡಿ

20 ತೊಲಾ ಲೇಹದ ಟಿನ್ ಡಬ್ಬಕ್ಕೆ ಕ್ರಯ ರೂ 1-8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
177 ಚೀನಾ ಬಜಾರ್ ರೋಡ್ ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಸು ಎ ಭೀಮರಾವ್ ಮೊದಲಿಯಾರ್ರವರು 21 10 1913 ರಲ್ಲಿ ಬರೆಯುತ್ತಾರೆ —"ನಾನು ಬಹುಕಾಲದಿಂದ ಅಸ್ತಮಾ ರೋಗದಲ್ಲಿ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ" [83-40]

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 53
(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಈ ಮಾನುಮನುಷ್ಯ ಇರುವ ಔಷಧವನ್ನ ಕೊಂಡುಕೊಳ್ಳಿ

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಪ್ಯಾಕೆಟ್ ಸಿಗರೆಟ್ ಲೈಟರ್.

ಕ್ರಯ ರೂ. 2-8-0.

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು. ದೀಪದ ಕಡ್ಡಿಯ ಚಕ್ಕಡ ಜರ್ಮನ್ ಸಿಲ್ವರ್‌ನಲ್ಲಿ ನಸ್ಯದ ಡಬ್ಬಿ ನಮೂನೆ ತಯಾರಿಸಿರುತ್ತದೆ. ಜನರು ನೋಡಿದರೆ ನಸ್ಯದ ಡಬ್ಬಿ ಎಂದೇ ಭಾವಿಸುವರು. ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಟರಿನಲ್ಲಿ ವಿವರಿಸಿರುತ್ತೇವೆ. ಬೇಗನೆ ಇದನ್ನು ತರಿಸಿ ಪರೀಕ್ಷಿಸಬಹುದು. [259-11]

ವಿಳಾಸ — ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,

93, ಮಿಂಟ್ ಸ್ಟ್ರೀಟ್, ಮದರಾಸು.

ಮನೆಗಳಲ್ಲೂ, ಕಲಿಯತಕ್ಕ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ವಿವರಿಸಿರುವ ಈ ಪುಸ್ತಕದೊಳಗೆ ಶಾಸ್ತ್ರ ರೀತಿಯಲ್ಲಿ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ. ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ವಿಧಾನಗಳನ್ನೂ, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಮಾರ್ಗ ಮತ್ತು ಮಿಸ್ತ್ರಗಳನ್ನೂ ಕಲಿತುಕೊಳ್ಳಬಹುದು. ಈ ಪುಸ್ತಕದಲ್ಲಿ 38 ಚಿತ್ರಗಳೂ, 30 ನಕ್ಷೆಗಳೂ ಇವೆ.

ಕ್ರಯ 1 ಪುಸ್ತಕಕ್ಕೆ ರೂ 3 ಪೋಸ್ಟೇಜು ಸೇರ

ವಿಳಾಸ — ರಾವ್ಸ್ ಟೈಲರಿಂಗ್ ಕಾಲೇಜು

[5 2] 10 ಪಿಕೆಟ್ ರೋಡ್, ಕಾಲ್ಬಾದೇವಿ, ಬೊಂಬಾಯಿ

ಓರಿಯಂಟಲ್ ಗವ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್ ಬೊಂಬಾಯಿ.

ಕಂಪನಿಯ ಫಂಡು . . . . ರೂ 1,25,00,000

ಕಂಪನಿಯಿಂದ ಪಾವತಿ ಆಗಿರುವದು .. 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ. —ವಿ ಎ ಎಸ್. ಲಿಟಿಟಿ, ಚೀಫ್ ಏಜೆಂಟ್, ಬೆಂಗಳೂರು. ವಿ ಎ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[184 21] ಬ್ರಾಂಚ್ ಸೆಕ್ರೆಟರಿ, ಮದರಾಸ್

ಕುಂತಳಾನಂದ ತೈಲವು.

192-22

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ.—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

A GREAT CONCESSION!

ಒಂದು ರೂಪಾಯಿ ರಿಯಾಯಿತಿ

ಅಪೂರ್ವ ಲಾಭ!

ಚಂದ್ರಪ್ರಭಾ ಬೆಲೆ ೪ ಆ. ಶೋಭನೆ. ೧೨ ಆ.

ಕಲಾನಾಥ— ೪ ಆ. ಚಂದ್ರಕಳಾ ೬ ಆ.

೨॥ ರೂ. ಬೆಲೆ ಬಾಳುವ ಈ ನಾಲ್ಕು ಅತ್ಯುತ್ತಮವಾದ ಕಾದಂಬರಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಬಹು ಸ್ವಲ್ಪ ದಿನಗಳ ಮಟ್ಟಿಗೆ ಟಪಾಲು ಖರ್ಚು ಸೇರಿಸಿ ೨ ರೂ ಗೆ ವಿ. ಪಿ ಯನ್ನು ಕಳುಹಿಸುವೆವು. ಅಲ್ಲದೆ ೧೯೦೪ ನೇ ವರುಷದ ಉತ್ತಮವಾದ ೧ ಪಾಕೆಟ್ ಡೈರಿಯನ್ನು ಬಹುಮಾನ ಕೊಡುವೆವು. ಮೇಲ್ಕಂಡ ಪುಸ್ತಕಗಳಲ್ಲಿ ಯಾವುದಾದರೂ ಒಂದನ್ನು ಅಪೇಕ್ಷಿಸಿದಾಗ್ಯೂ ಟಪಾಲು ಖರ್ಚು ಮಾಫಿ.

ವಂಗವಿಜೇತ—ಬೆಲೆ ರೂ. ೧—೪—೦.

ಬಿ. ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಬಂಗಾಳಿ ನಾವೆಲ್.

ಇವರ ಎಲ್ಲಾ ಕಾದಂಬರಿಗಳೂ ನಮ್ಮಲ್ಲಿ ದೊರೆಯುವವು.

ಯಂ. ಸುಬ್ಬರಾವ್,

[30-1] ಬುಕ್ ಸೆಲರ್, ಶಂಕರಪುರಂ, ಬೆಂಗಳೂರು.

ಕನ್ನಡ ಇಂಡಿಯನ್ ಪೀನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕ ಮಹಾಶಯರಿಗೆ ತಿಳಿಯಪಡಿಸುವದೇನಂದರೆ—

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ 1860 ನೇ ಇಸವಿಯಲ್ಲಿ ಮುಂಜೂರಾದ "ಇಂಡಿಯನ್ ಪೀನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಿಸಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೊಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:— ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಖ್ತೆಗಳನ್ನು ವಿವರಿಸಲ್ಪಟ್ಟಿರುವದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವಕೀಲರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮುಫಸ್ಸಲ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಆಸಾಮಿ ಚೋರಿ, ಗಂಡನು ಹೆಂಡತಿ 12 ವರುಷಗಳಿಗೆ ಕಡಮೇ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು.

ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ 1 ಕ್ಕೆ 2 ರೂಪಾಯಿ; ಟಪ್ಪಾಲ್ ಛಾರ್ಜ್ 4 ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-36]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪ್ರೊಫೆಸರ್ ಬ್ರೇಸ್ಲರ್

ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ

ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನವಾದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊ ಪೆಯಿನಾಡೈನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದದ್ದರು, ತರಿವಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಕೃತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-7]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ 0 8-0. ವಿ ಪಿ ಖರ್ಚು 0-4-0 ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ನೋಟೀಸು

ಅಮೃತಸಾರದ ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಿಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವುದೇನೆಂದರೆ:

ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು ಇವೆರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿಬಿಟ್ಟವೆಂದು ನಿಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ. ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು. ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ. ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ಸಂತೋಷವಾಗಿ ಹೇಳುವುದೇನೆಂದರೆ —ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು. ಎಷ್ಟು ಮಟ್ಟಿನ ಡಿಮಾಂಡುಗಳು ಬಂದಾಗ್ಯೂ ಪಾವತಿಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ. ಈ ಭಾಗದಲ್ಲಿ ನಿಮ್ಮ ಬ್ಯಾಂಕಿಗೆ ಯಾವ ಕಷ್ಟದೆಸೆಯೂ ಬರುವಹಾಗಿಲ್ಲವೆಂದು ಖಂಡಿತವಾಗಿ ತಿಳಿಯಿರಿ. ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಈಚೆಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರ್ನಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ.

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್—ಇವೆರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ಹಣವು ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು.

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರ್ ಆಫೀಸುಗಳನ್ನು ಪಡೆದಿರೋಣದರಿಂದ ಕೆಲವು ಜನರು ಅದೇ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದಾರೆ. ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ, ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿದೆಯಲ್ಲದೆ ಇನ್ಯಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ. [216-17]

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡಿಸುತ್ತಾ ಬಂದಿದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆಗಳನ್ನಿಟ್ಟುಕೊಂಡು ಬಂದಿದ್ದೀರೋ ಇನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದಾರೆ.

ಟಿ. ಎಸ್. ಆರ್. ಅಯ್ಯರ್,
ಸೆಕ್ರೆಟರಿ, ಮದರಾಸ್ ಬ್ರಾಂಚ್.

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್.

[redacted]

[redacted]

[redacted]

FLASHNO-
3

[redacted]

[redacted]

[redacted]

English Papers with L S Test Summary Special Papers and Monthly Tests etc. Subscription Rupees 2 (in advance) **Students' Spelling Book** As 4 (Postage Extra) **Postal Tution**—Monthly Fees English **Rs 2** Arithmetic **Re 1, the rest As 8** (all in advance) *Apply to*—**M N Sitarama Rao,**
[273 9] **Krishnarajo Mohalla, Mysore**

ಮನೆ ವಿಕ್ರಯದ ಪ್ರಕಟನೆ.

ಮೈಸೂರಲ್ಲಿ ಜರ್ಗನ್ ಮೋಹನ ಬಂಗ್ಲೆ ಬಳಿಯಲ್ಲಿ ಎ ರಾಮಣ್ಣನವರ ಬೀದಿಯಲ್ಲಿರುವ ರಿಟೈರ್ಡ್ ಫಾರೆಸ್ಟು ಅಸಿಸ್ಟೆಂಟ್ ಕನ್ಸರವೇಟರ್ ಬಿ ರಾಮಸ್ವಾಮಿ ಅಯ್ಯರವರ ಮನೆಯು ವಿಕ್ರಯಮಾಡಲ್ಪಡುವುದು ತಪ್ಸೀಲುಗಳನ್ನು ಮೈಸೂರು ಕೋಆಪರೆಟಿವ್ ಸೊಸೈಟಿ ಸೆಕ್ರಿಟರಿ ಮ॥ ಎಚ್ ಕೃಷ್ಣಾಚಾರ್ಯರವರಿಂದಾಗಲಿ, ನಾಲೀಕರಿಂದಾಗಲಿ ತಿಳಿಯಬಹುದು [38 3]
ಬಿ ರಾಮಸ್ವಾಮಿಅಯ್ಯರ್, ಮಹಾರಾಣಿಕಾಲೇಜ್, ಮೈಸೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆದೇಶಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ ಈ ಕಾನೂನಿಗನುಸಾರವಾಗಿ ಭರವಸೆಯ ಕೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 38] ಎಸ್ ಕೆಟ್ಟೂರ್, ಬ್ರಾಂಚ್ ಸೆಕ್ರಿಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ) 1,00,00,000
ಪಾವತಿಯಾದ ಮೊಬಲಗು 10,50,000
ವಸೂಲಾದ ಮೊಬಲಗು 87 00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್‍ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವ ವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾಲಿಸಿಯವರ ಮನೆಯಲ್ಲೇ ಜಾಗ್ರತೆ ಪಾವತಿ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲ್ಸಿದಾರ್‍ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [213 11]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ ಮೈಸೂರು

ಡೋಂಗರೆ

ಇವರ ಬಾಲಾಮೃತ [150 31]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಅಮೃತಾಂಜನ್

ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ ಅರ್ಧಾಂಗವಾಯು ಉಳುಕು ಸೊಂಟದನೋವು, ಹಲ್ಲುನೋವು, ಎದೆನೋವು, ಶೀತ, ಕೆಮ್ಮು ಚರ್ಮವ್ಯಾಧಿ ಮೊದಲಾದ ಎಲ್ಲಾ ತರದ ನೋವುಗಳೂ ಕ್ಷಿಪ್ರಿಯಾಗಿ ನಿಲ್ಲುವವು ಬಾಟ್ಲಿ ಒಂದರ 0 8-0 ಡಜನ 1 ಕ್ಕೆ 5 4-0 ವಿ ಪಿ ಖರ್ಚು ಪ್ರತ್ಯೇಕ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು

ಜಾಗ್ರತೆ—ಹಲವು ಜನರು ರಕಾರಿ ಮಾಲುಗಳನ್ನು ಅಮೃತಾಂಜನ ಎಂಬದಾಗಿ ಮಾರುವದರಿಂದ ನಮ್ಮ ರಿಜಿಸ್ಟರಿಯಾದ ಅಮೃತಾಂಜನವನ್ನು ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಟಿನ್ನಿನ ಕರಡಿಗೆಯಲ್ಲಿ ಪ್ಯಾಕುಮಾಡಿರುತ್ತೇವೆ ಮುಚ್ಚಳ ತೆಗೆದ ಕರಡಿಗೆಯನ್ನು ಪಡಕೊಳ್ಳಬೇಡಿರಿ ಗಜಕರ್ಣದ ಮುಲಾಮು—0 6-0, ದಂತಮಂಜನ—0 2 0 ಕೇಶವರ್ಧಿನಿ ತೈಲ 0 12 0 ಕ್ಯಾಟಲಾಗು ತರಿಸಿಕೊಳ್ಳಿರಿ [12 52]

ಅಮೃತಾಂಜನ ಡಿಪೋ,

ಮುಂಬಯಿ, ೧೦೯ ಫ್ರೇಯರ್ ರೋಡ್. | ಅಥವಾ | ಮದ್ರಾಸು, ೯ ಜಹಂಗೀರ್ ಸ್ಟ್ರೀಟ್.

ಕಥಾಸರಿತ್ಸಾಗರ.

ಥಳಥಳಿಸುವ ದಪ್ಪಕಾಗದ. ಬಲು ಮುದ್ದಾದ ಮುದ್ರಣ. (ಕಥೆಗಳೆಂಬ ಹೊಳೆಗಳ ಕಡಲು) ಗಟ್ಟಿಯಾದ ಅಟ್ಟೆ. ಕೆಲವೇ ಪ್ರತಿಗಳುಳಿದಿವೆ!!

ಪೂರ್ವಭಾಗ ವಿಸ್ತಾರವಾದ ಕಥೆಗಳು ಬಳಕೆಯಲ್ಲಿರುವ ಕಥೆಗಳೆಲ್ಲಕ್ಕೂ ಇದುವ ಜನ್ಮಭೂಮಿ ಮತ್ತು ಪ್ರಸವಭೂಮಿಯು ಅಗತ್ಯವಾಗಿ ಓದತಕ್ಕುದು ಬಾಲವೃದ್ಧ ಸ್ತ್ರೀಪುರುಷರೆಲ್ಲರೂ ಓದತಕ್ಕುದು

ಕ್ರಯ ಒಂದು ರೂಪಾಯಿ ಹನ್ನೆರಡಾಣೆ.

ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಪಂಗಿರಾಮು; ಅಥವಾ, ಎಸ್. ಆರ್. ಭಾರತಿ,
[6 8] "ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕ್ರಿಮಿಸೋಕದ ಮಾಡಿದ. ಬರೀ ಸಸ್ಯಾಹಾರ.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್
ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು [4 8]

ಮಕ್ಕಳಿಗಾಗಿಯೇ—"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ"—ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಜೈನರವರ ಉತ್ತಮೋತ್ತಮ ಆಯಿಂಟ್‌ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ ಎಲ್ಲಾ ತರದ ರಣಗಳು,

ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕಾಯಿಗಳ ಹುಣ್ಣುಗಳಿಗೂ ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯಕ್ಷಿಣಿಯಂಥಾ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರ್ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ ಹಣವನ್ನೂ ಖರ್ಚುಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ ಔಷದದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1 ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಛಾರ್ಜು ಬೇರೆ ಗುಲಾಬ್‌ಸುಂದರ ಪ್ರಕಾರ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ ಕ್ರಯ ಬಾಟ್ಲಿಗೆ ರೂ 1 6 0 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [20-0]

ವಿಳಾಸ—ಜೆ ಗುಲಾಬ್ ಚಂದ್ ಪೌರ್ವಾಳ್
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್ ಮದರಾಸ್

ದನಕರುಗಳಿಗೆ—ಕುದುರೆಗಳಿಗೆ

ಬಹು ಪ್ರಯೋಜನಕರವಾದ ಆಹಾರ ಬೇಕೋ?

ಹತ್ತಿಯ ಹೊಟ್ಟು! ಹತ್ತಿಯ ಹಿಂಡಿ! ಇವುಗಳನ್ನು ಉಪಯೋಗಿಸಿರುವವರು ಹೇಳುವುದನ್ನು ತಿಳಿದುಕೊಳ್ಳಿ

ಮ॥ ಮೇಗರವಳ್ಳಿ ಸಾಹುಕಾರ್ ಅಪ್ಪೂಭಟ್ಟರವರು ಬರೆಯುವುದು —

ನೀವು ನಮಗೆ ರವಾನಿಸಿದ ಹತ್ತಿ ಕಾಳು ಹಿಂಡಿ ಮತ್ತು ಹೊಟ್ಟು ಸಹಾ ಜಾನ್ವಾರುಗಳಿಗೆ ಕ್ರಮದಂತೆ ಆಹಾರವಾಗಿ ಉಪಯೋಗಿಸುತ್ತಾ ಇದೇನೆ ಇದರಿಂದ ದನಕರುಗಳು ಎಮ್ಮೆ ಸಹಾ ಕಾಯಪುಷ್ಟಿಯಾಗಿ ಹಾಲು ಎಷ್ಟು ಅಭಿವೃದ್ಧಿಯಾಗುತ್ತಿದೆ

ಗಾಡಿ ಎತ್ತುಗಳಿಗೆ ಸಹ ಇದರಿಂದ ಆರೋಗ್ಯವುಂಟು ಇದು ಹತ್ತಿ ಕಾಳಿಗಿಂತಲೂ ಕಮ್ಮಿ ಕ್ರಯ ವಿಳುವುದರಿಂದಲೂ ಒಳ್ಳೇ ಪ್ರಯೋಜನವಿರುವದರಿಂದಲೂ ಎಲ್ಲರೂ ಇದನ್ನು ಜಾನ್ವಾರುಗಳ ಆಹಾರಕ್ಕೆ ಧಾರಾಳವಾಗಿ ಉಪಯೋಗಿಸಬಹುದೆಂದು ನಾನು ದೃಢವಾಗಿ ಹೇಳುತ್ತೇನೆ 16 8 1913

ಹೊಟ್ಟನ್ನು ಬೆಂದ ಹುರಳಿಯ ಜತೆಯಲ್ಲಿ ಬೆರೆಯಿಸಿಕೊಟ್ಟರೆ ಕುದುರೆಗಳು ಹೆಚ್ಚು ಕೆಲಸ ಮಾಡುವವು ವೇಗ ದಣಿಯವು ಹೊಟ್ಟೆನೋವು, ಭೇದಿ ಸಿಂಹ ಆರೋಗ್ಯವಾಗಿರುವುದು ದೃಷ್ಟಾಂತಕ್ಕೆ ಬದಿವೆ ಹೊಟ್ಟು ಮೂಟೆ 1 ಕ್ಕೆ ರೂ 1 10 0 ಹಿಂಡಿ ಮೂಟೆ 1 ಕ್ಕೆ ರೂ 0 8 0 [28 1]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್,
101 ಕಿಲಾರಿ ರೋಡು (ಬಳೇಪೇಟೆ) ಬೆಂಗಳೂರು ಸಿಟಿ

ನರಕೂದಲಿಟ್ಟುಕೊಂಡು

ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ ಈ ರಂಗು ಹಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ ಈಗ

ಮಾರಿಕೆಗೆ ಬರುವ ಅನೇಕರ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುಜಾತಿಯವು ಹಚ್ಚಿದ ಮೇಲೆ ಕೂದಲು ಕೆಂಚ ತರಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಿಸುವಿರಿ ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂಪಾಯಿ 1 ಅಂಚೆ ಹಾಸಲು 1 ಆಣೆ [41-3]

ವಿಳಾಸ—ವಿ ಎ ಎಸ್
ಪಾಣಿ, 4, ಇರುಳಪ್ಪನ್
ಬೀದಿ, ಮದರಾಸ್

Printed and Published by the Rev H Gulliford Proprietor and Manager Wesleyan Mission Press Mysore 19/2/1914

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸರ್ ೧೯೧೬ ನೇ ಇಸವಿ ಫೆಬ್ರುವರಿ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೯

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒ ಧಾರ್ತಿ ಪಟ್ಟಿದ್ದ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲ ಇದರಿಂದ ವಿಪುಲವಾಗಿ ನಯವಾಗಿ ಚಕಚಕಿಸುವವು ನಬಿದವಾದ ನೀಲಬಣ್ಣದಿಂದ ಕೂಡಿ ಅಗಾಗ ಉದುರಿ ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪು ಕೊಡುತ್ತೆ ತಲೆ ಬುರುಡೆಯನ್ನು ಶುದ್ಧಮಾಡುತ್ತೆ ಹುಂಡಿನ ಹೊಟ್ಟನ್ನು ಆಜಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ನಿಲ್ಲಿಸಿ ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ದಟ್ಟವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಬುಡ್ಡಿ 1 ಕ್ಕೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 1 7 0

ಮೂಸೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಬೋರ್ಡ್ ಸೆಕ್ರೆಟರಿ ಎಂ ಡಿ ಸಾಲೊಮನ್‌ರವರು ಬರೆಯುವದು— ದಯಮಾಡಿ ಮೂರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ— ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಲೇಬಲುಹಚ್ಚಿ ಕೆಥಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವವರು ಕಾಮಿನಿಯಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, ಕೆಪಿಟೋಲ್‌ಬಾಮ್ ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ ಮಸ್ತಕಶೂಲೆ ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾ ಪ್ರತ್ಯೇಕ

ಓಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್ ಗುಳಿಗೆಗಳು ರಾಮಬಾಣವಾಗಿದೆ. ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟರೆ ಜ್ವರವು ಪುನಃ ಬರಕೂಡದು ಇದು ನಮ್ಮ ಉತ್ತಮ ಗುಣದ [illegible] ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು [illegible] ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಡನೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2-8 ವಿ. ಪಿ. ಖರ್ಚು ಪ್ರತ್ಯೇಕ

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [19 7]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉರ್ಬನ್ ಮಾರ್ಟ್, ಮಂಗಳೂರು

ಅಮೃತಾಂಜನ

ಇದರ ಉಪಯೋಗದಿಂದ ವಾತ, ಸಂದಿವಾತ, ತಲೆನೋವು, ನೆರೂಳಾರ, ಅರ್ಧಾಂಗವಾಯು ಉಳುಕು ಸೊಂಟದನೋವು, ಹಲ್ಲುನೋವು ಎದೆನೋವು, ಶೀತ ಕೆಮ್ಮು, ಚರ್ಮವ್ಯಾಧಿ ಮೊದಲಾದ ಎಲ್ಲಾ ತರದ ನೋವುಗಳೂ ಮಾತ್ರೆಯಾಗಿ ನಿಲ್ಲುವವು ಬಾಟ್ಲಿ ಒಂದರ 0 8 0 ಡಜನ 1 ಕ್ಕೆ 5 4 0 ವಿ ಪಿ ಖರ್ಚು ಪ್ರತ್ಯೇಕ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು ಜಾಗ್ರತೆ—ಹಲವು ಜನರು ಬೇರೆ ಮಾಲುಗಳನ್ನು ಅಮೃತಾಂಜನ ಎಂಬದಾಗಿ ಮಾರುವದರಿಂದ ನಮ್ಮ ರಿಜಿಸ್ಟ್ರಿಯಾದ ಅಮೃತಾಂಜನವನ್ನು ಸುಂದರವಾದ ಮತ್ತು ಹಲವು ಬಾಷೆಗಳುಳ್ಳ ಟಿನ್ನಿನ ಕರಡಿಗೆಯಲ್ಲಿ ಪಾಕುಮಾಡಿರುತ್ತೇವೆ ಮುಚ್ಚಳ ತೆಗೆದ ಕರಡಿಗೆಯನ್ನು ಪಡಕೊಳ್ಳಬೇಡಿರಿ ಗಜಕರ್ಣದ ಮುಲಾಮು—0 6 0 ದಂತಮಂಜನ—0 2 0 ಕೇಶವರ್ಧಿನಿ ತೈಲ 0 12 0 ಟಾಬ್ಲೆಟು ಪರೀಕ್ಷೆ [illegible] [52 1]

ಅಮೃತಾಂಜನ ಡಿಪೋ

ಮುಂಬಯಿ, ೧೯೫ ಫ್ರೇಯರ್ ರೋಡ್. | ಅಥವಾ | ಮದ್ರಾಸು, ೯ ಜಹಂಗೀರ್ ಸ್ಟ್ರೀಟ್.

ದಿ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್

ಪಾರ್ಟ್ ೨ನ್.

ಒಸ್ಸಿನ ಈ ಪುಸ್ತಕವು ಶರೀರ ಅಬ್ಯಾಸವು ಮಾಡುವವರಿಗೆ ಬಹಳ ಉಪಯುಕ್ತವಾಗಿರುವದು ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರಿಂದ ಅಂಗೀಕರಿಸಲ್ಪಟ್ಟಿದ್ದು

ಇದರಲ್ಲಿ ದಂಡಗಳನ್ನು ಬಸ್ಕಿಗಳನ್ನು ಸೇರಿದ ೫೧ ಪ್ರತಿಮೆಗಳನ್ನು ವ್ಯಾಯಾಮ ಪ್ರತಿಮೆಗಳಿಗೆ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು ಕನ್ನಡ ಬಾಷೆಗಳಲ್ಲಿ ಅಬ್ಯಾಸಮಾಡತಕ್ಕ ಕ್ರಮವನ್ನು ಬರೆಯಲ್ಪಟ್ಟು 118 ಕಾಗದಗಳನ್ನು ಉಂಟಾಗಿದೆ [51–1]

ಇದರ ಬೆಲೆ ೧-೨ ಅ. ಪೋಸ್ಟೇಜ್ ಪ್ರತ್ಯೇಕವು.

ಮಿ. ಎಸ ಬಿ ರಾಘವಲುನಾಯುಡು ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಚ್ಚಯಪ್ಪಾಸ್ ಕಾಲೇಜ್, ಮದರಾಸ್



ತಾಜಾಕಲಂ \ / —ಬಡ [illegible] ಯುವವರು ಈ [illegible] ರ ಹೆಸರನ್ನು ತಿಳಿಯಿಸಬೇಕಾಗಿ ಪ್ರಾರ್ಥನೆ | Address —B RAGHAVULU NAIDU
Senior Gymnastic Instructor
Pachayappa's College, Madras.

ಪ್ರೊಫೆಸರ್ ಬೇಸ್ಲರ್
ಇಲೆಕ್ಟ್ರೋ ವೆಯಿನಾಡ್ರೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಬರುವದೆಂತಲೂ ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷದಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷದವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷದಗಳೆಲ್ಲವು ಇದು ಅತ್ಯುತ್ತಮವಾದದ್ದು ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೋವೆಯಿನಾಡ್ರೈನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ಸಗಡಿ, ವಾಯುನೋವು (ಕೈಕಾಲು ಹಿಡಿತ), ಉಬುಕುಹಿಡಿದಿದ್ದರು, ಕರಿಸಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲ, ಹಲ್ಲುನೋವು, ತಲೆನೋವು, ಅರೆತಲೆನೋವು ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಸ್ತ್ರೀದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು) ಇದಕ್ಕೆಲ್ಲಾ ಒಹಳ ಶ್ಲಾಘನೀಯವಾದದ್ದು [12–9]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಬಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು

ಬುಡ್ಡಿಯ ಕ್ರಯ ರೂ 0 8–0 ವಿ ಪಿ ಖರ್ಚು 0–4–0 ಏಜಂಟರು ಬೇಕು

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಕುಂತಳಾನಂದ ತೈಲವು.

192 23

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3 9

ಕೆಳ ಹೊಟ್ಟೆಯ ನೋವು, ಬಲೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರಹ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಜೈಕರನವರ ಸ್ವದೇಶೀ ಬಾಮ್.

ರೆಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಪಿತ್ತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಗಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಗುಣಪಡಿಸುತ್ತವೆ ಜಡ್ಜಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ, ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ದಕ್ಷಿಣೆಯಂಥಾ ಮದ್ದು ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು ಇದು ಚನ್ನದಂಥಾ ಔಷಧ ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕು ಇರುವುದನ್ನು ನೋಡಿ ಕೊಂಡುಕೊಳ್ಳಿ ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ, 3 ಕ್ಕೆ ರೂ 1-11-0 ವಿ ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ [25 6]

ವಿಳಾಸ—ಜಿ. ಗುಲಾಬ್ ಚಂದ್ ಪೌವಾಳ್,
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಡೋಂಗರೆ

ಇವರ ಬಾಲಾಮೃತ

[150 32]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ನರೆಕೂದಲಿಟ್ಟುಕೊಂಡು

ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತ ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುಜಾತಿಯುತ, ಹಚ್ಚಿದ ಮೇಲೆ ಕೂದಲು ಕೆಂಚುತಿರುಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ, ಬಹು ಮೇಲಾದದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂಪಾಯಿ 1, ಅಂಚೆ ಹಾಸಲು 1 ಆಣೆ [41-3]

ವಿಳಾಸ—ಎ ಎ ಎಸ್.
ಪಾಣಿ, 3, ಇರುಳಪ್ಪನ್
ಬೀದಿ, ಮದರಾಸು.

ಕನ್ನಡ ಇಂಡಿಯನ್ ಪೀನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕ ಮಹಾಶಯರಿಗೆ ತಿಳಿಯಪಡಿಸುವದೇನಂದರೆ—

ಶ್ರೀಮದಿಂಡಿಯಾ ಗೌವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ 1860 ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೀನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಿಸಿ ಮಾರಾಟಕ್ಕೆ ಸಿದ್ಧವಾಗಿದೆ ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ಪಶ್ನೆಗಳನ್ನು ವಿವರಿಸಲ್ಪಟ್ಟಿರುವವು ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮುಖ್ತಾರ್ ಜನಗಳಿಗೂ ಉಪಯೋಗಕರವಾದದ್ದು

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಆಸಾಮಿಚೋರಿ, ಗಂಡನು ಹೆಂಡತಿ 12 ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು

ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು

ಕ್ರಯ ಪ್ರತಿ 1 ಕ್ಕೆ 2 ರೂಪಾಯಿ, ಟಪ್ಪಾಲ್ ಛಾರ್ಜು 4 ಆಣೆ

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127 36]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪ್ಯಾಕೆಟ್ ಸಿಗರೆಟ್ ಲೈಟರ್.

ಕ್ರಯ ರೂ. 2-8-0

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದ ಕಡ್ಡಿಯೇ ಬೇಡ ಜರ್ಮನ್ ಸಿಲ್ವರ್‌ನಲ್ಲಿ ಸಣ್ಣದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸುತ್ತೇವೆ ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [250-12]

ವಿಳಾಸ—ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು.

ಶಬ್ದಾದರ್ಶದ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತಿ ಉಪಯುಕ್ತವಾದುದು! ಕನ್ನಡ ವ್ಯಾಕರಣದ ಸಾರವೆಲ್ಲ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಪಂಡಿತರ ಸಹಾಯದಿಂದ ಬರೆಯಲ್ಪಟ್ಟಿದು! ಕ್ರಯ 3 ಆಣೆ, ತರಿಸಿಕೊಳ್ಳಿಂದು ಉಚಿತ ವ್ಯಾಪಾರಿಗಾರರಿಗೆ ನೂರಕ್ಕೆ ಇಪ್ಪತ್ತೈದರಂತೆ ಡಿಸ್ಕೌಂಟು!!

[200-11] ವಿಳಾಸ-ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ದನಕರುಗಳಿಗೆ—ಕುದುರೆಗಳಿಗೆ

ಬಹು ಪ್ರಯೋಜನಕರವಾದ ಆಹಾರ ಬೇಕೋ?

ಹತ್ತಿಯ ಹೊಟ್ಟು! ಹತ್ತಿಯ ಹಿಂಡಿ! ಇವುಗಳನ್ನು ಉಪಯೋಗಿಸಿರುವವರು ಹೇಳುವುದನ್ನು ತಿಳಿದುಕೊಳ್ಳಿ.

ಮ॥ ಮೇಗರವಳ್ಳಿ ಸಾಹುಕಾರ್ ಅಪ್ಪುಭಟ್ಟರವರು ಬರೆಯುವುದು—

ನೀವು ನನಗೆ ರವಾನಿಸಿದ ಹತ್ತಿ ಕಾಳು ಹಿಂಡಿ ಮತ್ತು ಹೊಟ್ಟು ಸಹಾ ಜಾನ್ವಾರುಗಳಿಗೆ ಕ್ರಮದಂತೆ ಆಹಾರವಾಗಿ ಉಪಯೋಗಿಸುತ್ತಾ ಇದೇನೆ ಇದರಿಂದ ದನಕರುಗಳು ಎಮ್ಮೆ ಸಹಾ ಕಾಯಪುಷ್ಟಿಯಾಗಿ ಹಾಲು ಸಹ ಅಭಿವೃದ್ಧಿಯಾಗುತ್ತಿದೆ

ಗಾಡಿ ಎತ್ತುಗಳಿಗೆ ಸಹ ಇದರಿಂದ ಆರೋಗ್ಯವುಂಟು. ಇದು ಹತ್ತಿ ಕಾಳಿಗಿಂತಲೂ ಕಮ್ಮಿ ಕ್ರಯ ಬೀಳುವುದರಿಂದಲೂ ಒಳ್ಳೇ ಪ್ರಯೋಜನವಿರುವದರಿಂದಲೂ ಎಲ್ಲರೂ ಇದನ್ನು ಜಾನ್ವಾರುಗಳ ಆಹಾರಕ್ಕೆ ಧಾರಾಳವಾಗಿ ಉಪಯೋಗಿಸಬಹುದೆಂದು ನಾನು ದೃಢವಾಗಿ ಹೇಳುತ್ತೇನೆ 16-8-1913

ಹೊಟ್ಟನ್ನು ಬೆಂದ ಹುರಳಿಯ ಜತೆಯಲ್ಲಿ ಬೆರೆಯಿಸಿಕೊಟ್ಟರೆ ಕುದುರೆಗಳು ಹೆಚ್ಚು ಕೆಲಸ ಮಾಡುವವು ಬೇಗ ದಣಿಯವು ಹೊಟ್ಟೆನೋವು, ಭೇದಿ ನಿಂತು ಆರೋಗ್ಯವಾಗಿರುವುದು ದೃಷ್ಟಾಂತಕ್ಕೆ ಬಂದಿವೆ ಹೊಟ್ಟು ಮೂಟೆ 1 ಕ್ಕೆ ರೂ 1-10-0 ಹಿಂಡಿ ಮೂಟೆ 1 ಕ್ಕೆ ರೂ 4 8 0 [28-5]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡು (ಕುಂಬಾರಪೇಟೆ), ಬೆಂಗಳೂರು ಸಿಟಿ

ಮನೆಗಳಲ್ಲೂ, ಕಲಿಯತಕ್ಕ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ವಿವರಿಸಿರುವ ಈ ಪುಸ್ತಕದೊಳಗೆ ಶಾಸ್ತ್ರರೀತ್ಯಾ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು ಇಂಥಾ ಪುಸ್ತಕ ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ವಿಧಾನಗಳನ್ನೂ, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಪದಾರ್ಥ ಮತ್ತು ವಿಧಿಗಳನ್ನೂ ಕಲಿತುಕೊಳ್ಳಬಹುದು ಈ ಪುಸ್ತಕದಲ್ಲಿ 38 ಚಿತ್ರಗಳೂ, 30 ನಕ್ಷೆಗಳೂ ಇವೆ

ಕ್ರಯ 1 ಪುಸ್ತಕಕ್ಕೆ ರೂ - ಪೋಸ್ಟೇಜ್ ಬೇರೆ

ವಿಳಾಸ—ರಾಮ್ಸೆ ಟೈಲರಿಂಗ್ ಕಾಲೇಜ್

[15-3] 30 ಪಿಕ್ಚೆಟ್ ರೋಡ್, ಟ್ರಿಪ್ಲಿಕೇನ್, ಮದರಾಸು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಯಾದ "ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೇ ಆಗಲಿ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[11 11] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ವಂಗವಿಜೇತ್ರ—ಬೆಲೆ ರೂ 1-4-0

ಮ|| ಬಿ ವೆಂಕಟಾಚಾರ್ಯರಿಂದ ಕನ್ನಡಿಸಲ್ಪಟ್ಟ ಬಂಗಾಳಿ ನಾವಿಲ್ ಇವರ ಎಲ್ಲಾ ಕಾದಂಬರಿಗಳೂ ಇನ್ನೂ ಇತರ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತೆ ಪುಸ್ತಕಗಳ ಪಟ್ಟಿ ಉಚಿತ [53 1]

ಯಂ ಸುಬ್ಬರಾವ್, ಬುಕ್ ಸೆಲರ್, ಬಂಕಿಪುರ, ಬೆಂಗಳೂರು

ಒಸವರಿ ಮಹೋತ್ಸವದ ಕೈ ಗಡಿಯಾರ



ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 11-0 ಆಗೆಗೆ ಕೊಡಲ್ಪಡುತ್ತೆ ವಿಳಾಸ—

ಜಿ ಆರ್ ರಾವ್, ಜನರಲ್ ಮರ್ಚೆಂಟ್,
15 ಆಫೀಸು ವೆಂಕಟಾಚಲಮೊದಲಿ ಬೀದಿ,
ತಿರುವಲ್ಲಕೇಣಿ, ಮದರಾಸ್

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security required from each Agent is Rs 50 For particulars see in person or apply to

Messrs VENKATACHALAM & SONS,
Chief Agents,
Hindustan Co-operative Insurance Society, Ltd
166, Dodpet, Near Old Taluk Cutchery,
243 14 *MYSORE*

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು	..ರೂ 4,25,00,000
ಕಂಪನಿಯಿಂದ ಪಾವತಿ ಆಗಿರುವದು	,, 3,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತ ವನ್ನು ಕಳುಹಿಸುತ್ತಾರೆ —ಮಿ ಎ ಎನ್ ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು ಮ|| ಎಂ ಎಸ್ ನಂಜಪ್ಪ ನವರು ಅಥವಾ ಮ|| ವೆಂಕಟಪತಮ್ಮ ನವರು, ಕಂಪನಿ ಏಜಂಟರು, ಮೈಸೂರು ಅಥವ
[194 22] ಬ್ರಾಂಚ್ ಸೆಕ್ರೆಟರಿ ಮದರಾಸ್

ಅಮೇರಿಕಾ ದೇಶದ

ಇಮಿಟೇಷನ್ ವಜ್ರದ ಆಭರಣಗಳು

ಈ ಪ್ರವೃತ್ತಿಯನ್ನು ಪಡೆದ ಅನೇಕ ಕೆಲಸಗಾರರಿಂದ ತಯಾರಿಸಿದ್ದು ಎಷ್ಟು ವರುಷಗಳಾದರೂ ಕೆಡುವುದಿಲ್ಲ ಭಾಗ್ಯವಂತರು ಕೂಡಾ ಉಪಯೋಗಿಸಲು ಅರ್ಹವಾದ್ದದ್ದು ಬೆಲೆ ಬಹಳ ಸುಲಭ ಕಮ್ಮಲು ಜೊತೆ 1 ಕ್ಕೆ ರೂ 1 1-0 ಹತ್ತಕಡಕು ಜೊತೆ 1 ಕ್ಕೆ ರೂ 1-0 0 ಕುರಡಿ ಬಾವಲಿ ಜೊತೆ 1 ಕ್ಕೆ ರೂ 1 8 0 ಮೂಗು ಬೊಟ್ಟು 0 1-0 ಬೇಸರಿ 1 ಕ್ಕೆ 0 10 0 ಬುಲಾಕು 1 ಕ್ಕೆ ರೂ 1-0-0



ಎರಕ್ಕ್ಯೋ ಚಿನ್ನದ ಗಿಲ್ಟುಮಾಡಿದ ತಂಜಾವೂರು ಗೆಜ್ಜೆ ಅಡ್ಡಿಗೆ ಈಗ ಈ ಹೊಸ ನಮೂನೆಯಾಗಿ ನಮ್ಮ ಮಿದ್ದು ಅಜವಾಯಿಸಿಯಿಂದ ತಯಾರಿಸಲ್ಪಟ್ಟಿರುತ್ತೆ ಇದಕ್ಕೆ ಬಲವಾದ ಚಿನ್ನದ ಗಿಲ್ಟು ಮಾಡಿ ಬಹಳ ದಿವಸಗಳ ವರಿವಿಗೂ ಕೆಡದಂತೆ ಮುಲಾಮು ಮಾಡಿ ಕೆಂಪು ರೇಷ್ಮೆಯಿಂದ ಬಹು ಅಂದವಾಗಿ ಕಟ್ಟಲ್ಪಟ್ಟಿರುತ್ತೆ ಹೆಂಗಸರು, ಹುಡುಗಿಯರು, ಮಕ್ಕಳು, ಭಾಗ್ಯವಂತರು ಮೊದಲಾಗಿ ಎಲ್ಲರೂ ಉಪಯೋಗಿಸಲು ಲಾಯಖಾದ್ದು ಇದರ ಬೆಲೆ ರೂ 1 0 0



ಸ್ಟರ್ಲಿಂಗ್ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟುಹಾಕಿದ ಆಭರಣ ಕಮ್ಮಲು ಜೊತೆ 1 8 0 ಹತ್ತಕಡುಕು ಜೊತೆ 2 0 0 ಬುಲಾಕು 2 0 0 ಮೂಗುಬೊಟ್ಟು 0-8-0 ವಿಳಾಸ —

ಪಿ ಮುನಿಸಾಮಿನಾಯುಡು, ನಂ 3 ಅರುಮುಗಶೆಟ್ಟಿ ವೀದಿ,
[64-1] ತಿರುವಲ್ಲಿಕೇಣಿ, ಮದರಾಸು

ಮಧುರೆ ಜುನ್ನಡಿ ಅಂಚಿನ ಸೀರೆ ಅಸ್ಸಲ್ ರಕಂ ರೂ 2-6-0
50 2

ಫೆಬ್ರವರಿ ಒಳಗಾಗಿ ತರಿಸಿಕೊಳ್ಳುವಂಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ

ಇದು ಉಡುವದಕ್ಕೆ ಧೃಢವಾಗಿಯೂ, ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ

ವಿಳಾಸ—ವಿ ಕೃಷ್ಣಸ್ವಾಮಿ ಮೊದಲಿಯಾರ್, ಕ್ಲಾತ್ ಮರ್ಚೆಂಟ್, 56 ಆಫೀಸು ವೆಂಕಟಾಚಲ ಮೊದಲಿ ಬೀದಿ ತಿರುವಲ್ಲಿಕೇಣಿ, ಮದರಾಸು

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,60,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜೆಂಟ್ರುಗಳು ತುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [243-14]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿಶ್ಚಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮರವು, ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುತ್ತವೆ [181-25]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಆಂಗಭಾಷಾ ಪ್ರಕಾಶಕ

[10-3]

ENGLISH SELF—INSTRUCTOR

ಹೆಚ್ಚು ಪುಸ್ತಕಗಳು ಬೇಕಾಗುವುದಿಲ್ಲ.

ಬಾಲಕ ಬಾಲಕಿಯರು, ವರ್ತಕರು, ಉಪಾಧ್ಯಾಯರು, ಗುಮಾಸ್ತೆಯರು, ಶಾನುಬೋಗರು, ಪಟೇಲರು ಎಲ್ಲರಿಗೂ ಬೇಕಾದ್ದು. ಕ್ರಮವಾಗಿ ಸುಲಭ ರೀತಿಯ ಇಂಗ್ಲೀಷು ಬರೆಯುವುದು, ಓದುವುದು, ಮಾತಾಡುವುದು ಕಲಿಯಬಹುದು ಸರ್ವ ವಿಷಯಗಳೂ ಅದಗಿವೆ ಕೆಲವು ಮಾತ್ರ ಉಳಿದಿವೆ ಆಲಸ್ಯಮಾಡಬೇಡಿ

ಕ್ರಯ 1-8-0 ಪೋಸ್ಟೇಜು 0-3-0

ವಿಳಾಸ—ಎ. ವಿ. ರಾಮಯಲು, ಅವಿನ್ಯೂ ರೋಡು, ಬೆಂಗಳೂರು ಸಿಟಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಫೆಬ್ರವರಿ 12 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣಿ —	(1) ಷೇರು ಮೊಬಲಗು	ರೂ 7,45,450
,,	(2) ಡಿಪಾಜಿಟ್ಟುಗಳು	,, 5,35,999
,,	(3) ಇತರೆ	,, 4,422
	(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ 12,85,871
ದೇಣಿ —	(1) ಕೈಯಲ್ಲಿರುವ ಬ್ಯಾಂಕುಗಳಲ್ಲಿರುವ ಹಣ ರೂ	2,20,645
,,	(2) ಖಾತೆ ಮತ್ತು ಇತರ ಸಾಲಗಳು	,, 7,16,349
,,	(3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1 37,014
,,	(4) ಇನ್‌ವೆಸ್ಟ್‌ಮೆಂಟುಗಳು	,, 1,50 000
,,	(5) ಏಜನ್ಸಿಗಳಲ್ಲಿರುವ ಮೊಬಲಗು	,, 44,894
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 6 847
,,	(7) ಇತರೆ	,, 10,222
	(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ 12,85,871

ಡಬ್ಲಿಯು. ಸಿ ರೋಜ್, ಮ್ಯಾನೇಜರ್.

ವಿದೇಶ ವೃತ್ತಾಂತಗಳು

ಇಟಲಿ ರಾಜ್ಯದಲ್ಲಿ ಸರ್ಕಾರದವರು ಸಿನಮಟೊಗ್ರಾಫ್ ವಿನೋದಗಳನ್ನು ತೋರಿಸುವ ನಾಟಕಶಾಲೆಗಳಿಗೆ ತೆರಿಗೆಯನ್ನು ಹಾಕಿ ರಾಜಾದಾಯವನ್ನು ಹೆಚ್ಚಿಸಿರುತ್ತಾರೆ

ಇಂಗ್ಲಾಂಡಿನಲ್ಲಿ ದಕ್ಷಿಣ ಸಮುದ್ರ ತೀರದಲ್ಲಿ ಕಳೆದ ವಾರ ಸುಂಟರಗಾಳಿ ಹುಟ್ಟಿ ಎರಡು ಹಡಗುಗಳು ಮುಳುಗಿಹೋದವು ಹನ್ನೊಂಭತ್ತು ಜನರು ಸಮುದ್ರದ ಪಾಲಾದರು

ಯೂರೋಪ್ಪಿಯನ್ ಟರ್ಕಿಯೊಳಗಿರುವ ಥ್ರೇಸ್ ಎಂಬ ಅಧಿಪತ್ಯದಲ್ಲಿ ಟರ್ಕಿ ಪ್ರಜೆಗಳ ಕಷ್ಟನಿವಾರಣೆಗಾಗಿ ಇಂಗ್ಲಾಂಡಿನಲ್ಲಿ ಒಂದು ಧರ್ಮ ಫಂಡನ್ನು ಪ್ರಾರಂಭಿಸಿರುತ್ತಾರೆ ಈ ಫಂಡಿಗೆ ನಮ್ಮ ವೈಸ್‌ರಾಯರವರ ಪತ್ನೀಯವರು 1,000 ರೂಪಾಯನ್ನು ಚಂದಾ ಕಳುಹಿಸಿದಾರೆ.

ಜರ್ಮನಿ ರಾಜ್ಯಕ್ಕೆ ಸೇರಿದ ಲೂಬೆಕ್ ಪಟ್ಟಣದಲ್ಲಿ ಹೇರ್ ಬಲ್ಡರ್ ಎಂಬೊಬ್ಬ ಚಿತ್ರಗಾರನು ತನ್ನ ಆಸ್ತಿಯಲ್ಲಿ 2,25,000 ರೂಪಾಯನ್ನು ಚಕ್ರವರ್ತಿಗೆ ಪಾವತಿಮಾಡಬೇಕೆಂದೂ, ಈ ಹಣವನ್ನು ಅವರು ಜರ್ಮನಿಯ ಹಡಗಿನ ಸೈನ್ಯವನ್ನು ಹೆಚ್ಚಿಸಿ ಬಲಪಡಿಸುವುದಕ್ಕೆ ವಿನಿಯೋಗಿಸಬೇಕೆಂದೂ ಮರಣಶಾಸನವನ್ನು ಬರೆದಿರುತ್ತಾನೆ

ಪನಾಮಾ ನಾಲೆಯ ಕೆಲಸಗಾರರ ಬಾಬಿಗೆ ಖಜಾಂಚಿಯಾಗಿ ನೇಮಕವಾಗಿದ್ದ ಮಿ|| ಕೆನ್ನಡಿ ಎಂಬುವನು ಲಕ್ಷಾಂತರ ಪ್ರಣ್ಯವನ್ನು ಅಪಹರಿಸಿದನೆಂದು ಗೊತ್ತಾದದ್ದರ ಮೇಲೆ ಅವನಿಗೆ ವಾರಂಟುಕೊಟ್ಟು ಕೋರ್ಟಿಗೆ ಹಾಜರಾಗಬೇಕೆಂದು ತಿಳಿಸಿದ್ದರು ಅದನ್ನು ಕೇಳಿ ಆತನು ಕತ್ತುಕತ್ತರಿಸಿಕೊಂಡು ಆತ್ಮಹತ್ಯಮಾಡಿಕೊಂಡನೆಂದು ವರ್ತಮಾನ ಬಂದಿದೆ

ಹೇರ್ ಬೆಲ್ಲಿನ್‌ಜರ್ ಎಂಬ ಜರ್ಮನಿಯ ಇಂಜನಿಯರು ಕಳೆದ ವಾರ ತನ್ನ ಆಕಾಶ ಬುಟ್ಟಿಯಲ್ಲಿ ಕುಳಿತು ಬಿಟ್ಟರ್‌ಫೆಲ್ಡ್ ಎಂಬ ಸ್ಥಳದಿಂದ 1,875 ಮೈಲಿ ದೂರ ಅಂತರಿಕ್ಷದಲ್ಲೇ ಸಂಚಾರಮಾಡುತ್ತಾ ಹೋಗಿ ಯೂರಲ್ ಪರ್ವತಗಳನ್ನು ಸಲಪಿದನು ಆಕಾಶ ಬುಟ್ಟಿಯಲ್ಲಿ ಇಷ್ಟುದೂರ ಸಂಚಾರಮಾಡಿದ್ದು ಇದುವರೆಗೆ ಪ್ರಪಂಚದಲ್ಲಿ ಯಾರೂ ಕೇಳರಲಿಲ್ಲ

ಟರ್ಕಿ ಗವರ್ನ್‌ಮೆಂಟಿನವರು ತಮ್ಮ ಸೈನ್ಯಕ್ಕೆ ಒಂದು ತಿಂಗಳ ಸಂಬಳ ಬಟವಾಡೆ ಮಾಡುವುದಕ್ಕೆ ಬ್ಯಾಂಕಿನಿಂದ 60 ಲಕ್ಷ ರೂಪಾಯಿ ಸಾಲತೆಗೆದುಕೊಂಡರು ಸೈನ್ಯಕ್ಕೆ ಇನ್ನೂ ನಾಲ್ಕು ತಿಂಗಳ ಸಂಬಳ ಪಾವತಿ ಆಗದೆ ಬಾಕಿಯಲ್ಲಿದೆ ಈ ಪೈಕಿ ಒಂದು ತಿಂಗಳ ಸಂಬಳವನ್ನು ಬಟವಾಡೆ ಮಾಡದೆ ಆ ಹಣವನ್ನು ಹಡಗಿನ ಸೈನ್ಯವನ್ನು ವೃದ್ಧಿಮಾಡುವುದಕ್ಕೆ ವಿನಿಯೋಗಿಸಿಕೊಳ್ಳುವಂತೆ ತೀರ್ಮಾನಿಸುತ್ತಾರೆ

ದಕ್ಷಿಣ ಯೂರೋಪಿನಲ್ಲಿ ಈಗತಾನೇ ಟರ್ಕಿ ಬಾಲ್ಕನ್ ಯುದ್ಧದ ದೆಸೆಯಿಂದ ನಿರ್ಮಾಣವಾಗಿರುವ ಆಲ್ಬೇನಿಯಾ ರಾಜ್ಯಕ್ಕೆ ಪ್ರಿನ್ಸ್ ವಿಲ್ಲಿಯಂ ವೀಡ್‌ರವರನ್ನು ಪರರಾಜ್ಯಗಳವರು ದೊರೆಯಾಗಿರುವಂತೆ ಒಪ್ಪಿ ನೇಮಕಮಾಡಿರುತ್ತಾರೆ ಅವರು ಕಳೆದ ವಾರ ಲಂಡನ್ ಪಟ್ಟಣಕ್ಕೆ ಹೋಗಿ ನಮ್ಮ ಚಕ್ರವರ್ತಿ ದಂಪತಿಗಳ ಕೂಡ ಬಕಿಂಗ್‌ಹಂ ರಾಜಭವನದಲ್ಲಿ ಇದ್ದು ಭೋಜನಮಾಡಿಕೊಂಡು, ಸೆಕ್ರೆಟರಿ ಸರ್ ಎಡ್ವರ್ಡ್ ಗ್ರೇ ಯವರ ಸಂಗಡ ಮಾತನಾಡಿಕೊಂಡು, ಪರರಾಜ್ಯಗಳ ರಾಯಭಾರಿಗಳನ್ನು ಸಂಧಿಸಿದರೆಂದು ತಂತೀವರ್ತಮಾನ ಬಂದಿದೆ

ಪೂರ್ವದಲ್ಲಿ ಹಿಂದುಸ್ಥಾನದ ರೈಲ್ವೆ ಇಲಾಖೆಯ ಡೈರೆಕ್ಟರ್ ಜನರಲ್ಲಾಗಿದ್ದು ಸೀಮೆಯಲ್ಲಿ ಕಾಲವಾದ ಮಿ|| ರಾಬರ್ಟ್ ಟಿ ಮ್ಯಾಲೆಟ್ ಎಂಬ ಸರದಾರನು ತನ್ನ ಮರಣ ಶಾಸನದಲ್ಲಿ ಬರೆದಿರುವುದೇನೆಂದರೆ—ತನ್ನ ಶವವನ್ನು ಯಾವ ಮತ ಸಂಸ್ಕಾರವೂ ಮಾಡದೆ ಸುಟ್ಟುಹಾಕಿ, ಬೂದಿಯನ್ನು ಎರಚಿಬಿಡಬೇಕು ತನಗೆ ಯಾವ ತರದ ಉತ್ತರ ಕ್ರಿಯಾದಿಗಳನ್ನೂ ಮಾಡಬೇಕಾದದ್ದಿಲ್ಲ ತನ್ನ ಹೆಸರನ್ನು ಯಾವ ರೀತಿಯಲ್ಲೂ ಶಾಶ್ವತ ಪಡಿಸಕೂಡದು ತನ್ನ ಶವವನ್ನು ಸುಡುವುದಕ್ಕೆ 300 ರೂಪಾಯಿಗಿಂತ ಹೆಚ್ಚು ಖರ್ಚುಮಾಡಬೇಕಾದದ್ದಿಲ್ಲ. ತನ್ನ ಆಸ್ತಿಯಲ್ಲಿ 75 000 ರೂಪಾಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕು ಎಂಬೀ ರೀತಿಯಾಗಿ ಬರೆದಿರುತ್ತಾನೆ

ಈಗಿನ ಟರ್ಕಿ ಗವರ್ನ್‌ಮೆಂಟನ್ನು ತಲೆಕೆಳಗೆ ಮಾಡಬೇಕೆಂದು ಅಲ್ಲಿನವರೇ ಕೆಲವರು ಅಂತರಂಗದಲ್ಲೇ ಮಸಲತ್ತು ಮಾಡುತ್ತಿರುವಂತೆ ಪ್ರಕಟವಾಗಿದೆ ಈಜಿಪ್ಟಿನಿಂದ ಕಳೆದ ವಾರ ಕಾನ್‌ಸ್ಟಂಟಿನೋಪಲ್ ನಗರಕ್ಕೆ ಹೋದ ಕರ್ನಲ್ ಅಜೀಜ್ ಅಲೀ ಎಂಬೊಬ್ಬ ಅರಬ್ಬಿ ದೊಡ್ಡ ಮನುಷ್ಯನನ್ನು ಸರ್ಕಾರದವರು ಹಿಡಿದು ಮಿಲ್ಟೇರಿ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕೆಂದು ಇಟ್ಟುಕೊಂಡಿದಾರೆ ಈ ಸುದ್ದಿಯು ಈಜಿಪ್ಟಿನ ರಾಜಧಾನಿಯಾದ ಕೈರೋ ಪಟ್ಟಣದಲ್ಲಿ ತುಂಬಾ ಕಳವಳವನ್ನೂ ಆಕ್ರೋಶವನ್ನೂ ಉಂಟುಮಾಡಿದೆ ಇಷ್ಟಲ್ಲದೆ ಟರ್ಕಿ ಗವರ್ನ್‌ಮೆಂಟಿನವರು ತಮ್ಮ ಸಿಪಾಯಿ ಸೈನ್ಯದ ಕ್ಯಾಪ್ಟನ್ ಷೆ ವಾಲ್ ಎಡ್ಡಿನ್ ಬೆಜ್ಜಿ ಎಂಬ ದೊಡ್ಡ ಉದ್ಯೋಗಸ್ಥನನ್ನು ಮೋಸ್ಕಂದ ಕಾರಣಕ್ಕಾಗಿ ಹಿಡಿದು ಕೊಲ್ಲಿಸಿದ್ದಲ್ಲದೆ ಆತನ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು

ವೃತ್ತಾಂತ ಪತ್ರಿಕೆ.

—:೦:—

ಸ ೧೯೧೪ ನೇ ಇಸವಿ ಫೆಬ್ರವರಿ ತಾ. ೨೬ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ಗ್ರಾಮಗಳನ್ನು ಅಭಿವೃದ್ಧಿಗೆ ತರುವುದು.

ನಮ್ಮ ಸೀಮೆಯ ಗ್ರಾಮಗಳ ಸ್ಥಿತಿಗತಿಯನ್ನು ಕ್ರಮಪಡಿಸಿ ಚೆನ್ನಾಗಿ ಮಾಡುವ ಭಾಗದಲ್ಲಿ ನಮ್ಮ ಗವರ್ನಮೆಂಟಿನವರು ಮಾಡುತ್ತಿರುವ ಪ್ರಯತ್ನಗಳನ್ನು ನೋಡಿ ನಾವು ಬಹಳವಾಗಿ ಸಂತೋಷಪಡುತ್ತೇವೆ. ಈ ಕಾರ್ಯವು ಸುಲಭವಾದದ್ದೇನೂ ಅಲ್ಲ. ನಮ್ಮ ಜನರು ಬದಲಾವಣೆಯೆಂದರೆ ಎದುರು ಬೀಳುವರು. ಯಾಕೆಂದರೆ ಬದಲಾವಣೆಯಲ್ಲಿ ಅವರಿಗೆ ಅಭಿರುಚಿಯಿಲ್ಲ. ಹಿರಿಯರ ಕಾಲದಿಂದಲೂ ಗ್ರಾಮದ ಕೆಲಸ ಕಾರ್ಯಗಳು ಒಂದು ರೀತಿಯಾಗಿ ನಡೆದುಬರುತ್ತಾ ಇರುವವು, ಅಂಥಾ ಕೆಲಸಕಾರ್ಯಗಳನ್ನು ಈಗ ಬದಲಾವಣೆಮಾಡಬೇಕಾದ ಪ್ರಕೃತವೇನು ' ಎನ್ನುತ್ತಾರೆ. ಗ್ರಾಮಾಂತರಗಳಲ್ಲಿ ಪದ್ಧತಿ ಆಚರಣೆ ಎಂಬುವುದೇ ಎಲ್ಲಕ್ಕೂ ಪ್ರಧಾನವಾಗಿರುತ್ತದೆ. ಅಂಥಾ ಪದ್ಧತಿಯನ್ನಾಗಲಿ ಆಚರಣೆಯನ್ನಾಗಲಿ ಬದಲಾಯಿಸಿ ಒಳ್ಳೇ ಆಚರಣೆಯನ್ನು ರೂಢಿಸಿಕೊಳ್ಳಿ ಎಂದು ಹೇಳತಕ್ಕ ಗಂಡಸಾಗಲಿ ಹೆಂಗಸಾಗಲಿ ಗ್ರಾಮಸ್ಥರ ಕಣ್ಣಿಗೆ ಶತ್ರುಗಳಾಗಿ ಪರಿಣಮಿಸುವರಲ್ಲದೆ ಹಿತವಾದಿಗಳೆ ... ಎಣಿಸಲ್ಪಡುವುದಿಲ್ಲ.

... ಯನ್ನು ಹರಡುವುದರ ಮೂಲಕ ಗ್ರಾಮಾಂತರಗಳ ಸ್ಥಿತಿಯನ್ನು ಅಭಿವೃದ್ಧಿಗೆ ತರಬಹುದಲ್ಲದೆ ಗವರ್ನಮೆಂಟಿನವರು ಇನ್ನಾವ ಇತರ ಮಾರ್ಗಗಳಿಂದಲೂ ಅಭಿವೃದ್ಧಿಮಾಡುವುದು ಸಾಧ್ಯವಲ್ಲವೆಂದು ನಮಗೆ ತೋರುತ್ತದೆ. ಈಗ ಗವರ್ನಮೆಂಟಿನವರು ವಿದ್ಯೆಯನ್ನು ಹರಡಬೇಕೆಂದು ನಿಶ್ಚಯಿಸಿಕೊಂಡಿರುವರು. ಗ್ರಾಮದಲ್ಲಿ ಮುಖಂಡನಾಗಿಯೂ ಗ್ರಾಮಸ್ಥರ ಪ್ರೀತಿ ಗೌರವಗಳಿಗೆ ಪಾತ್ರನಾಗಿಯೂ ವಿವೇಕಶಾಲಿಯಾಗಿಯೂ ಇರುವಂಥಾ ಗೌಡನಿರುವ ಪಕ್ಷಕ್ಕೆ ಆತನು ಗ್ರಾಮಸ್ಥರ ವಿರೋಧವನ್ನು ಸಂಪಾದಿಸಿಕೊಳ್ಳದೆ ಸುಲಭವಾಗಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ನಡಿಸಬಹುದಾಗಿದೆ. ಆದರೆ ಈಗಲೇ ಸಾಮಾನ್ಯವಾಗಿ ಪ್ರತಿ ಗ್ರಾಮದಲ್ಲೂ ಪಂಗಡಗಳುಂಟೆಂದು ಹೇಳಬಹುದು. ಒಂದು ವೇಳೆ ಅಂಥಾ ಗೌಡನು ಗ್ರಾಮದಲ್ಲಿ ಅಭಿವೃದ್ಧಿಮಾಡಬೇಕೆಂದು ಪ್ರಯತ್ನಪಡುವ ಪಕ್ಷದಲ್ಲಿ ಪಂಗಡಗಳು ಹೆಚ್ಚುತ್ತವೆ. ಗ್ರಾಮದಲ್ಲಿ ನಮ್ಮ ಅಭಿವೃದ್ಧಿಗಳು ನೆಲೆಗೊಳ್ಳುವುದಕ್ಕೆ ಪ್ರತಿಯಾಗಿ ವ್ಯಾಜ್ಯಗಳೂ ಹೋರಾಟಗಳೂ ಮನಸ್ತಾಪಗಳೂ ಹೆಚ್ಚುವವು.

ಆದರೆ ಗ್ರಾಮದಲ್ಲಿ ಒಬ್ಬ ಸ್ಕೂಲ್ ಉಪಾಧ್ಯಾಯನಿದ್ದು ತಿಳುವಳಿಕಸ್ತನೂ ಯೋಗ್ಯನೂ ಆಗಿರುವ ಪಕ್ಷದಲ್ಲಿ ಆತನಿಂದ ಆ ಗ್ರಾಮಕ್ಕೆ ತುಂಬಾ ಪ್ರಯೋಜನವಾಗುತ್ತೆನ್ನುವುದಕ್ಕೆ ಸಂಶಯವಿಲ್ಲ. ಆತನು ಗ್ರಾಮಸ್ಥರ ಸ್ನೇಹ ಪ್ರೀತಿ ಗೌರವಗಳನ್ನು ಪಡೆದವನಾಗಿದ್ದರೆ ತನ್ನ ಪಾಠಶಾಲೆಗೆ ಬರುವಂಥಾ ಮಕ್ಕಳ ಮೂಲಕ ಗ್ರಾಮಸ್ಥರಿಗೆ ಅನೇಕ ಆರೋಗ್ಯ ವಿಚಾರಗಳನ್ನು ಹೇಳಿಕೊಟ್ಟು ಗ್ರಾಮವನ್ನು ಆರೋಗ್ಯಕರವಾಗಿಯೂ ಶ್ರೇಯಸ್ಕರವಾಗಿಯೂ ಮಾಡಬಹುದಾಗಿದೆ.

ಈಗ ಗ್ರಾಮಗಳ ಕ್ಷೇಮಾಭಿವೃದ್ಧಿಯನ್ನು ಕಾಪಾಡಿ ಹೆಚ್ಚಿಸುವುದಕ್ಕೆ ಮೈಸೂರು ಗೌರ್ನಮೆಂಟಿನವರು ಮಾಡಿಟ್ಟು ರೂಢಿಗೆ ತರಬೇಕೆಂದಿರುವ ಈ ಹೊಸ ಏರ್ಪಾಡಿನಲ್ಲಿ ಅನೇಕ ವಿಷಯಗಳು ತುಂಬಾ ಸ್ತೋತ್ರಾರ್ಹವಾಗಿರುತ್ತವೆ. ಪ್ರಜೆಗಳು ಸ್ವಕೀಯವಾಗಿ ಸಾಧನಪಡಬೇಕೆಂದು ಸರ್ಕಾರದವರು ಒತ್ತಿಹೇಳುವರು. ಸಕಲ ವಿಧವಾದ ಶ್ರೇಯಸ್ಸಿಗೂ ಇದೇ ಮೂಲವಾಗಿರುತ್ತದೆ. ಗ್ರಾಮಾಧಿಕಾರಿಗಳು ಪ್ರಜೆಗಳಿಗೆ ಸಹಾಯಕರಾಗಿರಬೇಕೆಂದು ಈ ಏರ್ಪಾಡು ಸೂಚಿಸುವುದು. ಇದರಿಂದ ಗ್ರಾಮದ ಪ್ರಜೆಗಳನ್ನು ಕಷ್ಟನಷ್ಟಗಳಿಗೆ ಗುರಿಮಾಡದಂತೆ ಆಗಬೇಕೆಂದು ಹೇಳುವವು. ಯಾಕೆಂದರೆ ಗವರ್ನಮೆಂಟಿನವರು ಎಷ್ಟೋ ಪ್ರೀತಿಯಿಂದಲೂ ಉತ್ಕೃಷ್ಟವಾದ ಉದ್ದೇಶದಿಂದಲೂ ಒಂದು ಏರ್ಪಾಡು ಮಾಡಿದಾರೆ. ಸಣ್ಣ ನೌಕರರು ತಿಳಿಯದ ರೈತಪ್ರಜೆಗಳನ್ನು ಸುಲಿದು ತಿನ್ನುವುದಕ್ಕೆ ಪ್ರಾರಂಭಿಸಿ ಆ ಪ್ರೀತಿಯನ್ನೂ ಉದ್ದೇಶವನ್ನೂ ಹಾಳುಮಾಡುತ್ತಾರೆ. ಈ ಹೊಸ ಏರ್ಪಾಡಿನಿಂದ ಅಂಥಾ ಸ್ಥಿತಿ ಪ್ರಾಪ್ತವಾಗಲಾರದೆಂದು ನಿರೀಕ್ಷಿಸುತ್ತೇವೆ. ಈಗ ಸರ್ಕಾರದವರು ಮಾಡಿರುವ ಏರ್ಪಾಡಿನಲ್ಲಿ ಸ್ಕೂಲ್ ಮಾಸ್ಟರು ಯಾವ ಗಣನೆಗೂ ಬರಲಿಲ್ಲವಲ್ಲಾ ಎಂದು ವಿಷಾದಿಸುವೆವು. ಇಂಥಾ ಅಭಿವೃದ್ಧಿ ಕಾರ್ಯದಲ್ಲಿ ಸಹಾಯಕನಾಗತಕ್ಕವನು ಸ್ಕೂಲ್ ಮಾಸ್ಟರಲ್ಲದೆ ಇತರರ್‍ಯಾರೂ ಒದಗಲಾರರು. ಆತನ ಹೆಸರು ಈ ಏರ್ಪಾಡಿನಲ್ಲಿ ಕಾಣುವುದೇ ಇಲ್ಲ. ಒಂದು ವೇಳೆ, ಗ್ರಾಮಾಂತರಗಳಲ್ಲಿರುವ ಸ್ಕೂಲ್ ಮಾಸ್ಟರುಗಳು ಇನ್ನೂ ಚಿಕ್ಕವಯಸ್ಸಿನವರು; ಅವರಿಗೆ ಅಷ್ಟೇನೂ ಅನುಭವವಿರುವುದಿಲ್ಲ ಎಂಬ ಅಭಿಪ್ರಾಯವಿರಬಹುದು. ಇಂಥವರನ್ನು ಸರ್ಕಾರದವರು ಮುತುವರ್ಜಿಯಾಗಿ ತರಬೇತು ಮಾಡಬೇಕಾದದ್ದೂ, ಗ್ರಾಮಸ್ಥರಿಗೆ ನಿಜವಾಗಿಯೂ ಉಪಕಾರ ಮಾಡತಕ್ಕವರನ್ನೇ ಆರಿಸಿ ಕಳುಹಿಸತಕ್ಕದ್ದೂ ಪರಮಾವಶ್ಯವಾಗಿರುತ್ತವೆ.

ಈ ಹೊಸ ಏರ್ಪಾಟಿನಲ್ಲಿ ಕಾಣಿಸಿರುವಂಥಾ ತಃಖ್ತೆಗಳಲ್ಲಿ ಸತ್ಯವೂ ಯಥಾರ್ಥವೂ ಆದ ಸಂಗತಿಗಳನ್ನು ಬರೆದು ತಯಾರ್ ಮಾಡುವುದಾದರೆ ಈ ತಃಖ್ತೆಗಳಿಂದ ತುಂಬಾ ಪ್ರಯೋಜನವುಂಟು. ಯಾಕೆಂದರೆ ಗವರ್ನಮೆಂಟಿಗೆ ಇಲಾಖೆಗಳ ಮೂಲಕ ಬರೆದು ಬರುವ ಲೆಕ್ಕ ಮುಂತಾದವುಗಳನ್ನು ಸತ್ಯವಾದವುಗಳೆಂದು ನಂಬುವುದು ಸಾಧ್ಯವೇ ಎಂಬುದಾಗಿ ಶಂಕಿಸಿದುದೇವು. ಸರ್ಕಾರದವರು ಹುಕುಂ ಕೊಟ್ಟು ಕೇಳುವಾಗ್ಗೆ ಅನೇಕ ಸಂದರ್ಭಗಳಲ್ಲಿ ಬರೆದು ಬರುವ ಲೆಕ್ಕಗಳೂ ಇತರ ಸಂಗತಿಗಳೂ ನೇತ್ರಾನಂದಕರವಾಗಿಯೇ ಇರುವವು, ಆದರೆ ಗ್ರಾಮಾಂತರಗಳ ಸ್ಥಿತಿಗತಿಯು ಎಂದಿನಂತೆಯೇ ಇರಬಹುದು, ... ಇನ್ನೂ ಹೀನಸ್ಥಿತಿಗೆ ಬಂದಿರಬಹುದು. ಈ ಸಂದರ್ಭದಲ್ಲಿ ಕೆಲವು ವರುಷಗಳ ಹಿಂದೆ ನಮ್ಮ ಅನುಭವಕ್ಕೆ ಬಂದ ಒಂದು ಸಂಗತಿಯನ್ನು ಇಲ್ಲಿ ಉದಾಹರಿಸಲಪೇಕ್ಷಿಸುತ್ತೇವೆ. ಅದೇನೆಂದರೆ, ಎಜ್ಯುಕೇಷನ್ ಸ್ಕೂಲ್ ಇನ್‌ಸ್ಪೆಕ್ಟರು ಕೆಲವು ಹೋಬಳಿ ಸ್ಕೂಲುಗಳ ವಿಷಯದಲ್ಲಿ ರಿಪೋರ್ಟು ಕಳುಹಿಸಬೇಕಾಗಿತ್ತು. ಆ ಸ್ಕೂಲುಗಳ ಮೇಲೆ ಆಗಿನ ಇಲಾಖಾ ಮುಖ್ಯಾಧಿಕಾರಿಗೆ ತುಂಬಾ ಅಭಿಮಾನವಿದ್ದಿತು. ನಾವು ಆ ಇನ್‌ಸ್ಪೆಕ್ಟರ ಕೂಡ ಮಾತನಾಡುವಾಗ್ಗೆ ಅವರು— "ನಾನು ರಿಪೋರ್ಟಿನಲ್ಲಿ ಇದನ್ನು ಕೊಂಚ ಸುಳ್ಳನ್ನು ಸೇರಿಸಿ ಬರೆಯುವಂತಾದರೆ ಸಾಕಲ್ಲಾ, ... ' ಎಂದು ಹೇಳಿದರು. ಈ ಗ್ರಾಮಾಭಿವೃದ್ಧಿಯ ತಃಖ್ತೆಗಳಲ್ಲಿ ಸತ್ಯವೂ ಯಥಾರ್ಥವೂ ಆದ ವಿದ್ಯಮಾನಗಳನ್ನೇ ಬರೆಯುತ್ತಲೂ, ಗವರ್ನಮೆಂಟಿನವರ ಶ್ಲಾಘ್ಯವಾದ ಉದ್ದೇಶಗಳನ್ನು ಸತ್ಯಕೆಯಿಂದಲೂ ಯೋಗ್ಯವಾದ ರೀತಿಯಲ್ಲೂ ನಡಿಸುತ್ತಲೂ ಬಂದ ಪಕ್ಷದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ನವೀನವಾದ ಉತ್ಸಾಹವು ಹುಟ್ಟೀತೆನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ಪ್ರಜೆಗಳಲ್ಲಿ ಸಮಸ್ತ ಪಂಗಡಗಳವರೂ ಏಕೀಭವಿಸಿ ನಮ್ಮ ಸೀಮೆಯ ಗ್ರಾಮಗಳ ಸ್ಥಿತಿಗತಿಯನ್ನು ವಿಶೇಷ ಆರೋಗ್ಯಜನಕವಾಗಿಯೂ, ಶ್ರೇಯಸ್ಕರವಾಗಿಯೂ ಮಾಡಲು ಸಾಧನಪಡಬೇಕೆಂದೂ, ಈ ಮೂಲಕ ನಮ್ಮ ಸಂಸ್ಥಾನವನ್ನು ಅಭಿವೃದ್ಧಿಗೆ ತರಬೇಕೆಂದೂ ... ವಾಗಿ ಹಾರೈಸುತ್ತೇವೆ.

[ಗವರ್ನಮೆಂಟಿನವರು ನಮ್ಮಲ್ಲಿಗೆ ಕಳುಹಿಸಿರುವ ಮೇಲ್ಕಂಡ ಹೊಸ ಏರ್ಪಾಡಿನ ತಃಖ್ತೆ ಮೊದಲಾದವುಗಳನ್ನು ಮುಂದಿನ ವಾರ ಪ್ರಕಟಿಸಮಾಡುವೆವು.]

ಸ್ವಪರೀಕ್ಷೆ.

ಮಿ ಗ್ಲಾಡ್‌ಸ್ಟನ್ ಮಂತ್ರಿಶ್ರೇಷ್ಠನು ಈ ವಿಷಯವನ್ನು ಕುರಿತು ಹೇಳುವದೇನೆಂದರೆ,—ಒಬ್ಬೊಬ್ಬ ವ್ಯಕ್ತಿ ಪುರುಷನೂ ಸ್ತ್ರೀಯೂ ತನ್ನ ತನ್ನ ಗುಣದಲ್ಲಿಯೂ ನಡತೆಯಲ್ಲಿಯೂ ಯಾವ ಯಾವ ದೋಷಗಳೂ ಕೊರತೆಗಳೂ ಇವೆಯೆಂದು ಸಂತತವೂ ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುವ ಅಭ್ಯಾಸವನ್ನು ಮಾಡುತ್ತಿರಬೇಕು. ವರ್ತಕನು ದಿನವೆಲ್ಲಾ ಅಂಗಡಿಯಲ್ಲಿ ವ್ಯಾಪಾರವನ್ನು ಮಾಡುತ್ತಿದ್ದು ಸಂಜೆಯಲ್ಲಿ ಅಂಗಡಿ ಹಾಕುವದಕ್ಕಿಂತ ಮುಂಚೆ ವ್ಯಾಪಾರದಲ್ಲಿ ವೆಚ್ಚವಾದ ಸರಕುಗಳಿಂದ ತನಗೆ ತಕ್ಕ ಲಾಭ ಬಂದಿದೆಯೋ ಇಲ್ಲವೋ ಎಂದು ಲೆಕ್ಕನೋಡುತ್ತಾನೆ. ಪ್ರತಿ ಮನುಷ್ಯನು ತನ್ನಲ್ಲಿ ಈ ದಿನ ಹುಟ್ಟಿದ ಯೋಚನೆಗಳು ಮನೋಭಾವಗಳು ಎಂಥವುಗಳು ? ತಾನು ನುಡಿದ ಮಾತುಗಳು, ಮಾಡಿದ ಕೆಲಸಗಳು ಎಂಥವು ? ಎಂದು ಪ್ರತಿ ರಾತ್ರಿಯೂ ಮಲಗುವದಕ್ಕೆ ಹೋಗುವದಕ್ಕಿಂತ ಮುಂಚೆ ಪರೀಕ್ಷಿಸಬೇಕು. ಮುಖ್ಯವಾಗಿ ಆವಶ್ಯವಾಗಿರುವ ಈ ಕೆಲಸವನ್ನು ನಿರಂತರವಾಗಿ ನಡಿಸುವದಕ್ಕೆ ತಕ್ಕ ಅನುಕೂಲವು ದೊರೆಯುವ ಹಾಗೆ ಕ್ಲುಪ್ತವಾದ ಕಾಲವನ್ನು ಗೊತ್ತುಮಾಡಿಕೊಂಡು ಆ ಸಮಯವು ಬಂದ ಕೂಡಲೇ ಏಕಾಂತವಾದ ಸ್ಥಳಕ್ಕೆ ಹೋಗಿ ಅಲ್ಲಿ ತನ್ನನ್ನು ದೇವರ ಸಮ್ಮುಖದಲ್ಲಿ ಪರೀಕ್ಷಿಸಿಕೊಳ್ಳಲಿ. ಯಾವ್ಯಾವ ದುರಾಲೋಚನೆ ದುರ್ಭಾವನೆಗಳನ್ನು ಈ ದಿನ ಬೆಳಗ್ಗಿನಿಂದ ಈ ವರೆಗೂ ನನ್ನಲ್ಲಿ ಉದ್ಭವಿಸಿ ಮನಸ್ಸನ್ನು ಮಲಿನಪಡಿಸಿದವು. ಅನ್ಯಾಯವಾದ ಕೋಪ, ದುರಭಿಮಾನ, ಅನವಶ್ಯಕವಾದ ಕಠಿಣೋಕ್ತಿಗಳು, ದೂಷಣೆ, ಚಾಡಿ, ಪರನಿಂದೆ, ಹರಟೆ, ಹೃದಯದಲ್ಲಿ ಹುಟ್ಟಿ ... ದ ಹೊರಡೋಣ ಯಾರ್‍ಯಾರಿಗೆ ಎಷ್ಟೆಷ್ಟು ಮನೋವ್ಯಥೆಯನ್ನೂ ಕೇಡನ್ನೂ ಬಗೆದಿದ್ದೇನೆ ? ಯಾರನ್ನು ವಂಚಿಸಿದ್ದೇನೆ ? ನಿರ್ನಿಮಿತ್ತವಾಗಿ ಯಾರ ಮೇಲೆ ಜಗಳಕ್ಕೆ ಕಾಲು ಕೆರೆದಿದ್ದೇನೆ ? ಅಹಂಕಾರ, ಡಂಭ, ಆಟ ಪಾಠಗಳು ನನ್ನನ್ನು ಎಷ್ಟು ಮಟ್ಟಿಗೆ ಮಾಯಕ್ಕೆ ಮರುಳುಗೊಳಿಸಿದೆ ? ಪ್ರಯೋಜನಕಾರಿಯಾಗಿಯೂ ಪರರಿಗೆ ಹಿತಕಾರಿಯಾಗಿಯೂ ಬದುಕುವದಕ್ಕೆ ಪ್ರಯತ್ನಪಟ್ಟಿದ್ದೇನೆಯೆ ? ಅಥವಾ ಸ್ವಾರ್ಥಪ್ರಿಯನಾಗಿ ಸ್ವಹಿತವನ್ನು ಮಾತ್ರ ಬಯಸಿ ನನ್ನ ಕಾಲ, ಹಣ, ಬಲಗಳನ್ನು ಅದಕ್ಕಾಗಿ ಮಾತ್ರ ವ್ಯಯಮಾಡಿದ್ದೇನೆಯೆ ? ಈ ವಿಧವಾದ ಪ್ರಶ್ನೆಗಳನ್ನು ಹಾಕಿಕೊಂಡು ನಿರ್ವಂಚನೆ, ನಿಷ್ಪಕ್ಷಪಾತತೆಯಿಂದ ಯಥಾರ್ಥ ಪ್ರತ್ಯುತ್ತರಗಳನ್ನು ಹೇಳಿಕೊಳ್ಳಬೇಕು.

ದುಷ್ಟಭಾವ, ದುರಿಚ್ಛೆ, ದುರಾಲೋಚನೆಗಳು ಕೆಲರನ್ನು ಕಾಡಿ ಸಾಮಾನ್ಯವಾಗಿ ಪಾಪಕ್ಕೆಳೆಯುತ್ತವೆ. ಅವರ ಒಬ್ಬೊಬ್ಬನ ಸ್ವಭಾವಾನುಗುಣ್ಯವಾಗಿ ಒಂದೊಂದು ತರದ ಪಾಪಗಳು ಅವನವನನ್ನು ಮುಖ್ಯವಾಗಿ ಕಾಡುತ್ತಿರುತ್ತವೆ. ಕೆಲವರು ಆತುರದಿಂದ ನಿರ್ನಿಮಿತ್ತವಾದ ದುರಾಗ್ರಹಕ್ಕೆ ಅಧೀನರಾಗಿರುತ್ತಾರೆ. ಇವರು ಹತ್ತು ಕಲಹದ ಕಾಳಗಪಡೆಯಂತೆ ಮಾತಿಗೆ ಮೊದಲು ಸಿಟ್ಟುಗೊಳ್ಳುತ್ತಾರೆ. ಮೂಢ ... ಗಳನ್ನು ಮಾಡಿದ ನಂತರ ಏಕಾಂತದಲ್ಲಿ ಕುಳಿತುಕೊಂಡು ತಾವು ಮಾಡಿದ ತಪ್ಪನ್ನು ನೆನಸಿ ದುಃಖಪಡುತ್ತಾರೆ. ಕೆಲವರು ಕಾಮಾತುರದಿಂದ ವಿಷಯಲಂಪಟರಾಗಿ ಕೆಟ್ಟುಹೋಗುವ ದುರಭ್ಯಾಸವುಳ್ಳವರಾಗಿದ್ದಾರೆ. ಇನ್ನು ಕೆಲವರು ಮಾದಕಪದಾರ್ಥಗಳನ್ನು ಸೇವಿಸಿ ಮತ್ತರಾಗುವ ವಾಡಿಕೆಗೆ ದಾಸರಾಗಿದ್ದಾರೆ. ಮತ್ತೆ ಕೆಲವರಿಗೆ ಹರಟೆ ಮಾತು, ಚಾಡಿ, ನಿಂದೆಗಳು ಸಕ್ಕರೆಗಿಂತ ಸವಿಯಾಗಿವೆ. ಅವರಿಗೆ ಅದರಲ್ಲಿ ಎಷ್ಟೋ ಸಂತೋಷ. ಇನ್ನು ಕೆಲವರು ನ್ಯಾಯವಾಗಿ ತಮಗೆ ಪ್ರಾಪ್ತಿಸುವ ಶಿಕ್ಷೆಯನ್ನು ತಪ್ಪಿಸಿಕೊಳ್ಳುವದಕ್ಕೋ ಅಥವಾ ಆದಾಯದ ಮೇಲಣ ಅಪೇಕ್ಷೆಯಿಂದಲೋ ಸುಲಭವಾಗಿ ಸುಳ್ಳು ಹೇಳುವರು. ಹೀಗೆ ಒಂದೊಂದು ವಿಧವಾದ ಪಾಪವು ಒಬ್ಬೊಬ್ಬನಲ್ಲಿ ವಿಶೇಷವಾದ ರೀತಿಯಲ್ಲಿ ವಾಡಿಕೆಯಾಗಿರುವವು. ಬೇರೆ ವಿಧವಾದ ದುರಿಚ್ಛೆಗಳನ್ನು ಅವರು ಸ್ವಾಯತ್ತ ಎದುರಾಯಿಸಿ ತಮ್ಮ ಮನಸ್ಸಿನಲ್ಲಿ ಅವುಗಳಿಗೆ ಇಂಬುಗೊಡದೆ ಅವುಗಳನ್ನು ನಿರ್ಮೂಲಮಾಡುವರು. ಆದರೆ ನಮ್ಮ ಹೃದಯದಲ್ಲಿ ಬಹಳ ದಿನಗಳಿಂದ ಪ್ರೀತಿಯಾಗಿ ಸಾಕಿದ ತಮ್ಮ ಮುದ್ದು ಪಾಪವು ತಮ್ಮನ್ನು ಪ್ರೇರಣೆಮಾಡಿ ಪತ್ತಿಸಂಪದ ... ಅದಕ್ಕೆ ತಟ್ಟನೆ ಸೂಸೋತು ಹೋಗುವರು. ಮನೆಯ ದೀಪವೇ ಮನೆಯನ್ನು ಸುಟ್ಟ ಹಾಗೆ ಮಾತೇ ಸುದದಿರುವುದೇ ?

ಸ್ನೇಹಿತನೇ, ನಿನ್ನನ್ನು ಈ ... ಒಳಹೊಕ್ಕು ಕಾಡುತ್ತಿರುವ ಪಾಪವು ಯಾವುದು ? ಈ ದಿನ ಎಷ್ಟು ಸರ್ತಿ ಅದು ನಿನ್ನ ಹತ್ತಿರ ಬಂದು ತನ್ನ ಅಪಭಾವ ವಿಲಾಸಗಳನ್ನು ಬೀರಿ ನಿನ್ನನ್ನು ಒಲಿಸಿಕೊಳ್ಳುವದಕ್ಕೆ ಪ್ರಯತ್ನಿಸಿತು ? ನೀನು ಎಷ್ಟು ಸಾರಿ ಅದಕ್ಕೆ ಮರುಳಾಗಿ ಅದನ್ನು ಆಲಿಂಗಿಸಿಕೊಂಡೆ ? ನಿನಗೂ ಅದಕ್ಕೂ ಬಹು ಕಾಲದ ಸ್ನೇಹವಿರುವದರಿಂದ ಅದನ್ನು ಉಲ್ಲಂಘಿಸುವದು ಅಸಾಧ್ಯವಾಯಿತೋ ? ನೋಡಿಕೋ. ಅದು ಸರ್ಪದ ಹಾಗೆ ನಿನ್ನನ್ನು ವಂಚಿಸಿ ನಾಗರಹಾವಿನಂತೆ ಕಚ್ಚಿದು ನಿನ್ನಲ್ಲಿ ತನ್ನ ವಿಷಬಲವನ್ನು ತೋರಿಸುವದು.

ನಿನ್ನನ್ನು ಕಾಡುವ ಪಾಪವು ಯಾವದೆಂದು ಪರೀಕ್ಷಿಸಿ ... ದ ಗೊತ್ತುಮಾಡಿಕೊಂಡು ಅದನ್ನು ನಿನ್ನ ಹಗೆಯಾಳೆಯೆಂದು ಎಣ್ಣಿ ... ಅದಕ್ಕೆ ವಿರೋಧವಾಗಿ ಹೋರಾಟ ಪ್ರತಿಭಟಿಸು. ಅದಕ್ಕೆ ನಿನ್ನ ಮನಸ್ಸಿನಲ್ಲಿಯಾಗಲಿ ಯೋಚನೆಯಲ್ಲಿಯಾಗಲಿ ತರಿಗಿ ಆಸ್ಪದವನ್ನು ಕೊಡಲೇಬೇಡ. ಅದು ತನ್ನ ಸೌಂದರ್ಯವನ್ನು ಪನ್ನನ್ನು ಸೇವಿಸುವದರಿಂದ ಲಭ್ಯವಾಗುವ ಸಂತೋಷವನ್ನು ನಿನಗೆ ತೋರಿಸಿ ನಿನ್ನನ್ನು ತನ್ನ ವಶವರ್ತಿಯಾಗಬೇಕೆಂದು ಪ್ರೇರೇಪಿಸುವಾಗ ಅದನ್ನು ಹತ್ತಿರಕ್ಕೆ ಬರಲೀಸದೆ ಆಚೆಗೆ ನೂಕಿ ದುರಾತ್ಮನೆ ನನ್ನನ್ನು ಬಿಟ್ಟುಹೋಗು ಎಂದು ಖಂಡಿತವಾದ ನುಡಿಗಳಿಂದ ಹೇಳು.

ನೀನು ಒಂದೆರಡು ನೂರು ಸರ್ತಿ ನಿನ್ನ ಪ್ರೀತಿಪಾತ್ರವಾದ ಪಾಪಕ್ಕೆ ಸ್ಥಳಕೊಡದೆ ಹಿಮ್ಮೆಟ್ಟಿಸಿದರೂ ನಿನಗೆ ಸಂಪೂರ್ಣವಾಗಿ ಜಯವಾಯಿತೆಂದಾದರೂ ಅದು ನಿನ್ನ ಹತ್ತಿರಕ್ಕೆ ಪುನಃ ಬರುವದೇ ಇಲ್ಲವೆಂದಾದರೂ ತಿಳಿಯಬೇಡ. ಅದು ಸದೋಪದೇ ನಿನ್ನನ್ನು ಕಾಡುವದು. ನಿನ್ನ ಸ್ವಭಾವ, ಮನಸ್ಸು, ವಾಡಿಕೆಗಳು ಅದಕ್ಕೆ ಪಳಗಿವೆ. ಅದು ತನ್ನ ಕುಯುಕ್ತಿಯನ್ನು ನಿನ್ನ ಮೇಲೆ ನಿನಗೆ ಅರಿಕೆಯಿಲ್ಲದ ರೀತಿಯಲ್ಲಿ ಸಾಧಿಸಿ ನಿನ್ನ ಮನಸ್ಸನ್ನು ಹೊಕ್ಕು ನಿನ್ನನ್ನು ತನ್ನ ಅಧೀನಕ್ಕೆ ಬಗ್ಗಿಸಿಕೊಳ್ಳುವದು.

ಆದ್ದರಿಂದ ನೀನು ಅದಕ್ಕೆ ಜೀವಿತಕಾಲವೆಲ್ಲಾ ವಿರೋಧಿಯಾಗಿ ನಿಂತು ಯುದ್ಧಮಾಡು. ಮತ್ತು ನಿನ್ನ ಸಂಕಲ್ಪವು ಎಷ್ಟೇ ದೃಢವಾಗಿದ್ದರೂ ನಿನ್ನ ಸ್ವಂತ ಬಲವು ಸಾಲದಿರುವದು. ಆದ್ದರಿಂದ ದೇವರ ಪರಿಶುದ್ಧಾತ್ಮನು ನಿನಗೆ ಈ ಕೆಲಸದಲ್ಲಿ ನೆರವಾಗಿ ತನ್ನ ಸಹಕಾರಣೆಯನ್ನು ನಿನಗೆ ದಯಪಾಲಿಸಬೇಕೆಂದು ಆತನನ್ನು ಬೇಡುತ್ತಿರು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಈ ದಿನ ಸಾಯಂಕಾಲ ಶ್ರೀಮನ್ ಯುವರಾಜರವರು ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಬಹುಮಾನ ಸಭೆಯ ಅಗ್ರಾಸನವನ್ನು ಅಲಂಕರಿಸಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸುವವರಾಗಿದಾರೆ.

ಬೆಂಗಳೂರು ಬಿನ್ನಿಕಂಪನಿಯಲ್ಲಿ ಎಂ. ಎ. ಶ್ರೀನಿವಾಸಯ್ಯಂಗಾರ್ ಎಂಬಾತನು ಸುಮಾರು 31,000 ರೂಪಾಯಿ ಅಪಹರಿಸಿದನೆಂಬ ಮೊಕದ್ದಮೆಯನ್ನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡಿಸಿ, ಸೆಷನ್ಸ್ ದರ್ಯಾಪ್ತಿಗೆ ಕಳುಹಿಸುವುದಾಗಿ ಮೊನ್ನೆ ಮಂಗಳವಾರ ತೀರ್ಮಾನ ಹೇಳಿದರು.

ಇದೇ ತಾ. 28 ನೇ ಶನಿವಾರ ಸಾಯಂಕಾಲ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಷೇಕ್ಸ್‌ಪಿಯರ್ ಎಂಬ ಆಂಗ್ಲಮಹಾಕವಿಯ ಒಂದಾನೊಂದು ನಾಟಕದಲ್ಲಿ ಕೆಲವು ಭಾಗಗಳನ್ನು ಅಭಿನಯಿಸುವರು. ಆಗ್ಗೆ ಶ್ರೀಮನ್ ಮಹಾರಾಜರವರು ಯುವರಾಜರವರ ಸಮೇತ ದಯಮಾಡಿ ಹಾಜರಿರುವಂತೆ ಒಪ್ಪಿಕೊಂಡಿರುತ್ತಾರೆ.

ಶ್ರೀ ಶಿವಗಂಗಾ ಸ್ವಾಮಿಗಳು ಮುಂದಿನ ತಿಂಗಳ 8 ನೇ ತಾ ಗೆ ರಾಜಧಾನಿಗೆ ಬರುವುದು ತಪ್ಪಿ, ತಾ 1 ನೇ ಭಾನುವಾರ ಬೆಳಗ್ಗೆ ದಯಮಾಡುವಂತೆ ಖಬರಾಗಿದೆ. ಆ ದಿವಸವೇ ಶ್ರೀಮನ್ ಮಹಾರಾಜರವರು ಸ್ವಾಮಿಗಳಿಗೆ ಅರಮನೆಯಲ್ಲಿ "ಧೂಳೀ" ಪಾದಪೂಜೆಯನ್ನು ಬೆಳಸುವರೆಂದೂ, ಸ್ವಾಮಿಗಳು ಸಂಸ್ಕೃತ ಪಾಠಶಾಲೆ ಕಟ್ಟಡದಲ್ಲಿ ಇಳುಕೊಳ್ಳುತ್ತಾರೆಂದೂ ತಿಳಿದುಬಂದಿದೆ.

ಒಬ್ಬ ಬಾತ್ಮಿದಾರರಿಂದ—ಚನ್ನರಾಯಪಟ್ಟಣದ ತಾಲ್ಲೂಕು ಹಿರೀಸಾವೆ ಹೋಬಳಿ ಬೇಡರಹಳ್ಳಿ ಗ್ರಾಮದಲ್ಲಿ ಇದೇ ತಿಂಗಳು 16 ನೇ ತಾ ಭಾನುವಾರ ಬೆಳಗಿನ ಐದು ಗಂಟೆಯಲ್ಲಿ ಒಂದು ಭಾರಿ ಹುಲ್ಲುಮನೆಗೆ ಆಕಸ್ಮಾತ್ ಬೆಂಕಿ ಹತ್ತಿಕೊಂಡು 25 ಮನೆಗಳು ಸುಟ್ಟುಹೋದವು. ಇವುಗಳ ಖರೀದಿ 300 ರೂಪಾಯಿ ಆಗಬಹುದು. ಮಾಲೀಕರ ಗೋಳನ್ನು ಹೇಳಲು ಅಸಾಧ್ಯವಾಗಿದೆ.

ನಾಳೆ ಭಾನುವಾರದಿಂದ (ಮಾರ್ಚಿ ತಾ. 1) ಮೆಯಿಲ್ ಗಾಡಿಯು ಬೆಂಗಳೂರಿನಿಂದ ಬೆಳಗ್ಗೆ 7 ಗಂಟೆ 5 ನಿಮಿಷಕ್ಕೆ ಹೊರಟು ಮಧ್ಯಾಹ್ನ 12 ಗಂಟೆ 38 ನಿಮಿಷಕ್ಕೆ ರಾಜಧಾನಿಗೆ ಬರುವಂತೆ ಏರ್ಪಾಟಾಗಿದೆ. ಇದಲ್ಲದೆ ಬೆಂಗಳೂರಿನಿಂದ ಬೆಳಗ್ಗೆ 4-15 ಕ್ಕೆ ಒಂದು ಗಾಡಿಯು ತುಮಕೂರಿಗೆ ಹೊರಡುತ್ತದೆ, ತುಮಕೂರಿನಿಂದ ಬೆಳಗ್ಗೆ 6 55 ಕ್ಕೆ ಒಂದು ಗಾಡಿ ಬೆಂಗಳೂರಿಗೆ ಹೊರಡುವುದು.

ರಾಜಧಾನಿಯಲ್ಲಿರುವ ರೆವ್ ಟಿ ಲೂಕಯ್ಯನವರು ಬರೆಯುವುದು.—ಕಲ್ಕತ್ತೆಯಲ್ಲಿ ಪ್ರಕಟವಾಗುವ ಎಪಿಫನಿ ಎಂಬ ಇಂಗ್ಲಿಷ್ ವಾರ ಪತ್ರಿಕೆಯಲ್ಲಿ 25 ಪ್ರತಿಗಳು ಮಾತ್ರ ನನಗೆ ಕಳುಹಿಸುತ್ತಾರೆ. ಈ ಪತ್ರಿಕೆಗಳು ಈ ಪಟ್ಟಣಕ್ಕೆ ಸಾಲದು. ಪರಸ್ಥಳಕ್ಕೆ ಕಳುಹಿಸುವದಕ್ಕಾಗುವದಿಲ್ಲ. ಸದರಿ ಪತ್ರಿಕೆಗಳು ಬೇಕಾದವರು ಕಲ್ಕತ್ತೆಯ ಕಾರ್ನ್‌ವಾಲಿಸ್ ಸ್ಟ್ರೀಟ್ ಛಾಪಖಾನೆ ಮ್ಯಾನೇಜರಿಗೆ 4 ಆಣೆ ಸ್ಟಾಂಪ್ ಸಮೇತ ಬರೆದು ತರಿಸಿಕೊಳ್ಳಬಹುದು.

ಬೆಂಗಳೂರು ಸಿಟಿಯಲ್ಲಿ ವೆಂಕಟಪ್ಪನೆಂಬೊಬ್ಬ ವರ್ತಕನು 10 ವರುಷದ ಅಣ್ಣಯ್ಯನೆಂಬ ಹುಡುಗನಿಗೆ ಒಂದು ಕಾಸಿನ ಹೊಗೆಸೊಪ್ಪು ಬಿಕರಿ ಮಾಡಿದನೆಂದು ಪೊಲೀಸಿನವರು ಆ ವರ್ತಕನ ಮೇಲೆ ಸಿದ್ಧಮಾಡು ತಂದರು. ಅಂಥಾ ಸಣ್ಣ ಹುಡುಗರು ದೊಡ್ಡವರಿಂದ ಚೀಟಿ ತಂದು ತೋರಿಸದಿದ್ದರೆ ಅಂಗಡಿಯವರು ಹುಡುಗರಿಗೆ ಹೊಗೆಸೊಪ್ಪು ಬಿಕರಿ ಮಾಡಕೂಡದೆಂಬ ಹೊಸ ಕಾನೂನಿನ ಸಂಗತಿ ತನಗೆ ತಿಳಿದಿರಲಿಲ್ಲವೆಂದು ಆ ವರ್ತಕನು ಹೇಳಿಕೊಂಡನು. ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ಆಣೆ ಜುಲ್ಮಾನೆ ಹಾಕಿ ಕಳುಹಿಸಿಬಿಟ್ಟರು.

ಮ। ವಿ ಪಿ. ಮಾಧವರಾಯರಿಗೆ ಬರೋಡಾ ಸಂಸ್ಥಾನದ ದಿವಾನ್‌ಗಿರಿ ಆಯಿತು. ಅವರು ಕಳೆದ ಶುಕ್ರವಾರ ಮಧ್ಯಾಹ್ನ ರಾಜಧಾನಿಗೆ ಬಂದು, ಅರಮನೆಯಲ್ಲಿ ನಮ್ಮ ಮಹಾರಾಜರವರ ಭೇಟಿ ಪಡೆದುಕೊಂಡು, ಮೋಟರಿನಲ್ಲಿ ಆ ಸಾಯಂಕಾಲವೇ ಬೆಂಗಳೂರಿಗೆ ಪ್ರಯಾಣಮಾಡಿದರು. ಬೆಂಗಳೂರು ಚಾಮರಾಜಪೇಟೆ ಶಂಕರಮಠದಲ್ಲಿ ಅಲ್ಲಿನ ದೊಡ್ಡಮನುಷ್ಯರು ಸಭೆ ಸೇರಿ ಮ। ಮಾಧವರಾಯರ ಶ್ರೇಯಸ್ಸನ್ನು ಬಯಸಿದರು. ಅವರು ಭಾನುವಾರ ರಾತ್ರಿ ಬರೋಡಾ ಸಂಸ್ಥಾನವನ್ನು ಕುರಿತು ಬೆಂಗಳೂರಿನಿಂದ ಪ್ರಯಾಣಮಾಡಿದರು.

ಸಾಲ್ವೇಷನ್ ಆರ್ಮಿಯ ಅಧ್ಯಕ್ಷರಾದ ಬೂತ್ ಟೂಕರವರು ಬರೆಯುವದೇನೆಂದರೆ—ಪ್ಲೇಗ್ ಉಪದ್ರ ತಗಲಿದವರಿಗೆ ಮೊದಲು ಸ್ವಲ್ಪ ಹರಳೆಣ್ಣೆಯನ್ನು ಕುಡಿಸಿ ಸ್ವಲ್ಪ ಹೊತ್ತಿನ ಮೇಲೆ ಟಿಂಕ್ಚರ್ ಅಯೊಡೈನ್ ಎಂಬ ದ್ರಾವಕವನ್ನು 5 ರಿಂದ 7 ಬೊಟ್ಟುಗಳನ್ನು ಸ್ವಲ್ಪ ನೀರಿಗೆ ಹಾಕಿ ಬೆರಸಿ ಕುಡಿಸ... ಗಳ ಇದ್ದರೆ ಅದಕ್ಕೆ ಇದೇ ದ್ರಾವಕವನ್ನು ಲೇಪಿಸಿ ಹಾಲೇ ಆಹಾರ. ಎರಡನೇ ದಿನ ಬೆಳಗ್ಗೆ 2 ಬೊಟ್ಟು ಅದೇ ದ್ರಾವಕವನ್ನು ನೀರಿನಲ್ಲಿ ಬೆರಸಿ ಕೊಡಿ. ಜ್ವರವಿದ್ದರೆ ಸ್ವಲ್ಪ ವೇ ಕ್ವಿನೈನ್ ಪುಡಿಯನ್ನು ಕೊಡಿ. ಈ ಚಿಕಿತ್ಸೆಯಿಂದ ಅನೇಕಾನೇಕ ಪ್ಲೇಗ್ ರೋಗಿಗಳಿಗೆ ವಾಸಿಯಾಗಿದೆ.

ಹೊಡೇಬೊಮ್ಮನಹಳ್ಳಿ ಮಠದ ಮ। ರಾಚಪ್ಪಯ್ಯ, ಶಿವಯೋಗಿ, ಇವರು ಬರೆಯುತ್ತಾರೇನೆಂದರೆ—ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಯುವ

ಮೈಸೂರು ಲೋಯರ್ ಸೆಕೆಂಡರಿ ಪರೀಕ್ಷೆಗೋಸ್ಕರ ಶಿವಮೊಗ್ಗಾ ಸೆಂಟರಿಗೆ ಬರುವ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೂ ಮತ್ತು ಆ ಮಾಸ್ಟರುಗಳಿಗೂ ಧರ್ಮಾರ್ಥವಾಗಿ ಭೋಜನಾದಿಗಳನ್ನು ನಡಿಸಲು ತಕ್ಕ ಏರ್ಪಾಟು ಮಾಡಿರುತ್ತೆ. ಬರತಕ್ಕವರೆಲ್ಲರೂ ತಮ್ಮ ಹಾಸಿಗೆ ವಸ್ತ್ರಗಳು ವಿನಹಾ ಮತ್ತೇನೂ ತರತಕ್ಕದ್ದಿಲ್ಲ. ವಿದ್ಯಾರ್ಥಿಗಳೆಲ್ಲರೂ ಪರೀಕ್ಷೆ ನಡೆಯುವುದಕ್ಕೆ ಒಂದು ದಿವಸ ಮುಂಚೆ ಬಂದು ಕುಳಿತು ಬೀ ಐರುವ ಶ್ರೀ|| ಚಿಕ್ಕನ ಛತ್ರದಲ್ಲಿ ನಮ್ಮನ್ನು ಕಾಣಬೇಕೆಂದು ಕೋರುತ್ತೇವೆ.

•
• •

ಟಿ ನರಸೀಪುರದ ತಾಲ್ಲೂಕು ಡಣಾಯಕನ ಪುರದಲ್ಲಿ ಸುಬ್ಬಣ್ಣನೆಂಬಾತನನ್ನು ಮತ್ತ್ಯಾರೋ ಕೊಂದು ಆತನ ಹುಲ್ಲಿನ ಮೆದೆಯಲ್ಲಿ ಹಾಕಿ ಸುಟ್ಟುಬಿಟ್ಟಂತೆಯೂ, ಪೊಲೀಸಿನವರು ಈ ವಿಚಾರವನ್ನು ತನಿಖೆಮಾಡುತ್ತಿರುವುದಾಗಿಯೂ ಹಿಂದಿನ ವಾರ ತಿಳಿಸಿದೆವಷ್ಟೆ. ಆ ಮೆದೆ ಸುಟ್ಟಿರುವುದು ನಿಜವೆಂದೂ, ಅದನ್ನೆಲ್ಲಾ ಶೋಧನೆ ಮಾಡಿದಾಗ್ಗೆ ಎರಡು ಸಣ್ಣ ಮೂಳೆಗಳು ಮಾತ್ರ ಸಿಕ್ಕಿದವೆಂದೂ, ಅವನ್ನು ಬೆಂಗಳೂರಿಗೆ ಕೆಮಿಕಲ್ ಎಗ್ಸಾಮಿನರ ಪರೀಕ್ಷೆಗಾಗಿ ಕಳುಹಿಸಿರುತ್ತಾರೆಂದೂ, ಆ ಸುಬ್ಬಣ್ಣನ ಮೇಲೂ ಇತರರ ಮೇಲೂ ನಾನಂಟು ಹುಟ್ಟಿಸ್ಸಾದಕಾರಣ ಆತನು ಎಲ್ಲೋ ತಲೆತಪ್ಪಿಸಿಕೊಂಡು ಹೋಗಿರಬೇಕೇ ವಿನಾ ಕೊಲ್ಲಲ್ಪಟ್ಟಿರಬಹುದೆಂಬ ಮಾತನ್ನು ನಂಬುವುದು ಕಷ್ಟವಾಗಿದೆ ಎಂದೂ, ಇದಲ್ಲದೆ ಹುಲ್ಲಿನ ಮೆದೆಯಲ್ಲಿ ಮನುಷ್ಯನ ಶವವನ್ನು ಸಂಪೂರ್ಣವಾಗಿ ಸುಡುವುದಕ್ಕೆ ಸಾಧ್ಯವಾಗಲಾರದೆಂದೂ ಪೊಲೀಸಿನವರು ಅನುಮಾನಪಡುತ್ತಿರುವುದಾಗಿ ಕೇಳುತ್ತೇವೆ.

ವೈದಿಕ ಧರ್ಮ ಸಭಾ, ಬೆಂಗಳೂರು.

ಆರ್ಯ ಧರ್ಮಗಳಿಗೆ ಮೂಲಾಧಾರಗಳಾದ ವೇದ ಶಾಸ್ತ್ರಗಳು ಮಾಲಿನ್ಯ ಹೊಂದದಂತೆಯೂ, ಆರ್ಯ ಧರ್ಮಗಳು ಉಜ್ಜೀವಿತವಾಗಿರುವಂತೆಯೂ ಬೇಕಾದ ಪ್ರಯತ್ನವನ್ನು ಮಾಡುವುದಕ್ಕಾಗಿ ಕಳೆದ 12 ನೇ ತಾ ಗುರುವಾರ ಸಾಯಂಕಾಲ ನಡೆದ ಒಂದು ಸಭೆ ಸೇರಿತು. ಸಭೆಯಲ್ಲಿ ಮ|| ಗಳಾದ ಎಚ್ ವಿ ನಂಜುಂಡಯ್ಯನವರು, ಕೆ ಎಸ್ ಚಂದ್ರಶೇಖರಅಯ್ಯರವರು, ಎಂ ಎಸ್ ನಾರಾಯಣರಾಯರು, ಎಚ್ ರಾಮಯ್ಯನವರು, ಸಿ ರಾಮರಾಯರು, ವಿ ಸುಬ್ರಹ್ಮಣ್ಯಅಯ್ಯರವರು, ವೆಂಕಟನಾರಣಪ್ಪನವರು, ಟಿ ಶ್ರೀನಿವಾಸಾಚಾರ್ಯ, ಎಂ. ಟಿ. ನರಸಿಂಹಯ್ಯಂಗಾರ್ಯ, ಧಾರವಾಡದ ಮಹಾ ಭಾಗವತರು ಮೊದಲಾದ ಲೌಕಿಕ ಮಹಾಶಯರು, ಅರಮನೆ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ಕುಣಿಗಲ್ ರಾಮಶಾಸ್ತ್ರಿಗಳು, ಬೆಂಗಳೂರು ಶಂಕರಮಠದ ಪ್ರೌಢ ವಿದ್ಯಾಭಿವರ್ಧಿನೀ ಪಾಠಶಾಲಾ ಪಂಡಿತರುಗಳು, ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವಿದ್ವಾಂಸರುಗಳು ಮೊದಲಾಗಿ ಸುಮಾರು ಐವತ್ತಕ್ಕೆ ಮೇಲ್ಪಟ್ಟು ದಯಮಾಡಿಸಿದ್ದರು.

ಸಭಿಕರ ಪ್ರಾರ್ಥನೆಯಂತೆ ಮ|| ಎಂ. ಎಸ್ ನಾರಾಯಣರಾಯರು ಅಗ್ರಾಸನವನ್ನು ವಹಿಸಿ, ಸಭಾಸದರನ್ನು ಕುರಿತು ವೈದಿಕ ಧರ್ಮವು ಬಿಲವಾಗದಂತೆ ಏರ್ಪಾಡು ಮಾಡಬೇಕೆಂತಲೂ, ವೇದೋಕ್ತ ಕರ್ಮಗಳ ಸ್ವರೂಪವನ್ನು ಸರಿಯಾಗಿ ಬೋಧಿಸಿ ಆಚರಣೆಗೆ ತರುವದು ಆವಶ್ಯಕವಾದುದರಿಂದಲೂ, ಮೈಸೂರು ಸಂಸ್ಥಾನದ ಪಾಠಶಾಲೆಗಳಲ್ಲಿ ವೇದಶಾಸ್ತ್ರಗಳ ಏರ್ಪಾಡು ಕ್ರಮವಾಗಿದ್ದರೂ ಕರ್ಮಸ್ವರೂಪ, ವಿಧಾನಗಳನ್ನು ತಿಳಿಸುವ ಏರ್ಪಾಡು ಮಾಡಿಲ್ಲವಾದ್ದರಿಂದಲೂ ಕರ್ಮಗಳನ್ನು ತಿಳಿದ ಪುರೋಹಿತರು ಅತಿ ವಿರಳರಾದ್ದರಿಂದ ಅಂಥಾ ಭಾಗಗಳನ್ನು ಅಭ್ಯಾಸ ಮಾಡಿಕೊಂಡು ಪರೀಕ್ಷೆಗೆ ಬರತಕ್ಕವರಿಗೆ ಪ್ರೋತ್ಸಾಹಕ್ಕಾಗಿ ಪ್ರತಿ ವರ್ಷವೂ ಮಾಸವಲ್ಲೂ ಪರೀಕ್ಷೆಯನ್ನು ಇಟ್ಟು ಸಂಘ ಶಕ್ತಿಯಿಂದ ಆರ್ಜಿಸಿದ ದ್ರವ್ಯದಿಂದ ಬಹುಮಾನ ಮಾಡಬೇಕೆಂತ ತಿಳಿಸಿದರು. ಮ|| ಎಚ್. ರಾಮಯ್ಯನವರು ಈ ಉದ್ದೇಶವು ಅತಿ ಮುಖ್ಯವಾದುದೆಂತಲೂ, ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಯತ್ನ ಪಡಬೇಕಾದದ್ದು ಆವಶ್ಯಕವೆಂತಲೂ ಚೆನ್ನಾಗಿ ಉಪಪಾದನೆ ಮಾಡಿದರು. ವೇ|| ಧಾರವಾಡದ ಮಹಾ ಭಾಗವತರು ಸಣ್ಣ ಉಪನ್ಯಾಸ ರೂಪವಾಗಿ ಆರ್ಯಧರ್ಮದ ಪ್ರಾಮುಖ್ಯತೆಯನ್ನು ಕುರಿತು ಸ್ವಾರಸ್ಯವಾಗಿ ತಿಳಿಸಿ ಈ ಕಾರ್ಯವು ಅತಿ ಮುಖ್ಯವೆಂತಲೂ ಅವಶ್ಯ ಕರ್ತವ್ಯವೆಂತಲೂ ವಿಜ್ಞಾಪಿಸಿದರು. ಹೈ ಸ್ಕೂಲು ಸಂಸ್ಕೃತ ಪಂಡಿತರು ಬ್ರಹ್ಮಶ್ರೀ ಸಾಂಬಶಾಸ್ತ್ರಿಗಳು ಆರ್ಯ ಧರ್ಮಗಳು ಬಿಲವಾಗುವದಕ್ಕೂ, ಜನರ ಏಕಮತ್ಯ ತಪ್ಪುವದಕ್ಕೂ ಕಾರಣವನ್ನು ಉಪಪಾದನೆಮಾಡಿ ಅನೇಕ ವಿದ್ವಾಂಸರ ಅಭಿಮತವನ್ನು ಪಡೆದು ಪ್ರಕಟಿಸಿದ್ದ ಪರೀಕ್ಷಾ ಗ್ರಂಥಗಳನ್ನು ಸಭಿಕರ ಸನ್ನಿಧಿಯಲ್ಲಿ ವಿಜ್ಞಾಪಿಸಿದರು. ಇದಕ್ಕೊಂದು ಸಭೆಯನ್ನು ಏರ್ಪಡಿಸಬೇಕೆಂದು ಮ ಎಚ್ ವಿ ನಂಜುಂಡಯ್ಯನವರು ಮೊದಲಾದವರು ಅಭಿಪ್ರಾಯಪಟ್ಟಮೇಲೆ ಮ|| ಎಚ್ ರಾಮಯ್ಯನವರು ವೈದಿಕ ವೈದಿಕ ಮಹಾಶಯರುಗಳ ಉಪಸಭೆಯೊಂದನ್ನು ಏರ್ಪಡಿಸ ಬೇಕೆಂದು ಸೂಚಿಸಿದರು.

ಈ ಸಭೆಯಲ್ಲಿ ತೀರ್ಮಾನವಾದ ವಿಷಯಗಳೇನೆಂದರೆ—(1) ಈ ಸಭೆಯು ವೈದಿಕ ಧರ್ಮ ಸಭಾ ಎಂದು ಕರೆಯತಕ್ಕದ್ದು (2) ಕರ್ಮಗಳ ಸ್ವರೂಪ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ವೇದ, ಪ್ರಯೋಗ, ಸಾಹಿತ್ಯ, ವ್ಯಾಕರಣ, ಧರ್ಮಶಾಸ್ತ್ರಗಳನ್ನು ತಿಳಿದು ಸಮರ್ಥರಾಗುವಂತೆ ಜನರನ್ನು ಸಿದ್ಧಪಡಿಸಲು ತಕ್ಕ ಏರ್ಪಾಡು ಮಾಡತಕ್ಕದ್ದೇ ಇವರ ಉದ್ದೇಶ (3) ಈ ಪರೀಕ್ಷೆಯನ್ನು ಬರುವ ಸಂವತ್ಸರದ ವೈಶಾಖಮಾಸದಿಂದ ಉಪಕ್ರಮಿಸಿ ನಡಿಸತಕ್ಕದ್ದು (4) ಈ ಉದ್ದೇಶಗಳನ್ನು ಉಪಸಭೆಯವರು ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಕಟಿಸಿ ಎಲ್ಲಾ ಕಡೆಗಳಲ್ಲೂ ಪ್ರಚಾರ ಮಾಡತಕ್ಕದ್ದು (5) ಈ ಗ್ರಂಥಗಳನ್ನು ರಾಜಕೀಯ ಪಾಠಶಾಲೆಗಳಲ್ಲಿ ಪಾಠಗ್ರಂಥಗಳನ್ನಾಗಿ ಸೇರಿಸಬೇಕೆಂದು ಗವರ್ನಮೆಂಟಿನವರನ್ನು ಪ್ರಾರ್ಥಿಸತಕ್ಕದ್ದು (6) ಉಪಸಭೆಯವರು ಮೆಂಬರುಗಳ ಸಂಖ್ಯೆಯನ್ನು ಕ್ರಮಪಡಿಸುವದಕ್ಕೂ, ಸಭೆಗೆ ಬೇಕಾದ ವಿಷಯಗಳನ್ನು ತೀರ್ಮಾನ ಮಾಡುವದಕ್ಕೂ ಅಧಿಕಾರವನ್ನು ಹೊಂದಿರತಕ್ಕದ್ದು. (7) ಸಂಘವು ದ್ರವ್ಯಾರ್ಜನೆ ಮಾಡಿ ಪರೀಕ್ಷಾದಿ ಕ್ರಮಗಳನ್ನು ಉಪಸಭೆಯವರು ನಡಿಸತಕ್ಕದ್ದು.

ಕಡೆಯಲ್ಲಿ ಅಗ್ರಾಸನಾಧಿಪತಿಗೆ ವಂದನೆಯನ್ನು ಸಮರ್ಪಕ ಮಾಡಿ, ಕೂಟವನ್ನು ಮುಕ್ತಾಯಮಾಡಿದರು.

ತಾಲ್ಲೂಕು ವರ್ತಮಾನಗಳು.

ದಾವಣಗೆರೆ—ಈ ಊರಿನಲ್ಲಿ ಮೂರು ವರ್ಷಕ್ಕೆ ಒಂದಾವರ್ತಿ ನಡೆಯುವ ಜಾತ್ರೆ ಮಹೋತ್ಸವವು ಬರುವ ಮಾರ್ಚಿ 10 ನೇ ತಾ ರಿಂದ ಪ್ರಾರಂಭವಾಗಿ ಸುಮಾರು 15 ದಿನ ನಡೆಯುವುದು ಆ ಕಾಲದಲ್ಲಿ ಬರೋಡಾ, ಪಂಜಾಬ್, ಕೊಲ್ಹಾಪುರ, ಹೈದರಾಬಾದ್ ಮುಂತಾದ ಸ್ಥಳಗಳಿಂದ ನೂತನವಾದ ಕುಸ್ತಿ, ಆಟದವರು ಬಂದು ತಮ್ಮ ಸಾಮರ್ಥ್ಯವನ್ನು ತೋರಿಸುವಂತೆ ಇದೇ ಊರಿನ ಕೆಲವು ಸಾಹುಕಾರರು ಮುಂಚಿತವಾಗಿ ಗೊತ್ತುಮಾಡಿದ್ದಾರೆ. ಈ ಜಾತ್ರೆಗೆ ಸುಮಾರು 10-12 ಸಹಸ್ರ ಜನರು ಎಲ್ಲಾ ಕಡೆಗಳಿಂದ ಕೂಡಿ ಬರುವರು. ಈ ಮಹೋತ್ಸವಕಾಲದಲ್ಲಿ ಬರುವ ಜನಗಳಿಗೆ ಊಟ ಉಪಚಾರಗಳೂ, ಅಕ್ಕಿ ಬೇಳೆ ಮುಂತಾದವೂ ಕೊಡಲ್ಪಡುವವು. ಈ ಸಂದರ್ಭದಲ್ಲಿ ದಾವಣಗೆರೆ ನಿವಾಸಿಗಳಾದ ಗುಡ್ಸ್ ರೋಡಿನಲ್ಲಿ ವಾಸಮಾಡುವ ಮ|| ವಿಶ್ವಬ್ರಹ್ಮ ರಾಚಪ್ಪನವರು ತಮ್ಮ ಮಠದವರಿಗೆ ವಿಶ್ವಾಸಪೂರ್ವಕವಾಗಿ ತಕ್ಕ ಏರ್ಪಾಡುಗಳನ್ನು ಮಾಡಿಕೊಂಡು, ಈ ಜಾತ್ರೆಗೆ ಬರುವವರಿಗೆ ಭೋಜನಮಾಡಿಸಬೇಕೆಂದಿದ್ದಾರೆ.

ತ್ಯಾಮಗೊಂಡ್ಲು—ಕಳೆದ ವರ್ಷ ಮಳೆ ಸರಿಯಾಗಿ ಬಾರದ್ದರಿಂದ ಮುಸ್ಕಿ ಬೆಳೆ ಸರಿಯಾಗಿ ಆಗಲಿಲ್ಲ. ತರಿ ಫಸಲು ತಕ್ಕ ಮಟ್ಟಿಗಾದರೂ ಧಾರಣೆವಾಸಿಗಳು ಕ್ಷಾಮಕಾಲವನ್ನು ಸೂಚಿಸುತ್ತಾ ಇವೆ. ಬಿಸಿಲಿನ ತಾಪ ಸಹಿಸಲಸಾಧ್ಯ. ಕಳೆದ ವಾರ 1 2 ಹನಿ ಮಳೆ ಬಿತ್ತು. ಊರಲ್ಲಿ ಕೆಲವು ಕಡೆ ಸಿಡುಬಿನ ಉಪದ್ರ ಹೆಚ್ಚಾಗಿ ಇಳುಮುಖವಾಗುತ್ತಾ ಬಂದಿದೆ. ಪ್ರಜೆಗಳು ದೇವಿ ಸಿಡುಬು ಹಾಕಿಸಿಕೊಂಡರೂ, ಸಿಡುಬಿನ ಅವಾಂತ್ರ ತಪ್ಪಲಿಲ್ಲ. ಅಳತೆ ತೂಕಗಳ ಪ್ರಮಾಣವನ್ನು ಕ್ರಮಪಡಿಸುವದಕ್ಕೆ ಈ ಸಂಸ್ಥಾನದಲ್ಲಿ ಯಾರಿಂದಲೂ ಆಗಲಾರದು.—ಕೆಲವು ದಿನಗಳ ಹಿಂದೆ ಡಾಕ್ಟರ್ ಸುಬ್ರಾಯರವರ ಸುಮಾರು 15 ವರುಷದ ಮುದುಕಿ ಬೆಂಗಳೂರಲ್ಲೂ ಅವರ ಅಳಿಯನು ತ್ಯಾಮಗೊಂಡ್ಲದಲ್ಲಿಯೂ ತೀರಿಹೋದರು ಇದು ಅನೇಕರಿಗೆ ಸಂತಾಪವನ್ನುಂಟುಮಾಡಿದೆ.—ಪಟೇಲ್ ಮ|| ಅಪ್ಪಾಜಪ್ಪನವರು ಮ್ಯುನಿಸಿಪಾಲಿಟಿಯನ್ನು ಕ್ರಮವಾಗಿಟ್ಟಿರುವದರಿಂದ ಹವಾ ಕೆಟ್ಟಿದ್ದರೂ ರೋಗಾದಿಗಳು ತಲೆ ದೋರಲಿಲ್ಲ. ಕಳೆದ ವಾರ ಇನ್‍ಸ್ಪೆಕ್ಟರವರು ಬಂದು ಗೌ. ಎ ವಿ ಸ್ಕೂಲ್ ಪರೀಕ್ಷಿಸಿ ತೃಪ್ತರಾದರು. ಈ ವರುಷ ಇಂಗ್ಲಿಷ್, ಕನ್ನಡ, ಸಂಸ್ಕೃತ ಇವುಗಳಲ್ಲಿ ಲೋ ಸೆ ಪರೀಕ್ಷೆಗೆ ವಿದ್ಯಾರ್ಥಿಗಳು ಹಾಜರಾಗಿರುತ್ತಾರೆ — ಈ ಊರಿನ ಸಂತೆಯೂ, ಪೊಲೀಸೂ ತೃಪ್ತಿಕರವಾಗಿಲ್ಲ ಇವಕ್ಕೆ ಸರ್ಕಾರದವರು ಗಮನ ಕೊಡಬೇಕಾದೆ.

ಚನ್ನರಾಯಪಟ್ಟಣ. - 1 ನೇ ಕೌನ್ಸಿಲರವರು ಕುಣಿಗಲ ಮಾರ್ಗವಾಗಿ ತಾ 19 ನೇ ಗುರುವಾರ ಬೆಳಿಗ್ಗೆ 9½ ಗಂಟೆಗೆ ಇಲ್ಲಿನ ಟ್ರಾವೆಲರ್ಸ್ ಬಂಗ್ಲೆಗೆ ಮೋಟಾರಿನಲ್ಲಿ ದಯಮಾಡಿಸಿದರು. ಅಮಲ್ದಾರ್ರು ತಾಲ್ಲೋಕು ಅಧಿಕಾರಿಗಳ, ಮ್ಯುನಿಸಿಪಲ್ ಮೆಂಬರುಗಳ ಮತ್ತು ಗ್ರಾಮಸ್ಥರ ಸಮೇತ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿ ಹಾರ ತುರಾಯಿಗಳನ್ನು ಒಪ್ಪಿಸಿದರು. ಅವರು ಆರೋಗಣೆಯನ್ನು ತೀರಿಸಿಕೊಂಡು ಮಧ್ಯಾಹ್ನ ಸಮಸ್ತ ಅಧಿಕಾರಿಗಳ ಸಮೇತ ಸುಮಾರು 4 ಗಂಟೆಗೆ ಎ ವಿ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ವಿದ್ಯಮಾನಗಳನ್ನೆಲ್ಲಾ ಹೆಡ್ ಮಾಸ್ಟರಿಂದ ತಿಳಿದು, ಅಲ್ಲಿಂದ ಸಂಸ್ಕೃತ ಪಾಠಶಾಲೆಗೆ ದಯಮಾಡಿಸಿ ಪಾಠಶಾಲೆಯ ವಿಚಾರವನ್ನೆಲ್ಲಾ ಅಧ್ಯಕ್ಷರಿಂದ ತಿಳಿದು, ಮುಂದೆ ಹೊರಟು ಊರಿನ ಮಧ್ಯಭಾಗದಲ್ಲಿರುವ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯೊಳಕ್ಕೆ ಪ್ರವೇಶ ಮಾಡಲು ಬಾಲಕಿಯರೆಲ್ಲಾ ಎರಡು ಸಾಲಾಗಿ ನಿಂತು ಕೌನ್ಸಿಲರವರಿಗೆ ಸುಸ್ವಾಗತವನ್ನು ಬಯಸಿದರು. ವಿದ್ಯಾರ್ಥಿನಿಯರು ಲಕ್ಷ್ಮಿ ಮತ್ತು ಸರಸ್ವತಿ ಸಂವಾದವನ್ನು ಸ್ವಲ್ಪಮಟ್ಟಿಗೆ ಅಭಿನಯಿಸಿದ ನಂತರ ಮಂಗಳವು ಹಾಡಲ್ಪಟ್ಟಿತು. ಅವರು ಸ್ಕೂಲ್ ಹೆಡ್ ಮಾಸ್ಟರಿಂದ ಸ್ಕೂಲಿನ ವಿದ್ಯಮಾನಗಳನ್ನು ತಿಳಿದುಕೊಂಡು ಆಸ್ಪತ್ರೆಗೆ ದಯಮಾಡಿ ಪರಾಂಬರಿಸಿಕೊಂಡು ಬಂಗ್ಲೆಯನ್ನು ಸೇರಿದರು. ಮಾರನೇ ಬೆಳಿಗ್ಗೆ 7 ಗಂಟೆಗೆ ಶ್ರವಣಬೆಳ್ಗೊಳಕ್ಕೆ ದಯಮಾಡಿಸಿ ಅಲ್ಲಿಂದ 11 ಗಂಟೆಗೆ ವಾಪಸು ಬಂದು ಭೋಜನಾನಂತರ ತಾಲ್ಲೋಕಿನ ಸಮಸ್ತ ಇಲಾಖೆಗಳನ್ನೂ ಪರಾಂಬರಿಸಿ ತುಂಬಾ ತೃಪ್ತಿಪಟ್ಟುಕೊಂಡರು —ಇಲ್ಲಿಗೆ ತಾ 21 ನೇ ಶನಿವಾರ ಶಿವಗಂಗಾ ಸ್ವಾಮಿಗಳವರು ಸಾಯಂಕಾಲ 5½ ಗಂಟೆ ಸಮಯದಲ್ಲಿ ಈ ಗ್ರಾಮದ ಮಾರ್ಗವಾಗಿ ದಯಮಾಡಿಸಿದರು. ಸಮಸ್ತ ಅಧಿಕಾರಿಗಳೂ, ಗ್ರಾಮಸ್ಥರೂ ಶ್ರೀಯವರನ್ನು ಬಹು ಮರ್ಯಾದೆಯಿಂದ ಕರೆದುಕೊಂಡು ಬಂದು ಬಿಡಾರದಲ್ಲಿ ಇಳಿಸಿದರು. ತಾ 22 ನೇ ಭಾನುವಾರ ಅವರಿಗೆ ಭಿಕ್ಷೆ ಪಾದಪೂಜೆ ವಗೈರೆ ನಡಿಸಲ್ಪಟ್ಟವು.

ಮುಳಬಾಗಿಲು —ಈಗ ಬಿಸಿಲಿನತಾಪ ಸಹಿಸಲಸಾಧ್ಯವಾಗಿರುತ್ತೆ. ಈ ವರುಷ ಈ ಪ್ರಾಂತ್ಯ ಸರಿಯಾಗಿ ಮಳೆಯಾಗದೆ ರೈತರುಗಳಿಗೆ 2-3 ತಿಂಗಳ ಆಹಾರಕೂಡ ದೊರೆತಿಲ್ಲ. ಅನೇಕ ಗ್ರಾಮಗಳಲ್ಲಿ ಕುಡಿಯುವುದಕ್ಕೆ ಒಳ್ಳೆ ನೀರೇ ಇಲ್ಲ. ರೂಪಾಯಿಗೆ 12 13 ಸೇರು ರಾಗಿ, 6-6½ ಸೇರು ಅಕ್ಕಿ ಮಾರುತ್ತಿವೆ. ಕಷ್ಟ ಕೂಲೀ ಜನಗಳಿಗೂ, ಬಡ ನೌಕರರಿಗೂ ಜೀವನ ನಡೆಯುವುದು ದುರ್ಲಭವಾಗಿದೆ.—ನಮ್ಮ ಅಮಲ್ದಾರ್ ಮ|| ಕೆ ಲಿಂಗೋಜಿರಾವ್ ಬಾದಾಮಿಯವರು ಚನ್ನರಾಯಪಟ್ಟಣಕ್ಕೆ ವರ್ಗಮಾಡಲ್ಪಟ್ಟು ನೆನ್ನೆ ಬೃಹಸ್ಪತಿವಾರದ ಹೊಸ ಅಮಲ್ದಾರ್ರಿಗೆ ಛಾರ್ಜು ವಹಿಸಿದರು. ಇವರು ಬಹಳ ನಿಷ್ಪಕ್ಷಪಾತಿಗಳಾಗಿಯೂ, ಉದಾರಿಗಳಾಗಿಯೂ, ಕರುಣಾಪೂರ್ಣರಾಗಿಯೂ, ಉಪಕಾರಿಗಳಾಗಿಯೂ ಇದ್ದರು. ಇವರ ಇದ್ದಷ್ಟು ಪ್ರಜಾನುರಾಗವು ಹಿಂದೆ ಯಾವ ಅಮಲ್ದಾರ್ರಲ್ಲಿಯೂ ಇರಲಿಲ್ಲ. ಇವರು ಬೆಳಗಿನ ಹೊತ್ತು ಹೊಲಗಳಿಗೂ ತೋಟಗಳಿಗೂ ಖುದ್ದು ಹೋಗಿ, ಬಡ ರೈತರುಗಳಿಗೆ ವ್ಯವಸಾಯ ಕ್ರಮವನ್ನು ಬೋಧಿಸಿ, ಅವರಿಗೆ ಬೇಕಾದ ಸಲಕರಣೆಗಳನ್ನು ಮಾಡಿಕೊಡುತ್ತಿದ್ದರು. ಮತ್ತು ಪುರೋಭಿವೃದ್ಧಿಗೆ ಬೇಕಾದ ಅನೇಕ ಕೆಲಸಗಳನ್ನು ಮಾಡುತ್ತಿದ್ದರು. ಇಂಥವರ ಅಗಲುವಿಕೆಯಿಂದ ಪುರಜನರಿಗೆ ವ್ಯಸನ ಉಂಟಾಗಿದೆ. ಪುರ ಪ್ರಮುಖರೂ, ಆಫೀಸರುಗಳೂ, ನೌಕರವರ್ಗದವರುಗಳೂ ಸಹ ಇವರಲ್ಲಿ ತಮಗಿರತಕ್ಕ ಕೃತಜ್ಞತೆಯನ್ನು ತೋರ್ಪಡಿಸುವ ಉದ್ದಿಶ್ಯ ಶುಕ್ರವಾರ, ಶನಿವಾರ, ಭಾನುವಾರಗಳಲ್ಲಿ ಬೇರೆ ಬೇರೆಯಾಗಿ ಅನೇಕ ಸಂತೋಷ ಕೂಟಗಳನ್ನೂ, ಸಂಗೀತ ಕಚೇರಿಗಳನ್ನೂ ಮಾಡಿಸಿದರು. ನೆನ್ನೆ ಭಾನುವಾರ ಸಾಯಂಕಾಲ ಈ ಮಹನೀಯರ ಗ್ರಾಮಸ್ಥರುಗಳ ಸಹಾಯದಿಂದ ಕಟ್ಟಿಸಿದ ಟೌನ್ ಹಾಲಿನ ಕಟ್ಟಡದಲ್ಲಿ ಸಾಹುಕಾರ ಸಂಗೀತ ಕಚೇರಿ ನಡಿಸಿ ಇವರು ಮಾಡಿದ ತಕ್ಕ ಉಪಕಾರಗಳನ್ನು ಬಗೆಬಗೆಯಾಗಿ ಸ್ಮರಿಸಿ ಅದಕ್ಕಾಗಿ ಇವರನ್ನು ನಾನಾವಿಧವಾಗಿ ವರ್ಣಿಸಿದರು. ಅನಂತರ ಈ ಊರಿನ ರಾಘವದಾಸ ಶಿವಾಜೀ ಸಭೆಯವರು ಈ ಕರ್ಣಾಟಕರಿಗೆ ಅಭಿನಂದನ ಪತ್ರವನ್ನು ಒಪ್ಪಿಸಿದರು. ಶ್ರೀಯುತರ ಪ್ರತ್ಯುತ್ತರ ಸಹಿತ ಈಗ ಬರತಕ್ಕ ಅಮಲ್ದಾರ್ರವರು ಸಹ ಈ ಮಹನೀಯರ ಮೇಲ್ಪಂಕ್ತಿಯನ್ನೇ ಅನುಸರಿಸಿ ಯಶಸ್ಸು ಪಡೆಯುವರೆಂದು ನಂಬಿದ್ದೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಮಾರ್ಗಶೀರ್ಷಿದಾ ಎಂಬ ಜಹಜು 27,67,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ.

ಬೊಂಬಾಯಿ ಪಟ್ಟಣದ ಕೊಲಾಬಾ ಎಂಬ ಪೇಟೆಯೊಳಗೆ ಗೋಕುಲದಾಸ್ ಕುಲಿಯರ್‌ಜಿ ಎಂಬ ಸಾಹುಕಾರನ ಹತ್ತಿ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು 1,50,000 ರೂಪಾಯಿನ ಮಾಲುಗಳು ಸುಟ್ಟುಹೋದವು.

•
• •

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲೂಧಿಯಾನಾ ಪಟ್ಟಣದಲ್ಲಿ "ನೂರ್ ಆಫ್ ಸಾಕ್" ಎಂಬ ದೇಶೀಯ ವರ್ತಮಾನ ಪತ್ರಿಕೆಯ ಸಂಪಾದಕರು ಸರ್ಕಾರದಲ್ಲಿ 1,500 ರೂಪಾಯಿ ರೇವಣಿ ಕಟ್ಟದಲ್ಲದೆ ಆ ಪತ್ರಿಕೆಯನ್ನು ಪ್ರಕಟಿಸಬಾರದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

•
• •

ಪಂಜಾಬಿನಲ್ಲೂ ಸಿಂಧು ಪ್ರಾಂತ್ಯದಲ್ಲೂ ಒಳ್ಳೇ ಮಳೆಗಳು ಸುರಿಯಲಾರಂಭವಾಗಿದೆ. ಇದರಿಂದ ಹಿಂದೆ ಬಿತ್ತಿದ್ದ ಪೈರುಗಳಿಗೆ ಅಷ್ಟೇನೂ ಪ್ರಯೋಜನವಿಲ್ಲವಾದರೂ ಗೋಕಾಯಿಗಳು ಕಷ್ಟಪಡುವುದು ತಪ್ಪುತ್ತದೆ. ಕ್ಷಾಮದ ಭೀತಿಯೂ ಸ್ವಲ್ಪಮಟ್ಟಿಗೆ ನಿವಾರಣೆಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

•
• •

ಲಾಹೋರ್ ಪಟ್ಟಣದಲ್ಲಿರುವ ಗವರ್ನಮೆಂಟ್ ವೈದ್ಯವಿದ್ಯಾಶಾಲೆಯ ವಿದ್ಯಾರ್ಥಿಗಳು ತಮಗೆ ಸ್ಕೂಲ್ ಉಪಾಧ್ಯಾಯರುಗಳಿಂದ ನಾನಾ ತರದ ಕಷ್ಟನಷ್ಟ ಮನೋವ್ಯಥೆಗಳುಂಟಾಗುತ್ತಿವೆ ಎಂದೂ, ಅವುಗಳನ್ನೆಲ್ಲಾ ಪರಿಹರಿಸಿಕೊಡುವತನಕ ತಾವು ವಿದ್ಯಾಶಾಲೆಗೆ ಬರುವುದಿಲ್ಲವೆಂದೂ ಹೇಳಿ ಅರ್ಜಿ ಬರೆದುಕೊಂಡು ನಿಂತುಬಿಟ್ಟಿದ್ದಾರೆ.

•
• •

ಸಾತಾರ ಜಿಲ್ಲೆಗೆ ಸೇರಿದ ಪಂಡರ್ಪೂರ ಪೊಲೀಸ್ ಇನ್‍ಸ್ಪೆಕ್ಟರ್ ಖಾಜಿ ಪೈರುದೀನ್ ಎಂಬುವನು ತನ್ನ ಸ್ವಾಧೀನದಲ್ಲಿದ್ದ 700 ರೂಪಾಯಿನ ಮಾಲುಗಳನ್ನು ಅಪಹರಿಸಿದ್ದಲ್ಲದೆ ಅದು ಹೊರಪಡದಂತೆ ಮುಚ್ಚುವುದಕ್ಕೆ ಸುಳ್ಳು ರಿಕಾರ್ಡುಗಳನ್ನೂ ತಯಾರುಮಾಡಿದನೆಂದು ಮೊಕದ್ದಮೆ ಆಗಿದೆ. ಸಾತಾರೆಯ ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆ ದರ್ಯಾಪ್ತಿಯಾಗುತ್ತಿದೆ.

•
• •

ಕಲ್ಕತ್ತಾ ಪಟ್ಟಣದ ಪೊಲೀಸ್ ಇಲಾಖೆಯಲ್ಲಿ ಇನ್‍ಸ್ಪೆಕ್ಟರಾಗಿದ್ದು ಈಚೆಗೆ ಕೆಲಸ ಬಿಟ್ಟಿರುವ ಜಾರ್ಜ್ ವಿಲ್ಲಿಯಂ ಬೋನ್ಸ್ ಎಂಬುವನು ಕಳೆದ ವಾರ ತನ್ನ ಸ್ನೇಹಿತನ ಮನೆಗೆ ಹೋಗಿ ಆತನ ಪೆಟ್ಟಿಗೆಯಲ್ಲಿದ್ದ ಛೆಕ್ಕು ಪುಸ್ತಕವನ್ನು ಅಪಹರಿಸಿ ಅದರಲ್ಲಿ ಹಣವನ್ನು ಬರೆದು ಅಂಗಡಿಗಳಿಗೆ ಕೊಟ್ಟು ತನಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಂಡನು. ಇವನ ಮೋಸಗಾರಿಕೆಯು ಗೊತ್ತಾಯಿತು. ಮ್ಯಾಜಿಸ್ಟ್ರೇಟರು ಇವನನ್ನು ದರ್ಯಾಪ್ತಿ ಮಾಡಿ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

•
• •

ಹಿಮಾಚಲದ ತಪ್ಪಲಲ್ಲಿರುವ ಸಿಖಿಂ ರಾಜ್ಯದ ಮಹಾರಾಜರವರು ಕಳೆದ ವಾರ ಕಾಲವಾದರೆಂದು ಪ್ರಕಟವಾಗಿದೆ. ಇವರು ಇಂಗ್ಲೀಷರಿಗೂ ನೇಪಾಳ ಸಂಸ್ಥಾನದವರಿಗೂ ನಡೆದ ಯುದ್ಧದಲ್ಲಿ ಇಂಗ್ಲೀಷ್ ಗವರ್ನಮೆಂಟಿಗೆ ತುಂಬಾ ಸಹಾಯ ಮಾಡಿದ್ದರಿಂದ ಇಂಗ್ಲೀಷ್ ಗವರ್ನಮೆಂಟಿನವರು ಅವರಿಗೆ ಕೆಲವು ಸ್ಥಳಗಳನ್ನು ಸೇರಿಸಿಕೊಟ್ಟು, ಡಾರ್ಜಿಲಿಂಗ್ ನಗರವನ್ನು ಅವರಿಂದ ತೆಗೆದುಕೊಂಡರು. ಈ ರಾಜರಿಗೆ ಅವಸಾನಕಾಲದಲ್ಲಿ 64 ವರುಷ ವಯಸ್ಸಾಗಿ ಸುಮಾರು ನಾಲ್ವತ್ತು ಸಂವತ್ಸರಗಳಿಂದ ಸಂಸ್ಥಾನವನ್ನು ಆಳುತ್ತಿದ್ದರು.

•
• •

ಕಲ್ಕತ್ತಾ ಪಟ್ಟಣದ ಗುಪ್ತಪೊಲೀಸ್ ಇನ್‍ಸ್ಪೆಕ್ಟರ್ ನಿರುಪೇಂದ್ರನಾಥ ಘೋಸ್ ಎಂಬಾತನನ್ನು ನಿರ್ಮಲಕಾಂತರಾಯ್ ಎಂಬುವನು ಗುಂಡು ಹೊಡೆದು ಕೊಂದುಹಾಕಿದನಷ್ಟೆ. ಈ ಅಪರಾಧಿಯ ದರ್ಯಾಪ್ತಿಯು ಈ ವಾರ ಕಲ್ಕತ್ತಾ ಹೈ ಕೋರ್ಟಿನಲ್ಲಿ ಪ್ರಾರಂಭವಾಗಿ 4-5 ದಿನಗಳಲ್ಲಿ ಮುಗಿದು ಹೋಗುತ್ತದೆ. ಅಪರಾಧಿಯ ಕಡೆ ಮಿ|| ಗಳಾದ ಇ ನಾರ್ಟನ್‌ರವರು, ಸಿ ಆರ್. ದಾಸ್, ಜೆ. ಎನ್ ರಾಯಿ ಎಂಬ ಭಾರೀ ವಕೀಲರು ವಾದಿಸುವರೆಂದೂ, ಸರ್ಕಾರದ ತರಫಿನಲ್ಲಿ ಮಿ| ಬಿ ಸಿ ಮಿತ್ರರವರು ವಕೀಲರಾಗಿ ಮೊಕದ್ದಮೆ ನಡಿಸುತ್ತಾರೆಂದೂ ಪ್ರಕಟವಾಗಿದೆ.

•
• •

ಲಾಹೋರ್ ಪಟ್ಟಣದಲ್ಲಿ ಈಚೆಗೆ ಡಕಾಯಿತಿಗಳೂ ಕಳ್ಳರ ಕೃತ್ಯಗಳೂ ನಡೆಯುವುದು ಹೆಚ್ಚಿರುವಂತೆ ಕಾಣುತ್ತದೆ. ಕಳೆದ ವಾರ ಎರಡು ಕಡೆ ದೊಡ್ಡ ಕಳ್ಳತನ ನಡೆಯಿತು. ಒಂದು ಮನೆಯೊಳಗೆ ಕಳ್ಳರು ಒಬ್ಬ ಹೆಂಗಸನ್ನು ಕೊಂದುಹಾಕಿ ಸಾವಿರಾರು ರೂಪಾಯಿನ ನಗನಾಣ್ಯಗಳನ್ನು ಹೊತ್ತುಕೊಂಡು ಹೋದರು. ಇನ್ನೊಂದು ಕಡೆ ಒಬ್ಬ ಐಶ್ವರ್ಯವಂತನ ಮನೆಗೆ ಕಳ್ಳರು ನುಗ್ಗಿ 6,000 ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋದರು. ಅಲ್ಲಿನ ಒಂದು ಹಿಂದೂ ದೇವಸ್ಥಾನದಲ್ಲಿ ನಡೆದ ಕಳುವಿನ ಮೊಕದ್ದಮೆಯಲ್ಲಿ ಪೊಲೀಸಿನವರು ಇಬ್ಬರು ಮಹಮದಿಯರನ್ನು ದಸ್ತಗಿರಿ ಮಾಡಿದ್ದಾರೆ. ಈ ವಿಚಾರಗಳು ಆ ಪಟ್ಟಣದ ಪ್ರಜೆಗಳಲ್ಲಿ ಕಳವಳವನ್ನುಂಟುಮಾಡಿವೆ.

•
• •

ಲಂಡನ್ ಪಟ್ಟಣದಲ್ಲಿರುವ ಒಂದು ಕಂಪನಿಯವರು ಹಿಂದುಸ್ಥಾನದಲ್ಲಿ ಸಿಮೆಂಟ್ ಎಂಬ ಗಾರೆ ಪುಡಿಯನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂದು ತರದೂದು ಮಾಡುತ್ತಿದ್ದಾರೆ. ಈ ಕಾರ್ಖಾನೆಯನ್ನು ಪ್ರಾರಂಭಿಸುವುದಕ್ಕೆ 11,20,000 ರೂಪಾಯಿ ಮೂಲಧನ ಬೇಕಾಗುವುದೆಂದೂ, ಅವರು ಈ ಹಣವನ್ನು ಷೇರುಗಳ ವಿಕ್ರಯದಿಂದ ಹಿಂದುಸ್ಥಾನದಲ್ಲೇ ಕೂಡಿಸುತ್ತಾರೆಂದೂ ತಿಳಿದು ಬಂದಿದೆ. ಪಂಜಾಬ್ ಗವರ್ನಮೆಂಟಿನವರು ಈ ಕಾರ್ಖಾನೆಯಲ್ಲಿ ತಯಾರಾಗುವ ಸಿಮೆಂಟನ್ನೇ ಇನ್ನು ಹತ್ತು ವರುಷದ ತನಕ ಟನ್ 1 ಕ್ಕೆ 10 ರೂಪಾಯಿನಂತೆ ಕೊಂಡುಕೊಳ್ಳುವುದಾಗಿಯೂ, ಪಂಜಾಬಿನಲ್ಲಿ ಇನ್ಯಾರೂ ಈ ಕಂಪನಿಯವರ ಹೊರತು ಅಂಥಾ ಕಾರ್ಖಾನೆ ಇಟ್ಟು ಪೋಟಾಪೋಟಿಮಾಡಲು ಅವಕಾಶಕೊಡುವುದಿಲ್ಲವೆಂದೂ ಅವರಿಗೆ ಮಾತು ಕೊಟ್ಟಿದ್ದಾರೆ.

•
• •

ಬಂಗಾಳಾ ಆಧಿಪತ್ಯದಲ್ಲಿ ಅರಾಜಕ ಕೃತ್ಯಗಳು ಇನ್ನೂ ಶಮನವಾಗಲಿಲ್ಲ. ಮರಣಕರವಾದ ರಸಾಯನ ವಸ್ತುಗಳನ್ನು ಲಕೋಟೆಗಳಲ್ಲಿ ಹಾಕಿ ಅಧಿಕಾರಿಗಳಿಗೂ, ವರ್ತಮಾನ ಪತ್ರಿಕೆಗಳ ಎಡಿಟರುಗಳಿಗೂ ವಿಳಾಸ ಬರೆದು ಅಂಚೆಯ ಮೂಲಕ ಕಳುಹಿಸುತ್ತಾರೆ. ಕಲ್ಕತ್ತೆಯಲ್ಲಿ ಕಳೆದ ವಾರ ಪೊಲೀಸಿನವರು ಒಂದು ಮನೆಯನ್ನು ಅನುಮಾನದ ಮೇಲೆ ಶೋಧನೆ ಮಾಡಿದಾಗ ಅಂಥಾ ಎರಡು ಲಕೋಟೆಗಳು ಸಿಕ್ಕಿದವು. ರಾಜಪಾಲನೆಂಬ ಪೊಲೀಸ್ ಇನ್‍ಸ್ಪೆಕ್ಟರು ಒಂದು ಲಕೋಟೆಯನ್ನು ಕೈಯಿಂದ ಹಿಡಿದುಕೊಂಡು ಹೋಗುತ್ತಿದ್ದಾಗ ಅದು ಹಾರಿ ಅವನ ಕೈಯನ್ನು ಸುಟ್ಟು ಘಾಯಗೊಳಿಸಿತು. ಆ ಲಕೋಟೆಗಳು ಸಿಕ್ಕಿದ ಮನೆಯಲ್ಲಿ ಹುಡುಕಿದಾಗ 18 ವರುಷದ ಒಬ್ಬ ವಿದ್ಯಾರ್ಥಿಯನ್ನೂ ... ದು ಇನ್ನೊಬ್ಬ ವಿದ್ಯಾರ್ಥಿಯನ್ನೂ ದಸ್ತಗಿರಿ ಮಾಡಿದ್ದಾರೆ. ಈಗ ಪೊಲೀಸಿನವರು ... ಕೆಲವು ವರ್ತಮಾನಗಳು ಸಿಕ್ಕಿದ್ದರ ಮೇಲೆ ಕಲ್ಕತ್ತೆಯ ಪೊಲೀಸಿನವರು ಬೇರೆ ನಗರಕ್ಕೆ ಹೋಗಿ ಅಲ್ಲಿ ಕೆಲವು ಮನೆಗಳನ್ನು ಶೋಧನೆ ಮಾಡಿದ್ದಲ್ಲದೆ, ಕೆಲವರನ್ನು ದಸ್ತಗಿರಿ ಮಾಡಿದರು. ... ಗಳಿಂದ ಬೇರೆ ನಗರದ ಸಿಡಿಮದ್ದಿನ ಕಾರ್ಖಾನೆಯ ಪ್ರಯೋಜನವು ಹೊರಪಟ್ಟಿತೆಂದು ಪೊಲೀಸಿನವರಿಗೆ ಗೊತ್ತಾಗಿದೆ.

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು.

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳನ್ನೂ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನೂ ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಕಬ್ಬು ಅಲೆಯಾಡುವುದೂ, ಬೆಲ್ಲ ಬೇಯಿಸುವುದೂ

ಚೆನ್ನಾಗಿ ಬಲಿತ ಮೇಲೆ ಕಬ್ಬನ್ನು ಕತ್ತರಿಸಿ, ಅದನ್ನು ಕೈಲಾದಷ್ಟು ಶೀಘ್ರವಾಗಿ ಆಲೆಯಾಡಬೇಕು ಏಕೆಂದರೆ ಕೊಯಿದನಂತರ ಇಟ್ಟಷ್ಟೂ ಅದರಲ್ಲಿರುವ ಸಕ್ಕರೆಯು ನಷ್ಟವಾಗಿ ಹೋಗುತ್ತದೆ ಎರಡು ದಿನಗಳಲ್ಲಿ ಸಕ್ಕರೆಯು ಕಾಲು ಭಾಗದಷ್ಟು ನಷ್ಟವಾಗಿ ಸೊನೆಯು ನಾಲ್ಕರಷ್ಟು ಹೆಚ್ಚುತ್ತವೆ ಬಹಳ ಹೊತ್ತು ಇಟ್ಟಿದ್ದರೆ ಕಬ್ಬಿನ ಬೆಲ್ಲವು ಮೆತುವಾಗುವದು.

ಕಬ್ಬಿನ ಹಾಲನ್ನು ಕಾಯಿಸುವ ಕ್ರಮ.



ಬೇರೆಬೇರೆ ಅಂತಸ್ತಿನಲ್ಲಿ ಇಟ್ಟಿರುವ 3 ಕೊಪ್ಪರಿಗೆಗಳು

ಹಾಲನ್ನು ಕಡಾಯಿಯೊಳಕ್ಕೆ ಶೋಧಿಸಿಕೊಂಡು ತೂಕಮಾಡುವುದು

ಮೂರು ಮಾದರಿಯ ಗಾಣಗಳನ್ನು ವ್ಯವಸಾಯದ ಇಲಾಖೆಯವರು ಪರೀಕ್ಷಿಸಿದಾರೆ —

(1) ಬೆಂಗಳೂರಿನಲ್ಲಿ ಮಾಡಲ್ಪಟ್ಟ ದೇಶೀಯ ಗಾಣವು

(2) ಪಂಜಾಬೀ ದೇಶದ ಅಂಬಾಲಾ ಪಟ್ಟಣದಲ್ಲಿ ನಾಹನ್ ಕಾರ್ಖಾನೆಯಲ್ಲಿ ಮಾಡಲ್ಪಟ್ಟ ಗಾಣವು

(3) ಗ್ಲಾಸ್‌ಗೋ ಪಟ್ಟಣದಲ್ಲಿ ಸ್ಮಿತ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಇಂಜನ್ ಗಾಣವು

ಬೆಂಗಳೂರಿನ ಗಾಣದ ಕಣೆಗಳು 6 ಮುಕ್ಕಾಲು ಅಂಗುಲ ಅಗಲವಾಗಿರುತ್ತವೆ ನಾಹನ್ ಗಾಣದ ಕಣೆಗಳಲ್ಲಿ ಎರಡು ದೊಡ್ಡ ಕಣೆಗಳು 8 ವರೆ ಅಂಗುಲ ಅಗಲವಾಗಿಯೂ ಇರುವುವು ಇವುಗಳಲ್ಲೆಲ್ಲಾ ಕಣೆಗಳು ಉದ್ದವಾಗಿ ನಿಲ್ಲಿಸಲ್ಪಟ್ಟಿರುವುವು ಇಂಜನ್ ಗಾಣದಲ್ಲಿ ಕಣೆಗಳು ಮಲಗಿಸಲ್ಪಟ್ಟಿರುವುವು ನಾವು ಪರೀಕ್ಷಿಸಿದ ಗಾಣದ ಕಣೆಗಳು 12 ಅಂಗುಲ ಅಗಲವಾಗಿವೆ ಇದನ್ನು 6 ವರೆ ಕುದುರೆ ಶಕ್ತಿಯುಳ್ಳ ಆಯಿಲ್ ಇಂಜನ್ ನಿಂದ ನಡೆಸುತ್ತಿದ್ದರು ದೇಶಿ ಗಾಣದಲ್ಲಿ ಘಂಟೆಗೆ 222 ಪೌಂಡು ಆಲೆಯಾಡಿದರೆ ನೂರಕ್ಕೆ 66 ವರೆಯಷ್ಟು ರಸ ಬರುತ್ತದೆ ನಾಹನ್ ಗಾಣದಲ್ಲಿ ಘಂಟೆಗೆ 320 ಪೌಂಡು ಕಬ್ಬು ಆಲೆಯಾಡಿದರೆ ನೂರಕ್ಕೆ 69 ರಷ್ಟು ರಸಬರುತ್ತವೆ ಈ ಗಾಣಗಳನ್ನು ಸ್ವಲ್ಪ ಹೆಚ್ಚು ವೇಗವಾಗಿ ಓಡಿಸಿದರೆ ದೇಶೀಗಾಣದಲ್ಲಿ 400 ಪೌಂಡು ಕಬ್ಬನ್ನೂ ನಾಹನ್ ಗಾಣದಲ್ಲಿ 600 ಪೌಂಡು ಕಬ್ಬನ್ನೂ ಆಲೆಯಾಡಬಹುದು ಹೀಗೆ ಮಾಡಿದರೆ ದೇಶೀ ಗಾಣದಲ್ಲಿ ನೂರಕ್ಕೆ 60 61 ರಸವೂ ನಾಹನ್ ಗಾಣದಲ್ಲಿ 66 ರಸವೂ ಬರುವುದು ನಾಹನ್ ಗಾಣದ ರಸವು ನೂರಕ್ಕೆ 5 ರಂತೆ ಜಾಸ್ತಿಯಾದರೆ ಎಕರೆಗೆ 200 ಮಣ ಬೆಲ್ಲ ಬರುವ ಸಂದರ್ಭದಲ್ಲಿ 16 ಮಣ ಬೆಲ್ಲವು ಈ ಗಾಣದ ಉಪಯೋಗಮಾತ್ರದಿಂದ ಜಾಸ್ತಿಯಾಗಿ ಬರುವುದು ಈ ಗಾಣವು ಬಹಳ ಭದ್ರವಾಗಿ ಮಾಡಲ್ಪಟ್ಟಿದೆ ಅದರಲ್ಲಿ ಮರದ ಚಂದರೇಖೆಗಳಿರುವುದರಿಂದ ಕಣೆಯ ಗಡಾರಿಯು ಜಾಗ್ರತೆಯಾಗಿ ತೇದು ಹೋಗುವುದಿಲ್ಲ ಈ ಚಂದರೇಖೆಗಳು ಸವೆದು ಹೋದಾಗ ಅವುಗಳನ್ನು ಅಲ್ಪ ಖರ್ಚಿನಿಂದ ಬದಲಾಯಿಸಬಹುದು ಮುಂದಿನ ಚಿಕ್ಕ ಕಣೆಯಲ್ಲಿ ಗೀರುಗಳು ಆಳವಾಗಿರುವದರಿಂದ ಅದು ಕಬ್ಬನ್ನು ಜಾರದ ಹಾಗೆ ಹಿಡಿದು ಚನ್ನಾಗಿ ಒಳಕ್ಕೆಳೆದುಕೊಳ್ಳುತ್ತದೆ ಇಂಡಿಯಾ ದೇಶದ ಪ್ರದರ್ಶನಗಳಲ್ಲಿ ಪರೀಕ್ಷಿಸಿದ ಅನೇಕ ಎತ್ತಿನ ಗಾಣಗಳಲ್ಲಿ ಇದೇ ಉತ್ತಮವೆಂದು ಏರ್ಪಟ್ಟಿದೆ ವ್ಯವಸಾಯದ ಇಲಾಖೆಯವರಿಂದ ಈ ಗಾಣವನ್ನು 65 ರೂಪಾಯಿಗಳಿಗೆ ಪಡೆಯಬಹುದು ಗ್ಲಾಸ್‌ಗೋ ಪಟ್ಟಣದಲ್ಲಿ ಇಂಜನ್ ಗಾಣದಲ್ಲಿ ಘಂಟೆಗೆ 1,900 ಪೌಂಡುಗಳು ಆಲೆಯಾಡಬಹುದು ಅದರಲ್ಲಿ ನೂರಕ್ಕೆ 75 ರಂತೆ ರಸ ಬರುವುದು ಎತ್ತಿಗೆ ಬದಲಾಗಿ ಇಂಜನ್ ಉಪಯೋಗದಿಂದ ಖರ್ಚು ಬಹು ಸುಲಭವಾಗುವದಲ್ಲದೆ ಹೆಚ್ಚು ರಸ ಬರುವುದರಿಂದ ಮಾತ್ರ ಎಕರೆಗೆ 30 ಮಣದಂತೆ ಬೆಲ್ಲದ ಉತ್ಪತ್ತಿಯು ಜಾಸ್ತಿಯಾಗುವದು

ಕಬ್ಬಿನ ಹಾಲಿನಲ್ಲಿ ಕಸ್ಪಿನ ಚೂರೇ ಮೊದಲಾದ ಕಸಗರುಕಿರುವವು ಇವುಗಳನ್ನು ಆಚೆಗೆ ತೆಗೆದುಹಾಕುವುದಕ್ಕಾಗಿ ಬಟ್ಟೆಯಲ್ಲಿ ರಸವನ್ನು ಶೋಧಿಸಬೇಕು ಬದಲು ಬುಟ್ಟಿಯಲ್ಲಿ ಬಟ್ಟೆ ಹಾಕಿ ಸಾಧಾರಣವಾಗಿ ಇದನ್ನು ಮಾಡುತ್ತಾರೆ ಇದಕ್ಕೆ ಬದಲಾಗಿ ತಂತಿಯ ಜಲ್ಲಡಿಯಿಂದ ಮಾಡಿರುವ ಬುಟ್ಟಿಗಳನ್ನು ಹೆಬ್ಬಾಳದ ಫಾರಂನಲ್ಲಿ ಉಪಯೋಗಿಸುತ್ತಲಿದ್ದಾರೆ ಇವು ಕಬ್ಬಿಣದವುಗಳಾಗಿರುವುದರಿಂದ ಬಹು ದಿನ ಬಾಳಿಕೆಬರುವುದಲ್ಲದೆ ಅವುಗಳನ್ನು ಚೊಕ್ಕಟವಾಗಿ ಸುಲಭದಿಂದ ತೊಳೆಯಬಹುದು ಬಿದರು ಬುಟ್ಟಿಯಂತೆ ಅದು ರಸವನ್ನು ಹೀರದೆ ಇರುವುದರಿಂದ ಹುಳಿಯ ಸೋಂಕು ಅದರಲ್ಲಿ ನಿಲ್ಲುವುದಿಲ್ಲ

ಕಬ್ಬಿನ ಹಾಲಿನಲ್ಲಿ ಹುಳಿಯಿರುವುದರಿಂದ ಅದನ್ನು ಆ ಹುಳಿ ಸಮೇತವಾಗಿ ಕಾಸಿದರೆ ಅದರ ಸಕ್ಕರೆಯು ನಷ್ಟವಾಗಿ ಸೊನೆಯು ಜಾಸ್ತಿಯಾಗುವುದು ಆ ಹುಳಿ ಮುರಿಯುವುದಕ್ಕೋಸ್ಕರ ಸುಣ್ಣವನ್ನು ಸೇರಿಸಬೇಕು ಹಾಲು ಕಾಯುತ್ತಿರುವಾಗ ಸುಣ್ಣ ಹಾಕಿದರೆ ಸುಣ್ಣವು ಸೊನೆಯೊಂದಿಗೆ ಬೆರೆತು ಬೆಲ್ಲದ ಬಣ್ಣವನ್ನು ಕೆಡಿಸುವುದು ಆದುದರಿಂದ ಕಾಯಿಸುವುದಕ್ಕೆ ಮುಂಚಿತವಾಗಿಯೇ ಹಾಲಿಗೆ ಸುಣ್ಣವನ್ನು ಸೇರಿಸಬೇಕು ಹಾಲಿನಲ್ಲಿರುವ ಕಲ್ಮಷವನ್ನು ಆಚೆಗೆ ತೆಗೆಯುವ ಸಾಮರ್ಥ್ಯವು ಸುಣ್ಣಕ್ಕೆ ಇರುವುದರಿಂದ ಸುಣ್ಣ ಸೇರಿಸಿದ ಹಾಲಿನಲ್ಲಿ ವಿಶೇಷವಾಗಿ ಮಡ್ಡಿ ಕಟ್ಟುವದು

ಸುಣ್ಣವನ್ನು ಬಹಳ ಎಚ್ಚರಿಕೆಯಾಗಿ ಹಾಕಬೇಕು ಜಾಸ್ತಿಯಾದರೆ ಬೆಲ್ಲವು ಕಪ್ಪಗಾಗುವುದಲ್ಲದೆ, ಸಕ್ಕರೆಯೊಂದಿಗೆ ಸೇರಿ ಮಡ್ಡಿಯ ರೂಪವಾಗಿ ಮೇಲಕ್ಕೆ ತೇಲಬರುವದು ಮಡ್ಡಿ ತೆಗೆದುಹಾಕಿದಾಗ ಸುಣ್ಣದೊಂದಿಗೆ ಸೇರಿದ ಸಕ್ಕರೆಯೆಲ್ಲಾ ನಷ್ಟವಾಗಿ ಹೋಗುವದು ಸುಣ್ಣ ಕೊಂಚವಾಗಿ ಹಾಕಿದರೆ ಹಾಲಿನಲ್ಲಿ ಹುಳಿ ನಿಂತು ಬೆಲ್ಲ ಅಂಟಾಗುವುದು, ಸರಿಯಾಗಿ ಮಡ್ಡಿಯು ಕೂಡ ಕಟ್ಟುವದಿಲ್ಲ ಆದುದರಿಂದ ಪ್ರಮಾಣಕ್ಕೆ ಸರಿಯಾಗಿ ಸುಣ್ಣ ಹಾಕಬೇಕು ಎಲ್ಲಾ ಕಬ್ಬಿನಲ್ಲಿಯೂ ಹುಳಿಯು ಒಂದೇ ತೂಕವಾಗಿರುವದಿಲ್ಲ ಎಳೆಯ ಕಬ್ಬು, ದಿನಹೋದ ಕಬ್ಬು, ಸತ್ತ ಕಬ್ಬು, ಇವುಗಳಲ್ಲಿ ಜಾಸ್ತಿಯಾಗಿ ಹುಳಿ ಇರುವುದರಿಂದ ಸುಣ್ಣವೂ ಜಾಸ್ತಿಯಾಗಿಯೇ ಬೇಕಾಗುವುದು ಹೊಸದಾಗಿ ಬಿರೇ ಹಾಕಿದ ಸುಣ್ಣದಲ್ಲಿ ವಿಶೇಷ ಖಾರವಿರುವುದರಿಂದ, ಆಗ ಅದು ಕೊಂಚವಾಗಿಯೇ ಹಿಡಿಯುವುದು ಸುಣ್ಣವನ್ನು ನೀರಿನಲ್ಲಿ ಕಲಸಿ ಹಾಲಿಗೆ ಸೇರಿಸುವುದರಿಂದ, ನೀರು ಯಾವಾಗಲೂ ಒಂದೇ ಮಂದವಾಗಿಡುವುದು ಕಷ್ಟ ಆದುದರಿಂದ ಸುಣ್ಣ ಸಾಕಾಯಿತೆಂದು ತೋರಿಸುವ ಗುರುತೇನಾದರೂ ಇದ್ದರೆ ನಮಗೆ ಸುಖ ಅನುಭವಸ್ಥರು ಕಣ್ಣಿನ ನೋಟದಿಂದಲೇ ಸುಣ್ಣದ ಪ್ರಮಾಣವನ್ನು ಕಂಡುಹಿಡಿಯುವರು ಆದರೆ ರೆಡ್ ಲಿಟ್ಮಸ್ ಎಂಬ ಕೆಂಪುಕಾಗದದ ಸಹಾಯದಿಂದ ಇದನ್ನು ನೋಡುವುದು ಉತ್ತಮ ಈ ಕೆಂಪು ಕಾಗದವನ್ನು ಹಾಲಿನಲ್ಲಿ ಅದ್ದಿದರೆ ಅದರಲ್ಲಿ ಹುಳಿ ಇರುವ ವರೆಗೆ ಕಾಗದದ ಬಣ್ಣವು ಕೆಡುವುದಿಲ್ಲ ಸುಣ್ಣದ ಸುಂಕು ತಗಲಿದರೆ ಈ ಕಾಗದವು ನೀಲಿಯ ಬಣ್ಣವಾಗುವುದು ಆದುದರಿಂದ ಈ ಕಾಗದವನ್ನು ಆಗಾಗ್ಗೆ ಹಾಲಿನಲ್ಲಿ ಅದ್ದುತ್ತಾ ಇದ್ದು ಸುಣ್ಣವನ್ನು ಸೇರಿಸುತ್ತ ಬಂದರೆ ಸುಣ್ಣವು ಸಾಕಾದಾಗ ಕಾಗದಕ್ಕೆ ಕೊಂಚ ನೀಲಿ ಬಣ್ಣವು ಬರುವದು

ಗಾಣವಾಡಿದ ಮೇಲೆ ಹಾಲು ಕಾಯಿಸದೆ ಬಹಳ ಹೊತ್ತು ಬಿಟ್ಟು ಬಿಟ್ಟರೆ, ಅದರ ಸಕ್ಕರೆಯು ನಷ್ಟವಾಗಿ ಹೋಗುವದು ಇದು ಸೂಕ್ಷ್ಮ ಪ್ರಾಣಿಗಳಿಂದ ಆಗುವದು ಈ ಪ್ರಾಣಿಗಳು ಸೆಕೆ ಜಾಸ್ತಿಯಾದ ಹಾಗೆಲ್ಲಾ ತೀವ್ರವಾಗಿ ಹೆಚ್ಚುವುವು ಕೊಳಕು ಪಾತ್ರೆಗಳು, ಮಡಿಕೆಗಳು, ಇವುಗಳಲ್ಲಿ ಈ ಪ್ರಾಣಿಗಳ ಸೋಂಕು ಸದಾ ಇದ್ದೇ ಇರುವುದರಿಂದ, ಅವುಗಳ ಹಾವಳಿಯು ಜಾಸ್ತಿಯಾಗುವುದು ಆದುದರಿಂದ ಕಬ್ಬಿಣ ಮುಂತಾದ ಲೋಹಗಳಿಂದ ತಯಾರು ಮಾಡಿದ ಪಾತ್ರೆಗಳನ್ನು ಉಪಯೋಗಿಸುವುದರಿಂದಲೂ, ಆ ಪಾತ್ರೆಗಳನ್ನು ಚೊಕ್ಕಟವಾಗಿ ಮರಳುವ ನೀರಿನಿಂದ ತೊಳೆಯುವುದರಿಂದಲೂ ಈ ಪ್ರಾಣಿಗಳನ್ನು ನಾಶಮಾಡಬಹುದು ಬಿದಿರಿನ ಬೊಂಬಿನ ಡಬ್ಬಗಳು ಆದರೂ ಹಾಲು ಹಿಡಿಯುವುದಕ್ಕೆ ಅನುಕೂಲವಾಗುವುವು ಈ ಪ್ರಾಣಿಗಳು ಹಾಲು ಕುದಿಯುವುದಕ್ಕಾರಂಭಿಸಿದೊಡನೆಯೇ ಸತ್ತು ಹೋಗುವುವು ಆದುದರಿಂದ ಹಾಲನ್ನು ಗಾಣದಿಂದ ಬಂದ ತಕ್ಷಣವೇ ಕಾಯಿಸಿದರೆ ಈ ಪ್ರಾಣಿಗಳೆಲ್ಲಾ ನಷ್ಟವಾಗಿ ಹೋಗುವುವು ಸುಣ್ಣ ಹಾಕಿದಮೇಲೆಯೂ ಸಹ ಈ ಪ್ರಾಣಿಗಳು ಬೆಳೆಯುತ್ತಲೇ ಇರುವುವು

ಸಾಧಾರಣವಾಗಿ ನಾವು ಉರಿಯ ಮೇಲೆ ಕಾಯಿಸುವ ಕೊಪ್ಪರಿಗೆಗಳಲ್ಲಿ ರಸವು ಹೆಚ್ಚಾ ಕಾವನ್ನು ಹೊಂದಿ ಅದರಲ್ಲಿರುವ ಸಕ್ಕರೆಯು ಕೆಟ್ಟುಹೋಗಿ ಸೊನೆಯ ರೂಪವನ್ನು ಹೊಂದೇ ಹೊಂದುವುದು ಆವಿಯ ಸಹಾಯದಿಂದ ಕಾಯಿಸುವ ಕೊಪ್ಪರಿಗೆಗಳಲ್ಲಿ ಈ ನಷ್ಟವು ಕೊಂಚ ಕಡಮೆಯಾಗುವುದು ಹಾಳೆಯ ಸಂಚಾರವಿಲ್ಲದ, ಮುಚ್ಚಿದ ಕೊಪ್ಪರಿಗೆಗಳಲ್ಲಿ ಬಹಳ ಕೊಂಚವಾಗಿರುವುದು ಬಹಳ ಹೊತ್ತು ಹಾಲನ್ನು ಕಾಯಿಸುವುದರಿಂದ ಅದರಲ್ಲಿರುವ ಸಕ್ಕರೆಯು ನಷ್ಟವಾಗುವುದು ಹಸನಾದ ಬೆಲ್ಲ ಮಾಡುವ ಸ್ಥಳಗಳಲ್ಲಿ ಕೊಂಚವೇ (ಎಂದರೆ 60 ಸೇರು) ಹಾಲನ್ನು ಒಂದಾವರ್ತಿಗೆ ಹಾಕಿ ಒಂದೆರಡು ಘಳಿಗೆಯೊಳಗಾಗಿ ಕೊಪ್ಪರಿಗೆಯನ್ನು ಕೆಳಕ್ಕಿಳಿಸುವರು ಆದುದರಿಂದ ಕೈಲಾದಷ್ಟು ಕೊಂಚ ರಸವನ್ನು ತೆಗೆದುಕೊಂಡು, ಕೊಂಚ ಹೊತ್ತಿನಲ್ಲಿಯೇ ಬೇಯಿಸುವುದು ಉತ್ತಮ

ಹಾಲು ಕುದಿಯುವುದಕ್ಕೆ ಬಂದಾಗ ಅದರಲ್ಲಿರುವ ಕಲ್ಮಷವೆಲ್ಲಾ ನೊರೆಯಲ್ಲಿ ಮೇಲಕ್ಕೆ ತೇಲುವದು ಈ ಕಲ್ಮಷದ ಕೆನೆಗೆ ಮಡ್ಡಿಯೆಂದೂ ಹುಳಿಯೆಂದೂ ಹೆಸರು ಇದನ್ನು ತೆಗೆದು ಹಾಕಿದರೆ ಹಾಲು ನಿರ್ಮಲವಾಗಿ ಬೆಲ್ಲವು ಬೆಳ್ಳಗಾಗುವುದು ಮಡ್ಡಿಯು ತೆಗೆಯಲ್ಪಡದೇ ಇದ್ದರೆ ಬೆಲ್ಲವು ಬಹು ಕಪ್ಪಗಾಗುವುದು ರೈತರು ಮಡ್ಡಿ ತೆಗೆಯುವುದಕ್ಕೆ ಈಗ ಉಪಯೋಗಿಸುತ್ತಿರುವ ಬಿದುರು ಚಿಬ್ಬಲಿನಲ್ಲಿ ಮಡ್ಡಿಯೆಲ್ಲಾ ಕೆಳಕ್ಕಿಳಿದು ಹೋಗುವುದರಿಂದ ಅದರಿಂದ ಸರಿಯಾಗಿ ಮಡ್ಡಿ ತೆಗೆಯುವುದಕ್ಕೆ ಆಗುವದಿಲ್ಲ ಹೆಬ್ಬಾಳದ ಫಾರಂನಲ್ಲಿ ಇದಕ್ಕೆ ಒಂದು ವಿಧವಾದ ಸಣ್ಣ ರಂಧ್ರವುಳ್ಳ ಹಿತ್ತಾಳೆ ಜಲ್ಲಡಿಯನ್ನು ಮಾಡಿರುವರು ಇದು ಚಿಬ್ಬಲಿಗಿಂತ ಎಷ್ಟೋ ವಾಸಿ ಅನೇಕ ಜನರು ಅದನ್ನು ಕೊಂಡುಕೊಂಡು ಉಪಯೋಗಿಸುತ್ತಾ ಇದಾರೆ ರಂಧ್ರವಿಲ್ಲದಿರುವ ತಟ್ಟೆಯಲ್ಲಿ ಮಡ್ಡಿ ತೆಗೆದಾಗ್ಯೂ ಹಾಲಿನಲ್ಲಿರುವ ಕಲ್ಮಷವೆಲ್ಲಾ ಪೂರ್ತಿಯಾಗಿ ಹೋಗುವದಿಲ್ಲ ಆದುದರಿಂದ ಹಾಲು ಅರ್ಧ ಕಾದು ಅದರಲ್ಲಿರುವ ಕಲ್ಮಷವೆಲ್ಲಾ ಗಡ್ಡೆ ಕಟ್ಟಿದ ಮೇಲೆ ಅದನ್ನು ಶೋಧಿಸಿದರೆ ಚೆನ್ನಾಗಿ ಆಗುವದು ಇದಕ್ಕೋಸ್ಕರ ಈ ಪಕ್ಕದಲ್ಲಿರುವ ಪಟಗಳಲ್ಲಿ ತೋರಿಸಿರುವಂತೆ ಹೆಬ್ಬಾಳದ ಫಾರಂನಲ್ಲಿ ಒಂದರ ಮೇಲೆ ಒಂದಾಗಿ ಮೂರು ಕೊಪ್ಪರಿಗೆಗಳನ್ನು ಇಟ್ಟಿರುವರು ಮೇಲಿನ ಎರಡು ಕೊಪ್ಪರಿಗೆಗಳು ಒಂದು ಸಾಲಿನಲ್ಲಿಯೂ ಕೆಳಗಿನ ಕೊಪ್ಪರಿಗೆಯು ಇನ್ನೊಂದು ಸಾಲಿನಲ್ಲಿಯೂ ಇರುವವು ಮೊದಲನೆಯ ಕೊಪ್ಪರಿಗೆಯು 2 ನೆಯ ಮತ್ತು 3 ನೆಯ ಕೊಪ್ಪರಿಗೆಗಳ ಹೊಗೆಯಲ್ಲಿರುವ ಕಾವಿನಿಂದಲೇ ಕಾಯುತ್ತಿರುವುದು ಇಲ್ಲಿ ಸುಣ್ಣ ಹಾಕಿದ ಹಾಲನ್ನು ಕೆಲವು ಕಾಲ ಇಟ್ಟಿರುತ್ತದೆ ಅದು ಹೆಚ್ಚು ಕಡಿಮೆ ಕುದಿಯುವ ಹದಕ್ಕೆ ಬಂದಿರುತ್ತದೆ 2 ನೆಯ ಕೊಪ್ಪರಿಗೆಯಲ್ಲಿ ಮಡ್ಡಿ ಏಳುತ್ತದೆ ಅಲ್ಲಿ ಮಡ್ಡಿಯನ್ನು ಹಿತ್ತಾಳೆ ಜಲ್ಲಡಿ ತಟ್ಟೆಯಿಂದ ಎತ್ತಿ ತೆಗೆದುಹಾಕುತ್ತಾರೆ ರಸದೊಂದಿಗೆ ಸೇರಿದ ಈ ಮಡ್ಡಿಯನ್ನು ಮೊದಲನೆಯ ಕೊಪ್ಪರಿಗೆಯಲ್ಲಿ ಅಗಲವಾದ ಜಲ್ಲಡಿಯ ಮೇಲೆ ಹಾಸಿರುವ ಬಟ್ಟೆಯ ಮೇಲೆ ತಳ್ಳಿಗೆ ಹರಡುವರು ಇಲ್ಲಿ ಮಡ್ಡಿಯೆಲ್ಲಾ ಬಟ್ಟೆಯ ಮೇಲೆ ನಿಂತು ರಸವೆಲ್ಲಾ ಕೆಳಕ್ಕೆ ಇಳಿಯುತ್ತದೆ ಎರಡನೆಯ ಕೊಪ್ಪರಿಗೆಯಲ್ಲಿ ಹಾಲು ಅರ್ಧ ಕಾದಮೇಲೆ ಅದನ್ನು ಒಂದು ಗಜ ಅಗಲವುಳ್ಳ ಜಲ್ಲಡಿಯ ಮೇಲೆ ಇರುವ ಫ್ಲಾನಲ್ ಬಟ್ಟೆಯಲ್ಲಿ ಶೋಧಿಸುವುದರಿಂದ ಅದರಲ್ಲಿರುವ ಸಮಸ್ತ ಕಲ್ಮಷವೂ ಫ್ಲಾನಲ್ಲಿನ ಮೇಲೆ ನಿಂತುಬಿಡುವುದು ಹಾಲು ನಷ್ಟವಾಗದಂತೆ ಅದರಲ್ಲಿರುವ ಕಶ್ಮಲ ಮಾತ್ರವೇ ಈ ಉಪಾಯದಿಂದ ಹೋಗುವುದು ಗೊಬ್ಬದ ಸ್ಥಳವಿದವೇಕೆಂದ

ಪಾಕ ಇಳಿದನಂತರ ಪಾಕವನ್ನು ಅಚ್ಚುಮನೆಗೆ ಹಾಕುವುದಕ್ಕಿಂತ ಮುಂಚೆ ಸಣ್ಣ ಕೊಪ್ಪರಿಗೆಗೆ ಹಾಕುವ ಕ್ರಮ



ದೊಡ್ಡ ಕೊಪ್ಪರಿಗೆಯನ್ನು ಒಲೆಯ ಮೇಲಿನಿಂದ ಇಳಿಸುವುದಕ್ಕೆ ಬದಲಾಗಿ ಕೆಳಬಾಗದ ಮಗ್ಗುಲಲ್ಲಿ ಎರಡು ಕೀಲುಗಳನ್ನಿಟ್ಟು ಆ ಕೀಲಿನ ಮೇಲೆ ಸರಪಣಿಹಾಕಿ ಎಳೆಯುವುದನ್ನು ತೋರಿಸಿದೆ.

...ದಿಂದ ಸೈವು ಸರಿಯಾಗಿ ಜೋಡಿಸುವ ಸೌಕರ್ಯಕ್ಕೆ ಈ ಕೊಪ್ಪರಿಗೆಗಳನ್ನು ...ವಾಗಿ ಮಾಡಿವೆ. ಮೂರನೆಯ ಕೊಪ್ಪರಿಗೆಯು ಬಹಳ ದೊಡ್ಡದಾಗಿಯೂ ...ವಾಗಿಯೂ ಇರುವುದರಿಂದ ಅದನ್ನು ಪೂರ್ತಿಯಾಗಿ ಎತ್ತುವುದಕ್ಕೆ ಬದಲಾ... ...ಜೇ ಮಗ್ಗುಲು ಏಳುವ ಹಾಗೆ ಮಾಡಿದೆ. ಮೋಪು ಹಾಕುವ ಹತ್ತಿರದ... ...ಕ್ಕೆ ಸರಪಣಿಯನ್ನು ಕಟ್ಟಿ ಆ ಸರಪಣಿಯನ್ನು ಒಂದು ಚಕ್ರದ ಮೇಲೆ ...ಸಿಕೊಂಡು ಹೋಗಿ ಇನ್ನೊಂದು ಕೊನೆಗೆ ಒಂದು ಪೆಟ್ಟಿಗೆಯನ್ನು ಕಟ್ಟಿದೆ. ...ಪೆಟ್ಟಿಗೆಯಲ್ಲಿ ಕಲ್ಲು ಮುಂತಾದ ಭಾರವನ್ನು ಹಾಕಿದರೆ ಕೊಪ್ಪರಿಗೆಯು ...ದು ಪಕ್ಕದಿಂದಲೇ ಮೇಲಕ್ಕೆ ಏಳುವದು. ಇನ್ನೊಂದು ಪಕ್ಕಕ್ಕೆ ಎರಡು ...ಗೂಟಗಳನ್ನು ಜೋಡಿಸಿರುತ್ತದೆ. ಪೆಟ್ಟಿಗೆಯಲ್ಲಿರುವ ಭಾರವನ್ನು ತೆಗೆದರೆ ...ಪ್ಪರಿಗೆಯು ತನ್ನಷ್ಟಕ್ಕೆ ತಾನೇ ಹಿಂದಕ್ಕೆ ಹೋಗುವದು.

ಉಳಿದಿರುವ ಸಂಗತಿಗಳನ್ನು ಇನ್ನೊಂದು ಸಲ ಹೇಳಲಾಗುವುದು.

ಹೋದ ಸಾಲಿನಲ್ಲಿ ಕಿಬ್ಬನಹಳ್ಳಿಯ ಹತ್ತಿರ ವ್ಯವಸಾಯದ ಇಲಾಖೆಯ ...ವು ಬೆಲ್ಲಮಾಡುವ ವಿಧಾನವನ್ನು ರೈತರಿಗೆ ಪ್ರದರ್ಶಿಸಿದರು. ಇಲ್ಲಿ 15 ಎಕರೆ ...ಲ್ಲಿ ಬೆಳೆದಿದ್ದ ಕಬ್ಬನ್ನು ಗಾಣವಾಡಿ ಬೆಲ್ಲವು ಮಾಡಲ್ಪಟ್ಟಿತು. ರೈತರು ...ವಾಗಲೂ ಮಾಡುತ್ತಿದ್ದಂತೆ ಮಾಡಿದ್ದರೆ ಎಷ್ಟು ಲಾಭವು ಬರುತ್ತಿತ್ತೋ ಅದ... ...ಕ್ಕಿಂತಲೂ ಒಟ್ಟು 1,000 ರೂಪಾಯಿ ಜಾಸ್ತಿ ಲಾಭವು ಬಂದಿರುತ್ತದೆಂದು ...ವಾಗಿ ಗೊತ್ತುಮಾಡಲ್ಪಟ್ಟಿದೆ. ಇದರ ವಿಷಯವಾಗಿ ಕಿಬ್ಬನಹಳ್ಳಿಯ ಮ|| ...ವೆಂಕಟರಾಮಯ್ಯನವರು ಮತ್ತು ಮ|| ಭೀಮಯ್ಯನವರು ಬರೆದಿರುವದನ್ನು ...ಮ್ಮ ವಾಚಕರ ಅವಗಾಹನೆಗಾಗಿ ಕೆಳಗೆ ಕೊಟ್ಟಿರುತ್ತದೆ:—

"ಮೈಸೂರು ಅಗ್ರಿಕಲ್ಚರಲ್ ಇಲಾಖೆಯವರಿಂದ ಕಿಬ್ಬನಹಳ್ಳಿ ರೈತರಾದ ...ಗೆ ದಯಮಾಡಿಕೊಡಲ್ಪಟ್ಟ ಹೊಸ ನಮೂನೆಯ ಯಂತ್ರಗಳ ಮೂಲಕ ...ಮಾಡಲ್ಪಟ್ಟ ಮತ್ತು ಈ ಇಲಾಖೆಯವರು ಕಲಿಸಿಕೊಟ್ಟ ರೀತಿಯಿಂದ ಶ್ರೇಷ್ಠವಾ... ...ದ ಬೆಲ್ಲವನ್ನು ತಯಾರುಮಾಡಿ ತಿಪಟೂರು ಸಂತೆಯಲ್ಲಿ ಬಿಕರಿಮಾಡಿದ್ದರಿಂದ ...ಒಂದು ತಿಂಗಳಿಂದಲೂ ರೂ. 3-4-0 ಧಾರಣೆ ಬಂತು. ಸಾಧಾರಣವಾಗಿ ...ರೀತಿ ತಯಾರುಮಾಡುವಂತಹ ಬೆಲ್ಲಕ್ಕೆ ರೂ. 1-4-0 ಧಾರಣೆಯಾ... ...ದ್ದಾಗ್ಯೂ ಈ ಹಸನಾದ ಮಾದರಿಯ ಸರಕಿಗೆ ಜಾಸ್ತಿ ಧಾರಣೆ ಆಗುತ್ತಾ... ...ಇಲಾಖೆಯಿಂದ ಕೊಟ್ಟ ತಿಳುವಳಿಕೆಯಿಂದ ಬಹು ಉಪಕಾರವಾಗಿರು... ...ದೆ. ಈ ರೀತಿಯಾಗಿ ತಯಾರುಮಾಡುವ ಬೆಲ್ಲಕ್ಕೂ ಮತ್ತು ಇತರರು ತಯಾ... ...ಮಾಡತಕ್ಕ ಬೆಲ್ಲಕ್ಕೂ ಖರ್ಚು ಒಂದೇ ಆಗುತ್ತದೆ. ಅನೇಕ ದಿವಸಗಳಿಂದ ...ಯ್ಯು ಇದ್ದು ವ್ಯರ್ಥವಾಯಿತೆಂದು ತಿಳಿದಿದ್ದ ಕಬ್ಬಿನಿಂದಲೂ ಸಹಾ ಒಳ್ಳೆಯ ...ದ ಬೆಲ್ಲ ಇಳಿದಿರುತ್ತದೆ."

ಈ ಕೆಳಗೆ ವಿವರಿಸಿರುವ ಬೀಜಗಳು ಹೆಬ್ಬಾಳದಲ್ಲಿರುವ ಸರ್ಕಾರದ ವ್ಯವ... ...ಯದ ಇಲಾಖೆಯ ಅಜಮಾಯಿಷಿ ಕ್ಷೇತ್ರದಲ್ಲಿ ಬಿಕರಿಗೆ ಸಿಕ್ಕುತ್ತವೆ.—

ನೆಲಗಡಲೆ —ಮರಿಷಸ್ ನೆಲಗಡಲೆ 1,500 ಪೌಂಡುಗಳಿವೆ (25 ಎಕರೆಗ... ...ಗೆ ಆಗುವಷ್ಟು). 1 ರೂಪಾಯಿಗೆ 10 ಪೌಂಡುಗಳು. ವರ್ಜಿನಿಯಾ ನೆಲಗಡಲೆ 1,000 ಪೌಂಡುಗಳಿವೆ (20 ಎಕರೆಗಳಿಗೆ ಆಗುವಷ್ಟು). 1 ರೂಪಾಯಿಗೆ 16 ಪೌಂಡುಗಳು.

ತೋಟದ ತೊಗರಿ —20 ಸೇರುಗಳಿವೆ. 1 ಆಣೆಗೆ 1 ಸೇರು.

ಕಬ್ಬು

ಆಷಿ ಮರಿಷಸ್ —	1½ ಟನ್	(3,000 ಬೀಜ ಆಗುವಷ್ಟು)
ಬೀ. 208	2 ಟನ್	(4,000 ಬೀಜ ಆಗುವಷ್ಟು)
ಜಾವಾ	1 ಟನ್	(2,000 ಬೀಜ ಆಗುವಷ್ಟು).
ಮರಿಷಸ್ ಪಟ್ಟಾಪಟ್ಟಿ	1 ಟನ್	(3,000 ಬೀಜ ಆಗುವಷ್ಟು)

ಕಳುಹಿಸುವುದಕ್ಕೆ ತಗಲುವ ಲಾಗವಲ್ಲದೆ ಟನ್ ಒಂದಕ್ಕೆ 20 ರೂಪಾಯಿ.

ಈ ಕಬ್ಬು ಸಾಧಾರಣವಾಗಿ ನವೆಂಬರು ತಿಂಗಳಿಗೆ ಸೂನಂಗಿ ಹೊರಡುವದ... ...ದ ಬೀಜವನ್ನು ಅವಶ್ಯವಾದಷ್ಟು ಜಾಗ್ರತೆಯಾಗಿ ಹಾಕಬೇಕು. ಕೊಂಡು ಕೊಳ್ಳಬೇಕೆಂದಿರುವವರು ಜಾಗ್ರತೆಯಾಗಿ ಕೆಳಗೆ ಕೊಟ್ಟಿರುವ ವಿಳಾಸಕ್ಕೆ ...ಮಿಸಿಕೊಳ್ಳಬೇಕು. ವಿಳಾಸ—ಡಿ. ಜಿ. ರಾಮಚಂದ್ರರಾವ್, ಮ್ಯಾನೇಜರ್ ...ವ್ಯವಸಾಯದ ಇಲಾಖೆಯ ಪರೀಕ್ಷಾ ಕ್ಷೇತ್ರ, ಹೆಬ್ಬಾಳ, ಬೆಂಗಳೂರು ತಾಲ್ಲೂಕು.

ದನಗಳ ಹೊಸ ಪ್ರದರ್ಶನ.

ನಾಗಮಂಗಲದ ಸಮೀಪದಲ್ಲಿರುವ ಕೋಟೆ ಬೆಟ್ಟದ ಶ್ರೀವೆಂಕಟರಮಣ ಸ್ವಾಮಿ ರಥೋತ್ಸವವು ತಾ 10 ನೇ ಮಂಗಳವಾರ ನಡೆಯಿತು. ಈ ಜಾತ್ರೆಗೆ ...ದು ಕಡೆಯಿಂದ ಜನಗಳು ಬಂದಿದ್ದರು. ಈ ಸ್ಥಳವು ಉತ್ತಮ ಜಾತಿ ದನಗಳಿಗೆ ...ಕ್ಕಸ್ಥಾನವಾಗಿ, ಹುಲ್ಲು ನೀರು ಕಟ್ಟುವ ಸ್ಥಳ ಮೊದಲಾದವುಗಳಿಗೆಲ್ಲಾ ...ಸಿಕರವಾಗಿರುವದರಿಂದ ಇಂಥಾ ಸ್ಥಳದಲ್ಲಿ ದನಗಳ ಪ್ರದರ್ಶನವನ್ನು ...ಡಬೇಕೆಂದು ನಾಗಮಂಗಲದಲ್ಲಿರುವ ಸಿಲ್ಕ್ ಡೆಮಾನ್‌ಸ್ಟ್ರೇಟರ್ ಮ|| ...ಎಸ್. ಶಂಕರಯ್ಯನವರು ಯೋಚಿಸಿ ಸರ್ಕಾರದವರ ಸಹಾಯವನ್ನು ಪಡೆದು, ...ಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ ದನಗಳನ್ನು ಪ್ರದರ್ಶನ ಮಾಡ... ...ವರಿಗೂ, ದನಗಳನ್ನು ಕೊಳ್ಳತಕ್ಕವರಿಗೂ ಪ್ರೋತ್ಸಾಹಿಸಿ ಮೇಲ್ಕಂಡ ರಥೋ... ...ವದ ದಿವಸ ಸೇರುವಂತೆ ಏರ್ಪಡಿಸಿ ಒಂದು ಕಮಿಟಿಯ ಮುಖೇನ ಪ್ರದರ್ಶನ... ...ವನ್ನು ಪ್ರಾರಂಭಮಾಡಿದರು. ಪ್ರದರ್ಶನಕ್ಕೆ ಸುಮಾರು ನೂರಾರು ಉತ್ತಮ ...ಳುಗಳು ಬಂದಿದ್ದವು. ವೈಕಿ 1,000 1,200 ರೂಪಾಯಿ ಬೆಲೆಬಾಳುವ ...ಗಳೂ ಬಂದಿದ್ದವು. ಕಮಿಟಿ ಪ್ರೆಸಿಡೆಂಟರಾದ ನಾಗಮಂಗಲದ ಕೋಆಪರೇ... ...ಟಿವ್ ಸೊಸೈಟಿ ಸೆಕ್ರೆಟರಿ ಮ|| ಶ್ರೀನಿವಾಸಯ್ಯಂಗಾರ್ಯರು ದನಗಳ ಪ್ರದರ್ಶನದಿಂದಾ... ...ವ, ದನಗಳ ಪೋಷಣೆಯಿಂದಾಗುವ ಪ್ರಯೋಜನಗಳನ್ನು ಕುರಿತು ಉಪನ್ಯಾಸ ...ಮಾಡಿದರು. ಮ|| ಪಿ. ಎಸ್. ಶಂಕರಯ್ಯನವರು ರೇಷ್ಮೆ ವ್ಯವಸಾಯ ವಿಚಾರ... ...ವನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಕಮಿಟಿಯವರು ಮುಂದಿನ ...ವರ್ಷದ ಪ್ರದರ್ಶನದ ವಿಚಾರವಾಗಿ ಸರ್ಕಾರದವರ ಸಹಾಯವನ್ನಪೇಕ್ಷಿಸಿ ...ಸರ್ಕಾರದವರ ಮ್ಯಾನೇಜ್‌ಮೆಂಟಿನಿಂದ ನಡೆಯಬೇಕೆಂದು ಅಪ್ಲಿಕೇಷನ್ ...ನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು. ಅನಂತರ ಶ್ರೀಮನ್ಮಹಾ... ...ರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆ ಮುಕ್ತಾಯವಾಯಿತು.

ಶಾಂತವಿಲಾಸ ರೀಡಿಂಗ್ ರೂಂ, ತಿಕ್ಕಾಪುರ.

ಈಗ್ಗೆ 6 ತಿಂಗಳು ಮುಂಚೆ ಈ ಟೌನ್‌ನಲ್ಲಿ ಒಂದು ರೀಡಿಂಗ್ ರೂಂ ...ಮ|| ಜಿ. ಶಾಂತವೀರಪ್ಪನವರ ಮತ್ತು ಶಿರಸ್ತೇದಾರ್ ಮ|| ...ನಾರಾಯಣರಾವ್‌ರವರ ಪ್ರೋತ್ಸಾಹದಿಂದ ಜಾರಿಗೆ ತರಲ್ಪಟ್ಟಿತು. ಇದು ಹಾಕದ ...ಗೆ ಸಂಬಂಧಪಟ್ಟ ಒಂದು ಮಳಿಗೆಯಲ್ಲಿ ಇದ್ದದ್ದರಿಂದ ಅದು ಸರಿಹೋಗದೆ ...ಮಲ್ದಾರರವರು ತಾಲ್ಲೂಕು ಕಚೇರಿ ಎದುರು ಮೈದಾನದಲ್ಲಿ ಅಂದವಾದ ...ಒಂದು ಕಟ್ಟಡವನ್ನು ಕಟ್ಟಿಸಿದರು. ಈ ನೂತನ ಮಂದಿರ ಪ್ರವೇಶೋತ್ಸವವು ...ತಾ 15 ನೇ ಭಾನುವಾರ ನಡೆಸಲ್ಪಟ್ಟಿತು. ಅಮಲ್ದಾರರವರು ಸಭಾಧ್ಯಕ್ಷತೆ... ...ವನ್ನು ವಹಿಸಿ, ವರ್ತಮಾನ ಪತ್ರಗಳನ್ನು ಓದುವದರ ಪ್ರಯೋಜನವನ್ನೂ, ...ಮುಖ್ಯ ಬಹು ಮಂದಿ ಸಮ್ಯಗ್ಗಳು ಒಂದು ಕಡೆ ಸೇರುವದು ಪರಮ... ...ವೆಂಬ ಅಭಿಪ್ರಾಯವುಳ್ಳ ಉಪನ್ಯಾಸವನ್ನು ಮಾಡಿದರು. ಅನಂತರ ...ಎಸ್. ವೆಂಕಟರಾಜಯ್ಯನವರು ಈ ರೀಡಿಂಗ್ ರೂಮಿನಿಂದ ಜನಗಳಿಗೆ ಉಂಟಾಗು... ...ಲಾಭಕರವಾದ ಪ್ರಯೋಜನವನ್ನು ತಿಳಿಸುವದರೊಂದಿಗೆ ನಮ್ಮ ಅಮಲ್ದಾರರವರ ಹೆಸರು ಈ ಟೌನ್ನಿನ ಪ್ರಜೆಗಳಿಗೆ ಸರ್ವದಾ ಜ್ಞಾಪಕವಿರುವಂತೆ ಈ ವಾಚಕ ಮಂದಿರಕ್ಕೆ ಶ್ರೀಶಾಂತವಿಲಾಸ ಎಂಬ ಹೆಸರನ್ನು ಕೊಡುವದು ಯುಕ್ತವೆಂದು ಹೇಳಿ ತಮ್ಮ ಉಪನ್ಯಾಸವನ್ನು ಮುಗಿಸಿದರು. ಬಳಿಕ ಅಮಲ್ದಾರರವರು ಈ ರೀಡಿಂಗ್ ರೂಂಗೆ ಪ್ರಕೃತ ಇಷ್ಟರ ಮಟ್ಟಿನ ಕಟ್ಟಡ ಮಾಡಿರುವದಾಗಿಯೂ, ಈ ಸ್ಥಳದಲ್ಲಿ ತಾಲ್ಲೂಕು ಮತ್ತು ಟೌನ್ ಪ್ರೋಗ್ರೆಸ್ ಕಮಿಟಿಗಳು ಏರ್ಪಾ... ...ಡಾಗಿ ಮಂಜೂರಿ ಬಗ್ಗೆ ಗವರ್ನ್‌ಮೆಂಟಿಗೆ ಹೋಗಿರುವದರಿಂದ ಮಂಜೂರಾಗಿ ಬಂದ ನಂತರ ಪ್ರೋಗ್ರೆಸ್ ಕಮಿಟಿಯವರು ಈ ರೀಡಿಂಗ್ ರೂಂ ವಿಷಯದಲ್ಲಿ ಹೆಚ್ಚಾದ ಗಮನ ಕೊಡುವರೆಂದೂ, ಟೌನ್ ಪ್ರೋಗ್ರೆಸ್ ಕಮಿಟಿಯವರು ಈ ರೀಡಿಂಗ್ ರೂಮನ್ನು ಒಂದು ಬ್ರಾಂಚಾಗಿ ಇಡುವರೆಂಬ ಭಾವಗರ್ಭಿತ ಅಭಿಪ್ರಾಯವನ್ನು ಸೂಚಿಸಿದರು. ಅನಂತರ ಕೆಲವು ಮಹನೀಯರು ಇದಕ್ಕೆ ಮೆಂಬರಾಗಿ ಸೇರುವಂತೆ ಇಷ್ಟಪಟ್ಟು ಸೇರಿದರು. ಮತ್ತು ಈ ರೀಡಿಂಗ್ ರೂಮಿಗೆ ಶ್ರೀಮನ್ಮಹಾರಾಜರವರ ಫೋಟೋವನ್ನು ಮ|| ಶ್ರೀನಿವಾಸದೀಕ್ಷಿತರು ಭವಾನಿ ರಾಯರು ಕೊಟ್ಟರು. ಸಭಿಕರು, ಸಭಾಧ್ಯಕ್ಷರು ಸಹಾ ಬಹು ಸಂತೋಷದಿಂದ ರೀಡಿಂಗ್ ರೂಮಿನಲ್ಲಿ ಆ ಫೋಟೋವನ್ನು ಇಟ್ಟು ಸಂತೋಷವನ್ನು ಸೂಚಿಸಿದರು. ಗಂಧ ತಾಂಬೂಲ ಮರ್ಯಾದೆಗಳು ನಡೆದ ನಂತರ ಶ್ರೀಮನ್ಮಹಾರಾಜರವರಿಗೂ, ಸಭಾಧ್ಯಕ್ಷರಿಗೂ ಸೆಕ್ರೆಟರಿಯವರಾದ ಮ|| ಕೇಶವಯ್ಯಂಗಾರ್ರಿಗೂ ಶ್ರೇಯಃಪ್ರಾರ್ಥನೆಗಳು ಜರುಗಿದವು.

ಚಂದಾದಾರ್.

ದಿವಾನರವರ ಸರ್ಕೀಟು.

ಹುಣಸೂರು

ಕಳೆದ 14 ನೇ ತಾ ಬುಧವಾರ ಬೆಳಿಗ್ಗೆ 9 ಗಂಟೆಗೆ ದಿವಾನರವರು ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಗಳೆಲ್ಲರಿಂದೊಡಗೂಡಿ ಮೋಟರುಗಳಲ್ಲಿ ಹುಣಸೂರು ಮಾರ್ಗವಾಗಿ ಹೆಗ್ಗಡದೇವನಕೋಟೆಗೆ ತೆರಳಿದರು. ಬಾವುಟ, ಕದಳೀ ಸ್ತಂಭ, ತಳಿರುತೋರಣಗಳಿಂದಲಂಕೃತವಾಗಿ ತಾಲ್ಲೂಕ್ ಕಚೇರಿಯ ಮುಂಭಾಗದಲ್ಲಿ ತಯಾರಿಸಿದ್ದ ನವೀನ ಚಪ್ಪರಕ್ಕೆ ದಯಮಾಡಿಸುತ್ತಲೇ ಅಮಲ್ದಾರರೂ, ಅ|| ಇಂಜನಿಯರೂ, ಮ್ಯುನಿಸಿಪಲ್ ಮೆಂಬರುಗಳೂ, ಸರ್ಕಾರಿ ನೌಕರರೂ, ಟೌನ್ ಪ್ರಜೆಗಳೂ ಅವರುಗಳನ್ನು ಮರ್ಯಾದೆಯಿಂದ ಎದುರುಗೊಂಡರು. ಬಾರ್ ಸಿಪಾಯಿಗಳು ಅದಟ್ಟಿನಿಂದ ರಸ್ತೆಯ ಪಾರ್ಶ್ವದಲ್ಲಿ ನಿಂತುಕೊಂಡು ಬಂದೂಕಗಳನ್ನೆತ್ತಿ ಸೆಲ್ಯೂಟ್ ಮಾಡಿದರು. ಆಗ್ಗೆ ಆಫೀಸರುಗಳನ್ನು ಪರಿಚಿತಮಾಡಿಸಿದರು. ಫಲ ಪುಷ್ಪ ತಾಂಬೂಲಗಳನ್ನೊಪ್ಪಿಸಿ ಮುಜರೆ ಮಾಡಿದರು. ದಿವಾನರವರು ತಕ್ಕ ಹಾಗೆ ಪ್ರತಿ ವಂದನೆಮಾಡಿ ಮುಂದೆ ತೆರಳಿದರು. ಹೆಗ್ಗಡದೇವನಕೋಟೆಗೆ ದಯಮಾಡಿಸಿ ಅಲ್ಲಿ ಎಲ್ಲಾ ಭಾಗಗಳನ್ನೂ ಇನ್ಸ್‌ಪೆಕ್ಟ್ ಮಾಡಿಕೊಂಡು ಮಧ್ಯಾಹ್ನತ್ತರ 3½ ಗಂಟೆಗೆ ಹುಣಸೂರಿಗೆ ದಯಮಾಡಿಸಿದರು. ಸರ್ಕಾರಿ ಮತ್ತು ಖಾಸಗೀ ದೊಡ್ಡಮನುಷ್ಯರುಗಳಲ್ಲಿ ಹಲವರೂ, ಕಾಫೀಸೆಗಳ ಯುರೋಪಿಯನ್ ಸರದಾರರೂ ಊರ ಪ್ರವೇಶ ಭಾಗವಾದ ಚಿಕ್ಕ ಹುಣಸೂರು ಕೆರೆಯ ಹತ್ತಿರ ಕಾದಿದ್ದು ದಿವಾನರಿಗೆ ಕರೆಯ ಬಂಗಳವನ್ನು ತೋರಿಸಿದರು. ಬಳಿಕ ಅವರು ಮಿಲಿಟರಿ ಗ್ರಾಸ್ ಫಾರಮ್ ಕಟ್ಟಡ, ಗ|| ಎ. ವಿ. ಸ್ಕೂಲು, ವರ್ಕ್‌ಶಾಪ್, ಹೇಸ್ ಕಾರ್ಖಾನೆ ಇವುಗಳನ್ನು ಪರಾಂಬರಿಸಿ ಮುಸಾಫರ್‌ಖಾನೆಗೆ ದಯಮಾಡಿಸಿ, ಟೀಪಾರ್ಟಿ ತೀರಿಸಿಕೊಂಡು 7 ಗಂಟೆಗೆ ತಾಲ್ಲೂಕ್ ಕಚೇರಿಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ನಡಿಸಿದರು. ಅಲ್ಲಿ ಪ್ರಜೆಗಳು ವಾಟರ್ ಸಪ್ಲೈ, ಗೋಮಾಳ, ಮುನ್ಸಿಫ್ ಕೋರ್ಟು, ಮಲೆನಾಡಿನಿಂದ ಒಂದು ಬ್ರಾಂಚ್ ರೈಲ್ವೇ ಲೈನ್, ರೋಡುಗಳು, ಪೋಲೀಸ್ ಇಲಾಖೆ, ಇವೇ ಮುಂತಾದ ವಿಷಯಗಳಲ್ಲಿ ತಮ್ಮ ಕೊರತೆಗಳನ್ನು ದಿವಾನರವರಿಗೆ ವಿಜ್ಞಾಪಿಸಿಕೊಂಡರು. ಸ್ವಲ್ಪ ಸಮಯದಲ್ಲೇ ಪ್ರಜೆಗಳು ಅನೇಕ ಸಂಗತಿಗಳನ್ನು ಟೌನ್ ಜನರು ಕೇಳಿದರೂ ದಿವಾನರವರು ಬೇಸರಪಡದೆ ಬಹು ಶಾಂತವಾಗಿ ಸರ್ವ ಬಾಗದಲ್ಲೂ ಸಮಂಜಸವಾದ ಪ್ರತ್ಯುತ್ತರ ದಯಪಾಲಿಸಿ, ತರುವಾಯ ಯಡತೊರೆಗೆ ಹೊರಟು ಹೋದರು. 22 ನೇ ತಾ ಭಾನುವಾರ ಬೆಳಿಗ್ಗೆ 11 ಗಂಟೆಗೆ ಯಡತೊರೆಯಿಂದ ಹೊರಟು ಚುಂಚನಕಟ್ಟೆ, ಚಿಟ್ಟನಪುರ, ಪೆರಿಯಾಪಟ್ಟಣ ಇವುಗಳನ್ನೆಲ್ಲಾ ನೋಡಿಕೊಂಡು ಹುಣಸೂರಿಗೆ ಭೇಟಿಕೊಟ್ಟು, ತಾಲ್ಲೂಕ್ ಕಚೇರಿ, ಆಸ್ಪತ್ರೆ, ಹಿಂದುಸ್ತಾನಿ ಸ್ಕೂಲ್‌ಗಳು ಟೌನ್ ಮುಖ್ಯ ಭಾಗವನ್ನು ಇನ್ಸ್‌ಪೆಕ್ಟ್ ಮಾಡಿಕೊಂಡು ಪ್ರಜೆಗಳಿಂದ ಸನ್ಮಾನಹೊಂದಿ ಯಡತೊರೆಗೆ ವಾಪಸ್ ಪ್ರಯಾಣಮಾಡಿದರು.

ಹುಣಸೂರು ತಾಲ್ಲೂಕು ಚಿಕ್ಕಾಡಿಗನಹಳ್ಳಿ.

ಶ್ರೀಮನ್ ದಿವಾನ್ ಸಾಹೇಬರವರು ಯಡತೊರೆ ಮಾರ್ಗವಾಗಿ ಹುಣಸೂರಿಗೆ ದಯಮಾಡಿಸುತ್ತಾರೆಂದು ಈ ಗ್ರಾಮದ ಪಕ್ಕದ ರಸ್ತೆಯಲ್ಲಿ ಗ್ರಾಮಸ್ಥರು ಅಂದವಾಗಿ ಅಲಂಕರಿಸಿದ ಚಪ್ಪರವನ್ನು ಹಾಕಿದ್ದರು. ಸ್ಪೆಷಲ್ ಶಿರಸ್ತೇದಾರರೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್ ಮ|| ಕೆ. ನರಸಿಂಗರಾಯರೂ, ಗ್ರಾಮದ ಮುಖಂಡರೂ, ಪಟೇಲ್ ಶ್ಯಾನುಭೋಗರೂ ಶ್ರೀಯವರ ಆಗಮನವನ್ನು ನಿರೀಕ್ಷಿಸುತ್ತಲಿದ್ದರು. ಶ್ರೀಯವರ ಮೋಟರು ಗಾಡಿ ಕಂಡೊಡನೆಯೇ ಬ್ಯಾಂಡ್ ವಾದ್ಯವು ಮೊಳಗಿತು. ಮೋಟರು ಬಂದು ನಡುಚಪ್ಪರದಲ್ಲಿ ನಿಂತ ಕೂಡಲೇ ಹಾರ ತುರಾಯಿ ಒಪ್ಪಿಸಲ್ಪಟ್ಟವು. ಗ್ರಾಮದ ಕುಂದು ಕೊರತೆಯನ್ನು ಸಾವಧಾನದಿಂದ ಲಾಲಿಸಿ ಸಮುತ್ತರವನ್ನು ದಯಪಾಲಿಸಿದರು. ಗಾವಡಗೆರೆಯವರು ಹಾಕಿದ್ದ ಹಸರುವಾಣಿಯ ಚಪ್ಪರದಲ್ಲಿ ಶ್ರೀಯವರ ಆಗಮನವನ್ನು ನಿರೀಕ್ಷಿಸುತ್ತಲಿದ್ದ ಜನರ ಮಾತೃಭಾಷೆಯಾದ ಮಹಾರಾಷ್ಟ್ರ ಭಾಷೆಯಲ್ಲಿಯೇ ಕಾಲು ಗಂಟೆ ಸಂಭಾಷಣೆಮಾಡಿ ಅವರಿಗೆ ಒಂದು ಆಸ್ಪತ್ರೆಯನ್ನೂ ಇಂಗ್ಲಿಷ್ ಸ್ಕೂಲನ್ನೂ ಇಡಿಸಿ, ಗ್ರಾಮವನ್ನು ಯೂನಿಯನ್ನಾಗಿ ಮಾಡುವದಾಗಿ ಅಪ್ಪಣೆ ದಯಪಾಲಿಸಿ ಹುಣಸೂರು ಹೆಗ್ಗಡದೇವನಕೋಟೆಗೆ ಹೋಗಿ ವಾಪಸು ಯಡತೊರೆಗೆ ಚಿತ್ತೈಸಿದರು.

ಯಡತೊರೆ ತಾಲ್ಲೂಕು ಮಂಚನಹಳ್ಳಿ.

ಘನವನ್ನು ಹೊಂದಿದ ದಿವಾನ್ ಸಾಹೇಬರವರು ತಾ 19 ನೇ ಮಧ್ಯಾಹ್ನ 1 ಘಂಟೆಗೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಒಡನೆ ಮೋಟರ್ ಗಾಡಿಯಲ್ಲಿ ಮಂಚನಹಳ್ಳಿ ಗ್ರಾಮಕ್ಕೆ ದಯಮಾಡಿಸಿ, ರಸ್ತೆಯಲ್ಲಿ ಶೃಂಗರಿಸಲ್ಪಟ್ಟ ಚಪ್ಪರದ ಉಭಯಪಾರ್ಶ್ವದಲ್ಲಿಯೂ ನಿಂತಿದ್ದ ಗ್ರಾಮಸ್ಥರುಗಳಿಂದಲೂ, ವೈದಿಕ ಮಹಾಜನಗಳಿಂದಲೂ ಒಪ್ಪಿಸಲ್ಪಟ್ಟ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿದನಂತರ ಗ್ರಾಮಕ್ಕೆ ದಯಮಾಡಿಸುವಾಗ ದಾರಿಯಲ್ಲಿ ಮನೆಮನೆ ಬಾಗಿಲಿನಲ್ಲಿಯೂ ರಂಗವಲ್ಲಿ ತೋರಣ ಮುಂತಾದವುಗಳಿಂದ ಅಲಂಕರಿಸಿದ್ದನ್ನು ನೋಡಿಕೊಂಡು ಶ್ರೀಯವರಿಗಾಗಿ ಏರ್ಪಡಿಸಲ್ಪಟ್ಟ ಚಪ್ಪರಕ್ಕೆ ದಯಮಾಡಿಸುವಾಗ ಚಪ್ಪರದ ಮುಂಭಾಗದಲ್ಲಿ ಇಟ್ಟಿದ್ದ ಕೈಗಾರಿಕೆ ಮುಂತಾದ ಎಗ್ಜಿಬಿಷನ್ ವಸ್ತುಗಳನ್ನೆಲ್ಲಾ ಖುದ್ದು ಪರಾಂಬರಿಸಿ ಬಹಳ ಸಂತೋಷಪಟ್ಟರು. ಅನಂತರ ಶ್ರೀಯವರು ಪ್ರಜೆಗಳ ಪ್ರತಿ ಒಬ್ಬರ ಅಹವಾಲುಗಳನ್ನೂ ಸಾವಧಾನವಾಗಿ ಕೇಳಿ ಎಲ್ಲರಿಗೂ ಸಮುತ್ತರಗಳನ್ನು ದಯಪಾಲಿಸುತ್ತಾ ಪ್ರೀತಿಪೂರ್ವಕವಾದ ಆಸನವನ್ನು ಸ್ವೀಕರಿಸಿದರು. ಶ್ರೀಯವರ ಜೊತೆಯಲ್ಲಿ ಸುಮಾರು 20 ಜನ ದೊಡ್ಡ ಆಫೀಸರುಗಳು ದಯಮಾಡಿಸಿದ್ದರು. ಇಲ್ಲಿ ಗ್ರಾಮಾಭಿವೃದ್ಧಿಯ ಕಮಿಟಿಗಳನ್ನು ಏರ್ಪಡಿಸಿದರು. ಅನಂತರ ಇಲ್ಲಿ ಕೋಆಪರೇಟಿವ್ ಸೊಸೈಟಿಯ ಸೆಕ್ರೆಟರಿ ಮ|| ರಾಮಸ್ವಾಮಿ ಶಾಸ್ತ್ರಿಗಳು ಅಡ್ರೆಸ್ಸನ್ನು ಓದಿದರು. ಆ ಅಡ್ರೆಸ್ಸಿನಲ್ಲಿ ಕಂಡ ಮುಖ್ಯ ವಿಷಯಗಳೇನೆಂದರೆ:—

"ತಮ್ಮ ಘನತರವಾದ ಸವಾರಿಯು ನೊಡನೆಯೇ ಅಪೂರ್ವ ಇಲ್ಲಿಗೆ ದಯಮಾಡಿ ಎಪ್ರಜೆಗಳ ಕಷ್ಟಸುಖಗಳನ್ನು ಪ್ರತ್ಯಕ್ಷ ಪರಾಂಬರಿಸುವುದು ನಮ್ಮಗಳಿಗೆ ಅನಿರ್ವಚನೀಯವಾದ ಆನಂದವನ್ನುಂಟುಮಾಡಿರುತ್ತೆ. ಈ ನಮ್ಮ ಗ್ರಾಮವು ಬಹಳ ಚಿಕ್ಕದಾದರೂ ಸರ್ಕಾರಿ ಸ್ಕೂಲ್, ಪೋಸ್ಟಾಫೀಸ್, ಪರಸ್ಪರ ಸಹಾಯಸಂಘ, ವಾಚಕಶಾಲೆ, ಕೈಗಾರಿಕೆ ಮತ್ತು ವ್ಯವಸಾಯಸಂಘ, ಇವುಗಳು ಏರ್ಪಡಿಸಲ್ಪಟ್ಟು ನಡೆಯುತ್ತಾ ಇವೆ. ಇಷ್ಟೇ ಅಲ್ಲದೆ ಈ ಕಾರ್ಯದಲ್ಲಿ ಗ್ರಾಮಸ್ಥರು ಬಹಳ ಆಸಕ್ತರಾಗಿದ್ದಾರೆ ಮತ್ತು ನಾವುಗಳೆಲ್ಲರೂ ಸ್ವಂತ ವ್ಯವಸಾಯಗಾರರಾದಾಗ್ಯೂ ಸಾಧ್ಯವಾದ ಇತರ ಕೈಗಾರಿಕೆಗಳನ್ನೂ ಆಶ್ರಯಿಸಬೇಕೆಂಬ ಉದ್ದೇಶವುಳ್ಳವರಾಗಿರುತ್ತೇವೆ. ಇದಕ್ಕೆ ನಿದರ್ಶನವಾಗಿ ಬಾಳೇನಾರಿನಿಂದ ಏನೇನು ಕೆಲಸವಾಗಬಹುದು? ಈರೀ ರೇಷ್ಮೆಹುಳುಗಳನ್ನು ನಾವು ಬೆಳೆಯುವ ಹರಳುಸೊಪ್ಪಿನಿಂದ ಸಾಕಿ ತಯಾರುಮಾಡುವುದು, ಪಂಪಿನಿಂದ ನೀರು ಎತ್ತಿ ಕಬ್ಬು ವಗೈರೆ ಬೇಸಗೆ ಪೈರು ಮಾಡುವುದು, ಇವುಗಳನ್ನು ನಿರೀಕ್ಷಿಸುತ್ತಾ ಇದೇವೆ. ನಾವು ಸ್ವಂತವಾಗಿ ಬೆಳೆಯುವತಕ್ಕ ಸುಲಭಸಾಧ್ಯವಾದ ಪದಾರ್ಥಗಳಿಂದಲೇ ಆದಾಯಕರವಾದ ಕೈಗಾರಿಕೆ ಕೆಲಸವನ್ನು ಮಾಡಲು ಅಪೇಕ್ಷಿಸುತ್ತೇವೆ. ನಮ್ಮ ತೋಟಗಳಲ್ಲಿ ಬೆಳೆಯುವ ಪಾರಿವಾಳವೆಂಬ ಮರದಿಂದ ಶ್ಲಾಘ್ಯಕರವಾದ ಬಣ್ಣ ಮತ್ತು ಆಟದ ಸಾಮಾನುಗಳನ್ನು ಮಾಡುತ್ತಾ ಇದೇವೆ. ಈ ಕೆಲಸಗಳಿಗೆ ತಮ್ಮ ಮತ್ತು ತಮ್ಮ ಸರ್ಕಾರದವರ ಪ್ರೋತ್ಸಾಹವು ದಯಪಾಲಿಸಲ್ಪಡಬೇಕಾಗಿ ಕೇಳಿಕೊಳ್ಳುತ್ತೇವೆ.—ನಮ್ಮಗಳಿಗೆ ನಾಲೆಯೇ ಮುಖ್ಯ ಜೀವನವಾಗಿದೆ. ನಾಲಾ ಉಸ್ತುವಾರಿ, ರಿಪೇರಿ, ನೀರು ಬಿಡುವುದು ಮುಂತಾದದ್ದಕ್ಕೆ ಬೇರೇ ಇಲಾಖೆಯೇ ಏರ್ಪಾಡಿದ್ದಾಗ್ಯೂ ರೈತರಿಗೆ ಕಾರ್ಯತಃ ಇದು ಫಲದಾಯಕವಾಗಿರುವುದಿಲ್ಲ. ನಾಲೆಗಳ ಕಾಮಗಾರಿ, ನೀರು ಸರಫರಾಜು ಮುಂತಾದುವುಗಳು ತೃಪ್ತಿಕರವಾಗಿರುತ್ತೆಂಬ ಬಗ್ಗೆ ಗ್ರಾಮಕಮಿಟಿಗಳಿಂದ ಮಂಜೂರಾದ ನಂತರ ಇಲಾಖೆಯವರು ಬಿಲ್ಕುಮಾಡುವಂತೆ ಏರ್ಪಾಡುಮಾಡಿಕೊಡಬೇಕು. ಈ ಏರ್ಪಾಡಿನಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಸಹಾಯವಾಗಿರುತ್ತೆ. ಈ ವರ್ಷ ನಾಲಾದಲ್ಲಿ ನೀರು ಸಕಾಲದಲ್ಲಿ ತಪ್ಪಿಹೋಗಿ ನಮ್ಮ ಗ್ರಾಮಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳ ಮೇಲೆ ನಷ್ಟವಾಗಿರುತ್ತೆ.—ನಮ್ಮ ಗ್ರಾಮಾಭಿವೃದ್ಧಿಗೆ ಹಾಲಿ ಇರುವ ಗ್ರಾಮಠಾಣಕ್ಕೆ ಸೇರಿದಂತೆ ನಿವೇಶವನ್ನು ಬಿಡಿಸಿಕೊಟ್ಟು ಆರೋಗ್ಯಕರವಾಗಿ ವಿಶಾಲವಾದ ಮನೆಗಳನ್ನು ಕಟ್ಟಿಕೊಳ್ಳುವಂತೆ ಸಹಾಯ ಮಾಡಿಕೊಡಬೇಕು ಮತ್ತು ನಮ್ಮ ಗ್ರಾಮಕ್ಕೆ ರೈಲ್ವೆ ಸ್ಟೇಷನ್ ಇಡಿಸಿಕೊಡಬೇಕು.— ಯಡತೊರೆ ತಾಲ್ಲೂಕು ಕಚೇರಿಯು ಸಾಲಿಗ್ರಾಮಕ್ಕೆ ವರ್ಗಾಯಿಸಲ್ಪಡುತ್ತೆಂದು ಕೇಳಿ ಎಲ್ಲಾ ಪ್ರಜೆಗಳೂ ವ್ಯಾಕೂಲಿತರಾಗಿದೇವೆ. ಯಡತೊರೆಯು ತಾಲ್ಲೂಕಿಗೆ ಮಧ್ಯಸ್ಥಾನವಾಗಿಯೂ, ರೈಲ್ವೆ ಇರತಕ್ಕ ಸ್ಥಳವಾದ್ದರಿಂದಲೂ ತಾಲ್ಲೂಕನ್ನು ಇಲ್ಲಿಯೇ ಇಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.—ಈ ಗ್ರಾಮಕ್ಕೆ ಸುತ್ತಲೂ 2-3 ಮೈಲಿಗಳೊಳಗೆ ನಾಲ್ಕಾರುಸಾವಿರ ಪ್ರಜೆಗಳುಳ್ಳ 15 ಗ್ರಾಮಗಳಿರುತ್ತವೆ. ಈ ಗ್ರಾಮಗಳ್ಯಾವುದರಲ್ಲಿಯೂ ಸ್ಕೂಲ್ ಇರುವುದಿಲ್ಲ. ಹಂಪಾಪುರ ಮತ್ತು ಮಂಚನಹಳ್ಳಿಗಳ ಮಧ್ಯೆ ಒಂದು ಆಂಗ್ಲೋ ವರ್ನಾಕ್ಯುಲರ್ ಸ್ಕೂಲನ್ನು ಸ್ಥಾಪಿಸಿ ಬಲಾತ್ಕಾರದ ವಿದ್ಯಾಭ್ಯಾಸದ ಕಾನೂನನ್ನು ಅಜಮಾಯಿಷಿ ಮಾಡಿದಲ್ಲಿ ಸಾವಿರಾರು ಪ್ರಜೆಗಳು ವಿದ್ಯಾವಂತರಾಗುತ್ತಾರೆಂದು ಪ್ರಾರ್ಥಿಸುತ್ತೇವೆ.—ನಮ್ಮ ಗ್ರಾಮವನ್ನು ಕೆಲವು ಮಟ್ಟಿಗೆ ಹೊಳೇನರಸಿಪುರದ ಮುನ್ಸಿಫ್ ಕೋರ್ಟು ಅಧಿಕಾರಕ್ಕೆ ಒಳಪಡಿಸಿರುವುದರಿಂದ ಬಡಪ್ರಜೆಗಳಾದ ನಮ್ಮಗಳಿಗೆ ಅಪಾರವಾದ ತೊಂದರೆಯಾಗಿರುತ್ತೆ. ಆದ್ದರಿಂದ ಮೊದಲಿನಂತೆ ಮೈಸೂರಿಗೆ ವರ್ಗಾಯಿಸಿಕೊಡಬೇಕಾಗಿಯೂ, ಈ ಗ್ರಾಮಸಮೂಹಗಳ ಮಧ್ಯೆ ಒಂದು ಗ್ರಾಮಮುನ್ಸಿಫ್ ಕೋರ್ಟು ಸ್ಥಾಪಿಸಿಕೊಡುವಂತೆಯೂ ಪ್ರಾರ್ಥಿಸುತ್ತೇವೆ.— ನಾಲಾ ಏರಿಗಳ ಮೇಲೆ ಬೆಳೆಯುವ ಹುಲ್ಲನ್ನು ಹರಾಜು ಮೂಲಕ ವಿಕ್ರಯಿಸುವದನ್ನು ವಜಾಮಾಡಿರುತ್ತೆಂದು ಸರ್ಕಾರದಿಂದ ಪ್ರೊಸೀಡಿಂಗ್ಸು ಆಗಿರುತ್ತೆ. ಹೀಗಿದ್ದಾಗ್ಯೂ ಹರಾಜುಕ್ರಮ ನಡೆಯುತ್ತಾ ಇದೆ. ಇದರಿಂದ ನಮ್ಮ ಅನೇಕ ಗ್ರಾಮಗಳಲ್ಲಿ ದನಕರುಗಳು ನಷ್ಟಪಡುತ್ತಿವೆ. ಈ ಹರಾಜು ಕ್ರಮವನ್ನು ವಜಾ ಮಾಡಿಸಿ ಕಾಪಾಡಬೇಕಾಗಿ ಬೇಡುತ್ತೇವೆ." ಇತ್ಯಾದಿ.

ಈ ಗ್ರಾಮದಲ್ಲೇ ತಯಾರಾದ ಸುಂದರವಾದ ಮರದ ಪೆಟ್ಟಿಗೆಯಲ್ಲಿ ಆ ಅಡ್ರೆಸ್ಸನ್ನು ಇಟ್ಟು ಸಮರ್ಪಿಸಿ, ದಿವಾನರವರಿಗೂ, ಡೆಪ್ಯುಟಿ ಕಮಿಷನರವರಿಗೂ ಹಾರ ತುರಾಯಿಗಳನ್ನು ಒಪ್ಪಿಸಿದ್ದಲ್ಲದೆ ಎಲ್ಲಾ ಆಫೀಸರುಗಳಿಗೂ ಗಂಧ ಪುಷ್ಪ ಹಾರಗಳಿಂದ ಸತ್ಕರಿಸಿದರು. ಶ್ರೀಮನ್ ದಿವಾನರವರು ಗ್ರಾಮ ರಾಜಕೀಯಸ್ಥರ ಜಮೀನು ಬಿಡಿಸಿಕೊಡಲು ಡೆಪ್ಯುಟಿ ಕಮಿಷನರಿಗೂ, ಈ ಗ್ರಾಮದಲ್ಲಿ ಎ. ವಿ. ಸ್ಕೂಲನ್ನು ಇಟ್ಟುಕೊಡಲು ಗ್ರಾಮಸ್ಥರಿಂದ ಅರ್ಧ ಮೊಬಲಗು ಖರ್ಚು ತೆಗೆದುಕೊಂಡು ಕೊಡುವಂತೆ ಸರ್ಕಲ್ ಇನ್ಸ್‌ಪೆಕ್ಟರಿಗೂ, ನಾಲೆಗಳ ಸಾಲಾಬಾದು ಕಾಮಗಾರಿಗಳನ್ನು ಆಯಾ ಗ್ರಾಮಸ್ಥರಿಗೇನೇ ಕೊಡುವಂತೆ ಎಗ್ಜಿಕ್ಯೂಟಿವ್ ಇಂಜನಿಯರಿಗೂ ಅಪ್ಪಣೆಮಾಡಿ, ನಂತರ ಇಲ್ಲಿನ ಗೌರ್ನಮೆಂಟ್ ಸ್ಕೂಲಿಗೆ ದಯಮಾಡಿಸುತ್ತಿರುವಾಗ ಸ್ಕೂಲ್ ಮಾಸ್ಟರ್ ಮ|| ಆರ್ ಸೂರಪ್ಪನವರು ಬಾಲಕ ಬಾಲಕಿಯರುಗಳಿಂದ ಹೇಳಿಸಿದ ಶ್ರೀಮನ್ಮಹಾರಾಜರವರ ಮೇಲಿನ ಮಂಗಳಗೀತಗಳನ್ನು ಕೇಳಿ ಬಹು ಆನಂದಪಟ್ಟು, ಅಲ್ಲಿಂದ ಇಲ್ಲಿಯ ಕೆಲವು ರೈತರ ಮನೆಗಳನ್ನು ಖುದ್ದು ಪರಾಂಬರಿಸಿ, ಸಾಯಂಕಾಲ 6½ ಗಂಟೆ ಸಮಯದಲ್ಲಿ ಇಲ್ಲಿಂದ ತಿಪ್ಪೂರಿಗೆ ಹೋಗುವ ಹಳೇ ರಸ್ತೆಯಲ್ಲಿ ದಯಮಾಡಿಸಿದರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್

ಹುಲಿಕರಡಿಗಳ ಜಗಳ ನಂಬಲು ಅನುಮಾನ.

ಅಯ್ಯಾ,

ಮದರಾಸ್ ಗವರ್ನರವರು ಕಳೆದ ವಾರ ರಾಮೇಶ್ವರ ದ್ವೀಪದಲ್ಲಿ ನಡೆದ ಮಹಾಸಭೆಯಲ್ಲಿ ಅಗ್ರಾಸನವನ್ನು ವಹಿಸಿ ಹಿಂದುಸ್ಥಾನದಿಂದ ಸಿಲೋನ್ ದ್ವೀಪಕ್ಕೆ ಹೋಗುವ ರೈಲಿಗಾಗಿ ಸಿದ್ಧಪಡಿಸಿದ್ದ ರೈಲ್ ರಸ್ತೆಯನ್ನು ಪ್ರತಿಷ್ಠೆಮಾಡಿದರು ರಾಮೇಶ್ವರಕ್ಕೂ ಮಾನಾರಿಗೂ ಮಧ್ಯೆ ಇರುವ ಪಾಕ್ ಜಲ ಸಂಧಿಗೆ ಸೇತುವೆಯನ್ನು ಕಟ್ಟಬೇಕೆಂದು ಅನೇಕ ವರುಷಗಳಿಂದ ಯೋಚನೆ ಹುಟ್ಟಿ, ನಾನಾ ಬಗೆಯ ಅಂದಾಜಾ ಪಟ್ಟಿಗಳನ್ನು ತಯಾರ್ಮಾಡಿ ಕೊಟ್ಟಿದ್ದರು. ಈ ಸೇತುವೆಗೆ ಅಪಾರವಾದ ಹಣ ಬೇಕಾಗುವುದೆಂದು ಆ ಅಂದಾಜಾ ಪಟ್ಟಿಗಳಿಂದ ಗೊತ್ತಾಯಿತು. ಕಡೆಗೆ ದಕ್ಷಿಣ ಇಂಡಿಯಾ ರೈಲ್ವೆ ಕಂಪನಿಯು ರೈಲ್ ಮಾರ್ಗವನ್ನು ಮಂಟಪದಿಂದ ರಾಮೇಶ್ವರದ ವರೆಗೆ ಒಹಾವಣೆ ಮಾಡಬೇಕೆಂದೂ, ಅಲ್ಲಿಂದ ಜನರನ್ನೂ ಸಾಮಾನನ್ನೂ ಜಹಜುಗಳ ಮೇಲೆ ರಾಮೇಶ್ವರದಿಂದ ಮಾನಾರ್ ವರೆಗೆ ಜಲಮಾರ್ಗದಲ್ಲಿ ಸಾಗಿಸಬೇಕೆಂದೂ ಇತ್ಯರ್ಥಮಾಡಿದರು ಇತ್ತಲಾಗಿ ಸಿಲೋನ್ ದ್ವೀಪದ ರೈಲ್ವೆ ಕಂಪನಿಯವರು ರೈಲ್ ರಸ್ತೆಯನ್ನು ಬಡಾವಣೆ ಮಾಡಿ ಮಾನಾರ್ ಎಂಬಲ್ಲಿಗೆ ತಂದು ಸೇರಿಸಿದರು ಈಗ ಮಾನಾರಿನಿಂದ ರೈಲು ಹತ್ತಿ ಕೊಲಂಬೋ ಪಟ್ಟಣಕ್ಕೂ ಸಿಲೋನಿನ ಇತರ ಸ್ಥಳಗಳಿಗೂ ಹೋಗುವುದು ಸುಲಭವಾಯಿತು ಈಗ ಎಲ್ಲಾ ಕಾಮಗಾರಿಗಳೂ ಪೂರೈಸಿರುತ್ತವೆ ರೈಲ್ ಗಾಡಿಗಳೂ ಜಹಜುಗಳೂ ಸೇರಿ ಹಿಂದುಸ್ಥಾನದಿಂದ ಸಿಲೋನಿಗೆ ತಡೆಯಿಲ್ಲದೆ ಹೋಗಿ ಬರುತ್ತಿರುವವು. ಇದರಿಂದ ಜನಗಳ ಮತ್ತು ಸಾಮಾನುಗಳ ಆಮದು ರಫ್ತಿಗೆ ಎಷ್ಟೋ ಸರಾಗವಾಯಿತು.

ಹಿಂದುಸ್ಥಾನದಿಂದ ಸಿಲೋನಿಗೆ ಹೋಗುವ ಜಹಜೂ, ಸಿಲೋನಿನಿಂದ ಹಿಂದುಸ್ಥಾನಕ್ಕೆ ಬರುವ ಜಹಜೂ ಆದಾಮನ ಸೇತುವೆ ಎಂಬ ಸ್ಥಳದಲ್ಲಿ ಸಂಧಿಸುತ್ತವೆ. ಈ ಸ್ಥಳದಲ್ಲಿ ರಾಮನು ಪ್ರಾಚೀನ ಕಾಲದಲ್ಲಿ ಹನುಮಂತನ ಸಹಾಯದಿಂದ ಒಂದು ಸೇತುವೆಯನ್ನೋ, ಆಣೆಯನ್ನೋ ಕಟ್ಟಿಸಿದನೆಂದು ಹೇಳುತ್ತಾರೆ. ಸಮುದ್ರದೊಳಗೆ ಆ ಸ್ಥಳದಲ್ಲಿ ಉದ್ದಕ್ಕೂ ಅಡ್ಡಕಟ್ಟೆ ಈಗಲೂ ಇರುವುದರಿಂದ ಪೂರ್ವಕಾಲದಲ್ಲಿ ಹಿಂದುಸ್ಥಾನದವರೂ ಸಿಲೋನಿನವರೂ ಈ ಮಾರ್ಗವಾಗಿ ಹೋಗಿಬರುತ್ತಿದ್ದರೆಂದು ಹೇಳಬಹುದು ಅನೇಕ ಶತಮಾನಗಳು ಕಳೆದ ಮೇಲೆ ಅಂದರೆ ಈಗ ಮತ್ತೆ ಹಿಂದುಸ್ಥಾನಕ್ಕೂ ಸಿಲೋನಿಗೂ ಹೋಗಿ ಬರುವಂತೆ ನಿರಾಯಾಸವಾದ ಮಾರ್ಗವು ಹಾಕಲ್ಪಟ್ಟಿದೆ.

ಪ್ರಯಾಣಿಕರು ಈಗ ರಾಮೇಶ್ವರಕ್ಕೆ ರೈಲಿನ ಮೇಲೆ ಹೋಗಿ ಇಳಿದು ಅಲ್ಲಿ ಜಹಜು ಹತ್ತಿದರೆ ಒಂದೆರಡು ಗಂಟೆ ಹೊತ್ತಿನಲ್ಲಿ ಆ ಜಹಜು ಮಾನಾರ್ ಎಂಬ ತೀರಪಟ್ಟಣವನ್ನು ತಲುಪುತ್ತದೆ. ಅಲ್ಲಿ ಜಹಜುಬಿಟ್ಟು ರೈಲು ಹತ್ತಿ ಸಿಲೋನ್ ದ್ವೀಪದ ಯಾವ ಸ್ಥಳಕ್ಕಾದರೂ ಪ್ರಯಾಣಮಾಡಬಹುದು. ಇದರಿಂದ ಈಗ ತುತ್ತುಗುಡಿಯಲ್ಲಿ ಜಹಜು ಹತ್ತಿ ರಾತ್ರಿಯೆಲ್ಲಾ ಜಹಜಿನಲ್ಲಿ ಪ್ರಯಾಣಮಾಡಿ ಮರುದಿನ ಬೆಳಿಗ್ಗೆ ಸಿಲೋನ್ ದ್ವೀಪಕ್ಕೆ ಹೋಗಿ ತಲಪುವುದರ ಅನನುಕೂಲವು ನಿವಾರಣೆಯಾಯಿತು. ಮತ್ತು ಹಿಂದುಸ್ಥಾನದಿಂದ ಸಿಲೋನಿಗೆ ಮೊದಲಿಗಿಂತಲೂ ಈಗ ಎಷ್ಟೋ ಬೇಗ ಹೋಗಿ ತಲಪಬಹುದು.

ಈ ಸುಖಕರವಾದ ಮಾರ್ಗವು ಆಗಿರುವುದರಿಂದ ನಮ್ಮ ಸೀಮೆಯಲ್ಲೂ ಅನೇಕರಿಗೆ ಎಷ್ಟೋ ಉಪಕಾರವಾಯಿತು ಎಂದು ಹೇಳುತ್ತೇವೆ ಮೈಸೂರು ಸೀಮೆಯ ಅನೇಕ ಪ್ರಜೆಗಳು ಕೂಲಿ ಹಾಡಿಗಾಗಿ ಸಿಲೋನಿನಲ್ಲಿರುವ ಟೀ ಮತ್ತು ಕಾಫೀ ತೋಟಗಳಿಗೆ ಹೋಗುವುದುಂಟು ಇನ್ನು ಮುಂದೆ ಇಂಥಾ ಜನಗಳು ಪ್ರಯಾಣಕ್ಕಾಗಿ ಹೆಚ್ಚು ಹಣವನ್ನು ಖರ್ಚುಮಾಡಬೇಕಾದದ್ದು ತಪ್ಪಿತು; ಮತ್ತು ಮೊದಲಿಗಿಂತ ಅತಿ ಜಾಗ್ರತೆಯಾಗಿ ಅಲ್ಲಿಗೆ ಹೋಗುವಂತಾಯಿತು. ಸಿಲೋನಿನಲ್ಲಿರುವ ಕೂಲಿ ಜನರು ತಮ್ಮ ಸಂಪಾದನೆಯ ದ್ರವ್ಯವನ್ನು ಮಣಿಆರ್ಡರ್ ಮೂಲಕ ಹಿಂದುಸ್ಥಾನಕ್ಕೆ ಕಳುಹಿಸುತ್ತಾ ಬಂದಿದಾರೆ. ಇನ್ನು ಮುಂದೆ ಸಿಲೋನಿಗೆ ಹೋಗಿ ಬರತಕ್ಕವರ ಸಂಖ್ಯೆಯು ಬಹಳವಾಗಿ ಹೆಚ್ಚೀತೆನ್ನುವುದಕ್ಕೆ ಸಂಶಯವಿಲ್ಲ ಇದಲ್ಲದೆ ಇನ್ನುಮೇಲೆ ಆ ಲಂಕೆಯ ಪ್ರಜೆಗಳೂ ವಿಶೇಷವಾಗಿ ನಮ್ಮ ದೇಶಕ್ಕೆ ಬರುವುದಕ್ಕೆ ಎಷ್ಟೋ ಸರಾಗವಾಯಿತು.

ಹಿಂದುಸ್ಥಾನಕ್ಕೂ ಸಿಲೋನ್ ದ್ವೀಪಕ್ಕೂ ಈ ಅನುಕೂಲವಾದ ಮಾರ್ಗವನ್ನು ಕಲ್ಪಿಸಿಕೊಟ್ಟು ಆಮದು ರಫ್ತಿಗೆ ಪ್ರೋತ್ಸಾಹವನ್ನುಂಟುಮಾಡಿರುವ ರೈಲ್ವೆ ಕಂಪನಿಯವರನ್ನು ಪ್ರಜೆಗಳ ಪಕ್ಷವಾಗಿ ವಂದಿಸಬೇಕಾಗಿದೆ. ಈ ಹೊಸ ಮಾರ್ಗದ ದೆಸೆಯಿಂದ ಸಿಲೋನಿಗೂ, ಹಿಂದುಸ್ಥಾನಕ್ಕೂ ಪರಸ್ಪರವಾದ ಸಂಬಂಧವೃದ್ಧಿಹೊಂದಿ ಶ್ರೇಯಸ್ಸುಂಟಾದೀತೆನ್ನುವುದಕ್ಕೆ ಅನುಮಾನವೇನೂ ಕಾಣುವುದಿಲ್ಲ.

ಆತ್ಮಶಕ್ತಿ.

ಮನುಷ್ಯನು ದೇಹ, ಮನಸ್ಸು, ಆತ್ಮಗಳಿಂದೊಡಗೂಡಿದವನಾಗಿದ್ದಾನೆ ಈ ಮೂರರಲ್ಲಿ ಯಾವದಾದರೂ ಒಂದು ಇಲ್ಲದ ಪ್ರಾಣಿಯು ಮನುಷ್ಯವರ್ಗಕ್ಕೆ ಸೇರಿದ್ದಾಗಿ ಎಣಿಕೆಮಾಡಲಾರದು. ದೇಹವಿಲ್ಲದ ಮನುಷ್ಯನು ಈ ಲೋಕದಲ್ಲಿ ಇಲ್ಲ. ಮನಸ್ಸು ಅಥವಾ ಬುದ್ಧಿ ಇಲ್ಲದವನು ಮನುಷ್ಯಾಕೃತಿಯುಳ್ಳ ಮೃಗನಾಗಿದ್ದಾನೆ ದೇಹ ಮನಸ್ಸುಗಳೆರಡನ್ನು ತನ್ನ ವಶದಲ್ಲಿಟ್ಟುಕೊಂಡು ತನ್ನಿಷ್ಟ ಬಂದಂತೆ ಅವುಗಳನ್ನು ನಡಿಸುವ ಅಂತರ್ಯಾಮಿಯೇ ನಿಜ ಮನುಷ್ಯನು ಮನುಷ್ಯನು ತನ್ನ ವಶಕ್ಕೆ ಕೊಡಲ್ಪಡುವ ದೇಹ, ಮನಸ್ಸು, ಆತ್ಮಗಳನ್ನು ತಕ್ಕ ಆರೋಗ್ಯವಾದ ಸ್ಥಿತಿಯಲ್ಲಿಟ್ಟು ಕಾಪಾಡುತ್ತಾ ತಕ್ಕ ಕೃಷಿ ಅಥವಾ ವ್ಯವಸಾಯದ ಮೂಲಕ ಅಭಿವೃದ್ಧಿಪಡಿಸಿಕೊಳ್ಳುತ್ತಾ ಇರಬೇಕಾದ ಕರ್ತವ್ಯಬದ್ಧನಾಗಿದ್ದಾನೆ ದೇಹವು ತಕ್ಕ ಆರೋಗ್ಯ, ಬಲ, ಅಭಿವೃದ್ಧಿಗಳನ್ನು ಹೊಂದುತ್ತಿರುವ ಹಾಗೆ ಅದಕ್ಕೆ ಅವಶ್ಯವಾದ ಆಹಾರ, ಪಾನ, ವ್ಯಾಯಾಮ, ನಿದ್ರೆ ಮುಂತಾದವುಗಳನ್ನು ಕಾಲಕಾಲಕ್ಕೆ ಸರಿಯಾಗಿ ಒದಗಿಸಿಕೊಡುತ್ತಿರಬೇಕು ಇದು ತಕ್ಕವಯಸ್ಸಿಗೆ ಬಲ್ಲರಿಗೆ ವೇದ್ಯವಾಗಿರುವದರಿಂದಲೂ ಗೊತ್ತಿಲ್ಲದ ಚಿಕ್ಕವರ ಸಂರಕ್ಷಣೆಗೆ ತಂದೆತಾಯಿಗಳೂ ಪೋಷಕರೂ ಇರುವದರಿಂದಲೂ ಇದರ ವಿಷಯದಲ್ಲಿ ಹೆಚ್ಚಾಗಿ ಬರೆಯುವದು ಅಗತ್ಯವಿಲ್ಲ ಮನಸ್ಸು ಅಥವಾ ಬುದ್ಧಿಯ ಅಭ್ಯಾಸಕ್ಕೆ ತಕ್ಕ ಪಾಠಶಾಲೆಗಳು ದೇಶದ ಸಕಲ ಕಡೆಗಳಲ್ಲಿಯೂ ವ್ಯಾಪಿಸುತ್ತ ಬರುವದನ್ನು ನೋಡಿ ಬಹಳ ಸಂತೋಷವನ್ನು ಪಡುತ್ತೇವೆ ಬಾಲಬಾಲೆಯರು ಈ ವಿದ್ಯಾಶಾಲೆಗಳಿಗೆ ಹೋಗಿ ತಕ್ಕ ಶಿಕ್ಷಣೆಯಿಂದ ತಮ್ಮ ಬುದ್ಧಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು

ಆದರೆ ಬುದ್ಧಿಯೂ ದೇಹವೂ ಎಷ್ಟೇ ಆರೋಗ್ಯ ಬಲಾಭಿವೃದ್ಧಿಯುಳ್ಳವುಗಳಾಗಿದ್ದಾಗ್ಯೂ ಅವುಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ತಕ್ಕ ಪ್ರಯೋಜನಕ್ಕೆ ಬಳಸುವ ಅಂತರಾತ್ಮನು ತಕ್ಕ ಆರೋಗ ಬಲಗಳುಳ್ಳವನಾಗಿಲ್ಲದಿದ್ದರೆ ಅವುಗಳಿಂದ ಪ್ರಯೋಜನವೂ ಲಾಭವೂ ಆಗುವದಕ್ಕೆ ಬದಲಾಗಿ ಹಾನಿಯೂ ನಷ್ಟವೂ ಮಾತ್ರ ಪ್ರಾಪ್ತಿಸುವವು ಮಲ್ಲನು ಒಬ್ಬನು ಕಾಯಪುಷ್ಟಿಯಲ್ಲಿ ಸ್ಯಾಂಡೋ ಜಟ್ಟಿಗೆ ಸಮಾನನಾದ ಬಾಹುಬಲವುಳ್ಳವನಾಗಿದ್ದಾನೆ ಇದು ಒಳ್ಳೆಯದು ಯಾಕೆಂದರೆ ಸಾಧಾರಣವಾಗಿ ಇತರ ಮನುಷ್ಯರಿಗೆ ಅಸಾಧ್ಯವಾದ ಕೆಲಸಗಳನ್ನು ಅವನು ಮಾಡಿ ನೆರವೇರಿಸುವನು ಆದರೆ ಅವನು ರಾವಣನ ಹಾಗೆ ಬಲಹೀನರನ್ನು ಪೀಡಿಸುವದಕ್ಕೂ ರೋಗಿಗಳನ್ನೂ ಅಬಲೆಯರನ್ನೂ ಹಿಂಸಿಸುವದಕ್ಕೂ ತನ್ನ ಬಲವನ್ನು ಪ್ರಯೋಗಿಸಿದರೆ ಗತಿಯೇನು ? ಸೂಕ್ಷ್ಮಬುದ್ಧಿಯುಳ್ಳವನು ತನ್ನ ಯುಕ್ತಿಯನ್ನು ಪ್ರಯೋಗಿಸಿ ಚಮತ್ಕಾರವಾದ ಎಂಜಿನ್, ಬೈಸಿಕಲ್, ಮೋಟಾರ್ ಕಾರ್ ಮುಂತಾದ ಯಂತ್ರಗಳನ್ನು ಕಲ್ಪಿಸಿ ನೂರಾರು ಜನರಿಂದ ಅಸಾಧ್ಯವಾದ ಕಾರ್ಯಗಳನ್ನು ಸುಲಭವಾಗಿ ಮಾಡುವರು. ಆದರೆ ಅವರು ತಮ್ಮ ಬುದ್ಧಿಯನ್ನು ಕುಯುಕ್ತಿಯಂತ್ರಗಳನ್ನು ನಡೆಸುವುದಕ್ಕೆ ಪ್ರಯೋಗಿಸಿದರೆ ಯುಕ್ತಿಹೀನರ ಪಾಡೇನು ? ಹೀಗಿರುವದರಿಂದ ಯಾವ ಮನುಷ್ಯನೇ ಆಗಲಿ ಅವನ ಪರಾಕ್ರಮವೂ ಬುದ್ಧಿಯೂ ಎಷ್ಟೇ ಉನ್ನತವಾಗಿರಲಿ ಅವನು ತನ್ನ ಬುದ್ಧಿ, ಬಲ, ಪರಾಕ್ರಮಗಳನ್ನು ತನ್ನ, ಮತ್ತು ತನ್ನ ಬಂಧುವರ್ಗದವರ, ಮತ್ತು ಸಾಮಾನ್ಯವಾಗಿ ಲೋಕದಲ್ಲಿ ಬಡಬಗ್ಗರ ರೋಗಿಗಳ ಪ್ರಯೋಜನಾರ್ಥವಾಗಿ ಬಳಸದೇ ಹೋದರೆ ಅವನನ್ನು ಮನುಷ್ಯನೆನ್ನಕೂಡದು. ಅವನಿಗೆ ಆನೆಯಂಥಾ ದೃಢಕಾಯವೂ ಸಿಂಹದಂಥಾ ಪರಾಕ್ರಮವೂ ಇದ್ದರೆ ಅವನನ್ನು ರಾಕ್ಷಸನೆಂತ ಕರಿಯಿರಿ

ಅವನು ಬೃಹಸ್ಪತಿಯ ಹಾಗೆ ಬುದ್ಧಿಯುಳ್ಳವನಾಗಿ ಅತಿ ಚಮತ್ಕಾರವಾದ ಯಂತ್ರಗಳನ್ನು ರೂಢಿಸಿದರೆ ಅವನನ್ನು ಭೂತ ಅಥವಾ ಪಿಶಾಚಿಯಂತ ಕರೆಯಬಹುದು ಆದರೆ ಅವನಲ್ಲಿರುವ ಶಕ್ತಿಯುಕ್ತಿಗಳನ್ನು ಲೋಕೋಪಕಾರಗಳಾದ ಪ್ರಯೋಜನಕ್ಕೆ ಬಳಸಿದರೆ ಮಾತ್ರ ಅವನನ್ನು ಮನುಷ್ಯನೆಂತ ಕರೆಯಬಹುದು ಮನುಷ್ಯನೆಂಬ ಹೆಸರು ಶ್ರೇಷ್ಠವಾದದ್ದು. ಅದನ್ನು ಬರೀ ಬುದ್ಧಿಗಳುಳ್ಳ ಪ್ರಾಣಿಗೆ ಕೊಡುವವಕ್ಕಾಗುವದಿಲ್ಲ. ಅದಲ್ಲದೆ ಒಬ್ಬನು ದೊಡ್ಡಮನುಷ್ಯನೆನ್ನಿಸಿಕೊಳ್ಳಬೇಕಾದರೆ ಅವನು ವಿಶೇಷ ತರವಾದ ಬುದ್ಧಿಬಲಗಳುಳ್ಳವನಾಗಿದ್ದು ಅವೆಲ್ಲವುಗಳನ್ನು ಲೋಕದ ಮಂದಿಯ ಹಿತಕ್ಕಾಗಿ ಅನವರತವೂ ಪ್ರಯೋಗಿಸುತ್ತಿರಬೇಕು.

ನೆಪೋಲಿಯನ್ ಎಂಬ ಮಹಾ ಯುದ್ಧವೀರನಿದ್ದನು. ಇವನು ಸೈನ್ಯವನ್ನು ಯುದ್ಧಕ್ಕೆ ನಡಿಸುವದರಲ್ಲಿಯೂ ಯುದ್ಧ ಮಾಡುವದರಲ್ಲಿಯೂ ಅತಿ ಪರಾಕ್ರಮಶಾಲಿಯಾಗಿದ್ದು ಅನೇಕ ರಾಜ್ಯಗಳನ್ನು ಗೆದ್ದನು. ಅವನ ಧೈರ್ಯವು ಅಸಾಧಾರಣವಾದದ್ದು ಅವನು ಅಷ್ಟು ಕೆಡಕನೂ ಅಲ್ಲ. ಆದರೂ ಅವನನ್ನು ದೊಡ್ಡಮನುಷ್ಯನೆಂತ ಹೇಳುವದಕ್ಕೆ ಹಿಂದೆಗೆಯುತ್ತಾರೆ. ಯಾಕಂದರೆ ಅವನು ತನ್ನ ಬುದ್ಧಿ ಬಲಗಳನ್ನು ಲೋಕದ ಹಿತಕ್ಕಾಗಿಯಲ್ಲ. ತನ್ನ ದುರಾಶೆಯನ್ನು ತೃಪ್ತಿಪಡಿಸಿಕೊಳ್ಳುವದಕ್ಕೂ ಚಕ್ರವರ್ತಿಯೆಂಬ ಕೀರ್ತಿಯನ್ನು ಪಡೆಯುವದಕ್ಕೂ ಪ್ರಯೋಗಿಸಿದನು ಸಾರಾಂಶವೇನಂದರೆ ದೇಹವನ್ನೂ ಬುದ್ಧಿಯನ್ನೂ ಬೆಳಸಿ ಬಲಪಡಿಸುವದಕ್ಕೆ ನಾವು ತಕ್ಕ ಅಭ್ಯಾಸಗಳನ್ನು ಪ್ರಯೋಗಿಸಿ ಸಾಧಿಸುವ ಹಾಗೆ ಆತ್ಮಕ್ಕೆ ಸತ್ಪ್ರವರ್ತನೆಯನ್ನೂ ನೀತಿ ಮಾರ್ಗವನ್ನೂ ಪರೋಪಕಾರದ ಸಾಧನೆಯನ್ನೂ ಅಭ್ಯಾಸಮಾಡಬೇಕು. ಯಾಕಂದರೆ ಈ ಮಕ್ರೋಧಾದಿ ನಮ್ಮ ಷಡ್ವೈರಿಗಳು ಪ್ರಚಂಡ ಮೂರ್ತಿಗಳಂತೆ ಇರುತ್ತವೆ. ಅವುಗಳನ್ನು ಜೈಸಿ ನಮ್ಮ ಅಧೀನದಲ್ಲಿ ಅವುಗಳನ್ನಿಟ್ಟುಕೊಳ್ಳುವದು ಸುಲಭಸಾಧ್ಯವಲ್ಲ. ಅವುಗಳನ್ನು ತಮ್ಮಿಷ್ಟದಂತೆ ಹೋಗಲಿಯೆಂದು ಬಿಟ್ಟರೆ ಬಹಳ ಅನರ್ಥಗಳುಂಟಾಗುವವು. ನಮ್ಮ ಬಾಳು ಮಹಾಸಾಗರದ ಮೇಲೆ ಯಾನಮಾಡುವ ಹಡಗಿಗೆ ಸಮಾನವಾಗಿದೆ. ಆ ಹಡಗು ಬಿರುಗಾಳಿಯ ಬಡಿತಕ್ಕೆ ಸಿಕ್ಕಿ ಅಲ್ಲೋಲಕಲ್ಲೋಲವಾಗಿರುವ ಸಮುದ್ರದಲ್ಲಿ ಮುಳುಗಿ ನಾಶವಾಗದ ಹಾಗೆ ತೀರಕ್ಕೆ ನಡಿಸಿಕೊಂಡು ಹೋಗಬೇಕಾದರೆ ಸಮುದ್ರಯಾನವನ್ನು ಮಾಡಿ ಪಳಗಿದ ನಾವಿಕನು ಆ ಹಡಗನ್ನು ನಡಿಸುತ್ತಿರಬೇಕಾದುದು ಅಗತ್ಯವಲ್ಲವೆ ?

ಜೀವಿತಕಾಲವೆಂಬ ನಮ್ಮ ಬಾಳುವೆಯಲ್ಲಿ ನಾವು ಅಪಾಯಕ್ಕೂ ನಾಶನಕ್ಕೂ ತಪ್ಪಿಸಿಕೊಂಡು ದೇವನ್ನು ಸೇರಬೇಕಾದರೆ ಪ್ರತಿಯೊಬ್ಬನೂ ಸದ್ಗುಣಸದ್ನಡತೆಯನ್ನು ಬಹು ಆಸಕ್ತಿಯಿಂದ ಸತತವೂ ಸಾಧಿಸುತ್ತಿರಲಿ. ಸತ್ಯವೇದವು ಹೇಳುವದೇನಂದರೆ,—ಮನುಷ್ಯನಿಗೆ ಅತ್ಯಗತ್ಯವಾದದ್ದು ಒಂದೇ ಒಂದು. ಅದೇನು ? ದ್ರವ್ಯವೋ ? ಬಲವೋ ? ವಿದ್ಯೆಯೋ ? ಚಮತ್ಕಾರವೋ ? ಕೀರ್ತಿಯೋ ? ಸ್ವಾತಂತ್ರ್ಯವೋ ? ಇವ್ಯಾವವೂ ಅಲ್ಲಗಳೆಯತಕ್ಕವುಗಳಲ್ಲ ಆದರೆ ಜೀವಮಾನವೆಂಬ ಯಾನಕ್ಕೆ ಅತ್ಯಗತ್ಯವಾದುವಲ್ಲ ಆರೋಗ್ಯ ಭಾಗ್ಯಕ್ಕೆ ಹೆಯಾವ ಭಾಗ್ಯವೇ ಇಲ್ಲವೆನ್ನುವರು ಸಂದೇಹವಿಲ್ಲ. ಆದರೆ ಒಂದೊಂದು ವೇಳೆ ಅದೂ ಅತ್ಯಂತ ಅಗತ್ಯವಾದುದಲ್ಲ. ಸದ್ಗುಣ ಸದ್ನಡತೆಯೊಂದೇ ಜೀವಮಾನವೆಂಬ ಯಾನದಲ್ಲಿ ಮಾನವನೆಂಬ ಹಡಗಿಗೆ ಭದ್ರಸ್ಥಾಯಿಯಾದ ಲಂಗರವಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಶ್ರೀಮನ್ ಮಹಾರಾಜರವರು ಅರಮನೆಯ ದಾಣಿವಾಸದವರ ಸಮೇತ ತಾ. ೪ ನೇ ಸೋಮವಾರ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವವರಾಗಿದಾರೆ

ಮೂರನೇ ಮಹಾರಾಜ ಕುಮಾರರ್ತಿಯವರು ಸಂಸಾರ ಸಮೇತ ನಿನ್ನೆ ಮಧ್ಯಾಹ್ನ ೮ ನರಸೀಪುರದ ತಾಲ್ಲೂಕು ಕಸಬಿಗೆ ದಯಮಾಡಿದರು. ಅವರು ಅಲ್ಲಿ ಎರಡು ದಿನ ಇದ್ದು ನಾಳೆ ದಿನವಾರ ವಾಪಸು ಬರುವವರಾಗಿದಾರೆ.

ಒಬ್ಬ ಬಾತ್ಮಿದಾರರಿಂದ —ಬೆಂಗಳೂರು ಸಿಟಿ ದರ್ಜಾಪೇಟೆಯಲ್ಲಿ ಕಳೆದ ಶನಿವಾರ ರಾತ್ರಿ ಮ್ಯ, ಮಾಲೂರು ಬಾಳಾಜಿನಿಂಗ್ ಎಂಬ ದಾಸರು ಹರಿಕಥೆಯನ್ನು ಬಹು ಇಂಪಾಗಿ ಹೇಳಿದರು ಅನೇಕರು ಕೇಳಿ ಸಂತೋಷಪಟ್ಟರು

ರಾಜಧಾನಿಯ ಮುಖ್ಯವಾದ ದೊಡ್ಡಬೀದಿಗಳ ಎರಡು ಕಡೆಗಳಲ್ಲೂ ನೇತ್ರಾನಂದಕರವಾದ ಸಾಲುಗಿಡಗಳನ್ನು ಹಾಕಿ ಸಾಕಿ ಬೆಳಸುವುದಕ್ಕೋಸ್ಕರ 10 ರೂಪಾಯಿನ ಒಬ್ಬ ತಲಬುದಾರನನ್ನು ನೇಮಕ ಮಾಡಬೇಕೆಂದು ಮ್ಯುನಿಸಿಪಲ್ ಕೌನ್ಸಿಲರುಗಳು ಒಪ್ಪಿಕೊಂಡಿದಾರೆ.

ಚೆನ್ನರಾಯಪಟ್ಟಣ ತಾಲ್ಲೂಕು ಬೇಡಮಂಗಲದ ಬಳಿ ಕನ್ಯಾಕುಮಾರಿಯಲ್ಲಿ ಈ ತಿಂಗಳು 10 ನೇ ತಾರೀಖಿನ ದಿ ನಡೆಯುವ ರಥೋತ್ಸವ ಮತ್ತು ಜಾತ್ರೆ ಕಾಲದಲ್ಲಿ ದನಗಳ ಪ್ರದರ್ಶನವನ್ನು ಮಾಡಬಹುದೆಂದು ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆಂದೂ, ಉತ್ತಮವಾದ ದನಗಳಿಗೆ ಬಹುಮಾನ ಕೊಡಲ್ಪಡುವುದೆಂದೂ ತಿಳಿಯಬರುತ್ತದೆ

ಕಳೆದ ಭಾನುವಾರ ಲಾರ್ಡ್ ಮಿಂಟೊ ಪ್ರಭುಗಳು ಸ್ಕಾಟ್ಲೆಂಡಿನಲ್ಲಿ ಕಾಲವಾದರೆಂಬ ದುಃಖಕರವಾದ ವರ್ತಮಾನವನ್ನು ಪ್ರಕಟಿಸಲು ವಿಷಾದವಾಗುತ್ತದೆ. ಇವರು ಕಳೆದ 1905 ರಿಂದ 1910 ನೇ ಇಸವಿ ವರೆಗೆ ಹಿಂದುಸ್ಥಾನದ ವೈಸ್‌ರಾಯ್ ಪದವಿಯಲ್ಲಿದ್ದು, ಈ ರಾಷ್ಟ್ರದ ಶ್ರೇಯೋಭಿವೃದ್ಧಿಯನ್ನು ಬಯಸಿ ರಾಜ್ಯಭಾರದ ಕ್ರಮಗಳಲ್ಲಿ ಬಹು ಹಿತಕರವಾದ ಬದಲಾವಣೆಗಳನ್ನು ಮಾಡಿಟ್ಟು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಂಡರು

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಡಿಸ್ಟ್ರಿಕ್ಟ್ ಆಫೀಸ್ ಮೈದಾನದಲ್ಲಿ ವಿದ್ಯಾರ್ಥಿಗಳ ಅಂಗಸಾಧನಾ ಪಂದ್ಯಗಳು ಬಹು ಉತ್ಸಾಹಕರವಾಗಿ ನಡಿಸಲ್ಪಟ್ಟವು ಶ್ರೀಮನ್ ಯುವರಾಜರವರು ದಯಮಾಡಿ ಪಂದ್ಯಗಳಲ್ಲಿ ಗೆದ್ದ ಬಾಲಕರಿಗೆ ಬಹುಮಾನಗಳನ್ನು ದಯಪಾಲಿಸಿ, ಬಾಲಕರು ವಿದ್ಯೆ ಕಲಿಯುವುದೊಂದನ್ನೇ ಮುಖ್ಯವೆಂದು ಎಣಿಸದೆ ಕಾಯಪುಷ್ಟಿಗಾಗಿ ಕಸರತ್ತನ್ನೂ ಸಾಧನೆಯನ್ನೂ ಮಾಡುತ್ತಾ ಬರಬೇಕಾದದ್ದು ಪರಮಾವಶ್ಯಕವೆಂಬದಾಗಿ ಹಿತೋಕ್ತಿಯನ್ನು ಅಪ್ಪಣೆಕೊಡಿಸಿದರು.

ಕಳೆದ ಗುರುವಾರ ಸಾಯಂಕಾಲ ಶ್ರೀಮನ್ ಯುವರಾಜರವರು ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ನಡೆದ ವಿದ್ಯಾವರ್ಧಕಸಭೆಯ ಅಧ್ಯಕ್ಷತೆಯನ್ನು ವಹಿಸಿ, ಪಾಠಗಳಲ್ಲೂ ಅಂಗಸಾಧನೆಯಲ್ಲೂ ಮೇಲ್ಮೆಯನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸಿ, ಆ ಹೈಸ್ಕೂಲಿನ ಪ್ರವರ್ತಕರನ್ನು ಕುರಿತು ಪ್ರಸ್ತಾಪಮಾಡಿ, ಆಗಿನ ಕಾಲದಲ್ಲಿ ವಿದ್ಯಾಪ್ರೋತ್ಸಾಹಕ್ಕೆ ಮರಿಮಲ್ಲಪ್ಪನವರು ಧರ್ಮಫಂಡನ್ನು ಕೊಟ್ಟಿದ್ದು ಬಹು ಅಪೂರ್ವವೆಂದೂ, ಅದರ ದೆಸೆಯಿಂದ ಸಾವಿರಾರು ಬಾಲಕರು ಪ್ರತಿವರುಷವೂ ವಿದ್ಯೆ ಕಲಿತು ಶ್ರೇಯಸ್ಸನ್ನು ಪಡೆಯಲು ಮಹದುಪಕಾರವಾಯಿತೆಂದೂ, ವಿದ್ಯಾರ್ಥಿಗಳು ವಿದ್ಯೆಯನ್ನೇ ಪ್ರಾಧಾನ್ಯವಾಗಿ ಎಣಿಸದೆ ಸದ್ಗುಣ ಸಚ್ಚರಿತ್ರೆಗಳನ್ನು ಅವಲಂಬಿಸಿ, ದೊಡ್ಡವರಾದ ಮೇಲೆ ತಾವು ಹುಟ್ಟಿದ ಮನೆಗಳಿಗೂ, ವಿದ್ಯೆ ಕಲಿತ ಪಾಠಶಾಲೆಗಳಿಗೂ, ತಮ್ಮ ಜನ್ಮಭೂಮಿಗೂ ಒಳ್ಳೇ ಯಶಸ್ಸನ್ನು ತರಬೇಕೆಂದು ಹಾರೈಸಿದರು

ಕಳೆದ ಭಾನುವಾರ ಬೆಳಿಗ್ಗೆ ಶ್ರೀ ಶಿವಗಂಗಾಮಠದ ಶ್ರೀ ಸ್ವಾಮಿಗಳು ರಾಜಧಾನಿಗೆ ದಯಮಾಡಿದರು ಅರಮನೆ ಕಂಟ್ರೋಲರವರೂ, ಅಧಿಕಾರಿಗಳೂ, ಪುರಪ್ರಮುಖರೂ ಶ್ರೀ ಸ್ವಾಮಿಗಳನ್ನು ಪಟ್ಟಣದ ಬಾಗಿಲಲ್ಲಿ ಕಾದಿದ್ದು ಎದುರುಗೊಂಡು, ಅರಮನೆಯ ಮರ್ಯಾದೆಗಳ ಸಮೇತ ರಾಜಬೀದಿಯಲ್ಲಿ ಮೆರವಣಿಗೆ

...ಕರೆದುತಂದರು ಗೌರವಾರ್ಥವಾದ 11 ತೋಪುಗಳು ಹಾರಿಸಲ್ಪಟ್ಟವು ...ಸ್ವಾಮಿಗಳನ್ನು ಮಹಾರಾಜರವರು ಅರಮನೆಗೆ ಕರೆಸಿಕೊಂಡು ...ದಯಮಾಡಿ ಭೋಜನಕ್ಕೆ ...ವುಗಳು ಬೆಳೆದ ನಂತರ ಅವರಿಗಾಗಿ ನಿರ್ಮಿಸಿದ್ದ ...ಕ ಕಾಲೇಜಿಗೆ ಕಳುಹಿಸಿಕೊಟ್ಟರು ನೆನ್ನೆ ಬೆಳಗ್ಗೆ ಅರಮನೆಗೆ ಶ್ರೀ ಸ್ವಾಮಿ ...ದಯಮಾಡಿ ಮಹಾರಾಜರ ಆತಿಥ್ಯವನ್ನು ಸ್ವೀಕರಿಸಿ, ಬಿಲ್ವಪತ್ರೆಗಳು ಸಹಿ ...ಶ್ರೀ ಸ್ವಾಮಿಗಳು ಈ ವಾರ ನಗರದಲ್ಲಿ ಒಂದೆರಡು ಉಪನ್ಯಾಸಗಳನ್ನು ...ಪರಪ್ರಮುಖರುಗಳು ಮಾಡುವ ಪಾದಪೂಜಾದಿ ಆತಿಥ್ಯಗಳನ್ನು ಸ್ವೀಕ ...ಮುಂದಿನವಾರ ರಾಜಧಾನಿಯಿಂದ ನಂಜನಗೂಡಿಗೆ ದಯಮಾಡುತ್ತಾರೆಂದು ...ಕ್ತೀವೆ.

ನೀಲಗಿರಿ ಬೆಟ್ಟಗಳು.

ಈ ಬೆಟ್ಟಗಳು ದೂರಕ್ಕೆ ನೀಲಿ ಬಣ್ಣದ ಹಾಗೆ ಕಾಣುವುದರಿಂದ ಅದಕ್ಕೆ ...ಹೆಸರು ಕೊಟ್ಟಂತೆ ಕಾಣುವುದು ನಮ್ಮ ಮೈಸೂರಿನ ಪ್ರಯಾಣಿಕರು ಅಲ್ಲಿಂದ ...ಸುಮಾರು 11½ ಗಂಟೆ ಮೈಯಿಲಿನಲ್ಲಿ ಹೊರಟರೆ ಅದೇ ಸಾಯಂಕಾಲ 6 ಗಂಟೆ ...ಬೆಂಗಳೂರು ತಲಪುವರು ಕೆಲವು ಗಂಟೆಗಳ ಕಾಲ ಸ್ಟೇಷನ್ನಲ್ಲಾಗಲಿ ಅಥ ...ಅದಕ್ಕೆ ಹತ್ತಿರದಲ್ಲಿರುವ ತಮ್ಮ ನೆಂಟರಮನೆಗಳಲ್ಲಾಗಲಿ ಕಾಲಕಳೆದು ...9 ಗಂಟೆ 20 ನಿಮಿಷಕ್ಕೆ ಮದ್ರಾಸಿಗೆ ಹೋಗುವ ರೈಲನ್ನು ಹತ್ತಿದಲ್ಲಿ ...12 ಗಂಟೆ ವೇಳೆಗೆ ಜೋಲಾರಪೇಟೆ ಎಂಬ ಸ್ಟೇಷನ್ನನ್ನು ಸೇರುವರು. ...ಗಾಡಿಯನ್ನು ಬದಲಾಯಿಸಿ ಎಸ್. ಐ ಆರ್ ಎಂಬ ಕಂಪನಿಯ ರೈಲಿ ...ಹೊರಡು ಸ್ಟೇಷನ್ನನ್ನು ದಾಟಿ ಪೋದನೂರು ಸ್ಟೇಷನ್ ಜಂಕ್ಷನ್ ...ಬೆಳಗ್ಗೆ ಸುಮಾರು 7 ಗಂಟೆಗೆ ತಲಪಿ, ಅಲ್ಲಿಂದ ಹೊರಟು ಸುಮಾರು 9½ ...ಮೇಟುಪಾಳಯಂ ಎಂಬ ಸ್ಟೇಷನ್ಗೆ ತಲಪಿಸುವರು ಅಲ್ಲಿಂದ ಸುಮಾ ...ಗಂಟೆವೇಳೆಗೆ ಹೊರಡು ನೀಲಗಿರಿ ರೈಲಿಗೆ ಬದಲಾಯಿಸಿಕೊಳ್ಳಬೇಕಾ ...ಈ ನೀಲಗಿರಿ ರೈಲಿಗೆ ಇಂಜನನ್ನು ಸೇರಿಸಿ, ಸುಮಾರು 3 ಅಥವಾ ...ಗಾಡಿಗಳನ್ನು ಮಾತ್ರ ಜಂಟಿಸುವರು ಈ ಗಾಡಿಗಳಲ್ಲಿ ಪ್ರಯಾಣಿಕರು ಅತ್ಯಂ ...ಸುಂದರವಾದ ನೀಲಗಿರಿ ಬೆಟ್ಟಗಳ ನೋಟವನ್ನು ನೋಡುವಂತೆ ಗಾಡಿಗಳ ...ದ್ವಾರಗಳನ್ನೂ ಖುಲ್ಲಾಗಿ ತೆರೆದಿರುವಂತೆ ಮಾಡಿರುವುದಲ್ಲದೆ ಕ್ಲಾರ್ಕ್ ...ಎಂಬ ಬೆಟ್ಟಿಯ ಘಟ್ಟವನ್ನು ಇಳಿಬಿಟ್ಟಿರುವರು ಪ್ರಯಾಣಿಕರು ತಮ್ಮ ...ಸುತ್ತ ಈ ಬೆಟ್ಟದ ಪರದೆಗಳನ್ನು ಇಳಿಬಿಟ್ಟುಕೊಳ್ಳಬಹುದು, ಅಥವಾ ...ಬೇಕಾದ ಸುರುಳಿ ಸುತ್ತಿ ಕಟ್ಟಿಕೊಳ್ಳಬಹುದು ಮೇಟುಪಾಳಯದಿಂದ ಉದಕ ...ಮಂಡಲದ ವರೆಗೂ ಹೋಗುವ ನೀಲಗಿರಿ ರೈಲ್ ರಸ್ತೆಯು ಉದ್ದ 22 ಮೈಲಿ ...ಇರುವುದು ಸುಂದರವಾದ ಈ ಬೆಟ್ಟಗಳ ನೋಟವು ಮೇಟುಪಾಳಯದ ...ಸ್ಟೇಷನಿಂದಲೇ ಪ್ರಾರಂಭವಾಗುತ್ತದೆ ರೈಲು ಗಾಡಿಗಳನ್ನು ಬೆಟ್ಟಗಳ ...ಮೇಲಿನ ಪಕ್ಕಿಸಮೀಪಗಿರುವುದರಿಂದ ಇಂಜನ್ ಗಾಡಿಯು ಹಿಂದಲಿಂದ ...ಗಾಡಿಗಳನ್ನು ನೂಕಿಕೊಂಡು ಹೋಗುವುದು ಇಲ್ಲಿನ ರೈಲ್ ರಸ್ತೆಯು ವಿಶೇಷ ...ವಾದದ್ದು, ಎರಡು ರೈಲ್ ಕಂಬಿಗಳ ಮಧ್ಯದಲ್ಲಿ ಹಲ್ಲುಗಳಂತಿರುವ ಮತ್ತೊಂ ...ಕಂಬಿಯನ್ನು ಕೂನ್ನೂರು ಸ್ಟೇಷನ್ ವರೆಗೂ ಹಾಕಿರುವುದು ಈ ರೈಲಿನಲ್ಲಿ ...ಕುಳಿತುಕೊಂಡ ಪ್ರಯಾಣಿಕರಿಗೆ ರೈಲನ್ನು ಬೆಟ್ಟದಲ್ಲಿ ಹತ್ತಿಸುವುದೇ, ಅಲ್ಲಲ್ಲಿ ...ವಿಶೇಷವಾಗಿ ಮನೋಹರವಾದ ಗಿಡವಿಶೇಷಗಳಿಂದ ಕೂಡಿರುವ, ಸುತ್ತಲೂ ...ಇರುವ ಬೆಟ್ಟದ ಮೇಲ್ಭಾಗಗಳ ಕೆಲವು ಪ್ರದೇಶಗಳಲ್ಲಿ ಬೆಟ್ಟವನ್ನು ...ಕಡಿದು ರೈಲು ರಸ್ತೆಯು ಹಾಯುವುದೂ ಚೋದ್ಯವಾಗಿ ಕಾಣುವುದಲ್ಲದೆ ...ಇಂತಹ ಜನಗಳ ಇಂಜಿನಿಯರಿಂಗ್ ಕೆಲಸದ ನಿಪುಣತ್ವವು ಗೋಚರವಾಗು ...ವುದು. ಮೇಟುಪಾಳಯದಿಂದ ಸಮುದ್ರ ಮಟ್ಟಕ್ಕೆ 1,250 ಅಡಿ ಎತ್ತರವಾದ ...ಯಾವ ಸ್ಟೇಷನ್ ಸಿಕ್ಕುವುದು ಸ್ಟೇಷನ್ನಿಂದ ಹೊರಟು ಗಾಡಿಯಲ್ಲಿ ಕುಳಿತು ...ಕೊಂಡು ನೋಡಿದರೆ ಒಂದು ಪಾರ್ಶ್ವ ಅತ್ಯಂತ ವಿಸ್ತಾರವಾದ ಅಡವಿಮಯದ ...ಬಯಲು ಕಣ್ಣಿಗೆ ರಮ್ಯವಾಗಿ ಕಾಣುವುದು ಕಲ್ಲಾರ ಸ್ಟೇಷನ್ನಿಂದ ...ಸಮುದ್ರಮಟ್ಟಕ್ಕೆ 2,100 ಅಡಿ ಎತ್ತರವುಳ್ಳ ಅಡ್ಡರ್ಲೀ ಸ್ಟೇಷನ್ಗೆ ಬರುವೆವು ...ಅಲ್ಲಿಂದ 3,800 ಅಡಿ ಎತ್ತರವುಳ್ಳ ಹಿಲ್ಗ್ರೋವ್ ಸ್ಟೇಷನ್ನನ್ನೂ, 1,612 ...ಎತ್ತರವುಳ್ಳ ರನ್ನಿಮೇಡ್ ಸ್ಟೇಷನ್ನನ್ನೂ, 5,072 ಅಡಿ ಎತ್ತರವುಳ್ಳ ...ಕಟೇರಿ ರೋಡ್ ಎಂಬ ಸ್ಟೇಷನ್ನನ್ನೂ ದಾಟಿ 5,616 ಅಡಿ ಎತ್ತರವುಳ್ಳ ...ಕೂನ್ನೂರು ಸ್ಟೇಷನ್ಗೆ ಬರುವೆವು ಮಾರ್ಗದಲ್ಲಿ ಕೆಲವು ಪ್ಲಾಂಟರುಗಳ ಬಿಡದಿ ...ಮನೆಗಳೂ, ಟೀ ಮತ್ತು ಕಾಫಿ ಗಿಡಗಳ ತೋಟಗಳೂ ಕಾಣಿಸುವುವು ...ಕೂನ್ನೂರು ಪಟ್ಟಣದಲ್ಲಿ ಸುಮಾರು 1-5 ಸಾವಿರ ಮನೆಗಳಿರಬಹುದು ಮನೆ ...ಗಳು ಅಲ್ಲಲ್ಲಿ ಗುಡ್ಡಗಳ ಮೇಲಿದ್ದು ಕೆಳಗಿಂದ ನೋಟಕರಿಗೆ ಅಲ ಕಾರವಾಗಿ ...ಕಾಣುವು. ಸ್ಟೇಷನ್ಗೆ ಸುಮಾರು 1 ಮೈಲಿ ದೂರದಲ್ಲಿ ಪ್ಯಾಸ್ಚರ್ ಇನ್ ...ಸ್ಟಿಟ್ಯೂಟ್ ಆಫ್ ಸದರ್ನ್ ಇಂಡಿಯಾ ಎಂಬ ಆಸ್ಪತ್ರೆಯು ಇರುವುದು ...ಈ ಆಸ್ಪತ್ರೆಯಲ್ಲಿ ಹುಚ್ಚು ನಾಯಿ ಮೊದಲಾದ ಮೃಗಗಳು ಕಚ್ಚಿದುದಕ್ಕೆ ಚಿಕಿತ್ಸೆ ...ಯನ್ನು ಮಾಡುತ್ತಾರೆ ನಮ್ಮ ಇಂಡಿಯಾ ದೇಶದಲ್ಲಿ ಈ ರೀತಿ ಹುಚ್ಚು ಮೃಗ ...ಗಳಿಂದ ಕಚ್ಚಲ್ಪಟ್ಟವರ ಚಿಕಿತ್ಸೆಗೆ ಈ ಕೂನ್ನೂರು ಪಟ್ಟಣವಲ್ಲದೆ ...ಕಸೌಲಿ ಎಂಬ ಪಟ್ಟಣ ಒಂದಿರುವುದು ಈ ಎರಡು ಪ್ರದೇಶಗ ...ಳಲ್ಲಿಯೂ ಜನರಿಗೆ ಚಿಕಿತ್ಸೆಯು ದೊರೆಯುವುದು ದಕ್ಷಿಣ ಇಂಡಿಯಾ ...ದವರು ಉತ್ತರ ದೇಶದ ಕಸೌಲಿ ಪಟ್ಟಣಕ್ಕೆ ಹೋಗಿ ಚಿಕಿತ್ಸೆ ಹೊಂದುವುದು ...ಕಷ್ಟವಾದುದರಿಂದ ಸಾರ್ವಭೌಮ ಸರ್ಕಾರದವರು ಈ ಕೂನ್ನೂರಿನಲ್ಲಿ ಈ ...ಆಸ್ಪತ್ರೆಯನ್ನು ತೆರೆದಿರುತ್ತಾರಲ್ಲದೆ ಇಲ್ಲಿಗೆ ಹುಚ್ಚು ಮೃಗಗಳಿಂದ ಕಚ್ಚಿಸಿ ...ಕೊಂಡು ಬರುವವರಿಗೆ ಆಯಾ ಸರ್ಕಾರದವರು ಹೋಗಿ ಬರುವ ರೈಲ್ ಚಾರ್ಜು ...ಕೊಡುತ್ತಾರೆ ಮತ್ತು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದ ...ಬೇಕಾದ ನಿಶ್ಚಿತಕಾಲವಾದ ಹದಿನಾಲ್ಕು ದಿವಸಗಳ ವರೆಗೂ ಮೃಗಗಳಿಂದ ಕಚ್ಚಿಸಿ ...ಕೊಂಡವನಿಗೆ ತಲೆಯೊಂದಕ್ಕೆ 6 ಆಣೆ ಭತ್ಯ ಕೊಡುವರು. ಹೀಗಲ್ಲದೆ ...ಸಹಾಯಕ್ಕೆ ಬಂದಿರುವ ಗಂಡಸಿಗೂ ಭತ್ಯ ಕೊಡುತ್ತಾರೆ ಕೆಲವರು ...ಸ್ವಂತ ಖರ್ಚನ್ನಿಟ್ಟುಕೊಂಡು ಚಿಕಿತ್ಸೆಯನ್ನು ಹೊಂದಿ ಪ್ರಯಾಣ ಬೆಳಸು ...ವರು. ಬೆಳಗ್ಗೆ ಆಸ್ಪತ್ರೆಗೆ ಹೋಗಿ ಪರೀಕ್ಷಿಸಲ್ಪಟ್ಟ ಆಮೇಲೆ ದಕ್ಷಿಣ ಇಂಡಿಯದ ...ಬಳಿಯ ಸಮೀಪಗಳಿಂದ ನಾಯಿಗಳಿಂದ ಕಚ್ಚಿಸಿಕೊಂಡವರು ಬಂದು ಚಿಕಿತ್ಸೆ ...ಯನ್ನು ಹೊಂದುವುದು ಕಾಣಬಹುದಾಗಿದೆ ದಿನಪ್ರತಿಯಲ್ಲೂ ನಾನಾ ದೇಶ ...ದ ಜನಗಳು ಬರುತ್ತಲೇ ಇರುವುದರಿಂದಲೂ, ಆಸ್ಪತ್ರೆಯ ಕಾಂಪೌಂಡಿನಲ್ಲಿ ...ಮನೆಗಳು ಬಹು ಸ್ವಲ್ಪವಾಗಿರುವುದರಿಂದಲೂ ಜನಗಳಿಗೆ ಸ್ಥಳವಕಾಶಗೆ ...ಕಷ್ಟವಾಗಿ, ಊರಲ್ಲಿ ಹೋಗಿ ದುಬಾರಿ ಬಾಡಿಗೆಯನ್ನು ಕೊಟ್ಟು ...ಇರಬೇಕಾಗಿದೆ ಮತ್ತು ಕೆಲವು ಮಾರ್ಗಗಳನ್ನು ಕಟ್ಟಿಸಿಕೊಟ್ಟರೆ ಜನ ...ಗಳಿಗೆ ಉಪಕಾರವಾದೀತು ಕಾಂಪೌಂಡಿನಲ್ಲಿ ಇನ್ನೂ ಹೆಚ್ಚಾಗಿ ಮಾರ್ಗ ...ಕಟ್ಟುವುದಕ್ಕೆ ಸ್ಥಳವಿರುವುದು ಈ ಕೂನ್ನೂರಿನಲ್ಲಿ ಇತರ ಕಡೆಗಳ ...ಗಿಂತ ಧಾನ್ಯವಾಸ ಭಾರವಾಗಿರುವುದರಿಂದ ಆಸ್ಪತ್ರೆಯಲ್ಲಿ ಕೊಡುವ ಆರು ...ಭತ್ಯವು ಸಾಲದು ಅಲ್ಲಿಗೆ ಜನಗಳು ಊರಿನಲ್ಲಿದ್ದುಕೊಂಡು ಹೆಚ್ಚಾಗಿ ...ನಡೆದು ಆಸ್ಪತ್ರೆಗೆ ಹೋಗಬೇಕಾದರೆ ಒಂದು ರೂಪಾಯಿ ಕೊಟ್ಟಲ್ಲದೆ ...ಆಗುವುದಿಲ್ಲ ಧಾನ್ಯಗಳು ಬೆಟ್ಟ ಹತ್ತಿ ಬರಬೇಕಾಗಿರುವುದರಿಂದ ಧಾರಣೆ ...ಹೆಚ್ಚಾಗಿರುವುದು ಸಹಜವೇ ಸರಿ ಹತ್ತು ರೂಪಾಯಿ ಸಂಬಳವಿರತಕ್ಕ ನೌಕರ ...ನಿಗೆ ಪೂರಾ ಸಂಬಳವಲ್ಲದೆ ಆ ಸಂಬಳದಲ್ಲಿ ⅓ ಭಾಗ ಮಾತ್ರ ಕೊಡುವರು ಇವ ...ನು ರೈಲ್ ಛಾರ್ಜನ್ನು ಕೊಟ್ಟುಕೊಂಡು ತನ್ನ ಜೀವನವನ್ನು ಮಾಡಿ ...ಕೊಳ್ಳಬೇಕಾಗಿದೆ ದೂರ ಫಾಸಲೆಯಿಂದ ಬರತಕ್ಕ ಇಂಥಾ ನೌಕರನ ರೈಲ್ ...ಚಾರ್ಜು 40 ರೂಪಾಯಿ ಆಗುತ್ತದೆ ಮಿಕ್ಕದ್ದರಲ್ಲಿ ಆತನು ಹೇಗೆ ಜೀವನ ...ಮಾಡುವನೋ, ತನ್ನ ಸ್ಥಳದಲ್ಲಿ ತನ್ನ ಸಂಸಾರಕ್ಕೆ ಹೇಗೆ ಒದಗಿಸಿ ಬರಬೇಕೋ ತಿಳಿಯದು. ಬಲ್ಪ ನೌಕರನಿಗೆ ಈ ರೀತಿ ಕೊಡುವುದಕ್ಕಿಂತ ನೌಕರಿ ಇಲ್ಲದವರಿಗೆ ಸರ್ಕಾರದವರು ಹೋಗಿ ಬರುವ ರೈಲ್ ಛಾರ್ಜನ್ನೂ, ಹದಿನಾಲ್ಕು ದಿನಗಳ ಭತ್ಯವನ್ನೂ ಯಾವ ರೀತಿ ಕೊಡುವರೋ ಆ ರೀತಿ ಮಾಡಿದರೆ ಉತ್ತಮ. ಏಕಂದರೆ ಇಲ್ಲಿ ಹೋಟೆಲಿನಲ್ಲಿ ಊಟಮಾಡುವುದಕ್ಕೆ ದಿಂಡ್ರಪಕ್ಷ ಒಪ್ಪತ್ತಿಗೆ 5 ಆಣೆಗೆ ಕಡಿಮೆಯಾಗುವುದಿಲ್ಲ; ಅಥವಾ ಭತ್ಯ ಕೊಡುವುದಕ್ಕೆ ಬದಲಾಗಿ ಆಸ್ಪತ್ರೆಗೆ ಸೇರಿದಂತೆ ಒಂದು ಪಾಕಶಾಲೆಯನ್ನಿಟ್ಟು ಅನ್ನ ಹಾಕಿಸಿದರೆ ಬಹಳ ಉತ್ತಮ ಕೂನ್ನೂರು ಸ್ಟೇಷನ್ನನ್ನು ಬಿಟ್ಟರೆ 5,800 ಅಡಿ ಎತ್ತರವುಳ್ಳ ವೆಲ್ಲಿಂಗ್ಟನ್ ಸ್ಟೇಷನ್ ದೊರೆಯುವುದು ಇಲ್ಲಿ ಇಂಗ್ಲಿಷ್ ಸಿಪಾಯಿಗಳು ವಾಸಮಾಡಿಕೊಂಡಿರುವರು ಅಲ್ಲಿಂದ 6,144 ಅಡಿ ಎತ್ತರವುಳ್ಳ ಅರುವಂಕಾಡು ಸ್ಟೇಷನ್ಗೆ ಬರುವೆವು. ಇಲ್ಲಿ ಇಂಗ್ಲಿಷರ ಯುದ್ಧಸಾಮಗ್ರಿಗಳನ್ನು ಮಾಡುವ ಒಂದು ದೊಡ್ಡ ಫ್ಯಾಕ್ಟರಿ ಇರುವುದು ಇಲ್ಲಿಂದ ಬಿಟ್ಟು 6,864 ಅಡಿ ಎತ್ತರವುಳ್ಳ ಕೇತಿ ಸ್ಟೇಷನ್ನನ್ನೂ, 7,191 ಅಡಿ ಎತ್ತರವುಳ್ಳ ಲೊವಡೇಲ್ ಸ್ಟೇಷನ್ನನ್ನೂ ದಾಟಿ, 7,225 ಅಡಿ ಎತ್ತರವುಳ್ಳ ಫರ್ನ್ಹಿಲ್ ಸ್ಟೇಷನ್ಗೆ ಬರುವೆವು ಇಲ್ಲಿಯೇ ನಮ್ಮ ಪ್ರಭುಗಳಾದ ಶ್ರೀಮನ್ಮಹಾರಾಜರವರ ಅತ್ಯಂತ ರಮಣೀಯವಾದ ಬೇಸಗೆ ಸ್ಥಳದ ಅರಮನೆಯೂ, ಬರೋಡಾ ಮಹಾರಾಜರವರ ಅರಮನೆಯೂ, ಹೈದರಾಬಾದ್ ನಿಜಾಮರವರ ಅರಮನೆಯೂ ಇವೆ ಇದಕ್ಕೆ ಸುಮಾರು ಎರಡು ಫರ್ಲಾಂಗಿನಲ್ಲಿ ಬೆಟ್ಟದ ಮಧ್ಯ ಪ್ರದೇಶದಲ್ಲಿ ಅತ್ಯಂತ ಶೀತಳ ಹವೆಯನ್ನೊಳಗೊಂಡಿರುವ 7,228 ಅಡಿ ಎತ್ತರವುಳ್ಳ ಊಟಿ ಎಂಬ ಉದಕಮಂಡಲದ ನೀಲಗಿರಿ ರೈಲ್ವೆಯ ಆಖೈರ್ ಸ್ಟೇಷನ್ ದೊರೆಯುವುದು. ಇಲ್ಲಿನ ಪಟ್ಟಣವು ಕೂನ್ನೂರು ಪಟ್ಟಣಕ್ಕಿಂತ ಚಿಕ್ಕದಾದರೂ ರಸ್ತೆಗಳು ವಿಶಾಲವಾಗಿಯೂ, ಅನೇಕ ಪಾವು ಅಂಗಡಿಗಳಿಂದ ಕೂಡಿದ್ದಾಗಿಯೂ, ಅನೇಕ ಇಂಗ್ಲಿಷ್ ಸರದಾರರುಗಳ ಬಂಗಲೆಗಳನ್ನುಳ್ಳದಾಗಿಯೂ ಇರುವುದಲ್ಲದೆ ಕಲೆಕ್ಟರ ಆಫೀಸು, ಸಬ್ ಜಡ್ಜಿಯವರ ಕೋರ್ಟು, ಮದರಾಸು ಗವರ್ನರ ಬಂಗಲೆ, ಜೋಬ್ಬಿಲಿ ಮಹಾರಾಜರವರ ಅರಮನೆ, ಕುದುರೆ ಜೂಜಿನ ಮೈದಾನ, ಅತ್ಯಂತ ರಮಣೀಯವಾದ ಪಾರ್ಕು ಇವುಗಳೆಲ್ಲಾ ಕಂಗೊಳಿಸುವುವು ಅಲ್ಲಲ್ಲಿ ಇಲ್ಲಿನ ಕಾಡುನಿವಾಸಿಗಳಾದ ತೊದವರ ಗುಡಿಸಲುಗಳು ಆಶ್ಚರ್ಯವನ್ನುಂಟುಮಾಡುವುವು. ಈ ಉದಕಮಂಡಲವು ಮೈಸೂರು ಪಟ್ಟಣಕ್ಕೆ ಸುಮಾರು 80 ಮೈಲಿಗಳೊಳಗಿದ್ದರೂ ಅಲ್ಲಿಂದ ಇಲ್ಲಿಗೆ ಬರುವುದಕ್ಕೆ ನಾನೂರು ಮೈಲಿಗಿಂತಲೂ ಹೆಚ್ಚಾಗಿಯೇ ಸುತ್ತಿಕೊಂಡು ರೈಲಿನಲ್ಲಿ ಪ್ರಯಾಣಮಾಡಿ ಬರಬೇಕಾಗಿರುವುದನ್ನು ಕಂಡು ಪರಿತಾಪಪಡಬೇಕಾಗಿದೆ.

ಒಬ್ಬ ಪ್ರಯಾಣಿಕ.

ತಾಲ್ಲೂಕು ವರ್ತಮಾನಗಳು.

ಫ್ರೆಂಚ್‌ರಾಕ್ಸ್ —ಇಲ್ಲಿನ ಕೆರೆಯೆಲ್ಲಾ ಒಣಗಿ, ನೀರಿಗೆ ತುಂಬಾ ಕಷ್ಟವಾಗಿದೆ ಈ ಕಾಲದಲ್ಲಿ ನಮ್ಮ ಸರ್ಕಾರದವರು ಸಂತೆ ಮೈದಾನದಲ್ಲಿ ಒಂದು ಬಾವಿ ತೆಗಿಸಿಕೊಟ್ಟಲ್ಲಿ ತುಂಬಾ ಸಹಾಯವಾದೀತು ಇಲ್ಲದೆ ಹೋದರೆ ಸಾಂಕ್ರಾಮಿಕ ವ್ಯಾಧಿಗಳು ತಲೆದೋರುವ ಹೆದರಿಕೆಯುಂಟು ಈ ಕಷ್ಟಕಾಲದಲ್ಲಿ ಊರೊಳಗೆ ಕತ್ತೆಗಳ ಮತ್ತು ನಾಯಿಗಳ ಕಾಟವು ಹೆಚ್ಚಾಗಿ ಜನಗಳು ತಿರುಗಾಡುವುದಕ್ಕೆ ಅಸಾಧ್ಯವಾಗಿದೆ ಅಲ್ಲದೆ ಹಾವುಗಳ ಭಯವೂ ಉಂಟು ರಾತ್ರಿಗಳ ಸಂಜೆ, ಹೆಚ್ಚಾದ ಹೊತ್ತಾದ ಪ್ರತಿಗಳಿಗೆ ಈ ಭಯ ಹೋಗುವದಿಲ್ಲ —ತಾ 26 ನೇ ಗುರುವಾರ ಶ್ರೀ ಶಿವಗಂಗಾ ಸ್ವಾಮಿಗಳು ಬೆಳಗ್ಗೆ 9 ಘಂಟೆಗೆ ಈ ಗ್ರಾಮದ ಮಾರ್ಗವಾಗಿ ಪರಿವಾರದೊಡನೆ ದಯಮಾಡಿಸಿದರು ಸಮಸ್ತ ಅಧಿಕಾರಿಗಳೂ ಗ್ರಾಮಸ್ಥರೂ ಶ್ರೀಯವರನ್ನು ಬಹು ಮರ್ಯಾದೆಯಿಂದ ಕರೆದುಕೊಂಡು ಬಂದು ಕಳಶೋತ್ಸವಗಳಿಂದ ಅಲಂಕರಿಸಲ್ಪಟ್ಟಿದ್ದ ಬಿಡಾರದಲ್ಲಿ ಇಳಿಸಿದರು ಶಕ್ತ್ಯನುಸಾರ ಎಲ್ಲರೂ ಅಮಲ್ದಾರ್ರು ಮತ್ತು ಶೇಕದಾರ್ರು ಮಾಡಿದ್ದರು ... ಪಾದಪೂಜೆ ಮಾಡಿದರು ಆ ದಿನ ಅವರಿಗೆ ಭಿಕ್ಷೆ ಸಾದಪೂಜೆ ನಡೆಸಲ್ಪಟ್ಟವು ಸಾಯಂಕಾಲ 4 ಘಂಟೆ ಮೇಲೆ ಶ್ರೀಯವರು ಪರಿವಾರದೊಡನೆ ಶ್ರೀರಂಗಪಟ್ಟಣದ ಕಡೆ ಪ್ರಯಾಣಮಾಡಿದರು — ಇಲ್ಲಿನ ಪೋ ಸಬ್ ಇನ್ಸ್‌ಪೆಕ್ಟರ್ ಸಾಹೇಬರು ತಾ 26 ರಲ್ಲಿ ರಜಾದ ಮೇಲೆ ದಯಮಾಡಿದರು ಹೊಸಬರು ಇನ್ನೂ ಬಂದಿಲ್ಲ ಸುಮಾರು 2 3 ವರ್ಷಗಳಿಂದ ಇಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮ... ಕೃಷ್ಣಗಿರಿಯವರಿಗೆ ಮದೂರಿಗೆ ವರ್ಗವಾಗಿದೆ ಇವರು ಕೆಲಸವನ್ನು ನಂಬಿಗೆ ಮುತುವರ್ಜಿಯಿಂದ ಮಾಡುತ್ತಾ ಪ್ರಜಾಸುರಾಗಕ್ಕೆ ಪಾತ್ರರಾಗಿದ್ದರು —ಇಲ್ಲಿಗೆ ಸುಮಾರು 6 6 ಮೈಲಿ ದೂರದಲ್ಲಿರುವ ಲಕ್ಷ್ಮೀಸಾಗರದಲ್ಲಿ 15 ದಿವಸಗಳ ಕೆಳಗೆ ಒಂದು ಮನೆಗೆ ಬೆಂಕಿ ಬಿದ್ದು ಸುಮಾರು ಎರಡು ಸಾವಿರ ರೂಪಾಯಿಗಳವರೆಗೂ ನಷ್ಟವಾಗಿರುತ್ತೆ ಗ್ರಾಮದಲ್ಲಿ ಎರಡು ಪಾರ್ಟಿ ಇರುವುದರಿಂದ ಈ ರೀತಿ ಆಯಿತೆಂದು ಹೇಳುತ್ತಾರೆ.

ತರೀಕೆರೆ —ಕಳೆದವಾರ ಅ॥ ಕಮಿಷನರ್ ರವರು ದಯಮಾಡಿ ಇನ್ಸ್‌ಪೆಕ್ಷನ್ ಮಾಡಿ, ಜಮಾಬಂದಿಯನ್ನು ಪರೀಕ್ಷಿಸಿ ವಾಪಸ್ ತೆರಳಿದರು —ಕಳೆದ ತಾ 19 ರಲ್ಲಿ ಇಲ್ಲಿ ರೆಕಾರ್ಡು ಕೀಪರ ಮನೆಗೆ 6 7 ಜನ ಕಳ್ಳರು ನುಗ್ಗಿ ರೆಕಾರ್ಡು ಕೀಪರನ್ನೂ, ಅವರ ತಾಯಿಯನ್ನೂ ಹೊಡೆದು ಗಾಯಗೊಳಿಸಿ, ಸುಮಾರು 1,700 ರೂಪಾಯಿನ ಧರಿಸಿಕೊಂಡಿದ್ದ ಒಡವೆಗಳನ್ನು ಬಲವಂತದಿಂದ ಕಿತ್ತುಕೊಂಡು ಹೋದರು ಹೀಗೆ ಬಲವಂತದಿಂದ ಕೀಳುವಾಗ್ಗೆ ಕಿವಿ ಗಾಯವಾಯಿತು ಸಾಧುಗಳಾಗಿಯೂ, ಬಡಜನಕ್ಕೆ ಬೇಕಾದವರಾಗಿಯೂ ಇದ್ದವರಿಗೆ ಹೀಗಾದದ್ದಕ್ಕೆ ಬಹುಜನರು ಮರುಗುವರು.—ಕಳೆದ ಭಾನುವಾರ ಕುಡಿಯುವ ನೀರನ್ನು ಕೇಳುತ್ತಿದ್ದುದನ್ನು ನೋಡಿದರೆ ಆಶ್ಚರ್ಯವಾಗುತ್ತೆ ಕೆರೆಯಲ್ಲಿ ನೀರು ಬತ್ತಿಹೋಗಿರುವಾಗ್ಗೆ ಜನರು ಯೋಚನೆ ಇಲ್ಲದೆ ಕೆಡಿಸುತ್ತಾ ಇರುವುದು ಯುಕ್ತವಲ್ಲ —ಈ ಊರಿಗೆ ಸ್ವಲ್ಪ ದೂರದಲ್ಲಿರುವ ಗಾಳಿಹಳ್ಳಿಯಲ್ಲಿ ಇಬ್ಬರು ಕಳ್ಳರು ಒಬ್ಬ ಮುಸಲ್ಮಾನನ ಮನೆಗೆ ನುಗ್ಗಿ ಪೆಟ್ಟಿಗೆ, ಎಂಟ್ರದ ಬಿಂದಿಗೆ ಕದ್ದು ಹೊರಕ್ಕೆ ಹೋಗುವಾಗ್ಗೆ ಸಿಕ್ಕಿಬಿದ್ದು ಅಷ್ಟರಲ್ಲಿ ಊರೆಲ್ಲಾ ಗಲಾಟೆಯಾಗಿ ಒಂದು ಅವನನ್ನು ಹಿಡಿದು ಕಟ್ಟಿ ಬೆಳಗ್ಗೆ ಲಾಕಪ್ಪಿಗೆ ತಂದರು ಇವನಿಗೆ ಹಿಂದೆ 2 3 ಸಾರಿ ಜೈಲಾಗಿ, ಕಡೆಗೆ ಜೈಲಿನಿಂದಲೇ ತಪ್ಪಿಸಿಕೊಂಡು ಬಂದಿರುವಂತೆ ತಿಳಿದು ಬಂದಿದೆ ಈ ಕಡೆ ಕಳ್ಳಕೊರಮರ ಅವಾಂತ್ರ ಹೆಚ್ಚಾಗಿದೆ ತರೀಕೆರೆಯವರೇ ಕಳ್ಳತನ ಮಾಡಿರುವರೆಂದು ಜನರು ಹೇಳಿಕೊಳ್ಳುತ್ತಾರೆ ಹಾಗೂ ಕಳೆದ 19 ನೇ ತಾ ಇಷ್ಟು ದೊಡ್ಡ ಊರಿಗೆ ಇಬ್ಬರು ಪೋಲೀಸಿನವರೇ ಗಸ್ತು ಮಾಡುತ್ತಿದ್ದುದು ವರ್ತಮಾನ ಈ ಊರಲ್ಲಿ ಪೋಲೀಸಿನವರು 12 ಜನ ಇರಬೇಕೆಂದು ಹುಕುಂ ಇದ್ದರೂ 6 ಜನ ಮಾತ್ರ ಇವಾರಂತೆ ನಮ್ಮ ಅಮಲ್ದಾರರವರು ದಯಮಾಡಿ ಖಾಲಿಯಾಗಿರುವ ನೌಕರಿಗೆ ಭರ್ತಿ ಮಾಡಲು ಅಪ್ಪಣೆ ದಯಪಾಲಿಸಿದರೆ ಜನಗಳಿಗೆ ತುಂಬಾ ಉಪಕಾರವಾದೀತು —ಗ್ಯಾಂಗ್ ಫಾರವ್ ತೆಗೆದುಕೊಂಡು ಹೋಗುವ ಪೋಲೀಸಿನವರು ನಿಗಾ ವಹಿಸಿ ಕೆಲಸ ಮಾಡುವದಿಲ್ಲ ವೆಂದು ಅಲ್ಲಲ್ಲಿ ನಡೆಯುವ ವಿಷ್ಯಮಾನಗಳಿಂದ ತಿಳಿದು ಬಂದಿದೆ —ಲಕ್ಕವಳ್ಳಿ ಫಾರೆಸ್ಟಿನಲ್ಲಿ ಕೆಲವು ಜನ ಸ್ಥಳೀಯ ಒಡ್ಡರು ನಾಟಾ ಕದ್ದದ್ದರಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಬಂದು ತನಿಖೆ ಮಾಡುತ್ತಿದ್ದರು. ಆಗ್ಗೆ ಸದರಿ ಒಡ್ಡರು ಡಿಸ್ಟ್ರಿಕ್ಟ್ ಫಾರೆಸ್ಟಿನವರು ತಮ್ಮನ್ನು ಜಾತಿ ಭ್ರಷ್ಟರಾಗುವಂತೆ ಶಿಕ್ಷೆ ಯತ್ನ ಮಾಡಿದರೆಂದು ಪುಕಾರುಮಾಡಿ ಅವರ ಮೇಲೆ ಇಲ್ಲಿನ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ಹೀಗೆ ಬಂದ 4 ಅರ್ಜಿಗಳಲ್ಲಿ 3 ಜನ ರಾಜಿಯಾದರು, 1 ಉಳಿದಿದೆ ಈ ಜನರು ಕೆಲವರ ಸಹಾಯದಿಂದಲೂ, ಹಣದ ಬಲದಿಂದಲೂ ಅಧಿಕಾರಿಗಳನ್ನೇ ಎದುರಿಸುತ್ತಾ ಬಂದರೆ ಮುಂದೇನಾಗಬೇಕು ?—ಲಕ್ಕವಳ್ಳಿಗೆ ರೈಲ್ವೆ ಹಾಕುವ ಕೆಲಸ ತುಂಬಾ ತರಾತುರಿಯಿಂದ ನಡೆಯುತ್ತಿದೆ

ದೊಡ್ಡಬಳ್ಳಾಪುರ —ಗೌರಿಬಿದನೂರ್ ತಾಲ್ಲೂಕು ಹುದಗೂರು ಗ್ರಾಮದ ಅಪ್ಪಾಜಯ್ಯನೆಂಬ ಬ್ರಾಹ್ಮಣನು ಬೆಂಗಳೂರಲ್ಲಿ ತಾನು ವೆಂಕಟನಾರಣಪ್ಪ ಎಂಬಾತನ ಕನ್ಯೆಯನ್ನು ಮದುವೆಮಾಡಿಕೊಳ್ಳುವಂತೆ ಒಪ್ಪಿ ಕೊಟ್ಟಿದ್ದ ಸುಮಾರು ಮುನ್ನೂರು ರೂಪಾಯನ್ನು ವೆಂಕಟನಾರಾಣಪ್ಪ ಎಂಬಾತನೂ ಈ ಊರಲ್ಲಿರುವ ಜೋಡಿದಾರ್ ಗುಂಡಪ್ಪ ಎಂಬಾತನೂ ಈರ್ವರೂ ಸೇರಿ ಮೋಸಪಡಿಸಿ ಕನ್ನಿಕೆಯನ್ನು ಅಪ್ಪಾಜಯ್ಯನಿಗೆ ಮದುವೆ ಮಾಡಿಕೊಡದೆ ವಂಚಿಸಿದರೆಂದು ಗೌರಿಬಿದನೂರು ಪೋಲೀಸಿನಲ್ಲಿ ಫಿರ್ಯಾದು ಮಾಡಿದ್ದರ ಮೇಲೆ ಈರ್ವರನ್ನೂ ಹಿಡಿದು ಲಾಕಪ್ಪಿನಲ್ಲಿ ಮಡಗಿ ತರುವಾಯ ಜಾಮೀನ್ ಮೇಲೆ ಬಿಟ್ಟಿರುತ್ತಾರೆಂತಲೂ, ಈಗ ಈ ಮೊಕದ್ದಮೆ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಕೋರ್ಟಿನಲ್ಲಿ ದಾಖಲಾಗಿದೆ ಎಂತಲೂ ತಿಳಿಯಲಾಗಿದೆ —ಕಳೆದ ವಾರ ಚಿಕ್ಕಬಳ್ಳಾಪುರದ ಒಬ್ಬ ಮಾದಿಗನು ಮೇಸ್ತ್ರಿ ಅಣ್ಣಯ್ಯಪ್ಪನವರ ಒಂದು ಭಾರಿ ಗಬ್ಬದ ಹಸುವನ್ನು ರಘುನಾಥಪುರದ ಬಳಿ ಕೊಂಡು ಪರಾರಿಯಾಗುತ್ತಿದ್ದನೆಂದು ಅವನನ್ನು ಈ ಊರು ಪೋಲೀಸಿನವರು ಹಿಡಿದು ತಂದಿರುತ್ತಾರೆ —ದೊಡ್ಡಬಳ್ಳಾಪುರದಲ್ಲಿ ಕೊಣಗಟ್ಟದ ಕೆರೆಯಿಂದ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಿಕ್ಕೆ ವಾಗ್ದತ್ತ ಮಾಡಿದ್ದ ಮಹನೀಯರುಗಳೆಲ್ಲ ಕಳೆದ ವಾರ ತಮ್ಮ ಹಣವನ್ನು ಖಜಾನೆಗೆ ಕಟ್ಟಿದರು. ಆಲಂಪಲ್ಲಿ ವೆಂಕಟನಾರಾಯಣ ಶೆಟ್ಟರು 1,250, ಮೊದಲನೆ ಕಿಸ್ತು, ಒಟ್ಟು ಇವರ ಧರ್ಮ 5 ಸಾವಿರ ರೂಪಾಯಿ ಮ॥ ಸಾಹುಕಾರ್ ಚಂದ್ರಶೇಖರಯ್ಯನವರು 1,000 ಇವರ ಒಟ್ಟು ವಾಗ್ದಾನ 4,000 ಮ॥ ಗಳಾದ ಬೆಂಗಳೂರು ಡಿ ಆದಪ್ಪನವರು, ಗುರುಶಂಭುಲಿಂಗಪ್ಪನವರು, ಆಲಂಪಲ್ಲಿ ನರಸಿಂಹಯ್ಯನವರು, ಹೆಜ್ಜಾಜಿ ಕೃಷ್ಣಯ್ಯನವರು, ಆಲಂಪಲ್ಲಿ ಲಕ್ಷ್ಮಯ್ಯನವರು, ಆಲಂಪಲ್ಲಿ ಆದಿನಾರಾಯಣಶೆಟ್ಟರು, ಅಮಾನಾಸ್ಯ ಶ್ರೀಕಂಠಯ್ಯನವರು, ಚಿಕ್ಕ ಹನುಮಂತಪ್ಪನವರೂ ತಲಾ 1,000 ರೂಪಾಯಿ ಮೇರೆಗೆ ಈ ದೊಡ್ಡ ಮನುಷ್ಯರು ದಾನಕಮಾಡಿದರು ಈ ಮಧ್ಯೆ ಈ ನೀರಿನ ಸರಬರಾಜನ್ನು ಅಡ್ಡಿಮಾಡಲಿಕ್ಕೆ ಯಾರೋ ಕೆಲವು ಜನರು ಈ ಊರಿಗೆ ತಕ್ಕಷ್ಟು ಬಾವಿಗಳುಂಟೆಂದೂ, ನೀರಿನ ಕೊರತೆ ಇಲ್ಲವೆಂದೂ ದಿವಾನ್ ಸಾಹೇಬರಿಗೆ ಅರ್ಜಿ ಬರೆದುಕೊಂಡಿದ್ದಾರೆ ನೀರಿನ ಸರಬರಾಯಿ ಅವಶ್ಯವೆಂತ ಕಳೆದ 25 ವರ್ಷಗಳಿಂದಲೂ ಸರ್ಕಾರದವರೂ ಪ್ರಜೆಗಳೂ ರಿಕಾರ್ಡುಮಾಡಿರುತ್ತಾರೆ —ಫೆಬ್ರವರಿ ತಾ 23 ರಿಂದ ಮಾರ್ಚಿ 3 ರ ವರೆಗೆ ನಂದಿ ಜಾತ್ರೆ ನಡೆಯುತ್ತದೆ ಇಲ್ಲಿ ಸುಮಾರು 20 ಸಾವಿರ ಜನರೂ ದನಗಳೂ ಸೇರಿವೆ ಲಂಡನ್ ಮಿಷನ್ ಆಸ್ಪತ್ರೆ ಡಾಕ್ಟರುಗಳೂ ಬೋಧಕರೂ ಈ ವಾರವೆಲ್ಲಾ ಸಾವಿರಾರು ಮಂದಿಗೆ ರೋಗ ಚಿಕಿತ್ಸೆಯನ್ನೂ ಉಪನ್ಯಾಸಗಳನ್ನೂ ಮಾಡುತ್ತಿದ್ದಾರೆ ಅಲ್ಲದೆ ವಿವಿಧ ಸಾಮಾನುಗಳ ಎಗ್ಜಿಬಿಷನ್ ನಡೆಯುತ್ತಿವೆ. ಮತ್ತು ಕೋಆಪರೇಟಿವ್ ಕಾನ್ಫರೆನ್ಸ್ 3 ದಿನಗಳು ನಡೆಯಿತು ಶ್ರೀಮನ್ ಯುವರಾಜರವರು ಈ ದಿನ ದಯಮಾಡುವದಾಗಿ ಪ್ರವಾದವಿದೆ. ರೋಗಾದ್ಯುಪದ್ರಗಳಿಲ್ಲ. ಕುಡಿಯುವ ನೀರಿಗೆ ತಕ್ಕಮಟ್ಟಿಗೂ ಅನುಕೂಲವುಂಟು

ತಿಪಟೂರು —ಸದ್ಯಕ್ಕೆ ಈ ಟವನ್ನಲ್ಲಿ ಪ್ಲೇಗಿನ ಅವಾಂತ್ರ ಶಮನವಾಗಿದೆ, ಈಗ ಜನರ ನೀರಿಗೆ ತುಂಬಾ ಅಭಾವ ಈ ಕೊರತೆಯನ್ನು ನಿವಾರಣೆ ಮಾಡಲು 8 ಮೈಲಿ ಫಾಸಲೆ ಇರುವ ಶಿವರದ ಕೆರೆಯಿಂದ ನಲ್ಲಿ ಮೂಲಕ ವಾಟರ್ ಸಪ್ಲೈ ಮಾಡುತ್ತಾರಂತೆ ಇದಕ್ಕಾಗಿ ಈ ಊರಿನ ಪ್ರಮುಖ ವರ್ತಕ ಮಂಡಲಿಯವರು ಆಗಲೇ 15 ಸಾವಿರ ರೂಪಾಯಿ ಧರ್ಮಾರ್ಥವಾಗಿ ಚಂದಾ ಕೊಟ್ಟಿದ್ದಾರೆ.—ಇಲ್ಲಿಗೆ ಅಮಲ್ದಾರ್ ಮ॥ ಬುಲಿ ಕೃಷ್ಣರಾಯರು ಸಾಗರದಿಂದ ವರ್ಗವಾಗಿ ಒಂದು ಕೆಲಸದ ಛಾರ್ಜನ್ನು ವಹಿಸಿಕೊಂಡರು ಬದ್ಲಿ ನೋಡುತ್ತಿದ್ದ ಡೆಪ್ಯುಟಿ ಅಮಲ್ದಾರ್ ಮ॥ ಸೀತಾರಾಮಯ್ಯನವರು ತುರುವೇಕೆರೆಗೆ ಹೋದರು. ಇವರು ಇಲ್ಲಿ ಎರಡು ತಿಂಗಳ ಕಾಲವೇ ಇದ್ದರೂ ಜನರ ಅನುರಾಗಕ್ಕೆ ಪಾತ್ರರಾಗಿ ಈ ಊರಿನ ನೀರಿನ ಅಭಾವಕ್ಕೆ ತುಂಬಾ ಕನಿಕರಪಟ್ಟು, ಪ್ರಜೆಗಳಿಂದ ನಲ್ಲಿಗಳಿಗಾಗಿ ಚಂದಾ ಕೂಡಿಸುತ್ತಿದ್ದರು ಇವರ ಹಾಗೇ ಈಗ ಬಂದಿರುವ ಹೊಸ ಅಮಲ್ದಾರ್ರೂ ಪ್ರಜಾನುರಾಗವನ್ನು ಪಡೆವಾರೆಂದು ನಂಬಿದೇವೆ — ಈ ಊರಿಗೆ ಬೆಂಗಳೂರಿಂದ ಬಂದಿರುವ ವೇ॥ ರಾಮಾನುಜಅಯ್ಯಂಗಾರ್ರು ಸಾಹುಕಾರ್ ಶಿಂಗ್ರಿಸಂಜಪ್ಪನವರ ಮನೆ ಮುಂದೆ ಹಾಕಿರುವ ವಿಶಾಲವಾದ ಚಪ್ಪರದಲ್ಲಿ ರಾಮಾಯಣವನ್ನು 3 ತಿಂಗಳಿಂದ ಹರಿಕಥಾ ರೂಪವಾಗಿ ಹೇಳಿ ಕಡೆಯಲ್ಲಿ ಪಟ್ಟಾಭಿಷೇಕ ನಡಿಸಿದರು ಈ ಪುರನಿವಾಸಿಗಳು ದಾಸರಿಗೆ ಮಾಡಿದ ಮರ್ಯಾದೆಗಳು ಅಪೂರ್ವವಾಗಿದ್ದವು —ನಮ್ಮ ಸಂಸ್ಥಾನದ 2 ನೇ ಕೌನ್ಸಿಲರ್ ಸರ್ದಾರ್ ಎಂ ಕಾಂತರಾಜೆ ಅರಸಿನವರು ತಾ 25 ರಲ್ಲಿ ಅರಸೀಕೆರೆಯಿಂದ ಮೋಟಾರಿನಲ್ಲಿ ಬಂದು ಬಂಗ್ಲೆಯಲ್ಲಿ 2 ದಿನ ಮೊಕ್ಕಾಂ ಮಾಡಿದರು ಇವರ ಆಗಮನಕ್ಕಾಗಿ ಡಿಸ್ಟ್ರಿಕ್ಟಿನ ಇಲಾಖಾ ಅಧಿಕಾರಿಗಳೆಲ್ಲಾ, ಸ್ಥಳದ ಮ್ಯುನಿಸಿಪಲ್ ಕೌನ್ಸಿಲರು, ಪ್ರಮುಖ ವರ್ತಕ ಮಂಡಲಿಯವರು ಬಂಗ್ಲೆ ಬಳಿ ಕಾದಿದ್ದು, ಮ ಅರಸಿನವರಿಗೆ ಪುಷ್ಪಹಾರಗಳನ್ನು ಕೊಟ್ಟು ಸುಖಾಗಮನವನ್ನು ಬಯಸಿದರು ಮ॥ ಅರಸಿನವರು ಸ್ಥಳದ ವಿವರ ಮಾಸನಗಳನ್ನು ತಿಳಿದುಕೊಂಡು ಬಂಗ್ಲೆಗೆ ಹೋಗಿ ಭೋಜನಾನಂತರ 3 ಘಂಟೆಗೆ ಈ ಊರ ಲಿಂಗಾಯಿತರು ಕಟ್ಟತಕ್ಕ ವೀರಶೈವಾಶ್ರಮಕ್ಕೆ ಒಂದು, ಅಲ್ಲಿ ಕಟ್ಟತಕ್ಕ ಕಟ್ಟಡ ಭಾವಿ ಕೆಲಸ ನೋಡಿ, ಆಶ್ರಮದ ಪಕ್ಕದಲ್ಲಿರುವ ವಾಚಕಮಂದಿರಕ್ಕೆ ದಯಮಾಡಿ ಟೀಪಾನವನ್ನು ಮಾಡಿ ಅಲ್ಲಿ ಸ್ವಲ್ಪ ಗೌರವ್ವ ಸ್ವೀಕರಿಸಿಕೊಂಡು ವಾಚಕಮಂದಿರದ ಮುಂದೆ ಹಾಕಿದ್ದ ಚಪ್ಪರಕ್ಕೆ ಪ್ರವೇಶಮಾಡಿ ಅಲ್ಲಿ ವೀರಶೈವಾಶ್ರಮದ ರಿಪೋರ್ಟು ಮ॥ ನಂಜುಂಡಪ್ಪನವರು ಹೇಳಿದ್ದನ್ನು ಕೇಳಿ ಈ ಊರಿಗೆ ಬಂದಿರುವ ಹರಿಕಥಾ ದಾಸರು ವೇ॥ ರಾಮಾನುಜ ಅಯ್ಯಂಗಾರ್ರು ಸಂಕ್ಷೇಪವಾಗಿ ಹೇಳಿದ ಹರಿಕಥೆಯನ್ನು ಕೇಳಿ ಅಲ್ಲಿ ಒಪ್ಪಿಸಿದ ಫಲಪುಷ್ಪಗಳನ್ನು ಸ್ವೀಕರಿಸಿ ಆಶ್ರಮದ ಅಭಿಮಾನಿಗಳನ್ನು ವಂದಿಸಿ ಮುಂದೆ ಪೇಟೆಯಲ್ಲಿ ಹಾದು ಟವನ್ ನೋಡಿಕೊಂಡು ತೆರಳಿದರು. ಮರುದಿನ ಈ ಟವನ್ಗೆ ನೀರು ಸಪ್ಲೈ ಆಗುವ ಶಿವರದ ಕೆರೆಗೆ ಮೋಟಾರಿನಲ್ಲಿ ಅಧಿಕಾರಿಗಳ ಸಮೇತ ಹೋಗಿ ಪರಾಂಬರಿಸಿ ಬಂದರು ಮಧ್ಯಾಹ್ನ 3 ಘಂಟೆ ಮೇಲೆ ಕಚೇರಿಗೆ ಬಂದು ಎಲ್ಲಾ ಇಲಾಖೆಗಳನ್ನೂ ನೋಡಿ ತುಂಬಾ ತೃಪ್ತಿಪಟ್ಟಂತೆ ತೋರುತ್ತೆ ಬಳಿಕ ಮ॥ ಮ॥ ಶಿಂಗ್ರಿಸಂಜಪ್ಪನವರ ಗೃಹದ ಮುಂದೆ ಹಾಕಿದ್ದ ವಿಶಾಲವಾದ ಚಪ್ಪರಕ್ಕೆ ದಯಮಾಡಿ ಅಲ್ಲಿ ಸೇರಿದ್ದ ಸ್ಕೂಲುಗಳ ಬಾಲಕರಿಗೂ ಬಾಲಕಿಯರಿಗೂ ಅಗ್ರಾಸನವನ್ನು ವಹಿಸಿ ಬಹುಮಾನವನ್ನು ವಿನಿಯೋಗಿಸಿದರು ಮೊದಲು ಹೆಡ್ ಮಾಸ್ಟರುಗಳು ರಿಪೋರ್ಟುಗಳನ್ನು ಓದಿದರು ಬಾಲಕರು ಹೇಳಿದ ಇಂಗ್ಲಿಷ್ ರೆಸಿಟೇಷನ್ ಸುಖಾಗಮನ, ಷೇಕ್ಸ್‌ಪಿಯರ್ ನಾಟಕ, ಪ್ರಹ್ಲಾದ ಚರಿತ್ರೆ, ಬಾಲಕಿಯರು ಮಾಡಿದ ಶ್ರೀಯಃಪ್ರಾರ್ಥನೆ, ಸ್ತ್ರೀವಿದ್ಯಾಭ್ಯಾಸವನ್ನು ಕುರಿತ ಸಂಭಾಷಣೆ, ಇವಲ್ಲಾ ಮನೋಹರವಾಗಿದ್ದವು ಕಡೆಯಲ್ಲಿ ಸರ್ದಾರರು ಬಾಲಕ ಬಾಲಕಿಯರಿಗೆ ಬಹುಮಾನಗಳನ್ನು ಸ್ವಹಸ್ತದಿಂದ ಕೊಟ್ಟು, ಸಮಯೋಚಿತವಾದ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದರು ಈ ಸಮಾರಂಭವನ್ನು ನೋಡುವದಕ್ಕೆ ಪ್ರಜೆಗಳು ಕಿಕ್ಕಿರಿಯುವಂತೆ ಸೇರಿದ್ದರು ಕಡೆಯಲ್ಲಿ ಒಬ್ಬ ಮಹಮದೀಯರು ಈ ಊರಲ್ಲಿ ನೀರಿಗಾಗಿ ತುಂಬಾ ಅಭಾವಪಡುತ್ತಿರುವದನ್ನು ಕುರಿತು ಉಪನ್ಯಾಸಮಾಡಿದರು ಕಡೆಯಲ್ಲಿ ಅಗ್ರಾಸನಾಧಿಪತಿಗಳಿಗೆ ಹಾರಾ ತುರಾಯಿಗಳು ಸಮರ್ಪಿಸಲ್ಪಟ್ಟನಂತರ ಸರ್ದಾರರು ಬಂಗ್ಲೆಗೆ ತೆರಳಿದರು ತಾ. 27 ನೇ ಬೆಳಗ್ಗೆ ಮೋಟಾರಿನಲ್ಲಿ ಡೆಪ್ಯುಟಿ ಕಮಿಷನರ ಸಮೇತ ಸರ್ದಾರರು ದೊಡ್ಡಪೇಟೆಯಲ್ಲಿ ಹಾದು ಈ ಊರಲ್ಲಿ ನೂತನವಾಗಿ ಸ್ಥಾಪಿಸಿರುವ ಮೈಸೂರು ಬ್ಯಾಂಕನ್ನು ಪರಾಂಬರಿಸಿ ಬ್ಯಾಂಕಿನ ಡೈರೆಕ್ಟರ್ ಮ॥ ಶಿಂಗ್ರಿಸಂಜಪ್ಪನವರು ಒಪ್ಪಿಸಿದ ಫಲಪುಷ್ಪಗಳನ್ನು ಸ್ವೀಕರಿಸಿ, ಮುಂದೆ ಹಾದು ಕೋಆಪರೇಟಿವ್ ಸೊಸೈಟಿಯನ್ನು ಪಾರಾಮರ್ಶಿಸಿ ಸೊಸೈಟಿ ಪ್ರೆಸಿಡೆಂಟ್ ಮ॥ ಸಾಹುಕಾರ್ ಗ್ರಂದಿಗೆ ಪುಟ್ಟಸ್ವಾಮಿ ಶೆಟ್ಟರೇ ಮುಂತಾದ ಮೆಂಬರುಗಳು ಕೊಟ್ಟ ಹಾರಾ ತುರಾಯಿಗಳನ್ನು ಸ್ವೀಕರಿಸಿ ಮೋಟಾರಿನಲ್ಲಿ ತುಮಕೂರಿಗೆ ಪ್ರಯಾಣ ಬೆಳಸಿದರು

ಮೈಸೂರು ಸರ್ಕಾರಿ ಘೋಷಣೆ

ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರುಗಳ ಹಕ್ಕುಸ್ವಾತಂತ್ರ್ಯಗಳು

1907 ನೇ ಇಸವಿಯ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 12 A ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, ನ್ಯಾಯವಿಧಾಯಕ ಸಭೆಯಲ್ಲಿ ಬಜೆಟ್ ಎಂದರೆ ಜಮಾ ಖರ್ಚಿನ ಅಂದಾಜನ್ನು ಕುರಿತು ಚರ್ಚೆ ಮಾಡುವ ವಿಷಯದಲ್ಲಿಯೂ, ಪ್ರಶ್ನೆಗಳನ್ನು ಕೇಳುವ ವಿಷಯದಲ್ಲಿಯೂ ಸಹ ಇದರಡಿ ಕಂಡ ನಿಬಂಧನೆಗಳನ್ನು ಮಾಡಿ ಇರುತ್ತಾರೆ

1 ಸಭೆಯಲ್ಲಿ ಬಜೆಟ್ ಎಂದರೆ ಜಮಾ ಖರ್ಚಿನ ಅಂದಾಜನ್ನು ಚರ್ಚೆ ಮಾಡುವ ವಿಷಯದಲ್ಲಿ ನಿಬಂಧನೆಗಳು —(1) ಪ್ರೆಸಿಡೆಂಟರಾಗಲೀ, ಪ್ರೆಸಿಡೆಂಟರಿಂದ ನಿಯಮಿಸಲ್ಪಡುವ ಮೆಂಬರುಗಳ ಪೈಕಿ ಒಬ್ಬರಾಗಲೀ ಸರ್ಕಾರೀ ಬಜೆಟ್ಟನ್ನು ಕುರಿತು ಸಭೆಯಲ್ಲಿ, ಸದರಿ ಬಜೆಟ್ಟು ಯಾವ ವರ್ಷಕ್ಕಾಗಿ ತಯಾರಾಗಿರುತ್ತದೆಯೋ ಆ ವರ್ಷವು ಆರಂಭವಾಗುವದಕ್ಕೆ ಪೂರ್ವದಲ್ಲಿ, ವಿವರಿಸಿ ಹೇಳತಕ್ಕದ್ದು, ಮತ್ತು ಅದರ ಒಂದು ಅಚ್ಚಾದ ನಕಲನ್ನು ಪ್ರತಿ ಮೆಂಬರಿಗೂ ಕೊಡತಕ್ಕದ್ದು (2) ಒಂದೊಂದು ಬಾಬನ್ನೂ ವಿವರಿಸಿದ ಅನಂತರದಲ್ಲಿ, ಬಜೆಟ್ಟಿನ ವಿಷಯದಲ್ಲಿ ತಾವು ತಿಳಿಸಬೇಕೆಂದು ಅಪೇಕ್ಷಿಸುವ ಅಭಿಪ್ರಾಯಗಳನ್ನು ಪ್ರತಿ ಮೆಂಬರೂ ತಿಳಿಸಲು ಸ್ವತಂತ್ರರಾಗಿರತಕ್ಕದ್ದು (3) ಬಜೆಟ್ಟನ್ನು ವಿವರಿಸಿ ಹೇಳಿದ ಮೆಂಬರು ಜವಾಬನ್ನು ಕೊಡತಕ್ಕ ಹಕ್ಕುಳ್ಳವರಾಗಿರತಕ್ಕದ್ದು ಪ್ರೆಸಿಡೆಂಟರವರು ತಮಗೆ ಅವಶ್ಯಕವೆಂದು ಕಂಡುಬರುವ ಯಾವುದಾದರೂ ಅಭಿಪ್ರಾಯಗಳನ್ನು ತಿಳಿಸುವದರ ಮೂಲಕ, ಚರ್ಚೆಯನ್ನು ಸಮಾಪ್ತಿ ಮಾಡತಕ್ಕದ್ದು (4) 1907 ನೇ ಇಸವಿಯ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 12 (1) ಪ್ರಕರಣದ ನಿಯಮದ ಪ್ರಕಾರ ಮೈಸೂರು ನ್ಯಾಯವಿಧಾಯಕ ಸಭೆಯ ವಿಚಾರಕ್ಕೆ ಒಳಪಡಿಸದೆ ಇರತಕ್ಕ ಯಾವ ಸಂಗತಿಗಾಗಲೀ ಸಂಬಂಧಪಟ್ಟ ಯಾವುದಾದರೂ ಜಮಾ ಯಾ ಖರ್ಚಿನ ಬಾಬುಗಳ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಕೂಡದು

1 ಸಭೆಯಲ್ಲಿ ಪ್ರಶ್ನೆಗಳನ್ನು ಕೇಳುವ ವಿಷಯದಲ್ಲಿ ನಿಬಂಧನೆಗಳು — (1) ಇದರಡಿ ಕಂಡ ನಿಬಂಧನೆಗಳಲ್ಲಿ ಅಡಗಿರತಕ್ಕ ಷರತ್ತುಗಳಿಗೂ ನಿರ್ಬಂಧಗಳಿಗೂ ಒಳಪಟ್ಟು, ಸಭೆಯ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳ ಪೈಕಿ ಯಾರಾದರೂ ಮೆಂಬರು (ಚುನಾಯಿಸಲ್ಪಟ್ಟವರು ಅಥವಾ ನೇಮಿಸಲ್ಪಟ್ಟವರು) ಜನೋಪಯುಕ್ತವಾದ ಅಥವಾ ಮುಖ್ಯವಾದ ವಿಷಯಗಳನ್ನು ಕುರಿತು ಯಾವ ಪ್ರಶ್ನೆಯನ್ನಾದರೂ ಕೇಳಬಹುದು (2) ಸಭೆಯ ಒಂದು ಸಲದ ವಿಚಾರಣೆಗೆ, ಯಾವ ಮೆಂಬರಾಗಲಿ ಮೂರಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕಳುಹಿಸಿಕೊಡಕೂಡದು (3) 1907 ನೇ ಇಸವಿಯ ಮೈಸೂರು ನ್ಯಾಯವಿಧಾಯಕ ಸಭೆಯ 12 ನೆಯ ಪ್ರಕರಣದ 2ನೆಯ ಉಪ ಪ್ರಕರಣಕ್ಕೆ ಸೇರಿದ ಪ್ರತಿಷೇಧಗಳಿಗೆ ಅನುಸಾರವಾಗಿ ಮೈಸೂರು ನ್ಯಾಯವಿಧಾಯಕ ಸಭೆಯ ಅಧೀನಕ್ಕೆ ಒಳಪಡಿಸದೆ ಇರತಕ್ಕ ವಿಷಯಗಳಿಗೆ ಸಂಬಂಧಪಟ್ಟ ಯಾವ ಸಂಗತಿಗಳನ್ನು ಕುರಿತಾಗಲೀ ಅಥವಾ ರಾಜ್ಯದ ಆಡಳಿತದ ಇಲಾಖೆಗಳನ್ನು ಕುರಿತಾಗಲೀ ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಯಾವ ಪ್ರಶ್ನೆಯನ್ನೂ ಕೇಳಕೂಡದು, ಜವಾಬನ್ನೂ ಕೊಡಲಾಗಕೂಡದು (4) ಕೇಳತಕ್ಕ ಪ್ರಶ್ನೆಗಳು ಸಂಗತಿಗಳನ್ನು ತಿಳಿದುಕೊಳ್ಳತಕ್ಕ ಬಗ್ಗೆ ಬರೀ ವಿಜ್ಞಾಪನಾರೂಪವಾಗಿರತಕ್ಕದ್ದು ಅಲ್ಲದೆ ಅವುಗಳು ಬರೀ ಚರ್ಚಾರೂಪವಾಗಿಯಾಗಲಿ, ಕಾರಣವಿಲ್ಲದ ಊಹಾರೂಪವಾಗಿ ಯಾಗಲೀ, ಒಂದು ಪಂಗಡಕ್ಕೆ ಸೇರಿದ ಯಾವನಾದರೂ ಒಬ್ಬನಿಗೆ ಅಥವಾ ಒಂದು ಗುಂಪಿನವರಿಗೆ ಅವಮಾನಕರವಾದವುಗಳಾಗಿ ಯಾಗಲೀ ಇರಕೂಡದು ಮತ್ತು ಪ್ರತಿ ಪ್ರಶ್ನೆಯೂ ಅನುಕೂಲವಾದ ರೀತಿಯಲ್ಲಿ ಅನೇಕ ಸಣ್ಣ ಸಣ್ಣ ಪ್ರಶ್ನೆಗಳಾಗಿ ವಿಭಾಗಿಸಲ್ಪಡಬಹುದಾಗಿದ್ದರೂ, ಅವು ಒಂದೇ ವಿಷಯಕ್ಕೆ ಸಂಬಂಧಪಟ್ಟವಾಗಿರಬೇಕು (5) ಯಾವುದಾದರೂ ಪ್ರಶ್ನೆಗಳನ್ನು ಕೇಳಬೇಕೆಂಬ ಅಪೇಕ್ಷೆಯುಳ್ಳ ಮೆಂಬರು ವಿಚಾರಣೆಗೆ ಗೊತ್ತುಮಾಡಿರುವ ತಾರೀಖಿಗೆ ಕನಿಷ್ಠ ಪಕ್ಷ ಹತ್ತು ದಿನಗಳಿಗೆ ಮುಂಚೆ, ಆ ಪ್ರಶ್ನೆಗಳನ್ನು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿಯವರಿಗೆ ಕಳುಹಿಸಿಕೊಡಬೇಕು, ಹಾಗೆ ತಿಳಿಸುವ ನೋಟೀಸಿಗೆ ಪ್ರಶ್ನೆಯನ್ನು ಅನುಮೋದಿಸಲಪೇಕ್ಷಿಸುವವರು ಮುಂದೆ ಸರ್ಕಾರಿ ಉದ್ಯೋಗಸ್ಥರಲ್ಲದ ಇತರ ಮೆಂಬರುಗಳ ರುಜು ಆಗಿರತಕ್ಕದ್ದು (6) ಹನ್ನೆರಡಕ್ಕಿಂತಲೂ ಹೆಚ್ಚಾಗಿ ಪ್ರಶ್ನೆಗಳು ಬಂದಲ್ಲಿ, ಪ್ರಶ್ನೆಗಳ ಪ್ರಾಮುಖ್ಯತೆಯ ಮೇಲೂ, ಮೊದಲು ಯಾವುದು ಬಂತೆಂಬ ಕಾಲದ ಮೇಲೂ, ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ಇತರ ಮೆಂಬರುಗಳಿಂದ ಎಷ್ಟರಮಟ್ಟಿಗೆ ಅನುಮೋದಿಸಲ್ಪಟ್ಟು ಇರುತ್ತವೆಂಬ ಸಂಗತಿಯ ಮೇಲೂ ಪ್ರತ್ಯುತ್ತರ ಕೊಡಬೇಕಾಗಿರುವಂಥ ಪ್ರಶ್ನೆಗಳ ಸಂಖ್ಯೆಯನ್ನು ಚುನಾಯಿಸಲಾಗುವುದು (7) ತಮ್ಮ ಅಭಿಪ್ರಾಯದಲ್ಲಿ ಜನಗಳ ಪ್ರಯೋಜನಕ್ಕೆ ಅನುಕೂಲವಾಗಿರುವಂತೆ ಉತ್ತರವನ್ನು ಕೊಡುವುದಕ್ಕಾಗಲಾರದೆಂಬ ಒಂದು ಕಾರಣವಿನಾ ಮತ್ತಾವ ಕಾರಣವನ್ನೂ ತಿಳಿಸದೆಯೇ ಪ್ರೆಸಿಡೆಂಟರು ಯಾವ ಪ್ರಶ್ನೆಯನ್ನಾದರೂ ವಜಾಮಾಡಬಹುದು ಇಂಥಾ ಸಂದರ್ಭದಲ್ಲಿ ಸದರಿ ಪ್ರಶ್ನೆಯನ್ನು ಸಭೆಯ ನಡವಳಿಕೆಯ ಪುಸ್ತಕದಲ್ಲಿ ದಾಖಲುಮಾಡತಕ್ಕದ್ದಲ್ಲ (8) ಪ್ರೆಸಿಡೆಂಟರು, ತಮಗೆ ಯುಕ್ತವೆಂದು ತೋರಿದರೆ, ಹತ್ತು ದಿನಗಳ ನೋಟೀಸಿಗಿಂತಲೂ ಕಡಿಮೆಯಾದ ಅವಧಿಯಲ್ಲಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಕೊಡಬಹುದು ಮತ್ತು ಯಾವುದಾದರೂ ಒಂದು ಸಂದರ್ಭದಲ್ಲಿ ಅವರಿಗೆ ಯುಕ್ತವೆಂದು ತೋರಿದರೆ ನೋಟೀಸಿನ ಕಾಲಾವಧಿಯನ್ನು ಹತ್ತು ದಿನಗಳಿಗಿಂತಲೂ ಹೆಚ್ಚಾಗಿ ಗೊತ್ತು ಮಾಡಬಹುದು, ಅಥವಾ ಅವಶ್ಯಕವಾದರೆ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಕಾಲವನ್ನು ಹೆಚ್ಚಿಸಬಹುದು (9) ಮೇಲ್ಕಂಡ ನಿಯಮಗಳನುಸಾರವಾಗಿ ಪ್ರೆಸಿಡೆಂಟರಿಂದ ಅಂಗೀಕೃತವಾದ ಎಲ್ಲಾ ಪ್ರಶ್ನೆಗಳನ್ನೂ ನ್ಯಾಯವಿಧಾಯಕ ಸಭೆಯ ವಿಚಾರಣೆಯ ಕಾರ್ಯಕ್ರಮದ ಪಟ್ಟಿಯಲ್ಲಿ ದಾಖಲುಮಾಡತಕ್ಕದ್ದು ಉಳಿದ ಪ್ರಶ್ನೆಗಳ ಪೈಕಿ ಯಾವುದನ್ನಾದರೂ ಅದೇ ಮೆಂಬರು ನ್ಯಾಯವಿಧಾಯಕ ಸಭೆಯ ಮುಂದಿನ ಯಾವ ವಿಚಾರಣೆಯಲ್ಲಿಯಾಗಲೀ ಪುನಃ ಕೇಳಿದರೆ ಹೊಸ ಪ್ರಶ್ನೆಗಳಿಗಿಂತಲೂ ಅವುಗಳನ್ನು ಮೊದಲು ವಿಚಾರಕ್ಕೆ ತೆಗೆದುಕೊಳ್ಳತಕ್ಕದ್ದು (10) ಯಾವ ಮೆಂಬರಿಂದ ಪ್ರಶ್ನೆ ಏರ್ಪಡಿಸಲ್ಪಟ್ಟಿತೋ ಆ ಮೆಂಬರೇ ಅದನ್ನು ಓದತಕ್ಕದ್ದು, ಅಥವಾ ಅವರ ಗೈರುಹಾಜರಿಯಲ್ಲಿ ಅವರು ಅಪೇಕ್ಷಿಸಿದರೆ ಅವರ ಪರವಾಗಿ ಯಾರಾದರೂ ಇತರ ಮೆಂಬರು ಅದನ್ನು ಓದತಕ್ಕದ್ದು ಇದಕ್ಕೆ ಉತ್ತರವನ್ನು ಪ್ರೆಸಿಡೆಂಟರಾಗಲಿ, ಅಥವಾ ಈ ಕೆಲಸಕ್ಕಾಗಿ ಪ್ರೆಸಿಡೆಂಟರು ... ಯಾವ ಮೆಂಬರಾಗಲೀ ಕೊಡತಕ್ಕದ್ದು (11) ನೋಟೀಸಿನ ಮೂಲಕ ಒಂದು ಪ್ರಶ್ನೆಯು ಸಭೆಯಲ್ಲಿ ಮೊದಲಿಂದ ಕೇಳಲ್ಪಡದೇ ಇದ್ದರೂ, ಪ್ರೆಸಿಡೆಂಟರವರು ತಮ್ಮ ವಿವೇಚನಾನುಸಾರವಾಗಿ ಅದು ಜನಗಳ ಪ್ರಯೋಜನಕ್ಕೆ ಸಂಬಂಧಪಟ್ಟದ್ದೆಂಬ ಕಾರಣದ ಮೇಲೆ ಅದಕ್ಕೆ ಉತ್ತರಕೊಡತಕ್ಕದ್ದೆಂದು ವಿಧಿಸಬಹುದು (12) ಈ ನಿಬಂಧನೆಗಳ ಮೇರೆಗೆ ಕೇಳಲ್ಪಟ್ಟ ಪ್ರಶ್ನೆಗೆ ಕೊಡಲ್ಪಟ್ಟ ಉತ್ತರದ ವಿಷಯದಲ್ಲಿ ಯಾವ ಚರ್ಚೆಯನ್ನೂ ಮಾಡುವುದಕ್ಕೆ ಅವಕಾಶ ಕೊಡಕೂಡದು (13) ಕೇಳಲ್ಪಟ್ಟ ಪ್ರಶ್ನೆಯನ್ನೂ ಕೊಡಲ್ಪಟ್ಟ ಉತ್ತರವನ್ನೂ ಸಹ ಸಭೆಯ ನಡವಳಿಕೆಗಳ ಪುಸ್ತಕದಲ್ಲಿ ದಾಖಲುಮಾಡತಕ್ಕದ್ದು

ಗ್ರಾಮಾಭಿವೃದ್ಧಿಯ ವಿವರಗಳನ್ನು ತೋರಿಸುವ ತಃಖ್ತೆ.

ಸೂಚನೆಗಳು

1 ಈ ಕೆಳಗೆ ನಮೂದಿಸಿರುವ ಬಾಬುಗಳಲ್ಲಿ ಹಿಂದಿನ ವರ್ಷದಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆ, ಮುಂದಿನ ವರ್ಷದಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿ ನಡೆಸಬೇಕೆಂದು ಜನಗಳು ಕುತೂಹಲಪಟ್ಟಿದ್ದಾರೆ ಎಂಬ ಸಂಗತಿಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ಈ ತಃಖ್ತೆಯನ್ನು ಏರ್ಪಡಿಸಿರುತ್ತದೆ ಸದರಿ ಬಾಬುಗಳಲ್ಲಿ ಮುಖ್ಯವಾದುವುಗಳು ಯಾವುವೆಂದರೆ —(1) ವಿದ್ಯಾಭ್ಯಾಸ (ಸಾಮಾನ್ಯ ಮತ್ತು ಕೈಗಾರಿಕೆ) (2) ವ್ಯವಸಾಯ ಮತ್ತು ವ್ಯವಸಾಯದ ಉತ್ಪತ್ತಿ (3) ಕೈಗಾರಿಕೆ ಮತ್ತು ಕೈಗಾರಿಕೆಯ ಉತ್ಪತ್ತಿ (4) ವ್ಯಾಪಾರ (5) ರಸ್ತೆ, ನೀರಾವರಿ ವಗೈರೆ ಗ್ರಾಮದ ಕೆಲಸಗಳು, ಕಾಮಗಾರಿಗಳು (6) ಗ್ರಾಮಾರೋಗ್ಯ (7) ಉಪಯುಕ್ತವಾದ ಇತರ ಕೆಲಸಗಳು ಮೇಲ್ಕಂಡ ಅಂಶಗಳಲ್ಲಿ ಹಿಂದೆ ನಡೆದಿರುವ ಅಭಿವೃದ್ಧಿಯನ್ನು ತಿಳಿದುಕೊಳ್ಳುವುದರ ಮೂಲಕ ಮುಂದೆ ಇನ್ನೂ ಹೆಚ್ಚು ಅಭಿವೃದ್ಧಿ ನಡಿಸುವುದಕ್ಕೆ ಪ್ರೋತ್ಸಾಹಪಡಿಸಲು ಅನುಕೂಲವಾಗುವುದು 2 ಮೇಲೆ ನಮೂದಿಸಿರುವ ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಮುಂದಿನ ವರ್ಷದಲ್ಲಿ ನೆರವೇರಿಸುವುದಕ್ಕಾಗಿ ಜೂನ್ ಗುರ್ರೇ ತಾರೀಖಿಗೆ ಮುಂಚೆಯೇ ಒಂದು ಸಮಾಜವನ್ನು ನೇಮಿಸಬೇಕು ಆ ಸಮಾಜಕ್ಕೆ ಮೆಂಬರುಗಳ ಸಂಖ್ಯೆ 3 ರಿಂದ 5 ರ ಒಳಗಾಗಿ ಇರಬೇಕು ಹಿಂದಿನ ವರ್ಷ ಸಮಾಜದವರು ಏನೇನು ಕೆಲಸ ಮಾಡಿರುವರೆಂಬುದನ್ನೂ, ಮುಂದಿನ ವರ್ಷ ಏನೇನು ಹೆಚ್ಚು ಕೆಲಸ ನಡಿಸಬೇಕೆಂದು ಅವರು ಉದ್ದೇಶಿಸಿದ್ದಾರೆ ಎಂಬುದನ್ನೂ 12 ನೆಯ ಕಲಮಿನಲ್ಲಿ ಸಂಕ್ಷೇಪವಾಗಿ ನಮೂದಿಸಬೇಕು 3 ಯಾವ ಗ್ರಾಮದಲ್ಲಿ ಜನರು ತಾವೇ ಸೇರಿ ಸಮಾಜವನ್ನು ನೇಮಿಸಿಕೊಳ್ಳುವುದಿಲ್ಲವೋ ಅಂಥ ಗ್ರಾಮಕ್ಕೆ ತಾಲ್ಲೂಕು ಅಭಿವೃದ್ಧಿ ಸಮಾಜದವರಾಗಲಿ, ಅಂಥ ಸಮಾಜವು ಇಲ್ಲದ ಪಕ್ಷದಲ್ಲಿ ಅಮಲ್ದಾರರಾಗಲಿ ಗ್ರಾಮಾಭಿವೃದ್ಧಿ ಸಮಾಜವನ್ನು ನೇಮಿಸಬೇಕು 4 ಗ್ರಾಮದ ಜನಸಂಖ್ಯೆಯು 300 ಕ್ಕಿಂತ ಕಡಮೆಯಾಗಿದ್ದರೆ ಅಂಥಾ ಸಣ್ಣ ಗ್ರಾಮಗಳು 2 3 ಒಟ್ಟು ಸೇರಿ ಅವುಗಳಿಗೆಲ್ಲಾ ಒಂದೇ ಸಮಾಜವನ್ನು ನೇಮಿಸಿಕೊಳ್ಳಬೇಕು ಈ ಸಂದರ್ಭದಲ್ಲಿ ಯಾವುದು ಮುಖ್ಯ ಗ್ರಾಮವೋ ಅಲ್ಲಿ ಸಮಾಜವು ಸೇರುವ ಸ್ಥಳವೆಂದು ನಿರ್ಧರಿಸಬೇಕು ಆದರೆ ಆರು ಗ್ರಾಮಗಳಿಗಿಂತ ಹೆಚ್ಚಾಗಿ ಈ ರೀತಿ ಒಟ್ಟು ಸೇರಿಸಕೂಡದು 5 ಉತ್ತರಗಳನ್ನು ಮೊದಲು ಬೇರೆ ಕಾಗದದಲ್ಲಿ ಬರೆದಿಟ್ಟುಕೊಂಡು ಅನಂತರ ಈ ತಃಖ್ತೆಯಲ್ಲಿ ಬರೆಯಬೇಕು 6 ಗ್ರಾಮದಲ್ಲಿ ನೇಮಿಸಲ್ಪಟ್ಟಿರುವ ಅಭಿವೃದ್ಧಿ ಸಮಾಜದವರೇ ಸಾಮಾನ್ಯವಾಗಿ ಈ ತಃಖ್ತೆಯಲ್ಲಿ ಉತ್ತರಗಳನ್ನು ಬರೆಯಬೇಕು ಶಾನುಭೋಗರು ಅದನ್ನು ಓದಿನೋಡಿ ರುಜು ಹಾಕಬೇಕು ಮತ್ತು ಇದನ್ನು ತಯಾರ್ ಮಾಡುವುದರಲ್ಲಿ ಪಟೇಲರೂ ಶಾನುಭೋಗರೂ ಸಹಾಯ ಮಾಡಬೇಕು ಯಾವ ಗ್ರಾಮದಲ್ಲಿ ಅಭಿವೃದ್ಧಿ ಸಮಾಜವು ಇಲ್ಲವೋ ಆ ಗ್ರಾಮದಲ್ಲಿ ಈ ತಃಖ್ತೆಯನ್ನು ಪಟೇಲ್ ಶಾನುಭೋಗರೇ ತಯಾರ್ ಮಾಡಬೇಕು 7 ಈ ತಃಖ್ತೆಯ ಒಂದು ನಕಲನ್ನು ಪಟೇಲರು ಯಾವಾಗಲೂ ತಮ್ಮಲ್ಲಿ ದಾಖಲೆಗಾಗಿ ಇಟ್ಟುಕೊಂಡಿರಬೇಕು 8 ಈ ಪ್ರಶ್ನೆಗಳಿಗೆಲ್ಲಾ ಸರಿಯಾದ ಉತ್ತರಗಳನ್ನು ಸಮಾಜದವರೇ ಆಗಲಿ, ಶಾನುಭೋಗ ಪಟೇಲರೇ ಆಗಲಿ ಜೂನ್ ತಿಂಗಳಲ್ಲಿಯೇ ಸಾಧ್ಯವಾದ ಮಟ್ಟಿಗೂ ತಯಾರಿಸಿಟ್ಟುಕೊಂಡು ಜುಲೈ ತಿಂಗಳ 15 ನೆಯ ತಾರೀಖಿನೊಳಗಾಗಿ ತಃಖ್ತೆಯಲ್ಲಿ ಸ್ಪಷ್ಟವಾಗಿ ಬರೆದು ತಾಲ್ಲೂಕು ಅಭಿವೃದ್ಧಿ ಸಮಾಜಕ್ಕಾಗಲಿ, ಅಮಲ್ದಾರರಿಗಾಗಲೀ ರವಾನಿಸಬೇಕು 9 ಮೇಲೆ 1 ನೆಯ ಕಲಮಿನಲ್ಲಿ ನಮೂದಿಸಿರುವ ಮತ್ತು ಇತರ ಬಾಬುಗಳಲ್ಲಿ ಅಭಿವೃದ್ಧಿ ನಡಿಸುವುದಕ್ಕಾಗಿ ವಾರಕ್ಕೆ ಅರ್ಧ ದಿನದಂತೆ ಗ್ರಾಮಸ್ಥರ ಪೈಕಿ ಮನೆಗೆ ಒಬ್ಬರಂತೆ ಒಂದು ಸೇರಿ ಕೆಲಸ ಮಾಡುತ್ತಾ ಬಂದರೆ ಗ್ರಾಮಾಭಿವೃದ್ಧಿಗೆ ಸಹಾಯವಾಗುವುದು ಹಾಗೆ ಮಾಡಲು ಯಾರಿಗಾದರೂ ಸಾಧ್ಯವಾಗದೆ ಹೋದರೆ ಅಂಥವರು ಇತರರಿಂದ ಕೆಲಸ ಮಾಡಿಸಲು ಅನುಕೂಲಿಸುವಂತೆ ಒಂದಾನೆ ಆಣೆಯ ಮೇರೆಗೆ ಗ್ರಾಮಾಭಿವೃದ್ಧಿಯ ಕಾರ್ಯಕ್ಕಾಗಿ ಪಾವತಿ ಮಾಡುತ್ತಾ ಬರಬೇಕು ಈ ರೀತಿ ಯಾರ್‍ಯಾರು ಗ್ರಾಮ ಸಮಾಜಗಳು ಒಪ್ಪಿಕೊಳ್ಳುವುದಾದರೆ ಗ್ರಾಮಾಭಿವೃದ್ಧಿಯ ಕೆಲಸಗಳು ... ವಾಗಿ ಕೆಲಸ ನಡೆಯುವಂತ ತಕ್ಕ ಏರ್ಪಾಡು ಮಾಡುವ ಜವಾಬ್ದಾರಿಯನ್ನು ವಹಿಸತಕ್ಕದ್ದು

1 1911 ನೆಯ ಇಸವಿ ಜನಸಂಖ್ಯೆ ಗುರ್ರೆ ತಾರೀಖಿನಲ್ಲಿ ಒಟ್ಟು ಜನಸಂಖ್ಯೆ ಎಷ್ಟು ? ಗಂಡಸರು, ಹೆಂಗಸರು ಹುಡುಗರು, ಹುಡುಗಿಯರು ಇವರುಗಳ ಸಂಖ್ಯೆ ಎಷ್ಟೆಷ್ಟು ... ಈ ವರ್ಷದಲ್ಲಿ ... [ಸೂಚನೆ — ಈ ಸಂಗತಿಗಳನ್ನು ... ದಿಂದ ಸಂಗ್ರಹಿಸಬಹುದು] 3 ಓದುವುದೂ ಬರೆಯುವುದೂ ... (1) ಗ್ರಾಮದಲ್ಲಿ ಎಷ್ಟು ಪಾಠಶಾಲೆಗಳಿವೆ (2) ಎಷ್ಟು ಜನರು ಪಾಠಶಾಲೆಗಳಿಗೆ ಹೋಗುತ್ತಿದ್ದಾರೆ, ಇಲ್ಲವೆ ಬೇರೆ ಸ್ಥಳದಲ್ಲಿ ಓದಕಲಿಯುತ್ತಿದ್ದಾರೆ ? 4 (1) ಈ ಗ್ರಾಮದಲ್ಲಿ ಯಾವ ಯಾವ ವರ್ತಮಾನ ಪತ್ರಿಕೆಗಳನ್ನು ತರಿಸುತ್ತಿದ್ದಾರೆ (2) ವಾಚನಶಾಲೆಗಳು (ರೀಡಿಂಗ್ ರೂಂ) ಅಥವಾ ವಿದ್ಯಾಸಂಬಂಧವಾದ ಸಂಘಗಳು ಇದ್ದರೆ ಅವುಗಳ ವಿವರವನ್ನು ಸಂಕ್ಷೇಪವಾಗಿ ನಮೂದಿಸಿರಿ 6 ಗ್ರಾಮದಲ್ಲಿ ಎಷ್ಟು ... (ರೇವೆನ್ಯೂ) ಕಂದಾಯ ... ಇಟ್ಟುಕೊಂಡಿದ್ದಾರೆ ವ್ಯವಸಾಯ, ವ್ಯಾಪಾರ, ಕೂಲಿಯ ಕೆಲಸ ಇತ್ಯಾದಿ [ಸೂಚನೆ —ಗ್ರಾಮಸ್ಥರ ನಡಿಸುತ್ತಿರುವ ವ್ಯಾಪಾರದ ಕೆಲಸ, ಕಮ್ಮಾರರ ಕೆಲಸ, ನೇಯಿಗೆ ವಗೈರೆ ಮುಖ್ಯ ಕಸಬುಗಳನ್ನು ದಾಖಲು ಮಾಡಬೇಕು ಒಂದೇ ವಯಸ್ಸು ಮೊದಲಾದ ಕಾರಣಗಳಿಂದ ಉದ್ಯೋಗವಿಲ್ಲದೆ ಮನೆಯಲ್ಲಿರುವ ಸಂಖ್ಯೆಯನ್ನು ಆಶ್ರಿತರು ಎಂಬ ಕಲಮಿನಲ್ಲಿ ಬರೆಯಬೇಕು] 7 ಗ್ರಾಮದ ಮುಖ್ಯ ಬೆಳೆಗಳ ಅಥವಾ ಕಸಬುಗಳ ವಿಷಯದಲ್ಲಿ ಈ ರೀತಿನಲ್ಲಿ ಕಂಡ ವಿವರಗಳನ್ನು ತಿಳಿಸಿ —ಬತ್ತ, ರಾಗಿ ಕಬ್ಬು, ಎಳ್ಳು, ಸಜ್ಜೆ, ತೆಂಗು, ಅಡಿಕೆ ಇತ್ಯಾದಿಗಳ ವಿಸ್ತೀರ್ಣ ಅಥವಾ ಪರಿಮಾಣ ಮತ್ತು ಉತ್ಪನ್ನದ ಮೊತ್ತ [ಸೂಚನೆ — ಒಳಗೆ ... ವಿವರಗಳನ್ನು ... ಸಂಖ್ಯೆಗಳಿಂದ ಸಂಗ್ರಹಿಸಬಹುದು ... ವಿಚಾರಣೆಯಿಂದ ತಿಳಿದುಕೊಳ್ಳಬೇಕು] 8 ವ್ಯವಸಾಯವನ್ನು ಮುಖ್ಯ ವೃತ್ತಿಯಾಗಿಟ್ಟುಕೊಂಡಿರುವ ಎಷ್ಟು ಒಕ್ಕಲುಗಳು ಜೀವನ ಬರುವಂತೆ ಬೇರೆ ಕಸಬುಗಳನ್ನು ಅವಲಂಬಿಸಿರುತ್ತಾರೆ ? 9 ಕ್ಷಾಮವು ಬಂದರೆ ಎರಡು ವರ್ಷಗಳಿಗೆ ಸಾಕಾಗುವಷ್ಟು ದವಸವನ್ನಾಗಲಿ ಹಣವನ್ನಾಗಲಿ ಕೂಡಿಟ್ಟುಕೊಂಡಿರುವ ಒಕ್ಕಲುಗಳ ಸಂಖ್ಯೆ ಎಷ್ಟು ? ಹಾಗಿಲ್ಲದಾಗ್ಯೂ ಕಷ್ಟಕಾಲ ಬಂದರೆ ಹೇಗೆ ಜೀವನವನ್ನು ನಡಿಸಿಕೊಳ್ಳುತ್ತಾರೆ ? 10 (1) ಗ್ರಾಮದಲ್ಲಿ ಪರಸ್ಪರ ಸಹಾಯಕ ಸಂಘ ಇದೆಯೋ ? (2) ಎಷ್ಟು ಜನರು ಇದೇ ಗ್ರಾಮಕ್ಕೆ ಅಥವಾ ಬೇರೆ ಗ್ರಾಮಕ್ಕೆ ಸೇರಿದ ಪರಸ್ಪರ ಸಹಾಯಕ ಸಂಘಕ್ಕೆ ಸೇರಿದವರಾಗಿದ್ದಾರೆ ? ( ) ಗ್ರಾಮದಲ್ಲಿ ಪಂಚಾಯಿತಿ ಅಥವಾ ಇತರ ತೋಟಗಾರಿಕೆ, ಸಂಘಗಳಾಗಲಿ ಇವೆಯೋ ? ಅವು ಯಾವುವು ? 11 ಈ ತಃಖ್ತೆಯ ಎರಡನೆಯ ಪುಟದಲ್ಲಿ 1 ನೆಯ ಪ್ರಕರಣದಲ್ಲಿ ನಮೂದಿಸಿರುವ ಕೆಲಸಗಳ ಪೈಕಿ ಯಾವ ಯಾವುಗಳನ್ನು ಇನ್ನುಮುಂದೆ 5 ವರುಷಗಳೊಳಗಾಗಿ ಪೂರೈಸಬೇಕೆಂದು ಉದ್ದೇಶಿಸಿರುವರೋ ಅವನ್ನು ಸಂಕ್ಷೇಪವಾಗಿ ವಿವರಿಸಿರಿ 12 ವಾರಕ್ಕೆ ಅರ್ಧ ದಿನದಂತೆ ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ನಡಿಸುತ್ತಾ ಬರುವುದಕ್ಕೆ ಗ್ರಾಮಸ್ಥರು ಒಪ್ಪಿಕೊಂಡಿರುತ್ತಾರೆಯೋ ಹಾಗೆ ಒಪ್ಪಿಕೊಂಡಿದ್ದಲ್ಲಿ ಈ ವರ್ಷದಲ್ಲಿ ಎಷ್ಟು ದಿವಸಗಳು ಆ ರೀತಿ ಕೆಲಸ ನಡಿಸಲ್ಪಟ್ಟಿತು ? 13 (1) 11 ನೆಯ ಕಲಮಿನಲ್ಲಿ ವಿವರಿಸಿರುವದರ ಪೈಕಿ ಹಿಂದಿನ ವರ್ಷಗಳಲ್ಲಿ ಪ್ರಾರಂಭಿಸಲ್ಪಟ್ಟ ಕೆಲಸಗಳಲ್ಲಿ ಎಷ್ಟುಮಟ್ಟಿನ ಅಭಿವೃದ್ಧಿಯುಂಟಾಗಿದೆ ? (2) ಮುಂದಿನ ವರ್ಷದಲ್ಲಿ ಪ್ರಾರಂಭಿಸಬೇಕೆಂದಿರುವ ಕೆಲಸಗಳು ಯಾವುವು ? 14 ಈ ವರ್ಷದಲ್ಲಿ ಗ್ರಾಮಸ್ಥರು ಸಮುದಾಯ ರೀತಿಯಾಗಿ ಜೊತೆಗೂಡಿ ಅಥವಾ ಸ್ವತಃ ಕೆಲಸಮಾಡಿ ಯಾವ ಯಾವ ಸಾರ್ವಜನೋಪಯೋಗವಾದ ಕಾರ್ಯಗಳನ್ನು ನಡಿಸಿರುತ್ತಾರೆ ? ಅವುಗಳನ್ನು ವಿವರಿಸಿ, ಪ್ರತಿಯೊಂದಕ್ಕೂ ತಗಲಿದ ಖರ್ಚನ್ನು ನಮೂದಿಸಿರಿ 15 ಗ್ರಾಮದಲ್ಲಿ ಯಾರಾದರೂ ಧರ್ಮಾರ್ಥವಾಗಿ ಅಥವಾ ಜನೋಪಕಾರಕವಾದ ಕೆಲಸವನ್ನು ಮಾಡಿದ್ದಾರೆಯೋ ? ಅವರ ಹೆಸರನ್ನೂ, ಅವರು ಮಾಡಿರುವ ಕೆಲಸವನ್ನೂ, ಅದಕ್ಕೆ ಅವರು ಮುಟ್ಟಿಸಿರುವ ಖರ್ಚನ್ನೂ ಸಂಕ್ಷೇಪವಾಗಿ ವಿವರಿಸಿರಿ 16 ಕಳೆದ ವರ್ಷ ಈ ತಃಖ್ತೆಯನ್ನು ತಯಾರ್ ಮಾಡಿ ಕಳುಹಿಸಿದ ಗ್ರಾಮಾಭಿವೃದ್ಧಿ ಸಮಾಜದ ಮೆಂಬರುಗಳ ಇಲ್ಲವೆ ಗ್ರಾಮನೌಕರರ ಹೆಸರುಗಳನ್ನು ಇಲ್ಲಿ ಬರೆಯಿರಿ 17 ಮುಂದಿನ ವರ್ಷ ಗ್ರಾಮಾಭಿವೃದ್ಧಿ ಸಮಾಜಕ್ಕೆ ಮೆಂಬರುಗಳಾಗಿ ಗ್ರಾಮಾಭಿವೃದ್ಧಿಯ ಕೆಲಸವನ್ನು ನೆರವೇರಿಸಲು, ಈ ತಃಖ್ತೆಯನ್ನು ತಯಾರ್ ಮಾಡಲು ಒಪ್ಪಿಕೊಂಡಿರುವ ಸಾಮಾಜಿಕರ ಅಥವಾ ಗ್ರಾಮನೌಕರರ ಹೆಸರುಗಳನ್ನು ಬರೆಯಿರಿ

ಈ ತಃಖ್ತೆಗೆ ಶಾನುಭೋಗರೂ, ಸಾಮಾಜಿಕರು ಅಥವಾ ಅಧಿಕಾರಿಗಳೂ ರುಜುಮಾಡಬೇಕು

ವರದಕ್ಷಿಣೆಯ ಹಿಂಸ

ಸ್ನೇಹಲತಾದೇವಿಯು ವರದಕ್ಷಿಣೆ ನಿಮಿತ್ತವಾಗಿ ಮಾಡಿದ ದೇಹತ್ಯಾಗ

ಬಂಗಾಳಾ ದೇಶದಲ್ಲಿ ಒಬ್ಬ ಬ್ರಾಹ್ಮಣನಿಗೆ ಸ್ನೇಹಲತಾದೇವಿ ಎಂಬೊಬ್ಬ ಮಗಳಿದ್ದಳು ತಂದೆತಾಯಿಗಳು ಮಗಳನ್ನು ಅತಿಲಾಲನೆಯಿಂದ ಪೋಷಿಸುತ್ತಾ, ವಿದ್ಯಾವಂತಳನ್ನಾಗಿ ಮಾಡಿದರು ಮಗಳು ಪ್ರಾಪ್ತವಯಸ್ಕಳಾದ ನಂತರ ತಂದೆಯು ಅನುರೂಪನಾದ ವರನಿಗೆ ಕೊಟ್ಟು ಲಗ್ನಮಾಡಲು ಉದ್ದೇಶಮಾಡಿ, ವರಾನ್ವೇಷಣದಲ್ಲಿ ಉದ್ಯುಕ್ತನಾದನು ಆ ಪ್ರಾಂತ್ಯದಲ್ಲಿ ವರದಕ್ಷಿಣೆಯ ಹಾವಳಿ ವಿಶೇಷವಾಗಿದೆ ವರದಕ್ಷಿಣೆ ವಿನಹ ಬೇರೆ ಮಾತಿಲ್ಲ ಆ ರೀತಿ ಹೆಚ್ಚಾಗಿ ವರದಕ್ಷಿಣೆ ಕೊಟ್ಟ ಹೊರತು ತಕ್ಕ ವರನು ದೊರಕುವದು ದುರ್ಲಭ ಆದರೆ ಹೆಚ್ಚಾದ ವರದಕ್ಷಿಣೆಯನ್ನು ಕೊಡಲು ಎಲ್ಲರಿಗೂ ಸಾಧ್ಯವಲ್ಲ ಈ ಕಾರಣದಿಂದ ಅನೇಕ ಸಂಸಾರಿಗಳು ಕ್ಷೀಣಗತಿಗೆ ಬಂದಿರುತ್ತಾರೆ ಸ್ನೇಹಲತಾದೇವಿಯ ತಂದೆಯು ಪುಣ್ಯವಂತನಲ್ಲ ತನ್ನ ಮಗಳಿಗೆ ತಕ್ಕ ವರನನ್ನು ಕೊಡಿಸಲು ಮಾಡಿದ ಪ್ರಯತ್ನವೆಲ್ಲಾ ಸಾರ್ಥಕವಾಗದೆ ಹೋಯಿತು ಕಡೆಗೆ ಒಬ್ಬ ವರನಿಗೆ ಎರಡು ಸಾವಿರ ರೂಪಾಯಿ ವರದಕ್ಷಿಣೆ ಕೊಡಲು ಒಪ್ಪಿ ಲಗ್ನನಿಶ್ಚಯಮಾಡಿದನು ಈ ಧನವನ್ನು ಶೇಖರಮಾಡಲು ಅವನು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು ತಾನು ವಾಸವಾಗಿದ್ದ ಪಿತ್ರಾರ್ಜಿತವಾದ ಮನೆಯನ್ನು ಭೋಗ್ಯ ಮಾಡಿದ ಹೊರತು ಬೇರೆ ಮಾರ್ಗವಿಲ್ಲವೆಂದು ನಿರ್ಧಾರ ಮಾಡಿಕೊಂಡನು ಸ್ವಾಭಾವಿಕವಾಗಿ ಇವನ ಮಗಳು ತನ್ನ ತಂದೆ ಮಾಡುತ್ತಿದ್ದ ಪ್ರಯತ್ನ, ತಾಯಿತಂದೆಗಳ ಕಷ್ಟ ಮತ್ತು ಮನೆಯನ್ನು ಭೋಗ್ಯಮಾಡುವ ಉದ್ದೇಶ ಸಹಾ ಚೆನ್ನಾಗಿ ತಿಳಿದುಕೊಂಡು, ತನ್ನ ದೆಸೆಯಿಂದ ಪಿತ್ರಾರ್ಜಿತವಾದ ತನ್ನ ತಂದೆಯ ಮನೆಯು ಅವನ ಕೈತಪ್ಪಿ ಹೋಗುವ ಸಂಭವ ಎಂತೆಂದು ಯೋಚಿಸಿದಳು ಮತ್ತು ಈ ಕಾರಣದಿಂದ ತನ್ನ ಮಾತಾಪಿತೃಗಳು, ಸಹೋದರ ಸಹೋದರಿಯರು ಸಹ ವಾಸಕ್ಕೆ ಮನೆಯಿಲ್ಲದೆಯೂ, ಭಾರಿ ಸಾಲಕ್ಕೆ ಗುರಿಯಾಗಿ ಹೆಚ್ಚಾದ ದಾರಿದ್ರ್ಯ ಮತ್ತು ಸಂಕಷ್ಟಕ್ಕೆ ಬರಬಹುದೆಂದು ಪರ್ಯಾಲೋಚಿಸಿದಳು ಈ ರೀತಿ ತನ್ನ ತಂದೆಯ ಕುಟುಂಬಕ್ಕೆ ಒದಗಿದ ದುಸ್ತರವಾದ ವಿಪತ್ತಿಗೆ ತಾನು ದೇಹತ್ಯಾಗ ಮಾಡಿದ ಹೊರತು ಮತ್ತಾವ ವಿಧದಿಂದಲೂ ನಿವಾರಣೆಯಾಗಲಾರದೆಂದು ಯೋಚಿಸಿ ಪ್ರಾಣತ್ಯಾಗ ಮಾಡಲು ನಿರ್ಧರಿಸಿದಳು ತನ್ನ ತಂದೆಗೆ ಒಂದು ಪತ್ರಿಕೆಯನ್ನು ಬರೆದಿಟ್ಟು, ಸರಿ ರಾತ್ರಿಯಲ್ಲಿ ಒಬ್ಬಳಿಗೂ ತಿಳಿಯದ ಹಾಗೆ ತಾನುಟ್ಟಿದ್ದ ಬಟ್ಟೆಗೆ ಸೀಮೆಯೆಣ್ಣೆ ಸುರಿದು ... ಬೆಂಕಿ ಹಚ್ಚಿಕೊಂಡಳು ನೆರೆಹೊರೆಯವರು ಹೆಚ್ಚಾದ ಬೆಳಕು ಕಂಡು ಗಾಬರಿಬಿದ್ದು ಹೋಗಿ ನೋಡುವಲ್ಲಿ ಸ್ನೇಹಲತಾದೇವಿಯು ಮಾಡಿದ ಕಾರ್ಯವು ವ್ಯಕ್ತಪಟ್ಟಿತು ಬೆಂಕಿಯು ... ಒತ್ತಟ್ಟಾಗಿ ಆವಳನ್ನು ಆಸ್ಪತ್ರೆಗೆ ಸಾಗಿಸಿದರೂ ಎಲ್ಲಾ ಪ್ರಯತ್ನವೂ ನಿಷ್ಪ್ರಯೋಜನವಾಗಿ, ಸ್ನೇಹಲತಾದೇವಿಯು ಈಗ ಸುಮಾರು ಹದಿನೈದು ದಿವಸಗಳ ಕೆಳಗೆ ಕಾಲವಾದಳು

ಆ ಹುಡುಗಿ ತನ್ನ ತಂದೆಗೆ ಬರೆದಿಟ್ಟ ಕಾಗದದ ಒಕ್ಕಣೆ ಏನೆಂದರೆ— ತೀರ್ಥರೂಪು ತಂದೆಯವರ ಪಾದಸನ್ನಿಧಿಗಳಿಗೆ—ನನ್ನ ಮದುವೆಗೋಸ್ಕರ ತಾವು ನಮ್ಮ ಮನೆಯನ್ನು ಭೋಗ್ಯ ಮಾಡಲು ... ಹಿತವಾಗಿಯೂ ಆ ರೀತಿ ಮಾಡಬೇಡಿ ಹಾಗೆ ಮಾಡಲು ಇನ್ನು ತಮಗೆ ಅವಶ್ಯಕವೂ ಇರುವುದಿಲ್ಲ ... ತಮ್ಮ ... ಈ ನನ್ನ ಪ್ರಯತ್ನ ... ನನ್ನನ್ನು ಕುರಿತು ... —ತಾವು ತಮ್ಮ ಪ್ರೀತಿಯ ವಾತ್ಸಲ್ಯದಿಂದ ನನ್ನ ಮೇಲೆ ವಿಶೇಷವಾಗಿ ಸುರಿಸಿರುತ್ತೀರಿ ... ಕೋಮಲವಾದ ಪ್ರೇಮಲತೆಯು ... ನಾನು ನನ್ನ ಮಾತಾಪಿತೃಗಳ ವಿಶ್ವಾಸಕ್ಕೆ ಪಾತ್ರಳಾಗಿ, ಅನೇಕ ರಾತ್ರಿ ... ಸುಖವನ್ನು ಅನುಭವಿಸಿದೆನು ಈ ದೃಷ್ಟಿಯಿಂದ ... ವನ್ನು ಬೀದಿಗಳಲ್ಲಿ, ... ಈ ... ಮಗೆ ಪ್ರತಿ ... ಪ್ರಿಯ ತಂದೆಯೇ, ತಮ್ಮನ್ನು ... ದುಃಖಕ್ಕೂ ಗುರಿಮಾಡುವದು ... —ತೋಟ್ಟದ ... ಬೆಳಗಿನಿಂದ ಅಪರಾಹ್ನ ಪರ್ಯಂತ ... ಬೀದಿ ... ನೋಡಿದನು ಆ ಕಾಲದಲ್ಲಿ ... ತಮ್ಮ ಮುಖವನ್ನು ಕಣ್ಣಾರ ಕಂಡೆನು ... "ಎಲ್ಲಾ ... " ಎಂದು ಆಡಿದ ... ಗಳನ್ನು ... ಕೇಳಿದೆನು ಆ ದಿವಸ ನೋಡಿದ ಮುಖ ... ನನ್ನ ಮುಂದೆ ... ಮತ್ತು ಆಗ ನುಡಿದ ನಿಮ್ಮ ಮಾತು ... ಸ್ಮೃತಿಗೆ ಬರುತ್ತವೆ ಮತ್ತು ನನ್ನ ಲಗ್ನಕ್ಕೋಸ್ಕರ ಧನಸಂಗ್ರಹಮಾಡಲು ತಾವು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾಯಿತೆಂತಲೂ, ವಾಸವಾಗಿರುವ ಮನೆಯನ್ನು ಭೋಗ್ಯನಾಡಿದ ಹೊರತು ಬೇರೆ ಉಪಾಯವಿಲ್ಲವೆಂದು ಹೇಳಿದ, ಹೃದಯವನ್ನು ಭೇದಿಸುವ ಮಾತುಗಳನ್ನು ಕೂಡ ಕೇಳಿದೆನು — ಪ್ರಿಯ ಜನಕನೆ, ಈ ನಿಮ್ಮ ಯೋಚನೆಯನ್ನು ನಾನು ಕೇಳಲಾರೆನು ಮತ್ತು ತಮ್ಮ ಮನಸ್ಸಿಗೆ ಇನ್ನೂ ಹೆಚ್ಚಾದ ಭಾರವನ್ನು ಹೊರಿಸುವ, ಆ ಭಾರವ ... ಯಿಂದ ನರಳಬೇಕು ? ಇದು ಹಾಗೂ ತಾವು ನನಗೆ ಲಗ್ನಮಾಡದೆ ಇರುವದ ... ಎಷ್ಟು ಆಕ್ಷೇಪಕ್ಕೂ ಅಪಹಾಸ್ಯಕ್ಕೂ ಗುರಿಯಾಗಿರುತ್ತೀರಿ ... ತಾವು ನನಗೆ ವರನನ್ನು ಒದಗಿಸಲು ... ಪ್ರಯತ್ನವೆಲ್ಲಾ ... ಹೋಯಿತೆಂತಾಯಿತೆಂದು ಯಾರಿಗೆ ತಾನೇ ಗೊತ್ತಿಲ್ಲ ಪೂರ್ವಿಕರಿಂದಲೂ ಬಂದಿರುವ ಈ ನಮ್ಮ ಮನೆಯಲ್ಲಿ ಆಸರೆ ... ಆಗಲೀ, ಅಥವಾ ಅಪರಿಚಿತರ ಜನರ ಸಂಬಂಧವನ್ನಾಗಲೀ ನಾನು ಸಹಿಸತಕ್ಕವಳಲ್ಲ ಈ ವಿಷಯಕ್ಕೆ ತಮ್ಮನ್ನು ಎಂದಿಗೂ ಗುರಿಮಾಡಲಾರೆನು ಅದಕ್ಕೆ ಪ್ರತಿಯಾಗಿ ಈ ನನ್ನ ದೇಹವನ್ನೇ ಪೂರ್ಣಾಹುತಿಯಾಗಿ ಅರ್ಪಣೆಮಾಡಲು ಸಂಕಲ್ಪಮಾಡಿರುತ್ತೇನೆ —ಬರ್ದವಾನ್ ... ನಲ್ಲಿ ನದಿ ಉಕ್ಕಿ ಹೆಚ್ಚಾದ ಹಾವಳಿಯನ್ನುಂಟುಮಾಡಿದಾಗ ನಮ್ಮ ದೇಶದ ಅನೇಕ ವಿದ್ಯಾವಂತರಾದ, ಉದಾರಿಗಳಾದ ಯುವಕರು ಬಾಧೆಯ ಪಶ್ಚಾತ್ತಾಪ ಭರಿತರಾಗಿ ಕಷ್ಟ ನಿವಾರಣೆಮಾಡಲು ಅತಿ ಸಾಹಸಮಾಡಿದರೆಂದು ಕೇಳಿದ್ದೇನೆ ಈ ತರುಣಾವಾಲಿಗಳಿಗೆ ಬೇರಾರು ಕ್ರೀಯೆನ್ನುಂಟುಮಾಡಲಿ ಅಲ್ಲದೆ ಅನೇಕರು ಪರದೇಶ ವಸ್ತುಗಳನ್ನು ತ್ಯಜಿಸಿ, ಸ್ವದೇಶವಸ್ತುಗಳನ್ನು ಪ್ರಚುರಮಾಡಲು ಬದ್ಧಕಂಕಣರಾಗಿರುತ್ತಾರೆಂದು ಸಹ ಕೇಳಿದ್ದೇನೆ ಮತ್ತು ದಕ್ಷಿಣ ಆಫ್ರಿಕದಲ್ಲಿರುವ ನಮ್ಮ ಜನಗಳ ಸಹಾಯಕ್ಕಾಗಿ ಅನೇಕ ಗಣ್ಯರಾದವರು ಮನೆಮನೆಗೆ ಹೋಗಿ ಚಂದಾ ಹಣವನ್ನು ಎತ್ತಿದರೆಂದೂ ಕೇಳಿರುವೆನು ಆದರೆ ತನ್ನ ಸ್ವಜನಗಳ ಕಷ್ಟಕ್ಕೆ ಮರುಗುವ ದಯಾರ್ದ್ರಹೃದಯರಾರೂ ಇರುವದಿಲ್ಲವೇ ?—ಪ್ರಿಯ ಜನಕನೇ ! ನೆನ್ನೆ ರಾತ್ರಿ ಒಂದು ಸ್ವಪ್ನವನ್ನು ಕಂಡು, ಈ ಪ್ರತಿಜ್ಞೆಮಾಡಿದೆನು. ಅಮಾನುಷವಾದ ಸರ್ವ ಮನಸ್ಸನ್ನು ಆಕರ್ಷಿಸುವ ದಿವ್ಯ

...ನವು ಕೇಳಬಂತು ಈ ಭೂಲೋಕಕ್ಕೆ ಸೇರದ ಒಂದು ದಿವ್ಯ ...ರಾಶಿಯ ಮಧ್ಯೆ ಜಗಜ್ಜನನಿಯಾದ ದುರ್ಗಾದೇವತೆಯು ಪ್ರಸನ್ನಳಾಗಿ ...ಪರಿಪೂರ್ಣವಾದ ಮುಗುಳುನಗೆಯಿಂದೊಡಗೂಡಿ ನನ್ನನ್ನು ...ಬಾರೆಂದು ಕೈಸನ್ನೆಮಾಡಿದಂತೆ ಕಂಡೆನು ಆಗ ಶಾಪ, ಶೋಕಗ್ರಸ್ತ ...ಯುವತಿಯೂ, ನನ್ನ ಮನೆಯಲ್ಲಿ ಸರ್ವದಾ ಹರ್ಷವನ್ನು ಬೀರುತ್ತ ...ವ ಚಿಕ್ಕ ಮಕ್ಕಳು ಸಹ ಸ್ಮರಣೆಗೆ ಬಂದಿರಿ ತಮ್ಮನ್ನೂ ನನ್ನ ಪ್ರೀತಿಗೆ ...ರವರನ್ನೆಲ್ಲಾ ಮಹದ್ವಿಪತ್ತಿನಿಂದ ಪಾರುಮಾಡಲು ದೃಢಚಿತ್ತಳಾಗಿ, ...ಪೂರ್ಣಳಾದ ಮಹಾದೇವತೆಯ ಆಜ್ಞಾನುಸಾರ ಕ್ಷಣಮಾತ್ರವೂ ತಡ ...ದೆ ನಡೆಯಲು ಸಿದ್ಧಳಾಗಿದ್ದೇನೆಂದು ಸಂಜ್ಞೆಮಾಡಿದೆನು

ನನ್ನ ಮರಣಾನಂತರ ತಾವು ಅಪಾರವಾದ ಕಂಬನಿಗಳನ್ನು ಸುರಿಸುವಿರೆಂ...ನಾನು ಚೆನ್ನಾಗಿ ಬಲ್ಲೆನು ನಂನೇನೋ ಪ್ರಾಣ ತ್ಯಾಗಮಾಡಿದೆನು ಆದರೆ ...ಬದ ಮನೆಯು ಪರಹಸ್ತಗತವಾಗುವದರಿಂದ ಉಳಿದುಕೊಂಡಿತು ...ಕಲ್ಪವಾಡಿದಲಾಗಾಯ್ತು ಅಗ್ನಿ, ಜಲ, ಪಾಷಾಣಗಳ ಪೈಕಿ ಯಾವದರ ...ಲಕ ನನ್ನ ಇಹಲೋಕ ಯಾತ್ರೆಯನ್ನು ಸಮಾಪ್ತಿಮಾಡಿಕೊಳ್ಳಬೇಕೆಂದು ...ಲ ಯೋಚನೆಮಾಡಿದೆನು ಇವುಗಳ ಪೈಕಿ ಅಗ್ನಿಯೇ ಉತ್ಕೃಷ್ಟವೆಂ...ದು ನಿರ್ಧರಿಸಿ, ಆ ಮೂಲಕ ಈ ಪ್ರಾಣವನ್ನು ಬಿಡಲು ಸಿದ್ಧಾಂತಮಾಡಿ... ಈ ನನ್ನ ಕಳೇಬರವನ್ನು ದಹಿಸಲು ಹಾಕಿದ ಬೆಂಕಿಯು ದಶದಿಕ್ಕುಗಳ...ಲ್ಲಿ ವರದಕ್ಷಿಣೆಯಾದಿಯಲ್ಲಿ ಹರಡಿಕೊಳ್ಳಲಿ ಪ್ರಿಯ ತಂದೆಯೇ, ನನ್ನ ... ವಂದನೆಗಳನ್ನು ಸ್ವೀಕರಿಸಿ, ಅಪ್ಪಣೆಯನ್ನು ದಯಪಾಲಿಸಿ ಬಲಿಯನ್ನು ...ವ ಕಾಲವು ಒದಗಿಬಂದಿದೆ ಪ್ರಪಂಚವೆಲ್ಲಾ ಸುಖವಾಗಿ ಗಾಢನಿದ್ರೆಯಲ್ಲಿದೆ ...ಕೂಡ ಸ್ವಪ್ನದಲ್ಲೀ ಎಚ್ಚರವಿಲ್ಲದ ಆ ದೀರ್ಘನಿದ್ರೆಯನ್ನವಲಂಬಿ...ಸುವೆನು ಈಗ ಅಪೂರ್ವವಾದ ಮತ್ತು ಆಹ್ಲಾದಕರವಾದ ಮನೋವೃ...ತ್ತಿಯು ನನ್ನ ಮನಸ್ಸನ್ನು ಗೆಲ್ಲುತ್ತಲಿದೆ ಪರಲೋಕದಲ್ಲಿ ಜಗನ್ಮಾತೆಯಾದ ದುರ್ಗಾದೇವತೆಯ ಪಾದಾರವಿಂದವನ್ನು ಸೇರಿ, ಅದ್ಯಂತರಂತವಾದ ದಿವ್ಯ ...ಸುಖವನ್ನು ಹೊಂದಿ, ಅಲ್ಲಿಗೆ ಮಾತಾಪಿತೃಗಳಾದ ತಮ್ಮಗಳ ಆಗಮನವನ್ನು ನಿರೀಕ್ಷಿಸುತ್ತಾ ನಾನು ಕಾಯಬೇಕಾದದ್ದು ಕೂಡ ಕೊಂಚಕಾಲ ಮಾತ್ರವಲ್ಲವೇ ?"

ಈ ಲೇಖನವನ್ನು ಓದಿದರೆ ಯಾರ ಮನಸ್ಸು ತಾನೇ ಕರಗದೆ ಇದ್ದೀತು ? ...ಲತಾದೇವಿಯು ದೇಹತ್ಯಾಗಮಾಡಿ ತನ್ನ ಭಕ್ತಿಭಾವದಿಂದ ಮದುವೆ ...ಕ್ಕೆ ಬಾಲಕರಿಗೂ ಮತ್ತು ಅವರ ಮಾತಾಪಿತೃಗಳಿಗೂ ಇನ್ನು ಮೇಲಾ...ದ ವರದಕ್ಷಿಣೆಯನ್ನಪೇಕ್ಷಿಸುವ ದುಷ್ಟ ಪದ್ಧತಿಯನ್ನು ಆಚರಿಸ ಬೇಡಿ ...ಎಂದು ವಿಶೇಷವಾಗಿ ಸಾರುತ್ತಾಳೆ ಪೂರ್ವದಲ್ಲಿ ಲೋಕ ಕಂಟಕನಾದ ವೃತ್ರಾಸುರನ ಸಂಹಾರಕ್ಕೆ ತಕ್ಕ ಆಯುಧವನ್ನು ಮಾಡುವದಕ್ಕೆ ದಧೀಚಿ ಮಹರ್ಷಿಯು ತನ್ನ ಬೆನ್ನಿನ ಮೂಳೆಯನ್ನಿತ್ತು ಪ್ರಾಣತ್ಯಾಗಮಾಡಿ ಜಗತ್ತನ್ನು ಉದ್ಧರಿಸಿದಂತೆ ಪವಿತ್ರ ಸ್ನೇಹಲತಾದೇವಿಯು ಕೂಡ ಈಗ ಬಂಗಾಳದ ವರದಕ್ಷಿಣೆ ಎಂಬ ದುಷ್ಟ ರಾಕ್ಷಸನ ದಾವಳಿಯನ್ನು ತಪ್ಪಿಸಲು ಪ್ರಾಣತ್ಯಾಗಮಾಡಿದಂತೆ ಆಯಿತು ಈ ಮಹಾತ್ಮಳ ಹೆಸರು ಶಾಶ್ವತವಾಗಿ ಇರಬೇಕೆಂದು ಅಭಿಪ್ರಾಯದಿಂದ ಕಲ್ಕತ್ತಾ ಸೆನೆಟ್ ಹಾಲಿನ ಮುಂದೆ ಆಕೆಯ ಒಂದು ಪ್ರತಿಮೆಯನ್ನು ಇಡಿಸಲು ...ಯಿಸುತ್ತಾರೆ ಅಲ್ಲಿನ ಅನೇಕ ವಿದ್ಯಾರ್ಥಿಗಳು ...ನ್ನು ಮದುವೆ ವರದಕ್ಷಿಣೆಯನ್ನು ಬೇಡುವದಿಲ್ಲವೆಂದು ಪ್ರತಿಜ್ಞೆ ಮಾಡಿರುವರು ...ಕ್ಕೆ ಈ ದುಷ್ಟ ಪದ್ಧತಿಯನ್ನು ತಪ್ಪಿಸಲು ಯಾವ ಮಾರ್ಗವನ್ನು ಅನು...ಸಬೇಕೆಂದು ಯೋಚಿಸಲು ಸಭೆಗಳನ್ನು ನಡಿಸುತ್ತಲಿದ್ದಾರೆ ಆ ಪ್ರಾಂತ್ಯದವರೆಲ್ಲರೂ ವರದಕ್ಷಿಣೆ ತೆಗೆದುಕೊಳ್ಳುವವರು ಯಾವರೀತಿ ಆ ದ್ರವ್ಯವನ್ನು ವಿನಿಯೋಗ ಮಾಡಿ ಪಾಪಪರಿಹಾರ ಮಾಡಬೇಕೆಂದು ಯೋಚನಾಗ್ರಸ್ತರಾಗಿದ್ದಾರೆ

ಸ್ನೇಹಲತಾದೇವಿಯು ತನ್ನ ಕಾರ್ಯದಿಂದ ಆಬಾಲವೃದ್ಧರ ಕೀರ್ತಿಯನ್ನು ಸಂಪಾದಿಸಿದಳು ಆದರೆ ಆ ಶ್ರೀಮಂತ ಹುಡುಗನ ತಂದೆಯ ಮನಸ್ಸು ಕರಗಲಿಲ್ಲ ... ತನ್ನ ತಂದೆಯು ಕೊಡಲು ಬೈತನ್ನ... ಆ ಮಹಾತ್ಮಳು ಅನುಭವಿಸಿದಳು ಸ್ನೇಹಲತಾದೇವಿ... ಇನ್ನೂ ಎಷ್ಟು ಜನ ರತ್ನಗಳು ದುಃಖ ಪೀಡಿತರಾಗಿರುವರಿಲ್ಲ ? ಅವಳ ...ಎಷ್ಟು ಜನ ವಂತಾಗ್ರಸ್ತರಾಗಿರುವರಿಲ್ಲ ದಿನೇ ದಿನೇ ವರದಕ್ಷಿಣೆಯ ...ವು ಎಲ್ಲಾ ಭಾಗಗಳಲ್ಲಿಯೂ ವ್ಯಾಪಿಸುತ್ತಿದೆ ಆ ಹಾವಳಿಯನ್ನು ...ಬಿಟ್ಟ ಹೊರತು ಜನಾಂಗದ ಏಳಿಗೆ ಕಾಣಬರುವದಿಲ್ಲ ವರದಕ್ಷಿಣೆಯನ್ನ...ಪದ್ಧತಿಯು ...ಮ್ಮ ವರದಕ್ಷಿಣೆ ಪಡೆಯ ಮಾಡಿದರೆಂದ ... ಬೇಕಾಗಿಲ್ಲ ಇದು ನವ ವಿಚಾರವಲ್ಲವೇ ? ಸ್ನೇಹಲತಾದೇವಿಯು ತನ್ನ ಮರಣದಿಂದ ನಮ್ಮಗಳಿಗೆ ಎಚ್ಚರಿಕೆ ಕೊಟ್ಟಂತಾಯಿತು ಇದ...ರಿಂದ ನಾವು ಆ ಪದ್ಧತಿಯನ್ನು ನಿಲ್ಲಿಸದೆ ಹೋದ ಪಕ್ಷಕ್ಕೆ ಪೋಷಕರಾದ ...ದವರಿಗೆ ಗುರಿಯಾಗ ಬೇಕಾಗುತ್ತೆ ಬಾಲಕಿಯರು ... ಪ್ರತಿ ... ತಮ್ಮ ಕೈಲಾದ ಮಟ್ಟಿಗೆ ಈ ದುಷ್ಟ ಮಿಶ್ರ ಬಂದು ವರ್ಗಗಳ ಮಧ್ಯೆ ಈ ಕೆಟ್ಟ ಪದ್ಧತಿಗೆ ಆಸ್ಪದಕೊಡದಂತೆ ಪ್ರಯತ್ನಪಟ್ಟರೆ ಇದುವರೆಗೂ ...ದ ಸಂಭವಿಸಿರುವ ಪಾಪಕ್ಕೆ ಉಚಿತವಾದ ಪ್ರಾಯಶ್ಚಿತ್ತವೆನ್ನಬಹುದು

ಚಿಕ್ಕಮಗಳೂರ್ ಬಿ ವೆಂಕಟರಾಮಣ್ಣ

ದಿವಾನರವರ ಪರ್ಯಟನ.

ಸಾಲಿಗ್ರಾಮ

ಕಳೆದ ತಿಂಗಳ ತಾ 20 ನೇ ಶುಕ್ರವಾರ ಪ್ರಾತಃಕಾಲ ನಮ್ಮ ಸಂಸ್ಥಾನದ ಮಂತ್ರಿವರ್ಯರಾದ ದಿವಾನ್ ಮ॥ ಎಂ ವಿಶ್ವೇಶ್ವರಯ್ಯ, ಸಿ ಐ ಇ ಯವರು ...ಗೆ ದಯಮಾಡಿ ಟ್ರಾವಲರ್ಸ್ ಬಂಗಲೋ ಎದುರಿಗೆ ಹಾಕಿದ್ದ ಮಂಟಪ...ದಲ್ಲಿ ಮೊದಲು ಪಟೇಲ್ ಶ್ಯಾನುಭೋಗರೇ ಮುಂತಾದ ಉದ್ಯೋಗಸ್ಥರಿಂದಲೂ ...ಮುಂದೆ ಊರಿನ ಹೊರಭಾಗದಲ್ಲಿ ದಿವ್ಯವಾಗಿ ಅಲಂಕರಿಸಿದ್ದ ಹಸುರು ...ಚಪ್ಪರದಲ್ಲಿ ಮ್ಯುನಿಸಿಪಲ್ ಮೆಂಬರುಗಳಿಂದಲೂ ಮರ್ಯಾದೆಗಳನ್ನು ...ಕರಿಸಿ, ಈ ಊರಿಗೆ ಉಂಟಾಗಿರತಕ್ಕ ನೀರಿನ ತೊಂದರೆಯನ್ನು ಅವರಿಂದ ...ಶೀಘ್ರದಲ್ಲೀ ತಕ್ಕ ಪರಿಹಾರೋಪಾಯವನ್ನು ಮಾಡುತ್ತೇವೆಂದು ಉತ್ತರವನ್ನು ದಯಪಾಲಿಸಿ, ರಸ್ತೆಯ ಎರಡು ಪಕ್ಕಗಳಲ್ಲಿಯೂ ಕಿಕ್ಕಿರಿಯುವಂತೆ ...ದ್ದ ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸುತ್ತಾ ಮುಂದೆ ಬರುತ್ತಿರಲು, ...ನ ಜೈನಪ್ರಜೆಗಳು ತಮ್ಮ ದೇವಸ್ಥಾನದ ಮುಂಭಾಗದಲ್ಲಿ ನೇತ್ರಾನಂದಕರ...ವಾಗಿ ಅಲಂಕರಿಸಿದ್ದ ಮಂಟಪದಲ್ಲಿ ಅವರು ಬೇಡಿಕೊಂಡ ಪ್ರಕಾರ ದಿವಾನರ...ನ್ನು ಸುಖಾಸನದ ಮೇಲೆ ಕುಳಿತು ಈ ಕೆಳಗೆ ಕಂಡ ವಿಜ್ಞಾಪನಾ ಪತ್ರಿಕೆಯನ್ನು ...ಸಿದರು ಅದರಲ್ಲಿ ಕಂಡ ಮುಖ್ಯಾಂಶಗಳೇನೆಂದರೆ—

"ಶಿರೋಮಣಿಗಳಾದ ತಾವು ಸರ್ವಪ್ರಜೆಗಳನ್ನೂ ಸಮದೃಷ್ಟಿಯಿಂದ ...ತ್ತ ವಿಶ್ವೇಶ್ವರಾಭಿಧಾನವನ್ನು ಸಾರ್ಥಕಪಡಿಸಿಕೊಂಡಿರುವುದಲ್ಲದೆ ಪ್ರಕೃ...ತಿಯುಚಿಂತನೆಯನ್ನು ಮಾಡುವುದಕ್ಕಾಗಿ ಈ ಪ್ರಾಂತ್ಯ ದಯಮಾಡಿಸಿದವ...ರಾಗಿ ಪ್ರಥಮಮಂತ್ರಿವರ್ಯರಾಗಿರುವುದಕ್ಕಾಗಿ ತುಂಬಾ ಕೃತಜ್ಞರಾಗಿದ್ದೇವೆ ...ಸಂಸ್ಥಾನದ ಮಂತ್ರಿಪದವಿಯನ್ನು ಅಲಂಕರಿಸಿದಂದಿನಿಂದಲೂ ಪ್ರಜೆಗಳ ...ಶ್ರೇಯಸ್ಸೇ ತಮ್ಮ ಶ್ರೇಯಸ್ಸೆಂದು ಭಾವಿಸಿ ಪ್ರಯೋಜನಕರವಾದ ಅನೇಕ ...ಗಳನ್ನು ಅನವರತವೂ ಮಾಡುತ್ತ ಪ್ರಜೆಗಳಿಗೆ ನಾನಾವಿಧವಾಯಕ...ಲ್ಲಿಯೂ ಸಂಪದಭ್ಯುದಯ ಸಮಾಜದಲ್ಲಿಯೂ ಕಲ್ಪಿಸಿಕೊಟ್ಟಿರುವ...ರಾಗಿಯೂ, ದೇಶದ ನಾಲ್ಕುದಿಕ್ಕುಗಳಲ್ಲಿಯೂ ಸಂಚರಿಸಿ ಬಡಜನರ ...ಗಳನ್ನು ಅತ್ಯಂತ ಕನಿಕರದಿಂದ ವಿಚಾರಿಸಿ ಅವರಿಗಿರತಕ್ಕ ಕುಂದು...ಗಳನ್ನು ಹೋಗಲಾಡಿಸುತ್ತಿರುವುದಕ್ಕಾಗಿಯೂ ನಾವೆಲ್ಲರೂ ಕೃತಜ್ಞತಾ...ಪೂರ್ವಕವಾಗಿ ಎಷ್ಟು ವಂದಿಸಿದರೂ ಕಡಮೆಯಾಗಿರುತ್ತದೆ —ಈ ಗ್ರಾಮದ ಪ್ರಜಾಸಂಖ್ಯೆಯು ಈಚೀಚೆಗೆ ಬಹಳ ವೃದ್ಧಿಯಾಗಿ ಸ್ಥಳ ಸಂಕೋಚದಿಂದ ಮನೆಗಳು ಬಹಳ ಒತ್ತಾಗಿರುವುದಲ್ಲದೆ ಗ್ರಾಮ ಬಡಾವಣೆಯು ಅತ್ಯವಶ್ಯಕವಾಗಿರುವುದರಿಂದ ಬಡಾವಣೆಗೆ ಸ್ಥಳಾನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ —ನಮ್ಮ ತಾಲ್ಲೂಕಿನಲ್ಲೆಲ್ಲಾ ಸಾಲಿಗ್ರಾಮವೇ ದೊಡ್ಡ ಊರಾಗಿರುವುದರಿಂದಲೂ, ಎಡತೊರೆ ಟೌನ್ ಬಹಳ ಅನಾರೋಗ್ಯ ಪ್ರದೇಶವಾದುದರಿಂದಲೂ, ಪೂರ್ವದಲ್ಲಿ ಸಾಲಿಗ್ರಾಮವೂ ತಾಲ್ಲೂಕು ಹೆಡ್‌ಕ್ವಾರ್ಟರಾಗಿದ್ದುದರಿಂದಲೂ, ಈಗಲೂ ತಾಲ್ಲೂಕ್ ಹೆಡ್‌ಕ್ವಾರ್ಟರನ್ನು ಇಲ್ಲಿಗೆ ವರ್ಗಾಯಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ —ದಕ್ಷಿಣ ಇಂಡಿಯಾದಲ್ಲಿಯೂ ಮುಖ್ಯವಾಗಿ ಮೈಸೂರು ಸೀಮೆಯಲ್ಲಿಯೂ ಪೂರ್ವದಲ್ಲಿ ಜೈನರು ರಾಜಕಾರ್ಯಗಳಲ್ಲಿಯೂ, ವಿದ್ಯೆಯಲ್ಲಿಯೂ, ವಾಣಿಜ್ಯಾದಿಗಳಲ್ಲಿಯೂ ಅತ್ಯಂತ ಧುರೀಣರಾಗಿದ್ದರೆಂಬುದಕ್ಕೆ ಚರಿತ್ರೆಗಳೂ, ಶಾಸನಗಳೂ, ಪೂರ್ವಕವಿಗಳ ಗ್ರಂಥಗಳೂ ಸಾಕ್ಷಿಯಾಗಿರುತ್ತವೆ ಈಗಲಾದರೋ ಜೈನರು ತಮ್ಮ ಪೂರ್ವಿಕರು ಎಷ್ಟು ಉತ್ತಮ ಸ್ಥಿತಿಯಲ್ಲಿದ್ದರೋ ಅಷ್ಟು ಹೀನಸ್ಥಿತಿಯಲ್ಲಿರುವುದಲ್ಲದೆ ಈ ಕಾಲಕ್ಕೆ ಅತ್ಯವಶ್ಯಕವಾದ ವಿದ್ಯೆಯಲ್ಲಿ ಕೇವಲ ಹಿಂದುಳಿದಿರುವ ಸಂಗತಿಯು ಜಾಮಂದರ ದಿವ್ಯ ಚಿತ್ತಕ್ಕೆ ವೇದ್ಯವಿರಬಹುದು ಈ ಶೋಚನೀಯಸ್ಥಿತಿಯನ್ನು ತಿಳಿದುಕೊಂಡು ಉತ್ತಮಸ್ಥಿತಿಗೆ ಬರಬೇಕೆಂದು ಈಗೀಗ ಪ್ರಯತ್ನಪಡುತ್ತಿರುವ ಜೈನರಿಗೆ ಸತ್ಪ್ರಭುಗಳಾದ ತಮ್ಮ ಕಾಲದಲ್ಲಿ ಆಶ್ರಯವುಂಟಾಗಿ ಅಭಿವೃದ್ಧಿಗೆ ಬರಲು ಸ್ವಾಮಿಯವರು ಕಾರಣಭೂತರಾಗಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇವೆ " ಇತ್ಯಾದಿ

ಇದಕ್ಕೆ ದಿವಾನರವರು ಯಡತೊರೆಯೇ ಮಧ್ಯಸ್ಥಳವಾದುದರಿಂದ ಸಾಲಿಗ್ರಾಮವು ತಾಲ್ಲೂಕು ಹೆಡ್‌ಕ್ವಾರ್ಟರಾಗಿ ಮಾಡಲ್ಪಡಲು ಸಾಧ್ಯವಿಲ್ಲವೆಂಬದಾಗಿಯೂ, ಇಲ್ಲಿನ ಗ್ರಾಮ ಬಡಾವಣೆಗೆ ಅನುಕೂಲವು ಕಲ್ಪಿಸಿಕೊಡಲ್ಪಡುವುದಾಗಿಯೂ ಉತ್ತರವನ್ನು ದಯಪಾಲಿಸಿದರು ಅನಂತರ ಘೋಷರೆಯುತ್ತಿರುವ ಮಂಗಳ ವಾದ್ಯಗಳ ಮಧ್ಯ ಹಾರ ತುರಾಯಿಗಳನ್ನೂ, ದೇವಸ್ಥಾನದ ಒಳಗೆ ಪ್ರವೇಶಿಸಿ ಫಲಪ್ರಸಾದಗಳನ್ನೂ ಸ್ವೀಕರಿಸಿ ಈ ಊರಿನ ಸ್ಕೂಲು, ಆಸ್ಪತ್ರೆ, ಸೊಸೈಟಿಗಳಿಗೆ ದಯಮಾಡಿಸಿ ಅಲ್ಲಿನ ವಿದ್ಯಮಾನಗಳನ್ನು ತಿಳಿದು ಮುಂದೆ ಪ್ರಯಾಣಮಾಡಿದರು

ತಿರುಮಕೂಡ್ಲು ನರಸೀಪುರ

ತಾ 21ರಲ್ಲಿ ದಿವಾನ್ ಮ॥ ಎಂ ವಿಶ್ವೇಶ್ವರಯ್ಯ, ಸಿ ಐ ಇ ರವರು ನಂಜನಗೂಡಿನಿಂದ ನರಸೀಪುರ ಮಾರ್ಗವಾಗಿ ತಲಕಾಡಿಗೆ ದಯಮಾಡಿ ಹೊಸದಾಗಿ ಕಟ್ಟುವ ಕಟ್ಟೆಯನ್ನು ಪರಾಂಬರಿಸಿ ಗ್ರಾಮವನ್ನು ಸಹ ಪರಾಂಬರಿಸಿ 3 ಗಂಟೆಗೆ ತಾಲ್ಲೂಕು ಕಸಬಾದಲ್ಲಿ ತಾಲ್ಲೂಕು ಇನ್ಸ್‌ಪೆಕ್ಷನ್ ಆದ ಬಳಿಕ ದೊಡ್ಡಮನುಷ್ಯರಿಗೆಲ್ಲಾ ...ಟಿ ಕೊಟ್ಟರು ಊಕಲಗೆರೆ ಇನಾಂದಾರ್ ಮ॥ ರಂಗಾಚಾರ್ಯ ಹಾರ ತುರಾಯಿ ಒಪ್ಪಿಸಿದ ಬಳಿಕ ಅದ್ದನ್ನು ಒಪ್ಪಿಸಿದರು ... ನದಿಗೆ ಸೇತುವೆ, ತಾಲ್ಲೂಕು ಕಸಬಾದಲ್ಲಿ ಟೆಲಿಗ್ರಾಂ ಆಫೀಸು, ತಾಲ್ಲೂಕಿನಲ್ಲಿ ಉಡಿಯೂರ್ ...ನ್ನಾ ..., ಗಗನೇಶ್ವರಿ ಮೈಸೂರಿಗೆ ಬರುವ ರಸ್ತೆಗೆ ಗ್ರಾವಲ್ ಹಾಕಿಸುವದು, ಸೋಸಲೆಯಲ್ಲಿ ಒಂದು ಸಬ್ ರಿಜಿಸ್ಟ್ರಾರ್ ಆಫೀಸು, ಗಿರಿಗಿರಿನ ರಸ್ತೆಗಳು, ಮ...ರು ಕೆರೆ ಕಾಮಗಾರಿಗಳ ವಿಚಾರವಾಗಿಯೂ, ಕೈಗಾರಿಕೆಗೆ ವಿಚಾರದಲ್ಲಿಯೂ, ಆರೋಗ್ಯ ವಿಚಾರವಾಗಿಯೂ, ಇಂಡಸ್ಟ್ರಿಯಲ್ ಸ್ಕೂಲ್ ವಿಷಯವಾಗಿಯೂ ಪ್ರಜೆಗಳು ಅರಿಕೆಮಾಡಿಕೊಂಡದ್ದಕ್ಕೆ ಒಟ್ಟಿನಮೇಲೆ ನೋಟ್ ಮಾಡಿಕೊಂಡಿದ್ದಾರೆ ನಂತರ ಸಬ್ ರಿಜಿಸ್ಟ್ರಾರ್ ಆಫೀಸು ಇನ್ಸ್‌ಪೆಕ್ಷನ್, ಆಸ್ಪತ್ರೆ ಇನ್ಸ್‌ಪೆಕ್ಷನ್ ಮಾಡಿಕೊಂಡು ಸಾಯಂಕಾಲ ನಂಜನಗೂಡಿಗೆ ದಯಮಾಡಿಸಿದರು ದಿವಾನ್ ಸಾಹೇಬರವರ ಕೂಡ ಡೆಪ್ಯುಟಿ ಕಮಿಷನರು, ಸಬ್ ಡಿವಿಷನ್ ಸಾಹೇಬರವರು, ಪೊಲೀಸ್ ಸೂಪರಿಂಟೆಂಡೆಂಟರವರು, ಸರ್ಕಲ್ ಇನ್ಸ್‌ಪೆಕ್ಟರು ವಗೈರೆ ರಾಜಾಧಿಪತಿಗಳೆಲ್ಲಾ ದಯಮಾಡಿದ್ದರು

ಚಾಮರಾಜನಗರ

ಕಳೆದ ತಾ 23 ನೇ ಬುಧವಾರ ಬೆಳಿಗ್ಗೆ 10 ಘಂಟೆಗೆ ದಿವಾನ್ ಸಾಹೇಬರವರು, ಡೆ ಕಮಿಷನರ್‌ರವರೂ, ಸಬ್ ಡಿವಿಜನ್ ಆಫೀಸರರು, ಪೊಲೀಸ್ ಸೂಪರಿಂಟೆಂಡೆಂಟರವರು, ಇಂಜಿನಿಯರವರು, ಹೆಲ್ತ್ ಆಫೀಸರರೂ, ಪಾರೆಸ್ಟ್ ಆಫೀಸರವರು, ಎಕ್ಸೈಸ್ ಇಲಾಖೆಯವರು, ಸರ್ಕಲ್ ಮತ್ತು ಡೆಪ್ಯುಟಿ ಸ್ಕೂಲ್ ಇನ್ಸ್‌ಪೆಕ್ಟರುಗಳು ಮುಂತಾದ ಎಲ್ಲಾ ಅಧಿಕಾರಿಗಳೂ 5 6 ಮೋಟರುಗಳಲ್ಲಿ ದಯಮಾಡಿದರು ನಂಜನಗೂಡು ರಸ್ತೆ ಬಳಿ ಇರುವ ಕೋಟೆ ಹಾಕಿದ ಚಪ್ಪರವೇ ಮೊದಲನೇದು ಆ ದಿನ ನಮ್ಮ ಚಾಮರಾಜನಗರವೆಲ್ಲಾ ತುಂಬಾ ಶೃಂಗಾರವಾಗಿತ್ತು ಆಫೀಸುಗಳೂ, ಸ್ಕೂಲುಗಳು ಕಚೇರಿ ಮುಂತಾದವುಗಳೆಲ್ಲಾ ಕದಳೀ ಸ್ತಂಭಗಳಿಂದಲೂ, ಗೊನೆಗಳಿಂದಲೂ, ಹಸುರು ತೋರಣಗಳಿಂದಲೂ, ಸಾರ್ವಭೌಮರ ಮತ್ತು ಮಹಾರಾಜರವರ ಪಟಗಳಿಂದಲೂ ಮತ್ತು ಪ್ರತಿ ಅಂಗಡಿಗಳ ಬಳಿ ತೋರಣಗಳಿಂದಲೂ ಮುಸಾಫರಿ ಬಂಗ್ಲೆಯ ವರೆಗೂ ತುಂಬಾ ಅಲಂಕಾರವಾಗಿತ್ತು ಕೋಟೆ ಬಳಿ ಹಾಕಿದ್ದ ಚಪ್ಪರದಲ್ಲಿ ಮೈದಿಕರೂ ಸರ್ಕಾರದ ಅಧಿಕಾರಿಗಳೂ ಮ್ಯುನಿಸಿಪಲ್ ಮೆಂಬರುಗಳೂ ಇತರ ದೊಡ್ಡ ಮನುಷ್ಯರೂ ನಜರುಗಳ ಸಮೇತ ಎದುರುಗೊಳ್ಳಲು ಕುಂಬಿದ್ದರು ದಿವಾನ್ ಸಾಹೇಬರವರ ದರ್ಶನಾರ್ಥವಾಗಿ ಬಂದಿದ್ದ ಹಳ್ಳಿಯವರ ಜನಸ್ತೋಮವನ್ನು ಅಡಗಿಸುವದು ಪೊಲೀಸಿನವರಿಗೆ ಅಸದಳವಾಗಿತ್ತು. ದಿವಾನ್‌ರವರ ಸವಾರಿಯು ಚಪ್ಪರಕ್ಕೆ ದಯಮಾಡಿಸಿದ ಕೂಡಲೆ ವಾದ್ಯಗಳು ವೇದೋಕ್ತಿಗಳು ನಡೆಯುತ್ತಿರುವಲ್ಲಿ ದಿವಾನ್ ಸಾಹೇಬರವರು ಅಲ್ಲಿ ಎಲ್ಲರ ನಜರುಗಳನ್ನೂ ಅಂಗೀಕರಿಸಿ ಮೋಟರ್‌ಗಾಡಿ ಇಳಿದು ಪಾದಚಾರಿಗಳಾಗಿ ಅಧಿಕಾರಿಗಳೊಡನೆ ದಯಮಾಡಿ ಹಿಂದುಸ್ತಾನಿ ಸ್ಕೂಲಿಗೆ ಬಂದು ಅದನ್ನು ವಿಚಾರಿಸಿ ನಂತರ ಪೇಟೆಯಲ್ಲಿ ಬರುವಾಗ ಮಾರ್ಗದಲ್ಲಿ ನಜರು ಕೊಟ್ಟವರನ್ನೆಲ್ಲಾ ಅಂಗೀಕರಿಸಿ ಅವರನ್ನು ವಿಚಾರಿಸುತ್ತಾ ಅನೇಕರ ಅರ್ಜಿಗಳನ್ನು ತೆಗೆದುಕೊಳ್ಳುತ್ತಾ ಆಸ್ಪತ್ರೆಗೆ ದಯಮಾಡಿ ಅಲ್ಲಿಂದ ರೇವಿನ್ಯೂ ಆಫೀಸಿಗೂ, ನಂತರ ಗವರ್ನಮೆಂಟ್ ಗರ್ಲ್ಸ್ ಸ್ಕೂಲಿಗೂ, ಕೋಆಪರೇಟಿವ್ ಸೊಸೈಟಿಗೂ ವೆಸ್ಲಿಯನ್ ಮಿಷನ್ ಸ್ಕೂಲಿಗೂ, ಎ ವಿ ಸ್ಕೂಲಿಗೂ, ಚೌಕದ ಮಧ್ಯದಲ್ಲಿ ಜಟ್ಟಿಯವರು ಹಾಕಿದ್ದ ಚಪ್ಪರ ಮುಂತಾದವುಗಳಿಗೆ ದಯಮಾಡಿಸಿ ಅಲ್ಲಲ್ಲಿನ ಸಂಗತಿಗಳನ್ನು ವಿಚಾರಿಸಿ, ನಂತರ ಕಚೇರಿಗೂ, ದೇವಸ್ಥಾನಕ್ಕೂ ದಯಮಾಡಿಸಿ ಅಲ್ಲಿನ ಸಂಗತಿಗಳನ್ನು ವಿಚಾರಿಸಿ, ಮಧ್ಯಾಹ್ನ ಸುಮಾರು 1 ಘಂಟೆಗೆ ಮುಸಾಫರಿ ಬಂಗ್ಲೆಗೆ ದಯಮಾಡಿಸಿ ಒಂದು ಘಂಟೆ ವಿಶ್ರಾಮತೆಗೆದುಕೊಂಡು, ಕೂಡಲೆ ಜನನ ಮಂಟಪಕ್ಕೆ ದಯಮಾಡಿ ದರ್ಬಾರ್ ನಡಿಸಿ ಅನೇಕರ ಅಹವಾಲ್‌ಗಳಿಗೆ ತಕ್ಕ ಮಟ್ಟಿಗೆ ಸಮಾಧಾನ ಹೇಳಿದ್ದಲ್ಲದೆ ವಿದ್ಯಾಭಿವೃದ್ಧಿಯನ್ನು ಕುರಿತು ತುಂಬಾ ಮುತುವರ್ಜಿಯಿಂದ ಮಾತಾಡಿ,—ಸಾಧ್ಯವಾದಮಟ್ಟಿಗೆ ನಾವು ಎಲ್ಲರನ್ನೂ ವಿದ್ಯಾವಂತರಾಗ ಮಾಡಬೇಕಾಗಿದೆ ಇಲ್ಲಿ ನೇಕಡ 2 ರಷ್ಟು ವಿದ್ಯೆ ಕಲಿತವರು ಇರುವದು ಕಡಮೆಯಾಗಿದೆ ಅದಕಾರಣ ಎಲ್ಲರೂ ಈ ವಿಷಯದಲ್ಲಿ ಚಿಂತೆಪಟ್ಟು ಪ್ರೋತ್ಸಾಹಪಡಿಸುತ್ತಾ ಬರುವದಲ್ಲದೆ, ರಾತ್ರಿವೇಳೆ ವಯಸ್ಸಾದ ಗಂಡಸರೂ ಯೌವನಸ್ತರೂ ಕಲಿಯುವಹಾಗೆ ಏರ್ಪಾಟು ಮಾಡಬೇಕು ಈ ವಿಷಯದಲ್ಲಿ ಬೇರೆ ದೇಶಗಳಿಗಿಂತ ನಮ್ಮ ಸೀಮೆ ತುಂಬಾ ಹಿಂದೆ ಬಿದ್ದಿದೆ ಅದಕಾರಣ ಜಾಗ್ರತೆಪಡಬೇಕು ಅಲ್ಲದೆ ಪಂಚಮರ ವಿಷಯ ತುಂಬಾ ಚಿಂತಿಸಬೇಕು ಅವರಿಗೆಲ್ಲಾ ವಿದ್ಯೆ ಕಲಿಸಿ ಅವರ ವಿವೇಕ ಜ್ಞಾನವನ್ನೂ, ಕೌಶಲವನ್ನೂ, ಒಳ್ಳೆತನವನ್ನೂ ತೋರಿಸುವ ಯೋಚನೆಯಲ್ಲಿ ನಾವೆಲ್ಲರೂ ಭಾಗಿಗಳಾಗ ಬೇಕಾಗಿದೆ ಎಂದೂ ರೈಲ್ ವಿಷಯ ಕೇಳಿ ಈಗಿನ ಎಲ್ಲಾ ಕೆಲಸಗಳೂ ತೀರಿದಮೇಲೆ ಇಲ್ಲಿಗೂ ಹಾಕುತ್ತೇವೆ ಎಂದೂ ಅಂದರು ದೊಡ್ಡಕೆರೆಯ ಕಾಮಗಾರಿ ವಿಷಯದಲ್ಲಿ ನೋಟ್ ಮಾಡಿಕೊಂಡರು ಇನ್ನು ಇತರ ವಿಷಯಗಳಿಗೆಲ್ಲಾ ಉತ್ತರ ಕೊಡುತ್ತೇವೆಂದು ಹೇಳಿ ಸಾಯಂಕಾಲಕ್ಕೆ ವಾಪಸು ನಂಜನಗೂಡಿಗೆ ದಯಮಾಡಿಸಿದರು ದೇವಸ್ಥಾನದಲ್ಲಿದ್ದ ಒಂದು ಪುರಾತನ ಶಾಸನವನ್ನು ದೇವಸ್ಥಾನದ ಪೇಷ್ಕಾರರು ಓದಿ ಅರ್ಥ ಹೇಳಿದ ಕಾರಣ ತುಂಬಾ ಸಂತೋಷಪಟ್ಟರು

ನಂಜನಗೂಡು ತಾಲ್ಲೂಕು ಕಳಲೆಗ್ರಾಮ

ತಾ 26 ನೇ ಸಾಯಂಕಾಲ 5½ ಘಂಟೆಗೆ ನಮ್ಮ ದಿವಾನ್ ಸಾಹೇಬರವರಾದ ಮ॥ ಎಂ ವಿಶ್ವೇಶ್ವರಯ್ಯನವರು ನಂಜನಗೂಡಿನಿಂದ ಪರಿವಾರ ಸಮೇತ ಕಳಲೆ ಅಗ್ರಹಾರಕ್ಕೆ ಚಿತ್ತೈಸಿ ದೇವಸ್ಥಾನದ ಗ್ರಾಮ ಪರಾಂಬರಿಸಿದರು ಅಗ್ರಹಾರನಿವಾಸಿಗಳು ದೇವಸ್ಥಾನಕ್ಕೆ ಹಿಂದೆ ಅನೇಕ ಗ್ರಾಮ ವಗೈರೆ ಭಾರೀ ತಸ್ತೀಕು ಇದ್ದು ಹಾಲೀ ಅಲ್ಪತಸ್ತೀಕು ಆಗಿದೆ ಎಂದೂ, ಗ್ರಾಂಟು ಜಾಸ್ತಿಮಾಡಿಸಿ ಕೊಡಬೇಕೆಂದೂ, ಗ್ರಾಮಗಳನ್ನು ವಾಪಸು ಕೊಡಿಸಬೇಕೆಂದೂ, ದೇವಸ್ಥಾನಕ್ಕೆ ಜಮೀನ್ ಕೊಡಿಸಬೇಕೆಂದೂ, ಚಲುವಾಂಬುಧೀ ನಾಲೆಗೆ ನಲೆಯ ನೀರು ಬರುವಂತೆ ಹಾಲಳ್ಳಿ ತೊಂಡ್ಲಾದಿ ರೈತರು ಅಣೆ ಒಳಗೆ ಮಣ್ಣು ಅಡ್ಡ ಕಟ್ಟಿ ಹಾಳದಂತೆ ಬಂದೋಬಸ್ತು ಹುಕುಂ ಮಾಡಿಸಿ ಕೆರೆಯಿಂದ ರಾಯಪಾಳ್ಯದಲ್ಲೀ ಸಿಸ್ಟಂ, ಸವಡೀ ಮ್ಯಾನೇಜರ್ ಏರ್ಪಡಿಸಿಕೊಡಬೇಕೆಂದೂ ಅರ್ಜಿ ಮೂಲಕ ಅರಿಕೆಮಾಡಿಕೊಂಡದ್ದಕ್ಕೆ ದಿವಾನರು ಎಲ್ಲಾ ವಿಚಾರವನ್ನೂ ನೋಟ್‌ಮಾಡಿಕೊಂಡಿದೆ ವಿಚಾರದಿಂದ ಹುಕುಂ ಆಗುತ್ತೆಂದು ಅಪ್ಪಣೆ ಮಾಡಿದರು ಇಷ್ಟರಲ್ಲಿ ಮಂಗಳಾರ್ತಿಯಾಗಿ ಸರ್ವರಿಗೂ ಪ್ರಸಾದ ಮರ್ಯಾದೆಮಾಡಿದರು ನಂತರ ಅಭಿನಂದನ ಪತ್ರಿಕೆಯನ್ನು ಶ್ಲೋಕರೂಪವಾಗಿ ಓದಿ ಕೆ ರಂಗಸ್ವಾಮಯ್ಯಂಗಾರ್ರಿಂದ ಸ್ವೀಕರಿಸಿ, ಬಂದಿದ್ದ ಇಲಾಖಾ ಅಧಿಕಾರಿಗಳೊಡನೆ 6½ ಘಂಟೆಗೆ ನಂಜನಗೂಡಿಗೆ ಮೋಟಾರಿನಲ್ಲಿ ವಾಪಸು ದಯಮಾಡಿದರು

ಗುಂಡ್ಲುಪೇಟೆ ತಾಲ್ಲೂಕು

ಈ ವ್ಯವಸಾಯದ ಇಲಾಖಾ ವಾರ್ಷಿಕ ರಿಪೋರ್ಟಿನಲ್ಲಿ ಇಲಾಖೆಯವರು ರಾಗಿಯ ಜಳ, ಅದರ ಗೊಬ್ಬರ, ಬಿತ್ತನೆಯ ಕಾಳು, ಇವುಗಳ ವಿಷಯದಲ್ಲಿ ನಡೆಸಿರುವ ಪರೀಕ್ಷೆಗಳನ್ನು ವಿವರಿಸಿದಾರೆ ಇನ್ನೂ ಕೆಲವು ವಿಚಾರಗಳಲ್ಲಿ ಪರೀಕ್ಷೆಗಳು ನಡೆದಿರುತ್ತವೆ ಹತ್ತಿ, ಬತ್ತ, ಕಬ್ಬು, ಬೆಲ್ಲದ ತಯಾರಿ, ಈ ಮೊದಲಾದ ಪೈರುಗಳ ವಿಷಯದಲ್ಲೂ ಪರೀಕ್ಷೆಗಳನ್ನು ಮಾಡಿದಾರೆಂದು ತಿಳಿಯುತ್ತೇವೆ ಇದಲ್ಲದೆ ಇಲಾಖೆಯವರು ಸಂಸ್ಥಾನದ ಬೇರೆ ಬೇರೆ ಸ್ಥಳಗಳಲ್ಲಿ ನಾನಾ ಬಗೆಯ ಪರೀಕ್ಷೆಗಳನ್ನು ರೈತಪ್ರಜೆಗಳಿಗೆ ಮಾಡಿ ದೃಷ್ಟಾಂತಪಡಿಸಿರುವರು ಹೀಗೆ ದೃಷ್ಟಾಂತ ಮಾಡಿ ತೋರಿಸುವ ಭಾಗವನ್ನು ಇಲಾಖೆಯವರು ಇನ್ನೂ ಹೆಚ್ಚು ಮಾಡಿದ ಪಕ್ಷದಲ್ಲಿ ರೈತರು ಬೆಳೆಯನ್ನು ಸುಲಸುಮಾಡಿಕೊಳ್ಳುವುದಕ್ಕೆ ಅವಶ್ಯವಾದ ಸಂಗತಿಗಳನ್ನೆಲ್ಲಾ ಕಣ್ಣಾರನೋಡಿ ಗ್ರಹಿಸಿಕೊಂಡು ವ್ಯವಸಾಯದಲ್ಲಿ ಆಚರಿಸುವುದಕ್ಕೆ ತುಂಬಾ ಅನುಕೂಲವಾದೀತೆಂದು ನಮಗೆ ತೋರುತ್ತದೆ

ಹೊಸ ನಮೂನೆಯ ಉತ್ತಮತರದ ವ್ಯವಸಾಯ ಮುಟ್ಟುಗಳನ್ನು ಕಳೆದ ಸಾಲಿನಲ್ಲಿ ರೈತರು ಹೆಚ್ಚಾಗಿ ಉಪಯೋಗಿಸಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ ಇಲಾಖೆಯವರು ಈ ಹೊಸ ತರಹಾ ಮುಟ್ಟುಗಳನ್ನು ಹೆಚ್ಚುಯಾಗಿ ಪ್ರಚಾರಕ್ಕೆ ತರಲು ಸಾಹಸಪಡುತ್ತಿರುವುದೂ, ರೈತಪ್ರಜೆಗಳಿಗೆ ಅವುಗಳ ಮೇಲೆ ನಂಬಿಕೆಯೂ ಪ್ರೀತಿಯೂ ಹುಟ್ಟಿ ಹೆಚ್ಚುತ್ತಿರುವುದೂ ನಮ್ಮ ಸೀಮೆಯ ಶ್ರೇಯಸ್ಸಿಗೆ ಸಾಧಕವಾಗಿರುತ್ತದೆ

ಅಡಿಕೆ ಫಲಕ್ಕೆ ಹಿಡಿಯುವ ಕೊಳೆರೋಗದ ದೆಸೆಯಿಂದ ನಮ್ಮ ರೈತರಿಗೆ ಬಹಳ ನಷ್ಟ ಸಂಭವಿಸುತ್ತಿತ್ತು ಈ ರೋಗ ನಿವಾರಣೆಗೆ ಇಲಾಖೆಯವರು ಕಂಡು ಹಿಡಿದಿರುವ ಪರಿಹಾರೋಪಾಯವು ಸಾರ್ಥವಾಗುತ್ತಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ ಅಡಿಕೆ ಫಸಲು ಮಾಡುವ ಜಮೀನ್ದಾರರೆಲ್ಲಾ ವ್ಯವಸಾಯ ಇಲಾಖೆಯವರು ಹೇಳಿರುವ ರೀತಿಯಲ್ಲಿ ಕಾರ್ಯಸಾಧನಮಾಡಿದ ಪಕ್ಷದಲ್ಲಿ ಕೆಲವು ಕಾಲದಲ್ಲೇ ಈ ರೋಗದ ಹುಟ್ಟು ಅಡಗಿಹೋದೀತು ಹಿಂದಾನೊಂದು ಕಾಲದಲ್ಲಿ ಅಡಿಕೆ ಬೆಳೆಯಿಂದ ಪ್ರಯೋಜನವೇನೂ ಆಗುವುದಿಲ್ಲವೆಂದೂ, ಆ ಬೆಳೆಯನ್ನೇ ಬಿಟ್ಟುಬಿಡಬೇಕೆಂದೂ ಅನೇಕ ಜಮೀನ್ದಾರರು ಹೇಳುತ್ತಿದ್ದರು, ಈಗಲಾದರೋ ಆ ರೀತಿ ವ್ಯಸನಪಡುವುದಕ್ಕೆ ಕಾರಣವೇನೂ ಇಲ್ಲ ಮಲೆನಾಡಿನಲ್ಲಿ ಅಡಿಕೆ ತೋಟಗಳ ಯಜಮಾನರು ಏಕೀಭವಿಸಿ ವ್ಯವಸಾಯದ ಇಲಾಖೆಯವರು ತೋರಿಸಿಕೊಡುವ ಉಪಾಯವನ್ನು ಕ್ರಮವಾಗಿ ಕೆಲವು ಕಾಲ ಮಾಡಿದರೆ ಈ ಭಯಂಕರವಾದ ಕೊಳೆರೋಗವು ನಾಶವಾಗುವುದೆಂದೂ, ಅಡಿಕೆ ಫಸಲು ಮೊದಲಿಗಿಂತ ಹೆಚ್ಚುವುದೆಂದೂ ಧಾರಾಳವಾಗಿ ಹೇಳಬಹುದು

ಇದಲ್ಲದೆ ಬತ್ತ, ರಾಗಿ, ಜೋಳ ಮೊದಲಾದ ಧಾನ್ಯಗಳಿಗೆ ಹಿಡಿಯತಕ್ಕ ಕ್ರಿಮಿ ಅಥವಾ ಹುಳುಹುಪ್ಪಟೆಗಳನ್ನು ನಾಶಮಾಡುವುದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ವ್ಯವಸಾಯದ ಇಲಾಖೆಯವರು ಹಲವು ಪ್ರಯತ್ನಗಳನ್ನೂ ಪರೀಕ್ಷೆಗಳನ್ನೂ ಮಾಡುತ್ತಾ ಬಂದಿದಾರೆ ಈ ಭಾಗದಲ್ಲೂ ಇಲಾಖೆಯವರು ಒಳ್ಳೇ ಸಲಹೆಗಳನ್ನು ಹೇಳಿರುವರು ಆ ರೀತಿ ವ್ಯವಸಾಯಗಾರರು ನಡಿಸುವುದಾದರೆ ರೈತರಿಗೂ ಜಮೀನ್ದಾರರಿಗೂ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಅನುಮಾನವಿಲ್ಲ

ವ್ಯವಸಾಯದ ಇಲಾಖೆಯ ಪರೀಕ್ಷಾಕ್ಷೇತ್ರಗಳಲ್ಲಿ ನಡೆಯುವಂಥಾ ಕಾರ್ಯಗಳನ್ನು ನಮ್ಮ ಸೀಮೆಯ ರೈತರು ವಿಶೇಷವಾಗಿ ಹೋಗಿ ನೋಡುತ್ತಾ ಬರಬೇಕಲ್ಲದೆ ಅದೇ ರೀತಿ ತಮ್ಮ ಗ್ರಾಮದ ಸ್ವಂತ ಜಮೀನುಗಳಲ್ಲೂ ಸ್ವಲ್ಪಸ್ವಲ್ಪವಾಗಿ ಮಾಡುತ್ತಾ ಫಲಿತಾಂಶವನ್ನು ಗ್ರಹಿಸಿಕೊಳ್ಳುತ್ತಾ ಬರಬೇಕೆಂದು ಬಹಳವಾಗಿ ಹಾರೈಸುತ್ತೇವೆ

ಈಗ ಗವರ್ನಮೆಂಟಿನವರು ವ್ಯವಸಾಯದ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚಿಸಿ ದೊಡ್ಡದಾಗಿ ಮಾಡಿರೋಣದರಿಂದ ಡೈರೆಕ್ಟರಾದ ಡಾ|| ಕೋಲ್‌ಮನ್ ರವರೂ ಅವರ ಕೈಕೆಳಗಿನ ಅಧಿಕಾರಿಗಳೂ ಇನ್ನೂ ಹೆಚ್ಚಾಗಿಯೂ ಮುತುವರ್ಜಿಯಿಂದಲೂ ಕಾರ್ಯಗಳನ್ನು ನಡಿಸುವುದಕ್ಕೂ, ರೈತಪ್ರಜೆಗಳಿಗೆ ವ್ಯವಸಾಯದ ನವೀನಕ್ರಮಗಳನ್ನು ಕಲಿಸಿ ಹೆಚ್ಚು ಬೆಳೆಮಾಡಿಕೊಳ್ಳುವಂತೆ ಸಹಾಯ ಪ್ರೋತ್ಸಾಹಾದಿಗಳನ್ನು ಕೊಡುತ್ತಾ ಬರುವುದಕ್ಕೂ ತುಂಬಾ ಅನುಕೂಲವಾಯಿತೆಂದು ಹೇಳುತ್ತೇವೆ

ನೀತಿವಂತನಾಗಿ ನಡೆದರೆ ಸಾಲದೆ? ಭಕ್ತಿಯನ್ನೂ ಅಭ್ಯಾಸಮಾಡಬೇಕೇ?

ಭಕ್ತಿಯೆಂದರೆ ವಿಧೇಯತ್ವ ಬೇರೆ ಬೇರೆ ಸಂಬಂಧಗಳಿಂದ ಭಕ್ತಿಯು ಬೇರೆ ಬೇರೆ ವಿಧಗಳಾಗಿ ಪರಿಣಮಿಸುವದು ಪಿತೃಭಕ್ತಿ, ಮಾತೃಭಕ್ತಿ, ಗುರುಭಕ್ತಿ ರಾಜಭಕ್ತಿ ಮುಂತಾದವು ವಿವಿಧ ಸಂಬಂಧಗಳಿಂದ ವಿವಿಧ ಸ್ವಭಾವಗಳುಳ್ಳವಾಗಿ ಜನಿಸಿ ಅದೇ ಸ್ವಭಾವದಲ್ಲಿ ಬೆಳೆದು ಪ್ರಕಟಕ್ಕೆ ಬರುವವು ಇವೆಲ್ಲವುಗಳಲ್ಲಿ ದೇವರಲ್ಲಿ ನಮಗಿರಬೇಕಾದ ಭಕ್ತಿಯೇ ಪ್ರಾಮುಖ್ಯವಾದುದು ಅದೇ ಸಕಲವಿಧವಾದ ಭಕ್ತಿಗೆ ಮೂಲವು ಅದೇ ಬಗೆಬಗೆಯಾದ ಸಂಬಂಧಗಳಿಂದ ಹುಟ್ಟಿ ಬರುವ ಭಕ್ತಿಗೆ ಆಧಾರವೂ ಬಲವೂ ಆಗಿದೆ ದೇವಭಕ್ತಿಯನ್ನು ತ್ಯಜಿಸಿದವನಲ್ಲಿ ಪಿತೃಭಕ್ತಿ, ಮಾತೃಭಕ್ತಿ, ಗುರುಭಕ್ತಿಯು ಸ್ಥಿರವಾಗಿ ನಿಂತು ದೃಢಪಟ್ಟು ಬಾಳಲಾರದು ನಾಯಿಬಾಲದ ಮೇಲಣ ಬುತ್ತಿಯೂ ಕೆಸರಿನಲ್ಲಿ ನೆಟ್ಟ ಕಂಬವೂ ನಿಲ್ಲಲಾರವು

ಹಾಗಾದರೆ ದೇವಭಕ್ತಿಯೆಂದರೇನು? ಪರಮಾತ್ಮನಾದ ದೇವರನ್ನು ಅಚಂಚಲವಾದ ಹೃದಯದಿಂದ ಆಶ್ರಯಿಸಿ ಆತನನ್ನು ಸನ್ಮಾನಿಸಿ ಪ್ರೀತಿಸಿ ಸೇವಿಸುವದು ಮತ್ತು ಆತನ ಚಿತ್ತವನ್ನು ತಿಳಿದು ಅದನ್ನು ನೆರವೇರಿಸುವದಕ್ಕೆ ಸಿದ್ಧನಾಗಿರುವದು ದೈವಭಕ್ತಿಗೂ ಸಮ್ಯಗ್ವಿಚಾರತೆಗೂ ಇರುವ ಸಂಬಂಧವು ಸ್ವತಸ್ಸಿದ್ಧವಾಗಿದೆ ದೇವರಲ್ಲಿ ಭಕ್ತಿಯನ್ನಿಡುವನು ಮನುಷ್ಯರಲ್ಲಿ ವರ್ತಿಸುವ ಸಕಲ ವಿಧವಾದ ಭಕ್ತಿಗೂ ನೀತಿ, ಪ್ರೀತಿ, ಸತ್ಯ, ಶಾಂತಿ, ಕರುಣೆ ಮೊದಲಾದ ಸಕಲ ಸದ್ಗುಣಗಳಿಗೆ ಮೂಲವು ಹೀಗಿರುತ್ತಿರುವಲ್ಲಿ ಕೆಲವರು ದೇವರನ್ನು ಆಶ್ರಯಿಸದೆ ಇದ್ದರೆ ನೀತಿವಂತರಾಗಿ ನಡೆದರೆ ಸಾಕು ಎಂದು ಅಭಿಪ್ರಾಯಪಡುವದನ್ನೂ ನೋಡಿ ಮತ್ತು ಹಾಗೆಯೇ ಇತರರಿಗೂ ಬೋಧಿಸುವದನ್ನು ಕೇಳಿ ಇವರು ಕೆಸರಿನಲ್ಲಿ ಕಂಬವನ್ನು ನಿಲ್ಲಿಸುವದಕ್ಕೆ ಯತ್ನಿಸುವವರೇ ಎಂತ ವ್ಯಸನಪಡಬೇಕಾಗಿದೆ ಒಂದು ದೇಶದಲ್ಲಿ ಒಬ್ಬ ಅರಸನಿದ್ದನು, ಈತನು ತನ್ನ ಪ್ರಜೆಗಳನ್ನು ತನ್ನ ಮಕ್ಕಳೆಂತಲೂ ಅವರ ಸುಖವೇ ತನ್ನ ಸುಖವೆಂತಲೂ ಭಾವಿಸುತ್ತಿದ್ದನು ಪುಂಡರನ್ನೂ ಅನ್ಯಾಯಕರನ್ನೂ ಅಡಗಿಸಿ ಪ್ರಜಾಕ್ಷೇಮಕ್ಕಾಗಿ ಒಳ್ಳೊಳ್ಳೇ ಕ್ರಮಗಳನ್ನೂ ನ್ಯಾಯ ನಿಬಂಧನೆಗಳನ್ನೂ ಏರ್ಪಡಿಸಿ ಎಲ್ಲರೂ ನೆಮ್ಮದಿಯಾಗಿ ಬಾಳುವಂತೆ ಸಮಾಧಾನವನ್ನು ರಾಜ್ಯದಲ್ಲಿ ಸ್ಥಾಪಿಸಿದನು ವ್ಯಾಪಾರಾಭಿವೃದ್ಧಿಗಾಗಿ ರಸ್ತೆಗಳನ್ನೂ ಮಾಡಿಸಿ ಸಾಲುತೋಪುಗಳನ್ನು ಹಾಕಿಸಿದನು ವಿದ್ಯಾಭಿವೃದ್ಧಿಗೋಸ್ಕರ ಸಕಲ ಹಳ್ಳಿಹಳ್ಳಿಗಳಲ್ಲಿಯೂ ಪಾಠಶಾಲೆಗಳನ್ನೇರ್ಪಡಿಸಿದನು ಅಸ್ವಸ್ಥವಾಗಿರುವವರಿಗೋಸ್ಕರ ವೈದ್ಯಶಾಲೆಗಳನ್ನೂ ಆಸ್ಪತ್ರೆಗಳನ್ನೂ ಕಟ್ಟಿಸಿದನು ನೀರಿನ ಸರಬರಾಯಿಗೋಸ್ಕರ ಕೆರೆ, ಕುಂಟೆ, ನಾಲೆಗಳನ್ನು ಕಟ್ಟಿಸಿ ವ್ಯವಸಾಯವನ್ನು ಪ್ರೋತ್ಸಾಹಗೊಳಿಸಿದನು ಪ್ರಜೆಗಳು ಈ ಸೌಕರ್ಯಗಳನ್ನು ಪ್ರಯೋಗಿಸಿಕೊಂಡು ಅದರ ಫಲಗಳಿಂದ ಧನ, ಧಾನ್ಯ, ಕನಕ, ವಸ್ತ್ರಾಭರಣಗಳನ್ನು ಸಂಪಾದಿಸಿಕೊಂಡು ಅಚ್ಚುಕಟ್ಟಾಗಿ ಮನೆಗಳನ್ನು ಕಟ್ಟಿಕೊಂಡು ಭಾಗ್ಯವಂತರಾಗಿ ಬಾಳುತ್ತಿದ್ದರು ಆದರೆ ಇಷ್ಟು ಸುಖಸಂಪತ್ತುಗಳನ್ನು ತಮಗೊದಗಿಸಿಕೊಟ್ಟ ಅರಸನನ್ನು ಸೃಷ್ಟಿಮಾಡುತ್ತಿರಲಿಲ್ಲ ಪ್ರಜೆಗಳು ಮೆಚ್ಚಿಕೊಂಡಾಡುತ್ತಲಿದ್ದ ಸಕಲ ಸದ್ಗುಣಗಳೂ ಅರಸನಲ್ಲಿ ಮೂರ್ತಿವತ್ತಾಗಿ ಕಂಗೊಳಿಸುತ್ತಲಿದ್ದವು ಆ ಸದ್ಗುಣಗಳಿಂದ ತಮಗೆ ಲಭಿಸಿ ಆ ಸದ್ಗುಣಗಳಿಗೆ ಪ್ರತ್ಯಕ್ಷಸಾಕ್ಷಿಗಳಾಗಿದ್ದ ಸುಖಗಳನ್ನು ಪ್ರಜೆಗಳು ಮೆಚ್ಚಿ ಅನುಮೋದಿಸಿದರು ಆದರೆ ಅವೆಲ್ಲಕ್ಕೂ ಮೂಲನೂ ಆಧಾರಿಯೂ ಆಗಿದ್ದ ಅರಸನನ್ನು ಮಾತ್ರ ತಿರಸ್ಕರಿಸುತ್ತಿದ್ದರು ಆತನು ಊರಲ್ಲಿ ಸವಾರಿಹೊರಟು ಬೀದಿಗಳಲ್ಲಿ ಬರುವದನ್ನು ನೋಡಿ ತಮ್ಮ ಮನೆಗಳ ಬಾಗಿಲುಗಳನ್ನು ಹಾಕಿಕೊಳ್ಳುವರು ದಾರಿಯಲ್ಲಿ ಆತನನ್ನು ಕಂಡರೆ ಸನ್ಮಾನಮಾಡುತ್ತಿರಲಿಲ್ಲ, ನಮಸ್ಕಾರಮಾಡುತ್ತಿರಲಿಲ್ಲ ಪರದೇಶೀಯರು ಆ ಊರಿಗೆ ಬಂದು ಅವರ ನಡತೆಯನ್ನು ನೋಡಿ—ನೀವು ಇಂತಹ ಪ್ರಜಾವಾತ್ಸಲ್ಯವುಳ್ಳ ದೊರೆಯನ್ನು ಏಕೆ ಸನ್ಮಾನಿಸುವದಿಲ್ಲ? ಆತನು ನಿಮಗೆ ಮಾಡುವ ಉಪಕಾರಗಳಿಗೆ ನೀವು ಕೃತಜ್ಞರಾಗಿರಬೇಡವೇ? ಎಂದು ಕೇಳಿದರೆ ಅವರು—ಈ ರಾಜ್ಯದಲ್ಲಿ ನಮಗೆ ದೊರೆಯುವ ಸುಖಗಳೆಲ್ಲಾ ನಮಗೆ ಬೇಕು ರಾಜ್ಯಭಾರವೂ ರಾಜ್ಯದ ಕಟ್ಟಳೆಗಳೂ ಉತ್ಕೃಷ್ಟವಾದವುಗಳೇ ಸರಿ ಸತ್ಯ, ನೀತಿ, ಧರ್ಮ, ಪ್ರಜೋಪಕಾರಗಳು ಚನ್ನಾಗಿ ನಡೆಯುತ್ತವೆ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಭಂಗವಿಲ್ಲದೆ ಜರಗುತ್ತವೆ ಇವೆಲ್ಲಾ ನಮಗೆ ಅಗತ್ಯವಾಗಿ ಬೇಕು ಈ ಪ್ರಯೋಜನಗಳಿಲ್ಲದೆ ನಮ್ಮ ಬಾಳುವೆಯು ಚನ್ನಾಗಿರಲಾರದು ಆದರೆ ಅರಸನಿಂದ ನಮಗೇನು? ಈ ಏರ್ಪಾಡುಗಳೇ ನಮಗೆ ಸಾಕು ಅವು ಚ್ಯುತಿಯಿಲ್ಲದೆ ನಿರಂತರವಾಗಿ ನಡೆಯಲಿ ಎಂದು ಹೇಳಿದರಂತೆ

ಇವರು ಸ್ವಲ್ಪ ಆಶ್ಚರ್ಯವಾದ ಪ್ರಜೆಗಳಲ್ಲವೇ? ಕಟ್ಟಳೆ ಕಾನೂನುಗಳು ಏರ್ಪಾಡುಗಳು ಎಲ್ಲಿಂದ ಹುಟ್ಟಿಬಂದವೆಂದು ಅವರು ಯೋಚಿಸಬೇಡವೇ? ಇದಲ್ಲದೆ ಎಷ್ಟು ಉತ್ಕೃಷ್ಟವಾದ ಕಟ್ಟಳೆಗಳು ನ್ಯಾಯನಿಬಂಧನೆಗಳು ಇದ್ದರೂ ಅವುಗಳನ್ನು ಬಿಡದು ನಡಿಸಿ ಜಾರಿಗೆ ತರುವ ಬುದ್ಧಿಯೂ ಶಕ್ತಿಯೂ ಧೈರ್ಯವೂ ಅವುಗಳಿಗೆ ಬೆಂಬಲವಾಗಿ ನಿಂತಲ್ಲದೆ ಅವುಗಳ ಪ್ರಯೋಜನವು ಪ್ರಜೆಗಳಿಗೆ ಕಾರ್ಯತಃ ದೊರಕಲಾರದಲ್ಲವೇ ರಾಜ್ಯಾಡಳಿತದಲ್ಲಿ ಪ್ರಜಾಸೌಕರ್ಯಕ್ಕೆ ಬೇಕಾದ ಅನೇಕ ಕಟ್ಟಳೆಗಳು ಕಾಗದದ ಮೇಲೆ ಅಚ್ಚು ಹಾಕಲ್ಪಟ್ಟಿವೆ, ಆದರೆ ಅವುಗಳನ್ನು ಜಾರಿಗೆ ತಂದು ಪ್ರಜೆಗಳ ಸುಖವನ್ನು ಅಭಿವೃದ್ಧಿಪಡಿಸುವವರಿಲ್ಲ ಎಂದು ಪತ್ರಿಕೆಗಳು ಘಂಟಾಘೋಷವಾಗಿ ಹೇಳುತ್ತಲಿವೆ ಹೀಗಿರುವಲ್ಲಿ ಸೂರ್ಯಚಂದ್ರನಕ್ಷತ್ರಗಳನ್ನೂ, ಗಾಳಿ, ಮಳೆ, ಬೆಳೆಗಳನ್ನೂ ವರುಷಂಪ್ರತಿ ಕಾಲಕಾಲಕ್ಕೆ ಋತುಗಳನ್ನೂ ತಂದೊದಗಿಸುವವನು ಯಾರು ಎಂದು ನಾವು ಯೋಚಿಸಬೇಕಷ್ಟೆ ಇಂಜನಿಯರು ಇಲ್ಲದೆ ಇಂಜನ್ ನಿರ್ಮಾಣವಾಗುವದಿಲ್ಲ ಊರುತುಂಬ ನಲ್ಲಿಗಳಿಟ್ಟರೂ ಜಲಾಶ್ರಯವಾದ ನದಿಯಿಲ್ಲದೆ ಕೊಳವೆಗಳಲ್ಲಿ ನೀರು ಬರುವದಿಲ್ಲ ಕರ್ತೃವಿಲ್ಲದೆ ಕಾರಣವಿರುವದಿಲ್ಲ ಧರ್ಮಾಧಿಕಾರಿಯಿಲ್ಲದೆ ಧರ್ಮಪ್ರಮಾಣವಿರಲಾರದು ಸೈನ್ಯಾಧಿಪತಿಯಿಲ್ಲದ ಸೈನ್ಯವು ನಿಲ್ಲಲಾರದು ಅರಸನಿಲ್ಲದೆ ಪ್ರಜಾಕ್ಷೇಮವಿರಲಾರದು ದೇವರಿಲ್ಲದೆ ಜಗತ್ತು ಇರಲಾರದು, ನಡೆಯಲಾರದು ದೇವರೇ ಸಕಲಕ್ಕೂ ಮೂಲಾಧಾರಿ ಬುದ್ಧಿವಂತನೂ ದೇವರನ್ನು ಹುಡುಕುವವನೂ ಇದ್ದಾನೋ? ಎಂದು ನೋಡುವದಕ್ಕೆ ದೇವರು ಆಕಾಶದಿಂದ ಮನುಷ್ಯನ ಮಕ್ಕಳ ಮೇಲೆ ಕಣ್ಣಿಟ್ಟನು ದೇವರೇ ಇಲ್ಲವೆಂದು ಬುದ್ಧಿಹೀನನು ತನ್ನ ಹೃದಯದಲ್ಲಿ ಅಂದುಕೊಂಡಿದ್ದಾನೆ

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

⁂

ಶ್ರೀರಂಗಪಟ್ಟಣದ ಮ|| ಜಿ ದೇವಾಜಿರಾಯರು ಅಂಚೆ ಪೆಟ್ಟಿಗೆ ಎರಡು ಆಣೆ ಕಳುಹಿಸಿದವರಿಗೆ ಚೇಳಿನ ಔಷಧವನ್ನು ಪುಗಸಟ್ಟೆ ರವಾನೆ ಮಾಡುವದಾಗಿ ತಿಳಿಸುತ್ತಾರೆ

⁂

ರಾಜಧಾನಿಯ ನಜರ್ಬಾದಿನ ಬ್ಯಾಂಕ್ ಬಂಗಲೆಯಲ್ಲಿ ಮೊನ್ನೆ ಇಲಿ ಸತ್ತ ಕಾರಣ ರಾಜಾಸಾಹೇಬರವರು ಸಂಸಾರ ಸಮೇತ ಸರ್ ಶೇಷಾದ್ರಿ ಅಯ್ಯರವರ ಬಂಗಲೆಗೆ ಹೋಗಿ ಇರುತ್ತಾರೆ

⁂

ಮೈಸೂರು ಸೆಷನ್ಸ್ ಕೋರ್ಟಿನ ಶಿರಸ್ತೆದಾರ್ ಮ|| ವೈದ್ಯೇಶ್ವರ ಅಯ್ಯರಿಗೆ ಶಿವಮೊಗ್ಗೆಗೂ, ಅಲ್ಲಿನ ಶಿರಸ್ತೆದಾರ್ ಮ|| ಎನ್ ನರಸಿಂಹಯ್ಯನವರಿಗೆ ಮೈಸೂರಿಗೂ ವರ್ಗವಾಗಿರುತ್ತದೆ

⁂

ಬೆಂಗಳೂರು ದಂಡಿನ ಜಾಬರ್ ಬೇಗ್ ಎಂಬುವನು ಮೈಸೂರು ಬ್ಯಾಂಕಿಗೆ ಒಂದು ಛೆಕ್ಕಿನ ವಿಷಯದಲ್ಲಿ 100 ರೂಪಾಯಿಗೆ ಮೋಸಮಾಡಿದನೆಂಬ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಅಪರಾಧಿಗೆ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿದರು

⁂

ಶ್ರೀಮನ್ ಮಹಾರಾಜರವರು ಕಳೆದ ಶುಕ್ರವಾರ ಮಧ್ಯಾಹ್ನ ಬೆಂಗಳೂರಿಗೆ ಮೋಟರಿನಲ್ಲಿ ದಯಮಾಡಿ, ಶನಿವಾರ ಸಾಯಂಕಾಲ ವಾಪಸು ಚಿತ್ತೈಸಿದರು ಮೊದಲು ಏರ್ಪಾಡಾಗಿದ್ದಂತೆ ಮಹಾರಾಜರವರು ಕಳೆದ ಸೋಮವಾರ ನೀಲಗಿರಿಗೆ ದಯಮಾಡಲಿಲ್ಲ ನಾಳೆ ಅಥವಾ ನಾಡಿದ್ದು ಪ್ರಯಾಣಮಾಡಬಹುದೆಂದು ಊಹಿಸಲ್ಪಟ್ಟಿದೆ

⁂

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅಬ್ದುಲ್ ಖಾಲಿಕ್ ಎಂಬ ಮುಸಲ್ಮಾನನು ಲಿಂಗಮ್ಮನೆಂಬ ಒಕ್ಕಲಿಗರ ಹೆಂಗಸಿನ ಮೇಲೆ ಬಿದ್ದನೆಂದು ಮೊಕದ್ದಮೆ ಆಗಿ, ವಿಚಾರಣೆಯಲ್ಲಿ ಅವನ ಮೇಲೆ ತಪ್ಪು ರುಜುವಾತಾದ್ದರಿಂದ ಮ್ಯಾಜಿಸ್ಟ್ರೇಟರು ಆ ಮುಸಲ್ಮಾನನಿಗೆ ಆರು ತಿಂಗಳ ಕಠಿಣ ಸಜವನ್ನೂ 50 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

⁂

ಒಬ್ಬ ಬಾತ್ಮಿದಾರರಿಂದ—ಬೆಂಗಳೂರು ಶ್ರೀನಿವಾಸಮಂದಿರ ಸ್ತ್ರೀಸಭೆಯ ಮೀಟಿಂಗು ಕಳೆದ ಶನಿವಾರ ಬಹಳ ವಿಜೃಂಭಣೆಯಾಗಿ ಜರುಗಿತು ಸಭೆಯ ಪ್ರೆಸಿಡೆಂಟರು, ಮೆಂಬರುಗಳು, ಅನೇಕ ವಿಜಿಟರುಗಳು ಸೇರಿದ್ದರು ಸೌ|| ಗಂಗಾಬಾಯಮ್ಮನವರು ಪರಸ್ಪರ ಸಹಾಯವನ್ನು ಕುರಿತು ಉಪನ್ಯಾಸಮಾಡಿದರು ಈಗ ಜನಗಳಿಗೆ ಈ ವಿಷಯವು ಅವಶ್ಯಕವಾದದ್ದಾಗಿದೆ

⁂

ಕಳೆದ ಗುರುವಾರ ಸಾಯಂಕಾಲ ರಾಜಧಾನಿಯ ಮಿಷನ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳು ಒಂದು ಸಂತೋಷಕೂಟವನ್ನು ನಡಿಸಿ, ತಮ್ಮ ಉಪಾಧ್ಯಾಯರಾಗಿದ್ದ ಮ|| ಪಿ ಲಿಂಗಪ್ಪಯ್ಯನವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ಅವರಲ್ಲಿ ತಮಗಿರುವ ಗುರುಭಕ್ತಿಯನ್ನು ಪ್ರಕಾಶಪಡಿಸಿದರು ಸ್ಕೂಲಿನ ಪ್ರಿನ್ಸಿಪಲ್ ಮಿ|| ಆರ್ ಡಬ್ಲಿಯು ಬೂಟ್‌ರವರು ಈ ಕೂಟದಲ್ಲಿ ಅಗ್ರಾಸನವನ್ನು ವಹಿಸಿದ್ದರು

⁂

ಒಬ್ಬ ಬಾತ್ಮಿದಾರರು ಬರೆಯುವದು—ನಮ್ಮ ಸಂಸ್ಥಾನದ ಹಜರತ್ ದಿವಾನ್ ಸಾಹೇಬರವರ ಸವಾರಿಯು ಫೆಬ್ರವರಿ 20 ನೇ ತಾರೀಖು ಪ್ರಾತಃಕಾಲ ಮಿಲ್ಲಿಗೆ ದಯಮಾಡಿಸಿ ಅಲ್ಲಿನ ಡೈರೆಕ್ಟರುಗಳಿಗೆ ದರುಶನವಿತ್ತು ರೈಸ್ ಮಿಲ್ ಕಂಪನಿಯ ಕಟ್ಟಡಕ್ಕಾಗಿ ಜಾಗಾ ಸ್ಯಾಂಕ್ಷನ್ ಮಾಡಿ, ಸರ್ಕಾರದಿಂದ ರೈಸ್ ಮಿಲ್ ಕಂಪನಿಗೆ ಬೇಕಾದ ಸಹಾಯವನ್ನು ಹೊಂದಬಹುದು ಎಂಬದಾಗಿ ಅಪ್ಪಣೆ ಕೊಡಿಸಿರುತ್ತಾರೆ

ಕುಣಿಗಲಿನಲ್ಲಿದ್ದ ಸಬ್ ರೆಜಿಸ್ಟ್ರಾರ್ ಮ|| ಎಂ ರಾಘವೇಂದ್ರ ರಾಯರಿಗೆ ಅಲ್ಲಿಂದ ಕುಣಿಗಲಿಗೆ ವರ್ಗವಾದ ಸಂದರ್ಭದಲ್ಲಿ ಕುಣಿಗಲಿನ ಬ್ರಹ್ಮ ಕೂಡದವರು ಒಂದು ಸಭೆಯನ್ನು ನಡಿಸಿ ಮ|| ರಾಘವೇಂದ್ರರಾಯ ರವರಿಂದ ಅವರಿಂದಾದ ಉಪಕಾರಗಳನ್ನು ಕುರಿತು ಪ್ರಶಂಸೆಮಾಡಿ, ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರೆಂದು ಒಬ್ಬ ಬಾತ್ಮಿ ದಾರರು ಬರೆಯುತ್ತಾರೆ

* * *

ಸಕಲೇಶಪುರ ತಾಲ್ಲೂಕು ಮಂಡಗದ್ದೆಯಲ್ಲಿ ಕಳೆದ ತಿಂಗಳ ಅಂತ್ಯಭಾಗ ದಲ್ಲಿ ಪ್ರಮುಖರೂ ಕಾಫಿ ಪ್ಲಾಂಟರುಗಳೂ ಒಂದು ಸಭೆಯನ್ನು ನಡಿಸಿ ವಾಚಕಮಂದಿರವನ್ನು ಪ್ರಾರಂಭಮಾಡಿರುತ್ತಾರೆ ಈ ಮಂದಿರಕ್ಕೆ ನಾಗರತ್ನಂ ಯವರು ಪ್ರೆಸಿಡೆಂಟರಾಗಿಯೂ, ಮ|| ನಾಡಿಗ ಎಂ ಗುಂಡೇ ರಾಯರು ಸೆಕ್ರೆಟರಿಯಾಗಿಯೂ, ಮ|| ಆ ಭರಮಯ್ಯಗೌಡರು ಖಜಾಂಚಿ ಯಾಗಿಯೂ ಚುನಾಯಿಸಿ ನೇಮಿಸಲ್ಪಟ್ಟಿದಾರೆಂದು ತಿಳಿದುಬಂದಿದೆ

* * *

ಶ್ರೀ ಶಿವಗಂಗಾ ಸ್ವಾಮಿಗಳವರಿಗೆ ಕಳೆದ ವಾರ ರಾಜಧಾನಿಯಲ್ಲಿ ಮಹಾ ಜನರು ಪಾದಪೂಜಾದಿಗಳನ್ನು ಮಾಡಿ ಸತ್ಕರಿಸಿದರು ಶ್ರೀಸ್ವಾಮಿಗಳು ಕಳೆದ ವಾರ ಸಾಯಂಕಾಲ ಸಂಸ್ಕೃತ ಪಾಠಶಾಲಾ ಮೈದಾನದಲ್ಲಿ ಸ್ವಧರ್ಮಾ ಚಾರ ವಿಚಾರವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ದರು ವೈದಿಕ ಮಂಡಲಿಯವರೂ, ಲೌಕಿಕ ದೊಡ್ಡಮನುಷ್ಯರೂ ಅಧಿಕಾರಿಗಳೂ, ಅನೇಕ ಮಂದಿ ವಿದ್ಯಾರ್ಥಿಗಳೂ ಸೇರಿದ್ದರು ಶ್ರೀ ಸ್ವಾಮಿಗಳು ಕಳೆದ ಶನಿ ವಾರ ಬೆಳಿಗ್ಗೆ 9 ಗಂಟೆಗೆ ಪರಿವಾರ ಸಮೇತ ಅರಸುನೆಯ ಮರ್ಯಾದಿಗಳೊಡನೆ ಇಲ್ಲಿಯಿಂದ ನಂಜನಗೂಡನ್ನು ಕುರಿತು ಪ್ರಯಾಣಮಾಡಿದರು ಗೌರವಾರ್ಥ 21 ತೋಪುಗಳು ಹಾರಿಸಲ್ಪಟ್ಟವು

* * *

ಮಾಗಡಿ ತಾಲ್ಲೂಕು ಮಾಡುಬಾಳು ಹೋಬಳಿ ಸಾವನದುರ್ಗ ನೆಲಪಟ್ಟಿ ಯ ಶ್ರೀ ನರಸಿಂಹಸ್ವಾಮಿಯವರ ಸನ್ನಿಧಾನದಲ್ಲಿ ರಥೋತ್ಸವಾದಿಗಳು ನಡೆಯುತ್ತಲೂ, ಸಾವಿರಾರು ಪ್ರ ಜೆಗಳು ಸೇರುತ್ತಲೂ ಇರೋಣದರಿಂದ ಅಲ್ಲಿ ಎಲ್ಲರಿಗೂ ಅನುಕೂಲವಾದಂಥಾ ಒಂದು ದೊಡ್ಡ ಧರ್ಮಛತ್ರವನ್ನು ಕಟ್ಟಿಸಬೇಕೆಂದು ಆ ತಾಲ್ಲೂಕಿನ ಕೆಲವು ದೊಡ್ಡಮನುಷ್ಯರು ಸಭೆ ಸೇರಿ ತೀರ್ಮಾನಮಾಡಿ, ಆ ಕಟ್ಟಡಕ್ಕೆ ಬೇಕಾಗುವ 3000 ರೂಪಾಯನ್ನು ಚಂದಾ ಮೂಲಕ ಕೂಡಿಸುವಂತೆ ತೀರ್ಮಾನಮಾಡಿ ದ್ದಾರೆ ಈ ಪಂಡಿತಾಗಿ ಚಂದಾ ವಸೂಲಾಗುವ ಹಣದಲ್ಲಿ ಸಾಧಿಲ್ವಾರು, ಮಾಡು, ಸ್ಕ್ರೀಟು ಮೊದಲಾದ ಭಾಗಗಳಿಗೇ ವಿಶೇಷವಾಗಿ ಖರ್ಚಾಗದಂತೆ ಕಾಪಾ ಡುವ ವಿಷಯದಲ್ಲಿ ಮನಸ್ಸು ಕೊಟ್ಟು ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ

* * *

ಚಿತ್ರದುರ್ಗದ ಟವರ್ ಮ| ಸಾಟಿಪಾಲಪ್ಪನವರು ಬರೆಯುವುದೇನೆಂದ ರೆ ಮುಂದಿನ ಏಪ್ರೇಲ್ ತಿಂಗಳಲ್ಲಿ ನಡೆಯುವ ಲೋಯರ್ ಸೆಕೆಂಡರೀ ಪರೀಕ್ಷೆ ಗೋಸ್ಕರ ಚಿತ್ರದುರ್ಗದ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ಮತ್ತು ಛತ್ರದಲ್ಲಿ ಊಟಮಾಡತಕ್ಕ ಇತರ ವಿದ್ಯಾರ್ಥಿಗಳು ಮಾಸ್ಟರುಗಳು, ಇವರಿ ಗೆಲ್ಲಾ ಮಾಮೂಲಿನಂತೆ ಧರ್ಮಾರ್ಥವಾಗಿ ಪರೀಕ್ಷೆ ಪೂರೈಸುವ ವರೆಗೂ ಎರಡು ಹೊತ್ತು ಭೋಜನವೂ, ಮಧ್ಯಾಹ್ನ ಫಲಹಾರವೂ ನಡೆಯುವಂತೆ ಮ| ಸಾಹು ಕಾರ್ ಬಸಪ್ಪನವರು ಏರ್ಪಾಡುಮಾಡಿರುತ್ತಾರಾದ್ದರಿಂದ ಬರತಕ್ಕವರ ಸಂಖ್ಯೆ, ಹೆಸರು ಜಾತಿ, ಗ್ರಾಮ ಮುಂತಾದ ತಪ್ಸೀಲು ತಿಳಿಯಲು ಒಂದು ವಾರ ಮುಂಚಿತವಾಗಿ ನನಗೆ ಬರೆಯಬೇಕಾಗಿ ಕೋರಲ್ಪಟ್ಟಿದೆ

ಮೈಸೂರು ಗೆಜೆಟ್ ಸಂಗ್ರಹ

ಗುಡ್ ಫ್ರೈಡೆ (ಶುಭ ಶುಕ್ರವಾರ) ಜನರಲ್ ರಜಾ ದಿನವೆಂದು ತಿಳಿಯ ಪಡಿಸಿದ್ದು ಈ ಸಲ ಕ್ರಿಸ್ಮಸ್ ರಜವು ಡಿಸೆಂಬರ್ ತಾ 24 ರಿಂದ ಜನವರಿ ತಾ 2 ನೇ (ಉಭಯ ದಿನಗಳೂ ಸೇರಿ) ಇರತಕ್ಕದ್ದು

ಜಹಗೀರ್ದಾರ್ ಮ| ಚಂದ್ರಶೇಖರಭಟ್ಟರನ್ನು ನೆಲಮಂಗಲದ ಮ್ಯುನಿಸಿ ಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ

ಮಿ|| ಖಾಜಿ ಸಯ್ಯದ್ ಮಹಮ್ಮದ್ ಸಾಹೇಬ್ ಯವರನ್ನು ಶಿವಮೊಗ್ಗಾ ದ ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕಮಾಡಿದೆ

ಫಾರೆಸ್ಟ್ ಸಬ್ ಅ| ಕನ್ಸರ್ವೇಟರ್ ಮಿ|| ಸಿ ಎಚ್ ಈಗಲ್ಸ್ ರವರಿಗೆ ಕೊಟ್ಟಿರುವ ಆರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂವತ್ತೈದು ದಿನ ಜಾಸ್ತಿಮಾಡಿದೆ

ಚಿಕ್ಕಬಳ್ಳಾಪುರದ ತಾಲ್ಲೂಕು ಅಮಲ್ದಾರ್ ಮ|| ಎಸ್ ಎನ್ ಶ್ರೀ ಕಂಠಶಾಸ್ತ್ರಿ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗುಬ್ಬಿಯಿಂದ ಡೆಪ್ಟಿ ಅಮಲ್ದಾರ್ ಮ|| ಟಿ ಟಿ ರಾಮಚಂದ್ರರಾಯರು ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರರಾಗಿಯೂ, ಕೋಲಾರ್ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಅಕೌಂಟೆಂಟ್ ಮ|| ಬಿ ನಾರಾಯಣ ಅಯ್ಯರವರು ಗುಬ್ಬಿ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿ ಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ

ದಾವಣಗೆರೆ ಸಬ್ ಡಿವಿಜನ್ ಆಫೀಸರ್ ಮ|| ಆರ್ ನಾನಾಸ್ವಾಮಿ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಚಿತ್ರದುರ್ಗದ ಟ್ರೆಜರಿ ಅ|| ಕಮಿಷನರ್ ರವರು ದಾವಣಗೆರೆ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಮ|| ಪಿ ಗೋಪಾಲರಾಜೆ ಅರಸಿನವರನ್ನು ಅ|| ಕಮಿಷನರ್ ಆಗಿ ನೇಮಿಸಿ ದ್ದರಿಂದ ಫ್ರಂಟ್ ರಾಕ್ಸ್ ಡೆಪ್ಟಿ ಅಮಲ್ದಾರ್ ಮ|| ಅಬ್ದುಲ್ ಅಜೀಸ್ ಖಾನ್ ರನ್ನು ಆಸೆಕಲ್ ಅಮಲ್ದಾರರಾಗಿಯೂ, ರೆವಿನ್ಯು ಕಮಿಷನರವರ ಆಫೀಸ್ ನ ಮ|| ಕೆ ಮಲ್ಲರಾಜೆ ಅರಸಿನವರು ಫ್ರಂಟ್ ರಾಕ್ಸ್ ಡೆಪ್ಟಿ ಅಮ ಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ನೇಮಕ ಮಾಡ ಲ್ಪಟ್ಟಿದೆ

ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಮಿ|| ಇ ಎಚ್ ಥಾಮ್ಸನ್ ರವ ರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಅ|| ಕಮಿಷನರ್ ಮ|| ಎನ್ ಮಾಧವರಾಯನ್ನು ಕಳೆದ ಡಿಸೆಂಬರ್ ತಾ 18 ರಿಂದ 3 ನೇ ಕ್ಲಾಸಿಗೂ, ಮ|| ಜ ಬಿ ಹೆಬ್ಲಿಕರ್ ಯವರನ್ನು ಜನವರಿ ತಾ 1 ರಿಂದ 3 ನೇ ಕ್ಲಾಸಿಗೂ ಬಡ್ತಿಮಾಡಿದೆ

ಟ್ರೇ|| ಅ|| ಕಮಿಷನರ್ ಮ| ಪಿ ಗೋಪಾಲರಾಜೆಅರಸಿನವರನ್ನು ಬೆಂಗ ಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ

ಮ|| ಪಿ ರಾಘವೇಂದ್ರರಾಯರು ಎಕ್ಸೈಜ್ ಕಮಿಷನರ ಕೆಲಸದ ಛಾರ್ಜ್ ವಹಿಸಿಕೊಂಡ ತಾರೀಖಿನಿಂದ ಮಿ|| ಮಿರ್ಜಾ ಎಂ ಇಸ್ಮಾಯಿಲ್ ರವರನ್ನು ಹುಜೂರು ಸೆಕ್ರೆಟರಿಯಾಗಿ ಖಾಯಂ ಮಾಡಿದೆ

ಕೊಪ್ಪ ತಾಲ್ಲೂಕು ಅಮಲ್ದಾರ್ ಮ|| ಎನ್ ಶ್ರೀನಿವಾಸರಾಯರಿಗೆ ಕೊಟ್ಟ ಮೂರು ವಾರಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊ ಳ್ಳದೆ ಇರೋಣವಾಗಿ ರದ್ದುಮಾಡಿದೆ

ಮೋಟರ್ ಕಾರಿನ ಅನಾಹುತ

ಒಬ್ಬ ಮನುಷ್ಯನು ಮೃತಪಟ್ಟನು

ಮೊನ್ನೆ ಮಂಗಳವಾರ ಬೆಳಿಗ್ಗೆ ಸುಮಾರು 10 ಗಂಟೆ ಸಮಯದಲ್ಲಿ ಮೆಯಿ ಲ್ ಟಾಂಗಾ ಕಂಟ್ರಾಕ್ಟರ್ ಮಿ| ಪಾಲಂಜಿಯವರ ಮೋಟರ್ ಗಾಡಿಯನ್ನು ಒಬ್ಬ ಮುಸಲ್ಮಾನರವನು ರಾಜಧಾನಿಯ ನಜರ್ಬಾದ್ ರಸ್ತೆಯಿಂದ ಬಹುವೇಗವಾಗಿ ಬಿಟ್ಟುಕೊಂಡು ಬರುತ್ತಿದ್ದನು ಗಾರ್ಡನ್ ಹೋಟೇಲಿಗೂ ವೆಸ್ಲಿಯನ್ ಮಿಷನ್ ದೇವಸ್ಥಾನಕ್ಕೂ ನಡುವೆ ತಿರುವಿನಲ್ಲಿ ಗಾಡಿಯನ್ನು ತಿರುಗಿಸುವಾಗ್ಗೆ ಅಲ್ಲೇ ರಾಗಿ ಹುಲ್ಲಿನ ಹೊರೆಯನ್ನು ಮಾರುವುದಕ್ಕೆ ಹೊತ್ತು ತರುತ್ತಿದ್ದ ಸುಮಾರು 60 ವಯಸ್ಸಿನ ಒಬ್ಬ ಮುದಕನಾದ ಗ್ರಾಮಸ್ಥನು ಆ ಗಾಡಿಯ ಕೆಳಕ್ಕೆ ಸಿಕ್ಕಿ ಬಿದ್ದು ಕೊಂಡನು ಗಾಡಿನಡಿಸುತ್ತಿದ್ದ ಮಹಮದಿಯನು ಎದುರು ಗೋಡೆಗೆ ಗಾಡಿ ಬಡಿದೀತೆಂಬ ಶಂಕೆಯಿಂದ ತಿರುಗಿಸುವಾಗ್ಗೆ ಆ ತಿರುಪೇ ಮುರಿದುಹೋಗಿ ಗಾಡಿ ಯು ಆ ಮುದುಕನ ಎದೆ ಕಿಬ್ಬೊಟ್ಟೆಯ ಮೇಲೆ ಹರಿದು ಎದುರು ಗೋಡೆಗೆ ಬಡಿದು ಒಡೆದುಹೋಯಿತು ಆ ಮುದುಕನಿಗೆ ಕೂಡಲೆ ಸ್ಮರಣೆತಪ್ಪಿತು ಗಾರ್ಡನ್ ಹೋಟೇಲಿನ ಮ|| ಗಂಗಾಧರರಾಯರು ಕೂಡಲೆ ತಮ್ಮ ಡಿಸ್ಪೆನ್ಸರಿ ಯಿಂದ ಔಷಧಾದಿಗಳನ್ನು ತೆಗೆದುಕೊಂಡು ಹೋಗಿ ಸ್ಮರಣೆತಪ್ಪಿದ್ದ ಮುದುಕ ನನ್ನು ಹೋಟೇಲಿನ ಮೈದಾನಕ್ಕೆ ಸಾಗಿಸಿ ಬಹಳವಾಗಿ ಉಪಚಾರ ಮಾಡಿದ್ದರ ಮೇಲೆ ಮುದುಕನಿಗೆ ಪ್ರಜ್ಞೆಯುಂಟಾಯಿತು ಆಗ ಅವನ ಕಿಬ್ಬೊಟ್ಟೆಯ ಕರುಳು ಒಡೆದು ರಕ್ತವು ವಿಶೇಷವಾಗಿ ಹರಿಯುತ್ತಿತ್ತು ಮ|| ಗಂಗಾಧರರಾ ಯರೂ ಅಲ್ಲಿದ್ದವರೂ ಸೇರಿ ಒಂದು ರಬ್ಬರ್ ಚಕ್ರದ ಗಾಡಿಯಲ್ಲಿ ಆ ಮುದ ಕನನ್ನು ಮಲಗಿಸಿ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗೆ ಕಳುಹಿಸಿಕೊಟ್ಟರು ಅಲ್ಲಿ ಅವನು ಸ್ವಲ್ಪ ಹೊತ್ತು ಬದುಕಿದ್ದು ಸುಮಾರು 3 ಗಂಟೆಗೆ ತೀರಿಹೋದನು ಸಿಟಿ ಮ್ಯಾಜಿಸ್ಟ್ರೇಟರು ಅವನ ಹೇಳಿಕೆಯನ್ನು ಬರೆದುಕೊಂಡು, ಅವನು ಮೃತ ಪಟ್ಟನಂತರ ಕ್ರಮವಾಗಿ ಮಹಜರು ಮಾಡಿದರು

ಆ ಮೋಟರ್ ಗಾಡಿಯಲ್ಲಿ ಆಗ್ಗೆ ಯಾರೂ ಕುಳಿತಿರಲಿಲ್ಲ ನಡಿಸುವ ವನೂ ಅವನ ಸಂಗಾತಿಯೂ ಮಾತ್ರ ಅದರಲ್ಲಿದ್ದರು ಪೋಲೀಸಿನವರು ಅಲ್ಲಿಗೆ ಹೋಗಿ ನಡೆದ ವಿದ್ಯಮಾನಗಳನ್ನೆಲ್ಲಾ ವಿಚಾರಿಸಿ ಮೋಟರ್ ಗಾಡಿಯ ಸ್ಥಿತಿಯ ನ್ನೂ, ನಡಿಸುತ್ತಿದ್ದವನ ವಾಂಗ್ಮೂಲವನ್ನೂ ಬರೆದುಕೊಂಡು ಹೋಗಿದಾರೆ

ಮೈಸೂರು ನ್ಯಾಯವಿಧಾಯಕ ಸಭೆ

ಹೆಚ್ಚು ಮೆಂಬರುಗಳ ಚುನಾವಣೆ

ಈ ವಾರದ ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ನ್ಯಾಯವಿಧಾಯಕ ಸಭೆಗೆ ಮೆಂಬರಾಗಬೇಕೆಂದು ಅಪೇಕ್ಷಿಸಿರತಕ್ಕವರ ಹೆಸರುಗಳು ಪ್ರಕಟವಾಗಿರುತ್ತವೆ ಅವರು ಯಾರೆಂದರೆ—

(1) ಬೆಂಗಳೂರು ಮತ್ತು ಕೋಲಾರ್ ಡಿಸ್ಟ್ರಿಕ್ಟುಗಳು—ದೊಡ್ಡಬ ಳ್ಳಾಪುರದ ಅಡ್ವೊಕೇಟ್ ಮ|| ಎಸ್ ರಾಜಗೋಪಾಲಅಯ್ಯಂಗಾರ್ರು, ಬೆಂಗ ಳೂರು ಅಡ್ವೊಕೇಟ್ ಮ|| ಎಚ್ ಕೆ ವೀರಬಸವಯ್ಯನವರು, ಕೋಲಾರದ ರಿಟೈರ್ಡ್ ಹೆಡ್ ಮಾಸ್ಟರ್ ಮ|| ಎಸ್ ಮಲ್ಹಾರಿರಾಯರು, ಕೋಲಾರದ ಅಡ್ವೊಕೇಟ್ ಮ| ಎ ವಾಪುರಾಯರು, ಬೆಂಗಳೂರು ಮ್ಯುನಿಸಿಪಲ್ ಕೌನ್ಸಿ ಲರ್ ಮತ್ತು ಆ| ಮ್ಯಾಜಿಸ್ಟ್ರೇಟ್ ಮ|| ಬಿ ಕೆ ಗರುಡಾಚಾರ್ರು (2) ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳು—ಮೈಸೂರು ಅಡ್ವೊ ಕೇಟ್ ಮ|| ಎ ನರಸಿಂಹಯ್ಯನವರು, ಮೈಸೂರು ಅಡ್ವೊಕೇಟ್ ಮ|| ಕೆ ಚಂದ್ರಶೇಖರಯ್ಯನವರು, ಮೈಸೂರು ಅಡ್ವೊಕೇಟ್ ಮ| ಎಚ್ ನರಸಿಂಗ ರಾಯರು, ಹಾಸನದ ಅಡ್ವೊಕೇಟ್ ಮ|| ಎನ್ ವೆಂಕಟೇಶಯ್ಯನವರು, ನಂಜನಗೂಡು ಅಡ್ವೊಕೇಟ್ ಮ|| ಕೆ ವೆಂಕಟಸ್ವಾಮಯ್ಯನವರು (3) ತು ಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು—ಚಿತ್ರದುರ್ಗದ ಅಡ್ವೊಕೇ ಟರುಗಳಾದ ಮ| ಸಿ ಚನ್ನಕೇಶವಯ್ಯನವರು ಮ| ಬಿ ವೆಂಕಟಕೃಷ್ಣನ ವರು ಮ| ಎ ಆರ್ ನಾಗೇಶರಾಯರು (4) ಶಿವಮೊಗ್ಗೆ ಮತ್ತು ಕಡೂರು ಡಿಸ್ಟ್ರಿಕ್ಟುಗಳು—ಶಿವಮೊಗ್ಗೆಯ ಅಡ್ವೊಕೇಟರುಗಳಾದ ಮ| ಕೆ ಶಂಕರನಾ ರಾಯಣರಾಯರು, ಮ ಬಿ ಗರುಡಾಚಾರ್ರು, ಮ| ಸಿ ಸುಬ್ಬರಾಯರು

ಮೇಲ್ಕಂಡ ಹೆಸರುಗಳ ಪಟ್ಟಿಯನ್ನು ನೋಡಲಾಗಿ ತುಮಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಒಬ್ಬರಾದರೂ ಮೆಂಬರಾಗಬೇಕೆಂದು ಬಂದಿಲ್ಲ ವಾದಕಾರಣ ಆ ಡಿಸ್ಟ್ರಿಕ್ಟುಗಳ ಪ್ರಜಾ ಇಂಗಿತವು ನ್ಯಾಯವಿಧಾಯಕ ಸಭೆಯಲ್ಲಿ ಹೊರಪಡುವುದು ಕಷ್ಟವೆಂದು ಕಾಣುತ್ತದೆ ಮೇಲ್ಕಂಡ ಮೆಂಬರುಗಳಲ್ಲಿ ಅನೇ ಕರು ತಮ್ಮಗಳ ಸರಹದ್ದಿನೊಳಗಿರುವಂಥಾ ಓಟರುಗಳಿಗೆ ಕಾಗದಗಳನ್ನು ಬರೆದು ತಮಗೆ ಓಟು ಕೊಡಬೇಕೆಂದು ಕೇಳಿಕೊಂಡಿರುತ್ತಾರೆ ನಮಗೆ ತಿಳಿದುಬಂದಿರು ವ ಮಟ್ಟಿಗೆ ಮೇಲ್ಕಂಡ ಯಾವ ಮೆಂಬರಾಗಲಿ ನ್ಯಾಯವಿಧಾಯಕ ಸಭೆಯಲ್ಲಿ ಇಂಥಿಂಥಾ ಕಾರ್ಯಮಾಡಬೇಕೆಂದಿದೇನೆ ಎಂದು ಖಂಡಿತ ಮಾಡಿಕೊಂಡಿರುವಂತೆ ಕಂಡುಬರುವುದಿಲ್ಲ ಅದೊಂದು ಗೌರವವಾದ ಪದವಿ, ಆ ಪದವಿಯನ್ನು ಸಂಪಾ ದಿಸಿಕೊಳ್ಳಬೇಕು ಎಂಬ ಉದ್ದೇಶವಿರುವಂತೆ ತೋರುತ್ತದೆ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರಾಗತಕ್ಕವರ ಯೋಗ್ಯತೆ ಹ್ಯಾಗಿರಬೇಕೆಂದರೆ—ಅವರು ಸಂ ಸ್ಥಾನವನ್ನೆಲ್ಲಾ ಚೆನ್ನಾಗಿ ತಿಳಿದವರಾಗಿಯೂ, ಎಲ್ಲಾ ಪ್ರಾಂತ್ಯಗಳಲ್ಲೂ ಇರುವ ಸಮಸ್ತ ಪ್ರಜೆಗಳ ಕುಂದುಕೊರತೆಗಳನ್ನೂ ಅವರ ಸ್ಥಿತಿಗತಿಗಳನ್ನೂ ಬಲ್ಲವರಾಗಿ ಯೂ ಪ್ರಜೆಗಳ ಶ್ರೇಯಸ್ಸಿಗೆ ಅನುಕೂಲವೂ ಹಿತಕರವೂ ಆದ ಕಾನೂನುಗಳನ್ನೇ ಹಿಡಿದು ಒತ್ತಾಯಪಡತಕ್ಕವರಾಗಿಯೂ ಇರಬೇಕು ಈಗಿರುವ ಕಾನೂನುಗಳೇ ಸಾಕಾ ಗಿವೆ ಎಂದೂ, ಹೊಸ ಕಾನೂನುಗಳೇನೂ ಅವಶ್ಯವಿಲ್ಲವೆಂದೂ ನಮಗೆ ಕೆಲವು ವೇಳೆ ತೋರುತ್ತದೆ ಈಗಿರುವ ಕಾನೂನುಗಳನ್ನು ಅವುಗಳ ಉದ್ದೇಶಕ್ಕನುಸಾರವಾ ಗಿಯೂ, ಸತ್ಯತೆಯಿಂದಲೂ ರೂಢಿಸುವಂತೆ ಮಾಡಬೇಕಾದದ್ದು ಪರಮಾವಶ್ಯವೆಂದು ಹೇಳುತ್ತೇವೆ ಯಾಕಂದರೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ದರ್ಪವಾಗಲಿ ಬಿಗಿಯಾಗಲಿ ಇಲ್ಲದಿರುವುದೊಂದೇ ದೊಡ್ಡ ಕೊರತೆಯೆಂದು ಕಾಣುತ್ತದೆ ಸು ಮ್ಮನೆ ಹೋಗಿ ನ್ಯಾಯವಿಧಾಯಕ ಸಭೆಯಲ್ಲಿ ಕುರ್ಚಿಗಳನ್ನು ಅಲಂಕರಿಸುವಂ ಥಾ ಮೆಂಬರುಗಳು ನಮಗೆ ಅವಶ್ಯವಿಲ್ಲ ಸರ್ಕಾರದ ಅಧಿಕಾರಿಗಳು ಪ್ರಜೆಗಳ ಸೇವಕರಾಗಿರೋಣದರಿಂದ ಅವರು ತಮ್ಮ ಕರ್ತವ್ಯಗಳನ್ನು ಖಂಡಿತವಾಗಿಯೂ ಕಾನೂನಿಗನುಸಾರವಾಗಿಯೂ ನಡಿಸುತ್ತಿದಾರೆಯೇ ಎಂಬುವುದನ್ನು ಸರಿಯಾಗಿಯೂ ನಿರ್ದಾಕ್ಷಿಣ್ಯವಾಗಿಯೂ ನೋಡಿಕೊಳ್ಳತಕ್ಕಷ್ಟು ದಾಕ್ಷ್ಯತೆಯನ್ನು ಪಡೆದಿರುವವರೇ ಆ ಪೀಠಗಳನ್ನು ಅಲಂಕರಿಸಬೇಕು

ತಾಲ್ಲೂಕು ವರ್ತಮಾನಗಳು

<u>ಚನ್ನರಾಯಪಟ್ಟಣದ ತಾ, ನುಗ್ಗೇಹಳ್ಳಿ</u>—ಫೆಬ್ರವರಿ ತಾ 21 ರಲ್ಲಿ 3 ನೇ ಕೌನ್ಸಿಲರ್ ಎಂ ಕಾಂತರಾಜೆಅರಸಿನವರ ಸವಾರಿಯು ಅನಿರೀಕ್ಷಿತ ವಾಗಿ ಏಕಾಏಕಿ ಈ ಊರಿಗೆ ದಯಮಾಡಿ ಪಾನಕ್ಕೆ ಮುಖ್ಯಾಧಾರವಾದ ಕಲ್ಯಾ ಣಿ ಮತ್ತು ಲೋಕಲ್ ಫಂಡು ಬಾವಿಗಳು ಮುಂತಾದುವನ್ನು ಪರಾಂಬರಿಸಿದ್ದ ಲ್ಲದೆ ಊರೊಳಗೆ ದಯಮಾಡಿಸಿ ಬಾಲಕಬಾಲಕಿಯರ ಪಾಠಶಾಲೆಗಳನು ಕಟಾ ಕ್ಷಿಸಿ ಬಾಲಕಿಯರುಗಳಿಂದ ಹೇಳಲ್ಪಟ್ಟ ದೇವತಾಸ್ತುತಿಗಳನ್ನೂ, ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳನ್ನೂ ಕೇಳಿ ತುಂಬಾ ಸಂತೋಷಪಟ್ಟು ಬಾಲಕಬಾಲಕಿ ಯರ ವಿದ್ಯಾಭಿವೃದ್ಧಿ ವಿಷಯವೂ ಪರಾಂಬರಿಕೆ ತೆಗೆದುಕೊಂಡು ಸ್ಟೇಷನ್ಗೆ ದಯಮಾಡಿಸಿ ಅಲ್ಲಿ ಸೇರಿದ್ದ ವರ್ತಕರು ಮುಂತಾದ ಗ್ರಾಮಸ್ಥರ ಅಹವಾಲು ಗಳನ್ನು ಲಾಲಿಸಿ ಸರ್ಕಾರದ ನೌಕರರು ತಮ್ಮ ಕೆಲಸವನ್ನು ಸರಿಯಾಗಿ ನೆರವೇರಿ ಸುತ್ತಾ ಗ್ರಾಮಸ್ಥರಿಗೆ ಎಷ್ಟರಮಟ್ಟಿಗೆ ಸಹಾಯಕರಾಗಿದಾರೆಂಬುದನ್ನೂ ಪರಾಂ ಬರಿಸಿ ಗ್ರಾಮವೆಲ್ಲಾ ಸಂಚಾರಮಾಡಿ ಅಲ್ಲಿನ ಶಾಕೇಜು ವಿಷಯ ಪರಾಂಬರಿಕೆ ಯಿಂದ ಸವಾರಿ ದಯಮಾಡಿಸುವ ಕಾಲದಲ್ಲಿ ಸ್ಕೂಲುಗಳ ಬಾಲಕಬಾಲಕಿಯ ರಿಗೆ ಮಿಠಾಯಿ ಮುಂತಾದ್ದು ಹಂಚಬೇಕೆಂದು ಹತ್ತು ರೂಪಾಯಿ ಕೊಟ್ಟು ಚನ್ನರಾಯಪಟ್ಟಣಕ್ಕೆ ದಯಮಾಡಿಸಿದರು ಅದರಂತೆ ತಾ 26 ರಲ್ಲಿ ಮಕ್ಕಳಿಗೆ ತಿಂಡಿಯು ಹಂಚಲಾಯಿತು

<u>ಮೂಡಿಗೆರೆ</u>—ಕಡೂರ್ ಡಿಸ್ಟ್ರಿಕ್ಟ್ ಮೂಡಿಗೆರೆ ತಾಲ್ಲೋಕು ಅಮಲ್ದಾರ ರಾಗಿದ್ದ ಮಿ|| ಎಸ್ ರೂಬರ್, ಬಿ ಎ ಯವರಿಗೆ ಫ್ರಂಟ್ ರಾಕ್ಸ್ ಪೊಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗವಾದದ್ದನ್ನು ಕೇಳಿ ಬಹಳ ಸಂತೋಷ ಪಡುತ್ತೇವೆ ಇವರು ಪಾವಗಡ ತಾಲ್ಲೋಕಿನಿಂದ ಈ ಮೂಡಿಗೆರೆ ತಾಲ್ಲೋಕಿಗೆ ಬಂದು ಸುಮಾರು ಮೂರು ವರ್ಷಗಳ ಕಾಲ ಇದ್ದಾಗ್ಯೂ ಪ್ರಜೆಗಳ ಹಿತಚಿಂತಕ ರಾಗಿದ್ದು ಸತ್ಕೀರ್ತಿಯನ್ನು ಪಡೆದರು ಇದಕ್ಕಾಗಿ ಈ ತಾಲ್ಲೋಕಿನ ಇತರ ಆಫೀಸರುಗಳು, ನೌಕರರು, ಇನ್ನೂ ಅನೇಕ ದೊಡ್ಡಮನುಷ್ಯರು ಮೂಡಿಗೆರೆ ಎ ವಿ ಸ್ಕೂಲಿನಲ್ಲಿ ಸಭೆ ಸೇರಿ, ಮಿ|| ರೂಬರ್ ರವರನ್ನು ದಂಪತಿ ಸಮೇತ ಬ್ಯಾಂಡ್ ವಾದ್ಯ ಸಂದಣಿಯೊಡನೆ ಸ್ಕೂಲ್ ಕಟ್ಟಡಕ್ಕೆ ಕರೆದುಕೊಂಡು ಬಂದು ಅಗ್ರಾಸನದಲ್ಲಿ ಕುಳ್ಳಿರಿಸಿದರು ಸಭೆಗೆ ದಯಮಾಡಿದ್ದ ಮಹನೀಯರು ಹೊಸ ಅಮಲ್ದಾರ್ ಮಿ|| ಅಬ್ದುಲ್ ರಜಾಕ್ ಸಾಹೇಬರು, ಡಾ|| ಸಿದ್ದಪ್ಪನವರು, ಸಬ್ ಡಿವಿಜನ್ ಆಫೀಸರವರು, ಪೊಲೀಸ್ ಮತ್ತು ಎಕ್ಸೈಜು ಇನ್ಸ್ಪೆಕ್ಟರು ಗಳು, ಕಾಫಿ ಪ್ಲಾಂಟರ್ ಮ|| ಜಾವಳಿ ಗಣೇಶರಾಯರು, ಗೋಣೀಬೀಡು ಮೊಖ್ತೇಸರ್ ಮ|| ದ್ಯಾವಪ್ಪಗೌಡರು, ಸಾಹುಕಾರ್ ಮಿ|| ದಾವೂದ್ ಸಾಹೇಬ ರು, ಸಾಹುಕಾರ್ ಮಿ|| ದೊಡ್ಡ ಅಂಗಡಿ ರಜಾಕ್ ಸಾಹೇಬರು, ಸಾಹುಕಾರ್ ಮಿ|| ಕಲೀಮ್ ಸಾಹೇಬರು ಮುಂತಾದ ತಾಲ್ಲೋಕು ಹುದ್ದೇದಾರ್ರುಗಳು, ಸಾವಿರಾರು ಜನ ಮಹನೀಯರು ದಯಮಾಡಿಸಿ ಸಭೆಯನ್ನು ಅಲಂಕರಿಸಿದರು ಮ|| ಓ ರಾಮಚಂದ್ರರಾಯರು ಬರೆದುಕೊಟ್ಟ ಮಿ|| ರೂಬರ್ ಸಾಹೇಬರ ಗುಣಕಥನ ರೂಪವಾದ ಉಪನ್ಯಾಸವನ್ನು ಮ|| ಶ್ರೀನಿವಾಸಾಚಾರ್ರು ಓದಿಹೇಳಿ ದರು ಅದನ್ನು ಕೇಳಿ ಸಭೆಯವರೆಲ್ಲಾ ಆನಂದಭರಿತರಾದರು ಅನಂತರ ಮಿ|| ರೂಬರ್ ರವರು ಆ ಉಪನ್ಯಾಸಕ್ಕೆ ಪ್ರತಿಯಾಗಿ ಕೆಲವು ಪ್ರತ್ಯುತ್ತರವನ್ನು ದಯಪಾಲಿಸಿದ್ದಕ್ಕೆ ಸಭೆಯವರು ಆನಂದಹೊಂದಿದರು ತರುವಾಯ ಸಭೆಯಲ್ಲಿ ಸರ್ವರಿಗೂ ಗಂಧ ಪುಷ್ಪ ತಾಂಬೂಲ ಅಲ್ಪಾಹಾರ ಮೊದಲಾದವು ನಡೆದು ಅಗ್ರಾಸನಾಧಿಪತಿಗಳ ಕೊರಳಿಗೆ ಹಾರಾ ಧರಿಸಿ ಸಂತೋಷದಿಂದ ಕೋಲಾಹಾಲ ಧ್ವನಿ ಮಾಡಿದರು ನಂತರ ಸಭೆಯು ಮುಕ್ತಾಯವಾಗಲು ಮಿ|| ರೂಬರ್ ಸಾಹೇ ಬರವರು ದಂಪತಿಸಹಿತ ಬ್ಯಾಂಡ್ ವಾದ್ಯ ಬಾಣವಿರಸುಗಳ ಸಂದಣಿಯೊಡನೆ ಬಂಗ ಲೆಗೆ ವಾಪಸ್ ದಯಮಾಡಿಸಿದರು ಇವರಿಗೆ ಈಗ ಪ್ರಮೋಷನ್ ಆದದಕ್ಕೆ ಬಹಳ ಸಂತೋಷಪಡುತ್ತೇವಲ್ಲದೆ ಮುಂದೆ ಇದಕ್ಕಿಂತ ಅತಿಶಯವಾದ ದೊಡ್ಡ ಪದವಿ ಸಿಕ್ಕಬೇಕೆಂತ ಹಾರೈಸುತ್ತೇವೆ ಈಗ ತಾಲ್ಲೋಕಿಗೆ ದಯಮಾಡಿಸಿರುವ ಅಮಲ್ದಾರ್ ಮಿ|| ಅಬ್ದುಲ್ ರಜಾಕ್ ಸಾಹೇಬರವರು ಇವರಿಗಿಂತಲೂ ಹೆಚ್ಚಾ ದ ಪ್ರಜಾನುರಾಗಿಗಳಾಗಿರುವರೆಂದು ಹಾರೈಸುತ್ತೇವೆ —ಇದೇ ತಾಲ್ಲೋಕು ಗೋಣೀಬೀಡು ಗ್ರಾಮದ ಸ್ಕೂಲ್ ವರ್ನಾಕ್ಯುಲರ್ದದ್ದು ಪುನಹ ಸರ್ಕಾರದವರು ದಯವಿಟ್ಟು ಕೊಟ್ಟಿರುವುದನ್ನು ಈಗ ಬಂದಿರುವ ಸ್ಕೂಲ್ ಮಾಸ್ಟರ್ ಶ್ರೀನಿವಾ ಸಾಚಾರ್ರು ತುಂಬಾ ಮುತುವರ್ಜಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಮಾಡಿ ಸುತ್ತಾ ಇರುವುದರಿಂದ ಈ ಸ್ಕೂಲ್ ಅಭಿವೃದ್ಧಿಗೆ ಬರುವದರಲ್ಲಿ ಸಂದೇಹವಿಲ್ಲ ಸ್ಕೂಲ್ ಕೆಲಸಕ್ಕೂ ಮಾಸ್ಟರ ವಾಸಕ್ಕೂ ಈಗ ಹೊಸ ಮನೆಯನ್ನು ತಯಾರಿಸುವು ದಕ್ಕೆ ಗ್ರಾಮಸ್ಥರು ಮೆಂಬರು ಸಹ ಏರ್ಪಾಡುಮಾಡಿ ಕೆಲಸ ನಡಸುವುದರ ಲ್ಲಿದಾರೆ

ಇಂಡಿಯಾ ದೇಶದ ವೃತ್ತಾಂತಗಳು

ಮ|| ಗೋಪಾಲಕೃಷ್ಣ ಗೋಖಲೆಯವರಿಗೆ ಸ್ವಲ್ಪ ಆರೋಗ್ಯವಾದದ್ದರಿಂದ ಅವರು ಶರೀರಸೌಖ್ಯಕ್ಕೋಸ್ಕರ ಕಳೆದ ವಾರ ಸೀಮೆಗೆ ಪ್ರಯಾಣಮಾಡಿದರು

* * *

ಪೂರ್ವ ಆಫ್ರಿಕಾ ತೀರದಲ್ಲಿರುವ ಕಿಸ್ಮಯಾ ಎಂಬ ರಾಜ್ಯಕ್ಕೆ ಕಳೆದ ವಾರ ಇಂಡಿಯಾ ಗವರ್ನಮೆಂಟಿನವರು 360 ಒಂಟೆಗಳ ಸೈನ್ಯವನ್ನು ಕರಾಚಿ ಪಟ್ಟಣ ದಿಂದ ಜಹಜಿನ ಮೇಲೆ ಕಳುಹಿಸಿಕೊಟ್ಟರು

* * *

ಹೈದರಾಬಾದಿನ ಬ್ರಿಟಿಷ್ ರೆಸಿಡೆಂಟ್ ಕರ್ನಲ್ ಎ ಎಫ್ ಫಿನ್ ಹೆಯ ವರು ಆರು ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣಮಾಡಿದ್ದರಿಂದ ಕಾಶ್ಮೀರ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ ಮಿ|| ಎಸ್ ಎಂ ಫ್ರೇಜರ್ಯವರು ಹೈದ ರಾಬಾದಿಗೆ ಬಂದು ಆ ಕೆಲಸವನ್ನು ವಹಿಸಿಕೊಂಡಿದಾರೆ

* * *

ಕಳೆದ ಶುಕ್ರವಾರ ಮಧ್ಯಾಹ್ನ ಜಬ್ಬಲ್ಪುರದ ಹತ್ತಿರ ದಿಪೋರಿ ಎಂಬ ಸ್ಟೇಷನ್ನಲ್ಲಿ ಮೆಯಿಲ್ ಗಾಡಿಯು ಕೆಲವು ಸಾಮಾನು ಗಾಡಿಗಳಿಗೆ ಬಡಿದು ಅನಾಹುತವಾಯಿತು ನಾಲ್ಕು ಮಂದಿ ಯೂರೋಪಿಯನ್ರಿಗೂ ಆರು ಜನ ದೇಶೀಯ ಪ್ರಯಾಣಿಕರಿಗೂ ಗಾಯಗಳಾಗಿವೆ ಎರಡು ಮೂರು ಗಾಡಿಗಳು ಒಡೆದು ಹೋದವು

* * *

ಪೊಲೀಸಿನವರು ಕಲ್ಕತ್ತಾ, ಡೆಲ್ಲಿ, ಲಾಹೋರ್ ಮುಂತಾದ ಸ್ಥಳಗಳ ಲ್ಲಿ ಅರಾಜಕ ಗುಂಪಿಗೆ ಸೇರಿದವರೆಂದು ಕೆಲವರನ್ನು ಹಿಡಿದು ಕಲ್ಕತ್ತೆಯ ಜೈಲಿನಲ್ಲಿಟ್ಟುಕೊಂಡು ತನಿಖೆಕ್ರಮ ನಡಿಸುತ್ತಿದಾರೆ ಲಾಹೋರಿನಲ್ಲಿ ಎರಡು ವರುಷಗಳಿಂದ ವೈದಿಕವೃತ್ತಿಯಲ್ಲಿದ್ದ ರಘುವರಶರ್ಮ ಎಂಬಾತನನ್ನು ಪೊಲೀ ಸಿನವರು ದಸ್ತಗಿರಿಮಾಡಿ, ಆತನ ಮನೆಯನ್ನೆಲ್ಲಾ ಶೋಧನೆಮಾಡಿದಾರೆ

* * *

ಕೊಚ್ಚಿ ಸಂಸ್ಥಾನದ ದಿವಾನರಾಗಿದ್ದ ಮ|| ಎ ಆರ್ ಬ್ಯಾನರ್ಜಿಯ ವರು ಕಳೆದ ಸೋಮವಾರ ಆ ಕೆಲಸವನ್ನು ಬಿಟ್ಟುಬಿಟ್ಟರು ರಾಜರವರು ಮಿ|| ಜೋಸೆಫ್ ವಿಲ್ಲಿಯಂ ಭೋರ್ ಯವರನ್ನು ದಿವಾನರಾಗಿ ನೇಮಕ ಮಾಡಿಕೊಂಡಿದಾರೆ ಇವರು ಮರಾಠೆಯವರಾಗಿದ್ದು ಕ್ರೈಸ್ತಮತಾವಲಂಬಿಗ ಳಾಗಿ 1903 ನೇ ಇಸವಿಯಿಂದ ಮದರಾಸ್ ಅಧಿಪತ್ಯದಲ್ಲಿ ದೊಡ್ಡ ಉದ್ಯೋಗ ಗಳನ್ನು ವಹಿಸಿ ಪ್ರಜೆಗಳಲ್ಲಿ ವಿಶೇಷವಾದ ಭಕ್ತಿ ಪ್ರೀತಿಗಳನ್ನು ಸಂಪಾದಿಸಿಕೊಂಡು ಕೀರ್ತಿಶಾಲಿಗಳಾಗಿರುತ್ತಾರೆ

* * *

ವರದಕ್ಷಿಣೆಯ ನಿಮಿತ್ತವಾಗಿ ತನ್ನ ತಂದೆಗೆ ಪ್ರಾಪ್ತವಾಗಿದ್ದ ಕಷ್ಟದುಃಖಗ ಳನ್ನು ನಿವಾರಣೆ ಮಾಡುವುದಕ್ಕಾಗಿ ಕಲ್ಕತ್ತೆಯೊಳಗೆ ಸ್ನೇಹಲತಾದೇವಿ ಎಂಬ ಕನ್ಯೆಯು ಆತ್ಮಹತ್ಯ ಮಾಡಿಕೊಂಡಳಷ್ಟೆ ಈ ವಾರ ಅದೇ ಕಾರಣಕ್ಕಾಗಿ ಇನ್ನೊಬ್ಬ ಹುಡುಗಿಯು ಬೋಗ್ರಾ ಎಂಬ ಸ್ಥಳದಲ್ಲಿ ಆತ್ಮಹತ್ಯಮಾಡಿಕೊಂಡ ಳೆಂದು ತಿಳಿದು ಬಂದಿದೆ ಬೋಗ್ರಾನಗರದ ಸಬ್ರೆಜಿಸ್ಟ್ರಾರ್ ಆಗಿರುವ ಬಂಗಾಳಿ ಯ ಕುಮಾರ್ತೆ 15 ವರುಷದ ಸರಳ ಬಾಲದೇವಿ ಎಂಬುವಳು ಹಿಂದಿನ ಭಾನು ವಾರ ರಾತ್ರಿ ಮೈಸುಟ್ಟುಕೊಂಡು ಆತ್ಮಹತ್ಯ ಮಾಡಿಕೊಂಡಳು ಆವಳ ಗಂಡನೂ ಮಾವನೂ ಹಣಕೊಡಬೇಕೆಂದು ಆವಳ ತಂದೆಯನ್ನು ಪೀಡಿಸುತ್ತಿದ್ದರೆಂದೂ, ಅಷ್ಟು ಹಣ ಕೊಡಲಾರದ ಆ ತಂದೆಯು ವ್ಯಥೆಪಡುತ್ತಿದ್ದನೆಂದೂ, ಈ ಸಂಗತಿ ಯು ಮಗಳಿಗೆ ತಿಳಿದು ತಂದೆಯ ಕಷ್ಟವನ್ನು ನಿವಾರಣೆ ಮಾಡಬೇಕೆಂಬ ಉದ್ದೇ ಶದಿಂದ ಆರೀತಿ ಆತ್ಮಹತ್ಯ ಮಾಡಿಕೊಂಡಳೆಂದೂ ಪ್ರಕಟವಾಗಿದೆ

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಫೆಬ್ರವರಿ 28 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	ರೂ	7,68 780
,, (2) ಡಿಪಾಜಿಟ್ಟುಗಳು	,,	5,02,470
,, (3) ಇತರೆ	,,	6,816
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	13,28,065
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	1,93,332
,, (2) ಖಾತೆ ಮತ್ತು ಇತರ ಸಾಲಗಳು	,,	8,30,340
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,32,611
,, (4) ಇನ್ವೆಸ್ಟ್‌ಮೆಂಟುಗಳು	,,	1,00,010
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	73,116
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6,018
,, (7) ಇತರೆ	,,	11,865
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	13,28,065

ಡಬ್ಲಿಯು ಸಿ ರೋಜ್, ಮ್ಯಾನೇಜರ್

ತ್ಯಾಗರಾಜರು ಮತ್ತು ಗಾನವಿದ್ಯೆ

ದಕ್ಷಿಣ ಹಿಂದುಸ್ಥಾನದಲ್ಲಿ ಮಹದ್ದೈವಭಕ್ತರೆಂದೂ, ಗಾನವಿದ್ಯೆಯಲ್ಲಿ ದಿಗ್ದಂತಿಗಳೆಂದೂ, ಸುಕವಿಗಳೆಂದೂ ಪ್ರಸಿದ್ಧರಾದ ಈ ಮಹಾತ್ಮರ ಆರಾಧನೆಯನ್ನು ಬೆಂಗಳೂರು ನಿವಾಸಿಗಳಾದ ಸುಮಾರು 60 70 ಮಂದಿ ಸಂಗೀತ ವಿದ್ವಾಂಸರೂ ಮತ್ತು ಇತರ ರಸಿಕಮಹಾಜನಗಳೂ ಏಕಮತ್ಯದಿಂದ ಬ್ರಾಹ್ಮಣ ಸಂತರ್ಪಣೆ, ರಾತ್ರಿ ಭಜನೆ ಇವುಗಳ ಮೂಲಕ ಈಗ ಕೆಲವು ದಿವಸಗಳ ಹಿಂದೆ ಬಹು ವಿಜೃಂಭಣೆಯಿಂದ ನೆರವೇರಿಸಿದರೆಂಬ ಶ್ರಾವ್ಯವಾದ ವಿಚಾರವನ್ನು ಕೇಳಿ ಪ್ರತಿಯೊಬ್ಬ ರಸಿಕನೂ, ದೈವಭಕ್ತನೂ ಆನಂದವನ್ನೂ ಆಶ್ಚರ್ಯವನ್ನೂ ಪಡದೆ ಇರಲಾರನು ಈ ಮಹೋತ್ಸವವನ್ನು ವರ್ಷಂಪ್ರತಿಯಲ್ಲಿಯೂ ನಡಿಸುತ್ತಿರುವದನ್ನು ನೋಡಿದರೆ ಈ ಸಂಗೀತ ವಿದ್ವನ್ಮಂಡಲಿಯಲ್ಲಿ ಏಕಮತ್ಯವೆಂಬ ಜೀವಶಕ್ತಿಯು ಸಂಪೂರ್ಣವಾಗಿದೆ ಎಂದು ಹೇಳಲು ಸಂದೇಹವಿಲ್ಲ ಇಂತಹ ಏಕಮತ್ಯವೆಂಬ ಜೀವಶಕ್ತಿಯಿಂದ ಅಸಾಧಾರಣವಾದ ಕಾರ್ಯಗಳನ್ನು ನೆರವೇರಿಸಬಹುದೆಂದು ಸೂಚಿಸುವುದು ಅನಾವಶ್ಯಕ ಈ ಸಂಗೀತ ವಿದ್ವಾಂಸರಲ್ಲಿ ಇರತಕ್ಕ ಇಂತಹ ಸವಿಚಾರಣೆಯಾದ ಏಕಮತ್ಯದಿಂದ ಕೇವಲ ಶೋಚನೀಯವಾದ ಸ್ಥಿತಿಯಲ್ಲಿರತಕ್ಕ ಈ ಗಾನವಿದ್ಯೆಯನ್ನು ಪ್ರಾಚೀನ ಕಾಲದ ಉಚ್ಛ್ರಾಯ ಸ್ಥಿತಿಗೆ ತರಬಹುದೆಂದು ಧಾರಾಳವಾಗಿ ಹೇಳಬಹುದು ಈ ನವನಾಗರಿಕ ಕಾಲದಲ್ಲಿ ಸಂಗೀತದ ಗಂಧವನ್ನೇ ಅರಿಯದ ಬಹು ಮಂದಿ ಇರುವರು ಅನೇಕರಿಗೆ ಈ ವಿದ್ಯದ ಸ್ವಾರಸ್ಯವು ತಿಳಿಯದೆ, ಅದಕ್ಕೆ ತಕ್ಕ ಪ್ರೋತ್ಸಾಹವಿಲ್ಲದೆ ಮಲಿನವಾಗುತ್ತಿದೆ ಸಕಲರಿಗೂ ಸಂಗೀತದಲ್ಲಿ ತಕ್ಕ ಮಟ್ಟಿಗೆ ಅಭಿರುಚಿಯನ್ನು ಹುಟ್ಟಿಸಿ ಅದರ ಸ್ವಾರಸ್ಯವನ್ನು ಗ್ರಹಿಸುವ ಹಾಗೆ ಮಾಡುವುದು ಬಹು ಮಟ್ಟಿಗೆ ಸಂಗೀತ ವಿದ್ವಾಂಸರ ಕರ್ತವ್ಯವಾಗಿದೆ ಇಂತಹ ಕರ್ತವ್ಯವನ್ನು ಬೆಂಗಳೂರು ವಿದ್ವನ್ಮಂಡಲಿಯವರು ಕೈಕೊಂಡರೆ ಮೋಕ್ಷದಾಯಕವಾದ ಈ ಗಾನವಿದ್ಯೆಯು ಅಭಿವೃದ್ಧಿಗೆ ಬರದೆ ಇರಲಾರದು ಈ ಕೆಳಗೆ ತಿಳಿಸಿರತಕ್ಕ ಅಂಶಗಳಿಗೆ ಅಂಥವರು ಗಮನಕೊಟ್ಟು ಆಲೋಚಿಸಿದರೆ ಕಾರ್ಯಸಾಧನೆಯಾಗುವುದೆಂದು ನಿಸ್ಸಂದೇಹವಾಗಿ ಹೇಳಬಹುದು — ಒಂದು ಸಂಗೀತ ಸಭೆಯನ್ನು ಏರ್ಪಡಿಸುವುದು ಪ್ರತಿ ಮಾಸದಲ್ಲಿಯೂ ಅಲ್ಪಸ್ವಲ್ಪ ಚಂದಾ ಕೂಡಿಸಿ ಒಂದು ಫಂಡನ್ನು ಶೇಖರಿಸುವುದು ಈ ಮಂಡಲಿಯ ಆಶ್ರಯದಲ್ಲಿ ಒಂದು ಸಂಗೀತ ಧರ್ಮಪಾಠಶಾಲೆಯನ್ನೂ "ತ್ಯಾಗರಾಜ ಗುರುಕುಲವಾಸ" ಎಂಬ ಹೆಸರಿನಿಂದ ಕರೆಯತಕ್ಕದ್ದು ಇಂಥಾ ಪಾಠಶಾಲೆಯ ಜತೆಗೆ ಸಂಗೀತಶಾಸ್ತ್ರದ ಪುಸ್ತಕ ಭಂಡಾರ ಒಂದನ್ನು ಏರ್ಪಡಿಸುವುದು ಇದಕ್ಕೆ ಒಂದು ಸ್ಥಿರವಾದ ಕಟ್ಟಡವನ್ನು ಗೊತ್ತುಮಾಡುವುದು ಈ ವಿದ್ವನ್ಮಂಡಲಿಯವರು ಆಗಾಗ್ಗೆ ದೇವರ ಸೇವೆಗೆ ಸೇರುವಂತೆ ಸಂಗೀತ ಶಾಸ್ತ್ರದ ವಿಷಯದಲ್ಲಿ ಒಂದೊಂದು ಭಾಗವನ್ನು ಕುರಿತು ಉಪನ್ಯಾಸ ಕೊಡುವುದು ಈ ಮಂಡಲಿಯ ಆಶ್ರಯದಲ್ಲಿ "ನಾದಬ್ರಹ್ಮ" ಎಂಬ ಹೆಸರಿನಿಂದ ಕನ್ನಡದಲ್ಲಿ ಸಂಗೀತಶಾಸ್ತ್ರ ಪ್ರಚಾರಕ್ಕೋಸ್ಕರ ಒಂದು ಸಣ್ಣ ಮಾಸಪತ್ರಿಕೆಯನ್ನು ಹೊರಡಿಸುವುದು ಹೀಗೆ ಅನೇಕ ವಿಧಗಳಲ್ಲಿ ಪ್ರಯತ್ನಪಡಬಹುದು ಆದರೆ ಈ ಲೋಕೋಪಕಾರ ಕಾರ್ಯವು ಸುಲಭಸಾಧ್ಯವೆಂದು ಯಾರೂ ಹೇಳಲಾಗುವುದಿಲ್ಲ ಆದರೂ ಈ ವಿದ್ವನ್ಮಂಡಲಿಯಲ್ಲಿರತಕ್ಕ ಅಸದೃಶವಾದ ಏಕಮತ್ಯವನ್ನು ಯೋಚಿಸಿದರೆ ಇಂತಹ ಸತ್ಕಾರ್ಯವು ಸುಲಭವಾಗಿ ಕೈಗೂಡುವುದೆಂದು ಮನಃಪೂರ್ವಕವಾಗಿ ಹೇಳಬಹುದು ಪ್ರಜಾಹಿತಚಿಂತನೆಯಲ್ಲಿ ಮಗ್ನರಾದ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರೂ, ಅಮಾತ್ಯಪದವಿಯನ್ನಲಂಕರಿಸಿ ಪ್ರಜೋಪಕಾರವಾದ ಕೆಲಸಕ್ಕೆ ಮುಂದರಿಯುವ ಶೂರರಿಗೆ ಸಹಾಯ ಮಾಡಲು ಕಂಕಣಬದ್ಧರಾಗಿರತಕ್ಕ ನಮ್ಮ ದಿವಾನ್ ಮ|| ವಿಶ್ವೇಶ್ವರಯ್ಯನವರೂ ಎಂದಿಗೂ ಪ್ರೋತ್ಸಾಹಕರೇ ಇರುವರಲ್ಲ

ರಸಿಕ

[ಈಗ ಬೆಂಗಳೂರಿನಲ್ಲಿ ಅಧಿಕಾರಿಗಳೇ ಮುಂತಾದವರು ಸೇರಿ ಒಂದು ಗಾಯನಸಮಾಜವನ್ನು ಮಾಡಿಕೊಂಡಿರೋಣವರಿಂದ ಈ ಸಮಾಜದವರು ಮೇಲ್ಕಂಡ ವಿಚಾರಗಳನ್ನು ಕುರಿತು ಪರ್ಯಾಲೋಚನೆ ಮಾಡಿ, ತಕ್ಕ ಏರ್ಪಾಡುಗಳನ್ನು ಮಾಡಬಹುದಾಗಿದೆ —ಎಡಿ]

ಶಿವಮೊಗ್ಗೆಯಲ್ಲಿ ಯೋಗ್ಯತಾಪತ್ರವೂ ಬಿಲ್ಲತ್ತುಗಳೂ ಕೊಡಲ್ಪಟ್ಟದ್ದು

ತೀರ್ಥಹಳ್ಳಿ ನಿವಾಸಿಗಳಾದ ಮ ಕೃತ್ತನಪ್ಪರು ತಿಮ್ಮಣ್ಣ ಭಟ್ಟರವರಿಗೆ ಅವರು ಮಾಡಿರುವ ಜನೋಪಕಾರಾರ್ಥವಾದ ಕಾರ್ಯಕ್ಕಾಗಿ ಶ್ರೀಮನ್ ಮಹಾರಾಜರವರು ದಯಪಾಲಿಸಿದ ಯೋಗ್ಯತಾಪತ್ರವನ್ನು ಒಪ್ಪಿಸುವುದಕ್ಕಾಗಿ ಫೆಬ್ರವರಿ 28 ನೇ ತಾರೀಖು ಶನಿವಾರ ಸಾಯಂಕಾಲ ಶಿವಮೊಗ್ಗೆಯ ಟೌನ್ ಹಾಲಿನಲ್ಲಿ ಒಂದು ಮಹಾ ಸಭೆಯು ಸೇರಿ ಇತ್ತು ಮ|| ತಿಮ್ಮಣ್ಣ ಭಟ್ಟರು ಈ ಬಹುಮಾನವನ್ನು ಕಳೆದ ದಸರಾ ಮಹೋತ್ಸವದ ಕಾಲದಲ್ಲಿ ರಾಜಧಾನಿಯಲ್ಲಿ ಶ್ರೀಮನ್ ಮಹಾರಾಜರವರ ಸ್ವಹಸ್ತದಿಂದಲೇ ಪಡೆಯಬೇಕಾಗಿತ್ತು ಆದರೆ ಅನಾರೋಗ್ಯದ ದೆಸೆಯಿಂದ ಅವರು ಆ ಕಾಲದಲ್ಲಿ ಮೈಸೂರಿಗೆ ಪ್ರಯಾಣವನ್ನು ಬೆಳಸುವುದು ಸಾಧ್ಯವಾಗಲಿಲ್ಲ ಆದಕಾರಣ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದ ಮೇರೆಗೆ ಶಿವಮೊಗ್ಗೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಒಂದು ಸಭೆಯನ್ನು ಸೇರಿಸಿ, ಈ ಕಾರ್ಯವನ್ನು ಆಗಮಾಡಿದರು ಆ ದಿನ ಇಲ್ಲಿನ ಟೌನ್ ಹಾಲ್ ಒಳಗೂ ಹೊರಗೂ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು ಮುಂಭಾಗದಲ್ಲಿ ಟೌನ್ ಪೊಲೀಸಿನವರು ಸನ್ನದ್ಧರಾಗಿ ಸಾಲುಕಟ್ಟಿ ನಿಂತಿದ್ದರು 6 30 ಕ್ಕೆ ಸರಿಯಾಗಿ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸರುಗಳು ದರ್ಬಾರ್ ಡ್ರೆಸ್ಸಿನಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರ ಹಿಂದೆ ದೊಡ್ಡ ಮೆರವಣಿಗೆಯಾಗಿ ಟೌನ್ ಹಾಲಿಗೆ ದಯಮಾಡಿಸಿದರು ಕೂಡಲೆ ಅಲ್ಲಿ ಸೇರಿ ಇದ್ದ ಸಭಾಸದರೆಲ್ಲರೂ ಎದ್ದುನಿಂತು, ಆಫೀಸರುಗಳು ಪ್ಲಾಟ್‌ಫಾರಮಿನಲ್ಲಿ ತಮಗಾಗಿ ಸಿದ್ಧಪಡಿಸಿದ್ದ ಆಸನಗಳನ್ನು ಅಲಂಕರಿಸಿದ ಮೇಲೆ ಕುಳಿತುಕೊಂಡರು ಆಗ ಡೆಪ್ಯುಟಿ ಕಮಿಷನರ್ ಮಿ|| ಕೆ ಮೆಥೂಸ್, ಬಿ ಎ ರವರು ಈ ಕೆಳಗಿನ ಭಾಷಣವನ್ನು ಮಾಡಿದರು —

ಅರ್ಯರೇ,—ಈ ದರ್ಬಾರಿಗೆ ನಿಮ್ಮನ್ನು ಬರಮಾಡಿಕೊಂಡುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ ನಮ್ಮ ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿನವರು ನನಗೆ ಅಪ್ಪಣೆಕೊಡಿಸಿರುವ ಪ್ರಕಾರ ಈ ದರ್ಬಾರನ್ನು ಸೇರಿಸಿರುತ್ತೇನೆ ನಿಮ್ಮಗಳಿಗೆ ಕಳುಹಿಸಿಕೊಟ್ಟ ಆಹ್ವಾನ ಪತ್ರಿಕೆಯಲ್ಲಿ ಸೂಚಿಸಿರುವಂತೆ ನಮ್ಮ ದೇಶಬಾಂಧವರೂ ಪ್ರಸಿದ್ಧರೂ ಆದ ಮ|| ತೀರ್ಥಹಳ್ಳಿ ಕೃತ್ತನಪ್ಪರು ತಿಮ್ಮಣ್ಣ ಭಟ್ಟರು ಮಾಡಿರುವ ಜನೋಪಕಾರವಾದ ಕಾರ್ಯಗಳಿಗೆ ನಮ್ಮ ಶ್ರೀಮನ್ ಮಹಾರಾಜರವರು ಬಹು ಸಂತೋಷಪೂರ್ವಕವಾಗಿ ದಯಪಾಲಿಸಿರುವ ಯೋಗ್ಯತಾಪತ್ರಿಕೆಯನ್ನೂ ಬಿಲ್ಲತ್ತುಗಳನ್ನೂ ಅವರಿಗೆ ಒಪ್ಪಿಸುವುದೇ ಈ ದರ್ಬಾರಿನ ಉದ್ದೇಶವಾಗಿರುತ್ತದೆ ನಮ್ಮ ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿನವರು ಕೆಲವು ವರುಷಗಳಿಂದ ಈ ದೇಶದ ಸಂಪತ್ತನ್ನು ವೃದ್ಧಿಪಡಿಸುವುದಕ್ಕಾಗಿ ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಾ ಬಂದಿರುವುದು ನಿಮ್ಮಗಳಿಗೆ ವೇದ್ಯವಾಗಿಯೇ ಇರುತ್ತದೆ ಸಂಪದಭಿವೃದ್ಧಿ ಸಮಾಜವನ್ನೂ ಅದಕ್ಕೆ ಸಂಬಂಧಪಟ್ಟ ಮೂರು ಸೆಂಟರಲ್ ಮತ್ತು ಎಂಟು ಡಿಸ್ಟ್ರಿಕ್ಟ್ ಸಮಾಜಗಳನ್ನೂ ಏರ್ಪಡಿಸಿರುವುದು, ಕೈಗಾರಿಕೆ ಮತ್ತು ವ್ಯಾಪಾರಗಳ ಇಲಾಖೆಯನ್ನು ಏರ್ಪಡಿಸಿರುವುದು ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಬೇಕಾಗ ಸಲಹೆಗಳನ್ನು ಕೊಡಲು ಸಮರ್ಥರಾದವರನ್ನು ಆಗಿಂದಾಗ ನಿಯಾಮಕಮಾಡುತ್ತಾ ಬಂದಿರುವುದು, ಗ್ರಾಮಗಳ ಸ್ಥಿತಿಗತಿಗಳನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೆ ಈಚೀಚೆಗೆ ಗ್ರಾಮದ ಪಂಚಾಯಿತರನ್ನು ನಿಯಾಮಕ ಮಾಡಿರುವುದು, ಇವೇ ಮುಂತಾದ ಅನೇಕ ಕಾರ್ಯಗಳು ನಮ್ಮ ಶ್ರೀಮನ್ ಮಹಾರಾಜರವರೂ ಅವರ ಗವರ್ನ್‌ಮೆಂಟಿನವರೂ ತಮ್ಮ ಪ್ರಜೆಗಳ ಸಂಪತ್ತನ್ನು ವೃದ್ಧಿಪಡಿಸುವುದಕ್ಕಾಗಿ ಎಷ್ಟರ ಮಟ್ಟಿಗೆ ಪ್ರಯತ್ನಪಡುತ್ತಲಿದ್ದಾರೆಂಬುದನ್ನು ವ್ಯಕ್ತಪಡಿಸುತ್ತವೆ ನೀವು ಚೆನ್ನಾಗಿ ಯೋಚನೆಮಾಡಿ ನೋಡಿದರೆ, ಈ ಪ್ರಯತ್ನಗಳಲ್ಲಿ ಒಂದು ಮುಖ್ಯೋದ್ದೇಶವು ನಮಗೆ ಕಂಡುಬರುವುದು ಅದೇನೆಂದರೆ—ಸಂಪತ್ತನ್ನು ವೃದ್ಧಿಮಾಡಿಕೊಳ್ಳುವುದಕ್ಕೆ ಜನಗಳು ತಾವೇ ಪ್ರಯತ್ನಪಡಬೇಕಾದದು ಅತ್ಯವಶ್ಯಕವಾಗಿದೆ ಎಂಬುದೇ ಇಂಥ ವಿಷಯಗಳಲ್ಲಿ ಅಭಿವೃದ್ಧಿಯುಂಟಾಗಬೇಕಾದರೆ ಜನಗಳಿಂದಲೇ ಆಗಬೇಕು, ಗವರ್ನ್‌ಮೆಂಟಿನವರು ಅವರಿಗೆ ಬುದ್ಧಿ ಹೇಳಿ ಅವರನ್ನು ನಡಿಸಬಲ್ಲರೇ ಹೊರತು ಮತ್ತೇನೂ ಮಾಡಲಾರರು ಎಂಬುದನ್ನು ನಮ್ಮ ಅನುಭವವೇ ವ್ಯಕ್ತಪಡಿಸಿರುತ್ತದೆ

ಮ|| ತಿಮ್ಮಣ್ಣ ಭಟ್ಟರು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಭಾರಿ ಜಮೀನ್‌ದಾರರಾಗಿಯೂ ವರ್ತಕರಾಗಿಯೂ ಇರುತ್ತಾರೆ ಈಗ ಈ ದೇಶದಲ್ಲಿ ಬಾಲ್ಯದಲ್ಲಿರುವ ದವಸಧಾನ್ಯಗಳನ್ನು ಬೆಳೆದು ಬೇರೆಬೇರೆ ಕಡೆಗಳಿಗೆ ರಫ್ತುಮಾಡುವ ಕ್ರಮಗಳಲ್ಲಿ ಅವರು ತೃಪ್ತಿಪಟ್ಟಿರುವುದಿಲ್ಲ ಅವರು ಅಜ್ಞಾನಾಂಧಕಾರದಿಂದ ತುಂಬಿರುವಂಥಾ ಮತ್ತು ರೈಲಿಗೂ ಕೈಗಾರಿಕೆ ಕೆಲಸಗಳು ಚೆನ್ನಾಗಿ ನಡೆಯುವ ಪಟ್ಟಣಗಳಿಗೂ ಬಹಳ ದೂರದಲ್ಲಿರುವಂಥಾ ಮಲ್ನಾಡಿನ ಮಧ್ಯದಲ್ಲಿ ವಾಸಮಾಡುತ್ತಾ ಇದ್ದಾಗ್ಯೂ ಬಹಳ ಹಣವನ್ನು ಖರ್ಚುಮಾಡಿ, ಈ ನವನಾಗರಿಕತೆಯ ಕಾಲದಲ್ಲಿ ತಯಾರಾದ ಒಂದು ಹೊಸ ಯಂತ್ರವನ್ನು ತರಿಸಿ, ತೀರ್ಥಹಳ್ಳಿಯಲ್ಲಿ ಛತ್ರಿ ಕಟ್ಟುವ ಒಂದು ಕಾರ್ಖಾನೆಯನ್ನು ಪ್ರಾರಂಭಿಸಿರುತ್ತಾರೆ

ಆರ್ಯರೇ, ಜಾಗರೂಕನೂ ಬುದ್ಧಿವಂತನೂ ಆಗಿರುವ ಕೆಲಸಗಾರನಿಗೆ ಇಂತಹ ಕಾರ್ಯವನ್ನು ನಡಿಸುವುದು ಸುಲಭಸಾಧ್ಯವಲ್ಲ ಆದರೆ ಒಬ್ಬನು ಪ್ರವರ್ಧಮಾನಕ್ಕೆ ಬರಬೇಕಾದರೆ ನಂಬಿಕೆ, ಪೂರ್ಣ ನಿರೀಕ್ಷೆ, ನಷ್ಟಕ್ಕೆ ಎದೆಗೊಟ್ಟು ನಿಲ್ಲುವ ಮನಸ್ಸು, ಇವುಗಳ ಮೂಲಕವಾಗಿಯೇ ಬರಬೇಕಾಗಿದೆ ಮ|| ತಿಮ್ಮಣ್ಣ ಭಟ್ಟರು ಈಗತಾನೇ ಕೆಲಸವನ್ನು ಪ್ರಾರಂಭಿಸಿರುತ್ತಾರೆ ಅವರು ಕೈಗೊಂಡಿರುವ ಕೆಲಸವು ತುಂಬಾ ಸಾಫಲ್ಯವನ್ನು ಹೊಂದುವುದೆಂದೂ ಅವರ ಸಾಹಸವು ಅವರ ಮಿತ್ರಮಂಡಲಿಯವರಿಗೂ ನೆರೆಹೊರೆಯವರಿಗೂ ಒಳ್ಳೆಯ ಮಾದರಿಯಾಗಿರುವುದೆಂದೂ ನಾನು ದೃಢವಾಗಿ ನಂಬಿರುತ್ತೇನೆ ಒಂದು ಗರುಕೆ ಬೇರು ಇದ್ದ ಜಾಗದಲ್ಲಿ ಎರಡನ್ನು ಹಾಕಿ ಬೆಳಸುವವನು ಅನೇಕ ಯುದ್ಧಗಳಲ್ಲಿ ಜಯಪ್ರದನಾದ ಮಹಾವೀರನಿಗಿಂತಲೂ ಹೆಚ್ಚು ಜನೋಪಕಾರಿಯಾಗಿರುತ್ತಾನೆಂದು ಹೇಳುವುದುಂಟು ಇದೇ ಮಾತನ್ನು ತನ್ನ ಮಾತೃಭೂಮಿಯಲ್ಲಿ ಒಂದು ನವೀನವಾದ ಕೈಗಾರಿಕೆಯನ್ನು ಏರ್ಪಡಿಸಿ, ತನ್ನ ನೆರೆಹೊರೆಯವರಿಗೆ ಹೆಚ್ಚು ಕೆಲಸಗಳನ್ನು ಒದಗಿಸಿಕೊಟ್ಟು, ಅವರು ಹೆಚ್ಚು ಹಣವನ್ನು ಸಂಪಾದಿಸಿಕೊಂಡು ಉತ್ತಮವಾಗಿ ಜೀವಿಸುವಂತೆ ಮಾಡುವಾತನ ವಿಷಯದಲ್ಲಿಯೂ ನ್ಯಾಯವಾಗಿ ಹೇಳಬಹುದು

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮ ತಿಮ್ಮಣ್ಣ ಭಟ್ಟರಂತೆ ನವನಾಗರಿಕತೆಗೆ ಬಂದಿರುವ ಮಹನೀಯರುಗಳು ಅನೇಕ ಮಂದಿ ಇರುತ್ತಾರೆ ಈ ದೇಶದ ಅಭ್ಯುದಯಕ್ಕಾಗಿ ಮ ತಿಮ್ಮಣ್ಣ ಭಟ್ಟರು ಮಾಡುತ್ತಾ ಬಂದಿರುವ ಕಾರ್ಯಗಳನ್ನು ನಮ್ಮ ಶ್ರೀಮನ್ ಮಹಾರಾಜರವರು ಮೆಚ್ಚಿ ಅವರಿಗೆ ಬಹುಮಾನವನ್ನು ದಯಪಾಲಿಸಿರುವುದು ಅಂತಹ ಕಾರ್ಯಗಳನ್ನು ಕೈಕೊಳ್ಳುವಂತೆ ಅನೇಕರನ್ನು ಪ್ರೇರಿಸುವುದೆಂದು ನಾನು ನಂಬುತ್ತೇನೆ ದೇಶವು ಉತ್ತಮ ಸ್ಥಿತಿಗೆ ಬರಬೇಕಾದರೆ ಜನಗಳಲ್ಲಿ ಇಂಥ ಪ್ರೇರಣೆಯು ಹುಟ್ಟುವುದು ಅವಶ್ಯವಾಗಿರುತ್ತದೆ

ಮ|| ತಿಮ್ಮಣ್ಣ ಭಟ್ಟರವರು ಈ ಬಹುಮಾನವನ್ನು ಶ್ರೀಮನ್ ಮಹಾರಾಜರವರ ಸ್ವಹಸ್ತದಿಂದ ಪಡೆಯುವುದಕ್ಕಾಗಿ ಅರಮನೆ ದರ್ಬಾರಿಗೆ ಹೋಗಲು ಅಸಾಧ್ಯವಾಯಿತು ಆದಕಾರಣ ಈ ಯೋಗ್ಯತಾಪತ್ರವನ್ನು ಮ ತಿಮ್ಮಣ್ಣ ಭಟ್ಟರವರಿಗೆ ಕೊಡುವ ಸಂತೋಷಕರವಾದ ಕೆಲಸವು ನನಗೆ ಲಭ್ಯವಾಯಿತು ಕಡೆಯದಾಗಿ ಮ|| ತಿಮ್ಮಣ್ಣ ಭಟ್ಟರಿಗೆ ನಮ್ಮ ಶ್ರೀಮನ್ ಮಹಾರಾಜರವರ ಕಡೆಯಿಂದ ಇಷ್ಟು ದೊಡ್ಡ ಬಹುಮಾನವು ಬಂದಿರುವುದರಿಂದ ನಾನು ನನ್ನ ಪರವಾಗಿಯೂ ಈ ಸಭೆಯ ಪರವಾಗಿಯೂ ಸಂತೋಷಪೂರ್ವಕವಾದ ವಂದನೆಯನ್ನು ಸಲ್ಲಿಸುತ್ತೇನೆ

ಮ|| ತಿಮ್ಮಣ್ಣ ಭಟ್ಟರಿಗೆ ಯೋಗ್ಯತಾ ಪತ್ರವನ್ನೂ ಬಿಲ್ಲತ್ತುಗಳನ್ನೂ ಕೊಡುವಲ್ಲಿ ಎಲ್ಲಾ ಸಭೆಯೂ ಎದ್ದು ನಿಂತುಕೊಂಡಿತು ಗೌರವಾರ್ಥವಾಗಿ ತೋಪು ಹಾರಿಸಲ್ಪಟ್ಟಿತು ತರುವಾಯ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳನ್ನು ಹಂಚಿಕೊಟ್ಟ ಮೇಲೆ ಸಬ್ ಜಡ್ಜ್ ಮ|| ಬಿ ಎಸ್ ಕೃಷ್ಣ ಮಯ್ಯಂಗಾರ್ ರವರು ನಮ್ಮ ಶ್ರೀಮನ್ ಮಹಾರಾಜರವರಿಗೆ ಶ್ರೇಯಸ್ಸು ಬಯಸಬೇಕೆಂದು ಸಲಹೆ ಕೊಟ್ಟ ಪ್ರಕಾರ ಸಭಿಕರೆಲ್ಲರೂ ಏಕಶಬ್ದದಿಂದ ಶ್ರೇಯಸ್ಸನ್ನು ಬಯಸಿದರು ಆಫೀಸರುಗಳ ಮೆರವಣಿಗೆಯು ಬೆಳೆದ ನಂತರ ಸಭೆಯು ಬರಖಾಸ್ತಾಯಿತು

ಮ|| ತಿಮ್ಮಣ್ಣ ಭಟ್ಟರು ತಮ್ಮ ಯೋಗ್ಯತಾ ಪತ್ರವನ್ನು ರಾಜಧಾನಿಯಲ್ಲಿ ಪಡೆಯುವುದು ಅಸಾಧ್ಯವಾಗುದಕ್ಕಾಗಿ ವಿಷಾದಪಡಬೇಕಾಗಿದ್ದ ಆದರೂ ಅವರಿಂದ ಶಿವಮೊಗ್ಗೆ ಊರಿನಲ್ಲಿರುವವರೂ ಈ ಡಿಸ್ಟ್ರಿಕ್ಟಿನಿಂದ ಬಂದಿದ್ದ ಪ್ರಮುಖರುಗಳೂ ಈ ಅಪರೂಪವಾದ ಕೂಟವನ್ನು ಕಂಡು ಸಂತೋಷಪಡುವುದಕ್ಕೆ ಅವಕಾಶವಾಯಿತು ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಡಿಸ್ಟ್ರಿಕ್ಟ್ ಸಂಪದಭಿವೃದ್ಧಿ ಸಮಾಜದ ಮೆಂಬರುಗಳಲ್ಲಿ ಅನೇಕಾನೇಕರು ಹಾಜರಾಗಿದ್ದರು ಡೆಪ್ಯುಟಿ ಕಮಿಷನರ್ ಸಾಹೇಬರವರು ಕಾಲೋಚಿತವಾಗಿ ಮಾಡಿದ ಸ್ವಾರಸ್ಯವಾದ ಭಾಷಣವು ಬಲುಹಿತಕರವಾಗಿದ್ದಿತು

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಅಂಥವುಗಳಿಗೆ ನಾವು ಎಡೆ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಪುನಃ ಹೇಳುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ನಾರಸಂಪ್ರನಾರಣಪ್ಪ, ಶೀತಕಲ್ಲು ಯಾವ ಪತ್ರಿಕೆಯಲ್ಲಿ ನೀವು ಓದಿದಿರೋ ನಿಮ್ಮ ಆಕ್ಷೇಪಣೆಯನ್ನು ಆ ಪತ್ರಿಕೆಗೇ ಬರೆಯಬೇಕು ಆ ಪತ್ರಿಕೆಯವರು ಆ ರೀತಿ ಮಾಡದಿರುವದಾಗಿ ತೋರಿದರೆ ತಿಳಿಸಿ

ವಿದ್ಯಾಭಿಮಾನಿ, ಚಿಕ್ಕೂರು ಕೆ. ರಾಮಸ್ವಾಮಯ್ಯಂಗಾರ್, ವಿದ್ಯಾರ್ಥಿ, ಚನ್ನಪಟ್ಟಣ ಬಸಪ್ಪ, ಕೋಳಿಗಾಲ ವಿನಯ, ತೀರ್ಥಹಳ್ಳಿ ಸತ್ಯವಾದಿ ಮತ್ತು ಪ್ರತ್ಯಕ್ಷದರ್ಶಿ, ಚಿತ್ರದುರ್ಗ ಎ ರಿಟೈರ್ಡ್ ಆಫೀಸರ್ ಚಿತ್ರದುರ್ಗ — ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್.

ಮದರಾಸ್ ಕಂಪನಿಯ ಮೇಲೆ ಆಕ್ಷೇಪಣೆ

ಅಯ್ಯಾ,

ವಿ ಎ ಎಸ್ ಪಾಣಿ, ಇರುಳಪ್ಪನ್ ಬೀದಿ, ಮದರಾಸ್, ಇವರು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಂತೆ ಒಂದು ನೀಸೆ ದರ್ಬಾರ್ ಕೊಡಲು ವಿ ಪಿ ಮೂಲಕ ತರಿಸಿ ಡೈರೆಕ್ಷನ್ ಪ್ರಕಾರ ಒಂದು ವಾರ ಉಪಯೋಗಿಸಿದಾಗ್ಯೂ ಮುದುಕರು ಬೇರೆ ಪ್ರಾಯಸ್ಥರಂತೆ ತೋರಲಿಲ್ಲ ಈ ಕೂದಲ ಹಚ್ಚಿಕೊಂಡಾಗ್ಯೂ ಕೂದಲು ಅಷ್ಟು ಬಿಳುಪಾಗಿಯೇ ಇದೆ ಇಂಥಾ ಪ್ರಕಟನೆಗಳಿಂದ ಫಲವೇನೋ ತಿಳಿಯಲಿಲ್ಲ. ಜನರು ವೃಥಾ ಮೋಸಹೋಗುತ್ತಾರೆ ಎಂದು ವ್ಯಸನಪಡುತ್ತೇನೆ

ಚಿಕ್ಕಾಡಿಗನಹಳ್ಳಿ ಬಿ ನೀಲಕಂಠಸಾಲುಂಕೆ

ತಪ್ಪು ತಿದ್ದುವಿಕೆ

ಅಯ್ಯಾ,

ಕಳೆದ ವಾರದ ವೃತ್ತಾಂತ ಪತ್ರಿಕೆಯಲ್ಲಿ ದೊಡ್ಡಬಳ್ಳಾಪುರದ ನೀರಿನ ಪರಾಪಿಗೆ ಧರ್ಮಾರ್ಥವಾಗಿ ಹಣ ಕೊಟ್ಟವರ ಹೆಸರುಗಳು ಪ್ರಕಟವಾಗಿದ್ದವಷ್ಟೆ ಅದರಲ್ಲಿ ಕಂಡ ಕೆಲವು ತಪ್ಪುಗಳನ್ನು ತಿದ್ದಬೇಕಾಗಿದೆ ಮ ಕೃಷ್ಣಯ್ಯನವರು ಎಂಬುವದನ್ನು ಮ್ಯುನಿಸಿಪಲ್ ಮೆಂಬರ್ ಮ|| ಶ್ರೀಕಂಠಯ್ಯನವರು ಎಂದು ತಿದ್ದಬೇಕು ಮ|| ಚಂದ್ರಶೇಖರಯ್ಯನವರು ವಾಗ್ದಾನ ಮಾಡಿದ್ದು 1,000 ರೂಪಾಯಿ ಎಂಬುವದಕ್ಕೆ ಬದಲಾಗಿ ಅವರು ಖಜಾನೆಗೆ ಕಟ್ಟಿದ್ದು 1,000 ರುಪಾಯಿ ಎಂದು ಬದಲಾಯಿಸಬೇಕು ಮ|| ಡಿ ಆದೆಪ್ಪನವರೂ ಮ|| ಚಂದ್ರಶೇಖರಯ್ಯನವರೂ ಸೇರಿ 7 ಸಾವಿರ ರೂಪಾಯಿ ವಾಗ್ದಾನ ಮಾಡಿದ್ದರೆನ್ನುವದಕ್ಕೆ ಬದಲಾಗಿ ಮ|| ಡಿ ಆದೆಪ್ಪನವರೂ ಒಂದು ಸಾವಿರ ರೂಪಾಯಿ ಕೊಟ್ಟಿರುತ್ತಾರೆಂದು ತಿದ್ದುವಂತೆ ಕೇಳಿಕೊಳ್ಳುತ್ತೇನೆ

ಬಾತ್ಮಿದಾರ

ಸಣ್ಣ ನೌಕರರನ್ನು ವರ್ಗಮಾಡಬಾರದೇ?

ಅಯ್ಯಾ,

ತಾಲ್ಲೂಕು ನೌಕರರಿಗೆ 1866 ನೇ ಇಸವಿಯಲ್ಲಿ ಬಡತಿ ಆಯಿತು ಪುನಃ ಬಡತಿ ಆಗಿದೆ ಮುನ್ಸಿಫ್ ಕೋರ್ಟುಗಳಾಗಿ ಸುಮಾರು 40 ವರ್ಷವಾಯಿತು ಆದಿಯಲ್ಲಿ ಇದ್ದ ಸಂಬಳಗಳೇ ಈಗಲೂ ಇರುತ್ತೆ ಇವು ಸರ್ಕಾರದ ನೌಕರರಲ್ಲವೇ? ನೌಕರರನ್ನು ಐದು ವರುಷಗಳ ಮೇಲೆ ಒಂದೇ ಸ್ಥಳದಲ್ಲಿ ಇಡಕೂಡದೆಂದು ತಾಲ್ಲೂಕು ನೌಕರರನ್ನು ವರ್ಗಮಾಡುತ್ತಿದ್ದಾರೆ ಮುಪ್ಪಿಗೆ ಮುನ್ಸಿಫ್ ಕೋರ್ಟಿನಲ್ಲಿರುವ ನೌಕರರು ಐದು ವರುಷಕ್ಕೆ ಮೇಲ್ಪಟ್ಟು ಹದಿನೈದು ವರುಷಗಳ ಸರ್ವಿಸ್ಸುಳ್ಳವರಾಗಿಯೂ, ಸ್ಥಳ ಮನೆಯವರಾಗಿಯೂ ಇರುವುದು ಎಲ್ಲರಿಗೂ ತಿಳಿದಿದೆ ಇವರು ನೌಕರರಲ್ಲವೇ? ಬೇರೆ ಇತರ ಕೋರ್ಟು ಮುಂತಾದ ಸ್ಥಳಗಳಲ್ಲೂ ಇರಬಹುದು ಒಬ್ಬರ ಕಣ್ಣಿಗೆ ಸುಣ್ಣವನ್ನೂ ಮತ್ತೊಂದು ಕಣ್ಣಿಗೆ ಬೆಣ್ಣೆಯನ್ನು ಹಾಕುವುದು ಸರ್ಕಾರಕ್ಕೆ ಧರ್ಮವಲ್ಲ

ದೀನಬಂಧು

ಪೋಸ್ಟ್ ಆಫೀಸಿನ ಅಕ್ರಮ

ಸ್ವಾಮಿ,

ನಾನು ಒಂದು ರೈಲ್ವೆ ರಶೀತಿಯನ್ನು ವಿ ಪಿ ಮೂಲಕ (ರೂ 5-0 ರೂಪಾ) ಬೆಂಗಳೂರಿಗೆ ಒಬ್ಬ ವ್ಯಾಪಾರಸ್ಥನ ಹೆಸರ ಮೇಲೆ ಹೋದ ತಿಂಗಳು ತಾರೀಖಿಗೆ ಕಳುಹಿಸಿದೆನು ತರುವಾಯ ರೂಪಾಯಿಗಳು ಬರ ದಿಂಗಳೂ ವ್ಯಾಪಾರಸ್ಥನಿಗೆ ಕಾಗದ ಬರೆದದ್ದಕ್ಕೆ ಆತನು ಮೂರನೇ ರೂಪಾಯಿಗಳ ಕೊಟ್ಟು ಸದರಿ ಪಾರ್ಸಲ್ ತೆಗೆದುಕೊಂಡೆನು ಎಂದು ಬರೆದು ಅದರ ಮೇಲೆ ನಾನು ಒಂದು ಕಂಪ್ಲೈಂಟು ಬರೆದು ಸೂಪರಿಂಟೆಂಡೆಂಟರಿಗೆ ಕಳುಹಿಸಿಕೊಟ್ಟೆನು ಅದಕ್ಕೆ ಜವಾಬು (prescribed) ಫೀಜು ಕಳುಹಿಸಬೇಕೆಂದು ಬಂತು ಅದರಂತೆ ಕಳುಹಿಸಿಕೊಟ್ಟು 10 12 ದಿನವಾದರೂ ಜವಾಬೇ ಇಲ್ಲ ಈ ರೀತಿ ನಿಷ್ಕಾಳಜಿಯನ್ನು ನೋಡಿದರೆ ಪೋಸ್ಟ್ ಇಲಾಖೆಯವರ ಚಾಲಚಕ್ರವು ಇರುತ್ತೆ ಇದರಿಂದ ದುಡ್ಡು ಕೊಟ್ಟರೂ ಜನಗಳಿಗೆ ಅನುಕೂಲವಿಲ್ಲವೆಂಬ ದನ್ನು ತಾವೂ ತಮ್ಮ ಪಾಠಕರೂ ಯೋಚಿಸಬೇಕು ಪೋಸ್ಟ್ ಇಲಾಖೆಯ ಅಧಿಕಾರಸ್ಥರು ತಕ್ಕ ವಿಚಾರಣೆಯಿಂದ ನಮ್ಮ ಮನಿಯಾರ್ಡರು ಜಾಗ್ರತೆ ಯಾಗುವಂತೆ ಮಾಡುವರೆಂದು ನಂಬಿದೇನೆ

ಬೆಂಗಳೂರು ಖಾಜ ಸಯ್ಯದ್ ಯೂಸೂಫ್

— — —

ಹಳೇ ಛಾಪಾ ಕಾಗದಗಳು

ಸ್ವಾಮಿ,

ಸರ್ಕಾರಿ ಇದಕ್ಕೆ ಛಾಪಾ ಕಾಗದಗಳ ವೆಂಡರುಗಳನ್ನು ಕಾಗದಗಳು ಕೇಳಿದರೆ ಸಪ್ಲೈ ಇಲ್ಲ ಹೊಸ ನಮೂನೆ ಕಾಗದಗಳು ಬರುತ್ತೆ ಹಳೇ ಕಾಗದ ಕೊಡಲು ಹುಕ್ಮವಿಲ್ಲ ಎಂದು ಹೇಳುತ್ತಾರೆ ಒಂದು ವಾರದಿಂದಲೂ ಕಾಗದಗಳು ದೊರೆಯದೆ ತುಂಬಾ ಅನನುಕೂಲ ಉಂಟಾಗಿದೆ ಹೊಸ ನಮೂನೆ ಕಾಗದಗಳು ಎಂಥವೋ ಹಳೇ ಕಾಗದಗಳು ರದ್ದು ಮಾಡುತ್ತಾರೋ ಈಗೆ ಬರೆದ ಹಿಂದಿನ ಕಾಗದಗಳು ಕೋರ್ಟಿನಲ್ಲಿ ಅಂಗೀಕರಿಸುತ್ತಾರೋ ಇಲ್ಲವೋ ಈ ವಿಷಯವನ್ನು ಸಮಾಧಾನಮಾಡಬೇಕಾಗಿ ಕೋರುತ್ತೇನೆ

ಯಥಾರ್ಥಾಪೇಕ್ಷಿ

[ಸರ್ಕಾರದವರು 1914 ನೇ ಮಾರ್ಚಿ 1 ರಿಂದ ಹೊಸ ತರಹಾ ಛಾಪಾ ಕಾಗದಗಳನ್ನೇ ಉಪಯೋಗಿಸಬೇಕೆಂದು ಹುಕುಂ ಕೊಟ್ಟಿದ್ದಾರೆ ಈಗ ಪ್ರಜೆಗಳು ಇಟ್ಟುಕೊಂಡಿರುವಂಥಾ ಛಾಪಾ ಕಾಗದಗಳನ್ನು ಒಂದು ತಿಂಗಳ ವರೆಗೆ (ಮಾರ್ಚಿ ಏಪ್ರಿಲ್ ವರಿಗೆ) ಉಪಯೋಗಿಸಬಹುದು ಆ ಬಳಿಕ ಅಂಥಾ ಕಾಗದಗಳು ಪ್ರಯೋಜನಕ್ಕೆ ಬರುವುದಿಲ್ಲವಾದ್ದರಿಂದ ಪ್ರಜೆಗಳು ಅಂಥವುಗಳನ್ನು ಸರ್ಕಾರಕ್ಕೆ ಕೊಟ್ಟು ಹಣ ವಾಪಸು ಪಡೆಯಬಹುದು ಇದಕ್ಕೆ ಎರಡು ತಿಂಗಳ ಗಡುವು ಕೊಡಲಾಗಿದೆ ಈ ತಿಂಗಳು ಕಳೆದ ನಂತರ ಕರಾರುಗಳನ್ನೆಲ್ಲಾ ಹೊಸ ಛಾಪಾ ಕಾಗದಗಳಲ್ಲಿ ಬರೆಯಬೇಕು —ಎಡಿ]

———

ಗ್ರಾಮಗಳ ಅಭಿವೃದ್ಧಿ

ಸ್ವಾಮಿ,

ಫೆಬ್ರವರಿ ತಾ 26ರ ವೃತ್ತಾಂತ ಪತ್ರಿಕೆಯಲ್ಲಿ ಈ ವಿಚಾರವಾಗಿ ಬರೆದಿರುವ ಲೇಖನವನ್ನು ನೋಡಿದೆನು ಗ್ರಾಮದಲ್ಲಿ ತಿಳುವಳಿಕಸ್ಥನೂ, ಯೋಗ್ಯನೂ ಆದ ಉಪಾಧ್ಯಾಯನಿದ್ದರೆ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ ವಗೆರೆ ಬರೆದಿರುತ್ತೀರಿ ಈ ವಿಚಾರದಲ್ಲಿ ಸರ್ಕಾರದವರು ಉಪಾಧ್ಯಾಯರಿಗೆ ತಕ್ಕಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಲ್ಲಿ ಆ ಅಭಿಪ್ರಾಯವು ಸಫಲ ಆಗುವುದರಲ್ಲಿ ಸಂಶಯವಿಲ್ಲ ಹೇಗೆಂದರೆ ಸ್ಕೂಲಿನ ಅಭಿವೃದ್ಧಿಗೆ ಮಾಡಲ್ಪಟ್ಟಿರುವ ಕಮಿಟಿಗಳು ಉಪಾಧ್ಯಾಯರಿಗೆ ತಕ್ಕ ಸಹಾಯ ಮಾಡುವ ಪ್ರತಿಯಾಗಿ, ಉಪಾಧ್ಯಾಯರು ತಮಗೆ ಸಹಾಯಕರೂ, ತಮ್ಮಾಳಿಕಗಳೂ ಆಗಲಿಲ್ಲವೆಂದು ಅವರಿಗೆ ಪ್ರತಿಕೂಲಗಳಾಗಿರುವವು ಇದಕ್ಕೆ ಅನೇಕ ಉಪಾಧ್ಯಾಯರಿಗೆ ದೊರೆಯುವ ವೇತನಗಳು ಅತ್ಯಲ್ಪವಾದುದರಿಂದ ಹೊಟ್ಟೆಯ ಪಾಡಿಗಾಗಿ ಗ್ರಾಮಸ್ಥರನ್ನು ಆಶ್ರಯಿಸಬೇಕಾಗುವುದು ಹೀಗೆ ಆಶ್ರಯಿಸುತ್ತಾ ಬಂದಲ್ಲಿ ಉಪಾಧ್ಯಾಯರನ್ನು ಹೇಡಿಗಳೆಂದು ತಿಳಿದು ಕೇವಲ ಅಲ್ಪವಾಗಿ ಕಾಣುವರು ಇದರಿಂದ ಉಪಾಧ್ಯಾಯರ ಮಾತು ಗಣನೆಗೆ ಬರುವುದಿಲ್ಲ ಮತ್ತು ತನಿಖೆಗಾಗಿ ಬರುವ ಮುಖ್ಯಾಧಿಕಾರಿಗಳಾದರೋ ಉಪಾಧ್ಯಾಯರ ಕಷ್ಟ ಸುಖಗಳನ್ನು ವಿಚಾರಿಸದೆ ಗ್ರಾಮಸ್ಥರ ಅಹವಾಲುಗಳಂತೆ ಉಪಾಧ್ಯಾಯರು ನಡೆದುಕೊಳ್ಳಬೇಕೆಂದು ಹೇಳುವರು ಗ್ರಾಮಸ್ಥರಾದರೋ ವಿದ್ಯಾವಂತರೆಂದು ಹೇಳಲಾಗದು ಅವರಿಗೆ ಸ್ವಕಾರ್ಯಗಳ ಮುಂದೆ ಇನ್ನಾವುದೂ ರುಚಿಸುವುದಿಲ್ಲ ಇದಕ್ಕನುಸಾರವಾಗಿ ಅಧಿಕಾರಿಗಳು ತನಿಖೆಗಾಗಿ ಬಂದಾಗ ಕಮಿಟಿ ಮೆಂಬರುಗಳನ್ನೇ ಆಗಲಿ, ಗ್ರಾಮಸ್ಥರನ್ನೇ ಆಗಲಿ ಬರಮಾಡಿ ಕೊಂಡು ಅವರಿಗೆ ಹಿತಬೋಧನೆಗಳನ್ನು ಬೋಧಿಸುವುದೂ ಇಲ್ಲ ಈ ರೀತಿ ಅಧಿಕಾರಿಗಳು ಉಪಾಧ್ಯಾಯರಿಗೆ ಧಾರಾಳವಾದ ವೇತನಗಳನ್ನೂ ಸ್ವಾತಂತ್ರ್ಯವನ್ನೂ ಕೊಡುವುದೂ, ಮೆಂಬರು ಮತ್ತು ಗ್ರಾಮಸ್ಥರುಗಳು ಸ್ಕೂಲ್ ಮಾಸ್ಟರ್ರಿಗೆ ಸಹಾಯಕರಾಗಿರಬೇಕೆಂದು ಪ್ರೋತ್ಸಾಹ ಕೊಡುವುದೂ, ಅವಿದ್ಯಾವಂತ ರಾದ ಗ್ರಾಮಸ್ಥರ ಮಾತುಗಳನ್ನೇ ಪ್ರಾಧಾನ್ಯವಾಗೆಣಿಸಿ, ಬಡಪಾಯಿಗಳಂತಿರುವ ಉಪಾಧ್ಯಾಯರುಗಳನ್ನು ದೂರುವುದರಿಂದ ಹೇಗೆತಾನೇ ಗ್ರಾಮಗಳಸ್ನು ಅಭಿವೃದ್ಧಿ ಹೊಂದಲಾದೀತು ?

ದ ನಾಥಿಮಾನಿ

———

ದಿವಾನರವರ ಮದ್ದಗಿರಿ ಸಂದರ್ಶನ

ಸ್ವಾಮಿ,

ಈ ಮದ್ದಗಿರಿ, ಪಾವಗಡ ಮತ್ತು ಶಿರಾ ಪ್ರಾಂತ್ಯದ ಜನರು ಶ್ರೀಮದ್ದಿವಾನ್ ರವರ ಆಗಮನವನ್ನು ಹಾರೈಸಿಕೊಂಡಿರುವರು ಪ್ರಾಯಶಃ ಅವರು ಬೆಂಗಳೂರಿಂದ ಹೊರಟರೆ ತುಂಕೂರು ಡಿಸ್ಟ್ರಿಕ್ಟಿಗೆ ದಯಮಾಡಬಹುದು ಊಹಿಸಿ ಅವರ ಕೃಪಾಕಟಾಕ್ಷಕ್ಕೆ ಪಾತ್ರವಾದ ವಿಷಯವನ್ನು ಮುಂದಾಗಿ ಅವರ ಅವಧಾನಕ್ಕೆ ಬರುವದಕ್ಕಾಗಿ ಅರಿಕೆಮಾಡುವದೇನೆಂದರೆ—ಕೆಲವು ವರ್ಷದಿಂದ ಆಯಾಗ ಕಾಲಕ್ಕೆ ಮಳೆಗಳು ಬೀಳದೆ ಪ್ರಜೆಗಳು ಕ್ಷಾಮವನ್ನು ಅನುಭವಿಸುತ್ತಿರುವದು ಸಾಮಾನ್ಯವಾಗಿದೆ ಅದರಲ್ಲೂ ಈ ಮದ್ದಗಿರಿ, ಪಾವಗಡ, ತಾಲ್ಲೂಕುಗಳಾದರೋ ವೃಷ್ಟಿಯೂ ಫಲವೂ ಅಪೂರ್ವವಾಗಿರುವವು ಸರ್ಕಾರ ಇತರ ಸ್ಥಳಗಳಲ್ಲಿ ಕಲ್ಪಿಸಿರುವ ಜಲಾಶಯಗಳಲ್ಲಿ ಯಾವ ಭಾಗವೂ ಈ ತಾಲ್ಲೂಕುಗಳಲ್ಲಿ ಸರ್ಕಾರದವರು ಕಲ್ಪಿಸಿಲ್ಲ, ಸಾಮಾನ್ಯವಾದ ಬೋರನ ಕಣಿವೆ ಮತ್ತು ಮಾವತ್ತೂರು ಕೆರೆ ಇವೆರಡೂ ಇಲ್ಲದಿದ್ದಲ್ಲಿ ಈ ಮೂರು ತಾಲ್ಲೂಕುಗಳಲ್ಲೂ ಯಾವ ಜಲಾಶಯವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದಾಗಿತ್ತು ಈ ರೀತಿ ದೈವಸಹಾಯದಿಂದಾಗುವ ಮಳೆಯೂ, ಸರ್ಕಾರದಿಂದಾಗುವ ಜಲಾಶಯವೂ ಇಲ್ಲದ್ದರಿಂದ ಜನರು ತಮಗೂ ತಮ್ಮ ದನಕರುಗಳಿಗೂ ಪ್ರತಿ ವರುಷದಲ್ಲೂ ಸಂಭವಿಸುತ್ತಿರುವ ಕಷ್ಟವನ್ನು ಸಹಿಸಲಾರದೆ ಕ್ರಮಕ್ರಮೇಣ ಈ ದೇಶವನ್ನು ಬಿಟ್ಟು ವಸತಿಯಾದ ಪ್ರದೇಶಗಳಿಗೆ ಹೊರಡುವ ಸಂಭವ ಉಂಟಾಗಿರುತ್ತೆ ಇದನ್ನು ಪರಿಹರಿಸುವುದು ನಮ್ಮ ದಿವಾನರವರಿಗೆ ಅಸಾಧ್ಯವಲ್ಲ ಅವರ ಘನವಾದ ಆಲೋಚನೆಗೆ ನಾನು ಅರಿಕೆಮಾಡುವದೇನೆಂದರೆ—ಮದ್ದಗಿರಿ ತಾಲ್ಲೂಕು ಬಡವನಹಳ್ಳಿ ಬಳಿ ಹರಿದುಹೋಗುತ್ತಿರುವ ಭಾರೀ ಹಳ್ಳದ ನೀರು ಯಾವ ಉಪಯೋಗವಿಲ್ಲದೆ ಬ್ರಿಟಿಷ್ ಇಂಡಿಯದ ಅಗಳಿ ಮಧೂಡಿ ಪ್ರಾಂತ್ಯಕ್ಕೆ ಹೋಗುತ್ತಿರುವದು ಈ ನೀರು ಪೋಲಾಗದಂತೆ ಬಡವನಹಳ್ಳಿ ಬಳಿ ಇರುವ ಗೂಬಲಗುಟ್ಟೆ, ಅದರ ಬಳಿ ಇರುವ ಮತ್ತೊಂದ ಗುಟ್ಟೆ ಇವೆರಡಕ್ಕೂ ಅಡ್ಡಗಟ್ಟೆ ಹಾಕಿ ತಡೆದರೆ ನಿಲ್ಲುವ ನೀರೂ, ಮತ್ತು ತುಂಬಾಡಿ ಗ್ರಾಮದ ಬಳಿ ದೊಡ್ಡ ಸೇತುವೆಯು ಕೆಳಗೆ ಹರಿದುಹೋಗುತ್ತಿರುವ ನೀರನ್ನು ಆ ಸಮೀಪದಲ್ಲಿರುವ ಎರಡು ಗುಟ್ಟೆಗಳಿಗೆ ಅಡ್ಡಗಟ್ಟೆಹಾಕಿ ತಡೆದಲ್ಲಿ ಆ ನೀರೂ ಸೇರಿ ಜಲಸಮೃದ್ಧಿಯು ಬಹಳವಾಗಿ ಉಂಟಾಗುವದರಲ್ಲಿ ಯಾವ ಸಂಶಯವೂ ಇಲ್ಲ ಈ ವಿಷಯವನ್ನು ಈ ಪ್ರಾಂತ್ಯ ದಯಮಾಡಿಸಿದಾಗ ದಿವಾನರವರು ಪರಾಂಬರಿಸಿದಲ್ಲಿ ವ್ಯಕ್ತಪಡುತ್ತದೆ ಇವೆರಡರ ಕಾಮಗಾರಿಗಳಿಗೂ ಇಷ್ಟೇ ಲಾಗೋಡು ತಗುಲುತ್ತೆಂದು ಸರ್ವಜ್ಞರಾದ ಅವರಿಗೆ ತಿಳಿಸಲು ನಾನು ಶಕ್ತನಲ್ಲ ಪರಂತು ಇದಕ್ಕಾಗಿ ಮಾಡುವ ವ್ಯಯವು ದುರ್ವ್ಯಯವಾಗಲಾರದೆಂದು ಮಾತ್ರ ಬಲ್ಲೆನು ಕ್ಷಾಮದಿಂದ ಬಾಧೆಪಡುತ್ತಿರುವ ಅನೇಕರಲ್ಲಿ ಒಬ್ಬನಾದ

ವೆಂಕಟೇಶಶಾಸ್ತ್ರಿ, ಇನಾಂದಾರ್

———

ಮಲೆನಾಡು ಸ್ಟೇಟ್ ಫಾರೆಸ್ಟ್

ಅಯ್ಯಾ,

ಮಲೆನಾಡು ತಾಲ್ಲೋಕುಗಳಲ್ಲಿ ಸಾಗುವಳಿ ಜಮೀನುಗಳ ತಲೆಗಟ್ಟು ಮತ್ತು ಜನಗಳ ವಸತಿಯ ಗ್ರಾಮಗಳ ಸರಹದ್ದುಗಳಲ್ಲಿ ಸಹಾ ಇರತಕ್ಕ ಜಂಗಲುಗಳನ್ನೂ ಇತರೆ ಜಂಗಲುಗಳನ್ನೂ ಸಹಾ ಸರಕಾರದವರು "ಸ್ಟೇಟ್ ಫಾರೆಸ್ಟ್" ಬಗ್ಗೆ ವಿಂಗಡಿಸಿಯೂ, ವಿಂಗಡಿಸುತ್ತಲೂ ಇರುವುದು ಸರಿಯಷ್ಟೆ ಇಂಥಾ ಸ್ಟೇಟ್ ಫಾರೆಸ್ಟುಗಳಲ್ಲಿ ರೈತರಿಗೆ ಯಾವ ವಿಧವಾದ ಸ್ವಾತಂತ್ರ್ಯವೂ ಇಲ್ಲವೆಂಬುವದೂ ವಿದಿತವಾಗಿದೆ ಈ ಮಲೆನಾಡಿನಲ್ಲಿ ಅಡಿಕೆ ಬಾಗಾಯಿತು ಮುಖ್ಯ ಕೃಷಿಯಾಗಿರುವದರಿಂದ ಈ ಬಾಗಾಯಿತು, ವ್ಯವಸಾಯ, ರೇಖೆ ಮುಂತಾದ ಸಕಲ ವಿಷಯಕ್ಕೂ ಜಂಗಲುಗಳಲ್ಲಿ ಇರತಕ್ಕ ನಾಟಾ ಮತ್ತು ಸೊಪ್ಪು, ಸದರು, ಕಟ್ಟಿಗೆ, ಇನ್ನೂ ಇತರ ಅನೇಕ ಉಪಯೋಗಗಳ ಬಗ್ಗೆ ಕಾನುಗಳು ಅಗತ್ಯವಾಗಿರುವದರಿಂದ ಕಾನುಗಳಲ್ಲಿ ರೈತನಿಗೆ ಬೇಕಾದಷ್ಟು ಧಾರಾಳವಾದ ನಿರ್ಬಂಧವಿಲ್ಲದ ರಿಯಾಯಿತು ಇರಬೇಕೆಂತ ಅನೇಕ ವರುಷಗಳ ಲಾಗಾಯಿತು ದಸರಾ ದರ್ಬಾರಿನಲ್ಲಿಯೂ, ಫಾರೆಸ್ಟು ಇಲಾಖೆಯವರಿಗೂ, ಇನ್ನೂ ಇತರೇ ಆಫೀಸರವರಲ್ಲಿ ಸಹಾ ಅರಿಕೆಮಾಡಿಕೊಂಡು ಇರುವದು ಸರಿಯಷ್ಟೆ ಒಂದೆ ಸರಕಾರದವರು ರೈತರಿಗೆ ಜಂಗಲುಗಳಲ್ಲಿ ಮುಖ್ಯವಾದ ಉಪಯೋಗಗಳು ಎಷ್ಟರಮಟ್ಟಿಗೆ ಇವೆ ಎಂಬುವದನ್ನು ಯೋಚಿಸಿ, ಮಲೆನಾಡು ರೈತರಿಗೆ ಜಂಗಲುಗಳಲ್ಲಿ ಧಾರಾಳವಾದ ಸ್ವಾತಂತ್ರ್ಯವು ಇರಬೇಕೆಂಬುದರ ಮೇಲೆ ಜಾನುವಾರು, ಕೊಟ್ಟಿಗೆಗೆ ಬೇಕಾದ ನಾಟಾಗಳು ಮತ್ತು ಹೆಚ್ಚಾಗಿ ಬೇಕಾಗುವ ಕಟ್ಟಿಗೆ, ಸೊಪ್ಪು ಮುಂತಾದ್ದನ್ನು ಮುಫತ್ತಾಗಿ ಬಿಟ್ಟಿದ್ದರು ಈ ವೀಚೆಗೆ ರೈತ ರಿಯಾಯಿತಿ ಪಾಯಿದೆಯನ್ನು ಬಾರಿಗೆ ತಂದರು ಹೀಗಿರುತ್ತಾ ಈಗ ನಡೆಯುವ ಸ್ಟೇಟ್ ಫಾರೆಸ್ಟ್ ವಿಂಗಡದಿಂದ ಆಗುವ ಜಂಗಲಿ ನಿರ್ಬಂಧವು ರೈತಾಪಿ ಜನಗಳ ದುಃಸ್ಥಿತಿಗೆ ದೊಡ್ಡ ಕಾರಣವಾಗಿದೆ ಅಲ್ಲದೆ ಅಡಿಕೆ ಬಾಗಾಯಿತುಗಳು ಸ್ವಲ್ಪ ಕಾಲದಲ್ಲೇ ಹೀನಸ್ಥಿತಿಗೆ ಬರುತ್ತೆಂತ ಘಂಟಾಘೋಷವಾಗಿ ರೈತರು ಒದರುತ್ತಾರೆ ಈ ಮಲೆನಾಡಿನ ಸ್ಥಿತಿಯಲ್ಲಿ ಜಂಗಲುಗಳನ್ನು ಸ್ಟೇಟ್ ಫಾರೆಸ್ಟಾಗಿ ವಿಂಗಡಿಸಕೂಡದೆಂತ ಒತ್ತಿಹೇಳುವಷ್ಟು ಕಾರಣಗಳನ್ನು ಒದಗಿಸಿಕೊಂಡಿರುತ್ತಾರೆ ಈ ಮಲೆನಾಡಿನ ರೈತರು ತಮಗೆ ಒದಗಿರುವ ಈ ಕಷ್ಟವನ್ನು ಅನೇಕ ಸಾರಿ ಸರಕಾರಕ್ಕೆ ಅರಿಕೆ ಮಾಡಿಕೊಂಡರೂ ರೈತರಿಗೆ ಪ್ರಯೋಜನವಾಗಲಿಲ್ಲ ಆದರೆ ಈಗ ನಮ್ಮ ಅದೃಷ್ಟವೂ ನ್ಯಾಯವನ್ನೇ ಸಿದ್ಧಾಂತ ಮಾಡುವ ದಿವಾನ್ ಸಾಹೇಬ ಬಹದ್ದೂರರವರನ್ನು ರೈತರ ಕಷ್ಟಗಳನ್ನು ವಿಚಾರಮಾಡತಕ್ಕ ದೊಡ್ಡ ಪದವಿಗೆ ಒದಗಿಸಿರುವದರಿಂದ ಹಿಂದೆ ನಡೆದ ಅನೇಕ ಲೋಪಗಳೂ ಕೂಡ ತಿದ್ದುಪಾಟಾಗಿ ಪ್ರಜೆಗಳಿಗೆ ಖಂಡಿತವಾದ ನ್ಯಾಯವೇ ದೊರೆಯುತ್ತೆಂತ ನಂಬಿಕೊಂಡಿರುತ್ತಾರೆ 1913 ನೇ ಮಾರ್ಚ ತಿಂಗಳಲ್ಲಿ ಘನವಸ್ತುವಿದ ಮಂತ್ರಿಶ್ರೇಷ್ಠರಾದ ಮ|| ವಿಶ್ವೇಶ್ವರಯ್ಯನವರ ಸವಾರಿಯು ತೀರ್ಥಹಳ್ಳಿಗೆ ಪರಿವಾರದೊಡನೆ ಚಿತ್ತೈಸಿದಾಗ ತೀರ್ಥಹಳ್ಳಿ ಪ್ರಜೆಗಳ ಮುಖಂಡರು ಸ್ಟೇಟ್ ಫಾರೆಸ್ಟ್ ವಿಂಗಡಿಸುವದರಿಂದ ತಮಗುಂಟಾಗುವ ತೊಂದರೆಯನ್ನು ಅವರ ಸನ್ನಿಧಿಯಲ್ಲಿ ಬರಹ ಮೂಲಕವಾಗಿಯೂ, ಬಾಯಿಮಾತಿನಿಂದಲೂ ಅರಿಕೆ ಮಾಡಿಕೊಂಡದ್ದನ್ನು ಸಾವಧಾನವಾಗಿ ಕೇಳಿರುತ್ತಾರೆ ಹೀಗೆ ಫಾರೆಸ್ಟು ವಿಂಗಡಿಸುವದರಿಂದಲೇ ಮೊದಲಿಗಿಂತಲೂ ಸೌಕರ್ಯವನ್ನು ಪ್ರಜೆಗಳಿಗೆ ಕಲ್ಪಿಸುವ ಏರ್ಪಾಡು ಸುಲಭರೂಪವಾಗಿ ಇದ್ದರೂ ಇರಬಹುದು ಆದರೆ ಅಂಥಾ ಪ್ರಯೋಜನವನ್ನು ಸ್ವಲ್ಪದರಮಟ್ಟಿಗೂ ಪ್ರಜೆಗಳು ಹೊಂದುವಷ್ಟು ವಿದ್ಯಾವಂತರಲ್ಲವೆಂಬುದು ಸರಕಾರಕ್ಕೆ ವೇದ್ಯವೇ ಇದೆ ಸರಕಾರದ ಉದ್ಯೋಗಸ್ಥರಲ್ಲಿ ಅನೇಕ ಮಹನೀಯರು ಈ ಕಾನೂನುಗಳ ಆಧಾರದ ಮೇಲೆ ಪ್ರಜೆಗಳನ್ನು ಸಂಕೋಚದಲ್ಲಿ ಹಿಡಿದು ಪ್ರಯೋಜನವನ್ನು ಎದುರು ನೋಡುತ್ತಾರೆ ಪ್ರಜಾಪಕ್ಷವಾದ ಸರಕಾರದವರು ಈ ಮಲೆನಾಡಿನ ಅಭಿವೃದ್ಧಿಯಲ್ಲಿ ವಿಶೇಷ ಪ್ರಯತ್ನಪಡುವುದು ಸ್ತೋತ್ರಾರ್ಹವಾದದ್ದೇ ಸರಿ ಆದರೆ ಅಂಥಾ ಕಾರ್ಯಗಳಲ್ಲಿ ನಿಯುಕ್ತರಾದವರು ನಿಷ್ಪಕ್ಷಪಾತವಾಗಿ ಪ್ರಜೆಗಳ ಕಷ್ಟವನ್ನು ನಿವಾರಿಸುವುದಕ್ಕೆ ತಕ್ಕಷ್ಟು ಅವಕಾಶಕೊಟ್ಟೇ ಕಾನೂನುಗಳನ್ನು ಏರ್ಪಾಡುಮಾಡಿಸ ಬೇಕಾಗಿಯೂ ಬೇಡಿಕೊಳ್ಳುತ್ತಾರೆ ಸ್ಥಳೀಯ ಮುಖಂಡರಲ್ಲಿ ಮೆಂಬರಾಗಲು ಅರ್ಹರಾದವರು ಮುಂತಾಗಿ ಸಕಲರೂ ಸೇರಿ ಇನ್ನುಮೇಲೆ ಸ್ಟೇಟ್ ಫಾರೆಸ್ಟು ವಿಂಗಡವಾಗುವದರಲ್ಲಿ ತಮಗಿರುವ ತೊಂದರೆಯನ್ನು ಪ್ರಜೆಗಳಿಗೋಸ್ಕರವೂ ಸಂಸಾರದಲ್ಲಿ ಅರಿಕೆ ಮಾಡಿಕೊಂಡರೆ ನ್ಯಾಯವಾಗಿ ಕಂಡುಬಂದ ಈ ಸ್ಟೇಟ್ ಫಾರೆಸ್ಟನ್ನು ವಿಂಗಡ ಮಾಡಿಸ್ಯಾರಾಗಿ ಪ್ರಜೆಗಳು ನಂಬಿರುತ್ತಾರೆ

ಕ ರ

ತಾಲ್ಲೂಕು ವರ್ತಮಾನಗಳು.

ಕಾವೇರಿ ರಿಜರ್ವಾಯರ್ —ಭಾನುವಾರ ನಮ್ಮ ಶ್ರೀಮನ್ ಮಹಾರಾಜರವರು ಮೋಟಾರಿನಲ್ಲಿ ಇಲ್ಲಿಗೆ ದಯಮಾಡಿ ಕಟ್ಟೆಯ ಕೆಲಸವನ್ನು ಪರಾಂಬರಿಸಿಕೊಂಡು ವಾಪಸ್ ದಯಮಾಡಿದರು —ಈಗ್ಗೆ 6 7 ದಿನಗಳ ಕೆಳಗೆ ಇಲ್ಲಿಗೆ ಸಮೀಪವಾಗಿರುವ ಹೂಲಿಕೆರೆಯ ಬಳಿ ರಸ್ತೆಯಲ್ಲಿ ಯಾವನೋ ಒಬ್ಬನು ಮೃತಪಟ್ಟು ಬಿದ್ದಿದ್ದನು ಅವನು ಯಾವ ಕಾರಣದಿಂದ ಮೃತನಾಗಿಬಿದ್ದನೋ ಗೊತ್ತಿಲ್ಲ —ಈಗ್ಗೆ 10 12 ದಿನಗಳ ಕೆಳಗೆ ಇಲ್ಲಿಯ ನಾರ್ತ್ ಬ್ಯಾಂಕ್ ಗಾರೆ ಎಲ್ ಬಳಿ ಫಿಲ್ಟರಿಗೆ (ರಾಟಿಗೆ) ಸುಮಾರು 12 ವರುಷದ ಒಬ್ಬ ಮುಸಲ್ಮಾನರ ಹುಡುಗನು ಅಕಸ್ಮಾತ್ತಾಗಿ ಸಿಕ್ಕಿಕೊಂಡು ಮೃತನಾದನು —ಇಲ್ಲಿ ನಲ್ಲಿ ನೀರನ್ನು ಜಾಗ್ರತೆ ನಿಲ್ಲಿಸಿಬಿಡುತ್ತಾರೆ ಇದರಿಂದ ಜನಗಳಿಗೆ ಕೊಂಚ ತೊಂದರೆಯಾಗಿರುತ್ತೆ ಈ ಭಾಗದಲ್ಲಿ ನಮ್ಮ ಮೆಕ್ಯಾನಿಕಲ್ ಇಂಜನಿಯರು ಸರಿಯಾದ ಏರ್ಪಾಡು ಮಾಡಿಕೊಡುತ್ತಾರೆಂತ ನಂಬಿರುತ್ತೇವೆ —ಇಲ್ಲಿನ ಎ ವಿ ಸ್ಕೂಲಿಗೆ ಮ|| ಎಲ್ ಸುಬ್ಬರಾಯರು ಹೆಡ್ ಮಾಸ್ಟರಾಗಿ ಬಂದಾಗಿನಿಂದಲೂ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುತ್ತೆ

ಹಾಸನ —ಅ| ಕಮೀಷನರ್ ಮ|| ಎಂ ಶ್ರೀನಿವಾಸಮೂರ್ತಿಯವರು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟು, ಮ|| ಗೋಪಾಲರಾಜೆಅರಸಿನವರು ಇಲ್ಲಿಗೆ ಬರುತ್ತಾರೆಂದು ತಿಳಿದುಬಂದಿದೆ ಮ|| ಶ್ರೀನಿವಾಸಮೂರ್ತಿಯವರು ಮುಂದಿನ ಮೇ ತಿಂಗಳು ಇಲ್ಲಿ ನಡೆಯುವ ಉಪಾಧ್ಯಾಯರ ಕೂಟದಲ್ಲಿ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರು ಬರೆಯುವ ಅತ್ಯುತ್ತಮವಾದ ಪ್ರಬಂಧಕ್ಕೋಸ್ಕರ 10 ರೂಪಾಯಿ ಬಹುಮಾನವನ್ನು ಕೊಡುವುದಾಗಿ ವಾಗ್ದಾನಮಾಡಿದಾರೆ ಆ ಪ್ರಬಂಧವು ತಾಯಿತಂದೆಗಳ ಮನಸ್ಸಿನಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿಯೇ ತೀರಬೇಕು, ಇಲ್ಲದಿದ್ದರೆ ಅವರಿಗೆ ತಾವೇ ಶತ್ರುಗಳಾಗುತ್ತೇವೆಂಬ ಚಿಂತೆಯನ್ನು ಹುಟ್ಟಿಸುವ ರೀತಿ ಪ್ರಯತ್ನಗಳ ವಿಷಯದಲ್ಲಿ ಉಪಾಧ್ಯಾಯರ ಕರ್ತವ್ಯವನ್ನು ಕುರಿತದ್ದಾಗಿರಬೇಕು ಅದು 20 ನಿಮಿಷಗಳೊಳಗಾಗಿ ಓದಿ ಮುಗಿಸುವಷ್ಟೇ ಇರಬೇಕು ಮತ್ತು ಈ ಪ್ರಬಂಧಗಳು ಬರುವ ಏಪ್ರಿಲ್ ತಾ 9 ರೊಳಗೆ ಕಾರ್ಯದರ್ಶಿ ರೆವ್ ಎ ಬೈಬ್ರೂಕ್‌ಬ್ಯಾಂಕ್ ದೊರೆಯವರಿಗೆ ತಲುಪುವಂತೆ ರವಾನಿಸಬೇಕು —ಅ|| ಕಮೀಷನರ್ ಮ|| ಅಪ್ಪಣ್ಣಯ್ಯಂಗಾರ್ರು ಪದ್ಧತಿಯ ಪ್ರಕಾರ ಕಳೆದ ಭಾನುವಾರ ಶ್ರೀರಾಮಕೃಷ್ಣ ಪರಮಹಂಸರವರ ವರ್ಧಂತ್ಯುತ್ಸವಾಂಗವಾಗಿ ಕೀಳುಜಾತಿಯವರಿಗೋಸ್ಕರ ಒಂದು ಸಮಾರಾಧನೆಯನ್ನು ಮಾಡಿಸಿದರು ಸಾವಿರಾರು ಮಂದಿ ಸೇರಿ ಸುಭೋಜನಮಾಡಿ ಸಂತೋಷಪಟ್ಟರು — ಸೂಪರಿಂಟೆಂಡಿಂಗ್ ಇಂಜನಿಯರವರು ಸ್ಥಳಿಕಕಾರ್ಯಗಳ ವಿಚಾರಣಾರ್ಥವಾಗಿ ಬಂದಿದಾರೆ ಈ ಊರಿನಲ್ಲೂ, ಸಮೀಪವಾದ ಅಂಬುಗ ಗ್ರಾಮದಲ್ಲೂ ಮುಂದಿನ ವಾರ ರಥೋತ್ಸವವು ನಡೆಯುವದು ಸುತ್ತುಮುತ್ತಲಿನ ಅನೇಕ ಗ್ರಾಮಗಳಲ್ಲಿ ಅನೇಕ ಜಾತ್ರೆಗಳು ನಡೆಯುವವು

ಹುಣಸೂರು -ಕಳೆದ ತಿಂಗಳು 25 ನೇ ತಾ ಬುಧವಾರದ ರಾತ್ರಿ ಸುಮಾರು 10½ ಗಂಟೆಯಲ್ಲಿ ಈ ಟವರ್ ಮ್ಯಾಥಿಸನ್ ವರ್ಕ್‌ಷಾಪಿನಲ್ಲಿ ಅಕಸ್ಮಾತ್ ಹ್ಯಾಗೋ ಬೆಂಕಿ ಬಿದ್ದು ಕಾಫಿ ಭರ್ತಿಯಾಗಿದ್ದ ಗಡಂಗಿನ ಮೂಲಕ ಉರಿಯೂ ಹೊಗೆಯೂ ಕಾಣಿಸಿತು ನಮ್ಮ ಅಮಲ್ದಾರ್‌ರವರ ಪತ್ನಿಯವರು ತಮ್ಮ ಮಹಡಿಯ ಮೇಲಕ್ಕೆ ಹತ್ತಿದಾಗ ಆಕಸ್ಮಾತ್ತಾಗಿ ಉರಿಯನ್ನು ನೋಡಿ ಅಮಲ್ದಾರಿಗೆ ತಿಳಿಸಿದರು ಅವರು ಕೂಡಲೇ ತಮ್ಮ ಸೇವಕರಲ್ಲೊಬ್ಬರನ್ನು ಕಾರ್ಖಾನೆಗೆ ಓಡಿಸಿದರು ಆಗ್ಗೆ ಒಳಗಿದ್ದವರಿಗೆ ತಿಳಿಯಬಂದು ಅಪಾಯಕರವಾದ ಸೂಚನೆಯನ್ನು ಕುರಿತು ಗಂಟೆಯನ್ನು ಬಾರಿಸಿ ಮೆಷೀನನ್ನು ವಿಸಲ್ ಮಾಡಿಸಲು ಸಹಾಯಕ್ಕಾಗಿ ಟವನಿನಿಂದಲೂ, ಕಲ್ಕುಣಿ, ನಲವಾಗಲು ಗ್ರಾಮಗಳಿಂದಲೂ ಅನೇಕ ಜನರು ಬಂದು ನೀರು ಎರಚಿ ಬೆಂಕಿಯನ್ನು ಆರಿಸಿದರು ಪೆಟ್ರೀ ಹೇಯವರೂ, ಡಾಕ್ಟರವರೂ, ಇನ್ನೂ ಅನೇಕ ದೊಡ್ಡಮನುಷ್ಯರೂ ಹೋಗಿ ತಮ್ಮಿಂದಾದ ಸಹಾಯವನ್ನು ಮಾಡಿದರು ಮ್ಯಾನೇಜರಾದ ಮೆ|| ಥ್ವೆಯಟ್ಸ್ ಯವರೂ, ಮೆ|| ಮಿಡ್ಡಿರವರೂ ಜನಗಳ ಮಧ್ಯೆ ನುಗ್ಗಿ ತುಂಬಾ ಸಾಹಸಪಟ್ಟು ಬೆಂಕಿಯನ್ನು ಆರಿಸುತ್ತಿದ್ದರು ಈ ಮಧ್ಯೆ ಒಬ್ಬ ಮನುಷ್ಯನು ಉರಿಯನ್ನು ಆರಿಸಲು ಉರಿಯ ನಡುವೆ ಪ್ರವೇಶಮಾಡಿದನು ಆತನಿಗೆ ಪ್ರಜ್ಞೆತಪ್ಪಿದಂತಾಗಲು ಡಾಕ್ಟರವರು ಶೈತ್ಯೋಪಚಾರದಿಂದ ಇಲಾಜು ಮಾಡಿದರು ಆದರೆ ಮೇಲ್ಭಾಗಕ್ಕೆ ತಗಡು ಹಾಕಿದಾರೆ ಕೆಲವು ಮರದ ಜಾತಿಗಳು ಸುಟ್ಟುಹೋದವು ಕೆಲವು ಬುಷಲುಗಳ ಕಾಫಿಯೂ ನಷ್ಟವಾಯಿತು ಕೆಲವು ದವಾಲಿಗಳೂ ಸಾಮಾನುಗಳೂ ನಷ್ಟವಾದವು ಒಟ್ಟು ಸುಮಾರು 1,600 ರೂಪಾಯಿ ನಷ್ಟವಾಗಿರಬಹುದು ಸೂಪರಿಂಟೆಂಡೆಂಟರಿಗೆ ತಂತೀದ್ವಾರ ತಿಳಿದು ವಿಚಾರಿಸುವ ಬಗ್ಗೆ ಎಸ್ಟೇಟಿನಿಂದ ಬಂದಿರುತ್ತಾರೆ ಈ ಹುಣಸೂರು ತಾಲ್ಲೂಕಿನ 11 ಗ್ರಾಮಗಳಲ್ಲಿ 80 100 ಮನೆಗಳ ವರೆಗೂ ಬೆಂಕಿಯಿಂದ ಸುಟ್ಟು ಎಷ್ಟೋ ಮಂದಿ ಬಡಜನಗಳಿಗೆ ನಷ್ಟವನ್ನುಂಟುಮಾಡಿರುತ್ತೆ

ಮಳವಳ್ಳಿ —ಕೆರೆ ಒಣಗುತ್ತಾ ಬಂದಿದೆ ಜಾನುವಾರುಗಳಿಗೆ ನೀರಿಗೆ ಬಹಳ ಕಷ್ಟ ಭತ್ತದ ಫಸಲು ಅರ್ಧಮಟ್ಟಿಗೆ ಆಯಿತು —ನಮ್ಮ ಹೊಸ ಅಮಲ್ದಾರರು ಬಂದು 16 ದಿನವಾಯಿತು ಕಳೆದ ಎರಡು ಸಾಲಿನಿಂದ ಬಾಕಿ ಬಿದ್ದಿದ್ದ ಮೊಹತರ್ಫ ಕಂದಾಯವನ್ನು ಬಹಳ ಮೆಹನತ್ತಿನಿಂದಲೂ ಖಂಡಿತವಾಗಿಯೂ ವಸೂಲ್ಮಾಡುತ್ತಾ ಇದಾರೆ ಇದುವರೆಗೂ ಬಾಕಿ 400 ರೂಪಾಯಿ ಮಟ್ಟಿಗೆ ವಸೂಲಾಗಿರುವಂತೆ ತಿಳಿಯಬಂದಿದೆ ಪ್ರತಿದಿನವೂ ಗ್ರಾಮಾಂತರಗಳಿಗೆ ಹೋಗಿ ತಕರಾರುಗಳನ್ನು ಕಣ್ಣಾರ ನೋಡಿ ಫೈಸಲ್ಮಾಡುತ್ತಿರುವುದು ಜನಗಳಿಗೆಲ್ಲಾ ಬಹಳ ಸಂತೋಷವನ್ನುಂಟುಮಾಡಿದೆ —ಒಂದೆ ಇಷ್ಟು ಅಮಲ್ದಾರರು ನಮ್ಮ ನ್ಯಾಯವುಳ್ಳ ಶ್ರೀಮನ್ ಮಹಾರಾಜರವರ 29 ನೇ ವರ್ಷದ ಜನ್ಮದಿನ ಉತ್ಸವಾರ್ಥವಾಗಿ ಕಟ್ಟಿಸಿದ ಟೌನ್ ಹಾಲ್ ಕಟ್ಟಡದಲ್ಲಿ ಪುರಜನಗಳು ಒಂದು ವಾಚಕಶಾಲೆಯನ್ನು ಏರ್ಪಡಿಸಿ ಸಾರ್ಥಕವಾಗಿ ನಡೆಯುವಂತೆ ಮಾಡಿದಲ್ಲಿ ಉಪಕಾರವಾದೀತು — ಕಳೆದ ಸೆಪ್ಟಂಬರ್ 10 ರಲ್ಲಿ ಸ್ಕೂಲ್ ಮಾಸ್ಟರ್ ಪುಟ್ಟಯ್ಯನವರ ಮನೆಯಲ್ಲಿ ಕಳುವಾದಾಗ್ಗೆ ಗುಮಾನಿಯ ಮೇಲೆ ಹಿಡಿದಿದ್ದ ಚೌಡನೆಂಬುವನು ನಿರಪರಾಧಿ ಎಂದು ಮ್ಯಾಜಿಸ್ಟ್ರೇಟರು ಅವನನ್ನು ಖುಲಾಸೆ ಮಾಡಿರುತ್ತಾರೆ ಅಪರಾಧಿಗಳನ್ನು ಮುತುವರ್ಜಿಯಿಂದ ಪತ್ತೆಮಾಡದೇ ಹೋದದ್ದು ತುಂಬಾ ವ್ಯಸನಕರವಾಗಿದೆ ಪ್ರತಿ ತಿಂಗಳಲ್ಲೂ ಊರಿನಲ್ಲಿ ಕಳ್ಳತನ ನಡೆಯುತ್ತಲೇ ಇದೆ ಸರಿಯಾದ ಪತ್ತೆಹರದಾರನು ಇಲ್ಲದ್ದರಿಂದ ಕೋಟೆ ಬುರುಜಿನಲ್ಲಿರುವ ನುನೆಯವರಿಗೆ ತುಂಬಾ ಅನನುಕೂಲವಾಗಿದೆ —ಪೇಟೆಯಲ್ಲಿ ಒಂದು ಗರ್ಲ್ಸ್ ಸ್ಕೂಲು ಏರ್ಪಡಿಸುವರೆಂದು ವರ್ತಮಾನವಿದೆ ಹಾಲಿ ಇರುವ ಹುಡುಗರ ಸ್ಕೂಲೇ ಸರಿಯಾದ ಸ್ಥಿತಿಯಲ್ಲಿ ಇರದೆ ಮಾಸ್ಟರುಗಳೆಲ್ಲಾ ಸ್ವಂತ ಕೆಲಸಗಳಲ್ಲಿದ್ದುಕೊಂಡು ಮುಕು

ವರ್ಜ ವಹಿಸದೆ ಇರುತ್ತಾರೆ. ಇಂಥಾ ಸಂದರ್ಭದಲ್ಲಿ ಪೇಟೆ ಬಾಲಕಿಯರು 2 ಫರ್ಲಾಂಗ್ ದೂರದಲ್ಲಿರುವ ಕೋಟೆ ಸ್ಕೂಲಿಗೆ ಹೋಗಿಬರುವುದರಿಂದ ಯಾವ ವಿಧವಾದ ಅನನುಕೂಲವೂ ಕಂಡುಬರುವುದಿಲ್ಲ. ಹಿಂದಿನ ಅಮಲ್ದಾರ್ರು ದಯಮಾಡಿಸುವಾಗ್ಗೆ ಬಾಲಕಿಯರಿಗೆಲ್ಲಾ ಆಟದ ಸಾಮಾನು, ಪುಸ್ತಕ, ತಿಂಡಿಗಳನ್ನು ಹಂಚಿಸಿ, ಬಹಳ ಮಟ್ಟಿಗೆ ಪ್ರೋತ್ಸಾಹಮಾಡಿರುತ್ತಾರೆ —ಮೇಲ್ ಟ್ರೇನ್ ಕಾಲ ಬದಲಾಯಿಸಿರುವುದರಿಂದ ನಮ್ಮ ಊರಿನಲ್ಲಿ ಟಪ್ಪಾಲನ್ನು ಸಾಯಂಕಾಲ 6 ಘಂಟೆಗೆ ಕಟ್ಟುತ್ತಾರೆ ವರ್ತಕ ಜನರಿಗೆ ತುಂಬಾ ತೊಂದರೆಯಾಗಿರುತ್ತೆ. ಪೋಸ್ಟ್ ಇಲಾಖೆಯವರು ಕಾಗದಗಳ ಡಿಲಿವರಿಯನ್ನು 5 ಘಂಟೆಗೆ ಪೂರೈಸಿ, ಟಪ್ಪಾಲನ್ನು ರಾತ್ರಿ 8 ಘಂಟೆಗೆ ಕಟ್ಟುವಂತೆ ಮಾಡಿದಲ್ಲಿ ತುಂಬಾ ಅನುಕೂಲವಾಗುತ್ತೆ.

ಮಾಲೂರು.—ಹವಾ ಸಾಧಾರಣವಾಗಿರುತ್ತೆ. ಶಿಡುಬಿನ ಹಾವಳಿ ಜಾಸ್ತಿಯಾಗಿರುತ್ತೆ. ಅನೇಕ ಕಡೆ ನೀರಿಗೆ ಅಭಾವವಾಗಿದೆ. ಕರೀ ಖುಷ್ಕಿ ಫಸಲುಗಳು ಅಷ್ಟು ಚೆನ್ನಾಗಿ ಆಗಲಿಲ್ಲ, ಆದರೆ ಅವರೇ ಬೆಳೆ ಚೆನ್ನಾಗಿ ಆಯಿತೆನ್ನಬಹುದು ಸಬ್ ಡಿವಿಜನ್ ಆಫೀಸರರು ಜಮಾಬಂದಿಗೆ ಬಂದಿದ್ದ ವೇಳೆ ರಿಮಿಷನ್ ಮಾಡಬೇಕೆಂದು ಬಹು ಮಂದಿ ಹೇಳಿಕೊಂಡರು. ಅದು ಪ್ರಯೋಜನವಾಗಲಿಲ್ಲ. ದಿವಾನ್ ಸಾಹೇಬರು ಈ ತಿಂಗಳಲ್ಲಿ ಇಲ್ಲಿಗೆ ದಯಮಾಡುತ್ತಾರೆಂಬ ವರ್ತಮಾನವುಂಟು. ಅವರಾದರೂ ಕರುಣವಿಟ್ಟು ಸುತರಾಂ ಬೆಳೆಯಿಲ್ಲದ ಖಾತೇದಾರರಿಗೆ ಕಂದಾಯ ರಿಮಿಷನ್ ಮಾಡಿದರೆ ಉಪಕಾರವಾಗಿರುತ್ತೆ —ಎಕನಾಮಿಕ್ ಕಾನ್ಫರೆನ್ಸ್ ಸೆಕ್ರಿಟರಿಯವರೂ, ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರೂ ಇಲ್ಲಿಗೆ ಬಂದಿದ್ದು, ಅನೇಕರ ಕೋರಿಕೆಯಂತೆ ಜಾಸ್ತಿ ಸ್ಕೂಲುಗಳನ್ನು ಕೊಡುವುದಾಗಿ ಅಪ್ಪಣೆ ಮಾಡಿದರು.—ಈ ಮಾಲೂರಿಗೆ ಸಮೀಪದಲ್ಲಿ ತಂಗಡೀ ಚಕ್ಕೆ ಹೊಡೆಯುತ್ತಿದ್ದ ಬಹು ಸಣ್ಣ ವಯಸ್ಸಿನ ಒಬ್ಬ ಮಾದಿಗರವನು ಹಗಲು ಹೊತ್ತಿನಲ್ಲೇ ತನ್ನ ಹೆಂಡತಿಯನ್ನು ಮಚ್ಚಿನಿಂದ ಘೋರವಾಗಿ ಕತ್ತರಿಸಿ, ಅದೇ ಆಯುಧದಿಂದ ತನ್ನ ಕತ್ತನ್ನೂ ಕತ್ತರಿಸಿಕೊಂಡು ಮೃತನಾದನು. ತನ್ನ ಹೆಂಡತಿಯು ಬದ್ಧಚಾಲನ್ನು ಕಣ್ಣಿನಿಂದ ನೋಡಿ ಆ ರೀತಿ ಮಾಡಿದನೆಂದೂ, ಅವಿಧೇಯತ್ವವನ್ನು ತೋರಿಸಿ ಅಪಮಾನದ ಮಾತುಗಳನ್ನು ಹೆಂಡತಿ ಆಡಲು ಸಹಿಸಲಾರದೆ ಕಡಿದನೆಂದೂ ಅನ್ನುತ್ತಾರೆ. ಶವಗಳನ್ನು ದಫನ್ ಮಾಡಿದರು ಪೋಲೀಸು ಸೂಪರಿಂಟೆಂಡೆಂಟರು ಬಂದು ನಿಜಸ್ಥಿತಿಯನ್ನು ವಿಚಾರಿಸುತ್ತಿದ್ದಾರೆ.—ನಮ್ಮ ಅಮಲ್ದಾರ್ ಮ|| ಬಿ ಕೇಸರಸಿಂಗರು ರಿಟೈರಾಗುತ್ತಾರೆಂಬ ವದಂತಿಯು ದುಃಖಕರವಾಗಿರುತ್ತೆ. ಇವರು ಈ ತಾಲ್ಲೂಕಿಗೆ ಬಂದು ಜನಗಳಿಗೆ ಅನೇಕಾನೇಕ ಉಪಕಾರಗಳನ್ನು ಮಾಡಿದರು ಆಬಾಲವೃದ್ಧರೆಲ್ಲಾ ಇವರನ್ನು ಧರ್ಮರಾಯರೆಂದು ಕೊಂಡಾಡುತ್ತಾರೆ ಅನೇಕ ಕೆರೆಗಳನ್ನು ರಿಪೇರಿ ಮಾಡಿಸಿದರು, ಭಾವಿಗಳನ್ನು ತೆಗಸಿದರು, ಸೊಸೈಟಿಯನ್ನೇರ್ಪಡಿಸಿದರು, ಲಂಚ ರುಷವತ್ತುಗಳು ಇವರ ಹತ್ತಿರ ಬರುವುದಕ್ಕೇ ಇಲ್ಲ, 11 ಘಂಟೆಗೆ ತಪ್ಪದೆ ಕಛೇರಿಗೆ ಬರುತ್ತಿದ್ದರು, ನ್ಯಾಯಗಳನ್ನು ನಿಷ್ಪಕ್ಷಪಾತವಾಗಿ ವ್ಯವಸ್ಥೆ ಮಾಡುತ್ತಿದ್ದರು, ಇವರ ಫೈಸಲಿಗೆ ವಿರೋಧವಾಗಿ ಅಪೀಲಲ್ಲಿ ಇತ್ಯರ್ಥವಾದ ಕೇಸೇ ಇಲ್ಲ, ಯಾರ ವಿಷಯದಲ್ಲೂ ಎಂದೂ ಚಾಡಿ ಹೇಳದವರೇ ಅಲ್ಲ, ನಿಷ್ಕಲ್ಮಷ ಹೃದಯರು ಇವರಿಂದ ಈ ತಾಲ್ಲೂಕು ಪ್ರಜೆಗಳು ನಾನಾ ವಿಧದಲ್ಲಿ ಸುಖಪಟ್ಟರು ಇಂಥ ಮಹನೀಯರು ಈ ತಾಲ್ಲೂಕು ಬಿಟ್ಟು ಹೋಗುವರಲ್ಲಾ ಎಂದು ತಾಲ್ಲೂಕಿನವರೆಲ್ಲಾ ದುಃಖಪಡುತ್ತಿರುವರು.

ಮದ್ದಗಿರಿ —ಇಲ್ಲಿ ಆಗಲೇ ಕೆಲವು ಭಾವಿಗಳಲ್ಲಿ ನೀರು ಸಿಕ್ಕದೆ ಪ್ರಯಾಸವಾಗಿದೆ ಒಳ್ಳೇ ಬೇಸಗೆಯಲ್ಲಿ ಜನಗಳಿಗೂ ಜಾನ್ವಾರುಗಳಿಗೂ ತುಂಬಾ ತೊಂದರೆ ಉಂಟಾಗುತ್ತಲ್ಲಾ ಎಂದು ಈಗಿನಿಂದಲೇ ಕೆಲವು ವರ್ತಕರು ಜಾನ್ವಾರುಗಳ ನೀರಿಗೆ ಅನುಕೂಲಪಡಿಸಿರುತ್ತಾರೆ. ಇಂಥಾದ್ದರಲ್ಲಿ ನಾಳೆ 10 ನೇ ತಾ. ಲಾಗಾಯ್ತು ಇಲ್ಲಿ ಮಾರೀ ಜಾತ್ರೆ ಪ್ರಾರಂಭವಾಗುತ್ತೆ. ಇದು ವಿಶೇಷ ಜಾತ್ರೆಯಾದ್ದರಿಂದ 10 ದಿನಗಳವಟ್ಟಿಗೂ ಬಹು ಆಡಂಬರವಾಗಿ ನಡೆಯುತ್ತೆ ಪರಸ್ಥಳಗಳಿಂದ ಬರತಕ್ಕ ಜನಗಳ ಉಪಯೋಗಕ್ಕಾಗಿ 8 ನಲ್ಲಿಗಳನ್ನು ಇಡಬೇಕೆಂತಲೂ, ಹಿಂದಿನ ವರ್ಷ ಜಾನ್ವಾರುಗಳಿಗೆ ಬಹುಮಾನ ಕೊಟ್ಟಂತೆ ಈ ಸಲವೂ ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುವುದಕ್ಕಾಗಿಯೂ ಡೆಪ್ಯುಟಿ ಕಮಿಷನ್ ಸಾಹೇಬರನ್ನು ಬರಮಾಡಿಕೊಳ್ಳಬೇಕೆಂತಲೂ, ನಮ್ಮ ಅ|| ಕಮಿಷನರವರೂ, ಮುನ್ಸೀಫರವರೂ ಅಮಲ್ದಾರವರೂ, ಡಾಕ್ಟರವರೂ ಮತ್ತು ಪ್ಲೀಡರ್ ಶಿವರಾಮಯ್ಯನವರೂ, ಕಲ್ಯಾಣ ಸುಂದರಾಮಯ್ಯರ್‌ರವರೂ ಮಾರೀ ಗುಡಿ ಬಳಿಗೆ ದಯಮಾಡಿ ಜನಗಳ ಸೌಕರ್ಯಕ್ಕೆ ಅವಶ್ಯಕವಾದವುಗಳನ್ನು ಕುರಿತು ಯೋಚನೆ ಮಾಡಿದರು.—ಹಿಂದಿನ ವರ್ಷ ಮಧ್ವಗಿರಿ ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಪ್ಲೇಗ್ ರೋಗವು ಕಾಣಿಸಿಕೊಂಡಾಗ್ಗೆ ಡಾಕ್ಟರವರು ಪದೇಪದೇ ಹೋಗಿ ಅವರಿಗೆಲ್ಲಾ ಇನಾಕ್ಯುಲೇಷನ್ ಮಾಡಿಸಿಕೊಳ್ಳುವ ಹಾಗೆ ಬುದ್ಧಿ ಹೇಳಿ ಅನೇಕರಿಗೆ ತಾವೇ ನಿಂತು ಹಾಕಿ, ತಮ್ಮಿಂದಾದ ಮಟ್ಟಿಗೂ ಅದು ಇತರ ಕಡೆ ವ್ಯಾಪಿಸದಂತೆ ತಡೆದರು ಈ ಕೆಲಸಕ್ಕೆ ಸಹಾಯ ಮಾಡಿದ ಕೆಲವು ದೊಡ್ಡ ಮನುಷ್ಯರಿಗೆ ಮಾರಿ ಜಾತ್ರೆಯಲ್ಲಿ ಸರ್ಕಾರದವರು ಮೆಡ್ಲ್‌ಗಳನ್ನು ಕೊಡಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ —ಇದೇ ಮಾಹೆ 10 ಕ್ಕೆ ಕೋಆಪರೆಟಿವ್ ಸೊಸೈಟಿಯ ಇನ್ಸ್‌ಪೆಕ್ಟರವರು ಬಂದು ಸೊಸೈಟಿಯ ಮೊದಲನೇ ಕಾನ್ಫರೆನ್ಸನ್ನು ಪ್ರಾರಂಭಿಸಬೇಕೆಂದಿರುತ್ತಾರೆ. ಇದರ ಏರ್ಪಾಡನ್ನು ನಮ್ಮ ಅ|| ಕಮಿಷನರವರು ವಹಿಸಿ 80 ಮಂದಿ ಡೆಲಿಗೇಟ್ಸ್ ಮತ್ತು ಸೊಸೈಟಿಗಳ ರೆಜಿಸ್ಟ್ರಾರವರನ್ನೂ ಬರಮಾಡಿಕೊಂಡು ಅವರ ಸತ್ಕಾರಕ್ಕಾಗಿ ಸಾ|| ಸಂಜುಂಡಶೆಟ್ಟರ ಮತ್ತು ಕೆಂಪೀರವ ಛತ್ರಗಳಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ. ಪುರಾಭಿವೃದ್ಧಿಗಾಗಿ ನಮ್ಮ ಮೇಲ್ಕಂಡ ಆಫೀಸರವರು ಮಾಡುತ್ತಿರುವ ಕಾರ್ಯಗಳು ತುಂಬಾ ಸ್ತೋತ್ರಾರ್ಹವಾಗಿರುತ್ತವೆ. ಪರಸ್ಥಳಗಳಿಂದ ಅತಿಥಿಗಳ ಸೌಕರ್ಯಕ್ಕಾಗಿ ಮ|| ಗಳಾದ ಪ್ಲೀಡರ್ ಶಿವರಾಮಯ್ಯನವರು ಮತ್ತು ಶಾಮರಾಯ್ಸ್ತ್ರಿಗಳು ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ —ಜಾತ್ರೆಗೆ ಬರತಕ್ಕ ಜನಗಳಿಗೆ ಪ|| ರಾಮೇಗೌಡರು ಮಾತ್ರವಲ್ಲದೆ ಬಸಪ್ಪನವರ ಕುಮಾರರು ಪ|| ಕಪ್ಪಣ್ಣಗೌಡರು ಎಲ್ಲಾ ಕೋಮಿನವರಿಗೂ ತೃಪ್ತಿಯಾಗಿ ಅನ್ನೋದಕಗಳು ನಡೆಯುವಂತೆ ತುಂಬಾ ಸಾಹಸಮಾಡುತ್ತಾರೆ ಇಂಥಾ ಕಷ್ಟಕಾಲದಲ್ಲೂ ಇವರು ಜನಗಳ ಕ್ಷೇಮಚಿಂತನೆಗಾಗಿ ಪ್ರಯಾಸಪಡುತ್ತಿರುವುದನ್ನು ನೋಡಿ ತುಂಬಾ ಸಂತೋಷಪಡಬೇಕಾಗಿದೆ

ಶಿವಮೊಗ್ಗೆ.—ಇಲ್ಲಿ ತುಂಗಾನದಿಯ ಮೇಲೆ ಕಟ್ಟಲ್ಪಟ್ಟಿರುವ ಸೇತುವೆಯ ಮೇಲಣ ಗೋಡೆಯು ಟವನಿನಿಂದ ಹೋಗುತ್ತ ಬಲಭಾಗದಲ್ಲಿ ಸುಮಾರು ಎರಡು ಕಣ್ಣುಗಳ ಉದ್ದದ ವರಿಗೂ ಬಿದ್ದುಹೋಗಿ ಅಪಾಯಕರವಾಗಿದೆ ಅದರ ಮಗ್ಗುಲಲ್ಲಿ ಮಾಂಗನೀಸ್ ಕಂಪನಿಯ ರೈಲು ರಸ್ತೆಯು ಸೇತುವೆಯ ಮೇಲೆ ಹಾಕಲ್ಪಟ್ಟಿದೆ ಮತ್ತು ಜನಗಳೂ ದನಕರುಗಳೂ ತಿರುಗುವ ಸ್ಥಳವಾದ್ದರಿಂದ ಬೇಗ ಅದನ್ನು ದುರಸ್ತು ಮಾಡುವರೆಂದು ನಂಬಿದ್ದೇವೆ —ಇಲ್ಲಿನ ಕ್ಲಾರ್ಕ್ ಪೇಟೆಯಲ್ಲಿ ಕೆಲವು ದಿನಗಳಿಗೆ ಮುಂಚೆ ಮನೆಯ ಹತ್ತಿರ ಹಾಕಿಕೊಂಡಿದ್ದ ಸೋಗೆಗೆ ಹೇಗೋ ಬೆಂಕಿ ಬಿದ್ದು ಅದು ಸುತ್ತುಮುತ್ತು ವ್ಯಾಪಿಸಿಕೊಳ್ಳುವದಕ್ಕೆ ಮುಂಚೆ ಆರಿಸಲ್ಪಟ್ಟದ್ದರಿಂದ ಲೇಸಾಯಿತು —ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಗಳ ಸೂಪರೆಂಟರಾದ ಮಿಸ್ ಕಾರ್ಟಲೀ ಅಮ್ಮನವರು ಸೀಮೆಯಿಂದ ಕಳೆದ ಫೆಬ್ರವರಿ 24 ನೇ ತಾ ಈ ಸ್ಥಳವನ್ನು ಸೇರಿ ತಮ್ಮ ಕೆಲಸದ ಛಾರ್ಜನ್ನು ವಹಿಸಿದರು —ಹೊಳೆಹೊನ್ನೂರು ಪೋಸ್ಟ್ ಮಾಸ್ಟರು ಸರಕಾರದ ಹಣವನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಂಡರೆಂದು ಫಿರ್ಯಾದಾಗಿ ಅವರಿಗೆ ಎರಡು ತಿಂಗಳು ಸಜಾ ಆಯಿತು ಇವರು ಅಪೀಲ್ ಮಾಡಿಕೊಂಡಿರುವದಾಗಿ ತಿಳಿದುಬಂದಿದೆ —ನಮ್ಮ ಚೀಫ್ ಜಡ್ಜರಾದ ಮ|| ನಂಜುಂಡಯ್ಯನವರು ಇಲ್ಲಿಗೆ ದಯಮಾಡಿಸಿ ಕೋರ್ಟುಗಳನ್ನು ಪರಾಂಬರಿಸಿ ಅನಂತರ ಸಾಗರಕ್ಕೆ ಹೋಗಿ ವಾಪಸ್ ಹೋಗುವಾಗ್ಗೆ ಕಳೆದ ಫೆಬ್ರವರಿ 25 ನೇ ತಾ ಸಾಯಂಕಾಲ ರೈಲ್ವೆ ಸ್ಟೇಷನ್‌ನಲ್ಲಿ ಇಲ್ಲಿನ ದೊಡ್ಡಮನುಷ್ಯರು ಅವರನ್ನು ಕಂಡು ಹಾರ ತುರಾಯಿ ಮುಂತಾದ ಸತ್ಕಾರದೊಡನೆ ಸಾಗಕಳುಹಿಸಿದರು —ಕ್ಲಾರ್ಕ್ ಪೇಟೆಯ ಮುಸಲ್‌ಮಾನರೇ ಮುಂತಾದವರು ಹೊಸದಾಗಿ ಒಂದು ಗರಡಿಯನ್ನು ಕಟ್ಟಿಸಿಕೊಂಡು ಅದಕ್ಕೆ ಬೇಕಾದ ಮಟ್ಟ ಕೆಮ್ಮಣ್ಣನ್ನು ತಂದು ಕಳೆದ 22 ರಲ್ಲಿ ಬಾಜಾ ಬಜಂತ್ರಿ ಮುಂತಾದ ವಾದ್ಯಘೋಷದೊಡನೆ ಮೆರವಣಿಗೆ ಮಾಡಿದರು ಪಾಂಡುರಂಗೇಯವರ ಹೋಳಿಯಲ್ಲಿ ಕಾಮನನ್ನು ಕೂಡಿಸುವ ಜಾಗದಲ್ಲಿ ಕೆಲವರು ಪುಂಡು ಹುಡುಗರು ಸೇರಿ ಬಂಡು ಪದಗಳನ್ನು ಹೇಳುತ್ತ ದುಶ್ಚೇಷ್ಟೆಗಳನ್ನು ಮಾಡುತ್ತಲಿದ್ದ ಹಾಗೂ, ಅನೇಕ ಜನಗಳು ಅವರನ್ನು ನೋಡಿ ಅಸಹ್ಯಪಟ್ಟುಕೊಂಡ ಹಾಗೂ ತಿಳಿದುಬಂದಿದೆ —ಮ|| ಸಿಸಿ ಆನಂದರಾಯರು ಶಿವಮೊಗ್ಗೆ, ಕಡೂರು, ಹಾಸನ, ಈ ಮೂರು ಡಿಸ್ಟ್ರಿಕ್ಟುಗಳಲ್ಲಿ ಮಲ್ನಾಡು ಪ್ರಾಂತ್ಯದಲ್ಲಿ ವಾಸಮಾಡುವ ಜನಗಳ ಯೋಗಕ್ಷೇಮವನ್ನು ವಿಚಾರಿಸುವದಕ್ಕೆ ನೇಮಕವಾಗಿ ಬಂದಿದ್ದಾರೆಂದು ತಿಳಿಯಬಂದಿದೆ —ಕಳೆದ ತಿಂಗಳು 27 ನೇ ತಾ. ಇಲ್ಲಿನ ಟವನ್ ಹಾಲ್ ಪಕ್ಕದಲ್ಲಿರುವ ಟೆನ್ನಿಸ್ ಕೋರ್ಟನಲ್ಲಿ ಒಂದು ಪಂದ್ಯ ನಡೆದು ಅದರಲ್ಲಿ ನಮ್ಮ ಡೆಪ್ಯುಟಿ ಕಮಿಷನರ್ ಮಿ|| ಮತ್ತಾನ್ ಸಾಹೇಬರವರೂ, ಹೈಸ್ಕೂಲ್ ಹೆಡ್ ಮಾಸ್ಟರ್ ಮ|| ವಾಸುದೇವರಾಯರೂ ಗೆದ್ದದ್ದರಿಂದ ಒಂದು ಸಭೆ ಮಾಡಿ ಅದರಲ್ಲಿ ಟೀ ಪಾರ್ಟಿ, ಸಂಗೀತ ಮುಂತಾದ ಸಂತೋಷಗಳನ್ನು ಜರುಗಿಸಿ ಮಿಸೆಸ್ ನೈಟಿಂಗೇಲ್ ರವರ ಮೂಲಕ ಗೆದ್ದ ಆ ಇಬ್ಬರು ದೊಡ್ಡ ಮನುಷ್ಯರಿಗೆ ಬೆಳ್ಳಿಬಟ್ಟಲುಗಳನ್ನು ಬಹುಮಾನವಾಗಿ ಕೊಡಿಸೋಣಾಯಿತು

“ದೇವರಿಗೆ ಸ್ತೋತ್ರ ಸಲ್ಲಿಸುವದಕ್ಕೆ ಕಾರಣವಿಲ್ಲವೋ ? ಇಲ್ಲವೆಂತ ನೀನು ಭಾವಿಸಿದರೆ, ನಿನ್ನ ಮನೋನೇತ್ರಗಳ ಪಾಟವವು ಮೊಬ್ಬಾಗಿ, ಆತನ ಕೃಪಾ ಬಾಹುಳ್ಯವೆಂಬ ಭಂಡಾರದಿಂದ ನಿನಗೆ ತಂದೊದಗಿಸುತ್ತಲಿರುವ ಉಪಕಾರ ಪರಂಪರೆಗಳನ್ನು ಗ್ರಹಿಸಬಾರದೆಂದು ಸಂಕಲ್ಪಮಾಡಿದ್ದೀ ದೇವರ ಪ್ರೀತಿಯೆಂಬ ಸಾಗರದ ತರಂಗಗಳು ಪರಮಾನಂದವನ್ನೂ ಅಸಂಖ್ಯಾತಗಳಾಗಿ ಕರ್ಣಾನಂದವನ್ನೂ ಉಂಟುಮಾಡುವ ಮೃದುಮಧುರ ಗಾನದಂತೆ ನಿನ್ನ ಕಿವಿಯ ಮೇಲೆ ಬಂದು ಬಡಿಯುತ್ತಲಿದ್ದರೂ ಆದರ ಇಂಪನ್ನೊಲ್ಲದ ಕಿವಿಗಳಿಗೆ ಅದು ಕಠೋರವಾಗಿದೆ ನಿನ್ನ ಬಾಳು ಕೃತಜ್ಞತೆಯೆಂಬ ಲತೆಯಂತೆ ಬೆಳೆಯದ ಕಾಟು ಬಿದ್ದಿದೆ ನೀನು ದೇವರ ಆಶೀರ್ವಾದಗಳನ್ನು ತುಂಬಿತುಂಬಿ ಬರ್ತಿಯಾಗದ ಚೀಲ ನೀನು ದುರಾಶಾಪಾಶಕ್ಕೆ ಸಿಕ್ಕಿ ಹೊರಳಾಡುವ ನರಹುಳ. ಏಳು, ಏಳು ! ಈ ಬಲೆಯಿಂದ ಬಿಡಿಸಿಕೋ ನಿನ್ನ ಸ್ವರವನ್ನೆತ್ತಿ ದೇವರನ್ನು ಸ್ತುತಿಸು” ಎಂದು ಒಬ್ಬನು ತನ್ನ ಮನಕ್ಕೆ ಹೇಳಿಕೊಳ್ಳುತ್ತಾನೆ

ವಿಶೇಷವಾದ ಉಪಕಾರ, ದಾನ, ವರಗಳನ್ನು ಹೊಂದುವದರಿಂದ ಕೃತಜ್ಞತೆಯು ಹೃದಯದಲ್ಲಿ ಅಂಕುರಿಸುವದು ಎಂದು ಅನೇಕರು ಸಾಮಾನ್ಯವಾಗಿ ಅಭಿಪ್ರಾಯಪಡುತ್ತಾರೆ ಉಪಕಾರ, ದಾನ, ವರಗಳು ಕೃತಜ್ಞತೆಯುಳ್ಳ ಹೃದಯವನ್ನು ವಿಕಸಿತವಮಾಡುವವು ಇದಕ್ಕೆ ಸಂದೇಹವಿಲ್ಲ ಆದರೆ ಈ ವರಗಳೇ ಹೃದಯದಲ್ಲಿ ಕೃತಜ್ಞತೆಯನ್ನು ಹುಟ್ಟಿಸುವ ಮೂಲಕಾರಣಗಳಲ್ಲ ಮನಸ್ಸು ಉಪಕಾರಸ್ಮರಣೆಯುಳ್ಳದ್ದಾಗಿದ್ದರೆ, ದಾರಿದ್ರ್ಯವಾಗಲಿ ಐಶ್ವರ್ಯವಾಗಲಿ, ಕೊರತೆಯಾಗಲಿ, ಪುಷ್ಟಿಯಾಗಲಿ ಗೆಲುವಾಗಲಿ ಸೋಲಾಗಲಿ, ದುಃಖವಾಗಲಿ ಸಂತೋಷವಾಗಲಿ ಯಾವದೇ ಸಂಭವಿಸಿದರೂ ಉಪಕಾರಸ್ಮರಣೆಯುಳ್ಳ ಹೃದಯದಿಂದ ಕೃತಜ್ಞತೆಯೇ ಹೊರಹೊರಡುವದು ಹೃದಯದಲ್ಲಿ ತುಂಬಿರುವದೇ ಬಾಯಿಯಲ್ಲಿ ಹೊರಡುವದು ಒಳ್ಳೆಯವನು ತನ್ನ ಹೃದಯವೆಂಬ ಒಳ್ಳೇ ಬೊಕ್ಕಸದಿಂದ ಒಳ್ಳೇದನ್ನೇ ಹೊರಗೆ ತರುತ್ತಾನೆ ಕೆಟ್ಟವನು ಕೆಟ್ಟ ಬೊಕ್ಕಸದಿಂದ ಕೆಟ್ಟದ್ದನ್ನು ಹೊರಗೆ ತರುತ್ತಾನೆ

ಇದಲ್ಲದೆ ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲಿಸುತ್ತವೆ ನಮ್ಮ ಜೀವಮಾನದಲ್ಲಿ ನಮಗೆ ಸಂಭವಿಸುವ ಸುಖ ಸಂತೋಷ ಆದಾಯಗಳು ಮಾತ್ರವೇ ಅಲ್ಲ ಕಷ್ಟ, ದುಃಖ, ರೋಗ, ಬಡತನಗಳು ಸಹ ದೇವರ ಕೃಪೆ, ಪ್ರೀತಿಯಿಂದ ನಮ್ಮ ಪ್ರಯೋಜನಕ್ಕಾಗಿಯೇ ನಮಗೆ ದೊರಕಿದವೆಂದು ವಿಚಾರಪರರು ಗ್ರಹಿಸದಿರಲಾರರು ಹಿಂದೆ ನಮಗೆ ಸಂಭವಿಸಿದವುಗಳು ಮಹಾ ವಿಪತ್ತುಗಳೆಂದು ನಾನು ಭಾವಿಸಿದೆವು ಆಗ ದುಃಖವೆಂಬ ಕಾರ್ಗತ್ತಲು ನಮ್ಮ ಮನಸ್ಸನ್ನು ಕವಿದಿತ್ತು ಆದರೆ ಈಗ ಉದಯವಾಗಿರುವ ಬೆಳಕಿನ ಸಹಾಯದಿಂದ ಹಿಂದೆ ಸಂಭವಿಸಿದ್ದನ್ನು ಪರೀಕ್ಷಿಸಿ ನೋಡಿದರೆ ಅದರಿಂದಲೇ ನಮಗೆ ಮೇಲು ಉಂಟಾಗಿದೆ ಮುಂದೆ ಹಾಗೆಯೇ ಆತನು ನಮಗೆ ನಡಿಸಿಕೊಡುವನೆಂದು ನಿರೀಕ್ಷಿಸಲಾಗದೇ ?

ತಪ್ಪಿಸಿಕೊಳ್ಳಲಿಕ್ಕಾಗದ ರೀತಿಯಲ್ಲಿ ಸಂಭವಿಸಿ ನಿರ್ವಹಿಸಲಿಕ್ಕಾಗದ ಕಷ್ಟನಷ್ಟಗಳನ್ನು ತಾಳ್ಮೆಯಿಂದ ಸಹಿಸುವದಕ್ಕೆ ಒಪ್ಪುವದು ಕೃತಜ್ಞತೆಯಲ್ಲ ಜೀವಮಾನದಲ್ಲಿ ಸಂಭವಿಸುವ ವಿದ್ಯಮಾನಗಳಲ್ಲಿ ಶಾಂತಿಯಿಂದ ನಿಶ್ಚಿಂತನಾಗಿರುವದೂ ಕೃತಜ್ಞತೆಯಲ್ಲ ನಮ್ಮ ಅಂತರ್ಯದೊಳಗೆ ನೀತಿಸೂರ್ಯನಿಂದ ದೇವರ ಪ್ರೀತಿಯು ತುಂಬಿ ಪ್ರವಾಹವಾಗಿ ಹರಿಯುವದು ದೇವರು ಸಕಲವನ್ನು ತನ್ನ ಕೈಯಲ್ಲಿಟ್ಟುಕೊಂಡು ಆಳುತ್ತಿದ್ದಾನೆಂಬ ಭಾವದಿಂದ ಪರಿಪೂರ್ಣವಾದ ಹೃದಯದಲ್ಲಿ ಸ್ವಾಭಾವಿಕವಾಗಿ ಜನಿಸುವ ಫಲ, ಇದು ಕೃತಜ್ಞತೆ ಇಂತಹ ಕೃತಜ್ಞತೆಯನ್ನು ಪ್ರತಿ ದಿನವೂ ಆಯಾ ದಿನದ ಕರ್ತವ್ಯಗಳನ್ನು ಮಾಡುವದರಿಂದ ಬಲಪಡಿಸಬೇಕು ಇಂತಹ ಕೃತಜ್ಞತಾಭಾವದಿಂದಲೇ ಬಾಳುವದು ನಿಜಭಕ್ತನ ಸೌಂದರ್ಯವಾಗಿದೆ ದೇವರಿಗೆ ನಮ್ಮ ಕೃತಜ್ಞತೆಯಿಲ್ಲದೆ ಕೊರತೆಯಾಗಿದೆ ಎಂದಾದರೂ, ಆತನು ನಮ್ಮ ಕೃತಜ್ಞತೆಯನ್ನು ಆಶೆಯಿಂದ ಎದುರುನೋಡುತ್ತಲಿದ್ದಾನೆಂದಾದರೂ ಭಾವಿಸಲಾಗದು. ಕೃತಜ್ಞತೆಯುಳ್ಳ ಹೃದಯವು ನಮಗೆ ಬೇಕಾಗಿದೆ ಅದಿಲ್ಲದೆ ನಮ್ಮ ಗುಣವಾದರೂ ನಡತೆಯಾದರೂ ಪರಿಪಕ್ವವಾಗಲಾರದು

ಉಪಕಾರಸ್ಮರಣೆಯು ಅಧರ್ಮ, ಅಕ್ರಮ, ಪಾಪಗಳನ್ನು ತ್ಯಜಿಸಿ ಪವಿತ್ರರಾಗಿ ಬಾಳುವದಕ್ಕೆ ನಮಗೆ ತಕ್ಕ ಸಾಮರ್ಥ್ಯವನ್ನು ನೀಡುವದು ಕ್ರಿಸ್ತಭಕ್ತನು ಕ್ರಿಸ್ತನು ದೇವರಿಗೆ ಎಂತಹ ಸೇವೆಯನ್ನು ಸಮರ್ಪಿಸಿದನೋ ಅದಕ್ಕೆ ಸಮಾನವಾದ ಸೇವೆಯನ್ನು ಸಮರ್ಪಿಸುವದಕ್ಕೆ ಬದ್ಧನಾಗಿದ್ದಾನೆ ದೇವರ ಉಪಕಾರಗಳ ಸ್ಮರಣೆಯಿಂದಲೇ ಇಂತಹ ಸೇವೆಯನ್ನು ಮಾಡುವ ಆಶೆಯು ನಮ್ಮಲ್ಲಿ ಹುಟ್ಟುವದು ಇಂತಹ ಉಪಕಾರಸ್ಮರಣೆಯು ಹೇಗೆ ಪ್ರಕಟವಾಗುವದು ? ದೇವರನ್ನು ನಂಬಿ, ಯಥಾರ್ಥವಾದ ನಡತೆಯಿಂದ ಅಸ್ವಾರ್ಥಪರನಾಗಿ ಎಂದೆಂದಿಗೂ ಗುಣಗುಟ್ಟದೆ ಇರುವದರಿಂದಲೂ ಮತ್ತು ಮನುಷ್ಯರ ಕಡೆಗೆ ಪ್ರೀತಿಯೂ ಕರುಣೆಯೂ ಉಳ್ಳವನಾಗಿ ನಮಗೆ ಅವರು ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೇವೋ ಅದನ್ನೇ ಅವರಿಗೆ ಮಾಡುತ್ತ ಇರುವದರಿಂದಲೂ, ಇದನ್ನು ನಾವು ಮಾಡುವದಕ್ಕೆ ತಕ್ಕ ಶಕ್ತಿಯು ನಮ್ಮಲ್ಲಿಲ್ಲವೆಂದು ತಿಳಿದು— ಜೀವವನ್ನು ನಮಗೆ ದಯಪಾಲಿಸಿದ ಕರ್ತನೇ, ಕೃತಜ್ಞತೆಯಿಂದ ಪೂರಿತವಾದ ಹೃದಯವನ್ನು ನನಗೆ ಕರುಣಿಸು ಎಂದು ಬೇಡುವದರಿಂದಲೂ ಪ್ರಕಟವಾಗುತ್ತದೆ

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

∴

ರಾಜಧಾನಿಯಲ್ಲಿ ಸದ್ಯ ಬಿಸಿಲ ಬೇಗೆಯನ್ನು ತಡೆಯುವುದು ಬಹಳ ಕಷ್ಟವಾಗುತ್ತದೆ ಪ್ರತಿ ಅಭ್ಯಾಗ್ನಿ ಚೆನ್ನಾಗಿರುತ್ತದು ಬೇಗನೆ ಮಳೆ ಬರುವ ಸೂಚನೆಗಳು ಈಗೀಗ ಒಂದೆರಡು ದಿನಗಳಿಂದ ಕಾಣಬರುತ್ತಿವೆ

∴

ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲ್‌ರಾದ ಮಿ॥ ಓಯಿಟ್ಟರವರೂ, ರೆವಿನ್ಯೂ ಚೀಫ್ ಇಂಜನಿಯರಾದ ಮಿ ವೆಲ್ ರವರೂ ಏಪ್ರಿಲ್ ತಿಂಗಳ ಮೂರನೇ ವಾರದಲ್ಲಿ ರಜಾ ಪಡೆದು ಸೀಮೆಗೆ ತೆರಳುವವರಾಗಿದಾರೆ

∴

ಪರಿಕಥೆ ಮಾಡುವುದರಲ್ಲಿ ಗಟ್ಟಿಗಳೆನಿಸಿಕೊಂಡಿರುವ [illegible] ಪದ್ಮನಾಭಯ್ಯ ಎಂಬ ಹೆಣ್ಣುಮಗಳಿಗೆ ಕಳೆದ ವಾರ ಬೆಂಗಳೂರು ಪಟ್ಟಣದ ಪ್ರಜೆಗಳು ದೊಡ್ಡಣ್ಣನವರ ಧರ್ಮಕಟ್ಟೆಯಲ್ಲಿ ಒಂದು ಸಭೆಯನ್ನು ನಡಿಸಿ ಒಂದು ಬಂಗಾರದ ಮೆಡಲನ್ನು ಬಹುಮಾನ ಮಾಡಿದರು

∴

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಡಾಕ್ಟರ್ ಪಿ ಎಸ್ ರಾಮಚಂದ್ರ ಅಯ್ಯರವರನ್ನು ಪಾಶ್ಚಿಮ ಪಟ್ಟಣದಲ್ಲಿ ಮಲೇರಿಯ (ವಿಷಮಶೀತ) ಜ್ವರದ ಪ್ರಶ್ನೋತ್ತರಗಳನ್ನು ಚೆನ್ನಾಗಿ ಅರಿದುಕೊಂಡು ಬರುವುದಕ್ಕಾಗಿ ಸರ್ಕಾರದವರು ಅಲ್ಲಿಗೆ ಕಳುಹಿಸಿಕೊಡುವದಕ್ಕೆ ಗೊತ್ತುಮಾಡಿದರು

∴

ಅರಮನೆಯಲ್ಲಿ ಮಹಾಸಾಧ್ವಿ ಶ್ರೀ ಯುವರಾಣಿ ವಾಣೀವಿಲಾಸ [illegible] ಗಿರುವ ಹಣಿ ಮಹಾರಾಜರವರು ಈಗಿನಿಗೆ [illegible] ಸನ್ನಿಧಿಯಲ್ಲಿ ಯುಗಾದಿ ಹಬ್ಬವನ್ನು ರಾಜಧಾನಿಯಲ್ಲೇ ನಡೆಸುವ ದು ಜರುಗಿಸುವರೆಂದು ವರ್ತಮಾನವಿದೆ

∴

ಬೆಂಗಳೂರಿನಲ್ಲಿ ಬಾಬರ್ ಬೇಗ್ ಎಂಬುವನು ಮೈಸೂರು ಬ್ಯಾಂಕಿಗೆ 500 ರೂಪಾಯಿಗೆ ಮೋಸಮಾಡಿದನೆ ಎಂಬುದು ನಿಜವಲ್ಲವೆಂಬದಾಗಿ ಆ ಬ್ಯಾಂಕಿನ ಮ್ಯಾನೇಜರವರು ನಮಗೆ ಬರೆದಿರುತ್ತಾರೆ ಅವನು ಮೋಸಮಾಡಿದ ವ್ಯವಹಾರವು [illegible] ಬೆಂಗಳೂರು ದಂಡಿನಲ್ಲಿರುವ ಬ್ಯಾಂಕಿಗೆಂದೂ ಗೊತ್ತಾಗುತ್ತದೆ

∴

ಮೈಸೂರು ತಾಲ್ಲೂಕಿಗೆ ಸೇರಿದ ಸೆಟ್ಟಿನಾಯಕನ ಹಳ್ಳಿಯಲ್ಲಿ ಒಬ್ಬ [illegible] ಬಿವನು ಕಳೆದ 12 ನೇ [illegible] ಮರದಿಂದ ಬಿದ್ದು ಸತ್ತುಹೋದನು [illegible] ಅವನ ದೇಹವನ್ನು ಒಂದು ತೆಂಗಿನ ಮರದ ಕೆಳಗೆ ಹಾಕಿದ್ದರು [illegible] ಕಾರಣವನ್ನು ಕಳೆದ [illegible] ಮಹಾರುದ್ರನ ಮರಣೋತ್ತರ ಪರೀಕ್ಷೆ ಮಾಡಿಸಿದರು

∴

ರಾಜಧಾನಿಯ [illegible] ಉಗ್ರಾಣದಲ್ಲಿರುವ ಸರ್ವೆಂಟ್ ಕೋರ್ಟರ್ ನಲ್ಲಿರುವ ದಾರ್ ಮದ ಕಟವಾಲರ ಪತ್ನಿಯು ಕಳೆದ ವಾರ [illegible] ಸ್ಟವನ್ನು ಹಚ್ಚುವಾಗ ಬಟ್ಟೆಗೆ ಹತ್ತಿಕೊಂಡು [illegible] ಕೊಂಡು ತನ್ನ ಮೈಯನ್ನು ಸುಟ್ಟುಕೊಂಡದ್ದರಿಂದ ತುಂಬಾ ಗಾಯಗಳಾದವು ಆಕೆಯನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗದೆ ಕಳೆದ ಸೋಮವಾರ ಕಾಲವಾದಳು

∴

ಈ ಸಲ ಬೆಂಗಳೂರಿನಲ್ಲಿ ನಡೆದ ಪಿಂಜ್ರಾಪೋಲಿನವಾದ ಪ್ರದರ್ಶನೋತ್ಸವದಲ್ಲಿ ಉತ್ತಮ ವಸ್ತುಗಳನ್ನು ತಂದಿಟ್ಟು ತೋರಿಸಿದವರಿಗೆ ಮೊನ್ನೆ ಸೋಮವಾರ ಸಾಯಂಕಾಲ ಕೌನ್ಸಿಲರ್ ಮ॥ ಎಚ್ ವಿ ನಂಜುಂಡಯ್ಯನವರು ಅಲ್ಲಿನ ಗವರ್ನಮೆಂಟ್ ಹೈಸ್ಕೂಲ್ ಮಂದಿರದಲ್ಲಿ ಸಭೆಯ ಅಗ್ರಾಸನವನ್ನು ವಹಿಸಿ ಮೆಡಲ್, ಸರ್ಟಿಫಿಕೇಟ್, ಬಹುಮಾನಗಳನ್ನು ಹಂಚಿಕೊಟ್ಟು ಪ್ರೋತ್ಸಾಹಪಡಿಸಿದರೆಂದು ತಿಳಿಸಲು ಸಂತೋಷವಾಗುತ್ತದೆ

∴

ದಿವಾನ್ ಸರ್ ಎಂ ವಿಶ್ವೇಶ್ವರಯ್ಯನವರು ಮಿತಪರಿವಾರ ಸಮೇತ ಮೊನ್ನೆ ಸೋಮವಾರ ಸಾಯಂಕಾಲ ಬೆಂಗಳೂರಿನಿಂದ ಕೋಲಾರಕ್ಕೆ ದಯಮಾಡಿದರು ಮೊನ್ನೆ ನೆನ್ನೆ ಅವರು ಕೋಲಾರ ಮುಳಬಾಗಲುಗಳ ಸರ್ಕೀಟನ್ನು ಮುಗಿಸಿಕೊಂಡು ಬಂದು ಈ ದಿನ ಕೋಲಾರದ ಕೆಲವು ಗ್ರಾಮಗಳನ್ನು ಪರಾಂಬರಿಸಿ, ನಾಳೆ ಬೌರಿಂಗ್‌ಪೇಟೆಗೆ ಹೋಗಿಬಂದು, ನಾಡಿದ್ದು ಮಾಲೂರಿಗೆ ದಯಮಾಡಿ ಅಲ್ಲಿಂದ ನೆಟ್ಟಗೆ ಬೆಂಗಳೂರಿಗೆ ವಾಪಸು ಬರುವವರಾಗಿದಾರೆ

∴

ಬೆಂಗಳೂರು ಸಿಟಿಯಲ್ಲಿ ಭಾರಿ ವರ್ತಕರಾಗಿದ್ದ ಮ॥ ಬಿ ಕೆ ಮರಿಯಪ್ಪನವರು ಕಳೆದ ಶನಿವಾರ ಕಾಲವಾದರು ಇವರು ತಮ್ಮ ಆಸ್ತಿಯಲ್ಲಿ ಒಂದೂವರೆ ಲಕ್ಷ ರೂಪಾಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದೂ, ಈ ಫಂಡಿನ ಮೇಲ್ವಿಚಾರಣೆಯನ್ನು ಕೌನ್ಸಿಲರ್ ಮ॥ ಎಚ್ ವಿ ನಂಜುಂಡಯ್ಯನವರೂ ಮ॥ ಎಚ್ ರಾಮಯ್ಯನವರೂ ಇನ್ನು ನಾಲ್ವರೂ ಸೇರಿ ನೋಡಿಕೊಳ್ಳತಕ್ಕದ್ದೆಂದೂ ಗೊತ್ತುಮಾಡಿರುವಂತೆ ಪ್ರಕಟವಾಗಿದೆ ಮ॥ ಮರಿಯಪ್ಪನವರ ಧರ್ಮಬುದ್ಧಿಯು ಕೀರ್ತಿಪ್ರದವಾಯಿತೆಂದು ಸಂತೋಷಪಡುತ್ತೇವೆ

∴

ಬೀರೂರು ಮ॥ ಎಚ್ ಎಂ ಶಿವಲಿಂಗಪ್ಪಯ್ಯನವರು ಬರೆಯುವುದು— ಏಪ್ರಿಲ್ ತಿಂಗಳಲ್ಲಿ ನಡೆಯುವ ಬೋರ್ಡ್ ಸೆಕೆಂಡರಿ ಪರೀಕ್ಷೆಗೋಸ್ಕರ ಕಡೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ, ಅ॥ ಮಾಸ್ಟರುಗಳಿಗೂ ಉಚಿತವಾಗಿ ಭೋಜನ ಆಲ್ಪಾಹಾರಗಳನ್ನು ನಡಿಸಲು ಕಡೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಹಿಂಭಾಗದ ಹಾಲಿನಲ್ಲಿ ತಕ್ಕ ಏರ್ಪಾಟು ಮಾಡಿರುತ್ತೆ ಬರತಕ್ಕವರು ತಮ್ಮ ಹಾಸಿಗೆ ಮಡಿ ವಸ್ತ್ರಗಳ ವಿನಾ ಮತ್ತೇನೂ ತರಬೇಕಾದದ್ದಿಲ್ಲ

[illegible] ವಿದ್ಯಾರ್ಥಿಗಳು ಪರೀಕ್ಷೆಗೆ ಒಂದು ವಾರ ಮುಂಚೆ ತಿಳಿಸಬೇಕಾಗಿ [illegible]

* * *

[illegible]ಕಣ್ವಾಡಿ ತಲಾನಿನ ಎರಡನೇ ಭಾಗದ ಕಾಮಗಾರಿಯನು ಪಂಚಾಯತ [illegible]ದಾರರು ಒಪ್ಪಿಕೊಂಡು, [illegible] ತಾರೀಖಿನಿಂದ [illegible] ಕಾಲುವೆ ಪ್ರವಾಹದ ನೀರು ಹರಿಯುವಂತೆ ಬಿಟ್ಟು ಕೊಡಬೇಕೆಂದೂ, ಇದ [illegible] ಕಟ್ಟೆಯನ್ನು 126 ಅಡಿ ವರೆಗೆ ಏರಿಸಿ ಕಟ್ಟ ಕೊಳ್ಳಬಹುದೆಂದೂ, ಆದ [illegible] ಅಷ್ಟು ನೀರು ಹರಿಯುವುದನ್ನು ತಡೆದಿಡ್ಡು ನೋಡಿಕೊಳ್ಳತಕ್ಕಂಥಾ [illegible]ಗಳನ್ನು ಅಲ್ಲಿ ನೇಮಕ ಮಾಡಿದ್ದಾಗಿಯೂ ಇತ್ಯರ್ಥ ಮಾಡಿರುವ [illegible] ಕೇಳು[illegible] ಇದರ ಮೇಲೆ ನಮ್ಮ ದಿವಾನರವರು ಅಪೀಲ್ ಮಾಡಬೇಕೆಂದು [illegible]ಯತ್ನ ನಡೆಸುತ್ತಿರುವುದಾಗಿ ವರ್ತಮಾನವಿದೆ

* * *

[illegible]ರಮನೆ ಕಂಪನಿಯವರು ಈಗ ಬೆಂಗಳೂರಿನಲ್ಲಿ ನಾಟಕಗಳನ್ನು ಆಡು[illegible]ದ್ದಾರೆ ಈ ಕಂಪನಿಯಲ್ಲಿ [illegible] ರಾಯರು ಕಳೆದ ವಾರ [illegible] ನಾಟಕದಿಂದ ಬಹು ತಿಳಿಯುತ್ತದೆ ಇವರು ಪ್ರಾರಂಭದಿಂದಲೂ [illegible]ಯಲ್ಲಿ ಮೊದಲಾಗಿದ್ದು ತುಂಬಾ ಗೌರವವನ್ನು ಪಡೆದಿದ್ದರಲ್ಲದೆ ಕೆಲವು [illegible] ನಾಟಕಗಳನ್ನು ಬರೆದು ಇರುತ್ತಾರೆ ಇವರ ಕುಶಲ [illegible] ಮೆಚ್ಚಿ [illegible]ರಾಜರವರು ಅವರಿಗೆ ಬಹುಮಾನವನ್ನೂ ದಯಪಾಲಿಸಿದರು ಇಂಥವರು [illegible]ಗಾಗಿ ಅತ್ಯವಶ್ಯ ನಾಟಕ[illegible] ಕಾರಣ ಗೊತ್ತಾಗುವುದಿಲ್ಲ [illegible] ಇವರನ್ನು ಬಲ್ಲವರೆಲ್ಲಾ ಆಶ್ಚರ್ಯಪಡುತ್ತಿದ್ದಾರೆ

* * *

ಮೈಸೂರು [illegible] ಕವಿನಾಷನರವರು ಕಳೆದ ವಾರ ತಮ್ಮ ಮೋಟಾರಿನಲ್ಲಿ [illegible] ಮಾರ್ಗವಾಗಿ [illegible] ಬರುತ್ತಿರುವಾಗ್ಗೆ ಉದಯೂರು ಗ್ರಾಮದ [illegible] ಅದೆ [illegible] ಮುಂದೆ [illegible] ಬರುತ್ತಿತ್ತು ಅದಲ್ಲಿ 1 [illegible] ಮೋಟಾರ್ [illegible] ಗಾಡಿಯನ್ನು [illegible] ಗಾಡಿಯನು ಪಕ್ಕದ [illegible] ಒಂದು [illegible] ಹಿಂಗಿದ್ದವರೆಲ್ಲಾ [illegible] ಅಬ್ದುಲ್ [illegible] ಎಂಬ [illegible] ಮುಖಕ್ಕೆ [illegible] ಆಗಿ ಆತನನ್ನು [illegible] ಆಸ್ಪತ್ರೆಗೆ [illegible] ಕಳುಹಿಸಲ್ಪಟ್ಟಿದ್ದಾನೆ

* * *

ಮೈಸೂರು [illegible] ಆಫೀಸರಾದ [illegible] ರಾಯರು [illegible] ನಾಟಕ[illegible] ಹೋಗಿ [illegible] ಅವರು [illegible] ನಾಟಕ [illegible] ಬಹಳ [illegible] ಕಂಪನಿಯ [illegible] ಪ್ರಥಮಪ್ರಶಸ್ತಿ [illegible] ಕೃಷ್ಣರಾಯ [illegible] ಕಳೆದ [illegible] ಒಪ್ಪಂದ [illegible] ಮೊಕದ್ದಮೆ [illegible] ಕೃಷ್ಣಯ್ಯನವರು [illegible] ಶ್ರೀಕಂಠಯ್ಯನವರು, ಜಹಗೀರ್ದಾರ್ [illegible] ಸುಂದರ [illegible] ಮೊದಲಾ[illegible] ಸಾಕ್ಷಿಗಳ ಕೈಫಿಯತ್ತು ನಡೆಯಿತು ವಿಚಾರಣೆ ಇನ್ನೂ ಜರುಗುತ್ತಾ ಇದೆ

* * *

ಚಳ್ಳಕೆರೆ ತಾಲ್ಲೂಕು ದೊಡ್ಡೇರಿಯಲ್ಲಿ ಕಾಮನ ಹಬ್ಬವನ್ನು ವಿಶೇಷ [illegible] ನಡೆದ [illegible] ಪ್ರಕಟಿಸಬೇಕೆಂದೂ ಒಬ್ಬ ಬಾತ್ಮೀ[illegible] ಬರೆಯುತ್ತಾರೆ [illegible] ಆಲ್ಲಿ [illegible] ಕೋಲಗಳನ್ನು [illegible] ಈ ಉತ್ಸವದ [illegible] ಅಲ್ಲಿ [illegible] ಬಹಳ ಹಣವನ್ನೂ [illegible] ವ್ಯರ್ಥ [illegible] ಪಡಿಸಬೇಕೆಂದು ಊಹಿಸುತ್ತೇವೆ [illegible] ಪ್ರಯೋಜನವಾಗಲಿಲ್ಲವೆಂಬುವುದು [illegible] ಮುಖಗಳಿಗೆ [illegible] ಮುಂದಾದರೂ ವಿವೇಕ [illegible] ಮತ್ತು [illegible] ಸಾಧ್ಯವನ್ನು [illegible] ಬಳಸಿ [illegible] ಹಣಗಳನ್ನು ವಿನಿಯೋಗಿಸಬೇಕು [illegible] ವ್ಯಕ್ತ [illegible] ಪ್ರಕಟಿಸೋಣವೆಂದ ಓದುವವರಿಗೆ ಯಾವ ತರಹಾ [illegible] ಎಂದು

* * *

[illegible] ಕಮೀಷನರವರು [illegible] ಮಾಡುವ [illegible] ಮೊಕದ್ದ[illegible] ಕಕ್ಷಿಗಾರರ [illegible] ವಕೀಲರು ಹಾಜರಾಗಿ ವಾದಿಸುವುದಕ್ಕೆ ಅವಕಾಶ [illegible] ಕಷ್ಟ [illegible] ಬಾಧ್ಯತೆ [illegible] ಪ್ರತಿಭಾಷ್ಯ [illegible] ಗವರ್ನ್ಮೆಂಟಿಗೆ [illegible] ಮಾಡಿಕೊಳ್ಳುತ್ತಾ ಬಂದಿದ್ದರು ಗವರ್ನ್ಮೆಂಟವರು ಈ ವಿಚಾರವನ್ನು [illegible] ಇನ್ನು [illegible] ಕೊಡಿಸ 111 ನೇ ಸೆಕ್ಷನ್ [illegible] ಮೊದಲ [illegible] ಗ್ರಾಮಾಧಿಕಾರಿಗಳ ರೆವಿನ್ಯೂ [illegible] ಕ್ರಮ [illegible] ಇನ್ನು ಕೆಲವು ಮೊಕದ್ದಮೆಗಳಲ್ಲೂ [illegible] ರೆವಿನ್ಯೂ ಕಮೀಷನರ ಕೋರ್ಟಿನಲ್ಲಿ [illegible] ಮಾಡಿ, ಈ ಅರ್ಥಕ್ಕೆ ಈ ವಾರದ ಗೆಜೆ[illegible] ಪ್ರಕಟಿಸುತ್ತಾರೆ ಗವರ್ನ್ಮೆಂಟವರು ಪ್ರಜೆಗಳ ಪ್ರಾರ್ಥನೆಯನ್ನು ಆಲಿಸಿ, ಅವರಿಗಿದ್ದ ಅನನುಕೂಲತನ್ನು ಪರಿ[illegible]ಕೊಟ್ಟಿದ್ದಕ್ಕಾಗಿ ಸಂತೋಷಪಡುತ್ತೇವೆ

* * *

[illegible] ತೂಕದ ಹೊಸ ಬಟ್ಟುಗಳನ್ನು ಸರ್ಕಾರ[illegible] ಸೆಂಟ್ರಲ್ [illegible] ಮಾತ್ರ ಇಟ್ಟು ಬಿಕರಿ ಮಾಡುವುದ[illegible] ವರ್ತಕರ [illegible] ಅಪೇಕ್ಷಿಸಿದಾಗ ಅವು [illegible] ಇಲ್ಲ ಇವಲ್ಲದೆ ಅಳತೆಯ ಎಲ್ಲಾ ಸಾಧನಗಳನ್ನೂ [illegible] ಕೊಂಡುಕೊಳ್ಳಬೇಕೆಂಬ ವಿಧಿ ಇಟ್ಟಿರುವಂತೆಯೂ, ಆ ವೈಕಿ ಅಪೇ[illegible] ಒಂದೆರಡನ್ನು ಮಾತ್ರ ಬಿಕರಿ ಮಾಡುವುದಿಲ್ಲವೆಂದೂ ಒಬ್ಬ ಬಾತ್ಮೀದಾರರು [illegible]ತ್ತಾರೆ ಈ ಹೊಸ ಸಾಧನಗಳು ಬೇಗನೆ ಸಂಸ್ಥಾನದ [illegible] ಸರ್ಕಾರದವರು ಅವುಗಳನ್ನು ಪ್ರತಿ ತಾಲ್ಲೂಕು ಕಛೇರಿಯಲ್ಲೂ [illegible] ಬಿಕರಿ ಮಾಡಬೇಕು ಮತ್ತು ವರ್ತಕರಾಗಲಿ ಇತರರಾಗಲಿ ಅಪೇಕ್ಷಿ[illegible] ಸಾಧನಗಳನ್ನು ಮಾತ್ರ ಅವರವರಿಗೆ ಬಿಕರಿ ಮಾಡಬೇಕು ಪ್ರತಿ [illegible] ಎಲ್ಲಾ ಸಾಧನಗಳನ್ನೂ ಕೊಂಡುಕೊಂಡೇ ತೀರಬೇಕೆನ್ನುವುದರಿಂದ [illegible] ಪ್ರಜೆಗಳಿಗೆ ವೃಥಾ ನಷ್ಟ ಮಾಡಿದಂತಾಗುತ್ತದೆ ಸರ್ಕಾರದವರು [illegible]ಕ್ಕೆ ಗಮನಕೊಟ್ಟು ಬೇಗನೆ ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇವೆ

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ—ದೊಡ್ಡಬಳ್ಳಾಪುರಕ್ಕೆ ನಲ್ಲಿಗಳ ಮೂಲಕ ನೀರುಸರ[illegible] ಮಾಡುವ ಕೆಲಸಕ್ಕೆ ಧರ್ಮಾರ್ಥವಾಗಿ ಭಾರಿ ಮೊಬಲಗುಗಳನ್ನು ಕೊಟ್ಟಿ[illegible]ರೆಂದರೆ—ಮ|| ಗಳಾದ ಆಲಂಗಪಲ್ಲಿ ವೆಂಕಟನಾರಾಯಣಶೆಟ್ಟರು 1,500 ರೂಪಾಯಿ, ಸರಾಫ್ ಪುಟ್ಟಪ್ಪನವರು, ಹೂಬಗೆರೆ ಚಂದ್ರಶೇಖರಯ್ಯನವರು, ಶೀಂದಿ ಕಂಟ್ರ್ಯಾಕ್ಟರ್ ಚಿಕ್ಕಹನುಮಂತಪ್ಪನವರು, ಹಜ್ಜಾಜ ಶ್ರೀಕಂಠಯ್ಯನವರು, ನರಸಿಂಹಯ್ಯನವರು, ಆಲಂಪಲ್ಲಿ ಜದಿನಾರಾಯಣಶೆಟ್ಟರು, ಅಮಾನಾಕ್ಕೆ ಶ್ರೀಕಂಠಯ್ಯನವರು, ಆಲಂಪಲ್ಲಿ ಲಕ್ಷ್ಮಯ್ಯನವರು, ಹಜಟೆ ಗುರುಶಂಭುಲಿಂಗಪ್ಪನವರು ತಲಾ 1,000 ರೂಪಾಯಿ ಈ ರೀತಿ ಒಟ್ಟು 10,250 ರೂಪಾಯಿ ಪಾವತಿಮಾಡಿರುತ್ತಾರೆ

ಮಂಜರಾಬಾದ್ ತಾ|| ದೋಣಿಗಲ್—ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರಾದ ಮ|| ಸಿ ಶ್ರೀಕಂಠೇಶ್ವರ ಅಯ್ಯರವರು ಮತ್ತು ಲೇಟ್ ದಿವಾನ್ ಸರ್ ಕೆ ಶೇಷಾದ್ರಿ ಅಯ್ಯರವರ 3 ನೇ ಕುಮಾರರಾದ ಮ|| ರಾಮಸ್ವಾಮಿ ಅಯ್ಯರವರು ಸಹಾ ಮಿತ ಪರಿವಾರದೊಡನೆ ತಾ 7 ನೇ ಶನಿವಾರ 11½ ಗಂಟೆಗೆ ಮೂಡಗೆರೆಯಿಂದ ಸಕಲೇಶಪುರಕ್ಕೆ ದಯಮಾಡಿದರು ವಿಶ್ರಾಂತಿಯಿಂದ ಕಚೇರಿ ಕೆಲಸಗಳನ್ನು ತೀರಿಸಿಕೊಂಡು ಮಧ್ಯಾಹ್ನ ಸುಮಾರು 4 ಗಂಟೆಗೆ ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮ|| ಎಂ ಸದಾಶಿವರಾಯರವರು, ಹಾಸನದ ಪೊ ಸೂ ಮ|| ಕೆ ಅನಂತರಾಮಯ್ಯನವರು, ಸಕಲೇಶಪುರದ ಡಾಕ್ಟರು ಮ|| ಎಫ್ ಫರ್ನಾಂಡಿಸ್ ಯವರು ಮುಂತಾದವರೊಡನೆ ಮೋಟರ್ ಮತ್ತು ಸಾರೋಟುಗಳಲ್ಲಿ ಕೋಟೆಗೆ ದಯಮಾಡಿದರು ಅಗ್ಗೆ ದೋಣಿಗಾಲ್ ಕಾಫಿ ಪ್ಲಾಂಟರ್ ಮ|| ಡಿ ರಾಂಕಮಲ್ಲೇಗೌಡರು ಮತ್ತು ಇವರ ಸಹೋದರರಾದ ಮ|| ಡಿ ನಂಜೇಗೌಡರು ಸಹಾ ಕೋಟೆ ಬಳಿ ನೇತ್ರಾನಂದಕರವಾಗಿ ಅಲಂಕರಿಸಿದ್ದ ಬಳಿ ಪುರಜನರೊಡನೆ ಎದುರುಗೊಂಡು ಹಾರಾ ತುರಾಯಿ ಒಪ್ಪಿಸಿದರು ಕುಶಲಪ್ರಶ್ನೆಗಳು ಬೆಳೆದ ನಂತರ ಅವರು ಮಾರನಹಳ್ಳಿಗೆ ದೋಣಿಗಾಲ್ ಮಾರ್ಗವಾಗಿ ದಯಮಾಡಿ ಅಲ್ಲಿ ಆಹಾರವನ್ನು ಸ್ವೀಕರಿಸಿ ವಾಪಸು ಸಕಲೇಶಪುರಕ್ಕೆ ಸರ್ವರೂ ದಯಮಾಡಿಸಿದರು —ಅಮಲ್ದಾರ್ ಮ. ತಿರುನಾರಾಯಣಯ್ಯಂಗಾರ್ರವರು ಪ್ರಜಾನುರಾಗಿಗಳಾಗಿರುವುದು ಬಹು ಸಂತೋಷಕರವಾಗಿರುತ್ತೆ —ಕಾಫಿ ಧಾರಣೆ ಖಂಡಿ ಒಂದಕ್ಕೆ 225 ರೂಪಾಯಿ ವರೆಗೆ ಇದ್ದದ್ದು ಈಗ 210-212 ರೂಪಾಯಿಗೆ ಇಳಿದಿದೆ ಯಾಲಕ್ಕಿ ಧಾರಣೆ ಮಣಕ್ಕೆ 70-73 ರೂ ಇದ್ದದ್ದು 35 ರ ಲಾಗಾಯ್ತು 55 ರ ವರೆಗೆ ಇರುತ್ತೆ —ಸಕಲೇಶಪುರದ ಟವನಿನಲ್ಲಿ ಪ್ಲೇಗು ರೋಂಕು ನಿವಾರಣೆಯಾಯಿತು —ಹೊರಗೆ ಹಿಡಿಸಲಿದ್ದವರೆಲ್ಲಾ ಆತುರದಿಂದ ಊರು ಸೇರುತ್ತಾ ಇದಾರೆ ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಸಿಡುಬಿನ ಉಪದ್ರವು ಬಹು ವಿಶೇಷವಾಗಿರುವದು ತುಂಬಾ ವ್ಯಥೆಯಾಗಿರುತ್ತೆ

ನೀಲಗಿರಿ ಜಿಲ್ಲಾ ಕೂನ್ನೂರು—ಜನವರಿ ತಾ 9 ನೇ ಶುಕ್ರವಾರ ಮೈಸೂರು ವಾಸಸ್ಥಾನದ ಇವ ಕೂನ್ನೂರಿನಲ್ಲಿ ಕೂಲಿ ಮಾಡಿ ಜೀವನ ಮಾಡುತ್ತಿದ್ದಳ ಮಗನ್ಸಿಂಯುವನು ಇದೇ ಕೂನ್ನೂರಿನಲ್ಲಿ ಕ್ರೌಸ್ ಮನೆ ಎಂಬುವ ಬಂಗಲೆಯಲ್ಲಿ ಊಟಮಾಡಿಕೊಂಡಿದ್ದನು ಇವನ ಕೂಡ ಅಲ್ಲಿ 7 ಜನರಿದ್ದರು ಆ ದಿನ ಕೆಂಪನೆಂಬ ಹುಡುಗನು ಎಲ್ಲಿಯೋ ಪರಾರಿಯಾದನೆಂದು ಸಮಾಚಾರ ಹುಟ್ಟಿತು. ಬಳಿಕ ತಾ 12 ನೇ ಸೋಮವಾರ ಈ ಹುಡುಗನನ್ನು ಯಾರೋ ಕಳ್ಳರು ತಲೆ ಹೊಡೆದು ಕುತ್ತಿಗೆ ಕೊಯ್ದು ಬೆನ್ನಿಗೆ ಕಲ್ಲು ಕಟ್ಟಿ ಇಲ್ಲಿನ ಸಿಮೆಟೀರಿ ಎಂಬ ದೊರೆ ವಾಸದ ಗಾರೆ ಭಾವಿಗೆ ಹಾಕಿದ್ದನ್ನು 9 ಗಂಟೆ ಸುಮಾರಿನಲ್ಲಿ ಶವವು ಮೇಲೆ ಇದ್ದದ್ದನ್ನು ಅಲ್ಲಿ ಕೆಲಸ ಮಾಡುವ ಇಜಯ, ರಂಗ ಎಂಬ ಹುಡುಗರು ಪೋಲೀಸಿಗೆ ತಿಳಿಸಿದರು ಅವರು ಅಜಮಾಯಿಷಿ ಮಾಡಿ ಶವವನ್ನು ಆಸ್ಪತ್ರೆಗೆ ಸಾಗಿಸಿ ಪತ್ತೆ ತರಡಿಸಿ ನಡಿಸಿ, ಮೇಲ್ಕಂಡ ಕ್ರೌಸ್ ಮನೆಯಲ್ಲಿ ಊಟಮಾಡುತ್ತಿದ್ದ ಏಳು ಜನಗಳನ್ನೂ ಹಿಡಿದು ಲಾಕಪ್ಪಿಗೆ ಸಾಗಿಸಿದರು ಆ ಮೇಲೆ ಶವವನ್ನು ನೋಡಿ ಡಾಕ್ಟರು ತಲೆ ಹೊಡೆದಿತ್ತು, ಕುತ್ತಿಗೆ ಕುಯ್ದಿದ್ದರು, ಬೆನ್ನಿಗೆ ಕಲ್ಲು ಕಟ್ಟಿದ್ದರು, ಇದು ಯಾರೋ ಕೊಂದಿದಾರೆಂದು ಸರ್ಟಿಫಿಕೇಟು ಕೊಟ್ಟರು ಆ ಮೇಲೆ ಮೇಲ್ಕಂಡ ಅಪರಾಧಿಗಳ ಮನೆಯನ್ನು ಪರೀಕ್ಷೆ ಮಾಡುವಲ್ಲಿ ಬೆನ್ನಿಗೆ ಕಲ್ಲು ಕಟ್ಟಿದ್ದಂಥಾ ಹುರಿ ಮಾದ್ರಿ ಹುರಿಯೂ, ರಕ್ತವಾಗಿದ್ದ ಕತ್ತಿಯೂ ಸಿಕ್ಕಿತೆಂದು ಪೋಲೀಸಿನವರು ತಿಳಿಸಿದರು ಮೇಲ್ಕಂಡ ಅಪರಾಧಿಗಳನ್ನು ಪೋಲೀಸಿನವರು ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿದಾಗ ಅವರು ಬಂದೀಖಾನೆಯಲ್ಲಿ 24 ದಿನ ಇಟ್ಟಿದ್ದು, ಫೆಬ್ರವರಿ ತಾ 6 ರಲ್ಲಿ ಇವರ ಮೇಲೆ ಕೇಸು ಬರಲಿಲ್ಲವೆಂದು ಅವರನ್ನು ಜಾಮೀನಿನ ಮೇಲೆ ಬಿಟ್ಟು, ತಾ 25 ರಲ್ಲಿ ವಿಚಾರಣೆ ಮಾಡಿ ಬಿಡಿಸಿ ಅವರನ್ನೆಲ್ಲಾ ಕಳಿಸಿಬಿಟ್ಟರು ಈ ಕೃತ್ಯವನ್ನು ಯಾರು ನಡಿಸಿದರೆಂಬುದೇ ತಿಳಿಯಲಿಲ್ಲ ಈ ಸತ್ತ ಹುಡುಗನ ಬಂಧು ಬಳಗದ ಮತ್ತು ತಾಯಿ ತಂದೆಗಳ ದುಃಖ ಹೇಳತೀರದು —ಈ ಊರಿನಲ್ಲಿ ರೂಪಾಯಿಗೆ 11 ಪಡಿ ರಾಗಿ, 6 ಪಡಿ ಅಕ್ಕಿ ಮಾರುತ್ತೆ ಇಂಥ ದುರ್ಭಿಕ್ಷ ಕಾಲದಲ್ಲಿ 8-10 ರೂಪಾಯಿ ಸಂಬಳಗಾರರ ಜೀವನ ತುಂಬಾ ಕಷ್ಟವಾಗಿದೆ ಮತ್ತು ನೀಲಗಿರಿ ಎಂಬುವ ಹೆಸರಿನಲ್ಲಿ ನೀರೇ ಇರಬಹುದೆಂದು ದೂರದೇಶದವರು ತಿಳಿಯಬಹುದು ಇಲ್ಲಿ ಕುಡಿಯಲಿಕ್ಕೆ ನೀರು ಸಿಕ್ಕುವುದೇ ತುಂಬಾ ಶ್ರಮವಾಗಿರುತ್ತೆ ತೋಟಗಳಲ್ಲಿ ಕೆಲಸ ಮಾಡುವವರ ಪಾಡನ್ನು ಹೇಳಲು ಅಸಾಧ್ಯ. ಮಳೆ ಯಾವಾಗ ಬಂದೀತೆಂದು ಎಲ್ಲರೂ ಎದುರುನೋಡುತ್ತಲಿದಾರೆ

ಹುಣಸೂರು—ಕಳೆದ ತಿಂಗಳ ಅಂತ್ಯಭಾಗದಲ್ಲಿ ಚೀಫ್ ಇಂಜನಿಯರವರು ಬಂದು ಮೇಲೂರು ಕೆರೆ, ಹೈರಿಗೆಯ ಆನೆಕಟ್ಟು, ರೋಡು ಮೊದಲಾದವುಗಳನ್ನು ಇನ್ಸ್ಪೆಕ್ಷನ್ ಮಾಡಿಕೊಂಡು ಹೋದರು ಇಲ್ಲಿ ಅ|| ಇಂಜನಿಯರಾಗಿದ್ದ ಮ|| ಬಿ ಎನ್ ಅರಾಧ್ಯರವರು ಎಗ್ಸಿಕ್ಯೂಟಿವ್ ಇಂಜನಿಯರಾಗಿ ಅಕ್ಟೋಪ್ಲೋರು ಡಿವಿಜನ್ಗೆ ಇಷ್ಟರಲ್ಲೇ ತೆರಳುವರಾಗಿದಾರೆ ಇವರು ನಿಗರ್ವಶಿರೋಮಣಿಗಳು, ಕೆಲಸದಲ್ಲಿ ಪಂಡಿತರಾದಿಗಳು, ಇವರ ಹವ್ಯಾಸವೇನೂ ಇಲ್ಲದೆ ಸಾಮಾನ್ಯಸ್ಥಿತಿಯಲ್ಲಿದ್ದು ಆ ಇಲಾಖೆಯವರಿಂದಲೂ, ಸಭ್ಯಪ್ರಜೆಗಳಿಂದಲೂ ಗೌರವಿಸಲ್ಪಡುತ್ತಿದ್ದರು ಇಲ್ಲಿನ ಕೋಆಪರೇಟಿವ್ ಸೊಸೈಟಿಯ ವೈಸ್ ಪ್ರೆಸಿಡೆಂಟರಾಗಿದ್ದರು ಈ ದಿನ ಆ ಡಿಪಾರ್ಟ್ಮೆಂಟಿನ ಉದ್ಯೋಗಸ್ಥರು ಟೀ ಪಾರ್ಟಿ ಮುನ್ನಿಟ್ಟು ಹರಿಕಥೆ, ಸಂಗೀತಗಳನ್ನನುಸರಿಸಿ ಅವರ ಗುಣಕಥನವನ್ನು ಮಾಡಿ ಅವರಲ್ಲಿ ತಮಗಿದ್ದ ಪ್ರೀತಿಯನ್ನು ಪ್ರಕಾಶಪಡಿಸಬೇಕೆಂದಿದ್ದರು ಆದರ ಅದಕ್ಕವರು ಸಮ್ಮತಿಸದಲಿಲ್ಲವಾಗಿ ನಿಂತುಹೋಯಿತು ಇವರ ಕೆಲಸದ ಚಾರ್ಜನ್ನು ವಹಿಸಿಕೊಂಡಿರುವ ಮ| ಗರುಡಾಚಾರ್ಯರೂ ಅವರ ಮೇಲ್ಪಂಕ್ತಿಯನ್ನನುಸರಿಸಿ ಇಲ್ಲಿನ ಪ್ರಜೆಗಳ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿಕೊಳ್ಳುವರೆಂಬ ನಿರೀಕ್ಷೆಯುಂಟು —ಅ ಕಮಿಷನರ್ ಮ|| ವೆಂಕೋಬರಾಯರು ಕಳೆದ ವಾರ ಬಂದು 2 3 ದಿನ ಇದ್ದು ಈ ತಾಲ್ಲೂಕಿನ ಜಮಾಬಂದಿಯನ್ನು ಮಾಡಿಕೊಂಡು ಹೋಗಿ ಮತ್ತೆ ಈ ವಾರ ಇತರ ಕಡೆಯ ಜಮಾಬಂದಿಗಾಗಿ ದಯಮಾಡಿಸಿರುತ್ತಾರೆ —ಕನ್ಸರ್ವೆನ್ಸಿ ರೆಗ್ಯುಲೇಷನ್ ರೂಲ್ಸನ್ನು ಈ ಟವನ್ ಮ್ಯುನಿಸಿಪಾಲಿಟಿಯಲ್ಲಿ ಜಾರಿಗೆ ತರುವುದು ಅಷ್ಟು ಅನುಕೂಲವಾಗಿ ತೋರುವುದಿಲ್ಲ ಯಾಕೆಂದರೆ ಇದು ಸಣ್ಣ ಮ್ಯುನಿಸಿಪಾಲಿಟಿ ಅಲ್ಲದೆ ಇಲ್ಲಿ ಯಾರೂ ಅಷ್ಟು ವಿಶೇಷವಾಗಿ ಕುದುರೆಗಾಡಿ ಒಂಟೆತ್ತಿನಗಾಡಿ ಮುಂತಾದವುಗಳನ್ನು ಇಟ್ಟುಕೊಂಡಿಲ್ಲ ಒಂದೆರಡು ಇದ್ದರೂ ಪ್ರಜೆಗಳು ಅವುಗಳನ್ನು ತಮ್ಮ ಸ್ವಂತಕೆಲಸಗಳಿಗೆ ಇಟ್ಟುಕೊಂಡಿದಾರೆ ಸಣ್ಣ ಮ್ಯುನಿಸಿಪಾಲಿಟಿಯಲ್ಲಿ ಈ ರೂಲಸು ಕೃತಾಬಗಳಿಗೆ ಬಾಧಕವಾಗಿರುವುದಲ್ಲದೆ ಎಂದಿಗೂ ಸಾಧಕವಾಗಿರಲಾರದು —ಇಲ್ಲಿ ಒಂದು ಟವನ್ ಹಾಲ್ ಕಟ್ಟಬೇಕೆಂಬ ಉದ್ದೇಶವನ್ನು ಪ್ರಜೆಗಳು ಮರೆತಿರುವಂತೆ ಕಾಣುತ್ತದೆ ಮೊದಲು ಬಹು ಉತ್ಸಾಹದಿಂದ ವಿಾಟಿಂಗುಗಳು ನಡೆದವು ಈಗ ತಟಸ್ಥಭಾವವುಳ್ಳವರಾಗಿರುವದಕ್ಕೆ ಕಾರಣವೇನೋ ತಿಳಿಯದು ಒಬ್ಬ ಬ್ರಾಂಗಿಯೋಸ್ವರ ಅನೇಕ ಸಭ್ಯ ಪ್ರಜೆಗಳು ಈ ಉದ್ದೇಶವಟ್ಟ ಕಾರ್ಯವನ್ನು ಕೈಬಿಡದೆ ಪರಾರ್ಥಕ್ಕಾಗಿ ನೆರವೇರಿಸುವರೆಂದು ಹಾರೈಸಲ್ಪಟ್ಟಿದೆ —15ನೇ ತಾ ಭಾನುವಾರ ಹೆಗ್ಗಡದೇವನಕೋಟೆ ಮಾರ್ಗವಾಗಿ ಶ್ರೀ ಶಿವಗಂಗಾ ಸ್ವಾಮಿಯವರು ಬರುತ್ತಾರಾದಕಾರಣ ಅವರ ಮರ್ಯಾದೆಗಾಗಿಯೂ, ಸಂದರ್ಶನಕ್ಕಾಗಿಯೂ ಸರ್ಕಾರಿ ಉದ್ಯೋಗಸ್ಥರೂ, ಇತರ ಶಿಷ್ಯರೂ ಅವರನ್ನು ಸಂಧಿಸಿ ಟವನ್ ಒಳಕ್ಕೆ ಕರೆದುಕೊಂಡು ಬರುವಹಾಗೆ ಚಿಕ್ಕಹುಣಸೂರು ಕೆರೆಯ ರಸ್ತೆಯ ಹತ್ತರ ಕಾದುಕೊಂಡಿರುತ್ತಾರೆ ಸ್ವಾಮಿಯವರು ಹುಣಸೂರು ಮಾರ್ಗವಾಗಿ ತಲಕಾವೇರಿಗೆ ಪ್ರಯಾಣ ಬೆಳಸುವರು

ಶಿವಮೊಗ್ಗೆ—ಈ ನವನಾಗರಿಕ ಕಾಲದಲ್ಲಿಯೂ ಇಲ್ಲಿ ಕಾಮನ ಹಬ್ಬವನ್ನು ಆಚರಿಸುವ ಹಾವಳಿಯನ್ನು ನೋಡಿದರೆ ವಿಷಾದವಾಗುತ್ತೆ. ಬೇರೆ ಡಿಸ್ಟ್ರಿಕ್ಟು ಜಾಗಗಳಲ್ಲಿ ಇದು ನೆಪಮಾತ್ರಕ್ಕೆ ಎಲ್ಲಿಯೋ ಸ್ವಲ್ಪ ನಡೆಯುತ್ತೆ. ಇಲ್ಲಿ ರಾತ್ರಿ ಹಗಲು ಸೂಳೆಯರ ತಾಫೆ, ಕುಣಿಯುವುದು, ಬಂದು ಪದಗಳನ್ನು ಹೇಳುವದು, ಅಸಭ್ಯಕರವಾದ ನಾಟಕಗಳನ್ನಾಡುವದು ವಿಪರೀತವಾಗಿದೆ ಈ ಸಂದರ್ಭಗಳಲ್ಲಿ ಇದೇ 14 ನೇ ತಾ ಪಂಸೇರ್ಟಾನ್ ಎಂಬುವನ ಒಡವೆಯನ್ನು ಒಬ್ಬ ಬಳೇಗಾರನು ಕದ್ದುಕೊಂಡು ಜೋಡನಂತೆ ಮಾಲೀಕನು ಗೋಳಾಡುತ್ತ ಪೋಲೀಸಿಗೆ ತಿಳಿಸಲು ಮಾರನೇ ದಿನ ಅವನನ್ನು ಪತ್ತೆಮಾಡಿ ಅವನಿಂದ ಎರಡು ರೂಪಾಯಿ ಕೊಡಿಸಿ ಸಮಾಧಾನ ಪಡಿಸಿದರಂತೆ —ನಮ್ಮ ಅಮಲ್ದಾರ್ ಮ|| ಹಯಗ್ರೀವರಾಯರಿಗೆ ವರ್ಗವಾದ ನಿಮಿತ್ತ ಕಲ್ಲೂರಲ್ಲಿ ಅನೇಕ ದೊಡ್ಡ ಮನುಷ್ಯರು ಸೇರಿ ಅವರಿಗೆ ಔತಣಮಾಡಿಸಿ ಭೋಜನ ತಾಂಬೂಲಾದಿಗಳಿಂದ ಅವರನ್ನು ಸತ್ಕರಿಸಿದರು ಅವರ ಜವಾಬುಗೆ ಜುಡಿಷಲ್ ಹೆಡ್ ಮುನ್ಷಿ ಮ|| ಸಂಪತ್ಕುಮಾರ ಅಯ್ಯಂಗಾರರವರು ಸದ್ಯಕ್ಕೆ ಬದಲಿ ನೋಡುತ್ತಿದಾರೆ — ಕುಂಬಾರಗೇರಿಯಲ್ಲಿ ಎರಡು ಕಾಮಗಳನ್ನು ಕೂಡಿಸುವದು ಪದ್ಧತಿ ಇದರ ವಿಷಯವಾಗಿ ಹಜದ ವ್ಯಾಜ್ಯ ಹುಟ್ಟಿಂತಾಗಿ ಕೆಲವುಕಾಲ ಹೀಗೆ ಕಳೆದ ನಂತರ ಎಲ್ಲರೂ ಏಕೀಭವಿಸಿ ಒಂದೇ ಕಾಮನನ್ನಿಡುವದಕ್ಕೆ ಒಪ್ಪಿದರಂತೆ—ತಾ 11 ರಲ್ಲಿ ದುರ್ಗಿ ಗುಡಿಯಲ್ಲಿ ದುರ್ಗಾದೇವಿಯ ತೇರು ನಡೆಸಲ್ಪಟ್ಟು ಆ ರಾತ್ರಿ ಈ ಸಂಬಂಧವಾಗಿ ಬಾಣಬಿರುಸುಗಳನ್ನು ಬಿಡುತ್ತಿರಲು ಒಂದು ಬಾಣವು ಒಂದು ಹುಲ್ಲು ಮನೆಯ ಮೇಲೆ ಬಿದ್ದು ಹತ್ತಿಕೊಳ್ಳುತ್ತಿರುವಷ್ಟರಲ್ಲಿ ಜನಗಳು ಸಾಹಸ ಮಾಡಿ ವಿಶೇಷ ಅನಾಹುತವಾಗದಂತೆ ಕೂಡಲೆ ಆರಿಸಿಬಿಟ್ಟರು —ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಕಳೆದ 9 ನೇ ತಾ ತೀರ್ಥಹಳ್ಳಿ ಪ್ರಾಂತ್ಯ ಸರ್ಕೀಟು ಹೋಗಿ ವಾಪಸು ಬಂದರು—ಮ|| ಮಹಿಷಿ ಮಂಜಪ್ಪನವರ ಮನೆಯಲ್ಲಿ ನೀರು ಹಾಕಿಕೊಂಡು ಜೀವನ ಮಾಡುತ್ತಿದ್ದ ಒಬ್ಬ ಬಡ ಬ್ರಾಹ್ಮಣ ವಿಧವೆಯನ್ನು ಯಾರೋ ಜೂಜುಕೋರರು ವಂಚಿಸಿ ಚಿತ್ತಾಲಿ ಉಂಗುರವನ್ನು ಭಂಗಾರದ್ದೆಂದು ಅಡವಿಟ್ಟು ಆಕೆಯಿಂದ 50 ರೂಪಾಯಿ ತೆಗೆದುಕೊಂಡು ಹೋದರಂತೆ ಆಕೆ ಅವರ ಮೇಲೆ ಮೊಕದ್ದಮೆ ಮಾಡಿರುವದಾಗಿ ತಿಳಿಯ ಬಂದಿದೆ—ಪಟೇಲ್ ಸುಬ್ಬಾವಧಾನಿಯವರ ಬೈಸಿಕಲ್ಲನ್ನು ಮ| ಸುಬ್ಬರಾಯ ಪಿಳ್ಳೆಯವರ ಮಗ ರಿಪೇರಿ ಮಾಡುತ್ತೇನೆಂದು ಅವರಿಗೆ ತಿಳಿಸದೇನೇ ಮಾರಿಬಿಟ್ಟದ್ದರಿಂದ ಅವರು ಅವನ ಮೇಲೆ ಮೊಕದ್ದಮೆ ಮಾಡಿರುವದಾಗಿ ತಿಳಿದು ಬಂದಿದೆ—ತಾ 12 ರಲ್ಲಿ ಮ| ವಕೀಲ ರಾಮಚಂದ್ರರಾಯರ ಕುಟುಂಬಕ್ಕೆ ರಾತ್ರಿ ವೇಳೆ ಏನೋ ಹುಳು ಕಚ್ಚಿ ತೊಂದರೆಯಾಗಿರುವಾಗ ನಮ್ಮ ಸಿವಿಲ್ ಸರ್ಜನ್ ರಾದ ಮ|| ಅಪ್ಪಾದೊರೆಯವರು ಚಿಕಿತ್ಸೆ ಮಾಡಿದ್ದರಿಂದ ಈಚೆಗೆ ಗುಣವಾಗುತ್ತಾ ಬಂದಿರುವದಾಗಿ ತಿಳಿಯುತ್ತದೆ—ಬೆಂಕಿಪುರಕ್ಕೆ ಕೌನ್ಸೆಲರ್ ಸರ್ದಾರ್ ಕಾಂತರಾಜೆ ಅರಸಿನವರು ದಯಮಾಡಿರುವ ವರ್ತಮಾನವಿರುವದರಿಂದ ಆ ಸ್ಥಳಿಕರು ಊರನ್ನು ಶುದ್ಧಿಮಾಡುವ ಪ್ರಯತ್ನದಲ್ಲಿದಾರೆಂದು ಕೇಳಿ ಸಂತೋಷ ಪಡುತ್ತೇವೆ—ಕಳೆದ 14 ನೇ ತಾ ಸಾಯಂಕಾಲ ಇಲ್ಲಿನ ಟವನ್ ಹಾಲಿನಲ್ಲಿ ಒಂದು ಸಭೆ ಸೇರಿ ನ್ಯಾಯವಿಧಾಯಕ ಸಭೆಗೆ ಮೆಂಬರ ಚುನಾವಣೆಯು ನಡೆಯಿತು

ಗ್ರಾಮಸ್ಥರ ಉಡುಪು

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಮ|| ಪಿ ವೆಂಕಟ್ರಾಮಿಯಾಸ್‌ರವರು ಮೇಲ್ಕಂಡ ವಿಷಯವನ್ನು ಕುರಿತು ನಮಗೆ ಬರೆದಿರುವುದೇನೆಂದರೆ—

ಸಾಧಾರಣವಾಗಿ ಒಬ್ಬ ಮನುಷ್ಯನು ಬಟ್ಟೆಯನ್ನು ಉಡುವುದು ಯಾತಕ್ಕೆಂದರೆ ಮೈಯನ್ನು ಮುಚ್ಚಲಿಕ್ಕೂ, ಗೌರವಕ್ಕೂ ಮತ್ತು ಮಾನವನ್ನು ಮುಚ್ಚಿಕೊಳ್ಳುವುದಕ್ಕೂ ಆಗಿರುತ್ತದೆ ಬಟ್ಟೆಯನ್ನು ಉಡುವುದರಲ್ಲಿ ಆಯಾ ದೇಶವಾಡಿಕೆಯನ್ನು ಅನುಸರಿಸಿ ಜನರು ನಡೆದುಕೊಳ್ಳುವರು ಮಲೆನಾಡು ಪ್ರಾಂತ್ಯಗಳಲ್ಲಿ ಛಳಿಗಾಗಿ ಕಂಬಳಿಯನ್ನು ಉಡುವುದು ವಾಡಿಕೆಯಾಗಿರುತ್ತೆ ಮೈದಾನ ತರಫಿನಲ್ಲಿ ನೂಲಿನ ಬಟ್ಟೆಯನ್ನು ಉಡುವುದು ರೂಢಿಯಲ್ಲಿರುತ್ತೆ ಮುಖ್ಯವಾಗಿ ದೇಹದಲ್ಲಿ ಮುಚ್ಚಬೇಕಾದ ಭಾಗಗಳು ಯಾವವು ಅಂದರೆ—ತಲೆ, ಮೈ, ಕಾಲುಗಳು ಈಗ ಅನೇಕ ಕಡೆಗಳಲ್ಲಿ ರೂಢಿಯಾಗಿ ತಲೆಗೆ ಒಂದು ಪೇಟ, ಟೋಪಿ, ಅಥವಾ ವಸ್ತ್ರ, ಮೈಗೆ ಒಂದು ಅಂಗಿ, ಕಾಲುಗಳಿಗೆ ಅಂದರೆ ಸೊಂಟದಿಂದ ಕೆಳಭಾಗಕ್ಕೆ ಚಡ್ಡಿ, ಅರ್ಧ ಚಡ್ಡಿ, ಪೂರಾ ಚಡ್ಡಿ, ಷರಾಯಿ ಅಥವಾ ಪಂಚೆಯನ್ನು ಉಟ್ಟು ತೊಟ್ಟುಕೊಳ್ಳುವರು

ತಲೆಯಿಂದ ಕಾಲುಗಳ ವರಿವಿಗೂ ಮೈ ಮುಚ್ಚಿ ಇದ್ದರೆ ಅಲಂಕಾರವಾಗಿಯೂ, ಗೌರವವಾಗಿಯೂ ಕಾಣಿಸುವುದು ಕೆಲವು ಪ್ರಾಂತ್ಯಗಳಲ್ಲಿ ಅಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಗ್ರಾಮಗಳಲ್ಲಿ ರೈತರು ತಲೆಗೆ ದೊಡ್ಡ ರುಮಾಲನ್ನು ಕಟ್ಟಿಕೊಂಡಿರುವುದೂ, ಮೈಗೆ ಅಂಗಿಯನ್ನು ತೊಟ್ಟುಕೊಂಡಿರುವುದೂ, ಆದರೆ ಸೊಂಟದಿಂದ ಕೆಳಗೆ ಮಾತ್ರ ಒಂದು ಲಂಗೋಟಿ ವಿನಹ ಮತ್ತೆ ಯಾವದೂ ಇರುವುದಿಲ್ಲ ವಾಚಕರೇ, ಈ ಉಡುಪು ನೋಡುವವರಿಗೆ ಎಷ್ಟು ಚೆನ್ನಾಗಿ ಕಾಣಿಸುವುದು ! ಇಂಥಾ ಜನಗಳು ಎಲ್ಲಿಯಾದರೂ ಹೋದರೆ ಮರ್ಯಾದೆ ಉಂಟಾಗುವುದೋ ? ಇದು ನೋಡಲಿಕ್ಕೆ ಎಷ್ಟು ಅಸಹ್ಯವಾಗಿರುವುದು ? ಈ ಜನಗಳು ಸರ್ಕಾರಿ ನೌಕರರು ಅವರ ಗ್ರಾಮಕ್ಕೆ ಹೋದರೂ ಅಥವಾ ಅವರೇ ಕೋರ್ಟು ಕಚೇರಿಗಳಿಗೆ ಹೋದರೂ ತಾವು ಉಟ್ಟಿರುವ ಉಡುವು ಸಭೆಗೆ ಯೋಗ್ಯವಾದದ್ದಾಗಿಲ್ಲವೆಂದು ತಾವಾಗಿಯೇ ತಿಳಿದುಕೊಂಡು ಮೈಮೇಲೆ ಹೊದ್ದುಕೊಂಡಿರುವ ದುಪ್ಪಟಿಯನ್ನು ಸೊಂಟಕ್ಕೆ ಅವಸರವಸರವಾಗಿ ಸುತ್ತಿಕೊಳ್ಳುವರು ಮನುಷ್ಯನಿಗೆ ಮುಖ್ಯವಾಗಿ ಇರತಕ್ಕಂಥಾದ್ದು ಮಾನ ಇದನ್ನು ಕಾಪಾಡಿಕೊಳ್ಳಬೇಕೆಂಬ ತಾರತಮ್ಯ ತಿಳಿಯದೆ ಇರುವುದು ಮೃಗಗಳಿಗೆ ಸಮಾನವೆಂದು ತಿಳಿಯಬೇಕಾಗುತ್ತೆ ಈಗಿನ ಕಾಲದಲ್ಲಿ ಬಟ್ಟೆಬರೆಗಳು ಬಹು ಸುಲಭಕ್ರಯಕ್ಕೆ ದೊರೆಯುವವು ಎರಡು ಗಜ ಬಟ್ಟೆಯಾದರೆ ಒಂದು ಚಡ್ಡಿಯಾಗುವುದು, ಒಂದು ಪಂಚೆಗೆ ಆರು ಅಥವಾ ಎಂಟು ಆಣೆ ಕೊಟ್ಟರೆ ದೊರೆಯುವುದು ಈಗಿನ ಕಾಲದಲ್ಲಿ ನಾಗರೀಕವು ದಿನೇದಿನೇ ಹೆಚ್ಚುತ್ತಲಿರುವುದು. ಗ್ರಾಮಗಳಲ್ಲಿರತಕ್ಕವರು ಪಟ್ಟಣಗಳಿಗೆ ಬಂದರೆ ಕೆಲವು ದಿನಗಳಲ್ಲಿ ಅವರ ನಡೆನುಡಿಗಳು ಮತ್ತು ಉಡಿಗೆ ತೊಡಿಗೆಗಳೂ ಬದಲಾಯಿಸುವವು ಇಂಥವರು ತಮ್ಮ ಗ್ರಾಮಗಳಿಗೆ ಹೋದರೆ ಸ್ವಜನಗಳೆಲ್ಲಾ ಅವರವರುಗಳ ಬಟ್ಟೆಬರೆಗಳನ್ನು ನೋಡಿದರೆ ಅವರುಗಳಿಗೇನೇ ಅಸಹ್ಯವುಂಟಾಗುವುದು ಆದ್ದರಿಂದ ಇಂತಹ ಅಸಮಂಜಸವಾದ ಉಡುಪು ಅಗೌರವವಾಗಿಯೂ, ಮಾನಕ್ಕೆ ಕುಂದಕವಾಗಿಯೂ ಇರುವುದರಿಂದ ವಿದ್ಯಾವಂತರಾಗಿಯೂ ಸ್ವಾಭಿಮಾನಿಗಳಾಗಿಯೂ ಇರುವಂಥಾ ಮಹನೀಯರು ಇಂಥಾ ಜನಗಳಿಗೆ ತಿಳುವಳಿಕೆಯನ್ನುಂಟುಮಾಡುವರೆಂದು ಈ ಮೂಲಕ ಪ್ರಕಟಿಸಿರುವೆನು.

ಮೈಸೂರು ದಳವಾಯರ ಎ ವಿ ಸ್ಕೂಲು.

ಕಟ್ಟಡದ ಏರ್ಪಾಡು

ಶ್ರೀಶಿವಗಂಗಾ ಸ್ವಾಮಿಗಳವರು ಮೈಸೂರಿಗೆ ಸವಾರಿ ದಯಮಾಡಿಸಿದ್ದಾಗ್ಗೆ ಕಟ್ಟಡದ ಬಳಿ ಬಿಜಮಾಡಿ ತುಂಬಾ ಸಂತೋಷಪಟ್ಟದ್ದಲ್ಲದೆ, ಈ ಕಟ್ಟಡದ ಖರ್ಚಿಗೋಸ್ಕರ 100 ರೂಪಾಯಿಗಳನ್ನು ಕೊಡುವುದಾಗಿ ಅಪ್ಪಣೆಮಾಡಿರುತ್ತಾರೆ ಮತ್ತು ನಮ್ಮ ಶ್ರೀಮತ್ ಯುವರಾಜರವರು ಈ ಬಗ್ಗೆ 2,000 ರೂಪಾಯಿಗಳನ್ನು ನಗದಾಗಿ ಸಹಾಯಮಾಡಿರುತ್ತಾರೆ ಶ್ರೀಸ್ವಾಮಿಗಳವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸಿರತಕ್ಕದಲ್ಲದೆ ಶ್ರೀಮತ್ ಯುವರಾಜರವರಿಗೂ ರಾಜಕುಟುಂಬಕ್ಕೂ ಶ್ರೀಭಗವಂತನು ಆಯುರಾರೋಗ್ಯಾದಿಗಳನ್ನು ನಿರಂತರವೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ ಮತ್ತು ಕಟ್ಟಡಕ್ಕೆ ಇನ್ನೂ ಅನೇಕ ಸಹಾಯಗಳು ಆಗಬೇಕಾಗಿರುವುದರಿಂದ ಧಾರ್ಮಿಕರಾದ ಇತರ ಮಹನೀಯರುಗಳೂ ಇದೇ ರೀತಿ ತಮ್ಮ ತಮ್ಮ ಕೈಲಾಗುವ ಮಟ್ಟಿಗೆ ಜಾಗ್ರತೆಯಾಗಿ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ

ಎಚ್ ಕೃಷ್ಣರಾವ್, ಹೆಡ್ ಮಾಸ್ಟರ್

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914ನೇ ಇಸವಿ ಮಾರ್ಚಿ 7ನೇ ತಾ ವರೆಗಿನ ಬಾಕಿ ಲೆಕ್ಕ

ಲೇಣೆ —(1) ಶೇರು ಮೊಬಲಗು		ರೂ 7,00,850
,, (2) ಡಿಪಾಜಿಟ್ಟುಗಳು		,, [illegible]
,, (3) ಇತರೆ		,, 7,168
(ಶೇ, ಸಾ ವಿ ಕ್ಯುತ್ರಿ)	ಮೊತ್ತ ರೂ	13,20,191
ದೇಣಿ —(1) ಕೈಯಲ್ಲಿರುವ, ಬ್ಯಾಂಕಿನಲ್ಲಿರುವ ಹಣ ರೂ		1,16,771
,, (2) ಬಾಕಿ ಮತ್ತು ಇತರ ಸಾಲಗಳು		,, [illegible] 333
,, (3) ಪ್ರಾಮಿಸರಿ ನೋಟು ಮೇಲಿನ ಸಾಲಗಳು		,, 1,28,911
,, (4) ಇನ್ವೆಸ್ಟ್ ಮೆಂಟುಗಳು		,, [illegible]
,, (5) ಕೊಡಬೇಕಾದ ಮೊಬಲಗು		71,[illegible]
,, (6) ಪ್ರಾಮಿಸರಿ ನೋಟುಗಳು		,, [illegible]27
,, (7) ಇತರೆ		,, 12,176
(ಹಣ, ಕಾಸು ವಿಟ ಬಿಟ್ಟು)	ಮೊತ್ತ ರೂ	13,20,191

ಪಟ್ಟಾಭಿ ... ಮ್ಯಾನೇಜರ್

ಮೈಸೂರು ಕಾಸ್ಮಾಪಾಲಿಟನ್ ಕ್ಲಬ್.

ಹದಿನೆಂಟನೆಯ ವರುಷೋತ್ಸವ

ಕಳೆದ 15ನೇ ತಾ ಈ ನಗರದ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ 18ನೇ ವರುಷೋತ್ಸವವು ಬಹು ಸಂಭ್ರಮವಾಗಿ ಜರುಗಿತು ಸ್ವಾಭಾವಿಕವಾದ ವೃದ್ಧಿಯುಳ್ಳ ಕಟ್ಟಡವನ್ನು ಬಾವುಟ ತೋರಣಗಳಿಂದ ಅಲಂಕರಿಸಿದ್ದರು ರಾಜಧಾನಿಯ ಮತ್ತು ಹೊರಗಿನ ಅಧಿಕಾರಿಗಳೇ ಮೊದಲಾದ ಮೆಂಬರುಗಳು ಈ ಸಂತೋಷಕೂಟದಲ್ಲಿ ಭಾಗಿಗಳಾಗಿದ್ದರು ಹಗಲೆಲ್ಲಾ ಕಟ್ಟಡದಲ್ಲಿ ಅವರು ವಿನೋದಗಳಲ್ಲಿ ಸಂತೋಷಪಟ್ಟರು ಮಧ್ಯಾಹ್ನ ಎಲ್ಲರೂ ಸೇರಿ ವನಭೋಜನ ಮಾಡಿದರು ಸಾಯಂಕಾಲ ಕಟ್ಟಡದ ಮೈದಾನದಲ್ಲಿ ರಾಯಬಹದೂರ್ ಎ ನರಸಿಂಹಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಕೂಟವನ್ನು ನಡಿಸಿ, ಸೆಕ್ರೆಟರಿ ಮ ಕೆ ವೆಂಕಟರಾಯರು ಕಳೆದ 1913ನೇ ವರುಷದ ರಿಪೋರ್ಟನ್ನು ಓದಿಹೇಳಿದರು ಕಳೆದ ವರುಷ ಕ್ಲಬ್ಬಿನ ಎಲ್ಲಾ ಖರ್ಚುಗಳೂ ಕಳೆದು 779 ರೂಪಾಯಿ ತನಕ ಉಳಿದದ್ದು ಡಾಕ್ಟರ್ ಸಿ ರಾಜಾರಾಮರಾಯರವರ ಉತ್ಸಾಹವನ್ನೂ ಕಾರ್ಯದಕ್ಷತೆಯನ್ನೂ ಪ್ರಕಾಶಪಡಿಸುತ್ತದೆ ಈ ಕ್ಲಬ್ಬಿಗೆ ಮೆಂಬರಾಗಿರತಕ್ಕವರೆಲ್ಲಾ ವಿದ್ಯಾವಂತರೂ ಅಧಿಕಾರಿಗಳೂ ಆಗಿರೋಣದರಿಂದ ಇನ್ನೂ ಮೆಂಬರುಗಳಿಂದ ಸುಮಾರು 750 ರೂಪಾಯಿ ತನಕ ವಸೂಲಾಗದೆ ಬಾಕಿ ನಿಂತಿದೆ ಎಂದು ಹೇಳುವುದು ಅಷ್ಟೇನೂ ಸಂತೋಷಪ್ರದವಾಗಿಲ್ಲ ಕ್ಲಬ್ಬಿಗೆ ಬರಬೇಕಾಗಿರುವ ಹಣಗಳನ್ನು ವಸೂಲುಮಾಡುವುದರಲ್ಲೂ, ಖರ್ಚು ವಾಬುಗಳನ್ನು ಕಟ್ಟುನಿಟ್ಟಾಗಿ ನೋಡಿಕೊಳ್ಳುವುದರಲ್ಲೂ, ಕ್ಲಬ್ಬಿನಲ್ಲಿ ಮೆಂಬರುಗಳಿಗೆ ಸೌಕರ್ಯಗಳನ್ನು ಒದಗಿಸುವುದರಲ್ಲೂ, ಹೊಸದಾಗಿ ಮೆಂಬರುಗಳನ್ನು ಸೇರಿಸುವುದರಲ್ಲೂ ಡಾಕ್ಟರ್ ರಾಯರ ಸಾಹಸಪ್ರಯತ್ನಗಳನ್ನು ಮೆಂಬರುಗಳೆಲ್ಲಾ ಬಹಳವಾಗಿ ಶ್ಲಾಘಿಸಿದರು

ಈಗ ಕ್ಲಬ್ಬನ್ನು ಬಾಡಿಗೆಯ ಕಟ್ಟಡದಲ್ಲಿ ಮಾಡಿಕೊಂಡಿದಾರೆ ಮೆಂಬರುಗಳು ಬಹುಕಾಲದಿಂದಲೂ ಸ್ವಂತವಾಗಿ ಬಂಗಲೆ ಆರಾಮಗಳನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನಪಡುತ್ತಾ ಬಂದರು ಈ ಭಾಗವನ್ನು ತಿಳಿದು ಶ್ರೀಮತ್ ಮಹಾರಾಜರವರು ಕೃಪೆಯಿಟ್ಟು ಗಾರ್ಡನ್ ಪಾರ್ಕಿನಲ್ಲಿ ಪೊಲೀಸ್ ಸ್ಟೇಷನ್ ಎದುರು ವಿಶಾಲವಾದ ವಿಸ್ತಾರವಾದ ನಿವೇಶನವನ್ನು ಉಚಿತವಾಗಿ ದಯಪಾಲಿಸಿರುತ್ತಾರೆ ಮೆಂಬರುಗಳು ಹೊಸ ಬಂಗಲೆಯನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಆಗಲೇ ಅಸ್ತಿಭಾರವನ್ನು ಹಾಕಿ, ನಮ್ಮ ಮಹಾರಾಜರವರ ವರ್ಧಂತಿ ಉತ್ಸವದ ದಿನ ಪ್ರವೇಶೋತ್ಸವವನ್ನು ಆಗಮಾಡಿಸಬೇಕೆಂದು ಸಾಹಸಪಡುತ್ತಿರುವರು ಇದಕ್ಕಾಗಿ 100 ರೂಪಾಯಿನ 100 ಷೇರುಗಳನ್ನು ಹಾಕಿರುತ್ತಾರೆ ಆ ಪ್ರಕಾರ ಮೆಂಬರುಗಳು 90 ಷೇರುಗಳಷ್ಟು ಪಡೆದು ಇರುತ್ತಾರಾದರೂ ಇದುವರೆಗೆ 1,800 ರೂಪಾಯಿಗಿಂತ ಹೆಚ್ಚು ವಸೂಲಾಗಿರುವುದಿಲ್ಲ ಬೇಗ ಹಣ ಶೇಖರವಾದಲ್ಲದೆ ಅವರ ಉದ್ದೇಶವು ನೆರವೇರುವುದಿಲ್ಲವಾದಕಾರಣ ಷೇರ್ ಹಣವನ್ನು ಪೂರ್ತಾ ಪಾವತಿಮಾಡುತ್ತಾ ಬಂದ ಹಾಗೆ ಷೇರುದಾರರಿಗೆ ಶೇಕಡಾ 4 ರಂತೆ ಬಡ್ಡಿ ಕೊಡಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು

ಸರ್ದಾರ್ ಕಾಂತರಾಜೇಅರಸಿನವರು ಪ್ರೆಸಿಡೆಂಟರಾಗಿಯೂ, ರಾಯಬಹದೂರ್ ಎ ನರಸಿಂಹಯ್ಯಂಗಾರ್ಯರು ವೈಸ್ ಪ್ರೆಸಿಡೆಂಟರಾಗಿಯೂ, ಮ|| ಡಾಕ್ಟರ್ ಸಿ. ರಾಜಾರಾಮರಾಯರೂ, ಮ|| ಟಿ ಜಿ ಲಕ್ಷ್ಮೀನಾರಾಯರೂ ಸೆಕ್ರೆಟರಿಗಳಾಗಿಯೂ ಇರತಕ್ಕದೆಂದೂ ಕಮಿಟಿ ಮೆಂಬರುಗಳ ಚುನಾವಣೆಯು ಈ ತಿಂಗಳ ಆಖೈರಿನೊಳಗಾಗಿ ನಡೆಯತಕ್ಕದೆಂದೂ ತೀರ್ಮಾನವಾದ ಮೇಲೆ ಮೆಂಬರುಗಳು ಶ್ರೀಮತ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಆ ದಿನ ಸಂತೋಷಕೂಟವನ್ನು ಮುಕ್ತಾಯಮಾಡಿದರು

ದೇಶೋನ್ನತಿಗೆ ಆತಂಕವಾದ ವಾಡಿಕೆ ಮಾತುಗಳು

ನಮ್ಮ ದೇಶವು ಇತರ ದೇಶಗಳ ಹಾಗೆ ವ್ಯಾಪಾರ, ಕೈಗಾರಿಕೆ, ವ್ಯವಸಾಯಗಳಲ್ಲಿ ಅಭಿವೃದ್ಧಿಗೆ ಬಂದು ಧನಧಾನ್ಯಸಂಪತ್ತುಗಳಿಂದ ಕಂಗೊಳಿಸುತ್ತಾ, ದಾನಧರ್ಮಾದಿಗಳು ನೆಲೆಗೊಳ್ಳದ ಹಾಗೆ ತಿಳುವಳಿಕೆ ಸಾಲದ ಕೆಲವು ಅಭಿಪ್ರಾಯಗಳು, ಆಚರಣೆಯ ಹಲವು ಕೆಲಸಕಾರ್ಯಗಳೂ ಪ್ರಚುರಗೊಂಡಿವೆ ಯಾವವೆಂದರೆ ನಮ್ಮ ಜನರನ್ನು ವಿಶೇಷವಾಗಿ ದ್ರವ್ಯಾರ್ಜನೆ ಮಾಡಿ ಹಣಗಾರರಾಗುವ ಬಗೆ ಹ್ಯಾಗೆಂದು ಕೇಳಿದರೆ ಒಂದು ಮಾತನ್ನು ವೇದವಾಕ್ಯದ ಹಾಗೆ ತಾವುಗಳೂ ನಂಬಿ, ಕೇಳಿದವರಿಗೂ ಹೇಳುತ್ತಾರೆ ಪರರ ಒಡವೆಯು ಯಾವ ವಿಧದಿಂದಲಾದರೂ ಬಂದು ಸೇರಬೇಕು, ಇಲ್ಲವೇ ಅದೃಷ್ಟವಿರಬೇಕು ಇವೆರಡು ಮಾರ್ಗಗಳಲ್ಲದೆ ಯಾವ ಕಾಲಕ್ಕೂ ಯಾವನಾಗಲಿ ತನ್ನ ಬುದ್ಧಿಶಕ್ತಿಯಿಂದ ಸಂಪಾದಿಸಿ ಧನವಂತನಾಗುವುದಿಲ್ಲ ಎನ್ನುವರು ಇದು ವಿಶೇಷ ಜನರಲ್ಲಿ ತುಂಬಾ ವಾಡಿಕೆಯಾಗಿದೆ ಎಂದು ನಮ್ಮ ವಾಚಕರಲ್ಲಿ ಅನೇಕರು ಬಲ್ಲರು ಇದು ನಮ್ಮಗಳ ತಿಳುವಳಿಕೆ ಸಾಲದ ಮತ್ತು ಒಗ್ಗಟ್ಟಿಲ್ಲದ ಸೋಮಾರಿತನದ ಪ್ರಥಮೋದ್ದೇಶವೇ ಹೊರತು ಸಾಂಗವಾಗಿ ಉನ್ನತ ಸ್ಥಿತಿಯಲ್ಲಿರುವ ಇತರ ದೇಶಗಳ ಆಲೋಚನೆಯ ಮುಂದೆ ಮೂಢತನ ಎನಿಸಿಕೊಳ್ಳಲು ಯಾವ ವಿಧವಾದ ಸಂದೇಹವೂ ಇಲ್ಲ ಹೀಗೆ ಒಬ್ಬರ ಹಣ ಮತ್ತೊಬ್ಬರಿಗೆ ಬರಬೇಕಾದರೆ ಮೋಸ ಕಳ್ಳತನ ಇದ್ದೇ ಇರಬೇಕಂತೆ ಎಲ್ಲಾದರೂ ಸಿಕ್ಕಬಹುದೆಂದು ನಮ್ಮ ತಂದೆ ತಾಯಿಗಳು ಎಲ್ಲಿಯೂ ಹೂತಿಟ್ಟು ಇರುವದಿಲ್ಲ ಇದೇ ಒಂದು ಸಂಪಾದನೆಯೆಂದು ಯಾರೂ ಹುಡುಕುವದಿಲ್ಲ ಇಂಥಾ ವ್ಯವಹಾರದ ವಾಡಿಕೆ ಮಾತುಗಳನ್ನು ಅರ್ಥ ಮಾಡಿ ನೋಡಿದರೆ ಮೋಸಗಾರರು, ಕಳ್ಳರು, ಕೈಲಾಗದವರು ಎಂದು ನಮ್ಮನ್ನು ನಾವೇ ಪರರಾಷ್ಟ್ರಗಳವರಿಗೆ ಹೇಳಿಕೊಟ್ಟಂತಾಗುವುದಿಲ್ಲವೇ ಒಬ್ಬನಲ್ಲಿ ಇದ್ದ ಹಣ ಇನ್ನೊಬ್ಬನಿಗೂ ಇವನಲ್ಲಿದ್ದ ಹಣ ಮತ್ತೊಬ್ಬನಿಗೂ ಹೋಗಬಹುದಲ್ಲದೆ ಒಬ್ಬನು ದರಿದ್ರನಾದರೆ ಒಬ್ಬನು ಹಣಗಾರನಾಗಬೇಕಾಯಿತು ಹೀಗಿದ್ದರೆ ದೇಶವು ಉನ್ನತ ಸ್ಥಿತಿಗೆ ಬಂತೆಂಬುದು ಹ್ಯಾಗೆ ನಮ್ಮಗಳ ಸಾಹಸ, ಕೈಗಾರಿಕೆ ವ್ಯವಸಾಯಗಳಲ್ಲಿ ಇವರು ಬಡವರು, ಇವರು ಹಣಗಾರರು ಎಂಬ ಭೇದವಿಲ್ಲದೆ ಆಯಾ ದೇಶದ ಜನರು, ನಾನಾ ಸರಕುಗಳು ಇತರ ದೇಶಗಳನ್ನು ತಮ್ಮಲ್ಲಿಗೆ ತರಿಸಿಕೊಂಡು ಆಯಾ ದೇಶದ ಸರ್ವರಿಗೂ ಬಂದು ಸೇರುತ್ತಿದ್ದರೆ ಮೊದಲು ನಮ್ಮಲ್ಲಿ ಇದ್ದ ಹಣಕ್ಕಿಂತಲೂ ಹೆಚ್ಚಾಗಿ ದೇಶವು ಸುಖಸಂತೋಷಾದಿಗಳಿಂದ ನೆಲೆಗೊಂಡು ಉನ್ನತ ಸ್ಥಿತಿ ಎನಿಸಿಕೊಳ್ಳುವುದೇ ಹೊರತು ಇಂಥಾ ವಾಡಿಕೆಯ ಮಾತುಗಳಿಂದ ಎಷ್ಟು ಮಾತ್ರವೂ ಪ್ರಯೋಜನವಾಗುವದಿಲ್ಲ

ನಮ್ಮ ಜನಗಳು ಹಣಗಾರರನ್ನು ನೋಡಿದಾಗ ಅವರು ನಗೆ ಇವರ ಹಾಗೆ ಹೆಚ್ಚಾದ ಹಣವನ್ನು ಕೊಟ್ಟದ್ದು ಬಡಬಗ್ಗರಿಗೆಲ್ಲಾ ಏನು ಸಹಾಯ ಮಾಡುತ್ತಿದ್ದಾನಲ್ಲಾ ಎನ್ನುವರು ಒಂದು ಕಾಲಕ್ಕೆ ತಾನು ಹಣಗಾರನಾದರೆ ಬಡವರನ್ನೆಲ್ಲಾ ಹಿಂಸಿಸಿ ಯಾವ ವಿಧದಿ ದಬ್ಬಾಳಿಕೆ ಅವರ ಅಭಿಪ್ರಾಯಗಳನ್ನು ದುರುಪಯೋಗಿಸಿಕೊಂಡು ತಾನು ಮತ್ತಷ್ಟು ಹಣಗಾರನಾಗಬಲ್ಲನೇ ಎನ್ನುವರು ಕೋಡುಸಂಘದವನ ಬಳಿ ಹಣ ಇಲ್ಲದೇ ಇದ್ದಾಗ್ಯೂ ಹಸುಮಗಳಿಂದಲಾದರೂ ಇತರರಿಗೆ ಸಹಾಯ ಮಾಡುತ್ತಾನೆ ಕೋಡುಸಂಘದವನು ಹಣಗಾರನಾದಾಗ್ಯೂ ಜನಗಳಿಗೆ ಅವನಿಂದ ಯಾವ ವಿಧವಾದ ಉಪಕಾರವೂ ದೊರೆಯಲಾರದು ಹ್ಯಾಗೆಂದರೆ ಕೈಯಿಂಬ ಕೆರೆಯಲ್ಲಿ ಹಣವೆಂಬ ನೀರು ಇಲ್ಲದೆ ಇದ್ದಾಗ್ಯೂ ಉದಾರವೆಂಬ ತೂಬಿದ್ದರೆ ಯಾವ ಕಾಲಕ್ಕಾದರೂ ನೀರು ಬಂದು ಪೈರುಗಳನ್ನು ಪೋಷಿಸುವ ಹಾಗೆ ಇವನು ಸಂಪಾದಿಸಿದ ಹಣದಿಂದ ಇತರರಿಗೆ ಸಹಾಯ ಮಾಡುತ್ತಾನೆ ಕೈಯೆಂಬ ಕೆರೆಯಲ್ಲಿ ಹಣವೆಂಬ ನೀರು ತುಂಬಿ ತುಳುಕುತ್ತಿದ್ದರೂ ಉದಾರವೆಂಬ ತೂಬಿಲ್ಲದಿದ್ದರೆ ಪೈರಿಗೆ ನೀರಿದ್ದೂ ಪ್ರಯೋಜನವಿಲ್ಲ ಉದಾರತೆಯಿಲ್ಲದ ಹಣಗಾರನಿಂದಲೂ ಅಷ್ಟೇ ಪ್ರಯೋಜನ ಇದು ನಿಶ್ಚಯ ಬರೀ ಬಾಯಿಮಾತಿನ ಪ್ರಯೋಜನ, ಮಾತಿನಂತೆ ಕಾರ್ಯವೂ, ಕಾರ್ಯದಂತೆ ಮಾತೂ ಇಲ್ಲದ ಹರಟೆ ಕೂರರೆನಿಸಿಕೊಂಡು, ಮನಸ್ಸಿಗಳಾಗಿ ಮಕಳಸುತ್ತಾ ನಮ್ಮ ಬುದ್ಧಿಶಕ್ತಿಯನ್ನು ಸ್ವಲ್ಪವಾದರೂ ಉಪಯೋಗಿಸದ ಹೇಳಿಕೆಯ ಮಾತುಗಳನ್ನು ನಂಬಿದರೆ ವಿದ್ಯಾವಂತರೂ, ಸಂಪಾದಕರೂ, ಸತ್ಯಸಂಧರೂ ಆಗಿ ಕೀರ್ತಿಯನ್ನು ಯಾವ ಕಾಲಕ್ಕೂ ಸಂಪಾದಿಸಲಾರೆವು

ಈ ದೇಶದ ಹಣಗಾರರಲ್ಲಿ ಮುಕ್ಕಾಲು ಪಾಲು ಜನರು ಬಡ್ಡಿಗೆ ಕೊಟ್ಟು ಸಂಪಾದಿಸುವುದೇ ತಮ್ಮ ಮುಖ್ಯ ಕಸುಬಾಗಿ ತಿಳಿದುಕೊಂಡಿದಾರೆ ಈ ಊರಿನಲ್ಲಿ 8 ಸಾವಿರ ಪ್ರಜೆಗಳಿಗೆ ಬಡ್ಡಿಗೆ ಕೊಡುವ ಸಾಹುಕಾರರ ಬ್ಯಾಂಕುಗಳು 7 8 ಇವೆ ಈ ಬ್ಯಾಂಕುಗಳಲ್ಲಿ ಅನೇಕ ಪ್ರಜೆಗಳು ಹಣವನ್ನು ತೆಗೆದುಕೊಂಡು ಬಡ್ಡಿಗೆ ಮತ್ತಷ್ಟು ಚಕ್ರಬಡ್ಡಿಯನ್ನು ತೆತ್ತು ಅಸಲಿಗಿಂತಲೂ ಬಡ್ಡಿ ಹೆಚ್ಚಾಗಿ ಅಸಲಿಗೆ ಬಡ್ಡಿಯನ್ನು ಸೇರಿಸಿ, ಪುನಹಾ ಪತ್ರಗಳನ್ನು ಬರೆದುಕೊಟ್ಟು ಸ್ಥಿರಸ್ವತ್ತುಗಳನ್ನೆಲ್ಲಾ ಆಧಾರ ಮಾಡಿ ಚರಸ್ವತ್ತುಗಳನ್ನೂ ಮನೆ ಕರುಗಳನ್ನೂ ಮಾರಿಕೊಟ್ಟಾಗ್ಯೂ ತಮಗಿದ್ದ ಸಾಲಗಳು ತೀರದೆ ಜೀವನಕ್ಕೆ ತೊಂದರೆಯಾಗಿರುವಲ್ಲಿ ಜಪ್ತಿಗಳ ಮೇಲೆ ಜಪ್ತಿಗಳೂ ಹರಾಜುಗಳ ಮೇಲೆ ಹರಾಜುಗಳೂ ನಡೆದು, ತಮ್ಮ ಆಸ್ತಿಪಾಸ್ತಿಗಳೆಲ್ಲಾ ಸೂರೆ ಕೊಟ್ಟು ಯಾವ ವಿಧವಾದ ಆಧಾರವೂ ಇಲ್ಲದೆ ಜಿಂಕೆಯೆಂಬ ಕತ್ತಲಲ್ಲಿ ಸಿಕ್ಕಿ ನರಳುತ್ತಿರುವ ಕಾಲಕ್ಕೆ ಸರಿಯಾಗಿ ಪೂರ್ಣಚಂದ್ರನು ಉದಯಿಸಿದ ಹಾಗೆ ಈ ಪ್ರಾಂತ್ಯ ಸರ್ಕೀಟು ದಯಮಾಡಿದ ನಮ್ಮ ಸೀಮೆಯ ದಿವಾನ್ ಸಾಹೇಬರವರಿಗೆ ಇಲ್ಲಿನ ಪ್ರಜೆಗಳೆಲ್ಲರೂ ಅರ್ಜಿಗಳ ಮೂಲಕ ಅರಿಕೆ ಮಾಡಿಕೊಂಡರು ದಯಾಳುಗಳಾದ ನಮ್ಮ ದಿವಾನ್ ಸಾಹೇಬರವರು ಅದರಿಂದ ಜನಗಳ ಅಹವಾಲನ್ನು ಅಂಗೀಕರಿಸಿ ಕಾಲೋಚಿತವಾದ ಪ್ರತ್ಯುತ್ತರಗಳನ್ನು ಕೊಟ್ಟು ಹೊರಟು ಹೋದರು ಇವರು ಈ ಅರ್ಜಿಗಳನ್ನೆಲ್ಲಾ ನಮ್ಮ ಸೀಮೆಯ ರಿಜಿಸ್ಟ್ರಾರ್ರವರಿಗೆ ತನಿಖೆ ಬಗ್ಗೆ ಕಳುಹಿಸಿಕೊಟ್ಟರೆಂತಲೂ, ಅವರು ಬ್ಯಾಂಕುಗಳ ಲೆಕ್ಕಗಳನ್ನು ಅಜಮಾಯಿಷಿ ಮಾಡಿ ಮುಂದೆ ವಿಚಾರ ನಡಿಸುವರೆಂತಲೂ ವರ್ತಮಾನವಿದೆ ಈ ಊರಲ್ಲಿ ಸುಮಾರು ಮೂರನೇ ನಾಲ್ಕು ಭಾಗದ ಜನರು ಸಾಲಗಳಿಂದ ದುಸ್ಥಿತಿಯನ್ನು ಅನುಭವಿಸುತ್ತಲಿದಾರೆ ಇನ್ನಾದರೂ ಪ್ರಜೆಗಳಿಂದ ಶೇಕಡಾ ಇಷ್ಟೇ ಬಡ್ಡಿ ವಸೂಲುಮಾಡಬೇಕೆಂಬ ರಿಯಾಯಿತಿ ಅಪ್ಪಣೆಯನ್ನು ಸರ್ಕಾರದವರು ದಯಪಾಲಿಸದಿದ್ದರೆ ಪ್ರಜೆಗಳು ಜೀವಿಸುವುದು ಕಷ್ಟವಾಗಿ ಇತರ ಕಡೆಗಳಿಗೆ ಓಡಿಹೋಗಲು ಸಂದೇಹವಿಲ್ಲ ಹಣಗಾರರು ಪ್ರಜೆಗಳನ್ನು ಇಂಥಾ ಕಷ್ಟಕ್ಕೆ ಗುರಿಮಾಡುವದಕ್ಕಿಂತಲೂ ವ್ಯಾಪಾರ, ವ್ಯವಸಾಯ, ಕೈಗಾರಿಕೆಯ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿ, ತಾವು ಹೆಚ್ಚಾದ ಲಾಭವನ್ನು ಸಂಪಾದಿಸಿ ತಮ್ಮ ಕೈಕೆಳಗೆ ಅನೇಕ ಜನರ ಜೀವನಕ್ಕೆ ಕೊರತೆಯಿಲ್ಲದೆ ಒದಗಿ ಅವರ ಬಡಸ್ಥಿತಿಯನ್ನು ಹೋಗಲಾಡಿಸಿ ನಮ್ಮ ಆರ್ಯ ಉದ್ದೇಶದಂತೆ ಮಾತೃಪ್ರಾಯವಾದ ಜನ್ಮ ಭೂಮಿಯನ್ನು ಇಂಥಾ ಸತ್ಯಸಂಧರಾದ ಬ್ರಿಟಿಷ್ ಚಕ್ರವರ್ತಿಗಳ ಆಳಿಕೆಯಲ್ಲಿ ಉದ್ಧಾರಮಾಡಿ ಸುಖಸಂತೋಷಗಳನ್ನು ಒದಗಿಸದಿದ್ದರೆ ಇನ್ಯಾವ ಕಾಲಕ್ಕೂ ಕೀರ್ತಿಯನ್ನು ಸಂಪಾದಿಸಿ ಇತರ ದೇಶಗಳಂತೆ ನಮ್ಮ ದೇಶವು ಉನ್ನತ ಸ್ಥಿತಿಗೆ ಬರಲಾರದು

ಶಿಡ್ಲಘಟ್ಟ   ಪ್ರಜಾ ಹಿತಚಿಂತಕ

ನನ್ನ ಅನುಭವ

[ನಮ್ಮ ದಿವಾನ್ ಸಾಹೇಬರವರು ನಮ್ಮ ದೇಶದ ರೈತರ ಮತ್ತು ವರ್ತಕರ ಉಪಯೋಗಾರ್ಥವಾಗಿ ನನ್ನ ಅನುಭವವನ್ನು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತಿರಬೇಕೆಂದು ಆಜ್ಞಾಪಿಸಿರುತ್ತಾರೆ ಆದ್ದರಿಂದ ಇನ್ನು ಮೇಲೆ ತಿಂಗಳಿಗೆ ಒಂದು ಕಾಗದವನ್ನಾದರೂ ತಪ್ಪದೆ ಬರೆಯಲು ಯತ್ನಿಸುತ್ತೇನೆ ನನಗೆ ಮುಖ್ಯವಾಗಿ ಕಾಗದ ಬರೆದು ಯಾವ ಸಂಗತಿಗಳನ್ನಾದರೂ ತಿಳಿಯಲಪೇಕ್ಷೆಯುಳ್ಳ ವಾಚಕರ ಉಪಯೋಗಾರ್ಥವಾಗಿ ನನ್ನ ಅಡ್ರೆಸ್ಸನ್ನು ಈ ಕೆಳಗೆ ಕೊಟ್ಟಿದೇನೆ —

Mr K H Ramayya, London School of Economics, London

ಪ್ರಿಯಮಿತ್ರರೇ,—ಪಾಶ್ಚಿಮಾತ್ಯ ದೇಶಗಳು ಉನ್ನತ ಸ್ಥಿತಿಗೆ ಬಂದಿರುವದಕ್ಕೆ ಮುಖ್ಯ ಕಾರಣವೇನೆಂದು ನೀವು ಕೇಳಿದಲ್ಲಿ ಈ ದೇಶಗಳ ಜನರು ಕಷ್ಟಪಟ್ಟು ಮಾಡುವ ಕೆಲಸವೇ ಇವರನ್ನು ಮುಂದಕ್ಕೆ ತಂದಿರುವುದೆಂದು ನಾನು ನಿಂತಿಂತವಾಗಿ ಹೇಳಬಲ್ಲೆನು ಕೆಲಸ ಮಾಡುವುದರಲ್ಲಿ ಇದು ಮೇಲಾದ ಕೆಲಸ ಇದು ನಿಕೃಷ್ಟವಾದ ಕೆಲಸವೆಂದು ಇವರು ವ್ಯತ್ಯಾಸವನ್ನು ಮಾಡುವದಿಲ್ಲ ಕೆಲಸ ಮಾಡುವುದು ಅಗೌರವವೆಂದು ಇವರು ಎಣಿಸುವದಿಲ್ಲ ಯಾವ ವಿಧವಾದ ಕೆಲಸವಾದರೂ ಅದಕ್ಕೆ ವಿಶೇಷ ಗೌರವವನ್ನು ಕೊಡುವರು ಇವರು ಕೆಲಸವನ್ನು ಪಂದು ಮಿತ್ರನಂತೆ ಭಾವಿಸುವರಲ್ಲದೆ ಸೋಮಾರಿತನವನ್ನು ಶತ್ರುವಿನಂತೆ ದೂರಮಾಡಿರುವರು

ಈ ದೇಶಗಳಲ್ಲಿ ಶ್ರೀಮಂತರಾಗಿರುವ ಅನೇಕ ಪ್ರಭುಗಳು (Dukes) ಅರಮನೆಗಳಂತಿರುವ ದಿವ್ಯ ಭವನಗಳಲ್ಲಿ ವಾಸಮಾಡುತ್ತಿದ್ದಾಗ್ಯೂ ತಮ್ಮ ಜೀವನಕ್ಕಾಗಿ ಸಾಮಾನ್ಯ ಜನರಂತೆ ಕಷ್ಟಪಟ್ಟು ಕೆಲಸ ಮಾಡಬೇಕಾದ ಅವಶ್ಯವಿಲ್ಲದೇ ಹೋದಾಗ್ಯೂ ಪ್ರಪಂಚದ ಸುಖಗಳಲ್ಲಿ ಮಗ್ನರಾಗದೆ ತಮ್ಮ ಕರ್ತವ್ಯಗಳನ್ನು ಮಾಡುತ್ತಿರುವರು ಕೆಲಸ ಮಾಡದೆ ಸುಮ್ಮನಿರುವದು ವಿಶೇಷ ಅಗೌರವಕ್ಕೆ ಕಾರಣವೆಂದು ತಿಳಿದಿರುತ್ತಾರೆ ಇವರು ದೊಡ್ಡ ದೊಡ್ಡ ಕಂಪನಿಗಳಿಗೆ ಡೈರೆಕ್ಟರುಗಳಾಗಿಯೂ, ವಿಶೇಷ ಪಾಂಡಿತ್ಯವನ್ನು ಸಂಪಾದಿಸಿರುವವರು ಪುಸ್ತಕಗಳನ್ನು ಬರೆಯುವದರಲ್ಲಿಯೂ, ದೇಶಾಭ್ಯುದಯಕ್ಕಾಗಿ ಏರ್ಪಟ್ಟಿರುವ ಅನೇಕ ಸಂಘಗಳ ಪ್ರೆಸಿಡೆಂಟರಾಗಿಯೂ ತಮ್ಮ ಕಾಲವನ್ನೆಲ್ಲಾ ಪ್ರಜೆಗಳಿಗೆ ಉಪಯೋಗವನ್ನುಂಟುಮಾಡುವಂಥಾ ಕೆಲಸಗಳಲ್ಲಿ ಕಳೆಯುತ್ತಿದಾರೆ

ಕೆಲಸ ಮಾಡಬೇಕಾದ ಅಗತ್ಯವಿಲ್ಲದ ಶ್ರೀಮಂತರೇ ಸ್ವದೇಶಾಭಿಮಾನದಿಂದ ರಾತ್ರಿಹಗಲೂ ಕಷ್ಟಪಟ್ಟು ಕೆಲಸ ಮಾಡುತ್ತಿರುವಾಗ ಮಿಕ್ಕಾದ ಸಾಮಾನ್ಯ ಜನರು ಸುಮ್ಮನಿರುವುದುಂಟೇ ? ವಿಶೇಷ ಶ್ರೀಮಂತರೂ ಅಲ್ಲದೆ, ಮತ್ತು ವಿಶೇಷ ಬಡವರೂ ಅಲ್ಲದೆ, ಮಧ್ಯಮ ಸ್ಥಿತಿಯಲ್ಲಿರುವ ಜನರೇ Middle Classes ಈ ಪಾಶ್ಚಿಮಾತ್ಯ ದೇಶಗಳಿಗೆ ಬೆನ್ನೆಲುಬಾಗಿರುತ್ತಾರೆ ರಾಜ್ಯಾಡಳಿತವನ್ನು ನಡಿಸುತ್ತಿರುವ ಈ ದೇಶದ ಪ್ರಜಾಪ್ರತಿನಿಧಿ ಸಭೆಯಲ್ಲಿ (House of Commons) ಮಧ್ಯಮ ತರಗತಿಯಲ್ಲಿರುವ ಜನರೇ ವಿಶೇಷವಾಗಿ ಮೆಂಬರುಗಳಾಗಿರುತ್ತಾರೆ ಈ ಸಭೆಯಲ್ಲಿ ಅನೇಕ ಬ್ಯಾರಿಸ್ಟರುಗಳು, ಭಾರಿ ವರ್ತಕರು, ವರ್ತಮಾನ ಪತ್ರಿಕೆಗಳ ಎಡಿಟರುಗಳು, ವರ್ತಕ ಸಂಘ, ವ್ಯವಸಾಯ ಸಂಘ ಮುಂತಾದ ಸಂಘಗಳ ಪ್ರತಿನಿಧಿಗಳು ಇರುತ್ತಾರೆ ಇವರೆಲ್ಲರೂ ಪ್ರಜೆಗಳಿಂದ ಚುನಾಯಿಸಲ್ಪಟ್ಟವರಾಗಿರುವದರಿಂದ ಸರ್ವದಾ ಪ್ರಜೆಗಳಿಗೆ ಉಪಯೋಗವನ್ನುಂಟುಮಾಡುವಂಥಾ ಶಾಸನಗಳನ್ನು ಜಾರಿಗೆ ತರುವುದರಲ್ಲಿ ದೃಢಸಂಕಲ್ಪವುಳ್ಳವರಾಗಿರುತ್ತಾರೆ

ಕೂಲಿ ಕೆಲಸ ಮಾಡುವ ಬಡವರೂ ಸಹ ಶ್ರದ್ಧೆಯಿಂದ ತಮ್ಮ ಕೆಲಸವನ್ನು ಮಾಡುತ್ತಾರೆ ಕೆಲಸ ಮಾಡಲು ಹಿಂಜರಿಯುವ ಮನುಷ್ಯರನ್ನು ಇಲ್ಲಿ ನೋಡಬೇಕಾದರೆ ಅಪರೂಪ ಚಿಕ್ಕ ಮಕ್ಕಳೂ ಸಹ ತಮ್ಮ ತಮ್ಮ ಆಟ ಪಾಠಗಳಲ್ಲಿ ಶ್ರದ್ಧೆಯುಳ್ಳವರಾಗಿರುತ್ತಾರೆ ಮುಖ್ಯವಾಗಿ ಇವರಲ್ಲಿರುವ ದೊಡ್ಡ ಗುಣವೇ ನೆಂದರೆ ಸಂತೋಷದಿಂದ ಕೆಲಸ ಮಾಡುವುದು ಇದೇ ಇವರ ಸುಖಸಂಪತ್ತಿಗೆಲ್ಲಾ ಮೂಲ ಕಾರಣ

ನಮ್ಮಲ್ಲಿಯಾದರೋ ಕೆಲಸಮಾಡುವದೇ ಅವಮಾನವೆಂದು ಭಾವಿಸುವ ಕಾಲಬಂದಿದೆ ವಿದ್ಯಾವಂತರು ಕೆಲಸಮಾಡಬಾರದೆಂತಲೂ, ಕೆಲಸಮಾಡುವವರಿಗೆ ವಿದ್ಯೆಯು ಅನಾವಶ್ಯಕವೆಂತಲೂ, ಈಗ ದುರಭಿಪ್ರಾಯಗಳು ನಮ್ಮಲ್ಲಿ ತಲೆದೋರಿದ್ದರಿಂದಲೇ ನಮ್ಮ ದೇಶವು ಹೀನಸ್ಥಿತಿಗೆ ಬರಲು ಅವಕಾಶವಾಯಿತು ನಮ್ಮಲ್ಲಿ ಸಕಲ ಜನರೂ ವಿದ್ಯಾವಂತರಾಗಿ, ತಮ್ಮ ತಮ್ಮ ಯೋಗ್ಯತೆಗೆ ಅನುಸಾರವಾದ ಕಾರ್ಯಗಳಲ್ಲಿ ಆಸಕ್ತರಾಗಿ ಮನಃಪೂರ್ವಕವಾಗಿ ಕೆಲಸಮಾಡುತ್ತಾ ಬಂದಿದ್ದರೆ ನಮ್ಮ ದೇಶವು ಅಧೋಸ್ಥಿತಿಯಲ್ಲಿರುತ್ತಲಿತ್ತೇ ? ಎಂದಿಗೂ ಇಲ್ಲ

ಇಷ್ಟುಮಾತ್ರವಲ್ಲ, ಇಲ್ಲವೇ ಹೋಗಲಿ ಪ್ಯಾಸುಗಳನ್ನು ಮಾಡಿದ ಕೂಡಲೆ ಸರ್ಕಾರಿ ನೌಕರಿಯನ್ನು ಹುಡುಕಿಕೊಂಡು ಹೋಗುವುದು ನಮ್ಮಲ್ಲಿ ವಿದ್ಯಾವಂತರಾಗಿರುವ ಅನೇಕ ಯೌವನಸ್ಥರ ವಾಡಿಕೆಯಾಗಿದೆ ಯಾವ ಕೆಲಸ ಸಿಕ್ಕದೆ ಹೋದಾಗ್ಯೂ ಕೊಟ್ಟ ಸಂಬಳಕ್ಕೆ ಗುಮಾಸ್ತೆಯಾಗಿರುತ್ತೇವೆ ಎಂದು ಒಪ್ಪಿಕೊಳ್ಳುತ್ತಾರೆ ಅನಂತರ ಬಾಲವನ್ನು ಕಳೆದುಕೊಂಡ ನರಿಗಳಂತೆ ಪೆನ್ಷನ್ ಬರುವುದನ್ನು ಎದುರುನೋಡಿಕೊಂಡು ಕಾಲ ಕಳೆಯುತ್ತಾರೆ ಯಾವ ಕೆಲಸವೂ ಸಿಕ್ಕದೆ ಹೋದರೆ ಆಲದಲ್ಲಿದು, ಸರ್ವಿಸ್ ಆಫೀಸು ಜಾಗ್ರತೆಯಾಗಿ ಬಂದರೆ ಅದಕ್ಕಾದರೂ ಸೇರುತ್ತೇವೆಂದು ನಿರೀಕ್ಷಿಸಿಕೊಂಡಿರುವರು ಇದಕ್ಕೂ ಅವಕಾಶವಿಲ್ಲದೆ ಹೋದರೆ ಎಲ್ಲಾ ಪ್ರಯತ್ನಗಳೂ ವಿಫಲವಾದ ಮೇಲೆ ಸ್ಕೂಲ್ ಮಾಸ್ಟರ್ ಆಗಲು ಯತ್ನಿಸುತ್ತಾರೆ ಹೀಗಾಗಿರುವುದರಿಂದ ಕಛೇರಿಯಲ್ಲಿ ಅನೇಕ ಗುಮಾಸ್ತೆಗಳು ಸಂತೋಷದಿಂದ ಕೆಲಸಮಾಡುತ್ತಿಲ್ಲ ಅನೇಕ ಸ್ಕೂಲ್ ಮಾಸ್ಟರುಗಳು ಶ್ರದ್ಧೆಯಿಂದ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಡುತ್ತಿಲ್ಲ ಚಕ್ರಗಳು ಸರಿಯಾಗಿಲ್ಲದೆ ಹೋದರೆ ಗಾಡಿಯು ಸರಿಯಾಗಿ ನಡೆಯುವದುಂಟೇ ? ಅದರಂತೆಯೇ ಸರ್ಕಾರಿ ನೌಕರರು ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದಲೂ ಸಂತೋಷವಾಗಿಯೂ ಮಾಡದೆ ಹೋದರೆ ರಾಜ್ಯಭಾರಕ್ರಮವು ಸರಿಯಾಗಿ ನಡೆಯುವ ಬಗೆ ಹ್ಯಾಗೆ ? ಪ್ರಜೆಗಳಲ್ಲಿ ವಿಶೇಷ ಅನುರಾಗವುಳ್ಳ ನಮ್ಮ ಪ್ರಭುಗಳಾದ ಶ್ರೀಮತ್

ಮಹಾರಾಜರವರನ್ನೂ ಮತ್ತು ಶ್ರೀಮನ್ ಯುವರಾಜರವರನ್ನೂ, ಸ್ವಾಮಿಭಕ್ತಿಯೂ ಮತ್ತು ಪ್ರಜಾಭಿಮಾನದಲ್ಲಿಯೂ ನಿರತರಾಗಿರುವ ಮಂತ್ರಿ ಶ್ರೇಷ್ಠರನ್ನು ಪಡೆದಿರುವುದು ನಮ್ಮ ಭಾಗ್ಯೋದಯವೇ ಸರಿ ಆದರೆ ಸರ್ಕಾರಿ ನೌಕರರೂ ಆಳುವ ಮಹಾಸ್ವಾಮಿಯವರ ಮತ್ತು ಮಂತ್ರಿವರ್ಯರ ಸದ್ಭಾವನ್ನರಿತು, ನಿಷ್ಕಪಟಚಿತ್ತರಾಗಿ, ಸಂತೋಷದಿಂದ ತಮ್ಮ ಕರ್ತವ್ಯಗಳನ್ನು ಮಾಡದೆ ಹೋದರೆ ನಮಗೆ ಒದಗಿಬಂದಿರುವ ಸುಸಮಯವು ವ್ಯರ್ಥವಾಗಿ ಕಳೆದುಹೋಗುವುದು ಆದ್ದರಿಂದ ಮಿತ್ರರೇ, ನಾವುಗಳು ನಿಜವಾದ ರಾಜಭಕ್ತಿಯುಳ್ಳ ಪ್ರಜೆಗಳಾದರೆ ನಮ್ಮನ್ನಾಳುವ ಮಹಾಸ್ವಾಮಿಯವರಿಗೂ, ಇವರ ಮಂತ್ರಿವರ್ಯರಿಗೂ ನಮ್ಮ ನಮ್ಮ ಕರ್ತವ್ಯಗಳನ್ನು ಉಲ್ಲಾಸದಿಂದ ಮಾಡುವುದರ ಮೂಲಕ ನಮ್ಮ ಭಕ್ತಿ ವಿಶ್ವಾಸಗಳನ್ನು ತೋರಿಸಬೇಕೆಂದು ವಿನಯದಿಂದ ಬೇಡುತ್ತೇನೆ

ಕೆ ಎಚ್ ರಾಮಯ್ಯ

ಮೈಸೂರು ಸರ್ಕಾರದ ಕೆಲವು ರಿಪೋರ್ಟುಗಳು

ವ್ಯವಸಾಯದ ಬ್ಯಾಂಕುಗಳು

ಈ ಬ್ಯಾಂಕುಗಳ ವಾರ್ಷಿಕ ರಿಪೋರ್ಟಿನಲ್ಲಿ ಗತಸಾಲುಗಳ ರಿಪೋರ್ಟುಗಳಲ್ಲಿಯೇ ಜುಗುಪ್ಸೆಯನ್ನುಂಟುಮಾಡುವ ಕಥೆಯೇ ಹೇಳಲ್ಪಟ್ಟಿದೆ ಸುಮಾರು ಎಲ್ಲಾ ಬ್ಯಾಂಕುಗಳೂ ನಿಂತುಹೋದವು ಉಳಿದಿರುವ ಬ್ಯಾಂಕುಗಳು ಇಷ್ಟರಲ್ಲೇ ಅದೇ ಗತಿಯಾಗಬಹುದು ಸರ್ಕಾರದವರು ಈ ಬ್ಯಾಂಕುಗಳನ್ನು ಮಾಡಿ ಸುಲಭವಾಗಿ ಜನರಿಗೆ ಹಣ ದೊರಕುವಂತೆ ಮಾಡಿದ್ದರು ಈಗ ಅದು ನಿರ್ನಾಮವಾಗುತ್ತ ಬಂದಿರುವುದರಿಂದ ಇಂಥಾ ಏರ್ಪಾಡಿನ ಫಲವನ್ನು ಅವರು ಮರೆಯಲಾರರೆಂದು ನಂಬುತ್ತೇವೆ

ಸ್ಟಾಂಪ್ ಇಲಾಖೆ

ಕಾಗದಗಳು ಸಿದ್ಧವಾಗುವುದಕ್ಕೆ ಆವುಗಳನ್ನು ಸರ್ಕಾರದವರು ಒದಗಿಸುವ ಕಾರ್ಖಾನೆಗಳ ಮೇಲೆ ಬರೆಯುತ್ತೇವೆ ಈ ಸ್ಟಾಂಪ್ ಇಲಾಖೆಯಲ್ಲಿ ಮೈಸೂರು ಗವರ್ನ್‌ಮೆಂಟಿಗೆ ಕಳೆದ ವರುಷ 3,11,133 ರೂಪಾಯಿ ಹುಟ್ಟುವಳಿ ಆಯಿತು ಇಷ್ಟು ಹಣ ಹಿಂದೆ ಯಾವ ಸಾಲಿನಲ್ಲೂ ಈ ಇಲಾಖೆಯಲ್ಲಿ ಉತ್ಪತ್ತಿಯಾಗುತ್ತಿರಲಿಲ್ಲ ಈ ಉತ್ಪತ್ತಿಯಲ್ಲಿ ಸಿಬ್ಬಂದಿ ಮೊದಲಾದ ಇಲಾಖೆಯ ಖರ್ಚಿಗೆ 98,335 ರೂಪಾಯಿಯನ್ನು ವಿನಿಯೋಗಿಸಿದರು ಈ ಪೈಕಿ ಬಹಳ ಹಣವನ್ನು ಕೊಟ್ಟು ಸರ್ಕಾರದವರು ಈಗ ಪ್ರಚಾರಕ್ಕೆ ತರಲಾರಂಭಿಸಿರುವಂಥಾ ಹೊಸ ಮಾದರಿಯ ಸ್ಟಾಂಪುಗಳ ತಯಾರಿಗಾಗಿ ಸೀಮೆಯಿಂದ ಅಚ್ಚು ಮೊದಲಾದ ಸಾಧನಗಳನ್ನು ಕೊಂಡು ತರಿಸಿರುತ್ತಾರೆ

ಸಾದಿಲವಾರ್ ಖಾತೆ

ಮಿ|| ಯೇಟ್ಸ್‌ರವರು ಈ ರಿಪೋರ್ಟನ್ನು ಬಹಳ ಸಂಕ್ಷೇಪವಾಗಿ ಬರೆದಿದ್ದಾರೆ ಇದರಿಂದ ಕಳೆದ ವರುಷ 1,13,603 ರೂಪಾಯಿಯ ಕಾಗದ, ಕಡ್ಡಿ, ಮಸಿ, ಸ್ಟೀಲು ಮೊದಲಾದ ಸಾದಿಲವಾರ್ ಸಾಮಗ್ರಿಗಳನ್ನು ಸಂಸ್ಥಾನದ ಸರ್ಕಾರಿ ಆಫೀಸುಗಳಿಗೂ ಕಳುಹಿಸಿಕೊಟ್ಟಿರುವಂತೆ ಗೊತ್ತಾಗುತ್ತದೆ ಮುಖ್ಯ ಕೋರ್ಟು ಕಚೇರಿಗಳಲ್ಲಿ ಅಪರಿಮಿತವಾದ ಬರವಣಿಗೆ ಕೆಲಸಗಳು ನಡೆಯುತ್ತವೆಂದೂ, ಆ ಪೈಕಿ ಹಲವು ವಿಷಯಗಳು ಮುಖ್ಯವಾಯಿತೊಂದಿರದೇ ಇರುವುದು ಊಹಿಸಬೇಕಾಗಿದೆ ಇನ್ನಾದರೂ ಬರವಣಿಗೆಯನ್ನು ಸ್ವಲ್ಪ ಕಡಮೆಮಾಡಿ ಚುರುಕಾದ ತನಿಖೆಯೂ, ಮುತವರ್ಜಿಯಾದ ವಿಚಾರಣೆಯೂ ನಡೆದರೆ ಆದರೆ ಎಲ್ಲಾ ಭಾಗಗಳಲ್ಲೂ ಮೇಲಾದೀತೆಂದು ತೋರುವುದು

ಪಶುವೈದ್ಯದ ಇಲಾಖೆ

ಈ ಇಲಾಖೆಯ ರಿಪೋರ್ಟನ್ನು ಓದಿನೋಡುವಲ್ಲಿ ಕಳೆದ ವರುಷ ಬಹಳ ಚೆನ್ನಾಗಿ ಕೆಲಸ ನಡೆದಿದೆ ಎಂದು ಗೊತ್ತಾಗುತ್ತದೆ ಪಶುವೈದ್ಯ ಚಿಕಿತ್ಸೆಯನ್ನು ಚೆನ್ನಾಗಿ ಕಲಿತು ಮಾಡಬಲ್ಲಂಥಾ ಪಂಡಿತರ ವಿಷಯದಲ್ಲಿ ಪ್ರಜೆಗಳು ಪ್ರೀತಿ ವಿಶ್ವಾಸಗಳನ್ನು ಪಡೆಯುತ್ತಿದ್ದಾರೆಂದೂ ತಮ್ಮ ಗೋಶಾಲೆಗಳನ್ನು ಅವರ ಚಿಕಿತ್ಸೆಗೆ ಒಪ್ಪಿಸುವ ಭಾಗದಲ್ಲಿ ಹೆಚ್ಚು ಹೆಚ್ಚಾಗಿ ಕುತೂಹಲ ಪಡುತ್ತಿದ್ದಾರೆಂದೂ ಕೇಳಿ ಸಂತೋಷಪಡುತ್ತೇವೆ ಈ ಇಲಾಖೆಯ ಕೆಲವು ನೌಕರರು ನಡಿಸಿದ ಕೆಲವು ವಿಷಯದಲ್ಲಿ ಅವಿಚಾರವೂ ಮುಂತಾದ ಮರೆ ಮೋಸ ಮಾಡದೆ ಯಥಾರ್ಥವನ್ನು ಕಾಣಿಸಿರುವಂತೆ ನಮಗೆ ತೋರುವುದು ಅವರು ನಡಿಸಿದ ಕಾರ್ಯವು ತೃಪ್ತಿಗೆ ಅತ್ಯಂತ ತೃಪ್ತಿಕರವಾಗಿದ್ದ ಪಕ್ಷದಲ್ಲಿ ಅವರನ್ನು ನೌಕರಿಯಿಂದ ತೆಗೆಯಬೇಕು ಸಂಸ್ಥಾನದ ಮುಳಿ ಪಶುವೈದ್ಯದ ಆಸ್ಪತ್ರೆಗಳಿಗೆ ಅನುಕೂಲ ವಾದ ಕಟ್ಟಡಗಳನ್ನು ಒದಗಿಸಿಕೊಟ್ಟರೆಂದು ನಿರೀಕ್ಷಿಸುತ್ತೇವೆ

ಮೈಸೂರು ಸೀಮೆಯ ಜಾತಿಗಳ ವಿವರಣೆ

ಗೌರವಾನ್ ಕೌನ್ಸಿಲರ್ ಮ ಎಚ್ ವಿ ನಂಜುಂಡಯ್ಯನವರು ನಮ್ಮ ದೇಶದಲ್ಲಿರುವಂಥಾ ಬೇರೆ ಬೇರೆ ಜಾತಿಗಳ ಕುಲಚರಿತ್ರೆಯನ್ನು ಬರೆದಿದ್ದಾರೆ ಬಂಜಾರರು, ಬೆಸ್ತರು, ಗಂಗಡಿಕಾರ ಒಕ್ಕಲು, ಗಾಣಿಗರು, ಕುರಿ ಕೋಗಿಗಳು, ನೇಕಾರರು, ಈ ಜನರ ಕುಲಚರಿತ್ರೆಗಳು ನಮಗೆ ತಲುಪಿದೆ ಇವನ್ನೆಲ್ಲಾ ಇಂಗ್ಲೀಷಿನಲ್ಲಿ ಬರೆದಿದ್ದಾರೆ ಬಂಜಾರರ ಚರಿತ್ರೆ 18 ಪುಟಗಳಲ್ಲೂ ತಲಾ 1 ಆಣೆ ಕ್ರಯ ಇಟ್ಟಿರುವರು ಪ್ರತಿ ಒಂದು ಪುಸ್ತಕದಲ್ಲಿಯೂ ಜಾತಿಯ ಉತ್ಪತ್ತಿಯನ್ನೂ ಪದ್ಧತಿ ಆಚಾರಗಳನ್ನೂ ವಿವರವಾಗಿ ಬರೆದಿದ್ದಾರೆ ಇನ್ನೂ ಅನೇಕ ಸಂಗತಿಗಳನ್ನು ಸಂಗ್ರಹಮಾಡಿ ಬರೆಯುವುದಕ್ಕೆ ಇನ್ನೂ ಪ್ರಯತ್ನಪಡಬೇಕೆಂದು ಧಾರಾಳವಾಗಿ ಹೇಳುತ್ತೇವೆ ಅವರು ಕೈಕೊಂಡಿರುವ ಈ ವಿಶೇಷತರವಾದ ಕಾರ್ಯವು ಪೂರೈಸಿದ ಪಕ್ಷದಲ್ಲಿ ನಮ್ಮ ದೇಶದ ಬೇರೆ ಬೇರೆ ಪಂಗಡಗಳ ಪ್ರಜೆಗಳ ಚರಿತ್ರೆಯನ್ನು ಬಹಳ ಸುಲಭವಾಗಿ ತಿಳಿಯುವಂತಾಗುತ್ತದೆ

ಸರ್ಕಾರಿ ವಸ್ತುಪ್ರದರ್ಶನಶಾಲೆ

ಬೆಂಗಳೂರು ಸಿಟಿಯಲ್ಲಿ ನಮ್ಮ ಸರ್ಕಾರದವರು ಇಡಿಸಿರುವ ವಿವಿಧ ವಸ್ತುಪ್ರಾಣಿಗಳ ಪ್ರದರ್ಶನಶಾಲೆ (ಮ್ಯೂಜಿಯಂ)ಯು ಪ್ರಜೆಗಳಲ್ಲಿ ವಿಶೇಷ ಕುತೂಹಲವನ್ನುಂಟುಮಾಡುತ್ತದೆ ಕಳೆದ ಸಾಲಿನಲ್ಲಿ 3,85,841 ಜನರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರುತ್ತಾರೆ, ಅಂದರೆ ದಿನ ಒಂದಕ್ಕೆ 1,000 ಕ್ಕಿಂತ ಹೆಚ್ಚು ಜನರು ಹೋಗಿದ್ದರೆಂದು ಗೊತ್ತಾಗುವುದು ಈ ಕಟ್ಟಡದಲ್ಲಿ ಇಟ್ಟಿರುವ ನಾನಾ ಬಗೆಯ ವಸ್ತುಗಳನ್ನು ನೋಡಿಬರುವುದರಿಂದ ಜನರ ಜ್ಞಾನವು ಹೆಚ್ಚುವುದಕ್ಕೆ ಸಹಾಯವಾಗುತ್ತಿದೆ ಈಗ ಸರ್ಕಾರದವರು ಇದರ ಏರ್ಪಾಡಿನ ವಿಷಯದಲ್ಲಿ ಮ್ಯೂಜಿಯಂ ಅಧಿಕಾರಿಯ ಅಭಿಪ್ರಾಯಗಳನ್ನು ಕೇಳಿರುವುದನ್ನು ನೋಡುವಲ್ಲಿ ಈ ಶಾಲೆಯ ಅಭಿವೃದ್ಧಿಯನ್ನು ಗವರ್ನ್‌ಮೆಂಟಿನವರು ಈ ಸಂಸ್ಥಾನದ ಪ್ರಜೆಗಳಿಗೆ ಇನ್ನೂ ಹೆಚ್ಚಾಗಿ ಪ್ರಯೋಜನವಾಗುವಂತೆ ಮಾಡಬೇಕೆಂದು ಯೋಚಿಸಿರುವಂತೆ ಕಾಣುತ್ತದೆ ಅವರ ಯೋಚನೆಯು ಬೇಗನೆ ಪಕ್ವವಾಗಿ, ಒಳ್ಳೆ ಫಲಕಾರಿಯಾಗಲೆಂದು ಹಾರೈಸುತ್ತೇವೆ

ರೇಷ್ಮೆ ವ್ಯವಸಾಯ

ಮೈಸೂರು ಗವರ್ನ್‌ಮೆಂಟಿನ ಸಂಪದಭ್ಯುದಯ ಸಮಾಜದ ಸೆಕ್ರೆಟರಿಯವರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ರೇಷ್ಮೆ ವ್ಯವಸಾಯವೆಂಬ ವಿಚಾರವನ್ನು ಕುರಿತು ಒಂದು ಪುಸ್ತಕವನ್ನು ಬರೆದು ನಮಗೆ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟಿದ್ದಾರೆ ಇದು ಬಹಳ ಚೆನ್ನಾಗಿ ಅಚ್ಚಾಗಿದೆ ಇದರ ಕೂಡ ಒಂದು ನಕ್ಷೆ (ಮ್ಯಾಪ್) ಯನ್ನು ಇಟ್ಟಿದ್ದಾರೆ ಈ ನಕ್ಷೆಯಿಂದ ಕೋಲಾರ್ ಡಿಸ್ಟ್ರಿಕ್ಟಿನ ಯಾವಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ರೇಷ್ಮೆ ತಯಾರಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ ಇದರಲ್ಲಿ ಕಾಣಿಸಿರುವ ಲೆಕ್ಕಗಳೆಲ್ಲಾ ಯಥಾರ್ಥವಾಗಿರುವ ಪಕ್ಷದಲ್ಲಿ ಅಲ್ಲಿನ ಪ್ರಜೆಗಳು ರೇಷ್ಮೆ ತಯಾರಿಯಿಂದ ಪ್ರತಿ ವರುಷವೂ 15,69,570 ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ ಈ ರಿಪೋರ್ಟನ್ನು ಯಾವ ಉದ್ದೇಶದಿಂದ ಅವರು ಪ್ರಕಟಮಾಡಿರುತ್ತಾರೆಯೋ ನಮಗೆ ಸರಿಯಾಗಿ ಗೊತ್ತಾಗುವುದಿಲ್ಲ ಇದರಲ್ಲಿ ಧ್ವಂದ್ವಾಭಿಪ್ರಾಯಗಳು ಹೊರಪಡುವುದರಿಂದ ಈ ಕಸಬು ಸದ್ಯ ಅಭಿವೃದ್ಧಿಯಾಗುತ್ತದೆಯೋ ಕ್ಷೀಣವಾಗುತ್ತಿದೆಯೋ ಹೇಳುವುದು ಕಷ್ಟ ಈ ರಿಪೋರ್ಟಿನಲ್ಲಿ ಒಂದು ಕಡೆ "ಈ ಡಿಸ್ಟ್ರಿಕ್ಟಿನಲ್ಲಿ ರೇಷ್ಮೆ ವ್ಯವಸಾಯವು ವೃದ್ಧಿಹೊಂದುತ್ತಿರುವುದಕ್ಕೆ ಲಕ್ಷಣಗಳು ಬಹಳ ಚೆನ್ನಾಗಿವೆ ಈ ಕಸಬನ್ನು ಇನ್ನೂ ಕ್ರಮಪಡಿಸಿ ಒಳ್ಳೇ ಸ್ಥಿತಿಗೆ ತರುವ ಭಾಗದಲ್ಲಿ ಅವಶ್ಯವಾದ ಕಾರ್ಯಗಳನ್ನು ಮಾಡುವುದಾದರೆ ಬೆಳೆಯನ್ನು ಎರಡರಷ್ಟು ಹೆಚ್ಚಿಸಬಹುದು" ಎಂಬದಾಗಿ ಬರೆದಿದೆ ಈ "ಅವಶ್ಯವಾದ ಕಾರ್ಯಗಳು" ಯಾವವೋ ಅದು ಮಾತ್ರ ಈ ರಿಪೋರ್ಟಿನಲ್ಲಿ ಯಾವ ಕಡೆಯಲ್ಲೂ ಕಾಣಿಸಿರುವುದಿಲ್ಲ ಈ ರಿಪೋರ್ಟಿನಿಂದ ಯಾರಿಗೆ ಪ್ರಯೋಜನವಾಗಬಹುದೋ ನಮಗೆ ತಿಳಿಯದು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್ಪಾಂಡೆನ್ಸ್

ಶಿಕಾರಿಪುರದಲ್ಲಿ ತರೀಜಮೀನು ಆಬಾದು ಬಗ್ಗೆ ನೀರಿನ ಸರಬರಾಯಿ.

ಅಯ್ಯಾ,

ಶಿಕಾರಿಪುರದ ತಾಲ್ಲೂಕು ಕಬ್ಬು ಮತ್ತು ಭತ್ತದ ಫಸಲಿಗೆ ಶ್ರೇಷ್ಠವಾದದ್ದು ಹಾಲಿ ಇರತಕ್ಕ ತರಿ ಜಮೀನುಗಳಿಗೆ ದೊಡ್ಡ ಕೆರೆಗಳು ಇರುತ್ತವೆ ಆದಾಗ್ಯೂ ಸಕಾಲಕ್ಕೆ ಮಳೆ ಬಾರದ್ದರಿಂದ ಕೆರೆಗಳು ತುಂಬದೆ ಫಸಲು ಕೆಟ್ಟು ಹೋಗಿ ರೈತರು ದುರ್ದಿನಸಗೆ ಬಂದಿರುವರು ವರ್ಷದ ಆಖೈರಿನಲ್ಲಿ ಮಳೆ ಬಕ್ಕ ಕಂಡುಬಂದರೂ ಸಕಾಲದಲ್ಲಿ ಬಾರದಿರುವದರಿಂದ ಫಸಲಿಗೆ ಪ್ರಯೋಜನವಾಗುವದಿಲ್ಲ ಈ ಭಾಗದಲ್ಲಿ ಈ ತಾಲ್ಲೂಕಿನಲ್ಲಿರತಕ್ಕ ಕುಮದ್ವತಿ ನದಿಯ ಪೂರ್ವಭಾಗದ ಪ್ರಜೆಗಳು ಬಹಳ ಕಷ್ಟಪಡುತ್ತಲಿದ್ದಾರೆ ಪಶ್ಚಿಮದ ಕಡೆ ಜಮೀನುಗಳು ಸ್ವಲ್ಪ ಮಲೆನಾಡುತರದ ಪ್ರದೇಶವಾಗಿರುವದರಿಂದಲೂ, ಹಾಲಿ ಒಂದು ಆಣೆ ಕಟ್ಟುತ್ತಾ ಇರುವದರಿಂದಲೂ ಅಲ್ಪ ಪ್ರಯೋಜನವನ್ನಾದರೂ ಹೊಂದಬಹುದಾಗಿ ಪೂರ್ವಭಾಗದ ಕೆಲ ಸುಮಾರು 30 ಗ್ರಾಮದ ರೈತರುಗಳು ಈ ನದಿಗೆ ಒಂದು ಆಣೆಕಟ್ಟು ಅಥವಾ ಕೆರೆಯನ್ನಾದರೂ ಮಾಡಿಕೊಟ್ಟು ಪ್ರಜೆಗಳನ್ನು ಸಂರಕ್ಷಿಸಬೇಕಾಗಿ ಈಗ ಸುಮಾರು 10-15 ವರುಷದ ಪ್ರಾರ್ಥನೆಯು ಸರ್ಕಾರದವರ ಆಲೋಚನೆಯಲ್ಲಿದೆ ಹಾಲಿ ಇರತಕ್ಕ ಉತ್ಪತ್ತಿಗಿಂತ ಹತ್ತು ಸಾವಿರ ರೂಪಾಯಿ ಹೆಚ್ಚಿಸಬಹುದಾಗಿ ಸರ್ಕಾರದಲ್ಲಿ ಪ್ರಾರ್ಥಿಸಿಕೊಂಡಿವೆ ಮೇಲ್ಕಂಡಂತೆ ಅಂಜನಾಪುರದ ಹತ್ತಿರ ಕೆರೆ ಅಥವಾ ಆಣೆ ಕಟ್ಟಿದರೆ ಅನೇಕ ಖುಷ್ಕಿ ಜಮೀನುಗಳು ತರಿ ಆಗುತ್ತವೆ ಈ ವಿಷಯದಲ್ಲಿ ಕಳೆದ ದಸರಾ ಸಭೆಯಲ್ಲಿ ಸರ್ಕಾರದವರನ್ನು ಬಹು ವಿಧವಾಗಿ ಪ್ರಾರ್ಥಿಸಿಕೊಳ್ಳಲಾಯಿತು ಈ ತಾಲ್ಲೂಕಿನಲ್ಲಿ ನೀರಿನ ಅನುಕೂಲತೆಗಳು ಹೆಚ್ಚಾಗಿ ಆಗಬೇಕಾದದ್ದು ಅತ್ಯವಶ್ಯಕ ಆದಾಗ್ಯೂ ಹೆಚ್ಚು ಕ್ಷಾಮ ದೆಸೆಗೆ ಒಳಪಡುತ್ತಿರುವ ಪ್ರಜೆಗಳನ್ನು ಪೋಷಿಸುವದು ಪ್ರಥಮ ಧರ್ಮವಲ್ಲವೇ ಎಂಬ ಶಂಕೆಯು ಬರುತ್ತದೆ ಈ ಅನನುಕೂಲಗಳು ನಿಜವೇ ಅಥವಾ ಸುಳ್ಳೇ ಎಂಬದನ್ನು ಯಾರಾದರೂ ವ್ಯವಸಾಯಿಸಬೇಕೆಂತಲೂ, ಈ ತಿಂಗಳಲ್ಲಿ ಅಧಿಕಾರಿ ಶಿರೋಮಣಿಗಳು ಈ ತಾಲ್ಲೂಕಿಗೆ ದಯಮಾಡಿಸುವ ಪದಂತಿ ಇರುವದರಿಂದ ಪ್ರಜೆಗಳೆಲ್ಲರೂ ಈ ಕಾಲದಲ್ಲಿ ಕಷ್ಟನಿವಾರಣೆ ಬಗ್ಗೆ ಪ್ರಾರ್ಥಿಸಿಕೊಳ್ಳಬೇಕಾಗಿ ಕೋರುತ್ತೇವೆ

ಬಾತ್ಮಿದಾರ್

ಮಳವಳ್ಳಿ ವರ್ತಮಾನಕ್ಕೆ ಜವಾಬು

ಅಯ್ಯಾ,

ಸ್ಕೂಲ್ ಮಾಸ್ಟರ್ ಎಸ್ ಪುಟ್ಟಯ್ಯನವರ ಮನೆ ಕಳುವು ವಿಚಾರದಲ್ಲಿ ಬಹಳ ಮುತುವರ್ಜಿ ಮೇಲೆ ಪತ್ತೆ ತರಪಡಿಸು ನಡಿಸಿದರು ಈ ಕೇಸನ್ನು ಮಾಡಿದವರು ಯಾರಾಯಿತು ಈ ಊರಿನಲ್ಲಿ ಕಳುವು ನಡೆದಿಲ್ಲ ಪೋಲೀಸಿನವರು ರಾತ್ರಿಕಾಲದ ಬೀಟನ್ನು ಬಹಳ ಸಮರ್ಪಕವಾಗಿ ನಡಿಸುತ್ತಿದ್ದಾರೆ ಕೋರ್ಟಿನ ತೀರ್ಮಾನವು ನಮ್ಮ ಇಷ್ಟದಂತಾದೀತೇ?—ಪೇಟೆ ಬಾಯ್ಸ್ ಕನ್ನಡ ಸ್ಕೂಲ್ ವಿಚಾರದಲ್ಲಿ ಪೇಟೆಯಲ್ಲಿರುವ ಜನಗಳ ಪೈಕಿ ಬಹುಭಾಗದವರು ವಿದ್ಯಾವಂತರಾಗಿರುತ್ತಾರೆ ಬಾಲಕರ ಪೋಷಕರಿಂದ ಆವರೆಲ್ಲರಿಗೂ ಸ್ಕೂಲಿನ ವಿಚಾರ ಸಮರ್ಪಕವಾಗಿದ್ದು ಒಬ್ಬರಿಗೆ ಮಾತ್ರ ಅಸಮರ್ಪಕವಾಗಿರುವದು ನೋಡಿದರೆ ಯಾವದೋ ದುರಭಿಪ್ರಾಯವಿರುವಂತೆ ವ್ಯಕ್ತಪಡುತ್ತದೆ ಪೇಟೆ ಗರ್ಲ್ಸ್ ಸ್ಕೂಲಿನ ವಿಚಾರದಲ್ಲಿ ಕೋಟೆ ಗರ್ಲ್ಸ್ ಸ್ಕೂಲಿಗೂ ಪೇಟೆ ಕೊನೆಗೂ ಸುಮಾರು 1 ಮೈಲಿ ದೂರವಿದೆ ಪೇಟೆ ಕೋಟೆ ಮಧ್ಯೆ ಬೈಲು, ಕೊಳ, ಭಾವಿಗಳು ಮೊದಲಾದವಿವೆ ಪೇಟೆಯ ಜನರೆಲ್ಲರೂ ಇತರ ಮತಸ್ಥರು ಕೋಟೆ ಗರ್ಲ್ಸ್ ಸ್ಕೂಲೆಂದರೋ ಬ್ರಾಹ್ಮಣರ ಬೀದಿಯಲ್ಲಿರುತ್ತೆ ಪೇಟೆಯಿಂದ ಸಣ್ಣ ಬಾಲಕಿಯರು ಗಾಳಿ, ಮಳೆ, ಬಿಸಿಲು ಕಾಲಗಳಲ್ಲಿ ದೂರ ಪ್ರದೇಶ ಹೋಗುವುದು ಹೇಗೆ? ಇತರ ಮತದವರಾದ ದೊಡ್ಡ ಬಾಲಕಿಯರಿಗೆ ಜಲಮಲ ವಿಸರ್ಜನೆಗೆ ಬಹು ತೊಂದರೆ ಸಮೀಪದಲ್ಲಿ ನೀರಿಲ್ಲದೆ ಕೆರೆ ಕೊಳಗಳಿಗೆ ಹೋಗಬೇಕಾಗುತ್ತದೆ ಇವೇ ಮೊದಲಾದ ಇನ್ನೂ ಬಹಳ ತೊಂದರೆಗಳಿವೆ ಇದನ್ನು ಯೋಚಿಸಿಯೇ ಪೇಟೆಯ ಅನೇಕರು ತಮ್ಮ ಬಾಲಕಿಯರಿಗೆ ವಿದ್ಯಾಭ್ಯಾಸ ಮಾಡಿಸಲು ಇಷ್ಟವಿದ್ದರೂ ಸುಮ್ಮನಿದ್ದಾರಲ್ಲದೆ ಸರ್ಕಾರದವರನ್ನು ಕೇಳಿಕೊಂಡಿದ್ದಾರೆ ಬಾತ್ಮಿದಾರರ ಅಭಿಪ್ರಾಯವು ಬ್ರಾಹ್ಮಣೇತರರಿಗೆ ವಿದ್ಯಾಭ್ಯಾಸವಿಲ್ಲದೆ ಮೌಢ್ಯದಲ್ಲಿ ಇರಬೇಕೆಂದು ಇರುವಂತೆ ತೋರುತ್ತದೆ ಇದಕ್ಕನುಸಾರವಾಗಿ ಒಬ್ಬ ಕ್ರೈಸ್ತ ಬಾಲಕಿಯನ್ನು 1 2 ವರುಷಗಳಿಂಗಲೂ ಕೋಟೆ ಸ್ಕೂಲಿಗೆ ಸೇರಿಸದೆ ಚರ್ಚೆ ನಡೆಯುತ್ತಿದೆ ಲೋಕದಲ್ಲಿ ಬ್ರಾಹ್ಮಣರೂ ಇತರರೂ ದೇವರ ಸೃಷ್ಟಿಗೊಳಪಟ್ಟರೂ, ಪ್ರತಿ ಒಬ್ಬರಿಗೂ ನಾಗರಿಕತೆ ಮತ್ತು ವಿದ್ಯೆ ಬೇಕು ಆದ್ದರಿಂದ ಸಮಸ್ತ ಪ್ರಜೆಗಳೂ ಒಂದೇ ಎಂದು ಯೋಚಿಸಿ ಬಹುಜನಕ್ಕೆ ಉಪಯೋಗವಾಗುವ ಕೆಲಸವನ್ನು ಮಾಡುವುದು ಉತ್ತಮ

ಪ್ರಜಾ ಪಕ್ಷಪಾತಿ

ನಂಜನಗೂಡು ಸಬ್ ರಿಜಿಸ್ಟ್ರಾರ್ ಆಫೀಸು

ಅಯ್ಯಾ,

ನಂಜನಗೂಡು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನನ್ನ ವಿಷಯವಾಗಿ ನಡೆದಿರುವ ವಿದ್ಯಮಾನಗಳನ್ನು ಕುರಿತು ತಮ್ಮ ಪತ್ರಿಕೆಯಲ್ಲಿ ಬಾತ್ಮಿ ಕೊಡುವದಕ್ಕೋಸ್ಕರ ಒಂದೆರಡು ಜನರು ನನ್ನನ್ನು ಪ್ರಶ್ನೆಮಾಡಿದರು ಇತರರಿಗಿಂತ ನಾನೇ ಬರೆಯುವುದು ಒಳ್ಳೇದೆಂತ ಯೋಚಿಸಿ ಬರೆದಿರುತ್ತೇನೆ ಪತ್ರವನ್ನು ರೆಜಿಸ್ಟರ್ ಮಾಡಿಸುವಾಗ್ಗೆ ಕಾಲವೂ ಹಣವೂ ವ್ಯಯವಾಗುವದೆಂದು ತಕ್ಕ ಮಟ್ಟಿಗೆ ತಮ್ಮ ವಾಚಕರಿಗೆ ಗೊತ್ತಿರಬಹುದು ಆದರೆ ಪತ್ರ ರೆಜಿಸ್ಟರ್ ಆದ ಮೇಲೂ ರೆಜಿಸ್ಟರ್ ಆಫೀಸಿನಿಂದ ಉಪಟಳಕ್ಕೆ ತೊಂದರೆಗೆ ಸಿಕ್ಕಿರುವದ ನನ್ನ ಸಂಗತಿಯನ್ನು ಕೇಳಲು ಅನೇಕರು ಕುತೂಹಲಪಡುತ್ತಿರುವುದು ಆಶ್ಚರ್ಯವೇ ಸರಿ ನಾನು ಚಾಮರಾಜನಗರದ ವಾಸಿಯಾಗಿ ನಂಜನಗೂಡು ತಾಲ್ಲೋಕು ಸರ್ವಮಾನ್ಯ ಹುಸ್ಕೂರು ಗ್ರಾಮದ ವೃತ್ತಿವಂತನಾಗಿರುತ್ತೇನೆ ನಾನು ಕಳೆದ ಸಾಲು ಅಕ್ಟೋಬರ್ 27 ರಲ್ಲೂ ನಮ್ಮ ವೃತ್ತಿ ಗ್ರಾಮದ ರೈತಹಿಡುವಳಿಯಿಂದ ನನಗೆ ಕ್ರಯಲಬ್ಧವಾದ ಒಂದು ಜಮೀನನ್ನು 150 ರೂಪಾಯಿಗೆ ಅದೇ ಗ್ರಾಮವಾಸಿಯಾದ ಪುಟ್ಟಬಸವಪ್ಪನೆಂಬುವನಿಗೆ ಕ್ರಯಕ್ಕೆ ಕೊಟ್ಟು ಅದೇ ದಿವಸ ನಂಜನಗೂಡು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಡಿಟೋ ಪತ್ರವನ್ನು ರೆಜಿಸ್ಟರ್ ಸಹಾ ಮಾಡಿಸಿದೆನು ಈ ಪತ್ರವು ರೆಜಿಸ್ಟರ್ ಆದ 1 ದಿವಸದ ಮೇಲೆ ಸದರಿ ಪುಟ್ಟಬಸವಯ್ಯನಿಗೆ ಡಿಟೋ ಪತ್ರವು ಸಹ ವಾಪಸು ಮಾಡಲಾಯಿತು

ಮುಂದಲ ಮಾತೆ ಅಂದರೆ ನವಂಬರ್ 21 ರಲ್ಲೂ ಸದರಿ ಸಬ್ ರೆಜಿಸ್ಟ್ರಾರವರು ಸದರಿ ಪುಟ್ಟಬಸವಯ್ಯನ ಪತ್ರದ ವಿಷಯವಾಗಿ ಹುಜೂರಿಗೆ ರಿಪೋರ್ಟು ಮಾಡಲು ನಿಮ್ಮ ಹೇಳಿಕೆ ಅಗತ್ಯವಾಗಿರುವದರಿಂದ ಈ ನೋಟೀಸು ತಲಪಿದ ಮೂರು ದಿನಗಳೊಳಗಾಗಿ ನಮ್ಮ ರೂಬರೂಬು ಹಾಜರಾಗಬೇಕೆಂತ ನನಗೆ 103 ನೇ ನಂ ನೋಟೀಸು ಕೊಟ್ಟರು ನಾನು ಅದರಂತೆ ಸಬ್ ರೆಜಿಸ್ಟ್ರಾರ್‌ರನ್ನು ಕಾಣಲು ಅವರು ತಮ್ಮ ಆಫೀಸು ಹೆಡ್ ಗುಮಾಸ್ತೆಯನ್ನು ಕಂಡು ಕೇಳುವುದೆಂತ ಅಪ್ಪಣೆ ಕೊಡಿಸಿದರು ಅದರಂತೆ ನಾನು ಅವರನ್ನು ಕಂಡು ಕೇಳಲು ಅವರು ಸಮಾಧಾನವಾಗಿ ಯಾವದನ್ನೂ ಹೇಳಲಿಲ್ಲ ಅನಂತರ ನಾನು ಸ್ವಲ್ಪ ದಿವಸ ಬಿಟ್ಟುಕೊಂಡು ಎರಡುಮೂರಾವರ್ತಿ ಬಂದು ಕಂಡು ಕೇಳಿದರೂ ಯಾವ ಉತ್ತರವನ್ನೂ ಕೊಡಲಿಲ್ಲ ಆದುದರಿಂದ ನಾನು ಸದರಿ ಸಬ್ ರೆಜಿಸ್ಟ್ರಾರ್‌ರಿಗೆ ಈ ರೀತಿ ತೊಂದರೆ ಪಟ್ಟುಕೊಂಡು ಬಂದು ವೃಥಾ ವಾಪಸು ಹೋಗುತ್ತಾ ಇದೇನೆ ಯಾತಕ್ಕೋಸ್ಕರ ನನ್ನ ಹಾಜರಾತಿಯನ್ನು ಕೇಳೋಣವಾಗಿ ಈ ರೀತಿ ಮಾಡೋಣವಾಗಿದೆ? ಈ ಬಗ್ಗೆ ಇಂವಾರಸು ಅಪ್ಪಣೆ ಕೊಡಿಸಬೇಕೆಂತ ಒಂದು ಅರ್ಜಿಯನ್ನು ರೆಜಿಸ್ಟರ್ ಮೂಲಕ ಬರೆದುಕೊಂಡೆನು ಅದಕ್ಕೂ ಜವಾಬು ಕೊಡಲಿಲ್ಲ ಅನಂತರ ಈ ಸಂಗತಿಯನ್ನು ಕುರಿತು ಮೈಸೂರು ಡಿಸ್ಟ್ರಿಕ್ಟ್ ಹುಜೂರಿಗೆ ಅರಿಕೆ ಮಾಡಿಕೊಂಡೆನು

ಇಷ್ಟರಲ್ಲಿ ನಾನು ರೆಜಿಸ್ಟರ್ ಮಾಡಿಸಿದ ಸದರಿ ಪತ್ರದ ಮೇಲೆ ರೆಜಿಸ್ಟರ್ ಕಾಲದಲ್ಲಿ ಆಗದೇ ಇರತಕ್ಕ, ನನಗೆ ನಷ್ಟವಾಗತಕ್ಕ ಒಂದು ಹೊಸ ಇಂಡಾರಸುಮೆಂಟನ್ನು ಮಾಡಿರುವುದಾಗಿ ತಿಳಿಯಬಂತು ನಮ್ಮ ಘನವನ್ನು ಹೊಂದಿದ ದಿವಾನ್ ಸಾಹೇಬರವರು ಅಭಿನಂದನ ಪತ್ರಿಕೆಗಿಂತಲೂ ರೂಬರೂಬು ವಿಚಾರ ಮಾಡುವುದೇ ಮೇಲೆಂಬ ದಿವ್ಯತತ್ವಕ್ಕೆ ಬಂದು ದಯಮಾಡಿರುವುದಾಗಿ ತಿಳಿದು, ಅವರು ನಂಜನಗೂಡು ಮೊಕ್ಕಾಮಿಗೆ ಬಿಜಯಂಗೈದಿರುವಾಗ್ಗೆ ನನ್ನ ವಿಷಯವಾಗಿ ನಡಿಸಿರುವ ನಂಜನಗೂಡು ಸಬ್ ರೆಜಿಸ್ಟ್ರಾರ್‌ರವರ ವಿಷಯವನ್ನು ಕುರಿತು ಒಂದು ಅರ್ಜಿಯನ್ನು ಜಾಹಿರು ಮಾಡಿಕೊಂಡೆನು ದಿವಾನ್‌ರವರು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ನನ್ನ ಅರ್ಜಿಯನ್ನು ಕಳುಹಿಸಿ ಕೊಟ್ಟಮೇಲೆ ಡೆಪ್ಯುಟಿ ಕಮಿಷನರ್ ಸಾಹೇಬರು ಸದರಿ ಸಬ್ ರೆಜಿಸ್ಟ್ರಾರ್ ಆಫೀಸಿಗೆ ಕಳೆದ ತಾ 28 ರಲ್ಲಿ ದಯಮಾಡಿ ನನ್ನ ಪತ್ರ ರೆಜಿಸ್ಟರ್ ಆಗಿದ್ದ ಪುಸ್ತಕ (ವಾಲ್ಯುಂ) ವನ್ನು ತರಿಸಿ ಪರಾಂಬರಿಕೆ ತೆಗೆದುಕೊಂಡು ನನ್ನ ವಿಷಯವಾಗಿ ಸದರಿ ಆಫೀಸರು ಮತ್ತು ಹೆಡ್ ಗುಮಾಸ್ತೆರು ಸಹಾ ನಡಿಸಿರುವ ವಿದ್ಯಮಾನಗಳನ್ನು ಗೊತ್ತುಮಾಡಿಕೊಂಡು ರಾಜಧಾನಿಗೆ ದಯಮಾಡಿಸಿ, ಈ ಮಾಹೆ 3 ರಲ್ಲೂ ಸದರಿ ಹೆಡ್ ಗುಮಾಸ್ತೆಗೆ ಸಸ್ಪೆಂಡ್ ಹುಕುಂ ಮಾಡಿ ಈ ಅರ್ಜಿ ವಿಚಾರವನ್ನು ತಾವೇ ವಿಚಾರಮಾಡಬೇಕೆಂತ ಕುತೂಹಲವಿದ್ದರೂ ಸರ್ಕಾರಿ ಕೆಲಸದ ನಿಮಿತ್ತ ಅದಕ್ಕೆ ಅವಕಾಶ ತಪ್ಪಿದ್ದರಿಂದ ಸಬ್ ಡಿವಿಜನ್ ಆಫೀಸರಿಗೆ ವಿಚಾರಮಾಡುವಂತೆ ಅಪ್ಪಣೆಕೊಡಿಸಿದರು ಅನಂತರ ಸಬ್ ಡಿವಿಜನ್ ಆಫೀಸರವರು ಈ ಮಾಹೆ 5 ರಲ್ಲೂ ಸದರಿ ಆಫೀಸಿಗೆ ದಯಮಾಡಿ ಸದರಿ ಪತ್ರದ ವಾಲ್ಯುಮನ್ನು ಪರಾಂಬರಿಕೆಗೆ ತೆಗೆದುಕೊಂಡರು ಸದರಿ ವಾಲ್ಯುಮಿನಲ್ಲಿ ಸದರಿ ಪತ್ರ ರೆಜಿಸ್ಟರ್ ಆದದ್ದು 27 10-1913 ರಲ್ಲಿ ಆಗಿದ್ದಾಗ್ಯೂ ಹೊಸ ಪಾಪ 3 ಆಯಿತೆಂಬ ತುಂಡುಪಟ್ಟಿಯ ಕೆಳಗೆ 27-11 1913 ಎಂತ ಇತ್ತು. ವಾಲ್ಯುಂ ಬರೆದ ಶಿರಸ್ತೇದಾರರ ಅಕ್ಷರವನ್ನು ಕುರಿತು ತುಂಡು ಪಟ್ಟಿಯನ್ನು ಬರೆಯುವುದಕ್ಕೆ ಕಾರಣವೇನೆಂದು ಬಹಳವಾಗಿ ಕೇಳಿ ಯಾವ ಮಾತನ್ನೂ ಆಡದೆ ಸಾಹೇಬರವರ ಧುರೀಣವಾದ ಅಪ್ಪಣೆಯಾದ ಮೇಲೆ ಸಬ್ ರೆಜಿಸ್ಟ್ರಾರ್‌ರವರ ಅಪ್ಪಣೆಯಾದನಂತರ

ಈಚೆಗೆ ಷರಾ ಬರೆಯುತೆಂಬ ಅಂಶವನ್ನು ತೋರ್ಪಡಿಸಿದರು ಸಾಹೇಬರವರು ಹಣ ಪಾವತಿಯಾದವ್ವಕ್ಕೆ ನನ್ನ ರುಜು ಎಲ್ಲಿಂದು ಸಬ್ ರಿಜಿಸ್ಟ್ರಾರವರನ್ನು ಕೇಳಲು ಪತ್ರ ಬರೆದುಕೊಟ್ಟು ನನ್ನನ್ನು ಹಣ ತೆಗೆದುಕೊಂಡು ಓಡಿಹೋದನು, ಯತ್ನವಿಲ್ಲದೆ ರುಜು ತೆಗೆದುಕೊಳ್ಳಲಿಲ್ಲವೆಂತ ಹೇಳಿದರು ಅನಂತರ ಸಾಹೇಬರು ಈ ಸಂಗತಿಗಳನ್ನು ನೋಟುಮಾಡಿಕೊಂಡು ಅಸಲ್ ಪತ್ರವನ್ನು ಹಾಜರು ಪಡಿಸುವದಕ್ಕೆ ಹುಕುಂ ಕೊಟ್ಟು ಈ ಮಾಹೆ ತಾ 12 ರಲ್ಲಿ ಸದರಿ ಪತ್ರವನ್ನು ಹಾಜರು ಪಡಿಸಿಕೊಂಡು ಇವಾರ ಇಷ್ಟರವುಟ್ಟಿಗೆ ಇದುವರಿವಿಗೆ ನಡೆದುಇರುತ್ತೆ

ನಂಜನಗೂಡು ಸಬ್ ರಿಜಿಸ್ಟ್ರಾರವರು ವಯಸ್ಕರಾಗಿಯೂ, ವಿದ್ಯಾವಂತರಾಗಿಯೂ, ಇಹಲೋಕ ವ್ಯಾಪಾರದಲ್ಲಿ ನಿಸ್ಪೃಹವಾದ ವೇದಾಂತಶಾಸ್ತ್ರಾಧ್ಯಯನ ಮತ್ತು ಅಧ್ಯಾಪಕರಾಗಿಯೂ ಇರುವರೆಂದು ನಿಜವಾಗಿ ಒಪ್ಪಿಕೊಳ್ಳುತ್ತೇನೆ ಆದರೆ ಈ ನನ್ನ ಸಂಗತಿಗಳಿಗೆ ಹೆಡ್ ಗುಮಾಸ್ತೆ ಮೊದಲಾದವರ ಮಾತಿಗೆ ಒಳಪಟ್ಟು ದೂರಸ್ಥಳದ ಮತ್ತು ಪರಿಚಯವಿಲ್ಲದವರಲ್ಲಿ ಹೇಗೆ ಬೇಕಾದರೂ ನಡಿಸಬಹುದೆಂಬ ವಿಷಯದಲ್ಲಿ ಕಥಂಚಿತ್ ಮನಸ್ಸು ಕೊಟ್ಟದ್ದಕ್ಕೋಸ್ಕರ ತುಂಬಾ ವಿಷಾದಪಡುತ್ತೇನೆ.

ತಾ|| 14-3-1914 ಜ್ಞಾನೇಶ್ವರ ಪಂಡಿತ.

ತಾಲ್ಲೂಕು ವರ್ತಮಾನಗಳು.

ಬೀರೂರು —ಬಿಸಿಲು ಈಗಲೇ ಸಹಿಸಲಸಾಧ್ಯವಾಗಿದೆ. ದಿನಸಿ ಧಾರಣೆಯು ಹೆಚ್ಚುತ್ತಲಿದೆ ಕಳೆದ 2-3 ತಿಂಗಳಿಂದ ಪ್ಲೇಗಿಗಾಗಿ ಊರುಬಿಟ್ಟವರು ಈಗೀಗ ಊರು ಸೇರುತ್ತಲಿದಾರೆ —ಈ ಊರಲ್ಲಿ ಪರಸ್ಪರಸಹಾಯ ಸಂಘವನ್ನು ಏರ್ಪಡಿಸಿಕೊಡಬೇಕಾಗಿ ಪ್ರಾರ್ಥಿಸಿಕೊಂಡಿದ್ದಂತೆ ಕಳೆದ ತಿಂಗಳು ಆ ಸಂಘಗಳ ಉಪನ್ಯಾಸಕರೂ, ಇನ್ಸ್ಪೆಕ್ಟರೂ ಆದ ಮ|| ಎಚ್ ವೆಂಕಟರಾಮಯ್ಯನವರು ದಯಮಾಡಿಸಿ, ಸ್ಥಳದ ಮುಖ್ಯಸ್ಥರನ್ನು ಬರಮಾಡಿಕೊಂಡು ಶ್ರೀಮಂಜುನಾಥ ಅನಾಥಾಲಯದ ಕಟ್ಟಡದಲ್ಲಿ ಎರಡು ದಿನ ಸಭೆಮಾಡಿ ಶ್ರೀಕೃಷ್ಣರಾಜ ಪರಸ್ಪರ ಸಹಾಯಕ ಸಂಘವೆಂಬ ಸೊಸೈಟಿಯನ್ನು ಸ್ಥಾಪಿಸಿದರು ಷೇರು 1ಕ್ಕೆ 10 ರೂ ನ 2,000 ಷೇರುಗಳನ್ನು ಮಾಡಿರುವರು ಇದುವರೆಗೆ ಸುಮಾರು 600 ಷೇರುಗಳ ಮೇಲೆಯೇ ಖರ್ಚಾಗಿವೆ. ಇದಕ್ಕೆ ಕಡೂರು ಅಮಲ್ದಾರರು ಅಧ್ಯಕ್ಷರಾಗಿಯೂ, ಮ|| ಖರೀದಿರಾಮಣ್ಣನವರು ಉಪಾಧ್ಯಕ್ಷರಾಗಿಯೂ, ಮ|| ಚನ್ನಯ್ಯನವರು ಕಾರ್ಯದರ್ಶಿಗಳಾಗಿಯೂ, ಮ|| ಪೊಂ ಹಾಲಪ್ಪನವರು ಖಜಾಂಚಿಯವರಾಗಿಯೂ, 5 ಮಂದಿ ಡೈರೆಕ್ಟರಾಗಿಯೂ ಇರುತ್ತಾರೆ.—ಈ ಊರು ದೊಡ್ಡದಾದರೂ ಒಂದು ವಾಚಕಮಂದಿರ ಇಲ್ಲದಿರುವುದು ತುಂಬಾ ಶೋಚನೀಯವಾಗಿದೆ. ಸೊಸೈಟಿಯವರು ಈ ವಿಷಯಕ್ಕೆ ಗಮನಕೊಡುವರಾಗಿ ನಂಬುತ್ತೇನೆ —ಈ ತಿಂಗಳು 1 ನೇ ತಾ ಬುಧವಾರ ಇಲ್ಲಿ ಉಪಾಸನಾಸಮಾಜವೆಂಬ ಭಜನಾಕೂಟದ ವಾರ್ಷಿಕೋತ್ಸವವು ಶ್ರೀಮಂಜುನಾಥ ಅನಾಥಾಲಯದ ಕಟ್ಟಡದಲ್ಲಿ ವಿಜೃಂಭಣೆಯಿಂದ ಜರುಗಿತು. ಆ ದಿನ ಪದ್ಧತಿಯಂತೆ ಎಲ್ಲರೂ ಸೇರಿ ಗ್ರಾಮಪ್ರದಕ್ಷಿಣೆಯಾಗಿ ಭಜನೆ ಮಾಡಿಕೊಂಡು ಬಂದರು ಸಾಮಾಜಿಕರು, ಸ್ಥಳೀಕ ದೊಡ್ಡಮನುಷ್ಯರು, ಡಾಕ್ಟರು, ಶೇಕದಾರರು, ಜಮಾದಾರರು, ಸ್ಕೂಲ್ ಮಾಸ್ಟರುಗಳೂ ಸಾಯಂಕಾಲ 6 ಘಂಟೆಗೆ ಶ್ರೀಮಂಜುನಾಥ ಅನಾಥಾಲಯದ ಕಟ್ಟಡದಲ್ಲಿ ಸಭೆ ಸೇರಿದರು. ಸಮಾಜದವರ ಕೋರಿಕೆಯಂತೆ ಡಾಕ್ಟರ್ ಮ|| ಚಿದಂಬರಪಂಡಿತರವರು ಅಗ್ರಾಸನವನ್ನು ವಹಿಸಿದರು. ಆಲಯದ ಬಾಲಕರು ದೇವರ ಪ್ರಾರ್ಥನೆ ಮಾಡಿ ಉತ್ಸವವನ್ನು ಪ್ರಾರಂಭಿಸಿದರು. ಆ ವೇಳೆ ಸಹಾಯಕಾರ್ಯದರ್ಶಿಗಳಾದ ಮ|| ಎಂ ಟಿ ಶೇಷಾದ್ರಿಯಂಗಾರ್ರು ವರ್ಷದ ರಿಪೋರ್ಟನ್ನು ಓದಿ ಸಭಿಕರಿಗೆ ತಿಳಿಯಪಡಿಸಿದರು. ಅದರ ಮುಖ್ಯ ಅಂಶಗಳಾವುವೆಂದರೆ ಶ್ರೀ ಉಪಾಸನಾ ಸಮಾಜವು ಮೊದಲು ಸ್ಥಾಪಿಸಲ್ಪಟ್ಟು ಅದರಿಂದ ಆಗುತ್ತಿದ್ದ ಧರ್ಮಕಾರ್ಯಗಳು ಮತ್ತು ಆಲಯವು ಸ್ಥಾಪಿತವಾಗಿ ಈ ಸ್ಥಿತಿಗೆ ಬಂದುದು. ಆಲಯದ ಸ್ಥಾಪಕರು ಇದಕ್ಕಾಗಿ ಒಂದು ಕೊಟಡಿಯನ್ನು ಅರ್ಪಿಸಿರುವುದು. ಮ|| ಮಾಗಡಿ ಎಂ ಟಿ ವಲ್ಲಭಯ್ಯಂಗಾರ್ರು ಇವೆರಡರ ಚರಿತ್ರೆಗಳನ್ನು ರಚಿಸಿರುವುದು ಇದು ಪುನಹ ಪ್ರಾರಂಭವಾಗಿ ಸರಿಯಾಗಿ ನಡೆಯುತಾ ಇರುವುದು ಅನಾಥ ಬಾಲಕರು ದಿನವಹಿ 15-20 ನಿಮಿಷ ಕೂಡಿ ಭಜನೆಮಾಡುತ್ತಿರುವುದು ಚಂದಾ ವಸೂಲಾಗಿರುವುದು. ಮೂಲಧನ ಸ್ಕೂಲ್ ಸರ್ಕಲ್ ಇನ್ಸ್ಪೆಕ್ಟರವರೇ ಮೊದಲಾದವರು ಬಂದು ನೋಡಿ ಸಂತೋಷಪಟ್ಟಿರುವುದೇ ಮುಂತಾದ ವಿಚಾರಗಳನ್ನು ಕುರಿತು ರಿಪೋರ್ಟು ಓದಿದರು ಬಳಿಕ ಮ|| ಸಿ. ಶಾಮಣ್ಣನವರು ಅಸ್ವಾರ್ಥತೆ ಮತ್ತು ಧರ್ಮದ ವಿಷಯವಾಗಿ ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು ಅಗ್ರಾಸನಾಸೀನರು ರಿಪೋರ್ಟಿನಿಂದ ತಿಳಿಯುವ ಮತ್ತು ಉಪಾಸನಾ ಸಮಾಜ ಎಂಬ ವಿಷಯವಾಗಿ ವಿವರಿಸಿ ಅನಾಥಾಲಯಕ್ಕೂ ಅದಕ್ಕೂ ಇರುವ ಸಂಬಂಧವನ್ನು ವಿವರಿಸಿ ಶ್ಲಾಘಿಸಿದರು ಇದಾದ ಮೇಲೆ ಸಮಾಜದ ಅಧ್ಯಕ್ಷರು, ಸಮಾಜಿಕರು ಐಕ್ಯಮತ್ಯದಿಂದ ಕೆಲಸಮಾಡುತ್ತಿರುವುದನ್ನು ತಿಳಿಸಿ ಅಗ್ರಾಸನಾಸೀನರನ್ನೂ ಸಭಿಕರನ್ನೂ ವಂದಿಸಿದರು ಮ|| ಆನಂದರಾಯರು ಎಲ್ಲರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದ ಬಳಿಕ ಗಂಧಪುಷ್ಪತಾಂಬೂಲಗಳು ಹಂಚಲ್ಪಟ್ಟವು. ಇದಾದ ಮೇಲೆ ಕ್ರಮ ಪ್ರಕಾರ ಸಮಾಜ ಮಂದಿರದಲ್ಲಿ ಭಜನೆ ನಡೆಯಿತು

ಮಂಡ್ಯ.—ಬಿಸಿಲೂ ಸೆಕೆಯೂ ಅಧಿಕ. ಎಲ್ಲಾ ಭಾಗಗಳಲ್ಲೂ ಕ್ಷಾಮವೇ ಪ್ರಾಪ್ತವಾದಂತೆ ಇದೆ. ದಿವಾನ್ ಸಾಹೇಬರ ಸವಾರಿಯು ಮುಂದಿನ ತಿಂಗಳ ಪ್ರಾರಂಭದಲ್ಲಿ ಈ ಮಂಡ್ಯದ ಕಡೆ ಚಿತ್ತೈಸುವದೆಂದು ವರ್ತಮಾನ. ಈ ಸಾರಿ ಅಲ್ಪಸ್ವಲ್ಪ ಭತ್ತದ ಬೆಳೆಯೇ ಹೊರ್ತು ಇನ್ಯಾವ ಬೆಳೆಯೂ ಆಗಲಿಲ್ಲ ಈ ಊರಿನ ಕೆರೆಯು ನೋಟಕ್ಕೆ ವಿಸ್ತಾರವಾಗಿದೆಯೇ ಹೊರ್ತು ಆಳವಿಲ್ಲ ವಿಪರೀತ ಹೂಳು ತುಂಬಿರುವದು ಒಳಗೆರೆಯಲ್ಲಿರುವ ಸುಬೇದಾರ್ ಕಟ್ಟೆಯನ್ನು ಸರ್ಕಾರದವರು ಕಾಪಾಡಿಕೊಟ್ಟರೆ ಪ್ರಯಾಣಿಕರಿಗೂ ಜಾನುವಾರುಗಳಿಗೂ ತುಂಬಾ ಪ್ರಯೋಜನವಾದೀತು.—ಇಲ್ಲಿನ ಪೊಲೀಸ್ ಇನ್ಸ್ಪೆಕ್ಟರ್ ಮ|| ವೆಂಕಟಗಿರಿ ಅಯ್ಯಂಗಾರವರಿಗೆ ಚಾಮರಾಜನಗರಕ್ಕೆ ವರ್ಗವಾಯಿತು ಇವರು ನಿಧಾನಿಗಳು, ಬಡವರ ಹಿತಚಿಂತಕರು, ಖಂಡಿತವಾದಿಗಳು. ಇವರಿದ್ದ 3-4 ವರ್ಷ ಕಾಲವೂ ಈ ಮಂಡ್ಯದ ಪ್ರಜೆಗಳಿಗೆ ಹಗಲು ರಾತ್ರಿ ನೆಮ್ಮದಿಯಾಗಿತ್ತು. ಅನೇಕರು ಇವರ ಶ್ರೇಯಸ್ಸನ್ನು ಬಯಸಿ ಅವರನ್ನು ತಕ್ಕ ಸನ್ಮಾನಗಳೊಂದಿಗೆ ಸಾಗಕಳುಹಿಸಿದರು. ಬದಲಾಗಿ ಬಂದಿರತಕ್ಕವರು ಮೇಲ್ಪಟ್ಟವರಂತೆ ಇರುವರೆಂದು ನಂಬಲಾಗಿದೆ —ಈ ಸಾರಿ ಕಾಮನ ಹಬ್ಬದಲ್ಲಿ ಹಿಂದೂ ಮುಸಲ್ಮಾನರೊಳಗೆ ವಿಶೇಷ ಕಾರ್ಯಭಾಗಗಳೇನೂ ಆಗದೆ ತಕ್ಕ ಪೊಲೀಸ್ ಬಂದೋಬಸ್ತಿನಿಂದ ಎಲ್ಲಾ ಸಂತೋಷಕರವಾಗಿ ಜರುಗಿತು —ಇತರ ತಾಲ್ಲೋಕುಗಳಿಗಿಂತಲೂ ಈ ತಾಲ್ಲೋಕಿನಲ್ಲಿ ಕೇರಿ ಗಿರಾಕಿ ಹೆಚ್ಚಾಗಿಯೂ, ಲಾಭವು ಮುಮ್ಮಡಿಯಾಗಿಯೂ ಆಗುತ್ತಿರುವುದು ಪಡಖಾನೆಯು ಊರೊಳಗೆ ಇರುವುದು ಕುಂಬಾಗಲುಟಿಗೆ ಅವಕಾಶ. ಈ ದುಕಾನನ್ನು ಊರಾಚೆ ಹಾಕಬೇಕೆಂದು ಯೋಚನೆ ಹುಟ್ಟಿ ಮೇಲ್ಪಟ್ಟ ಅಧಿಕಾರಿಗಳೂ ಇದರ ವಿಷಯ ಗಮನಕ್ಕೆ ತಂದುಕೊಂಡಾಗ್ಯೂ ಕಡೆಗೆ ಅದು ಊರೊಳಗೇನೇ ಸ್ಥಿರವಾಗಲು ಮ್ಯುನಿಸಿಪಾಲಿಟಿಯವರು ಲೈಸೆನ್ಸು ಕೊಟ್ಟದ್ದನ್ನು ನೋಡಿದರೆ ಮದ್ಯಪಾನ ನಿವಾರಣಾ ಸಂಘದವರ ಆಲೋಚನೆ ಪ್ರಯತ್ನಗಳನ್ನು ಸಾಫಲ್ಯಕ್ಕೆ ತಂದ ಹಾಗಾಗಲಿಲ್ಲ —ಮಹಮ್ಮದಿಯರು ತಮ್ಮ ಗುರುವಿನ ವಿಶೇಷವಾದ ಹಬ್ಬವನ್ನು ಬಹು ಅಟ್ಟಹಾಸದಿಂದ ಆಚರಿಸಿದರು ಅಗ್ಗ ತಮ್ಮ ಮತದ ಎಲ್ಲಾ ಮಕ್ಕಳಿಗೂ ಸುಖಭೋಜನವನ್ನು ಮಾಡಿಸಿ ವಿನೋದಗಳನ್ನು ಕಲ್ಪಿಸಿ ಬಹುಮಾನಗಳನ್ನು ಕೊಟ್ಟು ಸಂತೋಷಪಡಿಸಿದರು —ಎ ವಿ ಸ್ಕೂಲಿನ ಮುಂದುಗಡೆ ಇರುವ ಮ್ಯುನಿಸಿಪಲ್ ಭಾವಿಯು ತುಂಬಾ ಅಪಾಯ ಸ್ಥಿತಿಯಲ್ಲಿದ್ದು ದಡ ಕಳಕೊಂಡು ಬಿದ್ದ ಸಂಗತಿಯು ಮತ್ತೊಂದು ಸಾರಿ ಅಧಿಕಾರಿಗಳ ಚಿತ್ತಕ್ಕೆ ಬಂದರೆ ಒಳ್ಳೇದು. ದೊಡ್ಡ ರಸ್ತೆಯ ಪಕ್ಕದಲ್ಲಿರುವ ಹುಲ್ಲಿನ ಜೋಪಡಿಗಳನ್ನು ತೆಗಿಸಿ ಮನೆ ಕಟ್ಟಿಕೊಳ್ಳುವಂತೆ ಏರ್ಪಡಿಸಿದರೆ ಉತ್ತಮ. ಯಾಕೆಂದರೆ ಕೆಲವು ದಿನಗಳ ಹಿಂದೆ ಬೆಂಕಿ ಬಿದ್ದು ತುಂಬಾ ಅಪಾಯವಾಗುವಂತಿತ್ತು —ದಿವಾನರವರ ಸವಾರಿಯು ಈ ಕಡೆಗೆ ದಯಮಾಡಿದಾಗ ಮಹಮ್ಮದಿಯರಿಗೂ ಸರ್ಕಾರದವರಿಗೂ ಇರುವ ಜೋಪಡಿ ವ್ಯಾಜ್ಯವನ್ನು ಫೈಸಲ್ ಮಾಡುವರೆಂದು ಅನೇಕರು ನಿರೀಕ್ಷಿಸಿಕೊಂಡಿದಾರೆ — ಈ ಊರಿಗೆ 2 3 ಮೈಲಿ ದೂರದಲ್ಲಿ ಪ್ಲೇಗ್ ಕಾಣಿಸಿಕೊಂಡಿದೆ ಹೊಳಲು ಮಲ್ಲಿಗೆರೆ ಎಂಬ ಸ್ಥಳದಲ್ಲಿ ಪ್ಲೇಗ್ ಮಾರಮ್ಮನಿಗೆ 7 ಕೋಣಗಳನ್ನು ಆಹುತಿ ಕೊಟ್ಟ ಸಂಗತಿಯು ಬಹು ಪರಿತಾಪಕರವಾಗಿದೆ. ಮೂಢರಾದ ಪಂಚಮರಿಗೆ ಉತ್ತಮರೆನಿಸಿಕೊಂಡವರು ಪ್ರೋತ್ಸಾಹ ಕೊಟ್ಟದ್ದರಿಂದಲೇ ಈ ಪ್ರಾಣಹತ್ಯೆ ವಾಗಿರಬೇಕು ಇದರಿಂದ ಕಳೆದ ವರ್ಷ ಕೊಮ್ಮೇರಹಳ್ಳಿ ಗ್ರಾಮದಲ್ಲಿ ನಡೆದ ಪಂಚಮರ ಸಂಘದ ಯಾವ ಪ್ರಯತ್ನಗಳೂ ಬೋಧನೆಗಳೂ ಸಾಫಲ್ಯಕ್ಕೆ ಬಂದ ಹಾಗೆ ತೋರಲಿಲ್ಲ.—ಈ ಊರಿನ ಸಂತೆಯಲ್ಲಿ ಪಸಿಗೆ ಎತ್ತುವುದೂ, ಗೋಲಕಕ್ಕೆ ಕಾಣಿಕೆ ವಸೂಲುಮಾಡುವುದೂ ರೂಢಿಯಾಗುತಾ ಬರುತ್ತಲಿದೆ ಈ ಕಷ್ಟದ ಕಾಲದಲ್ಲಿ ಬಡವರನ್ನು ಬಿಟ್ಟು ಇತರರಲ್ಲಿ ಪಸಿಗೆ ಮುಂತಾದವುಗಳನ್ನು ಎತ್ತಿದರೆ ಯಾರ ಆಕ್ಷೇಪಣೆಯೂ ಇರಲಾರದು —ಇಲ್ಲಿನ ಸಬ್ ರಿಜಿಸ್ಟ್ರಾರ್ರಿಗೆ ಸೀಯರ್ರಕ್ಕೆ ವರ್ಗವಾಯ್ತು. ಬದಲಿಯವರು ನಾಗಮಂಗಲದಿಂದ ಬಂದಿದಾರೆ.

ಪತ್ತೇದಾರೀ ಕಥೆಗಳು.

ದುಷ್ಟಚತುಷ್ಟಯ 0-4-0 ಗುಡುಕುಕೆಂಡಕಳ್ಳ 0-4 0 ನರಬಲಿ 0 4-0. ಸೋಮಶೇಖರ 0-6-0 ರಘುಕುಲಚರಿತೆ (ಇದು ರಘುವಂಶದ ತಾತ್ಪರ್ಯ) 0-8-0. ವಿ ಪಿ ಸೇರಿ. [68-1]

ವಿಳಾಸ—ಚತುರಂಗ ಶಾಲಾ, ಬೆಂಗಳೂರು ಸಿಟಿ

ಬೇಕಾಗಿದೆ.

ನೂರೈವತ್ತು ಆಳುಗಳನ್ನು ಕಾಫೀತೋಟಕ್ಕೆ ಒದಗಿಸಿಕೊಂಡು ಮಾಹಿತಿಯಿಂದ ಕೆಲಸಗಳನ್ನು ನಡಿಸುವ ಒಬ್ಬ ಕಾಫೀತೋಟದ ರೈಟರ್ ಬೇಕಾಗಿದೆ. ಸಂಬಳ ವಗೈರೆ ಅವರವರ ಯೋಗ್ಯತೆಯ ಮೇಲೆ ಕೊಡಿಸೆ ಈ ಕೆಳಗಿನ ಅಡ್ರೆಸ್ಸಿಗೆ ಕಾಗದಪತ್ರ ನಡಿಸಿ ಎಲ್ಲಾ ಮಾಹಿತಿ ತಿಳಿದುಕೊಳ್ಳಬಹುದು

ಅಡ್ರೆಸ್ಸು—ಜಾವಳಿ ಗಣೇಶರಾವ್, ಕಾಫಿ ಪ್ಲಾಂಟರ್,

[64-2] ಬಾಳೂರ್, ಕಡೂರ್

MADEENA WATCH Co, MADRAS.

No. 21, ANEKARKONAN STREET.

EIGHT-DAY'S WINDING WATCH

ನಾಣ್ಯವಾದ ಮಾಲು.

ಒಂದಾವರ್ತಿ ಬೀಗದ ಕೈ ಕೊಟ್ಟರೆ ಆರೆಘಳಿಗೆಯಾದರೂ ಹೆಚ್ಚುಕಡಮೆಯಾಗದೆ ಬೀಗದ ಕೈ ಕೊಟ್ಟ ಲಾಗಾಯಿತು ಎಂಟು ದಿವಸಗಳವರೆಗೂ ಸರಿಯಾದ

ಹೊತ್ತನ್ನು ತೋರಿಸುವುದು ನೋಟಕ್ಕೆ ಅಂದವಾದ ಮುಖ ನಾವು ಈ ಗಡಿಯಾರವನ್ನು ಖಾತರಿಯಾಗಿ ಶಿಫಾರಸು ಮಾಡಬಲ್ಲೆವು ಎಲ್ಲರಿಗೂ ಸಾಧ್ಯವಾಗಿರಬೇಕೆಂದು ಇದಕ್ಕೆ ಅಲ್ಪವಾದ ಬೆಲೆಯನ್ನಿಟ್ಟಿರುತ್ತೇವೆ. [36-3]

ಕ್ರಯ ಪೋಸ್ಟೇಜು ಸಹಿತ

ರೂ 6-8-0.

7 ವರುಷ ಗ್ಯಾರಂಟಿ.

ಪ್ಯಾಕಿಂಗುಛಾರ್ಜು ಮಾಫಿ ಸಾಮಾನು ಪಸಂದುಬಾರದೆಹೋದಲ್ಲಿ 15 ದಿವಸದೊಳಗೆ ಬದಲಾಯಿಸಿಕೊಳ್ಳಬಹುದು

ಅಡ್ರಸ್—ಮೆಡೀನಾ ವಾಚ್ ಕಂಪನಿ,

ನಂ. 21, ಅನೇಕಾರಕೋಣನ್ ಬೀದಿ, ಜಿ. ಟಿ, ಮದರಾಸು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 5-12

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

Always get the Emulsion with this mark—the Fishman the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಹೊಸ ಮಾಸ ಪತ್ರಿಕೆ' ಭಾರತೀವಿಲಾಸ ದ್ವಿತೀಯ ವರ್ಷಾರಂಭ

ಮೊದಲನೇದಾಗಿ—ಅವತಾರವೆತ್ತಿದಂಥ ದೇವರು ಸಾಯಬಾರದೆಂದು ಹಿಂದುಗಳು ಯಾಕೆ ಹೇಳಬೇಕು? ಹಿಂದುಗಳು ನಂಬುವಂಥ ಅವತಾರಪುರುಷರಿಗೂ ಕೂಡ ಮರಣವು ಪ್ರಾಪ್ತವಾಯಿತೆಂದು ಹಿಂದು ಗ್ರಂಥಗಳಲ್ಲಿಯೇ ಬರೆದಿರುವದಿಲ್ಲವೇ? ದೃಷ್ಟಾಂತವಾಗಿ ಸಾಕ್ಷಾತ್ ದೇವರೇ ಕೃಷ್ಣಾವತಾರವೆತ್ತಿ ಬಂದಿದ್ದನೆಂದು ನಂಬುವವರೆಲ್ಲರೂ ಕಡೆಯಲ್ಲಿ ಆತನು ಸತ್ತನೆಂಬುವದಕ್ಕೆ ಒಪ್ಪಿಕೊಳ್ಳುವವರಾಗಿರುತ್ತಾರೆ ಕೃಷ್ಣನು ಮರಣವನ್ನು ಹೊಂದಿದ ಸಂದರ್ಭಗಳಿಗೂ ರೀತಿಗೂ ಕ್ರಿಸ್ತನು ಮರಣವನ್ನು ಹೊಂದಿದ ಸಂದರ್ಭಗಳಿಗೂ ರೀತಿಗೂ ಬಹಳ ವ್ಯತ್ಯಾಸವು ಇರುತ್ತದೆ ಹೀಗಿದ್ದಾಗ್ಯೂ ಯಾರ್ಯಾರನ್ನು ಹಿಂದುಗಳು ಅವತಾರಪುರುಷರೆಂದು ನಂಬಿದ್ದರೋ ಅವರೆಲ್ಲರಿಗೂ ಮರಣವು ಸಂಭವಿಸಿದ್ದು ಹಿಂದುಗಳ ಒಂದು ಅಭಿಪ್ರಾಯವನ್ನು ಪ್ರಕಾಶಪಡಿಸುತ್ತದೆ ಅದೇನಂದರೆ—ದೇವರು ಅವತಾರವೆತ್ತುವ ಕಾಲದಲ್ಲಿ ಮನುಷ್ಯರು ಅನುಭವಿಸುವ ಸುಖದುಃಖಮರಣಾದಿಗಳಲ್ಲಿ ಆತನು ಪಾಲುಗಾರನಾಗದೆ ಹೋದರೆ ಆ ಅವತಾರವು ವಾಸ್ತವವಾಗಿಯೂ ಸಂಪೂರ್ಣವಾಗಿಯೂ ನರಾವತಾರವಾಗಿರುವದಿಲ್ಲ ಎಂಬುವದೇ ಅವತಾರವು ವಾಸ್ತವವಾಗಿ ನರಾವತರವೇ ಆಗಿರುವ ಪಕ್ಷದಲ್ಲಿ ದೇವರು ನಮ್ಮಂತೆಯೇ ಸತ್ತನೆಂದು ಭಾವಿಸಿಕೊಳ್ಳಬೇಕಾಗಿರುತ್ತದೆ ಹಾಗಿಲ್ಲದ ಪಕ್ಷದಲ್ಲಿ ಆ ಅವತಾರವನ್ನು ಪೂರ್ಣ ನರಾವತಾರವೆಂದು ಹೇಳುವದಕ್ಕಾಗುವದಿಲ್ಲ ಕ್ರಿಸ್ತನು ಅನುಭವಿಸಿದ ಮರಣವು ಆತನ ದೈವತ್ವಕ್ಕೆ ಕುಂದಕವನ್ನುಂಟುಮಾಡುವದಿಲ್ಲ ಇದಕ್ಕೆ ಬದಲಾಗಿ ಕ್ರಿಸ್ತನು, ಅಂದರೆ ಮಾನವ ರೂಪದಲ್ಲಿ ಕಾಣಿಸಿಕೊಂಡಿದ್ದ ದೇವರು, ಮರಣವನ್ನನುಭವಿಸದೆ ಇದ್ದ ಪಕ್ಷದಲ್ಲಿ ಆತನು ಎತ್ತಿದ್ದ ಅವತಾರವು ಸಹಜವಾಗಿ ಸಂಪೂರ್ಣವಾದ ಮಾನುಷ ಅವತಾರವೇ ಆಗಿತ್ತೆಂದು ಹೇಳುವದಕ್ಕೆ ಆಸ್ಪದವೇ ಇರುತ್ತಿರಲಿಲ್ಲ ನರಾವತಾರ ಪುರುಷನಾದ ಕ್ರಿಸ್ತನ ವಿಷಯ—"ಆತನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಆದನು" ಎಂದು ಪೂರ್ವ ಕಾಲದ ಒಬ್ಬ ಕ್ರೈಸ್ತ ಭಕ್ತನು ಬರೆದಿರುತ್ತಾನೆ ಮರಣವನ್ನನುಭವಿಸುವದರಲ್ಲಿಯೂ ಕೂಡ ಆತನು ನಮ್ಮಂತೆಯೇ ಆದನು ಆತನು ಸಾಯದೆ ಇದ್ದ ಪಕ್ಷದಲ್ಲಿ ಆತನು ಸಹಜವಾಗಿಯೂ ಪರಿಪೂರ್ಣವಾಗಿಯೂ ಮಾನವ ಅವತಾರಿಯಾಗಿದ್ದನೆಂದು ಹೇಳುವದು ಅಸಾಧ್ಯವಾಗಿತ್ತು

ಮುಂದಿನ ವಾರದಲ್ಲಿ ನಾವು ಕ್ರಿಸ್ತನ ಮರಣವನ್ನು ಕುರಿತ ಚರಿತ್ರೆಯನ್ನು ವಿವರವಾಗಿ ಬರೆಯಬೇಕೆಂದಿರುತ್ತೇವೆ ಸದ್ಯಕ್ಕೆ ಒಂದು ವಿಷಯವನ್ನು ಹೇಳಿದರೆ ಸಾಕಾಗಿರುವದು ಅದೇನಂದರೆ—ಕ್ರಿಸ್ತನ ಮರಣವು ಆತನು ನಮ್ಮಂತೆ ಸಾಯುವಷ್ಟರ ಮಟ್ಟಿಗೆ ವಾಸ್ತವವಾಗಿಯೂ ಸಂಪೂರ್ಣವಾಗಿಯೂ ಮಾನವನಾಗಿದ್ದನೆಂಬುವದನ್ನು ಸಿದ್ಧಾಂತಪಡಿಸುತ್ತದೆಂದು ನಾವು ತೋರಿಸಿರುತ್ತೇವೆ ಇದು ವಾಸ್ತವವೇ ಆಗಿದ್ದಾಗ್ಯೂ ಒಂದು ವಿಷಯದಲ್ಲಿ ಆತನ ಮರಣವು ಆತನು ಮಾನವರಿಗಿಂತ ಹೆಚ್ಚಿನವನಾಗಿದ್ದನೆಂಬುವದನ್ನು ಪ್ರಕಾಶಪಡಿಸುತ್ತದೆ ದುಷ್ಟರು ಆತನನ್ನು ಕೊಂದುಹಾಕಿದರು ಮಾನವರ ಅಹಂಕಾರ, ಮೂರ್ಖತನ, ಮತ್ಸರ, ಹುಳ್ಳಿದ್ವೇಷ ಇವೇ ಮೊದಲಾದವುಗಳು ಆತನ ಮರಣಕ್ಕೆ ಕಾರಣಗಳಾಗಿದ್ದವು ಮಾನವರಲ್ಲಿ ಇಂಥ ಪಾಪಗಳು ಇಲ್ಲದಿದ್ದರೆ ಅವರು ಆತನನ್ನು ಶಿಲುಬೆಯ ಮರಕ್ಕೆ ಜಡಿಯುತ್ತಿರಲಿಲ್ಲ ಕ್ರಿಸ್ತನು ಪಾಪಮಾಡುವದಕ್ಕಾದರೂ ಅಥವಾ ಪಾಪಕ್ಕೆ ವಿರೋಧವಾಗಿ ಪ್ರತಿಭಟಿಸುವದನ್ನು ಬಿಟ್ಟುಬಿಡುವದಕ್ಕಾದರೂ ಕ್ಷಣಮಾತ್ರಕ್ಕೆ ಒಪ್ಪಿದ್ದ ಪಕ್ಷದಲ್ಲಿ ಆತನು ತನಗೆ ಸಂಭವಿಸಿದ ಮರಣದಿಂದ ತಪ್ಪಿಸಿಕೊಳ್ಳಬಹುದಾಗಿತ್ತೆಂಬುವದನ್ನು ನಮ್ಮ ವಾಚಕಮಹಾಶಯರುಗಳು ಮರೆಯಬಾರದು ಇದನ್ನು ಆತನು ಸ್ಪಷ್ಟವಾಗಿ ಅರಿತಿದ್ದನು ಆದರೂ ಆತನು—ನನ್ನ ಪ್ರಾಣವು ಹೋದರೆ ಹೋಗಲಿ, ಪಾಪಮಾಡುವದಕ್ಕಿಂತ ಮುಂಚೆ ನಾನು ಸಾಯುತ್ತೇನೆ, ಕೆಟ್ಟದ್ದನ್ನು ಮಾಡುವದಕ್ಕೆ ಒಪ್ಪಿ ನನ್ನ ಪ್ರಾಣವನ್ನು ಉಳಿಸಿಕೊಳ್ಳುವದಕ್ಕಿಂತ ಸಾಯುವದೇ ಲೇಸು ಎಂದು ಹೇಳಿದನು,

ನಾವೆಲ್ಲರೂ ಎಷ್ಟರ ಮಟ್ಟಿಗೆ ಪಾಪದಲ್ಲಿ ಬಿದ್ದು ನರಳಾಡುತ್ತಿದ್ದೇವೆಂಬುವದನ್ನು ಯೋಚನೆಮಾಡಿಕೊಳ್ಳೋಣ

> ಪಾಪೋಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ।
> ತ್ರಾಹಿಮಾಂ ಪುಂಡರೀಕಾಕ್ಷ ಸರ್ವಪಾಪ ಹರೋ ಹರಿಃ॥

ಈ ಶಾಸ್ತ್ರವಚನವು ನಮ್ಮ ಯಥಾರ್ಥವಾದ ಸ್ಥಿತಿಯನ್ನು ಪ್ರಕಟಪಡಿಸುತ್ತದೆ ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ತೋಡಿದ ಭಾವಿಗೆ ಜಲವೇ ಸಾಕ್ಷಿ ನಮ್ಮ ದೇಹಗಳು ಪಾಪಮಯವಾಗಿರುತ್ತವೆ ಜನರು ನಾಲ್ಕು ಆಣೆಗೆ ಸುಳ್ಳುಸಾಕ್ಷಿ ನುಡಿಯುವರು ಅಲ್ಪ ಲಾಭಕ್ಕಾಗಿ ವರ್ತಕರು ಕಡಮೆ ತೂಕ ಕೊಡುವರು ಜನರು ಹೆಸರುವಾಸಿಯನ್ನೂ ಆಸ್ತಿಯನ್ನೂ ಸುಖವನ್ನೂ ಪಡೆಯುವದಕ್ಕಾಗಿ ದಿನಾಲು ಪಾಪಮಾಡುವದಕ್ಕೆ ಸಿದ್ಧರಾಗಿರುವರು ಹೀಗಿರುವ ಕಾರಣ ನೀತಿವಂತರಾಗಿ ಬದುಕುವವರಿಗೆ ಬಹಳ ಕಷ್ಟ ಸತ್ಯಕ್ಕೆ ಹೋದರೆ ಮೈ ಚಿಕ್ಕರೆ ಎಂಬ ಗಾದೆಯು ಸತ್ಯವಾಗಿಯೇ ಇರುತ್ತದೆ ಮೈ ಚಿತ್ತಲೆಯಾದರೂ ಆಗಲಿ ಸತ್ಯವೇ ನಮಗೆ ಬೇಕು, ಪಾಪಮಾಡಿ ಲಾಭಸಂಪಾದಿಸುವದು ಮಾತ್ರ ನಮಗೆ ಬೇಡವೇ ಬೇಡ ಎಂಬ ಧರ್ಮ ಬುದ್ಧಿಯುಳ್ಳವರು ಸಿಕ್ಕುವದು ಬಹು ಅಪರೂಪ ಆದರೆ ಕ್ರಿಸ್ತನು—ನನ್ನ ಮೈ ಚಿತ್ತಲೆಯಾದರೂ ಆಗಲಿ, ನಾನು ತುಂಬಾ ಅವ

...ವನಾಗಿ ಸತ್ತರೂ ಸಾಯಲಿ ಆದರೆ ಪಾಪದ ಸಂಬಂಧವು ಮಾತ್ರ ನನಗೆ ...ಬೇಡವೆಂದು ಹೇಳಿದನು ಕತ್ತಲೆಗೂ ಬೆಳಕಿಗೂ ಎಷ್ಟು ಸಂಬಂಧವು ...ದಯೋ ಕ್ರಿಸ್ತನಿಗೂ ಪಾಪಕ್ಕೂ ಅಷ್ಟು ಸಂಬಂಧವು ಇತ್ತು ಆತನು ...ಬದ್ಧವೈರಿಯಾಗಿದ್ದನು ಅದನ್ನು ನಾಶಮಾಡಬೇಕೆಂಬ ಉದ್ದೇಶದಿಂದ ...ನು ಈ ಲೋಕಕ್ಕೆ ಬಂದು, ಪಾಪರಹಿತನಾಗಿ ಬದುಕಿ, ಪಾಪದ ಸಂಗಡ ...ವಾದರೂ ಸಂಬಂಧವನ್ನು ಬೆಳಸುವದಕ್ಕಿಂತ ಸಾಯುವದೇ ಲೇಸೆಂದು ...ದನು ಹೀಗೆ ಆತನು ಪಾಪರಹಿತನಾಗಿಯೂ ಪೂರ್ಣ ಪರಿಶುದ್ಧನಾಗಿಯೂ ...ನೆಂಬುವದನ್ನು ಪ್ರಕಾಶಪಡಿಸಿದನು ಯಾವಾತನು ಪಾಪಮಾಡುವದಕ್ಕಿಂ ...ಸಾಯುವದೇ ಲೇಸೆಂದು ಭಾವಿಸಿದನೋ ಆತನು ನಿಷ್ಕಳಂಕನಾದ ಧರ್ಮ ...ದಯನೇ ಆಗಿರುತ್ತಾನೆ ಶ್ರೀಗಂಧದ ಮರವು ತನ್ನ ಸುವಾಸನೆಯನ್ನು ಕೊಡು ...ದುದಾಗ ಅದು ಕಡಿಯಲ್ಪಟ್ಟ ಮೇಲೆಯೇ ಅಲ್ಲವೇ ? ಹೀಗೆಯೇ ಕ್ರಿ ...ಸ್ತನು ತಾನು ಅನುಭವಿಸಿದ ಕ್ರೂರಮರಣದಿಂದ ತನ್ನ ಗುಣಮಹಿಮೆಯನ್ನು ...ಪ್ರಕಾಶಪಡಿಸಿದನು ಕ್ರಿಸ್ತನ ಮರಣವು ಆತನು ಪಾಪಕ್ಕೆ ಬದ್ಧದ್ವೇಷಿಯಾಗಿ ...ದೂ ಪೂರ್ಣ ಪವಿತ್ರನಾಗಿಯೂ ಇದ್ದನೆಂಬುವದನ್ನು ಸಿದ್ಧಾಂತಪಡಿಸುತ್ತದೆ ...ಮರಣವನ್ನು ಯಾವನಾದರೂ ಲಘುವಾಗಿ ಎಣಿಸಬಹುದೇ ? ಕ್ರಿಸ್ತನು ...ಸುರವಾದ ಮತ್ತು ಸಂಪೂರ್ಣವಾದ ಮಾನುಷ ಅವತಾರಿಯೆಂದು ...ಪಡಿಸುವದಕ್ಕೆ ಸಾಯಬೇಕಾದದ್ದು ಅವಶ್ಯವಾಗಿತ್ತು ಇಷ್ಟೇ ಅಲ್ಲ ...ನು ತನ್ನ ಮರಣದಿಂದ ತಾನು ಪಾಪಕ್ಕೆ ಬದ್ಧದ್ವೇಷಿಯಾಗಿಯೂ ಪಾಪರಹಿತ ...ನಾಗಿಯೂ ಇದ್ದೆನೆಂಬುವದನ್ನು ಸಿದ್ಧಾಂತಮಾಡಿದನು ಪಾಪದ ಸಂಗಡ ತಿಲಾಂ ...ವಾದರೂ ಸಂಬಂಧವನ್ನು ಬೆಳಿಸುವದಕ್ಕೆ ಮನಸ್ಸಿಲ್ಲದೆ ತನ್ನ ಪ್ರಾಣವನ್ನೇ ಬಿ ...ಕ್ರಿಸ್ತನು ಮಾನವರೂಪದಲ್ಲಿ ಕಾಣಿಸಿಕೊಂಡ ಸಾಕ್ಷಾತ್ ದೇವರಾಗಿಯೇ ...ರದೇಕಲ್ಲವೇ ? ಕ್ರಿಸ್ತನ ಮರಣವು ಬೇರೆ ಎಲ್ಲವುಗಳಿಗಿಂತಲೂ ಹೆಚ್ಚಾಗಿ ...ನು ಪವಿತ್ರನಾದ ದೇವರಾಗಿಯೇ ಇದ್ದನೆಂಬುವದನ್ನು ಸಿದ್ಧಾಂತಪಡಿಸುತ್ತದೆ

[ಸಶೇಷ]

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

...

ತೀರ್ಥಹಳ್ಳಿಯ ಸ್ಕೂಲ್ ವಿದ್ಯಾರ್ಥಿಗಳು ಒಂದು ಸಭೆಯನ್ನು ಮಾಡಿ ...ಉಪನ್ಯಾಸಗಳನ್ನೂ ಚರ್ಚೆಗಳನ್ನೂ ನಡಿಸುತ್ತಾ ಅಭಿವೃದ್ಧಿ ಹೊಂದು ...ತಾರೆಂದು ತಿಳಿದು ಸಂತೋಷಪಡುತ್ತೇವೆ

...

ಬೆಂಗಳೂರು ಬಿನ್ನಿ ಕಂಪನಿಯಲ್ಲಿ ಕ್ಯಾಷಿಯರಾಗಿದ್ದು ಸುಮಾರು 31,000 ...ರೂಪಾಯಿ ತಿಂದುಹಾಕಿದ ಎಂ ಎ ಶ್ರೀನಿವಾಸಯ್ಯಂಗಾರ್ ಎಂಬುವನಿಗೆ ...ಜಡ್ಜರು ೭ ವರುಷ ಕಠಿಣ ಸಜವನ್ನೂ 2,000 ರೂಪಾಯಿ ಜುಲ್ಮಾನೆ ...ಯನ್ನು ಕಳೆದ ಸೋಮವಾರ ವಿಧಿಸಿದರು

...

ಮ|| ಶಿವಯ್ಯ ಶಾಸ್ತ್ರಿಗಳು ಬೆಂಗಳೂರು ಪೇಟೆಯಲ್ಲಿ ಕಳೆದ ವಾರ ೩-೪ ...ಹರಿಕಥೆ ಮಾಡಿದರೆಂದೂ, ಮ|| ಚಿಕ್ಕಣ್ಣಸೆಟ್ಟರ ಪಾಪಿಸ ಬಳಿ ಹಾಕಿದ್ದ ...ಮುಂಟಪದಲ್ಲಿ ಹರಿಕಥೆ ನಡೆದಾಗ್ಗ ಸುಮಾರು 3,000 ಕ್ಕಿಂತಲೂ ...ಗಿ ಜನರು ಸೇರಿ ಸಂತೋಷಪಟ್ಟರೆಂದೂ ಒಬ್ಬ ಬಾತ್ಮಿದಾರರು ...ಯುತ್ತಾರೆ

...

ರಾಜಧಾನಿಯ ಕೋಟೆಯಲ್ಲಿ ವರಾಹಸ್ವಾಮಿ ದೇವಸ್ಥಾನದ ಎದುರು ...ರುತ್ತಿದ್ದ ಬಸವರಾಜ ಬಹದ್ದರವರು ಕಳೆದ ಶನಿವಾರ ಮಧ್ಯಾಹ್ನ ...ವಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ಇನ್ನೂ 26 ವರುಷ ...ಯಸ್ಸು ಇತ್ತು ಅರಮನೆಯ ಬಿರುದುಗಳ ಸಮೇತ ಶವವನ್ನು ಮೆರವಣಿಗೆ ...ಯಿಂದ ಸಾಗಿಸಿ ಆ ರಾತ್ರಿ ದಹನ ಮಾಡಿದರು

...

ಮ|| ವಿ ಪಿ ಮಾಧವರಾವ್, ಸಿ ಐ ಇ, ರವರು ಕಳೆದ ತಾ 17 ನೇ ...ಮಂಗಳವಾರ ಮಧ್ಯಾಹ್ನ ಬರೋಡಾ ಸಂಸ್ಥಾನದ ದಿವಾನಗಿರಿಯನ್ನು ...ವಹಿಸಿಕೊಂಡರು ದಿವಾನ್ ಬಹದ್ದೂರ್ ಮ|| ಕೆ ಪಿ ಪುಟ್ಟಣ್ಣಸೆಟ್ಟರವರು ...ಮಹಾಜನರ ಪರವಾಗಿ ಮ|| ಮಾಧವರಾಯರಿಗೆ ಸಂತೋಷಸೂಚಕ ...ದ ತಂತಿವರ್ತಮಾನವನ್ನು ಕಳುಹಿಸಿರುತ್ತಾರೆ

...

ಶ್ರೀಮದ್ಯುವರಾಜರವರು ಮಲ್ಲಿಮುಲ್ಲಪ್ಪನವರ ಹೈ ಸ್ಕೂಲಿಗೆ 1,000 ರೂಪಾಯನ್ನು ದಯಪಾಲಿಸಿದರು ಹೆಡ್ ಮಾಸ್ಟರವರು ಈ ಹಣವನ್ನು ಸರ್ಕಾರದಲ್ಲಿ ಧರ್ಮಫಂಡಾಗಿ ಇಟ್ಟು, ಅದರಲ್ಲಿ ಉತ್ಪತ್ತಿಯಾಗುವ ಹಣವನ್ನು ಯುವರಾಜರವರ ಹೆಸರಿನ ಮೇಲೆ ವರುಷೇ ವರುಷ ವಿದ್ಯಾರ್ಥಿಗಳಿಗೆ ಬಹುಮಾನ ...ವಿನಿಯೋಗಮಾಡುವುದಾಗಿ ನಿಶ್ಚಯಿಸಿರುತ್ತಾರೆ

...

ರಾಜಧಾನಿಯ ತಳೀ ಗಡಿಯಾರದ ಚೌಕದಲ್ಲಿ ಎರಡು ವಾರಗಳ ಹಿಂದೆ ...ಪತ್ರಿಯವನು ಹುಲ್ಲುಹೊರೆ ಹೊತ್ತು ತರುತ್ತಿದ್ದು ಒಂದು ಮೋಟರ್ ...ಗೆ ಸಿಕ್ಕಿ ಗಾಯಪಟ್ಟು ಆಸ್ಪತ್ರೆಯಲ್ಲಿ ತೀರಿಹೋದನಷ್ಟೆ ಪೋಲೀಸಿನವರು ...ಟಾರನ್ನು ನಡಿಸುತ್ತಿದ್ದ ಸಯ್ಯದ್ ಗೌಸ್ ಎಂಬುವನ ಮೇಲೆ ಫಿರ್ಯಾದು ...ಮಾಡಿದಾರೆ ಸಿಟಿ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯ ವಿಚಾರಣೆಯನ್ನು ...ಪ್ರಿಲ್ ತಾ 16 ನೇ ಗುರುವಾರಕ್ಕೆ ಇಟ್ಟುಕೊಂಡಿದಾರೆ

...

ಹಿಂದೆ ಮೈಸೂರು ಸಂಸ್ಥಾನದಲ್ಲಿ ಏಳು ವರುಷ ಚೀಫ್ ಜಡ್ಜರಾಗಿದ್ದು ...ಗೆ ಹೋಗಿದ್ದ ಮಿ|| ಸಿ ಜಿ ಪ್ಲಮರ್ ಸಾಹೇಬರು ಕಾಲವಾದರೆಂದು ...ದುಃಖಪಡುತ್ತೇವೆ ಇವರ ಕಾಲದಲ್ಲಿ ಮೈಸೂರು ನ್ಯಾಯಸ್ಥಾನಗಳು ...ಗೆ ಎಷ್ಟೋ ಸಂತೋಷಪ್ರದವಾಗಿದ್ದವೆಂದೂ, ಚೀಫ್ ಕೋರ್ಟಿನ ...ವು ಬಹಳ ಚೆನ್ನಾಗಿತ್ತೆಂದೂ ಹೇಳುವುದನ್ನು ಕೇಳಿದೇವೆ ಇವರ ಕುಮಾ ...ರು ಬೆಂಗಳೂರಿನಲ್ಲಿ ಸೆಷನ್ಸ್ ಜಡ್ಜರಾಗಿ ಕೆಲಸಮಾಡುತ್ತಿರುವರು ...ಶನಿವಾರ ಸನ್ಮಾನಾರ್ಥವಾಗಿ ಚೀಫ್ ಕೋರ್ಟನ್ನೂ ಸೆಷನ್ಸ್ ಕೋರ್ಟನ್ನೂ ಮುಚ್ಚಿದ್ದರು

...

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ|| ವಿ ಕೃಷ್ಣರಾಯರ ಮೇಲೆ ...ನಿಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬಂದಿರುವ ಮೊಕದ್ದಮೆಯಲ್ಲಿ ...ಮಂಗಳವಾರ ಪಿರ್ಯಾದಿ ತರಫಿನ ಸಾಕ್ಷಿಗಳ ಫಾಟೆ ಸವಾಲ್ (ಕ್ರಾಸ್) ...ಬೇಕಾಗಿತ್ತು ಅಪರಾಧಿ ಕಡೆಯ ಲಾಯರು ಆ ದಿನ ಬೆಳಿಗ್ಗೆಯೇ ...ವಕಾಲತ್ತು ವಹಿಸಿದೆವೆಂದೂ, ಈ ಮೊಕದ್ದಮೆಯ ದರ್ಯಾಫ್ತಿಯನ್ನು ...ಯ ಕೋರ್ಟಿಗೆ ವರ್ಗಮಾಡಿಸಿಕೊಳ್ಳುವುದಕ್ಕೆ ಅವಧಿ ಕೊಡಬೇಕೆಂದೂ ...ಕೊಂಡರು ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಏಪ್ರಿಲ್ ತಾ 17 ...ರವರೆಗೂ ಇಟ್ಟು ಇರುತ್ತಾರೆ

ಈ ತಿಂಗಳ ಪ್ರಾರಂಭದಲ್ಲಿ ರಾಜಧಾನಿಯ ಗವರ್ನಮೆಂಟ್ ನಾರ್ಮಲ್ ಸ್ಕೂಲಿನಲ್ಲಿ ನಡೆದ ಹೈಯರ್ ನಾರ್ಮಲ್ ಸರ್ಟಿಫಿಕೇಟ್ ಪರೀಕ್ಷೆಯೊಳಗೆ ಮುಂದೆ ಹೇಳುವ ಉಮೇದುದಾರರು ಬರಹ ಮತ್ತು ಪ್ರಾಕ್ಟಿಕಲ್ ಎಂಬೆರಡು ಭಾಗಗಳಲ್ಲಿ ತೇರ್ಗಡೆ ಹೊಂದಿರುತ್ತಾರೆಂದು ಪರೀಕ್ಷಕರು ತೀರ್ಮಾನ ಮಾಡಿದಾರೆ ಅವರ್ಯಾರೆಂದರೆ—ಸಿ ಲಕ್ಷ್ಮೀನಾರಣಯ್ಯರ್, ಏ ಎಲ್ ಸುಬ್ಬರಾವ್, ನಾಗೇಶರಾವ್, ಬಿ ಶ್ರೀಕಂಠಯ್ಯ, ಸತ್ಯವರಾಚಾರ್, ಎಸ್ ಕೃಷ್ಣಶಾಸ್ತ್ರೀ, ಎಚ್ ಶ್ರೀನಿವಾಸಮೂರ್ತಿ, ಎಚ್ ರಂಗಸ್ವಾಮಿಅಯ್ಯಂಗಾರ್, ಬರಹ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆ—ಎಚ್. ಆರ್ ಸೂರ್ಯನಾರಣಪ್ಪ

...

ಅರಮನೆ ನಾಟಕದ ಕಂಪನಿ ಸುಬ್ಬರಾಯರು ಬೆಂಗಳೂರಿನಲ್ಲಿ ಆತ್ಮಹತ್ಯ ಮಾಡಿಕೊಂಡರಷ್ಟೆ ಅವರು ಆತ್ಮಹತ್ಯ ಮಾಡಿಕೊಳ್ಳಲಿಲ್ಲವೆಂದೂ, ದ್ವೇಷಿಗಳ್ಯಾರೋ ಅವರನ್ನು ಕೊಂದು ನೇಣು ಹಾಕಿರಬೇಕೆಂದೂ ಕೆಲವು ಅರ್ಜಿಗಳು ತಲಪಿದ ಮೇಲೆ ಬೆಂಗಳೂರು ಡೆಪ್ಟಿ ಕಮಿಷನರವರೂ, ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರೂ ಮಿಂಡಿತವಾದ ತನಿಖೆಮಾಡಿ, ಆತ್ಮಹತ್ಯಮಾಡಿಕೊಂಡದ್ದೇ ನಿಜವೆಂದೂ, ಡಾಕ್ಟರ ಅಭಿಪ್ರಾಯವೂ ಅದೇ ಎಂದೂ ತೀರ್ಮಾನಮಾಡಿದರು ಇದಲ್ಲದೆ ಮೃತಪಟ್ಟ ಸುಬ್ಬರಾಯರು ಆತ್ಮಹತ್ಯ ಮಾಡಿಕೊಂಡಿದೇನೆಂದು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಿಗೂ, ಇಷ್ಟಮಿತ್ರರಿಗೂ ಕಾಗದಗಳನ್ನು ಬರೆದಿರುವುದಾಗಿ ಗೊತ್ತಾಯಿತು

...

ದಿವಾನ್ ಮ|| ಎಂ ವಿಶ್ವೇಶ್ವರಯ್ಯನವರು ಮುಂದಿನ ವಾರ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸರ್ಕೀಟು ಮಾಡುವರು ಏಪ್ರಿಲ್ ತಾ 1 ನೇ ಬುಧವಾರ ಬೆಳಿಗ್ಗೆ ಅವರು ಪ್ರೆಂಚ್‌ರಾಕ್ಸಿನಿಂದ ಶ್ರೀರಂಗಪಟ್ಟಣಕ್ಕೆ ಬಂದು ಮಧ್ಯಾಹ್ನದ ತನಕ ಇದ್ದು ಎಲ್ಲಾ ನೋಡಿಕೊಂಡು ವಾಪಸು ಫ್ರೆಂಚ್‌ರಾಕ್ಸಿಗೆ ಹೋಗಿ ಪ್ರಜೆಗಳ ಅಹವಾಲುಗಳನ್ನು ಕೇಳಿ ಕೆಲವು ಗ್ರಾಮಗಳನ್ನು ಪರಾಂಬರಿಸುತ್ತಾರೆ ತಾ 3 ರಲ್ಲಿ ಅವರು ಕೃಷ್ಣರಾಜಪೇಟೆಗೂ, ಮರುದಿನ ಮಂಡ್ಯಕ್ಕೂ, ತಾ 5 ರಲ್ಲಿ ಮೇಲುಕೋಟೆಗೂ, ಮಾರನೇ ದಿನ ನಾಗಮಂಗಲಕ್ಕೂ, ತಾ 7 ರಲ್ಲಿ ಮಳವಳ್ಳಿಗೂ ಪಯಣಮಾಡಿ ಆಯಾ ಸ್ಥಳಗಳ ವಿದ್ಯಮಾನಗಳನ್ನು ತಿಳಿದುಕೊಂಡು, ಪ್ರಜೆಗಳ ಅಹವಾಲುಗಳನ್ನು ಕೇಳಿ, ಕಾನಕಾನಹಳ್ಳಿಯ ಮೇಲೆ ಹಾಸಿ ಬೆಂಗಳೂರಿಗೆ ಹೋಗುವವರಾಗಿದಾರೆ

...

ವೀರಣ್ಣ ಉರುಫ್ ಪುಟ್ಟಸ್ವಾಮಿ ಎಂಬುವವಿಗೆ ಮರಣದಂಡನೆಯಾಗಿತ್ತು ಇವನು 1910 ನೇ ಜೂಲೈ ತಾ 3 ರಲ್ಲಿ ಮೈಸೂರು ಬಂದೀಖಾನೆಯಲ್ಲಿದ್ದು ಆ ದಿನ ತನ್ನ ಕಾವಲುಗಾರನಾದ ಅಬ್ಬಾಸ್ ಸಾಹೇಬ್ ಎಂಬುವನನ್ನು ಹೊಡೆದು ಕೊಂದುಹಾಕಿ, ತಪ್ಪಿಸಿಕೊಂಡು ಓಡಿಹೋಗಿದ್ದನು ಯಡತೊರೆ ಪೋಲೀಸ್ ಕಾನ್‌ಸ್ಟೆಬಲ್ ಷೇಕ್ ಮೊಹದೀನ್ ಎಂಬಾತನೂ ಇನ್ನಬ್ಬರೂ ಸೇರಿ ಈ ತಪ್ಪಿಸಿಕೊಂಡು ಹೋಗಿದ್ದ ಅಪರಾಧಿಯನ್ನು ಹುಣಸೂರು ತಾಲ್ಲೂಕಿಗೆ ಸೇರಿದ ಮಹದೇವನ ಮಠ ಎಂಬಲ್ಲಿ ತಾ 14 ನೇ ಶನಿವಾರ ಪತ್ತೆಮಾಡಿ ಅವನ ಕಾಲು ಗಾಯಮಾಡಿ ಹಿಡಿದುಕೊಂಡು ಬಂದಿದಾರೆ ಹಿಡಿದವರಿಗೆ ಕೊಡುವುದಾಗಿ ಸರ್ಕಾರದವರು ಘಾಯಿಷ್ ಮಾಡಿದ್ದ 200 ರೂಪಾಯಿ ಬಹುಮಾನವು ಆ ಪೋಲೀಸಿನವರಿಗೆ ದೊರಕುವುದೆಂದು ಕೇಳುತ್ತೇವೆ

ಹಿಂದೂ ವಿವಾಹ ಪರಿಷ್ಕರಣ ಸಂಘವು

ಬೆಂಗಳೂರಿನಲ್ಲಿ ನಡೆದ ಮೀಟಿಂಗು

ಬೆಂಗಳೂರು ಸಿಟಿ ಗವರ್ನಮೆಂಟ್ ಹೈ ಸ್ಕೂಲ್ ಕಟ್ಟಡದ ಮಂದಿರದಲ್ಲಿ ಕಳೆದ 18 ನೇ ತಾ ಬುಧವಾರ ಸಾಯಂಕಾಲ ಮೊಲ್ಕಂಡ ಸಭೆಯ ಎರಡನೇ ವಾರ್ಷಿಕ ಕೂಟವು ಜರುಗಿತು ಸುಮಾರು 250 ಮಂದಿಗಿಂತಲೂ ಹೆಚ್ಚಾಗಿ ಯೇ ಸ್ತ್ರೀಯರು ಹಾಜರಾಗಿದ್ದರು ಮ|| ಸಿ ಎಸ್ ಬಾಲಸುಂದರಂ ಅಯ್ಯರವರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ದಿವಾನ್ ಮ|| ವಿಶ್ವೇಶ್ವರಯ್ಯನವರ ಮಾತೃಶ್ರೀಯವರೂ ಬಹು ಮಂದಿ ಅಧಿಕಾರಸ್ಥರ ಮನೆ ಸ್ತ್ರೀಯರೂ ದಯಮಾಡಿದ್ದರು ಮ|| ಗೋಪಾಲಾಚಾರ್ಯರವರ ಪತ್ನಿಯವರು ಮಿಸ್ ಸಿ ಎ ಟೆನ್ನೆಂಟರ ವಿಚಾರವನ್ನು ಕುರಿತು ಪ್ರಸ್ತಾಪಮಾಡಿ, ಅವರು ಹಿಂದೂ ವಿವಾಹ ಪರಿಷ್ಕರಣಕ್ಕಾಗಿಯೂ, ಸ್ತ್ರೀವಿದ್ಯಾಭ್ಯಾಸಕ್ಕಾಗಿಯೂ ಈ ರಾಷ್ಟ್ರದಲ್ಲಿ ಸಂಚಾರಮಾಡಿ ಉಪನ್ಯಾಸಗಳನ್ನು ಮಾಡುತ್ತಾ, ಪುರುಷರ ಮತ್ತು ಸ್ತ್ರೀಯರ ಸಂಘಗಳನ್ನು ಕಲ್ಪಿಸುತ್ತಾ ಬಂದಿರುವುದನ್ನು ವಿವರಿಸಿ, ಆಕೆಯನ್ನು ಕೊಂಡಾಡಿದರು ಬಳಿಕ ಶ್ರೀನಿವಾಸಕಮ್ಮನವರು ಬಾಲ್ಯವಿವಾಹದಿಂದುಂಟಾಗುವ ಕೇಡುಗಳನ್ನು ವಿವರಿಸಿ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಸಂಗೀತವೂ ಹಾಡುಗಾರಿಕೆಯೂ ನಡೆದ ತರುವಾಯ ಮ|| ರಾಜಾರಾಮರಾಯರ ಪತ್ನೀರವರು ಈ ಸಂಘದ ಉದ್ದೇಶಗಳನ್ನೂ, ಇದು ವರೆಗೆ ಹಿಂದುಸ್ಥಾನದಲ್ಲಿ ನಡೆದಿರುವ ಕಾರ್ಯಗಳನ್ನೂ ಕುರಿತು ಮಿಸ್ ಟೆನ್ನೆಂಟ್ ರವರು ಬರೆದಿದ್ದ ಭಾಷಣದ ಕನ್ನಡದ ಭಾಷಾಂತರವನ್ನು ಓದಿ ಹೇಳಿದರು ಮ|| ಗೋಪಾಲಾಚಾರ್ಯರವರ ಪತ್ನೀರವರು ವಿವಾಹಕರ್ಮವನ್ನು ಈಗಿನ ಕಾಲಕ್ಕೆ ಅನುಕೂಲವಾಗಿ ಬದಲಾಯಿಸಿಕೊಳ್ಳಬೇಕಾದದ್ದು ಅವಶ್ಯವೆಂದು ದೀರ್ಘವಾಗಿ ಭಾಷಣಮಾಡಿ ಶಾಸ್ತ್ರವಚನಗಳನ್ನು ಉದಾಹರಿಸಿದರು ಕಡೆಯಲ್ಲಿ ಸ್ತ್ರೀಯರಿಗೆಲ್ಲಾ ಹೂವು ಕೊಟ್ಟು ಸಂತೋಷದಿಂದ ಎಲ್ಲರೂ ತೆರಳಿದರು

ರಾಜಧಾನಿಯಲ್ಲಿ ನಡೆದ ಮೀಟಿಂಗುಗಳು

ಟೌನ್ ಹಾಲಿನಲ್ಲಿ —ಕಳೆದ ತಾ 20ನೇ ಶುಕ್ರವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಒಂದು ಸಭೆನಡೆಯಿತು ಮ|| ವಿ ಶ್ರೀನಿವಾಸರಾಯರು ಅಗ್ರಾಸನವನ್ನು ವಹಿಸಿದ್ದರು ನೂರಾರುಮಂದಿ ದೊಡ್ಡಮನುಷ್ಯರೂ ಅಧಿಕಾರಿಗಳೂ ವಿದ್ಯಾರ್ಥಿಗಳೂ ಸಭೆಯಲ್ಲಿದ್ದರು, ಮೊಲ್ಕಂಡಸಂಘದ ಪ್ರತಿನಿಧಿಯಾಗಿ ಹಿಂದುಸ್ಥಾನವಲ್ಲೆಲ್ಲಾ ಸಂಚಾರಮಾಡಿ ಇದುವರೆಗೆ 86 ಶಾಖೆಗಳನ್ನು ಏರ್ಪಾಡು ಮಾಡಿರುವ ಮಿಸ್ ಸಿ ಎ ಟೆನ್ನೆಂಟರವರು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಬಳಿಕ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಎ ಮಹದೇವಶಾಸ್ತ್ರಿಗಳು, ಡಾಕ್ಟರ್ ಎಸ್ ವೆಂಕಟೋಬರಾಯರು, ವೈದಿಕಪಂಡಿತರೂ ಹೆಣ್ಣುಮಕ್ಕಳ ಮದುವೆಯನ್ನು 12 13 ವಯಸ್ಸಿನವರೆಗೆ ತಡೆಯಬೇಕೆಂದೂ, ಋತುಮತೀ ವಿವಾಹಗಳ್ನು ಮಾಡುವುದು ಕ್ಷೇಮಕರವೆಂದೂ ಗಂಡುಮಕ್ಕಳಿಗೆ ವಿವಾಹವನ್ನು 20 24 ವಯಸ್ಸಿನ ತನಕ ಮಾಡಕೂಡದೆಂದೂ, ವರದಕ್ಷಿಣೆಯನ್ನು ಕೇಳುವುದೂ ತೆಗೆದುಕೊಳ್ಳುವುದೂ ಎಷ್ಟುಮಾತ್ರಕ್ಕೂ ಯೋಗ್ಯವಲ್ಲವೆಂದೂ ಅನೇಕ ಉದಾಹರಣೆಗಳನ್ನು ಕೊಟ್ಟು ವಿವರಿಸಿದರು ಶ್ರೀಮದ್ಯುವರಾಜರವರು ಈ ಸಂಘದ ಕಾರ್ಯಗಳು ಸಾರ್ಥಕವಾಗುವುದನ್ನು ನೋಡಬೇಕೆಂದು ತುಂಬಾ ಉತ್ಸಾಹಪಡುತ್ತಿರುವುದಾಗಿಯೂ, ಅದಕ್ಕೋಸ್ಕರ ಸಾವಿರಾರು ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡಿರುವುದಾಗಿಯೂ ಮಿಸ್ ಟೆನ್ನೆಂಟ್ ರವರು ಸಭೆಯಲ್ಲಿ ತಿಳಿಸಿದರು ರಾಯ ಬಹದ್ದೂರ್ ಎ ನರಸಿಂಹಯ್ಯಂಗಾರ್ರ್ರು ಮ|| ವಿ ಶ್ರೀನಿವಾಸರಾಯರೂ ಸಮಯೋಚಿತವಾಗಿ ಮಾತನಾಡಿ ಮಿಸ್ ಟೆನ್ನೆಂಟರ ಸಾಹಸವನ್ನು ಕೊಂಡಾಡಿ ಸಭೆಯನ್ನು ಮುಕ್ತಾಯ ಮಾಡಿದರು

ಮಹಾರಾಣಿಯವರ ಕಾಲೇಜಿನಲ್ಲಿ —ತಾ 12 ನೇ ಶನಿವಾರ ಸಾಯಂಕಾಲ ಮಹಾರಾಣಿಯವರ ಕಾಲೇಜ್ ಮಂದಿರದೊಳಗೆ ಸ್ತ್ರೀಯರ ಸಭೆ ಜರುಗಿತು ಸುಮಾರು 300 ಮಂದಿಗಿಂತಲೂ ಹೆಚ್ಚಾಗಿಯೇ ರಾಜಧಾನಿಯ ಹೆಂಗಸರು ಈ ಸಭೆಯಲ್ಲಿ ಹಾಜರಾಗಿದ್ದರು ಶ್ರೀ ಶ್ರೀರಂಗಮ್ಮನವರೂ ವಿಶಾಲಾಕ್ಷಮ್ಮನವರೂ ಪ್ರಾಮುಖ್ಯವಾಗಿ ನಿಂತು ಆ ದಿನ ಸಭಾಕಾರ್ಯಗಳನ್ನು ಬಹು ಉತ್ಸಾಹದಿಂದ ನಡಿಸಿದರು ಮನೋಹರವಾದ ವೀಣೆ, ಪಿಟೀಲು, ಹಾರ್ಮೋನಿಯಂಗಳ ಸಂಗೀತವು ಆದ ಬಳಿಕ ಮಿಸ್ ಟೆನ್ನೆಂಟರ ಭಾಷಣವನ್ನು ಶ್ರೀ ಶ್ರೀರಂಗಮ್ಮನವರು ಕನ್ನಡದಲ್ಲಿ ಓದಿ ಹೇಳಿದ್ದಲ್ಲದೆ ಈ ಸಂಘದ ಉದ್ದೇಶಗಳನ್ನೂ ಇದುವರೆಗೆ ನಡೆದಿರುವ ಕಾರ್ಯಗಳನ್ನೂ ವಿವರಿಸಿ ಹೇಳಿದರು ಡಾ|| ಎಸ್ ವೆಂಕಟೋಬರಾಯರ ಪತ್ನಿಯವರು ಹೆಣ್ಣುಮಕ್ಕಳನ್ನು ಪಡೆದಿರುವ ಸ್ತ್ರೀಯರಿಗೆಲ್ಲಾ ಸಣ್ಣ ವಯಸ್ಸಿನಲ್ಲಿ ಮದುವೆಮಾಡುವುದರಿಂದ ಉಂಟಾಗುವ ಕೇಡುಗಳನ್ನು ಬಹು ಹೃದಯಂಗಮವಾಗಿ ವಿವರಿಸಿ ಉಪನ್ಯಾಸಮಾಡಿದರು ಹತ್ತು ಮಂದಿ ಸ್ತ್ರೀಯರು ತಮ್ಮ ಹೆಸರುಗಳನ್ನು ಮೆಂಬರುಗಳ ಪಟ್ಟಿಗೆ ಹೇಳಿ ಬರಸಿ ಸೇರಿಕೊಂಡರು ಈ ಸಭೆಗೆ ಪ್ರಿನ್ಸೆಸ್ ಚಲುವಾಜಮ್ಮಣ್ಣಿಯವರು ಪೋಷಕಿಯರಾಗಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದೆ

ಈ ಸಂಘದ ಮುಖ್ಯೋದ್ದೇಶಗಳು ಯಾವುವೆಂದರೆ —(1) ಹುಡುಗರಿಗೂ ಹುಡುಗಿಯರಿಗೂ ವಿವಾಹಮಾಡುವ ವಯಸ್ಸನ್ನು ಹೆಚ್ಚಿಸುವುದು, ಮತ್ತು ಹುಡುಗಿಯರಲ್ಲಿ ಈಗ್ಗಿಂತಲೂ ಹೆಚ್ಚಾಗಿ ವಿದ್ಯೆಯನ್ನು ಪ್ರಚಾರಪಡಿಸುವುದು (2) ಈ ವಿವಾಹಪರಿಷ್ಕರಣದ ವಿಷಯವಾಗಿ ಉಪನ್ಯಾಸಗಳು, ಪುಸ್ತಕಗಳು, ಪತ್ರಿಕೆಗಳು ಮೊದಲಾದವುಗಳಿಂದಲೂ ಉಚಿತವೆಂದು ತೋರುವ ಇತರೋಪಾಯಗಳಿಂದಲೂ ಜನರ ಅಭಿಪ್ರಾಯವನ್ನು ಸರಿಪಡಿಸುವುದು (3) ಈ ಬಾಲ್ಯ ವಿವಾಹ ಪದ್ಧತಿಯನ್ನು ಕ್ಷಿಪ್ರದಲ್ಲಿಯೇ ಬಹಳ ಮಟ್ಟಿಗೆ ಬದಲಾಯಿಸುವಂತೆ ಹಿಂದೂ ಮಹಾಜನರ ಅಭಿಪ್ರಾಯವನ್ನು ತಕ್ಕಷ್ಟು ಕೇಳಿಸುವುದು (4) ವಿವಾಹದ ಖರ್ಚುಗಳನ್ನೂ ಕನ್ಯಾ ವರ ಶುಲ್ಕಗಳನ್ನೂ ಪರಮಾವಧಿ ಕಡಿಮೆಮಾಡುವುದು. (5) ಈ ಉದ್ದೇಶಗಳನ್ನು ಸರ್ವಪ್ರಕಾರದಿಂದಲೂ ವಿಸ್ತರಿಸುವುದಕ್ಕೂ ಮುಂದೆ ಸಾಗಿಸುವದಕ್ಕೂ ಬೇಕಾದ ನಡವಳಿಕೆಯನ್ನು ನಡಿಸುವುದು

ತಾಲ್ಲೂಕು ವರ್ತಮಾನಗಳು

ಫ್ರೆಂಚ್‌ರಾಕ್ಸ್ —ಇಲ್ಲಿ ನೀರಿನ ಕಷ್ಟ ಎಷ್ಟು ಹೇಳಿದರೂ ತೀರದು ಹೊಸದಾಗಿ ದಯಮಾಡಿಸಿರುವ ಡೆಪ್ಟಿ ಅಮಲ್ದಾರ್ ಮ|| ಮಲ್ಲರಾಜೆ ಅರಸಿನವರು ಈ ನೀರಿನ ಕಷ್ಟವನ್ನು ಬೇಗ ನಿವಾರಣೆಮಾಡುತ್ತಾರೆಂದು ಎಲ್ಲರೂ ನಂಬಿಕೊಂಡಿದಾರೆ ಬೀದಿಗಳಲ್ಲಿ ಪೋಲಿ ನಾಯಿಗಳ ಕಾಟ ಹೆಚ್ಚು ಇದನ್ನು ಬಂದೋಬಸ್ತು ಮಾಡಿದರೆ ಒಳ್ಳೇದು —ನಮ್ಮ ಹೊಸ ಅಮಲ್ದಾರ್ರ ಕಾಲದಲ್ಲಾದರೂ ಮ್ಯುನಿಸಿಪಲ್ ಲಾಂದ್ರಗಳ ಸಂಖ್ಯೆ ಹೆಚ್ಚುವದೆಂದು ನಂಬಿದೇವೆ —ಇಲ್ಲಿನ ಕನ್‌ಟೋನ್‌ಮೆಂಟ್ ಬಜಾರಿನಲ್ಲಿ ಮೈಸೂರು ಶಿವಯ್ಯ ಶಾಸ್ತ್ರಿಗಳು ಶಿವಕಥಾ ಶ್ರವಣವನ್ನು ಬಹು ಉಲ್ಲಾಸಕರವಾಗಿ ಮಾಡಿದರು ಮಂಟಪವನ್ನು ತುಂಬಾ ವಿಸ್ತಾರವಾಗಿ ಕಟ್ಟಿದ್ದರಲ್ಲದೆ ನೇತ್ರಾನಂದಕರವಾಗಿ ಅಲಂಕಾರಮಾಡಿದ್ದರು ಸಾವಿರಾರು ಜನರು ಸೇರಿ ಅವರ ಕಥೆಯನ್ನು ಕೇಳಿ ಸಂತೋಷಪಟ್ಟರು

ತರೀಕೆರೆ —ಬಿಸಿಲಕಾವ ಹೆಚ್ಚು ಕೆಲವು ವೇಳೆ ಬೆಳಿಗ್ಗೆ 7-8 ಗಂಟೆ ವರಿಗೂ ಮಂಜು ಬೀಳುತ್ತೆ ಹವಾ ಆರೋಗ್ಯವಾಗಿಲ್ಲ —ಕಳೆದ ವರ್ಷ ಸಾಕಾದಷ್ಟು ಮಳೆ ಬಾರದ್ದರಿಂದ ಭಾವಿಗಳಲ್ಲಿ ನೀರಿಲ್ಲದೆ ಅನೇಕರು ತೊಂದರೆ ಪಡುತ್ತಾರೆ ಇದು ಮಲೆನಾಡಾಗಿ ಭಾವಿಗಳು ಸಾಕಾದಷ್ಟು ಆಳವಾಗಿದ್ದರೂ ನೀರಿಗೆ ಹೀಗೆ ಕಷ್ಟ —ಈ ಊರಲ್ಲೂ ಗ್ರಾಮಗಳಲ್ಲೂ ಸಿಡುಬಿನ ಉಪದ್ರವೂ ಪ್ಲೇಗೂ ಇದೆ ಅಲ್ಲದೆ ಈ ಕಡೆ ರೂಢಿಯಾಗಿ ನ್ಯುಮೋನಿಯ ಎಂಬ ರೋಗ ಜಾಡ ಕಾಣಿಸಿಕೊಂಡು ಅನೇಕರು ಕರ್ನಾಟಕ ಔಷಧ ಕೊಡುವದೇ ರೂಢಿ ಹಾಗೂ ಕೆಲವು ಗುಣವಾಗುತ್ತವೆ ಗುಣ ಬಾರದಿದ್ದರೆ ಕಡೇ ಘಳಿಗೆಯಲ್ಲಿ ಅಂಗಲಾಚುತ್ತಾ ಡಾಕ್ಟರ್ ಬಳಿಗೆ ಹೋಗುತ್ತಾರೆ ಆದರೆ ಪ್ರಯೋಜನವೇನು ? ಈ ಸಾರಿ ಕಾಮನ ಹಬ್ಬವನ್ನು ಊರಿನ ಜನರು ಬಹಳ ಆಸಕ್ತಿಯಿಂದ ನಡಿಸಿದರು ಐದು ಸ್ಥಳಗಳಲ್ಲಿ ಕಾಮನನ್ನು ಇಟ್ಟಿದ್ದರು ಎಲ್ಲರೂ ವೇಶ್ಯಾಂಗನೆಯರನ್ನು ಕರಸಿ ತಾಫೆ ಕಟ್ಟಿಸಿದರು ಇದು ಅತಿ ದುಃಖದವಾರ್ತೆ— ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ರಾಮರಾಯರು ವರ್ಗವಾಟ್ಟು ಕಡೇ ಸರ್ಕೀಟು ಬಂದಿದ್ದರು ಆಗ್ಗ ಸದರಿ ಇಲಾಖೆಯವರೂ ಇನ್ನೂ ಅನೇಕ ಆಫೀಸರುಗಳೂ ಸೇರಿ ಅವರಲ್ಲಿ ತಮಗಿದ್ದ ಪ್ರೀತಿ ಅನುರಾಗವನ್ನು ಟೀ ಪಾರ್ಟಿ ಮಾಡಿ ತೋರ್ಪಡಿಸಿದರು ಹೀಗೆ ಆಫೀಸರುಗಳೇ ಅಲ್ಲ, ಪ್ರಜಾ ಮುಖಂಡರೇ ಮೊದಲಾದವರೂ ಇಂಥಾ ಸಂದರ್ಭಗಳಲ್ಲಿ ಕೊಡುವದು ಆಫೀಸರುಗಳ ಧರ್ಮ ಬುದ್ಧಿಯನ್ನೂ, ಪ್ರಜಾ ವಾತ್ಸಲ್ಯವನ್ನೂ ತೋರ್ಪಡಿಸಿ, ಪ್ರಜೋಪಕಾರಿ ಎಂಬ ಬಿರುದನ್ನು ಬೀರುತ್ತೆ

ಹಾಸನ —ಇಲ್ಲಿನ ಟ್ರೆಜರಿ ಅ|| ಕಮಿಷನರ್ ಮ|| ಎಂ ಶ್ರೀನಿವಾಸಮೂರ್ತಿಗಳು ಮ|| ಗೋಪಾಲರಾಜೆ ಅರಸಿನವರಿಗೆ ಛಾರ್ಜನ್ನು ಕೊಟ್ಟರು ಈ ವಾರ ಮ|| ಶ್ರೀನಿವಾಸಮೂರ್ತಿಗಳಿಗೆ ಕ್ಲಬ್ಬಿನಲ್ಲೂ, ವಾಣಿವಿಲಾಸ ಪಾಠಶಾಲೆಯಲ್ಲೂ ಶ್ರೇಯಃಪ್ರಾರ್ಥನಾ ಸಮಾರಂಭಗಳು ನಡೆದವು ಇವರು ಪ್ರಜಾನುರಾಗಿಗಳಾಗಿದ್ದುದೇ ಇಷ್ಟಕ್ಕೂ ಮುಖ್ಯ ಕಾರಣ ನೆನ್ನೆ ವಾಣಿವಿಲಾಸ ಶಾಲೆಯಲ್ಲಿ ಸಾವಿತ್ರೀ ಚರಿತ್ರೆಯನ್ನು ಸಲ್ಲಾಪಾಭಿನಯ ಮೂಲಕ ಪ್ರದರ್ಶಿಸಿದ ಬಾಲಕಿಯರಿಗೆಲ್ಲಾ ಹಿಂದೆ ಮಹನೀಯರು ಕೊಟ್ಟಿದ್ದ ಹಣಕ್ಕೆ ಚಿನ್ನದ ಕಾಸುಗಳನ್ನು ತಂದು ಬಹುಮಾನಮಾಡಿದರು ಆಗ ಮ|| ಶ್ರೀನಿವಾಸಮೂರ್ತಿಗಳ ಗುಣಕಥನಗಳೂ ನಡೆದವು ಮ|| ಗೋಪಾಲರಾಜೆ ಅರಸಿನವರು ಪ್ರಜಾಭಿಮಾನವನ್ನು ಸಂಪಾದಿಸುವವರಾಗಲೆಂದು ಕೋರಲ್ಪಟ್ಟಿತು —ರೈಲ್ವೆ ಎಗ್ಸಿಕ್ಯುಟಿವ್ ಇಂಜನಿಯರ್ ಆಫೀಸೂ, ಎರಡು ಸಬ್ ಡಿವಿಜನ್ ಆಫೀಸುಗಳೂ ಪ್ರಾರಂಭವಾಗಿ ಎರಡು ತಿಂಗಳಿಂದ ಕೆಲಸ ನಡೆಯುತ್ತಿದೆ ಲೋಹಮಾರ್ಗಕ್ಕೆ ನಕ್ಷೆಗಳೂ, ಗುತ್ತಿಗೆಗಳೂ ಹಿಡಲ್ಪಟ್ಟು ಕಂಟ್ರಾಕ್ಟ್‌ಗಳೂ ಕೊಟ್ಟಿರುವಂತೆ ತಿಳಿಯುವುದು ಈ ರೈಲ್ವೆ ಲೈನಿನಲ್ಲಿ ಕೆಲಸಮಾಡುವ ಉದ್ಯೋಗಸ್ಥರ ಮತ್ತು ಕೂಲೀ ಆಳುಗಳ ದೇಹಾರೋಗ್ಯ ರಕ್ಷಣೆಗಾಗಿ ಸ್ಪೆಷಲ್ ಡಾಕ್ಟರನ್ನು ನೇಮಿಸಿದಾರೆ ಇನ್ನೂ ಮಾರ್ಗದ ಕಾಮಗಾರಿ ಪ್ರಾರಂಭವಾಗಲಿಲ್ಲ —ಇಲ್ಲಿನ ಪಾರ್ಕು ಮಳೆಗಾಲದಲ್ಲಿ ಎಷ್ಟೋ ಚೆನ್ನಾಗಿಯೂ, ಕೋಮಲವಾಗಿಯೂ ಇತ್ತು ಈಗ ನೋಡುವುದಕ್ಕೆ ಬಹು ವಿಷಾದಕರವಾಗಿದೆ ಮ್ಯುನಿಸಿಪಾಲಿಟಿಯವರು ಇದನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ಸಮರ್ಪಕವಾದ ಸಿಬ್ಬಂದಿ ಏರ್ಪಾಡುಮಾಡಬೇಕು —ಡೆಪ್ಯುಟಿ ಕಮಿಷನರವರು ಸಕಲೇಶಪುರದ ಪ್ರಾಂತ್ಯ ಪ್ರಯಾಣಮಾಡಿದಾರೆ ಆಸ್ಪತ್ರೆಯ ಡಾಕ್ಟರೂ ಆ ಪ್ರಾಂತ್ಯ ಹೋಗಿದ್ದು ಬಂದರು —ಈ ನಗರದಲ್ಲಿ ಸುಪ್ರಖ್ಯಾತರೂ, ಮಹೋಪಕಾರಿಗಳೂ, ಘನಯುತರೂ ಆಗಿದ್ದ ರಿಟೈರ್ಡ್ ಅಮಲ್ದಾರ್ ಮ|| ಎಚ್ ಆರ್ ಶ್ರೀನಿವಾಸರಾಯರು ಕಾಲವಾದರೆಂದು ತಿಳಿಸಲು ವಿಷಾದವಾಗುತ್ತದೆ ಇವರು ತುಂಬಾ ಶ್ರಮಪಟ್ಟು ಇಲ್ಲಿನ ವಾಣೀವಿಲಾಸ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿ, ಅನೇಕ ಕಡೆ ಸಂಚಾರಮಾಡಿ ಹಣವನ್ನು ಕೂಡಿಸಿ ಈ ಶಾಲೆಗಾಗಿ ಒಂದು ಒಳ್ಳೇ ಕಟ್ಟಡವನ್ನು ಕಟ್ಟಿಸಿದರು ಮತ್ತು ಥಿಯೊಸಾಫಿಕಲ್ ಸೊಸೈಟಿಗೋಸ್ಕರ ಸ್ವಂತವಾಗಿಯೇ ಒಂದು ಕಟ್ಟಡವನ್ನು ಕಟ್ಟಿಸಿ ಕೊಟ್ಟಿದಾರೆ ಇಂಥಾ ಪರೋಪಕಾರಿಗಳು ಕಾಲವಾದದ್ದು ಈ ಊರಿಗೆ ತುಂಬಾ ನಷ್ಟವಾಗಿರುತ್ತದೆ

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಮಾರ್ಚಿ 14 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು		ರೂ 7,74,680
,, (2) ಡಿಪಾಜಿಟ್ಟುಗಳು		,, 6,53,297
,, (3) ಇತರೆ		,, 7,817
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 14,35,794
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 3,57,413
,, (2) ಖಾತೆ ಮತ್ತು ಇತರ ಸಾಲಗಳು		,, 8 70,880
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,30,054
,, (4) ಇನ್‌ವೆಸ್ಟ್‌ಮೆಂಟುಗಳು		,, 1,00 000
,, (5) ಏಜೆನ್ಸಿಗಳಲ್ಲಿರುವ ಮೊಬಲಗು		,, 55,678
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 6 932
,, (7) ಇತರೆ		,, 12 739
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 14,35,794

ಡಬ್ಲಿಯು ೩ ಬೋಂದ್, ಮ್ಯಾನೇಜರ್

ಮೈಸೂರು ಕಿವುಡಮೂಗರ ಮತ್ತು ಕುರುಡರ ಪಾಠಶಾಲೆ

ಆನಂದ ಸಂವತ್ಸರ

ಆನಂದ ಎನ್ನುವ ಪದವೇ ಆಂದವಾದುದು ಅರ್ಥವೋ ಅಮಂದವಾದುದು ಇದನ್ನು ಸ್ವೀಕರಿಸುವುದೋ ವಿನೋದವಾದುದು ಇದರ ಆವಲೋಕನೋ ಧರ್ಮಪ್ರದವಾದುದು ಇವುಗಳನ್ನೆಲ್ಲಾ ಕಣ್ಣಿಲ್ಲದ ಕುರುಡರಿಗೆ ಕಿವಿಗಳು ಹೇಳಿ ಕೊಟ್ಟವು ಮನಸ್ಸು ಒಪ್ಪಿತು ನಾಲಗೆಯು ಹೇಳಿಬಿಟ್ಟಿತು ಆನಂದವು ಯಾರಿಗೆ ಅನಾದರ ಅನಾಥರಾದ ತಮ್ಮನ್ನು ಸಮರ್ಥರಾಗುವಂತೆ ಮಾಡಲು ಪ್ರಯತ್ನಿಸುವವರಿಗೆ ತಮ್ಮ ಕೃತಜ್ಞತೆಯನ್ನು ತೋರಿಸಬೇಕೆಂದು ಕುರುಡರು ಇಷ್ಟಪಟ್ಟಿರುತ್ತಾರೆ ಇದು ಶ್ಲಾಘನೀಯವಾದುದಲ್ಲವೇ ? ಹೆಸರಿಗೆ ತಕ್ಕಂತೆ ವಿಷಯ, ವಿಷಯಕ್ಕೆ ತಕ್ಕಂತೆ ಹೆಸರು ಆನಂದ ಸಂವತ್ಸರ ಎಲ್ಲೆಲ್ಲಿಯೂ ಆನಂದಕ್ಕೆ ಆದರ ಯಾವ ಆನಂದವು ಹುಟ್ಟಿದರೂ ಅದು ಎಂದಿನವರೆಗೆ ಇರುವುದೋ ಅಂದೇ ಕಂದಿಹೋಗುವುದೋ ಎಂಬ ಶಂಕೆಯು ಹಿಂದೆಯೇ ಹುಟ್ಟುವುದು ಆದರೆ ಈ ಆನಂದವಾದರೋ ಒಂದು ವರ್ಷ ಪರಿಯಂತರ ಇರುವುದೆಂದು ನಿರ್ಧಾರವಾಗಿದೆ ಆದುದರಿಂದ ಈ ಆನಂದದ ಅಮಂದವಾದ ಆನಂದವು ಉದಿಸಿದಾಗಿನಿಂದಲೂ ಅದನ್ನು ತಾವು ಅನುಭವಿಸುವುದೂ ಹಾಗೂ ಇತರರಿಗೆ ಕೊಡುವುದೂ ಹಿತವಾದುದೆಂದು ನಂಬಿ ಮೈಸೂರಿನ ಪಾಠಶಾಲೆಯ ಹೆಡ್ ಮಾಸ್ಟರು ಮ|| ಪಿ ಎನ್ ವೆಂಕಟರಾಯರು ಯೋಚಿಸಿ, ಆನಂದಸಂವತ್ಸರದ ಪ್ರಥಮದಿವಸವಾದ ಶುಕ್ರವಾರ (ಅಂದರೆ ನಾಳೆ) ಸಾಯಂಕಾಲ 5½ ಘಂಟೆಗೆ ಸರಿಯಾಗಿ ಪಾಠಶಾಲೆಯ ಚಪ್ಪರದಲ್ಲಿಯೇ ಸಂಗೀತವನ್ನು ನಡಿಸಲು ಏರ್ಪಡಿಸಿರುವರು ಅಲ್ಲಿ ಪಾಠಶಾಲೆಯ ಕುರುಡ ವಿದ್ಯಾರ್ಥಿಗಳು ಇಂಪಾದ ಗಾನದಿಂದಲೂ, ತಬಲ ಪಿಟೀಲು ಹಾರ್ಮೋನಿಯಂ ವೀಣೆ ಮೊದಲಾದ ವಾದ್ಯಗಳ ಗಾನದಿಂದಲೂ ಸಭಿಕರನ್ನು ಆನಂದದಲ್ಲಿ ಸೇರಿಸಬೇಕೆಂದು ಕುತೂಹಲಪಟ್ಟಿರುತ್ತಾರಾದಕಾರಣ ಪುರಜನರೂ ಇತರರೂ ದಯೆಯಿಟ್ಟು ಬರಬೇಕೆಂದು ಈ ಮೂಲಕ ಕೇಳಿಕೊಂಡಿರುವರು ಇವರ ಮನೋಭೀಷ್ಟವನ್ನು ನೆರವೇರಿಸಲು ಎಲ್ಲರೂ ಭಾಗಿಗಳಾಗಬೇಕೆಂದು ಕೋರುವ

ಆನಂದ

ಬೆಂಗಳೂರು ಶ್ರೀನಿವಾಸಮಂದಿರ

ಕಳೆದ ಶನಿವಾರ ಮಂದಿರದಲ್ಲಿ ಮಹಿಳೆಯರ ಕೂಟವು ಬಹಳ ವಿಸ್ತಾರವಾಗಿಯೂ, ವಿಜೃಂಭಣೆಯಿಂದಲೂ ನಡೆಯಿತು ಪ್ರಸಿಡೆಂಟರೂ ಅವರ ಸ್ನೇಹಿತರೂ ಮುಖ್ಯರಾದ ಮೆಂಬರುಗಳೆಲ್ಲರೂ ಕೂಡಿ ಇದ್ದರು ದಿವಾನರವರ ತಾಯಿಯವರಾದ ಶ್ರೀಮತಿ ವೆಂಕಟಮ್ಮನವರು ಸಹ ಬಂದಿದ್ದರು ಕೂಡಲು ಸ್ಥಳವೇ ದೊರಕಲಿಲ್ಲ ಇದರಿಂದ ಸ್ಥಳ ಸಂಕೋಚವಿರುವೆಂಬುದೂ ಹೇಳಬೇಕಾಗಿಲ್ಲ ನೋಡಿದವರಿಗೆ ಅದರ ಪ್ರಾಮುಖ್ಯತೆ ಗೊತ್ತಾಗುತ್ತದೆ ಬಾಲ್ಯವಿಧವೆಗಳಾದವರಾರಾದರೂ ಒಬ್ಬ ಮಹಿಳೆಯರು ಈ ವಿಷಯವನ್ನು ಯೋಚಿಸತಕ್ಕದ್ದಾಗಿದೆ ಸೆಕ್ರಿಟರಿಯವರು ತಮ್ಮ ಕೈಲಾದ ಕೆಲಸವನ್ನು ಮಾಡಲು ಸಿದ್ಧವಾಗಿರುತ್ತಾರೆ ಆದರೆ ಕಾರ್ಯದ ಪೂರ್ತಿಗೆ ಸಹೋದರಿಗಳ ಬಲವಿಲ್ಲದೆ ತಾವು ಜವಾಬ್ದಾರಿಯನ್ನು ವಹಿಸಲಾರರು ಆ ದಿವಸ ಮಿಸ್ ತಾರಾಬಾಯಿಯವರು ಆರೋಗ್ಯವನ್ನು ಕುರಿತು ಒಂದು ಸುಂದರವಾದ ಉಪನ್ಯಾಸವನ್ನು ಮಾಡಿದರು ಉಪನ್ಯಾಸವು ಸುಲಭವಾದ ಮತ್ತು ಉತ್ಕೃಷ್ಟವಾದ ಮರಾಟಿ ಭಾಷೆಯಲ್ಲಿ ಹೇಳಲ್ಪಟ್ಟಿತು ಇವರ ವಾಗ್ಧೋರಣೆಯು ಮನಸ್ಸನ್ನು ಸೆಳೆಯತಕ್ಕದ್ದಾಗಿಯೂ, ಚಿತ್ತಕ್ಕೆ ಆಹ್ಲಾದವನ್ನುಂಟುಮಾಡತಕ್ಕದ್ದಾಗಿಯೂ ಇತ್ತು ಸ್ತ್ರೀಸಮೂಹವು ಅಧಿಕವಾಗಿದ್ದಾಗ್ಯೂ ಉಪನ್ಯಾಸದ ಸ್ವಾರಸ್ಯದಿಂದ ಸಭೆಯೆಲ್ಲವೂ ನಿಶ್ಶಬ್ದವಾಗಿ ಉಪನ್ಯಾಸವನ್ನು ಕೇಳುತ್ತಲಿದ್ದರು ಮಿಸ್ ತಾರಾಬಾಯಿಯವರು ತಮ್ಮ ಪೂರ್ವ ಚರಿತ್ರೆಯನ್ನು ಹೇಳಿದ್ದಲ್ಲದೆ ತಮ್ಮ ಸಹೋದರಿಗಳಿಗೆ ಆರೋಗ್ಯಭಾಗ್ಯವೆಂಬುದನ್ನೂ ಶಕ್ತಿಯನ್ನೂ ಹ್ಯಾಗೆ ಪಡೆಯಬಹುದೆಂದು ಸೂಚಿಸಿದರು ಇವುಗಳ ಸಂಪಾದನೆ ಕೇವಲ ದುರ್ಲಭವಲ್ಲ ಸಾಧಾರಣವಾದ ಶುಚಿ, ನಿರ್ಮಲ್ಯ, ಕೇವಲ ಸಾತ್ವಿಕ ಆಹಾರ, ಇವುಗಳಿಂದ ಪಡೆಯಬಹುದೆಂದು ಹೇಳಿದರು ಮತ್ತು ಪ್ರತಿದಿವಸದಲ್ಲೂ ಒಂದು ಅಥವಾ ಅರ್ಧ ಗಂಟೆ ಹೊತ್ತಾಗಲಿ ವ್ಯಾಯಾಮವನ್ನು ಅಭ್ಯಾಸ ಮಾಡತಕ್ಕದ್ದು ಅತಿ ಅವಶ್ಯಕವೆಂದು ಹೇಳಿದರು ಇದರಿಂದ ತಾವುಗಳಲ್ಲದೆ ಮಕ್ಕಳ ಸಹಿತ ಆರೋಗ್ಯಶಾಲಿಗಳಾಗುವರೆಂದು ಹೇಳಿ ಕೆಲವು ವ್ಯಾಯಾಮಗಳನ್ನು ತಿಳಿಸಿ ಅವರ ಅಭ್ಯಾಸಗಳನ್ನು ತೋರಿಸಿದರು ಇವುಗಳ ಅಭ್ಯಾಸದಿಂದಲೇ ತಾವು ಆರೋಗ್ಯವಾಗಿರುತ್ತೇವೆಂದು ಹೇಳಿ ಪ್ರಸಿಡೆಂಟರಿಗೂ, ಸಭಿಕರಿಗೂ ತಮ್ಮ ವಂದನೆಗಳನ್ನು ಸಲ್ಲಿಸಿದರು ಅನಂತರ ಈ ಉಪನ್ಯಾಸವು ನಾಗಪೂರ್ ಪ್ರಾಂತ್ಯದಿಂದ ಬಂದಿರುವ ಸೌ|| ಸುಬ್ಬಮ್ಮನವರಿಂದ ಕನ್ನಡದಲ್ಲಿ ಭಾಷಾಂತರ ಮಾಡಲ್ಪಟ್ಟಿತು ಮಂದಿರದ ಸ್ತ್ರೀಶಾಖೆಯ ಮೆಂಬರುಗಳು ಮತ್ತು ಹಿತಚಿಂತಕರು ಮಿಸ್ ತಾರಾಬಾಯಿಯವರಿಗೆ ಒಂದು ಮೆಡಲ್ (ಪದಕ) ವನ್ನು ಕೊಡಲು ಯೋಚಿಸಿರುತ್ತಾರೆ

ಶ್ರೀನಿವಾಸಮಂದಿರದ ಅನಾಥಾಲಯದ ಸ್ತ್ರೀಶಾಖೆಯ ಸೆಕ್ರಿಟರಿಯವರು ಇದರಡಿ ಕಂಡ ವಸ್ತ್ರಗಳ ದಾನವನ್ನು ಅನಾಥರಿಗಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಅ|| ಸರ್ಜನ್ ಮ|| ರಾಮಚಂದ್ರಅಯ್ಯರವರ ಕುಟುಂಬ ಸೌ|| ವಿನಾನಂಬಾಯವರಿಂದ ಕೃತಜ್ಞತೆಯೊಡನೆ ಸ್ವೀಕರಿಸಿರುತ್ತಾರೆ —ಹೆಣ್ಣು ಮಕ್ಕಳಿಗಾಗಿ ಒಂದು ಒಳ್ಳೇ ಸೀರೆ, ಗಂಡು ಹುಡುಗರಿಗಾಗಿ ಎರಡು ಸೂಟ್ ಡ್ರೆಸ್ಸು, ಒಂದು ಶರಾಯಿ ಇಂಥಾ ದಾನಗಳ ಪ್ರಯೋಜನವನ್ನು ಸೆಕ್ರಿಟರಿಯವರು ಬಹಳ ಕೊಂಡಾಡುತ್ತಾರೆ

ಮೈಸೂರು ಸರ್ಕಾರು ಹುಕುಮುಗಳು

(1) ಮಲೆನಾಡು ಬಾಗಾಯಿತು ಜಮೀನುಗಳು

ಮಲೆನಾಡಿನಲ್ಲಿರತಕ್ಕ ಬಾಗಾಯಿತು ಜಮೀನ್‌ದಾರರು ತಮ್ಮ ತೋಟಗಳ ಉಪಯೋಗಕ್ಕಾಗಿ ಬಾಜು ಇರತಕ್ಕ ಸರ್ಕಾರಿ ಖರಾಬು ಜಮೀನುಗಳಿಂದ ಮಣ್ಣನ್ನು ಅಗೆದು ತೆಗೆದುಕೊಳ್ಳಬೇಕಾಗಿರುತ್ತದೆ ಈ ರೀತಿ ಮಣ್ಣನ್ನು ಪದೇ ಪದೇ ತೆಗೆಯುವುದರಿಂದ ಬಾಜು ಜಮೀನು ಭಾಗಗಳು ತೋಟಕ್ಕೆ ಸೇರಿಸಿಕೊಳ್ಳುವುದಕ್ಕೆ ಅಪಾತ್ರವಾಗಿರುತ್ತವೆ ಎಂತಲೂ, ಇಂಥಾ ಸಂದರ್ಭದಲ್ಲಿ ಆ ಜಮೀನುಗಳನ್ನು ಉಪಯೋಗಿಸಿಕೊಳ್ಳಲು ಅವರಿಗೆ ಅಪ್ಪಣೆ ಕೊಡಬೇಕೆಂತಲೂ, ಅವುಗಳಲ್ಲಿನ ಮರಗಳು ಸಲುವಾಗಿ ಬಂದ ಬಾಗಾಯಿತು ಕಂದಾಯವನ್ನು ವಿಧಿಸಬೇಕೆಂತಲೂ, 1911 ಮತ್ತು 1912ನೆಯ ವರ್ಷಗಳ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಅರಿಕೆ ಮಾಡಿಕೊಂಡ ವಿಷಯದಲ್ಲಿ ಸರ್ಕಾರದವರು ಹುಕುಂ ಕೊಟ್ಟಿರುವದೇನೆಂದರೆ—ಚರ್ಚೆಯಲ್ಲಿರುವ ಈ ಪದ್ಧತಿಯು ಮುಖ್ಯವಾಗಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಜಾರಿಯಲ್ಲಿರುವುದಾಗಿಯೂ, ಈ ಡಿಸ್ಟ್ರಿಕ್ಟುಗಳಲ್ಲಿ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲೂ ಕಣಿವೆಯ ಪ್ರದೇಶಗಳಲ್ಲೂ ಇರತಕ್ಕ ಬಾಗಾಯಿತು ಜಮೀನುಗಳ ಮಾಲೀಕರು ಮಳೆಯಿಂದ ಕೊಚ್ಚಿಹೋಗುವ ತಮ್ಮ ಜಮೀನನ್ನು ಭರ್ತಿಮಾಡಿಕೊಳ್ಳುವದಕ್ಕೋಸ್ಕರ ಬಾಜು ಖರಾಬು ಜಮೀನುಗಳಿಂದ ಆಗಾಗ್ಗೆ ಮಣ್ಣನ್ನು ಅಗೆದು ತೆಗೆದುಕೊಂಡು ಹೋಗುತ್ತಿರುವುದಾಗಿಯೂ ರಿಪೋರ್ಟುಗಳಿಂದ ತಿಳಿಯಬರುತ್ತದೆ ಆ ಖರಾಬು ಜಮೀನುಗಳನ್ನು ಸರ್ಕಾರದವರ ಅಪ್ಪಣೆ ವಿನಾ ಬೇರೆ ಕೆಲಸಕ್ಕೆ ಉಪಯೋಗಿಸಕೂಡದು ಹಾಗೆ ಬೇರೆ ಯಾವ ಕೆಲಸಕ್ಕೆ ಉಪಯೋಗಿಸಿದ ಪಕ್ಷದಲ್ಲಿ ಕಂದಾಯವನ್ನು ಹೆಚ್ಚಿಸುತ್ತೇವೆಂಬ ಷರತ್ತಿಗೆ ಒಳಪಡಿಸಿ, ಸ್ವಲ್ಪ ಕಂದಾಯದ ಮೇರೆ ಅವುಗಳನ್ನು ಬಾಜೂ ಇರತಕ್ಕ ಬಾಗಾಯಿತು ಜಮೀನುಗಳ ಮಾಲೀಕರಿಗೆ ಕೊಡಬಹುದೆಂದು ರೆವಿನ್ಯೂ ಕಮಿಷನರವರು ಸಲಹೆ ಕೊಡುತ್ತಾರೆ ಈ ವಿಷಯದಲ್ಲಿ ಸರ್ವೆ ಸೂಪರಿಂಟೆಂಡೆಂಟರವರ ಅಭಿಪ್ರಾಯವನ್ನು ಕೇಳುವಲ್ಲಿ, ಮಲೆನಾಡಿನಲ್ಲಿ ರಿಸೆಟಲ್ ಆದ ತಾಲ್ಲೂಕುಗಳಲ್ಲಿ ಇಂಥಾ ಪೂರ್ವದ ಒತ್ತುವರಿಗಳನ್ನೆಲ್ಲಾ ರಿಸರ್ವ ನಿಬಂಧನೆಗಳ ಮೇರೆಗೆ ಫೈಸಲ್ಮಾಡಿರುತ್ತದೆ ಎಂಬದಾಗಿ ತಿಳಿಸಿ, ಬಾಗಾಯಿತು ಜಮೀನುಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಪಡಬೇಕಾದ ಶ್ರಮವನ್ನೂ ಖರ್ಚನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಇನ್ನು ಮೇಲೆ ಇಂಥಾ ಒತ್ತುವರಿಗಳನ್ನು ಮೂರು ಗುಂಟೆ ವಿಸ್ತೀರ್ಣದ ವರೆಗೆ ಕಂದಾಯವಿಲ್ಲದೆ ಮುಫತ್ತಾಗಿ ಮಾಡಿಕೊಳ್ಳಲು ಅವಕಾಶ ಕೊಡಬಹುದೆಂತಲೂ, ಇದಕ್ಕಿಂತಲೂ ಹೆಚ್ಚು ಜಮೀನನ್ನು ಒತ್ತುವರಿ ಮಾಡಿಕೊಂಡರೆ ಕಂದಾಯವನ್ನು ದಾಖಲ್ಮಾಡಿ ಬಾಜು ಬಾಗಾಯಿತು ಜಮೀನುಗಳಿಗೆ ಸೇರಿಸಬಹುದೆಂತಲೂ ಶಿಫಾರಸು ಮಾಡುತ್ತಾರೆ ಈ ಕಾರಣಗಳ ದೆಸೆ, ಸೂಪರಿಂಟೆಂಡೆಂಟರವರ ಶಿಫಾರಸನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ

(2) ಸಾಗುವಳಿಗೆ ತಂಗಾಮಿಯಾಗಿ ಸರ್ಕಾರಿ ನೀರನ್ನು ಉಪಯೋಗಿಸಿಕೊಳ್ಳತಕ್ಕ ವಿಚಾರ

ಒಂದು ವರ್ಷಕ್ಕೆ ಮಾತ್ರ ಸರ್ಕಾರಿ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ದರಖಾಸ್ತುಗಳನ್ನು ಹಿಡಿಯಬಹುದೆಂದು ಏಟ ದರೆಯನ್ನು ಮಾಡಿ ಸರ್ಕಾರಿ ನೀರನ್ನು ಕಳ್ಳತನದಿಂದ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಉಂಟಾಗುತ್ತೆಂಬ ಕಾರಣದ ಮೇಲೆ ಈಚೆಗೆ ಸದರಿ ನಿಬಂಧನೆಯನ್ನು ರದ್ದು ಮಾಡಲಾಯಿತು ಆದರೆ ಯಥೋಚಿತವಾಗಿ ಮಳೆ ಆಗಿ ಹಾಳಿ ಇರತಕ್ಕ ಅಚ್ಚುಕಟ್ಟು ಜಮೀನಿನ ಸಾಗುವಳಿಗೆ ಬೇಕಾದಷ್ಟು ನೀರಿಗಿಂತಲೂ ಹೆಚ್ಚಾಗಿ ನೀರು ಕೆರೆಗಳಲ್ಲಿ ನಿಂತ ವರುಷಗಳಲ್ಲಿ, ಒಂದು ವರುಷಕಾಲಕ್ಕೆ ಮಾತ್ರ ಸರ್ಕಾರಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಬಂದ ದರಖಾಸ್ತುಗಳನ್ನು ಮಂಜೂರ್ ಮಾಡುವುದು ಸರ್ಕಾರಕ್ಕೂ ರೈತರಿಗೂ ಲಾಭಕರವಾದದ್ದೆಂದು ರೆವಿನ್ಯೂ ಕಮಿಷನರವರು ತಿಳಿಸುತ್ತಾರೆ ಅಲ್ಲದೆ ವಿಶೇಷ ಮಳೆ ಆದ ವರುಷದಲ್ಲಿ ಒಂದು ವರುಷಕ್ಕೆ ಮಾತ್ರ ಹಂಗಾಮಿ ನೀರುಸರಿ ದರವರನ್ನು ವಸೂಲ್ಮಾಡಬಹುದೆಂದಾಗಲೂ, ಡೆಪ್ಯುಟಿ ಕಮಿಷನರವರು ಚೆನ್ನಾಗಿ ಆಲೋಚನೆ ಮಾಡಿ ಸರಿಯಾದ ಕಾರಣವಿದ್ದ ಹೊರತು ಕೆರೆಯ ಅಚ್ಚುಕಟ್ಟು ಜಮೀನಿಗೆ ಖಾಯಂ ಆಗಿ ಜಮೀನನ್ನು ಸೇರಿಸಕೂಡದೆಂದೂ ರೆವಿನ್ಯೂ ಕಮಿಷನರವರು ಸಲಹೆಯನ್ನು ಕೊಟ್ಟು ಇರುತ್ತಾರೆ ಈ ವಿಷಯದಲ್ಲಿ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರು ವಿಶೇಷ ಮಳೆ ಆದ ವರುಷಗಳಲ್ಲಿ ಡೆಪ್ಯುಟಿ ಕಮಿಷನರವರು ಒಂದು ವರುಷಕ್ಕೆ ಮಾತ್ರ ಹಂಗಾಮಿ ನೀರು ಸರದಿಯನ್ನು ವಸೂಲ್ಮಾಡುವುದರಿಂದ ಯಾವ ನಿಯಮಕ್ಕೂ ಭಂಗಬಾರದೆಂದು ಅಭಿಪ್ರಾಯ ಪಡುತ್ತಾರೆ ಈ ಕಾರಣಗಳಿಂದ ರೆವಿನ್ಯೂ ಕಮಿಷನರವರೂ, ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರೂ ಏಕವಾಕ್ಯತೆಯಿಂದ ಹೇಳುವ ಅಭಿಪ್ರಾಯವನ್ನು ಸರ್ಕಾರದವರೂ ಒಪ್ಪಿ ಸಂದರ್ಭಗಳಲ್ಲಿ ರೆವಿನ್ಯೂ ಕಮಿಷನರವರ ಸರ್ಕ್ಯುಲರಿನಲ್ಲಿ ಅಡಗಿರುವ ಎಲ್ಲಾ ವಿಷಯಗಳಿಗೆ ಸ್ವಲ್ಪವೂ ತಪ್ಪದೆ ಸರಿಯಾಗಿ ಹಂಗಾಮಿ ನೀರುಸರದಿಯನ್ನು ಏರ್ಪಡಿಸುವ ಪದ್ಧತಿಯನ್ನು ಮುಂದೆಯೂ ಜಾರಿಗೆ ತರಬಹುದೆಂದು ಹುಕುಂ ಮಾಡಿರುತ್ತಾರೆ

ಎರಡನೇ ಕೌನ್ಸಲರವರ ಸಂಚಾರ

ಶಿಕಾರಿಪುರ

ಸರ್ದಾರ್ ಕಾಂತರಾಜ ಅರಸಿನವರು ಈ ಮಾಹೆ ತಾ 19ನೇ ಪ್ರಾತಃಕಾಲ ಹೊನ್ನಾಳಿಯಿಂದ ಹೊರಟು ಸವಳಂಗದ ಮಾರ್ಗವಾಗಿ ಮಧ್ಯಾಹ್ನ 12 ಘಂಟೆಗೆ ಇಲ್ಲಿಗೆ ದಯಮಾಡಿಸಿದರು ಟ್ರಾವೆಲರ್ಸ್ ಬಂಗ್ಲೆ ಬಳಿ ಹಾಕಿದ್ದ ಚಪ್ಪರದಲ್ಲಿ ಅವರ ಭೇಟಿ ಬಗ್ಗೆ ಬಂದ ಸಕಲ ಪ್ರಮುಖರೆಲ್ಲರೂ ಕಾದಿದ್ದರು ಅವರು ಮೋಟಾರಿನಿಂದ ಬಂಗ್ಲೆ ಬಳಿ ಇಳಿದ ಕೂಡಲೆ ಬ್ರಾಹ್ಮಣರುಗಳಿಂದ ಮಾಡಲ್ಪಟ್ಟ ಆಶೀರ್ವಾದ ಫಲಮಂತ್ರಾಕ್ಷತೆಯನ್ನು ತೆಗೆದುಕೊಂಡರು ನಂತರ ತಾಲ್ಲೂಕು ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳೂ, ಮುನಿಸಿಪಲ್ ಕೌನ್ಸಲರುಗಳೂ, ತಾಲ್ಲೂಕು ಬೋರ್ಡು ಮೆಂಬರುಗಳೂ, ಟವನ್ ಪ್ರೋಗ್ರೆಸ್ ಕಮಿಟಿ ಮೆಂಬರುಗಳೂ, ತಾಲ್ಲೂಕು ಪ್ರೋಗ್ರೆಸ್ ಕಮಿಟಿ ಮೆಂಬರುಗಳೂ, ದೇವಸ್ಥಾನದ ಧರ್ಮದರ್ಶಿಗಳೂ, ಗರ್ಲ್ಸ್ ಸ್ಕೂಲುಗಳ ಮ್ಯಾನೇಜರೂ, ಜಮೀನ್‌ದಾರರುಗಳೂ, ವರ್ತಕರೂ ಮೊದಲಾದವರು ಕೌನ್ಸಲರವರ ದರ್ಶನವನ್ನು ತೆಗೆದುಕೊಂಡರು ಇವರೆಲ್ಲರುಗಳ ಪರಿಚಯವನ್ನೂ ನಮ್ಮ ತಾಲ್ಲೂಕು ಅಮಲ್ದಾರರವರು ಮಾಡಿಸಿದರು ಸರ್ದಾರರು ಯೋಗಕ್ಷೇಮವನ್ನು ವಿಚಾರಿಸಿ, ಟವನ್ನಿನೊಳಗೆ ದಯಮಾಡಿಸುವದಾಗಿ ಅಪ್ಪಣೆ ಕೊಡಿಸಿ ಬಂಗ್ಲೆಗೆ ದಯಮಾಡಿಸಿದರು

ಸಾಯಂಕಾಲ 6 ಘಂಟೆಗೆ ಪೂರ್ವದಲ್ಲಿ ಈ ಗ್ರಾಮದ ಜನಗಳು ವಾಸವಾಗಿದ್ದ ಕೋಟೆಯನ್ನು ಪರಾಂಬರಿಸಿ ವಾಪಸು ಬಂಗಲೆಗೆ ಚಿತ್ತೈಸಿ ಪ್ರಜೆಗಳ ಅಹವಾಲನ್ನು ಕೇಳಿದರು ಮರುದಿನ ಬೆಳಿಗ್ಗೆ ಹೊಸದಾಗಿ ಕಟ್ಟಬೇಕೆಂದಿರುವ ಅಂಬಲಿಗೊಳ್ಳದ ಕೆರೆಯ ಬಾಗವನ್ನು ಪರಾಂಬರಿಸಿ ಮ|| ಭವಾನಿ ರಾಯರಿಂದ ಏರ್ಪಡಿಸಿದ್ದ ಉಪಹಾರಮಾಡಿ ಮಧ್ಯಾಹ್ನಕ್ಕೆ ವಾಪಸು ಚಿತ್ತೈಸಿದರು ಸಾಯಂಕಾಲ 5 ಘಂಟೆಗೆ ಡೆಪ್ಯುಟಿ ಕಮಿಷನರ್ ಎಸ್ ಬಿ ...ರವರು ಫಾರೆಸ್ಟು ಆಫೀಸರವರು, ಶಿವಮೊಗ್ಗಾ ಸಬ್ ಡಿವಿಜನ್ ಅ|| ಕಮಿಷನರವರು, ಪೊಲೀಸ್ ಸೂಪರಿಂಟೆಂಡೆಂಟರವರು ಮೊದಲಾದವರ ಸಮೇತ ಕೌನ್ಸಲರ್ ಸಾಹೇಬರ ಹಿಂದುಸ್ಥಾನಿ ಬಾಯರ ಸ್ಕೂಲ್ ರೋಡಿನಲ್ಲಿ ಬಂದು, ಎ ವಿ ಸ್ಕೂಲ್ ಪರಾಂಬರಿಸಿ ಕಟ್ಟಡ ಬಡಾವಣೆ ವಿಷಯದಲ್ಲಿ ಸದುತ್ತರವನ್ನಿತ್ತು, ತಾಲ್ಲೂಕು ಆಫೀಸಿಗೆ ದಯಮಾಡಿಸಿದರು ಮುಖ್ಯವಾದ ಜುಡಿಷಲ್, ಮುನಿಸಿಪಲ್, ಮೊದಲಾದ ಎಲ್ಲಾ ಬಾಬುಗಳನ್ನೂ ಪರಾಂಬರಿಸಿ ರೀಡಿಂಗ್ ರೂಮ್‌ಗೆ ದಯಮಾಡಿಸಿದರು ನಂತರ ಕೋಆಪರೆಟಿವ್ ಸೊಸೈಟಿ ಆಫೀಸ್ ಸಮಾಪದಲ್ಲಿ ಸೊಸೈಟಿ ಸೆಕ್ರೆಟರಿಯವರಾದ ಮ|| ಶ್ರೀನಿವಾಸದೀಕ್ಷಿತರು ಸೋಟಿ ಪಂಚಾಯಿತ ಕಮಿಟಿ ಮೆಂಬರುಗಳಾದ ಮ|| ಭವಾನಿರಾಯರು ಮೊದಲಾದವರ ಭೇಟಿ ಮಾಡಿದರು ನಂತರ ಸರ್ದಾರರು ಸಂಗಡ ದಯ ಮಾಡಿದ್ದ ಆಫೀಸರುಗಳ ಸಮೇತ ಆಫೀಸಿನೊಳಕ್ಕೆ ದಯಮಾಡಿ ಸೊಸೈಟಿಯ ಲೆಕ್ಕಪತ್ರಗಳನ್ನೂ ಜಮಾಖರ್ಚು ಲೆಕ್ಕ ಕ್ಯಾಷ್ ಎಲ್ಲಾ ಸಹಾ ಪರಾಂಬರಿಸಿ ಸಂತೋಷಪಟ್ಟರು ನಂತರ ಸೆಕ್ರೆಟರಿಯವರಿಂದ ಪುಷ್ಪಹಾರವು ಹಾಕಲ್ಪಟ್ಟಿತು ತಾಂಬೂಲಾದಿಗಳನ್ನು ಪರಿಗ್ರಹಿಸಿ ಸಪರಿವಾರದೊಡನೆ ಸ್ವಲ್ಪ ದೂರ ಮುಂದೆ ತೆರಳುವದರಲ್ಲಿ ಆರ್ಯಬಾಲಿಕಾ ಪಾಠಶಾಲೆಯ ಸಮೀಪ ಅಲ್ಲಿ ಮ್ಯಾನೇಜರು ಭೇಟಿ ಮಾಡಿದ ಮೇಲೆಗೆ ಸದರಿ ಪಾಠಶಾಲೆಗೆ ದಯಮಾಡಿಸಿದರು ಅಲ್ಲಿ ಪ್ರೇಮಚಂದರಾಯರವರ ಶ್ರೀಮತಿ ಪ್ರಾರ್ಥನೆಯನ್ನು ಮತ್ತು ಕಾಲವನ್ನು ವೃಥಾ ಕಳೆಯಬಾರದು, ... ಸ್ತ್ರೀಯರಿಗೆ ವಿದ್ಯೆಯು ಅತ್ಯವಶ್ಯಕವಾದದ್ದು ಎಂಬ ಎರಡು ಸಂಭಾಷಣೆಗಳನ್ನು ಮಕ್ಕಳು ಬಹು ಸ್ವಾರಸ್ಯವಾಗಿ ಮಾಡಿದರು ನಂತರ ಮಂಗಳಗಾನವು ನಡಿಸಲ್ಪಟ್ಟು, ಮ್ಯಾನೇಜರ್ ಮ|| ದೀಕ್ಷಿತರವರಿಂದ ಪುಷ್ಪಮಾಲಾ ತಾಂಬೂಲಾದಿಗಳು ಅರ್ಪಿಸಲ್ಪಟ್ಟವು ಹಾಲಿ ಪಾಠಶಾಲೆ ನಡಿಯುತ್ತಿರುವ ಕಟ್ಟಡವು ಬೆಳಕು ಗಾಳಿ ಮುಂತಾದ್ದಕ್ಕೆ ಹೆಚ್ಚು ಅನುಕೂಲವಿಲ್ಲವಾದಕಾರಣ ಹಳೆ ಪೋಸ್ಟ್ ಆಫೀಸು ಕಟ್ಟಡವನ್ನು ಈ ಪಾಠಶಾಲೆಗೆ ಕೊಡಬೇಕಾಗಿ ಸ್ಕೂಲ್ ಕಮಿಟಿ ಮೆಂಬರ್ ಮ|| ಭವಾನಿರಾಯರು ವಿಜ್ಞಾಪನೆಮಾಡಿಕೊಂಡರು ಕೌನ್ಸಲರವರು ಉತ್ತಮ ಅಭಿಪ್ರಾಯವನ್ನು ದಯಪಾಲಿಸಿದ್ದಕ್ಕಾಗಿ ಅವರಿಗೂ, ಡೆಪ್ಯುಟಿ ಕಮಿಷನರವರಿಗೂ ತಂಬಾ ಕೃತಜ್ಞತೆಯನ್ನು ಅರ್ಪಿಸತಕ್ಕದ್ದಾಗಿದೆ ನಂತರ ಅಲ್ಲಿಂದ ಮ|| ಹುಚ್ಚರಾಯಸ್ವಾಮಿ ದೇವಸ್ಥಾನಕ್ಕೆ ದಯಮಾಡಿ ಮಂಗಳ ... ಪರಾಂಬರಿಸಿ ... ಜೀರ್ಣವಾಗಿ ಆಗುತ್ತಿರುವ ಭಾಗವನ್ನೆಲ್ಲಾ ಅಜಮಾಯಿಷಿ ... ಆಸ್ಪತ್ರೆಗೆ ದಯಮಾಡಿ ಅಲ್ಲಿಂದ ಭೇಟಿ ಮಾರ್ಗವಾಗಿ ದಯಮಾಡಿದ ಕಾಲದಲ್ಲಿ ... ಬಾವಿಗಳನ್ನು ತೆಗಿಸಬೇಕೆಂದು ವಿಜ್ಞಾಪನೆಮಾಡಿಕೊಂಡರು ಊರಲ್ಲಿ ... ತೆಗೆದರೆ 50 70 ಅಡಿಗೆ ಕಮ್ಮಿ ನೀರು ಸಿಗುವದಿಲ್ಲವೆಂತಲೂ, ಉಪ್ಪು ನೀರು ಆಗುವದರಿಂದ ಹಾಲಿ ನಡೆಯುತ್ತಿರುವ ನಲ್ಲಿ ಸಂಬಂಧವಾದ ಆಲೋಚನೆಯನ್ನು ನಡಿಸಿಕೊಟ್ಟರೆ ಎಲ್ಲಾ ವಿಧವಾದ ಅನುಕೂಲವೂ ಪಡುವ ಗುಣವೆಂದೂ, ಈ ವಿಷಯದಲ್ಲಿ ಟವನ್ ಪ್ರಜೆಗಳು ಅನುಕೂಲಮಾಡುವವರಾಗಿರುತ್ತಾರೆಂತಲೂ ಸದ್ಯ ಆಲೋಚನೆ ಮಾಡಬೇಕಿಲ್ಲವೆಂದೂ ... ಭಾಗದಲ್ಲಿ ಹಾಳಿ ಎಲ್ಲಾ ಇರುವ ಜನ್ನೆರಡು ಸಾವಿರ ರೂಪಾಯಿಗೆ 9 10 ಬಾವಿಗಳನ್ನು ತೆಗಿಸಬಹುದೆಂತಲೂ ಮೊದಲಾಗಿ ಮ|| ದೀಕ್ಷಿತರವರು ವಿಜ್ಞಾಪನೆಮಾಡಿಕೊಂಡರು ಹಾಗೆಯೇ ಟವನ್ ಸಂಬಂಧವಾದ ಇನ್ನು ಕೆಲವು ವಿಜ್ಞಾಪನೆಗಳನ್ನು ಕೇಳುತ್ತಾ ಎಸವೇರ್ತಿ ... ಸಮೀಪ ಬಂದ ಮಂಗಳವಾದ್ಯ ..., ಮಿಷನ್ ಗರ್ಲ್ಸ್ ಸ್ಕೂಲಿಗೆ ದಯಮಾಡಿ ಬಾಲಿಕೆಯರಿಂದ ಮಾಡಿಸಲ್ಪಟ್ಟ ಸಂಭಾಷಣೆ ಜಮಕೋಲಾಟ, ಮಂಗಳ, ಇವುಗಳನ್ನು ಕೇಳಿ ಅತ್ಯಂತ ಸಂತೋಷವನ್ನು ಹೊಂದಿದರು ಗಂಧಪುಷ್ಪಾದಿಗಳನ್ನು ತೆಗೆದುಕೊಂಡು ಬಂಗ್ಲೆಗೆ ದಯಮಾಡಿದರು

ಮ|| ದೀಕ್ಷಿತರವರು ಮೈಸೂರು ಸಂಸ್ಥಾನದ ಕೌನ್ಸಲರವರು ನಮ್ಮಗಳ ಅಹವಾಲುಗಳನ್ನು ಚೆನ್ನಾಗಿ ಲಾಲಿಸಿ ಸದುತ್ತರಗಳನ್ನು ದಯಪಾಲಿಸಿದ್ದಕ್ಕಾಗಿ ನಮ್ಮಗಳ ವಂದನೆಯನ್ನು ಅರ್ಪಿಸುವದಾಗಿ ವಿಜ್ಞಾಪಿಸಿಕೊಂಡರು ತಾ 21ನೇ ಪ್ರಾತಃಕಾಲ 7 ಘಂಟೆಗೆ ಯುಕ್ತಸನ್ಮಾನದೊಡನೆ ಅವರು ಶಿರಾಳಕೊಪ್ಪ ಮಾರ್ಗವಾಗಿ ಸೊರಬಕ್ಕೆ ಪ್ರಯಾಣಮಾಡಿದರು ಅವರು ದಯಮಾಡಿದ್ದ ಕಾಲದಲ್ಲಿ ಟವನ್ ಪ್ರಜೆಗಳು ಹೊಂದಬಹುದಾದ ಅನುಕೂಲಕ್ಕೆ ಆದ ಏರ್ಪಾಟನ್ನು ಕಲ್ಪಿಸಿಕೊಟ್ಟ ಅಮಲ್ದಾರ್ ಮ|| ಜಿ ಶಾಂತವೀರಪ್ಪನವರನ್ನು ಎಲ್ಲರೂ ಕೊಂಡಾಡುತ್ತಾರೆ

ಬಾತ್ಮಿದಾರ್

ಗ್ರಾಮಪಾಠಶಾಲಾ ಉಪಾಧ್ಯಾಯರೂ ಗ್ರಾಮಸ್ಥರೂ

ಸರ್ಕಾರದವರ ಕರ್ತವ್ಯ

ನಮ್ಮ ಮೈಸೂರು ಸೀಮೆಯಲ್ಲಿರುವ ಕೆಲವು ಹಳ್ಳಿಗಳಲ್ಲಿ ಸರ್ಕಾರಿ ಪಾಠಶಾಲೆಗಳಿರುವುದು ಸರಿಯಷ್ಟೆ ಮೊದಲು ಇವುಗಳ ವಿಷಯದಲ್ಲಿ ಸ್ವಲ್ಪ ಯೋಚಿಸುವುದು ಯುಕ್ತ ಈಗ ಪ್ರತಿ ಗ್ರಾಮ ಪಾಠಶಾಲೆಗಳಲ್ಲೂ ಇರತಕ್ಕ ಉಪಾಧ್ಯಾಯರು ತಮ್ಮ ಕೆಲಸವನ್ನು ಎಷ್ಟರ ಮಟ್ಟಿಗೆ ನೆರವೇರಿಸುತ್ತಾರೆ ? ಇವರು ಮಾಡತಕ್ಕ ಕೆಲಸದಲ್ಲಿ ಇವರಿಗೆ ಅಭಿಲಾಷೆ ಇರುವುದೇ ? ಎಂಬೀ ವಿಷಯವನ್ನು ಯೋಚಿಸಿ ನೋಡಿದರೆ ಇವರಲ್ಲಿ ಅನೇಕರು ತಮ್ಮ ಕೆಲಸವನ್ನು ಖಂಡಿತವಾಗಿ ಸರಿಯಾಗಿ ನೋಡುವುದಿಲ್ಲ ಈ ಉಪಾಧ್ಯಾಯರು ತಮ್ಮ ಜೀವನಕ್ಕೆ ಇತರ ಮಾರ್ಗಗಳಿಲ್ಲದೆ ಈ ಕೆಲಸವನ್ನು ಸಂಪಾದಿಸಿಕೊಂಡು ತಮಗೆ ಬರತಕ್ಕ ಸಂಬಳ ಮಾತ್ರ ಬಂದರೆ ಸಾಕೆಂದು ಭಾವಿಸಿ ಇದರಲ್ಲಿ ಕೇವಲ ಬೇಸರಗೊಂಡು ಕೆಲವು

...ಮಾತ್ರ ಅಂದರೆ ಇತರ ವಿಧದಿಂದ ಜೀವನಮಾಡುವುದಕ್ಕೆ ಏರ್ಪಾಡು ...ಕೊಂಡ ನಂತರ ಈ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡುತ್ತಾರೆ ಮತ್ತು ...ಸ್ವಮತಾಭಿಮಾನದಿಂದ ಹಿಂದಣ ಅನೇಕ ದುಷ್ಟ ಪದ್ಧತಿಗಳನ್ನು ಕೈ ...ಪಾಠಶಾಲೆಗಳಿಗೆ ಬರುವ ಮಕ್ಕಳನ್ನು ಸರಿಯಾಗಿ ತಯಾರು ಮಾಡದೆ ...ರಾಗಿರುತ್ತಾರೆ ಇವರು ಈ ರೀತಿ ಉದಾಸೀನರಲ್ಲಿದ್ದರೆ ವಿದ್ಯಾವಿಹೀನರಾದ ...ವಿದ್ಯಾವಂತರೂ ತಿಳುವಳಿಕಸ್ಥರೂ ಆಗುವುದು ಹೇಗೆ. ಉಪಾಧ್ಯಾ... ಪ್ರಪಂಚದ ವಿಳಿಗೆಬಾಸ್ಕುಂಟುಮಾಡಲು ಮೊದಲನೇ ಹಂತದವರು ...ವರು ತಮ್ಮ ಪ್ರತಿ ಒಂದು ಕೆಲಸದಲ್ಲಿಯೂ ಆಸಕ್ತರಾಗಿರುವಂತೆಯೂ ...ಪ್ರಜೆಗಳಿಗೆ ಉಪಕಾರಮಾಡುವವರಾಗಿಯೂ ಇರತಕ್ಕದ್ದು ಕರ್ತವ್ಯವ... ಆದ್ದರಿಂದ ನಮ್ಮ ಸರ್ಕಾರದವರು ಈ ಉಪಾಧ್ಯಾಯರ ಕಡೆ ತಮ್ಮ ...ಯನ್ನು ಕೊಟ್ಟು ಮೊದಲು ಇವರನ್ನು ವಿದ್ಯಾವಂತರನ್ನಾಗಿಯೂ, ಪ್ರಜೆಗ... ಉಪಕಾರಮಾಡುವವರನ್ನಾಗಿಯೂ ಮಾಡಿ, ಇವರನ್ನು ಚೆನ್ನಾಗಿ ಪ್ರೋತ್ಸಾ... ನಮ್ಮ ದೇಶವು ಜಾಗ್ರತೆ ಅಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲ.

ಅನಂತರ ಹಳ್ಳಿಯಲ್ಲಿರುವ ಪ್ರಜೆಗಳ ವಿಷಯದಲ್ಲಿ ಯೋಚನೆ ಮಾಡಿದರೆ ...ದೇಶದ ಪ್ರತಿ ಒಂದು ಗ್ರಾಮದಲ್ಲಿಯೂ ಪಂಗಡಗಳು ಸಾಧಾರಣವಾಗಿರು... ಈ ಪಾರ್ಟಿಗಳಿಗೆ ಒಬ್ಬೊಬ್ಬ ಪುಂಡರು ಸೇರಿಕೊಂಡು, ಎಲ್ಲರನ್ನೂ ...ಮಾಡುತ್ತಾ, ಊರು ಏಳಿಗೆ ಹೊಂದಲು ಮಾರ್ಗವಿಲ್ಲದಂತೆ ಮಾಡು... ಸಾಧಾರಣವಾಗಿ ಇವರು ವಿದ್ಯಾಭ್ಯಾಸಮಾಡಿ ಈಗ ಸುಲಭ ಕ್ರಯಕ್ಕೆ ...ಯುವ ಆ ಪುಸ್ತಕಗಳನ್ನು ತೆಗೆದುಕೊಂಡು ಓದಿ, ಉತ್ತಮವಾದ ಜೀವ... ಉಪಾಯಕ್ಕೆ ಬೇಕಾದ ಕೆಲಸಗಳು ಮಾಡುವುದು ಅವಮಾನಕರವೆಂದು ...(ಅಂದರೆ, ವ್ಯವಸಾಯ, ಕೂಲಿಕೆಲಸಗಳನ್ನೂ ಮತ್ತು ಇತರ ಕೆಲಸಗ... ಮಾತಲಾದವೆ) ಏನೂ ತಿಳಿಯದ ಬಡರೈತರಲ್ಲಿ ದುರ್ವ್ಯಾಜ್ಯ ಹುಟ್ಟು... ಮಾಡಿ ಅವರ ಇಶ್ತಾಪಹಾರಗಳನ್ನೆಲ್ಲಾ ಕಿತ್ತುಕೊಂಡು ಕೊನೆಗೆ ತಾವೇ ...ಕ್ಕೆ ಗುರಿಯಾಗುತ್ತಾರೆ ಗ್ರಾಮಗಳಲ್ಲಿ ಪಾಠಶಾಲೆಗಳಿದ್ದರೆ ಉಪಾಧ್ಯಾಯ... ...ಪಕ್ಷದವರಲ್ಲವಿದ್ದರೆ ಇನ್ನೊಂದು ಪಕ್ಷದವರಾದರೂ ಹೀಯಾಳಿ... ಒಬ್ಬರು ಮಕ್ಕಳು ಕಳುಹಿಸಿದರೆ ಇನ್ನೊಬ್ಬರು ಕಳುಹಿಸುವುದು ದುರ್ಲ... ...ತ್ತು ಇಂಥವರಿಗೆ ಉಪಾಧ್ಯಾಯರು ವಿವೇಕ ಹೇಳಿದರೆ "ನಮ್ಮ ತಂದೆ ...ನಮ್ಮ ಅಜ್ಜನೂ ನಾವೂ ಓದಿದ್ದರಿಂದಲೇ ಜೀವನ ಮಾಡುತ್ತೇವೇನು? ...ಹೊಲ ಮನೆ ವ್ಯವಸಾಯಗಳು ಹೇಗೆ ಗುತ್ತವೆಯೋ? ನಾವೆಲ್ಲಾ ಜೀವನ ...ವಿಲ್ಲವೇ? ಓದುವದರಿಂದ ನಮಗೇನು ಬರುತ್ತೆ?" ಎಂದು ಹೀಯಾಳಿ... ...ತೆ ಮತ್ತು ಇಂಥಾ ಜನಗಳನ್ನೇ ಸ್ಕೂಲು ಕಮಿಟಿ ಮೆಂಬರುಗಳಾಗಿ ...ಯಿಸಿದರೆ ಅವರು ಸ್ಕೂಲಿಗೆ ಬೇಕಾಗುವ ಸಹಾಯವನ್ನೂ ಉಪಾಧ್ಯಾ... ...ಸಹಾಯವನ್ನೂ, ಗ್ರಾಮಸ್ಥರಿಗೆ ಪ್ರೋತ್ಸಾಹವನ್ನೂ ಸ್ವಲ್ಪವೂ ಮಾಡದೆ, ...ಸ್ಕೂಲ್ ಮೆಂಬರುಗಳು, ಮಾಸ್ಟರು ನಾವು ಹೇಳಿದಂತೆ ಕೇಳಬೇಕು ...ಯೂ, ಮಾಸ್ಟರು ಒಂದು ವೇಳೆ ರಜಾ ಪಡೆದು ಹೋದರೆ ಗ್ರಾಮದ ಜನ... ...ಸ್ಟರ ಮೇಲೆ ದೋಷಾರೋಪಣೆಯಾದ ಅರ್ಜಿ ಬರೆಸುತ್ತಾರೆ ಈ ರೀತಿ ...ದ ನಮ್ಮ ಹಳ್ಳಿ ಜನಗಳಿಗೆ ತಿಳುವಳಿಕೆಯನ್ನು ಯಾರು ಉಂಟುಮಾಡ... ...ಗ್ರಾಮದಲ್ಲಿ ಪಾರ್ಟಿ ಇದ್ದು ವ್ಯಾಜ್ಯಮಾಡಿಕೊಂಡು ಕೋರ್ಟಿಗೆ ...ಚೆ ತಿಳುವಳಿಕೆಯನ್ನುಂಟುಮಾಡದೆ ವಕೀಲರುಗಳು ಇವರಿಂದ ದಂಡ... ...ವನ್ನು ತೆರಿಸಿ ಸುಮ್ಮನೆ ಬಿಟ್ಟುಬಿಟ್ಟರೆ ಅವರಿಗೆ ಹೇಗೆ ತಿಳುವಳಿಕೆ ...ಬೇಕು. ಈ ವಿಷಯಗಳಲ್ಲಿ ಸರ್ಕಾರದವರು ಏತಕ್ಕೆ ಏರ್ಪಾಡು ...ಸಬಾರದು. ಈ ಸರ್ಕಾರದವರು ಮಾಡಿರುವ ಪ್ರಾಥಮಿಕ ವಿದ್ಯಾಭ್ಯಾಸದ ...ಧದ ರೆಗ್ಯುಲೇಷನ್ ಎಲ್ಲಾ ಪ್ರಜೆಗಳೂ ವಿದ್ಯಾವಂತರಾಗಲೆಂದು ಮಾಡಿರು... ಈ ರೆಗ್ಯುಲೇಷನ್ ಇನ್ನು ಮುಂದೆ ಬರುವ ಪ್ರಜೆಗಳಿಂದ ಮಕ್ಕಳಿಗೆ ...ಯುತ್ತ ಈಗ ಇರತಕ್ಕವರು ಸ್ವಲ್ಪ ಮಟ್ಟಿಗಾದರೂ ತಿಳುವಳಿಕೆ ಪಡೆಯ... ...ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಹ್ಯಾಗೆ ಮಾಡುತ್ತಾರೆ? ಅವರೇ ...ಯಲ್ಲಿದ್ದರೆ ಇದು ಯಾವ ರೀತಿಯಿಂದ ನಡೆದೀತು? ಈಗ ಒಂದು ...ದಲ್ಲಿ ಉಪಾಧ್ಯಾಯರು ಸರ್ಕಾರದವರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿ... ...ಕ್ಕೆ ನಿರ್ಬಂಧದ ಹುಕುಂ ಕೊಟ್ಟಿರುತ್ತಾರೆಂದು ಒಬ್ಬ ರೈತನಿಗೆ ಹೇಳಿದ್ದಕ್ಕೆ ...ನು ಕೋಪಿಸಿಕೊಂಡು ಕೆಲವು ದುರ್ಭಾಷೆಗಳನ್ನು ಆಡಿ, "ನಮ್ಮ ಮಕ್ಕಳು ...ದರೆ ನಮಗೆ ಲಾಭ, ನಾವು ಏಕೆ ಓದಿಸಬೇಕು?" ಎಂದು ಕೇಳಿದನಂತೆ. ...ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವೇ ಗೊತ್ತಿಲ್ಲದಿದ್ದರೆ ಏನು ...ಜನವಾದೀತು? ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲಿ ಸರಿಯಾದ ...ಳಿಯುಳ್ಳ ಜನಗಳನ್ನು ನೋಡಿ ಪ್ರತಿ ಗ್ರಾಮದಲ್ಲಿ ಒಂದೊಂದು ಸಂಘ ...ಸ್ಥಾಪಿಸುವುದೂ ರೀಡಿಂಗ್ ರೂಮ್ ಏರ್ಪಾಡು ಮಾಡುವದೂ, ಸಂಘ ...ಸೇರಿ ಗ್ರಾಮದ ಪ್ರಜೆಗಳನ್ನೆಲ್ಲಾ ಕರಸಿಕೊಂಡು ಒಂದೊಂದು ಸಾರಿ ...ಗು ನಡಿಸುವುದೂ ಯುಕ್ತವಾದ ಕೆಲಸ ಇಂಥ ಮೀಟಿಂಗುಗಳಿಗೆ ...ದ ಪಾಠಶಾಲೆ ಉಪಾಧ್ಯಾಯರೂ ಸೇರಿ ಹೊಸ ಅಂಶಗಳನ್ನು, ವಿದ್ಯೆಯಿಂ... ...ಪ್ರಯೋಜನವನ್ನೂ ಅವರಿಗೆ ಬೇಕಾದ ತತ್ಕಾಲೋಚಿತವಾದ ಕೆಲವು ಉಪ... ...ಕೊಟ್ಟು ಪ್ರೋತ್ಸಾಹಿಸಿದರೆ ಗ್ರಾಮಾಭಿವೃದ್ಧಿಯಾಗುವುದರಲ್ಲಿ ಸಂಶ... ಈ ರೀತಿಯಾದ ಮೀಟಿಂಗು ತಿಂಗಳಿಗೊಂದು ಸಾರಿ ನಡೆಯುವುದು ...ಮು. ಆದ್ದರಿಂದ ಇಂಥಾ ಏರ್ಪಾಡುಗಳನ್ನಾಗಲಿ, ಇದಕ್ಕಿಂತ ಉತ್ತಮವಾ... ...ಗಳನ್ನಾಗಲಿ ನಮ್ಮ ಸರ್ಕಾರದವರು ಮಾಡಿ ಜಾಗ್ರತೆ ಜಾರಿಗೆ ತರಲೆಂದು ...ಸುತ್ತೇನೆ.

ಕನಗೂಳ (?) ಎನ್ ಶಂಕರಪ್ಪ, ಸ್ಕೂಲ್ ಮಾಸ್ಟರ್

ಬಾತ್ಮೀದಾರರಿಗೆ ನೋಟೀಸ್.

...ದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ...ಇದನ್ನು ಸಕಲರೂ ತಿಳಿಯತಕ್ಕದ್ದು

...ಕೃಷ್ಣಪ್ಪ, ಶ್ರೀರಂಗಪಟ್ಟಣ —ಯಾವ ಪತ್ರಿಕೆಯಲ್ಲಿ ಓದಿದ ಪ್ರಕ... ...ನಂಬಿ ಮೋಸಹೋದಿರೋ ಆ ಪತ್ರಿಕೆಗೇ ನಿಮ್ಮ ಆಕ್ಷೇಪಣೆಯನ್ನು ...ದು ಉತ್ತಮ

...ಮಿಯ, ಚೆನ್ನಪಟ್ಟಣ —ನೀವು ಹೇಳುವ ಆಕ್ಷೇಪಣೆಗಳನ್ನ... ...ನಡೆದ ಕಾಲದಲ್ಲಿ ಪಂಚಾಯತರ ಮುಂದೆ ಹೇಳಿದ್ದರೆ ಅದರ ...ವನ್ನು ಸರ್ಕಾರದವರು ತನಿಖೆ ಮಾಡುವುದಕ್ಕೆ ಸಹಾಯವಾಗು...

ಹಿತಚಿಂತಕ, ಕರುಣಾಮುಕ್ತಿ —ಮೊದಲನೇ ವಿಷಯವನ್ನು ನೀವು ಕೋರ್ಟಿನಲ್ಲಿ ವ್ಯವಹರಿಸಿಕೊಳ್ಳಬೇಕು ಎರಡನೇ ವಿಚಾರವನ್ನು ಪೊಲೀಸಿಗೂ, ಫಾರೆಸ್ಟ್ ಇಲಾಖಾ ಅಧಿಕಾರಿಗೂ ಅರ್ಜಿ ಕೊಟ್ಟು ತಿಳಿಸಿದರೆ ಅವರು ತನಿಖೆಮಾಡಿ ಕ್ರಮ ಪಡಿಸುತ್ತಾರೆ

ಸತ್ಯವಾದಿ, ಚಿತ್ರದುರ್ಗ —ನೀವು ಊಹಿಸಿರುವಂತೆ ಅವರಿಗೆ ಆ ಕೆಲಸ ವಾಯಿತೆಂದು ತಿಳಿಯಲಿಲ್ಲವಾಗಿ ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರವೆಂದು ವಿಷಾದಿಸುತ್ತೇವೆ

—ಎಡಿ]

ಕರೆಸ್‌ಪಾಂಡೆನ್ಸ್.

ಗ್ರಾಮಪಾಠಶಾಲೆಗಳು ಮತ್ತು ವೃತ್ತಾಂತ ಪತ್ರಿಕೆಗಳು.

ಅಯ್ಯಾ,

ಪ್ರಪಂಚದಲ್ಲಿ ನೆಲೆಗೊಂಡಿರತಕ್ಕ ನಾನಾ ಜನಾಂಗಗಳ ಚರಿತ್ರೆಯನ್ನು ನೋಡಿದರೆ ನಿರಂಕುಶಪ್ರಭುತ್ವವನ್ನು ನಾಶಮಾಡಿ ಸಾಂಕುಶಪ್ರಭುತ್ವವನ್ನು ಸ್ಥಾಪಿಸಿದುದರಲ್ಲಿಯೂ, ಸಾಂಕುಶಪ್ರಭುತ್ವವು ಕ್ರಮ ತಪ್ಪದ ಹಾಗೆ ನಡೆಯುವುದರಲ್ಲಿಯೂ, ಪ್ರಜೋಪಕಾರವಾದ ಕೆಲಸಗಳಲ್ಲಿ ಹೋರಾಡುವುದರಲ್ಲಿಯೂ, ಪ್ರಪಂಚದ ಅನುಭವಗಳನ್ನು ಪರಿಚಯಮಾಡಿಕೊಡುವುದರಲ್ಲಿಯೂ "ವೃತ್ತಾಂತ ಪತ್ರಿಕೆಗಳು" ಅಸಾಧಾರಣವಾದ ಕೆಲಸಗಳನ್ನು ಮಾಡಿರುವುದೂ ಮಾಡುತ್ತಿರುವುದೂ ಪಾಶ್ಚಾತ್ಯ ಚರಿತ್ರೆಗಳನ್ನು ಪಠಿಸಿರತಕ್ಕ ಸರ್ವರಿಗೂ ವೇದ್ಯವೇ ಆಗಿರುತ್ತದೆ ನಮ್ಮ ಜನ್ಮಭೂಮಿಯಾದ ಮೈಸೂರು ಸಂಸ್ಥಾನದಲ್ಲಿ ಗ್ರಾಮಗಳ ಅಭಿವೃದ್ಧಿಗೋಸ್ಕರ ಸರ್ಕಾರದವರು ನಾನಾ ವಿಧವಾದ ಏರ್ಪಾಡುಗಳು ನಡಿಸುತ್ತಿರುವುದು ಸರಿಯಷ್ಟೆ ಈ ಏರ್ಪಾಡುಗಳಲ್ಲಿ ವಾರಕ್ಕೊಂದಾವರ್ತಿ ಗ್ರಾಮಸ್ಥರೆಲ್ಲರೂ ಒಂದು ಚಾವಡಿಯಲ್ಲಿ ಸೇರಿ ಗ್ರಾಮದ ಅಭಿವೃದ್ಧಿಯಾಗಲು ತಕ್ಕ ಏರ್ಪಾಡುಗಳ ವಿಷಯವಾಗಿ ಚರ್ಚಿಸಿ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಳ್ಳಬೇಕೆಂದೂ, ಅನಂತರ ವೃತ್ತಾಂತ ಪತ್ರಿಕೆಗಳನ್ನು ಓದಿಸಿ ಕೇಳಬೇಕೆಂದೂ ಕಾಣಿಸಿವೆ ಈ ರೀತಿಯಲ್ಲಿ ಗ್ರಾಮಸ್ಥರು ನಡೆದುಕೊಂಡರೆ ಅವರು ತಮ್ಮ ತಮ್ಮ ಕರ್ತವ್ಯಗಳನ್ನು ತಿಳಿದು ಧಾರ್ಮ್ಯಾಧರ್ಮಗಳು ಸರಿಯಾಗಿ ನಡೆದುಕೊಂಡು ಹೋಗಿ, ನೆಮ್ಮದಿಯಾಗಿ ಜೀವಿಸಲು ಯಾವ ಕೊರತೆಯೂ ಇಲ್ಲ ಇಂಥಾ ವೃತ್ತಾಂತ ಪತ್ರಿಕೆಗಳನ್ನು ಓದುವುದರಲ್ಲಿ ಒಂದು ವಿಧವಾದ ಅಭಿರುಚಿಯನ್ನು ಗ್ರಾಮ ಪಾಠಶಾಲೆಯ ಬಾಲಕರಲ್ಲಿ ಉದಯಿಸುವ ಹಾಗೆ ಮಾಡಿದರೆ ಮುಂದೆ ಅವರು ದೊಡ್ಡವರಾದ ಮೇಲೆ ತಮ್ಮ ಕರ್ತವ್ಯಗಳನ್ನು ತಿಳಿದು ಬಾಳುವುದಕ್ಕೆ ಅನುಕೂಲವಾದೀತು ಇದಕ್ಕೋಸ್ಕರ ನಮ್ಮ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿ ಸಾಹೇಬರವರು ಪ್ರತಿದಿನವೊಂದು ವಾರವೂ ಒಂದು ಗಂಟೆ ಹೊತ್ತು ಗ್ರಾಮದ ಉಪಾಧ್ಯಾಯರು ವೃತ್ತಾಂತ ಪತ್ರಿಕೆಗಳನ್ನು ಓದಿ ಬಾಲಕರಿಗೆ ಅವಗಾಹನೆಯಾಗುವ ಹಾಗೆ ಬೋಧಿಸಿದರೆ ಪ್ರಪಂಚದಲ್ಲಿ ನಡೆಯುತಕ್ಕ ವಿಷಯಗಳನ್ನು ತಿಳಿದುಕೊಂಡು ಅವರು ಆಲೋಚನಾಪರರಾಗದೆ ಇರಲಾರರು ಎಂಬ ಅಂಶವನ್ನು ಗಮನಿಸಿ "ಕರಿಕ್ಯುಲಮ್"ನಲ್ಲಿ ಅವಕಾಶ ಕೊಟ್ಟರೆ ಪ್ರಯೋಜನವಾದೀತೆಂದು ನಂಬುತ್ತೇನೆ

ಒಬ್ಬ ಸ್ಕೂಲ್ ಮಾಸ್ಟರ್

ಸೂಳೆಕೆರೆಯ ಏರ್ಪಾಡು

ಅಯ್ಯಾ,

ಮೈಸೂರು ಸೀಮೆಯ ಪೈಕಿ ಚನ್ನಗಿರಿ ತಾಲ್ಲೂಕಿನಲ್ಲಿ ಸೂಳೆಕೆರೆ ಎಂಬ ದೊಂದು ದೊಡ್ಡ ಕೆರೆ ಇದೆ ಹಾಲಿ ಈ ಕೆರೆಯಲ್ಲಿ ನೀರು ಸಮೃದ್ಧಿಯಾಗಿದೆ ಆದರೆ ನಾಲೆ ಜೋಡಿಯಲ್ಲಿ ಹಾಳಿದ್ದಂತೆ ಈ ನೀರನ್ನು ಕೆರೆ ಅಂಗಳ ಕೆಲವು ನುಗ್ಗುತ್ತೆ ಕೆಲವು ಕೋಡಿ ಹರಿದು ತುಂಗಭದ್ರಾ ಹೊಳೆಗೆ ಸೇರಿ ಅನ್ಯದೇಶಕ್ಕೆ ರವಾನಿಸಲ್ಪಡುತ್ತೆ ಇನ್ನು ಕೆಲವು ಸಿಕ್ಕಿದ ಕಡೆ ಹರಿದು ಸಾಗುವಳಿ ಜಮೀನು ಗಳೆಲ್ಲಾ ಜೌಗುಬಾಡುತ್ತಿವೆ ಈ ದುರವಸ್ಥೆಯು ಕಾಲೆಯನ್ನು ನೋಡಿಕೊಳ್ಳುವರಿಲ್ಲದೆ ನಿರ್ಲಕ್ಷ್ಯವಾಗಿ ಬಿಟ್ಟಿದ್ದರಿಂದ ಉಂಟಾಗಿದೆ ದೊಡ್ಡಗಟ್ಟದಿಂದ ತಾರಿಗನಹಳ್ಳಿ ವರೆಗೆ ಇರತಕ್ಕ 4 ಮೈಲಿ ವರೆಗೂ ಕಾಲ್ವೆ ಕೆಟ್ಟು ಸುಮಾರು 8-10 ವರುಷಗಳಿಂದಲೂ ಸುಖರಾಂ ನೀರಿಲ್ಲದೆ ತರಿ ಫಸಲನ್ನು ಯಾರೂ ಇಟ್ಟಿಲ್ಲ ಮುಸ್ಕಿ ಫಸಲು ಬೆಳೆದು ತರಿ ಕಂದಾಯ (ಎಕರೆ ಒಂದಕ್ಕೆ 7-8 ರೂಪಾಯಿ) ಕೊಡಬೇಕೆಂದರೆ ತುಂಬಾ ತೊಂದರೆಯಾಗಿ ಇಲ್ಲಿನ ರೈತರೆಲ್ಲಾ ಕೇವಲ ಬಡವರಾಗಿ ಜೀವದಾಸಗಳಾಗಿರುತ್ತಾರೆ ಈ ತೊಂದರೆಯನ್ನು ವಿಚಾರಿಸತಕ್ಕವರೇ ಇಲ್ಲ ಕಂದಾಯ ಮಾತ್ರ ಬಸ್ತಿ ವಗೈರೆ ಕ್ರಮದಿಂದ ವಸೂಲ್ಮಾಡಿಕೊಳ್ಳುತ್ತಾರೆ ಇದೇ ಕಾರಣದಿಂದ ಅರೇಹಳ್ಳಿ ಎಂಬ ಗ್ರಾಮ ಹಾಳಾಗಿ ಇಲ್ಲಿನ ತರೀ ಜಮೀನು ಗಳೆಲ್ಲಾ ಬಂಜರಿನಲ್ಲಿವೆ

ಪುನಹ ಉದ್ಯೋಗವಿಲ್ಲದ ರೈತರು ಇಲ್ಲಿ ಗ್ರಾಮ ಆಬಾದುಮಾಡಿ ಈ ಜಮೀನುಗಳನ್ನು ವ್ಯವಸಾಯಮಾಡುವುದಾಗಿಯೂ, ಈ ತರೀ ಜಮೀನುಗಳ ಕಂದಾಯದ ವಿಷಯವನ್ನು ಇತ್ಯರ್ಥಮಾಡಿಕೊಡಬೇಕಾಗಿಯೂ ಇಲ್ಲಿಗೆ 2 3 ವರುಷಗಳಿಂದಲೂ ಕೇಳುತ್ತಾ ಬಂದಿದ್ದಾರಾದರೂ ಜವಾಬು ಅವರಿಗೆ ಸಿಕ್ಕಿಲ್ಲ ಈ ಸಂಬಂಧವಾದ ರಿಕಾರ್ಡು ಗವರ್ನಮೆಂಟಿನಲ್ಲಿ ಕೆಳಗೂ ಮೇಲೂ ಓಡಾಡುತ್ತಿರುವುದಾಗಿ ತಿಳಿಯಬರುತ್ತೆ ಕೆಳಗೆ ಕೇಳಿದರೆ ಮೇಲಕ್ಕೆ ತೋರಿಸುತ್ತಾರೆ, ಮೇಲೆ ಕೇಳಿದರೆ ಕೆಳಕ್ಕೆ ತೋರಿಸುತ್ತಾರೆ

ಈಗಿನ ದಿವಾನ್ ಸಾಹೇಬ್ ಬಹದ್ದೂರರವರು ರೈತರ ಹಿತಚಿಂತಕರೆಂತ ತಿಳಿಯಬರುತ್ತಾರಲ್ಲವೆ ಇಂಥಾ ನವನಾಗರಿಕ ಕಾಲದಲ್ಲಿಯೂ ಇಂಥಾ ಸರ್ಕಾರಕ್ಕೂ, ಪ್ರಜೆಗಳಿಗೂ ಮತ್ತೂ ದೇಶಕ್ಕೂ ಸೌಖ್ಯಪ್ರಾಯವಾಗಿರತಕ್ಕ ಇಂಥಾ ದೊಡ್ಡ ಕೆರೆ ವಿಷಯ ಅಲಕ್ಷ್ಯಮಾಡಿರುವುದು ಕೇವಲ ಆಶ್ಚರ್ಯವಾಗಿದೆ

ಅರೆಹಳ್ಳಿ ಮಹಮ್ಮದ್ ಯಾಕೂಬ್

ಬಡರೈತರುಗಳ ನೀರಿನ ಕಷ್ಟ

ಅಯ್ಯಾ,

ಕೋಲಾರ ಡಿಸ್ಟ್ರಿಕ್ಟ್ ಗೋರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಹೋಬಳಿ ಹಳೇಹಳ್ಳಿ, ಉಪ್ಪರಹಳ್ಳಿ, ಕೊಲಿಮಿಹಳ್ಳಿ, ಕಾಚಚಿನ್ನೆಹಳ್ಳಿ, ಚಿಕ್ಕನಾಗೇನಹಳ್ಳಿ ವಗೈರೆ ಗ್ರಾಮಗಳಿಗೆ ಸಮೀಪ ಅಂದರೆ ಹಳೇಹಳ್ಳಿ ಗ್ರಾಮದ ಅಣ್ಣಮ್ಮನ ದೇವಸ್ಥಾನದ ಪಕ್ಕದಲ್ಲಿ ಅನಾದಿಯಾಗಿಯೂ ತೂಬುಗಳು ಶಿಥಿಲವಾಗಿಯೂ ಇರುವ ಎರಡು ತೂಬುಗಳುಳ್ಳ ಭಾರಿ ಕೆರೆಯೊಂದು ಇರುತ್ತೆ. ಈ ಕೆರೆಯು ಸರ್ವೆ ಸೆಟ್ಲಮೆಂಟಿಗೆ ತತ್ಪೂರ್ವ ದೊಡ್ಡಬಳ್ಳಾಪುರದ ತಾಲ್ಲೂಕು ಸುಬ್ರಾಯನ ಪಾಳ್ಯದಿಂದ ಬರುವ ಒಡ್ಡುಹಳ್ಳವೆಂಬ ನದಿಯ ನೀರಿನ ಜೋರನ್ನೂ ತಡೆಯಲಾರದೆ ಕಟ್ಟೆಯು ಒಡೆದುಹೋಗಿ ಎರಡು ತುಂಡುಗಳಾಗಿದೆ ಈ ಗ್ರಾಮಗಳೆಲ್ಲಾ ಒಂದಕ್ಕೊಂದು ಸಮೀಪವಾಗಿರುವದರಿಂದ ಕೆರೆ ಇಲ್ಲದೆ ನಮ್ಮಗಳ ಕಷ್ಟವು ಬಾಯಿಮಾತಿನಿಂದ ಹೇಳಕೂಡದ್ದಾಗಿದೆ. ಕಪಿಲೆ ಭಾವಿಗಳು ಇದ್ದರೂ ಮಳೆಗಾಲಕ್ಕೆ ಮಾತ್ರವೇ ಹೊರತು ಈ ಬೇಸಗೆ ಕಾಲಕ್ಕೆ ಅವುಗಳಲ್ಲಿ ಒಂದು ತಂಬಿಗೆ ನೀರಾದರೂ ಇರುವದಿಲ್ಲ ಕಂದಾಯವೇನೋ ಹಾಗೂ ಹೀಗೂ ಒಂದು ಬಿಸ್ತು ಕಳೆದು ಇನ್ನೊಂದು ಬಿಸ್ತು ಸಮೀಪಿಸಿತು ನಮ್ಮ ಎತ್ತು ಕರು ವಗೈರೆ ಮಾರಿ ಕಂದಾಯ ಕೊಡಬೇಕೇ ಹೊರತು ಇನ್ಯಾವ ವಿಧದಿಂದ ಕೊಡುವದಕ್ಕೂ ಮಾರ್ಗವೇ ಇಲ್ಲ ಈ ಕೆರೆಯ ವಿಚಾರದಲ್ಲಿ ಹಿಂದೆ ಅನೇಕ ಅರ್ಜಿಗಳು ಕೊಟ್ಟು ಚರ್ಚೆ ನಡೆದಿದ್ದರೂ ಕೂಡ ನಮ್ಮ ಮಹಾರಾಜಾ ಸರ್ಕಾರದವರ ದಿವ್ಯಚಿತ್ತಕ್ಕೆ ಬಂದಿರುವದಿಲ್ಲ ಈ ಕೆರೆಯು ರಸ್ತೆ ಪಕ್ಕದಲ್ಲಿಲ್ಲವಾದುದರಿಂದ ಯಾವ ಆಫೀಸರ ಕಣ್ಣಿಗೂ ಗೋಚರವಾಗಿರುವದಿಲ್ಲ ಇದು ಸುಬ್ರಾಯನ ಪಾಳ್ಯಕ್ಕೆ ಹೋಗುವ ದಾರಿಯಲ್ಲಿರುತ್ತೆ ಈ ಕೆರೆ ಕಟ್ಟಲು ವಿಶೇಷ ಖರ್ಚೇನೂ ಆಗಲಾರದು ಇದನ್ನು ಕಟ್ಟಿಸಿಕೊಟ್ಟಲ್ಲಿ ಅದರ ಕೆಳಗೆ ಸುಮಾರು ಎರಡು ಮೂರು ಸಾವಿರ ಎಕರೆ ಜಮೀನು ತರೀ ಸಾಗುವಳಿಯಾಗುತ್ತೆ. ನಮ್ಮ ದಿವಾನ್ ಸಾಹೇಬರವರ ಸರ್ಕೀಟು ಅನೇಕ ಕಡೆಗಳಲ್ಲಿ ನಡೆದಿದ್ದರೂ ಈ ಕಡೆ ಬಾರದೆ ಇರುವದು ನಮ್ಮ ದುರಾದೃಷ್ಟವೆಂದು ಭಾವಿಸಬೇಕು ನಮ್ಮ ಮೈಸೂರು ಸರ್ಕಾರದವರು ಬಡರೈತರಾದ ನಮ್ಮಗಳ ನೀರಿನ ಕಷ್ಟವನ್ನು ಘನವಾದ ಚಿತ್ತದಲ್ಲಿ ತಂದು, ಈ ಅನಾದಿಯಾಗಿರುವ ಬರಿ ಕೆರೆಯನ್ನು ಕಟ್ಟಿಸಿಕೊಟ್ಟಲ್ಲಿ ಸರ್ಕಾರಕ್ಕೆ ಫಾಯಿದೆಯೂ, ನಮ್ಮ ಮತ್ತು ನಮ್ಮ ಜೀವದಾಸುಗಳಿಗೆ ನೀರಿಗೆ ಆಧಾರವಾಗಿಯೂ ಆಗುತ್ತೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ

ಮುನಿಸಾಮಿಗೌಡ, ಉಪ್ಪರಹಳ್ಳಿ

ಲೆಜಿಸ್ಲೆಟಿವ್ ಮತ್ತು ಎಕನಾಮಿಕ್ ಕಾನ್ಫರೆನ್ಸ್‌ಗಳಿಗೆ ಮೆಂಬರುಗಳ ಚುನಾವಣೆ ಕ್ರಮಗಳು

ಅಯ್ಯಾ,

ಮೈಸೂರು ಗೌರ್ನಮೆಂಟಿನವರು ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಎಕನಾಮಿಕ್ ಕಾನ್ಫರೆನ್ಸ್‌ಗಳಿಗೆ ಸರ್ಕಾರದ ಪರವಾಗಿಯೂ, ಜನಗಳ ಪರವಾಗಿಯೂ ಮೆಂಬರುಗಳನ್ನು ಚುನಾಯಿಸಲು ಅವಕಾಶ ಕೊಟ್ಟಿರುವುದಕ್ಕೆ ಪ್ರಜೆಗಳು ಬಹಳ ಕೃತಜ್ಞರಾಗಿರಬೇಕಾಗಿದೆ ಈ ಚುನಾವಣೆಯಲ್ಲಿ ಮೆಂಬರಾಗಿ ನಿಲ್ಲಲು ಲಾಯರುಗಳೂ, ಪಟ್ಟಣವಾಸಿಗಳೇ ಹೆಚ್ಚಾಗಿ ನಿಲ್ಲುತ್ತಿದಾರೆ ಜನಗಳೂ ಇಂಥಾವರುಗಳನ್ನೇ ಚುನಾಯಿಸುತ್ತಿದಾರೆ ಸರ್ಕಾರದವರೂ ಸಹಾ ಇದೇ ರೀತಿ ನಾಮಿನೇಷನ್ ಮಾಡುತ್ತಿದಾರೆ ಇಂಥಾ ಚುನಾವಣೆಯಿಂದ ದೇಶವು ಎಷ್ಟು ಮಟ್ಟಿಗೆ ಅಭಿವೃದ್ಧಿಗೆ ಬಂದು, ಕೈಗಾರಿಕೆ ವ್ಯಾಪಾರಾದಿಗಳು ಹ್ಯಾಗೆ ಅಭಿವೃದ್ಧಿಯಾದೀತೆಂದು ಶಂಕೆಪಡಬೇಕಾಗಿದೆ. ಮೈಸೂರಿನ ಪ್ರಜೆಗಳ ಪೈಕಿ ಮುಕ್ಕಾಲುಪಾಲು ಜನಸಂಖ್ಯೆಗಿಂತ ಹೆಚ್ಚಾಗಿ ಗ್ರಾಮಾಂತ್ರವಾಸಿಗಳಾಗಿರುತ್ತಾರೆ. ಇವರಿಂದಲೇ ಸರ್ಕಾರಕ್ಕೆ ದ್ರವ್ಯ ಒದಗುತ್ತಿರುವದು ಇವರುಗಳಿಂದಲೇ ನಮ್ಮ ದೇಶ ಅಭಿವೃದ್ಧಿಯಾಗಬೇಕು ಕೈಗಾರಿಕೆ ಮತ್ತು ವ್ಯಾಪಾರಾದಿಗಳು ಇವರುಗಳಲ್ಲೇ ಹೆಚ್ಚುಮಾಡಲ್ಪಡಬೇಕು ಗ್ರಾಮಾಂತರದಲ್ಲಿರುವ ದೊಡ್ಡಮನುಷ್ಯರಿಗೆ ಗ್ರಾಮವಾಸಿಗಳ ಕಷ್ಟ ಸುಖಗಳೂ, ಕುಂದು ಕೊರತೆಗಳೂ ಗೊತ್ತಿರುವಂತೆ ಪಟ್ಟಣದಲ್ಲಿ ವಾಸಮಾಡತಕ್ಕವರಿಗೆ ಗೊತ್ತಾಗಲಾರದು ಎಲ್ಲೆಲ್ಲಿ ಯಾವ್ಯಾವ ಕಸಬು ನಡೆಯುತ್ತಿದೆ, ಯಾವ ಸ್ಥಳದಲ್ಲಿ ಯಾವ ಕೈಗಾರಿಕೆಗೆ ಅವಕಾಶವಿರುತ್ತೆ, ಎಲ್ಲೆಲ್ಲಿ ವ್ಯಾಪಾರ ಅಥವಾ ಬ್ಯಾಂಕನ್ನು ಯಂತ್ರಗಳನ್ನೂ ವೃದ್ಧಿಮಾಡಬಹುದು, ಈ ವಿಷಯಗಳನ್ನು ಗ್ರಾಮವಾಸಿಗಳು ಚೆನ್ನಾಗಿ ಬಲ್ಲರು ಆದ್ದರಿಂದ ಗೌರ್ನಮೆಂಟಿನವರೂ, ಪಟ್ಟಣವಾಸಿಗಳೂ, ಪ್ರತಿನಿಧಿಗಳೂ, ಓಟ್ ಕೊಡತಕ್ಕವರೂ ಗ್ರಾಮಾಂತರದವರಿಗೆ ಕೊಂಚ ಸ್ಥಳವಾದರೂ ಕೊಡಲು ಏರ್ಪಾಡುಮಾಡಬೇಕೆಂತಲೂ, ಜನಗಳೂ ಸಹ ಇಂಥವರಿಗೆ ಓಟ್ ಕೊಡಬೇಕೆಂತಲೂ ಕೋರುತ್ತೇನೆ ನಮ್ಮ ಪ್ರಜಾಪಕ್ಷಪಾತಿಗಳಾದ ಮತ್ತು ಗ್ರಾಮವಾಸಿಗಳ ಮೇಲೆ ಪೂರ್ಣಾಭಿಮಾನವುಳ್ಳ ಮಂತ್ರಿವರ್ಯರಾದ ಮ|| ವಿಶ್ವೇಶ್ವರಯ್ಯನವರು ಇದೇ ಅಭಿಪ್ರಾಯವುಳ್ಳವರಾಗಿದಾರೆಂದು ಧಾರಾಳವಾಗಿ ಹೇಳಬಹುದು ಇದನ್ನು ಜನಗಳು ತಿಳಿದುಕೊಂಡು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಲು ತಪ್ಪಿಹೋದಾಗ್ಯೂ, ಪ್ರಜಾಪಕ್ಷಪಾತಿಗಳಾದ ಸರ್ಕಾರದವರಾದರೂ ನಾಮಿನೇಷನ್ ಮೂಲಕ ಇಂಥಾ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆಂದು ಕೋರುತ್ತೇನೆ. ಇಂಥಾ ಚುನಾವಣೆಯಿಂದ ಸರ್ಕಾರದವರಾಗಲಿ, ಪ್ರಜೆಗಳಾಗಲಿ ಪಶ್ಚಾತ್ತಾಪಪಡಲಾರರೆಂದು ನಂಬುತ್ತೇನೆ

ಗ್ರಾಮಾಭಿಮಾನಿ

ಮಂಡಗದ್ದೆ ರೀಡಿಂಗ್ ರೂಮ್

ಅಯ್ಯಾ,

ಈ ರೀಡಿಂಗ್ ರೂಮ್ ಈಗ ನಾಲ್ಕು ವರುಷಗಳ ಕೆಳಗೆ ಸ್ಥಾಪಿಸಿ ನಡಿಸಬೇಕೆಂದು ಪ್ರಯತ್ನಪಟ್ಟು ಮಿ|| ರೆವ್ ಎ. ಇ ಸ್ಲೈಟಿಂಗೇಲರವರ ಸಲಹೆಯಂತೆ ನಾವು ನಡೆದಿದ್ದರೆ ಎಷ್ಟೋ ನಾಗರೀಕರಾಗಿರಬಹುದಾಗಿತ್ತು ಜನರಿಗೆ ಈ ವಿಚಾರದಲ್ಲಿ ಮನಸ್ಸು ಹೋಗದೆ ಮಧ್ಯದಲ್ಲಿ ನಿಲ್ಲಿಸಿಬಿಟ್ಟರು ಹಾಲಿ ಪ್ರೆಸಿಡೆಂಟರಾಗಿರುವ ಡಾಕ್ಟರ್ ನಾಗರತ್ನಂರವರು ನಮ್ಮ ರೀಡಿಂಗ್ ರೂಮ್ ಮೆಂಬರಾದ ಮ| ಜಮದಾರ್ ರಾಜೇರಾಯರವರು ಹಟಾತ್ತಾಗಿ ಮುಂದಾಳುಗಳಾಗಿ ನಿಂತು ಇದನ್ನು ರೂಢಿಯಲ್ಲಿ ತಂದಿರುತ್ತಾರೆ ಇದರಿಂದ ನಾವು ಎಷ್ಟರ ಮಟ್ಟಿಗೆ ಪ್ರಯೋಜನವನ್ನು ಹೊಂದಿರುತ್ತೇವೆ ಎಂಬನನ್ನು ಹೇಳಲಾರೆವು. ಕಳೆದ 2 ನೇ ಮೀಟಿಂಗಿನಲ್ಲಿ ಮೆಂಬರಾಗುವುದಕ್ಕೆ ಕೆಲವರು ಒಂದು ವಿಧವಾದ ಜುಗುಪ್ಸೆಪಟ್ಟಂತೆ ಕಂಡು ಬಂದಿದೆ ಅದರ ಕಾರಣವನ್ನು ಸರಿಯಾಗಿ ಹೊರಪಡಿಸಲಿಲ್ಲ ಗ್ರಾಮಸ್ಥರೆಲ್ಲರು ಸೇರಿ ಈ ಭಾಗದಲ್ಲಿ ಹಿಂಜರಿಯದೆ ಮುಂದೆ ನಿಂತು ರೂಢಿಸಿಕೊಂಡು ಬರುವ ಪಕ್ಷದಲ್ಲಿ ನಾವು ಎಷ್ಟೋ ಪ್ರಯೋಜನವನ್ನು ಹೊಂದಬಹುದು ಸರ್ಕಾರವು ಕೂಡ ಪ್ರಜೆಗಳು ತಿಳುವಳಿಕೆ ಉಳ್ಳವರಾಗಬೇಕೆಂದು ಅನೇಕ ಏರ್ಪಾಟು ಮಾಡುತ್ತಾ ಇದಾರೆ ಅದಕ್ಕೆ ತಕ್ಕ ಹಾಗೆ ಪ್ರಜಗಳಿಂದ ನಾವು ಜಡರಂತೆ ಇದ್ದುಕೊಂಡು ವೃಥಾ ಕಾಲಹರಣಮಾಡುವದು ಸರಿಯಲ್ಲ ಅದಕ್ಕೆ ತಕ್ಕಂತೆ ಕೈಲಾದ ಸಹಾಯವನ್ನು ಸರ್ಕಾರಕ್ಕೆ ಒದಗಿಸಿಕೊಡುತ್ತಾ ಬರಬೇಕು ಗ್ರಾಮಾಭಿವೃದ್ಧಿ ಸಂಘ, ಗ್ರಾಮ ಪಂಚಾಯತಿ ಮುಂತಾದವುಗಳನ್ನು ಸರ್ಕಾರವು ಪ್ರಜೆಗಳಿಗೆ ವಹಿಸುತ್ತಾ ಇರುವಾಗ ನಾವು ಅದರಿಂದ ಎಷ್ಟು ಪ್ರಯೋಜನ ಪಡೆಯಬಹುದೆಂಬುದನ್ನು ಯಾರೂ ತಿಳಿಯದೆ ಇರಲಾರರು ಈ ಊರಲ್ಲಿ ರೀಡಿಂಗ್ ರೂಮ್ ಏರ್ಪಾಟು ಮಾಡಿರುವ ಸಂಗತಿಯನ್ನು ಮೆಸರ್ಸ್ ಶಿವಮೊಗ್ಗಾ ಡೆಪ್ಯುಟಿ ಕಮಿಷನರ್ ಸಾಹೇಬರವರು ತಿಳಿದು ಬಹಳ ಸಂತೋಷಪಟ್ಟು ಸರ್ಕಾರಿ ಗೆಜೆಟನ್ನು ತರಿಸಿ ಕೊಡುವಂತೆ ಅಪ್ಪಣೆ

ದಯಪಾಲಿಸಿರುತ್ತಾರೆ ಮತ್ತು ನಮ್ಮ ತಾಲ್ಲೂಕು ಅಮಲ್ದಾರ್ ಮ॥ ಧರ್ಮರಾಯರವರು ವ್ಯವಸಾಯ ಸಂಬಂಧವಾದ ಸರ್ಕೀಲರುಗಳನ್ನು ಸಹ ಕಳುಹಿಸುವ ಹಾಗೆ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ ಮಿ॥ ನೈಟಿಂಗೇಲ್ ಧೊರೆಯವರು ಮತ್ತು ಹೆಂಗೆ ಆಸ್ಪತ್ರೆ ಡಾಕ್ಟರಾಗಿರುವ ಮಿಸ್ ಕ್ಯಾಂಬಲ್‌ರವರು ತಾವು ಮೆಂಬರಾಗಿರುವ ಹಾಗೆ ವಾಗ್ದಾನ ಮಾಡಿರುತ್ತಾರೆ ಇನ್ನೂ ಅನೇಕ ಸಹಾಯಗಳು ಒದಗುತ್ತಾಂಬವದಲ್ಲಿ ಸಂಶಯವಿಲ್ಲ. ಆದಕಾರಣ ಹಿಂದೆ ನಾವುಗಳು ಉದಾಸೀನ ಮಾಡಿದಂತೆ ಮುಂದೆ ಮಾಡದೆ ಇದನ್ನು ಊರ್ಜಿತಕೊಂಡು ಬರಲು ದೃಷ್ಟಿ ಕೊಡಬೇಕು ಆರಂಭಶೂರತ್ವದಲ್ಲಿ ನಮ್ಮ ಜನಗಳು ತುಂಬಾ ಆಸಕ್ತರೆಂಬುದನ್ನು ತೋರಿಸಬಾರದು ಇದೇ ನನ್ನ ಕೋರಿಕೆಯಾಗಿರುತ್ತೆ

ಮುಂಡಗದ್ದೆ   ನಾಡಿಗ ಎಂ ಗುಂಡುರಾವ್

ಮ್ಯುನಿಸಿಪಾಲಿಟಿಗಳಲ್ಲಿ ರಸ್ತೆಗಳು ಎತ್ತರದಲ್ಲಿರಬೇಕೇ ? ತಗ್ಗಿನಲ್ಲಿರಬೇಕೇ ?

ಅಯ್ಯಾ,

ಪ್ರಜೆಗಳ ಕ್ಷೇಮ ಆರೋಗ್ಯ ಅನುಕೂಲತೆಗೋಸ್ಕರ ಸರ್ಕಾರದವರು ಮ್ಯುನಿಸಿಪಾಲಿಟಿಗಳನ್ನೂ ಯೂನಿಯನ್‌ಗಳನ್ನೂ ನೇಮಿಸಿರುತ್ತಾರೆ ಇಂಥಾ ಸ್ಥಳಗಳಲ್ಲಿಯೂ, ಗ್ರಾಮಾಂತರಗಳಲ್ಲಿಯೂ ಮನೆಗಳನ್ನು ಕಟ್ಟುವದಕ್ಕೆ ಸರ್ಕಾರದವರು ಸ್ಯಾನಿಟೇಷನ್ ರೂಲ್ಸು ಪ್ರಕಾರ ಪ್ರಿನ್ಸಿಪಲ್‌ಗಳನ್ನು ಕೊಡುತ್ತಾರೆ ಸ್ಯಾನಿಟೇಷನ್ ರೂಲ್ಸು ಪ್ರಕಾರ ನೆಲಮಟ್ಟಕ್ಕೆ ೩ ಅಡಿ ಎತ್ತರ ಉಳ್ಳ ಅಸ್ತಿಭಾರದ ಮೇಲೆ ಮನೆ ಕಟ್ಟುವದೂ, ಬೆಳಕು ಗಾಳಿ ಸಂಚಾರಕ್ಕೆ ಕಿಟಕಿಗಳನ್ನಿಡುವದೂ ಅತ್ಯಂತ ಆರೋಗ್ಯಕರವಾದದ್ದೇ ಹೌದು ಆದರೆ ಸರ್ಕಾರದವರು ಮನೆಗಳಿರುವ ನೆಲಮಟ್ಟಕ್ಕಿಂತಲೂ ಎತ್ತರದಲ್ಲಿ ರಸ್ತೆಗಳನ್ನೂ ಚರಂಡಿಗಳನ್ನೂ ನಿರ್ಮಾಣಮಾಡತಕ್ಕದ್ದು ಯಾವ ನ್ಯಾಯ ? ಮತ್ತು ಬೀದಿ ಮಗ್ಗುಲು ಚರಂಡಿಗಳನ್ನು ನೆಲಮಟ್ಟಕ್ಕಿಂತ ಎತ್ತರದಲ್ಲಾಗಲಿ ತಗ್ಗಿನಲ್ಲಾಗಲಿ ಮಾಡಬೇಕೆಂಬ ರೂಲ್ಸು ಸರ್ಕಾರದವರು ಏರ್ಪಡಿಸಿದ್ದಾರೆಯೇ ಹೇಗೆ ?

ಹಿರಿಯರು ಪೂರ್ವ ಕಾಲದಲ್ಲಿ ಮನೆಗಳನ್ನು ನೆಲಮಟ್ಟಕ್ಕೆ ಸ್ವಲ್ಪ ಎತ್ತರದಲ್ಲಾಗಲಿ, ನೆಲಕ್ಕೆ ಸರಿಯಾಗಾಗಲಿ ಕಟ್ಟಿದ್ದಾರೆಯೇ ಹೊರತು ತಗ್ಗಿನಲ್ಲಿ ಕಟ್ಟಿಲ್ಲ ಈಗ ಮೂವತ್ತು ವರುಷಗಳ ಲಾಗಾಯ್ತು ಮ್ಯುನಿಸಿಪಾಲಿಟಿ ಇರುವ ಊರುಗಳಲ್ಲಿ ಪ್ರಜೆಗಳ ಆರೋಗ್ಯ ಕ್ಷೇಮ ಅನುಕೂಲತೆ ಮೇಲೆ ದೃಷ್ಟಿಯಿಡದೆ ಸಾರೋದ್ಧಾರವಾಗಿ ಪ್ರತಿ ವರುಷವೂ ರಸ್ತೆಗಳಿಗೆ ಮಣ್ಣು ಭರ್ತಿಮಾಡುವದು, ಚರಂಡಿಗಳನ್ನು ಎತ್ತರಿಸುವದು, ಈ ಕಾರಣದಿಂದ ಟೊಂಕದುದ್ದ ತಗ್ಗಿನಲ್ಲಿ ಮನೆಗಳು, ಟೊಂಕದುದ್ದ ಎತ್ತರದಲ್ಲಿ ರಸ್ತೆ ಚರಂಡಿಗಳು ಮಾರ್ಪಟ್ಟು, ಪ್ರಜೆಗಳಿಗೆ ಅನಾರೋಗ್ಯ, ದುಃಖ, ಅನನುಕೂಲತೆ ಪ್ರಾಪ್ತವಾಗಿರುತ್ತವೆ

ಮನೆಗಳಿರುವ ನೆಲಮಟ್ಟಕ್ಕಿಂತ ರಸ್ತೆಗಳು ತಗ್ಗಿನಲ್ಲಿದ್ದು ಚರಂಡಿಗಳು ಆಳವಾಗಿಯೂ ಅಗಲವಾಗಿಯೂ ಇರುವದರಿಂದ ಉಂಟಾಗುವ ಅನುಕೂಲಗಳನ್ನಾಗಲಿ, ರಸ್ತೆ ಮತ್ತು ಚರಂಡಿಗಳು ಎತ್ತರವಾಗಿರೋದರಿಂದ ಉಂಟಾಗುವ ತೊಂದರೆಗಳನ್ನಾಗಲಿ ವಿವರಿಸಬೇಕಾಗಿಲ್ಲ ಅವು ಸಾಮಾನ್ಯವಾಗಿ ಎಲ್ಲರಿಗೂ ವೇದ್ಯವಾಗಿರುತ್ತವೆ

ಹಳೇ ಮನೆಯನ್ನು ಕಿತ್ತು ಹೊಸ ಮನೆಯನ್ನು ಕಟ್ಟಬೇಕಾದರೆ ರಸ್ತೆ ಮಟ್ಟಕ್ಕೆ ಒಂದು ಟೊಂಕದುದ್ದವೂ, ರಸ್ತೆ ಮಟ್ಟದಿಂದ ಮೇಲಕ್ಕೆ ಎತ್ತರಿಸಬೇಕಾದರೆ ಒಂದು ಟೊಂಕದುದ್ದವೂ, ಈ ಎರಡು ಟೊಂಕದುದ್ದ ಹೊರಗಿನ ಮಣ್ಣು ತಂದು ಭರ್ತಿಮಾಡಿ ಗೋಡೆ ಕಟ್ಟಿ ಮನೆ ಕಟ್ಟುವದು ಬಡ ರೈತರಿಗೆ ಸಾಧ್ಯವೇ ? " ಅಪ್ಪ ಕಟ್ಟಿದ ಹಳೇ ಮನೆ ಹ್ಯಾಗಾದರೂ ಇರಲಿ, ಅದೇ ನನಗೆ ಶ್ರೇಯಸ್ಕರವು, ಇದರಲ್ಲೇ ಮೋಕ್ಷವು ಸತ್ತರೂ ಇದರಲ್ಲಿ ಸಾಯೋಣ, ಬದುಕಿದರೂ ಇದರಲ್ಲಿ ಬದುಕೋಣ " ಎಂಬ ಅಭಿಪ್ರಾಯವು ಎದೆಗುಂದಿದ ಬಡತೃತರಲ್ಲಿ ಹುಟ್ಟುತ್ತದೆ ಆದಕಾರಣ ಪ್ರಜೆಗಳಿಗೆ ಟೌನುಗಳಲ್ಲಿ ರಸ್ತೆಗಳನ್ನು ಎತ್ತರಿಸುತ್ತಾ ಹೋಗುವದು ಪ್ರಯೋಜನವೇ ? ಮನೆಗಳ ನೆಲಮಟ್ಟಕ್ಕಿಂತಲೂ ರಸ್ತೆಗಳನ್ನು ತಗ್ಗಿಸುವದು ಪ್ರಯೋಜನವೇ ? ಇದರ ಸಾಧಕಬಾಧಕಗಳನ್ನು ಪ್ರಜೋಪಕಾರಾರ್ಥವಾಗಿ ತಿಳಿಸಬೇಕಾಗಿ ಪ್ರಾರ್ಥಿಸುವ

ಪ್ರಜಾ ಹಿತೈಷಿ

ತಾಲ್ಲೂಕು ವರ್ತಮಾನಗಳು

ಹುಣಸೂರು ತಾಲ್ಲೂಕು ಚಿಕ್ಕಾಡಿಗನಹಳ್ಳಿ —ಸುಮಾರು ೩ ತಿಂಗಳ ಹಿಂದೆ ಇಲ್ಲಿನ ಬ್ರ್ಯಾಂಚ್ ಪೋಸ್ಟ್ ಆಫೀಸಿನಲ್ಲಿ ಕಳುವಾಗಿದ್ದ ಡೇಟ್ ಸ್ಟ್ಯಾಂಪು ಪೆಟ್ಟಿಯ ಸಹಿತವಾಗಿ ಕೆರೆಯಲ್ಲಿ ಸಿಕ್ಕಿದೆ —ಇದೇ ಮಾಹೆ 19 20 ರಲ್ಲು ಉಂಡವಾಡಿಯಲ್ಲಿ ಗಾವಡಗೆರೆ ಹೋಬಳಿ ಹುಣಸೂರು ಜಮಾಬಂದಿಯು ಸಬ್ ಡಿವಿಜನ್ ಸಾಹೇಬರಿಂದಲೂ, ಅಮಲ್ದಾರರಿಂದಲೂ ನಡೆಸಲಾಯಿತು —ಈ ಆಫೀಸರುಗಳು ಜನಗಳಿಗೆ ಹೇಳಿದ ಬುದ್ಧಿವಾದವನ್ನು ಅನುಸರಿಸಿ ಹೋಬಳಿ ಪೈಕಿ 6 7 ಗ್ರಾಮಸ್ಥರು ಗ್ರ್ಯಾಂಟ್ ಸ್ಕೂಲುಗಳಿಗೆ ಅಪ್ಲಿಕೇಷನ್ ಕೊಡಲು ಒಪ್ಪಿದಾರೆ ಆ ರೀತಿ ಬೇಗನೆ ಅರ್ಜಿ ಕೊಟ್ಟಲ್ಲಿ ಸರ್ಕಾರದವರು ಸ್ಕೂಲನ್ನು ಇಡಿಸಲು ಸಹಾಯ ಮಾಡುವದರಲ್ಲಿ ಲೋಪವಿಲ್ಲ ತ್ರೀವನ್ ದಿವಾನ್‌ರಲ್ಲಿ ಅರಿಕೆ ಮಾಡಿಕೊಂಡಂತೆ ಆಸ್ಪತ್ರೆ ವಿಷಯ ಅರಿಕೆ ಮಾಡಲ್ಪಟ್ಟಿತು ಬಹು ಪ್ರಜಾಸಂಪನ್ನವುಳ್ಳ ಈ ಗ್ರಾಮದ ರೈತರನ್ನೂ ಸುತ್ತಮುತ್ತಲಿರುವ ಗ್ರಾಮದ ರೈತರನ್ನೂ [illegible] ಒದಗಿಸಿ ಕಾಪಾಡುವಂತೆ ಆಸ್ಪತ್ರೆಯಾಗಲಿ, ಆಯುರ್ವೇದ ಔಷಧಾಲಯವಾಗಲಿ ಇಡಿಸಿ ಬಡರಾಯರ ಪ್ರಾಣವನ್ನು ಉಳಿಸಬೇಕು ಬೇಡುತ್ತಾರೆ ಈ ಗ್ರಾಮದಲ್ಲಿ ಪದ್ಧತಿಯಂತೆ [illegible] ನಡೆಯಿತು [illegible] ದಿದ್ದರೂ [illegible] ಜನಗಳಲ್ಲಿ [illegible] ಈ ರೀತಿ [illegible] ತಪ್ಪುವದಿಲ್ಲ

ಚನ್ನರಾಯಪಟ್ಟಣ —ಈ ಊರಿನಲ್ಲಿ ಬೇಲು ಹೆಚ್ಚು ಕೆರೆಯಲ್ಲಿ ನೀರು ಕಡಮೆಯಾಗುತ್ತಾ ಬಂತು [illegible] ಈ ನೀರನ್ನೇ ಸ್ನಾನಪಾನಗಳಿಗೂ ಗದ್ದೆಗಳಿಗೆ ಉಪಯೋಗಿಸುತ್ತಾರೆ ಜಾಗ್ರತೆ ಮುಂಗಾರು ಮಳೆ ಬಾರದಿದ್ದರೆ ಜನಗಳಿಗೂ ಜಾನುವಾರುಗಳಿಗೂ ಕುಡಿಯುವ ನೀರಿಗೆ ತುಂಬಾ ಅನನುಕೂಲವಾಗುತ್ತೆ —ಸಂತೆಯಲ್ಲಿ ಧಾರಣೆವಾಸಿಗಳು ದಿನೇದಿನೇ ಹೆಚ್ಚುತ್ತಲೇ ಇವೆ —ಕಳೆದ ವಾರ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಶ್ರೀಕಂಠೇಶ್ವರ ಅಯ್ಯರವರು ಇಲ್ಲಿಗೆ ಬಂದು ಪೋಲೀಸ್ ಮುಂತಾದವುಗಳನ್ನೆಲ್ಲಾ ಅಜಮಾಯಿಷಿ ಮಾಡಿ ಸಂತೋಷಪಟ್ಟುಕೊಂಡು ನಮ್ಮ ಅಮಲ್ದಾರ್ ಮ॥ ಸುಂದರರಾಜಯ್ಯಂಗಾರ್ರನ್ನು ಕಂಡು ಮಾತನಾಡಿಕೊಂಡು ಹಿರೀಸಾವೆ ಮಾರ್ಗವಾಗಿ ಪ್ರಯಾಣ ಮಾಡಿದರು —ನಮ್ಮ ಅಮಲ್ದಾರರಿಗೆ ವರ್ಗವಾಗಿದ್ದದ್ದು ತಪ್ಪಿ ಇಲ್ಲೇ ಇರುವಂತೆ ಹುಕುಂ ಆದದ್ದನ್ನು ಕೇಳಿ ಜನಗಳೆಲ್ಲರೂ ತುಂಬಾ ಸಂತೋಷಪಡುತ್ತಾರೆ ಇವರು ಬಂದಾರಭ್ಯ ಸರ್ಕಾರಿ ಕೆಲಸ ಕಾರ್ಯಗಳು ಬಹಳ ಚಟುವಟಿಕೆಯಿಂದ ನಡೆಯುತ್ತಲೂ ಪೋಲೀಸಿನವುಗಳು ಜಾಗ್ರತೆ ಪೈಸಲಾಗುತ್ತಲೂ ಇವೆ ಹಿಂದು ಜನಗಳ ಹಾವಳಿ ಕಡಿಮೆಯಾಗಿ, ಕಳ್ಳತನ ಮುಂತಾದ ಯಾವದೊಂದು ಗಲಾಟೆಯೂ ಇಲ್ಲದಂತೆ ಪ್ರಜೆಗಳಿಗೆ ತುಂಬಾ ಅನುಕೂಲವಾಗಿರುವದನ್ನು ಕಂಡು ಜನಗಳೆಲ್ಲರೂ ನಮ್ಮ ಪೋಲೀಸ್ ಇನ್ಸ್‌ಪೆಕ್ಟರನ್ನೂ ಅಮಲ್ದಾರ್ರನ್ನೂ ಬಹಳವಾಗಿ ಕೊಂಡಾಡುತ್ತಾರೆ —ನಮ್ಮ ಡಾಕ್ಟರು ಮಹಮದ್ ಮೂಸಾಸಾಹೇಬರು ಎರಡು ವೇಳೆಯೂ ಆಸ್ಪತ್ರೆಗೆ ಬಂದು ರೋಗಿಗಳನ್ನು ಔಷಧೋಪಚಾರಗಳಿಂದ ಉಪಚರಿಸುತ್ತಾರೆ ಅಲ್ಲದೆ ಗಂಡು ಹೆಣ್ಣುಮಕ್ಕಳ ಸ್ಕೂಲುಗಳಿಗೆ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸಿ ಕಾಯಿಲೆ ಸೂಚನೆ ಇದ್ದವರನ್ನು ಆಸ್ಪತ್ರೆಗೆ ಬರಮಾಡಿಕೊಂಡು ಔಷಧಕೊಟ್ಟು ಉಪಚರಿಸುತ್ತಾ ಪ್ರಜಾನುರಾಗಕ್ಕೆ ಪಾತ್ರರಾಗಿದಾರೆ

ಚನ್ನಪಟ್ಟಣ —ಬಿಸಿಲಿನ ತಾಪ ಹೆಚ್ಚುತ್ತಲಿದೆ ಕೆರೆ, ಕುಂಟೆಗಳಲ್ಲೆಲ್ಲಾ ನೀರು ಬತ್ತುವ ಕಾಲ ಬಂದೊದಗಿದೆ ಆಗಲೇ ಕೆಲವು ಕೆರೆಗಳಲ್ಲಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಾಗಿ ನೀರು ಬತ್ತಿ ಹೋಗಿರುತ್ತದೆ ಕೆಲವು ಬಾಗಗಳಲ್ಲಿ ಪೈರು ನೀರಿಲ್ಲದೆ ಒಣಗುವ ಹರುಣದಲ್ಲಿರುತ್ತದೆ ರಾಗಿಯ ಬೆಳೆಯಂತೂ ನಾಗಪಾಲೂ ಆದ ಹಾಗೆ ತೋರುವದಿಲ್ಲ ಧಾರಣೆ ಮಾನಗಳು ಬಹಳವಾಗಿ ಕ್ಷಾಮಗಾಲವನ್ನು ಸೂಚಿಸುತ್ತವೆ ಅಕ್ಕಿ 6 6½ ಸೇರು, ರಾಗಿ 12 13 ಸೇರು ಬಿಕರಿಯಾಗುತ್ತೆ ಕೂಲಿ ನಾಡಿನ ಜನಗಳಿಗೆ ದಿನದಿನದ ಆಹಾರವನ್ನು ಒದಗಿಸಿಕೊಳ್ಳುವುದೇ ದುರ್ಲಭವಾಗಿದೆ ಈ ಮಧ್ಯೆ ಪಟ್ಟಣಗಳ ಹಾವಳಿ ಜೋರು ಕೂಲಿಕಾರರು ಸಂಪಾದಿಸಿದ್ದರಲ್ಲಿ ಅರ್ಧ ಭಾಗವು ಈಡಿಗರ ಪಾಲೇ ಆಗುತ್ತಲಿದೆ —ಟವನ್ನಲ್ಲೂ ಮತ್ತು ಸುತ್ತು ಮುತ್ತಲಿನ ಹಳ್ಳಿಗಳಲ್ಲೂ ಸಿಡುಬು ಪ್ರಾರಂಭವಾಗಿದೆ ಸರ್ಕಾರದವರು ಹಳ್ಳಿಹಳ್ಳಿಗಳಿಗೆ ಹೋಗಿ ಗೋದಹಾಕಿ ಬಂದಿರುವುದು ತುಂಬಾ ಸ್ತೋತ್ರಾರ್ಹವಾದದ್ದೇ ಇನ್ನೂ ಕೆಲಸವನ್ನು ಮತ್ತಷ್ಟು ಹೆಚ್ಚಾಗಿ ಮಾಡಿದರೆ ಜನಗಳಿಗೆ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ ಈ ಊರಿನಲ್ಲಿ ಬೇದಿನಾಯಿಗಳು ವಿಪರೀತ ಮುಂದೆ ಅವುಗಳಿಂದ ಜನರಿಗೆ ತೊಂದರೆಯುಂಟಾಗದಂತೆ ಏರ್ಪಾಟು ಮಾಡಬೇಕಾಗಿರುತ್ತೆ —ಈ ಊರಿನ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು 150 ಮಂದಿಗಿಂತಲೂ ಹೆಚ್ಚಾಗಿರುತ್ತಾರೆ ಮಧ್ಯಾಹ್ನ ಬಾಲಕರು ನೀರಿಗೆ ತುಂಬಾ ತವಕ ಪಡುತ್ತಾರೆ ಆದ್ದರಿಂದ ಈ ಊರಿನ ಉದಾರಿಗಳಾದ ಸಾಹುಕಾರರು ಬಂದಾ ಹಾಕಿ, ವಿದ್ಯಾರ್ಥಿಗಳಿಗೆ ನೀರೊದಗಿಸುವರೆಂಬ ವರ್ತಮಾನವನ್ನು ಕೇಳಿ ಸಂತೋಷವಾಗಿದೆ ಅವರು ಬೇಗನೆ ಪ್ರಾರಂಭಿಸುವರೆಂದು ನಿರೀಕ್ಷಿಸಲ್ಪಟ್ಟಿದೆ —ಈ ಊರಿನಲ್ಲಿ ನಡೆದ ಕಾಮನ ಹಬ್ಬದ ವಿಜೃಂಭಣೆಯನ್ನು ನೋಡಿದರೆ ಪರಿತಾಪಕರವಾಗುತ್ತದೆ ಈ ಕ್ಷಾಮ ಕಾಲದಲ್ಲೂ ನವನಾಗರೀಕ ಕಾಲದಲ್ಲೂ ಜನರು ಇಷ್ಟರ ಮಟ್ಟಿಗೆ ಹಣ ವ್ಯಯಮಾಡಿ, ಸೂಳೆಯರ ತಾಫೆ, ಕುಣಿತ, ತಮಟೆ ವಾದ್ಯಗಳಿಂದ ಈ ಹಬ್ಬವನ್ನು ಆಚರಿಸಿದ್ದು ನೋಡಿದರೆ ವಿಷಾದಕರವಾಗಿದೆ ಕಾಮನ ಹಬ್ಬ ತೀರಿದ ತರುವಾಯ ಕೋಟೆಯಲ್ಲಿ ಮಾರಿಯ ಹಬ್ಬ ಆಚರಿಸಲ್ಪಟ್ಟಿತು ಇದಕ್ಕೂ ತುಂಬಾ ಹಣ ವ್ಯಯವಾಯಿತೆನ್ನುವುದರಲ್ಲಿ ಸಂದೇಹವಿಲ್ಲ ಈ ವಿಜೃಂಭಣೆಯಿಂದ ಮತ್ತು ಅರ್ಥಹಾನಿಯಾಗುತ್ತಿರುವ ಪದ್ಧತಿ ಆಚಾರಗಳು ಯಾವಾಗ ಕಾಣದೆ ಹೋಗಿ, ಪರೋಪಕಾರವು ವೃದ್ಧಿಯಾಗುತ್ತದೋ ಹೇಳಲರಿಯವು ಕಾಮ ಮತ್ತು ಮಾರಿ ಹಬ್ಬಗಳಲ್ಲಿ ಪೋಲೀಸ್ ಸಿಬ್ಬಂದಿ ತೃಪ್ತಿಕರವಾಗಿತ್ತು ಊರಾಚೆನ ದಾರಿಗಳಲ್ಲಿ ಕೆಲವು ಪುಂಡರು ಸೇರಿಕೊಂಡು ಮೂರು ಎಲೆ ಆಟವನ್ನಿಟ್ಟು ಹಳ್ಳಿಗಳಿಂದ ಬರುತ್ತಿರ ಜನರನ್ನು ಮೋಸಪಡಿಸುತ್ತಾರೆಂಬ ಸೂಚನೆ ಇರುತ್ತೆ ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ —20 ನೇ ತಾ ಶುಕ್ರವಾರ ಈ ಊರ ಬಳಿ ಇರುವ ಚಿಕ್ಕ ವೆಂಕಟಪ್ಪನ ಕೋಡಲ್ಲಿ ಒಬ್ಬ ಮಹಮದೀಯ ಯೌವನಸ್ಥನು ಕೆಲವರೊಂದಿಗೆ ಸ್ನಾನಕ್ಕೆ ಹೋಗಿ ಈಜುತ್ತಿರುವಾಗ ಸೆಳ್ತೆ ಸುತ್ತಿಕೊಂಡು ಮುಳುಗಿ ಪ್ರಾಣಬಿಟ್ಟನು ಈತನು ಪಾಲಕಾಡಿನಿಂದ ವಿದ್ಯಾರ್ಜನೆಗಾಗಿ ಬಂದಿದ್ದನು ಈತನಿಗೆ ಇಲ್ಲಿಯೇ ಮದುವೆಗೆ ಕೂಡ ಏರ್ಪಾಡಾಗಿದ್ದ ಹಾಗೆ ಕಂಡು ಬಂದಿರುತ್ತದೆ ಶವವನ್ನು ಹೊರಗೆ ತೆಗೆದ ಮೇಲೆ ಜನಾನಾ ಆಸ್ಪತ್ರೆಯ ಲೇಡಿ ಡಾಕ್ಟರ್ ಮಿಸ್ ಸಾಂಡಿಯಲ್ ರವರು ತುಂಬಾ ಮುತುವರ್ಜಿಯಿಂದ ಇಲಾಜು ಮಾಡಿದರೂ ಪ್ರಯೋಜನವಾಗಲಿಲ್ಲ ಸರ್ಕಾರಿ ಆಸ್ಪತ್ರೆ ಡಾಕ್ಟರವರೂ ಬಂದಿದ್ದರು

ದಿ ಜನರಲ್ ಏಜನ್ಸಿ, ಮೈಸೂರು

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31, 27 ನೆ ಜನವರಿ 1914 ರಲ್ಲಿ ಪ್ರಸಿದ್ಧ ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು—ಕಿಂಡರ್‌ಗಾರ್ಟನ್ ಕ್ರಮ 1-4 0, ಪಂಚತಂತ್ರ 0 8 0 ಕಥಾಮಂಜರಿ 0 6 0, ಕಥಾವಳಿ 0 5 6, ರಾಬಿನ್‌ಸನ್ ಕ್ರೂಸೋವಿನ ಸಾಹಸ ಕಾರ್ಯ 0-4 0, ಗಲಿವರನ ದೇಶಸಂಚಾರ 0 3 0, ಅಲ್ಲಾವುದ್ದೀನ್ ಅದ್ಭುತದೀಪ 0 5 0, ಸಿಂದಬಾದ್ ನಾವಿಕ 0 4 0, ಈಸೋಪನ ನೀತಿಕಥೆಗಳು 0 1 0 ಇವುಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡು ಕೊಡಬೇಕು 1915 ನೆಯ ಲೋವರ್ ಸೆಕಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು, ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ [23-11]

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು [illegible]



[illegible]

ಸ್ವಸ್ಥವಾಗುವುದು [illegible] ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಮುಖವಾದ ರೋಗಗಳೊಳಗೆ ಒಂದು ರೋಗಕ್ಕೆ ಮೂಲಕಾರಣವಾಗಿರುವುದು [illegible] ಬುವನ್ನು ಇದರಿಂದ ಅರಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ಎಳ್ಳಿಸುವುದು ತಲೆತಿರುಗುವುದು, ರಕ್ತಹೀನತೆ, ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [181-20]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು, ಅಥವಾ ಡೋನ್, ಪಿ. ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಪತ್ತೇದಾರೀ ಕಥೆಗಳು.

ದುಷ್ಟಚತುಷ್ಟಯ 0 1 0 ಗುರುಕುಳೆಂಡಕಳ್ಳ 0 1 0 ನರಬಲಿ 0-4-0 ಸೋಮಶೇಖರ 0 6 0 ರಘುಕುಲಚರಿತೆ (ಇದು ರಘುವಂಶದ ತಾತ್ಪರ್ಯ) 0 8-0 ವಿ ಪಿ ಸೇರಿ [68 2]

ವಿಳಾಸ—ಚತುರಂಗ ಶಾಲಾ, ಬೆಂಗಳೂರು ಸಿಟಿ

ಕನ್ನಡ ಲಾ ಪುಸ್ತಕಗಳು ಇಂಡಿಯನ್ ಪಿನಲ್‌ಕೋಡು

ಜಡ್ಜಿಗಳ ಟಿಪ್ಪಣಿ ಮತ್ತು ಆಚರಣೆ ಸಹಿತವಾದದ್ದು ರೂ 2, ಹಸನು ರೂ 2-8-0 ಸಿವಿಲ್ ಪ್ರೊಸೀಜರ್ ರೂ 2 8 0 ವ್ಯವಹಾರ ನಿಬಂಧವೆಂಬ ಕಂಟ್ರ್ಯಾಕ್ಟ್ ಲಾ ರೂ 2 ಪ್ರಶ್ನೋತ್ತರ ಲೀಗಲ್‌ಬೋಧಿನಿ 1 4-0 [41 7]

ವಿಳಾಸ—ಬಿ ನರಸಿಂಗರಾವ್, ಎಡಿಟರ್, " ಲಾ ಗೆಜೆಟ್, " ಬೆಂಗಳೂರು ಸಿಟಿ

ಬೇಕಾಗಿದೆ

ಸೂರೈವತ್ತು ಆಳುಗಳನ್ನು ಕಾಫೀತೋಟಕ್ಕೆ ಒದಗಿಸಿಕೊಂಡು ಮಾಹಿತಿಯಿಂದ ಕೆಲಸಗಳನ್ನು ನಡಿಸುವ ಒಬ್ಬ ಕಾಫೀತೋಟದ ರೈಟರ್ ಬೇಕಾಗಿದೆ ಸಂಬಳ ವಗೈರೆ ಅವರವರ ಯೋಗ್ಯತೆಯ ಮೇಲೆ ಕೊಡಿದೆ ಈ ಕೆಳಗಿನ ಅಡ್ರೆಸ್ಸಿಗೆ ಕಾಗದಪತ್ರ ನಡಿಸಿ ಎಲ್ಲಾ ಮಾಹಿತಿ ತಿಳಿದುಕೊಳ್ಳಬಹುದು

ಅಡ್ರಸ್ಸು—ಜಾವಳ ಗಣೇಶರಾವ್, ಕಾಫಿ ಪ್ಲಾಂಟರ್,

[61 1] ಬಾಳೂರ್, ಕಡೂರು

ಹೊಸ ಮಾಸ ಪತ್ರಿಕೆ **ಭಾರತೀವಿಲಾಸ** ದ್ವಿತೀಯ ವರ್ಷಾರಂಭ

ಇದೊಂದು ಕನ್ನಡ ಮಾಸ ಪತ್ರಿಕೆ ಪ್ರತಿ ಮಾಸದಲ್ಲಿಯೂ ಕ್ರಮವಾಗಿ ಪ್ರಚಾರವಾಗುವುದು ಕಾದಂಬರಿಗಳೂ, ನಕಲಿಗಳೂ, ವರ್ಣಗ್ರಂಥಗಳೂ ನೀತಿ ವಿದ್ಯಾ ವಿಷಯಕವಾದ ಉಪನ್ಯಾಸಗಳೂ ಬೇರೆಬೇರೆ ಫಟಸಂಖ್ಯೆಯಿಂದ ಬೈಂಡ್ ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದದ್ದು ವಾರ್ಷಿಕ ಚಂದಾ 1 8 0 ಚಂದಾದಾರರಾದವರಿಗೆ ಚಾಮುಂಡೇಶ್ವರಿ ಬೆಟ್ಟದ ಮಾಹಾತ್ಮ್ಯ ಎಂಬ ಪುಸ್ತಕ ಬಹುಮಾನ ಸಿಕ್ಕುತ್ತೆ ಇದರ ಕ್ರಯ 4 ಆಣೆ [272 6]

ವಿಳಾಸ—ಮಾನೇಜರ್, ಮಹಿಳೆಶ್ವರೀ ಪ್ರೆಸ್, ಮೈಸೂರು

ಜನವರಿ ಮಹೋತ್ಸವದ ಕೈ ಗಡಿಯಾರ.



ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ ವಿಳಾಸ—

ಜಿ ಆರ್ ರಾವ್, ಜನರಲ್ ಮರ್ಚಂಟ್,

೧೫ ಆಫೀಸು ವೆಂಕಟಾಚಲಮೊದಲಿ ಬೀದಿ,

ತಿರುವಲ್ಲಿಕೇಣಿ, ಮದರಾಸ್.

ಪ್ರಾಕೃತಿಕ ಜಿಯಾಗ್ರಫೀ.

೨ನೆಯ ಮುದ್ರಣ.

[58-4]

ಬಿಕರಿಗೆ ಸಿದ್ಧವಾಗಿದೆ

೧ ನೆಯ ಬಾಗ ಕ್ರಯ 0-4-6

೨ ನೆಯ ಬಾಗ ,, 0-4-6

ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್, ಸಿ [illegible] ಬುಕ್ ಡಿಪ್ಪೋ ಮೈಸೂರು

ಅಪ್ರೂವ್ಡ್ ಕನ್ನಡ ಗ್ರಂಥಗಳು.

[illegible]

(1) [illegible]

[illegible]

ವಿಳಾಸಗಳು —(1) ಬಿ ಅಶ್ವತ ನಾರಾಯಣ [illegible], [illegible] ಪೇಟೆ, ಮೈಸೂರ್ (2) ಶ್ರೀ [illegible] ಬುಕ್ ಡಿಪ್ಪೋ, ಮೈಸೂರ್ (3) ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರ್ (4) ದಿ ಜನರಲ್ ಏಜನ್ಸಿ ಮೈಸೂರ್

ಕುಂಬಕೋಣದ ಜರಿಗೆ ಒಂಟು ಹಾಕಿದ ಹೂವಿನ ಸರಿಗೆ

ಕಪ್ಪುಬಣ್ಣದ ಸೀರೆ ಕ್ರಯ ರೂ 2 13-0



ಇದು ಉಡುವದಕ್ಕೆ ದಪ್ಪವಾಗಿಯೂ ನೋಟಕ್ಕೆ ರಮ್ಯವಾಗಿಯೂ ಗಟ್ಟಿ ತರದ ಉಳ್ಳದ್ದಾಗಿಯೂ ಇದೆ ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಭಾಗ್ಯವಂತರು ಸಹ ಉಡುವದಕ್ಕೆ ಲಾಯಖಾದದ್ದು ಒಂದನ್ನು ತರಿಸಿ ಪರೀಕ್ಷಿಸಿರಿ.

ವಿಳಾಸ—ತುಲಸಿ ರಾಮದಾಸ್, ಕ್ಲಾತ್ ಮರ್ಚಂಟ್, 66 ಆಫೀಸು

[65-3] ವೆಂಕಟಾಚಲ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—3—1914 ರಿಂದ 14—3—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	1	0	0
ಮೈಸೂರು ,,	8	9	0	0
ಬೆಂಗಳೂರು ಡಿಸ್ಟ್ರಿಕ್ಟು	9	7	0	0
ಮೈಸೂರು ,,	14	12	0	0
ಕೋಲಾರ್ ,,	20	20	0	0
ಕೋಲಾರ್ ಚಿನ್ನದ ಗಣಿಗಳು	5	7	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	36	13	0	0
ಚಿತ್ರದುರ್ಗ ,,	1	1	0	0
ಕಡೂರ್ ,,	0	0	0	0
ಶಿವಮೊಗ್ಗ ,,	9	6	0	0
ಜುಮ್ಲಾ	94	76	0	0

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ವಸಂತಋತೌ ಚೈತ್ರ ಶುದ್ಧ ಪೌರ್ಣಮಿ ಶುಕ್ರವಾರದಿಂದ ಚೈತ್ರ ಬಹುಳ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಮಾರ್ಚಿ ಮತ್ತು ಏಪ್ರಿಲ್

ದಿ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಎಸಾನ ಮಾಸ ತೇದಿ
27	ಶುಕ್ರ	‡	ಪೌರ್ಣಮಿ	14 19	ರೇವತಿ	60 0	14
28	ಶನಿ	*	ಪಾಡ್ಯ	19 16	ರೇವತಿ	6 35	15
29	ಭಾನು	†	ಬಿದಿಗೆ	64 5	ಅಶ್ವಿನಿ	12-1	16
30	ಸೋಮ	§	[illegible]	58 [illegible]	ಭರಣಿ	18-1	17
ಈ ವಾರ ಮೇಲುಕೋಟೆಯಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಪಂಚಮರ ...ಯೂ, ಆ ಜನರ ಕೈಗಾರಿಕೆಗಳ ಪ್ರದರ್ಶನವೂ ಜರುಗುವವು ದಿವಾನ್ ಮ|| ...ವಿಶ್ವೇಶ್ವರಯ್ಯನವರು ಆ ಸಭೆಗೆ ದಯಮಾಡಿ ಪಂಚಮರ ಮುಖಂಡರಿಗೆ ...ಪಾರಿತೋಷಿಕಗಳನ್ನು ಹಂಚಿ ಕೊಡುವವರಾಗಿದ್ದಾರೆಂದು ತಿಳಿಯುತ್ತದೆ

ರಾಜಧಾನಿಯ ...ನ ವೆಸ್ಲಿಯನ್ ಮಿಷನ್ ...ಯದ ಹಿಂದೆ ...ಯ ... ನೆಲ್ಲಿ ಸುತ್ತಿ ಎಸೆದಿತ್ತು. ಪೋಲೀಸಿನವರು ಕ್ರಮಪ್ರಕಾರ ತನಿಖೆ ಮಾಡಿ ... ಮಾಡಿ, ಆ ಶಿಶುವಿನ ತಾಯಿಯನ್ನು ಪತ್ತೆಮಾಡುವುದರಲ್ಲಿದ್ದಾರೆ.

ಮೈಸೂರಿನಲ್ಲಿ ಮುಂದಿನ ವಾರ ನಡೆಯುವ ದನಗಳ ಪ್ರದರ್ಶನಾದಿಗಳ ...ದಲ್ಲಿ ಸೆಕ್ರೆಟರಿಯವರ ಇಷ್ಟಾರ್ಥವು ಇನ್ನೊಂದು ಕಡೆ ಪ್ರಕಟಿಸಿರು... ಉತ್ಕೃಷ್ಟವಾದ ಗೋವುಗಳನ್ನೂ ಕೈಗಾರಿಕೆ ವಸ್ತುಗಳನ್ನೂ ಕಸಬು... ಪ್ರದರ್ಶನಕ್ಕೆ ಕಳುಹಿಸಿ ಪ್ರಯೋಜನ ಹೊಂದುವರೆಂದು ಹಾರೈಸುವೆವು

ಪ್ರೈಮರಿ ಮತ್ತು ಲೋವರ್ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರಿ...ಗೆ ಬೆಂಗಳೂರು ಗವರ್ನ್‌ಮೆಂಟ್ ಹೈ ಸ್ಕೂಲಿನಲ್ಲಿ ಇದೇ ಏಪ್ರಲ್ ತಾ ...ರಿಂದ ಮೇ ತಾ. ೧೫ ರ ತನಕ ಒಂದು ತಿಂಗಳು ನಾರ್ಮಲ್ ಕ್ಲಾಸನ್ನು ... ನಡಿಸುವುದಾಗಿಯೂ, ಅಪೇಕ್ಷೆಯುಳ್ಳ ಉಪಾಧ್ಯಾಯರು ಹೋಗಿ ಶಿಕ್ಷಣ ... ಹೊಂದಬಹುದೆಂದೂ ಸೆಕ್ರೆಟರಿ ಮ|| ಎಸ್. ಶ್ರೀನಿವಾಸರಾಯರು ...ದ್ದಾರೆ.

...ದ ತಿಂಗಳ ೧೪ ನೇ ತಾ ಸಂಸ್ಥಾನದಲ್ಲಿ ನಡೆದ ಚುನಾವಣೆಯಲ್ಲಿ ... ಕೇಳುವವರಿಗೆ ಹೆಚ್ಚು ಸಂಖ್ಯೆಯ ಸಮ್ಮತಿ (ಓಟು) ಗಳು ದೊರೆತದ್ದ... ಅವರನ್ನು ಸರ್ಕಾರದವರು ನ್ಯಾಯವಿಧಾಯಕ ಸಭೆಗೆ ಪ್ರಜಾಪಕ್ಷದ ...ಗಳಾಗಿ ಅಂಗೀಕರಿಸಿರುತ್ತಾರೆ ಅವರು ಯಾರೆಂದರೆ—ಬೆಂಗಳೂರು ...ಪಲ್ ಕೌನ್ಸಿಲರ್ ಮ|| ಬಿ. ಕೆ. ಗರುಡಾಚಾರ್ಯ, ಹಾಸನದ ಅಡ್ವೊ... ಮ|| ಎಸ್. ವೆಂಕಟೇಶಯ್ಯನವರು, ಚಿತ್ರದುರ್ಗದ ಅಡ್ವೊಕೇಟ್ ಮ|| ಬಿ. ವೆಂಕಟರಾಮಣ್ಣನವರು, ಶಿವಮೊಗ್ಗೆಯ ಅಡ್ವೊಕೇಟ್ ಮ|| ಕೆ. ಶಂಕರನಾರಾಯಣರಾಯರು

ಒಬ್ಬ ಬಾತ್ಮಿದಾರರು ಬರೆಯುವುದು—ಕಳೆದ ತಾ. ೨೫ ನೇ ಬುಧವಾರ ರಾಜಧಾನಿಯ ದೊಡ್ಡಕೆರೆ ಏರಿಯ ಮೇಲೆ ಸುಮಾರು ೧೫ ವರುಷ ವಯಸ್ಸುಳ್ಳ ಒಬ್ಬ ಹೊಪ್ಪಹುಡುಗನು ಒಂದು ಅರಳೀಮರವನ್ನು ಹತ್ತಿ ಆಡುಗಳಿಗೆ ಎಲೆಗಳನ್ನು ಉದುರಿಸುತ್ತಾ ಇರಲು ಕಾಲುಜಾರಿ ಕೆಳಗೆ ಬಿದ್ದನು. ಅಲ್ಲಿ ಬಹಳ ಮಣ್ಣಿಂದ ಕೂಡಿರುವ ಭೂಮಿಯಾದ್ದರಿಂದ ಅವನಿಗೆ ಕಾಲುಗಳು ಮಾತ್ರ ಯಾತನೆ ಆಯಿತೇ ಹೊರ್ತು ಮತ್ತೇನೂ ಆಗಲಿಲ್ಲ.

ಮದರಾಸಿನ ಗುರುಬಸವ ಕಂಪನಿಯ ಪ್ರೊಪ್ರೈಟರವರೂ, ಬೆಂಗಳೂರು ಸುಲ್ತಾನ್ ಪೇಟೆಯ ಮ|| ಎಚ್ ಚನ್ನಕೇಶವಯ್ಯಂಗಾರರೂ, ನಮಗೆ ಯುಗಾದಿ ಹಬ್ಬದ ಶುಭಸಾಧನವನ್ನು ಕಳುಹಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇವೆ. ಸರ್ವರಕ್ತನೆಂಬ ಟಾನಿಕಿನ ಮೇಲೆ ನಮಗೆ ೩೬೦ ದಿನ ಅಥವಾ ೮,೬೪೦ ಗಂಟೆಗಳ ಆರೋಗ್ಯ ಸುಖ ಸಂತೋಷಾದಿಗಳೆಂಬ ದ್ರವ್ಯವು ಸಲ್ಲಬೇಕೆಂದು ನವೀನವಾದ ಬ್ಯಾಂಕ್ ನೋಟನ್ನು ಕಳುಹಿಸಿರುವರು

ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ದೊಡ್ಡನೆಂಬುವನು ಮಲ್ಲಮ್ಮನೆಂಬುವಳನ್ನು ಕೊಂದುಹಾಕಿದನೆಂದು ಮೊಕದ್ದಮೆ ಆಗಿ ಬೆಂಗಳೂರು ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದರು ಅಪರಾಧಿಯು ಅಪೀಲ್ ಮಾಡಿದ್ದರಲ್ಲಿ ಚೀಫ್ ಕೋರ್ಟಿನವರು ಮರಣದಂಡನೆಯ ಶಿಕ್ಷೆಯನ್ನು ರದ್ದುಮಾಡಿ, ಅವನ ಮೇಲಿನ ಅಪರಾಧವೇ ಸರಿಯಾಗಿ ರುಜುವಾತಾಗಲಿಲ್ಲವೆಂದು ಹೇಳಿ ಬಿಡಿಸಿಬಿಟ್ಟರು ಈ ಜಡ್ಜಮೆಂಟಿನಲ್ಲಿ ಪೋಲೀಸಿನವರ ನಡವಳಿಕೆಯನ್ನು ಚೆನ್ನಾಗಿ ಖಂಡಿಸಿರುತ್ತಾರೆ.

ಒಬ್ಬ ಬಾತ್ಮಿದಾರರಿಂದ—ಕಳೆದ ತಾ. ೧೧ ನೇ ಶನಿವಾರ ರಾಜಧಾನಿಯ ಹಳೇ ಅಗ್ರಹಾರದ ಚಕ್ರದ ಬೀದಿಯಲ್ಲಿರುವ ನರಸಿಂಹಮೂರ್ತ್ಯಾಚಾರ್ಯರ ಮನೆಯಲ್ಲಿ ಅಂಬಳೆ ತಾಯೂರು ರಂಗಾಚಾರ್ಯರ ಮಗ ನಾರಾಯಣನು ಮೂರು ದಿವಸ ಇದ್ದು ಬಹಳ ಪರಿಚಯವುಳ್ಳವನಾಗಿ ನಂಬಿಕೆಯನ್ನು ತೋರಿಸಿ ಸುಮಾರು ೧೫೦ ರೂಪಾಯಿ ಬಾಳುವ ಅಡ್ಡಿಕೆಯನ್ನು ಕದ್ದುಕೊಂಡು ಪರಾರಿಯಾದನು. ಪತ್ತೆ ತನಿಖೆ ಜರುಗುತ್ತಲಿದೆ ಪದೇ ಪದೇ ಈ ಅಗ್ರಹಾರದಲ್ಲಿ ಕಳ್ಳತನ ನಡೆಯುತ್ತಲೇ ಇದೆ

ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಕಳೆದ ಶನಿವಾರ ಸ್ತ್ರೀಯರು ಸಭೆ ಸೇರಿ ಸಂಗೀತ ದಾಸನಾರಿಕೆಗಳನ್ನು ಕೇಳಿ ಸಂತೋಷಪಟ್ಟರು. ಶ್ರೀ. ಲಕ್ಷ್ಮಮ್ಮನವರು ಭಗವದ್ಗೀತೆಯ ವಿಚಾರವಾಗಿ ಒಂದು ಉಪನ್ಯಾಸವನ್ನು ಬರೆದು ತಂದು ಓದಿದರು ಒಬ್ಬ ಪುಣ್ಯವತಿಯು ಮಂದಿರದ ಅನಾಥ ಬಾಲ ಬಾಲಕಿಯರಿಗೆ ಮಿಠಾಯಿ ಮೊದಲಾದ ತಿಂಡಿ ಪದಾರ್ಥಗಳನ್ನು ಹಂಚಿ ಆನಂದಪಡಿಸಿದ್ದರ ಮೇಲೆ ಶ್ರೀಯುಕ್ತ ಪ್ರಾರ್ಥನಾದಿಗಳು ನಡೆದು ಸಭೆಯು ಮುಕ್ತಾಯವಾಯಿತೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ರಾಜಧಾನಿಯ ಗಾಯನ ಸಮಾಜದ ಜನರಲ್ ಮೀಟಿಂಗು ತಾ. ೮ನೇ ಬುಧವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಜರುಗುವುದು ರಿಟೈರ್ಡ್ ಚೀಫ್ ಇಂಜನಿಯರ್ ಮ|| ವೈ ಶ್ರೀನಿವಾಸರಾಯರು ಸಭೆಯ ಅಗ್ರಾಸನವನ್ನು ವಹಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಕಳೆದ ಭಾನುವಾರ ಸಾಯಂಕಾಲ ಈ ಸಮಾಜದ ಸೆಕ್ರೆಟರಿಯವರಾದ ಮ|| ಎಚ್ ವಿ ಕೃಷ್ಣರಾಯರು ಟೌನ್ ಹಾಲ್ ಬಂಗಲೆಯಲ್ಲಿ ದ್ರೌಪದಿ ವಸ್ತ್ರಾಪಹರಣವೆಂಬ ಕಥೆಯನ್ನು ಇಂಪಾಗಿ ಮಾಡಿ ಸಭಿಕರನ್ನು ಸಂತೋಷಪಡಿಸಿದರು

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಶನಿವಾರ ನಡೆಸಿದ ಮೀಟಿಂಗಿನಲ್ಲಿ ಅಂಗಡಿಗಳಲ್ಲಿ ವಿಕರಿ ಆಗುವ ಧಾನ್ಯ ಮೊದಲಾದ ಸಮಸ್ತ ಆಹಾರ ಪದಾರ್ಥಗಳನ್ನೂ ಆಗಿಂದಾಗ್ಗೆ ಅಜಮಾಯಿಷಿ ಮಾಡುವುದಕ್ಕಾಗಿ ಒಬ್ಬ ಇನ್‌ಸ್ಪೆಕ್ಟರನ್ನು ೩೫+೧೦ ರೂಪಾಯಿ ತಲಬಿನ ಮೇಲೆ ನೇಮಕಮಾಡಬೇಕೆಂದೂ, ತಾಲ್ಲೂಕ್ ಕಛೇರಿ ರಸ್ತೆಯು ಅರ್ಕಾಟ್ ಶ್ರೀನಿವಾಸಾಚಾರ್ರ ರಸ್ತೆಗೆ ಸೇರುವ ಕಡೆ ವಿಸ್ತಾರವಾದ ಚೌಕವನ್ನು ಕಲ್ಪಿಸುವುದಕ್ಕೆ ಅಲ್ಲಿರುವ ಅಂಗಡಿ ಮನೆಗಳನ್ನು ಗಜಕ್ಕೆ ೫೦ ರೂಪಾಯಿನಂತೆ ಪ್ರತಿಫಲ ಕೊಟ್ಟು ತೆಗೆದುಕೊಂಡು ಒಡೆದುಹಾಕಬೇಕೆಂದೂ ತೀರ್ಮಾನಮಾಡಿದ್ದಾರೆ

ಅರಕಲಗೂಡು ನೇಟಿವ್ ಹಿಂದೂ ವೈದ್ಯಶಾಲಾ ಪ್ರೊಪ್ರೈಟರು ಮ|| ಎ. ಪಿ ನಾಗೇಶಯ್ಯ ಪಂಡಿತರು ಬರೆಯುವುದೇನೆಂದರೆ—ಹಾಸನದ ಡಿಸ್ಟ್ರಿಕ್ಟ್ ಅರಕಲಗೂಡಿನಲ್ಲಿ ಈ ಸಲದ ಶ್ರೀಮತ್ ಕೇಂದ್ರದ ಪೋಷಿತ ಆಯುರ್ವೇದ ವೈದ್ಯಾ ಕಾನ್ಫರೆನ್ಸು ೧೯೧೪ ನೇ ಇಸವಿ ಏಪ್ರೆಲ್ ತಾ ೮ ರಲ್ಲಿ ನಡೆಯುತ್ತದೆ ಹಿಂದೂ ವೈದ್ಯರು ಸದರಿ ಕಾನ್ಫರೆನ್ಸಿಗೆ ದಯಮಾಡಿಸಬೇಕಾಗಿ ಪ್ರಾರ್ಥನೆ ವೈದ್ಯರುಗಳ ಆಗಮನದಿಂದ ಆಯುರ್ವೇದ ವೈದ್ಯವು ಉತ್ತಮಸ್ಥಿತಿಗೆ ಬರುವದಾಗಿ ನಿರೀಕ್ಷಿಸಲ್ಪಟ್ಟಿದೆ. ಬಿಡಾರ ಮುಂತಾದ ಅನುಕೂಲಗಳು ಬೇಕಾದವರು ಮುಂಚಿತವಾಗಿಯೇ ಬರೆಯಬೇಕಾಗಿ ಕೋರಲ್ಪಟ್ಟಿದೆ

ಸಂಸ್ಥಾನದ ಸಂಪದಭ್ಯುದಯ ಸಮಾಜಕ್ಕೆ ಸಂಬಂಧಪಟ್ಟಂತೆ ಕಳೆದ ಬುಧವಾರ ಬೆಂಗಳೂರಿನಲ್ಲಿ ದಿವಾನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು ವರ್ತಕರೇ ಮೊದಲಾದವರು ಮೂರು ಗಂಟೆ ಹೊತ್ತು ನಾನಾ ವಿಷಯಗಳನ್ನು ಕುರಿತು ಚರ್ಚೆಮಾಡಿದರು ದಿವಾನ್‌ರವರು ಈ ಅಭಿವೃದ್ಧಿಕಾರ್ಯಗಳಲ್ಲಿ ಹಲವು ಲೋಪದೋಷಗಳಿವೆ ಎಂದು ಒಪ್ಪಿಕೊಂಡು, ವಿಷಯಗಳನ್ನು ಚರ್ಚಿಸುವುದಕ್ಕೆ ಮಾಸಪತ್ರಿಕೆ ಆಗಬೇಕೆಂದೂ, ಅದನ್ನು ಒಂದು ವರುಷ ನಡಿಸಿ ನೋಡಬೇಕೆಂದೂ ಅಭಿಪ್ರಾಯಪಟ್ಟರು. ಈ ಸಂಪದಭಿವೃದ್ಧಿಕಾರ್ಯಗಳ ಆಲೋಚನೆಗೆ ಮೂರು ವರುಷಗಳಿಂದ ಅಪಾರವಾದ ಹಣವೂ ಸಮಯವೂ ವ್ಯಯವಾಯಿತೆಂದೂ, ಇದುವರೆಗೆ ಕಾರ್ಯತಃ ಯಾವ ಬಗೆಯ ಸಂಪತ್ತಾಗಲಿ ವೃದ್ಧಿಯಾದದ್ದು ಕಾಣಲಿಲ್ಲವೆಂದೂ, ಮುಂದೆ ಈ ಮಾಸಪತ್ರಿಕೆಯ ಮೂಲಕ ಈ ಭಾಗವು ಪ್ರಕಾಶವಾದೀತೆಂದೂ ಅನೇಕ ದೇಶವತ್ಸಲರು ಎದುರುನೋಡುತ್ತಾರೆ.

ರಾಜಧಾನಿಯ ದೊಡ್ಡಕೆರೆ ಏರಿಯ ಹಿಂಭಾಗದಲ್ಲಿ ಪೋಲೀಸ್ ಸ್ಟೇಷನ್ ಬಳಿ ಗ್ರಾಮಸಾರವು ಸಾಗಿಹೋಗುವ ದೊಡ್ಡ ಚಪ್ಪಲನ್ನು ಸಿಮೆಂಟ್ ಕಾನ್‌ಕ್ರೀಟ್ ಎಂಬ ಗಾರೆ ಅಚ್ಚುಗಳಿಂದ ಸುಮಾರು ೬,೦೦೦ ರೂಪಾಯಿ ಮುಟ್ಟಿಸಿ ಟ್ರಸ್ಟ್‌ಬೋರ್ಡಿನವರು ಕಟ್ಟಿಸಿದ್ದದ್ದು ಕಳಚಿ ಬಿದ್ದುಹೋಗಿ ನಷ್ಟವಾದದ್ದರಿಂದ ಅದನ್ನು ಮತ್ತೆ ಕಟ್ಟಿಸುವುದಕ್ಕೆ ೧೧,೦೦೦ ರೂ ಸ್ಯಾಂಕ್ಷನ್ ಆಗಿ ಆ ಪೈಕಿ ಒಂದು ಸಾವಿರ ರೂಪಾಯಿನ ಕಾಮಗಾರಿ ನಡೆಯಿತು ಈಗ ಅದನ್ನು ಬಿಟ್ಟುಬಿಟ್ಟು ಆ ಚರಂಡಿಯನ್ನು ಉದಕ್ಕೂ ಭರ್ತಿಮಾಡಿಸಬೇಕೆಂದೂ, ಆ ಚೌಕದಲ್ಲಿ ಸುಮಾರು ೩೦,೦೦೦ ರೂಪಾಯಿ ಖರ್ಚುಮಾಡಿ ಆ ಭಾಗದ ಕಂದಕವನ್ನೆಲ್ಲಾ ಮುಚ್ಚಿ ಹಾಕಿ ಅಲ್ಲೊಂದು ಉದ್ಯಾನವನ ಮುಂತಾದದ್ದನ್ನು ಕಲ್ಪಿಸಿ ನೇತ್ರಾನಂದಕರವಾಗಿ ಮಾಡಬೇಕೆಂದೂ, ಅರಮನೆಯ ಬಾಗಿಲಲ್ಲಿ ಕೋಟೆಕೊತ್ತಲಗಳ ಮೇಲೆ ಸುಮಾರು ೨,೦೦೦ ರೂಪಾಯಿ ಖರ್ಚಿಟ್ಟು ಎರಡು ದೊಡ್ಡ ಗೋಪುರಗಳನ್ನು ಕಟ್ಟಿಸಿ ಅಲಂಕಾರಮಾಡಬೇಕೆಂದೂ ಮೊನ್ನೆ ಮಂಗಳವಾರ ನಡೆದ ಮೀಟಿಂಗಿನಲ್ಲಿ ಟ್ರಸ್ಟ್‌ಬೋರ್ಡ್ ಮೆಂಬರುಗಳು ತೀರ್ಮಾನಮಾಡಿದರೆಂದು ಕೇಳುತ್ತೇವೆ.

ಕೋಲಾರ್ ಡೆಪ್ಯುಟಿ ಕಮಿಷನರ್ ಮ|| ಪಿ. ಎಫ್. ಬೌರಿಂಗ್‌ಯವರು ಮೂರು ತಿಂಗಳು ರಜಾ ಪಡೆದು ಪತ್ನೀಸಮೇತ ಸೀಮೆಗೆ ಹೋಗಬರುವವರಾಗಿದ್ದಾರೆ. ಅವರ ಕೆಲಸವನ್ನು ಮ|| ಬಿ. ರಾಮಸ್ವಾಮಯ್ಯನವರು ಬದಲಿ ನೋಡುವಂತೆ ನೇಮಕವಾಗಿದೆ ಕಳೆದ ಶನಿವಾರ ಆ ಡಿಸ್ಟ್ರಿಕ್ಟಿನ ದೊಡ್ಡಮನುಷ್ಯರು ಬೌರಿಂಗ್ ದಂಪತಿಗಳನ್ನು ಕರಸಿಕೊಂಡು ಒಂದು ಸಂತೋಷ ಕೂಟವನ್ನು ನಡಿಸಿ ಅವರಲ್ಲಿ ತಮಗಿರುವ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಆ ಸಂದರ್ಭದಲ್ಲಿ ಮ|| ಬೌರಿಂಗ್ ಸಾಹೇಬರು ಸಭಿಕರನ್ನು ವಂದಿಸಿ ಪ್ರತ್ಯುತ್ತರವಾಗಿ ಹೇಳಿದ ಮುಖ್ಯ ವಿಷಯಗಳೇನೆಂದರೆ—ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ನೀರಿಗೆ ಕಷ್ಟವೆಂದು ಶ್ರೀಮನ್ಮಹಾರಾಜರವರಿಗೂ ಗವರ್ನ್‌ಮೆಂಟಿಗೂ ತಿಳಿದಿದೆ ಕೆರೆಗಳನ್ನು ದುರಸ್ತುಮಾಡಿಸುವುದರಲ್ಲಿ ದಿವಾನ್‌ರವರು ಮುತುವರ್ಜಿ ವಹಿಸಿದ್ದಾರೆ ೪೧,೦೦೦ ರೂಪಾಯಿ ಖರ್ಚುಮಾಡಿ (ಈ ಪೈಕಿ ರೈತರಿಂದ ೧೫,೦೦೦ ರೂಪಾಯಿ ಕಂಟ್ರಿಬ್ಯೂಷನ್ ವಸೂಲಾಗಿದೆ) ೧೨೦ ಕೆರೆಗಳನ್ನು ದುರಸ್ತುಮಾಡಿಸಿದ್ದಾಯಿತು. ಆ ಡಿಸ್ಟ್ರಿಕ್ಟಿನಲ್ಲಿರುವ ೩,೫೦೦ ಕೆರೆಗಳ ಪೈಕಿ ಇದುವರೆಗೆ ೮೧೨ ಸಣ್ಣ ಕೆರೆಗಳನ್ನು ರಿಪೇರಿಮಾಡಿಸಿದರು—ಇಲ್ಲಿನ ಭೂಮಿಯು ಗಟ್ಟಿಯಾಗಿಲ್ಲವಾದ್ದರಿಂದ ಉಳುವುದಕ್ಕೆ ಇಂಗ್ಲಿಷ್ ನೇಗಿಲು ಬೇಕಾಗಿಲ್ಲ. ಪಾಶ್ಚಾತ್ಯದೇಶಗಳ ಯಂತ್ರಗಳನ್ನು ನಮ್ಮ ಸೀಮೆಗೆ ತಂದು ಉಪಯೋಗಿಸುವುದರಿಂದ ಫಲವೇನೂ ಆಗಲಾರದು. ವಿಷ್ಕೆಯನ್ನು ಹರಡಿ, ರೇಷ್ಮೆ ಮೊದಲಾದ ದೇಶೀಯ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಏರ್ಪಾಡುಗಳನ್ನು ಮಾಡಿದರೆ ನಮ್ಮ ಜನರು ಸುಖಜೀವನ ಮಾಡಬಹುದು ಎಂಬೀ ರೀತಿಯಾಗಿ ಹೇಳಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಕೀರ್ತಿಶೇಷರಾದ ಎಡ್ವರ್ಡ್ ಚಕ್ರವರ್ತಿಯವರ ಭಾವ ಪ್ರತಿಮೆಯು ಕಳೆದ ವಾರ ಸೀಮೆಯಿಂದ ರಂಗೂನ್ ಪಟ್ಟಣಕ್ಕೆ ತಲುಪಿದೆ ಅದನ್ನು ಇಷ್ಟರಲ್ಲೇ ಲೆಫ್ಟಿನೆಂಟ್ ಗವರ್ನರವರು ಡಲ್‌ಹೌಸಿ ಪಾರ್ಕ್ ಎಂಬ ಉದ್ಯಾನವನದಲ್ಲಿ ಪ್ರತಿಷ್ಠೆ ಮಾಡುವವರಾಗಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕಾಲೇಜ್ ಸ್ಕ್ವೇರಿನಕ್ಕೂ ಹ್ಯಾರಿಸನ್ ರಸ್ತೆಗೂ ನಡುವೆ ಎಂಟು ಎಕರೆ ವಿಸ್ತಾರವುಳ್ಳ ನಿವೇಶನದಲ್ಲಿ ದಿವ್ಯವಾದ ದೊಡ್ಡ ಮಾರ್ಕೆಟ್ಟನ್ನು ಒಂಭತ್ತೂವರೆ ಲಕ್ಷ ರೂಪಾಯಿ ಮುಟ್ಟಿಸಿ ಕಟ್ಟಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಕಳೆದ ವಾರ ಒಂದು ದೊಡ್ಡ ಮಹಾಜನ ಸಭೆ ನಡೆಯಿತು ಡಾಕ್ಟರ್ ಸತೀಷ್ ಚಂದ್ರ ಬ್ಯಾನರ್ಜಿಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಹಿಂದೂ ಜನಗಳು ತಮ್ಮ ಗಂಡುಹೆಣ್ಣುಮಕ್ಕಳ ಮದುವೆಮಾಡುವಾಗ್ಗೆ ಕನ್ಯಾ ವರ ದಕ್ಷಿಣೆಗಳನ್ನು ಅಂಗೀಕರಿಸುವುದು ಸರ್ವಥಾ ಯೋಗ್ಯವಲ್ಲವೆಂದು ತೀರ್ಮಾನ ಮಾಡಿರುತ್ತಾರೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಕಳೆದ ಗುರುವಾರ ಮಧ್ಯಾಹ್ನ ಬೆಂಕಿಬಿದ್ದು ನೂರಾರು ಭಾರೀ ಮನೆಗಳು ಸುಟ್ಟುಹೋಗಿ ಸುಮಾರು ೧,೫೦೦ ಪ್ರಜೆಗಳು ಅಲೆಯುವಂತಾಯಿತು ಈಗ ಕಷ್ಟಕ್ಕೆ ಗುರಿಯಾಗಿರುವ ಜನರನ್ನು ಸಂರಕ್ಷಣೆಮಾಡುವುದಕ್ಕೆ ರಿಲೀಫ್ ಫಂಡನ್ನು ಕೂಡಿಸುತ್ತಿದ್ದಾರೆ. ೭೦-೮೦ ಸಾವಿರ ರೂಪಾಯಿನ ಮಾಲುಗಳು ಸುಟ್ಟುಹೋದವು.

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಮ|| ಇ ಎಲ್. ನಾರ್ಟನ್ ಎಂಬ ಮ್ಯಾಜಿಸ್ಟ್ರೇಟರು ಕಳೆದ ಗುರುವಾರ ಮಧ್ಯಾಹ್ನ ಕೋರ್ಟಿನಲ್ಲಿ ಕುಳಿತಿರುವಾಗ್ಗೆ ಒಬ್ಬ ಅಪರಾಧಿಯು ಅವರನ್ನು ಕಲ್ಲಿನಿಂದ ಹೊಡೆದುಬಿಟ್ಟನು. ಮ್ಯಾಜಿಸ್ಟ್ರೇಟರ ತಲೆಗೆ ಬಡಿದು ಗಾಯವಾಗಿ ತುಂಬಾ ರಕ್ತಸುರಿಯಿತು. ಅವರು ಕೂಡಲೇ ಮನೆಗೆ ಹೋಗಿ ಡಾಕ್ಟರಿಂದ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ.

ಹಿಂದುಸ್ತಾನದ ಹೊಸ ರಾಜಧಾನಿಯಾದ ದೆಹಲಿ ನಗರದಲ್ಲಿ ವೈಸ್‌ರಾಯರವರಿಗೂ, ಮಂತ್ರಾಲೋಚನಾ ಸಭೆಗೂ, ಇಂಡಿಯಾ ಗವರ್ನ್‌ಮೆಂಟಿನ ಆಫೀಸುಗಳಿಗೂ ಕಟ್ಟಡಗಳನ್ನು ಕಟ್ಟಿಸುವುದೇ ಮೊದಲಾದ ಕಾಮಗಾರಿಗಳಿಗೆ ೭,೬೬,೯೫,೦೦೦ ರೂಪಾಯನ್ನೂ, ಇತರ ಅನಿರೀಕ್ಷ್ಯವಾದ ಖರ್ಚಿಗೆ ೧೬೦ ಲಕ್ಷ ರೂಪಾಯನ್ನೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದ್ದಾರೆ

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ಹತ್ತಿಯ ಗಟ್ಟಿಗಳು ಭರ್ತಿಯಾಗಿದ್ದ ದೊಡ್ಡ ಉಗ್ರಾಣಗಳಿಗೆ ಬೆಂಕಿಬಿದ್ದು ೬೦-೭೦ ಸಾವಿರ ಮೂಟೆಗಳು ಸುಟ್ಟು ಕೆಟ್ಟುಹೋಗಿ ವರ್ತಕರಿಗೆ ೭೫ ಲಕ್ಷ ರೂಪಾಯಿ ತನಕ ನಷ್ಟವಾಯಿತು ಈಚೆಗೂ ಇನ್ನು ಕೆಲವು ಕಡೆ ಬೆಂಕಿ ಹುಟ್ಟಿ ಸಾವಿರಾರು ರೂಪಾಯಿನ ಹತ್ತೀ ಮೂಟೆಗಳು ಉರಿದುಹೋದವು ಸರ್ಕಾರದವರು ಆ ಭಾಗಗಳನ್ನು ಹೆಚ್ಚು ಉಸ್ತುವಾರಿ ಇಟ್ಟು ಕಾಯಬೇಕೆಂದು ಪೋಲೀಸಿನವರನ್ನು ನೇಮಕಮಾಡಿದ್ದಾರೆ

ಕಳೆದ ವಾರ ವೈಸ್‌ರಾಯರವರು ಬೊಂಬಾಯಿಗೆ ದಯಮಾಡಿ ಅಲ್ಲಿ ಕಟ್ಟಿ ತಯಾರಾಗಿದ್ದ ವಿಕ್ಟೋರಿಯಾ ಡಾಕ್ಸ್ ಎಂಬ ದಿವ್ಯವಾದ ಕಟ್ಟಡವನ್ನು ಪ್ರತಿಷ್ಠೆಮಾಡಿ ಬೇರೆ ಬೇರೆ ಸಂಘಗಳ ಪ್ರತಿನಿಧಿಗಳು ಒಪ್ಪಿಸಿದ ಅಡ್ರೆಸ್ಸುಗಳನ್ನು ಅಂಗೀಕರಿಸಿ ಸಮಯೋಚಿತವಾದ ಉತ್ತರಗಳನ್ನು ದಯಪಾಲಿಸಿ, ತಮ್ಮ ಪತ್ನೀಯವರನ್ನು ಸೀಮೆಗೆ ಸಾಗಕಳುಹಿಸಿ ವಾಪಸು ದೆಹಲಿಗೆ ದಯಮಾಡಿದರು. ಈಗ ಅವರು ದೆಹಲಿಯಿಂದ ಸಂಚಾರ ಹೊರಟು ಗ್ವಾಲಿಯರ್, ರೀವಾ ಸಂಸ್ಥಾನಗಳನ್ನೂ, ಡೇರಾಡೂನ್ ಮತ್ತು ಸಾಬಾತು ನಗರಗಳನ್ನೂ ಪರ್ಯಾಟನಮಾಡಿಕೊಂಡು ಬೇಸಗೆ ಕಳೆಯುವ ಉದ್ದೇಶ್ಯ ಸಿಮ್ಲಾ ಪಟ್ಟಣಕ್ಕೆ ಚಿತ್ತೈಸುವವರಾಗಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಸರ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಶಾಸ್ತ್ರ ಶೋಧನಾ ವಿದ್ಯಾಶಾಲೆಯ ಕಟ್ಟಡವು ಕಳೆದ ವಾರ ಪ್ರಾರಂಭವಾಗಿ ಸರ್ ಅಸುಟಾಷ್ ಮುಖರ್ಜಿಯವರು ಅದಕ್ಕೆ ಅಸ್ತಿಭಾರವನ್ನು ಹಾಕಿದರು ಈ ನವೀನ ವಿದ್ಯಾಶಾಲೆಗೆ ಅಲ್ಲಿನ ಸರ್ ತಾರಕನಾಥ ಪಲಿತ್ ಎಂಬೊಬ್ಬ ಬ್ಯಾರಿಸ್ಟರು ಮೊದಲು ೭ ಲಕ್ಷ ರೂಪಾಯಿ ಧರ್ಮಕೊಟ್ಟಿದ್ದರು ಅದು ಸಾಲಾಗಲಾರದೆಂದು ಕೆಲವು ದಿನಗಳ ಮೇಲೆ ಅವರಿಗೆ ತಿಳಿದುಬಂದದ್ದರಿಂದ ಎರಡನೇ ದಫಾ ೭ ಲಕ್ಷ ರೂಪಾಯಿ ಕೊಟ್ಟರು ಶಾಸ್ತ್ರಶೋಧನಾ ಸಾಮರ್ಥ್ಯವು ಹಿಂದುಸ್ಥಾನದ ದೇಶೀಯ ವಿದ್ಯಾವಂತರಲ್ಲಿ ಹುಟ್ಟಿ ಹರಡಬೇಕೆಂಬುವುದೇ ಆ ಧರ್ಮಾತ್ಮರ ಮುಖ್ಯ ಉದ್ದೇಶವಾಗಿದೆ ಈ ವಿದ್ಯಾನಿಲಯದ ಕಾರ್ಖಾನೆಯ ಖರ್ಚಿಗೆ ಇಂಡಿಯಾ ಗವರ್ನ್‌ಮೆಂಟಿನವರು ಸಾಲಿಯಾನಾ ೧೨,೦೦೦ ರೂಪಾಯಿ ಕೊಡುತ್ತಾ ಬರುವುದಾಗಿ ಒಪ್ಪಿಕೊಂಡಿದ್ದಾರೆ ಇದಲ್ಲದೆ ಡಾಕ್ಟರ್ ರಾಷ್ ಬಿಹಾರಿ ಘೋಸ್‌ರವರು ತಮ್ಮ ಆಸ್ತಿಯಿಂದ ಈ ವಿದ್ಯಾಶಾಲೆಗೆ ೧೦ ಲಕ್ಷ ರೂಪಾಯಿ ಫಂಡು ಕೊಟ್ಟು, ಅದರ ಉತ್ಪತ್ತಿಯಿಂದ ಆ ವಿದ್ಯಾಶಾಲೆಯಲ್ಲಿ ಅಭ್ಯಾಸಮಾಡುವಂಥಾ ೧೨ ಮಂದಿ ಯೌವನಸ್ಥರಿಗೆ ವೇತನಗಳನ್ನು ಕೊಡುವಂತೆ ಏರ್ಪಾಡುಮಾಡಿದ್ದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬಂಗಳೂರು.

1914 ನೇ ಇಸವಿ ಮಾರ್ಚಿ 19 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ —(1) ಷೇರು ಮೊಬಲಗು	...	ರೂ 7,74,770
,, (2) ಡಿಪಾಜಿಟ್ಟುಗಳು	...	,, 7,57,289
,, (3) ಇತರೆ	...	,, 9,325
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ 15,41,384
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 2,21,735
,, (2) ಬಾಕಿ ಮತ್ತು ಇತರ ಸಾಲಗಳು	...	,, 9,85,564
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,27,884
,, (4) ಇನ್‌ವೆಸ್ಟ್‌ಮೆಂಟುಗಳು	...	,, 1,00,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	...	,, 86,411
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 7,001
,, (7) ಇತರೆ	...	,, 13,809
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ 15,41,384

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಹಿಂದಲಹಳ್ಳಿ ವಾಚಕ ಮಂದಿರ

ಚನ್ನರಾಯಪಟ್ಟಣದ ತಾಲ್ಲೂಕು ಹಿಂದಲಹಳ್ಳಿಯಲ್ಲಿ ಮಾರ್ಚಿ ತಾ 27 ನೇ ಶುಕ್ರವಾರ ಹೊಸ ವರ್ಷವಾದ ಆನಂದ ಸಂವತ್ಸರದ ಆನಂದೋತ್ಸವದಲ್ಲಿ ಪುರವಾಸಿಗಳೆಲ್ಲರೂ ಸ್ಕೂಲ್ ಹಾಲಿನಲ್ಲಿ ಸಾಯಂಕಾಲ 4 ಗಂಟೆ ಲಾಗಾಯ್ತು 6 ಗಂಟೆ ತನಕ ಸಭೆ ಸೇರಿ ವಿದ್ಯಾರ್ಥಿಗಳ ವಾಚಕಮಂದಿರವೆಂಬ ಹೆಸರಿನ ಮೇಲೆ ಒಂದು ವಾಚಕಶಾಲೆಯನ್ನು ಸ್ಥಾಪಿಸಿದರು ಆ ಕಾಲದಲ್ಲಿ ಶ್ರವಣಬೆಳ್ಗೊಳದ ಇಂಗ್ಲಿಷ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಎ ಎಸ್ ರಂಗ ಚಾರ್ಯರವರು ಅಗ್ರಾಸನವನ್ನು ವಹಿಸಿದ್ದರು ಈ ಸಂತೋಷೋತ್ಸವದಲ್ಲಿ ನೆರೆದಿದ್ದ ಮಹಾ ಜನಗಳ ಫೋಟೋ ತೆಗೆಯಲಾಯಿತು ಅನಂತರ ವಿದ್ಯಾವಿಷಯವಾಗಿಯೂ, ಪುಸ್ತಕ ಭಂಡಾರದ ವಿಷಯವಾಗಿಯೂ, ವರ್ತಮಾನ ಪತ್ರಿಕೆಗಳ ವಿಷಯವಾಗಿಯೂ ಉಪನ್ಯಾಸಗಳು ನಡೆದವು ಅಗ್ರಾಸನಾಧಿಪತಿಗಳು ವಾಚಕಶಾಲೆಯಿಂದಾಗುವ ಪ್ರಯೋಜನವನ್ನೂ, ಪ್ರತಿಯೊಬ್ಬ ವಿದ್ಯಾಭಿಲಾಷಿಯೂ ವರ್ತಮಾನ ಪತ್ರಿಕೆಗಳನ್ನೋದಬೇಕೆಂಬ ವಿಷಯವನ್ನೂ ಕುರಿತು ಸ್ವಾರಸ್ಯವಾದ ಸಂಗತಿಗಳನ್ನು ಹೇಳಿ ತಿಳಿಸಿದರು ಅನಂತರ ದೇವರ ಪ್ರಾರ್ಥನೆಯೂ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ನಡಿಸಲ್ಪಟ್ಟವು ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಿದ ತರುವಾಯ ಸಭೆಯು ಬರಖಾಸ್ತಾಯಿತು ಸಭಿಕರ ಮತ್ತು ಇತರರ ವರಾಂಡಾದಲ್ಲಿ ವಾಚಕಶಾಲೆಯ ಹಿತೈಷಿಗಳಿಂದ ಏರ್ಪಡಿಸಿದ್ದ ಅಲಂಕೃತಿಯು ನೇತ್ರೋತ್ಸವವಾಗಿತ್ತು ಇಂಥಾ ಕೆಲಸಗಳೆಲ್ಲಾ ನಡೆಯಲು ಸ್ಕೂಲೇ ಮುಖ್ಯವಾಗಿ ಆಧಾರಭೂತವಾಗಿರುವುದರಿಂದ ಈ ಗ್ರಾಮದಲ್ಲಿ ಸರಿಯಾದ ಸ್ಕೂಲ್‌ಮನೆ ಇಲ್ಲದಿರುವುದು ಶೋಚನೀಯವಾಗಿದೆ ಹೊಸ ಸ್ಕೂಲ್ ಕಟ್ಟಡವನ್ನು ಕಟ್ಟಿಸಬೇಕೆಂದಿರುವ ಮ|| ಕವನ ಗೌಡರವರು ಕಟ್ಟಡವನ್ನು ಶೀಘ್ರದಲ್ಲಿಯೇ ಕಟ್ಟಿಸಿಕೊಟ್ಟು ಈ ಗ್ರಾಮದ ವಿದ್ಯಾರ್ಥಿಗಳನ್ನು ಉದ್ಧರಿಸಬೇಕೆಂದು ಪ್ರಾರ್ಥಿಸುತ್ತೇನೆ

ಪುರವಾಸಿ

ಮೈಸೂರು ಸಿಟಿ ಮುನಿಸಿಪಾಲಿಟಿ

1914-15 ನೇ ಸಾಲಿನ ಬಜೆಟ್ಟು

ಕಳೆದ ಶನಿವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಕಳೆದ ಫೆಬ್ರವರಿ ತಿಂಗಳ ಜಮಾ ಖರ್ಚು ಲೆಕ್ಕಗಳನ್ನು ಓದಿ ಪಾಸ್ ಮಾಡಿದರು ಆ ತಿಂಗಳಲ್ಲಿ ಜನನ 141 ಎಂದೂ, ಮರಣ 184 ಎಂದೂ ತಿಳಿಯಿತು ಜನರು ತಾವಾಗಿಯೇ ತಮ್ಮ ಮನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು ಮ್ಯುನಿಸಿಪಾಲಿಟಿಗೆ ತಿಳಿಸಬೇಕೆಂಬ ವಿಧಿ ಇರುವುದರಿಂದ ಅದಕ್ಕೆ ಮ್ಯುನಿಸಿಪಾಲಿಟಿಯವರು ಸರಿಯಾದ ಅನುಕೂಲಗಳನ್ನು ಒದಗಿಸದೆ ಇರುತ್ತಾರೆಂದೂ, ಹಾಗೆ ತಿಳಿಸದೆಹೋದವರ ಮೇಲೆ ಮೊಕದ್ದಮೆ ತರುತ್ತಾರೆಂದೂ ಆಕ್ಷೇಪಣೆಯಾಯಿತು ಇನ್ನು ಮುಂದೆ ಆಯಾ ಮೊಹಲ್ಲೆಯಲ್ಲಿ ಜನನಮರಣದ ರಿಜಿಸ್ಟ್ರರ್ ಆಫೀಸನ್ನು ತೋರಿಸುವಂತೆ ಒಂದು ಸ್ಥಳವನ್ನು ಗೊತ್ತುಮಾಡಿ ದೊಡ್ಡ ಬೋರ್ಡುಗಳನ್ನು ಬರಸಿ ನೇತುಹಾಕಿಸಬೇಕೆಂದು ಮೆಂಬರುಗಳು ಹೆಲ್ತ್ ಆಫೀಸರಿಗೆ ತಿಳಿಸಿದರು

ಬಳಿಕ ಮ್ಯುನಿಸಿಪಲ್ ಜಮಾಖರ್ಚುಗಳ ಅಂದಾಜು ಪಟ್ಟಿಗಳನ್ನು ಮೆಂಬರುಗಳು ಓದಿಸಿ ಚರ್ಚೆಯಿಂದ ಪಾಸ್‌ಮಾಡಿರುತ್ತಾರೆ 1914-15 ನೇ ಸಾಲಿನಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿಟಿಗೆ 2,06,000 ರೂಪಾಯಿ ಹುಟ್ಟುವಳಿ ಆಗಬಹುದೆಂದು ಗೊತ್ತುಮಾಡಿದರು ಮ್ಯುನಿಸಿಪಲ್ ಆಫೀಸಿನ ಸಿಬ್ಬಂದಿ ಖರ್ಚಿನ ವಿಷಯದಲ್ಲಿ ಒಂದು ಸಬ್ ಕಮಿಟಿಯು ನೇಮಕವಾಗಿ ಅವರು ರಿಪೋರ್ಟನ್ನು ಕಳುಹಿಸಿದ್ದರು ಮೆಂಬರುಗಳು ಆ ರಿಪೋರ್ಟಿನಲ್ಲಿ ಕಂಡ ಕೆಲವು ಅಂಶಗಳನ್ನು ಒಪ್ಪದೆ ಇನ್ಕಾರಮಾಡಿದರು ಆಫೀಸ್ ಮ್ಯಾನೇಜರ ಸಂಬಳ ಈಗ 50 ರಿಂದ 70 ರೂಪಾಯಿ ನಗದಿ ಆಗಿದೆ ಸಬ್ ಕಮಿಟಿಯವರು ಈ ಸಂಬಳವನ್ನು 60 ರಿಂದ 90 ರೂಪಾಯಿವರೆಗೆ ಮಾಡಿಡಬೇಕೆಂದು ಶಿಫಾರಸು ಮಾಡಿದ್ದರು ಈ ವಿಷಯ ಚರ್ಚೆಯಾಗಿ ಮ್ಯಾನೇಜರ ಸಂಬಳವನ್ನು 60-5-80 ರೂಪಾಯಿಗೆ ನಗದಿ ಆಗಬೇಕೆಂದು 16 ರ ಪೈಕಿ 8 ಮಂದಿ ಮೆಂಬರುಗಳು ಒಪ್ಪಿ ಸಮ್ಮತಿಹಾಕಿದ್ದರಿಂದ ಆ ರೀತಿ ಇತ್ಯರ್ಥವಾಯಿತು ಕಲೆಕ್ಟರ್ ಅಥವಾ ಅಸೆಸರ್ ಎಂಬ ಹೆಸರಿನ ಅಧಿಕಾರಿಯೇ ಅಗತ್ಯವಿಲ್ಲವೆಂದೂ, ತೆರಿಗೆ ಬಾಬಿಗೆ ಆಫೀಸಿನಲ್ಲಿ 6 ಮಂದಿ ಮಾತ್ರ ಗುಮಾಸ್ತೆಯರಿದ್ದರೆ ಸಾಕೆಂದೂ, ರಿಜಿಸ್ಟ್ರೀ ಹೆಡ್ ಮುತ್ಸದ್ದಿ ಎಂಬ ನೌಕರಿಯನ್ನು ವಜಾಮಾಡಬೇಕೆಂದೂ, ಕಂದಾಯದ ವಸೂಲಿ ಬಾಬಿನಲ್ಲಿ ವೈಸ್ ಪ್ರೆಸಿಡೆಂಟರು ಮುತುವರ್ಜಿಮಾಡಿ ಬಾಕಿ ನಿಲ್ಲದಂತೆ ನೋಡಿಕೊಳ್ಳಬೇಕೆಂದೂ, ಸ್ಟೋರ್ ಕೀಪರ ಸಂಬಳ 25-1-30 ರೂಪಾಯಿನಂತೆ ನಗದಿ ಮಾಡಬಹುದೆಂದೂ, ರೆಕಾರ್ಡ್ ಕೀಪರ್ ಕೆಲಸಕ್ಕೆ 18 ರಿಂದ 25 ರೂಪಾಯಿ ತನಕ ಬಡ್ತಿಕೊಡಬಹುದೆಂದೂ, ಎಲ್ಲಾ ಮ್ಯುನಿಸಿಪಲ್ ಜವಾನರಿಗೂ 6 ರೂಪಾಯಿಗೆ ಕಡಮೆ ಇಲ್ಲದಂತೆ ಸಂಬಳ ಕೊಡಬೇಕೆಂದೂ, ದೊಡ್ಡಿ ಜವಾನರಿಗೆ ಮಾತ್ರ ಅಲೋಯನ್ಸು ಸಲ್ಲುವ ನಿಮಿತ್ತ ಅವರ ತಲಬು 5 ರೂಪಾಯಿ ಇರಬೇಕೆಂದೂ, ದೇವರಾಜ್ ಮಾರ್ಕೆಟ್ಟಿನ ದರೋಗನ ಸಂಬಳವನ್ನು 10-1-15 ರೂಪಾಯಿ ಆಗಬೇಕೆಂದೂ, ಮಹಾಜನಗಳ ಕಾವಲುಗಾರರ ಸಂಬಳವನ್ನು 4 ರಿಂದ 5 ರೂಪಾಯಿ ಮಾಡಬೇಕೆಂದೂ, ಮ್ಯುನಿಸಿಪಾಲಿಟಿಯಲ್ಲಿ ಹೆಡ್ಡು ದವಾನರುಗಳ ಸಂಖ್ಯೆ ಬಹಳ ಹೆಚ್ಚಾಗಿರೋಣದರಿಂದ ಮುಂದೆ ಖಾಲಿ ಬೀಳುವ ಇಸಮುಗಳಿಗೆ ಹೊಸಬರನ್ನು ಸೇರಿಸಕೂಡದೆಂದೂ ಇತ್ಯರ್ಥಮಾಡಿದರು

ಮುಂದಿನ ಸಾಲಿನಲ್ಲಿ ಹೊಸ ಕಟ್ಟಡಗಳ ಬಾಬಿಗೆ 9,000 ರೂಪಾಯನ್ನು ತೆಗೆದಿಟ್ಟದ್ದಾರೆ ರಾಜಧಾನಿಯ ರಸ್ತೆಗಳನ್ನು ದುರಸ್ತುಮಾಡಿಸಿ ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ 30,000 ರೂಪಾಯಿ ಸಾಕಾಗಬಹುದೆಂದು ಪ್ರೆಸಿಡೆಂಟರು ಗೊತ್ತುಮಾಡಿದ್ದರು, ಮೆಂಬರುಗಳು ಈ ಬಾಬಿಗೆ ಅಷ್ಟು ಹಣ ಸಾಲದೆಂದು ಹೇಳಿ 40,000 ರೂಪಾಯಿ ವಿನಿಯೋಗಿಸುವಂತೆ ಬದಲಾಯಿಸಿರುತ್ತಾರೆ ಈಗ ಮ್ಯುನಿಸಿಪಲ್ ಕಚರಾವನ್ನು ಕೂಡಿಸಿ ಸಾಗಿಸುವುದಕ್ಕೆ ಗಾಡಿ 1 ಕ್ಕೆ 18 ರೂಪಾಯಿನಂತೆ ಕಂಟ್ರಾಕ್ಟರಿಗೆ ಪಾವತಿ ಆಗುತ್ತಿದೆ ಈ ಗಾಡಿಗಳೂ ಅವಕ್ಕೆ ಕಟ್ಟುವ ಎತ್ತುಗಳೂ ಸ್ವಲ್ಪವೂ ತೃಪ್ತಿಕರವಾಗಿಲ್ಲವೆಂಬ ಸಂಗತಿಯನ್ನು ಮೆಂಬರುಗಳು ತಿಳಿದು ಮ್ಯುನಿಸಿಪಾಲಿಟಿಯಿಂದಲೇ ಭಟ್ಟಿಮುಟ್ಟಾದ 30 ಗಾಡಿಗಳನ್ನು ಗಾಡಿ 1 ಕ್ಕೆ 60 ರೂಪಾಯಿ ಅಂದಾಜಿನಲ್ಲಿ ತಯಾರ್ಮಾಡಿಸಿ ಕನ್ಸರ್ವೆನ್ಸಿ ಇಲಾಖೆಗೆ ಕೊಡಬೇಕೆಂದೂ, ಕಂಟ್ರಾಕ್ಟರು 1 ಜೋಡಿ ಎತ್ತಿಗೆ ತಿಂಗಳಿಗೆ 18 ರೂಪಾಯಿನಂತೆ ತೆಗೆದುಕೊಂಡು ಆ ಗಾಡಿಗಳಿಗೆ ಕಟ್ಟಿ ಕಚರಾ ಸಾಗಿಸಬೇಕೆಂದೂ ಸೂಚಿಸಿ ಆ ರೀತಿ ಇತ್ಯರ್ಥಮಾಡಿರುತ್ತಾರೆ ಈಗ ಬೀದಿಗಳಲ್ಲೂ ಸಂದಿಗಳಲ್ಲೂ ಕಚರಾ ತುಂಬಿಸುವುದಕ್ಕೆ ಅನೇಕ ಕಡೆ ತಗಡುಗಳ ಗುಂಡಾದ ಪೀಪಾಯಿಗಳನ್ನು ಇಡಿಸಿದಾರೆ ಇವು ಆಗಾಗ್ಗೆ ಮುರಿದು ಕೆಟ್ಟುಹೋಗಿ ಆಗಾಗ್ಗೆ ಹೊಸ ಪೀಪಾಯಿ (ಡಸ್ಟ್ ಬಿನ್) ಗಳನ್ನು ಮಾಡಿಸಬೇಕಾಗಿದೆ ಇನ್ನು ಮುಂದೆ ಅಂಥಾ ಹೊಸ ಡಬ್ಬಾಗಳನ್ನು ಮಾಡಿಸಬೇಕಾಗಿಲ್ಲವೆಂದೂ, ಅವುಗಳಿಗೆ ಪ್ರತಿಯಾಗಿ ಸರಿಯಾದ ಸ್ಥಳಗಳಲ್ಲಿ ಕಲ್ಲುಚಪ್ಪಡಿಗಳಿಂದ ಶಾಶ್ವತವಾದ ತೊಟ್ಟಿಗಳನ್ನು ಕಟ್ಟಿಸುವುದು ಅನುಕೂಲವೂ ಲಾಭಕರವೂ ಆಗಿದೆ ಎಂದೂ ಮೆಂಬರುಗಳು ಒಪ್ಪಿ ಆ ರೀತಿ ತೀರ್ಮಾನಮಾಡಿದರು

ಮ್ಯುನಿಸಿಪಾಲಿಟಿಯವರು ಸರ್ಕಾರದಲ್ಲಿ ಸಾಲಮಾಡಿರುವ ಹಣಕ್ಕೆ ಅಂದರೆ ಸುಮಾರು 18,000 ರೂಪಾಯಿಗೆ ಸಾಲಿಯಾನಾ 870 ರೂಪಾಯಿ ಬಡ್ಡಿ ಪಾವತಿ ಮಾಡಬೇಕಾಗಿದೆ ಅದರೆ ಮ್ಯುನಿಸಿಪಾಲಿಟಿಯಲ್ಲಿ ಶಿಲ್ಕು ಹಣ ಉಳಿದಿರೋಣದರಿಂದ ಅದರಲ್ಲಿ ಮೇಲ್ಕಂಡ ಸಾಲವನ್ನು ಒಂದೇ ಗಂಟಿನಲ್ಲಿ ಪಾವತಿ ಮಾಡಿ ತೀರಿಸಿಬಿಟ್ಟರೆ ವರುಷೇವರುಷ ಬಡ್ಡಿ ತೆರುವುದು ತಪ್ಪಿಹೋದೀತೆಂದು ಕಂಡುಬಂದದ್ದರಿಂದ ಮೆಂಬರುಗಳು ಆ ರೀತಿ ಮಾಡಬಹುದೆಂದು ಒಪ್ಪಿಕೊಂಡರು

1914-15 ನೇ ಸಾಲಿನಲ್ಲಿ ಮೇಲ್ಕಂಡ ಖರ್ಚುಬಾಬುಗಳನ್ನೆಲ್ಲಾ ಅಂದರೆ ಒಟ್ಟು 2,15,000 ರೂಪಾಯಿ ವಜಾ ಮಾಡಿದಲ್ಲಿ ಆ ಸಾಲ್ ಅಖೈರಿನೊಳಗೆ 20,000 ರೂಪಾಯಿ ಶಿಲ್ಕು ಹಣ ಉಳಿಯುವಂತಾಗುತ್ತದೆ

ಈ ರೀತಿ ಬಜೆಟ್ಟು ಚರ್ಚೆಯಿಂದ ಇತ್ಯರ್ಥವಾಗುವಾಗ್ಗೆ ಸುಮಾರು 11 ಗಂಟೆಯಾದದ್ದರಿಂದ ಉಳಿದ ಮ್ಯುನಿಸಿಪಲ್ ವಿಚಾರಗಳನ್ನು ಇನ್ನೊಂದು ದಿನ ಮೀಟಿಂಗ್ ನಡಿಸಿ ವ್ಯವಸ್ಥೆಮಾಡೋಣವೆಂದು ಇಟ್ಟುಕೊಂಡಿರುತ್ತಾರೆ

ಮದ್ದಗಿರಿಯಲ್ಲಿ ನಡೆದ ಪ್ರದರ್ಶನವೂ, ಪರಸ್ಪರಸಹಾಯ ಸಂಘಗಳ ಕೂಟವೂ

ಕಳೆದ ತಾ 10 ರಿಂದ ತಾ 20 ರ ವರಿಗೆ ಮಾರಿ ಜಾತ್ರೆ ನಡಿಯಿತು ಪ್ರದರ್ಶನಕ್ಕಾಗಿ ಜಾನ್ವಾರುಗಳು ಸುಮಾರು 7-8 ಸಾವಿರದ ವರೆಗೂ ಕೂಡಿತ್ತು ಜನಸಂಖ್ಯೆಯು 5-6 ಸಾವಿರಕ್ಕೆ ಮೇಲ್ಪಟ್ಟು ಸೇರಿತ್ತು ವ್ಯಾಪಾರಕ್ಕೆ ಅನುಕೂಲವಾಗಿ ಸರಿಯಾದ ಅಂಗಡಿಗಳು ಪಾಪುಗಳು ವಗೈರೆ ಸದರಿ ಸ್ಥಳದಲ್ಲೇ ನೆಲಸಿದ್ದವು ಪರಸ್ಥಳದಿಂದ ಬಂದಿದ್ದ ಜನರಿಗೆ ಅನುಕೂಲಕ್ಕೆ ತಕ್ಕಂತೆ ಮ|| ರಾಮಯ್ಯನವರೂ, ಮ|| ಪಣ್ಣಿ ಬಸಪ್ಪನವರೂ ಜಾತ್ರೆ ಪೂರೈಸುವ ವರಿಗೂ ಅನ್ನ ಛತ್ರವನ್ನು ಇಟ್ಟಿದ್ದರು ಸಬ್ ಡಿವಿಜನ್ ಆಫೀಸರವರು ಜನ ಜಾನ್ವಾರುಗಳಿಗೆ ಅನುಕೂಲವಾಗುವಂತೆ ನೀರನ್ನು ಪೈಪಿನಿಂದಲೂ, ಭಾವಿಗಳಿಂದಲೂ, ಕಾಲುವೆ ಮತ್ತು ಹೊಂಡಗಳಿಂದಲೂ ಒದಗಿಸಿದ್ದರು ಇವರುಗಳನ್ನು ಎಷ್ಟು ಕೊಂಡಾಡಿದರೂ ಸಾಲದು

ಮದ್ದಗಿರಿ ದಂಡಿನ ಮಾರಿ ಜಾತ್ರೆ ಕಾಲದಲ್ಲಿ ಅಂದರೆ ಈ ಮಾಹೆ 14, 15, 16 ನೇ ತಾ ಗಳಲ್ಲಿ ಮದ್ದಗಿರಿಯಲ್ಲಿ ಈ ಸಬ್ ಡಿವಿಜನ್‌ಗೆ ಸೇರಿದ ಪರಸ್ಪರಸಹಾಯ ಸಂಘಗಳ ಮೊದಲನೆ ಮಹಾಸಭೆಯು ನಡಿಸಲ್ಪಟ್ಟಿತು ಶಿರಾ, ಪಾವಗಡ, ಮದ್ದಗಿರಿ, ಕೊರಟಗೆರೆ ಮತ್ತು ಈ ತಾಲ್ಲೂಕುಗಳ ಕೆಲವು ಸ್ಥಳಗಳಲ್ಲಿರತಕ್ಕ ಪರಸ್ಪರಸಹಾಯ ಸಂಘಗಳ ಕಮಿಟಿ ಮೆಂಬರುಗಳೂ, ಸೆಕ್ರಿಟರಿಗಳೂ, ತಾಲ್ಲೂಕುಗಳ ಅಮಲ್ದಾರ್ರುಗಳೂ, ಸಬ್ ಡಿವಿಜನ್ ಆಫೀಸರವರೂ, ಮುನ್ಸಿಪರವರೂ, ಮದ್ದಗಿರಿಯಲ್ಲಿರತಕ್ಕ ಪ್ಲೀಡರುಗಳೂ, ಶೆಟ್ಟಿ ವರ್ತಕರೂ, ಇತರ ದೊಡ್ಡಮನುಷ್ಯರೂ ಸಹ ನೆರೆದಿದ್ದರು ಪರಸ್ಪರಸಹಾಯ ಸಂಘಗಳು ಮುಂದೆ ಇನ್ನೂ ಹೆಚ್ಚಾಗಿ ಅಭಿವೃದ್ಧಿಯಾಗತಕ್ಕ ವಿಷಯದಲ್ಲಿ ಜನಗಳಿಗೆ ಪ್ರೋತ್ಸಾಹಪಡಿಸುವುದಕ್ಕಾಗಿ ನಮ್ಮ ಸಂಸ್ಥಾನದ ಪರಸ್ಪರಸಹಾಯ ಸಂಘಗಳ ರಿಜಿಸ್ಟ್ರರವರಾದ ಮ|| ಎಂ ಎ ನಾರಾಯಣಯ್ಯಂಗಾರ್ರವರೂ ಸಂಬಂಧಪಟ್ಟ ಆಫೀಸರವರೂ ದಯಮಾಡಿಸಿದ್ದರು ಈ ಮಹಾಸಭೆಯ ಮೀಟಿಂಗು ತಾ 14, 15, 16 ರಲ್ಲಿ ನಡಿಸಲ್ಪಟ್ಟಿತು ಅಗ್ರಾಸನವನ್ನು ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕುಮಾರಸ್ವಾಮಿನಾಯುಕರವರು ವಹಿಸಿದ್ದರು 14, 15 ನೇ ತಾ ತಾಲ್ಲೂಕುಗಳ ಮತ್ತು ಇತರ ಸ್ಥಳಗಳ ಪರಸ್ಪರಸಹಾಯ ಸಂಘಗಳ ನಡವಳಿಕೆ ರಿಪೋರ್ಟುಗಳು ಓದಲ್ಪಟ್ಟವು ಈ ಸಂಘಗಳಲ್ಲಿ ಶಿರಾ ಸಂಘವು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವಂತೆ ವ್ಯಕ್ತಪಟ್ಟಿದ್ದರಿಂದ ಮುಂದೆ ಇತರ ಸಂಘಗಳು ಅದರಂತೆ ಅಭಿವೃದ್ಧಿಯಾಗಲು ಕಾರಣವಾಯಿತು ಹೊರತು ಜನಗಳಲ್ಲಿ ಪರಸ್ಪರ ಅನುರಾಗವೂ, ನಂಬಿಕೆಯೂ ಉಂಟಾಗುವದಕ್ಕೆ ಕಾರಣ, ಶಕ್ತಿಮಾತ್ರರು ಅಭಿವೃದ್ಧಿಯಲ್ಲಿರುವದಕ್ಕೂ, ಸಮಪದವಿ ಅವರ ದರಿದ್ರಾವಸ್ಥೆಯಲ್ಲಿರುವದಕ್ಕೂ ಮತ್ತು ಬಡವರಾದ ಸಾಲಗಾರರನ್ನು ಅಭಿವೃದ್ಧಿಗೆ ತರುವ ಉದ್ದೇಶವೂ ಇವೇ ಮೊದಲಾದ ವಿಷಯಗಳಲ್ಲಿ ಮ|| ರಾಮರಾಯರವರೂ, ಪ್ಲೀಡರ್ ರಾಮಾಶಾಸ್ತ್ರಿಗಳವರೂ ಮತ್ತು ಸೊಸೈಟಿಗಳಿಂದ ಬಂದಿದ್ದ ಮಹನೀಯರೂ, ಪ್ಲೀಡರುಗಳೂ, ಕೆಲವು ದೊಡ್ಡಮನುಷ್ಯರು ಸಹ ಉಪನ್ಯಾಸಗಳನ್ನು ಜರುಗಿಸಿ, ಇರತಕ್ಕ ಲೋಪಗಳನ್ನು ಹೊರಪಡಿಸಿ ಚರ್ಚಿಸಲ್ಪಟ್ಟು ಬಡಜನಗಳ ಏಳಿಗೆಗೆ ತಕ್ಕ ಸರಿಯಾದ ಏರ್ಪಾಡುಗಳು ನೆರೆದಿದ್ದ ಜನಗಳಿಗೆಲ್ಲಾ ತಿಳಿಯುವಂತೆ ಓದಲಾಯಿತು 15 ನೇ ತಾ ಸಾಯಂಕಾಲ ದರ್ಬಾರ್ ಮಂದಿರದ ಫೋಟೋ ತೆಗೆಯಲಾಯಿತು ಅನಂತರ ಪ್ರದರ್ಶನಕ್ಕೆ ಹಾಜರಾಗಿದ್ದ ಜಾನ್ವಾರುಗಳನ್ನು ಬಹುಮಾನ ಕೊಡುವದಕ್ಕೆ ಚುನಾಯಿಸಿದ್ದು, ಚುನಾಯಿಸಿದ ಒಂದು ಜೋಡಿ ರಾಸಿಗೆ ಉಪಾಯದಿಂದ ಬೀಜವನ್ನು ತೆಗೆಯುವ ವಿಧಾನವನ್ನೂ ವೆಟರ್ನರಿ ಸರ್ಜನ್‌ರವರು ಮತ್ತು ಈ ಟವನ್ ಡಾಕ್ಟರೂ ಅಲ್ಲಿ ನೆರೆದಿದ್ದ ಜನಗಳಿಗೆಲ್ಲಾ ತಿಳಿಯುವಂತೆ ತೆಗೆದು ತೋರಿಸಿದರು ಅನಂತರ ಸಭೆಯು ಬರಖಾಸ್ತಾಯಿತು

ತಾ 16 ನೇ ಪ್ರಾತಃಕಾಲ 7 ಗಂಟೆಗೆ ದರ್ಬಾರು ಪ್ರಾರಂಭವಾಯಿತು ಸೊಸೈಟಿಗಳ ಅಭಿವೃದ್ಧಿ ವಿಷಯದಲ್ಲೂ, ಜನಗಳನ್ನು ಉತ್ತಮ ಸ್ಥಿತಿಗೆ ತರತಕ್ಕ ವಿಷಯದಲ್ಲೂ ಉಪನ್ಯಾಸಗಳು ಜರುಗಿದ ನಂತರ ಸಭಾಧ್ಯಕ್ಷರ ಸ್ವಹಸ್ತದಿಂದ ಚುನಾಯಿಸಲ್ಪಟ್ಟ ರಾಸುಗಳಿಗೆ ಬಹುಮಾನ ಹಂಚಲ್ಪಟ್ಟ ತರುವಾಯ ಸುಮಾರು 10½ ಗಂಟೆಗೆ ಸಭೆಯು ಮುಕ್ತಾಯವಾಯಿತು ಗೋಶಾಲೆಗಳನ್ನು ಅಭಿವೃದ್ಧಿಗೆ ತರತಕ್ಕ ವಿಧಾನವನ್ನು ಜನಗಳಿಗೆಲ್ಲಾ ತೋರ್ಪಡಿಸುವ ಹಾಗೆ ವಾದ್ಯಘೋಷದಿಂದ ಊರೊಳಗೆಲ್ಲಾ ಮೆರವಣಿಗೆ ಮಾಡಲ್ಪಟ್ಟಿತು ಈ ಮಹಾಸಭೆಯು ಆ ದಿನ ಮಧ್ಯಾಹ್ನ ಸುಮಾರು 3 ಗಂಟೆಗೆ ಪ್ರಾರಂಭವಾಯಿತು ತಾಲ್ಲೂಕ್ ಜಾಗಾಗಳಲ್ಲಿ ಯೂನಿಯನ್ ಬ್ಯಾಂಕುಗಳು ಸ್ಥಾಪನೆಯಾಗತಕ್ಕ ವಿಧಾನದ ವಿಷಯಗಳೆಲ್ಲವೂ ರಿಜಿಸ್ಟ್ರರ್ ಸಾಹೇಬರವರು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಲು ಆದರಪೂರ್ವಕವಾಗಿ ಮೆಂಬರುಗಳೂ, ಸೆಕ್ರಿಟರಿಗಳೂ ಅನುಮೋದಿಸಿದರು ಮತ್ತು ಆಗಲೇ ಮದ್ದಗಿರಿ ಯೂನಿಯನ್ ಬ್ಯಾಂಕಿಗೆ 9 ಸಾವಿರ ಡಿಪಾಜಿಟ್ಟು, 3 ಸಾವಿರ ಷೇರ್ ಮೊಬಲಗು ಸಹ ಮೂಲಧನವಾಯಿತೆಂದು ಜಾಯಿಂಟ್ ಸೆಕ್ರಿಟರಿಗಳಾದ ಮ|| ಶ್ರೀ ರಾಮಶಾಸ್ತ್ರಿಗಳಿಂದ ತಿಳಿದ್ಪಟ್ಟಿತು ಬಡಜನಗಳನ್ನು ಋಣಮುಕ್ತರನ್ನಾಗಿ ಮಾಡತಕ್ಕ ವಿಧಾನ, ವಿದ್ಯಾಭಿವೃದ್ಧಿ ಇವೇ ಮೊದಲಾದ ವಿಷಯಗಳಲ್ಲಿ ಉಪನ್ಯಾಸಗಳು ಜರುಗಿದವು ಈ ಉಪನ್ಯಾಸಗಳನ್ನು ಚರ್ಚಿಸಿ ಸಂಗತಿಗಳನ್ನು ಅತ್ಯಾದರದಿಂದ ಸಭಾ ನಾಯಕರೂ, ರಿಜಿಸ್ಟ್ರರವರೂ ಲಾಲಿಸಿ ಅವುಗಳಿಗೆಲ್ಲಾ ಸದುತ್ತರವನ್ನು ದಯಪಾಲಿಸಿದ್ದು ಇವರ ಸ್ವಾರಸ್ಯವಾದ ವಿವರಣೆಯು ಹೃದಯಂಗಮವಾಗಿತ್ತು ಸಭೆಯು 7 ಘಂಟೆಗೆ ಬರಖಾಸ್ತಾಯಿತು

ಪ್ರಜೆಗಳನ್ನು ಅಭಿವೃದ್ಧಿಗೆ ತರತಕ್ಕ ಭಾಗದಲ್ಲಿ ಇಂಥಾ ಏರ್ಪಾಟನ್ನು ನಡಿಸಲು ಅಭಿವೃದ್ಧಿಗೆ ತಂದ ಸಬ್ ಡಿವಿಜನ್ ಆಫೀಸರ್ ಮ|| ಕೃಷ್ಣಸ್ವಾಮಯ್ಯಂಗಾರ್ರವರ ಪ್ರೀತಿಯು ಬಹಳ ಶ್ಲಾಘನೀಯವಾದದ್ದು ನಮ್ಮ ಅಮಲ್ದಾರ್ರವರೂ ಸಹ ಜನಗಳ ಪರವಾಗಿ ಬಹಳ ಪ್ರಯತ್ನದ ಕಾರ್ಯಗಳನ್ನು ಮಾಡುತ್ತಿರುವರು ಈ ಕಾನ್‌ಫರೆನ್ಸಿಗೆ ನೆರೆದಿದ್ದ ಮಹಾಜನಗಳಿಗೆ ಅನ್ನೋದಕಗಳು ಸಕಾಲಕ್ಕೆ ಸರಿಯಾಗಿ ಅನುಕೂಲವಾಗುವಂತೆ ನಂಜುಂಡಶೆಟ್ಟರ ಛತ್ರದಲ್ಲಿ ಏರ್ಪಾಡು ಮಾಡಿಸಿದ್ದರು

ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ಬಾಲಕಬಾಲಕಿಯರಿಗೂ ಅವರ ಕಡೆ ಬರತಕ್ಕ ಜನರಿಗೂ ಭೋಜನಾದಿಗಳನ್ನು ಜಾತಿಭೇದವಿಲ್ಲದೆ ಜರುಗಿಸಲು ಹಿಂದಿನ ವರ್ಷದಂತೆ ನಂಜುಂಡಶೆಟ್ಟರ ಛತ್ರದಲ್ಲಿ ಈಗಿನಂದಲೇ ಮ|| ಕನಕಸಭಾಪತಿ ಅಯ್ಯರವರೂ, ಮ|| ರಾಮಶಾಸ್ತ್ರಿಗಳವರೂ ತಕ್ಕ ಏರ್ಪಾಡುಗಳನ್ನು ಮಾಡಿಸುತ್ತಿರುವರು

ಬಾತ್ಮಿದಾರ್

ಮೈಸೂರು ಕಿವುಡಮೂಗರ ಮತ್ತು ಕುರುಡರ ಪಾಠಶಾಲೆ

ವರ್ಷಾರಂಭದ ಸಮಾರಂಭ

ಮಾರ್ಚಿ ತಾ 27 ನೇ ಶುಕ್ರವಾರ ಸಾಯಂಕಾಲ 5½ ಗಂಟೆಯ ಸಮಯ ಯುಗಾದಿ ಹಬ್ಬ ಆನಂದ ಸಂವತ್ಸರದ ಆರಂಭದ ದಿನ ಮೇಲ್ಕಂಡ ಪಾಠಶಾಲೆಯ ಆವರಣದಲ್ಲಿ ಸಮಾರಂಭ, ಬಾಗಿಲುಗಳಲ್ಲಿ ಸಾಲುಸಾಲಾಗಿ ಗಿಡಗಳು, ಬಾಗಿಲ ಮೇಲ್ಭಾಗದಲ್ಲಿ ಸುಮಂಗಳದ ಫಲಕ, ಒಳಗೆ ಧ್ವಜಪತ್ರಗಳು, ಒಂದು ಕಡೆ ಅಂಧರಾದ ಅಂಧರ ಪುಸ್ತಕಗಳ ರಾಶಿ, ಮತ್ತೊಂದು ಕಡೆ ಸುಂದರವಾದ ಬಹುಮಾನವನ್ನು ತೋರುವ ಪದಕಗಳು, ಇನ್ನೊಂದು ಕಡೆ ಮೂಗರಿಂದ ತಯಾರಿಸಲ್ಪಟ್ಟ ವಸ್ತುಗಳು—ಚಟ್ಟಿ ಚಿತ್ರ ಇವುಗಳಿಂದ ಗೋಡೆಗಳಿಗೆ ಅಲಂಕಾರ, ಮತ್ತೊಂದು ಕಡೆ ಮುಂದಣ ಕಾರ್ಯದ ನಿರೀಕ್ಷೆ ಹೀಗೆ ಒಂದೊಂದು ಕಡೆ ಒಂದೊಂದು ವಿಧವಾದ ಆಕರ್ಷಣ ಒಳಗೆ ಅಂಧರ ಭಜನೆ ಕೂಟ, ಅವರಿಗಾಗಿ ಏರ್ಪಡಿಸಿದ್ದ ಎತ್ತರವಾದ ಸ್ಥಳದಲ್ಲಿ ಅವರ ವಾದ್ಯ ಸಮಯ ಸಮಿಪಿಸಿತು ಬಾಗಿಲಲ್ಲಿ ಜನರ ಸಂದಣಿ ಪಾಠಶಾಲೆಯ ಹೆಡ್ ಮಾಸ್ಟರ್ ಮ|| ಪಿ ಎನ್ ವೆಂಕಟರಾಯರೂ ಅವರ ಸಹಾಯೋಪಾಧ್ಯಾಯರೂ ಒಂದವರನ್ನು ಮರ್ಯಾದೆಯಿಂದ ಒಳಕ್ಕೆ ಬರಮಾಡಿಕೊಂಡು ಉಚಿತಾಸನದಲ್ಲಿ ಕುಳ್ಳಿರಿಸುವುದು ಇವೆಲ್ಲಾ ವಿನೋದವಾಗಿದ್ದುವು ಅನಂತರ ಎಡನೆಯ ಅಂಧ ವಿದ್ಯಾರ್ಥಿಗಳ ಆರಂಭವು ಪ್ರೇಕ್ಷಕರ ಸಮಾರಂಭದಲ್ಲಿ ಪ್ರಾರಂಭಕ್ಕೇನೇ ಸೇರಿಬಿಟ್ಟಿತು ಕುರುಡರು ಹಾಡಲಿಕ್ಕೆ ಆರಂಭಿಸಿದರು ಜನರು ತುಂಬಿದರು ಪಟಾರದಲ್ಲಿ ಜಾಗವಿಲ್ಲ ಯಾವಾಗ ದೀಪವು ಬಂದಿತೋ ಗೊತ್ತಾಗಲಿಲ್ಲ ಸೊಕ್ಕು ಮಾಡಿದ ಹೂಕ್ಕು ಬಂದಿತು ಎಲ್ಲರೂ ಸಂತೋಷದಿಂದ ತಲೆದೂಗುತ್ತಾ ಆನಂದ ಸಂವತ್ಸರದ ಮಹಿಮೆಯನ್ನು ಆನಂದದಿಂದ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಹಾಡಿದ ಮೇಲೆ ಮಂಗಳವು ನುಡಿಸಲ್ಪಟ್ಟಿತು

ಅನಂತರ ಜಾಯಿಂಟ್ ಸೆಕ್ರಿಟರಿಯವರಾದ ಮ|| ... ಕೃಷ್ಣರಾಯರು ಅಲ್ಲಿ ನೆರೆದಿದ್ದ ಜ್ಞಾನಾಭಿಮಾನಿಗಳಾದ ಮಹನೀಯರುಗಳಿಗೆ ಪಾಠಶಾಲೆಯ ವಿದ್ಯಾರ್ಥಿಗಳ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ಈ ಆನಂದ ವರ್ಷದ ಆನಂದವನ್ನು ಈ ಮೊದಲನೆಯ ದಿನವೇ ಎಲ್ಲರಿಗೂ ಉಂಟುಮಾಡಲು ಏರ್ಪಡಿಸಿದ ಹೆಡ್ ಮಾಸ್ಟರ ಶ್ರದ್ಧಾಭಕ್ತಿಯ ವಿಷಯವಾಗಿ ಮಾತನಾಡಿದುದಲ್ಲದೆ ಪಾಠಶಾಲೆಯ ಬಾಲಕರಿಗೆ ತುಂಬ ಪ್ರೋತ್ಸಾಹಕರವಾದ ಮಾತುಗಳನ್ನಾಡುತ್ತಿರಲು ಕುರುಡರು ತಮ್ಮ ಬದುಕನ್ನು ಮಾತನಾಡುತ್ತಿದ್ದರು ನೋಡಲು ತಾಯಿ ತಂದೆಗಳನ್ನು ಜ್ಞಾಪಿಸಿಕೊಂಡಂತೆಯೇ ಇದ್ದಿತು ಆದರೆ ಎಲ್ಲರೂ ಒಬ್ಬರನ್ನೇ ನೆನೆಸುತ್ತಿದ್ದರು ವಿಚಾರಿಸಲು, ತಮ್ಮನ್ನು ಈ ಸುಸ್ಥಿತಿಗೆ ತರಲು ಈ ಪಾಠಶಾಲೆಯನ್ನು ಸ್ಥಾಪಿಸಿದ ಮೈಸೂರು ಸರ್ಕಾರ್ ಇನ್ಸ್‌ಪೆಕ್ಟರು ಮತ್ತು ಆನರರಿ ಸೆಕ್ರಿಟರಿಯವರಾದ ಮ|| ಎಂ ಶ್ರೀನಿವಾಸರಾವ್, ಬಿ ಎ ಯವರು ಬಂದಿಲ್ಲವಲ್ಲಾ ಎಂದು ಪೇಚಾಡುತ್ತಿದ್ದರು ಇವರೇ ಈ ಪಾಠಶಾಲೆಯ ಸ್ಥಾಪಕರು, ಇವರೇ ಇದನ್ನು ಕೇವಲ ಉತ್ತಮ ಸ್ಥಿತಿಗೆ ತಂದವರು ಇವರಿಗೂ ಇವರ ಕೈಕೆಳಗೆ ಈ ಪಾಠಶಾಲೆಯಲ್ಲಿ ಕೆಲಸಮಾಡಿದ ಮ|| ಟಿ ವೆಂಕಟರಾಯರೇ ಮೊದಲಾದ ಉಪಾಧ್ಯಾಯರುಗಳಿಗೂ ಕೃತಜ್ಞರಾಗಿರುತ್ತೇವೆಂದು ಬಾಲಕರು ಹೇಳಿಕೊಂಡರು ಇದಲ್ಲವೇ ಆನಂದ ಸಂವತ್ಸರದ ಆನಂದಾರಂಭದ ಸಮಾರಂಭ ' ಕೃತಜ್ಞತೆಯಲ್ಲವೇ ಆನಂದ' ಇದನ್ನು ಬಲ್ಲವರಲ್ಲವೇ ಪರಮಾನಂದರು'

ಕೃತಜ್ಞತೆ

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕೆ ರಾಮಚಂದ್ರಯ್ಯ, ಜಂಬಲಾಪುರ—ನೀವು ಅಪೇಕ್ಷಿಸುವ ಪ್ರೊಸೀಡಿಂಗ್ಸು ಕನ್ನಡದಲ್ಲಿ ಪ್ರಕಟವಾಗಿದೆಯೋ ಇಲ್ಲವೋ ತಿಳಿಯದು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆದು ಕೇಳಿದರೆ ಅವರು ನಿಮಗೆ ಒಂದು ನಕಲನ್ನು ಕಳುಹಿಸುವರೆಂದು ನಂಬುತ್ತೇವೆ

ಕೆ ಪರಮೇಶ್ವಯ್ಯ, ಕಡೂರು—ಆ ಕಂಪನಿಯ ಮ್ಯಾನೇಜರಿಗೆ ಬರೆದುಕೊಂಡರೆ ಅವರು ಸಂಗತಿಗಳನ್ನು ತಿಳಿಸುತ್ತಾರೆ

ಕರೆಸ್‌ಪಾಂಡೆನ್ಸ್.

ಶಿಡ್ಲಘಟ್ಟದ ಕೋಆಪರೆಟಿವ್ ಸೊಸೈಟಿ

ಅಯ್ಯಾ,

ಈ ಸೊಸೈಟಿ ಸ್ಥಾಪಿತವಾಗಿ ಮೂರು ವರ್ಷ ಮಾತ್ರವೇ ಆಗಿದ್ದರೂ ಮೈಸೂರು ಸೀಮೆಯಲ್ಲಿ ಹೆಸರುವಾಸಿಯಾದವುಗಳಲ್ಲಿ ಇದೂ ಒಂದಾಗಿರುವದಾಗಿ ಅಭಿವೃದ್ಧಿಕರವಾಗಿ ನಡೆಯುತ್ತಾ ಬಂದಿರುತ್ತೆ ಈಚೆಗೆ ಜನರಲ್ ಮೀಟಿಂಗ್ ಆದ್ದರಲ್ಲಿ ಹೊಸದಾಗಿ ಮೆಂಬರುಗಳನ್ನು ಚುನಾಯಿಸಲಾಯಿತು ಆ ದಿನ ಓಟ್ಟು ಕೊಡುವದರಲ್ಲಿ ಕೆಲವು ಹೊಸ ಮೆಂಬರುಗಳು ಸೇರಿಸಲ್ಪಟ್ಟ ಕಾರಣವೂ, ಆರಂಭದಿಂದಲೂ 15 ಮಂದಿ ಇದ್ದದ್ದು ಈ ದಫೆ 11 ಮಂದಿಗೆ ಇಳಿಸಿದ ಕಾರಣವೂ ಅಭಿಮಾನಶಾಲಿಗಳಾಗಿ ಕೆಲಸ ಮಾಡುತ್ತಿದ್ದ ಕೆಲವು ಮೆಂಬರುಗಳು ವಿಶ್ರಾಂತಿ ಪಡೆಯಬೇಕಾಯಿತು ಕಾರಣಾಂತರದಿಂದ ಈಗಿನ ಕಮಿಟಿ ಮೆಂಬರುಗಳಲ್ಲೇ ಅಂತಃಕಲಹಗಳು ಪ್ರಾಪ್ತವಾಗಿರುವದರಿಂದ ಲೇವಾದೇವಿ ನಡಿಸತಕ್ಕ ಬಡಬಗ್ಗರಾದ ಮೆಂಬರುಗಳಿಗೆ ತೊಂದರೆಯಾಗಿರುತ್ತೆ ಸೆಕ್ರಿಟರಿಯವರು

...ಮೊದಲೂ ಇದರ ಅಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿಯಿಂದ ...ಸ ಮಾಡಿ ಕೀರ್ತಿಬರುವಂತೆ ಮಾಡಿದರು ಮೆಂಬರು ಸಾಲ ವಗೈರೆ ...ಸೆಕ್ರೆಟರಿಯವರ ಮೂಲಕವೇ ಪೊಂದರೆ ಇಲ್ಲದಂತೆ ಪಡೆಯುತ್ತಿದ್ದ ಕಾರಣ ...ಜನರ ಪಾಹಿತಿಯು ಪೂರ್ಣವಾಗಿರುತ್ತೆ ಈಚೆಗೆ ನಡವಳಿಕೆಯಲ್ಲಿ ...ಮೆಂಬರುಗಳ ಸ್ಯಾಂಕ್ಷನ್ ವಿನಹ ಸೆಕ್ರೆಟರಿಯವರು ಸಾಲಕೊಡಕೂಡ ...ಏರ್ಪಡಿಸಿಕೊಂಡಿರುತ್ತಾರೆ ಕಮಿಟಿ ಮೆಂಬರುಗಳು ಪ್ರತಿದಿನವೂ ಸೊಸೈ... ಬರುವದಿಲ್ಲ ಸಾಲ ಅಪೇಕ್ಷಿಸುವ ಮೆಂಬರು ಇವರ ಮನೆಗಳಿಗೆ ಹೋಗಿ ...ಕೊಂಡು ಬರಬೇಕಾದರೆ ಅಲ್ಲಿನ ಹಣವು ಕಮಿಟಿ ಮೆಂಬರುಗಳದೇ ...ಇವರು ಭಾವಿಸುವಂತೆ ತೋರುತ್ತೆ ಈಗಾಗಲೇ ಹತ್ತಾರು ಬಡರೈತರು ...ಸಮಯಕ್ಕೆ ಹಣ ಸಿಕ್ಕದೆ ಪೇಚಾಡುತ್ತಿರುವದನ್ನು ನೋಡಿರುತ್ತೇನೆ ತಪ್ಪಿದ ...ಬೀಳುವ ಸಂದರ್ಭಗಳಲ್ಲಿ ರಿಸೀಟು ಮಾಡಿಸಬೇಕಾದರೂ ಕಮಿಟಿ ಮೆಂಬರು ...ನ್ನು ಕರೆದುಕೊಂಡು ಬರಬೇಕು ಹೀಗಾದರೆ ಯತ್ನವೇನು ? ಇರುವ ಸೆಕ್ರೆ... ...ವರಲ್ಲಿ ಪ್ರಜೆಗಳಿಗಿರುವ ನಂಬಿಕೆಯೇ ಇದರ ಅಭಿವೃದ್ಧಿಗೆ ಕಾರಣವಾಗಿರು... ...ಇವರಿಗೆ ಸ್ವಾತಂತ್ರ್ಯವನ್ನು ತಪ್ಪಿಸಿ ಮೆಂಬರುಗಳ ಅಂತಃಕಲಹಗಳನ್ನು ...ಮಾನ ಮಾಡುತ್ತಾ ಬರುವದರಿಂದ ಪ್ರಜೆಗಳು ಒಂದು ಜನರಲ್ ಮೀಟಿಂಗ ...ಅತ್ವರಲ್ಲೇ ಮಾಡುವಂತೆ ಇವಾರೆಂದು ಕೇಳುತ್ತೇನೆ ಕಮಿಟಿಯವರು ...ಅವಕಾಶ ಕೊಡದಂತೆ ಕೂಡ್ಲೆ ಅನುಕೂಲವಾದ ಏರ್ಪಾಡುಮಾಡುವ ...ದು ನಂಬಿರುವ

ಈ ಸೊಸೈಟಿಯ ಮೆಂಬರು

ಸಿವಿಲ್ ಕೋರ್ಟುಗಳಿಂದಾಗುವ ನಷ್ಟ—ಪಶ್ಚಾತ್ತಾಪ

ಅಯ್ಯಾ,

...ದಾಪುರದ ತಾಲ್ಲೂಕು ...ಗಲು ಗ್ರಾಮದಲ್ಲಿ ಬಹು ಕಾಲದಿಂದ ...ಈಚಿನ ಜಮೀನಿನಿಂದ ನಮ್ಮ ಜಮೀನುಗಳಿಗೆ ಹೋಗುವ ದಾರಿ ಉಂಟು ...ದಾರಿ ಜಮೀನಿನಲ್ಲಿ ದಾರಿಯು ಅಜುಬಾಜು ಈಚಲ ಗಿಡಗಳೇ ಹೊರತು ...ನೂ ಇಲ್ಲ ಸದರಿ ಈಡಿಗರಿಗೂ ನಮಗೂ ಮನಸ್ತಾಪಗಳುಂಟಾಗಿ ಹೇಳದ ...ಮಾತು ಕೇಳಿ ಅಂಥಾ ಪಬ್ಲಿಕ್ ದಾರಿಗೆ ಹೋಗದಂತೆ ಅಟಂಕಮಾಡಿಬಿ... ನಾವ ಮಾಮೂಲು ದಾರಿಗೆ ಹರಕತ್ತು ಮಾಡಿದಾರೆಂದು ಈಡಿಗರು ...ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡಿದೆವು ಆ ದಾರಿ ಹರಕತ್ತು ಮಾಡಿ... ...ನಮಗೆ ನಾಲ್ಕು ಆಣೆ ನಷ್ಟವಾಗಿದೆ ಎಂದು ನಮೂದು ಮಾಡಿ ದಾವಾ ...ತ್ತಾಯಿತು ಅದರ ಮೇಲೆ ವಿಚಾರಣೆಗಳು ನಡೆದು, ದಾರಿ ಇರೋದು ನಿಜ ...ಸಮ್ಮ ನಷ್ಟವನ್ನೂ ಕೋರ್ಟು ಮಿನುಗಳನ್ನು ಪ್ರತಿವಾದಿಯಿಂದ ...ಕೊಡತಕ್ಕದ್ದೆಂದೂ ನಮ್ಮ ಪರವೇ ತೀರ್ಪು ಆಯಿತು ಅದರ ಮೇಲೆ ...ಅಪೀಲ್ ಮಾಡಿದರು ಅಪೀಲಿನಲ್ಲಿ ದಾರಿ ಇರೋದು ನಿಜವೆಂದೂ ...ಕ್ಕೆ ಕಕ್ಷಿ ರುಜುವಾತು ವಾದಿ ಮಾಡಿಕಲಿಲ್ಲವೆಂದೂ ಕೆಳಗಿನ ಕೋರ್ಟು ...ವಜಾ ಮಾಡಿಬಿಟ್ಟರು ಅಪ್ಪಕ್ಕೆ ನಾವು ಮದರಾಸ್ ಹೈಕೋರ್ಟಿನಲ್ಲಿ ...ಲ್ ಮಾಡಿದೆವು ಅಲ್ಲಿ ಸಹಾ ದಾರಿ ಇರೋದು ನಿಜವೆಂದೂ, ಇಂಥಾ ...ಷ್ಟಗಳಿಗೆ ನಾವು ಅವಕಾಶಕೊಟ್ಟರೆ ಲೋಕದಲ್ಲಿ ಇದೇ ಒಂದು ಲಾ ಆಗು... ...ಎಂದೂ, ಜನಗಳಿಗೆ ಬಹಳ ನಷ್ಟಕ್ಕೆ ಕಾರಣವಾಗುತ್ತದೆ ಎಂದೂ ತಿಳಿದು ...ದಾವಾ ಮಾಡಿರುವ ಕ್ರಮ ಸರಿಯಲ್ಲವೆಂದೂ, ಪುನಃ ಅಡ್ವೊಕೇಟ್ ಜನರಲ್ ...ಸೆರ್ಟ್ ಹೊಂದಿ 91 ನೇ ಸೆಕ್ಷನ್ ಪ್ರಕಾರ ದಾವಾ ತರಬಹುದೆಂದೂ ವಜಾ ...ಬಿಟ್ಟರು ಅದರ ಕ ನಾವು ಅಡ್ವೊಕೇಟ್ ಜನರಲ್‌ಗೆ ಅರ್ಜಿಮಾಡಿ ...ಲ್ಲಿ ಅವರು 91 ನೇ ಸೆಕ್ಷನ್ ಪ್ರಕಾರ ಹೊಸ ದಾವಾ ತರಬಹುದೆಂದು ...ಕೊಟ್ಟರು ಅದರ ಮೇರೆ ನಾವು ತಿರಿಗಿ ಪೆನುಗೊಂಡೆ ಮುನ್ಸಿಫ್ ...ಕೋರ್ಟಿನಲ್ಲಿ ದಾವಾ ಮಾಡಿದೆವು ಆಗ ಮುನ್ಸಿಫರೇ ಖುದ್ದಾಗಿ ದಯಮಾಡಿ ...ಪರಿಶೀಲಿಸಿ ದಾರಿ ಇರೋದು ನಿಜವೆಂದೂ, ಅದು ಇಲ್ಲದಿದ್ದರೆ ವಾದಿ ಜಮೀ... ...ಗೆ ಹೋಗುವದಕ್ಕೆ ಬೇರೆ ದಾರಿ ಇಲ್ಲವೆಂದೂ, ವಾದಿ ಮಿಚುಗಳನ್ನು ...ವಾದಿ ಕೊಡತಕ್ಕದ್ದೆಂದೂ ಡಿಕ್ರಿ ಮಾಡಿದರು ನಮಗೆ ಸುಮಾರು 1,500 ರೂಪಾಯಿಗಳೂ, ಈಡಿಗರಿಗೆ 1,000 ರೂಪಾಯಿಗಳೂ ಖರ್ಚು ಆಗಿದೆ ದಾರಿ ...ಗುವ ಜಮೀನು ಬಿಕರಿ ಮಾಡಿದರೆ ಒಂದು ನೂರು ರೂಪಾಯಿಗಳು ಸಹಾ ...ಬೆಲೆ ಬಾಳುವದಿಲ್ಲ ಈ ಹಣ ಪುಣ್ಯ ಕಾರ್ಯಗಳಿಗೆ ಖರ್ಚುಮಾಡಿದ್ದರೆ ಎಷ್ಟು ...ಮಾಗುತ್ತಿತ್ತೋ ಯೋಚಿಸಬೇಕು ಕೋರ್ಟುಗಳಿಂದ ಆಗುವ ಪ್ರಯೋ... ...ಮತ್ತು ನಷ್ಟ ನಮಗೆ ಚೆನ್ನಾಗಿ ಗೊತ್ತಾಗಿದೆ ಇದರಿಂದ ನಷ್ಟವೇ ಹೊರತು ಪ್ರಯೋಜನ ಇಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು ಕೋರ್ಟುಗ... ...ಹೋಗುವ ಪ್ರಶಸ್ತರು ನಮ್ಮ ಕಷ್ಟನಷ್ಟವನ್ನು ಮನಸ್ಸಿಗೆ ತರಬೇಕು

...ಗಲು ಲೋಕ ಹಿತಚಿಂತಕ.

ಬೇಲೂರಿನಲ್ಲಿ ನಡೆದ ಕಾಮನ ಹಬ್ಬ

ಅಯ್ಯಾ,

ಕಾಮನ ಹಬ್ಬವನ್ನು ಮಾಡುವ ಕಡೆಯಲ್ಲೆಲ್ಲಾ ಸರ್ಕಾರದ ಲೈಸೆನ್ಸು ...ಕೊಡು ವಿಧಾಯಕವಾಗಿರುವರು ಈ ಊರಲ್ಲಿ ನಾಗರಿಕರಿಂದ ...ವೇ ಆ ಹಬ್ಬವನ್ನು ಮಾಡುವದರಿಂದ ಏನೊಂದೂ ಪುಂಡಿಗೆ ಅವಕಾಶ ...ವಿಲ್ಲವೆಂದು ಇಲ್ಲಿ ಲೈಸೆನ್ಸಿನ ನಿರ್ಬಂಧವಿಟ್ಟಿಲ್ಲ ಇದರಿಂದ ಕೇವಲ ...ತು ಮಾದಲು ಕ ಷ ಬೀದಿ ಸೌದೆ ವಗೈರೆ ಎಲ್ಲಾ ಕಾಮನ ಹಬ್ಬ ...ವ ಮಾಡ್ವ ಬ್ರಾಹ್ಮಣರ ಪಾಲಾಗಿ, ಅವರ ಗೋಳು ಕೇಳುವವರೇ ದಿಕ್ಕಿ... ...ತು ಈ ಊರು ಕೋಟೆಯಲ್ಲಿ ಪ್ರಮುಖರಾದ ಬ್ರಾಹ್ಮಣರು ವಾಸಿ... ಕಳೆದ ಮಾಹ ತಾ 12 ನೇ ಗುರುವಾರ ಸಾಯಂಕಾಲ ಬೆಳದಿಂಗಳಲ್ಲಿ ...ಜಗಲಿಯ ಮೇಲೆ ಸಂತೋಷದಿಂದ ಕುಳಿತಿರುವಾಗ್ಗೆ ಈ ಕಾಮನಹಬ್ಬಕ್ಕೆ ...ದೊಡ್ಡದೊಡ್ಡ ಮನುಷ್ಯರೆಂದು ಹೆಸರು ಪಡೆದ ಕೆಲವು ಮಂದಿ ...ರೂ, ಸರ್ಕಾರಿ ನೌಕರರೂ, ಬಾಲಕಬಾಲಿಕಾ ಪಾಠಶಾಲೆಯ ಸ್ಕೂಲ್ ...ಗಳೂ ಸೇರಿ ಕೆಲವರ ಮನೆ ಬಾಗಿಲಲ್ಲಿ 8 10 ರೂಪಾಯಿ ಬೆಲೆ ಬಾಳ... ...ಗೆ ಮುಂಡಿಗೆ ವಗೈರೆಗಳನ್ನೂ, ದಾರಿಯಲ್ಲಿ ಒಪುತ್ತಿದ್ದ ಸೌದೆ ಗಾಡಿ... ...ನ್ನೂ ಹಿಡಿದು ಸಾಗಿಸಿದರು ಇದನ್ನು ಕಂಡ ಮಾಲೀಕರು ತಡೆಯಲು ...ಕೆಲವರು ಮುತ್ತಿಕೊಂಡು ಬಯಬಡಿಕೊಳ್ಳುವುದೂ, ಮಿಕ್ಕವರು ಅವ... ...ಸಾಮಾನುಗಳನ್ನು ಸಾಗಿಸುವುದೂ ವಗೈರೆ ದರೋಡೆ ಕೃತ್ಯಗಳನ್ನು ಮಾಡಿ ...ಅಲ್ಲದೆ ಎಷ್ಟು ಬೇಡಿಕೊಂಡಾಗ್ಯೂ ಒಪ್ಪದ ಒಬ್ಬ ಸೂಳೆಯನ್ನು ಸದರಿ ...ಮುಟ್ಟಿರುವ ಸ್ಥಳಕ್ಕೆ ಕರೆದುಕೊಂಡು ಬಂದು, ಮಾಗ್ದಾ ನರೀತ್ಯಾ ನಡೆಸು... ...ಕೇವಲ ಅವಮಾನಕರವಾದ ಮಾತು, ಹಾಡು ವಗೈರೆ ಹೇಳಿ ಅವಳ ...ಅವಮಾನಪಡಿಸಿ, ಆಕೆಯಲ್ಲಿ ಕೇಳಬಾರದ ಮಾತನ್ನು ಕೇಳಿ ತಾವೂ ಮಾನ ...ಕಳಕೊಂಡರು ಅಲ್ಲದೆ ಬೀದಿಬೀದಿಯಲ್ಲೆಲ್ಲಾ ಹೆಂಗಸರೂ ಗಂಡಸರೂ ...ಕೇವಲ ತುಚ್ಛವಾದ ಪದ್ಯ, ಹಾಡುಗಳಂ ಹಾಡುತ್ತಾ ಬೆಳದಿಂಗಳಲ್ಲಿ ...ನಿಂದ ಕುಳಿತಿದ್ದ ಮಾನಸ್ಥರಾದ ಗಂಡಸರೂ ಹೆಂಗಸರೂ ನಾಚಿಕೆ ...ಯಿಂದ ಕಿವಿ ಮುಚ್ಚಿಕೊಂಡು ಒಳಗೆ ಹೋಗುವಂತೆ ಮಾಡಿದರು ನಾಗರಿಕರಿ... ...ಗೆ ನ್ಯಾಷನಲ್ ಸ್ಕೂಲು ಸ್ಥಾಪನೆಯಾಗಿ ಆ ಸ್ಕೂಲ್ ಮಾಸ್ಟರುಗಳೂ, ...ದ ಸ್ಕೂಲ್ ಮಾಸ್ಟರುಗಳೂ, ಸರ್ಕಾರಿ ನೌಕರರೂ ಹೀಗೆ ಬಹಿರಂಗವಾಗಿ ...ಯಿಲ್ಲದೆ ತಮ್ಮಗಳ ಉದ್ಯೋಗಕ್ಕೂ ಮರ್ಯಾದೆ ಕೊಡದೆ ಭಂಡಪದ್ಯ ...ಹಾಡುಗಳನ್ನೂ ಹೇಳಿದುದನ್ನು ಕೇಳಿ ಕೇವಲ ಜುಗುಪ್ಸೆಯಿಂದ ಈ ...ವನ್ನು ಪ್ರಕಟಿಸಬೇಕೆಂದೂ, ಈ ಮಾಸ್ಟರುಗಳೇ ಹೀಗಿರುವಲ್ಲಿ ಇವರಿಂದ ...ಯುವ ಬಾಲಕಬಾಲಕಿಯರು ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬರುವರೆಂಬ ಸಂಗತಿಯನ್ನು ನಮ್ಮ ವಾಚಕರ ಅವಗಾಹನೆಗೆ ತರಬೇಕೆಂದೂ, ಇದನ್ನು ಕಂಡ ಸರ್ಕಾರೀ ಆಫೀಸರುಗಳೂ, ಹೆಂಗಸರುಗಳೂ ಬಲಾತ್ಕರಿಸಿದ್ದರಿಂದ ಅವರ ಹೇಳಿಕೆಯ ಸಂಕ್ಷೇಪವನ್ನು ಅರಿಕೆಮಾಡಿರುವೆನು ಇದು ನಮ್ಮ ಬೇಲೂರು ಆಫೀಸಿನ ಮಹಾಜನಗಳ ಅವಗಾಹನೆಗೆ ಬಂದು, ಮುಂದೆ ಈ ಕಾಮನಹಬ್ಬದ ಗಲಾಟೆಯು ಬಹಿರಂಗಕ್ಕೆ ಬಾರದಂತೆ ಮಾಡಲ್ಪಟ್ಟೀತೆಂದು ತೋರಲ್ಪಟ್ಟಿದೆ

ಪುರವಾಸಿ

ತೀರ್ಥಹಳ್ಳಿ ವಿಚಾರಗಳು

ಅಯ್ಯಾ,

ತೀರ್ಥಹಳ್ಳಿ ತಾಲ್ಲೋಕು ಪ್ರಜೆಗಳೆಲ್ಲರೂ ಸಾಧಾರಣವಾಗಿ ಅನುಕೂಲಸ್ಥರೆಂತಲೂ, ಅನೇಕರು ಲಕ್ಷಾಂತರ ರೂಪಾಯಿನ ಸಾಹುಕಾರರೆಂತಲೂ ಅನೇಕ ಕಡೆಗಳಲ್ಲಿ ವಾಡಿಕೆ ಇದೆ. ಸರ್ಕಾರದಲ್ಲಿಯೂ ಸಹ ಗ್ರಾಹ್ಯವಾಗಿದೆ ಆದರೆ ಇದು ನಿಜವಾದದ್ದೇ ? ಅಲ್ಲ ಈ ಮಲೆನಾಡಿನಲ್ಲಿ ಭೂವ್ಯವಸಾಯವೆಂಬುವದು ಅಡಿಕೆ ಮತ್ತು ಭತ್ತ ಇವೆರಡು ಮಾತ್ರ ರಫ್ತಾಗಿ ಇದರಿಂದ ಹಣವನ್ನು ಸಂಪಾದನೆಮಾಡುತ್ತಾರೆ ಬಾಕಿ ಕಾಳು ಕಡ್ಡಿ, ಲೋಹದ ಸಾಮಾನು, ಬಟ್ಟೆ ವಗೈರೆ ಎಲ್ಲವೂ ಆಮದಾಗಿ ಬರಬೇಕು ಅಡಿಕೆ ತೋಟ, ಭತ್ತದ ಜಮೀನು ಇರತಕ್ಕವರು ಈ ತಾಲ್ಲೋಕಿನ ಒಟ್ಟು ಜನಸಂಖ್ಯೆಯಲ್ಲಿ 100 ಕ್ಕೆ 5 ರಂತೆ ಇರಬಹುದು ಇದು ದೊಡ್ಡ ಧನವಂತರ ದರ್ಜೆ ಇದರಲ್ಲಿಯೂ ಸಾಲಗಾರರು ಸೇರಿಕೊಂಡಿರುತ್ತಾರೆ ಉಳಿದವರೆಲ್ಲರೂ ಸೇವಾವೃತ್ತಿಯಲ್ಲಿಯೂ, ಬಡ್ಡಿ ಸಂದಾಯದ ಬಗ್ಗೆ ದುಡಿದು ಕೇವಲ ಹೀನಸ್ಥಿತಿಯಲ್ಲಿ ಜೀವನವನ್ನು ನಿರ್ವಹಿಸಿಕೊಳ್ಳುತ್ತಾರೆ ಹೆಚ್ಚಾದ ಐಶ್ವರ್ಯವಂತರಿಗೆ ಅಡಿಕೆಯಿಂದಲೂ ಹೆಚ್ಚು ಹಣ ಸಂಪಾದನೆ, ಭತ್ತದ ಧಾರಣೆಯಿಂದಲೂ ಹೆಚ್ಚು ಹಣ ಸಂಪಾದನೆ ಆಗುವದರಿಂದ, ಹೊರಗಿನಿಂದ ಆಮದಾಗಿ ಬರುವ ಮಾಲಿಗೂ ಹೆಚ್ಚು ಬೆಲೆಯನ್ನೇ ಕೊಟ್ಟು ಕೊಂಡುಕೊಳ್ಳುತ್ತಾರೆ ಇಲ್ಲಿಂದ ರಫ್ತಾಗತಕ್ಕ ಆಹಾರ ಧಾನ್ಯವಾದ ಭತ್ತಕ್ಕೆ ತಾವೇ ಧಾರಣೆ ಜಾಸ್ತಿಮಾಡಿ, ಈ ತಾಲ್ಲೋಕು ಜನಗಳಿಗೆ ಸಾಕಾಗುವಷ್ಟು ಭಕ್ತವನ್ನೂ ಕೊಡ ಇಡದೆ ಬೇರೆ ದೇಶದವರಿಗೆ ಬಿಕರಿಮಾಡಿ ಈ ಬಡಜನಗಳಿಗೆ ತೊಂದರೆ ಪಡಿಸುತ್ತಾರೆ ಭತ್ತವನ್ನು ಬೆಳೆಯುದ ಮತ್ತು ಕೂಲಿನಾಲಿಯಿಂದ ಜೀವನ ಮಾಡತಕ್ಕ ನಿರ್ಗತಿಕರೇ ಈ ತಾಲ್ಲೋಕಿನಲ್ಲಿ ಬೆಳೆಯುವ ಭತ್ತಕ್ಕೂ ಹೆಚ್ಚು ಬೆಲೆ ಕೊಡಬೇಕು, ಪರದೇಶದಿಂದ ಆಮದಾಗುವ ಕಾಳುಕಡ್ಡಿ ಬಟ್ಟೆಬರೆಗೂ ಹೆಚ್ಚು ಬೆಲೆ ಕೊಡಬೇಕು ಅಂದ ಮೇಲೆ ಇಲ್ಲಿ ಕೊಡುವ ಒಂದು ದಿನದ ಐದಾಣೆ ಕೂಲಿ ಸಂಪಾದನೆಯಿಂದ ಜೀವನವನ್ನು ನಿರ್ವಾಹ ಮಾಡುವದು ಸಾಧ್ಯವೇ ? ಕದ್ದರೆ ಶಿಕ್ಷೆ, ದಾರಿ ಕಟ್ಟಿದರೆ ಶಿಕ್ಷೆ, ಮೋಸಮಾಡಿದರೆ ಈ ನಿರ್ಗತಿಕರಿಗೆ ಶಿಕ್ಷೆ, ಕೂಲಿಮಾಡುವ ಒಂದು ದಿವಸದಲ್ಲಿ ಕೆಲಸಕ್ಕೆ ಅಕಸ್ಮಾತ್ ಗೈರ್ ಹಾಜರಾದರೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್ ಅನುಸರಿಸಿ ಶಿಕ್ಷೆ ಸ್ವತಂತ್ರವಾಗಿ ಕೃಷಿ ಕೈಗಾರಿಕೆ ಕಸಬುಗಳನ್ನೇ ವಿದ್ಯೆಯಲ್ಲಿ ಹೊಂದುಳಿದ ಈ ಬಡಜನರು ಅರಿತವರಲ್ಲ, ಅಷ್ಟು ಸೌಲಭ್ಯವೂ ಇಲ್ಲ. ಇದರ ಪ್ರಯೋಜನವನ್ನು ಬಹು ಸ್ವಲ್ಪ ಕಾಲದಲ್ಲಿ ಹೊಂದಲು ಪ್ರಯಾಸಸಾಧ್ಯ ಈ ತಾಲ್ಲೋಕಿನ ಧನವಂತರಲ್ಲಿ ಅನೇಕರಿಗೆ ಐಶ್ವರ್ಯದ ಹೆಮ್ಮೆ ಹೆಚ್ಚಿ ತಮ್ಮಲ್ಲಿ ತಾವೇ ತೃಪ್ತರಾಗಿ ನ್ಯಾಯಾನ್ಯಾಯ ವಿಚಾರವಿಲ್ಲದೆ ಪುನಃಪುನಃ ಹಣ ಜೊತೆಗೊಳಿಸುವದಕ್ಕೆ ಬಡರೈತರನ್ನು ಪೀಡಿಸುತ್ತಾರೆ. ಸರ್ಕಾರದ ಉದ್ಯೋಗಸ್ಥರಲ್ಲಿ ಅನೇಕರು ಇಂಥಾ ಧನವಂತರಲ್ಲಿ ಸೇರಿ ಸ್ವಪ್ರಯೋಜನಕ್ಕೂ, ಸಾಹುಕಾರರ ಪ್ರಯೋಜನಕ್ಕೂ ಬಡರೈತರನ್ನು ಪೀಡಿಸುತ್ತಾರೆಂಬುದು ಎಲ್ಲರಿಗೂ ತಿಳಿದ ಅಂಶವಾಗಿದೆ ಕಾನೂನುಗಳೆಲ್ಲ ಇಂಥಾ ಧನವಂತರ ಪಕ್ಷದಲ್ಲಿ ದುರ್ಬಲವಾಗಿರುವಂತೆ ಕಾಣುತ್ತದೆ ಗುಲಾಮರನ್ನು ಮಾರುವ ಪ್ರದೇಶಕ್ಕೂ ಈ ತೀರ್ಥಹಳ್ಳಿ ತಾಲ್ಲೋಕಿಗೂ ವ್ಯತ್ಯಾಸವಿಲ್ಲ ಧನವಂತರಾದವರಲ್ಲಿ ಅನೇಕರು ಪ್ರತ್ಯಕ್ಷದಲ್ಲಿ ಸ್ವಪ್ರಯೋಜನಕ್ಕೋಸ್ಕರ ಹಣವನ್ನು ವೆಚ್ಚಮಾಡಿ ಸರ್ಕಾರದಲ್ಲಿಯೂ, ಇತರ ದೊಡ್ಡ ಮನುಷ್ಯರಲ್ಲಿಯೂ ಅನೇಕ ವಿಧವಾದ ಹೊಗಳಿಕೆಯನ್ನು ಹಾಕಿಸಿಕೊಂಡು, ಮುಂದಿನ ತಮ್ಮ ಕಾರ್ಯಗಳಿಗೆ ಅಟಂಕ ಬರಬಾರದಂತೆ ಕೇವಲ ನಿಸ್ಪೃಹರೆಂತಲೇ ನಟಿಸುತ್ತಾರೆ ಸರ್ಕಾರದವರು ಪ್ರತ್ಯಕ್ಷಪರೋಕ್ಷಗಳಲ್ಲಿಯೂ ಕೂಡ ಪ್ರಜೆಗಳ ಸುಖದುಃಖಗಳನ್ನು ವಿಚಾರಮಾಡುತ್ತಾ ಇದ್ದರೂ, ಈ ತಾಲ್ಲೋಕಿನ ಇನ್ನೂ ಅನೇಕ ದುಃಖಗಳು ಸರ್ಕಾರಕ್ಕೆ ವೇದ್ಯವಾಗಿಲ್ಲ ಹಾಗೆ ವೇದ್ಯವಾಗುವದಕ್ಕೆ ಸ್ವಪ್ರಯೋಜನ ಒಂದರಲ್ಲೇ ಆಸಕ್ತರಾದ ಮಹನೀಯರು ಬಿಡುವದೂ ಇಲ್ಲ ಈ ಬಡಜನಗಳಿಗೆ ಉಚ್ವಾಸ, ನಿಶ್ವಾಸಕ್ಕೂ ಸ್ವಾತಂತ್ರ್ಯವಿಲ್ಲ ಮೊಗಲ್, ಪುರಾತನ ಕಾಲದಲ್ಲಿ ನಡೆದಂತೆ ದೊಂಬಿ ದರೋಡೆ ಪರೋಕ್ಷದಲ್ಲಿ ನಡೆಯುತ್ತದೆ ಹೀಗೆ ಜನಗಳಿಗೆ ತೊಂದರೆ ಕೊಡತಕ್ಕ ಧನವಂತರಲ್ಲಿ ಕೆಲವರು ನಮ್ಮ ಎದುರಿನಲ್ಲಿಯೂ ಕ್ಷೀಣದೆಸೆಗೆ ಬಂದಿರುತ್ತಾರೆ ಅಂಥಾ ಶುಭದಿವಸವೂ ಬರಬಹುದು ಸರ್ಕಾರದಿಂದ ಏರ್ಪಟ್ಟಿರುವ ಮಲೆನಾಡು ಅಭಿವೃದ್ಧಿ ಸಂಘದವರು ಈ ಮಲೆನಾಡಿನ ಲೇವಾದೇವಿಯಲ್ಲಿ ಇರತಕ್ಕ ಅನನುಕೂಲಗಳನ್ನು ತಪ್ಪಿಸಿ ಹದು ಪಡಿಸುವದು, ಸಾಧ್ಯವಾದಷ್ಟು ಊನ ವೃತ್ತಿಯಲ್ಲಿ ಸೇವಾದಿಗಳಿಂದ ಕಾಡಿಸದಂತೆ ಜನಗಳಿಗೆ ತಿಳುವಳಿಕೆಯನ್ನೇ ಉಂಟುಮಾಡುವದು, ಈ ಸೀಮೆಯಲ್ಲಿ ಬೆಳೆವ ಭತ್ತದ ಫಸಲು ಇಲ್ಲಿನ ಜನಗಳಿಗೆ ಸಾಕಾಗುವಷ್ಟು ದಿನಸಿ ಇಲ್ಲಿಯೇ ನಿಲ್ಲುವಂತೆ ರೈತ ಕೋರಿಗನ್ನೇ ಮಾರಿ ನಗದಿಬೆಲೆಯನ್ನು ಮಾಡತಕ್ಕದ್ದು, ಸರ್ಕಾರದ ಉದ್ಯೋಗಸ್ಥರಿಂದ ನಡೆಯತಕ್ಕ ಕೆಲಸಗಳಲ್ಲಿ ರೈತನರವಾಗಿ ನ್ಯಾಯಾನ್ಯಾಯ ವಿಚಾರಗಳು ಪಕ್ಷಪಾತವಿಲ್ಲದಂತೆ ನಡೆಯತಕ್ಕದ್ದು, ಈ ಮುಂತಾದ ವಿಷಯಗಳಲ್ಲಿ ಜಬ್ಬಾದ ಗಮನಿಕೆ ಕೊಟ್ಟು ಹದ್ದುಬಸ್ತಿಗೆ ತರತಕ್ಕದ್ದರಲ್ಲಿ ಕಾಲಕ್ರಮೇಣ ಸ್ವಲ್ಪಸ್ವಲ್ಪವಾಗಿ ಬೇಕರಿಸಿಕೊಂಡು ವಿದ್ಯಾ ವಿಷಯದಲ್ಲಿ ಗಮನಿಕೆ ಕೊಡುತ್ತಾ ಸ್ವತಂತ್ರ ಜೀವನವನ್ನು ಕಲ್ಪಿಸಿಕೊಂಡಾರು

ಶಾ ರಾ,

ತಾಲ್ಲೂಕು ವರ್ತಮಾನಗಳು

ಕಡೂರು—ಬಿಸಿಲಿನ ತಾಪ ಬಹಳ ಜೋರಾಗಿದೆ ಜಾನುವಾರುಗಳಿಗೆ ನೀರಿನ ಅನುಕೂಲತೆ ಕಮ್ಮಿ ಆಗಿ ಬಹಳ ತೊಂದರೆಪಡುತ್ತಿರುವವು ಈ ವಿಚಾರದಲ್ಲಿ ಅಧಿಕಾರಿಗಳು ಮನಸ್ಸಿಗೆ ತಂದುಕೊಂಡು ನೀರಿನ ಅನುಕೂಲವನ್ನು ಕಲ್ಪಿಸಿಕೊಟ್ಟಲ್ಲಿ ತುಂಬಾ ಕೃತಜ್ಞರಾಗಿದ್ದೇವೆ—ಈ ಊರಲ್ಲಿ ಮಾರ್ವಾಡಿ ಹೀರಾಜಿಯವರ ಮೇಲೆ ಇವರ ಸೋದರಳಿಯ ಪಸರಾಜಯವರು ಮಾಡಿದ ಫಿರ್ಯಾದು ತಾಲ್ಲೂಕು ಕೋರ್ಟಿನಲ್ಲಿ ಫಿರ್ಯಾದಿ ತರಫು ಇಬ್ಬರು ಅಡ್ವೊಕೇಟರೂ, ಅಪರಾಧಿ ತರಫು ಒಬ್ಬ ಅಡ್ವೊಕೇಟರೂ ಹಾಜರಾಗಿ ವಿಚಾರ ನಡೆದು ತಾ 23 ರಲ್ಲಿ ವಜಾ ಆಗಿದೆ

ಅರಸೀಕೆರೆ ತಾ॥ ಹಾರನಹಳ್ಳಿ—ನಮ್ಮ ಅರಸೀಕೆರೆ ತಾಲ್ಲೂಕಿಗೆ ವರ್ಗವಾಗಿ ಹೊಸದಾಗಿ ದಯಮಾಡಿಸಿರುವ ಅಮಲ್ದಾರರು ಕಳೆದ ರವಿವಾರ ಹಾರನಹಳ್ಳಿಗೆ ದಯಮಾಡಿಸಿದರು ಇವರನ್ನು ಪದ್ಧತಿಯ ಪ್ರಕಾರ ಗ್ರಾಮಬಹಿರ್ಭಾಗದಲ್ಲಿ ಪುರಜನರೂ ಸೆಟ್ಟಿ ವರ್ತಕರೂ ಮೆಂಬರುಗಳೂ ನೌಕರನಾಸೇರೂ ಸಹ ಶಾಮಿದ್ದು ಎದುರುಗೊಂಡರು ಅಲಂಕರಿಸಲ್ಪಟ್ಟಿದ್ದ ಬೀದಿಗಳಲ್ಲಿ ಜನಸಮೂಹದೊಡನೆ ಅಮಲ್ದಾರರು ದಯಮಾಡಿ ಗ್ರಾಮ ಇನ್ಸ್‌ಪೆಕ್ಷನ್ ಮಾಡಿ ಬಾಯಿಸ್ ಸ್ಕೂಲಿಗೆ ದಯಮಾಡಿ ಸ್ಕೂಲ್ ಪರಾಂಬರಿಸಿ ಬಾಲಕರುಗಳಿಂದ ತಯಾರಿಸಲ್ಪಟ್ಟಿದ್ದ ವಸ್ತುಪ್ರದರ್ಶನ ನೋಡಿ ನವೀನಕಾಲದಲ್ಲಿ ನಡೆಯಬೇಕಾದ ವಿಷಯಗಳನ್ನು ಅನುಗ್ರಹಿಸಿ, ಹಿಂದುಸ್ತಾನಿ ಸ್ಕೂಲಿಗೆ ಹೋಗಿ ಅದನ್ನು ಪರಾಂಬರಿಸಿ ಅಲ್ಲಿಂದ ಪೋಲೀಸ್ ಸ್ಟೇಷನ್‌ಗೆ ದಯಮಾಡಿ ಯೂನಿಯನ್ ಮೀಟಿಂಗು ನಡಿಸಿ ಗ್ರಾಮಾನುಕೂಲಕ್ಕೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿಕೊಡುವದಾಗಿ ವಾಗ್ದಾನ ಮಾಡಿ ಬಳಿಕ ಬಾಗಡೆಗ್ರಾಮಕ್ಕೆ ತೆರಳಿದರು

ಚಿಂತಾಮಣಿ—ಈ ಊರಿನಲ್ಲಿ ಥಿಯೊಸಾಫಿಕಲ್ ಲಾಡ್ಜು ಶ್ರೀರಾಘವ ಮಂದಿರದಲ್ಲಿ ಮೀಟಿಂಗುಗಳು ಕ್ರಮವಾಗಿ ನಡೆಯುತ್ತಲಿವೆ—ಈ ಗ್ರಾಮದ ಟವುನ್ ಹಾಲ್ ರೀಡಿಂಗ್ ರೂಮಿನಲ್ಲಿ ಈಚೆಗೆ ಪೇಪರುಗಳು ಕ್ರಮವಾಗಿ ಬರುತ್ತಾ ಇವೆ ಇಲ್ಲಿನ ಡಾಕ್ಟರು ಎಂ ನಾರಾಯಣರಾಯರು ಇದಕ್ಕಾಗಿ ತುಂಬಾ ಶ್ರದ್ಧೆಯನ್ನು ವಹಿಸಿರುತ್ತಾರೆ ನಮ್ಮ ಅಮಲ್ದಾರ್ ಮ॥ ಸಿ ಗೋಪಾಲಾಚಾರ್ಯರವರೂ ಸಹ ರೀಡಿಂಗ್ ರೂಮಿಗಾಗಿ ಜನಗಳಿಗೆ ಪ್ರೋತ್ಸಾಹವನ್ನುಂಟುಮಾಡುತ್ತಿರುವರು—ಎರಡು ತಿಂಗಳ ಲಾಗಾಯಿತು ಊರಿನಲ್ಲಿ ಪೋಲೀಸಿನವರ ಬೀಟು ವಗೈರೆ ಕೆಲಸಗಳು ತೃಪ್ತಿಕರವಾಗಿ ನಡಿಸಲ್ಪಡುತ್ತವೆ. ಇನ್ಸ್‌ಪೆಕ್ಟರವರು ತುಂಬಾ ಮೆಹನತ್ತು ಮಾಡುತ್ತಾರೆ—2-3 ತಿಂಗಳ ಮುಂಚೆ ದಿವಾನ್ ಸಾಹೇಬರವರು ಈ ಊರಿನಲ್ಲಿ 6 ದಿನ ಮೊಕ್ಕಾಂ ಮಾಡಿದ ವೇಳೆ ಟವುನ್ ಜನಗಳ ಅಹವಾಲು ಮೇರೆಗೆ ಪೈಪುಗಳ ಕೆರೆಯನ್ನು ಬಡಾವಣೆಮಾಡಿ ಫಿಲ್ಟರು ಇಡಿಸತಕ್ಕ ಬಗ್ಗೆ ಅಪ್ಪಣೆಯಾಗಿತ್ತು. ಕಾಮಗಾರಿ ಯಾವಾಗ ಶುರು ಆಗುತ್ತದೋ ತಿಳಿಯದೆ ಇದೆ ಇದಕ್ಕಾಗಿ ಜನಗಳು ತುಂಬಾ ಚಿಂತಿಸುತ್ತಿರುವರು ಸರ್ಕಾರದವರ ದೃಷ್ಟಿಗೆ ಜಾಗ್ರತೆ ಬಂದು ಈ ಕೆಲಸ ಪೂರೈಸಿ ಜನಗಳನ್ನು ಉದ್ಧಾರಮಾಡಬೇಕಾಗಿ ಪ್ರಾರ್ಥನೆ

ದೊಡ್ಡಬಳ್ಳಾಪುರ.—ಈ ಊರಲ್ಲಿ ಯುಗಾದಿ ಹಬ್ಬದ ಮಾರಣೇ ದಿನ ಮನೆಗಳ ಮೇಲೆ ಜನರು ಕಲ್ಲುಗಳನ್ನು ಬೀರಿ ಹೆಂಚುಗಳನ್ನು ಒಡೆದು ನಷ್ಟಮಾಡುತ್ತಿದ್ದರಲ್ಲದೆ ಜನರಿಗೂ ಕೆಲವು ಸಾರಿ ಕಲ್ಲು ತಗಲಿ ತುಂಬಾ ಅಪಾಯವಾಗಬಹುದಾಗಿತ್ತು ಇದರಿಂದ ಕಲಹಗಳೂ ಜೈದಾಟಗಳೂ ಮಿತಿಮೀರಿ ನಡೆಯುತ್ತಿದ್ದವು ಈ ದುಷ್ಪದ್ಧತಿಯನ್ನು ಈಗಿನ ನಮ್ಮ ಅಮಲ್ದಾರರು ತಿಳಿದು ದಂಡೋರೆ ಮೂಲಕ ನಿಲ್ಲಿಸಿಬಿಟ್ಟರು ಇದಕ್ಕಾಗಿ ಪ್ರಜೆಗಳು ಇವರನ್ನು ತುಂಬಾ ಸ್ತೋತ್ರಮಾಡುತ್ತಾರೆ—ಈ ವರುಷ ಕಾಮನ ಹಬ್ಬದ ಗಲಾಟೆಗಳೂ ವೇಷಭಾಷೆಗಳೂ ಅಷ್ಟೇನೂ ವಿಶೇಷವಾಗಿ ನಡೆಯದೆ ಗಂಭೀರವಾಗಿ ಜರುಗಿತು—ಈ ಊರಿಗೆ ನೀರಿನ ಸರಬರಾಯಿ ಆಗುವ ವಿಷಯದಲ್ಲಿ ಈಚೆಗೆ ಕ್ರಮವಾಗಿ ಇಂಜನಿಯರಿಂದ ಮಾಡಲ್ಪಟ್ಟ ಅಂದಾಜಿನಲ್ಲಿ ಅದಕ್ಕೆ 50 ಸಾವಿರ ರೂಪಾಯಿ ಮಾತ್ರವಲ್ಲ, 70 ಸಾವಿರ ರೂಪಾಯಿ ಆಗಬೇಕೆಂದು ಗೊತ್ತುಮಾಡಿರುವದರಿಂದ ಈ ಭಾರಿ ಮೊಬಲಗಿನಲ್ಲಿ ಅರ್ಧವನ್ನು ಈ ಊರಿನ ಜನರು ಒದಗಿಸುವದು ದುಸ್ತರವಾಗಿದೆ ಇದಕ್ಕಾಗಿ ಈ ಊರಿನ ಮೆಂಬರುಗಳೂ, ಅಮಲ್ದಾರರೂ, ಮುನ್ಸಿಫರೂ ತುಂಬಾ ಮುತುವರ್ಜಿ ವಹಿಸಿ ಜನರಿಂದ ಬಾಕಿ ಮೊಬಲಗನ್ನು ಜವಾಯಿ ವಂತೆ ಮೀಟಿಂಗುಗಳನ್ನು ನಡಿಸಿ ಸಾಹಸಪಡುತ್ತಿದ್ದಾರೆ—ಈ ಊರಿಗೆ ಮ್ಯುನಿಸಿಪಲ್ ದೀಪಗಳು ಏನೇನೂ ಸಾಕಾಗಿಲ್ಲ ನೆಪಮಾತ್ರಕ್ಕೆ ಅಲ್ಲಲ್ಲಿ ಒಂದೊಂದು ದೀಪ ಮಿಣುಗುಟ್ಟುವದರಿಂದ ಪ್ರಯೋಜನವೇನೂ ಕಾಣಲಿಲ್ಲ ಕೆಲವು ರಸ್ತೆಗಳು ಅಲ್ಲಲ್ಲಿ ಗುಂಡಿಬಿದ್ದು ಕೆಟ್ಟುಹೋಗಿವೆ ಲಾಂಟಾನಾ ಗಿಡಗಳೂ ಪಾಳುಮನೆಗಳೂ ದೊಡ್ಡಬಳ್ಳಾಪುರದ ಹೀನಸ್ಥಿತಿಯನ್ನು ಪ್ರಕಟಿಸುತ್ತವೆ ಬಾಲಿ ನಿವೇಶದಲ್ಲಿ ಹೊಸದಾಗಿ ಭಾರಿ ಸ್ಕೂಲ್ ಕಟ್ಟಡಗಳಾಗಬೇಕಂತೆ ಯಾವಾಗಲೋ ಅದು ಮಾತ್ರ ಗೊತ್ತಿಲ್ಲ—ಕಿತ್ತಲೆಯಲ್ಲಿ ಒಬ್ಬನು ಮಲಗಿದ್ದ ನಾಯನ್ನು ತುಳಿದು ಅದರಿಂದ ಕಚ್ಚಲ್ಪಟ್ಟನಂತ ಕೇಳುತ್ತೇನೆ—ಕೆರೆ ಬತ್ತುತ್ತಾ ನೀರಿನ ಅಭಾವ ಹೆಚ್ಚುತ್ತಿದೆ ರೋಗಾದ್ಯುಪದ್ರಗಳೂ ಸಿದುಬೂ ಅಧಿಕವಾಗುತ್ತಿವೆ

ಆಲೂರು—ಈ ಊರು ಮಲ್ನಾಡು ಆದರೂ ಬಿಸಿಲಿನ ತಾಪವು ಒಲು ಹೆಚ್ಚು ಊರಲ್ಲಿರುವ ಭಾವಿಗಳಲ್ಲೆಲ್ಲಾ ನೀರು ಬತ್ತಿದೆ ಪೇಟೆಯ ಹಿಂಭಾಗದ ಭಾವಿಯಲ್ಲಿ ಮಾತ್ರ ನೀರಿದೆ ಅದೂ ಉಪ್ಪುನೀರು ಪೇಟೆಯ ಸಾಹುಕಾರು ಮನೆಗಳವರ ಸ್ನಾನಕ್ಕೂ ಪಾನಕ್ಕೂ ಇದೇ ಆಧಾರ ಆಲೂರು ಮುನ್ಸಿಪಾಲಿಟಿಯಲ್ಲಿ ಸುಮಾರು 25 ಸಾವಿರ ರೂಪಾಯಿ ಇದೆ ಸರಕಾರದವರು ಹೆಚ್ಚು ಭಾವಿಗಳನ್ನು ತೆಗಿಸಿ ಜನರ ಕಷ್ಟವನ್ನು ಪರಿಹರಿಸಬಹುದು ಬಟ್ಟೆ ಒಗೆಯುವದಕ್ಕೂ ಸ್ನಾನಕ್ಕೂ ಮತ್ತಾವ ಕೆರೆಯಾಗಲಿ ಕುಂಟೆಯಾಗಲಿ ಇಲ್ಲ ಮುಖ್ಯ ದನಕರುಗಳೂ ಜನರೂ ನೀರಿಲ್ಲದೆ ಸಾಯಬೇಕಾಗಿದೆ — ಈ ಊರ ಸಂತೆ ಭಾರಿಯಾದದ್ದು. ಸುಮಾರು 30-40 ಮೈಲಿಗಳ ದೂರದಿಂದಲೂ ಜನರು ವ್ಯಾಪಾರಕ್ಕಾಗಿ ಬರುವರು ಈ ಊರಿನ ಅಕ್ಕಿ ಹೆಸರಾದದ್ದರಿಂದ ಅಕ್ಕಿ ಒಂದೇ 10 12 ಸಾವಿರ ರೂಪಾಯಿ ನಷ್ಟು ಖರ್ಚಾಗುವದು ತುಂಬುವವರು ಹೆಚ್ಚಾದ್ದರಿಂದ ರೂಪಾಯಿಗೆ ಅಕ್ಕಿ 6 ಸೇರು, ರಾಗಿ 15 16 ಸೇರು ಇದೆ ಅಳತೆ ತೂಕಗಳ ವಿಷಯದಲ್ಲಿ ಸರ್ಕಾರದವರು ನಿಗಾ ಕೊಟ್ಟರೆ ಬಡವರಿಗೆ ತುಂಬಾ ಅನುಕೂಲ—ಹಾಲಿ ಆಕ್ಟಿಂಗ್ ಅಮಲ್ದಾರರಾಗಿರುವ ಮ॥ ಚಕ್ರಪಾಣಿರಾಯರು ಬಂದಲಾಗಾಯ್ತು ಕಳ್ಳಕಾಕರ, ದುರ್ಜನರ ತಲೆ ತಗ್ಗಿದೆ ಬಡವರ ಅಹವಾಲುಗಳಿಗೆ ಸರಿಯಾದ ನ್ಯಾಯ ಬರುವುದು ಪಕ್ಷಪಾತವಿಲ್ಲದ ತೀರ್ಮಾನದಿಂದ ತಾಲ್ಲೂಕೆಲ್ಲವೂ ಅದಬ್‌ನಲ್ಲಿದೆ—ಈ ಮಲ್ನಾಡಿನಲ್ಲಿ ರೋಗ ಹೆಚ್ಚು, ಆದರೂ ಇಲ್ಲಿನ ಆಸ್ಪತ್ರೆಯು ಜನರಿಗೆ ಅಷ್ಟು ಉಪಯೋಗಸಿಕ್ಕಿಗೆ ಬರದಿರುವುದಕ್ಕಾಗಿ ವಿಸನಪಡಬೇಕಾಗಿದೆ ಸಿಡುಬು ಹಲವಾರು ಮಕ್ಕಳನ್ನು ನರಳಿಸುತ್ತಿರುವುದು—ಮ॥ ವೀರಣ್ಣನವರು ಸಾಲಿಗ್ರಾಮದಿಂದ ವರ್ಗವಾಗಿ ಹೆಡ್ ಮಾಸ್ಟರಾಗಿ ಬಂದಲಾಗಾಯ್ತು ಈ ಊರಿನ ತಾಲ್ಲೂಕ್ ಸ್ಕೂಲು ತುಂಬಾ ಅಭಿವೃದ್ಧಿಯಲ್ಲಿದೆ ಸ್ಕೂಲ್ ಹುಟ್ಟಿದ ಲಾಗಾಯ್ತು ಇಷ್ಟು ಹುಡುಗರಿರಲಿಲ್ಲ ಸುಮಾರು 60-70 ಹುಡುಗರು ಸುತ್ತಲಿರುವ ಹಳ್ಳಿಗಳಿಂದ ಬರುವಂತೆ ಕಾಣುವುದು ಮಾಸ್ಟರುಗಳು ಸಾಲದು ಸರ್ಕಲ್ ಇನ್ಸ್‌ಪೆಕ್ಟರವರು 11 ನೇ ತಾ ಇಲ್ಲಿಗೆ ಬಂದು ಸ್ಕೂಲನ್ನು ನೋಡಿ ತುಂಬಾ ಸಂತೋಷಪಟ್ಟು ಇನ್ನಿಬ್ಬರು ಮಾಸ್ಟರನ್ನು ಕೊಡುವುದಾಗಿ ಅಪ್ಪಣೆ ಮಾಡಿದರಂತೆ ಸದ್ಯದಲ್ಲಿ ಅಷ್ಟಾದರೂ ವಾಸಿ—ಪರಸ್ಥಳದಿಂದ ಬಂದ ನೌಕರರಿಗೆ ಇಲ್ಲಿ ವಾಸಕ್ಕೆ ಮನೆಗಳು ಸಿಕ್ಕುವುದೇ ಇಲ್ಲ ಹಾಲು ಮೊಸರು ಮೊದಲಾಗಿ ಎಲ್ಲಾ ಪದಾರ್ಥಗಳೂ ಬೆಲೆ ಹೆಚ್ಚು 10-15 ರೂಪಾಯಿ ಸಂಬಳದ ನೌಕರರೂ ಬಡಮಾಸ್ಟರುಗಳೂ ಇಲ್ಲಿ ಜೀವಿಸುವುದು ಕಷ್ಟ ಡಾಕ್ಟರಿಗೂ ಸೂಲಗಿತ್ತಿಗೂ ವಾಸಕ್ಕೆ ಮನೆಗಳನ್ನು ಕಟ್ಟಿಕೊಡುವಂತೆ ಇತರ ನೌಕರರಿಗೂ ಸರ್ಕಾರದಿಂದಲೇ ಮನೆಗಳನ್ನು ಕಟ್ಟಿಸಿ ಅವರಿಂದ ಬಾಡಿಗೆ ತೆಗೆದುಕೊಳ್ಳುವದು ಮೇಲು.

ಮಂಡ್ಯ—ಕಳೆದ ತಿಂಗಳು ತಾ 15 ರಲ್ಲಿ ಮಂಡ್ಯಕ್ಕೆ ಸುಮಾರು 8 ಮೈಲಿ ದೂರದಲ್ಲಿರುವ ದುದ್ದವೆಂಬ ಗ್ರಾಮದಲ್ಲಿ ಬೆಂಕಿ ಬಿದ್ದು 6 ಮನೆಗಳು ಸುಟ್ಟುಹೋದವು ಇದರಿಂದ ರೈತರಿಗೆ ನೂರಾರು ರೂಪಾಯಿನ ಮಾಲು ನಷ್ಟವಾಯಿತು—ತಾ 16 ರಲ್ಲಿ ಬೂದನೂರು ಗ್ರಾಮದಲ್ಲಿ ಒಬ್ಬ ಅಗಸರವನು ಸತ್ತನು. ತಕ್ಷಣವೇ ಶವವನ್ನು ಸುಟ್ಟುಬಿಟ್ಟರು. ತಾ 25 ರಲ್ಲಿ ಡಿಟೆಕ್ಟಿವ್ ಪೋಲೀಸಿನವರ ರಿಪೋರ್ಟಿನಿಂದಲೋ ಇನ್ನಾವ ವರ್ತಮಾನದಿಂದಲೋ ಅಕಸ್ಮಾತ್ ಪ್ರೆಂಚ್ ರಾಕ್ಸಿನಿಂದ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ರೂಪೇನ್, ಬಿ.ಎ ಯವರು ಮಂಡ್ಯಕ್ಕೆ ದಯಮಾಡಿಸಿ ಸದರಿ ಸ್ಥಳಕ್ಕೆ ಹೋಗಿ ಆಜಮಾಯಿಸಿ ಮಾಡಿದ್ದರಲ್ಲಿ ತಾ 10 ನೇ ಮಂಗಳವಾರ ರಾತ್ರಿ ಸರ್ವಮಾನ್ಯ ಬೇಲೂರು ಗ್ರಾಮದಲ್ಲಿ ಕಾಳಿಕಾದೇವಿ ಜಾತ್ರೆ ನಡೆಯುತ್ತಿರುವಲ್ಲಿ ಮದ್ದಿನ ತಮಾಷೆಯೊಳಗೆ ಗಡಾಬಿಂಚ್ ಎಂಬುದೊಂದು ಹೊತ್ತುಮೀರಿ ಒಡೆದು ಸದರಿ ಅಗಸರ ಕರಿಯನಿಗೆ ಘೋರಾಘಾತ ಆಗಿ ಸತ್ತನೆಂತಲೂ, ಕುಷ್ಟ ಮತ್ತು ದೇಸಿ ಎಂಬವರಿಗೆ ಚಿಕಿತ್ಸೆ ನಡೆದು ಬದುಕಿಕೊಂಡರೆಂತಲೂ, ಇಷ್ಟರೊಳಗೆ ಪೋಲೀಸ್ ತನಿಖೆ ನಿಧಾನವಾಗಿ ನಡೆದದ್ದರಿಂದಲೂ, ಆಗ ನಡೆದದ್ದರಲ್ಲಿ ಅತ್ಯಪ್ರತಿಕರದ ಬಂದದ್ದರಿಂದ ಜಮೇದಾರ್ ಸುಬ್ರಾಯರನ್ನು ವರ್ಗಾಯಿಸಿದ ಹಾಗೂ, ತುಂಕೆರೆ ಚನ್ನ ಎಂಬ ಕಾನ್‌ಸ್ಟೇಬಲ್‌ಗೆ ಸಸ್ಪೆಂಡ್ ಆಗಿರುವುದಾಗಿಯೂ ವರ್ತಮಾನ ಇನ್ನು ಮುಂದೆ ಸರಿಯಾದ ತನಿಖೆ ನಡೆದು ಎಲ್ಲಾ ಸ್ಪಷ್ಟವಾಗಬಹುದು.—ಇಲ್ಲಿಗೆ ಸುಮಾರು 4 ಮೈಲಿ

ದೂರದಲ್ಲಿ ಸರ್ವಮಾನ್ಯ ಸಂತೆ ಕಸಲಗೆರೆ ಗ್ರಾಮದ ಬಳಿ ಒಬ್ಬನು ತನ್ನ ಕುಟುಂಬದಲ್ಲಿ ಜಗಳವಿದ್ದುದರಿಂದ ನೇಣುಹಾಕಿಕೊಂಡು ಸತ್ತನು —ದಿವಾನ್ ಸಾಹೇಬರು ಈ ಊರಿಗೆ ದಯಮಾಡಿಸುವದರ ನಿಮಿತ್ತ ವಾಕೀಜಾ ಆಗುತ್ತಿರುವುದು ಜನರಲ್ಲಿ ಸಂತೋಷದ ಗದ್ದಲವು ಹರಡಿರುವುದು ಅವರು ದಯಮಾಡಿಸಿದಾಗ (1) ಊರಿನ ಬಡಾವಣೆಯು ಸಂತೆಮಾಳ ದಸಡೆ ಹೆಚ್ಚಿಸುವದು, (2) ನೀರಿನ ಅಭಾವವನ್ನು ತಪ್ಪಿಸುವುದು, (3) ಕನ್ನಂಬಾಡಿ ತಲಾವ್ ಮಧ್ಯದ ನಾಗೇರವಾಗಿ ಸೂಳಕೆರೆಗೆ ಸೇರುವುದು, (4) ಗ್ರಾಮಾಂತರಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸವನ್ನು ರೂಢಿಗೆ ತರುವುದು ಎಂಬೀ ವಿಷಯಗಳನ್ನು ಅವರ ಚಿತ್ತಕ್ಕೆ ತರಬೇಕೆಂದು ಅಭಿಪ್ರಾಯವಿರತ್ತದೆ —ಈ ವರಿವಿಗೂ ನಾಲ್ಕು ಮಂದಿ ಡೆಪ್ಯುಟಿ ಕಮಿಷನರ್‌ರು, ಐದಾರು ಮಂದಿ ಸಬ್ ಡಿವಿಜನ್ ಆಫೀಸರುಗಳು, ಹಲವು ಅಮಲ್ದಾರರೂ ಸರ್ಕಾರಿ ಚಾವಡಿ ಎಂದೂ ಬಾಬಯ್ಯನ ಗುಡಿ ಎಂದೂ ಸರ್ಕಾರಕ್ಕೂ ಮುಸಲ್ಮಾನರಿಗೂ ಇರುವ ವ್ಯಾಜ್ಯವನ್ನು ದಿವಾನ್‌ರವರು ಫೈಸಲ್ ಮಾಡುವರೆಂದು ಅನೇಕರಲ್ಲಿ ನಿರೀಕ್ಷೆ ಇದೆ ಈ ಜೋಪಡಿಯು ಹೈರೋಡಿನ ಪಕ್ಕದಲ್ಲಿ ಸಾವಿರಾರು ರೂಪಾಯಿನ ಸರಕುಗಳು ತುಂಬಿರುವ ಅಂಗಡಿ ಸಾಲುಗಳ ಮಧ್ಯೆ ಇದ್ದು ಅನೇಕ ದೊಡ್ಡ ಮನುಷ್ಯರ ದೃಷ್ಟಿಗೆ ಅಸಹ್ಯಕರವಾಗಿ ಕಾಣುತ್ತದೆ ವರ್ಷಕ್ಕೊಂದು ಸಾರಿ ಮಾತ್ರ ವಾಕೀಜಾಗುವುದು ಆದ್ದರಿಂದ ದಿವಾನ್‌ರವರು ಇದನ್ನು ಫೈಸಲ್ ಮಾಡಿ ಕ್ರಮವಾದ ಕಟ್ಟಡಗಳು ಅಥವಾ ಸ್ಕೂಲಿಗಾಗಲಿ ಅನುಕೂಲವಾಗಬಹುದೆಂದು ನಂಬಲಾಗಿದೆ —ಈ ಊರಿನ ಸುತ್ತುಮುತ್ತಲ ಗ್ರಾಮಗಳಲ್ಲಿ ಪ್ಲೇಗ್ ಹಾವಳಿ ಉಂಟು ಮದ್ದೂರ ಟವನ್‌ನಲ್ಲಿ ಇಲಿಗಳು ಸಾಯುತ್ತ ಇದ್ದರೂ ಪೋಸ್ಟ್ ಆಫೀಸಿನ ಬಳಿ ಪ್ಲೇಗ್ ಮರಣವಾಯಿತೆಂದು ತಿಳಿದು ಬಂದರೂ ಸಂಶಯವಾಗಿದೆ ಪ್ಲೇಗ್ ಸೂಚನೆಯನ್ನು ಕಂಡೊಡನೆಯೇ ಬಹಿರಂಗಪಡಿಸುವುದು ಯಾವಾಗಲೂ ಒಳ್ಳೇದು —ಸಂತೆಯಲ್ಲಿ ಅಳತೆ ತೂಕಗಳನ್ನು ಸರ್ಕಾರದವರು ಬಲಾತ್ಕಾರದಿಂದ ಜಾರಿಗೆ ತರುವುದು ಒಳ್ಳೇದು — ೨೦ 30 ಸಹಸ್ರ ರೂಪಾಯಿ ಖರ್ಚುಮಾಡಿ ಕಟ್ಟಿಸುತ್ತಿರುವ ಆವಳಿ ಸಂಗಪ್ಪನವರ ಮತ್ತು ಧರಣಪ್ಪನವರ ಧರ್ಮ ಛತ್ರಕ್ಕೆ ದಿವಾನ್‌ರವರು ಚಿತ್ತೈಸುವರೆಂದು ಕೆಲಸವನ್ನು ಬಹು ತರಾತುರಿಯಿಂದ ನಡಿಸುತ್ತಿರುವರು —ಫೆ ಸೂರಿಂದ ರೆವ್ ಬ್ರೂವ್ ಬೋಧಕರು ಬುಧವಾರ ಇಲ್ಲಿಗೆ ಬಂದು ಎವರ್ ಎ ವಿ ಸ್ಕೂಲ್ ವಿದ್ಯಾರ್ಥಿಗಳಿಗೂ ಇತರರಿಗೂ ಆರೋಗ್ಯಶಾಸ್ತ್ರ ಸಂಬಂಧವಾದ ಮತ ಸಂಬಂಧವಾದ ಛಾಯಾಚಿತ್ರ ಪ್ರದರ್ಶನವನ್ನು ನಡಿಸಿ ತೋರಿಸಿ ಹೋದರು — ಅಮಲ್ದಾರ್ ಶ್ರೀನಿವಾಸರಾಯರವರ ಛತ್ರ ದೇವಸ್ಥಾನವು ದಿನೇದಿನೇ ಅಭಿವೃದ್ಧಿಸ್ಥಿತಿಯಲ್ಲಿದೆ ಅದರ ಏಜಂಟರಾಗಿರುವ ಮೇ। ಹೆಚ್ ರಾಘವೇಂದ್ರದಾಸರು ಹೆಣ್ಣು ಮಗುವಿನ ವಿಯೋಗದಿಂದ ಬಹಳ ಕ್ಲೇಶಪಟ್ಟವರಾಗಿ ಕಾಶೀಯಾತ್ರೆಗೆಂದು ಹೊರಟು ಆರೇಳು ತಿಂಗಳಲ್ಲಿ ಅನೇಕ ತೀರ್ಥಯಾತ್ರೆಗಳನ್ನು ಮಾಡಿಕೊಂಡು ದಂಪತ್ಸಮೇತ ತಾ 21 ನೇ ಶುಕ್ರವಾರ ಬಂದು ಸೇರಿದರು ಇವರು ತಿಳುವಳಿಕೆ ಇಲ್ಲದೆ ಕಾಶಿಯಿಂದ ಒಂದು ಪಾರ್ಸಲ್ ಪೆಟ್ಟಿಗೆ ಕಳುಹಿಸಿದ ಹಾಗೂ, ಅದರಲ್ಲಿ 10 1೦ ಗಂಗಾ ತಂಬಿಗೆ ಕೆಲವು ಹಿತ್ತಾಳೇ ದೇವರ ಪಾತ್ರೆಗಳು, 1 ೨ ಪೀತಾಂಬ್ರ, 1 ಶಾಲು, 1 ಕಲಾಪತ್ತು ಪಂಚೆ 1 ಪಟ್ಟೆ ಮಡಿ ವಗೈರೆ ಒಟ್ಟು ೭ ದುನೂರು ರೂಪಾಯಿನ ಸಾಮಾನು ಇಟ್ಟಿದ್ದ ಹಾಗೂ, ಡಿಟೋ ಪಾರ್ಸಲನ್ನು ಮುಂಜ್ಜದಲ್ಲಿರುವ ಅವರ ತಮ್ಮ ಸುಬ್ಬಣ್ಣಾಚಾರ್ರು ನಂಬಿಕೆ ಮೇಲೆ ತೆಗೆದುಕೊಂಡು ಬಂದು ಮನೆಯಲ್ಲಿ ಬಿಚ್ಚಿ ನೋಡಲಾಗಿ ಮೇಲ್ಕಂಡ ಪೀತಾಂಬ್ರ ವಗೈರೆ ಕೆಲವು ಸಾಮಾನ್ ಸಹಾ ಪೆಟ್ಟಿಗೆ ಬೇಗದ ಮುಂಭಾಗದ ಕಂಬಿ ಕಿತ್ತು ಎಲ್ಲಾ ತೆಗೆದುಕೊಂಡು ಇರುತ್ತಾರೆಂದೂ ಮನೆಮಂದಿಯವರುಗಳೆಲ್ಲಾ ಬಹಳ ವ್ಯಸನಪಡುತ್ತಿದಾರೆ ಮುಖ್ಯ ರೈಲ್ವೇ ಪಾರ್ಸಲ್‌ಗಳೇ ಹೀಗಾದರೆ ಈ ಕಷ್ಟವನ್ನು ಯಾರಿಗೆ ಹೇಳಿಕೊಳ್ಳಬೇಕು ?—ಮೇ। ಹೆಚ್ ರಾಘವೇಂದ್ರದಾಸರು ತಾ 27 ನೇ ಶುಕ್ರವಾರ ಯುಗಾದಿಹಬ್ಬದ ನಿಮಿತ್ತ ದೇವಸ್ಥಾನದಲ್ಲಿ ಪೂಜೆ ಅಭಿಷೇಕ ಮುಂತಾದ್ದನ್ನು ನಡಿಸಿ, ರಾತ್ರಿ ಸ್ಥಳಪುರೋಹಿತರಿಂದ ಪಂಚಾಂಗಶ್ರವಣಮಾಡಿಸಿದರು ದೀಪಾರಾಧನೆ ಮುಂತಾದ್ದು ನಡೆದು ಮಂಗಳಾರತಿ ವಗೈರೆಯನ್ನು ಬಹಳ ವಿಜೃಂಭಣೆಯಾಗಿ ಮಾಡಿದರು ಇಲ್ಲಿನ ಶಿರಸ್ತೇದಾರ್ರವರೂ, ಡಾಕ್ಟರವರೂ, ಹೆಡ್ ಮಾಸ್ಟರವರೂ ಗ್ರಾಮಸ್ಥರೂ ದಯಮಾಡಿಸಿ ಬಹಳ ಸಂತೋಷಪಟ್ಟರು

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪೆನಿಯ ಫಂಡು · ರೂ 4,25,00,000

ಕಂಪೆನಿಯಿಂದ ಪಾವತಿ ಆಗಿರುವದು ,, 3,೬0 00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪೆನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು ಮಿ॥ ಎಂ ಎಸ್ ನಂಜಪ್ಪನವರು ಅಥವಾ ಮಿ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194 27] ಬ್ರಾಂಚ್ ಸೆಕ್ರೆಟರಿ, ಮದರಾಸ್

ಅನುಭವಸಿದ್ಧವಾದ ಷರಬತ್ತುಗಳು.

ಅಮೃತ ಷರಬತ್ತು —ಎಲ್ಲಾ ವಿಧವಾದ ಹಳೇ ಜ್ವರಗಳೂ, ಅಶಕ್ತತೆ, ಅಗ್ನಿಮಾಂದ್ಯ, ಆಗಾಗ್ಗೆ ತಲೆ ಸೋಯುತ್ತಿರುವುದು, ಪಿತ್ತಸಂಕಟ, ರಕ್ತಕೊರತೆ, ಧಾತುನಷ್ಟ, ಇಂದ್ರಿಯಗಳ ಬಲಹೀನತೆ ಇವುಗಳನ್ನು ಹೋಗಲಾಡಿಸಿ ಜ್ಞಾಪಕ ಶಕ್ತಿಯನ್ನೂ ಇಂದ್ರಿಯಗಳ ಬಲವನ್ನೂ ಹೆಚ್ಚಿಸಿ ಆರೋಗ್ಯ ಉಂಟುಮಾಡುವದರಲ್ಲಿ ಸರ್ವಶ್ರೇಷ್ಠವಾದುದು ಕ್ರಯ 8 ಔನ್ಸು ಶೀಸೆ 1 ಕ್ಕೆ 0 8 0 12 ಔನ್ಸು ಶೀಸೆ 1 ಕ್ಕೆ 0 12 0

ರಸಬಾಳೆಹಣ್ಣಿನ ಷರಬತ್ತು —ರಕ್ತವೃದ್ಧಿ ತಂಪು, ಕೆಮ್ಮು ಮುಂತಾದುವುಗಳಿಗೆ ಒಳ್ಳೇದು ನೀರಿನಲ್ಲಿ ಸೇವಿಸುವುದು ಕ್ರ 8 ಔನ್ಸು 0 8 0, 12 ಔನ್ಸು 12 ಆ ಹುಳಿದಾಳಿಂಬೆ ಷರಬತ್ತು —ಪಿತ್ತಶಾಂತಿ, ಪಿತ್ತದಿಂದ ಉಂಟಾಗುವ ವಮನ ದಾಹ, ಸುಸ್ತು, ಪಿತ್ತ ಸಂಕಟ ಮೊದಲಾದವುಗಳನ್ನು ಹೋಗಲಾಡಿಸುವುದು, ಮತ್ತು ತಂಪು ಕ್ರ 8 ಔನ್ಸು 0 8 0, 12 ಔನ್ಸು 0-12 0 ಪ್ರಸಿದ್ಧವೂ ಶ್ರೇಷ್ಠವೂ ಆದ ಊದುಬತ್ತಿಗಳು —ಸೇರು 1 ಕ್ಕೆ ರೂ 24, 12, 10, 8, 6, 4, 3, 2½, 2, 1½ ಬಿಲ್ಲೆಗಳು 1 ಕ್ಕೆ 1½ ಆಣೆ ಛಾಯಾಯ್ಸ 3 ರೂ ವರೆಗೆ ಹಸಿಗಂಧ ತೊಲ 1 ಕ್ಕೆ ರೂ 2, 1, ಮತ್ತು 12 ಆಣೆ ಇವು ಅಲ್ಲದೆ ಅನೇಕ ಅತ್ತರುಗಳೂ ನಮ್ಮಲ್ಲಿ ಸಿಗುತ್ತೆ ಅವುಗಳಿಗೆ ಒಪ್ಪಿಸತಕ್ಕ ಸುಗಂಧಗಳು ಇವೇ ಇಂಥಾ ಶ್ರೇಷ್ಠವಾದ ಬತ್ತಿಗಳೂ ಬಿಲ್ಲೆಗಳೂ ಇನ್ನೆಲ್ಲಿಯೂ ದೊರೆಯುವದಿಲ್ಲ ಅರ್ಥಾತ್ ಸ್ವಾಂಪ್ ಕಳಿಸಿ ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ

ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ

ವಿಳಾಸ —ಶ್ರೀ ವೆಂಕಟೇಶ್ವರ ಕಂಪನಿ,

[280-13] 174 ಚಾಮರಾಜ ರೋಡ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಳುಕಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 30]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೧—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೬ ೭ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು



ಜನವರಿ ಮಹೋತ್ಸವದ ಕೈ ಗಡಿಯಾರ

ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಅಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 14 0 ಆಣೆಗೆ ಕೊಡಲ್ಪಡುತ್ತೆ ವಿಳಾಸ— ಜ ಆರ್ ರಾವ್, ಜನರಲ್ ಮರ್ಚಂಟ್, 21 ವಿನಾಯಕಮೇಸ್ತ್ರಿ ಬೀದಿ, ಮದರಾಸ್

ಕುಂಬಕೋಣದ ಜುಂಗಡಿ ಅಂಚು ಹಾಕಿದ ಪೂನಾ ಸರಿಗೆ ಕಪ್ಪುಬಣ್ಣದ ಸೀರೆ ಕ್ರಯ ರೂ 2-13-0



ಇದು ಉಡುವುದಕ್ಕೆ ದಪ್ಪವಾಗಿಯೂ ನೋಟಕ್ಕೆ ರಮ್ಯವಾಗಿಯೂ ಗಟ್ಟಿ ತರದ ಉಳ್ಳದ್ದಾಗಿಯೂ ಇದೆ ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಭಾಗ್ಯವಂತರು ಸಹ ಉಡ ಬಹುದು ಒಂದನ್ನು ತರಿಸಿ ಪರೀಕ್ಷಿಸಿರಿ

ವಿಳಾಸ—ತುಳಸಿ ರಾಮದಾಸ್, ಕ್ಲಾತ್ ಮರ್ಚೆಂಟ್, [65 4] 21 ವಿನಾಯಕಮೇಸ್ತ್ರಿ ಬೀದಿ, ಮದರಾಸ್

ಕುಂತಲ ಬಹಾರ ತೈಲ್ಯ.

ಈ ಕುಂತಲ ಬಹಾರ ತೈಲ್ಯವು ಅನೇಕ ತರದ ವನಸ್ಪತಿಗಳಿಂದ ತಯಾರಿಸಿ ಮನುಷ್ಯರ ಸರ್ವನ್ನಿನ ಅನೇಕ ತರದ ವ್ಯಾಧಿಗಳನ್ನು ಹೋಗಲಾಡಿಸಿ ಕೂದಲನ್ನು ತ್ವರೆಯಾಗಿ ಬೆಳೆಸುವುದು ಶಿರಃಪ್ರಭಂಗವನ್ನು ಪರಿಹರಿಸಿ ಬಹಳ ಸುವಾಸನೆ ಕೊಡುವುದು ಅಲ್ಲದೆ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಆಲೋಚನಾ ಶಕ್ತಿಯೂ, ಶೀತಳವೂ, ಸುವಾಸನೆಯೂ, ಬೆಟ್ಟ ತಲೆಯಲ್ಲಿ ಕೇಶವನ್ನು ಬೆಳಸುವುದು ಅಲ್ಲದೆ ಈಗಾಗಲೇ ತೈಲ್ಯಗಳಲ್ಲಿ ಈ "ಕುಂತಲ ಬಹಾರ ತೈಲ್ಯವು" ಹಿಂದರಿಯದಷ್ಟು ಪ್ರಖ್ಯಾತಿ ಹೊಂದಿರುವದು (ಮೇ) ಅಂತ್ಯದ ವರೆಗೆ ಶೀಸೆ 1 ಕ್ಕೆ ಬೆಲೆ ಆಣೆ 9 ನಂತರ ಶೀಸೆ 1 ಕ್ಕೆ ರೂ 1 ಕುಂತಲ ಬಹಾರ ತೈಲ್ಯದ ಪ್ರಖ್ಯಾತಿ ಹೊಂದುವರೆ ಮಾತ್ರ ರೂಪಾಯಿ 1 ರಿಂದ 9 ಆಣೆಗೆ ತಗ್ಗಿಸಲ್ಪಟ್ಟಿರುವದು ಟಪ್ಪಾಲು ಖರ್ಚು ಶೀ॥ 1 ಕ್ಕೆ 4 ಆಣೆ ಅಲಾಹಿದಾ ಗ್ರಾಹಕರು ಕೊಡಬೇಕಾಗುವದು [78 1]

ನಮ್ಮ ವಿಳಾಸ — ಮೋಹನ್ ಅಂಡ್ ಕಂಪೆನಿ, ಮಂಗಳಾದೇವಿ ಬೀದಿ, ಮಂಗಳೂರು.

ಬೋಧಕರ ಸಹಾಯವಿಲ್ಲದೆ ಹಾರಮೋನಿಯಂ ಕಲಿಯುವ ಪುಸ್ತಕ.

ಕ್ರಯ 0-8-0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸರವರಿಂದ ಪಂಡಿತರಿಗೂ ಮತ್ತು ಪಾಮರರಿಗೂ ಉಪಯೋಗವಾಗುವ ಉದ್ದೇಶದಿಂದ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 40 ಪಾರಸೀ ಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ಜಿ ಮೊದಲಾದವುಗಳು ವಿರವಾಗಿ ತಿಳಿಸಲ್ಪಟ್ಟಿರುತ್ತೆ ಸ್ವಲ್ಪ ಇಂಗ್ಲೀಷು ಭಾಷಾ ಪಾಂಡಿತ್ಯವುಳ್ಳವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹುಸುಲಭವಾಗಿ ಹಾರಮೋನಿಯಂ ನುಡಿಸುವದನ್ನೂ ಅನ್ಯದೇಶ ಭಾಷೆಯಾದ ಪಾರಸೀ ಹಾಡುಗಳನ್ನು ಬಹುಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಜಾಗ್ರತೆ ದರಖಾಸ್ತು ಕಳುಹಿಸಿ

ನಮ್ಮ ವಿಳಾಸ—ಜ ಆರ್ ರಾವ್, ಜನರಲ್ ಮರ್ಚಂಟ್, 55, ಆಫೀಸು ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ದಿ ಜನರಲ್ ಏಜನ್ಸಿ, ಮೈಸೂರು

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31, 27 ನೆ ಜನವರಿ 1914 ರಲ್ಲಿ ಪ್ರಸಿದ್ಧ ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು— ಕಿಂಡರ್‌ಗಾರ್ಟನ್ ಕ್ರಮ 1 1 0 ಪಂಚತಂತ್ರ 0 8 0 ಕಮಾನುಂಜರಿ 0 6 0, ಕಥಾವಳಿ 0 ೬ 8 ರಾಬಿನ್‌ಸನ್ ಕ್ರೂಸೋವಿನ ಸಾಹಸ ಕಾರ್ಯ 0-4-0, ಗಲಿವರನ ದೇಶಸಂಚಾರ 0 3 0, ಅಲ್ಲಾವುದಿನ್ ಅದ್ಭುತದೀಪ 0-೨ 0, ಸಿಂದಬಾದ್ ನಾವಿಕ 0 1 0, ಈಸೋಪನ ನೀತಿಕಥೆಗಳು 0 1 0 ಇವುಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡುಕೊಡಬೇಕು 1914 ನೆಯ ಲೋವರ್ ಸೆಕೆಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ [-9 13]

ಪ್ರದರ್ಶನದ ನೋಟೀಸ್.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರದಲ್ಲಿ ಶ್ರೀಸಂಗಮೇಶ್ವರಸ್ವಾಮಿ ಜಾತ್ರೆ ಕಾಲದಲ್ಲಿ ಅಂದರೆ 1914 ನೇ ಇಸವಿ ಏಪ್ರೆಲ್ ತಾ 12 ಕ್ಕೆ ಪ್ರಾರಂಭವಾಗಿ ಒಂದು ವಾರದ ವರೆಗೆ ದನಗಳ ಪ್ರದರ್ಶನದ ಜೊತೆಗೆ ವ್ಯವಸಾಯ ಕೈಗಾರಿಕೆ ಹಾಗು ವಿದ್ಯಾ ಸಂಬಂಧವಾದ ಪ್ರದರ್ಶನವು ನಡೆಯುವದು ಪ್ರದರ್ಶನಕ್ಕೆ ಎಗ್ಜಿಬಿಟ್ಸ್ ಯಾನೆ ಪದಾರ್ಥಗಳನ್ನು 1914 ನೇ ಇಸವಿ ಏಪ್ರೆಲ್ ತಾ 8 ಕ್ಕೆ ಪೂರ್ವಭಾವಿಯಾಗಿಯೇ ಕಳುಹಿಸಿಕೊಡತಕ್ಕದ್ದು ಪ್ರಕಟನ ಪತ್ರಿಕೆ ಹಾಗು ಇತರೆ ಮಾಹಿತಿಗಳು ಬೇಕಾಗಿದ್ದಲ್ಲಿ ಎಗ್ಜಿಬಿಷನ್ ಸೆಕ್ರೆಟರಿಯವರಲ್ಲಿ ಬರೆದುಕೊಳ್ಳಬಹುದು [7 1]

ಎಸ್ ಅನಂತರಾಮಯ್ಯಂಗಾರ್,

29-3-1914 ಡಪ್ಟಿ ಅಮಲ್ದಾರ್ ಮತ್ತು

ಹರಿಹರ ಎಗ್ಜಿಬಿಷನ್ ಕಮಿಟಿ ಸೆಕ್ರೆಟರಿ

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ

ಭಾರೀ ಕ್ರಯದ ಕನ್ನಡಕಗಳು

ಕ್ರಯ ಅವಲ್ ರಿಂ ರೂ 2 8-0

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ ರಾಮರಾವ್ ಬ್ರದರ್ಸು ರವರ ಸ್ಪಟಿಕವಾದ ಸ್ಫಟಿಕದ ಕನ್ನಡಕಗಳನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು



ಕಾಪಾಡಿಕೊಳ್ಳಿ ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲ ಕ್ರಮೇಣ ವ್ಯಾಧಿಯನ್ನು ಸಹ ಉಂಟುಮಾಡುತ್ತೆ ಆದಕಾರಣ ಅಂಥಾ ಕನ್ನಡಕಗಳನ್ನು ಉಪಯೋಗಿಸಬೇಡಿ ನಮ್ಮಲ್ಲಿ ಸ್ಪಟಿಕ ಮತ್ತು ಕ್ರಿಸ್ಟಲ್ ಮೊದಲ ದ ತರಹವಾರಿ ಭಾರೀ ಕ್ರಯದ ಕನ್ನಡಕಗಳು ವಿಕ್ರಯಕ್ಕೆ ಸಿದ್ಧವಾಗಿರುತ್ತೆ ಬೇಕಾದವರು ಅವರವರ ವಯಸ್ಸನ್ನು ಬರೆದು ಕಳುಹಿಸಿದರೆ ದೃಷ್ಟಿಗೆ ಸರಿಯಾದ ಕನ್ನಡಕವನ್ನು ಚುನಾಯಿಸಿ ಕಳುಹಿಸುತ್ತೇವೆ ನಮಗೆ ಏಜಂಟರು ಬೇಕು ತಿಂಗಳಿಗೆ ಸಂಬಳ ರೂ 10-0-0 ಬೇಕಾದವರು ಈ ವಿಳಾಸಕ್ಕೆ ಬರೆಯಿರಿ

ವಿಳಾಸ— ಎಸ್ ಎಸ್ ಮೂರ್ತಿ, ರಬ್ಬರ್ ಸ್ಟಾಂಪು ಮೇಕರ್, ತಿರುವಲ್ಲಿಕೇಣಿ, ಮದರಾಸು

BURMESE BEAUTY OIL (Regd.)

ಬರ್ಮೀಸ್ ಬ್ಯೂಟಿ ಆಯಿಲ್.

ಈ ತಲೆಗೆ ಹಾಕುವ ಎಣ್ಣೆಗಿಂತಲೂ ಉತ್ತಮವಾದ ಎಣ್ಣೆ ಸಿಕ್ಕುವದಿಲ್ಲ ಅತಿ ಮನೋಹರವಾದ ಸುವಾಸನೆಗಳು ಸೇರಿಸಿ ಶಾಸ್ತ್ರೋಕ್ತವಾಗಿ ತಯಾರುಮಾಡಿದೆ ಇದು ಕೂದಲಿಗೆ ಬಲಕೊಟ್ಟು, ದಟ್ಟವಾಗಿಯೂ, ಮೃದುವಾಗಿಯೂ ಬೆಳೆಸಿ ಮೆದುಳಿಗೆ ಬಲಕೊಡುವದು ಉಷ್ಣದಿಂದ ಕಣ್ಣಿನಲ್ಲಿ ನೀರು ಸುರಿಯುವದನ್ನು ನಿಲ್ಲಿಸಿ ತಂಪು ಕೊಡುತ್ತೆ



"ಬರ್ಮೀಸ್ ಬ್ಯೂಟಿ ಆಯಿಲ್" ಅಂದರೆ ಎಣ್ಣೆಗಳಲ್ಲಿ ಉತ್ಕೃಷ್ಟವಾದದ್ದೆ ನಿರಿ ಮೇಲಿನ ಚಿತ್ರದ ಹಾಗೆ ಉಗಟೇ ಚಾಕ ಜೆಗೆಯೂ, ಬಚ್ಚೋ ಕನ್ನಡಿಯೂ ಸಹ ಇರುವ ಒಂದು ಪೆಟ್ಟಿಗೆಯಲ್ಲಿ ಈ ತೈಲದ ಸೀಸೆ ಇರುತ್ತದೆ ಒಂದಾವರ್ತಿ ಇದನ್ನು ಉಪಯೋಗಿಸಿದರೆ ತಿಳಿ ಯಬಹುದು ಕ್ರಯ—ಸೀಸೆ 1 ಕ್ಕೆ ರೂ 1 0 0, ವಿ ಪಿ ಖರ್ಚು ಪ್ರತ್ಯೇಕ ಸೀಸೆ 3 ಕ್ಕೆ ವಿ ಪಿ ಖರ್ಚು ಸೇರಿ ರೂ 3 0 0 [76 1]

ದಿ ಫ್ಲೋರಲ್ ಪರ್ಫ್ಯೂಮರಿ ಕಂಪೆನಿ, ಬೊಂಬಾಯಿ, 7.

THE FLORAL PERFUMERY Co

Chemists and Perfumers, Bombay, 7

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,60,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವದನ್ನು 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪೆನಿಯ ಅಕ್ಕುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪೆನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾವತಿಯವರ ಮನೆಯಲ್ಲೇ ಜಾಗ್ರತೆ ಪಾವತಿ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲ್ದಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುದರಲ್ಲಿ ಸಂದೇಹವಿಲ್ಲ

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳು ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [711 1]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು

166, ದೊಡ್ಡಪೇಟೆ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

13—3—1914 ರಿಂದ 20—3—1914 ರ ವರೆಗೆ

ಸ್ಥಳ	ಪ್ಲೇಗ್ ಶಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಶಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	6	3	0	0
ಬೆಂಗಳೂರು ಡಿಸ್ಟ್ರಿಕ್ಟು	8	6	0	0
ಮೈಸೂರು ,,	23	10	0	0
ಕೋಲಾರ್ ,,	10	6	3	2
ಕೋಲಾರ್ ಚಿನ್ನದ ಗಣಿಗಳು	5	5	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	7	3	0	0
ಜುಮ್ಲಾ	60	33	3	2

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣ ಋತು ಚೈತ್ರ ಶುದ್ಧ ಸಪ್ತಮಿ ಶುಕ್ರವಾರದಿಂದ ಚೈತ್ರ ಶುದ್ಧ ... ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಏಪ್ರಿಲ್.

	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷ ಮಾಸ ತೇದಿ
3	ಶುಕ್ರ ‡	ಸಪ್ತಮಿ	4-21	ಆರಿದ್ರಾ	31 28	21
3	ಶನಿ *	ಅಷ್ಟಮಿ	1 51	ಪುನರ್ವಸು	11 16	22
3	ಭಾನು †	ನವಮಿ	0-37	ಪುಷ್ಯ	30-20	23
1	ಸೋಮ §	ಏಕಾದಶಿ	55 18	ಆಶ್ಲೇಷ	29-4	24
1	ಮಂಗಳ ,,	ದ್ವಾದಶಿ	49 15	ಮಘಾ	26 19	25
3	ಬುಧ	ತ್ರಯೋದಶಿ	13-40	ಪುಬ್ಬಾ	22 53	26
3	ಗುರು ,,	ಚತುರ್ದಶಿ	37-19	ಉತ್ತರ	19 1	27

‡ ಮಳೆ ನಕ್ಷತ್ರ—ರೇವತಿ 2 ನೇ ಪಾದ * ಅಶೋಕಾಷ್ಟಮಿ, ಚಾಂದ್ರ ... ನಂಜನಗೂಡಿನಲ್ಲಿ ಶ್ರೀಕಂಠನುಡೀ ಉತ್ಸವ † ಮೇಲು ... ವೈರಮುಡೀ ಉತ್ಸವ § ಸ್ಮಾರ್ತ ಏಕಾದಶಿ, ಮಳೆ ನಕ್ಷತ್ರ—ರೇವತಿ ... ಪಾದ. ,, ವೃಷ್ರ, ವೈಷ್ಣವ ಏಕಾದಶಿ, ಹರಿವಾಸರ, ನಂಜನಗೂಡಿನಲ್ಲಿ ... ಕಂಠೇಶ್ವರ ಪಂಚರಥ, ತಿರುಮಕೂಡ್ಲು ಅಗಸ್ತ್ಯೇಶ್ವರ ರಥ ಪ್ರದೋಷ ... ಬೂದಿ ರಂಗಸ್ವಾಮಿರಥ, ಮಳೆ ನಕ್ಷತ್ರ—ರೇವತಿ 1 ನೇ ಪಾದ

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
...ಅಕ್ಕಿ ಪಲ್ಲಾ ೧ಕ್ಕೆ	ರೂ	೧೪-೬-೦	೧೭-೦-೦
... ಅಕ್ಕಿ ಅವರ್		೧೫-೬-೦	೧೭-೮-೦
... ಅಕ್ಕಿ		೧೫-೦-೦	೧೬-೮-೦
... ಅವಲ್		[illegible]	೧೭-೮-೦
,, ಮಧ್ಯಮ		೧೭-೦-೦	೧೬-೧೨-೦
... ಬೇಳೆ ಅವಲ್ ಪಲ್ಲಾ ೧ಕ್ಕೆ		೨೬-೦-೦	೧೬-೪-೦
,, ಮಧ್ಯಮ ,,		೧೪-೦-೦	೧೪-೦-೦
... ರಾಗಿ ಪಲ್ಲಾ ೧ಕ್ಕೆ		೬-೧೨-೦	೫-೧೦-೦
... ,,		೬-೪-೦	೪-೧೨-೦
... ,,		೬-೬-೦	೭-೪-೦
... ಪಲ್ಲಾ ೧ಕ್ಕೆ		೧೩-೦-೦	೧೪-೦-೦
... ,,		೧೦-೧೨-೦	೧೨-೦-೦
... ,,		೧೫-೮-೦	೧೪-೦-೦
... ,,		೧೫-೦-೦	೧೬-೮-೦
... ,,		೧೨-೦-೦	೧೩-೦-೦
... ಸೇರು ೧೨೭ಕ್ಕೆ		೨೪-೮-೦	೨೪-೦-೦
... ಪಲ್ಲಾ ೧ಕ್ಕೆ		೯-೦-೦	೭-೧೦-೦
... ೧೨೭ ಸೇರಿಗೆ		೧೨-೮-೦	೧೪-೦-೦
...ಯಿ ಮಣ ೧ಕ್ಕೆ		೩-೦-೦	೩-೬-೦
...ಯಿ ,,		೩-೦-೦	೩-೪-೦
,, ಮಧ್ಯಮ		೩-೦-೦	೧-೮-೦
... ಅಚ್ಚು ೧೦೦ಕ್ಕೆ		೪-೮-೦	ಮಣ ೬-೪-೦
... ಮಣ ೧ಕ್ಕೆ		೫-೧೨-೦	೬-೮-೦
,, ,,		೫-೬-೦	೬-೦-೦
...ಯಿ ಮಿಣ್ಣ		೫-೪-೦	೬-೪-೦
... ಪಲ್ಲಾ ೧ಕ್ಕೆ		೭-೮-೦	೬-೪-೦
,, ,,		೫-೧೨-೦	೬-೦-೦
... ಮಣ ೧ಕ್ಕೆ		೧-೧೨-೦	೧-೪-೦
...ದ್ದು ಮಣ ೧ಕ್ಕೆ		೧೮-೮-೦	೨೨-೮-೦
... ಕಾಸಿದ್ದು ,, ,,		೨೧-೦-೦	
... ಪಟ್ಟ ೧ಕ್ಕೆ		೫-೧೨-೦	೫-೦-೦
...ಯಿ ೧೦೦ಕ್ಕೆ		೮-೦-೦	೬-೪-೦
...ಯಿ ಮಣ ೧ಕ್ಕೆ		೧-೦-೦	೧-೦-೦
...ಕಾಯಿ ಮಣ ೧ಕ್ಕೆ		೧-೪-೦	೧-೮-೦
(...) ಕೆಂಪು		೧೫-೮-೦	೧೫-೮-೦
,, ಹಸಿರು		೧೫-೧೪-೬	೧೫-೧೪-೬
,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
... ತೊಲ ೧೦೦ಕ್ಕೆ		೮೧-೦-೦	೮೧-೩-೦

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

(3) ಕ್ರಿಸ್ತನ ಮರಣಕ್ಕೂ ನಮಗೂ ಸಂಬಂಧವೇನೆಂಬ ಈ ಪ್ರಶ್ನೆಗೆ ಇನ್ನೊಂದು ಉತ್ತರವೇನಂದರೆ—ಕ್ರಿಸ್ತನ ಮರಣವು ದೇವರ ಸತ್ಯವಾದ ಪ್ರೀತಿಯನ್ನು ಈ ಲೋಕದಲ್ಲಿ ಪ್ರತ್ಯಕ್ಷವಾಗಿ ಪ್ರಕಟಪಡಿಸುತ್ತದೆ ಒಂದಾನೊಂದು ಸಂದರ್ಭದಲ್ಲಿ ಕ್ರಿಸ್ತನು "ನನ್ನನ್ನು ನೋಡಿದವನು ತಂದೆಯನ್ನು (ದೇವರನ್ನು) ನೋಡಿದ್ದಾನೆ" ಎಂದು ಹೇಳಿದನು ಹೀಗೆ ಆತನು ಸಾಸಮಾಡುವವರ ಕ್ರೂರ ಮುಂಚೆ ಸಾಯುವದೇ ಲೇಸೆಂದು ಭಾವಿಸಿಕೊಂಡು, ಹಾಗೆಯೇ ಸತ್ತ... ಜೀವನ ನಿತ್ಯವಾದ ಮತ್ತು ಪರಿಪೂರ್ಣವಾದ ಪವಿತ್ರತೆಯನ್ನು ಮನುಷ್ಯನಿಗೆ ...ತರವಾಗುವ ರೀತಿಯಲ್ಲಿ ಪ್ರಕಾಶಪಡಿಸಿದನು ಪಾಪಮಾಡುವದಕ್ಕೆ ಒಪ್ಪದೆ ...ವನ್ನೇ ಬಿಟ್ಟ ಆ ಪವಿತ್ರನಾದ ಕ್ರಿಸ್ತನನ್ನು ನಾವು ನೋಡುವಾಗ ಅಪ್ಪನ ...ದೇವರ ನಿಶ್ಚಲವಾದ ಪವಿತ್ರತೆಯನ್ನೇ ಕಂಡಂತಾಯಿತು ಮತ್ತು ಇವೇ ...ಯಲ್ಲಿ ಶಾಂತಚಿತ್ತನಾಗಿ ಪ್ರಾಣದಾನಮಾಡಿದ ಕ್ರಿಸ್ತನ ಸಹನವನ್ನೂ ದೀನ ...ವನ್ನೂ ಪ್ರೀತಿಯನ್ನೂ ಕುರಿತು ನಾವು ಓದುವಾಗ ಆ ಕಾಲದಲ್ಲಿ ಹಿಂದೂ ...ರುವ ನಮ್ಮ ಅಪ್ಪನೆಂದ ತಂದೆಯಾದ ದೇವರ ಸತ್ಯವಾದ ಪ್ರೀತಿಯನ್ನು ಪ್ರತ್ಯಕ್ಷವಾಗಿ ಕಂಡ ಹಾಗಾಯಿತು ಮನುಷ್ಯರ ಪಾಪಗಳಿಗಾಗಿ ದೇವರು ...ಸು ಕ್ರಿಸ್ತನನ್ನು ಶಿಕ್ಷಿಸಿದನೆಂದು ಕೆಲವರು ಭಾವಿಸುವರು ಇದು ಅಭಿಪ್ರಾಯವು ತಪ್ಪಾಗಿದೆ ಯಾಕೆಂದರೆ, ಒಬ್ಬನಿಗೆ ಬದಲಾಗಿ ಇನ್ನೊಬ್ಬನಿಗೆ ಶಿಕ್ಷೆ ಹಾಕುವದುಂಟೇ? ...ಗಾದೆಯಂತೆ ದೇವರು ಒಬ್ಬನು ಮಾಡಿದ ಪಾಪಕ್ಕಾಗಿ ಮತ್ತೊಬ್ಬನನ್ನು ...ಸುವದಿಲ್ಲ. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಸತ್ತದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸ್ಥಾಪಿಸಿದ್ದಾನೆ ಎಂಬದಾಗಿ ಒಬ್ಬ ಕ್ರೈಸ್ತ ಧರ್ಮಬೋಧಕನು ಹೇಳಿರುತ್ತಾನೆ ಕ್ರಿಸ್ತನ ...ನ್ನು ನಾವು ಓದುವಾಗ, ಎಲ್ಲಾ ಕಷ್ಟಗಳನ್ನು ತಾಳ್ಮೆಯಿಂದ ...ಕೊಳ್ಳುವ ಆತನ ಪ್ರೀತಿಯು ಅದೃಶ್ಯನಾದ ಸಾಕ್ಷಾತ್ ದೇವರಲ್ಲೇ ಇರುವ ...ವಾದ ಪ್ರೀತಿಯನ್ನು ನಮಗೆ ಪ್ರದರ್ಶನಪಡಿಸುತ್ತದೆ ಕ್ರಿಸ್ತನು ತನ್ನನ್ನು ಮರಣಕ್ಕೆ ಗುರಿಮಾಡಿದ ಆ ಯಾಜಕರು, ಸಿಪಾಯಿಗಳು, ಪಿಲಾತನು, ಯೂದನು ...ಮುಂತಾದವರೆಲ್ಲರಿಗೆ ವಿರೋಧವಾಗಿ ಪ್ರತಿಫಲಿಸುವದಕ್ಕೆ ಶಕ್ತನಾಗಿದ್ದನು. ಆದರೂ ಆತನು ಹಾಗೆ ಮಾಡುವದಕ್ಕೆ ಬದಲಾಗಿ ಅವರ ಪಾಪಗಳ ...ಮಿಂದ ತನ್ನ ಮೇಲೆ ಬಂದ ಕಷ್ಟಗಳನ್ನೆಲ್ಲಾ ಅನುಭವಿಸುವದಕ್ಕೆ ಸಿದ್ಧನಾಗಿದ್ದನು. ಅವರ ಪಾಪದ ಫಲವನ್ನು ಪ್ರೀತಿಪೂರ್ವಕವಾಗಿ ತಾನು ಉಂಡನು ...ಆತನು ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಇರುವ ಎಲ್ಲಾ ...ಅದೃಶ್ಯನಾದ ದೇವರ ಕುಂದಿಹೋಗದ ನಿತ್ಯವಾದ ಪ್ರೀತಿಯನ್ನು ವ್ಯಕ್ತ...ಪಡಿಸಿದನು ಈ ಪ್ರಬಂಧವನ್ನು ಬರೆಯುವವರ ಬಂಧುಗಳಲ್ಲಿ ಒಬ್ಬರು ಗುರುಗಳಾಗಿದ್ದಾರೆ ಅವರ ಮಕ್ಕಳಲ್ಲಿ ಒಬ್ಬನು ಕೊಲೆಮಾಡಿದ ಅಪರಾಧಕ್ಕೆ ಸಿಕ್ಕಿಬಿದ್ದು ...ಶಿಕ್ಷೆಯು ವಿಧಿಸಲ್ಪಟ್ಟಿತು ಈ ಸಮಾಚಾರವನ್ನು ಕೇಳಿದ ಕೆಲವು ...ಗಳಾಗಿ ಅವರ ತಲೆಯ ಕೂದಲುಗಳೆಲ್ಲಾ ನರೆತು ಬುದ್ಧಬಿಳುಪಾದವು ಪಾಪಮಾಡಿದವನು ಯಾರು? ಆ ಹುಡುಗನೇ ಆದರೆ ಪಾಪದ ಫಲವು ...ಮೇಲೆ ಬಿತ್ತು? ಆ ತಂದೆಯ ಮೇಲೆಯೇ ಕೊಲೆಗಾರನಾದವನು ಯಾರು? ...ಹುಡುಗನು ಆದರೆ ಆ ಕರ್ಮದ ಫಲವನ್ನು ಉಂಡವನು ಯಾರು? ಆ ಮುದುಕನು. ಮಗನು ಮಾಡಿದ ಕರ್ಮದ ಫಲವನ್ನು ತಂದೆ ತಿಂದದ್ದರಲ್ಲಿ ಆ ಮಗನ ಮೇಲೆ ತನಗಿರುವ ಪ್ರೇಮಾತಿಶಯವನ್ನು ಎಷ್ಟು ಸ್ಪಷ್ಟವಾಗಿ ಪ್ರಕಾಶಪಡಿಸಿದನು ...ಇದೇ ಪ್ರಕಾರ ದೇವರು ತನ್ನ ತತ್ವದ ಮೂರ್ತಿಯಾದ, ತನ್ನ ಪ್ರತಿಬಿಂಬನಾದ ಪ್ರಿಯನಾದ ಕ್ರಿಸ್ತನ ಮರಣದ ಮೂಲಕ ತನ್ನ ನಿತ್ಯವಾದ ಪ್ರೀತಿಯನ್ನು ಪ್ರದರ್ಶನಪಡಿಸಿದನು ದೇವರು ಸರ್ವಕಾಲದಲ್ಲಿಯೂ ಮಾನವರನ್ನು ...ಮಾಡುತ್ತಲೇ ಬಂದಿರುತ್ತಾನೆ ಆ ಪ್ರೀತಿಯು ಹಿಂದೆ ಯಾವ ಕಾಲದಲ್ಲಾದರೂ ಬಿದ್ದುಹೋದದ್ದೂ ಇಲ್ಲ ಅದು ಮುಂದೆ ಎಂದಿಗೂ ಬಿದ್ದುಹೋಗುವದು ಇಲ್ಲ ಈ ಅಗಾಧವಾದ ಪ್ರೀತಿಯನ್ನು ದೇವರು ಕ್ರಿಸ್ತನ ಮರಣದಲ್ಲಿ ಪ್ರಕಾಶಪಡಿಸಿದನು ಕ್ರಿಸ್ತನನ್ನು ಮರಣಕ್ಕೆ ಗುರಿಮಾಡಿದ ಪಾಪಗಳು 1900 ...ವರ್ಷಗಳ ಹಿಂದೆ ಇದ್ದವರಲ್ಲಿ ಮಾತ್ರವೇ ಅಲ್ಲ, ನಮ್ಮಲ್ಲಿಯೂ ಇರುತ್ತವೆ ...ಸಂತಾನವು ಪಾಪಮಾಡಿತು ಆದರೆ ನಮ್ಮ ಪಾಪದ ಅಪರಾಧವು ನಿರಪರಾಧಿಯಾದ ಕ್ರಿಸ್ತನ ಮೇಲೆ ಬಿತ್ತು ನರಸಂತಾನವು ಪಾಪಮಾಡಿತು ಆದರೆ ನಮ್ಮ ...ದ ಫಲವನ್ನು ಕ್ರಿಸ್ತನು ಮರಣವನ್ನನುಭವಿಸಿದರಲ್ಲಿ ತಿಂದನು ಪಾಪದ ...ನಂಜು ನರಸಂತಾನಕ್ಕೆಲ್ಲಾ ಏರಿರುತ್ತದೆ ಆದರೆ ಕ್ರಿಸ್ತನು ತನ್ನ ಮರಣದಲ್ಲಿ ಆ ನಂಜನ್ನು ಉಂಡನು ಆದಕಾರಣ ಲೋಕದ ಪಾಪವೆಂಬ ನಂಜನ್ನು ಉಂಡಂಥ ಕ್ರಿಸ್ತನೇ ವಾಸ್ತವವಾಗಿ ನಂಜುಂಡನಾಗಿರುತ್ತಾನೆ ಮತ್ತು ಕ್ರಿಸ್ತನ ವಿಷಯವಾಗಿ—ಆತನು ನಮ್ಮಲ್ಲಿರುವ ಪಾಪಗಳು ತನ್ನನ್ನು ಹಿಂಸೆಪಡಿಸುವದಕ್ಕೂ ಕೊಲ್ಲುವದಕ್ಕೂ ಅವಕಾಶಕೊಡುತ್ತಾನೆಂದು ನಾವು ಓದುವಾಗ ನಮಗೆ ಕಂಡುಬರುವಂಥಾದ್ದೇನು? ಮಾನವರ ಪಾಪದ ದೆಸೆಯಿಂದ ದುಃಖಿತನಾಗಿ ಮನೋವ್ಯಥೆಯನ್ನನುಭವಿಸುತ್ತಿರುವ ಪರಮತಂದೆಯಾದ ದೇವರ ಅಗಾಧವಾದ ಪ್ರೀತಿಯು ಕ್ರಿಸ್ತನ ಮರಣದಲ್ಲಿ ನಮಗೆ ಪ್ರಕಟವಾಗಿರುವದಿಲ್ಲವೇ? ಯೇಸು ಕ್ರಿಸ್ತನ ಮರಣವು ಈಗ ನಮಗೆ ದೇವರ ನಿತ್ಯವಾದ ಪ್ರೀತಿಯನ್ನು ಪ್ರಕಾಶಪಡಿಸುತ್ತದೆ ಆತನ ಮರಣವು ದೇವರು ಪಾಪಕ್ಕೆ ವಿರೋಧಿಯಾಗಿದ್ದಾನೆಂಬುವದನ್ನು ವ್ಯಕ್ತಪಡಿಸುತ್ತದೆ ಇಷ್ಟೇ ಅಲ್ಲ ನಮ್ಮ ಪಾಪಕ್ಕೆ ಬರತಕ್ಕ ಶಿಕ್ಷೆಯನ್ನು ತಾನು ಅನುಭವಿಸಿ, ನಮ್ಮನ್ನು ಅದರಿಂದ ಬಿಡಿಸುವಷ್ಟರ ಮಟ್ಟಿಗೆ ಆತನು ನಮ್ಮನ್ನು ಪ್ರೀತಿಸುತ್ತಾನೆಂಬುವದನ್ನೂ ಸಹ ಪ್ರಕಾಶಪಡಿಸುತ್ತದೆ

ಕ್ರಿಸ್ತನ ಮರಣದ ವಿಷಯವಾಗಿ ತಿಳಿಸತಕ್ಕಂಥ ಇನ್ನು ಅನೇಕ ಸಂಗತಿಗಳು ಇರುತ್ತವೆ ಆದರೆ ನಾವು ಈ ಪ್ರಬಂಧವನ್ನು ಮುಗಿಸಬೇಕಾಗಿರುತ್ತದೆ ವಾಚಕರೇ, ಕ್ರಿಸ್ತನ ಮರಣಕ್ಕೆ ಕಾರಣವಾಗಿದ್ದಂಥಾ ನಿಮ್ಮೊಳಗಿರುವಂಥಾ ಪಾಪಗಳನ್ನು ಬಿಟ್ಟುಬಿಡಿರಿ ಕಾಳಸರ್ಪವನ್ನು ಕಂಡು ಹೆದರುವಂತೆ ಅದಕ್ಕೆ ಹೆದರಿರಿ ಪ್ಲೇಗ್ ಮಾರಿಯನ್ನು ಕಂಡಂತೆ ಅದನ್ನು ಕಂಡು ಓಡಿಹೋಗಿರಿ ನೀವು ಪಾಪಗಳಲ್ಲೇ ನಿರತರಾಗಿದ್ದರೆ, ದೇವರ ಪ್ರೇಮಾತಿಶಯವನ್ನು ತಿರಸ್ಕರಿಸುತ್ತೀರಿ. ಈ ಪ್ರೇಮಾತಿಶಯವನ್ನು ಪ್ರದರ್ಶನಪಡಿಸುವದರಲ್ಲಿ ಕ್ರಿಸ್ತನು ಆ ಪಾಪಗಳೇ ತನ್ನನ್ನು ಕೊಲ್ಲುವದಕ್ಕೆ ಅವಕಾಶಕೊಟ್ಟನು ಆದರೆ ಈಗ ನೀವು—ನಮ್ಮ ಪಾಪಗಳಿಗಾಗಿ ಪಾಪರಾದವನ್ನು ಹೊತ್ತುಕೊಂಡ ನಮ್ಮ ಪರಮತಂದೆಯೇ, ಪಾಪಾತ್ಮನಾಗಿರುವ ನನ್ನ ಅಪರಾಧಗಳನ್ನು ಕ್ಷಮಿಸು, ನಾನು ಪಾಪರಹಿತನಾಗಿ ಬದುಕುವದಕ್ಕೆ ನನಗೆ ಸಹಾಯಮಾಡು ಎಂದು ಪ್ರಾರ್ಥಿಸಿದರೆ, ನಿಮ್ಮಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸಿರುವ ಕ್ರಿಸ್ತನ ಮರಣವು ಈಗ ನಿಮಗೆ ಪಾಪಕ್ಷಮೆಯನ್ನೂ ಜೀವನ್ಮುಕ್ತಿಭಾವವನ್ನೂ ನಿರ್ಮಲಚಿತ್ತವನ್ನೂ ಅನುಗ್ರಹಿಸುವದು [ಸಮಾಪ್ತಿ]

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಶ್ರೀಮನ್ ಮಹಾರಾಜರವರು ಮೊನ್ನೆ ಮಂಗಳವಾರದ ದಿನ ರಾಜಧಾನಿಯಿಂದ ಮೋಟರಿನಲ್ಲಿ ನಂಜನಗೂಡಿಗೆ ದಯಮಾಡಿದ್ದರು ಅವರು ಈ ವಾರ ನೀಲಗಿರಿಗೆ ಪ್ರಯಾಣಮಾಡುತ್ತಾರೆಂಬ ಪ್ರವಾದವಿದೆ

ಕಳೆದ ಶುಕ್ರವಾರವೂ ಮಂಗಳವಾರವೂ ಸಾಯಂಕಾಲ ರಾಜಧಾನಿಯಲ್ಲಿ ಎರಡು ಹದ ಒಳ್ಳೇ ಮಳೆ ಆಯಿತು ಬಿಸಿಲಿನ ಧಗೆಯು ಹೆಚ್ಚಾಗಿದೆ ಆದರೂ ಇನ್ನೂ ಮಳೆ ಬರಬಹುದೆಂಬ ನಿರೀಕ್ಷೆಯುಂಟು

ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ ರಸ್ತೆಯನ್ನು ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟಗಳ ಮೂಲಕ ಚಿಕ್ಕಬಳ್ಳಾಪುರದ ವರೆಗೆ ಬದಾವಣೆ ಮಾಡಬೇಕೆಂದೂ, ಇದಕ್ಕಾಗಿ 4 ಲಕ್ಷ ರೂಪಾಯನ್ನು ಮೊದಲಿನಂತೆ ಪ್ರಜೆಗಳಿಂದ ಸಾಲವಾಗಿ ತೆಗದು ಕೊಡಿಸಬೇಕೆಂದೂ ಆ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿದಾರೆ

ದಾವಣಗೆರೆ ತಾಲೂಕು ಮಾಯಕೊಂಡ ಗ್ರಾಮದಲ್ಲಿ ಸ್ಕೂಲ್ ಮಾಸ್ಟರ್ ರಾಮಚಂದ್ರರಾಯನು ಅಲ್ಲಿನ ಶೇಕ್ದಾರ್ ಸೀತಾರಾಮಯ್ಯನನ್ನು ಗಾಯಮಾಡಿದನೆಂದೂ, ಅದರಿಂದ ಆತನು ಮೃತಪಟ್ಟನೆಂದೂ, ಈಗ ಸರ್ಕಾರದವರು ರಾಮಚಂದ್ರರಾಯನನ್ನು ದಸ್ತಗಿರಿ ಮಾಡಿ ಅನಿಷೆ ನಡಿಸುತ್ತಿದಾರೆಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ

ಮಾಗಡಿ ತಾಲೂಕಿಗೆ ಸೇರಿದ ಕೆಲವು ಗ್ರಾಮಗಳ ಪಟೇಲರೂ, ಶ್ಯಾನುಭೋಗರೇ ಮೊದಲಾದವರೂ ತಮ್ಮ ಗ್ರಾಮಗಳಲ್ಲಿ ಪ್ಲೇಗ್ ಉಪದ್ರದ ನಿವಾರಣೆಗೋಸ್ಕರ ಪ್ರೋತ್ಸಾಹಪಡಿಸಿ ಗ್ರಾಮಸ್ಥರಿಗೆ ಇನಾಕ್ಯುಲೇಷನ್ ಮಾಡಿಸಿದ್ದಕ್ಕಾಗಿ ಸರ್ಕಾರದವರು ಅವರಿಗೆಲ್ಲಾ 50 ರೂಪಾಯಿ ಖರ್ಚಿನಲ್ಲಿ ಮೆಡಲುಗಳನ್ನು ತಯಾರುಮಾಡಿ ಬಹುಮಾನ ಕೊಡಬೇಕೆಂಬದಾಗಿ ಸ್ಯಾಂಕ್ಷನ್ ಮಾಡಿದಾರೆ

ಬೆಂಗಳೂರು ಸಿಟಿ ಡೆಪ್ಟಿ ಕಮಿಷನರವರ ಆಫೀಸಿನಲ್ಲಿ ನೌಕರನಾಗಿದ್ದ ನರಸಿಂಗರಾಯನೂ, ಓವರ್‌ಸಿಯರ್ ನಾಗರತ್ನ ಮೊದಲಿಯಾರ್ ಸೇರಿ ದೊಡ್ಡಬಳ್ಳಾಪುರದ ತಾಲೂಕಿನಲ್ಲಿ ನಡೆದ ಒಂದು ಕೆರೆ ಕಾಮಗಾರಿ ಹಣದಲ್ಲಿ ಸುಮಾರು 900 ರೂಪಾಯಿ ತಿಂದುಹಾಕಿದರೆಂದು ಮೋಕದ್ದಮೆ ಆಗಿದೆ ನರಸಿಂಗರಾಯನು ಪರಾರಿಯಾಗಿದಾನೆಂದೂ, ನಾಗರತ್ನಮೊದಲಿಯನ್ನು ಪೋಲೀಸಿನವರು ಮೊನ್ನೆ ಸೋಮವಾರ ದಿವಸದಲ್ಲಿ ದಸ್ತಗಿರಿ ಮಾಡಿದಾರೆಂದೂ ಪ್ರಕಟವಾಗಿದೆ

ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಸ್ತ್ರೀ ಸಮಾಜದ ಮೀಟಿಂಗು ಕಳೆದ ಶನಿವಾರ ಜರುಗಿತು ಸ್ತ್ರೀಯರು ವಿಶೇಷವಾಗಿ ಹಾಜರಾಗಿದ್ದರು ಹಾರ್ಮೋನಿಯಂ ವಾದ್ಯಘೋಷದಿಂದ ಆಹ್ಲಾದಕರವಾಗಿ ಕೂಟವು ಆರಂಭವಾಯಿತು ಶ್ರೀಮತಿ ಮಹಾಲಕ್ಷ್ಮಮ್ಮನವರು ಬುದ್ಧಿಕುಶಲತೆಗೆ ದೇಹಶಕ್ತಿಯು ಅವಶ್ಯಕವಾಗಿರುತ್ತದೆಂಬ ವಿಚಾರವನ್ನು ಕುರಿತು ಒಂದು ಭಾಷಣವನ್ನು ಓದಿ, ಮಂಗಳವಾದ ನಂತರ ಕೂಟವನ್ನು ಮುಕ್ತಾಯಮಾಡಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ

ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕೆಳಗಿನ ಹಾಗೆ ಮುಂದೆ ಹೇಳುವ ಸ್ಥಳಗಳಲ್ಲಿ ಕ್ರಮೇಣ ವೈದ್ಯಶಾಲೆಗಳನ್ನು ಇಡಿಸಬೇಕೆಂದು ತೀರ್ಮಾನ ಮಾಡಿಕೊಂಡಿದಾರೆ ಆ ಸ್ಥಳಗಳ್ಯಾವವೆಂದರೆ, ಪಾವಗಡ ತಾ|| ಹೊಸಕೋಟೆ, ಗುಬ್ಬಿ ತಾ|| ಹೊಸಕೆರೆ, ಚಿಕ್ಕನಾಯಕನಹಳ್ಳಿ ತಾ|| ಮದನಮಡು, ತುಮಕೂರು ತಾ|| ಕೋರಾಲ, ಕೊರಟಗೆರೆ ತಾ|| ತೋವಿನಕೆರೆ ಈ ಸ್ಥಳಗಳ ಮೊದಲನೇ ಎರಡು ಗ್ರಾಮಗಳಲ್ಲಿ 1914-15 ನೇ ಸಾಲಿನಲ್ಲಿ ವೈದ್ಯಶಾಲೆಗಳನ್ನು ಇಡಿಸುವವರಾಗಿದಾರೆ

ಮೇಲುಕೋಟೆ ವೈರಮುಡಿ ಉತ್ಸವವು

ಈ ಉತ್ಸವವು ಪ್ರತಿವರ್ಷ ಪುಷ್ಯನಕ್ಷತ್ರದಲ್ಲಾಗುವುದು ಈ ಉತ್ಸವವನ್ನು ನೋಡಲು ಸಹಸ್ರಾರು ಪ್ರಜೆಗಳು ಹಿಂದೂ ದೇಶದ ನಾನಾ ಕಡೆಗಳಿಂದ ಬಂದು ಕೆಲವು ವೇಳೆ ಉತ್ಸವವು ಮುಗಿಯುವ ವರೆಗೂ ಇದ್ದು ಹೋಗುವರು ಪುರಾತನವಾದ ಈ ಮೇಲುಕೋಟೆಯಲ್ಲಿನ ಜನಗಳು ಸೇವೆಗೆಯುವದಲೂ, ದೇವಸ್ಥಾನದ ವರಮಾನದಿಂದಲೂ ಜೀವಿಸುವರು ಇತರರು ವ್ಯಾಪಾರ ಕೈಷಿಗಳಿಂದ ಜೀವನಮಾಡುವರು ಇಲ್ಲಿ ಒಂದು ಗೌರ್ನಮೆಂಟ್ ಎ ವಿ ಸ್ಕೂಲೂ, ಲೋಕಲ್ ಫಂಡ್ ಡಿಸ್ಪೆಂಸರಿಯೂ, ಗರ್ಲ್ಸ್ ಸ್ಕೂಲೂ, ಸಹಾಯದ್ರವ್ಯವನ್ನು ಹೊಂದಿ ಎಗ್ಜಿಬಿಷನ್‌ಗಳಲ್ಲಿ ಕೈಗಾರಿಕೆ ಸಾಮಾನುಗಳಿಗೆ ಅನೇಕ ಮೆಡಲುಗಳನು ಪಡೆದ ಒಂದು ಇಂಡಸ್ಟ್ರಿಯಲ್ ಸ್ಕೂಲೂ, ಸಂಸ್ಕೃತ ವಿದ್ಯಾಭ್ಯಾಸಕ್ಕೆ ಕಾರಣವಾಗಿರುವ ಒಂದು ಪಾಠಶಾಲೆಯೂ, ಅದರಲ್ಲಿ ಭಾರಿಯಾದ ಲೈಬ್ರರಿಯೂ, ಒಂದು ವ್ಯವಸಾಯದ ಕೋಆಪರೆಟಿವ್ ಸೊಸೈಟಿಯೂ, ಒಂದು ನೇಯಿಗೆ ಕೋಆಪರೆಟಿವ್ ಸೊಸೈಟಿಯೂ ಇರುವವು

ಕಳೆದ 6 ನೇ ತಾ ನಮ್ಮ ದಿವಾನರವರಾದ ಮ|| ವಿಶ್ವೇಶ್ವರಯ್ಯನವರು ಈ ಉತ್ಸವ ಕಾಲದಲ್ಲಿ ಇಲ್ಲಿನ ವಿದ್ಯಮಾನಗಳನ್ನು ಕಣ್ಣಾರ ನೋಡಬೇಕೆಂಬ ಇರಾದೆಯಿಂದ ತಮ್ಮ ಸರ್ಕೀಟು ಸಮಯದಲ್ಲಿ ಅವಕಾಶವನ್ನುಂಟುಮಾಡಿಕೊಂಡು ಸಾಯಂಕಾಲ 3½ ಗಂಟೆಗೆ ಊರಿಗೆ ತಲಪಿ ಮೇಲ್ಕಂಡ ಸ್ಕೂಲುಗಳನ್ನೂ, ಡಿಸ್ಪೆನ್ಸರಿಯನ್ನೂ, ಸೊಸೈಟಿಗಳನ್ನೂ, ಪಾಠಶಾಲೆಯನ್ನೂ, ಅಲ್ಲಿರುವ ಪುರಾತನವಾದ ಧರ್ಮಶಾಲ, ಯತಿರಾಜ, ಬೈರಾಗಿ ಮಠಗಳನ್ನೂ ಪರಾಂಬರಿಸಿಕೊಂಡುದಲ್ಲದೆ ಬೆಟ್ಟವನ್ನು ಹತ್ತಿ ಯೋಗಾ ನೃಸಿಂಹ ದೇವರನ್ನೂ, ಊರಲ್ಲಿರುವ ತಿರುನಾರಾಯಣ ಸಂಪತ್ಕುಮಾರ ದೇವರುಗಳನ್ನೂ ಸಂದರ್ಶನ ಮಾಡಿ ಸುಮಾರು 6 ಗಂಟೆಗೆ ಶ್ರೀಯದುಗಿರಿ ಸದಾನಂದವರ್ಧಿನಿ ಸಭೆಯ ಮಂಟಪಕ್ಕೆ ದಯಮಾಡಿಸಿ ಮಂಡ್ಯದ ತಾ|| ಕೊಮ್ಮೇರಹಳ್ಳಿ, ಹೊಳಲಿ, ಮೇಲುಕೋಟೆ ತೊಂಬಳ ಕದಲಗೆರೆ, ಕೃಷ್ಣರಾಜಪೇಟೆ ತಾಲೂಕು ಅಕ್ಕಿಹೆಬ್ಬಾಳು, ಮೇಲುಕೋಟೆ ಇಂಡಸ್ಟ್ರಿಯಲ್ ಸ್ಕೂಲ್, ಸೀರಾ, ಚಿಕ್ಕನಾಯಕನಹಳ್ಳಿ, ತಿಪ್ಪೂರು, ಮೈಸೂರು ಪಂಚಮಸ್ಕೂಲುಗಳಿಂದ ತಯಾರಿಸಲ್ಪಟ್ಟ ರತ್ನಗಂಬಳಿ, ಪಂಚೆ, ಕಲಾವತ್ತು ಸೀರೆ, ಚಕ್ಕಳದ ಸಾಮಾನು, ಚಿತ್ತದ ಸಾಮಾನು, ಮರಕೆಲಸ ಮತ್ತು ಪಂಚಮ ಹುಡುಗರು ಬರೆದಿಟ್ಟಿದ್ದ ಕಾಪಿ ಪುಸ್ತಕ, ಕೈ ಬರವಣಿಗೆ ಇವುಗಳನ್ನು ಪರಾಂಬರಿಸಿ ಹರ್ಷಗೊಂಡದ್ದಲ್ಲದೆ ಅಲ್ಲಿ ನೆರೆದಿದ್ದ ಪ್ರಜೆಗಳ ಅಹವಾಲನ್ನು ಕೇಳಿ ತಿಳಿದುಕೊಳ್ಳುತ್ತಾ ಅಲ್ಲಿರುವ ಮುಖಂಡರಾದ ಮ್ಯುನಿಸಿಪಲ್ ಮೆಂಬರುಗಳಲ್ಲಿ ಕೆಲವರನ್ನು ಮುಂದೆ ಕರೆದು ಗ್ರಾಮಪಾಕೀಜು ಸ್ವಚ್ಛವಾಗಿಲ್ಲವೆಂದೂ ನೀರು ಡ್ರೈನೇಜು ಇವುಗಳಿಗೇನು ಮಾಡಿರುವಿರಿ ಮತ್ತು ಮುಂದಕ್ಕೆ ಏನು ಮಾಡತಕ್ಕವರಾಗಿರುವಿರೆಂದೂ ಪ್ರಸ್ತಾಪಮಾಡುವಲ್ಲಿ ಅಲ್ಲಿನ ಕೆಲವು ಮ್ಯುನಿಸಿಪಲ್ ಮೆಂಬರುಗಳು ಮ್ಯುನಿಸಿಪಾಲಿಟಿಯಲ್ಲಿ ಜನಗಳ ಬಡತನದಿಂದ ಆದಾಯ ಕಮ್ಮಿಯಾಗಿದೆಯೆಂದೂ, ಸರ್ಕಾರದವರು ಗ್ರಾಮಪಾಕೀಜು ವಗೈರೆಗಳಿಗೆ ಅನುಕೂಲಪಡಿಸಿಕೊಡಬೇಕೆಂದೂ ಕೇಳಿಕೊಂಡರು ಅದಕ್ಕೆ ನಮ್ಮ ದಿವಾನರವರು ಸರ್ವದಾ ಇದೇ ರೀತಿ ಸರ್ಕಾರದ ಸಹಾಯವನ್ನು ಕೇಳಿಕೊಂಡಲ್ಲಿ ಹಾಗೆ ಮಾಡಲು ಸರ್ಕಾರಕ್ಕೆ ಟೈತನ್ಯ ಸಾಲದೆಂದೂ, ಜನಗಳೇ ಮುಂದಾಳಾಗಿ ನಿಂತು ಮ್ಯುನಿಸಿಪಾಲಿಟಿಯ ಆದಾಯವನ್ನು ವೃದ್ಧಿಪಡಿಸಿಕೊಂಡು ಸರ್ಕಾರದವರನ್ನು ಸಲಹೆ ಕೇಳಿದರೆ ಅಂಥಾದ್ದಕ್ಕೆ ಗಮನಕೊಟ್ಟು ಸ್ವಲ್ಪ ದ್ರವ್ಯಸಹಾಯವನ್ನೂ ಮಾಡುತ್ತಾರೆಂದೂ ಅಪ್ಪಣೆ ಕೊಡಿಸಿದ್ದಲ್ಲದೆ ಅಲ್ಲಿ ನೇಯಿಗೆಯವರ ಮನೆಗಳು ಎಷ್ಟಿವೆಯೆಂದೂ, ಅವರ ಆದಾಯವು ಸಾಲಿಯಾನಾ ಎಷ್ಟಾಗಬಹುದೆಂದೂ ಕೇಳಿ ನೋಟುಮಾಡಿಕೊಂಡು ಮ್ಯುನಿಸಿಪಲ್ ಕೌನ್ಸಿಲರುಗಳನ್ನು ಕುರಿತು—ಇಲ್ಲಿಗೆ ಬರತಕ್ಕ ಯಾತ್ರಾರ್ಥಿಗಳ ಮೂಲಕ ಮ್ಯುನಿಸಿಪಾಲಿಟಿಗೆ ಯಾವದಾದರೊಂದು ವಿಧವಾಗಿ ಆದಾಯವನ್ನುಂಟುಮಾಡಿಕೊಂಡು ಗ್ರಾಮಾಭಿವೃದ್ಧಿಗೆ ಅವಕಾಶವನ್ನುಂಟುಮಾಡಿಕೊಳ್ಳತಕ್ಕದ್ದೆಂದು ಹೇಳಿ, ಆ ಸಮಾಜದಲ್ಲಿ ಕೊಟ್ಟ ಅಡ್ರೆಸ್ಸನ್ನು ಸ್ವೀಕರಿಸಿ, ಬೆಳ್ಳೂರು, ನಾಗಮಂಗಲ, ಕುಣಿಗಲ ಮುಖಾಂತರ ಅಲ್ಲಿಗೆ ಒಂದು ಲೈಟ್ ರೈಲ್ವೆಯನ್ನು ಹಾಕಿಸಿಕೊಡಬೇಕೆಂಬ ಪ್ರಾರ್ಥನೆಯನ್ನು ನೋಟುಮಾಡಿಕೊಂಡು ರಾತ್ರಿ 7 ಗಂಟೆಯಲ್ಲಿ ವಾಪಸು ಚಿತ್ತೈಸಿದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶುಕ್ರವಾರ ಬೆಳಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗು ನಡಿಸಿದರು ಪಟ್ಟಣದ ಕೆಲವು ಮುಖ್ಯವಾದ ರಸ್ತೆಗಳಲ್ಲಿ ಸೇತುವೆಗಳ ಕೆಳಗೆ ಜನರು ಹೋಗಿ ಹೇಸಿಗೆಮಾಡಿ ಕೆಡಿಸುತ್ತಿರುವುದನ್ನು ತಪ್ಪಿಸುವುದಕ್ಕೋಸ್ಕರ ಅಂಥಾ ಸೇತುವೆಗಳ ಬಾಯಿಗೆ ಒಂದು ಅಡಿ ಮೇಲಕ್ಕೆ ಕಬ್ಬಿಣದ ಸಲಾಕಿಗಳನ್ನು ಹಾಕಿ ನಿಲ್ಲಿಸಬೇಕೆಂದು ಮೆಂಬರುಗಳು ಒಪ್ಪಿ 300 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ —ದೇವರಾಜ ಮಾರ್ಕೆಟ್ಟಿನಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಶಾಲೆಯ ಮೇಲ್ವಿಚಾರಣೆಗೆ ಮ|| ಎಸ್ ವೆಂಕೋಬರಾಯರನ್ನು ವೈದ್ಯರಾಗಿ ಸರ್ಕಾರದವರು ಕಳುಹಿಸಿರುವುದರಿಂದ ಅವರ ತಲಬನ್ನು ಮ್ಯುನಿಸಿಪಾಲಿಟಿಯವರು ವಹಿಸಲಾಗದೆಂದು ತೀರ್ಮಾನಮಾಡಿದರು —ಹಕೀಂ ಅಲಿ ಪೀರ್ ಸಾಹೇಬರಿಗೆ ಮ್ಯುನಿಸಿಪಾಲಿಟಿಯಿಂದ ಮಾಹೆಯಾನಾ ಕೊಡುವ ಸಹಾಯದ್ರವ್ಯವನ್ನು ಇನ್ನೂ 5 ರೂಪಾಯಿ ಹೆಚ್ಚುಮಾಡಬೇಕೆಂದು ಮೆಂಬರುಗಳು ಒಪ್ಪಿದರು —ರಾಜಧಾನಿಯಲ್ಲಿರುವ ಮಹಾರಾಣಿಯವರ ಹೆಂಗಸರ ಆಸ್ಪತ್ರೆ ಖರ್ಚಿಗೆ ಈಗ ಮ್ಯುನಿಸಿಪಾಲಿಟಿಯವರು ವರುಷಕ್ಕೆ ಸುಮಾರು 5,000 ರೂಪಾಯಿ ಕೊಡುತ್ತಿದಾರೆ ಮೆಂಬರುಗಳು ಈ ಖರ್ಚನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡಲ್ಲಿ ವಿದ್ಯಾಭಿವೃದ್ಧಿಗೂ, ಕನ್ಸರ್ವೆನ್ಸಿ ಬಾಬಿಗೂ, ರಸ್ತೆಗಳ ಕಾಮಗಾರಿ ಮುಂತಾದದ್ದಕ್ಕೂ ಆ ಹಣವನ್ನು ಮ್ಯುನಿಸಿಪಾಲಿಟಿಯವರು ವಿನಿಯೋಗಿಸಿಕೊಳ್ಳುವುದಕ್ಕೆ ಸಹಾಯವಾಗುತ್ತೆಂದೂ, ಬೆಂಗಳೂರಿನಲ್ಲಿ ಇದೇ ರೀತಿ ಸರ್ಕಾರದವರು ಮ್ಯುನಿಸಿಪಾಲಿಟಿಗೆ ಸಹಾಯಮಾಡಿರುತ್ತಾರೆಂದೂ ಅಭಿಪ್ರಾಯಪಟ್ಟು, ಈ ಅರ್ಥವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಬೇಕೆಂದು ತೀರ್ಮಾನಮಾಡಿದಾರೆ

ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯ ಬಾಜೂದಲ್ಲಿರುವ ಖಾಲಿ ನಿವೇಶನವನ್ನು ಕನ್ನೇಗೌಡನಕೊಪ್ಪಲಿನ ಎ ವಿ ಸ್ಕೂಲು ಕಟ್ಟುವುದಕ್ಕಾಗಿ ವಿದ್ಯಾ ಇಲಾಖೆಗೆ ವಹಿಸಬಹುದೆಂದು ಮೆಂಬರುಗಳು ಒಪ್ಪಿದರು —ಮ್ಯುನಿಸಿಪಾಲಿಟಿಯಿಂದ ನೂರು ರೂಪಾಯಿಯೊಳಗೆ ಒಂದು ಬೈಸಿಕಲ್ಲನ್ನು ಕೊಂಡು ಅದನ್ನು ಉಪಯೋಗಿಸುವವನಿಗೆ 3 ರೂಪಾಯಿ ಅಲೋಯನ್ಸು ಕೊಡಬಹುದೆಂದೂ, ಈ ಜವಾನನು ಪ್ರೆಸಿಡೆಂಟರ ಬಳಿ ಆರ್ಡರ್ಲಿಯಾಗಿ ಕೆಲಸಮಾಡಬಹುದೆಂದೂ ಮೆಂಬರುಗಳು ಸಮ್ಮತಿಪಟ್ಟರು —ಪ್ರೆಸಿಡೆಂಟರವರು 50 ಬೆಂಚುಗಳನ್ನು ರೂ 3 15 0 ರಂತೆ ತಯಾರುಮಾಡಿಸಿದ್ದನ್ನು ಮೆಂಬರುಗಳು ಒಪ್ಪಿ, ಮ್ಯುನಿಸಿಪಲ್ ಸ್ಕೂಲುಗಳಿಗೆ ಹಂಚಿ ಕೊಡುವಂತೆ ಸೂಚಿಸಿದರು —ದೇವರಾಜ ಮಾರ್ಕೆಟ್ಟಿನೊಳಭಾಗದಲ್ಲಿ ಹಣ್ಣುಹಂಪಲು ಮತ್ತು ಚಿಲ್ಲರೆ ಅಂಗಡಿಗಳನ್ನು ಇಟ್ಟುಕೊಳ್ಳತಕ್ಕ ಅಂಗಡಿಗಳ ಬಾಡಿಗೆ ದರಗಳನ್ನು ಆ ವರ್ತಕರಿಗೆ ಹರಾಜು ಹಾಕಿ ವಹಿಸಬೇಕೆಂದೂ, ಇನ್ಯಾವ ರೀತಿಯಲ್ಲಿ ಅಂಗಡಿಗಳನ್ನು ಕೊಟ್ಟಾಗ್ಯೂ ಪಕ್ಷಪಾತ ಮಾಡುತ್ತಾರೆಂಬ ಆಕ್ಷೇಪಣೆ ತಪ್ಪುವುದಿಲ್ಲವೆಂದೂ ಮೆಂಬರುಗಳು ತೀರ್ಮಾನಮಾಡಿದರು ಈ ಅಂಗಡಿಗಳ ವರ್ತಕರೇ ಮುಂತಾದವರು ಬಾಡಿಗೆ ದರದ ವಿಷಯದಲ್ಲಿ ದಿವಾನ್‌ರೇ ಮೊದಲಾದವರಿಗೆಲ್ಲಾ ಅರ್ಜಿಗಳನ್ನು ಬರೆದುಕೊಂಡಿದ್ದರೆಂದು ಗೊತ್ತಾಯಿತು —ರಾಜಧಾನಿಗೆ ಕುಡಿಯುವ ನೀರು ಸರಬರಾಯಿ ಮಾಡುವುದಕ್ಕೆ ಸರ್ಕಾರದವರು ಸಾಲಿಯಾನಾ 16,000 ರೂಪಾಯಿ ತನಕ ಖರ್ಚುಮಾಡುವರು ಆದಾಗ್ಯೂ ನೀರು ಒದಗುವುದು ಸಾಲದು, ಸರಬರಾಯಿ ತೃಪ್ತಿಕರವಾಗಿಲ್ಲ, ಪ್ರಜೆಗಳ ಆಕ್ಷೇಪಣೆ ಬಹಳವಾಗಿದೆ ಮ್ಯುನಿಸಿಪಾಲಿಟಿಯವರು ಸುಮಾರು 13,000 ರೂಪಾಯನ್ನು ನೀರಿನ ಇಲಾಖೆಗೆ ಖಾವತಿ ಮಾಡುತ್ತಿದಾರೆ ಇದಕ್ಕಾಗಿ ಸರ್ಕಾರದವರು ಬಹು ವಿಶೇಷವಾದ ಸಿಬ್ಬಂದಿ ಖರ್ಚನ್ನು ಇಟ್ಟುಕೊಂಡಿರುವರು ನೀರಿನ ಸರಬರಾಯಿ ಎಚ್ಚರಿಕೆಯಾಗಿ ನಡೆಯುವುದಿಲ್ಲ ಆದಕಾರಣ ಈ ನೀರಿನ ಇಲಾಖೆಯನ್ನು ಸಂಪೂರ್ಣವಾಗಿ ಮೊದಲಿದ್ದಂತೆ ಮ್ಯುನಿಸಿಪಾಲಿಟಿಗೆ ವಹಿಸಿಬಿಟ್ಟರೆ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಗೆ ಜವಾಬ್ದಾರರಾಗಿ ನಿಂತು ನೀರಿನ ಬಟವಾಡೆಯನ್ನು ತೃಪ್ತಿಕರವಾಗಿ ಮಾಡಿಕೊಳ್ಳಬಹುದು, ಸಿಬ್ಬಂದಿ ಖರ್ಚನ್ನೂ ಕಡಮೆಮಾಡಬಹುದು ನಲ್ಲಿಗಳ ರಿಪೇರಿ ಜಾಗ್ರತೆಯಿಂದ ನಡೆದೀತು ಈ ಭಾಗಗಳನ್ನೆಲ್ಲಾ ಗವರ್ನ್‌ಮೆಂಟಿಗೆ ಅರಿಕೆಮಾಡಿ, ಅದನ್ನು ಮ್ಯುನಿಸಿಪಾಲಿಟಿಗೇನೇ ಸಂಪೂರ್ಣವಾಗಿ ಮೊದಲಿದ್ದಂತೆ ವಹಿಸಬೇಕೆಂದು ಕೇಳಿಕೊಳ್ಳುವಂತೆ ಮೆಂಬರುಗಳು ಏಕವಾಕ್ಯತೆಯಿಂದ ಒಪ್ಪಿಕೊಂಡರು.

ದಿವಾನ್‌ರವರಿಗೆ ಒಪ್ಪಿಸಿದ ಅಡ್ರೆಸ್ಸುಗಳು

ಸೂಲಿಕುಂಟೆ ಮುಂತಾದ ಗ್ರಾಮಗಳ ಪ್ರಜೆಗಳು

ಬೌರಿಂಗ್‌ಪೇಟೆ ತಾಲ್ಲೂಕ್ ಸೂಲಿಕುಂಟೆ ಧನ ಧಾನ್ಯಾಭಿವೃದ್ಧಿ ಅನ್ಯೋನ್ಯ ಸಹಾಯ ಸಂಘದ ಕೋಆಪರೇಟಿವ್ ಸೊಸೈಟಿ ಮೆಂಬರುಗಳೂ, ಮತ್ತು ಅದಕ್ಕೆ ಲಗತ್ತಿರುವ ಮುಗಳಬೆಲೆ, ಮಾದಮಂಗಲ, ಮಂಗೇರಿ, ಹಂಚಾಳ ವಗೈರೆ ಗ್ರಾಮಸ್ಥರೂ ಅತ್ಯಂತ ವಿನಯಪೂರ್ವಕವಾಗಿ ಮಾಡುವ ವಿಜ್ಞಾಪನೆಗಳು —

ಈ ನಮ್ಮ ಸೂಲಿಕುಂಟೆ ಗ್ರಾಮವು ಇದಕ್ಕೆ ಪೂರ್ವ ದಿಕ್ಕಿನಲ್ಲಿ ಕಾಲು ಮೈಲಿಯಲ್ಲಿರುವ ಮುಗಳಬೆಲೆ, ಮಂದಮಂಗಲವೂ ಕೋಟೆ ಪೇಟೆಯಂತೆ ಸೇರುವವು ಬೌರಿಂಗ್‌ಪೇಟೆ ರೈಲ್ವೇ ಸ್ಟೇಷನ್ ಆಗಿ ತಾಲ್ಲೂಕ್ ಕಸಬಾ ಆಗುವ ವರಿಗೂ ಈ ಊರು ಮೊಬಲೇ ಕಸಬಾ ಆಗಿತ್ತು. ಸುಮಾರು 120 ವರ್ಷಗಳ ಕೆಳಗೆ ತೋಷೀಖಾನೆ ರಾಮಯ್ಯನವರು ಇಲ್ಲಿ ಭಾರೀ ಸಂತೆ ಆಗುವಂತೆ ಏರ್ಪಡಿಸಿದರು ಆ ಲಾಗಾಯ್ತು ಕ್ರಮವಾಗಿ ಪ್ರತಿ ಶನಿವಾರವೂ ಸಂತೆ ನಡೆಯುತ್ತಲಿದೆ ಇಲ್ಲಿನ ವೈಶ್ಯರು, ಮುಸಲ್ಮಾನರು, ವೀರಶೈವ ವರ್ತಕರು ಮೊದಲಾದವರು ಪಶ್ಚಿಮ ಘಾಟ ಮಲೆನಾಡು, ಪೂರ್ವ ಘಾಟ ಪ್ರಾಂತ್ಯಗಳ ಸರಕುಗಳನ್ನು ತರಿಸಿ, ಈ ಸಂತೆಯಲ್ಲಿಯೂ, ಸುತ್ತುಮುತ್ತು ಸಂತೆಗಳಲ್ಲಿಯೂ, ಕೆಣವೇ ಕೆಳಗೂ ವಿಸ್ತಾರವಾಗಿ ವ್ಯಾಪಾರ ನಡಿಸುತ್ತಾ ಇದ್ದರು ಈಚೆಗೆ ಕಾರಣಾಂತರಗಳಿಂದ ಅವರ ವ್ಯಾಪಾರಗಳು ಹೀನ ಸ್ಥಿತಿಗೆ ಬಂದುವು ಆದರೂ ಈಗಲೂ ಬಡವೆ ಸುಮಾರಾಗಿ ವ್ಯಾಪಾರಗಳನ್ನು ನಡಿಸುತ್ತಲಿದ್ದಾರೆ ಇಲ್ಲಿ ನೇಯ್ಗೆಯವರು ಅರವತ್ತು ಮಗ್ಗಗಳನ್ನು ಇಟ್ಟುಕೊಂಡು ಅವರ ಕಸಬು ಮಾಡುತ್ತಲಿದ್ದಾರೆ ಎಲ್ಲರೂ ಬಹಳ ಬಡವರಾಗಿ ಇದ್ದಾರೆ

ಈ ಸ್ಥಳೀಕರಾದ ಸಬ್ ಜಡ್ಜಿ ಮ|| ವರದರಾಜಯ್ಯಂಗಾರ್‍ರು ಪೆನ್ಷನ್ ಪಡೆದೀಚೆಗೆ 1907 ನೇ ಇಸವಿ ಡಿಸೆಂಬರ್ ಮಾಹೆಯಲ್ಲಿ ಬಂದು ನಮ್ಮ ಹೀನ ಸ್ಥಿತಿಯನ್ನು ನೋಡಿ ಧನ ಧಾನ್ಯಾಭಿವೃದ್ಧಿ ಅನ್ಯೋನ್ಯ ಸಹಾಯ ಸಂಘವೆಂಬ ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿದರು ಅದು 1908 ನೇ ಇಸವಿ ಫೆಬ್ರವರಿ ಮಾಹೆಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿತು ಕೋಲಾರ ಡಿಸ್ಟ್ರಿಕ್ಟಿನ ಪರಸ್ಪರಸಹಾಯ ಸಂಘಗಳಲ್ಲಿ ಇದೇ ಪ್ರಥಮವಾದದ್ದು ಇದರ ಉದ್ದೇಶ ತಿಳಿಸುವ ನಿಬಂಧನೆಗಳ ಒಂದು ಪ್ರತಿಯನ್ನು ಪರಾಂಬರಿಕೆ ಬಗ್ಗೆ ಇದರೊಂದಿಗೆ ಜಂಟಿಸಿದೆ ಈ ಪ್ರಾಂತ್ಯ ಚಾಂದ್ರಹಳ್ಳಿ ಬ್ಯಾಂಕ್‌ಗಳೆಂದು ಬುದ್ಧಿ ದಾಕಾರವಾಗಿ ಹುಟ್ಟಿ ದಿವಾಳಿಯಾಗಿ ಅನೇಕರಿಗೆ ಕಷ್ಟ ನಷ್ಟಗಳು ಉಂಟುಮಾಡಿದ್ದರಿಂದ ಈ ಡಿಸ್ಟ್ರಿಕ್ಟಿನವರೆಲ್ಲಾ ಬ್ಯಾಂಕ್ ಎಂದರೆ ಹೆದರುತ್ತಿದ್ದೆವು ಪರಸ್ಪರಸಹಾಯ ಸಂಘಗಳಿಗೆ ಸರ್ಕಾರದ ಸಹಾಯವೂ, ಪ್ರೋತ್ಸಾಹವೂ, ಮೇಲ್ವಿಚಾರಣೆಯೂ ತುಂಬಿರುವವೆಂದು ನಮ್ಮಗಳಿಗೆ ಭರವಸೆ ಕೊಟ್ಟಿದ್ದರಿಂದ ನಾವುಗಳು ಈ ಸಂಘಕ್ಕೆ ಸೇರಿದೆವು ಷೇರ್ 1 ಕ್ಕೆ ಹತ್ತು ರೂಪಾಯಿ ಮಾಡಿ ಮಾಹೆಯಾನ ನಾಲ್ಕಾಣೆ ಮೇರೆಗೆ ಕಂತುಗಳನ್ನು ಕೊಡುತ್ತಾ ಭರ್ತಿಮಾಡುವುದೆಂದು ಪ್ರಾರಂಭಿಸಿದೆವು ಪ್ರಥಮ ರಿಜಿಸ್ಟ್ರಾರ್ ಆಗಿದ್ದ ರಾವ್ ಬಹದೂರ್ ರಾಮರಾಯರವರು ಶ್ರೀಮನ್ ಮಹಾರಾಜರವರ ಪಂಡಿಂದ ಎರಡು ನೂರು ರೂಪಾಯಿಗಳನ್ನು ಬಡ್ಡಿ ಇಲ್ಲದೆ ಒಂದು ವರ್ಷದ ವಾಯಿದೆಗೆ ಕೊಡಿಸಿದರು ಅವನ್ನು ವಾಯಿದೆಯಲ್ಲಿಯೇ ಅವರಿಗೆ ವಾವತಿಮಾಡಿಬಿಟ್ಟೆವು ಈಚೆಗೆ ರಿಜಿಸ್ಟ್ರಾರ್ ಮ|| ನಾರಣಯ್ಯಂಗಾರ್‍ರವರು ಶ್ರೀಮನ್ ಮಹಾರಾಜರವರ ಫಂಡಿನಿಂದಲೇ ನೇಯ್ಗೆ ಮೆಂಬರುಗಳ ಸಹಾಯಾರ್ಥವಾಗಿ ಐದು ನೂರು ರೂಪಾಯಿಗಳನ್ನು ಶೇಕಡಾ ಆರು ರೂಪಾಯಿನ ಬಡ್ಡಿ ಮೇರೆಗೆ ನಮ್ಮ ಸಂಘದಲ್ಲಿ ಡಿಪಾಜಿಟ್ ಇಟ್ಟಿದ್ದಾರೆ ಈಗ ಅರವತ್ತು ಮೆಂಬರುಗಳು ಸೇರಿ 188 ಷೇರುಗಳನ್ನು ಹಾಕಿಕೊಂಡು ಮಾಹೆಯಾನ ನಾಲ್ಕಾಣೆ ಮೇರೆಗೆ ವಾವತಿಮಾಡುತ್ತಾ, ಸುಮಾರು ಸಾವಿರದ ನಾನೂರು ರೂಪಾಯಿಗಳ ಮೊತ್ತ ಬಂಡವಾಳ ಮಾಡಿಕೊಂಡು ಇದ್ದೇವೆ ಹಿಂದೆ ನಮ್ಮಲ್ಲನೇಕರು ವರುಷಕ್ಕೆ ಶೇಕಡಾ 25, 37½, 75 ರ ಮೇರೆಗೆ ಬಡ್ಡಿ ತೆತ್ತು ತೆತ್ತು ಬೆಂಡಾಗಿಹೋಗಿದ್ದೆವು ಈಗ ನಮ್ಮ ಸಂಘದಿಂದ ಮಾಹೆಯಾನ ಒಂದು ರೂಪಾಯಿನ ಬಡ್ಡಿಯಂತೆ ಮೆಂಬರುಗಳಿಗೆ ಸಾಲ ದೊರಕುತ್ತೆ ಸೆಂಟ್ರಲ್ ಬ್ಯಾಂಕಿನಿಂದ ಅಥವಾ ಬೇರೆ ಕಡೆಯಿಂದ ಸಾಲ ತಂದು ಭಾರ ಹೊತ್ತುಕೊಂಡು ಹಠಾಗಿ ವಿಚಾರ್ಮಾಡುವುದಕ್ಕಿಂತಲೂ ಕೊಂಚಕೊಂಚವಾಗಿ ನಾವೇ ಕೂಡಹಾಕಿಕೊಂಡು ಬಂಡವಾಳ ವೃದ್ಧಿಪಡಿಸಿಕೊಳ್ಳಬೇಕೆಂಬುವುದೇ ನಮ್ಮ ಸಂಕಲ್ಪ ಜಮೀನು ವಮರೀಯ, ಕೈಗಾರಿಕೆ, ವ್ಯಾಪಾರಾಭಿವೃದ್ಧಿಗಳಿಗೆಲ್ಲಾ ಪರಸ್ಪರ ಸಹಾಯ ಸಂಘಗಳೇ ದೃಢವಾದ ಆಸ್ತಿವಾರವೆಂದು ನಮ್ಮಗಳಿಗೆ ಗೋಚರವಾಗುತ್ತಲಿದೆ ಈ ಸಂಘಕ್ಕೆ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಮನೆ ಮಾಡಿಕೊಂಡು ಇದ್ದೇವೆ ಖಾನಂದರವರು ಬಿಟ್ಟುಬಿಟ್ಟು ಊರೊಳಗೆ ಸರಿಯಾದ ಜಾಗಾವನ್ನು ಈ ಸೊಸೈಟಿ ಕಟ್ಟಡಕ್ಕಾಗಿ ಕೊಡಿಸಲು ಹುಕುಂ ಮಾಡಬೇಕೆಂದು ಬೇಡುತ್ತೇವೆ

ಮ|| ವರದರಾಜಯ್ಯಂಗಾರ್‍ರವರು ಸಾಹಸಪಟ್ಟು ಸೂಲುಕುಂಟೆಗೂ, ಮುಗಳಬೆಲೆ ಮಾದಮಂಗಲಕ್ಕೂ ಮಧ್ಯೆ ಕಂಟ್ರಿಬ್ಯೂಷನ್ ಮತ್ತು ಸರಕಾರದ ಸಹಾಯದಿಂದ ದೊಡ್ಡ ಸ್ಕೂಲು ಕಟ್ಟಡವನ್ನು ಕಟ್ಟಿಸಿ ಈ ಗ್ರಾಮಗಳಿಗೆ ಒಂದೇ ಸ್ಕೂಲು ಮಾಡಿಸಿದರು 40 60 ಮಂದಿ ಹುಡುಗರಿದ್ದದ್ದು, ಈಗ 120 ಮಂದಿ ಒಂದೇ ಕಡೆ ಸೇರಿ ಓದುವುದಕ್ಕೆ ಅನುಕೂಲವಾಯಿತು ದಿನೇ ದಿನೇ ಹುಡುಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ಸ್ಥಳ ಸಂಕೋಚವಾಗಿದೆ ಏಳು ಕ್ಲಾಸುಗಳಿಗೆ ಮೂರು ಕೊಠಡಿಗಳು ಮಾತ್ರ ಇವೆ ನಾಲರೇ ಟೀಚರುಗಳಿದ್ದಾರೆ ಈ ಊರಿನಲ್ಲಿ ಕೂಲೀ ಮಠದಲ್ಲಿ 10 10 ಮಂದಿ ಮುಸಲ್ಮಾನರ ಮಕ್ಕಳು ಓದುತ್ತಲಿದ್ದಾರೆ ಆದ್ದರಿಂದ ಈ ಸ್ಕೂಲಿಗೆ ಇನ್ನೆರಡು ಕೊಠಡಿಗಳನ್ನು ಸೇರಿಸಿ ಕಟ್ಟಿಸುವ ಹಾಗೂ, ಒಬ್ಬ ಹಿಂದುಸ್ತಾನೀ ಟೀಚರನ್ನೂ, ಒಬ್ಬ ಇಂಗ್ಲಿಷ್ ಕಲಿಸುವುದಕ್ಕೆ ಅರ್ಹನಾದ ಟೀಚರನ್ನೂ ಕೊಡಿಸಬೇಕು ಈ ಸ್ಕೂಲಿಗೆ ಈಗಿನ ಹೆಡ್ ಮಾಸ್ಟರು ನಾರಣಪ್ಪನವರು ಬಂದಾರಭ್ಯ ವರ್ಷ ವರ್ಷ ಲೋವರ್ ಸೆಕೆಂಡರೀ ಪರೀಕ್ಷೆಯಲ್ಲಿ ಕನ್ನಡದಲ್ಲಿ 3-4 ಜನ ಪ್ಯಾಸಾಗುತ್ತಲಿದ್ದಾರೆ ಆದರೆ ಈ ಹುಡುಗರು ಇಲ್ಲಿಂದ ಹೈ ಸ್ಕೂಲುಗಳಿಗೆ ಹೋಗಿ ವ್ಯಾಸಂಗಮಾಡಲು ರಹಾ ಇಲ್ಲದೆ ಇದೆ ಇಲ್ಲಿ 3 | 5 ನೇ ಕ್ಲಾಸಿನಲ್ಲಿ ದಿನವಹಿ ಒಂದು ಘಂಟೆಯಾದರೂ ಇಂಗ್ಲಿಷ್ ಪಾಠ ನಡೆದರೆ ಹುಡುಗರಿಗೆ ಬಹಳ ಪ್ರಯೋಜನವಾಗಿರುವುದು ಇದಕ್ಕೆ ಅನುಕೂಲಪಡಿಸಿ ಕೊಡಬೇಕೆಂದು ಬೇಡುವೆವು — ಇಲ್ಲಿನ ಹೊಲಗೇರಿಯಲ್ಲಿ ಪಂಚಮರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಸತ್ಯಮ್ಮನ ದೇವಸ್ಥಾನದಲ್ಲಿ ಒಬ್ಬ ಪ್ರೈವೇಟ್ ಟೀಚರನ್ನು ಇಟ್ಟು ಸ್ಕೂಲು ಏರ್ಪಡಿಸಿದರು ಸ್ಕೂಲು ಕಟ್ಟುವುದಕ್ಕೆ ಜಾಗಾ ಏರ್ಪಡಿಸಿ ಪಾಯಾವನ್ನು ಹಾಕಿಸಿದ್ದಾರೆ ಹತ್ತು ರೂಪಾಯಿನ ಸಂಬಳದಲ್ಲಿ ಒಬ್ಬ ಟೀಚರನ್ನು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಕೊಟ್ಟಿದ್ದಾರೆ ಕಟ್ಟಡಕ್ಕೆ ಮೇಲ್ಹಾವಣೆಗೆ ಹೆಂಚುಗಳನ್ನೂ ತ್ಯಾಗದ ಬಾಗಿಲುಗಳು, ಕಿಟಕಿಗಳನ್ನೂ ಕೊಡಿಸಬೇಕೆಂದು ಪ್ರಾರ್ಥನೆ — ಇದಲ್ಲದೆ ಈ ಊರಿನಲ್ಲಿ ಜನಗಳಿಗೆ ಒಂದು ವಾಚಕಮಂದಿರವನ್ನು ಕಟ್ಟಿಸಬೇಕೆಂದು ಕೋ|| ಸೊಸೈಟಿ ಪ್ರಯತ್ನ ಮಾಡಿಕೊಂಡು ಇದ್ದೇವೆ ಅದಕ್ಕೆ ಸರಿಯಾದ ಜಾಗವನ್ನು ಕೊಡಿಸಿ ಸರ್ಕಾರದಿಂದ ಕುಮ್ಮಕ್ಕು ಕೊಡಿಸಬೇಕೆಂದು ಕೋರುವೆವು

ಮೇಲಾಗಿ ಬೌರಿಂಗ್‌ಪೇಟೆ ಕೋಲಾರದ ರೈಲ್ವೆ ಆದಮೇಲೆ ಮಧ್ಯೆ ಸೂಲುಕುಂಟೆಗೆ 2½ ಮೈಲಿ ದೂರದಲ್ಲಿ ಒಂದು ಸ್ಟೇಷನ್ ಆಗಿ ಇದೆ ಅಲ್ಲಿಂದ ಸೂಲುಕುಂಟೆಗೂ ಮಾದಮಂಗಲಕ್ಕೂ ಸಂತೆ ಸಾಮಾನುಗಳು ಮತ್ತು ಜನಗಳು ಆಮದುರಫ್ತಿಗೂ ಅನುಕೂಲವಾಗುವಂತೆ ಒಂದು ರಸ್ತೆ ಮಾಡಿಸಿಕೊಡಲು ಹುಕುಂ ಆಗಬೇಕು — ಧಾತು ಈಶ್ವರ ಕ್ಷಾಮದಿಂದೀಚೆಗೆ ಸೂಲಿಕುಂಟೆ, ಮಾದಮಂಗಲ, ಮುಗಳಬೆಲೆ ಪ್ರಜಾ ಸಂಖ್ಯೆಯು ತುಂಬಾ ವೃದ್ಧಿಗೆ ಬಂದಿರುವುದು. ಒಂದೊಂದು ಮನೆಯಲ್ಲಿ ಎರಡು ಮೂರು ಸಂಸಾರಗಳು ಸೇರಿಕೊಂಡಿರುವುದರಿಂದ ಗಲೀಜಿಗೂ, ಅನಾರೋಗ್ಯಕ್ಕೂ ಕಾರಣವಾಗಿದೆ ಜನಗಳು ಹೊಸದಾಗಿ ಮನೆಗಳು ಕಟ್ಟಿಕೊಳ್ಳಲು ಜಾಗವಿಲ್ಲದೆ ಪೊದೆಯಲ್ಲಿಯೂ, ಗೊಬ್ಬರದ ಗುಂಡಿಗಳಲ್ಲಿಯೂ ಮನೆಗಳು ಕಟ್ಟಲು ಪ್ರಾರಂಭಿಸಿದ್ದಾರೆ ಇದರಿಂದ ಅನರ್ಥಕ್ಕೆ ಕಾರಣವಾಗುವುದು ಸೂಲಿಕುಂಟೆ ಗ್ರಾಮವನ್ನು ಪೂರ್ವಕ್ಕೆ ಬಡಾಯಿಸುವುದಕ್ಕೂ, ಮುಗಳಬೆಲೆ ಮಾದಮಂಗಲವನ್ನು ಪಶ್ಚಿಮಕ್ಕೆ ಬಡಾಯಿಸುವುದಕ್ಕೂ ಅನುಕೂಲವಾದ ಎತ್ತರವಾದ ಹೊಲಗಳಿವೆ ಹಾಗೆ ಗ್ರಾಮಗಳ ಬಡಾವಣೆಗೆ ತಕ್ಕ ಏರ್ಪಾಟು ಮಾಡಲು ಅಪ್ಪಣೆ ಕೊಡಿಸಬೇಕು — ಈ ಮೂರು ಗ್ರಾಮಗಳೂ ಸೇರಿ ಸುಮಾರು 2,000 ಪ್ರಜಾ ಸಂಖ್ಯೆ ಆಗುವುದರಿಂದ ಇವುಗಳ ವಾಕೀಜ ಮತ್ತು ಬಂದೋಬಸ್ತಿಗಾಗಿ ಇವನ್ನು ಸೇರಿಸಿ ಒಂದು ಯೂನಿಯನ್ ಮಾಡಲು ಯುಕ್ತವಾಗಿರುವುದನ್ನು ಆಲೋಚನೆಗೆ ತರಬೇಕೆಂದು ಕೋರಿ ಇದ್ದೇವೆ

ಈ ಮೇಲೆ ಕಂಡ ಕಾರಣಗಳಿಂದ ಖಾವಂದರವರು ಸೂಲಿಕುಂಟೆ ವರಿವಿಗೂ ತಮ್ಮ ಸವಾರಿ ಬೆಳಸಿ ನಮ್ಮ ಸೊಸೈಟಿ ಮತ್ತೂ ಸ್ಕೂಲುಗಳನ್ನೂ ಇನ್‌ಸ್ಪೆಕ್ಷನ್ ಮಾಡಿ ಕೆರೆಗಳನ್ನೂ, ರಸ್ತೆ ಮಾಡುವ ದಾರಿಯನ್ನೂ, ಗ್ರಾಮಗಳ ಬಡಾವಣೆಗೆ ಬೇಕಾದ್ದನ್ನೂ ಖುದ್ದು ಪರಾಂಬರಿಸಿ ಅನುಕೂಲಪಡಿಸಲು ಕ್ಷಿಪ್ರದಲ್ಲಿ ಹುಕುಂ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ

ಕೃಷ್ಣರಾಜಪೇಟೆ

ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜಪೇಟೆ ಟವುನ್ ಮತ್ತು ತಾಲ್ಲೂಕು ನಿವಾಸಿಗಳು ವಿನಯ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ — ಸುಗುಣಾಲಂಕೃತರಾದ ತಾವು ಈ ನಮ್ಮ ಟವುನ್ ಮತ್ತು ತಾಲ್ಲೂಕುಗಳಿಗೆ ಪೂರ್ಣ ಕಟಾಕ್ಷವಿಟ್ಟು ದಯಮಾಡಿಸಿರುವದಕ್ಕಾಗಿ ನಾವುಗಳು ತಮಗೆ ಬಹು ಸಂತೋಷದಿಂದ ಸುಸ್ವಾಗತವನ್ನು ಕೋರುವವರಾಗಿದ್ದೇವೆ ತಾವು ಈ ಪದವಿ ಅಲಂಕರಿಸಿದ ಕೂಡಲೆ ಈ ಸಂಸ್ಥಾನದ ರಾಜಕೀಯ ವಿದ್ಯಮಾನಗಳಲ್ಲೂ ದ್ರವ್ಯೋತ್ಪತ್ತಿ ಸಾಧನಗಳಲ್ಲೂ ನ್ಯಾಯಮಾರ್ಗಗಳಲ್ಲೂ ಈ ಸಂಸ್ಥಾನಕ್ಕೆ ಹೆಚ್ಚಾದ ಗೌರವವೂ ಉಪಯೋಗವೂ ಅವಶ್ಯಕವೂ ಆದ ಅನೇಕ ಏರ್ಪಾಟುಗಳು ನಡೆದಿರುವವು ಇವುಗಳಲ್ಲಿ ಸಾರ್ವಭೌಮ ಸರ್ಕಾರದೊಡನೆ ನಮ್ಮ ಸರ್ಕಾರಕ್ಕೆ ನಡೆದಿರುವ ಮೈಸೂರು ಟ್ರೀಟಿ, ಕನ್ನಂಬಾಡಿ ರಿಜರ್ವಾಯರ್ ಕೆಲಸಗಳು, ಒಳ ಮಾರ್ಗಗಳ ರೈಲ್ವೆ ಬಡಾವಣೆ, ಸಂಪದಭ್ಯುದಯ ಸಮಾಜದ ಕೃಷಿ ಕೈಗಾರಿಕೆ ವಿದ್ಯಾಭ್ಯಾಸದ ಏರ್ಪಾಟುಗಳು, ಶ್ರೀಮದ್ಯುವರಾಜರವರ ವಿದೇಶ ಸಂಚಾರ, ನ್ಯಾಯವಿಧಾಯಕ ಸಭೆಯ ವಿಸ್ತರಣೆ ಮತ್ತು ರಾಜ್ಯಾದಳಿತಗಳ ವಿತರಣೆ, ಇವುಗಳೆಲ್ಲವೂ 20 ನೇ ಶತಮಾನದಲ್ಲಿ ನಡೆದ ಮೈಸೂರು ಇತಿಹಾಸ ಪಂಗ್ತಿಯ ಮುಖ್ಯ ಭಾಗಗಳಾಗಿವೆ

ತಾವು ಹೊಸದಾಗಿ ಏರ್ಪಡಿಸಿರುವ ವಿಲೇಜ್ ಇಂಪ್ರೂವ್‌ಮೆಂಟ್ ಸ್ಕೀಮಿನ ಉಪಯೋಗದಿಂದ ಚಿರಕಾಲದಿಂದಲೂ ನಾಗರಿಕತೆಯಲ್ಲಿ ಹಿಂದುಳಿದಿರುವ ಗ್ರಾಮಾಂತರಗಳು ಬಹು ಮಟ್ಟಿಗೆ ಉಚ್ಛ್ರಾಯಸ್ಥಿತಿಗೆ ಬರಲು ಅನುಕೂಲವಾಗಿದೆ ಈ ತಾಲ್ಲೂಕಿನಲ್ಲಿ ಆ ಪದ್ಧತಿಯನ್ನನುಸರಿಸಿ ಈಗಾಗಲೇ 18 ವಿಲೇಜ್ ಕಮಿಟಿಗಳನ್ನು ಏರ್ಪಡಿಸಿಕೊಂಡು ಅದರ ಕಾರ್ಯೋದ್ಯಮದಲ್ಲಿ ನಿರತರಾಗಿದ್ದೇವೆ, ಅಲ್ಲದೆ ಈ ವಿಧವಾದ ಇನ್ನೂ ಅನೇಕ ಕಮಿಟಿಗಳ ಏರ್ಪಾಟಿನಲ್ಲೂ ಉತ್ಸಾಹಿಗಳಾಗಿದ್ದೇವೆ — ಮೈಸೂರು ಡಿಸ್ಟ್ರಿಕ್ಟಿನ ಮುಖ್ಯವಾದ ತಾಲ್ಲೂಕುಗಳಲ್ಲಿ ನಮ್ಮ ಈ ತಾಲ್ಲೂಕೂ ಒಂದಾಗಿರುತ್ತದೆ ಹೊಸದಾಗಿ ಸ್ಥಾಪಿತವಾದ ಮೈಸೂರು — ಅರಸೀಕೆರೆ ರೈಲ್ವೆ ಲೈನು ಈ ತಾಲ್ಲೂಕು ಅಕ್ಕಪಕ್ಕಗಳ ಪ್ರಾಂತದಲ್ಲಿ ಬರುವಂತೆ ಮಾಡಿಕೊಟ್ಟಿರುವುದಕ್ಕಾಗಿ ನಾವು ಬಹು ಕೃತಜ್ಞರಾಗಿದ್ದೇವೆ ಆದರೂ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಈ ಮಾರ್ಗವು 10 ಮೈಲಿ ಫಾಸಲೆಯಲ್ಲೇ ದೊರೆತಾಗ್ಯೂ ಮಧ್ಯೆ ಹೇಮಾವತೀ ನದಿಯು ಇರುವದರಿಂದ ಈ ಸೌಕರ್ಯವನ್ನು ನಾವುಗಳು ಸಂಪೂರ್ಣವಾಗಿ ಅನುಭವಿಸಲು ಅಡಚಣೆಯಾಗಿದೆ ಆದಕಾರಣ ಅಕ್ಕಿಹೆಬ್ಬಾಳು ಬಳಿ ಹೇಮಾವತೀ ನದಿಗೆ ಒಂದು ಸೇತುವೆಯನ್ನು ಕಟ್ಟಿಸಿ ಅದಕ್ಕೆ ಅನುಸಾರವಾದ ರಸ್ತೆಯನ್ನು ಇಲ್ಲಿಗೆ ಮಾಡಿಕೊಡಬೇಕಾಗಿ ಬೇಡಿಕೊಳ್ಳುತ್ತೇವೆ ತಮ್ಮ ಸವಾರಿಯು ಈ ಪ್ರಾಂತ್ಯ ಚಿತ್ತೈಸಿದ ಜ್ಞಾಪಕಾರ್ಥವಾಗಿ ಈ ಉಪಕಾರವನ್ನು ಮಾಡಬೇಕಾಗಿ ಪ್ರಾರ್ಥಿಸುವೆವು

ಈ ತಾಲ್ಲೂಕು ಸಿಂಧುಘಟ್ಟವೆಂಬ ಗ್ರಾಮದಲ್ಲಿ ಮುಸಲ್ಮಾನ್ ಪ್ರಜೆಗಳು ರೇಷ್ಮೆ ಕೈಗಾರಿಕೆಯ ಕೆಲವು ಭಾಗಗಳಿಂದ ಜೀವಿಸುತ್ತಲಿದ್ದಾರೆ ಈ ಸ್ಥಳದಲ್ಲಿ ಒಂದು ನೇಯಿಗೆ ಪಾಠಶಾಲೆಯನ್ನು ಸರ್ಕಾರದವರು ಏರ್ಪಾಟು ಮಾಡಿಕೊಟ್ಟಲ್ಲಿ ಆ ಮುಸಲ್ಮಾನ್ ಪ್ರಜೆಗಳು ತಮ್ಮ ಕೈಗಾರಿಕೆಯ ಸಂಪೂರ್ಣ ಫಲವನ್ನು ಪಡೆಯಲು ಅರ್ಹರಾಗುತ್ತಾರೆ ದಯವಿಟ್ಟು ಈ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕು — ನಮ್ಮ ತಾಲ್ಲೂಕು ಕಬ್ಬಿನ ವ್ಯವಸಾಯದಲ್ಲಿ ಪ್ರಸಿದ್ಧಿಗೊಂಡಿರುವುದು ಕಳೆದ ಐದಾರು ವರುಷಗಳಿಂದ ಬೇಸಗೆಯಲ್ಲಿ ಹಳ್ಳ ನೀರನ್ನು ತಪ್ಪಿಸಿದ್ದರಿಂದ ಕಬ್ಬಿನ ವ್ಯವಸಾಯಕ್ಕೂ ಮತ್ತು ದ್ವಿದಳ ಧಾನ್ಯಗಳ ಪೈರಾವಿಗೂ ತೊಂದರೆಯಾಗಿದೆ ಮಾಮೂಲ್ ಮೇರೆ ಕಬ್ಬಿಗೂ ದ್ವಿದಳಧಾನ್ಯ ಪೈರಾವಿಗೂ ನೀರು ಬಿಟ್ಟುಕೊಡುವಂತೆ ಅಪ್ಪಣೆ ಕೊಡಬೇಕಾಗಿ ಬೇಡುತ್ತೇವೆ

ಶ್ರೀರಂಗಪಟ್ಟಣ

ನಮ್ಮ ಶ್ರೀಮನ್ ದಿವಾನ್ ಸಾಹೇಬರವರು ಶ್ರೀರಂಗಪಟ್ಟಣಕ್ಕೆ ಈ ಮಾಹೆ ಒಂದನೇ ತಾರೀಖಿನಲ್ಲಿ ದಯಮಾಡಿ ಶ್ರೀರಂಗಪಟ್ಟಣ ಮತ್ತು ಗಂಜಾಂ ಬೀದಿಗಳನ್ನು ನೋಡಿಕೊಂಡು, ಸ್ಕೂಲ್‌ಗಳು, ತಾಲ್ಲೂಕುಕಚೇರಿ, ಮುನ್ಸೀಫ್ ಕೋರ್ಟು ಮತ್ತು ಶ್ರೀರಂಗನಾಥಸ್ವಾಮಿಯವರ ದೇವಸ್ಥಾನಕ್ಕೆ ಸಹ ದಯಮಾಡಿದ್ದು, ಅಲ್ಲಿನ ಆಡಳಿತಗಳನ್ನು ಸುಮಾರಾಗಿ ಪರಾಂಬರಿಸಿ, ಜನಗಳ ಅಹವಾಲನ್ನು ಕೇಳಲು ಶ್ರೀಚಾಮರಾಜೇಂದ್ರ ಮೆಮೋರಿಯಲ್ ಛತ್ರಕ್ಕೆ ದಯಮಾಡಿ, ಸುಮಾರು ಎರಡು ಘಂಟೆಗಳಕಾಲ ಸಾವಧಾನದಿಂದ ಪಟ್ಟಣವಾಸಿಗಳು ಮತ್ತು ತಾಲ್ಲೂಕು ರೈತರುಗಳ ಅಹವಾಲನ್ನು ಕೇಳಿದರು

ಶ್ರೀರಂಗಪಟ್ಟಣಕ್ಕೆ ಮುಖ್ಯವಾಗಿ ಪಾನಕ್ಕೆ ನಲ್ಲಿಮೂಲಕ ನೀರುಕೊಡಿಸಬೇಕೆಂತಲೂ, ಶ್ರೀರಂಗಪಟ್ಟಣದ ಗ್ರಾಮಸಾರ ನೀರು ಹೋಗಲು ಸರಿಯಾದ ಚರಂಡಿಗಳನ್ನು ಮಾಡಿಸಿಕೊಡಬೇಕೆಂತಲೂ, ಶ್ರೀರಂಗಪಟ್ಟಣದಲ್ಲಿ ಹಾಕಿಸಬೇಕೆಂದು ಉದ್ದೇಶಿಸಿ ಇರುವ ಛಂಡಿ ಕಾರ್ಖಾನೆಗೆ ಸ್ವಲ್ಪ ರಿಯಾಯಿತಿ ದರದಿಂದ ಮೂರು ವರುಷಗಳಕಾಲ ಮರಗಳನ್ನು ಕೊಡಿಸಬೇಕೆಂತಲೂ, ಶ್ರೀರಂಗಪಟ್ಟಣದಲ್ಲಿ ಸಾಹುಕಾರ್‍ರು ಮತ್ತು ಟೌನ್ ಕಂಟ್ರಾಕ್ಟರೂ ಆದ ಮ|| ಪುಟ್ಟನಂಜಪ್ಪನವರು ಕಟ್ಟಿಸಲು ಉದ್ದೇಶಿಸಿ ಇರುವ ರೀಡಿಂಗ್ ರೂಮ್ ಕಟ್ಟಡಕ್ಕೆ ಮುಪತ್ತು ಸರ್ಕಾರದಿಂದ ತ್ಯಾಗದ ಮರಗಳನ್ನು ಕೊಡಿಸಬೇಕೆಂತಲೂ, ಮು| ಮುನ್ಸಿಪಲ್ ಕಮಿಷನರ್‌ಗಳಾದ ಕೃಷ್ಣಾಚಾರ್‍ರು ಮತ್ತು ಸಿದ್ಧಲಿಂಗದೇವರು ಸಹ ಬಹು ವಿನಯದಲ್ಲಿ ದಿವಾನ್ ಸಾಹೇಬರವರನ್ನು ಪ್ರಾರ್ಥಿಸಿಕೊಂಡರು

ಊರಿಗೆ ನಲ್ಲಿ ನೀರು ಕೊಡಲು ಆಗಬೇಕಾದ ಪ್ರಾರಂಭದ ವೆಚ್ಚ ಅರವತ್ತುಸಾವಿರ ರೂಪಾಯಿಗಳ ಪೈಕಿ ಅರ್ಧ ಪಾಲನ್ನು ಮುನ್ಸಿಪಾಲಿಟಿಯವರಾಗಲೀ, ಅಥವಾ ಪ್ರಜಾಹಿತೈಷಿಗಳಾದ ಸ್ವದೇಶ ಪುರೋಭಿವೃದ್ಧಿಯನ್ನು ಹಾರೈಸುತ್ತಿರುವ ದೊಡ್ಡ ಮನುಷ್ಯರುಗಳಾಗಲೀ ಕೊಟ್ಟಲ್ಲಿ ಉಳಿದದ್ದನ್ನು ಗೌರ್ನ್‌ಮೆಂಟಿನವರು ಸಹಾಯಮಾಡುವದಾಗಿಯೂ, ಛಂಡಿ ಕಾರ್ಖಾನೆಗೆ ಸುಲಭದರದಲ್ಲಿ ಕೆಲವುಕಾಲ ಮರಗಳನ್ನು ಕೊಡಿಸುವ ವಿಷಯದಲ್ಲಿ ಆಲೋಚನೆಮಾಡಲಾವದಾಗಿಯೂ, ಉದಾರ ಶಿರೋಮಣಿಗಳು ಕಟ್ಟತಕ್ಕ ರೀಡಿಂಗ್ ರೂಮ್‌ಗೆ ಸ್ವಲ್ಪ ಬೆಲೆವುಳ್ಳ ಮರಗಳನ್ನು ಕೇಳತಕ್ಕದ್ದು ಯಾ ಕೊಡತಕ್ಕದ್ದು ಯುಕ್ತವಲ್ಲವೆಂತಲೂ, ಒಂದುವೇಳೆ ರೀಡಿಂಗ್ ರೂಮ್ ಸ್ಥಾಪಿತವಾದನಂತರ ವಿದ್ಯಾಭ್ಯಾಸದ ಇಲಾಖೆಯಿಂದ ಸ್ವಲ್ಪ ಗ್ರಾಂಟು ಕೊಟ್ಟರೂ ಕೊಡಬಹುದೆಂತಲೂ ಅಪ್ಪಣೆ ಮಾಡಿದರು

ಅನಂತರ ಗಂಜಾಂ ನಿವಾಸಿಗಳು ತಾವು ಭಾರೀ ಬೆಲೆಯುಳ್ಳ ಛತ್ರ ಕಟ್ಟಿಸುವ ಒಂದು ಮಿಷನ್ ಇಡುತ್ತೇವೆಂತಲೂ, ಅದಕ್ಕೆ ಗೌರ್ನ್‌ಮೆಂಟಿನವರು ಪ್ರೋತ್ಸಾಹ ಕೊಡಬೇಕೆಂತಲೂ ಕೇಳಿಕೊಂಡರು ಶ್ರೀರಂಗಪಟ್ಟಣದ ನಿವಾಸಿಗಳು ತಾವು ಛತ್ರ ಕಟ್ಟಿಸುವ ಒಂದು ಮಿಷನ್ ಇಡಲು ಪ್ರಯತ್ನಪಟ್ಟಿರುವುದಾಗಿಯೂ, ಗಂಜಾಂನಲ್ಲೂ ಒಂದು ಮಿಷನ್ ಇಟ್ಟಲ್ಲಿ ಉಭಯ ಮಿಷನ್‌ಗಳಿಗೂ ಕೆಲಸ ಸಾಲದೆ ನಷ್ಟಕ್ಕೆ ಒಳಗಾಗುವವೆಂತಲೂ, ಗಂಜಾಂ ನಿವಾಸಿಗಳು ಶ್ರೀರಂಗಪಟ್ಟಣದಲ್ಲಿ ಇಡತಕ್ಕ ಮಿಷನ್‌ಗೆ ಭಾಗಿಗಳಾಗಿ ಧಾರಾಳವಾಗಿ ಸೇರಿಕೊಳ್ಳಬಹುದೆಂತಲೂ ವ್ಯಕ್ತಪಡಿಸಿದ್ದನ್ನು ದಿವಾನ್ ಸಾಹೇಬರವರು ಸಹ ಅನುಮೋದಿಸಿದರು ಆದಾಗ್ಯೂ ಗಂಜಾಂ ವರ್ತಕರು ತಾವು ಗಂಜಾಂನಲ್ಲಿ ಒಂದು ಪ್ರತ್ಯೇಕ ಮಿಷನ್ ಸ್ಥಾಪಿಸಿಕೊಳ್ಳಲು ಉದ್ದೇಶಿಸಿರುವದಾಗಿಯೂ, ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಬಹುದಾದ ಮಿಷನ್‌ಗೆ ತಾವು ಭಾಗಿಗಳಾಗಲು ಇಷ್ಟವಿಲ್ಲವೆಂತಲೂ, ಖಂಡಿತವಾಗಿ ಹೇಳಿ, ಪಾಲಿ ಬೇರೆ ಮಿಷನ್ ಇಡುವ ತರದೂದಿನಲ್ಲಿರುತ್ತಾರೆ

ಬಹು ಮಟ್ಟಿಗೆ ತಿಳುವಳಿಕಸ್ಥರಾಗಿಯೂ, ವ್ಯವಹಾರಜ್ಞಾನಿಗಳಾಗಿಯೂ, ಶ್ರದ್ಧೆಯಿಂದ ಒಂದು ಛತ್ರದ ಮಿಷನ್ ಇಟ್ಟು ಉಭಯ ಟವುನ್‌ಗಳಿಗೂ ಅನುಕೂಲಪಡಿಸಬೇಕೆಂದು ಶ್ರೀರಂಗಪಟ್ಟಣದ ಮುಖ್ಯಸ್ಥರು ಮಾಡಿರುವ ಶ್ರೇಷ್ಠವಾದ ಉದ್ದೇಶಕ್ಕೆ ಪ್ರೋತ್ಸಾಹಕೊಡತಕ್ಕದ್ದು ಗಂಜಾಂ ನಿವಾಸಿಗಳ ಕರ್ತವ್ಯವಾಗಿದ್ದಾಗ್ಯೂ ಅವರು ಆ ರೀತಿ ಮಾಡದೆ ಪ್ರತ್ಯೇಕ ಮಿಷನ್ ಸ್ಥಾಪಿಸಬೇಕೆಂದು ಪ್ರಯತ್ನಮಾಡುತ್ತಿರುವದು ಬಹಳ ಶೋಚನೀಯವಾದದ್ದಾಗಿರುತ್ತೆ

ಪ್ರಜಾ ಹಿತೈಷಿ

ಮಂಡ್ಯ

ದಿವಾನರ ಸವಾರಿಯು ತಾ 4 ನೇ ಶನಿವಾರ 2 ಗಂಟೆಗೆ ಮಂಡ್ಯಕ್ಕೆ ಚಿತ್ತೈಸುವದೆಂಬ ವರ್ತಮಾನಕ್ಕೆ ಸರಿಯಾಗಿ ಎಲ್ಲಾ ಸರ್ಕಾರಿ ಕಟ್ಟಡಗಳೂ, ಇಂಗ್ಲಿಷ್ ಕನ್ನಡ ಹಿಂದುಸ್ತಾನಿ ಸ್ಕೂಲುಗಳೂ ಒಳಗೂ ಹೊರಗೂ ನೂತನವಾಗಿ ಶೃಂಗರಿಸಲ್ಪಟ್ಟಿದ್ದವು ಆಯಾ ಮತಸ್ಥರು ತಮ್ಮ ದೇವಸ್ಥಾನಗಳ ಬಳಿ ನೇತ್ರಾನಂದಕರವಾದ ಚಪ್ಪರಗಳನ್ನು ಹಾಕಿ ರಾಜಭಕ್ತಿಯನ್ನು ತೋರ್ಪಡಿಸಿದರು ರಸ್ತೆಯ ಉದ್ದಕ್ಕೂ ನಾನಾ ವಿಧವಾದ ಕಾಗದ ಹೆಸರು ಮುಂತಾದವುಗಳಿಂದ ತೋರಣಗಳನ್ನು ಕಟ್ಟಿದ್ದರು ಊರೆಲ್ಲಾ ಬಹುಮಟ್ಟಿಗೆ ಸಾಕೇಂದು ಮಾಡಿತ್ತು ದಿವಾನರ ಬರೋಣವನ್ನು ಎಲ್ಲಾ ಇಲಾಖಾ ಅಧಿಕಾರಿಗಳೂ, ಪುರಪ್ರಮುಖರೂ, ಇತರ ದೊಡ್ಡಮನುಷ್ಯರೂ, ಹಳ್ಳಿ ಹಳ್ಳಿಗಳಿಂದ ತಂಡೋಪತಂಡವಾಗಿ ಬಂದಿದ್ದ ರೈತ ಮೊದಲಾದ ಪ್ರಜೆಗಳೂ ಕಾದಿದ್ದು ಅವರು ಬಂದೊಡನೆಯೇ ಜಯಘೋಷವಾಗುತ್ತಿರುವಲ್ಲಿ ಆಸ್ಪತ್ರೆ ಬಳಿ ಹಾಕಿದ್ದ ಚಪ್ಪರದೊಳಗೆ ಸ್ವಾಗತವಾಡುವ ಉದ್ದೇಶ ಅಮಲ್ದಾರ್ ಮ|| ಕೃಷ್ಣೇಅರಸಿನವರು ಹಾರಾ ತುರಾಯಿಗಳನ್ನು ಅರ್ಪಿಸಿ, ಮ್ಯುನಿಸಿಪಲ್ ಮೆಂಬರುಗಳನ್ನು ಪರಿಚಯಮಾಡಿಸಿದರು ದಿವಾನರವರು ಮೋಟಾರಿನಿಂದ ಇಳಿದು ಆಸ್ಪತ್ರೆಯನ್ನು ತನಿಖೆಮಾಡಿಕೊಂಡು ಅಲ್ಲಿಂದ ಹಿಂದುಸ್ತಾನಿ ಗರಲ್ಸ್ ಸ್ಕೂಲನ್ನೂ, ಅದರ ಅಭಿವೃದ್ಧಿಯನ್ನೂ ನೋಡಿ ಸಂತೋಷಪಟ್ಟು ಮುಂದಕ್ಕೆ ಶ್ರೀನಿವಾಸ ಮಂದಿರದ ಬಳಿ ಮೋಟಾರನ್ನು ನಿಲ್ಲಿಸಿ ಶ್ರೀನಿವಾಸದೇವರ ಛತ್ರ ದೇವಸ್ಥಾನ ಪೂಜೆ ಮೊದಲಾದುವುಗಳನ್ನು ವಿಚಾರಿಸಿಕೊಂಡು, ಫಲ ಪ್ರಸಾದಗಳನ್ನು ಸ್ವೀಕರಿಸಿ ಬ್ರಾಹ್ಮಣರ ಬೀದಿ ಹೊಕ್ಕು ಅಲ್ಲಿಯೂ ತನಿಖೆಮಾಡಿಕೊಂಡು ಫಲ ಪುಷ್ಪಗಳನ್ನಂಗೀಕರಿಸಿ, ಗರಲ್ಸ್ ಸ್ಕೂಲಿಗೆ ದಯಮಾಡಿ, ಆ ಕಟ್ಟಡದ ಕೊರತೆಯನ್ನು ಗುರುತುಮಾಡಿಕೊಂಡು ಅಲ್ಲಿಂದ ವೆಸ್ಲಿಯನ್ ಮಿಷನ್ ಎ ವಿ ಸ್ಕೂಲಿಗೆ ದಯಮಾಡಿಸಿ ಐದಾರು ವರುಷಗಳಿಂದ ಈ ಸ್ಕೂಲು ವೃದ್ಧಿಯಾಗುತ್ತಿರುವುದನ್ನು ಕಂಡು ಅಲ್ಲಿಂದ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿಗೂ ದಯಮಾಡಿಸಿ ಕಟ್ಟಡದ ತುಂಬಾ ಇರುವ ಮಕ್ಕಳ ಸಂಖ್ಯೆಯನ್ನೂ, ಅಲ್ಲಿನ ಪಠ್ಯಪಾಠ ಕ್ರಮ, ಕಿಂಡರ್ ಗಾರ್ಟನ್, ಪೇಪರ್ ಫೋಲ್ಡಿಂಗ್, ಕ್ಲೇ ಮಾಡ್ಲಿಂಗ್, ಹೊಲಿಗೆ, ಹಾಡು ಗಾರಿಕೆ, ಹೂವು ಕತ್ತರಿಸುವುದು ಈ ಮುಂತಾದವುಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಮಿಷನರಿಗಳ ಮ್ಯಾನೇಜ್‌ಮೆಂಟನ್ನು ಹೊಗಳಿದವರಾಗಿ ಅಲ್ಲಿಂದ ಮುಂದಕ್ಕೆ ವರ್ತಕರು ಹಾಕಿದ್ದ ಚಪ್ಪರಕ್ಕೆ ದಯಮಾಡಿ ಅವರಿಂದ ಸನ್ಮಾನಹೊಂದಿ ಸಾಹುಕಾರ್ ಅರಳೆ ಸಣ್ಣಪ್ಪನವರ ಧರ್ಮ ಛತ್ರಕ್ಕೆ ದಯಮಾಡಿಸಿ ಕಟ್ಟಿದ ಎಲ್ಲಾ ಭಾಗಗಳನ್ನೂ, ಬಾವಿ ಕೊಳ ಮೊದಲಾದವುಗಳನ್ನೂ ಪರಾಂಬರಿಸಿ ಆ ಸಾಹುಕಾರರ ಧರ್ಮಗುಣವನ್ನು ಹೊಗಳಿ ಇನ್ನೂ ಪ್ರೋತ್ಸಾಹಿಸಿ ಅವರಿಂದಲೂ, ಅವರ ಪ್ರೋತ್ಸಾಹಕರೂ ಸಹಾಯಕರೂ ಆದ ಜೈನರ ರಾ ದರ್ಶನವರಿಂದಲೂ ಹಾರಾ ತುರಾಯಿಗಳನ್ನು ಅಂಗೀಕರಿಸಿ ಅಲ್ಲಿಂದ ಮೊದಲೇ ಜೈನರ ಪರವಾಗಿ ರಾ ಅಮ್ಮಣ್ಣಪ್ಪನವರು ತಂತೀ ವರ್ತಮಾನ ಕೊಟ್ಟು ಎಚ್ಚರಿಸಿಕೊಂಡಿದ್ದಂತೆ ಅವರ ಬಸ್ತಿಯ ಬಳಿ ಹಾಕಿದ್ದ ಚಪ್ಪರಕ್ಕೆ ದಯಮಾಡಿದರು ಅಲ್ಲಿ ಜೈನ ಪ್ರಜೆಗಳ ಪರವಾಗಿ ಸಾಹುಕಾರ್ ಎಂ ಎನ್ ನಾಗೇಂದ್ರಯ್ಯನವರು ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಅರ್ಪಿಸಿದರು ಅದರ ಸಾರಾಂಶವೇನೆಂದರೆ —

ಅಮಾತ್ಯ ಶಿರೋಮಣಿಗಳಾದ ತಾವು ಸಂಸ್ಥಾನದ ಸಮಸ್ತ ಪ್ರಜೆಗಳ ಕ್ಷೇಮಚಿಂತನೆಯನ್ನೇ ಸದಾ ವಿಚಾರಿಸುತ್ತಿರುವುದೇ ತಮ್ಮ ಮುಖ್ಯಕರ್ತವ್ಯಗಳಲ್ಲೊಂದೆಂದು ಭಾವಿಸಿ ಅಮಾತ್ಯಪದವಿಯನ್ನು ಅಲಂಕರಿಸಿದ ಕಾಲದಿಂದಲೂ ಅನೇಕ ಸ್ಥಳಗಳಲ್ಲಿ ಸಂಚಾರ ಹೊರಟಿರುವುದೇ ಸ್ವಾಮಿಗಳವರಿಗೆ ಪ್ರಜೆಗಳಲ್ಲಿರುವ ಅನುರಾಗವನ್ನು ವ್ಯಕ್ತಗೊಳಿಸುತ್ತದೆ ಅದರಲ್ಲಿಯೂ ಈ ನಮ್ಮ ಗ್ರಾಮಕ್ಕೆ ಸ್ವಾಮಿಯವರ ಆಗಮನವು ಪ್ರಥಮಾಗಮನವಾಗಿರುವ ತೆಯೇ ಸಂಸ್ಥಾನದ ಮಂತ್ರಿವರ್ಯರಲ್ಲಿಯೂ ಇಲ್ಲಿಗೆ ದಯಮಾಡಿಸಿದವರಲ್ಲಿ ತಾವೇ ಪ್ರಥಮರು ಆಗಿರುವುದರಿಂದ ನಾವೆಲ್ಲರೂ ತುಂಬಾ ಕೃತಜ್ಞರಾಗಿದ್ದೇವೆ ಪ್ರಜೆಗಳ ಬುದ್ಧಿ ಕೌಶಲ್ಯವನ್ನೂ ಐಶ್ವರ್ಯವನ್ನೂ ವಿದ್ಯೆಯನ್ನೂ ಹೆಚ್ಚಿಸುವುದರಲ್ಲಿ ಸ್ವಾಮಿಗಳಿಗಿರುವ ಅಸದೃಶವಾದ ಆಸಕ್ತಿಯೂ ಈಚೀಚೆಗೆ ಪ್ರಜೆಗಳ ಪರವಾಗಿ ನ್ಯಾಯವಿಧಾಯಕ ಸಭೆಗೂ ಎಕನಾಮಿಕ್ ಕಾನ್‌ಫರೆನ್ಸಿಗೂ ಹೊಸ ಮೆಂಬರುಗಳನ್ನು ಸೇರಿಸಿಕೊಂಡಿರುವುದೂ, ರೈಲ್ವೆ ಬಡಾವಣೆಗಳನ್ನು ಮಾಡುತ್ತಿರುವುದೂ, ವಿದ್ಯಾಭ್ಯಾಸದ ಇಲಾಖೆಯಲ್ಲಿ ಬಾರಿಗೆ ತಂದೂ ತರುತ್ತಲೂ ಇರುವ ಏರ್ಪಾಡುಗಳೂ ಸಾಕ್ಷಿಯಾಗಿರುವುದಲ್ಲದೆ ಸಂಸ್ಥಾನದ ಕೈಗಾರಿಕೆ ಮತ್ತು ವ್ಯವಸಾಯವನ್ನು ವೃದ್ಧಿಪಡಿಸಲು ಮುಖ್ಯಸಲಕರಣೆಗಳಾದ ಕಾರ್ಖಾನೆಗಳನ್ನೂ ಅಲ್ಲಲ್ಲಿ ಸ್ಥಾಪಿಸುತ್ತಿರುವುದೂ, ಕೆರೆ ಬಡಾವಣೆಗಳನ್ನು ಮಾಡುತ್ತಿರುವುದೂ ಕೇವಲ ಸ್ತೋತ್ರಾರ್ಹವೂ ಚಿರಸ್ಮರಣೀಯವೂ ಆಗಿದೆ ಉತ್ತರ ಹಿಂದುಸ್ಥಾನದಲ್ಲಿ ಅನೇಕ ವರ್ಷಗಳಿಂದಲೂ ಸಂಪಾದಿಸಿದ್ದ ಅನುಭವವನ್ನೂ, ಪಾಶ್ಚಾತ್ಯದೇಶಸಂಚಾರದಿಂದುಂಟಾದ ಅನುಭವವನ್ನೂ ಮಾತೃಭೂಮಿಯಾದ ನಮ್ಮ ಸಂಸ್ಥಾನದ ಪ್ರಯೋಜನಕ್ಕಾಗಿ ಅರ್ಪಿಸುವುದೇ ಸ್ವಾಮಿಯವರ ಮುಖ್ಯೋದ್ದೇಶವೆಂಗಿ ಭಾವಿಸಿ ಸದಾ ಪ್ರಯತ್ನಪಡುತ್ತಿರುವುದೂ, ಇಂಥಾ ಮಂತ್ರಿವರ್ಯರನ್ನು ನಮ್ಮನ್ನಾಳುವ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್, ಜಿ ಸಿ ಎಸ್ ಐ ರವರು ಈ ಮಹತ್ಪದವಿಗೆ ತಂದಿರುವುದೂ ಪ್ರಜೆಗಳಿಂದ ಸರ್ವರ ಪುಣ್ಯೋದಯವೆಂತ ಭಾವಿಸುತ್ತೇವೆ — ಈಚೀಚೆಗೆ ಸಕಾಲದಲ್ಲಿ ಮಳೆಯಾಗುವುದೇ ಕಮ್ಮಿಯಾಗುತ್ತಿರುವುದು ಸ್ವಾಮಿಯವರ ಲಕ್ಷ್ಯಕ್ಕೆ ಬಂದವೇ ಇದೆ ಮತ್ತು ಬಹಳ ವರ್ಷಗಳಿಂದಲೂ ಕಾಲಕಾಲಕ್ಕೆ ಮಳೆಯಾಗದೆ ಯಾವ ಫಸಲೂ ಬೆಳೆಯಲು ಅವಕಾಶವಿಲ್ಲದಿರುವುದರಿಂದ ಜನಗಳು ಬಹಳ ತೊಂದರೆಗೆ ಗುರಿಯಾಗಿರುತ್ತಾರೆ ಅಲ್ಲದೆ ದನಕರುಗಳಿಗೆ ಬಹಳ ತೊಂದರೆಯಾಗಿರುತ್ತದೆ ಕ್ಷಾಮದೇವತೆಯನ್ನೇ ಓಡಿಸಬೇಕೆಂದು ಯೋಚನೆಯಿಂದ ನಿರ್ಮಿಸುತ್ತಿರುವ ಕನ್ನಂಬಾಡಿ ಕಟ್ಟೆಯಿಂದ ಒಂದು ನಾಲೆಯನ್ನು ಕೊಟ್ಟು ಅನೇಕ ಖುಷ್ಕಿ ಜಮೀನಿನ ಸಾಗುವಳಿಗೆ ಅನುಕೂಲಪಡಿಸಿ ದನಕರುಗಳನ್ನೂ ರೈತರನ್ನೂ ಉದ್ಧಾರಮಾಡಬೇಕೆಂದು ಪ್ರಾರ್ಥಿಸುತ್ತೇವೆ — ವಿದ್ಯೆಯಲ್ಲಿ ಕೇವಲ ಹಿಂದುಳಿದಿರುವ ಜೈನರಿಗೆ ಇತರ ಹಿಂದುಳಿದಿರುವ ಜನಾಂಗದವರಿಗೆ ಉಂಟು ಮಾಡಿಕೊಡುತ್ತಿರುವ ಸವಲತ್ತುಗಳನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ

ದಿವಾನರವರು ಮೊಲ್ಕಂಡ ಪತ್ರಿಕೆಯನ್ನು ಅಂಗೀಕರಿಸಿ ಅಲ್ಲಿಂದ ಪ್ರಾಮು ಖ್ಯವಾಗಿ ಕಾಳಜಾತ್ರೆಯಲ್ಲಿ ಪಂಚಮರಿಂದುಂಟಾಗುವ ತೊಂದರೆಗಳನ್ನೂ ಕೊರತೆ ಗಳನ್ನೂ ವಿಚಾರಿಸಿ ನಿವಾರಣೆ ಬಗ್ಗೆ ಗುರ್ತುಹಾಕಿಕೊಂಡು ಅಲ್ಲಿಂದ ಆ ದಿನದ ಮಟ್ಟಿಗೆ ರಾಜಬೀದಿಯೋ ಎಂಬಂತೆ ಅಲಂಕರಿಸಲ್ಪಟ್ಟ ಪಂಚಮರ ಕೇರಿಯನ್ನು ಹೊಕ್ಕು ಸ್ಕೂಲಿಗೆ ದಯಮಾಡಿಸಿ ಅಲ್ಲಿಯೂ ಮಿಷನ್ನಿನವರ ಮ್ಯಾನೇಜ್‌ಮೆಂಟ ನ್ನು ಮೆಚ್ಚಿಕೊಂಡು ವಾಪಸ್ ಬರುತ್ತಾ ಆ ಜನಗಳಿಗಿರುವ ಕೊರತೆಗಳನ್ನು ತಿಳಿದುಕೊಂಡವರಾಗಿ ಗರ್ಲ್ಸ್ ಸ್ಕೂಲ್, ನೈಟ್ ಸ್ಕೂಲ್, ಕೈಗಾರಿಕೆ ಪಾಠಶಾಲೆ ಗಳನ್ನು ಇಡಿರುವುದಕ್ಕೆ ಗುರ್ತುಮಾಡಿಕೊಂಡು, ಅಲ್ಲಿಂದ ಹಿಂದುಸ್ತಾನಿ ಸ್ಕೂಲಿಗೆ ದಯಮಾಡಿ ಹಿಂದುಸ್ತಾನಿಯಲ್ಲೂ ಇಂಗ್ಲಿಷಿನಲ್ಲೂ ಒಪ್ಪಿಸಿದ ವಂದನಾಪತ್ರಿಕೆಗಳನ್ನು ಅಂಗೀಕರಿಸಿ ಅಲ್ಲಿಂದ ಕೋಆಪರೆಟಿವ್ ಸೊಸೈಟಿ ಮೂಲಕ ನಡಿಯುತ್ತಿರುವ ಕೊಮ್ಮೇರಹಳ್ಳಿ ಪಂಚಮರ ನೇಯ್ಗೆ ಕಸಬನ್ನು ನೋಡಿ, ಅಲ್ಲಿಂದ ಗೌ|| ಕನ್ನಡ ಬಾಯ್ಸ್ ಸ್ಕೂಲಿಗೆ ಚಿತ್ತೈಸಿ ಹೆಚ್ಚು ಬಾಲಕರ ಸಂಖ್ಯೆಯನ್ನೂ, ಕಟ್ಟಡದ ಕೊರತೆಯನ್ನೂ ತಿಳಿಕೊಂಡು, ಅಲ್ಲಿನ ಮಾನೇಜ್ ಮೆಂಟಿನ ವಿಷಯದಲ್ಲಿ ತೃಪ್ತಿಗೊಂಡವರಾಗಿ ಕಡೆಯಲ್ಲಿ ತಾಲ್ಲೋಕ್ ಕಚೇರಿ ಯನ್ನು ಇನ್‌ಸ್ಪೆಕ್ಟ್ ಮಾಡಿ, ಪ್ರಜೆಗಳ ಅಹವಾಲ್ ಅರ್ಜಿ ಕೇಳುವ ಉದ್ದೇಶ್ಯ ವಂದು ಸ್ಥಳಮಾಡಿದರು ಗ್ರಾಮಾಂತರಗಳ ವಿದ್ಯಾಭ್ಯಾಸ, ಕೆರೆ, ಕಟ್ಟೆ, ನಾಲೆ, ವ್ಯವಸಾಯ, ಕೈಗಾರಿಕೆ ಪಾಠಶಾಲೆಗಳನ್ನು ಸ್ಥಾಪಿಸುವದು, ಕೋಆಪರೆಟಿವ್ ಸೊಸೈಟಿ, ಸರ್ಕಾರದಿಂದಾಗಬೇಕಾದ ಸಹಾಯ, ಈ ಮುಂತಾದ ವಿಚಾರಗಳನ್ನು ಬಹು ಬಹಳ ಹೊತ್ತು ಚರ್ಚಿಸಿ ಪ್ರಾಮುಖ್ಯ ವಿಷಯಗಳನ್ನು ಗುರ್ತುಮಾಡಿ ಕೊಂಡರು ಮುಖ್ಯವಾಗಿ ಪ್ರಜೆಗಳು ತಾವೇ ಮುಂದರಿಸಿ ಮಾಡುವ ಕಾರ್ಯಗ ಳಿಗೆ ಸರ್ಕಾರದವರು ಸಹಾಯಕರಾಗಿ ನಿಂತು ಪ್ರೋತ್ಸಾಹಿಸುತ್ತಾರೆಂಬುದೇ ದಿವಾನರವರ ಮುಖ್ಯ ತಾತ್ಪರ್ಯವಾಗಿತ್ತು ಅವರ ಸಂಗಡ ಡೆಪ್ಯುಟಿ ಕಮಿಷನರ್ ಮೊದಲಾದ ಎಲ್ಲಾ ಇಲಾಖಾ ಅಧಿಕಾರಿಗಳೂ ಬಂದಿದ್ದ ಕಾರಣ ಎಲ್ಲಾ ಪ್ರಜೆಗಳ ದಿವಾನರ ಅವಗಾಹನೆಗೆ ಬರಲು ಅನುಕೂಲವಾಯಿತು

ಖಾತ್ರಿದಾರರಿಗೆ ನೋಟೀಸ್

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ವೆಂಬ ಈ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್ಪಾಂಡೆನ್ಸ್

ಚನ್ನಪಟ್ಟಣದಲ್ಲಿ ಕೆಲವು ಕೊರತೆಗಳು

ಅಯ್ಯಾ,

ಈಗ ಬಿಸಿಲುಬಲಿಸಿದಂತೆ ಕಾಣುತ್ತೆ. ಕಾಲರಾ ಉಪದ್ರದಿಂದ 2 ಕೇಸಾ ದವೆಂದು ಹೇಳುತ್ತಾರೆ ಬಿಸಲು ದಿನಾ ಹೆಚ್ಚುತ್ತಿದೆ.—ವೆಸ್ಲಿಯನ್ ಇಲಾ ಖೆಯವರು ಗಿರಲ್ಸ್ ಸ್ಕೂಲ್ ಏರ್ಪಡಿಸಿದ್ದಾಗ್ಯೂ ಅಲ್ಲಿ ಒಂದು ಜಲಬಾಧೆ ಕಕ್ಕ ಸ್ಸಿಲ್ಲದ್ದರಿಂದ ಹುಡುಗರೆಲ್ಲರೂ ಬಾಜು ಗಲ್ಲಿಯಲ್ಲೇ ಸಿಕ್ಕಿದಹಾಗೆ ಜಲ ಬಾಧೆ ಮಾಡುವದರಿಂದ ದುರ್ವಾಸನೆಯಾಗಿ ಬಾಲಕಿಯರಿಗೆ ಅನಾರೋಗ್ಯಕ್ಕೆ ಕಾರಣವಾಗಿದೆ ಅಲ್ಲದೆ ತಿರುಗಾಡುವವರಿಗೆ ಅಸಹ್ಯವಾಗಿದೆ ಇದನ್ನು ಧರ್ಮ ಬುದ್ಧಿಯ ಈ ಇಲಾಖೆಯವರೇ ಸರಿಪಡಿಸುತ್ತಾರೆಂದು ನಂಬಿಕೆ—ಲಕ್ಷ್ಮೀನಾರಾ ಯಣಸ್ವಾಮಿ ದೇವಸ್ಥಾನದ ದಕ್ಷಿಣಭಾಗದಲ್ಲಿ ತಿರುಗಾಡುವ ರಸ್ತೆಯಲ್ಲೇ ಬಳೆಗಾರ ವ್ಯಾಪಾರಿಗಳು ಒಡೆದ ಸಣ್ಣ ಸಣ್ಣ ಗಾಜುಪುಡಿಗಳನ್ನು, ಹಾಕಿಬಿ ಡುವದರಿಂದ ಚುಚ್ಚಿಕೊಂಡು ಹೊಡೆಯಬೇಕಾದ್ದಿಲ್ಲ ಇದನ್ನು ಸ್ಯಾನಿಟರಿ ಇನ್ಸ್‌ಪೆಕ್ಟರು ಕೂಡ್ಲೆ ಕ್ರಮಪಡಿಸಿ ಮುಂದೆ ಅಲ್ಲಿ ಹಾಕದಂತೆ ಪರ್ಯಾಟಿಸಬೇ ಕೆಂದು ನಿರೀಕ್ಷಿಸುತ್ತೇನೆ—ಮೈಸೂರಿಂದ ಬೆಂಗಳೂರಿಗೆ ಹೋಗುವ ದೊಡ್ಡ ರಸ್ತೆಯಲ್ಲಿ ನಾಯಿಗಳ ಕಾಟ ಸ್ವಲ್ಪ ಕಮ್ಮಿಯಾದಾಗ್ಯೂ ಕೋಳಿಗಳ ಕಾಟ ಹೆಚ್ಚಾ ಗಿರುವಂತೆ ಕಾಣುತ್ತೆ ದಿನಾ ತಿರುಗಾಡುವ ಮೋಟರ್ ಕಾರು ಗಾಡಿಗಳಿಗೆ ಸಿಕ್ಕಿ ಸಾಯುತ್ತಿರುವವು ಇವನ್ನು ಸಾಕುವವರಿಗೆ ಮನೆಗಳಲ್ಲಿ ಗೂಡುಗಳನ್ನು ಇಟ್ಟು ಕೊಂಡು ಸಾಕಬೇಕೆಂದು ಮ್ಯುನಿಸಿಪಲ್ ಮೆಂಬರುಗಳು ಯಾಕೆ ನಿರ್ಬಂಧಪಡಿ ಸಲಾರದೋ ಗೊತ್ತಿಲ್ಲ ಇವು ಪ್ರಾಣಬಿಡುವದಲ್ಲದೆ ರಸ್ತೆಗಳಲ್ಲಿ ಸಿಕ್ಕಿದ ಹಾಗೆ ಗಲೀಜುಮಾಡುವದರಿಂದ ತಿರುಗಾಡುವ ದೊಡ್ಡ ಮನುಷ್ಯರಿಗೆ ಬಹಳ ಅಸಹ್ಯ ವಾಗುತ್ತದೆ ಇದನ್ನು ಮ್ಯುನಿಸಿಪಲ್ ಇಲಾಖೆಯವರು ಕ್ರಮಪಡಿಸುವರೆಂದು ನಂಬಿರುತ್ತೇನೆ

ರಾಮಯ್ಯ

ಚಾಮರಾಜನಗರದ ವಿದ್ಯಮಾನಗಳು

ಅಯ್ಯಾ,

ಕಳೆದ ತಿಂಗಳು 21 ನೇ ತಾ ಡೆಪ್ಯುಟಿ ಕಮಿಷನರವರು ಇಲ್ಲಿಗೆ ದಯ ಮಾಡಿ ಕಚೇರಿ ಇನ್‌ಸ್ಪೆಕ್ಟ್ ಮಾಡಿಕೊಂಡು ವಾಪಸು ಸಾಯಂಕಾಲ ತಮ್ಮ ಮೋಟಾರಿನಲ್ಲಿ ತೆರಳಿದರು ಈ ಮೋಟರ್ ಗಾಡಿಯನ್ನು ಹಿಂಬಾಲಿಸಿ ಅನೇಕ ಹುಡುಗರು ರಸ್ತೆಯಲ್ಲಿ ಒಂದೆರಡು ಫರ್ಲಾಂಗಿನ ವರೆಗೂ ಹೋಗಿದ್ದು ವಾಪಸು ಬರುವಲ್ಲಿ 8 ವರುಷದ ಬಾಲಕನೊಬ್ಬನು ಮನೆಗೆ ಬರದೆ ಇದ್ದುದರಿಂದ ಗಾಬರಿ ಯಾಗಿ ಮನೆಯವರೆಲ್ಲಾ ಹುಡುಕಿದರೂ ಪತ್ತೆಯಾಗಲಿಲ್ಲ ಕೊನೆಗೆ ಮೂರು ದಿವಸ ಮೇಲೆ ಆ ರಸ್ತೆಯ ಎಡಪಾರ್ಶ್ವದಲ್ಲಿ ಸ್ವಲ್ಪ ದೂರದಲ್ಲಿ ಒಂದು ಪಾಳುಬಿದ್ದ ಕಪಿಲೆ ಭಾವಿಯಲ್ಲಿ ಸದರಿ ಹುಡುಗನ ಹೆಣವು ತೇಲುತ್ತಿದ್ದ ದನ್ನು ಕಂಡು ಪೋಲೀಸಿನವರಾದಿಯಾಗಿ ಸಮಸ್ತರೂ ಬಂದರು ಹೆಣವನ್ನು ಮೇಲೆ ತೆಗೆದು ನೋಡುವಲ್ಲಿ ಹುಡುಗನ ಮೈ ಮೇಲಿದ್ದ ಬೆಳ್ಳಿಯ ಮುರಿಗಳೂ, ಉಡಿ ದಾರ, ಕಿವಿಯ ಆಭರಣ ವಗೈರೆಗಳು ಕಾಣದೆ ಹೋಗಿ, ಹೆಣದ ಕತ್ತು ಊದಿ ಕೊಂಡು ಬಾಯಿಗಳಲ್ಲಿ ರಕ್ತ ಸುರಿಯುತ್ತಿದ್ದದ್ದು ಕಂಡುಬಂತು ಪೋಲೀಸಿನ ವರ ಕ್ರಮವಾದ ನಡವಳಿಕೆಯಿಂದ ಹೆಣವನ್ನು ವಾರಸುದಾರರಿಗೆ ಕೊಟ್ಟರು ಯಾರೋ ದುಷ್ಟರು ಒಡವೆಗಳ ಆಶೆಗಾಗಿ ಮಗುವನ್ನು ಪುಸಲಾಯಿಸಿ ಮರಗೆ ಕರೆದುಕೊಂಡು ಹೋಗಿ ಕತ್ತು ಕಿವಿಚಿ ಕೊಂದು, ಹೆಣವನ್ನು ಈ ಭಾವಿಗೆ ಹಾಕಿದಂತೆ ತೋರಿಬರುವುದರಿಂದ ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿ ದ್ದಾರೆ.

ಈಗಿನ ಅಮಲ್ದಾರ್ ಮ, ಕೆ ಕೆ ವೆಂಕಟಸ್ವಾಮಿ ಅಯ್ಯರವರು ಒಂದ ರಿಂದ ರೈತರಿಗೆ ಎಷ್ಟೋ ಸೌಖ್ಯವಾಗಿದೆ ಯಾವ ಕಾಗದ ಪತ್ರಗಳೂ, ಪೆಂಡಿಂಗ್ ಕೇಸುಗಳೂ ಜಾಗ್ರತೆಯಾಗಿ ಫೈಸಲಾಗುತ್ತಿವೆ ಪ್ರತಿ ಒಬ್ಬ ರೈತನ ಅರ್ಜಿಯನ್ನೂ ತಾವೇ ಖುದ್ದು ನೋಡಿ, ಕೂಡ್ಲೆ ಸದುತ್ತರವನ್ನು ದಯಪಾಲಿಸು ವದರಿಂದ ಗುಮಾಸ್ತೆಯರ ಹತ್ತಿರ ಹೋಗಿ ಆಶ್ರಯಮಾಡುವುದು ತಪ್ಪಿ ದಂತಾಗಿದೆ ಯಾವ ಪುಕಾರು ಬಂದರೂ ಅಮಲ್ದಾರ್ರು ಆದರದಿಂದ ಕೇಳಿ ಕೂಡ್ಲೆ ಪರಿಹಾರ ಮಾಡುವರು ಇವರು ಇಲ್ಲಿಗೆ ಬಂದ ಕೂಡ್ಲೆ ಅಸ್ತವ್ಯಸ್ತವಾಗಿದ್ದ ತಾಲ್ಲೂಕ್ ಕಚೇರಿ ಆಡಳಿತವನ್ನು ಕ್ರಮಪಡಿಸಲು ಆರಂಭಿಸಿ, ಲಂಚ ವಗೈರೆ ದುರ್ವ್ಯವಹಾರಗಳಿಗೆ ಅವಕಾಶವನ್ನು ತಪ್ಪಿಸಿ, ಬಹುಕಾಲ ಒಂದೇ ಕೆಲಸದಲ್ಲಿದ್ದು ನಾನಾ ವಿಧವಾದ ಅಂತರಂಗ ವ್ಯಾಪಾರಗ ಳನ್ನು ನಡಿಸುತ್ತಿದ್ದವರಿಗೆ ತಕ್ಕ ರೀತಿ ಬಂದೋಬಸ್ತು ಮಾಡಿದರು ಇದೀ ಚೆಗೆ ಕೆಲವು ನೌಕರರಿಗೆ ಸರಿಬೀಳದೆ ಕೆಲವರು ಕೂಟಕೂಡಿ ಅಮಲ್ದಾರ್ರವರ ಮೇಲೆ ದುರಾಲೋಚನೆಯಿಂದ ಅರ್ಜಿಯನ್ನು ಡೆಪ್ಯುಟಿ ಕಮಿಷನರ್ ಸಾಹೇಬರವ ರಿಗೆ ಕಳುಹಿಸಿ ಕೊಂಡರು ಇವರ ಮೇಲೆ ಅವರ ತನಿಖೆಯಿಂದ ನೌಕರರಿಗೆ ತಲಾ 1 ರೂಪಾಯಿನಿಂದ 8 ಆಣೆ ವರೆಗೂ ಜುಲ್ಮಾನೆ ವಿಧಿಸಿ ಖಂಡನ್ನಡ

ಗಿಸಿದರು ಇದರಿಂದ ರೈತರ ಕ್ಷೇಮಕ್ಕಾಗಿ ನಮ್ಮ ಸರ್ಕಾರದವರು ಯಾವಾ ಗಲೂ ದೃಷ್ಟಿಯನ್ನಿಟ್ಟಿರುವರೆಂದು ವ್ಯಕ್ತಪಡುವದು ಬಹುಕಾಲದಿಂದ ರೈತ ರನ್ನು ನಾನಾ ವಿಧವಾಗಿ ಪೀಡಿಸಿ ದ್ರವ್ಯಶೇಖರಮಾಡಿ ಇಲ್ಲಿಯೇ ಸ್ಥಳವನ್ನೆ ಮಾಡಿ ಕೊಂಡು ಸ್ವೇಚ್ಛೆಯಾಗಿದ್ದ ನೌಕರರಿಗೆ ನಿಸ್ಪೃಹರಾದ ದರ್ಪವುಳ್ಳ ಅಧಿಕಾರಿಗಳ ತಾಬೆಯು ಹೇಗೆ ಸರಿಬಿದ್ದೀತು ? ಕಛೇರಿಯಲ್ಲಿ ನಡೆಯುವ ಅಕ್ರಮಗಳನ್ನು ಬರೆಯಬೇಕಾದರೆ ತಮ್ಮ ಪತ್ರಿಕೆಯೇ ಸಾಲದು ಇನ್ನು ಮುಂದೆ ಇದೆಲ್ಲಾ ಅಡಗಿ ರೈತರಿಗೆ ಅನುಕೂಲವೂ, ನೌಕರರಿಗೆ ಒಳ್ಳೇ ಹೆಸರೂ ಬರುತ್ತದೆಂದು ನಂಬಿದೇನೆ

ಶಾರದಾ.

ಗ್ರಾಮಾಭಿವೃದ್ಧಿಯೂ ಸ್ಕೂಲ್ ಮಾಸ್ಟರುಗಳೂ

ಅಯ್ಯಾ,

ಗ್ರಾಮಾಭಿವೃದ್ಧಿಯು ಅವಶ್ಯಕವೆಂಬುದು ಬಹುಜನ ಸಮ್ಮತಿಯಾದದ್ದು ಈ ಶಬ್ದಕ್ಕೆ ಕುಂದಕವಾಗುವಂತೆ ತಮ್ಮ ಅಸೂಯಾದಿಗಳನ್ನು ಯಥಾರ್ಥಕ್ಕೆ ವಿರೋಧವಾಗಿ ಕಾವು ನಿಷ್ಪಕ್ಷಪಾತಿಗಳೆಂದು ಪತ್ರಿಕೆಗಳಿಗೆ ಅನೇಕ ಸಾರಿ ಪ್ರಕಟಿಸು ತ್ತಲಿದಾರೆ ಆದರೆ ಇದು ಸಜ್ಜನರ ಮನೋಪ್ರಾದವನ್ನುಂಟುಮಾಡುವದರಿಂದ ಸರ್ವಚೇತಾತ್ಮಕನಾದ ಪರಮಾತ್ಮನಿಗೆ ವೇದ್ಯವಿರುತ್ತದೆ

ಪ್ರಾಕು ಒಂದು ಗ್ರಾಮಕ್ಕೆ ಅಭಿಮಾನಿಗಳಾದ ಮುಖಂಡರು ಇದ್ದರೆ ಅವ ರನ್ನು ತಾಯಿತಂದೆಗಳಂತೆ ಭಾವಿಸಿ ತಮ್ಮ ನಡೆವಳಿಕೆಗಳನ್ನೆಲ್ಲಾ ಅವರಿಂದ ಸರಿ ಪಡಿಸಿಕೊಳ್ಳುತ್ತಾ ಸುಖ, ಭಾಗ್ಯ, ಕೀರ್ತಿವಂತರಾಗಿ ಬಾಳಿದರು ಮತ್ತು ಅವ ರವರ ಯೋಗ್ಯತೆಗಳನ್ನೆಲ್ಲಾ ಮಿತವಾಗಿ ಇಟ್ಟುಕೊಂಡಿದ್ದರು ಊರಿನಲ್ಲಿ ಪುಂಡು ಪೋಕರಿಯರ ಗಲಾಟೆಗೆ ಆಸ್ಪದವಾಗುತ್ತಿರಲಿಲ್ಲ ಸರ್ಕಾರದ ದೊಡ್ಡ ಹುದ್ದೆದಾ ರರುಗಳು ದೇಶೀಯ ಸಂಪ್ರದಾಯಗಳಲ್ಲಿ ಅನುಭವಿಗಳಾಗಿದ್ದದ್ದರಿಂದ ಮೇಲಿನ ತಪೆಗಳಿಗೆ ಸಹಕಾರಿಯಾಗಿದ್ದಿತು ಈಗಲೂ ಅಂಥ ತಿಸಬಂಧಿ ಯಾವದೂ ಇರು ವದಿಲ್ಲ ಶ್ಲೋಕ|| ಏನಕೇನಪ್ರಕಾರೇಣ ಪ್ರಸಿದ್ಧ ಪುರುಷೋಭವ|| ಏನಕೇನ ಪ್ರಕಾರೇಣ ಕುಟುಂಬ ಭರಣಂ ಕುರು । ಎಂಬ ನ್ಯಾಯವು ತಾತ್ಕಾಲಿಕ ಗ್ರಾಮ ದವರೂ ಇತರ ಉದ್ಯೋಗಸ್ಥರೂ ಉಪಕ್ರಮೋಪಸಂಹಾರಗಳಲ್ಲಿ ಅನರ್ಥ ಬುದ್ಧಿಕೌಶಲ್ಯಗಳಿಂದ ತಮ್ಮ ಕೀರ್ತಿಯು ಪ್ರೌಢತನವೂ ಹೆಚ್ಚಿಸುತ್ತಾ ಮೆರೆದು ಬರುತ್ತಿರುವಲ್ಲಿ ಗ್ರಾಮಹಾನಿ ಸಜ ನರು || ವಿಪತ್ರಿಮಿ ನ್ಯಾಯೇನ ಜೀವಾಂ ವ್ಯಾಹಂ ಎಂಬಂತೆ ವ್ಯಸನಪಡುತ್ತಿರುವರು ಯಾಕೆಂದರೆ ತಮ್ಮ ಕುಟುಂಬ ಪೋಷಣೆಯ ಅರ್ಜನೆಯ ದ್ರವ್ಯದಲ್ಲಿ ಕುಟುಂಬಭರಣಕ್ಕೆ ಉಳಿಯುವಂತೆ ಅನರ್ಥಗಳಾಗುವದರಿಂದ ಗ್ರಾಮ ಸೌಖ್ಯವೆಂಬ ನ್ಯಾಯವು ಇವರ ಪಾಲಿಗೆ ಎಲ್ಲಿ ತಾನೇ ಬರಬೇಕು ?

ಊರಿನಲ್ಲಿ ತಟಬಂದಿಗೆ ಅವಕಾಶಕೊಡದಂತೆ ದುರ್ಬೋಧನಾ ಪಂಡಿತರು ಗಳ ಸಮೂಹವು ಹೆಚ್ಚುತ್ತಲಿರುವ ಪ್ರಯುಕ್ತ ಬಾಲ್ಯ, ಕೌಮಾರ, ಯವ್ವನಾ ವಸ್ಥೆಗಳಲ್ಲಿರುವ ಗ್ರಾಮಸ್ಥರೆಲ್ಲಾ ತಮಗೆ ಅನುಕೂಲ ಸಾಧಕ ಬಾಧಕ ಪರ್ಯಾಯಗಳು ಇಲ್ಲದೆ ಸಕಲ ವಿಷಯದಲ್ಲಿಯೂ ಇಚ್ಛಾ ವಿಹಾರಿಗಳಾದರು ರೈತ ಅರ್ಜನೆಯ ದ್ರವ್ಯದಲ್ಲಿ ಒಂದು ಭಾಗವು ತಮಗೆ ಉಂಟಾಗುವ ಸರ್ಕಾರಿ ನಿರ್ಬಂಧ, ಪರತ್ತು, ವಶೀಕರಣ ಇವುಗಳಿಗೆ ವ್ಯಯಿಸುವರು ಎರಡನೇ ಭಾಗದ ದ್ರವ್ಯವು ಗ್ರಾಮದಲ್ಲಿ ನ್ಯಾಯ ವ್ಯವಸ್ಥೆ ಇಲ್ಲದಿರುವದರಿಂದ ಕೋರ್ಟುಗಳಿಗೂ, ಲಾಯರುಗಳಿಗೂ, ಪ್ರಮಾಣಗಳಿಗೂ ವ್ಯಯಿಸುತ್ತದೆ ಮೂರನೇ ಭಾಗದ ದ್ರವ್ಯವು ಕೃಷಿ ಸಂಬಂಧವಾದ ಯಂತ್ರಾನುಕೂಲಗಳು ಒದಗದೆ ಹೋದ್ದರಿಂದಲೂ, ಮಲೆನಾಡಿನ ಜನಸ್ತೋಮವು ಕಮ್ಮಿಯಾಗಿದ್ದು ಕನ್ನಡಾ ಜಿಲ್ಲಾ ನವಕರೀ ಆಳುಗಳು ಮತ್ತು ಕೈವಾಡಗಳು ಇವರಿಗೆ ವ್ಯಯಿಸುತ್ತೆ ನಾಲ್ಕನೇ ಭಾಗದ ದ್ರವ್ಯವು ಕೃಷಿ ಸಂಬಂಧ ಸ್ವದೇಶ ವಿದೇಶ ಮುಟ್ಟುಗಳಿಗೂ, ಸಂತೆ ಇಲ್ಲದಿರುವ ದರಿಂದ ಜಿನಸೀಗೂ ಸಹ ವ್ಯಯಿಸುತ್ತದೆ ಐದನೇ ಭಾಗ ದ್ರವ್ಯವು ಬೇಕಾಗುವದ ರಿಂದ ಹಣವನ್ನು ಹೆಚ್ಚು ಬಡ್ಡಿಯಿಂದ ತಂದು ಸರ್ಕಾರಿ ಕಂದಾಯಕ್ಕೂ, ವಿಶೇಷ ಜಮೀನು ಸಾಗುವಳಿಯ ಖರ್ಚಿಗೂ ಮತ್ತು ಮತಸಂಬಂಧವಾದ ವಿಶೇಷ ಕಟ್ಟಿಗೂ ಜೀವನಕ್ಕೂ ಸಹ ಬೇಕಾಗುವದರಿಂದ ನಾವು ಋಣಸಂಬಂಧಿ ಗಳಾಗಬೇಕಾಯ್ತು.

ಆದರೆ ಇವರಲ್ಲಿ ಒಂದು ದೃಷ್ಟಾಂತರವು ಮಾತ್ರ ಸೂಚಿಸುತ್ತದೆ ವಿದ್ಯಾ ಭಿವೃದ್ಧಿಯ ವಿಷಯದಲ್ಲಿ ಗ್ರಾಮಾಂತರ ಸ್ಕೂಲ್ ಮಾಸ್ಟರ್‌ಗಳಿಗೆ ಪ್ರಾಕು ಐದು ರೂಪಾಯಿಗೆ ಒಂದು ಗ್ರೇಡ್, 7 ರೂಪಾಯಿಗೆ ಒಂದು ಗ್ರೇಡುಗಳಿತ್ತು, ಆಗ ರೈತರು ಪಾರಮಾರ್ಥಿಕವೆಣಿಸಿ ತಮ್ಮ ತಮ್ಮ ಶಕ್ತ್ಯಾನುಸಾರ ಸ್ಕೂಲ್ ಕಟ್ಟಡವೂ, ಮಾಸ್ಟರ ವಾಸದ ಮನೆಯೂ ಮತ್ತು ಅವರ ಜೀವನಕ್ಕೆ ತಕ್ಕಷ್ಟು ಉಪಕೃತಿಯೂ ಮಾಡುತ್ತಲಿದ್ದರು ಆದರೆ ಈಗ ದಯಾಳು ಸರ್ಕಾರದವರೂ ಸಹ ಸ್ಕೂಲ್ ಮಾಸ್ಟರುಗಳಿಗೆ ಹತ್ತು ರೂಪಾಯಿ ವೇತನವೂ ಕೊಟ್ಟು, ಸ್ಕೂಲ್ ಕಟ್ಟಡವನ್ನು ಸರ್ಕಾರದಿಂದಲೇ ಕೊಡಿಸಿಬಿಟ್ಟರು ಮಾಸ್ಟರುಗಳಿಗೆ ಜುಜುವಿ ತಲಬು ಪ್ರಾಕು ಇರುವಾಗ ಗ್ರಾಮಸ್ಥರು ಮೊದಲು ಮಾಡುತ್ತಿದ್ದಂತೆ ಈಗಲೂ ಆ ರೀತಿಯೇ ವಾಸದ ಮನೆ ಮಾಡಿಕೊಡಬೇಕೆಂದು ಆ ಇಲಾಖಾದವರೂ ಸ್ಕೂಲ್ ಮಾಸ್ಟರುಗಳೂ ಈ ಬಡರೈತರನ್ನು ಹಿಂಸಿಸುವದರಿಂದ ಅವರು ಯಾರ ಮರೆಯನ್ನು ಹೊಕ್ಕು ಬದುಕಲಾದೀತು ? ಹಾಗೂ ಸ್ಕೂಲ್ ಮಾಸ್ಟರುಗಳಿಗೆ ವಾಸದ ಮನೆಯನ್ನು ಮಾಡಿಸಿಕೊಟ್ಟಾಗ್ಯೂ ಅವರು ಆ ಮನೆಯನ್ನು ಪುನಃ ಪುನಃ ಹಾಳುಮಾಡಿಕೊಂಡು ಮತ್ತೆ ಗ್ರಾಮಸ್ಥರು ವಾಸದ ಮನೆಯನ್ನು ಕಟ್ಟಿಸಿ ಕೊಡಬೇಕೆಂದರೆ ಈ ಬಡರೈತರು ಸಹ ಅಂಥಾವರಿಗೆ ವಾಸದ ಮನೆಯನ್ನು ಎಷ್ಟು ಸಾರಿ ತಾನೇ ಕಟ್ಟಿಸಿಕೊಟ್ಟಾರು ? ಪರಂತು ತಾಲ್ಲೋಕು ಬೋರ್ಡ್ ರೆವಿನ್ಯೂ, ಪೋಲೀಸ್, ಆಬಕಾರಿ, ಫಾರೆಸ್ಟು ಎಲ್ಲಾ ಇಲಾಖಾದಲ್ಲೂ ಎಂಟು ರೂಪಾಯಿ ಮೊದಲುಗೊಂಡು ನೌಕರಿಯವರಿಗೆ ವಾಸದ ಮನೆ ವಗೈರೆ ಅವರ ಕುಟುಂಬವನ್ನು ಕಾಪಾಡತಕ್ಕವರ್ಯಾರಿದ್ದಾರು ?

ಈ ಎಜುಕೇಷನ್ ಇಲಾಖೆಯಲ್ಲಿ ಮಾತ್ರ ಇರುವಂತೆ ನಿರ್ಬಂಧಗಳು ಎಲ್ಲಾ ಇಲಾಖೆಯವರೂ ಕೇಳಿದಲ್ಲಿ ಅವರಿಗೂ ಸಹ ವಾಸದ ಮನೆ ವಗೈರೆ ರೈತರೇ ಮಾಡಿಕೊಡಬೇಕಾದೀತೇ ? ಸ್ಕೂಲ್ ಮಾಸ್ಟರುಗಳ ಇಷ್ಟದಂತೆ ಅವರಿಗೆ ಮೇಲಧಿಕಾರಿಗಳ ಹುಕುಂ ದೊರೆಯುವದರಿಂದ ಈ ಬಡರೈತರಿಗೆ ಹಿಂಸೆಯು ಯಾವ ಕಾಲಕ್ಕೆ ತಾನೆ ತಪ್ಪೀತು ? ಇದಕ್ಕಾಗಿ ಸ್ಕೂಲ್ ಮಾಸ್ಟರು ಗ್ರಾಮದಲ್ಲಿ ದುರ್ಬೋಧನೆಯನ್ನುಂಟುಮಾಡಿ ತಮ್ಮ ಇಷ್ಟವನ್ನು ಸಲ್ಲಿಸಿಕೊಳ್ಳಲಪೇಕ್ಷಿಸು ವಲ್ಲಿ ಗ್ರಾಮದಲ್ಲಿಯೇ ಎರಡು ವಿಧವಾಗಿ ಪಂಗಡಗಳು ಉಂಟಾಗುವದರಿಂದ ಗ್ರಾಮಾಭಿವೃದ್ಧಿಯು ಹೇಗೆ ತಾನೇ ಉಂಟಾದೀತು ?

ಸರ್ವಜನ ಹಿತೈಷಿಣಿ

ತಾಲ್ಲೋಕು ವರ್ತಮಾನಗಳು

ಶ್ಯಾಮಗೊಂಡ್ಲು — ಈ ಪ್ರಾಂತ್ಯ ಬಿಸಿಲು ಜಾಸ್ತಿಯಾಗಿದೆ ಕೆರೆಗಳು ಒಣಗುತ್ತಾ ಬಂದಿವೆ ಎರಡು ಮೂರು ದಿನಗಳಿಂದ ಮೋಡಮಾಡುತ್ತಾ ಇದ್ದು, ಮೊನ್ನೆ ರಾತ್ರಿ ಕೊಂಚ ಮಳೆ ಬಂತು ಧಾರಣೆವಾಸಿಗಳು ದಿನೇ ದಿನೇ ಏರುತ್ತಾ, ಬಡಜನಗಳ ಜೀವನಕ್ಕೆ ತುಂಬಾ ತೊಂದರೆಯಾಗಿದೆ—ಈಗ ಅಲ್ಲಲ್ಲಿ ಕಳ್ಳತನ ಗಳು ಶುರುವಾಗಿವೆ 15 ದಿನಗಳ ಕೆಳಗೆ ಹೊಸ ಕೇರಿ ಹಯಾತ್ ಸಾಬಿ ಎಂಬು ವನ ಒಂದು ಎತ್ತನ್ನು ಕೊಯ್ದು ಚರ್ಮವನ್ನು ಮಂಡೀಗೆ ಕೊಂಡುಹೋದಾಗ ಪೋಲೀಸಿಗೆ ಸಿಕ್ಕಿಬಿದ್ದನು ಈತನಿಗೆ ಮೊದಲೇ ಒಂದು ಸಾರಿ ಸರ್ಕಾರದ ಶಿಕ್ಷೆ ಯಾಗಿತ್ತು ಮತ್ತು ಶಿವರಾತ್ರಿಗೆ ಊರು ಬಾಗಿಲಲ್ಲಿರುವ ದಾದು ಸಾಬಿ ಎಂಬು ವನ ಮನೆಗೆ ಮೊನ್ನೆ ಕಳ್ಳರು ಬಿದ್ದು 20-30 ರೂಪಾಯಿ ಮಾಲು ನಷ್ಟವಾಗಿ ರುತ್ತದೆ ಅಕಸ್ಮಾತಾಗಿ ಕೋಟೆಯಲ್ಲಿ ಸೋಮಯಾಜಿಗಳ ಮನೆ ಹಿತ್ತಲಲ್ಲಿದ್ದ ಹುಲ್ಲಿನ ಬಣವೆಗೆ ಹ್ಯಾಗೋ ಬೆಂಕಿಬಿದ್ದು ಸುಟ್ಟುಹೋಯಿತು. ಈ ವಿಚಾರ ಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು ಯಾರ ಕೆಲಸವೋ ತಿಳಿಯದು—ಕೆಲ ವು ದಿನಗಳಿಂದಲೂ ವೆ|| ಮಿಷನ್ ಗರ್ಲ್ಸ್ ಸ್ಕೂಲಿನ ವರಾಂಡದಲ್ಲಿ ರಾತ್ರಿ ಹೊತ್ತು ಕೆಲವರು ಮಲಗಿ ಗಲೀಜು ಮಾಡುವದಲ್ಲದೆ ಯುಗಾದಿ ಹಬ್ಬದ ರಾತ್ರಿ ಕಳ್ಳಿಸಿದು ಹೆಂಚನ್ನು ಒಡೆದು ಹಾಕಿರುತ್ತಾರೆ—ಶ್ಯಾಮಗೊಂಡ್ಲು ಸಕಳಲ್ಲಿಗೆ ಸೇರಿದ ದೊಡ್ಡಬೆಲೆ ಜಟ್ಟಲನೆಂಬುವನ ಖೂನಿ ಕೇಸಿನಲ್ಲಿ ಒಂದು ವರ್ಷ ಕಠಿಣ ಸಜಾ ಆದದ್ದನ್ನು ಕೇಳಿ ಅನೇಕರು ಆಶ್ಚರ್ಯಪಡುವದಲ್ಲದೆ ಕಳವಳ ಪಡು ತ್ತಾರೆ—ಕೋಟೆಯಲ್ಲಿ ನೀರಿನ ತೊಂದರೆಯನ್ನು ವಿವರಿಸಲಶಕ್ಯವಾಗಿದೆ— ಹೊಸ ಪೋಸ್ಟಾಫೀಸು ತಯಾರಾಗಿ ಅದರಲ್ಲಿ ಕೆಲಸ ನಡೆಯುತ್ತಾ ಇದೆ ಮ|| ಅಪ್ಪಾಜಿಗೌಡರವರು ಕುಡಿಯುವದಕ್ಕೆ ಅನುಕೂಲವಾದ ಸ್ವಂತ ಖರ್ಚಿನಿಂದ ಕಟ್ಟಿಸಿರುವ ಎರಡು ಸೀನೀರಿನ ಭಾವಿಗಳನ್ನು ಬಿಟ್ಟು ಕೆರೆಯ ಒಂದು ನೀರನ್ನು ಕುಡಿದು ಅನೇಕರು ರೋಗ ತಂದುಕೊಂಡಿರುತ್ತಾರೆ. ಜನಗಳ ವಿವೇಕವನ್ನು ಎಷ್ಟು ಹೇಳಿದಾಗ್ಯೂ ತೀರದು

ದೊಡ್ಡಬಳ್ಳಾಪುರ — ಬಿಸಿಲಿನ ಧಗೆ ಜಾಸ್ತಿ ನೀರಿಗೆ ತೊಂದರೆ — ಈ ಊರಿ ನಲ್ಲಿ ನಲ್ಲಿಗಳ ಮೂಲಕ ನೀರು ಸಪ್ಲೈ ಆಗಲು ಕೆಲವು ಪುಣ್ಯವಂತರು ದ್ರವ್ಯಸ ಹಾಯ ಮಾಡಿರುತ್ತಾರಲ್ಲದೆ ಇನ್ನೂ ಮಾಡುವದಾಗಿ ಮಾತುಕೊಟ್ಟಿರುತ್ತಾರೆ ಈ ರೀತಿ ಅಮೋಘವಾದ ಸಹಾಯಮಾಡತಕ್ಕದ್ದು ಕೇವಲ ಸ್ತೋತ್ರಾರ್ಹರಾಗಿ ರುತ್ತೆ — ಈ ಊರು ಪರೀಕ್ಷೆಗೆ ಸೆಂಟರಾಗಿತ್ತು ಬರತಕ್ಕ ವಿದ್ಯಾರ್ಥಿಗಳಿಗೆ ಭೋಜನಾದಿಗಳಿಗೆ ಈ ಗ್ರಾಮಸ್ಥರು ಸಹಾಯಮಾಡುತ್ತಾ ಆದರಿಸುತ್ತಿದ್ದರು. ಈ ಸಾರಿ ತಪ್ಪಿಹೋಯ್ತು. ಈ ವರ್ಷ ಕನ್ನಡ ಇಂಗ್ಲಿಷಿನಲ್ಲಿ 45 ಜನರ ವರಿಬಿ ಗೂ ಇಲ್ಲಿನ ಎ ವಿ ಸ್ಕೂಲಿನಲ್ಲಿ ಪರೀಕ್ಷೆಗೆ ಹೋಗಿರುತ್ತಾರೆ ಹೆಡ್ ಮಾಸ್ಟ ರು ಮ|| ಡಿ ಕೊಂಗಾಡಿಯಪ್ಪನವರು ಬಹಳ ಮೆಹನತ್ತಿನಿಂದ ಹುಡುಗರನ್ನು ತರಬೇತು ಮಾಡುತ್ತಿರುವರು—3 ನೇ ತಾ ಶುಕ್ರವಾರ ಸಾಯಂಕಾಲ ಸ್ಕೂಲಿನಲ್ಲಿ ಶ್ರೀಶಾರದಾ ಪೂಜೆಮಾಡಿದರು ಮುನ್ಸಿಫರು ಮ|| ಪಿ ಮಹದೇವ ಯ್ಯನವರು, ತಾಲ್ಲೂಕ್ ಆಫೀಸರರು, ನೌಕರಮನೇರು, ಲಾಯರುಗಳು, ಶೆಟ್ಟಿ ವರ್ತಕರು ಸಹಾ ಸೇರಿದ್ದರು ವಿದ್ಯಾರ್ಥಿಗಳಿಂದ ದೇವರ ಸ್ತೋತ್ರವೂ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ಹಾಡಿಸಿದರು ಮಂಗಳಾರತಿ ಆಗಿ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳು ಕೊಡಲ್ಪಟ್ಟವು ಮುನ್ಸಿಫರು ವಿದ್ಯಾರ್ಥಿಗಳಿಗೆ ಪರೀಕ್ಷಾ ಹಾಲ್ ಟಿಕೆಟುಗಳನ್ನು ಹಂಚಿ, ವಿದ್ಯಾರ್ಥಿಗಳನ್ನು ಕುರಿತು ಈ ಸಾರಿ ಹೋಗಿರುವ ಪರೀಕ್ಷಾ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಪ್ಯಾಸ್‌ಮಾಡಿ ಕೀರ್ತಿಹೊಂದಬೇಕೆಂತಲೂ, ಅದರಲ್ಲಿಯೂ 1 ನೇ ಕ್ಲಾಸಿನಲ್ಲಿ ಬರುವಂತೆ ಪ್ರಯತ್ನಮಾಡಬೇಕೆಂತಲೂ, ಒಂದು ವೇಳೆ ಕಾರಣಾಂತರಗಳಿಂದ ಫೇಲಾದಲ್ಲಿ ಅಲ್ಲಿಗೆ ಓದುವದನ್ನು ಬಿಡದೆ ಪ್ಯಾಸ್‌ಮಾಡುವಂತೆ ಮುಂದೆಯೂ ಓದಬೇಕೆಂತಲೂ, ಲೋವರ್ ಸೆಕೆಂಡರಿ ಪರೀಕ್ಷೆಯೇ ದೊಡ್ಡದೆಂದು ಭಾವಿಸದೆ ಮುಂದೆ ಪ್ರೌಢ ವಿದ್ಯಾಭ್ಯಾಸಕ್ಕೆ ಸಾಹಸ ಮಾಡಬೇಕೆಂತಲೂ ಬುದ್ಧಿವಾದವ ನ್ನು ಹೇಳಿ ಈ ಊರಿನಲ್ಲಿ 1 ನೇ ಕ್ಲಾಸಿನಲ್ಲಿ ಪ್ಯಾಸ್ ಮಾಡುವ ವಿದ್ಯಾರ್ಥಿಗೆ ಅಲಾರಂ ಟೈಂಪೀಸನ್ನು ಬಹುಮಾನ ಕೊಡುವಂತೆ ಹೆಡ್ ಮಾಸ್ಟರ ಮೂಲಕ ಅಪ್ಪಣೆಕೊಡಿಸಿದರು ನಂತರ ಸಭೆ ಬರಖಾಸ್ತಾಯ್ತು

ತರೀಕೆರೆ — ಬಿಸಿಲಿನ ಧಗೆ ಸಹಿಸಲಾಗದು ಲಕ್ಕುವಳ್ಳಿಗೆ ರೈಲ್ ರಸ್ತೆ ಹಾಕುವುದು ಇನ್ನೂ ಪೂರ್ತಿಯಾಗಲಿಲ್ಲ. ಕೆಲಸ ನಡೆಯುತ್ತಲೇ ಇದೆ. ತರೀ ಕೆರೆಯಿಂದ 11 ಮೈಲಿ ದೂರದವರೆಗೂ ಕಂಬಗಳನ್ನು ಹಾಕಿದಾರೆ—ಇಲ್ಲಿನ ಸಂತೆಯಲ್ಲಿ ಜೂಜಾಟವು ಕೆಲವು ವಾರಗಳಿಂದ ಕಾಣಿಸದಂತಿದ್ದು ಪುನಹ ಆರಂಭ ವಾಗಿರುವುದು ತುಂಬಾ ವಿಷಾದವನ್ನುಂಟುಮಾಡುತ್ತೆ ಸಂತೆಯಲ್ಲಿ ಫಕೀರರ ಹಾವಳಿಯನ್ನು ಜನರು ಸಹಿಸುವುದು ತುಂಬಾ ಕಷ್ಟವಾಗಿದೆ—ಈ ಊರಲ್ಲಿ ಎರಡು ನಾಟಕದ ಕಂಪನಿಗಳಿರುತ್ತವೆ ಎರಡು ದಿನಕ್ಕೊಂದಾವರ್ತಿ ಇಬ್ಬರೂ ಆಡುವರು ಧಾರಣೆವಾಸಿ ಭಾರವಾಗಿ ಜೀವನಕ್ಕೇ ಕಷ್ಟವಾಗಿರುವಾಗ್ಗೆ ಬಡ ಜನರು ನಾಟಕಕ್ಕೆ ದುಡ್ಡುಹಾಕಿ ನಷ್ಟಪಡುವುದು ತುಂಬಾ ಶೋಚನೀಯವಾ ಗಿದೆ—ಇಲ್ಲಿ ಕೆಲವು ಕಳ್ಳಕೊರಮರನ್ನು ಹಿಡಿದು ರಾತ್ರಿಯಲ್ಲಿ ಗಂಡಸರೆಲ್ಲ ರನ್ನು ಲಾಕಪ್ಪಿನಲ್ಲಿಟ್ಟು ನೋಡಿಕೊಳ್ಳುತ್ತಾರೆ ಇದೇ ಗ್ಯಾಂಗಿನಲ್ಲಿ ಮೊದಲು ಇದ್ದ 15 ಜನರು ಇಲ್ಲವೆಂದೂ, ಇವರ ಬದಲಿಗೆ ಹೊಸಬರು ಸೇರಿಕೊಂಡು ಮೊದಲಿನ ಹೆಸರನ್ನೇ ಹೇಳಿ ಮೋಸಪಡಿಸಬೇಕೆಂದಿರುತ್ತಾರೆಂದೂ ಕೇಳುತ್ತೇವೆ ನಂಬಲಾಗದ ಈ ಜನರನ್ನು ವಿಚಾರಿಸಿ, ತಕ್ಕ ಬಂದೋಬಸ್ತು ಮಾಡಿಸುವರೆಂದು ನಂಬುತ್ತೇವೆ—ಗುಮಾನಿ ಜನಗಳನ್ನು ಪೋಲೀಸಿಗೆ ರಿಪೋರ್ಟು ಮಾಡಿದಾಗ್ಗೆ ಅಪರಾಧಿಗಳೆಂದು ಕಂಡುಬಂದವರನ್ನು ಲಾಕಪ್ಪಿನಲ್ಲಿಟ್ಟು 1-2 ತಿಂಗಳಾದ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ಕೇಸು ವಿಚಾರವನ್ನಿಟ್ಟರೆ ದೈವವಶಾತ್ ಅಂಥಾ ಕೇಸುಗಳು ವಜಾ ಆಗುತ್ತವೆ, ಆದ್ದರಿಂದ ಪೋಲೀಸ್ ವಿಚಾರಣೆಯನ್ನು ಕೂಡಿದ ಮಟ್ಟಿಗೆ ಬೇಗ ಬೇಗ ನಡಿಸಿದರೆ ಅನೇಕರಿಗೆ ಶಿಕ್ಷೆಯಾಗುತ್ತೆ ಫೇಲಾ ಬಿಟ್ಟರೆ ಕೇಸು ನಾನಾ ರೀತಿಯಿಂದ ಕೆಟ್ಟುಹೋಗುತ್ತವೆ ಇದನ್ನು ದಯಾಳು ಸರ್ಕಾರ ದವರು ಚಿತ್ತಕ್ಕೆ ತಂದುಕೊಳ್ಳಬೇಕೆಂದು ಇಲ್ಲಿನ ಪ್ರಜೆಗಳು ಪ್ರಾರ್ಥಿಸು ತ್ತಾರೆ—ಇಲ್ಲಿಗೆ ಮೂರು ಮೈಲಿ ದೂರವಿರುವ ಶಿರಿಮನಹಳ್ಳಿಯಲ್ಲಿ ಸುಕಾಲಿ ಗರು ಇಲ್ಲಿರುವ ವೆಸ್ಲಿಯನ್ ಮಿಷನ್ ಉಪದೇಶಿಯವರ ಸಹಾಯ ಪ್ರೋತ್ಸಾಹ ದಿಂದ ಕುಡಿವುದನ್ನು ಒಂದು ತಿಂಗಳವರಿಗೂ ಕ್ರಮೇಣ ಕಡಿಮೆಮಾಡಿಕೊಂಡು ಬಂದು ನಂತರ ಸಂಪೂರ್ಣವಾಗಿ ಬಿಟ್ಟುಬಿಡುವದಾಗಿ ಮಾತುಕೊಟ್ಟಿದಾರೆ ಇನ್ನು ಕೆಲವರು ಇದೇ “ ಸುಕಾಲಿಗರ ಮದ್ಯವಿಸರ್ಜನೆ ” ಎಂಬ ಕೂಟಕ್ಕೆ ಸೇರುವದಕ್ಕಿ ರುವರು ಈಗ ಈ ಹಳ್ಳಿಯಲ್ಲಿ ಇಬ್ಬರು ಮುದುಕರೂ, ಎರಡು ಮನೆಯವರೂ ವಿನ ಹ ಉಳಿದವರೆಲ್ಲಾ ಅಂದರೆ ದೊಡ್ಡವರೂ ಚಿಕ್ಕವರೂ, ಗಂಡಸರೂ ಹೆಂಗಸರೂ, ಮಕ್ಕಳೂ ಆದಿಯಾಗಿ 39 ಜನರು ಒಮ್ಮನಸ್ಸಿನಿಂದ ಕುಡಿಯುವದನ್ನು ಬಿಟ್ಟಿ ದಾರೆ ಇದಕ್ಕೆ ದೇಶೋನ್ನತಿಯನ್ನು ಕೋರುವ ಹಿತೈಷಿಗಳೆಲ್ಲರೂ ಈ ಉಪದೇಶಿ ಯವರಿಗೆ ಸಹಾಯ ಮಾಡುವದರಿಂದಲೂ, ಈ ಜನರಿಗೆ ತಕ್ಕ ಬುದ್ಧಿ ಹೇಳುವದ ರಿಂದಲೂ ಈ ಸಂಘವನ್ನು ವೃದ್ಧಿಪಡಿಸಿ ದೃಢಪಡಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅಲ್ಲದೆ ಇಂಥಾ ಕಾಡುಜನಗಳು ಈ ದುರಭ್ಯಾಸವನ್ನು ಬಿಟ್ಟುಬಿಡುವುದಕ್ಕೆ ಪ್ರಾರಂಭಿಸಿರುವಾಗ್ಗೆ ಇತ್ತ ಕಡೆ ನಾಗರಿಕರಾಗಿಯೂ, ವೇದಶಾಸ್ತ್ರಗಳುಳ್ಳವರಾ ಗಿಯೂ ಇರುವ ಜನರು ಕೂಡಲೇ ಅದನ್ನು ಬಿಟ್ಟು ಅನಾಗರಿಕರೆಂಬ ದೂರಿನಿಂದ ದೂರ ವಾಗಬೇಕಾಗಿದೆ ಮತ್ತು ಇಂಥಾ ಸಂಘಗಳನ್ನು ಏರ್ಪಡಿಸಿಕೊಂಡು ಈ ದುಷ್ಟ ಪದ್ಧತಿಯನ್ನು ತೊರೆದುಬಿಡುವದು ಉತ್ತಮ

ಹಾಸನ — ಇಲ್ಲಿನ ಹೈ ಸ್ಕೂಲ್ ಜವಾನ ಹನುಮನೆಂಬುವನ ಮನೆಗೆ ಬೆಂಕಿ ಹತ್ತಿಕೊಂಡು ಮನೆಯಲ್ಲಿದ್ದ ದವಸಧಾನ್ಯ, ಬಟ್ಟೆಬರೆಗಳೆಲ್ಲಾ ಸುಟ್ಟು ಹೋದುದಲ್ಲದೆ ಒಳಗೆ ಕಟ್ಟಿಹಾಕಿದ್ದ ಎರಡು ರಾಸುಗಳು ಉರಿಯೊಳಗೆ ಸಿಕ್ಕಿ ಸತ್ತುಹೋದವು ಆ ಬಡವನು ಇದರಿಂದ ತುಂಬಾ ನಷ್ಟಕ್ಕೆ ಗುರಿಯಾದನು ಮತ್ತು ಕೊಡಗತವಳ್ಳಿ ಎಂಬ ಗ್ರಾಮದ ಬಸವೇಗೌಡನೆಂಬವನು ಮಾವಿನಹಳ್ಳಿ ಯಲ್ಲಿ ಕನ್ನ ಜಮೀನಿನ ಬಳಿ ಕವಿದುಕೊಂಡಿದ್ದ ಲಾಂಟಾನಾ ಮತ್ತು ಹಳುವಿನ ಪೊದೆಯನ್ನು ನಾಶಪಡಿಸುವುದಕ್ಕಾಗಿ ಹತ್ತಿಸಿದ ಬೆಂಕಿಯು ಬಿರುಗಾಳಿಯಿಂದ ಹೆಚ್ಚಿ ಸುತ್ತಲೂ ವ್ಯಾಪಿಸಿಕೊಂಡು ಅವನು ಹೊರಕ್ಕೆ ಬರಲವಕಾಶವಾಗದೆ ಒಳಗೆ ಸಿಕ್ಕಿ ಸುಟ್ಟುಹೋದನಂತೆ ಇದನ್ನು ಅವನ ವಾರಸ್‌ದಾರರು ನೋಡಿ ತುಂಬಾ ದುಃಖಪಟ್ಟು ಹಾಗೆಯೇ ಶವವನ್ನು ಚೆನ್ನಾಗಿ ಸುಟ್ಟುಹಾಕಿ ಬಂದರಂತೆ ಇದಾದ ಮೇಲೆ ಕುಂದೂರು ಪೋಲೀಸ್ ಸ್ಟೇಷನ್ ದಫೇದಾರ್ ಹೋಗಿ ವಿಚಾರಿಸಿ ಆ ವಾರಸ್‌ದಾರರನ್ನು ಹೆದರಿಸಿದಂತೆ ವರ್ತಮಾನವಿದೆ—ಹಾಸನದಲ್ಲಿ ಇನ್ನು ದೊಡ್ಡ ಸಿಡುಬು ಕಡಿಮೆಯಾದಂತಿಲ್ಲ ಪದಾರವೂ ಅಲ್ಲಲ್ಲಿ ಇದೆ ವೆದ್ಯಗಳ ಲ್ಲಿ ಇದ್ದವರು ಬಹುಮಟ್ಟಿಗೆ ಊರು ಸೇರಿದರು ಕೆಲವರು ಮಾತ್ರ ಅವರವರ

ಷೆಡ್‌ಗಳಲ್ಲಿಯೇ ಆರೋಗ್ಯವಾಗಿದೆ ಎಂದು ಅಲ್ಲೇ ಇದ್ದರೆ ಡೆಪ್ಯುಟಿ ಕಮಿಷನರ್‌ರವರು ಇವರಿಗೆ ಆಯಾ ಸ್ಥಳಗಳನ್ನು ಮನೇ ಕಟ್ಟಿಸಿಕೊಳ್ಳುವುದಕ್ಕೆ ಕೊಟ್ಟುಬಿಟ್ಟರೆ ಪರಮೋಪಕಾರವಾಗುವುದೆಂದು ಅವರು ಕೇಳಿಕೊಂಡು ಅಪ್ಪಣೆಯನ್ನು ನಿರೀಕ್ಷಿಸುತ್ತಿದ್ದಾರೆ —ಇಲ್ಲಿನ ಗೌರ್ನಮೆಂಟ್ ಹೈ ಸ್ಕೂಲ್ ವಾರ್ಷಿಕ ಬಹುಮಾನ ಸಭೆಯು ವಾಣೀವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ತಾ 26 ನೇ ಗುರುವಾರ ಬೆಳಗ್ಗೆ ಪ್ರಾರಂಭವಾಯಿತು ಈ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮ|| ವೆದರಾಲ್ ಸಾಹೇಬರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಮೊದಲು ಹೆಡ್ ಮಾಸ್ಟರ್ ಮ|| ಶಿವರಾಮಕೃಷ್ಣಯ್ಯರವರು ಸ್ಕೂಲ್ ರಿಪೋರ್ಟನ್ನು ಓದಿದರು ಅನಂತರ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಸಲ್ಲಾಪ ಅಭಿನಯಗಳು ನಡೆದವು ಈ ಪೈಕಿ ಕನ್ನಡದಲ್ಲಿ ನಡೆದ ಕುರುಟನ ಅನುವಾದವೂ, ಕಪಟಿಯ ವಿನೋದವೂ ಸಭಿಕರನ್ನು ಕ್ಷಣಕ್ಷಣದಲ್ಲಿಯೂ ನಗುವಂತೆ ಮಾಡಿದವು ಕಪಟಿಯ ಪಾತ್ರವನ್ನು ಅಭಿನಯಿಸಿದ ರಾಮಚಂದ್ರನೆಂಬ ವಿದ್ಯಾರ್ಥಿಗೆ ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರವರು ದ್ರವ್ಯರೂಪವಾದ ಬಹುಮಾನವನ್ನು ಕೊಟ್ಟರು ಇಬ್ಬರ ಇಂಗ್ಲಿಷ್ ಅನುವಾದವೂ ಅಭಿನಯವೂ, ಮತ್ತೊಬ್ಬ ವಿದ್ಯಾರ್ಥಿಯು ಪ್ರತ್ಯಕ್ಷ ನಿದರ್ಶನಮಾಡಿ ತೋರಿಸಿ ವಿವರಿಸಿದ ನೀರು ಮತ್ತು ಗಾಳಿ ವಿಷಯಕವಾದ ವಿವರಣೆಯೂ ಬಹು ಮನೋಹಾರಿಗಳಾಗಿದ್ದವು ಇಷ್ಟೆಲ್ಲಾ ಆದ ಮೇಲೆ ಬಹುಮಾನಗಳು ಕ್ಲಿಪ್ತವಾಗಿದ್ದ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟವು ಅನಂತರ ಡೆಪ್ಯುಟಿ ಕಮಿಷನರ್‌ರವರು ಹೈ ಸ್ಕೂಲ್ ಹೆಡ್ ಮಾಸ್ಟರವರ ರಿಪೋರ್ಟಿನ ವಿಷಯವಾಗಿಯೂ ಅವರ ಕಾರ್ಯದಕ್ಷತೆಯ ವಿಚಾರವಲ್ಲಿಯೂ ಶ್ಲಾಘ್ಯವಾದ ಉಪನ್ಯಾಸಮಾಡಿ ವಿದ್ಯಾರ್ಥಿಗಳಿಗೂ ಬುದ್ಧಿವಾದಗಳನ್ನು ಹೇಳಿದರು ಇದಾದ ಮೇಲೆ ಸದಸ್ಯರಿಗೆಲ್ಲಾ ಪುಷ್ಪತಾಂಬೂಲಗಳು ವಿನಿಯೋಗಿಸಲ್ಪಟ್ಟವು ಅದೇ ಸಮಯದಲ್ಲಿ ಡೆಪ್ಯುಟಿ ಕಮಿಷನರ್‌ರವರು ಕಳೆದ ವಾರ ವೈಕುಂಠವಾಸಿಗಳಾದ ಪ್ರಜೋಪಕಾರಿಗಳಾಗಿದ್ದ ರಿಟೈರ್ಡ್ ಅಮಲ್ದಾರ್ ಮ|| ಶ್ರೀನಿವಾಸರಾಯರ ಗುಣಕಥನವನ್ನು ಮಾಡಿ, ಅವರ ಸಾಹಸದಿಂದ ಕಟ್ಟಲ್ಪಟ್ಟ ಇಲ್ಲಿನ ವಾಣೀವಿಲಾಸ ಶಾಲೆಯಲ್ಲಿ ಆ ಮಹನೀಯರ ಫೋಟೋವನ್ನು ದೊಡ್ಡದಾಗಿ ತಯಾರ್ಮಾಡಿಸಿ ಇಡಬೇಕೆಂಬ ಬಗ್ಗೆ ಭಾನುವಾರ ಮೀಟಿಂಗು ನಡಿಸುವುದಾಗಿ ತಿಳಿಸಿದ್ದಲ್ಲದೆ ಮೈಸೂರು ಸರ್ಕಾರದ ನ್ಯಾಯವಿಧಾಯಕ ಸಭೆಗೆ ಈ ಮೈಸೂರು ಹಾಸನ ಡಿಸ್ಟ್ರಿಕ್ಟುಗಳ ಪ್ರತಿನಿಧಿಯಾಗಿ ಇಲ್ಲಿನ ಅಡ್ವೊಕೇಟರಾದ ಮ|| ವೆಂಕಟೇಶಯ್ಯನವರು ಚುನಾಯಿಸಲ್ಪಟ್ಟಿರುವುದಾಗಿ ಆರ್ಡರು ಬಂದ ವಿಚಾರವನ್ನು ಸಹ ತಿಳಿಸಿದರು ಸಭಿಕರು ಪರಮಾನಂದ ಭರಿತರಾದರು ಅಂತ್ಯದಲ್ಲಿ ನಮ್ಮ ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಗಳು ನಡೆದು, ಸಭಾಕಾರ್ಯವು ಮುಕ್ತಾಯವಾಯಿತು ಈ ಹೈ ಸ್ಕೂಲಿಗೋಸ್ಕರ ಪ್ರತ್ಯೇಕವಾದ ಒಂದು ಹೊಸ ಕಟ್ಟಡವು ಆಗಬೇಕೆಂದು ಗೌರ್ನಮೆಂಟಿನವರು 50 ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿ ಬಹು ದಿನಗಳಾದರೂ ಇನ್ನೂ ಕಾಮಗಾರಿ ಪ್ರಾರಂಭವಾಗದೆ ಪ್ರಜೆಗಳಲ್ಲಿ ವಿಷಾದವನ್ನುಂಟುಮಾಡಿದೆ

ಶಿವಮೊಗ್ಗೆ —ಕಳೆದ ತಿಂಗಳ 14 ನೇ ತಾ ಶನಿವಾರ ಮಧ್ಯಾಹ್ನ ಬ್ರಾಹ್ಮಣರ ಕೇರಿಯಲ್ಲಿ ವೈಶ್ಯರ ಪುರೋಹಿತರಾದ ಪುಟ್ಟಭಟ್ಟರ ಹುಲ್ಲು ಮನೆಯು ಬೆಂಕಿ ಹತ್ತಿ ಬೆಂದುಹೋಯಿತು ಇದರಿಂದ ಅವರಿಗೆ ನಷ್ಟವಾದರೂ ಬೇರೆ ಮನೆಗಳಿಗೆ ಹರಡಲಿಲ್ಲವಾದ್ದರಿಂದ ಸಂತೋಷ —ಕೆರೆಕೋಡಿ ರಾಮರಾಯರ ಮನೆ ಮೆಟ್ಟಿನ ಕೆಳಗೆ ಯಾವುದೋ ನಾಯಿ ಸತ್ತು 6 6 ದಿನ ಹಾಗೇ ಬಿದ್ದದ್ದೂ ಅದನ್ನು ಯಾರೂ ಎತ್ತದೆ ದುರ್ವಾಸನೆ ಸಹಿಸಕೂಡದಾಗಿತ್ತು ಕಡೆಗೂ ನಾಯಿ ನರಿ ಹಕ್ಕಿ ಪಕ್ಷಿಗಳು ಎಳೆದಾಡಿ ಶವವು ನಾಶವಾಯ್ತು ಮ್ಯುನಿಸಿಪಾಲಿಟಿಯ ವಿಲಕ್ಷಣ ಹೀಗಿದೆ —1913 ನೇ ಅಕ್ಟೋಬರ್ ತಾ 22 ರಲ್ಲಿ ಅಕ್ಟ್ರಾಯಿ ಸುಂಕ ಕೊಡದೆ ಇಸ್ಲಾಪುರದ ಅಬ್ದುಲ್ ಸತ್ತಾರನು ಕಟ್ಟೆ ನೌಕರರನ್ನು ದಬಾಯಿಸಿ ಸಾಗುವ ಕಟ್ಟೆಯಿಂದ ತಂಬಾಕು ಅಡಿಗೆ ಪ್ರವೇಶ ನೌಕರರು ಫಿರ್ಯಾದುಮಾಡಿದರೂ 5 6 ತಿಂಗಳು ವಿಚಾರಣೆ ಮಾಡದೆ ನಂತರ 1 ನೇ ಫಿರ್ಯಾದಿ ಕೋಲ್ಕಾರ್ ಅಬ್ದುಲ್ ಅಜೀಜ್ ಸುಳ್ಳು ಸಾಕ್ಷಿ ಹೇಳಿದನೆಂದು ಕೇಸ್ ಡಿಸ್‌ಮಿಸ್ ಮಾಡಲಾಯಿತು ಕಟ್ಟೆ ನೌಕರರು ಇನ್ನು ಮುಂದೆ ಸರ್ಕಾರಿ ಕೆಲಸ ಮಾಡುವುದೇ ಕಷ್ಟವಾಯಿತಲ್ಲಾ ಎಂದು ಮರುಗುತ್ತಿದ್ದಾರೆ — ಹೊಳೆಹೊನ್ನೂರು ಲಿಂಗಾಯತರು ಮತ್ತು ಬ್ರಾಹ್ಮಣರಲ್ಲಿ ಕಲಹ ಹುಟ್ಟಿ ಈಗ ಎರಡು ವಾರಗಳಿಂದ ಶಮನವಾಗದೆ ಹಾಗೆಯೇ ನಿಂತಿದೆ ಪೋಲೀಸಿನವರು ಈ ವಿಚಾರವಾಗಿ ಅಲ್ಲಿಗೆ ಹೋಗಿರುವರೆಂದು ತಿಳಿಯಬಂದಿದೆ —18 ನೇ ತಾ ನಮ್ಮ ಸೀನಿಯರ್ ಸರ್ಜನ್ ರಾದ ಡಾ ಆರುಮುಗಂ ಸಾಹೇಬರವರು ಇಲ್ಲಿಗೆ ದಯಮಾಡಿ ಆಸ್ಪತ್ರೆಯನ್ನು ಪರಾಂಬರಿಸಿ ಹೊರಟುಹೋದರು — ತಾ 24 ರಲ್ಲಿ ಪೆನ್ಷನ್ ಶಿರಸ್ತೇದಾರ್ ಮ|| ಚೆನ್ನಪ್ಪಯ್ಯನವರು ತಮ್ಮ ಮೊಮ್ಮಗನ ಹೆಸರಿನ ಮೇಲೆ ಎ ವಿ ಸ್ಕೂಲಿನ 12 ಮಂದಿ ಬಡಹುಡುಗರಿಗೆ ಬಟ್ಟೆಗಳನ್ನು ಕೊಡಿಸಿದ ಅವರ ಧರ್ಮವನ್ನು ಕೊಂಡಾಡತಕ್ಕದ್ದಾಗಿದೆ —ತಾ 25 ರಲ್ಲಿ ಬೆಂಗಳೂರು ಪೈಲ್ವಾನನಿಗೂ ಇಲ್ಲಿನ ಕೊಲ್ಲೂರಯ್ಯನ ಗರಡಿ ಪೈಲ್ವಾನನಿಗೂ ಕುಸ್ತಿ ನಡೆದು ದಾನಿ ಗೆದ್ದ ಹಾಗೂ, ನೋಟಕರಿಂದ ವಸೂಲಾದ 10 ರೂಪಾಯನ್ನು ಎರಡು ಭಾಗ ದಾಸಿಗೆ ನಿಂತದ್ದು ಸೋತವನಿಗೂ ಹಂಚಲಾಯಿತೆಂದು ತಿಳಿಯುತ್ತೆ — ಇಲ್ಲಿ ನಲ್ಲೀ ನೀರಿನ ವಿಷಯದಲ್ಲಿ ವಿಚಾರಣೆ ಕಡಮೆಯಾಗಿರುವದರಿಂದ ಸ್ವಲ್ಪ ತೊಂದರೆಯಾಗಿದೆ ಬೇಸಗೆ ಕಾಲದಲ್ಲಿ ನೀರಿನ ಖರ್ಚು ಹೆಚ್ಚು ಅದರೂ ಮುಖ್ಯ ಹಬ್ಬಗಳಲ್ಲಿ ನೀರೇ ಇಲ್ಲದಂತೆ ಮಾಡುತ್ತಾರೆ ತಾಲ್ಲೂಕು ಕಚೇರಿ ಬಳಿ ಇರತಕ್ಕ ನೀರಿನ ಮನೆಗೆ ಒಂದು ದಿನ ಮೂರು ನಲ್ಲಿ ಇಡುತ್ತಾರೆ ಬಾಕೀ ದಿನ ಒಂದೇ ನಲ್ಲಿ ಇಡುತ್ತಾರೆ ಜನರೆಲ್ಲಾ ಬಹಳ ಹೊತ್ತು ಕಾದಿದ್ದು ಬೇಸರಪಡುವರು ಮತ್ತು ಇದರ ಬಳಿ ಇರತಕ್ಕ ಸ್ಕೂಲಿನ ಹುಡುಗರು ಬಿಸಿಲಿನ ಬಾಯಾರಿಕೆಯಿಂದ ನಲ್ಲಿ ಬಳಿಗೆ ಹೋಗಿ ನೀರು ಕುಡಿಯುವುದಕ್ಕೂ ಅವಕಾಶವಿಲ್ಲದೆ ತೊಂದರೆಪಟ್ಟುಕೊಂಡು ಬರಬೇಕಾಗಿದೆ — ದುರ್ಗಿಗುಡಿ ಎಕ್ಸ್‌ಟೆನ್‌ಷನ್‌ನಲ್ಲಿ ಮನೆ ಕಟ್ಟತಕ್ಕವರಿಗೆ ರಿಯಾಯ್ತಿಯಿಂದ ಸೈಟು ಕೊಡುತ್ತೆಂಬ ಪ್ರೋತ್ಸಾಹದಿಂದ ಅನೇಕ ಬಡವರು ಮನೆ ಕಟ್ಟಲು ಕುತೂಹಲಪಟ್ಟು ಸ್ಥಳವನ್ನು ಕ್ರಯಕ್ಕೆ ಪಡೆಯಕೊಂಡು ಸೈಟು ಕೊಡಿಸಬೇಕೆಂದು ಅರ್ಜಿ ಹಾಕಿಕೊಂಡದ್ದಕ್ಕೆ ಯಾವ ಯಾವ ಸಾಮಾನು ಎಷ್ಟೆಷ್ಟು ಬೇಕೆಂದು ಅಳತೆ ಮೊದಲಾದದ್ದನ್ನು ಡೆ ಕ ಕೆ ಶ್ರೀನಿವಾಸರಾಯರು ಕೇಳಿ ತಾವು ಹೊರಟುಹೋಗುವ ಸಂದರ್ಭದಲ್ಲಿ ಇದರ ವಿಚಾರವನ್ನೇ ಮರೆತು ಬಿಟ್ಟರು ಈಗ ಬಂದಿರುವ ನಮ್ಮ ಡೆಪ್ಯುಟಿ ಕಮಿಷನರವರಿಗೆ ಅರ್ಜಿ ಹಾಕಿಕೊಂಡದ್ದರ ಮೇಲೆ ಗೌರ್ನಮೆಂಟಿನಿಂದ ಮಂಜೂರಾಗಿದ್ದ ಅವಧಿಯು ಪೂರೈಸಿರುತ್ತೆ ಎಂಬದಾಗಿ ಅಪ್ಪಣೆ ಕೊಡಲಾಗಿರುತ್ತೆ, ಬಡವರು ಮನೆ ಕಟ್ಟಿಕೊಳ್ಳಲು ಅನುಕೂಲವಿಲ್ಲದೆ ವ್ಯಥೆಪಡುತ್ತಿದ್ದಾರೆ ನಮ್ಮ ಪ್ರಭುಗಳು ಬಡವರ ಮೇಲೆ ಅನುಗ್ರಹವಿಟ್ಟು ಪುನಃ ಮೇಲಕ್ಕೆ ಬರೆದು ಸೈಟುಗಳನ್ನು ಕೊಡಿಸಲು ಏರ್ಪಾಡು ಮಾಡಿದರೆ ಬಡವರಿಗೆ ಮನೆ ಕಟ್ಟಿಸಿಕೊಟ್ಟಂತಾಗಿ ದುರ್ಗಿ ಗುಡಿ ಪ್ರಾಂತ್ಯವೆಲ್ಲಾ ಶೋಭಾಯಮಾನವಾಗಿ ಕಾಣುತ್ತೆ —ಈ ಪಟ್ಟಣವು ಡಿಸ್ಟ್ರಿಕ್ಟ್ ಆಗಿದ್ದು ಎಳೆಯಲಾರದ ಮತ್ತು ವಯಸ್ಸಾದ ಮುದಿ ಎತ್ತುಗಳನ್ನು ಕಟ್ಟಿ ರೈಲಿನಿಂದ ಮೂಟೆ ಸಾಗಿಸುತ್ತಿರುವುದನ್ನು ಪೋಲೀಸಿನವರು ನೋಡಿ ಮೇಲಕ್ಕೆ ರಿಪೋರ್ಟು ಮಾಡದಿರುವುದು ಆಶ್ಚರ್ಯವಾಗಿರುತ್ತೆ ಮತ್ತು ರಾತ್ರಿ ಕಾಲದಲ್ಲಿ ಗಾಡಿಗಳಿಗೆ ಬೆಳಕಿಟ್ಟುಕೊಂಡಿರಬೇಕೆಂಬದಾಗಿ ರೂಲ್ಸ್ ಇರುವದು ಸರಿಯಷ್ಟೆ ದೂರ ಸ್ಥಳದವರು ಈ ಹೊಸ ರೂಲ್ಸು ತಿಳಿಯದವರು ಲಾಂದ್ರ ಹಚ್ಚದೆ ಬಂದರೆ ಅವರನ್ನು ತಡೆದು ಅವರು ಲಾಂದ್ರವನ್ನು ಕೊಂಡುಕೊಂಡು ಹಚ್ಚುವರೂ ಬಿಡದೆ ಬೆಳಗಾಗುವ ವರೆಗೂ ಕೂಡಿಸಿದ್ದು ನಂತರ ಬಿಡುತ್ತಾರೆ ಹೀಗಾದರೆ ಪ್ರಜೆಗಳಿಗೆ ತೊಂದರೆ ಕೊಟ್ಟಂತಾಗುತ್ತೆ ಈ ರೀತಿ ಮಾಡದೆ ಲಾಂದ್ರವನ್ನು ಹಚ್ಚಿದ ನಂತರ ಗಾಡಿಯವನಿಗೆ ಬಿಡುಗಡೆಮಾಡಿದರೆ ಉಪಕಾರವಾದೀತು

ಉತ್ತಮ ಗ್ರಂಥಗಳು.

(1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6 0 (2) ವಿನಾಸಂವಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಚಂದ್ರಕಲಾ 6 ಆಣೆ (4) ಕಲಾನಾಥ 8 ಆಣೆ (5) ಸಹಾಯವಿಲ್ಲದೆ ಇಂಗ್ಲಿಷ್ ಕಲಿಯುವ ಪುಸ್ತಕ ರೂ 1 8 0 5 ಭಾಗಗಳೊಳಗೊಂಡಿದೆ (6) ಜಮಾಖರ್ಚಿನ ಪದ್ಧತಿ 12 ಆಣೆ ರಂಗಾಬಾಲ್ಯ ಜೀವನ ಚರಿತೆ 6 ಆಣೆ ಕನಕಾಲುಕಾ ಅಥವ ಕಮಲಿನೀ ಚರಿತಂ 6 ಆಣೆ ಬಿಕ್ರೊಜ ಸಾಹಸಗಳು 3 ಆಣೆ ಇಂದ್ರವಜ್ರ 3 ಆಣೆ ಸುರಸಾ 4 ಆಣೆ ಗಾಯಿನೀ 4 ಆಣೆ ಆಯರ್ ಕೀರ್ತಿ 10 ಆಣೆ

ನಮ್ಮಲ್ಲಿ ಸರ್ಕಾರಿ ಸ್ಕೂಲ್ ಪುಸ್ತಕ, ಸಂಸ್ಕೃತ, ಕನ್ನಡ, ತೆನುಗು ಭಾಷೆಗಳಲ್ಲಿ ವೈದ್ಯ, ವೇದಾಂತ, ಜೋತಿಷ್ಯ ಗ್ರಂಥಗಳು, ಮತ್ತು ಉತ್ತಮ ಕಾದಂಬರಿಗಳು, ಇಂಗ್ಲಿಷ್ ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ ನೀತಿಚಿಂತಾಮಣಿ—1, 2, 3 ನೇ ಭಾಗಗಳು ಬೆಳರಿಗೆ ಸಿದ್ಧವಾಗಿವೆ ಸ್ಕೂಲ್ ಉಪಾಧ್ಯಾಯರಿಗೆ ರಿಯಾಯಿತಿ ತೋರಿಸಲ್ಪಡುತ್ತೆ

[83-1] ಬಿ ನರಸಿಂಹಯ್ಯಂಗಾರ್,

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

"OTTO—PARADISE"
(Leading Perfume of the day)

ಈ ಅತ್ತರು ಬಹು ಶ್ರಮೆಯಿಂದಲೂ, ಚಾತುರ್ಯದಿಂದಲೂ ತಯಾರ್ಮಾಡಲ್ಪಟ್ಟಿದೆ ಇದರ ಸುವಾಸನೆ ಬಹುಕಾಲ ಪ್ರಮಾಣ ಆರಿಹೋಗಲಿಕ್ಕಿಲ್ಲ

ವಸ್ತ್ರಗಳಿಗೆ ದಾಗು ಬೀಳುವದಿಲ್ಲ ಇದು ಉಪಯೋಗಿಸುವವರಿಗಲ್ಲದೆ ಹತ್ತಿರದಲ್ಲಿರುವವರಿಗೂ ಸಹಾ ಇದರ ಸುವಾಸನೆಯು ಮನಸ್ಸನ್ನು ಸಂತೋಷಗೊಳಿಸುವದು ಮೂರು ದಿನಗಳ ತನಕ ಸುಗಂಧವು ನಿಲ್ಲದೆ ಹೋದರೆ 150 ರೂಪಾಯಿ ಬಹುಮಾನ ಕೊಡಲ್ಪಡುತ್ತೆ [76 2]

ಕ್ರಯ 1 ಡಜನು ಸೀಸೆಗೆ ಪೋಸ್ಟು ಖರ್ಚು ಸೇರಿ ರೂ 2-0 0 ಸಣ್ಣಲು ಕೇಸು ಡ್ರಾಂ ಸೀಸೆಗೆ 12 ಆಣೆ

ಪರ್‌ಫ್ಯೂಮ್ ಕಾರ್ಡು 1 ಆಣೆ ಟಪ್ಪಾಲ್ ಚೀಟಿ ಕಳುಹಿಸಿದವರಿಗೆ ರವಾನೆ ಮಾಡುತ್ತೇವೆ

ವಿಳಾಸ ದಿ ಫ್ಲೋರಲ್ ಪರ್‌ಫ್ಯೂಮರಿ ಕಂಪೆನಿ ಬೊಂಬಾಯಿ, 7

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಬಾಲವೃದ್ಧರಿಗೂ ಆನಂದವನ್ನುಂಟುಮಾಡುತ್ತಿರುವ

ಶ್ರೀಕರ ಕಸ್ತೂರಿ ಮಾತ್ರೆ

150 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳು 1 ನ್ನು ಬಾಯಿಯಲ್ಲಿ ದಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ದಣಿದವರೂ ಹಗುರಾದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು ಬಾಯಿ ನಾತವನ್ನು ಹೋಗಲಾಡಿ, ಬಾಯಾರಿಕೆಯನ್ನು ಶಮನಮಾಡಿ ತಾ ಬಾಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು ದಮ್ಮು ಅಜೀರ್ಣ ಹೊಟ್ಟೆನೋವು ಮಲಬಂಧ ಶರೀರದಲ್ಲಿ ದೌರ್ಬಲ್ಯ ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವದು ಮಾತನಾಡಿಸಲ್ಪಡುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮವಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ [220 24]

ಶ್ರೀಕರ ಕಸ್ತೂರಿ ಮಾತ್ರೆ —ಅನುಪಾನಪತ್ರ ಸಹಿತ 250 ಮಾತ್ರೆ 4 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ ನಂಜನಗೂಡು

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION.

(ಸ್ಕಾಟ್ಸ್ ಇಮಲ್‌ಷನ್)

ಘಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್ ಮಹಾಮಾರಿರೋಗ ಸಾಂಕ್ರಾಮಿಕ ಅಥವಾ ಶ್ವಾಸಕೋಶದ ರೋಗಗಳ ಬಯಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತವೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತವೆ

ಕೈಸೆಯಿಂದಲೇ ತಯಾರಾದದ್ದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್



ಜನವರಿ ಮಹೋತ್ಸವದ ಕೈ ಗಡಿಯಾರ.

[89 1]

ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 11-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ಕೃಷ್ಣಸ್ವಾಮಿ ಮೊದಲಿಯಾರ್,

ನಂ 24 ವಿನಾಯಕಮೇಸ್ತ್ರಿ ಬೀದಿ, ಮದರಾಸು.

ಕುಂತಲ ಬಹಾರ ತೈಲ್ಯ.

ಈ ಕುಂತಲ ಬಹಾರ ತೈಲ್ಯವು ಅನೇಕ ತರದ ವನಸ್ಪತಿಗಳಿಂದ ತಯಾರಾಗಿ ಮನುಷ್ಯರ ಶಿರಸ್ಸಿನ ಅನೇಕ ತರದ ವ್ಯಾಧಿಗಳನ್ನು ಹೋಗಲಾಡಿಸಿ ಕೂದಲನ್ನು ತ್ವರೆಯಾಗಿ ಬೆಳೆಸುವುದು ನಿದ್ರಾಭಂಗವನ್ನು ಪರಿಹರಿಸಿ ಬಹಳ ಸುವಾಸನೆ ಕೊಡುವುದು ಅಲ್ಲದೆ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಆಲೋಚನಾ ಶಕ್ತಿಯೂ, ಶೀತಳವೂ, ಸುವಾಸನೆಯೂ, ಬಟ್ಟೆ ತಲೆಯಲ್ಲಿ ಕೇಶವನ್ನು ಬೆಳೆಸುವದು ಅಲ್ಲದೆ ಈಗಣ ಕೇಶ ತೈಲ್ಯಗಳಲ್ಲಿ ಈ "ಕುಂತಲ ಬಹಾರ ತೈಲವು" ಹಿಂದರಿಯದಷ್ಟು ಪ್ರಖ್ಯಾತಿ ಹೊಂದಿರುವದು (ಮೇ) ಅಂತ್ಯದ ವರೆಗೆ ಶೀಸೆ 1 ಕ್ಕೆ ಬೆಲೆ ಆಣೆ 9 ನಂತರ ಶೀಸೆ 1 ಕ್ಕೆ ರೂ 1 ಕುಂತಲ ಬಹಾರ ತೈಲ್ಯದ ಪ್ರಖ್ಯಾತಿ ಹೊಂದುವರೆ ಮಾತ್ರ ರೂಪಾಯಿ 1 ರಿಂದ 9 ಆಣೆಗೆ ತಗ್ಗಿಸಲ್ಪಟ್ಟಿರುವದು ಟಪ್ಪಾಲು ಖರ್ಚು ಶೀಸೆ 1 ಕ್ಕೆ 4 ಆಣೆ ಅಲಾಹಿದಾ ಗ್ರಾಹಕರು ಕೊಡಬೇಕಾಗುವದು [78 2]

ನಮ್ಮ ವಿಳಾಸ — ಮೋಹನ್ ಅಂಡ್ ಕಂಪೆನಿ,

ಮಂಗಳಾದೇವಿ ಬೀದಿ, ಮಂಗಳೂರು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ 2-6-0.

ಏಪ್ರಿಲ್ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಎಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ

ಇದು ಉಡುವದಕ್ಕೆ ಧೃಡವಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆಸುಲಭವಾಗಿಯೂ ಇದೆ ಬಣ್ಣ ಹೋಗದು ಸೀರೆಯು ಉದ್ದ 18 ಮೊಳ ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ

ವಿಳಾಸ—ವಿ ಕೃಷ್ಣಸ್ವಾಮಿ ಮೊದಲಿಯಾರ್, ನಂ 24 ವಿನಾಯಕಮೇಸ್ತ್ರಿ ಬೀದಿ, ಮದರಾಸು

ನೀವು ಕಳೆದುಕೊಳ್ಳುವಿರೋ ?

[82-47]

ತರಿಸಿಕೊಳ್ಳುವ ಈ ಸಮಯವನ್ನು

ಕೇಶಕುಸುಮಾಕರ ಕೂದಲೆಣ್ಣೆ.

ಮೂರು ದಿನಗಳಿಗಾಗು ವಷ್ಟು ನಿಮ್ಮ ಬಾಗಿಲ ಬಳಿಗೆ ಪುಗಸಟ್ಟೆ ಕಳುಹುತ್ತೆ

ಈ ಕೂದಲೆಣ್ಣೆಯು ಅತ್ಯಂತ ಅಪೂರ್ವವಾದ ಒಳ್ಳೆ ಗುಣಗಳನ್ನೂ ಸುಗಂಧವನ್ನೂ ಪಡೆದದ್ದಾಗಿದೆ 30 ದಿನಗಳಿಗಾಗುವಷ್ಟು ತೈಲವುಳ್ಳ ಶೀಸೆ 1 ಕ್ಕೆ ಕ್ರಯ

ಹತ್ತು ಆಣೆ ಮಾತ್ರ, ಪೋಸ್ಟೇಜ್ ಬೇರೆ

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ, 177 ಜನರಲ್ ಬಜಾರ್ ರೋಡ್, ಮದ್ರಾಸು

ಜೈರ್‌ರವರ ಉತ್ತಮೋತ್ತಮ ಅಯಿಂಟ್‌ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಹಡೆ, ಕೆ ಪು, ಕಪ್ಪು ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ವ್ರಣಗಳು,

ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ ಚೂರಿ ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯೋಗ್ಯವಾದಂಥಾ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರ್ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ವಿನಿಯೋಗಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ನಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1 ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಖರ್ಚು ಬೇರೆ ಗುಲಾಬ್ ಸುಂದರ ಪ್ರಾಣರ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಉಪಕಾರಿ ಕ್ರಯ ಬಾಟ್ಲಿಗೆ ರೂ 1 6 0 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [25 12]

ವಿಳಾಸ—ಜಿ ಗುಲಾಬ್ ಚಂದ್ ಪೌರ್ಣಸ್,

ಮೈಸೂರು [illegible] ಸೆಟಲ್‌ಮೆಂಟ್ [illegible] ವೆಂಕಟರಾಯರು ಸರ್ಕಾರದ ಹಣವನ್ನು ತಿಂದುಹಾಕಿದರೆಂಬ ಮೊಕದ್ದಮೆಯು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಪ್ರಾರಂಭವಾಯಿತು ಸರ್ಕಾರದ ಕಡೆ 16 ಸಾಕ್ಷಿಗಳ ವಿಚಾರಣೆಯಾಗಬೇಕು ಈ ಪೈಕಿ [illegible] ಆಫೀಸರ [illegible] ಹಾಜರಾಗಿ ವೆಂಕಟರಾಯರ ಮೇಲೆ [illegible] ಗವರ್ನ್‌ಮೆಂಟ್ ಸ್ಯಾಂಕ್ಷನ್ [illegible] ಮಾಡಿದರು ಈ ಮೊಕದ್ದಮೆಯನ್ನು ಪತ್ತೆ [illegible] ಆಫೀಸರ್ [illegible] ಅವರು [illegible] ಮತ್ತು [illegible] ವಿವರಿಸಿ [illegible] ಸಂಬಂಧಪಟ್ಟ ರೆಜಿಮೆಂಟ್ [illegible] ಪುಸ್ತಕಗಳನ್ನು ಕೋರ್ಟಿಗೆ [illegible] ಗವರ್ನ್‌ಮೆಂಟ್ [illegible] ಕಂಟ್ರೋಲರಾದ ಮ|| [illegible] ಸಾಮಿಯವರ ಕ್ರಾಸಿಯತ್ತು ನಡೆಯಿತು ಇವರು ಲೆಕ್ಕ ತನಿಖೆ ಮಾಡಿದ ವಿಚಾರವನ್ನೂ ಇತರ ಸಂಗತಿಗಳನ್ನೂ ಸ್ವಲ್ಪ ದೂರ ಹೇಳಿದರು ಇವರ ವಿಚಾರಣೆ ಇನ್ನೂ ಪೂರೈಸಲಿಲ್ಲ

*

ಮಲೆನಾಡಿನ ಆರೋಗ್ಯವನ್ನು ಕಾಪಾಡಿ ಅಭಿವೃದ್ಧಿಗೆ ತರುವುದಕ್ಕಾಗಿ ಸರ್ಕಾರದಿಂದ ನೇಮಕವಾಗಿರುವ ಕಮಿಟಿಯವರು ಕಳೆದ ವಾರ ಚಿಕ್ಕಮಗಳೂರಿನಲ್ಲಿ ಸೇರಿ ತೀರ್ಮಾನಮಾಡಿರುವುದೇನೆಂದರೆ—(1) ಎಲ್ಲಾ ಕಡೆಗಳಿಗೂ ಒಳ್ಳೇ ಕುಡಿಯುವ ನೀರನ್ನು ಒದಗಿಸುವಂತೆ ಭಾವಿಗಳನ್ನು ತೆಗಿಸಬೇಕು ಮೊದಲು ಹರಿಹರಪುರದಲ್ಲಿ 30 ಮನೆಗಳಿಗೆ ಒಂದರಂತೆ ಭಾವಿಗಳಾಗಬೇಕು (2) ಆರೋಗ್ಯಕರವಾದ ನಿವೇಶನಗಳಲ್ಲಿ ಹೊಸ ಮನೆ ಕಟ್ಟಿಕೊಳ್ಳುವವರಿಗೆ ಸರಿಯಾದ ಆಧಾರದ ಮೇಲೆ 500 ರಿಂದ 2,000 ರೂಪಾಯಿ ತನಕ ಅಡ್ವಾನ್ಸು ಹಣಗಳನ್ನು ಸಾಲ ಕೊಟ್ಟು ಸುಲಭವಾದ ಕಂತುಗಳಲ್ಲಿ ವಸೂಲ್ಮಾಡಿಕೊಳ್ಳಬೇಕು (3) ಅಮಲ್ದಾರ್ರ ಕೂಡ ದೇಶೀ ಸಿಡುಬು ಹಾಕುವ ನೌಕರರನ್ನು ಕಳುಹಿಸಿ ಪ್ರೋತ್ಸಾಹದಿಂದ ಮಕ್ಕಳಿಗೆ ಸಿಡುಬು ಹಾಕಿಸುವ ಏರ್ಪಾಟಾಗಬೇಕು

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ದಂಡಿನಲ್ಲಿರುವ ಹಿಂದುಗಳಿಗೋಸ್ಕರ ಬಯ್ಯಪ್ಪನಹಳ್ಳಿ ಮನ ಪಾರ್ತಿಕಾವಲ್ ಗ್ರಾಮದಲ್ಲಿ 24 ಎಕರೆ 19 ಗುಂಟೆ ಜಮೀನನ್ನು ಸ್ಮಶಾನಕ್ಕಾಗಿ ಮೈಸೂರು ಸರ್ಕಾರದವರು ಇದೇ ಏಪ್ರಲ್ ಗುತ್ತಿಲಾಗಾಯಿತು ಗವರ್ನರ್ ಜನರಲ್‌ರ ಸ್ವಾಧೀನಕ್ಕೆ ಸಂಪೂರ್ಣವಾಗಿ ವಹಿಸಿರುತ್ತಾರೆ

ಮಳವಳ್ಳಿ ಮ್ಯುನಿಸಿಪಾಲಿಟಿಯೊಳಗೆ ಬಲಾತ್ಕಾರದಿಂದ ದೇಶಿ ಸಿಡುಬು ಹಾಕುವ ಕಾನೂನನ್ನು ಇದೇ ಏಪ್ರಲ್ 1 ರ ಲಾಗಾಯಿತು ಎರಡು ವರುಷ ಜಾರಿಯಲ್ಲಿರತಕ್ಕದ್ದು

ಮೈಸೂರು ನ್ಯಾಯವಿಧಾಯಕ ಸಭೆಗೆ ಮುಂದೆ ಹೇಳುವವರನ್ನು ಮೆಂಬರುಗಳಾಗಿ ನೇಮಿಸಲಾಗಿದೆ—ಕಂಟ್ರೋಲರ್ ಮ| ದಿವಾನ್ ಬಹದ್ದೂರ್ ಜೆ ಎಸ್ ಚಕ್ರವರ್ತಿಯವರು, ಎಕ್ಸೈಸ್ ಕಮಿಷನರ್ ಮ|| ಪಿ ರಾಘವೇಂದ್ರರಾಯರು, ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಕೆ ಆರ್ ಶ್ರೀನಿವಾಸಯ್ಯಂಗಾರ್ರು

ಮೂಡಿಗೆರೆ ರೇಂಜಿನ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮ|| ಎಂ ಎ ವರದಾಚಾರ್ರಿಗೆ ಮಾರ್ಚಿ ತಾ 20 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಕಡೂರು ರೇಂಜ್ ಆಫೀಸರು ಆ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು

ಮಿಂಟೋ ಆಸ್ಪತ್ರೆಯ ನೇತ್ರ ವೈದ್ಯರಾದ ಡಾ|| ಎಸ್ ವಿ ರಾಮಸ್ವಾಮಿ ಅಯ್ಯಂಗಾರ್ರಿಗೆ ಏಪ್ರಲ್ ತಾ 15 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅ| ಸರ್ಜನ್ ಮ|| ಬಿ ಜಿ ಶ್ರೀನಿವಾಸಾಚಾರ್ಯರು ಆಸ್ಪತ್ರೆಯ ಛಾರ್ಜನ್ನು ವಹಿಸಿರತಕ್ಕದ್ದು

ಅ|| ಸರ್ಜನ್ ಮ|| ಎಂ ಜಗನ್ನಾಥಂ ಪಿಳ್ಳೆಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನಾಲ್ಕು ದಿನ ಜಾಸ್ತಿ ಮಾಡಿದೆ ಇವರನ್ನು ಹಂಗಾಮಿಯಾಗಿ ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಮಾಡಿದೆ

ಮುಂದೆ ಹೇಳುವ ಅಮಲ್ದಾರ್ರುಗಳ ಬಡ್ತಿ ಹುಕುಂ ಮಾಡಿದೆ —1 ನೇ ಕ್ಲಾಸಿಗೆ—ಮ|| ಬಿ ಸಿ ಕೃಷ್ಣಸ್ವಾಮಿಯವರು 2 ನೇ ಕ್ಲಾಸಿಗೆ—ಮ| ಗಳಾದ ಬಿ ನಾರಾಯಣಸ್ವಾಮಿ ಅಯ್ಯಂಗಾರ್ರು, ಎಂ ಎಸ್ ರಾಮಚಂದ್ರರಾಯರು, ಎಂ ಸದಾಶಿವರಾಯರು, ಎಸ್ ಎನ್ ಅಪ್ಪಣ್ಣಯ್ಯಂಗಾರ್ರು, 3 ನೇ ಕ್ಲಾಸಿಗೆ—ಮಿ| ಎಡ್ವರ್ಡ್ ರಾಬರ್ಟರವರು, ಮ| ಗಳಾದ ವೈ ನರಸಿಂಗರಾಯರು, ಎಸ್ ಚಕ್ರಪಾಣಿ ಅಯ್ಯಂಗಾರ್ರು, ಕೆ ಕೆ ವೆಂಕಟಸ್ವಾಮಿ ಅಯ್ಯರವರು, 4 ನೇ ಕ್ಲಾಸಿಗೆ—ಮಿ| ಸರ್ದಾರ್ ಮೊಹಿಯುದ್ದೀನ್ ಷರೀಫರವರು, ಮ| ಗಳಾದ ಕೆ ವೆಂಕಟಯ್ಯಂಗಾರ್ರು, ಎ ಭೀಮರಾಯರು, ಆರ್ ಎ ನರಸಿಂಹಯ್ಯಂಗಾರ್ರು

ರೆವಿನ್ಯೂ ಸರ್ವೆ ಇಲಾಖೆಯ ಮ|| ಎಚ್ ವ್ಯಾಸರಾಯರನ್ನು 6 ನೇ ಕ್ಲಾಸ್ ಅ ಕಮಿಷನರಾಗಿ ನೇಮಕಮಾಡಿದೆ

ಮೊಳಕಾಲ್ಮೂರು ತಾಲ್ಲೂಕು ಅಮಲ್ದಾರ್ ಮ ಎನ್ ಸುಬ್ಬರಾಯರಿಗೆ ಟ್ರೆಷರ್ ಆಕ್ಟ್ ಸಂಬಂಧವಾದ ಕಾನೂನಿಗೆ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತಿ ಮಾಡುವ ಅಧಿಕಾರ ವಹಿಸಿದೆ

ಬೆಂಗಳೂರು ತಾಲ್ಲೂಕು ವರ್ತೂರು ಗ್ರಾಮದ ಯೂನಿಯನ್ ಪಂಚಾಯತಿಯನ್ನು 1914 ನೇ ಜುಲೈ ಲಾಗಾಯಿತು ವಜಾಮಾಡಿದೆ

ಕಡೂರು ಪೊಲೀಸ್ ಸೂಪರಿಂಟೆಂಡೆಂಟ್ ಮಿ| ಮಹಮದ್ ಓಬೇದುಲ್ಲಾಯವರಿಗೆ ಏಪ್ರಲ್ ತಾ 10 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಪೊಲೀಸ್ ಇನ್ಸ್‌ಪೆಕ್ಟರ್ ಮ| ಆರ್ ರಾಮರಾಯರು ಪೊಲೀಸ್ ಸೂಪರಿಂಟೆಂಡೆಂಟರಾಗಿ ಅವರ ಕೆಲಸವನ್ನು ಬದಲಿ ನೋಡತಕ್ಕದ್ದು

ಮಿ| ಪಿ ಎಫ್ ಬೌರಿಂಗ್‌ಯವರಿಂದ ಮ| ವಿ ರಾಮಸ್ವಾಮಯ್ಯನವರು ಮಾರ್ಚಿ ತಾ 31 ರಲ್ಲಿ ಕೋಲಾರ್ ಡೆಪ್ಯುಟಿ ಕಮಿಷನರ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ

ಮ ಸಿ ಆರ್ ರೆಡ್ಡಿಯವರಿಗೆ ಮಾರ್ಚಿ ತಾ 16 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಾನ್ಫಿಡೆನ್ಶಿಯಲ್ ಅಸಿಸ್ಟೆಂಟರಾದ ಮ ಎಚ್ ವಿ ಕೃಷ್ಣಯ್ಯನವರಿಗೆ ಮಾರ್ಚಿ ತಾ 30 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮ|| ಎನ್ ಸಂಪತ್ತಯ್ಯಂಗಾರ್ರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು

ಪಶ್ಚಿಮ ಸರ್ಕಲ್ ಸೂಪ ಇಂಜನಿಯರ್ ಮ| ವಿ ರಂಗಸ್ವಾಮಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮ|| ಆರ್ ವಿ X ಂಬರಂ ಅಯ್ಯರವರು ಸೂಪರಿಂಟೆಂಡಿಂಗ್ ಇಂಜನಿಯರಾಗಿಯೂ, ಮ|| ಬಿ ಸಿ ಶ್ರೀನಿವಾಸ ಅಯ್ಯಂಗಾರ್ರು ಮೈಸೂರು ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ

ಚಾಮರಾಜನಗರ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮ| ಕೆ ಆರ್ ಶೇಷಾಚಾರ್ರಿಗೆ ಏಪ್ರಿಲ್ ತಾ 2 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ| ಇಂಜನಿಯರ್ ಮ|| ಎಸ್ ಎ ರಾಮಸ್ವಾಮಿ ಅಯ್ಯರವರನ್ನು ಚಿತ್ರದುರ್ಗ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ

ಮೈಸೂರಿನಲ್ಲಿ ನಡೆದ ಎರಡು ವಾರ್ಷಿಕ ಕೂಟಗಳು

ರಾಜಧಾನಿಯ ಗಾಯನ ಸಮಾಜ

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಗಾಯನ ಸಮಾಜದ ವಾರ್ಷಿಕ ಕೂಟವು ಟೌನ್ ಹಾಲ್ ಬಂಗಲೆಯಲ್ಲಿ ಜರುಗಿತು ರಿಟೈರ್ಡ್ ಚೀಫ್ ಇಂಜನಿಯರ್ ಮ|| ನೆ ಶ್ರೀನಿವಾಸರಾಯರು ಅಗ್ರಾಸನವನ್ನು ವಹಿಸಿದರು ಸಮಾಜಕ್ಕೆ ಸೇರಿರುವ ಎಲ್ಲಾ ಕೋಮುಗಳ ಮತ್ತೂ ಕಸಬುಗಳ ಮೆಂಬರುಗಳು ಹಾಜರಾಗಿದ್ದರು ಸೆಕ್ರೆಟರಿ ಮ|| ಎಚ್ ಪಿ ಕೃಷ್ಣರಾಯರು 1914ನೇ ಫೆಬ್ರವರಿಗೆ ಆಖೈರಾದ ಎರಡು ವರುಷಗಳ ರಿಪೋರ್ಟನ್ನು ಓದಿ ಹೇಳಿದರು ಮೆಂಬರುಗಳ ಸಂಖ್ಯೆ ಜೂನ್ 1912ರಲ್ಲಿ 35 ಇದ್ದದ್ದು 1913ನೇ ಜನವರಿಯಲ್ಲಿ 234ಕ್ಕೆ ಹೆಚ್ಚಿ, ಈಗ 1914ನೇ ಫೆಬ್ರವರಿಯಲ್ಲಿ 150ಕ್ಕೆ ಇಳಿದಿದೆ ಈ ಸಂಖ್ಯೆಯಲ್ಲೂ ಅನೇಕರು ಮೆಂಬರಾಗಿರಲು ಅನುಮಾನಿಸುತ್ತಿದಾರೆಂದು ಗೊತ್ತಾಯಿತು ಕಳೆದ 22 ತಿಂಗಳಲ್ಲಿ ಮೆಂಬರುಗಳಿಂದ 2,189 ರೂಪಾಯಿ ವಸೂಲಾಗಿ, ಈ ಪೈಕಿ ಸುಮಾರು 1,452 ಚಿಲ್ಲರೆ ರೂಪಾಯಿ ಖರ್ಚಾಗಿರುತ್ತದೆ ಗಾಯನ ಕೂಟಗಳು 27 ನಡೆದವು ಈ ಸಮಾಜಕ್ಕೆ ಸಂಬಂಧಪಟ್ಟಂತೆ ಒಂದು ಸಂಗೀತ ಪಾಠಶಾಲೆ ನಡಿಸಲ್ಪಡುತ್ತಿದೆ ಅದರಲ್ಲಿ ಈಗ 24 ವಿದ್ಯಾರ್ಥಿಗಳು ಸೇರಿ ಅಭ್ಯಾಸಮಾಡುತ್ತಿದಾರೆ ಇದಕ್ಕಾಗಿ ಮ್ಯುನಿಸಿಪಾಲಿಟಿಯಿಂದ ಒಂದು ನಿವೇಶನವನ್ನು ಪಡೆದು ಪ್ರತ್ಯೇಕವಾಗಿ ಒಂದು ಕಟ್ಟಡವನ್ನು ಮಾಡಿಕೊಂಡರೆ ಅನುಕೂಲವಾದೀತು ಮೆಂಬರುಗಳಿಂದ ಚಂದಾ ಹಣ ಇನ್ನೂ 500 ರೂಪಾಯಿವರೆಗೆ ವಸೂಲಾಗಬೇಕಾಗಿದೆ ಸಮಾಜದ ಜಮಾಖರ್ಚು ಲೆಕ್ಕಗಳನ್ನು ಪರಿಶೋಧನೆ ಮಾಡಿದ ಆಡಿಟರುಗಳು ಲೆಕ್ಕಪತ್ರಗಳನ್ನು ಸರಿಯಾಗಿಯೂ ತೃಪ್ತಿಕರವಾಗಿಯೂ ಇಟ್ಟಿಲ್ಲವೆಂದು ಹೇಳಿ ಕೆಲವು ಲೋಪದೋಷಗಳನ್ನು ತೋರಿಸಿರುತ್ತಾರೆ ಮೆಂಬರುಗಳು ಸಮಾಜದ ಈ ಸ್ಥಿತಿಯನ್ನು ಸರಿಪಡಿಸಬೇಕೆಂದು ಚರ್ಚೆ ನಡಿಸಿ ಮ|| ಬಿ ರಾಮೇಶ್ವರಯ್ಯನವರೂ ಮ|| ಎಂ ಎಸ್ ಕೃಷ್ಣಸ್ವಾಮಿರಾಯರೂ ಸೇರಿ ಲೆಕ್ಕಗಳನ್ನೆಲ್ಲಾ ಅಜಮಾಯಿಷಿಮಾಡಿ, ಸರಿಯಾದ ರೀತಿಯಲ್ಲಿ ಇಟ್ಟು ನಡಿಸುವುದಕ್ಕೆ ಸಲಹೆಗಳನ್ನು ಸೂಚಿಸಬೇಕೆಂದು ಗೊತ್ತುಮಾಡಿದರು ಬಳಿಕ ಮೆಂಬರುಗಳು ಇನ್ನು ಮುಂದೆ ಸಮಾಜಕ್ಕೆ ಒಬ್ಬ ಸೆಕ್ರೆಟರಿಯೇ ಇರಬೇಕೆಂದು ತೀರ್ಮಾನಿಸಿ ಮ|| ಎಚ್ ಪಿ ಕೃಷ್ಣರಾಯರನ್ನು ಸೆಕ್ರೆಟರಿಯಾಗಿಯೂ, ಮ|| ಸಾಹುಕಾರ್ ಬಸುವಯ್ಯನವರನ್ನು ಟ್ರೆಜರರಾಗಿಯೂ ಗೊತ್ತುಮಾಡಿದರು ಬಳಿಕ ಕಮಿಟಿ ಮೆಂಬರುಗಳ ಸಂಖ್ಯೆಯನ್ನು 15 ರಿಂದ 12 ಕ್ಕೆ ಇಳಿಸಿ, ಹೊಸ ಮೆಂಬರುಗಳನ್ನು ಚುನಾಯಿಸಿದರು ಕಡೆಯಲ್ಲಿ ಚೇರ್‌ಮನ್‌ರವರು ಸಂಗೀತ ವಿದ್ಯೆಯ ಶ್ರೇಷ್ಠತೆಯನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸಮಾಡಿ, ಈ ಸಮಾಜವನ್ನು ಸಕಲ ಪ್ರಜೆಗಳೂ ಅಭಿವೃದ್ಧಿಗೆ ತರಬೇಕೆಂದೂ, ಎಲ್ಲರೂ ತಮ್ಮ ಮಕ್ಕಳಿಗೆ ಅಲ್ಪಸಲ್ಪ ಮಟ್ಟಿಗಾದರೂ ಸಂಗೀತದಲ್ಲಿ ಜ್ಞಾನವನ್ನು ಉಂಟುಮಾಡಬೇಕೆಂದೂ ಒತ್ತಿ ಹೇಳಿದರು ಅಲ್ಲಿಗೆ ಆ ದಿನದ ಕಾರ್ಯಗಳು ಮುಕ್ತಾಯ ಹೊಂದಿದವು

ಮೈಸೂರು ಲಾಯರುಗಳ ಸಂಘ

ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯ ಲಾಯರುಗಳ ಸಂಘದ ಮೆಂಬರುಗಳು ಸಿವಿಲ್ ಕೋರ್ಟುಗಳ ಕಟ್ಟಡದಲ್ಲಿ ಎಂಟನೇ ವರುಷದ ಕೂಟವನ್ನು ನಡಿಸಿದರು ಈ ಸಂಘಕ್ಕೆ ಸೇರಿರುವ 59 ಮಂದಿ ಅಡ್ವೊಕೇಟರು ಮತ್ತು ಪ್ಲೀಡರುಗಳ ಪೈಕಿ ಸುಮಾರು 40 ಮಂದಿಯ ತನಕ ಹಾಜರಾಗಿದ್ದರು ಪ್ರೆಸಿಡೆಂಟ್ ಮ|| ಎಚ್ ನರಸಿಂಗರಾಯರು ಅಗ್ರಾಸನವನ್ನು ವಹಿಸಿದರು ಸೆಕ್ರೆಟರಿ ಮ|| ಎ ಕೃಷ್ಣರಾಯರು ಸಂಘದ ವಾರ್ಷಿಕ ರಿಪೋರ್ಟನ್ನು ಓದಿ ಹೇಳಿದರು ಅದರಲ್ಲಿ ಕಂಡುಬಂದ ಮುಖ್ಯ ವಿಷಯಗಳೇನೆಂದರೆ—ಈ ಸಂಘವು ಅಭಿವೃದ್ಧಿ ಹೊಂದುತ್ತಾ ಇದೆ ಮೆಂಬರುಗಳ ಸಂಖ್ಯೆ ಹೆಚ್ಚುತ್ತಿರುವುದು ಹಿಂದಿನ ಸಾಲಿನ ಶಿಲ್ಕುಹಣ ಮತ್ತು ಈ ಸಾಲಿನ ಚಂದಾ ಸೇರಿ 1,087 ಚಿಲ್ಲರೆ ರೂಪಾಯಿ ಜಮಾ ಆಯಿತು ಈ ಪೈಕಿ ಸಿಬ್ಬಂದಿ, ಹೊಸ ಪುಸ್ತಕಗಳನ್ನು ತರಿಸುವುದೇ ಮುಂತಾದ್ದಕ್ಕೆ 840 ರೂಪಾಯಿ ವಿನಿಯೋಗಿಸಲ್ಪಟ್ಟು 1914 ನೇ ಮಾರ್ಚಿ ತಾ 1 ರಲ್ಲಿ 247 ಚಿಲ್ಲರೆ ರೂಪಾಯಿ ಉಳಿದಿದೆ ಕಮಿಟಿಯವರು ಕಳೆದ ವರ್ಷ ಮೀಟಿಂಗುಗಳನ್ನು ನಡಿಸಿ, ತಮ್ಮ ತೀರ್ಮಾನಗಳನ್ನು ಕಳುಹಿಸಿದ್ದಕ್ಕೆ ಗವರ್ನ್‌ಮೆಂಟಿನವರು ಪರ್ಯಾಲೋಚಿಸಿ ಇತ್ಯರ್ಥಪಡಿಸುವುದಾಗಿ ತಿಳಿಸಿದರು ಮಿಸೆಸ್ ಎ ಆನಂದರಾಯರು 70 ಲಾ ಪುಸ್ತಕಗಳನ್ನು ಸಂಘಕ್ಕೆ ಬಹುಮಾನ ಕಳುಹಿಸಿಕೊಟ್ಟರು ಸಂಘದವರು ಕಳೆದ ಸಾಲಿನಲ್ಲಿ 1,030 ರೂಪಾಯಿನ ಹೊಸ ಲಾ ಪುಸ್ತಕಗಳನ್ನು ಕೊಂಡು ತರಿಸಿದಾರೆ ಈಗ ಸಂಘದಲ್ಲಿ ಮೆಂಬರುಗಳು ಉಪಯೋಗಿಸುವುದಕ್ಕೆ ಒಟ್ಟು 686 ಪ್ರತಿಗಳ ಕಾನೂನುಗಳೂ ರಿಪೋರ್ಟುಗಳೂ ಇರುತ್ತವೆ ಸಂಘಕ್ಕೆ ಮೆಂಬರುಗಳಿಂದ ಇನ್ನೂ 163 ರೂಪಾಯಿ ಚಂದಾ ವಸೂಲಾಗದೆ ಬಾಕಿ ನಿಂತಿದೆ ಈ ರೀತಿಯಾಗಿ ಸೆಕ್ರೆಟರಿಗಳ ಮತ್ತು ಆಡಿಟರುಗಳ ರಿಪೋರ್ಟುಗಳು ಓದಿದ ಬಳಿಕ ಅವನ್ನು ಮೆಂಬರುಗಳು ಒಪ್ಪಿ ಪ್ಯಾಸ್ ಮಾಡಿದರು ಸಂಘಕ್ಕೆ ಇನ್ನೊಂದು ಸೆಟ್ಟು ಲಾ ರಿಪೋರ್ಟುಗಳನ್ನು ತರಿಸಿಡುವ ಬಾಗದಲ್ಲಿ ಚರ್ಚೆ ನಡೆಯಿತು ಅಡ್ವೊಕೇಟ್ ಮ| ವಿ ರಾಘವಾಚಾರ್ಯರು ಬಹಳ ಉದಾರ ಮನಸ್ಸಿನಿಂದ ತಮ್ಮ ಬಳಿ ಇರುವ ಸುಮಾರು 500 ರೂಪಾಯಿನ ಲಾ ರಿಪೋರ್ಟುಗಳನ್ನು ಸಂಘಕ್ಕೆ ಬಹುಮಾನ ಕೊಡುತ್ತೇವೆಂದು ತಿಳಿಸಿದರು ಮೆಂಬರುಗಳು ಅವರನ್ನು ವಂದಿಸಿ ಅವರ ಔದಾರ್ಯವನ್ನು ಕೊಂಡಾಡಿದರು ತರುವಾಯ ಮೆಂಬರುಗಳೆಲ್ಲಾ ಅಲ್ಪಾಹಾರವನ್ನು ಭುಂಜಿಸಿ, ಸಂತೋಷಕೂಟವನ್ನು ನಡಿಸಿದರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ರೇ ಮೊದಲಾದ ಜಡ್ಜಿಗಳೆಲ್ಲಾ ಹಾಜರಾಗಿದ್ದರು ಅಡ್ವೊಕೇಟರುಗಳಾದ ಮ|| ಡಿ ವಿ ರಂಗಸಾಮಯ್ಯಂಗಾರ್ರು, ಸಿ ನರಸಿಂಹಯ್ಯನವರೂ ಮನೋಹರವಾದ ಸಂಗೀತವನ್ನು ಹಾಡಿ ಸಭಿಕರನ್ನು ಸಂತೋಷಪಡಿಸಿದರು ಒಳ್ಳೆ ವೈದಿಕ ಶಿರೋಮಣಿ ಮ| ಶೇಷಣ್ಣನವರ ಆಹ್ಲಾದಕರವಾದ ಗೀತಾದಾನವೂ ನಡೆದು, ಗಂಧ ಹೂವಾಳೆ ಅಡಿಕೆಲೆ ವಿನಿಯೋಗದಿಂದ ಆ ದಿನದ ಸಂತೋಷಕೂಟವು ಮುಕ್ತಾಯವಾಯಿತು

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಅದಿಪತ್ತಿನಲ್ಲಿ ಎಡ್ವರ್ಡ್ ಚಕ್ರವರ್ತಿಯವರ ಮೆಮೋರಿಯಲ್ ಫಂಡಿಗೆ ಪ್ರಜೆಗಳಿಂದ ಚಂದಾ ರೂಪದಲ್ಲಿ 2 18,[illegible]7 ಚಿಲ್ಲರೆ ರೂಪಾಯಿ ವಸೂಲಾಗಿದೆ ಮದರಾಸ್ ಸರ್ಕಾರದವರೂ ಅಷ್ಟೇ ಹಣವನ್ನು ಈ ಫಂಡಿಗೆ ಸಹಾಯದ್ರವ್ಯವಾಗಿ ಕೊಡುವಂತೆ ಸ್ಯಾಂಕ್ಷನ್ ಮಾಡಿ, ಒಟ್ಟು ಹಣದಿಂದ ಕ್ಷಯರೋಗ ಚಿಕಿತ್ಸೆಗೆ ಒಂದು ಆಸ್ಪತ್ರೆಯನ್ನು ಕಟ್ಟಿಸಿ ನಡಿಸಬೇಕೆಂದು ಅಪ್ಪಣೆ ಕೊಟ್ಟಿದಾರೆ

*

ಅಮೃತಸರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಡೈರೆಕ್ಟರುಗಳ ನಡವಳಿಕೆ ವಿಷಯದಲ್ಲಿ ಕೆಲವು ಮೆಂಬರುಗಳು ಅನುಮಾನಪಟ್ಟು, ಚೆನ್ನಾಗಿ ತನಿಖೆಯಿಂದ ಡಿಪಾಜಿಟ್‌ದಾರರಿಗೂ ಷೇರುದಾರರಿಗೂ ನಷ್ಟ ಉಂಟಾಗದಂತೆ ಕೃಪೆಮಾಡಬೇಕೆಂದು ಪಂಜಾಬ್ ರೆಜಿಸ್ಟ್ರಾರರಿಗೆ ಅರ್ಜಿ ಬರೆದುಕೊಂಡಿದಾರೆಂತಲೂ, ಆ ಕಂಪನಿಯ ಮೇಲೆ ಕೆಲವು ಮೊಕದ್ದಮೆಗಳು ಹುಟ್ಟಿ ಗುಜರಾನ್‌ವಾಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆಮಾಡುತ್ತಿದಾರೆಂತಲೂ "ಪಂಜಾಬಿ" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂದು "ಕಾಮನ್‌ವೀಲ್" ಎಂಬ ಪತ್ರಿಕೆಯು ತಿಳಿಸುತ್ತದೆ

*

ಮಧ್ಯಪ್ರಾಂತ್ಯಗಳಿಗೆ ಸೇರಿದ ಮಾಲ್ವಾ ದೇಶದಲ್ಲಿ ಅಫೀಮಿನ ಬೆಳೆಯು ಕಡಮೆಯಾದದ್ದನ್ನು ನೋಡಿ ಅಲ್ಲಿನ ಧಾರ ಸಂಸ್ಥಾನಾಧಿಪತಿಯವರು ರೇಷ್ಮೆ ಹುಳು ಸಾಕುವ ಕಾರ್ಖಾನೆಯನ್ನು ಪ್ರಾರಂಭಿಸಿದರು ಇಂದೋರ್ ಸಂಸ್ಥಾನದ ಮಹಾರಾಜರವರು ಕಳೆದ ವಾರ ಅದನ್ನು ಪ್ರತ್ಯಕ್ಷವಾಗಿ ನೋಡಿದರು ಈ ಕಾರ್ಖಾನೆಯಲ್ಲಿ 788 ಮಗ್ಗಗಳಿದ್ದು ಸುಮಾರು 1,000 ಜನರು ಕೆಲಸಮಾಡುತ್ತಾರೆ ಅಫೀಮಿನ ವ್ಯಾಪಾರವು ತಪ್ಪಿಹೋದ ಜಮೀನುಗಳಲ್ಲೆಲ್ಲಾ ಈಗ ಹತ್ತಿಯ ಬೆಳೆಯನ್ನು ಮಾಡಲಾರಂಭಿಸಿದಾರೆ ಇವರಿಗೆ ಮಹಾರಾಜರವರೂ ದಿವಾನರವರೂ ಬೇಕಾದ ಸಹಾಯಗಳನ್ನು ಒದಗಿಸುತ್ತಿರುವರು

ಶುಂಠಿ ಮುರಬ್ಬಾ ಮಾಡತಕ್ಕ ವಿಧಾನ.

ಶುಂಠಿಯನ್ನೆಲ್ಲಾ ಚೆನ್ನಾಗಿ ನೀರಿನಲ್ಲಿ ತೊಳೆದು ನಂತರ ಮೇಲಿನ ಸಿಪ್ಪೆಯನ್ನೆಲ್ಲಾ ಹೆರೆದು ಬಿಡುವರು ನಂತರ ಅದನ್ನು ದಬ್ಬಳದಿಂದ ಅಲ್ಲಲ್ಲೇ ಚುಚ್ಚಿ ಅಕ್ಕಿಯನ್ನು ತೊಳೆದ ಕಲಗಚ್ಚಿನಲ್ಲಿ ತೊಳೆಯುತ್ತಾರೆ ಇದಾದ ಮೇಲೆ ಶುದ್ಧವಾದ ಸಕ್ಕರೆ ಮತ್ತು ನೀರಿನಲ್ಲಿ ಹಾಕಿ ಚೆನ್ನಾಗಿ ನೆನೆಯುವ ವರಿವಿಗೂ ಬೇಯಿಸಿ ಜಾಡಿಗಳಲ್ಲಿ ಹಾಕಿ ಮೇಲೆ ಸಕ್ಕರೆ ಪಾಕವನ್ನು ಸುರಿಯುವರು ಒಣ ಶುಂಠಿಯ ಮುರಬ್ಬಾವನ್ನು ಮಾಡಬೇಕಾದರೆ ಹಸಿ ಶುಂಠಿಯನ್ನು ನೀರೆಲ್ಲಾ ಹೋಗುವಂತೆ ಒಣಗಿಸಿ ಬಿದಿರು ಚಾಪೆಗಳ ಮೇಲೆ ಸಕ್ಕರೆಯನ್ನು ಹರವಿ ಅದರ ಮೇಲೆ ಶುಂಠಿ ಕೊನೆಗಳನ್ನೆಲ್ಲಾ ಇಟ್ಟು ಚಾಪೆಯಲ್ಲಿ ಬಿಗಿಯಾಗಿ ಸುತ್ತುವರು ಹೀಗೆ ಮಾಡಿದರೆ ಸಕ್ಕರೆಯು ಚೆನ್ನಾಗಿ ಶುಂಠಿಗೆಲ್ಲಾ ಮೆತ್ತಿಕೊಳ್ಳುವುದು ಹೀಗೆ ಯಾವ ವಿಧವಾದ ಮುರಬ್ಬಾವನ್ನು ಮಾಡಬೇಕಾದರೂ ಖಾರವು ಕಡಮೆಯಾಗಿರುವ ಶುಂಠಿಯನ್ನು ಉಪಯೋಗಿಸುವುದು ಒಳ್ಳೇದು ಚೈನಾ ದೇಶದಲ್ಲಿ ಬೆಳೆಯುವ ಶುಂಠಿಯು ಸಾಮಾನ್ಯವಾಗಿ ಖಾರವು ಕಡಮೆಯುಳ್ಳದ್ದಾಗಿರುವುದು ಅಲ್ಲಿನವರು ಇದನ್ನು ಬೆಳೆಯುವ ಕ್ರಮವು ಹ್ಯಾಗೆಂದರೆ — ಶುಂಠಿಯ ಕೊನೆಗಳನ್ನು ಒಂದರಿಂದ ಎರಡು ಅಡಿಗಳ ದೂರವಾಗಿ ದಿಂಡುಗಳನ್ನು ಕಟ್ಟಿ ಅಲ್ಲಿ ಆರು ಅಂಗುಲಗಳ ದೂರಕ್ಕೆ ಒಂದೊಂದರಂತೆ ನೆಡುವರು ದಿಂಡುಗಳ ನಡುವೆ ಹಳ್ಳಗಳಲ್ಲಿ ನೀರನ್ನು ಕಟ್ಟಿರುತ್ತಾರೆ ಸೊಸಿಗಳು ಸುಮಾರು ಮುಕ್ಕಾಲು ಅಡಿ ಎತ್ತರವಾಗಿರುವಾಗ್ಗೆ ಉಚ್ಚೆ ಅಥವಾ ಬಾಯಿಬಾನಿ ಗೊಬ್ಬರವನ್ನು ಹೇರಳವಾಗಿ ಹಾಕುತ್ತಾರೆ ಹೀಗೆ ಎರಡು ಮೂರಾವರ್ತಿ ಮಾಡುವರು ನೆಟ್ಟ ಸುಮಾರು ಮೂರು ತಿಂಗಳ ನಂತರದಲ್ಲಿ ಮೊದಲನೆ ಬೆಳೆಯು ಕೈಗೆ ಬರುವುದು ಈ ಶುಂಠಿಯು ಖಾರವು ಕಡಮೆಯುಳ್ಳದ್ದಾಗಿಯೂ ಹೆಚ್ಚು ಮೆತ್ತಬೆಲೆಬಾಳತಕ್ಕದ್ದಾಗಿಯೂ ಇರುವುದು ಆ ಶುಂಠಿಯೇ ಸಲ್ಪ ಬಲಿತರೆ ಅತಿ ಖಾರವಾಗಿರುವುದು

ಅರಕಲಗೂಡಿನಲ್ಲಿ ರೀಡಿಂಗ್ ರೂಮ್ ಸ್ಥಾಪನೆ

ಈ ಟೌನ್ನಲ್ಲಿ ಮೆಸರ್ಸ್ ಎ ವಿ ಸೂರ್ಯನಾರಾಯಣಸೆಟ್ಟಿ ಅಂಡ್ ಬ್ರದರ್ಸ್ ಇವರಿಂದ ಕಟ್ಟಲ್ಪಟ್ಟ ರಮಣೀಯವಾದ ಕಾರೊನೇಷನ್ ಹಾಲ್ ಗೃಹಪ್ರವೇಶ ಮಹೋತ್ಸವವು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ವೇದರಾಲ್ ಸಾಹೇಬರಿಂದ ತಾ 8 ನೇ ಬುಧವಾರ ಬೆಳಿಗ್ಗೆ ಹಾಲಿನ ಮುಂಭಾಗದಲ್ಲಿ ಸುಂದರವಾಗಿ ಕಟ್ಟಿಸಲ್ಪಟ್ಟ ಚಪ್ಪರದಲ್ಲಿ ಸಂಭ್ರಮವಾಗಿ ನಡಿಸಲ್ಪಟ್ಟಿತು ಈ ಮಹೋತ್ಸವಕ್ಕೆ ಎಕ್ಸ್ಟ್ರಾ ಅ॥ ಕಮಿಷನರ್ ಮ॥ ಸಿ ಎಸ್ ರಾಜಗೋಪಾಲಾಚಾರ್ಯರೂ, ಪೊಲೀಸ್ ಇ॥ ಮ॥ ಅನಂತರಾಮಯ್ಯರವರೂ, ಕೆಲವು ಕಾಫೀಪ್ಲಾಂಟರೂ, ಹಲವು ದೊಡ್ಡ ಮನುಷ್ಯರೂ ದಯಮಾಡಿ ಸಭೆಯನ್ನಲಂಕರಿಸಿದ್ದರು ನಾನಾ ವಿಧವಾದ ವಾದ್ಯಘೋಷಗಳು ಬೆಳೆದವು ಮಿ॥ ವೇದರಾಲ್‌ಸಾಹೇಬರವರು ಮುಸಾಫರ್ ಬಂಗಲೆಯಿಂದ ವಾದಗಳ ಘೋಷದಲ್ಲಿ ಕರೆದು ತಂದು ಅಗ್ರಾಸನದಲ್ಲಿ ಮರ್ಯಾದೆಯಿಂದ ಕುಳ್ಳಿರಿಸಲ್ಪಟ್ಟರು ಮ ಎ ವಿ ನಂಜುಂಡಶೆಟ್ಟರು ಅಡ್ರೆಸ್ಸನ್ನು ಒಪ್ಪಿಸಿದರು ನಂತರ ಮ॥ ವೈ ತಿಮ್ಮಪ್ಪಯ್ಯನವರು ರೀಡಿಂಗ್ ರೂಮಿನ ಪ್ರಯೋಜನವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಕೂಡಲೇ ಇಂಡಿಯಾ ಚಕ್ರವರ್ತಿಗಳಾದ ಜಾರ್ಜ್ ಸಾರ್ವಭೌಮರ ಶ್ರೇಯಸ್ಪ್ರಾರ್ಥನೆಯನ್ನು ನಡಿಸಿದರು ನಂತರ ವಿದ್ವಾನ್ ಕೆ ಲಕ್ಷ್ಮೀನರಸಿಂಹಾಚಾರ್ಯರು ಮಿ॥ ವೇದರಾಲ್ ಸಾಹೇಬರಿಗೂ, ಈ ರೀಡಿಂಗ್ ರೂಮಿಗೆ ಪ್ರೋತ್ಸಾಹಕರಾಗಿಯೂ ಮುಂದೆ ಅಭಿವೃದ್ಧಿಗೆ ತರತಕ್ಕವರಾಗಿಯೂ ಇರುವ ಮ ಸಿ ಎಸ್ ರಾಜಗೋಪಾಲಾಚಾರ್ಯರಿಗೂ, ಅಮಲ್ದಾರ್ ಮ॥ ಜಿ ಎಸ್ ರಾಮಸ್ವಾಮಯ್ಯಂಗಾರ್ಯರಿಗೂ, ಮ॥ ಎ ವಿ ಸೂರ್ಯನಾರಾಯಣಸೆಟ್ಟರಿಗೂ ಶ್ರೇಯಸ್ಪ್ರಾರ್ಥನೆಯನ್ನು ಮಾಡಿದರು ನಂತರ ಆರು ವರ್ಷ ವಯಸ್ಸುಳ್ಳ ಸುಂದರದಾಸ್ ಎಂಬ ಬಾಲಕನ ಸಂಭಾಷಣವು ಸಭಾಜನರಲ್ಲಿ ಆಶ್ಚರ್ಯವನ್ನುಂಟುಮಾಡಿತು ಬಳಿಕ ರೀಡಿಂಗ್ ರೂಮಿನ ಉಪಯೋಗವನ್ನು ಕುರಿತು ಬಾಲಕಿಯರ ನಾಟಕರೂಪವಾದ ಸಂಭಾಷಣೆಯು ನಡಿಸಲ್ಪಟ್ಟು ಅಂದವಾದ ಭಾಷಣಗಳಿಂದ ಸಭಾಜನಗಳೆಲ್ಲರ ಮನಸ್ಸೂ ಆನಂದತುಂದಿಲವಾಯಿತು ನಾಟಕಾಂತ್ಯದಲ್ಲಿ ಎ ಎನ್. ವಾಸವಾಂಬ ಎಂಬ ಬಾಲಕಿಯಿಂದ ಮಿ॥ ವೇದರಾಲ್ ಸಾಹೇಬರಿಗೆ ವಿಚಿತ್ರವಾದ ಕಸೂತಿಯಿಂದ ಮಾಡಿ ಒಪ್ಪಿಸಲ್ಪಟ್ಟ ಅಡ್ರೆಸ್ ಗಾನಮಾಡಲ್ಪಟ್ಟಿತು ಬಳಿಕ ಮಿ॥ ವೇದರಾಲ್ ಸಾಹೇಬರವರು ಅದಕ್ಕೆ ಸಮಂಜಸವಾದ ಪ್ರತ್ಯುತ್ತರವನ್ನು ಕೊಟ್ಟು ರೀಡಿಂಗ್ ರೂಮ್ ಬಾಗಿಲನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟಿದ್ದ ಸುವರ್ಣದ ಬೀಗದ ಕೈಯಿಂದ ತೆರೆದರು

ನಂತರ ಮ॥ ವೆಂಕಟೇಶಯ್ಯನವರು ತಾಲ್ಲೂಕು ಪ್ರೋಗ್ರೆಸ್ ಕಮಿಟಿ ವಿಚಾರವನ್ನೂ, ರೀಡಿಂಗ್ ರೂಮಿನ ವಿಚಾರವನ್ನೂ ಕುರಿತು ಉಪನ್ಯಾಸಮಾಡಿ ಈ ತಾಲ್ಲೂಕಿನಲ್ಲಿಯೂ ಒಂದು ಕಮಿಟಿಯನ್ನೇರ್ಪಡಿಸಿ ಆ ಕಮಿಟಿಗೆ ಕೆಲವು ಮೆಂಬರುಗಳು ಚುನಾಯಿಸಲ್ಪಟ್ಟರು ತರುವಾಯ ಸಂಭಾಷಣೆಗಳು ನಡೆದವು ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟಮೇಲೆ ಮಿ॥ ವೇದರಾಲ್ ಸಾಹೇಬರು ವಾದ್ಯಘೋಷದಲ್ಲಿ ಮುಸಾಫರ ಬಂಗಲೆಗೆ ದಯಮಾಡಿಸಿದರು ಆಗ ಬಂದ ಅತಿಥಿಗಳೆಲ್ಲರಿಗೂ ಬೇರೆ ಬೇರೆ ಕಡೆಯಲ್ಲಿ ಸಂತರ್ಪಣೆಯು ನಡಿಸಲ್ಪಟ್ಟಿತು ಮಧ್ಯಾಹ್ನದ ಮೇಲೆ ಬಾಲಕರುಗಳ ಆಟಪಾಟಗಳು ನಡೆದವು ಮ॥ ರಾಜಗೋಪಾಲಚಾರ್ಯರು ಅಗ್ರಾಸನಾಧಿಪತ್ಯವನ್ನು ವಹಿಸಿ ಬಾಲಕ ಬಾಲಕಿಯರಿಗೆ ಬಹುಮಾನವನ್ನು ಹಂಚಿಸಿದರು ಎಲ್ಲಾ ಜನಗಳಿಗೂ ಟಿಫನ್ ನಡೆಯಿತು ಹೀಗೆ ಸಂಭ್ರಮವಾಗಿ ಈ ಮಹೋತ್ಸವವನ್ನು ನಡಿಸಿ ಎಲ್ಲಾ ಜನಗಳಿಗೂ ಪರಮಾನಂದವನ್ನುಂಟುಮಾಡಿದ ಮ॥ ಸೂರ್ಯನಾರಾಯಣಶೆಟ್ರು ಉದಾರ ಸ್ವಭಾವವೂ ರಾಜಭಕ್ತಿಯೂ ಕೊಂಡಾಡತಕ್ಕದ್ದಾಗಿದೆ

ಸರ್ಕಾರದ ಪಂಚಮಾ ಸ್ಕೂಲುಗಳು

ಹಾಸನದ ತಾಲ್ಲೂಕು ಗೋರೂರು

ಹಿಂದಿನ ಬುಧವಾರ ಕದಳೀಸ್ತಂಭಗಳಿಂದಲೂ, ತಳಿರುತೋರಣಗಳಿಂದಲೂ, ಅಲಂಕರಿಸಲ್ಪಟ್ಟಿದ್ದ ಈ ಊರು ಪಂಚಮಾ ಸ್ಕೂಲು ಚಿತ್ರಪಟಗಳೊಂದಿಗೆ ನೇತ್ರಾನಂದಕರವಾಗಿತ್ತು ಸಾಯಂಕಾಲ 6 ರಿಂದ 8 ಘಂಟೆ ವರಿಗೆ ಮ॥ ಸ್ವಾ ರಾಮಸ್ವಾಮಯ್ಯಂಗಾರ್‍ರ ಅಧ್ಯಕ್ಷತೆಯಿಂದಲೂ, ಸಭೆಯನ್ನಲಂಕರಿಸಲ್ಪಟ್ಟಿದ್ದ ಕೆಲವು ದೊಡ್ಡ ಮನುಷ್ಯರುಗಳಿಂದಲೂ ಪ್ರಥಮ ವಾರ್ಷಿಕ ಸಭೆಯು ಬಹು ವಿಜೃಂಭಣೆಯಿಂದ ಜರುಗಿತು ಅಧ್ಯಕ್ಷರ ಪ್ರೇರಣೆಯಿಂದ ಸುಮಾರು 60-70 ಜನ ಪಂಚಮರು ನೆರೆದಿದ್ದರು ಮ॥ ಅಪ್ಪಯ್ಯಶೆಟ್ಟರಿಂದ ಸ್ಕೂಲ್ ರಿಪೋರ್ಟ್ ಓದಲಾಯಿತು ಅಗ್ರಾಸನಾಧಿಪತಿಗಳು ವಿದ್ಯಾಭ್ಯಾಸದಿಂದ ಉಂಟಾಗುವ ಪ್ರಯೋಜನ, ಮದ್ಯಪಾನಮಾಡುವುದರಿಂದ ಕೆಡಕು, ನೈರ್ಮಲ್ಯವಿಚಾರ ಇವುಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಹೃದಯಂಗಮವಾಗುವಂತೆ ಉಪನ್ಯಸಿಸಿದರು ಅದೇ ವಿಷಯವನ್ನು ಕುರಿತು ರಾಮಸ್ವಾಮಯ್ಯಂಗಾರ್‍ರು ಚೆನ್ನಾಗಿ ವಿವರಿಸಿದರು ಬಳಿಕ ವಿದ್ಯಾರ್ಥಿಗಳಿಗೆ ತಿಂಡಿಯೂ, ಸಭಿಕರಿಗೆ ಅಡಕೆಲೆಯೂ ಹಂಚಲಾಯ್ತು ಅನಂತರ ನಮ್ಮ ಚಕ್ರವರ್ತಿಗಳವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಪ್ರಾರ್ಥನೆ ನಡೆದು ಮಂಗಳವಾದ್ಯಗಳಿಂದ ಸಭೆಯು ಬರಖಾಸ್ತಾಯಿತು ಇಲ್ಲಿ ಪಂಚಮಪ್ರಜಾಸಂಖ್ಯೆಯು ಸುಮಾರು 200 ಇದ್ದರೂ ಹಾಲಿ ವ್ಯಾಸಂಗ ಮಾಡುತ್ತಲಿರುವ ಬಾಲಕರು 25 ಮಂದಿ ಮಾತ್ರ ಒಂದು ವರುಷದಲ್ಲಿ ಪಾರಗಳು ಬಿ ತರಗತಿವರಿಗೆ ತೃಪ್ತಿಕರವಾಗಿ ನಡೆದು ಸ್ಕೂಲು ತುಂಬಾ ಉತ್ತಮಸ್ಥಿತಿಯಲ್ಲಿರುವದು ಸಂತೋಷಕರವಾಗಿದೆ.

ಚಿತ್ರದುರ್ಗ.

ಚಿತ್ರದುರ್ಗದ ಆರಿಯನ್ ಸ್ಟುಡೆಂಟ್ಸ್ ಹೋಮ್ ಕಂಪೌಂಡಿನಲ್ಲಿ ಚಿತ್ರದುರ್ಗದ ಮಹಾಜನರಿಂದ ಡಿಲ್ಲೀ ಕಾರೊನೇಷನ್ ಜ್ಞಾಪಕಾರ್ಥವಾಗಿ ಸ್ಥಾಪಿಸಲ್ಪಟ್ಟಿದ್ದ ಶ್ರೀಮನ್ ಮೇರಿ ಮಹಾರಾಜ್ಞಿ ಪಂಚಮಾ ಸ್ಕೂಲನ್ನು ನಮ್ಮ ದಯಾಳುಗಳಾದ ಸರ್ಕಾರದವರು ಗೌರ್ನಮೆಂಟ್ ತಾಲ್ಲೂಕು ಪಂಚಮಾ ಸ್ಕೂಲಾಗಿ ಮಂಜೂರು ಮಾಡಿದರು ಅದಕ್ಕಾಗಿ ಸರ್ಕಾರದಿಂದ ಕಟ್ಟಲ್ಪಟ್ಟಿರುವ ನೂತನ ಬಿಲ್ಡಿಂಗಿನಲ್ಲಿ ಹಿಂದಿನ ವಾರ ಸಭೆ ಸೇರಿಸಲ್ಪಟ್ಟಿತ್ತು ಡಾಕ್ಟರ್ ಸಿ ಜಿ ಹನುಮಾನ್‌ಸಿಂಗರೇ ಮುಂತಾದ ದೊಡ್ಡ ಮನುಷ್ಯರು ದಯಮಾಡಿಸಿದ್ದರು ಇತರೇ ಸ್ಕೂಲ್ ವಿದ್ಯಾರ್ಥಿಗಳನೇಕರು ಬಂದಿದ್ದರು ಬೇಗಾರ್‍ರ ಗುರುಗಳಾದ ಪಾಲವಮುನಿ, ಬೇಗಾರ್‍ರು ಮತ್ತು ಚಲುವಾದಿ ಜನಗಳು ಹಾಜರಿದ್ದರು 31 ಜನ ಬಡ ವಿದ್ಯಾರ್ಥಿಗಳು ಒಂದೇ ವಿಧವಾದ ಡ್ರೆಸ್ ಹಾಕಿ ಸಾಲಾಗಿ ನಿಲ್ಲಿಸಲ್ಪಟ್ಟಿದ್ದರು ಸ್ಕೂಲ್ ಮಾಸ್ಟರ್ ಹನುಮಂತರಾಜಯ್ಯವರು ಈ ಗ್ರಾಮದಲ್ಲಿ ಮೊದಲೇ ಪ್ರಜೆಗಳಿಂದ ಸ್ಥಾಪಿತವಾಗಿದ್ದ ಮೇಲ್ಕಂಡ ಪಂಚಮಾ ಸ್ಕೂಲಿನ ರಿಪೋರ್ಟನ್ನು ಓದಿ, ಈ ವರಿಗೂ ಸ್ಕೂಲಿನ ಅಭಿಮಾನಶಾಲಿಗಳಾಗಿ ಸಹಾಯ ಮಾಡಿದ ದೊಡ್ಡ ಮನುಷ್ಯರನ್ನೂ, ಕಮಿಟಿಯವರನ್ನೂ ವಂದಿಸಿದ್ದಲ್ಲದೆ ಗೌರ್ನಮೆಂಟ್ ಸ್ಕೂಲ್ ಆದದ್ದಕ್ಕೆ ಸಂತೋಷವನ್ನೂ, ಕೃತಜ್ಞತೆಯನ್ನೂ ಪ್ರದರ್ಶಿಸಿ ಈ ಸ್ಕೂಲಿನ ಪುರೋಭಿವೃದ್ಧಿಗಾಗಿ ಭಗವತ್ಪ್ರಾರ್ಥನೆ ಮಾಡಿದರು ಬಾಲಕರೆಲ್ಲರೂ ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಸ್ಪ್ರಾರ್ಥನಾ ರೂಪವಾದ ಹಾಡನ್ನು ಹೇಳಿದರು ಅನಂತರ ಡಾಕ್ಟರ್ ಹನುಮಾನ್‌ಸಿಂಗ್ ರವರು ಆ ಜನಗಳಿಗೆಲ್ಲಾ ಬುದ್ಧಿವಾದ ಹೇಳಿದರು ಮತ್ತು ಅವರ ಹಸ್ತದಿಂದ ಸ್ಕೂಲ್ ತೆರೆಸಲ್ಪಟ್ಟು ಸ್ಕೂಲ್ ಸ್ಥಾಪನೆ ಮಾಡಲಾಯಿತು ಸಭಿಕರಿಗೆ ಗಂಧ, ಪುಷ್ಪ, ತಾಂಬೂಲವನ್ನೂ, ಬಾಲಕರಿಗೆ ಸಕ್ಕರೆಯನ್ನೂ ಹಂಚಿ ಸಭಾ ಬರಖಾಸ್ತು ಮಾಡಲ್ಪಟ್ಟಿತು

ದಿವಾನರವರ ಸರ್ಕೀಟು

ಫ್ರೆಂಚ್ ರಾಕ್ಸ್

ನಮ್ಮ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರು ಕಳೆದ 1 ನೇ ತಾ ಬೆಳಗಿನ ರೈಲಿನಲ್ಲಿ ಫ್ರೆಂಚ್ ರಾಕ್ಸಿಗೆ ದಯಮಾಡಿಸಿ ಕೊಪ್ಪೆ ತೋಟದಲ್ಲಿ ಶ್ರೀರಂಗಪಟ್ಟಣಕ್ಕೆ ತೆರಳಿದರು ಅಲ್ಲಿ ಎಲ್ಲವನ್ನೂ ಇನ್ಸ್‌ಪೆಕ್ಷನ್ ಮಾಡಿಕೊಂಡು ಜನಗಳ ಅಹವಾಲುಗಳನ್ನೆಲ್ಲಾ ವಿಚಾರಿಸಿಕೊಂಡು ಮಧ್ಯಾಹ್ನ ಸುಮಾರು 11 ಗಂಟೆಗೆ ಫ್ರೆಂಚ್ ರಾಕ್ಸಿಗೆ ದಯಮಾಡಿದರು ದಿವಾನ್ ಸಾಹೇಬರವರು ವಿಷಯಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳುವದಕ್ಕೋಸ್ಕರ ಎಲ್ಲಾ ಇಲಾಖೆಯ ಅಧಿಕಾರಿಗಳನ್ನೂ ತಮ್ಮ ಜೊತೆಯಲ್ಲಿ ಕರೆದುಕೊಂಡು ಬಂದಿದ್ದರು ಟೋಲ್ ಗೇಟಿನ ಬಳಿ ಮ್ಯುನಿಸಿಪಾಲಿಟಿಯವರು ಹಾಕಿಸಿದ್ದ ಚಪ್ಪರದಲ್ಲಿ ಮುನಿಸಿಪಲ್ ಮೆಂಬರುಗಳು ಹಾರಾ ತುರಾಯಿಗಳನ್ನು ಒಪ್ಪಿಸಿದರು ಅನೇಕ ಜನ ಊರಿನ ಪ್ರಮುಖರು ಅಲ್ಲಿ ಹಾಜರಾಗಿದ್ದರು 2 ನೇ ತಾ ಗುರುವಾರ ಮಧ್ಯಾಹ್ನದ ಮೇಲೆ ದಿವಾನ್ ಸಾಹೇಬರವರು ಡೆಪ್ಯುಟಿ ಕಮಿಷನರ ಕೋರ್ಟ ಕಚೇರಿಗಳನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಜನಗಳ ಅಹವಾಲುಗಳನ್ನೆಲ್ಲಾ ವಿಚಾರಿಸಿ, ಸಾಯಂಕಾಲ ಸುಮಾರು 6 ಗಂಟೆಗೆ ಇಲ್ಲಿಗೆ ನಾಲ್ಕು ಮೈಲು ದೂರದಲ್ಲಿರುವ ಪದವು ಎಂಬ ಗ್ರಾಮಕ್ಕೆ ದಯಮಾಡಿಸಿ, ಅಲ್ಲಿರತಕ್ಕ ಕಪಿನ ಡಿಪಾರ್ಟ್‌ಮೆಂಟ್ ಊರಿನ ಸ್ಥಿತಿಯನ್ನೂ ಪರಾಂಬರಿಸಿ ವಿಚಾರಿಸಿಕೊಂಡು ರಾತ್ರಿ ಸುಮಾರು 8 ಗಂಟೆಗೆ ಫ್ರೆಂಚ್ ರಾಕ್ಸಿಗೆ ದಯಮಾಡಿಸಿದರು 3 ನೇ ತಾ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಅವರು ಕೃಷ್ಣರಾಜಪೇಟೆಗೆ ದಯಮಾಡಿಸಿ ಅಲ್ಲಿ ಎಲ್ಲವನ್ನೂ ಪರಾಂಬರಿಸಿಕೊಂಡು ಸಾಯಂಕಾಲ 7½ ಗಂಟೆಗೆ ಫ್ರೆಂಚರಾಕ್ಸಿಗೆ ದಯಮಾಡಿಸಿದರು 4 ನೇ ತಾ ಶನಿವಾರ ಮಧ್ಯಾಹ್ನದ ತನಕ ಆಫೀಸ್ ನಡಿಸಿ ಮಂಡ್ಯಕ್ಕೆ ದಯಮಾಡಿ, ಅಲ್ಲಿನ ವಿಚಾರಗಳನ್ನೆಲ್ಲಾ ತಿಳಿದುಕೊಂಡು ಸಾಯಂಕಾಲ ಹಾಗೆಯೇ ಬೆಂಗಳೂರಿಗೆ ದಯಮಾಡಿ, 5 ನೇ ತಾ ಭಾನುವಾರ ರಾತ್ರಿ ಸುಮಾರು 9 ಗಂಟೆಗೆ ಫ್ರೆಂಚ್ ರಾಕ್ಸಿಗೆ ದಯಮಾಡಿಸಿದರು 6 ನೇ ತಾ ಸೋಮವಾರ ಬೆಳಗ್ಗೆ ದಿವಾನರವರು ಫ್ರೆಂಚ್ ರಾಕ್ಸ್ ಟವನ್ ಇನ್ಸ್‌ಪೆಕ್ಷನಿಗಾಗಿ ಎಲ್ಲಾ ಅಧಿಕಾರಿಗಳೊಡನೆ ಹೊರಟರು ಸ್ಕೂಲುಗಳನ್ನು ಬಹಳ ಚೆನ್ನಾಗಿ ಶೃಂಗರಿಸಿದ್ದರು ಅಲ್ಲದೆ ಊರಿನಲ್ಲಿ ಒಂದೆರಡು ಚಪ್ಪರಗಳನ್ನು ಹಾಕಿ ತೋರಣಾದಿಗಳಿಂದ ಅಲ್ಲಲ್ಲೇ ಅಲಂಕಾರಮಾಡಿದ್ದರು ಅವರು ಮೊದಲು ಇಲ್ಲಿನ ಕ ಟ್ರೋನ್‌ಮೆಂಟ್ ರಸ್ತೆಯಲ್ಲಿ ಹೋಟಲು ಬಜಾರದವರು ಹಾಕಿದ್ದ ಚಪ್ಪರಕ್ಕೆ ದಯಮಾಡಿದರು ಅಲ್ಲಿನ ಜನಗಳು ಒಪ್ಪಿಸಿದ ಹಾರಾ ತುರಾಯಿಗಳನ್ನು ಸ್ವೀಕರಿಸಿ ನೀರಿನ ವಿಷಯವೂ ರೈಲ್ವೆ ವಿಷಯವೂ ಮತ್ತು ಕೆಲವು ಸರ್ಕಾರಿ ಇಲಾಖೆಗಳನ್ನು ಇಲ್ಲಿಗೆ ವರ್ಗಮಾಡಿಕೊಡಬೇಕೆಂಬ ವಿಷಯವೂ ಓದಿದ ವಿಜ್ಞಾಪನಾ ಪತ್ರಿಕೆಯನ್ನು ಸಾವಧಾನವಾಗಿ ಕೇಳಿ ಕಾಲೋಚಿತವಾದ ಸದುತ್ತರವನ್ನು ದಯಪಾಲಿಸಿ, ನೆಟ್ಟಗೆ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿಗೆ ದಯಮಾಡಿಸಿ ಇನ್ಸ್‌ಪೆಕ್ಷನ್ ಮಾಡಿದ್ದಲ್ಲದೆ ಸ್ಕೂಲಿನ ಏರ್ಪಾಡುಗಳ ವಿಷಯದಲ್ಲಿ ತುಂಬಾ ಸಂತೋಷಪಟ್ಟರು ಬಾಲಕಿಯರು ಕನ್ನಡ ಇಂಗ್ಲಿಷಿನಲ್ಲಿ ಹಾಡಿದ ಪದ್ಯಗಳನ್ನು ಕೇಳಿ ಬಹಳ ಸಂತೋಷಪಟ್ಟು ಮಕ್ಕಳಿಗೆ ಮಿಠಾಯಿ ಕೊಡಿಸುವಂತೆ ಸ್ವಲ್ಪ ಹಣವನ್ನು ಕೊಟ್ಟು ಅಲ್ಲಿಂದ ಹಿಂದುಸ್ಥಾನಿ ಸ್ಕೂಲಿಗೆ ದಯಮಾಡಿಸಿ ಅಲ್ಲಿಯೂ ಇನ್ಸ್‌ಪೆಕ್ಷನ್ ಮಾಡಿಕೊಂಡು, ವಾಪಸು ಸಾಹುಕಾರ್ ಮತ್ತು ಮ್ಯುನಿಸಿಪಲ್ ಮೆಂಬರು ಮ ಅನಂತಸಿಂಗ್‌ರವರು ಸ್ವಂತವಾಗಿ ಕಟ್ಟಿಸಿದ ಅಲಂಕಾರವಾದ ಚಪ್ಪರಕ್ಕೆ ದಯಮಾಡಿಸಿ, ಅವರು ಒಪ್ಪಿಸಿದ ಹಾರಾ ತುರಾಯಿ ಫಲ ಮುಂತಾದ್ದನ್ನು ಸ್ವೀಕರಿಸಿ, ಊರಿನ ಸ್ಥಿತಿಯ ವಿಷಯವಾಗಿ ಅವರ ಕೂಡ ಸ್ವಲ್ಪ ಹೊತ್ತು ಮಾತನಾಡಿ ಅಲ್ಲಿಂದ ಗೌರ್ನಮೆಂಟ್ ಬಾಯ್ಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ಏರ್ಪಾಡುಗಳನ್ನೆಲ್ಲಾ ನೋಡಿ ತುಂಬಾ ಸಂತೋಷಪಟ್ಟುಕೊಂಡು ಅಲ್ಲಿಂದ ನೆಟ್ಟಗೆ ಮೊಹಲ್ಲಾ ನಾಗಸಾಗರಕ್ಕೂ ದಯಮಾಡಿಸಿ ಅಲ್ಲಿನ ವಿಷಯಗಳನ್ನೆಲ್ಲಾ ತನಿಖೆಮಾಡಿಕೊಂಡು ಸಾಯಂಕಾಲ ಸುಮಾರು 9 ಗಂಟೆಗೆ ಫ್ರೆಂಚರಾಕ್ಸಿಗೆ ದಯಮಾಡಿಸಿ, ಭೋಜನ ಮಾಡಿಕೊಂಡು ಅದೇ ರಾತ್ರಿ 10½ ಗಂಟೆ ರೈಲಿನಲ್ಲಿ ಮದ್ದೂರಿಗೆ ಪ್ರಯಾಣ ಬೆಳೆಸಿದರು ಸಬ್ ಡಿವಿಜನ್ ಸಾಹೇಬರೂ, ನಮ್ಮ ಅಮಲ್ದಾರರೂ, ಶೇಕ್‌ದಾರರೂ, ಪಟೇಲರೂ ದಿವಾನ್ ಸಾಹೇಬರವರಿಗೂ ಅವರ ಜೊತೆಯಲ್ಲಿ ಬಂದಿದ್ದ ಅಧಿಕಾರಿಗಳಿಗೂ ಯಾವ ಬಾಗದಲ್ಲಿಯೂ ಕೊರತೆಯಿಲ್ಲದಂತೆ ಎಲ್ಲಾ ಏರ್ಪಾಡುಗಳನ್ನೂ ಬಹು ತೃಪ್ತಿಕರವಾಗಿ ಮಾಡಿದ್ದರು ಮೋಟರುಗಳು ಓಡಾಡುವದಕ್ಕಾಗಿಯೂ ಗಾಡಿಗಳು ತಿರುಗುವದಕ್ಕಾಗಿಯೂ ಇಂಜನಿಯರ್ ಇಲಾಖೆಯವರು ಫ್ರೆಂಚ್‌ರಾಕ್ಸ್ ಮತ್ತು ನೆಲ್ಲಿಗೆರೆ ರಸ್ತೆಗಳನ್ನು ಬಹಳ ಚೆನ್ನಾಗಿ ಮಾಡಿದ್ದಾರೆ ಮುಖ್ಯವಾಗಿ ನಮ್ಮ ದಿವಾನ್‌ರವರು ಇಲ್ಲಿ 6 ದಿವಸ ಮೊಕ್ಕಾಂ ಮಾಡಿ 1 5 ತಾಲ್ಲೂಕುಗಳಲ್ಲೂ ಸುತ್ತು ಮುತ್ತಲಿನ ಗ್ರಾಮಾಂತರಗಳಲ್ಲೂ ಸಂಚರಿಸಿ ಪ್ರಜೆಗಳ ಕುಂದು ಕೊರತೆಗಳನ್ನು ಸ್ವತಹ ಅವಗಾಹಿಸಿದ್ದಾರೆ ಈ ವಿಷಯಗಳಲ್ಲಿ ಯಾವ್ಯಾವ ಏರ್ಪಾಡುಗಳನ್ನು ಮಾಡಬೇಕಾಗಿದೆಯೋ ಅವೆಲ್ಲವನ್ನೂ ಮಾಡದಿರಲಾರರೆಂದು ನಿರೀಕ್ಷಿಸುತ್ತೇವೆ ಫ್ರೆಂಚ್‌ರಾಕ್ಸಿನ ನೀರಿನ ಕಷ್ಟವನ್ನು ಎಷ್ಟು ಹೇಳಿದರೂ ತೀರದು ಇಲ್ಲಿನ ಸಂತೆ ಮೈದಾನದಲ್ಲಿ ವೈರಮುಡಿ ಮಂಟಪದ ಪಕ್ಕದಲ್ಲೂ ಒಂದೊಂದು ಬಾವಿಯನ್ನು ತೆಗೆಸಿಕೊಟ್ಟರೆ ಎಷ್ಟೋ ಉಪಕಾರವಾಗುತ್ತೆ ಅಧಿಕಾರಿಗಳು ಇದನ್ನು ಮನಸ್ಸಿಗೆ ತಂದುಕೊಂಡು ಏರ್ಪಾಡು ಮಾಡಿಸುವರೆಂದು ನಂಬಿದ್ದೇವೆ

ಕೃಷ್ಣರಾಜಪೇಟೆ

ಈ ಸಂಸ್ಥಾನದ ದಿವಾನ್ ಸಾಹೇಬರವರಾದ ಶ್ರೀಮನ್ ವಿಶ್ವೇಶ್ವರಯ್ಯನವರು ಕಳೆದ 3 ನೇ ತಾ ಕೃಷ್ಣರಾಜಪೇಟೆಗೆ ದಯಮಾಡಿಸಿದರು ಅವರ ಸತ್ಕಾರಕ್ಕಾಗಿ ಒಂದು ಕಮಿಟಿ ಏರ್ಪಾಡಾಗಿತ್ತು ಊರು ಬಾಗಿಲಲ್ಲಿ ಒಂದು ದೊಡ್ಡದಾದ ಚಪ್ಪರವನ್ನು ಹಾಕಿ, ಈ ತಾಲ್ಲೂಕಿನ ಪರವಾಗಿ ಒಂದು ಅಡ್ರೆಸ್ಸನ್ನು ಒಪ್ಪಿಸಲು ದಿವಾನ್ ಸಾಹೇಬರವರಿಂದ ಅಪ್ಪಣೆ ಪಡೆದರು. ಅಮಲ್ದಾರ್ ಮ॥ ವೆಂಕಟರಾಮಯ್ಯನವರು ಈ ಕಾಲದಲ್ಲಿ ಮ॥ ಶ್ಯಾನು ತಿರುನಾರಣಯ್ಯಂಗಾರ್‍ರ ಮುಖಾಂತರ ಒಂದು ಲೋಕಲ್ ಎಗ್ಜಿಭಿಷನ್ ಮತ್ತು ದನಗಳ ಪ್ರದರ್ಶನಕ್ಕೆ ಏರ್ಪಾಟು ಮಾಡಿದ್ದರು ದಿವಾನ್ ಸಾಹೇಬರವರು ಇಲಾಖಾ ಅಧಿಕಾರಿಗಳೊಡನೆ ಬರುತ್ತಿರುವಾಗ್ಗೆ ಅಮಲ್ದಾರ್ ಮ॥ ವೆಂಕಟರಾಮಯ್ಯನವರು ಚಿನಕುರಳಿ ಬಳಿ ಅವರನ್ನು ಅವರ ಪರಿವಾರದೊಡನೆ ಎದುರುಗೊಂಡು ಅಲ್ಲಿಂದ ಬಿಜಯಮಾಡಿಸಿಕೊಂಡು 10 ಘಂಟೆಗೆ ಕೃಷ್ಣರಾಜಪೇಟೆಗೆ ದಯಮಾಡಿದರು ಚಪ್ಪರದಲ್ಲಿ ಪುರಜನರೂ, ತಾಲ್ಲೂಕು ಪ್ರಜೆಗಳೂ, ಬಾಲಕಬಾಲಕಿಯರುಗಳೂ, ಎಲ್ಲಾ ಇಲಾಖೆಯ ಉದ್ಯೋಗಸ್ಥರೂ ದಿವಾನರವರನ್ನು ಎದುರುಗೊಂಡರು. ಮ॥ ಕೃಷ್ಣಶಾಸ್ತ್ರಿಗಳವರು ದಿವಾನ್ ಸಾಹೇಬರಿಗೆ ಹಾರಾ ತುರಾಯನ್ನು ಒಪ್ಪಿಸಿ, ಇಲ್ಲಿನ ಮುಖಂಡರನ್ನೆಲ್ಲಾ ಅವರಲ್ಲಿ ಭೇಟಿ ಮಾಡಿಸಿದರು ವೈದಿಕ ವಿದ್ವಾಂಸರುಗಳಿಂದ ಆಶೀರ್ವಾದಗಳು ನಡೆದ ಮೇಲೆ ದಿವಾನ್‌ರವರು ಎಗ್ಜಿಬಿಷನ್ ಮಂದಿರಕ್ಕೆ ದಯಮಾಡಿ ಅಲ್ಲಿನ ಏರ್ಪಾಟುಗಳನ್ನು ನೋಡಿ ಬಹಳ ಸಂತೋಷಪಟ್ಟರು ಎಗ್ಜಿಭಿಷನ್ ವಿಚಾರದಲ್ಲಿ ಅದು ಬೆಳೆದ ಅಥವ ತಯಾರಾದ ವಿಚಾರವನ್ನೆಲ್ಲಾ ಮ॥ ಕೃಷ್ಣಶಾಸ್ತ್ರಿಗಳವರು ದಿವಾನ್‌ರಿಗೆ ಅರಿಕೆ ಮಾಡಿದರು ದಿವಾನ್‌ರವರು ಎಲ್ಲವನ್ನೂ ನೋಡಿ ಸಂತೋಷಪಟ್ಟು ನಂತರ ಅದೇ ಸ್ಥಳದಲ್ಲಿದ್ದ ಕೋಆಪರೆಟಿವ್ ಸೊಸೈಟಿ ಮತ್ತು ರೀಡಿಂಗ್ ರೂಮುಗಳನ್ನು ಪರಾಂಬರಿಸಿ, ಗೌ॥ ಎ ವಿ ಸ್ಕೂಲಿಗೆ ದಯಮಾಡಿಸಿದರು ಅಲ್ಲಿ ಸ್ಕೂಲನ್ನು ಪರಾಂಬರಿಸಿಕೊಂಡು ಪೂರ್ವದ ದೊಡ್ಡ ಬೀದಿಯ ಮಾರ್ಗವಾಗಿ ಗರಲ್ಸ್ ಸ್ಕೂಲಿಗೆ ದಯಮಾಡಿಸಿದರು ಅಲ್ಲಿನ ಬಾಲಕಿಯರ ವಿದ್ಯಾಭ್ಯಾಸಕ್ರಮಗಳನ್ನೂ ಸಾವಧಾನವಾಗಿ ಪರಿಶೀಲಿಸಿ ಬಹಳ ತೃಪ್ತಿಪಟ್ಟು ಅಲ್ಲಿಂದ ಆಸ್ಪತ್ರೆಯನ್ನು ಪರಾಂಬರಿಸಿಕೊಂಡು ತಾಲ್ಲೂಕು ಕಚೇರಿಯ ಮೈದಾನಕ್ಕೆ ದಯಮಾಡಿ ಮೊದಲು ಸಬ್ ರಿಜಿಸ್ಟ್ರಾರ್ ಆಫೀಸಿಗೆ ಚಿತ್ತೈಸಿದರು ಅಲ್ಲಿ ಸಬ್ ರಿಜಿಸ್ಟ್ರಾರ್ ಮ॥ ಕೃಷ್ಣಸ್ವಾಮಿರಾಯರು ದಿವಾನ್ ಸಾಹೇಬರ ಪ್ರಶ್ನೆಗಳಿಗೆಲ್ಲಾ ಸಮಂಜಸವಾಗಿ ಉತ್ತರಗಳನ್ನು ಕೊಟ್ಟಮೇಲೆ ದಿವಾನ್‌ರವರು ಕೆಲಸಗಳನ್ನು ಪರಾಂಬರಿಸಿ ಬಹಳ ಸಂತೋಷಪಟ್ಟರು

ನಂತರ ತಾಲ್ಲೂಕು ಕಚೇರಿಯ ಮುಂದೆ ನಮ್ಮ ಅಮಲ್ದಾರರವರು ಮಾಡಿಸಿರುವ ಉದ್ಯಾನವನವನ್ನು ನೋಡಿ ಸಂತೋಷಪಟ್ಟು ತಾಲ್ಲೂಕು ಕಚೇರಿಗೆ ದಯಮಾಡಿ ಎಲ್ಲಾ ಇಲಾಖೆಗಳನ್ನೂ ತನಿಖೆಮಾಡುತ್ತ ಡೆಪ್ಯುಟಿ ಕಮಿಷನರೊಡನೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದರು ನಂತರ ಕೋರ್ಟ ಹಾಲಿನಲ್ಲಿ ದರ್ಬಾರು ನಡಿಸಿದರು ಈ ದರ್ಬಾರಿನಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕಿನ ಎಲ್ಲಾ ಹುದ್ದೇದಾರರೂ, ಟೌನ್ ಮತ್ತು ತಾಲ್ಲೂಕಿನ ಅನೇಕ ಖಾಸಗಿ ದೊಡ್ಡ ಮನುಷ್ಯರೂ ಸೇರಿದ್ದರು ಸುಮಾರು 2 ಗಂಟೆ ಹೊತ್ತು ಇಲ್ಲಿಗೆ ಉಪಯೋಗವಾದ ಅನೇಕ ವಿದ್ಯಮಾನಗಳನ್ನು ಕುರಿತು ಮ॥ ಕೃಷ್ಣಶಾಸ್ತ್ರಿಗಳೇ ಮುಂತಾದವರು ಚರ್ಚಿಸಿದರು ದಿವಾನ್ ಸಾಹೇಬರವರು ಅನೇಕ ವಿಷಯಗಳಿಗೆ ಸಂತೋಷಪಟ್ಟು, ಸಾಧ್ಯಾಸಾಧ್ಯಗಳನ್ನು ಕುರಿತು ಒಡನೆಯೇ ಸದುತ್ತರವನ್ನು ದಯಪಾಲಿಸಿದರು ಇದಕ್ಕಾಗಿ ಪ್ರಜೆಗಳಿಗೆ ಬಹಳ ಸಂತೋಷ ಉಂಟಾಯಿತು ಇದೆಲ್ಲಾ ಆದ ಮೇಲೆ ಮ॥ ಕೃಷ್ಣಶಾಸ್ತ್ರಿಗಳು ಪ್ರಜೆಗಳ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ್ದನ್ನು ದಿವಾನ್ ಸಾಹೇಬರವರು ಸಂತೋಷದಿಂದ ಸ್ವೀಕರಿಸಿ ಅದರ ಮುಖ್ಯವಾದ ಅಂಶಗಳಿಗೆಲ್ಲಾ ಸದುತ್ತರವನ್ನು ದಯಪಾಲಿಸಿದರು ನಂತರ ಶ್ರೀಮನ್ ಮಹಾರಾಜರವರಿಗೂ, ಶ್ರೀ ಯುವರಾಜರವರಿಗೂ ಮತ್ತು ದಿವಾನ್ ಸಾಹೇಬರವರಿಗೂ ಶ್ರೇಯಃಪ್ರಾರ್ಥನೆ ನಡೆದು ಸಭೆಯು ಬರಖಾಸ್ತು ಆಯಿತು

ದಿವಾನ್‌ರವರು ಎಲ್ಲರೊಡನೆ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸುವಾಗ್ಗೆ ಗ್ರಾಮದ ಎಲ್ಲಾ ಬಾಗಗಳನ್ನೂ ಪರಾಂಬರಿಸಿ ಗ್ರಾಮ ನೈರ್ಮಲ್ಯದ ವಿಚಾರದಲ್ಲಿ ತೃಪ್ತಿಪಟ್ಟು ಹಿಂದುಸ್ಥಾನಿ ಸ್ಕೂಲ್, ಪಂಚಮರ ಸ್ಕೂಲ್ ಮತ್ತು ಎಸ್ಟೇಟಿನ ದೇವಸ್ಥಾನ ಕಟ್ಟಡಗಳನ್ನು ಪರಾಂಬರಿಸಿದರು ಬಂಗಲೆಯಲ್ಲಿ ಸರ್ವರೂ ಊಟ ಉಪಚಾರಗಳಿಂದ ಸತ್ಕರಿಸಲ್ಪಟ್ಟರು ಕೆಲವು ಹೊತ್ತು ವಿಶ್ರಮಿಸಿಕೊಂಡ ನಂತರ ದಿವಾನ್ ಸಾಹೇಬರು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಹುದ್ದೇದಾರರುಗಳನ್ನೆಲ್ಲಾ ಸೇರಿಸಿ ಗ್ರಾಮಾಭಿವೃದ್ಧಿ ವಿಚಾರಕ್ಕಾಗಿ ಒಂದು ಮೀಟಿಂಗ್ ನಡಿಸಿದರು ಆ ಮೀಟಿಂಗಿಗೆ ಮ॥ ಕೃಷ್ಣಶಾಸ್ತ್ರಿಗಳವರನ್ನು ಬರಮಾಡಿಕೊಂಡು ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಅವರಿಗೆ ತಿಳಿಸಿದ್ದಲ್ಲದೆ ಸಂಸ್ಥಾನದ ಇತರ ಕಡೆಗಳಲ್ಲೂ ಇದೇ ಕೆಲಸವನ್ನು ನೆರವೇರಿಸಬೇಕೆಂದು ಅಪ್ಪಣೆ ಮಾಡಿದ್ದನ್ನು ಮ॥ ಕೃಷ್ಣಶಾಸ್ತ್ರಿಗಳು ಅನುಮೋದಿಸಿದರು ನಂತರ ಅಲ್ಲಿಂದ ಎಲ್ಲರೂ ಛತ್ರಕ್ಕೆ ದಯಮಾಡಿ ಅಲ್ಲಿ ಎಲ್ಲಾ ಕಟ್ಟಡವನ್ನೂ ಪರಾಂಬರಿಸಿಕೊಂಡು ವಾಪಸು ದಯಮಾಡಿದಾಗ ಟ್ರಾವಲರ್ಸ್ ಬಂಗಲೆಯಲ್ಲಿ ಟೀ ಪಾರ್ಟಿ ನೆರವೇರಿತು ದಿವಾನ್ ಸಾಹೇಬರವರು ತಮ್ಮ ಆಗಮನ ಸಂದರ್ಭದಲ್ಲಿ ನಡೆದ ಎಲ್ಲಾ ವಿಚಾರಕ್ಕೂ ಸಂತೋಷಪಟ್ಟು ಈ ತಾಲ್ಲೂಕಿನ ಪ್ರಜೆಗಳಲ್ಲಿರುವ ಅನ್ಯೋನ್ಯ ಭಾವಕ್ಕೂ, ರಾಜಭಕ್ತಿಗೂ ಮತ್ತು ಚಟುವಟಿಕೆಗೂ ಸಂತೋಷಪಟ್ಟು ಎಲ್ಲರಿಂದಲೂ ಮುದಿತರಾಗಿ ಈ ತಾಲ್ಲೂಕಿನ ಪ್ರಜೆಗಳ ವಿಚಾರದಲ್ಲಿ ತಮಗುಂಟಾಗಿರುವ ಸಂತೋಷವನ್ನು ಸರ್ವರಿಗೂ ತಿಳಿಸಬೇಕೆಂತ ಮ॥ ಕೃಷ್ಣಶಾಸ್ತ್ರಿಗಳವರಿಗೆ ತಿಳಿಸಿ ಸರ್ವರೊಡನೆ ಫ್ರೆಂಚ್ ರಾಕಿಗೆ ವಾಪಸು ಚಿತ್ತೈಸಿದರು

ಮಳವಳ್ಳಿ

ಇಲ್ಲಿಗೆ ದಿವಾನ್ ಸವಾರಿಯು 7 ನೇ ತಾ ಬೆಳಗ್ಗೆ ದಯಮಾಡಿಸಿತು ಟೌನ್ ಹಾಲ್ ಬಳಿ ಚಪ್ಪರದಲ್ಲಿ ಸರ್ಕಾರಿ ನೌಕರರು, ವರ್ತಕರು, ವೈದಿಕರು ಮುಂತಾದವರು ಕೂಡಿದ್ದು ಸವಾರಿ ದಯಮಾಡಿ ದಕೂಡಲೆ ವೈದಿಕರು ಫಲ ಮಂತ್ರಾಕ್ಷತೆಗಳನ್ನೂ ಇತರರು ಹಾರಾ ತುರಾಯಿ ಫಲ ಮುಂತಾದವುಗಳನ್ನೂ ಅರ್ಪಿಸಿದರು ದಿವಾನಸಾಹೇಬರವರು ಗ್ರಾಮದ ಯೋಗಕ್ಷೇಮವನ್ನು ವಿಚಾರಿಸಿ, ಬ್ಯಾಂಕಿಗೆ ದಯಮಾಡಿ ವಾಪಸು 11 ಗಂಟೆಗೆ ಬಂದು ಪಂಚಮಾ ಸ್ಕೂಲು, ಎ ವಿ ಸ್ಕೂಲು, ಗರಲ್ಸ್ ಸ್ಕೂಲು, ಹಿಂದುಸ್ಥಾನಿ ಬಾಯ್ಸ್ ಸ್ಕೂಲು, ಆಸ್ಪತ್ರೆ ಇವುಗಳನ್ನು ಪರಾಂಬರಿಸಿ ಪಂಚಮಾ ಸ್ಕೂಲಿಗೂ ಕನ್ನಡ ಗರಲ್ಸ್ ಸ್ಕೂಲಿಗೂ ತಿಂಡಿಗಾಗಿ ರೂಪಾಯಿಗಳನ್ನು ಬಹುಮಾನಮಾಡಿ, ತಾಲ್ಲೂಕು ಕಚೇರಿಗೆ ದಯಮಾಡಿಸಿ ಪ್ರಜೆಗಳ ಅಹವಾಲುಗಳನ್ನೂ ತೊಂದರೆಗಳನ್ನೂ ವಿಚಾರಿಸಿಕೊಂಡು, ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿ ಊಟಮಾಡಿಕೊಂಡು, 2½ ಗಂಟೆಗೆ ಬೆಂಗಳೂರಿಗೆ ಪ್ರಯಾಣಬೆಳಸಿದರು ಬರುವ ಮಾರ್ಗದಲ್ಲಿ ಹಿಂದುಸ್ಥಾನಿ ಗರಲ್ಸ್ ಸ್ಕೂಲಿಗೆ ಭೇಟಿಕೊಟ್ಟು ಬಾಲಕಿಯರಿಗೆ ತಿಂಡಿಗಾಗಿ ಬಹುಮಾನಕೊಟ್ಟು ಕೋಆಪರೆಟಿವ್ ಸೊಸೈಟಿ ಬಳಿ ನೇಕಾರ ವರ್ತಕರೂ, ಟಾಡಿ ಕಂಟ್ರಾಕ್ಟರ್ ನರಸೇಗೌಡರೂ ಹಾಕಿಸಿದ್ದ ಚಪ್ಪರದಲ್ಲಿ ಪೇಟೆ ಕನ್ನಡ ಸ್ಕೂಲಿನ ಬಳಿಯೂ ಮರ್ಯಾದೆಯನ್ನು ಸ್ವೀಕರಿಸಿ ಪ್ರಯಾಣಬೆಳಸಿದರು ಇವರ ಆಗಮನಕ್ಕಾಗಿ ಇಲ್ಲಿನ ಅಮಲ್ದಾರರವರು ಅನುಕೂಲವಾದ ಏರ್ಪಾಡನ್ನು ಮಾಡಿದರು ಆಕಸ್ಮಾತ್ತಾಗಿ ಈ ಊರಿನ ಪೇಟೆ ಬೆಸ್ತಗೇರಿಯವನೊಬ್ಬನು ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ ಮೇಲೂ ಸ್ಯಾನಿಟರಿ ಇನ್ಸ್‌ಪೆಕ್ಟರ ಮೇಲೂ ಹೊಡೆದರೆಂದು ಅರ್ಜಿಯನ್ನು ದಿವಾನ್ ಸಾಹೇಬರವರಲ್ಲಿ ಜಾಹಿರ್‌ಮಾಡಿಕೊಂಡನು ಅದನ್ನು ಅವರು ಡೆಪ್ಯುಟಿ ಕಮಿಷನರಿಗೆ ತೀರ್ಮಾನಮಾಡುವಂತೆ ಅಪ್ಪಣೆಮಾಡಿದರು ಇವರು ಆ ದಿನ ವಿಚಾರಣೆಮಾಡಿಕೊಂಡು ಮೈಸೂರಿಗೆ ಹೋದರು ಪೇಟೆ ಕನ್ನಡ ಸ್ಕೂಲಿನಲ್ಲಿ ಮಂದಲಿಗೆ, ನಡುಕಟ್ಟು, ಲಾಡಿ ಮೊದಲಾದ ಕೈಗಾರಿಕೆ ಕೆಲಸಗಳನ್ನು ಹಾತ್‌ಲಾಗೋಡಿನಿಂದ ನಡಿಸುತ್ತಾ ಅಭಿವೃದ್ಧಿಗೆ ಸ್ಕೂಲನ್ನು ತರುತ್ತಿರುವ ಹೆಡ್ ಮಾಸ್ಟರವರು ದಿವಾನಸಾಹೇಬರ ಆಗಮನದ ಮೂಲಕವಾದರೂ ತೃಪ್ತಿಹೊಂದೋಣವೆಂದು ನಿರೀಕ್ಷಿಸಿಕೊಂಡಿದ್ದರು ಈ ಊರಿನ ಇತರ ಸ್ಕೂಲಿನಲ್ಲಿ ಕೈಗಾರಿಕೆ ಕೆಲಸ ನಡೆಯುವದಕ್ಕೆ ಮೊದಲಾಗಲು ಪೇಟೆ ಕನ್ನಡಸ್ಕೂಲೇ ಮೇಲ್ಪಂಕ್ತಿಯಾಗಿದೆ ದಿವಾನಸಾಹೇಬ

ಜೊತೆಯಲ್ಲಿ ವಿದ್ಯಾಭ್ಯಾಸದ ಇಲಾಖಾ ಸರ್ಕಲ್ ಇನ್‌ಸ್ಪೆಕ್ಟರವರೂ, ...ಸ್ ಅ|| ಕಮಿಷನರೂ ವಿನಾ ಬಾಕಿಯವರೆಲ್ಲಾ ಆ ದಿನವೇ ಪ್ರಯಾಣ ...ದರು ಮಾರನೇ ದಿನ ಸರ್ಕಲ್ ಇನ್‌ಸ್ಪೆಕ್ಟರು ಬೆಳಗ್ಗೆ ಎ ವಿ ಸ್ಕೂಲನ್ನೂ, ...ಸ್ಕೂಲನ್ನೂ ಪರೀಕ್ಷೆಮಾಡಿ ಮಧ್ಯಾಹ್ನ ಎಕ್ಸ್‌ಟ್ರಾ ಅ|| ಕಮಿಷನರೊ ...ಪೇಟೆ ಕನ್ನಡ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ಕೈಗಾರಿಕೆ ಕೆಲಸವನ್ನೂ ...ರ್ಗಾರ್ಟನ ಕೆಲಸವನ್ನೂ ನೋಡಿ ಸಂತೋಷಪಟ್ಟರು ಅಲ್ಲದೆ ಸ್ಕೂಲನ್ನು ...ಅಭಿವೃದ್ಧಿಪಡಿಸಬೇಕೆಂದೂ, ಕೈಗಾರಿಕೆಗೆ ಸರ್ಕಾರದಿಂದ ಸಹಾಯವೂ ...ತಮೂ ಬೇಕೆಂದು ಕೇಳುತ್ತೇನೆ ಮತ್ತು ಪೇಟೆಯಲ್ಲಿ ಗರಲ್ಸ್ ...ಲ್ ಸ್ಥಾಪಿಸುತ್ತಾರೆಂದು ಕೇಳಿ ಸಂತೋಷಿಸುತ್ತೇನೆ

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವದಿಲ್ಲ ...ವು ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ...ಲಾದ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ...ವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ...ಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ...ಳೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧ ...ಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ...ವಿಲ್ಲ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಿನ್ನೈಸುತ್ತೇವೆ

ಬಾತ್ಮಿದಾರರು ನಮಗೆ ಬರೆಯುವ ವರ್ತಮಾನಗಳ ಕೆಳಗೆ ತಮ್ಮ ಹೆಸ ...ವ್ಯಕ್ಷರವನ್ನು ಮಾತ್ರ ಕಾಣಿಸುತ್ತಾರೆ ಇಂಥವುಗಳಿಗೆ ನಾವು ಗಮನಕೊಡ ...ರವು ಅವರ ಹೆಸರು, ಉದ್ಯೋಗ, ಸಂಪೂರ್ಣವಾದ ವಿಳಾಸಗಳನ್ನು ನಮಗೆ ...ಸಬೇಕಾದದ್ದು ಅವಶ್ಯ

ಕೆಲವು ಬಾತ್ಮಿದಾರರು ವಿಷಯಗಳನ್ನು ಬಹಳ ಉದ್ದ ಬರೆಯುತ್ತಾರೆ ...ಧಿಕಾರಿಗಳನ್ನು ಕುರಿತು ಬಹಳವಾಗಿ ಪ್ರಸ್ತಾಪಿಸುತ್ತಾರೆ ಅಂಥಾ ವಿಷಯ ...ವನ್ನು ಸ್ಥಳಾಧಿಕಾರಿಗಳಿಗೂ ಇಲಾಖಾ ಮುಖ್ಯಾಧಿಕಾರಿಗೂ ಬರೆದು ತಿಳಿಸಿದರೆ ...ಕ್ಷಿಣ ದೋಷದೋಷಗಳು ನಿವಾರಣೆಹೊಂದುವವು —ಎಡಿ]

ಕರಸ್‌ಪಾಂಡೆನ್ಸ್

ಒಂದು ವಿಮಾ ಕಂಪೆನಿ

(1) ಅಯ್ಯಾ, ಈ ಕೆಳಗೆ ಕಾಣಿಸಿನಲ್ಲಿ ರುಜುಮಾಡಿರುವ ನಾನು ...ಮೈಸೂರು ಗ ಸ ಲೈಫ್ ಮತ್ತು ಮ್ಯಾರೇಜ್ ಕಂಪೆನಿಗೆ ಮದುವೆ ವಿಮೆಗೆ ...ಮೂರು ತರಗತಿಗಳ ಪಾಲಿಸಿಗಳನ್ನು ತೆಗೆದುಕೊಂಡು ಮಾಹೆಯಾನ ...ರೂಪಾಯಿ ಚಂದಾ ಕೊಡುತ್ತಾ ಬಂದು ಆರು ತಿಂಗಳನಂತರ ಲಗ್ನವಾಗಲು ...ಆ ಕಂಪೆನಿಗೆ ಪಾವತಿಮಾಡಿದ ಮೊಬಲಗು 16 ರೂಪಾಯಿಗೆ ಎರಡರಷ್ಟು ...ಮೊಬಲಗು 72 ರೂಪಾಯಿ ಕಂಪೆನಿ ಏಜಂಟರ ಮೂಲಕ ನನಗೆ ಪಾವತಿಯಾಗಿರುತ್ತೆ

ಮಹಮದ್ ಯೂಸಫ್ ಉರುಫ್ ಮಹಮದ್ ಸಾಬಿ,
ಜಮೀನ್‌ದಾರ್, ಗಗೇ....

(2) ಈ ಕೆಳಗೆ ರುಜುಮಾಡಿರುವ ನಾನು ನನ್ನ ಮಗಳ ಲಗ್ನಕ್ಕಾಗಿ ಮಾಹೆಯಾನ 3 ರೂಪಾಯಿ ಮೇರೆ ಆರು ತಿಂಗಳ ಚಂದಾ 18 ರೂಪಾಯಿ ...ಪಾವತಿಮಾಡಿ ಲಗ್ನದ ವಿವಾಹಕ್ಕೆ 36 ರೂಪಾಯನ್ನು ಪಡೆದುಕೊಂಡೆ

ಪಂಚ ಅಬ್ದುಲ್ ವಹಬ್, ಜವಳಿ ಅಂಗಡಿ ಸಾಹುಕಾರ್ ಗಗೇ....

ಭತ್ತದ ಮಿಷನ್

ಅಯ್ಯಾ —ಬಹುಮಟ್ಟಿಗೆ ತಿಳುವಳಿಕೆಯುಳ್ಳವರಾಗಿಯೂ, ವ್ಯವಹಾರಜ್ಞಾನಿಗಳಾಗಿಯೂ, ಕ್ರಿಯಾಯುಕ್ತರಾಗಿಯೂ ಇರುವ ಶ್ರೀರಂಗಪಟ್ಟಣದ ಮುಖ್ಯಸ್ಥರು ಭತ್ತ ಕುಟ್ಟುವ ಒಂದು ಯಂತ್ರವನ್ನು ಇಡವುದಾಗಿಯೂ ಗಂಜಾಂ ನಿವಾಸಿಗಳು ಅದಕ್ಕೆ ಭಾಗಿಗಳಾಗಿ ಪ್ರೋತ್ಸಾಹಕೊಡದೆ ತಾವೇ ಬೇರೊಂದು ಯಂತ್ರವನ್ನಿಡಲು ಪ್ರಯತ್ನಪಡುತ್ತಿರುವುದು ವಿಷಾದನೀಯವಾಗಿದೆ ಎ ಬರಹಗಾರರೂ ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಸರಿಯಷ್ಟೆ ಈ ವಿಚಾರದಲ್ಲಿ ಪಾಲಿ ಶ್ರೀರಂಗಪಟ್ಟಣದಲ್ಲಿ ಸುಮಾರು ಒಂದು ವರ್ಷದಿಂದಲೂ ಒಂದು ಯಂತ್ರವು ಕೆಲಸಮಾಡುತ್ತಾ ಇದೆ ಇದಕ್ಕೆ ಅಲ್ಲಿನವರು ಪ್ರೋತ್ಸಾಹಕೊಡದೆ ...ಮೂರು ಯಂತ್ರವನ್ನು ಸ್ಥಾಪಿಸಬೇಕೆಂದು ಪ್ರಯತ್ನಮಾಡುತ್ತಿದ್ದಾರೆ ಇಂಥಾ ...ಕಲ್ಲಿ ಶ್ರೀರಂಗಪಟ್ಟಣಕ್ಕಿಂತ ಗಂಜಾಂನಲ್ಲಿ ಭತ್ತದ ಆಮದು ರಫ್ತು ಬಹಳ ...ಟುವ ಹೆಚ್ಚಾಗುತ್ತಿರುವುದರಿಂದಲೂ, ಈಚೆಗೆ ಅಕ್ಕಿಗಾಗಿ ಭತ್ತವನ್ನು ...ಕುಟ್ಟಿಸಿಗೆ ನಾಗಿಸುವ ತೊಂದರೆಯಿಂದಲೂ, ಸ್ಥಳೀಯರಲ್ಲಿ ಬಡಜನಗಳ ಜೀವನಕ್ಕೆ ಅನುಕೂಲವಾಗಲಿ ಎಂದು ನಮ್ಮ ಗ್ರಾಮಕ್ಕೆ ಒದಗುವಂತೆ ಗಂಜಾಂ ನಿವಾಸಿಗಳು ಪ್ರಯತ್ನಮಾಡುತ್ತಿರುವ ಈ ಬಾಗದಲ್ಲಿ ಸಂತೋಷಪಡದೆ ಅಸಹನೆಯಿಂದ ಮೇಲ್ಕಂಡಂತೆ ಲೇಖನವನ್ನು ಬರೆಯುವುದು ಸರಿಯಲ್ಲ ಗಂಜಾಂ ನಿವಾಸಿ

ಅರಕೆಲಗೂಡಿನಲ್ಲಿ ನೀರಿನ ಕಷ್ಟ

ಅಯ್ಯಾ,—ಬಿಸಿಲು ಹೆಚ್ಚು, ಮಳೆ ಬರುವ ಸೂಚನೆ ಕಾಣುತ್ತದೆ ಕುಡಿಯುವ ನೀರಿಗೆ ಬಹಳ ಕಷ್ಟ ಕೋಟೆ ಪೇಟೆಗೆ ಮಧ್ಯೆ ಇರುವ ದೊಡ್ಡ ಕೆರೆಯು ನೀರೇ ಮನುಷ್ಯರಿಗೂ ದನಕರುಗಳಿಗೂ ಆಧಾರ ಇದರ ನೀರು ಕೊಡ ಅನಾರೋಗ್ಯವಾದ ಸ್ಥಿತಿಯಲ್ಲಿದೆ ನೀರಿನಲ್ಲಿ ಕರಗಿದ ಸೆತ್ತೆಯು ಸೇರಿಕೊಂಡು ...ವನ್ನು ಮಲಿನಮಾಡಿದೆ ದಯಾಳು ಸರ್ಕಾರದವರು ನೀರಿನಲ್ಲಿರುವ ಸೆತ್ತೆಯು ...ವೂ, ಏರಿಯ ಬುಡದಲ್ಲಿರುವ ಕರಗಿದ ಕೆಸರು ಮಣ್ಣನ್ನೂ ಎರಡು ಮೂರು ...ಡಿ ತೆಗಿಸಿದರೆ ನೀರು ಎಷ್ಟೋ ಶುಚಿಯಾಗುವುದು ಹಿಂದೆ ಸರ್ಕಾರದವರು ...ಯಲ್ಲಿ ನೀರು ಕಡಮೆಯಾದ ಕಾಲದಲ್ಲಿ ಮೇಲ್ಕಂಡಂತೆ ಮಾಡಿಸುತ್ತಾ ...ದ್ದರು ಈ ಊರು ಕೋಟೆಯ ಪಶ್ಚಿಮ ದಿಕ್ಕಿನಲ್ಲೂ ಪೇಟೆಯ ಪೂರ್ವ ...ದಿಕ್ಕಿನಲ್ಲೂ ಇರುವ ಚಿಕ್ಕ ಕೆರೆಗಳು ಬಣಗುತ್ತಿವೆ ಈಗ ಸರ್ಕಾರದವರು ...ಮಣ್ಣು ತೆಗಿಸಿ ಕೆರೆಗಳಲ್ಲಿ ನೀರು ನಿಲ್ಲುವಂತೆ ಮಾಡಿಸಿಕೊಟ್ಟರೆ ಕೋಟೆಪೇಟೆ ...ಯವರು ಸ್ನಾನಮಾಡುವುದಕ್ಕೂ ಬಟ್ಟೆ ಒಗೆಯುವುದಕ್ಕೂ ಅನುಕೂಲವಾಗುತ್ತೆ ...ದೊಡ್ಡ ಕೆರೆ ನೀರು ಕುಡಿಯುವುದಕ್ಕೆ ಮಾತ್ರ ಉಪಯೋಗಿಸಿಕೊಂಡರೆ ಎಲ್ಲಾ ...ಗಳಿಗೂ ಮೇಲಾಗುತ್ತೆ ಪಕ್ಕದಲ್ಲಿ ದೊಡ್ಡಕೆರೆ ಕೆಳಗಿರುವ ಕಲ್ಯಾಣಿ ನೀರನ್ನು ...ಶುಚಿಮಾಡಿಸಿಕೊಟ್ಟರೆ ಬಟ್ಟೆ ಒಗೆಯುವುದಕ್ಕೆ ತುಂಬಾ ಅನುಕೂಲವಾಗಿರುವುದು

ಪುರವಾಸಿ

ಶಿವಮೊಗ್ಗಾ ಹೈಸ್ಕೂಲಿನಲ್ಲಿ ನಡೆದ ಕಾರ್ಯ

ಅಯ್ಯಾ,—ಲೋವರ್ ಸೆಕೆಂಡರಿ ಪರೀಕ್ಷೆಗೆ ಸುಮಾರು 10 12 ವರ್ಷ ವಯಸ್ಸಿನವರು ಮೊದಲ್ಗೊಂಡು 18 ವರ್ಷ ಪ್ರಾಯದವರೂ, ಹುಲ್ಲು ಮನೆ ...ದು ಹೆಂಚಿನ ಮನೆ ಕಾಣದವರೂ ಬರುವುದುಂಟು. ಇವರು ಬರುವಾಗ ...ಜೊತೆಯಲ್ಲಿ ತಮಗೆ ಬಹಳ ಸಲಿಗೆಯಾಗಿ, ತಂದೆತಾಯಿಗಳಂತೆ ಗೌರವಕ್ಕೆ ...ಪಾತ್ರರಾದ ಉಪಾಧ್ಯಾಯರುಗಳನ್ನು ತಮ್ಮ ಧೈರ್ಯಕ್ಕೂ, ಅನುಕೂಲತೆಗೂ ...ಕರೆದುಕೊಂಡು ಬರುವುದು ಪದ್ಧತಿ ಎಂದೂ ಕಾಣದ ದೊಡ್ಡ ಕಟ್ಟಡದಲ್ಲಿ ವೇಳ್ಕಂಡ ಬಾಲಕರನ್ನು ಸೇರಿಸಿಕೊಂಡು ಆ ಮಕ್ಕಳ ಧೈರ್ಯ, ಉತ್ಸಾಹ, ಗೌರವ ಮತ್ತು ಅನುಭಾವತ್ವಗಳಿಗೆ ಸಹಾಯಕರಾಗಿರುವ ಉಪಾಧ್ಯಾಯರುಗಳನ್ನು ಪೋಲೀಸ್ ಸಿಬ್ಬಂದಿಯಿಂದ ನೂಕಿಸಿ ಕಾಂಪೌಂಡಿನಲ್ಲಿ ಕೂಡ ಇರಕೂಡದೆಂದು ಹೊರಹೊರಡಿಸುತ್ತಿರಲು ಕೆಲವು ಮಕ್ಕಳಿಗೆ ಎಷ್ಟು ಧೈರ್ಯೋತ್ಸಾಹಗಳುಂಟಾಗಿರಬಹುದು ! ತಾವೂ ಉಪಾಧ್ಯಾಯರಾಗಿ ಉಪಾಧ್ಯಾಯರ ಗೌರವಾದಿಗಳನ್ನರಿಯದೆ ಕುರಿಯಂತೆ ಕಂಡುದಕ್ಕಾಗಿ ತುಂಬಾ ಆಶ್ಚರ್ಯಪಡಬೇಕಾಗಿದೆ. ವಿದ್ಯಕ್ಕೆ ಬೀಜಮಂತ್ರವನ್ನುಪದೇಶಿಸುವ ಈ ಹತ್ತು ರೂಪಾಯಿನ ಬಡ ಉಪಾಧ್ಯಾಯರುಗಳ ಅವಮರ್ಯಾದೆಯನ್ನು ವಿದ್ಯಾಭ್ಯಾಸದ ಇಲಾಖಾ ಇನ್|| ಜನರಲ್‌ರವರು ವಿಚಾರಮಾಡಿ ಈ ಹೈಸ್ಕೂಲಿನವರಿಗೆ ಬುದ್ಧಿವಾದ ಹೇಳುತ್ತಾರಾಗಿ ನಂಬಿರುತ್ತೇನೆ

ಸ್ವಾಮಿಸೇವಕ

ಮಳವಳ್ಳಿ ಬಾಲಿಕಾ ಪಾಠಶಾಲೆ

ಅಯ್ಯಾ,—ಈ ಪಾಠಶಾಲೆಯು ಸ್ಥಾಪಿತವಾಗಿ ಸುಮಾರು 16 ವರುಷಗಳ ಮೇಲಾಗಿರುತ್ತೆ ಅಂದಿನಿಂದ ಕೆಲವು ಕಾಲ ಗಂಡಸರೇ ಮುಖ್ಯೋಪಾಧ್ಯಾಯರಾಗಿದ್ದು ಈಚೆಗೆ 7 8 ವರ್ಷದಿಂದ ಹೆಂಗಸರೇ ಮುಖ್ಯೋಪಾಧ್ಯಾಯರಾಗಿರುತ್ತಾರೆ ಕಳೆದ ಎರಡು ಸಾಲಿನಿಂದಲೂ ಈ ಸ್ಕೂಲು ಬಹಳ ಅಭಿವೃದ್ಧಿಸ್ಥಿತಿಗೆ ಬಂದು, ಬಾಲಕಿಯರ ಸಂಖ್ಯೆಯು ಜಾಸ್ತಿಯಾಗಿರುತ್ತದೆ ಸಂಗೀತದ ಉಪಾಧ್ಯಾಯರು ಬರುವುದಕ್ಕೆ ಮುಂಚೆ ಮುಖ್ಯೋಪಾಧ್ಯಾಯರು ಇಂಪಾದ ಹಾಡುಗಳನ್ನು ಹೇಳಿಕೊಡುತ್ತಲೂ, ತ್ರಿಕಾಲದಲ್ಲಿ ಭಗವತ್ಪ್ರಾರ್ಥನೆ ಮಾಡಿಸುತ್ತಲೂ, ಬಾಲಕಿಯರಿಗೆ ಹೊಲಿಗೆ ಕಸೂತಿ ಕೆಲಸಗಳನ್ನು ಹೇಳಿಕೊಡುತ್ತಾ, ವಿನೋದವಾಗಿ ಕಾಲಕಳೆಯುತ್ತಾ, ಒಳ್ಳೇ ಬುದ್ಧಿ ಕಲಿಸಿ, ಈ ಪಾಠಶಾಲೆಯನ್ನು ಬಹಳ ಪ್ರೌಢಸ್ಥಿತಿಗೆ ತಂದಿದ್ದರು ಈ ರೀತಿ ಅಭಿವೃದ್ಧಿಹೊಂದುತ್ತಿರುವದನ್ನು ನೋಡಿ ಸೈರಿಸದ ಕೆಲವು ದುಷ್ಟಾತ್ಮರು ಈಕೆಯ ಮೇಲೆ ಕೆಲವು ಮೂಗರ್ಜಿಗಳನ್ನು ಬರೆದು, ತನಿಖೆ ಇಲ್ಲದೇನೇ ಬೇರೆ ಸರ್ಕಲ್ಲಿಗೆ ವರ್ಗಪಟ್ಟಿರುವ ಸಂಗತಿ ಎಲ್ಲರಿಗೂ ತುಂಬಾ ವಿಷಾದಕರವಾಗಿರುವುದೂ ಅಲ್ಲದೆ ಇನ್ನು ನಮ್ಮ ಊರ ಬಾಲಿಕಾ ಪಾಠಶಾಲೆಯು ಇಷ್ಟು ಅಭಿವೃದ್ಧಿಸ್ಥಿತಿಗೆ ಎಂದಿಗೂ ಬರಲಾರದೆಂದು ಊಹಿಸಬೇಕಾಗಿದೆ ಈಕೆಯ ಬದಲಿಗೆ ಬಂದಿರುವವರು ಅಪರವಯಸ್ಕರಾದ್ದರಿಂದ ಹಿಂದಿನವರಷ್ಟು ಆಸಕ್ತಿಯಿಂದ ಕೆಲಸಮಾಡಲಾರರು ನ್ಯಾಯಶೀಲರಾದ ಸರ್ಕಾರದವರು ಹಿಂದಿದ್ದವರನ್ನೇ ಇನ್ನು 3-4 ವರ್ಷ ಇಲ್ಲೇ ಇರಿಸಿದ್ದ ಪಕ್ಷದಲ್ಲಿ ಎಷ್ಟೋ ಚೆನ್ನಾಗಿತ್ತು

ಒಬ್ಬ ಬೋರ್ಡ್ ಮೆಂಬರು

ಚನ್ನಪಟ್ಟಣದ ಅಧಿಕಾರಿಗಳ ಗಮನಕ್ಕೆ ಬರಬೇಕಾದ ವಿಷಯಗಳು

ಅಯ್ಯಾ,—ಹೋದ ವಾರದ ಪತ್ರಿಕೆಯಲ್ಲಿ ವೆಸ್ಲಿಯನ್ ಮಿಷನ್ ಇಲಾಖೆಯವರು ಇಲ್ಲಿ ಒಂದು ಸ್ಕೂಲು ಸ್ಥಾಪಿಸಿರುವುದಾಗಿಯೂ, ಅಲ್ಲಿ ಕಕ್ಕಸು ಇಲ್ಲದ್ದರಿಂದ ಹುಡುಗರು ಬಾಜು ಗಲ್ಲಿಯಲ್ಲಿ ಮಲಮೂತ್ರವಿಸರ್ಜನೆ ಮಾಡಿ ಬಾಲಕಿಯರಿಗೆ ಅನಾರೋಗ್ಯಕ್ಕೆ ಕಾರಣವಾಗಿದೆ ಎಂತಲೂ, ಆದ್ದರಿಂದ ಅದಕ್ಕೆ ಮಿಷನ್‌ನವರೇ ಏರ್ಪಾಡು ಮಾಡಬೇಕೆಂತಲೂ ನಮೂದಿಸಿತ್ತು ಮಿಷನ್ನಿನವರೇನೋ ಬಾಲಕಿಯರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿರುತ್ತಾರೆ ಆದರೆ ಸ್ಕೂಲ್ ಪಕ್ಕದ ಗಲ್ಲಿಯಲ್ಲಿ ಇತರರು ಬಂದು ಗಲೀಜು ಮಾಡುವುದರಿಂದ ಅವರಿಗೋಸ್ಕರ ಮಿಷನ್‌ನವರು ಪ್ರತ್ಯೇಕವಾಗಿ ಒಂದು ಕಕ್ಕಸನ್ನು ಕಟ್ಟಿಕೊಡುವುದು ಯಾವ ನ್ಯಾಯ ? ಈ ಬಗ್ಗೆ ಮ್ಯುನಿಸಿಪಾಲಿಟಿಯವರೇ ತಕ್ಕ ಬಂದೋಬಸ್ತು ಮಾಡಬೇಕಾದುದು ಅವಶ್ಯವಾಗಿರುತ್ತದೆ ಈ ಊರಿನಲ್ಲಿ ರಾಜಬೀದಿಯು ತಕ್ಕಮಟ್ಟಿಗೆ ಶುಚಿಯಾಗಿದೆ ಆದರೆ ಗ್ರಾಮಸಾರವು ಹರಿಯುವ ಬಚ್ಚಲುಗಳನ್ನು ನೋಡಿದರೆ ಅಲ್ಲಲ್ಲಿ ಕೊಳಚೆಯೂ ಮತ್ತು ಸರ್ವದಾ ಒಂದೆರಡು ಅಂಗುಲಗಳ ಮಟ್ಟಿಗೆ ನೀರು ನಿಂತು ದುರ್ವಾಸನೆ ಹುಟ್ಟಿ ವಾಯುವು ಕೆಟ್ಟು ಜನಗಳು ರೋಗಾದಿಗಳಿಗೆ ಗುರಿಯಾಗಲು ಅವಕಾಶವಾಗಿದೆ ಸ್ಯಾನಿಟರಿ ಆಫೀಸರು ಇದಕ್ಕೆ ಗಮನಕೊಡಬೇಕಾದುದು ಅವಶ್ಯಕ ಪಟ್ಟಣವಾಸಿಗಳು ತಮ್ಮ ಮನೆಯ ಕಸಕಡ್ಡಿಗಳನ್ನು ಹಾಕುವುದಕ್ಕೆ ಇನ್ನೂ ಕೆಲವು ತೊಟ್ಟಿಗಳನ್ನು ಇಡಿಸಿ ಕೊಡಬೇಕು ಊರೊಳಗೆ ಗಲ್ಲಿಗಳನ್ನು ಪ್ರವೇಶಿಸಿ ನೋಡಿದರೆ ಮಲಮೂತ್ರಗಳ ವಿಸರ್ಜನೆಯು ವಿಪರೀತವಾಗಿರುವದು ರಾಜಬೀದಿಯಲ್ಲಿರುವ ಸಾರಾಯಿ ಅಂಗಡಿಯನ್ನು ತೆರೆದು ಬೇರೆ ಕಡೆ ಇಡಿಸಿದರೆ ಕ್ಷೇಮ ರಾಜಬೀದಿಯಿಂದ ಪೋಸ್ಟಾಫೀಸಿಗೆ ಹೋಗುವ ಮಾರ್ಗದಲ್ಲಿ ಸೇಂದಿ ಕಳ್ಳಿನ ದುಕಾನೂ ಇದೆ ಇದರ ದುರ್ವಾಸನೆ ಸಹಿಸಲಶಕ್ಯವು ಹೈಸ್ಕೂಲಿನ ಕೆಳಭಾಗದಲ್ಲಿರುವ ಗೋಮಾಂಸದ ಮಾರ್ಕೆಟ್ಟು ದುರ್ವಾಸನೆ ಬಡಿಯುತ್ತೆ ಇದನ್ನೆಲ್ಲಾ ಸರಿಪಡಿಸುವದು ಮೇಲ್ಪಟ್ಟ ಅಧಿಕಾರಿಗಳ ಕೆಲಸವಾಗಿರುತ್ತದೆ

ಪುರವಾಸಿ

ತಾಲ್ಲೂಕು ವರ್ತಮಾನಗಳು

ಮಾಗಡಿ —ಮಳೆ ಇಲ್ಲ ಬಿಸಿಲಿನ ಝಳ ಹೆಚ್ಚು ತಿರುಮಲೆ ರಂಗನಾಥಸ್ವಾಮಿಯ ರಥೋತ್ಸವ ನಡೆಯುತ್ತಿದೆ ಬಹುಜನರು ಸೇರಿರುವರು ಎಲ್ಲಾ ಜನಾಂಗದವರಿಗೂ ಇಲ್ಲ ಅನ್ನಪಾನಗಳಿಗೆ ಅನುಕೂಲವಿರುವುದರಿಂದ ಜನರಿಗೆ ವಸತಿಯಾಗಿದೆ ದೊಂಬಿ ಮೊದಲಾದ್ದೇನೂ ಇಲ್ಲ ಕಳೆದ ಹೋಳಿಯ ಹಬ್ಬದಲ್ಲಿ ಇಲ್ಲಿಯ ಮುಸಲ್ಮಾನರಿಗೂ ಹಿಂದುಗಳಿಗೂ ಕಲಹ ನಡೆದು ಕೊನೆಗೆ ರಾಜಿಯಾದರಂತೆ ಕಳೆದ ತಿಂಗಳಲ್ಲಿ ಹೆಬ್ಬಗೋಡಿ ಎಂಬ ಗ್ರಾಮದಲ್ಲಿ ಬೆಂಕಿಬಿದ್ದು 10 12 ಮನೆಗಳು ಸುಟ್ಟುಹೋದುವು ಪ್ರಾಣನಷ್ಟವೇನೂ ಆಗಿಲ್ಲ ಈ ತಾಲ್ಲೂಕಿನ ಉಪಾಧ್ಯಾಯರ ಸಂಘವು ಈ ಹಿಂದೆ ಕಾಲ್ವಕ್ಷು ಅಮಲ್ದಾರರವರಿಂದ ಸ್ಥಾಪಿಸಲ್ಪಟ್ಟಿದು ಮಾಸ್ತರುಗಳೆಲ್ಲರೂ ಉತ್ಸಾಹದಿಂದ ಕೆಲಸಮಾಡಿ ಸಂಘವನ್ನು ಅಭಿವೃದ್ಧಿಪಡಿಸುವರೆಂದು ನಂಬುತ್ತೇವೆ

ಚಿಕ್ಕನಾಯಕನಹಳ್ಳಿ —ಕೆರೆಯಲ್ಲಿ ನೀರು ಕಡಮೆಯಾಗುತ್ತಲಿದೆ ಈ ಕಾಲದಲ್ಲಿ ಬಟ್ಟೆ ಒಗೆಯುವವರನ್ನು ಲಕ್ಷ್ಯಮಾಡಿದರೆ ಅನುಕೂಲ ನೀರು ಕೆಟ್ಟಿರುವದರಿಂದ ಜನಗಳು ನೆಗಡಿ ಕೆಮ್ಮು ವಗೈರೆ ಬಾಯಿಲೆಗಳಿಂದ ನರಳುತ್ತಿದ್ದಾರೆ —ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಕೆಲಸಗಾರರ ಸಂಖ್ಯೆ ಕಮ್ಮಿಯಾಗುತ್ತಾ ಇದೆ ಈಗ ನೆಯಿಗೆ ತರಗತಿಯಲ್ಲಿ 4 ಜನ ದೊಡ್ಡವರು, ಇಬ್ಬರು ಹುಡುಗರು ಒಬ್ಬ ಮುದುಕಿ ಮಾತ್ರ ಕೆಲಸ ಮಾಡುವರು ಕೆಲಸ ಬರತಕ್ಕವರಿಗೆ ತಿಂಗಳಿಗೆ 8 10 ರೂಪಾಯಿ ಕೊಡುವದಕ್ಕಿಂತ ಜನಗಳಿಗೆ ಪ್ರೋತ್ಸಾಹ ಕೊಟ್ಟು ಹುಡುಗರನ್ನು ಸೇರಿಸಿ ಕೆಲಸ ಕಲಿಸಿಕೊಟ್ಟು ಅವರವರ ಯೋಗ್ಯತಾನುಸಾರ ಸ್ಕಾಲರ್‌ಷಿಪ್ ಕೊಟ್ಟಲ್ಲಿ ತುಂಬಾ ಸಹಾಯವಾಗುತ್ತೆ 15 ವರುಷಗಳಿಂದ ಇರತಕ್ಕವರನ್ನೇ ಇಟ್ಟುಕೊಂಡು ಕೆಲಸ ಮಾಡಿಸದಲ್ಲಿ ಹೊಸಬರಿಗೆ ಏನೂ ಕಲಿಸಿದಂತಾಗುವದಿಲ್ಲ ಸೂಪರೆಂಟರು ಇದಕ್ಕೆ ಗಮನಕೊಟ್ಟು ಹಳಬರನ್ನೆಲ್ಲಾ ವಜಾಮಾಡಿ ಹೊಸದಾಗಿ ಹುಡುಗರನ್ನು ಸೇರಿಸಿ ಅವರಿಗೆ ಕೆಲಸ ಕಲಿಸುವ ಏರ್ಪಾಟು ಮಾಡಿದರೆ ಸ್ಕೂಲ್ ಇನ್ನೂ ಅಭಿವೃದ್ಧಿಗೆ ಬರಬಹುದು ಈಗೀಗ ಸಣ್ಣ ದೊಡ್ಡ ಹುಡುಗರು ಬೀಡಿ ಸಿಗರೆಟ್ ಸೇದುವದು ಈಚೆಗೆ ಜಾಸ್ತಿ ಕಾನ್ವೆಂಟಿನ ಸ್ಕೂಲಿನಲ್ಲಿ ಏನು ಸಾಮಾನು ಹೇಳಿದಾಗ್ಯೂ ಮರವಿಲ್ಲ ಎಂಬ ಜವಾಬನ್ನೇ ಹೇಳುತ್ತಾರೆ

ಅರಸೀಕೆರೆ ತಾ|| ಬಾಣಾವಾರ —ಬಿಸಿಲಿನ ತಾಪವು ಬಹಳ ಜೋರಾಗಿದೆ ಕೆರೆಕಟ್ಟೆಗಳೆಲ್ಲಾ ಬತ್ತಿಹೋಗಿ ನೀರಿಗೆ ತುಂಬಾ ಅನಾನುಕೂಲವಾಗಿದೆ ಒಳಕೋಟೆಯಲ್ಲಿಯೂ ನೀರಿನ ತೊಂದರೆ ವಿವರಿಸಲು ಅಸಾಧ್ಯ ನಮ್ಮ ಅರಸೀಕೆರೆಗೆ ವರ್ಗಪಟ್ಟು ಬಂದಿರುವ ಹೊಸ ಅಮಲದಾರ್ರು ಕಳೆದ ಬುಧವಾರ ಬಾಣಾವಾರಕ್ಕೆ ದಯಮಾಡಿದರು ಇವರನ್ನು ಗ್ರಾಮ ಬಹಿರ್ಭಾಗದಲ್ಲಿ ಪುರಜನರು, ಮುಂಬರುಗಳು, ಶೆಟ್ಟಿಪಟೇಲರು, ನೌಕರಮಾನೇರು ಸಹ ಎದುರುಗೊಂಡರು ಬೆಳಗ್ಗೆ ಕನ್ನಡ ಹಿಂದುಸ್ತಾನಿ ಸ್ಕೂಲುಗಳನ್ನು ಪರಾಂಬರಿಸಿ ಗ್ರಾಮವನ್ನು ಇನ್‌ಸ್ಪೆಕ್ಷನ್ ಮಾಡಿ ಪ್ರಜೆಗಳ ಸೌಕರ್ಯಕ್ಕೆ ಬೇಕಾದ ಅನುಕೂಲಗಳನ್ನು ಸೂಚಿಸಿ ಚಾವಣಿಗೆ ದಯಮಾಡಿಸಿದರು ಒಳಕೋಟೆ ಭಾವಿಯು ಕೊಂಚ ಹೂಳುಬಿದ್ದು ನೀರು ಬತ್ತಿಹೋಗಿದೆ ಅಮಲದಾರ್ರು ಇದನ್ನು ಪರಾಂಬರಿಸಿ ನೀರುಬರುವಂತೆ ಮಾಡಿದರೆ ಉಪಕಾರವಾಗುತ್ತೆ —ತಾ 2ನೇ ಅರ್ಧರಾತ್ರಿ ಸಮಯದಲ್ಲಿ ಈ ಗ್ರಾಮದ ಸೈಯದ್ ಇಬ್ರಾಹಿಂ ಎಂಬುವನು ನಾಗಪ್ಪಶೆಟ್ಟರ ಮನೆಗೆ ನುಗ್ಗಿ ಸಾಮಾನುಗಳನ್ನು ಕದ್ದು ತೆಗೆದುಕೊಂಡುಹೋಗುವಾಗ ರಾತ್ರಿ ಗಸ್ತುಮಾಡುತ್ತಿದ್ದ ಪೋಲೀಸಿನವರು ಕಂಡು ಮಾಲು ಸಮೇತ ಅವನನ್ನು ಸೆರೆಮನೆಗೆ ತೆಗೆದುಕೊಂಡುಹೋದರು ನಮ್ಮ ಜಮಾದಾರ್ ನರಸಿಂಹಾಚಾರ್ರು ಈ ಬರಗಾಲದಲ್ಲಿ ಮುತುವರ್ಜಿಯಿಂದ ಗ್ರಾಮಗಸ್ತು ಮುಂತಾದ ಏರ್ಪಾಡುಮಾಡಿರುವದು ಸಂತೋಷವಾಗಿದೆ.

ಮಂಡ್ಯದ ತಾ|| ಬಸರಾಳು —ಈ ಊರಿನಲ್ಲಿ ದನಕರುಗಳಿಗೆ ನೀರಿಗೆ ಅಭಾವ ಇರುವ ಒಂದೇ ಕೆರೆಯಲ್ಲಿ ನೀರೆಲ್ಲಾ ಬತ್ತಿಹೋಗಿ ಭತ್ತದ ಪೈರೆಲ್ಲಾ ಅರ್ಧಬೆಳೆಯಲ್ಲೇ ಒಣಗಿಹೋಯಿತು. ಜಾನುವಾರುಗಳಿಗೆ ಮೇವು ಸಿಕ್ಕುವುದೇ ಕಷ್ಟ ಈ ವರುಷ ರಾಗಿ ಬೆಳೆಯೂ ಸಹ ಕೆಟ್ಟುಹೋಯಿತು ಹೀಗಿರುವಲ್ಲಿ ಧಾನ್ಯಗಳ ಧಾರಣೆಯಂತೂ ಹೇಳಬೇಕಾದದ್ದೇ ಇಲ್ಲ ಬಡಬಗ್ಗರ ಜೀವನಕ್ಕೆ ತುಂಬಾ ತೊಂದರೆಯಾಗಿರುತ್ತೆ ಜನರು ಮಳೆಯನ್ನೇ ನಿರೀಕ್ಷಣೆಮಾಡಿಕೊಂಡಿದ್ದಾರೆ —ಘನವನ್ನು ಹೊಂದಿದ ನಮ್ಮ ದಿವಾನ್ ಸಾಹೇಬರವರು ಮಂಡ್ಯಕ್ಕೆ ದಯಮಾಡಿಸಿದಾಗ್ಗೆ ನಾಗಮಂಗಲಕ್ಕೆ ಈ ಮಾರ್ಗವಾಗಿ ಚಿತ್ತೈಸಿ, ಇಲ್ಲಿನ ಪ್ರಜೆಗಳ ಅಹವಾಲುಗಳನ್ನೂ, ಮತ್ತು ಪದೇಪದೇ ಪ್ರಾಪ್ತವಾಗುತ್ತಿರುವ ನೀರಿನ ಕ್ಷಾಮವನ್ನೂ ಹೋಗಲಾಡಿಸುವರೆಂದೂ, ಈ ಗ್ರಾಮದಲ್ಲಿರುವ ಕನ್ನಡ ಬಾಯ್ಸ್ ಸ್ಕೂಲನ್ನು ಪರಾಂಬರಿಸಿ ಇದರ ಅಭಿವೃದ್ಧಿ ವಿಷಯದಲ್ಲಿ ಮನಸ್ಸಿಗೆ ತಂದುಕೊಂಡು ಅಪ್ಪಣೆಮಾಡುತ್ತಾರೆಂಬದಾಗಿ ಆಶೆಪಟ್ಟುಕೊಂಡಿದ್ದ ನಮ್ಮಗಳ ಕೋರಿಕೆಯು ವಿಫಲವಾಯಿತೆಂದು ವ್ಯಸನಪಡುತ್ತೇವೆ —ಈ ಊರು ಸ್ಕೂಲಿನಲ್ಲಿ ಓದತಕ್ಕ ಒಂದನೂರು ವಿದ್ಯಾರ್ಥಿಗಳಿಗೆ ಮೂರುಜನ ಮಾಸ್ತರುಗಳು ಇದ್ದು ಲೋವರ್ ಸೆಕೆಂಡರೀವರಿಗೂ ಇಟ್ಟುಕೊಂಡು ಪಾಠ ನಡಿಸುವುದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತೆ ಈ ತಾಲ್ಲೂಕು ವಿ ಇ ಸ್ಕೂಲುಗಳ ಪೈಕಿ ಈ ಗ್ರಾಮದ ಸ್ಕೂಲ್ ಕಟ್ಟಡವೇ ಭಾರಿಯಾಗಿದ್ದು ಊರ ಹೊರಭಾಗದಲ್ಲಿರುತ್ತದೆ ಇದರ ಉಸ್ತುವಾರಿಗೂ ಶುಚಿಯಾಗಿಟ್ಟುಕೊಳ್ಳುವುದಕ್ಕೂ ಏರ್ಪಾಡಿಲ್ಲ ಇಲಾಖೆಯವರು ಈ ಕೊರತೆಗಳನ್ನು ಸರಿಪಡಿಸಿಕೊಡಬೇಕಾಗಿ ಪ್ರಾರ್ಥನೆ

ಮೇಲುಕೋಟೆ —ಮೇಲುಕೋಟೆ ವೈರಮುಡಿ ಜಾತ್ರೆ ಕಾಲದಲ್ಲಿ ಈ ಸಾರಿ ರೋಗಾದಿ ಉಪದ್ರವಗಳೇನೂ ಇಲ್ಲ ನಾನಾ ಕಡೆಯಿಂದ ಅನೇಕ ಭಕ್ತಾದಿಗಳು ಬಂದಿದ್ದರು ಇಲ್ಲಿ ಕುಡಿಯತಕ್ಕ ನೀರು ಕಳೆದ ವರ್ಷಕ್ಕಿಂತ ಶುಚಿಯಾಗಿದ್ದರೂ ಇದನ್ನು ಕುಡಿದರೆ ಕಾಲರಾ ಬರುತ್ತೆಂದು ಭೀತಿ ಹುಟ್ಟಿಸಿ ಸದರಿ ನೀರನ್ನು ಉಪಯೋಗಿಸಲು ಅಡ್ಡಿಮಾಡಿದರು ಯಾತ್ರಿಕರು ಇತರ ಕೆಟ್ಟ ನೀರುಗಳನ್ನು ಉಪಯೋಗಿಸಿ ಕೆಮ್ಮಲು ವಗೈರೆಗಳಿಂದ ಪೀಡಿತರಾಗಿ ಬಹಳ ತೊಂದರೆಯನ್ನು ಅನುಭವಿಸಿ ಆಸ್ಪತ್ರೆಗೆ ಹೋಗಬೇಕಾಯಿತು ಜಾತ್ರೆಯು ಅರ್ಧ ಪಾಲು ಕಳೆದ ಮೇಲೆ ಪುನಃ ಅದೇ ನೀರನ್ನು ಕುಡಿಯಬಹುದೆಂದು ಅಪ್ಪಣೆಮಾಡಿದರುತ್ತಾರೆ. ಈಗ ಯಾರಿಗೂ ಕಾಲರಾ ವಗೈರೆ ಬರಲಿಲ್ಲ ಜಾತ್ರೆಯು ಪೂರೈಸಿತು ಎಲ್ಲರೂ ತಮ್ಮತಮ್ಮ ಸ್ಥಳಗಳಿಗೆ ಸುಖವಾಗಿ ಪ್ರಯಾಣಮಾಡಿದರು. ಕುಡಿಯುವ ನೀರಿಗೆ ಅಡ್ಡಿಪಡಿಸಿದ ಮಹಾತ್ಮರು ಯಾರೋ ಗೊತ್ತಾಗಲಿಲ್ಲ ಈ ಸಾರಿ ಬಳಂಗು ಆಟಗಳು ಬಹಳ ವಿಶೇಷವಾಗಿದ್ದವು ಇವರಿಗೆಲ್ಲಾ ಲೈಸೆನ್ಸುಗಳನ್ನು ಕೊಡದಿದ್ದರೆ ಚೆನ್ನಾಗಿತ್ತು ದೇವಾಲಯದಲ್ಲಿ ಯಾತ್ರಿಕರಿಗೆ ಸಮರ್ಪಕವಾದ ಏರ್ಪಾಡಾಗಲಿಲ್ಲ ಬಹಳ ಗಲಾಟೆಯೂ, ತೊಂದರೆಯೂ ಜನಗಳಿಗೆ ಆಗುತ್ತಿತ್ತು ಪಾರುಪತ್ಯಗಾರರು ಹಾಟಿಸ್ಥ್ಯವನ್ನು ವಹಿಸಿರುತ್ತಾರೆ ಊರಿನ ಪಾಠಶಾಲಾ ನಾಮಮಾತ್ರವಾಗಿತ್ತು —8ನೇ ತಾ ಪಂಚಮರ ಮೂರನೇ ಮಹಾಸಭೆಯು ನಡೆಯಿತು. ಶ್ರೀಮಾನ್ ಪ 2ಶಠಕೋಪ ಕೃಷ್ಣಯ್ಯಂಗಾರ್ರು ಅಗ್ರಾಸನವನ್ನು ವಹಿಸಿ, ಪಂಚಮರಿಗೆ ಹಿತೋಕ್ತಿಗಳನ್ನು ಹೇಳಿದರು ಈ ಸಭೆಗೆ ಮೈಸೂರು ಡಿಸ್ಟ್ರಿಕ್ಟ್ ಕ್ಲಾಸ್ ಮಿಷನ್ನವರೂ ಬಂದಿದ್ದರು ದೀನಜನರ ಏಳಿಗೆಯಲ್ಲಿ ಆಸಕ್ತರಾಗಿರುವವರ ಉದ್ದೇಶವು ಈ ಸಾರಿ ಬಹಳಮಟ್ಟಿಗೆ ಸಫಲವಾಯಿತಾಗಿದೆ

ಹೊನ್ನಾಳಿ —ಸರ್ಕಾರದವರು ತುಂಗಭದ್ರಾ ನದಿಗೆ ಸೇತುವೆ ಕಟ್ಟಿಸುವುದಕ್ಕೆ ಪ್ರಾರಂಭಿಸಿ ಅರ್ಧ ಮಟ್ಟಿಗೆ ಕೆಲಸವು ಪೂರೈಸಿರುತ್ತೆ ಈ ಸೇತುವೆಯಿಂದ ದಾವಣಗೆರೆ ಮೊದಲಾದ ಸ್ಥಳಗಳಿಂದ ಸರುಕುಗಳು ನಿರಾಯಾಸವಾಗಿ ಬಂದು ವ್ಯಾಪಾರವು ಬಹಳ ವೃದ್ಧಿ ಹೊಂದುವದಕ್ಕೆ ಅನುಕೂಲವಾಗಿದೆ —ಕೋಆಪರೇಟಿವ್ ಸೊಸೈಟಿ ರಿಜಿಸ್ಟ್ರಾರವರು ಹಿಂದಿನ ವಾರ ಈ ತಾಲ್ಲೂಕಿಗೆ ದಯಮಾಡಿಸಿ ಸೊಸೈಟಿ ಪ್ರಯೋಜನಗಳನ್ನು ಜನರಿಗೆ ತಿಳಿಯಪಡಿಸಿ ಈ ತಾಲ್ಲೂಕಿನಲ್ಲಿ ಸೊಸೈಟಿಗಳನ್ನು ಏರ್ಪಡಿಸಿರುತ್ತಾರೆ ಈ ಭಾಗದಲ್ಲಿ ತಾಲ್ಲೋಕು ಅಮಲ್ದಾರ್ ಮ ಕೆ ಕೇಶವಾಚಾರ್ರು ಮಾಡಿರತಕ್ಕ ಮುತುವರ್ಜಿಯು ಅಸಾಧಾರಣವಾದದ್ದು ಈ ಸೊಸೈಟಿಗಳಲ್ಲೆಲ್ಲಾ ಟವನ್ ಸೊಸೈಟಿಯು ಬಹಳ ಉತ್ತಮ ಸ್ಥಿತಿಯಲ್ಲಿದೆ ಸಾಹುಕಾರರಲ್ಲಿ 2 ರೂಪಾಯಿ ಬಡ್ಡಿ ಮೇಲೆ ಸಾಲ ತರುತ್ತಾ ಇದ್ದ ಲೇವಾದೇವಿಯು ನಿಂತು ಬಡಜನಗಳಿಗೆ ತುಂಬಾ ಅನುಕೂಲವಾಗಿದೆ ಸೊಸೈಟಿ ಪ್ರಾರಂಭ ಕಾಲದಲ್ಲಿ ಬಹು ಷೇರುಗಳನ್ನು ತೆಗೆದುಕೊಂಡಿದ್ದ ಸಾಹುಕಾರರು ಈಗ ನೆಪಮಾತ್ರ ಷೇರುಗಳನ್ನು ಇಟ್ಟು, ಉಳಿದ ಷೇರುಗಳನ್ನು ವಜಾಮಾಡಿಸಿಕೊಂಡ ವಿಷಯ ಶೋಚನೀಯವಾಗಿದೆ —ನಮ್ಮ ಸಂಸ್ಥಾನದ ಎರಡನೇ ಕೌನ್ಸಿಲರಾದ ಮಿರ್ಜಾ ಎಂ ಇಸ್ಮಾಯಿಲ್ ಅರಸಿನವರು ಇಲ್ಲಿಗೆ ದಯಮಾಡಿ ಇಲಾಖೆಗಳ ಇನ್‌ಸ್ಪೆಕ್ಷನ್ ಮಾಡಿಕೊಂಡು ಈ ತಾಲ್ಲೂಕಿನ ಅಹವಾಲುಗಳನ್ನು ವಿಚಾರಿಸಿ ಎಲ್ಲಾ ಸ್ಕೂಲುಗಳನ್ನೂ ಪರಾಂಬರಿಸಿ ಶಿವಾರಿಪುರಕ್ಕೆ ದಯಮಾಡಿಸಿದರು ಇವರ ಆಗಮನವು ಹೊನ್ನಾಳಿಗೆ ಶುಭಪ್ರದವಾದದ್ದಾಗಿರುತ್ತದೆ —ಮೈಸೂರು ಇನ್‌ಷೂರೆನ್ಸ್ ಕಂಪನಿ ಏಜಂಟರಾದ ಮ ಎನ್ ಸುಬ್ಬರಾಯರು ಹಿಂದಿನ ಭಾನುವಾರ ಹೊಸದಾಗಿ ಕಟ್ಟುತ್ತಿರುವ ಸೇತುವೆ ಬಳಿ ಪಿಕ್‌ನಿಕ್ ಪಾರ್ಟಿ ಮಾಡಿದರು ಸದರಿ ಸಂತೋಷ ಕೂಟಕ್ಕೆ ಟ್ರೆಜರಿ ಅ|| ಕಮಿಷನರ್ ಮ|| ಎಸ್ ವೆಂಕಟರಂಗಂ ರವರು, ಅಮಲ್ದಾರ್ ಮ|| ಕೆ ಕೇಶವಾಚಾರ್ರು, ಸರ್ಕಾರಿ ನೌಕರರೇ ಮೊದಲಾದವರುಗಳೆಲ್ಲಾ ಸೇರಿ ಬಹು ಆನಂದದೊಡನೆ ಸಲ್ಪ ಕಾಲವನ್ನು ಕಳೆದದ್ದು ಬಹು ಸಂತೋಷವಾಗಿತ್ತು —ಈ ತಾಲ್ಲೋಕು ಹೆಡ್ ಮಾಸ್ಟರಾಗಿದ್ದು ಪೆನ್‌ಷನ್ ಹೊಂದಿದ ಸತ್ಪುರುಷ ಸಮಾಜದ ಕಾರ್ಯದರ್ಶಿಗಳಾದ ಮ|| ಕೃಷ್ಣಪ್ಪನವರು ಚಿತ್ರದುರ್ಗದಿಂದ ಬಂದು ಇಲ್ಲಿನ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮತಾಚಾರ ಸಂಬಂಧವಾದ ವಿದ್ಯೆಯನ್ನು ಬೋಧಿಸಲು ಪಾಠಶಾಲೆಯನ್ನು ಇಲ್ಲಿನ ಜನಗಳ ಸಹಾಯದಿಂದ ಏರ್ಪಡಿಸಿ ವಿದ್ಯಾಭ್ಯಾಸಕ್ಕೆ ಪ್ರಾರಂಭಮಾಡಿದಾರೆ

ಹೊಸಕೋಟೆ —ಕೌನ್ಸಿಲರ್ ಮ|| ನಂಜುಂಡಯ್ಯನವರು ಇಲ್ಲಿಗೆ ದಯಮಾಡಿಸಿ ತಾಲ್ಲೂಕು ಕಚೇರಿಗೆ ಹೋಗಿ ಎಲ್ಲಾ ಖಾತೆಗಳನ್ನೂ ಅತಿ ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡಿ ಎಲ್ಲಾ ವಿಷಯಗಳಲ್ಲೂ ಅವರಿಗೆ ತೃಪ್ತಿಕರವಾಗಿ ಕಂಡುಬಂದದ್ದರಿಂದ ಅಮಲ್ದಾರರ ವಿಷಯ ಬಹಳ ಸಂತೋಷಪಟ್ಟರು ತರುವಾಯ ವೈಟ್ ಫೀಲ್ಡ್, ಸೂಲಿಬೆಲೆ ಮತ್ತು ಜಡಿಗೇನಹಳ್ಳಿ ಕಡೆ ಹೊರಟು ಎಲ್ಲಾ ವಿಚಾರಣೆ ಮಾಡಿಕೊಂಡು ಬಂದದ್ದಲ್ಲದೆ ಇಲ್ಲಿನ ಸ್ಕೂಲುಗಳನ್ನು ಇನ್‌ಸ್ಪೆಕ್ಷನ್‌ಮಾಡಿದ ತರುವಾಯ ಹೆಡ್ ಮಾಸ್ಟರು ಮಾಡಿರುವ ಹೊಸ ಕ್ರಮಗಳು ಮತ್ತು ನಾನಾ ತರದ ಕಿಂಡರ್‌ಗಾರ್ಟನ್ ಆಟಗಳ ವಿಷಯದಲ್ಲಿ ತುಂಬಾ ಸಂತೋಷಪಟ್ಟರು ಹೊಸತೀ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲ್ಪಟ್ಟಿತು —ಇಲ್ಲಿ ಪ್ಲೇಗ್ ರೋಗವು ಕಾಣಿಸಿಕೊಂಡು ಆರು ತಿಂಗಳಾ

ಯಿತೋ ಅನ್ನುವದರೊಳಗಾಗಿ ಪುನಹ ಈ ಉಪದ್ರವು ಪ್ರಾರಂಭವಾಗಿ ಎರಡು ತಿಂಗಳಾಯಿತು. ಈ ಸಲ ಮಳೆ ಸಾಲದೆ ಅಲ್ಪಸ್ವಲ್ಪ ಬೆಳೆಗಳಾದದ್ದರಿಂದ ಧಾರಣೆವಾಸಿಗಳು ಧಡಾವಾಗಿ ಬಡಜನಗಳಿಗೆ ನಾನಾ ತರದಲ್ಲೂ ಕಷ್ಟ ತೊಂದರೆಗಳು ಪ್ರಾಪ್ತವಾಯಿತಲ್ಲಾ ಎಂದು ಗೋಳಾಡುತ್ತಿರುವ ಸಮಯದಲ್ಲಿ ಪ್ಲೇಗ್ ಉಪದ್ರವು ಪ್ರಾರಂಭಿಸಿ ಜನಗಳನ್ನು ಇನ್ನೂ ಹೆಚ್ಚಾದ ಕಷ್ಟಕ್ಕೂ ವ್ಯಸನಕ್ಕೂ ಗುರಿಮಾಡಿದೆ. ಕಮ್ಮಿ ಸಂಬಳದ ಬಡನೌಕರರ ಪಾಡೋ ಹೇಳ ತೀರದು. ಇಂಥಾ ಸಮಯದಲ್ಲಿ ದಯಾಳುಗಳಾದ ಸರ್ಕಾರದವರು 5-6-7 ರೂಪಾಯಿ ಸಂಬಳದ ನೌಕರರ ವಿಷಯ ಚಿತ್ತಕ್ಕೆ ತಂದು ಸಂಬಳ ಹೆಚ್ಚು ಮಾಡಿಸಿ ಕೀರ್ತಿಪಡೆಯುವ ಹಾಗೆ ಬಡನೌಕರರು ಅರಿಕೆಮಾಡುತ್ತಾರೆ.—ಇಲ್ಲಿನ ದೊಡ್ಡಕೆರೆ ಸಂಪೂರ್ಣವಾಗಿ ಒಣಗಿಹೋಯಿತು. ಚಿಕ್ಕಕೆರೆಯಲ್ಲಿ ಸುಮಾರು ಒಂದು ತಿಂಗಳ ನೀರಿದೆ. ಸೀ ನೀರು ಭಾವಿಗಳಲ್ಲಿ ನೀರಿಲ್ಲದೆ ಜನಗಳು ಒಬ್ಬರಮೇಲೊಬ್ಬರು ಬಿದ್ದು ಒಂದು ಸೀರನ್ನು ಸೇದಿಕೊಂಡು ಬರುತ್ತಾರೆ. ಊರಿಗೂ ಸೀನೀರು ಭಾವಿಗೂ ಮುಕ್ಕಾಲು ಮೈಲಿ ದೂರ. ಬೇರೆ ಕಡೆ ಸೀನೀರು ಭಾವಿಗಳು ಇದ್ದಾಗ್ಯೂ ಆರೋಗ್ಯಕರವಾದದ್ದಲ್ಲ.—ಈ ಊರಿನಲ್ಲಿ ಪರಸ್ಥಳದಿಂದಲೂ ದೂರಭಾಸಲೆಯಿಂದ ಕೋರ್ಟು ಕಛೇರಿಗೆ ಬರುವ ಜನಗಳಿಗೂ ಹೊತ್ತಿಗೆ ತಿಂಡಿ ಇಲ್ಲದೆ ಕಷ್ಟಪಡುತ್ತಾ ಇದ್ದರು. ದಯಾಳುಗಳಾದ ನಮ್ಮ ಅಮಲ್ದಾರ್ ಮ॥ ಸೋಮೇಶ್ವರಯ್ಯರವರು ಜನಗಳಿಗೆ ಅನುಕೂಲವಾದ ಒಂದು ಹೋಟಲನ್ನು ಎರಡು ತಿಂಗಳ ಹಿಂದೆ ಕಛೇರಿ ಸಮೀಪದಲ್ಲಿ ಇಡಿಸಿದಾರೆ. ಈಗ ಪರಸ್ಥಳದ ಜನಗಳಿಗೆ ಮಾತ್ರವಲ್ಲದೆ ವರ್ಗಪಟ್ಟು ಒಂಟಿಯಾಗಿ ಬರುವ ಕಛೇರಿ ಉದ್ಯೋಗಸ್ಥರಿಗೂ ಅನುಕೂಲವಾಯಿತೆಂದು ಎಲ್ಲರೂ ಅಮಲ್ದಾರ್ರನ್ನು ಹೊಗಳುವರು.—ಡಾಕ್ಟರ್ ಮುತ್ತುಸಾಮಿ ದಾಸರವರು ಇಲ್ಲಿಗೆ ಬಂದು ಮೂರು ಸಾರಿಗೂ 312 ಜನಗಳಿಗೆ ಬಹು ಪ್ರೋತ್ಸಾಹದಿಂದ ಇನಾಕ್ಯುಲೇಷನ್ ಮಾಡಿದರು. ಇನ್ನೂ ಅಲ್ಲಲ್ಲೇ ಹೊಸ ಖಾಯಿಲೆಗಳು ಆಗುತ್ತಾ ಇವೆ. ಹಳೇ ಖಾಯಿಲೆಗಳು ಸಹ ಇವೆ ಪ್ಲೇಗ್ ತಗಲಿದವರ ಪೈಕಿ ಅನೇಕ ಜನಗಳು ಬದುಕಿಕೊಂಡರು. ಜನಗಳು ಇನಾಕ್ಯುಲೇಷನ್ ಹಾಕಿಕೊಳ್ಳುವದಕ್ಕೆ ಧಾರಾಳವಾಗಿ ಮುಂದೆಬರುವದೇ ಇಲ್ಲ. 4,500 ಜನ ಸಂಖ್ಯೆಯುಳ್ಳ ಈ ಊರು ಅರ್ಧ ಸಂಖ್ಯೆ ಸಹ ಇನಾಕ್ಯುಲೇಷನ್ ಹಾಕಿಸಿಕೊಳ್ಳದೆಹೋದರೆ ಏನೆಂದು ಯೋಚಿಸಬೇಕು ? ಇದರ ವಿಷಯ ಡಾಕ್ಟರ್ ಮುತ್ತುಸಾಮಿ ದಾಸರವರು ಬಹಳ ಮುತುವರ್ಜಿ ವಹಿಸಿ ಜನಗಳಿಗೆ ಅನೇಕ ವಿಧವಾಗಿ ಉದಾಹರಣೆಗಳ ಮೂಲಕ ವಿವರಿಸಿ ಹೇಳಿದರು

ಶಿಕಾರಿಪುರ—ಈಗ ಮೂರು ದಿನಗಳಿಂದ ಇಲ್ಲಿ ಹುಚ್ಚರಾಯಸ್ವಾಮಿ ತೇರೂ ಜಾತ್ರೆಯೂ ವಿಜೃಂಭಣೆಯಾಗಿ ನಡೆಯುತ್ತಾ ಇದೆ ಪ್ಲೇಗಿನ ಗಲಾಟೆಯೇನೂ ಇಲ್ಲದ್ದರಿಂದ ಹೋದ ವರುಷಕ್ಕಿಂತ ಹೆಚ್ಚಾಗಿ ನಾನಾ ಕಡೆಯ ಜನರು ಅಂಗಡಿಗಳನ್ನು ತಂದಿರುವರು ಜನಸಮುದಾಯವೂ ಜಾಸ್ತಿಯಾಗಿರುತ್ತೆ. ನಮ್ಮ ಮಾಮಲೇದಾರರು ಖುದ್ದು ನಿಂತು ತೇರಿನ ಕಾರ್ಯಗಳನ್ನು ಆಗಮಾಡಿಸುತ್ತಲಿದಾರೆ—ಈಚೆಗೆ ಇಲ್ಲಿನ ಆಜೂಬಾಜೂನಲ್ಲಿ ದರೋಡೆ ಕಳ್ಳತನಗಳು ನಡೆಯುವದಾಗಿ ತಿಳಿದು ಬರುತ್ತೆ ಈಗ್ಗೆ ನಾಲ್ಕಾರು ದಿನಗಳ ಕೆಳಗೆ ಬೆಳಂದೂರು ಹೋಬಳಿ ಕಾಗತಿಗೆ ಗ್ರಾಮದ ಮಂಜೋಜಿ ಎಂಬಾತನು ರೆಟ್ಟೆಹಳ್ಳಿ ಜಾತ್ರೆಯಲ್ಲಿ ಹೋರಿಗಳನ್ನು ತರುವ ನಿಮಿತ್ತ ಮಾಸೂರು ಮಾರ್ಗವಾಗಿ ಕಿಟ್ಟದ ಹಳ್ಳಿಬಳಿ ಆಸಿನಕಟ್ಟೆ ಗಿಡದಲ್ಲಿ ಒಬ್ಬನೇ ಹೋಗುತ್ತಿರುವಾಗ್ಗೆ ಹಗಲು 1 ಘಂಟೆ ಸಮಯದಲ್ಲೇ ಯಾರೋ ಪಟಿಂಗರು ಸದರಿ ಮಂಜೋಜಿಯನ್ನು ಅಡ್ಡಗಟ್ಟಿ ಮೇಲೆ ಬಿದ್ದು ಹೊಡೆದು ಅವನಲ್ಲಿದ್ದ ನಗದು 150 ರೂಪಾಯನ್ನೂ, ಕೈಬೆರಳಲ್ಲಿದ್ದ ಉಂಗುರಗಳನ್ನೂ, ಕಿವಿಯಲ್ಲಿನ ಮುರುಗಳನ್ನೂ ಕಸುಕೊಂಡು ಹೋದಂತೆಯೂ, ಪೆಟ್ಟು ತಿಂದವನು ಬಹು ಪ್ರಯತ್ನದಿಂದ ಸಮೀಪದ ಕಿಟ್ಟದಹಳ್ಳಿಗೆ ಓಡಿ ಹೋಗಿ ಪ್ರಾಣ ಉಳಿಸಿಕೊಂಡಂತೆಯೂ ತಿಳಿದು ಬರುತ್ತದೆ ಅಲ್ಲದೆ 8-10 ದಿನಗಳ ಕೆಳಗೆ ಸದರಿ ಕಿಟ್ಟದಹಳ್ಳಿಯಲ್ಲಿ ಬರ್ಮಾಜಿ ಎಂಬಾತನು ಸಾಕುತ್ತಿದ್ದ ಮೂರು ಕುರಿಗಳನ್ನೂ ಯಾರೋ ಕಳುವು ಮಾಡಿದಂತೆ ಗೊತ್ತಾಯಿತು. ಮತ್ತು ರಾಣೆಬೆನ್ನೂರಿಂದ ಕುರುಬರು ತಂದಿದ್ದ ಕುರೀಹಿಂಡಿನಲ್ಲಿ 3-4 ನ್ನು ಕದ್ದುಕೊಂಡು ಹೋದರೆಂದು ಕೇಳುತ್ತೇನೆ. ರೆಟ್ಟೆಹಳ್ಳಿಯಲ್ಲಿ ದನಗಳ ದೊಡ್ಡ ಜಾತ್ರೆ ನಡೆಯುತ್ತೆ ; ಅಲ್ಲದೆ ಕಿಟ್ಟದಹಳ್ಳಿಯಲ್ಲಿ ದುರ್ಗಾದೇವಿ ಜಾತ್ರೆ ನಡೆಯುತ್ತಿರುವದರಿಂದ ಹಗಲೂ ರಾತ್ರಿ ಪ್ರಯಾಣಗಳಿರುವವು ಸರ್ಕಾರದವರು ಈ ವಿಚಾರಕ್ಕೆ ನಿಗಾ ಕೊಟ್ಟು ಅಲ್ಲಲ್ಲಿ ಪೊಲೀಸ್ ಸಿಬ್ಬಂದಿಯನ್ನಿಟ್ಟು ಈ ಕಳ್ಳರ ಪುಂಡನ್ನು ಅಡಗಿಸುವರೆಂದು ನಿರೀಕ್ಷಿಸುತ್ತೇನೆ.—ಇಲ್ಲಿನ ಪ್ರಜೆಗಳು ಮಾಸೂರು ರಸ್ತೆ ಅಮುದು ರಸ್ತೆಗೆ ಮುಖ್ಯಮಾರ್ಗವಾಗಿರುವದರಿಂದ ಅದರ ಕಾಮಗಾರಿ ಬಗ್ಗೆ ಅನೇಕ ಸಾರಿ ಅರ್ಜಿ ಬರೆದುಕೊಂಡಿದಾರೆ ಡೆಪ್ಟಿ ಕಮಿಷನರ್ ಸಾಹೇಬರು ಸದರಿ ರಸ್ತೆಯ ಕಾಮಗಾರಿಯನ್ನು ಬಡ್ಜೆಟ್ಟಿನಲ್ಲೂ ಸೇರಿಸಿ ಪ್ಲಾನು ಮಾಡಿರುವದಾಗಿ ತಿಳಿದು ಬರುತ್ತೆ ಸರ್ಕಾರದವರು ಈ ರಸ್ತೆಯನ್ನು ಸಂಪಡಿಸುವದಾದರೆ ಅಮುದು ರಸ್ತೆಗೂ, ಪ್ರಜೆಗಳಿಗೂ ತುಂಬಾ ಪ್ರಯೋಜನವಾಗಿ ಈ ಕಳ್ಳಕಾಕರ ಭಯವೂ ತಪ್ಪೀತು ಆದಷ್ಟು ಬೇಗ ಇದನ್ನು ಸಂಪಡಿಸಿ, ಕೀರ್ತಿ ಪಡೆಯಬೇಂದು ಹಾರೈಸುತ್ತೇನೆ—ಈಗ ಸರ್ಕಾರದವರು ಕೆಲವು ಮುಖ್ಯ ಗಡಿಗಳಲ್ಲಿ ಇಬ್ಬರಿಬ್ಬರನ್ನು ಉಸ್ತುವಾರಿ ಬಗ್ಗೆ ನೇಮಿಸಿರುವದಾಗಿ ಗೊತ್ತಾಗುತ್ತೆ ಆದರೆ ಸದರಿ ಪೊಲೀಸಿನವರು ಅವರವರ ಗಡಿಗಳಲ್ಲಿ ಹಾಜರಿರದೆ ಹಳ್ಳಿಗಳಲ್ಲಿ ಸ್ವಾರ್ಥಪರರಾಗಿರುವಂತೆ ತಿಳಿದು ಬರುತ್ತೆ. ಈ ವಿಚಾರದಲ್ಲಿ ನಮ್ಮ ತಾಲ್ಲೂಕು ಆಫೀಸರರು ನಿಗಾ ಕೊಟ್ಟು ಕ್ರಮಪಡಿಸಬೇಕಾಗಿ ಪ್ರಾರ್ಥನೆ

ಹಿಂದೂಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ. ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 5-16

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತ್ಯಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಮೀನುಮನುಷ್ಯ ಇರುವ ಈ ಔಷಧದ ಗುರುತು. ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪೆನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-21]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಬಡವಾದ ಕೇಶಧಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾತು ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳಿಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವತ್ತು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು !

ಒಟ್ಟೊ-ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-14]

ಸಣ್ಣ ಸೀಸೆಯ ಬೆಲೆ ರೂ. 0-8-0 ಒಂದು ಡ್ರಾಮಿನ (ವಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜಂಟ್, ಬಿ. ಉಲ್ಲನ್ ಮಾರ್ಟ್, ಮಂಗಳೂರು.

WANTED.

For a large Coffee Estate in South Mysore capable and energetic Writer with sufficient knowledge of English to keep simple accounts, should be able to supply labour. Good pay for a good man.

Apply to:—

[90 1] X C/o VRITTANTA PATRIKE, MYSORE

ಹೊಸ ಮಾಸ ಪತ್ರಿಕೆ ! ಭಾರತೀವಿಲಾಸ. ದ್ವಿತೀಯ ವರ್ಷಾರಂಭ

ಇದೊಂದು ಕನ್ನಡ ಮಾಸ ಪತ್ರಿಕೆ. ಪ್ರತಿ ಮಾಸದಲ್ಲಿಯೂ ಕ್ರಮವಾಗಿ ಪ್ರಚಾರವಾಗುವುದು ಕಾದಂಬರಿಗಳೂ, ನಕಲಿಗಳೂ, ವಚನಗ್ರಂಥಗಳೂ ... ವಿದ್ಯಾ ವಿಷಯಕವಾದ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡು ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದದ್ದು. ವಾರ್ಷಿಕ ಚಂದಾ 1-8-0. ಚಂದಾದಾರರಾಗತಕ್ಕವರಿಗೆ ಚಾಮುಂಡೇಶ್ವರಿ ಬೆಟ್ಟದ ಮಾಹಾತ್ಮ್ಯ ಎಂಬ ಪುಸ್ತಕ ಬಹುಮಾನ ಸಿಕ್ಕುತ್ತೆ ಇದರ ಕ್ರಯ 4 ಆಣೆ [372-9]

ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

ತಂಜಾವೂರು ಗೆಜ್ಜೆ ಅಡ್ಡಿಗೆ.

ಕ್ರಯ ರೂ. 0-7-0.



ಇದು ಕೆನಡಿಯನ್ ಗೋಲ್ಡಿನಂತಹ ಲೋಹದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೊಕ್ಕೆಗಳು ಮತ್ತು ಕುಸುರಿಗಳು ಇಟ್ಟು ಎಲೆಕ್ಟ್ರಿಕ್ ಶಕ್ತಿಯಿಂದ ಗಟ್ಟಿಯಾಗಿ ಚಿನ್ನವನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ಅಡ್ಡಿಗೆಯನ್ನು ತಯಾರಿಸಿರುತ್ತೇವೆ. ಇದು ಗಾಜಿನ ಮಣಿಗಳಲ್ಲ ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು

ಹಾರಮೋನಿಯಂ ಕಲಿಯುವ ಪುಸ್ತಕ.

ಕ್ರಯ 0-8-0.

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 40 ಪಾರಸೀಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ತು ಮೊದಲಾದವುಗಳು ವಿರಳವಾಗಿ ತಿಳುಹಿಸಲ್ಪಟ್ಟಿರುತ್ತೆ. ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು [88-1]

ಚಂದಡಿ ಅಂಚಿನ ಸೀರೆ, ಹಾರಮೋನಿಯಂ ಬುಕ್ಕು, ತಂಜಾವೂರು ಅಡ್ಡಿಗೆ ಈ ಎರಡು ಕೋರುವವರು ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ವಿಳಾಸ—ಯಸ್ ಯನ್ ಮೂರ್ತಿ, 67, ಆಫೀಸು
ವೆಂಕಟಾಚಲ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ನಾಜೂಕಾದ ಗಡಿಯಾರ ! ಬಹು ಸುಲಭ ಕ್ರಯ !

ಸ್ಪ್ರಿಂಗ್ ಇಂಗ್ಲೀಷು ಲಿವರ್ ವಾಚು.

ಇದರ ಕ್ರಯ 6 ಬಹುಮಾನ ಸಮೇತ ರೂ. 3-8-0 ಮಾತ್ರ

ಇದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರು ಕೆಲಸದಿಂದಲೂ ನಾಜೂಕಾದ ಮತ್ತು ಬಲವಾದ ಯಂತ್ರಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗ ಹೊಸದಾಗಿ ತರಿಸಿರುತ್ತೇವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು, ಭರವಸೆಯಾದವು. ಸುಂದರವಾದದ್ದು ಅನೇಕ



ವರುಷ ಪರಂಪರೆ ಬಾಳಿಕೆ ಬರುವಂತ ಗಡಿಯಾರ. [77-45]

ಇದರ ಆರು ಬಹುಮಾನಗಳ ತಪಸೀಲು—1 ಸುಂದರವಾದ ಗಡಿಯಾರ ಸರಪಣಿ, 2 ದಿಕ್ಕನ್ನು ತೋರಿಸುವ ಉತ್ತರಮುಖಿ, 3 ನಾಜೂಕಾದ ಕರವಸ್ತ್ರ, 4 ಲೆವೆಂಡರ್ ಎಂಬ ಪರಿಮಳದ್ರವ್ಯ, 5 ಸರ್ಪಾಕಾರದ ಉಂಗುರ; 6 ವಿವಿಧವಾದ 6 ಸ್ಟೀಲ್ ಮುಳ್ಳು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—

ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂಬರು 7. ಕೊಪ್ ವೆಂಕಟಾಚಲೈಯರ್‌ಸ್ಟ್ರೀಟ್, ಮದರಾಸು.

ಬಿ. ವಿ. ಪಂಡಿತರ ಸಿದ್ಧೌಷಧಗಳು

ನಾರಿಕೇಳಾಂಜನ—ವಂಶಪಾರಂಪರ್ಯವಾಗಿ ಕೇವಲ ರಹಸ್ಯದಿಂದ ಉಪದೇಶಿಸಲ್ಪಟ್ಟಿದು. ಖಂಡಿತವಾಗಿಯೂ ಇಂತಹ ಅಂಜನವನ್ನು ನೋಡಿರಲಾರಿರಿ. ಸ್ವಲ್ಪವೂ ಉರಿಯನ್ನುಂಟುಮಾಡದೆ ಕಣ್ಣುಗಳಲ್ಲಿನ ಕೆಟ್ಟ ನೀರನ್ನು ಸುಲಭವಾಗಿ ಈಚೆಗೆ ಹೊರಡಿಸಿ ಸಮಸ್ತ ವಿಧವಾದ ತಲೆನೋವು, ತಲೆಭಾರ, ಕಣ್ಣುರಿಗಳನ್ನು ತಕ್ಷಣ ಪರಿಹರಿಸಿ ಕಣ್ಣುಗಳು ಬಹಳ ಹೊತ್ತು ತಣ್ಣಗಿರುವಂತೆ ಮಾಡಿ ರಾತ್ರಿ ಸುಖವಾಗಿ ನಿದ್ರೆಬರುವಂತೆ ಮಾಡುವುದು. ಕಣ್ಣುಮಂಜು, ರೆಪ್ಪೆಭಾರ, ಕಣ್ಣುನೋವು, ದುರ್ಮಾಂಸಗಳನ್ನು ಖಾತರಿ ಗುಣಪಡಿಸುತ್ತದೆ—ಬೆಲೆ ಸೀಸೆ 1 ಕ್ಕೆ 0-4-0. ಕ್ಷೀರದ ಕಸ್ತೂರಿಮಾತ್ರೆ—ಮಕ್ಕಳ ಸಮಸ್ತ ರೋಗಗಳಿಗೂ—ತಾಂಬೂಲದೊಡನೆ ಉಪಯೋಗಿಸುವುದಕ್ಕೂ, ಅಜೀರ್ಣ ಮತ್ತು ಜಲದೋಷಗಳಿಗೂ ಸರ್ವೋತ್ತಮವಾದುದು ಬೆಲೆ—250 ಮಾತ್ರೆ ಉಳ್ಳ ಸೀಸೆಗೆ 0-4-0. ಆಮೋದಿನಿ—ಸಂಗೀತಗಾರರಿಗೆ ಅಮೃತಪ್ರಾಯವಾದುದು. ಬಾಯಿನ ದುರ್ಗಂಧ, ಬಾಯಾರಿಕೆ, ಶರೀರದ ಆಯಾಸ, ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸುವುದು. ಬೆಲೆ 150 ಮಾತ್ರೆಯ ಸೀಸೆಗೆ 0-4-0 ದಂತಧಾವನಚೂರ್ಣ—ಸುವಾಸನೆಯಾಗಿರುವ ಈ ಚೂರ್ಣವನ್ನು ನಿತ್ಯವೂ ಉಪಯೋಗಿಸಿದರೆ ಹಲ್ಲು ಸಂಬಂಧವಾದ ಯಾವ ರೋಗಗಳಿಗೂ ಅವಕಾಶವಾಗದೆ ಹಲ್ಲುಗಳು ಬಿಳುಪಾಗಿಯೂ ಗಟ್ಟಿಯಾಗಿಯೂ ಆಗುತ್ತವೆ. ಆರು ಪಟ್ಟಣಗಳಿಗಿಂತಕಡಮೆ ಕಳುಹಿಸಲಾಗದು ಬೆಲೆ ಪೊಟ್ಟಣ 1ಕ್ಕೆ 0-1-0. 1 ನೇ ನಂಬರು ಚೂರ್ಣದಿಂದ ರಕ್ತಸೋರುವುದು, ಮುಡುನೋವು, ಥಳಕು, ಕ್ರಿಮಿಗಳು ಒಂದೇ ದಿನದಲ್ಲಿ ಗುಣವಾಗುತ್ತವೆ. ಬೆಲೆ ಸೀಸೆ 1 ಕ್ಕೆ 0-4-0. ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆ ತರಿಸಿದರೂ ಒಂದು ಉಚಿತವು. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ. ಟ.ಖ. ಪ್ರತ್ಯೇಕ. [220-35]

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಬಿ. ವೆಂಕಟಾಚಾರ್ಯರ ನಾವಿಲ್‌ಗಳು

ವಂಗವಿಜೇತ 1 4 0 ನನಾಬನಂದಿನಿ 1 8 0 ಅಮೃತಪುಳಿನ 0 11 0 ಕುಮುಳ 0 10 0 ಚಂದ್ರಶೇಖರ 1 1 0 ವಿಷವೃಕ್ಷ 1 4 0 ಚಂದ್ರಪ್ರಭಾ 0 14 0 ಶೋಭನೆ 0 12 0 ಚಂದ್ರಕಳಾ 0 6 0 ಕಲ್ಯಾಣ ಫ 0 8 0

[39 8] ಯಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಗೋಕಾಯಿಗೇ ಪ್ರದರ್ಶನವು

ಪುರೋಭಿವೃದ್ಧಿಯ ಸಲಹೆಗಳು

ಕುಣಿಗಲ್ ತಾಲ್ಲೂಕು ಯಡಿಯೂರಿನಲ್ಲಿ ಸಿದ್ಧಲಿಂಗೇಶ್ವರ ಸ್ವಾಮಿ ರಥೋತ್ಸವಕ್ಕೆ ಒಂದು ಅಂಗವಾಗಿ ನಡೆದ ದನಗಳ ಪ್ರದರ್ಶನದಲ್ಲಿ ಕಮಿಟಿ ಪ್ರೆಸಿಡೆಂಟರಾದ ಅಮಲ್ದಾರ್ ಮ॥ ಟಿ ಹನುಮಂತರಾಯರು ರೈತರಿಗೆ ಏನು ಹೇಳಿದ್ದರೆಂದರೆ—ರಥೋತ್ಸವಕ್ಕೆ ಒಂದು ಅಂಗವಾಗಿ ನಡೆದ ಈ ದನಗಳ ಪ್ರದರ್ಶನದಲ್ಲಿ ಸೇರಿದ್ದ ಅತ್ಯುತ್ಕೃಷ್ಟವಾದ ರಾಸುಗಳನ್ನು ನಮ್ಮ ಡಿಸ್ಟ್ರಿಕ್ಟ್ ಕಮೀಷನರವರಾಗಲೂ ನಮ್ಮ ಪುರೋಭಿವೃದ್ಧಿಗೆ ಬೇಕಾದ ಅನೇಕ ಮಾರ್ಗಗಳಲ್ಲಿ ಸ್ವಜನಾಂದ ಆಸಕ್ತಿಯುಳ್ಳವರಾಗಿಯೂ ಇರುವ ಮ ಕುಮಾರ ಸ್ವಾಮಿನಾಯಕರವರು ಮಿದ್ದು ದಯಮಾಡಿ ಸ್ವತಃ ಉಪನ್ಯಾಸ ನಡೆಸಲು ಅವಕಾಶವಾಗಲಿಲ್ಲವೆ ಮ ನಾವೆಲ್ಲರೂ ಖಿನ್ನರಾಗಿದೇವೆ ಆದರೆ ಈ ತಾಲ್ಲೂಕಿನಲ್ಲಿ ಪ್ರದರ್ಶನವೇ ಇದೇ ಮೊದಲಾಗಿದೆ ಈ ಡಿಸ್ಟ್ರಿಕ್ಟಿನಲ್ಲಿ ಅನೇಕ ದನಗಳ ಪ್ರದರ್ಶನಗಳನ್ನು ನೋಡಿ ಈ ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆಯ ಅಂಗವಾಗಿ ನಡೆದ ಈ ಪ್ರದರ್ಶನಕ್ಕೆ ದಯಮಾಡಿರುವ ದೊಡ್ಡ ಮನುಷ್ಯರು ಈ ಪ್ರದರ್ಶನದಲ್ಲಿ ಸೇರಿದಂಥ ಉತ್ತಮ ರಾಸುಗಳು ಇನ್ನು ಎಲ್ಲಿಯೂ ಸೇರಿರಲಿಲ್ಲವೆಂತ ನನ್ನಲ್ಲಿ ಅಪ್ಪಣೆ ಕೊಡಿಸುತ್ತಾರೆ ಈ ವಿಷಯವನ್ನು ನಾನು ನಾವು ಕೂಡಾ, ಡೆಪ್ಯುಟಿ ಕಮೀಷನರ್ ಸಾಹೇಬರವರಲ್ಲಿಯೂ ಅತಿ ಸಂತೋಷದಿಂದ ವಿಜ್ಞಾಪಿಸಿಕೊಳ್ಳುತ್ತೇನೆ ಮೊದಲಾವರ್ಷವೇ ಇಷ್ಟು ಸಮರ್ಥಕವಾಗ ನಡೆದ ಈ ಪ್ರದರ್ಶನವು ಇನ್ನು ಮೇಲೆ ಮತ್ತು ಹೆಚ್ಚಾಗಿ ಪ್ರಸಿದ್ಧಿಯನ್ನು ಹೊಂದಿ ಉತ್ತಮ ರಾಸುಗಳು ಸೇರತಕ್ಕ ಸ್ಥಳವೆಂತ ನಮ್ಮ ದೇಶದಲ್ಲೆಲ್ಲಾ ಘನವಾದ ಯಶಸ್ಸನ್ನು ಹೊಂದಲಿ ಎಂದು ನಾವು ದೇವರೊಡನೆ ಹಾರೈಸುತ್ತೇನೆ

ಈ ದಿನ ನನ್ನ ಸ್ನೇಹಿತರುಗಳಾದ ಕುಣಿಗಲ್ ತಾಲ್ಲೂಕು ಕೋಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ಸೂಪರ್ವೈಸರ್ ಮ ಎಟ್ ಸೂರಪ್ಪನವರೂ ಮ ಶಂಕರಲಿಂಗೇಗೌಡರೂ ಮತ್ತು ಪಟೇಲರಿ ಇನ್ಸ್ಪೆಕ್ಟರ್ ಮ॥ ಕೃಷ್ಣಯ್ಯಂಗಾರರೂ ಪರಸ್ಪರ ಸಹಾಯ ಸಂಘದಿಂದ ಜನಗಳಿಗೆ ಉಂಟಾಗುವ ಅನುಕೂಲಗಳೂ ಕೃಷಿಕಾಯವು ಉತ್ತಮವಾದ ಉದ್ಯೋಗವು ದನಗಳ ಸಲಹತಕ್ಕ ಕ್ರಮವೂ, ಈ ವಿಷಯವಾಗಿ ಮಾಡಿದ ಉಪಯುಕ್ತವಾದ ಉಪನ್ಯಾಸಗಳನ್ನು ಬಹು ಸಂತೋಷದಿಂದ ನಾವೆಲ್ಲರೂ ಕೇಳಿರುತ್ತೇವೆ ಇವರು ಸಂಕ್ಷೇಪವಾಗಿ ಹೇಳದ ವಿಷಯಗಳಲ್ಲಿ ಕೆಲವು ಅಂಶಗಳನ್ನು ಮಾತ್ರ ಸೂಕ್ಷ್ಮವಾಗಿ ವಿಸ್ತರಿಸಿ ಹೇಳಬೇಕೆಂತ ನಾನು ಕುತೂಹಲವುಳ್ಳವನಾಗಿರುತ್ತೇನೆ

ವ್ಯವಸಾಯ — ವ್ಯವಸಾಯವು ಅತ್ಯುತ್ತಮವಾದ ಉದ್ಯೋಗವೆನ್ನುವುದಕ್ಕೆ ಬೇರೆ ಸಾಧನೆಗಳನ್ನು ಒದಗಿಸಬೇಕಾಗಿಲ್ಲ ಒಂದು ವೇಳೆ ಅವಶ್ಯಕವಾಗಿದ್ದಲ್ಲಿ ಈ ಸಾಧನೆಗಳನ್ನು ವಿಶದಮಾಡುವುದಕ್ಕೆ ಹುಡುಕಬೇಕಾಗಿಯೂ ಇಲ್ಲ ಈ ಉದ್ಯೋಗಕ್ಕೆ ಆಗಿರುವ ಇನ್ನೂ ಸಹಾಯವಾಗಿಯೂ ಇರುವ ಶಾಸ್ತ್ರಗಳು ತಾವೇ ಒಂದೊಂದು ಘನವಾದ ಶಾಸ್ತ್ರವಾಗಿ ದೀರ್ಘಕಾಲ ವ್ಯಾಸಂಗದಿಂದಲೇ ಸಾಧಿಸತಕ್ಕವುಗಳಾಗಿ ಪರಿಣಮಿಸಿವೆ ಈ ಉದ್ಯೋಗದಲ್ಲಿ ಗೌರವವನ್ನೂ ಲಾಭವನ್ನೂ ಹೊಂದಲು ಅಪೇಕ್ಷೆಯುಳ್ಳವರು ಈ ಉದ್ಯೋಗಕ್ಕೆ ಅಂಗವಾಗಿರುವ ಶಾಸ್ತ್ರಗಳ ಮುಖ್ಯಮುಖ್ಯ ತತ್ವಗಳನ್ನು ಆದರೂ ತಿಳಿದುಕೊಳ್ಳಬೇಕು ಬೀಜವು ನೆಲದಲ್ಲಿ ಬೀಳತಕ್ಕದ್ದಾದರೂ ಅಲ್ಲಿ ಸೇರುವುದಕ್ಕೆ ಮುಂಚೆ ಶುಚಿಯಾಗಿ ಮಾಡಲ್ಪಡದಿದ್ದರೆ ಭೂಮಿಯ ದ ಅಂಕುರಿಸಲಾರದು ಎಳೆದರೆ ಕೊಳೆತು ಸೇರಿದಲ್ಲಿ ಅದರ ಮೇಲಿರುವ ಸಂಪುಗಳನ್ನು ಮುಟ್ಟಿ ನೆಲದಲ್ಲಿ ಅದಕ್ಕೆ ಹೋಗತಕ್ಕ ಆಹಾರಕ್ಕೆ ಕೊಳಕು ಅಡ್ಡಿಮಾಡುತ್ತದೆ ಬೀಜದಲ್ಲಿ ಎರಡು ಭಾಗಗಳವೆ ಜೀವ ಮತ್ತು ಇದಕ್ಕೆ ಬೇಕಾದ ಆಹಾರ ಆಹಾರವು ನೀರಲ್ಲಿ ಬೆರತು ಹಾಲಿನಂತೆ ಆಗಿ ವೃದ್ಧಿಹೊಂದುವ ಜೀವಕ್ಕೆ ಒದಗಿದಲ್ಲದೆ ಬೀಜವು ಮೊಳೆಯಲು ಅವಕಾಶವಿಲ್ಲ ಆದರಿಂದಬೇಟ ಬೀಜ ಮೊಳೆತು ಸಹ ಬೇರು ಉಂಟಾದ ಕಾಲದಲ್ಲಿ ಬೀಜದಲ್ಲಿ ದೇವರು ಇಟ್ಟಿರುವ ಆಹಾರವನ್ನು ಬೀಜದಲ್ಲಿರುವ ಜೀವವು ತಿಂದು ಆ ಆಹಾರ ಪೂರೈಸುವ ವರಿವಿಗೂ ಮೊಳೆತು ಬೆಳೆಯುತ್ತೆ ಆಹಾರ ಮುಗಿದ ಕಡೆ ಭೂಮಿಯಿಂದ ಆಹಾರ ಒದಗದೆ ಇದ್ದಲ್ಲಿ ಬಾಡಿ ಮೃತಿಯನ್ನು ಸಹ ಹೊಂದುತ್ತದೆ ಭೂಮಿಯು ಸಾರವನ್ನು ಬಿಡಿಮನ್ನು ಚಲ್ಲಿದರೆ ಮಿಡಿದವನ್ನು ಕಡುವುದಾದರೂ ಭೂಮಿಯು ಸ ತಗೆದುಕೊಂಡ ಸಾರರೂಪವಾದ ಸಾಲವನ್ನು ತೀರಿಸದಿದ್ದರೆ ತಾನು ಕೊಡುವುದನ್ನು ಕ್ರಮೇಣ ಭೂಮಿಯು ಕಮ್ಮಿಮಾಡುವುದರಲ್ಲಿ ಸಂಶಯವಿಲ್ಲ ಈ ಸಾಲವನ್ನು ತೀರಿಸುವುದಾದರೆ ಕೆಮಿಸ್ಟ್ರಿ ಎಂಬ ರಸಾಯನಶಾಸ್ತ್ರದ ಮುಖ್ಯ ಭಾಗಗಳನ್ನು ತಿಳಿದುಕೊಳ್ಳಬೇಕು ಈ ಸಾಲವನ್ನು ತೀರಿಸುವ ಸಾಧನವೇ ಗೊಬ್ಬರ ಗೊಬ್ಬರಗಳಲ್ಲಿ ಅನೇಕ ವಿಧಗಳಿವೆ ಯಾವ ಭೂಮಿಗೆ ಯಾವ ಗೊಬ್ಬರವನ್ನು ಹಾಕಿ ಸಾಲ ತೀರಿಸಬೇಕೋ ತಿಳಿದು ಆ ರೀತಿ ಮಾಡುವುದರಿಂದಲೇ ಭೂಮಿಯು ತನ್ನ ಉತ್ತಮಸ್ಥಿತಿಯನ್ನು ಹೊಂದುತ್ತದೆ ಇಲ್ಲದೆ ಅನ್ಯಥಾ ಇಲ್ಲ ಶಾಯಿಲೆ ಒಂದಾಗಿ ಔಷಧ ಮಾತ್ರದಿಂದಾವರೆ ಗುಣವಾಗುವದಲ್ಲಿ ಸಂಶಯವಿದೆ ?

ಪರಸ್ಪರ ಸಹಾಯ ವ್ಯವಸಾಯಕ್ಕೆ ಅಂಗವಾದ ಪ್ರತಿಒಂದು ಉದ್ಯೋಗದಲ್ಲಿಯೂ ಪರಸ್ಪರ ಸಹಾಯದ ಅವಶ್ಯಕತೆಯು ಬಲವಾಗಿ ಕಾಣಿಸುತ್ತದೆ ಪ್ರಾಣಿವರ್ಗಗಳಿಗೆ ಸಸ್ಯವರ್ಗಗಳಿಂದಲೂ, ಸಸ್ಯವರ್ಗಗಳಿಗೆ ಪ್ರಾಣಿವರ್ಗಗಳಿಂದ ಈ ಪರಸ್ಪರ ಸಹಾಯವು ದೈವನಿಯಮದಿಂದ ಜರುಗುತ್ತಲೇ ಇದೆ ಲೋಕಕ್ಕೆ ಜೀವನಾಧಾರವಾದ ಈ ವ್ಯವಸಾಯವು ಸರಿಯಾಗಿ ವೃದ್ಧಿಹೊಂದಲು, ಲೋಕೋತ್ತಮ ಧರ್ಮವಾಗಿರುವ ಪರಸ್ಪರಸಹಾಯವೆಂಬ ಧರ್ಮವು ವ್ಯವಸಾಯಕ್ಕೆ ಸಹಾಯವಾಗಿ ಬರಬೇಕು ಕಾಲಧರ್ಮಗಳು ಬದಲಾಯಿಸುತ್ತಿರುವುದರಿಂದಲೂ, ಮಳೆಯು ಸರಿಯಾಗಿ ನಡೆಯದೆ ಇರುವುದರಿಂದಲೂ ವ್ಯವಸಾಯ ಒಂದನ್ನೇ ನಂಬಿದವರಿಗೆ ತೊಂದರೆ ಸಂಭವಿಸದೆ ಇರದು ಇದನ್ನು ಪರಿಹರಿಸುವುದಕ್ಕೆ ಕೈಗಾರಿಕೆ ಕೆಲಸಗಳನ್ನು ಕಲಿಯಲೂ, ಸ್ಥಾಪಿಸಲೂ ಬೇಕು ಆದರೆ ಬಂಡವಾಳವುಳ್ಳ ಧನಿಕರಿಗೂ, ಬಡವರಾದ ಕೂಲಿಗಾರರಿಗೂ ನಡುವೆ ಒಂದು ದೊಡ್ಡ ಸಮುದ್ರವಿದೆ ಈ ಸಮುದ್ರವನ್ನು ದಾಟಲು ನಂಬಿಕೆಯೆಂಬ ಒಂದು ಬಲವಾದ ಸೇತುವೆಯನ್ನು ಕಟ್ಟಬೇಕು ಈ ಸೇತುವೆಯೇ ಕೋಆಪರೇಷನ್ ಅಥವಾ ಪರಸ್ಪರಸಹಾಯ ಈ ಸೇತುವೆಯ ರೂಪಾಂತರಗಳೇ ತಾಲ್ಲೂಕು ಅಭಿವೃದ್ಧಿಯ ಕಮಿಟಿ, ತಾಲ್ಲೂಕು ವ್ಯವಸಾಯ ಸಂಘ, ತಾಲ್ಲೂಕು ಗ್ರಾಮಾಭಿವೃದ್ಧಿಯ ಸಂಘ, ಕೆರೆಗಳ ಪಂಚಾಯಿತಿ ಗ್ರಾಮಕಮೀಟಿ

ವಿದ್ಯೆ —ಸಮಸ್ತ ವಿಧವಾದ ಏಳಿಗೆಗೂ ಸಮಸ್ತ ಕಾರ್ಯಸಿದ್ಧಿಗೂ ಮುಖ್ಯ ಸಾಧನೆಯಾಗಿಯೂ, ವಿಪತ್ತುಗಳೆಂಬ ಕತ್ತಲೆಯನ್ನು ಪರಿಹರಿಸುವ ಸೂರ್ಯಪ್ರಾಯವಾಗಿಯೂ ಇರುವ ವಿದ್ಯೆಯ ಸಹಾಯವಿಲ್ಲದೆ ಯಾವ ಉದ್ಯೋಗವೇ ಆಗಲಿ, ಯಾವ ಒಳ್ಳೇ ಕೆಲಸವೇ ಆಗಲಿ ಕೈಗೂಡಲಾರದು ಈ ವಿಷಯದಲ್ಲಿ ನಮ್ಮ ಶ್ರೀಮನ್ಮಹಾರಾಜ ರಾಜಾಸಾಹೇಬರವರ ಸರ್ಕಾರದವರು ಪ್ರಾರಂಭಿಸುವ ನಿರ್ಬಂಧ ವಿದ್ಯಾಭ್ಯಾಸವೆಂಬ ಪ್ರಬಲವಾದ ಉಪಕ್ರಮವು ನಮ್ಮ ದೇಶಕ್ಕೆ ಅಪ್ರಮೇಯವಾದ ಸಂಪತ್ಪರಂಪರೆಯನ್ನು ದೈವಾನುಗ್ರಹದಿಂದ ಸಂಪಾದಿಸಿಕೊಡುವುದಲ್ಲದೆ, ಮೈಸೂರು ಸೀಮೆಯ ಯಶಸ್ಸನ್ನು ದಿಗಂತಗಳಲ್ಲಿ ವಿಶ್ರಾಂತಿಯಿಲ್ಲದೆ, ದೇಶಾಂತರಗಳಲ್ಲಿ ಹರಡಲಿ ಎಂತ ನಾವೆಲ್ಲರೂ ಪ್ರಾರ್ಥಿಸೋಣ

ನೀವು ಕಳೆದುಕೊಳ್ಳುವಿರೋ ? [82-48]

ತಿಳಿಸಿಕೊಳ್ಳುವ ಈ ಸಮಯವನ್ನು

ಕೇಶಕುಸುಮಾಕರ ಕೂದಲೆಣ್ಣೆ.

ಮೂರು ದಿನಗಳಿಗಾಗು ವಷ್ಟು ನಿಮ್ಮ ಬಾಗಿಲ ಬಳಿಗೆ ಪುಗಸಟ್ಟೆ ಕಳುಹುತ್ತೆ.

ಈ ಕೂದಲೆಣ್ಣೆಯು ಅತ್ಯಂತ ಅಪೂರ್ವವಾದ ಒಳ್ಳೇ ಗುಣಗಳನ್ನೂ ಸುಗಂಧವನ್ನೂ ಪಡೆದದ್ದಾಗಿದೆ 30 ದಿನಗಳಿಗಾಗುವಷ್ಟು ತೈಲವುಳ್ಳ ಶೀಸೆ 1 ಕ್ಕೆ ಕ್ರಯ ಹತ್ತು ಆಣೆ ಮಾತ್ರ, ಪೋಸ್ಟೇಜ್ ಬೇರೆ

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ, 177 ಜೀನಾ ಬಜಾರ್ ರೋಡ್, ಮದ್ರಾಸು

ಜೈರವರ ಸ್ವದೇಶೀ ಬಾಮ್.

ರಿಜಿಸ್ಟರಾದ ಟ್ರೇಡ್ ಮಾರ್ಕು

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಆರೆತಲೆನೋವು, ನಡು ನೋವು, ಶೀತ, ನೆಗಡಿ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆ ನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ ಜಟ್ಟಿಗಳಿಗೂ, ಮಿಮುಲಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ ಯೂರೋಪ್, ಇಂಡಿಯಾ, ಅಮೇರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯಕ್ಷಿಣಿಯಂಥಾ ಮದ್ದು ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು ಇದು ಚಿನ್ನದಂಥಾ ಔಷಧ ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ ಸೂರ್ಯಕಿರಣಗಳ ರಿಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ ನಕ್ಲಿ ಔಷಧವನ್ನು ಕೊಂಡು ಮೋಸಹೋಗಬೇಡಿ ಉಪಯೋಗದ ಕ್ರಮ ಬಾಟ್ಲು ಸಂಗಡಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ 3 ಕ್ಕೆ ರೂ 1-14 0 ವಿ ಪಿ ಬೇರೆ ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ [25-15]

ವಿಳಾಸ—ಜೆ ಗುಲಾಬ್ ಚಂದ್ ಪೌವಾರ್,

50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಯಾಕ ಪರೀಕ್ಷಿಸಬಾರದು ? ಬಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು
ಆಟೋ ಮೋಹಿನಿ

ಇದು ಸೆಂಟ್ ಆಗಿದ ಈಗಿನ ಕಾಲದಲ್ಲಿ ಇದೇ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವನಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ

ಕ್ರಯ ½ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ 2-0-0

,, 1 ಡ್ರ್ಯಾಂ ಕೊಳವೆ ,, ,, 0-12-0

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0 12 0

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ

ಮದರಾಸ್ ಆಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚತುರ್ಭುಜ್‌ಲಾಲ್ ಕಂಪನಿ,

[301-1] ೧೩೩, ಚೈನಾಬಜಾರ್ ರೋಡ್, ಮದರಾಸ್

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರೆತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಬಚ್ಚು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104-47]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ಡೇಪೋ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೧ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ ಮನಸ್ಸಿನ ಧೈರ್ಯ ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪವಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-43]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಮು (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಸ್ಸತ್ವ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಉಡುಕುರುತಿ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179-33]



೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿಕೆಯಿಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧಿ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ! ಜೀವನಿಗೆ ರಕ್ತವೇ ಪ್ರಾಣಾಧಾರವು ಮನುಷ್ಯರು ಆರೋಗ್ಯದಿಂದ ಇರುವಿಕೆಗೂ, ಆಯುಸ್ಸು, ಬಲ, ತೇಜಸ್ಸು ಉಂಟಾಗುವುದಕ್ಕೂ ರಕ್ತವೇ ಮೂಲ ಕಾರಣವು "ಶರೀರಮಾದ್ಯಂ ಖಲುಧರ್ಮಸಾಧನಂ" ಎಂಬ ವಚನದಿಂದ ಪ್ರಾಪಂಚಿಕಗಳಾದ ಸಕಲ ವಿಧ ಭೋಗ ಭಾಗ್ಯ ಸೌಖ್ಯ ಕಾರ್ಯಗಳಿಗೆ ಮನುಷ್ಯದೇಹವು ಮುಖ್ಯ ಸಾಧನವಾಗಿರುವುದರಿಂದ ಇದಕ್ಕೆ ಅಪಾಯಕರಗಳಾದ ರೋಗಗಳ ದೆಸೆಯಿಂದ ಕಾಪಾಡಿಕೊಳ್ಳುವ ಬಗ್ಗೆ ಮನುಷ್ಯರು ಸರ್ವ ಪ್ರಯತ್ನದಿಂದಲೂ ಆರೋಗ್ಯವೆಂಬ ದೊಡ್ಡ ಭಾಗ್ಯವನ್ನು ಪಡೆಯತಕ್ಕದು ಕರ್ತವ್ಯವೇ ಹುದು ನಿಶ್ಚಯವು ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರ್ಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕಿಂಬರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶನಡಿಸುವುದು ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು



ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಈ ಸಾಲಾಮಿಸ್ರಿಯಲ್ಲಿ ಹಲ್ವವನ್ನೂ ಮತ್ತು ಕೆಲವರು ಬೇರೆ ಬೇರೆ ವಿಧವಾಗಿಯೂ ತಯಾರ್ಮಾಡಿ ಮಾರುವರು ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾವನ್ನು ಸೇವನೆಮಾಡುವುದರಿಂದ ಇದರ ಗುಣವನ್ನು ತಾನಾಗಿಯೇ ಪ್ರಕಾಶಪಡಿಸುವುದು ಪ್ರತಿಯೊಬ್ಬರೂ ಮುರಬ್ಬಾವಿನಲ್ಲಿ ಪಂಜಾಬ್ ಸಾಲಾಮಿಸ್ರಿಯನ್ನು ನೋಡಬಹುದು ಇದು ಬಹಳ ಮೃದುವಾಗಿಯೂ, ತಿನ್ನುವುದಕ್ಕೆ ಬಹಳ ರುಚಿಯಾಗಿಯೂ ಇದೆ ಅನೇಕರು ಸಾಲಾಮಿಸ್ರಿಯನ್ನು ಹಾಲಿನೊಂದಿಗೆ ಕಾಯಿಸಿ ಕುಡಿಯುವುದನ್ನು ಸಾಧಾರಣ ವಾಡಿಕೆಯಲ್ಲಿಟ್ಟಿರುವರು ಉರುಳಗಡ್ಡೆ, ರಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ? ಅಥವ ಬೇರೆ ತರಹದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು 15 ತೊಲ ಮುರಬ್ಬಾವಿರುವ ಡಬ್ಬಿ ಒಂದಕ್ಕೆ ಐದು ರೂಪಾಯಿಗಳು ಬೆಲೆಯಿಟ್ಟರೂ ಬಹಳ ಕಡಮೆಯಾದ ಬೆಲೆಯೆಂತಲೇ ತಿಳಿಯಬೇಕು ಸಾಧಾರಣವಾಗಿ ಎಲ್ಲರಿಗೂ ಉಪಯೋಗವಾಗಲೆಂದು ಲೋಕೋಪಕಾರಾರ್ಥವಾಗಿ ಪ್ರತಿ ಡಬ್ಬಿ ಒಂದಕ್ಕೆ 1 8 0 ರೂ ಇಟ್ಟಿರುತ್ತೆ ದಿನಕ್ಕೆರಡಾವರ್ತಿ ಹೊತ್ತಿಗೆ ಅರ್ಧ ತೊಲದಂತೆ ಸೇವಿಸಿ ಮೇಲೆ 1 ಪಾವು ಹಸೀ ಹಾಲು ಅಥವಾ ನೀರು ಕುಡಿಯಬೇಕು ಡಬ್ಬಿ 1 ಕ್ಕೆ ರೂ 1 8 0, ಟಪಾಲ್ ಖರ್ಚು ಅಲಾಯಿದ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು,
13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ.

ನಮಗ ಕಾಗದವನ್ನು ಬರಯುವೇಕಾದರೆ, ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚನ್ನಾಗಿ ತಿಳಿಯುವಂತೆ ಬರೆಯಬೇಕು

1 ಧಾತುಪುಷ್ಟಿ ಚೂರ್ಣ—ಸೊಂಟದ ನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬಸ ಬರುವದು ಇವುಗಳು ಗುಣವಾಗುವವು ಬೆಲೆಯು ಡಬ್ಬಿ 1 ಕ್ಕೆ 0 5 0

2 ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು—ಚೇಳು ಕುಟುಕಿದ ಸ್ಥಳದಲ್ಲಿ ಸದರಿ ತೈಲದಲ್ಲಿ ಒಂದು ಬಟ್ಟೆಯ ತುಂಡನ್ನು ತೋಯಿಸಿ ಸದರಿ ಕಡಿದ ಸ್ಥಳಕ್ಕೆ ಈ ಬಟ್ಟೆಯನ್ನು ಕಾಲು ಗಂಟೆಯ ಹೊತ್ತು ಕಟ್ಟಿದರೆ ಕೂಡಲೆ ನಿವಾರಣೆಯಾಗುವುದು ಒಂದು ಕಡ್ಡಿಗೆ ಸ್ವಲ್ಪ ಹತ್ತಿಯನ್ನು ಸುತ್ತಿ ತೈಲದಲ್ಲಿ ಅದ್ದಿ ಕೂದಲು ತೆಗೆಯಬೇಕೆಂಬುವ ಸ್ಥಳಕ್ಕೆ ಸವರಿದರೆ 3 ನಿಮಿಷದಲ್ಲಿ ಕೂದಲು ಉದುರಿ ಹೋಗುವುದು ಕ್ರಯ ಸೀಸಾಯಿ 1 ಕ್ಕೆ ಆಣೆ 0 3 0

3 ವಾತನಿವಾರಣ ತೈಲವು—ಈ ತೈಲವನ್ನು ಉಪಯೋಗಿಸುವದರಿಂದ ಎದೆಯಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಶರೀರಕ್ಕೆ ರಾತ್ರಿಯಲ್ಲಿ ಮರ್ದನಮಾಡಿ ಪ್ರಾತಃಕಾಲ ಸ್ನಾನಮಾಡಲು ತಕ್ಷಣ ಗುಣಕಾಣುವುದು ಕ್ರಯ ಸೀಸಾಯಿ 1 ಕ್ಕೆ 0 4-0

4 ಹೊಟ್ಟೆನೋವಿಗೆ ಔಷಧ—ಈ ದ್ರಾವಕವನ್ನು ತಣ್ಣೀರಿನಲ್ಲಿ 4 ತೊಟ್ಟುಗಳು ಹಾಕಿ ಕಲಸಿ ಕುಡಿಸಲು ಕೂಡಲೆ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 0 4 0

5 ಕೆಮ್ಮಲು ರೋಗಕ್ಕೆ ಔಷಧ—ಒಬ್ಬ ಸನ್ಯಾಸಿಯಿಂದ ಕೊಡಲ್ಪಟ್ಟ ಈ ಸಿದ್ಧೌಷಧವನ್ನು 14 ದಿನಗಳು ಸೇವನೆಮಾಡಿದರೆ ಖಂಡಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1ಕ್ಕೆ 0 4 0

6 ವ್ರಣಕ್ಕೆ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ 8 10 ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸ ವ್ರಣಗಳು ಗುಣಪಡುವದು ಕ್ರಯ ಡಬ್ಬಿ 1 ಕ್ಕೆ 0 4 0

7 ಆಶ್ಚರ್ಯಕರವಾದ ಭೇದಿ ಮಾತ್ರೆಗಳು—ಈ ಮಾತ್ರೆಗಳನ್ನು ರಾತ್ರಿ ಮಲಗುವಾಗ ನೀರಿನಲ್ಲಿ ತೆಗೆದುಕೊಂಡು ಮಲಗಿಕೊಂಡರೆ ಬೆಳಗ್ಗೆ ಎಷ್ಟು ಮಾತ್ರೆಗಳನ್ನು ತೆಗೆದುಕೊಂಡು ಇರುತ್ತೇವೆಯೋ ಅಷ್ಟೇ ಭೇದಿಗಳು ಆಗುತ್ತೆ 3 4 ಮಾತ್ರೆಗಳಗಿಂತ ಜಾಸ್ತಿ ತೆಗೆದುಕೊಳ್ಳಕೂಡದು ಕ್ರಯ 0 4 0

8 ತಲೆನೋವಿಗೆ ತೈಲವು—ಈ ತೈಲವನ್ನು ಸ್ವಲ್ಪ ಹಣೆಗೆ ಹಚ್ಚಲು 5 ನಿಮಿಷದಲ್ಲಿ ತಲೆನೋವು ನಿವಾರಣೆಯಾಗುವದು ಈ ತೈಲವನ್ನು ಪ್ರತಿಯೊಬ್ಬರೂ ತಮ್ಮ ಹತ್ತಿರದಲ್ಲಿಟ್ಟಿದ್ದರೆ ಬಹಳ ಅನುಕೂಲವಾಗುತ್ತೆ ಪರೀಕ್ಷೆಮಾಡಿ ನೋಡಿರಿ ಕ್ರಯ ಸೀಸಾಯಿ 1 ಕ್ಕೆ 0 2 6

9 ಉಷ್ಣ ಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಶರೀರದಲ್ಲಿ ಗಾಯಗಳಿದ್ದರೂ, ಈ ಔಷಧವನ್ನು ದಿನಕ್ಕೆರಡಾವರ್ತಿಯಂತೆ 21 ದಿನಗಳು ಸೇವಿಸಲು ಖಂಡಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 1-0 0

10 ಮೂಲವ್ಯಾಧಿಗೆ ಔಷಧ—ಮಲದ್ವಾರದಲ್ಲಿ ರಕ್ತಸ್ರಾವವೂ, ಮತ್ತು ಮೊಳಕೆಯ ಬಾಧೆಯೂ ಸಹಾ ಇದ್ದು ಶ್ರಮಪಡುವವರು ಈ ಮಾತ್ರೆಗಳನ್ನು ದಿನಕ್ಕೆರಡಾವರ್ತಿ ತಣ್ಣೀರಿನಲ್ಲಿ 10 ದಿನಗಳು ಸೇವಿಸಲು ಸಂಪೂರ್ಣವಾದ ಗುಣ ಹೊಂದುವರು ಕ್ರಯ ಸೀಸಾಯಿ 1 ಕ್ಕೆ 0 8-0

11 ಕಣ್ಣಿಗೆ ಸುರ್ಮಾ—ಕಣ್ಣಿನಲ್ಲಿ ನೀರು ಸುರಿಯುವದು, ಕಣ್ಣುರಿ, ದೃಷ್ಟಿ ಕಡಮೆಯಾಗಿರುವದು, ದೂರದೃಷ್ಟಿ ಕಡಮೆಯಾಗಿರುವದು, ಕಣ್ಣಿನಲ್ಲಿ ಹೂವಿರುವದು, ಈ ಸುರ್ಮವನ್ನು ರಾತ್ರಿ ಒಂದಾವರ್ತಿ ಕಣ್ಣಿಗೆ ಹಚ್ಚಲು ಬಹಳ ಗುಣಕೊಡುವದು ಇದನ್ನು ಯಾರು ಬೇಕಾದರೂ ಹಚ್ಚಬಹುದು ಕ್ರಯ ಸೀಸಾಯಿ 1 ಕ್ಕೆ 0 4 0

12 ದಂತ ಚೂರ್ಣವು—ಹಲ್ಲುಗಳು ಅಲ್ಲಾಡುವದು, ರಕ್ತ ಸುರಿಯುವದು, ಕೀವು ಸುರಿಯುವದು, ವಸಡುಗಳಲ್ಲಿ ನೋವು, ಊದುವಿಕೆ, ಬಾಯಿ ದುರ್ಗಂಧ, ಇವುಗಳೆಲ್ಲವೂ ಈ ಚೂರ್ಣದಿಂದ ಹಲ್ಲುಜ್ಜಿ ಸ್ವಲ್ಪ ಹೊತ್ತಿನ ಮೇಲೆ ಬಾಯಿಮುಕ್ಕಳಿಸಲು ನಿವಾರಣೆಯಾಗುವುದು ಕ್ರಯ ಡಬ್ಬಿಗೆ 0 1 3

13 ಕೂದಲು ಬೆಳೆಯುವ ಎಣ್ಣೆ (ಬಂಫೋಲಾ ತೈಲ)— ಅನೇಕರಿಗೆ ಕೂದಲನ್ನು ಬೆಳಸುವ ಇಚ್ಛೆಯಿರುವದು ಈ ತೈಲವನ್ನು 10 15 ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು ತೈಲವು ಬಹಳ ಸುವಾಸನೆಯಾಗಿರುವದು ಮೆದುಳಿಗೆ ತಂಪು ಉಂಟುಮಾಡುವುದು ಕ್ರಯ ಸೀಸಾಯಿ 1 ಕ್ಕೆ 0-4 0

14 ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲ ತಲೆನೋವು ನಿಲ್ಲುತ್ತೆ ಔಷಧವು ಖರ್ಚಾಗದೆ ಹಾಗೆಯೇ ಇರುವದು ಕ್ರಯ ಸೀಸಾಯಿ 1 ಕ್ಕೆ 0-4-0

15 ಕಜ್ಜಿ ಮತ್ತು ಹುಳಕಡ್ಡಿ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ 8 10 ದಿನಗಳು ಒಂದು ಕಡ್ಡಿಗೆ ಅರಳೆಯನ್ನು ಸುತ್ತಿ ಹಚ್ಚಿದರೆ ಖಂಡಿತವಾಗಿ ಗುಣಪಡಿಸುವುದು ಕ್ರಯ ಸೀಸಾಯಿ 1 ಕ್ಕೆ 0 4 0

16 ಆಶ್ಚರ್ಯಕರವಾದ ಪೆನ್ಸಲ್—ಈ ಪೆನ್ಸಲ್‌ನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚೆನ್ನಾಗಿ ಕಾಣುವವು ನೋಡುವವರಿಗೆ ಬಹಳ ಆಶ್ಚರ್ಯವಾಗಿ ಕಾಣುತ್ತೆ ಕ್ರಯ 0-4 0

17 ಬಿಳೀ ಕೂದಲನ್ನು ಕರೀ ಕೂದಲನ್ನಾಗಿ ಮಾಡುವ ದ್ರಾವಕ—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿವಿಗೂ ಕರಿಯ ಕೂದಲುಗಳು ಇರುತ್ತೆ ಒಂದು ಸೀಸೆಯು ಬಹಳ ದಿನಗಳವರಿವಿಗೆ ಉಪಯೋಗಿಸಬಹುದು ಪ್ರತಿಯೊಬ್ಬರೂ ಇಡಬೇಕಾದದ್ದು ಇದನ್ನು ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುವೆವು ಕ್ರಯ 1-0 0

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ನಮಗೆ ಕಾಗದ ಬರೆಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು

1 0 0 ರೂಪಾಯಿಗಿಂತ ಕಡಮೆ ವಿ ಪಿ ಕಳಿಸುವುದಿಲ್ಲ [74 4]

ಡಿ ಮನ್ನಾಲಾಲ್, ಡಿಲ್ಲೀ ವೈದ್ಯರು,
13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ

ಕುಂತಲ ಬಹಾರ ತೈಲ್ಯ.

ಈ ಕುಂತಲ ಬಹಾರ ತೈಲ್ಯವು ಅನೇಕ ತರದ ವನಸ್ಪತಿಗಳಿಂದ ತಯಾರಿ ಮನುಷ್ಯರ ಶಿರಸ್ಸಿನ ಅನೇಕ ತರದ ವ್ಯಾಧಿಗಳನ್ನು ಹೋಗಗೊಳಿಸಿ ಕೂದಲನ್ನು ತ್ವರೆಯಾಗಿ ಬೆಳಸುತ್ತದು ನಿದ್ರಾಭಂಗವನ್ನು ಪರಿಹರಿಸಿ ಬಹಳ ಸುವಾಸನೆ ಕೊಡುವುದು ಅಲ್ಲದೆ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಆಲೋಚನಾ ಶಕ್ತಿಯೂ, ಶೀತಳವೂ, ಸುವಾಸಿಕವೂ, ಬಟ್ಟೆ ತಲೆಯಲ್ಲಿ ಕೇಶವನ್ನು ಬೆಳಸುವದು ಅಲ್ಲದೆ ಈಗಣ ಕೇಶ ತೈಲ್ಯಗಳಲ್ಲಿ ಈ "ಕುಂತಲ ಬಹಾರ ತೈಲ್ಯವು" ಹಿಂಜರಿಯದಷ್ಟು ಪ್ರಖ್ಯಾತಿ ಹೊಂದಿರುವದು (ಮೇ) ಅಂತ್ಯದ ವರೆಗೆ ಶೀಸೆ 1 ಕ್ಕೆ ಬೆಲೆ ಆಣೆ 9 ನಂತರ ಶೀಸೆ 1 ಕ್ಕೆ ರೂ 1 ಕುಂತಲ ಬಹಾರ ತೈಲ್ಯದ ಪ್ರಖ್ಯಾತಿ ಹೊಂದುವರೆ ಮಾತ್ರ ರೂಪಾಯಿ 1 ರಿಂದ 9 ಆಣೆಗೆ ತಗ್ಗಿಸಲ್ಪಟ್ಟಿರುವದು ಟಪ್ಪಾಲು ಖರ್ಚು ಶೀಸೆ 1 ಕ್ಕೆ 1 ಆಣೆ ಅಲಾಹಿದಾ ಗ್ರಾಹಕರು ಕೊಡಬೇಕಾಗುವದು [78 3]

ನಮ್ಮ ವಿಳಾಸ — ಮೋಹನ್ ಅಂಡ್ ಕಂಪೆನಿ,
ಮಂಗಳಾದೇವಿ ಬೀದಿ, ಮಂಗಳೂರು.

ಮನೆಗಳಲ್ಲೂ, ಕಲಿಯಕಕ್ಕೆ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ವಿವರಿಸಿರುವ ಈ ಪುಸ್ತಕದೊಳಗೆ ಶಾಸ್ತ್ರ ರೀತಿಯಲ್ಲಿ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು ಇಂಥಾ ಪುಸ್ತಕ ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ವಿಧಾನಗಳನ್ನೂ, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಪದಾರ್ಥ ಮತ್ತು ಮಿಶ್ರಗಳನ್ನೂ ಕಲಿತುಕೊಳ್ಳಬಹುದು ಈ ಪುಸ್ತಕದಲ್ಲಿ 38 ಚಿತ್ರಗಳೂ, 30 ನಕ್ಷೆಗಳೂ ಇವೆ

ಕ್ರಯ 1 ಪುಸ್ತಕಕ್ಕೆ ರೂ 2, ಪೋಸ್ಟೇಜ್ ಬೇರೆ
ವಿಳಾಸ—ರಾವ್ಸ್ ಟೈಲರಿಂಗ್ ಕಾಲೆಜು,
[15 10] 30 ಪಿಕೆಟ್ ರೋಡ್, ಕಾಲ್ಬಾದೇವಿ, ಬೊಂಬಾಯಿ

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 4,20,00,000
ಕಂಪನಿಯಿಂದ ಪಾವತಿ ಆಗಿರುವದು ,, 3,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ| ಎಂ ಎಸ್ ರಟೆರೂ, ಚೀಫ್ ಏಜೆಂಟ್, ಬೆಂಗಳೂರು, ಮ ಎಂ ಎಸ್ ನಂಜಪ್ಪನವರು ಅಥವಾ ಮ| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ
[191 29] ಬ್ರಾಂಚ್ ಸೆಕ್ರೆಟರಿ, ಮದರಾಸ್

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ ಈ ಕಾನೂನಿಗನುಸಾರವಾಗಿ ಭರವಸೆಯ ಜೀವನಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 45] ಎನ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಮರೆಯಬ್ಯಾಡಿರಿ ಮರೆಯಬ್ಯಾಡಿರಿ

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರೆಯುವದು

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ಸೆಳೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಾಬೂನುಗಳಿರುವ ಪೆಟ್ಟಿಗೆ 1 ಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0 ಅಂಚೇ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [77-2]

ವಿಳಾಸ —ವಿ ಎ ಎಸ್ ಪಾಣಿ ಕಂಪನಿ,
ನಂಬರ್ 3, ಇರುಳಪ್ಪನ್ ಬೀದಿ, ಮದರಾಸು

Printed and Published by the Rev. H Gulliford, Proprietor and Manager, Wesleyan Mission Press, Mysore 16/4/1914

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಪ್ರತಿಯು ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು ೧೯೧೫ನೇ ಇಸವಿ ಏಪ್ರಿಲ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೪೨

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡಿಸ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು ನೆಗಡಿ, ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಿಕಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಜಟ್ಟು, 1 ರಿಂದ 13 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [170 31]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿಕೆಂದು ಕೂಗಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೆಚಾಡಬೇಡಿ! ಒಂದೇ ಒಂದು ಬುಡ್ಡಿಯು ೧೦೦। ಡಾಕ್ಟರು ಉಪಚಾರದ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಮನ ವೈದ್ಯಶಾಲಾ, ಮೈಸೂರು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರ್ಮಾಡಿರುವದು.

[1 17]

ಮೆಲ್ಲಿನ್‌ರವರ ಲಾಕ್ಟೋ ಎಂಬಾಹಾರ

ಇದರಲ್ಲಿ ಮೆಲ್ಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ ಕೆಲವು ನಿಮಿಷಗಳಲ್ಲಿ ತಯಾರ್ ಮಾಡಿಕೊಳ್ಳುವದು ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ

ಬಳಗಿನ ಜಾಕ್ತೆ ಮೆಲ್ಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಲವಲವಿಕೆಯನ್ನೂ ಕೊಡುತ್ತದೆ

Messrs OAKES & Company, Mount Road Madras

ವಿಳಾಸ —ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ ಮೌಂಟ್ ರೋಡ್, ಮದರಾಸು

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೋ ವೆಯಿನಾಡ್ರೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಉಂಟಾಗುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗಿಂತಲೂ ಇದು ಅತ್ಯುತ್ತಮವಾದದ್ದು ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ



ಎಲಿಕ್ಟ್ರೋ ವೆಯಿನಾರ್ಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕು ಹಿಡಿದಿದ್ದರೂ, ಕರಿನರ್ಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಕೃತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12–16]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುತ್ತದೆ

ಬುಡ್ಡಿಯ ಕ್ರಯ ರೂ. 0–8 0. ವಿ ಪಿ ಖರ್ಚು 0 4 0 ಏಜಂಟರು ಬೇಕು

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಕಪ್ಪಾಗಿಯೂ ಸಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ಹೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಗ್ಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು



—ಳುಕರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ಕೃಷ್ಟೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವದು ಸೀಸೆಯೊಂದರ ಕ್ರಯ ರೂ 1-0 0 ಅ ವೆ 0 4-0 ಬೇರೆ, 3 ಸೀಸೆಗಳ ಕ್ರಯ ರೂ 2 10-0, ಅ ವೆ 0 7-0 ಬೇರೆ

ಸೂಚನೆ —ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಓಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕ ಇಲ್ಲವು ಒಂದೇ ಒಂದು ಸಲ ನಿಮ್ಮ ಕೈಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಹಾಕಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯ ಅರಳಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಏನೂ ಇರಲಿ ಈ ಓಟೋ ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ [19 15

ಸಣ್ಣ ಸೀಸೆಯ ಬೆಲೆ ರೂ 0 8 0 ಒಂದು ಡ್ರಾಮಿನ (ಮಾಡಿಯಂ) ಸೀಸೆ 1ಕ್ಕೆ 0 12 0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0 0 ಅಂಚೆಯ ವೆಚ್ಚ ಬೇರೆ ರೂ 0-4 0 ಓಟೋ ದಿಲ್ ಬಹಾರ್ ಪರಿಮಳದ ಕಾಡುಗಳು ಡಜನ್ ಒಂದಕ್ಕೆ 0 12 0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ —

ಆಂಗ್ಲೋ ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜಂಟ್, ಡಿ. ಉಲ್ಲಾ ಷರೀಫ್, ಮಂಗಳೂರು

ಸ್ಕೂಲ್ ಬಹುಮಾನಸಭೆ

ಮಂಡ್ಯದ ತಾಲ್ಲೂಕು ಬಸರಾಳುಗ್ರಾಮ

ಕಳೆದ ತಾ 15 ನೇ ಬುಧವಾರ ಸಾಯಂಕಾಲ ಇಲ್ಲಿಯ ಗೌರ್ನಮೆಂಟ್ ಕನ್ನಡ ಎ ಇ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳನ್ನು ಹಂಚಿದರು ಇದಕ್ಕೆ ಸ್ಕೂಲ್ ಕಟ್ಟಡವನ್ನು ತೋರಣಾದಿಗಳಿಂದ ಅಲಂಕರಿಸಿದ್ದರು ಈ ಗ್ರಾಮದಲ್ಲಿ ವಾಸವಾಗಿರುವ ಮೆಂಬರುಗಳಾದ ಶ್ರೀ॥ ಪರಮೇಶ್ವರಯ್ಯನವರೂ ಮತ್ತು ಶ್ರೀ॥ ಲಿಂಗಣ್ಣಯ್ಯನವರೂ ಅಧ್ಯಕ್ಷತೆ ವಹಿಸಿದ್ದರು ವರ್ತಕ ಮಂಡಲಿಯವರೂ, ಗೌರ್ನಮೆಂಟ್ ಉದ್ಯೋಗಸ್ಥರೂ ದಯಮಾಡಿದ್ದರು ಸಭೆಯು ವಾದ್ಯಘೋಷದೊಡನೆ ತುಂಬಿತ್ತು ಹೆಡ್ ಮಾಸ್ಟರು ಮ॥ ಎಂ ವೆಂಕಟಸುಬ್ರಹ್ಮಣ್ಯಯ್ಯನವರು ಸ್ಕೂಲ್ ರಿಪೋರ್ಟು ಓದಿ, ಕೈಗಾರಿಕೆ ವಿಷಯವಾಗಿಯೂ ಉಪನ್ಯಾಸಮಾಡಿದರು ಅ॥ ಮಾಸ್ಟರುಗಳಾದ ಬಿ ಕೆ ವಿಶ್ವೇಶ್ವರಯ್ಯನವರ ೩, ಎಸ್ ಸಿದ್ಧೋಜಿರಾಯರೂ ತಕ್ಕಮಟ್ಟಿಗೆ ಸಂಪೂರ್ಣವಾಗಿ ಬಾಲಕರಿಗೆ ಕಿಂಡರ್‌ಗಾರ್ಟನ್ ರೀತ್ಯಾ ವಿದ್ಯೆ ಕಲಿಸುವುದರಿಂದುಂಟಾಗುವ ಪ್ರಯೋಜನವನ್ನು ಕುರಿತು ಉಪನ್ಯಾಸಮಾಡಿದರು ಸಭೆಯ ಪರವಾಗಿ ಮ॥ ಬಿ ವೆಂಕಟರಾಮಯ್ಯನವರು ಸುಮಾರು 15 ವರುಷಗಳ ಕೆಳಗೆ ಇದ್ದ ಸ್ಕೂಲ್ ಸ್ಥಿತಿಯನ್ನೂ, ಪ್ರಕೃತ ಅಭಿವೃದ್ಧಿಯಲ್ಲಿರುವ ವಿಷಯವನ್ನೂ, ಮಾಸ್ಟರುಗಳು ಚಟುವಟಿಕೆಯಾಗಿ ಕೆಲಸಮಾಡುವ ವಿಷಯವನ್ನೂ ಕುರಿತು ಉಪನ್ಯಾಸ ಮಾಡಿದರು ಮ॥ ವೈ ಎನ್ ರಾಮಣ್ಣನವರು ನೂತನ ವಿದ್ಯಾಭ್ಯಾಸ ಮತ್ತು ಕೈಗಾರಿಕೆ ಪ್ರಯೋಜನವನ್ನು ಕುರಿತು ಸ್ವಲ್ಪಕಾಲ ಉಪನ್ಯಾಸ ಮಾಡಿದನಂತರ ಸ್ಕೂಲ್ ಬಾಲಕಿಯರು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಕೆಲವು ಹಾಡುಗಳನ್ನು ಹಾರ್ಮೋನಿಯಂ ವಾದ್ಯದೊಡನೆ ಇಂಪಾಗಿ ಗಾನಮಾಡಿದರು ಅ॥ ಮಾಸ್ಟರು ಸಿದ್ಧೋಜಿರಾಯರೂ ಕೆಲವು ಭಗವನ್ನಾಮಕೀರ್ತನೆಗಳನ್ನು ಇಂಪಾಗಿ ಗಾನಮಾಡಿದರು ತರುವಾಯ ಬಹುಮಾನ ಪುಸ್ತಕಗಳು ವಿದ್ಯಾರ್ಥಿಗಳಿಗೆ ಹಂಚಲ್ಪಟ್ಟು, ಸಭೆಯು ಗಂಧ ಪುಷ್ಪ ತಾಂಬೂಲಗಳಿಂದ ಬರಖಾಸ್ತಾಯಿತು

ಗ್ರಾಮಾಭಿಮಾನಿ

ಸಾತ್ವಿಕ ಶ್ರೀವೈಷ್ಣವ ಸಭಾ

ಈ ಸಭೆಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾದರಹಳ್ಳಿಯಲ್ಲಿ ಈ ತಿಂಗಳು 1,,12 ನೇ ತಾರೀಖುಗಳಲ್ಲಿ ಸೇರಿತ್ತು ಈ ಸಭೆಯಲ್ಲಿ ಸಾತ್ವಿಕ ಶ್ರೀವೈಷ್ಣವರು ಮತ್ತು ಇತರ ಜನಗಳು ಸಹ ಸೇರಿ ಸುಮಾರು 200 ಜನಗಳವರಿಗಿದ್ದರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಮ॥ ವಿ ಗೋಪಾಲಯ್ಯಂಗಾರು ಸಭಾಧ್ಯಕ್ಷರಾಗಿದ್ದರು ಕಡಬ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರು ವಿದ್ಯಾಭ್ಯಾಸದಿಂದ ಉಂಟಾಗುವ ಪ್ರಯೋಜನವನ್ನು ಕುರಿತು ನೀತಿಮಂಜರಿಯಿಂದಲೂ, ಭರ್ತೃಹರಿಯಿಂದಲೂ ಕೆಲವು ವಿಷಯಗಳನ್ನು ತೆಗೆದು ಉದಾಹರಿಸಿ ಜನಗಳಿಗೆ ವಿಶದವಾಗಿ ತಿಳಿಯುವ ಹಾಗೆ ಉಪನ್ಯಾಸ ಮಾಡಿದರು ಅಮಲ್ದಾರ್ರು ವಿದ್ಯಾಭಿವೃದ್ಧಿಯ ವಿಷಯದಲ್ಲಿ ನಮ್ಮ ಇಂಡಿಯಾ ದೇಶವು ಇಂಗ್ಲಿಷರಿಂದ ಹೊಂದಿರತಕ್ಕ ಉಪಕಾರವನ್ನು ಕುರಿತು ಕೆಲವು ವಿಷಯಗಳನ್ನು ತಿಳಿಸಿದನಂತರ ವಿದ್ಯಾಭಿವೃದ್ಧಿಯಿಂದಲೇ ಜಪಾನ್ ರಾಜ್ಯವು ಅಭಿವೃದ್ಧಿಸ್ಥಿತಿಗೆ ಬಂತೆಂತಲೂ, ನಮ್ಮ ಮೈಸೂರು ಸರ್ಕಾರದವರು ವಿದ್ಯಾಭಿವೃದ್ಧಿಯ ವಿಷಯದಲ್ಲಿ ಮಾಡುವ ಏರ್ಪಾಡುಗಳಿಗೆ ಪ್ರಜೆಗಳು ಭಾಗಿಗಳಾಗಿ ವಿದ್ಯೆಯನ್ನು ಹೆಚ್ಚಿಸಿಕೊಂಡು ಎಲ್ಲರೂ ಐಕಮತ್ಯದಿಂದ ಪುರೋವೃದ್ಧಿಗೆ ಬರಬೇಕೆಂತಲೂ ಅನೇಕ ಉಪಮಾನಗಳಿಂದ ಉಪನ್ಯಾಸಮಾಡಿದರು ಇವರ ಉಪನ್ಯಾಸದ ದೆಸೆಯಿಂದ ಆ ಕೂಡಲೆ ಸಾದರಹಳ್ಳಿಯಲ್ಲಿ ಪರಸ್ಪರ ಸಹಾಯಕ ಸಂಘವೊಂದು ಏರ್ಪಾಡಾಯಿತು ಈ ಅಮಲ್ದಾರ್ರು ಪ್ರಜೆಗಳಲ್ಲಿ ಇಟ್ಟಿರುವ ಪ್ರೀತಿ ದಯೆ ಪುರೋವೃದ್ಧಿಯ ವಾತ್ಸಲ್ಯ ಇವುಗಳನ್ನು ಕುರಿತು ಹೊಗಳಲು ಇವರು ಮಾಡಿದ ಉಪನ್ಯಾಸ ಸಾಕ್ಷಿಯಾಗಿದೆ 11 ನೇ ತಾ ಮಧ್ಯಾಹ್ನ ರಾ॥ ಕೊಂಡಮಾಚಾರ್ಯರು ಶ್ರೀ ವೈಷ್ಣವ ಸಮಯ ಮತ್ತು ಸಮಯಾಚಾರ ಇವುಗಳ ವಿಷಯದಲ್ಲಿ ಉಪನ್ಯಾಸ ಮಾಡಿದರು ಅನಂತರ ಗಂಧ ಪುಷ್ಪ ತಾಂಬೂಲಗಳ ವಿನಿಯೋಗವಾಗಿ ಸಭಾ ಕಾರ್ಯವು ಮುಕ್ತಾಯವಾಯಿತು ಈ ಸಭೆಯು ಹೂಗರೇಹಳ್ಳಿ ಶ್ರೀಮಾನ್ ರಾಮಕೃಷ್ಣಪ್ಪನವರ ಮಕ್ಕಳು ಹನುಮಂತರಾಯರ ಪ್ರೋತ್ಸಾಹದ ಮೇಲೆ ಏರ್ಪಾಡಾಯಿತು ಸಾದರಹಳ್ಳಿ ಪಟೇಲ್ ಮ ಗಳಾದ ಲಕ್ಷ್ಮಯ್ಯನವರು, ಕೃಷ್ಣಯ್ಯನವರು, ಎಸ್ ಎ ತಿರುಮಲಾಚಾರ್ಯರು, ಬೆಳಗುಲಿ ತಿರುಮಲರಾಯರು, ಕೊಡಲಾಗರದ ನರಸಿಂಹಯ್ಯನವರೇ ಮುಂತಾದ ಸ್ಥಳಿಕರು ಸಭೆಗೆ ಬಂದಿದ್ದ ಅಭ್ಯಾಗತರನ್ನು ತಕ್ಕ ಮಾನಸನ್ಮಾನಗಳಿಂದ ಉಪಚರಿಸಿ ತಕ್ಕ ಗೌರವದಿಂದ ಕಳುಹಿಸಿದ್ದಕ್ಕಾಗಿ ಅವರ ಮಹೋಪಕಾರವು ಚಿರಸ್ಮರಣೀಯವಾಗಿದೆ

ಬಾತ್ಮಿದಾರ್

ನಮ್ಮ ಪುಸ್ತಕ ಭಂಡಾರವು

“ರಾಜಭಕ್ತಿ ”—ಇದು ಯಾಜ್ಞವಲ್ಕ್ಯ ಪ್ರಣೀತ ರಾಜತಂತ್ರದ ರಾಜಭಕ್ತಿ ವಿಷಯವಾದ ಉಪನ್ಯಾಸವು ಇದರಲ್ಲಿ ಅವತರ್ಣ, ಉಪನ್ಯಾಸ ಶಬ್ದಾರ್ಥ, ಧರ್ಮದಂಡನಿರ್ಣಯ, ಪ್ರಭುಶಕ್ತಿ ಮಹಿಮೆ ಮೊದಲಾದುವು ಪ್ರೌಢವಾಗಿ ಉಪನ್ಯಸಿಸಲ್ಪಟ್ಟಿವೆ ಉಪನ್ಯಾಸಕರು ಆನೇಕಲ್ಲಿನಲ್ಲಿರುವ ವೇ॥ ಟಿ ಪಂಡಿತ ಸುಬ್ರಾಯಶಾಸ್ತ್ರಿಗಳವರು ಬೆಂಗಳೂರು ಟವರ್ ಪ್ರೆಸ್ಸಿನಲ್ಲಿ ಅಚ್ಚಾಗಿರುವ ಇದನ್ನು ಬೆಂಗಳೂರು ಶಂಕರಪುರದ ಬೌತಿಕ ಕಲಾನಿಧಿ ಆಫೀಸ್ ಮ್ಯಾನೇಜರ್ ಮ॥ ಎಸ್ ಎಸ್ ರಾಮಸ್ವಾಮಿ ಅಯ್ಯರವರಿಂದ ತರಿಸಿಕೊಳ್ಳಬಹುದು ಇದರ ಬೆಲೆ 6 ಆಣೆ

“ಮಾಲಿನೀ ”—ಇದೊಂದು ಕಲ್ಪಿತ ಕಾದಂಬರಿ ವಧೂವರರು ಪರಸ್ಪರ ಪ್ರೀತಿಯಿಂದ ಮಾಡಿಕೊಳ್ಳುವ ಮದುವೆಗೂ, ವಧೂವರರ ವಯಸ್ಸು ಬೇರಧಾರ್ಢ್ಯ ಮೊದಲಾದವುಗಳ ಹೊಂದಿಕೆಯಿಂದ ಆಗುತಲಿರುವ ವಿವಾಹಕ್ಕೂ ಇರುವ ವ್ಯತ್ಯಾಸಗಳೂ, ಫಲಾಫಲಗಳೂ, ಕಥಾನಾಯಕನಾದ ಮನೋಹರನ ಸುಗುಣಗಳೂ ಈ ಚಿಕ್ಕ ಕಾದಂಬರಿಯಲ್ಲಿ ಅಂಕಿತವಾಗಿವೆ ಭಾಷೆಯು ತಕ್ಕ ಮಟ್ಟಿಗೆ ಸರಳವಾಗಿದೆ ಚಾಮರಾಜನಗರದ ಕಾದಂಬರೀ ಸಂಗ್ರಹ ಗ್ರಂಥಮಾಲೆಯ ಸಂಪಾದಕರು ಪ್ರಕಟಿಸಿರುವ ಮಾಗಡಿ ಮ॥ ಎಂ ಟಿ ಮಲ್ಲಭಯ್ಯಂಗಾರ್ಯರಿಂದ ವಿರಚಿತವಾದ ಇದರ ಬೆಲೆ 3 ಆಣೆ

“ಶ್ರೀರಾಮಚರಿತೆ ” —ಗಂಜಾಂ ಸ್ಕೂಲ್ ಹೆಡ್ ಮಾಸ್ಟರು ಮ॥ ಎಂ ಕೃಷ್ಣಪ್ಪನವರು ಈ ಪದ್ಯ ಗ್ರಂಥವನ್ನು ರಚಿಸಿರುತ್ತಾರೆ ಕಾಳಿದಾಸ ಮಹಾಕವಿಯಿಂದ ರಚಿಸಲ್ಪಟ್ಟಿರುವ ರಘುವಂಶದ ಏಳು ಸರ್ಗಗಳನ್ನು ಎತ್ತಿ ಕನ್ನಡಿಸಿ ಸೀಸಾ ಸಂಧಿಯನ್ನು ಭಾಮಿನಿ ಷಟ್ಪದಿಯಲ್ಲೂ, ಉಳಿದ ಭಾಗವನ್ನು ಕುಸುಮ ಷಟ್ಪದಿಯಲ್ಲೂ ಬರೆದು ಬರುವರು ಇದು ಕರ್ಣಾಟಕ ಗ್ರಂಥಮಾಲೆಯ ಸಂಚಿಕೆಗಳಲ್ಲಿ ಪ್ರಕಟವಾಗಿರುತ್ತವೆ ಪದ್ಯಗಳು ಲಲಿತವಾಗಿಯೂ ಮನೋಹರವಾಗಿಯೂ ಇರೋಣದರಿಂದ ಮಕ್ಕಳು ಓದುವುದಕ್ಕೆ ಯೋಗ್ಯವಾಗಿರುವಂತೆ ಕಾಣುತ್ತದೆ ಮೈಸೂರು ಜಿ ಟಿ ಎ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿಸಲ್ಪಟ್ಟ ಗ್ರಂಥಕರ್ತರಲ್ಲಿ ದೊರೆಯುವುದು ಕ್ರಯ 12 ಆಣೆ

“ಸಂಗೀತ ಪದಯುಕ್ತ ನೀತಿಬೋಧಕ ಕಥೆಗಳು ”—ಪಾಠಶಾಲೆಗಳಲ್ಲಿ ಕಿಂಡರ್‌ಗಾರ್ಟನ್ ಪದ್ಧತಿಯನ್ನು ಅನುಸರಿಸಿ ಕಥೆಗೆ ಅಲ್ಲಲ್ಲಿ ಪದ ಹೇಳುತ್ತಾರೆ ಆ ಪದ್ಧತಿಯ ಪಾಠಕ್ರಮಕ್ಕೆ ಕಥೆಗಳೂ ಸೇರುತ್ತವೆ ಈ ಪುಸ್ತಕದಲ್ಲಿ ಕಿಂಡರ್‌ಗಾರ್ಟನ್ ಪಾಠಕ್ರಮಕ್ಕೆ ಸಂಬಂಧಿಸಿಕೊಳ್ಳಲು 20 ಕಥೆಗಳು ಬರೆಯಲ್ಪಟ್ಟಿವೆ ಕಥೆಯು ಮೊದಲು ಒಂದು ನೀತಿಶ್ಲೋಕವೂ, ಅನಂತರ ಅದರ ತಾತ್ಪರ್ಯವೂ, ಬಳಿಕ ಕಥೆಯೂ, ಕಡೆಯಲ್ಲಿ ಕಥೆಗೆ ಸಂಬಂಧಿಸುವಂತೆ ಒಂದು ಹಾಡೂ ಪ್ರತಿ ಕಥೆಯಲ್ಲೂ ಬರೆಯಲ್ಪಟ್ಟಿವೆ ಇದರ ಕ್ರಮವು ನೀತಿಚಿಂತಾಮಣಿಯನ್ನು ಹೋಲುವುದು ಅಪೇಕ್ಷಿತರು (ಕೊಡಗು) ಮಡಿಕೇರಿಯಲ್ಲಿರುವ ಮ॥ ಪಿ ಆರ್ ದಾಸ್ (ಗ್ರಂಥಕರ್ತ) ರವರಿಗೆ ಬರೆದು ಪುಸ್ತಕವನ್ನು ಪಡೆಯಬಹುದು

“ಸುಶೀಲೆ ”—ಇದರಲ್ಲಿ ಗ್ರಂಥಪ್ರಕಾಶಕರ ಪೀಠಿಕೆಯೂ, ಗ್ರಂಥಕರ್ತ್ರಿಯರ ಪ್ರಸ್ತಾವನೆಯೂ ರಮ್ಯವಾಗಿರುವವು ಈ ವಚನ ಗ್ರಂಥದಲ್ಲಿ ಹಲವೆಡೆ ಸಂಸ್ಕೃತ ಶಬ್ದಗಳೂ, ಕೆಲವೆಡೆ ಶೃಂಗಾರ ವಚನಗಳೂ ಕಂಡು ಬಂದರೂ ಸ್ತ್ರೀಯರು ಇಷ್ಟು ಚೆನ್ನಾಗಿ ಗ್ರಂಥವನ್ನು ಬರೆದಿರುವ ವಿಷಯದಲ್ಲಿ ನಾವು ಸಂತೋಷಿಸದಿರಲಾರೆವು ಇದರಲ್ಲಿ ಸುಶೀಲೆಯು ತನ್ನ ಪತಿಯನ್ನು ಒಳ್ಳೆಯ ದಾರಿಗೆ ತರಲು ಯೋಚಿಸಿದ ಯತ್ನಗಳೂ ವರ್ತನೆಗಳೂ ಉಕ್ತವಾಗಿವೆ ಈ ಸಾಂಸಾರಿಕ ಕಥೆಯನ್ನು ಅಪೇಕ್ಷಿತರು ಮೈಸೂರು ಹನುಮಾನ್ ಕಂಪನಿಯಲ್ಲೂ, ನಂಜನಗೂಡಿನಲ್ಲಿರುವ ಗ್ರಂಥಕರ್ತ್ರಿಯರಾದ ಶ್ರೀಮತಿ ತಿರುಮಲಮ್ಮನವರಿಂದಲೂ ಪಡೆಯಬಹುದು ಮೈಸೂರು ಕ್ರೌನ್ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿತವಾಗಿರುವ ಇದರ ಬೆಲೆ 6 ಆಣೆ

ಪ್ರಾಣಿವೈದ್ಯ ಔಷಧಿ ಪ್ರಕಾಶಿಕೆ —ಬೆಂಗಳೂರು ವೈದ್ಯಸಿಂಧು ಗ್ರಂಥಮಾಲೆಯಲ್ಲಿ ಜನಗಳಿಗೆ ಬಹು ಮಟ್ಟಿಗೆ ಉಪಯೋಗವಾಗಬೇಕೆಂದು ಪ್ರಕಟಿಸುತ್ತಲಿರುವ ಪುಸ್ತಕಗಳಲ್ಲಿ ಇದು 29 ನೆಯದಾಗಿರುತ್ತದೆ ಇದರಲ್ಲಿ ಪ್ರಾಣಿಗಳ ಹಾಲು ಮಜ್ಜೆ ಮೊದಲಾದವುಗಳಿಂದ ಯಾವ ಬಗೆಯ ಗುಣಾವಗುಣಗಳು ಕಂಡುಬರುವುವೆಂಬುದು ವಿವೃತವಾಗಿದೆ ಕೊನೆಯಲ್ಲಿ ಅಮ್ಮನ ಶಿಡುಬು, ಪ್ಲೇಗ್ ಶಿಡುಬು ಮೊದಲಾದವುಗಳ ಚಿಕಿತ್ಸಾಕ್ರಮವು ಉಕ್ತವಾಗಿದೆ ಸರ್ವರೂ ತಿಳಿಯಬೇಕಾದ ಅನೇಕ ಸಂಗತಿಗಳು ಇದರಲ್ಲಿ ಸುಲಭವಾಗಿ ತಿಳಿಸಲ್ಪಟ್ಟಿವೆ ಬೆಂಗಳೂರು ಕ್ಯಾಶ್ಬುಕ್ ಪ್ರೆಸ್ಸಿನಲ್ಲಿ ಮುದ್ರಿತವಾಗಿರುವ ಈ ಗ್ರಂಥವನ್ನು ಅಪೇಕ್ಷಿಸತಕ್ಕವರು ಗ್ರಂಥಕರ್ತರಾದ ಮ॥ ವೈದ್ಯ ಪಂಚಾನನ ವಿ ಡಿ ಪಂಡಿತರ ವೈದ್ಯಸಿಂಧು ಗ್ರಂಥಮಾಲಾ ಆಫೀಸ್, ಬೆಂಗಳೂರು, ಇವರ ಮೂಲಕ ಪಡೆಯಬಹುದು ಕ್ರಯ ೧ ಆಣೆ

“ಗೋವೈದ್ಯಸಾರಸಂಗ್ರಹ ”—ಇದು 4 ಪುಟ ಪೀಠಿಕೆಯನ್ನೂ, 16 ಪುಟಗಳಿಂದ ಅವತರಣಿಕೆಯನ್ನೂ, ಉಳಿದ 38 ಪುಟಗಳಿಂದ ಗೋವಿಗೆ ಬರಬಹುದಾದ ರೋಗಗಳು, ಆ ರೋಗಗಳ ಲಕ್ಷಣಗಳು, ಆ ರೋಗಕ್ಕೆ ಮಾಡಬಹುದಾದ ಚಿಕಿತ್ಸೆ ಮುಂತಾದುವನ್ನೂ ವಿವರಿಸಿವೆ ಗೋವಿಗೆ ಬರುವ 100 ರೋಗಗಳ ಚಿಕಿತ್ಸೆಯನ್ನು ಇದರಲ್ಲಿ ಗ್ರಂಥಕಾರರು ವಿವರಿಸುತ್ತಾರೆ ಗ್ರಂಥಕರ್ತರು ಪೂರ್ವಿಕರು ಸಂಗ್ರಹಿಸಿದ್ದ ಗೋವೈದ್ಯಸಾರವನ್ನು ತಾವು ಬರೆದಿರುವಂತೆ ತಿಳಿಸುತ್ತಾರೆ ಇದರಲ್ಲಿ ವಿವರಿಸಿರುವಂತೆ ಚಿಕಿತ್ಸೆಮಾಡುವುದು ಜನರಿಗೇನೂ ಕಷ್ಟವಲ್ಲ ಮೈಸೂರು ಸರ್ಕಾರದ ಪಶುವೈದ್ಯದ ಇಲಾಖೆಯವರು ಈ ಪುಸ್ತಕವನ್ನು ತರಿಸಿಕೊಂಡು ಇದರಲ್ಲಿ ಹೇಳಿರುವ ಚಿಕಿತ್ಸೆಗಳ ಸಾಧಕ ಬಾಧಕಗಳನ್ನು ಪರೀಕ್ಷಿಸಿ ಪ್ರಕಟಿಸಬೇಕಾದದ್ದು ಆವಶ್ಯಕವೆಂದು ತೋರುತ್ತದೆ ಮೈಸೂರು ಕೆ ನರಸಿಂಹಯ್ಯ ಕಂಪನಿ, ಪ್ರಿಂಟರ್ಸ್, ಇವರಿಂದ ಮುದ್ರಿತವಾಗಿರುವ ಇದರ ಬೆಲೆ 4 ಆಣೆ ಪುಸ್ತಕವು ಮೈಸೂರು ಹಳೇ ಅಗ್ರಹಾರದಲ್ಲಿರುವ ಎ ನಂಜಪ್ಪನವರಲ್ಲಿ ದೊರೆಯುವುದು

“ಪ್ರಾಕೃತಿಕ ಭೂಗೋಳ (2 ನೆಯ ಭಾಗ) —ಇದು ಮೈಸೂರು ಇಟ್ಟಿಗೇಗೂಡಿನ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರಾದ ಮ ಎಂ ಪಿ ಲಿಂಗಪ್ಪಯ್ಯನವರಿಂದ ಭೂವಿವರಣೆಯ ಸಾಮಾನ್ಯ ಶಾಸ್ತ್ರ ವಿಷಯಗಳನ್ನು ಅಲ್ಲಲ್ಲಿ ಚಿತ್ರಗಳ ಮೂಲಕ ವ್ಯಕ್ತವಾಗುವಂತೆ ವಿವರಿಸಿ ಪ್ರಶ್ನೋತ್ತರ ರೂಪದಲ್ಲಿ ಬರೆಯಲ್ಪಟ್ಟ ಪುಸ್ತಕ ಈ ಪುಸ್ತಕದ ದ್ವಿತೀಯ ಮುದ್ರಣವೇ ವಿದ್ಯಾರ್ಥಿಗಳಿಗೆ ಇದರ ವಿಷಯದಲ್ಲಿರುವ ಅಭಿರುಚಿಯನ್ನು ಸ್ಪಷ್ಟಗೊಳಿಸುವುದು ಪುಸ್ತಕವು ಪ್ರಶ್ನೋತ್ತರ ರೂಪದಲ್ಲಿರುವುದರಿಂದಲೂ, ಇದು ದೇಶೀಯ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಪ್ರಾಯಶಃ ಪಾಠ ಪುಸ್ತಕವಾಗಿರುವುದರಿಂದಲೂ ಅವರು ಈ ಪ್ರಶ್ನೋತ್ತರಕ್ರಮವನ್ನೇ ಬಾಯಿಪಾಠ ಮಾಡಿಯಾರೆಂದೂ, ಆದರಿಂದ ವಿದ್ಯಾರ್ಥಿಗಳಿಗೆ ಭೂಗೋಳ ಪುಸ್ತಕದ ಕೂಡ ಓದಿಕೊಳ್ಳುವುದಕ್ಕೆ ಸಹಾಯವಾಗಿದೆ ಎಂದೂ ಸೂಚಿಸುತ್ತೇವೆ ಒಟ್ಟಿನಲ್ಲಿ ಈ ಪುಸ್ತಕದ ಕ್ರಮಗಳು ಚೆನ್ನಾಗಿದೆಯೆಂದು ಹೇಳಬಹುದು ಇದರ ಬೆಲೆ 4½ ಆಣೆ ಮೈಸೂರು ಎ ಯಲ್ ಯಸ್ ಬುಕ್ ಡಿಪೋ ಮ್ಯಾನೇಜರವರಲ್ಲಿ ದೊರೆಯುವುದು

“ಪ್ರೈತಭಾಷ್ಯದ ಪ್ರಕ್ಷಿಪ್ತವಚನವೆಂಬ ಜಾತಕ ”— ಪ್ರೌಢಾ ವಿವಾಹವು ವೇದೋಕ್ತವಾದುದು ಕನ್ಯಾ ವಿವಾಹವು ವೇದೋಕ್ತವಲ್ಲ ವೇದೋಕ್ತವಲ್ಲದ, ಕನ್ಯಾ ವಿವಾಹವನ್ನು ಬಲಪಡಿಸುವುದಕ್ಕಾಗಿ ಶ್ರುತಿ ಸ್ಮೃತಿ ಭಾಷ್ಯಾದಿಗಳಲ್ಲಿ ಹೊಸಹೊಸ ಅಂಶಗಳು ಸೇರಿಸಲ್ಪಟ್ಟಿವೆ ಹೀಗೆ ಸೇರಿಸಲ್ಪಟ್ಟ ಗ್ರಂಥಕಾರರಲ್ಲದವರ ನವೀನ ಕಲ್ಪಿತ ವಚನಗಳೇ ಪ್ರಕ್ಷಿಪ್ತ ವಚನಗಳು “ಸ್ತ್ರೀಣಾಂ ಪ್ರದಾನ ಕರ್ಮೈವ ಯಥೋಪನಯನಂ ತಥಾ ” ಎಂಬುದು ಶ್ರೀ ಮಧ್ವಾಚಾರ್ಯರು ಭಾಷ್ಯದಲ್ಲಿ ಹೇಳಿದ ಸ್ಮೃತಿವಚನವಲ್ಲ ಇತರರು ಕ್ರಿಸ್ತಶಕ 1400 1500 ರೊಳಗಣ ಸುಮಾರಿನಲ್ಲಿ ಸೇರಿಸಿದ ಪ್ರಕ್ಷಿಪ್ತವಚನವಾಗಿರಬೇಕು ಶ್ರುತಿ ಸ್ಮೃತಿ ಭಾಷ್ಯಾದಿಗಳಲ್ಲಿರುವ ಪ್ರಕ್ಷಿಪ್ತ ವಚನಗಳನ್ನು ತೆಗೆದು ಶ್ರುತಿ ಸ್ಮೃತ್ಯಾದಿಗಳಿಗೆ ಅರ್ಥದಲ್ಲಿ ಹೋಲಿಕೆಯಿರುವಂತೆ ಮತಗ್ರಂಥಗಳನ್ನು ಸಂಸ್ಕರಿಸಿ ಸಿದ್ಧಪಡಿಸುವುದು ಮಠಾಧಿಪತಿಗಳ ಕರ್ತವ್ಯ ಶ್ರುತಿ ಸ್ಮೃತಿ ಭಾಷ್ಯಾದಿಗಳ ದಿ ಪದಲ್ಲಿ ಪ್ರೌಢಾವಿವಾಹವನ್ನೊಪ್ಪುವವು ಶ್ರೀ ಮಧ್ವಾಚಾರ್ಯರೂ ಶ್ರುತಿಸ್ಮೃತಿಗಳ ಅರ್ಥವನ್ನೇ ಅಂಗೀಕರಿಸುವರು ” ಮೊದಲಾದ ಸಂಗತಿಗಳನ್ನು ಬೆಂಗಳೂರಿನಲ್ಲಿರುವ ಮ॥ ಆರ್ ರಘುನಾಥರಾಯರು ವಿಮರ್ಶಿಸಿ ಪುಸ್ತಕವನ್ನಾಗಿ ಮಾಡಿರುವರು ಇವರ ವಿಮರ್ಶೆಗನುಸಾರವಾಗಿ ಹಿಂದುಗಳ ಮತಗ್ರಂಥಗಳು ಸಂಸ್ಕರಿಸಿ ಮಠಾಧಿಪತಿಗಳಿಂದ ಪ್ರಕಟಿಸಲ್ಪಟ್ಟರೆ ಲೋಕೋಪಕಾರವಾದೀತು ಬೆಂಗಳೂರು ಐರಿಸ್ ಪ್ರೆಸ್ಸಿನಲ್ಲಿ ಅಚ್ಚಾಗಿರುವ ಈ ಪುಸ್ತಕದ ಬೆಲೆ 3 ಆಣೆ ಬೇಕಾದವರು ಗ್ರಂಥಕರ್ತರಿಂದ ಪುಸ್ತಕಗಳನ್ನು ಪಡೆಯಬಹುದು

ಎಂ ಕೆ

ಮೈಸೂರು ನ್ಯಾಯವಿಧಾಯಕ ಸಭೆಯು

ಕಳೆದ 11 ನೇ ತಾ ಮಂಗಳವಾರ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಮಂದಿರದಲ್ಲಿ ಮೊಲ್ದಂಡ ಸಭೆಯು ವಿವಾಟಿಂಗು ನಡೆಯಿತು ಸರ್ಕಾರಿ ಮೆಂಬರುಗಳೂ, ಪ್ರಜಾಪಕ್ಷದ ಮೆಂಬರುಗಳೂ ಹಾಜರಾಗಿದ್ದರು ದಿವಾನ್ ಮ॥ ಎಂ ವಿಶ್ವೇಶ್ವರಯ್ಯನವರು ಅಗ್ರಾಸನವನ್ನು ವಹಿಸಿದರು ಸಭೆಯ ಪ್ರಾರಂಭಕಾರ್ಯಗಳು ನಡೆದ ಬಳಿಕ ದಿವಾನ್‌ರವರು ಸಭಿಕರನ್ನು ಕುರಿತು ಹೇಳಿದ ಮುಖ್ಯ ವಿಚಾರಗಳೇನೆಂದರೆ—

ಈ ನ್ಯಾಯವಿಧಾಯಕ ಸಭೆಯು ಈಗ ಹೊಸ ರೀತಿಯಾಗಿ ರಚಿಸಲ್ಪಟ್ಟಿದೆ, ಇದರಲ್ಲಿ ನಡೆಯತಕ್ಕ ಕಾರ್ಯಗಳು ಮೊದಲಿಗಿಂತ ಹೆಚ್ಚಾಗಿರುವವು ಇಲ್ಲಿಂದ ಮುಂದೆ ಮೆಂಬರುಗಳಾದ ನೀವು ಗವರ್ನಮೆಂಟಿನವರನ್ನು ಪ್ರಶ್ನೆಮಾಡಬಹುದು ನೀವು ನಿಮ್ಮ ಆಕ್ಷೇಪಣೆಗಳನ್ನು ತಿಳಿಸಿ ಚರ್ಚೆನಡಿಸುವುದಕ್ಕೆ ನಿಮಗೆ ಅವಕಾಶವನ್ನು ಕೊಡಲಾಗಿದೆ ಇಷ್ಟೇ ಅಲ್ಲ ಪ್ರಜೆಗಳಲ್ಲಿ ಗಣ್ಯರಾದವರೂ ಮುಖಂಡರೂ ಡಿಸ್ಟ್ರಿಕ್ಟ್, ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಸರ್ಕಾರದವರ ಕೂಡ ಕಲೆತು ಪ್ರಜಾಹಿತ ಕಾರ್ಯಗಳನ್ನು ನಡಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಪ್ರತಿ ಒಂದು ವಿಷಯದಲ್ಲೂ ಕೆಲಸ ನೆರವೇರುವುದಕ್ಕೆ ಅನುಕೂಲವಾಗ ಮಾರ್ಗಗಳನ್ನು ಹುಡುಕಿ ಚರ್ಚೆಮಾಡಬೇಕಾಗಿರುವುದು ಮುಖ್ಯವರ್ಜ ವಹಿಸಿ ವಿಷಯಗಳ ಪೂರ್ವಾಪರಗಳನ್ನು ಕುರಿತು ಚೆನ್ನಾಗಿ ಹುಡುಕಾಡುತ್ತಾ, ಚರ್ಚೆನಡಿಸುತ್ತಾ ಬರೋಣದರಿಂದ ನಮ್ಮ ಸೀಮೆಯ ಪ್ರಜೆಗಳ ಕುಂದು ಕೊರತೆಗಳೂ ಕಷ್ಟನಷ್ಟಗಳೂ ಪರಿಹರಮಾಡಿಕೊಳ್ಳುವುದಕ್ಕೆ ಸರಿಯಾದ ಉಪಾಯಗಳೂ ಸಲಹೆಗಳೂ ದೊರಕದೆ ಹೋಗುವುದಿಲ್ಲ ಅಭಿವೃದ್ಧಿಗೆ ಬಂದಿರುವ ಇತರ ದೇಶಗಳಲ್ಲಿ ಗವರ್ನಮೆಂಟಿನವರ ಮೇಲೆ ಬರತಕ್ಕ ಆಕ್ಷೇಪಣೆಗಳಿಂದ ಪ್ರಯೋಜನವಾಗುವ ಹಾಗೆ ನಮ್ಮ ದೇಶದಲ್ಲಿ ಬರತಕ್ಕ ಆಕ್ಷೇಪಣೆಗಳಿಂದ ಪ್ರಯೋಜನವಾಗುವುದಿಲ್ಲ ನಮ್ಮ ದೇಶದಲ್ಲಿ ಹೊಸ ಕಾನೂನು ಅಥವಾ ಏರ್ಪಾಡುಗಳನ್ನು ಕಂಡರೆ ಆಕ್ಷೇಪಣೆಗಳು ಹುಟ್ಟುವವಲ್ಲದೆ ಅಭಿವೃದ್ಧಿಗೆ ಬರತಕ್ಕ ಮಾರ್ಗಗಳನ್ನು ಸೂಚಿಸುವುದಾಗಲಿ, ಅವುಗಳನ್ನು ಕುರಿತು ಚರ್ಚೆಮಾಡುವುದಾಗಲಿ ಕಡಮೆ ಮತ್ತು ಶ್ರೇಯಸ್ಸನ್ನು ಬಯಸಿ ಅದು ಕೈಗೂಡುವಂತೆ ಆಕ್ಷೇಪಣೆ ಮಾಡುವುದೂ ಕಡಮೆಯಾಗಿದೆ ಅಲ್ಪಸ್ವಲ್ಪ ಅಭಿವೃದ್ಧಿ ಹೊಂದಿರುವಂಥಾ ನಮ್ಮ ದೇಶದಲ್ಲಿ ಶ್ರೇಯೋಭಿವೃದ್ಧಿಯ ಕಾರ್ಯಗಳನ್ನು ನಡಿಸಲು ಸಮರ್ಥರಾಗಿಯೂ, ಬುದ್ಧಿಶಾಲಿಗಳಾಗಿಯೂ ಇರುವವರೆಲ್ಲರ ಸಹಾಯವೂ ನಮಗೆ ಬೇಕೇಬೇಕು ಅದಕಾರಣ ನಾವು ಪ್ರಯತ್ನಪಡತಕ್ಕವರನ್ನೂ, ಕಾರ್ಯಮಾಡತಕ್ಕವರನ್ನೂ ಅಧೈರ್ಯಪಡಿಸಬಾರದು ಹಾಗೆ ಮಾಡಿದರೆ ಉತ್ಸಾಹಕ್ಕೂ ಸಾಹಸಪ್ರಯತ್ನಗಳಿಗೂ ಭಂಗವುಂಟಾಗಿ ನಮ್ಮ ದೇಶದ ಶ್ರೇಯಸ್ಸಿಗೆ ಅವಕಾಶತಪ್ಪಿಹೋದೀತು ಇನ್ನು ಮುಂದೆ ದೇಶೋನ್ನತಿಗೆ ಸಹಾಯವಾಗುವಂಥಾ ಕಾರ್ಯಗಳು ವೃದ್ಧಿಹೊಂದಿ, ಸೀಮೆಯಲ್ಲಿ ಆಲೋಚನಾಪರರೂ ಕಾರ್ಯೋತ್ಸಕರೂ ಹೆಚ್ಚಿ ಹರಡಿಕೊಂಡರೆ ಆಗ್ಗೆ ಪಾಶ್ಚಾತ್ಯರಾಜ್ಯಗಳಲ್ಲಿ ಆಕ್ಷೇಪಣೆಗಳಿಂದ ಸರ್ಕಾರಕ್ಕೆ ಉಂಟಾಗುವಂಥಾ ಫಲಪ್ರಯೋಜನಾದಿಗಳು ನಮಗೂ ಲಭ್ಯವಾಗಬಹುದು ಅಂಥಾ ಸಮಯ ಒದಗುವ ತನಕ ನೀವುಗಳು ಗವರ್ನಮೆಂಟಿನವರ ಮೇಲೆ ಹಮ್ಮುಖವಾದ ಮತ್ತೂ ಉತಕರವಾದ ಆಕ್ಷೇಪಣೆಗಳನ್ನೇ ಮಾಡುತ್ತಾ ಬರಬೇಕೆಂದು ಕೇಳಿಕೊಳ್ಳುತ್ತೇನೆ ಇನ್ನು ಮೇಲೆ ನಾವು ಅನೇಕಾವರ್ತಿ ಸೇರುವೆವು ನಾನಾ ಒಗೆಯ ಪ್ರತಿನಿಧಿಗಳ ಸಂಖ್ಯೆಯು ಹೆಚ್ಚಾಗಿರೋಣದರಿಂದ ಈ ಸಭೆಯ ಚರ್ಚೆಗಳು ನಾನಾ ಮುಖವಾಗಿದ್ದು ಪ್ರಾಮುಖ್ಯವಾಗಿ ಎಣಿಸಲ್ಪಡುತ್ತವೆ ಸರ್ಕಾರಿ ತರಫಿನ ಮೆಂಬರುಗಳಾದ ನಾವು ಪ್ರಜಾಪ್ರತಿನಿಧಿಗಳಾದ ನಿಮಗೆ ಈ ಸಮಯದಲ್ಲಿ ಸುಸ್ವಾಗತವನ್ನು ಕೋರಿ ಪ್ರಜಾಪರಿಪಾಲನೆಯ ವಿಚಾರಗಳನ್ನು ನಿಮ್ಮೊಡನೆ ಕುರಿತು ಪರ್ಯಾಲೋಚನೆಮಾಡುವಂತಾದದ್ದಕ್ಕಾಗಿ ಸಂತೋಷಪಡುತ್ತೇವೆ

ಬಳಿಕ ಮ॥ ವೆಂಕಟಕೃಷ್ಣಯ್ಯನವರು ಪ್ರಜಾಪ್ರತಿನಿಧಿಗಳ ಪರವಾಗಿ ದಿವಾನ್‌ರವರನ್ನು ಕುರಿತು ಪ್ರತ್ಯುತ್ತರ ಹೇಳಿದ್ದೇನೆಂದರೆ—ಈ ನ್ಯಾಯವಿಧಾಯಕ ಸಭೆಯನ್ನು ಇಷ್ಟು ಉನ್ನತ ಸ್ಥಿತಿಗೆ ತಂದದ್ದಕ್ಕೋಸ್ಕರ ಪ್ರಜೆಗಳ ಪ್ರತಿನಿಧಿಗಳಾಗಿ ಬಂದಿರುವ ನಾವುಗಳು ತಮಗೆ ಭಕ್ತಿವಿಶ್ವಾಸಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ ಬ್ರಿಟಿಷ್ ಇಂಡಿಯಾದಲ್ಲೂ ನ್ಯಾಯವಿಧಾಯಕ ಸಭೆಗಳಿಯುತ್ತವೆ ಅವುಗಳಲ್ಲಿ ಸರ್ಕಾರಿ ತರಫಿನ ಮೆಂಬರುಗಳು ಹೆಚ್ಚಾಗಿರುತ್ತಾರೆ ಪ್ರಜೆಗಳ ಪ್ರತಿನಿಧಿಗಳು ಹೆಚ್ಚಾಗಿರುವಂತೆ ಈ ಸಭೆಯನ್ನು ತಾವು ಏರ್ಪಾಡು ಮಾಡಿರುವುದು ನೋಡಿದರೆ ಪ್ರಜೆಗಳ ಪ್ರತಿನಿಧಿಗಳಲ್ಲಿ ತಮಗಿರುವ ನಿರ್ಮಲವಾದ ನಂಬಿಕೆಯು ಗೊತ್ತಾಗುತ್ತದೆ ನಂಬಿಕೆಯು ನಂಬಿಕೆಯನ್ನು ಹುಟ್ಟಿಸುವುದು ತಾವು ನಮ್ಮಲ್ಲಿಟ್ಟಿರುವ ನಂಬಿಕೆಗೆ ಯಾವ ಲೋಪವೂ ಬರದಂತೆ ನಡೆದುಕೊಳ್ಳುವುದು ನಮ್ಮ ಕರ್ತವ್ಯ ರಾಜಕಾರ್ಯದಲ್ಲಿ ನಮ್ಮ ಕೂಡ ಆಲೋಚನೆ ಮಾಡಿ ನಮ್ಮ ಸಲಹೆಗಳನ್ನು ಅಂಗೀಕರಿಸಿ ದೋಷಗಳಿದ್ದರೆ ತೋರಿಸಿಕೊಡಬೇಕೆಂದು ಕೋರುತ್ತೇವೆ ನಮ್ಮ ಸಹಜವಾದ ಆಕ್ಷೇಪಣೆಗಳನ್ನು ಅಂಗೀಕರಿಸಿ ಪ್ರಜಾರಂಜಕವಾಗಿ ಪರಿಪಾಲನೆ ಮಾಡಬೇಕೆಂದು ಶ್ರೀಮನ್ ಮಹಾರಾಜರವರೂ ತಾವೂ ಆಲೋಚಿಸಿ ಈ ಸಭೆಗೂ ನಮಗೂ ಗೌರವವನ್ನು ಕಲ್ಪಿಸಿಕೊಟ್ಟದ್ದಕ್ಕೋಸ್ಕರ ನಾವು ಬಹಳ ಕೃತಜ್ಞರಾಗಿರುತ್ತೇವೆ ತಮ್ಮೊಡನೆ ಕಲೆತು ಕೆಲಸ ಮಾಡುವುದು ನಮ್ಮ ಕರ್ತವ್ಯ ಇದರ ಸಾಂಕೇತ ಮೇರೆಯನ್ನು ಮೀರದೆ ನಾವುಗಳು ರಾಜಭಕ್ತಿ ಅನುರಾಗ ಸಹಿತರಾಗಿ ಕೆಲಸಮಾಡುವೆವೆಂದು ಶ್ರೀಮನ್ ಮಹಾರಾಜರವರಿಗೂ ತಮಗೂ ನಂಬಿಕೆಯನ್ನು ಹೇಳುವೆವು ಇಂಥಾ ಕರ್ತವ್ಯವನ್ನು ಸಾರ್ಥಕವಾಗಿ ನೆರವೇರಿಸುವ ಶಕ್ತಿಯು ನಮಗೆ ಉಂಟಾಗಲೆಂದು ಪ್ರಾರ್ಥಿಸುತ್ತೇವೆ

ತರುವಾಯ ಪ್ರಜಾಪಕ್ಷದ ಮೆಂಬರುಗಳು ಸರ್ಕಾರದ ಕಾರುಬಾರುಗಳ ವಿಷಯದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿ, ಸರ್ಕಾರಿ ಅಧಿಕಾರಿಗಳಿಂದ ಅವುಗಳಿಗೆ ಸಮಾಧಾನವನ್ನು ಪಡೆದರು ಈ ಪ್ರಶ್ನೋತ್ತರಗಳು ಯಾವವೆಂದರೆ —

1 ಮ॥ ಬಿ ನರಸಿಂಗರಾಯರು ಕೇಳಿದ್ದು —(1) ರಿಟ್ರೆಂಚ್‌ಮೆಂಟ್ ಕಮಿಟಿ ಏರ್ಪಾಡಾದದ್ದು ಯಾವಾಗ ? (2) ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಮಟ್ಟಿಗೆ ಖರ್ಚು ಕಡಮೆ ಮಾಡಲಾಗಿದೆ ? (3) ಆ ಕಮಿಟಿಗೆ ಸರ್ಕಾರದವರು ಪ್ರಜಾಪಕ್ಷದ ಒಬ್ಬ ಮೆಂಬರನ್ನು ನೇಮಕಮಾಡಿಕೊಳ್ಳಬಾರದೇ ?

ಮ ಕೆ ಆರ್ ಶ್ರೀನಿವಾಸಯ್ಯಂಗಾರ್ರು ಕೊಟ್ಟ ಜವಾಬು —(1) 1906 ರಲ್ಲಿ ಮತ್ತೆ 1911 ರಲ್ಲಿ ಕಮಿಟಿಯನ್ನು ಬದಲ ಪಣೆ ಮಾಡಿದೆ (2) ಅವರ ನಾಪ ವಿವರವನ್ನು ಮೆಂಬರಿಗೆ ಒದಮ ಕಳಹಿಸಿದೆ (3) ಸದ್ಯದಲ್ಲಿ ಪ್ರಜಾಪಕ್ಷದ ಮೆಂಬರನ್ನು ಈ ಕಮಿಟಿಗೆ ಸೇರಿಸಬೇಕಾದ ಅಗತ್ಯ ಕಂಡುಬಂದಿಲ್ಲ ಆದರೂ ಪ್ರಜಾಪಕ್ಷದ ಮೆಂಬರುಗಳು ಯಾವ ಬಾಬಿನಲ್ಲಾಗಲಿ ತಮ್ಮ ಅಭಿಪ್ರಾಯವನ್ನು ಬರಹ ಮೂಲಕ ಕಮಿಟಿಗೆ ತಿಳಿಸಿದರೆ ಪರ್ಯಾಲೋಚನೆ ಮಾಡಲಾಗುವುದು

2 ಮ॥ ಬಿ ನರಸಿಂಗರಾಯರು ಕೇಳಿದ್ದು —(1) ಎಷ್ಟು ಮಂದಿ ಇನಾಂದಾರರ ಕೋಧಿ ಹಣಗಳು ಇತ್ಯರ್ಥವಾಗದೆ ಉಳಿದಿದೆ ? (2) ಆ ಪೈಕಿ ಎಷ್ಟು ಹಿಂದಿನ ಅರ್ಜಿ ಬಾಕಿಯಲ್ಲಿದೆ ? (3) ಅವುಗಳೆಲ್ಲಾ ಎಷ್ಟು ದಿನಕ್ಕೆ ಫೈಸಲಾಗಬಹುದು

ಮ॥ ಎಂ ಕಾಂತರಾಜೆ ಅರಸಿನವರು ಕೊಟ್ಟ ಜವಾಬು —(1) ಇನ್ನೂ 30 ಉಳಿದಿವೆ (2) 1907 ನೇ ಜೂಲೈ ತಾ 11 (3) ಅವರವರ ತಕ್ಕ ಬಾಧ್ಯತೆಗಳನ್ನು ಇತ್ಯರ್ಥ ಮಾಡುವುದರಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವಂಥಾ ಆಚರಣೆಗಳನ್ನು ನಿಷ್ಕರ್ಷೆ ಮಾಡಬೇಕಾಗುತ್ತದೆ ಜಾಗ್ರತೆ ಇತ್ಯರ್ಥಮಾಡುವ ಏರ್ಪಾಡು ನಡೆಯುತ್ತಿದೆ

3 ಮ॥ ಬಿ ನರಸಿಂಗರಾಯರು ಕೇಳಿದ್ದು —(1) ಮೈಸೂರು ಜೈಲುಗಳಲ್ಲಿ ಸಣ್ಣ ವಯಸ್ಸಿನ ಖೈದಿಗಳು ಎಷ್ಟು ಮಂದಿ ಇದ್ದಾರೆ ? (2) ಅವರನ್ನು ದೊಡ್ಡ ಖೈದಿಗಳ ಜೊತೆಗೆ ಸೇರದಂತೆ ಪ್ರತ್ಯೇಕವಾಗಿಟ್ಟು, ಅವರಿಗೆ ಯೋಗ್ಯವಾದ ಶಿಕ್ಷಣವನ್ನು ಮಾಡಿಸಲು ಯಾವ ಏರ್ಪಾಡುಗಳುಂಟು ?

ಮ॥ ಎಂ ಕಾಂತರಾಜೆ ಅರಸಿನವರು ಕೊಟ್ಟ ಜವಾಬು —(1) ಸಣ್ಣ ವಯಸ್ಸಿನ ಖೈದಿಗಳು ಬೆಂಗಳೂರು ಜೈಲಿನಲ್ಲಿ 14 ಮಂದಿ ಇದ್ದಾರೆ ಮೈಸೂರು ಜೈಲಿನಲ್ಲಿ ಯಾರೂ ಇಲ್ಲ (2) ಬೆಂಗಳೂರು ಮತ್ತೂ ಮೈಸೂರು ಜೈಲುಗಳಲ್ಲಿ ಸಣ್ಣ ವಯಸ್ಸಿನ ಖೈದಿಗಳನ್ನು ಪ್ರತ್ಯೇಕವಾಗಿಡಲು ಒಂದು ಭಾಗವನ್ನು ತೆಗೆದಿಟ್ಟಿದೆ ವಿದ್ಯಾಕಲಿಕ ಯೋಗ್ಯನಾದ ಖೈದಿಯನ್ನು ಅವರಿಗೆ ವಿದ್ಯೆ ಕಲಿಸುವುದಕ್ಕೆ ನೇಮಿಸಿದೆ ಅವರಿಗೆ ಮರಕೆಲಸ, ಕೈತೋಟಮಾಡುವುದು, ಜಮಖಾನೆ ತಯಾರುಮಾಡುವುದು ಮೊದಲಾದ ಕಸಬುಗಳನ್ನು ಕಲಿಸುತ್ತಾ ಇದೆ

4 ಮ॥ ಕರಣಿಕ ಕೃಷ್ಣಮೂರ್ತಿರಾಯರು ಕೇಳಿದ್ದು —(1) ಬೆಂಗಳೂರು ಸಿಟಿ ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳಲ್ಲಿ ನಲ್ಲಿ ನೀರನ್ನು ಅಳೆಯುವುದಕ್ಕೆ ಯಂತ್ರ (ಮೀಟರ್) ಗಳನ್ನು ಇಟ್ಟು, ರೂಲ್ಸುಗಳನ್ನು ಮಾಡಿರುವುದರಿಂದ ಪ್ರಜೆಗಳಿಗೆ ಉಂಟಾಗಿರುವ ಕಷ್ಟನಷ್ಟಗಳು ಸರ್ಕಾರದವರಿಗೆ ವೇದ್ಯವಾಗಿದೆಯೋ ? ಮನುಷ್ಯನ ಜೀವನಕ್ಕೆ ನೀರು ಅವಶ್ಯವಾದದ್ದರಿಂದ ಈ ಏರ್ಪಾಡನ್ನು ವಜಾ ಮಾಡುವುದರಿಂದಲೋ ಇತರ ವಿಧವಾಗಿಯೋ ಆ ಕಷ್ಟನಷ್ಟವನ್ನು ಕಡಮೆ ಮಾಡಬಹುದೇ (2) ಗವರ್ನಮೆಂಟಿನ ಬೇರೆ ಬೇರೆ ಇಲಾಖೆಗಳಲ್ಲಿ ಕಳೆದ ಹತ್ತು ವರುಷಗಳಿಂದ ಸರ್ಕಾರದ ಹಣಗಳು ಎಷ್ಟು ಸಲ ದುರ್ವಿನಿಯೋಗವಾಗಿವೆ ? ಅದನ್ನು ತಪ್ಪಿಸುವುದಕ್ಕೆ ಯಾವ ಪ್ರತೀಕಾರ ಮಾಡಿದೆ ? ನಷ್ಟವಾದ ಹಣಗಳ ಪೈಕಿ ಎಷ್ಟು ವಸೂಲಾಗಿ ಇನ್ನೆಷ್ಟು ಉಳಿದಿದೆ ?

ಮ॥ ಕೆ ಆರ್ ಶ್ರೀನಿವಾಸಯ್ಯಂಗಾರ್ರು ಕೊಟ್ಟ ಜವಾಬು —(1) ಕಷ್ಟನಷ್ಟಗಳುಂಟಾಗಿರುವ ಸಂಗತಿ ಗವರ್ನಮೆಂಟಿನ ತಿಳುವಳಿಕೆಗೆ ಬಂದಿಲ್ಲ

...ವನ್ನು ಒದಗಿಸುವುದಕ್ಕೆ ಆಗುವ ಖರ್ಚಿನಲ್ಲಿ ಹೆಚ್ಚುಭಾಗ ಮ್ಯುನಿಸಿಪಾಲಿಟಿಗಳು ಟರ್ಮ್ ಪ್ರಜೆಯಾಗಲಿ ಕೊಡುವುದಿಲ್ಲ, ಸಂಸ್ಥಾನಾವಳಿ ರೈತಸಂದ ...ವಾಗುವುದು ಈಗಿರುವ ರೂಲಸನ್ನು ಬದಲಾಯಿಸಲಿಕ್ಕೂ, ರದ್ದು ಮಾಡ...ವ್ವು ಸರ್ಕಾರದವನ್ನು ಕೋರಿಲ್ಲ (೩) ಸರ್ಕಾರದ ಹಣ ದಸ್ತು ಆದರೆ ಅಂಥಾ ಪ್ರತಿ ಒಂದನ್ನೂ ತನಿಖೆಮಾಡಲಾಗುತ್ತೆ ಅಂಥಾದ್ದು ಎಷ್ಟು ನಡೆಯಿ...ದು ಗೊತ್ತುಮಾಡಲು ಲೆಕ್ಕವನ್ನಿಟ್ಟಿಲ್ಲ ಅಂಥಾ 10 ವರುಷದ ಲೆಕ್ಕಗಳನ್ನು ...ಯುವುದರಲ್ಲಿ ಪ್ರಯೋಜನವೇನೂ ಕಾಣುವುದಿಲ್ಲ

5 ಮ|| ಎಂ ವೆಂಕಟಕೃಷ್ಣಯ್ಯನವರೂ ಮ|| ಎಸ್ ಆರ್ ಬಾಲಕೃಷ್ಣ...ರಾಯರೂ ಕೇಳಿದ್ದು (1) ಬೆಂಗಳೂರು ದಂಡಿನ ಹುಟ್ಟುವಳಿ ಇಲ್ಕಿನ ಪೈಕಿ ...ವ ಸಾಲಿನ ವರೆಗೆ ಎಷ್ಟು ಹಣ ನಮ್ಮ ಸರ್ಕಾರಕ್ಕೆ ಪಾವತಿ ಆಗಿದೆ (೨) ...ವನ್ನು ಯಾವ ರೀತಿ ವಿನಿಯೋಗಮಾಡಿದೆ ? (3) ಈ ಹಣವನ್ನು ಯಾವ ...ಯ ಕೆಲಸಕ್ಕೆ ಖರ್ಚುಮಾಡುವುದು ? (೪) ದಂಡಿನಿಂದ ಇನ್ನೂ ಎಷ್ಟು ಹಣ ...ಬೇಕಾಗಿದೆ ? ಅದ ಬರುವುದು ಯಾವಾಗ ? (೫) ಈಗ ಬಂದಿರುವ ಹಣವನ್ನೂ ಇನ್ನು ಮುಂದೆ ಬರತಕ್ಕ ಹಣವನ್ನೂ ಯಾವುದಾದರೊಂದು ಗೊತ್ತಾದ ...ಕ್ಕೆ ವಿನಿಯೋಗಿಸುವಂತೆ ತೀರ್ಮಾನ ಪ್ರತಿಗಳ ತಿಳುವಳಿಕೆ ಬಗ್ಗೆ ಪ್ರಕಟಿಸ...ದೀತೇ ?

ದಿವಾನ್ ಬಹದೂರ್ ಪಿ ಎಸ್ ಚಕ್ರವರ್ತಿಯವರು ಕೊಟ್ಟ ಉತ್ತರ —(1) 1910 11 ನೇ ಸಾಲು ಜನ್ವರಿ ವರೆಗೆ ಬರಬೇಕಾಗಿರುವ ...ರು 39,22 130 10 8 ಪೈನಲ್ಲಿ 30,00,000 ರೂಪಾಯಿ ಪಾವತಿ ಬಂದಿದೆ (೨) ಅದನ್ನು ಸರ್ಕಾರದ ಇತರ ಹಣದ ಜೊತೆಗೆ ಸೇರಿಸಿದೆ (೩) ಮತ್ತು (೪) ...ರುಸ ಸರ್ಕಾರದ ಇತರ ಹಣದ ಕೂಡ ಸೇರಿಹೋಗುತ್ತೆ ಈ ಹಣವನ್ನು ಬೇರೆ ಕೆಲಸಕ್ಕೆ ವಿನಿಯೋಗಿಸಬೇಕೆಂದು ಸರ್ಕಾರದವರು ಅಭಿಪ್ರಾಯ ಪಟ್ಟಿಲ್ಲ, ಅದ...ಗಿ ಯಾವ ರೂಲಸನ್ನೂ ಖಂಡಿತವಾಗಿ ಪ್ರಕಟಿಸುವುದಿಲ್ಲ (೫) 1910 11 ನೇ ಸಾಲ್ ಆಖೈರಿಗೆ ಇನ್ನೂ ರೂ 9,22,930-10 8 ಪೈ ಪಾವತಿ ಬರಬೇಕಾ...ದೆ ಅಲ್ಲಿಂದೀಚೆಗೆ ಪ್ರತಿಯಾಲಿಸಲಾಗಿ ನಮಗೆ ಬರಬೇಕಾಗುವ ಮೊಬಲಗಿನ ...ವಿಷಯ ಇನ್ನೂ ಚರ್ಚೆಯಲ್ಲಿದೆ ಇದು ಯಾವಾಗ ವ್ಯವಸ್ಥೆಯಾಗುವುದೋ ...ತಿಳಿದಾಗದು

6 ಮ|| ಎಂ ವೆಂಕಟಕೃಷ್ಣಯ್ಯನವರೂ ಮ ಎಸ್ ಆರ್ ಬಾಲಕೃಷ್ಣ ರಾಯರೂ ಕೇಳಿದ್ದು —(1) ಇದುವರೆಗೆ ರಿಟ್ರೆಂಚ್‌ಮೆಂಟ್ ಕಮಿಟಿಯವರು ಸೂಚಿಸಿದ ಯಾವ ಸಲಹೆಗಳನ್ನು ಗವರ್ನ್‌ಮೆಂಟಿನವರು ಒಪ್ಪಿ ಸಿಬ್ಬಂದಿ ಖರ್ಚಿನಲ್ಲಿ ಎಷ್ಟು ಹಣ ಉಳಿಸಿರುತ್ತಾರೆ ? (೨) ಆ ಕಮಿಟಿಯವರ ಯಾವ ಶಿಫಾರಸುಗಳನ್ನು ಸರ್ಕಾರದವರು ಒಪ್ಪಲಿಲ್ಲ ಹಾಗೆ ಒಪ್ಪಿಕೊಂಡಿದ್ದರೆ ಎಷ್ಟು ಉಳಿತಾಯವಾಗುತ್ತಿತ್ತು (೩) ಈ ಕಮಿಟಿಗೆ ಇನ್ನು ಮುಂದೆ ಪ್ರಜಾಪಕ್ಷದ ಮೆಂಬರು ...ಸಹಾಯವನ್ನು ಒದಗಿಸಲು ಸರ್ಕಾರದವರಿಗೆ ಅಭಿಪ್ರಾಯವುಂಟೇ ?

ಮ|| ಕೆ ಆರ್ ಶ್ರೀನಿವಾಸಯ್ಯಂಗಾರ್ರು ಕೊಟ್ಟ ಉತ್ತರ —(1) ಮತ್ತು (೩) ಅವಶ್ಯವಾದ ಸಮಾಧಾನವನ್ನು ಬರೆದು ಮೆಂಬರಿಗೆ ಕೊಟ್ಟಿದೆ (೨) ಮೊದಲನೇ ಪ್ರಶ್ನೆಯ ೨ನೇ ಭಾಗದ ಉತ್ತರವನ್ನು ನೋಡಿಕೊಳ್ಳಬೇಕು

7 ಮ|| ಎ ವೆಂಕಟಕೃಷ್ಣಯ್ಯನವರೂ ಮ ಎಸ್ ಆರ್ ಬಾಲಕೃಷ್ಣರಾಯರೂ ಕೇಳಿದ್ದು —ಬರುತ್ತಿ ಸಾಲಿನ ಬಜೆಟ್ಟಿನಲ್ಲಿ ತೋರಿಸಿರುವ ... ಲಕ್ಷ ರೂಪಾಯಿ ಹ್ಯಾಗೆ ಖರ್ಚುಮಾಡಲಾಗಿದೆ

ದಿವಾನ್ ಬಹದೂರ್ ಪಿ ಎಸ್ ಚಕ್ರವರ್ತಿಯವರು ಅವರು ಕೇಳಿದ ಖರ್ಚು ಪಟ್ಟಿಯನ್ನು ತಯಾರುಮಾಡಿಕೊಟ್ಟರು

8 ಮ ವೆಂಕಟಕೃಷ್ಣಯ್ಯನವರೂ ಮ|| ಬಾಲಕೃಷ್ಣರಾಯರೂ ಕೇಳಿದ್ದು —(1) ಎಫಿಷನ್ಸಿ ಆಡಿಟ್ ಎಂಬ ಹೊಸ ಇಲಾಖೆಯನ್ನು ಕಲ್ಪಿಸಿದ ಗವರ್ನ್‌ಮೆಂಟ್ ಹುಕುಮನ್ನು ತೋರಿಸುತ್ತೀರಾ ? (೨) ತೋರಿಸದೆ ಹೋಗುವ ಪಕ್ಷದಲ್ಲಿ ಆ ಹೊಸ ಇಲಾಖೆಯ ರಚನೆ ಹ್ಯಾಗೆ ? ಅದು ಯಾವ ರೀತಿ ಕಾರ್ಯಕ್ರಮವನ್ನು ಅನುಸರಿಸುತ್ತದೆ ? ಇದನ್ನಾದರೂ ತಿಳಿಸಬಹುದೇ ? (೩) ಅದಕ್ಕೆ ಬದಲಾಗಿ ಸರ್ಕಾರದವರು ಒಬ್ಬ ಯೋಗ್ಯನಾದ ಅಧಿಕಾರಿಯನ್ನು ಸಂಸ್ಥಾನದ ಎಲ್ಲಾ ಸರ್ಕಾರೀ ಇಲಾಖೆಗಳ ವಿದ್ಯಮಾನವನ್ನು ಪರಿಶೀಲಿಸಿ ರಿಪೋರ್ಟ್ ಮಾಡುವಂತೆ ನೇಮಿಸಿದರೆ ಅದರಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಹಿತವಾಗುವುದಿಲ್ಲವೆ ? ಈ ರೀತಿ ಮಾಡಬಹುದೇ ? ಈಗ ಮಾಡಿರುವ ಹೊಸ ಇಲಾಖೆಯಿಂದ ಬೇರೆಬೇರೆ ಇಲಾಖೆಗಳ ಸ್ವಾಭಾವಿಕ ಕೆಲಸಗಳಿಗೆ ಅಡಚಣೆಯುಂಟಾಗುವುದು

ಮ|| ಕೆ ಆರ್ ಶ್ರೀನಿವಾಸಯ್ಯಂಗಾರ್ರು ಕೊಟ್ಟ ಜವಾಬು —(1) ಮತ್ತು (೨) ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುವ ಹುಕುಮನ್ನು ಮೆಂಬರುಗಳು ತಮ್ಮ ಸ್ವಂತ ತಿಳುವಳಿಕೆಗಾಗಿ ನೋಡಿಕೊಳ್ಳಬಹುದು ಈಗ ಆ ಹುಕುಮನ್ನು ಸಭೆಯ ಮುಂದೆ ತಂದು ಇಡಲು ಸರ್ಕಾರದವರಿಗೆ ಇಷ್ಟವಿಲ್ಲ (೩) ಅಂಥಾ ಅಧಿಕಾರಿಯನ್ನು ನೇಮಕಮಾಡುವುದು ಅಗತ್ಯವಾದಾಗ ಈ ಸಲಹೆಯನ್ನು ಪರ್ಯಾಲೋಚಿಸಲ ದೀತು

9 ಮೇಲ್ಕಂಡ ಇಬ್ಬರು ಮೆಂಬರುಗಳು ಕೇಳಿದ್ದು —(1) ಸಿವಿಲ್ ಕೋರ್ಟುಗಳ ಸಿಬ್ಬಂದಿಯನ್ನು ಈಗಿನ ಕಾಲಕ್ಕೆ ಅನುಗುಣವಾಗಿ ಬದಲಾಯಿಸುವ ಯೋಚನೆ ಉಂಟೇ ? (೨) ಇಲ್ಲವಾದರೆ ಈಗಿರುವ ಸಿಬ್ಬಂದಿಯ ಕಮ್ಮಿ ಸಂಬಳ ...ವಾಗಿ ಅನೇಕ ವರುಷಗಳಾದದ್ದರಿಂದಲೂ, ಆಹಾರಧಾನ್ಯಗಳು ಪ್ರಿಯವಾಗಿರುವುದರಿಂದಲೂ, ರೆವಿನ್ಯೂ ಮೊದಲಾದ ಇಲಾಖೆಗಳ ಸಿಬ್ಬಂದಿಗೆ ಸಂಬಳ ಏರಿಸಿರುವುದರಿಂದಲೂ ಈ ನೌಕರರ ಸಂಬಳವನ್ನು ಬೇಗನೆ ಹೆಚ್ಚಿಸಲಾಗದೇ ?

ಮ ಎಚ್ ವಿ ನಂಜುಂಡಯ್ಯನವರು ಕೊಟ್ಟ ಉತ್ತರ —(1) ಮತ್ತು (೨) ಗವರ್ನ್‌ಮೆಂಟಿನವರು ಸಿವಿಲ್ ಕೋರ್ಟುಗಳ ಪ್ರೋಸೆಸ್ ಸಿಬ್ಬಂದಿ ಸಂಬಳವನ್ನು ಹೆಚ್ಚಿಸಿ ಈಚೆಗೆ ಸ್ಯಾಂಕ್ಷನ್ ಮಾಡಿದ್ದಾರೆ ಇದಕ್ಕೆ ಸಾಲಿಯಾನಾ 8,100 ರೂಪಾಯಿ ಜಾಸ್ತಿ ಖರ್ಚಾಗುವುದು ಸಿವಿಲ್ ಕೋರ್ಟುಗಳ ಇತರ ಸಿಬ್ಬಂದಿಗಳ ಸಂಬಳವನ್ನು ಹೆಚ್ಚಿಸುವ ವಿಚಾರವು ಚೀಫ್ ಕೋರ್ಟಿನವರ ಪರ್ಯಾಲೋಚನೆಯಲ್ಲಿದೆ

ಕೆಳಗೆ ಕಂಡ ಪಟ್ಟಿಯಲ್ಲಿ ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸು ಮೇರೆ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಮಿಗತೆ ಮಾಡಿದೆ ಎಂಬುದನ್ನು ತಿಳಿಸಿದೆ

ಇಲಾಖೆ	ಮಿಗತೆ ಆದ ರೂಪಾಯಿ
ರಿಜಿಸ್ಟ್ರೇಷನ್	8,000
ಜುಡಿಷಲ್	51,000
ಎಕ್ಸೈಸ್	62,000
ಬಂದೀಖಾನೆ	1,200
ಭೂಗರ್ಭಶೋಧನಾ	1,200
ನೇಮಕಾತಿಗಳ ಸಿಬ್ಬಂದಿಯಲ್ಲಿ	
ಟ್ರಾವೆಲಿಂಗ್ ಬಂಗಲೆಗಳು	9,700
ಹೆಡ್‌ಕ್ವಾರ್ಟರ್ ಆಫೀಸುಗಳು	3,000
ಸೆಕ್ರೆಟೇರಿಯಟ್ ಆಫೀಸು	7,200
ಮುಜರಾಯಿ ಖಜಾನೆ	4,700
ಜಮೀನಿನ ವಿನಸು, ದವಾಲಿ	1,000
ರೆವಿನ್ಯೂ ಖಾತೆ	2,000
ಮರಾಮತ್ ಇಲಾಖೆ	1,11,000
ಜುಮ್ಲಾ ರೂಪಾಯಿ	2,14,500

ತಾ ಕ —ಈಚೆಗೆ ಮೇಲ್ಕಂಡ ಇಲಾಖೆಗಳಲ್ಲಿ ಕೆಲಸ ಹೆಚ್ಚಿದೆ ಹಾಗೆ ಸಿಬ್ಬಂದಿಯನ್ನು ಜಾಸ್ತಿ ಮಾಡಲಾಗಿದೆ

ರಿಟ್ರೆಂಚ್‌ಮೆಂಟ್ ಕಮಿಟಿಯವರು ಸೂಚಿಸಿ, ಸರ್ಕಾರದ ಸ್ಯಾಂಕ್ಷನ್ ಆಗದೆ ಇರುವ ಬಾಬುಗಳನ್ನೂ ಹಣಗಳನ್ನೂ ಕೆಳಗೆ ಕಾಣಿಸಿದೆ —

2 ನೇ ಸ್ಟೇಟ್ ಜಿಯಾಲಜಿಸ್ಟ್ ಎಂಬ ನೌಕರಿ ಮುಂತಾದ್ದನ್ನು ವಜಾ ಮಾಡಿದರೆ	11,100
ಕುಣಿಗಲ ಕುದುರೆ ಫಾರಮನ್ನು ವಜಾ ಮಾಡಿದರೆ	30,000
ಬಾರ್ ಸ್ಪೆನ್ಸ ಮುಂತಾದ್ದನ್ನು ಕಡಮೆ ಮಾಡಿದರೆ	23,500
ಶಿವಮೊಗ್ಗೆಯ ಸವಾರ್ ಸ್ಪೆಷ್ಯವನ್ನು ವಜಾ ಮಾಡಿದರೆ	21,200
ಹವಾ ನಿರ್ಧರಿಸುವ ಇಲಾಖೆಯನ್ನು ವಜಾ ಮಾಡಿದರೆ	12,000
ಒಟ್ಟು ರೂಪಾಯಿ	97,800

ಹಾಲಿ ಸಾಲಿನ ಬಜೆಟ್ಟಿನಲ್ಲಿ ದಾಖಲಾಗಿರುವ 6 ಲಕ್ಷ ರೂಪಾಯಿಗೆ ಕೆಳಗೆ ಕಂಡಂತೆ ಖರ್ಚು ಕಾಣಿಸಿದೆ —

(1) ಖಾಯಂ ಬದ್ದಿ ಬಾಬುಗಳು

1914 ನೇ ಮಾರ್ಚಿಯಿಂದ ತಾಲ್ಲೂಕ್ ಸಿಬ್ಬಂದಿ ಸಂಬಳ ಹೆಚ್ಚಿಸಿದ್ದಕ್ಕೆ	13,939
1914 ನೇ ಅಕ್ಟೋಬರಿನಿಂದ ಸಿಟಿ ಪೋಲೀಸ್ ಸಿಬ್ಬಂದಿ ಸಂಬಳ ಹೆಚ್ಚಿಸಿದ್ದಕ್ಕೆ	11,863
ಕಂಟ್ರೋಲರ್ ಆಫೀಸ್ ಸಿಬ್ಬಂದಿ ಸಂಬಳ ಬಡಾವಣೆ	10,768
1914 ನೇ ಮಾರ್ಚಿಯಿಂದ ಡಿಸ್ಟ್ರಿಕ್ಟ್ ಆಫೀಸ್ ಸಿಬ್ಬಂದಿ ಸಂಬಳ ಹೆಚ್ಚಿಸಿದ್ದಕ್ಕೆ	1,726
ಎಫಿಷನ್ಸಿ ಆಡಿಟ್ ಎಂಬ ಹೊಸ ಇಲಾಖೆಯನ್ನು ಇಟ್ಟಿದ್ದಕ್ಕೆ	8,326
ಸೆಕ್ರೆಟೇರಿಯಟ್ ರೆಕಾರ್ಡುಗಳ ವಿಲೇವಾರಿಗಾಗಿ (4 ತಿಂಗಳ ಸಿಬ್ಬಂದಿ ಖರ್ಚು)	2,000
1914 ನೇ ಮಾರ್ಚಿಯಿಂದ ವ್ಯವಸಾಯ ಇಲಾಖೆ ಸಿಬ್ಬಂದಿ ಸಂಬಳವನ್ನು ಹೆಚ್ಚಿಸಿದ್ದಕ್ಕೆ	21,418
ಜುಮ್ಲಾ ರೂಪಾಯಿ	1,08,039

(2) ಖಾಯಂ ಅಲ್ಲದ ಖರ್ಚುಬಾಬುಗಳು

ವೈಸ್‌ರಾಯರವರ ಅತಿಥ್ಯದ ಖರ್ಚುಗಳು	2,85,000
ಕಬ್ಬನ್ ಪಾರ್ಕಿನ ಅಭಿವೃದ್ಧಿ ಕಾರ್ಯಗಳಿಗೆ	3,500
ಮಳೆನಾಡು ಅಭಿವೃದ್ಧಿ ಕಾರ್ಯಗಳಿಗೆ	1,00,000
ಜುಮ್ಲಾ ರೂಪಾಯಿ	3,88,500
ಮೇಲ್ಕಂಡ (1), (2) ಬಾಬುಗಳ ಒಟ್ಟು ಖರ್ಚು	4,96,539

ತಾ ಕ —ಮೇಲ್ಕಂಡವುಗಳಲ್ಲದೆ ಇತರ ಕೆಲವು ಖರ್ಚುಗಳನ್ನೂ ಈ ಬಾಬಿಗೆ ದಾಖಲ್‌ಮಾಡಿದೆ ಇತರ ಬಾಬುಗಳಲ್ಲಿ ಉಳಿಕೆ ಹಣವನ್ನು ಅವಶ್ಯವಾದರೆ ಇದಕ್ಕೆ ಜಾತಾ ಸಮುತಾಯಿಷಿ ಮಾಡಲಾಗುವುದು ಈಗ ಸ್ಯಾಂಕ್ಷನ್ ಮಾಡಿರುವ ಹಣಗಳನ್ನೆಲ್ಲಾ ಈ ಸಾಲಿನಲ್ಲಿ ಪೂರ್ತಿ ವಿನಿಯೋಗಿಸಿಕೊಳ್ಳುತ್ತಾರೆಂಬುವುದು ಅನುಮಾನವಾಗಿದೆ

ಬಾತ್ಮೀದಾರರಿಗೆ ನೋಟೀಸ್

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ಕಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ತಿಮ್ಮಪ್ಪ, ನೆಲ್ಲುಂಡೆ ಗ್ರಾಮ —ನೀವು ಹೇಳುವಂಥಾ ಮರಾಗತ ಕೃತ್ಯಗಳು ಸುಮ್ಮನಿದ್ದಷ್ಟೂ ಹೆಚ್ಚುವವು ರುಜುವಾತು ಕೊಡಬಲ್ಲವರು ಸರಹಿತರಾಗಿ ವರದಿ ಮಾಡಿ ಅಂಥಾ ದುಷ್ಟರಿಗೆ ಶಿಕ್ಷೆ ಮಾಡಿಸಬೇಕು

ಪ್ರತ್ಯಕ್ಷದರ್ಶಿ ಹೊಸೂರು ಯಥಾರ್ಥವಾದಿ ಬೆಂಗಳೂರು ಸಿಟಿ —ಈ ಬಾತ್ಮೀದಾರರು ಸರಿಯಾದ ಹೆಸರು ವಿಳಾಸಗಳನ್ನು ತಿಳಿಸಿಲ್ಲ

ಅರಿಕುಠಾರ ಚಾಮರಾಜನಗರ ಪಿ ತಿ ತರೀಕೆರೆ ಹಲಗೆಗದ ಬಂಕಹಳ್ಳಿ ಕೆ ವೆ ಚಿಂತಾಮಣಿ ಹಿತಚಿಂತಕ ಕಾಕಸಂದ್ರ ದೀವಟಿಗೆ ಮದ್ದಗಿರಿ —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

— ಎಡಿ]

ಕರೆಸ್ಪಾಂಡೆನ್ಸ್

ವಿಚಾರ ತಿಳಿಯಬೇಕು

ಅಯ್ಯಾ,—ಮರಕೆಲಸವನ್ನು ಬೋಧಿಸತಕ್ಕ ಶಾಸ್ತ್ರ ಗ್ರಂಥ ನನ್ನ ಉಪಯೋಗಕ್ಕೆ ಬೇಕಾಗಿರುತ್ತೆ ಇದು ಸಿಕ್ಕುವ ಸ್ಥಳವನ್ನು ಯಾರೂ ಹೇಳುವುದಿಲ್ಲ ಕೆಲವರು ಇಂಗ್ಲಿಷಿನಲ್ಲಿ ಮಾತ್ರ ಇದೆ ಅನ್ನುತ್ತಾರೆ ಕನ್ನಡದಲ್ಲಿ ಈ ಪುಸ್ತಕವನ್ನು ಪ್ರಿಂಟುಮಾಡಿರುವ ಸಂಗತಿಯನ್ನಾಗಲಿ, ಇದು ಸಿಕ್ಕುವ ಅಡ್ರೆಸ್ಸನ್ನಾಗಲಿ ಬಲ್ಲಂಥವರು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ

ಚನ್ನಯ್ಯ, ಮರಳೀನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು

ಮಳವಳ್ಳಿ ಗರ್ಲ್ಸ್ ಸ್ಕೂಲ್

ಅಯ್ಯಾ,—ಕಳೆದ ವಾರ ಪ್ರಕಟಿಸಿದ ಈ ಸ್ಕೂಲು ವಿಷಯವನ್ನು ಓದಿ ಎಲ್ಲರೂ ಆಶ್ಚರ್ಯ ಪಡುತ್ತಿದ್ದಾರೆ ಈ ಬಾತ್ಮೀದಾರರು ಪಡುವ ಅಭಿಪ್ರಾಯವೆಲ್ಲಾ ನಿರಾಧಾರವಾದದ್ದು ಈಗ ನರ್ವಿಸಪಟ್ಟ ಹೆಡ್ಮಿಸ್ಟ್ರೆಸರ ಕಾಲದಲ್ಲಿ ಈ ಸ್ಕೂಲು ಬಹಳ ಅಭಿವೃದ್ಧಿಸ್ಥಿತಿಗೆ ಬಂದಿದೆಯೆಂದು ಸೂಚಿಸುತ್ತಾರೆ ಆದರೆ ಸ್ಕೂಲನ್ನು ಪೂರ್ವದ ಹಳೆ ಮನೆಯಿಂದ ಈಗಿರುವ ರಾಜವೀಧಿಯ ಹೊಸ ಮಹಡಿ ಮನೆಗೆ ತಂದದ್ದರಿಂದಲೂ, ನನ್ನ ಅಮಲ್ದಾರ್ರಾಗಿದ್ದ ಮ ಕೆ ಎಲ್ ಬಾಪಾಮಿಯವರಿಗೆ ಇದರ ಪೂರ್ಣಾಭಿಮಾನ ಇದ್ದುದರಿಂದಲೂ, ಆ ಮಾಸ್ಟರುಗಳು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾ ಬಂದದ್ದರಿಂದಲೂ, ಪುರವಾಸಿಗಳಿಗೆ ಸ್ತ್ರೀವಿದ್ಯಾಭ್ಯಾಸದಲ್ಲಿ ಆಸಕ್ತಿ ಹೆಚ್ಚಾಗುತ್ತಾ ಬಂದದ್ದರಿಂದಲೂ ಈ ಸ್ಕೂಲ್ ಈಚೀಚೆಗೆ ಅಭಿವೃದ್ಧಿಸ್ಥಿತಿಗೆ ಬರುತ್ತಾ ಇತ್ತು ಈ ಹೆಡ್ಮಿಸ್ಟ್ರೆಸರ ವರ್ಗದಿಂದ ಈ ಸ್ಕೂಲಿಗೇನೂ ಕೊರತೆಯಾಗಿಲ್ಲ ಈಗಿನ ಹೆಡ್ಮಿಸ್ಟ್ರೆಸರ ಕಾಲದಲ್ಲಿ ಸ್ಕೂಲು ಅಷ್ಟು ಅಭಿವೃದ್ಧಿಗೆ ಬರಲಾರದೆಂದು ಈ ಬಾತ್ಮೀದಾರರು ಹೇಗೆ ಹೇಳುತ್ತಾರೋ ಗೊತ್ತಾಗುವುದಿಲ್ಲ ಈಗಿನವರು ಮೊದಲಿನವರಿಗಿಂತಲೂ ಹೆಚ್ಚು ತಿಳುವಳಿಕೆಯುಳ್ಳವರೂ, ಅನುಭವಶಾಲಿಗಳೂ ಆದುದರಿಂದ ಈ ಸ್ಕೂಲ್ ಇನ್ನು ಅಭಿವೃದ್ಧಿಸ್ಥಿತಿಗೆ ಬರುವುದರಲ್ಲಿ ಸಂದೇಹವಿರಲಾರದು ಮತ್ತು ಇವರ ಮೇಲೆ ಪಟ್ಟಣದ ನಿವಾಸಿಗಳಿಗೆ ಒಳ್ಳೆ ಅಭಿಪ್ರಾಯ ಉಂಟಾಗಿ ತಮ್ಮ ದೊಡ್ಡ ದೊಡ್ಡ ಬಾಲೆಯರನ್ನು ಸ್ಕೂಲಿಗೆ ಕಳುಹಿಸುತ್ತಿದ್ದಾರೆ

ಪ್ರತ್ಯಕ್ಷದರ್ಶಿ

[ಈ ವಿಷಯವಾಗಿ ಇನ್ನು ಬಾತ್ಮಿಯನ್ನು ಪ್ರಕಟಿಸಲಾರೆವು —ಎಡಿ]

ರಾಮಸಮುದ್ರದ ಕೆರೆ ಸ್ಥಿತಿ

ಅಯ್ಯಾ,—ಮೈಸೂರು ಸೀಮೆಯ ಪೈಕಿ ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕು ಸಾದ್ಲಿ ಹೋಬಳಿ ಯರನಾಗೇನಹಳ್ಳಿ ಯಜೆಕಟ್ಟಿನಲ್ಲಿ ಈ ರಾಮಸಮುದ್ರದ ಕೆರೆ ಇರುತ್ತೆ ಈ ಕೆರೆಯಲ್ಲಿ ನೀರು ಸಮೃದ್ಧಿಯಾಗಿ ಇದ್ದರೂ ನಾಯಿ ಮೊರೆಯಲ್ಲಿ ಹಾಲು ಇರುವಂತೆ ತೋರುತ್ತೆ ಈ ಕೆರೆಗೆ ಬಲಪಾರ್ಶ್ವದ ತೂಬಿಗೆ ದೊಡ್ಡ ನಾಲಾ ಇದೆ ನಾಲಾ ಕೆರೆಗೂ ಸಹ ಸುಮಾರು ಎರಡು ಲಕ್ಷ ರೂಪಾಯಿನ ವರೆಗೂ ಗೌರ್ನಮೆಂಟಿನಿಂದ ಖರ್ಚಾಗಿರಬಹುದು ಸದರಿ ನಾಲೆ ೭½ ಮೈಲಿ ಉದ್ದಕ್ಕೂ ಹೋಗಿರುತ್ತೆ ಈ ನಾಲಾ ಕೆಳಗೆ ದೇವಗಾನಹಳ್ಳಿ, ಗುಂಡ್ಲಹಳ್ಳಿ, ಯರನಾಗೇನಹಳ್ಳಿ, ಕುರುಬರಹಳ್ಳಿ, ಗಡಿಮಿಂಚೇನಹಳ್ಳಿ, ಮುಜರಾವರದಗಾನಹಳ್ಳಿ, ಈ 6 ಗ್ರಾಮಗಳು ತರೀ ಜಮೀನುಗಳು ಹರಾಜಿನಲ್ಲಿ ಸಾವಿರಾರು ರೂಪಾಯಿ ಕೊಟ್ಟು ಅನೇಕ ಜನರು ತೆಗೆದು ಇರುತ್ತಾರೆ ಈ ನಾಲಾ ಇರ್ರಿಗೇಷನ್ ಇಲಾಖಾ ಮಾರ್ಫತ್ತು ಆದ ಲಾಗಾಯಿತು ಸಿಲ್ಟು ತುಂಬಿ ನಾಲೆಯಲ್ಲಿ 22 ಮಡವಾಯಿಗಳಿಗೆ ಬಾಗಿಲು ಬೀಗ ವಗೈರೆ ಇಲ್ಲದೆ ಸುಮಾರು 10 12 ವರುಷಗಳಿಂದಲೂ ತರೀ ಫಸಲುಗಳಿಗೆ ಸಲೀಸು ನೀರು ಬಾರದೆ ಬೆಳೆ ನಷ್ಟವಾಗಿದ್ದಾಗ್ಯೂ ಕೂಡಾ ತರೀ ಕಂದಾಯ ಎಕರೆ 1 ಕ್ಕೆ 7-8 ರೂಪಾಯಿ ಮೇರಿಗೆ ಕೊಡುತ್ತಾ ತುಂಬಾ ತೊಂದರೆಯಾಗಿ ಸಲೀಸು ನೀರು ಬರುವುದಕ್ಕೂ, ಸಾಲಿಯಾನಾ ಸಿಲ್ಟು ತೆಗೆಯುವದಕ್ಕೂ ಯಕರೆ 1 ಕ್ಕೆ 8 ಆಣೆ ಮೇರಿಗೆ ಸಾಲಿಯಾನಾ ಕೊಡುವಂತೆ ಒಪ್ಪಿ ಮುಚ್ಚಳಿಕೆ ಕೊಟ್ಟು ಒಂದು ಸಾಲಿನ ಮೊಬಲಗು ಸಹ ಕೊಟ್ಟು 6 7 ವರುಷವಾಯಿತು ಈವರೆಗೆ ಕಾಮಗಾರಿ ಇಲ್ಲ, ಸಲೀಸು ನೀರು ಬರುವದೂ ಇಲ್ಲ ಆಖೈರು ಗ್ರಾಮವಾದ ಗಡಿಮಿಂಚೇನಹಳ್ಳಿಗೆ ವಾರಕ್ಕೆ ಒಂದು ದಿನ ನೀರು ಬಂದಲ್ಲಿ ಕಾಶೀ ಗಂಗೆ ಬಂದಂತೆ ತೋರುತ್ತೆ ಆ ದಿನ ಬೆಳೆಗಳು ಹರಿಯದೆ ಫಸಲು ನಷ್ಟವಾಗಿ ಅನೇಕ ಜಮೀನುಗಳು ರಾಜೀನಾಮೆ ಕೊಟ್ಟಿರು ಇನ್ನು ಕೆಲವು ಜಮೀನುಗಳನ್ನು ಬಿಡಲಾರದೆ ನೀರಿನ ತಕರಾರಿನಿಂದ ಗುವಸ್ತೆ ಕಂದಾಯ ಕೊಡದೆ ನಿಲ್ಲಿಸಿ ಅನೇಕ ಅರ್ಜಿಗಳ ಮೂಲಕ ಅಮಲ್ದಾರ್ರು ಮತ್ತು ಸಬ್ ಡಿವಿಜನ್ ಸಾಹೇಬರ ರೂಬರೂಬ್ ಹೇಳಿಕೊಂಡಾಗ್ಯೂ ನಮ್ಮಗಳ ನೀರಿನ ತೊಂದರೆಯನ್ನು ವಿಚಾರಿಸತಕ್ಕವರೇ ಇಲ್ಲ ಕಂದಾಯಕ್ಕೆ ಮಾತ್ರ ನೋಟೀಸು, ಜಪ್ತಿ, ಹರಾಜು ವಗೈರೆ ಕ್ರಮ ನಡಿಸಿ ವಸೂಲಿ ಮಾಡಿಕೊಳ್ಳುತ್ತಾರೆ ಮೇಲಿನ ಗ್ರಾಮಗಳು ದೇವಗಾನಹಳ್ಳಿ, ಗುಂಡ್ಲಹಳ್ಳಿ, ಯರನಾಗೇನಹಳ್ಳಿ ಜಮೀನುಗಳಿಗೆ ಅನುಕೂಲವೇ ಸರಿ ಆಖೈರು ನಾಲೆಗೆ ಮಾತ್ರ ನೀರು ಬರಬೇಕಾದರೆ ನಾಲಾ ಮಣೀಗಾರ್ ನೌಡಿಗಳು ಇರುವ ಮೊಕ್ಕಾಂಗೆ ನಾವು ಹೋಗಿ ನೀರು ಬಿಡಬೇಕೆಂತ ಕೇಳಿಕೊಂಡರೆ ನೀರು ಸಾಗಿಸುತ್ತಾರೆ ಮೇಲಿನ ಗ್ರಾಮಗಳ ಜನಗಳನ್ನು ಕೇಳಿಕೊಂಡು—ನಮಗೆ ಒಂದು ವಾರವಾಯಿತು ಈ ದಿನ ನೀವುಗಳು ನಮ್ಮ ಮೇಲೆ ದಯವಿಟ್ಟು ಬಿಡಬೇಕೆಂತ ಕೇಳಿದಲ್ಲಿ ಅವರ ದಯೆಯಿಂದ ಬಿಟ್ಟರೆ ನೀರು ಬರುತ್ತೆ ಇಲ್ಲವೇ ನಾವು 10 ೨ ಜನ ಸುಮ್ಮನೇ ಹೋಗುವದಾಗುತ್ತೆ ಈ ರೀತಿ ಮನ್ನಾನೆ ಕಿತ್ತ ನೀರು ಹಲಾಕಾಗಿ ಚಿತ್ರಾವತಿಗೆ ಸೇರಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಿಗೆ ಅನುಕೂಲವಾಗುತ್ತೆ ಆದ್ದರಿಂದ ಯಾವ ಆಫೀಸರಿಗೂ ಗೋಚರವಾಗದೇ ನಮ್ಮ ಬೆಳೆಗಳು ಮಾತ್ರ ನಷ್ಟವಾಗಿ ತುಂಬಾ ಕಷ್ಟಪಡುವವರಾಗಿದ್ದೇವೆ ಈಗ ಇರತಕ್ಕ ನಮ್ಮ ದಿವಾನ್ ಸಾಹೇಬರವರು ಒದಗೈತರಾದ ನಮ್ಮಗಳ ನೀರಿನ ಕಷ್ಟವನ್ನು ಘನವಾದ ಚಿತ್ತಕ್ಕೆ ತಂದು ಸಲೀಸು ನೀರುಬರುವ ಏರ್ಪಾಟುಮಾಡಿಕೊಡಬೇಕಾಗಿ ಹಾರೈಸುತ್ತೇವೆ ಇಲ್ಲವಾದರೆ ನೀರು ಬಂದು ತರೀ ಫಸಲು ಆದರೆ ತರೀ ಕಂದಾಯ ವಸೂಲು ಮಾಡುವ ಹಾಗೂ, ಇಲ್ಲವಾದರೆ ಖುಷ್ಕಿ ಕಂದಾಯ ವಸೂಲು ಮಾಡುವ ಹಾಗೂ ಏರ್ಪಾಟು ಮಾಡಿಸಿಕೊಡಬೇಕಾಗಿ ಬೇಡುತ್ತೇನೆ

ಪಾ ವೀರಭದ್ರಾಚಾರಿ, ಗಡಿಮಿಂಚೇನಹಳ್ಳಿ

ಹರಿಹರದಲ್ಲಿ ಪ್ರದರ್ಶನ—ವಿವರಣೆ ಮತ್ತು ಆಕ್ಷೇಪಣೆ

ಅಯ್ಯಾ,—ಪ್ರದರ್ಶನವು ತಾ 13 ರಿಂದ ಪ್ರಾರಂಭವಾಗಿ ನೆನ್ನೆಗೆ ಅಂದರೆ ತಾ 17 ಕ್ಕೆ ಪೂರೈಸಿತು ಡಿ|| ಕ|| ಸಾಹೇಬರು ಮ|| ತ್ಯಾಗರಾಜ ಅಯ್ಯರವರು, ಮ|| ಎಂ ಎ ನಾರಾಯಣ ಅಯ್ಯಂಗಾರ್ರು, ಎಲ್ಲಾ ತಾಲ್ಲೂಕುಗಳ ಅಮಲ್ದಾರ್ರೊಡಗೂಡಿ ಬಂಗಲೆಯಿಂದ ವಾದ್ಯ ವಿಜೃಂಭಣೆಯಲ್ಲಿ ಎ ವಿ ಸ್ಕೂಲ್ ಕಟ್ಟಡಕ್ಕೆ ಸಾಯಂಕಾಲ 5 ಘಂಟೆಗೆ ದಯಮಾಡಿದರು ಸ್ಕೂಲ್ ಕಾಂಪೌಂಡಿನಲ್ಲಿ ಹಾಕಲ್ಪಟ್ಟ ಪಂಡಾಲಿನಲ್ಲಿ ಎಲ್ಲರೂ ಉಚಿತಾಸನದಲ್ಲಿ ಕುಳಿತುಕೊಂಡರು ಅನಂತರ ಮ|| ಆರ್ ಟಿ ಮಹದೇವರಾಯರು ಆ ಸ್ಥಳಕ್ಕೆ ದಯಮಾಡಿದಾಗ ಸಭಿಕರು ಬಹಳ ಕೃತಜ್ಞರಾಗಿದ್ದೇವೆಂಬ ಸ್ತೋತ್ರರೂಪವಾದ ಸ್ವಾಗತವನ್ನು ಮಾಡಿ ಪ್ರದರ್ಶನ ಉದ್ದೇಶವನ್ನು ಸ್ವಾರಸ್ಯತದಲ್ಲಿ ಪ್ರಕಟಿಸಿದರು ಡೆ|| ಕ|| ಸಾಹೇಬರ ಅಗ್ರಾಸನಾಧಿಪತ್ಯಕ್ಕೆ ಮ|| ಹನುಮಂತರಾಯರವರೂ, ಅ| ಕ| ಮ|| ನಾನಾಸಾವಿರಾಯರೂ ಮತ್ತು ಮ|| ಮಾಗಳ್ ರಂಗರಾಯರೂ ಅನುಮೋದಿಸಿದರು ಅನಂತರ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಹನುಮಂತರಾಯರು ವಿದ್ಯಾಭ್ಯಾಸದ ವಿಷಯದಲ್ಲಿ ಸಾರಸ್ಯವಾದ ಉಪನ್ಯಾಸ ಮಾಡಿ, ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನಗಳಲ್ಲಿ ವಿದ್ಯಾಭ್ಯಾಸದ ಪ್ರದರ್ಶನಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಸಭಾಸದರಿಗೂ ಅಧಿಕಾರಿಗೂ ವಂದನೆಗಳನ್ನು ಅರ್ಪಿಸಿದರು ಬಂದ ಪದಾರ್ಥಗಳನ್ನು ಸರಿಯಾಗಿ ವಿಂಗಡಿಸುವದರಲ್ಲಿ ಸಹಾಯ ಮಾಡಿದ ಎಗ್ಜಿಬಿಷನ್ ಕ್ಲಾರ್ಕ್ ಮ|| ಎಂದ ರಾಯರಿಗೂ, ಸ್ಕೂಲ್ ಅ|| ಮಾಸ್ಟರ್ ಜಿ ಕೃಷ್ಣಪ್ಪನವರಿಗೂ ಕೃತಜ್ಞತೆಯನ್ನು ತೋರ್ಪಡಿಸಿದರು

ಎಗ್ಜಿಬಿಷನ್ ತೆರೆಯಲ್ಪಟ್ಟ ನಂತರ ಡೆ ಕ| ಸಾಹೇಬರವರೂ, ಕೋಆಪರೇಟಿವ್ ರಿಜಿಸ್ಟ್ರಾರ್ ಸಾಹೇಬರವರೂ ಚಿತ್ರವಿಚಿತ್ರಪದಾರ್ಥಗಳನ್ನು ನೋಡಿ ನೋಡಿ ಸಂತೋಷಪಟ್ಟರು, ಮ ಎ ಕೆ ರಾಮಸ್ವಾಮಿ ಅಯ್ಯಂಗಾರರು ದಾವಣಗೆರೆಯಿಂದ ಕರೆದುಕೊಂಡು ಬಂದ ಕಿಂಡರ್‌ಗಾರ್ಟನ್ ಪ್ರಾಕ್ಟಿಕಲ್ ತರಗತಿಗೆ ದಯಮಾಡಿಸಿದರು ಅಲ್ಲಿ ನೋಡುವದಕ್ಕಾಗಿ ಇಟ್ಟಿದ್ದ ಪದಾರ್ಥಗಳು ದೊಡ್ಡ ಪಟ್ಟಣವಾಸಿಗಳಿಗೂ ಸಹ ನೂತನವಾದವಾಗಿದ್ದವು ಯಾವ ಪ್ರದರ್ಶನದಲ್ಲಿಯೂ ಪದಾರ್ಥಗಳಿಲ್ಲ ಎಲ್ಲಾ ಇಂಗ್ಲೆಂಡಿನಿಂದಲೂ, ಬೊಂಬಾಯಿನಿಂದಲೂ ತರಿಸಿದ ಅಮೂಲ್ಯವಾದ ಸಾಮಾನುಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಇಷ್ಟು ಗಮನಕೊಟ್ಟು ದ್ರವ್ಯ ವ್ಯಯಮಾಡುತ್ತಿರುವ ದಾವಣಗೆರೆಯ ದೊಡ್ಡ ಮನುಷ್ಯರ ಉದಾರವನ್ನು ಎಷ್ಟೆಂತ ವರ್ಣಿಸೋಣ ! ಅದೆಂತಿರಲಿ ಅನಂತರ ಆ ಕಿಂಡರ್‌ಗಾರ್ಟನ್ ಬಾಲಕರ ಪರೀಕ್ಷೆಯಾಯಿತು ಪ್ರಶ್ನೆಗೆ ಸರಿಯಾದ ಅವರ ಬುದ್ಧಿವಂತಿಕೆಯ ಉತ್ತರಗಳನ್ನೂ, ಅವರ ಧೈರ್ಯ, ಚಮತ್ಕಾರಗಳನ್ನೂ ನೋಡಿ ಸರ್ವರೂ ಈ ಪಾಠಶಾಲೆ ನಮ್ಮ ಮೈಸೂರು ದೇಶದಲ್ಲಿ ಮಾದರಿಯ ಶಾಲೆ ಎಂತ ಘಂಟಾಘೋಷವಾಗಿ ಹೇಳಿದರು ಇದರಲ್ಲಿ ಅನುಸರಿಸುವ ಪದ್ಧತಿಯನ್ನು ಪ್ರತಿಯೊಬ್ಬ ಉಪಾಧ್ಯಾಯನೂ ಮತ್ತು ತಂದೆಯೂ ಅನುಸರಿಸತಕ್ಕದ್ದಾಗಿದೆ ಇಂಥಾ ಪ್ರದರ್ಶನಗಳು ಪ್ರತಿ ಡಿಸ್ಟ್ರಿಕ್ಟು ಸ್ಥಳದಲ್ಲಿ ಸಾಧಾರಣ ನಡೆಯಬಹುದು, ಅಥವಾ, ಮುಂದೆ ನಡೆಯಬಹುದು ಆದರೆ ನಮ್ಮ ಚಿತ್ರಮುಗಳಿಗೆ ಇದು ಹೊಸದಲ್ಲ ಇದು ಉಪಾಧ್ಯಾಯರ ಸ್ವತ್ತು ಕ್ಕೆ ಕಾರಣವಾಗಿದೆ ಆದರೆ ಈ ದಾವಣಗೆರೆ ಕಿಂಡರ್‌ಗಾರ್ಟನ್ ಸ್ಕೂಲಿನಲ್ಲಿ ಅನುಸರಿಸುವ ಪಾಠಕ್ರಮದ ನವೀನ ಪದ್ಧತಿ ಎಲ್ಲಿಯೂ ಇಲ್ಲದ್ದು ನೋಡಿದರೆ ಸದರಿ ವಿಷಯಗಳನ್ನು ಕನ್ನಡ ವಾರಪತ್ರಿಕೆಯಲ್ಲಿ ಪ್ರಕಟಿಸದೆ ಇರುವದೇ ಮುಖ್ಯ ಕಾರಣವೆಂತ ಕಾಣುತ್ತೆ ಇದು ಹಾಗಿರಲಿ ದನಗಳ ಗತಿ ಏನಾಯಿತು ? ಒಂದು ಕಾಲ್ನಡೆಯೂ ಬರಲಿಲ್ಲ ಆದ್ದರಿಂದ ಅದನ್ನು ತಾ 15 ಕ್ಕೆ ಪ್ರಾರಂಭಿಸುವುದೆಂತ ತೀರ್ಮಾನವಾಯಿತು

ಪರಸ್ಪರ ಸಹಾಯ ಸಂಘದ ಉಪನ್ಯಾಸ ತಾ. 13,14,15 ರಲ್ಲಿ ನಡೆಯಿತು ಮ|| ಎಂ ಎ ನಾರಾಯಣಯ್ಯಂಗಾರ್ರು, ಬಹಳ ಮುತುವರ್ಜಿಯಿಂದ ಬೇಸರಗೊಳ್ಳದೆ ಎಲ್ಲರ ಅನುಮಾನವನ್ನೂ ಬಗೆಹರಿಸಿ ತೃಪ್ತಿಪಡಿಸಿದರು

ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆ.

"ಷೇಕ್ಸ್ಪಿಯರ್ ಮಹಾಕವಿಯು ರಚಿಸಿದ ರಚಿತನಾದ ಕಥೆಗಳು" ಎಂಬ ಕನ್ನಡ ಪುಸ್ತಕವನ್ನು 1915 ನೇ ಇಸವಿ ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಪಠ್ಯಪುಸ್ತಕವಾಗಿ ನೇಮಿಸಿರುತ್ತಾರೆ ಈ ಪುಸ್ತಕದ ಪ್ರತಿಗಳು ಮೈಸೂರು ಸಿ ಎಲ್ ಎಸ್ ಬುಕ್ ಡಿಪೋದಲ್ಲಿ ಪ್ರತಿ 1 ಕ್ಕೆ 8 ಆಣೆಯಂತೆ ಬೆಳಂಗೆ ಸಿದ್ಧವಾಗಿವೆ

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security rebuired from each Agent is Rs. 50 For particulars see in person or apply to

Messrs VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, Near Old Taluk Cutchery,
243 22 *MYSORE*

BRAHMAPPA TAVANAPPANAVAR,

Merchant & Commission Agent
Agent to Messrs Currimbhoy Ebrahim & Co's Mills
BOMBAY

ನಾವು ಮುಂಬೈ ಮೆಸರ್ಸ್ ಕರೀಂಭಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸರ್ಸ್ ಫಜಲಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಚೋಟುದಲ್ಲಾಳಿ, ಮೊಕ್ತಾದುವು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಹುಂಡೀಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ ಜೆಟ್ಟು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮೂಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 1½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ [97 1]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು

ಹೆಡ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ ಬ್ರಾಂಚ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

— o —

ಸನ್ ೧೯೧೪ ನೇ ಇಸವಿ ಏಪ್ರಿಲ್ ತಾ ೨೩ ನೇ ಗುರುವಾರ

ಮೈಸೂರು ನ್ಯಾಯವಿಧಾಯಕ ಸಭೆಯು

ಮೈಸೂರು ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಸಂಖ್ಯೆ ಹೆಚ್ಚಿದ ಮೇಲೆ ಈ ಸಭೆಯ ಮೊದಲನೇ ಮೀಟಿಂಗು ಹಿಂದಿನ ವಾರ ನಡೆಯಿತು ಆಗ್ಗೆ ಕೆಲವು ಮೆಂಬರುಗಳು ಸರ್ಕಾರದವರನ್ನು ಕೇಳಿದ ಪ್ರಶ್ನೆಗಳನ್ನೂ ಅವುಗಳಿಗೆ ಸರ್ಕಾರದ ಅಧಿಕಾರಿಗಳು ಕೊಟ್ಟಿರುವ ಉತ್ತರಗಳನ್ನೂ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ ಈ ವಿಷಯಗಳೆಲ್ಲಾ ರಾಜಾದಾಯಕ್ಕೆ ಸಂಬಂಧಪಟ್ಟವುಗಳಾಗಿದ್ದವು ಸಿಬ್ಬಂದಿ ಖರ್ಚನ್ನು ಕಡಮೆ ಮಾಡುವುದಕ್ಕಾಗಿ ಏರ್ಪಾಡಾದ ಕಮಿಟಿಯವರು ಸಾಲಿಯಾನಾ 2,60,000 ರೂಪಾಯಿನ ಖರ್ಚು ಕಡಿಮೆ ಮಾಡಬಹುದೆಂದು ಸಿಫಾರಸುಮಾಡಿದರು, ಆದರೆ ಸರ್ಕಾರದವರು 17,800 ರೂಪಾಯಿ ಖರ್ಚಿನ ಸಿಬ್ಬಂದಿಯನ್ನು ವಜಾ ಮಾಡಲು ಒಪ್ಪದೆ ಹೋದರು ಬೆಂಗಳೂರು ದಂಡಿನ ಬಿಮಾಖರ್ಚು ಬಿಲ್ಲಿನಲ್ಲಿ ಮೈಸೂರು ಸರ್ಕಾರಕ್ಕೆ ರೂ 19,22,919 10-8 ಪೈ ಬಾಪತಿ ಬರಬೇಕಾಗಿದೆ ಎಂದೂ, ಈ ಪೈಕಿ 10 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆಂದೂ ಕಂಟ್ರೋಲರವರು ತಿಳಿಸಿದರು ನೀರು ಅಳೆಯುವ ಯಂತ್ರ (ಮೀಟರ್) ಗಳನ್ನು ಬೆಂಗಳೂರು ಮತ್ತು ಮೈಸೂರು ಶಹರುಗಳಲ್ಲಿ ಇಟ್ಟಿರುವುದರಿಂದ ಪ್ರಜೆಗಳಿಗೆ ಕಷ್ಟನಷ್ಟಗಳುಂಟಾಗಿರುವುವೆಂದು ಹೇಳುವುದಕ್ಕೆ ಸರಿಯಾದ ಕಾರಣಗಳೇನೂ ಕಂಡುಬರಲಿಲ್ಲವೆಂದು ಸಕ್ರೆಟರಿಯವರು ಒಂದು ಪ್ರಶ್ನೆಗೆ ಉತ್ತರ ಹೇಳಿದರು ಸಂಸ್ಥಾನದ ಇಲಾಖೆಗಳಲ್ಲಿ ಸರ್ಕಾರದ ಹಣಗಳು ದುರ್ವಿನಿಯೋಗವಾಗಿಲ್ಲವೇ ಎಂಬ ಪ್ರಶ್ನೆಗೆ ಖಂಡಿತವಾದ ಉತ್ತರವೇನೂ ದೊರಕದೆ ಹೋಯಿತು. ಇನಾಂದಾರರಿಗೆ ಕೆರೆಯಿಂದ ಉತ್ಪತ್ತಿಯು ನಷ್ಟವಾಗುವ ವಿಷಯದಲ್ಲಿ ಅವರ ಅರ್ಜಿಗಳು ಬೇಗನೆ ವ್ಯವಸ್ಥೆ ಆಗುವುದಿಲ್ಲವೆಂದು ಒಬ್ಬ ಮೆಂಬರು ಕೇಳಿದ ಪ್ರಶ್ನೆಯಿಂದ ಗೊತ್ತಾಯಿತು ಈ ಬಾಬಿನಲ್ಲಿ 1907 ನೇ ಜುಲೈ ತಾ 11 ರ ಒಂದು ಅರ್ಜಿ ಇನ್ನೂ ವ್ಯವಸ್ಥೆಯಾಗಿರುವುದಿಲ್ಲ ಮೈಸೂರು ಬೃಹತ್ಕಾರಾಗೃಹಗಳಲ್ಲಿ ಶಿಕ್ಷೆಯನ್ನು ಅನುಭವಿಸುವ ಸಣ್ಣ ವಯಸ್ಸಿನ ಅಪರಾಧಿಗಳು 16 ಮಂದಿಗಿಂತ ಹೆಚ್ಚಾಗಿಲ್ಲವೆನ್ನುವುದು ಸಂತೋಷಕರವಾಗಿದೆ "ಎಸೆರ್ಟೆಸಿ ಆಕ್ಟ್" ಎಂಬ ಹೊಸ ಇಲಾಖೆಯ ವಿಚಾರದಲ್ಲಿ ಪ್ರಶ್ನೆಮಾಡಿದ್ದಕ್ಕೆ ಹೆಚ್ಚು ಸಂಗತಿಯೇನೂ ತಿಳಿಯಲು ಅವಕಾಶವಾಗದೆ ಹೋಯಿತು ಅಂತು ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳು ಕೇಳಿದ ಪ್ರಶ್ನೆಗಳು ಯೋಗ್ಯವಾಗಿಯೂ ಪ್ರಯೋಜನಕರವಾಗಿಯೂ ಇದ್ದವು. ಮೆಂಬರುಗಳಿಗೆ ದೊರತಿರುವ ಈ ಅಧಿಕಾರದ ದೆಸೆಯಿಂದ ಹಲವು ಒಳ್ಳೇ ವಿಷಯಗಳು ಪ್ರಜೆಗಳಿಗೆ ತಿಳಿದುಬರಲು ಅವಕಾಶವಾಗಿದೆ ಎಂದು ನಂಬುತ್ತೇವೆ ಇದಲ್ಲದೆ ಮೆಂಬರುಗಳು ಸಭೆಯಲ್ಲಿ ಪ್ರಶ್ನೆ ಕೇಳಬಹುದೆಂಬ ತಿಳುವಳಿಕೆಯಿಂದ ಬೇರೆ ಬೇರೆ ಇಲಾಖೆಯ ಕಾರುಬಾರುಗಳು ಇನ್ನೂ ಜಬುವಟಿಕೆಯಾಗಿಯೂ, ದೂರದೃಷ್ಟಿಯಿಂದಲೂ ನಡೆಯಲು ಸಹಾಯವಾಯಿತೆಂದು ಹೇಳುತ್ತೇವೆ

ಈ ಸಭೆಯಲ್ಲಿ ಪ್ರಾಮುಖ್ಯವಾದ ನ್ಯಾಯ ನಿಬಂಧನೆಗಳ ವಿಚಾರವಾದ ಚರ್ಚೆಗಳೇನೂ ನಡೆಯಲಿಲ್ಲ ಸಭೆಯ ಕಾರ್ಯಗಳೆಲ್ಲಾ ಸುಮಾರು ಒಂದೂವರ ಗಂಟೆ ಹೊತ್ತಿನಲ್ಲಿ ಪೂರೈಸಿದವು

ಮೈಸೂರು ಫಾರೆಸ್ಟ್ ಇಲಾಖೆಯು

ಮೈಸೂರು ಸೀಮೆಯ ಕಾಡುಗಳು ಐಶ್ವರ್ಯಯುಕ್ತವಾಗಿರುತ್ತವೆ ಕಳೆದ ವರುಷ ಈ ಬಾಬಿನಲ್ಲಿ 12,91,721 ರೂಪಾಯಿ ಹುಟ್ಟುವಳಿಯೂ, 6,83,501 ರೂಪಾಯಿ ಖರ್ಚೂ ಆಗಿ ಗವರ್ನ್‌ಮೆಂಟಿಗೆ 26,10,220 ರೂಪಾಯಿ ನಿವ್ವಳ ಆದಾಯ ಕಂಡುಬಂದಿದೆ ಶ್ರೀಗಂಧದ ಧಾರಣೆ ಹೆಚ್ಚಿದ್ದುದರಿಂದ ಈ ಒಂದು ಬಾಬಿನಲ್ಲೇ 22,69,408 ರೂಪಾಯಿ ಉತ್ಪತ್ತಿಯಾಯಿತು, ಅಂದರೆ, ಹೋದ ಸಾಲಿಗಿಂತ ಶ್ರೀಗಂಧ ಒಂದರಲ್ಲೇ 10 ಲಕ್ಷ ರೂಪಾಯಿ ಜಾಸ್ತಿ ಹುಟ್ಟುವಳಿ ಆಗಿರುವುದು

ಈಗ ಗವರ್ನ್‌ಮೆಂಟಿನವರು ಈ ಫಾರೆಸ್ಟ್ ಬಾಬಿನ ಸಿಬ್ಬಂದಿಯನ್ನು ಪೂರ್ಣ ರೀತಿಯಾಗಿ ಮಾಡಿಟ್ಟು ಸಂಬಳಗಳನ್ನು ಹೆಚ್ಚು ಮಾಡಿದರೆ ಇದಲ್ಲದ ಕಾಡುಗಳನ್ನು ಹೆಚ್ಚಿಸಿ ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ಸಾಹಸ ಪಡುತ್ತಿರುವರು ಕಾಡುಗಳಲ್ಲಿ ಕೆಲಸಮಾಡುವುದಕ್ಕೆ ಸಂಬಂಧಪಟ್ಟ ಜನರು ಸಿಕ್ಕುವುದೇ ಕಷ್ಟವೆಂದು ಒಪ್ಪಿಕೊಳ್ಳುತ್ತೇವೆ ಆದರೆ ಸರಿಯಾದ ಕೂಲಿಜನರು ಒದಗಿದ ಪಕ್ಷದಲ್ಲಿ ನಮ್ಮ ಸಂಸ್ಥಾನದ ಜಂಗಲ್ ಉತ್ಪತ್ತಿಯು ಇನ್ನೂ ಹೆಚ್ಚಾಗಿ ಹಬ್ಬಬಹುದೆಂದು ತೋರುತ್ತದೆ ಈ ಇಲಾಖೆಯ ಸಿಬ್ಬಂದಿಯವರಿಗೆ ಅಧಿಕಾರಿಗಳು ವಿಧಿಸಿರುವ ಶಿಕ್ಷೆಗಳ ವಿವರಣೆಯು ಓದುವುದಕ್ಕೆ ಬಹಳ ಸ್ವಾರಸ್ಯವಾಗಿ ಕಾಣುತ್ತದೆ ಇದರಿಂದ ಕೆಲವು ಕಾಡಿನ ನೌಕರರು ಅಯೋಗ್ಯರಾಗಿದ್ದಾರೆ ಎಲ್ಲದೇ, ಅಂತಕೋರರೂ ಯೂ ದುರ್ಮಾರ್ಗರಾಗಿಯೂ ಇರಬೇಕೆಂದು ತೋರುವುದು ಕೆಲವು ಸಂದರ್ಭಗಳಲ್ಲಿ ಫಾರೆಸ್ಟ್ ನೌಕರರಾಗಿದ್ದವರನ್ನೆಲ್ಲಾ ಜಟ್ಟಿಗೆ ತಿಕ್ಕಿಸಿರುತ್ತಾರೆ

ಫಾರೆಸ್ಟುಗಳಿಂದ ಸಾಮಾನುಗಳನ್ನು ಟ್ರಾಮ್ ಗಾಡಿಗಳ ಮೂಲಕ ರೈಲ್ವೆ ಸ್ಟೇಷನ್ ಗಳಿಗೆ ತಂದು ಕೆಡವುವದಕ್ಕೆ ಸರ್ಕಾರದವರು ಮಾಡಿರುವ ಏರ್ಪಾಡು ಲಾಭಕರವಾಗಿಯೂ ಸರಾಗವಾಗಿಯೂ ನಡೆಯದೆ ಇರುತ್ತದೆ ಫಾರೆಸ್ಟ್ ಉತ್ಪತ್ತಿಯನ್ನು ಹಬ್ಬಿಸಬೇಕಾಗಿದ್ದರೆ ಕಾಡುಗಳಲ್ಲಿ ಕೆಲಸಮಾಡುವುದಕ್ಕೆ ಇನ್ನೂ ವಿಶೇಷವಾಗಿ ಯಂತ್ರಗಳ ಸಹಾಯವನ್ನು ಕಲ್ಪಿಸಿಕೊಳ್ಳಬೇಕಾದ್ದೀತೆಂದು ತೋರುವುದು ನಿಪುಣರಾದ ಕೆಲಸಗಾರರೇನೋ ಅವಶ್ಯವಾಗಿ ಬೇಕು ಮೈಸೂರು ಸರ್ಕಾರದವರು ತಮ್ಮ ಕೆಲಸಗಳಿಗೋಸ್ಕರವಾದರೂ ಜನರನ್ನು ಬೇರೆ ಬೇರೆ ಕಸುಬುಗಳಲ್ಲಿ ತಯಾರು ಮಾಡುವುದಕ್ಕೆ ಮಾರ್ಗಗಳನ್ನು ಕಲ್ಪಿಸಬೇಕೆಂದು ಸೂಚಿಸುತ್ತೇವೆ

ಮೈಸೂರು ವಿದ್ಯಾ ಇಲಾಖೆಯ ರಿಪೋರ್ಟು

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ವಾರ್ಷಿಕ ರಿಪೋರ್ಟಿನ ಮೇಲೆ ಸರ್ಕಾರದವರು ಬರೆದಿರುವ ಹುಕುಮು ನಮಗೆ ತಲುಪಿದೆ ಆದರೆ ಆ ರಿಪೋರ್ಟು ಇನ್ನೂ ಬಂದಿರುವುದಿಲ್ಲ ವಿದ್ಯೆಯನ್ನು ಕಲಿಸುವ ಪಾಠಶಾಲೆಗಳು 4,478 ರಿಂದ 4,509 ಕ್ಕೂ, ವಿದ್ಯೆ ಕಲಿಯುವ ಮಕ್ಕಳ ಸಂಖ್ಯೆಯು 1,19,214 ರಿಂದ 1,46,140 ಕ್ಕೂ ಹೆಚ್ಚಿದವು, ಈ ಪೈಕಿ 1,29,009 ಗಂಡು ಮಕ್ಕಳೆಂದೂ, 27,131 ಹೆಣ್ಣು ಮಕ್ಕಳೆಂದೂ ಗೊತ್ತಾಯಿತು ಈ ರೀತಿ ಪಾಠಶಾಲೆಗಳೂ ಮಕ್ಕಳ ಸಂಖ್ಯೆಯೂ ಹೆಚ್ಚಿರುವುದೇನೋ ಸಂತೋಷವೇ ಸರಿ, ಆದರೆ ಅವು ನಿರೀಕ್ಷಿಸಬಹುದಾದಷ್ಟು ಮಟ್ಟಿಗೆ ಹೆಚ್ಚಿರುವುದಿಲ್ಲ ವಿದ್ಯೆ ಕಲಿಯುವವರು 7,221 ಮಂದಿ ಹೆಚ್ಚಿರುತ್ತಾರಾದರೂ ಬಾಲ್ಯ ಪಾಠಗಳನ್ನು ಕಲಿಯತಕ್ಕವರೇನೋ 4,171 ಕ್ಕಿಂತ ಹೆಚ್ಚಾಗಲಿಲ್ಲ ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಗೆ ಹಣವನ್ನು ವಿಶೇಷವಾಗಿ ಸ್ಯಾಂಕ್ಷನ್ ಮಾಡಿರೋಣದರಿಂದ ಇನ್ನೂ ಹೆಚ್ಚು ಫಲವನ್ನು ತೋರಿಸಬೇಕಾಗಿತ್ತು

ಸಾಯುಕಾಲ ಪಾಠಶಾಲೆಗಳು ಕಡಮೆಯಾಗಿರುತ್ತವೆ ಈಗ ಸರ್ಕಾರದವರು ಸ್ಯಾಂಕ್ಷನ್ ಮಾಡಿರುವ ಹೊಸ ನಿಬಂಧನೆಗಳನ್ನು ಜಾರಿಗೆ ತರುವ ಪಕ್ಷದಲ್ಲಿ ವಿದ್ಯೆ ಹರಡಲು ತುಂಬಾ ಅಡಚಣೆಯುಂಟಾದೀತೆಂದೂ, ಸಾಯುಕಾಲ ಪಾಠಶಾಲೆಗಳು ಇನ್ನೂ ಕಡಮೆಯಾಗುವವೆಂದೂ ನಮಗೆ ತೋರುತ್ತದೆ

ಶಿಕ್ಷಣವನ್ನು ಹೊಂದಿದಂಥಾ ಉಪಾಧ್ಯಾಯರ ಸಂಖ್ಯೆ ಹೆಚ್ಚಬೇಕೆಂದು ಸರ್ಕಾರದವರು ಅನುಮೋದಿಸಿರುವುದನ್ನು ನೋಡಿ ನಮಗೆ ಸಂತೋಷವಾಗುತ್ತದೆ ಈಗ ಇರುವಂಥಾ 3,880 ಜನ ಉಪಾಧ್ಯಾಯರುಗಳ ಪೈಕಿ 730 ಮಂದಿ ಮಾತ್ರವೇ ತರಪೇತಾದವರು ಇದು ತೃಪ್ತಿಕರವಾದದ್ದೆಂದು ಎಷ್ಟು ಮಾತ್ರಕ್ಕೂ ಹೇಳಲಾಗದು ಇದಕಾರಣ ಮೈಸೂರು ಸರ್ಕಾರದವರು ಶಿಕ್ಷಣ ಪಾಠಶಾಲೆ (ನಾರ್ಮಲ್ ಸ್ಕೂಲು) ಗಳ ಸಂಖ್ಯೆಯನ್ನೂ, ಶಿಕ್ಷಕರ ಸಂಖ್ಯೆಯನ್ನೂ ಹೆಚ್ಚಿಸುವ ಭಾಗದಲ್ಲಿ ಏರ್ಪಾಡು ಮಾಡಬೇಕೆಂದು ಕುತೂಹಲ ಪಡುತ್ತಿರುವುದನ್ನು ನೋಡಿ ನಾವು ಬಹಳ ಸಂತೋಷಪಡುವೆವು ಸರ್ಕಾರದವರು ಈ ಕುತೂಹಲವನ್ನು ಬೇಗನೆ ಈಡೇರುವಂತೆ ಮಾಡುವರೆಂದು ನಂಬುತ್ತೇವೆ

ಬೆಳೆಯುವದು

ಗೋಧಿಯ ಕಾಳನ್ನು ಎಲ್ಲರೂ ನೋಡಿದಾರಷ್ಟೆ ಅದನ್ನು ನೋಡಿದರೆ ಅದರಲ್ಲಿ ಏನೂ ವಿಶೇಷತೆ ಇರುವಂತೆ ಕಾಣುವದಿಲ್ಲ ಆದರೂ ಅದರಲ್ಲಿ ಆಶ್ಚರ್ಯವನ್ನು ಹುಟ್ಟಿಸುವ ಅತಿರಹಸ್ಯವಾದ ಒಂದು ವಿಶೇಷತ್ವವುಂಟು ಅದೇನು ಎಲ್ಲರಾ?

ಅದನ್ನು ಹಸನುಮಾಡಿದ ಭೂಮಿಯಲ್ಲಿ ಬಿತ್ತಿದರೆ ಆ ರಹಸ್ಯವು ಪ್ರಕಟವಾಗುವದು ಅದು ಮೊಳಕೆಯಾಗಿ ಕೆಳಗೆ ಬೇರು ಬಿಡುತ್ತಾ ಮೇಲಕ್ಕೆ ಬೆಳೆಯುತ್ತಾ ಗರಿಗಳನ್ನೂ ದಂಟನ್ನೂ ರೂಪಿಸಿಕೊಂಡು ಕಡೆಗೆ ತೆನೆಯನ್ನೂ ತೆನೆಯಲ್ಲಿ ತನ್ನ ಮೊದಲಿನ ಆಕಾರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಹೋಲುವ ನೂರಾರು ಕಾಳುಗಳನ್ನೂ ಕೊಡುವದು ಇಂತಹ ಬಲವು ಕಲ್ಲು, ಕಬ್ಬಿಣ, ತಾಂಬ್ರ ಮುಂತಾದ ನಿರ್ಜೀವ ವಸ್ತುಗಳಲ್ಲಿಲ್ಲ ಬೆಳೆದು ಪ್ರಬಲಹೊಂದಿ ಹೆಚ್ಚುವ ಶಕ್ತಿಯು ಜೀವವುಳ್ಳ ಸಕಲ ವಸ್ತುಗಳಿಗೂ ಇದೆ

ಇವಲ್ಲದ ಜೀವವುಳ್ಳ ವಸ್ತುವು ಯಾವದಾಗಲಿ ಪ್ರಯತ್ನವಿಲ್ಲದೆ ತಾನಾಗಿ ಬೆಳೆಯುತ್ತಿರುತ್ತದೆ ಕ್ರಿಸ್ತನು ಒಂದು ದಿನ ಉಪದೇಶ ಹೇಳುತ್ತಿರುವಾಗ ಊಟಕ್ಕೆ ಏನು ಮಾಡಬೇಕು? ದೇಹಕ್ಕೆ ಬೇಕಾದ ಬಟ್ಟೆಬರೆಗಳನ್ನು ಯಾರು ನಮಗೆ ಕೊಡುವರು ಎಂದು ಚಿಂತಾಕ್ರಾಂತರಾಗಿರುವವರನ್ನು ಕಂಡು ಅವರಿಗೆ "ನಿಮ್ಮ ಪ್ರಾಣ ಧಾರಣೆಗೆ ಏನು ಊಟಮಾಡಬೇಕು? ಏನು ಕುಡಿಯಬೇಕು? ಏನು ಹೊದ್ದುಕೊಳ್ಳಬೇಕು? ಎಂದು ಚಿಂತೆಪಡಬೇಡಿರಿ ಊಟಕ್ಕಿಂತ ಪ್ರಾಣವು ಮೇಲಾದದ್ದು, ಉಡುಪಿಗಿಂತ ಮೈ ಮೇಲಾದದ್ದಲ್ಲವೇ ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ನೋಡಿರಿ ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ ಕಣಜಗಳಲ್ಲಿ ತುಂಬಿಟ್ಟುಕೊಳ್ಳುವದಿಲ್ಲ ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳನ್ನು ಸಾಕಿಸಲಹುತ್ತಾನೆ ಅವುಗಳಿಗಿಂತ ನೀವು ಎಷ್ಟೋ ಹೆಚ್ಚಿನವರಲ್ಲವೇ? ಚಿಂತೆಮಾಡಿಮಾಡಿ ಒಂದು ಮೊಳ ಬೆಳೆದವನಾರು ಹಾಗೆ ಮಾಡಿ ಬೆಳೆಯುವದೂ ಯಾರಿಂದಾದೀತು? ಇದಲ್ಲದೆ ನೀವು ಉಡುಪಿನ ಸಲುವಾಗಿ ಚಿಂತೆ ಮಾಡುವದು ಯಾಕೆ? ಅಡವಿಯ ಹೂಗಳು ಬೆಳೆಯುವ ರೀತಿಯನ್ನು ಯೋಚಿಸಿರಿ ಅವು ದುಡಿಯುವದಿಲ್ಲ, ನೂಲುವದಿಲ್ಲ, ಆದಾಗ್ಯೂ ಸೊಲೊಮೋನನು ತನ್ನ ಸಕಲ ವೈಭವದಿಂದಿರುವಾಗಲೂ ಈ ಹೂಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅವನಿಗೆ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ ಅಲ್ಪ ವಿಶ್ವಾಸಿಗಳೇ, ಇಂದಿದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತಲೂ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸುವದಿಲ್ಲವೇ? ಏನು ಊಟಮಾಡಬೇಕು? ಏನು ಕುಡಿಯಬೇಕು? ಎಂದು ಚಿಂತಿಸಬೇಡಿರಿ ಯಾಕಂದರೆ ಇವೆಲ್ಲವುಗಳ ವಿಷಯದಲ್ಲಿ ಅನ್ಯಜನಗಳು ಚಿಂತಿಸುತ್ತಾರೆ ಆದರೆ ಅವು ನಿಮಗೆ ಬೇಕೆಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದಿದೆ ಹೀಗಿರುವದರಿಂದ ನೀವು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿಕೊಳ್ಳುವದಕ್ಕೆ ಮೊದಲು ಪ್ರಯತ್ನಿಸಿರಿ ಆಗ ಇವೆಲ್ಲವೂ ನಿಮಗೆ ದೊರಕುವವು ಇದರಿಂದ ತಿಳಿಯುವದೇನೆಂದರೆ ನಾವು ಬೆಳೆಯಬೇಕೆಂದು ಅಪೇಕ್ಷಿಸಿದರೂ ಅಪೇಕ್ಷಿಸದೆ ಇದ್ದರೂ ದೇಹದ ಬೆಳವಣಿಗೆಯು ಆಗುವದು

ದೇಹವನ್ನು ಬೆಳಸಿ ದೊಡ್ಡವರಾಗುವದು ನಮ್ಮ ಪ್ರಯತ್ನವಿಲ್ಲದೆ ಆಗುವದು ಆದರೆ ಬುದ್ಧಿ, ಭಕ್ತಿ, ಗುಣ, ನಡತೆಗಳು ನಮ್ಮ ಪ್ರಯತ್ನವಿಲ್ಲದೆ ಮತ್ತು ತಕ್ಕ ಸಾಧನಗಳಿಲ್ಲದೆ ಬೆಳೆಯುವದಿಲ್ಲ ಆದ್ದರಿಂದ ಜೀವದ ಬೆಳವಣಿಗೆಯ ವಿಷಯದಲ್ಲಿ ನಾವು ಜವಾಬ್ದಾರರಲ್ಲದಿದ್ದರೂ ಬುದ್ಧಿ, ಜ್ಞಾನ ಸದ್ಗುಣ, ಸನ್ನಡತೆಗಳಲ್ಲಿ ಬೆಳೆಯುವದಕ್ಕೆ ನಾವು ತಕ್ಕ ಪ್ರಯತ್ನಗಳನ್ನು ಮಾಡಿ ತಕ್ಕ ಸಾಧನಗಳನ್ನು ಪಡೆದುಕೊಳ್ಳಬೇಕು ಬಿತ್ತಿದ ಪ್ರಯೋಜನವು ನಮ್ಮ ದೇಹದ ಬೆಳವಣಿಗೆಯ ಹಾಗೆ ಬಾಲಕಬಾಲಕಿಯರಿಗೆ ಪಾಠಶಾಲೆಗಳನ್ನಿಟ್ಟು ವಿದ್ಯೆಯನ್ನು ಸರಿಯಾಗಿ ಬುದ್ಧಿ ಬೆಳೆಯುತ್ತಾ ಬರುವದನ್ನು ನೋಡಿದರೆ ಯಾರಿಗೆ ತಾನೇ ಸಂತೋಷವಾಗುವದಿಲ್ಲ?

ಇದರಲ್ಲಿ ನಾವು ಲಕ್ಷ್ಯಕೊಡಬೇಕಾದ ಮಾತು ಇನ್ನೊಂದುಂಟು ಏನೆಂದರೆ—ಯಾವ ಗಿಡವಾದರೂ ಪ್ರಾಣಿಯಾದರೂ—ತಾನು ಬೆಳೆಯುವದಿಲ್ಲ ಇರುವ ಸ್ಥಿತಿಯಲ್ಲೇ ಇರುತ್ತೇನೆಂತ ಹಟಹಿಡಿಯಲಾರದು ಒಳ್ಳೇ ಬೀಜವು ತಕ್ಕ ಭೂಮಿಯಲ್ಲಿ ಬಿದ್ದು ಗೊಬ್ಬರ, ನೀರು ಮುಂತಾದ ಸಲಕರಣೆಗಳನ್ನು ಹೊಂದಿ ಬೆಳೆಯದೆ ಇರುವದು ಅಸಾಧ್ಯ ಆದರೆ ಮನುಷ್ಯನು—ತಾನು ತಕ್ಕ ವಿದ್ಯೆ ಬುದ್ಧಿಗಳನ್ನು ಕಲಿಯುವದಿಲ್ಲ ತಂದೆತಾಯಿಗಳು ಗುರುಗಳೂ ಹೇಳುವ ಮಾತನ್ನು ಕೇಳುವದಿಲ್ಲವೆಂದು ಹಟಹಿಡಿಯುವದು ಸಾಧ್ಯವಾಗಿದೆ ಹೀಗೆ ಮಾಡಿದರೆ ವ್ಯವಸಾಯವಿಲ್ಲದೆ ಪಾಳುಬಿದ್ದ ಹೊಲದಲ್ಲಿ ಕಳೆಯುಳ್ಳುಗಳೇ ಬೆಳೆದು ಆಹಾರಕ್ಕೆ ತಕ್ಕ ಧಾನ್ಯವು ಸಿಕ್ಕದೇಹೋಗುವ ಪ್ರಕಾರವೇ ದುಬುದ್ಧಿ, ದುರ್ಗುಣ, ದುರ್ನಡತೆಯೇ ಆತನ ಮನಸ್ಸನ್ನು ಆಕ್ರಮಿಸಿ ಬೆಳೆದು ಬೆಳಗೆಬ್ಬುವವು ಅಭ್ಯಾಸಕ್ಕೆ ತಕ್ಕ ಅವಕಾಶವು, ಸದ್ಗುಣ ಸನ್ನಡತೆಯನ್ನು ಕಲಿಸುವದಕ್ಕೆ ತಕ್ಕ ಒಳ್ಳೆಯವರ ಮೇಲ್ಪಂಕ್ತಿಯೂ ಸ್ನೇಹವೂ ನಮಗೆ ಲಭ್ಯವಾಗುವದು ಸ್ವಲ್ಪ ಕಷ್ಟ ಆದರೂ ಪ್ರಯತ್ನಪಟ್ಟು ಕಾಂಕ್ಷಿತರಾಗಿರುವವರಿಗೆ ದೇವರು ತಕ್ಕ ಸಹಾಯವನ್ನು ಕೊಡದಿರಲಾರನು ನಿತ್ಯದಲ್ಲಿ ನಮ್ಮ ಮೇಲೆ ಬಂದಿರುವ ಕರ್ತವ್ಯವೇನಂದರೆ—ಸದ್ಗುಣ ಸನ್ನಡತೆಗಳನ್ನು ಅಭ್ಯಾಸಿಸುವದಕ್ಕೆ ಈಗ ನಮಗೆ ದೊರೆತಿರುವ ಸಕಲ ಸಾಧನಗಳನ್ನು ಜಾಗ್ರತೆಯಿಂದ ಪ್ರಯೋಗಿಸಿ ಲಾಭವನ್ನು ಹೊಂದುವದು ದೊರೆತ ಅನುಕೂಲ, ಸಹಾಯ, ಸಮಯ, ಸ್ನೇಹಗಳನ್ನು ಅಲಕ್ಷ್ಯಿಸುವದು ನಾಶನಕ್ಕೆ ಕಾರಣವಾಗಿರುವದು ಯಾವನಲ್ಲಿ ಇದೆಯೋ ಅವನಿಗೆ ಇನ್ನೂ ಕೊಡಲ್ಪಡುವದು ಅವನಿಗೆ ಮತ್ತೂ ಹೆಚ್ಚಾಗುವದು ಇಲ್ಲದವನಿಂದ ಅವನಲ್ಲಿ ಇದ್ದದ್ದೂ ತೆಗೆಯಲ್ಪಡುವದು ಅವನು ಕೆಲಸಕ್ಕೆ ಬಾರದ ಆಳು

ಕೆಲವು ದಿನಗಳ ಕೆಳಗೆ ಒಂದು ವರ್ತಮಾನ ಪತ್ರಿಕೆಯಲ್ಲಿ ವ್ಯವಸಾಯಾಭಿವೃದ್ಧಿಯನ್ನು ಕುರಿತು ಒಂದು ಸಂಗತಿಯನ್ನು ಓದಿದೆವು ಏನಂದರೆ—ವ್ಯವಸಾಯಾಭಿವೃದ್ಧಿಯಲ್ಲಿ ಆಸಕ್ತನಾದ ಒಬ್ಬ ವಿದ್ವಾಂಸನು ಪರೀಕ್ಷೆಮಾಡಬೇಕೆಂದು ಒಂದು ಪಾತಿಯನ್ನು ಅಗಿಸಿದನು ಭೂಮಟ್ಟದಲ್ಲಿ ಅದು ಹದಿನೆಂಟು ಅಂಗುಲ ಅಗಲ, ಅಷ್ಟೇ ಉದ್ದವುಳ್ಳ ಚೌಕವಾಗಿತ್ತು ಕೆಳಕ್ಕೆ ತೋಡುತ್ತಾ ತೋಡುತ್ತಾ ಕಿರಿದಾಗಿ ತಳದಲ್ಲಿ ಎರಡೇ ಅಂಗುಲದಗಲ ಮಾತ್ರ ನಿಂತಿತು ಹೀಗೆ ಕೊಳವೆಯಾಗಿದ್ದ ಆ ಪಾತಿಯು ಆಳವು ಇಪ್ಪತ್ತೈದು ಅಂಗುಲವಿತ್ತು ಈ ಪಾತಿಯಲ್ಲಿ ಒಂದು ಗೋಧಿಕಾಳನ್ನು ಬಿತ್ತಿ ಆ ಬೀಜವನ್ನು ಮುಚ್ಚುವದಕ್ಕೆ ತಕ್ಕಷ್ಟು ಮಣ್ಣನ್ನು ಮಾತ್ರ ಹಾಕಿಬಿಟ್ಟಿರಲು ಕೆಲವು ದಿನಗಳಲ್ಲಿ ಅದು ಮೊಳೆತು ಮೇಲೆ ಗರಿ ಕಾಣಿಸಿತು ಅನಂತರ ಅದನ್ನು ಮಣ್ಣಿನಿಂದ ಮುಚ್ಚಲು ಮತ್ತೆ ಕೆಲವು ದಿನಗಳಲ್ಲಿ ಆ ಪಾತಿಯಲ್ಲಿ ಗೋಧಿಯ ಮೂರು ಕವಲುಗಳು ಕಾಣಿಸಿದವು ಆ ಮೂರನ್ನು ಮುಚ್ಚಿ ಕೆಲವು ದಿನಗಳಾದನಂತರ ಆರು ಕವಲುಗಳು ಬೇರೆ ಬೇರೆ ಕಾಣಿಸುತ್ತಿದ್ದವು ಹೀಗೆಯೇ ಮಾಡುತ್ತಾ ಭೂಮಟ್ಟಕ್ಕೆ ಬರುವಾಗ್ಗೆ ಎಪ್ಪತ್ತು ದಂಟುಗಳೂ ತೆನೆಗಳೂ ಎದ್ದಂತೆ ಕಟ್ಟಕಡೆಗೆ ಆ

...ಗ್ಲ್ಯಾ ಬೀಜ ಎಣಿಸುವಲ್ಲಿ ಒಂದು ಗೋಧೀ ಕಾಳಿನಿಂದ 2,500 ಗೋಧೀ ಕಾಳು ಬೆಳದಿದ್ದವು ವ್ಯವಸಾಯದಲ್ಲಿ ಪ್ರಯೋಗಿಸಿದ ಬುದ್ಧಿಗೆ ಇದು ತಕ್ಕ ಫಲವಲ್ಲವೇ ಪಾರಮಾರ್ಥಿಕ ವ್ಯವಸಾಯದಲ್ಲಿ ಇಂತಹ ಬೆಳೆಯು ನಮಗೆ ಬರಲಿ

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಈ ಸಲ ಚಕ್ರವರ್ತಿಯವರ ವರ್ಧಂತಿ ಉತ್ಸವವನ್ನು ಜೂನ್ ತಾ 22 ನೇ ಸೋಮವಾರ ಆಚರಿಸತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿದೆ

ಮೈಸೂರು ಸಂಪದಭಿವೃದ್ಧಿ ಸಮಾಜದ 5 ನೇ ಮಹಾಸಭೆಯು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಜೂನ್ ತಾ 5 ನೇ ಶುಕ್ರವಾರ ಪ್ರಾರಂಭವಾಗುವುದೆಂದು ನಿಷ್ಕರ್ಷೆಮಾಡಲ್ಪಟ್ಟಿದೆ

ರಾಜಧಾನಿಯಲ್ಲಿರುವ ಮರಾಟೆಯ ಚಿಕ್ಕಣ್ಣನ ಮಗ 16 ವರುಷದ ಕಾಶೀರಾಯನೆಂಬ ಹುಡುಗನು ಕುಡಿದು ದೇವರಾಜ ಮಾರ್ಕೆಟ್ಟಿನ ಮುಂದೆ ಗಲಭೆ ಮಾಡುತ್ತಿದ್ದನೆಂದು ಮೊಕದ್ದಮೆ ನಡೆದು ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ 3 ರೂಪಾಯಿ ಜುಲ್ಮಾನೆ ವಿಧಿಸಿದರು

ಶ್ರವಣಬೆಳಗುಳದಲ್ಲಿ ಒಂದು ಸರ್ಕಾರಿ ಎ ವಿ ಸ್ಕೂಲನ್ನು ನಡಿಸಬೇಕೆಂದು ಸ್ಯಾಂಕ್ಷನ್ ಆಗಿದೆ ಅಲ್ಲಿದ್ದ ಸಾಹುಕಾರಿ ಇಂಗ್ಲೀಷ್ ಸ್ಕೂಲನ್ನು ವಜಾಮಾಡಿ ಮ್ಯುನಿಸಿಪಾಲಿಟಿಯವರು ಅದಕ್ಕಾಗಿ ಕೊಡುತ್ತಿದ್ದ 15 ರೂಪಾಯಿ ಇನ್ನು ಮುಂದೆ ಕೊಡಬೇಕಾದದ್ದಿಲ್ಲವೆಂದು ಹುಕುಂ ಆಗಿದೆ

ರಾಜಧಾನಿಯ ಗಾಯನ ಸಮಾಜದವರು ಕೊಳಲುವಾದ್ಯದ ಮ|| ಪಲ್ಲಡಂ ಸಂಜೀವರಾಯರನ್ನು ಕರಸಿ ಕಳೆದ ವಾರ ಎರಡು ದಿನ ಟೌನ್ ಹಾಲ್ ಬಂಗಲೆಯಲ್ಲಿ ಅವರ ವಾದ್ಯಕಚೇರಿ ನಡಿಸಿದರು ನೂರಾರು ಜನರು ಸೇರಿ ಅವರ ಸಾಮರ್ಥ್ಯವನ್ನು ನೋಡಿ ತುಂಬಾ ಆನಂದಪಟ್ಟರು

ಕಳೆದ ಗುರುವಾರ ಬೆಳಗ್ಗೆ ಶ್ರೀಮನ್ಮಹಾರಾಜರವರೂ, ಯುವರಾಜರವರೂ ಅರಮನೆಯ ರಾಣೀವಾಸದವರ ಸಮೇತ ರಾಜಧಾನಿಯಿಂದ ಮೋಟರುಗಳಲ್ಲಿ ನೀಲಗಿರಿಗೆ ದಯಮಾಡಿಸಿದರು ಅವರೆಲ್ಲಾ ಮುಂದಿನ ತಿಂಗಳ ಅಂತ್ಯಭಾಗದಲ್ಲಿ ವಾಪಸು ಬಿಜಯಂಗೈಯುವುದಾಗಿ ನಿಶ್ಚಯಿಸಲ್ಪಟ್ಟಿದೆ

ಈ ವರುಷ ಮೈಸೂರು ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯಲ್ಲಿ ಸೆಪ್ಟಂಬರ್ ತಾ 30 ನೇ ಬುಧವಾರ ಪ್ರಾರಂಭವಾಗುತ್ತೆಂದೂ, ಆ ದಿನ ಸಭೆಯಲ್ಲಿ ಒಪ್ಪಿಸಬೇಕೆಂದಿರುವ ಅರ್ಜಿಗಳ ನಕಲನ್ನು ಮೂರು ದಿನ ಮುಂಚೆ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದೂ ಸರ್ಕಾರದವರು ಪ್ರಕಟಮಾಡಿದ್ದಾರೆ

ಸರ್ಕಾರದವರು ಸಿವಿಲ್ ಕೋರ್ಟುಗಳ ಅಮೀನರ ಸಂಬಳವನ್ನು 10 14 ರೂಪಾಯಿನಿಂದ 13 15 ರೂಪಾಯಿಗೂ, ಸಮನ್ ಜವಾನರ ಸಂಬಳವನ್ನು 6-7 ರೂಪಾಯಿನಿಂದ 10 8 ರೂಪಾಯಿಗೂ ಬಡ್ತಿಮಾಡಿರುತ್ತಾರೆ ಈ ಬಡ್ತಿ ಯಿಂದ ಸರ್ಕಾರಕ್ಕೆ ಸಾಲಿಯಾನಾ 8,100 ರೂಪಾಯಿ ಜಾಸ್ತಿ ಖರ್ಚಾಗುವುದು

ಬೌರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ಬಳಿ ಈ ಸಲ ತಿಮ್ಮರಾಯಸ್ವಾಮಿ ರಥೋತ್ಸವ ಬಹಳ ವಿಜೃಂಭಣೆಯಾಗಿ ಜರುಗಿತು ಜಾತ್ರೆಗೆ ಬಂದಿದ್ದ ಜನರಿಗೆ ಮ ಗಳಾದ ಲಿಂಗಪ್ಪ, ಗಂಟ್ಲಪ್ಪ ಕನ್ನಪ್ಪನವರ ವೆಂಕಟಸಾಮಿ ನಾಯ್ಡು ಇವರು ಅನ್ನದಾನ ಮಾಡಿದರು ಎಂದು ಒಬ್ಬ ವರ್ತಮಾನದಾರರು ಬರೆಯುತ್ತಾರೆ

ಬೆಂಗಳೂರು ಸಿಟಿಯಲ್ಲಿ ಹೊರಡುವ “ಕುರುವಿಜಯ” ವೆಂಬ ಹೊಸ ವಾರಪತ್ರಿಕೆಯ ಮೊದಲನೇ ಸಂಚಿಕೆಯು ನಮಗೆ ತಲುಪಿದೆ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕೋತ್ಸವದ ಜ್ಞಾಪಕಾರ್ಥವಾಗಿ ಈ ಪತ್ರಿಕೆಯು ಪ್ರತಿ ಸೋಮವಾರವೂ ಪ್ರಕಟಿಸಲಾಗುವುದೆಂದೂ, ಇದರ ವಾರ್ಷಿಕ ಚಂದಾ ಸ್ಥಳದವರಿಗೆ ರೂ 1¦, ಪರಸ್ಥಳದವರಿಗೆ ರೂ 2 2 0 ಎಂದೂ ತಿಳಿದುಬರುತ್ತದೆ

ಬೆಂಗಳೂರು ಸಿಟಿ ಮಾರ್ಕೆಟ್ಟಿನಲ್ಲಿ ಮ|| ಕೆ ವಿ ನಾರಣಯ್ಯಂಗಾರ್ರು ಬಾಳೆಕಾಯಿ ಕೊಂಡುಕೊಂಡಾಗ್ಗೆ ಅಂಗಡಿಯವರು ತೂಕದಲ್ಲಿ ಮೋಸಮಾಡಿದರೆಂದು ಮೊಕದ್ದಮೆ ತಂದರು ಸಿಟಿ ಮ್ಯಾಜಿಸ್ಟ್ರೇಟರು ದರ್ಯಾಪ್ತಿಯಿಂದ ಚಿನ್ನಯ್ಯ, ಅಬ್ದುಲ್ಲಾ ಎಂಬ ಇಬ್ಬರು ವರ್ತಕರಿಗೂ ತಲಾ 5 ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದು ವಾರ ಸಜಾ ಎಂಬ ಶಿಕ್ಷೆ ವಿಧಿಸಿದರು

ಮೈಸೂರು ಕೃಷ್ಣರಾಜ ಮೊಹಲ್ಲೆಯಲ್ಲಿರುವ ಮ|| ಎಂ ಎಸ್ ಸಿದ್ದಪ್ಪ ಶೆಟ್ಟರವರು ತಯಾರುಮಾಡಿರುವ ಒಂದು ಶೀಸೆ ಕಪ್ಪುಶಾಯಿಯನ್ನೂ ಒಂದು ಪೊಟ್ಟಣ ಶಾಯಿಪುಡಿಯನ್ನೂ ನಮಗೆ ಕಳುಹಿಸಿದ್ದಾರೆ ಇವು ಬರೆಯುವುದಕ್ಕೆ ಬಹಳ ಚೆನ್ನಾಗಿವೆ ಅವರು ಶೀಸೆಯನ್ನು 9 ಕಾಸಿಗೂ, ಪೊಟ್ಟಣವನ್ನು 2 ಆಣೆಗೂ ಬಿಕರಿ ಮಾಡುತ್ತಾರೆಂದೂ, ವ್ಯಾಪಾರಸ್ಥರಿಗೆ ಇನ್ನೂ ಅಗ್ಗವಾಗಿ ಕೊಡುವರೆಂದೂ ತಿಳಿಯುತ್ತೇವೆ

ಮೈಸೂರು ಸರ್ಕಾರಿ ಇಂಜನಿಯರಿಂಗ್ ಸ್ಕೂಲಿನ ಹೆಡ್ ಮಾಸ್ಟರಾಗಿದ್ದ ಮ|| ವಿ ಸಿ ಶ್ರೀನಿವಾಸಯ್ಯಂಗಾರ್ರಿಗೆ ಅಲ್ಲಿಂದ ವರ್ಗವಾದ ಕಾರಣ ಆ ಸ್ಕೂಲಿನ ವಿದ್ಯಾರ್ಥಿಗಳು ಕಳೆದ ವಾರ ಅವರನ್ನು ಕರಸಿಕೊಂಡು ಅವರಿಗಾಗಿ ಒಂದು ಸಂತೋಷ ಕೂಟವನ್ನು ನಡಿಸಿ ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಈಗ ಅವರ ಸ್ಥಾನಕ್ಕೆ ಮ|| ಎಸ್ ಶ್ರೀನಿವಾಸ ಅಯ್ಯರವರು ನೇಮಕವಾಗಿದ್ದಾರೆ

ಹುಣಸೂರಿಂದ ಒಬ್ಬ ವರ್ತಮಾನದಾರರು ಬರೆಯುವುದು —ಇಲ್ಲಿದ್ದ ಮಹಾರಾಷ್ಟ್ರಜಾತಿಯ ನಂಜುಬಾಯಿ ಎಂಬಾಕೆ ಕಳೆದ 10ನೇ ತಾ ಶುಕ್ರವಾರ ಮೃತಳಾದಳು ಈಕೆ ದೊಡ್ಡ ವಂಶದಲ್ಲಿ ಹುಟ್ಟಿ ಚೆನ್ನಾಗಿ ಬದುಕಿ ಈ ಪ್ರಾಂತ್ಯಕ್ಕೆ ಬಂದು ಕೆಲವು ವರುಷಗಳಿಂದ ಮಡಿಕೇರಿ, ಗೋಣಿಕೊಪ್ಪಲು, ವೀರರಾಜಪೇಟೆ ಮುಂತಾದ ಕಡೆಗಳಲ್ಲಿ ತೂಳೆ, ಕಿತ್ತಳೆ ಹಣ್ಣುಗಳಲ್ಲಿ ವ್ಯಾಪಾರ ಮಾಡುತ್ತಿದ್ದಳು ಇಲ್ಲಿನ ಕೆಲವು ಜನರು ಸೇರಿ ಆಕೆಯ ಶವವನ್ನು ಸಾರ್ಥಕಪಡಿಸಿದರು

ಒಬ್ಬ ವರ್ತಮಾನದಾರರಿಂದ—ತುಂಕೂರು ತಾಲ್ಲೂಕು ಚಿಕ್ಕ ತೊಟ್ಲುಕೆರೆ ಗ್ರಾಮದಲ್ಲಿ ಹಿಂದಿನ ವಾರ ಗ್ರಾಮಸ್ಥರು ಹೊಸ ಸ್ಕೂಲ್ ಕಟ್ಟಡದಲ್ಲಿ ಸೇರಿ ಒಂದು ಸಭೆ ನಡಿಸಿದರು ಕರಣೀಕರು ಮ|| ನಲ್ಲಪ್ಪನವರು ಅಗ್ರಾಸನವನ್ನು ವಹಿಸಿದರು ಶಿಕ್ಷಕರು ಗ್ರಾಮಾಭಿವೃದ್ಧಿಯ ಚರಿತ್ರೆಯನ್ನು ಓದಿ ತಿಳಿಸಿದರು ಸಣ್ಣ ವಯಸ್ಸಿನ ಮಕ್ಕಳು ಸ್ಕೂಲ್ ಅಭಿವೃದ್ಧಿಯನ್ನೂ ಇನಾಂ ಪುಸ್ತಕಗಳನ್ನೂ ಕುರಿತು ಆಡಿದ ಮಾತುಗಳು ಬಹಳ ಸ್ವಾರಸ್ಯವಾಗಿತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಬೆಳಸಿ ಸಭೆಯನ್ನು ಮುಕ್ತಾಯಮಾಡಿದರು

ಬೆಂಗಳೂರು ಸಿಟಿ ಮ|| ಬಿ ಕೆ ಗರುಡಾಚಾರ್ಯರಿಗೆ ನ್ಯಾಯವಿಧಾಯಕ ಸಭೆಯ ಮೆಂಬರ್ ಸ್ಥಾನವು ಚುನಾವಣೆಯಲ್ಲಿ ದೊರೆತದ್ದಕ್ಕಾಗಿ ಅಲ್ಲಿನ ವರ್ತಕ ಮಂಡಲಿಯಲ್ಲಿ ಕಳೆದ ಭಾನುವಾರ ಸಾಯಂಕಾಲ ಅವರಿಗಾಗಿ ಒಂದು ಸಂತೋಷಕೂಟವು ಜರುಗಿತು ಮ|| ಸಿ ಶ್ರೀನಿವಾಸಯ್ಯಂಗಾರ್ರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಸಂಗೀತ ಹಾಡುಗಾರಿಕೆ ಫಲಾಹಾರಗಳು ಬೆಳೆದ ನಂತರ ಸಭಾನಾಯಕರೂ, ಮ|| ಕೆ ಕೃಷ್ಣಮೂರ್ತಿರಾಯರೂ, ಮ|| ಬಿ ವಿ ಸುಬ್ಬರಾಯರೂ ಮ|| ಗರುಡಾಚಾರ್ಯರ ಸೌಶೀಲ್ಯ ಸಾಮರ್ಥ್ಯಾದಿಗಳನ್ನು ಕುರಿತು ಪ್ರಶಂಸೆ ಮಾಡಿದರು ಮ|| ಗರುಡಾಚಾರ್ಯರು ಅವರನ್ನೆಲ್ಲಾ ವಂದಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು

ನಮ್ಮ ಮಹಾರಾಜರವರ ಆಕೃತಿ ಸಹಿತವಾಗಿ ತಯಾರಿಸಲ್ಪಟ್ಟಿರುವ ಹೊಸ ಛಾಪಾಕಾಗದಗಳನ್ನೂ, ಕೋರ್ಟ್ ಫೀ ಮತ್ತು ರಸೀತಿ ಸ್ಟಾಂಪುಗಳನ್ನೂ ಮೇ ತಾ 15 ರಿಂದ ಎಲ್ಲಾ ಖಜಾನೆಗಳಲ್ಲೂ ಬಿಕರಿಮಾಡಲಾಗುತ್ತೆಂದೂ, ಹಳೆಯ ಛಾಪಾಕಾಗದ ಮತ್ತು ಸ್ಟಾಂಪುಗಳನ್ನು ಮೇ ತಾ 15 ರಿಂದ ಒಂದು ತಿಂಗಳ ತನಕ ಉಪಯೋಗಿಸಬಹುದೆಂದೂ, ಮೇ ತಾ 15 ರಿಂದ ಎರಡು ತಿಂಗಳೊಳಗಾಗಿ ಹಳೆಯ ಸ್ಟಾಂಪು ಮತ್ತು ಛಾಪಾಕಾಗದಗಳನ್ನು ಖಜಾನೆಗೆ ವಾಪಸು ಕೊಟ್ಟು ಹೊಸದನ್ನು ತೆಗೆದುಕೊಳ್ಳಬಹುದೆಂದೂ, ಮೇ ತಾ 15 ರಿಂದ ಆಚೆಗೆ ಹಳೇ ಛಾಪಾಕಾಗದವಾಗಲಿ ಸ್ಟಾಂಪುಗಳಾಗಲಿ ಯಾವ ಖಜಾನೆಯಿಂದಲೂ ಬಿಕರಿ ಮಾಡಕೂಡದೆಂದೂ ಸರ್ಕಾರದವರು ಇಸ್ತಿಹಾರು ಕೊಟ್ಟಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ.

ಪ್ಲೀಡರ್ ಮ|| ಸಿ ಬಿ ಗೋಪಾಲರಾಯರನ್ನು ಕೋಲಾರ್ ಟೌನ್ ಮ್ಯುನಿಸಿಪಲ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ನೇಮಕಮಾಡಿದೆ

ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಕೆ ಆರ್ ಶ್ರೀನಿವಾಸಯ್ಯಂಗಾರ್ರಿಗೆ ತಾ 1ರಿ ದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮುಂದೆ ಹೇಳುವ ಅಮಲ್ದಾರ್ರ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಬಿ ಕೇಸರ್ ಸಿಂಗ್‌ರವರು ರಿಟೈರ್ ಆದಕಾರಣ ಮಿ॥ ಸಿಮನ್ ರಾಬರ್ಟ್‌ರವರು ಮಾಲೂರಿಗೆ (ಪ್ರೊಬೇಷನರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಕೆಲಸದ ಬದಲಿಯ ಅವಧಿ ಪೂರೈಸಿದ ಮೇಲೆ) ಮ|| ಎಚ್ ಬಸವರಾಜೆ ಅರಸಿನವರು ಮಳವಳ್ಳಿಗೆ ಬದಲಾಗಿ ನಾಗಮಂಗಲಕ್ಕೆ (ರಜಾ ಪೂರೈಸಿದ ಬಳಿಕ)

ಬೆಂಗಳೂರಿನಲ್ಲಿ ನಡೆದ ಎರಡು ಸಂತೋಷ ಕೂಟಗಳು

ಮಿಸ್ ತಾರಾಬಾಯಿಗೆ ಬಹುಮಾನ ಮಾಡಿದ್ದು

ಕಳೆದ ಶನಿವಾರ ಸಾಯಂಕಾಲ ಹಿಂದುಸ್ಥಾನದ ಲೇಡಿ ಸ್ಯಾಂಡೋ ಎಂಬ ಹೆಸರು ಪಡೆದಿರುವ ಮಿಸ್ ತಾರಾಬಾಯಿ ಯವರಿಗೆ ಬಹುಮಾನಕೊಡುವ ಉದ್ದೇಶ್ಯ ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖೆಯ ಮಂಡಲಿಯವರು ಒಂದು ಸಂತೋಷಕೂಟವನ್ನು ನಡಿಸಿದರು ಮಿಸೆಸ್ ಟಿ ಆನಂದರಾವ್ ಸುಂದರಾಬಾಯಮ್ಮನವರು, ದಿವಾನ್‌ರವರ ಧರ್ಮಪತ್ನೀ ವೆಂಕಮ್ಮಗಾರು, ಮಿಸೆಸ್ ಕರ್ಪೂರ್ ಶ್ರೀನಿವಾಸರಾಯರು, ಡಾಕ್ಟರ್ ಮಿಸ್ ಆರ್ ಗೋವಿಂದರಾಜುಲು ಯವರು, ಇವರ ಸಹೋದರಿಯವರು ಮುಂತಾಗಿ ಬೆಂಗಳೂರಿನ ಮುಖಂಡ ಪ್ರಜೆಗಳ ಸಂಸಾರಕ್ಕೆ ಸೇರಿದ ಬಹುಮಂದಿ ಸ್ತ್ರೀಯರು ಸಭೆಯಲ್ಲಿ ಹಾಜರಾಗಿದ್ದರು ಸಾ|| ತಂಗಮ್ಮನವರು ವೀಣೆಯ ಮೇಲೆ ಮನೋಹರವಾಗಿಯೂ ಉಲ್ಲಾಸಕರವಾಗಿಯೂ ಹಾಡಿ ಮಹಿಳೆಯರಿಗೆ ಆನಂದವನ್ನುಂಟುಮಾಡಿದರು ಶ್ರೀಮತಿ ಮಹಲಕ್ಷ್ಮಮ್ಮನವರು ಶಾಶ್ವತವಾದ ಐಶ್ವರ್ಯವ್ಯಾವುದು ಎಂಬ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಓದಿ ಹೇಳಿದರು ಬಳಿಕ ಪ್ರೆಸಿಡೆಂಟ್ ಸಾ|| ಟಿ ಸುಂದರಾಬಾಯಮ್ಮನವರು ಮಂಡಲಿಯವರ ಪರವಾಗಿ ಎದ್ದು ನಿಂತು ಮಹರಾಷ್ಟ್ರ ಭಾಷೆಯಲ್ಲಿ ಮಿಸ್ ತಾರಾಬಾಯಿ ಯವರ ಶರೀರ ಸಾಮರ್ಥ್ಯವನ್ನೂ ಮನೋಧಾರಾಢ್ಯವನ್ನೂ ಆಕೆ ಮಾಡುವ ಬಹು ಆಶ್ಚರ್ಯಕರವಾದ ಅಂಗಸಾಧನೆಗಳನ್ನೂ ಕುರಿತು ಪ್ರಶಂಸೆಮಾಡಿದರು ಆಕೆಯನ್ನೂ ಆಕೆಯ ಸಾಹಸಕಾರ್ಯಗಳನ್ನೂ ನೋಡುವುದರಿಂದ ದೇಶೀಯ ಸ್ತ್ರೀಯರ ಸಾಮರ್ಥ್ಯವೆಂಥಾದ್ದೆಂದು ತಿಳಿದುಬರುವುದೆಂದೂ, ದೇಶೀಯ ಸ್ತ್ರೀಯರು ನಾಗರಿಕವಾದ ಈಗಿನ ಕಾಲದಲ್ಲಿ ವೃದ್ಧಿಗೊಂಡಲು ಎಲ್ಲಾ ಭಾಗಗಳಲ್ಲೂ ಯೋಗ್ಯತೆಯನ್ನು ಪಡೆದಿರುತ್ತಾರೆಂಬುವುದಕ್ಕೆ ಮಿಸ್ ತಾರಾಬಾಯಿಯೇ ಸಾಕ್ಷಿಯಾಗಿದ್ದಾರೆಂದೂ, ಅವರಿಗೆ ಪುಸ್ತಕ ವಿದ್ಯೆಯನ್ನೂ ಗೃಹಕೃತ್ಯ ವಿದ್ಯೆಯನ್ನೂ ದೇಶೀಯ ಪದ್ಧತಿಗೆ ಅನುಸಾರವಾದ ರೀತಿಯಲ್ಲಿ ಹೇಳಿ ಕಲಿಸಬೇಕಾದದ್ದೊಂದೇ ಕೊರತೆಯೆಂದೂ, ಪ್ರಾಚೀನಕಾಲದಲ್ಲಿದ್ದ ಸೀತಾ, ದಮಯಂತಿ ಮೊದಲಾದ ಸ್ತ್ರೀ ಶಿರೋಮಣಿಗಳಿಗೆ ಯಾವ ರೀತಿಯಲ್ಲಿ ಶಿಕ್ಷಣವು ನಡೆಯಿತೋ ಅದರ ಕ್ರಮಗಳನ್ನು ಅರಿತು ಅದರಂತೆಯೇ ನಾವು ಅನುಸರಿಸಿ ನಡೆದುಕೊಳ್ಳಬೇಕಾಗಿದೆಯೆಂದೂ ಹೇಳಿದರು ಬಳಿಕ ಬೆಂಗಳೂರು ಮ|| ಪುಟ್ಟಣ್ಣನವರು ಕೆತ್ತಿ ತಯಾರುಮಾಡಿದ್ದ ಪಂಚರತ್ನಗಳುಳ್ಳ ದಿವ್ಯವಾದ ಪದಕವನ್ನು ಪ್ರೆಸಿಡೆಂಟರು ಸೆಕ್ರೆಟರಿಯವರಿಂದ ತೆಗೆದುಕೊಂಡು ಮಹಿಳೆಯರು ಜಯಧ್ವನಿಮಾಡುತ್ತಿರುವಲ್ಲಿ ಮಿಸ್ ತಾರಾದೇವಿಯ ಅಂಗರೇಖೆಗೆ ತಗಲಿ ಹಾಕಿದರು ತರುವಾಯ ನಾಗಪುರದ ಮಿಸೆಸ್ ರಾನಡೆ ಸುಬ್ಬಮ್ಮನವರು ಬ್ರೂಚ್ ಎಂಬ ಒಂದು ವಜ್ರದ ಆಭರಣವನ್ನು ಮಿಸ್ ತಾರಾದೇವಿಗೆ ಬಹುಮಾನ ಮಾಡಿದರು ಮಿಸ್ ತಾರಾದೇವಿಯು ಅವುಗಳನ್ನು ಆನಂದದಿಂದಲೂ ಕೃತಜ್ಞತಾ ಪೂರ್ವಕವಾಗಿಯೂ ಸ್ವೀಕರಿಸಿ ಆ ಸ್ತ್ರೀ ಮಂಡಲಿಯವರ ಸೌಶೀಲ್ಯವನ್ನು ಕೊಂಡಾಡಿ, ಆ ಆಭರಣಗಳನ್ನು ತಮ್ಮ ಜೀವಿತಕಾಲವೆಲ್ಲಾ ಬಹು ಪ್ರೀತಿಯಿಂದ ಇಟ್ಟು ಕಾಪಾಡಿಕೊಂಡುಬರುವುದಾಗಿ ಹೇಳಿದರು ಕಡೆಯಲ್ಲಿ ಮಂಗಳಾರತಿ ಮುಂತಾದ್ದು ಬೆಳಿಸಿ ಆ ಸಂತೋಷಕೂಟವು ಮುಕ್ತಾಯವಾಯಿತು

ದಾಸರಿಗೆ ಬಹುಮಾನ ಮಾಡಿದ್ದು

ಕಳೆದ ಭಾನುವಾರ ಸಾಯಂಕಾಲ 6½ ಘಂಟೆ ಮೇಲೆ ಬೆಂಗಳೂರು ಸಿಟಿ ಕಿಲಾರಿ ರೋಡ್ ಧರ್ಮರಾಯ ದೇವಸ್ಥಾನದಲ್ಲಿ ಒಂದು ಮಹಾಸಭೆಯು ನೆರವಿತ್ತು ಆ ಬೀದಿಯ ಮುಖಂಡ ವಾಸಸ್ಥರೂ, ಮಂಡಿ ಸಾಹುಕಾರ್ ಮ| ಹರಿಯಣ್ಣನವರೂ, ಮ್ಯುನಿಸಿಪಲ್ ಕೌನ್ಸಿಲರುಗಳಾದ ಮ ರಾಜಪ್ಪನವರು, ಆದಪ್ಪನವರು, ಸಜ್ಜನರಾಯರೂ, ಲಕ್ಷ್ಮೀದರಾಯರೇ ಮೊದಲಾದ ಮಹನೀಯರೂ ಬಂದಿದ್ದರು ಸಭೆಯ ಅಗ್ರಾಸನವನ್ನು ಮೈಸೂರು ಗೌ|| ಪ್ರೆಸ್ ಅ| ಸೂಪರಿಂಟೆಂಡೆಂಟರಾದ ಮ| ಡಿ ಬಿ ರಾಮಚಂದ್ರ ಮುದಲಿಯಾರ್ರವರು ಬಹಳ ಆದರದಿಂದ ವಹಿಸಿದ್ದರು ಸಭೆಯ ಉದ್ದೇಶದಂತೆ ಮಾರೂರಿನಿಂದ ಬಂದು 4 ತಿಂಗಳಿಂದ ಅನೇಕ ಹರಿಕಥೆಗಳನ್ನು ಬಹಳ ಚಾತುರ್ಯದಿಂದಲೂ, ಭಕ್ತಿಯಿಂದಲೂ ಮಾಡುತ್ತಿದ್ದ ಮ| ಬಾಲಾಜಿ ರಾಮದಾಸರಿಂದ ಅನಸೂಯಾ ಚರಿತ್ರೆಯು ಹರಿಕಥಾ ರೂಪವಾಗಿ ಸರ್ವರಿಗೂ ಶ್ರವಣಾನಂದ, ಬ್ರಹ್ಮಾನಂದ ವುಂಟಾಗುವಂತೆ ನಡಿಸಿದರು ಕಥೆಯು ಮುಕ್ತಾಯವಾಗುವ ಸಮಯದಲ್ಲಿ ದಾಸರಿಗೆ ಒಂದು ವಿಜ್ಞಾಪನಾ ಪತ್ರಿಕೆಯು ಒಪ್ಪಿಸಲ್ಪಟ್ಟಿತು ಮ|| ರಾಮಚಂದ್ರ ಮುದಲಿಯಾರ್ರು ಶಾಲೋಚಿತ ಭಾಷಣವನ್ನುಮಾಡಿ, ದಾಸರಿಗೆ ಒಂದು ದಿವ್ಯವಾದ ಸುವರ್ಣ ಪದಕವನ್ನು ಕೊಟ್ಟು ಸನ್ಮಾನವಮಾಡಿದರು ನೆರದ ಸಭೆಗೆ ರಾ|| ಕೆನಕಸಭಾಪತಿ ಮುದಲಿಯಾರ್ರು ವಂದನೆಗಳನ್ನು ಮಾಡಿದರು ವಿ ಆರ್ ಕೆ.

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ತಾ 11 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 14,731 ಜನರಿಗೆ ಹೊಸದಾಗಿ ಪ್ಲೇಗ್ ತಗಲಿತೆಂದೂ, 12,164 ಜನರು ಆ ರೋಗದಲ್ಲಿ ಕಾಲವಾದರೆಂದೂ ತಿಳಿಯುವುದು

ಅಮೃತಸಾರದ ಗೋಪಾಲದಾಸನೆಂಬೊಬ್ಬ ಬ್ರಾಹ್ಮಣನು ಪತ್ನಿ ಸಮೇತ ಕಿರಣ್ ಕಾಟ್ ಎಂಬ ಸ್ಥಳದಲ್ಲಿ ಒಂದು ಯಾಗವನ್ನು ಮಾಡಿ ಕಡೆಯಲ್ಲಿ ಇಬ್ಬರೂ ಅಗ್ನಿಗುಂಡದಲ್ಲಿ ಬಿದ್ದು ಸುಟ್ಟುಹೋದರು

ಬರೋಡಾ ಸಂಸ್ಥಾನದ ಗಾಯಕವಾಡೆ ಮಹಾರಾಜರವರು ಕಳೆದ ಶನಿವಾರ ಬೊಂಬಾಯಿನಲ್ಲಿ ಹಡಗು ಹತ್ತಿ ಸೀಮೆಗೆ ಪ್ರಯಾಣಮಾಡಿದರು ಇವರು ಆರು ತಿಂಗಳ ಕಾಲ ಯೂರೋಪಿಯನ್ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುತ್ತಾರೆಂದು ಪ್ರಕಟವಾಗಿದೆ

ರಂಗೂನ್ ಪಟ್ಟಣದಲ್ಲಿ ಭಿಕ್ಷಗಾರರ ಕಾಟ ಹೆಚ್ಚಾದ್ದರಿಂದ ಪೋಲೀಸಿನವರು ಭಿಕ್ಷಗಾರರನ್ನು ಹಿಡಿದು ಕಾನೂನ್ ಪ್ರಕಾರ ಅವರ ಮೇಲೆ ಮೊಕದ್ದಮೆ ಮಾಡುತ್ತಿದ್ದಾರೆ ಕಳೆದ ವಾರ 300 ಜನ ಭಿಕ್ಷಗಾರರು ಹಣ ಕಟ್ಟಿ ಜಾಮೀನಿನ ಮೇಲೆ ಬಿಡಿಸಿಕೊಂಡು ಹೋಗಿದ್ದಾರೆ

ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಿವಾನ್‌ರಾದ ಮ|| ರಾಜಗೋಪಾಲಾಚಾರ್ಯರು ಇಷ್ಟರಲ್ಲೇ ಆ ಕೆಲಸವನ್ನು ಬಿಟ್ಟುಬಿಡುತ್ತಾರಾದ್ದರಿಂದ ಅಲ್ಲಿನ ಪ್ರಜೆಗಳು ಅವರಿಗೆ ನಾನಾ ಪ್ರಕಾರವಾಗಿ ಔತಣ ಮಾಡಿ ಅಡ್ರೆಸ್ಸುಗಳನ್ನು ಒಪ್ಪಿಸುತ್ತಾ ಇದ್ದಾರೆ ಅವರ ಕೆಲಸಕ್ಕೆ ಯಾರು ನೇಮಕವಾಗುವರೋ ಇನ್ನೂ ಪ್ರಕಟವಾಗಿಲ್ಲ

ಬೌದ್ಧಮತವನ್ನವಲಂಬಿಸಿದ ಯೂರೋಪಿಯನ್‌ರಿಬ್ಬರು ಕಲ್ಕತ್ತೆಗೆ ಬಂದಿದ್ದಾರೆ ಇವರು ಜರ್ಮನಿಯಲ್ಲಿ ಹುಟ್ಟಿದವರು ಬೌದ್ಧಮತಕ್ಕೆ ಸೇರಿ ಕಾವೀ ಬಟ್ಟೆಗಳನ್ನು ಹಾಕಿಕೊಂಡಿದ್ದಾರೆ ಅವರು ಇದುವರೆಗೆ ಸಿಖಿಂ ಪ್ರಾಂತ್ಯದಲ್ಲಿದ್ದು ಈಗ ಕಲ್ಕತ್ತೆಗೆ ಬಂದಿರುವರೆಂದೂ, ಈ ವಾರ ಅಲ್ಲಿಂದ ಹೊರಟು ಸಿಲೋನ್ (ಲಂಕಾ) ದ್ವೀಪಕ್ಕೆ ಬರುತ್ತಾರೆಂದೂ ಪ್ರಕಟವಾಗಿದೆ

ಬೊಂಬಾಯಿನಲ್ಲಿ ಈ ತಿಂಗಳ ಪ್ರಾರಂಭದಿಂದ ಲಕ್ಷಾಂತರ ಮೂಟೆಗಳ ಹತ್ತಿಯು ಬೆಂಕಿಬಿದ್ದು ಉರಿದುಹೋಗಿ ಮಾಲೀಕರಿಗೆ ಕೋಟ್ಯಂತರ ರೂಪಾಯಿ ನಷ್ಟವಾಯಿತು ಇನ್ನೂ ಅಲ್ಲಲ್ಲಿ ಬೆಂಕಿಬಿದ್ದು ಹತ್ತಿಯ ಮೂಟೆಗಳು ಉರಿಯುವದು ತಪ್ಪಿಲಿಲ್ಲ ಯಾರೋ ಬೇಕೆಂದು ಬೆಂಕಿಹಾಕುತ್ತಾರೆಂದು ಅನುಮಾನ ಉಂಟಾಗಿ, ನಾಲ್ಕಾರು ಮಂದಿ ಹಿಡಿಯಲ್ಪಟ್ಟಿದ್ದಾರೆ

ಪಂಜಾಬ್ ಆಧಿಪತ್ಯದಲ್ಲಿ ಅಲ್ಪಸ್ವಲ್ಪ ಜಮೀನುಗಳನ್ನು ಇಟ್ಟುಕೊಂಡಿದ್ದು ಗೃಹಕೃತ್ಯದ ನಿಮಿತ್ತ ಆಧಾರಭೋಗ್ಯ ಮಾಡಿಬಿಟ್ಟಿರುವ ರೈತ ಪ್ರಜೆಗಳು ಕೋರ್ಟುಫೀಜೇನೂ ಇಲ್ಲದೆ ಜಮೀನು ಬಿಡಿಸಿಕೊಳ್ಳುವುದಕ್ಕೆ ಆ ಸರ್ಕಾರದವರು ಒಂದು ಕಾನೂನ್ ಮಾಡಿ ಜಾರಿಗೆ ತಂದಿದ್ದಾರೆಂದೂ, ಅನೇಕ ಜಮೀನ್‌ದಾರರಿಗೆ ಇದರಿಂದ ತುಂಬಾ ಉಪಕಾರವಾಗಿದೆ ಎಂದೂ ಅಲ್ಲಿನ ರೆವಿನ್ಯೂ ಆಡಳಿತದ ರಿಪೋರ್ಟಿನಿಂದ ಗೊತ್ತಾಗುತ್ತದೆ

ಪೂರ್ವ ಬಂಗಾಳದಲ್ಲಿ ಸಾಧಾರಣ ಪೋಲೀಸಿನವರು ಅಲ್ಲಿ ನಡೆಯುತ್ತಿರುವ ಡಕಾಯಿತಿ ಮೊದಲಾದ ದುರಾಗತ ಕೃತ್ಯಗಳನ್ನು ಅಡಗಿಸಲಾರರೆಂದು ಸರ್ಕಾರದವರಿಗೆ ಗೊತ್ತಾದದ್ದರಿಂದ ಆ ಪೋಲೀಸಿನವರನ್ನೆಲ್ಲಾ ವಾಪಸು ಕರಸಿಕೊಂಡು ಅವರ ಸ್ಥಾನಗಳಿಗೆ ಒಂದು ರಿಜಮೆಂಟಿನ ದೇಶೀಯ ಸಿಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ ಇವರು ಡಿಸ್ಟ್ರಿಕ್ಟುಗಳಲ್ಲೆಲ್ಲಾ ಹಂಗಾಮಿ ಕಟ್ಟಡಗಳಲ್ಲಿದ್ದುಕೊಂಡು ಪೊಲೀಸ್ ನೌಕರಿಯನ್ನು ಮಾಡುವಂತೆ ಹುಕುಂ ಆಗಿದೆ

ವಿಶಾಖ ಪಟ್ಟಣದ ಜಿಲ್ಲೆಗೆ ಸೇರಿದ ಶೃಂಗವರಪುಕೋಟೆಯಲ್ಲಿ ವೀರಾಸಾಮಿ ಎಂಬೊಬ್ಬ ಅಂಚೆ ಜವಾನನು ಅಲ್ಲಿನ ಪೋಸ್ಟ್ ಮಾಸ್ಟರನ್ನೂ ಆತನ ಹೆಂಡತಿಯನ್ನೂ ಕೊಂದುಹಾಕಿ, ಆಕೆಯ ಮೈಮೇಲಿದ್ದ ಒಡವೆಗಳನ್ನೂ ಪೋಸ್ಟ್ ಆಫೀಸಿನ 2,000 ರೂಪಾಯಿಯನ್ನೂ ಅಪಹರಿಸಿದನು ಪತ್ತೆ ತರಹೂದು ನಡೆದಾಗ ಅವನ ಮಗಳೂ ಸೊಸೆಯೂ ಇದ್ದ ಸಂಗತಿಯನ್ನು ಹೊರಪಡಿಸಿದರು ಕೆಲವು ಮಾಲೂ ಅವನ ಬಳಿ ಸಿಕ್ಕಿತು ಈ ಅಪರಾಧಿಗೆ ಫಾಸೀ ಸಜಾ ವಿಧಿಸಲ್ಪಟ್ಟಿರುತ್ತದೆ

ಅಹಮದಾಬಾದಿನ ಮಣಿಲಾಲ್ ಗೇಲಾಭಾಯಿ ಸಫಿ ಎಂಬುವನು ಹಿಂದಿ ಹುನ್ನಾರ್ ಉದ್ಯೋಗಪ್ರಸಾರಕ ಫಂಡು ಎಂಬ ಹೆಸರಿಟ್ಟು ಒಂದು ಫಂಡುಮಾಡಿ ಊರೂರಲ್ಲಿ ಸಂಚಾರಮಾಡುತ್ತಾ ಲಾಟರಿ ಹಾಕುತ್ತೇನೆಂದು ಹೇಳಿ ಜನರನ್ನು ಮೋಸಪಡಿಸಿ ಟಿಕೆಟ್ 1 ಕ್ಕೆ 1 ರೂಪಾಯಿನಂತೆ ಸುಮಾರು 20,000 ಜನರಿಂದ ಹಣವನ್ನು ಎತ್ತಿದನು ಇವನು ಮೋಸಗಾರನೆಂಬುವುದು ಪೋಲೀಸಿಗೆ ಗೊತ್ತಾಗಲು ಮೂರು ವರುಷ ಹಿಡಿಯಿತು ಕಳೆದ ವಾರ ಬೊಂಬಾಯಿನಲ್ಲಿ ಅವನಿಗೆ ಕಠಿಣ ಸಜಾ ವಿಧಿಸಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸ್ ಇನ್ಸ್‌ಪೆಕ್ಟರನ್ನು ಗುಂಡಿನಿಂದ ಹೊಡೆದು ಕೊಂದನೆಂದೂ, ಒಬ್ಬ ಹುಡುಗನನ್ನೂ ಕೊಂದನೆಂದೂ ಪೋಲೀಸಿನವರು ಸುಮಾರು 8 ವಯಸ್ಸಿನ ನಿರ್ಮಲಕಾಂತರಾಯ್ ಎಂಬ ಹುಡುಗನನ್ನು ಹಿಡಿದು ಅವನ ಮೇಲೆ ಮೊಕದ್ದಮೆ ಮಾಡಿದರು ಈ ಮೊಕದ್ದಮೆಯನ್ನು ಎರಡಾವರ್ತಿ ದರ್ಯಾಪ್ತಿ ಮಾಡಿದಾಗಲೂ ಪಂಚಾಯಿತರು ಅವನು ನಿರಪರಾಧಿ ಎಂದು ಅಭಿಪ್ರಾಯಪಟ್ಟಿದ್ದರಿಂದ ಎರಡು ಸಲವೂ ಮ್ಯಾಜಿಸ್ಟ್ರೇಟರು ಅವನನ್ನು ಖುಲಾಸ್ ಮಾಡಿಬಿಟ್ಟರು ಈ ಅಪರಾಧಿಯ ಕಡೆ ಮಿ| ನಾರ್ಟನ್ ಎಂಬ ಪ್ರಸಿದ್ಧ ವಕೀಲರು ಮೊಕದ್ದಮೆಯನ್ನು ವಾದಿಸಿದ್ದಲ್ಲದೆ ಈಗ ಇವರೇ ತಮ್ಮ ಸ್ವಂತ ಖರ್ಚಿನಿಂದ ಆ ಹುಡುಗನನ್ನ ವಿಲಾಯತಿಗೆ ಕಳುಹಿಸಿ ಬ್ಯಾರಿಸ್ಟರ್ ಪರೀಕ್ಷೆಗೆ ಓದಿಸುತ್ತಾರೆಂದು ತಿಳಿದು ಬಂದಿದೆ ಕಲ್ಕತ್ತಾ ಪಟ್ಟಣದಲ್ಲಿ ನಾಟಕಗಳ ಕಂಪನಿಯವರು ನಾಟಕಗಳನ್ನಾಡಿ ಉತ್ಪತ್ತಿಯಾಗುವ ಹಣಗಳನ್ನು ಆ ಹುಡುಗನ ವಿದ್ಯಾಭ್ಯಾಸದ ಸಂದಿಗೆ ಕೊಡುತ್ತಿದ್ದಾರೆಂದೂ ಪ್ರಕಟವಾಗಿದೆ

ಹೊಸ ಮಾಸ ಪತ್ರಿಕೆ ಭಾರತೀವಿಲಾಸ ದ್ವಿತೀಯ ವರ್ಷಾರಂಭ!

ಇದೊಂದು ಕನ್ನಡ ಮಾಸ ಪತ್ರಿಕೆ ಪ್ರತಿ ಮಾಸದಲ್ಲಿಯೂ ಕ್ರಮವಾಗಿ ಪ್ರಚಾರವಾಗುವುದು ಕಾದಂಬರಿಗಳೂ, ನಕಲಿಗಳೂ, ವಚನಗ್ರಂಥಗಳೂ ನೀತಿ ವಿದ್ಯಾ ವಿಷಯಕವಾದ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡ್ ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದದ್ದು ವಾರ್ಷಿಕ ಚಂದಾ 1-8-0 ಚಂದಾದಾರರಾಗ ತಕ್ಕವರಿಗೆ ಚಾಮುಂಡೇಶ್ವರಿ ಬೆಟ್ಟದ ಮಾಹಾತ್ಮ್ಯ ಎಂಬ ಪುಸ್ತಕ ಬಹುಮಾನ ಸಿಕ್ಕುತ್ತೆ ಇದರ ಕ್ರಯ 4 ಆಣೆ [272 10]

ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

ಕುಂತಲ ಬಹಾರ ತೈಲ್ಯ.

ಈ ಕುಂತಲ ಬಹಾರ ತೈಲ್ಯವು ಅನೇಕ ತರದ ವನಸ್ಪತಿಗಳಿಂದ ತಯಾರಿಸಿ ಮನುಷ್ಯರ ಸಿರಸ್ಸಿನ ಅನೇಕ ತರದ ವ್ಯಾಧಿಗಳನ್ನು ಹೋಗಗೊಳಿಸಿ ಕೂದಲನ್ನು ತ್ವರೆಯಾಗಿ ಬೆಳಸುವುದು ನಿದ್ರಾಭಂಗವನ್ನು ಪರಿಹರಿಸಿ ಬಹಳ ಸುವಾಸನೆ ಕೊಡುವುದು ಅಲ್ಲದೆ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಆಲೋಚನಾ ಶಕ್ತಿಯೂ, ಶೀತಳವೂ, ಸುವಾಸನೆಯೂ, ಬಟ್ಟೆ ತಲೆಯಲ್ಲಿ ಕೇಶವನ್ನು ಬೆಳಸುವದು ಅಲ್ಲದೆ ಈಗಿನ ಕೇಶ ತೈಲ್ಯಗಳಲ್ಲಿ ಈ "ಕುಂತಲ ಬಹಾರ ತೈಲ್ಯವು" ಹಿಂದರಿಯುದಷ್ಟು ಪ್ರಖ್ಯಾತಿ ಹೊಂದಿರುವದು (ಮೇ) ಅಂತ್ಯದ ವರೆಗೆ ಶೀಸೆ 1 ಕ್ಕೆ ಬೆಲೆ ಆಣೆ 9 ನಂತರ ಶೀಸೆ 1 ಕ್ಕೆ ರೂ 1 ಕುಂತಲ ಬಹಾರ ತೈಲ್ಯದ ಪ್ರಖ್ಯಾತಿ ಹೊಂದುವರೆ ಮಾತ್ರ ರೂಪಾಯಿ 1 ರಿಂದ 9 ಆಣೆಗೆ ತಗ್ಗಿಸಲ್ಪಟ್ಟಿರುವದು ಟಪ್ಪಾಲು ಖರ್ಚು ಶೀಸೆ 1 ಕ್ಕೆ 4 ಆಣೆ ಅಲಾಹಿದಾ ಗ್ರಾಹಕರು ಕೊಡಬೇಕಾಗುವದು [78 4]

ನಮ್ಮ ವಿಳಾಸ — ಮೋಹನ್ ಅಂಡ್ ಕಂಪೆನಿ,
ಮಂಗಳಾದೇವಿ ಬೀದಿ, ಮಂಗಳೂರು

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 1,20,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ —ಮಿ। ಎಂ ಎಸ್ ಶೆಟಿ ಶೊ, ಚೀಫ್ ಏಜೆಂಟ್, ಬೆಂಗಳೂರು ಮಿ। ಎಂ ಎಸ್ ನಂಜಪ್ಪನವರು ಅಥವಾ ಮಿ। ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[191 40] ಬ್ರಾಂಚ್ ಸೆಕ್ರೆಟರಿ, ಮದರಾಸ್

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ

ಈ ರಂಗು ಹಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ ಈಗ

ಮಾರಿಕೆಗೆ ಬಂದಿರುವ ಅಲ್ಪ ತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುಜಾತಿಯವು ಹಚ್ಚಿದ ಮೇಲೆ ಕೂದಲು ಕೆಂಚುತಿಮಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಸು ಸಮೇತ ಬಾಟ್ಲು ಒಂದಕ್ಕೆ ರೂಪಾಯಿ 1, ಅಂಚೆ ಹಾಸಲು 1 ಆಣೆ [173]

ವಿಳಾಸ—ವಿ ಎ ಎಸ್ ಪಾಗ್, 3, ಇರುಳಪ್ಪನ್ ಬೀದಿ, ಮದರಾಸ

ಬೆಣ್ಣೆ ಮತ್ತು ಹಾಲು ಹೆಚ್ಚುವದಕ್ಕೆ!

ಮಿ॥ ಎಮ್ ಚಂಗಲ್ವರಾಯಶೆಟ್ಟರವರು, ಪೆನ್ಷನ್ ಡೆಪ್ಯುಟಿ ಕಮಿಷನರ್, ಚಾಮರಾಜಪೇಟೆ, ಬೆಂಗಳೂರು ಸಿಟಿ, ಇವರು ಬರೆಯುವುದು

"ಹತ್ತಿಬೀಜಹೊಟ್ಟನ್ನೂ ಹಿಂಡಿಯನ್ನೂ ಹಸುಗಳಿಗೆ ಉಪಯೋಗಿಸುತ್ತಿದ್ದೇನೆ ಅವು ಮೊದಲಿಗಿಂತ ಹೆಚ್ಚಾಗಿ ಹಾಲು ಕೊಡುತ್ತಿವೆ ಅಲ್ಲದೆ ಹಾಲಿನ ಗುಣವೂ ಹೆಚ್ಚಾಗಿದೆ ನನ್ನ ಮಿತ್ರರೆಲ್ಲರಿಗೂ ಇವುಗಳನ್ನು ಪರೀಕ್ಷಿಸಿ ನೋಡಿರೆಂದು ಹೇಳುತ್ತಿದ್ದೇನೆ"—20 2-1911

ಹೊಟ್ಟು ಮೂಟೆ 1 ಕ್ಕೆ 1½ ಮಣ ಕ್ರಯ ರೂ 1-10-0 ಹಿಂಡಿ ಮಣ 1ಕ್ಕೆ ರೂ 1 (0 ಪರೀಕ್ಷಿಸಿ ನೋಡಿ 'ಅನುಮಾನ ಬಿಡಿ' [-5-11]

ಇಂಡಿಯನ್ ಕೋಅಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
109, ಕಿಲಾರಿ ರೋಡ್ (ಕುಂಬಾರಪೇಟೆ), ಬೆಂಗಳೂರು ಸಿಟಿ

CHAMBERLAIN'S COUGH REMEDY.

ಚೇಂಬರ್ಲೇನ್ನವರು ಕಂಡುಹಿಡಿದ ಕೆಮ್ಮಿನ ಔಷಧವು



3 17

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಸ್ವಾಯುವಾದ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಸುಲಭವಾಗಿ ಪರಿಹರಿಸುತ್ತದೆ ಉಸುರು ಹೊಮ್ಮುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ರಭ್ಭವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕವ ಹರ್ಷಿಗಳು ಬೋಕ! ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಆ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಬೋಧಿಸುವುದು, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಬಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 1 ಆಣೆ

ಕನ್ನಡ ಇಂಡಿಯನ್ ಪೀನಲ್ ಕೋಡ್

ಇದರ ಕ್ರಯ ಪ್ರತಿ 1 ಕ್ಕೆ ರೂ 2 ಟಪಾಲು ಹಾಸಲು 4 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 11]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಅನೇಕ ಕಾರಣಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ,

ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸವರನಿಸಲಾರದು ಹೊಟ್ಟೆಯಲ್ಲಿರುವ ಜ್ವರದ ಗೆಡ್ಡೆಯನ್ನು ನಾಶಪಡಿಸುವುದು ಶ್ವಾಸ ಕಾಸ ರೋಗಗಳನ್ನು ನಿರ್ಮೂಲಪಡಿಸುವುದು ಈ ಸಾಲಾಮಿಸ್ರಿ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಈ ಮುರಬ್ಬಾ ವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು 10 ತೋಲಾ ಮುರಬ್ಬಾ ಇರುವ ಡಬ್ಬಾ 1 ಕ್ಕೆ ರೂ 1 8-0 ಟಪಾಲ್ ಖರ್ಚು ಅಲಾಯಿದ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಡಿ ಮುನ್ನಾಲಾಲ್, ಡಿಲ್ಲಿ ವೈದ್ಯರು,
13, ಹಳೇ ಸಿದ್ದೀಕಟ್ಟ, ಬೆಂಗಳೂರು ಸಿಟಿ

ನಮಗ ಕಾಗದವನ್ನು ಬರಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು

1 ಧಾತುಪುಷ್ಟಿ ಚೂರ್ಣ —ಹಿರಿಯ ಡಬ್ಬಾ 1 ಕ್ಕೆ 1 0 0 2 ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು —ಬೇಡನ ಹೊಡತಕ್ಕೂ ಮತ್ತು ಕೂದಲು ತೆಗಿಯುವದಕ್ಕೂ ಬಹಳ ಒಳ್ಳೆಯದು ಕ್ರಯ 0 2 (3 ವಾತಸಿವಾರಣೆ ತೈಲವು —ಕ್ರಯ ಸೀಸಾಯಿ 1 ಕ್ಕೆ 0 1-0 4 ಹೊಟ್ಟೆನೋವಿಗೆ ಔಷಧ— ಕ್ರಯ ಸೀಸಾಯಿ 1 ಕ್ಕೆ 0 4 0 5 ಕೆಮ್ಮಿನ ರೋಗಕ್ಕೆ ಔಷಧ —ಕ್ರಯ ಸೀಸಾಯಿ 1ಕ್ಕೆ 0 14 6 ಪ್ರಮೇಹಕ್ಕೆ ಔಷಧ —ಕ್ರಯ ಡಬ್ಬಿ 1 ಕ್ಕೆ 0-4-0 7 ಆಶ್ಚರ್ಯಕರವಾದ ಭೇದಿ ಮಾತ್ರೆಗಳು —ಕ್ರಯ 0-4-0 8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1ಕ್ಕೆ 0-2 6 9 ಉಷ್ಣ ಕಾಯಿಲೆಕ್ಕೆ ಮಾತ್ರೆಗಳು — ಶರೀರದಲ್ಲಿ ಹಳೆಯದಾದರೂ ಗಾಯಗಳಿದ್ದರೂ 21 ದಿನಗಳು ಸೇವಿಸಲು ಖಂಡಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 1 0 0 10 ಮೂಲವ್ಯಾಧಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 8 0 11 ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1 ಕ್ಕೆ 0 4 0 12 ದಂತ ಚೂರ್ಣವು —ಕ್ರಯ ಡಬ್ಬಿ 0 1 1 13 ಕೂದಲು ಬೆಳೆಯುವ ಎಣ್ಣೆ (ಬಂಫೋಲಾ ತೈಲ) —ಸೀಸಾಯಿ 1 ಕ್ಕೆ 0 4 0 14 ಆಶ್ಚರ್ಯಕರವಾದ ದ್ರಾವಕ —ಇದನ್ನು ಸ್ವಲ್ಪ ಮೂಸಿನೋಡುವದರಿಂದ 1 ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ ಕ್ರಯ ಸೀಸಾಯಿ 1ಕ್ಕೆ 0 4 0 15 ಕಜ್ಜಿ ಮತ್ತು ಹುಳಕಡ್ಡಿ ಔಷಧ —ಕ್ರಯ ಸೀಸಾಯಿ 1ಕ್ಕೆ 0 4-0 16 ಆಶ್ಚರ್ಯಕರವಾದ ಪೆನ್ಸಲ್ —ಈ ಪೆನ್ಸಲ್ನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚೆನ್ನಾಗಿ ಕಾಣುವವು ನೋಡುವವರಿಗೆ ಬಹಳ ಆಶ್ಚರ್ಯವಾಗಿ ಕಾಣುತ್ತೆ ಕ್ರಯ 0 4 0 17 ಬಿಳೀ ಕೂದಲನ್ನು ಕರೀ ಕೂದಲನ್ನಾಗಿ ಮಾಡುವ ದ್ರಾವಕ —ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರೆಗೂ ಕರಿಯ ಕೂದಲುಗಳು ಇರುತ್ತೆ ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುವೆವು ಕ್ರಯ 1 0 0

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ಡಿ ಮುನ್ನಾಲಾಲ್, ಡಿಲ್ಲೀ ವೈದ್ಯರು.
13, ಹಳೇ ಸಿದ್ದೀಕಟ್ಟ, ಬೆಂಗಳೂರು ಸಿಟಿ

[91-1]

ಹೆಂಗಸರಿಗೂ, ಕಲಿಯತಕ್ಕ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ಪಿವರಿಸಿರುವ ಈ ಪುಸ್ತಕದಿಂದ ಶಾಸ್ತ್ರರೀತಿಯಲ್ಲಿ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು. ಇಂಥಾ ಪುಸ್ತಕವು ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ. ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ಕ್ರಮವನ್ನು, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಕ್ರಮ ಮತ್ತು ಇಸ್ತ್ರಿಯನ್ನೂ ಕಲಿತುಕೊಳ್ಳಬಹುದು. ಈ ಪುಸ್ತಕದಲ್ಲಿ ಚಿತ್ರಗಳು, ೩೦ ನಕ್ಷೆಗಳೂ ಇವೆ.

ಕ್ರಯ 1 ಪುಸ್ತಕಕ್ಕೆ ರೂ 2, ಪೋಸ್ಟೇಜ್ ಬೇರೆ.

ವಿಳಾಸ—ರಾವ್ಸ್ ಟೈಲರಿಂಗ್ ಕಾಲೇಜ್,

[.. 11] ೩೦ ಪಿಕೆಟ್ ರೋಡ್, ಕಾಳ್ಬಾದೇವಿ, ಬೊಂಬಾಯಿ

ಎಂಪೈರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್—ಬೊಂಬಾಯಿ. ಬ್ರಾಂಚಿ ಆಫೀಸ್—ಬೆಂಗಳೂರು ಸಿಟಿ

ಇನ್‌ಷೂರೆನ್ಸ್ ಕಂಪೆನಿಗಳು ಸಂಘದ ಆದರ್ಶಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೆ ಒಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಹಣವನ್ನು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ಇದರಲ್ಲಿ ಹಣ ಹೂಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ವ್ಯವಹಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕೆಲಸ ಬಹಳ ಮಿತವ್ಯಯದಿಂದ ನಿರ್ವಹಿಸಲ್ಪಟ್ಟು ವಿಮೆದಾರರಿಗೆ ಕಡಿಮೆಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು. ಏಜೆಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಈ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-46] ಎಸ್. ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಸುಖಕರ, ಆನಂದ,

ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಯೂರೋಪ್ ರಾಜ್ಯದಲ್ಲಿ ನೂರಾರು ವರುಷ

ಗಳಿಂದ ಉಪಯೋಗದಲ್ಲಿದೆ.

ಸೆಲಿಂತ್ರಾನ ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬು ಮುದ್ರೆಯಾದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟಡಗಿಸುತ್ತದೆ

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತವಾಗಿದೆ [73-6]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಇರುವ 15 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ		2	ಆಣೆ
,,	95 ,, ,, ,, ,,	4	,,
,,	200 ,, ,, ,, ,,	7	,,
,,	300 , ಸುಂದರವಾದ ಟಿನ್ ಡಬ್ಬಿ	9	,,
,,	80 , ,, ,, ,,	1	,,
,,	100 ,, ಬಾಟ್ಲಿಯಲ್ಲಿ	$1\frac{1}{2}$	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸವನ್ನೂ ಸಹಾ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಲಿಂತ್ರಾನ ಡಿಪೋ,

ಬೊಂಬಾಯಿ 3;

ಅಥವಾ, ಬಿ. ಸಿ. ಷಾ ಕಂಪೆನಿ,

509 ಮಿಂಟ್ ಬೀದಿ, ಮದರಾಸ್.

ಕೈಕೆಲಸದ ಪಾಠಶಾಲಾ.

ಎಂಥಾ ದೊಡ್ಡ ವ್ಯಾಧಿಗಳಿಗೂ ನಮ್ಮಲ್ಲಿ ಔಷಧವುಂಟು.

ಗುಣವಾಗುತ್ತದೋ ಇಲ್ಲವೋ ನಮ್ಮ ಕ್ಯಾಟಲಾಗನ್ನು ನೋಡಿ ಒಂದು ದಫೆ ಔಷಧ ಸೇವಿಸಿ ಮಾಡಿದರೆ ನಮಗೆ ತಿಳಿಯುವುದು. ಅನೇಕರು ನಮ್ಮ ಔಷಧ ಸೇವಿಸಿ ಶೀಘ್ರವಾಗಿ ಗುಣಹೊಂದಿ ನಮಗೆ ಸರ್ಟಿಫಿಕೇಟು ಕೊಟ್ಟ, ರುತ್ತಾರೆ. ಪರೀಕ್ಷಿಸಬಹುದು. ಆಯುರ್ವೇದಪಂಡಿತರು ವೈದ್ಯ ಬಿ ಯಸ್. ರಾಜಗೋಪಾಲಪಿಳ್ಳೆ, 167, ಕೀಲಾರಿ ರೋಡು, ಬೆಂಗಳೂರು ಪಂಡು. [93-1]

ಉತ್ತಮ ಗ್ರಂಥಗಳು.

(1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 (2) ಶಿವಾನಂದಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಚಂದ್ರಕಲಾ 6 ಆಣೆ (4) ಕಲಾನಾಥ 8 ಆಣೆ (5) ಸಹಾಯವಿಲ್ಲದೆ ಇಂಗ್ಲಿಷ್ ಕಲಿಯುವ ಪುಸ್ತಕ ರೂ 1-8-0 5 ಭಾಗಗಳೊಳಗೊಂಡಿದೆ. (6) ಜನಾರ್ದನಪದ್ಧತಿ 12 ಆಣೆ ಹನುಮದ್ವಿಲಾಸ 8 ಆಣೆ 1915 ನೇ ಇಸವಿ ಕನ್ನಡ ಮತ್ತು ಸಂಸ್ಕೃತ ಟಿಕ್ಕುಗಳು, ಗುರುಕುಲಂತ ಕಳ್ಳ, ನರಬಲಿ, ಯಾಮಿನಿ, ಪುಷ್ಪಚಿತ್ರ ಎಂಬ ಬಂಗಾಳಿ ನಾವೆಲ್‌ಗಳು—ಪ್ರತಿಗೆ 2 ಆಣೆ ಕಾಮಿನೀ 4 ಆಣೆ ಆರ್ಯಕೀರ್ತಿ 10 ಆಣೆ. ನಮ್ಮಲ್ಲಿ ಸರ್ಕಾರಿ ಸ್ಕೂಲ್ ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳು, ಮತ್ತು ಉತ್ತಮ ಕಾದಂಬರಿಗಳು, ಇಂಗ್ಲಿಷ್ ಮತ್ತು ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ. ನೀತಿಚಿಂತಾಮಣಿ—3 ನೇ ಭಾಗ ಬೇಗನೆ ಸಿದ್ಧವಾಗಿದೆ

[83 2] ಬೇಲೂರು ನರಸಿಂಹಯ್ಯಂಗಾರ್,

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಅತೋ ಮೋಹಿನಿ

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯಕ. ಕರವಸ್ತ್ರಕ್ಕೆ ನಾಲ್ಕು ಹನಿ ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷಿಸಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ.

ಕ್ರಯ ¼ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.

,, 1 ಡ್ರಾಂ ಕೊಳವೆ ,, ,, ,, 0-12-0.

ಅತೋ ಮೋಹಿನಿ ಪರಿಮಳದ ಕಾಡುಗಳು ಡಜನ್ 1 ಕ್ಕೆ ರೂ. 0-12 0.

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಸತ್ಯಕ್ಕೆಲ್ಲಾ ಏಜಂಟರು—

ಮಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[251-10] ೧೨೩, ಚೈನಾಬಜಾರ್ ರೋಡ್, ಮದರಾಸ್.

ಶ್ರೀ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ವಿಶೇಷವಾಗಿ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅತೀಸಾರ-ಭೇದಿ-ಜ್ವರ-ಕೆಮ್ಮು-ನೆಗಡಿ-ಮರವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇವರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು [330-26]

ವಿಷಮಜ್ವರ-ನೆಗಡಿ ಕೆಮ್ಮು-ತಲೆನೋವು-ಅಗ್ನಿಮಾಂದ್ಯ, ಶೀತವಾಯು-ಹಲ್ಲುನೋವು-ಮಲಬದ್ಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

"ನಿರುಪಮಾ" ಹೊಸ ನಾಟಕಗಳಲ್ಲಿ ಮುಳಿಸಿ ಬಹು ಜನರ ಸ್ತ್ರೀಪಾತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ. "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ. ಪತ್ತೇದಾರಿಯ ಕಥೆ. ಕ್ರಯ 6 ಆಣೆ. "ಸಂತಾಪಕ" ಮನೋಹರವಾದ ನವೀನ ಕಾದಂಬರಿ. ಎಲ್ಲರೂ ಅಗತ್ಯವಾಗಿ ಓದಬೇಕಾದುದು ಕ್ರಯ 1 ಆ. "ಮಹಾರಣ್ಯಪುರಾಧಿಪತ್ಯ" 4 ಆ "ಶಕುಲೋಕ ರಹಸ್ಯ" 2 ಆ "ಕಲಹಪ್ರಿಯಪ್ರಹಸನ" 2 ಆ. "ಯೋಗನಿದ್ರಾ ಪ್ರಹಸನ" 2 ಆಣೆ—ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ.

[266-10] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲೆನಿಸುವುದು, ತಲೆನೋವು, ಗಾಬರಿ; ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು; ಕೀಲುನೋವು, ಮರವು, ನಿಶ್ಯಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-33]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಏಪ್ರೆಲ್ 9 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ

ಲೇಣಿ —(1) ಷೇರು ಮೊಬಲಗು	ರೂ	9,10,995
,, (2) ಡಿಪಾಜಿಟ್ಟುಗಳು	,,	8,13,094
,, (3) ಇತರೆ	,,	21,456
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	17,45,545
ದೇಣಿ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ.	2,51,364
,, (2) ಖಾತೆ ಮತ್ತು ಇತರ ಸಾಲಗಳು	,,	11,13,961
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,20,164
,, (4) ಇನ್‌ವೆಸ್ಟ್‌ಮೆಂಟುಗಳು	,,	1,00,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	1,37,613
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	7,013
,, (7) ಇತರೆ	,,	15,530
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	17,45,545

ಡಬ್ಲಿಯು ಸಿ ರೋಚ್, ಮ್ಯಾನೇಜರ್.

ಲಿಂಗಾಯಿತ ವಿದ್ಯಾರ್ಥಿಗಳ ಸಂತೋಷೋತ್ಸವ

ಶಿವಮೊಗ್ಗಾ ಸೆಂಟರ್‌ನಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಸೇರತಕ್ಕ ಲಿಂಗಾಯಿತ ವಿದ್ಯಾರ್ಥಿಗಳಿಗೆ ಈ ವರೆಗೂ ಯಾವ ಮಹನೀಯರೂ ಅವರುಗಳ ಭೋಜನೋಪಚಾರಗಳ ವಿಷಯದಲ್ಲಿ ಏನಾದ ಏರ್ಪಾಡನ್ನೂ ಮಾಡಿರಲಿಲ್ಲ. ಈ ಕೊರತೆಯನ್ನು ತಿಳಿದು ಈ ವರುಷ ವೇ|| ಬೊಮ್ಮನಹಳ್ಳಿ ಮಠದ ಹೂಡೇದ ರಾಚಪ್ಪಯ್ಯನವರು, ವೇ|| ನ್ಯಾಮತಿ ಹೊನ್ನಾಳಿ ಮಠದ ರುದ್ರಪ್ಪಯ್ಯನವರು, ಮ|| ಗಳಾದ ಹಿರೂರು ಬಸಪ್ಪಗೌಡರು, ಹೆಬ್ಬಂಡೆ ರುದ್ರಪ್ಪಗೌಡರು, ಫೋ ಜ ರುದ್ರಪ್ಪನವರು, ದೊಡ್ಡಗೊಪ್ಪೇನಹಳ್ಳಿ ಶಿವಪ್ಪಗೌಡರು, ಶಿವನೆಪುರದಪ್ಪಗೌಡರು, ನಾಗಸಮುದ್ರದ ಚನ್ನಬಸಪ್ಪಗೌಡರು, ಸಿದ್ದಾಪುರದ ಪರಮೇಶ್ವರಪ್ಪಗೌಡರು, ಹನಸ್ವಾಡಿ ಗಡ್ಡಬಸಪ್ಪಗೌಡರು, ಈ ಮೊದಲಾದ ಮಹನೀಯರ ಸಹಾಯದಿಂದ ವೇ|| ರಾಚಪ್ಪಯ್ಯನವರು ಈ ಸೆಂಟರಿಗೆ ಸೇರಿದ್ದ ಎಲ್ಲಾ ಲಿಂಗಾಯಿತ ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ವಿದ್ಯಾರ್ಥಿಗಳ ಪೋಷಕರೂ ಸಹ ಸೇರಿ ಇನ್ನೂರು ಜನಗಳಿಗೆ ಸಕಾಲಕ್ಕೆ ಸರಿಯಾದ ಮೃಷ್ಟಾನ್ನಭೋಜನ ಫಲಾಹಾರಗಳಿಂದ ಬಹು ಆದರದಿಂದಲೂ ವಿಚಾರದಿಂದಲೂ ನಿಷ್ಪಕ್ಷಪಾತವಾಗಿ ತಾ 5 ರಿಂದೆ 11 ರ ವರೆಗೆ ಯಾವದೊಂದು ಕೊರತೆಯೂ ಇಲ್ಲದಂತೆ ತೃಪ್ತಿಪಡಿಸಿ, ತಾ. 10 ರಲ್ಲಿ ಶ್ರೀ ಗುರುಬಸವಸ್ವಾಮಿಗಳ ಮಠದಲ್ಲಿ ಮೀಟಿಂಗ್ ಸೇರಿದ್ದರು. ಆ ಸಭೆಯಲ್ಲಿ ಲಿಂಗಾಯಿತ ಮತದೇಳಿಗೆ ಮೇಲ್ಪಟ್ಟಿಯನ್ನು ಹಾಕಿ ಕೊಡಿಸಿದ ಮೇಲಿನ ಮಹನೀಯರ ಔದಾರ್ಯ ಪರೋಪಕಾರ ವಿಷಯದಲ್ಲಿ ಚನ್ನಗಿರಿ ಕೆ ನಾಗಪ್ಪನವರೂ, ನ್ಯಾಮತಿ ಪ್ರಥಪ್ಪನವರೂ, ಹನಸ್ವಾಡಿ ಗಡ್ಡಬಸಪ್ಪನವರೂ ಉಪನ್ಯಾಸಮಾಡಿದ ನಂತರ ಗಂಧ ಪುಷ್ಪ ಫಲತಾಂಬೂಲ ಸಂಗೀತಾದಿಗಳಿಂದ ಆನಂದಗೊಳಿಸಿದರು. ಈ ಸತ್ಕಾರ್ಯಕ್ಕೆ ಮನಗೊಟ್ಟು ನೆರವೇರಿಸಿದ ಅಧ್ಯಕ್ಷರು ಸ್ವಮತದ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೋಸ್ಕರ ಹೊಸ್ಟೆಲ್ ಹೋಂ ಎಂಬ ಒಂದು ನಿಲಯವನ್ನು ಸ್ಥಾಪಿಸಿ, ಇಂಗ್ಲಿಷ್ ಮತ್ತು ಕನ್ನಡ ವಿದ್ಯಾರ್ಥಿಗಳಿಗೆ ಅಶನವಸನಾದಿಗಳಿಗೆ ಕೊರತೆಯಿಲ್ಲದಂತೆ ಅನುಕೂಲಪಡಿಸಬೇಕೆಂಬ ಕುತೂಹಲವುಳ್ಳವರಾಗಿದಾರೆ. ಪರೋಪಕಾರಿಗಳೂ ಉದಾರಮನಸ್ಕರೂ ಆದ ಮಹನೀಯರು ಸದರಿ ರಾಚಪ್ಪಯ್ಯನವರಿಗೆ ಅವರ ಇಷ್ಟಾರ್ಥ ಪೂರ್ತಿಗೋಸ್ಕರ ಸಹಾಯಮಾಡುವುದಲ್ಲದೆ ಇವರ ಮೇಲ್ಪಂಕ್ತಿಯನ್ನು ಕೈಕೊಂಡು ಕೀರ್ತಿಶೇಷರಾಗಬೇಕೆಂದು ಪ್ರಾರ್ಥಿಸಿದೆ. ಪ್ರತ್ಯಕ್ಷಬಂದ.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರಶೂಲ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಂತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ ಮಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲುಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0 8-0. ಡಜನ್ 1 ಕ್ಕೆ ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0 6 0. ದಂತಮಂಜನ 0 2-0. ಮೋಹಿನಿ ತೈಲ 0-12 0. ಬಿಚ್ಚು ಮುಲಾಮು 0-3-0. ಜುಲಾಬು ಮಾತ್ರೆ ಸುಂದರಿ ಮುಲಾಮು 0 8-0 ಕ್ಯಾಟಲಾಗಿಗೆ ಬರೆಯಿರಿ [52-7]

ಅಮೃತಾಂಜನ ಡಿಪೋ,

ಫೋರ್ಟು. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಡಾಕ್ಟರ್ ಕೋಲ್‌ಮ್ಯಾನ್ ಸಾಹೇಬರು ದಯಮಾಡಿಸಿದ ದಿವಸ ಕೆಲಸಗಳೆಲ್ಲಾ ಕಾಲಕ್ಕೆ ಸರಿಯಾಗಿ ನಡೆದವು ಇವರು ಹೊರಟುಹೋದನಂತರ ಪ್ರದರ್ಶನದ ಪ್ರಮುಖರು ಪ್ರೋಗ್ರಾಮನ್ನು ಪರೀಕ್ಷಿಸಿ, ನಿರಸವಾದ ವಿದ್ಯಾಭ್ಯಾಸದ ವಿಷಯಗಳನ್ನು ಲೋಪಮಾಡುವದರಲ್ಲಿ ಪ್ರತ್ಯವಾಯವಿಲ್ಲವೆಂತ ಪರ್ಯಾಲೋಚಿಸಿ ಫಲಾಹಾರಕ್ಕೆ ಪ್ರಾರಂಭಿಸಿದರು ವಿದ್ಯೆಯ ವಿಷಯಕ್ಕೆ ಮ|| ಸಿ ಕೃಷ್ಣರಾಯರು ಉಪನ್ಯಾಸ ಮಾಡುವಾಗ ಸಂತೋಷದಿಂದ ತಲೆದೂಗಿ ಚಪ್ಪಾಳೆಹೊಡೆದ ಈ ವಿದ್ಯಾಪಕ್ಷಪಾತಿಗಳೇ ವಿದ್ಯೆಯ ವಿಷಯಕವೂ, ಆ ಇಲಾಖೆಯ ವಿಷಯಕವೂ ಇಷ್ಟು ಬೆಲೆ ಕೊಟ್ಟ ಮೇಲೆ ವಿದ್ಯಾಹೀನರಾದ ಗ್ರಾಮ್ಯಜನಗಳು ಇದನ್ನು ಎಷ್ಟು ಆದರಿಸಬಹುದು ? ಅಂತು ಪ್ರದರ್ಶನವೆಲ್ಲಾ ಫಲಾಹಾರದಲ್ಲೇ ಪರ್ಯವಸಾನ ಹೊಂದಿತು

ಈ ದಿವಸ 17 ನೇ ತಾ ಕೊನೇ ದಿವಸ ಬಹುಮಾನ ವಿಲೇವಾರಿ ಆಯಿತು ಕೈಗಾರಿಕೆಗೆ, ವಿದ್ಯಾಭ್ಯಾಸದ ಪದಾರ್ಥಗಳಿಗೆ ಕೊಟ್ಟ ಬಹುಮಾನಕ್ಕಿಂತ ವ್ಯವಸಾಯದ ಪದಾರ್ಥಗಳಿಗೆ ಹಂಚಿದ ಬಹುಮಾನ ಬಹು ಚಮತ್ಕಾರವಾಗಿತ್ತು ನದಿಯಲ್ಲಿ ಹಾಕಿದ ಪೆಂಡಾಲಿನಲ್ಲಿ ಕಾಲ್ನಡೆಗಳಿಗೂ, ವ್ಯವಸಾಯದ ಪದಾರ್ಥಗಳಿಗೂ ಬಹುಮಾನ ಹಂಚಿದರು ಸೆಕ್ರೆಟರಿಗಳಾದ ಮ|| ಆರ್ ಟಿ ಮಹದೇವರಾಯರು ಬಹುಮಾನಗಳನ್ನು ಹಂಚುವ ಅಧಿಕಾರಹೊಂದಿದರು ಡೆ|| ಕ|| ಸಾಹೇಬರವರು ಅಲ್ಲಿಯೇ ಇದ್ದಾಗ್ಗು ಅವರ ಕೈ ಮುಟ್ಟದ ನಂತರ ವಿಲೇವಾರಿ ಮಾಡಲ್ಪಟ್ಟಿತು ಇಷ್ಟರಲ್ಲಿ ಇಲ್ಲಿನ ಶಾ|| ಮ|| ಶ್ರೀನಿವಾಸರಾಯರು ತಮ್ಮ ರೈತನಿಗೆ ಬಂದ ಬಹುಮಾನವನ್ನು ಅಂಗೀಕರಿಸಲು ಅವನಿಲ್ಲದ ಸಬಬು ತಾವೇ ಹೋಗಿ ಕೈ ಚಾಚಿದರು ಆದರೆ ಮ|| ಮಹದೇವರಾಯರು ಕೈಯೆತ್ತಿ ಕೊಡದಿರುವ ಬಹುಮಾನ ಅವರದಲ್ಲವೆಂತ ಹೇಳಿ ಆ ದೊಡ್ಡಮನುಷ್ಯರನ್ನು ಆ ಸಭೆಯಲ್ಲಿ ವಾಪಸು ಕಳುಹಿಸಿದರು ಅಷ್ಟರಲ್ಲೇ ಅದೇ ಮ|| ಆರ್ ಟಿ ಮಹದೇವರಾಯರು ತಮ್ಮ ತಮ್ಮಂದಿರ ಹೆಸರಿಗೆ ಬಂದ ಬಹುಮಾನವನ್ನು ತಮ್ಮ ಪೈಕಿ ಒಬ್ಬ ಹುಡುಗನಿಗೂ, ದಾವಣಗೇರಿಯಲ್ಲಿ ಒಬ್ಬರಿಗೆ ಬಂದ ಬಹುಮಾನವನ್ನು ಆ ಊರಿಗೆ ಸೇರಿದ ಮತ್ತು ಆ ಸ್ಥಳದಲ್ಲಿದ್ದ ಒಬ್ಬರ ಕೈಗೂ ಸ್ವಲ್ಪವೂ ಹಿಂಜರಿಯದೆ ದಯಪಾಲಿಸಿದರು ಪ್ರದರ್ಶನದ ಕಾರ್ಯಗಳನ್ನು ಸ್ವತಃ ನೋಡುವವರೇ ಅದನ್ನು ಪರಿಶೀಲಿಸಬಲ್ಲರು ಆಗಲಿ ಇಷ್ಟು ದ್ರವ್ಯ ವೆಚ್ಚವಾದಾಗ್ಯೂ ಏನು ಜನಗಳಿಗೆ ಉಪಯೋಗವಾಗುತ್ತೋ ನೋಡೋಣ ! ಈಗ 5 ವರುಷಗಳ ಮುಂಚೆ ಇಂಥಾದ್ದೊಂದು ನಡೆಯಿತು ಇದು ವರೆಗೂ ಅದರ ಫಲ ತೋರಬರಲಿಲ್ಲ ಇದು ಎರಡನೆಯದು ಅಂತು ದನಗಳನ್ನು ಬಹು ಪ್ರಯತ್ನದಿಂದ ಐದು ಸಾವಿರದವರೆಗೆ ಸೇರಿಸುವದು ದುಸ್ತರವಾಯಿತು ದನಗಳು ಕಡಮೆ ವ್ಯಾಪಾರ ಸ್ವಲ್ಪ ಜನಗಳು ಬಹಳ ತಿಂಡಿಯವ್ಯಾಪಾರ ಜಾಸ್ತಿ

ಪ್ರೇಕ್ಷಕ ಹರಿಹರರಾವ್

ತಾಲ್ಲೂಕು ವರ್ತಮಾನಗಳು

ಕಾರ್ ಕಾನಹಳ್ಳಿ ತಾ|| ಕಗ್ಗಲೀಪುರ —ನಮ್ಮ ದಿವಾನ್ ಸಾಹೇಬರವರು ಕಳೆದ ತಾ 7 ನೇ ಮಂಗಳವಾರ ರಾತ್ರಿ 8 ಘಂಟೆಗೆ ಕಾರ್ ಕಾನಹಳ್ಳಿಯಿಂದ ಈ ಗ್ರಾಮಕ್ಕೆ ದಯಮಾಡಿಸಿ ಇಲ್ಲಿನ ಗೌರ್ನಮೆಂಟ್ ಏ ಇ ಸ್ಕೂಲ್ ಮುಂಭಾಗದಲ್ಲಿ ಹಾಕಿಸಿದ್ದ ಬಹಳ ಸುಂದರವಾದ ಹಸರುವಾಣಿ ಚಪ್ಪರದಲ್ಲಿ ಮೋಟರುಗಾಡಿಯನ್ನು ನಿಲ್ಲಿಸಿ ಗ್ರಾಮಸ್ಥರಿಂದ ಒಪ್ಪಿಸಲ್ಪಟ್ಟ ಫಲಪುಷ್ಪಗಳನ್ನು ಸ್ವೀಕರಿಸಿ ಪ್ರಜೆಗಳ ಅಹವಾಲನ್ನು ವಿಚಾರಿಸುತ್ತಾ ಸ್ಕೂಲಿನೊಳಕ್ಕೆ ದಯಮಾಡಿ ಬಾಲಿಕಾಪಾಠಶಾಲೆಯ ಬಾಲಕಿಯರುಗಳಿಂದ ಗಾನಮಾಡಲ್ಪಟ್ಟ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಆಲಿಸಿ ಸಂತೋಷಹೊಂದಿ ಬಾಲಕಿಯರಿಗೆ ಬಹುಮಾನ ದಯಪಾಲಿಸಿ ಸ್ಕೂಲ್ ಕಾಂಪೌಂಡಿನಲ್ಲಿ ಬಾಲಕರಿಂದ ಆಬಾದು ಮಾಡಲ್ಪಟ್ಟಿದ್ದ ಮಕ್ಕಳ ತೋಟದ ಗಿಡಗಳನ್ನು ಪರಾಮರಿಸಿ ಮೋಟರ್ ಗಾಡಿ ಹತ್ತಿ ಬೆಂಗಳೂರನ್ನು ಕುರಿತು ಚಿತ್ತೈಸಿದರು

ಚಿತ್ರದುರ್ಗ —ಬಿಸಿಲು ಬಹಳ ಜಾಸ್ತಿ ಮಳೆ ಬರತಕ್ಕ ಚಿಹ್ನೆಯೇ ಕಾಣೋದಿಲ್ಲ ನೀರಿನ ಕಷ್ಟವಂತೂ ಹೇಳತೀರದು ಆಹಾರ ಪದಾರ್ಥಗಳ ಮತ್ತು ದನದ ಮೇವಿನ ಬೆಲೆ ಜಾಸ್ತಿಯಾಗುತ್ತಿದೆ. ಈಗ್ಗೆ 6 7 ತಿಂಗಳಿಂದ ಇಲ್ಲಿ ವಿಷಮಶೀತಜ್ವರ ವ್ಯಾಪಿಸಿ ಒಳ್ಳೇ ಯೌವನಸ್ಥರನ್ನೇ ಕೊಲ್ಲುತ್ತಾ ಇದೆ ಈ ಕಾಯಿಲೆಯಿಂದ ಅನೇಕ ಸಂಸಾರಿಗಳು ಕೆಟ್ಟರು ಬಡವರ ಜೀವನಕ್ಕೆ ಸುಕಾದಷ್ಟು ಕೂಲಿಪಾಡು ಸಿಕ್ಕೋದಿಲ್ಲ ಈ ದುರ್ಭಿಕ್ಷದಿಂದ ಎಲ್ಲಿ ನೋಡಿದರೂ ಕಳ್ಳತನಗಳು ಜಾಸ್ತಿಯಾಗುತ್ತಾ ಇವೆ ಈ ಡಿಸ್ಟ್ರಿಕ್ಟಿನಲ್ಲಿರತಕ್ಕ ಬಕ್ತರಾದ ಪೋಲೀಸ್ ಸೂ| ರವರು ಮಾಡುವ ಸಾಹಸ ಪ್ರಯತ್ನಗಳಿಂದ ಕಳ್ಳರಿಗೆ ಹೆಚ್ಚು ಧೈರ್ಯವಾಗದೆ ಅವರ ಉಲ್ಬಣ ತಡೆಸುಕೊಂಡಿದೆ ಈ ತಿಂಗಳು ಆದಿಭಾಗದಲ್ಲಿ ಸೆಷನ್ಸ್ ಕೋರ್ಟು ಬಂದಿದ್ದು ಮೊಳಕಾಲ್ಮೂರು ತಾಲ್ಲೂಕು ಸಂತೆಗುಡ್ಡದ ದರೋಡೆ ಮೊಕದ್ದಮೆ ವಿಚಾರಣೆಮಾಡಿ ಅಪರಾಧಿಗಳಿಗೆ ಶಿಕ್ಷೆ ಕೊಟ್ಟದ್ದಾಯ್ತು

ತರೀಕೆರೆ —ಮಳೆ ಇನ್ನೂ ಬಾರದ್ದರಿಂದ ಈ ಪ್ರಾಂತ್ಯ ನೀರಿಗೂ, ದನಕರುಗಳ ಮೇವಿಗೂ ತುಂಬಾ ಕಷ್ಟವಾಗಿದೆ —ಊರಲ್ಲಿ ದನಗಳನ್ನು ಮಾಲೀಕರು ರಾತ್ರಿ ಕಟ್ಟುವದೇ ಇಲ್ಲ ಕತ್ತೆಗಳಂತೂ ಊರಲ್ಲಿ ತುಂಬಿ ಅಲೆಯುತ್ತವೆ ಕತ್ತಲು ಕಾಲದಲ್ಲಿ ಜನರು ತಿರುಗುವದು ತುಂಬಾ ಶ್ರಮ ಈ ವಿಷಯದಲ್ಲಿ ಮಾಲೀಕರಿಗೆ ತಕ್ಕ ಎಚ್ಚರಿಕೆ ಹೇಳಿದರೆ ಕ್ಷೇಮ —ಕಳ್ಳತನಗಳ ಹಾಗೂ ಇದ್ದೇ ಇದೆ ಒಬ್ಬನು ಬ್ರಾಹ್ಮಣರಮನೆಯ ಪಾತ್ರೆಯನ್ನು ತೆಗೆದುಕೊಂಡು ಓಡಿಹೋಗುವಾಗ ರೈಲ್ವೆ ಸಬ್ ಓವರ್ಸೀಯವರು ಹಿಡಿದು, ಬಿಡದೆ ಬಹಳ ಸಾಹಸಪಟ್ಟು ಪೋಲೀಸಿಗೆ ಕೊಟ್ಟರು ಮತ್ತು ಒಬ್ಬನು ಇಲ್ಲಿರುವ ಒಬ್ಬ ಸೂಳೆಮನೆಗೆ ಹೋಗಿ ಅವಳ ಕತ್ತಿನಲ್ಲಿದ್ದ ಅಡ್ಡಿಕೆಯನ್ನು ತೆಗೆದುಕೊಂಡು ಓಡಿಹೋಗಿ ಸಿಕ್ಕಿಬಿದ್ದನು —ಈ ಊರಲ್ಲಿ ಅನೇಕ ಜಾತಿಯವರಿದ್ದು ಬಹು ಪಟ್ಟಿಗೆ ಸಂಗಡ(ಪಾರ್ಟಿ) ಮಾಡಿಕೊಂಡಿದಾರೆ ಇದರಿಂದ ಮೇಲಾಗಲಾರದು ದಾಯಾದಿಗಳು ಸೇರಿ ತೋಟದಲ್ಲಿ ಹೊಡೆದಾಡಿ ನೋವುಮಾಡಿಕೊಂಡು ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಹೊಂದುತ್ತಾರೆ ಅಲ್ಲದೆ ಒಬ್ಬ ಮಹಮ್ಮದೀಯನು ಜನರಿಗೆ ನೀರಿನ ಕಷ್ಟ ಹೆಚ್ಚಾದ್ದರಿಂದ ತನ್ನ ಸ್ವಂತ ವೆಚ್ಚದಿಂದ ಒಂದು ಭಾವಿ ತೋಡಿಸಿದ್ದನು ಅವನ ಎದುರು ಪಾರ್ಟಿಯವರು ಅದರಲ್ಲಿ ಮಲವಿಸರ್ಜನೆಮಾಡಿ ಕೆಡಿಸಿದ್ದರು ಪಾರ್ಟಿಗಳಿರುವವರೆಗೂ ಪರೋಪಕಾರ ಕಾರ್ಯಗಳು ವ್ಯರ್ಥವಾಗುತ್ತವೆ —ಕೆರೆ ಬಾರ ಸ್ಟೇಷನ್ನಲ್ಲಿರುವ ಖಲಂದರ್ ಸಾಬಿಯು 18 ಮೈಲಿ ದೂರದ ಕಾಸಿ ತೋಟದಿಂದ ಒಡ್ಡರೂ ತರುವದಕ್ಕೆ ಹೆದರಿ ಬಿಟ್ಟಿದ್ದ 120 ಘನ ಅಡಿ ನಾಟಾವನು 1 ಜೊತೆ ಎತ್ತುಗಳ ಮೂಲಕ 60 ರೂಪಾಯಿ ಬಾಡಿಗೆ ಗೊತ್ತುಮಾಡಿಕೊಂಡು ತಂದು ಊರಲ್ಲಿ ಮೆರವಣಿಗೆ ಮಾಡಿದನು ಈತನ ಸಾಹಸಕ್ಕೆ ಮೆಚ್ಚಿ ಜನರು ಸಂತೋಷಪಟ್ಟದ್ದಲ್ಲದೆ ನಾಟಾ ತಂದದ್ದರಿಂದ 1 ಮೆಡಲ್ ಕೊಡಿಸಬೇಕೆಂದು ಕೆಲವರು ಯೋಚಿಸಿದಾರೆ —ಇಲ್ಲಿನ ಜವಾನ್ದಾರ್ರಿಗೂ, ದಫೇದಾರ್ರಿಗೂ, ತಾಲ್ಲೂಕ್ ದಫೇದಾರ್ರಿಗೂ ವರ್ಗವಾದ್ದು ಸಂತೋಷ ಹಳಬರೇ ಯಾವಾಗ್ಯೂ ಇರುವದು ಸಹಜವಲ್ಲ ಹೊಸಬರು ಮೊದಲಿನಂತೆ ಕೆಲಸ ಮಾಡುವರೆಂದೂ, ಈ ಮಲೆನಾಡಿನ ಕಡೆಯಲ್ಲಿ ಬೇರೆ ಬೇರೆ ಕಡೆಯಿಂದ ಸರ್ಕಾರಿ ನೌಕರರು ವರ್ಗವಾಗಿ, ಅತ್ತಿತ್ತ ಚಲಿಸದೆ ಇರುವ ನಮ್ಮಗಳಿಗೆ ದರುಶನಕೊಟ್ಟು ಉಪಕಾರ ಮಾಡಿಯಾರೆಂದೂ ಸಂತೋಷಪಡುತ್ತೇವೆ

ಶಿವಮೊಗ್ಗೆ —ಕಳೆದ 7 ನೇ ತಾ ಇನ್ ಜನಿಯರವರು ಹಸಲವಾಡಿ ಇರಿಗೇಷನ್, ವಾಟರ್ ಸಪ್ಲೈ ಅಜಮಾಯಿಷಿ ಮಾಡಿಕೊಂಡು ಹೋದರು —ಕೂಡಲಿ ಜಾತ್ರೆಯಲ್ಲಿ ಅಂಗಡಿ ಕಂದಾಯ ಎತ್ತುವದರಲ್ಲಿ ಕೆಲವು ಸರ್ಕಾರಿ ನೌಕರರು ನಿಗದಿಯಾದ್ದಕ್ಕಿಂತ ಹೆಚ್ಚಾಗಿಯೂ, ಮತ್ತೆ ಕೆಲವರು ಕೆಲವೆಡೆಗಳಲ್ಲಿ ಕಡಮೆಯಾಗಿಯೂ ವಸೂಲು ಮಾಡಿದ್ದರಿಂದ ಜಾತ್ರೆಗೆ ಬಂದಿದ್ದ ವರ್ತಕರ ಪೈಕಿ ಅನೇಕರು ವ್ಯಸನಪಟ್ಟು ನಮ್ಮ ಡೆಪ್ಯುಟಿ ಕಮಿಷನರಿಗೆ ಅರ್ಜಿ ಹಾಕಿಕೊಂಡಿರುವಂತೆ ತಿಳಿದುಬರುತ್ತೆ ಮತ್ತೆ ಕೆಲವರು ಜುಲುಂ ಎತ್ತಿದರೆಂತಲೂ ವರ್ತಮಾನವಿದೆ ವಿಚಾರಿಸತಕ್ಕಸಂಗತಿ —ಮ|| ತಿಳುವಳಯ್ಯನ ಸುಬ್ಬಯ್ಯನವರು ಲೋವರ್ ಸೆಕಂಡರಿ ಪರೀಕ್ಷೆಗೆ ಬಂದಿದ್ದ ವಿದ್ಯಾರ್ಥಿಗಳಿಗೆ ಐದು ದಿನಗಳು ಎರಡು ಹೊತ್ತೂ ಚೆನ್ನಾಗಿ ಆತಿಥ್ಯ ನಡಿಸಿದ್ದರಿಂದ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಒಂದು ಸಂತೋಷಕೂಟವನ್ನು ನಡಿಸಿ ಆ ಉಪಕಾರಿಯನ್ನು ವಂದಿಸಿದರು —ಸೀತುವೆ ಹತ್ತಿರ ಗುಂಡಪ್ಪನವರ ಅಳಿಯಂದಿರು ವಾಸವಾಗಿರುವ ಹುಲ್ಲು ಮನೆಗೆ ಹೊದ್ದಿಸಿದ್ದ ಹುಲ್ಲು ಛಾವಣಿಯು ಘಾಳಿಯಿಂದ ಅನಾಮತ್ತು ಹೊಡಕೊಂಡು ಹೋಯಿತು —ಕೂಡಲಿ ಜಾತ್ರೆಯಲ್ಲಿ ಎತ್ತಿನ ಪಂಪೆ ಆದಾಗ ಅಲ್ಲಿಗೆ ಎಂಟು ಕಾಲಿನ ಒಂದು ಎತ್ತನ್ನು ತಂದಿದ್ದರೆಂತಲೂ, ಅದಕ್ಕೆ ಟಿಕೀಟು ಹಾಕಿ ಹಣ ಕೂಡಿಸಿದರೆಂತಲೂ ತಿಳಿಯಬರುತ್ತೆ —ವೈಸ್ ಪ್ರೆಸಿಡೆಂಟರು ಸುಂಕದ ಆಫೀಸ್ ನೌಕರರ ವಿಷಯ ಮನಸ್ಸಿಗೆ ತಂದುಕೊಂಡು ಅವರನ್ನು ವರ್ಗಾಯಿಸಿದ್ದರಿಂದ ಕೆಲಸವು ತೃಪ್ತಿಕರವಾಗಿ ನಡೆಯುತ್ತದೆ —ಮ|| ಶಂಕರನಾರಾಯಣರಾಯರು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದರಿಂದ ಪುರಜನಗಳು ಟೌನ್ ಹಾಲಿನಲ್ಲಿ ಅವರನ್ನು ಕರೆದುಕೊಂಡು ಅವರಿಗಾಗಿ ಒಂದು ಸಂತೋಷದ ಕೂಟವನ್ನು ಜರುಗಿಸಿದರು —ತೀರ್ಥಹಳ್ಳಿ ತಾಲ್ಲೂಕು ಸೀತೂರು ಶ್ಯಾನುಭೋಗರ ಆಳು ತಿಮ್ಮನೆಂಬುವನು ನಾಟಾ ಹೇರಿದ್ದ ಗಾಡಿಯ ಮೇಲೆ ತೂಕಡಿಸುತ್ತಾ ಬಿದ್ದು ಗಾಡಿಯು ಅವನ ಮೇಲೆ ಹರಿದು ಜಖಂ ಆಯಿತೆಂತಲೂ, ಅವನನ್ನು ಆಸ್ಪತ್ರೆಗೆ ಸಾಗಿಸಿದರೆಂತಲೂ ಕೇಳುತ್ತೇವೆ —ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸ್ಕೂಲುಗಳ ಅ|| ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಕೆ ಸುಬ್ಬರಾಯರು ಹರಿಕಥೆ ಮಾಡಿದರು ಸುಮಾರು ಸಾವಿರ ಜನಗಳು ಕೂಡಿದ್ದು ಬಹಳ ಸಂತೋಷಪಟ್ಟರು

ಬಿ. ವೆಂಕಟಾಚಾರ್ಯರ ನಾವಿಲ್‌ಗಳು

ವಂಗವಿಜೇತ 1 4 0 ಸಾನಂದಿನಿ 1 8 0 ಅಮೃತಪುಳಿನ 0 11 0 ಪರಿಮಳ 0 10 0 ಚಂದ್ರಶೇಖರ 1-1 0 ವಿಷವೃಕ್ಷ 1-4 0 ಚಂದ್ರಪ್ರಭಾ 0 14 0 ಶೋಭನೆ 0-12 0 ಚಂದ್ರಕಳಾ 0 6 0 ಕಲಾನಾಥ 0 8 0

[53 9] ಯಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ ರೂಪಾಯಿ 0–7–0

ಇದು ಕೆನಡಿಯನ್ ಗೋಲ್ಡ್ ನಂತಹ ಲೋಹದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೊಕ್ಕೆಗಳು ಮತ್ತು ತುರ್ತುಪುಗಳು ಇಟ್ಟು ಎಲೆಕ್ಟ್ರಿಕ್ ಶಕ್ತಿಯಿಂದ ಗಟ್ಟಿಯಾಗಿ ಚಿನ್ನವನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ಅಡ್ಡಿಗೆಯನ್ನು ತಯಾರಿಸಿರುತ್ತೇವೆ ಇದು ಗಾಜಿನ ಮಣಿಗಳಲ್ಲ ನಿಜವಾದ ಗಟ್ಟಿ ಗೆಜ್ಜೆಗಳು ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು [9‑1]

ನಮ್ಮ ವಿಳಾಸ —ಯುಸ್ ಯುನ್ ಮೂರ್ತಿ, ತಿರುವಲ್ಲಿಕೇಣಿ, ಮದರಾಸು

ನೀವು ಕಳೆದುಕೊಳ್ಳುವಿರೋ ? [82-41]

ತರಿಸಿಕೊಳ್ಳುವ ಈ ಸಮಯವನ್ನು ಕೇಶಕುಸುಮಾಕರ ಕೂದಲೆಣ್ಣೆ.

ಮೂರು ದಿನಗಳಿಗಾಗು ವಷ್ಟು ನಿಮ್ಮ ಬಾಗಿಲ ಬಳಿಗೆ ಪುಗಸಟ್ಟೆ ಕಳುಹುತ್ತೆ

ಈ ಕೂದಲೆಣ್ಣೆಯು ಅತ್ಯಂತ ಅಪೂರ್ವವಾದ ಒಳ್ಳೇ ಗುಣಗಳನ್ನೂ ಸುಗಂಧವನ್ನೂ ಪಡೆದದ್ದಾಗಿದೆ 40 ದಿನಗಳಿಗಾಗುವಷ್ಟು ತೈಲವುಳ್ಳ ಸೀಸೆ 1 ಕ್ಕೆ ಕ್ರಯ ಹತ್ತು ಆಣೆ ಮಾತ್ರ, ಪೋಸ್ಟೇಜ್ ಬೇರೆ

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ, 177 ಜೇಸಾ ಚ್ಯಾರ್ ರೋಡ್, ಮದ್ರಾಸು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ ಸಣ್ಣ ಮಕ್ಕಳು ಹೇಳದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೆ

SCOTTS' EMULSION [17]

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು ದಾಲಿನಲ್ಲಿ ಕೆಲವು ತೊಟ್ಟು ಬೆರಸಿಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು ಅದು ಸಂತೋಷವೂ ಆನಂದವೂ ಸಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು

Always get the Emulsion with this mark—the Fishman —the mark of the "Scott" process!

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

WANTED.

For a large Coffee Estate in South Mysore a capable and energetic Writer with sufficient knowledge of English to keep simple accounts, should be able to supply labour. Good pay for a good man

Apply to

[90 2] **K C/o VRITTANTA PATRIKE, MYSORE**

ಹಾರಮೋನಿಯಂ ಕಲಿಯುವ ಪುಸ್ತಕ ಕ್ರಯ ರೂ 0–8–0

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 10 ಸಾರಸಿ ಹಾಡುಗಳು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ತುಗಳು ತಿಳುಹಿಸಲ್ಪಟ್ಟಿರುತ್ತೆ ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು ವಿಳಾಸ —ಜಿ ಆರ್ ರಾವ್, 55, ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

[9‑1]

ವಿಕರಿಗ ಸಿದ್ಧವಾಗಿದೆ.

ಹರಳು ಬೀಜ, ಹೊಂಗೇ ಬೀಜ, ನೆಲಗಡಲೇಕಾಯಿ ಬೀಜಗಳಿಂದ ಎಣ್ಣೆ ತೆಗೆಯುವ 5 ಅಂಗುಲಗ ಚಾಚುತು (2) ಸ್ಕ್ರೂ ಪ್ರೆಸ್‌ಗಳೂ, ಕಟ್ಟುವ ಮತ್ತು ಹೊಟ್ಟು ತೆಗೆಯುವ ಯಂತ್ರ 1 ತೂರುವ ಯಂತ್ರ 1 ಮೇಲೆ ನಮೂದಾಗಿರುವವುಗಳು ಹುಣಸೂರಲ್ಲಿರುವ ಮೆ|| ಪಿಟ್ರಿ ಹೇ ಅಂಡ್ ಸನ್ ಯವರ ಕಾರ್ಖಾನೆಯಲ್ಲಿ ಇರುತ್ತವೆ ಬೇಕಾದವರುಗಳು ಧಾರಣೆ ವಗೈರೆ ವಿಚಾರಗಳನ್ನು, ಕಾಗದ ಬರೆದು ತಿಳಿದುಕೊಳ್ಳಬಹುದು ಕುಟ್ಟುವ ಮತ್ತು ತೂರುವ ಯಂತ್ರಗಳನ್ನು ದನಗಳ ಸಹಾಯದಿಂದಲಾದರೂ, ಅಥವಾ ಹ್ಯಾಂಡ್ ಪವರ್‌ನಿಂದಲಾದರೂ ಕೆಲಸಮಾಡಬಹುದು ಈ ಯಂತ್ರಗಳ ಜೊತೆಯಲ್ಲಿ ಎಣ್ಣೇ ಯಂತ್ರವನ್ನು ನಡಿಸಬಹುದು

[91 2] PETRIE HAY & SON, HUNSUR



ಕೆಂಪು ಒಣ್ಣದ ಮಧುರೆ ಜುಂನಡಿ ಅಂಚಿನ ಸೀರೆ ಅವಲ್ ರಜಿಂ ರೂ 2 4 0 ಸುಂದರವಾದ ರವಕೆ ಇನಾಂ ಇದು ಉಡುವದಕ್ಕೆ ದಡೂಜಾಗಿಯೂ ನೋಡುವದಕ್ಕೆ ನಯವಾಗಿಯೂ ಕೊಳ್ಳಲು ಬೆಲೆ ಸುಲಭವಾಗಿಯೂ ಇದೆ. ಎಲ್ಲಾ ಹೇಗಿದು ಉದ್ದ 18 ಮೊಳ ವಿಳಾಸ —ಜಿ ಆರ್ ರಾವ್, 55, ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು

ಕ್ರಯ 6 ಆಣೆ

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3 50 ಕ್ಕೆ 8, 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಜಿಲೆ, ಎತ್ತರ, ನದಿ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ ಕ್ರಯ 3 ಆಣೆ [19 10]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ ಡಿಟೋ 5 ನೇ ಪುಸ್ತಕದ ನೋಟ್ಸು 1 ಆಣೆ ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ Notes on 'Tanglewood Tales, English Lower Secondary Text for 1915—As 3

ಯನ್ ಆರ್ ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು

ಜೈನ್ ರವರ ಉತ್ತಮೋತ್ತಮ ಆಯಿಂಟ್ ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಜ್ಜಿ, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರೋಗಗಳು, ಹುಣ್ಣುಗಳು ಬಹುಬೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ



ಮೊದಲಾದ ಪ್ರಾಣಿಗಳ ಗಾಯಗಳಿಗೂ ಯಕ್ಷಗೆಯಂದಾ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1, ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಛಾರ್ಜು ಬೇರೆ ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ ಕ್ರಯ ಬಾಟ್ಲಿಗೆ ರೂ 1 6‑0 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [25 14]

ವಿಳಾಸ—ಟಿ ಗುಲಾಬ್ ಚಂದ್ ಪೌವಾರ್,

50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಡೋಂಗರೆ

ಇವರ ಬಾಲಾಮೃತ [150 40]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು ೪ ಆಣೆ.

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಕನ್ನಡ ಲಾ ಪುಸ್ತಕಗಳು. ಇಂಡಿಯನ್ ಪನಲ್ ಕೋಡು

ಜಡ್ಜಿಗಳ ಟಿಪ್ಪಣಿ ಮತ್ತು ಆಚರಣೆ ಸಹಿತವಾದದ್ದು ರೂ. 2, ಹಸನು ರೂ 2-8-0 ಸಿವಿಲ್ ಪ್ರೊಸೀಜರ್ ರೂ 2-8-0 ವ್ಯವಹಾರ ನಿಬಂಧನೆಂಬ ಕಂಟ್ರಾಕ್ಟ್ ಲಾ ರೂ 2 ಪ್ರಶ್ನೋತ್ತರ ಲೇಖ್ಯಬೋಧಿನಿ 1-4-0 [41-11]

ವಿಳಾಸ—ಬಿ ನರಸಿಂಗರಾವ್, ಎಡಿಟರ್, "ಲಾ ಗೆಜೆಟ್," ಬೆಂಗಳೂರು ಸಿಟಿ

ದಿ ಜನರಲ್ ಏಜೆನ್ಸಿ, ಮೈಸೂರು

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31, 27 ನೆ ಜನವರಿ 1914 ರಲ್ಲಿ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು—ಕಿಂಡರ್‌ಗಾರ್ಟನ್ ಕ್ರಮ 1-4-0, ಪಂಚತಂತ್ರ 0-8-0, ಕಥಾಮಂಜರಿ 0-6-0, ಕಥಾವಳಿ 0 5 6, ರಾಬಿನ್‌ಸನ್ ಕ್ರೂಸೋವಿನ ಸಾಹಸ ಕಾರ್ಯ 0-4-0, ಗಲಿವರನ ದೇಶಸಂಚಾರ 0 3-0, ಅಲ್ಲಾವುದೀನ್ ಅದ್ಭುತದೀಪ 0-5 0, ಸಿಂದಬಾದ್ ನಾವಿಕ 0-4-0, ಇಸೋಪನ ನೀತಿಕಥೆಗಳು 0-4 0 ಇವು ಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡು ಕೊಡಬೇಕು 1915 ನೆಯ ಲೋವರ್ ಸೆಕೆಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು, ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ [23-15]

ಹೊಸ ವರುಷ ! ಹೊಸ ಪುಸ್ತಕಗಳು !! ಹೊಸ ಏರ್ಪಾಟು !!!

ಕ್ರಯ ಕಡಮೆ ! ಕೆಲವು ದಿನಗಳ ಮಟ್ಟಿಗೆ !! ಕಡಮೆ ಕ್ರಯ !!!

ಅವಧೀ ಮೀರಿದ ಬಳಿಕ ಅಲ್ಪಕ್ರಯಕ್ಕೆ ದೊರೆಯಲಾರದು ಬೇಗ ಬರೆದು ತರಿಸಿಡಿರಿ !!!

ಶ್ರೀ ಶ್ರೀ ವಿವೇಕಾನಂದೋಪನ್ಯಾಸಗಳು

ಶ್ರೀ ಶ್ರೀ ವಿವೇಕಾನಂದಸ್ವಾಮಿ (ಸಚಿತ್ರ ಚರಿತ್ರೆ) ೪ ಆಣೆ ೨ ಹಿಂದೂಮತ (ಚಿಕಾಗೋ ಉಪನ್ಯಾಸ) ೪ ಆಣೆ

ಪ್ರಶ್ನೋತ್ತರ ಲೇಖ್ಯಬೋಧಿನಿ [81 2]

ಲೇಖ್ಯ ವ್ಯವಹಾರವನ್ನು ಬೋಧಿಸುವುದು ಸಂಗ್ರಹಯೋಗವಾಗಿದೆ ಎರಡನೆಯ ಭಾಗ ೩೦೦ ಪುಟಗಳು ದಪ್ಪ ಕಾಗದ ಭದ್ರವಾದ ಬೈಂಡು ಕ್ರಯ ಅಂಚೆಯ ವೆಚ್ಚ ಸೇರಿ ಒಂದು ರೂಪಾಯಿ ನಾಲ್ಕಾಣೆ ಮಾತ್ರ

ಕಥಾಸರಿತ್ಸಾಗರ ಭೂಮಿಯ ಆಳತೆ

ಪೂರ್ವ ಕಥೆಗಳೆಂಬ ಹೊಳೆಗಳ ಕಡಲು ಭಾಗ ಕಥೆಗಳೆಲ್ಲವೂ ... ಕವಿಗಳಿಗೂ ಪ್ರಸಿದ್ಧ ಭೂಮಿ ಧಾರ್ಮಿಕ ಸಾಮಾಜಿಕ, ನೈತಿಕ ಎದ್ದವಾ ಗಳಲ್ಲಿ ಕಟ್ಟಿ ಕೈಗನ್ನಡಿ ... ಆಗ ಒಂದು ಪುಸ್ತಕ ವನ್ನು ಸಂಗ್ರಹಿಸಿರುವುದು

ಕ್ರಯ ಒಂದು ರೂಪಾಯಿ ಯೆಂಟಾಣೆ

ಕೆಲವು ಪ್ರತಿಗಳೇ ಉಳಿದಿವೆ ಮುಗಿದ ಬಳಿಕ ದೊರೆಯಲಾರದು ಬೋಧಕರ ಸಹಾಯವಿಲ್ಲದೆ ಶಂಕು ಯೋಜನೆ ಎಂಬ ಸಲದಳತೆಯನ್ನು ಕಲಿಸುವುದು

ಕ್ರಯ ಹನ್ನೆರಡಾಣೆ ಮಾತ್ರ

ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಪಂಗಿರಾಮ, ಅವರ ಎಸ್ ಆರ್ ಭಾರತಿ, ಸಂಪಾದಕ, 'ಸವಿನುಡಿ' ಭಾಷಾನಿಧಿ, ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವ ವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಠಗಳನ್ನು ಇನಾಮಾಗಿ ಕಳುಹಿಸಲಾದೀತು [69 6]

ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಕುಂತಲಾನಂದ ತೈಲವು

192 31

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ 1,00,000

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಎಚ್ಚರಿಕೆ —(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸ್ಸನ್ನು ಕೇಳಿ ತರಿಸಿಕೊಂಡು ಚನ್ನಾಗಿ ಓದಿ ನೋಡಿ ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ, ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಆರಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚನ್ನಾಗಿ ಗೊತ್ತಾಗುತ್ತದೆ)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು ಇದರಲ್ಲಿ ದೃಷ್ಟಿಪಾತ್ರವಾದ ಬಾಗಗಳೂ, ಖಚಿತವಾದ ಕ್ರಮಗಳೂ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ ಅವರಿಗೆ ಸಂಬಳವೂ, ಕಮಿಷನ್ನೂ ಕೊಡಲಾಗುವುದು ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ —

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಲೇವಾದೇವಿ —ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ ಕಂಪನಿಯ ಷೇರುಗಳು ಬಹು ಅಮೂಲ್ಯವಾದವು, ಮತ್ತು ಎಲ್ಲರೂ ಪಡಕೊಳ್ಳುವಷ್ಟು ಸುಲಭವಾಗಿ ಮಾಡಲಾಗಿದೆ [161—34]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು

ಬೇಕಾಗಿದೆ —ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕು ಮಂದಿ ಸ್ಥಳೀಕ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ, —

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಮೈಸೂರು ಸೀಮೆಯ ಪರಸ್ಪರ ಸಹಾಯ ಸಂಘಗಳು

ಮೈಸೂರು ಗವರ್ನಮೆಂಟಿನವರು ಮೇಲ್ಕಂಡ ಸಂಘಗಳ 1912 13 ನೇ ಸಾಲಿನ ಆಡಳಿತದ ರಿಪೋರ್ಟನ್ನು ಪರಾಂಬರಿಸಿ ಅದರ ಮೇಲೆ ಬರೆದಿರುವ ಅಭಿಪ್ರಾಯಗಳೇನೆಂದರೆ—

ಸಂರಕ್ಷಣೆ —ಈ ಸಾಲಿನಲ್ಲಿ ರೆಜಿಸ್ಟ್ರಾರವರು 197 ದಿವಸಗಳೂ, ಅಸಿಸ್ಟೆಂಟ್ ರೆಜಿಸ್ಟ್ರಾರವರು 90 ದಿವಸಗಳೂ, ಇನ್ಸ್‌ಪೆಕ್ಟರುಗಳು ಸರಾಸರಿ 240 ದಿವಸಗಳೂ, ಇನ್ಸ್‌ಪೆಕ್ಟರುಗಳು ಸರಾಸರಿ 210 ದಿವಸಗಳೂ ಸಂಚಾರಮಾಡಿದರು ಕೆಲಸ ನಡೆಸುತ್ತಿರುವ ಎಲ್ಲಾ ಸೊಸೈಟಿಗಳೂ ಒಂದಾವರ್ತಿಯಾದರೂ ಆಡಿಟ್ ಮಾಡಲ್ಪಟ್ಟವು ಮುಂದಿನ ಸಂಘಗಳನ್ನು ವರುಷದಲ್ಲಿ ಅನೇಕಾವರ್ತಿ ತನಿಖೆ ಮಾಡಲಾಗುತ್ತೆಂದು ನಂಬಿದೆ —ಸಂಸ್ಥಾನದ ನಾನಾ ಕಡೆಗಳಲ್ಲಿ ನಡಿಸಲ್ಪಟ್ಟ ಸಂಘಗಳ ಮಹಾ ಸಭೆಗಳು ಈ ವರುಷದ ಆಡಳಿತದಲ್ಲಿ ಸ್ತೋತ್ರಾರ್ಹವಾದ ಅಂಶವಾಗಿವೆ ಹಾಸನ, ಚನ್ನಗಿರಿ, ಯದಿಯೂರು ಮತ್ತು ತುಂಕೂರು, ಈ ಸ್ಥಳಗಳಲ್ಲಿ ಸರ್ಕಾರಿ ಅಧಿಕಾರಿಗಳಲ್ಲದೆ ಇತರ ದೊಡ್ಡಮನುಷ್ಯರ ಉತ್ಸಾಹಪೂರ್ವಕವಾದ ಪ್ರಯತ್ನದಿಂದ ಸಭೆಗಳು ನಡಿಸಲ್ಪಟ್ಟವು ಈ ಸಭೆಗಳಲ್ಲೆಲ್ಲಾ ಅನೇಕ ಪ್ರತಿನಿಧಿಗಳು ದಯಮಾಡಿಸಿ ಸಭಾಕಾರ್ಯದಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿದರು 1912 ನೇ ಅಕ್ಟೋಬರ್ ತಿಂಗಳಲ್ಲಿ ಮೈಸೂರಿನಲ್ಲಿ ಪರಸ್ಪರ ಸಹಾಯ ಸಂಘಗಳ ಎರಡನೇ ಮಹಾ ಸಭೆ ನಡೆಯಿತು ಶ್ರೀಮದ್ಯುವರಾಜರವರಿಂದ ಸಭೆಯು ಉಪಕ್ರಮಿಸಲ್ಪಟ್ಟು ಮೊದಲನೇ ಕೌನ್ಸಿಲರ್ ರಾಜಮಂತ್ರಪ್ರವೀಣ ಎಚ್. ವಿ ನಂಜುಂಡಯ್ಯ, ಸಿ ಐ ಇ ಯವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ನೆರವೇರಿತು ಈ ಸಭೆಯ ರಿಪೋರ್ಟು ನವೆಂಬರ್ ತಾ 8 ರಲ್ಲಿ ಪರಾಮರ್ಶಿಸಿದೆ ಹಾಸನ ಮತ್ತು ತುಂಕೂರುಗಳಲ್ಲಿ ಯೂನಿಯನ್ ಸ್ಥಾಪನೆಯೂ, ಶ್ರೀಮನ್ಮಹಾರಾಜರವರ ಬಾಡಿಗಾರ್ಡ್ (ಅಂಗರಕ್ಷಕ) ಸವಾರರಿಗೂ, ಅರಮನೆ ಖಾಸ್ ಕಛೇರಿಯ ನೌಕರಮಾನಿಸರಿಗೂ, ಹೀನಸ್ಥಿತಿಯಲ್ಲಿರುವ ಹೊಲೆಯರು ಮತ್ತು ಮಾದಿಗರಿಗೂ ಮತ್ತು ಕೋಲಾರದ ಚಿನ್ನದಗಣಿಗಳಲ್ಲಿ ರತ್ನ ಗಣಿಗಳಲ್ಲಿ ಕೆಲಸಮಾಡುವ ಕೂಲಿಆಳುಗಳಿಗೂ ಅನುಕೂಲಿಸುವಂತೆ ಕೋಆಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಿಕೊಟ್ಟಿರುವದೂ ಈ ಸಾಲಿನ ಆಡಳಿತದಲ್ಲಿ ಮುಖ್ಯ ಇತರ ಕೆಲಸಗಳಾಗಿರುತ್ತವೆ

ಸೊಸೈಟಿ ಸಂಖ್ಯೆ ಮತ್ತು ಕೆಲಸ —ಸೊಸೈಟಿಗಳು 208 ರಿಂದ 343 ಕ್ಕೆ ಅಂದರೆ ಶೇಕಡ 65 ರಷ್ಟು, ಮೆಂಬರುಗಳ ಸಂಖ್ಯೆಯು 13,148 ರಿಂದ 24,538 ಕ್ಕೆ ಅಂದರೆ ಶೇಕಡ 87 ರಷ್ಟು, ಬಂಡವಾಳವು 6,75,312 ರೂಪಾಯಿನಿಂದ 12,83,388 ರೂಪಾಯಿಗೆ ಅಂದರೆ ಶೇಕಡ 91 ರಷ್ಟು ಹೆಚ್ಚಿಸುತ್ತವೆ ಸೊಸೈಟಿಗಳ ಒಟ್ಟು ನಿವ್ವಳ ಲಾಭವು 1911 12 ನೇ ಸಾಲಿನಲ್ಲಿ 34,836 ರೂಪಾಯಿ ಇದ್ದದ್ದು ಈ ಸಾಲಿನಲ್ಲಿ 62,530 ರೂಪಾಯಿಗೆ ಹೆಚ್ಚಿದೆ ರಿಜರ್ವ್

ಘಂಡು ಮೊಬಲಗು 18,833 ರೂಪಾಯಿಯಿಂದ 30,100 ರೂಪಾಯಿಗೆ ಹೆಚ್ಚಿತು ಈ ವರುಷದ ಒಟ್ಟು ಜಮಾ ಖರ್ಚು 59,32,081 ರೂಪಾಯಿಗಳು, ಕಳೆದ ವರುಷ 34,88,950 ರೂಪಾಯಿಗಳು ಕಳೆದ ವರುಷಕ್ಕಿಂತಲೂ ಶೇಕಡ 70 8 ರಷ್ಟು ಹೆಚ್ಚಾಗಿದೆ ಇದಲ್ಲದೆ ಒಟ್ಟು ಜಮಾ ಖರ್ಚಿನಲ್ಲಿ ಇದ್ದ ಮೊಬಲಗಿನ ಮೇಲೆ ಶೇಕಡ 1 0ರಷ್ಟು ಮತ್ತು ಷೇರು ಮೊಬಲಗಿನ ಮೇಲೆ ಶೇಕಡ 9 21 ರಷ್ಟು ಲಾಭ ಬಂದ ಹಾಗಾಯಿತು ಹೋದ ವರುಷಕ್ಕಿಂತ ಇದು ತೃಪ್ತಿಕರವಾದ ಅಂಶವಾಗಿದೆ

313 ಸೊಸೈಟಿಗಳ ಪೈಕಿ ವರುಷದ ಅಂತ್ಯ ಭಾಗದಲ್ಲಿ ಸ್ಥಾಪಿಸಲ್ಪಟ್ಟ ಕಾರಣದಿಂದ 31 ಸೊಸೈಟಿಗಳು ಕೆಲಸ ಪ್ರಾರಂಭಿಸಲಿಲ್ಲ 13 ಇತರ ಸೊಸೈಟಿಗಳು ವಾರ್ಷಿಕ ಲೆಕ್ಕಗಳನ್ನು ಕಳುಹಿಸಲಿಲ್ಲ ಇಲಾಖೆಯ ಪ್ರೌಢವರ್ಗಕ್ಕೆ ಸೇರುವದರಿಂದ ಆಗತಕ್ಕ ಪ್ರಯೋಜನಗಳು ಸೊಸೈಟಿಯವರ ತಿಳುವಳಿಕೆಗೆ ಬರುತ್ತೆಂದೂ, ತಮ್ಮ ಆದಳಿತ ಅಭಿವೃದ್ಧಿಗಳನ್ನು ಕುರಿತ ರಿಪೋರ್ಟ್ ಮತ್ತು ಲೆಕ್ಕಗಳನ್ನು ರೆಜಿಸ್ಟ್ರಾರವರಿಗೆ ಕಳುಹಿಸುವರೆಂದೂ ನಂಬಿದೆ ಇನ್ನು ಕೆಲವು ಕಾಲ ಹಿಂದಾಗಿರತಕ್ಕ ಸೊಸೈಟಿಗಳನ್ನು ಅನಿವಾರ್ಯ ತನಿಖೆಮಾಡುವದರಿಂದಲೂ, ಬುದ್ಧಿವಾದದಿಂದಲೂ ಪ್ರೋತ್ಸಾಹಿಸಿ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡಿಸುವದರಲ್ಲಿ ರೆಜಿಸ್ಟ್ರಾರವರು ಗಮನಕೊಡುವದು ತುಂಬಾ ಪ್ರಯೋಜನಕರವಾಗಿದೆ

ಪಟ್ಟಣಗಳಲ್ಲಿರತಕ್ಕ ಸೊಸೈಟಿಗಳೇ ಇನ್ನೂ ಇತರ ಸಂಘಗಳಿಗೆ ದಾರಿಯನ್ನು ತೋರಿಸುತ್ತಲಿವೆ ಮತ್ತು ಭಾರಿ ಆದಳಿತಗಳನ್ನು ನಡಿಸತಕ್ಕವುಗಳೂ ಅವೇ ಆಗಿವೆ ಲೇವಾದೇವಿಯೇ ಸೊಸೈಟಿಗಳ ಮುಖ್ಯೋದ್ದೇಶವಾಗಿದೆ ಆದರೆ ಬಣ್ಣದ ಸಾಮಾನು ಮಾಡುವದಕ್ಕೂ, ನೇಯಿಗೆ ಜನಗಳಿಗೂ ಹತ್ತು ಸೊಸೈಟಿಗಳು ಏರ್ಪಟ್ಟಿವೆ ಈ ಸೊಸೈಟಿಗಳು ನಾಲ್ಕು ಲಕ್ಷಕ್ಕೆ ಮೇಲ್ಪಟ್ಟ ಆದಳಿತವನ್ನು ನಡಿಸುವದು ಜನಗಳ ಉತ್ಸಾಹಕ್ಕೆ ನಿದರ್ಶನವಾಗಿದೆ ಇ ಟ್ಟಿ ಕಾವಳಿ ಇಡತಕ್ಕ ಸಂಘಗಳ ಪೈಕಿ ಕೆಳಗೆ ಕಾಣಿಸಿರುವ 17 ಸಂಘಗಳು ಒಳ್ಳೆ ಆದಳಿತವನ್ನು ನಡಿಸುತ್ತೆಂದೂ, ಉಜ್ವಲಭವಿತವ್ಯ [illegible] ಮಂಡಳಿಗಳನ್ನು ಪಡೆದಿರುವವೆಂದೂ ಹೇಳಬಹುದು ಹಿಂದಿನ ವರುಷದಲ್ಲಿ ಆದ ನಷ್ಟವನ್ನು ನಿಶ್ಶೇಷವಾಗಿ ಪರಿಹರಿಸಿಕೊಳ್ಳಲು ಆಗದಿದ್ದರೂ ಈ ವರುಷ ಸ್ವಲ್ಪ ಲಾಭಸಂಪಾದನೆ ಮಾಡಿರುವದು ಕೊಪ್ಪದಲ್ಲಿರುವ ಅಗ್ರಿಕಲ್‌ಚರಲ್ ಸೊಸೈಟಿಗೆ ಪ್ರಶಂಸನೀಯವಾಗಿದೆ ಮತ್ತು ಅಲ್ಲಿನ ಕೆಲವು ದೊಡ್ಡ ಮನುಷ್ಯರು ಬಡ್ಡಿಯಿಲ್ಲದೆ ಹಣವನ್ನು ಸೊಸೈಟಿಗೆ ಮುಂಗಡವಾಗಿ ಕೊಟ್ಟು ಚಾಲ್ತಿ ಕೆಲಸಗಳನ್ನು ನಡಿಸುತ್ತಲೂ, ನಷ್ಟವನ್ನು ಪರಿಹರಿಸಿಕೊಳ್ಳುವದಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಲೂ ಇರುವದು ಸ್ತೋತ್ರಾರ್ಹವಾಗಿದೆ * [ಚನ್ನಪಟ್ಣ ದಾಯಿರೆ ಇ ಇಸ್ಲಾಮ್ ಕೋಆಪರೇಟಿವ್ ಸೊಸೈಟಿ, ಚನ್ನಪಟ್ಣ ಲ್ಯಾಕರ್‌ವೇರ್ ಫ್ಯಾಕ್ಟರಿ, ದೊಡ್ಡಘಟ್ಟದ ಸೊಸೈಟಿ, ಚಿಕ್ಕಬಳ್ಳಾಪುರದ ಸೊಸೈಟಿ, ಯದರೂರು ಸೊಸೈಟಿ, ಶಿರಾಸೊಸೈಟಿ, ಕುಣಿಗಲ್‌ಸೊಸೈಟಿ, ಚಿಕ್ಕನಾಯಕನಹಳ್ಳಿ ಸೊಸೈಟಿ, ತುರುವೇಕೆರೆ ಸೊಸೈಟಿ, ಹೊನ್ನವಳ್ಳಿ ಕಾರೊನೇಷನ್ ಸೊಸೈಟಿ, ಮೇಲುಕೋಟೆ ನೇಯಿಗೆ ಸೊಸೈಟಿ, ಕೊಮಾರನಹಳ್ಳಿ ನೇಯಿಗೆ ಸೊಸೈಟಿ, ಹೊಳೆನರಸೀಪುರದ ಸೊಸೈಟಿ, ಅರಸೀಕೆರೆ ಸೊಸೈಟಿ, ಚನ್ನಗಿರಿ ಸಂಘ, ನಲ್ಲೂರು ಸಂಘ, ಮೊಳಕಾಲ್ಮೂರು ಜಮಿಯ್ ಅಲ್ ಇಸ್ಲಾಂ ಸೊಸೈಟಿ]

ಸುಮಾರು 19 ಲಕ್ಷ ರೂಪಾಯಿ ಸಾಲವು ಮೆಂಬರುಗಳಿಗೆ ಕೊಡಲ್ಪಟ್ಟಿತು ಈ ಪೈಕಿ ಶೇಕಡ 51 ರಷ್ಟು ಮೊಬಲಗು ಪ್ರತಿಫಲವನ್ನುಂಟುಮಾಡುವ ಉದ್ದೇಶಗಳಿಗೂ, ಶೇ| 5 1 ರಷ್ಟು ಮೊಬಲಗು ಉತ್ಪತ್ತಿಕರವಲ್ಲದ ಉದ್ದೇಶಗಳಿಗೂ, ಶೇ 23 6 ರಷ್ಟು ಮೊಬಲಗು ಹಿಂದಿನ ಸಾಲ ತೀರಿಸುವದಕ್ಕೂ ಕೊಡಲಾಯಿತು ಸೊಸೈಟಿಗಳು ತಮ್ಮ ಬಂಡವಾಳವನ್ನು ಮೆಂಬರುಗಳಿಗೆ ಪ್ರಯೋಜನ ಉಂಟಾಗುವಂತೆ ಒಳ್ಳೆ ಮಾರ್ಗದಲ್ಲಿ ಉಪಯೋಗಿಸುತ್ತವೆಂಬುವದಕ್ಕೆ ಅನೇಕ ನಿದರ್ಶನಗಳಿರುತ್ತವೆ ಸಾಲ ಕೊಟ್ಟ ಮೊಬಲಗಿನಲ್ಲಿ ಶೇಕಡ 73 ರಷ್ಟು ವಸೂಲಾಯಿತು ಈ ವಸೂಲಿ ಕೆಲಸವು ತೃಪ್ತಿಕರವಾಗಿದೆ ಎಂದು ಹೇಳಬಹುದು

ಬಂಡವಾಳ —ಸಾಧ್ಯವಾದ ಮಟ್ಟಿಗೆ ಎಲ್ಲಾ ಸೊಸೈಟಿಗಳೂ ಸರ್ಕಾರದಿಂದ ದ್ರವ್ಯಸಹಾಯವನ್ನು ಅಪೇಕ್ಷಿಸದೆ ತಮ್ಮ ಷೇರುಹಣ ಠೇವಣಿಗಳು ಮತ್ತು ಸೆಂಟ್ರಲ್ ಬ್ಯಾಂಕುಗಳಿಂದ ಸಾಲ, ಇವುಗಳಿಂದ ಬಂಡವಾಳವನ್ನು ಕಲ್ಪಿಸಿಕೊಂಡು ಆದಳಿತ ನಡಿಸುತ್ತಲಿರುವದು ಶ್ಲಾಘನೀಯವಾಗಿದೆ

ವ್ಯವಹಾರಗಳು — ಈ ಸಾಲಿನಲ್ಲಿ ರೆಜಿಸ್ಟ್ರಾರವರಲ್ಲಿ 71 ದಾವಾಗಳು ದಾಖಲಾಗಲ್ಪಟ್ಟಿದ್ದವು ಹಿಂದಿನ ಸಾಲಿನಲ್ಲಿ 36 ದಾವಾಗಳು ದಾಖಲಾಗಿದ್ದವು ಸಾಲ್ ಮುರುವಿನಲ್ಲಿ ಫೈಸಲಾಗದೆ ಬಾಕಿಯುಳಿದ ದಾವಾಗಳನ್ನು ಸೇರಿಸಿದರೆ 107 ದಾವಾಗಳು ಫೈಸಲಾತಿಗೆ ಎಂದವೆಂದು ಹೇಳಬಹುದು ಈ ಪೈಕಿ 64 ದಾವಾಗಳು ವಾಪಸು ತೆಗೆದುಕೊಳ್ಳಲ್ಪಟ್ಟವು 28 ದಾವಾಗಳಲ್ಲಿ ಡಿಕ್ರಿಗಳು ಕೊಡಲ್ಪಟ್ಟವು 15 ದಾವಾಗಳು ಬಾಕಿಯಲ್ಲಿದ್ದವು ಮೆಂಬರುಗಳಿಗೆ ಸಂಬಂಧಪಡುವ ವಿವಾದಗಳ ವಿಷಯದಲ್ಲಿ ಪಂಚಾಯಿತರೇ ಅವರ ಪಂಗಿ ತೀರ್ಪು ಕೊಡಬಹುದೆಂದು ಮೈಸೂರು ಕೋಆಪರೇಟಿವ್ ಸೊಸೈಟಿಗಳ ಕಾನೂನಿನ 37 ನೇ ಸೆಕ್ಷನ್ (ಬಿ) ಒಳಪ್ರಕರಣದಲ್ಲೂ ಮತ್ತು ಅದನ್ನನುಸರಿಸಿ ಮಾಡಿರುವ ನಿಬಂಧನೆಗಳಲ್ಲೂ ಅವಕಾಶ ಕಲ್ಪಿಸಿರುವದರಿಂದ ಅದಕ್ಕೆ ರೆಜಿಸ್ಟ್ರಾರವರು ಗಮನಕೊಡಬೇಕಾಗಿದೆ ಈ ನಿಬಂಧನೆಯನ್ನು ಎಷ್ಟರ ಮಟ್ಟಿಗೆ ಜಾರಿಗೆ ತರಬಹುದಾಗಿರುತ್ತೆ ಎಂಬುದನ್ನು ತಿಳಿಯಬೇಕೆಂದು ಗವರ್ನಮೆಂಟಿನವರು ಅಪೇಕ್ಷಿಸುತ್ತಾರೆ

ಲೆಕ್ಕಗಳ ತನಿಖೆ ಮತ್ತು ಅಜಮಾಯಿಷಿ —ಸುಮಾರು ಶೇಕಡ 16 ರಷ್ಟು ಎಂದರೆ 225 ಸೊಸೈಟಿಗಳ ಲೆಕ್ಕಗಳು ತನಿಖೆ ಅಥವ ಅಜಮಾಯಿಷಿ ಮಾಡಲ್ಪಟ್ಟವು ಆದರೆ ಕೋ ಆಪರೇಟಿವ್ ಸೊಸೈಟಿಗಳ ಕಾನೂನಿನ 31 ನೇ ಸೆಕ್ಷನ್ ಪ್ರಕಾರ ಪ್ರತಿ ಸಂಘವನ್ನೂ ರೆಜಿಸ್ಟ್ರಾರವರು ಚೆನ್ನಾಗಿ ತನಿಖೆಮಾಡತಕ್ಕದ್ದು ಅವರ ಕರ್ತವ್ಯವಾಗಿರುವದರಿಂದ ಅವರು ಇದಕ್ಕೆ ಹೆಚ್ಚಾದ ನಿಗಾ ಕೊಡಬೇಕು ಹಾಸನದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಯೂನಿಯನ್‌ಗೆ ಸೇರಿರುವ ಸಂಘಗಳ ಲೆಕ್ಕತನಿಖೆ ಮತ್ತು ಮೇಲಿ ಚಾರಣೆ ಕೆಲಸಗಳನ್ನು ಯೂನಿಯನ್‌ಗಳವರೇ ಕೈಕೊಂಡಿರುವದು ಬಹಳ ಪ್ರಯೋಜನಕರವಾದದ್ದಾಗಿದೆ ಹೀಗೆಯೇ ಅನೇಕ ಯೂನಿಯನ್‌ಗಳನ್ನು ಏರ್ಪಡಿಸಿದರೆ ಸೊಸೈಟಿಗಳ ತನಿಖೆ ಮತ್ತು ಅಜಮಾಯಿಷಿ ಕೆಲಸಗಳನ್ನು ಅವುಗಳೇ ಮಾಡಿಕೊಳ್ಳುವದರಿಂದ ರೆಜಿಸ್ಟ್ರಾರರೂ ಅವರ ಸಿಬ್ಬಂದಿಯವರೂ ಬಹಳ ಸಂಕಷ್ಟಸ್ಥಿತಿಯಲ್ಲಿರುವ ಮತ್ತು ಸರಿಯಾಗಿ ಕೆಲಸ ಮಾಡದಿರುವ ಸೊಸೈಟಿಗಳಿಗೆ ಹೆಚ್ಚಾಗಿ ಗಮನಕೊಡುವದಕ್ಕೆ ಅವಕಾಶವಾಗುತ್ತೆಂದು ಸರ್ಕಾರದವರು ನಂಬುತ್ತಾರೆ

ಎಲ್ಲಾ ಭಾಗಗಳಲ್ಲೂ ಅನ್ಯೋನ್ಯ ಸಹಾಯ ಸಂಘಗಳ ಅಭಿವೃದ್ಧಿಯು ಈ ಸಾಲಿನಲ್ಲಿ ತುಂಬಾ ತೃಪ್ತಿಕರವಾದದ್ದಾಗಿರುತ್ತೆ ಸಂಸ್ಥಾನದ ಮೈದಾನ್ ಪ್ರದೇಶಗಳಲ್ಲಿ ಸಂಘಗಳು ಜಾಸ್ತಿಯಾಗಿರುತ್ತವೆ ಅನ್ಯೋನ್ಯ ಸಹಾಯ ಸಂಘಗಳ ವಿಷಯದಲ್ಲಿ ಸರ್ಕಾರಿ ನೌಕರರು ಮತ್ತು ಇತರ ದೊಡ್ಡ ಮನುಷ್ಯರು ರೆಜಿಸ್ಟ್ರಾರವರಿಗೆ ತುಂಬಾ ಸಹಾಯಕೊಟ್ಟದ್ದಕ್ಕಾಗಿ ಸರ್ಕಾರದವರು ಸಂತೋಷಪಡುತ್ತಾರೆ ಅನ್ಯೋನ್ಯ ಸಹಾಯ ಸಂಘಗಳಿಗೂ, ಪಶುವೈದ್ಯ ಮತ್ತು ವ್ಯವಸಾಯದ ಇಲಾಖೆಗಳಿಗೂ ಹೆಚ್ಚಾಗಿ ಸಂಬಂಧವನ್ನು ಕಲ್ಪಿಸತಕ್ಕ ಭಾಗವನ್ನು ಸರ್ಕಾರದವರು ರೆಜಿಸ್ಟ್ರಾರವರ ಅವಗಾಹನೆಗೆ ತರುತ್ತಾರೆ ರಿಜಿಸ್ಟರಾಗಿರುವ ಅನೇಕ ಸೊಸೈಟಿಗಳ ಹೆಸರುಗಳು ಬಹಳ ದೊಡ್ಡವಾಗಿರುವದರಿಂದ ಇನ್ನು ಮುಂದೆ ಸೊಸೈಟಿಗಳು ಚಿಕ್ಕಚಿಕ್ಕ ಹೆಸರುಗಳನ್ನು ಇಟ್ಟುಕೊಳ್ಳುವಂತೆ ರೆಜಿಸ್ಟ್ರಾರವರು ಪ್ರೋತ್ಸಾಹಿಸಬೇಕು ಈ ಸಾಲಿನಲ್ಲಿ ಸಂಸ್ಥಾನಾವಳಿ ಪರಸ್ಪರಸಹಾಯ ಸಂಸ್ಥೆಗಳು ಸ್ಥಿರವಾಗಿಯೂ, ಜಾಗ್ರತೆಯಾಗಿಯೂ ಅಭಿವೃದ್ಧಿಗೆ ಬಂದದ್ದಕ್ಕಾಗಿ ಸರ್ಕಾರದವರು ಮಿ| ನಾರಾಯಣ ಅಯ್ಯಂಗಾರ್ರವರನ್ನೂ, ಅವರ ಸಿಬ್ಬಂದಿಯನ್ನೂ ವಂದಿಸುತ್ತಾರೆ

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನಮೆಂಟಿನ ಜೀವವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲ್ಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [213 23]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

ಎಂಥಾ ರೋಗವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯುಶೂಲು ಆರತಲೆ, ಕಲಿನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಪ್ಲೂರಸಿ ಫು, ಗಂಟ್ಲು ಗಾರನ್ನುವುದು, ಕೆಮ್ಮುಗಳು ಶೀತನೆಗಡಿ, ಕ್ಷಯರೋಗ, ಜಮ್ಮು, ಉಳುಕು, ಛಳುಕು, ಚೇಳು ಕಡಿದ ಬಾಧೆ ಈ ನೋವಾದ ಎಲ್ಲಾ ತರಹ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರ ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104 18]

* ಕ್ಲೆಮೆಂಟರ ಮ್ಯಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು –(1) ಎಸ್ ಪೀಟರ್ಸ್, 17 ಸೆಡಮುಲಿಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಸ್ಟ್ಯಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ.

ಇದು ಹಿಂದುಸ್ಥಾನದಲ್ಲೆಲ್ಲಾ ತುಂಬಾ ಪ್ರಖ್ಯಾತಿ ಪಡೆದಿದೆ

ನಿಸ್ಸಂದೇಹವಾದ ಆಧಾರವುಳ್ಳದ್ದು

ಸಾಲಿಯಾನಾ ಹುಟ್ಟುವಳಿ ರೂ 3,13,00,000	ಶೇಖರವಾಗಿರುವ ಫಂಡು ರೂ 30,13,00,000
ಬೋನಸ್ ಪಾವತಿ ರೂ 12,20,00,000	ವಿಮೆದಾರರಿಗೆ ಪಾವತಿ ರೂ 16,76,00,000

ಪೂರ್ಣಜೀವಮಾನ, ಕೆಲವು ವರುಷಗಳ ನಂತರ ಪಾವತಿ, ಮಕ್ಕಳ ವಿಮೆ, ದುಗುಣಿ ವಿಮೆ, ಸ್ವಲ್ಪಕಾಲದ ವಿಮೆ—ಈ ಮೊದಲಾದ ಪಾಲಿಸಿಗಳನ್ನು ಈ ಕಂಪನಿಯಲ್ಲಿ ಬಹಳ ಸುಲಭವಾದ ದರಗಳಲ್ಲಿ ಪಡೆಯಬಹುದು

ಹಿಂದುಸ್ಥಾನದಲ್ಲಿಯೇ ವಿಮೆಪತ್ರಗಳನ್ನು ಕೊಡುವ, ವಿಮೆದಾರರ ಹಣ ಪಾವತಿಮಾಡುವ ಮತ್ತು ಸಾಲಗಳನ್ನು ಕೊಡುವ ಕೆಲಸಗಳು ನಡಿಸಲ್ಪಡುತ್ತವೆ ವಿಶೇಷ ಸಂಗತಿಗಳನ್ನೂ, ಕನ್ನಡ ಇಂಗ್ಲಿಷ್ ನೋಟೀಸ್ ಪುಸ್ತಕಗಳನ್ನೂ ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಿ— [50 12]

ಕಮಿಷನ್ ಮತ್ತು ಜನರಲ್ ಏಜನ್ಸಿ,

ಅವೆನ್ಯೂರೋಡ್, ಬೆಂಗಳೂರು ಸಿಟಿ	ಮೈಸೂರು ಸೀಮೆಯ ಮುಖ್ಯ ಏಜಂಟರು	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗಾ

ಮೈಸೂರು ದಸರಾ ಕೈಗಾರಿಕ ಮತ್ತು ವ್ಯವಸಾಯ ಸಂಬಂಧ ಪ್ರದರ್ಶನ, 1914

ಈ ವರುಷದ ಪ್ರದರ್ಶನವು ಬರುವ ಸೆಪ್ಟಂಬರು ಮಾಹೆ ೨೦ ನೇ ತಾರೀಖು ಅಥವಾ ಅ ಸುಮಾರಿನಲ್ಲಿ ತೆರೆಯಲ್ಪಡುವದು

ಈ ಪ್ರದರ್ಶನದ ಸಂಬಂಧಪ್ರಕಟನೆಗಳು ಅಚ್ಚಿನಲ್ಲಿರುತ್ತವೆ ಶೀಘ್ರವಾಗಿ ಕಳುಹಿಸಲ್ಪಡುವವು

ಈ ಪ್ರದರ್ಶನದಲ್ಲಿ ಈ ಕೆಳಗೆ ಕಂಡ ವಿಷಯಗಳ ಪ್ರೋಟಾಪ್ರೋಟಿಗಳು ಏರ್ಪಡಿಸಲ್ಪಟ್ಟಿವೆ ಇಷ್ಟವುಳ್ಳವರು ತಮಗೆ ಅನುಕೂಲ ತೋರುವವುಗಳಲ್ಲಿ ಪ್ರೈಪ್ರೋಟ ಮಾಡಬಹುದು ಮತ್ತು ಇಂಥಾ ಪ್ರೋಟಾಪ್ರೋಟಿಗಳ ಸಂಬಂಧವಾದ ಕಾನೂನು ಮತ್ತು ಇತರ ತಪಸೀಲುಗಳನ್ನು ಮೈಸೂರಿನಲ್ಲಿರುವ ಪ್ರದರ್ಶನ ಸೆಕ್ರೆಟರಿಯವರ ಆಫೀಸಿಗೆ ಬರೆದು ತಿಳಿದುಕೊಳ್ಳತಕ್ಕದ್ದು

ಪ್ರೋಟಾ ಪ್ರೋಟಿಗಳು —(1) ನೇಯಿಗೆ, (2) ಉಳುವುದು, (3) ಮರ ಮತ್ತು ಲೋಹಗಳಲ್ಲಿ ಕೆತ್ತನ ಕೆಲಸ, (4) ಮಣ್ಣಿನ ಮಡಿಕೆಗಳು ಮಾಡುವ ಕೆಲಸ

[60 2] ರಂಗನಾಥರಾವ್ ಸಾಹೇಬ್,
5-4-1914 ಸೆಕ್ರೆಟರಿ

ಅಪೂರ್ವ ಕನ್ನಡ ಗ್ರಂಥಗಳು.

[39 6]

(1) ಜನಾನಸುಸ್ಥಿತಿಗೆ ಮೂಲಾಧಾರ —14 ಸಭಾವ ಚಿತ್ರಗಳುಳ್ಳದು ದೇಶೋನ್ನತಿಗೆ ಬೇಕಾದ ವಿಷಯಗಳನ್ನೆಲ್ಲ ಕಥಾರೂಪದಿಂದ ಬೋಧಿಸುತ್ತದೆ ಕ್ರಯ ವಿ ಪಿ ಸಹ ಗಿಲ್ಟ್ ಬೈಂಡ್ 3 4 0, ಗ್ಲೇಜ್ 1 8 0 ದುಯ್ಯಂ 1 4 0 (2) ಧರ್ಮಪದ —500 ಕೋಟಿ ಜನರಿಂದ ಪಾರಾಯಣಮಾಡಲ್ಪಡುವ ಗ್ರಂಥದ ಕನ್ನಡ ತರ್ಜುಮೆ ಕ್ರಯ —ವಿ ಪಿ ಸಹ 1 0 0 (3) ಬೌದ್ಧಾವತಾರ — ಭಗವಾನ್ಬುದ್ಧನ ಆಶ್ಚರ್ಯಕರವಾದ ಜನ್ಮ ಚರಿತ್ರೆ ವಿ ಪಿ ಸಹಿತ 0 6 0

ವಿಳಾಸಗಳು —(1) ಬಿ ಅಶ್ವತ್ಥನಾರಾಯಣಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರ್ (2) ಶ್ರೀವಾಣೀವಿಳಾಸ ಬುಕ್ ಡಿಪೋ, ಮೈಸೂರ್, (3) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರ್ (4) ದಿ ಜನರಲ್ ಏಜನ್ಸಿ, ಮೈಸೂರ್

ನಾಜೂಕಾದ ಗಡಿಯಾರ ಬಹು ಸುಲಭ ಕ್ರಯ !!

ಸ್ಪ್ರಿಂಗ್ ಇಂಗ್ಲೀಷು ಲಿವರ್ ವಾಚು.

ಇದರ ಕ್ರಯ 6 ಬಹುಮಾನ ಸಮೇತ ರೂ 3–8–0 ಮಾತ್ರ

ಇದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರು ಕೆಲಸದಿಂದಲೂ ನಾಜೂಕಾದ ಮತ್ತು ಬಲವಾದ ಯಂತ್ರಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗತಾನೆ ಹೊಸದಾಗಿ ತರಿಸಿರುತ್ತೇವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಎಂಗ್ರೇವಾದದ್ದು ಸುಂದರವಾದದ್ದು ಅನೇಕ



ವರುಷ ಪರಿಯಂತರ ಬಾಳಿಕೆ ಬರುವಂತ ಗಡಿಯಾರ [77 16]

ಇದರ ಆರು ಬಹುಮಾನಗಳ ತಪಸೀಲು—1 ಸುಂದರವಾದ ಗಡಿಯಾರದ ಸರಪಣಿ 2 ದಿಕ್ಕನ್ನು ತೋರಿಸುವ ಉತ್ತರಮುಖಿ 3 ನಾಜೂಕಾದ ಕರವಸ್ತ್ರ 4 ಕ್ಯಾಲೆಂಡರ್ ಎಂಬ ಪಂಚಾಂಗಪತ್ರ 5 ಸ್ವರ್ಣಕಾರದ ಉಂಗರ 6 ಬಲವಾದ 6 ಸ್ಟೀಲ್ ಮುಳ್ಳು

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ —

ಬಿ ಆರ್ ವೆಂಕಟರಮಣ ಅಂಡ್ ಕಂ,
ನಂಬರು 7 ಕೊಪ್ ವೇಂಕಟಾಚಲಯರ್ ವೀದಿ, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

3—4—1914 ರಿಂದ 10— 4—1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	2	1	0	0
ಮೈಸೂರು	,	1	1	0	0
ಬೆಂಗಳೂರು	ಡಿಸ್ಟ್ರಿಕ್ಟು	1	1	0	0
ಮೈಸೂರು	,,	2	3	0	0
ಕೋಲಾರ್	,,	1	1	64	44
ಕೋಲಾರ್ ಚಿನ್ನದ ಗಣಿಗಳು		1	2	0	0
ತುಂಕೂರು	ಡಿಸ್ಟ್ರಿಕ್ಟು	0	0	1	1
ಹಾಸನ	,,	1	1	0	0
ಚಿತ್ರದುರ್ಗ	,,		0	0	0
ಕಡೂರ್	,	1	1	0	0
ಶಿವಮೊಗ್ಗಾ	,,	14	7	0	0
	ಜುಮ್ಲಾ	19	22	65	45

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೇ ವಸಂತಋತೌ ಚೈತ್ರ ಬಹುಳ ಚತುರ್ದಶಿ ಶುಕ್ರವಾರದಿಂದ ವೈಶಾಖ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಏಪ್ರಿಲ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ ತೇದಿ
24	ಶುಕ್ರ	‡	ಚತುರ್ದಶಿ	17 14	ರೇವತಿ	23 57	12
25	ಶನಿ	,	ಅಮಾವಾಸ್ಯೆ	22 06	ಅಶ್ವಿನಿ	30 2	13
26	ಭಾನು		ಪಾಡ್ಯಮಿ	27 21	ಭರಣಿ	36 41	14
27	ಸೋಮ	§	ಬಿದಿಗೆ	31 44	ಕೃತ್ತಿಕೆ	42 7	15
28	ಮಂಗಳ	*	ತದಿಗೆ	34 1	ರೋಹಿಣಿ	46 24	16
29	ಬುಧ	†	ಚವುತಿ	37 25	ಮೃಗಶಿರ	49 33	17
30	ಗುರು	,	ಪಂಚಮಿ	36 55	ಆರಿದ್ರಾ	51 25	18

‡ ಸರ್ವತ್ರ ಕರಗದ ಅಮಾವಾಸ್ಯಾ, ಶ್ರೀ ವೈಶ್ವಾನರಾಹಜಯಂತೀ, ಶ್ರೀರಂಗದ ರಂಗನಾಥಸ್ವಾಮಿ ರಥ ,, ಶೂನ್ಯತಿಥಿ ಪ್ರಥಮಾ ತಿಥಿ, ಮಳೆ ನಕ್ಷತ್ರ– ಭರಣಿ 1 ನೇ ಪಾದ § ಚಂದ್ರೋದಯ, ಜವಾದಿಸಾನ ಚಂದ್ 1 * ಪಾರ್ವತೀ ಗೌರೀವ್ರತ, ಪರಶುರಾಮಜಯಂತಿ † ಶ್ರೀಭಾಷ್ಯಕಾರ್ರ ರಥ, ಶ್ರೀರಂಗದಲ್ಲಿ ಕೋದಂಡರಾಮಸ್ವಾಮಿ ಉತ್ಸವಾರಂಭ ,, ಲಾವಣ್ಯಗೌರೀ ವ್ರತ, ಶ್ರೀಭಾಷ್ಯಕಾರ್ರ ತಿರುನಕ್ಷತ್ರ, ಶಂಕರಜಯಂತಿ, ಸಾಲಿಗ್ರಾಮದಲ್ಲಿ ಯೋಗಾನೃಸಿಂಹಸ್ವಾಮಿ ರಥ, ಮಳೆ ನಕ್ಷತ್ರ—ಭರಣಿ 2 ನೇ ಪಾದ

Printed and Published by the Rev H GULLIFORD, Proprietor and Manager, Wesleyan Mission Press, Mysore 28/4/1914

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು ಸರ್ ೧೯೧೪ ನೇ ಇಸವಿ ಏಪ್ರಿಲ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೪೮

ಸ್ತ್ರೀಯರ ಭೂಷಣವು!!!

ಮೃದುವಾದ ಗುಂಗುರು ಗುಂಗುರಾಗಿರುವ, ನೀಳವಾದ ಕಪ್ಪಾದ ಕೇಶಪಾಶವನ್ನು ಯಾವ ನಾರಿಯು ತಾನೇ ಬಯಸುವದಿಲ್ಲ? ಇಂತಹ ಕೇಶಪಾಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡಲು ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಅಧಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಉಪಯೋಗಕರವಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುವುದರಿಂದ ಮಸ್ತಿಷ್ಕದ ಬೇಗೆಯು ತಗ್ಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇವನ್ನು ತೀಡಿದ ತರುವಾಯ ಬಿಳಿಕೆಯಿಂದ ಬಿಡುಗಡೆ ಹೊಂದಿ, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗಿರಾಕಿಗಳ ಉತ್ತಮೋತ್ತಮವಾದ ಯೋಗ್ಯತಾಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ. ಸೇಗಿನಪಾಳೆಯದ ಬಂಧುಗಳು ಬಸವನಗುಡಿ, ಬೆಂಗಳೂರು ಇವರು ಕೆಲದಿನಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಸುವುದಕ್ಕೆ ಸರ್ವೋತ್ಕೃಷ್ಟವಾದುದೊಂದು ಸಾಧನವಾಗಿರುತ್ತದೆ. ಅದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವುದು. ಒಂದು ಸೀಸೆಯ ಕ್ರಯ ರೂ 1 0 0 ಅಂಚೆ 0 1 0 ಬೇರೆ, 3 ಸೀಸೆಗಳ ಕ್ರಯ ರೂ 2 10 0, ಅಂಚೆ 0 7 0 ಬೇರೆ.

ಸೂಚನೆ — ಅನೇಕ ಮರ್ಯಾದಾಹೀನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕ್ರಯದಿಂದ ತಮಗೆ ಅತ್ಯಲ್ಪ ಸಹಾಯ ದೊರಕುತ್ತದೆಂದು, "ಕಾಮಿನಿಯಾ ತೈಲ"ವನ್ನು ಕೇಳಿದರೆ, ಇದು ಅದಕ್ಕಿಂತ ಉತ್ತಮವಾದ್ದು ಇದೆ ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ಬೇಕೆಂದು ಕೇಳಿರಿ. ಅವರಲ್ಲಿ ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜೆಂಟರಿಂದಲೇ ಕೊಂಡುಕೊಳ್ಳುವ ಏರ್ಪಾಡು ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಅಸಲಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ ಮತ್ತು ಆಶ್ಚರ್ಯಕರವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉಷ್ಣವಾದಿಕೆಯು ಆವರಿಸಿದಂತಾಗುತ್ತದೆ. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19 16

ಸಣ್ಣ ಸೀಸೆಯ ಬೆಲೆ ರೂ 0 8 0 ಒಂದು ಡ್ರಾಮಿನ (ಮಧ್ಯಮ) ಸೀಸೆ ರೂ 0 12 0 ಅದರ ಎರಡರಷ್ಟು ದೊಡ್ಡ ಸೀಸೆಯ ಬೆಲೆ ರೂ 2-0 0 ಅಂಚೆಯ ವೆಚ್ಚ ಬೇರೆ ರೂ 0 4 0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾಡಿಗೆಗಳು ಡಜನ್ ಒಂದಕ್ಕೆ 0 12 0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ

ಏಜೆಂಟ್, ಪಿ. ಉಡುಪ ಮಾರ್ಟ್, ಮಂಗಳೂರು

ನಂ — ೯೨೨೩ — ಬಹು ಸುಲಭ ಕ್ರಯ!!

ಸ್ವಿಸ್ ಇಂಗ್ಲಿಷ್ ಲಿವರ್ ವಾಚು.

ಇದರ ಕ್ರಯ 6 ಬಹುಮಾನ ಸಮೇತ ರೂ 3 8 0 ಮಾತ್ರ

ಈ ವಾಚುಗಳು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರು ಕೆಲಸದಿಂದಲೂ ಸ್ವಾಭಾವಿಕ ಮತ್ತು ಬಲವಾದ ಪ್ರಮಾಣಗಳಿಂದಲೂ ತಯಾರಾಗಿ ಒಂದಿರುತ್ತದೆ. ಈಗತಾನೆ ಹೊಸದಾಗಿ ತರಿಸಿರುತ್ತೇವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಬಲವಾದ ಕೇಸ್ ಉಳ್ಳದ್ದು. ಸುಂದರವಾದದ್ದು. ಅನೇಕ ವರುಷ ಬಾಳಿಕೆ ಬರುವಂತ ಗಡಿಯಾರ.



[77 47]

ಇದರ ಆರು ಬಹುಮಾನಗಳ ತಪಸೀಲು—1 ಸುಂದರವಾದ ಗಡಿಯಾರ ಸರಪಣಿ, 4 ದಿಕ್ಕನ್ನು ತೋರಿಸುವ ಉತ್ತರಮುಖಿ, 3 ನಾಜೂಕಾದ ಕರವಸ್ತ್ರ, 1 ಬಾಟಲು ಪರಿಮಳದ್ರವ್ಯ, 1 ಸಡಗರವಾದ ಉಂಗುರ, 6 ವಿವಿಧವಾದ 6 ಸ್ಟೀಲ್ ಪೆನ್ನುಗಳು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ಡಿ. ಪಿ. ವೆಂಕಟರಮಣ ಅಂಡ್ ಕಂಪನಿ,

ನಂಬರು 7 ಕೂಲಿ ವೆಂಕಟಾಚಲ ಮೈಯರ್ ಬೀದಿ, ಮದರಾಸು.

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚೆಕ್ಕುಗಳು—ಶೀರೆಗಳು, ಖಣಗಳು

ಹೊಸ ನಮೂನೆಯ ತರಹವಾರಿ ಚೆಕ್ಕುಗಳು, ಶೀರೆಗಳು, ಖಣಗಳು ಕಿರಗೆಗಳು, ಒಳ್ಳೆರಯಾಗಿಯೂ ಬೇಲುಗಳಲ್ಲಿಯೂ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು.

ಹಣ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕಾದು ಕೋರಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಅವಶ್ಯಕವಿಲ್ಲ.

ಸರಕುಗಳ ಮೇಲಿನ ಸಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು. ಸೋಲಾಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಲಾಭವನ್ನು ಹೊಂದುತ್ತಿರುವರು. [28-11]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

169, ಕಿಲಾರಿ ರೋಡ್ (ಕುಂಬಾರಗರ ಪೇಟೆ), ಬೆಂಗಳೂರು ಸಿಟಿ.

ಹೊಸ ವರುಷ! ಹೊಸ ಪುಸ್ತಕಗಳು!! ಹೊಸ ಏರ್ಪಾಟು!!!

ಕಡಮೆ ಕ್ರಯ! ಕೆಲವು ದಿನಗಳ ಮಟ್ಟಿಗೆ!! ಕ್ರಯ ಕಡಮೆ!!!

ಅವಧೀ ಮೀರಿದ ಬಳಿಕ ಅಲ್ಪಕ್ರಯಕ್ಕೆ ದೊರೆಯಲಾರದು. ಬೇಗ ಬರೆದು ತರಿಸಿರಿ!!!

ವಂಗಭಾಷ (ಬಂಗಾಳಿ)ಯಿಂದ ತಿಳಿಗನ್ನಡಕ್ಕೆ ಪರಿವರ್ತನವಾದ ಸುಪ್ರಸಿದ್ಧ

ಐತಿಹಾಸಿಕ ಕಾದಂಬರಿಗಳು! ಮನೋಹರವಾದ ಉಪನ್ಯಾಸಗಳು!!

ಸರ್ವರಿಗೂ ಇಂಪಾಗಿರುವ ನಾವಲುಗಳು!!!

ಬಿಕರಿಗೆ ಸಿದ್ಧ!! **ಶಕ್ತಿ.** ಬಿಕರಿಗೆ ಸಿದ್ಧ!!!

"ಭಾರತಿ" ಎಂಬ ವಂಗಭಾಷೆಯ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಸ್ವರ್ಣಕುಮಾರಿ ದೇವಿಯಿಂದ ವಂಗಭಾಷೆಯಲ್ಲಿ "ಫುಲೇರ್ ಮಾಲಾ" ಆಂಗ್ಲಭಾಷೆಯಲ್ಲಿ 'Fatal Garland' ಎಂಬ ಗ್ರಂಥಗಳು ರಚಿಸಲ್ಪಟ್ಟವು. ಅತ್ಯಲ್ಪಕಾಲದಲ್ಲಿ ಅನೇಕ ಭಾಷೆಗಳಿಗೆ ಪರಿವರ್ತನವಾಗಿರುವಿಕೆಯು ಇವುಗಳ ಪ್ರಾಶಸ್ತ್ಯವನ್ನು ಸೂಚಿಸುತ್ತದೆ. ಕನ್ನಡ ಭಾಷೆಯಲ್ಲಿ ಇಂಥ ಉತ್ತಮಗ್ರಂಥಗಳಿಲ್ಲದೆ ಇರುವ ಲೋಪವನ್ನು ಕುರಿತು ಮೂಲಗ್ರಂಥವನ್ನು ಸಂಪೂರ್ಣವಾಗಿ ಭಾಷಾಂತರ ಮಾಡಿದೆ. ಇದರಲ್ಲಿ ಮಹಮ್ಮದೀಯ ಸಾಮ್ರಾಜ್ಯ ಸಿಂಹಾಸನವನ್ನು ಹಿಂದೂ ಸಾಮಂತ ರಾಜನೇರಿ ಚಕ್ರವರ್ತಿಯಾಗುವಿಕೆಯೂ, ರಾಜಪುತ್ರ ಯುವಕನೊಬ್ಬನು ಮಹಮ್ಮದೀಯಾಂಗನೆಯ ಕೈ ಹಿಡಿದು ಹಿಂದೂ ಮಹಮ್ಮದೀಯ ಐಕ್ಯತೆಯಾದುದೂ, ಅತ್ಯದ್ಭುತ ವರ್ಣನೀಯವು. ಕಥಾ ನಾಯಕಿಯಾದ "ಶಕ್ತಿ"ಯ ಧೈರ್ಯ ಸ್ಥೈರ್ಯ ಸಾಹಸಗಳು ಎಂಥವರ ಮನವನ್ನಾದರೂ ಆಕರ್ಷಿಸದಿರದು. ಒಟ್ಟಿನಲ್ಲಿ ಅನುರಾಗ ವಿಹೀನವಾದ ದಾಂಪತ್ಯದ ಪರಿಣಾಮ ಫಲವು ಚಿತ್ರಿತವಾಗಿ, ಸ್ನೇಹಾನುರಾಗಸಹಿತ ದಾಂಪತ್ಯದ ಪರಿಣಾಮವನ್ನು ಸೂಚಿಸುತ್ತಿದೆ. ಆಬಾಲವೃದ್ಧ ಸ್ತ್ರೀಪುರುಷರೆಲ್ಲರೂ ಓದತಕ್ಕುದು. ಬೇಗ ಬರೆಯಿರಿ.

ಕ್ರಯ ಹನ್ನೆರಡಾಣೆ ಮಾತ್ರ.

ಅಚ್ಚಾಗುತ್ತಿದೆ! ಅಚ್ಚಾಗುತ್ತಿದೆ!! ಅಚ್ಚಾಗುತ್ತಿದೆ!!!

ಐದುನೂರು ಪುಟಗಳ ಸುಮಾರಾಗುವ ದೊಡ್ಡ ಪುಸ್ತಕವು!!!

ಅಚ್ಚು ಮುಗಿಯುವುದರೊಳಗೆ ಅಪೇಕ್ಷಿಸುವರಿಗೆ ಅಂಚೆ ವೆಚ್ಚ ಸೇರಿ

ಒಂದೇ ಒಂದು ರೂಪಾಯಿಗೆ ಕೊಡಲ್ಪಡುವುವು. ವಿಳಾಸ ಕೊಡಿ!!!

THE SLAVE GIRL OF AGRA.

ಮಾಧವೀಕಂಕಣಂ

[84-3]

ಎಂಬೀ ಗ್ರಂಥವು ಕೀರ್ತಿಶೇಷರಾಗಿ ಕೈಲಾಸವಾಸಿಗಳಾದ ಬರೋಡಾ ರಾಜ್ಯದ ಮುಖ್ಯ ಮಂತ್ರಿ ಶ್ರೀಯುತ ರಾಮೇಶಚಂದ್ರದತ್ತರವರಿಂದ ವಂಗ (ಬಂಗಾಳಿ) ಭಾಷೆಯಲ್ಲೂ ಆಂಗ್ಲ (ಇಂಗ್ಲಿಷ್) ಭಾಷೆಯಲ್ಲೂ ರಚಿಸಲ್ಪಟ್ಟಿತು. ಇವರ ಗ್ರಂಥಗಳೆಲ್ಲವೂ ದಿಗಂತಯಶೋವಿರಾಜಿತಗಳು. ಈ ಮಹಾಮಹನ ಚಂದ್ರಿಕೆ ಎಷ್ಟಾನವೂ ಅನುಪಮೇಯವಾಗಿ ಬಹುಜನ ಸೇವ್ಯವೆಂಬುದಕ್ಕೆ ಅನೇಕ ಗ್ರಂಥಗಳು ಹಿಂದೀ, ಮಹಾರಾಷ್ಟ್ರ, ಆಂಧ್ರವೇ ಮುಂತಾದ ಪ್ರಚಲಿತ ಭಾಷೆಗಳಿಗೆ ಪರಿವರ್ತನವಾಗಿರುವಿಕೆಯೇ ದೃಷ್ಟಾಂತವು. ಅನುಪಮಾನ ರಾಜನೀತಿಸಂಪನ್ನನೂ, ಮಹಮ್ಮದೀಯ ಸಾಮ್ರಾಜ್ಯ ನಿರ್ಮಾಣಧುರೀಣನೂ ಆದ ಅಕ್ಬರು ಚಕ್ರವರ್ತಿಯ ಮತ್ತು ಆತನ ಪ್ರಮುಖ ಮಂತ್ರಿವರ್ಯರ ತಾತ್ಕಾಲಿಕ ವೈದೇಶಿಕ ವ್ಯವಸ್ಥೆಗಳ ಚರಿತ್ರೆಗಳನ್ನು ಹೃದಯಂಗಮವಾಗಿ ಈ ಗ್ರಂಥವು ಬೋಧಿಸುವುದು. ಅಂತಃಪುರ ವಾಸಿಯರಲ್ಲಿ ಅಗ್ರಗಣ್ಯೆಯೂ, ಅನುಪಮಸುಂದರಿಯೂ, ತಾರ್ತಾರಯುವತಿಯೂ ಆದ "ಜಲೇಖಾ"ಯ ಸಾಹಸಗಳು ಅತಿ ವಿಚಿತ್ರವಾಗಿ ವಾಚಕರ ಮನವನ್ನಾಕರ್ಷಿಸುತ್ತ ಪುಸ್ತಕವಾದ್ಯಂತವಾಗಿ ಓದಿದಲ್ಲದೆ ಬಿಡದು. ಆದರಿಂದಲೇ ಈ ಪುಸ್ತಕಕ್ಕೆ "ತಾರ್ತಾರದಾಸೀ ಸುಂದರಿ" ಯೆಂಬ ಹೆಸರುಂಟಾಯಿತು. ಸುಪ್ರಸಿದ್ಧ ಯಶೋವಿರಾಜಿತನೂ, ದೇಶೋದ್ಧಾರಕನೂ, ಕವಿಶಿರೋಮಣಿಯೂ ಆದ ಶ್ರೀಯುತ ಬಂಕಿಂಚಂದ್ರ ಚಟೋಪಾಧ್ಯಾಯನ ಗ್ರಂಥಮಾಲೆಗೆ ಈ ಗ್ರಂಥವು ಎಷ್ಟುಮಟ್ಟಿಗೂ ಹಿಂದುಳಿಯಲಾರದು. ವಾಚಕವರ್ಗವಿದನ್ನು ಪರಿಗಣಿಸಲು ಪ್ರಾರ್ಥಿತರು.

ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಪಂಗಿರಾಮ, ಅಥವ ಎಸ್. ಆರ್. ಭಾರತಿ, ಸಂಪಾದಕ, "ಸವಿನುಡಿ" "ಭಾಷಾನಿಧಿ",

ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮನೆಗಳಲ್ಲೂ, ಕಲಿಯತಕ್ಕ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ವಿವರಿಸಿರುವ ಈ ಪುಸ್ತಕದೊಳಗೆ ಶಾಸ್ತ್ರ ರೀತಿಯಲ್ಲಿ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು ಇಂಥಾ ಪುಸ್ತಕ ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ವಿಧಾನಗಳನ್ನೂ, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಪದಾರ್ಥ ಮತ್ತು ಮಿಶ್ರಗಳನ್ನೂ ಕಲಿತುಕೊಳ್ಳಬಹುದು ಈ ಪುಸ್ತಕದಲ್ಲಿ 38 ಚಿತ್ರಗಳೂ, 30 ನಕ್ಷೆಗಳೂ ಇವೆ

ಕ್ರಯ 1 ಪುಸ್ತಕಕ್ಕೆ ರೂ 2, ಪೋಸ್ಟೇಜ್ ಬೇರೆ.

ವಿಳಾಸ—ರಾವ್ಸ್ ಟೈಲರಿಂಗ್ ಕಾಲೇಜ್,

[15 12] 30 ಪಿಕೆಟ್ ರೋಡ್, ಕಾಳ್ಬಾದೇವಿ, ಬೊಂಬಾಯಿ

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್–ಅಜ್ಮೀರ್ ಬ್ರಾಂಚಾಫೀಸ್–ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 47] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

S U. N. & Co.,

BENARES CITY, U P

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೇಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುವುದು [69 7]

ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಸುಖಕರ, ಆನಂದ,
ಬಹಳ ಅವಶ್ಯ.
ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷ ಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸಿಗ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು

(2) ಸೇದುವವರಿಗೆ ಪರಪ್ರಸಾದವಾದದ್ದು

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟಿದಂತೆ ಅಡ್ಡಿಮಾಡುತ್ತದೆ

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ [73–7]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ

ಮುತ್ತುಗಳಿರುವ 15 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಕಾಸು

,,	90	,,	,,	,,	,, 4	,,
,,	200	,,	,,	,,	,, 7	,,
,,	600	,, ಸುಂದರವಾದ ಟಿನ್ ಡಬ್ಬಾ			9	,,
,,	80	,,	,,	,,	, 4	,,
,,	100	,, ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು

ನಮ್ಮ ವಿಳಾಸ—ಸೆಶಿಂತಾನ ಡಿಪೋ,

ಬೊಂಬಾಯಿ 3;

ಅಥವಾ. ಬಿ ಸಿ. ಷಾ ಕಂಪೆನಿ,

509 ಮಿಂಟ್ ಬೀದಿ, ಮದರಾಸ್.

CHAMBERLAIN'S COLIC, CHOLERA
AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-18

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು ಶೀತ, ಚರ್ಮ ವ್ಯಾಧಿ, ಹಲ್ಲುನೋವು ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಾತ್ರಿಯಾಗಿ ನಿಲ್ಲುವವು ರಿವಾಜಿ ವಿಷಧಗಳನ್ನು ಪಡಕೊಳ್ಳಬೇಡಿರಿ ಈ ಸಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯ ಲೇಬಲ್ ಹಚ್ಚಿ ಮಾರುತ್ತೇವೆ ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತು 0 9-0 ಡಜನ್ 1 5 4 ವಿ ಪಿ ಪ್ರತ್ಯೇಕ ಗಜಕರ್ಣದ ಮುಲಾಮು 0 6 0 ದಂತಮಂಜನ 0 2 0 ಮೋಹಿನಿ ತೈಲ 0 12 0 ಖಜ ಮುಲಾಮು 0 3 0 ಜುಲಾಬು ಮಾತ್ರೆ 0 6 0 ಸುಂದರಿ ಮುಲಾಮು 0 8 0 ಕ್ಯಾಟಲಾಗಿಗೆ ಬರೆಯಿರಿ [62 8]

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

MELLIN'S FOOD

TRADE MARK TRADE MARK

ಮೆಲಿನ್ಸ್ ಆಹಾರವು [4 18]

ಕೈಸೋಕದ ಮಾಡಿದೆ ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಹಲ್ಲುಬರುವ ತನಕ ಎಲ್ಲರಿಗೂ ಸಂಪೂರ್ಣವಾದ ಆರೋಗ್ಯವನ್ನೂ ವಿಶೇಷವಾದ ಬಲವನ್ನೂ ಕೊಡುತ್ತದ

ಮೆಲಿನ್ಸ್ ಆಹಾರದ ಮಾದರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರ —

Messrs OAKES & Company, Mount Road, Madras

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪ್ರೊಫೆಸರ್ ಬೇಸ್ಲರ್
ಇಲೆಕ್ಟ್ರೊ ಪೆಯಿನಾಡ್ರೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವುದರಿಂದಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಬರುವುದರಿಂದಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂದೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯ ಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೋಪೆಯಿನಾಡ್ರೈನ್ ತೈಲದಿಂದ ಗುಣಪಡುವ ವ್ಯಾಧಿಗಳು —

ತಿಮಿರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದದ್ದು, ಕರಿಸಶ್ವಾಸ, ಪಸುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳ) ಕೃತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಬೇಗ ಗುಣವಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12–17]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು

ಬುಡ್ಡಿಯ ಕ್ರಯ ರೂ 1–8–0 ವಿ ಪಿ ಖರ್ಚು 0–4–0 ಏಜಂಟರು ಬೇಕು

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

WANTED.

For a large Coffee Estate in South Mysore a capable and energetic Writer with sufficient knowledge of English to keep simple accounts should be able to supply labour Good pay for a good man

Apply to

X C/o VRITTANTA PATRIKE, MYSORE

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು · ರೂ 1,15,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸ್ಪೆಷಲ್ ಪೇಕ್ಟರ್ ಸವರು ಈ ವಿಳಾಸದಾರರಿಗೆ ಬರೆದುಕೊಂಡವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್ ನಂಜಪ್ಪನವರು ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[191 31] ಆಫೀಸ್ ಬ್ರಾಂಚ್ ಸೆಕ್ರೆಟರಿ, ಮದರಾಸ್

BRAHMAPPA TAVANAPPANAVAR,

Merchant & Commission Agent

Agent to Messrs Currimbhoy Ebrahim & Co's Mills BOMBAY

ನಾವು ಮುಂಬೈ ಮಸರ್ಸ್ ಕರೀಂಭಾಯ್ ಇಬ್ರಾಹಿಂ ಅಂಡ್ ಕಂಪೆನಿಯ ಬಾಬತು, ಮಸರ್ಸ್ ಫಜುಲಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್ ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸಂಸ್ಥಾನದಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿದ್ದೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಬೋರೂದಳ್ಳಾಳಿ, ಮೊಕ್ತಾ ಮಟ್ಟು, ಗನ್ನಿಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ಖರ್ಚು ಉಳಿಯುತ್ತೆ ಹೊಸ ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ನಾಲ್ಕು ಮೇಲೆ ರೇಟಿನ 1 ರೂಪಾಯಿ ಲಾಗಾಯ್ತು 1½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ [97 2]

ನಮ್ಮ ಓತ್ರುವ ಏಜಂಟರ ವರ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಮೊಬೈಲ್ ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡುತ್ತ ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಸಹ ದೊರೆಯುತ್ತೆ

ಬಟ್ಟೆಗಳನ್ನು ಮಾರಾಟಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು

ಹೆಡ್ ಆಫೀಸು ಬ್ರಹ್ಮಪ್ಪ ತವನಪ್ಪನವರ್, ಮರ್ಚಂಟ್ ಅಂಡ್ ಕಮಿಷನ್ ಏಜಂಟ್ ದಾವಣಗೆರೆ ಬ್ರಾಂಚ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ



ಸ್ವಾಮಿ ಮಹೋತ್ಸವದ ಕೈ ಗಡಿಯಾರ [99 1]

ಅರ್ಧ ಕ್ರಯ ರೂ 1–14–0

ಒರುವ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 11-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ಏ ಕೃಷ್ಣಸ್ವಾಮಿ ಮೊದಲಿಯಾರ್, ನಂ 27 ಒಂದರ್ ಬೀದಿ, ಜಿ ಟಿ, ಮದರಾಸು

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ ಕನ್ನಡ ಟೆಕ್‌ಸ್ಟಿನ ನೋಟ್ಸು.

ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3, 50 ಕ್ಕೆ 8, 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ ಕ್ರಯ 2 ಆಣೆ [49 11]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ ಡಿಟೊ 5 ನೇ ಪುಸ್ತಕದ ನೋಟ್ಸು 1 ಆಣೆ ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ Notes on "Tanglewood Tales," English Lower Secondary Text for 1915—As 3

ಯನ್. ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಜೈನರವರ ಸ್ವದೇಶೀ ಬಾಮ್.

ರಜಿಸ್ಟರಾದ ಟ್ರೇಡ್ ಮಾರ್ಕು

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ನೆಗಡಿ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆ ನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ



ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ ಪಡ್ಡಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ ಯುರೋಪ್, ಇಂಡಿಯಾ ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದ ವೆ ಲಿಂಗುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯುಕ್ತಿಯಿಂಥಾ ಮದ್ದು ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟುಕೊಂಡಿರಬೇಕು ಇದು ಚಿನ್ನದಂಥಾ ಔಷಧ ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ ಸೂರ್ಯಕಿರಣಗಳ ರಜಿಸ್ಟರ್ ಮಾರ್ಕು ಇರುವುದನ್ನು ನೋಡಿ ಕೊಂಡುಕೊಳ್ಳಿ ನಕ್ಲಿ ಔಷಧವನ್ನು ಕೊಂಡು ಮೋಸಹೋಗಬೇಡಿ ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ 3 ಕ್ಕೆ ರೂ 1-11 0 ವಿ ಪಿ ಬೇರೆ ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ [25 15]

ವಿಳಾಸ—ಜಿ ಗುಲಾಬ್ ಚಂದ್ ಪವಾರ್,
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್ ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs 1,00,000

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus, which will explain to you the mode of the working of the present day provident companies in India and enables you to select a good institution where your hard earned money will be safe

Absolute Security, Attractive Schemes Soundest Principles

Wanted Chief Agents and agents throughout India on Commission and Salary For prospectuses etc please apply to

Mr M L NAGANNAH,
Managing Agent, MYSORE

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs 1,00,000

(INCORPORATED UNDER THE MYSORE COMPANIES REGULATION No III OF 1895)

BANKING – Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses etc, please apply to

Mr M L NAGANNAH,
Managing Agent, MYSORE.

[1-39]

ದಿ ಜನರಲ್ ಏಜನ್ಸಿ, ಮೈಸೂರು

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31, 27 ನೆ ಜನವರಿ 1914 ರಲ್ಲಿ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು—ಕಿಂಡರ್‌ಗಾರ್ಟನ್ ಕ್ರಮ 1-4-0, ಪಂಚತಂತ್ರ 0 8-0, ಕಥಾಮಂಜರಿ 0 6-0, ಕಥಾವಳಿ 0-5 6, ರಾಬಿನ್‌ಸನ್ ಕ್ರೂಸೋವಿನ ಸಾಹಸಕಾರ್ಯ 0-4-0, ಗಲಿವರನ ದೇಶಸಂಚಾರ 0 3-0, ಅಲ್ಲಾವುದೀನ್ ಅದ್ಭುತದೀಪ 0-6 0, ಸಿಂದಬಾದ್ ನಾವಿಕ 0-4-0, ಈಸೋಪನ ನೀತಿಕಥೆಗಳು 0 4 0 ಇವುಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡು ಕೊಡಬೇಕು 1915 ನೆಯ ಲೋವರ್ ಸೆಕಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು, ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ [23 16]

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಏಪ್ರೆಲ್ 16 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	ರೂ	9,26 575
,, (2) ಡಿಪಾಜಿಟ್ಟುಗಳು	,,	12,10,240
,, (3) ಇತರೆ	,,	22,104
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	21,58,919

ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	5,75,863
,, (2) ಖಾತೆ ಮತ್ತು ಇತರ ಸಾಲಗಳು	,,	11,61,351
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,36,939
,, (4) ಇನ್‌ವೆಸ್ಟ್‌ಮೆಂಟುಗಳು	,,	1,00,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	1 61,965
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	7,085
,, (7) ಇತರೆ	,,	15,716
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	21,58,919

ಡಬ್ಲಿಯು ಸಿ ರೋಸ್, ಮ್ಯಾನೇಜರ್

ಕೋಆಪರೇಟಿವ್ ಕಾನ್ಫರೆನ್ಸ್, ಹರಿಹರ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪ್ರಥಮ ಕೋಆಪರೇಟಿವ್ ಕಾನ್ಫರೆನ್ಸ್ ಮಹಾಸಭೆಯು ತಾ 12ರ ಲಾಗಾಯ್ತು 15ರ ವರಿವಿಗೆ ಹರಿಹರದಲ್ಲಿ ನಡೆಯಿತು. ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರೂ, ಕೋಆಪರೇಟಿವ್ ಸೊಸೈಟಿಗಳ ರಜಿಸ್ಟ್ರಾರ್ ಸಾಹೇಬರೂ, ಡಾಕ್ಟರ್ ಕೋಲ್‌ಮನ್ ಸಾಹೇಬರೂ ಸಹಾ ಅಗ್ರಾಸನವನ್ನು ವಹಿಸಿದ್ದರು ಈ ಡಿಸ್ಟ್ರಿಕ್ಟಿನ 8 ತಾಲ್ಲೂಕುಗಳ ಅಮಲ್ದಾರರುಗಳೂ, ದಾವಣಗೆರೆ ಮತ್ತು ಚಿತ್ರದುರ್ಗದ ಸಬ್ ಡಿವಿಜನ್ ಅ॥ ಕಮಿಷನರುಗಳೂ, ಚಿತ್ರದುರ್ಗದ ಸಿವಿಲ್ ಸರ್ಜನರೂ, ಇಂಜನಿಯರೂ, ಅಗ್ರಿಕಲ್ಚರ್ ಇನ್ಸ್‌ಪೆಕ್ಟರೂ, ಚಿತ್ರದುರ್ಗದ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರೂ, ಎಕ್ಸಾಮಿನ್ ಇಲಾಖೆಯವರೂ, ಎಗ್ರಿಕಲ್ಚರ್ ಇಲಾಖೆಯವರೂ, ಸ್ಕೂಲ್‌ಗಳ ಇನ್ಸ್‌ಪೆಕ್ಟರುಗಳೂ, ಚಿತ್ರದುರ್ಗದ ಲಾಯರುಗಳೂ, ಈ ಡಿಸ್ಟ್ರಿಕ್ಟಿನ 18 ಸೊಸೈಟಿಗಳ ಪೈಕಿ ಅನೇಕ ಸೊಸೈಟಿಗಳ ಸೆಕ್ರೆಟರಿಗಳು ಮುಂತಾದ ಡೆಲಿಗೇಟರುಗಳೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ, ಬಾರಿ ವರ್ತಕರೂ, ಕೃಷಿಕರೇ ಮುಂತಾದವರೂ, ಪಟೇಲ್ ಶ್ಯಾನುಭೋಗರುಗಳೂ, ಸಹಾ ಬಂದಿದ್ದರು ಮೂರು ದಿನಗಳು ಬೆಳಿಗ್ಗೆ ಮತ್ತು ಮಧ್ಯಾಹ್ನ ಸಹಾ ಮೀಟಿಂಗ್ ನಡೆಯಿತು ಕಾನ್ಫರೆನ್ಸ್ ಪರವಾಗಿ ಕೋಆಪರೇಟಿವ್ ಸೊಸೈಟಿಗಳ ಅಭಿವೃದ್ಧಿ ವಿಷಯವಾದ 21 ತರಹೆಯ ಚರ್ಚೆಗಳೂ ಸಾವಧಾನವಾಗಿ ಚರ್ಚಿಸಲ್ಪಟ್ಟು ರೆಸೊಲ್ಯೂಷನ್ ತೀರ್ಮಾನವಾಯ್ತು ಎಲ್ಲಾ ಸೊಸೈಟಿಯವರೂ ಅವರವರ ಸೊಸೈಟಿಗಳ ಜಮಾಬಂದಿ ಮುಂತಾದ ವಿಷಯಗಳನ್ನು ಕುರಿತು ತಯಾರಿಸಿ ತಂದಿದ್ದ ಸುಲಭ ರಿಪೋರ್ಟುಗಳು ಓದಿ ಒಪ್ಪಿಸಲ್ಪಟ್ಟವು ಸೊಸೈಟಿಗಳ ಇನ್ಸ್‌ಪೆಕ್ಟರುಗಳು ಹೊಸ ಏರ್ಪಾಡುಗಳ ವಿಷಯವಾಗಿ ಅನೇಕ ಉಪನ್ಯಾಸಗಳು ಓದಿ ಹೇಳಿದರು ಮತ್ತು ಸೊಸೈಟಿಗಳವರು ಅವರಿಗೆ ತೋರಿಬಂದ ಕುಂದುಕೊರತೆಗಳ ಕುರಿತು ಅನೇಕ ವಿಷಯಗಳನ್ನು ಬಹಿರಂಗಪಡಿಸಿದರು ಎಲ್ಲಾ ವಿಷಯಗಳಿಗೂ ರಜಿಸ್ಟ್ರಾರ್ ರವರು ಸರಿಯಾದ ಉತ್ತರಗಳನ್ನಿತ್ತು ಕ್ರಮವಾಗಿ ಸೊಸೈಟಿಗಳನ್ನು ನಡಿಸಿಕೊಂಡು ಹೋಗಲು ಸಲಹೆ ಕೊಟ್ಟರು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಸೊಸೈಟಿಗಳು ಏರ್ಪಾಡು ಮಾಡಬಹುದೆಂದು ಎಲ್ಲಾ ತಾಲ್ಲೂಕುಗಳ ಅಮಲ್ದಾರರುಗಳೂ ಆಲೋಚಿಸಿ ಸುಮಾರು 60 ಗ್ರಾಮಗಳ ಒಂದು ಪಟ್ಟಿಯನ್ನು ತಯಾರಿಸಿ ರಜಿಸ್ಟ್ರಾರ್‌ರವರಿಗೆ ಒಪ್ಪಿಸಿದರು ರಿಸೆಪ್ಷನ್ ಕಮಿಟಿಯ ಸೆಕ್ರೆಟರಿಗಳಾದ ಮ॥ ಮಹದೇವರಾವ್ ಮತ್ತು ಮ॥ ಜದೆ ರಾಮರಾವ್ ಇವರು ಮೇಲ್ಕಂಡವರು ದಯಮಾಡಿಸಿದ ವಿಷಯದಲ್ಲಿ ಸಂತೋಷ ಸೂಚಕವಾದ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು ಈ ಕಾನ್ಫರೆನ್ಸ್ ತೆರೆದು ಎಲ್ಲಾ ಸೊಸೈಟಿಯವರೂ ಒಂದೇ ಕಡೆ ಸೇರಿ ಒಬ್ಬರೊಬ್ಬರ ಕುಂದುಕೊರತೆಗಳನ್ನು ಹೇಳಿಕೊಳ್ಳುವದಕ್ಕೂ ಹೊಸ ಏರ್ಪಾಡುಗಳನ್ನು ಆಲೋಚಿಸುವದಕ್ಕೂ ಅನುಕೂಲಪಡಿಸಿದ್ದರಿಂದ ರಿಸೆಪ್ಷನ್ ಕಮಿಟಿ ಸೆಕ್ರೆಟರಿಗಳನ್ನು ಸೊಸೈಟಿಯವರು ವಂದಿಸಿದರು ಕೊನೆಯ ದಿವಸ ಸಭಾಧ್ಯಕ್ಷರನ್ನೂ ಸಭೆಯವರನ್ನೂ ಗಂಧ ಪುಷ್ಪ ತಾಂಬೂಲಾದಿಗಳಿಂದ ಸನ್ಮಾನಿಸಿ ನಮ್ಮನ್ನಾಳುವ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರ್‌ರವರಿಗೂ, ಯುವರಾಜರವರಿಗೂ ಶ್ರೇಯಃಪ್ರಾರ್ಥನೆಗಳನ್ನು ನಡಿಸಿ ಸಭೆಯನ್ನು ಮುಕ್ತಾಯಮಾಡಿದರು ತಾ 13ರಿಂದ 16ರ ವರಿವಿಗೆ ಎ ವಿ ಸ್ಕೂಲ್ ಕಟ್ಟಡದಲ್ಲಿ ತೆರೆದಿದ್ದ ವಸ್ತುಪ್ರದರ್ಶನವನ್ನು ಸರ್ವರೂ ನೋಡಿ ಸಂತೋಷಪಟ್ಟರು ಮತ್ತು ಸಭೆಗೆ ಬಂದಿದ್ದ ಮುಖಂಡ ಜನರು ಅಪರೂಪವಸ್ತುಗಳಿಗೆ ಬಹುಮಾನ ಕೊಡಲು ಚುನಾಯಿಸಿದರು ತುಂಗಭದ್ರಾನದಿಯ ಬೈಲಿನಲ್ಲಿ ದನಗಳ ಪ್ರದರ್ಶನ ನಡಿಸಲ್ಪಟ್ಟಿತು ಇವುಗಳಲ್ಲೂ ಚೆನ್ನಾಗಿ ಸಾಕಿದ ದನಗಳಿಗೆ ಬಹುಮಾನ ಕೊಡಲು ಚುನಾಯಿಸಲ್ಪಟ್ಟಿತು ತಾ 15ನೇ ಬೆಳಿಗ್ಗೆ ಮ॥ ಬಾಳಾಜೀರಾಯರು ಏರ್ಪಡಿಸಿರುವ ವಾಟರ್ ಮಿಲ್ ಎಂಬ ನೀರಿನ ಯಂತ್ರವನ್ನೂ, ಹೊಸ ಅರಹೇ ನೇಗಲುಗಳನ್ನೂ ಮತ್ತು ಇವರ ಸಾಗುವಳಿ ಜಮೀನುಗಳನ್ನೂ ನೋಡಿದರು ಸಾಯಂಕಾಲ ಮ॥ ಮಹದೇವರಾಯರ ತೋಟಕ್ಕೆ ಹೋಗಿ ಅವರ ನೀರೆತ್ತುವ ಯಂತ್ರವನ್ನೂ, ಅವರ ತೋಟವನ್ನೂ ನೋಡಿ ಸಂತೋಷಪಟ್ಟರು ಮತ್ತು ಅಲ್ಲಿ ಏರ್ಪಡಿಸಿದ್ದ ಟೀ ಪಾರ್ಟಿಯನ್ನು ಸರ್ವರೂ ಸೇರಿ ನಡಿಸಿ ಇವರ ಪರೋಪಕಾರ ಕಾರ್ಯಕ್ಕೆ ಇವರನ್ನು ಸರ್ವರೂ ವಂದಿಸಿದರು ಅನಂತರ ಜಾತ್ರೆ ನೋಡಿಕೊಂಡು ಸರ್ವರೂ ಅವರವರ ಸ್ಥಳಕ್ಕೆ ತೆರಳಿದರು

ಈ ರೀತಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಕೋಆಪರೇಟಿವ್ ಕಾನ್ಫರೆನ್ಸ್‌ಗಳನ್ನು ನಡಿಸುವದರಿಂದ ನಮ್ಮ ದೇಶದ ಸೊಸೈಟಿಗಳು ಜಾಗ್ರತೆಯಾಗಿ ಅಭಿವೃದ್ಧಿಗೆ ಬರುತ್ತವೆ ಮತ್ತು ಒಂದು ಸೊಸೈಟಿಯವರು ಮತ್ತೊಂದು ಸೊಸೈಟಿಯವರೊಂದಿಗೆ ಸೇರಿ ಒಬ್ಬರ ಕುಂದು ಕೊರತೆಗಳನ್ನು ಮತ್ತೊಬ್ಬರಲ್ಲಿ ಹೇಳಿಕೊಂಡು ಸಾಂಗವಾಗಿಯೂ ಧೈರ್ಯದಿಂದಲೂ ಕೆಲಸ ಕಾರ್ಯಗಳನ್ನು ನಡಿಸಿಕೊಳ್ಳಲು ಅನುಕೂಲವಾಗುತ್ತದೆ, ಮತ್ತು ನಮ್ಮ ದೇಶದಲ್ಲಿ ಏಕಮತ್ಯವೂ, ಪರೋಪಕಾರ ಬುದ್ಧಿಯೂ ಹೆಚ್ಚುತ್ತವೆ ಆದ್ದರಿಂದ ಪ್ರತಿ ಡಿಸ್ಟ್ರಿಕ್ಟಿನ ಮುಖಂಡರೂ ಇಂಥಾ ಸಭೆಗಳನ್ನು ನಡಿಸಬೇಕೆಂದು ಪ್ರಾರ್ಥಿಸುತ್ತೇನೆ

ಕೆ ವೆಂಕಟರಾಯಶೆಟ್ಟಿ, ಬೆಳಗೂರು

ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆ.

"ಷೇಕ್ಸ್‌ಪಿಯರ್ ಮಹಾಕವಿಯಿಂದ ರಚಿತವಾದ ಕಥೆಗಳು" ಎಂಬ ಕನ್ನಡ ಪುಸ್ತಕವನ್ನು 1915 ನೇ ಇಸವಿ ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುತ್ತಾರೆ ಈ ಪುಸ್ತಕದ ಪ್ರತಿಗಳು ಮೈಸೂರು ಸಿ ಎಲ್ ಎಸ್ ಬುಕ್ ಡಿಪೋದಲ್ಲಿ ಪ್ರತಿ 1 ಕ್ಕೆ 8 ಆಣೆಯಂತೆ ಬೆಲೆಗೆ ಸಿದ್ಧವಾಗಿವೆ (3)

WANTED

An active and influential Taluk Agent in every Taluk of Mysore Province and Coorg on a salary of Rs. 20 per mensem rising to Rs 40 by annual increments of Rs 2 Cash security rebuired from each Agent is Rs 50 For particulars see in person or apply to

Messrs YENKATACHALAM & SONS,
Chief Agents,
Hindustan Co operative Insurance Society Ltd,
166, Dodpet, Near Old Taluk Cutchery,
243 23 *MYSORE*

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ಸೋಂಕಿದ್ದರೂ ವಾಸಿಮಾಡಿಕೊಳ್ಳುವೆನೆಂದು ನೀಲು ವಾಯು, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತಜ್ವರ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104-47]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ತಿರುಮಲೆಪಿಳ್ಳೆ ಬೀದಿ, ಪುರಸಾವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ವೃತ್ತಾಂತ ಪತ್ರಿಕೆ

—— o ——

ಸನ್ ೧೯೧೪ ನೇ ಇಸವಿ ಏಪ್ರೆಲ್ ತಾ ೩೦ ನೇ ಗುರುವಾರ

ಸಂಯುಕ್ತ ಸಂಸ್ಥಾನಗಳೂ ಮೆಕ್ಸಿಕೋ ಸಂಸ್ಥಾನವೂ

ಉತ್ತರ ಅಮೇರಿಕೆ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಿಗೂ (ಯುನೈಟೆಡ್ ಸ್ಟೇಟ್ಸ್), ಮೆಕ್ಸಿಕೋ ಸಂಸ್ಥಾನಕ್ಕೂ ಯುದ್ಧ ಪ್ರಾಪ್ತವಾಗಿರುವ ಸಂಗತಿಯು ಬಹು ವಿಷಾದವನ್ನುಂಟುಮಾಡಿದ ಮೆಕ್ಸಿಕೋ ಸಂಸ್ಥಾನದ ಪೂರ್ವ ಚರಿತ್ರೆಯು ಸಂತೋಷಪ್ರದವಾಗಿಲ್ಲ ಅಲ್ಲಿ ಇದು ವರೆಗ ಇದ್ದ ಯಾವ ಗವರ್ನಮೆಂಟಿನವರೂ ಪ್ರಜೆಗಳ ಭಕ್ತಿಪ್ರೀತಿಯನ್ನಾಗಲಿ ಸಂಸ್ಥಾನದ ಏಳಿಗೆಯನ್ನಾಗಲಿ ಬಯಸಿ ಕಾಪಾಡಿಕೊಂಡು ಬಂದವರಾಗಲಿಲ್ಲ ಆ ಸೀಮೆಯಲ್ಲಿ ರಾಜ್ಯಕ್ರಾಂತಿಗಳು ಆಗಿಂದಾಗ ಸಂಭವಿಸುತ್ತಲೇ ಇರುವವು ಒಂದು ವೇಳೆ ಅದನ್ನು ಒಬ್ಬ ರಾಜನು ಆಳುತ್ತಾನೆ, ಕೆಲವು ಕಾಲದಲ್ಲೇ ದೊರೆತನ ಹಾಳಾಗಿ ಪ್ರಜಾಪ್ರತಿನಿಧಿಗಳು ನಿಂತು ಪ್ರಭುತ್ವ ಮಾಡುವರು ಅನೇಕ ವೇಳೆ ರಾಜನಾಗಿ ನಿಂತವನು ಆಳ್ವಿಕೆಯಲ್ಲಿ ಯಾವುದೊಂದು ಆತಂಕಗಳನ್ನೂ ಇಟ್ಟುಕೊಳ್ಳದೆ ಸ್ವೇಚ್ಛೆಯಾಗಿ ತನಗೆ ತೋರಿದಂತೆ ರಾಜ್ಯಭಾರ ಕಾರ್ಯಗಳನ್ನು ನಡಿಸಿರುತ್ತಾನೆ ಇದಕ್ಕೆ ಪ್ರತಿಯಾಗಿ ಧರ್ಮದಿಂದಲೂ ವಿವೇಕವಾಗಿಯೂ ಆಳಿದ್ದ ಪಕ್ಷದಲ್ಲಿ ಆ ದೇಶವು ಎಷ್ಟೋ ಅಭಿವೃದ್ಧಿಗೆ ಬರಬಹುದಾಗಿತ್ತು

ಈಗ ಮೆಕ್ಸಿಕೋ ರಾಜ್ಯದ ಪ್ರಸಿಡೆಂಟಾಗಿರುವ ಹ್ಯುಯರ್ಟ ಎಂಬಾತನು ಪ್ರಜೆಗಳ ಭಕ್ತಿಪ್ರೀತಿಯನ್ನು ಸಂಪಾದಿಸಿಕೊಂಡಿಲ್ಲವಾದದ್ದರಿಂದ ಪ್ರಜೆಗಳು ಆತನ ಆಳ್ವಿಕೆಯ ವಿಷಯದಲ್ಲಿ ಅನೇಕ ವೇಳೆ ಪ್ರತಿಭಟಿಸುತ್ತಾ ಬಂದಿರುವರು, ಮತ್ತು ಬಹು ಕಾಲದಿಂದಲೂ ಪ್ರಜೆಗಳು ಆತನ ಗವರ್ನಮೆಂಟಿನ ಮೇಲೆ ತಿರುಗಿಬಿದ್ದು ಯುದ್ಧಗಳು ನಡೆಯುತ್ತಿರುವವು ಅಮೇರಿಕಖಂಡಕ್ಕೆ ಸೇರಿದ ಯಾವ ರಾಜ್ಯದೊಳಗಾಗಲಿ ಗಲಬೆಗಳೇನಾದರೂ ಸಂಭವಿಸಿದರೆ ಅದನ್ನು ಸರಿಪಡಿಸುವ ಅಧಿಕಾರವನ್ನು ಸಂಯುಕ್ತ ಸಂಸ್ಥಾನಗಳವರೇ ಸಂಪೂರ್ಣವಾಗಿ ವಹಿಸಿಕೊಂಡಿರುತ್ತಾರಾದರೂ ಅವರು ಇದುವರೆಗೆ ಮೆಕ್ಸಿಕೋ ರಾಜ್ಯದ ಗಲಬೆಗಳಿಗಾಗಲಿ, ಅಲ್ಲಿ ನಡಯುವ ಯುದ್ಧಗಳಿಗಾಗಲಿ ತಲೆಹಾಕಲಿಲ್ಲ ಈಗ ಅವರು ಮೆಕ್ಸಿಕೋದವರ ಮೇಲೆ ಯುದ್ಧಕ್ಕೆ ಹೊರಟಿರುವ ಕಾರಣವು ಅಷ್ಟೇನೂ ವಿಶೇಷವಾದದ್ದಲ್ಲ ಸಂಯುಕ್ತ ರಾಜ್ಯಗಳ ಕೆಲವು ಜನರು ಹಡಗಿನ ಮೇಲೆ ಹೋಗಿ ಮೆಕ್ಸಿಕೋಗೆ ಸೇರಿದ ಒಂದು ತೀರ ಪಟ್ಟಣದಲ್ಲಿ ಇಳಿದರು ಇವರನ್ನು ಮೆಕ್ಸಿಕೋ ಅಧಿಕಾರಿಗಳು ಮರ್ಯಾದೆಯಿಂದ ಕಾಣಲಿಲ್ಲ ಅಮೇರಿಕದ ಬಾವುಟಕ್ಕೆ ಅವಮಾನ ಮಾಡಲಾಯಿತು ಮೆಕ್ಸಿಕೋದವರು ತಮ್ಮ ಅಪರಾಧವನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಿಕೊಳ್ಳಬೇಕೆಂದೂ, ಅಮೇರಿಕದ ಬಾವುಟಕ್ಕೆ ಸನ್ಮಾನಮಾಡಿ ತೋಪುಗಳನ್ನು ಹಾಕಬೇಕೆಂದೂ ಸಂಯುಕ್ತ ಸಂಸ್ಥಾನಗಳ ಸರ್ಕಾರದವರು ಕೇಳಿಕೊಂಡರು ಮೆಕ್ಸಿಕೋವಿನ ಪ್ರಸಿಡೆಂಟಾದ ಹ್ಯುಯರ್ಟ ಎಂಬಾತನು ಆ ರೀತಿ ಮಾಡುವುದಿಲ್ಲವೆಂದು ತಿರಸ್ಕಾರ ಮಾಡಿಬಿಟ್ಟನು ಆದಕಾರಣ ಸಂಯುಕ್ತ ಸಂಸ್ಥಾನಗಳ ಗವರ್ನಮೆಂಟಿನವರು ಕೆಲವು ಯುದ್ಧದ ಹಡಗುಗಳನ್ನು ಮೆಕ್ಸಿಕೋವಿಗೆ ಕಳುಹಿಸಿದರು ಇದರಂತೆ ಸೈನ್ಯಗಳು ಹೋಗಿ ವೀರಕ್ರೂಸ್ ಎಂಬ ಸ್ಥಳದಲ್ಲಿ ಇಳಿದು ಆ ತೀರಪಟ್ಟಣವನ್ನು ತಮ್ಮ ಸ್ವಾಧೀನಮಾಡಿಕೊಂಡವು ಅಲ್ಲಿ ಅಷ್ಟೇನೂ ಕಠಿಣವಾದ ಯುದ್ಧ ನಡದಂತೆ ಕಾಣುವುದಿಲ್ಲ ಅಮೇರಿಕದವರ ಕಡೆ 17 ಮಂದಿ ಕೊಲೆಯಾದರು 70 ಜನರಿಗೆ ಗಾಯಗಳಾಗಿವೆ ಇದಲ್ಲದೆ ಸಂಯುಕ್ತ ಸಂಸ್ಥಾನಗಳಿಗೂ ಮೆಕ್ಸಿಕೋವಿಗೂ ಮಧ್ಯೆ ಇರುವ ಭೂಪ್ರದೇಶದಲ್ಲೂ ಕೆಲವು ಯುದ್ಧಗಳು ನಡೆದಿರುವಂತೆ ತಿಳಿಯುವುದು

ಸಂಯುಕ್ತ ಸಂಸ್ಥಾನಗಳವರಿಗೇನೋ ಮೆಕ್ಸಿಕೋ ದೇಶವನ್ನು ಗೆದ್ದು ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಅಭಿಪ್ರಾಯವಿರುವಂತೆ ಕಾಣುವುದಿಲ್ಲ ಮೆಕ್ಸಿಕೋದಲ್ಲಿ ಸ್ಥಿರವಾದ ರಾಜಭಾರವನ್ನು ನೆಲೆಗೊಳಿಸಿ, ಅದು ಶ್ರೇಯಸ್ಸಿಗೆ ಬರುವಂತೆ ಮಾಡಬೇಕೆಂಬುವುದೇ ಸಂಯುಕ್ತ ಸಂಸ್ಥಾನಗಳ ಕುತೂಹಲವಾಗಿರುತ್ತದೆ ಮೆಕ್ಸಿಕೋದ ದುಃಸ್ಥಿತಿಗೆಲ್ಲಾ ಪ್ರಸಿಡೆಂಟ್ ಹ್ಯುಯರ್ಟ ಎಂಬಾತನೇ ಕಾರಣಭೂತನೆಂದೂ, ಆತನನ್ನು ಆಳ್ವಿಕೆಯಿಂದ ತಪ್ಪಿಸಿ ಹೊರಡಿಸಿಬಿಟ್ಟರೆ ಆ ದೇಶವು ನೆಮ್ಮದಿಯಾಗಿಯೂ ಸುಖದಿಂದಲೂ ಇದ್ದೀತೆಂದೂ ಅಮೇರಿಕದವರು ತಿಳಿದುಕೊಂಡಿದ್ದಾರೆ

ಮುಂದೆ ಇದು ಹ್ಯಾಗೆ ಪರ್ಯವಸಾನವಾಗುವುದೋ ಊಹಿಸಿ ಹೇಳುವುದು ಸುಲಭವಲ್ಲ ಒಂದು ವೇಳೆ ಮೆಕ್ಸಿಕೋದವರೆಲ್ಲಾ ಏಕವಾಗಿ ನಿಂತುಕೊಂಡ ಪಕ್ಷದಲ್ಲಿ ಅಮೇರಿಕದವರು ಬಹುಕಾಲ ವಿಶೇಷವಾಗಿ ಶ್ರಮಪಡಬೇಕಲ್ಲದೆ ಆ ದೇಶವು ಹಿಡಿಯಲಾಗದು ಹಾಗಿಲ್ಲದೆ ಮೆಕ್ಸಿಕೋದವರಲ್ಲೇ ಎರಡು ಸಂಘಗಳು ಹುಟ್ಟಿದರೆ ಒಂದು ಪಕ್ಷದವರು ಅಮೇರಿಕದವರ ಕಡೆ ಸೇರಿಕೊಳ್ಳುತ್ತಾರೆ ಆಗ್ಗೆ ಈ ಯುದ್ಧವು ಮೇಲಾಗಿಯೂ ಬೇಗನೆ ಸುಲಭವಾಗಿ ಪರ್ಯವಸಾನವಾಗುವುದು ಹ್ಯಾಗೂ ಜಾಗ್ರತೆಯಾಗಿ ನೆಮ್ಮದಿಯೂ ಸಮಾಧಾನವೂ ನೆಲೆಗೊಂಡು ಆ ದೇಶವು ಅಭಿವೃದ್ಧಿಗೆ ಬರುವಂತಾಗಲೆಂದು ಹಾರೈಸುತ್ತೇವೆ ಯಾಕೆಂದರೆ ಯುದ್ಧ ನಡೆದು ಕತ್ತಿಯಲ್ಲಿ ಲಭ್ಯವಾಗುವ ಸಮಾಧಾನವು ಸಮಾಧಾನವೆನಿಸಿಕೊಳ್ಳಲಾರದು

ಐರ್ಲೆಂಡಿನ ವಿಚಾರವು

ಐರ್ಲೆಂಡಿನ ಉತ್ತರ ಭಾಗದ ಆಳ್ವಿಕೆಯ ವಿಷಯದಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಯಾವ ರೀತಿ ಇತ್ಯರ್ಥ ಮಾಡಿದಾರೆಯೋ ತಿಳಿದು ಹೇಳುವುದು ಕಷ್ಟವಾಗಿದೆ ಗವರ್ನಮೆಂಟಿನವರು ಅಲ್‌ಸ್ಟರ್ ಎಂಬ ಆ ವಿಭಾಗಕ್ಕೆ ಸೈನ್ಯ ಹೋಗುವಂತೆ ಹುಕುಂ ಕೊಟ್ಟದ್ದೂ, ಅಲ್ಲಿನ ಒಂದಾನೊಂದು ತೀರಪಟ್ಟಣಕ್ಕೆ ಯುದ್ಧದ ಜಹಜುಗಳು ಹೋಗಬೇಕೆಂದು ಅಪ್ಪಣೆ ಕೊಟ್ಟದ್ದೂ ನಿಜವಾಗಿ ಪರಿಣಮಿಸಿದಂತೆ ಕಾಣುತ್ತದೆ ಇದರ ಮೇಲೆ ಕೆಲವು ಹುದ್ದೇದಾರರು ಅಲ್‌ಸ್ಟರಿನಲ್ಲಿ ಪ್ರಜೆಗಳ ಮೇಲೆ ಯುದ್ಧಮಾಡುವುದಕ್ಕೆ ಸಮ್ಮತಿ ಇಲ್ಲದೆ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಡುತ್ತೇವೆಂದು ಹೇಳಿದ್ದೂ ಆಯಿತು ಗವರ್ನಮೆಂಟಿನವರೇನೋ ಅಲ್‌ಸ್ಟರಿನ ಪ್ರಜೆಗಳನ್ನು ಬಲಾತ್ಕಾರಪಡಿಸಿ ತಮ್ಮಂತೆ ಮಾಡಿಕೊಳ್ಳಬೇಕೆಂದು ಎಷ್ಟು ಮಾತ್ರಕ್ಕೂ ತಾವು ಇಷ್ಟಪಟ್ಟವರಾಗಿಲ್ಲವೆಂದು ಖಂಡಿತವಾಗಿ ಹೇಳುತ್ತಾರೆ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ನಾನಾ ಬಗೆಯ ಚರ್ಚೆಗಳು ಹೇರಳವಾಗಿ ನಡೆದಿದ್ದರೂ ಗವರ್ನಮೆಂಟಿನವರ ಖಂಡಿತವಾದ ಅಭಿಮತವೇನೆಂಬುವುದು ಗೊತ್ತಾಗದು ಇದೊಂದು ವಿಷಯವೇನೋ ಗರಿಷ್ಕಾರವಾಗಿದೆ ಹೋಮ್ ರೂಲ್ ಮಸೂದೆಯು ಕಾನೂನಾಗಿಬಿಟ್ಟ ಪಕ್ಷದಲ್ಲೂ ಅಲ್‌ಸ್ಟರ್ ವಿಭಾಗದವರು ಐರ್ಲೆಂಡಿನ ಪ್ರಜೆಗಳೊಳಗೆ ಸೇರಿಹೋಗಬೇಕೆಂದು ಬಲಾತ್ಕಾರವೇನೂ ಮಾಡುವುದಿಲ್ಲವೆಂಬದಾಗಿ ಗವರ್ನಮೆಂಟಿನವರು ಖಂಡಿತವಾಗಿ ಹೇಳಿದಾರೆ

ಹೋಮ್ ರೂಲ್ ಮಸೂದೆಯು ಕಾನೂನು ಆಗುವೆನ್ನುವ ಭಾಗದಲ್ಲಿ ಸಂಶಯವೇನೂ ಕಾಣುವುದಿಲ್ಲ ಪಾರ್ಲಿಮೆಂಟಿನಲ್ಲಿ ಅದನ್ನು ಹೆಚ್ಚು ಮಂದಿ ಮೆಂಬರುಗಳು ಸಮ್ಮತಿಹಾಕಿ ಪ್ಯಾಸ್ ಮಾಡಿಬಿಡುತ್ತಾರೆ ಇಷ್ಟಕ್ಕೇ ಐರ್ಲೆಂಡಿನ ಆಳ್ವಿಕೆಯ ವಿಚಾರವು ಇತ್ಯರ್ಥವಾಗುವುದಿಲ್ಲ ಕೂಡಲೇ ಈಗಿರುವ ಪಾರ್ಲಿಮೆಂಟು ಬರಖಾಸ್ತಾಗುವುದು ಪ್ರಜೆಗಳು ಪಾರ್ಲಿಮೆಂಟಿಗೆ ಹೊಸ ಮೆಂಬರುಗಳನ್ನು ಚುನಾವಣೆ ಮಾಡುತ್ತಾರೆ ಇದು ಆಗುವ ತನಕ ಜನರು ನಾನಾ ರೀತಿ ಮಾತನಾಡಿಕೊಳ್ಳುತ್ತಿರುವರು ಇದರಲ್ಲಿ ಹುರುಳೇನೂ ಇರುವುದಿಲ್ಲ ಇದರೆ ಅನೇಕರು ನಿರೀಕ್ಷಿಸುವಂತೆ ವಿಶೇಷವಾದ ಸಂಭವವೇನೂ ಉಂಟಾಗಲಾರದು

ದೈವಜ್ಞಾನ

ಮನುಷ್ಯನ ತಲೆಯು ಅವನ ಕತ್ತಿನ ಮೇಲೆ ನಿಂತಿದೆ ಅದನ್ನು ಹೊರುವದು ಅವನಿಗೆ ಭಾರವಲ್ಲ ಆದರೆ ಆನೆಯನ್ನು ನೋಡಿರಿ ಅದರ ತಲೆ ಎಷ್ಟು ಗಾತ್ರವಾಗಿದೆ ಅದನ್ನು ತೂಕಮಾಡಿದರೆ ಸುಮಾರು ನಾಲ್ಕು ನೂರು ಸೇರಿನ ತೂಕವಿರುವುದು ಮತ್ತು ಅಷ್ಟು ಭಾರವಾದ ತಲೆಯನ್ನು ಅದರ ದೇಹದ ಮುಂದೆ ಎತ್ತಿ ನಿಲ್ಲಿಸಿದ ಹಾಗೆ ನಿರ್ಮಾಣಮಾಡಿದ್ದರೆ ಹೇಗಿರುವುದು ಆಗ ಭಾರವಾಗಿರುತ್ತಿದ್ದ ತಲೆಯು ಅದಕ್ಕೆ ತೊಂದರೆಪಡಿಸುವದಾಗುತ್ತದೆ ಆದರೆ ಆನೆಗೆ ತಲೆಯು ಅದರ ದೇಹದ ಮೇಲೆ ನಿರ್ಮಾಣವಾಗಿದ್ದರೆ ಅದು ಸೊಂಡಲಿನಿಂದ ನೀರು ಕುಡಿವುದಕ್ಕೂ ನೆಲದಲ್ಲಿ ಇಟ್ಟ ವಸ್ತುಗಳನ್ನು ತೆಗೆದುಕೊಂಡು ತಿನ್ನುವದಕ್ಕೂ ಆಗುತ್ತಿರಲಿಲ್ಲ ಅದು ಕಣ್ಣುಗಳಿಂದ ನೋಡುವದೂ ಅಸಾಧ್ಯವಾಗುತ್ತಿತ್ತು ಅಷ್ಟೇಕೆ ? ಒಂದೇ ಮಾತಿನಲ್ಲಿ ಅದು ಬದುಕುತ್ತಿರಲಿಲ್ಲ ಆದ್ದರಿಂದ ಆನೆಗೆ ತಲೆಯನ್ನು ಅದರ ದೇಹದ ಮುಂದುಗಡೆ ದೇಹವನ್ನು ಬಿಟ್ಟು ಸ್ವಲ್ಪ ಆಚೆಗೆ ನಿರ್ಮಾಣಮಾಡಿ ನಿಲ್ಲಿಸಲಾಯಿತು ಆದರೆ ಅಷ್ಟು ಭಾರವಾದ ತಲೆಯು ನಿಲ್ಲುವದಕ್ಕೆ ಕೆಳಗಡೆ ಏನೂ ಆಧಾರವಿಲ್ಲದೆ ಹೇಗೆ ನಿಂತಿದೆ ? ನಾವು ನಮ್ಮ ಕೈಯಲ್ಲಿ ಸುಮಾರು ಇಪ್ಪತ್ತು ಸೇರು ತೂಕವುಳ್ಳ ಗುಂಡನ್ನು ಹಿಡಿದು ಅದನ್ನು ಆದಷ್ಟು ವಿಸ್ತಾರವಾಗಿ ಮುಂದಕ್ಕೆ ಚಾಚಿದರೆ ಚಾಚಿ ಹಿಡಿದಿರುವ ನಮ್ಮ ಕೈಯಲ್ಲಿ ಆ ಗುಂಡನ್ನು ಎಷ್ಟು ಹೊತ್ತು ಹಿಡಿಯುವದಕ್ಕೆ ಆಗುತ್ತೆ ? ಬೇಗ ಭಾರವು ಹೆಚ್ಚಾಗಿ ಗುಂಡನ್ನು ಹಿಡಿಯುವದಕ್ಕಾಗದೆ ನೆಲಕ್ಕೆ ಬಿಸುಡಬಿಡುವೆವಲ್ಲವೇ ? ಆನೆಯು ತನ್ನ ದೇಹದಿಂದ ಹೊರಗೆ ನಿಂತಿರುವ ಅಷ್ಟು ದೊಡ್ಡ ತಲೆಯನ್ನು ಜೀವಾವಧಿ ಹೊತ್ತಿರುವದು ಹೇಗೆ ಸಾಧ್ಯವಾಗಿದೆ ? ಹೇಗೆಂದರೆ ಅದರ ದೇಹದಿಂದ ಎರಡು ಬಲವಾದ ಹಗ್ಗದಂತಿರುವ ದೊಡ್ಡ ನರಗಳು ಕತ್ತಿನ ಮೇಲ್ಭಾಗದಲ್ಲಿ ಹೊರಟು ಬಂದು ಆನೆಯ ತಲೆಯನ್ನು ಬಲವಾಗಿ ಹಿಡಿದು ಅದನ್ನು ಹೊರುವದು ಆನೆಗೆ ಸುಲಭಸಾಧ್ಯವಾಗುವಂತೆ ಮಾಡಿವೆ ಇದು ದೇವರ ಮಹಿಮೆಯಲ್ಲವೋ ?

ಹೊಳೆಗಳಲ್ಲಿ ಕಿಚಕಿಚನೆ ಹಾರಾಡುವ ಚಿಕ್ಕ ಪಕ್ಷಿಯನ್ನು ನೋಡಿರಿ ಅದರ ಕಣ್ಣುಗಳು ಆ ಹೊಳೆಯಲ್ಲಿರುವ ಕಡ್ಡಿಗಳಿಗೆ ಸ್ಪರ್ಶಿಸಿ ಗಾಯ ತಗಲಿದರೂ ಅದರ ಕಣ್ಣಿಗೆ ನೋವಾಗುವದಿಲ್ಲ ಹದ್ದು ಬೇಸಿಗೆ ದಿವಸಗಳ ಮಧ್ಯಾಹ್ನದಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವ ಸೂರ್ಯನ ರಶ್ಮಿಗೆ ತನ್ನ ನೇತ್ರಗಳನ್ನೊಡ್ಡಿದರೂ ಅದರ ಕಣ್ಣು ಕುಕ್ಕುವುದಿಲ್ಲ ಅದೇಕೆ ? ಏಕೆಂದರೆ—ಹದ್ದಿಗೂ ಆ ಚಿಕ್ಕ ಪಕ್ಷಿಗಳಿಗೂ ಕಣ್ಣಿನ ಮೇಲೆ ಒಂದು ಗಟ್ಟಿಯಾದ ಮುಚ್ಚಳವು ಜೋಡಿರುತ್ತದೆ ಈ ಮುಚ್ಚಳವು ಅದರ ಕಣ್ಣಿಗೆ ಅಪಾಯವಾಗದಂತೆ ಕಾಪಾಡುವದು ಮತ್ತು ಆ ಮುಚ್ಚಳವು ದೂರದ ವಸ್ತುಗಳನ್ನು ನೋಡುವದಕ್ಕೆ ಅನುಕೂಲಿಸುವ ಕನ್ನಡಿಯಂತೆ ಸ್ವಚ್ಛವಾಗಿದೆ ಇಂತಹ ಅತ್ಯುತ್ಕೃಷ್ಟವಾದ ಮುಚ್ಚಳವನ್ನು ಅದಕ್ಕೆ ಮಾಡಿಕೊಟ್ಟವರಾರು ?

ಆಹಾರವನ್ನು ನುಂಗುವದಕ್ಕೆ ಮುಂಚೆ ಅದನ್ನು ಚೆನ್ನಾಗಿ ಅಗಿಯಬೇಕಷ್ಟೆ ಇದಕ್ಕಾಗಿ ಅನೇಕ ಪ್ರಾಣಿಗಳಿಗೆ ಬಾಯಿಯಲ್ಲಿ ದಂತಗಳಿವೆ ಪಕ್ಷಿಗಳು ಹಾರುವದು ಸುಲಭಸಾಧ್ಯವಾಗಿರುವಂತೆ ಅವುಗಳ ತಲೆಗಳು ಚಿಕ್ಕವಾಗಿರಬೇಕು. ಆದ್ದರಿಂದ ಅವುಗಳ ಬಾಯಿಯಲ್ಲಿ ದಂತ ಪಂಕ್ತಿಗಳನ್ನು ಬೆಳಸುವಷ್ಟು ವಿಸ್ತಾರವಾಗಿ ಜಾಗವಿಲ್ಲ ಅದು ಕಾಳನ್ನು ಅಥವಾ ತನ್ನ ಆಹಾರವನ್ನು ಅಗಿಯದೆ ನುಂಗಿಬಿಡುತ್ತದೆ ಆದರೆ ಅದರ ಹೊಟ್ಟೆಯಲ್ಲಿರುವ ಒಂದು ಯಂತ್ರವು ಆ ಆಹಾರವನ್ನು ಪುಡಿಯಾಗಿ ಅರೆದು ರಕ್ತವಾಗುವಂತೆ ಸದೆಯುವದಾಗುತ್ತದೆ ಇದು ದೇವರ ಜ್ಞಾನವಲ್ಲವೇ ?

ಆಫ್ರಿಕಾ ಅರೇಬಿಯಾಗಳಲ್ಲಿ ವಿಸ್ತಾರವಾದ ಮರುಭೂಮಿಗಳಿರುತ್ತವೆ ಇಲ್ಲಿ ನೀರು ಸಿಕ್ಕುವದು ಬಹಳ ಕಷ್ಟ ಬಿಸಿಲಿನ ಬೇಗೆಯು ತೀರ ಅಸಾಧ್ಯವಾಗಿದೆ ಮರಳು ಕಾದು ತಳಮಳಗೊಳ್ಳುವ ಹಾಗೆ ಮಾಡುತ್ತದೆ ಪ್ರಾಣಿಗಳು ಕಾಲಿಡುವದಕ್ಕಾಗುವದಿಲ್ಲ ವಿಸ್ತಾರವಾದ ಸಾಗರಗಳನ್ನು ಹಡಗಿನಲ್ಲಿ ದಾಟುವದು ಸಾಧ್ಯವಾಗಿದೆ ಆದರೂ ಈ ಮರುಭೂಮಿಗಳಲ್ಲಿ ಸುರಕ್ಷಿತವಾಗಿ ಯಾನಮಾಡುವ ಉಪಾಯ ಅಥವಾ ಯಂತ್ರವನ್ನು ಯಾರೂ ಕಂಡುಹಿಡಿದಿಲ್ಲ ದೇವರು ಇದಕ್ಕೊಂದು ಸಜೀವ ಯಂತ್ರವನ್ನು ಸೃಷ್ಟಿಸಿದ್ದಾನೆ ಒಂಟೆ ಇದೆಯಲ್ಲವೇ ? ಅದು ತನ್ನ ಹೊಟ್ಟೆಯಲ್ಲಿ ಅನೇಕ ದಿನಗಳಿಗೆ ಬೇಕಾದಷ್ಟು ನೀರನ್ನು ಸೇರಿಸಿಟ್ಟುಕೊಳ್ಳಬಲ್ಲದು ದಿನ ಒಂದಕ್ಕೆ ಮೂವತ್ತು ಮೈಲುಗಳ ಮೇರೆಗೆ ಒಂದು ದಿವಸವೂ ಎಡೆಬಿಡದೆ ಮೂರು ನಾಲ್ಕು ವಾರಗಳ ವರಿಗೂ ಭಾರವಾದ ಹೊರೆಯನ್ನು ಹೊತ್ತುಕೊಂಡು ಪ್ರಯಾಣಮಾಡಬಲ್ಲದು ಅದರ ಪಾದ ಮೃದುವಾಗಿ ಆ ಮರಳು ಕಾಡಿನಲ್ಲಿ ದಣಿವಿಲ್ಲದೆ ನಡೆಯುವುದಕ್ಕೆ ತಕ್ಕದ್ದಾಗಿದೆ ಹಿಮಪ್ರದೇಶಗಳಲ್ಲಿ ಒಂದು ತರದ ಮೃಗವಿರುತ್ತದೆ ಅದು ಹಿಮದಲ್ಲಿ ವಾಸಮಾಡಿ ಹಿಮದ ಮೇಲೆ ದಿನ ಒಂದಕ್ಕೆ ನೂರು ಮೈಲಿಗಳು ಓಡಬಲ್ಲದು ಆದರೆ ಆ ಹಿಮಸಾರಂಗವನ್ನು ಸಹಾರದ ಮರುಭೂಮಿಗೆ ತಂದುಬಿಟ್ಟರೆ ಸಾಯುವದು ಹಾಗೆಯೇ ಒಂಟೆಯು ಹಿಮಪ್ರದೇಶದಲ್ಲಿ ಪರಿಣಾಮವಿಲ್ಲದೆ ಮೃತಪಡುವದು ಉಷ್ಣವಲಯಕ್ಕೆ ತಕ್ಕ ಒಂಟೆಯನ್ನೂ ಶೀತವಲಯಕ್ಕೆ ಹಿಮಸಾರಂಗವನ್ನೂ ದೇವರು ನಿರ್ಮಿಸಿದನು

ಜೇನುನೊಣವಿಧಯಷ್ಟೆ ಅದು ಮೇಣದಲ್ಲಿ ಸಣ್ಣ ಸಣ್ಣ ಅಂಕಣಗಳನ್ನು ಮಾಡಿ ಒಂದೊಂದು ಅಂಕಣವನ್ನು ಜೇನಿನಿಂದ ಭರ್ತಿಮಾಡುತ್ತದೆ ಹೀಗೆ ಜೇನು ಬೇರೆ ಬೇರೆ ಸಣ್ಣ ಕೋಶಗಳಲ್ಲಿರುವದರಿಂದ ಅದು (ಜೇನು) ತುಳುಕದೆ (ಹಳಸದ) ತಾಜಾವಾಗಿರುತ್ತದೆ ಮತ್ತು ಈ ಸಣ್ಣ ಸಣ್ಣ ಕೋಶಗಳಿಂದ ಜೇನಿನ ಗೂಡು ಭದ್ರವಾಗಿ ನಿಂತಿರುತ್ತದೆ ಒಂದು ದೊಡ್ಡ ಬಟ್ಟಲನ್ನು ಕಟ್ಟಿ ಅದರಲ್ಲಿ ಜೇನನ್ನು ಸೇರಿಸಿಡುವದಕ್ಕಿಂತ ಸಣ್ಣ ಸಣ್ಣ ಅಂಕಣಗಳನ್ನು ಮಾಡುವದು ಉತ್ತಮವೆಂತ ಜೇನು ಹುಳಕ್ಕೆ ಹೇಳಿ ಕೊಟ್ಟವರಾರು ? ದೇವನಲ್ಲಿ ಸಕಲ ಜ್ಞಾನವೂ ಉಂಟು ಆತನು ತನ್ನ ಜ್ಞಾನದಿಂದ ತನ್ನ ಸೃಷ್ಟಿಗಳಿಗೆ ಬೇಕು ಬೇಕಾದಷ್ಟು ಜ್ಞಾನವನ್ನು ಹಂಚಿಕೊಟ್ಟಿರುವ ಹಾಗೆ ಕಾಣುತ್ತದಲ್ಲವೇ ?

ಸ್ತ್ರೀಯರು ಬೆರಳಿಗೆ ಇಟ್ಟುಕೊಳ್ಳುವ ಉಂಗುರವಿದೆಯಷ್ಟೆ ಕೈಗಾರಿಕೆಯಲ್ಲಿ ಜಾಣನಾಗಿರುವವನು ಅಂತಹ ಉಂಗುರದೊಳಗೆ ಗಡಿಯಾರವನ್ನು ಮಾಡಿ ಇರಿಸಬಲ್ಲನು ಅಂತಹ ಸಣ್ಣ ಗಡಿಯಾರದಲ್ಲಿ ಚಕ್ರಗಳೂ ಅದರ ಬೇರೆ ಬೇರೆ ಭಾಗಗಳೂ ಎಷ್ಟು ಸೂಕ್ಷ್ಮವಾಗಿರಬೇಕು ಅಂತರಿಕ್ಷದಲ್ಲಿ ಹಾರಾಡುವ ಸಣ್ಣ ಸಣ್ಣ ಪ್ರಾಣಿಗಳೂ ಭೂಮಿಯಲ್ಲಿ ಹರಿದಾಡುವ ಸಣ್ಣ ಜಂತುಗಳೂ ಅವುಗಳ ದೇಹಗಳಲ್ಲಿರುವ ಅವಯವಗಳೂ ಆ ಗಡಿಯಾರಕ್ಕಿಂತ ಆಶ್ಚರ್ಯವಾದ ಪ್ರಾಣಿಗಳಲ್ಲವೆ ? ಒಂದು ಸಣ್ಣ ಹುಳದ ದೇಹದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚಾದ ಸ್ನಾಯುಗಳಿವೆ ಆ ಒಂದು ಪ್ರಾಣಿಯು ಈ ಸ್ನಾಯುಗಳನ್ನೆಲ್ಲಾ ತನ್ನಿಷ್ಟದಂತೆ ಪ್ರಯೋಗಿಸಿ ಮನೆ ಕಟ್ಟಿಕೊಂಡು ಆಹಾರವನ್ನು ಸಂಪಾದಿಸಿಕೊಂಡು ತನ್ನ ಸ್ವಭಾವಾನುಗುಣ್ಯವಾಗಿ ಬದುಕುತ್ತದೆ ನಿಜದೇವರ ಮಹತ್ವವನ್ನು ಪರೀಕ್ಷಿಸದೆ ಮನುಷ್ಯನು ಪೂಜಿಸುವದಕ್ಕೆ ತನ್ನ ಕೈಯಿಂದ ಮಾಡಿಕೊಂಡಿರುವ ವಿಗ್ರಹವನ್ನು ತ್ಯಜಿಸಿ—ಸಿವೆ ಕರ್ತನೇ, ನಿನ್ನ ಕೆಲಸಗಳು ಎಷ್ಟೋ ಬಾಹುಳ್ಯವಾಗಿವೆ ಅವುಗಳನ್ನೆಲ್ಲಾ ಜ್ಞಾನದಿಂದ ಉಂಟುಮಾಡಿದ್ದೀ ಭೂಮಿಯೂ ಸಮುದ್ರವೂ ಅಂತರಿಕ್ಷವೂ ಇವುಗಳನ್ನು ನಿನ್ನ ಆಸ್ತಿಯಿಂದ ಪರಿಸಿದ್ಧಿಯೆಂದು ಆತನಿಗೆ ಅಡ್ಡಬೀಳುವದು ಯೋಗ್ಯವಾಗಿರುವದಲ್ಲವೇ ?

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ದಿವಾನ್‌ರವರೂ, ಚೀಫ್ ಇಂಜನಿಯರವರೂ ಮೊನ್ನೆ ಮಂಗಳವಾರ ರಾತ್ರಿ ಬೆಂಗಳೂರಿನಿಂದ ನೀಲಗಿರಿಗೆ ದಯಮಾಡಿದರು

ಬೆಂಗಳೂರು ರೆಸಿಡೆನ್ಸಿ ಸರ್ಜನ್‌ರಾದ ಮೇಜರ್ ಸ್ಟಾಂಡೇಜ್‌ರವರನ್ನು ಒಂದು ನಾಯಿ ಕಡಿದದ್ದರಿಂದ ಅವರು ಚಿಕಿತ್ಸೆಗಾಗಿ ಮೊನ್ನೆ ರಾತ್ರಿ ಕಸೌಲಿ ಆಸ್ಪತ್ರೆಗೆ ಪ್ರಯಾಣಮಾಡಿದರು

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಬಳಿ ಸ್ವಲ್ಪದೂರದಲ್ಲಿ ಒಬ್ಬ ಮುದುಕ ಮನುಷ್ಯನು ಒಂಟೆತ್ತಿನ ಗಾಡಿಯನ್ನು ಹೊಡೆದುಕೊಂಡು ಬರುತ್ತಿದ್ದಾಗ ಒಬ್ಬ ಜಹಗೀರುದಾರರ ಮೋಟರ್ ಗಾಡಿಯು ಡಿಕ್ಕಿ ಹೊಡೆದು ಒಂಟೆತ್ತಿನ ಗಾಡಿಯನ್ನು ಕೆಡವಿಬಿಟ್ಟಿತು ಎತ್ತು ಕೂಡಲೇ ಮೃತಪಟ್ಟಿತು ಆ ಮುದುಕನು ಆಸ್ಪತ್ರೆಯಲ್ಲಿ ಸತ್ತುಹೋದನು

ಯುಗಾದಿ ಕಳೆದು ಒಂದು ತಿಂಗಳಾದರೂ ಇನ್ನೂ ಮಳೆಗಳು ಬರಲಿಲ್ಲ. ...ಲ ಬೇಗೆ ಸಹಿಸಲೂ ಸಾಧ್ಯವಾಗಿದೆ. ಸದ್ಯದಲ್ಲಿ ಕಾಲಸ್ಥಿತಿಯು ಸಂಸ್ಥಾನಾದ್ಯಂತ ...ಣವನ್ನುಂಟುಮಾಡಿರುವುದು

∴

ಮೈಸೂರಿನಿಂದ ಹಾಸನದ ಮೇಲೆ ಅರಸೀಕೆರೆಗೆ 106 ಮೈಲಿದೂರ ಮೈಸೂರು ...ರದವರು ರೈಲ್ ಹಾಕಿಕೊಳ್ಳಬಹುದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿ ...ವರು ಸ್ಯಾಂಕ್ಷನ್ ಮಾಡಿರುತ್ತಾರೆ.

∴

ರಾಜಧಾನಿಯ ಮ್ಯುನಿಸಿಪಲ್ ಆಫೀಸಿನ ಒಂದು ಕೊಟಡೀ ಬಾಗಿಲ ಬೀಗ ...ನ್ನು ಮುರಿದು ಒಳಗಿದ್ದ 150 ರೂಪಾಯನ್ನು ಯಾರೋ ಕದ್ದುಬಿಟ್ಟರು. ...ಲೀಸಿನವರು ಪತ್ತೆ ಶೋಧನೆ ನಡಿಸುತ್ತಿದಾರೆ

∴

ಬೆಂಗಳೂರು ದಂಡಿನಲ್ಲಿ ಯಾವ ಯಾವ ಕಡೆ ಬ್ರಾಂದಿ ಷಾಪುಗಳು ಇರಬೇ...ಕುವುದನ್ನು ನೋಡಿ ವ್ಯವಸ್ಥೆ ಮಾಡುವುದಕ್ಕೆ ರೆಸಿಡೆಂಟರವರು ಪ್ರಜಾ ಮುಖಂ...ರ ಒಂದು ಕಮಿಟಿಯನ್ನು ನೇಮಕಮಾಡಿದಾರೆ.

∴

ಮೈಸೂರು ಸರ್ಕಾರದ ಸ್ಟಾಂಪ್ ಇಲಾಖೆಯಲ್ಲಿ ಕೆಲವು ಹಣ ಅಪಹರಿಸ...ಲ್ಪಟ್ಟಿರುವುದೆಂದು ತಿಳಿದುಬಂದದ್ದರಿಂದ ಮಿ|| ಯೇಟ್ಸ್ ಸಾಹೇಬರೂ ...ಟ್ರೋಲರವರೂ ಸೇರಿ ತನಿಖೆ ಮಾಡುತ್ತಿರುವಂತೆ ತಿಳಿದು ಬರುತ್ತದೆ.

∴

ಸೀನಿಯರ್ ಕೌನ್ಸೆಲರ್ ಮ|| ಹೆಚ್ ವಿ. ನಂಜುಂಡಯ್ಯ, ಸಿ ಐ ಇ. ...ವರು ಕಳೆದ ವಾರ ನೀಲಗಿರಿಗೆ ಹೋಗಿದ್ದು ಬೆಂಗಳೂರಿಗೆ ವಾಪಸು ಬಂದರು. ...ವರು ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಿವಾನ್‌ಗಿರಿಯನ್ನು ...ಗೀಕರಿಸುವುದಕ್ಕೆ ನಮ್ಮ ಮಹಾರಾಜರವರ ಅನುಮತಿಯನ್ನು ಪಡೆದು ...ರು ನೀಲಗಿರಿಗೆ ಹೋಗಿದ್ದರೆಂದು ವರ್ತಮಾನವಿದೆ.

∴

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ|| ಬಿ. ಕೃಷ್ಣರಾಯರು "ಮೈಸೂರು ಸ್ಟಾರ್" ಪತ್ರಿಕೆಯ ಸಂಪಾದಕರಾದ ಮ|| ವೈ. ವಿರೂಪಾಕ್ಷಯ್ಯ...ರ ಮೇಲೆ ಮಾನನಷ್ಟದ ಮೊಕದ್ದಮೆಯನ್ನು ತಂದಿದ್ದರಷ್ಟೆ. ಈ ಮೊಕದ್ದ...ಮೆಯಲ್ಲಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಮ|| ಬಿ. ವೆಂಕೋಬರಾಯರು ...ರ್ಯಾದಿಯ ಮತ್ತು ಸ್ಯಾನಿಟರಿ ಇನ್ಸ್‌ಪೆಕ್ಟರ್ ನರಸಿಂಗರಾಯರ ಶೈಸಿಯತ್ತು...ನ್ನು ತೆಗೆದುಕೊಂಡ ನಂತರ ಅಪರಾಧಿ ಮ|| ವಿರೂಪಾಕ್ಷಯ್ಯನವರು ಫಿರ್ಯಾ...ದಿ ಕ್ಷಮಾಪಣೆ ಕೇಳಿಕೊಂಡರು ಫಿರ್ಯಾದಿಯು ಅದನ್ನು ಅಂಗೀಕರಿಸಿ ...ಕದ್ದಮೆಯನ್ನು ರಾಜೀಮಾಡಿಕೊಂಡರು ಇದು ಈ ರೀತಿ ಇತ್ಯರ್ಥವಾ...ದ್ದು ಸಂತೋಷಕರವಾಗಿದೆ

∴

ಕಳೆದ ವಾರ ದಿವಾನ್ ಮ|| ಎಂ ವಿಶ್ವೇಶ್ವರಯ್ಯರವರು ರಾಜಧಾನಿಗೆ ...ದಮಾಡಿ ಮ್ಯುನಿಸಿಪಲ್ ಆಫೀಸು, ತಾಲ್ಲೂಕ್ ಆಫೀಸುಗಳನ್ನು ಪರಾಂಬರಿಸಿ, ...ಸ್ಟ್ ಆಫೀಸ್ ಕಟ್ಟಡಕ್ಕೆ ಪುರಪ್ರಮುಖರನ್ನು ಕರಸಿಕೊಂಡು ಒಂದು ...ಟಿಂಗ್ ನಡಿಸಿದರು ಸಂಪದಭಿವೃದ್ಧಿ ಸಮಾಜದ ಮುಖ್ಯಾಧಿಕಾರಿಗಳೂ, ...ಎ ಚಾಟರ್‌ಟನ್ ರವರೂ, ಡಾಕ್ಟರ್ ಎಲ್ ಸಿ. ಕೋಲ್‌ಮನ್ ರವರೂ, ...ಟಿ. ಡೆನ್‌ಹಮ್‌ರವರೂ, ಮ|| ಎಂ. ರಾಮರಾಯರೂ, ಮ|| ಸಿ. ಕೃಷ್ಣರಾ...ಯರೂ, ಅಲ್ಲದೆ ಮೈಸೂರು ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಗಳೂ ಹಾಜರಾಗಿ ...ಷಿ ವ್ಯವಸಾಯ, ವಿದ್ಯಾಭ್ಯಾಸ, ಕೈಗಾರಿಕೆ, ಈ ಮೊದಲಾದ ವಿಚಾರಗಳಲ್ಲಿ ...ವೃದ್ಧಿ ಕಾರ್ಯಗಳನ್ನು ಕುರಿತು ದಿವಾನ್‌ರವರು ಪ್ರಜಾಪ್ರಮುಖರೊಡನೆ ...ಲೋಚನೆಮಾಡಿ, ಅವರ ಅಭಿಪ್ರಾಯಗಳನ್ನು ಗುರುತು ಹಾಕಿಕೊಂಡರು. ...ಟಿಂಗಿನ ಪ್ರಾರಂಭದಲ್ಲಿ ದಿವಾನ್‌ರವರು ಅಲ್ಲಿ ನಡೆಯುವ ಚರ್ಚೆಗಳು ಬಹು ...ಯುಕ್ತವಾಗಿರಬೇಕೆಂದು ಅಪ್ಪಣೆಕೊಡಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಕೊತ್ತಾಪುರದ ಮ|| ಸಾಹುಕಾರ್ ಲಕ್ಷ್ಮೀನರಸಪ್ಪರವರನ್ನು ಮಧುಗಿರಿ ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ಕಾಫಿ ಪ್ಲಾಂಟರ್ ಮ|| ಚಂದ್ರೇಗೌಡ ...ನ್ನು ಚಿಕ್ಕಮಗಳೂರು ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ಮ|| ಸುಬ್ಬೇ ಗೌಡನ್ನು ಶ್ರೀರಂಗಪಟ್ಟಣದ ತಾಲ್ಲೂಕು ಕುರುಬರಸೆಟ್ಟಿಹಳ್ಳಿ ಯೂನಿಯನ್ ಪಂಚಾಯತಿ ಮೆಂಬರಾಗಿಯೂ, ರೆವ್|| ಇ ಎಸ್ ಎಡ್‌ವರ್ಡ್ಸ್ ಯವರನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸೆಲರಾಗಿಯೂ ನೇಮಿಸಿದೆ

ಮಂಡ್ಯದ ತಾಲ್ಲೂಕ್ ಅಮಲ್ದಾರ್ ಮ|| ಎ ಕೃಷ್ಣಅರಸಿನವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಜಾಸ್ತಿಮಾಡಿದೆ.

ಮಂಡ್ಯದ ತಾಲ್ಲೂಕ್ ಛಾರ್ಜು ವಹಿಸಿರುವ ಪ್ರೊಬೇಷನರ್ ಮ|| ಜಿ ಮಲ್ಲಿ...ಕಾರ್ಜುನಯ್ಯನವರು ಆ ತಾಲ್ಲೂಕಿನ ಅಮಲ್ದಾರರಾಗಿ ಬದಲಿನೇಮಿಸಲ್ಪಟ್ಟಿದಾರೆ

ಅ|| ಸರ್ಜನ್ ಮಿಸ್ ಮೇರಿ ಡಿವಾಸ್‌ಯವರಿಗೆ ಕೊಟ್ಟಿರುವ ಒಂದು ...ಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ದಿನ ಜಾಸ್ತಿ ಮಾಡಿದೆ

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ|| ಬಿ. ಕೃಷ್ಣರಾಯರಿಗೆ ...ವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹದಿನೈದು ...ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಜನರಲ್ ಆಸ್ಪತ್ರೆಯಲ್ಲಿರುವ ಅ|| ಸರ್ಜನ್ ಮ|| ಎಂ. ಜಗ...ನ್ನಾಥ ಶೆಟ್ಟಿಯವರು ಆ ಕಾಲದಲ್ಲಿ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಕೆಲಸದ ...ಭಾರವನ್ನು ವಹಿಸಿರತಕ್ಕದ್ದು.

ಮ|| ಸಿ ನರಸಿಂಹ ಅಯ್ಯಂಗಾರರನ್ನು 2 ನೇ ಕ್ಲಾಸ್ ಅ|| ಇಂಜನಿಯ...ರಾಗಿ ನೇಮಿಸಿ ಶಿವಮೊಗ್ಗಾ ಡಿವಿಜನ್‌ಗೆ ವರ್ಗಮಾಡಿದೆ

ಮೈಸೂರು ಸಂಸ್ಥಾನದಲ್ಲಿ ಕೆಲಸ ಮಾಡುವುದಕ್ಕಾಗಿ ಕಳುಹಿಸಿರುವ ರೈಲ್ವೆ ಸೂಪರಿಂಟೆಂಡಿಂಗ್ ಇಂಜನಿಯರ್ ಮಿ|| ಇ ಎ. ಎಸ್ ಬೆಲ್‌ರವರಿಗೆ ...ಇಂಡಿಯಾ ಗವರ್ನ್‌ಮೆಂಟನವರು ಏಪ್ರಲ್ ತಾ. 20 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜವೂ, ಇದರ ಕೂಡ ನಾಲ್ಕು ತಿಂಗಳ ಫರ್ಲೋ ರಜವೂ ಕೊಟ್ಟಿದೆ

ಅವರು ರಜದ ಮೇಲಿರುವಾಗ್ಗೆ ಮುಂದೆ ಹೇಳುವ ಏರ್ಪಾಡುಗಳು ಹುಕುಂ ...ಮಾಡಲ್ಪಟ್ಟಿವೆ —

ಮಿ|| ಎಚ್. ಡಿ ಕ್ರೈಸ್‌ರವರು ಮೈಸೂರು ಅರಸಿಕೆರೆ ರೈಲ್ವೆಯ ಸೂಪರಿಂ...ಟೆಂಡಿಂಗ್ ಇಂಜನಿಯರಾಗಿರತಕ್ಕದ್ದು, ಮ|| ಡಿ ಜಿ. ದಾಣಿಯವರು ಫೀಡರ್ ...ರೈಲ್ವೆ ಸೂಪರಿಂಟೆಂಡಿಂಗ್ ಇಂಜನಿಯರಾಗಿಯೂ, ರೈಲ್ವೆ ಇಲಾಖೆಯಲ್ಲಿ ...ಡರ್ ಸೆಕ್ರೆಟರಿಯವರಾಗಿಯೂ ಇರತಕ್ಕದ್ದು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಸ್ಪೆಷಲಿಸ್ಟ್ ಡಾ|| ಎಚ್. ಬಿ ...ಗ್ಯಾಸ್‌ಯವರಿಗೆ ಜನವರಿ ತಾ 9 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಆ ಕಾಲದಲ್ಲಿ ಅ|| ಸರ್ಜನ್ ಮ|| ಎಸ್ ಕೆ ಹನುಮಂತ...ರಾಯರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು

ಕಣ್ಣಾಗಾಲದ ದಂಗೆ ಮೊಕದ್ದಮೆ.

ಹೊಸದಾಗಿ ಆರು ಮಂದಿಗೆ ಶಿಕ್ಷೆಯಾಯಿತು

ಈ ನರಸೀಪುರದ ತಾಲ್ಲೂಕು ಮೂಗೂರಿನವರು ಕಣ್ಣಾಗಾಲಕ್ಕೆ ಗುಂಪು ...ಗೂಡಿಕೊಂಡು ಹೋಗಿ ಕತ್ತಿರಕ್ಕೃತ್ಯಗಳನ್ನು ನಡಿಸಿದ ಅಪರಾಧಿಗಳ ಪೈಕಿ ಮೊದಲನೇ ಗುಂಪಿನವರನ್ನು ಸರ್ಕಾರದವರು ಹಿಡಿದು ಶಿಕ್ಷೆವಿಧಿಸಿದರಷ್ಟೆ. ಆ ಗುಂಪಿಗೆ ಸೇರಿದ್ದು ಸಿಕ್ಕದೆ ತಲೆತಪ್ಪಿಸಿಕೊಂಡು ಹೋಗಿದ್ದವರ ಪೈಕಿ ಪೊಲೀಸಿನವರು ಚಿಕ್ಕಪ್ಪಯ್ಯನನ್ನು 3-6-1913 ರಲ್ಲೂ, ಪುಟ್ಟಸುಬ್ಬೇಗೌಡನ ಚಿಕ್ಕಮಗ ಚಿಕ್ಕ ಪುಟ್ಟಸ್ವಾಮಿಯನ್ನು 24-7-1913 ರಲ್ಲೂ, ಅಬ್ದುಲ್‌ರಹೀಮನನ್ನು 21-9-1913 ರಲ್ಲೂ ಪತ್ತೆಮಾಡಿ ಹಿಡಿದರು, ಪುಟ್ಟಸುಬ್ಬೇಗೌಡನ ತಮ್ಮ ಅಂಬ್ಲಿ ಮಾದಪ್ಪ, ಸಂಬಪ್ಪನ ಬಸಪ್ಪ, ಚಿಕ್ಕ ರುದ್ರಪ್ಪ, ಕಾಡಮ್ಮನ ಮಾದಯ್ಯ, ಕಣ್ಣಾಗಾಲದ ಗುಂಡಪ್ಪ, ಈ 5 ಮಂದಿಯೂ ಕೋರ್ಟಿಗೆ ತಾವಾಗಿಯೇ ಹಾಜರಾಗಿ ಸರ್ಕಾರದವರ ವಶವಾದರು. ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಈ 8 ಮಂದಿ ಅಪರಾಧಿಗಳನ್ನೂ ಮೈಸೂರು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು

ಅ|| ಸೆಷನ್ಸ್ ಜಡ್ಜ್ ಮ|| ಬಿ. ಸುಬ್ಬಣ್ಣನವರು ಈ ಮೊಕದ್ದಮೆಯ ದರ್ಯಾಫ್ತಿಯನ್ನು ತಾ. 23-3-1914 ರಲ್ಲಿ ಪ್ರಾರಂಭಮಾಡಿ, ಇದೇ ಏಪ್ರೆಲ್ ತಾ. 20 ಕ್ಕೆ ಪೂರೈಸಿ, ತಾ. 25 ನೇ ಶನಿವಾರ ಜಡ್ಜ್‌ಮೆಂಟು ಹೇಳಿದರು ಈ ಮೊಕದ್ದಮೆಯಲ್ಲಿ ಸರ್ಕಾರದ ತರಫು ಪಬ್ಲಿಕ್ ಪ್ರಾಸಿಕ್ಯೂಟರ್ ಮ|| ಬಿ. ಕೃಷ್ಣಮಾಚಾರ್ಯರು 62 ಸಾಕ್ಷಿಗಳನ್ನು ವಿಚಾರಣೆಮಾಡಿದರು. 2,3,4,5 ನೇ ಅಪರಾಧಿಗಳ ಪಕ್ಷದಲ್ಲಿ ಅಡ್ವೊಕೇಟ್ ಮ|| ಎ. ರಾಮಣ್ಣನವರು ವಕಾಲತ್ತು ಪಡೆದು ಅಪರಾಧಿಗಳ ಪರವಾಗಿ ಬಂದಿದ್ದ 23 ಮಂದಿಯ ಪೈಕಿ 16 ಜನ ಸಾಕ್ಷಿಗಳನ್ನು ದರ್ಯಾಫ್ತಿ ಮಾಡಿಸಿದರು. ಉಳಿದ 4 ಜನ ಅಪರಾಧಿಗಳು ವಕೀಲರನ್ನು ಇಟ್ಟಿರಲಿಲ್ಲ.

ಮ|| ಗಳಾದ ಉಗ್ರಪ್ಪನವರು, ನರಸಿಂಗರಾಯರು, ಬಸಪ್ಪನವರು, ಪುಟ್ಟರಾಮಯ್ಯನವರು ಅಸೆಸರುಗಳಾಗಿದ್ದು ಈ ಮೊಕದ್ದಮೆಯ ವಿಚಾರಣೆಯೆಲ್ಲಾ ಪೂರೈಸಿದ ಮೇಲೆ ಏಕವಾಕ್ಯತೆಯಿಂದ 1,3,5,6,7 ನೇ ಅಪರಾಧಿಗಳು ತಕ್ಸೀರ್ ಮಾಡಿರುವುದಾಗಿಯೂ; 2 ನೇ ಅಪರಾಧಿಯ ಮೇಲೆ ತಕ್ಸೀರು ರುಜುವಾತಾಗ ಲಿಲ್ಲವೆಂದೂ, 4 ನೇ ಅಪರಾಧಿ ತಕ್ಸೀರು ನಡಿಸಿದನೆಂಬ ಭಾಗದಲ್ಲಿ ರುಜುವಾತು ಸಾಲದೆಂದೂ ಅಭಿಪ್ರಾಯಪಟ್ಟರು; 8 ನೇ ಅಪರಾಧಿಯ ವಿಷಯದಲ್ಲಿ ಅಸೆಸರುಗಳ ಪೈಕಿ ಕೆಲವರು ಅವನು ತಕ್ಸೀರ್ ಮಾಡಿರುತ್ತಾನೆಂದೂ, ಉಳಿದವರು ಅದು ಅನುಮಾನವಾಗಿದೆ ಎಂದೂ ಭಿನ್ನಾಭಿಪ್ರಾಯವನ್ನು ಹೇಳಿದರು.

ಅ|| ಸೆಷನ್ಸ್ ಜಡ್ಜ್ ಮ|| ಬಿ ಸುಬ್ಬಣ್ಣನವರು ಕಳೆದ ಶನಿವಾರ ಹೇಳಿದ ಜಡ್ಜ್‌ಮೆಂಟಿನ ಮುಖ್ಯಾಂಶವೇನೆಂದರೆ.—(1) ಚಿಕ್ಕಪುಟ್ಟಸ್ವಾಮಿ, ಸಂಬಪ್ಪನ ಬಸಪ್ಪ, ಇವರಿಬ್ಬರಿಗೂ ಖುಲಾಸ್ ಆಯಿತು; (2) ಚಿಕ್ಕಪ್ಪಯ್ಯ, ಅಬ್ದುಲ್ ರಹೀಂ, ಕಣ್ಣಾಗಾಲದ ಗುಂಡಪ್ಪ, ಈ ಮೂರು ಮಂದಿಗೂ ತಲಾ ಎರಡು ವರುಷ ಕಠಿಣಸಜಾ ಆಯಿತು, (3) ಚಿಕ್ಕರುದ್ರಪ್ಪ, ಕಾಡಮ್ಮನ ಮಾದಯ್ಯ, ಇವರಿಗೆ ತಲಾ ಒಂದು ವರುಷ ಕಠಿಣಸಜಾ ಆಯಿತು, (4) ಪುಟ್ಟಸುಬ್ಬೇಗೌಡನ ತಮ್ಮ ಅಂಬ್ಲಿಮಾದಪ್ಪನಿಗೆ ಆರು ತಿಂಗಳ ಕಠಿಣಸಜಾ ಆಯಿತು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಆಡಿಟರುಗಳ ರಿಪೋರ್ಟಿನಿಂದ ಮೊಹತರ್ಫಾ ಕಂದಾಯಗಳು 9 ತಿಂಗಳಿಗೆ 26,000 ರೂಪಾಯಿ ಮಾತ್ರ ವಸೂಲಾಗಿ ಇನ್ನೂ 47,750 ರೂಪಾಯಿ ತನಕ ಬಾಕಿ ನಿಂತಿವೆ ಎಂದೂ, ಕಳೆದ 10 ವರುಷಗಳಲ್ಲಿ 40,000 ರೂಪಾಯಿ ಕಂದಾಯಗಳು ರವಿಮಾಫ್ ಆಗಿವೆಯೆಂದೂ ತಿಳಿಯಿತು ಇದಕ್ಕೆ ಆಫೀಸಿನವರು ಚಟುವಟಿಕೆಯಾಗಿಯೂ ಮುತುವರ್ಜಿಯಿಂದಲೂ ವಸೂಲಿ ಕೆಲಸ ನಡಿಸಲಿಲ್ಲವೆಂದೂ, ಇನ್ನು ಮುಂದೆ ಈ ಬಾಬನ್ನು ಕ್ರಮಪಡಿಸುತ್ತೇವೆಂದೂ ಪ್ರೆಸಿಡೆಂಟರು ಸಮಾಧಾನ ಹೇಳಿದರು ಆಡಿಟರುಗಳು ರಾಜಧಾನಿಯಲ್ಲಿ ಸಾವಿರಾರು ಬೈಸಿಕಲುಗಳಿದ್ದರೂ ಅವುಗಳ ತೆರಿಗೆ ವಸೂಲಾಗುವುದು ಬಹಳ ಕೊಂಚವಾಗಿದೆಯೆಂದೂ, ಲೆಕ್ಕತನಿಖೆಕಾಲದಲ್ಲಿ ಗುಮಾಸ್ತೆಯು ಸುಮಾರು ಇಷ್ಟಿರಬಹುದೆಂದು ಹೇಳಿದನೆಂದೂ ತಿಳಿಸಿದರು. ಆಡಿಟರುಗಳಿಗೆ ಗುಮಾಸ್ತೆಯು ಆ ರೀತಿ ಹೇಳಿದ್ದು ಸರಿಯಲ್ಲವೆಂದು ಮ|| ರಂಗಯ್ಯಂಗಾರ್ರು ಆಕ್ಷೇಪಣೆ ಮಾಡಿದ್ದಕ್ಕೆ ಪ್ರೆಸಿಡೆಂಟರು ಆ ಗುಮಾಸ್ತೆಗೆ ತಕ್ಕ ಪ್ರತೀಕಾರ ಮಾಡುವುದಾಗಿ ಹೇಳಿದರು. ಆಡಿಟರುಗಳು ಎರಡು ಮೊಹಲ್ಲೆಗಳಲ್ಲಿ ಕನ್ಸರ್ವೆನ್ಸಿ ಇಲಾಖೆಯವರು ದಿನವಹಿ ಕಿತ್ತಲು ಗುಡಿಸುವುದಕ್ಕೆ ಮನೆಯವರಿಂದ ಬಹಳ ಸ್ವಲ್ಪ ಹಣ ವಸೂಲಾಗುತ್ತಿದೆಯೆಂದೂ, ಸಿಬ್ಬಂದಿ ಖರ್ಚು ತುಂಬಾ ಹೆಚ್ಚಾಗಿದೆಯೆಂದೂ, ಈ ವಿಚಾರವನ್ನು ಕ್ರಮಪಡಿಸಬೇಕೆಂದೂ ರಿಪೋರ್ಟಿನಲ್ಲಿ ಸೂಚಿಸಿದ್ದರು. ಈ ವಿಚಾರವು ಚರ್ಚೆಯಾಗುವಲ್ಲಿ ಮ|| ಅಂಬಳೆ ಪಂಡಿತರೂ, ಮ|| ರಂಗಯ್ಯಂಗಾರರೂ ಹೆಲ್ತ್ ಇಲಾಖೆಯವರ ಕರ್ತವ್ಯದಲ್ಲಿ ಹಲವು ಲೋಪ ದೋಷಗಳನ್ನು ಎತ್ತಿಹಾಕಿ, ಪ್ರಜೆಗಳಿಗೆ ನ್ಯಾಯವಾದ ಸೌಕರ್ಯಗಳನ್ನು ಕಲ್ಪಿಸಿಕೊಡದೆ ಅವರು ರೂಲಿಸಿಗೆ ವಿರೋಧವಾಗಿ ನಡೆದರೆಂದು ಅವರ ಮೇಲೆ ಮೊಕದ್ದಮೆ ಮಾಡುವುದೂ, ಮ್ಯಾಜಿಸ್ಟ್ರೇಟರಿಂದ ಜುಲ್ಮಾನೆ ಹಾಕಿಸುವುದೂ ಯೋಗ್ಯವಲ್ಲವೆಂದು ಆಕ್ಷೇಪಣೆ ಮಾಡಿದರು ಪ್ರೆಸಿಡೆಂಟರು ಈ ವಿಚಾರವನ್ನೆಲ್ಲಾ ಪುನರಾವರ್ತಿ ಆಲೋಚಿಸಿ ಸರಿಪಡಿಸುತ್ತೇವೆಂದೂ, ಇನ್ನು ಮುಂದೆ ಆಡಿಟರುಗಳು ವೈಸ್ ಪ್ರೆಸಿಡೆಂಟರ ಸಮ್ಮುಖದಲ್ಲೇ ಲೆಕ್ಕಪತ್ರಗಳನ್ನು ತನಿಖೆ ಮಾಡಬಹುದೆಂದೂ ಒಪ್ಪಿಕೊಂಡರು.

ರಸ್ತೆ ಚರಂಡಿ ಮುಂತಾದ ಚಿಲ್ಲರೆ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ನಾಲ್ಕು ಗುಂಪು (ಗ್ಯಾಂಗು) ಗಳ ಸಿಬ್ಬಂದಿಯನ್ನು ತಲಬಿಗೆ ಇಟ್ಟುಕೊಂಡಿದಾರೆ. ಇವರು ಮಾಡುವ ಕೆಲಸಗಳು ತೃಪ್ತಿಕರವಾಗಿಲ್ಲವೆಂದೂ, ಆ ಪೈಕಿ ಎರಡು ಗ್ಯಾಂಗುಗಳನ್ನು ವಜಾ ಮಾಡಬೇಕೆಂದೂ ತೀರ್ಮಾನವಾಯಿತು —ಸರ್ಕಾರದವರು ಒಪ್ಪಿ ಕಳುಹಿಸಿದ ಮ್ಯುನಿಸಿಪಲ್ ಮ್ಯಾನ್ಯುಯಲ್ ಪ್ರಕಾರ ಮ್ಯುನಿಸಿಪಾಲಿಟಿಯಲ್ಲಿ ಜಾರಿಯಲ್ಲಿಡಬೇಕೆಂಬ ವಿಷಯ ಚರ್ಚೆಯಾಗಿ ಅದು ಯಾವಯಾವ ಭಾಗದಲ್ಲಿ ಮೈಸೂರು ಮ್ಯುನಿಸಿಪಾಲಿಟಿಗೆ ಸಮಂಜಸವಾಗಿ ಕಂಡುಬರುವುದೋ ಅಂಥಾ ಭಾಗಗಳನ್ನು ಜಾರಿಯಲ್ಲಿಟ್ಟುಕೊಂಡು, ಸರಿಯಾಗಿಲ್ಲದ ಭಾಗವನ್ನು ಸರ್ಕಾರಕ್ಕೆ ಆಗಾಗ್ಗೆ ಅರಿಕೆಮಾಡಿ ತಿದ್ದಿಸಿಕೊಳ್ಳಬೇಕೆಂದು ತೀರ್ಮಾನಮಾಡಿದರು —ಮಹಾರಾಜರವರ ವರ್ಷಂತಿ ಉತ್ಸವಕಾಲದಲ್ಲಿ ಸಂಸ್ಥಾನಾದ್ಯಂತ ಲೋಕಲ್ ಬೋರ್ಡುಗಳ ಪ್ರತಿನಿಧಿಗಳನ್ನು ರಾಜಧಾನಿಗೆ ಬರಮಾಡಿಕೊಂಡು ಒಂದು ಮಹಾಸಭೆ ನಡಿಸಬೇಕೆಂದು ಹಿಂದೆ ಮೆಂಬರುಗಳು ಒಪ್ಪಿ ಸರ್ಕಾರದವರನ್ನು ಕೇಳಿದ್ದರು. ಗವರ್ನ್‌ಮೆಂಟಿನವರು ಸದ್ಯದಲ್ಲಿ ಈ ಸಭೆಯನ್ನು ನಡಿಸಬೇಕಾದದ್ದಿಲ್ಲವೆಂದು ಅಪ್ಪಣೆ ಕೊಡಿಸಿರುತ್ತಾರೆ —ಕಾರಂಜಿ ಕೆರೆ ಏರಿಯನ್ನು ಸಮಮಾಡಿ ಅವಶ್ಯವಾದ ಕಾಮಗಾರಿ ಮಾಡಿಸಿದ್ದಕ್ಕೆ ಖರ್ಚಾಗಿರುವ 7,331 ರೂಪಾಯನ್ನು ಮ್ಯುನಿಸಿಪಾಲಿಟಿಯವರೂ, ಟ್ರಸ್ಟ್ ಬೋರ್ಡಿನವರೂ ಸಮವಾಗಿ ಹಂಚಿಕೊಂಡು ಕೊಡಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದರು. ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ ಕಾಮಗಾರಿಯ ಅಂದಾಜಾ ಪಟ್ಟಿಯೇ ತಮಗೆ ತಿಳಿಸಲಿಲ್ಲವೆಂದೂ, ಆ ವಿಷಯದಲ್ಲಿ ತಮ್ಮ ಆಲೋಚನೆಯನ್ನೂ ಕೇಳಲಿಲ್ಲವೆಂದೂ, ಇದೂ ಅಲ್ಲದೆ ಮ್ಯುನಿಸಿಪಾಲಿಟಿಗೆ ಅಷ್ಟು ಹಣ ಕೊಡಲು ಚೈತನ್ಯವಿಲ್ಲವೆಂದೂ, ಆದಕಾರಣ ಆ ಖರ್ಚನ್ನೆಲ್ಲಾ ಟ್ರಸ್ಟ್ ಬೋರ್ಡಿನವರೇ ವಹಿಸಿಕೊಳ್ಳಬೇಕೆಂದೂ ತೀರ್ಮಾನಮಾಡಿದರು

ಬೈಸಿಕಲ್ ಮತ್ತು ಗಾಡಿ ಕಂದಾಯವನ್ನು ಹಿಡಿದು ವಸೂಲ್ಮಾಡುವ ಗುಂಡುರಾಯರಿಗೆ ತಿಂಗಳಿಗೆ 5 ರೂಪಾಯಿಯಂತೆ ಅಲೋಯನ್ಸು ಕೊಡಬಹುದೆಂದು ಸ್ಯಾಂಕ್ಷನ್ ಆಯಿತು —ಸುಬ್ರಾಯನ ಕೆರೆಯ ಪೂರ್ವಕ್ಕಿರುವ ಸುಮಾರು ಒಂದು ಎಕರೆ ಖಾಲಿ ನಿವೇಶನವನ್ನು ವನೌಷಧಿಗಳ ಸಾಗುವಳಿಗಾಗಿ ಸರ್ಕಾರದವರಿಗೆ ವಹಿಸಿಬಿಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು — ಪ್ರೆಸಿಡೆಂಟರ ತಲಬಿನಲ್ಲಿ ಮೂರನೇ ಒಂದಂಶವನ್ನು ಮ್ಯುನಿಸಿಪಾಲಿಟಿಯವರೂ, ಎರಡು ಭಾಗವನ್ನು ಟ್ರಸ್ಟ್ ಬೋರ್ಡಿನವರೂ ವಹಿಸಿಕೊಂಡು ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿದ್ದದ್ದನ್ನು ಮುಂದಿನ ಜುಲೈನಿಂದ ಜಾರಿಗೆ ತರಬೇಕೆಂದು ಮೆಂಬರುಗಳು ಸಮ್ಮತಿಪಟ್ಟರು —ರೆವ್. ಸಾಡೇ ಸಾಹೇಬರು ಮಿಷನ್ ಆಸ್ಪತ್ರೆ ಬಳಿ ಇರುವ ಖಾಲಿ ನಿವೇಶನದಲ್ಲಿ ಆ ಆಸ್ಪತ್ರೆಗೆ ಬೇಕಾದ ಕೆಲವು ಕಟ್ಟಡಗಳನ್ನು ಕಟ್ಟಬೇಕಾಗಿರೋಣದರಿಂದ ಇಂಥಾ ಪರಹಿತಕಾರ್ಯಕ್ಕೆ ಮ್ಯುನಿಸಿಪಾಲಿಟಿಯವರೂ ಸಹಾಯಮಾಡಬೇಕೆಂದೂ, ಆ ಖಾಲಿ ನಿವೇಶನಕ್ಕೆ ಹಾಕಿರುವ ರೂ. 101-12-0 ಕಂದಾಯವನ್ನು ಮಾಫಿ ಬಿಡಬೇಕೆಂದೂ ಬರೆದಿದ್ದರು. ಮೆಂಬರುಗಳು ಆ ಕಾಗದವನ್ನು ಓದಿಸಿ, ರೆವ್. ಸಾಡೇ ಸಾಹೇಬರು ಆ ಖಾಲಿ ನಿವೇಶನದಲ್ಲಿ 1915ನೇ ಜೂನ್ ಅಖೈರಿನೊಳಗಾಗಿ ಕಟ್ಟಡವನ್ನು ಕಟ್ಟಬೇಕೆಂದೂ, ಅದುವರೆಗೆ ಕಂದಾಯವನ್ನು ವಸೂಲ್ಮಾಡಬೇಕಾದದ್ದಿಲ್ಲವೆಂದೂ, ಕಟ್ಟಡಗಳನ್ನು ಕಟ್ಟಿಕೊಂಡ ಪಕ್ಷದಲ್ಲಿ ಈ ಕಂದಾಯವನ್ನು ರಿಮಿಷನ್ ಮಾಡತಕ್ಕದ್ದೆಂದೂ ಇತ್ಯರ್ಥಮಾಡಿದರು —ಊರನಗರೆ ಬಾಗಿಲಲ್ಲಿದ್ದ ಕ್ಲಾರ್ಕ್ ಛತ್ರವನ್ನು ಸರ್ಕಾರದವರು ವಹಿಸಿಕೊಂಡು, ಕೊಟ್ಟಿರುವ 3,700 ರೂಪಾಯನ್ನು ವಿನಿಯೋಗಿಸಿ ಬಡವರು ಇಳುಕೊಳ್ಳುವುದಕ್ಕೆ ಅನುಕೂಲವಾದ ಕಟ್ಟಡವನ್ನು ಅದೇ ಹೆಸರಿನ ಮೇಲೆ ಕಟ್ಟಿಸಬೇಕೆಂದು ತೀರ್ಮಾನವಾಯಿತು.—ದೇವರಾಜ ಮಾರ್ಕೆಟ್ಟಿನೊಳಗೆ ದಿನಸಿ ಮೊದಲಾದ ಅಂಗಡಿಗಳನ್ನು 7 ರೂಪಾಯಿ ಬಾಡಿಗೆ ನಿಗದಿಮಾಡಿ 1915ನೇ ಜೂನ್ ಅಖೈರುವರೆಗೆ ಬಾಡಿಗೆದಾರರಿಗೆ ವಹಿಸಬಹುದೆಂದು ಇತ್ಯರ್ಥವಾಗಿದೆ.—ಟ್ರಸ್ಟ್ ಬೋರ್ಡನ್ನೂ ಮ್ಯುನಿಸಿಪಾಲಿಟಿಯನ್ನೂ ಒಂದೇ ಆಫೀಸಾಗಿ ಮಾಡಬಹುದೇ ಎಂದು ಗವರ್ನ್‌ಮೆಂಟಿನವರು ಪ್ರಶ್ನೆಮಾಡಿದ್ದರು. ಮೆಂಬರುಗಳು ಇನ್ನು ಕೆಲವು ಕಾಲ ಅಂದರೆ ದೊಡ್ಡ ದೊಡ್ಡ ಪುರಾಭಿವೃದ್ಧಿ ಕಾಮಗಾರಿಗಳೂ ಕಾರ್ಯಗಳೂ ಎಲ್ಲಾ ಪೂರೈಸುವ ತನಕ ಎರಡು ಆಫೀಸುಗಳನ್ನೂ ಪ್ರತ್ಯೇಕವಾಗಿಯೇ ಇಟ್ಟಿರುವುದು ಅವಶ್ಯವೆಂದು ತೀರ್ಮಾನ ಮಾಡಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಪರ್ಷಿಯಾ ಎಂಬ ಜಹಜು 18,78,750 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ.

∴

ಆರ್ಯ ವೈಶ್ಯರ ಏಳನೇ ಮಹಾಸಭೆಯು ಎಲ್ಲೋರ್ ಪಟ್ಟಣದಲ್ಲಿ ಮೇ ತಾ. 20 ರಿಂದ ಪ್ರಾರಂಭವಾಗಿ ಮೂರು ದಿನ ನಡೆಯುವುದಾಗಿದೆ.

∴

ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮನಿವಾರಣೆಯ ಕಾರ್ಯಗಳಿಗೋಸ್ಕರ ಹಿಂದುಸ್ಥಾನದ ಕ್ಷಾಮನಿವಾರಣಾ ಧರ್ಮ ಫಂಡಿನಿಂದ 50,000 ರೂಪಾಯನ್ನು ಕೊಟ್ಟಿದಾರೆ

∴

ಚಿತ್ತಗಾಂಗದಲ್ಲಿ ಬಾಬು ಜಗದೀಂದ್ರ ಘೋಷ್ ಎಂಬ ವಕೀಲನನ್ನು ಯಾರೋ ರಾತ್ರಿ 8 ಗಂಟೆ ಸಮಯದಲ್ಲಿ ಆತನ ಮನೆಯೊಳಗೆ ಗುಂಡು ಹಾಕಿ ಕೊಂದುಬಿಟ್ಟಿದಾರೆ.

∴

ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ತೇಸಮಲಾಯಿ ಎಂಬ ಸ್ಥಳದಲ್ಲಿ ಕಳೆದ ವಾರ ದಿವಾನ್‌ರವರು ದೀಪದ ಕಡ್ಡಿ ತಯಾರಾಗುವ ಕಾರ್ಖಾನೆಯ ಹೊಸ ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆಮಾಡಿದರು.

∴

ತಿನ್ನವೆಲ್ಲಿಯಲ್ಲಿ ಒಬ್ಬ ಹಿಂದುವು ರೋಮಾಯ ಕ್ರೈಸ್ತಹೆಣ್ಣನ್ನು ಕರೆದುಕೊಂಡುಬಂದು ಹಿಂದೂ ಆಚರಣೆಯಂತೆ ಮದುವೆ ಮಾಡಿಕೊಂಡನು. ಇದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜಿಯವರು ಆ ಹಿಂದುವಿಗೂ, ಹೆಣ್ಣಿನ ತಂದೆಗೂ, ಆರು ತಿಂಗಳಂತೆಯೂ, ಹೆಣ್ಣಿಗೆ ಎರಡು ತಿಂಗಳೂ ಸಜಾ ವಿಧಿಸಿರುತ್ತಾರೆ.

∴

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಕ್ಯಾನಿಂಗ್ ಟೌನ್ ಎಂಬ ವಿಭಾಗದಲ್ಲಿ ಕಳೆದ ವಾರ ಬೆಂಕಿಬಿದ್ದು 100 ಮನೆಗಳು ಸುಟ್ಟುಹೋದವು. ಸಬ್ ರೆಜಿಸ್ಟ್ರಾರ್ ಆಫೀಸು, ಡಾಕ್ಟರ್ ಆಫೀಸು, ಫಾರೆಸ್ಟ್ ಆಫೀಸು, ಬಜಸ್ ಮಹಲ್ ಮಾರ್ಕೆಟ್ಟು, ಈ ಕಟ್ಟಡಗಳು ಬೆಂದುಹೋಗಿ, ನೂರಾರು ಜನರು ಮನೆಯಿಲ್ಲದೆ ಅಲೆಯುವಂತಾಗಿದೆ.

∴

ಕಾಶೀ ಪಟ್ಟಣದಲ್ಲಿ ಪೊಲೀಸಿನವರ ಕಾಟ ಹೆಚ್ಚಾಗಿದೆಯೆಂದೂ, ಅದನ್ನು ಪರಿಹರಿಸಿಕೊಡಬೇಕೆಂದೂ, ಅದುವರೆಗೆ ಕೆಲಸಕ್ಕೆ ಬರುವುದಿಲ್ಲವೆಂದೂ ಹೇಳಿ ಮ್ಯುನಿಸಿಪಲ್ ಕಚರಾ ಗುಡಿಸುವವರೂ, ಚಂಬಾರರೂ, ನೀರು ಹೊರುವವರೂ ನಿಂತು ಬಿಟ್ಟಿದಾರೆ. ಬೀದಿಗಳಲ್ಲಿ ಕಚರಾ ನಿಂತು ತುಂಬಾ ಹೇಸಿಕೆಯಾಗಿದೆ ಮ್ಯುನಿಸಿಪಲ್ ಅಧಿಕಾರಿಗಳು ಆ ಜನರಿಗೆ ವಿವೇಕ ಹೇಳಿದರೂ ಅವರು ಕೆಲಸದ ಮೇಲೆ ಬಂದಿಲ್ಲ.

∴

ಕಳೆದ ತಾ. 18ಕ್ಕೆ ಅಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 13,151 ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು; ಅಂದರೆ, ಹಿಂದಿನ ವಾರಕ್ಕಿಂತ 13,17 ಮಂದಿ ಹೆಚ್ಚು. ಕರಾಚಿ ಪಟ್ಟಣದಲ್ಲಿ ಈಗ ಈ ಉಪದ್ರವು ಬಹಳ ಕಠಿಣವಾಗಿದೆ ಪ್ರಜೆಗಳು ಊರುಬಿಟ್ಟು ಕ್ಯಾಂಪುಗಳಿಗೆ ಹೋಗಿದ್ದಾರೆ. ಅಲ್ಲಿನ ಪ್ರಾಣಿಗಳ ಆಲಯದಲ್ಲಿ ಕೆಲವು ಮೃಗಗಳೂ ಪ್ರಾಣಿಗಳೂ ಈ ರೋಗ ತಗಲಿ ಸತ್ತುಹೋದವು.

∴

ಪೂನಾ ಪಟ್ಟಣದ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರು ಒಬ್ಬ ಪಠಾಣನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಕೊಂಡು ಅವನ ಮೇಲೆ ತರಲ್ಪಟ್ಟ ಕಳುವಿನ ಮೊಕದ್ದಮೆಯನ್ನು ದರ್ಯಾಫ್ತಿ ಮಾಡುತ್ತಿದ್ದಾಗ ಆ ಪಠಾಣನು ಹ್ಯಾಗೋ ತಪ್ಪಿಸಿಕೊಂಡು ಕೋರ್ಟಿನಿಂದ ಹೊರಟುಹೋದನು. ಪೊಲೀಸಿನವರು ಸ್ವಲ್ಪ ಹೊತ್ತಿನ ಮೇಲೆ ಅಪರಾಧಿ ಇಲ್ಲದ್ದನ್ನು ಕಂಡು ತಲಾಷ್ ಮಾಡಲಾರಂಭಿಸಿದರು ಇನ್ನೂ ಅವನು ಸಿಕ್ಕಿ ಇಲ್ಲ

∴

ಕಲ್ಕತ್ತಾ ಪಟ್ಟಣದ ನೀಮ್ ಕೋಲಾ ಘಾಟ್ ಎಂಬ ಬೀದಿಯಲ್ಲಿರುವ ಬಾಬು ಯೋಗೀಂದ್ರನಾಥ ಲಾಲ್ ಎಂಬ ಪುಣ್ಯವಂತನಾದ ಜಮೀನ್‌ದಾರನು ಖಾಯಿಲೆ ಇದ್ದು ಸಮರಾತ್ರಿಯಲ್ಲಿ ತೀರಿಹೋದನು. ಆತನ ಹೆಂಡತಿ 26 ವಯಸ್ಸಿನ ದೇವಿ ದಾಸಿದಾಸಿ ಎಂಬಾಕೆ ಪತಿವಿಯೋಗ ದುಃಖವನ್ನು ಸಹಿಸಲಾರದೆ ಒಂದು ಕೋಟಡಿಗೆ ಹೋಗಿ ಸೀಮೆಯೆಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿ ಆತ್ಮಹತ್ಯಮಾಡಿಕೊಂಡಳು ಇನ್ನೊಂದು ಬೀದಿಯಲ್ಲಿ ಗಂಡಹೆಂಡರಿಗೆ ವಾಗ್ವಾದಹುಟ್ಟಿ ಹೆಂಡತಿಯು ಸೀಮೆಯೆಣ್ಣೆ ಹಾಕಿಕೊಂಡು ಬೆಂಕಿಹಚ್ಚಿಕೊಂಡು ಮೃತಪಟ್ಟಳು. ಮತ್ತೊಂದು ಕಡೆ ಒಬ್ಬ ಪ್ರಾಯಸ್ಥನು ತನ್ನ ಹೆಂಡತಿ ಸತ್ತ ದುಃಖವನ್ನು ಸಹಿಸಲಾರದೆ ಮೇಲ್ಕಂಡಂತೆಯೇ ಆತ್ಮಹತ್ಯಮಾಡಿಕೊಂಡನು.

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘವು

ಮೊಕ್ಕಾಂ—ಹರಿಹರ

ಈ ತಿಂಗಳು ತಾ 12 ರ ಲಾಗಾಯಿತು ಹರಿಹರದಲ್ಲಿ ವಿದ್ಯಾ ಸಂಬಂಧವಾದ ಪ್ರದರ್ಶನೋತ್ಸವವು ನಡಿಸಲ್ಪಟ್ಟಿತು ಇದಕ್ಕಾಗಿ ಡಿಸ್ಟ್ರಿಕ್ಟಿನ ವಿದ್ಯಾ ಇಲಾಖೆಯ ಎಲ್ಲಾ ಆಫೀಸರುಗಳೂ, ಚಳ್ಳಕೆರೆ, ಹಿರಿಯೂರು, ಹೊಳಲಕೆರೆ, ದಾವಣಗೆರೆ, ಹರಿಹರ, ಚಿತ್ರದುರ್ಗದ ಎ ವಿ ಸ್ಕೂಲ್ ಹೆಡ್ ಮಾಸ್ಟರುಗಳೂ, ಅ|| ಮಾಸ್ಟರುಗಳೂ, ದಾವಣಗೆರೆ ಹರಿಹರದ ತಾಲ್ಲೂಕುಗಳ ಎಲ್ಲಾ ಹೋಬಳಿ ಸ್ಕೂಲ್ ಮಾಸ್ಟರುಗಳೂ ದಯಮಾಡಿಸಿದ್ದರು ಎಲ್ಲಾ ಒಟ್ಟು 90 ಜನಗಳ ವರಿವಿಗೂ ಸೇರಿತ್ತು ಪ್ರದರ್ಶನ ಶಾಲೆಯಲ್ಲಿ ಸುಮಾರು 25 ಸ್ಕೂಲುಗಳವರು ವಿದ್ಯಾಸಂಬಂಧದ ಸಾಮಾನುಗಳನ್ನು ತಂದು ಇರಿಸಿದ್ದರು ಅನೇಕ ವಸ್ತುಗಳು ಚಿತ್ರದುರ್ಗದ ಎಡ್ಯುಕೇಷನಲ್ ಮ್ಯೂಜಿಯಂನಿಂದ ಕಳುಹಿಸಲ್ಪಟ್ಟಿದ್ದವು ತಾ 12 ನೇ ಭಾನುವಾರ ಮಧ್ಯಾಹ್ನ 5 ಘಂಟೆಗೆ ಪ್ರದರ್ಶನ ಮಂದಿರದ ಬಾಗಿಲು ತೆರೆಯಲ್ಪಟ್ಟಿತು ಮುಂಭಾಗದ ಹಾಲಿನಲ್ಲಿ ವ್ಯವಸಾಯ ಸಂಬಂಧವಾದ ವಸ್ತುಗಳೂ, ಅದರ ಎಡಕ್ಕೂ ಬಲಕ್ಕೂ ಇರುವ ಮಂದಿರಗಳಲ್ಲಿ ಒಂದರಲ್ಲಿ ವಿದ್ಯಾಸಂಬಂಧವಾದದ್ದು, ಇನ್ನೊಂದರಲ್ಲಿ ಕೈಗಾರಿಕೆ ಸಂಬಂಧವಾದ ವಸ್ತುಗಳೂ ಪ್ರದರ್ಶನ ಮಾಡಿದ್ದರು ಮುಖ್ಯವಾಗಿ ವಿದ್ಯಾಸಂಬಂಧದಲ್ಲಿ ಭೂಗೋಳ, ಚರಿತ್ರೆ, ಬರವಣಿಗೆ, ಡ್ರಾಯಿಂಗ್, ಬ್ರಷ್‌ವರ್ಕ್, ಪೇಪರ್ ಫೋಲ್ಡಿಂಗ್ ಈ ವಿಷಯಕವಾದ ವಸ್ತುಗಳು ಬಹಳವಾಗಿದ್ದವು ನಾನಾ ವಿಧವಾದ ಕೈಗಾರಿಕೆ ವಸ್ತುಗಳು ಕೆಲವು ಹೆಣ್ಣುಮಕ್ಕಳ ಸ್ಕೂಲಿನಿಂದಲೂ ಬಂದಿದ್ದವು ನವೀನ ಬೋಧನ ಕ್ರಮಕ್ಕೆ ತಕ್ಕಂತೆ ಇದ್ದವು ತಾ 13 14 ಈ ಎರಡು ದಿನಗಳಲ್ಲಿ ಕ್ರಮವಾಗಿ ಎಲ್ಲಾ ಉಪಾಧ್ಯಾಯರುಗಳೂ ಚೆನ್ನಾಗಿ ಪರಿಶೀಲಿಸಿ ತಕ್ಕ ನೋಟ್ಸುಗಳನ್ನು ತೆಗೆದುಕೊಂಡರು ತಾ 15 16 ರಲ್ಲಿ ಮಕ್ಕಳ ತರಗತಿಗಳಲ್ಲಿ ಕಿಂಡರ್‌ಗಾರ್ಟನ್ ಕ್ರಮದಂತೆ ಪಾಠ ಹೇಳುವುದರಲ್ಲಿಯೂ, ಭೂವಿವರಣೆ ಪಾಠವನ್ನು ಯಾವ ಕ್ರಮದಲ್ಲಿ ಬೋಧಿಸಬೇಕೆಂಬ ಬಗ್ಗೆ ಎರಡು ಉಪನ್ಯಾಸಗಳು ನಡೆದವು ತಾ 16 ನೇ ಸಾಯಂಕಾಲ 5 ಘಂಟೆಯಿಂದ ವಿದ್ಯಾವಿಷಯಕವಾದ ಒಂದು ಉಪನ್ಯಾಸವು (ವಿದ್ಯೆಯ ಪ್ರಯೋಜನ, ಸರ್ಕಾರದವರು ಮಾಡುವ ಸಹಾಯ, ರೈತರ ಕರ್ತವ್ಯ ಇವುಗಳ ವಿಷಯವಾಗಿ) ಸ್ವಾರಸ್ಯವಾಗಿ ಹೇಳಲ್ಪಟ್ಟಿತು ಇವುಗಳಲ್ಲದೆ ವ್ಯವಸಾಯ, ಕೈಗಾರಿಕೆ ಸಂಬಂಧದ ಉಪನ್ಯಾಸಗಳಿಗೂ ಉಪಾಧ್ಯಾಯರುಗಳು ಹಾಜರಾಗುತ್ತಿದ್ದರು ಈ ರೀತಿ ೫ ದಿನಗಳು ಹೆಚ್ಚು ಪ್ರಯೋಜನವನ್ನು ಹೊಂದಿ ತಾ 17 ನೇ ಶುಕ್ರವಾರ ಎಲ್ಲರೂ ತಮ್ಮ ಗ್ರಾಮಗಳಿಗೆ ತೆರಳಿದರು

ಪರಸ್ಥಳದಿಂದ ಬಂದಿದ್ದ ಹೋಬಳಿ ಸ್ಕೂಲ್ ಉಪಾಧ್ಯಾಯರುಗಳಿಗೆಲ್ಲಾ ಸ್ಥಳವಸತಿಯನ್ನೂ, ಭೋಜನದ ಅನುಕೂಲವನ್ನೂ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಹರಿಹರದ ಎ ವಿ ಸ್ಕೂಲ್ ಹೆಡ್ ಮಾಸ್ಟರಿಗೂ, ತಾಲ್ಲೂಕು ಅಮಲ್ದಾರರವರಿಗೂ ಕೃತಜ್ಞರಾಗಿರುತ್ತೇವೆ 1913 ನೇ ಇಸವಿ ಡಿಸೆಂಬರ್ ಮಾಹೆಯಲ್ಲಿ ಈ ಡಿಸ್ಟ್ರಿಕ್ಟಿನ ಆರು ತಾಲ್ಲೂಕು ಉಪಾಧ್ಯಾಯರುಗಳು ಚಿತ್ರದುರ್ಗದ ಹೆಡ್ ಕ್ವಾರ್ಟರಿನಲ್ಲಿ ಸಂಘದ ವಾರ್ಷಿಕೋತ್ಸವವನ್ನು ನಡಿಸಿದ್ದಲ್ಲದೆ ಒಂದು ಪ್ರದರ್ಶನೋತ್ಸವವನ್ನೂ ನಡಿಸಿದ್ದರು ಆಗ್ಗೆ ಹರಿಹರ, ದಾವಣಗೆರೆ ತಾಲ್ಲೂಕುಗಳಿಂದ ಉಪಾಧ್ಯಾಯರು ಬಂದಿರಲಿಲ್ಲ ಈ ಸಂದರ್ಭದಲ್ಲಿ ಈ ಎರಡು ತಾಲ್ಲೂಕುಗಳವರಿಗೂ ಈ ವಿಧವಾದ ಪ್ರಯೋಜನವನ್ನುಂಟುಮಾಡಿಕೊಟ್ಟಿದ್ದಕ್ಕಾಗಿ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎ ಕೆ ತಿರುಮಲಾಚಾರ್ಯರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳು ಸಮರ್ಪಿಸಲ್ಪಟ್ಟವು ವೀರಾವಿಷ್ಣಪ್ಪ, ಜಾಯಿಂಟ್ ಸೆಕ್ರೆಟರಿ

ಪರಸ್ಪರ ಸಹಾಯ ಸಂಘಗಳು

ಚನ್ನಗಿರಿ ಫೆಡರಲ್ ಕೋಆಪರೇಟಿವ್ ಬ್ಯಾಂಕು

1914 ನೇ ಇಸವಿ ಮಾರ್ಚಿ ಮತ್ತು ಏಪ್ರಿಲ್ ತಿಂಗಳಲ್ಲಿ ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ಈ ಬ್ಯಾಂಕಿಗೆ ಮೆಂಬರಾಗಿರುತ್ತಾರೆ —ಅಮಲ್ದಾರ್ ಮ| ಕೆ ನಾರಣಯ್ಯರವರು ಮ|| ನಲ್ಲೂರು ಪಟ್ಣಶೆಟ್ಟಿ ಆಡವಪ್ಪ ಬಿನ್ ಚನ್ನವೀರಪ್ಪನವರು, ಮ ನಲ್ಲೂರು ಪಟೇಲ್ ಹಾಲಪ್ಪ ಬಿನ್ ಕರೇಗೌಡರು, ನಲ್ಲೂರು ಶ್ರೀ ಮಲ್ಲಿಕಾರ್ಜುನ ಪರಸ್ಪರ ಸಹಾಯ ಸಂಘ ಮ| ದೇವರಹಳ್ಳಿ ನಾಡಿಗ ನರಸಪ್ಪನವರು, ಕಡೂರು ಶ್ರೀ ವೀರಭದ್ರ ಪರಸ್ಪರ ಸಹಾಯ ಸಂಘ, ಕಣಿಗೆರೆ ಶ್ರೀ ಆಂಜನೇಯ ಕೋಆಪರೇಟಿವ್ ಸೊಸೈಟಿ, ಮ| ತಾವರೆಕೆರೆ ಸಣ್ಣವೀರಪ್ಪ ಬಿನ್ ವೀರಪ್ಪನವರು, ತಾವರೆಕೆರೆ ಶ್ರೀ ಆಂಜನೇಯ ಪರಸ್ಪರ ಸಹಾಯ ಸಂಘ, ಮ|| ಅತ್ತಿಗಟ್ಟದ ಪಟೇಲ್ ಲಿಂಗಪ್ಪ ಬಿನ್ ರಾಮಲಿಂಗಪ್ಪನವರು, ಮ ತಾವರೆಕೆರೆ ಶ್ಯಾನು ಗಿರಿಯಪ್ಪ ಬಿನ್ ವೆಂಕಟವಾಸಪ್ಪನವರು, ಮ|| ಉಬ್ರಾಣಿ ಶ್ಯಾನು ಅಶ್ವತ್ಥನಾರಣಯ್ಯ ಬಿನ್ ವೆಂಕಟರಮಣಯ್ಯನವರು, (2) ಈ ಬ್ಯಾಂಕಿನಲ್ಲಿ ಮೆಂಬರುಗಳಿಗೋಸ್ಕರ ಒಂದುನೂರು ಷೇರುಗಳೂ, ಈ ತಾಲ್ಲೂಕಿನ ಸೊಸೈಟಿಗಳಿಗೋಸ್ಕರ ಒಂದು ನೂರು ಷೇರುಗಳೂ, ಈ ರೀತಿ ಇರಬೇಕೆಂತ ಗೊತ್ತಾಗಿದೆ ದೊಡ್ಡ ಮನುಷ್ಯರಾಗಿ ಪರಸ್ಪರ ಸಹಾಯಾಸಕ್ತಿವುಳ್ಳವರು ಷೇರು ಹೋಲ್ಡರುಗಳು ಆಗಲು ಅರ್ಹರಾಗಿರುತ್ತಾರೆ ಸಮಸ್ತರಿಗೂ ಅನುಕೂಲವಾಗುವದಕ್ಕೋಸ್ಕರ ಪ್ರಕೃತ ಷೇರು 1 ಕ್ಕೆ 25 ರೂಪಾಯಿ, ಅಡ್ಮಿಷನ್ ಫೀ 1 ರೂಪಾಯಿ, ಷೇರು ಫೀ 1 ಆಣೆ, ಈ ಮೇರಿಗೆ ಇಟ್ಟಿರುತ್ತದೆ ನಾಲ್ಕು ಷೇರುಗಳಿಗಿಂತಲೂ ಜಾಸ್ತಿ ಆಗಿ ಯಾವ ಮೆಂಬರೂ ಪಡೆಯಲು ಅವಕಾಶವಿರುವದಿಲ್ಲ ಡಿಪಾಜಿಟ್ಟುಗಳನ್ನು ಇಡಲು ಮೆಂಬರಾದವರಿಗೂ ಮೆಂಬರಲ್ಲದವರಿಗೂ, ಸ್ಥಳ ಮತ್ತು ಪರಸ್ಥಳದವರಿಗೂ ಸಹ ಸೌಲಭ್ಯವನ್ನು ಕಲ್ಪಿಸಿಕೊಟ್ಟಿರುತ್ತದೆ (3) ಹಣಗಾರರು ಈ ವ್ಯಾಳ್ಯದಲ್ಲಿ ತಮ್ಮ ಹಣವನ್ನು ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ಟಾಗಿ ಇರಿಸಿ, ಶೇಕಡ ಸಾಲಿಯಾನಾ 6 ರೂಪಾಯಿನವರಿಗೂ ನಫೆ ಪಡೆಯುವಷ್ಟು ಅನುಕೂಲಮಾಡಿದೆ (4) ಮೆಂಬರಾದವರಿಗೆ ಬ್ಯಾಂಕಿನಲ್ಲಿ ಸಾಲಕೊಡಿಸುವ ಹಕ್ಕನ್ನು ಸೊಸೈಟಿಗಳ ರಿಜಿಸ್ಟ್ರಾರವರೇ ಉಳಿಸಿಕೊಂಡಿರುತ್ತಾರೆ (5) ಷೇರುಗಳು ಬಹಳ ಸ್ವಲ್ಪ ಇರುವದರಿಂದ ಮೆಂಬರಾಗಲು ಅಪೇಕ್ಷೆಯುಳ್ಳ ದೊಡ್ಡ ಮನುಷ್ಯರು ಜಾಗ್ರತೆಯಾಗಿ ಷೇರುಗಳನ್ನು ಪಡೆಯಬಹುದು ಹೆಚ್ಚಿಗೆ ತಪಶೀಲ್ ಅಪೇಕ್ಷಿಸುವವರಿಗೆ ಸೂಪರ್‌ವೈಜರ್ ಮ|| ಸಿ ಭೀಮರಾಯರು ಕೂಡಲೇ ಜವಾಬು ಕೊಡಲು ಸಿದ್ಧರಾಗಿರುತ್ತಾರೆ

ಚನ್ನಗಿರಿ ತಾಲ್ಲೂಕು ದೇವರಹಳ್ಳಿ ಶ್ರೀ ಉಡುಮರಡೀ ರಂಗನಾಥಸ್ವಾಮಿ ರಥೋತ್ಸವಕಾಲದಲ್ಲಿ ನಡೆದ ಕೋಆಪರೇಟಿವ್ ಮೀಟಿಂಗು

ಚನ್ನಗಿರಿ ಕಸಬಾದಲ್ಲಿ 1914 ನೇ ಇಸ್ವಿ ಫೆಬ್ರುವರಿ ತಾ 10 11 ರಲ್ಲಿ ಕೋಆಪರೇಟಿವ್ ಕಾನ್‌ಫರೆನ್ಸ್ ನಡಿಸಲ್ಪಟ್ಟು ಪ್ರಜೆಗಳ ಕ್ಷೇಮಕ್ಕಾಗಿ ಅನೇಕ ವಿಷಯಗಳು ತೀರ್ಮಾನಹೊಂದಿರುವುದನ್ನು ಈ ದೇವರಹಳ್ಳಿ ಮತ್ತು ಆಸ್‌ಪಾಸ್ ಗ್ರಾಮಸ್ಥರಿಗೆ ತಿಳಿಸುವ ಉದ್ದಿಶ್ಯ ಮೀಟಿಂಗ್ ಏರ್ಪಡಿಸಬೇಕಾಗಿಯೂ, ಸಮಿಪದಲ್ಲಿರುವ ಸೊಸೈಟಿಯ ಮೆಂಬರುಗಳನ್ನು ಒರನಾಡಿಕೊಳ್ಳಬೇಕಾಗಿಯೂ ರೆಜಲ್ಯೂಷನ್ ಮಾಡಿಕೊಂಡ ಪ್ರಕಾರ ತಾ 11 ನೇ ಸಾಯಂಕಾಲ 6 ಘಂಟೆಗೆ ಮೀಟಿಂಗ್ ಪ್ರಾರಂಭಿಸಲ್ಪಟ್ಟಿತು ಸಂತೆಬೆನ್ನೂರು, ಕಗತೂರು, ನುಗ್ಗಿಹಳ್ಳಿ, ನೀತಿಗೆರೆ, ನಲ್ಲೂರು ಮುಂತಾದ ಕಡೆಗಳಿಂದ ಮೆಂಬರುಗಳೂ ಮತ್ತು ರಥೋತ್ಸವಕ್ಕಾಗಿ ಬಂದಿದ್ದ ಅನೇಕರೂ ಸಹ ಸುಮಾರು 400 ಜನಗಳ ವರೆಗೆ ಸಭೆ ಸೇರಿತ್ತು ಸಭೆಯವರ ಕೋರಿಕೆಯಂತೆ ಈ ತಾಲ್ಲೂಕು ಅಮಲ್ದಾರ್ ಮ|| ಕೆ ನಾರಣಯ್ಯರವರು ಅಗ್ರಾಸನವನ್ನು ವಹಿಸಿದರು ಕೋಆಪರೇಟಿವ್ ಸೊಸೈಟಿಗಳು, ಪಡಸದ ಬ್ಯಾಂಕುಗಳು, ಎಕನಾಮಿಕ್ ಕಾನ್‌ಫರೆನ್ಸ್, ಪ್ರೋಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಅನೇಕ ವಿಷಯಗಳು ಸಭೆಯವರಿಗೆ ತಿಳಿಸಲ್ಪಟ್ಟವು ಕೋಆಪರೇಟಿವ್ ಸೊಸೈಟಿಗಳ ಸೂಪರ್‌ವೈಜರ್ ಮ|| ಭೀಮರಾಯರು ಸಭೆಯವರ ಕೋರಿಕೆಯಂತೆ ಕೋಆಪರೇಟಿವ್ ಸೊಸೈಟಿ ಮತ್ತು ಫೆಡ್ರಲ್ ಬ್ಯಾಂಕ್ ಪ್ರಯೋಜನವನ್ನು ಸಮಸ್ತರಿಗೂ ತಿಳಿಯುವಂತೆ ಉಪನ್ಯಾಸಮಾಡಿದರು ಮೀಟಿಂಗ್ ಸಾಂಗವಾಗಿ ನೆರವೇರಿಸಿಕೊಟ್ಟದ್ದಕ್ಕಾಗಿ ಅಗ್ರಾಸನಾಧಿಪತಿಗಳನ್ನು ವಂದಿಸಿ ಮೀಟಿಂಗ್ ಕ್ಲೋಸ್ ಮಾಡಲಾಯಿತು ಒಬ್ಬ ಮೆಂಬರು

ಚನ್ನಗಿರಿ ತಾ|| ತಾವರೆಕೆರೆ ಶ್ರೀ ಆಂಜನೇಯ ಪರಸ್ಪರ ಸಹಾಯ ಸಂಘ

1914 ನೇ ಇಸವಿ ಏಪ್ರಿಲ್ ತಾ 8 ರಲ್ಲಿ ಈ ಸಂಘದ ಆಫೀಸಿನಲ್ಲಿ ಜನರಲ್ ಮೀಟಿಂಗ್ ಮ|| ಅಮಲ್ದಾರ್ ಕೆ ನಾರಣಯ್ಯರವರ ಅಧ್ಯಕ್ಷತೆಯಿಂದ ನಡಿಸಲ್ಪಟ್ಟಿತು ಸಮೀಪ ಗ್ರಾಮಸ್ಥರಾದ ದುರ್ಮಿಗೆರೆ, ಕೊಡಗೀಕೆರೆ, ಉಬ್ರಾಣಿ, ಸುಗ್ಗಿ, ಮುಗುಳೀಹಳ್ಳಿ, ಕಲ್ಕೆರೆ ಮುಂತಾದ ಗ್ರಾಮಗಳ ಮೆಂಬರುಗಳೂ ಮತ್ತು ವಿಜಿಟರುಗಳೂ ಸಹ ಸುಮಾರು ಎರಡುನೂರು ಜನದವರೆಗೂ ದಯಮಾಡಿಸಿದ್ದರು ಈ ಸಂಘದ ಸೆಕ್ರೆಟರಿಯವರು ಈ ತಾಲ್ಲೂಕಿನ ಸೊಸೈಟಿಗಳ ಆನರರಿ ಸೂಪರ್‌ವೈಜರ್ ಮ|| ಭೀಮರಾಯರನ್ನು ಕೋಆಪರೇಟಿವ್ ಸೊಸೈಟಿಗಳ ಪ್ರಯೋಜನವನ್ನು ಕುರಿತು ಉಪನ್ಯಾಸ ಮಾಡಬೇಕೆಂದು ಕೇಳಿಕೊಂಡ ಪ್ರಕಾರ ಅವರು ಸಮಸ್ತರಿಗೂ ತಿಳಿಯುವಂತೆ ಉಪನ್ಯಾಸ ಮಾಡಿದರು ಅಗ್ರಾಸನಾಧಿಪತಿಗಳು ಸರಕಾರದವರು ಪ್ರಜೆಗಳ ಅಭಿವೃದ್ಧಿಗಾಗಿ ಮಾಡುತ್ತಲಿರುವ ಅನೇಕ ಏರ್ಪಾಟುಗಳನ್ನೂ, ಗ್ರಾಮಾಭಿವೃದ್ಧಿ ಸಮಾಜದ ಕಾನೂನುಗಳನ್ನೂ ತಿಳಿಸುವವರಾದರು ಮೇಲ್ಕಂಡ ಉದ್ದೇಶವನ್ನೆಲ್ಲಾ ಸಭೆಯವರು ಶಾಂತವಾಗಿ ಕೇಳಿ ಆನಂದಭರಿತರಾಗಿ ಅನೇಕರು ಈ ಸಂಘಕ್ಕೂ ಮತ್ತು ಚನ್ನಗಿರಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಫೆಡರಲ್ ಬ್ಯಾಂಕಿಂಗ್ ಯೂನಿಯನ್‌ಗೂ ಮೆಂಬರಾಗಿ ಸೇರಿದರು ಶ್ರೀಯುತಪ್ರಾರ್ಥನೆಗಳನ್ನು ಮಾಡಿ, ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಅಗ್ರಾಸನಾಧಿಪತಿಗಳನ್ನೂ ಮ|| ಭೀಮರಾಯರವರನ್ನೂ ವಂದಿಸಿ ಮೀಟಿಂಗ್ ಬರಖಾಸ್ತು ಮಾಡಲಾಯಿತು ಒಬ್ಬ ಮೆಂಬರು

ಚನ್ನಪಟ್ಟಣದ ರೇಷ್ಮೆ ಸಂಘ

ಈ ತಿಂಗಳು ತಾ 2 ರಲ್ಲಿ ಚನ್ನಪಟ್ಟಣದಲ್ಲಿ ಪಟ್ಟುನೂಲ್ ಸಂಘ ಯೂನಿಯನ್ ಅಸೋಸಿಯೇಷನ್ ಸ್ಥಾಪನೆ ಕಾಲದಲ್ಲಿ ಅಗ್ರಾಸನಾಧಿಪತ್ಯವನ್ನು ವಹಿಸಿ ಕೌನ್ಸಿಲರ್ ಎಂ ಕಾಂತರಾಜ ಅರಸಿನವರು ಹೇಳಿದ್ದೇನೆಂದರೆ —

ನಾವು ಈ ದಿನ ಇಲ್ಲಿ ಸೇರಿ ಪ್ರಾರಂಭಿಸತಕ್ಕ ಕೆಲಸವು ಬಹು ಮುಖ್ಯವಾದದ್ದು ರೇಷ್ಮೆ ಕೈಗಾರಿಕೆಯು ಮೈಸೂರು ಸಂಸ್ಥಾನಕ್ಕೂ ರೈತರಿಗೂ ವರ್ತಕರಿಗೂ ಒಂದು ಅಮೂಲ್ಯವಾದ ಆಸ್ತಿ ಈ ಕೈಗಾರಿಕೆಯು ಈಗ ಬೆಂಗಳೂರು, ಮೈಸೂರು, ಕೋಲಾರ, ತುಮಕೂರು, ಈ ಮೂರು ಈ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಹರಡಿ ಇದ್ದರೂ ಇದರಿಂದ ಎಷ್ಟು ಕಮ್ಮಿಯಾಗಿ ಲೆಕ್ಕಾಚಾರಹಾಕಿ ನೋಡಿದರೂ ವರುಷಕ್ಕೆ ಒಂದು ಕೋಟಿ ರೂಪಾಯಿಗೆ ಕಮ್ಮಿಯಿಲ್ಲದ ವರಮಾನವಿರುತ್ತದೆಂದು ತಿಳಿಯಬರುತ್ತೆ —ನೀರಿನ ಅನುಕೂಲವಿದ್ದು ಹುಳುಗಳು ಚೆನ್ನಾಗಿ ಬೆಳೆದರೆ ಸಾಕಣೆ ವ್ಯವಸಾಯವು ಬಹು ಆದಾಯಕರವಾದದ್ದು ಇದರಲ್ಲಿರತಕ್ಕ ಒಂದು ವಿಚಿತ್ರವಾದ ಸ್ವಾರಸ್ಯವೇನಂದರೆ, ಇದು ಸಾಕಣೆ ವ್ಯವಸಾಯ ಮಾಡತಕ್ಕ ರೈತನಿಗೊಬ್ಬನಿಗೆ ಮಾತ್ರವೇ ಅಲ್ಲ ಹುಳುಗಳನ್ನು ಸಾಕತಕ್ಕ ಗಂಡಸರು ಹೆಂಗಸರಿಗೂ, ಅಲ್ಪಸ್ವಲ್ಪ ಬಂಡವಾಳ ಹಾಕಿಕೊಂಡು ಧಾರವನ್ನು ತೆಗೆಯುವ ಕೆಲಸಗಾರರಿಗೂ, ಇದರಲ್ಲಿ ವ್ಯಾಪಾರಮಾಡತಕ್ಕ ವರ್ತಕರಿಗೂ, ಶುದ್ಧ ಅಥವಾ ಮಿಶ್ರ ರೇಷ್ಮೆಯ ವಸ್ತ್ರ ನೇಯತಕ್ಕ ನೇಯಿಗೆಯವರಿಗೂ ಸಮಪಾದ ಉದ್ಯೋಗವನ್ನು ಕೊಡುತ್ತೆ ಇವರೆಲ್ಲರಿಗೂ ನ ಮತ್ತು ತುದಾ ಸಲವತ್ತಾದು ದಿನಗಳಲ್ಲಿ ಅವರವರ ಕೆಲಸಕ್ಕೆ ತಕ್ಕ ಕೂಲಿ, ಆದಾಯ, ನಫೆಯನ್ನು ಕೊಡುತ್ತೆ —ರೇಷ್ಮೆ ಕೈಗಾರಿಕೆ ನಡೆಯತಕ್ಕ ಪ್ರಪಂಚದ ಇತರ ದೇಶಗಳಲ್ಲಿ ಸಾಕಣೆ ಬೆಳೆಯನ್ನು ವರ್ಷಕ್ಕೆ ಒಂದೇ ಸಲ ತೆಗೆಯುತ್ತಾರೆ ಆದರೆ ಇಲ್ಲಿ ವರುಷ ಒಂದಕ್ಕೆ ಮೂರರಿಂದ ಎಂಟು ಬೆಳೆ ತೆಗೆಯುವಷ್ಟು ಅದೃಷ್ಟಶಾಲಿಗಳಾಗಿದೇವೆ

ಮೈಸೂರು ರೈತರಿಗೆ ತಲಾಂತರಗಳಿಂದ ರೇಷ್ಮೆ ಕೈಗಾರಿಕೆಯು ಪ್ರಿಯವಾದದ್ದು ಇವರು ಇದೇ ರೀತಿ ಶ್ರದ್ಧಾಭಕ್ತಿಯಿಂದ ನಡಿಸುತ್ತಿರುವದು ಶ್ಲಾಘ್ಯವಾದದ್ದೇ ಸರಿ ಉತ್ತಮವಾದ ಮೈಸೂರು ರೇಷ್ಮೆಯು ನಮ್ಮ ಇಂಡ್ಯಾ ದೇಶದಲ್ಲೇ ಅಲ್ಲದೆ ಲಂಡನ್ ಪ್ಯಾರಿಸ್ ಮುಂತಾದ ನಗರಗಳಲ್ಲಿ ಹೆಸರುವಾಸಿಯನ್ನು ಪಡೆದಿರುತ್ತದೆ ಮೈಸೂರು ರೇಷ್ಮೆಯು ಪಶ್ಚಿಮದೇಶಕ್ಕೂ, ಹೈದರಾಬಾದು, ಬೊಂಬಾಯಿ ಅಧೀನ ಕೊನೆಗೆ ಕಾಶಿಗೆ ಸಹಾ ಹೋಗುತ್ತದೆ ಈಗೆ ಸ್ವಲ್ಪ ವರುಷಗಳ ಕೆಳಗೆ ಒಂದು ಫ್ರೆಂಚರ ಕಂಪನಿಯವರು ನಮ್ಮ ದೇಶದ ಎಲ್ಲೆಯಲ್ಲಿ ರೇಷ್ಮೆ ದಾರ ತೆಗೆಯತಕ್ಕ ಕಾರಖಾನೆಯನ್ನು ಇಟ್ಟು ಹುಳುಗಳ ಮೊಟ್ಟೆಗಳನ್ನು ವಿಶೇಷವಾಗಿ ಬಂಗಾಳಕ್ಕೆ ಕ್ರಮವಾಗಿ ಕಳುಹಿಸುತ್ತಿದ್ದಂತೆ ನಮಗೆ ತಿಳಿದಿರಬಹುದು ಇತರ ದೇಶಗಳಿಗೆ ಹೋಗುತ್ತಿರುವ ರೇಷ್ಮೆ ಧಾರದ ಥ್ಯೂಟಾವನ್ನು ಸಹಾ ತೃಣೀಕರಿಸತಕ್ಕದ್ದಾಗಿಲ್ಲ ಇದರಿಂದ ರೇಷ್ಮೆ ವ್ಯವಸಾಯವು ಎಷ್ಟು ವಿಧದಲ್ಲಿ ಆದಾಯಕರವಾದದ್ದು, ಎಷ್ಟು ಜನ ಇದರಿಂದ ಜೀವನಮಾಡುತ್ತಾರೆ ಇದರಿಂದ ಎಷ್ಟು ಜನ ಕುಬೇರರಾಗಿದಾರೆ ಎಂಬೀ ಅಂಶ ನಮಗೆ ಗೊತ್ತಾಗುತ್ತೆ ಆದ್ದರಿಂದ ಇಂತಹ ಕೈಗಾರಿಕೆಯನ್ನು ಕುರಿತು ಸರಕಾರದವರೂ ಪ್ರಜೆಗಳೂ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ —ರೇಷ್ಮೆ ಮತ್ತು ರೇಷ್ಮೆ ಬಟ್ಟೆಗಳು ಆರೋಗ್ಯದಿಂದಲೂ ಇಂಡಿಯಾ ದೇಶದಲ್ಲಿ ಮಡಿಯಾಗಿ ಭಾವಿಸಲ್ಪಟ್ಟಿವೆ ಈಗ ಪ್ರಪಂಚದಲ್ಲೆಲ್ಲಾ ರೇಷ್ಮೆಗೆ ಗಿರಾಕಿ ಬಲು ಜೋರಾಗಿ ಹೆಚ್ಚುತ್ತಿದೆ ಆದ್ದರಿಂದ ಈ ವ್ಯಾಪಾರದಲ್ಲಿ ಮುಂದಾಳಾಗ ನಮಗೆ ತುಂಬಾ ಅವಕಾಶವುಂಟು

ಪ್ರಪಂಚದ ಇತರ ದೇಶಗಳು ನವೀನ ಆಯುಧಗಳನ್ನೂ ವಿಧಾನಗಳನ್ನೂ ಹುಡುಕಿ ರೇಷ್ಮೆ ಬಟ್ಟೆಗಳನ್ನು ತಯಾರಿಸಿ ಬಹು ಅಭಿವೃದ್ಧಿಯಾಗುತ್ತಿವೆ ಆದರೆ ಮೈಸೂರಲ್ಲಿ ನಾವಾದರೋ ಈಗ ಒಂದು ಶತಮಾನದ ಕೆಳಗೆ ಯಾವ ವಿಧಾನಗಳಿದ್ದವೋ ಅವುಗಳನ್ನೇ ನಮ್ಮ ರೈತರು ಅನಕ್ಷರಸ್ಥರು ಅನುಸರಿಸುತ್ತಿದ್ದಾರೆ ನೀರಿನ ಯಂತ್ರಗಳ ಉಪಯೋಗ ತಿಳಿದವರಲ್ಲಿ ಹುಳುಗಳು ಸಾಕತಕ್ಕ ಕೊಠಡಿಗಳನ್ನು ಇಕ್ಕಟ್ಟು ಕತ್ತಲೆ ಮಾಡಿ ವಾಯುಸಂಚಾರವಿಲ್ಲದಂತೆ ಗಲೀಜಾಗಿಟ್ಟುಕೊಂಡಿರುವರು ಹುಳುಗಳನ್ನು ಸಾಕುವದಕ್ಕೂ ಧಾರ ತೆಗೆಯುವದಕ್ಕೂ ಪೂರ್ವದಿಂದಲೂ ಒಂದೇ ತರಹ ಸಾಧನಗಳನ್ನಿಟ್ಟುಕೊಂಡಿರುತ್ತಾರೆ ನಮ್ಮ ವರ್ತಕರಲ್ಲಾದರೋ ಪಾಶ್ಚಾತ್ಯರಲ್ಲಿರತಕ್ಕ ಪರಸ್ಪರಸಹಾಯ ಶಕ್ತಿ, ಮುಂದಾಳುತನ ಅತ್ಯಲ್ಪವಾಗಿವೆ ಇತರ ದೇಶದವರು ಈ ಕೈಗಾರಿಕೆಯಲ್ಲಿ ಹಾಕಿರತಕ್ಕ ಬಂಡವಾಳಕ್ಕೂ ನಾವು ಹಾಕಿರತಕ್ಕ ಬಂಡವಾಳಕ್ಕೂ ಹೋಲಿಸಿ ನೋಡಿದರೆ ನಮ್ಮ ಬಂಡವಾಳವು ತೃಣಗಣ್ಯಮಾನವಾಗಿದೆ ಇದೆಲ್ಲಾ ನೋಡಿದರೆ ಈ ಕೈಗಾರಿಕೆಯು ದಿನೇ ದಿನೇ ಕ್ಷೀಣವಾಗುತ್ತಿವೆ ಎಂದು ತಿಳಿಯಬಹುದು ಇದೂ ಅಲ್ಲದೆ ವರ್ಷೇ ವರ್ಷೇ ಶೇಕಡ 30 ಪಾಲು ರಷ್ಟು ಬೆಳೆಯು ವ್ಯರ್ಥವಾಗುತ್ತಿದೆ ಇದು ತುಂಬಾ ಶೋಚನೀಯವಾದ ಅಂಶವಲ್ಲವೇ ? ಈ ಕೈಗಾರಿಕೆಯಲ್ಲಿ ನಿರತರಾಗಿರುವವರು ತಕ್ಕ ಸನ್ನಾಹಗಳನ್ನು ಮಾಡಬೇಕಾದ ಕಾಲವು ಒದಗಿರುತ್ತೆ

ಇದಕ್ಕಾಗಿಯೇ ಸರಕಾರದವರು ಗತ 3 4 ವರ್ಷಗಳಿಂದ ಜನಗಳಿಗೆ ಸಹಾಯಮಾಡಿ ಈ ಕೈಗಾರಿಕೆಗೆ ಉತ್ತೇಜನ ಕೊಡುತ್ತಿದಾರೆ ಅಗ್ರಿಕಲ್ಚರಲ್ ಕಮಿಟಿಯವರು ರೈತರಿಗೆ ನವೀನ ವಿಧಾನಗಳನ್ನು ಬೋಧಿಸಲು ಶಿಕ್ಷಿತರಾದ ಇನ್‌ಸ್ಪೆಕ್ಟರುಗಳನ್ನು ನೇಮಿಸಿದಾರೆ ಆಗಾಗ್ಗೆ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಈ ಸಾಹಿತ್ಯವನ್ನು ಪತ್ರಿಕೆಗಳ ಮೂಲಕ ಪ್ರಚುರಪಡಿಸುತ್ತಿದಾರೆ ಈ ಶಾಸ್ತ್ರದಲ್ಲಿ ಪ್ರವೀಣಪಂಡಿತರಾದ ಸೀನಿಯರ್ ವಾಲೆಂಗ್‌ಟನ್ ಮಾರಿಯವರನ್ನು ಮೊನ್ನೆತಾನೇ ಇಟಲಿಯಿಂದ ಕರೆತರಿಸಿ ಈಗ ನಾವು ಸೇರಿರತಕ್ಕ ಇದೇ ಸ್ಥಳದಲ್ಲೇ ಒಂದು ಸೆಂಟ್ರಲ್ ಫಾರಮ್ ಎಂಬ ಪ್ರದರ್ಶನ ತೋಟವನ್ನು ಏರ್ಪಡಿಸುತ್ತಿರುವದು ತಮಗೆ ಗೊತ್ತೇ ಇದೆ ಇವರ ಮುಖ್ಯೋದ್ದೇಶವೇನಂದರೆ, ಬೀಜವನ್ನು ಶೋಧಿಸುವ ಡಿಪೋಗಳನ್ನು ಇಟ್ಟು ರೋಗ ರಹಿತವಾದ ಮೊಟ್ಟೆಗಳನ್ನು ರೈತರಿಗೆ ಹಂಚಬೇಕೆಂಬುವದೇ ಇವರು ಇನ್ನೂ ಮುಖ್ಯವಾದ ಇತರ ಕಾರ್ಯಗಳನ್ನು ಕೈಗೊಂಡಿರುತ್ತಾರೆ ಇವರ ಪ್ರಯತ್ನವು ಸಫಲವಾಗಲೆಂದು ನಾವು ಹಾರೈಸೋಣ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರವರು ಇದೇ ಪಟ್ಟಣದಲ್ಲೇ ಧಾರ ತೆಗೆಯತಕ್ಕ ಒಂದು ಯಂತ್ರದ ಕಾರಖಾನೆಯನ್ನು ಇಟ್ಟಿರುತ್ತಾರೆ ಇದು ರೇಷ್ಮೆ ಕಾರಖಾನೆಗೆ ಮಧ್ಯಪ್ರವೇಶವಾಗಬಹುದೆಂಬ ಭರವಸೆಯುಂಟು

ಮೈಸೂರಲ್ಲಿ ಟಾಟಾರವರ ಫಾರಮು ಈ ಕೈಗಾರಿಕೆಯನ್ನು ಮೊದಲು ಶುರುಮಾಡಿದವರಲ್ಲಿ ಗತಿಸಿದ ಶ್ರೀಮಂತರಾದ ಜೆ ಎನ್ ಟಾಟಾರವರೊಬ್ಬರು ಸಾಲ್ವೇಷನ್ ಆರ್ಮಿಯವರ ಮೂಲಕ ಈಗ ನಡಿಸುತ್ತಿರುವ ಇವರ ರೇಷ್ಮೆ ಫಾರಮ್ ಬೆಂಗಳೂರಲ್ಲಿ ಅಮೋಘವಾದ ಕೆಲಸವನ್ನು ಮಾಡುತ್ತಿದೆ ಇವರು ಕ್ಲೋಸ್‌ಪೇಟೇಲಿ ಒಂದು ಬ್ರಾಂಚನ್ನು ಇಡಲು ಪ್ರಯತ್ನಪಡುತ್ತಿರುವರು ರೇಷ್ಮೆ ಸಂಘ ಆದ್ದರಿಂದ ನೀವು ಒಳ್ಳೇ ಸಮಯದಲ್ಲಿ ರೇಷ್ಮೆ ಸಂಘ ಒಂದನ್ನು ಏರ್ಪಡಿಸಿ ಅದರ ಮುಖ್ಯಸ್ಥಳವನ್ನು ಚನ್ನಪಟ್ಟಣದಲ್ಲಿಟ್ಟರೆಂದು ನನಗೆ ತೋರುತ್ತೆ ಪರಂತು ಇಂತಹ ಸಂಘವು ಅನೇಕ ವರುಷಗಳ ಕೆಳಗೆ ಏರ್ಪಾಡಾಗಿರಬೇಕಾಗಿತ್ತು ಈ ಸಂಘವು ಮಾಡಬೇಕಾದ ಉಪಯುಕ್ತ ಕೆಲಸಗಳು ಇನ್ನೂ ಅನೇಕವಿವೆ ಇವುಗಳನ್ನು ಕ್ರಮಪಡಿಸಿ ನೆರವೇರಿಸುತ್ತಾ ಬಂದಲ್ಲಿ ಸಂಘದ ಮೆಂಬರುಗಳಿಗೂ ಜನಗಳಿಗೂ ಆದಾಯಬರುವದರಲ್ಲಿ ಸಂದೇಹವೇನೂ ಇಲ್ಲ ಈ ಕೈಗಾರಿಕೆಯನ್ನು ತೃಪ್ತಿಯಾಗಿ ನಡಿಸಬೇಕಾದರೆ ತೊಂದರೆಯನ್ನೂ ವೆಚ್ಚವನ್ನೂ ಲಕ್ಷ್ಯಮಾಡಬಾರದು ಇದನ್ನು ಎಲ್ಲರೂ ಮುಖ್ಯೋದ್ದೇಶವಾಗಿಟ್ಟುಕೊಳ್ಳಬೇಕು ಇದರಲ್ಲಿ ನೀವು ಮುಂದಾಳಾಗಿ ನಿಂತರೆ ಸರಕಾರದವರ ಉದಾರವಾದ ಸಹಾಯವನ್ನು ನಿರೀಕ್ಷಿಸಬಹುದು

ಗವರ್ನಮೆಂಟಿನವರು ಏರ್ಪಡಿಸಿರತಕ್ಕ ಕ್ರಮಗಳನ್ನು ಮೊದಲೇ ತಮಗೆ ವಿವರಿಸಿದೇನೆ ನಿಮ್ಮ ಭಾಗದ ಕೆಲಸಗಳನ್ನೆಲ್ಲಾ ಮೊದಲು ನೀವು ನೆರವೇರಿಸಿ ನಂತರ ಸರಕಾರದವರ ಸಹಾಯ ಅಪೇಕ್ಷಿಸಿದ ವಿನಹಾ ನಿರಂತರವಾದ ಫಲಾಪೇಕ್ಷೆ ಪಡೆಯಲು ಸಾಧ್ಯವಿಲ್ಲ ಆದರೆ ಈ ಭಾಗದಲ್ಲಿ ಕೆಲವು ಅಪಾಯಗಳಿವೆ ಇವುಗಳನ್ನು ನೀವು ನೆನಪಿನಲ್ಲಿಟ್ಟುಕೊಂಡು ನಿವೃತ್ತಿಮಾಡಿಕೊಳ್ಳಬೇಕು ಅವು ಯಾವುವಂದರೆ, ಕಕ್ಷಿ, ದ್ವೇಷಮ್ಯಗಳು, ಅಸೂಯೆ, ಜಾತಿಮತ್ಸರ, ಸೋಮಾರಿತನ ನಿಮ್ಮ ಸಂಘವು ಚಿರಕಾಲ ವೃದ್ಧಿಯಾಗಿ ನಿರಂತರ ಉಪಕಾರಿಯಾಗಿರಲೆಂದು ಹಾರೈಸುತ್ತೇನೆ ನಿಮ್ಮ ರೂಲುಗಳ ಮಸೂದೆಯನ್ನು ನೋಡಿದೆ ಅವು ಸುಲಭವಾಗಿ ಅನುಷ್ಠಾನಕ್ಕೆ ಯೋಗ್ಯವಾದವುಗಳಾಗಿವೆ ಅವುಗಳೂ ಸಹಕಾರಿಯಾಗಲೆಂದು ಹಾರೈಸುತ್ತೇನೆ

ಮೈಸೂರು ರೇಷ್ಮೆ ಸಂಘವು ಒಂದು ವಿಷಾರದಾಗಿ ದಿಟ್ಟುಕ್ಕ ಕೆಲಸ ಮಾಡಿಕೊಂಡೀತೆಂದು ಕೇಳಿ ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ದಿವಾನ್ ಸಾಹೇಬರವರು ಕೇವಲ ಸಂತೋಷಪಡುವರು ತಾವು ಕೇಳಿಕೊಂಡಂತೆ ನಾನೂ ನಡೆದ ಸಂಗತಿಗಳನ್ನು ಅಲ್ಲಿ ಅರಿಕೆ ಮಾಡುತ್ತೇನೆ —ಅನೇಕ ಸ್ಥಳಗಳಿಂದ ಬಂದಿರತಕ್ಕ ಈ ಸಂಘದ ಮೆಂಬರುಗಳಿಗೂ ಮುಖ್ಯವಾಗಿ ಈ ಸಂಘವನ್ನು ಸ್ಥಾಪಿಸಲು ಕೇವಲ ಶ್ರಮತೆಗೆದುಕೊಂಡಿರುವ ಮಿ|| ಅಬ್ದುಲ್ ಮಜಿದ್ ಯವರಿಗೂ ವಂದಿಸುತ್ತೇನೆ ಇವರು ಅಗ್ರಿಕಲ್ಚರಲ್ ಕಮಿಟಿ ಮೆಂಬರಾಗಿ ಈ ಕಮಿಟಿ ಸೆಕ್ರೆಟರಿಯವರಾದ ಮ| ಕೆ ಸುಬ್ಬರಾಯರಿಂದ ಅಪೂರ್ವವಾದ ಸಹಾಯ ಪಡೆಯುತ್ತಾರೆ ಮ ಸುಬ್ಬರಾಯರು ಈ ಭಾಗದಲ್ಲಿ ತುಂಬಾ ಪರಿಶ್ರಮವುಳ್ಳವರು ಇವರು ಈ ಸಂಘಕ್ಕೆ ಬೇಕಾದ ಸಹಾಯವನ್ನು ಮಾಡಲು ಸಿದ್ಧರಾಗಿರುವರಲ್ಲದೆ, ನಿಮಗೆ ಬೇಕಾದದ್ದನ್ನೆಲ್ಲಾ ಅಗ್ರಿಕಲ್ಚರಲ್ ಕಮಿಟಿಯವರಿಗೂ ಸರಕಾರದವರಿಗೂ ಬಿನ್ನಹ ಮಾಡುವದರಲ್ಲಿ ಏನೇನೂ ಸಂದೇಹವಿಲ್ಲ

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಪತ್ರ ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಸಜ ನವಿಧೇಯ, ಮತ್ತೀಕೆರೆ ಅ ಸುಬ್ಬಣ್ಣಗೌಡ, ತಿಂಡ್ಲಾಡಿ, ಕೊಪನಿರಗೌಡ, ಚೀಕ್ಕನಹಳ್ಳಿ ಒಬ್ಬ ದೇಶಸೇವಕ, ಹೊಸಗನಹಳ್ಳಿ —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುವೆವು

ಒಬ್ಬ ಚಂದಾದಾರ, ಬಾಗಲ್‌ಪೇಟೆ —ನಿಮ್ಮ ಆಕ್ಷೇಪಣೆ ಸಹಜವಾದದ್ದೆಂದು ಒಪ್ಪಿಕೊಳ್ಳುತ್ತೇವೆ ಆದರೆ ವರ್ತಮಾನ ಪತ್ರಿಕೆಗಳು ಬರೀ ವರ್ತಮಾನಗಳನ್ನೇ ಪ್ರಕಟಿಸುವುದರಿಂದ ಬದುಕುವುದು ಎಲ್ಲೂ ಸಾಧ್ಯವಿಲ್ಲ ಚಂದಾ ಕೊಟ್ಟು ಪತ್ರಿಕೆಗಳನ್ನು ಓದಬೇಕೆಂಬ ಅಭಿರುಚಿಯು ಪ್ರಜೆಗಳಲ್ಲಿ ಇನ್ನೂ ಹೆಚ್ಚಬೇಕಾಗಿದೆ ವ್ಯಾಪಾರ ವಿಷಯವಾದ ಪ್ರಕಟನೆಗಳಲ್ಲಿ ಬಾತ್ಮಿದಾರರು ಹೇಳುವಂತೆ ಮೋಸಕರವಾದವುಗಳು ಅನೇಕ ಉಂಟು ಪದಾರ್ಥಗಳನ್ನು ಕಣ್ಣಿನಿಂದ ನೋಡದೆ ಕೊಂಡುಕೊಳ್ಳುವಾಗ ಮೋಸ ಹೋಗುವುದಕ್ಕೂ ಸಿದ್ಧವಾಗಿರಬೇಕು —ಎಡಿ]

ಕರೆಸ್‌ಪಾಂಡೆನ್ಸ್

ದಶಾವತಾರದ ಆಟದಿಂದಾಗುವ ಕೇಡು

ಅಯ್ಯಾ,—ತೀರ್ಥಹಳ್ಳಿ, ಕೊಪ್ಪ ಈ ಎರಡು ತಾಲ್ಲೋಕುಗಳಲ್ಲಿ ದಶಾವತಾರದ ಆಟ ಎಂದು ರೂಢಿಯಾಗಿದೆ ದಕ್ಷಿಣ ಕನ್ನಡಾ ಜಿಲ್ಲಾದಿಂದ 20 25 ಜನರು ಜೋತಾಗಿ ಸೇರಿಕೊಂಡು ಮೇಳ ಎಂದರೆ ಹೊಳೆಯುವ ಬೇಗಡೆಯ ವಸ್ತ್ರಗಳಿಂದ ತಯಾರ್ಮಾಡಿದ ಪದಾರ್ಥಗಳನ್ನು ಶರೀರಕ್ಕೆ ಆಭರಣವಾಗಿ ಇಟ್ಟುಕೊಂಡು ರಂಗಸ್ಥಳ ಎಂದರೆ 8 10 ಗಜ ವಿಸ್ತೀರ್ಣಕ್ಕೆ ಸ್ಥಳ ಸಫಾಯಿ ಮಾಡಿಕೊಂಡು ಅದರ ಸುತ್ತಲೂ ಈ ಆಟ ನೋಡತಕ್ಕ ಜನಗಳ ಸಭೆ ಸೇರಿಸಿಕೊಂಡು ನೃತ್ಯ ತಾಳ ಮದ್ದಲೆ ಚಂಡೆ ಈ ಶಬ್ದದೊಂದಿಗೆ ಸಾಯಂಕಾಲ 7 ಘಂಟೆಗೆ ಶುರುಮಾಡಿದರೆ ಬೆಳಿಗ್ಗೆ 8 ಘಂಟೆ ವರೆಗೆ ರಾತ್ರಿಯೆಲ್ಲಾ ಕುಣಿದು ಮೆರೆದು ಕೂಗಿ ಪ್ರಸಂಗ ಎಂದು ಪ್ರಸಂಗ ಹೇಳಿ ಜನಗಳಿಗೆ ನಿದ್ರಾಭಂಗಮಾಡಿ ಕಾಹಿಲೆ ಹೊಂದಿಸುವದಲ್ಲದೆ ಊರಲ್ಲಿ ಪ್ಲೇಗು, ಮೈಲಿ ಮುಂತಾದ ಅಂಟುರೋಗ ಇದ್ದರೆ ಆ ರೋಗಿತಾಗಿದ ಮೂಢಜನಗಳು ಕೂಡ ಆಟನೋಡಬೇಕೆಂಬ ಅಪೇಕ್ಷೆಯಿಂದ ರಾತ್ರಿ ಒಬ್ಬರಿಗೂ ಗೊತ್ತಿಲ್ಲದ ಹಾಗೆ ಆಟಕ್ಕೆ ಬಂದು ಅಂಟಿಸಿ ಹೋಗಿಬಿಡುತ್ತಾರೆ ಈ ಆಟದವರಿಗೆ ರಾತ್ರಿ ಬೆಳಗಾಗಬೇಕಾದರೆ 15 20 ರೂಪಾಯಿ ಅನಾವಶ್ಯವಾಗಿ ಕೊಟ್ಟು ಕಳೆಯುತ್ತಾರೆ ಮತ್ತು ಊರಲ್ಲಿರತಕ್ಕ ಪೋಕರಿ ಜನಗಳು ಹೆಚ್ಚಾಗಿ ನಿಷಾ ತೆಗೆದುಕೊಂಡು ಒಬ್ಬರಿಗೊಬ್ಬರು ಗುದ್ದಿ ಹೊಡೆದುಕೊಂಡು ಮೈನೋಯಿಸಿಕೊಂಡು ಬೆಳಿಗ್ಗೆ ನಿಷಾ ಇಳಿದನಂತರ ಸುಮ್ಮಗೆ ಹೋಗುತ್ತಾರೆ ಮತ್ತು ನಿಷಾ ಹೆಚ್ಚಿದವರು ಮುಂದೆ ಕುಂತಿರುವವರನ್ನು ಎಳೆದು ಹಿಂದಕ್ಕೆ

ನ್ನು ಮುಂದೆ ಕಂಡುಕೊಳ್ಳುವರು ಈ ಅನ್ಯಾಯ ಕೆಲಸಕ್ಕೂ ಮತ್ತು ಮಲೆನಾಡು ಜನಗಳ ಕ್ಷೇಮಕ್ಕೂ ಕುಂದಕ ಬಾರದಂತೆ ತಮ್ಮ ಮೈಸೂರು ಸರ್ಕಾರದವರು ಆಸ್ಪದ ಕೊಡದಿರಲಾರರೆಂದು ನಂಬಿ ಪ್ರಾರ್ಥಿಸುವೆನು

ಎಂ ಎಸ್, ಆಗುಂಬೆ

[ಗ್ರಾಮಗಳಲ್ಲಿ ಮುಖಂಡರಾಗಿಯೂ ಪ್ರಜಾ ಹಿತಚಿಂತಕರಾಗಿಯೂ ಇರುವವರು ಸಾಹಸಪಟ್ಟರೆ ಇಂಥಾದ್ದನ್ನೆಲ್ಲಾ ತಪ್ಪಿಸಬಹುದು ಇದಕ್ಕೆ ಸರ್ಕಾರದವರನ್ನು ಕೇಳಬೇಕಾದ ಅಗತ್ಯವಿಲ್ಲ —ಎಡಿ]

ಸಂತೆ ಕಟ್ಟುವ ಸ್ಥಳ ಬದಲಾವಣೆ

ಅಯ್ಯಾ,—ತ್ಯಾಮಗೊಂಡ್ಲುನಲ್ಲಿ ಇದು ವರೆಗೂ ಹನುಮಂತರಾಯನ ಬೀದಿಯಲ್ಲಿ ನಡೆಯುತ್ತಿದ್ದ ಸಂತೆಯು ಸರಿಯಾಗಿ ನಡೆಯದೆ ಹೋದ್ದರಿಂದ ಗ್ರಾಮದ ಮುಖಂಡರ ಕೋರಿಕೆಯಂತೆ ಶೇಷಾವಧೂತರ ಗೋರಿಯ ಬಳಿ ಇದು ನಡೆಯಬೇಕೆಂದು ಸರ್ಕಾರದವರ ಅಪ್ಪಣೆಯಾಗಿದೆ ಪರಗ್ರಾಮ ಮತ್ತು ಅಕ್ಕಪಕ್ಕ ಗ್ರಾಮದವರು ಬಂದು ವ್ಯಾಪಾರ ಮಾಡಬಹುದು ಇದಕ್ಕಾಗಿ ಆ ದಿನ ಅಲ್ಲಿ ಮಾರುವ ಯಾವ ಪದಾರ್ಥಗಳಿಗೂ ಸುಂಕ ವಗೈರೆ ವಸೂಲ್ಮಾಡುವದಿಲ್ಲವೆಂದು ಸರ್ಕಾರದವರ ಅಪ್ಪಣೆಯಾಗಿದೆ

ಸುಬ್ಬಣ್ಣ, ಕಂಟ್ರ್ಯಾಕ್ಟರ್

ಪೋಸ್ಟ್ ಇಲಾಖೆಯ ಮೇಲೆ ಆಕ್ಷೇಪಣೆ

ಅಯ್ಯಾ,—ಬೆಂಗಳೂರು ಸಿಟಿಯಲ್ಲಿ ತಾ 22 ನೇ ನವಂಬರ್ 13 ರಲ್ಲು ಅಲ್ಲಿನ ಕಮರ್ಷಿಯಲ್ ಪ್ರಿನ್ಸಿಪಾಲರಿಂದ ಪೋಸ್ಟಾಫ ನನ್ನ ಹೆಸರಿನ ಕಾರ್ಡು ಈ ಮಾಹೆ ತಾ 31 ಕ್ಕೆ ಒಕ್ಕಾಡಿಗನ ಹಳ್ಳಿ ಪೋಸ್ಟಿಗೆ ಬಂದು ನನಗೆ ಡೆಲಿವರಿ ಆದ 21 1 1914 ನೇ ತಾರೀಖಿನ ಹುಣಸೂರಿನ ಮುದ್ರೆ ಒತ್ತಿ ತಾ 25 1 1914 ರಲ್ಲು ನನಗೆ ಸಾವತಿ ಆಗಿರುತ್ತೆ ಇಷ್ಟು ಕಾಲ ಸದರಿ ಕಾರ್ಡು ತಲಪದೆ ಇದ್ದು ಏನು ಕಾರಣವೋ, 5 ತಿಂಗಳ ಕಾಲ ಸದರಿ ಕಾರ್ಡು ಎಲ್ಲಿ ನಿಂತಿತ್ತೋ ತಿಳಿಯದಲ್ಲ ಈ ಕಾರ್ಡನ್ನು ಪರಾಂಬರಿಕೆ ಬಗ್ಗೆ ಇದರ ಕೂಡ ಕಳುಹಿಸಿದ್ದೇನೆ

ಒಕ್ಕಾಡಿಗನಹಳ್ಳಿ

ಬಿ ನೀಲಕಂಠರಾವ್ ಸಾಲಂಕೆ

[ಈ ಕಾರ್ಡನ್ನು ನೋಡಿದೆವು ಐದು ತಿಂಗಳು ಅದು ಎಲ್ಲಿ ಹೋಗಿತ್ತೋ ನಮಗೆ ಗೊತ್ತಾಗಲಿಲ್ಲ ಪೋಸ್ಟ್ ಇಲಾಖೆಯವರಿಗೇ ತಿಳಿಯಬೇಕು —ಎಡಿ]

ಜೋಡಿದಾರರೂ ರೈತರೂ

ಅಯ್ಯಾ,—ಸರ್ಕಾರದಿಂದ ಜೋಡಿಯಾಗಿ ಕೊಡಲ್ಪಟ್ಟ ಜೋಡಿ ಗ್ರಾಮದಲ್ಲಿ ಜಮೀನು ಗೇಣಿದಾರಿಯಾಗಿ ರೈತನಿಗೆ ಕೊಟ್ಟಮಾತ್ರಕ್ಕೇ ರೈತನು ಧಣಿಯ ಅನುಮತಿಗೆ ವ್ಯತಿರಿಕ್ತವಾಗಿ ಇತರರಿಗೆ ಖರೀದಿಗೆ ಕೊಟ್ಟು ಫಾಯಿದೆ ಪಡೆಯಬಹುದೇ? ಈ ವಿಚಾರದಲ್ಲಿ ಸರ್ಕಾರದಲ್ಲಿ ಮನವಿ ಮಾಡಿಕೊಂಡಲ್ಲಿ ನ್ಯಾಯ ತೀರ್ಮಾನ ಮಾಡಿ ಸದರಿ ಖರೀದಿಯನ್ನು ತಪ್ಪಿಸಲಾರರೇ? ಇಂಥಾ ಸಂದರ್ಭಗಳು ಅನೇಕವಾಗಿ ನಡೆದು ಧಣಿಯು ಪಾಪರಾಗುತ್ತಲೂ, ರೈತನು ಸುಖಿಸುತ್ತಲೂ ಬರುವ ಕಾಲ ಒದಗಿತಲ್ಲಾ! ಇದಕ್ಕೆ ಪರಿಹಾರವಿಲ್ಲವೇ? ತಮ್ಮ ವಾಚಕರ್ಯಾರಾದರೂ ಪರಿಹಾರವನ್ನು ದಯವಿಟ್ಟು ಅಪ್ಪಣೆಕೊಡಿಸಿದಲ್ಲಿ ಸ್ವಂಥಾ ಬಡವನಿಗೆ ಬಹಳ ಅನುಕೂಲಿಸುತ್ತಾಗಿ ಪ್ರಾರ್ಥಿಸುವ

ಜೋಡಿದಾರ ಜಿ ಶ್ರೀನಿವಾಸಶಾಸ್ತ್ರೀ

ಶಿವಮೊಗ್ಗ ಡಿ, ಸವಳಂಗದ ಹೊಸಕೆರೆ ಮತ್ತು ನಾಲಾ ವಿಚಾರ

ಅಯ್ಯಾ —ಈ ಕೆರೆ ಆದ ಕೆಲವು ವರ್ಷಗಳ ಮೇಲೆ ಈ ಕೆರೆ ಕೆಳಗಿನ ನಾಲೆಯನ್ನು ರೆವಿನ್ಯೂ ಇಲಾಖೆಯಿಂದ ಇನ್ಜಿನಿಯರ್ ಇಲಾಖೆಯವರ ಸ್ವಾಧೀನ ಒಪ್ಪಿಸಿದ ನಂತರ ಈ ನಾಲಾ ಕೆಳಗೆ ಇರುವ ಗ್ರಾಮಾಂತ್ರಗಳ ರೈತರಿಗೆ ಕಾಲಾಕಾಲಕ್ಕೆ ಯಾವ ಪೈರುಗಳಿಗೂ ಆಸ್ಪದಕೊಡದೆ ನೀರು ಒದಗಿಸುತ್ತಾ ಬಂದಿರುವದರಿಂದ ವರ್ಷ ವರ್ಷ ಕಬ್ಬು ಮತ್ತು ಭತ್ತದ ಫಸಲು ರೈತರು ಜಾಸ್ತಿ ಬೆಳೆಕೊಳ್ಳಲು ಸರ್ಕಾರದವರು ತುಂಬಾ ಅನುಕೂಲಮಾಡಿಕೊಟ್ಟಿರುತ್ತಾರೆ ಈ ಇನ್ಜಿನಿಯರ್ ಇಲಾಖೆಗೆ ನಾಲಾ ಸೇರಿದ ನಂತರ ಸಬ್ ಓವರ್ಸಿಯರು ಮತ್ತು ನಾಲಾ ಮಣೇಗಾರರು ನಾಲಾದ ಮೇಲೆ ಹೋಗಿ ನಾಲಾ ವಿದ್ಯಮಾನವನ್ನೂ ಜಮೀನು ಹಿಸ್ಸೆಯಲ್ಲಿರುವದನ್ನೂ ಕಂಡು ರೈತರುಗಳನ್ನು ಕರಸಿ ಅವರ ಕಷ್ಟಗಳನ್ನು ವಿಚಾರಿಸಿದ್ದರಲ್ಲಿ ಸೋಗಿಲು ಗಂಜೇನಹಳ್ಳಿಯಲ್ಲಿ ರೈತರು ಎರಡು ಪಾರ್ಟಿ ಆಗಿರುವದರಿಂದಲೂ ನಾಲಾ ಹಂಚಿಗೆ ಕಾಲುವೆಗಳನು ದುರಸ್ತುಮಾಡಿಕೊಳ್ಳಲು ಅವರವರಲ್ಲೇ ಏಕಮತ್ಯವಿಲ್ಲದೆ ಒಬ್ಬರ ಮೇಲೆ ಒಬ್ಬರು ಮೊಕದ್ದಮೆಗಳು ಮಾಡಿಕೊಂಡು ಕೋರ್ಟುಗಳಿಗೆ ಅಲೆಯುತ್ತಾ ಇರುವದನ್ನೂ ವಿಚಾರಿಸಿ ಚತುರೋಪಾಯದಿಂದ ರೈತರುಗಳಿಗೆ ತಿಳುವಳಿಕೆ ಕೊಟ್ಟು ಪಾರ್ಟಿಗಳನ್ನು ಮುರಿದು ರೈತರು ತಮ್ಮ ಅಭಿವೃದ್ಧಿಗೆ ಬರುವ ದಾರಿಯನ್ನು ತೋರಿಸಿ ಅನುಕೂಲಮಾಡಿಸಿಕೊಟ್ಟಿರುವದಕ್ಕಾಗಿ ತುಂಬಾ ಸಂತೋಷಪಡಬೇಕಾಗಿರುತ್ತೆ ಅಲ್ಲದೆ ಚಿಕ್ಕೇನಹಳ್ಳಿ, ದೊಡ್ಡೇನಹಳ್ಳಿ ಕೊನೆ ಗ್ರಾಮಗಳಾದ್ದರಿಂದಲೂ, ನಾಲಾಕ್ಕೆ ಬೀಗಗಳು ಇಲ್ಲದೆ ಇರುವದರಿಂದಲೂ ಆ ಗ್ರಾಮದವರಿಗೆ ನೀರು ಒದಗಿಸುವದು ಬಹಳ ಕಷ್ಟವಾಗಿತ್ತು ಇಂಥಾದ್ದರಲ್ಲಿ ಪ್ರತಿ ವಾಟಿಗಿನಲ್ಲಿಯೂ ನೀರು ಇಲ್ಲವೆಂಬ ಅಂಶವನ್ನು ಅರ್ಜಿಮಾಡುತ್ತಿದ್ದರು ಈಚೆಗೆ ಇವರುಗಳು ಬಂದ ನಂತರ ಈ ಫಿರ್ಯಾದಿ ಸಂಪೂರ್ಣವಾಗಿ ನಿಂತು ಹೋಗಿರುತ್ತೆ ಅಲ್ಲದೆ ರೈತರುಗಳಿಗೆ ನೀರಿನ ವಿಷಯದಲ್ಲಿ ಸವ್ವಕ್ಕೆ ಕೊರತೆ ಇರುವದಿಲ್ಲ ಇನ್ನು ಮುಂದೆ ಸರ್ಕಾರದವರು ಈ ರೈತರು ಮಸೂದು ಕಾವೇರಿ ನಾಲಾದಂತೆ ವರ್ಷಕ್ಕೆ ಎರಡು ಪೈರು ಬೆಳೆಯಲು ತಕ್ಕ ತಿಳುವಳಿಕೆಕೊಡುತ್ತಾರಾಗಿ ನಂಬುತ್ತೇನೆ ಹಾಲಿ ಈಗ ಇಲ್ಲಿನ ನಾಲಾ ಮಣೇಗಾರರು ಎರಡು ಪೈರು ತೆಗೆದುಕೊಳ್ಳಲು ರೈತರಿಗೆ ಸಾಧ್ಯವಾದಷ್ಟು ತಿಳುವಳಿಕೆ ಕೊಡುತ್ತಾ ಇರುವದಾಗಿ ತಿಳಿಯಬರುತ್ತೆ ಇವರುಗಳ ಮೇಲಿನ ಕೆಲಸವನ್ನು ಈ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳು ಪರಾಂಬರಿಸಿ ಇನ್ನೂ ರೈತರುಗಳಿಗೆ ಸಾಧ್ಯವಾದಷ್ಟು ಪ್ರೋತ್ಸಾಹ ಕೊಡಲು ಅವಕಾಶಕೊಡುತ್ತಾರಾಗಿ ನಂಬುತ್ತೇನೆ

ಪ್ರಜಾ ಹಿತಚಿಂತಕ

ಸಾತ್ವಿಕ ಶ್ರೀವೈಷ್ಣವ ಸಭಾ

ಅಯ್ಯಾ,—ಈ ಸಭೆಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾದರಹಳ್ಳಿಯಲ್ಲಿ ಕಳೆದ 11 12 ನೇ ತಾರೀಖುಗಳಲ್ಲಿ ನಡೆಯಿತಷ್ಟೆ ಇದಕ್ಕೆ ಹಿಂದೆಯೇ ಈ ಸಭೆಯು ಎರಡು ಸ್ಥಳಗಳಲ್ಲಿ ನಡೆದಿದ್ದಂತೆ ತಿಳಿಯಬರುವುದು ಈ ಸಭೆಯನ್ನು ಸೇರಿಸುವುದರಲ್ಲಿ ಮುಂದಾಳುಗಳಾದ ರಾ॥ ಕೊಂಡವಾಚಾರ್ಯರೂ, ಕೋನೇಹಳ್ಳಿ ಹನುಮಂತರಾಯರೂ ಇನ್ನು ಮುಂತಾದವರೂ ಈ ಸಭೆಯನ್ನು ಸ್ಥಾಪಿಸುವದಕ್ಕೆ ಮುಂಚೆಯೇ ಇದರ ಉದ್ದೇಶವನ್ನೂ, ಮತದಲ್ಲಿ ಆಗಬೇಕಾಗಿರುವ ಮುಖ್ಯವಾದ ಸಂಸ್ಕಾರಗಳನ್ನೂ ಪರಿಶೀಲಿಸಿ, ಈ ಮತದಲ್ಲಿ ಇನ್ನೂ ವಿದ್ಯಾವಂತರಾಗಿರುವ ಮತಸ್ಥರನ್ನೂ ಸಹೃದಯತೆಯಿಂದ ಒಡಮಾಡಿಕೊಂಡು ಏಕಮತ್ಯದಿಂದ ಕಾರ್ಯನಡೆಸಿದ್ದರೆ ಈಗ ಈ ಮತದಲ್ಲಿ ನೆಲೆಗೊಂಡಿರುವ ಅವ್ಯವಸ್ಥೆಗಳೆಲ್ಲಾ ನಿರ್ಮೂಲವಾಗಬಹುದಾಗಿತ್ತು ಮೈಸೂರು ಸೀಮೆಯಲ್ಲಿ ಈ ಮತದವರು ಅತ್ಯಂತ ವಿರಳ ಅದರಲ್ಲಿಯೂ ಬಹು ಮಂದಿ ಅವಿದ್ಯಾವಂತರು ಅರ್ಚಕರ ಹೊರತು ಮತ್ತೊಂದು ವೃತ್ತಿಯಿಲ್ಲ ಇಂದವರನ್ನು ಒಂದು ಮಾಡಿ ವಿದ್ಯಾವಂತರನ್ನಾಗಿ, ನಾಗರಿಕರನ್ನಾಗಿ ಮಾಡುವುದು ಸುಲಭಸಾಧ್ಯವಲ್ಲ ಇದಕ್ಕೆ ಮತದ ಮುಖಂಡರ ಧನಸಹಾಯವೂ ಸ್ವಾರ್ಥತ್ಯಾಗವೂ ಸ್ಥಿರಮನಸ್ಸೂ ಮುಖ್ಯವಾಗಿ ಬೇಕು ಅಲ್ಲದೆ ಅಲ್ಪಸ್ವಲ್ಪವಾಗಿರುವ ಈ ಮತದ ವಿದ್ಯಾವಂತರುಗಳೂ ಸಹೃದಯತೆಯಿಂದ ಏಕೀಭವಿಸಿ ಕೆಲಸ ನಡಿಸಬೇಕು ಈ ಸಭೆ 15 ವಿದ್ಯಾವಂತರುಗಳನ್ನೂ ಸಭೆಗೆ ಬರಮಾಡಿಕೊಳ್ಳಲಿಲ್ಲ ಶ್ರೀ ಎಚ್ ವೆಂಕಟರಾಯ ಕವಿಗಳು, ಸೂ॥ ಮಾ॥ ಸಂಜೀವರಾಯರು, ವೆರ್ನಾಕ್ಯುಲರ್ ಮಾ॥ ಹನುಮಂತರಾಯರು, ಸಿದ್ಧಾಪುರದ ದಾಳಪ್ಪನವರು, ವೆಂಕಟಪ್ಪನವರು, ಕಂಟ್ರ್ಯಾಕ್ಟರು ಹನುಮಂತರಾಯರು ಮುಂತಾದವರನ್ನೂ ಸಭೆಗೆ ಬರಮಾಡಿಕೊಂಡು, ಅವರಿಂದಲೂ ಸಹಾಯ ಹೊಂದಿದ್ದಲ್ಲಿ ಸಭೆಗೆ ಬಹಳ ಅನುಕೂಲವಾಗುತ್ತಿತ್ತು ಮ॥ ಕೊಂಡವಾಚಾರ್ಯರು ಎಚ್ ವೆಂಕಟರಾಯರಿಗೆ ಕಳುಹಿಸಿದ ಆಹ್ವಾನ ಪತ್ರಿಕೆಯು ಸಭೆ ನಡೆಯುವ ದಿನವೇ ಅವರಿಗೆ ತಲಪಿತು ಅವರು ಸಭೆಗೆ ಬಂದಿದ್ದರೆ ಗುಪ್ತವಾಗಿದ್ದ ಅನೇಕ ಹೊಸ ವಿಷಯಗಳು ಪ್ರಚುರವಾಗಿ ಈ ಮತದವರು ಎಚ್ಚೆತ್ತು ಕೊಳ್ಳಬಹುದಾಗಿತ್ತು ಮುಂದಾದರೂ ಸಭಾ ಕಾರ್ಯದರ್ಶಿಗಳು ಮತದ ಮುಖಂಡರನ್ನೂ ವಿದ್ಯಾವಂತರನ್ನೂ ಬರಮಾಡಿಕೊಂಡು, ಸಭಾ ಕಾರ್ಯಗಳನ್ನು ಏಕಮತ್ಯದಿಂದ ನಿರ್ವಹಿಸಿ, ಹಿಂದೆ ಇಲ್ಲದೆ ಇದ್ದ ಡಂಭರೂಪವಾದ ಆಚಾರಗಳು ಪುನಃ ಮತದಲ್ಲಿ ಬೇರೂರುವಂತೆ ಮಾಡದೆ ಬ್ರಾಹ್ಮಣ ಮತದಲ್ಲಿಯೇ ಆಚರಣೆಗೆ ತರಬೇಕೆಂದು ವಾಗ್ವಾದ ನಡೆಯುತ್ತಿರುವ ವಿದ್ಯೆ, ಪ್ರೌಢಾವಿವಾಹ, ವಿಧವಾವಿವಾಹ, ಕೈಗಾರಿಕೆ, ವ್ಯಾಪಾರ, ವ್ಯವಸಾಯ, ಇಂಥಾ ಅಭಿವೃದ್ಧಿ ಕಾರ್ಯಗಳಲ್ಲಿ ಸ್ವಮತೀಯರನ್ನು ಸುಶಿಕ್ಷಿತರನ್ನಾಗಿ ಮಾಡುತ್ತಾ ಬಂದಲ್ಲಿ ಈ ಮತೀಯರು ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ

ಅರ್ಚಕ ಹನುಮಂತಯ್ಯ, ಗೋರೀಪುರ

ತಾಲ್ಲೂಕು ವರ್ತಮಾನಗಳು

ಮೂಡಿಗೆರೆ ತಾ॥ ಬಣಕಲ್‌ಪೇಟೆ —ಈ ಪ್ರಾಂತ್ಯ ಈ ವರೆಗೂ ಮಳೆ ಇಲ್ಲದೆ ವ್ಯವಸಾಯಕ್ಕೆ ಬಹಳ ಅಡಚಣೆಯಾಗಿದೆ ಮತ್ತು ಈ ಪ್ರಾಂತ್ಯ ಕಾಫಿಯಾಲಕ್ಕೆ ಮುಖ್ಯ ಆಧಾರವಾಗಿರುವದರಿಂದ ಈ ವರೆಗೂ ಮಳೆ ಇಲ್ಲದೆ ಕಾಫಿಯಾಲಕ್ಕೆ ಫಸಲು ಬಹಳವಾಗಿ ನಷ್ಟ ಹೊಂದುತ್ತಿದೆ ಧಾರಣೆವಾಸಿಯಂತು ಕ್ಷಾಮಗಾಲವನ್ನೇ ತೋರುತ್ತಿದೆ —ಕೂಲಿಜನಗಳ ಪಾಡು ಹೇಳತೀರದು ಇವರ ಗೋಳನ್ನು ನೋಡಿ ಈ ಪ್ರಾಂತ್ಯದ ಯೂರೋಪಿಯನ್ ಪ್ಲಾಂಟರುಗಳು ಮೀಟಿಂಗು ನಡಿಸಿ ಕೂಲಿಜನಗಳಿಗೆ ದಿನ 1ಕ್ಕೆ 4 ಆಣೆ ಕಂಬಳ ಇದದ್ದನ್ನು 5 ಆಣೆಗೆ ಹೆಚ್ಚಿಸಿರುವದು ಕೂಲಿಜನರಿಗೆ ಬಹಳ ಸಂತೋಷಕರದವಾಗಿದೆ

ಯಡತೊರೆ ತಾ॥ ಮಂಚನಹಳ್ಳಿ —ಈ ಗ್ರಾಮದಲ್ಲಿ ತಾ 22 ನೇ ಬುಧವಾರ ಕೋಆಪರೇಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರ್ ಮ॥ ಎಂ ಪುಟ್ಟಸ್ವಾಮಿಯವರ ಅಧ್ಯಕ್ಷತೆ ಮತ್ತು ಪ್ರೋತ್ಸಾಹದಲ್ಲಿ ಒಂದು ಗೋಸಂರಕ್ಷಣಾ ಸಮಾಜವು ಸ್ಥಾಪಿಸಲ್ಪಟ್ಟಿತು ಇದರ ಉದ್ದೇಶವು ಗೋವುಗಳು ಬಾಯುಬಿಡಾಗಿರುವ ವರೆಗೂ ಕೆಲಸ ತೆಗೆದುಕೊಂಡು ನಂತರ ಮಾರ್ಗ ಮುಂತಾದ್ದಕ್ಕಾಗಿ ಇವುಗಳನ್ನು ಕಟುಕರ ವಶಕ್ಕೆ ಒಪ್ಪಿಸಿ ಕೊಲ್ಲಿಸುತ್ತಿರುವದನ್ನು ತಪ್ಪಿಸಿ ಇಂಥವುಗಳನ್ನು ಸಮಾಜದವರು ತಪಾಸ್‌ಮಾಡಿ ಸುಲಭ ಕ್ರಯಕ್ಕೋ ಮುಫತ್ತಾಗಿಯೋ ಸಿಕ್ಕುವ ಬಾಯಿಬಿಡದ ಧನಗಳನ್ನು ಕಾಪಾಡಬೇಕೆಂಬುದೇ ಆಗಿರುತ್ತೆ ಇದಕ್ಕಾಗಿ ಆ ದಿವಸವೇ ಸಾಹುಕಾರ್ ಮ ವೆಂಕಟಸುಬ್ಬಯ್ಯನವರೇ ಮೊದಲಾದವರು ಸುಮಾರು 60 ರೂಪಾಯಿ ವರೆಗೆ ಚಂದಾರೂಪವಾಗಿ ವಾಗ್ದಾನಮಾಡಿದ್ದು ಬಹಳ ಸಂತೋಷಕರವಾಗಿದೆ ಕೋಆಪರೇಟಿವ್ ಸೊಸೈಟಿ ಸೆಕ್ರೆಟರಿ ಮ॥ ರ ಮಸ್ವಾಮಿ ಶಾಸ್ತ್ರಿಗಳು ಈ ಸಮಾಜಕ್ಕೆ ಬೇಕಾದ ಪುಸ್ತಕಗಳನ್ನು ಹಾಕಿಕೊಡುವುದಕ್ಕೂ, ಸೆಕ್ರೆಟರಿಯಾಗಿದ್ದು ಕಾರ್ಯಗಳನ್ನು ನಡಿಸುವುದಕ್ಕೂ ಒಪ್ಪಿಕೊಂಡಿರುವದು ಸ್ತೋತ್ರಾರ್ಹವಾಗಿದೆ

ಬೀರೂರು ಇಲ್ಲಿ ಪ್ಲೇಗ್ ಉಪದ್ರ ಎಂತವಾಗಿ ಸುಮಾರು 2 ತಿಂಗಳಾಯಿತು ಈ ಭೀತಿಯಿಂದ ಚದರಿಹೋಗಿದ್ದ ಜನರು ಊರು ಬಂದು ಸೇರುತ್ತಿದ್ದಾರೆ ವರ್ಷ ವರ್ಷ ಪ್ಲೇಗಿನ ಹಾವಳಿ ತಪ್ಪಿಲ್ಲವಾದ್ದರಿಂದ ಪುನಃ ಸ್ಥಾನಭ್ರಷ್ಟರು ಎಲ್ಲಿ ಉಳಿದುಕೊಳ್ಳಬೇಕೆಂಬ ಚಿಂತೆ ತಪ್ಪಲಿಲ್ಲ —ಅ॥ ಕಮಿಷನರ್ ರವರೂ ಅಮಲ್ದಾರರೂ ಬಿದ್ದು ಜನಾನುರಾಗದಿಂದ ಕೆಲಸ ಪೂರೈಸಿಕೊಂಡು ದಯಮಾಡಿದರು —ಕಡೂರು ಪೇಟೆಗೆ ಸ್ಥಳಾಂತರಗಳಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಬಂದಿದ್ದ ವೀರಶೈವ ವಿದ್ಯಾರ್ಥಿಗಳಿಗೂ ಅವರಲ್ಲಿ ಊಟ ಮಾಡತಕ್ಕ ಇತರ ಮತಸ್ಥರಾದ ವಿದ್ಯಾರ್ಥಿಗಳಿಗೂ ಈ ಊರಿನ ಮ॥ ಎಸ್ ಎಂ ಶಿವಲಿಂಗಪ್ಪಯ್ಯನವರು ಕಾಲಕಾಲಕ್ಕೆ ಭೋಜನ ಫಲಾಹಾರ ಮುಂತಾದವುಗಳಿಗೆ ತಕ್ಕ ಏರ್ಪಾಡು ಮಾಡಿ ಬಹು ವಿಶ್ವಾಸದಿಂದ ನಡಿಸಿದ್ದು ಜ್ಞಾಪನೀಯವಾಗಿದೆ ಇದು ವಿದ್ಯಾರ್ಥಿಗಳಿಗೆ ಮಾತ್ರವೇ ಉಪಕಾರವಾದಂತಲ್ಲ ಇಂಥಾ ಸತ್ಕಾರ್ಯಗಳು ರಾಜಭಕ್ತಿಗೆ ಅನ್ಯೋನ್ಯವಾಗಿ ಸಂಬಂಧಪಟ್ಟವುಗಳಾದ್ದರಿಂದ ಮ॥ ಶಿವಲಿಂಗಪ್ಪಯ್ಯನವರು ಈ ಮೂಲಕ ರಾಜಭಕ್ತಿಯನ್ನು ಪ್ರದರ್ಶನ ಮಾಡಿದಂತಾಯಿತು —ಅಡಿಕೆ ಧಾರಣೆ ಏರುತ್ತಾ ಇವೆ

ಮಾಲೂರು ತಾ॥ ಕೂರ್ನಹೊಸಹಳ್ಳಿ —ಈ ಊರಿನಲ್ಲಿ ಮೊದಲಿನಿಂದಲು ಒಂದು ಬಾಯ್ಸ್ ಸ್ಕೂಲ್ ಇತ್ತು ಅದನ್ನು ವಜಾಮಾಡಿದ್ದು, ಈಚೆಗೆ ಅದನ್ನು ಪುನಃ ಇಲ್ಲಿಗೆ ಸ್ಯಾಂಕ್ಷನ್ ಮಾಡಿದ್ದಕ್ಕಾಗಿ ಮಹಾರಾಜಾ ಸರ್ಕಾರಕ್ಕೆ ನಾವು ತುಂಬಾ ಕೃತಜ್ಞರಾಗಿದ್ದೇವೆ ಸ್ಕೂಲ್ ಮಾಸ್ಟರಾಗಿ ಬಂದಿರತಕ್ಕ ಎನ್ ನಂಜುಂಡಶಾಸ್ತ್ರಿಗಳು ಸ್ಕೂಲ್ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸಿ ಬಾಲಕರ ಸಂಖ್ಯೆ 40 50 ರವರಿವಿಗೆ ಕೆತ್ತಿ ವಿದ್ಯಾವಿಷಯದಲ್ಲಿ ಬಹಳ ಮೆಹನತ್ತು ಮಾಡಿ ಬಾಲಕ ಬಾಲಕಿಯರಿಗೆ ತಕ್ಕ ಪ್ರೋತ್ಸಾಹಪಡಿಸುತ್ತಿರುವುದು ಸ್ತೋತ್ರಾರ್ಹವಾಗಿದೆ ಅಲ್ಲದೆ ರಾತ್ರಿ ವೇಳೆ ರೈತರಿಗೆ ವ್ಯವಸಾಯ ವಿಷಯದಲ್ಲಿಯೂ ವರ್ತಮಾನ ಪತ್ರಿಕೆಗಳಿಂದಲೂ ಅನೇಕ ವಿಷಯ ತಿಳಿಯಪಡಿಸುತ್ತಿರುವರು ಸ್ಕೂಲ್ ಪರೀಕ್ಷೆ ಮಾಡುವದಕ್ಕಾಗಿ ಅ॥ ಡೆಪ್ಯುಟಿ ಇನ್ಸ್‌ಪೆಕ್ಟರು ಬಂದು ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿ ಬಾಲಕರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಸಹಾಯೋಪಾಧ್ಯಾಯರನ್ನು ಕೊಡುವಂತೆ ಹೇಳಿ ಹೋದರು ಇದರಿಂದ ಸ್ಕೂಲು ಇನ್ನೂ ಉತ್ತಮ ಸ್ಥಿತಿಗೆ ಬರಲು ಸಂದೇಹವಿಲ್ಲ ಈಗ ಸ್ಕೂಲ್ ಕಟ್ಟಡವು ಬಹಳ ಚಿಕ್ಕದಾಗಿಯೂ, ಗಾಳಿಬೆಳಕಿನ ವಿಷಯದಲ್ಲಿ ಅನನುಕೂಲವಾಗಿಯೂ ಇರುವುದರಿಂದ ಬೇರೆ ಹೊಸ ಕಟ್ಟಡ ಕಟ್ಟಿಸಿಕೊಡಬೇಕಾಗಿ ಪ್ರಾರ್ಥನೆ ಇದಕ್ಕಾಗಿ ಗ್ರಾಮಸ್ಥರು ಕಂಟ್ರಿಬ್ಯೂಷನ್ ಮೊಬಲಗು ಕೊಡಲು ಸಿದ್ಧರಾಗಿದಾರೆ

ಮಂಡ್ಯ —ಕೀನೀರಿಗೆ ತುಂಬಾ ಅಭಾವವಾಗಿದೆ ಕೀಸೀರಿನ ಕೊಳ ಬತ್ತಿ ಹೋಗಬಹುದು ಸುಮಾರು ಒಂದು ತಿಂಗಳಿಂದಲೂ ಪ್ಲೇಗ್ ಸೂಚನೆಗಳಿದ್ದರೂ ಎಚ್ಚರಿಕೆ ತಂದುಕೊಳ್ಳದೆ ಹೋದ್ದರಿಂದ ಈ ವರೆಗೂ ನೂರು ಮರಣಗಳಾದವು ಈಗ ಅನೇಕರು ಊರು ಬಿಡುವ ಯೋಚನೆಯಲ್ಲಿದ್ದಾರೆ ಈ ಪ್ರಾಂತ್ಯ ಪಾರ್ಟಿ ವ್ಯಾಜ್ಯಗಳೂ, ಇತರ ವಿಧವಾದ ಗಲಾಟೆಗಳೂ ಆಗಾಗ್ಗೆ ಹುಟ್ಟಿ ಅನೇಕ ಮೊಕದ್ದಮೆಗಳೂ ನಡೆಯುತ್ತಾ ಇವೆ. ಅಮಲ್ದಾರ್ ಮ॥ ಕೃಷ್ಣೆ ಅರಸಿನವರು ಅನೇಕ ಕಡೆ ಸಂಭವಿಸಿ ಪಾರ್ಟಿ ವ್ಯಾಜ್ಯಗಳನ್ನು ಫೈಸಲ್ ಮಾಡುವದಲ್ಲದೆ ಪರಸ್ಪರ ಸಹಾಯಕ ಸಂಘಗಳ ಮೂಲಕ ರಾಜಿ, ಪ್ರೀತಿ, ಸಮಾಧಾನಗೊಳಿಸುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿದೆ ಇವರು ಬಂದಲಾಗಾಯಿತು ಅನೇಕ ವೇಳೆ ನ್ಯಾಯ ದೊರಕಿದೆ ಎಂದು ಹೇಳುತ್ತಾರೆ —ತಾ 2 ರಲ್ಲು ಮಂಡ್ಯದ ವರ್ತಮಾನದಲ್ಲಿ «20 30 ಸಹಸ್ರ ರೂಪಾಯಿ ಖರ್ಚುಮಾಡಿ ಕಟ್ಟಿಸುತ್ತಿರುವ ಆರಳೆ ಸಂಗಪ್ಪನವರ ಮತ್ತು ಧರ್ಮಪ್ಪನವರ ಧರ್ಮ ಛತ್ರ ವಿತ್ರಕ್ಕೆ» ಎಂಬುದು ತಪ್ಪಾಗಿ ಪ್ರಕಟವಾಗಿತ್ತು ಈ ಧರ್ಮ ಛತ್ರಕ್ಕೆ ಮೇಲ್ಕಂಡ ಆರಳೆ ಸಂಗಪ್ಪನವರ ಸ್ವಂತ ಖರ್ಚೇ ಹೊರತು ಧರ್ಮಪ್ಪನವರದೇನೂ ಇಲ್ಲ ಆದರೆ ಅ ಕಟ್ಟಡದ ವಿಷಯದಲ್ಲಿ ನೆರವಾಗುವದು ತುಂಬ ಸಹಾಯಕರಾಗಿದಾರೆ —ಸಂತೆಯಲ್ಲೂ ಟೌನ್ನಿನಲ್ಲೂ ಅಳತೆ ತೂಕಗಳ ನಿಗಾ ಇನ್ನೂ ಸರಿಹೋಗಿಲ್ಲ ಸರ್ಕಾರದವರ ಗಮನಕ್ಕಾದರೂ ಗೊತ್ತಾಗಲಿಲ್ಲ ಮೈಸೂರಿಗೂ ಬೆಂಗಳೂರಿಗೂ ಮಧ್ಯೆ ಇರುವ ಸ್ಟೇಷನ್‌ಗಳಲ್ಲಿ ಇಲ್ಲದೇ ಇರತಕ್ಕ ಕೆಲವು ಅನುಕೂಲಗಳನ್ನು ಈ ಮಂಡ್ಯದ ಸ್ಟೇಷನ್ನಿನಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಇಟ್ಟಿಸ ವರ್ತಕರು ಚಂದಾ ಹಾಕಿ 15 ತಿಂಗಳ ವರೆಗೂ ದಾಹಶಾಂತಿ ವೊದಲಾದವುಗಳನ್ನು ಮಾಡಿಸುತ್ತಿರುವುದು ಸ್ತೋತ್ರಾರ್ಹವಾಗಿದೆ.

ದೇವನಹಳ್ಳಿ —ಈ ಊರಿನಲ್ಲಿ ಬಿಸಿಲಿನ ತಾಪ ಸಹಿಸಲು ಅಸಾಧ್ಯವಾಗಿರುತ್ತೆ. ಸಾಯಂಕಾಲವಾಗುತ್ತಲೇ ಮೋಡ ಮುಚ್ಚಿಕೊಂಡು ಮಳೆ ಬರುವಂತೆ ಸೂಚನೆ ತೋರುತ್ತಿಯೇ ವಿನಹ ಮಳೆ ಬರಲಿಲ್ಲ ಕೆರೆ ಕುಂಟೆಗಳಲ್ಲಿ ನೀರು ಇಲ್ಲದೆ ಜೀವ ಧನಗಳಿಗೆ ಮೇವೂ, ನೀರೂ ಇಲ್ಲದೆ ಬಹಳ ಪ್ರಯಾಸವಾಗಿರುತ್ತೆ ಧಾರಣೆವಾಸಿಗಳಂತು ಹೇಳತೀರದು ಅಕ್ಕಿ ರೂಪಾಯಿಗೆ 6 6½ ಸೇರು, ರಾಗಿ 12 ಸೇರು ಮಾರಾಟವಾಗುತ್ತಿದೆ — ತಾ 13 ನೇ ಸೋಮವಾರ ಅಮಲ್ದಾರರು, ಪೋ॥ ಇನ್ಸ್‌ಪೆಕ್ಟರು ವಗೈರೆಯವರು ಸ್ಕೂಲ್ ಮಾಸ್ಟರ್ ಶ್ರೀನಿವಾಸಯ್ಯಂಗಾರರು ನಡಿಸಿದ ರಾಮೋತ್ಸವದಲ್ಲಿ ಮುಖಂಡರಾಗಿ ನಿಂತು ಆಯಾ ಪಂಗಡದವರಿಗೆ ಬೇರೆ ಬೇರೆ ಊಟ ಉಪಚಾರಗಳನ್ನು ನಡಿಸಿ ಉತ್ಸವವನ್ನು ಅತಿ ವಿಜೃಂಭಣೆಯಾಗಿ ನಡಿಸಿದರು —ಗ್ರಾಮ ಶಾನುಭೋಗರು ಚೆನ್ನಾಗಿಲ್ಲ ಇರತಕ್ಕ ಝಾಡಮಾಲಿಗಳು ಸರಿಯಾಗಿ ಚೊಕ್ಕಟ ಮಾಡುವದಿಲ್ಲ ಸಂತೆಬೀದಿಯ 2½ ಅಳುದ್ದದ ಗುಂಡಿಯು ಬಹಳ ಕಾಲದಿಂದಲೂ ಮುಚ್ಚದೆ ಹಾಗೆಯೇ ಇರುತ್ತೆ ಅದರಲ್ಲಿ ಯಾರಾದರೂ ಬಿದ್ದು ಪ್ರಾಣಾಪಾಯವಾದಾಗ ಮುಚ್ಚಿಸುತ್ತಾರೋ ಏನೋ ಮತ್ತು ಲಾಂದ್ರಗಳು ಸರಿಯಾಗಿ ಉರಿಯದೆ ಹೊಗೆ ಮುಚ್ಚಿಕೊಳ್ಳುತ್ತವೆ ರಸ್ತೆಗಳಲ್ಲಿರುವ ಲಾಂದ್ರಗಳು ಮಾತ್ರ ನೇಮಕವಾದ ಕಾಲದವರಿವಿಗೂ ಉರಿಯದೆ ನಂದಿಹೋಗುತ್ತವೆ ಸಂದುಗೊಂದುಗಳ ರಸ್ತೆಗಳು ಸರಿಯಾಗಿಲ್ಲದೆ ಹಳ್ಳಕೊಳ್ಳಗಳಾಗಿ ಕೊರಕಲು ಬಿದ್ದು ಕತ್ತಲೆ ಕಾಲದಲ್ಲಿ ಅನೇಕ ಜನಗಳು ಬಿದ್ದು ಘಾಯಮಾಡಿಕೊಳ್ಳುತ್ತಾರೆ ಇದನ್ನು ಮ್ಯುನಿಸಿಪಾಲಿಟಿಯವರು ಪರಾಂಬರಿಸಿ ಕ್ರಮಪಡಿಸುವರೆಂತ ನಂಬುತ್ತೇವೆ —ಆಸ್ಪತ್ರೆಯಲ್ಲಿ 9 ಘಂಟೆಗೆ ಮೇಲ್ಪಟ್ಟು ಬಾಗಿಲು ತೆರೆಯುತ್ತಾರೆಂಬದಾಗಿಯೂ, ಸಕಾಲಕ್ಕೆ ಬಂದ ಜನಗಳಿಗೆ ಔಷಧೋಪಚಾರಗಳು ನಡೆಯುವದಿಲ್ಲವೆಂತಲೂ, ಕೂಲಿನಾಲಿ ಮಾಡತಕ್ಕವರು 9 ಘಂಟೆ ವರಿವಿಗೂ ಕಾದು ಇದ್ದರೆ ಕಾಯಿಲೆಯವರ ಆಹಾರ ತ್ಯಾಗ, ತಮ್ಮ ಜೀವನ ತ್ಯಾಗ ಎಂತ ಹೇಳಿಕೊಳ್ಳುತ್ತಾರೆ ದಯಾಳು ಸರ್ಕಾರದವರು ಆಸ್ಪತ್ರೆಯಲ್ಲಿ ಚಟುವಟಿಕೆಯಿಂದ ಕೆಲಸ ನಡೆಯುವಂತೆ ಮಾಡುತ್ತಾರೆಂದು ನಿರೀಕ್ಷಿಸುವರು

ಹಾಸನ —ತಾ 3 ನೇ ಶುಕ್ರವಾರ ಮಾತ್ರ ಈ ಪ್ರಾಂತ್ಯ ಬಹು ಒಳ್ಳೇ ಮಳೆಯು ಬಂದಿತು ಈಚೆಗೆ ಅದರ ಸೂಚನೆ ಕೂಡ ಕಾಣುವುದಿಲ್ಲ ಕೆರೆ ಕಟ್ಟೆಗಳೂ, ಸೇದುವ ಭಾವಿ ಕೊಳಗಳೂ ಬತ್ತಿಹೋಗುತ್ತಾ ಇವೆ ಈಗ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ॥ ಗೋಪಾಲರಾಜೆಅರಸಿನವರು ಬಹು ಮುತುವರ್ಜಿಯಿಂದ ಕೆಲಸಗಳನ್ನು ನಡಿಸುತ್ತಿರುವಂತೆ ತೋರುತ್ತದೆ ಸಾಕ್ಷ್ಯ ವಿಷಯದಲ್ಲಿ ಇನ್ನೂ ಇವರು ಗಮನಕೊಟ್ಟಂತೆ ಕಾಣುವುದಿಲ್ಲ ಈ ಊರಿಗೆಲ್ಲಾ ಇರುವ ಇದೊಂದೇ ಸಾರ್ಕನ್ನು ಉತ್ತಮರೀತಿಯಲ್ಲಿಡುವುದಕ್ಕೆ ಗಮನಕೊಡಬೇಕಾಗಿದೆ ಈ ಡಿವಿಜನ್ನಿನ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಪುಟ್ಟಸ್ವಾಮಯ್ಯನವರಿಗೆ ಕನ್ನಂಬಾಡಿ ಕೆರೆಯ ಡಿವಿಜನ್‌ಗೆ ವರ್ಗವಾಯಿತು ಈ ಡಿವಿಜನ್‌ನಲ್ಲಿ ಕೆಲವು ದೋಷಗಳು ಕಂಡುಬಂದಿತ್ತೆಂತಲೂ, ಅ॥ ಕಂಟ್ರೋಲರವರು ಬಂದು ಆಫೀಸ್ ಲೆಕ್ಕಗಳನ್ನು ನೋಡಿಕೊಂಡು ಹೋದರೆಂತಲೂ ಪ್ರವಾದವಿದೆ ಇಲ್ಲಿಗೆ ಮ॥ ರಾಮಸ್ವಾಮಿಅಯ್ಯರವರು ಬಂದು ಚಾರ್ಜನ್ನು ವಹಿಸಿಕೊಂಡಿದ್ದಾರೆ —ಮೇ ತಿಂಗಳಿನ ತಾ 22-23ನೇ ಶುಕ್ರವಾರ ಶನಿವಾರಗಳಲ್ಲಿ ಈ ಡಿಸ್ಟ್ರಿಕ್ಟಿನ ವಿಶಿಷ್ಟ ಸ್ಕೂಲ್ ಮಾಸ್ಟರುಗಳೂ ಈ ಟೌನ್‌ನಲ್ಲಿ ಸೇರಿ ಒಂದು ದೊಡ್ಡ ಪರಿಷತ್ತನ್ನು ನಡಿಸಬೇಕೆಂದು ತೀರ್ಮಾನವಾಗಿದೆ ಬರತಕ್ಕ ಉಪಾಧ್ಯಾಯರಿಗೆಲ್ಲಾ ಇಲ್ಲಿ ಊಟ ಉಪಚಾರಗಳಿಗೆ ಸರಿಯಾದ ಏರ್ಪಾಡುಗಳು ಮಾಡಲ್ಪಡುವವು ವಿದ್ಯಾವಿಚಾರವಾದ ಉಪನ್ಯಾಸಗಳೂ ಚರ್ಚೆಗಳೂ ನಡೆಯುವವು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರೂ, ಸರ್ಕಲ್ ಇನ್ಸ್‌ಪೆಕ್ಟರವರೂ ಬಂದು ಪರಿಷತ್ತನ್ನು ನಡಿಸುವರೆಂಬ ವರ್ತಮಾನವಿದೆ —ಈ ಸಂಸ್ಥಾನದಲ್ಲೆಲ್ಲಾ ಬಹು ಪ್ರಖ್ಯಾತರೂ, ಜನಾಭಿಮಾನಿಗಳೂ ಆಗಿದ್ದ ಗ್ರಾಹಂ ಆಂಡ್ರುಸನ್ ಎಂಬ ಮಹನೀಯರು ಕಾಲವಾಗಿ ಕಳೆದ ತಾ 9 ರಲ್ಲಿ ಇಲ್ಲಿನ ಯೂರೋಪಿಯನ್ ಸಮಾಧಿಯಲ್ಲಿ ಸಮಾಧಿಮಾಡಲ್ಪಟ್ಟರು ಇವರು ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ವೆದರಾಲ್ ಸಾಹೇಬರವರಿಗೆ ಚಿಕ್ಕಮಾವನವರು ಡೆಪ್ಯುಟಿ ಕಮಿಷನರವರು ಅರಕಲಗೂಡು ತಾಲ್ಲೂಕಿಗೆ ಜಮಾಬಂದಿಗಾಗಿ ಹೋಗಿದ್ದಾರೆ ಅಮಲ್ದಾರ್ ಮ॥ ರಾಜಗೋಪಾಲಾಚಾರ್ಯರು ಎಕ್ಸೈಸ್ ಅಸಿಸ್ಟೆಂಟರಾಗಿ ಬದಲಿ ಹೋಗುತ್ತಿದ್ದಾರೆ ಈ ಮುಂದಿನ ವರ್ಷದ ಸೇಂದಿ ಹರಾಜು ಮುಗಿಯಿತು ಚಾಲ್ತಿ ವರ್ಷಕ್ಕಿಂತಲೂ, ಈ ಬಾಬಿನಲ್ಲಿ ಸರ್ಕಾರಕ್ಕೆ ಈ ಒಂದು ತಾಲ್ಲೂಕಿನಲ್ಲಿಯೇ ಕೆಲವು ಸಾವಿರ ರೂಪಾಯಿಗಳ ಮಟ್ಟಿಗೆ ಹೆಚ್ಚು ಉತ್ಪತ್ತಿಯಾಗಿದೆ ಎಂತ ವರ್ತಮಾನವಿದೆ ಕುಡುಕತನವನ್ನು ಹೆಚ್ಚಿಸುವುದಕ್ಕೆ ಈ ಪ್ರಾಂತ್ಯ ಪೋಟಾ ಪೋಟಿ ಹೆಚ್ಚುತ್ತಿರುವದು ವಿಷಾದಕರವಾಗಿದೆ

ಹೊಸಕೋಟೆ —ಎರಡು ವಾರಗಳಿಂದ ಪ್ಲೇಗ್ ಖಾಯಿಲೆಗಳು ಇರಲಿಲ್ಲ ಆದರೆ ತಾ 20 ರಲ್ಲಿ ಒಂದು ಮರಣವೂ ಒಂದು ಪ್ಲೇಗ್ ಖಾಯಿಲೆಯೂ ಆದವು ಬಿಸಿಲಿನ ತಾಪ ಹೆಚ್ಚು, ಮಳೆ ಇದುವರೆಗೂ ಇಲ್ಲ ಗೋಕಾಯಿಗಳ ಮೇವಿಗೆ ಬಹಳ ಕಷ್ಟ ಇನ್ನೂ ಅಲ್ಲಲ್ಲೇ ಸಾಧಾರಣ ಜ್ವರ ಮತ್ತು ಸಿಡುಬುರೋಗ ಉಂಟು ಈ ಸಲ ಪ್ರತಿಯೊಂದು ಮನೆಯಲ್ಲೂ ಮಕ್ಕಳಿಗೆ ಹಟ್ಟೆಮ್ಮನು ಎದ್ದು ಬಹಳ ಕಷ್ಟವಾಯಿತು ಈ ಊರಿನಲ್ಲಿ ಜನಗಳು ನೀರಿಗೆ ಬಹಳ ಕಷ್ಟಪಡುತ್ತಾ ಇದ್ದದ್ದನ್ನು ನೋಡಿ ನಮ್ಮ ಅಮಲ್ದಾರರು ಮ್ಯುನಿಸಿಪಲ್ ಕೋಟೆನಲ್ಲಿ 16 ಅಡಿ ಅಡ್ಡಳತೆಯುಳ್ಳ ಒಂದು ದೊಡ್ಡ ಭಾವಿಯನ್ನು ತೆಗಿಸುತ್ತಾ ಇದ್ದಾರೆ ನಮ್ಮ ಮಹಾರಾಜರವರ ಹೆಸರಿನ ಮೇಲೆ ಕಟ್ಟುತ್ತಾ ಇರುವ ಮಾರ್ಕೆಟ್ಟಿನ ಕಟ್ಟಡವು ಸುಮಾರು ಎರಡು ವಾರಗಳಲ್ಲಿ ಪೂರೈಸಬಹುದು ಟೌನ್ ಅಭಿವೃದ್ಧಿಗಾಗಿ ಊರಿನ ಸುತ್ತುಮುತ್ತಲಿರುವ ಸಮೀಪದ ಗ್ರಾಮಗಳ ಪೈಕಿ ದಂಡ ಹಳ್ಳಿ, ಪೆಕ್ಕಳ್ಳಿ, ಕಂಬಾರಳ್ಳಿ, ಗಗಲು, ಉಪ್ಪಾರಳ್ಳಿ ಮತ್ತು ಕುಂಬಳಹಳ್ಳಿಯವರು ಮಾತ್ರ ತಮ್ಮ ಗ್ರಾಮಗಳನ್ನು ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಬಹುದೆಂದು ಸಮ್ಮತಿ ಕೊಟ್ಟಿದ್ದಾರೆ ಊರಿನ ಬಡಾವಣೆಗೋಸ್ಕರವೂ, ನಲ್ಲಿ ಮುಖಾಂತರ ಬಡಾವಣೆಗೆ ನೀರು ಸರಬರಾಯಿ ಮಾಡುವ ಹಾಗೂ ಗವರ್ನ್‌ಮೆಂಟಿನಲ್ಲಿ ಚರ್ಚೆ ನಡೆಯುತ್ತಾ ಇದೆ ಸರ್ಕಾರದವರು ಕಾಲ ವಿಳಂಬ ಮಾಡದೆ ಜನಗಳಿಗೆ ಬೇಕಾಗಿರುವ ಈ ಕಾರ್ಯಗಳನ್ನು ಜಾಗ್ರತೆಯಿಂದ ಸ್ಯಾಂಕ್ಷನ್ ಮಾಡಿ ಸಿದ್ಧಿಗೆ ತಂದು ಕೀರ್ತಿ ಪಡೆಯುವರೆಂದು ಹಾರೈಸುತ್ತೇವೆ —ಐವರು ಜೂಜಾಡುವಾಗ ಮುದ್ದಾಮಾಲಾಗಿ ಸಿಕ್ಕಿದ್ದರಿಂದ ಪೋಲೀಸಿನವರಿಂದ ಚಾರ್ಜು ಮಾಡಲ್ಪಟ್ಟು ಐವರಿಗೂ ಜುಲುಮಾನೆ ಆಯಿತು ಇನ್ನು ಮುಂದಾದರೂ ಜನರು ಈ ದುರಭ್ಯಾಸವನ್ನು ಬಿಟ್ಟು ಕೆಲಸಕಾರ್ಯಗಳನ್ನು ಮಾಡಿಕೊಂಡು ಮಾನಸ್ಥರಾಗಿ ಬದುಕುವಂತೆ ಇದು ಒಂದು ಎಚ್ಚರಿಕೆಯಾಗಿದೆ —ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ತಾ 23 ಕ್ಕೆ ಇಲ್ಲಿಗೆ ದಯಮಾಡಿಸಿ ಪೋಲೀಸ್ ರಿಕಾರ್ಡುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಕುರಿತು ತನಿಖೆ ಮಾಡಿದ ತರುವಾಯ ಇಲ್ಲಿನ ಇನ್ಸ್‌ಪೆಕ್ಟರಾದ ಮ॥ ಬಳವಂತರಾಜೆ ಅರಸಿನವರ ವಿಷಯ ಬಹಳ ಸಂತೋಷಪಟ್ಟು ಅವರನ್ನು ಬಹಳವಾಗಿ ಮೆಚ್ಚಿಕೊಂಡರು ಪೋಲೀಸ್ ಸೂಪ್ರೆಂಟರು ಸಹ ಇವರ ವಿಷಯ ಒಳ್ಳೆ ಅಭಿಪ್ರಾಯ ಪಟ್ಟರು ಜಮೇದಾರ್ ರಂಗರಾಯರು ಈ ಕ್ಷಾಮಕಾಲದಲ್ಲಿ ಕಳ್ಳಕಾಕರ ದೆಸೆಯಿಂದ ಜನಗಳು ಅನುಭವಿಸಬೇಕಾದ ಕಷ್ಟವನ್ನು ತಿಳಿದು ರಾತ್ರಿ ಗಸ್ತುಮಾಡುತ್ತಾ ಗಲಭೆಗಳು ಆಗದಂತೆ ಕೆಲಸ ನಡಿಸುತ್ತಾ ಇದ್ದಾರೆ

ಸೀಯೂರ —ಇಲ್ಲಿ ಕಳೆದ ವರುಷ ಸುಮಾರು 15 ಇಂಚು ಮಳೆ ಆಗಿ ಈ ವರುಷ ಇದುವರೆಗೆ ಚೆನ್ನಾಗಿ ಮಳೆ ಬಾರದೆ ಇರುವದರಿಂದ ಜನ ಜಾನುವಾರುಗಳಿಗೆ ನೀರಿಗೆ ತುಂಬಾ ತೊಂದರೆ ಉಂಟಾಗಿರುತ್ತೆ ಸುಮಾರು 20 ದಿವಸಕ್ಕೆ

ಮುಂಚೆ ಸ್ವಲ್ಪ ಮಳೆ ಆಗಿ, ಧಗೆ ಇನ್ನೂ ಹೆಚ್ಚಾಯಿತು —ಈ ತಾಲ್ಲೂಕಿಗೆ ಒಂದು ತಿಂಗಳ ಮುಂಚೆ ಕೊಪ್ಪದ ತಾಲ್ಲೂಕಿನಿಂದ ವರ್ಗವಾಗಿ ಬಂದಿರುವ ಅಮಲ್ದಾರ್ ಮ|| ಎನ್ ಶ್ರೀನಿವಾಸರಾಯರು ಹಿಂದೆ ಇದ್ದ ಅಮಲ್ದಾರ್ ಮಿ|| ಟಿ ಅಬ್ದುಲ್ ಖಾದರ್ ಸಾಹೇಬರನ್ನು ಮರಸುವಂತೆ ಕೆಲಸಮಾಡುತ್ತಿರುವರು ಕಚೇರಿಗೆ 11 ಘಂಟೆಗೆ ಸರಿಯಾಗಿ ಬಂದು ಸಾಯಂಕಾಲ 5 ಘಂಟೆವರೆಗೆ ಕೆಲಸಮಾಡುವದರಿಂದ ಸರ್ಕಾರಿ ನೌಕರರು ಕಾಲಕ್ಕೆ ಸರಿಯಾಗಿ ಬಂದು 11 ಘಂಟೆಗೆ ಟ್ರೆಜರಿ ಜಮಾಖರ್ಚು ನಡೆಯುತ್ತಾ ಇರುವುದು ಎಲ್ಲಾ ಪಟೇಲ್ ಶ್ಯಾನುಭೋಗರೂ, ಇರಸಾಲ್ ಖಾರ್ಯವಣೆಮಾಡಿಸಿ ಈ ಗ್ರಾಮದಲ್ಲಿ ಹೋಟಲು ಇಲ್ಲದೆ ಅನ್ನಕ್ಕೆ ತೊಂದರೆಪಡತಕ್ಕವರು ಅವರವರ ಗ್ರಾಮಕ್ಕೆ ಸೇರಲು ಅನುಕೂಲವಾಯಿತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಮಲ್ದಾರ್ರವರು ಕಕ್ಷಿಗಾರ್ರಿಗೆ ತೊಂದರೆ ಆಗದಂತೆ ಶೀಘ್ರವಾಗಿ ಅಡರ್ಜ್‌ಗಳಿಗೆ ಅವಕಾಶವಾಗದಂತೆ ನ್ಯಾಯವಾಗಿ ತೀರ್ಪುಕೊಡುತ್ತಲಿರುವರು ಅಲ್ಲದೆ ಎಲ್ಲಾ ಮತದವರಲ್ಲಿ ಒಂದೇ ರೀತಿ ಅಭಿಮಾನವಿಟ್ಟು ಆಗಾಗ್ಗೆ ಎಲ್ಲರೂ ಐಕಮತ್ಯದಿಂದಿರಬೇಕೆಂದು ಬುದ್ಧಿವಾದ ಹೇಳುತ್ತಿರುವುದು ಶ್ಲಾಘನೀಯವಾಗಿದೆ —ಇಲ್ಲಿ ಎಂದಿಗೂ ಇಲ್ಲದೆ ನೂತನವಾಗಿ ಹಿಂದೂ ಮಹಮ್ಮದೀಯರಲ್ಲಿ ರಾಮೋತ್ಸವದ ವಿಷಯದಲ್ಲಿ ರಾಮೋತ್ಸವ ಖಸಾಬರ ಅಂಗಡಿಗಳ ಮಧ್ಯೆ ಇರುವ ರೋಡಿನಲ್ಲಿ ಮಾಡಬೇಕೆಂಬ ಬಗ್ಗೆ ಉಂಟಾಗಿದ್ದ ವೈಷಮ್ಯವನ್ನು ಅಮಲ್ದಾರ್ರವರು ದಯಮಾಡಿ ಹೋಗಲಾಡಿಸಿ ಉಭಯಮತಸ್ಥರ ರಾಜಿಯಿಂದ ಪಾಂಡಾಲ ತೆಗೆದು, ಕೊಟ್ಟ ಫೈಸಲಿಗಾಗಿ ನಿಷ್ಕಾರಣದಿಂದ ನಿಷ್ಠುರದಲ್ಲಿ ಸಿಕ್ಕಿದ್ದ ಹಿಂದೂ, ಮುಸಲ್ಮಾನರು ತುಂಬಾ ಕೃತಜ್ಞರಾಗಿರುತ್ತಾರೆ ಈ ರಾಮೋತ್ಸವದ ಕಾರ್ಯನಿರ್ವಾಹದ ಬಗ್ಗೆ ಮುಸಲ್ಮಾನರು, ಲಿಂಗಾಯಿತರು, ಇತರೆ ಜನಗಳಿಂದ ಚಂದಾ ವಸೂಲಾಗಿ ರಾಮನವಮಿ ವಿಜೃಂಭಣೆಯಿಂದ ನಡೆದದ್ದಕ್ಕಾಗಿ ಸರ್ವರೂ ಆನಂದಭರಿತರಾದರು ಈ ರಾಮನವಮಿಯ ಕಡೇ ದಿವಸ ಬ್ರಾಹ್ಮಣರು ಮಾತ್ರ ಸಂತರ್ಪಣೆ ಮಾಡತಕ್ಕದ್ದಕ್ಕೆ ಬದಲಾಗಿ ಆ ಖರ್ಚಿನಲ್ಲಿ ಲಿಂಗಾಯಿತರಿಗೆ ಸಹಾ ಸಂತರ್ಪಣೆ ಮಾಡಲು ಸೌಕರ್ಯ ಉಂಟಾಗುವಂತೆ ಮಾಡಿದ್ದರಿಂದ ಲಿಂಗಾಯಿತರು ನಾರಾಯಣಸ್ವಾಮಿ ಎಂಬ ದೇವರಿಗೆ ಕಾಯಿ ಅರ್ಪಿಸಿ ಅಕ್ಷತೆ ರಸಾಯನ ಹೊಂದಿ ಬ್ರಾಹ್ಮಣರೂ ಲಿಂಗಾಯಿತರೂ ಏಕಮತ್ಯದಿಂದಿರಲು ಅವಕಾಶವಾದದ್ದು ತುಂಬಾ ಸಂತೋಷಕರವಾಗಿರುತ್ತದೆ ಈ ವರುಷ ನೂತನವಾಗಿ ಲಿಂಗಾಯಿತರ ಸಂತರ್ಪಣೆಗೆ ಅವಕಾಶವಾದಂತೆ ಮುಸಲ್ಮಾನರು ಚಂದಾ ಕೊಟ್ಟವರಾದ್ದರಿಂದ ಇವರುಗಳಿಗೆ ಸಹಾ ಅದೇ ಏರ್ಪಾಡು ಕಾರ್ಯನಿರ್ವಾಹಕರು ಮಾಡಿದ್ದರೆ ತುಂಬಾ ಸ್ತೋತ್ರಾರ್ಹವಾಗುತ್ತಿದ್ದನ್ನುವದರಲ್ಲಿ ಸಂಶಯವಿಲ್ಲ ಈ ರೀತಿಯಾಗಿ ಸರ್ವಮತಸ್ಥರೂ ಏಕಮತ್ಯವಾಗಿ ನಮ್ಮ ಅಮಲ್ದಾರ್ರವರ ದಯಮಾಡಿಸಿದ ಕಾಲದಲ್ಲಿ ಅವಕಾಶ ಉಂಟಾದ್ದಕ್ಕೆ ನಾವೆಲ್ಲಾ ಆನಂದಪಡುತ್ತೇವೆ

ತುಮಕೂರು —ಬಿಸಿಲಿನ ತಾಪ ಸಹಿಸಕೂಡದ್ದಾಗಿದೆ ಮಳೆಯ ನಿರೀಕ್ಷಣೆಯೇ ಇಲ್ಲ ಈ ಟವನ್ ಮೊದಲ್ಗೊಂಡು ಈ ತಾಲ್ಲೂಕಿನ ಬಹು ಭಾಗಗಳಲ್ಲಿ ಜನರಿಗೂ ಜಾನುವಾರುಗಳಿಗೂ ಕುಡಿಯುವದಕ್ಕೆ ನೀರಿಲ್ಲದೆ ಬಹು ಶ್ರಮಪಡಬೇಕಾಗಿದೆ —ಈ ತಾಲ್ಲೂಕಿಗೆ ಸೇರಿದ ಮರಳೂರು ಅಮಾನಿಕೆರೆ ಪಟೇಲ್ ಸಿದ್ದಲಿಂಗೇಗೌಡನು ತನ್ನಿಷ್ಟ ಬಂದವರಿಗೆ ಕೆರೆಯ ನೀರನ್ನು ಬಿಡುತ್ತಾ ಬಂದಿದ್ದರಿಂದ ಕಡೆಗೆ ಅನೇಕ ಫಿರ್ಯಾದುಗಳು ಆತನ ಮೇಲೆ ದಾಖಲ್ಮಾಡಲ್ಪಟ್ಟವು ಆ ಪೈಕಿ ಒಂದು ಕ್ರಿಮಿನಲ್ ಸಿರ್ಯಾದು ಟ್ರೆಜರಿ ಅ|| ಕಮಿಷನರ್ ಸಾಹೇಬರಲ್ಲಿ ದಾಖಲ್ಮಾಡಲ್ಪಟ್ಟಿತು ಸದರಿ ಸಿದ್ದಲಿಂಗೇಗೌಡನು ಫಿರ್ಯಾದಿಯನ್ನು ರಾಜಿಮಾಡಿಕೊಂಡನಾಗಿ ರೆವಿನ್ಯೂ ತರಫು ವಿಚಾರಣೆ ನಡೆದು ಎರಡು ತಿಂಗಳ ಕಾಲಮಾತ್ರ ಸಸ್ಪೆಂಡ್ ಮಾಡಲ್ಪಟ್ಟನು ತಾಲ್ಲೂಕು ಅಮಲ್ದಾರರಲ್ಲಿ ಈ ವಿಷಯವಾಗಿ ಆರು ಫಿರ್ಯಾದುಗಳು ದಾಖಲ್ಮಾಡಲ್ಪಟ್ಟು ವಿಚಾರಣೆಯಾದರೂ ಇನ್ನೂ ತೀರ್ಮಾನವು ಹೊರಗೆ ಬಂದಿಲ್ಲ —ಈ ಟವನ್‌ನಲ್ಲಿರುವ ರಿಟೈರ್ಡ್ ಅ| ಕಮಿಷನರ್ ಮಿರ್ ಕಮಾಲುದ್ದೀನ್ ಸಾಹೇಬರು ಮೈಸೂರು ಬೋರ್ಡ್ ಸೆಕೆಂಡರಿ ಪರೀಕ್ಷೆಗೋಸ್ಕರ ಬಂದಿದ್ದ ಮಹಮ್ಮದೀಯ ವಿದ್ಯಾರ್ಥಿಗಳು, ಇವರ ಪೋಷಕರು, ಉಪಾಧ್ಯಾಯ ಸೇರಿ ಸುಮಾರು ಐವತ್ತು ಮಂದಿಗೆ ಪರೀಕ್ಷೆ ಪೂರೈಸುವ ತನಕ ಕಾಲಕಾಲಕ್ಕೆ ಅನ್ನಪಾನಾದಿಗಳನ್ನು ಕೊಟ್ಟು ಬಹಳವಾಗಿ ಉಪಚರಿಸಿದರು ಇದಕ್ಕಾಗಿ ಅವರೆಲ್ಲಾ ಒಂದು ಸಭೆಕೂಡಿ ಇಲ್ಲಿನ ವೈಸ್ ಪ್ರೆಸಿಡೆಂಟ್ ಮ|| ಸಿ ಶೇಷಾದ್ರಿ ಅಯ್ಯಂಗಾರರನ್ನು ಚೇರ್‌ಮೆನ್‌ರಾಗಿ ಮಾಡಿ ತಮ್ಮ ಕೃತಜ್ಞತೆಯನ್ನು ಭಾಷಣ ಮೂಲಕ ವಿಜ್ಞಾಪಿಸಿದರು ಅದಕ್ಕೆ ಚೇರ್‌ಮೆನ್‌ರು ಎದ್ದು ಈ ಮಹನೀಯರಂತೆ ಎಲ್ಲಾ ಕಡೆಯಲ್ಲಿಯೂ ಮಹಮ್ಮದೀಯ ದೊಡ್ಡ ಮನುಷ್ಯರೂ ಹಿಂದೂ ದೊಡ್ಡ ಮನುಷ್ಯರೂ ಪ್ರತಿವರ್ಷವೂ ಏರ್ಪಾಡು ಮಾಡುತ್ತಾ ಬಂದರೆ ಇಭಯವರ್ಗಗಳಲ್ಲಿ ಒಳ್ಳೇ ಗತಿಯನ್ನು ಪಡೆಯುವರೆಂದು ಬಹು ಗಂಭೀರವಾಗಿ ಅಪ್ಪಣೆ ಕೊಡಿಸಿದರು —ಈ ಊರಿನ ಭಾರಿ ಸಾಹುಕಾರರಾದ ಮ|| ಕೋದಂಡರಾಮಶೆಟ್ಟರು ತಮಗೆ ಬರಬೇಕಾಗಿದ್ದ ಮೊಬಲಗಿಗಿಂತಲೂ ಹೆಚ್ಚಿಗೆ ದೇಣಿದಾರನಿಂದ ವಸೂಲ್ಮಾಡಿಕೊಂಡರೆಂದು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದಾಗಿ ವಿಚಾರಣೆ ನಡೆದು ಜಾಮೀನುಮೇಲೆ ಬಿಟ್ಟಿದಾರೆ ಇನ್ನೂ ವಿಚಾರಣೆಯೆ ಲ್ಲ ಪೂರೈಸಿಲ್ಲ ಬೆಂಗಳೂರಿನ ಆಡ್ವೊಕೇಟರಾದ ಮ| ಡಿ ವೆಂಕಟರಾಮಯ್ಯನವರು ಅಪರಾಧಿ ತರಫಿನಲ್ಲೂ, ತುಮಕೂರು ಅಡ್ವೊಕೇಟ್ ಮ|| ಎಚ್ ವೆಂಕಟರಾಮಯ್ಯನವರು ಫಿರ್ಯಾದಿ ತರಫಿನಲ್ಲೂ ವಾದಿಸುತ್ತಿದಾರೆ —ಬೆಂಗಳೂರಿಂದ ಇಲ್ಲಿಗೆ ಮುನ್ಸಿಫ್ ಕೋರ್ಟು ಇನ್ಸ್‌ಪೆಕ್ಷನ್ ಬಗ್ಗೆ ಡಿಸ್ಟ್ರಿಕ್ಟ್ ಜಡ್ಜರವರು ದಯಮಾಡಿಸಿದ್ದವೇಳೆ ಇಲ್ಲಿನ ಮುನ್ಸಿಫ್ ಕೋರ್ಟಿನಲ್ಲಿ ಒಬ್ಬ ಮುನ್ಸಿಫರಿಂದ ಕೆಲಸ ನಡೆಯಲು ಸಾಧ್ಯವಿಲ್ಲದೆ ಬಹು ವರ್ಷಗಳ ಮೊಕದ್ದಮೆಗಳು ಹಿಂದೆಬಿದ್ದಿವೆಯಾದ್ದರಿಂದ ಮತ್ತೊಂದು ಕೋರ್ಟನ್ನು ಇಡಿಸಿಕೊಡಬೇಕೆಂದು ಇಲ್ಲಿನ ಪ್ರಜೆಗಳು ಅರ್ಜಿಮೂಲಕ ಕೇಳಿಕೊಂಡದ್ದಕ್ಕೆ ಅವರು ಒಪ್ಪಿ ಒಂದು ವರ್ಷದ ಮಟ್ಟಿಗೆ ಮತ್ತೊಂದು ಕೋರ್ಟನ್ನು ಏರ್ಪಾಡುಮಾಡತಕ್ಕ ವಿಚಾರದಲ್ಲಿ ಮೇಲ್ಪಟ್ಟವರಿಗೆ ಸಿಫಾರಸು ಮಾಡುವುದಾಗಿ ಅಪ್ಪಣೆಕೊಡಿಸಿದರು ಇದು ಬಹು ದಿನಗಳಿಂದಲೂ ಚರ್ಚೆನಡೆಯುತ್ತಾ ಚೀಫ್ ಕೋರ್ಟಿನವರ ಗಮನಕ್ಕೂ ಬಂದು ಯಾವ ವಿಧದಲ್ಲಿ ಈ ಕೋರ್ಟಿಗೆ ಸಹಾಯ ಮಾಡಬಹುದೆಂದು ಪ್ರೋಸೀಡಿಂಗ್ಸು ಸಹ ಹೊರಡಿಸಿದಾರೆ ಕೂಡ್ಲೆ ಬೇಸಗೆ ರಜಮೊಳಗೆ ಇತ್ಯರ್ಥವಾಗಬಹುದೆಂದು ಎಲ್ಲರೂ ನಿರೀಕ್ಷಿಸುತ್ತಿದಾರೆ

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಹಿಂ ರೂ 2-6-0

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ [೧೭ 1]

ಇದು ಉಡುವದಕ್ಕೆ ದಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ ಬನ್ನಾ ಜೋಗದು ಸೀರೆಯ ಉದ್ದ 18 ಮೊಳ ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ ವಿಳಾಸ—

ಏ ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜಿ ಟಿ, ಮದರಾಸು

Full Notes and **Examiner** on L S E Texts (1915)—**Both Tanglewood and Fairy Tales,** with Author's life, meanings, explanations, summaries, constructions and questions. Price **Annas 5 English Papers**—Subscription **Re 1¼ only** Special copy **As 6 Spelling Book As 4** (Postage extra)

Apply to, **M N Sitarama Rao,**

[100 1] **Krishnaraja Mohalla, Mysore**

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,60,000
ವಸೂಲಾದ ಮೊಬಲಗು	87 00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವ ವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪೆನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟ್ಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [243 23]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,

166, ದೊಡ್ಡಪೇಟೆ, ಮೈಸೂರು

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 15

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ. ೬ ಆ,

ಚುಕ್ಕಿಯುಳ್ಳ ಟೋಪಿಗಳು ರೂ ೧–೮, ರೂ ೧–೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

"In addition to cap making we are giving special attention to knitting stockings All our stockings, for adults and children, are hand made Prices will be sent on enquiry"

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS,
GIRLS' INDUSTRIAL SCHOOL, HASSAN

ಬಿ. ವೆಂಕಟಾಚಾರ್ಯರ ನಾವಿಲ್‌ಗಳು

ಬಂಗವಿಜೇತ 1 1 0 ನವಾಬನಂದಿನಿ 1 8 0 ಅಮೃತಪುಳಿನ 0 11-0 ಪರಿಮಳ 0-10 0 ಚಂದ್ರಶೇಖರ 1 1 0 ವಿಷವೃಕ್ಷ 1-4 0 ಚಂದ್ರಪ್ರಭಾ 0-14-0 ಶಿಖಭಲ 0 14-0 ಚಂದ್ರಕಳಾ 0 6-0 ಕಲಾನಾಥ 0 8-0

[53 10] ಯಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಅಮೇರಿಕಾ ದೇಶದ ಇಮಿಟೇಷನ್ ವಜ್ರದ ಆಭರಣಗಳು

ಇದು ಪ್ರಖ್ಯಾತಿಯನ್ನು ಪಡೆದು ಅನೇಕ ಕೆಲಸಗಾರರಿಂದ ತಯಾರಿಸಿದ್ದು ಎಷ್ಟು ವರುಷಗಳಾದರೂ ಕೆಡುವುದಿಲ್ಲ ಭಾಗ್ಯವಂತರೂ ಕೂಡ ಉಪಯೋಗಿಸಲು ಅರ್ಹವಾದದ್ದು ಬೆಲೆ ಬಹಳ ಸುಲಭ



ಕಮ್ಮಲು ಜೊತೆ 1 ಕ್ಕೆ ರೂ 1 2-0 ಹತ್ತಕಡಳು ಜೊತೆ 1 ಕ್ಕೆ ರೂ 0 15-0 ಕುಂಡಿ ಬಾವಲಿ ಜೊತೆ 1 ಕ್ಕೆ ರೂ 1 8 0 ಮೂಗುಬೊಟ್ಟು 0-4 0, ಬೇಸರಿ 1 ಕ್ಕೆ 0 10 0 ಬುಲಾಕು 1 ಕ್ಕೆ 0 15-0, ಎಲೆಕ್ಟ್ರೊ ಚಿನ್ನದ ಗಿಲ್ಟು ಮಾಡಿದ ತಂಜಾವೂರು ಗೆಜ್ಜೆ ಅಡ್ಡಿಗೆ ಇದು ಹೊಸ ನಮೂನೆಯಾಗಿ ನಮ್ಮ ಖುದ್ದು ಅಜಮಾಯಿಷಿಯಿಂದ ತಯಾರ್ಮಾಡಲ್ಪಟ್ಟಿರುತ್ತೆ ಇದಕ್ಕೆ ಬಲವಾದ ಚಿನ್ನದ ಗಿಲ್ಟು ಮಾಡಿ ಬಹಳ ದಿವಸಗಳ ವರೆಗೂ ಕೆಡದಂತೆ ಮುಲಾಮು ಮಾಡಿ ಕರಿಯ ರೇಷ್ಮೆಯಿಂದ ಬಹು ಅಂದವಾಗಿ ಕಟ್ಟಲ್ಪಟ್ಟಿರುತ್ತೆ ಹೆಂಗಸರು ಹುಡುಗಿಯರು, ಮಕ್ಕಳು, ಭಾಗ್ಯವಂತರು ಮೊದಲಾಗಿ ಎಲ್ಲರೂ ಉಪಯೋಗಿಸಲು ಲಾಯಖಾದದ್ದು ಇದರ ಬೆಲೆ ರೂ 0 6-0



ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಸಪ್ತತಿಗಳು ಎಲ್ಲಾ ಜನಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸ್ಮೃತಿವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುತ್ತು. ಈ ಕಥೆಗಳನ್ನು ಈಗ ಪ್ರಶಾಂತರವಾಗಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಸತ್ಯ, ಅಹಿಂಸೆ ಮುಂತಾದ ... ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೋಕಿಕರಿಗೆ ಬೋಧಿಸುವುದು (2) ಜ್ಞಾನ ಧ್ಯಾನ ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ಸನ್ಮಾರ್ಗಪ್ರವರ್ತನೆ ಬುದ್ಧಿಚಾತುರ್ಯವಾದ ಮುಂತಾದ್ದನ್ನು ತಿಳಿಸುವುದು (3) ಸ್ತ್ರೀಪಾತಿವ್ರತ್ಯ ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧ ನೀತಿ ಮುಂತಾದ ವಿಷಯಗಳನ್ನು ಬೋಧಿಸುವುದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಸಹಿತ ಚಮತ್ಕಾರವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು (5) ಅಲ್ಲಲ್ಲಿ ಸಂದರ್ಭಾನುಸಾರ ಭಾವನಕ್ಕೆ ಒಪ್ಪುವ ... ಓದುವವರಿಗೂ ಕೇಳುವವರಿಗೂ ಮನೋರಂಜಕವಾಗಿರುವವು ಹೀಗೆ ಸಮಸ್ತರಿಗೂ ಉಪಯೋಗವಾದದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಅವಶ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0 ಟಪ್ಪಾಲು ಹಾಸಲು 1 ಆಣೆ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರ ಕ್ರಯ ಪ್ರತಿ 1 ಕ್ಕೆ ರೂ ... ಟಪಾಲು ಹಾಸಲು 1 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ ಯಕ್ಷಗಾನ ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ಮಾರಯಿಕ್ಕುತ್ತೇವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಸಪ್ಲೈಯರ್ಸ್, ಬೆಂಗಳೂರು ಸಿಟಿ

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವ "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗ

500 ರೂಪಾಯಿಗಳು ಬಹುಮಾನ ಕೊಡಲ್ಪಡುವದು.

ಮುರಬ್ಬಾಗಳಿಂದ ಧಾತುವನ್ನು ವೃದ್ಧಿಪಡಿಸಿಕೊಂಡವರಿಗೆ ಹೃದಯ ಕೋಶವು ಬಲಿಷ್ಠವಾಗಿ ನಾನಾ ವ್ಯಾಧಿಗಳಿಂದ ನರಳಿ ಬಳಲಿ ಕಾಲ ಕಳೆಯುವವರು ಈ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ವಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಕಾಲಿಲ್ಲದಿದ್ದರೂ ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ದೇಹದಲ್ಲಿ ರಕ್ತವು ಕೆಟ್ಟು ಹೋಗಿದ್ದರೂ, ದೇಹ ನಡೆಯುತ್ತದರಿಂದ ಮೇಲುಬ್ಬಸ ಬರುವ ತಲೆಯ ನೋವೂ ಇವುಗಳೆಲ್ಲವೂ ಸಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಗೆ ತರುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ಚಳಿನೋವುಗಳನ್ನು ಹೋಗಲಾಡಿಸುವುದು ಧಾತುವನ್ನು ವೃದ್ಧಿಪಡಿಸುವುದು ನೋಡಿದ ನೋವು ಸಲ್ಲ ಸತ್ಯವು ಇರುವದರಿಂದ ಕೆಲಸಮಾಡುವುದರಲ್ಲಿ ಉತ್ಸಾಹವೂ ಧೈರ್ಯವೂ ಬುದ್ಧಿಶಕ್ತಿಯೂ ಶರೀರಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಕಾಚ್ಯವ ಮತ್ತು ಧಾತುಪುಷ್ಟಿ ಎಷ್ಟು ಮಾತ್ರವೂ ಸವಾಲಿಲ್ಲದಾದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ... ಈ ಸಾಲಾಮಿಸ್ರಿ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್, ಕಂದಹಾರ್ ದೇಶಗಳಲ್ಲಿ ಇದು ಬಹಳ ವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಳಸುವುದರಿಂದ ಶಕ್ತಿಯುಳ್ಳ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳ ಶಕ್ತಿಗೆ ಸಮಾನವಾದರು ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ಸೀರಾಕರಿಸುತ್ತೇನೆ... ರದ ಮೂಲಕ ನನ್ನಿಂದ ಪಡೆಯಬಹುದು 15 ತೋಲಾ ಮುರಬ್ಬಾ ಇರುವ ಡಬ್ಬಿ 1 ಕ್ಕೆ ರೂ 1 8 0 ಟಪಾಲ್ ವೆಚ್ಚ ಅಲಾಯದ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು,

13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ

ನಮಗೆ ಕಾಗದವನ್ನು ಬರೆಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು

1 ಧಾತುಪುಷ್ಟಿ ಚೂರ್ಣ —ಪೆಟ್ಟಿಯ ಡಬ್ಬಾ 1 ಕ್ಕೆ 0 5 0 2 ರೋಮನಾಶಕ ಮತ್ತು ವೃಕ್ತಿಕರಪುಡಿ ತೈಲವು —ಕೀಲಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವದಕ್ಕೂ ಬಹಳ ಒಳ್ಳೆಯದು ಕ್ರಯ 0 2 0 3 ವಾತನಾಶಕ ತೈಲವು —ಕ್ರಯ ಸೀಸಾಯಿ 1 ಕ್ಕೆ 0-4-0 4 ಹೊಟ್ಟೆನೋವಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 4 0 5 ಕೆಮ್ಮು ರೋಗಕ್ಕೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 4 0 6 ಪ್ರಮೇಹ ಔಷಧ —ಕ್ರಯ ಡಬ್ಬಿ 1 ಕ್ಕೆ 0 4 0 7 ಅಶ್ವಗಂಧಕರವಾದ ಭೇದಿ ಮಾತ್ರೆಗಳು —ಕ್ರಯ 0 4 0 8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1 ಕ್ಕೆ 0 2 6 9 ಉಷ್ಣಕಾರಕಕ್ಕೆ ಮಾತ್ರೆಗಳು —ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ 21 ದಿನಗಳು ಸೇವಿಸಲು ಬಿಂದಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 1-0 0 10 ಮೂಲವ್ಯಾಧಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 1 8 0 11 ಕಣ್ಣಿಗೆ ಸುರಮಾ —ಕ್ರಯ ಸೀಸಾಯಿ 1 ಕ್ಕೆ 0 4 0

12 ದಂತ ಚೂರ್ಣವು —ಕ್ರಯ ಡಬ್ಬಿಗೆ 0 1 3 13 ಕೂದಲು ಬೆಳೆಯುವ ಎಣ್ಣೆ (ಬ್ರಾಹ್ಮೀ ತೈಲ) —ಸೀಸಾಯಿ 1 ಕ್ಕೆ 0-4 0 14 ಅಶ್ವಗಂಧಕರವಾದ ದ್ರಾವಕ —ಇದನ್ನು ಸಲ್ಲ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ ಕ್ರಯ ಸೀಸಾಯಿ 1 ಕ್ಕೆ 0 4 0 15 ಕಜ್ಜಿ ಗಜಕರ್ಣ ಹುಳುಕಡ್ಡಿ ಔಷಧ —ಕ್ರಯ ಸೀಸಾಯಿ 1 ಕ್ಕೆ 0 1 0 16 ಅರುಗಾದ ಪೆನ್ಸಿಲ್ —ಈ ಪೆನ್ಸಿಲ್‌ನಿಂದ ಕಾಗದದ ಮೇಲೆ ಬರೆಯುವಾಗ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಅಕ್ಷರಗಳು ಚೆನ್ನಾಗಿ ಕಾಣುತ್ತವೆ ನೋಡುವವರಿಗೆ ಬಹಳ ಆಶ್ಚರ್ಯವಾಗುತ್ತೆ ಕ್ರಯ 0 1 1 17 ಬಿಳೀ ಕೂದಲನ್ನು ಕರೀ ಕೂದಲು ಮಾಡುವ ದ್ರಾವಕ —ಈ ದ್ರವವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರೆಗೂ ಕರಿಯ ಕೂದಲುಗಳು ಇರುತ್ತೆ ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುತ್ತೇವೆ ಕ್ರಯ 1 6 0

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ಡಿ ಮನ್ನಾಲಾಲ್, ಡಿಲ್ಲೀ ವೈದ್ಯರು,

[94—4] 13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ

ಸ್ಟ್ಯಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ.

ಹಿಂದುಸ್ಥಾನದಲ್ಲೆಲ್ಲಾ ತುಂಬಾ ಪ್ರಖ್ಯಾತಿ ಪಡೆದಿದೆ

ನಿಸ್ಸಂದೇಹವಾದ ಆಧಾರವುಳ್ಳದ್ದು

ವಾರ್ಷಿಕ ವರಮಾನ ... ರೂ 3,23,00,000 — ಶೇಖರವಾಗಿರುವ ಹಣ ರೂ 20,33,00,000

... ಬಾವತಿ ... 19,35,00,000 — ವಿಮೆದಾರರಿಗೆ ಬಾವತಿ ರೂ 16,75,00,000

ಪೂರ್ಣಜೀವಮಾನ, ಕೆಲವು ವರುಷಗಳ ನಂತರ ಸಾವತಿ, ಮಕ್ಕಳ ವಿಮೆ, ... ವಿಮೆ, ಸ್ವಲ್ಪಕಾಲದ ವಿಮೆ,— ಈ ಮೊದಲಾದ ಪಾಲಿಸಿಗಳನ್ನು ಈ ಕಂಪನಿ ... ಬಹಳ ಸುಲಭವಾದ ದರಗಳಲ್ಲಿ ಪಡೆಯಬಹುದು

ಹಿಂದುಸ್ಥಾನದಲ್ಲೇ ಹೊಸ ವಿಮೆ ಪತ್ರಗಳನ್ನು ಕೊಡುವ, ವಿಮೆದಾರರ ... ವಾಗುವ ಮತ್ತು ಸಾಲಗಳನ್ನು ಕೊಡುವ ಕೆಲಸಗಳು ನಡಿಸಲ್ಪಡುತ್ತವೆ ... ಸಂಗತಿಗಳನ್ನೂ, ಕನ್ನಡ ಇಂಗ್ಲಿಷ್ ನೋಟೀಸ್ ಪುಸ್ತಕಗಳನ್ನೂ ಕೆಳಗಿನ ... ದಿಂದ ಪಡೆಕೊಳ್ಳಿ— [35 14]

ಕಮೀಷನ್ ಮತ್ತು ಜನರಲ್ ಏಜನ್ಸಿ,

... ರೋಡ್, ... ಳೂರು ಸಿಟಿ	ಮೈಸೂರು ಸೀಮೆಯ ಮುಖ್ಯ ಏಜಂಟರು,	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗಾ

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಕೊಳ್ಳೇಗಾಲ ... ಪುರದ ಚೆಕ್ಕುಗಳು — ಶೀರೆಗಳು, ಖಣಗಳು ... ಹೊಸ ನಮೂನೆಯ ತರತರಹದ ವಸ್ತ್ರಗಳು, ಶೀರೆಗಳು, ... ಗಳು, ಕಿರಿಗಳು ಚಿಲ್ಲರೆಯಾಗಿಯೂ ಬೇಲುಗಳಲ್ಲಿಯೂ ... ಕ್ರಯಕ್ಕೆ ನಮ್ಮಲ್ಲಿ ದೊರೆಯುವವು

... ಮುಂದಾಗಿ ... ಸಾಹುಕಾರು ... ಬಾರದು ... ಕೋರಿದ ನಮೂನೆಗಳು ಬಾರದೆ ನಷ್ಟ ಪಡಬೇಕಾದ ಅವ ... ಇಲ್ಲ

ನಮಗೆ ... ನಂಬರುಗಳನ್ನು ತಿಳಿಸಿ ... ಕೊಳ್ಳಬಹುದು ... ಪ್ರರಕ್ಕಿಂತ ನಮ್ಮಲ್ಲಿಯೇ ಅನು ... ಕೂಲವಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕ ... ರು ನಮ್ಮ ... ದರಿ ... ಹೊಂದುತ್ತಿರು [28-15]

... ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

... ರ್ಷ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, ... ಕೆಂಪಾಂಬುಧಿ ರೋಡ್ (ಕುಂಬಿಗರ ಪೇಟೆ), ಬೆಂಗಳೂರು ಸಿಟಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 16

... ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ... ಗಳು ತರಿಸಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ...

... ಇತರ ಕಡೆಗಳಲ್ಲಿ ಮಾಡಿ ಬಳಸುತ್ತಿರುವ ಟೋಪಿಗಳ ದಾರವ ... ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂ ... ಗುವರು

... ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ನಟ್ಟಿಗ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ... ನಾವೇ ಗಂಡು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ... ಗಳನ್ನೇ ಆರಿಸಿ ಕಳುಹಿಸುತ್ತೇವೆ

... ಯಿಂದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ... ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವು ಚನ್ನಾಗಿಲ್ಲ ... ದರೆ ನಮ್ಮಲ್ಲಿ ದೊರೆಯುವದಿಲ್ಲ

... ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ... ೬ ಆ,

... ಚುಕ್ಕಿಯುಳ್ಳ ಟೋಪಿಗಳು ರೂ ೧–೮, ರೂ ೧–೧೨

... ಚುಕ್ಕಿಯುಳ್ಳ ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

... ಟೋಪಿಗಳು ೧ ರೂ ೮ ಆ, ೧ ರೂ ೬ ಆ

"In addition to cap making we are giving ... attention to knitting stockings. All our ... ings, for adults and children, are hand-made. ... will be sent on enquiry"

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS,
GIRLS' INDUSTRIAL SCHOOL, HASSAN

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs. 40 by annual increments of Rs 2. Cash security required from each Agent is Rs 50. For particulars see in person or apply to

Messrs VENKATACHALAM & SONS,
Chief Agents,
Hindustan Co operative Insurance Society, Ltd,
166, Dodpet, Near Old Taluk Cutchery,
243 21 *MYSORE*

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದರೆ—ಎಂದರೆ, ನಿನಗೆ ಯಾವ ನೋವೇ ಉಂಟಾಗದಿರಲಿ— ನನಗೆ ನಿಷ್ಟ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿ

(೧೨ ಆಣೆ ಬುಡ್ಡಿ ಪರಿಮಾಣ)

ದೆಯೋ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಈ ಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಅಶಕ್ತಿ; ಎದೆಯು ತಲ್ಲಣಿಸುವುದು, ಉಬ್ಬರಿಸುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟು ಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋ ... ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ... ಗುಣವಾಗಲಿ ಮಕ್ಕಳಿಗಾಗಲಿ ಶರೀರದಲ್ಲಿ ... ವನ್ನೂ ... ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ... ರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ದೃಢವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನು ಕೊಡುವುವು [181 30]

೫ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಎಲ್ಲರಲ್ಲಿಯೂ ದೊರೆಯುವುವು, ಅಥವಾ ಡೋನ್, ಪಿ ಓ ಬಾಕ್ಸ್ ೫೦ ಬೊ ... —ಇವರಲ್ಲಿ ದೊರೆಯುವುವು

"ಈ ವಾಯುವಿನಿಂದ ನಾನು ಬಿಡುಗಡೆ ಹೊಂದುವೆನು, ಈ ಕಠಿಣ ನೋವನ್ನು ನಿಲ್ಲಿಸುವೆನು, ನಾನು ಆರೋಗ್ಯಹೊಂದಿ ಬಲಿಷ್ಠನಾಗಿ, ಕೆಲಸಮಾಡಿ ಜೀವದಲ್ಲಿ ಸಂತೋಷಪಡುವೆನೆಂದು ಹೇಳುವಷ್ಟು ಜಿತ ಮನಸ್ಸು ನಿನಗಿದ್ದರೆ," ಗ್ಲಾಸ್ಗೋ ನಗರದ ಹಾಲಿಸ್ ವೀಧಿಯಲ್ಲಿ ವಾಸಮಾಡುವ ಮಿ॥ ಪಿಟರ್ ಥೊರೆಯುವರು ಸ್ವಸ್ಥವಾದ ರೀತಿಯನ್ನು ಕುರಿತು ಓದು.

"ಐದು ವರುಷಗಳ ಕಾಲ ನನಗೆ ವಾಯುವಿನಿಂದ ಹೇಳಲಾಗದ ಸಂಕಟಪಟ್ಟೆನು. ನನಗೆ ತಿಳಿದ ಔಷಧವನ್ನೆಲ್ಲಾ ಉಪಯೋಗಿಸಿದೆನು. ಉತ್ತಮ ವೈದ್ಯರ ಆಲೋಚನೆಗಾಗಿಯೂ ಔಷಧಗಳಿಗಾಗಿಯೂ 150 ರೂಪಾಯಿಗಳನ್ನು ಖರ್ಚುಮಾಡಿದೆನು. ರಾತ್ರೀ ವೇಳೆಗಳಲ್ಲಿನ ನೋವು ಅಧಿಕವಾಗಿದ್ದದ್ದರಿಂದ ನಿದ್ರೆಯೇ ಬರುತ್ತಿರಲಿಲ್ಲ. ಕೀಲುಗಳಿಗೆಲ್ಲಾ ಪ್ಲಾಸ್ಟೀಸುಗಳನ್ನು ಕಟ್ಟುತ್ತಿದ್ದದ್ದರಿಂದ ಆ ತತ್ಕಾಲಕ್ಕೆ ಸ್ವಲ್ಪಮೇಲಾಗಿ ಕಾಣುವದು. ಕಡೆಗೆ ಸಿಟಿಲ್‌ಸ್‌ಯವರ ಒಂದು ಸೀಸಾಯ ತೈಲವು ನನ್ನನ್ನು ಸಂಪೂರ್ಣವಾಗಿ ವಾಸಿಮಾಡಿತು. ಐದು ವರುಷಗಳಲ್ಲಿ ಇನ್ನಾವದೂ ನನಗೆ ಮೇಲು ಮಾಡಲಿಲ್ಲ."

ಔಷಧ ಮಾರುವವರೆಲ್ಲರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತ

101-1

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಏಪ್ರಿಲ್ 23 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಬೇಕೆ —(1) ಷೇರು ಮೊಬಲಗು	_ _	_ ರೂ 9,36 566
,, (2) ಡಿಪಾಜಿಟ್ಟುಗಳು	_ _ ___	,, 12,82,097
,, (3) ಇತರೆ	_ _ _ ___	,, 22,909
(ಆಣೆ, ಕಾಸು ಬಿಟ್ಟಿರುತ್ತೆ)		ಜುಮ್ಲಾ ರೂ 22,41,571
ದೇಣಿ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 6,43,876
,, (2) ಖಾತೆ ಮತ್ತು ಇತರ ಸಾಲಗಳು	___	,, 12,29,123
,, (3) ಡಿಸ್ಕೌಂಟು ಮಾಡಿದ ನಾಯಿದೆ ಹುಂಡಿಗಳು		,, 1,79,639
,, (4) ಇನ್ವೆಸ್ಟ್‌ಮೆಂಟುಗಳು		,, 1,00,000
,, (5) ಏಜನ್ಸಿಗಳಲ್ಲಿರುವ ಮೊಬಲಗು		,, 66,157
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	___	,, 7,061
,, (7) ಇತರೆ	___ _	,, 15,815
(ಆಣೆ, ಕಾಸು ಬಿಟ್ಟಿರುತ್ತೆ)		ಜುಮ್ಲಾ ರೂ 22,41,571

ಡಬ್ಲಿಯು ಸಿ. ರೋಜ್, ಮ್ಯಾನೇಜರ್

ಮೈಸೂರು ವ್ಯವಸಾಯದ ಇಲಾಖೆ

ವ್ಯವಸಾಯದ ಪಾಠಶಾಲೆ—ಹೆಬ್ಬಾಳ

1914 ನೇ ಇಸವಿ ಜೂನ್ ತಾ 7 ರಿಂದ ಹೆಬ್ಬಾಳದಲ್ಲಿ ಸ್ಥಾಪಿಸಿರುವ ಮೈಸೂರು ವ್ಯವಸಾಯದ ಪಾಠಶಾಲೆಯ ದ್ವಿತೀಯ ವರುಷದ ಕಾರ್ಯಗಳು ಪ್ರಾರಂಭವಾಗುತ್ತೆ ಈ ಪಾಠಶಾಲೆಗೆ ಸೇರಲು ಇಷ್ಟ ಉಳ್ಳವರು ಇದೇ ವರುಷ ಮೇ 30 ನೇ ತಾರೀಖಿನೊಳಗಾಗಿ ಈ ಇಲಾಖಾ ಡೈರೆಕ್ಟರವರಿಗೆ, ಅದಕ್ಕಾಗಿ ನಿಯಮಿಸಿರುವ ಅಚ್ಚಾದ ಫಾರಂನಲ್ಲಿ, ಅರ್ಜಿ ಬರೆದುಕೊಳ್ಳಬಹುದು ಇದಕ್ಕಾಗಿ ಮೇಲ್ಕಂಡ ಪಾಠಶಾಲೆಯ ನಿಬಂಧನೆಗಳ (ರೂಲ್ಸ್) ಅಭಿಪ್ರಾಯವನ್ನು ಸಂಕ್ಷೇಪವಾಗಿ ಈ ಕೆಳಗೆ ಸೂಚಿಸಿರುತ್ತೆ ಕೂಡಿದ ಮಟ್ಟಿಗೂ ಉತ್ತಮ ತರಹ ವಿದ್ಯಾರ್ಥಿಗಳು ಬರಬೇಕೆಂಬ ಕುತೂಹಲವಿರುವದರಿಂದ ಮೇಲ್ಕಂಡ ಪಾಠಶಾಲೆಯು ಸ್ಥಾಪಿತವಾಗಿರುವ ವಿಷಯವು ನಮ್ಮ ರೈತಾಪಿ ಜನಗಳಲ್ಲಿ ಹೆಚ್ಚು ಪ್ರಚುರಕ್ಕೆ ಬರಬೇಕೆಂದು ಕೋರಲ್ಪಟ್ಟಿರುತ್ತೆ

2 ಈ ಪಾಠಶಾಲೆಯನ್ನು ಸೇರುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದಲೇ ಆಗಲಿ, ಪಾಠಶಾಲೆಯಿಂದಲೇ ಆಗಲಿ ಯಾವ ವೇತನವೂ ದೊರೆಯುವದಿಲ್ಲವಾಗಿ ಆಯಾ ಡಿಸ್ಟ್ರಿಕ್ಟು ಕಮಿಟಿ ಅಥವ ವ್ಯವಸಾಯದ ಸಂಘದವರು ತಮಗೆ ಯುಕ್ತ ಕಂಡುಬರುವ ವಿದ್ಯಾರ್ಥಿಗಳಿಗೆ ಕೈಲಾದ ಸಹಾಯವನ್ನು ಮಾಡಿ ಕಳುಹಿಸುವದರಲ್ಲಿ ಯಾವ ಅಡ್ಡಿಯೂ ಇರುವದಿಲ್ಲ

3 ಈ ಪಾಠಶಾಲೆಯ ಮುಖ್ಯ ಉದ್ದೇಶವು ನಮ್ಮ ದೇಶದ ಬೇಸಾಯಗಾರರಿಗೆ ತಮ್ಮ ಜಮೀನುಗಳನ್ನು ಕೃಷಿಮಾಡುವ ವಿಧಾನಗಳನ್ನು ಕಲಿಸಬೇಕೆಂಬುವದೇ ಆಗಿದ್ದರೂ ಇನ್ನು ಮುಂದೆ ಕೆಲವು ಕಾಲದವರೆಗೆ ಈ ಇಲಾಖೆಯಲ್ಲಿಯೇ ಕೆಲಸ ಮಾಡುವದಕ್ಕೆ ತರಬೇತಾದ ಜನಗಳು ಬೇಕಾಗಿರುವದರಿಂದ ಅವರನ್ನು ಈ ಪಾಠಶಾಲೆಯಲ್ಲಿ ತೇರ್ಗಡೆಹೊಂದಿದವರ ಪೈಕಿ ಚುನಾಯಿಸಬೇಕೆಂದು ಯೋಚಿಸಿರುತ್ತೆ

ವ್ಯವಸಾಯ ಪಾಠಶಾಲೆಯ ನಿಬಂಧನೆಗಳು (ಸಂಕ್ಷೇಪವಾಗಿ)

(1) ಸ್ಥಳ —ಈ ಪಾಠಶಾಲೆಯು ಬೆಂಗಳೂರಿಗೆ 5 ಮೈಲಿಯಲ್ಲಿರುವ ಹೆಬ್ಬಾಳವೆಂಬ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ (2) ಆಡಳಿತ —ಇದರ ಆಡಳಿತವೆಲ್ಲಾ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೇ ಸೇರಿರುತ್ತೆ (3) ಉದ್ದೇಶ —ಈ ಪಾಠಶಾಲೆಯ ಉದ್ದೇಶವು ಅದರ ವಿದ್ಯಾರ್ಥಿಗಳಿಗೆ ವ್ಯವಸಾಯದ ಕಸಬನ್ನು ಚೆನ್ನಾಗಿಯೂ ತಿಳುವಳಿಕೆಯಿಂದಲೂ ಅವಲಂಬಿಸುವವನ್ನು ಕಲಿಸಬೇಕೆಂಬುವದೇ ಆಗಿರುತ್ತೆ (4) ಉಪದೇಶ —ಇಲ್ಲಿ ಪಾಠ ಕ್ರಮವು ಸಾಧ್ಯವಾದಮಟ್ಟಿಗೂ ಕಾರ್ಯತಃ ಉಪಯೋಗಕ್ಕೆ ಬರುವ ರೀತಿಯಲ್ಲಿ ಏರ್ಪಡಿಸಿರುತ್ತೆ ವ್ಯವಸಾಯದ ವಿಧಾನಗಳನ್ನು ತಿಳಿದುಕೊಳ್ಳುವದಕ್ಕೆ ಶಾಸ್ತ್ರಸಮ್ಮತವಾದ ಪಾಠವು ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಇಂಗ್ಲಿಷ್ ಭಾಷೆಯಲ್ಲಿ ಬೋಧಿಸುವಂತೆ ಏರ್ಪಡಿಸಿರುತ್ತೆ (5) ಇಲ್ಲಿ ವಿದ್ಯಾಕಾಲಕ್ಷೇಪವು ಪೂರೈಸಬೇಕಾದರೆ ಎರಡು ವರುಷ ಕಾಲ ಹಿಡಿಯುವದು ಮೊದಲನೇ ವರುಷ ಕೆಲವು ಭಾಗಗಳನ್ನೂ, ಎರಡನೇ ವರುಷ ಕೆಲವು ಭಾಗಗಳನ್ನೂ ಉಪದೇಶಮಾಡಲಾಗುತ್ತೆ ಇಷ್ಟರಲ್ಲಿ ವಿದ್ಯಾರ್ಥಿಗಳ ಪೈಕಿ ಯಾರಾದರೂ ವ್ಯವಸಾಯ ಶಾಸ್ತ್ರದ ಯಾವ ಭಾಗದಲ್ಲಿಯಾದರೂ ಹೆಚ್ಚು ಅಭಿರುಚಿಯನ್ನು ತೋರಿಸಿ, ಅದನ್ನು ಇನ್ನೂ ಹೆಚ್ಚಾಗಿ ವ್ಯಾಸಂಗಮಾಡಲು ಕುತೂಹಲಪಟ್ಟರೆ ಅವರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿ ಕೊಡಲಾಗುತ್ತೆ —ಇಂಗ್ಲಿಷ್ ಭಾಷೆ ಅಭ್ಯಾಸವಿಲ್ಲದೆ ಇರುವ ನಮ್ಮ ದೇಶದ ವ್ಯವಸಾಯಗಾರರ ಮತ್ತು ಅವರ ಮಕ್ಕಳ ಅನುಕೂಲಾರ್ಥವಾಗಿ ಕನ್ನಡ ಭಾಷೆಯಲ್ಲಿಯೇ ಚಿಕ್ಕ ಚಿಕ್ಕ ಪಾಠಗಳಾಗಿ ಬೋಧಿಸುವ ವಿಶೇಷ ಸ್ಪೆಷಲ್ ಪಾಠ ಕ್ರಮಗಳನ್ನು ಏರ್ಪಾಟು ಮಾಡಲಾಗುತ್ತೆ ಇವನ್ನು ನಾಲ್ಕು ವಾರಗಳೊಳಗಾಗಿ ಮುಗಿಸಲಾಗುತ್ತೆ ಈ ಉಪದೇಶ ನಡೆಯುವ ಕಾಲವನ್ನು ಮತ್ತು ಸ್ಥಳಗಳನ್ನು ಗೊತ್ತುಮಾಡಿ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಸ್ಸಾಡಲಾಗುತ್ತೆ (6) ಪ್ರತಿ ವರುಷ ಈ ಪಾಠಶಾಲೆಗೆ 15 ಜನ ವಿದ್ಯಾರ್ಥಿಗಳನ್ನು ದಾಖಲ್ಮಾಡಲಾಗುತ್ತೆ ಇವರನ್ನು ಚುನಾಯಿಸುವದರಲ್ಲಿ ಬೇಸಾಯಗಾರರ ಮಕ್ಕಳಿಗೆ ಹೆಚ್ಚು ಗಮನಕೊಡಲಾಗುತ್ತೆ ವಿದ್ಯಾರ್ಥಿಗಳನ್ನು ಚುನಾಯಿಸುವದಕ್ಕೆ ಮುಂಚೆ ಇವರಿಗೆ ಇಂಗ್ಲಿಷ್ ಭಾಷೆಯಲ್ಲಿಯೂ, ಗಣಿತಶಾಸ್ತ್ರದಲ್ಲಿಯೂ ಇರುವ ಪರಿಶ್ರಮವನ್ನು ಗೊತ್ತುಮಾಡುವದಕ್ಕಾಗಿ ಒಂದು ಪರೀಕ್ಷೆಯನ್ನು ನಡಿಸಲಾಗುತ್ತೆ (7) ವಿದ್ಯಾರ್ಥಿಗಳು ಪಾಠಶಾಲೆಯಲ್ಲಿ ಸಂಬಳವನ್ನು (ಸ್ಕೂಲ್ ಫೀಜು) ಏನೂ ಕೊಡಬೇಕಾಗಿಲ್ಲ (8) ವಿದ್ಯಾರ್ಥಿಗಳು ಪಾಠಶಾಲೆಯಲ್ಲಿ ವ್ಯಾಸಂಗಮಾಡುವ ಕಾಲದಲ್ಲಿ ಹೆಬ್ಬಾಳದಲ್ಲಿರುವ ವಿದ್ಯಾರ್ಥಿನಿಲಯದಲ್ಲಿ ವಾಸಮಾಡಬೇಕು ಮನೆ ಬಾಡಿಗೆ ಕೊಡಬೇಕಾದದ್ದಿಲ್ಲ ಊಟದ ಖರ್ಚನ್ನು ಮಾತ್ರ ವಿದ್ಯಾರ್ಥಿಗಳೆಲ್ಲರೂ ಹಂಚಿಕೊಳ್ಳಬೇಕು (9) ವಿದ್ಯಾರ್ಥಿಗಳ ಆರೋಗ್ಯಸ್ಥಿತಿಯನ್ನು ವಿಚಾರಿಸಿಕೊಳ್ಳಲು ಸರ್ಕಾರದವರು ಒಬ್ಬ ವೈದ್ಯರನ್ನು ಗೊತ್ತುಮಾಡಿರುತ್ತಾರೆ

ಮೇಲ್ಕಂಡ ಪಾಠಶಾಲೆಯ ವಿಷಯಗಳೆಲ್ಲಾ ತಪಶೀಲಾಗಿ ತಿಳಿಯಬೇಕಾದರೆ ಸದರಿ ಪಾಠಶಾಲೆಯ ನಿಬಂಧನೆಗಳ ಒಂದು ಪ್ರತಿಯನ್ನು ವ್ಯವಸಾಯ ಇಲಾಖಾ ಡೈರೆಕ್ಟರವರಿಗೆ ಬರೆದು ತರಿಸಿಕೊಳ್ಳಬಹುದು

ಬೆಂಗಳೂರು, ಎ ಕೆ ಯಜ್ಞನಾರಾಯಣಯ್ಯರ್,
22-4 1914 ಡೆಪ್ಯುಟಿ ಡೈರೆಕ್ಟರ್.

ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆ.

"ಷೇಕ್ಸ್‌ಪಿಯರ್ ಮಹಾಕವಿಯಿಂದ ರಚಿತವಾದ ಕಥೆಗಳು" ಎಂಬ ಕನ್ನಡ ಪುಸ್ತಕವನ್ನು 1915 ನೇ ಇಸವಿ ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುತ್ತಾರೆ ಈ ಪುಸ್ತಕದ ಪ್ರತಿಗಳು ಮೈಸೂರು ಸಿ ಎಲ್ ಎಸ್ ಬುಕ್ ಡಿಪೋದಲ್ಲಿ ಪ್ರತಿ 1 ಕ್ಕೆ 8 ಆಣೆಯಂತೆ ವಿಕರಿಗೆ ಸಿದ್ಧವಾಗಿವೆ (3)

ಬಿ. ವೆಂಕಟಾಚಾರ್ಯರ ನಾವಿಲ್‌ಗಳು

ವಂಗವಿಜೇತ 1 4 0 ನವಾಬನಂದಿನಿ 1 8 0 ಅಮೃತಪುಲಿನ 0-11-0 ಪರಿಮಳ 0 10-0 ಚಂದ್ರಶೇಖರ 1-1 0 ವಿಷವೃಕ್ಷ 1-4-0 ಚಂದ್ರಪ್ರಭಾ 0-14-0 ಶಿರೋಮಣಿ 0-12-0 ಚಂದ್ರಕಲಾ 0 6 0 ಕಲಾನಾಥ 0-8-0

[53 11] ಯಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

Excellent notes on **Tanglewood Tales** 3 As Notes on **Fairy Tales** 2 As ಆರೋಗ್ಯಪ್ರಶ್ನೋತ್ತರ 1 ಆಣೆ ಪತ್ರಗಳ ನಮೂನೆಗಳುಳ್ಳ ಪತ್ರರತ್ನಾಕರ 8 ಆಣೆ ಅರ್ಜಿಗಳ ನಮೂನೆಗಳುಳ್ಳ ಟೀಪ್ಪಣಿ ಪ್ರಕಾಶಿಕೆ 4 ಆಣೆ [106 1]

Apply to —(1) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು,

(2) Chowrappa & Son, Bangalore City

ಗೃಹಕೃತ್ಯದ ಪ್ರಕಟಣೆ ನೋಟೀಸು

ದೊಡ್ಡಬಳ್ಳಾಪುರದಲ್ಲಿರುವ ಎಳೆತೋಟದ ದೊಡ್ಡ ಬಾಲಣ್ಣನವರ ಮುನಿಮುನಿಯಪ್ಪನಾದ ಈ ಕೆಳಗೆ ರುಜುಮಾಡಿರುವ ಮುನಿಸಾಮಪ್ಪನು ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ನನ್ನ ತಂದೆಯವರಾದ ಸುಮಾರು 70 ವರ್ಷ ವಯಸ್ಸುಳ್ಳ ಮುನಿವೆಂಕಟಪ್ಪನವರು ಕೇವಲ ವಯೋವೃದ್ಧರಾಗಿ ಬುದ್ಧಿ ಸ್ವಾಧೀನವಿಲ್ಲದವರಾಗಿ ನನ್ನ ಪೋಷಣೆಯಲ್ಲಿರುತ್ತಾರೆ ಇವರು ತಮ್ಮ ಇಷ್ಟ ಬಂದಂತೆ ನನ್ನ ಪಿತರಾರ್ಜಿತ ಸ್ವತ್ತುಗಳನ್ನು ಅಂದರೆ ಅವಾಜಿಸೀಪುರಕ್ಕೆ ಸೇರಿರುವ ಖುಷ್ಕಿ ತರೀ ಜಮೀನುಗಳನ್ನು, ಕಸಬಾ ರೋಜಿಪುರ ಗ್ರಾಮಕ್ಕೆ ಸೇರಿರುವ ಬಾಗಾಯಿತು ಜಮೀನುಗಳನ್ನು ಯಾರಿಗಾಗಲೀ ಕ್ರಯ ಭೋಗ್ಯ ಆಧಾರ ಮುಂತಾದ್ದನ್ನು ಮಾಡಲು ಹಕ್ಕುಳ್ಳವರಲ್ಲವು ಇವರಿಗೆ ಯಾರೇ ಆಗಲಿ, ಯಾತಕ್ಕಾಗಿ ಆಗಲಿ ಸಾಲ ವಗೈರೆ ಕೊಟ್ಟಿದ್ದರೂ, ಮುಂದೆ ಕೊಟ್ಟರೂ ಅಂಥಾ ಸಾಲಗಳಿಗೆ ಮೇಲ್ಕಂಡ ನನ್ನ ಪಿತರಾರ್ಜಿತ ಸ್ವತ್ತುಗಳಾಗಲಿ, ನಾನಾಗಲಿ ಗುರಿಯಾಗುವದಿಲ್ಲವು

ದೊಡ್ಡಬಳ್ಳಾಪುರ [108-1]

5 ನೇ ಮೇ, 1914 ಎಳೆತೋಟದ ಮುನಿಸಾಮಪ್ಪನ ರುಜು

ವೀರಶೈವ ಬಡ ವಿದ್ಯಾರ್ಥಿಗಳಿಗೆ

ರಾವ್ ಬಹದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲಿಷ್ ಲೋವರ್ ಸೆಕೆಂಡರಿಗೆ ಕಡಮೆಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಿಯೂ ಇರಬೇಕು ಮತ್ತು ಪ್ರೌಢವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶದೊರೆಯುವದು ಚೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ತಮ್ಮ ಯೋಗ್ಯತಾ ವಿಚಾರವಾಗಿ ಸರ್ಟಿಫಿಕೇಟು ತರತಕ್ಕದ್ದು ಗತವರ್ಷದಲ್ಲಿ ಛತ್ರದಲ್ಲಿದ್ದ ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದವರಿಗೆ ಮೊದಲು ಅವಕಾಶಕೊಟ್ಟು ಅನಂತರ ಇತರರಿಗೆ ಅವರ ಯೋಗ್ಯತೆ ಪ್ರಕಾರ ಸಾಧ್ಯವಾದಷ್ಟು ಕ್ಲಿಪ್ತವಾಗಿ ಸ್ಥಳದೊರೆಯುತ್ತೆ ಇಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಜೂನ್ 5 ನೇ ತಾರೀಖಿನೊಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು [107 1]

ಬೆಂಗಳೂರು ಸಿಟಿ, ಎಚ್ ಕೆ ವೀರಬಸವಯ್ಯ, ಬಿ ಎ ,ಬಿ ಎಲ್ ,

3 5-1914 ಆನರರಿ ಸೆಕ್ರೆಟರಿ

ಮಲೆನಾಡು

ಜ್ವರ ನಿವಾಸಿಕರೇ! ಮನೆಯಲ್ಲಿಯೇ ವೈದ್ಯನು!

ಯುಕಲಿಪ್ಟಸ್ ತೈಲದ ಸುವಾಸನೆಯಿದ್ದಲ್ಲಿ ಮಲೆನಾಡು ಸೊಳ್ಳೆಗಳ ಸುಳಿವೇ ಇರದು ಸೊಳ್ಳೆಗಳಿಲ್ಲದಲ್ಲಿ ಮಲೆನಾಡು ಜ್ವರವಿರದು ಈ ತೈಲವನ್ನು ಸೇವಿಸುವುದರಿಂದ ಮಲೆಜ್ವರ, ಶೀತಜ್ವರ, ವಿಷಮಜ್ವರ, ಶೀತವಾತ, ಗಂಟಲುನೋವು, ಗೂರಲು ಉಬ್ಬಸ ವಾಯುರೋಗ, ಹಲ್ಲುನೋವು ಕಜ್ಜಿ, ಜಲದೋಷ, ಶೀತಭೇದಿ, ಉಷ್ಣಭೇದಿ ಉಷ್ಣಕಾರಕ ರೋಗಗಳು ಶೀಘ್ರದಲ್ಲಿ ಗುಣವಾಗುವವು ಜ್ವರಗಡ್ಡೆಯು ನಿವಾರಣವಾಗುವುದು ದನಕರುಗಳ ಸರ್ವರೋಗಗಳಿಗೆ ದಿವ್ಯೌಷಧವಾಗಿದೆ ಇದು ಮನೆಯಲ್ಲಿರುವುದರಿಂದ ಒಬ್ಬ ವೈದ್ಯನೇ ಇದ್ದಂತಾಗುವುದು ಔನ್ಸ್ ಬಾಟ್ಲಿ ಕ್ರಯ 5 ಆಣೆ ವಿ ಪಿ ಬೇರೆ ಡಜನ್ ಬಾಟ್ಲಿಗಳಿಗೆ ರೂ 3 0-0 ವಿ ಪಿ ಬೇರೆ ಅನುಪಾನಪತ್ರವು ಶೀಸೆಯೊಂದಿಗೆ ಕಳುಹಿಸಲ್ಪಡುವದು

ಸ್ನೇಹಲತಾ ಮಸ್ತಕ ತಾಪಹಾರಿಣೀ ತೈಲ ಶಿರ ರೋಗಗಳಿಗೆ ಅತ್ಯುತ್ತಮ ತೈಲವು ಕೇಶವು ಉದ್ದುದ್ದ ಬೆಳೆಯುವುದು ಆರೋಗ್ಯದಾಯಕವಾದ ತೈಲಗಳಲ್ಲಿ ಇದು ಕೊಂಚಕಾಲದಲ್ಲೇ ಕೀರ್ತಿಯನ್ನು ಪಡೆದಿದೆ

ಪುಲುನಾರ, ವಾಯಿಲೆಟ್, ಟಿರಿ ಪಿಲ್ಲಿಸಮ್ ಮೊದಲಾದ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 0-12-0 [103 1]

ಇಕ್ಷಿಪ್ಸ್ ರಬ್ಬರ್ ಮೊಹರುಗಳು, ಫೋಟೋ ಎನ್‌ಲಾರ್ಜ್‌ಮೆಂಟುಗಳು ಅಗ್ಗದರದಲ್ಲಿ ತಯಾರಿಸಿಕೊಡಲಾಗುವುದು

ವಿಳಾಸ-ದಿ ಇಕ್ಲಿಪ್ಸ್ ಏಜನ್ಸಿ, ಮೋಸಸ್ ಕೊಟೇಜು, ಕಂಕನಾಡಿ.

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವುದು ನಮ್ಮ ಏಜಂಟರು ಬಿ ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ ಕೆಲವು ಏಜೆಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಕಡೆಯಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ

— ೦ —

ಸನ್ ೧೯೧೪ ನೇ ಇಸವಿ ಮೇ ತಾ ೭ ನೇ ಗುರುವಾರ

ಐರ್ಲೆಂಡಿನ ವಿದ್ಯಮಾನಗಳು.

ಲಂಡನ್ ಪಟ್ಟಣದಿಂದ ಬಂದಿರುವ ತಂತೀವರ್ತಮಾನಗಳನ್ನು ನೋಡುವಲ್ಲಿ ಆಲ್‌ಸ್ಟರ್ ಎಂಬ ವಿಭಾಗದ ಪ್ರಜೆಗಳು ಸದ್ಯದಲ್ಲಿ ಐರಿಷ್ ಪಾರ್ಲಿಮೆಂಟಿಗೆ ಅಧೀನರಾಗುವುದಿಲ್ಲವೆಂದು ನಿಷ್ಕರ್ಷೆ ಮಾಡಿಕೊಂಡಿರುವಂತೆ ಕಂಡುಬರುವುದು ಆ ವಿಭಾಗದ ಪ್ರಜೆಗಳು ತುಂಬಾ ಸಾಹಸಪಟ್ಟು ಸಾವಿರಾರು ಬಂದೂಕುಗಳನ್ನೂ ಲಕ್ಷಾಂತರ ಮದ್ದುಗುಂಡನ್ನೂ ಇತರ ಕಡೆಗಳಿಂದ ಸರ್ಕಾರಿ ಅಧಿಕಾರಿಗಳ ಸುಳಿವು ತಿಳಿಯದ ಹಾಗೆ ತರಿಸಿಟ್ಟುಕೊಂಡಿರುತ್ತಾರೆ

ಇತ್ತಲಾಗಿ ಇಂಗ್ಲಿಷ್ ಪಾರ್ಲಿಮೆಂಟು ಸಭೆ ಮನೆಯಲ್ಲಿ ನಡೆಯುತ್ತಿರುವ ಚರ್ಚೆಗಳನ್ನೂ ವಾಗ್ವಾದಗಳನ್ನೂ ನೋಡಿದರೆ ಉಭಯ ಪಕ್ಷಿಯವರೂ ಗೌರವಯುಕ್ತವಾದ ರೀತಿಯಲ್ಲಿ ಈ ವಿಚಾರವನ್ನು ವ್ಯವಸ್ಥೆಮಾಡಿಕೊಳ್ಳಬೇಕೆಂದು ಕುತೂಹಲಪಡುತ್ತಿರುವಂತೆ ಕಾಣುತ್ತದೆ ಡಬ್ಲಿನ್ ನಗರದಲ್ಲಿ ಏರ್ಪಾಟಾಗುವ ಐರಿಷ್ ಪಾರ್ಲಿಮೆಂಟ್ ಸಭೆಗೆ ಇಂಗ್ಲಿಷ್ ಗವರ್ನಮೆಂಟಿನವರು ಆಲ್‌ಸ್ಟರ್ ವಿಭಾಗದವರನ್ನು ಅಧೀನರಾಗಬೇಕೆಂದು ಬಲಾತ್ಕಾರ ಮಾಡುವವರಾಗಿಲ್ಲವೆಂಬುವುದೇನೋ ಖಂಡಿತ ಕಲಹಕ್ಕೆ ಈಡಾಗುತ್ತಿರುವ ಸಮಸ್ತ ಪಕ್ಷಿಗಳಿಗೂ ಸಮಾಧಾನ ಉಂಟಾಗುವ ರೀತಿಯಲ್ಲಿ ಒಂದು ಹೊಸ ತರಹಾ ಸಂಬಂಧವನ್ನು ಕಲ್ಪಿಸುವುದರಲ್ಲಿದ್ದಾರೆಂದು ಕಾಣುತ್ತಿದೆ ಈ ಹೊಸ ಸಂಬಂಧದ ರೀತಿ ಎಂಥಾದ್ದೋ ಸ್ಪಷ್ಟವಾಗಿ ಗೊತ್ತಾಗಲಿಲ್ಲ ಈ ವಿಚಾರವನ್ನು ಕುರಿತು ಗವರ್ನಮೆಂಟಿನ ಎದುರು ಪಕ್ಷದವರು ತಮ್ಮೊಳಗೇ ಆಲೋಚನೆಮಾಡಿಕೊಳ್ಳುತ್ತಿರುವರು ಅವರ ಈ ಆಲೋಚನೆಗಳೂ ಆಲೋಚನೆಗಳೂ ತೃಪ್ತಿಕರವಾಗಿ ಬಗೆಹರಿದು ಎಲ್ಲಾ ಪಕ್ಷಿಗಳಿಗೂ ಸಂತೋಷವನ್ನೂ ಸಮಾಧಾನವನ್ನೂ ಉಂಟುಮಾಡುವಂತೆ ಪರಿಣಮಿಸುವುದೆಂದು ಎಲ್ಲರೂ ಬಹಳವಾಗಿ ಹಾರೈಸುತ್ತಿದ್ದಾರೆ ಇದು ಬಗೆಹರಿಯುವುದರಲ್ಲಿ ಕಷ್ಟವೇನೋ ಉಂಟು, ಆದರೆ ಎಲ್ಲಾ ಪಕ್ಷಿಗಳವರೂ ಆವಶ್ಯವೂ ಉತ್ತಮವೂ ಆಗಿರುವ ವಸಾಹತುಸ್ವಾತಂತ್ರ್ಯವನ್ನು ಏರ್ಪಡಿಸುವುದರಲ್ಲಿ ಸಂಕಲ್ಪಮಾಡಿಕೊಂಡರೆ ಸುಲಭವಾಗಿ ಐಕ್ಯಮತವಾಗಿಹೋದೀತು ಎಲ್ಲರಿಗೂ ತೃಪ್ತಿಕರವಾಗಿರುವಂಥಾ ಏರ್ಪಾಟನ್ನು ಮಾಡಿಟ್ಟು ರೂಢಿಸುವುದಕ್ಕೆ ಸ್ವಲ್ಪ ದೀರ್ಘಕಾಲಬೇಕು ಇದರೂ ಕೆಲವು ವಾರಗಳೊಳಗಾಗಿ ಎಲ್ಲಾ ವಿವಾದ ಅಂಶಗಳೂ ಬಗೆಹರಿಯುವವೆಂದೂ, ಯಾರೊಬ್ಬರೂ ಅಸಮ್ಮತಿಸುವಂಥಾ ಕೆಟ್ಟ ಫಲವು ದೊರಕಲ್ಪಡುವುದೆಂದೂ ನಂಬಿ ನಿರೀಕ್ಷಿಸುತ್ತೇವೆ

ಆಲ್‌ಸ್ಟರ್ ಎಂಬುವುದು ಐರ್ಲೆಂಡಿನಲ್ಲಿ ಒಂದು ಭಾಗವಾಗಿದೆ, ಕಾಲಕ್ರಮದಲ್ಲಿ ಅದು ಐರ್ಲೆಂಡಿನ ಆಳ್ವಿಕೆಗೆ ಸೇರಿ ಹೋಗಲೇಬೇಕು ಐರ್ಲೆಂಡಿನಲ್ಲಿ ಏರ್ಪಾಡಾಗುವ ಪಾರ್ಲಿಮೆಂಟ್ ಎಂಬ ಪ್ರಜಾಪ್ರತಿನಿಧಿ ಸಭೆಯು ಏಕಪಕ್ಷದಿಂದಲೂ, ಧರ್ಮವಾಗಿಯೂ ಆಳುತ್ತಾ ಇರುವುದನ್ನು ಕಂಡರೆ ಆಲ್‌ಸ್ಟರ್ ವಿಭಾಗವೂ ಅದರ ಕೂಡ ಸೇರಿಕೊಂಡು ದೇಶವನ್ನು ಅಭಿವೃದ್ಧಿಗೆ ತರುವ ಮಾರ್ಗದಲ್ಲಿ ಐರ್ಲೆಂಡಿಗೆ ಸಹಾಯ ಮಾಡೀತೆನ್ನುವುದಕ್ಕೆ ಸಂಶಯವಿಲ್ಲ

ಮೆಕ್ಸಿಕೋ ದೇಶದ ಗಲಭೆಯು

ಮೆಕ್ಸಿಕೋ ದೇಶದೊಳಗೆ ಹುಟ್ಟಿರುವ ಗಲಭೆಗಳು ಈಗನ ಕೊನೆಮುಟ್ಟುವಂತೆ ಕಾಣುತ್ತಿದೆ ಆದರೆ ಆ ದೇಶವು ತಹಬಂದಿಯಲ್ಲಿಲ್ಲವಾಗಿ ಮುಂದೆ ಏನೇನು ಸಂಭವಿಸುವುದೋ ಊಹಿಸಿ ಹೇಳುವುದು ಪ್ರಯಾಸ ಸಂಯುಕ್ತ ಸಂಸ್ಥಾನಗಳ ಗವರ್ನಮೆಂಟಿನವರು ವೀರಕ್ರೂಸ್ ಎಂಬ ತೀರಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಅದು ಮೆಕ್ಸಿಕೋ ದೇಶಕ್ಕೆ ಮುಖ್ಯವಾದ ತೀರಪಟ್ಟಣ ಈಗ ಹುಟ್ಟಿರುವ ಮನಸ್ತಾಪವು ನಿವಾರಣೆಯಾಗುವ ತನಕ ಈ ತೀರಪಟ್ಟಣವನ್ನು ಅವರು ಬಿಟ್ಟುಕೊಡುವಂತಿಲ್ಲ ಈ ಗಲಭೆಗಳು ಬಗೆಹರಿಯುವುದಕ್ಕೆ ಮುಂಚೆ ಅವರು ಆ ಪಟ್ಟಣದಿಂದ ಮೆಕ್ಸಿಕೋ ನಗರಕ್ಕೂ ಸೈನ್ಯವನ್ನು ಕಳುಹಿಸಿದರೂ ಕಳುಹಿಸಬಹುದು

ಈಚೆಗೆ ಬಂದಿರುವ ವರ್ತಮಾನದಿಂದ ದಕ್ಷಿಣ ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಮೊದಲಾದ ಸಂಸ್ಥಾನಗಳವರು ಮಧ್ಯಸ್ಥಿಕೆ ಮಾಡುವುದಾಗಿ ತಿಳಿಸಿದ್ದಾರೆಂದೂ, ಹಾಗೆ ಬಗೆಹರಿಸುವುದಕ್ಕೆ ಸಂಯುಕ್ತ ಸಂಸ್ಥಾನಗಳವರೂ ಮೆಕ್ಸಿಕೋದವರೂ ಒಪ್ಪಿಕೊಂಡಿದ್ದಾರೆಂದೂ ಗೊತ್ತಾಗುತ್ತದೆ ಯಾವ ರೀತಿಯಲ್ಲಾದರೂ ಈ ರಾಜ್ಯಗಳ ನಡುವೆ ಉಂಟಾಗಿರುವ ಮನಸ್ತಾಪವು ಬೇಗನೆ ಬಗೆಹರಿದು ಯಥಾಪ್ರಕಾರ ಅವರವರಿಗೆ ಸದ್ಭಾವವೂ ಸ್ನೇಹವೂ ನೆಲಗೊಳ್ಳುವಂತಾಗಲೆಂದು ನಾವು ನಿರೀಕ್ಷಿಸುತ್ತೇವೆ ಸಂಯುಕ್ತ ಸಂಸ್ಥಾನಗಳವರೇನೋ ಮೆಕ್ಸಿಕೋದವರ ಮೇಲೆ ಕತ್ತಿ ಕಟ್ಟಬೇಕೆಂಬ ಕುತೂಹಲವುಳ್ಳವರಾಗಿಲ್ಲವೆಂದೂ, ತಮಗುಂಟಾಗಿರುವ ಮನಸ್ತಾಪವನ್ನೂ ಆ ದೇಶದೊಳಗಣ ಗಲಭೆ ಕಾದಾಟಗಳನ್ನೂ ಪರಿಹರಿಸಬೇಕೆನ್ನುವುದರಲ್ಲೇ ಅಭಿಲಾಷೆಪಡುತ್ತಿದ್ದಾರೆಂದೂ ಗೋಚರವಾಗುತ್ತದೆ ಸದ್ಯದಲ್ಲಿ ಮೆಕ್ಸಿಕೋ ರಾಜ್ಯವನ್ನು ದಕ್ಷನಾಗಿಯೂ ಪ್ರೀತಿಪೂರ್ವಕವಾಗಿ ಪರಿಪಾಲನೆಮಾಡತಕ್ಕಂಥಾ ಪುರುಷನು ದೊರೆಕಬೇಕು. ಇಂಥವನು ಸಿಕ್ಕದೆಹೋಗಿರುವುದೇ ಆ ದೇಶದ ದುಸ್ಥಿತಿಗೆ ಕಾರಣವಾಗಿದೆ ಹ್ಯಾಗೂ ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಲಾಗಿ ಅಲ್ಲಿನ ಕಷ್ಟಗಳೂ ಗಲಭೆಗಳೂ ಇನ್ನು ಮುಂದೆ ಸ್ವಲ್ಪ ದಿನಗಳೊಳಗೇ ಇತ್ಯರ್ಥ ಹೊಂದಿ ನೆಮ್ಮದಿಯು ನೆಲಗೊಳ್ಳುವ ಸಂಭವ ತೋರಿಬರುತ್ತಿರುವುದು

ಮನುಷ್ಯನ ಮನಸ್ಸಿನಲ್ಲಿ ಬರೆಯಲ್ಪಟ್ಟಿರುವ ಧರ್ಮಶಾಸ್ತ್ರ

ಲೋಕದಲ್ಲಿ ಅನೇಕ ಮತಗಳಿರುತ್ತವೆ ಪ್ರತಿಯೊಂದು ಮತಸ್ಥರು ಒಂದು ಪವಿತ್ರ ಗ್ರಂಥವನ್ನು ಧರ್ಮಶಾಸ್ತ್ರವನ್ನಾಗಿ ಇಟ್ಟುಕೊಂಡಿರುವರು ಎಲ್ಲಾ ಮತಗಳಲ್ಲಿಯೂ ಸಾಮಾನ್ಯವಾಗಿರುವ ನೀತಿಬೋಧನೆಗಳು ಇದ್ದಾಗ್ಯೂ ಅವುಗಳಲ್ಲಿ ವ್ಯತ್ಯಾಸವು ಸಹ ಇರುವದು ಒಬ್ಬರು ಧರ್ಮಶಾಸ್ತ್ರವೆಂದು ಒಪ್ಪಿದ್ದನ್ನು ಇತರರೂ ಒಪ್ಪುವದಿಲ್ಲ ಒಂದು ವೇಳೆ ಸರ್ವರಿಗೂ ಸಾಮಾನ್ಯವಾದಂಥಾ ಒಂದು ಧರ್ಮಶಾಸ್ತ್ರವು ಇದ್ದಾಗ್ಯೂ ಅದು ಸರ್ವರಿಗೂ ಪ್ರಯೋಜನಕಾರಿಯಾಗುವದಿಲ್ಲ ಯಾಕೆಂದರೆ ನಿರಕ್ಷರಕುಕ್ಷಿಗಳಾಗಿರುವವರು ಎಷ್ಟೋ ಮಂದಿ ಇರುವರು ಅವರೆಲ್ಲರಿಗೂ ಧರ್ಮಶಾಸ್ತ್ರೋಪದೇಶವನ್ನು ಹೊಂದುವದು ಅಸಾಧ್ಯವಾದ್ದರಿಂದ ಸಿಕ್ಕೇ ಸಿಕ್ಕುತ್ತದೆಂದು ನಂಬುವದಕ್ಕೆ ಆಸ್ಪದವಿರುವದಿಲ್ಲ ಅಂಥವರ ಪಾಲಿಗೆ ಧರ್ಮಶಾಸ್ತ್ರವು ಇದ್ದರೆ ಅವರಿಗೆ ಎಷ್ಟು ಪ್ರಯೋಜನವೋ ಇಲ್ಲದಿದ್ದರೂ ಅಷ್ಟೇ ಪ್ರಯೋಜನ ಮಾನವರು ಕೈಕೊಳ್ಳಬೇಕಾದ ಧರ್ಮವನ್ನು ಅವರಿಗೆ ತಿಳಿಯಪಡಿಸುವ ಒಂದು ಧರ್ಮಶಾಸ್ತ್ರವು ದೇವರಿಂದ ಕೊಡಲ್ಪಟ್ಟಿದ್ದರೆ, ಅದು ಸರ್ವರಿಗೂ ಸಾಮಾನ್ಯವಾಗಿಯೇ ಇರಬೇಕು ಹಾಗಿಲ್ಲದ ಪಕ್ಷದಲ್ಲಿ ದೇವರು ಪಕ್ಷಪಾತಮಾಡಿದಂತಾಗುವದು ಮತ್ತು ಧರ್ಮಶಾಸ್ತ್ರದ ಗಂಧವನ್ನೇ ಅರಿಯದವರನ್ನು ಧರ್ಮಶಾಸ್ತ್ರವನ್ನು ಮೀರಿ ನಡೆದವರಂತೆ ಶಿಕ್ಷಿಸುವದು ಅನ್ಯಾಯವಾಗಿರುವದು ನೀತಿಸ್ವರೂಪನಾದ ದೇವರು ಹೀಗೆ ಮಾಡಕೂಡದು

ಹಾಗಾದರೆ ದೇವರು ಸರ್ವರಿಗೂ ಸಾಮಾನ್ಯವಾಗಿ ಕೊಟ್ಟಿರುವ ಯಾವದಾದರೊಂದು ಧರ್ಮಶಾಸ್ತ್ರವು ಇರುತ್ತದೆಯೋ? ಮನುಷ್ಯನಿಗಿರುವ ಸ್ವಭಾವವನ್ನು ನೋಡಿರಿ ನಾವು ಆಗಿಂದಾಗ್ಗೆ ಇತರರ ಗುಣನಡತೆಗಳನ್ನು ನೋಡಿ ಇದು ಒಳ್ಳೇದು, ಅದು ಕೆಟ್ಟದ್ದು ಎಂದು ತೀರ್ಮಾನಿಸುತ್ತೇವೆ ನಾವು ಯಾವ ಶಾಸನವನ್ನನುಸರಿಸಿ ಇಂಥ ತೀರ್ಮಾನವನ್ನು ಮಾಡುತ್ತೇವೋ ಅದು ನಮ್ಮ ಅಧಿಕಾರಕ್ಕೆ ಒಳಪಟ್ಟಿರುವದಿಲ್ಲ ನಮ್ಮ ಇಷ್ಟ ಬಂದ ಪ್ರಕಾರ ಅದನ್ನು ಬದಲಾಯಿಸುವದು ಅಸಾಧ್ಯ, ಒಬ್ಬ ನ್ಯಾಯಾಧಿಪತಿಯು ನ್ಯಾಯಾಸನದ ಮೇಲೆ ಕೂತು ಹಿಂದೆ ಮಾಡಿಟ್ಟಿರುವ ಶಾಸನವನ್ನನುಸರಿಸಿ ಹ್ಯಾಗೆ ಜಡ್ಜ್‌ಮೆಂಟು ಹೇಳುತ್ತಾನೋ ಹಾಗೆಯೇ ನಾವೂ ಸಹ ಮುಂದೆ ಮಾಡಿಟ್ಟಿರುವ ಒಂದು ಶಾಸನವನ್ನನುಸರಿಸಿ ತೀರ್ಮಾನಮಾಡುವದಕ್ಕೆ ಬಂಧಿಸಲ್ಪಟ್ಟಿರುತ್ತೇವೆ ಕೆಲವು ಸಮಯಗಳಲ್ಲಿ ನಾವು ಇತರರ ವಿಷಯದಲ್ಲಿ ಅಲ್ಲ, ನಮ್ಮ ವಿಷಯದಲ್ಲಿಯೇ ತೀರ್ಮಾನಮಾಡಿಕೊಳ್ಳುವದುಂಟು ಅಂಥಾ ಕಾಲದಲ್ಲಿ ನಾವು ನಮ್ಮೊಳಗೆ ಇರುವ ಒಬ್ಬ ನ್ಯಾಯಾಧಿಪತಿಯ ಮುಂದೆ ಅಪರಾಧಿಗಳಾಗಿ ನಿಂತಿರುತ್ತೇವೆ ಆ ನ್ಯಾಯಾಧಿಪತಿಯು ಮಾಡುವ ಜಡ್ಜ್‌ಮೆಂಟಿನ ಮೇಲೆ ಅಪೀಲ್ ಮಾಡುವದಕ್ಕಾದರೂ ತಪ್ಪಿಸಿಕೊಳ್ಳುವದಕ್ಕಾದರೂ ಮಾರ್ಗವಿರುವದಿಲ್ಲ ಯಾವ ಶಿಕ್ಷೆ ನಮಗಾಗಿದ್ದು ಕೊಂಡು, ನಮ್ಮನ್ನು ಅಪರಾಧಿಗಳೆಂದು ತೀರ್ಮಾನಿಸುತ್ತದೆಯೋ ಆ ಶಿಕ್ಷೆಯು ನಮಗಿಂತಲೂ ಎಷ್ಟೋ ದೊಡ್ಡವನಾಗಿರುವ ಒಬ್ಬ ಅಧಿಕಾರಿಯ ಹಸ್ತವಾಗಿದೆಯೆಂದು ಮುಂದಟ್ಟು ಮಾಡಿಕೊಳ್ಳುತ್ತೇವೆ

ಮನುಷ್ಯನಿಗಿರುವ ಈ ಸ್ವಭಾವವು ಸಾಧಾರಣವಾಗಿ ಎಲ್ಲಾ ಕಾಲಗಳ ಎಲ್ಲಾ ಜನರಿಗೂ ಏಕಪ್ರಕಾರವಾಗಿರುತ್ತದೆ ದೃಷ್ಟಾಂತರವಾಗಿ ರಾಮ, ಸೀತೆ ಮೊದಲಾದವರ ಸಚ್ಚರಿತ್ರೆಯನ್ನು ಈ ಕಾಲದ ಆಂಗ್ಲೇಯರೂ ಕೊಂಡಾಡಿ ಶ್ಲಾಘಿಸುತ್ತಾರೆ ಅನೇಕ ವರ ಕಾರ್ಯಗಳ ವಿಷಯ ಎಳ್ಳಷ್ಟೂ ಅನುಮಾನವಿಲ್ಲದೆ ಇದು ಒಳ್ಳೇದು, ಅದು ಕೆಟ್ಟದ್ದೇ ಸರಿ ಎಂದು ಸರ್ವರೂ ಒಪ್ಪಿಕೊಳ್ಳುವರು ಎಲ್ಲಾ ಧರ್ಮಶಾಸ್ತ್ರಗಳ ನೀತಿಬೋಧನೆಗಳು ಈ ನ್ಯಾಯಾಧಿಪತಿಯ ಮುಂದೆ ವಿಮರ್ಶಿಸಲ್ಪಡಬೇಕು ಸರ್ವರಿಗೂ ಸಾಮಾನ್ಯವಾಗಿಯೂ ಸರ್ವೋತ್ತಮವಾಗಿಯೂ ಇರುವ ಈ ಅಧಿಕಾರವು ಏನಾಗಿರಬಹುದು? ಇಷ್ಟರ ಮಟ್ಟಿಗೆ ನಮ್ಮ ಅಧಿಕಾರಕ್ಕೆ ಒಳಪಡದೆ ಇರುವಂಥಾ ಇಷ್ಟು ಕಟ್ಟುನಿಟ್ಟಾದ ತೀರ್ಪನ್ನು ಮಾಡುವಂಥಾ ಅಧಿಕಾರವು ಎಲ್ಲಿಂದ ಬಂದಿರಬಹುದು?

ಮನುಷ್ಯನು ದೇಹಧಾರಿಯಾಗಿರುವದರಿಂದಲೂ ಈ ಪ್ರಪಂಚದಲ್ಲಿ ಸಹವಾಸಮಾಡುತ್ತಾ ಇರುವದರಿಂದಲೂ ಅವನಲ್ಲಿ ಒಂದು ದೊಡ್ಡ ಹೋರಾಟವು ನಡೆಯುತ್ತಾ ಇದೆ ಮನುಷ್ಯನಿಗಿರುವ ನೀತಿಜ್ಞಾನವು ಅವನನ್ನು ಆಳುವದಕ್ಕೆ ಅತ್ಯುತ್ತಮವಾದದ್ದು ಯಾರು ತಮಗಿರುವ ಸೂಕ್ಷ್ಮ ಬುದ್ಧಿಗೆ ವಿಧೇಯರಾಗಿ ನಡೆಯುತ್ತಾರೋ ಅಂಥವರಿಗೆ ಈ ಹೋರಾಟವು ಅವರ ವಿವೇಚನಾಶಕ್ತಿಯನ್ನು ಬಲಗೊಳಿಸುವದಲ್ಲದೆ ಅವರಲ್ಲಿ ಅತ್ಯುತ್ತಮವಾದ ಸದ್ಗುಣಗಳು ಹುಟ್ಟುವದಕ್ಕೆ ಅವಕಾಶ ಕೊಟ್ಟು, ಅವುಗಳನ್ನು ವೃದ್ಧಿಮಾಡುತ್ತದೆ ಇಷ್ಟು ತಿಮ್ಮ ಸಾಟಿ ಇಲ್ಲದಿದ್ದರೆ, ನಮಗೆ ತಿಳಿದಿರುವ ಹಾಗೆ ಮನುಷ್ಯನಲ್ಲಿ ಅತ್ಯುತ್ತಮವಾದ ಸದ್ಗುಣಗಳು ಇರುತ್ತಲಿರಲಿಲ್ಲ ಇವುಗಳಿಗೆ ಇಷ್ಟರ ಮಟ್ಟಿನ ಸಂಬಂಧ ಇರುವದರಿಂದ ಈ ಪ್ರಪಂಚವನ್ನು ಉಂಟುಮಾಡಿದಾತನೇ ಈ ನೀತಿಜ್ಞಾನವನ್ನು ಮನುಷ್ಯನಿಗೆ ಕೊಟ್ಟಿರಬೇಕೆಂಬುವದು ವ್ಯಕ್ತವಾಗುತ್ತದೆ ಮತ್ತು ಇದರಿಂದ ಪ್ರಪಂಚವನ್ನು ಉಂಟುಮಾಡಿದಾತನ ನೀತಿಯುಳ್ಳ ಉದ್ದೇಶವು ಪ್ರಕಟವಾಗುತ್ತದೆ

ಒಬ್ಬ ಕ್ರೈಸ್ತಭಕ್ತನಿಗೆ ಸರ್ವರೂ ಇವರ ವಿಷಯ ಹೇಳಿರುವದೇನೆಂದರೆ— ದೇವರಿಗೆ ಪಕ್ಷಪಾತವಿಲ್ಲ. ಧರ್ಮಶಾಸ್ತ್ರವಿಲ್ಲದವರಾಗಿ ಪಾಪಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶಹೊಂದುವರು ಆದರೆ ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ, ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ, ಹಾಗಿರಲು ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬುದನ್ನು ತೋರಿಸುತ್ತಾರೆ ಇದಕ್ಕೆ ಅವರ ಮನಸ್ಸು ಸಾಕ್ಷಿ ನುಡಿಯುತ್ತದೆ ಅವರ ಯೋಚನೆಗಳು ಪ್ರತಿವಾದಿಗಳಂತೆ— ಇದು ತಪ್ಪೆಂದು ತಪ್ಪಲ್ಲವೆಂದೂ ಸೂಚಿಸುತ್ತವೆ" ಈ ಧರ್ಮಶಾಸ್ತ್ರವು ದೇವರು ಪ್ರತಿಯೊಬ್ಬರಿಗೂ ಕೊಟ್ಟಿರುವ ಮನಸ್ಸಾಕ್ಷಿಯೇ ಆಗಿರುತ್ತದೆ ಇದು ದೇವರ ಚಿತ್ತವನ್ನು ಪ್ರಕಟಿಸುತ್ತದೆ ನಮಗೆ ಧರ್ಮಶಾಸ್ತ್ರ ತಿಳಿಯದೆಂದು ನೆವ ಹೇಳುವದಕ್ಕೆ ಯಾರಿಗೂ ಆಸ್ಪದವಿಲ್ಲ ಈ ಸೂಕ್ಷ್ಮ ಬುದ್ಧಿಗೆ ವಿಧೇಯರಾಗುವದಕ್ಕಾದರೂ ಅವಿಧೇಯರಾಗುವದಕ್ಕಾದರೂ ಮನುಷ್ಯನಿಗೆ ಸ್ವಾತಂತ್ರ್ಯವುಂಟು ಆದಕಾರಣ ಪ್ರತಿಯೊಬ್ಬನೂ ತಾನು ಮಾಡುವ ಕಾರ್ಯಾಕಾರ್ಯಗಳಿಗೆ ಜವಾಬ್ದಾರನಾಗಿಯುತ್ತಾನೆ

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

• • •

ಕಳೆದ ಭಾನುವಾರ ರಾಜಧಾನಿಯಲ್ಲಿ ಸ್ವಲ್ಪ ಮಳೆ ಆಯಿತು ಆದಾಗ್ಯೂ ಮುಂಗಾರು ಮಳೆಗಳು ಬಾರದೆ ಬಿಸಿಲ ಬೇಗೆಯು ಹೆಚ್ಚಿರುವುದು

ಬೆಂಗಳೂರು ತಾಲ್ಲೂಕಿಗೆ ಸೇರಿದ ವಡಿಗೇನಹಳ್ಳಿಯಲ್ಲಿ ಕಳೆದ ಗುರುವಾರ ಪ್ರಜೆಗಳ ಮುಖಂಡರು ಸಭೆ ಸೇರಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿರುವುದಾಗಿ ತಿಳಿದು ಬರುತ್ತದೆ

* * *

ಕೌನ್ಸಲರುಗಳಾದ ಮ|| ಎಚ್ ವಿ ನಂಜುಂಡಯ್ಯ, ಸಿ ಐ ಇ ರವರೂ, ಸರ್ದಾರ್ ಎಂ ಕಾಂತರಾಜೆ ಅರಸಿನವರೂ ಕಳೆದ ವಾರ ರಾಜಧಾನಿಗೆ ಬಂದು ಎರಡು ದಿನ ಇದ್ದು ವಾಪಸು ಬೆಂಗಳೂರಿಗೆ ಪ್ರಯಾಣಮಾಡಿದರು

* * *

ಬೆಂಗಳೂರು ಕಲ್ಲಾಸ್ಪತ್ರೆಯ ಡಾಕ್ಟರಾದ ಮ|| ಎಸ್ ವಿ ರಾಮಸ್ವಾಮಯ್ಯಂಗಾರ್ಯರು ತಮ್ಮ ಕುಮಾರನನ್ನು ವಿದ್ಯಾಭ್ಯಾಸಕ್ಕಾಗಿ ಕಳೆದ ವಾರ ಸೀಮೆಗೆ ಕಳುಹಿಸಿದರು ಹುಡುಗನ ತಾಯಿಯೂ ಸಂಗಡ ಪ್ರಯಾಣಮಾಡಿದಾರೆ

* * *

ಹಗಲಿನಲ್ಲಿ ಕಸಬುದಾರಿ ಕೆಲಸಗಳಿಗೂ, ರಾತ್ರಿಯಲ್ಲಿ ದೀಪ ಉರಿಸುವುದಕ್ಕೂ ಉಪಯೋಗಿಸಿಕೊಳ್ಳುವಂಥಾ ವಿದ್ಯುಚ್ಛಕ್ತಿಯ ದರಗಳನ್ನು ನಮ್ಮ ಸರ್ಕಾರದವರು ಈ ತಿಂಗಳ ಪ್ರಾರಂಭದಿಂದ ಶಾಲುವಾಸಿ ಕಡಮೆ ಮಾಡಿರುತ್ತಾರೆ

* * *

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿಯ ಇಲಾಖಾ ಮುಖ್ಯಾಧಿಕಾರಿಯಾಗಿರುವ ಮಿ|| ಸಿ ಎಫ್ ಬೇಮ್ಸ್‌ರವರು ತಮ್ಮ ನೌಕರಿಯ ಅವಧಿ ಪೂರೈಸುವುದಕ್ಕೆ ಇನ್ನು ಮೂರು ತಿಂಗಳು ಇದೆ ಎಂದೂ, ಆ ತರುವಾಯ ತಾವು ಕೆಲಸ ಬಿಟ್ಟುಬಿಡುವುದಾಗಿಯೂ ಗವರ್ನ್‌ಮೆಂಟಿಗೆ ತಿಳಿಸಿದಾರೆಂದು ಪ್ರಕಟವಾಗಿದೆ

* * *

ರಾಜಧಾನಿಯಲ್ಲಿರುವ ದ್ವಿವೇದಿ ಕೃಷ್ಣಶಾಸ್ತ್ರಿಗಳು ಕೆಲವು ದಿನಗಳ ಹಿಂದೆ ದಕ್ಷಿಣ ದೇಶದಲ್ಲಿ ಸಂಚಾರಮಾಡುತ್ತಿದ್ದಾಗ ಆದಿವೇಣಿಯ ದೊಡ್ಡ ಮನುಷ್ಯರು ಅವರನ್ನು ಕರೆಸಿಕೊಂಡು ಅವರ ವೀಣಾಗಾನವನ್ನು ಕೇಳಿ ಮೆಚ್ಚಿದವರಾಗಿ ಅವರಿಗೆ ಒಂದು ಭಂಗಾರದ ಮೆಡಲನ್ನು ಕೊಟ್ಟು ಸನ್ಮಾನಮಾಡಿದರೆಂದು ಕೇಳುತ್ತೇವೆ

* * *

ಬೆಂಗಳೂರು ತಾಲ್ಲೂಕಿನ ಗೊಲ್ಲರ ವೆಂಕಟನೆಂಬುವನು 16 ವಯಸ್ಸಿನ ಮರಿ ಎಂಬ ಹುಡುಗಿಯನ್ನು ತಂದೆ ತಾಯಿಗಳ ಅನುಮತಿ ಪಡೆಯದೆ ಎತ್ತಿಕೊಂಡು ಹೋಗಿ ಮದುವೆ ಮಾಡಿಕೊಳ್ಳಬೇಕೆಂದು ಪ್ರಯತ್ನ ಪಟ್ಟದ್ದಕ್ಕಾಗಿ ಬೆಂಗಳೂರು ಅ|| ಸೆಷನ್ಸ್ ಜಡ್ಜರವರು ಕಳೆದ ಶನಿವಾರ ಅವನಿಗೆ 3 ವರುಷ ಕಠಿಣಶಿಕ್ಷೆಯನ್ನೂ 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

* * *

ಕೋಲಾರ—ಬೌರಿಂಗ್‌ಪೇಟೆ ರೈಲ್ವೆಗೋಸ್ಕರ ಸರ್ಕಾರದವರು ಪೋಲೀಸ್ ಸಿಬ್ಬಂದಿಯನ್ನು ವರುಷಕ್ಕೆ 1,800 ರೂಪಾಯಿ ಸಿಬ್ಬಂದಿ ಖರ್ಚನ ಮೇಲೆ ಸ್ಯಾಂಕ್ಷನ್ ಮಾಡಿ ಡಿಸ್ಟ್ರಿಕ್ಟ್ ಬೋರ್ಡಿಗೆ ತಿಳಿಸಿದರು ಆ ಬೋರ್ಡಿನವರು ಆ ಖರ್ಚನ್ನು ಒಪ್ಪಿಕೊಂಡು, ಸ್ಯಾಂಕ್ಷನ್ ಮಾಡುವುದಕ್ಕಿಂತ ಮುಂಚೆ ಸರ್ಕಾರದವರು ಬೋರ್ಡಿನ ಅಭಿಮತವನ್ನು ಕೇಳಿದ್ದರೆ ಚೆನ್ನಾಗಿತ್ತೆಂದು ಅರಿಕೆ ಮಾಡಿದರು

* * *

ಬೆಂಗಳೂರಿಗೂ ಚಿಂತಾಮಣಿಗೂ ಮೋಟರ್ ಟಪ್ಪಾಲನ್ನು ಇಟ್ಟು ಪ್ರಯಾಣಿಕರಿಗೆ ಅನುಕೂಲಮಾಡಿಕೊಡುವಂತೆ ಏರ್ಪಾಟಾಗುತ್ತಿದೆ ಇದನ್ನು ಒಂದು ಕಂಪನಿಯವರು ನಡಿಸುವರು ಇದಕ್ಕಾಗಿ ಮಾರ್ಗದಲ್ಲಿರುವ ಕೆಲವು ಸೇತುವೆಗಳನ್ನೂ ಹಳ್ಳಗಳನ್ನೂ ಇಂಜನಿಯರ್ ಇಲಾಖೆಯವರು ಸರಿಮಾಡಿಸುತ್ತಿದಾರೆ ಒಂದೆರಡು ತಿಂಗಳಲ್ಲೇ ಈ ಮೋಟರ್ ಟಪ್ಪಾಲು ಪ್ರಾರಂಭವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

* * *

ರಾಜಧಾನಿಯ ದೊಡ್ಡಪೇಟೆ ಕಡೇ ಭಾಗದಲ್ಲಿರುವ ಬಾಡಿ ಗಾರ್ಡ್ ಲೈನ್ ಕಟ್ಟಡವನ್ನೂ, ಅದರ ಪಕ್ಕದಲ್ಲಿರುವ ಆಸ್ಪತ್ರೆ ಕಟ್ಟಡವನ್ನೂ, ಖಾಲಿ ನಿವೇಶನವನ್ನೂ ಅರಮನೆ ಇಲಾಖೆಯಿಂದ ಟ್ರಸ್ಟ್ ಬೋರ್ಡಿನವರು 30,000 ರೂಪಾಯಿಗೆ ತೆಗೆದುಕೊಂಡಿದಾರೆ ಆ ಭಾಗದಲ್ಲಿ ಕೆಲವು ಆರೋಗ್ಯಕರವಾದ ಮಾದರಿ ಮನೆಗಳನ್ನು ಟ್ರಸ್ಟ್ ಬೋರ್ಡಿನಿಂದ ಕಟ್ಟಿಸಿ ಪ್ರಜೆಗಳಿಗೆ ಬಿಕರಿ ಮಾಡಬೇಕೆಂದು ಯೋಚಿಸುತ್ತಿರುವಂತೆ ಕೇಳುತ್ತೇವೆ

* * *

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಟೆನ್ನಿಸ್ ಎಂಬ ಚೆಂಡಾಟದ ಪಂದ್ಯದಲ್ಲಿ ರಾಜಧಾನಿಯ ಮ|| ಯು ಡಿ ರಂಗರಾಯರು ಬಹಳ ಸೆಕ್ಷೀತ್ರಾರ್ಹರಾಗಿ ತಮ್ಮ ಸಾಮರ್ಥ್ಯವನ್ನು ಪ್ರಕಾಶಪಡಿಸಿ ಎದುರಾಳಿಗಳನ್ನೆಲ್ಲಾ ಗೆದ್ದು ಬಹು ಮೇಲಾದ ಬಹುಮಾನವನ್ನು ಸಂಪಾದಿಸಿಕೊಂಡು ಬಂದರು ಇವರಿಗೆ ಈ ಚೆಂಡಾಟದ ಪಂದ್ಯಗಳಲ್ಲಿ ಇದುವರೆಗೆ ಸುಮಾರು 18 ಬಹುಮಾನಗಳು ದೊರೆತಿರುವುವೆಂದು ತಿಳಿಸಲು ಸಂತೋಷವಾಗುತ್ತದೆ

* * *

ಬೆಂಗಳೂರು ಕಲಾಸಿಪಾಳ್ಯದಲ್ಲಿ ಧರ್ಮರಾಜ ದೇವಸ್ಥಾನದ ಉತ್ಸವಕ್ಕೆ ಸಂಬಂಧಪಟ್ಟಂತೆ ವರುಷೇವರುಷ ನಡೆಯುವಂಥಾ ಬೆಂಕಿ ತುಳಿಯುವ ಸಂಭ್ರಮವು ಕಳೆದ ಭಾನುವಾರ ಜರುಗಿತು ಸುಮಾರು ನೂರು ಜನದ ತನಕ ವಿಸ್ತಾರವಾದ ಅಗ್ನಿಗುಂಡದಲ್ಲಿ ಇಳಿದು ಬರಿಯ ಕಾಲಿನಲ್ಲೇ ಕೆಂಡಗಳ ಮೇಲೆ ತುಳಿದಾಡಿದರು ಈ ಆಶ್ಚರ್ಯಕರವಾದ ಆಚರಣೆಯನ್ನು ಸಾವಿರಾರು ಪ್ರಜೆಗಳು ನಿಂತು ನೋಡಿ ಭ್ರಮೆಹೊಂದಿ ಸಂತೋಷಪಟ್ಟರು

* * *

ಬೆಂಗಳೂರಿನಲ್ಲಿ ಆರಣಿ ಜಹಗೀರುದಾರರು ಮೋಟರ್ ಗಾಡಿಯನ್ನು ಹೊಡಿಸಿಕೊಂಡು ಹೋಗುತ್ತಿದ್ದಾಗ ಅದು ಒಂಟೆತ್ತಿನ ಗಾಡಿಗೆ ಬಡಿದು ಎತ್ತು ಸತ್ತುಹೋಯಿತೆಂದೂ, ಆ ಗಾಡಿಯಲ್ಲಿದ್ದ ಮುಸಲ್ಮಾನನಿಗೆ ಗಾಯವಾಗಿ ಅವನು ಆಸ್ಪತ್ರೆಯಲ್ಲಿ ಕಾಲವಾದನೆಂದೂ ಕಳೆದ ವಾರ ತಿಳಿಸಿದ್ದೆವಷ್ಟೆ ಈಗ ಪೋಲೀಸಿನವರು ಆ ಜಹಗೀರುದಾರರ ಮೇಲೆ ಅವರು ಸ್ವೇಚ್ಛೆಯಿಂದ ಮೋಟರ್ ನಡಿಸಿದರೆಂದು ಮೊಕದ್ದಮೆ ತಂದಿದಾರೆ ಅದು ಮುಂದಿನ ಸೋಮವಾರ ವಿಚಾರಣೆಯಾಗುವುದಾಗಿದೆ

* * *

ಬೆಂಗಳೂರು ದಂಡಿನ ಆಸ್ಪತ್ರೆಯಲ್ಲಿದ್ದ ಸುಮಾರು 28 ವಯಸ್ಸಿನ ಗುಟ್ಟಿ ಸೆಂಟೊಬ್ಬ ಪ್ಪೈದಿಯು ಕಳೆದ ಗುರುವಾರ ತಗಡು ಚೂರಿನಿಂದ ಕೊರಳು ಕೊಯ್ದುಕೊಂಡು ಆತ್ಮಹತ್ಯ ಮಾಡಿಕೊಂಡನು. ಇವನು ಕೊಲೆಮಾಡಿದನೆಂದು ಹಿಂದೊಮ್ಮೆ ಸೆಷನ್ಸ್ ಜಡ್ಜರವರು ಅವನಿಗೆ 1911 ನೇ ಜನವರಿಯಲ್ಲಿ ಮರಣಾವಧಿ ಸಜವನ್ನು ವಿಧಿಸಿದ್ದರು ಶಿಕ್ಷೆಯಾದ ಒಂದು ತಿಂಗಳ ಮೇಲೆ ಅವನಿಗೆ ಬುದ್ಧಿ ಸ್ಥಿರ ತಪ್ಪಿತೆಂದು ತಿಳಿದು ಡಾಕ್ಟರು ಅವನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆನಡಿಸುತ್ತಿದ್ದರು ಆರು ತಿಂಗಳ ತನಕ ಅವನು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಆಗಾಗ್ಗೆ ಪ್ರಯತ್ನಪಡುತ್ತಲೇ ಇದ್ದನು

* * *

ತೊಳಕಾಲ್ಮುರುವಿನಿಂದ ಒಬ್ಬ ಬಾತ್ಮೀದಾರರು ಬರೆಯುವುದು.—ಬಳ್ಳಾರಿ ಜಿಲ್ಲೆ ಮೊನ್ನೆ 30 ನೇ ಏಪ್ರೆಲ್ ಗುರುವಾರ ರಾತ್ರಿ ಒಬ್ಬ ಲಿಂಗಾಯಿತರ ಸುಮಾರು 18-20 ವರ್ಷ ವಯಸ್ಸುಳ್ಳ ಹುಡುಗನು ಅಕಸ್ಮಾತ್ ಕಾಯಿಲೆಯಿಂದ ಮೃತಪಟ್ಟನು ಈತನಿಗೆ ಒಬ್ಬ 15 ವರ್ಷದ ಹೆಂಡತಿಯೂ ಒಂದು ಚಿಕ್ಕ ಗಂಡುಕೂಸು ಸಹ ಇದ್ದರು ಆತನು ಸಾಯುವಾಗ್ಗೆ ಹೆಂಡತಿಯು ವ್ಯಸನದಿಂದ "ನನಗೇನು ಹೇಳುತ್ತೀರಿ" ಎಂದು ಗಂಡನನ್ನು ಕೇಳಲು, ಅವನು "ಆ ಹುಡುಗನನ್ನು ನೋಡಿಕೊಂಡಿರುತ್ತೀಯಾ?" ಎಂದು ಹೇಳಿ ಪ್ರಾಣಬಿಟ್ಟನು ಈ ಮಾತನ್ನು ಕೇಳಿ ಆ ಹೆಂಗಸು ಸುಮ್ಮನೆ ಹೊರಕ್ಕೆ ಹೋಗಿ ಹತ್ತಿರ ಇದ್ದ ಆಳವಾದ ಸೇದುವ ಭಾವಿಯಲ್ಲಿ ಬಿದ್ದು ಪ್ರಾಣಬಿಟ್ಟಳು ಮಾರನೇ ದಿನ ಆಕೆಯ ಶವವನ್ನು ಭಾವಿಯಿಂದ ತೆಗೆದು ಗಂಡಹೆಂಡರ ಶವಗಳನ್ನು ಒಂದೇ ವಿಮಾನದಲ್ಲಿ ಕುಳ್ಳಿರಿಸಿ ಬಹಳ ವಿಜೃಂಭಣೆಯಿಂದ ಮೆರವಣಿಗೆ ಮಾಡಿ ನಂತರ ದಫನ್ ಮಾಡಿದರು

ಮೈಸೂರು ಗೆಜೆಟ್ ಸಂಗ್ರಹ

ಮಿ|| ಎಲ್ ಪಿ ಕೆಂಟ್ ಯವರನ್ನು ಕಡೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿದೆ

ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಅ|| ಆಫೀಸರ್‌ರಾದ ಮ|| ಪಿ ಗೋಪಾಲರಾಜೆ ಅರಸಿನವರಿಗೆ ಮೇ ತಾ 1 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ|| ಮಹಮ್ಮದ್ ಜಹಿರುದ್ದೀನ್ ಮೊಕ್ಕೆಯವರು ರಜದಿಂದ ಕೂಡಲೇ ಒಂದು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು

ಕಾವೇರಿ ತಲಾವ್ ಕಾಮಗಾರಿಯ ಸ್ಪೆಷಲ್ ಡಿಪ್ಟಿ ಅಮಲ್ದಾರ್ ಮ|| ಸಿ ಬಿ ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರ್ ಮ|| ಟಿ ವೆಂಕಟರಾಮಯ್ಯನವರು ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಮ|| ಬಿ ರಾಮಸ್ವಾಮಯ್ಯನವರಿಗೆ ಏಪ್ರೆಲ್ ತಾ 27 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಬೆಂಗಳೂರು ಸಿಟಿ ಹೆಲ್ತ್ ಆಫೀಸರ್ ಮ|| ಆರ್. ಸುಬ್ಬರಾಯರು ವೈಸ್ ಪ್ರೆಸಿಡೆಂಟ್ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು

ಯುವರಾಜರವರ ಪರ್ಸನಲ್ ಅಸಿಸ್ಟೆಂಟ್ ಮ ಎಂ ಎ ಸಿಂಗ್ರಾಚಾರ್ಯರಿಗೆ ಏಪ್ರೆಲ್ ತಾ 17 ರಿಂದ ಮೂವತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ದಿವಾನ್‌ರವರ ಪ್ರೈವೆಟ್ ಸೆಕ್ರೆಟರಿ ಮ|| ಎಸ್ ಹಿರಿಯಣ್ಣಯ್ಯನವರಿಗೆ ಏಪ್ರೆಲ್ ತಾ 27 ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ|| ಬಿ ರಾಗಪ್ಪನವರನ್ನು 1912 ನೇ ನವಂಬರ್ ತಾ 10 ರಿಂದಲೂ, ಮ|| ಬಿ ಸುಬ್ಬಣ್ಣನವರನ್ನು 1913 ನೇ ನವಂಬರ್ ತಾ 26 ರಿಂದಲೂ ಸಬ್ ಜಡ್ಜಿಗಳಾಗಿ ಖಾಯಂ ಮಾಡಿದೆ

ಚಿತ್ರದುರ್ಗದ ಮುನ್ಸಿಫ್ ಮ|| ಟಿ ವೆಂಕೋಬರಾಯರನ್ನು ಚೀಫ್ ಕೋರ್ಟಿನ ಡೆಪ್ಟಿ ರೆಜಿಸ್ಟ್ರಾರಾಗಿ ನೇಮಕಮಾಡಿದೆ

ಗವರ್ನ್‌ಮೆಂಟ್ ಡೆಪ್ಟಿ ಸೆಕ್ರೆಟರಿ ಮ|| ಡಿ ಎಂ ನರಸಿಂಗರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗವರ್ನ್‌ಮೆಂಟಿನ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಬದಲಿ ನೇಮಕನಾಗಿರುತ್ತಾರೆ

ಮುಂದೆ ಹೇಳುವವರನ್ನು ಎರಡು ವರುಷಗಳ ವರೆಗೆ ಹಂಗಾಮಿ ಓವರ್ಸಿಯರುಗಳಾಗಿ ನೇಮಿಸಿಕೊಂಡು ಕಾವೇರಿ ತಲಾವ್ ಕಾಮಗಾರಿಯ 4 ನೇ ಅಕ್ಕಿಹೆಬ್ಬಾಳ್ ಡಿವಿಜನ್‌ಗೆ ವರ್ಗಮಾಡಿದೆ—(1) ಮ ಪಿ ಎಂ ಶಂಕರರಾಮಸ್ವಾಮಿ ಅಯ್ಯರವರು ತಲಬು ರೂ 100, ಮ ಡಿ ಧರ್ಮರಾಜ ಅಯ್ಯರ್ ತಲಬು ರೂ 80

ಮ|| ಕೆ ಕೃಷ್ಣಯ್ಯಂಗಾರ್ಯರು ರೈಲ್ವೆ ಇಲಾಖಾ ಸೆಕ್ರೆಟರಿ ಕೆಲಸದ ಛಾರ್ಜನ್ನೂ, ಮ|| ಡಿ ಜಿ ದಾಣಿಯವರೂ, ಮಿ|| ಎಚ್ ಡಿ ರೈಸ್‌ಯವರೂ ರೈಲ್ವೆ ಕಾಮಗಾರಿಗಳ ಛಾರ್ಜನ್ನೂ ಮಿ|| ಇ ಎ ಎಸ್ ಬೆಲ್‌ರವರಿಂದ ಏಪ್ರೆಲ್ ತಾ 21 ರಲ್ಲಿ ವಹಿಸಿಕೊಂಡಿದಾರೆ

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿ ದೇಶೀಯ ದೊಡ್ಡ ಮನುಷ್ಯರು ಒಂದು ಸ್ವದೇಶೀ ಜಹಜಿನ ಕಂಪನಿಯನ್ನು ಪ್ರಾರಂಭಿಸುವವರಾಗಿದಾರೆ ಈ ಕಂಪನಿಯ ಕೆಲಸವನ್ನೆಲ್ಲಾ ನಿಪುಣನಾದ ಒಬ್ಬ ಜಪಾನ್ ಅಧಿಕಾರಿಯಿಂದ ಮಾಡಿಸುವರು ಜಹಜುಗಳು ಅಲ್ಲಿಂದ ಮದರಾಸಿಗೂ, ರಂಗೂನಿಗೂ ಹೋಗಿಬರುತ್ತವೆ

* * *

ಮದರಾಸ್ ಪಟ್ಟಣದಲ್ಲಿ ಸಣ್ಣ ಹುಡುಗರು ಬೀಡಿ ಸಿಗರೆಟ್ಟುಗಳನ್ನು ಸೇದುವುದು ಹೆಚ್ಚುತ್ತಾ ಬಂದಿರುವುದನ್ನು ಕಂಡು, ಈ ದುರಭ್ಯಾಸವನ್ನು ತಪ್ಪಿಸುವುದಕ್ಕೆ ಒಂದು ಕಾನೂನ್ ಮಾಡಿ ಜಾರಿಗೆ ತರಬೇಕೆಂದು ಅಲ್ಲಿನ ಮುತ್ಯಾಲಪೇಟೆ ಮುಸಲ್ಮಾನ್ ಅಂಜುಮನ ಸಂಘದವರು ಮದರಾಸ್ ಗವರ್ನ್‌ಮೆಂಟಿನವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಒಪ್ಪಿಸಿರುತ್ತಾರೆ

* * *

ವೈಸ್‌ರಾಯ್ ಪ್ರಭುಗಳು ಮೊನ್ನೆ ಸೋಮವಾರ ಸಿಂಲಾ ಪಟ್ಟಣಕ್ಕೆ ದಯಮಾಡಿದರು ಹೋಗುತ್ತಾ ದಾರಿಯಲಿ ಒಂದು ದಿನ ಡೆಹಲಿ ನಗರದಲ್ಲಿದ್ದು ಹೊಸ ರಾಜಧಾನಿಯ ಕಾಮಗಾರಿ ವಿಚಾರಗಳನ್ನು ಪರಾಂಬರಿಸಿದರು ಅವರು ಮುಂದೆ ಅಕ್ಟೋಬರ್ ತಿಂಗಳಲ್ಲಿ ಷಿಲ್ಲಾಂಗ್ ಮತ್ತು ಮಣಿಪುರಗಳಲ್ಲೂ, ನೊವೆಂಬರಿನಲ್ಲಿ ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೆ, ರಂಗೂನ್ ಮುಂತಾದ ನಗರಗಳಲ್ಲೂ ಸಂಚಾರ ಮಾಡಿಕೊಂಡು ಬರುವವರಾಗಿದಾರೆ

* * *

ವಾಯುವ್ಯ ರೈಲ್ವೆ ಗಾಡಿಗಳಲ್ಲಿ ಒಬ್ಬ ಸಿಂಧಿಯು 11 ಚೀಲಗಳ ಗೋಧಿಯನ್ನು ಕದ್ದದ್ದಕ್ಕೆ ಮ್ಯಾಜಿಸ್ಟ್ರೇಟರು ಅವನಿಗೆ 6 ತಿಂಗಳ ಕಠಿಣಸಜಾ ವಿಧಿಸಿದರು ಆ ಸಿಂಧಿಯು ತಾನು 70 ವರುಷದ ಮುದುಕನೆಂದೂ, ಇದು ವರೆಗೆ ಕಳುವನ್ನೂ ಮಾಡಿದವನಲ್ಲವೆಂದೂ, ಆ ಶಿಕ್ಷೆಯನ್ನು ಮಾಫಮಾಡಿಕೊಡದಿದ್ದರೆ ಕಡಮೆಯಾದರೂ ಮಾಡಿಕೊಡಬೇಕೆಂದೂ ಅಪೀಲ್ ಮಾಡಿಕೊಂಡನು ಸರಾಜಿಯ ಜಡ್ಜಿಗಳು ಇಂಥಾ ರೈಲ್ವೆ ಗಾಡಿಗಳಲ್ಲಿ ನಡೆಯುವ ಕಳುವನ್ನು ನಿಲ್ಲಿಸಬೇಕೆಂದು ಹೇಳಿ ಅವನಿಗೆ ಆಗಿದ್ದ ಆರು ತಿಂಗಳ ಸಜವನ್ನು ಹದಿನೆಂಟು ತಿಂಗಳಿಗೆ ಜಾಸ್ತಿ ಮಾಡಿದರು

* * *

ಪಂಜಾಬ್ ಅಧಿಪತ್ಯದ ಅರಾಜಕಗುಂಪಿನವರನ್ನು ಸರ್ಕಾರದವರು ಹಿಡಿದು ದರ್ಯಾಫ್ತುಮಾಡುತ್ತಿದಾರೆ ಇದುವರೆಗೆ ಅವರು ಅಪರಾಧಿಗಳಾದ ಇಬ್ಬರಿಗೆ ಕ್ಷಮಾಪಣೆಯ ವಾಗ್ದಾನವನ್ನು ಕೊಟ್ಟು, ಅವರ ಮೂಲಕ ಅರಾಜಕಗುಂಪಿನವರ ಕೃತ್ಯಗಳನ್ನು ತಿಳಿದುಕೊಳ್ಳುತ್ತಿರುವರು ಈಗ ರಾವಲ್‌ಪಿಂಡಿಯ ಪೋಲೀಸಿನವರು ನೂರಪುರದ ಜಾತ್ರೆಯಲ್ಲಿ ಒಬ್ಬ ಸನ್ಯಾಸಿಯನ್ನು ಅನುಮಾನದ ಮೇಲೆ ದಸ್ತಗಿರಿಮಾಡಿ, ಅವನೇ ರಾಷ್‌ಬಿಹಾರಿ ಬೋಸನೆಂದು ಹೇಳುತ್ತಾರೆ ಇದುವರೆಗೆ ನಡೆದಿರುವ ವಿಚಾರಣೆಯಲ್ಲಿ ರಾಷ್‌ಬಿಹಾರಿಬೋಸ್ ಎಂಬುವನೇ ಫಿತೂರಿಕೋರರ ಮುಖಂಡನೆಂದು ತಿಳಿದುಬಂದಿದೆ ಅವನು ಬಹುಕಾಲದಿಂದ ಸಿಕ್ಕದೆ ತಲೆತಪ್ಪಿಸಿಕೊಂಡಿರುವನು ಈ ಫಿತೂರಿ ಗುಂಪಿಗೆ ಸೇರಿದವರೇ ಡೆಹಲಿ ವಿಡಿಮದ್ದಿನ ಗುಂಡು ಹಾಕಿದವರೆಂದು ಊಹಿಸಲ್ಪಟ್ಟಿದೆ

ವಿದೇಶ ವೃತ್ತಾಂತಗಳು.

ಅಮೇರಿಕಕ್ಕೆ ಸೇರಿದ ವರ್ಜಿನಿಯಾ ಡಿಸ್ಟ್ರಿಕ್ಟಿನಲ್ಲಿ ಎಕ್ಲಿಸ್ ಎಂಬ ಸ್ಥಳದಲ್ಲಿ ಕಲ್ಲಿದ್ದಲು ತೆಗೆಯುವ ಗಣಿಯೊಳಗೆ ಬೆಂಕಿ ಹುಟ್ಟಿ ಮಹಾ ಶಬ್ದದೊಡನೆ ಹಾರಿತು ಸುಮಾರು 250 ಜನ ಕೂಲಿಕಾರರು ಅದರಲ್ಲಿದ್ದು ಮೃತಪಟ್ಟರೆಂದು ತಂತೀ ವರ್ತಮಾನ ಬಂದಿದೆ

* * *

ಚೀನಾ ರಾಜ್ಯದಲ್ಲಿ ಸಮುದ್ರ ಕಳ್ಳರು ಕಿಯಾವ್ ಎಂಬ ತೀರಪಟ್ಟಣದ ಬಳಿ ನಿಂತಿದ್ದ ತಾಯಿನ್ ಎಂಬ ಇಂಗ್ಲಿಷರ ಜಹಜನ್ನು ಸುಟ್ಟುಹಾಕಿದರು. ಆ ಜಹಜಿನಲ್ಲಿದ್ದ ಪ್ರಯಾಣಿಕರೇ ಮೊದಲಾದ 158 ಜನರು ಹಾಂಕಾಂಗ್ ಪಟ್ಟಣಕ್ಕೆ ತಪ್ಪಿಸಿಕೊಂಡು ಬಂದಿದಾರೆ ಇನ್ನೂ 180 ಜನರು ಏನಾದರೋ ತಿಳಿಯಲಿಲ್ಲ

* * *

ಜರ್ಮನಿ ಚಕ್ರವರ್ತಿಯವರು ತಮ್ಮ ಸ್ವಂತ ಸಂಚಾರಕ್ಕೋಸ್ಕರ ಒಂದು ದಿವ್ಯವಾದ ಜಹಜನ್ನು ತಯಾರ್ಮಾಡಿಸಿಕೊಂಡಿದಾರೆ ಇದಕ್ಕೆ 75 ಲಕ್ಷ ರೂಪಾಯಿ ಖರ್ಚಾಗಿರುವುದು ಅದರಲ್ಲಿ 465 ಜನರು ಕುಳಿತು ಪ್ರಯಾಣ ಮಾಡಬಹುದು ಅದು ಸಮುದ್ರದಲ್ಲಿ ಮುಳುಗದ ರೀತಿ ರಚಿಸಲ್ಪಟ್ಟಿದೆ ಚಕ್ರವರ್ತಿಯವರೇ ಖುದ್ದಾಗಿ ತಯಾರ್ಮಾಡಿಸಿರುತ್ತಾರೆ

* * *

ಆಫ್ರಿಕ ಖಂಡದಲ್ಲಿ ಪೋರ್ಚುಗೀಸರಿಗೆ ಸೇರಿದ ಗಿನಿ ರಾಜ್ಯದಲ್ಲಿ ಸ್ಯಾನ್ ಸಾಲ್ವೆಡರ್, ಅಂಗೋಲ ಎಂಬ ಸ್ಥಳಗಳ ಸ್ವದೇಶಿಗಳು ಪೋರ್ಚುಗೀಸ್ ಅಧಿಪತಿಗಳ ಮೇಲೆ ತಿರುಗಿಬಿದ್ದು ದಂಗೆ ಕೃತ್ಯಗಳನ್ನು ನಡಿಸುತ್ತಿದಾರೆ 20 ಮಂದಿ ಬಿಳಿಯ ಜನರು ಕೊಲೆಯಾದರು ಗವರ್ನರನ್ನೂ ಸೈನ್ಯಗಳನ್ನೂ ಅಲ್ಲಿಂದ ಓಡಿಸಿಬಿಟ್ಟರು ಕಾರ್ಖಾನೆಗಳನ್ನು ಸುಟ್ಟುಹಾಕುತ್ತಿದಾರೆ

* * *

ಟರ್ಕಿ ರಾಜ್ಯದಲ್ಲಿ ನಾವೆಯ ಸೈನ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಸರ್ಕಾರದವರೂ ಪ್ರಜೆಗಳೂ ಸಾಹಸಪಡುತ್ತಿದಾರೆ ಅದಕ್ಕಾಗಿ ಒಂದು ಫಂಡು ಏರ್ಪಾಡಾಗಿರುವುದು ಈ ಫಂಡಿಗೆ ಪ್ರಜೆಗಳು ಇದುವರೆಗೆ 3,17,50,000 ರೂಪಾಯಿ ಚಂದಾ ಕೊಟ್ಟಿರುವರು ಸರ್ಕಾರದವರು ತಮ್ಮ ಹಣವನ್ನೂ ಅದಕ್ಕೆ ಸೇರಿಸಿ ಇಂಗ್ಲಾಂಡಿನಲ್ಲೂ, ಫ್ರಾನ್ಸಿನಲ್ಲೂ ಕೆಲಕೆಲವು ಜಹಜುಗಳನ್ನು ತಯಾರ್ಮಾಡಿಸುತ್ತಿದಾರೆ

* * *

ಆಕಾಶ ಬುಟ್ಟಿಯಲ್ಲಿ ಮೂರು ಮಂದಿ ಜರ್ಮನಿಯವರು ಪರ್ಮ್ ಎಂಬ ರಾಜ್ಯಕ್ಕೆ ಹೋಗಿ ಇಳಿದರು ಇವರು ಕೋಟೆಕೊತ್ತಲಗಳನ್ನು ನೋಡಿಕೊಂಡು ಹೋಗುವುದಕ್ಕೋಸ್ಕರ ಗೂಢಚಾರರಾಗಿ ಬಂದಿದಾರೆಂದು ರಷ್ಯಾ ಸರ್ಕಾರದವರು ತಿಳಿದು ಅವರನ್ನು ಹಿಡಿದು ದರ್ಯಾಫ್ತು ಮಾಡಿ ತಲಾ ಆರು ತಿಂಗಳಂತೆ ಸಜಾ ವಿಧಿಸಿದರು ಈ ಸುದ್ದಿಯು ಜರ್ಮನಿಯವರಿಗೆ ತಿಳಿದು ಅವರಲ್ಲಿ ರಷ್ಯಾದವರ ಮೇಲೆ ಮನಸ್ತಾಪವನ್ನು ಹುಟ್ಟಿಸಿದೆ

* * *

ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಸ್ವತಂತ್ರ ಅಧಿಪತ್ಯಗಳೊಳಗೆ ಹಿಂದುಸ್ಥಾನದ ಗಂಡಸರೇ ವಿಶೇಷವಾಗಿರೋಣದರಿಂದ ಅವರಲ್ಲಿ ದುರಾಗತ ಕಾರ್ಯಗಳು ಹೆಚ್ಚಾಗಿ ನಡೆಯುತ್ತಿವೆ ಎಂದೂ, ಇದನ್ನು ಪರಿಹರಿಸಬೇಕೆಂದೂ ಚರ್ಚೆಯಾಯಿತು ಇನ್ನು ಮುಂದೆಕ್ಕೆ ಹಿಂದುಸ್ಥಾನದ ಹೆಂಗಸರನ್ನು ಶಕ್ಯ ಮಟ್ಟಿಗೆ ಹೆಚ್ಚಾಗಿ ಆ ಸ್ಥಳಗಳಿಗೆ ಕಳುಹಿಸುವ ಥರದಲ್ಲಿ ಏರ್ಪಾಟುಮಾಡುತ್ತೇವೆಂದು ಸ್ಟೇಟ್ ಸೆಕ್ರೆಟರಿಯವರು ತಿಳಿಸಿದಾರೆ

* * *

ದಕ್ಷಿಣ ಅಮೇರಿಕಕ್ಕೆ ಸೇರಿದ ಪುಟುಮೆಯೊ ಎಂಬ ಪ್ರಾಂತ್ಯದಲ್ಲಿ ಬಿಳಿಯ ಜನರು ದೇಶೀಯ ಒರಟುಜನರನ್ನು ನಾನಾ ಪ್ರಕಾರವಾದ ಕ್ರೂರಹಿಂಸೆಗಳಿಗೆ ಗುರಿಮಾಡಿ ಅವರಿಂದ ರಬ್ಬರ್ ಎಂಬ ಅಂಟನ್ನು ಗಿಡಗಳಿಂದ ತರಿಸಿಕೊಳ್ಳುತ್ತಿದ್ದದ್ದು ಪ್ರಪಂಚಕ್ಕೆ ಗೋಚರವಾಯಿತು ಇಂಗ್ಲಿಷ್ ಮತ್ತೂ ಇತರ ನಾಗರಿಕ ಪ್ರಜೆಗಳು ಅಲ್ಲಿನ ವಿದ್ಯಮಾನಗಳನ್ನು ಗೊತ್ತುಮಾಡುವುದಕ್ಕೆ ಕೆಲವು ಪ್ರತಿನಿಧಿಗಳನ್ನು ನೇಮಿಸಿ ಕಳುಹಿಸಿಕೊಟ್ಟರು ಈ ಪಂಚಾಯಿತಿಯವರು ಅಲ್ಲಿ ನಡೆಯುವ ವಿಚಾರಗಳನ್ನೆಲ್ಲಾ 310 ಪುಟಗಳುಳ್ಳ ಪುಸ್ತಕದಲ್ಲಿ ವಿವರಿಸಿ ಬರೆದು ಇದಾರೆ, 82 ಮಂದಿಯನ್ನು ಅವರ ತೀರ್ಮಾನದಂತೆ ದಸ್ತಗಿರಿ ಮಾಡಿರುವರು

* * *

ಬವೇರಿಯ ಸಂಸ್ಥಾನಕ್ಕೆ ಮುಖ್ಯ ಪಟ್ಟಣವಾದ ಮ್ಯೂನಿಚ್ ನಗರದಲ್ಲಿ ಒಂದು ಪರಮಾಶ್ಚರ್ಯಕರವಾದ ಮೊಕದ್ದಮೆ ನಡೆಯಿತು ಪಾರ್ಟೆನ್‌ಕಿರ್ಚನ್ ಎಂಬ ಸ್ಥಳದಲ್ಲಿ ಒಬ್ಬ ಉಪಾಧ್ಯಾಯಿನಿಯು ಎಲ್ಲಿ ವಾಸಮಾಡಬೇಕು ಎಂಬ ವಿಚಾರವಾಗಿ ಮ್ಯುನಿಸಿಪಲ್ ಮೆಂಬರುಗಳು ಚರ್ಚೆಮಾಡುವಾಗ್ಗೆ ಅವರು ಆಕೆಗೆ ಅಪಮಾನಕರವಾದ ಸಂಗತಿಗಳನ್ನು ನುಡಿದರು ಆಕೆ ಮೆಂಬರುಗಳನ್ನೆಲ್ಲಾ ಅಪರಾಧಿ ಸ್ಥಾನಕ್ಕೆ ಸೇರಿಸಿ ಅವರ ಮೇಲೆ ಫಿರ್ಯಾದು ತಂದಳು ಅಪರಾಧ ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಆ ಮೆಂಬರುಗಳ ಪೈಕಿ ಮುಖಂಡನಾಗಿದ್ದವನಿಗೆ ಮೂರು ದಿನವೂ, ಉಳಿದವರಿಗೆಲ್ಲಾ ಎರಡೆರಡು ದಿನವೂ ಸಜಾ ವಿಧಿಸಿದರು

* * *

ರಷ್ಯಾ ಚಕ್ರಾಧಿಪತ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ನಗರದಲ್ಲಿ ಕೋಟ್ಯಾಧೀಶ್ವರನಾಗಿದ್ದ ಎಂ ಐವಾನ್ ಸೊಫೊನಾರ್ವ್‌ಸ್ಕಿ ಎಂಬಾತನು ಈಗತಾನೇ ಕಾಲವಾದನು ಅವನು ಬದುಕಿದ್ದಾಗ್ಗೆ ಅವನಿಗೆ ಈಗಿನ ನವನಾಗರಿಕ ಕಾರ್ಯಗಳನ್ನೂ ಏರ್ಪಾಟುಗಳನ್ನೂ ಕಂಡರಾಗುತ್ತಿರಲಿಲ್ಲ ಒಂದು ಮೋಟರ್ ಗಾಡಿಯನ್ನೂ ಹತ್ತಿದವನಲ್ಲ ಹಿರಿಯರ ಆಚರಣೆಯಲ್ಲೇ ತೃಪ್ತಿಪಟ್ಟುಕೊಂಡಿದ್ದನು ಇಂಥಾ ಮನುಷ್ಯನು ಮೃತಪಟ್ಟ ಮೇಲೆ ಆತನ ಮರಣಶಾಸನವನ್ನು ತೆಗೆದು ಓದಿದಾಗ ಅದರಲ್ಲಿ ಯಾವ ಕಾರೇಗಾರನು ತನ್ನ ಶವವನ್ನು ವಿಮಾನ ಯಂತ್ರದಲ್ಲಿಟ್ಟುಕೊಂಡು ಹೋಗಿ ಸಮಾಧಿಸ್ಥಾನದಲ್ಲಿ ಇಳಿಸುತ್ತಾನೆಯೋ ಅವನಿಗೆ ತನ್ನ ಆಸ್ತಿಯಲ್ಲಿ ಮೂರು ಲಕ್ಷ ರೂಪಾಯಿ ಬಹುಮಾನ ಕೊಡಬೇಕು ಎಂದು ಬರೆದಿಟ್ಟಿದ್ದನು ಆತನ ದಾಯಾದಿಗಳೇ ಮುಂತಾದವರು ಈ ಶಾಸನವನ್ನು ಓದಿ ಆಶ್ಚರ್ಯಪಟ್ಟು, ಆತನ ಇಷ್ಟಾರ್ಥವನ್ನು ನೆರವೇರಿಸಬೇಕೆಂದು ಹೇಳಿದರು ವಿಮಾನಗಳಲ್ಲಿ ಸಂಚರಿಸಬಲ್ಲ ಪೊಸಿಫ್ ಎಂಬ ಪ್ರಾಯಶಃಮಧ್ಯನು ಹೋಗಿ ತಾನು ಮೃತನ ಅಭಿಮತವನ್ನು ನಡಿಸುತ್ತೇನೆಂದು ಒಪ್ಪಿ, ಶವವನ್ನು ವಿಮಾನದಲ್ಲಿಟ್ಟುಕೊಂಡು ಅಂತರಿಕ್ಷಮಾರ್ಗದಲ್ಲೇ ಸಮಾಧಿಯ ತನಕ ಸಾಗಿಸಿಕೊಂಡು ಹೋದನು ಇಳಿಯುವಾಗ್ಗೆ ಏನೋ ಅಪಾಯಕಾರ್ಯವಾಯಿತು. ಆ ಕಾರೇಗಾರನು ಯಂತ್ರಸಹಿತ ಧೊಪ್ಪನೆ ಬಿದ್ದು ಗಾಯವಾಗಿ ಕಡೆಗೆ ಸತ್ತುಹೋದನು ಆದರೂ ಮೃತನ ಸಂಬಂಧಿಗಳು ಈ ಕಾರೇಗಾರನಿಗೆ ಅಷ್ಟು ದ್ರವ್ಯವನ್ನೂ ಪಾವತಿಮಾಡಿ ಬಿಟ್ಟರು

ರಾಜಧಾನಿಯ ಸಿವಿಲ್ ಆಸ್ಪತ್ರೆ.

ಮೈಸೂರು ಸೆಷನ್ಸ್ ಜಡ್ಜರವರ ಅಭಿಪ್ರಾಯ

ಕೆಲವು ದಿನಗಳ ಹಿಂದೆ ರಾಜಧಾನಿಯ ಹಳೇ ಅಗ್ರಹಾರದಲ್ಲಿ ಒಬ್ಬ ಕಳ್ಳನು ಕಡುಬು ಮಾರುವ ಒಬ್ಬ ಹೆಂಗಸನ್ನು ಅವಳ ಅಂಗಡಿ ಮನೆಯಲ್ಲಿ ಹೊಡೆದು ಕೆಡವಿ ಕಳುವುಮಾಡಿ ಹಿತ್ತಲ ಬಾಗಿಲ ಕಡೆಯಿಂದ ತಲೆತಪ್ಪಿಸಿಕೊಂಡು ಓಡಿ ಹೋಗುತ್ತಿರುವಾಗ್ಗೆ ಪೊಲೀಸಿನವರೇ ಮುಂತಾದವರು ಅವನನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು, ಅವನು ಆ ಹೆಂಗಸನ್ನು ಮರಣಕರವಾಗಿ ಗಾಯಮಾಡಿ ಕಳುವುಮಾಡಿದನೆಂದು ಮೊಕದ್ದಮೆ ತಂದರು ಗಾಯಪಟ್ಟ ಹೆಂಗಸನ್ನು ಚಿಕಿತ್ಸೆಗಾಗಿ ಇಲ್ಲಿನ ಜನರಲ್ ಆಸ್ಪತ್ರೆಗೆ ಕಳುಹಿಸಿಕೊಟ್ಟರು ಆ ಹೆಂಗಸು ಆಸ್ಪತ್ರೆಯಲ್ಲಿ ಸತ್ತುಹೋದಳು

ಈ ಮೊಕದ್ದಮೆಯನ್ನು ಮೈಸೂರು ಸೆಷನ್ಸ್ ಜಡ್ಜಿಗಾದ ಮಿ॥ ವಿಾರ್ ಹಂಜಾ ಹುಸೇನ್‌ರವರು ದರ್ಯಾಫ್ತುಮಾಡಿ, ಮೇಲ್ಕಂಡ ಅಪರಾಧಿಗೆ ಜೀವಾಂತ್ಯದವರೆಗೆ ಸಜಾ ಶಿಕ್ಷೆಯನ್ನು ವಿಧಿಸಿ, ಆ ಜಡ್ಜಮೆಂಟಿನಲ್ಲಿ ಮೇಲ್ಕಂಡ ಆಸ್ಪತ್ರೆಯೊಳಗೆ ನಡೆದ ವಿದ್ಯಮಾನಗಳನ್ನು ಕುರಿತು ಬರೆದಿರುವುದೇನೆಂದರೆ—

ಕಾನೂನ್ ಪ್ರಕಾರ ಮಾಜಿಸ್ಟ್ರೇಟರು ಮೃತಪಟ್ಟವಳ ಕೈಫಿಯತ್ತನ್ನು ಬರೆದಿಡಲಿಲ್ಲ ಇದಕ್ಕೆ ಕಾರಣವೇನೆಂದರೆ ಆಸ್ಪತ್ರೆಯ ಅಧಿಕಾರಿಗಳು ಆ ಹೆಂಗಸಿಗೆ ಎಂಥಾ ಗಾಯಗಳಾಗಿದ್ದವೆಂಬುವುದನ್ನು ಪರೀಕ್ಷೆಮಾಡಿ ಗೊತ್ತುಮಾಡಿರಲಿಲ್ಲ, ಮತ್ತು ಅವಳ ಸ್ಥಿತಿಯನ್ನು ಅವರು ಪೊಲೀಸಿನವರಿಗೆ ತಿಳಿಸಲಿಲ್ಲ ಇನ್ನೂ ವಿಶೇಷವೇನೆಂದರೆ ಅವಳು ಮೃತಪಟ್ಟಳೆಂಬ ಸುದ್ದಿಯು ಆಸ್ಪತ್ರೆಯ ಛಾರ್ಜನ್ನು ವಹಿಸಿದ್ದ ವೈದ್ಯರಿಗೆ ಸತ್ತ ಮೂರು ಗಂಟೆಗಳಾದ ಮೇಲೆ ತಲಪಿರುತ್ತದೆ. (ಶವವನ್ನು ಕತ್ತರಿಸಿ ಪರೀಕ್ಷೆಮಾಡಿದ) ಸಬ್ ಅ॥ ಸರ್ಜನ್ ಮ॥ ಕೃಷ್ಣಯ್ಯಂಗಾರ್ರು ತಮ್ಮ ಕೈಫಿಯತ್ತಿನಲ್ಲಿ ಸರಿಯಾದ ಚಿಕಿತ್ಸೆ ನಡೆದಿದ್ದರೆ ಆ ಹೆಂಗಸಿಗೆ ಗಾಯವುಂಟಾದದ್ದು ವಾಸಿಯಾಗಿ ಅವಳು ಬದುಕಿಕೊಳ್ಳುತ್ತಿದ್ದಳು ಎಂದು ಹೇಳುತ್ತಾರೆ ಬಾಲಕೃಷ್ಣರಾವ್ ಮತ್ತು ಆಸೀವಾಲಾ ಎಂಬಿಬ್ಬರು ಸಬ್ ಅ॥ ಸರ್ಜನ್‌ರುಗಳ ಕೈಫಿಯತ್ತಿನಿಂದ ಮೃತಪಟ್ಟವಳನ್ನು ಆಸ್ಪತ್ರೆಯಲ್ಲಿ ಸರಿಯಾದ ರೀತಿ ಪರೀಕ್ಷೆ ಮಾಡಿನೋಡಲಿಲ್ಲವೆನ್ನುವುದೂ, ಅವಳ ಖಾಯಿಲೆ ಎಂಥಾದ್ದೆಂದು ಕಂಡುಹಿಡಿಯಲಿಲ್ಲವೆನ್ನುವುದೂ ಸ್ಪಷ್ಟವಾಗುತ್ತದೆ ಬಹಳ ಚೆನ್ನಾಗಿ ನಡೆಸಲ್ಪಡುತ್ತಿರುವ, ಮೈಸೂರಿನಲ್ಲಿರುವಂಥಾ ಆಸ್ಪತ್ರೆಯೊಳಗೆ, ಮೃತಪಟ್ಟವಳ ಶರೀರದಲ್ಲಿದ್ದ ಈ ಸಾಮಾನ್ಯವಾದ ಗಾಯಗಳ ಸ್ಥಿತಿಯನ್ನು ಗೊತ್ತುಮಾಡದೆ ಹೋದದ್ದು ಹ್ಯಾಗೋ ವಿಸ್ಮಯವನ್ನುಂಟುಮಾಡತಕ್ಕದ್ದಾಗಿದೆ ಈ ವಿಚಾರವು ಅದಕ್ಕೆ ಸಂಬಂಧಪಟ್ಟ ಇಲಾಖೆಯವರಿಂದ ತನಿಖೆ ಮಾಡಲ್ಪಡಬೇಕು"

ಈ ರೀತಿ ಸೆಷನ್ಸ್ ಜಡ್ಜರವರು ಅಭಿಪ್ರಾಯಪಟ್ಟಿದ್ದರ ಮೇಲೆ ವೈದ್ಯ ಇಲಾಖೆಯ ಮುಖ್ಯಾಧಿಕಾರಿಗಳು ಆಸ್ಪತ್ರೆಯವರಿಗೆ ಬರೆದು ಅವರ ಸಮಾಧಾನವನ್ನು ಕೇಳಿರುತ್ತಾರೆ ಆಸ್ಪತ್ರೆಯ ಅಧಿಕಾರಿಗಳು ಅದಕ್ಕೆ ಹೇಳುವ ಸಮಾಧಾನವನ್ನು ಸರ್ಕಾರದವರು ಪ್ರಕಟಮಾಡುವುದು ಈ ಆಸ್ಪತ್ರೆಯ ಯಶಸ್ಸಿಗೆ ಹಿತಕರವಾಗಿದ್ದೀತೆಂದು ಪ್ರಜೆಗಳು ನಿರೀಕ್ಷಿಸುವರು

ಆಸ್ಪತ್ರೆಗಳ ಪ್ರಯೋಜನ

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸ್ಯಾನಿಟರಿ ಆಫೀಸರು ಮ॥ ವಿ ಮುತ್ತುಸ್ವಾಮಿದಾಸ್‌ರವರು ಈ ಮೂಲಕ ಗ್ರಾಮವಾಸಿಗಳಿಗೆಲ್ಲಾ ತಿಳಿಯಪಡಿಸುವುದೇನೆಂದರೆ—

ಎಲ್ಲಾ ಭಾಗಗಳಲ್ಲೂ ಆರೋಗ್ಯಭಾಗ್ಯವೇ ಪ್ರಧಾನ್ಯವೆಂದು ನೀತಿಯು ಹೇಳುವುದು ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳ ಆರೋಗ್ಯವನ್ನು ವೃದ್ಧಿಪಡಿಸಿಕೊಂಡು ಸದಾ ಸುಖಿಗಳಾಗಿರಬೇಕೆಂಬ ಉದ್ದಿಶ್ಯ ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ವೈದ್ಯಶಾಲೆಗಳನ್ನು ಏರ್ಪಡಿಸಿರುವರು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಲ್ಲಿಯೂ ಮತ್ತು ದೊಡ್ಡ ಸ್ಥಳಗಳಲ್ಲಿಯೂ ಲೋಕಲ್ ಫಂಡ್ ಆಸ್ಪತ್ರೆಗಳನ್ನೂ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಸಿವಿಲ್ ಆಸ್ಪತ್ರೆಗಳನ್ನೂ ಮತ್ತು ಸಂಸ್ಥಾನದ ಮುಖ್ಯ ಪಟ್ಟಣಗಳಾದ ಬೆಂಗಳೂರು, ಮೈಸೂರುಗಳಲ್ಲಿ ವಿಕ್ಟೋರಿಯಾ ಆಸ್ಪತ್ರೆ ಮತ್ತು ಜನರಲ್ ಆಸ್ಪತ್ರೆಗಳೆಂಬ ದೊಡ್ಡ ಆಸ್ಪತ್ರೆಗಳನ್ನೂ ಪ್ರಜೆಗಳ ಅನುಕೂಲಕ್ಕಾಗಿ ಏರ್ಪಡಿಸಿರುವರು ಇಂಥಾ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದರೂ ಗ್ರಾಮವಾಸಿಗಳು ತಮಗೆ ಏನಾದರೂ ಖಾಯಿಲೆ ಇದ್ದಲ್ಲಿ ತಕ್ಕ ಸ್ಥಳಕ್ಕೆ ಹೋಗಿ ಇಲಾಜು ಮಾಡಿಕೊಳ್ಳೋಣವೆಂಬ ಯೋಚನೆ ಅವರಿಗೆ ಹುಟ್ಟುವುದಿಲ್ಲ ಇದಕ್ಕೆ ಕಾರಣವೇನೆಂದರೆ ಆಸ್ಪತ್ರೆಗೆ ಹೋದರೆ ಅವರನ್ನು ಕೊಯ್ಯುವರೆಂಬ ಭೀತಿಯು ಎಲ್ಲಾ ಕಡೆಗಳಲ್ಲೂ ರೂಢಿಯಲ್ಲಿರುವುದು ಇದು ತಪ್ಪು ತಿಳುವಳಿಕೆ ಖಾಯಿಲೆಗಳಲ್ಲಿ ಅನೇಕ ತರಹಾಗಳು ಇರುವವು ಕೆಲವು ಔಷಧಿಯಿಂದಲೇ ಗುಣವಾಗುವವು, ಕೆಲವು ಶಸ್ತ್ರದಿಂದ ಗುಣಹೊಂದುವವು, ಕೆಲವು ಇವೆರಡರಿಂದಲೂ ಗುಣವಾಗುವವು ಹೀಗಿರುವಲ್ಲಿ ಡಾಕ್ಟರು ಏನು ಮಾಡಿಯಾರು? ಶಸ್ತ್ರ ಹಾಕುವ ಖಾಯಿಲೆ ಆಗಿದ್ದರೆ ಹಾಗೆ ಮಾಡಬೇಕೆಂದು ಹೇಳುವರು ಅದಕ್ಕೆ ಒಪ್ಪದಿದ್ದರೆ ಮನೆಗೆ ಹೋಗಿ ಎಂದು ಹೇಳುವರು ಬಲವಂತದಿಂದ ರೋಗಿಯನ್ನು ಹಿಡಿದು ಶಸ್ತ್ರ ಹಾಕುವರೆಂದು ಹೇಳುವುದೂ, ತಿಳಿದಿರುವುದೂ ಶುದ್ಧ ಅಪದ್ಧವಾದ ವಿಷಯವಾಗಿದೆ ತಾಲ್ಲೂಕು ಆಸ್ಪತ್ರೆಗಳಲ್ಲಿ ಸಾಧ್ಯವಾಗದ ಖಾಯಿಲೆಗಳನ್ನು ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೆ ತೆಗೆದುಕೊಂಡು ಹೋಗಬಹುದು ಅಲ್ಲಿಯೂ ಸಾಧ್ಯವಾಗದಿದ್ದರೆ ಅಲ್ಲಿನ ಸ್ಥಳೀಯ ಡಾಕ್ಟರುಗಳು ಖಾಯಿಲೆ ಸ್ಥಿತಿ ಹೀಗಿರುವುದು, ಅದಕ್ಕೆ ಏನು ಮಾಡಬೇಕೆಂಬ ತಿಳುವಳಿಕೆಯನ್ನು ಕೊಡುವರು ಒಂದು ಎರಡು ದಿನಗಳಲ್ಲಿ ಗುಣಹೊಂದಬಹುದಾದ ಖಾಯಿಲೆಗಳು ತಕ್ಕ ತಿಳುವಳಿಕೆ ಇಲ್ಲದೇನೂ, ಡಾಕ್ಟರುಗಳಿಗೆ ತೋರಿಸಿ ಅದಕ್ಕೆ ಏನು ಮಾಡಬೇಕೆಂಬ ಅಭಿಪ್ರಾಯವನ್ನು ಪಡೆಯದೇನೂ ಅನೇಕ ಖಾಯಿಲೆಗಳು ಔಷಧಿಗೂ ಮತ್ತು ಶಸ್ತ್ರವೈದ್ಯಕ್ಕೂ ಸಾಧ್ಯವಾಗದಂತೆ ಪ್ರಬಲವಾಗುವವು ಇದಕ್ಕೆ ಒಂದು ದೃಷ್ಟಾಂತವನ್ನು ಕೊಡುವೆನು

ಕೋಲಾರ್‌ಪೇಟೆ ಸಬ್ ತಾಲ್ಲೂಕಿನ ಒಂದು ಗ್ರಾಮದಲ್ಲಿ ಒಬ್ಬ ಹೆಂಗಸಿಗೆ ಹೊಟ್ಟೆಯಲ್ಲಿ ಒಂದು ತರಹವಾದ ನೀರಿನ ಗಡ್ಡೆ ಹುಟ್ಟಿತು ಇದನ್ನು ಐದು ವರುಷದ ವರೆಗೂ ಯಾವ ತರಹವಾದ ವೈದ್ಯೋಪಚಾರವೂ ಸಹ ಮಾಡದೆಹೋದ್ದರಿಂದ ಈ ಗಡ್ಡೆಯು ದಿನೇದಿನೇ ದೊಡ್ಡದಾಗಿ, ನಂತರ ಹೊಟ್ಟೆಯನ್ನು ಹೊತ್ತುಕೊಂಡು ತಿರುಗಾಡಲಿಕ್ಕೂ ಸಾಧ್ಯವಾಗದೆ ಮನೆಯಲ್ಲೇ ಇದ್ದಳು ಈಕೆಯನ್ನು ಕಂಡ ಕೆಲವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಹೋದರೆ ಗುಣವಾಗುವುದೆಂದು ಹೇಳಿದರು ಅದನ್ನು ಕೇಳಿದ ಕೂಡಲೆ ಆ ಹೆಂಗಸು ಆತುರದಿಂದ ಒಂದು ಗಾಡಿಮಾಡಿಕೊಂಡು ಆಸ್ಪತ್ರೆಗೆ ಬಂದಳು ಇವಳನ್ನು ನೋಡಿದವರು ಬಹಳ ಆಶ್ಚರ್ಯ ಪಟ್ಟರು ಈ ಆಸ್ಪತ್ರೆಯು ಸ್ಥಾಪಿತವಾದ ಲಾಗಾಯ್ತು ಇಂಥಾ ದೊಡ್ಡ ಹೊಟ್ಟೆಯುಳ್ಳವರು ಎಂದಿಗೂ ಬಂದಿರಲಿಲ್ಲ ಈಕೆಯ ಹೊಟ್ಟೆಯ ಸುತ್ತಳತೆಯು ಆರು ಅಡಿ ಇತ್ತು ಡಾಕ್ಟರು ಆಕೆಯ ಹೊಟ್ಟೆಯನ್ನು ಕೊಳವಿಯಾದ ಸೂಜಿಯಿಂದ ಚುಚ್ಚಲು, ಕುದುರೆಗೆ ನೀರು ಕುಡಿಸುವಂಥಾ ತೊಟ್ಟಿಗಳಲ್ಲಿ ಏಳು ತೊಟ್ಟಿ ನೀರು ಹೊರಗೆ ಬಂತು ಹೊಟ್ಟೆಯೊಳಗೆ ಇದ್ದ ಗಡ್ಡೆಯನ್ನು ಹಾಗೆಯೇ ಬಿಟ್ಟುಬಿಡಬೇಕಾಯಿತು ಖಾಯಿಲೆಯವಳ ಹೊಟ್ಟೆಯು ಸಣ್ಣದಾಗಿದ್ದಾಗಲೇ ಆಸ್ಪತ್ರೆಗೆ ಬಂದಿದ್ದರೆ ಇಷ್ಟು ವಿಹಾರಕ್ಕೆ ಕಾರಣವಾಗುತ್ತಿರಲಿಲ್ಲ

ಈ ಖಾಯಿಲೆಯನ್ನು ಪ್ರಕಟಿಸಲು ನನ್ನ ಉದ್ದೇಶವೇನೆಂದರೆ—ಗ್ರಾಮಾಂತರಗಳಲ್ಲಿ ಈ ತರಹವಾದ ಖಾಯಿಲೆ ಇದ್ದರೆ ಸಮೀಪದಲ್ಲಿರುವ ಆಸ್ಪತ್ರೆಗೆ ಹೋಗಿ ತೋರಿಸಿದ್ದಾದರೆ ಖಾಯಿಲೆ ಸ್ಥಿತಿಯು ಇಂಥಾದ್ದೆಂದು ತಿಳಿಸುವರು ಅದರಂತೆ ನಡೆದುಕೊಂಡದ್ದಾದರೆ ಬಹು ದಿನಗಳು ನರಳಬೇಕಾದ ಖಾಯಿಲೆಗಳು ಸ್ವಲ್ಪ ದಿನಗಳಲ್ಲೇ ತಕ್ಕ ಚಿಕಿತ್ಸೆಯನ್ನು ಹೊಂದಿ ಸೌಖ್ಯವನ್ನು ಹೊಂದುವರು ಈ ಸಂಗತಿಯನ್ನು ಎಲ್ಲಾ ವಿದ್ಯಾವಂತರೂ ಮತ್ತು ದೇಶಾಭಿಮಾನಿಗಳೂ ತಿಳಿಯದಂಥಾ ಬಡರೈತರಿಗೆ ತಿಳುವಳಿಕೆಯನ್ನು ಕೊಟ್ಟು ಕೀರ್ತಿಶೇಷರಾಗುವರೆಂದು ನಂಬುತ್ತೇನೆ

ಶ್ರೀರಂಗಪಟ್ಟಣ—ಒಂದು ವಿವರಣೆ

ನಮ್ಮ ಮೈಸೂರಾಧಿಪತ್ಯದಲ್ಲಿರುವಷ್ಟು ಪುರಾತನಸ್ಥಳಗಳೂ, ಪುಣ್ಯಕ್ಷೇತ್ರಗಳೂ, ಮತ್ತು ಚರಿತ್ರೆಯಲ್ಲಿ ಪ್ರಖ್ಯಾತವಾದ ಸ್ಥಳಗಳೂ ಇದೇ ವಿಸ್ತೀರ್ಣವುಳ್ಳ ಇನ್ನು ಯಾವ ಪ್ರಾಂತ್ಯದಲ್ಲಿಯೂ ಇರಲಾರವು ಆದರೆ ಜನಗಳಿಗೆ ತಮ್ಮ ತಮ್ಮ ದೇಶದಲ್ಲೇ ಇರುವ ಪ್ರಸಿದ್ಧಿಯಾದ ಸ್ಥಳಗಳನ್ನು ನೋಡಲು ಹೆಚ್ಚು ಅಭಿಲಾಷೆ ಇರುವುದಿಲ್ಲ ಶ್ರೀರಂಗಪಟ್ಟಣವು ಬಹು ಪುರಾತನ ಪಟ್ಟಣವಾದರೂ, ಮತ್ತು ಅದನ್ನು ನೋಡಲು ಇಂಡಿಯಾ ದೇಶದ ಎಲ್ಲಾ ಕಡೆಗಳಿಂದಲೂ ಜನಗಳು ಬರುತ್ತಿದ್ದರೂ, ಮೈಸೂರು ಪ್ರಾಂತ್ಯದಲ್ಲಿಯೇ ಇರುವವರಲ್ಲಿ ಅನೇಕರಿಗೆ ಅದನ್ನು ನೋಡಬೇಕೆಂಬ ಕುತೂಹಲವೂ, ಮತ್ತು ಕುತೂಹಲವಿದ್ದರೂ ಅದನ್ನು ಹೋಗಿ ನೋಡಲು ಮನಃಪೂರ್ವಕವಾದ ಪ್ರಯತ್ನವನ್ನು ಮಾಡಲಭಿಲಾಷೆಯೂ ಇರಲಾರದು ಆದುದರಿಂದಲ್ಲವೇ ಶ್ರೀರಂಗಪಟ್ಟಣವು ಎಷ್ಟು ಖ್ಯಾತಿಹೊಂದಿದ ಪುರಾತನ ಪಟ್ಟಣವಾದರೂ ಮೈಸೂರು ದೇಶದ ಅನೇಕ ಪ್ರಜೆಗಳ ಕಣ್ಣಿಗೆ ಬೀಳದಿರುವದು? ಅಂಥವರು ಶ್ರೀರಂಗಪಟ್ಟಣದ ಮಹಿಮೆಯನ್ನು ಓದಿ, ನೋಡಲಪೇಕ್ಷಿಸಿ ಹೋಗುವರೆಂಬ ಊಹೆಯಿಂದ ಅದರ ವಿಷಯವಾಗಿ ಈ ಸಂಕ್ಷೇಪ ಪ್ರಬಂಧವು ಬರೆಯಲ್ಪಟ್ಟಿದೆ

ಶ್ರೀರಂಗಪಟ್ಟಣವು ಮೈಸೂರು ಪಟ್ಟಣದಿಂದ ಎಂಟು ಮೈಲಿಗಳ ದೂರದಲ್ಲಿ ಕಾವೇರಿ ನದಿಯ ದಡದಲ್ಲಿ ಇರುವುದು ಬೆಂಗಳೂರಿನಂತೆ ಈ ಊರಿನಲ್ಲಿ ವಿದ್ಯುಚ್ಛಕ್ತಿಯೂ, ಟ್ರೇಂಗಾಡಿಗಳನ್ನು ಹಾಕುವ ಪ್ರಯತ್ನವೂ ಇಲ್ಲ, ಅಥವಾ, ಉದಕಮಂಡಲದಂತೆ ಈ ಊರಿನ ಹವವು ಪ್ರಸಿದ್ಧಿಹೊಂದಿದ್ದೂ ಅಲ್ಲ ಆದರೂ ವರ್ಷಾವರ್ಷವೂ ಅದನ್ನು ನೋಡುವುದಕ್ಕಾಗಿ ಬರತಕ್ಕಂಥಾ ಜನಗಳು ಬಹಳವಾಗಿರುವರು ಇದಕ್ಕೆ ಕಾರಣವೇನಿರಬಹುದೆಂದು ಸ್ವಲ್ಪ ಯೋಚಿಸಿದರೆ ಇದರ ಪುರಾತನ ಚರಿತ್ರವೇ ಇದಕ್ಕೆ ಕಾರಣವೆಂದು ಕಂಡುಬರುವುದು ದಕ್ಷಿಣಹಿಂದುಸ್ಥಾನದ ಚರಿತ್ರೆ ಪ್ರಾರಂಭವಾದ ಆದಿಕಾಲದಲ್ಲಿ ಶ್ರೀರಂಗಪಟ್ಟಣವು ಗಂಗಾ ಕುಲದವರಿಂದ ಆಳಲ್ಪಟ್ಟಿತು ಅನಂತರ ಹನ್ನೆರಡನೇ ಶತಮಾನದಲ್ಲಿ ಅದನ್ನು ಶ್ರೀವೈಷ್ಣವಕುಲದ ಮೂಲಪುರುಷರಾದ ಶ್ರೀರಾಮಾನುಜಾಚಾರ್ಯರಿಗೆ ಹೊಯ್ಸಳದೊರೆಯಿಂದ ಕೊಡಲ್ಪಟ್ಟಿತು ಹದಿನೈದು ಮತ್ತು ಹದಿನಾರನೇ ಶತಮಾನಗಳಲ್ಲಿ ಶ್ರೀರಂಗಪಟ್ಟಣದ ರಾಜರು ವಿಜಯನಗರದ ರಾಜರ ಅಧೀನರಾದರು ಮತ್ತು ಹದಿನೇಳನೇ ಶತಮಾನದಲ್ಲಿ ಅದು ಮೈಸೂರು ರಾಜರಿಂದ ತೆಗೆದುಕೊಳ್ಳಲ್ಪಟ್ಟು ಅವರ ರಾಜ್ಯಕ್ಕೆ ಆಗ ಅದು ಮುಖ್ಯಪಟ್ಟಣವಾಯಿತು ಹದಿನೆಂಟನೇ ಶತಮಾನದಲ್ಲಿ ಮಹಮದೀಯರು ಅದನ್ನು ಅನ್ಯಾಯದಿಂದ ಆಕ್ರಮಿಸಿಕೊಂಡರು, ಆದರೆ ಅದೇ ಶತಮಾನದ ಕೊನೆಯಲ್ಲಿ ಇಂಗ್ಲೀಷರಿಗೂ ಮಹಮದೀಯರಿಗೂ ಯುದ್ಧವಾಗಿ, ಆ ಯುದ್ಧದಲ್ಲಿ ಮಹಮದೀಯರನ್ನು ಇಂಗ್ಲೀಷರು ಸೋಲಿಸಿ, ಶ್ರೀರಂಗಪಟ್ಟಣವನ್ನು ತಿರಿಗಿ ಮೈಸೂರು ರಾಜರಿಗೆ ಕೊಟ್ಟರು ಇದೇ ಶ್ರೀರಂಗಪಟ್ಟಣದ ಸಂಕ್ಷೇಪ ಚರಿತ್ರೆ

ಆದರೆ ಹೊರಗಡೆಯಿಂದ ಶ್ರೀರಂಗಪಟ್ಟಣವನ್ನು ನೋಡಬೇಕೆಂದು ಬರುವವರಿಗೆ ಅಲ್ಲಿರುವ ಪುರಾತನ ಕಟ್ಟಡಗಳೂ, ಕೋಟೆಯೂ ಹೆಚ್ಚು ಆನಂದವನ್ನುಂಟುಮಾಡುವವು 1799 ನೇ ಇಸವಿಯಲ್ಲಿ ಜನರಲ್ ಹ್ಯಾರಿಸ್ ಎಂಬ ಇಂಗ್ಲೀಷ್ ಸೈನ್ಯಾಧಿಪತಿಯು ಕೋಟೆಗೆ ಮುತ್ತಿಗೆ ಹಾಕಿದಾಗ ಅದನ್ನು ಗುಂಡಿನಿಂದ ಒಡೆದು ಕೋಟೆ ತೆಗೆದುಕೊಂಡ ಜಾಗವು ಈಗಲೂ ಕೋಟೆಯ ಉತ್ತರಕ್ಕೂ, ಪಶ್ಚಿಮಕ್ಕೂ ಮಧ್ಯೆ ಕಾವೇರಿ ನದಿಯು ಎರಡು ಭಾಗವಾಗಿ ಹರಿದು ಹೋಗುವ ಜಾಗದಲ್ಲಿ ಕಾಣಲ್ಪಡುವದು ಟಿಪ್ಪುವು ಸತ್ತುಹೋದ ಜಾಗವು ಕೋಟೆಯ ಉತ್ತರ ಭಾಗದಲ್ಲಿದೆ ಇಂಡಿಯಾ ದೇಶದಲ್ಲಿ ಎರಡನೇ ಕೋಟೆ ಎನಿಸಿಕೊಂಡಿರುವ ಶ್ರೀರಂಗಪಟ್ಟಣದ ಕೋಟೆಯೊಳಗೆ ಇಂಗ್ಲೀಷರಿಗೂ ಮಹಮದೀಯರಿಗೂ ಯುದ್ಧವಾದಾಗ ಟಿಪ್ಪುವು ಇಂಗ್ಲೀಷ್ ಸಿಪಾಯಿಗಳನ್ನು ಸೆರೆಹಿಡಿದು ಹಾಕಿಕೊಂಡಿದ್ದ ಕತ್ತಲು ಕೋಣೆಗಳು ಇರುವವು ಕೋಟೆಯೊಳಗೆ ಇನ್ನೂ ಅನೇಕ ತರಾವರಿ ಕಟ್ಟಡಗಳು ಇರುವವು ಶ್ರೀರಂಗಪಟ್ಟಣವನ್ನು ಶ್ರೀರಾಮಾನುಜಾಚಾರ್ಯರಿಗೆ ಕೊಟ್ಟಾಗ ಅವರು ಕಟ್ಟಿಸಿದ ಒಂದು ಮಹತ್ತಟ್ಟದವಾದ ಶ್ರೀರಂಗನಾಥಸ್ವಾಮಿ ದೇವಸ್ಥಾನವು ಕೋಟೆಯ ಒಳಗೇ ಇರುವುದು ಈ ದೇವಸ್ಥಾನಕ್ಕೆ ಅರ್ಧ ಮೈಲಿ ದೂರದಲ್ಲಿ ಟಿಪ್ಪುವು ಪೂಜೆಮಾಡುತ್ತಿದ್ದ ಮಸೀದಿ ಇದೆ ಇನ್ನು ಕೊಂಚ ದೂರದಲ್ಲಿ ಬಹು ತಮಾಷೆಯಾದ ಚಕ್ರಾಕಾರದ ಸೇತುವೆಯೊಂದಿರುವುದು ಇದು ಇಟ್ಟಿಗೆಯಿಂದ ಕಟ್ಟಲ್ಪಟ್ಟಿರುವುದಾದರೂ ಯಾರಾದರೂ ಇದರ ಮೇಲೆ ಮಧ್ಯಭಾಗದಲ್ಲಿ ನಿಂತುಕೊಂಡು ಕುಣಿದರೆ ಇದು ಅಲ್ಲಾಡುವದು

ಕೋಟೆಯ ಹೊರಗಡೆಯಲ್ಲಿಯೂ ನೋಡಬೇಕಾದ ಅನೇಕ ನೋಟಗಳಿರುವವು ಟಿಪ್ಪುಸುಲ್ತಾನ್ ಶ್ರೀರಂಗಪಟ್ಟಣದ ರಾಜನಾಗಿದ್ದಾಗ ಅವನು ಬೇಸಗೆಯಲ್ಲಿ ವಾಸಮಾಡುತ್ತಿದ್ದ ಮತ್ತು ಅವನು ಸತ್ತುಹೋದನಂತರ ಅದು ಇಂಗ್ಲೀಷರ ಆಡಳಿತದಲ್ಲಿದ್ದಾಗ ಕರ್ನಲ್ ವೆಲ್ಲೆಸ್ಲಿ ವಾಸವಾಗಿದ್ದ ಬಂಗಲೆಯು ಈಗಲೂ ನೋಡುವುದಕ್ಕೆ ಬಹಳ ರಮ್ಯವಾಗಿರುವುದು ಇದೇ ದರಿಯಾ ದೌಲತ್ ಎಂಬ ಕಟ್ಟಡವು ಈಗಲೂ ಮೈಸೂರು ಸರ್ಕಾರದವರು ಆ ಕಟ್ಟಡವನ್ನು ಬಹಳ ನಾಜೂಕಾಗಿಟ್ಟಿರುವರು ಇದಕ್ಕೆ ಎರಡು ಮೈಲಿಯಲ್ಲಿ ಎಸೆಲ್ಲಿಯಂ ಎಂಬ ಕಟ್ಟಡವಿರುವುದು ಇದನ್ನು ಟಿಪ್ಪುವು ಅವನ ತಂದೆಯಾದ ಹೈದರನನ್ನು ಹೂಳಿದ ಜಾಗದಲ್ಲಿ ಕಟ್ಟಿಸಿದನು ಅನಂತರ ಟಿಪ್ಪುವು ಮತ್ತು ಅವನ ತಾಯಿಯೂ ಸತ್ತುಹೋದಾಗ ಅವರೂ ಅದೇ ಜಾಗದಲ್ಲಿ ಹೂಳಲ್ಪಟ್ಟರು ಇದು ಕರೀಕಲ್ಲಿನಲ್ಲಿ ಕಟ್ಟಲ್ಪಟ್ಟಿರುವುದು, ಮತ್ತು ಈಗಲೂ ಇನ್ನು ಹೊಸ ಕಟ್ಟಡದಂತೆ ಕಾಣುವದು ಈ ಪ್ರಸಿದ್ಧಸ್ಥಳದಲ್ಲಿ ನೋಡಬಹುದಾದ ಇನ್ನು ಅನೇಕ ಕಟ್ಟಡಗಳ ಪೈಕಿ ದರಿಯಾ ದೌಲತ್ತಿಗೆ ದಕ್ಷಿಣದಲ್ಲಿ ಮೈಸೂರು ಸರ್ಕಾರದವರು, ಕಟ್ಟಿಸಿದ ಒಂದು ಕಲ್ಲಿನ ಕಂಭವಿರುವದು ಇದನ್ನು ಅವರು ಯುದ್ಧದಲ್ಲಿ ಮೃತಪಟ್ಟ ಅನೇಕ ಇಂಗ್ಲೀಷ್ ಸಿಪಾಯಿಗಳ ಜ್ಞಾಪಕಾರ್ಥವಾಗಿ ಕಟ್ಟಿಸಿದಾರೆ ಹೈದರನ ಗೋರಿಯ ಹತ್ತಿರ ಕರ್ನಲ್ ಬೇಲಿ ಎಂಬಾತನಿಗಾಗಿ ಅವನ ಚಿಕ್ಕಪ್ಪನು ಕಟ್ಟಿಸಿದ ಜ್ಞಾಪಕಾರ್ಥವಾದ ಕಟ್ಟಡ ಒಂದಿರುವದು ಸ್ಕಾಟ್ ಬಂಗಲೆ ಎಂಬುವದೊಂದಿರುವದು ಅಲ್ಲಿ ಈಗಲೂ ಅನೇಕ ಪುರಾತನ ಸಾಮಾನುಗಳಿರುವವು

ಈ ರೀತಿಯಾಗಿ ಶ್ರೀರಂಗ ಪಟ್ಟಣದಲ್ಲಿ ಮನಸ್ಸಿಗೆ ಹರ್ಷವನ್ನುಂಟುಮಾಡುವ ನೋಟಗಳು ಅನೇಕವಿರುವಲ್ಲಿ, ಅಲ್ಲಿಗೆ ವರ್ಷಾವರ್ಷವೂ ಅನೇಕರು ಊರು ನೋಡಲು ಬರುವುದೇನಾಶ್ಚರ್ಯ? ಮೈಸೂರು ಪ್ರಾಂತ್ಯದಲ್ಲಿಯೇ ಇದ್ದುಕೊಂಡು ಶ್ರೀರಂಗಪಟ್ಟಣವನ್ನು ನೋಡದಿರುವವರ ಉತ್ಸಾಹವನ್ನು ಏನೆಂದು ಹೇಳೋಣ!

ಚನ್ನಗಿರಿ   ರಾಜಗೋಪಾಲ್ ಆರ್ ವಂಕೀಪುರ್

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಆರ್ ರಾಮರಾವ್, ಬೆಂಗಳೂರು ಧರ್ಮವಾದಿ, ಶಿವಮೊಗ್ಗ— ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ —ಎಡಿ]

ಕರೆಸ್ಪಾಂಡೆನ್ಸ್.

ಮೈಸೂರು ಪ್ರಜೆಯ ಅನುಭವ

ಅಯ್ಯಾ,—ನಾನು 1913 ನೇ ಜನವರಿಯಲ್ಲಿ ತಿಪಟೂರಲ್ಲಿ ಪೊಲೀಸ್ ಜಮಾದಾರನಾಗಿ ಇದ್ದಾಗ ಅಲ್ಲಿ ಇರುವ ಕೆಲವು ಘನಂದಾರ ವರ್ತಕರಿಂದು ಅನ್ನಿಸಿಕೊಂಡು ಇರುವ ದೊಡ್ಡ ಮನುಷ್ಯರು ಮತ್ತು ನಮ್ಮ ಇಲಾಖೆ ನೌಕರರು ಸಹ ಒಂದಾಗಿ ಸೇರಿ ನನ್ನ ಮೇಲೆ ಇ ಪಿ ಕೋ 342 351 ಸೆಕ್ಷನ್ ಪ್ರಕಾರ ಉತ್ಪ್ರೇಕ್ಷಣೆ ಮೊಕದ್ದಮೆ ಮಾಡಿ ಅದನ್ನು ತಮ್ಮ ಪರಸಾಹಸದಿಂದ ಸ್ಥಾಪಿಸಲು ಪ್ರಯತ್ನಪಟ್ಟರು ಅಂತ್ಯದಲ್ಲಿ ಇದು ಡಿ॥ ಮ್ಯಾಜಿಸ್ಟ್ರೇಟರವರಲ್ಲಿ ಸಂಪೂರ್ಣವಾಗಿ ಖುಲಾಸೆ ಆಯಿತು ಆದರೆ ಡ್ಯ॥ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ಇವರ ನಿಜಾಂಶ ತಿಳಿಯದೆಹೋದದ್ದರಿಂದ ಗ್ರೇಡು ಕಂಪರಾ ಮಾಡಿದರು ಇದರಿಂದ ಅಲ್ಲಿ ಇರುವದಕ್ಕೆ ಮನಸ್ಸಿಲ್ಲದೆ ಅನ್ಯದೇಶದಲ್ಲಿ ನನ್ನ ಅದೃಷ್ಟ ಪರೀಕ್ಷೆ ಮಾಡಲು ಬೊಂಬಾಯಿಗೆ ಬಂದೆ ಇಲ್ಲಿ 3 ನೇ ದಿವಸವೇ ಪಿ ಡಬ್ಲ್ಯು ಇಲೆಕ್ಟ್ರಿಕಲ್ ಇಂಜನಿಯರ್ ಆಫೀಸಿನಲ್ಲಿ 10 ರೂಪಾಯಿ ನೌಕರಿ ದೊರತು, 5 ನೇ ತಿಂಗಳಲ್ಲಿ 60+10 ಗೆ ಬಡತಿ ಆಯಿತು ಇಷ್ಟರಲ್ಲೇ ರಾಜಪುತಾನದ ಒಂದು ಸಂಸ್ಥಾನದಲ್ಲಿ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸ ದೊರಕಿತು ಹಾಲಿ ಈ ನೌಕರಿಯಲ್ಲಿ ಇದ್ದೇನೆ ಮೇಲ್ಕಂಡ ಘನಂದಾರ ವರ್ತಕರ ಮತ್ತು ಇಲಾಖೆ ಮುಖಂಡರು ಸಹೋದರರ ಮಹನತ್ತು ಇಲ್ಲದ ಇದ್ದಲ್ಲಿ ನಾನು ಈ ಪದವಿಗೆ ಎಂದಿಗೂ ಬಾರದೆ ಅಲ್ಲಿ ಇನ್ನು ಅನೇಕರಂತೆ ಕೊಳೆಯುತ್ತಿರಬೇಕಾಗುತ್ತಿತ್ತು ಮೇಲ್ಕಂಡವರು ನನಗೆ ಮಾಡಿದ ಸಹಾಯಕ್ಕಾಗಿ ಅವರುಗಳಿಗೆ ನನ್ನ ಅತ್ಯಂತ ವಂದನೆಗಳನ್ನು ತಮ್ಮ ಪತ್ರಿಕೆ ಮೂಲಕ ಕಳುಹಿಸುತ್ತೇನೆ

ಆಸಿಂದ್, ಒಡಿಮೀರ್,   ಡಿ ನರಸಿಂಗರಾವ್,
ರಾಜಪುತಾನ   ಮ್ಯಾಜಿಸ್ಟ್ರೇಟ್

ಉಪಾಧ್ಯಾಯರ ಶಿಕ್ಷಣ

ಅಯ್ಯಾ,—ಹಾಸನದ ಟವನ್‌ನಲ್ಲಿ ಈ ತಿಂಗಳು ತಾ 22 23 ನೇ ಶುಕ್ರವಾರ ಶನಿವಾರಗಳಲ್ಲಿ ಈ ಡಿಸ್ಟ್ರಿಕ್ಟಿನ ಉಪಾಧ್ಯಾಯರ ಸಂಘವನ್ನು ನಡಿಸುವಂತೆ ತೀರ್ಮಾನವಾಗಿರುವುದು ಎಲ್ಲಾ ತೋರ ಇದೇ ಮೇರೆ ಪ್ರತಿ ಡಿಸ್ಟ್ರಿಕ್ಟಿನ ಹೆಡ್‌ಕ್ವಾರ್ಟರುಗಳಲ್ಲಿಯೂ ಪ್ರತಿವರ್ಷವೂ ನಡೆಯುವಂತೆ ಆಯಾ ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿ ಸಮಾಜದವರು ಏರ್ಪಾಟು ಮಾಡಿದರೆ ದೇಶಕ್ಕೆ ಎಷ್ಟೋ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ ಈ ಸಂಘದ ಕೆಲವು ಮಂದಿ ಕಾರ್ಯದಕ್ಷರೂ, ಅನುಭವಶಾಲಿಗಳೂ, ವಿದ್ಯಾವಂತರೂ ಆಗಿರುವ ಉಪಾಧ್ಯಾಯರನ್ನು ಆರಿಸಿಕೊಂಡು, ಅಂತಹವರೊಬ್ಬರಿಗೆ 10 ಅಥವಾ 15 ಪ್ರೈಮರಿ ಪಾಠಶಾಲೆಗಳನ್ನು ವಹಿಸಿ ಇವರು ಆಯಾ ಶಾಲೆಯ ಉಪಾಧ್ಯಾಯರೊಡನೆ ಕಲತು ಆಯಾ ಸ್ಥಳದಲ್ಲಿ ವಾಸಿಸುತ್ತಾ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಪಾಠವನ್ನೂ ಸರಿಯಾದ ಮೇಲ್ಪಂಕ್ತಿಯ ಮಾರ್ಗ ನಡಿಸುತ್ತಾ ಕೆಲವು ವಾರಗಳ ತನಕ ಅನುಭವಮಾಡಿಕೊಟ್ಟು, ಮುಂದಿನ ಇನ್ನೊಂದು ಗ್ರಾಮಕ್ಕೆ ಹೋಗಿ ಅದೇ ಪ್ರಕಾರ ನಡಿಸುತ್ತಾ ಹೋಗುವಂತೆ ಏರ್ಪಾಟುಮಾಡಿದರೆ ಎಲ್ಲಾ ಉಪಾಧ್ಯಾಯರೂ ನಾರ್ಮಲ್ ಸ್ಕೂಲಿನಲ್ಲಿ ವಾಸಮಾಡಿ ತೇರ್ಗಡೆಯಾದವರಂತೆಯೇ ಸಮರ್ಥರಾಗುವುದರಲ್ಲಿ ಸಂದೇಹವಿಲ್ಲವೆಂದು ಬಹುಮಂದಿ ಸಹೃದಯರ ಅಭಿಪ್ರಾಯವಾಗಿದೆ ಇದು ಮುಖ್ಯವಾಗಿಯೂ ತೋರುತ್ತದೆ ಸ್ಥಾನದ ಉಪಾಧ್ಯಾಯರನ್ನು ನಾರ್ಮಲ್ ಸ್ಕೂಲಿಗೆ ಬರಮಾಡಿಕೊಂಡು ತಿದ್ದುಪಾಟುಮಾಡಿ ಕಳುಹಿಸುವುದಕ್ಕೆ ತಗಲುವ ಅವರನ್ನು ಅವರವರ ಸ್ಥಳಗಳಲ್ಲಿಯೇ ತಿದ್ದುಪಾಟುಮಾಡುವುದು ಸಮಯ ಮತ್ತು ದ್ರವ್ಯ ಈ ಎರಡು ಅಂಶಗಳಲ್ಲಿಯೂ ಲಾಭಕರವೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿ ವ್ಯಕ್ತವಾಗುವುದು ಸಮಾಜದವರಾಗಲಿ, ಸರ್ಕಾರದವರಾಗಲಿ ಈ ಏರ್ಪಾಟನ್ನು ಆಲೋಚಿಸಿ, ಜಾರಿಗೆ ಕೊಡುವ ಬಹಳ ಬಗೆ ಒಡನೆ ಆಚರಣೆಗೆ ತರುವರೆಂದು ನಿರೀಕ್ಷಿಸುತ್ತೇನೆ ಈ ಏರ್ಪಾಟಿನಿಂದ ಗ್ರಾಮಾಂತರಗಳಲ್ಲಿರುವ ಶಿಕ್ಷಣಾಭಿಮಾನಿಗಳೂ ಆಗಾಗ್ಗೆ ಒಟ್ಟುಗೂಡುವ ಉಪನ್ಯಾಸಗಳನ್ನು ಆ ಉಪಾಧ್ಯಾಯರು ಮಾಡುತ್ತಾ ಬರಲು ಅನುಕೂಲಿಸುವುದು ಆದ್ದರಿಂದ ಈ ಏರ್ಪಾಟು ಶ್ಲಾಘ್ಯವಾದುದೆಂದು ನನ್ನ ಅಭಿಪ್ರಾಯ ತುಂಬಾ ಸಂತೋಷ

ಹಾಸನ   ಪ್ರಜಾವಿದ್ಯಾಭಿಮಾನಿ

ದೇವನಹಳ್ಳಿ ವಿಚಾರಗಳು

ಅಯ್ಯಾ,— ತಮ್ಮ ಹಿಂದಿನ ವಾರದ ಸಂಚಿಕೆಯಲ್ಲಿ ನಮ್ಮ ತಾಲ್ಲೂಕು ಆಸ್ಪತ್ರೆಯ ಸಬ್ ಅ॥ ಸರ್ಜನ್ ರವರ ವಿಷಯದಲ್ಲಿ ತಮ್ಮ ಬಾತ್ಮಿದಾರರು ಅವರು ಆಸ್ಪತ್ರೆಗೆ ಪ್ರಾತಃಕಾಲ 9 ಗಂಟೆ ವರೆಗೂ ಬರುವದಿಲ್ಲವೆಂತಲೂ, ಚಟುವಟಿಕೆಯಿಂದ ಕೆಲಸಮಾಡುವರು ಬೇಕೆಂತಲೂ ವಗೈರೆ ಬರೆದಿರುತ್ತಾರೆ ಇದರಿಂದ ತಮ್ಮ ಬಾತ್ಮೀದಾರರು ಯಾವಾಗಲೂ ಆಸ್ಪತ್ರೆಗೆ ಹೋಗಲೇ ಇಲ್ಲವೆಂತ ತೋರುತ್ತದೆ ನಮ್ಮ ಡಾಕ್ಟರು ಇಲ್ಲಿಗೆ ಬಂದು 3 ½ ವರುಷಗಳಾದವು ಇದಕ್ಕೆ ಮುಂಚೆ ಇವರು ಅನೇಕ ತಾಲ್ಲೂಕುಗಳಲ್ಲೂ, ಅರಮನೆಯಲ್ಲೂ ಬಹಳ ಮೆಹನತ್ತಿನಿಂದ ಕೆಲಸಮಾಡಿರುತ್ತಾರೆ ಇವರು ಇಲ್ಲಿಗೆ ಬಂದ ಲಾಗಾಯಿತು ಜನಗಳ ಅನುರಾಗಕ್ಕೆ ಪಾತ್ರರಾಗಿ ಬಡವರು ಐಶ್ವರ್ಯವಂತರೆಂಬ ಭೇದವನ್ನೆಣಿಸದೆ ಬೆಳಗ್ಗೆ 6 ಘಂಟೆಯಿಂದ ಊರು ಗಸ್ತುಮಾಡಿಕೊಂಡು, 8 ರಿಂದ 11 ಗಂಟೆ ತನಕಲೂ, ಸಾಯಂಕಾಲ 1 ರಿಂದ 5 ಗಂಟೆ ತನಕಲೂ ಆಸ್ಪತ್ರೆಯಲ್ಲಿ ಔಷಧ ಕೊಡುತ್ತಾ ಜನಗಳನ್ನು ಕಾಪಾಡುತ್ತಿದಾರೆ ಇವರ ಹಿಂದೆ ಇದ್ದ ಡಾಕ್ಟರುಗಳ ಕಾಲದಲ್ಲಿ ಆಸ್ಪತ್ರೆಗೆ ದಿನವಹಿ ಬರುತ್ತಿದ್ದ ರೋಗಿಗಳ ಸಂಖ್ಯೆಗೂ ಈಗಿನ ಸಂಖ್ಯೆಗೂ ಅರ್ಧಾರ್ಧ ಸಂಬಂಧವಿಲ್ಲ ಇದಕ್ಕೆ ಊರಿನ ಅನಾರೋಗ್ಯಸ್ಥಿತಿಯು ಕಾರಣವಿಲ್ಲ ನಮ್ಮ ಡಾಕ್ಟರು ಕೊಡತಕ್ಕ ಔಷಧವನ್ನೂ, ಇವರ ಗುಣವನ್ನೂ ಪ್ರೀತಿಸಿ ಪ್ರಜೆಗಳು ಆಸ್ಪತ್ರೆಗೆ ಬಂದು ದಾಖಲಾಗುವರು ಹೀಗಿರುವಲ್ಲಿ ಇಂಥಾ ಉದಾರ ಮನುಷ್ಯರ ವಿಷಯದಲ್ಲಿ ಈ ರೀತಿ ತಮ್ಮ ಬಾತ್ಮೀದಾರರು ಬರೆದಿರತಕ್ಕದ್ದು ಶೋಚನೀಯವಾಗಿರುತ್ತದೆ ನಮ್ಮ ಡಾಕ್ಟರವರು ಬಹಳ ದೃಢಾಂಗರಾಗಿ ಚಟುವಟಿಕೆಯಿಂದ ಕೆಲಸಮಾಡುತ್ತಿದಾರೆ

ನಮ್ಮ ಅಮಲ್ದಾರ್ ಮ॥ ಎಸ್ ಶ್ರೀನಿವಾಸಯ್ಯಂಗಾರ್ರವರು ಈ ಊರಿನ ಪ್ರಜೆಗಳನ್ನು ಸಭೆ ಸೇರಿಸಿ ಇಲ್ಲಿ ಒಂದು ಪರಸ್ಪರ ಸಹಾಯಕ ಬ್ಯಾಂಕನ್ನು ಏರ್ಪಡಿಸಿರುತ್ತಾರೆ ಈ ಬ್ಯಾಂಕು ಈ ತಿಂಗಳು 2 ನೇ ತಾ ಪ್ರಾರಂಭವಾಗಿ ಲೇವಾದೇವಿ ನಡಿಸುತ್ತಾ ಇದೆ ಷೇರು 1 ಕ್ಕೆ 5 ರೂಪಾಯಿ ಬೆಲೆಯುಳ್ಳ 1,000 ಷೇರುಗಳನ್ನು ಮೂಲಧನವಾಗಿ ಸದ್ಯಕ್ಕೆ ಮಾಡಿರುತ್ತಾರೆ ಷೇರುಗಳೆಲ್ಲವೂ ಆಗಲೇ

ರ್ಭಾಗ್ಯವಾಗಿದೆ. ಈ ಊರಿನಲ್ಲಿ ಇಂಥಾ ಬ್ಯಾಂಕು ಇದುವರೆಗೆ ಇಲ್ಲದೆ ಪ್ರಜೆಗಳಿಗೆ ಬಹಳ ಅನನುಕೂಲವಾಗಿತ್ತು. ನಮ್ಮ ಅಮಲ್ದಾರರು ಬಹಳ ಮುತುವರ್ಜಿ ವಹಿಸಿ ನಮ್ಮಗಳ ಕೋರಿಕೆಯಂತೆ ಈ ಬ್ಯಾಂಕನ್ನು ಏರ್ಪಡಿಸಿರುವದಕ್ಕಾಗಿ ಇವರಿಗೆ ಪ್ರಜೆಗಳೆಲ್ಲರೂ ಕೃತಜ್ಞರಾಗಿದ್ದಾರೆ.

ಮಳೆ ಇದುವರೆಗೆ ಸುತರಾಂ ಬೀಳಲಿಲ್ಲ. ಥಾರಗೆವಾಸಿಗಳು ದಿನವೂ ಹೆಚ್ಚುತ್ತಲಿವೆ. ಅನೇಕ ಕಡೆಯಲ್ಲಿ ಕುಡಿಯುವುದಕ್ಕೆ ಒಳ್ಳೇ ನೀರು ಸಿಕ್ಕದೆ ಜನಗಳು ತೊಂದರೆಪಡುತ್ತಿದ್ದಾರೆ. ಹೋದವರುಷ ಈ ತಾಲ್ಲೂಕಿನಲ್ಲಿ ಬೆಳೆ ಸುತರಾಂ ಆಗಲಿಲ್ಲ. ಪ್ರಜೆಗಳು ಸರ್ಕಾರದ ಹಣವನ್ನು ಕೊಡುವುದಕ್ಕೆ ಬೈತನ್ನ ಸಾಲದೆ ವ್ಯಸನಪಡುತ್ತಿದ್ದಾರೆ. ದಯಾಳುಗಳಾದ ಸರ್ಕಾರದವರು ಅರ್ಧ ಕಂದಾಯವನ್ನು ರಿಮಿಷನ್ ಮಾಡಿದರೆ ಬಹಳ ಮಟ್ಟಿಗೆ ಉಪಕಾರವಾಗುವದು. ಹೀಗೆ ರಿಮಿಷನ್ ಮಾಡಲು ಆಗದೆ ಹೋಗುವ ಭಾಗದಲ್ಲಿ ಸರ್ಕಾರದವರು ತಾಲ್ಲೂಕು ಅಧಿಕಾರಿಗಳಿಗೆ ವಸೂಲಿ ವಿಷಯದಲ್ಲಿ ಪ್ರಜೆಗಳಿಗೆ ತೊಂದರೆ ಕೊಡದೆ ಕೆಲವು ಕಾಲ ಅವಧಿಯನ್ನು ಕೊಟ್ಟು ಅನಂತರ ವಸೂಲಿ ಕ್ರಮ ಜರುಗಿಸುವಂತೆ ಅಪ್ಪಣೆ ಮಾಡ್ಯಾರೆಂತ ನಂಬಿದೇನೆ.

ದೇವನಹಳ್ಳಿ — ಡಿ. ರಾಮರಾವ್, ಬಿ. ಎ., ಜೋಡಿದಾರ್

ತಾಲ್ಲೂಕು ವರ್ತಮಾನಗಳು

ಗೌರೀಬಿದನೂರು ತಾ॥ ಕೆಂಕೆರೆ. — ಈ ಗ್ರಾಮದಲ್ಲಿರುವ ಆಂಜನೇಯಸ್ವಾಮಿ ಮತ್ತು ನರಸಿಂಹಸ್ವಾಮಿ ದೇವಸ್ಥಾನಗಳು ಅತ್ಯಂತ ಪುರಾತನವಾದವುಗಳಾಗಿ ಶಿಥಿಲವಾಗಿವೆ. ಇವುಗಳನ್ನು ತಾಲ್ಲೂಕು ಅಮಲ್ದಾರ್ ಮ॥ ಸಿ. ವಿ. ಕೃಷ್ಣಸ್ವಾಮಿರಾಯರು ಮತ್ತು ಹೊಸೂರು ಹೋಬಳಿ ಶೇಕದಾರ್ ಮ॥ ಸಿ. ರಾಘವೇಂದ್ರರಾಯರು ಸಹ ಗ್ರಾಮಕ್ಕೆ ದಯಮಾಡಿಸಿದ್ದ ವೇಳೆ ನೋಡಿ, ಇಲ್ಲಿನ ಗ್ರಾಮಾಭಿವೃದ್ಧಿ ಕಾರ್ಯಗಳ ವಿಷಯವಲ್ಲ ಜನರಿಗೆ ಪ್ರೋತ್ಸಾಹಪಡಿಸಿದ್ದರ ಮೇರೆ ಇಲ್ಲಿನ ಸಾಹುಕಾರ್ ಮ॥ ಗಾದೇನಹಳ್ಳಿ ಮಲ್ಲಪ್ಪನವರು ಶಿವದೇವಸ್ಥಾನದ ಬಳಿ ಒಂದು ಕಲ್ಲು ಕಟ್ಟಡದ ನೀರಿನ ಸೇದುವ ಭಾವಿಯನ್ನು ತೆಗಿಸುವುದಾಗಿಯೂ, ಮ॥ ರೈತ ಗುಂಡಲಹಳ್ಳಿ ಅಪ್ಪಣ್ಣನವರು ಶ್ರೀ ಆಂಜನೇಯಸ್ವಾಮಿಯ ದೇವಸ್ಥಾನವನ್ನೂ, ಉಳಿದ ಗ್ರಾಮಸ್ಥರು ನರಸಿಂಹಸ್ವಾಮಿಯ ದೇವಸ್ಥಾನವನ್ನೂ ಜೀರ್ಣೋದ್ಧಾರ ಮಾಡುವುದಾಗಿಯೂ ಮೇಲ್ಕಂಡ ಆಫೀಸರುಗಳ ಸಮಕ್ಷಮ ಸಂತೋಷದಿಂದ ಒಪ್ಪಿ, ಅದರಂತೆ ಮ॥ ಸಾಹುಕಾರ್ ಮಲ್ಲಪ್ಪನವರು ತೆಗಿಸಿದ ಭಾವಿಯಲ್ಲಿ ಅಮರಿಸದಂತೆ ಒಳ್ಳೇ ಸಿಹಿನೀರು ಬಿದ್ದಿರುತ್ತೆ. ಉಳಿದ ಧರ್ಮಕರ್ತರುಗಳೂ ಸಹ ತಮ್ಮ ಕೆಲಸಗಳನ್ನು ಕೂಡಲೇ ಪೂರೈಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ಶ್ರೀರಂಗಪಟ್ಟಣ. — ಹವಾ ತಕ್ಕಮಟ್ಟಿಗೆ ಆರೋಗ್ಯವಾಗಿದೆ. ಬಿಸಿಲಿನ ತಾಪವನ್ನು ಸಹಿಸುವದಕ್ಕಾಗುವದಿಲ್ಲ. ರೈತರೆಲ್ಲರೂ ಮಳೆಯನ್ನು ಎದುರುನೋಡುತ್ತಿದ್ದಾರೆ. ಈಗ ಇಲ್ಲಿನ ಬಾವಿಗಳಲ್ಲೆಲ್ಲಾ ನೀರು ಕಡಮೆಯಾಗುತ್ತಾ ಇದೆ. ನಮ್ಮ ಡೆಪ್ಯುಟಿ ಅಮಲ್ದಾರ್ ಮ॥ ಮುದ್ದುರಂಗೆ ಅರಸಿನವರ ಕಾಲದಲ್ಲಿ ಒಂದು ಭಾವಿ ತೆಗಿಸಲು ಸ್ಯಾಂಕ್ಷನ್ ಆಗಿರುವದು ಸಂತೋಷಕರವಾಗಿದೆ. ನಮ್ಮ ಅಮಲ್ದಾರರು ಅನುಕೂಲವಾದ ಸ್ಥಳದಲ್ಲಿ ಭಾವಿಯನ್ನು ತೆಗಿಸುವರೆಂದು ನಂಬಿದ್ದೇವೆ. ಕೋಟೆಯ ಅಂಗಳದಲ್ಲಿ ಒಂದೆರಡು ಭಾವಿಗಳನ್ನು ತೆಗಿಸಿದರೂ ಪ್ರಜೆಗಳಿಗೆ ಅನುಕೂಲವಾಗುತ್ತೆ. ಮ್ಯುನಿಸಿಪಲ್ ಲಾಂದ್ರಗಳಲ್ಲಿ ಬೆಳಕು ಕಡಮೆಯಾಗುತ್ತಾ ಬರುತ್ತದೆ. ಬೀದಿಯಲ್ಲಿ ವಿಷಜಂತುಗಳ ಕಾಟ ಹೆಚ್ಚಾಗಿರುವದರಿಂದ ಇನ್ನಕ್ಕ ಲಾಂದ್ರಗಳಲ್ಲಿ ಬೆಳಕು ಸರಿಯಾಗಿ ಉರಿದರೆ ಒಳ್ಳೇದು. — ಸಂತೆಯಲ್ಲಿ ಹಿಟ್ಟಿನ ಸೇರುಗಳ ಹಾವಳಿ ಜಾಸ್ತಿಯಾಗಿದೆ. ಕೆಲವರು 3-4 ಸೇರುಗಳನ್ನು ಇಟ್ಟುಕೊಂಡು ಅಳೆಯುತ್ತಾರೆ. ಒಂದು ರೂಪಾಯಿಗೆ ರಾಗಿ ಕೊಂಡು ತುವರೆ ಸರಿಯಾಗಿ ಒಂದು ಸೇರು ಕಡಮೆ ಬರುತ್ತದೆ. ಈ ದುರ್ಭಿಕ್ಷ ಕಾಲದಲ್ಲಿ ಈ ರೀತಿ ಇದ್ದರೆ ಬಡ ಜನಗಳು ಜೀವಿಸುವದು ಕಷ್ಟ. ಸಂತೆಯಲ್ಲಿ ಕೆಲವರು ಅಂಗಡಿಗಳನ್ನು ಮನಸ್ಸುಬಂದ ಕಡೆಗಳಲ್ಲಿ ಇಟ್ಟುಕೊಳ್ಳುವದರಿಂದ ಜನಗಳ ಗಲಾಟೆ ಹೆಚ್ಚಾಗಿರುತ್ತೆ. ವ್ಯಾಪಾರ ಕೊಂಡುಕೊಳ್ಳುವವರಿಗೆ ತುಂಬಾ ಅನನುಕೂಲವಾಗಿರುತ್ತೆ. ಇವನ್ನು ಕ್ರಮಪಡಿಸುವರೆಂದು ನಂಬಿದ್ದೇವೆ. ಮುಖ್ಯವಾಗಿ ಪಟ್ಟೇ ಸೀರು, ಕಳ್ಳ ತಕ್ಕಡಿಗಳ ಹಾವಳಿ ಎಂದಿಗೆ ಕಡಮೆಯಾದೀತೆಂದು ಬಡ ಜನಗಳು ಮರುಗುತ್ತಿದ್ದಾರೆ.

ಅರಕಲಗೂಡು. — ಬಿಸಿಲು ಬಹಳ ಜಾಸ್ತಿ. ತಾ 24 ನೇ ಶುಕ್ರವಾರ ಸ್ವಲ್ಪ ಮಳೆ ಬಂತು. ಆದರೂ ಪ್ರಯೋಜನವಾಗಲಿಲ್ಲ. ಭೂಮಿಯಲ್ಲಿದ್ದ ಒಣಹುಲ್ಲು ಗೆಡ್ಡೆ ಇವು ಸ ರವಾಗುವುದಕ್ಕೆ ಮಾರ್ಗವಾಯಿತು. ನೀರಿಗೆ ತುಂಬಾ ಕಷ್ಟ. ಈ ಕಾಲಕ್ಕೆ ಮುಂಗಾರು ಮಳೆ 4-5 ಸಾರಿ ಬಂದು ಭೂಮಿಯನ್ನೆಲ್ಲಾ ಹದಮಾಡಿಕೊಂಡು ಬಿತ್ತನೆಗೆ ಸಿದ್ಧಪಡಿಸಿಕೊಳ್ಳಬೇಕಾಗಿತ್ತು. ಮಳೆ ಬಾರದ್ದರಿಂದ ಹಿಂದಿನ ವರುಷದ ಕಷ್ಟವೇ ಪ್ರಾಪ್ತವಾಗುವುದೆಂದು ರೈತರೆಲ್ಲಾ ಧ್ಯಾನಗೊಂಡಿರುತ್ತಾರೆ. ದವಸಧಾನ್ಯಗಳ ಧಾರಣೆ ದಿನದಿನಕ್ಕೆ ಜಡವಾಗುತ್ತಲೇ ಇದೆ. — ಏಪ್ರಿಲ್ ತಾ 16 ರಲ್ಲಿ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಜಮಾಬಂದಿಗಾಗಿ ದಯಮಾಡಿ 2-3 ದಿನ ಇದ್ದು ಎಲ್ಲಾ ಕೆಲಸವನ್ನೂ ನಡಿಸಿಕೊಂಡು ವಾಪಸು ತೆರಳಿದರು. — ಈ ಊರಿನಲ್ಲಿ ಗೋಮಾಂಸವನ್ನು ಮಾರುವುದಕ್ಕೆ ಒಂದು ಅಂಗಡಿಗೆ ಸರ್ಕಾರದಿಂದ ಅಪ್ಪಣೆಯಾಗಿದೆಯೆಂದು ವರ್ತಮಾನ. ಇದರಿಂದ ಈ ಪ್ರಾಂತ್ಯದ ದನಕರುಗಳ ವೃದ್ಧಿಗೆ ಕೇಡು ಬಂದೊದಗಿತು. ಸರ್ಕಾರದವರು ಹೊರದೇಗಿ ಗೋಮಾಂಸ ಮಾರುವುದಕ್ಕೆ ಲೈಸೆನ್ಸನ್ನು ಕೊಡದೆ ಈಗ ಇರುವ ಅಂಗಡಿಗಳ ಲೈಸೆನ್ಸನ್ನು ವಜಾಮಾಡಿದರೆ ನಮ್ಮ ಪ್ರಯೋಜನಕ್ಕಾಗಿರುವ ಮೂಕ ಪ್ರಾಣಿಗಳು ಇನ್ನು ಕೆಲವು ಕಾಲ ಜೀವಿಸುವುದಕ್ಕೆ ಮಾರ್ಗವಾಗುತ್ತೆ. — ಪ್ರತಿ ಗುರುವಾರ ಬರತಕ್ಕ ವೃತ್ತಾಂತ ಪತ್ರಿಕೆ ಅರಕಲಗೂಡಿಗೆ ಶನಿವಾರ ತಲಪುವದು. ಕೆಲವು ವೇಳೆ 2-3 ದಿನ ಪೋಸ್ಟಿನಲ್ಲಿ ನಿಂತು ಕಾಲಕ್ಕೆ ಸರಿಯಾಗಿ ಬಾರದೆ ತೊಂದರೆಯಾಗುತ್ತೆ. ಕಳೆದ ತಾ 23 ನೇ ಗುರುವಾರದ ಪತ್ರಿಕೆಯು ತಾ 27 ಕ್ಕೆ ಅರಕಲಗೂಡಿಗೆ ಬಂದಿದೆ. ಅದು ಯಡತೊರೆಯ ಮಾರ್ಗವಾಗಿ ಬರಬೇಕಾಗಿರುವದರಿಂದ ಮಧ್ಯದ ಪೋಸ್ಟಾಫೀಸುಗಳಲ್ಲಿ ನಿಂತುಬರುವುದು. ಆಯಾ ಆಫೀಸುಗಳಲ್ಲಿ ಕೆಲಸ ಮಾಡುವವರ ಬಟುವಟಿಕೆಯು ಎಷ್ಟರಮಟ್ಟಿಗಿದೆ ಎಂದು ತಿಳಿಯಬಹುದು.

ತರೀಕೆರೆ ತಾ॥ ತೀರನಹಳ್ಳಿ. — ಒಂದು ಹದ ಮಳೆಯು ತಕ್ಕಮಟ್ಟಿಗೆ ಬಿದ್ದಿರುತ್ತದೆ. ರೈತರೆಲ್ಲರೂ ಭೂಮಿಯನ್ನು ಉಳಲು ಆರಂಭಿಸಿರುತ್ತಾರೆ. — ಈ ಊರಿನ ಗೌರ್ನಮೆಂಟ್ ವಿ. ಇ. ಸ್ಕೂಲಿನಲ್ಲಿ ಪ್ರತಿ ತಿಂಗಳಲ್ಲಿಯೂ ನಡೆಯುವ ಸ್ಟೂಡೆಂಟ್ಸ್ ಅಸೋಸಿಯೇಷನ್ ಎಂಬ ಸಂಘವು ತಾ 21 ನೇ ಸೋಮವಾರ ಹುಳಿಯಾರು ಮಠದ ವೇ॥ ಬಸವಯ್ಯನವರ ಆತಿಥ್ಯದಿಂದ ಶ್ರೀನರಸಿಂಹದೇವರ ದೇವಸ್ಥಾನದಲ್ಲಿ ನಡಿಸಲ್ಪಟ್ಟಿತು. ಈ ಸಂಘಕ್ಕೆ ನಮ್ಮ ತಾಲ್ಲೂಕು ಅಮಲ್ದಾರರವರು, ಪೋಲೀಸ್ ಇನ್ಸ್‌ಪೆಕ್ಟರವರು, ಶೇಕದಾರ್, ಪೋಲೀಸ್ ಜಮೇದಾರ್ ವಗೈರಾ ವಹಿವಾಟದವರೆಲ್ಲಾ ದಯಮಾಡಿಸಿದ್ದರು. ಸ್ಥಳ ಮತ್ತು ಪರಸ್ಥಳದ ಜನರು ಸುಮಾರು 400 ರ ವರೆಗೆ ಸಭೆಯಲ್ಲಿ ಸೇರಿದ್ದರು. ಸ್ಕೂಲ್ ವಿದ್ಯಾರ್ಥಿಗಳು ನೀತಿಕಥೆಯನ್ನು ಅಭಿನಯ ರೂಪವಾಗಿ ತಿಳಿಸಿದರು. ಸ್ಕೂಲ್ ಮೇಷ್ಟರ್ ಮ॥ ಎನ್. ಕರಿಬಸಪ್ಪನವರು ವಿದ್ಯಾಪ್ರಯೋಜನದ ವಿಷಯವಾಗಿ ಉಪನ್ಯಾಸವನ್ನು ಓದಿದರು. ಅಮಲ್ದಾರರವರು ಈ ಉಪನ್ಯಾಸದ ಮುಖ್ಯಾಂಶಗಳನ್ನೆಲ್ಲಾ ಸಭಿಕರ ಮನಸ್ಸಿಗೆ ನಾಟುವಂತೆ ಮಧುರ ಭಾಷಣದಿಂದ ತಿಳಿಸಿದರಲ್ಲದೆ ಇಂಥಾ ಸಂಘಗಳನ್ನು ನಡಿಸುವುದರಿಂದಲೂ, ವೃತ್ತಾಂತಪತ್ರಿಕೆಗಳು, ಕಥೆ ಪುರಾಣಗಳು ಮುಂತಾದವುಗಳನ್ನು ಓದುವುದರಿಂದಲೂ ಉಂಟಾಗತಕ್ಕ ಪ್ರಯೋಜನಗಳನ್ನೆಲ್ಲಾ ಬೋಧಿಸಿದರು. ಅನಂತರ ಪೋಲೀಸ್ ಇನ್ಸ್‌ಪೆಕ್ಟರವರು ವ್ಯವಸಾಯಕ್ಕೆ ಅನುಕೂಲವಾದ ಸೀಮೆಯ ಕೃಷ್ಯುಪಕರಣಗಳ ಪ್ರಯೋಜನಗಳನ್ನೆಲ್ಲಾ ವಿವರವಾಗಿ ತಿಳಿಸಿದರಲ್ಲದೆ ಈಗಿನ ನವೀನ ಪದ್ಧತಿಯಂತೆ ವಿದ್ಯೆಯನ್ನು ಬಾಲಕರಿಗೆ ಬೋಧಿಸಬೇಕೆಂಬ ಅಂಶವನ್ನು ಸ್ಕೂಲ್ ಮಾಸ್ಟರಿಗೆ ತಿಳಿಸಿದರು. ಬಳಿಕ ಅಮಲ್ದಾರರವರು ಗ್ರಾಮಾಭಿವೃದ್ಧಿ ಸಂಘಕ್ಕೆ ಮ॥ ಗಳಾದ ಪಟೇಲ್ ಸಿದ್ಧೆಗೌಡರು, ಯಜಮಾನ ನಿಂಗಳ್ಳೀರ ಸಿದ್ರಾಮಣ್ಣನವರು, ಮಠದ ರುದ್ರಯ್ಯನವರು, ಬಡಗಿ ಉದ್ದನಪ್ಪನವರು, ಗೌಡರ ಸಿದ್ದನಂಜಪ್ಪನವರು, ಈ ಐದು ಜನಗಳನ್ನೂ ಮೆಂಬರುಗಳಾಗಿ ಚುನಾಯಿಸಿ, ಮೀಟಿಂಗ್ ನಡೀತಕ್ಕ ಕ್ರಮಗಳನ್ನೆಲ್ಲಾ ತಿಳಿಸಿದರು. ಅನಂತರ ಶ್ರೀದೇವರಿಗೆ ಮಂಗಳಾರತಿ ನಡೆದು ಸೇರಿದ ಸಭಿಕರಿಗೆಲ್ಲಾ ಪಾನ್ ಸುಪಾರಿಯೂ, ಬಾಲಕರಿಗೆ ತಿಂಡಿಯೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು. ಬಳಿಕ ಅಮಲ್ದಾರರು ಊರೊಳಗೆ ದಯಮಾಡಿ ಗ್ರಾಮ ಪಾಕೀಜು ವಿಷಯವಾಗಿ ಜನಗಳಿಗೆ ಬೋಧಿಸುತ್ತಾ, ಪ್ರಜೆಗಳ ಅಹವಾಲನ್ನು ಅಂಗೀಕರಿಸಿ ಸದುತ್ತರವನ್ನು ದಯಪಾಲಿಸುತ್ತಾ ಊರನ್ನೆಲ್ಲಾ ಪರಿಶೋಧಿಸಿ ಆ ರಾತ್ರಿ ರೈಲು ಹತ್ತಿ ತರೀಕೆರೆಗೆ ದಯಮಾಡಿದರು.

ಹಾಸನ. — ತಾ 23 ನೇ ಬುಧವಾರ ಬೆಳಿಗ್ಗೆ ಈ ಟವನ್ ಮ್ಯುನಿಸಿಪಾಲಿಟಿ ಮೆಂಬರುಗಳ ಮೀಟಿಂಗ್ ನಡೆಯಿತು. ಈ ಪ್ರಾಂತ್ಯ ಬಿಸಿಲಿನ ತಾಪವೂ ಬಿರುಗಾಳಿಯೂ ಅಧಿಕವಾಗಿರುವುದರಿಂದ ಆಗಾಗ್ಗೆ ಬೆಂಕಿಯ ಭಯವೂ ಉಂಟಾಗುತ್ತಿರುವುದನ್ನು ಯೋಚಿಸಿ, ಅಂತಹ ಆಪತ್ಕಾಲಕ್ಕೆ ಅನುಕೂಲಿಸುವಂತೆ ಒಂದು ಪೈರ್ ಎಂಜಿನನ್ನು ತರಿಸಬೇಕೆಂದು ತೀರ್ಮಾನವಾಗಿದೆ. ಕುಡಿಯುವ ನೀರಿಗೆ ದೇವಗೆರೆಯ ನೀರೇ ಎಲ್ಲರಿಗೂ ಆಧಾರವಾಗಿದೆ. ಇದರಲ್ಲಿಯೂ ನೀರು ಬತ್ತುತ್ತಾ ಬಂದಿದೆ ಮತ್ತು ಕುಡಿಯುವುದಕ್ಕೂ ಚೆನ್ನಾಗಿಲ್ಲ. ಮ್ಯುನಿಸಿಪಲ್ ಪಾರ್ಕಿನಲ್ಲಿರುವ ಭಾವಿಗಳೆರಡರ ನೀರೂ ಚೆನ್ನಾಗಿದೆ. ಈ ಸ್ಥಳವು ದಕ್ಷಿಣೋತ್ತರ ಭಾಗಗಳೆರಡಕ್ಕೂ ಬಹು ದೂರವಾಗಿರುವುದರಿಂದ ಈ ಎರಡು ಕಡೆಯ ನಿವಾಸಿಗಳಿಗೂ ನೀರಿಗೆ ಕಷ್ಟವೆಂದೇ ಹೇಳಬೇಕು. ನಮ್ಮ ಮ್ಯುನಿಸಿಪಾಲಿಟಿಯವರು ಈ ಎರಡು ಕಡೆಗಳಿಗೂ ಒಂದೊಂದು ಭಾವಿಯನ್ನು ತೋಡಿಸಿದರೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ ಮತ್ತು ಬೆಂಕೀ ಅನಾಹುತ ಉಂಟಾದಾಗ ನೀರನ್ನು ಒದಗಿಸಿಕೊಳ್ಳುವುದಕ್ಕೂ ಅವು ಅನುಕೂಲಿಸುವವು. ಈ ಮ್ಯುನಿಸಿಪಾಲಿಟಿಯು ಸಿವಿಲ್ ಆಸ್ಪತ್ರೆಯ ಎದುರಿಗಿರುವ ಕೊಚ್ಚೇ ಗುಂಡಿಯನ್ನು ಮುಚ್ಚಿಸುವುದಕ್ಕಾಗಲಿ, ಅದನ್ನು ಚೆನ್ನಾಗಿಯೂ ಆಳವಾಗಿಯೂ ತೋಡಿಸಿ ಕಲ್ಯಾಣಿಯಂತೆ ಕಟ್ಟಿಸಿ ಸುತ್ತಲೂ ಉದ್ಯಾನವನವನ್ನು ಮಾಡಿಸುವುದಕ್ಕಾಗಲಿ ಇನ್ನೂ ಗಮನಕೊಟ್ಟಂತೆ ಕಾಣಲಿಲ್ಲ. ಇದರಿಂದ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಸೊಳ್ಳೆಯ ಕಾಟ ತಪ್ಪುವಂತಿಲ್ಲ. — ತಾ 23 ನೇ ಬುಧವಾರ ಮಧ್ಯಾಹ್ನ ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ಒಂದು ಮೀಟಿಂಗು ನಡೆಯಿತು. ಸಂಪದಭಿವೃದ್ಧಿ ಸಮಾಜಕ್ಕೆ ಈ ಡಿಸ್ಟ್ರಿಕ್ಟಿಗೆ ಒಬ್ಬ ಮೆಂಬರನ್ನು ಚುನಾಯಿಸಲು ಓಟುಗಳು ಹಾಕಲ್ಪಟ್ಟವು. ಇದೇ ವಾರ ಈ ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿ ಸಮಾಜದ ಶಾಖೆಯ ಮೀಟಿಂಗೂ, ಮಲೆನಾಡಿನ ಅಭಿವೃದ್ಧಿಯ ಮೀಟಿಂಗೂ ನಡೆದವು. — ಈ ಟವನ್ನಿಂದ ಅರಸಿಕೆರೆ, ಹೊಳೆನರಸೀಪುರ, ಅರಕಲಗೂಡು, ಈ ತಾಲ್ಲೂಕುಗಳಿಗೆ ಹೋಗುವ ರಸ್ತೆಗಳು ಗಾಡಿಗಳ ಸಂಚಾರಕ್ಕೆ ತುಂಬಾ ಕಷ್ಟವಾಗಿವೆ. ಅರಸಿಕೆರೆ ರಸ್ತೆಯಂತೂ ಬಹುಮಟ್ಟಿಗೆ ಕೆಟ್ಟುಹೋಗಿರುವುದಲ್ಲದೆ ಈ ರಸ್ತೆಯಲ್ಲಿ ಕಳ್ಳತನವೂ ಹೆಚ್ಚಾಗಿದೆ. ಈಗ್ಗೆ ಒಂದು ತಿಂಗಳಿನಿಂದೀಚೆಗೆ ಬಹು ಜನ ಪ್ರಯಾಣಿಕರಿಗೆ ಕಷ್ಟನಷ್ಟಗಳುಂಟಾಗಿವೆ ಎಂದು ತಿಳಿದುಬಂದಿತು. ಇಂಜಿನಿಯರ್ ಇಲಾಖೆಯವರು ರಸ್ತೆಗಳನ್ನು ಸರಿಮಾಡಿಸುವುದಕ್ಕೂ, ಪೋಲೀಸು ಇಲಾಖೆಯವರು ಪ್ರಯಾಣಿಕರ ಮಾನ ಪ್ರಾಣ ಧನಗಳನ್ನು ಕಾಪಾಡುವುದಕ್ಕೂ ಹೆಚ್ಚಾದ ಗಮನ ಕೊಡುವುದು ಅಗತ್ಯವಾಗಿದೆ. — ನಮ್ಮ ಡಿಸ್ಟ್ರಿಕ್ಟ್ ಟ್ರೆಜರಿ ಅ॥ ಕಮಿಷನರ್ ಮ॥ ಪಿ. ಗೋಪಾಲರಾಜೆ ಅರಸಿನವರು ತಮ್ಮ ವಿವಾಹಕ್ಕೋಸ್ಕರ ಮೈಸೂರಿಗೆ ಪ್ರಯಾಣಮಾಡಿದರು.

ಮಳವಳ್ಳಿ ತಾ॥ ಕೊತ್ತನಹಳ್ಳಿ. — ಈ ತಾಲ್ಲೂಕಿನಲ್ಲಿ ಇದು ಒಂದು ದೊಡ್ಡ ಗ್ರಾಮ. ಪ್ರಜಾ ಸಂಖ್ಯೆ 1,600. ಈ ಪೈಕಿ ಪಂಚಮರ ಸಂಖ್ಯೆ ಜಾಸ್ತಿ 1,000. ಇವರಿಗಾಗಿ ಒಂದು ಎಲಿಮೆಂಟರಿ ಸ್ಕೂಲು 27-3-13 ರಲ್ಲಿ ಸ್ಥಾಪಿತವಾಗಿ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದೆ. ಈ ಸ್ಕೂಲ್ ಇನ್ಸ್‌ಪೆಕ್ಷನ್‌ಗೆ ಈ ಸಾರಿ ದಯಮಾಡಿಸಿದ್ದ ಅ॥ ಡೆಪ್ಯುಟಿ ಇನ್ಸ್‌ಪೆಕ್ಟರವರು ಹಾಲಿ ಸ್ಕೂಲ್ ಮಾಸ್ಟರ್ ಎಚ್. ಮರಿಗೌಡರು ಬಾಲಕರನ್ನು ನಾರುವ ಲಾಳಿ ಮಗ್ಗಗಳಲ್ಲಿ ನೆಯ್ಗೆ ಕೆಲಸದಲ್ಲಿ ತರಪೇತು ಮಾಡಿರುವದೂ ಕೂಡ ತೃಪ್ತಿಕರವಾಗಿದೆಯೆಂದು ಅಭಿಪ್ರಾಯಪಟ್ಟು ಇದಕ್ಕಾಗಿ ಸರ್ಕಾರದಿಂದ ಸಹಾಯ ಮಾಡಿಸುತ್ತೇವೆಂದು ತಿಳಿಸಿದರು. — ಇಲ್ಲಿನ ಪಂಚಮ ಕೋಆಪರೇಟಿವ್ ಸೊಸೈಟಿಯವರು ಹಾರುವ ಲಾಳಿ ಯಂತ್ರಗಳನ್ನು ತರಿಸಿಕೊಂಡು ನಡಿಸುತ್ತಿರುವ ನೆಯ್ಗೆ ಕಸಬನ್ನು ನೋಡಿ ಈ ಪ್ರಾಂತ್ಯದ ನೆಯ್ಗೆ ಕಸಬಿನವರು ತಮಗೂ ತರಿಸಿಕೊಡಬೇಕೆಂದು ಆತುರಪಡುತ್ತಾರೆ. ಸದ್ಯ 10 ಮಗ್ಗಗಳಲ್ಲಿ ಸೀರೆ, ವಸ್ತ್ರ, ಪಂಚೆ ಮುಂತಾದವುಗಳನ್ನು ನಾಜೂಕಾಗಿ ತಯಾರುಮಾಡುತ್ತಿದೆ. ಈ ಹಾರುವ ಲಾಳಿ ಯಂತ್ರಗಳನ್ನು ಜೋಡಿಸಲಿಕ್ಕೆ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯ ಡೈರೆಕ್ಟರ್ ಸಾಹೇಬರು ಒಬ್ಬ ಡೆಮಾನ್‌ಸ್ಟ್ರೇಟರನ್ನು ಸಹ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಡೆಮಾನ್‌ಸ್ಟ್ರೇಟರ್ ಮ॥ ಮುತ್ತುಸಾಮಿ ಮೊದಲಿಯಾರ್‌ರು ಪಂಚಮರಲ್ಲಿ ಭೇದವಿಡದೆ ಸಮ್ಮಿಳಿತವಾಗಿ ಕೆಲಸಮಾಡುತ್ತಿರುವರು. — ಮಳವಳ್ಳಿಗೆ ಡಿವಿಷನ್ ಸಾಹೇಬರವರ ಸವಾರಿಯು ದಯಮಾಡಿಸಿದ್ದಾಗ್ಗೆ ಈ ಗ್ರಾಮದ ಮುಖಂಡರು ಮುಂದಿಂದ ನಮ್ಮ ಗ್ರಾಮದ ಮೇಲೆ ಒಂದು ಗ್ರಾವಲ್ ರಸ್ತೆಯನ್ನು ಮೊಹರಿ ವಗೈರೆಗಳಿಲ್ಲದೆ ಮಳವಳ್ಳಿಗೆ ಮಾಡಿಸಿಕೊಡಬೇಕೆಂದೂ, ಗುದಗ್ಗೆ ಸಾಲಿನಲ್ಲಿ ಒಡೆದುಹೋಗಿರತಕ್ಕ ಈ ಗ್ರಾಮದ ಕೆರೆಯನ್ನು ಕಟ್ಟಿಸಿಕೊಡಬೇಕೆಂದೂ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಇಲ್ಲಿನ ಕುಡಿಯುವ ನೀರಿಗೆ ತುಂಬಾ ಅಭಾವವಾಗಿದೆ. ಜಲಕ್ಷಾಮವಂತೂ ಹೇಳತೀರದು. ಈ ಗ್ರಾಮಕ್ಕೆ ಅರ್ಧ ಮೈಲಿ ಫಾಸಲೆಯಲ್ಲಿರುವ ಗುರುಕಾರ್ ಕೆಂಪಣ್ಣನವರ ಕಟ್ಟೆಯಲ್ಲಿ ಕುಡಿಯುವ ನೀರು ಒದಗುವಂತೆ ಮ॥ ಗು. ಕೆಂಪಣ್ಣನವರು ತುಂಬಾ ಮೆಹನತ್ತಿನಿಂದ ನೀರು ಗಲೀಜು ಮಾಡದಂತೆ ಕಟ್ಟುಮಾಡಿ ಕಾವಲಿಟ್ಟು ಸಹಾಯಮಾಡುತ್ತಿರುವುದು ಶ್ಲಾಘನೀಯವಾಗಿರುತ್ತೆ. ಇವರು ಉತ್ತಮರ ಸ್ಕೂಲಿಗಾಗಿ ತಮ್ಮ ಸ್ವಂತ ಕಟ್ಟಡವನ್ನು ಬಿಟ್ಟುಕೊಡುವುದಾಗಿ ವಾಗ್ದಾನಮಾಡಿ ಡೆಪ್ಯುಟಿ ಇನ್ಸ್‌ಪೆಕ್ಟರು ದಯಮಾಡಿಸಿದ್ದಾಗ್ಗೆ ಸ್ಕೂಲಿಗೆ ಅರ್ಜಿ ಕೊಟ್ಟು ಸ್ಕೂಲನ್ನು ಇಡಿಸಬೇಕೆಂದು ನಿರೀಕ್ಷಿಸುತ್ತಿರುವರು. ಆ ಗ್ರಾಮದ ಜಮೀನ್‌ದಾರ್ ಮ॥ ಬೊ. ಮಾದೇಗೌಡರೂ, ಗುರುಕಾರ್ ಕೆಂಪಣ್ಣನವರೂ ತಮ್ಮ ಸ್ವಂತ ಖಾಗೋಡಿನಿಂದ ಅಲಾಹಿದ ಒಂದು ಸ್ಕೂಲ್ ಕಟ್ಟಡ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. — ಮ॥ ಹೊಂಬಾಳೆ ಮಾದೇಗೌಡರು ಈ ಗ್ರಾಮದಲ್ಲಿ ಭಾರಿ ಜಮೀನ್‌ದಾರರಾಗಿ ಲೇವಾದೇವಿ ಇಟ್ಟು ಸುಲಭ ಬಡ್ಡಿಗೆ ಸಹಾಯಮಾಡುತ್ತಿದ್ದಾರೆ. ಪ್ರತಿ ನಿತ್ಯವೂ ಹತ್ತಾರು ಜನ ಬಡಬಗ್ಗರಿಗೂ ಪರಸ್ಥಳದವರಿಗೂ ಅನ್ನ ಹಾಕಿಸುತ್ತಾ ಈ ಪ್ರಾಂತ್ಯ ತುಂಬಾ ಹೆಸರುವಾಸಿ ಪಡೆದಿದ್ದಾರೆ.

ಇಂಡಿಯಾ ದೇಶದ ವೃತ್ತಾಂತಗಳು

ಮಾಮೋರಾ ಎಂಬ ಹಡಗು 36,09,600 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ.

ಕಲ್ಕತ್ತಾ ಪಟ್ಟಣದಲ್ಲಿ ಭಾರೀ ವಕೀಲನಾಗಿಯೂ, ವಿದ್ಯಾಪ್ರಚಾರಕ್ಕೆ ಲಕ್ಷಾಂತರ ರೂಪಾಯಿ ಧರ್ಮ ಮಾಡಿದವನಾಗಿಯೂ ಇರುವ ಸರ್ ತಾರಕನಾಥ ಪಲಿತ್ ಎಂಬಾತನು ಈಗ ತುಂಬಾ ಕಾಯಿಲೆಯಾಗಿರುತ್ತಾನೆಂದು ವರ್ತಮಾನ ಬಂದಿದೆ.

ಕಲ್ಕತ್ತಾ ಪಟ್ಟಣದಲ್ಲಿದ್ದ ಇಂಡಿಯಾ ಗವರ್ನ್‌ಮೆಂಟಿನ ಸೆಕ್ರೆಟರಿಯಟ್ ಆಫೀಸ್ ಕಟ್ಟಡಗಳನ್ನು ರೈಲ್ವೆ ಕಂಪನಿಯವರು 26 ಲಕ್ಷ ರೂಪಾಯಿಗೆ ಕೊಂಡುಕೊಂಡರು. ಆ ಕಟ್ಟಡಗಳಿಗೆ ಗವರ್ನ್‌ಮೆಂಟಿನವರು 28 ಲಕ್ಷ ರೂಪಾಯಿ ಖರ್ಚು ಮಾಡಿದ್ದರು.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ವಿದ್ಯಾಶಾಲೆಗಳ ಅಧಿಕಾರಿಗಳೆಲ್ಲಾ ಕಳೆದ ವಾರ ಸಭೆ ಸೇರಿ, ಆ ಪ್ರಾಂತ್ಯದೊಳಗೆ ವಿದ್ಯಾರ್ಥಿಗಳಲ್ಲಿ ಅರಾಜಕ ಮತವು ಹಬ್ಬುತ್ತಿರುವುದನ್ನು ಅಡಗಿಸುವುದಕ್ಕೆ ಏನು ಮಾಡಬೇಕೆಂದು ಆಲೋಚನೆ ಮಾಡಿದರು.

ಕರಾಚಿ ಪಟ್ಟಣದ ಮ್ಯುನಿಸಿಪಾಲಿಟಿಯವರ ಶಿಫಾರಸನ್ನು ಒಪ್ಪಿಕೊಂಡು ಇನ್ನು ಮುಂದೆ ಆ ಪಟ್ಟಣದಲ್ಲಿ ಆಕ್ಟ್ರಾಯಿ ಸುಂಕಗಳನ್ನೆಲ್ಲಾ ವಜಾಮಾಡಿದೆ ಎಂದೂ, ಅವುಗಳಿಗೆ ಪ್ರತಿಯಾಗಿ ಟೋಲ್‌ಗೇಟುಗಳ ಹುಟ್ಟುವಳಿ ಒಂದನ್ನೇ ಇಟ್ಟುಕೊಳ್ಳಬೇಕೆಂದೂ ಬೊಂಬಾಯಿ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಬೀಹಾರ್ ಗವರ್ನ್‌ಮೆಂಟಿನವರು ಕೆಲವು ಮಂದಿ ಪೋಲೀಸಿನವರನ್ನು ಸೀಮೆಗೆ ಕಳುಹಿಸಿ ಅಲ್ಲಿನ ಪ್ರವೀಣರ ಕೈಕೆಳಗೆ ಪತ್ತೇದಾರಿ ಕೆಲಸಗಳನ್ನು ಕಲಿತು ಅನುಭವ ಮಾಡಿಕೊಂಡು ಬರುವಂತೆ ಸ್ಯಾಂಕ್ಷನ್ ಮಾಡಿದ್ದಾರೆ. ಕಲ್ಕತ್ತೆಯಿಂದಲೂ ಕೆಲವು ಪೋಲೀಸಿನವರನ್ನು ಅವರ ಕೂಡ ಕಳುಹಿಸುವರೆಂಬ ವರ್ತಮಾನವಿದೆ.

ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್‌ರವರ ಜನ್ಮೋತ್ಸವವನ್ನು ಈ ಸಲ ಜೂನ್ ತಾ 22 ಕ್ಕೆ ಪ್ರತಿಯಾಗಿ ಇದೇ ಮೇ ತಿಂಗಳ ತಾ 18 ನೇ ಸೋಮವಾರ ಹಿಂದುಸ್ಥಾನದೊಳಗೆ ಆಚರಿಸಬೇಕೆಂದೂ, ಆ ದಿನ ಎಲ್ಲಾ ಕಡೆಗಳಲ್ಲೂ ಮಕ್ಕಳಿಗೆ ಆಟಗಳನ್ನು ಕಲ್ಪಿಸಿ ತಿಂಡಿ ಹಂಚಿ ಸಂತೋಷಪಡಿಸಬೇಕೆಂದೂ ಗೊತ್ತಾಗಿದೆ.

ಕಳೆದ ವಾರ ಬೊಂಬಾಯಿ ಪಟ್ಟಣದ ನಲ್‌ಬಜಾರವೆಂಬ ಬೀದಿಯಲ್ಲಿ ಒಂದು ಸಾಲಿನ ಅಂಗಡಿಗಳಿಗೆ ಬೆಂಕಿಬಿದ್ದು ಉರಿದು ಹೋದವು. ಆದರೆ ಮುಕ್ಕಾಲು ಗಂಟೆಯೊಳಗಾಗಿ ಮ್ಯುನಿಸಿಪಾಲಿಟಿಯವರು ಇಂಜಿನ್ ಮೂಲಕ ನೀರು ಎರಚಿ ಬೆಂಕಿಯನ್ನು ಅಡಗಿಸಿದರು. ಆದಾಗ್ಯೂ ಅಷ್ಟರೊಳಗೇ 22,000 ರೂಪಾಯಿನ ಮಾಲು ನಷ್ಟವಾಯಿತು.

ರಂಗೂನ್‌ನಿಂದ ಜಪಾನ್ ಕಂಪನಿಯ ಪೈಸುಮಾರು ಎಂಬ ಹಡಗು ಗೋಪಾಲಪುರಕ್ಕೆ ಬಂದಾಗ ಆ ಸ್ಟೇಷನ್ ಅಧಿಕಾರಿಗಳು ಹಡಗಿನೊಳಕ್ಕೆ ಹೋಗಿ ಆಜಮಾಯಿಷಿ ಮಾಡಿದರು. ಕಾನೂನಿಗೆ ವಿರೋಧವಾಗಿ ಹೆಚ್ಚು ಮಂದಿ ಪ್ರಯಾಣಿಕರು ಅದರಲ್ಲಿ ಇದ್ದದ್ದರಿಂದ ಆ ಹಡಗನ್ನು ದಸ್ತಗಿರಿ ಮಾಡಿದರು. ಪ್ರಯಾಣಿಕರನ್ನೆಲ್ಲಾ ಕರೆದುತಂದು ರೈಲಿನ ಮೇಲೆ ಅವರವರ ಸ್ಥಳಕ್ಕೆ ಕಳುಹಿಸಿದರು.

ಪಂಜಾಬ್ ಆಧಿಪತ್ಯದ ಹಿಂದೂ ಪ್ರಮುಖರು ಲಾಹೋರ್ ಪಟ್ಟಣದಲ್ಲಿ ಸೇರಿ ಎರಡು ದಿನ ಮಹಾಸಭೆಯನ್ನು ನಡಿಸಿದರು. ಹಿಂದುಗಳ ಆಚಾರ ವಿಚಾರಗಳೂ, ಈಗಿನ ವಿದ್ಯಾಭ್ಯಾಸ ಕ್ರಮವೂ, ಇವುಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆಮಾಡಿಕೊಳ್ಳಬೇಕೆಂಬ ವಿಚಾರವೂ ಸಭೆಯಲ್ಲಿ ಚರ್ಚೆಯಾದವು. ಕಡೆಯಲ್ಲಿ ಹಿಂದುಗಳ ಸಹಜವಾದ ಚರಿತ್ರೆಯೊಂದನ್ನು ಸರಿಯಾದ ಕ್ರಮದಲ್ಲಿ ಬರಸಿಡಬೇಕೆಂದು ಸಭಿಕರು ತೀರ್ಮಾನಮಾಡಿದರು.

ಕರ್ಪೂರದ್ರಾವಕವು ಹಿಂದುಸ್ಥಾನಕ್ಕೆ ಹೊರಗಿನಿಂದ ವಿಶೇಷವಾಗಿ ಬರುತ್ತಿದೆ. ಇದನ್ನು ನಮ್ಮ ದೇಶದಲ್ಲೇ ಕಾರ್ಖಾನೆಗಳನ್ನಿಟ್ಟು ತಯಾರುಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕೆಲವು ವ್ಯಾಪಾರಿಗಳು ಕಳೆದ ವಾರ ಡೆಹ್ರಾ ಡೂನ್ ಪಟ್ಟಣದಲ್ಲಿ ಸೇರಿ ಆಲೋಚನೆ ಮಾಡಿದ್ದಾರೆ. ಲಾಹೋರಿನಲ್ಲೂ, ಭೂಪಾಲಿ ಎಂಬ ಸ್ಥಳದಲ್ಲೂ ಎರಡು ಕಾರ್ಖಾನೆಗಳನ್ನು ಇಡುವಂತೆ ಏರ್ಪಾಡಾಗಿದೆ. ಇದಕ್ಕಾಗಿ ಸೀಮೆಯಿಂದ ಭಾರಿ ಯಂತ್ರೋಪಕರಣಗಳನ್ನು ತರಿಸಿರುವರು.

ನಾಗಪುರದಲ್ಲಿ ಭಗವಂತ ಕೃಷ್ಣ ಆಪ್ಟೆ ಎಂಬೊಬ್ಬ ಪೋಲೀಸ್ ಇನ್ಸ್‌ಪೆಕ್ಟರು ಉಂಶ್ರ ಕರಶೀಲಿನ ಧನಲಾಭ್ ಎಂಬುವನನ್ನು ಹಿಡಿದು ಹುಸಿ ಕಳುವು ಮಾಡಿದನೆಂದು ಅಪರಾಧ ಹೊರಿಸಿ ಅವನಿಂದ 50 ರೂಪಾಯಿ ಲಂಚ ತೆಗೆದುಕೊಂಡು ಮೊಕದ್ದಮೆಯನ್ನು ಕೈಬಿಟ್ಟನೆಂದು ಆ ಪೋಲೀಸಿನವನ ಮೇಲೆ ಫಿರ್ಯಾದು ಬಂದಿದೆ. ಮ್ಯಾಜಿಸ್ಟ್ರೇಟರು ಈ ಫಿರ್ಯಾದಿಯನ್ನು ವಿಚಾರಣೆ ಮಾಡಿದ್ದಾಯಿತು. ಮುಂದಿನ ವಾರ ತೀರ್ಮಾನ ಹೇಳುವಂತೆ ತಿಳಿಸಿದ್ದಾರೆ.

ಕಳೆದ ವಾರ ಕಲ್ಕತ್ತಾ, ಹೌರಾ ಮುಂತಾದ ಕಡೆಗಳಲ್ಲಿ ಅಪಾರವಾದ ಮಳೆಯೂ ಸುಂಟರಗಾಳಿಯೂ ಸಂಭವಿಸಿ ನಾನಾ ಕಷ್ಟನಷ್ಟಗಳು ಪ್ರಾಪ್ತವಾದವು. ನೂರಾರು ಮನೆಗಳು ಕೊಚ್ಚಿ ಬಿದ್ದು ಹೋದವು. ಕೆಲವು ಜನರಿಗೆ ಗಾಯಗಳಾಗಿರುತ್ತವೆ. ಗಾಡಿಗಳು ನಡೆಯದೆ ನಿಂತು ಹೋಗಿದ್ದವು. ತಂತೀ ಕಂಬಗಳೂ ಭಾರೀ ಮರಗಳೂ ಉರುಳಿಕೊಂಡವು. ಸಮುದ್ರ ತೀರದಲ್ಲೂ, ನದಿಯ ಮುಖದಲ್ಲೂ ನಿಂತಿದ್ದ 23 ಹಡಗುಗಳೂ ಹತ್ತಾರು ದೋಣಿಗಳೂ ಮುಳುಗಿಕೊಂಡವು.

ಮುಲ್ತಾನ್ ಪಟ್ಟಣದಲ್ಲಿ ಕಳೆದ 3-4 ತಿಂಗಳೊಳಗೆ ಹದಿನೈದು ದೇಶೀಯ ಬ್ಯಾಂಕುಗಳ ತನಕ ದಿವಾಳಿ ಆಗಿ ಅವುಗಳಲ್ಲಿ ಹಣಗಳನ್ನು ಹಾಕಿದ್ದ ಸಾವಿರಾರು ಪ್ರಜೆಗಳು ತಮ್ಮ ಹಣಗಳನ್ನು ಕಳೆದುಕೊಂಡು ಸಂಕಟಪಡುತ್ತಿದ್ದಾರೆ. ಆ ಬ್ಯಾಂಕುಗಳ ಆಸ್ತಿಪಾಸ್ತಿಗಳೇ ಮುಂತಾದ ವೃತ್ತಾಂತಗಳನ್ನು ಆಗಿಂದಾಗ್ಗೆ ಷೇರುದಾರರಿಗೂ ಡಿಪಾಜಿಟ್‌ದಾರರಿಗೂ ತಿಳಿಸುವುದಕ್ಕಾಗಿ ಅಲ್ಲಿನ ರಾಯ್ ದಾಮೋದರದಾಸ್ ಎಂಬ ದೊಡ್ಡ ಮನುಷ್ಯನು ಒಂದು ವಾರಪತ್ರಿಕೆಯನ್ನು ಪ್ರಕಟಿಸುವಂತೆ ಒಪ್ಪಿಕೊಂಡಿರುತ್ತಾನೆ.

ಕಳೆದ ತಾ 25 ಕ್ಕೆ ಅಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 14,036 ಜನರಿಗೆ ಪ್ಲೇಗ್ ಉಪದ್ರ ತಗಲಿತು, 11,693 ಜನರು ಆ ರೋಗದಲ್ಲಿ ಕಾಲವಾದರು. ಈ ಮರಣ ಸಂಖ್ಯೆಯ ಪಂತಿಕೆ ಹ್ಯಾಗೆಂದರೆ — ಡೆಹಲಿ 1, ಬೊಂಬಾಯಿ 637, ಮದರಾಸ್ 9, ಬಂಗಾಳಾ 13, ಬೀಹಾರ್ 2,095, ಸಂಯುಕ್ತ ಆಧಿಪತ್ಯಗಳು 3,750, ಪಂಜಾಬ್ 4,943, ಬರ್ಮಾ 224, ಮೈಸೂರು 13, ಹೈದರಾಬಾದ್ 2, ಭೋಪಾಲ್ 2, ರಾಜಪುತಾನ 32, ವಾಯುವ್ಯಸರಹದ್ದು ಪ್ರಾಂತ್ಯ 7, ಕಾಶ್ಮೀರ 20.

ರಾವಲ್ಪಿಂಡಿ ಪಟ್ಟಣದಲ್ಲಿ ಐದು ಮಂದಿ ಯೂರೋಪಿಯನ್ ಹುಡುಗರು ಒಂದು ತೋಟಕ್ಕೆ ಹೋಗಿ ಹಣ್ಣುಗಳನ್ನು ಕಿತ್ತು ಕೊಯ್ಯುತ್ತಿದ್ದಾಗ ತೋಟಗಾರನು ಅವರನ್ನು ಓಡಿಸಬೇಕೆಂದು ಪ್ರಯತ್ನಪಟ್ಟನು. ಆದರೆ ಆ ಹುಡುಗರು ಮರೆಯಾಗಿ ತೋಟಗಾರನನ್ನು ಹೊಡೆದು ಬಹಳ ಘೋರವಾಗಿ ಗಾಯಮಾಡಿಬಿಟ್ಟರು. ಮ್ಯಾಜಿಸ್ಟ್ರೇಟನು ಆ ಐದು ಮಂದಿಯನ್ನೂ ವಿಚಾರಣೆಮಾಡಿ

ಬೊಂಬಾಯಿ ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು. ಈಗ ಹೈ ಕೋರ್ಟ್ ಜಡ್ಜರವರು ಅವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ

⁂

ಸಾಕ್ಷಿ ಎಂಬಲ್ಲಿ ಟಾಟಾ ಕಂಪನಿಯು ವಿಸ್ತಾರವಾದ ಕಾರ್ಖಾನೆಯನ್ನಿಟ್ಟು ಕಬ್ಬಿಣವನ್ನು ತುಕ್ಕಿನಿಂದ ತೆಗೆದು ರೈಲ್ ಕಂಬಿಗಳೇ ಮುಂತಾದವುಗಳನ್ನು ತಯಾರುಮಾಡಿಸುತ್ತಿದ್ದಾರಷ್ಟೆ. ಈ ಕಾರ್ಖಾನೆಯೊಳಗೆ ಕಳೆದ ವಾರ ಒಂದು ಅನಾಹುತವಾಗಿ ಹನ್ನೊಂದು ಮಂದಿಗೆ ಮರಣಕರವಾದ ಗಾಯಗಳಾಗಿವೆ. ನೀರಿನಂತಾದ ಕಬ್ಬಿಣವು ಕೊಳವೆಗಳಲ್ಲಿ ಸಾಗಿ ಬರುತ್ತಿದ್ದಾಗ ಆ ಕೊಳವೆ ಒಡೆದು ಕುದಿಯುವ ಲೋಹವು ಸಮೀಪದಲ್ಲಿದ್ದ ಕೆಲಸಗಾರರಿಗೆ ಬಡಿಯಿತು. ಈ ಪೈಕಿ 4 ಮಂದಿ ಜರ್ಮನಿಯ ಕೂಲೀಗಾರರು, 7 ಮಂದಿ ಹಿಂದುಸ್ಥಾನದವರು

⁂

ಬೊಂಬಾಯಿ ಪಟ್ಟಣದಲ್ಲಿ ತಿಂಡಿಪದಾರ್ಥಗಳನ್ನು ಬಿಕರಿಮಾಡುವ ವೈಶೆಟ್ಟಿ ಎಂಬುವನು ಮಿ॥ ಜಾರ್ಜ್ ದೇ ಎಂಬೊಬ್ಬ ಇಂಜನಿಯರನ್ನು ಕೋಪಕಾರಣಾಂತರದಿಂದ ಒದ್ದು ನೋವನ್ನುಂಟುಮಾಡಿದನು. ಇದಕ್ಕಾಗಿ ಮ್ಯಾಜಿಸ್ಟ್ರೇಟರು ಆ ಥಾಂಡಿಗನಿಗೆ ಒಂದು ದಿನ ಸದಾ ಕೈದನ್ನೂ 600 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಜುಲ್ಮಾನೆಯ ಹಣವನ್ನೆಲ್ಲಾ ಫಿರ್ಯಾದಿಗೆ ಪಾವತಿಮಾಡಬೇಕೆಂದೂ ಫಿರ್ಯಾದಿಯು ಈ ಪರಿಹಾರ ಸಾಲದೆಂದು ಯೋಚಿಸುವುದಾದರೆ ಸಿವಿಲ್ ಕೋರ್ಟಿನಲ್ಲೂ ಅಪರಾಧಿಯ ಮೇಲೆ ದಾವಾ ಮಾಡಬಹುದೆಂದೂ ಹೇಳಿದರು

⁂

ಹಿಮಾಚಲದ ತಪ್ಪಲಲ್ಲಿರುವ ಸಿಮೂರ್ ಸಂಸ್ಥಾನದ ಸರ್ಕಾರದವರು ಬರ್ನ್ ಎಂಬ ಕಂಪನಿಯವರಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದಾರೆ. ಕಂಪನಿಯವರು ಆ ಸಂಸ್ಥಾನದಲ್ಲಿ ಹರಿಯುವ ನದಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಾರೆ. ನದಿಗಳನ್ನು ದಾಟುವುದಕ್ಕೆ ತಂತಿಗಳ ಸೇತುವೆಗಳನ್ನು ಹಾಕಿಸುವರು. ಕಾಡುಗಳಿಂದ ನಾಟಾಗಳನ್ನೂ ಸೌದೆಯನ್ನೂ ಸಾಗಿಸಿತಂದು ಬಿಕರಿಗೆ ಒದಗಿಸುತ್ತಾರೆ. ಬೊಂಬುಗಳನ್ನು ತಂದು ಕಾಗದ ತಯಾರುಮಾಡುವುದಕ್ಕೆ ಅನುಕೂಲಿಸುವಂಥಾ ತಿರುಳನ್ನು ತಯಾರುಮಾಡುತ್ತಾರೆ. ಸುಣ್ಣವನ್ನು ಸುಟ್ಟು ತಾಮ್ರವನ್ನು ತುಕ್ಕುಗಳಿಂದ ಬಿಡಿಸುತ್ತಾರೆ. ಈ ಮೊದಲಾದ ರಿಯಾಯಿತಿಗಳು ಆ ಕಂಪನಿಗೆ ದೊರಕಿರುವವು

⁂

ತಿನ್ನವೆಲ್ಲಿಯಿಂದ ನಾಗರಕಾಯಿಲಿಗೆ ಮೋಟಾರ್ ಟಪ್ಪಾಲುಗಾಡಿ ಇಟ್ಟಿದ್ದಾರೆ. ಕಳೆದ ಬುಧವಾರ 10 ಮಂದಿ ಪ್ರಯಾಣಸ್ಥರು ಮೋಟಿನಲ್ಲಿ ಕುಳಿತು ಹೋಗುತ್ತಿದ್ದಾಗ ನಡಿಸುವವನು ಬಹಳ ಜೋರಾಗಿ ಮೋಟರನ್ನು ಓಡಿಸಿದನು. ಪ್ರಯಾಣಿಕರು ಎಷ್ಟು ಹೇಳಿದರೂ ಅವನು ಲಕ್ಷ್ಯಮಾಡಲಿಲ್ಲ. ಕಡೆಗೆ ಆ ಮೋಟರ್ ಗಾಡಿ ರಸ್ತೆ ತಪ್ಪಿ ಒಂದು ಆಲದ ಮರಕ್ಕೆ ಬಡಿದು ಅನಾಹುತವಾಯಿತು. ನಡಿಸುತ್ತಿದ್ದವನೂ ಅವನ ಜೊತೆಗಾರನೂ ಗಾಡಿಯಿಂದ ಧುಮುಕಿ ಓಡಿಹೋದರು. ಗಾಡಿಯಲ್ಲಿದ್ದ 3-4 ಜನರಿಗೆ ಘೋರ ಗಾಯಗಳಾದವು. ಇವರಲ್ಲಿ ಒಬ್ಬನು ಮೃತಪಟ್ಟನು, ಇನ್ನೊಬ್ಬ ಬದುಕುವುದು ಕಷ್ಟವಾಗಿದೆ. ಆ ಗಾಡಿ ನಡಿಸಿದವನನ್ನು ಪೋಲೀಸಿನವರು ಹುಡುಕುತ್ತಿದ್ದಾರೆ.

⁂

ದೆಹಲಿ ನಗರದ ವಜೀರಾಬಾದ್ ರಸ್ತೆಯಲ್ಲಿ ಸರ್ಕಾರದವರು ಕೆಡವುತ್ತಿರುವ ಹಳೇ ಮಸ್ಜಿದಿನ ಗುಡ್ಡದಲ್ಲಿ ಒಂದು ದೊಡ್ಡ ಹೆಜ್ಜೆಯ ಗುರುತು ಇದೆ. ಈ ಹೆಜ್ಜೆಯು 32 ಅಂಗುಲ ಉದ್ದವಾಗಿಯೂ, 16 ಅಂಗುಲ ಅಗಲವಾಗಿಯೂ ಇದೆ. ಪಂಡಿತ್ ಬಂಕೆ ರಾಯ್ ಎಂಬಾತನು ಈ ಹೆಜ್ಜೆ ಗುರುತು ಪುರಾತನ ಪಾಂಡವರ ಕಾಲದ್ದೆಂದು ತಿಳಿಸಿದ್ದರ ಮೇಲೆ ಚೀಫ್ ಕಮಿಷನರವರು ಹೋಗಿ ನೋಡಿ, ಆ ಹೆಜ್ಜೆ ಗುರುತಿನ ಸುತ್ತಲೂ ಕಟಕಟೆ ಕಟ್ಟಿಸಿ ಅದನ್ನು ಕೆಡದಂತೆ ಕಾಪಾಡಬೇಕೆಂದು ಅಪ್ಪಣೆ ಕೊಟ್ಟರು. ರಾಯಬಹದೂರ್ ಲಾಲಾ ಶಿವಪ್ರಸಾದ್, ಸಿ ಐ ಇ ಯವರು ತಮ್ಮ ಸ್ವಂತ ಖರ್ಚಿನಿಂದ ಅದನ್ನು ಮಾಡಿಸುವುದಾಗಿ ಒಪ್ಪಿಕೊಂಡಿದ್ದಾರೆ

⁂

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಪ್ರತಾಪಘಡ ಸಂಸ್ಥಾನದ ರಾಜಮಾತೆಯವರ ಪತ್ನೀರವರು ಕಳೆದ ವಾರ ಕಾಲವಾದದ್ದು ಆ ಸಂಸ್ಥಾನದಲ್ಲೂ ಹೊರಗಡೆಯಲ್ಲೂ ವಿಶೇಷ ದುಃಖವನ್ನುಂಟುಮಾಡಿದೆ. ಗತಿಸಿದ ರಾಣಿಯವರು ಇನ್ನೂ ಚಿಕ್ಕವಯಸ್ಸಿನವರಾಗಿದ್ದರೂ ಅವರಿಗೆ ಇಂಗ್ಲಿಷ್, ಸಂಸ್ಕೃತ, ಪಾರ್ಸಿ ಭಾಷೆಗಳಲ್ಲೂ, ಸಂಗೀತ ಮತ್ತು ಚಿತ್ರ ಬರೆಯುವ ವಿದ್ಯೆಗಳಲ್ಲೂ ತುಂಬಾ ಪರಿಶ್ರಮವಿತ್ತು. ಆಕೆ ತುಂಬಾ ದಯಾದ್ರ್ರ ಹೃದಯವುಳ್ಳವಳಾಗಿದ್ದದರಿಂದ ಹಲವು ಬಾಲಿಕಾ ಪಾಠಶಾಲೆಗಳ ಪುರೋಭಿವೃದ್ಧಿಗೆ ಆಕೆಯವರು ವಿಶೇಷ ಕಾರಣಭೂತರಾಗಿದ್ದರು. ಆಕೆ ಪತಿಯ ಕೂಡ ಸೀಮೆಗೆ ಹೋಗಿದ್ದಾಗ ಮಹಾರಾಜ್ಞೀರವರು ಆಕೆಯ ಸದ್ಗುಣಗಳಿಗೆ ಮೆಚ್ಚಿ ಬಂಗಾರದ ಪದಕವನ್ನು ಬಹುಮಾನ ದಯಪಾಲಿಸಿದ್ದರು

⁂

ತಂಜಾವೂರಿನಲ್ಲಿ ಒಬ್ಬ ಮುಹಮ್ಮದಿಯನು ಪ್ಲೇಗ್ ತಗಲಿ ಕಾಲವಾದನು. ಅದು ಅಂಟುಜಾಡ್ಯವೆಂದೂ, ಆ ಶವವನ್ನು ಸುಡುವುದು ಕ್ಷೇಮಕರವೆಂದೂ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು ಹೇಳಿದ್ದರ ಮೇಲೆ ಮ್ಯುನಿಸಿಪಾಲಿಟಿಯವರು ಆ ಮುಹಮ್ಮದಿಯನ ಶವವನ್ನು ಅವನ ಸಹೋದರನ ಸಮ್ಮತಿ ಪಡೆದು ಸುಟ್ಟುಬಿಟ್ಟರು. ಅದರ ಮೇಲೆ ಅಲ್ಲಿನ ಮುಹಮ್ಮದಿಯರು ತಮ್ಮ ಮತಪದ್ಧತಿಗೆ ಶವವನ್ನು ಸುಟ್ಟದ್ದು ವಿರೋಧವಾಯಿತೆಂದು ಗಲಭೆಮಾಡಿದರು. ಈ ವಿಚಾರವು ಮದರಾಸ್ ನ್ಯಾಯವಿಧಾಯಕ ಸಭೆಯಲ್ಲೂ ಚರ್ಚೆಗೆ ತರಲ್ಪಟ್ಟಿತು. ಅದರ ಮೇಲೆ ಸರ್ಕಾರದವರು ತನಿಖೆಮಾಡಿ, ಶವವನ್ನು ಸುಡಬೇಕಾದ ಅಗತ್ಯವಿರಲಿಲ್ಲವೆಂದೂ, ಇನ್ನು ಮುಂದೆ ಇಂಥಾ ಸಂದರ್ಭಗಳಲ್ಲಿ ಸ್ಥಳಾಧಿಕಾರಿಗಳು ಪ್ರಜೆಗಳ ಮತಾಚಾರಕ್ಕೆ ವಿರೋಧವಾಗುವಂಥಾ ಕಾರ್ಯಗಳನ್ನು ನಡಿಸದಂತೆ ನೋಡಿಕೊಳ್ಳಬೇಕೆಂದೂ ಅಪ್ಪಣೆಕೊಡಿಸಿದ್ದಾರೆ.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು — ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3, 50 ಕ್ಕೆ 8; 100 ಕ್ಕೆ 30.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-12]

ಇರಾಮಿಯ 2 ನೆಯ ಪುಸ್ತಕದ ನೋಟ್ಸು 3½ ಆಣೆ, ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ. Notes on "Tanglewood Tales." English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ —ಯಸ್. ಆರ್. ವಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಮಾಯಾವಿ.

ಬಹುಮನೋಹರವಾದ (ಬಂಗಾಳಿ ನಾವೆಲ್) ಇದರಂತಹ ಪುಸ್ತಕ ಕನ್ನಡ ಭಾಷೆಯಲ್ಲೇ ಇಲ್ಲವೆನ್ನಬಹುದು. ಇನ್ನೊಂದು ವಾರದೊಳಗಾಗಿ ಸಿದ್ಧವಾಗುತ್ತದೆ. ಅಷ್ಟರಲ್ಲೇ ಮುಂಗಡ ಹಣ ಕಳುಹಿಸುವವರಿಗೆ ಮಾತ್ರ ಎಂಟೇ ಆಣೆ. ನಮ್ಮ ವಿಳಾಸ ನಂ. ಸುಬ್ರಹ್ಮಣ್ಯಶಾಸ್ತ್ರಿ, ಮಾಧವೀಕಂಕಣ ಇತ್ಯಾದಿ ಗ್ರಂಥಪ್ರಣೇತ, ಮೈಸೂರು



ಮೇ ಮಹೋತ್ಸವದ ಕೈ ಗಡಿಯಾರ.

[99-3]

ಅರ್ಧ ಕ್ರಯ ರೂ. 1-14-0

ಬರುವ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 21, ವಿನಾಯ್ಕಮೇಸ್ತ್ರಿ ಬೀದಿ, ಜಿ ಟಿ, ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0.

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ [99-2]

ಇದು ಉಡುವದಕ್ಕೆ ದಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ ಕೃಷ್ಣಸ್ವಾಮಿಮೊದಲಿಯಾರ್ ನಂ 21, ವಿನಾಯ್ಕಮೇಸ್ತ್ರಿ ಬೀದಿ, ಜಿ ಟಿ, ಮದರಾಸು

ಜೈನರವರ ಉತ್ತಮೋತ್ತಮ ಆಯಿಂಟ್ ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಹಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಮುವಿನ ಕೆರತ, ಎಲ್ಲಾ ತರದ ರಣಗಳು, ಹುಣ್ಣುಗಳು ಒದು ವೇಗವಾಗಿ ಬಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ವಾಸಿಯಾಗುತ್ತವೆ.



ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ಒವನ್ನೇ ಉಪಯೋಗಿಸಬಹುದು. ಇದನ್ನು ಗೋಕರುಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯುಕ್ತವೆನ್ನುಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ವಿನಿಯೋಗಿಸಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತಿರುವವನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ 1, ಸಣ್ಣ ಬಾಟ್ಲಿಗೆ 10 ಆಣೆ. ವಿ. ಪಿ. ಛಾರ್ಜು ಬೇರೆ. ಗುಲಾಬಿ ಸುಂದರ ಪ್ರಕಾರ ಕೊಡಲ್ಪಡುವ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ 1-0-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [25-16]

ವಿಳಾಸ—ಜಿ. ಗುಲಾಬ್ ಚಂದ್ ಸೌಕಾರ್,

60 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಪಿಟೀಲ್.

ಪೂರ್ವದ ಕ್ರಯ ರೂ. 15-0-0

ಈಗಿನ ಕ್ರಯ ರೂ. 8-8-0.

ಒಂದು ತಿಂಗಳ ವರೆಗೆ ಮಾತ್ರ.

ಇದು ನಮ್ಮ ಸ್ವಂತ ಆರ್ಡರ್ ಮೇರೆಗೆ ಸೀಮೆಯಲ್ಲಿ ತಯಾರಿಸಿ ನಮ್ಮ ಏಜಂಟರು ಕಳುಹಿಸಿ ಇರುತ್ತಾರೆ. ಇದು ಸಾಧಾರಣ ಪಿಟೀಲುಗಳಂಥಾದ್ದಲ್ಲ. ಇದರ ನಾದವು ಬಹಳ ಮನೋಹರವಾಗಿ ಪಿಟೀಲು ಕಲಿಯುವವರಿಗೂ, ಪಂಡಿತರುಗಳಿಗೂ, ಸ್ತ್ರೀಯರಿಗೂ ಬಹಳ ಉಪಯೋಗವಾದದ್ದು. ಈ ತರಹದ ಮೇಕರ್ ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು.

ನಮ್ಮ ವಿಳಾಸ :—

ರಾಮಸ್ವಾಮಿ ಮತ್ತು ಕಂಪನಿ, ನಂ॥ 2, ಪೊಮ್ಮಾಳ್ವಿಯನ ಬೀದಿ, ಆನೆಗವನಿ ಸಮೀಪ, ಮದರಾಸು.

[105-1]

ಕೈಕೆಲಸದ ಔಷಧಶಾಲಾ.

ಎಂಥಾ ದೊಡ್ಡ ವ್ಯಾಧಿಗಳಿಗೂ ನಮ್ಮಲ್ಲಿ ಔಷಧವುಂಟು.

ಗುಣವಾಗುತ್ತದೋ ಇಲ್ಲವೋ ನಮ್ಮ ಕ್ಯಾಟಲಾಗನ್ನು ನೋಡಿ ಒಂದು ದಫ ಔಷಧ ಸೇವಿಸಿಮಾಡಿದರೆ ತನಗೇ ತಿಳಿದುಬರುವುದು. ಅನೇಕರು ನಮ್ಮ ಔಷಧ ಸೇವನೆಮಾಡಿ ಶೀಘ್ರವಾಗಿ ಗುಣಹೊಂದಿ ನಮಗೆ ಸರಟಿಫಿಕೇಟ್ಸು ಕೊಟ್ಟಿರುತ್ತಾರೆ. ಪರೀಕ್ಷಿಸಬಹುದು. ಕ್ಯಾಟಲಾಗನ್ನು ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪು ಕಳುಹಿಸಬೇಕು. ಆಯುರ್ವೇದಪಂಡಿತರು ಶ್ರೀ ಟಿ ಯಸ್. ರಾಜಗೋಪಾಲಪಿಳ್ಳೆ, 167, ಕೇವಲರಿ ರೋಡು, ಬೆಂಗಳೂರು ದಂಡು [93-2]

ದಿ ಜನರಲ್ ಏಜನ್ಸಿ, ಮೈಸೂರು.

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31. 27 ನೆ ಜನವರಿ 1914 ರಲ್ಲಿ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿರುತ್ತಾರೆ. ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು—ಕಿಂಡರ್‌ಗಾರ್ಟನ್ ಕ್ರಮ 1-4-0, ಪಂಚತಂತ್ರ 0-8-0, ಕಥಾಮಂಜರಿ 0 6 0, ಕಥಾವಳಿ 0-5-0, ರಾಬಿನ್‌ಸನ್ ಕ್ರೂಸೋವಿನ ಸಾಹಸಕಾರ್ಯ 0 1 0, ಗಲಿವರನ ದೇಶಸಂಚಾರ 0-3-0, ಅಲ್ಲಾವುದೀನ್ ಅದ್ಭುತದೀಪ 0 5 0, ಸಿಂದಬಾದ್ ನಾವಿಕ 0-4-0, ಈಸೋಪನ ನೀತಿಕಥೆಗಳು 0 1-0. ಇವುಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡುಕೊಡಬೇಕು. 1915 ನೆಯ ಲೋವರ್ ಸೆಕಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು, ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ. [23-17]

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.

ಅಡ್ಡಿಗೆಯ ಮಾದರಿಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ

ಇದು ಕೆಂಪಡಿನ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ತೂಬುಗಳನ್ನು ಮತ್ತು ಕುಮುನಪುಗಳನ್ನು ಇಟ್ಟು ಗಟ್ಟಿಯಾಗಿ ಅಸಲಿಯ ಮುಲಾಮನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ. ಇದು ಗೀಜನ ಮಣಿಗಳಲ್ಲ. ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರಿಗೂ ಹುಡುಗಿಯರಿಗೂ ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖ್ಖಾದದ್ದು. ಅನೇಕರು ಸುಳ್ಳು ಪ್ರಕಟನೆಗಳನ್ನು ಪ್ರಕಟಿಸಿ ಜನಗಳಲ್ಲಿ ನಂಬಿಕೆಯನ್ನು ಕೆಡಿಸಿಕೊಂಡಿರುವದರಿಂದ ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ. ಕಾಲಕ್ರಮೇಣ ಅಡ್ಡಿಗೆಯ ರಂಗು ಸ್ವಲ್ಪ ಕಮ್ಮಿಯಾದರೆ ಚಿನ್ನದ ಮುಲಾಮನ್ನು ಅಡ್ಡಿಗೆಯ ಮೇಲೆ ಸವರಿದರೆ ಪುನಃ ಚಿನ್ನದಂತಾಗುವ 1 ಡಬ್ಬಿ ಮುಲಾಮನ್ನು ಅಡ್ಡಿಗೆಯ ಸಂಗಡಲೇ ಉಚಿತವಾಗಿ ಕಳುಹಿಸುತ್ತೇವೆ [101-1]

ವಿಳಾಸ— ಎಸ್. ಎನ್. ಮೂರ್ತಿ, ತಿರುವಲ್ಲಿಕೇಣಿ, ಮದರಾಸು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವದು, ಕೆಮ್ಮುಗಳು, ಶೀತನೆಗಡಿ, ಕ್ಷಯರೋಗ, ಪಟ್ಟು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104 50]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಚ್ ಪೀಟರ್ಸ್, 37 ವಹಮುಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಬಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಪ್ರತಿ ಮನೆಯಲ್ಲಿಯೂ ಅಗತ್ಯವಾಗಿ ಇರಬೇಕಾದ ನಾಲ್ಕು ಸಿದ್ಧೌಷಧಗಳು.

ಬಾಲಸಂಜೀವಿನಿ—ಮಕ್ಕಳಿಗೆ ಒಂದು ಮಾತ್ರೆಯನ್ನು ಎದೆಹಾಲಿನಲ್ಲಿ ಹಾಕಿದರೆ 1-2 ವೇಳೆ ಮಾತ್ರ ಸುಲಭವಾಗಿ ಭೇದಿ ಮಾಡಿ ಪಕ್ಕೆಗಳ ಸೆಳತ (ಲೊಳವು), ಹೊಟ್ಟೆ ಉಬ್ಬರ, ಶೀತವಾಯು, ಕೆಮ್ಮು, ನೆಗಡಿ, ಮಲಬದ್ಧತೆ ಮುಂತಾದ್ದನ್ನು ಆಶ್ಚರ್ಯಕರವಾಗುವಂತೆ ತಕ್ಷಣ ಗುಣವಾಗುತ್ತವೆ. ಬೆಲೆ 50 ಮಾತ್ರೆ 4 ಆ. ಪ್ರೇಮಕರ ಕಸ್ತೂರಿ ಮಾತ್ರೆ—ತಾಲೂಪವನ್ನು ರಂಜಿಸಿ, ನೀರು ಮನಾ ಬದಲಾವಣೆಗಳನ್ನು ಸರಿಪಡಿಸಿ, ಅಗ್ನಿಮಾಂದ್ಯ, ಜ್ವರ, ಕೆಮ್ಮು, ನೆಗಡಿ, ತಲೆನೋವು, ಮಲಬಂಧ, ಶೀತವಾಯು, ಅರೆ ತಲೆ ಮುಂತಾದ್ದನ್ನೂ ಮಕ್ಕಳ ಸಮಸ್ತ ರೋಗಗಳನ್ನೂ ಪರಿಹರಿಸಿ ಆರೋಗ್ಯವನ್ನು ಸರ್ವದಾ ಕಾಪಾಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ಬೆಲೆ 250 ಮಾತ್ರೆ 4 ಆ. ಆಮೋದಿನಿ—ಅಪೂರ್ವವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ಸಂಗೀತಗಾರರಿಗೆ ಅಮೃತಪ್ರಾಯವಾದುವು. ಶರೀರದ ಆಯಾಸ, ಬಾಯಾರಿಕೆ, ವಿಷವಿಧವಾದ ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸಿ ರಕ್ತವೃದ್ಧಿಯನ್ನೂ ಮನಸ್ಸಿಗೆ ಅಪೂರ್ವವಾದ ಆನಂದವನ್ನೂ ಉಂಟುಮಾಡುತ್ತದೆ. 150 ಮಾತ್ರೆ 4 ಆ. ನಾರಿಕೇಳಾಂಜನ—ಕಣ್ಣಿನೊಳಗೆ ಹಾಕಲು ಅತ್ಯುತ್ತಮವಾದ, ಅತಿ ಸೌಮ್ಯವಾದ, ಇತರ ಎಲ್ಲಾ ನಾರಿಕೇಳಾಂಜನಗಳನ್ನು ಮೀರಿಸಿರುವ ಪೂರ್ವಿಕರಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟ ಸಿದ್ಧಾಮೃತ. ಬೆಲೆ 4 ಆಣೆ. ಪ್ರತಿ ಔಷಧವು ವಿಶದವಾದ ಅನುಪಾನಪತ್ರದೊಡನೆ ಕೊಡಿಸುವುದು. ಮೇಲ್ಕಂಡ ಔಷಧಗಳನ್ನು ಪ್ರತ್ಯೇಕ ಅಥವಾ ಒಟ್ಟಿಗೆ ಐದು ಸೀಸೆ ತರಿಸಿದರೆ ಒಂದು ಇನಾಮು. ವಿ ಪಿ ಛಾರ್ಜು ಪ್ರತ್ಯೇಕ 220-28

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ವಿದ್ಯಾಭ್ಯಾಸದ ಇಲಾಖೆ.

ದೇಶಭಾಷಾ ಪಾಠಶಾಲೆಗಳ ಏಳಿಗೆಯ ವಿಷಯ

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ಮಾಡಬೇಕಾಗಿರುವ ಏರ್ಪಾಡುಗಳಲ್ಲಿ ಕೆಳಗೆ ಕಾಣಿಸಿರುವ ವಿಷಯಗಳನ್ನು ಕೂಡಲೆ ಗಮನಕ್ಕೆ ತರಬೇಕು —

1 ಸರ್ಕಾರದ ಕಟ್ಟಡಗಳನ್ನುಳ್ಳ ಎಲ್ಲಾ ಪಾಠಶಾಲೆಗಳಲ್ಲಿಯೂ ಅವಶ್ಯಕವಾದ ಉಪಕರಣಗಳು ಇರಬೇಕು ಆ ಉಪಕರಣಗಳು ಕನಿಷ್ಠಪಕ್ಷ ಈ ಕೆಳಗೆ ಸೂಚಿಸಿರುವಷ್ಟಾದರೂ ಇರಬೇಕು —

(1) ಸಾಮಗ್ರಿಗಳು — ಒಂದು ಕುರ್ಚಿ, ಒಂದು ಮೇಜು, ಎರಡು ಬೆಂಚುಗಳು, ಒಂದು ಪೆಟ್ಟಿಗೆ ಅಥವಾ ಒಂದು ಸಣ್ಣ ಬೀರು, ಎರಡು ಕರೀ ಹಲಗೆಗಳು, ಹುಡುಗರು ಕೂರುವುದಕ್ಕೆ ಮರದ ಹಲಗೆಗಳು ಅಥವಾ ಚಾಪೆಗಳು, 10 12 ಅಂಗುಲದಷ್ಟು ಎತ್ತರವಾದ ತಗ್ಗು ಮೇಜಗಳು (2) ಪುಸ್ತಕಗಳು — ವೆಂಕಟರುಬ್ಬಯ್ಯನವರ ಕಿಂಡರ್‌ಗಾರ್ಟನ್ ಕ್ರಮ, ನೀತಿಚಿಂತಾಮಣಿಯ ಮೂರು ಭಾಗಗಳು, ಪಂಚತಂತ್ರ, ಈಸೋಪನ ನೀತಿ ಕಥೆಗಳು, ಕಥಾಮಂಜರಿ, ಕಥಾವಳಿ, ಕಥಾಸಂಗ್ರಹ, ಧರ್ಮಬೋಧ, ಕಿಂಡರ್‌ಗಾರ್ಟನ್ ಆಟಗಳು ಮತ್ತು ಕಥೆಗಳು, ಶ್ರೀನಿವಾಸರಾಯರ ಹಿಂದೂ ಜನರ ಆಟಗಳು, ವ್ಯಾಯಾಮದೀಪಿಕೆ, ಲೇಖ್ಯಬೋಧಿನಿ, ಮೈಸೂರು ಚರಿತ್ರಸಾರ, ಬಾಲಭೂವಿವರಣೆ, ಬಾಲಬೋಧೆ, 1 ನೇ ಮತ್ತು 2 ನೇ ರೀಡರ್‌ಗಳು ಅಂಕಗಣಿತ ಬಾಲಬೋಧಿನಿ, 1 ನೇ ತರಗತಿಯ ಗಣಿತ ಮತ್ತು ಎರಡನೇ ಮೂರನೇ ತರಗತಿಗಳ ಗಣಿತ, ಅಮರ 1 ನೇ ಕಾಂಡ, ರಾಬಿನ್‌ಸನ್ ಕ್ರೂಸೋವಿನ ಸಾಹಸ ಚರ್ಯೆ, ಗಲಿವರನ ದೇಶಸಂಚಾರ, ಅಲ್ಲಾವುದೀನನ ಅದ್ಭುತ ದೀಪ, ಸಿಂದ್‌ಬಾದ್ ನಾವಿಕ — (3) ಭೂಪಟಗಳು ಮತ್ತು ಇತರ ಉಪಕರಣಗಳು — ಪಾಠಶಾಲೆಯ ನಕ್ಷೆ, ಗ್ರಾಮನಕ್ಷೆ ಮತ್ತು ತಾಲ್ಲೂಕು ನಕ್ಷೆ, ಮೈಸೂರು ದೇಶದ ಭೂಪಟ, ಹಿಂದೂದೇಶದ ಭೂಪಟ ಮತ್ತು ಪ್ರಪಂಚದ ಭೂಪಟ ಒಂದು ಗೋಳ, ಮಣಿಗಳ ಚೌಕಟ್ಟು ಮತ್ತು ಬೇಕಾದಷ್ಟು ಹುಣಿಸೆಯ ಅಥವಾ ಇತರ ಬೀಜಗಳು, ಅಡಿಗೋಲು ಮತ್ತು ಗಜ ಅಡಿಯ ಟೇಪು ಅಥವಾ ಸರಪಣಿ ಒಳಕೆಯಲ್ಲಿರುವ ಒಟ್ಟುಗಳು ಮತ್ತು ಸೇರು ಮೊದಲಾದ ಅಳತೆಯ ಸಾಮಗ್ರಿಯುಗಳು, ಒಂದು ಸಣ್ಣ ಅಥವಾ ದೊಡ್ಡ ಗಡಿಯಾರ, ಒಂದು ಪಾಠಶಾಲೆಯ ಗಂಟೆ, ಮೃಗಗಳ ಮತ್ತು ಪಕ್ಷಿಗಳ ಚಿತ್ರಪಟಗಳು, ಒಂದು ಘನವಸ್ತುದರ್ಶಕ ಮತ್ತು ಘನವಸ್ತುರೂಪಕಗಳು, ಕಿಂಡರ್‌ಗಾರ್ಟನ್ ಕರಣಗಳು, ಬಣ್ಣಗಳನ್ನೂ ಆಕಾರಗಳನ್ನೂ ತೋರಿಸುವ ಗೋಡೆಗೆ ತಗಲುಹಾಕುವ ಪಟಗಳು, ಸಚಿತ್ರ ವರ್ಣಮಾಲೆ ಮತ್ತು ಓದುವ ಕಲಿಸುವ ಪಟಗಳು, 1 ಚಾಕು ಮತ್ತು 1 ಕತ್ತರಿ, ಅವಶ್ಯಕವಾದ ಕಡೆಗಳಲ್ಲಿ ತೋಟಗಾರಿಕೆಯ ಸಲಕರಣೆಗಳು

2 ಈ ರೀತಿಯಾಗಿ ಉಪಕರಣಗಳನ್ನು ಹೊಂದಿದ ಪಾಠಶಾಲೆಗಳಿಗೆ ಉಪಾಧ್ಯಾಯರ ಸರ್ಟಿಫಿಕೇಟ್ ಪಡೆದ ಮತ್ತೂ ಶಿಕ್ಷಿತರಾದ ಉಪಾಧ್ಯಾಯರು ಇರುವುದು ಮೇಲು.

3 ಪ್ರತಿಯೊಬ್ಬ ಉಪಾಧ್ಯಾಯನೂ ಗಮನಿಸತಕ್ಕದ್ದೇನೆಂದರೆ — ಆತನು ಪಾಠಕ್ರಮಪಟ್ಟಿಯಲ್ಲಿರುವ ಸಾಮಾನ್ಯ ಪಾಠಗಳನ್ನು ಮಕ್ಕಳು ಅವರವರ ಅನುಭವದಿಂದಲೇ ತಿಳಿದುಕೊಳ್ಳುವ ರೀತಿ ಬೋಧಿಸುವುದೂ ಅಲ್ಲದೆ ವ್ಯಾವಹಾರಿಕ ವಿದ್ಯಾಭ್ಯಾಸದ ಕಮಿಟಿಯ ರಿಪೋರ್ಟಿನಲ್ಲಿ ಕಂಡ ಯಾವುದಾದರೂ ಒಂದು ತರದ ಕೈಕೆಲಸವನ್ನು ತನ್ನ ಪಾಠಶಾಲೆಯಲ್ಲಿ ಬಳಕೆಗೆ ತರಬೇಕು

4 ಪ್ರತಿ ಉಪಾಧ್ಯಾಯನೂ ಪಾಠಶಾಲೆಯಲ್ಲಿ ದಿನಗಟ್ಟಳೆಯ ಕೆಲಸಗಳನ್ನು ನಡೆಸಿದ ಹಾಗೆ, ತನ್ನ ಪಾಠಶಾಲೆಯಲ್ಲಿ ಓದುವ ಹುಡುಗರ ತಂದೆತಾಯಿಗಳನ್ನೂ, ಆ ಗ್ರಾಮದ ಜನರನ್ನೂ ಸಾಯಂಕಾಲದಲ್ಲಿ ವಾರಕ್ಕೆ ಎರಡು ಮೂರು ದಿನಗಳ ಮಟ್ಟಿಗೆ ತನ್ನ ಪಾಠಶಾಲೆಗೆ ಬರುವಂತೆ ಪ್ರೋತ್ಸಾಹಿಸಬೇಕು ಮತ್ತು ಅವರು ಸೇರಿದಾಗೆಲ್ಲಾ ವಿನೋದಕರವಾದ ಮತ್ತು ಬುದ್ಧಿವಿಕಾಸವನ್ನುಂಟುಮಾಡುವ ಕಥೆಗಳನ್ನಾಗಲಿ, ಆ ವಾರದ ವರ್ತಮಾನಪತ್ರಿಕೆಗಳಲ್ಲಿರುವ ಕೆಲವು ಭಾಗಗಳನ್ನಾಗಲಿ ತಾನೇ ಆದರೂ ಓದಬೇಕು, ಇಲ್ಲವೇ ತನ್ನ ವಿದ್ಯಾರ್ಥಿಗಳಲ್ಲಿ ಒಬ್ಬನಿಂದಲಾದರೂ ಓದಿಸಬೇಕು ಆ ಗ್ರಾಮದ ಜನರು ಓದುಬರಹ ಕಲಿಯಲು ಇಷ್ಟಪಟ್ಟರೆ ಅಲ್ಲಿ ಅವರಿಗಾಗಿ ಸಹಾಯಧನ ಹೊಂದುವ ಒಂದು ರಾತ್ರಿ ಶಾಲೆಯನ್ನು ಏರ್ಪಡಿಸಿ ಓದುಬರಹ ಲೆಕ್ಕಾಚಾರಗಳನ್ನು ಹೇಳಿಕೊಡಬೇಕು

ಇವರಿಂದ ಸಂಕ್ಷೇಪವಾಗಿ ತಿಳಿಸುವುದೇನೆಂದರೆ — ಪ್ರತಿಯೊಬ್ಬ ಉಪಾಧ್ಯಾಯನೂ ಸ್ಕೂಲು ಮಕ್ಕಳಿಗೆ ವಿದ್ಯೆ ಕಲಿಸುವುದು ಮಾತ್ರವಲ್ಲದೆ ದೊಡ್ಡವರಿಗೂ ಕೂಡ ಓದುವುದರಿಂದಲೂ, ಉಪನ್ಯಾಸ ಮಾಡುವುದರಿಂದಲೂ, ರಾತ್ರಿ ಪಾಠಶಾಲೆಗಳಲ್ಲಿ ಕ್ರಮವಾಗಿ ಪಾಠ ನಡಿಸುವುದರಿಂದಲೂ ವಿದ್ಯಾಭಿವೃದ್ಧಿ ಮಾಡುವುದು ತನ್ನ ಮುಖ್ಯ ಕರ್ತವ್ಯವೆಂದು ತಿಳಿದುಕೊಳ್ಳಬೇಕು

ಎಂ. ರಾಮರಾವ್,

ಇನ್ ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್ ಇನ್ ಮೈಸೂರು

ಮನೆಗಳಲ್ಲೂ, ಕಲಿಯುವುದಕ್ಕೆ ಚಿಕ್ಕವರಿಗೂ

ಬಹು ಅಪೂರ್ವ ಹೊಲಿಗೆ ಪುಸ್ತಕ.

ಇಂಗ್ಲಿಷಿನಲ್ಲಿ ಬರೆದು ವಿವರಿಸಿರುವ ಈ ಪುಸ್ತಕದೊಳಗೆ ಶಾಸ್ತ್ರ ರೀತಿಯಲ್ಲಿ ಉಡುಪುಗಳನ್ನು ಕತ್ತರಿಸುವ ವಿಧಾನಗಳನ್ನು ಕಲಿತುಕೊಳ್ಳಬಹುದು ಇಂಥಾ ಪುಸ್ತಕ ಹಿಂದುಸ್ಥಾನದಲ್ಲಿ ಇದುವರೆಗೆ ಯಾರೂ ಪ್ರಕಟಿಸಿಲ್ಲ ಗಂಡಸರ, ಹೆಂಗಸರ ಮತ್ತು ಮಕ್ಕಳ ಬಟ್ಟೆಗಳನ್ನು ಬಹಳ ನಾಜೂಕಾಗಿ ಕತ್ತರಿಸಿ ಹೊಲಿಯುವ ವಿಧಾನಗಳನ್ನೂ, ಬಗೆಬಗೆಯಾಗಿ ಉಡುಪುಗಳನ್ನು ತೊಳೆದು ರಂಗುಹಾಕುವ ಪದಾರ್ಥ ಮತ್ತು ಮಿಶ್ರಗಳನ್ನೂ ಕಲಿತುಕೊಳ್ಳಬಹುದು. ಈ ಪುಸ್ತಕದಲ್ಲಿ 38 ಚಿತ್ರಗಳೂ, 30 ನಕ್ಷೆಗಳೂ ಇವೆ

ಕ್ರಯ 1 ಪುಸ್ತಕಕ್ಕೆ ರೂ 2, ಪೋಸ್ಟೇಜ್ ಬೇರೆ.

ವಿಳಾಸ—ರಾವ್ಸ್ ಟೈಲರಿಂಗ್ ಕಾಲೇಜ್,

[15-13] 30 ಪಿಕೆಟ್ ರೋಡ್, ಕಾಳ್ಬಾದೇವಿ, ಬೊಂಬಾಯಿ

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಆಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಅಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[101 18] ಎಸ್ ಕಟ್ಟೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಸನ್ ೧೮೭೬ ರಿಂದ ೧೯೧೪ ವರೆಗೆ.

ಕಾಲದ ಪರೀಕ್ಷೆ ! ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 5-19

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧಿಯನ್ನು ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಅದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮುಲು,

Always get the Emulsion with this mark the Fishman the mark of the 'Scott' process!

ಸಕಲವಿಧ ಕ್ಷಯಗಳು, ನಾನಾಕಾರಣಂದ ಗಳ ಕ್ಷೀಣತೆ, ಆಹಾರದಲ್ಲಿ ಅರುಚಿ ಇರಲ್ಲದ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕ್ಯೆನೋಕಡೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕೆಮಿಸ್ಟರು,

ಲಂಡನ್, ಇಂಗ್ಲೆಂಡ್

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು ದುಪ್ಪಟ್ಟ, ಮಗುಟ, ಜಗನ್ನಾಥ ಜಾಗಟೆಗಳು ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಠಗಳನ್ನು ಇನಾಮಾಗಿ ಕಳುಹಿಸಲಾಗುತ್ತದೆ [69 8]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ

BRAHMAPPA TAVANAPPANAVAR,

Merchant & Commission Agent.

Agent to Messrs Currimbhoy Ebrahim & Co's Mills, BOMBAY

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೀಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚು ಉಳಿಯುತ್ತ ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4 ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತ [97 3]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು

ಹೆಡ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ ಬ್ರಾಂಚ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ಡೋಂಗರೆ

ಇವರ ಬಾಲಾಮೃತ್

[150-12]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ. ಟಪಾಲ್ ಖರ್ಚು 8 ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಸುಖಕರ, ಆನಂದ,

ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು

(2) ಹಾಡುವವರಿಗೆ ವರಪ್ರಸಾದವಾದದ್ದು

(3) ಬಾಯಿ ದುರ್ಗಂಧ, ಗಂಟಲು ಗಾರೆಸ್ಸುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ [73 9]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ

ಮುತ್ತಿನಂತಿರುವ	15	ಮಾತ್ರೆ	ಉಳ್ಳ	ಪೊಟ್ಟಣಕ್ಕೆ	ಕ್ರಯ	2	ಆಣೆ.
,,	42	,,	,,	,,	,,	4	,,
,,	200	,,	,,	,,	,,	7	,,
,,	200	,,	ಸುಂದರವಾದ ಟಿನ್ ಡಬ್ಬಾ			9	,,
,,	80	,,	,,	,,	,,	4	,,
,,	100	,,	ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟ್ಯಾಂಪನ್ನೂ, ಅಂಚೆ ಖರ್ಚಿಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,

ಬೊಂಬಾಯಿ 3;

ಅಥವಾ, ಬಿ ಸಿ. ಷಾ ಕಂಪೆನಿ,

509 ಮಿಂಟ್ ಬೀದಿ, ಮದರಾಸ್.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು ರಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತು 0 8-0 ಡಜನ್ 1 ಕ್ಕೆ 5-1 0 ವಿ ಪಿ ಪ್ರತ್ಯೇಕ ಗಜಕರ್ಣದ ಮುಲಾಮು 0 6 0 ದಂತಮಂಜನ 0 2-0 ಮೋಹಿನಿ ತೈಲ 0-12-0 ಮಜ್ಜಾ ಮುಲಾಮು 0-3-0 ಜುಲಾಬು ಮಾತ್ರ 0 8 0 ಸುಂದರಿ ಮುಲಾಮು 0 8-0. ಕ್ಯಾಟಲಾಗಿಗ ಬರೆಯರಿ [64-9]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ

ಅಮೃತಾಂಜನ ಡಿಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

WANTED.

For a large Coffee Estate in South Mysore a capable and energetic Writer with sufficient knowledge of English to keep simple accounts, should be able to supply labour Good pay for a good man

Apply to —

[904] **X C/o VRITTANTA PATRIKE, MYSORE**

ಅಪೂರ್ವ ಕನ್ನಡ ಗ್ರಂಥಗಳು.

[39 7]

(1) ಜಪಾನರುನ್ನತಿಗೆ ಮೂಲಾಧಾರ —14 ಸ್ವಭಾವ ಚಿತ್ರಗಳುಳ್ಳದು ದೇಶೋನ್ನತಿಗೆ ಬೇಕಾದ ವಿಷಯಗಳನ್ನೆಲ್ಲ ಕಥಾರೂಪದಿಂದ ಬೋಧಿಸುತ್ತದೆ ಕ್ರಯ ವಿ ಪಿ ಸಹ ಗಿಲ್ಟ್ ಬೈಂಡ್ ರೂ 1 0, ಗ್ಲೇಜ್ 1-8 0, ದುಯ್ಯಂ 1 4 0 (2) ಧರ್ಮಪದ —650 ಕೋಟಿ ಜನರಿಂದ ಪಾರಾಯಣಮಾಡಲ್ಪಡುವ ಗ್ರಂಥದ ಕನ್ನಡ ತರ್ಜುಮೆ ಕ್ರಯ —ವಿ ಪಿ ಸಹ 1-0 0 (3) ಬೌದ್ಧಾವತಾರ — ಭಗವಾನ್ಬುದ್ಧನ ಆಶ್ಚರ್ಯಕರವಾದ ಜನ್ಮ ಚರಿತ್ರೆ ವಿ ಪಿ ಸಹಿತ 0 6 0

ವಿಳಾಸಗಳು —(1) ಬಿ ಅಶ್ವತ್ಥನಾರಾಯಣಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರ್, (2) ಶ್ರೀವಾಣೀವಿಳಾಸ ಬುಕ್ ಡಿಪೋ, ಮೈಸೂರ್, (3) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರ್, (4) ದಿ ಜನರಲ್ ಏಜನ್ಸಿ, ಮೈಸೂರ್

ಉತ್ತಮ ಗ್ರಂಥಗಳು.

(1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6 0 (2) ಶಿವಾನಂದಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಚಂದ್ರಿಕಾ 6 ಆಣೆ (4) ಕೈಲಾಸನಾಥ 8 ಆಣೆ (5) ಸಹಾಯವಿಲ್ಲದೆ ಇಂಗ್ಲಿಷ್ ಕಲಿಯುವ ಪುಸ್ತಕ ರೂ 1 8 0 5 ಭಾಗಗಳೊಳಗೊಂಡಿದೆ (6) ಜನಾರ್ಜನ ಪದ್ಧತಿ 12 ಆಣೆ ಹನುಮದ್ವಿಲಾಸ 8 ಆಣೆ 1915 ನೇ ಇಸವಿ ಕನ್ನಡ ಮತ್ತು ಸಂಸ್ಕೃತ ಡೈರಿಗಳು, ಗುರುತುಕೊಂಡ ಕಳ್ಳ, ನರಬಲಿ, ಯಾಮಿನಿ, ದುಷ್ಟಚತುಷ್ಟಯ ಎಂಬ ಬಂಗಾಳಿ ನಾವೆಲ್‌ಗಳು—ಪ್ರತಿಗೆ 2 ಆಣೆ ಕಾಮಿನೀ 4 ಆಣೆ ಆರ್ಯಕೀರ್ತಿ 10 ಆಣೆ ನಮ್ಮಲ್ಲಿ ಸರ್ಕಾರಿ ಸ್ಕೂಲ್ ಪುಸ್ತಕ, ಸಂಸ್ಕೃತ, ಕನ್ನಡ ತೆನುಗು ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳು, ಮತ್ತು ಉತ್ತಮ ಕಾದಂಬರಿಗಳು, ಇಂಗ್ಲಿಷ್ ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ ನೀತಿಚಿಂತಾಮಣಿ—3 ನೇ ಭಾಗ ಬೆಳಕಿಗೆ ಸಿದ್ಧವಾಗಿದೆ

[87-3] ಬೇಲೂರು ನರಸಿಂಹಯ್ಯಂಗಾರ್,

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷದಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷದವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷದಗಳಿಗೆಲ್ಲವು ಇದು ಅತ್ಯುತ್ತಮವಾದದ್ದು ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೊಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು —

ತಿಮಿರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕಮ್ಮನಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕರಿನಶ್ವಾಸ, ಸಹುನೋವು (ಸೊಂಟನೋವು), ಪಕ್ಕಶೂಲ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲ, (ಅಳ್ಳೆ) ಕೃತ್ಯದೋಷಗಳು, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12-18]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು

ಬುಡ್ಡಿಯ ಕ್ರಯ ರೂ 0-8-0 ವಿ. ಪಿ ಖರ್ಚು 0-4-0 ಏಜಂಟರು ಬೇಕು

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಮೈಸೂರು ಗವರ್ನಮೆಂಟ್ ಸೆಕ್ಯುರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ 1,00,000

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಎಚ್ಚರಿಕೆ.—(ನೀವು ಪ್ರಾವಿಡೆಂಟ್ ಜೀವವಿಮಾ ಪಾಲಿಸಿಯಾಗಲಿ, ಮದುವೆ ವಿಮಾ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸನ್ನು ಕೇಳಿ ತರಿಸಿಕೊಂಡು ಚನ್ನಾಗಿ ಓದಿ ನೋಡಿ ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ, ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಆರಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚನ್ನಾಗಿ ಗೊತ್ತಾಗುತ್ತದೆ)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು ಇದರಲ್ಲಿ ದೃಷ್ಟಿಪಾತ್ರವಾದ ಬಾಗಗಳೂ, ಖಚಿತವಾದ ಕ್ರಮಗಳೂ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ ಅವರಿಗೆ ಸಂಬಳವೂ, ಕಮೀಷನ್ನೂ ಕೊಡಲಾಗುವುದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ —

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ 1,00,000

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಲೇವಾದೇವಿ —ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ ಕಂಪನಿಯ ಷೇರುಗಳು ಬಹು ಅಮೂಲ್ಯವಾದವು, ಮತ್ತು ಎಲ್ಲರೂ ಪಡಕೊಳ್ಳುವಷ್ಟು ಸುಲಭವಾಗಿ ಮಾಡಲಾಗಿದೆ [161-10]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು

ಬೇಕಾಗಿದೆ —ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕು ಮಂದಿ ಸ್ಥಳೀಯ ಡೈರೆಕ್ಟರುಗಳು ಬೇಕು ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ.—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು . . ರೂ 4,15,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ರಟಿಕೊ, ಚೀಫ್ ಏಜೆಂಟ್, ಬೆಂಗಳೂರು, ಮಿ॥ ಎಂ ಎಸ್ ನಂಜಪ್ಪನವರು ಅಥವಾ ಮಿ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194 32] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ನಾಜೂಕಾದ ಗಡಿಯಾರ ಬಹು ಸುಲಭ ಕ್ರಯ!!

ಸ್ಟ್ರಾಂಗ್ ಇಂಗ್ಲೀಷು ಲಿವರ್ ವಾಚು.

ಇದರ ಕ್ರಯ 6 ಬಹುಮಾನ ಸಮೇತ ರೂ 3-8-0 ಮಾತ್ರ

ಇದು ಪ್ರಪಂಚದಲ್ಲೆಲ್ಲಾ ಜಹಗೀರಾದ ಲಿವರು ಕೆಲಸದಿಂದಲೂ ನಾಜೂಕಾದ ಮತ್ತು ಬಲವಾದ ಯಂತ್ರಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗತಾನೆ ಹೊಸದಾಗಿ ತರಿಸಿರುತ್ತೇವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಭರವಸೆಯಾದದ್ದೂ ಬಹು ಸುಂದರವಾದದ್ದು ಆನೇಕ



ವರುಷ ಪರಂಪರೆ ಬಾಳಿಕೆ ಬರುವಂತ ಗಡಿಯಾರ [77-18]

ಇದರ ಆರು ಬಹುಮಾನಗಳ ತಪಸೀಲು—1 ಸುಂದರವಾದ ಗಡಿಯಾರ ಸರಪಣಿ 2 ದಿಕ್ಕನ್ನು ತೋರಿಸುವ ಉತ್ತರದಮುಖಿ 3 ನಾಜೂಕಾದ ಕರವಸ್ತ್ರ, 4 ಲೆವೆಂಡರ್ ಎಂಬ ಪರಿಮಳದ್ರವ್ಯ, 5 ಸಫಾಯಾದ ಉಂಗರ, 6 ವಿವಿಧವಾದ 6 ಸ್ಟೀಲ್ ಮುಳ್ಳು

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ —

ಜಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂಬರು 7 ಕೂಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17 4—1914 ರಿಂದ 24 4—1914 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು	ಸತ್ತದ್ದು	ಕಾಲರಾ ಹಿಡಿದದ್ದು	ಸತ್ತದ್ದು
ಬೆಂಗಳೂರು ಪಟ್ಟಣ		3	1	0	0
ಮೈಸೂರು	,,	6	2	0	0
ಬೆಂಗಳೂರು ಡಿಸ್ಟ್ರಿಕ್ಟು		5	1	0	0
ಮೈಸೂರು	,,	4	1	0	0
ಕೋಲಾರ್	,,	4	4	10	6
ಕೋಲಾರ್ ಚಿನ್ನದ ಗಣಿಗಳು		4	5	0	0
ತುಂಕೂರು ಡಿಸ್ಟ್ರಿಕ್ಟು		0	0	2	2
ಹಾಸನ	,,	0	0	0	0
ಚಿತ್ರದುರ್ಗ	,,	0	1	0	0
ಕಡೂರ್	,,	2	0	0	0
ಶಿವಮೊಗ್ಗಾ	,,	11	4	0	0
	ಜುಮ್ಲಾ	35	2[illegible]	12	8

ಶಾಲಿವಾಹನ ಶಕ ವರುಷಗಳು 1837 ನೇ ಆನಂದ ಸಂವತ್ಸರದ ಉತ್ತರಾಯಣ ವಸಂತಋತು ವೈಶಾಖ ಶುದ್ಧ ತ್ರಯೋದಶಿ ಶುಕ್ರವಾರದಿಂದ ವೈಶಾಖ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ವೃಷಭ ತೇದಿ
8	ಶುಕ್ರ ‡	ತ್ರಯೋದಶಿ	4 1	ಉತ್ತರ ಚಿತ್ತ	53 00	26
9	ಶನಿ *	ಪೌರ್ಣಮಿ	51 19	ಸ್ವಾತಿ	27 31	27
10	ಭಾನು	ಪಾಡ್ಯಮಿ	46-13	ವಿಶಾಖ	23 42	28
11	ಸೋಮ §	ಬಿದಿಗೆ	41 15	ಅನೂರಾಧ	20 26	29
12	ಮಂಗಳ †	ತದಿಗೆ	37 4	ಜ್ಯೇಷ್ಠ	17-53	30
13	ಬುಧ	ಚೌತಿ	33 18	ಮೂಲ	16 9	31
14	ಗುರು ,	ಪಂಚಮಿ	31 37	ಪೂಷಾ	15-27	1

‡ ಸ್ಮಾರ್ತರ ಶ್ರೀನೃಸಿಂಹಜಯಂತಿ, ಬಿಳಗಿರಿ ರಂಗಸ್ವಾಮಿ ರಥ * ಆರ್ಧನಾರೀಶ್ವರವ್ರತ, ವೈಷ್ಣವ ಶ್ರೀನೃಸಿಂಹಜಯಂತಿ, ಸೌರ ಚಿತ್ರಾಪೂರ್ಣಿಮಾ ಮಳೆ ನಕ್ಷತ್ರ—ಕೃತ್ತಿಕೆ 1 ನೇ ಪಾದ § ಶ್ರೀಲಕ್ಷ್ಮೀರಮಣಸ್ವಾಮಿ ರಥ † ಸಂಕಟಹರಚತುರ್ಥಿ ,, ಮಳೆ ನಕ್ಷತ್ರ— ಕೃತ್ತಿಕೆ 2 ನೇ ಪಾದ, ಮಳೂರು ನೃಸಿಂಹಸ್ವಾಮಿ ರಥ

Printed and Published by the Rev H Gulliford, Proprietor and Manager, Wesleyan Mission Press, Mysore 7/5/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭. ಮೈಸೂರು—ಸನ್ ೧೯೧೮ ನೇ ಇಸವಿ ಮೇ ತಾರೀಖು ೧೮ ನೇ ಗುರುವಾರ. ಸಂಚಿಕೆ ೫೦

ಸ್ತ್ರೀಯರ ಸಂತೋಷ ಸ್ಥಾನವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾದ ಕಪ್ಪಾದ ತಲೆಕೂದಲನ್ನು ಯಾವ ಸ್ತ್ರೀಯು ತಾನೇ ವಾಂಛಿಸಲಿಲ್ಲ? ಇಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದದ್ದು:

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಪುರುಷರಿಗೆ ... ಧೀರರಿಗೂ ... ಯಾಗಿರುತ್ತದೆ. ಈ ತೈಲವನ್ನು ... ಮುಕ್ಕೊಳ್ಳುತ್ತಲೇ, ...



... ದು ಸಮ್ಮ... ಗ ಧನವಂತರೂ ಮುದುರಸ್ಥರೂ ... ವು ಆಗಿರುವುದು.

ಸೀಲುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೇಶೀಯರ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಯೋಗ್ಯತಾಪತ್ರಗಳೂ ದೊರತಿವೆ.

ಅವುಗಳಲ್ಲಿ ಒಂದನ್ನು ನೋಡಿರಿ: ಸೇಗಿನಷಾಳರ ಲಂಧುಗಳು ಬಸವನ ಕಾಲ್ಪೇಟೆ ... ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ... ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ... ಪಾರ್ಸಲೊಂದರ ಕ್ರಯ ರೂ 1 0 0, ಅ ವೆ 0 1 0 ನೇರೆ, 3 ಸೀಸೆಗಳ ಕ್ರಯ ರೂ 2 10-0, ಅ ವೆ 0 7 0 ಬೇರೆ.

ಸೂಚನೆ:—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಶ್ರೇಷ್ಠ ವಸ್ತುಗಳ ವಿಕ್ರಯದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ಈ "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವು ..." ಎಂದು ಅನರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ... ಅಂಥಾ ಸಂದರ್ಭಗಳಲ್ಲಿ ನೋಡಿ ... "ಕಾಮಿನಿಯಾ ಆಯಿಲ್" ತಾನೇ ಬೇಕೆಂದು ಕೇಳಿರಿ. ಅವರಲ್ಲಿ ... ಅಧವಾ ನಮ್ಮ ಏಜೆಂಟರಿಂದಲೇ ಕೊಂಡುಕೊಳ್ಳುತ್ತ ... ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ... ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಬಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧ ದ್ರವವು ಮಧುರ ಕೋಮಲ ಪರಿಮಳ ಮತ್ತು ... ತೆಗೆದ ಸೌಗಂಧಿಕ ಕುಸುಮಗಳಿಂದ ... (ಆಲ್ಕೋಹೋಲ್) ಸಂಸರ್ಗವಿಲ್ಲದ್ದು ... ಈ ದ್ರವದ ... ನಮ್ಮ ಸುಗ್ರಂಥ ... ನೈಗಿರಿಕನಾದೊಂದು ... ಬೇರೆ ಯಾವ ಪರಿಮಳ ದ್ರವದ ... ಈ ಒಟ್ಟೋ ದಿಲ್ ಬಹಾರಿನ ಗಂಧವು ಅವಲ್ಲಗೆ ... ತೆರನಿಂದ ... ವನ್ನು ಪರಿಶೀಲಿಸಿರಿ. [19 18

ಸ್ಟ... ಸೀಸೆಯ ಕ್ರಯ ರೂ 1 8 0 ಒಂದು ಡ್ರಾಮ್ (ನಾಲ್ಕಿಯಂ) ಸೀಸೆ 0-12 0 ಅರ್ಧ ಡ... ರೂ 2 0 0 ... ಬೇರೆ ರೂ 0 4 0 ... ಒಟ್ಟೋ ದಿಲ್ ಬಹಾರ್ ... ಒಂದಕ್ಕೆ 0 12 0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದಿ, ಬೊಂಬಾಯಿ.

ಏಜೆಂಟ್, ಡಿ ಲಕ್ಕ್ ಮಾರ್ಕ್, ಮಂಗಳೂರು

ಹೊಸ ಮಾಸ ಪತ್ರಿಕೆ ಭಾರತೀವಿಲಾಸ ದ್ವಿತೀಯ ವರ್ಷಾರಂಭ

ಇದೊಂದು ಕನ್ನಡ ಮಾಸ ಪತ್ರಿಕೆ. ಪ್ರತಿ ಮಾಸದಲ್ಲಿಯೂ ಕ್ರಮವಾಗಿ ಪ್ರಕಾಶವಾಗುವುದು. ಕಾದಂಬರಿಗಳೂ, ನಾಟಕಗಳೂ, ಚರಿತ್ರಗ್ರಂಥಗಳೂ, ನೀತಿ ವಿದ್ಯಾ ವಿಷಯಗಳ ಉಪನ್ಯಾಸಗಳೂ ಬೇರೆಬೇರೆ ಫಾರಂಗಳಲ್ಲಿ ... ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದುದು. ವಾರ್ಷಿಕ ಚಂದಾ 1-8-0. ಚಂದಾದಾರರಾಗತಕ್ಕವರಿಗೆ ಚಾಮುಂಡೇಶ್ವರಿ ... ಮಾಹಾತ್ಮ್ಯ ಎಂಬ ಪುಸ್ತಕ ಬಹುಮಾನ ... ಇದರ ಕ್ರಯ 4 ಆಣೆ [272 13]

ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

BRAHMAPPA TAVANAPPANAVAR,
Merchant & Commission Agent
Agent to Messrs. Currimbhoy Ebrahim & Co's Mills
BOMBAY

...

... ಬಳಿ ... ಕಂಪನಿಯವರ ... ಒಟ್ಟಿಗೆ ಕನ್ನ ... ಮತ್ತು ... ನಮ್ಮ ... ಒಟ್ಟಿಗೆ ... ವಿಧಿಸತಕ್ಕ ... ಚೋಮಂದಳ್ಳಿ ... ಮುಂತಾದವುಗಳು ... ಯಾವ ವಿಧವಾದ ... ಅನುಭವ ... ದೇಶದಲ್ಲಿಯೂ ... ಕೊಳ್ಳತಕ್ಕವರಿಗೆ ಮಾಲಿನ ಮೇಲೆ ರೇಟಿನ ... ಶಾಯ ವರಿಗೆ ಡಿಸ್ಕೌಂಟು ದೊರೆಯುತ್ತ... [97 4]

ನಮ್ಮ ಟ್ರ್ಯಾವಲಿಂಗ್ ಏಜಂಟರ ಪರ ಎಟ್ಟಿಗಳ ಸಮೂನೆಗಳನ್ನು ಕೊಟ್ಟು ... ತರಿಸಿಕೊಳ್ಳುವ ಏರ್ಪಾಡು ಮಾಡಿರುತ್ತ... ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತ...

ಒಟ್ಟಿಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ. ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು . . . ರೂ 4,15,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ... ಫಾರಂ ... ಕಳುಹಿಸುತ್ತಾರೆ:—ಮಿ॥ ಎ. ಎಸ್ ... ಬೆಂಗಳೂರು ಮಿ॥ ಎಂ. ಎಸ್ ... ಅಥವಾ ಮಿ॥ ವೆಂಕಟನರಸಪ್ಪನವರು, ... ಮೈಸೂರು, ಅಥವಾ ... ಸೆಕ್ರಿಟರಿ, ಮದರಾಸ್ [1 13]

ನಿಮ್ಮ ... ಇದರ ಕ್ರಯ ೧ ಬಹುಮಾನ ಸಮೇತ ರೂ 3 8-0 ಮಾತ್ರ

ಇದು ... ಹೆಸರುವಾಸಿಯಾದ ಒಳ್ಳೆ ಕಲಸದಿಂದಲೂ ... ಮತ್ತು ಬಲವಾದ ಯಂತ್ರಸಾಧನ ಗಳಿಂದಲೂ ತಯಾರಾಗಿ ಬಂದಿ... ರುತ್ತಿ ... ಜೊತೆಯಾಗಿ ... ಯಾದ ಕಾಲವನ್ನು ... ಭರವಸೆಯಾದದ್ದೂ ... ಸುಂದರವಾದ ... ಅನೇಕ ...



ವರುಷ ಪರಂಪರೆ ಬಾಳಿಕೆ ಬರುವಂತ ಗಡಿಯಾರ [77-4]

ಇದರ ಆರು ಬಹುಮಾನಗಳ ಕರಸೀಲು—1 ಸಣ್ಣದಾದ ಗಡಿಯಾರ ಸರಪಣಿ, 2 ದಿಕ್ಕನ್ನು ತೋರಿಸುವ ಉತ್ತರಮುಖಿ, 3 ... ಕರವಸ್ತ್ರ, 4 ಕ್ಯಾಲೆಂಡರ್ ಎಂಬ ಪಂಚಾಂಗ ... 5 ... ಉಂಗುರ, 6 ವಿವಿಧವಾದ 6 ಸ್ಟೀಲ್ ಮುಳ್ಳು

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ —

ವಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂಬರು 7 ಕೊಂಡ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಹೊಸ ವರುಷ! ಹೊಸ ಪುಸ್ತಕಗಳು!! ಹೊಸ ಯೇರ್ಪಾಡು!!!

ಕ್ರಯ ಕಡಮೆ! ಕೆಲವು ದಿನಗಳ ಮಟ್ಟಿಗೆ!! ಕಡಮೆ ಕ್ರಯ!!!

ಅವಧಿ ಮೀರಿದ ಬಳಿಕ ಅಲ್ಪಕ್ರಯಕ್ಕೆ ದೊರೆಯಲಾರದು! ಬೇಗಬೇಗ ಬರೆದು ತರಿಸಿರಿ!!

ಕನ್ನಡ ನಾಡಿನಲ್ಲಿ The Self English Study. ಪ್ರಕಟವಾದ ಈ ತೆರನ

ಮೊತ್ತಮೊದಲು ದಿ ಸೆಲ್ಫ್ ಇಂಗ್ಲೀಷ್ ಸ್ಟಡಿ. ಪುಸ್ತಕಗಳಿವೇ!

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲಿಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ

84-4

೧ನೆ ಪುಸ್ತಕ	೨ನೆ ಪುಸ್ತಕ	೩ನೆ ಪುಸ್ತಕ
ಪ್ರಥಮಾಭ್ಯಾಸಿಗಳಿಗೆ ಪದ ಯೋಜನೆ	ವ್ಯಾಕರಣ ಮತ್ತು ತರ್ಜುಮೆಯ ಮಾಡುವ ನಿಯಮಗಳು	ಸರ್ವೋಪಯೋಗಿಯಾದ ಪ್ರಾಸಾದ ಪುಸ್ತಕ
ಇಪ್ಪತ್ತೈದು ಭಾಗಗಳು	ಆರು ಭಾಗಗಳು	ಮೂವತ್ತು ಭಾಗಗಳು
೨೦೦ ಪುಟಗಳು	೨೦೦ ಪುಟಗಳು	೩೩೬ ಪುಟಗಳು
ಕ್ರಯ ಹನ್ನೆರಡಾಣೆ	ಹನ್ನೆರಡಾಣೆ	ಹನ್ನೆರಡಾಣೆ

ಪ್ರತಿ ಪುಸ್ತಕವೂ ... ಇಂಗ್ಲಿಷ್ ... ಆಂಗ್ಲವಾದ ... ಕಲಿಯುವವರಿಗೆ ... ಬರುವದಕ್ಕೆ ... ಮುದ್ರಣಕ್ಕೆ ... ಉಪಯೋಗವಾಗಿದೆ.

ಮೂರು ಪುಸ್ತಕಗಳೂ, ಒಂದೇ ಬಾರಿಗೆ ... ಅಂಚೆ ವೆಚ್ಚ ಸೇರಿ ಒಂದು ರೂಪಾಯಿ ಹನ್ನೆರಡಾಣೆಗೆ ದೊರೆಯುವುದು. ನಮ್ಮ ವಿಳಾಸ ಬದಲಾಗಿದೆ —

ಭಾರತಿ ಸಂಘದಿಂದಾಗಿ, ಲಕ್ಷ್ಮೀ ಎಸ್ ಆರ್ ಭಾರತಿ, ಸಂಪಾದಕ ಸವಿನುಡಿ "ಭಾಷಾನಿಧಿ",
... ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ಟ್ಯಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ.

ಇದು ಹಿಂದುಸ್ಥಾನದಲ್ಲೆಲ್ಲಾ ತುಂಬಾ ಪ್ರಖ್ಯಾತಿ ಪಡೆದಿದೆ.

ನಿಸ್ಸಂದೇಹವಾದ ಆಧಾರವುಳ್ಳದ್ದು

ಪಾಲಿಯೂಪಾ ಹುಟ್ಟುವಳಿ ರೂ 2,33,00,000	ಶೇಖರವಾಗಿರುವ ಫಂಡು ರೂ 20,33,00,000
ಬೋನಸ್ ಪಾವತಿ ರೂ 12,36,00,000	ವಿಮೆದಾರರಿಗೆ ಪಾವತಿ ರೂ 46,75,00,000

ಪೂರ್ಣಜೀವಮಾನ, ಕೆಲವು ವರುಷಗಳ ನಂತರ ಪಾವತಿ, ಮಕ್ಕಳ ವಿಮೆ, ಮಗುಳಿ ವಿಮೆ, ಸ್ವಲ್ಪಕಾಲದ ವಿಮೆ—ಈ ಮೊದಲಾದ ಪಾಲಿಸಿಗಳನ್ನು ಈ ಕಂಪನಿಯಲ್ಲಿ ಬಹಳ ಸುಲಭವಾದ ದರಗಳಲ್ಲಿ ಪಡೆಯಬಹುದು

ಹಿಂದುಸ್ಥಾನದಲ್ಲಿಯೇ ವಿಮೆಪತ್ರಗಳನ್ನು ಕೊಡುವ, ವಿಮೆದಾರರ ಹಣ ಪಾವತಿಮಾಡುವ ಮತ್ತು ಸಾಲಗಳನ್ನು ಕೊಡುವ ಕೆಲಸಗಳು ನಡೆಸಲ್ಪಡುತ್ತವೆ ವಿಶೇಷ ಸಂಗತಿಗಳನ್ನೂ, ಕನ್ನಡ ಇಂಗ್ಲಿಷ್ ನೋಟೀಸ್ ಪುಸ್ತಕಗಳನ್ನೂ ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಿ— [35-16]

ಕಮಿಷನ್ ಮತ್ತು ಜನರಲ್ ಏಜನ್ಸಿ,

ಅವೆನ್ಯೂರೋಡ್, ಬೆಂಗಳೂರು ಸಿಟಿ } ಮೈಸೂರು ಸೀಮೆಯ ಮುಖ್ಯ ಏಜಂಟರು { ಕೊಲ್ಲೂರಯ್ಯನ ಬೀದಿ, ಶಿವಮೊಗ್ಗಾ

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು.

3 20

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು,

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಜಾಗ್ರತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚೆಕ್ಕುಗಳು—ಶೀರೆಗಳು, ಖಣಗಳು

ಹೊಸ ನಮೂನೆಯ ತರಹವಾರಿ ಚೆಕ್ಕುಗಳು, ಶೀರೆಗಳು, ಖಣಗಳು, ತಿರಿಗೆಗಳು, ಚಿಲ್ಲರೆಯಾಗಿಯೂ ಬೇಲುಗಳಲ್ಲಿಯೂ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು

ಹಣ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕಾದು ಕೋರಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಅವಶ್ಯಕವಿಲ್ಲ

ಸನಗುಗಳ ಮೇಲಿನ ನಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು ಸೋಲಾಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಫಾಯಿದೆ ಹೊಂದುತ್ತಿರುವರು [28-16]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 159, ಕಿಲಾರಿ ರೋಡ್ (ಕುಂಬಾರ ಪೇಟೆ), ಬೆಂಗಳೂರು ಸಿಟಿ

ಪ್ರೊಫೆಸರ್ ಬೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ಸಗಣಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕರಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಕಿವಿನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಕೃತ್ಯದೋಷಗಳು, ಪಶುಗಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12-19]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗಿತು

ಬುಡ್ಡಿಯ ಕ್ರಯ ರೂ ೧-8-0. ವಿ ಪಿ ಖರ್ಚು 0-4-0 ಏಜಂಟರು ಬೇಕು

ಮುಖ್ಯ ಏಜಂಟರು :—ಗುರುಬಸವ ಅಂಡ್ ಕಂಪನಿ, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 17

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾವದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ,

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

"In addition to cap making we are giving special attention to knitting stockings All our stockings, for adults and children, are hand-made Prices will be sent on enquiry"

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS,
GIRLS' INDUSTRIAL SCHOOL HASSAN

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus, which will explain to you the mode of the working of the present day provident companies in India, and enables you to select a good institution, where your hard earned money will be safe.

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M L NAGANNAH,
Managing Agent, MYSORE.

A NOVELTY OF THE TWENTIETH CENTURY'

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE. MYSORE.

CAPITAL Rs 1,00,000

(INCORPORATED UNDER THE MYSORE COMPANIES' REGULATION No III OF 1895)

BANKING—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses, etc, please apply to

[161 11]

Mr M L NAGANNAH,
Managing Agent, MYSORE

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.
ಹೆಡ್ಆಫೀಸ್—ಅಜ್ಮೀರ್ ಬ್ರಾಂಚಆಫೀಸ್—ಬೆಂಗಳೂರು ಸಿಟಿ
ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ... ದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ... ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ... ಬಹಳ ಮಿತವ್ಯಯದಿಂದ ನಿರ್ವಹಮಾಡಲ್ಪಟ್ಟು ವಿಮೇದಾರರಿಗೆ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು
[109 49] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

S U. N. & Co.,
BENARES CITY, U P

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !
ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಠಗಳನ್ನು ಇನಾಮಾಗಿ ಕಳುಹಿಸಲಾದೀತು [69 9]
ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಮಲೆನಾಡು ನಿವಾಸಿಕರೇ !
ಮನೆಯಲ್ಲಿಯೇ ವೈದ್ಯನು!

ಯುಕಲಿಪ್ಟಸ್ ತೈಲದ ಸುವಾಸನೆಯ ದ್ದಲ್ಲಿ ಮಲೆನಾಡು ಸೊಳ್ಳೆಗಳ ಸುಳಿವು ಇರದು ಸೊಳ್ಳೆ ಗಳಿಲ್ಲದಲ್ಲಿ ಮಲೆನಾಡು ಜ್ವರವಿರದು ಈ ತೈಲವನ್ನು ಸೇವಿಸುವುದರಿಂದ ಮಲೆಜ್ವರ, ಶೀತಜ್ವರ, ವಿಷಮಜ್ವರ, ಶೀತವಾತ, ಗಂಟಲುನೋವು, ಕರುಳು ಉಬ್ಬಸ, ಕ್ಷಯರೋಗ, ಹಲ್ಲುನೋವು, ಕಣ್ಣುರಿ ಇಲಿದೋಷ, ಶೀತಪಿತ್ತ ಉತ್ತಬೇಧಿ ಉಷ್ಣ ತಾಪಕ ಮೊದಲಾದ ರೋಗಗಳು ಶೀಘ್ರದಲ್ಲಿ ಗುಣವಾಗುವವು ಜ್ವರಗಡ್ಡೆಯು ನೀರಾಗುವುದು ದನಕರುಗಳ ಸರ್ವರೋಗಗಳಿಗೆ ದಿವ್ಯೌಷಧವಾದ ಇದು ಮನೆಯಲ್ಲಿರುವುದರಿಂದ ಒಬ್ಬ ವೈದ್ಯನೇ ಇದ್ದಂತಾಗುವುದು ಸೀಸೆ ಒಂದಕ್ಕೆ ಕ್ರಯ ... ಆಣೆ ವಿ ಪಿ ಬೇರೆ ಡಜನ್ ಬಾಟ್ಲಿಗಳಿಗೆ ರೂ 1-0-0 ವಿ ಪಿ ಬೇರೆ ಉಪಯೋಗಪತ್ರವು ಸೀಸೆಯೊಂದಿಗೆ ಕಳುಹಿಸಲ್ಪಡುವದು
ಸ್ನೇಹಲತಾ ಮಸ್ತಕ ತಾಪಹಾರಿಣೀ ತೈಲ ಶಿರ ರೋಗಗಳಿಗೆ ಅತಿ ಶ್ರಮ ... ಕೇಶವು ಉದ್ದವಾಗಿ ಬೆಳೆಯುವುದು ಆರೋಗ್ಯದಾಯಕವಾದ ತೈಲಗಳಲ್ಲಿ ಇದು ಕೆಲಂಟ ಕಾಲದಲ್ಲೇ ಕೀರ್ತಿಯನ್ನು ಪಡೆದಿದೆ ಬೆಲೆ 4 ಔನ್ಸಿನ ಸೀಸೆಗೆ 0 12 0 ಗುಲಬಾಸ, ವಾಯಿಲೆಟ್, ಚೆರಿ ಬ್ಲೊಸಮ್ ಮೊದಲಾದ ಪರಿಮಳದ ಅತ್ತರುಗಳು ಡಜನ್ 1 ಕ್ಕೆ 0 12 0, ಗ್ರೋಸ್ 1 ಕ್ಕೆ 6-0 0
ಇಕ್ಲಿಪ್ಸ್ ರಬ್ಬರ್ ಮೊಹರುಗಳು, ಸ್ಟಟೋ ಎನ್‌ಲಾರ್ಜ್‌ಮೆಂಟುಗಳು ಅಗ್ಗದಲ್ಲಿ ತಯಾರಿಸಿಕೊಡಲಾದೀತು [102 2]
ವಿಳಾಸ—ದಿ ಇಕ್ಲಿಪ್ಸ್ ಏಜನ್ಸಿ, ಪೋಪ ಕೊಪೆಂಬು, ಕಂಕನಾಡಿ

WANTED.
For a large Coffee Estate in South Mysore a capable and energetic Writer with sufficient knowledge of English to keep simple accounts, should be able to supply labour. Good pay for a good man
Apply to —
[90 5] **X C/o VRITTANTA PATRIKE, MYSORE.**

ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆ.
"ಷೇಕ್ಸ್‌ಪಿಯರ್ ಮಹಾಕವಿಯಿಂದ ರಚಿತವಾದ ಕಥೆಗಳು" ಎಂಬ ಕನ್ನಡ ಪುಸ್ತಕವನ್ನು 1916 ನೇ ಇಸವಿ ಮೈಸೂರು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಪಠಪುಸ್ತಕವಾಗಿ ನೇಮಿಸಿರುತ್ತಾರೆ ಈ ಪುಸ್ತಕದ ಪ್ರತಿಗಳು ಮೈಸೂರು ಸಿ ಎಲ್ ಎಸ್ ಬುಕ್ ಡಿಪೋದಲ್ಲಿ ಪ್ರತಿ 1 ಕ್ಕೆ 8 ಆಣೆಯಂತೆ ಬಿಕರಿಗೆ ಸಿದ್ಧವಾಗಿವೆ (1)

ಸುಖಕರ, ಆನಂದ, ಬಹಳ್ ಅವಶ್ಯ.
ಈಗ ತಾನೇ ಕಂಡುಹಿಡಿದಿದೆ.
ಜಪಾನ್ ರಾಜ್ಯದಲ್ಲಿ ನೂರಾರು ವರುಷ ಗಳಿಂದ ಉಪಯೋಗದಲ್ಲಿದೆ.

ಸೆಂಶಿತಾನ
ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು
(2) ಹಾಡುವವರಿಗೆ ವರಪ್ರಸಾದವಾದದ್ದು.
(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ
(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ [73-9]
ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ

ಮುತ್ತಿನಂತಿರುವ	1೦	ಮಾತ್ರೆ ಉಳ್ಳ ಪೊಟ್ಣಕ್ಕೆ ಕ್ರಯ		2	ಆಣೆ
,,	9೦	,,	,, ,, ,,	4	,,
,,	200	,,	,, ,, ,,	7	,,
,,	200	,,	ಸುಂದರವಾದ ಟಿನ್ ಡಬ್ಬಾ	9	,,
,,	80	,,	,, ,, ,,	4	,,
,,	100	,,	ಬಾಟ್ಲಿಯಲ್ಲಿ	1½	,,

ಈ ಕ್ರಯದನ್ನು ಸ್ಟಾಂಪನ್ನೂ, ಅಂಚ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು
ನಮ್ಮ ವಿಳಾಸ—ಸೆಂಶಿತಾನ ಡಿಪೋ,
ಬೊಂಬಾಯಿ 3;
ಅಥವಾ, ಬಿ ಸಿ. ಷಾ ಕಂಪನಿ,
509 ಮಿಂಟ್ ಬೀದಿ, ಮದರಾಸ್.

ಅಮೃತಾಂಜನ ರಿಜಿಸ್ಟರ್ಡ್
ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು ಠಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತು 0 8-0 ಡಜನ್ 1 ಕ್ಕೆ 5 1 0 ವಿ ಪಿ ಪ್ರತ್ಯೇಕ ಗಜಕರ್ಣದ ಮುಲಾಮು 0 6-0, ದಂತಮಂಜನ 0 2-0 ಮೋಹಿನಿ ತೈಲ 0 12 0 ಖಜ್ಜಿ ಮುಲಾಮು 0 3-0 ಜುಲಾಬು ಮಾತ್ರೆ 0-8 0 ಸುಂದರಿ ಮುಲಾಮು 0 8-0 ಕ್ಯಾಟಲಾಗಿಗೆ ಬರಿಯರಿ [52-10]
ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ವಾರ್ಕ್ ಇವರಲ್ಲಿ ಸಿಕ್ಕುತ್ತವೆ
ಅಮೃತಾಂಜನ ಡಿಪೋ,
ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಡೋಂಗರೆ
ಇವರ ಬಾಲಾಮೃತ
[150 43]
ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ
ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವನ್, ಮದರಾಸು ಇವರಲ್ಲೂ ದೊರೆಯುವುದು.

Excellent notes on **Tanglewood Tales** 3 As. Notes on **Fairy Tales** 2 As ಆರೋಗ್ಯಪ್ರಶ್ನೋತ್ತರ 1 ಆಣೆ ಪತ್ರಗಳ ನಮೂನೆಗಳುಳ್ಳ ಪತ್ರರತ್ನಾಕರ 8 ಆಣೆ ಅರ್ಜಿಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ 4 ಆಣೆ [106-2]
Apply to,—(1) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು,
(2) Chowrappa & Son, Bangalore City.

ಹತ್ತಿಯ ಹಿಟ್ಟು ಹೊಟ್ಟು

ಬೆಂಗಳೂರು ದಂಡಿನಲ್ಲಿರುವ ಇಂಗ್ಲಿಷ್ ಸೈನಿಕರ ಉಪಯೋಗಕ್ಕಾಗಿ ಆ ಸರ್ಕಾರದವರು ಮಿಲ್ಟೇರಿ ಇಲಾಖೆಯವರಿಂದ ಅಲ್ಲಿ ಒಂದು ಕರೋಹಟ್ಟಿಯನ್ನು ಇಡಿಸಿ ನಡಿಸುತ್ತಿದಾರೆ ಅದರ ಮ್ಯಾನೆಜರವರಾದ ಮಿ|| ಎಸ್. ಡಬ್ಲ್ಯು ರಾಸ್ ಸಾಹೇಬರು ಎಮ್ಮೆ, ಹಸು, ಕರುಗಳನ್ನು ತಮ್ಮ ಕರೋಹಟ್ಟಿಯಲ್ಲಿ ಸಾಕುವ ಕ್ರಮವನ್ನು ಕುರಿತು ಬರೆಯುವಾಗ್ಗೆ ಹತ್ತಿಯ ಹಿಟ್ಟು ಮತ್ತು ಹೊಟ್ಟಿನ ಗುಣವನ್ನು ವಿವರಿಸಿದಾರೆ ಅವರು ಬರೆದಿರುವುದನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಿರುವೆವು

ಹಾಲನ್ನು ಕೊಡುತ್ತಿರುವ ರಾಸುಗಳಿಗೆ ಸ್ವಲ್ಪ ಪ್ರಮಾಣದಲ್ಲಿಯೇ ಅತ್ಯಧಿಕ ಸಾರವನ್ನುಳ್ಳ ಆಹಾರವನ್ನು ಕೊಡಬೇಕಾದರೆ ಹತ್ತಿಯ ಬೀಜದ ಹಿಂಡಿಗಿಂತಲೂ ಉತ್ತಮವಾದ ಮೇವು ಮತ್ಯಾವುದೂ ಇರುವುದಿಲ್ಲ ದನಗಳಿಗೆ ಈ ಮೇವನ್ನು ರೂಢಿ ಮಾಡಿಸಬೇಕೆಂಬ ತೊಂದರೆಯೇ ಇಲ್ಲ ಮೊದಲಿನಿಂದಲೂ ಅವುಗಳ ಮುಂದಿರಿಸಿದಷ್ಟನ್ನೂ ಕೇವಲ ಆತುರದಿಂದ ತಿಂದುಬಿಡುತ್ತವೆ ಹತ್ತಿಯ ಬೀಜದ ಹಿಟ್ಟನ್ನು ಒಣಗಿದ್ದನ್ನೇ ಆಗಲಿ ಅಥವಾ ಅಂಬಲಿಯ ರೂಪದಲ್ಲಿಯಾಗಲಿ ತಿನ್ನಿಸಬಹುದಾದುದರಿಂದ ಅದೊಂದು ಮಿತವ್ಯಯದ ಮೇವಾಗಿರುತ್ತದೆ ಇತರ ಮೇವುಗಳಿಗಿಂತಲೂ ಇದು ಪ್ರಾಣಿಗಳಿಗೆ ಪುಷ್ಟಿಕರವಾಗಿಯೂ ಉತ್ತಮ ಫಲಿತಾಂಶಗಳನ್ನು ಕೊಡುವುದಾಗಿಯೂ ಇರುವುದು

ಸ್ವಾಭಾವಿಕವಾಗಿ ಒಂದೊಂದು ಪ್ರಾಣಿಗೆ ಯಾವ ಪ್ರಮಾಣವನ್ನು ಕೊಡಬೇಕೆಂಬುದು ಮೇವನ್ನು ಕೊಡುವಾತನ ಶಕ್ತಿಗೆ ಆಧೀನವಾಗಿರುತ್ತದೆ ಆದರೆ ಸರ್ಕಾರಿ ಹೈನದ ಮನೆಗಳಲ್ಲಿ ಕೊಡುವ ಪ್ರಮಾಣವು 1,000 ಪೌಂಡುಗಳ ತೂಕವುಳ್ಳ ದನಕ್ಕೆ 10 ಪೌಂಡುಗಳ ಮೇರೆಯೂ ಮತ್ತು ಪ್ರಾಣಿಯು ಕರಾವು ಶಕ್ತಿಗೆ ಅನುಸಾರವಾಗಿಯೂ ಇರುವುದು ಹಾಲು ಕರೆಯದಿರುವ ರಾಸುಗಳಿಗೆ ಈ ಮೇವು ವಿಪರೀತ ಪುಷ್ಟಿಯಾಗಿರುವುದರಿಂದ ಅವುಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟಿರುವುದಕ್ಕಾಗಿ ಪ್ರಾಣಿಯೊಂದಕ್ಕೆ ದಿನಕ್ಕೆ 1 ಪೌಂಡಿನಂತೆ ಮಾತ್ರವೇ ಕೊಡುತ್ತಿರುವೆವು. ಎಳೇ ರಾಸುಗಳಿಗೆ ಇದು ಅತ್ಯಂತ ಶ್ರೇಷ್ಠವಾದುದು ಇದರಿಂದ ಪ್ರಾಣಿಗಳು ಬೇಗನೆ ಫಲ ಬೀಳುವುವಲ್ಲದೆ ಜೋರುಗಾಗಿಯೂ ಸುಪೋಷಿತವಾಗಿಯೂ ಕರುಗಳನ್ನು ಹಾಕುವುದಕ್ಕೆ ಸರಿಯಾದ ಸ್ಥಿತಿಯಲ್ಲಿಯೂ ಇರುವಂತಾಗುವುದು ಇಲ್ಲಿ ನಾವು ಎಳೇ ದನಗಳಿಗೆ ದಿನ ಒಂದಕ್ಕೆ 6 ಪೌಂಡುಗಳ ಹತ್ತೀ ಬೀಜದ ಹಿಟ್ಟನ್ನು ಕೊಡುತ್ತಿರುವೆವು ಅವು ಅತ್ಯುತ್ತಮವಾದ ಸ್ಥಿತಿಯಲ್ಲಿರುತ್ತವೆ ಮತ್ತು ಆ ಪೈಕಿ ಅನೇಕವು ಎರಡು ವರ್ಷಕ್ಕೆ ಬರುತ್ತಲೇ ಫಲ ಬಿದ್ದಿರುತ್ತವೆ ಮತ್ತೆ ಕೆಲವು ಎರಡು ವರ್ಷ ಮೂರು ತಿಂಗಳ ವಯಸ್ಸಿನಲ್ಲಿ ಕರುಗಳನ್ನು ಹಾಕಿರುವುದಲ್ಲದೆ ದಿನವೊಂದಕ್ಕೆ 30 ರಿಂದ 40 ಪೌಂಡುಗಳ ಹಾಲನ್ನು ಕರೆಯುತ್ತಿವೆ ಈ ತೃಪ್ತಿಕರವಾದ ಫಲಿತಾಂಶಕ್ಕೆ ಅವುಗಳಿಗೆ ಹುಟ್ಟಿದಾರಭ್ಯ ಹತ್ತೀ ಬೀಜದ ಹಿಟ್ಟಿನಂತಹ ಒಂದು ಒಳ್ಳೇ ಮೇವೇ ಅಲ್ಲದೆ ಮತ್ಯಾವ ಕಾರಣವೂ ಇರುವುದಿಲ್ಲ

ಘಟ್ಟ ಮೇವಿಗೆ ಹತ್ತೀ ಬೀಜದ ಸಿಪ್ಪೆಯು ಚೆನ್ನಾಗಿರುವುದು ಮತ್ತು ಮೇವಿನ ಭಾಗವನ್ನಾಗಿ ಇದನ್ನು ಉಪಯೋಗಿಸುವುದರಿಂದ ಖರ್ಚಿನಲ್ಲಿ ಮಿಗಿತಾಯವುಂಟು ರಾಗಿ, ಭತ್ತ ಮುಂತಾದವುಗಳ ಕಡ್ಡಿ ಅಥವಾ ಒಣ ಹುಲ್ಲು 100 ಪೌಂಡುಗಳಿಗೆ ಒಂದು ರೂಪಾಯಿಗಿಂತಲೂ ಹೆಚ್ಚಾಗಿ ಬೀಳುವ ಸಂದರ್ಭಗಳಲ್ಲಿ ಪ್ರಾಯದ ದನಗಳಿಗೆ ಒಂದೊಂದಕ್ಕೆ ದಿನಕ್ಕೆ 20 ಪೌಂಡುಗಳ ವರೆಗೂ ಇದನ್ನು ಲಾಭಕರವಾಗಿ ಉಪಯೋಗಿಸಲಾಗುವುದು

ಸ್ವಲ್ಪವೂ ಆಲಸ್ಯವಿಲ್ಲದಂತೆ ದನಗಳಿಗೆ ಇದರ ಮೇಲೆ ವ್ಯಾಮೋಹವುಂಟಾಗುವುದು ಮತ್ತು ಇದರೊಂದಿಗೆ ಸ್ವಲ್ಪ ಉಪ್ಪನ್ನು ಸೇರಿಸಿದ್ದಾದರೆ ಮೊದಲಿನಿಂದಲೂ ಸ್ವಲ್ಪವೂ ಬಿಡದಂತೆ ತಿಂದುಬಿಡುವವು ಅದನ್ನು ಇತರ ಕಾಳುಗಳು ಅಥವಾ ಹಿಟ್ಟುಗಳೊಂದಿಗೆ ಬೆರಸಿ ಕಲಗಚ್ಚು ಅಥವಾ ಅಂಬಲಿಯ ರೂಪದಾಗಿ ದನಗಳ ಮುಂದಿರಿಸುವುದೇ ಅದನ್ನು ಕೊಡತಕ್ಕ ಶ್ರೇಷ್ಠವಾದ ಮಾರ್ಗವಾಗಿರುತ್ತದೆ ಹೀಗೆ ಮಾಡಿದಲ್ಲಿ ಪ್ರಾಣಿಗಳು ಹಾಕಿದಷ್ಟನ್ನೂ ತಿನ್ನುತ್ತ ಬರುವುವಾದುದರಿಂದ ಯಾವ ತೊಂದರೆಯೂ ಪ್ರಾಪ್ತವಾಗುವುದಿಲ್ಲ

ನಮ್ಮ ಈ ಹೈನದ ಮನೆಯಲ್ಲಿ ಕೊಡುವ ಮೇವಿನ ಸಾಮಗ್ರಿಗಳು ಯಾವುವೆಂದರೆ —

	ದಿನಕ್ಕೆ 10 ರಿಂದ 20 ಪೌಂಡು ಹಾಲು ಕೊಡುವವು	ದಿನಕ್ಕೆ 4 ರಿಂದ 10 ಪೌಂಡು ಹಾಲು ಕೊಡುವವು	ಹಾಲು ಕರೆಯದಿರುವವು
ಎಮ್ಮೆಗಳು—			
ಹತ್ತಿಯ ಬೀಜದ ಹಿಂಡಿ	4	2	1
ಹತ್ತಿಯ ಬೀಜದ ಸಿಪ್ಪೆ	9	6	10
ತವುಡು	1	1	1
ತೊಗರಿಹೊಟ್ಟು	1	1	
ಮದ್ಯ ಕಾಸುವುದರಲ್ಲಿ ಉಪಯೋಗಿಸುವ ಕಾಳುಗಳ ಹೊಟ್ಟು ಒದ್ದೆ ಮಾಡಿದ್ದು	6	4	
ರಾಗೀಕಡ್ಡಿ	20	20	20
ಆಕಳು—			
ಹತ್ತಿಯ ಬೀಜದ ಹಿಟ್ಟು	4	2	1
ಹತ್ತಿಯ ಬೀಜದ ಸಿಪ್ಪೆ	6	6	10
ತವುಡು	2	1	1
ತೊಗರಿಹೊಟ್ಟು	1	1	
ಮದ್ಯ ಕಾಸುವುದರಲ್ಲಿ ಉಪಯೋಗಿಸುವ ಕಾಳುಗಳ ಹೊಟ್ಟು	8	4	
ರಾಗೀಕಡ್ಡಿ	20	20	20
ಎಳೇರಾಸು ಆಕಳು—	9 ರಿಂದ 12 ತಿಂಗಳು		6 ರಿಂದ 9 ತಿಂಗಳು
ಹತ್ತೀಬೀಜದ ಹಿಂಡಿ	5		4
ಹತ್ತೀಬೀಜದ ಸಿಪ್ಪೆ	,,		-
ತವುಡು	2		1

ಮೇಲಿನ ಪಟ್ಟಿಯಿಂದ ಹತ್ತೀ ಬೀಜದ ಹಿಂಡಿ ಮತ್ತು ಸಿಪ್ಪೆಗಳನ್ನು ಧಾರಾಳವಾಗಿ ಕೊಡುತ್ತೇವೆಂಬುದು ವ್ಯಕ್ತವಾಗುತ್ತದೆ

ಯೂರೋಪು ಮತ್ತು ಇಂಡಿಯಾ ದೇಶಗಳ ಆಕಳುಗಳು ಹತ್ತೀ ಬೀಜದ ಹಿಂಡಿ ಮತ್ತು ಸಿಪ್ಪೆಗಳ ಮೇವಿನಿಂದ ಬಹಳ ಒಳ್ಳೇ ಸ್ಥಿತಿಗೆ ಬರುತ್ತವೆ ಮತ್ತು ಎಮ್ಮೆಗಳೂ ಇವುಗಳನ್ನು ಬಹಳ ಆತುರದಿಂದ ತಿನ್ನುತ್ತವೆ"

ಭಕ್ತವಿಜಯ

ಎರಡನೆಯ ಆವೃತ್ತಿ ಮುದ್ರಿತವಾಗುತಿದ್ದ ಈ ಗ್ರಂಥವು ಬೈಂಡಾಗಿ ಸಿದ್ಧವಾಗಿದೆ. ಬೆಲೆ ಪೋಸ್ಟೇಜ್ ಸಹಿತ ರೂ. 3-0-0. ಅಪೇಕ್ಷಕರು ದಯೆಯಿಟ್ಟು ಒಡನೆಯೆ ಬರೆದುಕೊಳ್ಳಬೇಕು. ವಿಲಂಬಿಸಿದರೆ ಪ್ರತಿಗಳು ದೊರೆಯಲಾರವು.

[110-1] ವಿಳಾಸ —ಭಕ್ತವಿಜಯ ಆಫೀಸ್, ಮೈಸೂರ್

ಹೊಸ ಬಂಗಾಳಿ ನಾವಿಲ್ಸ್ —ವಿಷವಿವಾಹ 4 ಆ ಸನ್ಯಾಸಿನಿ 1¼ ಆ ಅನಾಥಪ್ರೇತ 1 ಆ ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0 ಚಂದ್ರಶೇಖರ 1-1-0 ರಜನಿ 13 ಆ ಅಹಲ್ಯಾಬಾಯಿ 9 ಆ ಇತ್ಯಾದಿ. ಚಿತ್ರವಿಚಿತ್ರಾವಳಿ 3ನೆ ಭಾಗ ಮತ್ತು ಮಾಯಾವಿ ಪ್ರಿಂಟಾಗುತ್ತವೆ. ನ್ಯಾಯದರ್ಪಣ 1¼ ರೂಪಾಯಿ

[63-12] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವುದು. ನಮ್ಮ ಏಜಂಟರು ಬಿ ಸಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಆಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

PRINTING PRESS FOR SALE.

The Printing Press upon which this Newspaper is being printed is for sale. Size, Double Demy. Fittings for hand or power. May be seen working by appointment. Price, Rs 1,200

Apply to-

THE MANAGER
Wesleyan Mission Press
Mysore City

[11-1]

ವೃತ್ತಾಂತ ಪತ್ರಿಕೆ

ಸನ್ ೧೯೧೪ ನೇ ಇಸವಿ ಮೇ ತಾ ೧೪ ನೇ ಗುರುವಾರ

ಮೈಸೂರು ಸರ್ಕಾರದ ನೌಕರಿಗಳು

ಮೈಸೂರು ಸಂಸ್ಥಾನದ ಜುಡಿಷಲ್ (ನ್ಯಾಯಸ್ಥಾನ) ಇಲಾಖೆ ಮತ್ತು ವೈದ್ಯ ಇಲಾಖೆಗಳಲ್ಲಿ ಉದ್ಯೋಗಗಳಿಗೆ ಜನರನ್ನು ನೇಮಕಮಾಡತಕ್ಕ ವಿಚಾರವಾಗಿ ಈಚೆಗೆ ಹಲವು ಪತ್ರಿಕೆಗಳೊಳಗೆ ವಾದಗಳು ನಡೆಯುತ್ತಾ ಬಂದಿರುವವು. ಈ ವಾದಗಳಲ್ಲಿ ಕೆಲವು ವಿಚಾರಗಳು ಸ್ವಲ್ಪ ದೀರ್ಘವಾದ ಆಲೋಚನೆಗೆ ಅರ್ಹವಾಗಿರುತ್ತವೆ. ಜಾತ್ಯಧಾರರು ದೊಡ್ಡದ ಸಂಬಳವನ್ನೂ ಮೇಲಾದ ಸ್ಥಾನವನ್ನೂ ಅಪೇಕ್ಷಿಸಿ ಚರ್ಚೆಮಾಡುತ್ತಿರುವರೆಂದು ಕಂಡುಬರುವುದು. ನಮ್ಮ ಮಹಾರಾಜರವರ ಗವರ್ನ್‌ಮೆಂಟಿನ ಸರ್ವಿಸಿಗೆ ಸೇರತಕ್ಕವರಲ್ಲಿ ಈ ಎರಡು ಆಸೆಗಳು ಪ್ರಧಾನವಾಗಿರುವ ಪಕ್ಷಕ್ಕೆ ಈ ಸಂಸ್ಥಾನದ ಮುಂದಿನ ಸ್ಥಿತಿಗತಿಯು ಅಷ್ಟೇನೂ ಸಂತೋಷಕರವಾಗಿರಲಾರದು.

ನಮ್ಮ ಗವರ್ನ್‌ಮೆಂಟಿನ ಕೆಲಸಕಾರ್ಯಗಳು ನಡೆಯುವುದಕ್ಕೆ ವಿದ್ಯಾಸಮರ್ಥರಾದ ಜನಗಳು ಬೇಕಾಗಿದೆ ಎನ್ನುವುದೂ, ಅಂಥಾ ಜನಗಳಿಗೆ ಯೋಗ್ಯವಾದ ಸಂಬಳಗಳು ಸಲ್ಲಬೇಕೆಂಬುದೂ ಎಲ್ಲರೂ ಒಪ್ಪತಕ್ಕದ್ದಾಗಿದೆ. ಇದಕ್ಕೆ ಪ್ರತಿಯಾಗಿ ನಮ್ಮ ಸರ್ಕಾರದ ನೌಕರರು ಸಂಬಳವನ್ನೂ ಗೌರವವಾದ ಪದವಿಯನ್ನೂ ಮಾತ್ರ ಕೋರುವವರಾದರೆ ನಮ್ಮ ಪ್ರಜೆಗಳ ಮುಂದಿನ ಗತಿಯು ಸಂತೋಷಕರವಾಗುವುದಿಲ್ಲ.

ಸಂಸ್ಥಾನದ ನೌಕರಿಯನ್ನು ಅಪೇಕ್ಷಿಸತಕ್ಕ ಪ್ರತಿ ಒಬ್ಬನೂ ಮೊದಲು ನಮ್ಮ ಮಹಾರಾಜರವರ ವಿಷಯದಲ್ಲೂ ಅವರ ಗವರ್ನ್‌ಮೆಂಟಿನ ವಿಷಯದಲ್ಲೂ ಜಯ ಭಕ್ತಿಗಳನ್ನು ಪಡೆದವನಾಗಿರಬೇಕು. ಎರಡನೆಯದಾಗಿ ಅವನಿಗೆ ಪ್ರಜೆಗಳ ಮೇಲಣ ಪ್ರೀತಿಯು ಹೇರಳವಾಗಿಯೂ, ಅವರ ಶ್ರೇಯೋಭಿವೃದ್ಧಿಯಲ್ಲಿ ಕುತೂಹಲವೂ ಉತ್ಸಾಹವೂ ವಿಶೇಷವಾಗಿಯೂ ಇರಬೇಕು. ಸರ್ಕಾರದ ನೌಕರಿಗೆ ಸೇರತಕ್ಕವನು ಐಶ್ವರ್ಯವನ್ನೂ ದೊಡ್ಡ ಪದವಿಯನ್ನೂ ಸಂಪಾದಿಸುವುದಕ್ಕಲ್ಲ, ಸಂಸ್ಥಾನವನ್ನು ಅಭಿವೃದ್ಧಿಗೆ ತಂದು ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡಲು ಸಾಹಸ ಪ್ರಯತ್ನಗಳನ್ನು ಮಾಡುವುದಕ್ಕಾಗಿಯೇ ಎಂದು ಗ್ರಹಿಸಬೇಕು.

ಗವರ್ನ್‌ಮೆಂಟಿನ ಪ್ರತಿ ಒಬ್ಬ ನೌಕರನೂ ತನ್ನ ನೌಕರಿಯ ದೆಸೆಯಿಂದ ಪ್ರಜೆಗಳಿಗೆ ನಾನಾ ಉಪಕಾರಗಳನ್ನು ಮಾಡಬಹುದು, ಇಲ್ಲವೇ ವಿಶೇಷವಾದ ಕಷ್ಟನಷ್ಟಗಳನ್ನುಂಟುಮಾಡಬಹುದು. ಕಚೇರಿಯಲ್ಲಿರುವ ಒಬ್ಬ ಜವಾನನು ಅಧಿಕಾರಿಯನ್ನು ನೋಡಲಾಗದವರನ್ನು ನೋಡುವುದಕ್ಕೆ ಕಚೇರಿಗೆ ಬರುವಂಥಾ ಬಡಕೃಷಿಕರೇ ಮುಂತಾದ ಅರ್ಜಿದಾರರಿಗೆ ಸಹಾಯ ಮಾಡಲೂ, ನೋಡುವುದಕ್ಕಾಗದಂತೆ ಅಡಚಣೆಮಾಡಲೂ ಬಹುದು. ಯಾವುದಾದರೂ ಒಂದು ಕೆಲಸಕ್ಕಾಗಿ ಕಚೇರಿಗೆ ಬರತಕ್ಕವರನ್ನು ಗುಮಾಸ್ತನು ಅವರ ಕೆಲಸವನ್ನು ಬೇಗ ಮಾಡಿಕೊಟ್ಟು ಸಂತೋಷಪಡಿಸಬಹುದು; ಇಲ್ಲವೇ ಅವರನ್ನು ದಣಿಸಿ ಸಂಕಟಪಡಿಸಲೂ ಬಹುದು. ದೊಡ್ಡ ಅಧಿಕಾರಿಗಳಿಗೆ ದರ್ಜೆಯೂ ಅಧಿಕಾರವೂ ಹೆಚ್ಚಾಗಿದೆ. ಇವರು ತಾಲ್ಲೂಕಿನ ಪ್ರಜೆಗಳನ್ನು ಸುಖಿಗಳಾಗಿಯೂ, ಸಂತೋಷವಾಗಿಯೂ ನಡೆಸಿಕೊಂಡು ಬರಬಹುದು, ಹಾಗಿಲ್ಲದಿದ್ದರೆ ಅಂಥಾ ಅಧಿಕಾರಿಗಳ ದೆಸೆಯಿಂದ ತಾಲ್ಲೂಕಿನ ಪ್ರಜೆಗಳೆಲ್ಲಾ ಕಷ್ಟನಷ್ಟ ಮನೋವ್ಯಥೆಗಳನ್ನು ಅನುಭವಿಸಬಹುದು. ಅಧಿಕಾರಿಗಳೂ ಅವರ ಕೈಕೆಳಗಿನ ನೌಕರರೂ ತಮ್ಮತಮ್ಮ ಕರ್ತವ್ಯ ಕಾರ್ಯಗಳನ್ನು ಪ್ರೀತಿಯಿಂದಲೂ ಚಟುವಟಿಕೆಯಾಗಿಯೂ ಮಾಡುತ್ತಾ, ಪ್ರಜೆಗಳ ವಿಷಯದಲ್ಲಿ ಪಕ್ಷಪಾತಮಾಡದೆ ಧರ್ಮವಾಗಿಯೂ, ಸತ್ಯದಿಂದಲೂ ನಡೆದುಕೊಂಡ ಪಕ್ಷದಲ್ಲಿ ಎಲ್ಲೆಲ್ಲೂ ನೆಮ್ಮದಿಯೂ, ಸುಖ ಸಂತೋಷಗಳೂ ಹುಟ್ಟಿ ಹೆಚ್ಚಿ ಮೆರೆಯುತ್ತವೆ. ಇದಕ್ಕೆ ಪ್ರತಿಯಾಗಿ ಅವರು ಲಂಚವನ್ನ ಪೇಕ್ಷಿಸುತ್ತಾ, ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಆಲಸ್ಯಮಾಡುತ್ತಾ, ಪ್ರಜೆಗಳ ಮೇಲೆ ಪ್ರೀತಿಯಿಲ್ಲದೆ ಅವರನ್ನು ವೃಥಾ ದಣಿಸುತ್ತಾ ಬಂದರೆ ಪ್ರಜೆಗಳಿಗೆ ಕಷ್ಟನಷ್ಟಗಳುಂಟಾಗುವುದು ಮಾತ್ರವೇ ಅಲ್ಲ, ಅಧಿಕಾರಿಗಳ ಮತ್ತೂ ಗವರ್ನ್‌ಮೆಂಟಿನ ವಿಷಯದಲ್ಲಿ ಅವರಿಗೆ ಅತೃಪ್ತಿಯೂ ಅಸಮಾಧಾನವೂ ಗೊಣಗಾಟಗಳೂ ಹುಟ್ಟಿ ಹರಡುವವು.

ಅಧಿಕಾರಿಗಳೂ ನೌಕರರೂ ನಮ್ಮ ಮಹಾರಾಜರವರ ಸರ್ವಿಸಿನಲ್ಲಿರುವ ಕಾಲದಲ್ಲಿ ಪ್ರಜೆಗಳ ಸೇವೆಗಾಗಿಯೇ ನೇಮಕವಾಗಿರುವರೆಂಬ ವಿಷಯವನ್ನು ಅವರು ಚೆನ್ನಾಗಿ ತಿಳಿಯುವವರಾಗಬೇಕು. ನಮ್ಮ ಗವರ್ನ್‌ಮೆಂಟಿನ ಅನೇಕಾನೇಕ ಉದ್ಯೋಗಸ್ಥರು ದಿವಾನ್‌ರವರ ಚಾಕಚಕ್ಯತೆಯನ್ನೂ ಪ್ರಜಾಭಿಮಾನವನ್ನೂ ಅನುಸರಿಸುವುದನ್ನು ನೋಡಬೇಕೆಂದು ಕುತೂಹಲಪಡುತ್ತೇವೆ. ಅವರು ಸಂಸ್ಥಾನದ ಶ್ರೇಯೋಭಿವೃದ್ಧಿಯನ್ನೇ ಪ್ರಾಮುಖ್ಯವಾಗಿಟ್ಟುಕೊಂಡು, ಆ ಚಿಂತೆಯಿಂದಲೇ ಕೆಲಸಗಳನ್ನು ನಡಿಸುತ್ತಿರುವರು. ಗವರ್ನ್‌ಮೆಂಟಿನಲ್ಲಿ ಉದ್ಯೋಗಿಗಳಾಗಿರುವವರೆಲ್ಲಾ ತಮ್ಮ ಉದ್ಯೋಗದ ವಿಷಯದಲ್ಲೂ ಪ್ರಜಾಹಿತದ ಮೇಲೂ ಇನ್ನೂ ಹೆಚ್ಚಾಗಿ ಮನಸ್ಸಿಟ್ಟು ಕಾರ್ಯಗಳನ್ನು ನಡಿಸುತ್ತಾ ಬಂದ ಪಕ್ಷದಲ್ಲಿ ನಮ್ಮ ಸಂಸ್ಥಾನಕ್ಕೆ ಅಭಿವೃದ್ಧಿಯೂ ಶ್ರೇಯಸ್ಸೂ ಬಹಳ ಬೇಗನೆ ಲಭ್ಯವಾಗುವವೆಂದು ಹೇಳಬಲ್ಲೆವು.

ಅನ್ಯದೇಶಗಳ ವಿಚಾರಗಳು.

ಐರ್ಲೆಂಡಿನ ವಿಚಾರವು ಎಲ್ಲಾ ಪಕ್ಷಗಳವರಿಗೂ ಹಿತಕರವಾಗುವ ರೀತಿಯಲ್ಲಿ ಇತ್ಯರ್ಥವಾಗಬಹುದೆಂಬ ಭರವಸೆ ಕಂಡು ಬರುತ್ತದೆ. ಈ ವಿಚಾರವನ್ನು ಕುರಿತು ಗವರ್ನ್‌ಮೆಂಟಿನಲ್ಲೂ ಎದುರು ಪಕ್ಷದಲ್ಲೂ ಪ್ರಾಮುಖ್ಯರಾದವರು ಕಲೆತು ಚರ್ಚೆಮಾಡುತ್ತಿದ್ದಾರೆಂದು ಕಾಣುವುದು. ಅವರು ಈಗ ಹುಟ್ಟಿರುವ ಚಿಂತೆಯನ್ನೂ ಅಸಮಾಧಾನವನ್ನೂ ನಿವಾರಣೆಮಾಡುವುದಕ್ಕೆ ಸುಲಭವಾದ ಉಪಾಯಗಳನ್ನು ಕಂಡುಹಿಡಿದು ಜಾರಿಗೆ ತರುವುದು ಕಷ್ಟವಲ್ಲ. ಇದರಲ್ಲಿ ಉಭಯ ಪಕ್ಷದವರಿಗೂ ಪ್ರತಿಬಂಧಕಗಳ ಸೇರಿ ವಿಶೇಷವಾಗಿರುತ್ತವೆ. ಆದರೆ ಈಗಿನ ಸ್ಥಿತಿಯನ್ನು ನಿರ್ವಹಿಸಬೇಕೆಂಬ ವಿಷಯದಲ್ಲಿ ಅವರೆಲ್ಲಾ ಒಕ್ಕಟ್ಟಾದರೆ ಅದಕ್ಕೆ ಮಾರ್ಗ ದೊರೆತೀತು. ಅದು ಸಕಲರಿಗೂ ಸಮ್ಮತವಾಗಿ ಸಂತೋಷವನ್ನುಂಟುಮಾಡೀತು. ಆದಕಾರಣ ಅಂಥಾ ಮಾರ್ಗವು ಬೇಗನೆ ರೂಪಿಸಲ್ಪಡಲೆಂದು ಹಾರೈಸುತ್ತೇವೆ.

* * * *

ಮೆಕ್ಸಿಕೋ ರಾಜ್ಯದ ವಿಚಾರವು ಅದೇನೂ ಸಂತೋಷಪ್ರದವಾಗಿಲ್ಲ. ಸಂಯುಕ್ತ ಅಧಿಪತ್ಯಗಳ ಸೈನ್ಯವು ಇನ್ನಾ ವೀರಕ್ರೂಸ್ ಎಂಬ ಪಟ್ಟಣವನ್ನು ಆಕ್ರಮಿಸಿಕೊಂಡೇ ಇದೆ. ಅದು ಇಷ್ಟರಲ್ಲೇ ರಾಜಧಾನಿಯಾದ ಮೆಕ್ಸಿಕೋ ನಗರಕ್ಕೂ ಪ್ರವೇಶಿಸುವ ಸಂಭವವಿರುವ ಹಾಗೆ ಕಾಣಬರುತ್ತದೆ. ಇದರಿಂದ ಈಗ ಹುಟ್ಟಿರುವ ಮನಸ್ತಾಪವು ಜಾಸ್ತಿಯಾಗಿ, ಅಲ್ಲಿನ ಪ್ರಜೆಗಳಿಗೆ ಕ್ಷೋಭೆಯುಂಟಾದೀತೆಂದು ಹೇಳುತ್ತಾರೆ. ಪ್ರೆಸಿಡೆಂಟ್ ಹ್ಯೂಯರ್ಟಾ ಎಂಬಾತನು ಪ್ರಜೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾರದೆ ಆತನ ಅಧಿಕಾರಬಲವು ಸಡಿಲವಾಗುತ್ತಿದೆ ಎಂದು ಹೇಳುವರು. ಈ ವಾರ್ತೆ ನಿಜವಾಗಿದ್ದರೂ ಇದರ ಬದಲು ಹೀಗಾದ ಪಕ್ಷಕ್ಕೆ ಸಂಯುಕ್ತ ಅಧಿಪತ್ಯಗಳವರು ಎಷ್ಟು ಬೇಗನೆ ಈ ವಿಚಾರವನ್ನು ಕೊನೆಮುಟ್ಟಿಸುವರೋ ಅಷ್ಟು ಬೇಗನೆ ಎಲ್ಲರಿಗೂ ಕ್ಷೇಮವಾದೀತು. ಈಗ ಆ ರಾಜ್ಯದಲ್ಲಿ ಬಿಗಿ ತಪ್ಪಿಹೋಗಿದೆ, ಪ್ರಜಾ ನೆಮ್ಮದಿಗೆ ಅಡಚಣೆಗಳು ಅನೇಕವಾಗಿರುತ್ತವೆ. ದರ್ಜೆಪಟ್ಟ ಪ್ರಜಾನಿಯಾಮಕದಿಂದ ಆಳತಕ್ಕ ಸಮರ್ಥನು ದೊರಕುವುದು ಪ್ರಯಾಸವಾಗಿದೆ.

* * * *

ಬಾಲ್ಕನ್ ಸಂಸ್ಥಾನಗಳಲ್ಲಿ ಪ್ರತ್ಯೇಕ ಮಾಡಲ್ಪಟ್ಟಿರುವ ಆಲ್ಬೇನಿಯ ಎಂಬ ಹೊಸ ಅಧಿಪತ್ಯದೊಳಗೆ ಕಾರುಬಾರುಗಳು ತೃಪ್ತಿಕರವಾಗಿಲ್ಲ. ಅಲ್ಲಿ ಕಟ್ಟುಕಾಣದೆ ಒಳಗಾಗದ ಜನರು ಅನೇಕರು ಕಾಣಿಸಿಕೊಂಡು ಆಯುಧಪಾಣಿಗಳಾಗಿ ಅನೇಕ ಪ್ರಜೆಗಳನ್ನು ನಿಷ್ಕಾರಣವಾಗಿ ಕೊಲೆ ಮಾಡಿರುತ್ತಾರೆ. ಇವರಿಗೆ ಹೊಸದಾಗಿ ಏರ್ಪಾಡಾದ ಗವರ್ನ್‌ಮೆಂಟು ಕೇಳದು. ಹೊಸ ದೊರೆಯು ರಾಜ್ಯದಲ್ಲೆಲ್ಲಾ ತನ್ನ ದರ್ಪವನ್ನು ಪ್ರಕಾಶಕ್ಕೆ ತಂದು ಬೇಗನೆ ನೆಮ್ಮದಿಯನ್ನು ಉಂಟುಮಾಡುವಂತಾಗಲೆಂದು ಹಾರೈಸುತ್ತೇವೆ. ಈಗ ಆಲ್ಬೇನಿಯದಲ್ಲಿ ಉಂಟಾಗಿರುವ ಒಳಜಗಳ ಗಲಭೆಗಳ ದೆಸೆಯಿಂದ ರಾಜ್ಯರಾಜ್ಯಗಳಿಗೆ ಮನಸ್ತಾಪಗಳೇನೂ ಉಂಟಾಗುವುದಿಲ್ಲವೆಂದು ನೆನಸುತ್ತೇವೆ.

ಮನುಷ್ಯನಿಗಿರುವ ಅಗಾಧವಾದ ಕೊರತೆಗಳು.

ಇದು ದ್ವಂದ್ವ ಲೋಕ. ಇದರಲ್ಲಿ ಸುಖದುಃಖಗಳು ಸಂಮಿಳಿತವಾಗಿರುತ್ತವೆ. ದುಃಖ ಬೆರಸದ ಸುಖವು ಯಾರಿಗೂ ಸಿಕ್ಕುವದಿಲ್ಲ. ಈ ಲೋಕದಲ್ಲಿ ಸಕಲ ಸಂತೃಪ್ತಿಯೆಂಬುದು ಸ್ವಪ್ನಪ್ರಾಯವಾಗಿಯೇ ಇರುವದು. ಬಡತನದ ಕಾರಣದಿಂದ ಎಷ್ಟೋ ಕೊರತೆಗಳು ಹುಟ್ಟುತ್ತವೆ. ಅನೇಕರು ಉಣ್ಣುವದಕ್ಕೆ ಅನ್ನವಿಲ್ಲದೆಯೂ ಹೊದೆಯುವದಕ್ಕೆ ಬಟ್ಟೆಯಿಲ್ಲದೆಯೂ ವಾಸಮಾಡುವದಕ್ಕೆ ಮನೆಯಿಲ್ಲದೆಯೂ ಸಂಕಟಪಡುತ್ತಿರುವರು. ಅನೇಕರು ಸಾಲದಲ್ಲಿ ಬಿದ್ದು, ಸಾಲಕೊಟ್ಟವನಿಗೆ ಅಡಿಯಾಳಾಗಿ, ತೀರಿಸುವ ಮಾರ್ಗವನ್ನು ಕಾಣದೆ ಹಗಲೂ ರಾತ್ರಿಯೂ ಕೊರಗುತ್ತಲಿರುವರು. ಹಣವಿಲ್ಲದವನು ಲೋಕದಲ್ಲಿ ಬದುಕಲಾರನು, ಹಣವಿಲ್ಲದವನು ಹೆಣಕ್ಕೆ ಸಮಾನ ಅನ್ನುವಷ್ಟರ ಮಟ್ಟಿಗೆ ಜನರು ಬಡತನದಿಂದ ಕಷ್ಟಪಡುವರು. ಅನಾರೋಗ್ಯದ ಕಾರಣದಿಂದಲೂ ಎಷ್ಟೋ ಕೊರತೆಗಳು ಹುಟ್ಟುತ್ತವೆ. ಅನೇಕರಿಗೆ ಬೇಕಾದಷ್ಟು ಐಶ್ವರ್ಯವು ಇದ್ದಾಗ್ಯೂ ಅದನ್ನು ಅನುಭವಿಸುವದಕ್ಕೆ ಅವಶ್ಯಕವಾದ ಆರೋಗ್ಯಭಾಗ್ಯವು ಇರುವದಿಲ್ಲ. ಅಗಣಿತವಾದ ವ್ಯಾಧಿಗಳು ಮನುಷ್ಯನನ್ನು ಕಾಡಿಸುತ್ತಿರುವವು. ಅನೇಕರು ಈ ಕೊರತೆಯನ್ನು ಸಹಿಸಲಾರದೆ ಅಕಾಲ ಮೃತ್ಯುವನ್ನು ಹಾರೈಸುವರು. ಆರೋಗ್ಯಭಾಗ್ಯವೇ ಸಕಲ ಭಾಗ್ಯವೆನ್ನುವಷ್ಟರ ಮಟ್ಟಿಗೆ ಜನಗಳು ನಾನಾ ರೋಗಾದಿ ಕಷ್ಟಗಳ ದೆಸೆಯಿಂದ ಕೊರತೆಪಡುತ್ತಿರುವರು. ಇವೇ ಮೊದಲಾದ ಕೊರತೆಗಳು ಶಾರೀರಕ ಕೊರತೆಗಳಾಗಿರುತ್ತವೆ. ಇಂಥ ಕೊರತೆಗಳು ಮಾನವರೆಲ್ಲರಿಗೂ ಇಷ್ಟಿಷ್ಟೇ ಇರುತ್ತವೆಂದು ಹೇಳುವದಕ್ಕೆ ಅವಕಾಶವಿಲ್ಲ. ಇವುಗಳಿಗಿಂತಲೂ ಹೆಚ್ಚಿನ ಆತ್ಮಿಕ ಕೊರತೆಗಳು ಮಾನವರೆಲ್ಲರಿಗೂ ಸರ್ವಸಾಮಾನ್ಯವಾಗಿರುತ್ತವೆ.

ಈ ಜೀವಮಾನದಲ್ಲಿ ನಾವು ಮಾಡುವ ಕಾರ್ಯಾಕಾರ್ಯಗಳಿಗೆ ತಕ್ಕ ಪ್ರತಿಫಲವು ಯಾವಾಗಲೂ ಸಿಕ್ಕುವದಿಲ್ಲ. ಸಾಧಾರಣವಾಗಿ ದುಷ್ಟರಿಗೇನೇ ಶ್ರೇಯಸ್ಸುಂಟಾಗುತ್ತದೆ. ಶಿಷ್ಟರು ಧರ್ಮವನ್ನು ಕೈಕೊಂಡು ನಡೆದದ್ದರಿಂದ ತಮ್ಮ ಪ್ರಾಣಗಳನ್ನು ಸಹ ಕಳೆದುಕೊಂಡಿರುವದು ಅಪರೂಪವಲ್ಲ. ಇಂಥ ಅಕ್ರಮವು ಈಗ ಮಾತ್ರವೇ ಅಲ್ಲ, ಎಲ್ಲಾ ಕಾಲಗಳಲ್ಲಿಯೂ ಇದ್ದೇ ಇತ್ತು. ಮಹಾಜ್ಞಾನಿಗಳಿಗೆ ಇದು ತುಂಬಾ ಕಳವಳವನ್ನುಂಟುಮಾಡಿರುತ್ತದೆ. ಎಲ್ಲಾ ಯುಗಗಳವರು ಇದರ ವಿಷಯ ಒಂದೇ ಅಭಿಪ್ರಾಯಪಟ್ಟಿರುತ್ತಾರೆ. ಅದೇನೆಂದರೆ— ನಮ್ಮ ಈಗಿನ ಜೀವಮಾನವು ಪರಿಪೂರ್ಣವಾದದ್ದಲ್ಲ, ಮರಣದ ತರುವಾಯ ಪ್ರತಿಯೊಬ್ಬನಿಗೂ ಅವನವನ ಕಾರ್ಯಾಕಾರ್ಯಗಳಿಗೆ ತಕ್ಕ ಫಲಾಫಲಗಳು ಕಾದಿರುತ್ತವೆ ಎಂಬುವದೇ. ಇದು ಮಾತ್ರವಲ್ಲದೆ ನಮಗೆ ಅವಸಾನ ಕಾಲವು ಸಮೀಪಿಸುತ್ತಾ ಬರುತ್ತದೆ. ನಾವು ಮಾಡಬಾರದ ಎಷ್ಟೋ ಪಾಪಕೃತ್ಯಗಳನ್ನು ಮಾಡಿದ್ದೇವೆ. ಇದಕ್ಕೆ ನಮ್ಮ ನಮ್ಮ ಮನಸ್ಸಾಕ್ಷಿ, ಪಾಪಕ್ಕೆ ತಕ್ಕ ಶಿಕ್ಷೆಯು ಮುಂದೆ ಬರುತ್ತದೆಂದು ತಿಳಿದಿರುವಂಥ ನಾವು ಮರಣವನ್ನು ಸಮೀಪಿಸುತ್ತಿರುವಾಗ, ನಾವು ಹಿಂದೆ ಮಾಡಿದ ಪಾಪಗಳಿಗೆ ತಕ್ಕ ಶಿಕ್ಷೆಯನ್ನು ಮುಂದೆ ಅನುಭವಿಸಬೇಕು ಎಂಬ ಭಯವು ನಮ್ಮನ್ನು ಹಿಡಿಯುತ್ತದೆ. ಇದನ್ನು ನಾವು ಅನುಭವಪೂರ್ವಕವಾಗಿ ಬಲ್ಲೆವು. ಇದರಿಂದ ನಮ್ಮಲ್ಲಿ ಒಂದು ಅಗಾಧವಾದ ಕೊರತೆಯು ಹುಟ್ಟುತ್ತದೆ. ಅದೇನೆಂದರೆ—ನಾನು ಹಿಂದೆ ಮಾಡಿರುವ ಪಾಪಗಳಿಗೆ ಮುಂದೆ ಬರಲಿಕ್ಕಿರುವ ಶಿಕ್ಷೆಯಿಂದ ಹ್ಯಾಗಾದರೂ ತಪ್ಪಿಸಿಕೊಳ್ಳಬೇಕು, ಸ್ವರ್ಗಕ್ಕೆ ಮುಂದೆ ಲಭ್ಯವಾಗುವ ಸದ್ಗತಿಯು ನನಗೂ ಲಭ್ಯವಾಗಬೇಕು; ಆದಕಾರಣ ಯಾವ ಪ್ರಯತ್ನದಿಂದಲಾದರೂ ಪಾಪಕ್ಷಮೆಯನ್ನು ಪಡೆದುಕೊಳ್ಳಬೇಕು ಎಂಬುವದೇ. ಎಷ್ಟೋ ಮಂದಿ ತೀರ್ಥಯಾತ್ರೆಗಳನ್ನು ಮಾಡುವದು, ಪುಣ್ಯಜಲಗಳಲ್ಲಿ ಸ್ನಾನಮಾಡುವದು, ವಿರಕ್ತರಾಗಿ ಕಾವಿಯನ್ನು ಧರಿಸಿ ವನವಾಸಿಗಳಾಗುವದು, ಘೋರ ತಪಸ್ಸುಗಳಿಂದ ನಾನಾ ಪ್ರಕಾರವಾಗಿ ದೇಹವನ್ನು ದಂಡಿಸುವದು ಇವೇ ಮುಂತಾದ ಹಲವು ಸಾಹಸಕಾರ್ಯಗಳನ್ನು ಮಾಡುವದಕ್ಕೆ ಕಾರಣವೇನು? ಈ ಅಗಾಧವಾದ ಕೊರತೆಯನ್ನು ನೀಗಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದಲೇ ಅಲ್ಲವೇ? ಇದರಿಂದ ಈ ಕೊರತೆಯು ಎಷ್ಟು ಅಗಾಧವಾದದ್ದೆಂದು ವ್ಯಕ್ತವಾಗುತ್ತದೆ. ಈ ಒಂದೆ ಕೊರತೆಯು ನೀಗಿದರೆ ಸಕಲ ಭಾಗ್ಯವು ಲಭ್ಯವಾದಂತಿರುವದು.

ಇದಲ್ಲದೆ ನಮ್ಮಲ್ಲಿರುವ ಮತ್ತೊಂದು ಕೊರತೆಯನ್ನು ತಿಳಿದುಕೊಳ್ಳುತ್ತೇವೆ. ಮುಂದೆ ನಮಗೆ ಶಿಕ್ಷೆಯು ಬರುವದಕ್ಕಿದೆ ಎಂಬ ಭಯವು ಇನ್ನು ಮೇಲಾದರೂ ದೇವರಿಗೆ ವಿಧೇಯರಾಗಿ ನಡೆದು, ಸಾಧ್ಯವಾದರೆ ಆ ಮೂಲಕವಾಗಿ ನಮ್ಮ ಹಿಂದಿನ ಪಾಪಗಳನ್ನು ಕಳೆದುಕೊಳ್ಳಬೇಕೆಂಬ ಅಪೇಕ್ಷೆಯನ್ನು ಹುಟ್ಟಿಸುತ್ತದೆ. ಹೀಗೆ ಮಾಡುವದಕ್ಕೆ ಪ್ರಯತ್ನಪಡುವಾಗ ನಾವು ಪಾಪದಿಂದ ಬಂಧಿಸಲ್ಪಟ್ಟವರೂ ಧರ್ಮವನ್ನು ಕೈಕೊಳ್ಳುವದಕ್ಕೆ ಕೇವಲ ಅಶಕ್ತರೂ ಆಗಿದ್ದೇವೆಂಬುವದು ಮಾತ್ರ ವ್ಯಕ್ತವಾಗುತ್ತದೆ. ನಾವು ಎಷ್ಟು ಹೆಚ್ಚಾಗಿ ಪ್ರಯತ್ನಪಡುತ್ತೇವೋ ಅಷ್ಟು ಹೆಚ್ಚಾಗಿ ನಾವು ನಿರ್ಬಲರೂ ಪಾಪಕ್ಕೆ ಸೆರೆಬಿದ್ದವರೂ ಆಗಿರುತ್ತೇವೆಂಬುವದು ಮಾತ್ರ ಪ್ರಕಟವಾಗುವದು. ನಾವು ಹಿಂದೆ ಮಾಡುತ್ತಾ ಬಂದಿರುವ ಪಾಪಗಳು ಆ ದುರ್ಮಾರ್ಗದಲ್ಲೇ ಹೋಗುವದಕ್ಕೆ ನಮ್ಮನ್ನು ಬಲಾತ್ಕರಿಸುವ ಒಂದು ಶಕ್ತಿಯಂತೆ ಇರುತ್ತವೆ. ಪಾಪಕ್ಕೆ ಅಡಿಯಾಳಾಗಿರುವ ಈ ಸ್ಥಿತಿಯನ್ನು ಒಂದು ಸಾರಿ ವಾಸ್ತವವಾಗಿ ತಿಳಿದುಕೊಂಡರೆ, ಅದು ಸಹಿಸಲಾಗದ ದುಃಖವಾಗುವದು. ಇದರಿಂದ ಮುಂದೆ ಬರುವದಕ್ಕಿರುವ ಶಿಕ್ಷೆಯ ವಿಷಯವಾದ ಭಯವು ಮತ್ತಷ್ಟು ಹೆಚ್ಚಾಗುವದು. ಆದಕಾರಣ ನಮಗೆ ಎರಡು ವಿಧವಾದ ಬಿಡುಗಡೆಯು ಬೇಕಾಗಿರುತ್ತದೆ. ಯಾವವೆಂದರೆ—(1) ನಾವು ಹಿಂದೆ ಮಾಡಿದ ಪಾಪಗಳಿಗೆ ಕ್ಷಮಾಪಣೆ, (2) ಈಗ ನಮ್ಮನ್ನು ಬಂಧಿಸಿರುವ ಪಾಪದಾಸ್ಯದ ವಿಮೋಚನೆ. ಇವುಗಳೇ ಧರ್ಮಶಾಸ್ತ್ರವು ನಾವು ಕೈಕೊಳ್ಳತಕ್ಕದಾದ ಧರ್ಮವನ್ನು ಘೋಷಿಸುತ್ತದೆ. ಆದರೆ ಅದನ್ನು ಅತಿಕ್ರಮಿಸಿ ನಡೆದವರಿಗೆ ಕರುಣೆಯನ್ನು ತೋರಿಸುವದಿಲ್ಲ.

ಒಬ್ಬ ಭಕ್ತನ ಅನುಭವ: "ಧರ್ಮಶಾಸ್ತ್ರವು ಪಾರಮಾರ್ಥಿಕವಾದದ್ದೆಂದು ನಾವು ಒಪ್ಪುತ್ತೇವೆ. ಆದರೆ ನಾನು ದೇಹಧರ್ಮಕ್ಕೆ ಒಳಗಾದವನು. ಪಾಪದ ಸ್ವಾಧೀನದಲ್ಲಿರುವದಕ್ಕೆ ಮಾರಲ್ಪಟ್ಟವನೂ ಆಗಿದ್ದೇನೆ. ಹಾಗೆ ಪರೆ ನಾನು ಮಾಡುವದು ನನಗೇ ಗೊತ್ತಿಲ್ಲ, ಒಳ್ಳೇದನ್ನು ಮಾಡುವದಕ್ಕೆ ನನಗೇನೋ ಮನಸ್ಸುಂಟು, ಆದರೆ ಅದನ್ನು ಮಾಡುವದು ನನ್ನಿಂದಾಗದು. ನಾನು ಮೆಚ್ಚುವ ಒಳ್ಳೇ ಕಾರ್ಯವನ್ನು ಮಾಡದೆ ಮೆಚ್ಚದಿರುವ ಕೆಟ್ಟಕಾರ್ಯವನ್ನೇ ಮಾಡುವವನಾಗಿದ್ದೇನೆ. ಅಯ್ಯೋ, ನಾನು ಎಂಥಾ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ನನ್ನನ್ನು ಬಿಡಿಸುವವನು ಯಾರು? ಬಿಡಿಸುವವನು ಇದ್ದಾನೆ. ಬಿಡಿಸುವವನಾಗಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ."

ಯೇಸು ಕ್ರಿಸ್ತನು ಮಾನವರ ಈ ಎರಡು ಅಗಾಧವಾದ ಕೊರತೆಗಳನ್ನು ನೀಗಿಸುವದಕ್ಕೆ ಶಕ್ತನು. ಅವನು ಹಿಂದಿನ ಪಾಪಗಳನ್ನು ಕ್ಷಮಿಸಿ ಬಿಟ್ಟು, ಮುಂದೆ ಅವರು ಪಾಪರಹಿತರಾಗಿ ಜೀವಿಸುವದಕ್ಕೆ ಶಕ್ತಿಯನ್ನು ದಯಪಾಲಿಸುತ್ತಾನೆಂದು ಈ ಭಕ್ತನು ಸಾಕ್ಷಿಕೊಡುತ್ತಾನೆ. ಈ ಕಾಲದ ಲಕ್ಷೋಪಲಕ್ಷ ಕ್ರೈಸ್ತರು ಇದು ಸತ್ಯವೆಂದು ಅನುಭವಪೂರ್ವಕವಾಗಿ ಒಪ್ಪುತ್ತಾರೆ. "ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು" ಎಂದು ಯೇಸು ಕ್ರಿಸ್ತನು ಎಲ್ಲರನ್ನೂ ಕರೆಯುತ್ತಾನೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ರಾಜಧಾನಿಯಲ್ಲಿ ಮಳೆಗಳಾಗಲಿಲ್ಲ, ಬಿಸಿಲ ಬೇಗೆ ಹೆಚ್ಚಾಗಿದೆ. ಸಂಜೆ ಹೊತ್ತು ಸ್ವಲ್ಪ ಮೋಡದ ಛಾಯೆಯಿಂದ ಗಾಳಿ ಬೀಸುತ್ತಿರುವುದು.

* * *

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕ್ಕೆ ಬೊಂಬಾಯಿ ಅಧಿಪತ್ಯದ ಗವರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಪತ್ನೀ ಪರಿವಾರ ಸಮೇತ ದಯಮಾಡುವರೆಂದು ಕೇಳುತ್ತೇವೆ.

* * *

ನೀಲಗಿರಿ ಬೆಟ್ಟದ ಮೇಲೆ ಫರ್ನ್‌ಹಿಲ್ ಎಂಬ ನಮ್ಮ ಮಹಾರಾಜರವರ ಅರಮನೆಯೊಳಗೆ ಈ ತಿಂಗಳು 26ನೇ ತಾ ಮಂಗಳವಾರ ಯೂರೋಪಿಯನ್ ಸರ್ದಾರರಿಗೆ ಪದ್ಧತಿಯಂತೆ ದಿಕ್ಷನಾದಿಗಳು ಜರಗುವವು.

* * *

ಕನ್ನಂಬಾಡಿ ತಲಾಖಿನ ವ್ಯವಹಾರ ಕೋರ್ಟಿನ ಪ್ರಸಿಡೆಂಟರಾದ ಸರ್ ಹರ್ಬರ್ಟ್ ಗ್ರಿಫಿನ್‌ರವರು ಮೊನ್ನೆ ಸೋಮವಾರ ತೀರ್ಮಾನವನ್ನು ಬರೆದು ಕೊಟ್ಟು ಸೀಮೆಗೆ ತೆರಳುವವರಾಗಿದ್ದರು. ಅದರ ಫಲಿತಾಂಶವು ಇನ್ನು ಮುಂದೆ ಪ್ರಕಟವಾಗಬೇಕು.

* * *

ಈಗ ಬೇಸಗೆಯ ನಿಮಿತ್ತ ನೀರಿನ ಸರಬರಾಜು ಸಾಲದೆ ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪನ್ನವು ಕಡಮೆಯಾದದ್ದರಿಂದ ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸಗಳು ಆವಿಯ (ಸ್ಟೀಮ್) ಯಂತ್ರಶಕ್ತಿಯಿಂದ ನಡೆಯುತ್ತಿವೆ.

* * *

ಡೆಪ್ಯುಟಿ ಕಮೀಷನರುಗಳು ಡಿಸ್ಟ್ರಿಕ್ಟ್ ಬೋರ್ಡು ಮತ್ತು ತಾಲ್ಲೂಕ್ ಬೋರ್ಡ್ ಮೀಟಿಂಗುಗಳನ್ನು ಒಂದೇ ಕಡೆ ಯಾವಾಗಲೂ ನಡಿಸುವುದಕ್ಕೆ ಪ್ರತಿ

ಹೋಗಿ ಒಂದೊಂದಾವರ್ತಿ ಒಂದೊಂದು ಸ್ಥಳದಲ್ಲಿ ನಡಿಸುವುದು ಒಳ್ಳೆಯ ದೆಂದು ಸರ್ಕಾರದವರು ಪ್ರೆಸಿಡೆಂಟರುಗಳಿಗೆ ತಿಳಿಯಪಡಿಸಿದಾರೆ.

* * *

ಮಾರಿಕಣಿವೆ ಕೆರೆ ನೀರನ್ನು ಬ್ರಾಂಚುನಾಲು ವಿಂಗಡಿಸಿ ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿ ಬ್ರಾಂಚುಗಳನ್ನು ವಿಂಗಡಿಸಿ ಈ ವಾರದ ಗೆಜೆಟ್ಟಿನಲ್ಲಿ ಘೋಷಣೆ ಮಾಡಿಸಿದಾರೆ. ಅದರಂತೆ 1913 ನೇ ಜುಲೈನಿಂದ ಆರು ವರುಷ ನಡೆಯತಕ್ಕದ್ದೆಂದು ಸದ್ಯ ವಿಧಿಸಲಾಗಿದೆ

* * *

ಬೆಂಗಳೂರಿನಿಂದ ಮಾಗಡಿಯ ಮೇಲೆ ಕುಣಿಗಲಿಗೆ ಮೋಟರ್ ಟಪ್ಪಾ ವನ್ನು ಇಟ್ಟು ಪ್ರಜೆಗಳ ಸಂಚಾರಕ್ಕೆ ಸೌಕರ್ಯವನ್ನು ಕಲ್ಪಿಸಬೇಕೆಂದು ಯೋಚಿಸಿ ಈ ಏರ್ಪಾಡಿಗೆ 50,000 ರೂಪಾಯಿ ಸಾಲ ಕೊಡಿಸಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಕೇಳಿದ್ದರು. ಸರ್ಕಾರದವರು ಆ ರೀತಿ ಸಾಲಕೊಡಲಾಗುವುದಿಲ್ಲವೆಂದು ಅಪ್ಪಣೆ ಕೊಟ್ಟಿದಾರೆ

* * *

ಒಬ್ಬ ಬಾತ್ಮಿದಾರರಿಂದ—ಕಳೆದ ಸೋಮವಾರ ರಾಜಧಾನಿಯ ಇಟ್ಟಿಗೇ ಗೂಡು ತಪ್ಪಮಂಡಲಿಯವರು ಸೇರಿ ತುಲಸೀ ರಾಮದಾಸರ ಶಿಷ್ಯರಾದ ಚನ್ನ ಪಟ್ಟಣದ ಕನಕದಾಸರಿಂದ ಹರಿಕಥೆ ಮಾಡಿಸಿ ಸಂತೋಷಪಟ್ಟು ಅವರಿಗೆ ಘಂಗಾ ರದ ಪದಕವನ್ನು ಸಮರ್ಪಿಸಿದರು ದಾಸರು ಕುರುಬರಾದರೂ ಇವರು ಮಾಡಿದ ಕಥೆಯು ಭಕ್ತಿ ವೈರಾಗ್ಯಗಳಿಂದ ಕೂಡಿ ಅಮೋಘವಾಗಿರುವದು

* * *

ಶ್ರೀಮನ್ಮಹಾರಾಜರವರು ಕಳೆದ ಗುರುವಾರ ಬೆಳಿಗ್ಗೆ ನೀಲಗಿರಿಯಿಂದ ಮೋಟರಿನಲ್ಲಿ ದಯಮಾಡಿ ಮೂರು ದಿನ ರಾಜಧಾನಿಯಲ್ಲಿದ್ದು, ಶನಿವಾರ ಸಂಜ ವೇಳೆಗೆ ಚಿತ್ರ್ರ್ಯಸಿ, ಸಾಯಂಕಾಲ ವಾಪಸು ಬಂದು ಅರಮನೆಯಲ್ಲಿ ಆರೋಗ ಣೆಯನ್ನು ತೀರಿಸಿಕೊಂಡು ರಾತ್ರಿ ಸುಮಾರು 8 ಗಂಟೆಗೆ ಮೋಟರಿನಲ್ಲಿ ಇಲ್ಲಿಂದ ನೀಲಗಿರಿಗೆ ಪ್ರಯಾಣಮಾಡಿದರು ಆ ದಿನ ಬೆಳದಿಂಗಳು ಬಹು ಪ್ರಕಾಶಮಾನ ವಾಗಿಯೂ, ಆಹ್ಲಾದಕರವಾಗಿಯೂ ಇತ್ತು. ಈ ತಿಂಗಳ ಆಖೈರಿಗೆ ಅವರು ಪರಿವಾರದವರ ಸಮೇತ ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ

* * *

ಮ॥ ಟಂಕಸಾಲೆ ಸುಬ್ಬರಾಜೆ ಅರಸರವರು ತಮ್ಮ ಕುಮಾರ್ತೆಯನ್ನು ಅ॥ ಕಮೀಶನರ್ ಮ॥ ಗೋಪಾಲರಾಜೆ ಅರಸರವರಿಗೆ ಕೊಟ್ಟು ಕಳೆದ ಗುರುವಾರ ರಾಜಧಾನಿಯ ಕೋಟೆಯೊಳಗೆ ಬಹು ಉತ್ಸಾಹದಿಂದ ವಿವಾಹೋತ್ಸವವನ್ನು ನೆರವೇರಿಸಿದರು ವಿವಾಹ ಮಂಟಪದ ಅಲಂಕಾರವು ನೇತ್ರಾನಂದಕರವಾಗಿತ್ತು ನಗರದ ಅನೇಕ ಮಹನೀಯರೂ ಸರ್ಕಾರಿ ಅಧಿಕಾರಿಗಳೂ ಎಲ್ಲಾ ಕೋಮುಗಳ ಮುಖ್ಯ ಮನುಷ್ಯರೂ ವಿವಾಹಕಾಲದಲ್ಲಿ ಕರೆಸಲ್ಪಟ್ಟಿದ್ದರು ವಿವಾಹ ಸಂಬಂಧ ವಾಗಿ ನಡೆಯುವ ಉತ್ಸವಾದಿಗಳೆಲ್ಲಾ ಅರಮನೆಯ ಮರ್ಯಾದೆಗಳಿಂದ ಕೂಡಿ ಕಳೆಕಳೆಯಾಗಿ ನೆರವೇರಿದವು.

* * *

ಚಿಕ್ಕಬಳ್ಳಾಪುರದ ತಾಲ್ಲೂಕು ಚಿಕ್ಕಾಪುರವೆಂಬ ಗ್ರಾಮದಲ್ಲಿ ಪ್ರಜೆಗಳಿಗೆ ಕುಡಿಯುವ ನೀರಿನ ಬಾವಿಯನ್ನು ತೆಗಿಸಿಕೊಡುವುದಕ್ಕೆ 1,064 ರೂಪಾಯಿ ಬೇಕಾಗುವುದೆಂದು ಅಂದಾಜು ಆಯಿತು ಗ್ರಾಮಸ್ಥರು ಆ ಪೈಕಿ ಅರೆವಾಸಿ ಯನ್ನು ಬಂದಾಯಿಸುತ್ತಿ ಬಾವಿ ಕಾಮಗಾರಿ ನಡಿಸುವ ಮೇಲೆ ಉಳಿದ ಅರ್ಧ ಹಣ ವನ್ನು ಸರ್ಕಾರದಿಂದ ಪಾವತಿಮಾಡಿ ಕಾಮಗಾರಿಯನ್ನು ಪೂರೈಸಬೇಕೆಂದೂ, ಈ ಹಳ್ಳಿ ಮೊದಲಾದ ಗ್ರಾಮಾಭಿವೃದ್ಧಿಯ ಸಂಘವು ಏರ್ಪಾಟಾಗದೆ ಇರುವ ಸ್ಥಳ ಗಳಲ್ಲಿ ಈ ರೀತಿಯಾದ ಧನಸಹಾಯವನ್ನು ಮಾಡಲಾಗದೆಂದೂ ಗವರ್ನಮೆಂ ಟಿನವರು ಅಪ್ಪಣೆಕೊಡಿಸುತ್ತಾರೆ

* * *

ಹುಣಸೂರು ತಾಲ್ಲೂಕು ಮುತ್ತಿನಮುಳ್ಳೂರು ಹೋಬಳಿಗೆ ಸೇರಿದ ಕೊಂಡೂರು ಗ್ರಾಮದಲ್ಲಿ ತಾ ೯ ನೇ ಶುಕ್ರವಾರ ಬೀರದೇವರ ದೊಡ್ಡ ದೇವರನ್ನು ಮಾಡಿ ದರು ಈ ಜಾತ್ರೆಗಾಗಿ ನಾಲ್ಕು ಸಾವಿರ ಜನಗಳ ಮೇಲೆಯೂ ನೋಟಕರು ನೆರೆ ದಿದ್ದರು ಇವರಲ್ಲಿ ಕಸ್ತ ಜನಗಳ ಊಟಕ್ಕಾಗಿ 100 ಕುರಿಗಳು, 10 ಪಲ್ಲಾ ಅಕ್ಕಿ ಬಳಸಲ್ಪಟ್ಟಿತ್ತು ಬ್ರಾಹ್ಮಣರಿಗೂ, ವೈಶ್ಯರಿಗೂ ಪ್ರತ್ಯೇಕ ಭೋಜನ ವೇರ್ಪಾಡು ಮಾಡಿದ್ದರು ಇವನ್ನು ನೋಡಬಂದ ಜನಗಳು ಬಹಳ ಸಂತೋಷ ಪಟ್ಟು ಹೋದರು ಈ ಜಾತ್ರೆಗೆ 12 ದೇವರುಗಳು ಪರಸ್ಥಳದಿಂದ ಬಂದಿದ್ದವು ಎಂದು ಒಬ್ಬ ಬಾತ್ಮಿದಾರರು ಬರೆದಿದಾರೆ.

* * *

ಕಳೆದ 6 ನೇ ತಾ ಬುಧವಾರ ರಾತ್ರಿ, ಮೈಸೂರು ರತ್ನಾವಳಿ ನಾಟಕದ ಕಂಪ ನಿಯವರು ಬೆಂಗಳೂರಿನಲ್ಲಿ ನಾಟಕವನ್ನು ಆಡಿದಾಗ್ಗೆ ಅಲ್ಲಿನ ಪ್ರಜೆಗಳು ಆ ಕಂಪನಿಯ ಕೆಲವು ನಾಟಕಧಾರಿಗಳಿಗೆ ಕೆಲವು ಆಭರಣಗಳನ್ನು ಅಲ್ಲಿನ ಮ॥ ರಾಜ ಸಂಗೀತರತ್ನರ ಹಸ್ತದಿಂದ ಕೊಡಿಸಿ ತಮ್ಮ ಮೆಚ್ಚಿಕೆಯನ್ನು ಪ್ರಕಾಶ ಪಡಿಸಿದರು ಇದಲ್ಲದೆ ಕಳೆದ 9 ನೇ ತಾ ಭಾನುವಾರ ರಾತ್ರಿ ಬೆಂಗಳೂರಿ ನಲ್ಲಿ ಅದೇ ನಾಟಕದ ಕಂಪನಿಗೆ ಸೇರಿದ ಕೆಲವು ನಾಟಕಧಾರಿಗಳಿಗೆ ಶ್ರೀಮನ್ಮಹಾರಾಜರವರು ವಿರ್ಜಾ ಬಹದೂರ್ "ರಾಜಸಭಾಭೂಷಣ" ರ್ಕೆ ಪಿ ಅಯ್ಯಂಗಾರಿಯವರ ಕೈಯಿಂದ ಕೆಲವು ಒಡವೆಗಳನ್ನು ಬಹುಮಾನವಾಗಿ ಕೊಡಿಸಿ ತಮ್ಮ ಸಂತೋಷವನ್ನು ಪ್ರಕಾಶಪಡಿಸಿದರು.

ಮೈಸೂರು ಗೆಜೆಟ್ ಸಂಗ್ರಹ

ತುಮಕೂರು ಡೆಪ್ಯುಟಿ ಕಮಿಷನರಾದ ಮ॥ ಬಿ. ಜಿ ಕುಮಾರಸ್ವಾಮಿನಾ ಯಕರನ್ನು ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಕ ಮಾಡಿದೆ

ಶಿವಮೊಗ್ಗ ಸಬ್ ಡಿವಿಜನ್ ಅ॥ ಕಮಿಷನರ್ ಮ॥ ಜಿ ಬಿ ಮೆಟ್ಲಿಕರ್ ರವರಿಗೆ ಮೇ ತಾ. 1 0 ರ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಅವಧಿಯಲ್ಲಿ ಅ॥ ಕಮಿಷನರ್ ಮ॥ ಎಸ್ ವೆಂಕಟರಂಗಯ್ಯನವರು ಸಬ್ ಡಿವಿಜನ್ ಕೆಲಸವನ್ನು, ಅ॥ ಕಮಿಷನರ್ ಮ॥ ಎಂ ನಾರಾಯಣಪ್ಪನವರು ಡಿಸ್ಟ್ರಿಕ್ಟ್ ವಿ ಭಾಗದ ಭಾರವನ್ನು ವಹಿಸತಕ್ಕದ್ದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ವಿಭಾಗದ ಅ॥ ಕಮಿಷನರ್ ಮ॥ ಬಿ. ಭೀ ಮರಾಯರಿಗೆ ಮೇ ತಾ 11 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಚಳ್ಳಕೆರೆ ಸಬ್ ಡಿವಿಜನ್ ಅ॥ ಕಮಿಷನರ್ ಮ॥ ಎಂ ಎಸ್ ರಾಮಚಂದ್ರರಾಯರು ವಿಭಾ ಗದ ಭಾರವನ್ನೂ ವಹಿಸತಕ್ಕದ್ದು

ಆಲೂರು ಡೆಪ್ಯುಟಿ ಅಮಲ್ದಾರ್ ಮ॥ ಎಂ ಚಕ್ರಪಾಣಿರಾಯರನ್ನು ಹಾಸನ ತಾಲ್ಲೂಕ್ ಅಮಲ್ದಾರ್ ಮತ್ತೂ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಾಯಿಸಿದೆ

ಹಾಸನದ ಸಬ್ ರೆಜಿಸ್ಟ್ರಾರ್ ಮ॥ ಕೆ ದೊರೆಸ್ವಾಮಯ್ಯಂಗಾರ್ರು ಆಲೂರು ಡೆಪ್ಯುಟಿ ಅಮಲ್ದಾರ್ ಮತ್ತೂ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಾಯಿಸಲ್ಪಟ್ಟಿದಾರೆ

ಮ॥ ಎನ್ ಶ್ರೀನಿವಾಸರಾಯರನ್ನು 1 ನೇ ಕ್ಲಾಸ್ ಅಮಲ್ದಾರಿಗೆ ವಾಪಸು ಬಂದದ್ದರಿಂದ ಮುಂದೆ ಹೇಳುವ ಏರ್ಪಾಡು ಹುಕುಂ ಮಾಡಲಾಗಿದೆ—(1) ಶ್ರೀ ಪಟ್ಟಾಭಿಸಂಪತ್ಶಾಸ್ತ್ರಿಗಳು 3 ನೇ ಕ್ಲಾಸ್, ಮ॥ ಎಂ. ಎಸ್ ಹಯಗ್ರೀವ ರಾಯರು 3 ನೇ ಕ್ಲಾಸ್, ಮ॥ ಸಿ ಲಕ್ಷ್ಮಣರಾಯರು 4 ನೇ ಕ್ಲಾಸ್ ಅಮ ಲ್ದಾರರಾಗಿರತಕ್ಕದ್ದು

ಮೈಸೂರು ಅ॥ ಕಮಿಷನರ್ ಮ॥ ಗುಲಾಮ್ ಮೊಹದೀನ್ ಮೋತ್ರಿಯ ವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಮ॥ ಎ. ವಿ ರಾಮಚಂದ್ರಅಯ್ಯರನ್ನು 100 ರೂಪಾಯಿ ಸಂಬಳದ ಮೇಲೆ 2 ವರುಷ ಹಂಗಾಮಿಯಾಗಿ ಓವರ್ಸಿಯರಾಗಿ ನೇಮಿಸಿ, ಕಾವೇರಿ ಸಲಾವಿನ ಕಾ ಮಗಾರಿ ಯಡಕೊರೇ ಡಿವಿಜನ್‌ಗೆ ವರ್ಗಮಾಡಿದೆ

ಮ॥ ಎಸ್ ಎ ರಾಮಸ್ವಾಮಿಅಯ್ಯರವರು ಹಾಸನ್ ಡಿವಿಜನ್ ಛಾರ್ಜು ವಹಿಸಿಕೊಂಡ ಲಾಗಾಯಿತು 1 ನೇ ಕ್ಲಾಸ್ ಎಗ್ಜಿಕ್ಯುಟಿವ್ ಇಂಜನಿಯರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಕೋಲಾರ್ ಚಿನ್ನದ ಗಣಿಗಳು.

33 ವರುಷಗಳ ಕಾರುಕರ್ದಿಗಳು.

ಕೋಲಾರ್ ಚಿನ್ನದ ಗಣಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿ ರುವ ಬೋರ್ಡಿನವರು ಕಳೆದ 1913 ನೇ ಡಿಸೆಂಬರ್ ತಾ 31 ಕ್ಕೆ ಪೂರೈಸಿದ 33 ಸಂವತ್ಸರಗಳಲ್ಲಿ ಆ ಗಣಿಗಳ ಕೆಲಸ ಕಾರ್ಯಗಳು ನಡೆದಿರುವ ವಿಚಾರಗ ಳನ್ನು ಕುರಿತು ಒಂದು ರಿಪೋರ್ಟನ್ನು ಬರೆದು ಪ್ರಕಟಮಾಡಿದಾರೆ ಈ ಗಣಿಗಳ ಪೂರ್ವಚರಿತ್ರೆಯು ಅನೇಕರಿಗೆ ತಿಳಿಯದೆ ಇಲ್ಲ ಹಲವು ಕಂಪನಿಗಳು ಮೊದಲು ಚಿನ್ನ ತೆಗೆಯುತ್ತೇವೆಂದು ಏರ್ಪಾಗಿ ಬಂದು ಕೆಲವು ಹಣ ಖರ್ಚು ಮಾಡಿ ಕೆಲಸವನ್ನು ಮುಂದರಿಸಲು ದ್ರವ್ಯಾದಿಗಳ ಸಹಾಯ ಒದಗದೆ ಹಾಗೇ ನಿಂತು ಹೋಗಿ ತುಂಬಾ ನಷ್ಟಪಟ್ಟವು ಈಗಲಾದರೋ ಪ್ರಪಂಚದಲ್ಲಿ ಚಿನ್ನವು ವಿಶೇಷವಾಗಿ ಉತ್ಪತ್ತಿಯಾಗುವ ಭಾರೀ ಗಣಿಗಳೊಳಗೆ ನಮ್ಮ ಸಂಸ್ಥಾನದ ಗಣಿಗಳೂ ಸೇರುಗೊಂಡಿರುತ್ತವೆ. ಚಿನ್ನ ತೆಗೆಯುವುದಕ್ಕೆ 1880 ನೇ ಇಸವಿ ಯಲ್ಲಿ ಮೈಸೂರು, ಉರಿಗ, ನಂದಿದುರ್ಗ, ಮೈಸೂರು ರೀಫ್ ಎಂಬ ಕಂಪನಿ ಗಳೂ ; ಆ ಮಾರನೇ ವರುಷ ಬಾಲಘಾಟ್, ನೈನ್ ರೀಫ್ ಕಂಪನಿಗಳೂ ; 1889 ರಲ್ಲಿ ಛಾಂಪಿಯನ್ ರೀಫ್ ಕಂಪನಿಯೂ ಏರ್ಪಾಡಾದವು. ಇವುಗಳ ಲ್ಲದೆ ಇನ್ನೂ ಕೆಲವು ಕಂಪನಿಗಳು ಹುಟ್ಟಿ ಕೆಲವು ಕಾಲ ಶೋಧನೆಯ ಕಾಮ ಗಾರಿಯನ್ನು ನಡಿಸಿ ನಿಂತುಹೋದವು 1898 ನೇ ಇಸವಿಯಲ್ಲಿ ಜಾನ್ ಟೆಯ ಲರ್ ಸನ್ಸ್ ಎಂಬವರ ಮೇಲ್ವಿಚಾರಣೆಯಲ್ಲಿ 18 ಚಿನ್ನ ತೆಗೆಯುವ ಕಂಪನಿಗ ಳಿದ್ದು ಕೆಲಸ ಮಾಡುತ್ತಿದ್ದವು ಈ ಪೈಕಿ ಹಲವು ಕಂಪನಿಗಳು ಚಿನ್ನವು ಮೇಲ್ಗಡೆ ದೊರಕದೆ ಬಹಳ ಆಳವಾಗಿ ಅಗೆದು ಭೂಮಿಯನ್ನು ಶೋಧಿಸಲು ಚೈತನ್ಯವೂ ಮುತುವರ್ಜಿಯೂ ಸಾಧನೆಯೂ ಇಲ್ಲದೆ ದಿವಾಳಿಯಾದವು

ಈಗಲಾದರೋ ಆರು ಕಂಪನಿಗಳು ಭಂಗಾರವನ್ನು ತೆಗೆಯುತ್ತಿವೆ ಇವುಗಳ ಮೂಲಧನ 20,81,000 ಪೌಂಡುಗಳು . ಈ ಷೇರುಗಳ ಬೆಲೆಯು ಈಗ ಹೆಚ್ಚಿರುವುದರಿಂದ ಅವುಗಳನ್ನು ಬಿಕರಿ ಮಾಡಿದ ಪಕ್ಷದಲ್ಲಿ 68,66,728 ಪೌಂಡು ಉತ್ಪತ್ತಿಯಾದೀತು 1880 ನೇ ಇಸವಿಯಿಂದ ಕೋಲಾರ್ ಗಣಿಗ ಳಿಂದ ಎಲ್ಲಾ ಕಂಪನಿಗಳವರೂ 1,17,07,137 ಟನ್ನುಗಳಷ್ಟು (ಟನ್ 1 ಕ್ಕೆ ಸುಮಾರು 93½ ಮಣಗಳು) ಬಂಗಾರದ ಒರಕು ಬೆರಕೆಯಾದ ಕಲ್ಲುಗಳನ್ನು ಗಣಿಗಳಿಂದ ಮೇಲಕ್ಕೆ ತಂದು ಪುಡಿಮಾಡಿ ಅದರಿಂದ 1,93,11,184 ಔನ್ಸ್ ಗಳಷ್ಟು (ಔನ್ಸ್ 1 ಕ್ಕೆ 41 ರೂಪಾಯಿ ತೂಕ) ಚಿನ್ನದ ಗಟ್ಟಿಗಳನ್ನು ಉತ್ಪ ತ್ತಿಮಾಡಿದಾರೆ ಈ ಭಂಗಾರಕ್ಕೆ 69,12,88,110 ರೂಪಾಯಿ ಕ್ರಯವಾಗು ತ್ತದೆ ಗಣಿಗಳವರು ಅಷ್ಟು ಹಣವನ್ನು ಉತ್ಪತ್ತಿಮಾಡಿಕೊಂಡು, ಅದರಲ್ಲಿ ಮೈಸೂರು ಗವರ್ನಮೆಂಟಿಗೆ 3,11 23,770 ರೂಪಾಯನ್ನು ರಾಜಪಾಲಾ ಗಿಯೂ, ಕಂಪನಿಗಳ ಷೇರುದಾರರಿಗೆ 22,93,16,930 ರೂಪಾಯನ್ನು ಲಾಭ ವಾಗಿಯೂ ಹಂಚಿಕೊಟ್ಟಿದಾರೆ

ಕೋಲಾರದಲ್ಲಿ ಚಿನ್ನ ತೆಗೆಯುವ ಗಣಿಗಳ ಪ್ರದೇಶವು ಸುಮಾರು 11,853 ಎಕರೆಗಳಾಗುತ್ತವೆ ಆ ಗಣಿಗಳಲ್ಲಿ 500 ಜನ ಯೂರೋಪಿಯನ್ನರೂ, 400 ಜನ ಆಂಗ್ಲೋ ಇಂಡಿಯನ್ನರೂ, 26,000 ದೇಶೀಯ ಜನರೂ ತಮ್ಮ ಸಂಗಾತ ಗಳ ಸಮೇತ ಚಿನ್ನ ತೆಗೆಯುವ ಬೇರೆಬೇರೆ ಕೆಲಸ ಮಾಡುತ್ತಿದಾರೆ ಅಲ್ಲಿ ಒಟ್ಟು ಪ್ರಜಾ ಸಂಖ್ಯೆಯು 60,000 ಕ್ಕೆ ಕಡಮೆಯಾಗಿಲ್ಲವೆಂದು ಹೇಳಬಹುದು ಇದ ಲ್ಲದೆ ಈ ಕೆಲಸಗಾರರ ಸೌಕರ್ಯಗಳ ನಿಮಿತ್ತ ಅಲ್ಲಿ ಹೋಗಿ ನೆಲಸುವ ಇತರ ಕಸಬುಗಳ ಪ್ರಜೆಗಳು ಬೇರೆ ಕೆಲವು ಸಾವಿರವಾಗಬಹುದು ಗಣಿಗಳಲ್ಲಿ ಚಿನ್ನ ತೆಗೆಯುವ ನಾನಾ ಕೆಲಸಗಳನ್ನು ಮಾಡಿದವರಿಗೆ 1898 ರಿಂದ 1913 ನೇ ಇಸವಿ ಆಖೈರು ವರೆಗೆ 11,12,68,875 ರೂಪಾಯಿ ಸಂಬಳ ಮತ್ತೂ ಕೂಲಿ ಹಣ ಪಾವತಿ ಮಾಡಲಾಗಿದೆ

ಮೈಸೂರು ಗವರ್ನಮೆಂಟಿನವರು ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಗಣಿಯವರಿಗೆ ಬಿಕರಿ ಮಾಡುತ್ತಿದಾರಷ್ಟೆ 1903 ನೇ ಇಸವಿ ಯಿಂದ ಗಣಿಗಳ ಕಂಪನಿಯವರು ವಿದ್ಯುಚ್ಛಕ್ತಿಗಾಗಿ ಮೈಸೂರು ಸರ್ಕಾರಕ್ಕೆ 1,62,21,330 ರೂಪಾಯಿ ಕೊಟ್ಟಿದಾರೆ. ಆದರೆ ಬೇತಮಂಗಲದ ಕೆರೆಯ ನೀರನ್ನು ಉಪಯೋಗಿಸಿಕೊಂಡಿರುವುದಕ್ಕೆ ಗಣಿಗಳ ಕಂಪನಿಯವರು ಮೈಸೂರು ಗವರ್ನಮೆಂಟಿಗೆ ಹತ್ತು ವರುಷದಿಂದ ಒಟ್ಟು ಎಷ್ಟು ಹಣ ಪಾವತಿ ಮಾಡಿದಾ ರೆಂದು ಪ್ರಕಾಶಿತ ಮಾಡಲಿಲ್ಲ ಇದೂ ಕೆಲವು ಲಕ್ಷ ರೂಪಾಯಿಗಳಾಗಿರಬೇ ಕೆಂದು ಹೇಳಬಹುದು ಯಾಕೆಂದರೆ ಗಣಿಗಳ ಕಂಪನಿಯವರು ಪ್ರತಿ ದಿನವೂ ಹತ್ತು ಲಕ್ಷ ಗ್ಯಾಲನ್ ನಂತೆ ನೀರು ಉಪಯೋಗಿಸಿಕೊಳ್ಳುತ್ತಿರುವರು

ಮಲೆನಾಡು ಅಭಿವೃದ್ಧಿ.

ಕಳೆದ ಏಪ್ರೆಲ್ ತಾ 27 ರಲ್ಲಿ ಹಾಸನದಲ್ಲಿ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಈ ವಿಚಾರದಲ್ಲಿ ಅಫಿಷಿಯಲ್ ಮತ್ತೂ ನಾನ್ ಅಫಿಷಿಯಲ್ ಮೆಂಬರುಗಳು ಸೇರಿ ಒಂದು ಮೀಟಿಂಗ್ ನಡಿತು ನಮ್ಮ ಡೆಪ್ಯುಟಿ ಕಮಿಷನರ್ ಮಿ॥ ಪಿ ಆರ್ ಡಬ್ಲ್ಯು ಮದರಾಲ್ ಸಾಹೇಬರವರು ಅಗ್ರಾಸನವನ್ನು ವಹಿಸಿದ್ದರು ಮಂಜ್ರಾ ಬಾದು ತಾಲ್ಲೂಕು ಮಲೆನಾಡಷ್ಟೆ ಈ ತಾಲ್ಲೂಕು ಪ್ರಜೆಗಳ ಪರವಾಗಿ ಒಬ್ಬ ನಾನ್ ಅಫಿಷಿಯಲ್ ಮೆಂಬರನ್ನು ಸರ್ಕಾರದವರು ತೆಗೆದುಕೊಂಡಿದಾರೆ ಯಾ ರೆಂದರೆ ಮ॥ ದೋಣಿಗಾಲ್ ಪಟೇಲ್ ಮತ್ತು ಕಾಫಿ ಪ್ಲಾಂಟರ್ ನಂಜೇಗೌಡರು ಇವರು ಪ್ರಜಾಪ್ರತಿನಿಧಿಸಭೆಯ ಮೆಂಬರು, ಮತ್ತು ತಾಲ್ಲೂಕ್ ಬೋರ್ಡು ಮೆಂ ಬರು ಚಿಕ್ಕವಯಸ್ಸಿನ ಇವರು ಈ ಮೀಟಿಂಗಿನಲ್ಲಿ ಒಂದು ದೀರ್ಘವಾದ ಉಪ ನ್ಯಾಸ ಮಾಡಿ, ಇದರಲ್ಲಿ ಪ್ರಜೆಗಳ ಪರವಾಗಿ ತುಂಬಾ ಮುತುವರ್ಜಿ ವಹಿಸಿ, ನಮ್ಮ ಶ್ರೀಮನ್ಮಹಾರಾಜರವರು ಕೃಪೆಮಾಡಿ ಮಲೆನಾಡು ಅಭಿವೃದ್ಧಿಗಾಗಿ ಹಾಲಿ ದಯಪಾಲಿಸಿರುವ ಹಣವನ್ನು ಯಾವ ರೀತಿ ವೆಚ್ಚ ಮಾಡಿದರೆ ಸರ್ಕಾರದವರ ಉದ್ದೇಶ ಈಡೇರಿ ಪ್ರಜೆಗಳಿಗೆ ಉಪಯೋಗವಾಗಿ ಕ್ಷೇಮವಾಗಬಹುದೆಂಬ ವಿಚಾ ರದಲ್ಲಿ ಕೆಲವು ಅಂಶಗಳನ್ನು ಈ ಕೆಳಗೆ ವಿವರಿಸಿರುವ ಮೇರೆ ಅಗ್ರಾಸನಾಧಿಪತ್ಯ ವಹಿಸಿದ ಡೆಪ್ಯುಟಿ ಕಮಿಷನರವರಿಗೆ ಸೂಚಿಸಿದರು ಇವರು ಸೂಚಿಸಿರುವ ವಿಷಯ ಗಳ ವಿಚಾರವಾಗಿ ಇತರ ಮೆಂಬರುಗಳು ಮತ್ತು ಡೆಪ್ಯುಟಿ ಕಮಿಷನರು ಸಹ ಬಹ ಳ ಯೋಗ್ಯವಾಗಿವೆ ಎಂದೂ, ಅರ್ಥವಾದವುಗಳೆಂದೂ ಹೇಳಿ ಸಂತೋಷಪಟ್ಟು, ಇವರಿಗೆ ವಂದನೆ ಮಾಡಿದರು ಅವುಗಳಾವವೆಂದರೆ—

1 ವಿದ್ಯಾಭ್ಯಾಸವು ಸಕಲ ಕಾರ್ಯಕ್ಕೂ ಮೂಲಾಧಾರವಾಗಿರುವ ಸಂಗತಿ ಯನ್ನು ತಿಳಿಸಿ ಮಾಡಬೇಕಾದ್ದಿಲ್ಲ ಈ ಮಂಜ್ರಾಬಾದು ತಾಲ್ಲೂಕಿನ ಒಟ್ಟು ಪ್ರಜಾಸಂಖ್ಯೆಯು 1911 ನೇ ಇಸವಿಯಲ್ಲಿ 50,381 ಆಗಿರುತ್ತೆ ಗಂಡು 26,754 ; ಹೆಣ್ಣು 23,836 ವಿದ್ಯಾವಂತರು 3,282 , ವಿದ್ಯೆಯಿಲ್ಲದವರು 47,307 ಈ ವಿದ್ಯೆಯಿಲ್ಲದ ಸಂಖ್ಯೆಯನ್ನು ಕಡಮೆ ಮಾಡಲು ಅವಶ್ಯಕವಾಗಿ ಆಗಬೇಕಾಗಿರುವ ಸಾಧ್ಯವಾದ ಮಟ್ಟಿನ ಪ್ರಯತ್ನಗಳನ್ನೇರ್ಪಡಿಸುವುದು.

2 ಆರೋಗ್ಯವಿಚಾರ ಮುಖ್ಯವಾದದ್ದು ಇದನ್ನು ಪರ್ಯಾಲೋಚನೆ ಯಿಂದ ಕ್ರಮಪಡಿಸಿ ಅನುಕೂಲ ರೀತಿ ಮಾಡಿಕೊಡಬೇಕು (1) ಜನಗಳಿಗೂ, ದನಗಳಿಗೂ ಕುಡಿಯುವ ನೀರು ಪ್ರಾಮುಖ್ಯವಾಗಿರುತ್ತೆ (2) ತಾಲ್ಲೋಕಾ ಮಲೆ ಒಟ್ಟು 1,120 ಕೆರೆಗಳಿವೆ ಈ ಪೈಕಿ ದುರಸ್ತಾದವು 753 , ನಾದುರಸ್ತಾ ದವು 367. ಕೆಲವು ಗ್ರಾಮಗಳಲ್ಲಿ ಇಂಥಿಂಥಾ ಕೆರೆಗಳು ಶಿವಾಯಿ ಮತ್ಯಾವ ಜಲಾಧಾರಗಳೂ ಇಲ್ಲ (3) ಇಂಥಾ ಕೆರೆಗಳಾಗಲಿ, ಸರಿಯಾಗಿ ಶಾಶ್ವತವಾಗಿ ನೀರು ನಿಲ್ಲುವ ಭಾವಿಗಳಾಗಲಿ, ಸಮೀಪದಲ್ಲಿ ಹಳ್ಳಗಳಾಗಲಿ ಶುದ್ಧಾಂಗ ವಾಗಿ ನೀರಿನ ವಸತಿಗಳಿಲ್ಲದೆ ಹಂಗಾಮಿಯಾಗಿ ಕಾಲಾನುಗುಣ್ಯವಾಗಿ ಗುಂಡಿ, ಗೊಟ್ರುಗಳನ್ನು ಮಾಡಿಕೊಂಡು ಅನಾರೋಗ್ಯವಾದ ನೀರನ್ನು ಉಪಯೋಗಿಸು ತ್ತಿರುವ ಗ್ರಾಮಗಳು ಸಹ ಇರುತ್ತವೆ (4) ತಾಲ್ಲೋಕಾಮಲೆ ಹಾಲಿ ಇರುವ ಒಟ್ಟು ಆಸ್ಪತ್ರೆಗಳು ಅನೇಕ ಗ್ರಾಮಗಳಿಗೆ ದೂರ ಫಾಸಲೆಯಾಗಿರುವ ಕಾರಣ ದಿಂದ ಆಸ್ಪತ್ರೆ ಉಪಯೋಗ ಏನೆಂಬುದನ್ನು ಅರಿಯದೆ ಇರುವ ಗ್ರಾಮಗಳು ಅನೇಕ ಇರುತ್ತವೆ. (5) ಅಲ್ಲಲ್ಲಿ ಮುಖ್ಯವಾದ ಸ್ಥಳಗಳಲ್ಲಿ ಆಸ್ಪತ್ರೆ ಸ್ಥಾಪನೆ ಮಾಡುವುದು ಪ್ರಕೃತ ಅಸಾಧ್ಯವೆಂದು ತೋರಿದರೆ ಹೀಗೆ ಮಾಡಲು ತಕ್ಕ ಪ್ರಯತ್ನ ಇಟ್ಟು ಸದ್ಯಕ್ಕೆ "ಟ್ರಾವಲಿಂಗ್ ಡಾಕ್ಟರು" ಗಳನ್ನು ಹಂಗಾಮಿ ಯಾಗಿಟ್ಟು, ನಮ್ಮ ಮಲೆನಾಡು ಪ್ರದೇಶಗಳಲ್ಲಿರುವ ಅನಾರೋಗ್ಯ ವಿಚಾರಗ ಳನ್ನು ಕಂಡು ಹಿಡಿಯುವುದು, ಆಸ್ಪತ್ರೆ ಔಷಧಿಗಳಿಂದುಂಟಾಗುವ ಸುಫಲಗಳು, ಇತ್ಯಾದಿ ವಿಚಾರಗಳಲ್ಲಿ ಮೂಢರಾಗಿರುವ ಪ್ರಜೆಗಳಿಗೆ ಪ್ರೋತ್ಸಾಹ ಆಗುವಂತೆ ಯೂ ಏರ್ಪಾಡು ಇಡಿಸಿದರೆ ಉತ್ತಮ ಇವರ ಸಹಾಯಕ್ಕೆ ಕಾಂಪೌಂಡರು ಗಳು, ಔಷಧಿ ಸಾಮಗ್ರಿಗಳು ಸಹ ಒದಗಿಸಿಕೊಡುವುದು ಒಳ್ಳೇದು. (6) ಈ ವರುಷ ಈ ಮಂಜರಾಬಾದು ತಾಲ್ಲೋಕಿನಲ್ಲಿ "ದೊಡ್ಡಮ್ಮ" ಯಾನೆ ಸಿಡು ಬಿನ ರೋಗದಿಂದ ಬಹು ಮಂದಿ ಮೃತರಾಗಿರುತ್ತಾರಲ್ಲದೆ ಅಂಗಹೀನರಾಗಿ ನರಳುತ್ತಿರುತ್ತಾರಾಗಿ ಈ ವಿಚಾರದಲ್ಲಿ ತುಂಬಾ ಪ್ರಯೋಜನಕರವಾದ "ವ್ಯಾಕ್ಸಿ ನೇಷನ್" ಸಿಡುಬು ಚುಚ್ಚಿಸುವದನ್ನು ಬಲಾತ್ಕಾರದಿಂದ ಜಾರಿಗೆ ತರುವಂತೆ ಏರ್ಪಾಡು ಮಾಡಿಸಿಕೊಡಬೇಕು (7) ಅಕಾಲಮರಣಕ್ಕೆ ತುತ್ತಾಗುತ್ತಿರುವ "ಹೆಂಗಸ" ವಿಷಯದಲ್ಲಿ ಐವತ್ತು ಸಾವಿರಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಯುಳ್ಳ ಈ ತಾಲ್ಲೂಕಿಗೆ ಎರಡು ಸೂಲಗಿತ್ತಿಯರಿಂದ ಸಹಾಯವಾಗಲು ಸಾಲದೆ ಹೆಚ್ಚು ಕೊಂದರೆ ಇರುವದರಿಂದ ಸೂಲಗಿತ್ತಿಯರ ಸಂಖ್ಯೆಯನ್ನು ಹೆಚ್ಚಿಸಿಕೊಡುವುದ ರಲ್ಲಿ ತುಂಬಾ ಉಪಕಾರ ; ಮತ್ತು ಈ "ಮಲೆನಾಡು ಅಭಿವೃದ್ಧಿ" ಗೆ ಅರ್ಹ ವಾದ ವಿಚಾರವಾಗಿರುತ್ತೆ

3. ಸಾಧ್ಯವಾದ ಮಟ್ಟಿಗೆ ಗ್ರಾಮ ರಸ್ತೆಗಳನ್ನೇರ್ಪಡಿಸುವುದು

4 ಪುರಾತನವಾಗಿ ಕೆಲವು ಗ್ರಾಮಗಳು ಅನಾರೋಗ್ಯವಾದ ಸ್ಥಳಗಳಲ್ಲಿ ಹಿಂದೆ ಕಾರಣಾಂತರದಿಂದ ಕಾಲಾನುಗುಣವಾಗಿ ಸ್ಥಾಪನೆ ಆಗಿರುವ ಗ್ರಾಮಗಳು ಕೆಲವು ಇರಬಹುದು. ಇದನ್ನು ಕಂಡುಹಿಡಿದು ಸಾಧ್ಯವಾದ ಮಟ್ಟಿಗೂ ಬೈಲಾದ ಒಳ್ಳೇ ಹವಾ ಬರುವ ಸ್ಥಳಕ್ಕೆ ಬದಲಾಯಿಸಿ ಸ್ಥಾಪನೆ ಆಗುವದು ಮುಖ್ಯವಾದ ವಿಚಾರವಾಗಿರುತ್ತೆ ಹೀಗೆ ಮಾಡಲು ಯುಕ್ತ ತೋರುವ ರಿಯಾಯತಿ ಮತ್ತು ಕುಮ್ಕಿಗಳನ್ನು ಅಂಥಾ ಪ್ರಜೆಗಳಿಗೆ ಸರ್ಕಾರದವರು ತೋರಿಸಿಕೊಟ್ಟು ಉಪಾ ಯಾಂತ್ರದಿಂದ ಕಾಲಕ್ರಮೇಣ ಅಭಿವೃದ್ಧಿಗೆ ತರಬೇಕಾಗಿ ಪ್ರಾರ್ಥನೆ

ತಾಲ್ಲೂಕು ವರ್ತಮಾನ.

ಸಿರಾ ತಾಲ್ಲೂಕು ಕಳವಿಗೆರೆ—ನಮ್ಮ ತಾಲ್ಲೂಕು ಮಲ್ದಾರ್ರವರಾದ ಮ॥ ಎನ್ ಶ್ರೀನಿವಾಸರಾಯರು ಇಲ್ಲಿಗೆ ವರ್ಗಪಟ್ಟು ಬಂದು ಸ್ವಲ್ಪ ದಿವಸಗ ಳಾದಾಗ್ಯೂ ಪ್ರಜೆಗಳ ಹಿತಚಿಂತನೆಗೆ ಮನಕೊಟ್ಟಿರುವುದಕ್ಕೆ ಸೊಸೈಟಿಯೇ ಮೊದ ಲಾದ ಏರ್ಪಾಟುಗಳನ್ನು ಮಾಡಿರುವುದೇ ನಿದರ್ಶನವಾಗಿರುತ್ತೆ ಇವರು ತಾ 23-3-1914 ರಲ್ಲಿ ಈ ಗ್ರಾಮಕ್ಕೆ ದಯಮಾಡಿ ಪ್ರಜೆಗಳಿಗೆ ತಕ್ಕ ಬುದ್ಧಿವಾದ ಗಳನ್ನು ಉಪನ್ಯಾಸ ದೃಷ್ಟಾಂತಗಳ ಮೂಲಕ ತಿಳಿಯಪಡಿಸಿ, ಮೆಂಬರುಗಳ ಚುನಾವಣೆಯಿಂದ ಗ್ರಾಮಾಭಿವೃದ್ಧಿ ಸಂಘವನ್ನು ಏರ್ಪಡಿಸಿ, ಕೊಆಪರೆಟಿವ್ ಸೊಸೈಟಿ ಸ್ಥಾಪಿಸಿಕೊಳ್ಳಲು ತಕ್ಕ ಪ್ರೋತ್ಸಾಹ ಕೊಟ್ಟದ್ದರಿಂದ ಗ್ರಾಮಸ್ಥರೆಲ್ಲಾ ಅವರಿಗೆ ವಂದಿಸಿ ಸೊಸೈಟಿ ಏರ್ಪಡಿಗಾಗಿ ರೆಜಿಸ್ಟ್ರಾರ್ ಸಾಹೇಬರಿಗೆ ಅರ್ಜಿ ಬರೆದುಕೊಂಡರು ಇದಕ್ಕಾಗಿ ಈ ಡಿಸ್ಟ್ರಿಕ್ಟ್ ಕೊಆಪರೆಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರವರು ಮ॥ ಎನ್ ಆರ್. ನಗರ್ಕರ್, ಬಿ ಎ ಯವರು, ಗೌ॥ ಅಗ್ರಿ ಕಲ್ಚರಲ್ ಇನ್ಸ್‌ಪೆಕ್ಟರ್ ಮ॥ ಕೃಷ್ಣರಾಯರೊಂದಿಗೆ ಏಪ್ರಲ್ ತಾ. 30 ರಲ್ಲಿ ಈ ಗ್ರಾಮಕ್ಕೆ ದಯಮಾಡಿ ಸೊಸೈಟಿಗಳಿಂದ ಮತ್ತು ನೂತನ ವ್ಯವಸಾಯ ಅಂದರೆ ಸರಿಯಾದ ಮಾರ್ಗದಲ್ಲಿ ಗೊಬ್ಬರ ಕೊಡಿಸುವುದು ಸಸಿಗಳ ಪೋಷಣೆ ವಿಷಯವಾಗಿ ಪ್ರಜೆಗಳಿಗೆ ಪರಸ್ಪರ ಉಂಟಾಗುವ ಪ್ರಯೋಜನಾಂಶಗಳನ್ನು ದೃಷ್ಟಾಂತಪೂರ್ವಕ ವಾಗಿ ಪ್ರಸ್ತಾಪಿಸಿ ಮಧ್ಯಾಹ್ನ ಗೌ ಸ್ಕೂಲ್ ಕಟ್ಟಡಕ್ಕೆ ಗ್ರಾಮದ ಮುಖಂಡ ದೊಡ್ಡಮನುಷ್ಯರೆಲ್ಲಾ ಮೀಟಿಂಗಿಗೆ ಬರುವಂತೆ ಅಪ್ಪಣೆಕೊಡಿಸಿದ ಪ್ರಕಾರ ಸಭೆಯು ಸೇರಿಸಲ್ಪಟ್ಟಿತು ಈ ಸಭೆಗೆ ಬರಮಾಡಿಕೊಳ್ಳಲ್ಪಟ್ಟಿದ್ದ ಹಾಲೇನಹಳ್ಳಿ ಕೊಆಪರೆಟಿವ್ ಸೊಸೈಟಿಗಳ ಸೆಕ್ರೆಟರಿಯವರಾದ ವೇ॥ ಭೀಮಣ್ಣನವರ ಕೋರಿಕೆ ಯಂತೆ ಸೊಸೈಟಿ ಇನ್ಸ್‌ಪೆಕ್ಟರ್ ಮ॥ ಎನ್. ಆರ್ ನಗರ್ಕರ್, ಬಿ ಎ. ಯವರು ಅಗ್ರಾಸನವನ್ನು ವಹಿಸಿ, ನೆರೆದಿದ್ದ ಸಭಾಸದರಿಗೆಲ್ಲಾ ಹೃದಯಂಗಮ ವಾಗುವಂತೆ ಸೊಸೈಟಿಗಳ ಸ್ಥಾಪನೆ, ಪುರೋಭಿವೃದ್ಧಿ, ಪ್ರಯೋಜನಾಂಶಗಳ ವಿಷಯವಾಗಿ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಅನಂತರ ಅನೇಕ ವೇಳೆ ಸೊಸೈಟಿಗಳ ಕಾನ್ಫರೆನ್ಸಿಗೆ ಮತ್ತೂ ಮೀಟಿಂಗುಗಳಿಗೆ ದಯ ಮಾಡಿಸಿದ್ದು ಅನುಭವವನ್ನು ಪಡೆದವರಾದ ಸದರಿ ವೇ॥ ಭೀಮಣ್ಣನವರು ದೇಶಾ ಭ್ಯುದಯ ಮತ್ತು ಐಕಮತ್ಯಗಳಿಗೆ ಸೊಸೈಟಿಗಳೇ ಮುಖ್ಯ ಕಾರಣವಾಗಿರು ತ್ತೆಂಬುದರ ವಿಷಯವಾಗಿ ಅನೇಕ ಗ್ರಾಮಗಳ ದೃಷ್ಟಾಂತಗಳಿಂದ ಸಂಭಾಷಣೆ ಮಾಡಿದ್ದನ್ನು ಕೇಳಿ ಗ್ರಾಮಸ್ಥರಿಗೆಲ್ಲಾ ನಂಬಿಕೆಯುಂಟಾಗಿ ಕೂಡಲೆ 200 ಷೇರು ಗಳ ಮೇಲ್ಪಟ್ಟು ಮೊಬಲಗು ಜಮಾಯಿಸಿದ್ದಲ್ಲದೆ ಸೊಸೈಟಿ ಕಾರ್ಯನಿರ್ವಾಹ ಕ್ಕಾಗಿ ಈ ಗ್ರಾಮದ ಪ್ರಮುಖ ಸಾಹುಕಾರರಾದ ಮ॥ ರಾಮೇಗೌಡರು ಪ್ರೆಸಿ ಡೆಂಟರಾಗಿಯೂ, ಮ॥ ತಾ ನಾರಾಯಣಪ್ಪನವರು ಸೆಕ್ರೆಟರಿಯಾಗಿಯೂ, ಗೌ॥ ಸ್ಕೂಲ್ ಮಾಸ್ಟರ್ ಮ॥ ಕೆ. ನಾಗೇಶರಾಯರು ಅ, ಸೆಕ್ರೆಟರಿಯಾಗಿಯೂ, ಗ್ರಾಮದ ಪಟೇಲ್ ಅಜ್ಜೀಗೌಡರು ಟ್ರೆಷರರಾಗಿಯೂ, ಎಂ. ಲಿಂಗೇಗೌಡರು, ಕಾಕಿ ಲಿಂಗೇಗೌಡರು, ಕಾಕಿ ರಂಗೇಗೌಡರು, ಹೊ ನಾಗೇಗೌಡರು ಬಳ್ಳಿ ಪುಟ್ಟೇ ಗೌಡರು ಸೊಸೈಟಿ ಪಂಚಾಯತದಾರರಾಗಿಯೂ ನೇಮಿಸಲ್ಪಟ್ಟರು ಗ್ರಾಮವಾಸಿ ಗಳಿಗೆ ಅಧಿಕಾರಿಗಳ ಪ್ರೇರಣೆಯಿಂದುಂಟಾದ ಐಕಮತ್ಯವು ಚಿರಸ್ಥಾಯಿಯಾಗಿ ನಿಂತಲ್ಲಿ ಸೊಸೈಟಿಯ ಶ್ರೇಯೋಭಿವೃದ್ಧಿಗೆ ಎಂದಿಗೂ ಕುಂದಕವುಂಟಾಗಲಾರದು. ನೆರೆದಿದ್ದ ಸಭಿಕರೆಲ್ಲಾ ಈ ಸೊಸೈಟಿ ಸ್ಥಾಪನೆಗೆ ಅಸ್ತಿಭಾರವನ್ನು ಹಾಕಿದ ನಮ್ಮ ಅಮಲ್ದಾರ್ರವರ ಪರಹಿತಾದಿ ಸುಗುಣಗಳನ್ನು ಕೊಂಡಾಡಿ, ಸೊಸೈಟಿ ಇನ್ಸ್‌ಪೆಕ್ಟರ್ ಮ॥ ಎನ್ ಆರ್ ನಗರ್ಕರ್, ಬಿ ಎ. ಯವರಿಗೂ, ಅಗ್ರಿಕಲ್ಚರಲ್ ಇನ್ಸ್‌ಪೆ ಕ್ಟರ್ ಮ॥ ಕೃಷ್ಣರಾಯರಿಗೂ, ಗ್ರಾಮಾಭಿಮಾನದಿಂದ ದಯಮಾಡಿಸಿದ್ದ ಹಾಲೇನಹಳ್ಳಿ ಸೊಸೈಟಿ ಸಕ್ರೆಟರಿ ವೇ॥ ಭೀಮಣ್ಣನವರಿಗೂ ಮರ್ಯಾದಾರ್ಹ ವಾದ ವಂದನೆಗಳನ್ನು ಸಮರ್ಪಿಸಿದರು. ಕಡೆಯಲ್ಲಿ ಸರ್ವರೂ ಎದ್ದು ನಮ್ಮ ನ್ನಾಳುತ್ತಿರುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಶ್ರೇಯಃಪ್ರಾರ್ಥನೆ ಮಾಡಿ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1914 ನೇ ಇಸವಿ ಏಪ್ರಿಲ್ 30 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	ರೂ 9,51,476
,, (2) ಡಿಪಾಜಿಟ್ಟುಗಳು	,, 12,98,853
,, (3) ಇತರೆ	,, 24,071
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ 22,74,399

ದೇಣೆ —(1) ಕೈಯಲ್ಲಿರುವ ಬ್ಯಾಂಕುಗಳಲ್ಲಿರುವ ಹಣ	ರೂ 6 62,338
,, (2) ಖಾತೆ ಮತ್ತು ಇತರ ಸಾಲಗಳು	,, 13,12,604
,, (3) ಡಿಸ್ಕೌಂಟು ಮಾಡಿದ ವಾಯಿದ ಹುಂಡಿಗಳು	,, 1 96,380
,, (4) ಇನ್‌ವೆಸ್ಟ್‌ಮೆಂಟುಗಳು	,, 1,00,010
,, (5) ಬ್ರಾಂಚುಗಳಲ್ಲಿರುವ ಮೊಬಲಗು	,, 88,624
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 7,080
,, (7) ಇತರೆ	,, 17,384
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ 22,74,399

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಪಾಶ್ಚಾತ್ಯರಿಗೂ ನಮಗೂ ಇರುವ ತಾರತಮ್ಯ.

ಪಾಶ್ಚಾತ್ಯರಂತೆ ನಾವೂ ಉಡಬೇಕು, ತೊಡಬೇಕು, ತಿನ್ನಬೇಕು, ಕುಡಿಯಬೇಕು ಆದರೆ ಅವರ ಸಹಜವಾದ ಸುಗುಣಗಳನ್ನು ಕಲಿತುಕೊಳ್ಳುವ ಕುತೂಹಲವು ಮಾತ್ರ ನಮಗಿಲ್ಲ ಅವರು ನಮ್ಮಂತೆ ಸೋಮಾರಿಗಳಾಗಿರುವುದಿಲ್ಲ ಸಮಯದ ಬೆಲೆಯನ್ನು ತಿಳಿದು, ಸದಾ ಉದ್ಯೋಗಶೀಲರಾಗಿರುತ್ತಾರೆ ರೈಲ್ವೇ ಗಾಡಿಗಳಲ್ಲಿ ಪ್ರಯಾಣ ಮಾಡುವಾಗಲೂ ವರ್ತಮಾನ ಪತ್ರಿಕೆಗಳನ್ನು ಓದುವುದು, ಇಲ್ಲವೇ ಗ್ರಂಥಾವಲೋಕನ, ಇವುಗಳಿಂದ ತಮ್ಮ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಾರೆ ಅವರಲ್ಲಿ ಸ್ತ್ರೀಯರಿಗೂ ಸಹ ಪುರುಷರಂತೆಯೇ ಸ್ವಾತಂತ್ರ್ಯ ಪ್ರಿಯರು, ಮತ್ತೂ ವಿದ್ಯಾವತಿಯರು ಅವರೂ ಸದಾ ಯಾವುದಾದರೂ ಲಾಭಕರವಾದ ಕೆಲಸಗಳನ್ನು ಮಾಡುತ್ತಿರುತ್ತಾರೆ ಒಂದು ಕ್ಷಣವಾದರೂ ವ್ಯರ್ಥವಾಗಿ ಕಾಲಹರಣಮಾಡುವುದಿಲ್ಲ ಅವರು ನಮ್ಮ ಸ್ತ್ರೀಯರಂತೆ ಪರನಿಂದೆ, ಇತರರನ್ನು ಅಪಹಾಸ್ಯಮಾಡಿ ನಗುವುದು, ನೆರೆಹೊರೆಯವರೊಡನೆ ಕಲಹ, ಇತ್ಯಾದಿ ದುಶ್ಚೇಷ್ಟೆಗಳಿಗೆ ಲಕ್ಷ್ಯಕೊಡುವುದಿಲ್ಲ ಇದಕ್ಕೆಲ್ಲಾ ನಮ್ಮ ಸ್ತ್ರೀಯರ ವಿದ್ಯಾಹೀನತೆಯೇ ಮುಖ್ಯ ಕಾರಣ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸಿದರೆ ಅವರು ಕೆಟ್ಟುಹೋಗುತ್ತಾರೆಂಬ ಚಿತ್ತಭ್ರಮೆಯು ನಮಗಿದೆ ಆದರೆ ಐರೋಪ್ಯರು ಹಾಗೆ ಅಭಿಪ್ರಾಯಪಡುವುದಿಲ್ಲ ನಮ್ಮ ಜನರಲ್ಲಿ ಗ್ರಾಮವಾಸಿಗಳಾದ ಕೆಲವರು ಕಕ್ಷಿಮಟ್ಟಿಗೆ ಓದುಬರಹ ಬಂದರೆ ಇತರರ ಮೇಲೆ ಪುಂಡು ಅರ್ಜಿಗಳನ್ನು ಬರೆಯತೊಡಗುತ್ತಾರೆ ಅವರಾದರೋ ತಮ್ಮ ತಿಳುವಳಿಕೆಯನ್ನು ಅಭಿವೃದ್ಧಿಪಡಿಸಿಕೊಂಡು ಆ ಮೂಲಕ ಲೋಕೋಪಕಾರವಾಗುವ ಕೆಲಸಗಳನ್ನು ಮಾಡಿ ಕೀರ್ತಿಹೊಂದುತ್ತಾರೆ ಅವರು ಯಾವ ಕೆಲಸವನ್ನು ಮಾಡಿದರೂ ಮನಃಪೂರ್ವಕವಾಗಿಯೂ, ಸಂತೋಷಚಿತ್ತದಿಂದಲೂ ಮಾಡುತ್ತಾರೆ ಆದ್ದರಿಂದಲೇ ಅವರು ಎಂತಹ ಅಜೇಯವಾದ ಕೆಲಸವನ್ನಾದರೂ ಸುಲಭವಾಗಿ ಜಯಿಸಿಬಿಡುತ್ತಾರೆ ಒಂದೊಂದು ವೇಳೆ ಅವರು ಹಿಡಿದ ಕೆಲಸವು ವಿಮುಖವಾದರೆ ಅದನ್ನು ಅಷ್ಟಕ್ಕೇ ಬಿಟ್ಟು ನಮ್ಮ ಹಾಗೆ ಹತಾಶರಾಗಿರುವುದಿಲ್ಲ ಹೇಗಾದರೂ ಸಿರಸಾಹಸಮಾಡಿ, ಆ ಕೆಲಸವನ್ನು ಸಾಧಿಸುವವರೆಗೂ ಬಿಡುವುದಿಲ್ಲ ಅವರು ದೃಢಕಾಯರು, ಧೀರರು, ಆರೋಗ್ಯಸೂತ್ರಗಳಿಗನುಸಾರವಾಗಿ —ನಿರ್ಮಲವಾದ ಗಾಳಿ, ಬೆಳಕು ಬರುವಂತೆ ದೊಡ್ಡದೊಡ್ಡ ಕಿಟಕಿ, ಬಾಗಿಲುಗಳನ್ನುಳ್ಳ ವಿಶಾಲವಾದ ಮನೆಗಳಲ್ಲಿ ಸುಖವಾಗಿ ವಾಸಮಾಡುತ್ತಾರೆ ಶರೀರ ಸ್ವಾಸ್ಥ್ಯ—ಆಹಾರ, ಉಡುಪು, ಗಾಳಿ ಅಂಗಸಾಧನೆ, ವಿಶ್ರಾಂತಿ, ಇವುಗಳ ವಿಚಾರದಲ್ಲಿ ಜಾಗರೂಕರಾಗಿರುವುದರಿಂದ ಅವರು ನಮ್ಮ ಹಾಗೆ ರೋಗಪೀಡಿತರಾಗಿ ನರಳುತ್ತಿರುವುದಿಲ್ಲ ಅವರು ನಮ್ಮ ಹಾಗೆ "ದೇವರ ಇಷ್ಟ ಇದ್ದಂತೆ ಆಗುತ್ತದೆ" ಎಂಬ ಮೂಲ ಮಂತ್ರವನ್ನು ಸದಾ ಪಠಿಸುತ್ತಾ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳದೆ ವ್ಯಗ್ರರಾಗಿರುವುದಿಲ್ಲ ಬೆಳಿಗ್ಗೆ ಎದ್ದು ನಮ್ಮ ಮುಖವನ್ನು ನಾವು ತೊಳೆಯದೇ ಬಿಟ್ಟರೆ ದೇವರು ಬಂದು ತೊಳೆಯುವುದಿಲ್ಲವೆಂದು ಅವರು ಚೆನ್ನಾಗಿ ಬಲ್ಲರು ಅಲ್ಲದೆ ಅವರು ನಮ್ಮಂತೆ "ನಾವೇ ಪೂಜ್ಯರು, ದೊಡ್ಡವರು, ಮತ್ತೂ ಸರ್ವಜ್ಞರು" ಎಂಬ ದುರಭಿಮಾನವುಳ್ಳವರಾಗಿಲ್ಲ ಇತರರಿಂದ ತಾವು ಕಲಿತುಕೊಳ್ಳಬೇಕಾದ ಸುಗುಣಗಳಿದ್ದಲ್ಲಿ ಅವನ್ನು ಮೊದಲು ಗ್ರಹಿಸುತ್ತಾರೆ ಅವರಲ್ಲಿ ಗುಣಕ್ಕೆ ಮಾತ್ಸರ್ಯವಿಲ್ಲ ಜಾತ್ಯಭಿಮಾನಗಳಿಲ್ಲ ಆದ್ದರಿಂದಲೇ ಅವರು ಅಷ್ಟು ಉನ್ನತಸ್ಥಿತಿಗೆ ಬಂದು ಜಗತ್ಪೂಜ್ಯರಾಗಿದ್ದಾರೆ ಅವರು ದೀನರ ಮತ್ತೂ ಕೀಳುಜಾತಿಯವರ ಸುಖದುಃಖಗಳಲ್ಲಿ ಸಹಜವಾಗಿಯೇ ಸಮಾನುಭವವುಳ್ಳವರು ಅವರನ್ನು ಏಳಿಗೆಗೆ ತರಲು ತಮ್ಮ ಶಕ್ತಿಮೀರಿ ಸಹಾಯಮಾಡುತ್ತಾರೆ ಆದರಿಂದಲೇ ದೀನರಲ್ಲಿ ಅವರಿಗಿರುವ ದಯಾಭಾವವು ಗೋಚರಿಸುತ್ತದೆ ಅವರು ಯಾವ ಕೆಲಸವನ್ನು ಮಾಡಬೇಕಾದರೂ ಅದರ ಪೂರ್ವಾಪರಗಳನ್ನು ಮೊದಲೇ ಆಲೋಚಿಸಿ, ಅನಂತರ ಕಾರ್ಯಾರಂಭ ಮಾಡುತ್ತಾರೆ ಆತುರಪಟ್ಟು ಯಾವ ಕೆಲಸವನ್ನೂ ಮಾಡುವುದಿಲ್ಲ ಒಕ್ಕಟ್ಟಿನ ಬಿಕ್ಕಟ್ಟನ್ನು ಅವರು ಸಂಪೂರ್ಣವಾಗಿ ಬಲ್ಲರು ಆದ್ದರಿಂದಲೇ ಅವರು ಈ ಭೂಮಂಡಲವನ್ನಾದರೂ ನಿರಾತಂಕರಾಗಿ, ಯಾವಭಯವೂ ಇಲ್ಲದಂತೆ ಆಳಬಲ್ಲಷ್ಟು ಶಕ್ತರಾಗಿದ್ದಾರೆ

ಆದರೆ ನಮ್ಮಲ್ಲಿಯಾದರೋ ಪ್ರತಿಯೊಂದು ಸಣ್ಣ ಗ್ರಾಮದಲ್ಲಿಯೂ ಕೂಡ ಅಂತಃಕಲಹಗಳೂ, ಕಕ್ಷಿಗಳೂ, ಪರಸ್ಪರ ದ್ವೇಷಾಸೂಯೆಗಳೂ, ಅಸಮಾಧಾನಗಳೂ ತುಂಬಿಹೋಗಿವೆ ಆದ್ದರಿಂದ ನಾವು ಯಾವ ಕೆಲಸವನ್ನಾರಂಭಿಸಿದರೂ ಪರಿಣಾಮದಲ್ಲಿ ವ್ಯಾಜ್ಯವೂ, ಕಷ್ಟನಷ್ಟಗಳೂ ಉಂಟಾಗುತ್ತಿವೆ ಇವೇ ನಮ್ಮ ಈ ದುರವಸ್ಥೆಗೆ ಮುಖ್ಯ ಕಾರಣ ಪ್ರಜೆಗಳ ವಿಷಯದಲ್ಲಿ ಮಾತಾಪಿತೃಗಳ ಭಾವವುಳ್ಳ ನಮ್ಮ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರವರ ಸರ್ಕಾರದವರು ಅವರ ಏಳಿಗೆಗೆ ಸಾಧನಗಳಾದ ಅನೇಕ ವಿಷಯಗಳನ್ನು ಚರ್ಚಿಸಿ ಕ್ಷಿಪ್ರದಲ್ಲಿಯೇ ಜಾರಿಗೆ ತರಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ ಅವರ ಸದುದ್ದೇಶಗಳೆಲ್ಲಾ ನಮಗೆ ಫಲಕಾರಿಯಾಗಿ ಪರಿಣಮಿಸಿ, ನಾವು ಸುಖಪಡಬೇಕಾದರೆ ನಮ್ಮಲ್ಲಿ ಪರಸ್ಪರ ಸಹಾಯ, ಐಕ್ಯಮತ್ಯ, ಸ್ವದೇಶಾಭಿಮಾನ, ರಾಜಭಕ್ತಿ, ಸಂತುಷ್ಟತೆ, ಇವೇ ಮೊದಲಾದ ದೇಶಾಭ್ಯುದಯ ಸೂಚಕಗಳಾದ ಸುಗುಣಗಳು ಬೇರೂರಬೇಕು

ಪಾಶ್ಚಾತ್ಯರಲ್ಲಿ ಮಕ್ಕಳಿಗೆ ವಿದ್ಯೆಯನ್ನು ಬಲಾತ್ಕಾರವಾಗಿಯಾದರೂ ಕಲಿಸುತ್ತಾರೆ ವಿವಾಹವು ಐಚ್ಛಿಕ ನಮ್ಮಲ್ಲಿಯಾದರೋ ವಿವಾಹವನ್ನು ಬಲಾತ್ಕಾರವಾಗಿ ಮಾಡಿಬಿಡುತ್ತಾರೆ, ವಿದ್ಯಾಭ್ಯಾಸವು ಐಚ್ಛಿಕ ಇವರಿಂದಲೇ ಅವರಿಗೂ ನಮಗೂ ಇರುವ ಪರಸ್ಪರ ತಾರತಮ್ಯಗಳನ್ನು ತಿಳಿದುಕೊಳ್ಳಬಹುದು

ಎಮ್ ಕೃಷ್ಣಪ್ಪ, ಯಲಹಂಕ

ಹುಲಿಯ ಹದುಳಿಕೆ

ಸಿರಾ ತಾಲ್ಲೂಕು ಕಳವಗೆರೆ ಗ್ರಾಮವು ಬಾಗಾಯಿತು ಅಡಿಕೆ, ತೆಂಗು ಮುಂತಾದ ಫಲವೃಕ್ಷಗಳಿಂದ ಸುತ್ತಲ್ಪಟ್ಟದ್ದಾಗಿರುವುದು ಬೆಟ್ಟ, ಗುಡ್ಡ, ಕಾಡುಗಳಿಲ್ಲದೆ ಬೈಲು ಪ್ರದೇಶವಾಗಿರುವದರಿಂದ ಕಾಡು ಮೃಗಗಳ ಭೀತಿಯಿಲ್ಲದೆ, ಸಣ್ಣ ಮಕ್ಕಳು ಕೂಡ ತಮ್ಮ ತಮ್ಮ ತೋಟಗಳಲ್ಲಿ ನಿರ್ಭಯವಾಗಿ ಸಂಚಾರಮಾಡುತ್ತಿರುವರು ಹೀಗಿರುತ್ತಿರಲು ಈ ಮಾಹೆ 3 ನೇ ತಾ ಭಾನುವಾರ ಬೆಳಿಗ್ಗೆ 10 ಘಂಟೆ ಸಮಯದಲ್ಲಿ ಅಕಸ್ಮಾತ್ತಾಗಿ ಒಂದು ಹುಲಿಯು ಬಂದು, ಗ್ರಾಮಕ್ಕೆ ಸುಮಾರು 2 ಫರ್ಲಾಂಗ್ ದೂರದಲ್ಲಿರುವ ತೋಟದ ಕಡಗಿನಲ್ಲಿ ಮಲಗಿದ್ದದ್ದನ್ನು 12 ವರ್ಷದ ಗೋವಿಂದನೆಂಬ ಹುಡುಗನೊಬ್ಬನು ಬೀಳದಕಾಯಿ ಆರಿಸಲು ಹೋಗಿದ್ದಾಗ ಕಂಡು, ಸದ್ದುಮಾಡದೆ ಆ ತೋಟದ ಕಪಿಲೆ ಹೊಡೆಯುತ್ತಿದ್ದವರ ಬಳಿಗೆ ಬಂದು ದೊಡ್ಡದಾದ ಹಾಡುಬೆಕ್ಕೋ, ಅಥವಾ ಮತ್ತಾವ ಪ್ರಾಣಿಯೋ ಅಲ್ಲಿ ಮಲಗಿರುತ್ತೆಂದು ತಿಳಿಸಲು, ಉತ್ಸಾಹಶಾಲಿಗಳಾದ ಕೆಲವರು ನೋಡುವುದಕ್ಕೆ ಬರುತ್ತಿರುವಾಗ ಅವರನ್ನು ಕಂಡು ಹುಲಿಯು ಘರ್ಜನೆಯಿಂದ ಕುಪ್ಪಳಿಸಿ ಆಳವಾಗಿ ಬೆಳೆದಿದ್ದ ಹುಲ್ಲಿನ ಪೊದರಿನಲ್ಲಿ ಅವಿತುಕೊಂಡಿತು ಇದರ ಆರ್ಭಟದಿಂದ ಕಪಿಲೆ ಎಳೆಯುತ್ತಿದ್ದ ಎತ್ತುಗಳು ಹತೋಟಿ ಮೀರಿ ಬೆದರಿದ್ದರಿಂದಲೂ, ತೋಟದ ಕೋತಿಗಳು ಕಿರಚಿಕೊಂಡದ್ದರಿಂದಲೂ ಮತ್ತು ನೋಡಿದವರು ಬೆದರಿ ಕೂಗಿಕೊಂಡದ್ದರಿಂದಲೂ ಸುತ್ತುಮುತ್ತಲಿನ ತೋಟದವರು ತಮ್ಮ ಕೆಲಸವನ್ನು ಬಿಟ್ಟು 50 60 ಮಂದಿಯು ಬರಿಗೆ ಸೇರಿ ತುರ್ತು ಒದಗಿದ ತೆಂಗಿನ ಮಟ್ಟೆ ದೊಣ್ಣೆ ದಬ್ಬೆ ತೆಗೆದುಕೊಂಡು ಮೇಲ್ಕಂಡ ತೋಟಕ್ಕೆ ಹೋಗಿ ಹುಲಿಯನ್ನು ಪೊದರುಗಳಲ್ಲಿ ಹುಡುಕುತ್ತಿರುವಾಗ್ಗೆ ಕಾಲ್ಕೆರೆ ರಂಗಪ್ಪನವರ ಮಗ ಚಿಕ್ಕಣ್ಣನೆಂಬ 14 ವರ್ಷದ ಹುಡುಗನು ಮೊದಲು ಕಂಡು "ಇಲ್ಲಿರುತ್ತೆ" ಎಂದು ಹುಲಿಯ ಕಡೆ ಕೈಯನ್ನು ತೋರಿಸಲು ಅದು ರೋಷದಿಂದ ಥಟ್ಟನೆ ಅವನ ಮೇಲೆ ಹಾರಿ ಬರಲು ದೈವ ಪ್ರೇರಣೆಯಿಂದ ಅವನು ಮುಖ ಕೆಳಗಾಗಿ ಕಡಗಿನಲ್ಲಿ ಬೀಳಲು ಅದಕ್ಕೆ ಆಯವಿಲ್ಲದೆ ಅವನ ಬೆನ್ನಿನ ಮೇಲೆ ಮಾತ್ರ ಬಡಿದು ಮುಂದಕ್ಕೆ ಹೊರಡಲು ಸುಮಾರು 50 60 ಗಜ ಫಾಸಲೆಯಲ್ಲಿದ್ದ ಗಿರೇಗೌಡನಹಳ್ಳಿ ದೊಡ್ಡರಂಗಪ್ಪನೆಂಬುವನು "ಹುಲಿಯು ಬರುತ್ತಿದೆ" ಎಂದು ಅದೇ ಮೇರೆಗೆ ಕೈ ತೋರಿಸಲು ಅದು ರೇಗಿ ಜನಕಮುದಾಯವನ್ನೂ ಪೊದರುಗಳನ್ನೂ ಬಿಟ್ಟು ಅವನ ಕಡೆಯೇ ಕುಪ್ಪಳಿಸುತ್ತಾ ಬರಲು ಅವನು ಧೈರ್ಯಗೆಡದೆ ತಕ್ಷಣ ಅಲ್ಲಿದ್ದ ಅಡಿಕೆಯ ಮರವನ್ನು ಸುಮಾರು 12 ಅಡಿಗಳ ಮೇಲಕ್ಕೆ ಹತ್ತಿದನು ಹುಲಿಯು ಹಾರಿ ಇವನ ಕಾಲ ಬುಡ್ಡಿಯನ್ನು ಉಗುರುಗಳಿಂದ ಬಡಿಯಿತು ಅವನು ಅಲ್ಲಿಗೂ ಧೈರ್ಯಗೆಡದೆ ಇನ್ನೂ ನಾಲ್ಕೈದು ಅಡಿ ಮೇಲಕ್ಕೆ ಹತ್ತುವಷ್ಟರೊಳಗಾಗಿ ಹುಲಿಯು ಪುನಃ ಬೂದಿಯಿಂದ ಹುಡುಗಿ ಮೇಲಕ್ಕೆ ಹಾರಿ ಅವನ ಎಡದು ತೊಡೆಯನ್ನು ಹಾಕಿದ ಕೂಡಲೇ ಅಡಿಕೆ ಮರದ ಆಸರೆ ತಪ್ಪಿ ಹುಲಿಯು ಕೆಳಕ್ಕೆ ಬಿಟ್ಟಿತು ಇಷ್ಟಕ್ಕೆ ಅವನ ತೊಡೆಯ ಮೇಲ್ಭಾಗ ಕೆಳಭಾಗಗಳಲ್ಲಿ ಎರಡು ಎರಡೂವರೆ ಅಂಗುಲ ಆಳವಾದ ಹಲ್ಲುಗಳು ನಾಟಿರುತ್ತೆ ಆದಾಗ್ಯೂ ಅವನು ಅಧೈರ್ಯಪಡದೆ ಕೆಳಕ್ಕೆ ಬೀಳದೆ ಮರವನ್ನು ಮತ್ತೊಂದು ಕೈಯಿಂದ ಬಲವಾಗಿ ಹಿಡಿದೇ ಇದ್ದನು ಅಷ್ಟರೊಳಗಾಗಿ ನೆರೆದಿದ್ದ ಶೂರಾಗ್ರೇಸರರೆಲ್ಲಾ ದಿಕ್ಕಾಪಾಲಾಗಿ ಪ್ರಾಣಭೀತಿಯಿಂದ ಬೇಲಿಗಳನ್ನು ಹೂರಿ ಹಾರಿ ಓಡಿಹೋಗುತ್ತಿದ್ದರು ಸುಮಾರು 60 ವರ್ಷ ವಯಸ್ಸುಳ್ಳ ದೊಳ್ಳೆಚಿಕ್ಕಣ್ಣನು ಇದೇ ಮೇರೆ ಓಡಿಹೋಗಲು ಶಕ್ತಿಯಿಲ್ಲದೆ ಹುಲಿಯ ಕಡೆ ತಿರುಗಿ ತಿರುಗಿ ನೋಡುತ್ತಾ ಅವಿತುಕೊಳ್ಳುತ್ತಾ ಕೈಯಾಡಿಸಲು ಹುಲಿಯು ಅವನ ಮೇಲೆ ತಿರುಗಿ ಬರಲು ಮೂರ್ಛೆಯಿಂದ ಕೆಳಗೆ ಬಿದ್ದನು ಇವನಿಗೆ ಬೆನ್ನಿನ ಮೇಲೆ ಪರಚಿದ್ದಕ್ಕೆ ಸುಮಾರು ಎರಡು ಅಂಗುಲದ ಗಾಯವಾಗಿರುತ್ತೆ ಜನಗಳ ಅತ್ಯಾರ್ಭಟದಿಂದ ಹುಲಿಯು ಮುಂದಿನ ತೋಟದ ಕಡೆ ಹೊರಟುಹೋಯಿತು ಓಡಿಹೋದ ಜನಗಳೆಲ್ಲಾ ಪುನಃ ಸೇರಿ ಮೇಲ್ಕಂಡ ಪ್ರಜ್ಞೆತಪ್ಪಿದ ಮೂರು ಮಂದಿಗೂ ಶೈತ್ಯೋಪಚಾರ ಮಾಡಿ ಸಾಗಿಸಿಕೊಂಡು ಊರಿಗೆ ಬಂದರು ಇವರುಗಳ ಬಟ್ಟೆಬರೆ ರಕ್ತಮಯವಾಗಿರುವುದನ್ನೂ ನೋಡಿದ ಗ್ರಾಮವಾಸಿಗಳು ಧೈರ್ಯಗುಂದಿ ಕಂಗೆಟ್ಟರು ಪುನಃ ಇವರುಗಳಿಗೆ ಸ್ವಲ್ಪ ಉಪಚಾರವನ್ನು ಕೊಟ್ಟು ಕೂಡಲೆ 6 ನೆ ಮೈಲಿಯ ಫಾಸಲೆಯಲ್ಲಿರುವ ಸಿರಾ ಆಸ್ಪತ್ರೆಗೆ ಗಾಡಿಯಲ್ಲಿ ಕರೆದುಕೊಂಡುಹೋದರು ಇವರ ಬೆಂಬಲ ಪೋಷಕರಾಗಿ ಹೋಗಿದ್ದ ಮ ರಾ ಪುಟ್ಟರಾಮಯ್ಯನವರು ತಾಲ್ಲೂಕು ಅಮಲ್ದಾರವರಿಗೆ ಮೇಲ್ಕಂಡ ಸಂಗತಿಯನ್ನು ಸವಿಸ್ತಾರವಾಗಿ ತಿಳಿಸಲು, ಅವರು ಆ ಕೂಡಲೆ ಡಾಕ್ಟರವರನ್ನು ಬರಮಾಡಿಕೊಂಡು ಇವರುಗಳಿಗೆ ಧೈರ್ಯಕೊಟ್ಟರು ಡಾಕ್ಟರವರು ತುಂಬಾ ಮೆಹನತ್ತಿನಿಂದ ಇಲಾಜುಮಾಡಿ ಅಲ್ಲಿಯೇ ಇಟ್ಟುಕೊಂಡಿರುತ್ತಾರೆ ದೇವರು ಶೀಘ್ರವಾಗಿ ಅವರಿಗೆ ಆರೋಗ್ಯಭಾಗ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ ಅದು ವರೆಗ ಸಾಯಂಕಾಲ 7 ಘಂಟೆಯಾದ್ದರಿಂದ ಆ ಗ್ರಾಮದವರ ಕೋರಿಕೆಯಂತೆ ಹುಲಿಯ ಶಿಕಾರಿಗೆ ಬರಲು ಅಕಾಲವಾಯಿತು ಯತ್ನವಿಲ್ಲದೆ ಮಾರನೇ ಬೆಳಿಗ್ಗೆ ಅಮಲ್ದಾರ್ ಮ, ವೆಂಕಟನಾರಣಯ್ಯನವರೂ, ಡಾಕ್ಟರವರೂ, ಪೋಲೀಸ್ ಜಮಾದಾರರೂ, ಯಕ್ಸೈಸ್ ಸೂಪರ್‌ವೈಜರವರೂ, ಪ್ರಸಿದ್ಧ ಶಿಕಾರಿದಾರರಾದ ಮಿ ಇನೂಸ್ ಖಾನ್ ಸಾಹೇಬರವರೇ ಮುಂತಾದ 7 8 ಮಂದಿಯೊಡನೆ ಬಂದೂಕುಗಳ ಸಮೇತ ದಯಮಾಡಿಸಿ ಗ್ರಾಮದ ಸಿಬ್ಬಂದಿಯೊಡನೆ ತೋಟಗಳಲ್ಲಿ ಹುಲಿಯ ಹೆಜ್ಜೆಯ ಗುರುತನ್ನು ಅನುಸರಿಸಿ ಹುಡುಕಿ ಸಾಯಂಕಾಲದ ವರೆಗೆ ನಿರೀಕ್ಷಿಸಿದರು ಹುಲಿಯು ಬೇರೆ ಸಿಕ್ಕಲಿಲ್ಲವಾಗಿ ಗ್ರಾಮವಾಸಿಗಳಿಗೆ ತಕ್ಕ ಧೈರ್ಯ ಹೇಳಿ, ಎಲ್ಲಿಯಾದರೂ ಅದು ಇರುವ ಸ್ಥಳ ಕಂಡರೆ ತಮಗೆ ತಕ್ಷಣ ವರ್ತಮಾನ ಕೊಟ್ಟಲ್ಲಿ ಕೂಡಲೆ ಬಂದು ಶಿಕಾರಿಮಾಡುವುದಾಗಿ ಭರವಸೆ ಕೊಟ್ಟು, ಸಿರಾಕ್ಕೆ ಪ್ರಯಾಣಮಾಡಿದರು ಆ ಲಾಗಾಯಿತು ಹುಲಿಯು ಸುತ್ತುಮುತ್ತಲಿನ ಗ್ರಾಮದ ತೋಟಗಳಲ್ಲಿ ಸೇರಿರುತ್ತೆಂದು ಘಳಿಗೆ ಘಳಿಗೆಗೆ ಪ್ರತ್ಯೇಕ ವರ್ತಮಾನ ಹುಟ್ಟುತ್ತಿರುವದರಿಂದ ಧೈರ್ಯಶಾಲಿಗಳಾದವರು ಸಿಬ್ಬಂದಿಯೊಡನೆ ತಮ್ಮ ತಮ್ಮ ತೋಟವನ್ನು ರಕ್ಷಿಸಿಕೊಳ್ಳುತ್ತಿರುವರು ಆದರೆ ಇಷ್ಟಕ್ಕೆ ಅಶಕ್ತಿವಂತರಾದವರ ತೋಟಗಳು ಮಾತ್ರ ಕಳ್ಳ ಕಾಕರ ಅವಾಂತರಕ್ಕೆ ಸಿಕ್ಕಿ ಬಹಳ ಫಲ ನಷ್ಟವಾಗುತ್ತಲಿದೆ ನಮ್ಮ ಸರ್ಕಾರದವರು ತಕ್ಕ ಮೆಹನತ್ತಿನಿಂದ ಹುಲಿಯ ಪೆಸೆಯಿಂದ ಭೀತರಾಗಿರುವ ಬಡ ಪ್ರಜೆಗಳ ಕಷ್ಟ ನಷ್ಟಗಳನ್ನು ಕೂಡಲೆ ಪರಿಹರಮಾಡುತ್ತಾರೆಂಬ ಭರವಸೆಯಿಂದ ನಂಬಿ ನಿರೀಕ್ಷಿಸುತ್ತಿರುವ

ಪ್ರತ್ಯಕ್ಷದರ್ಶಿ

ತಾಲ್ಲೂಕು ವರ್ತಮಾನಗಳು.

ಕಾನಕಾನಹಳ್ಳಿ ತಾ|| ಕಗ್ಗಲೀಪುರ —ಬಿಸಿಲಿನ ತಾಪ ಹೆಚ್ಚಾಗಿದೆ ಮಳೆಯಿಲ್ಲ ಸಂಜೆಯ ಹೊತ್ತು ಸ್ವಲ್ಪ ಮೋಡ ಕಟ್ಟುತ್ತದೆ ನೀರಿಲ್ಲದೆ ದನಕರುಗಳಿಗೆ ಬಹಳ ತೊಂದರೆಯಾಗಿದೆ ಕೆರೆ ಬತ್ತಿಹೋಗಿದೆ ಒಣಗಿರೆಯಲ್ಲಿ ಒಬ್ಬ ಪುಣ್ಯಾತ್ಮರು ಒಂದು ಭಾವಿಯನ್ನು ತೆಗಿಸಿದಾರೆ ಅದರಲ್ಲೂ ಒಂದು ಬಿಂದಿಗೆ ಕೂಡ ಮುಳುಗುವುದಿಲ್ಲ ಆದ್ದರಿಂದ ಮನುಷ್ಯರಿಗೂ ನೀರಿಗೆ ಬಹಳ ತೊಂದರೆಯಾಗಿದೆ ಇಲ್ಲಿ ಸಿಡುಬುರೋಗ ಜಾಸ್ತಿಯಾಗಿ ಬಹಳ ಕಷ್ಟವುಂಟಾಗಿದೆ 20 25 ವಯಸ್ಸಿನವರಿಗೂ ಸಿಡುಬು ಏಳುತ್ತಾ ಇದೆ ಇದರಿಂದ ಕೆಲವು ಹುಡುಗರೂ, 2 3 ಜನ ದೊಡ್ಡವರೂ ಕಾಲವಾದರು

ಚಿಕ್ಕಬಳ್ಳಾಪುರದ ತಾ|| ಕೇಶವಾರ —ಈ ಊರಿನಲ್ಲಿ ಬಿಸಿಲಿನ ಧಗೆ ವಿಪರೀತವಾಗಿದೆ ಜನರು ಮಳೆಯನ್ನೇ ಎದುರುನೋಡುತ್ತಿದ್ದಾರೆ ಜನಗಳಿಗೆ ಜೀವನ ನಡೆಯುವುದು ತುಂಬಾ ಕಷ್ಟವಾಗಿದೆ —ಕಳೆದ ತಿಂಗಳಲ್ಲಿ ನಡೆದ ಮೇಲೂರು ಜಾತ್ರೆಯಲ್ಲಿ ಈ ಊರಿನ ಶ್ರೀ|| ಮ|| ವೆಂಕಟೇಶಯ್ಯನವರೂ, ನಂಜುಂಡಪ್ಪನವರೂ ವಿಶೇಷ ಶ್ರಮಪಟ್ಟು ನೂರಾರು ಜನರಿಗೆ ಸಂತರ್ಪಣೆ ನಡಿಸಿದ್ದು ಸ್ತೋತ್ರಾರ್ಹವಾಗಿದೆ —ಈ ಊರಿಗೆ ಸರ್ಕಾರದವರು ಕಳೆದ ಜನವರಿಯಲ್ಲಿ ದಯಪಾಲಿಸಿದ ಸ್ಕೂಲು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ ಗ್ರಾಮಸ್ಥರು ಸ್ಕೂಲ್ ಮನೆ ಕೆಲಸವನ್ನು ಪೂರೈಸಿ, ಹುಡುಗರನ್ನು ಜಮಾಯಿಸಿ ಕೊಡಲು ಉಪಾಧ್ಯಾಯರಿಗೆ ಸಹಾಯಮಾಡಿದರೆ ವಿದ್ಯಾಭಿವೃದ್ಧಿಯು ಬಹಳ ಚೆನ್ನಾಗಿ ನಡೆದೀತು

ಚನ್ನಪಟ್ಟಣದ ತಾ| ಮಂಕೊಂದ —ಈ ಗ್ರಾಮದಲ್ಲಿ ಸುಮಾರು 170 ಮನೆಗಳ ವರೆಗ ಇರುತ್ತೆ ಪ್ರಜಾ ಸಂಖ್ಯೆ ಮಾತ್ರ 930 ರ ವರೆಗೆ ಇರುತ್ತೆ ಈ ಗ್ರಾಮದಲ್ಲಿ ಬಾಲಕರು 200 250 ರ ವರೆಗೆ ಇರುವರು ಇಲ್ಲಿಗೆ ಒಂದು ಸ್ಕೂಲು ಇಲ್ಲದೆ ಬಾಲಕರು ಬಹಳ ಹೀನಸ್ಥಿತಿಯಲ್ಲಿದ್ದರು ನಮ್ಮ ಅಮಲ್ದಾರವರು ತಾ 26 ಕ್ಕೆ ದಯಮಾಡಿಸಿ ಗ್ರಾಮಸ್ಥರೆಲ್ಲರನ್ನೂ ಕರಸಿಕೊಂಡು ಮೇಲ್ಕಂಡ ವಿಚಾರದಲ್ಲಿ ಗ್ರಾಮಸ್ಥರೆಲ್ಲಾ ಮುನ್ನೂರು ರೂಪಾಯಿ ವಸೂಲ್ಮಾಡಿ ಕೊಟ್ಟು ಒಂದು ಎಕರೆ ಜಮೀನು ಕೊಟ್ಟರೆ ಗವರ್ನಮೆಂಟಿನಿಂದ ಸಹಾಯ ಮಾಡಿ 1,000 ರೂಪಾಯಿನ ಕಟ್ಟಡವನ್ನು ಕಟ್ಟಿಸುತ್ತೇವೆಂದು ಪ್ರೋತ್ಸಾಹಮಾಡಿದರು ಅದರಂತೆ ಗ್ರಾಮಸ್ಥರೆಲ್ಲರು ಒಪ್ಪಿಕೊಂಡು ಅಮಲ್ದಾರ್ರವರು ಅವರವರ ಚೈತನ್ಯಾನುಸಾರ 10 5 ರೂಪಾಯಿನಂತೆ ಕೆಲವು ಜನಗಳು ಚಂದಾ ಮೊಬಲಗು ಕೊಟ್ಟರು ಈಚೆಗೆ ಕೆಲವು ಜನಗಳು ಸ್ಕೂಲ್ ಚಂದಾ ಹಣ ಕೊಡದೆ ಸಬ್ ಡಿವಿಜನ್ ಆಫೀಸರಲ್ಲಿ ಅರ್ಜಿ ಕೊಟ್ಟು ಇದನ್ನು ವಜಾ ಮಾಡಿಸಬೇಕೆಂದು ಕೇಳಿಕೊಂಡಿದ್ದಾರೆ 250 ರೂಪಾಯಿ ವರೆಗೆ ಚಂದಾ ಹಣ ವಸೂಲಾಗಿರುತ್ತೆ ಆದ್ದರಿಂದ ಸಬ್ ಡಿವಿಜನ್ ಆಫೀಸರವರು ದಯವಿಟ್ಟು ಗ್ರಾಮದಲ್ಲಿ ಕೆಲವು ಜನಗಳು ಕೊಟ್ಟಂತೆ ಇತರರಿಂದಲೂ ಚಂದಾ ಕೊಡಿಸುವಂತೆ ಹುಕುಂ ಅಪ್ಪಣೆ ಕೊಟ್ಟರೆ ಈ ಗ್ರಾಮದಲ್ಲಿ ಸ್ಕೂಲು ಆದೀತು

ಕೊಪ್ಪ ತಾ|| ಬೊಂಬಲಾಪುರ —ಈ ಊರು ಈ ತಾಲ್ಲೂಕಿನ ಮಧ್ಯದಲ್ಲಿ 300 ಜನ ಪ್ರಜಾಸಂಖ್ಯೆಯಿಂದ ಕೂಡಿದೆ ಈ ಊರಿಗೆ ಸರಿಯಾದ ಸರ್ಕಾರಿ ಸ್ಕೂಲ್ ಇಲ್ಲದೆ ಪ್ರಜೆಗಳು ಗೌರ್ನಮೆಂಟಿನವರನ್ನು ಅನೇಕ ಸಾರಿ ಕೇಳಿಕೊಂಡದ್ದಕ್ಕೆ ಅವರು ಒಂದು ಸ್ಕೂಲನ್ನು ಸ್ಯಾಂಕ್ಷನ್ ಮಾಡಿದರು ಜನಗಳು ಚಂದಾ ದ್ರವ್ಯದಿಂದ ಒಂದು ಹೊಸ ಕಟ್ಟಡವನ್ನು ತಯಾರಿಸಿ ಸದರಿ ಸ್ಕೂಲ್ ನಡಿಸಲು ಒಪ್ಪಿಸಿರುತ್ತಾರೆ ಈ ದಿವಸ ಭಂಡಿಗಡಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಬಿ ನಾಗಾಭಟ್ಟರು ದಯಮಾಡಿಸಿ ಈ ಸ್ಕೂಲನ್ನು ಓಪನ್ ಮಾಡಿದರು 20 ಜನ ಬಾಲಕರು ಹಾಜರಿದ್ದರು ಕ್ರಮೇಣ 30 ಜನರು ಸೇರಬಹುದು ಈ ಊರಲ್ಲಿ ಜಾತ್ರೆಕಾಲವಾದಕಾರಣ ಅನೇಕ ಪರಸ್ಥಳೀಯ ಮಹನೀಯರು ನೆರೆದಿದ್ದರು ಈ ದಿನ ಮಧ್ಯಾಹ್ನೋತ್ತರ ಈ ಸ್ಕೂಲ್ ಕಟ್ಟಡದಲ್ಲಿ ಸ್ಥಳೀಯ, ಪರಸ್ಥಳೀಯ ಮಹನೀಯರು ಸೇರಿ ಸಭೆ ನಡಿಸಿ, ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಸುಂದರವಾಗಿ ಅಲಂಕರಿಸಿ ಮೆರವಣಿಗೆ ಮಾಡಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ನಂತರ ಸಭೆಯವರಿಗೆ ಸುಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆ ಮುಕ್ತಾಯವಾಯಿತು. ಈ ಉತ್ಸವಕ್ಕೆ ಸುಮಾರು 150 ಜನರು ನೆರೆದಿದ್ದರು ಸ್ಕೂಲ್ ಕಟ್ಟಡವು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು ಈ ಸ್ಕೂಲು ಬಹು ಕಾಲ ನೆಲಸಿ ಅನೇಕ ಬಾಲಕರಿಗೆ ವಿದ್ಯಾದಾಯಕವಾಗಲೆಂದು ಪ್ರಾರ್ಥಿಸುತ್ತೇವೆ

ಹಾಸನ —ಕಳೆದ ತಾ 3 ನೇ ಭಾನುವಾರವೂ, 5 ನೇ ಮಂಗಳವಾರವೂ ಈ ಪ್ರಾಂತ್ಯ ಬಹು ಒಳ್ಳೇ ಮಳೆಯಾಯಿತು ಆದರೆ ಈಚೆಗೆ ಸುತರಾಂ ನಿಂತುಹೋಗಿದೆ ಬಿಸಿಲಿನ ಝಳವಂತೂ ಸಹಿಸತೀರದು ಈ ಮಳೆಯಿಂದ ಕೆರೆ ಕಟ್ಟೆಗಳಿಗೆ ಅಲ್ಪಸ್ವಲ್ಪ ನೀರು ಬಂದು, ದನಕರುಗಳಿಗೆ ಸಹಾಯವಾಗಿದೆ ರೈತರು ತರಾತುರಿಯಿಂದ ಬಿತ್ತನೆ ಕಾರ್ಯಗಳನ್ನು ಮಾಡುತ್ತಿದ್ದಾರೆ —ಕಳೆದ ತಾ 5ನೇ ಮಂಗಳವಾರ ಮಧ್ಯಾಹ್ನ ಒಬ್ಬ ಕಾಫೀ ಎಸ್ಟೇಟ ರೈಟರು ತಮ್ಮ ಸ್ವಂತ ಗ್ರಾಮದಿಂದ ಎಸ್ಟೇಟಿಗೆ ಪ್ರಯಾಣಮಾಡುತ್ತಾ ಮಾರ್ಗವಾಗಿ ಇಲ್ಲಿಗೆ ಬಂದು, ದೇವಿಕೆರೆಯ ಬಳಿ ಗಾಡಿ ನಿಲ್ಲಿಸಿ ಊರೊಳಕ್ಕೆ ಹೋಗಿದ್ದಾಗ ಇವರ 8 9 ವರ್ಷ ವಯಸ್ಸುಳ್ಳ ಒಬ್ಬ ಮಗನು ನೀರು ಕುಡಿಯಲಿಕ್ಕೆಂದು ಕೆರೆಗೆ ಇಳಿದು ಅಕಸ್ಮಾತ್ತಾಗಿ ನೀರಿನೊಳಕ್ಕೆ ಬಿದ್ದು ಮುಳುಗಿ ಕೆಲವು ನಿಮಿಷಗಳೊಳಗೆ ಸತ್ತುಹೋದನು ಈ ಕೆರೆಯಲ್ಲಿ ಯಾವಾಗಲೂ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ಲನು ಪಹರೆ ಇದ್ದೇ ಇರುವನು ಇವನು ಅಲ್ಲಿಯೇ ಇದ್ದುಕೊಂಡ ಹಗಲಿನಲ್ಲಿಯೇ ಇಂತಹ ಒಬ್ಬ ಬಾಲಕನು ಕೆರೆಯಲ್ಲಿಳಿದು ಬಿದ್ದು ಮೃತಪಟ್ಟದ್ದು ಅತ್ಯಂತ ದುಃಖವೂ, ಆಶ್ಚರ್ಯಕರವೂ ಆಗಿದೆ ಮಗುವನ್ನು ಕಳೆದುಕೊಂಡು ಗೋಳಾಡುತ್ತ ಹೋದ ಆ ತಂದೆತಾಯಿಗಳ ದುಃಖವನ್ನು ಹೇಳತೀರದು ಅಧಿಕಾರಿಗಳು ಆ ಮೇಲೆ ಬಂದು ನೋಡಿ ಮುಂದಿನ ಕಾರ್ಯಗಳನ್ನು ನಡಿಸಿದರು —ಇಲ್ಲಿನ ಸಾಹುಕಾರ್ ಮ|| ಶ್ರೀಕಂಠಪ್ಪನವರು ಅನೇಕ ಕೈಗಾರಿಕೆ ಕಾರ್ಯಗಳಿಗೆ ಉಪಯೋಗವಾಗುವ ಒಂದು ಭಾರೀ ಎಂಜನನ್ನು ತರಿಸಿ, ಶೀಘ್ರದಲ್ಲೇ ಕಾರ್ಖಾನೆಯನ್ನು ಸ್ಥಾಪಿಸುವರೆಂದು ತಿಳಿದು ಬಂದಿದೆ

ಮಾವಳ್ಳಿ —ಇಲ್ಲಿಗೆ ಕಳೆದ 2 ನೇ ತಾ ಶನಿವಾರ ಸಾಯಂಕಾಲ ಶ್ರೀ ಶಿವಗಂಗಾ ಸ್ವಾಮಿಗಳವರು ಶಿವನಸಮುದ್ರದಿಂದ ದಯಮಾಡಿದರು ಊರು ಮಹಾಜನಗಳೂ ಅಧಿಕಾರಿಗಳೂ ಸಹ ಬಂಗಲೆ ಬಳಿ ಕಾದಿದ್ದು ಶ್ರೀಯವರನ್ನು ಎದುರುಗೊಂಡರು ಮಾರನೇ ದಿವಸ ರಾಜಬೀದಿಯ ಬ್ರಾಹ್ಮಣರೂ ಅಮಲ್ದಾರರೂ ಶ್ರೀಯವರಿಗೆ ಪಾದಪೂಜೆ ಭಿಕ್ಷೆ ಸಹ ಮಾಡಿಸಿದರು ಸೋಮವಾರ ಇಲ್ಲಿನ ಚಿಕ್ಕಬೀದಿಯ ಬ್ರಾಹ್ಮಣರೆಲ್ಲಾ ಸೇರಿ ಅದೇ ರೀತಿ ಪಾದಪೂಜೆ ಭಿಕ್ಷೆ ಸಹ ಮಾಡಿದರು ಮಂಗಳವಾರ ಬೆಳಿಗ್ಗೆ ಶ್ರೀಯವರ ಸವಾರಿಯು ಪರಿವಾರಸಮೇತ ಹಲಗೂರಿಗೆ ದಯಮಾಡಿಸಿದರು —ಈ ಊರಲ್ಲಿ 30 40 ಸಾವಿರ ರೂಪಾಯಿ ಲೇವಾದೇವಿ ಮಾಡುತ್ತಿದ್ದ ಬೆಸ್ತರ ಹೊಟ್ಟೆ ಮಾದಯ್ಯನೆಂಬುವನು ಕಳೆದ ಬುಧವಾರ ಬೆಳಿಗ್ಗೆ 8 ಗಂಟೆಯಲ್ಲಿ ಊಟ ಮಾಡಿಕೊಂಡು ಒಂದು ಹಳ್ಳಿಗೆ ಹೋಗಿಬರುವುದಾಗಿ ಮನೆಯಲ್ಲಿ ಹೇಳಿ ಹೊರಟು ಮನೆಯಿಂದ ಸುಮಾರು 3-4 ಫರ್ಲಾಂಗು ದೂರದಲ್ಲಿರುವ ಒಂದು ನೇರಳೇ ಮರದ ಕೆಳಗೆ ಮಲಗಿ ಕಾಲು ಗಂಟೆಯೊಳಗಾಗಿ ಅಲ್ಲೇ ಪ್ರಾಣಬಿಟ್ಟನು ಅನಂತರ ಅವನ ಮಕ್ಕಳು ಮುಂಗಳು ಹೋಗಿ ಹೆಣವನ್ನು ಅವರ ಹೊಸ ಮನೆಗೆ ತೆಗೆದುಕೊಂಡು ಹೋಗಿ ಹಜಾರದಲ್ಲಿ ಮೂರುಸುತ್ತು ಬಳಸಿ ನಂತರ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಜಾತಿಪದ್ಧತಿ ಮೀರಿ ಹೂಳದೆ ಸುಟ್ಟುಬಿಟ್ಟರು ಈಗ್ಗೆ ಕೆಲವು ತಿಂಗಳ ಕೆಳಗೆ ಸಂತೆಯಲ್ಲಿ ನಡೆದ ದೊಂಬಿ ಮೊಕದ್ದಮೆಯಲ್ಲಿ ಇವನೂ ಒಬ್ಬ ಅಪರಾಧಿಯಾಗಿದ್ದನು ಈ ದೊಂಬಿ ಕೇಸು ಇನ್ನೂ ಫೈಸಲಾಗದೆ ಇಷ್ಟು ಸಾವಕಾಶವಾದದ್ದು ಕೇಸಿನ ರುಜುವಾತು ನಶಿಸಿ ಹೋಗುವುದಕ್ಕೆ ಅವಕಾಶವಾಗುತ್ತೆಂದು ಹೇಳಿಕೊಳ್ಳುತ್ತಾರೆ

ತ್ಯಾಮಗೊಂಡ್ಲು —ಕೆಲವು ದಿನಗಳಿಂದ ಮೋಡವಾಡುತ್ತಾ ಇದೆ ಆದರೆ ಮಳೆ ಬರಲೇ ಇಲ್ಲ ರೈತರು ಆಕಾಶವನ್ನೇ ನೋಡುತ್ತಲಿದ್ದಾರೆ ಬಿಸಿಲು ಧಗೆ ಸ್ವಲ್ಪ ಮಟ್ಟಿಗೆ ಕಮ್ಮಿಯಾಗುತ್ತಾ ಹವ ಆರೋಗ್ಯವಾಗಿದೆ ಧಾರಣೆವಾಸಿ ಕ್ಷಾಮಕಾಲವನ್ನೇ ತೋರಿಸುತ್ತಲಿವೆ ರೋಗಾದಿಗಳಿಲ್ಲ —ಕಳೆದ ವಾರ ನಡುವಂದಪಟೇಲರ ತೆಂಗಿನತೋಟಕ್ಕೆ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಕೆಲವು ಮರಗಳು ಸುಟ್ಟುಹೋದುವು —ಈ ಊರಿನಲ್ಲಿ ತಿಗಳರ ಒಸಪ್ಪನೆಂಬಾತನು ಸ್ವಂತ ಖರ್ಚಿನಿಂದ ದನಕರುಗಳಿಗೂ, ಪ್ರಯಾಣಿಕರಿಗೂ ಕುಡಿಯುವುದಕ್ಕೆ ನೀರನ್ನು ಅನುಕೂಲಮಾಡಿದ್ದನ್ನು ನೋಡಿ ಪ್ರಜೆಗಳು ತುಂಬಾ ಕೃತಜ್ಞರಾಗಿದ್ದಾರೆ —ಎರಡು ದಿನಗಳಿಂದ ಇಲ್ಲಿ ಆ ಜನೇಯ ದೇವರ ರಥೋತ್ಸವವು ಬಹು ವಿಜೃಂಭಣೆಯಾಗಿ ನಡೆಯಿತು ಗಲಾಟೆಗೆ ಆಸ್ಪದವಿಲ್ಲದಂತೆ ಮ ಪಟೇಲರೂ, ಪೋಲೀಸಿನವರೂ ಉಸ್ತುವಾರಿ ನೋಡಿಕೊಂಡರು —ಇಲ್ಲಿದ್ದ ಡಾಕ್ಟರ್ ಸುಬ್ಬರಾಯರು ತುಂಕೂರಿಗೆ ವರ್ಗವಾಯಿತು ಇವರ ಸಹನ ಗುಣವೂ, ಇವರ ಕೆಲಸವೂ ಬಹು ತೃಪ್ತಿಕರವಾಗಿದ್ದವು ಇಂಥವರಿಗೆ ವರ್ಗವಾದದ್ದಕ್ಕಾಗಿ ಎಲ್ಲರೂ ವ್ಯಸನಪಡುತ್ತಾರೆ ಅವರಿಗೆ ಬದಲಾಗಿ ಬಂದವರು ಹಾಗೇ ಒಳ್ಳೇ ಹೆಸರು ಪಡೆಯುವರೆಂದು ನಂಬುತ್ತೇನೆ —ಹೊಸಕೋಟೆಯಿಂದ ಹೊಸದಾಗಿ ಬಂದ ಪೋಲೀಸ್ ಜಮೇದಾರರು ತುಂಬಾ ಚಟುವಟಿಕೆಯಾಗಿ ಕೆಲಸ ಮಾಡುತ್ತಾ ಒಳ್ಳೆ ಹೆಸರು ಹೊಂದುತ್ತಲಿದ್ದಾರೆ —ಕಳೆದ ತಿಂಗಳು ತಾ 20 ರಲ್ಲಿ ತುಂಕೂರಿನ

ಬೆಳಗ್ಗೆ 6½ ಗಂಟೆಗೆ ಹೊರಟ ಲೋಕಲ್ ರೈಲುಗಾಡಿ ದೊಡ್ಡಬೆಲೆ ಸ್ಟೇಷನ್ ಬಳಿ ಪೋರ್ಟರನ ಅಜಾಗರೂಕತೆಯಿಂದ ಒಂದು ವಾಗಿನ್ ಬಂಡಿಯು ಉರುಳಿಕೊಂಡು, ಇನ್ನೊಂದು ವಾಗಿನ್ ಕಂಬಿಯಿಂದ ಕೆಳಗೆ ಬಿದ್ದು 11 ಘಂಟೆಗೆ ಬದಲಾಗಿ ಮಧ್ಯಾಹ್ನ 2½ ಘಂಟೆಗೆ ಬೆಂಗಳೂರು ಸೇರಿತು ಆದರೆ ಯಾವ ಅಪಾಯವೂ ಜನರಲ್ಲಿದ್ದವರಿಗೆ ಉಂಟಾಗಲಿಲ್ಲ —ಮ॥ ಪುಟ್ಟೇಗೌಡರು ತಮ್ಮ ತಿಂಗಳವಾರದ ಕಳೆದ ವಾರ ವಿವಾಹವನ್ನು ಬಹು ಅಟ್ಟಹಾಸವಾಗಿ ನಡೆಸಿ ನೂರಾರು ಜನಗಳಿಗೆ ಅನ್ನದಾನ ಮಾಡಿಸಿದರು ಈ ಕಷ್ಟಕಾಲದಲ್ಲಿ ಅವರ ದಯಾಳುತ್ವವು ಕೊಂಡಾಡತಕ್ಕದ್ದಾಗಿದೆ ದೊಡ್ಡ ಮನುಷ್ಯರಲ್ಲಿ ಇಂಥಾ ಉದಾರತ್ವವಿರುವುದನ್ನೇ ಎಲ್ಲರೂ ಮೆಚ್ಚುವರು

ದೇವನಹಳ್ಳಿ —ಈ ಊರಿನಲ್ಲಿ 5 ನೇ ತಾ ಸೋಮವಾರ ರಾತ್ರಿ ಸುಮಾರು 3 ಇಂಚ ಮಳೆಯಾಗಿ ರೈತರೆಲ್ಲಾ ತಮ್ಮ ತಮ್ಮ ಹೊಲಗಳ ಉಳುಮೆ ಮಾಡುತ್ತಿದ್ದಾರೆ ಕೆರೆ ಕುಂಟೆಗಳಿಗೆ 15 0 ದಿನಗಳ ನೀರು ಬಂದಿರುತ್ತೆ —ಹಿರೇಊರಿನ ಕೆರೆಯು ಸರ್ವರಿಗೂ ಜೀವಾಧಾರವಾಗಿದೆ ಇದು ಸುಮಾರು 3½ ತಿಂಗಳ ಹಿಂದೆ ಒಣಗಿಹೋಗಿದ್ದಾಗ ಕೆರೆಯ ಜಾಗಾವಾರವನ್ನು ಹರಾಜು ಮಾಡಿ ಕೆರೆಯನ್ನು ಶುಚಿಮಾಡಿಸಿ 3 ಭಾವಿಗಳನ್ನು ತೆಗಿಸುತ್ತೇವೆಂಬದಾಗಿ ವೈಸ್ ಪ್ರೆಸಿಡೆಂಟರು ಅಪ್ಪಣೆಕೊಡಿಸಿದ್ದು, ಜಹಲ್ ವರುಷಗೂ ಕೆರೆಯು ಶುಚಿಯಾಗದೆ ಮೊನ್ನೆ ಬಿದ್ದ ಮಳೆಗೂ, ಹಿಂದೆ ಬಿದ್ದಿದ್ದ ಮಳೆಗೂ ಕೊಂಚ ನೀರು ಬಂದಿರುವದರಿಂದ ಆ ಕೊಳೆ ನೀರನ್ನೇ ಜನಗಳೆಲ್ಲಾ ಉಪಯೋಗಿಸುತ್ತಾ ಬಂದು ಆದುದರಿಂದ, ಜನರು ವಿಧ್ಯವಿಧ ರೋಗಪೀಡಿತರಾಗಿದ್ದಾರೆ ಹೀಗಿರುವಾಗ ಮ॥ ರಾಮರಾಯರು ಆಸ್ಪತ್ರೆ ಡಾಕ್ಟರು ಪ್ರಾತಃಕಾಲ 6½ ಘಂಟೆಯಿಂದ 8 ಘಂಟೆ ವರಿವಿಗೂ ಊರು ಗಸ್ತುಮಾಡುತ್ತಾರೆಂದೂ, ನಂತರ 8 ಘಂಟೆ ಮೇಲೆ 11 ಘಂಟೆಗೆ ಆಸ್ಪತ್ರೆಗೆ ಹಾಜರಾಗಿ ಬಂದವರಿಗೆ ಔಷಧಿ ಕೊಡುತ್ತಾರೆಂದೂ ಬರೆದು ಇದಾರೆ ಇವರು ಗ್ರಾಮ ಗಸ್ತುಮಾಡುತ್ತಿದ್ದರೆ ಹಿರೇಊರಿನ ಕೆರೆಯು ಯಾಕೆ ಸಾಕ್ ಆಗಲಿಲ್ಲವೋ, ಚರಂಡಿಗಳ ಕೊಳಕು ಯಾಕೆ ಹಾಗೇ ನಾರುತ್ತಿದೆಯೋ, ಸಂತೆ ಬೀದಿಯ ಗುಂಡಿಯು ಅನೇಕ ವರ್ಷಗಳಿಂದ ಯಾಕೆ ಮುಚ್ಚದೆ ಬಿದ್ದಿದೆಯೋ, ಯಾವ ಗಲ್ಲಿಯಲ್ಲಿ ಕೇಳಿದರೂ ಯಾಕೆ ಡಾಕ್ಟರು ಬರಲಿಲ್ಲವೆಂತ ಹೇಳುತ್ತಾರೆಯೋ ತಿಳಿಯದು ಬಹುಶಾ ಕೋಟೆಯಲ್ಲಿ ಓಡಾಡುತ್ತಿರಬಹುದು ಈ ಡಾಕ್ಟರು 3 ತಿಂಗಳ ರಜಾದಲ್ಲಿದ್ದಾಗ ಬದ್ಲಿ ಡಾಕ್ಟರು ಬಂದಿದ್ದ ಕಾಲದಲ್ಲಿ ಅವರ ರಜಾ ಪೂರೈಸುವದರೊಳಗಾಗಿ ಮೊದಲಿನವರು ಅವಶ್ಯಕವಿಲ್ಲವೆಂತಲೂ, ಬದ್ಲಿಯಾಗಿ ಬಂದಿರುವವರನ್ನೇ ಇರಿಸಬೇಕೆಂತಲೂ ಡಿಸ್ಟ್ರಿಕ್ಟ್ ಸರ್ಜನ್‌ರಿಗೆ ಪ್ರಜೆಗಳು ಯಾಕೆ ಅರ್ಜಿ ಬರೆದುಕೊಂಡಿದ್ದರೋ ಗೊತ್ತಾಗಲಿಲ್ಲ ಮತ್ತು ಈ ಊರಿನ ಪಾಯಿಂಟೆಗಳು ದಿಗರು ತಾಲ್ಲೂಕುಗಳಿಗೆ ಯಾಕೆ ಹೋಗುತ್ತವೋ, ಇಂಥಾ ಪಕ್ಷಪಾತದ ಮಾತು ಯಾಕೆ ಬರೆದು ಇರುತ್ತಾರೋ ಹೇಳಲಾರೆನು

ಮಂಡ್ಯದ ತಾ ಬಸರಾಳು —ಈ ಗ್ರಾಮದಲ್ಲಿ ಈ ಮಾಹೆ 3, 5 ಎರಡು ದಿವಸ ಸ್ವಲ್ಪಕಾಲ ಮಳೆ ಸುರಿಯಿತು ಇದರಿಂದ ಜನಗಳಿಗೂ ದನಕರುಗಳಿಗೂ ಸ್ವಲ್ಪ ಅನುಕೂಲವಾಗಿದೆ ರೈತರು ಹೊಲಗಳನ್ನು ಉತ್ತು ಜೋಳವನ್ನು ಬಿತ್ತುತ್ತಾರೆ ಕೆಲವರು ಇನ್ನೂ ಬಿತ್ತಿರುವುದಿಲ್ಲ ಹೀಗೆಯೇ 1 2 ಇಂಚ ಮಳೆ ಕೂಡಲೇ ಬಂದರೆ ತುಂಬಾ ಅನುಕೂಲ —ಕಳೆದ ವರ್ಷ ಪ್ರಾಪ್ತವಾಗಿದ್ದ ದನಗಳ ಚಿಕಿತ್ಸೆಗಾಗಿ ಪಶುವೈದ್ಯರು ತಾ 2 ರಲ್ಲಿ ದಯಮಾಡಿಸಿದ್ದರು ಯಾವ ರೈತರೂ ತಮ್ಮ ದನಕರುಗಳಿಗೆ ಚಿಕಿತ್ಸೆಮಾಡಿಸಿದ ಹಾಗೆ ತೋರಲಿಲ್ಲ ಇದಕ್ಕೆ ಇವರು ಗಳ ಅಜ್ಞಾನವೇ ಕಾರಣವಿರಬಹುದು ಪೂರ್ವದಲ್ಲಿ ಸರ್ಕಾರದ ವೈದ್ಯರು ರೋಗ ಚಿಕಿತ್ಸೆಗಾಗಿ ಹಳ್ಳಿಗಳಿಗೆ ಬಂದರೆ ಇವರು ಏನೋ "ಮಾಡಿ ತಮ್ಮಗಳನ್ನು ಕೊಯ್ಯುತ್ತಾರೆಂದು ಜನಗಳು ಸಾಮಾನ್ಯವಾಗಿ ವೈದ್ಯರ ಕಣ್ಣಿಗೆ ಅಗೋಚರವಾಗುತ್ತಿದ್ದರು ಹಾಗೂ ಅವರ ಕಣ್ಣಿಗೆ ಗೋಚರವಾದ ಒಬ್ಬ ಇಬ್ಬರನ್ನು ಕೇಳಿದರೆ "ನಮ್ಮಗಳಿಗ್ಯಾರಿಗೂ ರೋಗವಿಲ್ಲ ನಮಗೇನೂ ಬೇಡಿ ಹೋಗಿ ಸ್ವಾಮಿ" ಎಂದು ಹೇಳಿ ಅಲ್ಲಿ ಒಂದು ನಿಮಿಷವೂ ಕೂಡ ನಿಲ್ಲದೆ ಹೊರಟುಹೋಗುತ್ತಿದ್ದರು ಇತ್ತೀಚೆಗೆ ನಮ್ಮ ಸರ್ಕಾರದವರಲ್ಲಿ ಅನೇಕ ಹಳ್ಳಿಜನಗಳಿಗೆ ಧೈರ್ಯವೂ, ನಂಬಿಕೆಯೂ ಹುಟ್ಟಿ ತಾವಾಗಿಯೇ ಚಿಕಿತ್ಸೆಮಾಡಿಸಿಕೊಳ್ಳುತ್ತಾ ಇರುವುದು ಬಹಳ ಸಂತೋಷದ ವಿಷಯವೇ ಆಗಿದೆ ಈ ಗ್ರಾಮದಲ್ಲಿ ಮಾತ್ರ ತಮ್ಮ ದನಕರುಗಳಿಗೆ ಪ್ರಾಪ್ತವಾಗಿರುವ ರೋಗಕ್ಕೆ ಚಿಕಿತ್ಸೆ ಮಾಡಿಸದೆ ಇರುವುದು ನೋಡಿದರೆ ಇಲ್ಲಿ ಇನ್ನೂ ಪೂರ್ವದವರ ಮೌಢ್ಯವನ್ನು ಉಳಿಸಿದ ಹಾಗೆ ತೋರುತ್ತದೆ —ಈ ಪ್ರಾಂತ್ಯ ಒಬ್ಬ ಗೃಹಸ್ಥನು ತನ್ನ ಮಗಳನ್ನು ಒಂದು ಗ್ರಾಮಕ್ಕೆ ಕೊಡುವುದಾಗಿ ಮಾತು ಕೊಟ್ಟು ಅವರಿಂದ ಕೆಲವು ಒಡವೆಗಳನ್ನು ತೆಗೆದುಕೊಂಡಿದ್ದು, ಅವರನ್ನು ಬಿಟ್ಟು ಅದಕ್ಕಿಂತಲೂ ಹೆಚ್ಚಾದ ಒಡವೆಗಳನ್ನು ಪಡೆದುಕೊಳ್ಳಬೇಕೆಂಬ ಆಸೆಯಿಂದ ಇನ್ನೊಂದು ಗ್ರಾಮಕ್ಕೆ ಮಾತು ನಿಷ್ಕರ್ಷೆಮಾಡಿಕೊಂಡು ಲಗ್ನ ದಿವಸ ಸಮೀಪ ಬಂದ ಹಾಗೂ, ಈ ಸಮಯವನ್ನು ಕಾಯುತ್ತಿದ್ದ ಅವನ ಸ್ವಂತ ಬಂಧುವು ತನ್ನ ಗ್ರಾಮದಿಂದ ರಾತ್ರಿಯ ಕಾಲ ಬಂದು ಮದುವೆಯಾಗುವ ಹುಡುಗಿಯನ್ನೇ ಕರೆದುಕೊಂಡು ಹೋಗಿ ತನ್ನ ಮಗನಿಗೆ ಮದುವೆ ಮಾಡಿಕೊಂಡ ಹಾಗೂ ವರ್ತಮಾನವಿದೆ ಈ ಸಂಗತಿ ನಿಜವಾಗಿದ್ದಲ್ಲಿ ದುರಾಶೆಯುಳ್ಳವರಿಗೆಲ್ಲಾ ಬುದ್ಧಿ ಕಲಿಸಿದ ಹಾಗಾಯಿತು —ಇಲ್ಲಿಯ ಗ್ರಾಮ ಬೀದಿಗಳು ಬಹಳ ಗಲೀಜಾಗಿರುತ್ತವೆ ಮ ರಾ ಪರಮೇಶ್ವರಯ್ಯನವರ ಮನೆ ಹಿಂಬಾಗದ ಪಾಳು ಪ್ರದೇಶವನ್ನು ಜನಗಳು ಕೆಡಿಸಿ ಹೇಸಿಕೆಮಾಡಿದ್ದಾರೆ ಇದು ಜನಗಳು ತಿರುಗಾಡುವ ದಾರಿ ಪಕ್ಕದಲ್ಲಿರುವ ಕಾರಣ ದುರ್ವಾಸನೆ ಸೂಸಿಕೊಂಡಿದ್ದಾಗಿದೆ ಮಳೆಗಾಲದಲ್ಲಂತೂ ಇದರ ವಾಸನೆ ಸಹಿಸುವುದು ಅತ್ಯಂತ ಕಷ್ಟವಾಗಿದೆ ಜನಗಳು ತಮ್ಮ ಮನೆಯ ಕಸ ಕಡ್ಡಿ, ಸೊಪ್ಪು ಸದೆ, ಒಡೆದ ಚೋಕೆ, ಮುಂತಾದವುಗಳನ್ನೂ ಸಹ ಅಲ್ಲೇ ಹಾಕುತ್ತಾರೆ ಇದರಂತೆಯೇ ಮುರದ ಪಕ್ಕದ ಪಾಳು ಪ್ರದೇಶದಲ್ಲಿಯೂ ತುಂಬಾ ಗಲೀಜಾಗಿರುತ್ತದೆ ಈ ಕಾರಣದಿಂದ ಇಲ್ಲಿಗೆ ಸಾಂಕ್ರಾಮಿಕ ರೋಗಗಳು ಪ್ರಾಪ್ತವಾಗುವುದರಲ್ಲಿ ಏನೂ ಸಂದೇಹವಿರುವುದಿಲ್ಲ ನಮ್ಮ ಸರ್ಕಾರದವರು ಇದನ್ನು ಕ್ಷಿಪ್ರದಲ್ಲಿ ತಪ್ಪಿಸಿಕೊಟ್ಟರೆ ಕ್ಷೇಮ ಇಲ್ಲಿನ ಗ್ರಾಮ ನೈರ್ಮಲ್ಯಕ್ಕಾಗಿ ಇಬ್ಬರು ತೋಟಿಗಳನ್ನು ನೇಮಿಸುವರೆಂದು ನಂಬುತ್ತೇವೆ

ಬಾತ್ಮಿದಾರರಿಗೆ ನೋಟೀಸ್

ಕುರುವಳ್ಳಿ ಚಾಳಿಂಗೈನ ರಾಘವೇಂದ್ರರಾಯರು ತೀರ್ಥಹಳ್ಳಿ ತಾಲ್ಲೂಕ್ ಕಛೇರಿಯಲ್ಲಿ ಮುಖ್ಯ ನೌಕರರಿಗೆ ಬೇಕಾದವರಿಗಲ್ಲದೆ ಇತರರಿಗೆ ನೋಟಿಗೆ ಬಿಲ್ಲೆ ದೊರೆಯುವುದು ಪ್ರಯಾಸವೆಂದೂ, ಇದಕ್ಕಾಗಿ ಜನರು ನಾಲ್ಕಾರು ದಿನ ದಣಿಯಬೇಕೆಂದೂ ನೌಕರರು ನೆಂಟರಾಗಿ ಒಂದೇ ಜಾತಸ್ಥರಾಗಿರೋಣದರಿಂದ ಇದಕ್ಕೆ ಸಹಾಯವಾಗಿದೆಯೆಂದೂ, ಪಟೇಲ್ ಶ್ಯಾನುಭೋಗರ ಪೋಟಿನ ಹಣಗಳು ಸರಿಯಾಗಿ ಸಾವಿರಾರು ಅಡವಿಗೆ ಹಾಗಿದೆಯೆಂದೂ, ಹತ್ತಿಪ್ಪತ್ತು ವರುಷಗಳಿಂದ ಈ ನೌಕರರನ್ನು ಸರ್ಕಾರದವರು ಯಾಕೆ ವರ್ಗಾವರ್ಗಿ ಮಾಡದೆ ಒಂದೇ ಕಡೆ ಇಟ್ಟಿರುತ್ತಾರೋ ತಿಳಿಯದ ಜನರು ನಾನಾ ಕಷ್ಟನಷ್ಟಗಳಿಗೆ ಗುರಿಯಾಗಿ ಕೊರಗುತ್ತಿದ್ದಾರೆಂದೂ ಆಕ್ಷೇಪಣೆಯುಳ್ಳ ವಾಕ್ಯವನ್ನು ಬರೆದಿದ್ದಾರೆ ಪ್ರಜೆಗಳ ದುಃಖದ ಅಮಲ್ದಾರರೇ ಮುಂತಾದ ಮೇಲ್ಪಟ್ಟ ಅಧಿಕಾರಿಗಳಿಗೂ ಇಲಾಖೆ ಇನ್ಸ್‌ಪೆಕ್ಟರುಗಳಿಗೂ ಇಂಥಾ ವಿದ ಮಾನಗಳನ್ನು ಅರಿಕೆ ಮಾಡಿಕೊಂಡರೆ ಅವರು ಇದನ್ನು ತನಿಖೆ ಮಾಡಿ ಸಂಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಮಂಡ್ಯದ ತಾಲ್ಲೂಕು ಕೌಡ್ಲೆಯಲ್ಲೂ, ಅದರ ಸಮೀಪದ ಇನ್ನೊಂದು ಗ್ರಾಮದಲ್ಲೂ ಸ್ಕೂಲುಗಳಲ್ಲಿ ತೃಪ್ತಿಕರವಾಗಿ ಕೆಲಸಗಳು ನಡೆಯುವದಿಲ್ಲವೆಂದೂ, ಇನ್ಸ್‌ಪೆಕ್ಟರು ಬಂದು ಹೋಗುವ ಒಂದು ದಿನದಲ್ಲಿ ಲೋಪಗಳು ತಿಳಿಯಲವಕಾಶವಿಲ್ಲವೆಂದೂ ಲ್ಯಾಂಡ್ ಹೋಲ್ಡರ್ ರಾಮಾಭಟ್ಟರು ಬರೆಯುತ್ತಾರೆ

—ಎಡಿ]

ಇಂಡಿಯಾ ದೇಶದ ವೃತ್ತಾಂತಗಳು.

ಮ್ಯಾಸಿಡೋನಿಯಾ ಎಂಬ ಹಡಗು 5,00,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತದೆ

ಬೆಜವಾಡಾ ಮ್ಯುನಿಸಿಪಾಲಿಟಿಗೆ ಪ್ರಜೆಗಳು ಸದ್ಯಕ್ಕೆ 12 ಮಂದಿ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳಬಹುದೆಂದು ಮದರಾಸ್ ಸರ್ಕಾರದವರು ಅಪ್ಪಣೆಕೊಟ್ಟಿದ್ದಾರೆ

ಎಲ್ಲೋರಿನಲ್ಲಿ ನಡೆಯುವ ಆರ್ಯವೈಶ್ಯ ಮಹಾ ಸಭೆಗೆ ಹೈಕೋರ್ಟ್ ವಕೀಲ್ ಮ॥ ಸೆಲ್ಲಾ ಗುರುಸ್ವಾಮಿಶೆಟ್ಟರು ಅಧ್ಯಕ್ಷತೆಯನ್ನು ವಹಿಸುವುದಾಗಿ ಒಪ್ಪಿಕೊಂಡಿದ್ದಾರೆ

ಬಿಹಾರ್ ಎಂಬ ಹೊಸ ಅಧಿಪತ್ಯದೊಳಗೆ ಸರ್ಕಾರಿ ಅಧಿಕಾರಿಗಳ ಮತ್ತು ಆಫೀಸುಗಳ ಕಟ್ಟಡಗಳಿಗೆ 1.5 ಲಕ್ಷ ರೂಪಾಯಿ ಖರ್ಚುಮಾಡಬಹುದೆಂದು ಸ್ಟೇಟ್ ಸೆಕ್ರೆಟರಿಯವರಿಂದ ಸ್ಯಾಂಕ್ಷನ್ ಆಗಿದೆ

ಬೊಂಬಾಯಿ ಪಟ್ಟಣದ ಕೆಲವು ಬೀದಿಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನೂ, ಕೆಲವು ಬೀದಿಗಳಲ್ಲಿ ಗ್ಯಾಸ್ ಎಂಬ ಹೊಗೆಯ ದೀಪಗಳನ್ನೂ ಪರೀಕ್ಷಾರ್ಥವಾಗಿ ಇಡಬೇಕೆಂದು ಮ್ಯುನಿಸಿಪಾಲಿಟಿಯವರು ಸ್ಯಾಂಕ್ಷನ್ ಮಾಡಿದ್ದಾರೆ

ಕೆಲವು ತಿಂಗಳ ಹಿಂದೆ ಪಟ್ಟಾಭಿಷಿಕ್ತರಾದ ಸಿಮ ಸಂಸ್ಥಾನದ ಮಹಾರಾಜರವರಿಗೆ ಬರ್ಮಾ ರಾಜವಂಶಕ್ಕೆ ಸೇರಿದ ಮಾಲರ್ಕ್ ಲಿಂಬಿನ್ ಎಂಬ ರಾಜಕುಮಾರಿಯನ್ನು ಕೊಟ್ಟು ರಂಗೂನ್ ಪಟ್ಟಣದಲ್ಲಿ ವಿವಾಹ ನಡೆಯುವಂತೆ ನಿಷ್ಕರ್ಷೆಯಾಗಿದೆ

ಪ್ರತಿ ವರುಷದ ಅಂತ್ಯಭಾಗದಲ್ಲೂ ಹಿಂದುಸ್ಥಾನದ ಕೋಆಪರೆಟಿವ್ ಸೊಸೈಟಿಗಳ ರಿಜಿಸ್ಟ್ರಾರುಗಳ ಮಹಾಸಭೆಯು ಸಿಂಲಾ ಪಟ್ಟಣದಲ್ಲಿ ನಡೆಯುತ್ತಿತ್ತಷ್ಟೆ, ಈ ಸಭೆಯು ಈ ವರುಷ ನಡೆಯುವುದಿಲ್ಲವೆಂದೂ, ಮುಂದಿನ ವರುಷ ನಡೆಯಬಹುದೆಂದೂ ತಿಳಿದುಬರುತ್ತದೆ

ಸಾತಾರೆಯ ಡಿಸ್ಟ್ರಿಕ್ಟ್ ಕೋರ್ಟಿನ ನಾಜರಾಗಿದ್ದ ಅಲೆಕ್ಸಾಂಡರ್ ಲೂಯಿ ಎಂಬಾತನು ಕೋರ್ಟಿನವರ ಅಪ್ಪಣೆಯಂತೆ ಒಬ್ಬ ಮೈನರ ಆಸ್ತಿಯನ್ನು ರಕ್ಷಿಸುತ್ತಾ ಅದರಲ್ಲಿ ಇಬ್ಬರು ಗುಮಾಸ್ತರೊಡನೆ ಸೇರಿಕೊಂಡು 2,000 ಚಿಲ್ಲರೆ ರೂಪಾಯಿ ತಿಂದುಹಾಕಿದನೆಂದು ಮೊಕದ್ದಮೆ ಬಂದಿದೆ

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸೋಲಾಪುರ ಜಿಲ್ಲೆಯಲ್ಲಿ ಈಗ ಬರಗಾಲ ಸಂಭವಿಸಿರುತ್ತದೆ ಪ್ರಜೆಗಳ ಕಷ್ಟನಿವಾರಣೆಗಾಗಿ ಒಂದು ಫಂಡು ಏರ್ಪಾಟಾಗಿ 15,0 ರೂಪಾಯಿ ತನಕ ಕೂಡಿರುವುದು ಗವರ್ನರವರು 500 ರೂಪಾಯಿ ಚಂದಾ ಹಾಕಿದರು ಕಮಿಟಿಯವರು ಇತರ ಕಡೆಗಳಲ್ಲೂ ಚಂದಾ ಎತ್ತುತ್ತಿದ್ದಾರೆ

ಕಲ್ಕತ್ತಾ ಪಟ್ಟಣದ ಎಂಟಾಲಿ ಎಂಬ ಭಾಗದಲ್ಲಿ ಪೋಲೀಸಿನವರು ಬಾರಲ್ ಬರ್ಗ ಎಂಬೊಬ್ಬ ಯೂರೋಪಿಯನ್‌ನ ಮನೆಯನ್ನು ನುಗ್ಗಿ ಶೋಧನೆಮಾಡುವಾಗ್ಗೆ ಅವನ ಮನೆಯಲ್ಲಿ ಸುಮಾರು ಒಂದು ಸೇರು ಕೊಕೈನ್ ಎಂಬ ಮದ್ದು ಪದಾರ್ಥವು ಸಿಕ್ಕಿತು ಅವನನ್ನು ದಸ್ತಗಿರಿಮಾಡಿ, 5,000 ರೂಪಾಯಿ ಜಾಮೀನ್ ತೆಗೆದುಕೊಂಡು ಬಿಟ್ಟಿದ್ದಾರೆ

ಮದರಾಸ್ ಗವರ್ನ್‌ಮೆಂಟಿನ ವ್ಯವಸಾಯ ಇಲಾಖಾ ಅಧಿಕಾರಿಗಳು ಮಲಬಾರಿನಲ್ಲಿ ತೆಂಗಿನ ಗಿಡಗಳಿಗೆ ಹಿಡಿಯುತ್ತಿದ್ದ ರೋಗವನ್ನು ನಿವಾರಣೆಮಾಡಿದರು ಆ ಚಿಕಿತ್ಸೆಯು ತೃಪ್ತಿಕರವಾಗಿರುವುದರಿಂದ ಸ್ಥಳಾಧಿಕಾರಿಗಳು ರೈತರಿಗೆ ಪ್ರೋತ್ಸಾಹಪಡಿಸಿ ಅದರಂತೆ ನಡೆಯಬೇಕೆಂದೂ, ಆಲಸ್ಯಮಾಡಬಾರದೆಂದೂ ವಿವೇಕ ಹೇಳುವಂತೆ ಅಪ್ಪಣೆ ಕೊಟ್ಟಿದ್ದಾರೆ

ಕಡಪ, ಕರ್ನೂಲ್, ಬಳ್ಳಾರಿ, ಈ ಮೂರು ಡಿಸ್ಟ್ರಿಕ್ಟುಗಳಿಗೂ ಒಂದು ಕಾಲೇಜನ್ನು ಸ್ಥಾಪಿಸಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು 20,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ ಅದನ್ನು ಯಾವ ಸ್ಥಳದಲ್ಲಿ ಮಾಡಬೇಕೆಂಬ ವಿಷಯದಲ್ಲಿ ಕೆಲವು ಕಾಲದಿಂದ ಚರ್ಚೆ ನಡೆಯುತ್ತಾ ಬಂದು, ಕಡೆಗೆ ಬಳ್ಳಾರಿಯಲ್ಲಿ ಸ್ಥಾಪಿಸುವಂತೆ ತೀರ್ಮಾನ ಮಾಡಿದ್ದಾರೆ

ಬ್ಯಾಂಕಾಕ್ ಪಟ್ಟಣದ ಸಯಾಂಕ ಮರ್ಕಲ್ ಬ್ಯಾಂಕಿನ ಮ್ಯಾನೇಜರಾಗಿಯೂ, ಚೈನಾ ಸಯಾಂ ಬ್ಯಾಂಕಿನ ಮುಖ್ಯ ಡೈರೆಕ್ಟರಾಗಿಯೂ ಇದ್ದ ನಾಯ ಪಾಲಾಂಗ್ ಎಂಬುವನು ಹತ್ತು ಲಕ್ಷ ದ್ರವ್ಯವನ್ನು ಅಪಹರಿಸಿದ್ದಕ್ಕಾಗಿ ಅವನಿಗೆ ಕಳೆದ ವಾರ ಹತ್ತು ವರುಷ ಕಠಿಣ ಸಜಾ ಆಯಿತು ಮತ್ತು ಚೈನಾ ಸಯಾಂ ಬ್ಯಾಂಕಿನ ಮ್ಯಾನೇಜರಾಗಿದ್ದ ಪೋಲ್ಯಂಡನ ತಮ್ಮನಿಗೆ ಆರು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿತು

ಔರಂಗಾಬಾದ್ ಜಿಲ್ಲೆಗೆ ಸೇರಿದ ನಾರಾಯಣರಾವು ಎಂಬ ಮರಾಠಾ ರೈತನು ಅನೇಕ ವರುಷಗಳಿಂದ ಹಲವು ಕೊಲೆಗಳನ್ನು ನಡಿಸಿ ಸಿಕ್ಕದೆ ಇದ್ದನು ಇವನು ಗಾಡಿ ಬಾಡಿಗೆ ಮಾಡಿಕೊಂಡು, ದೂರಸ್ಥಳಕ್ಕೆ ಹೋಗುತ್ತಾ ಗಾಡಿಯವನಿಗೆ ದಾರಿಯಲ್ಲೇ ವಿಷಹಾಕಿದ ತಿಂಡಿ ಕೊಟ್ಟು ಕೊಂದುದಾಕಿ, ಎತ್ತು ಗಾಡಿಗಳನ್ನು ಬಿಕರಿ ಮಾಡುತ್ತಿದ್ದನು ಈ ಕ್ರೂರಾತ್ಮನನ್ನು ಪೋಲೀಸಿನವರು ಈಗತಾನೇ ಪತ್ತೆಮಾಡಿ ಹಿಡಿದಿರುತ್ತಾರೆ

ಲಾಹೋರ್ ಪಟ್ಟಣದಲ್ಲಿ ಒಂದು ಭಾಗದ ವಿಷಯದಲ್ಲಿ ಹಿಂದೂ ಮಹಮ್ಮದೀಯರಿಗೆ ಬಹು ಭಯಂಕರವಾಗಿ ಕಡಿದಾಟವಾಗುವಂತಿತ್ತು ಮಹಮ್ಮದ್ ಶಫಿಯವರೂ, ರಾಮಚಂದ್ರದಾಸರವರೂ ಸೇರಿ ಈ ವ್ಯಾಜ್ಯವನ್ನು ವ್ಯವಸ್ಥೆ ಮಾಡಿದರು ಆ ಭಾಗಕ್ಕೆ ಕೆಳಗಿನಿಂದ ಮೇಲಿನ ತನಕ ಅರ್ಧಕ್ಕೆ ಒಂದು ಪರದೆ ಹಾಕಿ ಒಂದು ಕಡೆ ಹಿಂದುಗಳೂ, ಇನ್ನೊಂದು ಕಡೆ ಮಹಮ್ಮದೀಯರೂ ನೀರು ಉಪಯೋಗಿಸಿಕೊಳ್ಳುವಂತೆ ಒಪ್ಪಿಕೊಂಡರು

ಕಳೆದ 2 ನೇ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದೊಳಗೆ 14,842 ಜನರಿಗೆ ಪ್ಲೇಗ್ ತಗಲಿತು 11,069 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ಹಂಚಿಕೆ ಹ್ಯಾಗಂದರೆ—ಪಂಜಾಬ್ 1,797, ಸಂಯುಕ್ತ ಅಧಿಪತ್ಯಗಳು 3,162, ಬಿಹಾರ್ 1,85, ಬೊಂಬಾಯಿ 721, ಮದರಾಸ್ 7, ಬಂಗಾಳಾ 12, ಬರ್ಮಾ 153, ಮೈಸೂರು 25, ಹೈದರಾಬಾದ್ 23, ರಾಜಪುಟಾನಾ 33

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ಬರ್ಹಾನಿ ಎಂಬ ಪಟ್ಟಣದಲ್ಲಿ ಕಳೆದ ಮಂಗಳವಾರ ಮಧ್ಯಾಹ್ನ ಅಪೂರ್ವವಾದ ಬಿರುಗಾಳಿ ಹುಟ್ಟಿ ಅರ್ಧ ಗಂಟೆ ಹೊತ್ತು ಬೀಸಿತು ಬಳಿಕ ಗುಡುಗು ಮಿಂಚು ಸಿಡಿಲುಗಳ ಸಮೇತ ಬಹಳ ಜೋರಾಗಿ ಮಳೆ ಸುರಿಯಿತು. ಆನೆಕಲ್ಲುಗಳೂ ಬಿದ್ದವು. ಬಿರುಗಾಳಿ ಬೀಸಿದ ರಭಸಕ್ಕೆ ಅನೇಕ ಮನೆಗಳ ಮೇಲ್ಛಾವಣಿಗಳೂ, ಗಿಡಮರಗಳೂ ಬಿದ್ದು ಕೊಚ್ಚಿಹೋದವು ರಸ್ತೆಗಳಲ್ಲಿ ಗಾಡಿಗಳೂ ಸಾರೋಟುಗಳೂ ಉರುಳಿಕೊಂಡವು. ಬಹಳ ಆಸ್ತಿಪಾಸ್ತಿಗಳು ನಾಶವಾಗಿವೆ

ಫೆರೋಜ್‌ಪುರದ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಮ॥ ದಾಮೋದರದಾಸರವರು ಮ॥ ಚಂದಾಸಿಂಗ್ ಎಂಬ ವಕೀಲರ ವಿಷಯದಲ್ಲಿ ಬರೆದಿಟ್ಟಿದ್ದ ಯಾವುದೋ ಒಂದು ವಿಚಾರವನ್ನು ಈಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮಿ॥ ಬಾಸ್ಟರ್ ಸ್ಮಿತ್‌ರವರು ಪ್ರಕಟಮಾಡಿದ್ದರಿಂದ ಆ ವಕೀಲರು ತಮಗೆ ಅಪಮಾನವೂ ಮನೋವ್ಯಥೆಯೂ ಆಗಿದೆ ಎಂದೂ, ಅವರಿಂದ 10,000 ರೂಪಾಯಿ ಡಾಮೇಜು ಕೊಡಬೇಕೆಂದೂ ಅವರಿಬ್ಬರ ಮೇಲೂ ಫಿರ್ಯಾದುಮಾಡಿದ್ದಾರೆ. ಈ ಮೊಕದ್ದಮೆ ಜೂನ್ ತಾ 23 ಕ್ಕೆ ವಿಚಾರಣೆಗೆ ಇಟ್ಟಿದೆ.

ದೆಹಲಿ ಪಿತೂರಿ ಮೊಕದ್ದಮೆಯನ್ನು ತಲಾಷ್ ಮಾಡುವಾಗ್ಗೆ ಪೋಲೀಸಿನವರಿಗೆ ದೊರೆತ ಕಾಗದಪತ್ರಗಳ ದೆಸೆಯಿಂದ ಮೂರು ಮಂದಿ ಹಿಂದೂ ಯೌವನಸ್ಥರನ್ನು ದಸ್ತಗಿರಿ ಮಾಡಿದ್ದಾರೆ. ಇವರೂ ಇನ್ನಿಬ್ಬರೂ ಸೇರಿ 1913 ರಲ್ಲಿ ನೀಮುಚ್ ಎಂಬ ಸ್ಥಳದಲ್ಲಿ ಒಬ್ಬ ಸಾಧುವನ್ನೂ ಒಬ್ಬ ಹುಡುಗನನ್ನೂ ಅವರ ಮಠದಲ್ಲಿ ಕೊಂದುಹಾಕಿದರೆಂದು ತಿಳಿಯುವುದು. ಈ ಸೈತಿ ಮಾಣಿಕ್ಯಚಂದ್ ಎಂಬ ಅಪರಾಧಿಗೆ ಸರ್ಕಾರದವರು ಕ್ಷಮಾಪಣೆಯನ್ನು ಕೊಟ್ಟಿರುವರು ಅವನು ಕೃತ್ಯ ನಡೆದದ್ದನ್ನು ವಿವರಿಸಿರುತ್ತಾನೆ ಪೋಲೀಸಿನವರು ಇನ್ನಿಬ್ಬರನ್ನು ಹಿಡಿಯಬೇಕೆಂದು ತಲಾಷ್ ಮಾಡುತ್ತಿದ್ದಾರೆ.

ಬೊಂಬಾಯಿ ಪಟ್ಟಣದ ಕೊಲಂಬಾ ಎಂಬ ವಿಭಾಗದಲ್ಲಿ ಕಳೆದ ತಿಂಗಳು ಅನೇಕ ಹತ್ತೀ ಕಾರ್ಖಾನೆಗಳಿಗೆ ಬೆಂಕಿ ಬಿದ್ದು ಅದನ್ನು ಆರಿಸುವುದಕ್ಕೆ ಅಪಾರವಾದ ನೀರು ಖರ್ಚಾಗಿಹೋದದ್ದರಿಂದಲೂ, ಬೊಂಬಾಯಿಗೆ ನೀರು ಬರುವ ಭಾರಿ ನಲ್ಲಿಯು ಅಲ್ಲಿಂದ 30 ಮೈಲಿ ದೂರದಲ್ಲಿ ಅಕಸ್ಮಾತ್ತಾಗಿ ಒಡೆದು ನೀರೆಲ್ಲಾ ಸುತ್ತುಮುತ್ತಿನ ಪ್ರದೇಶಗಳಲ್ಲಿ ಹರಿದು ಹಲಾಕಾಗಿರುವುದರಿಂದಲೂ ಆ ಪಟ್ಟಣದೊಳಗೆ ಪ್ರಜೆಗಳಿಗೆ ಕುಡಿಯುವ ನೀರಿಗೆ ತುಂಬಾ ಕಷ್ಟ ಸಂಭವಿಸಿರುತ್ತದೆ ಮಲಬಾರ್ ಹಿಲ್ ಮತ್ತು ಭಂಡರ್‌ವಾಡಾ ಎಂಬೀ ವಿಭಾಗಗಳಲ್ಲಿ ಈಗ ನೀರಿಗೆ ಕ್ಷಾಮ ಉಂಟಾಗಿದೆ.

ಬರೋಡಾ ಸಂಸ್ಥಾನದಲ್ಲಿ ವೈದಿಕ ಕರ್ಮಗಳನ್ನು ಮಾಡಿಸತಕ್ಕವರು ಪುರೋಹಿತರೂ ಪೂಜಾರಿಗಳೂ ಮೊದಲು ಒಂದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸರ್ಟಿಫಿಕೇಟು ಪಡೆದಿರಬೇಕೆಂಬ ಅರ್ಥಕ್ಕೆ ಸರ್ಕಾರದವರು ಒಂದು ಮಸೂದೆ ಕಾನೂನನ್ನು ರಚಿಸಿದರು ಪ್ರಜೆಗಳು ಈ ಕಾನೂನಿನ ವಿಷಯದಲ್ಲಿ ಅಸಮಾಧಾನಪಟ್ಟು ನಾನಾ ಪ್ರಕಾರವಾಗಿ ಚರ್ಚೆಮಾಡಲಾರಂಭಿಸಿದರು ಆದಕಾರಣ ಪ್ರಜೆಗಳ ಅಭಿಪ್ರಾಯಗಳನ್ನೆಲ್ಲಾ ಸಂಗ್ರಹ ಮಾಡಿ, ತರುವಾಯ ಈ ಮಸೂದೆಯನ್ನು ನ್ಯಾಯವಿಧಾಯಕ ಸಭೆಯಲ್ಲಿಟ್ಟು ಚರ್ಚೆಮಾಡಿಸಬೇಕೆಂದು ತೀರ್ಮಾನ ಮಾಡಿದ್ದಾರೆ

ಹಿಂದುಸ್ಥಾನದಿಂದ ಮಕ್ಕಾ, ಮದೀನಾಗಳಿಗೆ ಯಾತ್ರೆಗಾಗಿ ಹೋಗುವಂಥಾ ಮುಸಲ್ಮಾನರು ಬೊಂಬಾಯಿನಲ್ಲಿ ಹಡಗು ಹತ್ತುವುದಕ್ಕೆ ಮೊದಲು ಅಲ್ಲಿರುವ ಟರ್ಕಿ ರಾಯಭಾರಿಯಿಂದ ತಾವು ಬ್ರಿಟಿಷ್ ಪ್ರಜೆಗಳೆಂಬ ಅರ್ಥಕ್ಕೆ ಸರ್ಟಿಫಿಕೇಟು ತೆಗೆದುಕೊಳ್ಳಬೇಕು ಇದಕ್ಕೆ ಟರ್ಕಿಯ ರಾಯಭಾರಿಗೆ 3 ರೂಪಾಯಿ ರುಸುಂ ಕೊಡಬೇಕಾಗಿದೆ ಈಗ ಈ ರುಸುಮನ್ನು ಆ ರಾಯಭಾರಿಯು 6 ರೂಪಾಯಿಗೆ ಹೆಚ್ಚಿಸಿದ್ದಾರೆ ಬೊಂಬಾಯಿನಲ್ಲಿರುವ ಮಹಮ್ಮದಿಯ ದೊಡ್ಡ ಮನುಷ್ಯರು ಈ ಫೀಜನ್ನು ಹೆಚ್ಚಿಸಕೂಡದೆಂದು ಆ ರಾಯಭಾರಿಗೆ ತಿಳಿಸುವುದಕ್ಕೋಸ್ಕರ ಒಂದು ಸಭೆಯನ್ನು ಈ ವಾರ ನಡಿಸುವವರಾಗಿದ್ದಾರೆ

ಈ ತಿಂಗಳ 2 ನೇ ತಾ. ನಿಂದ ವಿಜಯನಗರದ ಮಹಾರಾಜಾ ಕಾಲೇಜಿನಲ್ಲಿ ಶೈವಮತಸ್ಥರ ಐದನೇ ಮಹಾಸಭೆಯು ಪ್ರಾರಂಭವಾಗಿ ಮೂರು ದಿನಗಳವರೆಗೆ ಜರುಗಿತು ವಾರಂಗಾಲಿನ ಶ್ರೀಶಂಕರ ಆರಾಧ್ಯುಲುರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ನೈಜಾಮರ ಅಧಿಪತ್ಯದಿಂದ 150 ಮಂದಿ ಪ್ರತಿನಿಧಿಗಳು ಹೋಗಿದ್ದರು ಶ್ರೀಲಕ್ಷ್ಮೀಪ್ರಸಾದರಾಯರು ಶೈವವಿದ್ಯಾರ್ಥಿಗಳಿಗೆ ಒಂದು ವೇದಪಾಠಶಾಲೆಯನ್ನು ಸ್ಥಾಪಿಸುವುದಕ್ಕೆ 1,000 ರೂಪಾಯನ್ನೂ, ಶೈವಸಿದ್ಧಾಂತದ ಪ್ರಾಚೀನ ಗ್ರಂಥಗಳನ್ನು ಅಚ್ಚು ಹಾಕಿಸುವುದಕ್ಕೆ 200 ರೂಪಾಯನ್ನೂ, ಆ ಪಾಠಶಾಲೆಯ ಸರಸ್ವತೀ ಭಂಡಾರಕ್ಕೆ 200 ರೂಪಾಯನ್ನೂ ಉಚಿತವಾಗಿ ಕೊಡುವುದಾಗಿ ವಾಗ್ದಾನ ಮಾಡಿದರು

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಜಸ್ಸೋರಿನಲ್ಲಿ ವಾಹಿದ್ ಮುಲ್ಲಾ ಎಂಬ ಮಹಮ್ಮದೀಯನು ಸಂಸಾರ ಸಮೇತ ಕ್ರೈಸ್ತಮತವನ್ನು ಅವಲಂಬಿಸಿದನು ಅವನ ಮಗಳಿಗೆ ಮೊದಲೇ ಮದುವೆಯಾಗಿತ್ತು ಇವಳ ಗಂಡನು ಕ್ರೈಸ್ತನಾಗದಿದ್ದ ಆ ಹುಡುಗಿಯನ್ನು ಕರೆದು ತಂದು ಮಹಮ್ಮದೀಯ ಮತಕ್ಕೆ ಪುನಃ ಸೇರಿಸಿಕೊಂಡು ಮತ್ತೆ ವಿವಾಹ ಮಾಡಿಕೊಂಡನು ಈಗ ಆ ಹುಡುಗಿಯ ತಂದೆ ವಾಹಿದ್ ಮುಲ್ಲನು ತನ್ನ ಮಗಳನ್ನು ತನ್ನ ಪೋಷಣೆಗೆ ಕೊಡಿಸಬೇಕೆಂದೂ, ಅವಳು ಕ್ರೈಸ್ತಳಾದಾಗಲೇ ಮದುವೆಯ ಸಂಬಂಧ ಹರಿದುಹೋಯಿತೆಂದೂ ಅಳಿಯನ ಮೇಲೆ ದಾವಾ ತಂದಿದ್ದಾನೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಗಿಯ ಕಕ್ಷಿಯಿತ್ತು ತೆಗೆದುಕೊಳ್ಳಬೇಕೆಂದು ಸಮನ್ಸ್ ಕೊಟ್ಟಿದ್ದಾರೆ

ಬೊಂಬಾಯಿ ಪಟ್ಟಣದಲ್ಲಿ ಮ ಮುರಾರ್ಜಿ ನರೋತ್ತಮ ಗೋಕುಲದಾಸರವರು ಮಹಾಬಲೇಶ್ವರದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟುವುದಕ್ಕೆ 25,000 ರೂಪಾಯಿನ ತಮ್ಮ ಬಾಬತು ಪ್ರಬರಿ ಎಂಬ ಆಸ್ತಿಯನ್ನು ಸರ್ಕಾರಕ್ಕೆ ವಹಿಸಿಬಿಟ್ಟರು ಮತ್ತು ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ ಕಟ್ಟುವುದಕ್ಕಾಗಿ 5,000 ರೂಪಾಯಿ ಕೊಡುತ್ತೇವೆಂದು ತಿಳಿಸಿದ್ದಾರೆ ಅಲ್ಲಿ ಕಟ್ಟುವ ದೊಡ್ಡ ಆಸ್ಪತ್ರೆಗೆ ಪ್ರಜೆಗಳು ಚಂದಾ ಕೊಟ್ಟಿರುವರು, ಬಾಕಿ ಹಣವನ್ನು ಸರ್ಕಾರದವರು ಒದಗಿಸುವುದಾಗಿ ನಿಷ್ಕರ್ಷೆಯಾಗಿದೆ ಮುಂದಿನ ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗುವುದು ಬೊಂಬಾಯಿ ಗವರ್ನ್‌ಮೆಂಟಿನವರು ಮ॥ ನರೋತ್ತಮದಾಸರವರನ್ನು ಅವರು ಮಾಡಿರುವ ಧರ್ಮಕ್ಕಾಗಿ ವಂದಿಸಿದ್ದಾರೆ

ವಾಯುವ್ಯ ಸರಹದ್ದು ಪ್ರಾಂತ್ಯದ ಕೆಲವು ಇಂಗ್ಲಿಷ್ ಪ್ರಜೆಗಳನ್ನು ಸರಹದ್ದಿನ ಆಚೆ ಇರುವ ಅಫಘಾನ್ ಪ್ರಜೆಗಳು ಕೈಸೆರೆಹಿಡಿದುಕೊಂಡು ಹೋಗಿ ಹಣ ಕೊಟ್ಟರೆ ಬಿಡುತ್ತೇವೆಂದು ಹೇಳುತ್ತಿದ್ದರು ಇಂಡಿಯಾ ಸರ್ಕಾರದವರು ಅಫಘಾನಿಸ್ಥಾನದ ಅಮೀರರಿಗೆ ಈ ವಿಚಾರವನ್ನು ಬರೆದು ತಿಳಿಸಿದ್ದರ ಮೇಲೆ ಅವರು ಆ ದುಷ್ಟ ಜನರನ್ನೆಲ್ಲಾ ಹಿಡಿದು ತರಿಸಿ ದರ್ಬಾರಿನಿಂದ ಅವರಿಗೆ ಶಿಕ್ಷೆಗಳನ್ನು ವಿಧಿಸಲ್ಪಟ್ಟ ಮೇಲೆ ಅವರು ಎತ್ತಿಕೊಂಡು ಹೋಗಿದ್ದ ಹಿಂದುಸ್ಥಾನದ ಜನರನ್ನೆಲ್ಲಾ ಪಹರೆ ಇಟ್ಟು ಸುರಕ್ಷಿತವಾಗಿ ವಾಪಸು ಕಳುಹಿಸಿಬಿಟ್ಟರು ಈ ದೇಶದ ಗವರ್ನ್‌ಮೆಂಟಿನವರು ಕೈಸೆರೆ ಹಿಡಿದಿಟ್ಟುಕೊಂಡಿದ್ದ ಜೋಸ್ಟ್ ಜನರನ್ನು ಈಗ ವಾಪಸು ಅವರ ಊರುಗಳಿಗೆ ಕಳುಹಿಸುವ ಏರ್ಪಾಟು ಮಾಡಿದ್ದಾರೆಂದು ಪ್ರಕಟವಾಗಿದೆ

ಬಂಗಾಳಾದಲ್ಲಿ ವರದಕ್ಷಿಣೆಯನ್ನು ಒದಗಿಸಲಾರದೆ ಚಿಂತೆ ಪಡುತ್ತಿದ್ದ ತಂದೆತಾಯಿಗಳ ಸಂಕಟವನ್ನು ನೋಡಿ ತಾಳಲಾರದೆ ಸ್ನೇಹಲತಾದೇವಿಯೇ ಮೊದ ಲಾದ 3 4 ಮಂದಿ ಹೆಣ್ಣು ಮಕ್ಕಳು ಆತ್ಮಹತ್ಯ ಮಾಡಿಕೊಂಡರಷ್ಟೆ ಈ ವರ ದಕ್ಷಿಣೆಯ ಪದ್ಧತಿಯನ್ನೇ ತೊಡೆದುಬಿಡಬೇಕೆಂದು ಅನೇಕರು ಆ ಪ್ರಾಂತ್ಯದಲ್ಲಿ ಸಭೆಗಳನ್ನು ಮಾಡಿ, ವಿದ್ಯಾರ್ಥಿಗಳಿಂದ ವಾಗ್ದಾನಗಳನ್ನು ತೆಗೆದುಕೊಳ್ಳುತ್ತಿದ್ದರೂ ಈಗಲೂ ಆ ದುಸ್ಸ್ವಭಾವವು ಅನೇಕರನ್ನು ಬಿಟ್ಟಿಲ್ಲವೆಂದು ಕೇಳಿ ದೇಶವತ್ಸಲ ರು ದುಃಖಪಡುತ್ತಿದಾರೆ ವಿದ್ಯಾವಂತರು ಕೂಡ ಈಗಲೂ ಬಹಳ ಹೆಚ್ಚಾಗಿ ವರದಕ್ಷಿಣೆಯನ್ನು ಕೇಳುತ್ತಿರುವುದಾಗಿಯೂ, ಢಾಕಾದಲ್ಲಿ ಮದುವೆಯಾದ ಬಳಿ ಕ ಅಳಿಯನು ಹಣವನ್ನು ಹೆಚ್ಚಿಗೆ ತಗಾದೆ ಮಾಡುತ್ತಿದ್ದದ್ದನ್ನು ನೋಡಿ ಹೆಣ್ಣು ಮಗುವು ಆತ್ಮಹತ್ಯಮಾಡಿಕೊಂಡಿರುವುದಾಗಿಯೂ ಕಲ್ಕತ್ತೆಯ ಪತ್ರಿಕೆಯು ತಿಳಿಸುತ್ತಿದೆ

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ನ್ಯಾಂಗುನೇರಿ ತಾಲ್ಲೂಕು ಪೋಲೀಸಿನವರು ಕಡು ಪಟ್ಟಿ ಎಂಬ ಗ್ರಾಮದಲ್ಲಿ ಮರವರ ಕೆಲವು ಮನೆಗಳನ್ನು ಅನುಮಾನದ ಮೇಲೆ ಶೋಧನೆ ಮಾಡಿದಾಗ ಎರಡು ಗಾಡಿಗಳು ತುಂಬುವಷ್ಟು ಪಾತ್ರೆಗಳು ಸಿಕ್ಕಿದವು ಇದು ಪ್ರಕಟವಾದ ಮೇಲೆ ಅನೇಕ ಜನರು ಆ ಪಾತ್ರೆಗಳು ತಮ್ಮದೆಂದು ರುಜು ವಾತು ಕೊಟ್ಟರು ಆ ಕಳ್ಳರಾದರೋ ಆ ಪಾತ್ರೆಗಳ ಮೇಲಿದ್ದ ಮಾಲೀಕರ ಹೆಸರು ಗಳನ್ನು ಅಳಿಸಿ ತಮ್ಮ ಹೆಸರುಗಳನ್ನು ಕೆತ್ತಿಸಿಕೊಂಡಿದ್ದರು ಮ್ಯಾಜಿಸ್ಟ್ರೇಟರು ಅಪರಾಧಿಗಳ ಪೈಕಿ ತಂದೆಯಾದವನಿಗೆ 4 ವರುಷವೂ, ಅವನ ನಾಲ್ಕು ಮಂದಿ ಮಕ್ಕಳಿಗೂ, ಒಬ್ಬ ಮೊಮ್ಮಗನಿಗೂ ತಲಾ 2 ವರುಷವೂ ಕಠಿಣ ಸಜಾ ವಿಧಿಸಿರು ತ್ತಾರೆ ಮತ್ತು ಜೈಲಿನಿಂದ ಬಿಡುಗಡೆಯಾದ ಬಳಿಕ ಆ ತಂದೆಯಾದವನು ನಾಲ್ಕು ವರುಷ ಪೋಲೀಸಿನವರಿಗೆ ತನ್ನ ವಾಸಸ್ಥಳ ಮುಂತಾದದ್ದನ್ನು ತಿಳಿಸುತ್ತಿರ ಬೇಕೆಂದೂ ಆಜ್ಞೆ ಮಾಡಿದಾರೆ

ಪಂಜಾಬ್ ಗವರ್ನ್ಮೆಂಟಿನವರು ಇಂಗ್ಲಾಂಡಿನ ಒಂದು ಕಂಪನಿಯವ ರಿಗೆ ಪಂಜಾಬಿನಲ್ಲಿ ಸಿಮೆಂಟ್ ಎಂಬ ಗಾರೆಪುಡಿಯನ್ನು ತಯಾರ್ಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಪ್ರಾರಂಭಿಸಬಹುದೆಂದೂ, ಈ ಕಂಪನಿಗೆ ಒಂದುವರೆ ಲಕ್ಷ ರೂಪಾಯನ್ನು ಸರ್ಕಾರದಿಂದ ಸಹಾಯ ಮಾಡುವುದಲ್ಲದೆ ಆ ಕಾರ್ಖಾ ನೆಯಲ್ಲಿ ತಯಾರಾಗುವ ಗಾರೆಪುಡಿಯನ್ನು ಹತ್ತುವರುಷದ ತನಕ ನಿಗದಿಯಾದ ದರಕ್ಕೆ ಸರ್ಕಾರದವರು ಕೊಂಡುಕೊಳ್ಳುವುದಾಗಿಯೂ ರಿಯಾಯತಿಯನ್ನು ತೋರಿಸಿದರು ಈಗ ಉತ್ತರ ದೇಶದಲ್ಲಿ ದೇಶೀಯ ಕಾರ್ಖಾನೆಗಳು ನಾಲ್ಕು ಇದ್ದು, ಅಂಥಾ ಗಾರೆಪುಡಿಯನ್ನು ತಯಾರ್ಮಾಡುತ್ತಿವೆ ಈ ಕಂಪನಿಗಳವರು ಮೇಲ್ಕಂಡ ಇಂಗ್ಲಿಷ್ ಕಂಪನಿಯವರಿಗೆ ದೊರೆತ ಪ್ರತ್ಯಕ್ಷವಾದ ರಿಯಾಯಿತಿಗ [illegible] ದೇಶೀಯ ಕಂಪನಿಗೆ ಆ ರಿಯಾಯಿತಿಗಳನ್ನು ತೋರಿಸಿ ಪ್ರೋತ್ಸಾಹಪಡಿ ಬೇಕೆಂದೂ [illegible] ಮತ್ತು ಆ ಇಂಗ್ಲಿಷ್ ಕಂಪನಿಯವರ ಕೂಡ ಪಂಜಾಬ್ ಗವರ್ನ್ಮೆಂಟಿನವರು ಮಾಡಿಕೊಂಡಿರುವ ಕರಾರಿನ ನಕಲನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡಿ, ದೇಶೀಯ ಕಾರ್ಖಾನೆಗಳ ಯಜ ಮಾನರ ಅಭಿಪ್ರಾಯವನ್ನು ಕೇಳಿ ಇತ್ಯರ್ಥ ಮಾಡಬೇಕೆಂದೂ ಪ್ರಾರ್ಥಿಸಿ ಕೊಂಡಿದಾರೆ

ಈ ವರುಷ ದಕ್ಷಿಣ ದೇಶಕ್ಕೆ ಸೇರಿದ ಕಾಲಡಿಯಲ್ಲಿ ಶ್ರೀಶಂಕರಜಯಂತಿ ಉತ್ಸವವು ಕಳೆದ ಏಪ್ರಿಲ್ ತಾ 20 ರಿಂದ ಪ್ರಾರಂಭವಾಗಿ ಐದು ದಿನ ಉತ್ಸಾ ಹದಿಂದ ಜರುಗಿತು ನೂರಾರು ಮಂದಿ ವೈದಿಕ ಲೌಕಿಕ ದೊಡ್ಡ ಮನುಷ್ಯರೂ, ಸಾವಿರಾರು ಪ್ರಜೆಗಳೂ ಅಲ್ಲಿ ಸೇರಿದ್ದರು ವೇದಶಾಸ್ತ್ರಾದಿಗಳಲ್ಲಿ ಪರೀಕ್ಷೆಗಳೂ, ಉಪನ್ಯಾಸಗಳೂ, ಹರಿಕಥೆಗಳೂ, ಉತ್ಸವಗಳೂ, ಸಂತರ್ಪಣೆಗಳೂ ಬಹಳ ತೃಪ್ತಿಕರವಾಗಿ ನಡೆದುವು ಈ ಉತ್ಸವಗಳಿಗೆ ಹೋಗಿದ್ದ ಸುಮಾರು 5,000 ಬ್ರಾಹ್ಮಣರು ಪ್ರತಿನಿತ್ಯವೂ ಏಕವಾಗಿ ಕುಳಿತು ಸಹಿಗಳನ್ನು ನಡಿಸಿದ್ದೂ, ಭೋಜ ನಾದಿಗಳನ್ನು ಮಾಡಿದ್ದೂ ನೇತ್ರಾನಂದಕರವಾಗಿತ್ತು ಶ್ರೀ ಶೃಂಗೇರಿ ಮಠದ ಏಜಂಟರು ಬ್ರಹ್ಮಶ್ರೀ ಸದಾಚಾರ ವರ್ತನಪ್ರವೀಣ ವೇ|| ಶ್ರೀಕಂಠಶಾಸ್ತ್ರಿಗಳು ಶ್ರೀ ಶಂಕರಾಚಾರ್ಯರ ಚರಿತ್ರೆಯನ್ನೂ, ಅವರು ಬೋಧಿಸಿ ಮಾಡಿದ ತತ್ವಗ ಳನ್ನೂ ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿ, ಸಕಲರೂ ಜ್ಞಾನ ಸಂಪಾದನೆ ಮಾಡಿ ಮೋಕ್ಷಸಾಧನೆ ಮಾಡಬೇಕೆಂದು ಮುಂತಾಗಿ ಭಾಷಣ ಮಾಡಿದರು ಬಳಿಕ ಕಾಲಡಿ ವಿದ್ವತ್ ಸಭೆಯೊಂದು ಪ್ರಾರಂಭವಾಗಿ ಸಂಸ್ಕೃತ ವಿದ್ಯಾಪ್ರಚಾರಕ್ಕೆ ಹಿಂದುಸ್ಥಾನದಲ್ಲೆಲ್ಲಾ ಫಂಡನ್ನು ಎತ್ತಿ ವರುಷೇ ವರುಷ ಅಲ್ಲಿ ವಿದ್ವತ್ ಸಭೆಯನ್ನು ನಡಿಸಿ ಬಹುಮಾನಗಳನ್ನು ಕೊಡಬೇಕೆಂದು ಏರ್ಪಾ ಡಾಯಿತು ಮೈಸೂರು ಸಂಸ್ಥಾನದ ರಿಟೈರ್ಡ್ ಚೀಫ್ ಜಡ್ಜ್ ರಾಜ ಗುರುಭ ಕ್ತಕೇಸರಿ ಎ ರಾಮಚಂದ್ರಯ್ಯರವರು ಮುಖಂಡರಾಗಿ ನಿಂತು ಮೇಲ್ಕಂಡ ಉತ್ಸವಾದಿಗಳನ್ನೆಲ್ಲಾ ಬಹು ಉತ್ಸಾಹದಿಂದಲೂ, ಶ್ರದ್ಧೆಯಾಗಿಯೂ ನೆರವೇರಿ ಸಿದರು

ವಿದೇಶ ವೃತ್ತಾಂತಗಳು

ಡೆನ್ಮಾರ್ಕಿನ ರಾಜದಂಪತಿಗಳು ಕಳೆದ ಶನಿವಾರ ಲಂಡನ್ ಪಟ್ಟಣಕ್ಕೆ ಹೋಗಿ ನಮ್ಮ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ

ರಷ್ಯಾ ರಾಜ್ಯದ ಭಾರೀ ಸೈನ್ಯಾಧಿಪತಿಗಳೆಲ್ಲಾ ಸೇರಿ ಅಲ್ಲಿನ ಸೈನಿಕರಲ್ಲಿ ಹೆಚ್ಚುತ್ತಿರುವ ಕುಡುಕುತನವನ್ನು ಅಡಗಿಸುವುದಕ್ಕೆ ಉಪಾಯಗಳನ್ನು ಕುರಿತು ಚರ್ಚೆ ಮಾಡುತ್ತಿದಾರೆ

ಇಂಗ್ಲಾಂಡಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಿ ಅಲ್ಲಿ ಗವರ್ನ್ಮೆಂಟಿನವರಿಂದ ಏರ್ಪಾಡಾಗಿರುವ ಕಮಿಟಿಯವರ ಮೇಲ್ವಿಚಾರಣೆಗೆ ಒಳಪಟ್ಟಿರುವಂಥಾ ವಿದ್ಯಾ ರ್ಥಿಗಳು ಅಲ್ಲಿ ವಿದ್ಯಾಭಿವೃದ್ಧಿಗೆ ಉಂಟಾಗಿರುವ ನಾನಾ ಕಷ್ಟ ಅನನುಕೂಲಗ ಳನ್ನು ವಿವರಿಸಿ ಅಧಿಕಾರಿಗಳಿಗೆ ಬರೆದುಕೊಂಡಿದಾರೆ

ಲಂಡನ್ ಪಟ್ಟಣದಲ್ಲಿರುವ ಬ್ರಿಟಿಷ್ ಮ್ಯೂಜಿಯಂ ಎಂಬ ವಿಚಿತ್ರವ ಸ್ತುಗಳ ಶಾಲೆಯಲ್ಲಿ ಚಕ್ರವರ್ತಿಯವರು ಕಳೆದ ವಾರ ತಮ್ಮ ತಂದೆಯವರ ಹೆಸರಿನ ಮೇಲೆ ನಿರ್ಮಾಣವಾಗಿದ್ದ ಅಪೂರ್ವವಸ್ತುಗಳ ಭಾಗವನ್ನು ತೆರೆದು ಪ್ರತಿಷ್ಠೆ ಮಾಡಿದರು ಆಗ್ಗೆ ಚಕ್ರವರ್ತಿನಿಯವರೂ ಅಲ್ಲಿ ಹಾಜರಾಗಿದ್ದರು ಈ ಭಾಗಕ್ಕೆ 60 ಲಕ್ಷ ರೂಪಾಯಿ ಖರ್ಚಾಗಿದೆ

ಜರ್ಮನಿಯಲ್ಲಿ ಪ್ರಸಿದ್ಧ ಹೊಂದಿದ್ದ ಪ್ರಿನ್ಸೆಸ್ ಟ್ರಸ್ಟ್ ಎಂಬ ದೊಡ್ಡ ಬ್ಯಾಂಕು ದಿವಾಳಿಯಾಯಿತು ಈ ಬ್ಯಾಂಕು 160 ಲಕ್ಷ ರೂಪಾಯಿ ಸಾಲ ಕೊಡಬೇಕಾಗಿದೆ, ಅದರಲ್ಲಿ ಸಿಕ್ಕಿರುವ ಆಸ್ತಿಯೋ 14,62,500 ರೂಪಾ ಯಿಗಿಂತ ಹೆಚ್ಚಾಗಿಲ್ಲ ಪ್ಯಾಲಸ್ಟೀನ್ ಎಂಬ ಒಂದು ಬ್ಯಾಂಕಿಗೇ ಈ ದಿವಾಳಿ ಬ್ಯಾಂಕಿನಿಂದ 11½ ಲಕ್ಷ ರೂಪಾಯಿ ಸಲ್ಲಬೇಕಾಗಿದೆ

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರಸಭೆಯು ಕೆಲವು ಹಿಂದೂ ಮಹಮದಿಯ ಪ್ರತಿನಿಧಿಗಳು ಹಿಂದುಸ್ಥಾನದ ರಾಜಕೀಯ ವಿಚಾರಗಳ ನ್ನು ಕುರಿತು ಸ್ಟೇಟ್ ಸೆಕ್ರೆಟರಿಯವರ ಕೂಡ ಚರ್ಚೆ ನಡಿಸಬೇಕೆಂದು ಸೀಮೆಗೆ ಹೋಗಿದಾರೆ ಸ್ಟೇಟ್ ಸೆಕ್ರೆಟರಿ ಲಾರ್ಡ್ ಕ್ರೂರವರು ಮೊನ್ನೆ ಸೋಮವಾರ ಈ ಪ್ರತಿನಿಧಿಗಳಿಗೆ ಭೇಟಿ ದಯಪಾಲಿಸುವಂತೆ ನಿಷ್ಕರ್ಷೆಯಾಗಿತ್ತು

ಇಂಗ್ಲಾಂಡಿನಲ್ಲಿ ಮ್ಯುನಿಸಿಪಾಲಿಟಿಗಳಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕು ಪಡೆದಿರುವಂಥಾ ಸ್ತ್ರೀಯರಿಗೆ ಪಾರ್ಲಿಮೆಂಟ್ ಮೆಂಬರ ಚುನಾವಣೆಯ ಹಕ್ಕನ್ನು ಕೊಡಬಹುದೆಂಬ ಅರ್ಥಕ್ಕೆ ಲಾರ್ಡ್ ಸೆಲ್ಬೋರ್ನ್ರವರು ಒಂದು ಮಸೂದೆ ಕಾನೂನನ್ನು ರಚಿಸಿ ಚರ್ಚೆಗೆ ಇಟ್ಟಿದ್ದರು ಪಾರ್ಲಿಮೆಂಟಿನಲ್ಲಿ ಮೆಂಬರುಗಳು ಈ ಮಸೂದೆ ಕಾನೂನು ಅವಶ್ಯವಿಲ್ಲವೆಂದು ಕಳೆದ ಬುಧವಾರ ತಿರಸ್ಕಾರ ಮಾಡಿಬಿಟ್ಟರು

ಚಕ್ರವರ್ತಿ ಸಾರ್ವಭೌಮರ ಬಳಿ ಯಾವಾಗಲೂ ಹಿಂದುಸ್ಥಾನದ ನಾಲ್ಕು ಮಂದಿ ದೇಶೀಯ ಸಿಪಾಯಿಗಳು ಪಹರೆ ಇರುತ್ತಾರೆ ಇಂಡಿಯಾ ಗವರ್ನ್ಮೆಂ ಟಿನವರು ಅಂಥವರನ್ನು ಎರಡು ವರುಷಗಳಿಗೊಂದಾವರ್ತಿ ಚುನಾಯಿಸಿ ಸೀಮೆಗೆ ಕಳುಹಿಸಿ, ಹಿಂದೆ ಅಲ್ಲಿದ್ದವರನ್ನು ವಾಪಸು ಕರಸಿಕೊಳ್ಳುವರು ಹಿಂದುಸ್ಥಾನ ದಿಂದ ಹೋದ ನಾಲ್ವರು ಹೊಸ ಆರ್ಡರ್ಲಿಗಳನ್ನು ಹಿಂದಿನ ಮಂಗಳವಾರ ಲಂಡನ್ ಪಟ್ಟಣದಲ್ಲಿ ಚಕ್ರವರ್ತಿಯವರು ಅಂಗೀಕರಿಸಿದರು

ಸಯಾಂ ರಾಜ್ಯದಲ್ಲಿ ರೈಲ್ ರಸ್ತೆಗಳ ಬಡಾವಣೆಗಾಗಿ ಸಾಮಾನುಗಳು ಬೇಕೆಂದು ಕಂಟ್ರಾಕ್ಟು ಕೇಳಿದರು ಜರ್ಮನಿ, ಅಮೇರಿಕ, ಬೆಲ್ಜಿಯಂ, ಇಂಗ್ಲಾಂಡ್ ಮುಂತಾದ ರಾಜ್ಯಗಳ ಕಾರ್ಖಾನೆಗಳವರು ಟೆಂಡರುಗಳನ್ನು ಹಾಕಿ ದ್ದರು ಸಯಾಂ ಸರ್ಕಾರದವರು ಇಂಗ್ಲಿಷ್ ಕಾರ್ಖಾನೆಯವರ ಅಂದಾಜಾ ಪಟ್ಟಿಯನ್ನೇ ಅಂಗೀಕರಿಸಿ, ನಾಲ್ವತ್ತಮೂರು ಭಾರೀ ಸೇತುವೆ ಕಟ್ಟುವ ಸಾಮಾ ನುಗಳನ್ನು ತಯಾರ್ಮಾಡಿ ಕಳುಹಿಸುವಂತೆ ಸ್ಯಾಂಕ್ಷನ್ ಮಾಡಿದಾರೆ ಇದುವರೆಗೆ ಜರ್ಮನಿಯ ಕಾರ್ಖಾನೆಗಳಿಂದ ಇಂಜಿನ್‌ಗಳೂ, ವಾಗನ್‌ಗಳೂ ಸಯಾಮಿಗೆ ಅನೇಕವಾಗಿ ಬಂದಿರುತ್ತವೆ

ಮಾರ್ಸೇಲ್ಸ್ ಪಟ್ಟಣದಲ್ಲಿ ಲೂಯಿ ಆಂಡ್ರ್ಯೂ ಎಂಬೊಬ್ಬ ಕ್ರೂರಾತ್ಮನು ಬಾರ್ಮಾಡಿದ ಪಿಸ್ತೂಲನ್ನು ಹಿಡಿದು ಒಂದು ಮನೆಯನ್ನು ಪ್ರವೇಶಿಸಿ ಮನೆ ಯೊಳಗಿದ್ದವರನ್ನು ಕೊಂದುಬಿಡುತ್ತೇನೆಂದು ಗಾಬರಿಪಡಿಸಿ ನಗನಾಣ್ಯಗಳನ್ನು ಎತ್ತಿಕೊಂಡು ಹೋಗುತ್ತಿದ್ದನು ಹನ್ನೆರಡು ವಯಸ್ಸಿನ ಒಬ್ಬ ಹುಡುಗಿ ಅಷ್ಟ ರೊಳಗೇ ಒಂದು ಡಬ್ಬಿ ನಶ್ಯದ ಪುಡಿಯನ್ನು ತಂದು ಆ ಕಳ್ಳನ ಮುಖಕ್ಕೆ ಎಸೆದಳು ನಶ್ಯದ ಪುಡಿಯು ಅವನ ಕಣ್ಣುಗಳಿಗೆ ಬಿದ್ದಾಗ ಅವನು ಅತಿತೀ [illegible]

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security required from each Agent is Rs 50 For particulars see in person or apply to

Messrs VENKATACHALAM & SONS,
Chief Agents,
Hindustan Co operative Insurance Society Ltd
166, Dodpet, Near Old Taluk Cutchery,
243 25 *MYSORE*

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘಾ ಲಿ

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87 00,000

ಈ ಕಂಪೆನಿಯಲ್ಲಿ ಪಾಲಿಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯ ನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನ್ಮೆಂಟಿನ ಜೀವ ವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿ ಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರು ಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಮುಟ್ಟೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ

ಜೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [213 25]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಒಳ್ಳೇ ಸಮಯ ! ಹೆಚ್ಚು ಖರ್ಚಾಗಿಕೊಂಡಿವೆ !! ನಂತರ ದೊರೆಯಲಾರವು !!!

ಮೇಲಾದ ಜರ್ಬಾಕ್ ರೇಷ್ಮೆ ಪಂಚೆಗಳು.

ಅನೇಕ ಪಂಚೆಗಳು ದಿನವೂ ಖರ್ಚಾಗಿ ಕೊಂಡಿರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ ವಾಚಕರೇ ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆ ಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ಆಗಿಕೊಂಡಿರುವದ್ದರಿಂದ ವ್ಯ ಶ್ಯಾಲು ಶಾಲು ಸರಕು ಖರ್ಚಾಗಿಹೋಗಿರುತ್ತೆ ಈಗ ಸ್ವಲ್ಪವೇ ಉಳಿದಿರುತ್ತೆ ಇದರ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳ ಒಪ್ಪು ವ ಅಪೂರ್ವವಾದ ಪಂಚೆಗಳು ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘ ವರ್ಣ, ಇತ್ಯಾದಿ ರಂಗುಗಳುಳ್ಳ ಬಹಳ ಉತ್ಕೃಷ್ಟವಾದ ಪಂಚೆಗಳು

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ 3 ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ

ನಮ್ಮ ವಿಳಾಸ—ಎಲ್ ಎಂ ಸ್ವಾಮಿ ಅಂಡು ಕಂಪೆನಿ,
[103] ನಂ 41, ನಂಬುಳಯ್ಯರ್ ಬೀದಿ, ಮದರಾಸು

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ

ಅಡ್ಡಿಗೆಯ ಮಾದರಿಯನ್ನು ನೋಡಬೇಕೆಂದು ಬರಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ

ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾ ಗಿ ಹೂವುಗಳನ್ನು ಮತ್ತು ಕುಸುರುಗಳನ್ನು ಇಟ್ಟು ಗಟ್ಟಿಯಾಗಿ ಅದರಮೇಲೆ

ಮುಲಾಮನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯಕಾರಕವಾ ಗಿ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ ಇದು ಗಟ್ಟಿ ಮಣಿಗಳಲ್ಲ ನಿಜವಾದ ಗಟ್ಟಿ ಗೆಜ್ಜೆಗಳು ಸ್ತ್ರೀಯರಿಗೂ [illegible] ಗಿಯರಿಗೂ ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಕ್ಕಾದದ್ದು ಅನೇಕರು ಸುಳ್ಳು ಪ್ರಕಟನೆಗಳನ್ನು ಪ್ರಕಟಿಸಿ ಜನಗಳಲ್ಲಿ [illegible] ಕೆಯನ್ನು ಕೆಡಿಸಿಕೊಂಡಿರುವದರಿಂದ ನಮ್ಮಲ್ಲಿ ಜನಗಳಿಗೆ [illegible] ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ ಕಾಲಕ್ರಮೇಣ ಅಡ್ಡಿಗೆಯ ರಂಗು ಸ್ವಲ್ಪ ಕಮ್ಮಿಯಾದರೆ ಚಿನ್ನದ ಮುಲಾಮನ್ನು ಅಡ್ಡಿಗೆಯ ಮೇಲೆ [illegible] ದರೆ ಪುನಃ ಚಿನ್ನದಂತಾಗುವ 1 ಡಬ್ಬಿ ಮುಲಾಮನ್ನು ಅಡ್ಡಿಗೆಯ ಸಂಗಡ ಉಚಿತವಾಗಿ ಕಳುಹಿಸುತ್ತೇವೆ [1042]

ವಿಳಾಸ—ಎಸ್ ಎನ್. ಮೂರ್ತಿ, ತಿರುವಲ್ಲಿಕೇಣಿ, ಮದರಾಸು.

ಜೈಕರವರ ಸ್ವದೇಶೀ ಬಾಮ್.

ರಿಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, [illegible] ನೋವು, ಶೀತ, ಸೆಳೆತ, ಬೆನ್ನುನೋವು, ಊದು, ಕೆಮ್ಮು, ಎದೆನೋವು [illegible]

ನೋವು, ಚಳುಕು, ಚೇಳುಕಡಿತ, ಕೈಕಾಲು [illegible] ಕೀಲುಗಳ ನೋವು, ಉರಿ, ಸುಟ್ಟಗಾಯ [illegible] ಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸು ತ್ತದೆ ವಿದ್ಯಾರ್ಥಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇ ಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಯ್ತಗಳಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಪ್ರವಾಗಿಲ್ಲ ಯೂರೋಪ್ ಇಂಡಿಯಾ, ಅಮೆರಿಕಾ ದೇಶಗಳಲ್ಲಿ [illegible]

[illegible] ವೈದ್ಯಶಾಸ್ತ್ರಗಳಲ್ಲಿ [illegible] ದಪ್ಪ ಬಾಟ್ಲಿ [illegible] ದಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ 1 ಕ್ಕೆ ರೂ 1 14 0 ವಿ ಪಿ ಚಿಲರೆ ನಮ್ಮ ಎಲ್ಲಾ ಔಷಧಿಗಳ ಕ್ಯಾಟಲಾಗನ್ನೂ ಬರೆದು ತರಿಸಿಕೊಳ್ಳಿ [25 17]

ವಿಳಾಸ—ಟಿ ಗುಲಾಬ್ ಚಂದ್ ಪೋವಾರ್,
60 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ ಸ್ಟಿನ ನೋಟ್ಸು —ಕ್ರಯ 6 ಆಣೆ

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3 50 ಕ್ಕೆ 8 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಚೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ ಕ್ರಯ 2 ಆಣೆ [49 13]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ ಡಿಟೋ 4 ನೇ ಪುಸ್ತಕದ ನೋಟ್ಸು 1½ ಆಣೆ ಡಿಟೋ 5 ನೇ ಪುಸ್ತಕದ ನೋಟ್ಸು 1 ಆಣೆ ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ Notes on "Tanglewood Tales," English Lower Secondary Text for 1915—As 3 Notes on Fairy Tales—As 2

ನಮ್ಮ ವಿಳಾಸ —ಯನ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು

ಬಿ ವಿ. ಪಂಡಿತರ ಸಿದ್ಧೌಷಧಗಳು

ನೇತ್ರರೋಗಾಂಜನ —ವಂಶಪಾರಂಪರ್ಯವಾಗಿ ಕೇವಲ ರಹಸ್ಯದಿಂದ ಉಪದೇ ಶಿಸಲ್ಪಟ್ಟಿದ್ದು ಖಂಡಿತವಾಗಿಯೂ ಇಂಥಹ ಅಂಜನವನ್ನು ನೋಡಿರಲಾರಿರಿ ಸ್ವಲ್ಪವೂ ಉರಿಯನ್ನುಂಟುಮಾಡದೆ ಕಣ್ಣುಗಳಲ್ಲಿನ ಕೆಟ್ಟ ನೀರನ್ನು ಸುಲಭವಾ ಗಿ ಈಚೆಗೆ ಹೊರಡಿಸಿ ಸಮಸ್ತ ವಿಧವಾದ ತಲೆನೋವು, ತಲೆಭಾರ, ಕಣ್ಣುರಿಗಳ ನ್ನು ತಕ್ಷಣ ಪರಿಹರಿಸಿ ಕಣ್ಣುಗಳು ಬಹಳ ಹೊತ್ತು ತಣ್ಣಗಿರುವಂತೆ ಮಾಡಿ ರಾತ್ರಿ ಸುಖವಾಗಿ ನಿದ್ರೆಬರುವಂತೆ ಮಾಡುವುದು ಕಣ್ಣುಮಂಜು ರೆಪ್ಪೆಭಾರ, ಕಣ್ಣುನೋವು, ದುರ್ಮಾಂಸಗಳನ್ನು ಬಾತರಿ ಗುಣಪಡಿಸುತ್ತದೆ—ಬೆಲೆ ಸೀಸೆ 1 ಕ್ಕೆ 0 1 0 ಸ್ತ್ರೀಶಿಶು ಕಸ್ತೂರಿಮಾತ್ರೆ—ಮಕ್ಕಳ ಸಮಸ್ತ ರೋಗಗಳಿಗೂ— ಬಾಲರೋಗಗಳಿಗೆ ಉಪಯೋಗಿಸುವುದಲ್ಲದೆ, ಅಜೀರ್ಣ ಮತ್ತು ಜಲದೋಷ ಗಳಿಗೂ ಸರ್ವೋತ್ತಮವಾದುದು ಬೆಲೆ—20 ಮಾತ್ರೆ ಉಳ್ಳ ಸೀಸೆಗೆ 0-4-0 ಅಮೋದಿನ—ಸಂಗೀತಗಾರರಿಗೆ ಅತ್ಯಾವಶ್ಯಕವಾದುದು ಬಾಯಿನ ದುರ್ಗಂ ಧ, ಒಣಕೆಮ್ಮು, ಶರೀರದ ಆಯಾಸ ಕೆಮ್ಮು ಉಬ್ಬಸಗಳನ್ನು ತಕ್ಷಣ ಪರಿಹರಿ ಸುವುದು ಬೆಲೆ 150 ಮಾತ್ರೆಯ ಸೀಸೆಗೆ 0-4 0 ದಂತಧಾವನಚೂರ್ಣ—ಸುವಾ ಸನೆಯಾಗಿರುವ ಈ ಚೂರ್ಣವನ್ನು ನಿತ್ಯವೂ ಉಪಯೋಗಿಸಿದರೆ ಹಲ್ಲು ಸಂಬಂಧ ವಾದ ಯಾವ ರೋಗಗಳಿಗೂ ಅವಕಾಶವಾಗದೆ ಹಲ್ಲುಗಳು ಬಿಳುಪಾಗಿಯೂ ಗಟ್ಟಿ ಯಾಗಿಯೂ ಆಗುತ್ತವೆ ಆರು ಪಟ್ಟಣಗಳಿಗಿಂತ ಕಡಮೆ ಕಳುಹಿಸಲಾಗದು ಬೆಲೆ ಪೊಟ್ಟಣ 1 ಕ್ಕೆ 0 1 0 1 ನೇ ನಂಬರು ಚೂರ್ಣದಿಂದ ರಕ್ತಸೋರುವುದು ಹಲ್ಲು ಡುನೋವು, ಛಳುಕು, ಕ್ರಿಮಿಗಳು ಒಂದೇ ದಿನದಲ್ಲಿ ಗುಣವಾಗುತ್ತವೆ ಬೆಲೆ ಸೀಸೆ 1 ಕ್ಕೆ 0 1 0 ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆ ತರಿಸಿದರೂ ಒಂದು ಇನಾ ಮು ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ ಟಿ ಪಿ ಪ್ರತ್ಯೇಕ [230-29]

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

ಸುಧಾರಿಸಿದ ವ್ಯವಸಾಯ ಪದ್ಧತಿಯ ಮೇಲೆ ಒಬ್ಬ ಸ್ವಂತ ಬೇಸಾಯಗಾರರ ಭಾಷಣ

ಮೊನ್ನೆ ೩ನೇ ಹರಿಹರದಲ್ಲಿ ನಡೆದ ಪ್ರಸಿದ್ಧವಾದ ದನಗಳ, ವ್ಯವಸಾಯದ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೆಂಬರ ಡೆಪ್ಯುಟಿ ಕಮಿಷನರ್ ಸಾಹೇಬರು ಆದಿಯಾಗಿ ಸರ್ಕಾರಿ ದೊಡ್ಡ ದೊಡ್ಡ ಅಧಿಕಾರಿಗಳೂ, ಈ ಪ್ರಾಂತ್ಯದ ಅನೇಕ ಸಹಸ್ರ ರೈತರು ಸಹ ಸೇರಿದ್ದರು ಅಲ್ಲಿ ಕೂಡಿದ್ದ ಈ ಸಭೆಯ ಅಗ್ರಾಸನವನ್ನು ಚಿತ್ರದುರ್ಗದ ಸಬ್ ಡಿವಿಜನ್ ಆಫೀಸರವರಾದ ಮ|| ರಾಮಚಂದ್ರರಾಯರವರು ವಹಿಸಿದ್ದರು ಆಗ್ಗೆ ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ಜಮೀನುದಾರರಾದ ಮ|| ಎನ್ ಸಿದ್ಧಲಿಂಗಯ್ಯದೇವರು ಸುಧಾರಿಸಿದ ವ್ಯವಸಾಯ ಪದ್ಧತಿಯ ಮೇಲೆ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು

ಅವರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಹನ್ನೆರಡು ವರುಷದ ತಮ್ಮ ಸ್ವಂತ ಬೇಸಾಯದ ಕಸಬಿನ ಅನುಭವದ ಫಲರೂಪವಾದ ಅನೇಕ ಅಮೂಲ್ಯ ಸೂಚನೆಗಳನ್ನ ಮಾಡಿದರು ವ್ಯವಸಾಯವು ಇತರ ಎಲ್ಲಾ ಕಸಬುಗಳಿಗಿಂತಲೂ ಸರ್ವಶ್ರೇಷ್ಠವಾದದ್ದು ಮತ್ತು ದೇಶದ ಏಳಿಗೆಗೆ ನಮ್ಮ ರೈತಪ್ರಜೆಗಳೇ ಮೂಲಾಧಾರರಾಗಿರುತ್ತಾರೆ ಎಂಬುವದನ್ನು ಸಿದ್ಧಾಂತಪಡಿಸಿದರು ಆದರೆ ನಮ್ಮ ರೈತರು ವ್ಯವಸಾಯದ ಪ್ರಾಥಮಿಕ ಜ್ಞಾನದಲ್ಲಿ ಸಹ ಅಜ್ಞರಾಗಿರುವರೆಂಬ ವ್ಯಸನಕರವಾದ ಅವರ ಹೀನಸ್ಥಿತಿಯನ್ನೂ ಸಹ ವಿವರಿಸಿ ಹೇಳಿದರು. ನಮಗಿಂತಲೂ ಎಲ್ಲಾ ವಿಧದಲ್ಲೂ ನಮ್ಮ ಕಸಬಿನಲ್ಲಿ ಮುಂದುವರಿದಿರುವ ಪಾಶ್ಚಾತ್ಯರ ಸುಧಾರಿಸಿದ ಶಾಸ್ತ್ರೀಯವಾದ ವ್ಯವಸಾಯ ಪದ್ಧತಿಗಳನ್ನೂ, ಉಳುವುದರ ಮುಖ್ಯ ಉದ್ದೇಶವನ್ನೂ, ಹೊಸ ತರಹೆಯ ಇಂಗ್ಲಿಷ್ ನೇಗಲಿಗೂ ನಮ್ಮ ನಾಡು ನೇಗಲಿಗೂ ಇರುವ ವ್ಯತ್ಯಾಸ ಮತ್ತು ಅವುಗಳಿಂದ ಆಗುವ ಕೆಲಸಗಳನ್ನೂ ಸಹ ವಿವರಿಸಿದ್ದಲ್ಲದೆ ನಮ್ಮ ರೈತರು ಅವರ ಮೇಟ್ಮಿಯ ಸಲುವಾಗಿ ಉಳುವ ನೇಗಲನ್ನಾದರೂ ಅವರು ಬದಲಾಯಿಸಿಕೊಂಡೇ ತೀರಬೇಕೆಂದು ಸಾಧಿಸಿದರು ಗೊಬ್ಬರದ ಸಾರವು ಕೆಡದಂತೆ ಕೂಡಿಹಾಕುವ ವಿಧಾನವನ್ನೂ, ಅದನ್ನು ಉಪಯೋಗಿಸುವ ಸಂದರ್ಭವನ್ನೂ, ದನಗಳ ಗಂಜಲದ ಶ್ರೇಷ್ಠತ್ವವನ್ನೂ, ಅದನ್ನು ಶೇಖರಿಸುವ ವಿಧಾನಗಳನ್ನೂ ಸಹ ವಿವರಿಸಿದರು ಅಲ್ಲದೆ ಬಿತ್ತುವ ಬೀಜಗಳನ್ನೂ, ಚುನಾವಣೆ ಮಾಡುವ ಪದ್ಧತಿ, ಬೆಳೆಗಳನ್ನು ಬದಲಾಯಿಸುವದರ ಉಪಯೋಗ, ಕಬ್ಬನ್ನು ಹೆಚ್ಚಾಗಿ ಬೆಳೆದು ಬೆಲ್ಲವನ್ನು ಉತ್ತಮವಾದ ರೀತಿಯಲ್ಲಿ ಮಾಡುವ ವಿಧಾನ, ಕ್ಷೇತ್ರದ ಬೆಳೆಯನ್ನು ಹುಲುಸಾಗಿ ಬೆಳೆಯಬೇಕಾದರೆ ಅನುಸರಿಸಬೇಕಾದ ಕ್ರಮಗಳು, ತಡಗಣೆ, ಅವರೆ, ಹುರುಳಿ, ಮೊದಲಾದ ದ್ವಿದಳ ಧಾನ್ಯಗಳ ಪೈರುಗಳು ಸಸಿ ಸೊಸಗಳ ಗೊಬ್ಬರದ ಭೂಸಾರ ಪದಾರ್ಥವನ್ನು ಹೇಗೆ ಹೆಚ್ಚಿಸುತ್ತವೆ ಎಂಬುವದನ್ನೂ, ಅಲ್ಲಲ್ಲೇ ವ್ಯವಸಾಯದ ಸಂಘಗಳನ್ನು ಸ್ಥಾಪಿಸುವದರ ಆವಶ್ಯಕತೆ, ಇವೇ ಮೊದಲಾದ ವ್ಯವಸಾಯ ಸುಧಾರಣೆಯ ಮೇಲಿನ ಅನೇಕ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಸಭಿಕರ ಮನಮುಟ್ಟುವಂತೆ ಮುಕ್ಕಾಲು ಗಂಟೆ ಪರಿಯಂತರವೂ ದೀರ್ಘವಾದ ಭಾಷಣವನ್ನು ಮಾಡಿದರು ವಿದ್ಯೆಯ ಕೊರತೆಯೂ, ನಿರುತ್ಸಾಹವೂ, ದಾರಿದ್ರ್ಯವೂ, ಐಕಮತ್ಯದ ಅಭಾವವೂ ಸಹ ನಮ್ಮ ರೈತರ ಅವನತಿಗೆ ಮುಖ್ಯ ಕಾರಣಗಳೆಂದು ಉಪನ್ಯಾಸಕರು ಸೂಚಿಸಿದರು

ಅವರ ಉಪನ್ಯಾಸವು ಸುಬೋಧವಾಗಿಯೂ, ಸಭಿಕರ ಮನಸ್ಸಿಗೆ ಚೆನ್ನಾಗಿ ನಾಟುವ ಹಾಗೆ ಸುಲಲಿತವಾಗಿಯೂ ಇದ್ದುದರಿಂದ ಈ ಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರವರಾದ ಮೆ|| ಡೆಪ್ಯುಟಿ ಕಮಿಷನರ್ ಸಾಹೇಬರವರು ಉಪನ್ಯಾಸಕರಾದ ಮ| ದೇವರವರಿಗೆ ಮೊದಲನೆಯ ಬಹುಮಾನ ಪತ್ರಿಕೆಯನ್ನು ಬಹು ಸಂತೋಷದಿಂದ ದಯಪಾಲಿಸಿದರು

ಅನಂತರ ಮ| ದೇವರವರು ಪ್ರಮುಖ ರೈತರ ಪ್ರಾರ್ಥನೆಯ ಪ್ರಕಾರ ಶಿಮೊಗ್ಗದಲ್ಲಿ ಕಡೂರು ಡಿಸ್ಟ್ರಿಕ್ಟ್ ಸಬ್ ಡಿವಿಜನ್ ಆಫೀಸರವರಾದ ಮ| ವಿ. ಟಿ. ಕೇಶವಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಈ ವಿಷಯದ ಮೇಲೆಯೇ ಸ್ವಾರಸ್ಯವಾದ ಮತ್ತೊಂದು ಭಾಷಣವನ್ನು ಮಾಡಿದರು ಅಲ್ಲದೆ ಚಿತ್ರದುರ್ಗ, ದಾವಣಗೆರೆ ಟೌನುಗಳಲ್ಲಿ ಸಹ ಇವರು ತಮ್ಮ ಉಪನ್ಯಾಸಗಳಿಂದ ವ್ಯವಸಾಯಗಾರರ ಅಜ್ಞಾನವನ್ನು ಹೋಗಲಾಡಿಸಿ ಅವರ ಪೂರ್ಣಪ್ರೀತಿಗೆ ಪಾತ್ರರಾದರು

ನಮ್ಮ ಬೇಸಾಯಗಾರರ ಪುರೋಭಿವೃದ್ಧಿಗಾಗಿಯೇ ಈ ಪ್ರಕಾರ ಉಪನ್ಯಾಸಗಳನ್ನು ಮಾಡುತ್ತ ತಮ್ಮ ಅಮೂಲ್ಯವಾದ ಕಾಲವನ್ನು ಕಳೆಯಲು ಸಿದ್ಧರಾಗಿರುವ ನಿಪುಣ ರೈತರಾದ ಮ ದೇವರವರ ಶ್ಲಾಘ್ಯವಾದ ಸದುದ್ದೇಶವನ್ನು ಶ್ರೀ ಜಗದೀಶನು ಈಡೇರಿಸಲೆಂದೂ, ಅಪ್ರಾರ್ಥಿತವಾಗಿ ಲಭ್ಯವಾಗಿರುವ ಈ ಸುಸಮಯವನ್ನು ನಮ್ಮ ರೈತಪ್ರಜೆಗಳು ಸಾರ್ಥಕ್ಯ ಮಾಡಿಕೊಳ್ಳದಿರಲಾರರೆಂದೂ ಮನಃಪೂರ್ವಕವಾಗಿ ಆಶಿಸುತ್ತೇನೆ

ಜಿ ಎಚ್ ನರಸಿಂಗರಾವ್, ದಾವಣಗೆರೆ

ಕೈಕೆಲಸದ ಔಷಧಶಾಲಾ.

ಎಂಥಾ ದೊಡ್ಡ ವ್ಯಾಧಿಗಳಿಗೂ ನಮ್ಮಲ್ಲಿ ಔಷಧವುಂಟು.

ಗುಣವಾಗುತ್ತದೋ ಇಲ್ಲವೋ ನಮ್ಮ ಕ್ಯಾಟಲಾಗನ್ನು ನೋಡಿ ಒಂದು ದಫ ಔಷಧ ಸೇವನೆಮಾಡಿದರೆ ತಮಗೇ ತಿಳಿದುಬರುವುದು ಅನೇಕರು ನಮ್ಮ ಔಷಧ ಸೇವನೆಮಾಡಿ ಶೀಘ್ರವಾಗಿ ಗುಣಹೊಂದಿ ನಮಗೆ ಸರಟಿಫಿಕೇಟು ಕೊಟ್ಟಿದ್ದಾರೆ ಪರೀಕ್ಷಿಸಬಹುದು ಕ್ಯಾಟಲಾಗನ್ನು ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪು ಕಳುಹಿಸಬೇಕು ಆಯುರ್ವೇದಪಂಡಿತರು ಕೈವ ಟ ಯಸ್ ಇಂಡೋಫಾಲಸಿ, 167, ಕೇವಲರ ರೋಡು, ಬೆಂಗಳೂರು ದಂಡು [93 3]

Full Notes and Examiner on L. S. E Texts (1915)—Both Tanglewood and Fairy Tales, with Author's life, meanings, explanations, summaries, constructions and questions. Price Annas 5 English Papers —Subscription Re 1¼ only Special copy As 6 Spelling Book As 4 (Postage extra)

Apply to, M N Sitarama Rao,

[100 3] Krishnaraja Mohalla, Mysore

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವಾಗಿವೆಯೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 5-20

(ಸ್ಕಾಟ್ಸ್ ಇಮಲ್ಶನ್)

Always get the Emulsion with this mark—the Fishman—the mark of the "Scott" process!

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರೆಯುತ್ತದೆ

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ; ಎದೆ ಕಲ್ಲಿನಿಸುವುದು, ತಲೆನೋವು, ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋದ್ರವ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-38]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ೬ ೭ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ದಿ ಜನರಲ್ ಏಜನ್ಸಿ, ಮೈಸೂರು.

ದೇಶಭಾಷಾ ಪಾಠಶಾಲೆಗಳನ್ನು ಉತ್ತಮಸ್ಥಿತಿಗೆ ತರಲು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಡಿಸೆಂಬರ್ 31, 27 ನೆ ಜನವರಿ 1914 ರಲ್ಲಿ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿರುತ್ತಾರೆ ಇವೆಲ್ಲವೂ ನಮ್ಮಲ್ಲಿ ಸಿಕ್ಕುವವು—ಕಿಂಡರ್‌ಗಾರ್ಟನ್ ಕ್ರಮ 1 4-0, ಪಂಚತಂತ್ರ 0-8-0, ಕಥಾಮಂಜರಿ 0 6-0, ಕಥಾವಳಿ 0-5 6, ರಾಬಿನ್‌ಸನ್ ಕ್ರೂಸೋವಿನ ಸಾಹಸಕಾರ್ಯ 0-1-0, ಗಲಿವರನ ದೇಶಸಂಚಾರ 0 3-0, ಅಲ್ಲಾವುದೀನ್ ಅದ್ಭುತದೀಪ 0-5-0, ಸಿಂದಬಾದ್ ನಾವಿಕ 0-4-0, ಈಸೋಪನ ನೀತಿಕಥೆಗಳು 0-4 0. ಇವುಗಳನ್ನು ಮಕ್ಕಳ ವಿದ್ಯೆಯಲ್ಲಿ ಆಸಕ್ತಿಯುಳ್ಳ ತಂದೆತಾಯಿಗಳು ಅಗತ್ಯ ಕೊಂಡು ಕೊಡಬೇಕು 1915 ನೆಯ ಲೋವರ್ ಸೆಕೆಂಡರಿ ಕನ್ನಡ, ಇಂಗ್ಲಿಷ್ ಗ್ರಂಥಗಳು, ನೋಟ್ಸ್, ಎಲ್ಲಾ ಸ್ಕೂಲ್ ಪುಸ್ತಕಗಳು ಸಿಗುತ್ತವೆ [23-18]

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ

« ನಿರುಪಮಾ » ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ ಕ್ರಯ 12 ಆಣೆ « ಕುಮುದಿನೀ » ಬಂಗಾಳಿಯ ನಾವೆಲಿನ ಭಾಷಾಂತರ, ಪತ್ತೇದಾರಿಯ ಕಥೆ ಕ್ರಯ 6 ಆಣೆ « ಸಂತಾಪಕ » ಮನೋಹರವಾದ ನವೀನ ಕಾದಂಬರಿ ಎಲ್ಲರೂ ಅಗತ್ಯವಾಗಿ ಓದಬೇಕಾದುದು ಕ್ರಯ 4 ಆ « ಮಹಾರಣ್ಯಪುರಾಧಿಪತ್ಯ » 4 ಆ « ಪರಲೋಕ ರಹಸ್ಯ » 2 ಆ « ಕಲಹಪ್ರಿಯಾಪ್ರಹಸನ » 2 ಆ « ಯೋಗನಿದ್ರಾ ಪ್ರಹಸನ » 2 ಆಣೆ —ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ

[260-22] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ನೀವು ಕಳೆದುಕೊಳ್ಳುವಿರೋ? [86-34]

ತರಿಸಿಕೊಳ್ಳುವ ಈ ಸಮಯವನ್ನು

ಕೇಶಕುಸುಮಾಕರ ಕೂದಲೆಣ್ಣೆ.

ಮೂರು ದಿನಗಳಿಗಾಗು ವಷ್ಟು ನಿಮ್ಮ ಬಾಗಿಲ ಬಳಿಗೆ ಪುಗಸಟ್ಟೆ ಕಳುಹುತ್ತೇ.

ಈ ಕೂದಲೆಣ್ಣೆಯು ಅತ್ಯಂತ ಅಪೂರ್ವವಾದ ಒಳ್ಳೆ ಗುಣಗಳನ್ನೂ ಸುಗಂಧವನ್ನೂ ಪಡೆದದ್ದಾಗಿದೆ 30 ದಿನಗಳಿಗಾಗುವಷ್ಟು ತೈಲವುಳ್ಳ ಶೀಸೆ 1 ಕ್ಕೆ ಕ್ರಯ

ಹತ್ತು ಆಣೆ ಮಾತ್ರ,

ಪೋಸ್ಟೇಜ್ ಬೇರೆ.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ, 177 ಚೀನಾ ಬಜಾರ್ ರೋಡ್, ಮದ್ರಾಸು.

ಒಂದುವೇಳೆ ನಿಮ್ಮ ಮಗು ರಾತ್ರಿಯಲ್ಲಿ ಶ್ವಾಸನಾಳ ಕಟ್ಟಿಕೊಂಡದ್ದರಿಂದ ಗಂಟಲೂ ಎದೆಯೂ ಭಾರವಾಗಿ ಎಚ್ಚರವಾಗಬಹುದು ಅದರಿಂದ ಅದಕ್ಕೆ ಗಂಟಲು ಕಟ್ಟಿಹೋಗಿ ಕೊರಳು ಹಿಸುಕಿದಂತೆ ಆಗಿ ಉಸುರು ಕಟ್ಟಿದಂತಾಗುವದು ತಡಮಾಡಿ ಹಾನಿ ಹೊಂದಲಾಗದು. ತಕ್ಷಣದ ಬಿಡುಗಡೆ ಹತ್ತಿರವೇ ಇದೆ

ನ್ಯೂ ಜರ್ಸಿಗೆ ಸೇರಿದ ನ್ಯೂಗಟ್ಲೌವಿನ ಮಿಸ್ಟ್ರೆಸ್ || ಜೆ. ವಿಲ್ಕಾಕ್ಸ್ ಹೇಳುವದೇನೆಂದರೆ :—" ಕಳೆದ ವರುಷದಲ್ಲಿ, ಎರಡು ವರುಷದ ನನ್ನ ಹೆಣ್ಣುಮಗಳೊಬ್ಬಳು ಶೀತಕ್ಕೆ ಸಿಕ್ಕಿ ಅದು ಬೇಗ ಹೆಚ್ಚಿ ಶ್ವಾಸನಾಳವನ್ನು ಕಟ್ಟಿತು. ರಾತ್ರಿಯಲ್ಲಿ ಮಗುವು ಶ್ವಾಸಿಸುವದಕ್ಕೆ ಕಷ್ಟಪಡುತ್ತಿರುವದನ್ನು ಕಂಡು ಎದ್ದು ಹೋಗಿನೋಡಲು ಕೊರಳು ಹಿಸುಕಿದಂತಾಗಿತ್ತು. ಮನೆಯಲ್ಲಿ ಚೆಂಬರ್ಲೇನ್ಸ ಕಫ ಸ್ವಲ್ಪ ಇದ್ದದ್ದರಿಂದ ಅದನ್ನು ಲೇಪಿಸ ತೊಡಗಿದೆನು. ಅದರಿಂದ ಅದ್ಭುತವಾದಂತಾಯಿತು. ಇದಾದ ಕೆಲವು ನಿಮಿಷಗಳಲ್ಲಿಯೇ ಮಗುವು ಧಾರಾಳವಾಗಿ ಶ್ವಾಸಿಸಿ, ಚೆನ್ನಾಗಿ ನಿದ್ದೆಮಾಡಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ದೊರಕುತ್ತದೆ.

Mellin's Food

ಮೆಲಿನ್ಸ್ ಆಹಾರವು

ಕೈ ಸೋಕದೆ ಮಾಡಿದೆ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರದ ಬಿಸ್ಕತ್ತುಗಳು [4 20]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs OAKES & Company, Mount Road, Madras

ವಿಳಾಸ-ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲಿ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಕುಸುಕಶೂಲಿ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈರಕ್ತಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179-36]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಯಿಂದ ತೋರಿಸಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಕೇಜಾಡಬೇಡಿ! ಒಂದೇ ಒಂದು ಬುಡ್ಡಿಯು ಮನೆಯಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚ ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಕುಂತಳಾನಂದ ತೈಲವು.

192-34

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟ್ಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ.—ಬಿ ಎಮ್ ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮುನೀಶ್ವರರು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನೂ ಲೋಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಕೌತುಕವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಿತವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ

ಕನ್ನಡ ಇಂಡಿಯನ್ ಪೀನಲ್‌ಕೋಡ್

ಇದರ ಕ್ರಯ ಪ್ರತಿ 1 ಕ್ಕೆ ರೂ 2 ಟಪಾಲು ಹಾಸಲು 4 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-47]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರಜಿಸ್ಟರ್ ಆಗಿದೆ ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ'

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ 2-0-0

,, 1 ಡ್ರ್ಯಾಂ ಕೊಳವೆ ,, ,, ,, 0-12-0.

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0 12 0

ಎಲ್ಲರಲ್ಲೂ ಬಿಕರಿಗ ಇಟ್ಟಿದೆ

ಮದರಾಸ್ ಅಧಿಕೃತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[351-22] ೧೩೩, ಜೈನಾಬಜಾರ್ ರೋಡ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

24—4—1914 ರಿಂದ 1—5—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	1	0	0
ಮೈಸೂರು ,,	3	2	0	0
ಬೆಂಗಳೂರು ಡಿಸ್ಟ್ರಿಕ್ಟು	3	3	0	0
ಮೈಸೂರು ,,	3	1	0	0
ಕೋಲಾರ್ ,,	6	3	14	5
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	3	4	0	0
ಜುಮ್ಲಾ	1J	15	14	5

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ವಸಂತಋತೌ ವೈಶಾಖ ಬಹುಳ ಷಷ್ಠಿ ಶುಕ್ರವಾರದಿಂದ ವೈಶಾಖ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭವಾಸ ತಿಥಿ
15	ಶುಕ್ರ ‡	ಷಷ್ಠಿ	30 37	ಉತ್ತರಾ	15 ೨೨	3
16	ಶನಿ *	ಸಪ್ತಮಿ	30 51	ಶ್ರವಣ	17 34	3
17	ಭಾನು §	ಅಷ್ಟಮಿ	32 24	ಧನಿಷ್ಠ	20 32	4
18	ಸೋಮ	ನವಮಿ	56-11	ಶತಭಿಷ	24 35	5
19	ಮಂಗಳ	ದಶಮಿ	38 57	ಪೂಭಾ	29 45	6
20	ಬುಧ †	ಏಕಾದಶಿ	43-21	ಉಭಾ	35 45	7
21	ಗುರು ,,	ದ್ವಾದಶಿ	48-46	ರೇವತಿ	42-18	8

‡ ವೈಪ್ರ: * ಮೇಲುಕೋಟೆಯಲ್ಲಿ ಪಲ್ಲವೋತ್ಸವಾರಂಭ § ಮಳೆ ನಕ್ಷತ್ರ—ಕೃತ್ತಿಕೆ 3 ನೇ ಪಾದ † ಸರ್ವತ್ರ ಏಕಾದಶಿ ,, ಮಳೆ ನಕ್ಷತ್ರ—ಕೃತ್ತಿಕೆ 4 ನೇ ಪಾದ

500 ರೂಪಾಯಿಗಳು ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು ಹೊಟ್ಟೆಯಲ್ಲಿರುವ ಜ್ವರದ ಗೆಡ್ಡೆಯನ್ನು ನಾಶಪಡಿಸುವುದು ಶ್ವಾಸ ಕಾಸ ರೋಗಗಳನ್ನು ನಿರ್ಮೂಲಿಸಪಡಿಸುವುದು ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲ್, ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು 15 ತೋಲಾ ಮುರಬ್ಬಾ ಇರುವ ಡಬ್ಬಾ 1 ಕ್ಕೆ ರೂ 1 8-0, ಟಪಾಲ್ ಖರ್ಚು ಅಲಾಯಿದ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತ

ಈ ದಿವಸ ಮತ್ತು ನಾಳೆಯೂ ಬಹಳ ಜನರು ಉಪಯೋಗಕ್ಕೆ ಬಾರದ ಔಷಧಗಳನ್ನು ಬಹಳವಾಗಿ ಹೊಗಳಿ ಪ್ರಕಟನೆಗಳ ಮೂಲಕ ಪ್ರಚುರಪಡಿಸಿ ಜನರಿಗೆ ಬಹಳ ಮೋಸಪಡಿಸುವರು ಇದು ನಮಗೆ ಸರಿಯಲ್ಲ ಒಂದಾವರ್ತಿ ನಮ್ಮ ಔಷಧಗಳನ್ನು ತರಿಸಿ ಪರೀಕ್ಷಿಸಿರಿ ಸುಳ್ಳು ನಿಜ ಎಂಬುದು ತಿಳಿಯಬರುತ್ತೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ

ನಮಗೆ ಕಾಗದವನ್ನು ಬರೆಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು

1 ಧಾತುಪುಷ್ಟಿ ಚೂರ್ಣ —ಬೆಲೆಯು ಡಬ್ಬಾ 1 ಕ್ಕೆ 0-5-0 2 ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು —ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವದಕ್ಕೂ ಬಹಳ ಒಳ್ಳೆಯದು ಕ್ರಯ 0 2-0 3 ಪಾಶನವಾರಣೆ ತೈಲವು —ಕ್ರಯ ಸೀಸಾಯಿ 1 ಕ್ಕೆ 0-4 0 4 ಹೊಟ್ಟೇನೋವಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 4-0 5 ಕೆಮ್ಮಲು ರೋಗಕ್ಕೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0-4-0 6 ವ್ರಣಕ್ಕೆ ಔಷಧ —ಕ್ರಯ ದಬ್ಬಿ 1 ಕ್ಕೆ 0 4-0 7 ಆಶ್ಚರ್ಯಕರವಾದ ಭೇದಿ ಮಾತ್ರೆಗಳು.—ಕ್ರಯ 0-4 0 8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1ಕ್ಕೆ 0 2 6 9 ಉಷ್ಣಕಾರಕಕ್ಕೆ ಮಾತ್ರೆಗಳು —ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ 21 ದಿನಗಳು ಸೇವಿಸಲು ಖಂಡಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 1-0 0 10 ಮೂಲವ್ಯಾಧಿಗೆ ಔಷಧ —ಕ್ರಯ ಸೀಸಾಯಿ 1ಕ್ಕೆ 0 8 0 11. ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1 ಕ್ಕೆ 0-4-0

12 ದಂತ ಚೂರ್ಣವು —ಕ್ರಯ ದಬ್ಬಿಗೆ 0-1 3 13 ಕೂದಲು ಬೆಳೆಯುವ ಎಣ್ಣೆ (ಬಂಘೋಲಾ ತೈಲ) —ಸೀಸಾಯಿ 1ಕ್ಕೆ 0 4-0 14 ಆಶ್ಚರ್ಯಕರವಾದ ದ್ರಾವಕ —ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೇನೋವು ನಿಲ್ಲುತ್ತೆ ಕ್ರಯ ಸೀಸಾಯಿ 1ಕ್ಕೆ 0-4-0 15 ಕಜ್ಜಿ ಮತ್ತು ಹುಳಕಡ್ಡಿ ಔಷಧ —ಕ್ರಯ ಸೀಸಾಯಿ 1ಕ್ಕೆ 0 4-0 16 ಆಶ್ಚರ್ಯಕರವಾದ ಪೆನ್ಸಲ್ —ಈ ಪೆನ್ಸಲ್‌ನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚೆನ್ನಾಗಿ ಕಾಣುವವು ನೋಡುವವರಿಗೆ ಬಹಳ ಆಶ್ಚರ್ಯವಾಗಿ ಕಾಣುತ್ತೆ ಕ್ರಯ 0-4-0 17 ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ —ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿವಿಗೂ ಕರಿಯ ಕೂದಲುಗಳು ಇರುತ್ತೆ ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುವೆವು ಕ್ರಯ 1-0-0

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ಡಿ. ಮನ್ನಾಲಾಲ್. ಡಿಲ್ಲೀ ವೈದ್ಯರು,

[94-4] 13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ

Printed and Published by the Rev. H Gulliford, Proprietor and Manager, Wesleyan Mission Press, Mysore. 14/5/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೧೪ ನೇ ಇಸವಿ ಮೇ ತಾರೀಖು ೨೧ ನೇ ಗುರುವಾರ. ಸಂಚಿಕೆ ೫೧

ಹೊಸ ವರುಷ! ಹೊಸ ಪುಸ್ತಕಗಳು !! ಹೊಸ ಯೇರ್ಪಾಟು !!!
ಕ್ರಯ ಕಡಮೆ! ಕೆಲವು ದಿನಗಳ ಮಟ್ಟಿಗೆ!! ಕಡಮೆ ಕ್ರಯ !!!
ಅವಧೀ ವಿಾರಿದ ಬಳಿಕ ಅಲ್ಪಕ್ರಯಕ್ಕೆ ದೊರೆಯಲಾರದು. ಬೇಗ ಬರೆದು ತರಿಸಿಡಿರಿ !!!

ಶ್ರೀ ಶ್ರೀ ವಿವೇಕಾನಂದೋಪನ್ಯಾಸಗಳು

೧ ಶ್ರೀ ಶ್ರೀ ವಿವೇಕಾನಂದಸ್ವಾಮಿ (ಸಚಿತ್ರ ಚರಿತ್ರೆ) ೪ ಆಣೆ. ೨ "ಹಿಂದೂಮತ" (ಚಿಕಾಗೋ ಉಪನ್ಯಾಸ) ೩ ಆಣೆ.

ಪ್ರಶ್ನೋತ್ತರ ಲೇಖಬೋಧಿನಿ

ಲೋಕ ವ್ಯವಹಾರವನ್ನು ಬೋಧಿಸುವುದು ಸಂಗ್ರಹಯೋಗ್ಯವಾಗಿದೆ. ಎರಡನೆಯ ಭಾಗ ೫೦೦ ಪುಟಗಳು ದಪ್ಪ ಕಾಗದ ಭದ್ರವಾದ ಬೈಂಡು. ಕ್ರಯ ಅಂಚೆ ವೆಚ್ಚ ಸೇರಿ ಒಂದು ರೂಪಾಯಿ ನಾಲ್ಕಾಣೆ ಮಾತ್ರ

ಕಥಾಸರಿತ್ಸಾಗರ ಭೂಮಿಯ ಆಳತೆ

ಪೂರ್ವ ಕದೆಗಳೆಂಬ ಹೊಳೆಗಳ ಕಡಲು. ಭಾಗ ಕಥೆಗಳೆಲ್ಲಕ್ಕೂ ಜನ್ಮಭೂಮಿ ಎಲ್ಲಾ ಕಥೆಗಳಿಗೂ ಪ್ರಸವ ಭೂಮಿ. ಧಾರ್ಮಿಕ, ಸಾಮಾಜಿಕ, ನೈತಿಕ ವಿಧ್ಯವಾ ನರೆಲ್ಲರಿಗೂ ಕೈಗನ್ನಡಿ ಅಗತ್ಯವಾಗಿ ಒಂದು ಪುಸ್ತಕ ವನ್ನು ಸಂಗ್ರಹಿಸಿಡತಕ್ಕದು.

ಕ್ರಯ ಒಂದು ರೂಪಾಯಿ ಯೆಂಟಾಣೆ

ಕೆಲವು ಪ್ರತಿಗಳೇ ಉಳಿದಿವೆ. ಮುಗಿದ ಬಳಿಕ ದೊರೆಯಲಾರದು. ಬೋಧಕರ ಸಹಾಯವಿಲ್ಲದೆ ಶಂಕು ಯೋಜನೆ ಎಂಬ ನೆಲದಳೆಯನ್ನು ಕಲಿಸುವುದು

ಕ್ರಯ ಹನ್ನೆರಡಾಣೆ ಮಾತ್ರ.

[84—5]

ನಮ್ಮ ವಿಳಾಸ ಬದಲಾಗಿದೆ:—

ಭಾರತಿ ಸಂಪಂಗಿರಾಮು, ಅಥವ ಎಸ್ ಆರ್ ಭಾರತಿ, ಸಂಪಾದಕ, "ನವಿನುಡಿ ಭಾಷಾನಿಧಿ",
ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000

(1895ನೇ ಇಸವಿ 3ನೇ ಮೈಸೂರು ಕಂಪೆನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ)

ಎಚ್ಚರಿಕೆ:—(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸ್ಸನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ನೋಡಿ. ಇದರಿಂದ ಹಿಂದು ಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ, ಮತ್ತು ಇದ ರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಜುನಾಯಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚೆನ್ನಾಗಿ ಗೊತ್ತಾಗುತ್ತದೆ)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು ಇದರಲ್ಲಿ ದೃಷ್ಟಿಪಾತ್ರವಾದ ಭಾಗಗಳೂ, ಖಚಿತವಾದ ಕ್ರಮಗಳೂ, —ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ ಅವರಿಗೆ ಸಂಬಳವೂ, ಕಮಿಷನ್ನೂ ಕೊಡ ಲಾಗುವುದು ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ —

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ 1,00,000

(1895ನೇ ಇಸವಿ 3ನೇ ಮೈಸೂರು ಕಂಪೆನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಲೇವಾದೇವಿ —ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ. ಕಂಪನಿಯ ಷೇರುಗಳು ಬಹು ಅಮೂಲ್ಯ ವಾದವು; ಮತ್ತು ಎಲ್ಲರೂ ಪಡಕೊಳ್ಳುವನ್ನು ಸುಲಭವಾಗಿ ಮಾಡಲಾಗಿದೆ. [161—12]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲ ಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ. ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಮುಂಗಡ ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿ ಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು.

ಬೇಕಾಗಿದೆ —ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕು ಮಂದಿ ಸ್ಥಳೀ ಯ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು. ಘನವಂತರಾಗಿಯೂ, ಮುಖಂ ಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ.—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾ



ರ್ಥಿಗಳಿಗೂ ಅಷ್ಟೇ ಅಗತ್ಯವ ಸಹಕಾರಿ ಯಾಗಿರುತ್ತದೆ ಈ ತೈಲವನ್ನು ತಲೆಗೆ ಹಚ್ಚಿ ದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆ ಯು ತಣ್ಣಗಾಗಿ, ಮನಸ್ಸು ಉಲ್ಲಾಸ ದಿಂದ ಪ್ರಫುಲ್ಲಿತವಾಗುತ್ತದೆ ಕೂದಲು ಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗ ಲಾರವು, ಆದರೆ ಅವು ದಟ್ಟವಾಗಿ ಬೆಳೆ ದು ಸಮೃದ್ಧವಾಗುವವು ಇದರ ಸು ಗಂಧವಾದರೋ ಮಧುರವೂ ಮೋಹಕ ವೂ ಆಗಿರುವುದು

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣ ವನ್ನೂ ತಲೆಯನ್ನೂ ಹಾಳುಮಾಡುವು ದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪ ಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸ ರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂದುಗಳು ಬಸವನ ಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನ ವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ 1-0-0, ಅ ವೆ 0-10 ಬೇರೆ, 3 ಸೀಸೆಗಳ ಕ್ರಯ ರೂ 2-10 0, ಅ ವೆ 0 7-0 ಬೇರೆ

ಸೂಚನೆ —ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳು ವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ ಚಿರಸ್ಥಾಯಿ-ಮತ್ತು ಅತ್ಯು ತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗ ಳನ್ನು ವಿಾರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ [19 19]

ಸಣ್ಣ ಸೀಸೆಯ ಬೆಲೆ ರೂ 0-8-0 ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12 0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0 0 ಅಂಚೆಯ ವೆಚ್ಚ ಬೇರೆ ರೂ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12 0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ಡಿ. ಕುಲ್ಕರ್ಣಿ ಮಾರ್ಕೆಟ್, ಮಂಗಳೂರು

ಹೊಸ ಬಂಗಾಳೀ ನಾವಿಲ್ಸ್ —ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇಮ 1 ಆ. ಬಿ ವೆಂಕಟಾಚಾರ್ಯರಿಂದ ವಂಗವಿಜೇತ 1-4 0. ಚಂದ್ರಶೇಖರ 1-1-0. ರಜನಿ 18 ಆ ಅಹಲ್ಯಾಬಾಯಿ 9 ಆ, ಇತ್ಯಾದಿ. ಚಿತ್ರವಿಚಿತ್ರಾವಳೀ 2ನೆ ಭಾಗ ಮತ್ತು ಮಾಯಾವಿ ಪ್ರಿಂಟಾಗುತ್ತಿವೆ. ನ್ಯಾಯದರ್ಪಣ 1½ ರೂಪಾಯಿ.
[53-13] ಎಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿಸಿ ತಯಾರಿಸುವ ಉತ್ತಮವಾದ ಬನಾರಸ್ ರೇಸ್ಮೆ ಜರೀ ಸೀರೆಗಳು, ಕಜ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಚಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-10]

ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಕುಂತಳಾನಂದ ತೈಲವು.

192-35

ಹಿಂದುಸ್ತಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ. ಎಮ್. ಸಾಥ ಮತ್ತು ಕಂಪೆನಿ,
ಪೇರಿ, ಮದರಾಸ್.

ಗಂಟ್ಲಿನ ಹುಣ್ಣು ಹಾನಿಕರವಾದದ್ದು.

ಸಾಧಾರಣವಾದ ಗಂಟ್ಲುನೋವು ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬಿದನ್ನು ಒಂದು ಅಥವ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಯಾಗುತ್ತೆ. ಹಾಗಿಲ್ಲದೆ ನಿರ್ಲಕ್ಷ್ಯಮಾಡುವದಾದರೆ, ಅನೇಕ ವೇಳೆ ಎದೆನೆಗಡಿಯೂ ಕೆಮ್ಮೂ ಇತರ ಮರಣಕರವಾದ ದೊಡ್ಡರೋಗಗಳು ಪ್ರಾಪ್ತವಾಗುವವು, ಇಷ್ಟು ಸ್ವಲ್ಪ ಖರ್ಚಿಗೆ ಇಷ್ಟು ಸುಲಭವಾಗಿಯೂ ಖಂಡಿತವಾಗಿಯೂ ಚಿಕಿತ್ಸೆ ದೊರಕುವದರಿಂದ ಅಲಕ್ಷ್ಯದೆ ಕಳಕೊಳ್ಳಬೇಡಿ.

ಸಾಧಾರಣ ಗಂಟ್ಲು ನೋವಿಗಾಗಲೀ ಅಥವಾ ಹಾನಿಕರವಾದ ಕೆಮ್ಮಿಗಾಗಲೀ ಲಿಟ್ಲ್ಸ್ ಓರಿಯೆಂಟಲ್ ಬಾಮಿನಷ್ಟು ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉಟ್ಸನ್ನ್ಯರ್‌ಶೈರಿಗೆ ಸೇರಿರುವ ಇವೇಷಾಂ ಪಲ್ಲದ ಮೆ॥ ಎಚ್. ಡ್ರಿನ್‌ಹೇಲ್‌ಯವರು ಬರೆಯುವದೇನಂದರೆ:—ನನಗೆ ಕಠಿಣ ಎದೆನೆಗಡಿಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟ್ಲಿನಲ್ಲಿ ಕಚತವೂ ಕಟ್ಟುವಡಿಸುವ ಒಣ ಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ—ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಂಡುಕೊಳ್ಳಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬಿದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂ. ಮೇರಿಗೆ ಮಾರಲ್ಪಡುತ್ತೆ.

101-3

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-21

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಳೆತ (ವಾತ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅಪಚಾರ, ಇನ್ನೂ ಅನೇಕ ರೋಗಗಳಿಗೆ ಕೆಟ್ಟೆರಿ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಮಾತ ... ದಾರಿಕೊಡದೆ, ನರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ... ಯಾ ಹೊಟ್ಟೆಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಬಳ್ಳೀ ಶಕ್ತಿವರ್ಧಕವಾಗಿದೆ —೩೨ ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179-37]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಟ್ಟಿರೆಂದು ತೋರುವ ಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿದ್ದು, ಮೂತ್ರವು ಕಟ್ಟಿದ್ದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಬೇಕಾದಬೇಡಿ। ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಕಳುಹುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರ್ಮಾಡಿರುವದು.

[1 21]

ಮೆಲಿನರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ... ಗಳಲ್ಲಿ ತಯಾರ್ಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ

ಬಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ... ಯನ್ನೂ ಬಲಿಕೆಯನ್ನೂ ಕೊಡುತ್ತದೆ

Messrs OAKES & Company, Mount Road, Madras

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ದರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನೂ ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯದರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು. (4) ನವರಸಾಲಂಕೃತವಾಗಿ ಕಥಾಪ್ರಸಂಗದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1 8-0, ಟಪ್ಪಾಲು ಹಾಸಲು 4 ಆಣೆ

ಕನ್ನಡ ಇಂಡಿಯನ್ ಪೀನಲ್‌ಕೋಡ್

ಇದರ ಕ್ರಯ ಪ್ರತಿ 1 ಕ್ಕೆ ರೂ 2 ಟಪಾಲು ಹಾಸಲು 4 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಮಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-43]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್‌ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3, 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-14]

ಇಂಗ್ಲಿಷಿಯ 3 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿ) 1 ಆಣೆ Notes on "Tanglewood Tales," English Lower Secondary Text for 1915—As. 3. Notes on Fairy Tales—As. 2

ನಮ್ಮ ವಿಳಾಸ —ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಜೈನರವರ ಉತ್ತಮೋತ್ತಮ ಆಯಿಂಟ್ ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಜಗಳು,

ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯಕ್ಷಿಣಿಯಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತುವದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ 1; ಸಣ್ಣ ಬಾಟ್ಲಿಗೆ 10 ಆಣೆ ವಿ. ಪಿ ಛಾರ್ಜ್ ಬೇರೆ. ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ 1-8-0. ಇವನ್ನು ಒಂದು ಸಲ ತರಿಸಿ ಪರೀಕ್ಷಿಸಿ. [25-18]

ವಿಳಾಸ—ಪಿ. ಗುಲಾಬ್ ಚಂದ್ ಪೌವಾರ್ಲ್,
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಮೇಲಾದ ಜರ್ಪಾಕ್ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ! ಸಾವಿರಗಟ್ಟಲೆ ವಿಕ್ರಯವಾಗುತ್ತಿದೆ!! ನಂತರ ದೊರೆಯಲಾರದು!!! ಅನೇಕ ಪಂಚೆಗಳು ದಿನವೂ ಮಾರಾಟವಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ! ಶೃಂಗಾರವನ್ನೂ, ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದರಿಂದ ಮು ಕ್ಕಾಲು ಪಾಲು ಸರಕು ಮಾರಾಟವಾಗಿಹೋಗಿರುತ್ತ ಈಗ ಸ್ವಲ್ಪವೇ ಉಳಿದಿರುತ್ತ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಕರುಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಮಾದರಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 2. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎಸ್. ಎಂ. ಸ್ವಾಮಿ ಅಂಡು ಕಂಪೆನಿ,
[109-2] ನಂ. 44, ಸಂಬುಕಯ್ಯರ್ ಬೀದಿ, ಮದರಾಸು.

ಸ್ಟ್ಯಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ.

ಇದು ಹಿಂದುಸ್ಥಾನದಲ್ಲೆಲ್ಲಾ ತುಂಬಾ ಪ್ರಖ್ಯಾತಿ ಪಡೆದಿದೆ.

ನಿಸ್ಸಂದೇಹವಾದ ಆಧಾರವುಳ್ಳದ್ದು.

ಸಾಲಿಯಾನಾ ಹುಟ್ಟುವಳಿ ರೂ 2,13,00,000	ಶೇಖರವಾಗಿರುವ ಫಂಡು ರೂ 20,33,00,000
ಬೋನಸ್ ಪಾವತಿ ರೂ 12,25,00,000	ವಿಮೆದಾರರಿಗೆ ಪಾವತಿ ರೂ. 49,75,00,000

ಪೂರ್ಣಜೀವಮಾನ, ಕೆಲವು ವರುಷಗಳ ನಂತರ ಪಾವತಿ, ಮಕ್ಕಳ ವಿಮೆ, ದುಗಣಿ ವಿಮೆ, ಸ್ವಲ್ಪಕಾಲದ ವಿಮೆ—ಈ ಮೊದಲಾದ ಪಾಲಿಸಿಗಳನ್ನು ಈ ಕಂಪನಿಯಲ್ಲಿ ಬಹಳ ಸುಲಭವಾದ ದರಗಳಲ್ಲಿ ಪಡೆಯಬಹುದು.

ಹಿಂದುಸ್ಥಾನದಲ್ಲಿಯೂ ವಿಮೆಪತ್ರಗಳನ್ನು ಕೊಡುವ, ವಿಮೆದಾರರ ಹಣ ಪಾವತಿಮಾಡುವ ಮತ್ತು ಸಾಲಗಳನ್ನು ಕೊಡುವ ಕೆಲಸಗಳು ನಡಿಸಲ್ಪಡುತ್ತವೆ. ವಿಶೇಷ ಸಂಗತಿಗಳನ್ನೂ, ಕನ್ನಡ ಇಂಗ್ಲಿಷ್ ನೋಟೀಸ್ ಪುಸ್ತಕಗಳನ್ನೂ ಕೆಳಗಿನ ವಿಳಾಸದಾರರಿಂದ ತರಿಸಿಕೊಳ್ಳಿ— [35-16]

ಕಮಿಷನ್ ಮತ್ತು ಜನರಲ್ ಏಜನ್ಸಿ,

ಅವೆನ್ಯೂರೋಡ್, ಬೆಂಗಳೂರು ಸಿಟಿ } ಮೈಸೂರು ಸೀಮೆಯ ಮುಖ್ಯ ಏಜಂಟರು. { ಕೊಲ್ಲಿರಯ್ಯನ ಬೀದಿ, ಶಿವಮೊಗ್ಗ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳೆಲ್ಲೆಲ್ಲಾ ಶ್ರೇಷ್ಠವಾದದ್ದು

ಅಟೋ ಮೋಹಿನಿ

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ಸಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ!

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.
,, 1 ಡ್ರಾಂ ಕೊಳವೆ ,, ,, ,, 0-12-0.

ಅಟೋ ಮೋಹಿನಿ ಪರಿಮಳದ ಸಾಬೂನುಗಳು ಡಜನ್ 1 ಕ್ಕೆ ರೂ. 0-12-0.

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-23] ೧೩೨, ಚೈನಾಬಜಾರ್ ರೋಡ್, ಮದರಾಸ್.

ಮಲೆನಾಡು ನಿವಾಸಿಕರೇ!

ಮನೆಯಲ್ಲಿಯೇ ವೈದ್ಯನು!

ಯುಕಲಿಪ್ಟಸ್ ತೈಲದ ಸುವಾಸನೆಯಿದ್ದಲ್ಲಿ ಮಲೆನಾಡು ಸೊಳ್ಳೆಗಳ ಕಾಟವೇ ಇರದು. ಸೊಳ್ಳೆಗಳಿಲ್ಲದಲ್ಲಿ ಮಲೆನಾಡು ಜ್ವರವಿರದು. ಈ ತೈಲವನ್ನು ಸೇವಿಸುವುದರಿಂದ ಮಲೆಜ್ವರ, ಶೀತಜ್ವರ, ವಿಷಮಜ್ವರ, ಶೀತವಾತ, ಗಂಟಲುನೋವು, ಗೂರಲು ಉಬ್ಬಸ, ವಾಯುರೋಗ, ಹಲ್ಲುನೋವು, ಕಣ್ಣುರಿ, ಜಲದೋಷ, ಶೀತಬೇದಿ, ಉಷ್ಣಭೇದಿ, ಉಷ್ಣಕಾರಕ ಮೊದಲಾದ ರೋಗಗಳು ಶೀಘ್ರದಲ್ಲಿ ಗುಣವಾಗುವವು. ಜ್ವರಗಡ್ಡೆಯು ನೀರಾಗುವುದು. ದನಕರುಗಳ ಸರ್ವರೋಗಗಳಿಗೆ ದಿವ್ಯೌಷಧವಾಗಿದೆ. ಇದು ಮನೆಯಲ್ಲಿರುವುದರಿಂದ ಒಬ್ಬ ವೈದ್ಯನೇ ಇದ್ದಂತಾಗುವುದು. ಔನ್ಸ್ ಬಾಟ್ಲಿ ಕ್ರಯ 5 ಆಣೆ. ವಿ. ಪಿ ಬೇರೆ. ಡಜನ್ ಬಾಟ್ಲಿಗಳಿಗೆ ರೂ 3-0-0. ವಿ. ಪಿ. ಬೇರೆ. ಅನುಪಾನಪತ್ರವು ಸೀಸೆಯೊಂದಿಗೆ ಕಳುಹಿಸಲ್ಪಡುವದು.

ಸ್ನೇಹಲತಾ ಮಸ್ತಕ ತಾಪಹಾರಿಣೀ ತೈಲ. ಶಿರರೋಗಗಳಿಗೆ ಅತ್ಯುತ್ತಮ ತೈಲವು ಕೇಶವು ಉದ್ದುದ್ದ ಬೆಳೆಯುವದು. ಆರೋಗ್ಯದಾಯಕವಾದ ತೈಲಗಳಲ್ಲಿ ಇದು ಕೊಂಚಕಾಲದಲ್ಲೇ ಕೀರ್ತಿಯನ್ನು ಪಡೆದಿದೆ. ಬೆಲೆ 4 ಔನ್ಸಿನ ಸೀಸೆಗೆ 0-12-0. ಪುಲುನಾನ, ವಾಯುಲೆಟ್, ಚೆರಿಬ್ಲೋಸಮ್ ಮೊದಲಾದ ಪರಿಮಳದ ಸಾಬೂನುಗಳು ಡಜನ್ 1 ಕ್ಕೆ 0-12-0, ಗ್ರೋಸ್ 1 ಕ್ಕೆ 6-0-0.

ಇಕ್ಲಿಪ್ಸ್ ರಬ್ಬರ್ ಮೊಹರುಗಳು, ಸ್ಟಾಟೋ ಎನ್‌ಲಾರ್ಜ್‌ಮೆಂಟುಗಳು ಅಗ್ಗದರದಲ್ಲಿ ತಯಾರಿಸಿಕೊಡಲಾಗುವುದು. [102-3]

ವಿಳಾಸ- ದಿ ಇಕ್ಲಿಪ್ಸ್ ಏಜನ್ಸಿ, ಹೋಪ್ ಕೋ ಪೋ, ಕಂಕನಾಡಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಮೇ 7 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಬೇಕೆ —(1)	ಷೇರು ಮೊಬಲಗು	ರೂ. 9,72,725
,, (2)	ಡಿಪಾಜಿಟ್ಟುಗಳು	,, 13,04,670
,, (3)	ಇತರೆ	,, 24,639
(ಆಣೆ, ಕಾಸು ಬಿಟ್ಟಿರುತ್ತೆ)		ಜುಮ್ಲಾ ರೂ 23,02,034

ದೇಣೆ —(1)	ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ. 3,00,141
,, (2)	ಖಾತೆ ಮತ್ತು ಇತರ ಸಾಲಗಳು	,, 13,16,645
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1,94,939
,, (4)	ಇನ್‌ವೆಸ್ಟ್‌ಮೆಂಟುಗಳು	,, 3,01,000
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 64,228
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 7,107
,, (7)	ಇತರೆ	,, 17,684
(ಆಣೆ, ಕಾಸು ಬಿಟ್ಟಿರುತ್ತೆ)		ಜುಮ್ಲಾ ರೂ 23,02,034

ಡಬ್ಲ್ಯು ಸಿ ರೋಜ್, ಮ್ಯಾನೇಜರ್.

---

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಮತಿ ಸವೆಯುವುದರಿಂದ ಮೋಲುಬ್ಬಸ ಬರುವುದೂ,



ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೆರಳಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರಕಾಂತಿಯೂ ಉಂಟಾಗುತ್ತದೆ. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಪ್ಲೀಹ ಗೆಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸ ರೋಗಗಳನ್ನು ನಿರ್ಮೂಲಪಡಿಸುವುದು. ಈ ಸಾಲಾಮಿಸ್ರಿ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್, ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. 15 ತೊಲಾ ಮುರಬ್ಬಾ ಇರುವ ಡಬ್ಬಾ 1 ಕ್ಕೆ ರೂ 1-8-0. ಟಪಾಲ್ ಖರ್ಚು ಅಲಾಯಿದ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಈ ದಿವಸವೂ ಮತ್ತು ನಾಳೆಯೂ ಬಹಳ ಜನರು ಉಪಯೋಗಕ್ಕೆ ಬಾರದ ಔಷಧಗಳನ್ನು ಬಹಳವಾಗಿ ಜಾಹೀರು ಪ್ರಕಟನೆಗಳ ಮೂಲಕ ಪ್ರಚುರಪಡಿಸಿ ಜನರಿಗೆ ಬಹಳ ಮೋಸಪಡಿಸುವರು. ಇದು ನಮಗೆ ಸರಿಯಲ್ಲ. ಒಂದಾವರ್ತಿ ನಮ್ಮ ಔಷಧಗಳನ್ನು ತರಿಸಿ ಪರೀಕ್ಷಿಸಿರಿ. ಸುಳ್ಳು ನಿಜ ಎಂಬುದು ತಿಳಿಯಬರುತ್ತೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ.

ನಮಗೆ ಕಾಗದವನ್ನು ಬರೆಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟು ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು.

---

1. ಧಾತುಪುಷ್ಟಿ ಚೂರ್ಣ.—ಬೆಲೆಯು ಡಬ್ಬಾ 1 ಕ್ಕೆ 0-5-0 2. ಕೇಶನಾಶಕ ಮತ್ತು ವೃದ್ಧಿಕರದಂತ್ರ ತೈಲವು.—ಬೋಳಿನ ಹೊಡತಕ್ಕೂ ಮತ್ತು ಕೂದಲು ಉದುರುವದಕ್ಕೂ ಬಹಳ ಒಳ್ಳೆಯದು ಕ್ರಯ 0-2-0 3 ಕೇಶನಾಶಕ ತೈಲವು —ಕ್ರಯ ಸೀಸಾಯಿ 1 ಕ್ಕೆ 0-1-0 4. ಹೊಟ್ಟೆನೋವಿನ ಔಷಧ —ಕ್ರಯ ಸೀಸಾಯಿ 1 ಕ್ಕೆ 0-1-0 5 ಕೆಮ್ಮಿನ ರೋಗಕ್ಕೆ ಔಷಧ—ಕ್ರಯ ಸೀಸಾಯಿ 1 ಕ್ಕೆ 0-1-0 6 ವ್ರಣಕ್ಕೆ ಔಷಧ —ಕ್ರಯ ಡಬ್ಬಿ 1 ಕ್ಕೆ 0-1-0 7 ಆಶ್ಚರ್ಯಕರವಾದ ಚೇಳು ಮಾತ್ರೆಗಳು —ಕ್ರಯ 0-1-0 8. ತಲೆನೋವಿನ ತೈಲವು —ಕ್ರಯ ಸೀಸಾಯಿ 1ಕ್ಕೆ 0-2-6 9 ಪುಷ್ಟಿಕಾರಕಕ್ಕೆ ಮಾತ್ರೆಗಳು —ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ 2 ದಿನಗಳು ಸೇವಿಸಲು ಖಂಡಿತವಾಗಿಯೂ ಗುಣವಾಗುವದು. ಕ್ರಯ ಸೀಸಾಯಿ 1ಕ್ಕೆ 1-0-0. 10 ಮೂಲವ್ಯಾಧಿಗೆ ಔಷಧ.—ಕ್ರಯ ಸೀಸಾಯಿ 1ಕ್ಕೆ 0-8-0 11 ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1 ಕ್ಕೆ 0-1-0.

12 ದಂತ ಚೂರ್ಣವು.—ಕ್ರಯ ಡಬ್ಬಿಗೆ 0-1-3 13 ಕೂದಲು ಬೆಳೆಯುವ ಎಣ್ಣೆ (ಬಂಗೋಲಾ ತೈಲ) —ಸೀಸಾಯಿ 1ಕ್ಕೆ 0-1-0 14 ಆಶ್ಚರ್ಯಕರವಾದ ದ್ರಾವಕ.—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಕ್ರಯ ಸೀಸಾಯಿ 1ಕ್ಕೆ 0-4-0 15 ಕಜ್ಜಿ ಮತ್ತು ಹುಳುಕಡ್ಡಿ ಔಷಧ—ಕ್ರಯ ಸೀಸಾಯಿ 1ಕ್ಕೆ 0-1-0 16 ಆಶ್ಚರ್ಯಕರವಾದ ಪೆನ್ಸಲ್.—ಈ ಪೆನ್ಸಲ್‌ನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ. ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚೆನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯವಾಗಿ ಕಾಣುತ್ತೆ. ಕ್ರಯ 0-4-0 17 ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ.—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿವಿಗೂ ಕರಿಯ ಕೂದಲುಗಳು ಇರುತ್ತೆ. ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುವೆವು. ಕ್ರಯ 1-0-0.

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
[94-5] 13, ಹಳೇ ಸಿದ್ದೀಕಟ್ಟೆ, ಬೆಂಗಳೂರು ಸಿಟಿ.

ಪರಸ್ಪರ ಸಹಾಯ ಸಂಘಗಳು.

ಬೊಂಬಾಯಿ ಸೆಂಟ್ರಲ್ ಬ್ಯಾಂಕು

ಬೊಂಬಾಯಿ ಅಧಿಪತ್ಯದ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಷೇರುದಾರರು ಕಳೆದ ಶನಿವಾರ ಸಭೆ ಸೇರಿ ವಾರ್ಷಿಕ ಕೂಟವನ್ನು ನಡಿಸಿದರು. ಸರ್ ವಿಟ್ಠಲದಾಸ್ ಥ್ಯಾಕರ್ಸೆಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಬ್ಯಾಂಕಿನ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿ ಹೇಳುವಲ್ಲಿ ಕಳೆದ ವರುಷ ಆ ಬ್ಯಾಂಕಿಗೆ 28,012 ರೂಪಾಯಿ ಲಾಭ ಉತ್ಪತ್ತಿ ಆಗಿದೆ ಎಂದು ತಿಳಿಸಿದರು. ಡಿಬೆಂಚರ್ ಪತ್ರಗಳ ಮೊಬಲಗುಗಳನ್ನು ಕ್ರಮೇಣ ಪಾವತಿ ಮಾಡುವ ಫಂಡಿಗೆ ಕೆಲವು ಹಣವನ್ನು ತೆಗೆದಿಟ್ಟು ನೋಡುವಲ್ಲಿ ಬ್ಯಾಂಕಿನ ಮೂಲಧನಕ್ಕೆ ಶೇಕಡ 11 ರೂಪಾಯಿಯಂತೆ ಬಡ್ಡಿ ಉತ್ಪತ್ತಿಯಾಗಿದೆ. ಒಂಬತ್ತು ತಿಂಗಳಲ್ಲಿ ಬ್ಯಾಂಕಿನ ಮೂಲಧನಕ್ಕೆ 1,10,000 ರೂಪಾಯಿ ಷೇರುದಾರರಿಂದ ವಸೂಲಾಯಿತು. ಲಾಭದಲ್ಲಿ ಷೇರುದಾರರಿಗೆ ಶೇಕಡ 6 ರೂಪಾಯಿಯಂತೆ ಬಡ್ಡಿ ಬಟವಾಡೆ ಮಾಡಬೇಕೆಂದೂ, ರಿಜರ್ವ್ ಫಂಡಿಗೆ 7,000 ರೂಪಾಯಿ ತೆಗೆದಿಡಬೇಕೆಂದೂ, ಸೊಸೈಟಿಯ ಷೇರುಫಂಡಿಗೆ 7,000 ರೂಪಾಯಿ ತೆಗೆದಿಡಬೇಕೆಂದೂ ಇತ್ಯರ್ಥ ಮಾಡಿದರು.

ಬರ್ಮಾದಲ್ಲಿ ಕೋಆಪರೇಟಿವ್ ಸಂಘಗಳು.

ಕಳೆದ ವರುಷ ಬರ್ಮಾ ಅಧಿಪತ್ಯದಲ್ಲಿ ಪರಸ್ಪರ ಸಹಾಯ ಸಂಘಗಳು ಶೇಕಡ 41 ರಷ್ಟು ಹೆಚ್ಚಾದವು. ಈಗ ಒಟ್ಟು 1,115 ಸಂಘಗಳಿರುತ್ತವೆ. ಅವುಗಳಲ್ಲೆಲ್ಲಾ 31,007 ಮಂದಿ ಮೆಂಬರುಗಳಿದ್ದಾರೆ. ಸೊಸೈಟಿಗಳಲ್ಲಿ ಲೇವಾದೇವಿ ಹಣಗಳು ಶೇಕಡ 45 ರಷ್ಟು ಹೆಚ್ಚಿದವು, ಅಂದರೆ 53 ಲಕ್ಷ ರೂಪಾಯಿನ ಮೂಲಧನ ಕೂಡಿರುತ್ತದೆ. ಈ ಪೈಕಿ 761 ಸಂಘಗಳು ವ್ಯವಸಾಯಾಭಿವೃದ್ಧಿಗಾಗಿಯೇ ಏರ್ಪಾಡಾಗಿ ಬಹಳ ಚೆನ್ನಾಗಿ ನಡೆಯುತ್ತಿರುವವು. ಈಚೆಗೆ ಮೆಂಬರುಗಳು ಆಗಾಗ್ಗೆ ಸೇರಿ ಕಾನ್‌ಫರೆನ್ಸುಗಳನ್ನು ನಡಿಸಿ, ಪರಸ್ಪರಸಹಾಯ ಬ್ಯಾಂಕುಗಳೂ ಸೊಸೈಟಿಗಳೂ ದೇಶದಲ್ಲೆಲ್ಲಾ ಹರಡುವಂತೆಯೂ, ಅವುಗಳ ಕಾರ್ಯಗಳು ವಿಚಕ್ಷಣೆಯಿಂದ ನಡೆಯುವಂತೆಯೂ ಮಾಡಿಕೊಳ್ಳುತ್ತಿದ್ದಾರೆ.

Full Notes and **Examiner** on L. S. E. Texts (1915)—**Both Tanglewood and Fairy Tales,** with Author's life, meanings, explanations, summaries, constructions and questions. Price **Annas 5. English Papers**—Subscription **Re 1¼ only.** Special copy **As. 6. Spelling Book As 4.** (Postage extra)

Apply to **M. N. Sitarama Rao,**

[100 4] **Krishnaraja Mohalla, Mysore**

ಸ್ಕಾರ್ಪಿನ್‌ಯೂನಿಯೊ.

ಚೇಳು ಕಡಿತಕ್ಕೆ ಮಹೌಷಧ

ಕೋಲಾರದ ಪೋಲೀಸ್ ಇನ್ಸ್‌ಪೆಕ್ಟರವರು ರಾ|| ರಾ|| ಜಿ. ಕೆ. ಮಾಧವ ರಾವ್ ಯವರು ಹೇಳುವದೇನೆಂದರೆ—"ನಿಮ್ಮ ಸ್ಕಾರ್ಪಿನ್‌ಯೂನಿಯೋ ಚೇಳಿನ ಔಷಧಿಯು ಅತಿ ಶೀಘ್ರದಲ್ಲಿಯೇ ಗುಣಕೊಟ್ಟದ್ದರಿಂದ ಇನ್ನು ಮೂರು ಬಾಟ್ಲಿಗಳನ್ನು ಕಳುಹಿಸಿಕೊಡಿರಿ." ಬಾಟ್ಲಿ ಒಂದರ ಬೆಲೆ ಎಂಟಾಣೆ ಮಾತ್ರವೇ, ಮತ್ತು ಪೋಸ್ಟು ವಿ. ಪಿ. ಛಾರ್ಜು ವಗೈರೆ ಮೂರು ಬಾಟ್ಲಿ ವರೆಗೆ ನಾಲ್ಕಾಣೆ ಮಾತ್ರವೇ.

[113 1] ವಿಳಾಸ—ಸ್ಕಾರ್ಪಿನ್‌ಯೂನಿಯೋ ಡಿಪೋ, ಹರಿಹರ

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವುದು. ನಮ್ಮ ಏಜಂಟರು ಬಿ ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಆಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, 'ವೃತ್ತಾಂತ ಪತ್ರಿಕೆ," ಮೈಸೂರು

ಪ್ರಿಂಟುಮಾಡುವ ಯಂತ್ರ ಬೇಕೇ?

"ವೃತ್ತಾಂತ ಪತ್ರಿಕೆ"ಯು ಪ್ರಿಂಟಾಗುತ್ತಿರುವ ಮುದ್ರಾಯಂತ್ರವು ಬಿಕರಿಗೆ ಸಿದ್ಧವಾಗಿದೆ. ಡಬ್ಬಲ್ ಡೆಮ್ಮಿ ಸೈಜು. ಕೈಯಿಂದ ತಿರುಗಿಸುವುದಕ್ಕೂ, ಎಂಜಿನ್ ಶಕ್ತಿಯಿಂದ ತಿರುಗಿಸುವುದಕ್ಕೂ ಉಪಕರಣಗಳು ಉಂಟು. ಈ ಯಂತ್ರದಲ್ಲಿ ಪ್ರಿಂಟಾಗುತ್ತಿರುವುದನ್ನು ಬಂದು ನೋಡಬಹುದು. ಕ್ರಯ 1,200 ರೂ.

[111–2] ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೪ ನೇ ಇಸವಿ ಮೇ ತಾ ೨೧ ನೇ ಗುರುವಾರ

ಮೈಸೂರಿನಲ್ಲಿ ಕಸಬುಗಳು

ಮೈಸೂರು ಸಂಪದಭ್ಯುದಯ ಸಮಾಜದವರು 'ಹತ್ತಿ ಬೀಜದ ಉತ್ಪತ್ತಿಗಳು' ಎಂಬ ಒಂದು ಸಣ್ಣ ಪುಸ್ತಕವನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ, ಮತ್ತು ಮೈಸೂರು ಗವರ್ನ್‌ಮೆಂಟಿನವರು ನಮ್ಮ ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯದ ಸ್ಥಿತಿಗತಿಯ ವಿಷಯದಲ್ಲಿ ಸೇನಾರ್ ಮಾರಿ ಎಂಬ ಇಟಲಿ ರೇಷ್ಮೆ ನಿಪುಣರು ಬರೆದಿರುವ ರಿಪೋರ್ಟನ್ನು ಕಳುಹಿಸಿರುತ್ತಾರೆ. ಇವೆರಡನ್ನೂ ಓದಿ ನೋಡುವಲ್ಲಿ ಕಸಬುಗಳನ್ನು ಪ್ರೋತ್ಸಾಹಪಡಿಸುವುದಕ್ಕೆ ಕೆಲವು ಮಟ್ಟಿಗೆ ಪ್ರಯತ್ನಗಳು ನಡೆದಿರುವವೆಂದು ಗೊತ್ತಾಗುವುದು.

ಸೇನಾರ್ ಮಾರಿಯವರು ರಿಪೋರ್ಟಿನಲ್ಲಿ ಬರೆದಿರುವ ವಿಚಾರಗಳು ಅಷ್ಟೇನೂ ಸಂತೋಷಕರವಾಗಿಲ್ಲ. ರೇಷ್ಮೆಯ ಕಸಬು ಈಗ ಸಂಸ್ಥಾನದಲ್ಲಿ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಈ ರಿಪೋರ್ಟು ಚೆನ್ನಾಗಿ ತಿಳಿಸುತ್ತದೆ. ಆ ಕಸಬನ್ನು ಮಾಡುತ್ತಿರುವವರು ತರಬೇತಾದವರಲ್ಲ, ಅವರು ಅನುಸರಿಸುತ್ತಿರುವ ಕ್ರಮಗಳಲ್ಲಿ ಬಹಳ ನಷ್ಟವಾಗುತ್ತಿದೆ. ಈ ರಿಪೋರ್ಟಿನಲ್ಲಿ ಈ ಕ್ರಮಗಳ ಲಾಭನಷ್ಟಗಳನ್ನು ಕುರಿತು ಬರೆಯಲಾಗಿದೆಯೇ ಹೊರತು ಅವುಗಳನ್ನು ತಿದ್ದಿ ಅಭಿವೃದ್ಧಿಗೆ ತರುವ ಮಾರ್ಗಗಳನ್ನು ಸೂಚಿಸಿಲ್ಲ. ಈ ಕಸಬುದಾರರು ಯಾವ ಯಾವ ಕೆಟ್ಟ ಅಭ್ಯಾಸಗಳನ್ನು ಇಟ್ಟುಕೊಂಡು ಅನುಸರಿಸುತ್ತಾ ಬಂದಿದ್ದಾರೆಂಬುವುದನ್ನು ಮಾತ್ರ ಈ ರಿಪೋರ್ಟು ಹೇಳುತ್ತದೆ, ಆ ಕೆಟ್ಟ ಅಭ್ಯಾಸಗಳನ್ನು ಯಾವ ರೀತಿ ಬಿಟ್ಟು ಕಸಬನ್ನು ಅಭಿವೃದ್ಧಿಮಾಡಿಕೊಳ್ಳಬೇಕೋ ಸೂಚಿಸಿರುವುದಿಲ್ಲ. ಸೇನಾರ್ ಮಾರಿಯವರು ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯವು ಮುಂದೆ ಬಹಳ ಲಾಭಕರವಾಗುವುದೆಂದು ತಿಳಿದುಕೊಂಡಿದ್ದಾರೆ, ಆದಕಾರಣ ಅವರು ಇಷ್ಟರಲ್ಲೇ ಅಂಥಾ ಲಾಭಕರವಾದ ವಿಧಾನಗಳನ್ನೂ ಮಾರ್ಗಗಳನ್ನೂ ತಿಳಿಯ ಹೇಳುವರೆಂದು ನಂಬುತ್ತೇವೆ. ಅವರು ಹೇಳಿಕೊಡುವ ಮಾರ್ಗಗಳನ್ನು ಅನುಸರಿಸಿದ ಪಕ್ಷದಲ್ಲಿ ನಮ್ಮ ರೈತರು ಒಳ್ಳೇ ರೇಷ್ಮೆಯನ್ನು ತಯಾರುಮಾಡಿ ಲಾಭ ಸಂಪಾದನೆ ಮಾಡುವರೆಂದು ಊಹಿಸಬಹುದು. ಸರ್ಕಾರದವರು ಒಳ್ಳೆಯ ರೇಷ್ಮೇ ಕಾರ್ಖಾನೆಯನ್ನಿಟ್ಟು, ರೇಷ್ಮೇ ಕಸಬು ಮಾಡುವ ಕ್ರಮಗಳನ್ನು ನಮ್ಮ ಜನರಿಗೆ ಕಲಿಸಿಕೊಟ್ಟರೆ ಈ ಕಸಬು ಬಹಳ ಮಟ್ಟಿಗೆ ಅಭಿವೃದ್ಧಿಯಾದೀತೆನ್ನುವುದಕ್ಕೆ ಸಂಶಯವಿಲ್ಲ. ಇದಕ್ಕಾಗಿ ಒಂದು ಕಂಪನಿಯನ್ನು ಮಾಡಬೇಕಾಗಬಹುದು. ಇದರಲ್ಲಿ ಒಂದು ದೊಡ್ಡ ಕಷ್ಟವಿದೆ. ಬುದ್ಧಿವಂತಿಕೆಯಾಗಿಯೂ ಸತ್ಯತೆಯಿಂದಲೂ ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕವರು ಸಿಕ್ಕುವುದೇ ಪ್ರಯಾಸ.

ಹತ್ತೀ ಬೀಜದ ಉತ್ಪತ್ತಿಗಳನ್ನು ಕುರಿತ ಪುಸ್ತಕದ ಕಡೇ ಭಾಗದಲ್ಲಿ ಒಂದು ಕಂಪನಿಯು ಏರ್ಪಾಡು ಮಾಡಲಾಗಿದೆ ಎಂದು ಕಾಣಿಸಿ, ಆ ಪುಸ್ತಕದಲ್ಲಿ ವಿವರಿಸಿರುವಂತೆ ಆ ಕಂಪನಿಯು ಕಾರ್ಖಾನೆಯಲ್ಲಿ ಬೇರೆ ಬೇರೆ ವ್ಯಾಪಾರ ವಸ್ತುಗಳು ತಯಾರುಮಾಡಲಾಗುತ್ತವೆಂದು ತಿಳಿಸಲಾಗಿದೆ. ಹತ್ತೀ ಬೀಜವನ್ನು ಗಾಣವಾಡಿ ತೆಗೆಯುವ ಯೆಣ್ಣೆಯು ಆಹಾರವಾಗಿಯೂ, ಅಡಿಗೆ ಪದಾರ್ಥಗಳಿಗೂ ಉಪಯೋಗವಾಗುತ್ತದೆ. ತುಪ್ಪಕ್ಕಿಂತಲೂ ಇದು ಅಗ್ಗವಾಗಿ ಸಿಕ್ಕುವುದಲ್ಲದೆ ಇದನ್ನು ತುಪ್ಪಕ್ಕೆ ಪ್ರತಿಯಾಗಿ ಎಲ್ಲಾ ಕೆಲಸಗಳಿಗೂ ಉಪಯೋಗಿಸಬಹುದು. ಯೆಣ್ಣೆ ತೆಗೆದ ಮೇಲೆ ಬರುವ ಹತ್ತಿಯ ಹೊಟ್ಟನ್ನೂ ಹಿಂಡಿಯನ್ನೂ ದನಗಳಿಗೆ, ಅದರಲ್ಲೂ ಕರೆಯುವ ಹಸುಗಳಿಗೂ ಎಮ್ಮೆಗಳಿಗೂ ಆಹಾರವಾಗಿ ಹಾಕುತ್ತಾ ಬಂದರೆ ಅವು ಪುಷ್ಟಿಯಾಗಿ, ಹೆಚ್ಚಾಗಿ ಒಳ್ಳೇ ಹಾಲನ್ನು ಕರೆಯುತ್ತವೆ. ಹತ್ತಿಯ ಬೀಜದಿಂದ ಉತ್ಪನ್ನವಾಗುವ ಎಲ್ಲಾ ವಸ್ತುಗಳನ್ನೂ ಜನರು ಉಪಯೋಗಿಸಿಕೊಳ್ಳಬಹುದು. ಈಗಲಾದರೋ ಹತ್ತೀ ಬೀಜವನ್ನು ಬಹು ವಿಶೇಷವಾಗಿ ಕೂಡಿಸಿ ಇಂಗ್ಲೆಂಡಿಗೆ ಕಳುಹಿಸಿಬಿಡುತ್ತಾರಾದ್ದರಿಂದ ಇದರಲ್ಲಿ ನಮ್ಮ ಸೀಮೆಗೆ ಸ್ವಲ್ಪ ನಷ್ಟಸಂಭವಿಸುತ್ತಿದೆ. ನಮ್ಮ ಸೀಮೆಯ ಜನರಿಗೆ ಅದರ ಯೆಣ್ಣೆ ಬೇಕು. ಅದರ ಗುಣವನ್ನು ತಿಳಿದುಕೊಂಡ ಮೇಲೆ ಎಲ್ಲರೂ ಅದನ್ನೇ ಉಪಯೋಗಿಸಬಹುದು. ಹತ್ತಿಯ ಹೊಟ್ಟೂ ಹಿಂಡಿಯೂ ನಮ್ಮ ಗೋಶಾಲೆಗಳಿಗೆ, ವಿಶೇಷವಾಗಿ ಕರೆಯುವ ದನಗಳಿಗೆ ಬೇಕಾಗಿರುತ್ತವೆ. ಈಗ ಒಳ್ಳೆಯ ಹಾಲು ಸಿಕ್ಕುವುದೇ ಪ್ರಯಾಸ. ಸಿಕ್ಕಿದರೂ ಬಹಳ ಪ್ರಿಯವಾಗಿದೆ. ಈ ಹಿಂಡಿ ಹೊಟ್ಟನ್ನು ಹಾಕಿದರೆ ದನಗಳು ಹೆಚ್ಚು ಹಾಲು ಕೊಡುವವು.

ಆದಕಾರಣ ಇದಕ್ಕಾಗಿ ದಾವಣಗೆರೆಯಲ್ಲೋ ಹರಿಹರದಲ್ಲೋ ಒಂದು ಕಂಪನಿ ಏರ್ಪಾಡಾದರೆ ನಾವು ತುಂಬಾ ಸಂತೋಷಪಡುತ್ತೇವೆ. ಇದರಲ್ಲಿ ತುಂಬಾ ಲಾಭ ಉತ್ಪತ್ತಿಯಾಗುವುದೆಂದು ಮಾತ್ರ ನಾವು ನಿಶ್ಚಿತವಾಗಿ ಹೇಳಲಾರೆವು, ಯಾಕೆಂದರೆ ಅದನ್ನು ನಡಿಸುವ ಜನಗಳ ಸಾಮರ್ಥ್ಯವೂ ಚಟುವಟಿಕೆಯೂ ಸತ್ಯಸಂಧತೆಯೂ ಇದ್ದಂತೆ ಅದು ಲಾಭಕರವಾಗಿಯೋ ನಷ್ಟಕರವಾಗಿಯೋ ಪರಿಣಮಿಸೀತು. ಹತ್ತಿಯ ಬೀಜವೇನೋ ದಾವಣಗೆರೆಯ ಸುತ್ತುಮುತ್ತಿನಲ್ಲಿ ದೊರಕುತ್ತದೆ, ಅದರಿಂದ ತಯಾರಾಗುವ ಯೆಣ್ಣೆಯೂ, ಹಿಂಡಿ ಹೊಟ್ಟುಗಳೂ ಸುಲಭ ದರದಲ್ಲಿ ಬಿಕರಿ ಆಗಬಹುದು. ಮಿತವಾದ ಖರ್ಚನ್ನಿಟ್ಟು ಎಚ್ಚರಿಕೆಯಾಗಿ ನಡಿಸಿದ ಪಕ್ಷದಲ್ಲಿ ಈ ಕಸಬಿನಲ್ಲಿ ಲಾಭವಿದೆ ಎನ್ನುವುದಕ್ಕೆ ಸಂಶಯವಿಲ್ಲ. ಕಸಬುಗಳಾಗಬೇಕೆಂದು ಬಹಳವಾಗಿ ಮಾತನಾಡುತ್ತಿರುವವರು ಈ ಕಸಬಿಗೆ ಬೇಕಾಗಿರುವ ಹಣವನ್ನು ಕೂಡಿಸಿ, ಲಾಭಕರವಾದ ರೀತಿಯಲ್ಲಿ ನಡಿಸಿಕೊಂಡು ಬರಲೆಂದು ನಂಬಿ ನಿರೀಕ್ಷಿಸುತ್ತೇವೆ. ಈ ಹತ್ತೀ ಬೀಜದ ಕಾರ್ಖಾನೆಗೆ 1,00,000 ರೂಪಾಯಿ ಬೇಕೆಂದೂ, ಈ ಪೈಕಿ ಮೈಸೂರು ಸರ್ಕಾರದವರು 50,000 ರೂಪಾಯಿ ಕೊಡುತ್ತಾರೆಂದೂ ಹೇಳಲಾಗಿದೆ. ಈ ಕಾರ್ಖಾನೆಯನ್ನು ಪ್ರಾರಂಭಿಸಿ ಪರೀಕ್ಷಿಸಬೇಕಾದದ್ದೇನೋ ಬಹಳ ಅವಶ್ಯಕವೇ ಸರಿ. ಇದರಲ್ಲಿ ಲಾಭವಿದೆ ಎನ್ನುವುದರಲ್ಲಿ ಸಂಶಯವಿಲ್ಲ; ಆದರೆ ಅದು ಲಾಭಕರವೇ ಆದೀತೆಂದು ಯಾರೂ ಊಹಿಸಿ ಹೇಳಲಾರರು. ನಾವೇನೋ ಅದು ಲಾಭಕರವಾಗಲೆಂದು ಹಾರೈಸುತ್ತೇವೆ. ಈ ಕಂಪನಿಯಲ್ಲಿ ಷೇರುಗಳನ್ನು ಕೊಂಡುಕೊಳ್ಳಬೇಕೆಂದು ಅಪೇಕ್ಷಿಸುವವರು ಬೆಂಗಳೂರಿನಲ್ಲಿರುವ ಮೈಸೂರು ಬ್ಯಾಂಕಿಗೆ ಬರೆದುಕೊಂಡಲ್ಲಿ ಅವರು ಅವಶ್ಯವಾದ ಫಾರಮುಗಳನ್ನು ಕಳುಹಿಸುತ್ತಾರೆ.

ಇದಲ್ಲದೆ, ಮೈಸೂರು ಗವರ್ನ್‌ಮೆಂಟಿನವರು ಕಸಬುಗಳನ್ನು ಪ್ರಾರಂಭಿಸಿ ನಡಿಸಬೇಕೆಂಬವರಿಗೆ ಅದಕ್ಕಾಗಿ ಅಡ್ವಾನ್ಸಾಗಿ ಸಾಲಗಳನ್ನು ಕೊಡಿಸುತ್ತೇವೆಂದು ಹುಕುಂ ಕೊಟ್ಟು ಇರುತ್ತಾರೆ. ಮತ್ತು ಅಂಥವರಿಗೆ ಆಯಾ ಕಸಬುಗಳ ವಿಷಯವಲ್ಲಿ ಬೇಕಾದ ಸಲಹೆಗಳನ್ನೂ ತಿಳುವಳಿಕೆಯನ್ನೂ ಕೊಡುವರೆಂದೂ, ಅಂಥಾ ಸಲಹೆಗಳ ಮತ್ತೂ ತಿಳುವಳಿಕೆಗಳ ಸಾಧಕ ಬಾಧಕಗಳ ವಿಷಯದಲ್ಲಿ ಗವರ್ನ್‌ಮೆಂಟಿನವರು ಯಾವ ಜವಾಬ್ದಾರಿಯನ್ನೂ ವಹಿಸುವುದಿಲ್ಲವೆಂದೂ ಹೇಳಿರುವರು. ಆದಕಾರಣ ಹಣವನ್ನು ಸಾಲ ಪಡೆಯತಕ್ಕವರೂ, ತಮ್ಮ ಹಣವನ್ನು ಹಾಕತಕ್ಕವರೂ ಆಯಾ ಕಸಬುಗಳ ಫಲಾಫಲಗಳಿಗೆ ಅವರೇ ಜವಾಬ್ದಾರರೆಂದು ತಿಳಿಯಬೇಕು. ಸರ್ಕಾರದವರು ಕೊಡುವ ಸಾಲಗಳು ಜಾಗ್ರತೆ ವಾಪಸು ವಸೂಲಾಗಬೇಕೆಂದು ಕೇಳುವುದೂ, ಅದಕ್ಕೆ ನಿಬಂಧನೆಗಳನ್ನು ಕಲ್ಪಿಸಿರುವುದೂ ನ್ಯಾಯವೂ ಧರ್ಮವೂ ಆಗಿದೆ.

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಮೈಸೂರು ಸಂಸ್ಥಾನದ ವಿದ್ಯುಚ್ಛಕ್ತಿ ಇಲಾಖೆಯ ಮುಖ್ಯಾಧಿಕಾರಿಯಾದ ಮಿ|| ಸಿ. ಎಫ್. ಛೀಮ್ಸ್‌ರವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದನ್ನು ಗವರ್ನ್‌ಮೆಂಟಿನವರು ಅಂಗೀಕರಿಸಿಕೊಂಡರೆಂದು ಪ್ರಕಟವಾಗಿದೆ.

ಬೆಂಗಳೂರು ಮಲ್ಲೇಶ್ವರದಲ್ಲಿ ಮ|| ಗರುಡಾಚಾರ್ರ ಮನೆಯೊಳಗೆ ಬೆಳ್ಳಿ ಪಾತ್ರೆಗಳನ್ನು ಕಳವುಮಾಡಿದ ಸಿ. ಕೆ. ಶ್ರೀನಿವಾಸಯ್ಯಂಗಾರ್ ಎಂಬುವನಿಗೆ ಮ್ಯಾಜಿಸ್ಟ್ರೇಟರು ಹದಿನೈದು ದಿನಗಳ ಸಾಧಾರಣ ಸಜಾ ವಿಧಿಸಿದರು.

ಬೆಂಗಳೂರಿನಲ್ಲಿ ಅಲಸೂರು ಸ್ಟೇಷನ್ ಪೊಲೀಸ್ ಕಾನ್‌ಸ್ಟೆಬಲ್ ಮಾಷಾಕರಾಯನು ಅಜಾಗರೂಕತೆಯಿಂದ ಒಬ್ಬ ಖೈದಿಯನ್ನು ಬಿಟ್ಟುಬಿಟ್ಟನೆಂದು ಮ್ಯಾಜಿಸ್ಟ್ರೇಟರು ಅವನಿಗೆ 3 ತಿಂಗಳ ಸಾದಾ ಸಜವನ್ನೂ, 25 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದಾರೆ.

ಮುನ್ಸಿಫ್ ಕೋರ್ಟುಗಳಲ್ಲಿ ಮೊದಲಿನಂತೆ ಸಾಕ್ಷಿಗಳ ಠೇವಣಿಯುತ್ತರಗಳನ್ನೆಲ್ಲಾ ಕನ್ನಡದಲ್ಲೇ ಗುಮಾಸ್ತೆಯರಿಂದ ಬರೆಸಬೇಕೆಂದೂ, ಮುನ್ಸಿಫರು ಮುಖ್ಯ ವಿಷಯಗಳನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳಬಹುದೆಂದೂ ಸರ್ಕಾರದವರು ಹುಕುಂ ಮಾಡಿದ್ದಾರೆ.

ಲೇಟ್ ಮ|| ಜಸ್ಟಿಸ್ ಟಿ. ನರಹರಿರಾಯರ ಕುಮಾರರಾದ 27 ವಯಸ್ಸಿನ ಮ|| ಜಯಸೀಮರಾಯರು ಕಳೆದ ವಾರ ಬೆಂಗಳೂರಿನಲ್ಲಿ ವಿಷಮಶೀತಜ್ವರದಿಂದ ಕಾಲವಾದರು. ಇವರು ನಮ್ಮ ಸರ್ಕಾರದಿಂದ ೬೦ ರೂಪಾಯಿ ವೇತನ ಪಡೆದು ಬೊಂಬಾಯಿನಲ್ಲಿ ವೈದ್ಯವನ್ನು ಕಲಿಯುತ್ತಿದ್ದರು.

ಒಬ್ಬ ಬಾತ್ಮೀದಾರರಿಂದ—ಕಳೆದ ತಾ 12 ನೇ ಮಂಗಳವಾರ ರಾಜಧಾನಿಯ ಕೋಟೆ ಗಣಪತಿ ದೇವಸ್ಥಾನದಲ್ಲಿ ದೇವರಿಗೆ ಧರಿಸಿದ್ದ ಬೆಳ್ಳಿಯ ಕವಚ, ಇತರ ಕೆಲವು ಆಭರಣಗಳು ಮತ್ತೂ ಪೂಜಾ ಸಾಮಗ್ರಿಗಳು, ಇವುಗಳನ್ನು ಯಾರೋ ಕಳುವುಮಾಡಿದರು. ಪತ್ತೆ ತರಮೂದು ನಡೆಯುತ್ತಿದೆ.

ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮಿ|| ಟಿ. ಡೆನ್‌ಹಂ ರವರು ನಮ್ಮ ಸರ್ಕಾರದವರ ಅಪ್ಪಣೆಯ ಪ್ರಕಾರ ಆಸ್ಟ್ರೇಲಿಯಾ ದ್ವೀಪಕ್ಕೆ ಅಲ್ಲಿನ ವಿದ್ಯಾಭ್ಯಾಸದ ಕ್ರಮವನ್ನು ತಿಳಿದುಕೊಂಡು ಬರುವದಕ್ಕಾಗಿ ಹೋಗಿರುತ್ತಾರೆಂದೂ, ಅವರು ಜೂನ್ ಆಖೈರಿನೊಳಗೆ ವಾಪಸು ಬರುವರೆಂದೂ ಕೇಳುತ್ತೇವೆ.

ಕಳೆದ 15 ನೇ ತಾ ನಿಂದ ಹೊಸ ಸ್ಟಾಂಪುಗಳೂ ಹೊಸ ಛಾಪಾ ಕಾಗದಗಳೂ ಜಾರಿಗೆ ತರಲ್ಪಟ್ಟವು. ಅವುಗಳಲ್ಲಿ ನಮ್ಮ ಮಹಾರಾಜರವರ ಮುಖಭಾವವು ಅಚ್ಚಾಗಿರುತ್ತದೆ. ಆದರೆ ಅದು ಅಷ್ಟೇನೂ ಚೆನ್ನಾಗಿರುವಂತೆ ಕಾಣುವುದಿಲ್ಲ. ಬೆಂಗಳೂರು ದಂಡಿನಲ್ಲಿ ಈ ಸ್ಟಾಂಪು ಮತ್ತು ಛಾಪಾಕಾಗದಗಳನ್ನೇ ಉಪಯೋಗಿಸಿಕೊಂಡು, ಅದರ ಲಾಭವನ್ನು ದಂಡಿನ ಉತ್ಪತ್ತಿಗೆ ಸೇರಿಸಿಕೊಳ್ಳುತ್ತಾರೆ.

ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಸಾಕಿಟ್ಟಿರಸಿದ 14 ವಯಸ್ಸಿನ ಸೌ|| ಪದ್ಮಾವತಮ್ಮನೆಂಬ ಅನಾಥೆಯಾದ ಹೆಣ್ಣುಮಗಳನ್ನು ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ಮ|| ಎಸ್. ರಾಜಾರಾವ್, ಬಿ. ಎ. ಯವರು ವರಿಸಿ ಕಳೆದ ವಾರ ವಿವಾಹ ಮಾಡಿಕೊಂಡರು. ಬೆಂಗಳೂರಿನ ಅನೇಕ ದೊಡ್ಡ ಮನುಷ್ಯರು ಸಂಸಾರ ಸಮೇತ ವಿವಾಹಕಾಲದಲ್ಲಿ ಹಾಜರಾಗಿದ್ದು ನೂತನ ದಂಪತಿಗಳನ್ನು ಹರಸಿದರು.

ಕಳೆದ 11 ನೇ ತಾ ಸೋಮವಾರ ಶ್ರೀಮನ್ ಮಹಾರಾಜರವರು ನೀಲಗಿರಿ ಬೆಟ್ಟದ ಮೇಲೆ ಫರ್ನ್‌ಹಿಲ್ ಅರಮನೆಯಲ್ಲಿ ಯೂರೋಪಿಯನ್ ಸರದಾರರನ್ನೂ ದೊರೆಸಾನಿಗಳನ್ನೂ ಕರೆಸಿಕೊಂಡು ಬಹು ಆದರದಿಂದಲೂ ಆಟ್ಟಹಾಸವಾಗಿಯೂ ಅವರಿಗೆಲ್ಲಾ ಔತಣವನ್ನು ಮಾಡಿಸಿ ಸಂತೋಷಪಡಿಸಿದರು. ಶ್ರೀಮನ್ ಮಹಾರಾಜರವರು ರಾಣೀವಾಸದವರ ಸಮೇತ ಈ ವಾರ ನೀಲಗಿರಿಯಿಂದ ರಾಜಧಾನಿಗೆ ದಯಮಾಡುವವರಾಗಿದ್ದಾರೆ.

ಒಬ್ಬ ಬಾತ್ಮೀದಾರರು ಬರೆಯುವುದು—ನೀಲಗಿರಿ ಜಿಲ್ಲಾ ಕೂನೂರು ಬಜಾರಿನಲ್ಲಿ ಒಂದು ನಾಯಿಗೆ ಹುಚ್ಚು ಹಿಡಿದು ಸುಮಾರು 10 12 ವರುಷ ವಯಸ್ಸುಳ್ಳ ಹುಡುಗರು ಸುಮಾರು 10-15 ಜನಗಳನ್ನು ಕಡಿದು ಗಾಯಪಡಿಸಿದ್ದಲ್ಲದೆ ಊರಲ್ಲಿದ್ದ ಕೆಲವು ನಾಯಿಗಳನ್ನೂ ಕಡಿಯಿತು. ಮೇಲ್ಪಟ್ಟ ನಾಯಿಗಳನ್ನು ಕೂನೂರು ಮುನಿಸಿಪಾಲಿಟಿಯಿಂದ ಸುಡಿಸಿದರು. ಆ ಜನಗಳನ್ನು ಕೂನೂರು ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡುತ್ತಾ ಇದ್ದಾರೆ.

ಮೈಸೂರು ಅರಸೀಕೆರೆ ರೈಲ್ವೆ ರಸ್ತೆಯಲ್ಲಿ ಮನದಗೆರೆ ಸ್ಟೇಷನ್‌ನಿಂದ ಚಿಕ್ಕೇರಿ ಮಾರ್ಗವಾಗಿ ಶ್ರವಣಬೆಳ್ಗೊಳಕ್ಕೆ ರೈಲ್ ರಸ್ತೆ ಹಾಕಬಹುದೇ ಎಂದು ರೈಲ್ವೆ ಚೀಫ್ ಇಂಜನಿಯರವರು ಪ್ರಶ್ನೆಮಾಡಿದ್ದಕ್ಕೆ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ಆ ರಸ್ತೆಗೆ ಬದಲಾಗಿ ಹೊಳೆನರಸೀಪುರದಿಂದ ಕಡವಿನ ಹೊಸಹಳ್ಳಿ, ನಾಣಕ್ಕಿ, ಜೋಳೀನಹಳ್ಳಿ, ಹಿರಿಬಿಲ್ಲತ್ತಿ, ಹಿಂಪಲಹಳ್ಳಿಗಳ ಮೇಲೆ ಶ್ರವಣಬೆಳ್ಗೊಳಕ್ಕೆ ರೈಲ್ ರಸ್ತೆ ಹಾಕಿದರೆ ಅನುಕೂಲವೆಂದು ಅಭಿಪ್ರಾಯಪಟ್ಟು ಆ ರೀತಿ ತಿಳಿಸಿದ್ದಾರೆ.

ರಾಜಧಾನಿಗೆ ಒಳ್ಳೇ ಮಳೆ ಒಂದಾದರೂ ಬರಲಿಲ್ಲ. ಸಿಡಿಲು ಮಿಂಚುಗಳಿಂದ ಕೂಡಿ ಮೋಡವಿಡುತ್ತಲೇ ಇದೆ. ಕಳೆದ ಶುಕ್ರವಾರ ರಾತ್ರಿ ಶಿವಸಮುದ್ರದಿಂದೀಚೆಗೆ 9 ಮೈಲಿ ದೂರದಲ್ಲಿ ರಾವಣಿ ಎಂಬ ಗ್ರಾಮದ ಹತ್ತಿರ ಒಂದು ತೆಂಗಿನ ಮರವು ಗಾಳಿಗೆ ಒಡಿದು ವಿದ್ಯುಚ್ಛಕ್ತಿಯ ತಂತಿಗಳ ಮೇಲೆ ಬಿದ್ದುಕೊಂಡದ್ದರಿಂದ ಶಕ್ತಿಯು ತಂತಿಯ ಮೂಲಕ ಬಾರದೆ ಆ ರಾತ್ರಿಯೆಲ್ಲಾ ರಾಜಧಾನಿಯಲ್ಲಿ ಕಗ್ಗತ್ತಲು ಕವಿದಿತ್ತು. ಇದಲ್ಲದೆ ಅದೇ ರಾತ್ರಿ ರಾಜಧಾನಿಯ 3ನೇ ಸರ್ಕಲಿಗೆ ಸೇರಿದ ನಜರಬಾದು, ದೊಡ್ಡಪೇಟೆಗಳಲ್ಲಿ ಸಿಡಿಲೆರಗಿ ಕೆಲವು ವಿದ್ಯುಚ್ಛಕ್ತಿ ದೀಪದ ಬುಡ್ಡಿಗಳು ಒಡೆದುಹೋದವು.

ಕೊಡಗಿನ ಚೀಫ್ ಕಮಿಷನರ್‌ರವರು ಫಾರೆಸ್ಟ್ ಇಲಾಖೆಯ ವಾರ್ಷಿಕ ರಿಪೋರ್ಟನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಕೊಡಗು ಸಣ್ಣ ಸೀಮೆಯಾದರೂ ಅಲ್ಲಿ ಕಾಡುಗಳೇ ಹೆಚ್ಚಾಗಿವೆ. ಕಳೆದ 1912-13 ನೇ ಸಾಲಿನಲ್ಲಿ ಫಾರೆಸ್ಟಿನ ಉತ್ಪತ್ತಿಯು 2,77,602 ರೂಪಾಯಿ, ಖರ್ಚು 1,65,710 ರೂಪಾಯಿ ಆಗಿ ಸರ್ಕಾರಕ್ಕೆ 1,11,893 ರೂಪಾಯಿ ಮಿಕ್ಕಿರುತ್ತದೆ. ಕೆಲವು ಕಡೆಗಳಲ್ಲಿ ಲಂಟಾನಾ ಗಿಡವನ್ನು ನಾಶಪಡಿಸುವ ಏರ್ಪಾಡು ನಡೆದಿದೆ; ಜಂಗಲಿನಲ್ಲಿ ಕಾಳ್ಗಿಚ್ಚು ಹಬ್ಬದಂತೆ ಪ್ರಯತ್ನಪಟ್ಟಿದ್ದಾರೆ. ಆದಾಗ್ಯೂ 3,030 ಎಕರೆಯಷ್ಟು ಕಾಡು ಬೆಂಕಿಬಿದ್ದು ಸುಟ್ಟುಹೋಯಿತು. ಇದು ಕೊಡಗಿನ ಉತ್ತರಭಾಗದಲ್ಲೇ ಹೆಚ್ಚೆಂದು ತಿಳಿದು ಬಂದಿದೆ

ಮೈಸೂರು ಜನರಲ್ ಏಜನ್ಸಿ ಪ್ರೊಪ್ರೈಟರ್ ಮ|| ಎಲ್. ರಾಮಚಂದ್ರ ರಾಯರು ಬರೆಯುವುದು —ನೆನ್ನೆ ಬೆಳಿಗ್ಗೆ ನಮ್ಮ ರೈತನು ಜಬೂರ್‌ನಿಂದ ಈ ಊರಿಗೆ ತಂದ ಸವಾರೀ ಎತ್ತಿನ ಗಾಡಿಯನ್ನು ಮೈಸೂರು ಅಮಲ್ದಾರರ ಅಪ್ಪಣೆ ಮೇರೆಗೆ ತಾಲ್ಲೂಕು ಪೋಲೀಸಿನವರು ಬಲಾತ್ಕಾರ ಮಾಡಿ ಹಿಡಿದು ರೈಲ್ವೇ ಸ್ಟೇಷನ್ನಿಗೆ ಸಾಗಿಸಿ ಎತ್ತುಗಳು ಎಳೆಯಲಾರದಷ್ಟು ಭಾರವಾದ ಕಬ್ಬಿಣದ ಕಂಭಗಳನ್ನು ಗಾಡಿಯಲ್ಲಿ ತುಂಬಿಸಿ ಏಕಾಏಕಿ ಸಾಗಿಸುವದರಲ್ಲಿದ್ದರು ಅಷ್ಟರಲ್ಲೇ ನಮಗೆ ತಿಳಿದು ಡೆಪ್ಯುಟಿ ಕಮಿಷನರರ ಬಳಿಗೆ ಹೋಗಿ ವಿಜ್ಞಾಪಿಸಿಕೊಳ್ಳಲು, ಆ ಗಾಡಿಯನ್ನು ಕೂಡಲೆ ಬಿಡಿಸಬೇಕೆಂದು ಅಮಲ್ದಾರ್ರಿಗೆ ಹುಕುಂ ಬರೆದು ನಮ್ಮ ವಶಕ್ಕೆ ಕೊಟ್ಟರು ಅನಂತರ ಅಮಲ್ದಾರರು ಕೊತ್ವಾಲನಿಗೆ ಅದೇ ರೀತಿ ಹುಕುಂ ಕೊಟ್ಟಾಗ್ಯೂ ಈತನು ಬಂದು ಗಾಡಿ ಬಿಡಿಸಲು 3-4 ಗಂಟೆ ಸಾವಕಾಶವಾಯಿತು ಇದೇ ರೀತಿ ಅನೇಕ ಗಾಡಿಗಳ ಮಾಲೀಕರಾದ ಬಡರೈತರು ಸರ್ಕಾರದ ನೌಕರರ ಕೈಗೆ ಸಿಕ್ಕಿ ಇನ್ನೂ ಪೇಚಾಡುತ್ತಲಿದ್ದಾರೆ. ಈ ಪದ್ಧತಿಯನ್ನು ಯಾಕೆ ತಪ್ಪಿಸಬಾರದೋ ತಿಳಿಯುವುದಿಲ್ಲ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಕೃಷಿ ಶಾಸ್ತ್ರಕ್ಕೆ ಸಂಬಂಧಪಟ್ಟ ಬೋಧನೆ ಮತ್ತು ರೂಢಿ ಪಾಠಗಳನ್ನು ಸುಲಭವಾಗಿ ಕನ್ನಡ ಭಾಷೆಯಲ್ಲಿ ಉಪದೇಶ ಮಾಡುವದಕ್ಕಾಗಿ ಮೊದಲನೆ ಕೆಲವು ಪಾಠಗಳನ್ನು ಹೆಬ್ಬಾಳದ ವ್ಯವಸಾಯದ ಪಾಠಶಾಲೆಯಲ್ಲಿ ಇದೇ ಮಾಹೆ 25 ನೇ ತಾ ಸೋಮವಾರದಿಂದ ಆರು ದಿವಸಗಳ ವರಿಗೂ ಜರುಗಿಸಲಾಗುತ್ತದೆ. ಹೇಳಿಕೊಡುವ ವಿಷಯಗಳ್ಯಾವವೆಂದರೆ —(1) ಭೂವ್ಯವಸಾಯಕ್ಕೆ ಸಂಬಂಧಪಡುವ ಕ್ರಮಗಳ ಮತ್ತು ಅದನ್ನು ಆಚರಿಸುವ ವಿಧಾನಗಳು ; (2) ದೇಶೀ ಮತ್ತು ವಿದೇಶೀ ಮುಟ್ಟುಗಳ ವಿಷಯವಾಗಿ ಉಪಯೋಗಿಸುವಲ್ಲಿಯೂ ಹೊರಗೂ ತಿಳಿಯಬೇಕಾದ ಅನುಭವ ಪಾಠಗಳು

ಕೆಲಸ ಕಾರ್ಯಗಳನ್ನು ಬಿಟ್ಟುಬರಲು ಅನನುಕೂಲವಿದ್ದರೂ ಹೊಸ ಪದ್ಧತಿಯಂತೆ ವ್ಯವಸಾಯದ ವಿಧಾನಗಳನ್ನು ಕಲಿಯ ಬೇಕೆಂದು ಆಸಕ್ತರಾಗಿರುವ ಮೈಸೂರು ಸೀಮೆಯ ರೈತರಿಗಾಗಿ ಈ ಏರ್ಪಾಟು ಮಾಡಿರುವದರಿಂದ ಅಪೇಕ್ಷೆಯುಳ್ಳವರೆಲ್ಲರೂ ಈ ಪಾಠಕ್ಕೆ ಸೇರಬಹುದು ಈ ವಿಧಾನಗಳನ್ನು ತಮ್ಮ ಸೇವಕರಿಗೂ ಕಲಿಸಬೇಕೆಂದು ಇಷ್ಟಪಡುವವರೂ ಸಹ ಹಾಗೆ ಮಾಡಬಹುದು. ಮೇಲ್ಕಂಡ ಉಪದೇಶವು ಮುಫತ್ತಾಗಿ ಜರುಗಿಸಲಾಗುತ್ತೆ. ಪಾಠ ಜರುಗುವ ಒಂದು ವಾರವೂ ಹೆಬ್ಬಾಳದಲ್ಲೇ ಇರುವುದಕ್ಕೆ ಮನಸ್ಸುಳ್ಳವರಿಗೆ ಇಳಿದುಕೊಳ್ಳುವದಕ್ಕೆ ಸ್ಥಳವನ್ನು ಮುಫತ್ತಾಗಿ ಕೊಡಲಾಗುತ್ತೆ ಅಲ್ಲದೆ ದುಬಾರಿಯಿಲ್ಲದಂತೆ ಅಲ್ಲೇ ಇರುವ ಪಾಠಶಾಲೆಯ ಭೋಜನ ಶಾಲೆಯಲ್ಲಿ ಊಟಕ್ಕೂ ಏರ್ಪಾಟು ಮಾಡಬಹುದು. ಈ ಪಾಠಗಳಿಗಾಗಿ ಬರುವವರೆಲ್ಲರೂ ಆರು ದಿವಸದ ಪಾಠಗಳನ್ನೂ ಮುಗಿಸಿಕೊಂಡು ಹೋಗುವವರಲ್ಲಿ ಬಹಳ ಉಪಯೋಗವುಂಟು ಆದರೆ ಕಾರಣಾಂತರದಿಂದ ಕೆಲವು ಪಾಠಗಳಿಗೆ ಮಾತ್ರ ಇದ್ದು ಹೋಗಬೇಕೆಂಬುವವರನ್ನು ಕೂಡ ಸೇರಿಸಿಕೊಳ್ಳಲಾಗುತ್ತೆ —ಇದಕ್ಕೆ ಸೇರಬೇಕೆಂದು ಅಪೇಕ್ಷಿಸುವವರು ಇದೇ ಮಾಹೆ 23 ನೇ ತಾ. ಶನಿವಾರದೊಳಗೆ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ತಮ್ಮ ಹೆಸರುಗಳನ್ನು ಕಳುಹಿಸಬೇಕು.

ಶಿಡ್ಲಘಟ್ಟದಲ್ಲಿ ನಡೆದ ದೊಂಬಿ ಕಲಹ.

ಇಬ್ಬರಿಗೆ ಗಾಯವಾದದ್ದರಲ್ಲಿ ಒಬ್ಬ ಮೃತಪಟ್ಟನು

ಇದೇ ತಿಂಗಳು 8 ನೇ ತಾ ಶಿಡ್ಲಘಟ್ಟದ ಕಸಬಾ ಸಮ್ಮತು ಹಂಡಿಗನಾಳು ಗ್ರಾಮದ ಬಳಿ ಒಂದು ಹೊಲದ ತಕರಾರಿಗೋಸ್ಕರ ಅಣ್ಣತಮ್ಮಂದಿರಾದ ಬೈಯಣ್ಣನವರ ದೊಡ್ಡ ಮುನೆಪ್ಪನ ಪಕ್ಷದವರಿಗೂ, ಇವರ ತಮ್ಮ ಚಿಕ್ಕ ಮುನೆಪ್ಪನವರ ಪಕ್ಷದವರಿಗೂ ಹೊಲದಲ್ಲಿ ಮಧ್ಯಾಹ್ನ ಸುಮಾರು 2 ಗಂಟೆಯಲ್ಲಿ ಘೋರವಾದ ವ್ಯಾಜ್ಯ ನಡೆದು, ಮರಣಕರವಾದ ಗಾಯಗಳಿಂದ ರಕ್ತವನ್ನು ಸುರಿಸುತ್ತಾ ಸ್ಮರಣೆತಪ್ಪಿದ ಗೊಲ್ಲರ ಚಿಕ್ಕರಾಜಪ್ಪನ ಚಿಕ್ಕ ಬತ್ತಲಪ್ಪ ಮತ್ತು ದೊಡ್ಡ ಬತ್ತಲಪ್ಪ ಎಂಬುವರನ್ನು ಗಾಡಿಯಲ್ಲಿ ತಂದು ಆಸ್ಪತ್ರೆಗೆ ಹಾಜರು ಮಾಡಿದರು ಅಮಲ್ದಾರ್ ಮಿ ಥಾಮ್ಸನ್ ಸಾಹೇಬರವರು ಆಸ್ಪತ್ರೆ ಹತ್ತರಕ್ಕೆ ದಯಮಾಡಿ ಇವರನ್ನು ನೋಡುವಾಗ್ಗೆ ಒಬ್ಬನು ಮಾತಾಡಲಾರದೆ ವಿಶೇಷವಾದ ಏಟುಗಳಿಂದ ರಕ್ತ ವಾಂತಿಗಳನ್ನು ಕಾರುತ್ತಾ, ಮತ್ತೊಬ್ಬನಿಗೆ ತಲೆಯ ಮೇಲೆ ಎರಡು ಮೂರು ಏಟುಗಳಾಗಿ ರಕ್ತ ಸುರಿಯುತ್ತಿದ್ದುದನ್ನೂ ಎಡಗೈ ಮುರಿದು ಹೋಗಿರುವುದನ್ನು ನೋಡಿ ಕನಿಕರಪಟ್ಟು ಚಿಕಿತ್ಸೆ ಮಾಡಲಿಕ್ಕೆ ಬಿಟ್ಟರು ತರುವಾಯ ನಮ್ಮ ಡಾಕ್ಟರವರು ಚಿಕ್ಕ ಬತ್ತಲಪ್ಪನೆಂಬುವನಿಗೆ ತಮ್ಮ ಕೈಲಾದ ಮಟ್ಟಿಗೂ ಸಾಹಸಪಟ್ಟರೂ ಸಾಧ್ಯವಾಗದೆ ಅವನು ರಾತ್ರಿ ಸುಮಾರು ಮೂರು ಗಂಟೆಗೆ ಮೃತಪಟ್ಟನು ಮಾರನೇ ದಿವಸ ಶವವನ್ನು ಡಾಕ್ಟರ ಅಜಮಾಯಿಷಿ ಮಾಡಲ್ಪಟ್ಟಿತು ಮತ್ತೊಬ್ಬನಿಗೆ ಪ್ರಾಣಭಯವೇನೂ ಇಲ್ಲ ಬಹಳ ಮುತುವರ್ಜಿಯಿಂದ ಆಸ್ಪತ್ರೆಯಲ್ಲಿಯೇ ನೋಡಿಕೊಳ್ಳುತ್ತಾರೆ

ಕೇಸನ್ನು ನಮ್ಮ ಅಮಲ್ದಾರ್ರವರು ಖುದ್ದು ಅಜಮಾಯಿಷಿಯಿಂದ ತನಿಖೆ ಮಾಡಿ ಮೃತಪಟ್ಟವನ ಕಡೆಯವರಾದ ಚಿಕ್ಕ ಮುನಿಯಪ್ಪ ಈತನ ಹೆಂಡತಿ ಕೆಂಪಕ್ಕನ ಕಡೆಯಿಂದ ಫೈಸಿಯತ್ತು ತಗೆದುಕೊಂಡು, ಬೈಯಣ್ಣನವರ ಮುನೆಪ್ಪ ಈತನ ಮಗ ಚಿಕ್ಕ ಕೃಷ್ಣಪ್ಪ, ಮಲ್ಲಜನವರ ಮುನಿಯಪ್ಪ, ರೊಯ್ಯಕಾಳ್ಳ ಬಾಷರ್ ಸಾಬಿ, ಹಜಾಂ ಮುನಿಸಾಮಿ, ಬ್ರಾಹ್ಮಣ ನಾರಾಯಣಾ, ಚಿಂತಾಮಣಿ ಪೇಟೆ ಮುನಿಗ, ಡಿಸ್ಟ್ರಿಕ್ಟು ಬೋರ್ಡು ಮೆಂಬರಾದ ಉಲುದೇನಹಳ್ಳಿ ಹನುಮಂತಪ್ಪ, ಇವರುಗಳನ್ನು ದಸ್ತಗಿರಿ ಮಾಡಿದ್ದಾರೆ. ಇವರ ಪೈಕಿ ಬೈಯಣ್ಣನವರ ಮುನಿಯಪ್ಪನ ಹಿರೀ ಮಗ ದೊಡ್ಡ ಕೃಷ್ಣನೆಂಬುವನೂ, ತೋಂಪಣ್ಣನವರ ಬಸಪ್ಪನೆಂಬುವನೂ ಫರಾರಿಯಾಗಿರುವುದರಿಂದ ನಮ್ಮ ಪೋಲೀಸ್ ಇನ್ಸ್‌ಪೆಕ್ಟರವರೂ ಜಮಾದಾರರೂ ಬಹಳ ಮುತುವರ್ಜಿಯಿಂದ ಪತ್ತೇಹಚ್ಚುತ್ತಿದ್ದಾರೆ ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿರುವ ದೊಡ್ಡ ಬತ್ತಲಪ್ಪನು ಫೈಸಿಯತ್ತು ಕೊಡಲಿಕ್ಕೆ ಚೈತನ್ಯವಿಲ್ಲದಿರುವದರಿಂದ ಮುಂದೆ ಆತನ ಫೈಸಿಯತ್ತಿನಲ್ಲಿ ಇನ್ನೂ ಯಾರುಯಾರನ್ನು ದಸ್ತಗಿರಿ ಮಾಡುವರೋ ಗೊತ್ತಿಲ್ಲ ಈ ಕೇಸನ್ನು ನಮ್ಮ ದಯಾಳುಗಳಾದ ಅಮಲ್ದಾರ್ರವರು ಇಲ್ಲಿಂದ ಮುಂದೆ ಈ ಹಾಮಿನಿಗೆ ದಯಮಾಡಿಸಿದ್ದ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರನ್ನು ಕೂಡಿಕೊಂಡು ಖುದ್ದಾಗಿ ತಾವೇ ನಡಿಸುತ್ತಿರುವುದರಿಂದ ಯಾವ ವಿಧವಾದ ವ್ಯತ್ಯಾಸವೂ ನಡೆಯಲಾರದೆಂದು ನಂಬಿ ನಿರೀಕ್ಷಿಸುತ್ತೇನೆ

ಶಿಡ್ಲಘಟ್ಟ. ಒಬ್ಬ ಬಾತ್ಮಿದಾರ್.

ತಾಲ್ಲೂಕು ವರ್ತಮಾನಗಳು.

ದಾವಣಗೆರೆ.—ಕಳೆದ 16 ನೇ ತಾ. ಶುಕ್ರವಾರ ಸಾಯಂಕಾಲ ಸುಮಾರು ಆರೂಮುಕ್ಕಾಲು ಘಂಟೆಗೆ ಅಕಸ್ಮಾತ್ತಾಗಿ ಈ ಊರಿಗೆ ಪೂರ್ವೋತ್ತರ ದಿಕ್ಕಿನಿಂದ ಒಂದು ದೊಡ್ಡ ಬಿರುಗಾಳಿಯೂ, ಅದರ ಹಿಂದೆ ಕಲ್ಲುಮಳೆಯೂ ಪ್ರಾಪ್ತವಾಗಿ ಅನೇಕ ಅರಳೆ ಕಾರ್ಖಾನೆಗಳ ಮೇಲ್ಛಾವಣಿಗಳನ್ನು ಹಾರಿಸಿಬಿಟ್ಟವು ರಸ್ತೆ ಪಕ್ಕಗಳಲ್ಲಿನ ದೊಡ್ಡ ದೊಡ್ಡ ಮರಗಳನ್ನು ಕೆಡವಿಹಾಕಿದವು. ಬಡ ಜನಗಳ ಗುಡಿಸಲುಗಳು ಒಂದೂ ಉಳಿಯದೆ ಹಾರಿಸಲ್ಪಟ್ಟವು. ಆ ರಾತ್ರಿಯೆಲ್ಲಾ ಆ ಬಡಜನಗಳು ಆಶ್ರಯವಿಲ್ಲದೆ ಆ ಛಳಿಯಲ್ಲಿಯೂ ಮಳೆಯಲ್ಲಿಯೂ ಅಲೆಯುತ್ತಿದ್ದದ್ದು ತುಂಬಾ ಪರಿತಾಪಕರವಾಯ್ತು ಒಡ್ಡರ ಪೈಕಿ ಒಬ್ಬ ಮುದುಕಿಯು ತನ್ನ ಮನೆಗೆ ಸವಾಪಿಸಿ ಬರುತ್ತಿರುವಾಗ್ಗೆ ಆ ಧಾಳಿಗೆ ಸಿಕ್ಕಿ ಪ್ರಾಣಬಿಟ್ಟಳು. ಇನ್ನು 8-10 ನಿಮಿಷಗಳು ಮಾತ್ರ ಈ ಚಂಡಮಾರುತವು ಬೀಸಿದ್ದರೆ ಅನೇಕ ಮನೆಗಳು ಬಿದ್ದು ದೊಡ್ಡ ಅನಾಹುತವು ನಡೆಯುತ್ತಿತ್ತು

ಚಿತ್ರದುರ್ಗದ ತಾ|| ಭೀಮಸಮುದ್ರ —ಈ ತಿಂಗಳು 15 ನೇ ತಾ. ಶುಕ್ರವಾರ ಸಾಯಂಕಾಲ 6 ಗಂಟೆ ಸಮಯದಲ್ಲಿ ಈ ಊರಿನ ಪೂರ್ವದ ಕಡೆ ಮಳೆ ಮೋಡವು ಕಾಣಿಸಿಕೊಂಡಿತು. ಸ್ವಲ್ಪ ಹೊತ್ತಿನ ಮೇಲೆ ಸುತ್ತುಮುತ್ತಲೂ ಧೂಮ್ರವರ್ಣದಂತೆ ವಿಶೇಷವಾಗಿ ಧೂಳು ಎದ್ದಿತು. ತರುವಾಯ ಬಿರುಗಾಳಿಯು ಜಾಸ್ತಿಯಾಗಿ ಊರಿನ ಮೇಲೆ ಬಿದ್ದು ಕೆಲವು ಹೆಂಚಿನ ಹುಲ್ಲುಮನೆಗಳ ಮೇಲೆ ಬಿದ್ದು ಕಲ್ಲಾಬಿಲ್ಲಿಯಾಗುವಂತೆ ಕದಲಿಸಿದ್ದಲ್ಲದೆ ಅಲ್ಲಲ್ಲಿ ನಿಲ್ಲಿಸಿದ್ದ ಗಾಡಿಗಳನ್ನು ಎತ್ತಿಹಾಕಿತು. ಈ ಬಿರುಗಾಳಿಯಿಂದ ಅಲ್ಲಲ್ಲಿ ಹೊಲಗಳಲ್ಲಿ ಇದ್ದ ಬೇವಿನಮರ, ಜಾಲಿಮರಗಳನ್ನು ಬುಡಸುಟ್ಟ ಉರುಳಿಸಿದ್ದಲ್ಲದೆ, ಈ ಊರ ಕೆರೆಯ ಹಿಂದಿನ ತೋಟಗಳ ಮೇಲೆ ಬೀಸಿ ಒಂದೊಂದು ತೋಟದಲ್ಲಿ ಇಪ್ಪತ್ತು ಮೊದಲುಗೊಂಡು ಮುನ್ನೂರರ ವರಿಗೂ ಅಡಿಕೆ ಮರಗಳನ್ನೂ ಮತ್ತು ಬೇಲಿ ಸಾಲಿನಲ್ಲಿ ಇದ್ದ ತೆಂಗು, ಮಾವು, ಹಲಸು ಮುಂತಾದ ಮರಗಳನ್ನೂ ಬೇರು ಸಹಿತವಾಗಿ ಉರುಳಿಸಿರುವದಲ್ಲದೆ ಕೆಲವು ಮರಗಳಲ್ಲಿ ಕೊಂಬೆಗಳು ಮುರಿದುಕೊಂಡು ದಿಕ್ಕಾಪಟ್ಟೆಯಾಗಿ ಬಿದ್ದಿರುತ್ತವೆ ಈ ಅಡಿಕೆ ಮರಗಳಲ್ಲಿ ಕೆಲವು ಬೇರು ಸಹಿತವಾಗಿಯೂ, ಇನ್ನು ಕೆಲವು ಮಧ್ಯಕ್ಕೆ ಗರಗಸದಿಂದ ಕೊಯ್ದ ತುಂಡಿನಂತೆಯೂ, ಕೆಲವು ಸುಳಿ ಮಾತ್ರವೂ ಮುರಿದು ಬಿದ್ದಿರುತ್ತವೆ. ಇವಲ್ಲದೆ ಈ ಮರಗಳು ಬಿದ್ದ ಪೆಟ್ಟಿಗೂ, ಗಾಳಿಯ ಆಘಾತಕ್ಕೂ ಬಾಳೇ ಗಿಡಗಳು ಆನೆಯು ಹೊಕ್ಕ ಉದ್ಯಾನ ವನದಂತೆ ಆಗಿರುತ್ತೆ. ಈ ರೀತಿಯಿಂದ ಉಂಟಾದ ಅನಾಹುತವನ್ನು ಕಂಡು ಜನಗಳು ದುಃಖಿಸುವದಲ್ಲದೆ ಇದುವರಿವಿಗೆ ಎಂದೂ ಇಂಥಾ ಗಾಳಿ ಬೀಸಿದ್ದನ್ನಾಗಲಿ, ಮರಾಮಾಡಿಗಳು ಮುರಿದು ಹೋಗಿರುವದನ್ನಾಗಲಿ ತಾವು ಹುಟ್ಟಿದಾರಭ್ಯ ಕಂಡಿರಲಿಲ್ಲವೆಂದು ಹೇಳುತ್ತಾರೆ. ಬಿದ್ದಿರುವ ಅಡಿಕೆ ಮರಗಳಿಂದ ಉಂಟಾಗಿರುವ ನಷ್ಟವು ಈ ವರುಷದ ಫಸಲು ಒಂದೂವರೆ ಸಾವಿರ ರೂಪಾಯಿ ಬೆಲೆ ಬಾಳುವಷ್ಟು ಲುಕ್ಸಾನು ಆಗಿರುವುದಾಗಿಯೂ, ಹೋದ ಮರದ ಬದಲಿ ಹೊಸ ಸಸಿಗಳನ್ನು ಬೆಳಸಿ ಅದರಿಂದ ಫಲ ಬೆಳೆಯಲು 8-10 ವರುಷಗಳು ಬೇಕೆಂತಲೂ ಹೇಳುತ್ತಾರೆ ಇತರ ಫಸಲುಗಳಿಗೆ ಆಗಿರುವ ನಷ್ಟವೂ ವಿಶೇಷವಾಗಿರುವದಲ್ಲದೆ ಅವುಗಳನ್ನು ಗುತ್ತಿಗೆಗೆ ತೆಗೆದುಕೊಂಡ ಬಡವರು ಬಹಳವಾಗಿ ವ್ಯಸನಪಡುತ್ತಾರೆ ಈ ಗಾಳಿಯು ಪ್ರಾರಂಭಕ್ಕೆ ಇಷ್ಟು ಅನಾಹುತಮಾಡಿರುವದರಿಂದ ಈ ಮುಂಗಾರು ಗಾಳಿ ಪೂರೈಸುವದರೊಳಗಾಗಿ ಇನ್ನೂ ಎಷ್ಟು ಬಿರುಗಾಳಿ ಬೀಸಿ ಲುಕ್ಸಾನು ಪಡಿಸುವದೋ ಎಂತ ಗ್ರಾಮಸ್ಥರು ಪಶ್ಚಾತ್ತಾಪಪಡುತ್ತಾರೆ. ಆ ದಿವಸ ಬಿರುಗಾಳಿ ಬೀಸಿ ಇಷ್ಟು ಅನಾಹುತ ಪಡಿಸಿದ್ದಲ್ಲದೆ ಬಂದ ಮಳೆಯಿಂದ ಹಸಿಮಳೆ ಆಗಲಿಲ್ಲ

ಮುಳವಳ್ಳಿ.—ಕಳೆದ ಶುಕ್ರವಾರ ರಾತ್ರಿ 8 ಗಂಟೆ ಸಮಯದಲ್ಲಿ ಅತಿ ಬಿರುಗಾಳಿ ಎದ್ದು ಸುಮಾರು 2½ ಅಂಗುಲ ಪ್ರಮಾಣದ ಮಳೆ ಸುರಿದು, ಕೆರೆ ಕಟ್ಟೆಗಳಿಗೆಲ್ಲಾ ತಕ್ಕಮಟ್ಟಿಗೆ ನೀರು ಬಂತು. ಊರೊಳಗಿದ್ದ ಕಚರಾಗಳೆಲ್ಲಾ ಕೊಚ್ಚಿಕೊಂಡು ಹೋಗಿ ಶುಚಿಯಾಗಿರುತ್ತದೆ ಈ ಟವನ್ ಮ್ಯುನಿಸಿಪಲ್ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿಲ್ಲ. ಚರಂಡಿಗಳಲ್ಲಿ ನೀರು ನಿಂತು ಕೊಳೆತು ದುರ್ವಾಸನೆ ಬಡಿಯುತ್ತದೆ ಗಲ್ಲಿಗಳಂತೂ ಹೇಸಿಕೆ ಹೆಚ್ಚಾಗಿ ಮುಖಹಾಕುವುದೇ ಕಷ್ಟವಾಗಿದೆ ನಮ್ಮ ಸ್ಯಾನಿಟರಿ ಇನ್‌ಸ್ಪೆಕ್ಟರವರು ಟವನ್ ಗಸ್ತುಮಾಡಿ ಸರಿಪಡಿಸುತ್ತಾರೆಂತ ಕೋರಿದೆ.—ಈ ಊರು ಅಗ್ರಹಾರದಿಂದ ಕುಡಿಯುವ ನೀರಿನ ಕಟ್ಟೆಗೆ ಹೋಗುವ ದಾರಿಯಲ್ಲಿ ಮುಸಲ್ಮಾನರ ಬೀದಿಯಲ್ಲಿ ಜಟಕಾ ಗಾಡಿಗಳ ಕಂಪನಿಯೊಂದಿದ್ದು, ಕಂಪನಿಯಲ್ಲಿ ಕೆಲಸಮಾಡುವ ಮುಸಲ್ಮಾನರೂ ಹಗಲೆಲ್ಲಾ ಗಾಡಿಬಿಡುವುದಕ್ಕೆ ಕುದುರೆಗಳನ್ನು ಕಟ್ಟುತ್ತಲೂ ಬಿಚ್ಚುತ್ತಲೂ ಗಾಡಿಗಳನ್ನು ರಸ್ತೆಯಲ್ಲಿ ನಿಲ್ಲಿಸಿಕೊಂಡು ಕೆಲಸಮಾಡುತ್ತಾರೆ. ನೀರಿಗೆ ಹೋಗಿಬರುವ ಹೆಂಗಸರಿಗೆ ದಾರಿ ಸಿಕ್ಕುವುದು ಕಷ್ಟ. ಹಿಂದೆ ಸದರಿ ಕಂಪನಿಯನ್ನು ಊರು ಹೊರಕ್ಕೆ ಸಾಗಿಸಬೇಕೆಂದು ಏರ್ಪಾಡು ಮಾಡುತ್ತಿದ್ದರು ಈಗಲಾದರೂ ಈ ವಿಷಯವನ್ನು ಯೋಚಿಸಿ ಅನುಕೂಲಪಡಿಸ್ಯಾರೆಂತ ಕೋರಲ್ಪಟ್ಟಿದೆ – ಆಕ್ಟ್ರಾಯಿ ಬಾಬಿನ ಲೆಕ್ಕವನ್ನು ಸುಮಾರು 15 ದಿವಸಗಳಿಂದ ಆಡಿಟರವರು ತನಿಖೆ ಮಾಡುತ್ತಿದ್ದಾರೆ, 2-3 ಜವಳಿ ಅಂಗಡಿಗಳಲ್ಲಿ ಎರಡು ಮೂರು ಸಾವಿರ ರೂಪಾಯಿನಷ್ಟು ಜವಳಿ ಸುಂಕ ತೀರ್ವೆ ಆಗದೆ ಬಾಕಿಯಾಗಿರುವ ಹಾಗೂ, ಕೆಲವು ವಸೂಲಾಗಿರುವ ಸುಂಕವು ಸರ್ಕಾರಕ್ಕೆ ಸೇರದೆ ಇರುವ ಹಾಗೂ ಲೆಕ್ಕಗಳು ಸಿಕ್ಕಿರುವಂತೆ ತಿಳಿದುಬಂದಿದೆ ಅಲ್ಲದೆ ಕೆಲವು ಅಂಗಡಿಯವರು ಆಡಿಟರವರಿಗೆ ಲೆಕ್ಕಗಳನ್ನೇ ಕೊಡದೆ ತಿರಸ್ಕಾರಮಾಡಿರುವರೆಂದೂ ವರ್ತಮಾನವಿದೆ — ಬಿ. ವೆಂಕಟನಾರಣಪ್ಪನೆಂಬುವನು ಯಡಕೊರೆ ತಾಲ್ಲೂಕು ಶೀಗನಾಳು ಸ್ಕೂಲಿನಲ್ಲಿ 1-7-1911 ರಿಂದ 8-9-11 ರ ವರೆಗೆ ಬದ್ಲಿ ನೋಡಿ ನಂತರ ಖಾಯಂ ಮಾಸ್ಟರು ಬಂದುದರಿಂದ ಅವರಿಗೆ ಛಾರ್ಜು ವಹಿಸಿ ಬಂದುಬಿಟ್ಟನು. ಆ ವ್ಯಕ್ತಿ ಒಂದು ತಿಂಗಳು ಎಂಟು ದಿನಗಳ ಸಂಬಳವು ಬಾಕಿ ನಿಂತಿತ್ತು. ಈ ಸಂಬಳವನ್ನು ಕೊಡಿಸಬೇಕೆಂದು ಆತನು ಜೀವಂತನಾಗಿದ್ದಾಗಲೇ ಎಷ್ಟೋ ಅರ್ಜಿಗಳನ್ನು ಬರೆದುಕೊಂಡನು ಈಚೆಗೆ ಆತನು ಮೃತಪಟ್ಟ ಮೇಲೆ ಆತನ ತಂದೆಯು ಡೆಪ್ಟಿ ಇನ್‌ಸ್ಪೆಕ್ಟರಿಗೆ ಅರ್ಜಿ ಬರೆದುಕೊಳ್ಳಲು ನಡವಳಿಕೆ ನಡೆದು ಆ ಬಾಬ್ತು ಸಂಬಳವನ್ನು ತಂದೆಗೆ ಪಾವತಿಮಾಡುವ ಹಾಗೆ ಸದರಿ ತಾಲ್ಲೂಕಿಗೆ 11-7-1912 ರಲ್ಲಿ ಯಾದಿ ಬರೆದಿರುವುದಾಗಿ ತಂದೆಗೆ ಹುಕುಂ ಕೊಟ್ಟರು ಈಚೆಗೆ ತಂದೆಯು ತಾಲ್ಲೂಕಿಗೆ ಅನೇಕ ಅರ್ಜಿಗಳನ್ನು ಬರೆದುಕೊಂಡರು ಒಂದಕ್ಕೂ ಜವಾಬೇ ಬರಲಿಲ್ಲ ಪುನಹ ಅವರು ಡೆಪ್ಟಿ ಇನ್‌ಸ್ಪೆಕ್ಟರಿಗೆ ಅರ್ಜಿಗಳನ್ನು ಬರೆದುಕೊಳ್ಳಲು, ಸಂಬಳ ಕೊಡಿಸುವಂತೆ ತಾಲ್ಲೂಕಿಗೆ ಆಗಾಗಲೇ ಯಾದಿ ಬರೆದಿರುವುದಾಗಿ ಹುಕುಂ ಕೊಟ್ಟಿರುತ್ತಾರೆ. ಅಂತೂ ಮೃತನ ತಂದೆಯು ತಾಲ್ಲೂಕಿಗೆ 18 ಅರ್ಜಿಗಳನ್ನೂ, ಸ್ಕೂಲ್ ಇನ್‌ಸ್ಪೆಕ್ಟರಿಗೆ 16 ಅರ್ಜಿಗಳನ್ನೂ, ಡೆಪ್ಟಿ ಕಮಿಷನರ್‌ರವರಿಗೆ 2 ಅರ್ಜಿಗಳನ್ನೂ, ಕಂಟ್ರೋಲರವರಿಗೆ ಒಂದು ಅರ್ಜಿಯನ್ನೂ ಬರೆದುಕೊಂಡರು ಅವರ ಮಗ ಬದ್ಲಿ ನೋಡಿ ಸುಮಾರು 3 ವರುಷಗಳಾಗುತ್ತಾ ಬಂದವೆ. ಆದರೂ ಇನ್ನೂ ಸಂಬಳ ಬೇರೆ ಪಾವತಿ ಆಗಲಿಲ್ಲ ಈಗಲಾದರೂ ಸರಕಾರದವರು ಸದರಿ ತಾಲ್ಲೂಕಿನವರು ಅವರಿಗೆ ಸಂಬಳವನ್ನು ಇನ್ನೂ ಯಾಕೆ ಪಾವತಿ ಮಾಡಲಿಲ್ಲವೆಂಬುದನ್ನು ವಿಚಾರಿಸಿ, ಕೊಡಿಸುವರೆಂದು ನಿರೀಕ್ಷಿಸುತ್ತೇನೆ

ವಿದೇಶ ವೃತ್ತಾಂತಗಳು.

ಹಾಂಕಾಂಗ್ ಪಟ್ಟಣದಲ್ಲಿ ಕಳೆದ ವಾರ ಪ್ಲೇಗ್ ಉಪದ್ರ ಕಾಣಿಸಿಕೊಂಡು 215 ಜನರು ಕಾಯಿಲೆಯಾದರೆಂದೂ, 172 ಜನರು ಆ ರೋಗದಲ್ಲಿ ಕಾಲವಾದರೆಂದೂ ತಿಳಿದುಬಂದಿದೆ.

ಬ್ರಿಟಿಷ್ ಕೊಲಂಬಿಯಾಕ್ಕೆ ಸೇರಿದ ಸ್ಟುವರ್ಟ್ ಎಂಬಲ್ಲಿ ಒಂದು ರಬ್ಬರಿನ ಕಾರ್ಖಾನೆಯಲ್ಲಿ ಬೆಂಕಿಯ ದೆಸೆಯಿಂದ ಒಂದುವರೆ ಲಕ್ಷ ರೂಪಾಯಿನ ಸಾಮಾನು ನಷ್ಟವಾಯಿತು.

ಜರ್ಮನಿಯ ಕಾರೇಗಾರನು ವಿಮಾನ ಯಂತ್ರದಲ್ಲಿ ಕುಳಿತು 807 ಮೈಲಿ ದೂರ ಗಂಟೆಗೆ 72 ಮೈಲಿಯ ಪ್ರಕಾರ ಅಂತರಿಕ್ಷದಲ್ಲಿ ಸಂಚಾರಮಾಡಿಕೊಂಡು ಸುರಕ್ಷಿತವಾಗಿ ಬಂದಿಳಿದನು.

ಲಂಡನ್ ಪಟ್ಟಣದ ಚಿತ್ರಶಾಲೆಯಲ್ಲಿ ಒಂದು ಚರಿತ್ರಾರ್ಹವಾದ ತಸ್ವೀರನ್ನು ಚೀಕೆಂದು ಒಡೆದು ಹಾಕಿದ ಸ್ತ್ರೀಯನ್ನು ಮ್ಯಾಜಿಸ್ಟ್ರೇಟರು ಆರು ತಿಂಗಳ ಬಂಧೀಖಾನೆ ಶಿಕ್ಷೆಗೆ ಗುರಿಪಡಿಸಿದರು.

ಬ್ರಿಟಿಷ್ ಕೊಲಂಬಿಯದಲ್ಲಿ ಮೌಂಟ್ ರವೆಲ್‌ಸ್ಟೋಕ್ ಎಂಬ ಗುಡ್ಡದ ಬಳಿ ದಿವ್ಯವಾದ ಉದ್ಯಾನವನವನ್ನು ಮಾಡಿ ಪ್ರಜೆಗಳ ವಿಹಾರಕ್ಕೆ ಸಿದ್ಧಪಡಿಸುವುದಕ್ಕೋಸ್ಕರ 95 ಚದರಮೈಲಿ ವಿಸ್ತಾರವುಳ್ಳ ಜಮೀನನ್ನು ಕೊಟ್ಟಿರುತ್ತಾರೆ.

ಲಂಡನ್ ಪಟ್ಟಣದಲ್ಲಿ ಯುದ್ಧದ ಇಲಾಖೆಯ ಎರಡು ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹಾರುತ್ತಾ ಒಂದಕ್ಕೊಂದು ಸಿಕ್ಕಿ ಬಡಿದಾಡಿ ನಾಶಹೊಂದಿದವು ಇಬ್ಬರು ಕಾರೇಗಾರರು ಮೃತರಾದರು; ಒಬ್ಬನಿಗೆ ಪೂರಾ ಏಟು ಬಿದ್ದಿದೆ.

ಪನಾಮಾ ಜಲಮಾರ್ಗದ ಕಾಮಗಾರಿ ಇಲಾಖೆಯಲ್ಲಿ ಮ್ಯಾನೆಜರಾಗಿದ್ದ ಜಾನ್ ಬರ್ಕ್ ಎಂಬಾತನೂ, ಇನ್ನು ಮೂರು ಮಂದಿಯೂ ಗವರ್ನ್‌ಮೆಂಟಿಗೆ ಮೋಸಮಾಡಿರುತ್ತಾರೆಂದು ಆ ನಾಲ್ಕು ಮಂದಿಯನ್ನೂ ಹಿಡಿಯುವಂತೆ ವಾರಂಟು ಹುಟ್ಟಿದೆ.

ಇಂಗ್ಲಾಂಡಿನಲ್ಲಿ ಪಾರ್ಲಿಮೆಂಟಿಗೆ ಮೆಂಬರನ್ನು ಚುನಾವಣೆ ಮಾಡುವ ಹಕ್ಕು ಕೊಡಬೇಕೆಂದು ಹೋರಾಡುವ ಇಂಗ್ಲಿಷ್ ಸ್ತ್ರೀಯರು ಈಗ ಕೋರ್ಟುಗಳ ಹೊರಗಡೆ ನಿಂತು ಗಟ್ಟಿಯಾಗಿ ಅರಚಿಕೊಂಡು, ಕೋರ್ಟಿನ ಕೆಲಸಗಳು ನಡೆಯದಂತೆ ಅಡ್ಡಿಮಾಡಲಾರಂಭಿಸಿದ್ದಾರೆ.

ನ್ಯೂಜೀಲೆಂಡಿಗೆ ಸೇರಿದ ಆಕ್ಲೆಂಡ್ ನಗರದ ಗವರ್ನ್‌ಮೆಂಟ್ ಹೌಸ್ ಎಂಬ ಬಂಗಲೆಗೆ ಬೆಂಕಿಬಿದ್ದು 90,000 ರೂಪಾಯಿನ ವಸ್ತುಗಳು ಸುಟ್ಟು ನಷ್ಟವಾದವು. ಗವರ್ನರವರು ಅಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿದ ಹಾಗೂ, ವಿದ್ಯುಚ್ಛಕ್ತಿ ದೀಪಗಳ ತಂತಿಯು ಒಡೆದು ಹತ್ತಿಕೊಂಡು ಅನಾಹುತವನ್ನುಂಟುಮಾಡಿದ ಹಾಗೂ ಪ್ರಕಟವಾಗಿದೆ.

ಕೊಮಗಾಟು ಮಾರು ಎಂಬ ಜಪಾನ್ ಜಹಜಿನಲ್ಲಿ 600 ಮಂದಿ ಹಿಂದುಗಳು ಹಿಂದುಸ್ಥಾನದಿಂದ ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಹೋಗುತ್ತಿದ್ದಾರೆ. ಇವರನ್ನು ಅಲ್ಲಿ ಇಳಿಸಕೂಡದೆಂದೂ, ಆ ದೇಶಕ್ಕೆ ಸೇರಿಸಿಕೊಳ್ಳದೆ ವಾಪಸು ಕಳುಹಿಸಿಬಿಡಬೇಕೆಂದೂ ಕ್ಯಾನಡಾದಲ್ಲಿ ಚರ್ಚೆ ಹುಟ್ಟಿದೆ. ಆ ಹಿಂದುಗಳೆಲ್ಲಾ ಕಸಬುಗಳನ್ನು ಚೆನ್ನಾಗಿ ಕಲಿತವರೇ ಹೊರತು ಬೇರಲ್ಲ. ಇವರನ್ನು ಆ ದೇಶದೊಳಕ್ಕೆ ಸೇರಿಸಿಕೊಳ್ಳುವರೋ, ವಾಪಸು ಕಳುಹಿಸಿಬಿಡುವರೋ ನೋಡಬೇಕಾಗಿದೆ.

ಡಾಕ್ಟರ್ ಮಕರಾ ಎಂಬೊಬ್ಬ ಅಮೇರಿಕದ ವೈದ್ಯನು ಇಂಗ್ಲೆಂಡಿನಲ್ಲೂ ಯೂರೋಪ್ಪಿನ ಮುಖ್ಯ ನಗರಗಳಲ್ಲೂ ವಾಯುವಿನಿಂದ ಕೀಲುನೋವಿಗೆ ಒಂದು ಪರಿಹಾರವನ್ನು ಕಂಡುಹಿಡಿದಿರುವುದಾಗಿ ಪ್ರಕಟಮಾಡಿ ಅನೇಕ ಜನರನ್ನು ಮೋಸಪಡಿಸಿದ್ದು ರುಜುವಾತಾಯಿತು ಅದರಿಂದ ಅವನಿಗೆ ಮೂರು ವರುಷ ಸಜಾವೂ 18,000 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟದ್ದಲ್ಲದೆ ಅವನ ಸಂಗಡಿಗರಾಗಿದ್ದ ಒಂಭತ್ತು ಮಂದಿಗೆ ಎರಡು ತಿಂಗಳ ಲಾಗಾಯತು ಹನ್ನೆರಡು ತಿಂಗಳ ವರೆಗೆ ಸಜಾ ಆಗಿರುತ್ತದೆ.

ಟೈಟಾನಿಕ್ ಎಂಬ ಜಹಜು ಅಟ್ಲಾಂಟಿಕ್ ಸಾಗರದಲ್ಲಿ ಹಿಮಗಡ್ಡೆಗಳಿಗೆ ಸಿಕ್ಕಿ ಒಡೆದು ಮುಳುಗಿಹೋದಾಗ ಅದರಲ್ಲಿದ್ದು ಅಕಾಲಮರಣವನ್ನು ಹೊಂದಿದ ಮೂವತ್ತೈದು ಮಂದಿ ಇಂಜನಿಯರುಗಳ ಹೆಸರನ್ನು ಶಾಶ್ವತಪಡಿಸುವುದಕ್ಕೆ ಇಂಗ್ಲಾಂಡಿನ ದಕ್ಷಿಣತೀರದಲ್ಲಿರುವ ಸೌತ್‌ಹಾಂಪ್‌ಟನ್ ಎಂಬ ತೀರಪಟ್ಟಣದಲ್ಲಿ ಒಂದು ಬೀಳೆ ಕಲ್ಲಿನ ಪ್ರತಿಮೆಯನ್ನು ಕಳೆದ ವಾರ ಸರ್ ಆರ್ಚಿಬಾಲ್ಡ್ ಡೆನ್ನಿಯವರು ಪ್ರತಿಷ್ಠೆಮಾಡಿದರು. ಆ ಉತ್ಸವವನ್ನು ಹತ್ತು ಸಹಸ್ರ ಪ್ರಜೆಗಳು ಸೇರಿ ನೋಡಿ ಸಂತುಷ್ಟರಾದರು.

ಆಸ್ಟ್ರಿಯಾ ರಾಜ್ಯದಲ್ಲಿ ಆದಾಯದ ಮೇಲಣ ತೆರಿಗೆ ದರಗಳನ್ನು ಹೆಚ್ಚು ಮಾಡಿರುತ್ತಾರೆ ಮದುವೆ ಮಾಡಿಕೊಳ್ಳದೆ ಇರುವ ಗಂಡಸರೂ ಹೆಂಗಸರೂ ಮೊದಲು ಕೊಡುತ್ತಿದ್ದ ತೆರಿಗೆಗಿಂತಲೂ ಶೇಕಡ 15 ರಂತೆ ಜಾಸ್ತಿಕೊಡಬೇಕು. ಮಕ್ಕಳಿಲ್ಲದ ಗಂಡಹೆಂಡರೂ, ಒಂದೇ ಮಗುವನ್ನು ಪಡೆದಿರುವವರೂ ಮೊದಲಿಗಿಂತ ಶೇಕಡ 10 ರಂತೆ ಜಾಸ್ತಿಕೊಡಬೇಕು. ಆದರೆ ನಾಲ್ಕೈದು ಮಕ್ಕಳನ್ನು ಪಡೆದು ಆ ಮಕ್ಕಳೆಲ್ಲಾ ತಂದೆತಾಯಿಗಳ ಕೂಡ ಇರುವ ಪಕ್ಷಕ್ಕೆ ಆ ತಂದೆತಾಯಿಗಳು ಕೊಡುವ ತೆರಿಗೆಯಲ್ಲಿ ಪ್ರತಿ ಒಂದು ಮಗುವಿಗೂ ಶೇಕಡ 5 ರಂತೆ ವಜಾಮಾಡಿಕೊಂಡು ಬಾಕಿಯನ್ನು ಮಾತ್ರ ಸರ್ಕಾರಕ್ಕೆ ಕೊಡಬಹುದು.

ಟರ್ಕಿ ಪಾರ್ಲಿಮೆಂಟು ಬರಖಾಸ್ತಾಗಿ ಇಪ್ಪತ್ತೊಂದು ತಿಂಗಳಾಗಿತ್ತು. ಕಳೆದ ಗುರುವಾರ ಸುಲ್ತಾನರು ಪಾರ್ಲಿಮೆಂಟ್ ಮೆಂಬರುಗಳನ್ನು ಕೂಡಿಸಿ, ಇನ್ನು ಮುಂದೆ ಪೂರ್ವದಂತೆ ರಾಜ್ಯಭಾರ ವಿಚಾರಗಳನ್ನು ಹಿಡಿದು ಚರ್ಚಿಸುವಂತೆ ತಿಳಿಸಿದರು. ಈಚೆಗೆ ನಡೆದ ಯುದ್ಧದಲ್ಲಿ ಆ ರಾಜ್ಯದ ಸೈನಿಕರಿಗೆ ಅಪಜಯವಾಗಿ ಅಪಕೀರ್ತಿಯುಂಟಾಯಿತೆಂದೂ, ಪರರಾಜ್ಯಗಳವರು ಕೆಲವು ದ್ವೀಪಗಳನ್ನು ಗ್ರೀಸ್ ದೇಶಕ್ಕೆ ಸೇರಿಸಿ ಕೊಟ್ಟುಬಿಟ್ಟದ್ದು ಟರ್ಕಿಗೆ ತುಂಬಾ ನಷ್ಟವಾಯಿತೆಂದೂ, ಭೂ ಸೈನ್ಯವನ್ನೂ ಸಮುದ್ರ ಸೈನ್ಯವನ್ನೂ ವೃದ್ಧಿಮಾಡಿ ತಡವೇ ತಾದ ಸ್ಥಿತಿಯಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯವಾಗಿದೆ ಎಂದೂ ಸುಲ್ತಾನರವರು ಅಪ್ಪಣೆ ಕೊಡಿಸಿದರು.

ಪ್ಯಾರಿಸ್ ಪಟ್ಟಣದಲ್ಲಿ ದೊಡ್ಡ ಮನುಷ್ಯರೇ ಕೆಲವರು ಸೇರಿ ದರೋಡೆಗಳನ್ನು ನಡಿಸುತ್ತಿದ್ದದ್ದು ಅಲ್ಲಿನ ಪೋಲೀಸಿಗೆ ಗೊತ್ತಾಯಿತು. ಪೋಲೀಸಿನವರ ಪ್ರೇರಣೆಯಿಂದ ಆರ್‌ಬೆಂಜ್ ಎಂಬ ಅಂಗಡಿಯವನು 36,000 ರೂಪಾಯಿನ ಜವಾಹಿರಿಗಳನ್ನು ಕೈಗಾಡಿಯಲ್ಲಿಟ್ಟು ತನ್ನ ಅಂಗಡಿಯಿಂದ ಬೀದಿಯಲ್ಲಿ ತಳ್ಳಿಸಿಕೊಂಡು ಹೋಗುತ್ತಿದ್ದನು. ಆ ಕಳ್ಳರಿಗೆ ಇದರ ಸುಳಿವು ಹೇಗೋ ತಿಳಿದು ಐದು ಮಂದಿ ಆ ಗಾಡಿಯನ್ನು ಕೊಳ್ಳೆಮಾಡಬೇಕೆಂದು ನುಗ್ಗಿದರು. ಸಮೀಪದಲ್ಲೇ ಅಡಗಿಕೊಂಡಿದ್ದ ಪೋಲೀಸಿನವರು ಬಹಳ ಪ್ರಯಾಸಪಟ್ಟು ಐದು ಮಂದಿಯನ್ನೂ ಹಿಡಿದುಕೊಂಡರು ಆ ಕಳ್ಳರಲ್ಲಿ ಒಬ್ಬ ಜರ್ಮನಿಯ ದೊಡ್ಡ ವಂಶಕ್ಕೆ ಸೇರಿದವನು, ಇನ್ನೊಬ್ಬ ದಕ್ಷಿಣ ಅಫ್ರಿಕದವನು, ಮತ್ತೊಬ್ಬ ದಕ್ಷಿಣ ಅಮೇರಿಕದವನು, ನಾಲ್ಕನೆಯವನು ಜರ್ಮನಿಯವನು, ಐದನೆಯವನು ಫ್ರಾನ್ಸಿನವನು. ಈ ರೀತಿ ಬೇರೆಬೇರೆ ಜನಾಂಗಕ್ಕೆ ಸೇರಿದ ಇವರು ಒಂದಾಗಿ ಕೆಲವು ಕಾಲದಿಂದ ನಾನಾ ಅಕೃತ್ಯಗಳನ್ನು ನಡಿಸುತ್ತಾ ಸಿಕ್ಕದೆ ತಪ್ಪಿಸಿಕೊಂಡಿದ್ದರು.

ವಿದ್ಯಾಭಿವೃದ್ಧಿಯ ಕಾರ್ಯಗಳು.

ಹೊಸಕೊಪ್ಪದಲ್ಲಿ ಸ್ಕೂಲ್ ಕಟ್ಟಡಕ್ಕೆ ಅಸ್ತಿಭಾರ ಹಾಕಿದ್ದು

ತರೀಕೆರೆ ತಾಲ್ಲೂಕು ಹೊಸಕೊಪ್ಪದಲ್ಲಿ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರಾವ್ ಬಹದೂರ್ ಮ|| ಎಂ ಶಾಮರಾವ್, ಎಂ ಎ ಯವರು ಕಳೆದ ಸೋಮವಾರ ಸ್ಕೂಲ್ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದಾಗ್ಗೆ ಮ|| ಹೊ ಕೃಷ್ಣರಾಯರು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅದರ ಮುಖ್ಯಾಭಿಪ್ರಾಯವೇನೆಂದರೆ—

"ನಾವುಗಳು ವಾಸವಾಗಿರುವ ಈ ಪ್ರದೇಶದಲ್ಲಿ ತಮ್ಮನ್ನು ಬರಮಾಡಿಕೊಳ್ಳಲು ನನಗೆ ತುಂಬಾ ಸಂತೋಷ ಉಂಟಾಗಿರುತ್ತದೆ ತಾವು ಈ ಪ್ರಾಂತ್ಯದ ಯಮಾಡಿದ್ದು ಇದೇ ಮೊದಲು ಸಲವಾಗಿರುವುದರಿಂದ ಮಲೆನಾಡು ಜನಗಳ ಪರವಾಗಿ ನಾನು ತಮಗೆ ಮನಃಪೂರ್ವಕವಾದ ಸುಸ್ವಾಗತವನ್ನು ಬಯಸುತ್ತೇನೆ ತಾವು ವಿದ್ಯಾಭ್ಯಾಸದ ಇಲಾಖೆಗೆ ಇನ್‌ಸ್ಪೆಕ್ಟರ್ ಜನರಲ್‌ರವರಾಗಿ ಬಂದ ಮೇಲೆ ಪ್ರಾಥಮಿಕ ವಿದ್ಯಾಭ್ಯಾಸವು ಉಚಿತವಾಗಿಯೂ, ನಿರ್ಬಂಧದಿಂದಲೂ ನಡೆಯುವಂತೆ ಏರ್ಪಾಟಾಗಿ, ಪ್ರಾಥಮಿಕ ವಿದ್ಯಾಭ್ಯಾಸದ ಬಿಲ್ಲು ಕಾನೂನಾಗಿ ಪರಿಣಮಿಸಲು ಅವಕಾಶವಾಯಿತು ನಿಜವಾದ ಎಲ್ಲಾ ಪುರೋಭಿವೃದ್ಧಿ ಕಾರ್ಯಗಳಿಗೂ ವಿದ್ಯಾಭ್ಯಾಸವೇ ಆಧಾರವಾಗಿರುತ್ತದೆಯಾಗಿ ಇಂತಹ ಏರ್ಪಾಟನ್ನು ಮಾಡಿದುದಕ್ಕಾಗಿ ತಮಗೂ, ಶ್ರೀಮತ್ ಮಹಾರಾಜರವರ ಸರ್ಕಾರದವರಿಗೂ ನಾವು ಕೃತಜ್ಞರಾಗಿದೇವೆ ಸದರಿ ಕಾನೂನನ್ನು ಜಾರಿಗೆ ತರಲು ಕಾರ್ಯಕಾರಿಯಾಗಿರುವಂತೆ ನಾನೂ ಸ್ವಲ್ಪಮಟ್ಟಿಗೆ ಸಹಾಯಕನಾಗಿರಬೇಕೆಂಬ ಉತ್ಸಾಹದಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಚಾರಗೊಳಿಸುವುದಕ್ಕೆ ಒಂದು ಸ್ಕೂಲನ್ನು ಕಟ್ಟಬೇಕೆಂದು ಉದ್ದೇಶಿಸಿ, 1914 ನೆಯ ಜನವರಿ 10 ನೆಯ ತಾರೀಖಿನಲ್ಲಿ ನಾನು ಇಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿದೆನು ನನ್ನ ಸ್ನೇಹಿತರು ಮಾಡಿದ ಸಹಾಯದಿಂದ ಸದರಿ ಕೆಲಸವು ನೆರವೇರಲು ಸಾಧ್ಯವಾಯಿತು ಗ್ರಾಮಸ್ಥರಲ್ಲಿ ಗಣ್ಯರಾದ ಮ|| ಗಳಾದ ಕಂ ಕೃಷ್ಣಪ್ಪನವರು, ಬಿ ಸುಬ್ಬರಾಯರು, ಪ ವೆಂಕಣ್ಣಗೌಡರು, ವಾ ದುಗ್ಗಣ್ಣಗೌಡರು, ಮಂಗೇಗೌಡರು ಮುಂತಾದವರು ಧಾರಾಳವಾಗಿ ಚಂದಾ ಕೊಟ್ಟು ಸಹಾಯಮಾಡಿದುದರಿಂದ ಈ ಸ್ಕೂಲ್ ಕಟ್ಟಡವನ್ನು ಇಷ್ಟು ಸುಲಭವಾಗಿ ಪ್ರಾರಂಭಿಸಲು ಸಾಧ್ಯವಾಯಿತು —ಈ ಸ್ಕೂಲಿಗೆ ಗ್ರಾಂಟನ್ನು ಕೊಡಬೇಕೆಂದು ನಾವು ಕೇಳಿಕೊಂಡೆವು ಈ ವಿಷಯದಲ್ಲಿ ತಡೆಯಿಲ್ಲದೆ ಸಹಾಯಮಾಡಿ ಸಮಯೋಚಿತವಾದ ಬುದ್ಧಿವಾದವನ್ನು ತಿಳಿಸಿದ ತಮಗೂ, ನಮ್ಮ ವಿಜ್ಞಾಪನೆಯನ್ನು ಮೇಲಕ್ಕೆ ಶಿಫಾರಸುಮಾಡಿದುದಲ್ಲದೆ ಇತರ ವಿಧವಾದ ಸಹಾಯವನ್ನೂ ಮಾಡಿದ ನಮ್ಮ ಡೆಪ್ಯುಟಿ ಕಮಿಷನರ್ ಮ|| ಕೆ ಕೃಷ್ಣಅಯ್ಯರ್‌ರವರಿಗೂ, ಗ್ರಾಂಟನ್ನು ಮಂಜೂರ್ಮಾಡಿದ ಸರ್ಕಾರದವರಿಗೂ ತುಂಬಾ ಕೃತಜ್ಞರಾಗಿರುತ್ತೇವೆ

"ಪ್ರಸಕ್ತವಾದ ಸ್ಕೂಲು ನನ್ನ ಜಮೀನಿನಲ್ಲೇ ಇರುತ್ತದೆ ನಾನು ಸದರಿ ಜಮೀನನ್ನು ಉಚಿತವಾಗಿ ಸ್ಕೂಲಿಗೆ ಕೊಟ್ಟಿರುವುದಲ್ಲದೆ ಚಂದಾ ನೆರಬಲಗನ್ನೂ ಯಥಾಶಕ್ತಿ ಕೊಟ್ಟಿರುತ್ತೇನೆ ಈಗ ಸದರಿ ಸ್ಕೂಲ್ ಕಟ್ಟಡಕ್ಕೆ ತಳಾದಿಕಲ್ಲನ್ನು ಹಾಕಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ ತಮ್ಮ ಎದುರಿಗೆ ಇರುವ ಅನೇಕ ಬಾಲಕರು ಸದರಿ ಸ್ಕೂಲಿಗೆ ಸೇರಿ ವಿದ್ಯಾಭ್ಯಾಸಮಾಡಬೇಕೆಂದು ಹಾರೈಸುತ್ತಲಿರುವುದರಿಂದ ಸ್ಕೂಲಿನ ಕೆಲಸವನ್ನೂ ಈಗ ಉಪಕ್ರಮಿಸಬಹುದಾಗಿದೆ ಈ ಉಭಯ ಕಾರ್ಯಗಳೂ ವಿದ್ಯಾಭ್ಯಾಸದ ಇಲಾಖೆಗೆ ಮುಖ್ಯ ಹುದ್ದೇದಾರರಾದ ತಮ್ಮಿಂದ ಉಪಕ್ರಮಿಸಲ್ಪಡಬೇಕೆಂಬ ಸಂದರ್ಭವು ಈ ಕಾಲದಲ್ಲಿ ಒದಗಿದುದರಿಂದ ಕಮಿಟಿಯವರಿಗೆಲ್ಲಾ ತುಂಬಾ ಸಂತೋಷವಾಗಿದೆ ಅಲ್ಲದೆ ಆ ರೀತಿ ನಡೆಸಲು ತಾವು ಅದರ ಪೂರ್ವಕವಾಗಿ ಒಪ್ಪಿಕೊಂಡುದಕ್ಕಾಗಿ ಮನಃಪೂರ್ವಕವಾಗಿ ತಮ್ಮನ್ನು ವಂದಿಸುತ್ತೇವೆ —ನಾವು ವಾಸಮಾಡತಕ್ಕ ಈ ಮಲೆನಾಡು ಪ್ರಾಂತ್ಯದಲ್ಲಿ ದೈವಿಕ ಸಂಪತ್ತು ಎಂದರೆ ಶೃಂಗಾರಶೋಭಾಸಮೃದ್ಧಿಯು ವಿಶೇಷವಾಗಿ ಇದ್ದಾಗ್ಯೂ ನಮ್ಮಲ್ಲಿ ನಾಗರಿಕತೆಯು ಕಡಮೆ ನಮ್ಮ ಪ್ರಾಂತ್ಯದ ಭೂಮಿಯು ಫಲವತ್ತಾಗಿದ್ದರೂ ಎಲ್ಲೆಲ್ಲಿಯೂ ನೀರು, ಮರ ಗಿಡಗಳು ಯಥೇಚ್ಛವಾಗಿದ್ದರೂ ಶೀಘ್ರವಾಗಿ ಸಂಚಾರಮಾಡಲು ತಕ್ಕ ಸೌಲಭ್ಯಗಳಿಲ್ಲದುದರಿಂದಲೂ, ನಾವು ವಾಸಮಾಡತಕ್ಕ ಜಾಗಗಳು ಬೆಟ್ಟ ಗುಡ್ಡಗಳ ಸುತ್ತುಮುತ್ತಿನ ಪ್ರದೇಶದಲ್ಲಿರುವುದರಿಂದಲೂ ಮೈದಾನ ಪ್ರದೇಶದ ಜನರಲ್ಲಿರುವಷ್ಟು ಉತ್ಸಾಹಶಕ್ತಿಯಾಗಲಿ ಚಟುವಟಿಕೆಯಾಗಲಿ ನಮಗೆ ಇರುವುದಿಲ್ಲ ಇದಲ್ಲದೆ ವಿದ್ಯಾಭ್ಯಾಸದ ಫಲವು ನಮಗೆ ಸಂಪೂರ್ಣವಾಗಿ ದೊರೆಯಲು ಅವಕಾಶವಿಲ್ಲದೇನೇ ಹೋಗಿದೆ

"ಈ ಮಲೆನಾಡು ಪ್ರಾಂತ್ಯಕ್ಕೆಲ್ಲಾ ಒಂದೇ ಒಂದು ಸೆಕೆಂಡ್ ಗ್ರೇಡ್ ಕಾಲೇಜು ಇತ್ತು ಅದನ್ನು ಕೆಲವು ವರ್ಷಗಳ ಕೆಳಗೆ ತೆಗೆದುಹಾಕಿದರು ಇದರಿಂದ ಜನಗಳಿಗೆ ತುಂಬಾ ನಷ್ಟವಲ್ಲದೆ ವ್ಯಸನವೂ ಉಂಟಾಗಿರುತ್ತದೆ ಈಚೆಗೆ ಇಂಡಿಯಾ ದೇಶದ ದಕ್ಷಿಣಪ್ರಾಂತ್ಯಗಳಲ್ಲಿ ನಾನು ಸಂಚಾರಮಾಡಿದಾಗ ತಿರುಚಿನಾಪಲ್ಲಿ, ಕುಂಭಕೋಣ, ಮಧುರೆ, ನಾಗಪಟ್ಟಣ, ಈ ಪ್ರಾಂತ್ಯಗಳಲ್ಲಿ ಅನೇಕ ಕಾಲೇಜುಗಳಿರುವುದನ್ನು ನೋಡಿ ವಿಸ್ಮಯಪಟ್ಟೆನು ಇವುಗಳೆಲ್ಲವೂ ಸುತ್ತಲೂ ಒಂದು ನೂರು ಮೈಲಿಗಳಿಗಿಂತ ಹೆಚ್ಚಿಲ್ಲದ ಫಾಸಲೆಯ ಪ್ರದೇಶದಲ್ಲಿಯೇ ಇರುತ್ತವೆ ಅವುಗಳಲ್ಲಿ ಮುಂದೆ ಸ್ವಲ್ಪ ದಿನಗಳಲ್ಲಿಯೇ ಅಲ್ಪ ಖರ್ಚಿನಿಂದ ಅನೇಕ ಜನ ಹುಡುಗರು ವಿದ್ಯಾಭ್ಯಾಸಮಾಡುವವೆಂಬುದು ಆಶ್ಚರ್ಯವೇನೂ ಅಲ್ಲ ಅಂತಹ ಪ್ರಯೋಜನಗಳಿಗೆ ನಾವು ಭಾಗಿಗಳಾಗಿಲ್ಲವಾಗಿ ಶಿವಮೊಗ್ಗೆಯಲ್ಲಿ ಶೀಘ್ರವಾಗಿ ಒಂದು ಕಾಲೇಜನ್ನು ಪುನಃ ಸ್ಥಾಪಿಸಬೇಕೆಂದು ವಿಜ್ಞಾಪಿಸುತ್ತೇನೆ ಅಲ್ಲದೆ ಈಚೆಗೆ ಕೆಲವು ತಿಂಗಳ ಕೆಳಗೆ ಅನೇಕ ಜನ ವಿದ್ಯಾರ್ಥಿಗಳಿಗೆ ನಮ್ಮ ಮೈಸೂರು ದೇಶದ ಕಾಲೇಜುಗಳಲ್ಲಿ ಸ್ಥಳ ದೊರೆಯದೆ ಹೋದದ್ದರಿಂದ ಕೆಲವರು ದೇಶಾಂತರಗಳಿಗೆ ಹೋಗಿ ವಿದ್ಯಾಭ್ಯಾಸಮಾಡಬೇಕಾಯಿತು ಹುಡುಗರು ಮುಂದಕ್ಕೆ ಬಂದಹಾಗೆಲ್ಲಾ ಕಾಲೇಜುಗಳನ್ನು ಹೆಚ್ಚಿಸುವುದು ಅವಶ್ಯಕವು ಈ ಕಾರಣದಿಂದಲೂ, ಮಲೆನಾಡಿನ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿಯೂ ಶಿವಮೊಗ್ಗೆಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸಬೇಕೆಂದು ವಿನಯಪೂರ್ವಕವಾಗಿ ವಿಜ್ಞಾಪಿಸುತ್ತೇನೆ

"ಇದು ಒಳ್ಳೇ ಸಂದರ್ಭವಾಗಿರುವುದರಿಂದ ಜನಗಳಲ್ಲಿ ಶಾಸ್ತ್ರಸಂಬಂಧವಾದ ವಿದ್ಯಾಭ್ಯಾಸವು, ಅದರಲ್ಲಿಯೂ ವಿಶೇಷವಾಗಿ ಮಲೆನಾಡಿನಲ್ಲಿ ಆರೋಗ್ಯಶಾಸ್ತ್ರಕ್ಕೆ ಸಂಬಂಧಪಟ್ಟ ವಿದ್ಯಾಭ್ಯಾಸವು, ಹರಡಿ ವ್ಯಾಪಿಸುವಂತೆ ಮಾಡುವುದಕ್ಕಾಗಿ ಶಾಸ್ತ್ರಸಂಬಂಧವಾದ ಕೆಲವು ಪುಸ್ತಕಗಳನ್ನು ತರ್ಜುಮೆಮಾಡತಕ್ಕ ಬಗ್ಗೆ ದೇಶಭಾಷೆಯಲ್ಲಿ ಅಭಿಜ್ಞರಾದ ಜನರೊಡನೆ ಕೂಡಿದ ಒಂದು ಕಮಿಟಿಯನ್ನು ನೇಮಿಸಬೇಕಾಗಿರುತ್ತದೆ ದೇವರು ಅನುಗ್ರಹಿಸಿರುವ ಸಂಪತ್ತನ್ನು ಮನುಷ್ಯನಿಗೆ ಅನುಕೂಲವಾಗುವಂತೆ ಹೇಗೆ ನಡೆಸಿಕೊಳ್ಳಬೇಕೆಂಬುದೂ ನಮಗೆ ಗೊತ್ತಿಲ್ಲ ಎಲ್ಲಾ ಕಡೆಗಳಲ್ಲಿಯೂ ವಿದ್ಯೆಯನ್ನು ಪ್ರಚಾರಗೊಳಿಸಿ ಜ್ಞಾನೋದಯವನ್ನುಂಟುಮಾಡುವುದು ವಿದ್ಯಾಭ್ಯಾಸದ ಇಲಾಖೆಯ ಕರ್ತವ್ಯವಾಗಿದೆ ಆದುದರಿಂದ ದೇಶಭಾಷೆಯಲ್ಲಿ ಬುಲೆಟಿನ್ ಎಂಬ ಸಣ್ಣ ಸಣ್ಣ ಪುಸ್ತಕಗಳನ್ನು ಆಗಾಗ್ಗೆ ಪ್ರಕಟಿಸುತ್ತಾ ಬಂದಲ್ಲಿ ಆ ಬಗ್ಗೆ ಖರ್ಚಾಗುವ ಹಣವು ವ್ಯರ್ಥವಾದುದೆಂದು ಯಾರೂ ಭಾವಿಸರು ಇದೂ ಅಲ್ಲದೆ ನಮ್ಮನ್ನಾಳುವ ಶ್ರೀಮತ್ ಮಹಾರಾಜರವರು ಕರ್ನಾಟಕ ಸಿಂಹಾಸನಾಧೀಶ್ವರರೆಂಬ ಬಿರುದು ಪಡೆದಿರುವರು ಅವರ ದೇಶದಲ್ಲಿ ಕನ್ನಡ ಭಾಷೆಯೂ, ಕನ್ನಡ ಗ್ರಂಥಗಳೂ ಅಭಿವೃದ್ಧಿಗೆ ಬರುವುದು ನ್ಯಾಯವಾಗಿದೆ ಹೀಗೆ ಉಪಯೋಗಕರವಾದ ಏರ್ಪಾಟನ್ನು ಮಾಡಿ ಕನ್ನಡ ಭಾಷೆಗೆ ಪ್ರೋತ್ಸಾಹಕೊಟ್ಟಲ್ಲಿ ಮೈಸೂರು ದೇಶದ ಒಳಗೂ, ಹೊರಗೂ ಕನ್ನಡ ಭಾಷೆಯನ್ನಾಡುವ ಜನಗಳಿಗೆ ತುಂಬಾ ಪ್ರಯೋಜನವಾಗುತ್ತದೆ

"ಮಲೆನಾಡು ಇಂಪ್ರೂವ್‌ಮೆಂಟ್ ಕಮಿಟಿಯನ್ನು ಏರ್ಪಡಿಸಿ, ಅಲ್ಲಿಗೆ ಅಭಿವೃದ್ಧಿಕಾರ್ಯಗಳನ್ನು ಒದಗಿಸತಕ್ಕ ಬಗ್ಗೆ ಮೂರು ಲಕ್ಷ ರೂಪಾಯಿ ಮಂಜೂರ್ಮಾಡಿರುವುದಕ್ಕಾಗಿ ಸರ್ಕಾರದವರಿಗೂ, ಅದರಲ್ಲಿಯೂ ಮುಖ್ಯವಾಗಿ ಪ್ರಾಜ್ಞರಾದ ದಿವಾನ್ ಮ|| ವಿಶ್ವೇಶ್ವರಯ್ಯ, ಸಿ ಐ ಇ ಯವರಿಗೂ ನಾವು ಬಹಳ ಕೃತಜ್ಞರಾಗಿರುವೆವು ಸದರಿ ಕಮಿಟಿಯು ಆಗಲೇ ಏರ್ಪಟ್ಟು ಮಲೆನಾಡಿಗೆ ಅನುಕೂಲವಾದ ಕಾರ್ಯಗಳನ್ನು ಕೈಗೊಳ್ಳುತ್ತಿರುತ್ತದೆಯಾಗಿ ನಮ್ಮ ಕೃತಜ್ಞತೆಯು ಸಾರ್ಥಕ್ಯವಾಗಿಯೂ, ನಿರರ್ಗಳವಾಗಿಯೂ ಇರುತ್ತದೆ

"ತಾವು ಈ ಸ್ಕೂಲಿನ ಉಪಕ್ರಮಕಾರ್ಯವನ್ನು ಈಗ ನೆರವೇರಿಸಬೇಕೆಂತಲೂ, ಈ ಸ್ಕೂಲು ಅಭಿವೃದ್ಧಿಗೆ ಬಂದು ಇಂತಹ ಸ್ಕೂಲುಗಳು ಮಲೆನಾಡಿನಲ್ಲಿ ಇನ್ನೂ ಹೆಚ್ಚಲಿ ಎಂದೂ ಪ್ರಾರ್ಥಿಸಿ, ತಾವು ಈ ಪ್ರಾಂತ್ಯ ಮುಂದೆ ಅನೇಕ ಸಲ ಬಂದು ಇಲ್ಲಿನ ವಿದ್ಯಾಮಾನಗಳನ್ನು ಪರಾಂಬರಿಸಿ ನಮ್ಮಗಳಿಗೆ ಪ್ರೋತ್ಸಾಹಕೊಡುತ್ತಿರಬೇಕೆಂತಲೂ ವಿಜ್ಞಾಪಿಸುವುದೇ ಈಗ ನನ್ನ ಕರ್ತವ್ಯವಾಗಿರುತ್ತದೆ —ಈ ಸ್ಕೂಲಿಗೆ ಒಬ್ಬ ಇಂಗ್ಲಿಷ್ ಉಪಾಧ್ಯಾಯರು ಏರ್ಪಾಟಾಗಿರುವುದರಿಂದ ದೊಡ್ಡ ದೊಡ್ಡ ಹುಡುಗರ ವಿದ್ಯಾಭ್ಯಾಸಕ್ಕೂ ಪ್ರಯೋಜನಕರವಾಯಿತೆಂದು ಭಾವಿಸುತ್ತೇವೆ ಈ ಸ್ಕೂಲು ಕಾಲ ಕ್ರಮೇಣ ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿನ ಸ್ಥಿತಿಗೆ ಬರುವುದು ಇದಕ್ಕೆ ಒಂದು ವಾಚಕಾಲಯವನ್ನೂ (ರೀಡಿಂಗ್ ರೂಮ್) ಸೇರಿಸಿ, ಅಲ್ಲಿ ಜನಗಳು ಸೇರಿ ತಿಳುವಳಿಕೆಯನ್ನು ಪಡೆಯುವಂತೆ ಮಾಡಿ ಅದರಿಂದ ಜ್ಞಾನಪ್ರಚಾರವಾಗುವಂತೆ ಮಾಡಬೇಕೆಂತಲೂ, ಸ್ಕೂಲಿನ ಸುತ್ತಲೂ ಒಂದು ತೋಟವನ್ನು ಮಾಡಿಸಬೇಕೆಂತಲೂ ಕಮಿಟಿಯವರು ಬಹಳವಾಗಿ ಅಭಿಪ್ರಾಯಪಡುತ್ತಿರುವುದಲ್ಲದೆ ಉಪಾಧ್ಯಾಯರುಗಳ ವಾಸಕ್ಕಾಗಿ ಕಟ್ಟಡಗಳನ್ನು ಕಲ್ಪಿಸಿರುತ್ತಾರೆ ವಿದ್ಯಾಭ್ಯಾಸ ಸಂಬಂಧವಾಗಿ ಪ್ರಕಟವಾಗುವ ಪುಸ್ತಕಗಳನ್ನು ಸದರಿ ವಾಚಕಾಲಯಕ್ಕೆ ಉಚಿತವಾಗಿ ಕಳುಹಿಸಿಕೊಡಬೇಕೆಂದು ವಿಜ್ಞಾಪಿಸುತ್ತೇನೆ —ಹಡಸೆಯಲ್ಲಿಯೂ, ಇನ್ನೂ ಇತರ ಮೂರು ಸ್ಥಳಗಳಲ್ಲಿಯೂ ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿ ಜನಗಳಿಗೆ ಸಾಧ್ಯವಾದ ಮಟ್ಟಿಗೆ ಪ್ರಯೋಜನವನ್ನು ಕಲ್ಪಿಸಬೇಕೆಂದು ಪ್ರಯತ್ನಪಡುತ್ತಲಿದೇನೆ

"ಈ ದಿನವು ಶ್ರೀಮತ್ ವೈಸ್ರಾಯರವರ ವಿಷಯಕವಾದ ಬಾಲಕರ ಪ್ರೀತಿ ಪ್ರದರ್ಶನ ಮಹೋತ್ಸವದ ದಿನವಾಗಿ ಭಾಗ್ಯವಶಾತ್ ಸಂಭವಿಸಿರುವುದರಿಂದ ನಮ್ಮ ಕಾರ್ಯಗಳಿಗೆ ವಿಶೇಷ ಗೌರವವುಂಟಾಗಿರುವುದಲ್ಲದೆ ಅವುಗಳ ಪುರೋಭಿವೃದ್ಧಿಗೆ ಶುಭಸೂಚನೆಯಾಗಿರುತ್ತದೆ ಪರ್ಯವಸಾನದಲ್ಲಿ ತಿಳಿಸತಕ್ಕದ್ದು ಏನೆಂದರೆ ತಮಗೂ, ಈ ಕಾರ್ಯವನ್ನು ಸಫಲಗೊಳಿಸಿದ ಜನಗಳೆಲ್ಲರಿಗೂ ಅತ್ಯಂತ ಕೃತಜ್ಞನಾಗಿರುವೆನು "

ಕಲ್ಕೆರೆಯ ಹೊಸ ಸ್ಕೂಲ್ ಸ್ಥಾಪನೆ

ತಿಪಟೂರು ತಾಲ್ಲೂಕು ಕಲ್ಕೆರೆ ಗ್ರಾಮದಲ್ಲಿ ಸುಮಾರು 100 ಮನೆಗಳಿವೆ ಪ್ರಜೆಗಳೆಲ್ಲಾ ಸುಮಾರಾಗಿ ರಜಪುತ್ರರಾಗಿದಾರೆ ಇವರು ಮೈಸೂರು ಬಾರ್ ಇಲಾಖೆ ಮುಂತಾಗಿ ಗೌರ್ನಮೆಂಟ್ ಇಲಾಖೆಗಳಲ್ಲಿ ಸರ್ವಿಸ್ ಮಾಡಿದವರಾಗಿಯೂ, ಕೆಲವರು ಪೆನ್‌ಷನ್ ಪಡೆದವರಾಗಿಯೂ ಇದಾರೆ ಈ ಗ್ರಾಮದಲ್ಲಿ ಇದುವರಿಗೂ ಸರ್ಕಾರಿ ಪಾಠಶಾಲೆ ಇರಲಿಲ್ಲ ಈಗ ನಮ್ಮ ದಯಾಳು ಸರ್ಕಾರದವರು ಈ ಗ್ರಾಮಕ್ಕೆ ಒಂದು ಕನ್ನಡ ಪಾಠಶಾಲೆಯನ್ನು ಹೊಸದಾಗಿ ಮಂಜೂರು ಮಾಡಿ, ಮ|| ಸಿ ವರದಯ್ಯಂಗಾರನ್ನು ಉಪಾಧ್ಯಾಯರನ್ನಾಗಿ ನೇಮಿಸಿ ಕಳುಹಿಸಿದಾರೆ ತಾ 11 ನೇ ಸೋಮವಾರ ಸಭೆ ಸೇರಿತು ಈ ಗ್ರಾಮದ ಮ|| ಪುಟ್ಟಣ್ಣನವರು ಅಗ್ರಾಸನವನ್ನು ವಹಿಸಿದ್ದರು ಮ|| ಪೆನ್‌ಷನ್ ಶೇಕ್‌ದಾರ್ ಹರೀಸಿಂಗರು, ಪಟೇಲ್ ಮಂಗೇಗೌಡರು, ಪಟೇಲ್ ರಂಗೇಗೌಡರು, ಗುಬ್ಬಿಶೆಟ್ಟರು, ಸಂಪಿಗೆ ಲಕ್ಷ್ಮಣಸಿಂಗರು, ಕಾಂಟ್ರ್ಯಾಕ್ಟರ್ ಹರೀಸಿಂಗರು, ಹ| ಹಸನ್ ಮಿಯಾ ಸಾಹೇಬರು, ಸೈಯದ್ ಅಹಮ್ಮದ್ ಸಾಹೇಬರು, ಹಯಾತ್ ಸಾಹೇಬರು, ಮಹಮ್ಮದ್ ಖಲಂದರ್ ಸಾಹೇಬರು, ಮತ್ತು ಸುತ್ತುಮುತ್ತಣ ಗ್ರಾಮದವರನೇಕರು ಸುಮಾರು 400 ಜನಗಳ ವರೆಗೆ ಸೇರಿದ್ದರು ಮ|| ಹೊನ್ನವಳ್ಳಿ ಸುಬ್ಬರಾಯರು ಏಕಮತ್ಯದ ವಿಚಾರವಾಗಿಯೂ, ಆದಿನಾಯ್ಕನಹಳ್ಳಿ ಪ್ರೈವೇಟ್ ಸ್ಕೂಲ್ ಮಾಸ್ಟರ್ ಷೇಖ್ ಇಸ್ಮಾಯಿಲ್‌ರು, ವಿದ್ಯೆಯಿಂದಲೇ ಇಹಪರ ಸುಖ ಸಂಪತ್ತು ಲಭಿಸುತ್ತೆ ಎಂಬುದರ ವಿಷಯವಾಗಿಯೂ ಬಹಳ ಸ್ವಾರಸ್ಯವಾದ ಉಪನ್ಯಾಸಗಳನ್ನು ಬೆಳಸಿ, ಸಭಿಕರ ಮನಸ್ಸನ್ನು ಸಂತೋಷಪಡಿಸಿದರು ಅನಂತ ಬಾಲಕರಿಂದ ಗಣಪತಿ ಸ್ತೋತ್ರವೂ, ನಮ್ಮನ್ನಾಳುವ ಶ್ರೀಮತ್ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದೂರ್‌ರವರ ಮತ್ತು ಸಾರ್ವಭೌಮ ಜಾರ್ಜ್ ಮಹಾನುಭಾವರ ಶ್ರೇಯಃಪ್ರಾರ್ಥನೆಗಳೂ ನಡಸಿ, ಬಾಜಾ ಬಹಳ ವಾದ್ಯಗಳಿಂದ ಜೋಗ್ಯರಿಸಿ ಪಾನ್‌ಸುಪಾರಿ ಗಂಧ ಇವುಗಳಿಂದಲೂ ಮಿಠಾಯಿಯಿಂದಲೂ ಸಭೆಗೆ ಆನಂದಪಡಿಸಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು

ಚಳ್ಳಕೆರೆ ತಾಲ್ಲೂಕು ದೊಡ್ಡೇರಿ

ನಮ್ಮ ಶ್ರೀಮತ್ ಮಹಾರಾಜಾ ಸರ್ಕಾರದವರು ಸಂಸ್ಥಾನದ ಸಮಸ್ತ ಕೋಮುಗಳಲ್ಲೂ ವಿದ್ಯಾಭಿವೃದ್ಧಿಯನ್ನುಂಟುಮಾಡುವ ಸದುದ್ದೇಶದಿಂದಲೇ ಈ ಗ್ರಾಮದಲ್ಲಿ ಒಂದು ಪಂಚಮ ಸ್ಕೂಲನ್ನು ಸ್ಥಾಪಿಸಿ, ಒಬ್ಬ ಮಾಸ್ತರನ್ನು ದಯಪಾಲಿಸಿರುತ್ತಾರೆ ಸನ್ನಿಧಾನದವರ ಅಪ್ಪಣೆ ಪ್ರಕಾರ ಈ ಮಾಹೆ 13 ನೇ ತಾ ಮಂಗಳವಾರ ಪ್ರಾತಃಕಾಲ ಗ್ರಾಮದ ಮುಖಂಡರೂ ಬೇಗಾರಿ ಜನಗಳೂ ಸರ್ಕಾರದವರು ಮಂಜೂರುಮಾಡಿ ಕೊಟ್ಟಿರುವ ಅಲಂಕೃತವಾದ ಬಾಡಿಗೆ ಮನೆಯಲ್ಲಿ ಬಾಲಕರುಗಳೊಂದಿಗೆ ಪ್ರಾರಂಭೋತ್ಸವವನ್ನು ನಡಿಸಿ ಪಂಚಮರ ಬಾಲಕರಿಗೂ, ಅವರ ಪೋಷಕರಿಗೂ ಪ್ರೋತ್ಸಾಹಗೊಳಿಸುವ ಉದ್ದೇಶವಾಗಿ ವಿದ್ಯಾಭ್ಯಾಸದಿಂದಾಗುವ ಉತ್ತಮವಾದ ಫಲ ಪ್ರಯೋಜನಗಳನ್ನು ಮ ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಪೂರ್ಣಬೋಧಾಚಾರ್ಯರು ತಿಳಿಸಿದರು ಅನಾಗರಿಕರೂ ಮತ್ತು ಗರೀಬರಾದ ಬೇಗಾರಿ ಜನಗಳನ್ನು ಅಭಿವೃದ್ಧಿಗೆ ತರುವ ಏರ್ಪಾಟು ಸರ್ಕಾರದವರ ಘನ ಆಲೋಚನೆಯ ಫಲವೆಂಬ ಬಗ್ಗೆ ಹಿಂದೂಸ್ತಾನಿ ಸ್ಕೂಲ್ ಮಾಸ್ಟರ್ ಮಿ|| ಸೈಯ್ಯದ್ ಅಹಮ್ಮದ್ ಸಾಹೇಬರು ಉದಾಹರಿಸಿದರು ಮ|| ಗಳಾದ ಪಟೇಲ್ ವೀರಣ್ಣನವರೂ ಶ್ಯಾ ರುದ್ರಪ್ಪನವರೂ ಮುಂದೆ ಈ ಸ್ಕೂಲನ್ನು ಅಭಿವೃದ್ಧಿಗೆ ತರುವದಕ್ಕೋಸ್ಕರ ಬೇಗಾರಿ ಜನಗಳು ತಮ್ಮ ಮಕ್ಕಳನ್ನು ಕ್ರಮವಾಗಿ ಸ್ಕೂಲಿಗೆ ಕಳುಹಿಸುವ ಹಾಗೆ ತಕ್ಕ ತಿಳುವಳಿಕೆಯನ್ನು ಕೊಟ್ಟರು ಆಗ ಬಾಲಕರು ದೇವರ ಪ್ರಾರ್ಥನೆಯನ್ನೂ, ಶ್ರೀಮತ್ ಚಕ್ರವರ್ತಿಗಳವರ ಮತ್ತು ಶ್ರೀಮತ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನೂ ಮಾಡಿದರು ಅನಂತರ ಸಮಸ್ತ ಜನಗಳಿಗೂ ಹೂ ಗಂಧಾದಿಗಳನ್ನು ಹಂಚಿ, ಬಾಲಕರಿಗೆ ಫಲಾಹಾರ ಕೊಡಲ್ಪಟ್ಟಿತು ಈ ಸ್ಕೂಲಿಗೆ ಮಾಸ್ಟರಾಗಿ ಬಂದಿರುವ ಮ|| ವಿ ರಾಮರಾಜಯ್ಯನವರು ಅದರ ಅಭಿವೃದ್ಧಿಗಾಗಿ ಅನುಕೂಲಪಡಿಸುವರೆಂದು ನಂಬಲಾಗಿದೆ

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ವರ್ತಮಾನಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಿನ್ನೈಸಿಕೊಳ್ಳುತ್ತೇವೆ

ಎಂ ಎಸ್ ನೀಲಪ್ಪ, ವಾಟದಹೊಸಹಳ್ಳಿ, ಎಂ ಭೀಮಾಚಾರ್, ಬ್ರಾಹ್ಮಿಂಗ್‌ಪೇಟೆ, ರಂಗಪ್ಪ, ತುಮಕೂರು ಎಚ್ ಎನ್ ಅಣ್ಣಯ್ಯ, ಬೆಂಗಳೂರು — ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ —ಎಡಿ]

ಕರೆಸ್ಪಾಂಡೆನ್ಸ್

ಒಬ್ಬ ವ್ಯವಸಾಯಗಾರರ ಭಾಷಣ

ಅಯ್ಯಾ,—ತಮ್ಮ ಹಿಂದಿನ ವಾರದ ಸಂಚಿಕೆಯಲ್ಲಿ ಹೇಮಗಿರಿ ಹರಿಹರ, ಬೀರೂರು, ದಾವಣಗೆರೆ, ಚಿತ್ರದುರ್ಗ ಮುಂತಾದ ಸ್ಥಳಗಳಲ್ಲಿ ಮ|| ಎನ್ ಸಿದ್ದಲಿಂಗದೇವರು ಎಂಬುವರು ತಮಗೆ ತಿಳಿದ ವ್ಯವಸಾಯದ ಅನುಭವವನ್ನು ಮೌಢ್ಯರಾದ ರೈತರಿಗೆ ತಿಳಿಸುವದು ಲೋಕಸಮ್ಮತವಾಗಿರುತ್ತದೆ ಆದರೆ ಎಲ್ಲಾ ಕಸುಬುಗಳಿಗಿಂತಲೂ ಶ್ರೇಷ್ಠವಾದದ್ದು ಬೇಸಾಯವೆಂದೂ, ದೇಶದ ಏಳಿಗೆಗೆ ಕೃಷಿಪ್ರಜೆಗಳೇ ಮೂಲಾಧಾರರಾಗಿರುತ್ತಾರೆಂದೂ ಸಿದ್ಧಾಂತ ಪಡಿಸಿದ ವಿಷಯವನ್ನು ಮೇಲ್ಕಂಡ ಉಪನ್ಯಾಸಕರು ದಯವಿಟ್ಟು ಮುಂದಲ ಸಂಚಿಕೆಯಲ್ಲಿ ಪ್ರಕಟಮಾಡಿ ವ್ಯವಸಾಯದ ಅನುಭವವಿಲ್ಲದ ರೈತಾಪಿ ಜನಗಳಿಗೂ, ಇತರ ಕಸಬುದಾರಿ ಜನಗಳಿಗೂ ತಿಳಿಯಪಡಿಸಬೇಕೆಂದು ಕೋರುತ್ತೇನೆ

ಬಿ ಸಿದ್ದಲಿಂಗಪ್ಪ, ಮೈಸೂರು

ಚನ್ನಪಟ್ಟಣದ ಸ್ಕೂಲುಗಳು

ಅಯ್ಯಾ,—ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ವಿದ್ಯವನ್ನು ಅಭಿವೃದ್ಧಿಗೆ ತಂದು, ಜನಗಳ ಶ್ರೇಯಸ್ಸನ್ನು ಕೋರಿ, ನೂರಾರು ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿರುವುದಕ್ಕಾಗಿ, ಈ ಬಾಬಿನಲ್ಲಿ ಉಪಕಾರವನ್ನು ಹೊಂದಿರುವ ಪಟ್ಟಣ ಮತ್ತು ಗ್ರಾಮವಾಸಿಗಳು ಸರ್ಕಾರದವರಿಗೆ ಕೃತಜ್ಞರಾಗಿರುವುದರಲ್ಲಿ ಸಂದೇಹವಿರುವುದಿಲ್ಲ ಚನ್ನಪಟ್ಟಣದ ಟವನ್‌ಗೆ 2 ಸ್ಕೂಲುಗಳನ್ನು ಕೊಟ್ಟು, ಒಂದು ಕೋಟೆಯಲ್ಲಿಯೂ, ಮತ್ತೊಂದನ್ನು ಪೇಟೆಯಲ್ಲಿಯೂ ಸ್ಥಾಪಿಸಿರುತ್ತಾರೆ ಕೋಟೆಯ ಮಕ್ಕಳು ಪೇಟೆಯಲ್ಲಿರುವ ಮಿಡ್ಲ್ ಸ್ಕೂಲಿಗೆ ಬರಲು ದೂರವಾಗಿರುವುದರಿಂದ ಅಲ್ಲಿ ಸ್ಕೂಲನ್ನು ಸ್ಥಾಪಿಸಿ ಕೊಟ್ಟಿರುವುದು ಕೋಟೆಯಲ್ಲಿರುವ ಮಕ್ಕಳಿಗೆ ತುಂಬಾ ಉಪಕಾರವಾಯಿತೆನ್ನುವದರಲ್ಲಿ ಸಂದೇಹವಿಲ್ಲ ಆದರೆ ಪೇಟೆಯಲ್ಲಿ ಮಿಡ್ಲ್ ಸ್ಕೂಲನ್ನು ಸೇರಿಸಿದರೆ ಅರ್ಧ ಮೈಲಿ ಚದರದಲ್ಲಿ ಒಟ್ಟಿಗೆ 4 ಸ್ಕೂಲುಗಳು ಇರುತ್ತವೆ ಅದು ಮಾತ್ರವಲ್ಲದೆ ಈಗ ಹೊಸದಾಗಿ ಸ್ಥಾಪಿಸಿರುವ ಸ್ಕೂಲು ಮಿಡ್ಲ್ ಪಾಠಶಾಲೆಗೆ ಕೇವಲ ಸಮೀಪದಲ್ಲಿರುತ್ತದೆ ಅಲ್ಲದೆ ಪೇಟೆಯಲ್ಲಿ ಸ್ಥಾಪಿಸಿರುವ ಪ್ರೈಮರಿ ಸ್ಕೂಲಿಗೂ ಮತ್ತು ಒಬ್ಬ ಒಡ ಮಾಸ್ಟರು ಸ್ಥಾಪಿಸಿ ಮಾಡಿರುವ ಪ್ರೈವೇಟ್ ಸ್ಕೂಲಿಗೂ ಒಂದು ಅಡ್ಡಗೋಡೆ ಮಾತ್ರವಿರುತ್ತದೆ, ಆದ್ದರಿಂದ ಆ ಪ್ರೈವೇಟ್ ಸ್ಕೂಲು ಮಾಸ್ಟರು ಈಗಿರುವ ಕಟ್ಟಡವನ್ನು ಬಿಡಬೇಕಾದ ಸಂಭವ ಬಂದೊದಗಿದ ಹಾಗೆ ಕಾಣುತ್ತೆ ಇದರಿಂದ ಆ ಬಡ ಮನುಷ್ಯನು ಬೇರೆ ಕಟ್ಟಡಕ್ಕೆ ತನ್ನ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಬೇಕಾಗಿರುತ್ತೆ ಇದು ಆತನಿಗೆ ತೊಂದರೆಯಲ್ಲವೇ ಕೋಟೆಯಲ್ಲಿಯೂ, ಪೇಟೆಯಲ್ಲಿಯೂ ಏಸಿಲು ರಜಕ್ಕೆ ಮುಚೆ ಸ್ಕೂಲನ್ನು ಪ್ರಾರಂಭಿಸಿ, ಒಂದು ದಿನವಿಟ್ಟು ತರುವಾಯ ರಜ ಕೊಟ್ಟುಬಿಟ್ಟಿದ್ದರು ಈಗ ಪ್ರಾರಂಭಿಸಿರುತ್ತಾರೆ ಈ ಸ್ಕೂಲುಗಳನ್ನು ಸ್ಥಾಪಿಸಿರುವುದರಿಂದ ಬೇರೆ ಸ್ಕೂಲುಗಳಿಗೆ ಯಾವ ಬಾಬಿನಲ್ಲಿಯೂ ತೊಂದರೆಯುಂಟಾಗದಂತೆ ನೋಡಿಕೊಳ್ಳುವುದೇ ಪ್ರಾಮುಖ್ಯವಾದ ಸಂಗತಿಯಾಗಿರುತ್ತದೆ ಇದರ ವಿಷಯ ಸೇರ್ಪಟ್ಟ ಅಧಿಕಾರಿಗಳ ಗಮನವು ಅವಶ್ಯಕವಾಗಿರುತ್ತೆ

ಪುರವಾಸಿ

ಕೋಲಾರ ತಾಲ್ಲೂಕು ವ್ಯಾಲಪೂರು

ಅಯ್ಯಾ,—ಈ ಗ್ರಾಮವು ವೇಮಗಲ್ ಹೋಬಳಿಗೆ ಸೇರಿದ ಕಾಯಂಗುತ್ತಾ ಗ್ರಾಮ ಇದು ದೇವನಹಳ್ಳಿ ರಾಮಪ್ಪನವರದು ಇದು ಮಾಲೂರು ರೈಲಿಗೆ 21 ಮೈಲಿಯಲ್ಲಿಯೂ, ಕೋಲಾರ ರೈಲಿಗೆ 1› ಮೈಲಿಯಲಿಯೂ ಇದೆ ಈ ಗ್ರಾಮಕ್ಕೆ ಒಂದು ಕಡೆ ೬ ಮೈಲಿ ಫಾಸಲೆಯಲ್ಲಿಯೂ, ಇನ್ನೆರಡು ಕಡೆ 3 ಮತ್ತು 4 ಮೈಲಿ ಫಾಸಲೆಯಲ್ಲಿಯೂ ರಸ್ತೆ ಸಿಕ್ಕುವವೇ ಹೊರತು ಈ ಗ್ರಾಮದಿಂದ ಬೇರೆ ಎಲ್ಲಿಗೂ ರಸ್ತೆಯೇ ಇಲ್ಲ ಇಲ್ಲಿನ ಮನೆಗಳ ಸಂಖ್ಯೆ ೬೦0, ಜನಸಂಖ್ಯೆ 2310, ಅಂಗಡಿಗಳ ಸಂಖ್ಯೆ 30 ಮಗ್ಗಗಳ ಸಂಖ್ಯೆ 4, ರೇಷ್ಮೆ ತೆಗೆಯುವ ಕಾರ್ಖಾನೆಗಳ ಸಂಖ್ಯೆ ಸುಮಾರು 10, ರೇಷ್ಮೆ ಹುಳ ಸಾಕುವವರ ಸಂಖ್ಯೆ 300 ಇಷ್ಟಿದ್ದರೂ ಗ್ರಾಮಕ್ಕೆ ಒಂದು ಯೂನಿಯನ್ ಪಂಚಾಯತ ವಾಗಲಿ, ಮ್ಯುನಿಸಿಪಲ್ ಸರ್ಕಾರಾಗಲಿ ಇಲ್ಲ ಈ ಗ್ರಾಮದಲ್ಲಿ ಬೀಟ್ ಪೋಲೀಸ್ ಸ್ಟೇಷನ್ ಇಬ್ಬರು ಕಾನ್‌ಸ್ಟೇಬಲರೂ, ಕನ್ನಡ ಹಿಂದುಸ್ತಾನಿ ಗರಲ್ಸ್ ಸ್ಕೂಲ್ ಒಂದು ಹಿಂದುಸ್ತಾನಿ ಬಾಯ್ಸ್ ಸ್ಕೂಲು, ಒಂದು ವಾಚನಾ ಪಾಠಶಾಲೆ ಎಂಬ ನಾಲ್ಕು ಸ್ಕೂಲುಗಳೂ ಒಂದು ಪೋಸ್ಟ್ ಆಫೀಸು, ಒಂದು ಸರ್ಕಲ್ಲರ್ ಆಫೀಸೂ ಇವೆ ಇಲ್ಲಿ ತಯಾರಾಗುವ ರೇಷ್ಮೆಯು ಎಲ್ಲಾ ದೇಶಗಳಿಗೂ ರಫ್ತಾಗುವದು ಸುಮಾರು ವರುಷಕ್ಕೆ ೬೦ 30 ಸಾವಿರ ರೂಪಾಯಿನ ರೇಷ್ಮೆಯು ಪರಸ್ಥಳಗಳಿಗೆ ರಫ್ತಾಗುತ್ತದೆ ಇದ್ದರಿಂದಲೇ ಈ ಗ್ರಾಮಕ್ಕೆ ಸರ್ಕಾರದ ದೊಡ್ಡ ದೊಡ್ಡ ಉದ್ಯೋಗಸ್ಥರು ಪದೇಪದೇ ಬರುತ್ತಿದ್ದರೂ ರಸ್ತೆ ಏರ್ಪಾಟಾಗದಿರುವದು ಆಶ್ಚರ್ಯ ಈ ಗ್ರಾಮದ ಪೋಲೀಸ್ ಬಂದೋಬಸ್ತಾದಿಯು ಚೆನ್ನಾಗಿರುತ್ತದೆ ಕನ್ನಡ ಬಿ ಇ ಸ್ಕೂಲಿನಲ್ಲಿ 120 ಹುಡುಗರೂ, 6 ತರಗತಿಗಳೂ ಇಬ್ಬರು ಮಾಸ್ಟರುಗಳೂ ಕೆಲಸಮಾಡುತ್ತಿದ್ದರು ಈಚೆಗೆ ಗೌರ್ನಮೆಂಟಿನವರು ಇನ್ನೊಬ್ಬ ಸಹಾಯೋಪಾಧ್ಯಾಯರನ್ನು ಕೊಟ್ಟಿದಾರೆ ಈಗಿರುವ ಕಟ್ಟಡದಷ್ಟು ಹೊಸ ಕಟ್ಟಡವೂ ಇನ್ನೊಬ್ಬ ಸಹಾಯೋಪಾಧ್ಯಾಯರೂ ಈ ಸ್ಕೂಲಿಗೆ ಸಹಾಯಮಾಡಿ ಕೊಟ್ಟಲ್ಲಿ ಪಕ್ಕತಕ್ಕ ಎಲ್ಲಾ ಕೊರತೆಗಳೂ ತಪ್ಪುವವು ಪಿಕ್ಕ ಮೂರು ಸ್ಕೂಲುಗಳಿಗೂ ಕಟ್ಟಡವೇ ಇಲ್ಲ ಈ ಕಟ್ಟಡಗಳಿಗೆ ಗ್ರಾಮಸ್ಥರು ಹಣ ಕೊಡಲು ಚೈತನ್ಯವಿಲ್ಲದವರಾಗಿದಾರೆ ಆದ್ದರಿಂದ ಇವು ಕಟ್ಟಡವಿಲ್ಲದೆ ಕಲ್ಯತ್ತೆಯ ಬ್ಲಾಕ್ ಹೋಲಿನ ಸುಖವನ್ನು ಅನುಭವಿಸುತ್ತವೆ ಹಿಂದುಸ್ತಾನಿ ಬಾಯ್ಸ್ ಸ್ಕೂಲಿನಲ್ಲಿ 40 ಜನ ವಿದ್ಯಾರ್ಥಿಗಳುಳ್ಳ ಕೂಡಿದ ನಾಲ್ಕು ತರಗತಿಗಳನ್ನು ಒಬ್ಬ ಮಾಸ್ಟರು ನಡೆಯಿಸುವದನ್ನು ನೋಡಿದರೆ ೬ ತರಗತಿಗಳನ್ನು ನಡಸುವ ಕನ್ನಡ ಹೆಡ್ ಮಾಸ್ಟರಿಗಿಂತಲೂ ಅದೃಷ್ಟವಾಲಿಗಳೆಂದು ಹೇಳಬಹುದು ಪಕ್ಕತದಲ್ಲಿ ಈ ಗ್ರಾಮದಲ್ಲಿ 300 ಬಾಲಕಬಾಲಕಿಯರು ವಿದ್ಯಾಭ್ಯಾಸಮಾಡುತ್ತಿರುವಾಗ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪ್ರಯತ್ನಪಡದೆ ಇರುವದು ಗ್ರಾಮಸ್ಥರಿಗೆ ವಿಷಾದವನ್ನುಂಟುಮಾಡಿದೆ ಈಚೆಗೆ ಕನ್ನಡ ಬಿ ಇ ಸ್ಕೂಲ್ ಹೆಡ್ ಮಾಸ್ಟರು ಮ|| ಡಿ ಕೃಷ್ಣಶಾಸ್ತ್ರಿಗಳವರು ವಿಷಯ ವಾರ್ತಾ ಬೋಧಕ ಸಮಾಜವೆಂಬ ಒಂದು ಕಮಿಟಿಯನ್ನು ಈ ಸ್ಕೂಲಿಗೆ ಸೇರಿದಂತೆ ಸ್ಥಾಪಿಸಿರುತ್ತಾರೆ ಈ ಸಭೆಯ ಉದ್ದೇಶವೇನೆಂದರೆ ಸಭೆಯ ಮೆಂಬರುಗಳು ಸ್ವಲ್ಪ ಚಂದಾ ಮೂಲಕ ಹಣವನ್ನು ಕೂಡಿಸಿ ಅದರಿಂದ ವರ್ತಮಾನ ಪತ್ರಿಕೆಗಳನ್ನೂ, ಮಾಸ ಪತ್ರಿಕೆಗಳನ್ನೂ ತರಿಸಿ ತನ್ಮೂಲಕ ರೈತಾಪಿ ಜನರಿಗೆ ವ್ಯಾಪಾರ, ಕೈಗಾರಿಕೆ, ವ್ಯವಸಾಯ ಮುಂತಾದವುಗಳಲ್ಲಿ ಜ್ಞಾನಾಭಿವೃದ್ಧಿಯನ್ನು ಉಂಟುಮಾಡಬೇಕೆಂಬುದೇ ಇನ್ನು ಮುಂದೆ ಈ ಸ್ಕೂಲು ಬಿ ಇ ಎಂಬ ಹೆಸರು ಕಳೆದುಕೊಂಡು ಎ ವಿ ಎಂಬ ಹೊಸ ಹೆಸರನ್ನು ಧರಿಸಬಹುದೆಂಬ ಭರವಸೆ ಇದೆ

ಗ್ರಾಮವಾಸಿ

ತಾಲ್ಲೂಕು ವರ್ತಮಾನಗಳು.

ಹುಣಸೂರು ತಾ|| ಚಿಕ್ಕಾಡಿಗನಹಳ್ಳಿ — ಬಿಸಿಲಿನ ತಾಪ ಹೆಚ್ಚು, ಮಳೆ ಮುಖವೇ ಇಲ್ಲ. ಸಾಯಂಕಾಲ ತಂಗಾಳಿ ಮಾತ್ರ ಇಂಪಾಗಿ ಬೀಸುತ್ತದೆ. ಈರುಬೆಳೆಗೆ ಅರ್ಧ ಆಯಾಂ ಏನಾಯಿತು ಮುಂದೇನುಗತಿಯೋ ಎಂದು ರೈತರು ಚಿಂತಿಸುತ್ತಿದ್ದಾರೆ. ಧಾರಣೆ ದಿನೇ ದಿನೇ ಏರುತ್ತಿದೆ — ಪೋಲೀಸ್ ಸೂಪರಿಂಟೆಂಡೆಂಟರು ದಾವಣಗೆರೆ ಪೋಲೀಸ್ ಸ್ಟೇಷನ್ ಇನ್ಸ್‌ಪೆಕ್ಷನ್ ಮಾಡಿಕೊಂಡು ದಯಮಾಡಿದರು — ಸ್ಪೆಷಲ್ ಶಿರಸ್ತೆದಾರರು ಈಗಲಾದರೂ ಗ್ರಾಮಗಳ ಸಮೀಪದಲ್ಲಿ ಗೊಬ್ಬರ ಗೋಡು ಹಾಕದಂತೆ ಮಾಡಿದರೆ ಇದರಿಂದುಂಟಾಗುವ ಅನಾರೋಗ್ಯ ಕಡಮೆಯಾದೀತು.

ಹುಣಸೂರು — ಈ ಊರಿನಲ್ಲಿ ಎರಡು ಹದ ಮಳೆ ಸುಮಾರಾಗಿ ಆಯ್ತು. ಈಚೆಗೆ ಆಗಾಗ್ಗೆ ಮೋಡವಾಡುತ್ತಾ ಇದೆ. ಆದರೆ ಮಳೆ ಮಾತ್ರ ಬರುವ ಹಾಗೆ ಕಾಣುವುದಿಲ್ಲ. ಬಿಸಿಲಿನ ತಾಪವು ಹೆಚ್ಚಾಗಿದೆ — ಮೈಸೂರಿಂದ ಮಡಿಕೇರಿಗೆ ಮೋಟರ್ ಟಪಾಲು ಬಿಡುವ ವರ್ತಮಾನವಿದೆ. ಇದು ಜಾಗ್ರತೆ ಆಗಬಹುದೆಂದು ನಂಬುತ್ತೇನೆ — ಕಳೆದ ಮೂರು ವರ್ಷಗಳಿಂದಲೂ ಈ ಊರಿನಲ್ಲಿ ಶ್ರೀ ನರಸಿಂಹಸ್ವಾಮಿ ರಥೋತ್ಸವವು ಕ್ರಮವಾಗಿ ನಡೆಯುತ್ತಾ ಇದ್ದು, ಈ ವರುಷ ಮಾತ್ರ ಏನು ಕಾರಣದಿಂದಲೋ ನಿಂತು ಹೋಗಿರುತ್ತೆ. ಸ್ಥಳಾಧಿಕಾರಿಗಳ ಮುತುವರ್ಜಿಯಿಂದಲೂ ಗ್ರಾಮಸ್ಥರ ಏಕಮತ್ಯದಿಂದಲೂ ಈ ಉತ್ಸವವು ಜ್ಯೇಷ್ಠ ಮಾಸದಲ್ಲಾದರೂ ನಡೆಯುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಅರಸೀಕೆರೆ — ಇಲ್ಲಿ ಮೋಡವೂ ಹನಿಗಳೂ ಆಗಾಗ್ಗೆ ಕಾಣಿಸಿಕೊಂಡರೂ ಬಿಸಿಲಿನ ತಾಪ ಸಹಿಸಲಶಕ್ಯವಾಗಿದೆ. ಕುಡಿಯುವ ನೀರಿನ ವಿಷಯದಲ್ಲಿ ಬಹಳ ಪ್ರಯಾಸವಾಗಿದೆ. ದನಕರುಗಳಿಗೆ ಮೇವು ಸಿಕ್ಕುವದು ದುರ್ಲಭ. ಊರಲ್ಲಿ ಮಕ್ಕಳಿಗೆ ಸಿಡುಬು ರೋಗ ಇನ್ನೂ ಕಾಣಿಸಿಕೊಳ್ಳುತ್ತಲೇ ಇದೆ. ಜಿನಸಿ ಧಾರಣೆಗಳು ಬಹಳ ಬಿರುಸಾಗಿರುತ್ತವೆ — ಮ್ಯುನಿಸಿಪಲ್ ಲಾಂದ್ರಗಳು ಬಹಳ ಕಮ್ಮಿಯಾಗಿದ್ದಾಗ್ಯೂ ಅನೇಕ ಕಡೆಗಳಲ್ಲಿ ಹತ್ತಿಸುವದೇ ಇಲ್ಲ. ತಾಲ್ಲೂಕು ಕಚೇರಿ ಎದುರಿಗೆ ಒಂದು ಲಾಂದ್ರ ಕಂಭವಾದರೂ ಇಲ್ಲ. ಈ ವಿಷಯಕ್ಕೆ ಸ್ಥಳಾಧಿಕಾರಿಗಳು ಗಮನ ಕೊಡುವರೆಂದು ನಿರೀಕ್ಷಿಸುತ್ತೇವೆ — ಕಳೆದ 9, 10 ನೇ ತಾರೀಖಿನಲ್ಲಿ ದಾಕ್ತರುಗಳು, ಡೆಪ್ಯುಟಿ ಕಮಿಷನರ್ ರವರು ಮೂರು ನಾಲ್ಕು ಡಿಸ್ಟ್ರಿಕ್ಟಿನಿಂದ ಇಲ್ಲಿಗೆ ದಯಮಾಡಿಸಿ ತಾಲ್ಲೂಕು ಕಚೇರಿಯಲ್ಲಿ ಮಲೆನಾಡಿನ ವೈದ್ಯ ಸೌಕರ್ಯದ ವಿಚಾರದಲ್ಲಿ ಒಂದು ದೊಡ್ಡ ಕೂಟವನ್ನು ನಡಿಸಿದರು. ಶಾಸನದ ಡೆಪ್ಯುಟಿ ಕಮಿಷನರ್ ರವರು ಅಗ್ರಾಸನವನ್ನು ವಹಿಸಿದ್ದರು. ಈ ಕೂಟದ ಮುಖ್ಯಾಭಿಪ್ರಾಯ ಮಲೆನಾಡಿನ ಪ್ರದೇಶಗಳನ್ನು ಉತ್ತಮ ಸ್ಥಿತಿಗೆ ತರಬೇಕೆಂಬುದೇ — ಕಳೆದ ವಾರದ ಮಧ್ಯೆ ಸರ್ಕಲ್ ಇನ್ಸ್‌ಪೆಕ್ಟರವರು ಇಲ್ಲಿಗೆ ದಯಮಾಡಿ ಸ್ಕೂಲುಗಳನ್ನು ಇನ್ಸ್‌ಪೆಕ್ಟ್ ಮಾಡಿ ಕಡೂರು ಪ್ರಾಂತ್ಯ ಪ್ರಯಾಣ ಮಾಡಿದರು — ಇಲ್ಲಿನ ಹಿಂದುಸ್ತಾನಿ ಬಾಯ್ಸ್ ಸ್ಕೂಲಿನಲ್ಲಿ ಕಳೆದ ಆರು ವರ್ಷಗಳಿಂದ ಆ ಮಾಸ್ಟರಾಗಿದ್ದ ಮಿ|| ಅಬ್ದುಲ್ ರಹಿಮಾನ್ ಸಾಹೇಬರಿಗೆ ಬೆಂಗಳೂರಿಗೆ ವರ್ಗವಾದ್ದರಿಂದ ಅವರಿಗಾಗಿ ಇಲ್ಲಿನ ಹೆಡ್ ಮಾಸ್ಟರರವರು 10ನೇ ತಾ ಒಂದು ಸಂತೋಷ ಕೂಟವನ್ನು ನಡಿಸಿ ಆ ಅಸಿ|| ಮಾಸ್ಟರ ಸತ್ಕಾರ್ಯಗಳನ್ನು ಕುರಿತು ವಿವರಿಸಿ ಅವರನ್ನು ಸತ್ಕರಿಸಿ ಆ ರಾತ್ರಿ ಬೆಂಗಳೂರಿಗೆ ಸಾಗಕಳುಹಿದರು.

ಚನ್ನಪಟ್ಟಣ — ಒಂದೆರಡು ವಾರಗಳಿಂದ ಮೋಡವಾಡುತ್ತಾ ಮಳೆಯ ಚಿಹ್ನೆಗಳು ತೋರಿದರೂ ಮಳೆಬಾರದೆ ಜನಗಳಿಗೂ ದನಕರುಗಳಿಗೂ ತುಂಬಾ ತೊಂದರೆಯಾಗಿತ್ತು. ಸೆಕೆಯು ವಿಪರೀತವಾಗಿತ್ತು. ಆದರೆ 15 ನೇ ತಾ ಶುಕ್ರವಾರ ಸಾಯಂಕಾಲ ವಿಪರೀತ ಮಳೆಯಾಯಿತು. ರೈತಾಬಿಗಳೆಲ್ಲರೂ ಹರ್ಷಿತರಾಗಿ ಮುಂದೆ ತಮ್ಮ ಕೆಲಸಗಳನ್ನು ಪ್ರಾರಂಭಿಸುತ್ತಿದ್ದಾರೆ. ಸಕಾಲಕ್ಕೆ ಮಳೆ ಬಾರದ್ದು ಎಲ್ಲರಿಗೂ ವ್ಯಸನಕರವಾದ ಸಂಗತಿಯಾಗಿರುತ್ತದೆ — 12 ನೇ ತಾ ಮಂಗಳವಾರ ಶಿವಗಂಗಾ ಸ್ವಾಮಿಗಳ ಸವಾರಿಯು ಇಲ್ಲಿಗೆ ಚಿತ್ತೈಸಿತ್ತು. ಊರನ್ನು ತಳಿರು ತೋರಣಗಳಿಂದ ಅಲಂಕರಿಸಿದ್ದರು. ಅಮಲ್ದಾರರೂ, ಪೋಲೀಸ್ ಇನ್ಸ್‌ಪೆಕ್ಟರೂ, ಸೀಕಂಪಲ್ ಶಾನಭೋಗರು ಮುತುವರ್ಜಿಯಿಂದ ಸ್ವಾಮಿಗಳನ್ನು ಊರಾಚೆ ಸಂಧಿಸಿ ಕರೆದುಕೊಂಡು ಬಂದರು. ಅವರು ಇಲ್ಲಿ ಆತಿಥ್ಯವನ್ನು ಸ್ವೀಕರಿಸಿ, ಬುಧವಾರ ಹೊರಟು ಹೋದರು. ಅವರು ಇಲ್ಲಿಗೆ ಬಂದದ್ದು ಎಲ್ಲರಿಗೂ ತುಂಬಾ ಸಂತೋಷವಾಯಿತು. ಆದರೆ ಅವರಿಂದ ಕೆಲವರಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾದ ಹಾಗೆ ಕಂಡುಬರುತ್ತದೆ. ಅವರ ಸಾಮಾನುಗಳನ್ನು ಸಾಗಿಸಲಿಕ್ಕೆ ಗಾಡಿಗಳನ್ನು ಮಾಲೀಕರಿಂದ ಬಲವಂತವಾಗಿ ಎಳೆದಿದ್ದರು. ಅದು ಮಾತ್ರವಲ್ಲದೆ ಒಬ್ಬಿಬ್ಬರಿಗೆ ಏಟು ಗಳೂ ಬಿದ್ದ ಹಾಗಿರುತ್ತದೆ. ಈ ರೀತಿಯಾಗಿ ಬಲವಂತವು ನಡೆಯದಂತೆ ಮೇಲ್ಪಟ್ಟ ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡುವರೆಂದು ನಿರೀಕ್ಷಿಸುತ್ತೇವೆ — ಹಲವು ಸೇರುವೆಗಳೂ, ತೋಟದ ಒಟ್ಟುಗಳೂ ಹೊಸದಾಗಿ ಗವರ್ನ್‌ಮೆಂಟಿನಿಂದ ಕಟ್ಟಿ, ಇತರ ಕಡೆಗಳಲ್ಲಿ ಚಲಾವಣೆಯಲ್ಲಿ ಇರುತ್ತವೆ. ಇಲ್ಲಿ ಮಾತ್ರ ಅಂಥಾ ಏರ್ಪಾಟು ಈ ಮಟ್ಟಿಗೂ ಇಲ್ಲದ ಹಾಗೆ ಕಂಡುಬರುತ್ತದೆ. ಈ ವಿಷಯದಲ್ಲಿ ಸರ್ಕಾರದವರು ಗಮನ ಕೊಟ್ಟರೆ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂದೇಹವಿರುವುದಿಲ್ಲ.

ದೊಡ್ಡಬಳ್ಳಾಪುರ — ಈ ವಾರ ಒಂದು ರಾತ್ರಿ ದಿವ್ಯವಾದ ಮಳೆ 3 ಗಂಟೆ ಹೊತ್ತು ವಿಪರೀತವಾಗಿ ಸುರಿದು, ಅನೇಕ ಕೆರೆಗಳಿಗೆ ತುಂಬಾ ನೀರೂ, ಕೆಲವು ದೊಡ್ಡ ಕೆರೆಗಳಿಗೆ ಮುಕ್ಕಾಲು ಭಾಗ ನೀರೂ ತುಂಬಿ, ಜನಗಳಿಗೂ ದನಗಳಿಗೂ ಆನಂದವನ್ನು ಉಂಟುಮಾಡಿತು. ಬಿಸಿಲಿನ ಧಗೆ ಈ ವರ್ಷ ಬಹು ಕಠಿಣವಾಗಿ, ಅಸಹನೀಯವಾಗಿದೆ — ಏಪ್ರಿಲ್ 30ನೇ ತಾ ಜಕ್ಕನಹಳ್ಳಿಯಲ್ಲಿ ಚಿಕ್ಕರಂಗನೆಂಬ ಒಬ್ಬ ಹುಡುಗನು ಸುಮಾರು 35 ವರ್ಷದವನು ತಿಮ್ಮಿ ಎಂಬ ಸುಮಾರು 25 ವರ್ಷದ ಮದುವೆಯಾದವಳ ಕುತ್ತಿಗೆ ಕೊಯಿದು ತುಂಬಾ ಅಪಾಯವಾಗಿ ಆಸ್ಪತ್ರೆಯಲ್ಲಿರುವಂತೆ ಆಗಿದೆ. ಮತ್ತು ಈ ಚಿಕ್ಕರಂಗನು ತನ್ನ ಕುತ್ತಿಗೆ ತಾನೇ ಕೊಯ್ದುಕೊಂಡು ಇಬ್ಬರೂ ಈಗ ಆಸ್ಪತ್ರೆಯಲ್ಲಿರುತ್ತಾರೆ. ಇವರನ್ನು ದಾಕ್ತರ ಮುಸ್ತಫಾಖಾನ್ ಯವರು ಕಳೆದ ಗುರುವಾರ ಬಂದು ನೋಡಿ ಕ್ರಮವಾದ ಇಲಾಜು ಮಾಡಿರುವದರಿಂದ ಇಬ್ಬರೂ ಗುಣಮುಖರಾಗಿ ಬದುಕುವಂತಿದೆ. ತಿಮ್ಮಿಯು ಚಿಕ್ಕರಂಗನಿಗೆ 1 ರೂಪಾಯಿ ಸಾಲಕೊಟ್ಟಿಂತೆಯೂ, ಚಿಕ್ಕರಂಗನು ಹಣವನ್ನು ತುಂಬಾ ಮೊಂಡುವಿದ್ದದ್ದರಿಂದ ಅವಳು ಚಿಕ್ಕರಂಗನನ್ನು ಕೆಲವು ಕಠಿಣ ಮಾತುಗಳಿಂದ ಬೈದಂತೆಯೂ, ಅದಕ್ಕೋಸ್ಕರ ಅವನು ಓಡಿಹೋಗಿ ಕತ್ತಿಯನ್ನು ತಂದು ಅವಳನ್ನು ಕೆಳಗೆ ಕೆಡವಿಕೊಂಡು ಎದೆ ಮೇಲೆ ಕುಳಿತು ಕತ್ತಿಯಿಂದ ಕುತ್ತಿಗೆ ಕೊಯ್ಯುತ್ತಿರುವಾಗ ಆ ಗ್ರಾಮದ ಮತ್ತೊಬ್ಬನು ಕಾಣಲು ಚಿಕ್ಕರಂಗನು ಓಡಿಹೋದನೆಂತಲೂ ಹೇಳುತ್ತಾಳೆ. ಚಿಕ್ಕರಂಗನು ತಿಮ್ಮಿಯ ಗಂಡ ನರಸಿಂಹನು ಸುಮಾರು 60 ವರ್ಷದ ಮುದುಕನು ತನ್ನನ್ನು ತಿಮ್ಮಿಯನ್ನು ಕುತ್ತಿಗೆ ಕೊಯಿದನೆಂದು ಹೇಳುವನು. ವಿಚಾರಣೆಯಲ್ಲಿ ನಿಜಸ್ಥಿತಿಯು ತಿಳಿಯಬೇಕು. ಸದ್ಯ ತಿಮ್ಮಿ ಗಂಡನನ್ನು ಜಾಮೀನ್ ಮೇಲೆ ಬಿಡುಗಡೆ ಮಾಡಿಯುವಂತೆ ತಿಳಿದುಬಂದಿದೆ — ವರ್ತಕರಲ್ಲಿ ಅನೇಕರು ಇನ್ನೂ ಹಳೇ ಸೇರುಗಳನ್ನೇ ಉಪಯೋಗಿಸುತ್ತಿದ್ದಾರೆ. ಹೊಸ ಸೇರುಗಳು ತಯಾರಾಗಿದ್ದರೂ ಉಪಯೋಗಿಸುವುದಿಲ್ಲ.

ಮಂಡ್ಯ — ಈ ವರೆಗೂ ಎರಡು ಹದ ಮಳೆಗಳಾದದ್ದರಿಂದ ರೈತರು ಜೋಳದ ಬಿತ್ತನೆಗೆ ಪ್ರಾರಂಭಮಾಡಿದ್ದಾರೆ. ಇನ್ನೂ ಮೋಡಗಳಾಡುತ್ತಲೇ ಇವೆ — ಈ ವಾರ ಪೇಂಡಿ ಹರಾಜು ಆದದ್ದರಲ್ಲಿ ಕಳೆದ ವರ್ಷಕ್ಕಿಂತಲೂ 6½ ಸಾವಿರ ರೂಪಾಯಿನಷ್ಟು ಉತ್ಪತ್ತಿ ಹೆಚ್ಚಾಗಿ ಬಿಟ್ಟಾಯಿತು. ಕಳೆದ ವರುಷ 6 ಸಾವಿರ ರೂಪಾಯಿಗೆ ನಿಂತಿತ್ತು. ಇದರಿಂದ ಪೇಂಡಿ ಗಿರಾಕಿ ವರ್ಷೇವರ್ಷ ಎಷ್ಟರ ಮಟ್ಟಿಗೆ ಆಗುತ್ತಲಿದೆ ಎಂದು ನಾಗರಿಕರು ತಿಳಿದುಕೊಳ್ಳದೆ ಇರಲಾರರು — ಕಳೆದ ತಾ 1 ರಲ್ಲಿ ಮಂಡ್ಯ ಕಸಬಾ ಜವಳಿ ಅಂಗಡಿ ಸಾ|| ಕೆಂಪೆಗೌಡರ ಜ್ಯೇಷ್ಠಪುತ್ರಿ ಹೊಂಬಾಳಮ್ಮನನ್ನು ಇಂಡುವಾಳದ ಕಂಟ್ರಾಕ್ಟರ್ ಹೊನ್ನೆಗೌಡರ ಮಕ್ಕಳು ಹೊನ್ನೆಗೌಡರಿಗೆ ಕೊಟ್ಟು ಲಗ್ನಮಾಡಿಸಿ ಸಮಸ್ತ ಕೋಮುಗಳವರಿಗೆ ಔತಣವನ್ನೂ ಮತ್ತು ತಕ್ಕ ಮರ್ಯಾದೆಗಳನ್ನೂ ಮಾಡಿದ್ದರಲ್ಲಿ ಎಲ್ಲರೂ ಈ ದಂಪತಿಗಳಿಗೆ ಶ್ರೇಯಸ್ಸನ್ನು ಬಯಸಿದರು. ಎಲ್ಲಾ ಮತಸ್ಥರನ್ನೂ ಇವರ ಗುಣವೇ ಆಕರ್ಷಣವಾಡಿತ್ತೆಂದು ಹೇಳಬೇಕು — ಸಂತೆಯಲ್ಲಿ ಕಮ್ಮಿ ತೂಕ, ಅಳತೆ, ಬಟ್ಟುಗಳನ್ನು ಕೇಳುವವರೇ ಇಲ್ಲವಲ್ಲಾ. ಅನೇಕರು ಬೆಂಗಳೂರು ಮೈಸೂರು ಕಡೆಗಳಿಂದ ಹೊಸ ಸೇರು ಮೊದಲಾದವುಗಳನ್ನು ಉಪಯೋಗಿಸುತ್ತಾ ಇದ್ದು ಕಡೆಗೆ ಇಲ್ಲಿನ ಲಘುಬಗುವನ್ನು ನೋಡಿಕೊಂಡು ಹಿಂದಿನ ಸೇರುಗಳನ್ನೇ ಉಪಯೋಗಿಸಲು ಧೈರ್ಯವುಳ್ಳವರಾದರು — ಊರಿನ ಪಾಕೀಜು ವಿಚಾರದಲ್ಲಿ ಮುನಿಸಿಪಾಲಿಟಿಯವರು ಇನ್ನೂ ಸ್ವಲ್ಪ ಮುತುವರ್ಜಿ ವಹಿಸಿದರೆ ಅನುಕೂಲ. ಅಮಲ್ದಾರ್ ಶ್ರೀನಿವಾಸರಾಯರ ಛತ್ರ ದೇವಸ್ಥಾನಗಳು ಉತ್ತಮಸ್ಥಿತಿಯಲ್ಲಿವೆ. ಈಚೆಗೆ ಅದರೊಳಗಿದ್ದ ಕೊಳಗಳನ್ನು ಪಾಕೀಜು ಮಾಡಿಸಿ ಪರಸ್ಥಳಕರಿಗೆ ತಕ್ಕ ಅನುಕೂಲಗಳನ್ನು ಏರ್ಪಡಿಸಿರುವುದು ತುಂಬಾ ಸಂತೋಷ. ದಿವಾನ್ ಪೂರ್ಣಯ್ಯನವರ ಛತ್ರದ ಕಟ್ಟಡವು ಹೀನಸ್ಥಿತಿಯಲ್ಲಿದೆ. ಇಂಜನಿಯರ್ ಇಲಾಖೆಯಿಂದ ಶೀಘ್ರದಲ್ಲಿ ರಿಪೇರಿಯಾಗದಿದ್ದಲ್ಲಿ ಮುಂದೆ ಹೆಚ್ಚಾದ ಅಪಾಯಕ್ಕೆ ಒಳಗಾಗಬಹುದು.

ಫ್ರೆಂಚ್‌ರಾಕ್ಸ್ — ಇಲ್ಲಿ ಈಚೆಗೆ ಜೂಜಾಟವು ವೃದ್ಧಿಯಾಗುತ್ತಿರುವಂತೆ ಕಾಣುತ್ತದೆ. ಇಲ್ಲಿನ ಖಜಾನೆ ಬಳಿಯ ತೋಪಿನಲ್ಲಾದರೋ ಆಗಾಗ್ಗೆ ಜೂಜಾಟ ನಡೆಯುತ್ತಲೇ ಇದೆ. ರಾತ್ರಿ ಕಾಲದಲ್ಲಿ ಮನೆಗಳಲ್ಲಿಯೂ ಇಸ್ಪೀಟಿನ ಜೂಜು ನಡೆಯುತ್ತದೆಂಬ ವರ್ತಮಾನ. ಹಗಲೂ ರಾತ್ರಿಗಳಲ್ಲಿ ಊರಿನಲ್ಲಿ ಬೀಟ್ ನಡಿಸತಕ್ಕ ಪೋಲೀಸಿನವರ ದೃಷ್ಟಿಗೆ ಈ ಜೂಜುಕೋರರು ಬೀಳದಿರುವದನ್ನೂ, ಡಿಸ್ಟ್ರಿಕ್ಟ್ ಪೋಲೀಸ್ ಆಫೀಸ್ ಇರತಕ್ಕ ಈ ದೊಡ್ಡ ಸ್ಥಳದಲ್ಲಿಯೇ ಧೈರ್ಯವಾಗಿ ಜೂಜಾಡುವದನ್ನೂ ನೋಡಿದರೆ ಆಶ್ಚರ್ಯವಾಗಿದೆ. ಇದಕ್ಕೆ ಕಾರಣವೇನಿರಬಹುದೋ ಮೇಲ್ಪಟ್ಟ ಅಧಿಕಾರಿಗಳೇ ಯೋಚಿಸಬೇಕು. ಜೂಜಾಟವು ಹೆಚ್ಚಾಗುತ್ತಾ ಬಂದರೆ ಕಳ್ಳತನಗಳು ಎಲ್ಲಿ ಶುರುವಾಗುವವೋ ಎಂಬ ಭಯವಿದೆ. ಆದ್ದರಿಂದ ಇಲ್ಲಿನ ದೊಡ್ಡ ಅಧಿಕಾರಿಗಳೆಲ್ಲರೂ ಈ ವಿಷಯಕ್ಕೆ ತುಂಬಾ ಗಮನಕೊಟ್ಟು ಜೂಜುಕೋರರನ್ನು ಹಿಡಿಸಿ, ಶಿಕ್ಷೆಮಾಡಿಬಿಟ್ಟರೆ ಈ ದುಸ್ತರ ಹಾವಳಿ ತಪ್ಪೀತು. ಈಗ್ಗೆ 2 ವರ್ಷಗಳ ಹಿಂದೆ ಕೆಲವರನ್ನು ಹಿಡಿದು ಶಿಕ್ಷೆಮಾಡಿದ್ದರು. ಅದು ಕೆಲವು ಕಾಲದವರೆಗೂ ತಪ್ಪಿದ್ದದ್ದು ಈಗ ಪುನಃ ಪ್ರಾರಂಭವಾಗಿದೆ — ಸಂತೆಯ ಮೈದಾನದಲ್ಲಿ ಭಾವಿ ತೆಗೆಯಲು ಪ್ರಾರಂಭ ಮಾಡಿದ್ದಾರೆ. ಆದಷ್ಟು ಮಟ್ಟಿಗೆ ಜಾಗ್ರತೆಯಾಗಿ ಈ ಕೆಲಸವನ್ನು ಪೂರೈಸುವದು ಒಳ್ಳೇದು. — ಸಂತೆಯಲ್ಲಿ ವಡೆ, ಚಕ್ಕುಲಿ, ಕಡುಬು ಮೊದಲಾದ ತಿಂಡಿ ಪದಾರ್ಥಗಳನ್ನು ಮಾರತಕ್ಕವರು ಅಸಹ್ಯವಾದ ಪುಟ್ಟಿಗಳಲ್ಲಿಟ್ಟುಕೊಂಡು ಮಾರುವದೂ ಅಲ್ಲದೆ ಬೀದಿಯ ಮಣ್ಣೆಲ್ಲಾ ಆ ಪದಾರ್ಥಗಳಲ್ಲಿ ತುಂಬಿಕೊಂಡಿರುತ್ತೆ. ಇದನ್ನು ತನಿಖೆಮಾಡಿ, ರಾಜಧಾನಿಯಲ್ಲಿ ಈಗ ಮಾಡಿರುವ ಏರ್ಪಾಡನ್ನು ಇಲ್ಲಿಯೂ ಸ್ವಲ್ಪಮಟ್ಟಿಗಾದರೂ ಮಾಡಿದರೆ ಅನುಕೂಲ. ಹಣ್ಣು ಹಂಪಲುಗಳನ್ನು ಮಾರತಕ್ಕವರಾದರೋ ಧೈರ್ಯವಾಗಿ ಕೊಳೆತದ್ದನ್ನೂ, ಕಾಯಿಕಸರನ್ನೂ ಕೊಯಿದು ಮಾರುತ್ತಿದ್ದಾರೆ. ಶ್ರೀರಂಗಪಟ್ಟಣದ ಸಂತೆಯನ್ನು ಏರ್ಪಡಿಸಿರುವಂತೆ ಇಲ್ಲಿಯೂ ಲೈನುಗಳಾಗಿ ರಸ್ತೆಗಳನ್ನು ಮಾಡಿಸಿದರೆ ಜನಗಳ ವ್ಯಾಪಾರಕ್ಕೆ ಅನುಕೂಲವಾಗುವದಲ್ಲದೆ ಸಂತೆಯಲ್ಲಿ ನಡೆಯತಕ್ಕ ಅಕ್ರಮಗಳೆಲ್ಲಾ ಪರಿಷ್ಕಾರವಾಗಿ ತೋರಿಬರುತ್ತವೆ. ಈ ಸೂಚನೆಗಳನ್ನು ಕ್ರಮಪಡಿಸುವರೆಂದು ನಂಬಿದೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಲಿಕೋಟೆಯ ಸಮುದ್ರ ತೀರದಲ್ಲಿ ಜಹಜಿಗೆ ಬರ್ತಿಮಾಡಬೇಕೆಂದು ಪೇರಿಸಿಟ್ಟಿದ್ದ 300 ಚೀಲಗಳ ಕೊಬರಿ ಗಿಟುಕುಗಳು ಬಿರುಗಾಳಿ ಬೀಸಿ ಹಾಳಾಗಿ ಸಾಹುಕಾರನಿಗೆ ಇದರಿಂದ 1,000 ರೂಪಾಯಿ ನಷ್ಟವಾಗಿದೆ.

ತಿರುಪತಿಯಲ್ಲಿ ಮಹಂತರು ತೆಪ್ಪೋತ್ಸವಕ್ಕೋಸ್ಕರ 25,000 ರೂಪಾಯಿ ಮುಟ್ಟಿನ ಬಹು ನೇತ್ರಾನಂದಕರವಾದ ದೋಣಿಯನ್ನು ತಯಾರ್ಮಾಡಿಸಿದ್ದಾರೆ. ಈ ಉತ್ಸವವು ಮೊನ್ನೆ ಸೋಮವಾರ ಬಹಳ ವಿಜೃಂಭಣೆಯಾಗಿ ನಡೆಯಿತು.

ಬಂಗಾಳಾ ಸರ್ಕಾರದವರು ಭಾಗಲ್‌ಪುರದಲ್ಲಿದ್ದ ಪೋಲೀಸ್ ಇನ್ಸ್‌ಪೆಕ್ಟರುಗಳ ಸ್ಕೂಲನ್ನು ಕಲ್ಕತ್ತಾ ಪಟ್ಟಣಕ್ಕೆ ವರ್ಗಮಾಡಿ, ಏಕಕಾಲದಲ್ಲಿ 350 ಮಂದಿ ಇನ್ಸ್‌ಪೆಕ್ಟರುಗಳು ತರಪೇತಾಗುವಂತೆ ಏರ್ಪಾಡು ಮಾಡಿದ್ದಾರೆ.

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಬಾಂಡಪುರವೆಂಬ ಹೊಸಹಳ್ಳಿಯೊಳಗೆ ಒಂದು ಮದುವೆ ಮನೆಯಲ್ಲಿ (ಮುನ್ಸಿಫರ ಮನೆ) ಯಜಮಾನನ ಟಂಡೂಕವನ್ನು ಯಾರೋ ಕದ್ದುಬಿಟ್ಟರು. ಪೋಲೀಸಿನವರು ಹೋಗಿ ಮದುವೆಗೆ ಹೋಗಿದ್ದವರ ಹೆಸರುಗಳನ್ನೆಲ್ಲಾ ಬರೆದುಕೊಂಡು ಅವರ ಮನೆಗಳನ್ನು ಶೋಧನೆಮಾಡುತ್ತಿದ್ದಾರೆ.

ಕರಾಚಿ ಪಟ್ಟಣದಲ್ಲಿ ಒಬ್ಬ ಕೆಟ್ಟ ಸ್ತ್ರೀಯು ಫರ್ನಿಚರ್ ಇಲ್ಲದೆ ಆಯುವ ಮಧ್ಯಗುಂಡನ್ನು ಪರೀಕ್ಷೆಂದಲೆಂದು ಮೊಕದ್ದಮೆ ಆಯಿತು. ವಿಚಾರಣೆಯಲ್ಲಿ ಆ ಹೆಂಗಸು ಆ ವಸ್ತುಗಳನ್ನು ತನ್ನ ಮಕ್ಕಳಿಗೆ ಆಡುವುದಕ್ಕಾಗಿ ತರಿಸಿಕೊಟ್ಟಂತೆ ಕಾರಣ ಹೇಳಿದಳು. ಮ್ಯಾಜಿಸ್ಟ್ರೇಟರು ಆಕೆಗೆ 50 ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ.

ಲಾಹೋರಿನಲ್ಲಿ ಪ್ರಕಟವಾಗುವ ಪಂಜಾಬ್ ಸಮಾಚಾರವೆಂಬ ವಾರ ಪತ್ರಿಕೆಯಲ್ಲಿ ತನಗೆ ಅವಮಾನಕರವಾದ ಸಂಗತಿಗಳನ್ನು ಬರೆದಿದ್ದರೆಂದು ಚೀಫ್ ಕೋರ್ಟ್ ಪ್ಲೀಡರ್ ಪಂಡಿತ ರಾಮಭುಜದತ್ತ ಚೌಧ್ರಿ ಎಂಬಾತನು ಆ ಪತ್ರಿಕೆಯ ಪ್ರೊಪ್ರೈಟರಾದ ಹೀರಾಲಾಲ್ ಕಪೂರ್ ಎಂಬಾತನ ಮೇಲೆ ಫಿರ್ಯಾದು ತಂದಿರುತ್ತಾನೆ. ಮೊಕದ್ದಮೆ ವಿಚಾರಣೆಯಾಗುತ್ತಿದೆ.

ನಾಗಪುರದಲ್ಲಿ ಗುಪ್ತ ಪೋಲೀಸಿಗೆ ಸೇರಿದ್ದ ಸಬ್ ಇನ್ಸ್‌ಪೆಕ್ಟರ್ ಬಲವಂತ ಕೃಷ್ಣ ಆಪ್ಟೆ ಎಂಬುವನು ದಸಲಾಖಿನ್ ಎಂಬುವನನ್ನು ಸುಮ್ಮನೆ ದಸ್ತಗಿರಿ ಮಾಡಿ ಅವನಿಂದ 30 ರೂಪಾಯಿ ಲಂಚ ತೆಗೆದುಕೊಂಡನೆಂದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಆ ಪೋಲೀಸಿನವನಿಗೆ ಒಂದು ವರುಷ ಕಠಿಣ ಸಜವನ್ನೂ, 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

ರಂಗೂನ್ ಪಟ್ಟಣದಲ್ಲಿ ಡಿಕ್ರೂಸ್ ಎಂಬೊಬ್ಬ ರೈಲ್‌ಗಾಡಿ ನಡಿಸುವವನು ಅಲಕ್ಷ್ಯವಾಗಿ ಗಾಡಿ ನಡಿಸಿದ್ದರಿಂದ ಗಾಡಿಗೆ ಅಪಾಯ ಸಂಭವಿಸಿ ಮೂರು ಮಂದಿಗೆ ಗಾಯಗಳಾದವೆಂದೂ, ಕಂಪನಿಯ ಸಾಮಾನು ನಷ್ಟವಾಯಿತೆಂದೂ ಮೊಕದ್ದಮೆ ಬಂದು ಮ್ಯಾಜಿಸ್ಟ್ರೇಟರು ಆ ಗಾಡಿ ನಡಿಸಿದವನಿಗೆ 15 ದಿನ ಕಠಿಣ ಸಜವನ್ನೂ 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

ಗಂಜಾಂ ಡಿಸ್ಟ್ರಿಕ್ಟಿಗೆ ಸೇರಿದ ಆಸ್ಕಾ ನಗರದಲ್ಲಿ ಮಹಾನದಿಗೆ ಒಂದು ಕಬ್ಬಿಣದ ಸೇತುವೆಯನ್ನು ಕಟ್ಟಿಸಬಹುದೆಂದು ಮದರಾಸ್ ಗವರ್ನ್‌ಮೆಂಟಿನವರು 1,70,200 ರೂಪಾಯಿನ ಖರ್ಚು ಪಟ್ಟಿಯನ್ನು ಒಪ್ಪಿ ಸ್ಯಾಂಕ್ಷನ್ ಮಾಡಿ, ಈ ಕಾಮಗಾರಿಯು ಡಿಸ್ಟ್ರಿಕ್ಟ್ ಬೋರ್ಡ್ ಹಣದಿಂದ ನಡೆಯುವುದರಿಂದ ಅದಕ್ಕೆ 85,100 ರೂಪಾಯನ್ನು ಸರ್ಕಾರದಿಂದ ಸ್ಯಾಂಕ್ಷನ್ ಮಾಡಿದ್ದಾರೆ.

ಶೋಲಾಪುರ ಜಿಲ್ಲೆಯಲ್ಲೂ ಆ ಸುತ್ತುಮುತ್ತಿನಲ್ಲೂ ಮಳೆ ಇಲ್ಲದೆ ಗೋಕರುಗಳು ಲಯವಾಗುತ್ತಿರುವವು. ಅವುಗಳ ಸಂರಕ್ಷಣೆಗಾಗಿ ಅನೇಕ ಸ್ಥಳಗಳಲ್ಲಿ ಗೋಶಾಲೆಗಳನ್ನು ಮಾಡಿ, ದನಗಳನ್ನು ತರಿಸಿಟ್ಟುಕೊಂಡು ಸಾಕುತ್ತಿದ್ದಾರೆ. ಇದಕ್ಕೆ ಚಂದಾ ಕೂಡಿಸಲು ಒಂದು ಧರ್ಮ ಫಂಡು ಏರ್ಪಾಡಾಗಿ, ಕಮಿಟಿಯವರು 50,000 ರೂಪಾಯನ್ನು ಕೂಡಿಸಬೇಕೆಂದು ಸಾಹಸಪಡುತ್ತಿರುವರು.

ಒಬ್ಬ ದೇಶೀಯ ಸ್ತ್ರೀಯು ಹೌರಾ ಪಟ್ಟಣದ ಬಳಿ ಇರುವ ಲಿಲ್ಲೂವಾ ಎಂಬ ಗ್ರಾಮಕ್ಕೆ ಭಕ್ತಳೆಂದು ತರುವುದಕ್ಕೆ ಹಣ ತೆಗೆದುಕೊಂಡು ಹೋಗುತ್ತಿರುವಲ್ಲಿ ಒಬ್ಬ ಮಹಮದೀಯನು ಬೆನ್ನುಹತ್ತಿ ಹೋಗಿ ಅವಳನ್ನು ಹಿಡಿದು ಕೊಂದುಹಾಕಿ ಅವಳ ಬಳಿ ಇದ್ದ ಹಣವನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದನು. ಅಷ್ಟರಲ್ಲೇ ಕೆಲವು ಜನ ಗ್ರಾಮಸ್ಥರು ಕಂಡು ಅವನನ್ನು ಓಡಿಸಿಕೊಂಡು ಹೋಗಿ ಹಿಡಿದು ಪೋಲೀಸಿಗೆ ಒಪ್ಪಿಸಿರುತ್ತಾರೆ.

ಕಳೆದ ವಾರ ಸಿಲೋನ್ (ಲಂಕಾ) ದ್ವೀಪದ ಮುಖ್ಯ ಪಟ್ಟಣವಾದ ಕೊಲಂಬೊನಗರದಲ್ಲಿ ಬೌದ್ಧರ ಒಂದು ದೊಡ್ಡ ಉತ್ಸವ ನಡೆದು, ಅದನ್ನು ನೋಡುವುದಕ್ಕೆ ಅನೇಕ ಸಹಸ್ರ ಪ್ರಜೆಗಳು ಸೇರಿದ್ದರು. ಆ ಸಂದರ್ಭದಲ್ಲಿ ಒಂದು ತಂತಿಯ ಸೇತುವೆಯು ಕಡಿದು ದೋಣಿಗಳು ನದಿಯಪಾಲಾದವು. ನೂರಾರು ಜನರು ನದಿಯಲ್ಲಿ ಮುಳುಗಿಕೊಂಡರು. ಆ ಪೈಕಿ 9 ಮಂದಿ ಮೃತಪಟ್ಟರೆಂದೂ, 30 ಜನರಿಗೆ ಗಾಯವಾಗಿದೆಯೆಂದೂ ತಿಳಿಯುತ್ತದೆ.

ಬೊಂಬಾಯಿ ಪಟ್ಟಣದಲ್ಲಿ ಒಬ್ಬ ಹಿಂದುವು ತನಗೋಸ್ಕರ ಕೆಲವು ಕ್ವಿನೈನ್ (ಜ್ವರದ) ಮಾತ್ರೆಗಳನ್ನು ತಂದು ಮನೆಯಲ್ಲಿಟ್ಟಿದ್ದನು. ಅವನ ಒಂದು ವರುಷದ ಹೆಣ್ಣು ಮಗುವು ಆ ಮಾತ್ರೆಗಳಲ್ಲಿ ಕೆಲವನ್ನು ತಿಂಡಿಯೆಂದು ಭಾವಿಸಿ ನುಂಗಿಬಿಟ್ಟಿತು. ಸ್ವಲ್ಪ ಹೊತ್ತಿನಲ್ಲೇ ಆ ಮಗುವಿಗೆ ವಾಂತಿಯೂ, ಮೈ ನಡುಕವೂ ಹುಟ್ಟಿದ್ದನ್ನು ನೋಡಿ ಮನೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದರು. ಆಸ್ಪತ್ರೆಯಲ್ಲಿ ಮಗುವು ತೀರಿಹೋಯಿತು.

ಯಾಂಗ್ವೆಸಾಭಾ ಎಂಬೊಬ್ಬ ಬರ್ಮೀಯ ಭಾರೀ ಜಮೀನ್‌ದಾರನು ಶ್ವೆಂಗಿ ಎಂಬ ತನ್ನ ರಾಜಧಾನಿಯಲ್ಲಿ ಒಂದು ದೊಡ್ಡ ಹಬ್ಬವನ್ನು ಮಾಡಿದನು. ಸಿನ್‌ಹೆ ಎಂಬ ಸ್ಥಳದಿಂದ ಇನ್‌ಲೆ ಎಂಬ ಕೆರೆಯ ತನಕ 16 ಮೈಲಿ ದೂರ ನೀರಾವರಿ ನಾಲೆಯನ್ನು ತೋಡಿಸಿ ಪೂರೈಸಿರುತ್ತಾರೆ. ಅದರಿಂದ 10,000 ಎಕರೆ ಜಮೀನು ಕರಿ ವ್ಯವಸಾಯಕ್ಕೆ ಬರುತ್ತದೆ. ವಿಶೇಷವಾದ ದಾನಧರ್ಮ ಉತ್ಸವಾದಿಗಳಿಂದ ಆತನು ಈ ನಾಲೆಯನ್ನು ಪ್ರತಿಷ್ಠೆ ಮಾಡಿಸಿದನು.

ಮದರಾಸ್ ಪಟ್ಟಣದಲ್ಲಿ ಯಾವ ಮನೆಯೊಳಗೂ ಒಂದಾದರೂ ಸೇದುವ ಭಾವಿ ಇರಕೂಡದೆಂದೂ, ಅಂಥಾ ಭಾವಿಗಳನ್ನೆಲ್ಲಾ ಬಲಾತ್ಕಾರದಿಂದಲಾದರೂ ಮುಚ್ಚಿಸಿಬಿಡಬೇಕೆಂದೂ ಮ್ಯುನಿಸಿಪಾಲಿಟಿಯವರು ಇಸ್ತಿಹಾರು ಹಾಕಿದರು. ಸೊಳ್ಳೆಗಳು ಹುಟ್ಟಿ ಭಾವಿಗಳಲ್ಲಿದ್ದುಕೊಂಡು ಜನರನ್ನು ಕಡಿದು ಮಲೇರಿಯಾ ಜ್ವರವನ್ನು ಉತ್ಪತ್ತಿಮಾಡುತ್ತವೆ ಎಂಬುವುದೇ ಈ ಆಜ್ಞೆಗೆ ಮುಖ್ಯ ಕಾರಣ. ಕಳೆದ ಗುರುವಾರ ವಿಕ್ಟೋರಿಯಾ ಪಬ್ಲಿಕ್ ಹಾಲ್ ಎಂಬ ಮಂದಿರದಲ್ಲಿ ಸಾವಿರಾರು ಪ್ರಜೆಗಳು ಸೇರಿ ಒಂದು ಸಭೆಯನ್ನು ನಡಿಸಿ, ಮ್ಯುನಿಸಿಪಾಲಿಟಿಯ ಆ ಹುಕುಮನ್ನು ಜಾರಿಗೆ ತರಕೂಡದೆಂದು ತೀರ್ಮಾನಮಾಡಿ ಆ ರೀತಿ ಅವರಿಗೆ ತಿಳಿಸಿರುತ್ತಾರೆ.

ಸುಮಾರು ಏಳು ವರುಷಗಳಿಂದ ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ದಿವಾನ್‌ಗಿರಿ ಮಾಡುತ್ತಿದ್ದು ಆ ಸಂಸ್ಥಾನವನ್ನು ಅಭಿವೃದ್ಧಿಗೆ ತಂದ ದಿವಾನ್ ಬಹದೂರ್ ಪಿ ರಾಜಗೋಪಾಲಾಚಾರ್ಯರು ಕಳೆದ ತಾ 11 ನೇ ಸೋಮವಾರ ಆ ಕೆಲಸದಿಂದ ನಿವೃತ್ತರಾದರು. ಇದುವರೆಗೆ ಆ ಸಂಸ್ಥಾನದಲ್ಲಿ ಚೀಫ್ ಜಡ್ಜಿರಾಗಿದ್ದ ಮ|| ಎಂ ಕೃಷ್ಣನ್ ನಾಯರ್ ಎಂಬುವವರನ್ನು ಮಹಾರಾಜರವರು ಕರಸಿಕೊಂಡು ಅವರಿಗೆ ದಿವಾನ್‌ಗಿರಿಯನ್ನು ಮರ್ಯಾದೆಗಳ ಸಮೇತ ವಹಿಸಿದರು. ಸ್ವದೇಶಿಯರಿಗೆ ಈ ಪದವಿ ದೊರಕಿದ್ದನ್ನು ನೋಡಿ ಆ ಸಂಸ್ಥಾನದ ಪ್ರಜೆಗಳು ತುಂಬಾ ಸಂತೋಷಪಡುತ್ತಿದ್ದಾರೆ.

ಬೊಂಬಾಯಿ ಪಟ್ಟಣದ ಚಿಂಚ ಬಂದರ್ ರೋಡಿನಲ್ಲಿ ಒಂದು ಮದುವೆ ಮೆರವಣಿಗೆಯ ಕೂಡ ಹೋಗುತ್ತಿದ್ದ ಇವರೀಬಾಯಿ ಎಂಬೊಬ್ಬ ಹಿಂದೂ ಸ್ತ್ರೀಯನ್ನು ಡ್ಯಾನಿಯಲ್ ಎಂಬ ಜವಾನಿ ಆಡಿಗೆಯವನು ಕೈ ಹಿಡಿದು ಬಲಾತ್ಕಾರದಿಂದ ದೂರ ಎಳೆದುಕೊಂಡುಹೋದನು. ಆ ಸ್ತ್ರೀಯು ಗಾಬರಿಬಿದ್ದು ಕೂಗಿಕೊಂಡಾಗ ಜನರು ಸೇರಿ ಆಕೆಯ ಸಹಾಯಕ್ಕೆ ಬಂದರು. ಅಷ್ಟರಲ್ಲೇ ಆ ದುಷ್ಟನು ಅಲ್ಲಿಂದ ಓಡಿಹೋದನು. ಪೋಲೀಸಿನವರು ಹಿಡಿದು ಅವನ ಮೇಲೆ ಮೊಕದ್ದಮೆ ಮಾಡಿದಾಗ ಮ್ಯಾಜಿಸ್ಟ್ರೇಟರು ಅವನಿಗೆ ನೂರು ರೂಪಾಯಿ ಜುಲ್ಮಾನೆ, ತಪ್ಪಿದರೆ ಒಂದು ತಿಂಗಳ ಸಾದಾ ಸಜವನ್ನು ವಿಧಿಸಿದರು.

ಪ್ಲೇಗ್ ಉಪದ್ರವದಿಂದಾದ ಮರಣಗಳು ಹಿಂದಿನ ವಾರ ಹಿಂದುಸ್ಥಾನದಲ್ಲಿ ಬಹಳ ಕಡಮೆ. 7,413 ಜನರು ಮಾತ್ರ ಆ ರೋಗದಲ್ಲಿ ಕಾಲವಾಗಿರುತ್ತಾರೆ. ಅಂದರೆ ಹಿಂದಿನ ವಾರದ ಮರಣಸಂಖ್ಯೆಗಿಂತ 3,626 ಕಡಮೆ. ಪ್ಲೇಗ್ ತಗಲಿದವರ ಸಂಖ್ಯೆಯೂ ಇಳಿದಿದೆ. ಹಿಂದಿನ ವಾರ 12,822 ಜನರಿಗೆ ಪ್ಲೇಗ್ ತಗಲಿತ್ತು. ಕಳೆದ ವಾರವಾದರೋ 8,730 ಮಂದಿಗೆ ಮಾತ್ರ ತಗಲಿದೆ. ಬೇರೆ ಬೇರೆ ಆಧಿಪತ್ಯಗಳಲ್ಲಿ ಪ್ಲೇಗ್ ಮರಣಸಂಖ್ಯೆಗಳು ಬಹಳ ಮಟ್ಟಿಗೆ ಕಡಮೆಯಾದವು. ಪಂಜಾಬ್ 3,338, ಸಂಯುಕ್ತ ಆಧಿಪತ್ಯಗಳು 2,216, ಬೀಹಾರ್ ಮತ್ತು ಒರಿಸ 1,071, ಬೊಂಬಾಯಿ 673, ಬರ್ಮಾ 120, ಬಂಗಾಳಾ 23, ಮದರಾಸ್ 1, ಸರಹದ್ದು ಪ್ರಾಂತ್ಯ 18. ಮಧ್ಯಪ್ರಾಂತ್ಯಗಳಲ್ಲೂ ಅಸ್ಸಾಂನಲ್ಲೂ ಪ್ಲೇಗ್ ಮರಣಗಳಾಗಲೇ ಇಲ್ಲ.

ಈಗತಾನೇ ಅನಂತಶಯನದ ದಿವಾನ್‌ಗಿರಿಯಿಂದ ನಿವೃತ್ತರಾಗಿರುವ ದಿವಾನ್ ಬಹದ್ದೂರ್ ಪಿ ರಾಜಗೋಪಾಲಾಚಾರಿ, ಸಿ ಐ ಇ ಯವರು ಮದರಾಸ್ ಗವರ್ನ್‌ಮೆಂಟಿನವರಿಂದ ಎರಡು ವರುಷ ರಜಾ ಪಡೆದುಕೊಂಡಿದ್ದಾರೆ. ಇವರು ಕಳೆದ 16 ನೇ ತಾ ಶನಿವಾರ ಬೊಂಬಾಯಿನಲ್ಲಿ ಪರ್ಷಿಯಾ ಎಂಬ ಜಹಜು ಹತ್ತಿ ಸೀಮೆಯನ್ನು ಕುರಿತು ಪ್ರಯಾಣಮಾಡಿದರು. ಮುಂದಿನ ನವಂಬರ್ ಸುಮಾರಿನಲ್ಲಿ ಅವರು ಅಲ್ಲಿಂದ ವಾಪಸು ಬಂದು, 1915 ನೇ ಮಾರ್ಚಿ ಅಥವಾ ಏಪ್ರಿಲ್ ತಿಂಗಳಲ್ಲಿ ಮತ್ತೆ ಸೀಮೆಗೆ ಹೋಗುವರೆಂದು ಪ್ರಕಟವಾಗಿದೆ. ಅನಂತಶಯನ ಸಂಸ್ಥಾನದ ಫಾರೆಸ್ಟ್ ಕನ್ಸರ್ವೇಟರ್ ರಾವ್ ಸಾಹೇಬ್ ಎಂ ರಾಮರಾಯರು ಎಂಟು ತಿಂಗಳ ರಜಾ ಪಡೆದು ಮಾಜಿ ದಿವಾನ್‌ರವರ ಕೂಡ ಸೀಮೆಗೆ ಪ್ರಯಾಣಮಾಡಿದರು.

ಹಿಂದುಸ್ಥಾನದ ವಿಕ್ಟೋರಿಯಾ ಮೆಮೋರಿಯಲ್ ಫಂಡಿನ 1913 ನೇ ವರುಷದ ಜಮಾ ಖರ್ಚು ಲೆಕ್ಕಗಳು ಈಗತಾನೇ ಪ್ರಕಟವಾಗಿವೆ. ಕಳೆದ ವರುಷ

ಈ ಫಂಡಿನಿಂದ 2,45,000 ರೂಪಾಯಿ ಕಾಮಗಾರಿ ಮುಂತಾದದ್ದಕ್ಕೆ ಖರ್ಚಾಯಿತು ಈ ಫಂಡಿಗೆ ವಾಗ್ದಾನವಾಗಿ ಇನ್ನೂ ವಸೂಲಾಗದೆ ಇರುವ ಚಂದಾಹಣಗಳ ಪೈಕಿ ಕಳೆದ ವರುಷ 00,000 ರೂಪಾಯಿ ವಸೂಲಾಗಿ, ಇನ್ನೂ 1,13,000 ರೂಪಾಯಿ ಬಾಕಿ ಇದೆ ಈ ಪೈಕಿ 15,000 ರೂಪಾಯಿ ಮಾತ್ರ ವಸೂಲಾಗಬಹುದಂತೆ ಕಲ್ಕತ್ತಾ ಪಟ್ಟಣದಲ್ಲಿ ಕಟ್ಟಲ್ಪಡುತ್ತಿರುವ ಮೆಮೋರಿಯಲ್ ಬಂಗಲೆಗೆ ಈ ವರುಷ ಮಾರ್ಚಿ ತಾ 0 ರ ವರೆಗೆ 25 ಲಕ್ಷ ರೂಪಾಯಿ ಖರ್ಚಾಗಿದೆ ಬಿಳಿಯ ಕಲ್ಲು ಸಿಕ್ಕುವುದೇ ಕಷ್ಟವಾದದ್ದರಿಂದ ಕಾಮಗಾರಿಯು ಬೇಗನೆ ನಡೆಯದೆ ಹೋಯಿತೆಂದು ಕಾರಣ ಹೇಳುತ್ತಾರೆ

ಕುದುರೆ, ಎತ್ತು ಮೊದಲಾದ ಸಾಧು ಪ್ರಾಣಿಗಳಿಗೆ ಜನರು ಹಿಂಸೆ ಪಡಿಸದಂತೆ ನೋಡಿಕೊಳ್ಳುವುದಕ್ಕೂ, ಹಾಗೆ ಹಿಂಸೆ ಪಡಿಸಿದವರನ್ನು ಹಿಡಿದು ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರಿಂದ ಜುಲ್ಮಾನೆ ಹಾಕಿಸುವುದಕ್ಕೂ ಎಲ್ಲಾ ಪಟ್ಟಣಗಳಲ್ಲೂ ಇರುವಂತೆ ಕಲ್ಕತ್ತಾ ನಗರದಲ್ಲೂ ಒಂದು ಸಂಘವಿರುತ್ತದೆ ಈ ಸಂಘದವರು ಅಲ್ಪಸ್ವಲ್ಪ ಸಂಬಳಗಳನ್ನು ಕೊಟ್ಟು ಅಲ್ಪರನ್ನು ಏಜಂಟರಾಗಿ ನೇಮಿಸಿಕೊಂಡಿದ್ದಾರೆ ಈ ಏಜಂಟರು ಅನೇಕ ಸಂದರ್ಭಗಳಲ್ಲಿ ಬಡಬಗ್ಗರನ್ನೂ ತಿಳುವಳಿಕೆ ಸಾಲದವರನ್ನೂ ಹಿಡಿದು ಹೆದರಿಸಿ ಅವರಿಂದ ದುಡ್ಡು ಕಸುಕೊಳ್ಳುವುದು ಅಪರೂಪವಲ್ಲ ಸಂಘದವರು ಇಂಥಾ ಅಕೃತ್ಯವನ್ನು ನಿಲ್ಲಿಸಬೇಕೆಂದು ಮ್ಯಾಜಿಸ್ಟ್ರೇಟರು ಕಳೆದ ವಾರ ಒಂದು ಮೊಕದ್ದಮೆ ನಡೆದಾಗ ಅವರಿಗೆ ತಿಳಿಯುವಂತೆ ಜಡ್ಜಮೆಂಟಿನಲ್ಲಿ ಬರೆದು ಇರುತ್ತಾರೆ

ಕಲ್ಕತ್ತಾ ಪಟ್ಟಣದ ರಾಜಾ ಬಜಾರ್ ಬೀದಿಯ ಒಂದು ಮನೆಯೊಳಗೆ ಸಿಡಿಮದ್ದಿನ ಗುಂಡುಗಳನ್ನು ತಯಾರ್ಮಾಡುವ ಪದಾರ್ಥಗಳು ಪೋಲೀಸಿನವರ ಶೋಧನೆಯ ಕಾಲದಲ್ಲಿ ಸಿಕ್ಕಿದವು ಪೋಲೀಸಿನವರು ಅಮೃತಲಾಲ, ದಿನೇಶ, ಸರೋದ, ಕಲಿಪಾದ ಎಂಬ ನಾಲ್ವರು ಬಂಗಾಳೀ ಯೌವನಸ್ಥರನ್ನು ಹಿಡಿದು, ಅವರು ಸಿಡಿಮದ್ದಿನ ಗುಂಡು ತಯಾರ್ಮಾಡತಕ್ಕವರೆಂದೂ ಫಿತೂರಿಕೋರರೆಂದೂ ಮೊಕದ್ದಮೆ ತಂದರು ಮ್ಯಾಜಿಸ್ಟ್ರೇಟ್ ಮಿ॥ ಪೇಟಿ ರವರು ಈ ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿದ್ದಾರೆ ಇದುವರೆಗೆ ಸರ್ಕಾರದ ತರಫಿನಲ್ಲಿ ಸುಮಾರು 160 ಮಂದಿ ಸಾಕ್ಷಿಗಳ ಕೈಫಿಯತ್ತು ನಡೆದಿದೆ ಅಪರಾಧಿಗಳಾದ ನಾಲ್ವರೂ ಅಂಥಾ ಕೃತ್ಯಗಳಿಗೆ ಸೇರಿದವರಲ್ಲವೆಂಬ ಅರ್ಥಕ್ಕೆ ವಾಜಮೂಲಗಳನ್ನು ಬರೆದು ಒಪ್ಪಿಸಿದ್ದಾರೆ ಮೊಕದ್ದಮೆ ಇನ್ನೂ ಇತ್ಯರ್ಥವಾಗಲಿಲ್ಲ

ಈ ವರುಷ ಪ್ರಾರಂಭದಿಂದ ಬೊಂಬಾಯಿ ಪಟ್ಟಣದಲ್ಲಿ ಸುಮಾರು 40 ಕಾರ್ಖಾನೆಗಳಲ್ಲಿ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿನ ಹತ್ತಿ ಮೂಟೆಗಳೇ ಮುಂತಾದ ಸರಕು ನಾಶವಾಯಿತಷ್ಟೆ ಈ ಬೆಂಕಿಗಳನ್ನು ಆರಿಸುವುದಕ್ಕೆ ಬೊಂಬಾಯಿ ಮ್ಯುನಿಸಿಪಾಲಿಟಿಯ ಫೈರ್ ಬ್ರಿಗೇಡ್ ಎಂಬ ಗುಂಪಿನ ಸೇವಕರು ತುಂಬಾ ಸಾಹಸಪಟ್ಟರು ಬೆಂಕಿಯನ್ನಾರಿಸುವುದರಲ್ಲಿ ಇಬ್ಬರು ಸತ್ತು ಹೋದರು ಆ ಸೇವಕರಿಗೆಲ್ಲಾ ಬಹುಮಾನ ಕೊಡಬೇಕೆಂದು ಅಲ್ಲಿನ ಸಾಹುಕಾರರೂ ವರ್ತಕರೂ ಆರು ಸಾವಿರ ರೂಪಾಯಿ ಫಂಡನ್ನು ಚಂದಾ ಎತ್ತಿ ಕೊಡಿಸಿದ್ದಾರೆ ಇದಲ್ಲದೆ ಮ್ಯುನಿಸಿಪಾಲಿಟಿಯಿಂದ ಅವರಿಗೆಲ್ಲಾ ಒಂದು ತಿಂಗಳ ಸಂಬಳವನ್ನು ಇನಾಮು ಕೊಡಿಸಬೇಕೆಂದೂ ಗೊತ್ತಾಗಿದೆ ಬೆಂಕಿಗೆ ಸಿಕ್ಕಿ ಮೃತಪಟ್ಟವರ ಸಂಸಾರದ ಜೀವನಕ್ಕೆ ದ್ರವ್ಯವನ್ನು ಕೊಡುವಂತೆ ತೀರ್ಮಾನ ಮಾಡಿದ್ದಾರೆ

ಸಂಯುಕ್ತ ಆಧಿಪತ್ಯಗಳೊಳಗೆ ಸೇರಿದ ಷಹರನ್‌ಪುರದ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಮಹಮದಿಯನು ಒಬ್ಬ ಹೆಂಗಸನ್ನು ಕೊಂದುಹಾಕಿ ತಲೆತಪ್ಪಿಸಿಕೊಂಡು ಹೋದನು ಮಿ॥ ಗಾರ್ಡನ್ ಎಂಬ ಪೋಲೀಸ್ ಸೂಪರಿನ್‌ಟೆಂಡೆಂಟರು ತಮ್ಮ ನಾಯಿಯನ್ನು ಆ ಕೊಟಡಿಯೊಳಕ್ಕೆ ಕರೆದುಕೊಂಡು ಹೋಗಿ ಅದು ಅಲ್ಲಿದ್ದ ಬಟ್ಟೆಬರೆಗಳನ್ನೆಲ್ಲಾ ಮೂಸಿ ನೋಡಿದ ಮೇಲೆ ಅದರ ಸಹಾಯದಿಂದ ಆ ಅಪರಾಧಿಯನ್ನು ಹಿಡಿದರು ಸೆಷನ್ಸ್ ಜಡ್ಜರು ಅದರ ಮೇಲೆ ಅವನಿಗೆ ಮರಣ ದಂಡನೆಯನ್ನು ವಿಧಿಸಿದರು ಈಗ ಅವನು ಅಪೀಲ್ ಮಾಡಿಕೊಂಡಿದ್ದಾನೆ ಹೈ ಕೋರ್ಟ್ ಜಡ್ಜಿಗಳು ಆ ಕೊಟಡಿಯಲ್ಲಿದ್ದ ಬಟ್ಟೆಗಳು ಆ ಅಪರಾಧಿಯವೇ ಎಂದು ರುಜುವಾತು ಸಿಕ್ಕಲಿಲ್ಲವೆಂದೂ, ಆ ನಾಯಿಯ ಸಹಾಯತೆಯಿಂದಲೇ ಇತರ ರುಜುವಾತೇನೂ ಇಲ್ಲದೆ ಶಿಕ್ಷೆ ವಿಧಿಸುವುದು ಸಹಜವಲ್ಲವೆಂದೂ ಹೇಳಿ ಮರಣ ದಂಡನೆಯನ್ನು ವಜಾಮಾಡಿರುತ್ತಾರೆ

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಮಕ್ಕಳು ರೋಗಿಷ್ಠರಾಗಿಯೂ, ಬಲಹೀನರಾಗಿಯೂ ಆಗುತ್ತಿರುವುದನ್ನು ನೋಡಿ 35 ಮಂದಿ ಪಾರ್ಸಿ ಡಾಕ್ಟರುಗಳು 1,200 ಮಂದಿ ಮಕ್ಕಳ ಶರೀರಸ್ಥಿತಿಯನ್ನು ಪರೀಕ್ಷೆ ಮಾಡಿದರು 191 ಮಕ್ಕಳಿಗೆ ಹೊಟ್ಟೆಯಲ್ಲಿ ಗೆಡ್ಡೆ ಬೆಳೆದಿತ್ತು, ಮಲೇರಿಯಾ ಜ್ವರವೇ ಇದಕ್ಕೆ ಕಾರಣ 391 ಮಕ್ಕಳಿಗೆ ಕಣ್ಣು ಊನವಾಗಿತ್ತು ಅರೆವಾಸಿ ಮಕ್ಕಳಿಗೆ ಕಿವಿ, ಗಂಟಲು, ಮೂಗುಗಳ ಉಪದ್ರವು ಕಂಡಿತು ಹಲ್ಲು ರೋಗವು ಇರುವ ಮಕ್ಕಳೇ ಬಹಳ ಹೆಚ್ಚಾಗಿದ್ದರು ಡಾಕ್ಟರಗಳ ಪರೀಕ್ಷೆಯಲ್ಲಿ 1,503 ಸ್ಕೂಲ್ ಹುಡುಗರೊಳಗೆ 800 ಮಂದಿಗೆ ಕೆಟ್ಟ ಹಲ್ಲು ಇದ್ದಿತು ಆ ಮಕ್ಕಳಿಗೆಲ್ಲಾ ಸರಿಯಾದ ಚಿಕಿತ್ಸೆಯನ್ನು ಮಾಡಿಸಿ, ಅವರ ತಂದೆತಾಯಿಗಳಿಗೆ ಮಕ್ಕಳ ಪೋಷಣೆಯ ಕ್ರಮಗಳನ್ನು ಹೇಳಿಕೊಡುತ್ತಾ ಬರಬೇಕೆಂದು ಪಾರ್ಸಿ ದೊಡ್ಡಮನುಷ್ಯರು ಏರ್ಪಾಡು ಮಾಡಿರುತ್ತಾರೆ

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಭವಾನಿಪುರದಲ್ಲಿ ಕನಕಿಪುರದೊಳಗೆ ಗೌರವಸ್ಥನಾದ ಒಬ್ಬ ಬಂಗಾಳಿಯ 15 ವಯಸ್ಸಿನ ದೇವಿ ಎಂಬ ಮಗಳು ತನ್ನ ಮದುವೆ ವಿಚಾರದ ವಿಷಯದಲ್ಲಿ ತನ್ನ ತಂದೆತಾಯಿಗಳು ಪಡುತ್ತಿದ್ದ ಚಿಂತೆಯಲ್ಲೇ ಮಗ್ನಳಾಗಿದ್ದು ಕಳೆದ ಭಾನುವಾರ ಆತ್ಮಹತ್ಯ ಮಾಡಿಕೊಂಡಳು ಅವಳು ತನ್ನ ಕೊಟಡಿಯೊಳಗೆ ಉಟ್ಟಿದ್ದ ಸೀರೆಗೆ ಸೀಮೆಯೆಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಬಿಟ್ಟಳು ಉರಿಯೂ ಹೊಗೆಯೂ ಹೆಚ್ಚಿ ನೆರೆಹೊರೆಯಲ್ಲೆಲ್ಲಾ ಮನೆಗೆ ಬೆಂಕಿಬಿದ್ದಿತೋ ಎಂಬಂತೆ ಗಾಬರಿಯಾಯಿತು ಸರ್ಕಾರಕ್ಕೆ ತಿಳಿದಾಗ ಅವರು ಬೆಂಕಿ ಆರಿಸುವ ಯಂತ್ರವನ್ನು ತಂದು ನೀರು ಸುರಿಸಿದರು ಆಗ ಕೆಲವು ಜೆಂಗಸರು ಆ ಕೊಟಡಿಯ ಬಾಗಿಲು ಒಡೆದು ನೋಡಿದಾಗ ಆ ಹುಡುಗಿ ಮಾತ್ರ ಉರಿಯುತ್ತಿದ್ದದ್ದು ಗೊತ್ತಾಯಿತು ಅವಳಿಗೆ ಸಾಯಂಕಾಲದ ತನಕ ಎಷ್ಟೆಷ್ಟೋ ಚಿಕಿತ್ಸೆಮಾಡಿದರೂ ಅವಳು ಬದುಕಲಿಲ್ಲ ಇದು ವರದಕ್ಷಿಣೆಯ ಪರಿಣಾಮ

ಬಂಗಾಳಾ ಮೊದಲಾದ ಕಡೆಗಳಲ್ಲಿ ಕಲ್ಲಿದ್ದಲ ಗಣಿಗಳಿರುತ್ತವೆ ಕಳೆದ 1913 ನೇ ಇಸವಿಯಲ್ಲಿ ಹಿಂದುಸ್ಥಾನದ ಎಲ್ಲಾ ಗಣಿಗಳಿಂದಲೂ 1,54,86 118 ಟನ್ನುಗಳ ಕಲ್ಲಿದ್ದಲನ್ನು ಗಣಿಗಳಿಂದ ತೆಗೆದಿರುತ್ತಾರೆ ಇದರ ಹಂಚಿಕೆ ಹ್ಯಾಗಂದರೆ—ಬೀಹಾರ್ ಮತ್ತು ಒರಿಸ್ಸಾ ಗಣಿಗಳಲ್ಲಿ 1,03,36,309 ಟನ್ನುಗಳ ಕಲ್ಲಿದ್ದಲು, ಬಂಗಾಳಾ 16, 9,952 ಟನ್ನುಗಳೂ, ಅಸ್ಸಾಂ 2,70,364, ಮಧ್ಯಪ್ರಾಂತ್ಯ 2,35,657, ಪಂಜಾಬಿನಲ್ಲೂ ಬಲೂಚಿಸ್ಥಾನದಲ್ಲೂ 50,000 ಟನ್ನುಗಳಂತೆ ಉತ್ಪತ್ತಿಯಾದವು ವಾಯವ್ಯ ಸರಹದ್ದು ಪ್ರಾಂತ್ಯದಲ್ಲಿ ಮಾತ್ರ 90 ಟನ್ನುಗಳಿಗಿಂತ ಹೆಚ್ಚು ಸಿಕ್ಕಲಿಲ್ಲ ಇವಲ್ಲದೆ ಪರದೇಶಗಳ ಕಲ್ಲಿದ್ದಲು 6 ಲಕ್ಷ ಟನ್ ಹಿಂದುಸ್ಥಾನಕ್ಕೆ ರಫ್ತಾಗಿ ಬಂದಿರುತ್ತದೆ ಹಿಂದುಸ್ಥಾನದಿಂದ 30 ಲಕ್ಷ ಟನ್ ಕಲ್ಲಿದ್ದಲು ಹೊರಕ್ಕೆ ಸಾಗಿ ಹೋಯಿತು ಈ ರಾಷ್ಟ್ರದ ರೈಲ್ವೆ ಇಲಾಖೆಯವರು 45 ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಕೊಂಡು ಉಪಯೋಗಿಸಿರುತ್ತಾರೆ.

ಉಚಿತವಾಗಿ ದೊರಕುವದು

ನಮ್ಮ ಮಾತಿನ ಸತ್ಯತೆಯನ್ನು ಪರೀಕ್ಷಿಸಿ ನೋಡಿ

ನಮ್ಮಲ್ಲಿರುವ ಬಲವಾದ ಲೀವರ್ ವಾಚನ್ನು ಕ್ರಯವಿಲ್ಲದೆ ಪಡೆಯಬೇಕಾದರೆ ಅರ್ಧಾಣೆ ಸ್ಟಾಂಪು ಸಮೇತ ಇಂಗ್ಲಿಷಿನಲ್ಲೇ ನಮಗೆ ಕಾಗದ ಬರೆಯಬೇಕು

[118 1] ವಿಳಾಸ—ಫಟಾಲ ಕಂಪನಿ, ಚಿತ್ತೂರು, ಉ ಆ



ಮೇ ಮಹೋತ್ಸವದ ಕೈ ಗಡಿಯಾರ

ಅರ್ಧ ಕ್ರಯ ರೂ. 1-14-0

ಬರುವ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 14-0 ಆಣೆಗೆ ಕೊಡಲ್ಪಡುತ್ತೆ ವಿಳಾಸ—ಜಿ ಆರ್ ರಾವ್, ನಂ 65, ಆಫೀಸು ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ಮಧುರೆ ಚುನ್ನಡಿ ಅಂಚಿನ ಸೀರೆ ಅಪ್ಪಲ್ ರಬಿಂ ರೂ 2-6 0.

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು

[116 1] ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ

ಹಾರಮೋನಿಯಂ ಕಲಿಯುವ ಪುಸ್ತಕ

ಕ್ರಯ 0-8-0

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 40 ಪಾರಸೀ ಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಸ್ವರ ಮೊದಲಾದವುಗಳು ವಿರಳವಾಗಿ ತಿಳಿಸಲ್ಪಟ್ಟಿರುತ್ತೆ ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು

ಚುನ್ನಡಿ ಅಂಚಿನ ಸೀರೆ, ಹಾರಮೋನಿಯಂ ಬಾಕ್ಸು, ತಂಜಾವೂರು ಅಡ್ಡಿಗೆ ಈ ಮೂರೂ ಕೋರುವವರು ಸಹ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ವಿಳಾಸ—ಜಿ ಆರ್ ರಾವ್, ನಂ 65, ಆಫೀಸು

[116 1] ವೆಂಕಟಾಚಲ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ

ಅಡ್ಡಿಗೆಯ ಮಾದರಿಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ

ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ತೂಬುಗಳನ್ನು ಮತ್ತು ತುಮುಲವುಗಳನ್ನು ಇಟ್ಟು ಗಟ್ಟಿಯಾಗಿ ಅಪರಂಜಿಯ ಮುಲಾಮನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ ಇದು ಗಾಜಿನ ಮಣಿಗಳಲ್ಲ ನಿಜವಾದ ಗಟ್ಟಿ ಗೆಜ್ಜೆಗಳು ಸ್ತ್ರೀಯರಿಗೂ ಹುಡುಗಿಯರಿಗೂ ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಕ್ಕಾದದ್ದು ಅನೇಕರು ಸುಳ್ಳು ಪ್ರಕಟಣೆಗಳನ್ನು ಪ್ರಕಟಿಸಿ ಜನಗಳಲ್ಲಿ ನಂಬಿಕೆಯನ್ನು ಕೆಡಿಸಿಕೊಂಡಿರುವವರಿಂದ ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ ಕಾಲಕ್ರಮೇಣ ಅಡ್ಡಿಗೆಯ ರಂಗು ಸ್ವಲ್ಪ ಕಮ್ಮಿಯಾದರೆ ಚಿನ್ನದ ಮುಲಾಮನ್ನು ಅಡ್ಡಿಗೆಯ ಮೇಲೆ ಸವರಿದರೆ ಪುನಃ ಚಿನ್ನದಂತಾಗುವ 1 ಡಬ್ಬಿ ಮುಲಾಮನ್ನು ಅಡ್ಡಿಗೆಯ ಸಂಗಡಲೇ ಉಚಿತವಾಗಿ ಕಳುಹಿಸುತ್ತೇವೆ

ವಿಳಾಸ—ನರಸಿಂಹನಾಯ್ಡುಗಾರು, 21, ಅಕ್ಬರ್ ಸಾಹೇಬ್

[10—2] ಬೀದಿ, ತಿರುವಲ್ಲಿಕೇಣಿ, ಮದರಾಸು

ಶ್ರೇಷ್ಠವಾದ ವಾಚ್ ನೂತನವಾದ ವಾಚ್ ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ 3 8 0 ಮಾತ್ರ

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ಗೌರವವೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ ಇದರ 7 ಬಹುಮಾನಗಳ ತಪಸೀಲ್—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಹಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ತೀಸೆ, (7) ಕರವಸ್ತ್ರ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ— [117-1]

ಟಿ ಸೀತಾರಾಮ ಮೊದಲಿಯಾರ್, ನಂ. 1, ಕೆಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ವಿಕಟಪ್ರತಾಪವೆಂಬ ಮಾಸಪತ್ರಿಕೆ

ಹಾಸ್ಯರಸದಿಂದ ಕೂಡಿ ಸಚಿತ್ರವೂ ವಿಚಿತ್ರವೂ ಆದ ವಿಷಯಗಳಿಂದ ಪ್ರಕಟಿಸುವ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಅಂಚೇ ವೆಚ್ಚ ಸೇರಿ ಒಂದೇ ರೂಪಾಯಿ' ಪತ್ರಿಕೆಯು ಪ್ರತಿ ತಿಂಗಳ 5 ನೆಯ ತಾರೀಖಿಗೆ ಹೊರಡುವದು.

115 1 ವಿಳಾಸ—ವಿಕಟಪ್ರತಾಪ ಆಫೀಸ್, ಕುಪ್ಪಂ ಪೋಸ್ಟು.

ಕೈಕಲಸದ ಪಾಠಶಾಲಾ.

ಎಂಥಾ ದೊಡ್ಡ ವ್ಯಾಧಿಗಳಿಗೂ ನಮ್ಮಲ್ಲಿ ಔಷಧವುಂಟು

ಗುಣವಾಗುತ್ತದೋ ಇಲ್ಲವೋ ನಮ್ಮ ಕ್ಯಾಟಲಾಗನ್ನು ನೋಡಿ ಒಂದು ವಿಷಯ ಆವುಷಧ ಸೇವನೆಮಾಡಿದರೆ ತಮಗೇ ತಿಳಿದುಬರುವುದು ಅನೇಕರು ನಮ್ಮ ಅವುಷಧ ಸೇವನೆಮಾಡಿ ಶೀಘ್ರವಾಗಿ ಗುಣಹೊಂದಿ ನಮಗೆ ಸರಟಿಫಿಕೇಟು ಕೊಟ್ಟಿರುತ್ತಾರೆ ಪರೀಕ್ಷಿಸಬಹುದು ಕ್ಯಾಟಲಾಗನ್ನು ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪು ಕಳುಹಿಸಬೇಕು ಆಯುರ್ವೇದಪಂಡಿತರು ವೈದ್ಯ ಟಿ ಯಸ್ ರಾಜಗೋಪಾಲಪಿಳ್ಳೆ, 167, ಕೇವಲರಿ ರೋಡು, ಬೆಂಗಳೂರು ದಂಡು [93-4]

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ ಕ್ರಯ 12 ಆಣೆ "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ. ಪತ್ತೇದಾರಿಯ ಕಥೆ ಕ್ರಯ 6 ಆಣೆ "ಸಂತಾಪಕ ಮನೋಹರವಾದ ನವೀನ ಕಾದಂಬರಿ ಎಲ್ಲರೂ ಅಗತ್ಯವಾಗಿ ಓದಬೇಕಾದುದು ಕ್ರಯ 4 ಆ "ಮಹಾರಣ್ಯಪುರಾಧಿಪತ್ಯ" 4 ಆ "ಪಶುಲೋಕ ರಹಸ್ಯ" 2 ಆ "ಕಲಹಪ್ರಿಯಾಪ್ರಹಸನ" 2 ಆ "ಯೋಗನಿದ್ರಾ ಪ್ರಹಸನ" 2 ಆಣೆ—ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ

[266 23] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸಂಸ್ಕೃತ ಸಾಹಿತ್ಯ ಚಂದ್ರಿಕಾ ಗ್ರಂಥಮಾಲಾ.

ಇದರಲ್ಲಿ (1) ಸಂಸ್ಕೃತ ಭಾಷಾ ಮಂಜರೀ, (2) ಸಂಸ್ಕೃತ ವ್ಯಾಕರಣಮ್, (3) ಸೂಕ್ತಿಮುಕ್ತಾವಲಿ, ಎಂಬೀ ಮೂರು ಗ್ರಂಥಗಳನ್ನು ಹದಿನಾರು ಸಂಚಿಕೆಗಳಾಗಿ ಪ್ರಕಟಿಸುವೆವು ನಾಲ್ಕು ಸಂಚಿಕೆಗಳು ಸಿದ್ಧವಾಗಿರುವುವು ಸಂಚಿಕೆ 1 ಕ್ಕೆ 6 ಆಣೆ ಮಾತ್ರ ಈ 3 ಗ್ರಂಥಗಳ ಸಹಾಯದಿಂದ ಸರ್ವರೂ ಸ್ವತಂತ್ರವಾಗಿ ಸಂಸ್ಕೃತ ಭಾಷೆಯನ್ನು ಕಲಿಯಬಹುದು ಇವಲ್ಲದೆ ಶ್ರೀಮದ್ವಾಲ್ಮೀಕಿ ರಾಮಾಯಣ, ರಘುವಂಶ, ಶಾಕುಂತಲ ಮುಂತಾದ ಇಪ್ಪತ್ತು ಸಂಸ್ಕೃತ ಕಾವ್ಯ ನಾಟಕಗಳನ್ನು ಸಂಪೂರ್ಣವಾಗಿ ಪ್ರತಿಪದ ಟೀಕಾ ತಾತ್ಪರ್ಯಗಳೊಡನೆ ವರ್ಣನಾನುಗುಣವಾದ ಅತ್ಯಂತ ಸುಂದರವಾದ ರವಿವರ್ಮನ ಕರದ ಚಿತ್ರಗಳೊಡನೆ 150 ಪುಟಗಳ 40 ಪುಸ್ತಕಗಳಾಗಿ ಪುಸ್ತಕ 1 ಕ್ಕೆ ವಿ ಪಿ ಒಂದು ರೂಪಾಯಂತೆ ಪ್ರಕಟಿಸುವೆವು ಶೀಘ್ರದಲ್ಲಿ ಚಂದಾದಾರರಾಗಬೇಕು

[114 1] ವಿಳಾಸ—ಪಂಡಿತ್ ಕೆ ಭಾಸ್ಕರಶಾಸ್ತ್ರೀ, ಬೆಂಗಳೂರು ಸಿಟಿ

NOW READY

Full Notes with Summary and Numerous useful questions on Circe's Palace The Golden Fleece and Fairy Tales (I S Text for 1915) by Mr A S Rangaswamiengar B A, Asst Master Maharani's College, Mysore Price four annas only Yate's Primer 0 4 0 Yate's Second Reader 0-9 0 King Second Reader 0 6-0 King Third Reader 0 8 0, Macmillan's New No IV Reader 0 12 0 Hydes Practical English Grammar—First 0 15-0, Second 0 15 0 Longman's School Geography 1 4 0, Marrison's Junior Geography of India 0 12 0

We supply you any books in English or Canarese

[23 19] **The General Agency, Mysore**

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚೆಕ್ಕುಗಳು—ಶೀರೆಗಳು, ಖಣಗಳು

ಹೊಸ ನಮೂನೆಯ ತರತರವಾದ ಚೆಕ್ಕುಗಳು, ಶೀರೆಗಳು, ಖಣಗಳು, ಕಿರಿಗೆಗಳು, ಚಿಲ್ಲರೆಯಾಗಿಯೂ ಬೇಲ ಗಳಲ್ಲಿಯೂ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು ಹಣ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕಾದು ಕೋರಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಆವಶ್ಯಕವಿಲ್ಲ ನಮೂನೆಗಳ ಮೇಲಿನ ನಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು ಸೋಲಾಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಲಾಭ ಹೊಂದುತ್ತಿರುವರು [-8 17]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

ಇಂಡಿಯನ್ ಕೊಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 160, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಮಹಾಶಯರಿಗೂ, ಮುಖ್ಯವಾಗಿ ಸ್ಕೂಲು ಉಪಾಧ್ಯಾಯರಿಗೂ ಮತ್ತು ವಿದ್ಯಾರ್ಥಿಗಳಿಗೂ ವಿನಯಪೂರ್ವಕವಾಗಿ ತಿಳಿಸುವದೇನಂದರೆ—ಕಳೆದ ಹನ್ನೆರಡು ವರುಷಗಳಿಂದಲೂ ವಿಷರ್ ಬುಕ್ ಡಿಪೋನಲ್ಲಿ ಮಾನೇಜರಾಗಿದ್ದು ಈಚೆಗೆ ಆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ಈಗ್ಗೆ ನಮ್ಮ ಸ್ವಂತ ಹೆಸರಿನ ಮೇಲೆ ಒಂದು ಪುಸ್ತಕಾಲಯವನ್ನು ಏರ್ಪಡಿಸಿರುತ್ತೇವೆ ಸರ್ವರೂ ನಮ್ಮ ಮೇಲೆ ಅಭಿಮಾನವಿಟ್ಟು ಪ್ರೋತ್ಸಾಹಿಸುತ್ತಾ ಬರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ ನಮ್ಮ ಆಲಯದಲ್ಲಿ ಎಲ್ಲಾ ತರವಾದ ಇಂಗ್ಲೀಷು, ಕನ್ನಡ, ತೆಲುಗು, ಅರವ ಮತ್ತು ಸಂಸ್ಕೃತ ಪ್ರಥಮ ತರಗತಿ ಮೊದಲುಗೊಂಡು ಬಿ ಎ ತರಗತಿ ವರಿವಿಗೂ ಎಲ್ಲಾ ಪುಸ್ತಕಗಳೂ ದೊರೆಯುವವಲ್ಲದೆ, ಇನ್ನೂ ಅನೇಕ ತರಹ ಇಂಗ್ಲಿಷ್ ಮತ್ತು ಕನ್ನಡ ಕಥೆ ಪುಸ್ತಕಗಳೂ, ಕಾದಂಬರಿಗಳೂ ಮತ್ತು ಸ್ಟೇಷನರಿಗೆ ಸಂಬಂಧಪಟ್ಟ ಎಲ್ಲಾ ತರವಾದ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ ವಿಳಾಸ— [112 1]

ಕೆ. ಎ ಚೌರಪ್ಪ ಅಂಡ್ ಸನ್, ಪುಸ್ತಕ ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ

ಸಾವರೆನ್ನಗಳ ಕಳವು

ಇದು ವ್ಯಾಪಾರದ ಹಂಗಾಮು ಆಗಿರುವದರಿಂದ ಈ ಸೀಟಿನ ವರ್ತಕರು ದಿನಾಲು ಮುಂಬಯಿಯಿಂದ ನೋಟು ಮತ್ತು ಸಾವರೆನ್ನಗಳ ಪಾರ್ಸಲ ಗಳನ್ನು ತರಿಸುತ್ತಾರೆ. ಈ ಪಾರ್ಸಲುಗಳಲ್ಲಿ ಒಂದನ್ನಾದರು ನುಂಗಿ ನೀರು ಕುಡಿದರೆ ತನ್ನ ದಾರಿದ್ರ್ಯ ವಿಚ್ಛಿನ್ನವಾಗಬಹುದೆಂಬ ವಿಚಾರದಿಂದ ರೈಲ್ವೆ ಸಾರ್ಟಿಂಗ ಡಿಪಾರ್ಟಮೆಂಟಿನಲ್ಲಿರುವ ದೊರಾಸ್ವಾಮಿ ಎಂಬ ಅಪ್ರಬುದ್ಧ ಕಾರಕೂನನು ಒಂದು ಪಾರ್ಸಲನ್ನು ತೆಗೆದುಕೊಂಡು ಅದರೊಳಗಿನ 815 ಸಾವರೆನ್ನಗಳನ್ನು ಬಗಲಿಗೆ ಹಾಕಿದನೆಂಬ ಆರೋಪದಿಂದ ಪೋಲೀಸರಿಂದ ಹಿಡಿಯಲ್ಪಟ್ಟಿರುತ್ತಾನೆ. ಈ ಪಾರ್ಸಲು ಹುಬ್ಬಳ್ಳಿಯ ಪ್ರಸಿದ್ಧ ವರ್ತಕರಾದ ಹಿಂದೂಜಿ ಅಮರಂಗಜಿಯವರದೂ ಇನ್ನೊಬ್ಬ ಮಾರವಾಡಿಯದೂ ಆಗಿತ್ತು. ಹುಬ್ಬಳ್ಳಿ ಮತ್ತು ಧಾರವಾಡ ಪಟ್ಟಣಗಳಿಗೆ ಮುಂಬಯಿಯಿಂದ ಬರುವ ಟಪಾಲು ಹುಟಗಿಯ ಮಾರ್ಗವಾಗಿಯೂ ಬರುತ್ತದೆ. ಹುಟಗಿಯಿಂದ ವಿಜಾಪೂರದ ಮಟ್ಟಿಗೆ ಒಬ್ಬ ಸಾರ್ಟರನು ಇರುತ್ತಿರುವನು. ಹುಟಗಿಯಿಂದ ವಿಜಾಪೂರಕ್ಕೆ ಹೋಗಿ ಬಂಡಿಯು ಬರುವದಕ್ಕೆ ನಾಲ್ಕು ತಾಸುಗಳು ಬೇಕಾಗುತ್ತವೆ. ಈ ಅವಧಿಯಲ್ಲಿ ಈತನು ಮೇಲೆ ಹೇಳಿದ ಪಾರ್ಸಲವನ್ನು ಕಿಂಚಿತ್ತಾದರು ಸಂಶಯ ಬರದಂತೆ ಒಡೆದು ಅದರೊಳಗಿನ ಪಾರ್ಸಲುಗಳನ್ನು ತೆಗೆದುಕೊಂಡನು. ಮಾರವಾಡಿಗಳ ಮುಂಬಯಿಯ ದಲಾಲರು ಪಾರ್ಸಲುಗಳನ್ನು ಪೋಸ್ಟದಲ್ಲಿ ಇನ್ಸ್ಯೂರ ಮಾಡಿದ ತರುವಾಯ, ಪೋಸ್ಟ ಖಾತೆಯವರು ಒಂದು ಚೀಲದಲ್ಲಿ ಇವನ್ನು ಹಾಕಿ ಮೊಹರು ಮಾಡಿ ಕಳುಹಿಸಿದರು. ದೊರಾಸ್ವಾಮಿಯು ಪೋಸ್ಟಿನ ಈ ಚೀಲದ ಮೇಲಿನ ಮೊಹರನ್ನು ಇಟ್ಟು ಕೆಳಗೆ ಚೀಲದ ಹೊಲಿಗೆಯ ಎಳೆಯನ್ನು ಬಿಚ್ಚಿ ಒಳಗಿನ ಪಾರ್ಸಲುಗಳನ್ನು ತೆಗೆದುಕೊಂಡು, ಪುನಃ ಯಾರಿಗೂ ತಿಳಿಯದಂತೆ ಇದನ್ನು ಹೊಲಿದನು. ಹುಬ್ಬಳ್ಳಿಯಲ್ಲಿ ಪಾರ್ಸಲಿನ ಡಿಲಿವ್ಹರಿಯಾದ ಬಳಿಕ ಸಾವರೆನ್ನಗಳು ಕಳವಾಗಿಹೋದಂತೆ ಕಂಡು ಬಂತು. ಆ ನಂತರ ಪೋಲೀಸ ತಪಾಸಣೆಗೆ ಪ್ರಾರಂಭವಾಗಿ ದೊರಸ್ವಾಮಿಯು ಹಿಡಿಯಲ್ಪಟ್ಟನು. ಈತನು ಮದ್ರಾಸ ಇಲಾಖೆಯವನು. ಈತನಿಗೆ ಈ ಕೃತ್ಯದಲ್ಲಿ ಒಬ್ಬ ಸಹಾಯಕನೂ ಇರುವನು. ಇವರೀರ್ವರು ಕೂಡಿ ಸಾವರೆನ್ನಗಳನ್ನು ಗಿರಂಕ್ಯತಮಾಡಿದರು. ಅವರ ಕಳವು ಬೇಗನೆ ಬೈಲಿಗೆ ಒಂದು, ಕಳವಿಗೆ ಹೋದ ೯೦೦ ಸಾವರೆನ್ನಗಳಲ್ಲಿ 60 ಮಾತ್ರ ತಪಾಸು ಇಲ್ಲದೆ ಹೋಗಿವೆ. ಉಳಿದವುಗಳಲ್ಲಿ 300 ಕೊಲ್ಹಾಪೂರದಲ್ಲಿ ಹಾಗೂ ಬಳ್ಳಾರಿ, ಬೆಂಗಳೂರು ಮತ್ತು ಕಾಟಪಾಡಿಯಲ್ಲಿ ಎರಡೆರಡು ನೂರುಗಳಂತೆ ಸಿಕ್ಕಿರುತ್ತವೆ. ಉಳಿದ ನಾಣ್ಯಗಳನ್ನು ಇವರು ವಿಲಾಸದ ಉಪಯೋಗಮಾಡಲಿಕ್ಕೆ ಸಾಲುವಮಾಡಿರಬೇಕೆಂದು ತರ್ಕವಿರುತ್ತದೆ. ಇವರ ಅಪರಾಧದ ವಿಚಾರಣೆಯು ಇಪ್ಪತ್ತನೆ ದಿವಸ ವಿಜಾಪೂರದಲ್ಲಿ ಮೆ॥ ಹುಜೂರ ಡಿಪ್ಯುಟಿ ಕಲೆಕ್ಟರರ ಮುಂದೆ ನಡೆಯುತಕ್ಕದ್ದಿರುತ್ತೆಂದು ತಿಳಿಯುತ್ತದೆ.

⁂

ಸಂಯುಕ್ತ ಪ್ರಾಂತ್ಯದಲ್ಲಿರುವ ಮಸೂರಿಯಲ್ಲಿ ಒಬ ಯುರೋಪಿಯನ್ನ ಸ್ತ್ರೀಯಳು ಮ್ಯುನಿಸಿಪಾಲಿಟಿಯ ಮೆಂಬರಳಾಗಿರುತ್ತಾಳೆ. ಹಿಂದುಸ್ಥಾನದಲ್ಲೆಲ್ಲ ಇವಳೇ ಮೊದಲನೆಯ ಸ್ತ್ರೀ ಮೆಂಬರಳಾಗಿರುತ್ತಾಳೆ. 1911 ರಲ್ಲಿ ಎರ್ವ ವಿದುಷಿಯು ಅಲ್ಲಾಬಾದಿನ ಮ್ಯುನಿಸಿಪಾಲಿಟಿಯ ಇಲೆಕ್ಷನದಲ್ಲಿ ಉಮೇದವಾರಳಾಗಿ ನಿಂತಿದ್ದಳು. ಆದರೆ ಕೆಲಪ್ರೊಟ್ಟ ಉಮೇದವಾರರ ದಾಕ್ಷಿಣ್ಯದ ದೆಸೆಯಿಂದ ರಾಜೀನಾಮೆಯನ್ನು ಕೊಟ್ಟಳು. ಮ್ಯುನಿಸಿಪಾಲಿಟಿಯ ಕಾಯದೆಯ ಪ್ರಕಾರ ಯಾವತೊಬ್ಬ ಸ್ತ್ರೀಯು ಮೆಂಬರಳಾಗಲಿಕ್ಕೆ ಪ್ರತಿಬಂಧವಿರುವದಿಲ್ಲ. ಈ ವಿಷಯವಾಗಿ ಮುಂಬೈಯಲ್ಲಿ ಚರ್ಚೆ ನಡೆದಾಗ ಒಬ್ಬ ಪ್ರೊಫೆಸರು ತಮ್ಮ ಹೆಂಡತಿಯು ಮೆಂಬರಳಾಗಿ ಆರಿಸಲ್ಪಡಬೇಕೆಂದು ತಾವು ಸಹ ರಾಜೀನಾಮೆಯನ್ನು ಕೊಡಲಿಕ್ಕೆ ಸಿದ್ಧರಾಗಿದ್ದರು. ಹೆಣ್ಣು ಮಕ್ಕಳು ಮೆಂಬರರಾಗಲಿಕ್ಕೆ ಯಾವ ಪ್ರಕಾರದ ಅಡ್ಡಿಯು ಇರುವದಿಲ್ಲೆಂತಲೂ, ಅವರು ಉಮೇದವಾರರಾಗಲಿಕ್ಕೇ ಹಿಂಜರಿಯುತ್ತಾರೆಂದೂ ತೋರಲ್ಪಡುತ್ತದೆ. ಆದರೆ ಸುಶಿಕ್ಷಿತೆಯರಾದ ಸ್ತ್ರೀಯರು ಉಮೇದವಾರಳಾಗಿ ನಿಂತರೆ ಮಸೂರೀ ಶಹರದ ಮಾರ್ಗದಂತೆ ಇವರಿಗೂ ಯಶಸ್ಸು ದೊರಲಿಕ್ಕೆ ಯಾವ ತರದ ಆತಂಕ ಬರಲಾರದೆಂದು ಹೇಳಬಹುದಾಗಿರುತ್ತದೆ.

⁂

ಮದ್ರಾಸ ಇಲಾಖೆಗೆ ಸೇರಿದ ನೆಲ್ಲೂರ ಪಟ್ಟಣಕ್ಕೆ ಒಬ್ಬರು ಪುನರ್ವಿವಾಹಿತರು ಬಂದರು. ಇವರಿಗೆ ಒಬ್ಬ ವಕೀಲರು ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟು, ಅವರ ಕೂಡ ಪಜ್ತಿ ವ್ಯವಹಾರವನ್ನು ಮಾಡಿದರು. ನೆಲ್ಲೂರಿನ ಹತ್ತರವೇ ಪುಷ್ಪಗಿರಿಯ ಸ್ವಾಮಿಗಳು ಸಂಚಾರಮಾಡುತ್ತಿದ್ದರು. ಈ ವರ್ತಮಾನವನ್ನು ಕೇಳಿ, ಸ್ವಾಮಿಗಳು ವಕೀಲರಿಗೆ ಬಹಿಷ್ಕಾರವನ್ನು ಹಾಕಿದರು. ಹೀಗೆ ಬಹಿಷ್ಕಾರ ಹಾಕುವದರಿಂದ ತಮ್ಮ ಅಪಮಾನವಾಯಿತೆಂದು ವಕೀಲರು ಸ್ವಾಮಿಗಳ ಮೇಲೆ ಮಾನಹಾನಿಯ ಫಿರ್ಯಾದಿಯನ್ನು ಮಾಡಲುದ್ಯುಕ್ತರಾದರು. ಕೆಲವು ಕೂಡಿ, ಈ ಫಿರ್ಯಾದಿಯು ನಡೆಯದಂತೆಯೂ ಸ್ವಾಮಿಗಳು ಬಹಿಷ್ಕಾರದ ಆಜ್ಞೆಯನ್ನು ರದ್ದು ಮಾಡುವ ಹಾಗೂ ಸಂಧಿಯನ್ನು ನಡೆಸಿರುತ್ತಾರೆ.

ಕೆ ವ್ಯ, ಧಾರವಾಡ

ಸ್ವಸ್ಥವಾಗುವ್ರವಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿಶ್ಶಕ್ತಿ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಾಶ್ಮರಿ, ನಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-37]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪೋ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

WANTED.

For a large Coffee Estate in South Mysore a capable and energetic Writer with sufficient knowledge of English to keep simple accounts, should be able to supply labour. Good pay for a good man.

Apply to —

[90 6] **X C/o VRITTANTA PATRIKE, MYSORE**

Excellent notes on Tanglewood Tales 3 As. Notes on **Fairy Tales** 2 As. ಆರೋಗ್ಯಪ್ರಶ್ನೋತ್ತರ 1 ಆಣೆ. ಪತ್ರಗಳ ನಮೂನೆಗಳುಳ್ಳ ಪತ್ರರತ್ನಾಕರ 8 ಆಣೆ. ಅರ್ಜಿಗಳ ನಮೂನೆಗಳುಳ್ಳ ಲೇಖ್ಯಕಲ್ಪ ಪ್ರಕಾಶಿಕೆ 1 ಆಣೆ. [106 3]

Apply to —(1) ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು,

(2) Chowrappa & Son, Bangalore City

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ ಕಟ್ಟಡಗಳು—ಕಲ್ಕತ್ತಾ

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,60,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲಿಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್ಮೆಂಟಿನ ಜೀವವಿಮೆ ಕಂಪೆನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿ ಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂಕೋಚವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜೆಂಟ್ರುಗಳು ಕುಂಬಾ ಅದೃಷ್ಟವಂತರೆಂಬುವುದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-26]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 5-21

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ನಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಶಾಲಿಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತವು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-60] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕ ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-10]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತನಂತಿರುವ	15 ಮಾತ್ರೆ ಉಳ್ಳ ಪೊಟ್ಟಣಕ್ಕೆ	ಕ್ರಯ	2 ಆಣೆ.
,,	96 ,, ,, ,,	,,	4 ,,
,,	200 ,, ,, ,,	,,	7 ,,
,,	400 ,, ಸುಂದರವಾದ ಟಿನ್ ಡಬ್ಬಾ		9 ,,
,,	80 ,, ,, ,,	,,	4 ,,
,,	100 ,, ಬಾಟ್ಲಿಯಲ್ಲಿ		1½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಬಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಬೊಂಬಾಯಿ 3;
ಅಥವಾ, ಬಿ ಸಿ. ಷಾ ಕಂಪನಿ,
509 ಮಿಂಟ್ ಬೀದಿ, ಮದರಾಸ್.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯೆನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಬರುವವೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡ್ಯೆನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗೆಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-20]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. ೧-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security required from each Agent is Rs 50 For particulars see in person or apply to

Messrs VENKATACHALAM & SONS
Chief Agents,
Hindustan Co operative Insurance Society, Ltd,
166, Dodpe Near Old Taluk Cutchery,
243 26 *MYSORE*

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 18

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಪಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಚುಕ್ಕಿಯುಳ್ಳ ಟೋಪಿಗಳು ರೂ ೧_೮ ರೂ ೧_೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

In addition to cap making we are giving special attention to knitting stockings All our stockings for adults and children are hand-made Prices will be sent on enquiry'

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS
GIRLS INDUSTRIAL SCHOOL, HASSAN

ಶ್ರೀ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಾಗಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ ಜ್ವರ ಕೆಮ್ಮು ನೆಗಡಿ ಯಳವು ಹೊಟ್ಟೆಯುಬ್ಬರ ಈ ರೋಗಗಳನ್ನು ಸಮಯದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು [220 30]

ವಿಷಮಜ್ವರಗಳು ನೆಗಡಿ ಕೆಮ್ಮು ತಲೆನೋವು ಅಗ್ನಿಮಾಂದ್ಯ ಶೀತವಾಯು ಹಲ್ಲುನೋವು ಮಲಬಂಧ ಅರೋಚಕ ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು ಸಾವಿರಾರು ಜನರು ಪರೀಕ್ಷಿಸಿದ್ದಾರೆ ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

BRAHMAPPA TAVANAPPANAVAR,

Merchant & Commission Agent
Agent to Messrs Currimbhoy Ebrahim & Co s Mills
BOMBAY

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಪಜುಲಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಲ್ವಾ, ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್ ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಪೇಟೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾದಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಪೇಟೆ ರೇಟಿನ ಮೇಲೆ ೩ ರೂಪಾಯಿ ಲಾಗಾಯ್ತು 1½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ [97 ೨]

ನಮ್ಮ ಟ್ರಾವಲಿಂಗ್ ಏಜಂಟರ ವರ ಬಟ್ಟೆಗಳ ಸಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು

ಹೆಡ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ ಬ್ರಾಂಚ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ ಬೆಂಗಳೂರು ಸಿಟಿ

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ

ಕಂಪನಿಯ ಫಂಡು . . . ರೂ 4,15,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮ॥ ಎಂ ಎಸ್ ರಜಿಲೊ, ಚೀಫ್ ಏಜೆಂಟ್, ಬೆಂಗಳೂರು ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194 ೩1] ಆಕ್ಟಿಂಗ್ ಬ್ರಾಂಚ್ ಸೆಕ್ರಿಟರಿ, ಮದರಾಸ್

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆ ಯೂನಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿಮಳೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104-೨1]

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 13 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲಿಪಿಳ್ಳೆ ಬೀದಿ, ಪುರಿಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

1—೨—1914 ರಿಂದ 8—೨—1914 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	1	0	0	0
ಮೈಸೂರು	,,	3	2	0	0
ಬೆಂಗಳೂರು	ಡಿಸ್ಟ್ರಿಕ್ಟು	2	2	0	0
ಮೈಸೂರು	,,	1	1	0	0
ಕೋಲಾರ್	,,	2	0	25	18
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು	ಡಿಸ್ಟ್ರಿಕ್ಟು	0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	0	0	0	0
ಶಿವಮೊಗ್ಗ	,	1	0	0	
	ಜುಮ್ಲಾ	10	೦	25	18

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ವಸಂತಋತೌ ವೈಶಾಖ ಬಹುಳ ತ್ರಯೋದಶಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವ್ಯಸ್ತಭ ವಾಸ ಕೇದಿ
22	ಶುಕ್ರ ‡	ತ್ರಯೋದಶಿ	೨3 59	ಅಶ್ವಿನಿ	18 ೨9	9
23	ಶನಿ ,	ಚತುರ್ದಶಿ	58 51	ಭರಣಿ	೨5 15	10
24	ಭಾನು §	ಅಮಾವಾಸ್ಯೆ	60 0	ಕೃತ್ತಿಕೆ	60 0	11
25	ಸೋಮ †	ಅಮಾವಾಸ್ಯೆ	2 31	ಕೃತ್ತಿಕೆ	0-30	12
26	ಮಂಗಳ *	ಪಾಡ್ಯಮಿ	5 23	ರೋಹಿಣಿ	೨ 1	13
27	ಬುಧ	ಬಿದಿಗೆ	7 0	ಮೃಗಶಿರ	8 23	14
28	ಗುರು ,	ತದಿಗೆ	[illegible] 2	ಆರಿದ್ರಾ	10 [illegible]6	15

‡ ಪ್ರದೋಷ ,, ಮಿಥುನಾಯನ, ಮಾಸಶಿವರಾತ್ರಿ § ಸರ್ವತ್ರ ಅಮಾವಾಸ್ಯೆ † ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ * ಪುನ್ನಾಗಗೌರೀ ವ್ರತ, ಚಂದ್ರೋದಯ, ರಜಬ್ ಚಂದ್ 1 , ಕದಳೀಗೌರೀ ವ್ರತ, ರಂಭಾ ತೃತೀಯಾ, ಮಳೆ ನಕ್ಷತ್ರ—ರೋಹಿಣಿ 2 ನೇ ಪಾದ

ಡೋಂಗರೆ

ಇವರ ಬಾಲಾಮೃತ

[150 41]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ, ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು ನಕಲಿ ಔಷದಗಳನ್ನು ಪಡಕೊಳ್ಳಬೇಡಿರಿ ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡು ಮಾಡಿದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತ್ತು 0 8 0 ಡಜನ್ 1 ಕ್ಕೆ ೨ 1 0 ವಿ ಪಿ ಪ್ರತ್ಯೇಕ ಗಜಕರ್ಣದ ಮುಲಾಮು 0 6 0 ದಂತಮಂಜನ 0 2-0 ಮೋಹಿನಿ ತೈಲ 0 12 0 ಖಜ್ಜಿ ಮುಲಾಮು 0-3-0 ಜುಲಾಬು ಮಾತ್ರೆ 0 8-0 ಸಂಧಿವಾತ ಮುಲಾಮು 0 8 0 ಕ್ಯಾಟಲಾಗಿಗೆ ಬರೆಯಿರಿ [52 11]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

Printed and Published by the Rev H GULLIFORD, Proprietor and Manager, Wesleyan Mission Press, Mysore 21/5/1914

REGISTER M. 24

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು- ಸನ್ ೧೯೧೪ ನೇ ಇಸವಿ ಮೇ ತಾರೀಖು ೨೮ ನೇ ಗುರುವಾರ. ಸಂಚಿಕೆ ೫೨

ಸ್ತ್ರೀಯರ ಭೂಷಣವು!!!

ಸ್ವಾಭಾವಿಕ, ಗುಂಗುರು ಗುಂಗುರಾಗಿರುವ, ನೀಲಿವರ್ಣದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ಅಪೇಕ್ಷಿಸುವದಿಲ್ಲವು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ?

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಅವರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ ಸರ್ಟಿಫಿಕೇಟ್ ಒಫ್ ಮೇರಿಟ್ [illegible] ಯೋಗ್ಯತಾಪತ್ರ [illegible] ರು ಸ್ಪರ್ಧಿಸದ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅನೇಕ ನೀಗಿಸುವವರು, ಒಬ್ಬರೇ ನೋಡಿರಿ ರೋಗಿನಹಾಳಕರ ಬಂಧುಗಳು [illegible] ಪಿಗೆ, ಬೇಗ — ತಾವು ಕೆಲ ತಿ ನಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ಕೊರಲುಗಳನ್ನು ಬೆಳೆಯುವುದಕ್ಕೆ ಸರ್ಪೋತ್ತಮವಾದ ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೊಡಲು ವಿ ಪಿ ದ್ವಾರಾ ರವಾನಿಸುವುದು ಸೀಸೆಯೊಂದರ ಕ್ರಯ ರೂ 1-0-0, ಅ ವೆ 0-4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ ವೆ 0-7-0 ಬೇರೆ

ಸೂಚನೆ —ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಲ್ಲಿ ಮೊದಲು ಬಾನ್ ಆದಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಸರಿಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ [19-20]

ಸಣ್ಣ ಸೀಸೆಯ ಬೆಲೆ ರೂ 0-8-0 ಒಂದು ಡ್ರಾಮಿನ (ನಿಸಾದಿಯಾ) ಸೀಸೆಗೆ 0-12-0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ಡಿ. ಉಲ್ಲಾ ಮಾರ್ಕೆ, ಮಂಗಳೂರು.

Excellent notes on Tanglewood Tales 3 As Notes on **Fairy Tales** 2 As ಆರೋಗ್ಯಪ್ರಶ್ನೋತ್ತರ 1 ಆಣೆ ಪತ್ರಗಳ ನಮೂನೆಗಳುಳ್ಳ ಪತ್ರರತ್ನಾಕರ 8 ಆಣೆ. ಅರ್ಜಿಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ 1 ಆಣೆ [106-4]

Apply to —(1) ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು,

(2) Chowrappa & Son, Bangalore City.

WANTED.

For a large Coffee Estate in South Mysore a capable and energetic Writer with sufficient knowledge of English to keep simple accounts, should be able to supply labour Good pay for a good man.

Apply to

[90-7] **X Co VRITTANTA PATRIKE, MYSORE.**

ಎಂಪೈರ್ ಜನರಲ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್ ಅಜ್ಮೀರ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಶೂರೆನ್ಸ್ ಕಂಪೆನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಠೇವಣಿ ಹಣವನ್ನು ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆಯನ್ನು ತೆಗೆದುಕೊಳ್ಳುವ ಜನರಿಗೇ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಷಯದಲ್ಲಿ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯಾಲಯ ಎಲ್ಲಾ ವಿಷಯದಲ್ಲಿಯೂ ನಿರ್ವಹಿಸಲ್ಪಡುತ್ತಿದ್ದು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ವಿಸ್ತಾರವಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು

[10-31] ಎಸ್ ಕಟ್ಟೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್. ಬೆಂಗಳೂರು ಸಿಟಿ

ಸುಖ ಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಲಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು

(3) ಬಾಯಿ ದುರ್ಗಂಧ, ಗಂಟಲು ಗಾರೆಸ್ಸುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಮುಟ್ಟದಂತೆ ಅಡ್ಡಿಮಾಡುತ್ತದೆ

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ [73-11]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	15	ಮಾತ್ರೆ ಇಳ್ಳ ಪೊಟ್ಟಣಕ್ಕೆ ಕ್ರಯ	2 ಆಣೆ.
,,	95	,, ,, ,, ,,	4 ,,
,,	200	,, ,, ,, ,,	7 ,,
,,	200	,, ಸುಂದರವಾದ ಟಿನ್ ಡಬ್ಬಾ	9 ,,
,,	80	,, ,, ,, ,,	4 ,,
,,	100	,, ಬಾಟ್ಲಿಯಲ್ಲಿ	1½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಲಿಂತಾನ ಡಿಪೋ,

ಬೊಂಬಾಯಿ 3;

ಅಥವಾ, ಬಿ ಸಿ. ಷಾ ಕಂಪನಿ,

509 ಮಿಂಟ್ ಬೀದಿ, ಮದರಾಸ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಮಹನೀಯರಿಗೂ, ಮುಖ್ಯವಾಗಿ ಸ್ಕೂಲು ಉಪಾಧ್ಯಾಯರಿಗೂ ಮತ್ತು ವಿದ್ಯಾರ್ಥಿಗಳಿಗೂ ವಿನಯಪೂರ್ವಕವಾಗಿ ಜ್ಞಾಪಿಸುವದೇನೆಂದರೆ.—ಕಳೆದ ಹನ್ನೆರಡು ವರುಷಗಳಿಂದಲೂ ಬುಕ್ ಬುಕ್ ಡಿಪೋನಲ್ಲಿ ಮ್ಯಾನೇಜರಾಗಿದ್ದು ಈಚೆಗೆ ಆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ಈಗ್ಗೆ ನಮ್ಮ ಸ್ವಂತ ಹೆಸರಿನ ಮೇಲೆ ಒಂದು ಪುಸ್ತಕಾಲಯವನ್ನು ಏರ್ಪಡಿಸಿರುತ್ತೇವೆ. ಸರ್ವರೂ ನಮ್ಮ ಮೇಲೆ ಅಭಿಮಾನವಿಟ್ಟು ಪ್ರೋತ್ಸಾಹಿಸುತ್ತಾ ಒರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ ನಮ್ಮ ಆಲಯದಲ್ಲಿ ಎಲ್ಲಾ ತರವಾದ ಇಂಗ್ಲೀಷು, ಕನ್ನಡ, ತೆಲುಗು, ಅರವ ಮತ್ತು ಸಂಸ್ಕೃತ ಪ್ರಥಮ ತರಗತಿ ಲಾಗಾಯಿತು ಬಿ ಎ ತರಗತಿ ವರಿವಿಗೂ ಎಲ್ಲಿ ಪುಸ್ತಕಗಳೂ ದೊರೆಯುವವಲ್ಲದೆ, ಇನ್ನೂ ಅನೇಕ ತರಹ ಇಂಗ್ಲಿಷ್ ಮತ್ತು ಕನ್ನಡ ಕಥೆ ಪುಸ್ತಕಗಳೂ, ಕಾದಂಬರಿಗಳೂ ಮತ್ತು ಸ್ಟೇಷನರಿಗೆ ಸಂಬಂಧಪಟ್ಟ ಎಲ್ಲಾ ತರವಾದ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ ವಿಳಾಸ — [112-2]

ಕೆ ಎ. ಚೌರಪ್ಪ ಅಂಡ್ ಸನ್, ಪುಸ್ತಕ ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟ್ಸ್, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು -- ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1, 25 ಕ್ಕೆ 3; 50 ಕ್ಕೆ 8, 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ [49-15]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ ದಿಟೊ 1 ನೇ ಪುಸ್ತಕದ ನೋಟ್ಸು 1½ ಆಣೆ, ದಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ Notes on "Tanglewood Tales," English Lower Secondary Text for 1915—As 5. Notes on Fairy Tales—As 2

ನಮ್ಮ ವಿಳಾಸ—ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

BRAHMAPPA TAVANAPPANAVAR,

Merchant & Commission Agent.

Agent to Messrs Currimbhoy Ebrahim & Co's Mills

BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಭಾಯ್ ಇಬ್ರಾಹಿಂ ಅಂಡ್ ಕಂಪನಿಯವರ ಖಾಟಿತು, ಮೆಸ್ಸರ್ಸ್ ಫಜುಲ್ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ಸಳ್ವಾಳಿ, ಬೋಟುದಳ್ವಾಳಿ, ಮೊಕ್ಕಾದಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ ಜಾಸ್ತಿ ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ [97-6]

ನಮ್ಮ ಟ್ರಾವಲಿಂಗ್ ಏಜಂಟರ ಪರ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಪರ ಒಟ್ಟು ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು .—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಷೇರುಗಳು	10,60,000
ವಸೂಲಾದ ಷೇರುಗಳು	87,00,000

ಈ ಕಂಪೆನಿಯಲ್ಲಿ ಪಾಲ್ಗಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪೆನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರಿಸಿಡೆಂಟರಾಗಿರುವುದರಿಂದ ಈ ಕಂಪೆನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ ಅದ್ದರಿಂದ ಪಾಲ್ಗಾರರು ಮತ್ತು ಇದಕ್ಕೆ ಸೇರಿದ ಏಜಂಟ್ಸುಗಳು ಕೂಡಾ ಅಭ್ಯಸ್ಥವಂತರಾಗುವುದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ [243 27]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ಸು,

166, ದೊಡ್ಡಪೇಟೆ, ಮೈಸೂರು

ಜ್ಯೋತಿರವರ ಸ್ವದೇಶೀ ಬಾಮ್

ರಿಜಿಸ್ಟರಾದ ಟ್ರೇಡ್ ಮಾರ್ಕು

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಆರೆತಲೆನೋವು, ನಡುನೋವು, ಶೀತ, ಸೆಳೆತ, ಜನ್ನನೋವು, ಊತು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಇದು ಗಳಿಗೂ, ಮಿದುಳಿನ ಕೆಲಸಗಾರರಿಗೂ ಪ್ರಯೋಜನವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬುಗಳು, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರವಾಗಿಲ್ಲ. ಯುರೋಪ್, ಇಂಡಿಯಾ ಅನೇಕಾ ವೈದ್ಯಗ್ರಂಥಗಳನ್ನು ನೋಡಿ ತಯಾರಾಗಿದೆ. ಹುಡುಗರೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಮುಕ್ಕಿನ ಸಂಘ ಮನು ಲಕ್ಷಾಂತರ ಜನರನ್ನೆಲ್ಲಾ ಪಾಸಿವಾಗಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಜನ್ನದಂಥಾ ವಿಶಧ. ಎಲ್ಲಾ ವೈದ್ಯಶಾಲೆಗಳಲ್ಲೂ ಚಿಕಿತ್ಸೆಯಾಗುತ್ತಿದೆ. ಸೂರ್ಯನ ಚಿತ್ರಗಳ ರಿಜಿಸ್ಟರ್ ಮಾರ್ಕು ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇದೆ. 1 ಬಾಟ್ಲಿಗೆ 12 ಆಣೆ. 3 ಕ್ಕೆ ರೂ 1 14 0 ವಿ ಪಿ ಬೇರೆ. ನಮ್ಮ ಎಲ್ಲಾ ಔಷದಿಗಳ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ [25 19]

ವಿಳಾಸ—ಜೆ ಗುಲಾಬ್ ಚಂದ್ ಪೌವಾಳ್,

50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಮಲೆನಾಡು ನಿವಾಸಿಕರೇ!

ಮನೆಯಲ್ಲಿಯೇ ವೈದ್ಯನು!

ಯುಕಲಿಪ್ಟಸ್ ತೈಲದ ಸುವಾಸನೆಯಿದ್ದಲ್ಲಿ ಮಲೆನಾಡು ಸೊಳ್ಳೆಗಳ ಸುಳಿವೇ ಇರದು. ಸೊಳ್ಳೆಗಳಿಲ್ಲದಲ್ಲಿ ಮಲೆನಾಡು ಜ್ವರವಿರದು. ಈ ತೈಲವನ್ನು ಸೇವಿಸುವುದರಿಂದ ಮಲೆಜ್ವರ, ಶೀತಜ್ವರ, ವಿಷಮಜ್ವರ, ಶೀತವಾತ, ಗಂಟಲುನೋವು, ಗೂರಲು ಉಬ್ಬಸ, ವಾಯುರೋಗ, ಹಲ್ಲುನೋವು, ಕಣ್ಣಿನ ಬೇನೆ, ಹುಳುಕಡ್ಡಿ ಉಗ್ರವಾದ ರೋಗಗಳು ಶೀಘ್ರದಲ್ಲಿ ಗುಣವಾಗುವವು. ಪ್ರಯಾಣದಲ್ಲಿಯೂ ನೀರಾಗುವುದು ದನಕರುಗಳ ಸರ್ವರೋಗಗಳಿಗೆ ದಿವ್ಯೌಷಧವಾಗಿದೆ. ಒಂದು ಬಾಟ್ಲು ಕ್ರಯ ೮ ಆಣೆ ವಿ ಪಿ ಬೇರೆ ಡಜನ್ ಬಾಟ್ಲುಗಳಿಗೆ ರೂ 3 0 0 ವಿ ಪಿ ಬೇರೆ. ಅನುಪಾನಕ್ರಮ ಶೀಸೆಯೊಂದಿಗೆ ಕಳುಹಿಸಲ್ಪಡುವುದು. ಘಲುವಾನಿ, ಪಾಯಿಜನ್, ಚೆರಿ ಬ್ಲಾಸಮ್ ಮೊದಲಾದ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 0 12 0 ಗ್ರೋಸ್ 1 ಕ್ಕೆ 6 0 0

ಸರ್ಟಿಫಿಕೇಟು—ಪಿ ಪಿ ಮೆಡಿಸಿನ್, ಮದ್ರಾಸ್ —ತಮ್ಮ ಯುಕಲಿಪ್ಟಸ್ ತೈಲವು ನನ್ನ ಮನೆಯಲ್ಲಿಯೂ ಸಿನೆಹೊರೆಯಲ್ಲಿಯೂ ಸಾಕ್ಷಾತ್ ವೈದ್ಯನಂತೆ ... ಗೂರಲು, ಉಬ್ಬಸ, ಮಲೆಜ್ವರ, ಶೀತಗಳಲ್ಲಿ ಇದು ದಿವ್ಯೌಷಧಿ ಎಂಬುದು ಅನುಮಾನವೇ ಇಲ್ಲ. ಕೂಡಲೆ ಒಂದು ಡಜನ್ ವಿ ಪಿ ಮೂಲಕ ಕಳುಹಿಸಿರಿ

ವಿಳಾಸ-ದಿ ಇಕ್ಲಿಪ್ಸ್ ಏಜನ್ಸಿ, ಪೋಸ್ಟು ಕೊಟೇಜು, ಕಂಕನಾಡಿ.

ಮೇಲಾದ ಜಪಾನ್ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ಸಿದ್ಧವಾಗಿಟ್ಟು ಮಾರಲಾಗುತ್ತಿದೆ!! ನೂತನವಾದ ಅಮೋಘವಾದ ಅನೇಕ ಪಂಚೆಗಳು ದಿನವೂ ಮಾರಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ಕಡಿಮೆಯಾಗಿದೆ. ಸಾಮಾನ್ಯಗಳನ್ನು ನೀಗಿಸುವುದಕ್ಕೆ

ಕೊಂಡಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತಾಸಿಕೊಂಡಿರುವುದರಿಂದ ಮುಕ್ಕಾಲು ಪಾಲು ಸರಕು ಮಾರಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಕರು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೆಜೆಂಟ ವರ್ಣ, ಇತ್ಯಾದಿ ರಂಗುಗಳಿರುವ ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಪರೀತಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 3½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ 2, ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ

ನಮ್ಮ ವಿಳಾಸ—ಎಚ್ ಎಂ ಸ್ವಾಮಿ ಅಂಡು ಕಂಪೆನಿ,

[169 3] ನಂ 44, ನಂಬುಳಯ್ಯರ್ ಬೀದಿ, ಮದರಾಸು.

CHAMBERLAIN'S PAIN BALM.

ಚೇಂಬರಲೇನ್ ಯವರು ಮಾಡಿದ ನೋವುಹರ ಔಷಧವು.



3 22

ಟೆಸ್ಸೆಯಿಜಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷದ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರಲೇನ್ ಯವರು ಮಾಡಿದ ನೋವುಹರ ಔಷದವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮಾಂಸಖಂಡಗಳೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕ್ರಯವಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪ್ರೊಫೆಸರ್ ಬ್ರೇಸ್ಲರ್ ಎಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ಪ್ರವಹಿಸುತ್ತಿರುವದೆಂದಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಉಂಟಾಗುವವೆಂದಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷದದ ಉಪಯೋಗದಿಂದಲ್ಲದೆ



ಬೇರೆ ಔಷದಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂದಲೂ ಆಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷದವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷದಗಳಿಗಿಂತಲೂ ಇದು ಉತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ

ಎಲೆಕ್ಟ್ರೊ ಪೆಯಿನಾಡೈನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮಿರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನಗಡಿ, ವಾಯುನೋವು (ಕೃಕಾಟಿ ಪಿಡಿತ), ಉಳುಕುಹಿಡಿದಿದ್ದರು, ಕಿವಿನೋವು, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲು ನೋವು, ತಲೆನೋವು, ಆರೆತಲೆ ನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಆಳ್ಳಿ) ಕೃತ್ರಿಮದೋಷಗಳು, ವಿಷಮಗಳಿಗೆ ಕಡಿತಗಳಿಗೂ (ಚೇಳು ಮುಂತಾದದ್ದು), ಎದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12 21]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುತ್ತೆ

ಬುಡ್ಡಿಯ ಕ್ರಯ ರೂ ೦-8-0, ವಿ. ಪಿ ಖರ್ಚು 0-4-0 ಏಜಂಟರು ಬೇಕು

ಮುಖ್ಯ ಏಜಂಟರು :—ಗುರುಬಸವ ಅಂಡ್ ಕಂಪನಿ, ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs 1,00,000

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident, Life or Marriage Policy, please ask for a copy of our Company's prospectus which will explain to you the mode of the working of the present day provident companies in India, and enables you to select a good institution, where your hard earned money will be safe

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc , please apply to

Mr M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs 1,00,000,

(INCORPORATED UNDER THE MYSORE COMPANIES' REGULATION No III OF 1895)

BANKING :—Every sort of banking business transacted The company's shares are most valuable and are within the reach of all

Land and house purchase and investment policies are a specialty of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply. For prospectuses, etc , please apply to

It is to be kindly noted by the public that Mr B C Gopalaswamy has been appointed as our District Agent for Hassan District Our policy-holders in Hassan taluk can pay their premia to our above district agent as Mr G S. Ramakrishnah's services were already dispensed with.

[161-43]

Mr M. L NAGANNAH,
Managing Agent, MYSORE.

ಉಚಿತವಾಗಿ ದೊರಕುವದು

ನಮ್ಮ ವಾಚಿನ ಸತ್ಯತೆಯನ್ನು ಪರೀಕ್ಷಿಸಿ ನೋಡಿ

ನಮ್ಮಲ್ಲಿರುವ ಬಲವಾದ ಲೀವರ್ ವಾಚನ್ನು ಕ್ರಯವಿಲ್ಲದೆ ಪಡೆಯಬೇಕಾ ದರೆ ಅರ್ಧಾಣೆ ಸ್ಟಾಂಪು ಸಮೇತ ಇಂಗ್ಲಿಷಿನಲ್ಲಿ ನಮಗೆ ಕಾಗದ ಬರೆಯಬೇಕು

[118 3] ವಿಳಾಸ—ಫೆಬಾಲ ಕಂಪನಿ, ಚಿತ್ತೂರು, ಉ ಆ

ವಿಕಟಪ್ರತಾಪವೆಂಬ ಮಾಸಪತ್ರಿಕೆ.

ಹಾಸ್ಯರಸದಿಂದ ಕೂಡಿ ಸಚಿತ್ರವೂ ವಿಚಿತ್ರವೂ ಆದ ವಿಷಯಗಳಿಂದ ಪ್ರಕಾಶಿಸುವ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಅಂಚೇ ವೆಚ್ಚ ಸೇರಿ ಒಂದೇ ರೂಪಾಯಿ । ಪತ್ರಿಕೆಯು ಪ್ರತಿ ತಿಂಗಳ 5 ನೆಯ ತಾರೀಖಿಗೆ ಹೊರಡುವುದು ।

115-3 ವಿಳಾಸ —ವಿಕಟಪ್ರತಾಪ ಆಫೀಸ್, ಕುಪ್ಪಂ ಪೋಸ್ಟು

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security required from each Agent is Rs 50 For particulars see in person or apply to

Messrs VENKATACHALAM & SONS,
Chief Agents,
Hindustan Co operative Insurance Society. Ltd,

166, Dodpet, Near Old Taluk Cutchery,
213 27 *MYSORE*

ಸಂಸ್ಕೃತ ಸಾಹಿತ್ಯ ಚಂದ್ರಿಕಾ ಗ್ರಂಥಮಾಲಾ

ಇದರಲ್ಲಿ (1) ಸಂಸ್ಕೃತ ಭಾಷಾ ಮಂಜರೀ, (2) ಸಂಸ್ಕೃತ ವ್ಯಾಕರಣಮ್, (3) ಸೂಕ್ತಿಮುಕ್ತಾವಲೀ ಮುಂತಾದ ಏಳು ಗ್ರಂಥಗಳನ್ನು ಹದಿನಾರು ಸಂಚಿಕೆಗಳಾಗಿ ಪ್ರಕಟಿಸುವೆವು ನಾಲ್ಕು ಸಂಚಿಕೆಗಳು ಸಿದ್ಧವಾಗಿರುವುವು. ಸಂಚಿಕೆ 1 ಕ್ಕೆ ೪ ಆಣೆ ಮಾತ್ರ ಈ 7 ಗ್ರಂಥಗಳ ಸಹಾಯದಿಂದ ಸರ್ವರೂ ಸ್ವತಂತ್ರವಾಗಿ ಸಂಸ್ಕೃತ ಭಾಷೆಯನ್ನು ಕಲಿಯಬಹುದು ಇವಲ್ಲದೆ ಶ್ರೀಮದ್ವಾಲ್ಮೀಕಿ ರಾಮಾಯಣ, ರಘುವಂಶ, ಶಾಕುಂತಲ ಮುಂತಾದ ಇಪ್ಪತ್ತು ಸಂಸ್ಕೃತ ಕಾವ್ಯ ನಾಟಕಗಳನ್ನು ಸಂಪೂರ್ಣವಾಗಿ ಪ್ರತಿಪದ ಕನ್ನಡ ಟೀಕಾ ತಾತ್ಪರ್ಯಗಳೊಡನೆ ವರ್ಣನಾನುಗುಣವಾದ ಅತ್ಯಂತ ಸುಂದರವಾದ ವಿವಿಧವರ್ಣದ ತರದ ಚಿತ್ರಗಳೊಡನೆ 160 ಪುಟಗಳ 40 ಪುಸ್ತಕಗಳಾಗಿ ಪುಸ್ತಕ 1 ಕ್ಕೆ ವಿ ಪಿ ಒಂದು ರೂಪಾಯಿಯಂತೆ ಪ್ರಕಟಿಸುವೆವು ಕ್ಷಿಪ್ರದಲ್ಲಿ ಚಂದಾದಾರರಾಗಬೇಕು

[114 2] ವಿಳಾಸ—ಪಂಡಿತ ಕೆ ಭಾಸ್ಕರಶಾಸ್ತ್ರಿ, ಬೆಂಗಳೂರು ಸಿಟಿ.

ಊತದ ಮೊಣಕಾಲು.

ದಿನದ ಪಯಣದಲ್ಲಿ ನೀವು ಕಂಡುಕೊಳ್ಳುವ ನೋವಿನಂತೆಯೇ ಇದೂ ಕೋಪಾಗಿಯೂ ಅನಾನುಕೂಲವಾಗಿಯೂ ಇರುತ್ತದೆ, ಮತ್ತು ಅದು ಹಾನಿಕರವಾದದ್ದು. ಊತದ ಮೊಣಕಾಲು ಸದಾ ಕುಂಟರಾಗಮಾಡುತ್ತದೆ.

ಫಿಲಡೆಲ್ಫಿಯದ, ಎ. ಸಿ. ಲೇಮ್ಯಾ ಎಂಬುವರು ಬರೆಯುವುದು :—"ಎರಡು ವರುಷಗಳಕಾಲ ಮೊಣಕಾಲಿನ ದೊಡ್ಡ ಊತದ ದೆಸೆಯಿಂದ ಮರಣಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಮಾಡಲಿಲ್ಲ. ನಮ್ಮ ನಗರದ ನಾಲ್ವರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ಶೀಘ್ರದಲ್ಲಿ ಪೂರ್ಣ ಗುಣಹೊಂದಿದೆನು."

ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವದರಿಂದ ಉಳುಕುಗಳೂ, ಬಾವುಗಳೂ, ಪಾರ್ಶ್ವವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ.

101 1

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣಪ್ರದೇಶವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷದವನ್ನು ಕೊಡುವುದು ಅವಶ್ಯಕ

SCOTT'S EMULSION 5 22

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷದದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

Always get the Emulsion with this mark—the Fisherman the mark of the "Scott" process

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕ್ರಮದಿಂದ ಮುಚ್ಚಿದ್ದೇನೇ ತಯಾರಾದದ್ದು.

ಮೀನುಗುರುತು ಇರುವ ಈ ಔಷಧದ ಗುರುತು ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ

ಸ್ಕಾಟ್ ಅ ಬ್ ಚೌನ್, ಲಿಮಿಟೆಡ್, ಔಷದಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ಜ್ಯೇಷ್ಠ ಶುದ್ಧ ಚೌತಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಮೇ ಮತ್ತು ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ವೃಷಭ ಮಾಸ ತೇದಿ
29	ಶುಕ್ರ	ಚೌತಿ	6 34	ಪುನರ್ವಸು	11-17	16
30	ಶನಿ ‡	ಪಂಚಮಿ	1-30	ಪುಷ್ಯ	10-58	17
31	ಭಾನು §	ಷಷ್ಠಿ	1-18	ಆಶ್ಲೇಷ	56 24	18
1	ಸೋಮ	ಅಷ್ಟಮಿ	52 35	ಮಖಾ	7 13	19
2	ಮಂಗಳ	ನವಮಿ	46 51	ಪುಬ್ಬಾ	1 9	20
3	ಬುಧ *	ದಶಮಿ	41-13	ಉತ್ತರಾ	0-31	21
4	ಗುರು †	ಏಕಾದಶಿ	31 15	ಚಿತ್ತ	52 32	22

‡ ಸ್ಕಂದಪಂಚಮಿ § ಶ್ರೀರಂಗದಲ್ಲಿ ವಸಂತೋತ್ಸವಾರಂಭ, ಮಳೆ ನಕ್ಷತ್ರ—ರೋಹಿಣಿ 3 ನೇ ಪಾದ * ದಶಹರಪರ್ವ, ವರದರಾಜ ಜಯಂತಿ, ಶ್ರೀರಂಗಪಟ್ಟಣದಲ್ಲಿ ನೃಸಿಂಹಸ್ವಾಮಿ ರಥ † ಸರ್ವತ್ರ ನಿರ್ಜಲ ಏಕಾದಶಿ, ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ

ಒಂದು ಕೋಆಪರೆಟಿವ್ ಸಂಘವು

ಆನೆಕಲ್ ತಾಲ್ಲೂಕು ಜಿಗಣಿ ಶ್ರೀ ವರದರಾಜಸ್ವಾಮಿ ಕೋಆಪರೆಟಿವ್ ಸೊಸೈಟಿ ಮೆಂಬರುಗಳು ಸ್ಕೂಲ್ ಕಟ್ಟಡದಲ್ಲಿ ಸೇರಿ ನಡೆಸಿದ ಜನರಲ್ ಮೀಟಿಂಗಿನಲ್ಲಿ ವ್ಯವಸಾಯ ಇಲಾಖಾ ಅ ಕೆಮಿಸ್ಟರಾದ ಮ॥ ಯಜ್ಞನಾರಾಯ್ಯರವರು ಹೇಳಿದ್ದೇನೆಂದರೆ—ಈಗ ಜಿಗಣಿ ಹೋಬಳಿಯಲ್ಲಿ ಜಿಗಣಿ ಗ್ರಾಮಕ್ಕೆ ಸಮೀಪವಾಗಿರುವ 12 ಗ್ರಾಮಗಳಿಗೆ ಇಂಗ್ಲಿಷ್ ತರಹ ಕಬ್ಬಿಣದ ನೇಗಿಲುಗಳನ್ನು ವ್ಯವಸಾಯ ಇಲಾಖೆಯವರು ಕೊಟ್ಟಿದಾರೆ ಈ ನೇಗಿಲುಗಳು ಸಮದ ಹಾಗೆಲ್ಲಾ ಹೊಸ ಗುಳಗಳು ಬೇಕಾದಾಗ ರೈತರು ಬೆಂಗಳೂರಿಗೇ ಹೋಗಿ ತರಬೇಕಾಗಿದೆ ಇಲ್ಲದಿದ್ದರೆ ನೇಗಿಲನ್ನು ಉಪಯೋಗಿಸದೆ ಇಟ್ಟಿರಬೇಕಾಗುವುದು ಈ ಕೊಂದರೆ ತಪ್ಪಿಸುವ ಉದ್ದೇಶದಿಂದ ಜಿಗಣಿ ಕೋಆಪರೆಟಿವ್ ಸೊಸೈಟಿಯಲ್ಲಿ ಬೆಂಗಳೂರಿನಿಂದ ತರಿಸಿರುವ ಎರಡು ತರಹ ಗುಳಗಳನ್ನು ಮಾರಾಟಕ್ಕಾಗಿ ದಾಸ್ತಾನು ಇಡಲು ಈ ಮೀಟಿಂಗ್ ನಡಿಸಲ್ಪಟ್ಟಿದೆ ಈ ರೀತಿ ಹೇಳಿದ್ದಲ್ಲದೆ ಎಲ್ಲರ ತಿಳುವಳಿಕೆ ಬಗ್ಗೆ ಇಂಗ್ಲಿಷ್ ನೇಗಿಲುಗಳ ಪ್ರಯೋಜನವನ್ನೂ, ಕಾಂಪೋಸ್ಟ್ ಗೊಬ್ಬರ ಹತ್ತಿ ಬೆಳೆಯುವ ವಿಧಾನ ಮತ್ತು ಅದರಿಂದ ಬರುವ ಲಾಭಯನ್ನೂ, ಹಸೀ ಜಮೀನಿನಲ್ಲಿ ಗೊಬ್ಬರ ಬೆಳೆಸಿ ಅದನ್ನು ಕತ್ತರಿಸಿ ಕೆಸರಿನಲ್ಲಿ ತುಳಿದು ಮಾಡುವ ಹಸೀ ಗೊಬ್ಬರದಿಂದ ಪೈರು ಜಾಸ್ತಿಯಾಗುವ ವಿಷಯವನ್ನೂ, ನಾಟಿ ಪೈರಿನಿಂದ ತಕ್ಕ ಫಸಲು ಹೆಚ್ಚುವುದನ್ನೂ, ಈ ಅಂಶಗಳಲ್ಲಿ ತಿಳುವಳಿಕೆ ಬೇಕಾದವರು ಅಪೇಕ್ಷಿಸಿದಾಗ ವ್ಯವಸಾಯದ ಇಲಾಖೆಯವರು ಸಲಹೆ ಕೊಡುವುದಾಗಿಯೂ ಹೇಳಿದರು

ಅನಂತರ ಕೋಆಪರೆಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಮ॥ ನಾರಣಯ್ಯಂಗಾರ್ರವರು ಈ ರೀತಿ ಅಪ್ಪಣೆ ಕೊಡಿಸಿದರು —ಜಿಗಣಿ ಶ್ರೀ ವರದರಾಜಸ್ವಾಮಿ ಕೋಆಪರೆಟಿವ್ ಸೊಸೈಟಿಯಲ್ಲಿ 31 ಜನಗಳು ಸೇರಿ 99 ಷೇರುಗಳನ್ನು ತೆಗೆದುಕೊಂಡು ಷೇರು ಹಂತಿಗಾಗಿ ರೂ 1119 ಜಮಾಯಿಸಿದೆ ಆದರೆ ಜಿಗಣಿಯು 300 ಮನೆಗಳಿಗಿಂತ ಜಾಸ್ತಿಯಾದ ದೊಡ್ಡ ಗ್ರಾಮವಾಗಿದೆ 100 ಜನವಾದರೂ ಸೇರಿ ತಿಂಗಳಿಗೆ ನಾಲ್ಕು ಆಣೆಯಂತೆ ಕೊಡಿಹಾಕಿದರೂ ತಿಂಗಳಿಗೆ 25 ರೂಪಾಯಿ ಜಮಾಯಿಸುತ್ತದೆ ಇಷ್ಟು ಕಮ್ಮಿ ಜನ ಸಂಘಕ್ಕೆ ಸೇರಿರುವುದರಿಂದ ಸೊಸೈಟಿಗಳ ವಿಚಾರವನ್ನು ಎಲರೂ ಚೆನ್ನಾಗಿ ತಿಳಿದುಕೊಂಡಿರುವಂತೆ ಕಂಡುಬರುವುದಿಲ್ಲ —ಬಳಿಕ ಸಂಘದ ಪ್ರಯೋಜನವನ್ನು ಕುರಿತಾ ಅವರು ತಿಳಿಸಿದ್ದೇನೆಂದರೆ— ಯಾವ ಕೆಲಸಕ್ಕೂ ಬಂಡವಾಳ ಬೇಕು ಸಂಘಗಳಿಲ್ಲದ ಸ್ಥಳದಲ್ಲಿ ಬಂಡವಾಳಕ್ಕೆ ಸಾಹುಕಾರರ ಹತ್ತಿರ ಹೋಗಿ ತರಬೇಕು ಅನೇಕ ವೇಳೆ ಕೆಟ್ಟ ಸಾಹುಕಾರರಿಂದ ಜಮೀನು ಸಹಾ ಹೋಗುತ್ತದೆ ಸಮಯಕ್ಕೆ ಬೇಕಾದ ಬಂಡವಾಳವನ್ನು ಒದಗಿಸಿಕೊಟ್ಟು ರೈತರ ಜಮೀನು ಉಳಿಸಲು ಪರಸ್ಪರ ಸಹಾಯಕ ಸಂಘಗಳು ಏರ್ಪಡಿಸಲ್ಪಟ್ಟಿವೆ ಮಾರ್ಕೆಟಿನ ಬಡ ಮಾರಿಗರು ಲಬ್ಬೆಯವರಿಗೆ ದಿನ ಒಂದಕ್ಕೆ ಒಂದು ರೂಪಾಯಿಗೆ ಒಂದು ಕಾಸು ಬಡ್ಡಿ ಕೊಡುತ್ತಿದ್ದರು ಸೆಂಟ್ರಲ್ ಬ್ಯಾಂಕಿನಿಂದಲೂ, ಶ್ರೀಮನ್ಮಹಾರಾಜರವರ ಸಂಡಿನಿಂದಲೂ ಸಾಲಕೊಡಿಸಿ, ಅವರ ಸಾಲವನ್ನು ತೀರಿಸಿದ್ದರಿಂದ ಅವರಿಗೆ ಬಡ್ಡಿ ಮಾಫಿಯೆ ಆಯಿತು ಅಲ್ಲದೆ ಅವರು ಮೇಲಾಗಿ ತಮ್ಮ ಕೂಲಿಯಲ್ಲಿ ದಿನ ಒಂದಕ್ಕೆ ಅರ್ಧ ಕೊಡಿಸುತ್ತಾ ಬಂದು, ಪ್ರತಿ ಒಬ್ಬನೂ ಸ್ವಲ್ಪಸ್ವಲ್ಪ ಹಣವನ್ನು ಜಮಾಯಿಸಿದಾರೆ ನೀವುಗಳೂ ಸಹ ತಿಂಗಳಿಗೆ ನಾಲ್ಕಾಣೆಯಂತೆ ಆದರೂ ಕೂಡಿಡಬೇಕು ಹಿಂದಿನ ಸಾಲ ತೀರಿಸಲು ಬಂಡವಾಳವು ಸಂಘದಲ್ಲಿಲ್ಲದಿದ್ದರೆ ಬೆಂಗಳೂರು ಸೆಂಟ್ರಲ್ ಬ್ಯಾಂಕಿನಿಂದ ಸಾಲ ಕೊಡಿಸಬಹುದು ಇದು ಬಡವರಿಗೆ ಹುಂಬಾ ಅನುಕೂಲ ಅಲ್ಲದೆ ಸಾಹುಕಾರರು ಸಹ ಕೆಟ್ಟ ಜನರಿಗೆ ಸಾಲ ಕೊಟ್ಟು ಸಿವಿಲ್ ಕೋರ್ಟಿಗೆ ಹೋಗಿ ದುಬಾರಿ ಖರ್ಚು ತಗಲುವುದರಿಂದ ಬಡ್ಡಿ ಕೆಟ್ಟು ಹಾಕುತ್ತಾರೆ ಅವರೂ ಸಂಘಕ್ಕೆ ಸೇರಿ ಸಂಘದ ಮುಖಾಂತರ ಸಾಲ ಕೊಟ್ಟಲ್ಲಿ ವಸೂಲಿಗೆ ತೊಂದರೆ ಇಲ್ಲದೆ ಬರುತ್ತದೆ ರೆಜಿಸ್ಟ್ರಾರ್ರವರು ಡಿಕ್ರಿ ಕೊಟ್ಟು ವಸೂಲಿ ಮಾಡಿಸಿ ಕೊಡುತ್ತಾರೆ ಸರ್ಕಾರದವರು ಸಂಘಗಳಿಗೆ ಅನೇಕ ರಿಯಾಯತಿಗಳನ್ನು ತೋರಿಸಿರುವುದಲ್ಲದೆ ಶ್ರೀಮನ್ಮಹಾರಾಜರವರು ತುಂಬಾ ಮುಖವರ್ಜಿ ವಹಿಸಿದಾರೆ ಆದ್ದರಿಂದ ಎಲ್ಲರೂ ಈ ಸಂಘಕ್ಕೆ ಸೇರಿ ಪ್ರಯೋಜನ ಹೊಂದುವದು ಒಳ್ಳೇದು

ಡೋಂಗರೆ

ಇವರ ಬಾಲಾಮೃತ

[150 45]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಬೆಂಗಳೂರಿನ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತದ ತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹಾನಿ ಒದಗುವಕೆಯನ್ನು ನಿಲಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುತುಕೂಲಿ, ಮಕ್ಕಳ ಎಳವು ಜ್ವರ, ನಟ್ಟುಜ್ವರ, ಕೃಮಿತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ — 221 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪ್ಯಾಕೇಜು 1 ಆಣೆ [179 38]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿಕೊಂಡು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ನೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮೂಹದಲ್ಲಿ ಪೇಟಾದಬೇಡಿ ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ವಿಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

PRINTING PRESS FOR SALE.

The Printing Press upon which this Newspaper is being printed is for sale Size, Double Demy Fittings for hand or power May be seen working by appointment Price, Rs 1,200

Apply to—

THE MANAGER,

Wesleyan Mission Press

[1163] Mysore City

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಅಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವದು ನಮ್ಮ ಏಜಂಟರು ಬಿ ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ ಕೆಲವು ಏಜಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಅಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ

ಮ್ಯಾನೇಜರ್, ವೃತ್ತಾಂತ ಪತ್ರಿಕೆ," ಮೈಸೂರು

ವೃತ್ತಾಂತ ಪತ್ರಿಕೆ

—o—

ಸನ್ ೧೯೧೪ ನೇ ಇಸವಿ ಮೇ ತಾ ೨೮ ನೇ ಗುರುವಾರ

ಬ್ರಿಟಿಷ್ ಸಾಮ್ರಾಜ್ಯವೂ ಹಿಂದುಸ್ಥಾನದ ಪ್ರಜೆಗಳೂ

ಹಿಂದುಸ್ಥಾನದ ಪ್ರಜೆಗಳು ಸುಮಾರು ನಾಲ್ಕುನೂರು ಮಂದಿ ಜರ್ಮನ್ ಕಂಪನಿಯವರ ಒಂದು ಜಹಜಿನಲ್ಲಿ ಪ್ರಯಾಣಮಾಡಿಕೊಂಡು ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಪಶ್ಚಿಮ ದಡವನ್ನು ತಲಪಿರುತ್ತಾರೆ ಕನಡಾ ದೇಶದ ಅಧಿಕಾರಿಗಳು ಇವರನ್ನು ಜಹಜಿನಿಂದ ಇಳಿಯಗೊಡುವುದಿಲ್ಲವೆಂಬಂತೆ ಕಾಣುತ್ತಿದೆ ಈ ವಿಚಾರವು ದಕ್ಷಿಣ ಆಫ್ರಿಕದಲ್ಲಿ ಹೇಗೆ ನಮ್ಮ ಜನರಿಗೆ ಕಷ್ಟನಷ್ಟಗಳು ಹುಟ್ಟಿದವೋ ಅಂಥಾ ಕಷ್ಟನಷ್ಟಗಳು ಕೆನಡಾದೊಳಗೂ ಪ್ರಾಪ್ತವಾಗುವಂತೆ ಮಾಡುವುದು. ದಕ್ಷಿಣ ಆಫ್ರಿಕದಲ್ಲಿ ಹೋರಾಟಗಳು ಕೊನೆಮುಟ್ಟಿ ಸಮರ್ಪಕವಾದ ತೀರ್ಮಾನವಾಗಬಹುದೆಂಬ ಭರವಸೆಯುಂಟಾಗಿದೆ ಈ ತೀರ್ಮಾನವು ದಕ್ಷಿಣ ಆಫ್ರಿಕದವರಿಗೂ, ನಮ್ಮ ದೇಶೀಯರಿಗೂ ತೃಪ್ತಿಕರವಾಗಿದ್ದೀತೆಂದು ನಿರೀಕ್ಷಿಸುವೆವು

ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿರುವುದರಿಂದ ನಮ್ಮ ದೇಶದ ಜನರು ಆ ಸಾಮ್ರಾಜ್ಯದೊಳಗಿರುವ ಯಾವ ದೇಶಕ್ಕೆ ಹೋಗುವುದಕ್ಕೂ ಅವರಿಗೆ ಹಕ್ಕು ಉಂಟು, ಇದಕ್ಕೆ ಯಾವ ವಿಧವಾದ ತಡೆಗಳೂ ಇರುವುದು ಧರ್ಮವಲ್ಲ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾವು ತಿಳಿಯಬೇಕಾಗಿದೆ ಮೊದಲನೆಯದಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿರುವ ಸಕಲ ದೇಶಗಳೊಳಗೂ ಕಟ್ಟಳೆ ಕಾನೂನುಗಳೆಲ್ಲಾ ಒಂದೇ ರೀತಿಯಾಗಿಲ್ಲ ಆದಕಾರಣ ಯಾವನಾದರೂ ಚಕ್ರಾಧಿಪತ್ಯದ ಒಂದು ಮೂಲೆತಾಕಿನ ದೇಶಕ್ಕೆ ಹೋಗಬೇಕೆಂದಿದ್ದ ಪಕ್ಷದಲ್ಲಿ ಅವನು ಆ ದೇಶದಲ್ಲಿ ಆಚರಣೆಯಲ್ಲಿರುವಂಥಾ ಕಾನೂನಿನಂತೆ ನಡೆದುಕೊಳ್ಳಲು ಬದ್ಧನಾಗಬೇಕು ವಿವಾಹದ ವಿಷಯದಲ್ಲಿ ಕಾನೂನು ಮಾಡಿಕೊಂಡಿದ್ದಾರೆ, ಆರೋಗ್ಯ ವಿಚಾರವಾದ ನಿಬಂಧನೆಗಳಿರುವವು, ಕೂಲಿಮಾಡಿಸ ವಿಷಯದಲ್ಲೂ ನಿರ್ಬಂಧಗಳು ಇರುತ್ತವೆ ಈ ಕಟ್ಟಲೆ ಕಂದಾಚಾರಗಳನ್ನೂ ನಿಬಂಧನೆಗಳನ್ನೂ ನಮ್ಮ ದೇಶದ ಜನರು ಅನುಸರಿಸತಕ್ಕವರಾಗಿಲ್ಲ ಆದಕಾರಣ ನಮ್ಮ ಜನರಲ್ಲಿ ಯಾರಾದರೂ ಅಂಥಾ ಕಾನೂನಿಗೆ ವಿರೋಧವಾಗಿ ನಡೆದರೆಂದು ಹಿಡಿಯಲ್ಪಟ್ಟು ಶಿಕ್ಷೆಯನ್ನನುಭವಿಸಬೇಕಾಗಿ ಬಂದರೆ ಅದು ಅಪಮಾನವೆಂದು ನಾವು ಭಾವಿಸಬಾರದು ಯಾಕಂದರೆ ಚಕ್ರಾಧಿಪತ್ಯವು ಒಂದೇ ಆಗಿದ್ದರೂ ದೇಶಾಂತರಗಳಲ್ಲಿ ಸ್ಥಳ ವಿಶೇಷವಾದ ಕಾನೂನುಗಳು ಜಾರಿಯಲ್ಲಿರುತ್ತವೆ ಅಂಥಾ ಕಾನೂನುಗಳಿಗೆ ವಿರೋಧವಾಗಿ ನಡೆದವರನ್ನು ಆಯಾ ಸರ್ಕಾರದವರು ಹಿಡಿದು ದಂಡಿಸಬೇಕಾದದ್ದೇ ಸಹಜ ನಮ್ಮ ಜನಗಳಾದರೋ ಈ ದೇಶದಲ್ಲಿ ಅನುಸರಿಸುವಂಥಾ ಆಚರಣೆಗಳನ್ನೇ ಅನ್ಯದೇಶದಲ್ಲೂ ಆಚರಿಸಬಹುದೆಂದು ತಿಳಿದುಕೊಂಡಿದ್ದಾರೆ ವಾಗ್ವಾದಕ್ಕೂ ಹೋರಾಟಕ್ಕೂ ಕಷ್ಟನಷ್ಟಗಳಿಗೂ ಇದೇ ಕಾರಣ ಯಾವನೇ ಆಗಲಿ ತನ್ನ ದೇಶದಲ್ಲಿ ತಾನು ಆಚರಿಸುತ್ತಿದ್ದ ಆಚರಣೆಗಳನ್ನೇ ಅನ್ಯದೇಶದಲ್ಲೂ ಅನುಸರಿಸುತ್ತೇನೆಂದು ಹಟ ಹಿಡಿಯುವುದು ಸಾಧ್ಯವಲ್ಲ ಆಯಾ ದೇಶಕ್ಕೆ ಅನುಗುಣವಾದ ಆಚಾರ ವ್ಯವಹಾರಗಳನ್ನು ಅನುಸರಿಸಿ ನಡೆಯಬೇಕಾಗಿದೆ ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುವೆವು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ಅನೇಕ ದೇಶಗಳಲ್ಲಿ ಒಬ್ಬನಿಗೆ ಒಬ್ಬ ಹೆಂಡತಿ ಮಾತ್ರ ಇರಬೇಕೆಂಬ ವಿಧಿಯುಂಟು ಹೀಗಿರುವಲ್ಲಿ ಅಂಥಾ ಸೀಮೆಗೆ ಯಾವನಾದರೂ ಇಬ್ಬರು ಹೆಂಡರ ಸಮೇತ ಹೋಗಿ ಅಲ್ಲೇ ಇದ್ದುಬಿಡುತ್ತೇನೆಂದು ಹೇಳುವನಾದರೆ ಅಲ್ಲಿನ ಕಾನೂನ್ ಅನುಸರಿಸಿ ಅಧಿಕಾರಿಗಳು ಅವನನ್ನು ಹಿಡಿದು ದಂಡನೆಗೆ ಗುರಿಮಾಡುತ್ತಾರೆ ಹಾಗಿಲ್ಲದೆ ಅವನು ದೇಶಾಟನೆಗಾಗಿ ಹೋಗಿದ್ದ ಪಕ್ಷದಲ್ಲಿ ಅವನಿಗೆ ಯಾವುದೊಂದು ಅನನುಕೂಲವೂ ಉಂಟಾಗದು.

ಎರಡನೆಯದಾಗಿ ಜಾತಿಪದ್ಧತಿಯು ಅನ್ಯದೇಶಗಳಲ್ಲಿ ನಾನಾ ಬಗೆಯ ಕಷ್ಟಗಳನ್ನುಂಟುಮಾಡುವುದು ಹಿಂದುವು ಸಮುದ್ರದ ಮೇಲೆ ಪ್ರಯಾಣ ಮಾಡಿಬಿಟ್ಟರೆ ಅವನ ಜಾತಿ ಹೋಯಿತೆಂದು ಊಹಿಸಿದ್ದವು ಈಗ ಹಾಗೆ ಆಗಿಲ್ಲ ಹಿಂದುಗಳು ಸಮುದ್ರಯಾನ ಮಾಡಿಕೊಂಡು ಅನ್ಯದೇಶಗಳಿಗೆ ಹೋದ ಮೇಲೆ ಆ ದೇಶದೊಳಗೂ ತಮ್ಮ ಜಾತಿಪದ್ಧತಿಗಳನ್ನು ಅನುಸರಿಸಬೇಕೆಂದು ಪ್ರಯತ್ನಪಡುವರು ಆ ಅನ್ಯದೇಶದವನಾದರೋ ಈ ಜಾತಿಪದ್ಧತಿಗಳ ಅರಿಯನೋ ತಿಳಿಯದು ಈ ವಿಚಾರವೂ ಹಲವು ವೇಳೆ ನಾನಾ ಅನನುಕೂಲಗಳಿಗೆ ಕಾರಣವಾಗುತ್ತದೆ ಹಿಂದುವಾದವನು ತನ್ನ ಜನ್ಮಭೂಮಿಯ ಜೊತೆಯಲ್ಲೇ ತನ್ನ ಜಾತಿ ಪದ್ಧತಿಯನ್ನೂ ತ್ಯಜಿಸಿಬಿಟ್ಟು, ಅನ್ಯದೇಶದಲ್ಲಿರುವಾಗ ಅಲ್ಲಿನ ಜನರಂತೆಯೇ ನಡೆದುಕೊಳ್ಳಲು ಒಪ್ಪುವನಾದ ಪಕ್ಷಕ್ಕೆ ಯಾವ ಹೋರಾಟಕ್ಕೂ ಮನೋವ್ಯಥೆಗೂ ವಿಶೇಷ ಅವಕಾಶವಿರುವುದಿಲ್ಲ

ನಮ್ಮ ದೇಶದ ಜನರು ಮುಖ್ಯವಾಗಿ ಮೇಲ್ಕಂಡ ಎರಡು ವಿಷಯಗಳನ್ನೂ ಕುರಿತು ಚೆನ್ನಾಗಿ ಯೋಚಿಸಿ ಇತ್ಯರ್ಥಮಾಡಿಕೊಂಡರೆ ಅವರು ಬ್ರಿಟಿಷ್ ಚಕ್ರಾಧಿಪತ್ಯದ ಯಾವ ಸೀಮೆಗೆ ಹೋಗುವುದಾದರೂ ಅವರಿಗೆ ವಿಶೇಷ ಕಷ್ಟನಷ್ಟಗಳು ಸಂಭವಿಸುವುದಿಲ್ಲ ಅವರು ಆಯಾ ಸೀಮೆಯ ಕಟ್ಟು ಕಾನೂನುಗಳನ್ನು ಅನುಸರಿಸುವುದಕ್ಕೆ ಒಪ್ಪತಕ್ಕವರಾಗಬೇಕು ಯಾಕಂದರೆ ಅನ್ಯದೇಶಗಳಲ್ಲಿ ನಮ್ಮ ಜನರು ಜಾತಿಪದ್ಧತಿ ಆಚಾರಗಳನ್ನು ಇಲ್ಲಿನಂತೆಯೇ ಅನುಸರಿಸುತ್ತೇವೆನ್ನುವುದು ಸಾಧ್ಯವಲ್ಲ ದೇಶಾಟನ ಮಾಡುವವರೂ, ಅನ್ಯದೇಶದಲ್ಲಿ ಹೋಗಿ ವಾಸಮಾಡಬಯಸುವವರೂ ಆ ಪರದೇಶಗಳಲ್ಲಿನ ವಿಧ್ಯಮಾನಗಳೆಲ್ಲಾ ತಮ್ಮ ದೇಶದಲ್ಲಿದ್ದವುಗಳಂತೆಯೇ ತಮಗೆ ಅನುಕೂಲವಾಗಿಯೂ, ಸಂತೋಷಪ್ರದವಾಗಿಯೂ ಇರುವವೆಂದು ಊಹಿಸುವುದು ಸಹಜವಲ್ಲ ಆದರೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಪ್ರಜೆಯು ಆ ಸಾಮ್ರಾಜ್ಯದೊಳಗೆ ಯಾವ ದೇಶದಲ್ಲಾದರೂ ಸಂಚಾರಮಾಡಲು ಹಕ್ಕುಬಾಧ್ಯತೆಯನ್ನು ಪಡೆದಿರುತ್ತಾನೆಂಬುವವನ್ನು ಒಪ್ಪಿಕೊಳ್ಳುತ್ತೇವೆ ಇದರಲ್ಲಿ ಅವನು ಆಯಾ ಸೀಮೆಯ ಕಟ್ಟಲೆ ಕಾನೂನುಗಳಂತೆ ನಡೆದುಕೊಳ್ಳಲು ಸಿದ್ಧನಾಗಿರಬೇಕಾದದ್ದೊಂದೇ ಮುಖ್ಯ ಆಶಯವಾಗಿದೆ

ಭೂಪಟ

ಈ ಭೂಮಂಡಲವು ಎಷ್ಟು ವಿಸ್ತಾರವಾದದ್ದು ? ಅದರಲ್ಲಿ ನದೀಗಳೂ ಪರ್ವತಗಳೂ ಸರೋವರಗಳೂ ಎಲ್ಲಿ ಇರುತ್ತವೆ ? ಮತ್ತು ಮಹಾ ಸಾಗರಗಳೂ ದ್ವೀಪಗಳೂ ಖಂಡಖಂಡಗಳೂ ಕೋಟ್ಯಾಂತರ ಜೀವರಾಶಿಗಳೂ ನಾನಾ ವರ್ಣದ ಮತ್ತು ಹಲವು ವಿಧದ ಭಾಷೆಗಳನ್ನಾಡುವ ಜನಗಳೂ ಇದ್ದಾರೆ ಇದರ ಬಾಹುಳ್ಯವನ್ನು ಗ್ರಹಿಸುವದು ಸುಲಭಸಾಧ್ಯವಲ್ಲ

ಮತ್ತು ಭೂಮಿಯು ಯಾವ ರೂಪದಲ್ಲಿದೆ ? ಅದಕ್ಕೆ ಆಧಾರವೇನು ? ಇವೇ ಮುಂತಾದ ವಿಷಯಗಳನ್ನು ಕುರಿತು ಪೂರ್ವದಿಂದ ತಿಳಿಯಬೇಕೆಂದು ಜನರು ಯೋಚಿಸುತ್ತಿದ್ದರು ಸಕಲ ದೇಶ, ಭಾಷೆ ಬಣ್ಣಗಳ ಜನಗಳು ತಮ್ಮ ತಮ್ಮ ದೇಶಗಳಲ್ಲಿ ವಿದ್ವಾಂಸರೆನ್ನಿಸಿಕೊಂಡವರನ್ನು ಈ ಭೂಮಂಡಲದ ವಿಸ್ತೀರ್ಣ ರೂಪ, ಆಧಾರ ಮುಂತಾದವುಗಳ ವಿಷಯ ವಿಚಾರಿಸುತ್ತಿದ್ದರು ಇಂಥವರ ಕೌತುಕವನ್ನು ತೃಪ್ತಿಪಡಿಸಬೇಕೆಂದು ಬೇರೆ ಬೇರೆ ದೇಶಗಳ ವಿದ್ವಾಂಸರು ಈ ಭೂಮಂಡಲವನ್ನು ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದರು ತಿಳಿಯಲಾರದ್ದನ್ನು ಊಹಿಸಿ ಬರೆದರು ಉತ್ಪ್ರೇಕ್ಷಿಸಿದರು ಪುರಾಣೇತಿಹಾಸಗಳಲ್ಲಿ ಭೂಗೋಳವನ್ನು ಕುರಿತು ಬರೆದಿರುವ ವರ್ಣನೆಯು ಹೀಗೆಯೇ ಊಹಿಸಿದ ಉತ್ಪ್ರೇಕ್ಷೆಯಾಗಿದೆ ಭೂಮಿಯು ಲಕ್ಷಾಂತರ ಯೋಜನ ವಿಸ್ತಾರವಾದ ಚಾಪೆಯಂತೆ ಹಾಸಲ್ಪಟ್ಟಿದೆ ಅದರಲ್ಲಿ ಸಪ್ತ ದ್ವೀಪಗಳು ಸಪ್ತ ಸಾಗರಗಳಿಂದ ಪರಿವೃತವಾಗಿವೆ ಈ ಸಾಗರಗಳಲ್ಲಿ ಒಂದು ಹಾಲಿನ ಸಮುದ್ರ ಮತ್ತೊಂದು ಮೊಸರಿನದು, ಬೇರೊಂದು ಇಕ್ಷುಸಾಗರ, ಮತ್ತೊಂದು ಸುರಾ ಅಂದರೆ ಮದ್ಯದಿಂದ ತುಂಬಿ ತುಳುಕುತ್ತಿರುವುದು ಇನ್ನೊಂದು ಲವಣಸಮುದ್ರ ಇವುಗಳ ಮಧ್ಯೆ ಜಂಬೂ ದ್ವೀಪವಿರುತ್ತದೆ ಮತ್ತು ಈ ಭೂಮಿಯನ್ನು ಅಷ್ಟದಿಗ್ಗಜಗಳು ಹೊತ್ತುಕೊಂಡುಂಟಿವೆ ನಡುವೆ ಆದಿಶೇಷನು ತನ್ನ ಸಾವಿರ ತಲೆಗಳ ಮೇಲೆ ಭೂಮಿಯನ್ನು ಹೊತ್ತು ನಿಂತಿದ್ದಾನೆ ಈ ಮೊದಲಾದ ವಿವರಣೆಯು ಪರಿಶೋಧನೆ ಮಾಡಲಾರದೆ ಮನೆಯಲ್ಲಿ ಕೂತುಕೊಂಡು ಅಜ್ಞರನ್ನು ವಂಚಿಸುವದಕ್ಕಾಗಿ ಬರೆದ ಸ್ವಕಪೋಲಕಲ್ಪನೆಗಳಾಗಿವೆ

ಆದರೆ ನಿಜವಾದ ಭೂಗೋಳಶಾಸ್ತ್ರವಿಲ್ಲವೆ ? ಭೂಮಿಯ ಆಕಾರ, ವಿಸ್ತಾರ ಅದರ ಆಧಾರ, ಸ್ವಭಾವಗಳನ್ನು ಕುರಿತು, ನಮಗೆ ಸರಿಯಾದ ತಿಳುವಳಿಕೆ ಇಲ್ಲವೆ ? ಈ ಕಾಲದಲ್ಲಿ ಪಾಠಶಾಲೆಗಳು ಸಕಲ ಪಟ್ಟಣ ಹಳ್ಳಿಗಳಲ್ಲಿಯೂ ಸ್ಥಾಪಿತವಾಗಿರುತ್ತವೆ ಅವುಗಳಲ್ಲಿ ಯಾವದಾದರೂ ಒಂದನ್ನು ಪ್ರವೇಶಮಾಡೋಣ ಅದರಲ್ಲಿ ಗೋಡೆಯ ಮೇಲೆ ಒಂದು ದೊಡ್ಡ ಪರವು ನೇತಹಾಕಿರುವದು ಕಾಣಬರುತ್ತದೆ ಇನ್ನು ಕೆಲವು ದೊಡ್ಡ ಪಠಶಾಲೆಗಳಲ್ಲಿ ಭೂಮಿಯ ಆಕಾರವನ್ನೂ ಅದರ ಚಲನೆಯನ್ನೂ ಸೂಚಿಸುವ ಭೂಗೋಳವಿರುತ್ತದೆ ಉಪಾಧ್ಯಾಯನು ಅದರ ಎದುರಿಗೆ ಬಾಲಕರನ್ನು ನಿಲ್ಲಿಸಿಕೊಂಡು—ಭೂಮಿಯು ಚೆಂಡಿನ ಹಾಗೆ ಗುಂಡಾಗಿದೆ ಅದು ಯಾವ ಆಧಾರವೂ ಇಲ್ಲದೆ ಅಂತರಿಕ್ಷದಲ್ಲಿ ಚಲಿಸುತ್ತಿರುತ್ತದೆ ಅದರಲ್ಲಿ ಕ್ಷೀರ, ದಧಿ, ಸರ್ಪಿ, ಸುರಾ ಮುಂತಾದ ರಸಗಳಿಂದ ತುಂಬಿದ ಸಾಗರಗಳೊಂದೂ ಇಲ್ಲ ಆದರೆ ಮಹಾ ವಿಸ್ತಾರವಾದ ಉಪ್ಪುನೀರಿನ ಸಾಗರಗಳಿರುತ್ತವೆ ಎಂದು ಬೋಧಿಸಿ ತನ್ನೆದುರಿಗಿರುವ ಭೂಪಟವನ್ನೂ ಅದರ ಮೂಲಕ ಈ ಭೂಮಿಯ ರೂಪ, ವಿಸ್ತೀರ್ಣ ಸ್ವಭಾವಗಳನ್ನೂ ಅವರ ಗ್ರಹಿಕೆಗೆ ತರುತ್ತಾನೆ

ಭೂಮಿಯ ಸ್ವಭಾವ, ಆಕಾರ, ಪ್ರಮಾಣಗಳನ್ನು ತಿಳಿಯಬೇಕೆಂಬ ಹಂಬಲಿಕೆಯು ಮನುಷ್ಯರನ್ನು ಮೊದಲಿಂದ ಹೇಗೆ ಕಾಡುತ್ತಿದ್ದಿತೋ ಅದಕ್ಕಿಂತ ಶತಾಂಶ ಹೆಚ್ಚಾಗಿ ದೇವರನ್ನು ಕುರಿತು ತಿಳಿಯಬೇಕೆಂಬ ಅಭಿಲಾಷೆಯು ಮನುಷ್ಯನನ್ನು ಬಾಧಿಸುತ್ತಲಿದೆ ಲೋಕದಲ್ಲಿ ಎಷ್ಟೊಂದು ಶಾಸ್ತ್ರಗಳಿವೆ ? ಪ್ರಪಂಚದಲ್ಲಿ ಉತ್ಪತ್ತಿಯಾಗಿ ಹರಡಿಕೊಂಡಿರುವ ಮತಗಳೆಷ್ಟು ? ಆ ಮತಗಳನ್ನು ಬೋಧಿಸುವ ಗುರುಗಳು ಎಷ್ಟು ಮಂದಿ ಇದ್ದಾರೆ ? ಲೋಕದಲ್ಲಿ ಜಪ, ತಪ, ತೀರ್ಥಯಾತ್ರೆ ದೇವದಂಡನೆಗಳನ್ನು ಮಾಡಿ ದೇವರನ್ನು ನೋಡಬೇಕೆಂದು ಅತಿ ಕಾಂಕ್ಷಿತರಾಗಿರುವ ಜನಗಳ ಆಶಾಪಾಶವು ದೇವರಿಗೆ ಗೊತ್ತಿಲ್ಲವೆ ? ಗೊತ್ತಿದ್ದರೂ ಚಿಂತಿಸದೆ ನನಗೆ ಅವರ ಗೊಡವೇನು ? ಅವರು ಹೇಗಾದರೂ ಇರಲಿ ಎಂತ ನಿರ್ಲಕ್ಷ್ಯವಾಗಿ, ದೇವರು ನಿರ್ಗುಣನಾಗಿದ್ದಾನೆಯೋ ? ದೇವರು ಯಾರು ? ಆತನು ಎಲ್ಲಿದ್ದಾನೆ ? ಹ್ಯಾಗಿದ್ದಾನೆ ? ನನಗೂ ಆತನಿಗೂ ಯಾವ ಸಂಬಂಧವಿದೆ ? ಎಂದು ಜಗದುತ್ಪತ್ತಿಯಿಂದ ಮನುಷ್ಯನು ವಿಚಾರಿಸುತ್ತ ಇರುವಲ್ಲಿ ದೇವರು ನಿಷ್ಕರುಣಿಯಾಗಿ ಅವರನ್ನು ಕಣ್ಣು ಕಟ್ಟಿ ಕಾರ್ಗತ್ತಲೆಯಲ್ಲಿ ಬಿಡುವಷ್ಟು ಕ್ರೂರನೋ ?

ಈ ಪ್ರಶ್ನೆಗಳಿಗೆ ಬೇರೆಬೇರೆ ಮತ ಸಿದ್ಧಾಂತಗಳು ಏನು ಪ್ರತ್ಯುತ್ತರ ಹೇಳುತ್ತವೆಯೋ ಅದನ್ನು ವಿಚಾರಿಸುವದು ಪ್ರಕೃತದಲ್ಲಿ ಅಸಾಧ್ಯ ಆದರೆ ಕ್ರಿಸ್ತಮತಕ್ಕೆ ಮೂಲಗ್ರಂಥಗಳಾದ ಸುವಾರ್ತೆಗಳು ಏನು ಹೇಳುತ್ತವೆಂದು ಸ್ಥಳ ಸಂಕೋಚವಾಗಿರುವದರಿಂದ ಕ್ರೋಢೀಕರಿಸಿ ಬರೆಯುತ್ತೇವೆ ಏನಂದರೆ—ಆದಿಯಲ್ಲಿ ವಾಕ್ಯವೆಂಬವನಿದ್ದನು ಆ ವಾಕ್ಯವೆಂಬಾತನು ದೇವರ ಬಳಿಯಲ್ಲಿದ್ದನು ಆ ವಾಕ್ಯವು ದೇವರೇ ಆಗಿದ್ದನು ಆತನ ಮೂಲಕವಾಗಿ ಸಕಲವೂ ಉಂಟಾಯಿತು ಉಂಟಾಗಿರುವ ವಸ್ತುಗಳಲ್ಲಿ ಒಂದಾದರೂ ಆತನಿಂದಲ್ಲದೆ ಉಂಟಾಗಲಿಲ್ಲ ಆ ವಾಕ್ಯವೆಂಬುವನು ನರಾವತಾರವೆತ್ತಿದನು ಮತ್ತು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿ ನಮ್ಮ ಮಧ್ಯದಲ್ಲಿ ವಾಸವಾಗಿದ್ದನು ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯಾದ ದೇವರ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆಯು ಹಾಗಿತ್ತು ಆತನ ಕೃಪಾಪೂರ್ಣತೆಯೊಳಗಿಂದ ನಾವೆಲ್ಲರೂ ಕೃಪೆಯ ಮೇಲೆ ಕೃಪೆಯನ್ನು ಹೊಂದಿದ್ದೇವೆ ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮೂಲಕವಾಗಿ ನಮಗೆ ಲಭವಾದವು ದೇವರನ್ನು ಯಾವನು ಎಂದು ಕಂಡಿಲ್ಲ ತಂದೆಯ ಎದೆಯಲ್ಲಿರುವ ಒಬ್ಬನೇ ಮಗನು ಆತನನ್ನು ತಿಳಿಯಪಡಿಸಿದನು ಮೇಲಿಂದ ಬರುವವನು ಎಲ್ಲರ ಮೇಲೆ ಇದ್ದಾನೆ ಭೂಲೋಕದಿಂದ ಹುಟ್ಟಿದವನು ಭೂಲೋಕದವನಾಗಿದ್ದು ಭೂಲೋಕದ ಮಾತುಗಳನ್ನಾಡುತ್ತಾನೆ ಪರಲೋಕದಿಂದ ಬರುವವನು ದೇವರು ಕಳುಹಿಸುವವನು ಆತನು ದೇವರ ಮಾತುಗಳನ್ನೇ ಆಡುತ್ತಾನೆ ತಂದೆಯು ಮಗನನ್ನು ಪ್ರೀತಿಸಿ ಎಲ್ಲವನ್ನೂ ಆತನ ಕೈಯಲ್ಲಿ ಕೊಟ್ಟಿದ್ದಾನೆ ಈ ಮಗನನ್ನು ನಂಬುವವನಿಗೆ ನಿತ್ಯ ಜೀವ (ದೇವರ ಸಾನ್ನಿಧ್ಯ) ಇದ್ದೇ ಇರುತ್ತದೆ ಆದರೆ ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ

ಮೇಲೆ ಸಂಕ್ಷೇಪವಾಗಿ ಬರೆದಿರುವ ವಾಕ್ಯಗಳನ್ನು ಧ್ಯಾನಪಟ್ಟು ಓದುವವರಿಗೆ ಒಂದು ವಿಷಯವು ಗೋಚರವಾಗದಿರಲಾರದು ಅದೇನಂದರೆ—ಈ ಭೂಮಂಡಲದ ಆಕಾರ, ವಿಸ್ತಾರ, ಅದರ ಸ್ವಭಾವ, ಅದರ ಆಧಾರಗಳನ್ನು ತಿಳಿಯಬೇಕೆಂದು ಕಾಂಕ್ಷಿತರಾಗಿದ್ದ ಮನುಷ್ಯರಿಗೆ ಭೂಪಟವೂ ಭೂಗೋಳವೂ ಭೂಮಿಯ ನಿಜಪ್ರತಿರೂಪಿಗಳಾಗಿದ್ದು ಹೇಗೆ ಸಹಾಯವಾಗಿವೆಯೋ ಹಾಗೆಯೇ ಕ್ರಿಸ್ತನು ದೇವರನ್ನು ತಿಳಿಯಬೇಕೆಂದು ಅಪೇಕ್ಷಿಸುವವರಿಗೆ ಅದೃಶ್ಯನಾದ ದೇವರ ಸ್ವರೂಪವೂ ದೇವಸ್ವಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

⁂

ಶ್ರೀಮನ್ಮಹಾರಾಜರವರು ಪರಿವಾರ ಸಮೇತ ನೀಲಗಿರಿಯಿಂದ ತಾ 30 ನೇ ಶನಿವಾರ ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ

⁂

ಕಳೆದ ತಾ 22 ನೇ ಶುಕ್ರವಾರ ಬೆಳಿಗ್ಗೆ ರಾಜಧಾನಿಯ ಹೊಸ ಅರಮನೆಯ ಮೇಲ್ಭಾಗದ ಗೋಪುರದಲ್ಲಿ ಪ್ರಧಾನ ಕಲಶವನ್ನು ಇಟ್ಟು ಪ್ರತಿಷ್ಠೆ ಮಾಡಿಸಿದರು

⁂

ಕಳೆದ ವಾರ ವೇ| ಸುಬ್ಬಯ್ಯ ಭಾಗವತರು ರಾಜಧಾನಿಯ ಕೋಟೆಯೊಳಗಿನ ಗುಡಿಯಲ್ಲಿ ಹರಿಕಥೆಯನ್ನು ಮಾಡಿ ಸಭಿಕರನ್ನು ಸಂತೋಷಪಡಿಸಿದರು ಪ್ರಜೆಗಳು ಭಾಗವತರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು

⁂

ಇನಾಂತಿ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಸಂಘವು ಏರ್ಪಾಟಾಗಿದ್ದು ಗ್ರಾಮಸ್ಥರೂ ಇನಾಂದಾರರೂ ಬಾವಿ, ಸ್ಕೂಲು ಮೊದಲಾದ ಕಟ್ಟಡಗಳಿಗೆ ಚಂದಾ ಕೂಡಿಸಿ ಮಾಡಿಸುವುದಾದರೆ ನಾಲ್ಕನೇ ಒಂದು ಭಾಗದ ಹಣವನ್ನು ಸರ್ಕಾರದಿಂದ ಕೊಡಲಾಗುತ್ತೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ

⁂

ಸ್ಪೆ ಅ|| ಕಮಿಷನರ್ ಮ|| ಎ ಗೋಪಾಲರಾಜ ಅರಸಿನವರು ತಮಗೆ ವಿವಾಹ ಬೆಳೆದ ಸಂತೋಷಕ್ಕಾಗಿ ತಮ್ಮ ಸ್ನೇಹಿತರನ್ನು ಕರೆಸಿಕೊಂಡು ಅವರನ್ನು ಫಲಾಹಾರ ಸಂಗೀತಾದಿಗಳಿಂದ ಸಂತೋಷಪಡಿಸಿದ್ದಲ್ಲದೆ ಅವರ ಮಧ್ಯೆ ಕುಳಿತು ಫೋಟೋ ತೆಗೆಸಿಕೊಂಡರು. ಸ್ನೇಹಿತರೆಲ್ಲಾ ಮ|| ಅರಸಿನವರ ಶ್ರೇಯಸ್ಸನ್ನು ಬಯಸಿ ತೆರಳಿದರು

⁂

ಆನೆಗಳ ಕೊಂಬು (ದಂತ) ಗಳನ್ನು ಡಿಸ್ಟ್ರಿಕ್ಟ್ ಕಮಿಷನರುಗಳು ಕೊಯಿಸಿ ಆರು ತಿಂಗಳಿಗೊಂದು ಸಲ ಬೆಂಗಳೂರಿಗೆ ಕಳುಹಿಸಬೇಕೆಂದೂ, ಅಲ್ಲಿ ಪ್ರಿಂಗಂಧವು ತಯಾರಾಗುವ ಕಾಲದಲ್ಲೇ ದಂತಗಳನ್ನೂ ಹರಾಜಿಗೆ ಇಟ್ಟು ವಿಕರಿ ಮಾಡಬೇಕೆಂದೂ, ಈ ಮಧ್ಯೆ ಒಂದೆರಡು ತುಂಡು ದಂತಗಳನ್ನು ವಿಕರಿ ಮಾಡಬೇಕಾಗಿ ಬಂದರೆ ಗವರ್ನ್‌ಮೆಂಟಿನವರ ಸ್ಯಾಂಕ್ಷನ್ ಪಡೆಯಬೇಕೆಂದೂ ಗವರ್ನ್‌ಮೆಂಟಿನವರು ರೂಲಸು ಮಾಡಿದ್ದಾರೆ

⁂

ಸರ್ಕಾರದವರು ಈ ಸಲ ನವರಾತ್ರಿ ಉತ್ಸವಗಳ ಕಡೆಯಲ್ಲಿ ರಾಜಧಾನಿಯಲ್ಲಿ ನಡೆಯುವ ಪ್ರತಿನಿಧಿಸಭೆಯ ಕಾಲನಿಯಾಮಕ ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ ಜೂಲೈ ತಾ 27 ಕ್ಕೆ ಮುಂಚೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಪ್ರತಿನಿಧಿಗಳ ಪ್ರಥಮ ಸಭೆಗಳು ನಡೆಯಬೇಕೆಂದೂ, ಸೆಪ್ಟಂಬರ್ ತಾ 27 ರೊಳಗೆ ಅಡ್ರೆಸ್ಸುಗಳ ನಕಲನ್ನು ಗವರ್ನ್‌ಮೆಂಟ್ ಸೆಕ್ರೆಟರಿಯವರಿಗೆ ಸೇರುವಂತೆ ಕಳುಹಿಸಬೇಕೆಂದೂ, ಸೆಪ್ಟಂಬರ್ ತಾ 30 ನೇ ಬುಧವಾರ ಪ್ರತಿನಿಧಿಸಭೆಯು ಪ್ರಾರಂಭವಾಗುವುದೆಂದೂ ನಿಷ್ಕರ್ಷೆಯಾಗಿರುತ್ತದೆ

ಚಾಮರಾಜನಗರದ ದೇವಸ್ಥಾನದಿಂದ ಒಂದು ಮಂಟಪವನ್ನು ಮಾಡ್ರಿ ನೋಡುವುದಕ್ಕಾಗಿ ಅರಮನೆಗೆ ತರಿಸಿದ್ದು ಅದನ್ನು ಮೊನ್ನೆ ಮಂಗಳವಾರ ಪಡು ಮಧ್ಯಾಹ್ನ ಅರಮನೆಯಿಂದ ಲಾರಿ ಎಂಬ ಮೋಟರ್ ಗಾಡಿಯಲ್ಲಿಟ್ಟು ಪಹರೆ ಸಹಿತ ವಾಪಸು ಚಾಮರಾಜನಗರಕ್ಕೆ ಕಳುಹಿಸಿದರು ಈ ಗಾಡಿಯು ರಾಜಧಾನಿಯಿಂದ 6-7 ಮೈಲಿ ದೂರ ಹೋಗುವಷ್ಟರಲ್ಲೇ ದಾರಿಯಲ್ಲಿ ಮಗುಚಿಬಿದ್ದು ಮುರಿದುಹೋಯಿತು ಅದರಲ್ಲಿದ್ದ ಮೂರು ಮಂದಿ ಸೇವಕರಿಗೆ ಗಾಯಗಳಾಗಿ ಆಸ್ಪತ್ರೆಗೆ ಬಂದರು ಮಂಟಪವೂ ಕೆಲವು ಭಾಗ ಮುರಿದುಹೋಯಿತು

ಬರುವ ಜೂನ್ ತಾ 4 ನೇ ಗುರುವಾರ ರಾಜಧಾನಿಯಲ್ಲಿ ನಮ್ಮ ಮಹಾರಾಜರವರ ೩೦ನೆಯ ವರ್ಷ ವರ್ಧಂತಿಯ ಉತ್ಸವಗಳು ಬೆಳೆಯುವವು ಅರಮನೆಯಲ್ಲಿ ಪದ್ಧತಿಯ ಪ್ರಕಾರ ದರ್ಬಾರುಗಳೂ, ಪಟ್ಟಣದಲ್ಲಿ ಮೆರವಣಿಗೆಯೂ, ನೂರಾರು ಮಂದಿ ಯೂರೋಪಿಯನ್ನರಿಗೆ ಆತಿಥ್ಯಗಳೂ, ಕುದುರೆಗಳ ಜೂಜುಗಳೂ, ಇತರ ವಿನೋದಗಳೂ ಜರುಗುತ್ತವೆ ತಾ 5 ನೇ ಶುಕ್ರವಾರ ಅಧಿಕಾರಿಗಳೂ ಪ್ರಜೆಗಳ ಪ್ರತಿನಿಧಿಗಳೂ ಸೇರಿ ಮೈಸೂರು ಸಂಸ್ಥಾನದ ಸಂಪತ್ತನ್ನು ಹೆಚ್ಚಿಸುವ ಭಾಗಗಳನ್ನು ಕುರಿತು ಆಲೋಚನೆ ಮಾಡುವ ವಾರ್ಷಿಕ ಕೂಟವನ್ನು ನಡಿಸುತ್ತಾರೆ

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ರಾಯಚೂರಿನ ಕಲೆಕ್ಟರವರಾದ ಮ|| ಬಶಿರುದ್ದೀನ್ ಅಹಮದ್ ಸಾಹೇಬರು ರಾಜಧಾನಿಗೆ ಬಂದಿದ್ದರು ಕಳೆದ ಗುರುವಾರ ಸಾಯಂಕಾಲ ಅಡ್ವೊಕೇಟ್ ಮ|| ಎಂ ಸಿ ರಂಗಯ್ಯಂಗಾರ್ರವರು ಅವರನ್ನು ಕರಸಿಕೊಂಡು ತಮ್ಮ ಮನೆಯಲ್ಲಿ ಅಟ್ ಹೋಮ್ ಎಂಬ ಸಂತೋಷಕೂಟವನ್ನು ನಡಿಸಿದರು ರಾಜಧಾನಿಯಲ್ಲಿರುವ ಬಹು ಮಂದಿ ಹಿಂದೂ ಮಹಮದೀಯ ದೊಡ್ಡ ಮನುಷ್ಯರು ಕರಸಲ್ಪಟ್ಟಿದ್ದರು ಅಲ್ಪಾಹಾರವೂ, ವೈಣಿಕ ಶಿಖಾಮಣಿ ಮ|| ಶೇಷಣ್ಣನವರ ಇಂಪಾದ ವೀಣಾವಾದನವೂ, ವಿದ್ವಾನ್ ವೇ| ವಾಸುದೇವಾಚಾರ್ಯರ ಆಹ್ಲಾದಕರವಾದ ಹಾಡುಗಾರಿಕೆಯೂ ನಡೆದು ಎಲ್ಲರೂ ಮ|| ರಂಗಯ್ಯಂಗಾರ್ರವರ ಮೂಲಕ ಕಲೆಕ್ಟರವರ ಪರಿಚಯ ಹೊಂದಿ ತೆರಳಿದರು

ಈ ತಿಂಗಳ ಪ್ರಾರಂಭದಲ್ಲಿ ಅರಣೆ ಜಹಗೀರುದಾರರು ಬೆಂಗಳೂರಿನಲ್ಲಿ ಮೋಟರ್ ಗಾಡಿಯನ್ನು ರಾತ್ರಿ ನಡಿಸಿಕೊಂಡು ಹೋಗುತ್ತಿದ್ದಾಗ ಆ ಮೋಟರ್ ಗಾಡಿಯು ಎದುರಿಗೆ ಬರುತ್ತಿದ್ದ ಒಬ್ಬ ಮಹಮದಿಯನ ಒಂಟೆತ್ತಿನ ಗಾಡಿಗೆ ತಗುಲಿ ಅಪಾಯ ಸಂಭವಿಸಿ, ಎತ್ತು ಸತ್ತುಹೋಯಿತೆಂದೂ, ಮಹಮದಿಯನು ಗಾಯಪಟ್ಟು ಆಸ್ಪತ್ರೆಯಲ್ಲಿ ತೀರಿಹೋದನೆಂದೂ, ಪೋಲೀಸಿನವರು ಜಹಗೀರುದಾರರ ಮೇಲೆ ಮೊಕದ್ದಮೆ ಮಾಡಿದಾರೆಂದೂ ತಿಳಿಸಿದ್ದೆವಷ್ಟೆ ಈ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರಾದ ಮಿ|| ಕಾರ್ಸ್‌ರವರು ದಯಾರ್ಪಿವಾಡಿ ಮೊನ್ನೆ ಸೋಮವಾರ ತೀರ್ಮಾನವನ್ನು ಹೇಳಿದರು ಜಹಗೀರುದಾರರು 800 ರೂಪಾಯಿ ಜುಲ್ಮಾನೆ ಕೊಡಬೇಕು, ಇಲ್ಲವೇ ಎರಡು ತಿಂಗಳ ಸಾಧಾ ಸಜಾ ಅನುಭವಿಸಬೇಕು, ಜುಲ್ಮಾನೆ ವಸೂಲಾದರೆ 600 ರೂಪಾಯನ್ನು ಆ ಮಹಮದಿಯನ ಹೆಂಡತಿಗೆ ಕೊಡಬೇಕು ಮತ್ತು ಜಹಗೀರುದಾರರು ಒಂದು ವರುಷದ ತನಕ ಮೋಟರನ್ನು ಸ್ವತಂತ್ರಿಸಿ ನಡಿಸಕೂಡದು ಈ ರೀತಿ ಶಿಕ್ಷೆಯಾಗಿರುತ್ತದೆ ಜಹಗೀರುದಾರರು ಈಗ ಅದರ ಮೇಲೆ ಅಪೀಲ್ ಮಾಡುವವರಾಗಿದಾರೆ

ಸಂಸ್ಥಾನಮುಳೆ ಸರ್ಕಾರದಿಂದ ಗ್ರಾಂಟುಪಡೆಯುವಂಥಾ ಸ್ಕೂಲುಗಳಲ್ಲಿ 10 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಸಂಬಳವನ್ನು ಪಡೆಯುತ್ತಿರುವ ಉಪಾಧ್ಯಾಯರನ್ನು ಮೈಸೂರು ಸರ್ಕಾರದ ಇನ್ಷುರೆನ್ಸ್ (ಜೀವವಿಮೆ) ಫಂಡಿಗೆ ಸೇರಿಸಿಕೊಳ್ಳುವುದಾಗಿ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿದೆ ಅಂಥಾ ಸ್ಕೂಲುಗಳ ಮ್ಯಾನೇಜರುಗಳು ಪ್ರತಿ ತಿಂಗಳಲ್ಲೂ ತಮ್ಮ ಉಪಾಧ್ಯಾಯರ ಸಂಬಳದಲ್ಲಿ ಹತ್ತಕ್ಕೆ ಒಂದು ರೂಪಾಯಿಯಂತೆ ಹಿಡಿದು ಸರ್ಕಾರದ ಖಜಾನೆ ಪಾವತಿಮಾಡಬೇಕಾಗಿದೆ 1914 ನೇ ಜುಲೈ ತಾ 1 ರಿಂದ ಆಚೆಗೆ ಹೊಸ ದಾಖಲಾಗಿ ಸೇರುವವರೆಲ್ಲಾ ಈ ಫಂಡಿಗೆ ಸೇರಿಕೊಳ್ಳಬೇಕೆಂತಲೂ, ಈಗ ಉಪಾಧ್ಯಾಯರಾಗಿರುವವರು ಈ ಫಂಡಿಗೆ ಸೇರುವ ವಿಷಯದಲ್ಲಿ 1914 ಸೆಪ್ಟೆಂಬರ್ ಆಖೈರಿನೊಳಗಾಗಿ ಇಷ್ಟಾರ್ಥ ಮಾಡಿಕೊಳ್ಳುವಂತೆ ಅವರಿಗೆ ಮಾತ್ರ ಅವಧಿಯನ್ನು ಕೊಟ್ಟಿದೆ ಎಂದೂ ರೂಲಸು ಮಾಡಲಾಗಿದೆ ಈ ವಿಚಾರವು ಅನೇಕ ವರುಷಗಳಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿತ್ತು ಸರ್ಕಾರದವರು ಇದನ್ನು ಸ್ಯಾಂಕ್ಷನ್ ಮಾಡಿದ್ದರಿಂದ ಗ್ರಾಂಟ್ ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೂ ಸಹಾಯವಾಯಿತೆಂದು ಸಂತೋಷಪಡುತ್ತೇವೆ

ತುಮಕೂರು ನರಸೀಪುರದ ತಾಲ್ಲೂಕು ಕೃಷ್ಣರಾಜಪುರ ಅಗ್ರಹಾರದೊಳಗೆ ಮ|| ಶ್ರೀನಿವಾಸರಂಗಾಚಾರ್ಯರ ಮನೆಯಲ್ಲಿ ಒಡವೆ, ಹಣ, ಕರ್ಚಿ ಸಾಮಾನುಗಳು, ಬಟ್ಟೆಗಳು ಕಳುವಾದ ಸಂದರ್ಭದಲ್ಲಿ ಪೋಲೀಸಿನವರು ಮೂರು ಜನರನ್ನು ಹಿಡಿದು ಪತ್ತೆ ತರದೂದು ನಡಿಸುತ್ತಿದ್ದರು. ಈ ಪೈಕಿ ವ್ಯಕ್ತಿ ಸಿದ್ದಾಚಾರಿ ಎಂಬುವನು ದಸ್ತಗಿರಿಯಾದ ಏಳು ದಿನಗಳ ಮೇಲೆ ಕಳೆದ ಮಾರ್ಚಿ ಹಬ್ಬದ ದಿನ ಪೋಲೀಸಿನವರ ಸ್ವಾಧೀನದಲ್ಲಿದ್ದಾಗ ಸತ್ತುಹೋದನು ಮೃತನ ಸಂಬಂಧಿಗಳು ಪೋಲೀಸಿನವರ ಮೇಲೆ ಅವರು ಮೃತನನ್ನು ಹಿಂಸೆ ಮಾಡಿದ್ದರಿಂದ ಅವನು ಸತ್ತನೆಂದು ಮುಂತಾಗಿ ಅರ್ಜಿಹಾಕಿದರು ಪೋಲೀಸ್ ಇನ್ಸ್‌ಪೆಕ್ಟರು ತನಿಖೆಮಾಡಿ ಆ ಸಮಯದಲ್ಲಿ ಖೈದಿಗಳ ಮೇಲುಸ್ತುವಾರಿ ಇದ್ದ ಕಾನ್‌ಸ್ಟೇಬಲ್ ರಾಮ, ನಂಜುಂಡ, ಪಾಪಾಖಿಯು, ಮತ್ತು ದಫೇದಾರ್ ಕೆಂಚಪತಯ್ಯ ಈ ಐದು ಮಂದಿಯ ಮೇಲೂ ಇವರು ಮೃತನನ್ನು ಹಿಂಸೆ ಮಾಡಿದರೆಂದು ಮೊಕದ್ದಮೆ ತಂದಿದಾರೆ ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಪ್ರಥಮ ದರ್ಯಾಪ್ತಿ ಮಾಡುತ್ತಿದಾರೆ ಸರ್ಕಾರದ ಪರ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರವರೂ, ಅಪರಾಧಿಗಳ ತರಫು ಅಡ್ವೊಕೇಟ್ ಮ|| ಎ ರಾಮಣ್ಣನವರೂ ವಕಾಲತ್ತು ವಹಿಸಿರುವರು

ಮೈಸೂರು ಗೆಜೆಟ್ ಸಂಗ್ರಹ.

ಚಕ್ರವರ್ತಿ ಸಾರ್ವಭೌಮರವರ ಜನ್ಮೋತ್ಸವದ ನಿಮಿತ್ತ ಜೂನ್ ತಾ 1 ನೇ ಸೋಮವಾರ ಸಮಸ್ತ ಪಬ್ಲಿಕ್ ಆಫೀಸುಗಳೂ, ಕೋರ್ಟುಗಳೂ, ಖಜಾನೆಗಳೂ ಮುಚ್ಚಲ್ಪಡತಕ್ಕದ್ದು

ಮೈಸೂರು ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ|| ಎಲ್ ಎಚ್ ಬೆಕ್ ಯವರಿಗೆ ಜೂನ್ 11 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈಸೂರು ಅರಸೀಕೆರೆ ರೈಲ್ವೆ ಕಾಮಗಾರಿ ಇಲಾಖೆ ಅ|| ಇಂಜಿನಿಯರ್ ಮಿ|| ಕೆ ಅರುಣಾಚಲಂ ಅಯ್ಯರವರಿಗೆ ಹನ್ನೆರಡು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು

ಮುಂದೆ ಹೇಳುವವರಿಗೆ ಹೆಬ್ಬಿದ್ದ ಪಿಟ್ಟು ದೊರಕಿದ ಕಾರಣ ಅವರನ್ನು ಮೇ 27 ರಿಂದ ಮೈಸೂರು ಸೆಂಟ್ರಲ್ ಬ್ಯಾಂಕಿನ ಸಮಾಜದ ಮೆಂಬರುಗಳಾಗಿ ನೇಮಕಮಾಡಿದೆ —ಮ|| ಗುಂಡ (ಕಾನ್‌ಕಾನಹಳ್ಳಿ) ಗುರುಕಾರ್ ಪುಟ್ಟಮಾದೇಗೌಡರು, (ಕೋಲಾರ್) ಜಿ ಗಿರಿಯಾಚಾರಯರು, (ಮಾಗಡಿ) ಸಾಹುಕಾರ್ ಮುಕೆಟ್ಟರು, (ಶ್ರೀರಂಗಪಟ್ಟಣ) ವೀಣೆ ರಂಗಸ್ವಾಮಯ್ಯಂಗಾರ್ರು, (ಹಾಸನ) ಗುರುಕಾರ್ ಜೊಗಕೆರೆ ಬಸವೇಗೌಡರು, (ಶಿಕಾರಿಪುರ) ಎಸ್ ಎಚ್ ..., (ಚಿತ್ರದುರ್ಗ) ಎಂ ಬಿ ಕೃಷ್ಣರಾಯರು, (ಚಿಕ್ಕಮಗಳೂರು) ...ಮಯ್ಯನವರು

ಕೋಲಾರದ ಮುನ್‌ಸಿಫ್ ಮ|| ಎನ್ ನರಸಿಂಹಯ್ಯಂಗಾರ್ರಿಗೆ ಮೇ ತಾ 25 ರಿಂದ ಆರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ಮೈಸೂರು ಅಡ್ವೊಕೇಟ್ ಮ|| ಬಿ ರಘುನಾಥಾಚಾರ್ರನ್ನು ಸಾಗರದ ಮುನ್‌ಸಿಫರಾಗಿಯೂ, ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೆದಾರ್ ಮ|| ಎಸ್ ಆರ್ ರಾಮಸ್ವಾಮಿ ಅಯ್ಯರನ್ನು ಕೋಲಾರದ ಮುನ್‌ಸಿಫರಾಗಿಯೂ ನೇಮಿಸಲ್ಪಟ್ಟಿದೆ

ಮುಂದೆ ಹೇಳುವ ಮುನ್‌ಸಿಫರ ವರ್ಗಾವರ್ಗೀ ಹುಕುಂ ಮಾಡಿದೆ—ಮ|| ಎನ್ ಜಿ ಲಕ್ಷ್ಮೀನರಸಿಂಹಯ್ಯಂಗಾರ್ರು ಚಿಕ್ಕಮಗಳೂರಿನಿಂದ ಚಿತ್ರದುರ್ಗಕ್ಕೆ ಮ|| ಡಿ ಆಳಸಿಂಗ್ರಾಚಾರ್ರು ಸಾಗರದಿಂದ ಚಿಕ್ಕಮಗಳೂರಿಗೆ, ಮ|| ಎಂ ಎಲ್ ಶ್ರೀಕಂಠೇಗೌಡರು ಶಿವಮೊಗ್ಗೆಯಿಂದ ಮದ್ದಗಿರಿಗೆ, ಮ|| ಎಚ್ ಎಂ ಕೃಷ್ಣಸ್ವಾಮಿಯವರು ಮದ್ದಗಿರಿಯಿಂದ ಶಿವಮೊಗ್ಗೆಗೆ

ಮ|| ಸಿ ಎ ರಾಮಸ್ವಾಮಿ ಅಯ್ಯಂಗಾರ್ರನ್ನು ಎರಡು ವರುಷ ಹಂಗಾಮಿಯಾಗಿ 160 ರೂಪಾಯಿ ಸಂಬಳದ ಮೇಲೆ ಸೂಪರವೈಸರಾಗಿ ನೇಮಕಮಾಡಿ ಕಾವೇರಿ ರಿಜರ್ವಾಯರ್ ಕಾಮಗಾರಿಯ ಯಡತೊರೆ ಡಿವಿಜನ್‌ಗೆ ವರ್ಗಮಾಡಿದೆ

ಸ್ಪೆಷಲ್ ಡ್ಯೂಟಿ ಮೇಲಿದ್ದ ಮ|| ಕರ್ಪೂರ್ ಶ್ರೀನಿವಾಸರಾಯರು ಮೇ ತಾ 18 ರಲ್ಲಿ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನೂ, ಮ|| ಕೆ ಕೃಷ್ಣಯ್ಯಂಗಾರ್ರು ಡಿಪ್ಟಿ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನೂ ವಹಿಸಿಕೊಂಡಿದಾರೆ

ಮೈಸೂರು ತಾಲ್ಲೂಕ್ ಅಮಲ್ದಾರ್ ಮಿ|| ಮಹಮದ್ ಪೀರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ—ಶಿರಸ್ತೆದಾರ್ ಮ|| ಎಂ ನಾರಾಯಣರಾಯರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಒಂದು ಆಶ್ಚರ್ಯವಾದ ಸಂಗತಿ

ನೋಡಿದವರಿಗೆ ನಿಜ, ಕೇಳಿದವರಿಗೆ ಸುಳ್ಳು

ಇದೇ ಏಡ್ಲಘಟ್ಟದ ತಾಲ್ಲೂಕು ಯಣ್ಣೂರು ಗ್ರಾಮದಲ್ಲಿ ವಾಸವಾಗಿರುವ ವೈಷ್ಣವರ ರಂಗಪ್ಪನೆಂಬಾತನಿಗೆ ಇಬ್ಬರು ಹೆಂಡತಿಯರು ಇವರ ಪೈಕಿ ಹಿರಿಯ ಹೆಂಡತಿಯು ಗಂಡನ ಮನೆಯನ್ನು ಬಿಟ್ಟು ತೌರುಮನೆಯಲ್ಲಿ ಇದಾಳಂತೆ ಈ ಗಂಡನ ಸ್ವಾಧೀನದಲ್ಲಿರುವ ಕಿರೀ ಹೆಂಡತಿಯಾದ ಗೋಪಮ್ಮ ಎಂಬ ಯೌವನವತಿಗೆ ಒಂದುವರೆ ತಿಂಗಳಿಂದ ಅಕಸ್ಮಾತ್ತಾಗಿ ಪ್ರತಿನಿತ್ಯವೂ ಅನೇಕ ಕಲ್ಲುಗಳು ಎಲ್ಲಿ ಯಾವ ಕೆಲಸಮಾಡುತ್ತಿದ್ದಾಗಲೂ ಬಂದು ಬೀಳುತ್ತವೆಂದು ವರ್ತಮಾನ ಹುಟ್ಟಿ, ಪ್ರಜೆಗಳಲ್ಲಿ ಹರಡಿಕೊಂಡಿತು ಈ ವರ್ತಮಾನವನ್ನು ತಿಳಿದು ನಮ್ಮ ತಾಲ್ಲೂಕು ಅಮಲ್ದಾರ್ ಮಿ|| ಫ್ರಾಂಕ್ ಸಾಹೇಬರವರೂ, ಸಬ್ ರೆಜಿಸ್ಟ್ರಾರವರೂ ಅಲ್ಲಿಗೆ ಹೋಗಿ ವಿಚಾರಿಸಿ ಆಜಮಾಯಿಷಿ ಮಾಡಿದ್ದರಲ್ಲಿ ಅವರು ಪ್ರತಿ ದಿನವೂ ಕಲ್ಲುಗಳು ಬೀಳುತ್ತವೆ ಎಂತಲೂ, ಆಕೆಯನ್ನು ಎಲ್ಲಿ ಯಾರ ಮನೆಯಲ್ಲಿ ಇಟ್ಟಾಗ್ಯೂ ಆಕೆಯ ಕಣ್ಣಿಗೂ ಅಲ್ಲಿರುವ ಮತ್ಯಾರ ಕಣ್ಣಿಗೂ ಕಾಣಿಸದಂತೆ ಎಲ್ಲಿಂದಲೋ ಕಲ್ಲುಗಳು ಬಂದು ಆಕೆಯ ಬೆನ್ನಿಗೂ ಎದೆಗೂ ಸೋಕಿದ ಹಾಗೆ ಆಗಿ ಹುಡುಗಿಯು ಗಾಬರಿಯಿಂದ ಹಾ ಕಲ್ಲುಬಿತ್ತೆಂದು ಕೂಗುವಾಗ್ಗೆ ಎಲ್ಲರೂ ಕೇಳುವ ಹಾಗೆ ಧುಸ್ಸನೆ ಶಬ್ದವಾಗಿ ಭೂಮಿಯ ಮೇಲೆ ಕಲ್ಲು ಕಾಣಿಸುವುದೆಂತಲೂ, ಹುಡುಗಿಗೆ ಸೋಕಿದ ಶರೀರಭಾಗದಲ್ಲಿ ಯಾವ ವಿಧವಾದ ಘಾಯಗಳೂ ಕಾಣುವುದಿಲ್ಲವೆಂತಲೂ, ಕಲ್ಲಿನ ಪೂರಾ ಏಟು ಆಕೆಯ ಮೇಲೆ ಬೀಳುವುದಿಲ್ಲವೆಂತಲೂ, ಬಿದ್ದ ಕಲ್ಲುಗಳು ಒಂದು ಸೇರಿನ ತೂಕದಿಂದ ಹನ್ನೆರಡು ಸೇರಿನ ತೂಕದ ಕಾಡುಕಲ್ಲುಗಳೂ ಬೆಣಚು ಕಲ್ಲುಗಳೂ ರಾಗಿ ಬೀಸುವ ಕಲ್ಲಿನ ಹೋಳುಗಳೂ ಬೀಳುತ್ತವೆ ಎಂತಲೂ, ಬಿದ್ದ ಕಲ್ಲುಗಳು ಮಾಯವಾಗದೆ ಕಲ್ಲಿನ ಸ್ವಲ್ಪಭಾಗ ಮಾತ್ರ ನೂತನ ವಾಯುವಾಗಿ ಇರುತ್ತವೆ ಎಂತಲೂ, ಇನ್ನೂ ಕೆಲವರು ಪರೀಕ್ಷಾರ್ಥವಾಗಿ ಒಂದು ಚಿಕ್ಕಮನೆಯಲ್ಲಿ ಇಟ್ಟು ಗವಾಕ್ಷಿಗಳನ್ನೂ ಕಿಟಕಿಗಳನ್ನೂ ಬಾಗಿಲನ್ನೂ ಮುಚ್ಚಿ ತಾವು ನಾವೇ ಕೆಲವು ಜನರು ಒಳಗೆ ಇದ್ದು ಆಕೆಯನ್ನು ಒಂದು ಬಟ್ಟೆ ಬುಟ್ಟಿಯೊಳಗೆ ಮಲಗಿಸಿದ್ದಾಗ್ಯೂ ಬುಟ್ಟಿಯೊಳಗೆ ಶಬ್ದವಾಗಿ ಹುಡಗಿಯು ಹಾ ಕಲ್ಲುಬಿತ್ತೆಂದು ಹೇಳುವಾಗ್ಗೆ ಎಲ್ಲರೂ ನೋಡಿದ ಹಾಗೆ ಒಳಗೆ ಕಲ್ಲು ಬಿದ್ದಿತ್ತೆಂತಲೂ, ಕದವೂ ಕಿಟಕಿಗಳೂ ಯಾವವೂ ತೆರೆಯಲ್ಪಡಲಿಲ್ಲವೆಂತಲೂ ತಿಳಿಯಬಂದಿತಂತೆ ಇದನ್ನೆಲ್ಲಾ ಕೇಳಿ ನಮ್ಮ ಅಮಲ್ದಾರ್ ಸಾಹೇಬರವರೂ, ಸಬ್ ರೆಜಿಸ್ಟ್ರಾರವರೂ ಕಲ್ಲುಗಳನ್ನೂ ಹುಡುಗಿಯನ್ನೂ ಸಹ ಫೋಟೋ ತೆಗೆದುಕೊಂಡು ಬಂದಿದಾರೆ ಈ ಫೋಟೋದಲ್ಲಿ ಕಾಣಿಸುವ ಕಲ್ಲಿನ ರಾಶಿಯು ಸುಮಾರು ಒಂದೆರಡು ಗಾಡಿಗಳಾಗಬಹುದು ಇದನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಆಕೆಯನ್ನು ನಮ್ಮ ಊರಿಗೆ ಕರೆಯಿಸಿಕೊಂಡು 3-4 ದಿನ ಇಲ್ಲಿಯೇ ಇಟ್ಟು ನೋಡಿದ್ದರಲ್ಲಿ ಅಷ್ಟು ವಿಶೇಷವಿಲ್ಲದೆ 1-2 ದಿನ 2-3 ಕಲ್ಲುಗಳು ಮಾತ್ರ ಬಿದ್ದವೆಂದು ಅವರ ಮನೆಯವರು ಅಮಲ್ದಾರ್ ಸಾಹೇಬರಿಗೆ ತೋರಿಸಿದರು ಈ ವಿಷಯವು ಬಹಳ ಆಶ್ಚರ್ಯವಾದದ್ದಾಗಿದೆ ನಿಜಸ್ಥಿತಿ ಏನೋ ತಿಳಿಯದು.

ಬಾತ್ಮೀದಾರ್

[ಈ ಬಾತ್ಮೀದಾರರು ಇಲ್ಲಿ ಹೇಳಿರುವ ಫೋಟೋವಿನ ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿದಾರೆ ಈ ಫೋಟೋದಲ್ಲಿ ಮೇಲ್ಕಂಡ ಹೆಣ್ಣುಮಗಳು ನಿಂತಿರುವಳು ಈಕೆಯ ಕಾಲಿನ ಬಳಿ ಬಲಗಡೆ ದೊಡ್ಡ ಕಲ್ಲುಗಳ ರಾಶಿಯೂ, ಎಡಗಡೆ 3-4 ದೊಡ್ಡ ಸಣ್ಣ ಕಲ್ಲುಗಳೂ ಬಿದ್ದಿರುತ್ತವೆ —ಎಡಿ]

ಗ್ರಾಮದಲ್ಲಿರುವ ಗುಂಡಿಗಳಿಂದಾಗುವ ಅಪಾಯ

ಚಿತ್ರದುರ್ಗ ತಾಲ್ಲೂಕು ಕೊಣಬೇವು ಗ್ರಾಮದ ಉತ್ತರಕ್ಕೆ ಜನರು ಬಳಸುವ ಭಾವಿಯ ಮತ್ತು ದಾರಿಯ ಮೇಲಾಗದಲ್ಲಿ ಗ್ರಾಮದ ಸಮೀಪದಲ್ಲಿಯೇ 2-3 ಆಳು ಪ್ರಮಾಣವುಳ್ಳ ಗುಂಡಿಗಳು ಇರುವವು ಇವು ಮಳೆಗಾಲದಲ್ಲಿ ಗ್ರಾಮದ ಪಾಚೀಜು ನೀರಿನಿಂದ ತುಂಬಿ ದುರ್ವಾಸನೆಯಿಂದಲೂ, ಬಳಸುವ ಭಾವಿಯ ನೀರು ಕೆಡುವದರಿಂದಲೂ ಜನರು ರೋಗದಿಂದ ಬಹಳವಾಗಿ ನರಳುತ್ತಾರೆ ಮತ್ತು ಈಗ 15-20 ದಿನಗಳ ಕೆಳಗೆ ಸ್ವಲ್ಪ ಮಳೆ ಬಂದುದರಿಂದ ಗ್ರಾಮದ ಪಾಚೀಜು ನೀರೆಲ್ಲಾ ಬಂದು ಆಳು ಪ್ರಮಾಣವುಳ್ಳ ಗುಂಡಿಗೆ ತುಂಬಿಕೊಂಡಿತ್ತು ಮತ್ತು ಮೇ ತಾ 18 ನೇ ಸೋಮವಾರ ಮಧ್ಯಾಹ್ನ ಒಂದು ಘಂಟೆ ಸಮಯದಲ್ಲಿ ಕೆಲವು ಚಿಕ್ಕ ಹುಡುಗರು ಸೇರಿ ಆಡಿಕೊಳ್ಳುತ್ತಾ, ಆ ಗುಂಡಿಯ ಹತ್ತಿರಕ್ಕೆ ಹೋಗಿರುವಾಗ್ಗೆ ವೀರಭೈರವ ಎಂಬ ಮೂರು ವರ್ಷದ ಒಂದು ಹೆಣ್ಣುಕೂಸು ಅಕಸ್ಮಾತ್ತಾಗಿ ಆ ಗುಂಡಿಯಲ್ಲಿ ಬೀಳಲು ಮಿಕ್ಕ ಹುಡುಗರೆಲ್ಲಾ ಅಲ್ಲಿಯೇ ನೋಡಿಕೊಳ್ಳುತ್ತಾ ನಿಂತಿರಲು, ನಾಲ್ಕು ವರ್ಷದ ಹುಡುಗನೊಬ್ಬನು ಓಡಿಹೋಗಿ ಆ ಹುಡುಗಿಯ ತಾಯಿತಂದೆಗಳಿಗೆ ತಿಳಿಸಲು ಅವರು ಗಾಬರಿಯಿಂದ ಓಡಿಹೋಗಿ ನೋಡಿದಾಗ ಕೂಸು ನೀರಿನಲ್ಲಿ ಮುಳುಗಿರಲು ಕಾಣಲಿಲ್ಲ ಆಗ ಮತ್ತಷ್ಟು ಗಾಬರಿಯಾಗಿ ನೀರಿನಲ್ಲಿ ಇಳಿಯುವಷ್ಟರಲ್ಲಿ ಕೂಸು ಮೇಲಕ್ಕೆ ಏಳಲು ಆಗ ಅದನ್ನು ಹಿಡಿದು ಮೇಲಕ್ಕೆ ತಂದು ನೋಡಲು ನೀರು ಕುಡಿದು ಹೊಟ್ಟೆ ಊದಿಕೊಂಡು ಶ್ವಾಸವಾಡದಿರಲು ಅವರ ತಂದೆತಾಯಿಗಳ ಗೋಳಾಟ ಜಾಸ್ತಿಯಾಯಿತು ಅಷ್ಟರಲ್ಲೇ ಮೂಗಿನಿಂದ ಸ್ವಲ್ಪ ಶ್ವಾಸ ಹೊರಡಲು ಒಬ್ಬನು ಕೂಸನ್ನು ಹಿಡಿದು ಅಪ್ಪಾಲೆ ಆಡಿಸಲು ಬಾಯಿಯಲ್ಲಿಯೂ, ಮೂಗಿನಲ್ಲಿಯೂ ನೀರೆಲ್ಲಾ ಹೊರಗೆ ಬರಲು ಶ್ವಾಸವಾಡುವದಕ್ಕೆ ಪ್ರಾರಂಭವಾಯಿತು ಅನಂತರ ಮನೆಗೆ ಎತ್ತಿಕೊಂಡು ಹೋದರು ಈಗ ಕೂಸು ಸುಖವಾಗಿರುತ್ತದೆ ಇದರಿಂದ ಇಂಥಾ ಗುಂಡಿಗಳು ಗ್ರಾಮದ ಸಮೀಪದಲ್ಲಿಯೂ, ಬಳಸುವ ಭಾವಿಯ ಸಮೀಪದಲ್ಲಿಯೂ, ಸ್ಥಳದ ಮತ್ತು ಪರಸ ಳದ ಜನರೂ ಗಾಡಿಗಳೂ ಸಹ ತಿರುಗಾಡುವ ದಾರಿಗಳ ಎರಡು ಪಕ್ಕಗಳಲ್ಲಿಯೂ ಇರುವದರಿಂದ ಮೇಲೆ ಹೇಳಿದಂತೆ ಪ್ರಾಣಹಾನಿಗೂ, ರೋಗಾದಿಗಳಿಗೂ ಅವಕಾಶ ಉಂಟಾಗುತ್ತದೆ ತಾಲ್ಲೂಕು ಅಧಿಕಾರಿಗಳು ಇಂಥವುಗಳನ್ನು ತಮ್ಮ ಮನಸ್ಸಿಗೆ ತಂದುಕೊಂಡು ತಕ್ಕ ಪ್ರಯತ್ನದಿಂದ ಅವುಗಳನ್ನು ಮುಚ್ಚಿಸಿ ರೋಗಾದಿಗಳಿಗೂ ಪ್ರಾಣಹಾನಿಗೂ ಅವಕಾಶವಿಲ್ಲದಂತೆ ಮಾಡಿಸುವರೆಂದು ನಂಬಿದೇನೆ

ಪ್ರತ್ಯಕ್ಷದರ್ಶಿ.

[ಇಂಥಾ ಕಡೆ ಗ್ರಾಮದ ಮುಖಂಡರು ಪ್ರಜೆಗಳಿಗೆ ವಿವೇಕ ಹೇಳಿ ತಿಂಗಳಿಗೆ ಒಂದೆರಡು ದಿನ ಇಂಥಾ ಕೆಲಸಕ್ಕೆ ಎಲ್ಲರೂ ಬರುವಂತೆ ಮಾಡಿಕೊಂಡು ಅವರುಗಳೆಲ್ಲಾ ಸೇರಿ ಗ್ರಾಮದಲ್ಲಿ ಅವಶ್ಯವಾದ ಇಂಥಾ ಗುಂಡಿ ಮುಚ್ಚುವುದೇ ಮೊದಲಾದ ಕಾರ್ಯಗಳನ್ನು ಸುಲಭವಾಗಿ ಮಾಡಿಕೊಳ್ಳಬಹುದು ಇಂಥಾ ಕೆಲಸಗಳಿಗೆ ಸರ್ಕಾರದವರ ಕೈಕಾಮವು ನಿಷ್ಪ್ರಯೋಜನ —ಎಡಿ]

ಇಂಡಿಯಾ ದೇಶದ ವೃತ್ತಾಂತಗಳು

ಡಾರ್ಜಿಲಿಂಗ್ ಪಟ್ಟಣದ ರೈಲ್ವೆ ಸ್ಟೇಷನ್ ಆವರಣದಲ್ಲಿ ವ್ಯಾಪಾರಸ್ಥರ ಸರಕುಗಳು ಭರ್ತಿಯಾಗಿದ್ದ ಮನೆಗೆ ಬೆಂಕಿ ಬಿದ್ದು ಸುಮಾರು 30,000 ರೂಪಾಯಿ ನಷ್ಟವಾಯಿತು

ಬೊಂಬಾಯಿ ಪಟ್ಟಣದಲ್ಲಿ ಒಬ್ಬ ವೈರಾಗಿಯು ಗೋವಿಂದಜಿ ಮಾಧವಜಿ ಎಂಬ ಭಾರೀ ಸಾಹುಕಾರನ ಕೂಡ ವಾಗ್ವಾದ ಮಾಡಿ ಗಾಯಪಡಿಸಿದನು ಆ ಸಾಹುಕಾರನಿಗೆ ಹಾನಿಯಾಗದೆ ಬಾಬವಾದನು

ಬರೋಡಾ ಗವರ್ನಮೆಂಟಿನವರು ಮೊಹುವಾ ಎಂಬ ಊರಿನಿಂದ ಅನಾವಲ ಎಂಬ ಊರಿನ ತನಕ 18 ಮೈಲಿ ರೈಲ್ ರಸ್ತೆ ಹಾಕಿಕೊಳ್ಳಬಹುದೆಂದು ಇಂಡಿಯಾ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

ಹೌರಾ ಪಟ್ಟಣದ ಟಿಂಡರ್ ಬಾಗನ್ ರೋಡಿನಲ್ಲಿ ಎಕ್ಸೈಜ್ ಅಧಿಕಾರಿಗಳು ಒಂದು ಮನೆಗೆ ನುಗ್ಗಿ ಶೋಧನೆ ಮಾಡಿದಾಗ 3,700 ಪೊಟ್ಟಣಗಳ ಕೋಕೇನ್ ಎಂಬ ಮದ್ದವಸ್ತುವು ಸಿಕ್ಕಿತು ಹತ್ತು ಜನರನ್ನು ದಸ್ತಗಿರಿ ಮಾಡಿದರು

ಕಲ್ಕತ್ತಾ ಪಟ್ಟಣದಲ್ಲಿ ನಾಗೇಂದ್ರನಾಥ ಮುಖರ್ಜಿ ಎಂಬೊಬ್ಬ ವಕೀಲನು ಕೆಲವು ಮೊಕದ್ದಮೆಗಳಲ್ಲಿ ಕಕ್ಷಿಗಾರರಿಗೆ ಮೋಸಪಡಿಸಿದನೆಂದು ಈಗ ದಸ್ತಗಿರಿ ಮಾಡಲ್ಪಟ್ಟಿದಾನೆ ಇವನ ಗುಮಾಸ್ತೆಯು ಪೋಲೀಸಿನವರು ಬಂದದ್ದನ್ನು ನೋಡಿ ತಲೆತಪ್ಪಿಸಿಕೊಂಡು ಹೋದವನು ಇನ್ನೂ ಸಿಕ್ಕಿ ಇಲ್ಲ

ಮೆರಟ ನಗರದ ಫಿತೂರಿ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಇಪ್ಪತ್ತೊಂದು ಮಂದಿ ಅಪರಾಧಿಗಳ ಮೇಲೆ ಸಾಕ್ಷಿಗಳ ವಿಚಾರಣೆ ಮಾಡಿ ಕಳೆದ ವಾರ ಅವರನ್ನೆಲ್ಲಾ ಸೆಷನ್ಸ್ ಕೋರ್ಟಿಗೆ ಕಳುಹಿಸಿಕೊಟ್ಟರು ಸೆಷನ್ಸ್ ಜಡ್ಜರು ಮೊನ್ನೆ ಸೋಮವಾರದಿಂದ ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡುತ್ತಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಮೊಹಿತ್ ಎಂಬೊಬ್ಬ ಕೋರ್ಟ್ ಅಮೀನನು ಒಬ್ಬ ಹಿಂದೂ ಸ್ತ್ರೀಯು ವಾಸವಾಗಿದ್ದ ಮನೆಯಿಂದ ಆಕೆಯನ್ನು ಕೋರ್ಟಿನ ಹುಕುಂ ಪ್ರಕಾರ ಹೊರಡಿಸಬೇಕೆಂದು ಹೋಗಿ ಹೊಡೆದು ಅವಮಾನಪಡಿಸಿದನು ಇವನ ಅಕೃತ್ಯವು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಆ ಅಮೀನನಿಗೆ 50 ರೂಪಾಯಿ ಜುಲ್ಮಾನೆಯನ್ನು ವಿಧಿಸಿರುತ್ತಾರೆ

ಮಹಾಬಲೇಶ್ವರದಲ್ಲಿ ಬೊಂಬಾಯಿ ಗವರ್ನರವರು ಮುರಾರ್ಜಿ ಗೋಕುಲದಾಸರವರ ಹೆಸರಿನ ಮೇಲೆ ಕಟ್ಟಿದ್ದ ಆಸ್ಪತ್ರೆಯನ್ನು ಪ್ರಾರಂಭ ಮಾಡಿದರು ಮ|| ನರೋತ್ತಮರವರು ಷಿಬಿರಿ ಎಂಬ ಕಟ್ಟಡವನ್ನೂ ವಿಸ್ತಾರವಾದ ನಿವೇಶನವನ್ನೂ ಈ ಆಸ್ಪತ್ರೆಗೆ ಕೊಟ್ಟು ...,000 ರೂಪಾಯಿ ನಗದನ್ನೂ ಕೊಟ್ಟರು ಲೇಟ್ ದರಂಸೀ ಯವರ ಪತ್ನಿಯು 8,000 ರೂಪಾಯಿ ತಮ್ಮ ಹೆಸರಿನಲ್ಲಿ ಕೊಟ್ಟಿದಾರೆ.

ಕಳೆದ ತಾ 16 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಸರ್ಕಾರಿ ಲೆಕ್ಕಗಳ ಪ್ರಕಾರ 6,118 ಜನರಿಗೆ ಪ್ಲೇಗ್ ತಗಲಿತು, 6,053 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ— ಪಂಜಾಬ್ 3,365, ಸಂಯುಕ್ತ ಆಧಿಪತ್ಯಗಳು 1,169 ಬೀರಾರ್ ಮತ್ತು ಬಿಹಾರ್ ... 689, ಬೊಂಬಾಯಿ ಆಧಿಪತ್ಯ 337, ಬಂಗಾಳಾ 23, ಮದರಾಸ್ 2, ಬರ್ಮಾ 105, ಮೈಸೂರು ಸಂಸ್ಥಾನ 31

ಕಲ್ಕತ್ತಾ ಪಟ್ಟಣದಲ್ಲಿ ಕಾಬೂಲಿ ಜನರು ಪ್ರಜೆಗಳಿಗೆ ಸಾಲ ಕೊಟ್ಟು ಸಾಲಗಾರರನ್ನು ಹಿಡಿದು ರಾಜಬೀದಿಯಲ್ಲಿ ಪೋಲೀಸಿನವರ ಎದುರಿಗೇನೇ ದೊಣ್ಣೆಗಳಿಂದ ಹೊಡೆದು ಹಿಂಸೆಪಡಿಸುವುದು ಮತ್ತೆ ಪ್ರಾರಂಭವಾಗಿದೆ ಇದನ್ನು ತಡೆಯಲು ಪೋಲೀಸಿನವರು ಅಸಮರ್ಥರಾದದ್ದನ್ನು ಕಂಡು, ಪೋಲೀಸ್ ಕಮಿಷನರವರು ಇನ್ನು ಮುಂದೆ ಕಾಬೂಲಿ ಜನರ್ಯಾರೂ ರಾಜಬೀದಿಗಳಲ್ಲಿ ತಿರುಗುವಾಗ ದೊಣ್ಣೆಗಳನ್ನು ಹಿಡಿದು ತಿರುಗಕೂಡದು ಎಂದು ಇಸ್ತಿಹಾರು ಹಾಕಿಸಿದಾರೆ ಇದರಿಂದಲಾದರೂ ಅವರ ಹಾವಳಿ ಕಡಿಮೆಯಾದೀತೆಂದು ಅಲ್ಲಿನ ಅಧಿಕಾರಿಗಳು ಊಹಿಸುತ್ತಾರೆ

ಶ್ರೀರಂಗಪಟ್ಟಣದಲ್ಲಿ ಒಂದು ಆಯುರ್ವೇದ ವಿದ್ಯಾಶಾಲೆಯನ್ನೂ, ಅದಕ್ಕೆ ಸಂಬಂಧಪಟ್ಟಂತೆ ಒಂದು ಧರ್ಮದ ವೈದ್ಯಶಾಲೆಯನ್ನೂ ಸ್ಥಾಪಿಸಬೇಕೆಂದು ತಿರುಚಿನಾಪಳ್ಳಿ ಡಿಸ್ಟ್ರಿಕ್ಟಿಗೆ ಸೇರಿದ ಪರಸೂರು ಮಿರಾಸದಾರರಾದ ಮ|| ಆರ್ ಕೆ ಪ್ರಸನ್ನ ವೆಂಕಟೇಶ ರಾಯಗೋಪುರವರು ಮೊದಲು 1,000 ರೂಪಾಯಿ ಕೊಟ್ಟಿದ್ದರು ಈಗ ಅವರು ಮತ್ತೆ ಲಪಕ್ಕಾಗಿಯೇ 20,000 ರೂಪಾಯಿ ಕೊಟ್ಟಿದಾರೆ ಈ ಹಣವನ್ನು ತಿರುಚಿನಾಪಳ್ಳಿಯ ಬ್ಯಾಂಕಿನಲ್ಲಿ ಇಟ್ಟಿರುವರು ಅದರ ಬಡ್ಡಿಯಿಂದ ಮೇಲ್ಕಂಡ ಧರ್ಮಕಾರ್ಯಗಳನ್ನು ನಡಿಸುವಂತೆ ಏರ್ಪಾಡಾಗಿದೆ ಮದರಾಸಿನ ಆಯುರ್ವೇದ ವಿದ್ಯಾಶಾಲೆಯಲ್ಲಿ ಓದಿ ತೇರ್ಗಡೆ ಹೊಂದಿರುವ ಒಬ್ಬ ವೈದ್ಯರನ್ನು ನೇಮಿಸಿ ಇಷ್ಟರಲ್ಲೇ ಅವೆರಡನ್ನೂ ಪ್ರಾರಂಭ ಮಾಡುತ್ತಾರೆಂದು ತಿಳಿಯುವುದು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಚಿನಾಕುರಿ ಎಂಬ ಬಹು ಪುರಾತನ ಕಾಲದ ಕಲ್ಲಿದ್ದಲ ಗಣಿಯಲ್ಲಿ ಕೂಲಿಮಾಡುತ್ತಿದ್ದ ಸಾಧು, ನೀಸಿ, ಮುಂತಾದ ಹತ್ತು ಮಂದಿ ಪಂಜಾಬಿಗಳು ಸಾಂತಾಲ್ ಪರಗಣಗಳು, ಬ್ಯಾಂಕೂರ, ಹಜಾರಿಬಾಗ್, ಕಟ್ಟಾಕ್, ಬರ್ದವಾನ್, ಈ ಪ್ರಾಂತ್ಯಗಳಲ್ಲಿ ದರೋಡೆಗಳನ್ನು ಮಾಡಿ ಸಗನಾಗ್ಗಳನ್ನು ದೋಚುತ್ತಾ ಇದ್ದರು 1899 ನೇ ಇಸವಿಯಿಂದ 1913 ನೇ ಮೇ ತಿಂಗಳ ತನಕ ಅವರ ಕೃತ್ಯಗಳಿಗೆ ಅಡ್ಡಿಯೇನೂ ಉಂಟಾಗಲಿಲ್ಲ 1913 ನೇ ಇಸವಿಯಲ್ಲಿ ಒಂದು ಮೊಕದ್ದಮೆಯಲ್ಲಿ ಅವರು ದಸ್ತಗಿರಿ ಮಾಡಲ್ಪಟ್ಟರೂ ರುಜುವಾತಾಗದೆ ಅವರಿಗೆ ಬಿಡುಗಡೆಯಾಯಿತು ಕಳೆದ ವರುಷ ಮೇ ತಿಂಗಳಲ್ಲಿ ಅವರನ್ನು ಪೋಲೀಸಿನವರು ಹಿಡಿದರು ಇವರು ಆಲೂಕ ಎಂಬಲ್ಲಿ ನಡಿಸಿದ ದರೋಡೆಯು ರುಜುವಾತಾಯಿತು ಅವರ ಬಳಿ ಅಪಾರ ಸಗನಾಗ್ಗಳೂ ಬಟ್ಟೆಬರೆಗಳೂ ಸಿಕ್ಕಿದ್ದಲ್ಲದೆ ಬಂದೂಕು ಮದ್ದು ಗುಂಡು ಸಹ ಸಿಕ್ಕಿದವು ಅವರಿಗೆ ...

PRINTING PRESS FOR SALE.

The Printing Press upon which this Newspaper is being printed is for sale Size, Double Demy Fittings for hand or power. May be seen working by appointment Price, Rs 1,200

Apply to—

THE MANAGER

Wesleyan Mission Press

[117] Mysore City

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವುದು ನಮ್ಮ ಏಜಂಟರು ಬಿ ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ ಕೆಲವು ಏಜೆಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಆಖೈರಿಗೆ ಸರಿಯಾಗಿ ಕಳುಹಿಸಿಕೊಡು ತ್ತಾರೆಂದು ನಿರೀಕ್ಷಿಸಲಾಗಿದೆ

ಮ್ಯಾನೇಜರ್, ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ

—o—

ಸನ್ ೧೯೧೪ ನೇ ಇಸವಿ ಮೇ ತಾ ೨೮ ನೇ ಗುರುವಾರ

ಬ್ರಿಟಿಷ್ ಸಾಮ್ರಾಜ್ಯವೂ ಹಿಂದುಸ್ಥಾನದ ಪ್ರಜೆಗಳೂ

ಹಿಂದುಸ್ಥಾನದ ಪ್ರಜೆಗಳು ಸುಮಾರು ನಾಲ್ಕು ನೂರು ಮಂದಿ ಜಪಾನ್ ಕಂಪೆನಿಯವರ ಒಂದು ಜಹಜಿನಲ್ಲಿ ಪ್ರಯಾಣಮಾಡಿಕೊಂಡು ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಪಶ್ಚಿಮ ದಡವನ್ನು ತಲಪುರುತ್ತಾರೆ ಕೆನಡಾ ದೇಶದ ಅಧಿಕಾರಿಗಳು ಇವರನ್ನು ಜಹಜಿನಿಂದ ಇಳಿಯಗೊಡುವುದಿಲ್ಲವೆಂಬಂತೆ ಕಾಣುತ್ತಿದೆ ಈ ವಿಚಾರವು ದಕ್ಷಿಣ ಅಫ್ರಿಕದಲ್ಲಿ ಹೇಗೆ ನಮ್ಮ ಜನರಿಗೆ ಕಷ್ಟನಷ್ಟಗಳು ಹುಟ್ಟಿದವೋ ಅಂಥಾ ಕಷ್ಟನಷ್ಟಗಳು ಕೆನಡಾದೊಳಗೂ ಪ್ರಾಪ್ತವಾಗುವಂತೆ ಮಾಡುವುದು ದಕ್ಷಿಣ ಅಫ್ರಿಕದಲ್ಲಿ ಹೋರಾಟಗಳು ಕೊನೆಮುಟ್ಟಿ ಸಮರ್ಪಕವಾದ ತೀರ್ಮಾನವಾಗಬಹುದೆಂಬ ಭರವಸೆಯುಂಟಾಗಿದೆ ಈ ತೀರ್ಮಾನವು ದಕ್ಷಿಣ ಅಫ್ರಿಕದವರಿಗೂ, ನಮ್ಮವರಿಗೂ ತೃಪ್ತಿಕರವಾಗಿದ್ದೀತೆಂದು ನಿರೀಕ್ಷಿಸುವೆವು

ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿರುವುದರಿಂದ ನಮ್ಮ ದೇಶದ ಜನರು ಆ ಸಾಮ್ರಾಜ್ಯದೊಳಗಿರುವ ಯಾವ ದೇಶಕ್ಕೆ ಹೋಗುವುದಕ್ಕೂ ಅವರಿಗೆ ಹಕ್ಕು ಉಂಟು, ಇದಕ್ಕೆ ಯಾವ ವಿಧವಾದ ತಡೆಗಳೂ ಇರುವುದು ಧರ್ಮವಲ್ಲ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾವು ತಿಳಿಯಬೇಕಾಗಿದೆ ಮೊದಲನೆಯದಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿರುವ ಸಕಲ ದೇಶಗಳೊಳಗೂ ಕಟ್ಟಳೆ ಕಾನೂನುಗಳೆಲ್ಲಾ ಒಂದೇ ರೀತಿಯಾಗಿಲ್ಲ ಆದಕಾರಣ ಯಾವನಾದರೂ ಚಕ್ರಾಧಿಪತ್ಯದ ಒಂದು ಮೂಲೆತಾಕಿನ ದೇಶಕ್ಕೆ ಹೋಗಬೇಕೆಂದಿದ್ದ ಪಕ್ಷದಲ್ಲಿ ಅವನು ಆ ದೇಶದಲ್ಲಿ ಆಚರಣೆಯಲ್ಲಿರುವಂಥಾ ಕಾನೂನಿನಂತೆ ನಡೆದುಕೊಳ್ಳಲು ಬದ್ಧನಾಗಬೇಕು. ವಿವಾಹದ ವಿಷಯದಲ್ಲಿ ಕಾನೂನು ಮಾಡಿಕೊಂಡಿದ್ದಾರೆ, ಆರೋಗ್ಯ ವಿಚಾರವಾದ ನಿಬಂಧನೆಗಳಿರುವವು ಕೂಲಿಪಾಡಿನ ವಿಷಯದಲ್ಲೂ ನಿರ್ಬಂಧಗಳು ಇರುತ್ತವೆ ಈ ಕಟ್ಟಳೆ ಕಂದಾಚಾರಗಳನ್ನೂ ನಿಬಂಧನೆಗಳನ್ನೂ ನಮ್ಮ ದೇಶದ ಜನರು ಅನುಸರಿಸ ತಕ್ಕವರಾಗಿಲ್ಲ ಆದಕಾರಣ ನಮ್ಮ ಜನರಲ್ಲಿ ಯಾರಾದರೂ ಅಂಥಾ ಕಾನೂನಿಗೆ ವಿರೋಧವಾಗಿ ನಡೆದರೆಂದು ಹಿಡಿಯಲ್ಪಟ್ಟು, ಶಿಕ್ಷೆಯನ್ನನುಭವಿಸಬೇಕಾಗಿ ಬಂದರೆ ಅದು ಅಧರ್ಮವೆಂದು ನಾವು ಭಾವಿಸಬಾರದು ಯಾಕಂದರೆ ಚಕ್ರಾಧಿಪತ್ಯವು ಒಂದೇ ಆಗಿದ್ದರೂ ದೇಶಾಂತರಗಳಲ್ಲಿ ಸ್ಥಳ ವಿಶೇಷವಾದ ಕಾನೂನುಗಳು ಜಾರಿಯಲ್ಲಿರುತ್ತವೆ ಅಂಥಾ ಕಾನೂನುಗಳಿಗೆ ವಿರೋಧವಾಗಿ ನಡೆದವರನ್ನು ಆಯಾ ಸರ್ಕಾರದವರು ಹಿಡಿದು ದಂಡಿಸಬೇಕಾದದ್ದೇ ಸಹಜ ನಮ್ಮ ಜನಗಳಾದರೋ ಈ ದೇಶದಲ್ಲಿ ಅನುಸರಿಸುವಂಥಾ ಆಚರಣೆಗಳನ್ನೇ ಅನ್ಯದೇಶದಲ್ಲೂ ಆಚರಿಸಬಹುದೆಂದು ತಿಳಿದುಕೊಂಡಿದ್ದಾರೆ ವ್ಯಾಜ್ಯಕ್ಕೂ ಹೋರಾಟಕ್ಕೂ ಕಷ್ಟನಷ್ಟಗಳಿಗೂ ಇದೇ ಕಾರಣ ಯಾವನೇ ಆಗಲಿ ತನ್ನ ದೇಶದಲ್ಲಿ ತಾನು ಆಚರಿಸುತ್ತಿದ್ದ ಆಚರಣೆಗಳನ್ನೇ ಅನ್ಯದೇಶದಲ್ಲೂ ಅನುಸರಿಸುತ್ತೇನೆಂದು ಹಟ ಹಿಡಿಯುವುದು ಸಾಧ್ಯವಲ್ಲ ಆಯಾ ದೇಶಕ್ಕೆ ಅನುಗುಣವಾದ ಆಚಾರ ವ್ಯವಹಾರಗಳನ್ನು ಅನುಸರಿಸಿ ನಡೆಯಬೇಕಾಗಿದೆ ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುವೆವು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ಅನೇಕ ದೇಶಗಳಲ್ಲಿ ಒಬ್ಬನಿಗೆ ಒಬ್ಬ ಹೆಂಡತಿ ಮಾತ್ರ ಇರಬೇಕೆಂಬ ವಿಧಿಯುಂಟು ಹೀಗಿರುವಲ್ಲಿ ಅಂಥಾ ಸೀಮೆಗೆ ಯಾವನಾದರೂ ಇಬ್ಬರು ಹೆಂಡರ ಸಮೇತ ಹೋಗಿ ಅಲ್ಲೇ ಇದ್ದುಬಿಡುತ್ತೇನೆಂದು ಹೇಳುವನಾದರೆ ಅಲ್ಲಿನ ಕಾನೂನ್ ಅನುಸರಿಸಿ ಅಧಿಕಾರಿಗಳು ಅವನನ್ನು ಹಿಡಿದು ದಂಡನೆಗೆ ಗುರಿಮಾಡುತ್ತಾರೆ ಹಾಗಿಲ್ಲದೆ ಅವನು ದೇಶಾಟನೆಗಾಗಿ ಹೋಗಿದ್ದ ಪಕ್ಷದಲ್ಲಿ ಅವನಿಗೆ ಯಾವುದೊಂದು ಅನನುಕೂಲವೂ ಉಂಟಾಗದು

ಎರಡನೆಯದಾಗಿ ಜಾತಿಪದ್ಧತಿಯು ಅನ್ಯದೇಶಗಳಲ್ಲಿ ನಾನಾ ಬಗೆಯ ಕಷ್ಟಗಳನ್ನುಂಟುಮಾಡುವುದು ಹಿಂದುವು ಸಮುದ್ರದ ಮೇಲೆ ಪ್ರಯಾಣ ಮಾಡಿಬಿಟ್ಟರೆ ಅವನ ಜಾತಿ ಹೋಯಿತೆಂದು ಊಹಿಸಿದ್ದವು ಈಗ ಹಾಗೆ ಆಗಿಲ್ಲ ಹಿಂದುಗಳು ಸಮುದ್ರಯಾನ ಮಾಡಿಕೊಂಡು ಅನ್ಯದೇಶಗಳಿಗೆ ಹೋದ ಮೇಲೆ ಆ ದೇಶದೊಳಗೂ ತಮ್ಮ ಜಾತಿಪದ್ಧತಿಗಳನ್ನು ಅನುಸರಿಸಬೇಕೆಂದು ಪ್ರಯತ್ನಪಡುವರು ಆ ಅನ್ಯದೇಶದವರಿಗಾದರೋ ಈ ಜಾತಿಪದ್ಧತಿಗಳ ಆಶಯವೇನೋ ತಿಳಿಯದು ಈ ವಿಚಾರವೂ ಹಲವು ವೇಳೆ ನಾನಾ ಅನನುಕೂಲಗಳಿಗೆ ಕಾರಣವಾಗುತ್ತದೆ ಹಿಂದುವಾದವನು ತನ್ನ ಜನ್ಮಭೂಮಿಯ ಜೊತೆಯಲ್ಲೇ ತನ್ನ ಜಾತಿ ಪದ್ಧತಿಯನ್ನೂ ತ್ಯಜಿಸಿಬಿಟ್ಟು, ಅನ್ಯದೇಶದಲ್ಲಿರುವಾಗ ಅಲ್ಲಿನ ಜನರಂತೆಯೇ ನಡೆದುಕೊಳ್ಳಲು ಒಪ್ಪುವನಾದ ಪಕ್ಷಕ್ಕೆ ಯಾವ ಹೋರಾಟಕ್ಕೂ ಮನೋವ್ಯಥೆಗೂ ವಿಶೇಷ ಅವಕಾಶವಿರುವುದಿಲ್ಲ

ನಮ್ಮ ದೇಶದ ಜನರು ಮುಖ್ಯವಾಗಿ ಮೇಲ್ಕಂಡ ಎರಡು ವಿಷಯಗಳನ್ನೂ ಕುರಿತು ಚೆನ್ನಾಗಿ ಯೋಚಿಸಿ ಇತ್ಯರ್ಥಮಾಡಿಕೊಂಡರೆ ಅವರು ಬ್ರಿಟಿಷ್ ಚಕ್ರಾಧಿಪತ್ಯದ ಯಾವ ಸೀಮೆಗೆ ಹೋಗುವುದಾದರೂ ಅವರಿಗೆ ವಿಶೇಷ ಕಷ್ಟನಷ್ಟಗಳು ಸಂಭವಿಸುವುದಿಲ್ಲ ಅವರು ಆಯಾ ಸೀಮೆಯ ಕಟ್ಟುಕಾನೂನುಗಳನ್ನು ಅನುಸರಿಸುವುದಕ್ಕೆ ಒಪ್ಪತಕ್ಕವರಾಗಬೇಕು ಯಾಕಂದರೆ ಅನ್ಯದೇಶಗಳಲ್ಲಿ ನಮ್ಮ ಜನರು ಜಾತಿಪದ್ಧತಿ ಆಚಾರಗಳನ್ನು ಇಲ್ಲಿನಂತೆಯೇ ಅನುಸರಿಸುತ್ತೇವೆನ್ನುವುದು ಸಾಧ್ಯವಲ್ಲ ದೇಶಾಟನ ಮಾಡುವವರೂ, ಅನ್ಯದೇಶದಲ್ಲಿ ಹೋಗಿ ವಾಸಮಾಡಲಪೇಕ್ಷಿಸುವವರೂ ಆ ಪರದೇಶಗಳಲ್ಲಿನ ವಿದ್ಯಮಾನಗಳೆಲ್ಲಾ ತಮ್ಮ ದೇಶದಲ್ಲಿದ್ದವುಗಳಂತೆಯೇ ತಮಗೆ ಅನುಕೂಲವಾಗಿಯೂ, ಸಂತೋಷಪ್ರದವಾಗಿಯೂ ಇರುವವೆಂದು ಊಹಿಸುವುದು ಸಹಜವಲ್ಲ ಆದರೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಪ್ರಜೆಯು ಆ ಸಾಮ್ರಾಜ್ಯದೊಳಗೆ ಯಾವ ದೇಶದಲ್ಲಾದರೂ ಸಂಚಾರಮಾಡಲು ಹಕ್ಕುಬಾಧ್ಯತೆಯನ್ನು ಪಡೆದಿರುತ್ತಾನೆಂಬುವುದನ್ನು ಒಪ್ಪಿಕೊಳ್ಳುತ್ತೇವೆ ಇದರಲ್ಲಿ ಅವನು ಆಯಾ ಸೀಮೆಯ ಕಟ್ಟಳೆ ಕಾನೂನುಗಳಂತೆ ನಡೆದುಕೊಳ್ಳಲು ಸಿದ್ಧನಾಗಿರಬೇಕಾದದ್ದೊಂದೇ ಮುಖ್ಯ ಆಶಯವಾಗಿದೆ

ಭೂಪಟ

ಈ ಭೂಮಂಡಲವು ಎಷ್ಟು ವಿಸ್ತಾರವಾದದ್ದು ! ಅದರಲ್ಲಿ ನದಿಗಳೂ ಪರ್ವತಗಳೂ ಸರೋವರಗಳೂ ಎಷ್ಟಿರುತ್ತವೆ ಮತ್ತು ಮಹಾ ಸಾಗರಗಳೂ ದ್ವೀಪಗಳೂ ಪಂಚಖಂಡಗಳೂ ಕೋಟ್ಯಾಂತರ ಜೀವರಾಶಿಗಳೂ ನಾನಾ ವರ್ಣದ ಮತ್ತು ಹಲವು ವಿಧದ ಭಾಷೆಗಳನ್ನಾಡುವ ಜನಗಳೂ ಇದ್ದಾರೆ ಇದರ ಬಾಹುಳ್ಯವನ್ನು ಗ್ರಹಿಸುವದು ಸುಲಭಸಾಧ್ಯವಲ್ಲ

ಮತ್ತು ಭೂಮಿಯು ಯಾವ ರೂಪದಲ್ಲಿದೆ ? ಅದಕ್ಕೆ ಆಧಾರವೇನು ? ಇವೇ ಮುಂತಾದ ವಿಷಯಗಳನ್ನು ಕುರಿತು ಪೂರ್ವದಿಂದ ತಿಳಿಯುವಿಕೆ ಮನಸ್ಸು ಯೋಚಿಸುತ್ತಿದ್ದರು ಸಕಲ ದೇಶ ಭಾಷೆ ಬಲ್ಲವರ ಜನಗಳು ತಮ್ಮ ತಮ್ಮ ದೇಶಗಳಲ್ಲಿ ವಿದ್ವಾಂಸರೆನ್ನಿಸಿಕೊಂಡವರನ್ನು ಈ ಭೂಮಂಡಲದ ವಿಸ್ತೀರ್ಣ ರೂಪ, ಆಧಾರ ಮುಂತಾದವುಗಳ ವಿಷಯ ವಿಚಾರಿಸ ಹತ್ತಿದರು ಇಂಥವರ ಕೌತುಕವನ್ನು ತೃಪ್ತಿಪಡಿಸಬೇಕೆಂದು ಬೇರೆ ಬೇರೆ ದೇಶಗಳ ಎಷ್ಟೋ ಜನರು ಈ ಭೂಮಂಡಲವನ್ನು ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದರು ತಿಳಿಯಲಾರದ್ದನ್ನು ಊಹಿಸಿ ಬರೆದರು ಉತ್ಪ್ರೇಕ್ಷಿಸಿದರು ಪುರಾಣೇತಿಹಾಸಗಳಲ್ಲಿ ಭೂಗೋಳವನ್ನು ಕುರಿತು ಬರೆದಿರುವ ವರ್ಣನೆಯು ಹೀಗೆಯೇ ಊಹಿಸಿದ ಉತ್ಪ್ರೇಕ್ಷೆಯಾಗಿದೆ ಭೂಮಿಯು ಲಕ್ಷಾಂತರ ಯೋಜನ ವಿಸ್ತಾರವಾದ ಚಾಪೆಯಂತೆ ಹಾಸಲ್ಪಟ್ಟಿದೆ ಅದರಲ್ಲಿ ಸಪ್ತ ದ್ವೀಪಗಳು ಸಪ್ತ ಸಾಗರಗಳಿಂದ ಪರಿವೃತವಾಗಿವೆ ಆ ಸಾಗರಗಳಲ್ಲಿ ಒಂದು ಹಾಲಿನ ಸಮುದ್ರ, ಮತ್ತೊಂದು ಮೊಸರಿನದು, ಬೇರೊಂದು ಇಕ್ಷು ಸಾಗರ, ಮತ್ತೊಂದು ಸುರಾ ಅಂದರೆ ಮದ್ಯದ ತುಂಬಿ ತುಳುಕುತ್ತಿರುವುದು ಇನ್ನೊಂದು ಲವಣಸಮುದ್ರ ಇವುಗಳ ಮಧ್ಯೆ ಜಂಬೂ ದ್ವೀಪವಿರುತ್ತದೆ ಮತ್ತು ಈ ಭೂಮಿಯನ್ನು ಅಷ್ಟ ದಿಗ್ಗಜಗಳು ಹೊತ್ತುಕೊಂಡುಂಟಂತೆ ನಡುವೆ ಆದಿಶೇಷನು ತನ್ನ ಸಾವಿರ ತಲೆಗಳ ಮೇಲೆ ಭೂಮಿಯನ್ನು ಹೊತ್ತು ನಿಂತಿದ್ದಾನೆ ಈ ಮೊದಲಾದ ವಿವರಣೆಯು ಪರಿಶೋಧನೆ ಮಾಡಲಾರದ ಮನೆಯಲ್ಲಿ ಕೂತುಕೊಂಡು ಅಜ್ಞರನ್ನು ವಂಚಿಸುವದಕ್ಕಾಗಿ ಬರೆದ ಸ್ವಕಪೋಲಕಲ್ಪನೆಗಳಾಗಿವೆ

ಆದರೆ ನಿಜವಾದ ಭೂಗೋಳಶಾಸ್ತ್ರವಿಲ್ಲವೆ ? ಭೂಮಿಯ ಆಕಾರ, ವಿಸ್ತಾರ, ಅದರ ಆಧಾರ, ಸ್ವಭಾವಗಳನ್ನು ಕುರಿತು, ನಮಗೆ ಸರಿಯಾದ ತಿಳುವಳಿಕೆ ಇಲ್ಲವೆ ? ಈ ಕಾಲದಲ್ಲಿ ಪಾಠಶಾಲೆಗಳು ಸಕಲ ಪಟ್ಟಣ ಹಳ್ಳಿಗಳಲ್ಲಿಯೂ ಸ್ಥಾಪಿತವಾಗಿರುತ್ತವೆ ಅವುಗಳಲ್ಲಿ ಯಾವದಾದರೂ ಒಂದನ್ನು ಪ್ರವೇಶಮಾಡೋಣ ಅದರಲ್ಲಿ ಗೋಡೆಯ ಮೇಲೆ ಒಂದು ದೊಡ್ಡ ಪಟವು ನೇತಹಾಕಿರುವದು ಕಾಣುತ್ತದೆ ಇನ್ನು ಕೆಲವು ದೊಡ್ಡ ಪಾಠಶಾಲೆಗಳಲ್ಲಿ ಭೂಮಿಯ ಆಕಾರವನ್ನೂ ಅದರ ಚಲನೆಯನ್ನೂ ಸೂಚಿಸುವ ಭೂಗೋಳವಿರುತ್ತದೆ ಉಪಾಧ್ಯಾಯನು ಅದರ ಎದುರಿಗೆ ಬಾಲಕರನ್ನು ನಿಲ್ಲಿಸಿಕೊಂಡು—ಭೂಮಿಯು ಚೆಂಡಿನ ಹಾಗೆ ಗುಂಡಾಗಿದೆ ಅದು ಯಾವ ಆಧಾರವೂ ಇಲ್ಲದೆ ಅಂತರಿಕ್ಷದಲ್ಲಿ ಚಲಿಸುತ್ತಿರುತ್ತದೆ ಅದರಲ್ಲಿ ಕ್ಷೀರ, ದಧಿ, ಸರ್ಪಿ, ಸುರಾ ಮುಂತಾದ ರಸಗಳಿಂದ ತುಂಬಿದ ಸಾಗರಗಳೊಂದೂ ಇಲ್ಲ ಆದರೆ ಮಹಾ ವಿಸ್ತಾರವಾದ ಉಪ್ಪುನೀರಿನ ಸಾಗರಗಳಿರುತ್ತವೆ ಎಂದು ಬೋಧಿಸಿ ತನ್ನೆದುರಿಗಿರುವ ಭೂಪಟವನ್ನೂ ಅದರ ಮೂಲಕ ಈ ಭೂಮಿಯ ರೂಪ, ವಿಸ್ತೀರ್ಣ ಸ್ವಭಾವಗಳನ್ನೂ ಅವರ ಗ್ರಹಿಕೆಗೆ ತರುತ್ತಾನೆ.

ಭೂಮಿಯ ಸ್ವಭಾವ, ಆಕಾರ, ಪ್ರಮಾಣಗಳನ್ನು ತಿಳಿಯಬೇಕೆಂಬ ಅಪೇಕ್ಷೆಯು ಮನುಷ್ಯರನ್ನು ಮೊದಲಿಂದ ಹೇಗೆ ಕಾಡುತ್ತಿದ್ದಿತೋ ಅದಕ್ಕಿಂತ ಶತಾಂಶ ಹೆಚ್ಚಾಗಿ ದೇವರನ್ನು ಕುರಿತು ತಿಳಿಯಬೇಕೆಂಬ ಅಭಿಲಾಷೆಯು ಮನುಷ್ಯನನ್ನು ಬಾಧಿಸುತ್ತಲಿದೆ ಲೋಕದಲ್ಲಿ ಎಷ್ಟೊಂದು ಶಾಸ್ತ್ರಗಳಿವೆ ? ಪ್ರಪಂಚದಲ್ಲಿ ಉತ್ಪತ್ತಿಯಾಗಿ ಹರಡಿಕೊಂಡಿರುವ ಮತಗಳೆಷ್ಟು ? ಆ ಮತಗಳನ್ನು ಬೋಧಿಸುವ ಗುರುಗಳು ಎಷ್ಟು ಮಂದಿ ಇದ್ದಾರೆ ? ಲೋಕದಲ್ಲಿ ಜಪ, ತಪ, ತೀರ್ಥಯಾತ್ರೆ ದೇಹದಂಡನೆಗಳನ್ನು ಮಾಡಿ ದೇವರನ್ನು ನೋಡಬೇಕೆಂದು ಅತಿ ಕಾಂಕ್ಷಿತರಾಗಿರುವ ಜನಗಳ ಅಭಿಲಾಷೆಯು ದೇವರಿಗೆ ಗೊತ್ತಿಲ್ಲವೆ ? ಗೊತ್ತಿದ್ದರೂ ಚಿಂತಿಸದೆ ನನಗೆ ಅವರ ಗೊಡವೇನು ? ಅವರು ಹೇಗಾದರೂ ಇರಲಿ ಎಂತ ನಿರ್ಲಕ್ಷ್ಯವಾಗಿ, ದೇವರು ನಿರ್ಗುಣಿಯಾಗಿದ್ದಾನೆಯೋ ? ದೇವರು ಯಾರು ? ಆತನು ಎಲ್ಲಿದ್ದಾನೆ ? ಹ್ಯಾಗಿದ್ದಾನೆ ? ನನಗೂ ಆತನಿಗೂ ಯಾವ ಸಂಬಂಧವಿದೆ ಎಂದು ಜಗದುತ್ಪತ್ತಿಯಿಂದ ಮನುಷ್ಯನು ವಿಚಾರಿಸುತ್ತ ಇರುವಲ್ಲಿ ದೇವರು ನಿಷ್ಕರುಣಿಯಾಗಿ ಅವರನ್ನು ಕಣ್ಣು ಕಟ್ಟಿ ಕಾರ್ಗತ್ತಲೆಯಲ್ಲಿ ಬಿಡುವಷ್ಟು ಕ್ರೂರನೋ ?

ಈ ಪ್ರಶ್ನೆಗಳಿಗೆ ಬೇರೆ ಬೇರೆ ಮತ ಸಿದ್ಧಾಂತಗಳು ಏನು ಪ್ರತ್ಯುತ್ತರ ಹೇಳುತ್ತಿವೆಯೋ ಅದನ್ನು ವಿಚಾರಿಸುವದು ಪ್ರಕೃತದಲ್ಲಿ ಅಸಾಧ್ಯ ಆದರೆ ಕ್ರಿಸ್ತಮತಕ್ಕೆ ಮೂಲಗ್ರಂಥಗಳಾದ ಸುವಾರ್ತೆಗಳು ಏನು ಹೇಳುತ್ತವೆಂದು ಸ್ಥಳ ಸಂಕೋಚವಾಗಿರುವದರಿಂದ ಕ್ರೋಢೀಕರಿಸಿ ಬರೆಯುತ್ತೇವೆ ಏನಂದರೆ—ಆದಿಯಲ್ಲಿ ವಾಕ್ಯವೆಂಬವನಿದ್ದನು ಆ ವಾಕ್ಯವೆಂಬಾತನು ದೇವರ ಬಳಿಯಲ್ಲಿದ್ದನು ಆ ವಾಕ್ಯವು ದೇವರೇ ಆಗಿದ್ದನು ಆತನ ಮೂಲಕವಾಗಿ ಸಕಲವೂ ಉಂಟಾಯಿತು ಉಂಟಾಗಿರುವ ವಸ್ತುಗಳಲ್ಲಿ ಒಂದಾದರೂ ಆತನಿಂದಲ್ಲದೆ ಉಂಟಾಗಲೇ ಇಲ್ಲ ಆ ವಾಕ್ಯವೆಂಬುವನು ನರಾವತಾರವೆತ್ತಿದನು ಮತ್ತು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯಾದ ದೇವರ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆಯು ಹಾಗಿತ್ತು ಆತನ ಕೃಪಾನಿಧಿಯೊಳಗಿಂದ ನಾವೆಲ್ಲರೂ ಕೃಪೆಯ ಮೇಲೆ ಕೃಪೆಯನ್ನು ಹೊಂದಿದ್ದೇವೆ ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮೂಲಕವಾಗಿ ನಮಗೆ ಲಭ್ಯವಾದವು ದೇವರನ್ನು ಯಾವನು ಎಂದು ಕಂಡಿಲ್ಲ ತಂದೆಯ ಎದೆಯಲ್ಲಿರುವ ಒಬ್ಬನೇ ಮಗನು ಆತನನ್ನು ತಿಳಿಯಪಡಿಸಿದನು ಮೇಲಿನಿಂದ ಬರುವವನು ಎಲ್ಲರ ಮೇಲೆ ಇದ್ದಾನೆ ಭೂಲೋಕದಿಂದ ಹುಟ್ಟಿದವನು ಭೂಲೋಕದವನಾಗಿದ್ದು ಭೂಲೋಕದ ಮಾತುಗಳನ್ನಾಡುತ್ತಾನೆ ಪರಲೋಕದಿಂದ ಬರುವವನು ದೇವರು ಕಳುಹಿಸುವವನು ಆತನು ದೇವರ ಮಾತುಗಳನ್ನೇ ಆಡುತ್ತಾನೆ ತಂದೆಯು ಮಗನನ್ನು ಪ್ರೀತಿಸಿ ಎಲ್ಲವನ್ನೂ ಆತನ ಕೈಯಲ್ಲಿ ಕೊಟ್ಟಿದ್ದಾನೆ ಈ ಮಗನನ್ನು ನಂಬುವವನಿಗೆ ನಿತ್ಯಜೀವ (ದೇವರ ಸಾನ್ನಿಧ್ಯ) ಇದ್ದೇ ಇರುತ್ತದೆ ಆದರೆ ಮಗನಿಗೆ ಅವಿಧೇಯನಾಗುವವನು ಜೀವವನ್ನು ಕಾಣುವದೇ ಇಲ್ಲ

ಮೇಲೆ ಸಂಕ್ಷೇಪವಾಗಿ ಬರೆದಿರುವ ವಾಕ್ಯಗಳನ್ನು ಧ್ಯಾನವಿಟ್ಟು ಓದುವವರಿಗೆ ಒಂದು ಅಭಿಪ್ರಾಯವು ಗೋಚರವಾಗದಿರಲಾರದು ಅದೇನಂದರೆ—ಈ ಭೂಮಂಡಲದ ಆಕಾರ, ವಿಸ್ತಾರ, ಅದರ ಸ್ವಭಾವ, ಅದರ ಆಧಾರಗಳನ್ನು ತಿಳಿಯಬೇಕೆಂದು ಕಾಂಕ್ಷಿತರಾಗಿದ್ದ ಮನುಷ್ಯರಿಗೆ ಭೂಪಟವೂ ಭೂಗೋಳವೂ ಭೂಮಿಯ ನಿದರ್ಶನರೂಪಿಗಳಾಗಿದ್ದು ಹೇಗೆ ಸಹಾಯವಾಗಿವೆಯೋ ಹಾಗೆಯೇ ಕ್ರಿಸ್ತನು ದೇವರನ್ನು ತಿಳಿಯಬೇಕೆಂದು ಅಪೇಕ್ಷಿಸುವವರಿಗೆ ಅದೃಶ್ಯನಾದ ದೇವರ ಸ್ವರೂಪವೂ ದೇವಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ

ಒಳದೇಶದ ವೃತ್ತಾಂತಗಳು

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಶ್ರೀಮನ್ ಮಹಾರಾಜರವರು ಪರಿವಾರ ಸಮೇತ ನೀಲಗಿರಿಯಿಂದ ತಾ 30 ನೇ ಶನಿವಾರ ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ

ಕಳೆದ ತಾ 22 ನೇ ಶುಕ್ರವಾರ ಬೆಳಿಗ್ಗೆ ರಾಜಧಾನಿಯ ಹೊಸ ಅರಮನೆಯ ಮೇಲ್ಭಾಗದ ಗೋಪುರದಲ್ಲಿ ಪ್ರಧಾನ ಕಲಶವನ್ನು ಇಟ್ಟು ಪ್ರತಿಷ್ಠೆ ಮಾಡಿಸಿದರು

ಕಳೆದ ವಾರ ವೇ| ಸುಬ್ಬಯ್ಯ ಭಾಗವತರು ರಾಜಧಾನಿಯ ಇಟ್ಟಿಗೆಗೂಡಿನಲ್ಲಿ ಹರಿಕಥೆಯನ್ನು ಮಾಡಿ ಸಭಿಕರನ್ನು ಸಂತೋಷಪಡಿಸಿದರು ಪ್ರಜೆಗಳು ಭಾಗವತರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಟಪಡಿಸಿದರು

ಇನಾಮತಿ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಸಂಘವು ಏರ್ಪಾಡಾಗಿದ್ದು ಗ್ರಾಮಸ್ಥರೂ ಇನಾಂದಾರರೂ ಬಾವಿ, ಸ್ಕೂಲು ಮೊದಲಾದ ಕಟ್ಟಡಗಳಿಗೆ ಚಂದಾ ಕೂಡಿಸಿ ಮಾಡಿಸುವುದಾದರೆ ನಾಲ್ಕನೇ ಒಂದು ಭಾಗದ ಹಣವನ್ನು ಸರ್ಕಾರದಿಂದ ಕೊಡಲಾಗುತ್ತದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ

ಶ್ರೀ ಅಸಿಸ್ಟೆಂಟ್ ಕಮಿಷನರ್ ಮ|| ಎ ಗೋಪಾಲರಾಜ ಅರಸಿನವರು ತಮಗೆ ವಿವಾಹ ಬೆಳೆದ ಸಂತೋಷಕ್ಕಾಗಿ ತಮ್ಮ ಸ್ನೇಹಿತರನ್ನು ಕರಸಿಕೊಂಡು ಅವರನ್ನು ಫಲಾಹಾರ ಸಂಗೀತಾದಿಗಳಿಂದ ಸಂತೋಷಪಡಿಸಿದ್ದಲ್ಲದೆ ಅವರ ಮಧ್ಯೆ ಕುಳಿತು ಫೋಟೋ ತೆಗಿಸಿಕೊಂಡರು ಸ್ನೇಹಿತರೆಲ್ಲಾ ಮ|| ಅರಸಿನವರ ಶ್ರೇಯಸ್ಸನ್ನು ಬಯಸಿ ತೆರಳಿದರು

ಆನೆಗಳ ಕೊಂಬು (ದಂತ) ಗಳನ್ನು ಡೆಪ್ಯುಟಿ ಕಮಿಷನರುಗಳು ಕೂಡಿಸಿ ಆರು ತಿಂಗಳಿಗೊಂದು ಸಲ ಬೆಂಗಳೂರಿಗೆ ಕಳುಹಿಸಬೇಕೆಂದೂ, ಅಲ್ಲಿ ಪ್ರಿನ್ಸಿಪಲ್ ಅಫೀಸರು ದಂತಗಳನ್ನು ಹರಾಜಿಗೆ ಇಟ್ಟು ಬಿಕರಿ ಮಾಡಬೇಕೆಂದೂ, ಈ ಮಧ್ಯೆ ಒಂದೆರಡು ತುಂಡು ದಂತಗಳನ್ನು ಬಿಕರಿ ಮಾಡಬೇಕಾಗಿ ಬಂದರೆ ಗವರ್ನಮೆಂಟಿನವರ ಸ್ಯಾಂಕ್ಷನ್ ಪಡೆಯಬೇಕೆಂದೂ ಗವರ್ನಮೆಂಟಿನವರು ಹುಕುಂ ಮಾಡಿದ್ದಾರೆ

ಸರ್ಕಾರದವರು ಈ ಸಲ ನವರಾತ್ರಿ ಉತ್ಸವಗಳ ಕಡೆಯಲ್ಲಿ ರಾಜಧಾನಿಯಲ್ಲಿ ನಡೆಯುವ ಪ್ರತಿನಿಧಿಸಭೆಯ ಕಾಲನಿಯಾಮಕ ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ ಜೂಲೈ ತಾ 27 ಕ್ಕೆ ಮುಂಚೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಪ್ರತಿನಿಧಿಗಳ ಪ್ರಥಮ ಸಭೆಗಳು ನಡೆಯಬೇಕೆಂದೂ, ಸೆಪ್ಟಂಬರ್ ತಾ 27 ರೊಳಗೆ ಅರ್ಜಿಸ್ಸುಗಳ ನಕಲನ್ನು ಗವರ್ನಮೆಂಟ್ ಸೆಕ್ರೆಟರಿಯವರಿಗೆ ಸೇರುವಂತೆ ಕಳುಹಿಸಬೇಕೆಂದೂ, ಸೆಪ್ಟಂಬರ್ ತಾ 30 ನೇ ಬುಧವಾರ ಪ್ರತಿನಿಧಿಸಭೆಯು ಪ್ರಾರಂಭವಾಗುವುದೆಂದೂ ನಿಷ್ಕರ್ಷೆಯಾಗಿರುತ್ತದೆ

ಚಾಮರಾಜನಗರದ ದೇವಸ್ಥಾನದಿಂದ ಒಂದು ಮಂಟಪವನ್ನು ವಾದ್ರಿ ಮಾಡುವುದಕ್ಕಾಗಿ ಅರಮನೆಗೆ ತರಿಸಿದ್ದು ಅದನ್ನು ಮೊನ್ನೆ ಮಂಗಳವಾರ ಮಧ್ಯಾಹ್ನ ಅರಮನೆಯ "ಫ ಲಾರಿ ಎಂಬ ಮೋಟರ್ ಗಾಡಿಯಲ್ಲಿಟ್ಟು ಪುನಃ ವಾಪಸು ಚಾಮರಾಜನಗರಕ್ಕೆ ಕಳುಹಿಸಿದರು ಈ ಗಾಡಿಯು ರಾಜಧಾನಿಯಿಂದ 67 ಮೈಲಿ ದೂರ ಹೋಗುವಷ್ಟರಲ್ಲೇ ದಾರಿಯಲ್ಲಿ ಮಗುಚಿಬಿದ್ದು ಮುರಿದುಹೋಯಿತು ಅದರಲ್ಲಿದ್ದ ಮೂರು ಮಂದಿ ಸೇವಕರಿಗೆ ಗಾಯಗಳಾಗಿ ಆಸ್ಪತ್ರೆಗೆ ಬಂದರು ಮಂಟಪವೂ ಕೆಲವು ಭಾಗ ಮುರಿದುಹೋಯಿತು

ಬರುವ ಜೂನ್ ತಾ 4 ನೇ ಗುರುವಾರ ರಾಜಧಾನಿಯಲ್ಲಿ ನಮ್ಮ ಮಹಾರಾಜರವರ ೩೦ನೆಯ ವರ್ಷ ವರ್ಧಂತಿಯ ಉತ್ಸವಗಳು ಜರಗುವವು ಅರಮನೆಯಲ್ಲಿ ಪದ್ಧತಿಯ ಪ್ರಕಾರ ದರ್ಬಾರುಗಳೂ, ಪಟ್ಟಣದಲ್ಲಿ ಮೆರವಣಿಗೆಯೂ, ನೂರಾರು ಮಂದಿ ಯೂರೋಪಿಯನ್ನರಿಗೆ ಆತಿಥ್ಯಗಳೂ, ಕುದುರೆಗಳ ಜೂಜುಗಳೂ, ಇತರ ವಿನೋದಗಳೂ ಜರುಗುತ್ತವೆ ತಾ 6 ನೇ ಶುಕ್ರವಾರ ಅಧಿಕಾರಿಗಳೂ ಪ್ರಜೆಗಳ ಪ್ರತಿನಿಧಿಗಳೂ ಸೇರಿ ಮೈಸೂರು ಸಂಸ್ಥಾನದ ಸಂಪತ್ತನ್ನು ಹೆಚ್ಚಿಸುವ ಭಾಗಗಳನ್ನು ಕುರಿತು ಆಲೋಚನೆ ಮಾಡುವ ವಾರ್ಷಿಕ ಕೂಟವನ್ನು ನಡಿಸುತ್ತಾರೆ

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ರಾಯಚೂರಿನ ಕಲೆಕ್ಟರವರಾದ ಮ॥ ಬಶೀರುದ್ದೀನ್ ಅಹಮದ್ ಸಾಹೇಬರು ರಾಜಧಾನಿಗೆ ಬಂದಿದ್ದರು ಕಳೆದ ಶನಿವಾರ ಸಾಯಂಕಾಲ ಅಡ್ವೊಕೇಟ್ ಮ॥ ಎಂ ಸಿ ರಂಗಯ್ಯಂಗಾರ್ರವರು ಅವರನ್ನು ಕರಸಿಕೊಂಡು ತಮ್ಮ ಮನೆಯಲ್ಲಿ ಆಟ್ ಹೋಮ್ ಎಂಬ ಸಂತೋಷಕೂಟವನ್ನು ನಡಿಸಿದರು ರಾಜಧಾನಿಯಲ್ಲಿರುವ ಬಹು ಮಂದಿ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರು ಕರೆಸಲ್ಪಟ್ಟಿದ್ದರು ಅಲ್ಪಾಹಾರವೂ, ವೈಣಿಕ ಶಿಖಾಮಣಿ ಮ॥ ಶೇಷಣ್ಣನವರ ಇಂಪಾದ ವೀಣಾವಾದನವೂ, ವಿದ್ವಾನ್ ವೇ॥ ವಾಸುದೇವಾಚಾರ್ಯರ ಆಹ್ಲಾದಕರವಾದ ಹಾಡುಗಾರಿಕೆಯೂ ನಡೆದು ಎಲ್ಲರೂ ಮ॥ ರಂಗಯ್ಯಂಗಾರ್ರವರ ಮೂಲಕ ಕಲೆಕ್ಟರವರ ಪರಿಚಯ ಹೊಂದಿ ತೆರಳಿದರು

ಈ ತಿಂಗಳ ಪ್ರಾರಂಭದಲ್ಲಿ ಆರಣಿ ಜಹಗೀರುದಾರರು ಬೆಂಗಳೂರಿನಲ್ಲಿ ಮೋಟರ್ ಗಾಡಿಯನ್ನು ರಾತ್ರಿ ನಡಿಸಿಕೊಂಡು ಹೋಗುತ್ತಿದ್ದಾಗ ಆ ಮೋಟರ್ ಗಾಡಿಯು ಎದುರಿಗೆ ಬರುತ್ತಿದ್ದ ಒಬ್ಬ ಮಹಮದೀಯನ ಒಂಟೆತ್ತಿನ ಗಾಡಿಗೆ ಬಡಿದು ಅಪಾಯ ಸಂಭವಿಸಿ, ಎತ್ತು ಸತ್ತುಹೋಯಿತೆಂದೂ, ಮಹಮದೀಯನು ಗಾಯಪಟ್ಟು ಆಸ್ಪತ್ರೆಯಲ್ಲಿ ತೀರಿಹೋದನೆಂದೂ, ಪೊಲೀಸಿನವರು ಜಹಗೀರುದಾರರ ಮೇಲೆ ಮೊಕದ್ದಮೆ ಮಾಡಿದಾರೆಂದೂ ತಿಳಿಸಿದ್ದೆವಷ್ಟೆ ಈ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರಾದ ಮಿ॥ ಕಾಕ್ಸ್‌ರವರು ದರ್ಯಾಪ್ತಿಮಾಡಿ ಮೊನ್ನೆ ಸೋಮವಾರ ತೀರ್ಮಾನವನ್ನು ಹೇಳಿದರು ಜಹಗೀರುದಾರರು 800 ರೂಪಾಯಿ ಜುಲ್ಮಾನೆ ಕೊಡಬೇಕು, ಇಲ್ಲವೇ ಎರಡು ತಿಂಗಳ ಸಾಧಾ ಸಜಾ ಅನುಭವಿಸಬೇಕು, ಜುಲ್ಮಾನೆ ವಸೂಲಾದರೆ 600 ರೂಪಾಯನ್ನು ಆ ಮಹಮದೀಯನ ಹೆಂಡತಿಗೆ ಕೊಡಬೇಕು ಮತ್ತು ಜಹಗೀರುದಾರರು ಒಂದು ವರುಷದ ತನಕ ಮೋಟರನ್ನು ಸ್ವತಂತ್ರಿಸಿ ನಡಿಸಕೂಡದು ಈ ರೀತಿ ಶಿಕ್ಷೆಯಾಗಿರುತ್ತದೆ ಜಹಗೀರುದಾರರು ಈಗ ಅದರ ಮೇಲೆ ಅಪೀಲ್ ಮಾಡುವವರಾಗಿದಾರೆ

ಸಂಸ್ಥಾನಾದ್ಯಂತ ಸರ್ಕಾರದಿಂದ ಗ್ರಾಂಟುಪಡೆಯುವಂಥಾ ಸ್ಕೂಲುಗಳಲ್ಲಿ 10 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಸಂಬಳವನ್ನು ಪಡೆಯುತ್ತಿರುವ ಉಪಾಧ್ಯಾಯರನ್ನು ಮೈಸೂರು ಸರ್ಕಾರದ ಇನ್‌ಷೂರೆನ್ಸ್ (ಜೀವವಿಮೆ) ಕಂಪನಿಗೆ ಸೇರಿಸಿಕೊಳ್ಳುವುದಾಗಿ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುವರೆ ಅಂಥಾ ಸ್ಕೂಲುಗಳ ಮ್ಯಾನೇಜರುಗಳು ಪ್ರತಿ ತಿಂಗಳಲ್ಲೂ ತಮ್ಮ ಉಪಾಧ್ಯಾಯರ ಸಂಬಳದಲ್ಲಿ ಹತ್ತಕ್ಕೆ ಒಂದು ರೂಪಾಯಿಯಂತೆ ಹಿಡಿದು ಸರ್ಕಾರದ ಖಜಾನೆಗೆ ಪಾವತಿಮಾಡಬೇಕಾಗಿದೆ 1911 ನೇ ಜೂಲೈ ತಾ 1 ರಿಂದ ಈಚೆಗೆ ಸ್ಕೂಲ್ ಮಾಸ್ಟರಾಗಿ ಸೇರುವವರೆಲ್ಲಾ ಈ ಸಂಘಕ್ಕೆ ಸೇರಿಕೊಳ್ಳಲೇ ಬೇಕೆಂದೂ, ಈಗ ಉಪಾಧ್ಯಾಯರಾಗಿರುವವರು ಈ ಸಂಘಕ್ಕೆ ಸೇರುವ ವಿಷಯದಲ್ಲಿ 1914 ನೇ ಡಿಸೆಂಬರ್ ಅಖೈರಿನೊಳಗಾಗಿ ಇತ್ಯರ್ಥ ಮಾಡಿಕೊಳ್ಳುವಂತೆ ಅವರಿಗೆ ಮಾತ್ರ ಅವಧಿಯನ್ನು ಕೊಟ್ಟಿದೆ ಎಂದೂ ರೂಲಸು ಮಾಡಲಾಗಿದೆ ಈ ವಿಚಾರವು ಅನೇಕ ವರುಷಗಳಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿತ್ತು ಸರ್ಕಾರದವರು ಇದನ್ನು ಸ್ಯಾಂಕ್ಷನ್ ಮಾಡಿದ್ದರಿಂದ ಗ್ರಾಂಟ್ ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೂ ಸಹಾಯವಾಯಿತೆಂದು ಸಂತೋಷಪಡುತ್ತೇವೆ

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಕೃಷ್ಣರಾಜಪುರ ಅಗ್ರಹಾರದೊಳಗೆ ಮ॥ ಶ್ರೀನಿವಾಸರಂಗಾಚಾರ್ಯರ ಮನೆಯಲ್ಲಿ ಒಡವೆ, ಹಣ, ಕರೆನ್ಸಿ ನೋಟುಗಳು, ಬಟ್ಟೆಗಳು ಕಳುವಾದ ಸಂದರ್ಭದಲ್ಲಿ ಪೊಲೀಸಿನವರು ಮೂರು ಮಂದಿಯನ್ನು ಹಿಡಿದು ಪತ್ತೆ ತರದೂದು ನಡಿಸುತ್ತಿದ್ದರು ಈ ಪೈಕಿ ಮರಕೆಲಸದ ಸಿದ್ದಾಚಾರಿ ಎಂಬುವನು ದಸ್ತಗಿರಿಯಾದ ಏಳು ದಿನಗಳ ಮೇಲೆ ಕಳೆದ ಯುಗಾದಿ ಹಬ್ಬದ ದಿನ ಪೊಲೀಸಿನವರ ಸ್ವಾಧೀನದಲ್ಲಿದ್ದಾಗ ಸತ್ತುಹೋದನು ಇವನ ರಕ್ತಸಂಬಂಧಿಗಳು ಪೊಲೀಸಿನವರ ಮೇಲೆ ಅವರು ಮೃತನನ್ನು ಹಿಂಸೆ ಮಾಡಿದ್ದರಿಂದ ಅವನು ಸತ್ತನೆಂದು ಮುಂತಾಗಿ ಅರ್ಜಿ ಹಾಕಿದರು ಪೊಲೀಸ್ ಅಧಿಕಾರಿಗಳು ತನಿಖೆಮಾಡಿ ಆ ಸಮಯದಲ್ಲಿ ಖೈದಿಗಳ ಮೇಲುಸ್ತುವಾರಿ ಇದ್ದ ಸಂಜ, ರಾತ, ನಂಜುಂಡ, ಪಾಪಣ್ಣ, ಮತ್ತು ದಫೇದಾರ್ ಕೇಶವಯ್ಯ ಎಂಬೀ ಐದು ಮಂದಿಯ ಮೇಲೂ ಇವರು ಮೃತನನ್ನು ಹಿಂಸೆ ಮಾಡಿದರೆಂದು ಮೊಕದ್ದಮೆ ತಂದಿದಾರೆ ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ಪ್ರಥಮ ದರ್ಯಾಪ್ತಿ ಮಾಡುತ್ತಿದಾರೆ ಸರ್ಕಾರದ ತರಫ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರವರೂ, ಅಪರಾಧಿಗಳ ತರಫು ಅಡ್ವೊಕೇಟ್ ಮ॥ ಎ ರಾಮಣ್ಣನವರೂ ವಕಾಲತ್ತು ವಹಿಸಿರುವರು

ಮೈಸೂರು ಗೆಜೆಟ್ ಸಂಗ್ರಹ.

ಚಕ್ರವರ್ತಿ ಸಾರ್ವಭೌಮರವರ ಜನ್ಮೋತ್ಸವದ ನಿಮಿತ್ತ ಜೂನ್ ತಾ 22 ನೇ ಸೋಮವಾರ ಸಮಸ್ತ ಪಬ್ಲಿಕ್ ಆಫೀಸುಗಳೂ, ಕೋರ್ಟುಗಳೂ, ವಿದ್ಯಾಶಾಲೆಗಳೂ ಮುಚ್ಚಲ್ಪಡತಕ್ಕದ್ದು

ಗಣಿಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ॥ ಎಲ್ ಎಚ್ ಬೆಕ್ವಿತ್ ಯವರಿಗೆ ಮೇ ತಾ 11 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೆಂಟು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಅರ್ಬನ್ ರೈಲ್ವೆ ಕಾಮಗಾರಿ ಡಿವಿಷನ್ ಅ॥ ಇಂಜನಿಯರ್ ಮ॥ ಟಿ ಕೆ ಅರುಣಾಚಲಂ ಅಯ್ಯರವರಿಗೆ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಮುಂದೆ ಹೇಳುವವರಿಗೆ ಹೆಚ್ಚಾದ ಓಟ್ಸು ದೊರಕಿದ ಕಾರಣ ಅವರನ್ನು ಮೇ ತಾ 27 ರಿಂದ ಮೈಸೂರು ಸಂಪದಭ್ಯುದಯ ಸಮಾಜದ ಮೆಂಬರುಗಳಾಗಿ ಅಂಗೀಕರಿಸಿ ನೇಮಕಮಾಡಿದೆ —ಮ॥ ಗಳಾದ (ಕಾನ್‌ಕಾನಹಳ್ಳಿ) ಗುರುಕಾರ್ ವೆಂಕಟರಾಮೇಗೌಡರು, (ಕೋಲಾರ್) ಜಿ ಗಿರಿಮಾಜರಾಯರು, (ಪಾವಗಡ) ಟಿ ಆಂಜನೇಯಶೆಟ್ಟರು, (ಶ್ರೀರಂಗಪಟ್ಟಣ) ಬೀಸೆ ರಂಗಸ್ವಾಮಯ್ಯಂಗಾರ್ರು, (ಮಂಡ್ಯರಾಬಾದು) ಹೊಸಕೆರೆ ಬಸವೇಗೌಡರು, (ಸಿಕಾರಿಪುರ) ಎಸ್ ಎಚ್ ಶಾಮಾರಾಯರು, (ಚಿತ್ರದುರ್ಗ) ಎಂ ಬಿ ಕೃಷ್ಣರಾಯರು, (ಚಿಕ್ಕಮಗಳೂರು) ಎಸ್. ಮಂಜಯ್ಯನವರು

ಕೋಲಾರದ ಮುನ್‌ಸಿಫ್ ಮ॥ ಎನ್ ನರಸಿಂಹಯ್ಯಂಗಾರ್ರಿಗೆ ಮೇ ತಾ 25 ರಿಂದ ಆರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ಮೈಸೂರು ಅಡ್ವೊಕೇಟ್ ಮ॥ ಬಿ. ರಘುವಾಚಾರ್ರನ್ನು ಸಾಗರದ ಮುನ್‌ಸಿಫರಾಗಿಯೂ, ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟು ಶಿರಸ್ತೇದಾರ್ ಮ॥ ಎಸ್ ಆರ್ ರಾಮಸ್ವಾಮಿ ಅಯ್ಯರನ್ನು ಕೋಲಾರದ ಮುನ್‌ಸಿಫರಾಗಿಯೂ ನೇಮಿಸಲ್ಪಟ್ಟಿದೆ

ಮುಂದೆ ಹೇಳುವ ಮುನ್‌ಸಿಫರ ವರ್ಗಾವರ್ಗಿ ಹುಕುಂ ಮಾಡಿದೆ—ಮ॥ ಎನ್ ಜಿ ಲಕ್ಷ್ಮೀನರಸಿಂಹಯ್ಯಂಗಾರ್ರು ಚಿಕ್ಕಮಗಳೂರಿನಿಂದ ಚಿತ್ರದುರ್ಗಕ್ಕೆ ಮ॥ ಡಿ ಅಳಸಿಂಗ್ರಾಚಾರ್ರು ಸಾಗರದಿಂದ ಚಿಕ್ಕಮಗಳೂರಿಗೆ, ಮ। ಎಂ ಎಲ್ ಶ್ರೀಕಂಠೇಗೌಡರು ಶಿವಮೊಗ್ಗೆಯಿಂದ ಮದ್ದಗಿರಿಗೆ, ಮ॥ ಎಚ್ ಎಂ ಕೃಷ್ಣಸ್ವಾಮಿಯವರು ಮದ್ದಗಿರಿಯಿಂದ ಶಿವಮೊಗ್ಗೆಗೆ

ಮ॥ ಸಿ ಎ ರಾಮಸ್ವಾಮಿ ಅಯ್ಯಂಗಾರ್ರನ್ನು ಎರಡು ವರುಷ ಹಂಗಾಮಿಯಾಗಿ 150 ರೂಪಾಯಿ ಸಂಬಳದ ಮೇಲೆ ಸೂಪರವೈಜರಾಗಿ ನೇಮಕಮಾಡಿ ಕಾವೇರಿ ರಿಜರ್ವಾಯರ್ ಕಾಮಗಾರಿಯ ಎಡತೊರೆ ಡಿವಿಜನ್‌ಗೆ ವರ್ಗಮಾಡಿದೆ

ಸ್ಪೆಷಲ್ ಡ್ಯೂಟಿ ಮೇಲಿದ್ದ ಮ॥ ಕಪೂರ್ ಶ್ರೀನಿವಾಸರಾಯರು ಮೇ ತಾ 18 ರಲ್ಲಿ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನೂ, ಮ॥ ಕೆ ಕೃಷ್ಣಯ್ಯಂಗಾರ್ರು ಡಿಪ್ಯುಟಿ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನೂ ವಹಿಸಿಕೊಂಡಿದಾರೆ

ಮೈಸೂರು ತಾಲ್ಲೂಕ್ ಅಮಲ್ದಾರ್ ಮಿ। ಮಹಮದ್ ಪೀರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ —ಶಿರಸ್ತೇದಾರ್ ಮ॥ ಎಂ ನಾರಾಯಣರಾಯರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು

ಒಂದು ಆಶ್ಚರ್ಯವಾದ ಸಂಗತಿ.

ನೋಡಿದವರಿಗೆ ನಿಜ, ಕೇಳಿದವರಿಗೆ ಸುಳ್ಳು

ಇದೇ ಶಿಡ್ಲಘಟ್ಟದ ತಾಲ್ಲೂಕು ಯಣ್ಣೂರು ಗ್ರಾಮದಲ್ಲಿ ವಾಸವಾಗಿರುವ ವೈಷ್ಣವರ ರಂಗಪ್ಪನೆಂಬಾತನಿಗೆ ಇಬ್ಬರು ಹೆಂಡತಿಯರು ಇವರ ಪೈಕಿ ಹಿರಿಯ ಹೆಂಡತಿಯು ಗಂಡನ ಮನೆಯನ್ನು ಬಿಟ್ಟು ತೌರುಮನೆಯಲ್ಲಿ ಇದಾಳಂತೆ ಈ ಗಂಡನ ಸ್ವಾಧೀನದಲ್ಲಿರುವ ಕಿರೀ ಹೆಂಡತಿಯಾದ ಗೋಪಮ್ಮ ಎಂಬ ಯೌವನವತಿಗೆ ಒಂದುವರೆ ತಿಂಗಳಿಂದ ಅಕಸ್ಮಾತ್ತಾಗಿ ಪ್ರತಿನಿತ್ಯವೂ ಅನೇಕ ಕಲ್ಲುಗಳು ಎಲ್ಲಿ ಯಾವ ಕೆಲಸಮಾಡುತ್ತಿದ್ದಾಗೂ ಬಂದು ಬೀಳುತ್ತವೆಂದು ವರ್ತಮಾನ ಹುಟ್ಟಿ, ಪ್ರಜೆಗಳಲ್ಲಿ ಹರಡಿಕೊಂಡಿತು ಈ ವರ್ತಮಾನವನ್ನು ತಿಳಿದು ನಮ್ಮ ತಾಲ್ಲೂಕು ಅಮಲ್ದಾರ್ ಮಿ॥ ಧಾಂಕನ್ ಸಾಹೇಬರವರೂ, ಸಬ್ ರೆಜಿಸ್ಟ್ರಾರವರೂ ಅಲ್ಲಿಗೆ ಹೋಗಿ ವಿಚಾರಿಸಿ ಅಜಮಾಯಿಷಿ ಮಾಡಿದ್ದರಲ್ಲಿ ಅವರು ಪ್ರತಿದಿನವೂ ಕಲ್ಲುಗಳು ಬೀಳುತ್ತವೆ ಎಂತಲೂ, ಆಕೆಯನ್ನು ಎಲ್ಲಿ ಯಾರ ಮನೆಯಲ್ಲಿ ಇಟ್ಟಾಗ್ಯೂ ಆಕೆಯ ಕಣ್ಣಿಗೂ ಅಲ್ಲಿರುವ ಮತ್ಯಾರ ಕಣ್ಣಿಗೂ ಕಾಣಿಸದಂತೆ ಎಲ್ಲಿಂದಲೋ ಕಲ್ಲುಗಳು ಒಂದು ಆಕೆಯ ಬೆನ್ನಿಗೂ ಎದೆಗೂ ಸೋಕಿದ ಹಾಗೆ ಆಗಿ ಹುಡುಗಿಯು ಗಾಬರಿಯಿಂದ ಹಾ ಕಲ್ಲುಬಿತ್ತೆಂದು ಕೂಗುವಾಗ್ಗೆ ಎಲ್ಲರೂ ಕೇಳುವ ಹಾಗೆ ಧುಪ್ಪನೆ ಶಬ್ದವಾಗಿ ಭೂಮಿಯ ಮೇಲೆ ಕಲ್ಲುಕಾಣಿಸುವುದೆಂತಲೂ, ಹುಡುಗಿಗೆ ಸೋಕಿದ ಶರೀರಭಾಗದಲ್ಲಿ ಯಾವ ವಿಧವಾದ ಗಾಯಗಳೂ ಕಾಣುವುದಿಲ್ಲವೆಂತಲೂ, ಕಲ್ಲಿನ ಪೂರಾ ಏಟು ಆಕೆಯ ಮೇಲೆ ಬೀಳುವುದಿಲ್ಲವೆಂತಲೂ, ಬಿದ್ದ ಕಲ್ಲುಗಳು ಒಂದು ಸೇರಿನ ತೂಕದಿಂದ ಹನ್ನೆರಡು ಸೇರಿನ ತೂಕದ ಕಾಡುಕಲ್ಲುಗಳೂ ಬೆಣಚು ಕಲ್ಲುಗಳೂ ರಾಗಿ ಬೀಸುವ ಕಲ್ಲಿನ ಜೋಳಿಗಳೂ ಬೀಳುತ್ತವೆ ಎಂತಲೂ, ಬಿದ್ದ ಕಲ್ಲುಗಳು ಮಾಯವಾಗದೆ ಕಲ್ಲಿನ ಸ್ವಲ್ಪಭಾಗ ಮಾತ್ರ ನೂತನ ಹಾಯವಾಗಿ ಇರುತ್ತವೆ ಎಂತಲೂ, ಇನ್ನೂ ಕೆಲವರು ಪರೀಕ್ಷಾರ್ಥವಾಗಿ ಒಂದು ಚಿಕ್ಕಮನೆಯಲ್ಲಿ ಇಟ್ಟು ಗವಾಕ್ಷಿಗಳನ್ನೂ ಕಿಟಕಿಗಳನ್ನೂ ಬಾಗಿಲನ್ನೂ ಮುಚ್ಚಿ ತಾವು ತಾವೇ ಕೆಲವು ಜನರು ಒಳಗೆ ಇದ್ದು ಆಕೆಯನ್ನು ಒಂದು ಬಟ್ಟೆ ಬುರಕಿಯೊಳಗೆ ಮಲಗಿಸಿದ್ದಾಗ್ಯೂ ಬುರಕಿಯೊಳಗೆ ಶಬ್ದವಾಗಿ ಹುಡಗಿಯು ಹಾ ಕಲ್ಲುಬಿತ್ತೆಂದು ಹೇಳುವಾಗ್ಗೆ ಎಲ್ಲರೂ ನೋಡಿದ ಹಾಗೆ ಒಳಗೆ ಕಲ್ಲು ಬಿದ್ದಿತ್ತೆಂತಲೂ, ಕದವೂ ಕಿಟಕಿಗಳೂ ಯಾವವೂ ತೆರೆಯಲ್ಪಡಲಿಲ್ಲವೆಂತಲೂ ತಿಳಿಯಬಂದಿತಂತೆ ಇದನ್ನೆಲ್ಲಾ ಕೇಳಿ ನಮ್ಮ ಅಮಲ್ದಾರ್ ಸಾಹೇಬರವರೂ, ಸಬ್ ರೆಜಿಸ್ಟ್ರಾರವರೂ ಕಲ್ಲುಗಳನ್ನೂ ಹುಡುಗಿಯನ್ನೂ ಸಹ ಫೋಟೋ ತೆಗೆದುಕೊಂಡು ಬಂದಿದಾರೆ ಈ ಫೋಟೋವಿನಲ್ಲಿ ಕಾಣಿಸುವ ಕಲ್ಲಿನ ರಾಶಿಯು ಸುಮಾರು ಒಂದೆರಡು ಗಾಡಿಗಳಾಗಬಹುದು ಇದನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ಆಕೆಯನ್ನು ನಮ್ಮ ಊರಿಗೆ ಕರೆಯಿಸಿಕೊಂಡು 3-4 ದಿನ ಇಲ್ಲಿಯೇ ಇಟ್ಟು ನೋಡಿದ್ದರಲ್ಲಿ ಅಷ್ಟು ವಿಶೇಷವಿಲ್ಲದೆ 1-2 ದಿನ 2 3 ಕಲ್ಲುಗಳು ಮಾತ್ರ ಬಿದ್ದವೆಂದು ಅವರ ಮನೆಯವರು ಅಮಲ್ದಾರ್ ಸಾಹೇಬರಿಗೆ ತೋರಿಸಿದರು ಈ ವಿಷಯವು ಬಹಳ ಆಶ್ಚರ್ಯವಾದದ್ದಾಗಿದೆ ನಿಜಸ್ಥಿತಿ ಏನೋ ತಿಳಿಯದು

ಬಾತ್ಮಿದಾರ್

[ಈ ಬಾತ್ಮೀದಾರರು ಇಲ್ಲಿ ಹೇಳಿರುವ ಫೋಟೋವಿನ ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿದಾರೆ ಈ ಫೋಟೋದಲ್ಲಿ ಮೇಲ್ಗಡೆ ಹೆಣ್ಣುಮಗಳು ನಿಂತಿರುವಳು ಕೆಳಗೆ ಕಾಲಿನ ಬಳಿ ಬಲಗಡೆ ದೊಡ್ಡ ಕಲ್ಲುಗಳ ರಾಶಿಯೂ, ಎಡಗಡೆ 3-4 ದೊಡ್ಡ ಸಣ್ಣ ಕಲ್ಲುಗಳೂ ಬಿದ್ದಿರುತ್ತವೆ —ಎಡಿ]

ಗ್ರಾಮದಲ್ಲಿರುವ ಗುಂಡಿಗಳಿಂದಾಗುವ ಅಪಾಯ

ಚಿತ್ರದುರ್ಗ ತಾಲ್ಲೂಕು ಕೊಣಚೀವು ಗ್ರಾಮದ ಉತ್ತರಕ್ಕೆ ಜನರು ಬಳಸುವ ಭಾವಿಯ ಮತ್ತು ದಾರಿಯ ಮೇಲ್ಭಾಗದಲ್ಲಿ ಗ್ರಾಮದ ಸಮೀಪದಲ್ಲಿಯೇ 1-2 3 ಆಳು ಪ್ರಮಾಣವುಳ್ಳ ಗುಂಡಿಗಳು ಇರುವವು ಇವು ಮಳೆಗಾಲದಲ್ಲಿ ಗ್ರಾಮದ ಪಾಕೀಜು ನೀರಿನಿಂದ ತುಂಬಿ ದುರ್ವಾಸನೆಯಿಂದಲೂ, ಬಳಸುವ ಭಾವಿಯ ನೀರು ಕೆಡುವದರಿಂದಲೂ ಜನರು ರೋಗದಿಂದ ಬಹಳವಾಗಿ ನರಳುತ್ತಾರೆ ಮತ್ತು ಈಗ 15 20 ದಿನಗಳ ಕೆಳಗೆ ಸ್ವಲ್ಪ ಮಳೆ ಬಂದುದರಿಂದ ಗ್ರಾಮದ ಪಾಕೀಜು ನೀರೆಲ್ಲಾ ಬಂದು ಆಳು ಪ್ರಮಾಣವುಳ್ಳ ಗುಂಡಿಗೆ ತುಂಬಿಕೊಂಡಿತ್ತು ಮತ್ತು ಮೇ ತಾ 18 ನೇ ಸೋಮವಾರ ಮಧ್ಯಾಹ್ನ ಒಂದು ಘಂಟೆ ಸಮಯದಲ್ಲಿ ಕೆಲವು ಚಿಕ್ಕ ಹುಡುಗರು ಸೇರಿ ಆಡಿಕೊಳ್ಳುತ್ತಾ, ಆ ಗುಂಡಿಯ ಹತ್ತಿರಕ್ಕೆ ಹೋಗಿರುವಾಗ್ಗೆ ವೀರಭೈರ ಎಂಬ ನಾಲ್ಕು ವರ್ಷದ ಒಂದು ಹುಡುಗ ಕೂಸು ಅಕಸ್ಮಾತ್ತಾಗಿ ಆ ಗುಂಡಿಯಲ್ಲಿ ಬೀಳಲು ಚಿಕ್ಕ ಹುಡುಗರೆಲ್ಲಾ ಅಲ್ಲಿಯೇ ನೋಡಿಕೊಳ್ಳುತ್ತಾ ನಿಂತಿರಲು, ನಾಲ್ಕು ವರ್ಷದ ಹುಡುಗನೊಬ್ಬನು ಓಡಿಹೋಗಿ ಆ ಹುಡುಗಿಯ ತಾಯಿತಂದೆಗಳಿಗೆ ತಿಳಿಸಲು ಅವರು ಗಾಬರಿಯಿಂದ ಓಡಿಹೋಗಿ ನೋಡಿದಾಗ ಕೂಸು ನೀರಿನಲ್ಲಿ ಮುಳುಗಿರಲು ಕಾಣಲಿಲ್ಲ ಆಗ ಮತ್ತಷ್ಟು ಗಾಬರಿಯಾಗಿ ನೀರಿನಲ್ಲಿ ಇಳಿಯುವಷ್ಟರಲ್ಲಿ ಕೂಸು ಮೇಲಕ್ಕೆ ಏಳಲು ಆಗ ಅದನ್ನು ಹಿಡಿದು ಮೇಲಕ್ಕೆ ತಂದು ನೋಡಲು ನೀರು ಕುಡಿದು ಹೊಟ್ಟೆ ಊದಿಕೊಂಡು ಶ್ವಾಸವಾಡದಿರಲು ಅದರ ತಂದೆತಾಯಿಗಳ ಗೋಳಾಟ ಜಾಸ್ತಿಯಾಯಿತು ಅಷ್ಟರಲ್ಲಿ ಮೂಗಿನಿಂದ ಸ್ವಲ್ಪ ಶ್ವಾಸ ಹೊರಡಲು ಒಬ್ಬನು ಕೂಸನ್ನು ಹಿಡಿದು ಅಪ್ಪಾಲಿ ಆಡಿಸಲು ಬಾಯಿಯಲ್ಲಿಯೂ, ಮೂಗಿನಲ್ಲಿಯೂ ನೀರೆಲ್ಲಾ ಹೊರಗೆ ಬರಲು ಶ್ವಾಸವಾಡುವದಕ್ಕೆ ಪ್ರಾರಂಭವಾಯಿತು ಅನಂತರ ಮನೆಗೆ ಎತ್ತಿಕೊಂಡು ಹೋದರು ಈಗ ಕೂಸು ಸುಖವಾಗಿರುತ್ತದೆ ಇದರಿಂದ ಇಂಥಾ ಗುಂಡಿಗಳು ಗ್ರಾಮದ ಸಮೀಪದಲ್ಲಿಯೂ, ಬಳಸುವ ಭಾವಿಯ ಸಮೀಪದಲ್ಲಿಯೂ, ಸ್ಥಳದ ಮತ್ತು ಪರಸ್ಥಳದ ಜನರೂ ಗಾಡಿಗಳೂ ಸಹ ತಿರುಗಾಡುವ ದಾರಿಗಳ ಎರಡು ಪಕ್ಕಗಳಲ್ಲಿಯೂ ಇರುವದರಿಂದ ಮೇಲೆ ಹೇಳಿದಂತೆ ಪ್ರಾಣಹಾನಿಗೂ, ರೋಗಾದಿಗಳಿಗೂ ಅವಕಾಶ ಉಂಟಾಗುತ್ತದೆ ತಾಲ್ಲೂಕು ಅಧಿಕಾರಿಗಳು ಇಂಥವುಗಳನ್ನು ತಮ್ಮ ಮನಸ್ಸಿಗೆ ತಂದುಕೊಂಡು ತಕ್ಕ ಪ್ರಯತ್ನದಿಂದ ಅವುಗಳನ್ನು ಮುಚ್ಚಿಸಿ ರೋಗಾದಿಗಳಿಗೂ ಪ್ರಾಣಹಾನಿಗೂ ಅವಕಾಶವಿಲ್ಲದಂತೆ ಮಾಡಿಸುವರೆಂದು ನಂಬಿದೇನೆ

ಪ್ರತ್ಯಕ್ಷದರ್ಶಿ.

[ಇಂಥಾ ಕಡೆ ಗ್ರಾಮದ ಮುಖಂಡರು ಪ್ರಜೆಗಳಿಗೆ ವಿವೇಕ ಹೇಳಿ ತಿಂಗಳಿಗೆ ಒಂದೆರಡು ದಿನ ಇಂಥಾ ಕೆಲಸಕ್ಕೆ ಎಲ್ಲರೂ ಬರುವಂತೆ ಮಾಡಿಕೊಂಡು ಅವರುಗಳೆಲ್ಲಾ ಸೇರಿ ಗ್ರಾಮದಲ್ಲಿ ಅವಶ್ಯವಾದ ಇಂಥಾ ಗುಂಡಿ ಮುಚ್ಚುವುದೇ ಮೊದಲಾದ ಕಾರ್ಯಗಳನ್ನು ಸುಲಭವಾಗಿ ಮಾಡಿಕೊಳ್ಳಬಹುದು ಇಂಥಾ ಕೆಲಸಗಳಿಗೆ ಸರ್ಕಾರದವರ ಕೈಕಾಯುವ ನಿಷ್ಪ್ರಯೋಜನ —ಎಡಿ]

ಇಂಡಿಯಾ ದೇಶದ ವೃತ್ತಾಂತಗಳು.

ಡಾರ್ಜಿಲಿಂಗ್ ಪಟ್ಟಣದ ರೈಲ್ವೆ ಸ್ಟೇಷನ್ ಆವರಣದಲ್ಲಿ ವ್ಯಾಪಾರಸ್ಥರ ಸರಕುಗಳು ಜಮೆಯಾಗಿದ್ದ ಮನೆಗೆ ಬೆಂಕಿ ಬಿದ್ದು ಸುಮಾರು 70,000 ರೂಪಾಯಿ ನಷ್ಟವಾಯಿತು

ಬೊಂಬಾಯಿ ಪಟ್ಟಣದಲ್ಲಿ ಒಬ್ಬ ಜೈಲಿಗಾಗಿಯು ಗೋವಿಂದಜಿ ಮಾಧವಜಿ ಎಂಬ ಭಾರೀ ಸಾಹುಕಾರನ ಕೂಡ ವಾಗ್ವಾದ ಮಾಡಿ ಗಾಯಪಡಿಸಿದನು ಆ ಸಾಹುಕಾರನಿಗೆ ಶಾಸಿಯಾಗದೆ ಕಾಲವಾದನು

ಬರೋಡಾ ಗವರ್ನಮೆಂಟಿನವರು ವಾಸುವಾ ಎಂಬ ಊರಿನಿಂದ ಅನಾವಲ ಎಂಬ ಊರಿನ ತನಕ 18 ಮೈಲಿ ರೈಲ್ ರಸ್ತೆ ಹಾಕಿಕೊಳ್ಳಬಹುದೆಂದು ಇಂಡಿಯಾ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

ಹೌರಾ ಪಟ್ಟಣದ ಟಿಂಡಲ್ ಬಾಗನ್ ರೋಡಿನಲ್ಲಿ ಎಕ್ಸೈಸ್ ಅಧಿಕಾರಿಗಳು ಒಂದು ಮನೆಗೆ ನುಗ್ಗಿ ಶೋಧನೆ ಮಾಡಿದಾಗ 3,700 ಪೌಂಡುಗಳ ಕೊಕೈನ್ ಎಂಬ ಮದ್ದುವಸ್ತುವು ಸಿಕ್ಕಿತು ಹತ್ತು ಜನರನ್ನು ದಸ್ತಗಿರಿ ಮಾಡಿದರು

ಕಲ್ಕತ್ತಾ ಪಟ್ಟಣದಲ್ಲಿ ನಾಗೇಂದ್ರನಾಥ ಮುಖರ್ಜಿ ಎಂಬೊಬ್ಬ ವಕೀಲನು ಕೆಲವು ಮೊಕದ್ದಮೆಗಳಲ್ಲಿ ಕಕ್ಷಿಗಾರರಿಗೆ ಮೋಸಪಡಿಸಿದನೆಂದು ಈಗ ದಸ್ತಗಿರಿ ಮಾಡಲ್ಪಟ್ಟಿದಾನೆ ಇವನ ಗುಮಾಸ್ತೆಯು ಪೊಲೀಸಿನವರು ಬಂದದ್ದನ್ನು ನೋಡಿ ತಪ್ಪಿಸಿಕೊಂಡು ಹೋದವನು ಇನ್ನೂ ಸಿಕ್ಕಿ ಇಲ್ಲ.

ಡೆಹಲಿ ನಗರದ ಪಿತೂರಿ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಹನ್ನೊಂದು ಮಂದಿ ಅಪರಾಧಿಗಳ ಮೇಲೆ ಸಾಕ್ಷಿಗಳ ವಿಚಾರಣೆ ಮಾಡಿ ಕಳೆದ ವಾರ ಅವರನ್ನೆಲ್ಲಾ ಸೆಷನ್ಸ್ ಕೋರ್ಟಿಗೆ ಕಳುಹಿಸಿಕೊಟ್ಟರು ಸೆಷನ್ಸ್ ಜಡ್ಜರು ಮೊನ್ನೆ ಸೋಮವಾರದಿಂದ ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡುತ್ತಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಮೆರಿಡಿತ್ ಎಂಬೊಬ್ಬ ಕೋರ್ಟ್ ಅಮೀನನು ಒಬ್ಬ ಹಿಂದೂ ಸ್ತ್ರೀಯು ವಾಸವಾಗಿದ್ದ ಮನೆಯಿಂದ ಆಕೆಯನ್ನು ಕೋರ್ಟು ಹುಕುಂ ಪ್ರಕಾರ ಹೊರಡಿಸಬೇಕೆಂದು ಹೋಗಿ ಹೊಡೆದು ಅವಮಾನಪಡಿಸಿದನು. ಇವನ ಅತ್ಯಕೃತ್ಯವು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಆ ಅಮೀನನಿಗೆ 50 ರೂಪಾಯಿ ಜುಲ್ಮಾನೆಯನ್ನು ವಿಧಿಸಿರುತ್ತಾರೆ

ಮಹಾಬಲೇಶ್ವರದಲ್ಲಿ ಬೊಂಬಾಯಿ ಗವರ್ನರವರು ಮುರಾರ್ಜಿ ಗೋಕುಲದಾಸರವರ ಹೆಸರಿನ ಮೇಲೆ ಕಟ್ಟಿದ್ದ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡಿದರು ಮ॥ ನರೋತ್ತಮರವರು ಪ್ರಬರಿ ಎಂಬ ಕಟ್ಟಡವನ್ನೂ ವಿಸ್ತಾರವಾದ ನಿವೇಶನವನ್ನೂ ಈ ಆಸ್ಪತ್ರೆಗೆ ಕೊಟ್ಟು 5,000 ರೂಪಾಯಿ ನಗದನ್ನೂ ಕೊಟ್ಟರು ಲೇಟ್ ಧರಂಸೀ ಯವರ ಪತ್ನಿಯು 8,000 ರೂಪಾಯಿ ತಮ್ಮ ಹೆಸರಿನಲ್ಲಿ ಕೊಟ್ಟಿದಾರೆ.

ಕಳೆದ ತಾ 16 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಸರ್ಕಾರಿ ಲೆಕ್ಕಗಳ ಪ್ರಕಾರ 6,158 ಜನರಿಗೆ ಪ್ಲೇಗ್ ತಗಲಿತು, 6,053 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ— ಪಂಜಾಬ್ 3,565, ಸಂಯುಕ್ತ ಆಧಿಪತ್ಯಗಳು 1,468, ಬೀರಾರ್ ಮತ್ತು ಓರಿಸ್ಸಾ 698, ಬೊಂಬಾಯಿ ಆಧಿಪತ್ಯ 337, ಬಂಗಾಳ 23, ಮದರಾಸ್ 2, ಬರ್ಮಾ 105, ಮೈಸೂರು ಸಂಸ್ಥಾನ 21

ಕಲ್ಕತ್ತಾ ಪಟ್ಟಣದಲ್ಲಿ ಕಾಬೂಲಿ ಜನರು ಪ್ರಜೆಗಳಿಗೆ ಸಾಲ ಕೊಟ್ಟು ಸಾಲಗಾರರನ್ನು ಹಿಡಿದು ರಾಜಬೀದಿಯಲ್ಲಿ ಪೊಲೀಸಿನವರ ಎದುರಿಗೇನೇ ದೊಣ್ಣೆಗಳಿಂದ ಹೊಡೆದು ಹಿಂಸೆಪಡಿಸುವುದು ಮತ್ತೆ ಪ್ರಾರಂಭವಾಗಿದೆ ಇದನ್ನು ತಡೆಯಲು ಪೊಲೀಸಿನವರು ಅಸಮರ್ಥರಾದದ್ದನ್ನು ಕಂಡು, ಪೊಲೀಸ್ ಕಮಿಷನರವರು ಇನ್ನು ಮುಂದೆ ಕಾಬೂಲಿ ಜನರ್‍ಯಾರೂ ರಾಜಬೀದಿಗಳಲ್ಲಿ ತಿರುಗುವಾಗ ದೊಣ್ಣೆಗಳನ್ನು ಹಿಡಿದು ತಿರುಗಕೂಡದು ಎಂದು ಇಸ್ತಿಹಾರು ಹಾಕಿಸಿದಾರೆ. ಇದರಿಂದಲಾದರೂ ಅವರ ಹಾವಳಿ ಕಡಮೆಯಾಗಬೇಕೆಂದು ಅಲ್ಲಿನ ಅಧಿಕಾರಿಗಳು ಊಹಿಸುತ್ತಾರೆ

ಶ್ರೀರಂಗದಲ್ಲಿ ಒಂದು ಆಯುರ್ವೇದ ವಿದ್ಯಾಶಾಲೆಯನ್ನೂ, ಅದಕ್ಕೆ ಸಂಬಂಧಪಟ್ಟಂತೆ ಒಂದು ಧರ್ಮದ ವೈದ್ಯಶಾಲೆಯನ್ನೂ, ಸ್ಥಾಪಿಸಬೇಕೆಂದು ತಿರುಚಿನಾಪಳ್ಳಿ ಡಿಸ್ಟ್ರಿಕ್ಟಿಗೆ ಸೇರಿದ ಪರಸೂರು ಮಿರಾಸಿದಾರರಾದ ಮ। ಆರ್ ಕೆ ಪ್ರಸನ್ನ ವೆಂಕಟೇಶ ನಾಯರೆಂಬುವರು ಮೊದಲು 1,000 ರೂಪಾಯಿ ಕೊಟ್ಟಿದ್ದರು. ಈಗ ಅವರು ಮತ್ತೆ ಆಪತ್ಕಾಗಿಯೇ 30,000 ರೂಪಾಯಿ ಕೊಟ್ಟಿದಾರೆ ಈ ಹಣವನ್ನು ತಿರುಚಿನಾಪಳ್ಳಿಯ ಬ್ಯಾಂಕಿನಲ್ಲಿ ಇಟ್ಟಿರುವರು ಅದರ ಬಡ್ಡಿಯಿಂದ ಮೇಲ್ಕಂಡ ಧರ್ಮ ಕಾರ್ಯಗಳನ್ನು ನಡಿಸುವಂತೆ ಏರ್ಪಾಡಾಗಿದೆ ಮದರಾಸಿನ ಆಯುರ್ವೇದ ವಿದ್ಯಾಶಾಲೆಯಲ್ಲಿ ಓದಿ ತೇರ್ಗಡೆ ಹೊಂದಿರುವ ಒಬ್ಬ ವೈದ್ಯರನ್ನು ನೇಮಿಸಿ ಇಷ್ಟರಲ್ಲೇ ಆವೆರಡನ್ನೂ ಪ್ರಾರಂಭ ಮಾಡುತ್ತಾರೆ ದು ತಿಳಿಯುವುದು

ಬಂಗಾಳ ಆಧಿಪತ್ಯಕ್ಕೆ ಸೇರಿದ ಚಿನಾಕುರಿ ಎಂಬ ಬಹು ಪುರಾತನ ಕಾಲದ ಕಲ್ಲಿದ್ದಲ ಗಣಿಯಲ್ಲಿ ಕೂಲಿಮಾಡುತ್ತಿದ್ದ ನಾಥು, ನಾನಿ, ಮುಂತಾದ ಹತ್ತು ಮಂದಿ ಪುಂಡಾಟಿಗಳು ಸಾಂತಾಲ್ ಪರಗಣಗಳು, ಬ್ಯಾಂಕುರ, ಹಜಾರಿಬಾಗ್, ಕಟ್ಟಾಕ್, ಬರ್ದ್ವಾನ್ ಈ ಪ್ರಾಂತ್ಯಗಳಲ್ಲಿ ದರೋಡೆಗಳನ್ನು ಮಾಡಿ ನಗನಾಣ್ಯಗಳನ್ನು ದೋಚುತ್ತಾ ಇದ್ದರು 1899 ನೇ ಇಸವಿಯಿಂದ 1913 ನೇ ಮೇ ತಿಂಗಳ ತನಕ ಅವರ ಕೃತ್ಯಗಳಿಗೆ ಅಡ್ಡಿಯೇನೂ ಉಂಟಾಗಲಿಲ್ಲ 1912 ನೇ ಇಸವಿಯಲ್ಲಿ ಒಂದು ಮೊಕದ್ದಮೆಯಲ್ಲಿ ಅವರು ದಸ್ತಗಿರಿ ಮಾಡಲ್ಪಟ್ಟರೂ ರುಜುವಾತಾಗದೆ ಅವರಿಗೆ ಬಿಡುಗಡೆಯಾಯಿತು ಕಳೆದ ವರುಷ ಮೇ ತಿಂಗಳಲ್ಲಿ ಅವರನ್ನು ಪೊಲೀಸಿನವರು ಹಿಡಿದರು ಇವರು ಆಲೂಕಿ ಎಂಬಲ್ಲಿ ನಡಿಸಿದ ದರೋಡೆಯು ರುಜುವಾತಾಯಿತು ಅವರ ಬಳಿ ಅಪಾರ ನಗನಾಣ್ಯಗಳೂ ಬಟ್ಟೆಬರೆಗಳೂ ಸಿಕ್ಕಿದ್ದಲ್ಲದೆ ಬಂದೂಕು ಮದ್ದು ಗುಂಡು ಸಹ ಸಿಕ್ಕಿದವು ಅವರಿಗೆ ತಲಾ ಆರು, ಏಳು ವರುಷಗಳಂತೆ ಸಜಾ ಆಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಮೇ 14 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	... ...	ರೂ 9,74,435
,, (2) ಡಿಪಾಜಿಟ್ಟುಗಳು	...	,, 13,09,816
,, (3) ಇತರೆ	... ...	,, 24,889
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 23,09,140
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ. 5,19,495
,, (2) ಖಾತೆ ಮತ್ತು ಇತರ ಸಾಲಗಳು		,, 13,19,573
,, (3) ಡಿಸ್ಕೌಂಟು ಮಾಡಿದ ಪಾಯಿದೆ ಹುಂಡಿಗಳು		,, 1,54,775
,, (4) ಇನ್‌ವೆಸ್ಟ್‌ಮೆಂಟುಗಳು	...	,, 2,01,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	...	,, 58 272
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...	,, 8,230
,, (7) ಇತರೆ	...	,, 17,796
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 23,09,140

ಡಬ್ಲಿಯು ಸಿ ರೋಜ್, ಮ್ಯಾನೇಜರ್

ಮಹಾರಾಜಾ ಸಯ್ಯಾಜಿರಾವ್ ಗಾಯಕವಾಡಿಯವರ ಉಪನ್ಯಾಸ

ಬರೋಡಾ ಸಂಸ್ಥಾನದ ಪ್ರಥಮ ಪರಸ್ಪರ ಸಹಾಯಕರ ಸಮ್ಮೇಳನವು ನಡೆಯಿತು ಶ್ರೀಮನ್ ಮಹಾರಾಜರವರು ಆ ಸಮಯದಲ್ಲಿ ದಯಮಾಡಿ ಅದರ ಶ್ರೇಯೋಭಿವೃದ್ಧಿಯನ್ನು ಬಯಸಿ ಅಭಿನಂದನವನ್ನು ಮಾಡಿದರು ಬರೋಡೆಯಲ್ಲಿ ಬಲವಾಗುತ್ತಿರುವ ಮತ್ತು ಹೊಸ ಕಸಬುಗಳ ಪ್ರೋತ್ಸಾಹಾರ್ಥ ಶ್ರೀಮನ್ ಮಹಾರಾಜರವರು ಹೆಚ್ಚಾದ ಮೊಬಲಗನ್ನು ಸ್ವಲ್ಪ ಬಡ್ಡಿಗೆ ಜನರಿಗೆ ಕೊಡಲು ಉದ್ದೇಶಿಸಿರುವುದಾಗಿ ವದಂತಿ ಇರುತ್ತಿದ್ದುದರ ಮೇಲೆ ಆ ಸಮಯದಲ್ಲಿ ತಮ್ಮ ಪ್ರಭುಗಳ ಮುಖದಿಂದಲೇ ಆ ಶುಭವಾರ್ತೆಯನ್ನು ಕೇಳಿ ಪರಮಾನಂದ ಭರಿತರಾದರು ಇದಕ್ಕಾಗಿ ನಿಯಮಗಳನ್ನೂ ವಿಧಿಸಿರುವರು ಇವುಗಳನ್ನು ಜಾರಿಯಲ್ಲಿ ತರಲು ತಕ್ಕ ಅಧಿಕಾರಸ್ಥರ ಮಂಡಲಿಯನ್ನು ನಿಯಮಿಸಿರುತ್ತಾರೆ ಉತ್ಸಾಹ ಸಾಹಸಶಾಲಿಗಳಾದವರು ಈ ಸಮಯವನ್ನು ಕೈಬಿಡದೆ ಯುಕ್ತವಾದ ರೀತಿಯಲ್ಲಿ ವಿನಿಯೋಗಿಸಿಕೊಂಡು ಪ್ರಯೋಜನ ಪಡೆಯಬೇಕೆಂಬುದಾಗಿ ಪ್ರಕಟಿಸಿರುವರು ಗಾಯಕವಾಡಿ ಮಹಾರಾಜರವರ ಉಪನ್ಯಾಸವು ಬಹುಜನಗಳಿಂದ ಸ್ತೋತ್ರಮಾಡಲ್ಪಟ್ಟಿರುತ್ತದೆ ನಮ್ಮ ವಾಚಕರ ಉಪಯೋಗಾರ್ಥ ಅದರ ಮುಖ್ಯ ತಾತ್ಪರ್ಯವನ್ನು ಇದರಡಿ ತಿಳಿಸುವೆವು

ಆ ದಿನ ಶುಕ್ರವಾರವಾದ ಮಧ್ಯಾಹ್ನ 3 ಘಂಟೆ ಸಮಯಕ್ಕೆ ಗಾಯಕವಾಡಿ ಶ್ರೀಮನ್ ಮಹಾರಾಜರವರು ರಾಜಪುತ್ರ ಜಯಸಿಂಹರಾಯರೊಡನೆ ಪರಿವಾರದೊಡನೆ ಸಮ್ಮೇಳನ ಸ್ಥಾನಕ್ಕೆ ದಯಮಾಡಿಸಿದರು ಅತಿ ವಿಜೃಂಭಣೆಯೊಡನೆ ಅಲ್ಲಿ ನೆರೆದಿದ್ದವರು ಸ್ವಾಗತವನ್ನು ಸಲ್ಲಿಸಿದರು ಬಹುಮಂದಿ ಅಲ್ಲಿಗೆ ಬಂದು ಹಾಜರಿದ್ದ ಬಗ್ಗೆ ಮಹಾರಾಜರವರು ಬಹು ಪ್ರೀತರಾದರು ಎರಡು ಸಾವಿರ ಮಂದಿ ರೈತರೂ ಇತರ ಮುಸ್ಲಿಮಾನ್ ಜನರೂ, ಒಂದು ಸಾವಿರ ಮಂದಿಗೆ ಹೆಚ್ಚಾಗಿ ಪ್ರತಿನಿಧಿಗಳೂ, ಆಗಂತುಕರೂ ಬಂದಿದ್ದರು

ಸಮ್ಮೇಳನದ ಕಾರ್ಯಾರಂಭಕ್ಕೆ ಅನುಜ್ಞೆಯನ್ನು ಕೊಟ್ಟು ಪ್ರಕರಣ ಶಾತ್ ಈ ಕೆಳಗೆ ವಿವರಿಸಿರುವ ರೀತಿಯಲ್ಲಿ ಉಪನ್ಯಾಸವನ್ನು ಮಾಡಿದರು —ನಮ್ಮ ರಾಜ್ಯದಲ್ಲಿ ಪ್ರಥಮತಃ ನಡೆಯುವ ಈ ಪರಸ್ಪರಸಹಾಯ ಸಂಘ ಸಮ್ಮೇಳನವನ್ನು ಸಾಕ್ಷಾತ್ತಾಗಿ ಬಂದು ಅನುಗ್ರಹಿಸುವಂತೆ ನಮ್ಮನ್ನು ಪ್ರಾರ್ಥಿಸಿದಾಗ ಬಹು ಸಂತೋಷದೊಡನೆ ಸದರಿ ಆಹ್ವಾನವನ್ನು ಅಂಗೀಕರಿಸಿದೆವು ಕಾರಣವೇನೆಂದರೆ ಈ ಜಾತೀಯವಾದ ಕಾರ್ಯದಲ್ಲಿ ನಮಗಿರುವ ಆದರವನ್ನು ತೋರ್ಪಡಿಸುವುದಕ್ಕೂ, ನಮ್ಮ ನಾಲ್ಕು ಪ್ರಾಂತ್ಯಗಳಿಂದಲೂ ಬಂದಿರುವ ಸಂಘಗಳ ಪ್ರತಿನಿಧಿಗಳನ್ನು ಕಾಣುವುದಕ್ಕೂ ಸರಿಯಾದ ಸಮಯ ಒದಗಿತೆಂದು ತಿಳಿದೆವು

ನಮ್ಮ ಪ್ರಜೆಗಳ ವಿಷಯದಲ್ಲಿ ಯಾವ ವಿಚಾರಗಳು ಅವರ ಐಹಿಕ ಭೋಗಭಾಗ್ಯಗಳನ್ನೂ, ಸುಖಸಂತೋಷಗಳನ್ನೂ, ಆಮುಷ್ಮಿಕವಾದ ಧರ್ಮ ಕರ್ಮಗಳನ್ನೂ ಕ್ರಮಪಡಿಸಿ ಇಷ್ಟೋತ್ಪತ್ತಿಕರವಾಗಿ ಅಭಿವೃದ್ಧಿಗೆ ತರುವಂತಹವಾಗಿರುವುವೋ ಅಂತಹ ಅಭ್ಯುದಯಕರವಾದ ವಿಚಾರಗಳ ವಿಷಯದಲ್ಲಿ ನಮ್ಮ ಪರಮಾದರವೂ ಅಭಿಮಾನವೂ ಸದಾ ಇರುವುದು ಮತ್ತು ಅಂತಹ ಕಾರ್ಯಗಳು ಸಫಲೀಸು ಏಕಾಗಿ ಸಾರ್ಥಕಗಳಾಗಲು ನಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಸಹಾಯ ಮಾಡಲು ಸಿದ್ಧವಾಗಿರುವೆವು ಈ ಪರಸ್ಪರ ಸಹಾಯ ಸಂಘಗಳು ಜನರಿಗೆ ಬಹು ಉಪಕಾರಿಗಳೆಂದು ನಂಬಿರುತ್ತೇವೆ ಏಕೆಂದರೆ ಇವು ಜನರಿಗೆ ತಮ್ಮ ಸ್ವಂತ ಆಡಳಿತಗಳಲ್ಲಿ ಸರಿಯಾದ ವ್ಯವಹಾರಜ್ಞಾನವನ್ನು ಉಂಟುಮಾಡುವ ಉದ್ದೇಶವನ್ನುಳ್ಳವಾಗಿರುವವು ಇದಲ್ಲದೆ ಅವುಗಳಲ್ಲಿ ನಡೆಯುತ್ತಿರುವ ಕಸಬುಗಳನ್ನು ಊರ್ಜಿತಪಡಿಸಿ ಅಭಿವೃದ್ಧಿಗೆ ತರಲು ಯತ್ನಿಸುವುವು ಇದರಿಂದ ಜನರ ಜೀವನವು ಸುಖಕರವಾಗುವುದು ನಮ್ಮ ಅಭಿಪ್ರಾಯದಲ್ಲಿ ನಾಗರಿಕ—ಎಂದರೆ ಪಟ್ಟಣವಾಸಿಗಳ ಮತ್ತು ಗ್ರಾಮಾಂತರವಾಸಿಗಳ ಕ್ಷೇಮಕ್ಕೆ ಸಂಬಂಧಪಟ್ಟು ಬಹುಕಾಲದಿಂದಲೂ ವಿಚಾರಕ್ಕೆ ವಿಷಯವಾಗಿದ್ದರೂ ಅಪ್ರಾಪ್ತ ಇತ್ಯರ್ಥವಾಗಿದೆ ಇನ್ನೂ ನವನವವಾಗಿ ತೋರುತ್ತದೆ ಚಿಂತೆಗೆ ಆಸ್ಪದವಾದ ಅನೇಕ ಅಂಶಗಳನ್ನು ವಿಮರ್ಶೆಗೆ ತರಲು ಈ ಪರಸ್ಪರ ಸಹಾಯ ಕ್ರಮವೆಂಬುದು ಅಮೂಲ್ಯವಾದ ಉಪಾಯವೆಂದು ತೋರುತ್ತದೆ ಎಲ್ಲಾ ಕಡೆಯಲ್ಲಿಯೂ ಪ್ರತಿಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಆಡಳಿತಗಳನ್ನೂ ಈ ಪರಸ್ಪರಸಹಾಯವೆಂಬುದು ಆವರಿಸಿಕೊಳ್ಳಬೇಕು ಪ್ರಾಪಂಚಿಕ ವ್ಯವಹಾರಕ್ಕೆ ಗ್ರಾಮವೆಂಬುದು ಎಲ್ಲಾ ವಿಧದಲ್ಲೂ ಒಂದಾಗಿ ಕಾಣಬೇಕು ಈಗಿನ ಲೋಕತಂತ್ರದ ಪ್ರವಾಹವು ಯಾವ ದಾರಿಯಲ್ಲಿರುವುದೆಂದರೆ ಎಲ್ಲವೂ ಒಂದರೊಡನೆ ಒಂದು ಸೇರುತ್ತಾ, ಒಗ್ಗಟ್ಟಾಗುತ್ತಾ ಕೂಟದಲ್ಲಿ ಕೆಲಸಮಾಡುವ ಅಭಿಪ್ರಾಯದಲ್ಲಿರುವುದು ಗ್ರಾಮನಿವಾಸಿಗಳಲ್ಲಿ ಜನರೆಲ್ಲರೂ ಕೊಳ್ಳುವುದು ಮತ್ತು ಮಾರಾಟ ಪದಾರ್ಥಗಳನ್ನು ಉತ್ಪತ್ತಿಮಾಡುವುದು, ಉಪಯೋಗಿಸುವುದು ಒಗ್ಗಟ್ಟಾಗಿ ಸಮಿತಿಯಲ್ಲಿ ಕೆಲಸಮಾಡಲು ತೊಡಗಿದರೆ ಜನರ ವರಮಾನವೂ ನೆಮ್ಮದಿಯೂ ತನ್ನಿಚ್ಛೆಯಾಗಿ ಕ್ರಮವಾಗಿ ಹುಟ್ಟುವವು ವಿಪರೀತವಾದ ಕಾಲಗತಿಯಿಂದ ತಮ್ಮ ತಮ್ಮ ಸ್ಥಿತಿಗಳಲ್ಲಿ ಒದಗುವ ಹೆಚ್ಚುಕಡಿಮೆಗಳನ್ನೂ, ಕಷ್ಟನಷ್ಟಗಳನ್ನೂ ಸ್ವಲ್ಪಮಟ್ಟಿಗೆ ಸಹಿಸಲು ಅವರಿಗೆ ಶಕ್ತಿಯುಂಟಾಗುವುದು ಅವರಿಗೆ ಮುಂಜಾಗ್ರತೆ ವಹಿಸಬೇಕೆಂಬ ಬುದ್ಧಿಯುಂಟಾಗುವುದು ಆದರಿಂದ ಮುಂದೆ ಬರಬಹುದಾದ ವ್ಯತ್ಯಾಸಗಳನ್ನು ಮೊದಲೇ ಆಲೋಚಿಸಿ ಅದಕ್ಕೆ ತಕ್ಕಂತೆ ಜಾಗ್ರತೆಪಡುವ ಅಭ್ಯಾಸವೂ ಹಿಂದೆಯೇ ಬರುವುದು ಈ ರೀತಿ ಮಾಡುವುದರಿಂದ ನಮ್ಮ ಮಂತ್ರಿಗಳೂ ನಾವೂ ಜನರ ಹಿತವನ್ನು ಬಯಸಿ ಜಾರಿಯಲ್ಲಿ ತರಬೇಕೆಂದು ಉದ್ದೇಶಿಸಿರುವ ಅನೇಕ ಸತ್ಕಾರ್ಯಗಳು ಸಾರ್ಥಕಗಳಾಗಿ ನೆರವೇರಲು ಜನರು ತಮ್ಮ ಕೈಲಾದಷ್ಟುಮಟ್ಟಿಗೆ ಸಹಾಯಮಾಡಿದಂತಾಗುವುದು

ಈಗ ನಮ್ಮ ಅಂದರೆ ಪರಸ್ಪರ ಸಹಾಯಪ್ರವರ್ತಕರ ಆಡಳಿತಗಳೆಲ್ಲವೂ ಕೃಷಿಜೀವಿ ಜನರಲ್ಲಿಯೇ ಪ್ರಾಯಶಃ ಮುಖ್ಯವಾದ ಹಾಗೆ ಕಂಡುಬರುತ್ತಿದೆ ಸಧ್ಯಕ್ಕೆ ಅದು ಹಾಗೆಯೇ ಇರುವುದು ಕ್ಷೇಮಕರವೆಂದು ನಾವು ತಿಳಿದಿರುವೆವು ಮತ್ತು ಇನ್ನೂ ಸ್ವಲ್ಪಕಾಲದವರೆಗೆ ಹಾಗಿರುವುದು ಯುಕ್ತ, ಮತ್ತು ಆವಶ್ಯಕವು ನಮ್ಮ ದೇಶದ ಕಸಬುಗಳಲ್ಲಿ ಕೃಷಿಯೆಂಬುದು ಇತರಾಪೇಕ್ಷೆಯಿಂದ ವ್ಯಾಪಕವಾದದ್ದು, ಮತ್ತು ನಮ್ಮ ದೇಶದ ಜನರಲ್ಲಿ ಮುಕ್ಕಾಲುಪಾಲಿಗಿಂತ ಹೆಚ್ಚಾಗಿ ಅದರಿಂದಲೇ ಸಾಕ್ಷಾತ್ತಾಗಿ ಕಾಲಕ್ಷೇಪಮಾಡುತ್ತಿರುವರು ಇಂತಹ ಅತಿಶಯವಾದ ಕಸಬು ನಮ್ಮಲ್ಲಿ ಈಗ ಒಳ್ಳೇ ಉಚ್ಛ್ರಾಯಸ್ಥಿತಿಯಲ್ಲಿ ಇಲ್ಲವು ಜರ್ಮನಿ (ಜರ್ಮನ್ಯ), ಅಮೇರಿಕಖಂಡದ ಸಂಯುಕ್ತ ಸಂಸ್ಥಾನಗಳಂತೆ ಇತರ ದೇಶಗಳಲ್ಲಿಯೂ ಈ ಭರತಖಂಡದ ಮತ್ತು ಇಂಡಿಯಾ ಸರ್ಕಾರದ ವ್ಯವಸಾಯಾಭಿವೃದ್ಧಿಗಾಗಿರುವ ಇಲಾಖೆಯವರು ವಿಚಾರಮಾಡಿ ನಿಷ್ಕೃಷ್ಟವಾಗಿ ತೀರ್ಮಾನಿಸಿರುವ ಮತ್ತು ನಮಗೆ ಪ್ರಯೋಜನಕಾರಿಗಳಾದ ವಿಷಯಗಳು ಬಹುವಾಗಿರುವುದಾದಕಾರಣ ಅವುಗಳನ್ನು ನಾವು ಉಪಯೋಗದಲ್ಲಿ ತಂದು ಪ್ರಯೋಜನವನ್ನು ಪಡೆಯುವುದು ಆವಶ್ಯಕವು ಮತ್ತು ಅದನ್ನು ನಾವು ಎದುರುನೋಡಬಹುದು ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಇತರ ಕಡೆ ಏನೇನು ನಡೆಯುತ್ತಿರುವುದೋ ಅದೆಲ್ಲವನ್ನೂ ಜಾಗರೂಕತೆಯಿಂದ ತಿಳಿದು, ನಮ್ಮ ಅಧಿಕಾರಿಗಳು ಕಾರ್ಯೋನ್ಮುಖರನ್ನಾಗಿ ಮಾಡುವರೆಂದು ನಂಬಿರುವೆವು

ನಮ್ಮ ಸೀಮೆಯಲ್ಲಿರುವ ಕೃಷಿಜೀವಿಯ ಜನರು ಅನೇಕವಾಗಿ ಬಡವರು, ಶುದ್ಧಾಂಗವಾಗಿ ಜ್ಞಾನಶೂನ್ಯರು, ಕೆಲವು ವಿಷಯದಲ್ಲಿ ವಿಶದತೆಯಿಲ್ಲದವರು ಕೃಷಿಯ ಆರಂಭಕ್ಕೆ ಬೇಕಾದ ದನಕರುಗಳಾಗಲಿ, ನೇಗಲು ಮೊದಲಾದ ಉಪಕರಣಗಳಾಗಲಿ, ಸರಿಯಾದ ಬೀಜಗಳಾಗಲಿ ಇವರಲ್ಲಿ ಸಾಕಾದಷ್ಟು ಇರುವುದಿಲ್ಲವು ಶಾಸ್ತ್ರಸಮ್ಮತವಾದ ರೀತಿಯಲ್ಲಿ ಕೆಲಸಮಾಡಲು ಇವರಿಗೆ ಮೊದಲೇ ತಿಳಿಯದು ಇದಲ್ಲದೆ ಹೆಚ್ಚು ಲಾಗುವದು ಬಾಬುಗಳಾದ ಜನ್ಮಾಂತರದ ಪದ್ಧತಿಗಳೆಂಬ ಪಿಶಾಚಗಳು ಇವರನ್ನು ಬಲವಾಗಿ ಹಿಡಿದಿರುವವು ಇವರಿಗೆ ಲಾಭನಷ್ಟಗಳು ಯಾವ ಪ್ರಮಾಣವಾಗಿರುವುವೆಂಬುದು ತಿಳಿಯದು ಅವರ ಹಿಡುವಳಿ ಜಮೀನುಗಳು ಬಹು ಕೊಂಚವಾಗಿಯೂ, ದಿಕ್ಕಿಗೆ ಪಾಲಾಗಿಯೂ ಚದರಿರುವವು ಇವರ ವರಮಾನವೂ ಬಹು ಸ್ವಲ್ಪ ಮತ್ತು ಅನಿಶ್ಚಿತವಾದುದಾಗಿರುವುದು ಇದರ ಮೇಲೆ ಸಾಲವೆಂಬುದು ಅವರ ಎದೆಯ ಮೇಲೆ ಆದುಮುತ್ತಿರುವುದು ಸಾಲದ್ದಕ್ಕೆ ಪಂಗಡಗಳೂ, ಶಕ್ತಿಗಳೂ ಹೆಚ್ಚಿ, ಒಬ್ಬರನ್ನು ಕಂಡರೆ ಮತ್ತೊಬ್ಬರಿಗಾಗದೆ ಸಣ್ಣ ಕೃತ್ರಿಮಗಳೂ, ಜದ್ದುಗಳೂ, ಜಗಳಗಳೂ ಇವರನ್ನು ಒಡೆದುಬಿಟ್ಟಿರುವವು ಹೀಗಿರುವವರು ಈಗಿನ ಕಾಲಕ್ಕೆ ತಕ್ಕ ನಾಗರಿಕತೆಯನ್ನೂ, ಹೊರಪ್ರಪಂಚದಲ್ಲಿನ ನಡವಳಿಕೆಗಳ ವಿಷಯಕವಾದ ಜ್ಞಾನವನ್ನೂ ಹೇಗೆ ಹೊಂದಿಯಾರು ಎಷ್ಟೇ ಪ್ರಜಾಹಿತಂಕರವಾದ ಬುದ್ಧಿಯಿಂದ ವಿಧಿಸಲ್ಪಟ್ಟದ್ದಾದರೂ ಕೇವಲ ರಾಜಶಾಸನದಿಂದಲೇ ಮೇಲೆ ಕಂಡ ಐಹಿಕ ದುರ್ದೆಸೆಯನ್ನು ತೊಲಗಿಸಬೇಕೆಂದರೆ ಅಸಾಧ್ಯವೇ ಸರಿ ಗ್ರಾಮವಾಸಿಗಳಾದ ಜನರು ಉದ್ಧಾರವಾಗಲು ಉಪಾಯವು ಒಂದೇ ಉಳಿದಿರುವುದು ಹಳ್ಳಿಯಲ್ಲಿ ಜನರು ಪರಸ್ಪರ ಸಹಾಯಕ್ರಮವನ್ನು ಬಳಕೆಯಲ್ಲಿ ತರಬೇಕಾದದು ಮುಖ್ಯ ಯಾವ ಕಡೆ ಅಜ್ಞಾನವೂ, ದಾರಿದ್ರ್ಯವೂ, ಅವಿವೇಕವೂ, ಅನೀತಿಯೂ ಇರುವುದೋ ಈ ಪರಸ್ಪರಸಹಾಯಕ್ರಮದಿಂದ ಅವೆಲ್ಲವನ್ನೂ ತೊಲಗಿಸಲು ಸಾಧ್ಯ ಜರ್ಮನಿ, ಹಾಲೆಂಡ್, ಡೆನ್‌ಮಾರ್ಕ್, ಈ ದೇಶಗಳಲ್ಲಿ ಈ ಪರಸ್ಪರಸಹಾಯವು ಮಾಡಿರುವ ಕೆಲಸವನ್ನು ನೋಡಿದರೆ ನಮ್ಮ ದೇಶದ ನಾಡಿನ ಜನರಿಗೆ ನಾಗರಿಕತೆಯನ್ನು ಕಲಿಸಲು ನಾವು ಅಪೇಕ್ಷಿಸದೆ ಪಕ್ಷದಲ್ಲಿ ಅವರು ನಾಗರಿಕರಾಗಿ ಪ್ರಪಂಚ ಜ್ಞಾನವುಳ್ಳವರಾಗಬೇಕೆಂದು ನಾವು ಕೋರಬೇಕಾದುದು ಅವಶ್ಯಕವೆಂಬುದೇನೋ ಸತ್ಯ ಅಂಥಾ ಉದ್ದೇಶವನ್ನು ಪ್ರೋತ್ಸಾಹಪಡಿಸುವುದಕ್ಕೂ, ಸಫಲಪಡಿಸುವುದಕ್ಕೂ ಸಮರ್ಥವಾದುದು ಪರಸ್ಪರಸಹಾಯ ಸಂಘಗಳಿಗಿಂತಲೂ ಬೇರೆಯಾವುದೂ ಇಲ್ಲವೆಂಬುದು ಮನಸ್ಸಿಗೆ ಬಹು ಚೆನ್ನಾಗಿ ತಿಳಿದುಬರುವುದು ನಾವು ಮೇಲೆ ನಮೂದಿಸಿದ ದೇಶಗಳಲ್ಲಿ ಐರಾಯತು ಕರ್ಬಿನ ಜನರಲ್ಲಿ ಈ ಪರಸ್ಪರ ಸಹಾಯ ಕ್ರಮವೆಂಬುದು ಅತಿ ಮಾನುಷವಾದ ಅದು ತಕ್ಕಾರ್ಯಗಳನ್ನು ಸಾಧಿಸಿರುವುದು ದಾರಿದ್ರ್ಯವೂ, ಅದರ ಹಿಂದೆ ಎಡಬಿಡದೇ ಇರುವ ಅನಿಷ್ಟ ವರ್ಗವೂ ಹಾವಳಿಮಾಡುತ್ತಿದ್ದ ಕಡೆ ನೆಮ್ಮದಿಯೂ, ಸಮೃದ್ಧಿಯೂ ಹೃದಯಾನಂದಕರವಾಗಿ ಕಣ್ಣೊಳಿಸುತ್ತಿರುವುವು ಮತ್ತು ಸಮುದಾಯಕ ಸಂಪದಭಿವೃದ್ಧಿಗೆ ಪ್ರವಾಹ ಅಸ್ತಿಭಾರವನ್ನು ಕಲ್ಪಿಸಿದಂತಾಗಿವೆ ರೈತ ಜನರು ಸಾಹಸಪರರಾಗಿರುವುದರೊಡನೆ ತಮ್ಮ ಸ್ಥಿತಿಗಳನ್ನು ತಿಳಿದು ಅವುಗಳಿಗೆ ತಕ್ಕ ಖರ್ಚುವೆಚ್ಚಗಳನ್ನಿಟ್ಟುಕೊಂಡು ಕಾಲೋಚಿತವಾದ ಮತ್ತು ಉದಾರವಾದ ಚಿತ್ತವೃತ್ತಿಯನ್ನೂ, ಕೆಲಸಕಾರ್ಯಗಳನ್ನೂ ಉಳ್ಳವರಾಗಿ ಗ್ರಾಮವಾಸಿಗಳಾದರೂ ಲೌಕಿಕ ಸಮರ್ಥರಾಗತೊಡಗಿರುವರು ನಾಡುವಾಸಿ ಜನರ ಏಳಿಗೆಯ ತತ್ವವನ್ನು ವಿಚಾರಮಾಡುವಂಥವರಿಗೆ ಯೂರೋಪ್ ಖಂಡದ ದೇಶಗಳಲ್ಲಿ ಈ ಪರಸ್ಪರ ಸಹಾಯಕ್ರಮವು ಹೊಂದಿರುವ ಮೇಲ್ಮೆಯನ್ನೂ, ಅದು ಜನರಲ್ಲಿ ಸಾಧಿಸಿರುವ ಮಹತ್ಪ್ರಯೋಜನಗಳನ್ನೂ ಕೇಳಿ ತಿಳಿದುಕೊಳ್ಳುವುದಕ್ಕಿಂತಲೂ ಪ್ರಬಲತರ ಬೋಧಪ್ರದವಾದುದು ಬೇರೊಂದು ಇರಲಾರದೆಂದು ತೋರುತ್ತದೆ ಇತರ ಕಡೆ ಈ ಕಾರ್ಯದಲ್ಲಿ ಮೊದಲು ಪ್ರವರ್ತಿಸಿದವರು ಯಾವ ಯಾವ ಪ್ರತಿಬಂಧಕ ಸಾಮಗ್ರಿಗಳನ್ನು ಅನುಭವಿಸಿದರೋ ಎದುರು ನೋಡಿದರೋ, ಯಾವ ವಿಷಮಗಳನ್ನು ವಿಮರ್ಶೆಗಳನ್ನಾಗಿ ತಿಳಿದರೋ ಅವುಗಳಿಗೆ ಸರಿ ಬೇರೆ ಯಾವುದೂ ಬರೋಡೆಯಲ್ಲಿ ಹೊಸದಾಗಿ ಕಂಡುಬರಲಿಲ್ಲವು—ರ.

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರ ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ದೇವನಹಳ್ಳಿಯ ಸದಾಚಾರವನ್ನು ಕುರಿತ ಆಕ್ಷೇಪಣೆಗೆ ಬಿ ಶಂಕರರಾಯರು ಪ್ರತಿ ಜವಾಬನ್ನು ಕೊಟ್ಟು ಒಂದು ಬಾತ್ಮಿ ಬರೆದಿದ್ದಾರೆ ಇದು ವಾಗ್ವಾದಗಳಿಗೆ ಅವಕಾಶಕೊಡಬೇಕೆನ್ನುವುದು ನಮ್ಮ ಉದ್ದೇಶವಲ್ಲ ಪ್ರತಿ ಒಂದು ಸ್ಥಳದಲ್ಲೂ ಶಕ್ತಿಗಳಿವೆ ಎಂದೂ, ಅನಕಾರ ದೊರೆತಾಗ ಅವು ಪ್ರಾಬಲ್ಯಕ್ಕೆ ಬರುವವೆಂದೂ ಎಲ್ಲರಿಗೂ ತಿಳಿದು ಟು ಶಕ್ತಿಗಳನ್ನು ತೊಡೆದುಬಿಟ್ಟು ಅಧಿಕಾರಿಗಳು ಪ್ರಜಾಹಿತವನ್ನೇ ಪ್ರಧಾನವಾಗಿಟ್ಟುಕೊಂಡು ಕಾರ್ಯಗಳನ್ನು ನಡಿಸುತ್ತಾ ಬಂದರೆ ಯಾವ ವಿಧವಾದ ಹೋರಾಟಕ್ಕೂ ಅವಕಾಶವಾಗುವುದಿಲ್ಲ

ಮಹಲಿಂಗಪ್ಪ, ದಾವಣಗೆರೆ — ಈ ಬಾತ್ಮಿಯನ್ನು ಪ್ರಕಟಿಸುವುದರಿಂದ ಸದ್ಯದಲ್ಲಿ ಪರಸ್ಪರ ಮನಃಕ್ಲೇಶಗಳು ಹುಟ್ಟಿ ಬೆಳೆಯುವವಲ್ಲದೆ ಫಲವೇನೂ ಆಗಲಾರದು

ಕೆ ನಂಜುಂಡಪ್ಪ, ದೇವನಹಳ್ಳಿ —ದೀರ್ಘವಾಗಿ ಬರೆದ ಉಪನ್ಯಾಸಗಳನ್ನು ಪ್ರಕಟಿಸುವುದಕ್ಕೆ ಅವಕಾಶಕೊಡಲಾರೆವೆಂದು ವಿಷಾದಿಸುತ್ತೇವೆ

ಕೃಷ್ಣಾಜಿರಾವ್, ಶಿವಮೊಗ್ಗೆ —ನಿಮ್ಮ ಬಾತ್ಮಿಯನ್ನು ಶಿವಮೊಗ್ಗಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಕಳುಹಿಸಿರುತ್ತೇವೆ

ಎಂ ಸುಬ್ಬರಾವ್, ಬೆಂಗಳೂರು ಸಿಟಿ ಮತ್ತು "ಹಾಸ್ಯಗಾರ" ಕಾಲೇಜು ಪೇಟೆ — ಇವೆರಡು ಬಾತ್ಮಿಗಳೂ ಓದಲು ಹಿತಕರವಾಗಿಲ್ಲದ್ದರಿಂದ ಬಿಟ್ಟಿದೇವೆ

ಟಿ ಗುಂಡುರಾವ್, ಸಕಲೇಶಪುರ —ನೀವು ಬರೆದ ವಿಷಯವನ್ನು ಕುರಿತು ವಿಚಾರಿಸಿದ್ದಲ್ಲಿ ಅದು ತಯಾರಾಗುತ್ತಿದೆ ಎಂದು ತಿಳಿಯಿತು ಮೋಸವೇನೂ ಕಾಣುವುದಿಲ್ಲ

ಶಿವಮೊಗ್ಗಾ ಟೌನ್‌ನಲ್ಲಿ ಮಾರ್ಕೆಟ್ಟಿನ ಹತ್ತಿರ ಕಟುಕರು ಬಹಿರಂಗವಾಗಿ ಪ್ರಾಣಿಗಳನ್ನು ಕೊಲ್ಲುತ್ತಿರುವುದು ತಿರುಗಾಡುವ ಪ್ರಜೆಗಳಿಗೆ ಅಸಹ್ಯಕರವಾಗಿದೆ ಎಂದು ಮುಂತಾಗಿ "ಓರ್ವ ಬಾಲಕಿಯು" ಬರೆಯುತ್ತಾಳೆ ಇದು ಮ್ಯುನಿಸಿಪಾಲಿಟಿಯವರ ದೃಷ್ಟಿಗೆ ಬಂದಿದೆಯೋ ಇಲ್ಲವೋ ತಿಳಿಯದು

—ಎಡಿ]

ಕರೆಸ್‌ಪಾಂಡೆನ್ಸ್

ಉಕ್ತಲೇಖನ ಪರೀಕ್ಷೆ

ಅಯ್ಯಾ,—ತುಂಕೂರಲ್ಲಿ ತಾ 18 5 14 ರಲ್ಲಿ ಡಿಕ್ಟೇಷನ್, ಹ್ಯಾಂಡ್ ರೈಟಿಂಗ್ ಪರೀಕ್ಷೆಯು ನಡೆದು ಸರಿಯಷ್ಟೆ ಇಂಗ್ಲಿಷ್ ಹ್ಯಾಂಡ್ ರೈಟಿಂಗಿಗೆ ಕೊಟ್ಟ ಪ್ಯಾಸೇಜು ಅದರ ಕಾಲದಲ್ಲಿ ಬರೆಯಲು ಸಾಧ್ಯವಿಲ್ಲವಷ್ಟು ಜಾಸ್ತಿಯಾಗಿತ್ತು ಈ ಸೆಂಟರಿಗೆ ಬಂದವರ ಪೈಕಿ ಒಬ್ಬರಾದರೂ ಪೂರ್ತಿ ಬರೆಯಲಿಲ್ಲ ಕನ್ನಡದಲ್ಲಿ ಡಿಕ್ಟೇಷನ್ ಹೇಳಿದವರಿಗೆ ದಂತಸ್ಥಿರತ್ವ ಇಲ್ಲದ್ದರಿಂದ ಅದರಲ್ಲಿ ಇರುವ ಶಬ್ದಗಳು ವಿಕಾರವಾಗಿ ಕೇಳಿಸಲ್ಪಟ್ಟವು ಮತ್ತು ಆ ಕಾಲದಲ್ಲಿ ವಿರಾಮ ಎಂಬ ಶಬ್ದ ವಿನಹಾ ಮತ್ತಾವುದೂ ವಾಕ್ಯದಲ್ಲಿ ಉಪಯೋಗಿಸಲ್ಪಡುವ ಕಾಮ್ಮ, ಅರ್ಧ ವಿರಾಮ, ಇವೇ ಮುಂತಾದವು ಹೇಳಲ್ಪಡಲಿಲ್ಲ ಇದರಿಂದ ಈ ವ್ಯಾಸಂಗಿಗಳಿಗೆ ಬಹಳ ವ್ಯಥೆಯುಂಟಾಗಿರುತ್ತೆ ಈ ಸಲಕ್ಕೆ ಪರೀಕ್ಷಕರು ಕೊಂಚ ದೈನ್ಯದೃಷ್ಟಿಯಿಂದ ಪೇಪರುಗಳನ್ನು ನೋಡಿ, ಮುಂದೆ ಇಂಥಾ ತೊಂದರೆಗಳು ಉಂಟಾಗದಂತೆ ಉಪಕಾರಮಾಡಬೇಕೆಂದು ಕೋರುವ

ವಿದ್ಯಾರ್ಥಿಹಿತೈಷಿ

[ಇದೇ ಅರ್ಥಕ್ಕೆ ಇನ್ನೊಂದು ಬಾತ್ಮಿ ಬಂದಿದೆ —ಎಡಿ]

ಕೋಲಾರದಲ್ಲಿ ಕುಡಿಯುವ ನೀರಿಗೆ ತೊಂದರೆ

ಅಯ್ಯಾ,—ಈ ಊರಿನಲ್ಲಿ ಕುಡಿಯುವ ನೀರಿಗೆ ಉಂಟಾಗಿರುವ ತೊಂದರೆಯನ್ನು ಹೇಳುವುದಕ್ಕೇ ಅಸಾಧ್ಯವಾಗಿರುವುದು ಪಶ್ಚಿಮ ಭಾಗದಲ್ಲಿ ವಾಸಿಸುವ ಜನರೆಲ್ಲಾ ದಶರಥ ಕುಂಟೆಯಲ್ಲಾಗಲಿ, ಅಥವಾ ಸಾಗರ ಕುಂಟೆಯಲ್ಲಾಗಲಿ ನೀರನ್ನು ತಂದು ಕುಡಿಯುತ್ತಾರೆ ಈ ಕುಂಟೆಗಳನ್ನು ಕಾಯುವುದಕ್ಕೆ ಹೆಸರುಮಟ್ಟಿಗೆ ಇಬ್ಬರು ಆಳುಗಳು ಇರುವರು ಹೀಗೆ ಇದ್ದಾಗ್ಯೂ ಆ ಕುಂಟೆಗಳಲ್ಲಿ ಸ್ನಾನಮಾಡುವುದು, ಮಕ್ಕಳ ಬಟ್ಟೆಯನ್ನು ಒಗೆಯುವುದು ಶೌಚ ಮಾಡಿಕೊಳ್ಳುವುದು, ಮುಸರೆ ಉಜ್ಜುವುದು ಮುಂತಾದ ಕೃತ್ಯಗಳಿಂದ ನೀರು ಅತಿಯಾಗಿ ಕೆಟ್ಟು ಹೋಗಿರುವುದು ದಶರಥ ಕುಂಟೆಯ ಮೇಲ್ಭಾಗದಲ್ಲಿಯೂ, ಮೆಟ್ಟಿಲುಗಳ ಮೇಲೆಯೂ ಜನಗಳು ದೇಹಬಾಧೆಯನ್ನು ತೀರಿಸಿಕೊಳ್ಳುವರು ಈ ಕೆಳಕು ನೀರನ್ನೇ ಜನಗಳು ಕುಡಿಯುವರು ಡೆಪ್ಯುಟಿ ಕಮಿಷನರ್ ಮ॥ ಶ್ರೀಕಂಠೇಶ್ವರ ಅಯ್ಯರವರು ಇಲ್ಲಿದ್ದಾಗ ಊರು ಬಹಳ ಶುಭ್ರವಾಗಿಯೂ, ಕುಡಿಯುವ ನೀರು ನಿರ್ಮಲವಾಗಿಯೂ ಇತ್ತಲ್ಲದೆ ಜನೋಪಕಾರಿಗಳಾಗಿಯೂ, ಕೇವಲ ದಕ್ಷರಾಗಿಯೂ ಇದ್ದರು ಅವರು ಇಲ್ಲಿಂದ ವರ್ಗವಾದ ಮೇಲೆ ಅವರನಂತರ ಬಂದ ಇತರರ್‍ಯಾರೂ ಮುಖ್ಯವಾದೀ ವಿಷಯಕ್ಕೆ ಗಮನಕೊಟ್ಟಂತೆಯೇ ಕಾಣುವುದಿಲ್ಲ ನಮ್ಮ ವೈಸ್ ಪ್ರೆಸಿಡೆಂಟ್ ಸಾಹೇಬರವರೂ ಕೂಡ ಈ ವಿಷಯಕ್ಕೆ ಗಮನವನ್ನು ಕೊಡದಿರುವುದು ನೋಡಿದರೆ ಅತಿ ವಿಷಾದಕರವಾಗುವುದು ನಮ್ಮ ದೇಶವನ್ನು ಸರ್ವ ವಿಧದಲ್ಲಿಯೂ ಉತ್ತಮಸ್ಥಿತಿಗೆ ತರಬೇಕೆಂದು ನಮ್ಮನ್ನಾಳುವ ಮಹಾಸ್ವಾಮಿಯವರೂ ಮತ್ತು ಅವರ ಮಂತ್ರಿಶ್ರೇಷ್ಠರೂ ತಮ್ಮ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸುತ್ತಿರುವಾಗ ಅಲ್ಪವಾದೀ ವಿಷಯಕ್ಕೆ ಇಲ್ಲಿನ ಅಧಿಕಾರಿಗಳ ಗಮನವು ಬೇರೆ ಇರುವುದಕ್ಕಾಗಿ ಅತಿ ವಿಷಾದಪಡಬೇಕಾಗಿದೆ

ಪ್ರಜಾಹಿತೈಷಿ

ಶಿವಮೊಗ್ಗಾ ಟೌನ್ ಪಾರ್ಕ್ ಗುಡಿ ಎಕ್ಸ್‌ಟೆನ್‌ಷನ್ ವಿಷಯ

ಅಯ್ಯಾ,—ಸರ್ಕಾರದವರು ಬಹು ದ್ರವ್ಯ ಖರ್ಚು ಮಾಡಿ ಪ್ರಜೆಗಳ ಆರೋಗ್ಯಕ್ಕೆ ಅನುಕೂಲವಾಗಿ ದೊಡ್ಡ ದೊಡ್ಡ ರಸ್ತೆಗಳೂ, ಬರಂಡಿ, ಸೇತುವೆ ಮೊದಲಾದವುಗಳನ್ನು ಅಲ್ಲಲ್ಲಿ ಜೋಡಣೆಗಳನ್ನೂ ಹಾಕಿ ಮನೆಗಳನ್ನು ವಿಂಗಡಿಸುವುದು ಸರಿಯಷ್ಟೆ ಟೌನ್‌ನಲ್ಲಿ ಆರೋಗ್ಯ ಕಡಮೆ ಮತ್ತು ಬಡವರಿಗೆ ಸ್ಥಳ ದೊರೆಯುವದು ಅಸಾಧ್ಯವೆಂಬ ಯೋಚನೆಯಿಂದ ಈ ಸ್ಥಳದಲ್ಲಿ ಮನೆ ಪಳಗಳನ್ನು ಕ್ರಯಕ್ಕೆ ಪಡೆದು ಸರ್ಕಾರದವರ ಆಜ್ಞೆ ಪ್ರಕಾರ ಈಗಾಗ ಕೆಲವರು ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ ಒಂದೆ ಸೈಟ್‌ನಲ್ಲಿ ಕೆಲವು ದೊಡ್ಡ ದೊಡ್ಡ ಮನೆಗಳು ಆಗಿರುತ್ತವೆ ಮನೆಗಳ ಸೈಟಿನಲ್ಲಿ 40 ಮನೆಗಳನ್ನು ಕಟ್ಟಿಕೊಂಡು ವಾಸವಾಗಿಯೂ ಇರುತ್ತಾರೆ ಈ ಸ್ಥಳವು ಆರೋಗ್ಯವಾಗಿರುತ್ತೆಂಬ ಆಸೆ ಇಂದ ನದೀತೀರವನ್ನು ಬಿಟ್ಟು ಇಲ್ಲಿಗೆ ಬಂದರೆ, ಇಲ್ಲಿ ಸಕಾಲಕ್ಕೆ ನೀರೇ ಸಿಕ್ಕದೆ ತೊಂದರೆ ಪಡುವ ಹೊತ್ತು ಬಂದಿರುತ್ತೆ ಅನುಕೂಲಸ್ಥರೂ, ದ್ರವ್ಯಾನುಕೂಲವುಳ್ಳವರೂ ಆಳುಗಳ, ಪರಿಚಾರಕರ ಮೂಲಕ ನೀರನ್ನು ಅನುಕೂಲಪಡಿಸಿಕೊಳ್ಳಬಹುದು ಈಗ ಸುಮಾರು 18 ದಿವಸದಿಂದ ನನ್ನ ಅನುಭವಕ್ಕೆ ಬಂದಿರುವದು ಏನೆಂದರೆ ಮನೆಗಳ ಸೈಟಿನಲ್ಲಿ ನೀರಿನ ಮನೆ ಹತ್ತಿರ 1 ನಲ್ಲಿ, 2 ನೇ ಪ್ಯಾರಲಲ್ ರೋಡಿನಲ್ಲಿ 1 ನಲ್ಲಿ, 4 ನೇ ಪ್ಯಾರಲಲ್ ರೋಡಿನಲ್ಲಿ 1 ನಲ್ಲಿ, ಹೀಗೆ 3 ನಲ್ಲಿಗಳಿವೆ 12 ದಿವಸ ರಾತ್ರಿ 8 9 ಘಂಟೆಗೇನೇ ನೀರು ಬರುವದು ನಿಲ್ಲಿಸಿದ್ದರು ನಂತರ 3 4 ದಿವಸ ಸರಿಯಾಗಿ ನೀರು ಬರುತ್ತಿತ್ತು ಈಚೆಗೆ ಬೆಳಗ್ಗೆ 6 ಘಂಟೆಗೆ ರಾತ್ರಿ 8 ಘಂಟೆಗೆ ನಲ್ಲಿಗಳ ಬಳಿ ಹೋದರೆ ನೀರೇ ಸಿಕ್ಕದ ಹಾಗೆ ಒಂದಾಗಿರುತ್ತೆ ಸುಮಾರು 7 7½ ಗಂಟೆಗೆ ನೀರು ಬರುತ್ತೆ ರಾತ್ರಿ ನೀರು ಬಂದ್ ಮಾಡಿ ಬೆಳಗ್ಗೆ 7½ ಗೆ ಸಿಕ್ಕುವಂತೆ ಮಾಡಿದರೆ ಅನುಕೂಲಸ್ಥರಿಗೂ, ದ್ರವ್ಯದ ಪಾತ್ರಗಳ, ಮತು ಆಳುಗಳ ಅನುಕೂಲತೆಯುಳ್ಳವರಿಗೂ ಯಾವ ವಿಧವಾದ ತೊಂದರೆಯೂ ಆಗುವದಿಲ್ಲ ನದಿ, ನಲ್ಲಿ, ಭಾವಿಗಳನ್ನು ಪ್ರಾಣಗಳಾಗಿ ಮಾಡಿಕೊಂಡಿರುವ ಬಡವರಿಗೆ ತುಂಬಾ ಅನನುಕೂಲವಾಗಿರುತ್ತೆ ಟೌನ್‌ನಲ್ಲಿ ನದಿ ಇದ್ದರೂ ನಲ್ಲಿಗಳಲ್ಲಿ ರಾತ್ರಿ ಹಗಲು ನೀರು ಸಿಕ್ಕುತ್ತೆ ನವ್ಯ ಕಾಣಿಸದಿರುವ ಈ ಸ್ಥಳದಲ್ಲಿ ಈ ರೀತಿ ತೊಂದರೆಯಾಗಿರುತ್ತೆ ಆದ್ದರಿಂದ ವಾಟರ್ ಸಪ್ಲೈ ಮಾಡತಕ್ಕ ಅಧಿಕಾರಿಗಳೇ ಆಗಲಿ, ಇತರ ದೊಡ್ಡ ಆಫೀಸರವರೇ ಆಗಲಿ ಈ ಅರಿಕೆಯನ್ನು ದಿವ್ಯ ಚಿತ್ತಕ್ಕೆ ತಂದುಕೊಂಡು ರಾತ್ರಿ ಹಗಲೂ ನೀರು ದೊರೆಯುವಂತೆ ಮಾಡಿಕೊಟ್ಟರೆ ಅನೇಕ ಬಡವರು ತಮ್ಮ ತಮ್ಮ ಕೆಲಸಗಳನ್ನು ಸಕಾಲಕ್ಕೆ ಮಾಡಿಕೊಂಡು ಬದುಕುವವರಾಗುತ್ತಾರೆ ಮತ್ತು ಇಲ್ಲಿನ ನೀರಿನ ಮನೆ ಹತ್ತಿರ ಇರತಕ್ಕ ನಲ್ಲಿಯಲ್ಲಿ ನೀರಿನ ರಂಗದ ಕೊಳೆ ಬರುತ್ತಿದೆ ನೀರಿನ ಬುದಬುದ್ದಿಲ್ಲಿ ಮಾಲೆಯಂತೆ ನಿಂತಿರುತ್ತದೆ ಈ ಮನೆಯನ್ನು ಬಹು ದಿವಸದಿಂದ ತೊಳೆದ ಹಾಗೆ ತೋರುವದಿಲ್ಲ

ಸರ್ಕಾರದವರು ಈ ವರಿಗೂ ರಿಯಾಯಿತಿಯಿಂದ ನಾಟಾಗಳನ್ನು ಕೊಡಿಸಿಲ್ಲ ಕೊಡಿಸುತ್ತಾರೆಂಬ ನಂಬಿಕೆಯಿಂದ ಮನೆ ಕಟ್ಟಲು ಪ್ರಾರಂಭಿಸಿದವರು ಮಧ್ಯ ನಾಟಾ ದೊರೆಯದೆ ಇದ್ದುದ್ದರಿಂದ ಕಟ್ಟುವದನ್ನು ನಿಲ್ಲಿಸದೆ ನಷ್ಟವಾಗುತ್ತೆಂದು ಸಾಲ ವಗ್ಯೆರೆ ಮಾಡಿ ಕಟ್ಟಿಕೊಂಡರು ಇನ್ನೂ ಅನೇಕರು ಯೋಚನೆಯಲ್ಲಿರುತ್ತಾರೆ ಇಂಥಾದ್ದರಲ್ಲಿ ನೀರಿಗೇನೇ ಇಷ್ಟು ತೊಂದರೆಯಾದರೆ ಮನೆ ಕಟ್ಟಿಕೊಳ್ಳತಕ್ಕ ನದೀತೀರವಾಸಿಗಳಾದ ಪ್ರಜೆಗಳಿಗೆ ಪ್ರೋತ್ಸಾಹವೇ ಇಲ್ಲದಂತಾಗುತ್ತೆ ಆದ್ದರಿಂದ ಪ್ರಭುಗಳು ರಿಯಾಯಿತಿ ನಾಟಾಗಳನ್ನೂ, ನೀರಿನ ಅನುಕೂಲತೆಯನ್ನೂ ಒದಗಿಸಿ ಕಾಪಾಡಬೇಕಾಗಿ ಕೇಳಿಕೊಳ್ಳುವ

ಪ್ರಜಾಭಿಮಾನಿ

ತಾಲ್ಲೂಕು ವರ್ತಮಾನಗಳು

ಶಿಕಾರಿಪುರ — ಇದುವರೆಗೂ ಮಳೆಯಾಗದೆ ಇರುವುದರಿಂದ ಸೆಕೆ ಬಹಳ ಭೀಕರವಾಗಿದೆ ರೈತರು ವ್ಯವಸಾಯ ಕಾರ್ಯಕ್ಕೆ ತುಂಬಾ ಅನನುಕೂಲವಾಯಿತಲ್ಲಾ ಎಂದು ಚಿಂತಿಸುತ್ತಿದಾರೆ ಹವೆಯು ಆರೋಗ್ಯಕರವಾಗಿರುವುದಾದರೂ ಎರಡು ೩ ಗಳ ಲಾಗಾಯ್ತು ಎಷ್ಟೋ ಜನಗಳು ಚಳಿ ಜ್ವರ ಮೊದಲಾದ ಕಾಯಿಲೆಯಿಂದ ವ್ಯಥೆಪಟ್ಟಿದಾರೆ ಈ ಪ್ರಾಂತ್ಯದಲ್ಲಿ ಸಿಡುಬಿನ ಅವಾಂತ್ರವು ಹೆಚ್ಚಾಗಿದೆ — ಇಲ್ಲಿನ ಮುನಿಸಿಪಲ್ ಲಾಂದ್ರಗಳ ದೀವಿಗೆಯ ಪ್ರಕಾಶವು ಚೆನ್ನಾಗಿಲ್ಲ ಮತ್ತು ಕೆಲವೆಡೆಯಲ್ಲಿ ಹಚ್ಚುವಂತೆ ತೋರುವುದಿಲ್ಲ — ಈಗ ಸುಮಾರು ನಾಲ್ಕು ವರುಷಗಳಿಂದಲೂ ಈ ಟವನ್‌ಗೆ ಕ್ರಾಸ್ ರೋಡುಗಳು ಆಗುವುದು ಅತ್ಯವಶ್ಯಕವೆಂದೂ ಚರ್ಚೆ ನಡೆದು ಈಗ ಗೌರ್ನಮೆಂಟಿನಿಂದ ರೋಡ್ ಕಾಮಗಾರಿಗೆ ಆರ್ಡರು ಬರುವಂತೆ ಕೇಳುತ್ತೇವೆ ಮೇಲ್ಪಟ್ಟ ಆಫೀಸರು ಈ ವಿಷಯಕ್ಕೆ ಗಮನಕೊಟ್ಟು ಕ್ರಮಪಡಿಸ್ಯಾರೆಂದು ನಂಬುತ್ತೇನೆ — ಈ ಊರಿಗೆ ಹೊಸದಾಗಿ ದಯಮಾಡಿಸಿರುವ ಚಾಮರಾಜನಗರ ತಾಲ್ಲೂಕ್ ರಾಮಸಮುದ್ರದ ವೇ॥ ಸಂಗೀತವಿದ್ವಾನ್ ಮಹದೇವಯ್ಯನವರ ಸಂಗೀತ ಕಚೇರಿಯು ೩ ೪ ಕಡೆಗಳಲ್ಲಿ ಬಹಳ ಆಹ್ಲಾದಕರವಾಗಿ ನಡೆಯಿತು ಆ ಕಾಲದಲ್ಲಿ ಅಮಲ್ದಾರ್ರವರೇ ಮೊದಲಾದ ಸರ್ಕಾರಿ ಆಫೀಸರು, ಮುನಿಸಿಪಲ್ ಮೆಂಬರುಗಳು, ವರ್ತಕಮಂಡಲಿಯವರೇ ಮೊದಲಾದ ಪುರಪ್ರಮುಖರೂ ಸಭೆಯನ್ನಲಂಕರಿಸಿ ಅವರ ಅಸಾಧಾರಣವಾದ ಹಾಡುಗಾರಿಕೆಯನ್ನು ಮತ್ತು ಜಲತರಂಗು, ಕೊಳಲೂದುವುದು, ಹಾರ್ಮೋನಿಯಂ ನುಡಿಸುವುದೇ ಮೊದಲಾದ ವಿದ್ಯೆಗಳಲ್ಲಿ ಅವರಿಗಿರುವ ನೈಪುಣ್ಯವನ್ನು ಪರಾಂಬರಿಸಿ ಅವರನ್ನು ತುಂಬಾ ಗೌರವಪೂರ್ವಕವಾಗಿ ಸನ್ಮಾನಿಸಿ ಯಥೋಚಿತ ಬಹುಮಾನದಿಂದ ತೃಪ್ತಿಪಡಿಸಿದ್ದು ತುಂಬಾ ಸಂತೋಷವಾಗಿದೆ

ಶಿವಮೊಗ್ಗ — ಮಹಿಷಿರಾವು ಇವರ ಚಕ್ರಗ ಒಳ ತೋಟಿ ಇನ್‌ಜನ್ ಹೋಗುತ್ತಿರುವಾಗ ಎದುರಿಗೆ ನಾಟಾ ಗಾಡಿಗಳು ಬರುತ್ತಿದ್ದವು ಈ ಮಧ್ಯೆ ಕಟ ರಾಗಾಡಿ ಬಂದ ಗದ್ದಲದಲ್ಲಿ ಒಂದು ನಾಟಾ ಗಾಡಿಯ ಎತ್ತು ಬೆದರಿ ಇನ್‌ಜನ್‌ಗೆ ತಗಲಿ ಎತ್ತಿನ ಕಾಲು ಗಾಯವಾಯಿತು ಈಗ ಆಸ್ಪತ್ರೆಯಲ್ಲಿ ಗುಣಹೊಂದುತ್ತಲಿದೆ — ವ್ಯವಸಾಯದ ಇಲಾಖಾ ಡೈರೆಕ್ಟರ್ ಮ॥ ಛಾಟರ್ಟನ್ ಸಾಹೇಬರವರು ಈ ಊರಿಗೆ ಬಂದು ವರ್ತಕಮಂಡಲಿಯನ್ನು ಸೇರಿಸಿ ವಿಚಾರಣೆ ನಡಿಸಿದರು ಮತ್ತು ವ್ಯಾಪಾರ, ಕೈಗಾರಿಕೆ ವಿಷಯವಾಗಿ ಉಪನ್ಯಾಸಮಾಡಿದರು — ತುಮಕೂರು ತಾಲ್ಲೂಕು ಬರಗೂರು ಗ್ರಾಮದ ಕುಂಚಿಗರ ರಂಗನೆಂಬವನು ಹರಿಗೆ ಗ್ರಾಮದಲ್ಲಿ ಓದುವ ಸಾಲೆ ಹಾಕಿಕೊಂಡಿದ್ದನು ಇಂಗಿರುತ್ತ ಇದೇ ತಿಂಗಳ 17ನೇ ತಾ ಪರಮೇಶ್ವರಯ್ಯನವರ ಭಂಗಾರದ ಕಾಪನ್ನು ಮನೆಗೆ ಹೋಗಿಬಂದು ಕೊಡುತ್ತೇನೆಂದು ತೆಗೆದುಕೊಂಡು ಮತ್ತು ಸೇಲಂ ಜಿಲ್ಲಾ ಪಟ್ಟಣದ ಗ್ರಾಮದ ಜವಳಿ ವ್ಯಾಪಾರದ ತಲಗುಬಾಜಿಗರ ಜಾಂ ಲಕ್ಷ್ಮಣನೆಂಬವನ ಹತ್ತಿರ ಇಟ್ಟಿದ್ದ ರೂಪಾಯಿನ ಕಲಾಪತ್ತು ರುಮಾಲು, ಪಲ್ಲ, ಕಲಾಪತ್ತು ಪಂಚೆ ಮುಂತಾದವುಗಳನ್ನು ತೆಗೆದುಕೊಂಡು ಪರಾರಿಯಾದವನು ಈ ವರೆಗೂ ಪತ್ತೆ ಇಲ್ಲ ಇವನ್ನು ಸರ್ಕಾರದವರು ತನಿಖೆಯಿಂದ ಪತ್ತೆಮಾಡುವರೆಂದು ಅಪೇಕ್ಷಿಸುತ್ತೇವೆ — ಮ॥ ಬಾಲಕೃಷ್ಣರಾಯರ ಭತ್ತದ ಮಿಷನ್‌ಗೆ ಅನೇಕ ಗಾಡಿಗಳ ಭತ್ತ ಬರುತ್ತಲೇ ಇದೆ ಇವರು ಯಂತ್ರವನ್ನು ಸರಿಯಾಗಿ ನಡಸುವ ಡ್ರೈವರುಗಳಿಗೆ ತಕ್ಕ ಪ್ರೋತ್ಸಾಹ ಕೊಡದೆ ಹಾಗೆ ಅವರನ್ನು ಬದಲಾಯಿಸುತ್ತಾ ಅವರ ಸಂಬಳಗಳನ್ನು ಕಡಿಯುವದರಿಂದ ಅವರಿಗೂ, ಭತ್ತ ತರುವವರಿಗೂ ನಷ್ಟವಾಗುತ್ತಲಿದೆ — ಇಲ್ಲಿನ ನಾಗಪ್ಪನ ಕೇರಿಯನ್ನು ಸುಮಾರು ಒಂದು ವಾರದಿಂದ ಸರಿಯಾಗಿ ಗುಡಿಸಲಿಲ್ಲವೆಂದು ಜನಗಳು ಗುಜುಗುಟ್ಟುತ್ತಾರೆ ಮ್ಯುನಿಸಿಪಾಲಿಟಿಯವರ ಗಮನಕ್ಕೆ ಅದು ಬರಬೇಕಾಗಿದೆ — ಇಲ್ಲಿ ಕೆಲವರು ಪಟ್ಟಾ ಸೇರಿನ ಮೊಲ ಕಟ್ಟನ್ನು ಕಿತ್ತು ಅದನ್ನು ಒಳಕ್ಕೆ ಬಡಿದು ವ್ಯಾಪಾರಕ್ಕೆ ಪ್ರಯೋಗಿಸುತ್ತಾರೆಂದು ತಿಳಿದು ಬರುತ್ತೆ ಸರಕಾರದವರು ಇವರ ವಿಷಾಂತರವನ್ನು ತಿಳಿದು ಕ್ರಮಪಡಿಸಬೇಕಾಗಿದೆ

ಪುಷ್ಪಗಿರಿ — ಬಿಸಿಲಿನ ತಾಪ ಹೆಚ್ಚು ವೈಶಾಖ ಮಾಸ ಪ್ರಾರಂಭವಾದಾಗ್ಯೂ ಮಳೆ ಒಂದು ಹನಿಯಾದರೂ ಬಿದ್ದಿರುವುದಿಲ್ಲ ರೈತರ ದೃಷ್ಟಿಯೆಲ್ಲಾ ಆಕಾಶದ ಕಡೆಗಿದೆ ಜನ ಮತ್ತು ಜಾನುವಾರುಗಳಿಗೆ ನೀರಿಗೆ ಬಹು ಅಡಚಣೆಯುಂಟಾಗುತ್ತದೆ ತೆಂಗಿನ ಮರದ ಭಾವಿಗೂ, ಕೋಟೆ ಭಾವಿಗೂ ಹಗಲು ರಾತ್ರಿ 12 ಘಂಟೆಯಾದರೂ ವಿರಾಮವೇ ಇರುವುದಿಲ್ಲ ಅಧಿಕಾರಿಗಳು ಪ್ರಜೆಗಳು ಕುಡಿಯುವ ನೀರಿಗೆ ಏನಾದರೂ ಒಂದು ಏರ್ಪಾಟನ್ನು ಮಾಡಿಕೊಟ್ಟರೆ ಬಹಳ ಮಟ್ಟಿಗೆ ಉಪಕಾರ ಮಾಡಿದಂತಾಗುತ್ತದೆ ಪೋಲೀಸ್ ಸ್ಟೇಷನ್ ಸರಹದ್ದಿನ ಹಳ್ಳಿ ಕೋಟೆ ಬಾಗಿಲಿಗೆ ರಾತ್ರಿ 11 ಘಂಟೆವರೆಗೆ ಕಾವಲಿದ್ದು ಬಳಿಕ ಬೀದಿಗಳನ್ನು ವಾಪಸ್ ತರುವುದು ಮೇಲ್ಪಟ್ಟವರಿಗೆ ಗೋಚರವಾಗುವುದು ಕಷ್ಟ ಅಧಿಕಾರಿಗಳ ದೃಷ್ಟಿಯು ಬಡ ಪ್ರಜೆಗಳ ಮೇಲೆ ಬೀಳುವುದಾದರೆ ನೀರಿನ ಕೊರತೆ ಶೀಘ್ರದಲ್ಲಿಯೇ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ ಚೋಳನಹಳ್ಳಿ ಕೆರೆ ಕಾಮಗಾರಿ ವಿಚಾರವಲ್ಲಿ ಅನೇಕ ವೇಳೆ ಅನೇಕ ಆಫೀಸರುಗಳಿಗೆ ಅರ್ಜಿ ಸಲ್ಲಿಸಲಾಯಿತು ಕೊಡಿಸಲು ಇಷ್ಟೆಲ್ಲಾ ಆದಾಗ್ಯೂ ಆ ಕೆರೆ ಕೆಳಗಿನ ರೈತರ ಗೋಳಾಟವನ್ನು ವಿಚಾರಿಸುವವರೇ ಇಲ್ಲವಲ್ಲಾ ಎಂದು ಸಂಕಟಪಡುತ್ತಾರೆ ಫಸಲನ್ನು ನೋಡಿದರೆ ಕ್ಷಾಮವನ್ನೇ ಸೂಚಿಸುತ್ತದೆ ಬಡವರ ಕಷ್ಟ ಕೇಳಿರಿದು ಸರಕಾರದವರು ಇನ್ನು ಮುಂದಾದರೂ ಕೆರೆ ಕಾಮಗಾರಿ ವಿಚಾರವನ್ನು ಚಿತ್ತಕ್ಕೆ ತಂದುಕೊಳ್ಳುವುದಾದರೆ ರೈತರ ವಿಜ್ಞಾಪನೆ ನೆರವೇರುವುದರಲ್ಲಿ ಸಂಶಯವಿಲ್ಲ — ಇಲ್ಲಿ ಕೆಲವು ಕಾಲದಿಂದ ಎ ವಿ ಸ್ಕೂಲಿನಲ್ಲಿ ಕೆಲಸಮಾಡುತ್ತಿದ್ದ ಮ॥ ಕೃಷ್ಣಮೂರ್ತಿಯವರಿಗೆ ತುಮಕೂರಿಗೆ ವರ್ಗವಾಯಿತು ಇವರು ಸರ್ವರಿಗೂ ಬೇಕಾದವರಾಗಿದ್ದು ಸ್ಕೂಲಿನಲ್ಲಿ ಸೊಸೈಟೀಸ್ ಮುಂತಾದ್ದು ನಡೆದಾಗ ಮುಂದಾಳಾಗಿ ನಿಂತು ಕಾರ್ಯವನ್ನು ನಡಿಸುತ್ತಿದ್ದುದಲ್ಲದೆ ಸೊಸೈಟಿ ಕಾರ್ಯಗಳಲ್ಲಿ ತುಂಬಾ ಸಹಾಯಕರಾಗಿದ್ದರು — ನಮ್ಮ ಮುನ್ಸಿಫರು ಶಿವಮೊಗ್ಗಕ್ಕೆ ವರ್ಗವಾಯಿತೆಂದು ವರ್ತಮಾನವಿದೆ ಅವರು ಇಲ್ಲಿಗೆ ಬಂದು ಒಂದು ವರ್ಷ ಕೂಡ ಆಗಲಿಲ್ಲ ಆದರೂ ತಮ್ಮ ಕೆಲಸಕಾರ್ಯಗಳಲ್ಲಿ ಶ್ರಮ ತೋರಿಸುವದರಲ್ಲಿಯೂ, ಕೋರ್ಟ್ ಸಂಬಂಧದ ವ್ಯಾಜ್ಯಗಳನ್ನು ಆದಷ್ಟು ಬೇಗನೆ ಇತ್ಯರ್ಥಮಾಡುತ್ತಾ ಜನಗಳ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು

ಹೊಸಕೋಟೆ — ಇಲ್ಲಿ ಬಿಸಿಲಿನ ಉರಿ ಹೆಚ್ಚು, ಇನ್ನೂ ಮಳೆ ಬರಲಿಲ್ಲ ದನ ಮೇವಿಗೆ ಬಹಳ ಕಷ್ಟ ಕೆರೆಗಳು ಒಣಗಿ ಹೋದವು ಬಹುಬೇಗ ನಮ್ಮ ಹೊಲಗಳನ್ನು ಉತ್ತಬೇಕೆಂಬದಾಗಿ ರೈತರ ದೃಷ್ಟಿಯು ಆಕಾಶದ ಕಡೆಗೆ ಇದೆ ಧಾನ್ಯಗಳು ಬಹಳ ಹೆಚ್ಚಾಗಿವೆ ಬಡವರ ಪಾಡೋ ಹೇಳತೀರದು — ಎರಡು ವಾರಗಳಿಂದ ಪ್ಲೇಗಿನ ಸುದ್ದಿ ಏನೂ ಇಲ್ಲ ಇಲ್ಲಿನ ಡಾಕ್ಟರು ಪ್ಲೇಗ್ ಬಾಯಿಲೆ ಮನೆಗಳಿಗೆ ಹೋಗಿ 12 ಜನಗಳಿಗೆ ವಾಕ್ಸಿನ್ ಮಾಡಿದಾರೆ ಊರಿನವರು ಇವರ ವಿಷಯ ಬಹಳ ಸಂತೋಷಪಡುತ್ತಾರೆ ಬಡಾವಣೆ ಮತ್ತು ಕೆರೆ ಮುಂತಾದ್ದು ನೀರಿನ ಸರಬರಾಯಿ ವಿಷಯ ದಯಾಳುಗಳಾದ ಸರ್ಕಾರದವರು ಜಾಗ್ರತೆಯಿಂದ ಸ್ಯಾಂಕ್ಷನ್ ಮಾಡಿ ಜನಗಳಿಗೆ ಅನುಕೂಲಪಡಿಸಿಕೊಡುವರೆಂದು ಪ್ರಾರ್ಥಿಸುತ್ತೇವೆ — ತಾ ೯ನೇ ಶನಿವಾರ ಇಲ್ಲಿ ರಥೋತ್ಸವವು ಬಹಳ ಸಂಭ್ರಮದಿಂದ ಜರುಗಿತು ಇದಕ್ಕೆ ಸಂಬಂಧಪಟ್ಟ ಉತ್ಸವಗಳನ್ನು ಬೇರೆ ಬೇರೆ ಇಲಾಖಾದಾರರು ಮತ್ತು ಊರಿನವರು ಪ್ರತ್ಯೇಕವಾಗಿ ಎಂಟು ದಿನಗಳ ಕಾಲ ನಡಿಸಿದರು ಶಾ॥ ಮ॥ ತಿಂದಪ್ಪನವರು ಮುಖಂಡರಾಗಿ ನಿಂತು ಅವರ ಮುತುವರ್ಜಿಯಿಂದ ಎಲ್ಲಾ ಕಾರ್ಯಗಳನ್ನೂ ನಡಿಸಿದರು ಸದರಿ ಜಾತ್ರೆ ನಡೆಯಿತು ಪರಿಷೆಯನ್ನು ನೋಡುವದಕ್ಕೆ ಸುತ್ತುಮುತ್ತಲಿನ ಗ್ರಾಮಗಳವರು ವಿಶೇಷವಾಗಿ ಸೇರಿದ್ದರು ತೇರು ನೆಲೆಗೆ ನಿಲ್ಲುವ ವರಿಗೂ ಅಮಲ್ದಾರರು, ಇನ್ಸ್‌ಪೆಕ್ಟರು, ಶಿರಸ್ತೇದಾರರೇ ಮುಂತಾದವರು ಬಹು ಶ್ರದ್ಧೆಯಿಂದ ಯಾವ ಗಲಾಟೆ ಮತ್ತು ಅಪಾಯಕ್ಕೆ ಆಸ್ಪದವಾಗದಂತೆ ಸೂರ್ಯೋದಯಕ್ಕೆ ಮುಂಚೆ ತಂದು ನಿಲ್ಲಿಸಿದರು ತರುವಾಯ ತಿಗಳರ ಪೇಟೆಯಲ್ಲಿ ನಡೆಯುವ ನಾನಾ ಆಟಬಾಟೆಗಳನ್ನೂ ಕರಗವನ್ನೂ ನೋಡುವದಕ್ಕೆ ಜನಗಳೆಲ್ಲಾ ಹೋದರು ಈ ಕರಗದ ತಮಾಷೆಯನ್ನು ನೋಡುವದಕ್ಕೆ ಬೆಂಗಳೂರು ಮೊದಲಾದ ನಾನಾ ಕಡೆಗಳಿಂದ ಜನಗಳು ಸೇರಿದ್ದರು ನೂರಾರು ಜನಗಳಿಗೆ ಸುಭೋಜನಮಾಡಿಸಿ ತೃಪ್ತಿಪಡಿಸಿದರು ಈ ಎಲ್ಲಾ ಕಾರ್ಯಗಳನ್ನೂ ತಿಗಳರ ಪೇಟೆಗೆ ಯಜಮಾನರಾದ ಮ॥ ಗಳಾದ ಪುಳ್ಳಪ್ಪನವರು, ಪೂಜಾರಿ ಮುನಿಸಾಮಪ್ಪನವರು ಮತ್ತು ಚಿನ್ನ ಪುಳ್ಳಪ್ಪನವರು ಬಹು ಉತ್ಸಾಹದಿಂದ ನಡೆಸಿದರು — ರಥೋತ್ಸವದ ದಿನ ಒಂದು ವ್ಯಸನಕರವಾದ ಸಂಗತಿ ನಡೆಯಿತು 25 ವರ್ಷ ಪ್ರಾಯದ ಶೇಷಗಿರಿರಾವ್ ಎಂಬವರು ಪಾಡಿಕೆಯ ಪ್ರಕಾರ ಪಂಚೆ ಒಗೆಯುವದಕ್ಕೆ ಭಾವಿಗೆ ಹೋಗಿ ಕಾಲುಜಾರಿಬಿದ್ದು ಅಕಾಲ ಮರಣವನ್ನು ಹೊಂದಿದ್ದಕ್ಕಾಗಿ ಎಲ್ಲರೂ ದುಃಖಪಡುತ್ತಾರೆ — ತಾ 22ರಲ್ಲಿ ಇಲ್ಲಿಗೆ ಡೆಪ್ಟಿ ಸ್ಯಾನಿಟರಿ ಕಮಿಷನರವರು ದಯಮಾಡಿಸಿ ಉಪ್ಪಾರಹಳ್ಳಿಗೆ ಹೋಗಿ ಅಲ್ಲಿಂದ ಹಿಂತಿರುಗಿ ಊರಿಗೆ ಬಂದು ಸಾಕೀಜಾ ಸಂಬಂಧವಾದ ಎಲ್ಲಾ ವಿಷಯಗಳನ್ನೂ ಕುರಿತು ಅತಿಸೂಕ್ಷ್ಮವಾಗಿ ವಿಚಾರಿಸಿದ ತರುವಾಯ ಅಮಲ್ದಾರರು ಇಲ್ಲಿ ಮಾಡಿರುವ ಎಲ್ಲಾ ಏರ್ಪಾಡುಗಳ ವಿಷಯದಲ್ಲಿ ಬಹಳ ಸಂತೋಷಪಟ್ಟರು ಮತ್ತು ಎಲ್ಲಾ ಸ್ಕೂಲುಗಳ ಮೇಲ್ವಿಚಾರಣೆಮಾಡಿ ತೃಪ್ತಿಪಟ್ಟು ಹೆಡ್ ಮಾಸ್ಟರ ಕೆಲಸವನ್ನು ಮೆಚ್ಚಿಕೊಂಡು ತೆರಳಿದರು

ಬೇಲೂರು — ಪ್ರತಿವರುಷವೂ ಈ ಊರಿನಲ್ಲಿ ನಡೆಯುವ ರಥೋತ್ಸವದ ಕಾಲದಲ್ಲಿ ಬಹು ಮಂದಿ ಜೂಜುಕೋರರು ಸೇರಿ ಇಲ್ಲಿಗೆ ಬರುವ ಭಕ್ತಾದಿಗಳನ್ನು ಮೋಸಪಡಿಸಿ ದುಡ್ಡು ಕಸುಕೊಂಡು ಗೋಳಾಡಿಸುತ್ತಿದ್ದರು ಈ ಸಾರಿ ನಮ್ಮ ಅಮಲ್ದಾರ್ ಮ॥ ಲಿಂಗೋಪಂತ್ ಬಾದಾಮಿಯವರಿಂದ ಜೂಜುಕೋರರಿಗೆ ಲೈಸೆನ್ಸು ದೊರೆಯದೆ ಹೋಯಿತು ಇದರಿಂದ ಪ್ರಜೆಗಳು ಅವರನ್ನು ಕೊಂಡಾಡುತ್ತಾರೆ ಮತ್ತು ಅವರೂ, ಹೊಸದಾಗಿ ಬಂದಿರುವ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ರಂಗರಾಯರೂ ದಕ್ಷರಾಗಿರೋಣದರಿಂದ ಈಗಿನ ಪ್ರಜೆಗಳ ಹಿಂಸೆಯು ನಿವಾರಣೆಯಾಗುತ್ತಾ ಹರುಷಚಿತ್ತರಾಗುತ್ತಿರುವರೆಂದು ಸಂತೋಷಪಡುವೆನು ಆದರೆ ಈ ಊರು ಮತ್ತು ಆಸ್‌ಪಾಸ್ ಗ್ರಾಮಗಳ ಕೆಲವು ಜೂಜುಕೋರರು ಪೋಲೀಸಿನವರ ವಿಶ್ವಾಸ ಸಂಪಾದಿಸಲು ಪ್ರಯತ್ನಿಸಿದ್ದರೂ ಅದು ಸಾಧ್ಯವಾಗಲಾರದು — ಸಾಯಂಕಾಲ 6 6½ ಘಂಟೆ ಸಮಯದಲ್ಲಿ ಪುಂಡರ ಸಮೂಹವು ಈ ಊರು ಪೋಸ್ಟಾಫೀಸು ಕಟ್ಟಡದ ಬಳಿ ಅಂದರೆ ಶರಾಬು, ಸೇಂದಿ, ಕೋರಿಗಳ ಬಳಿ ಬರುವ ಅನುಕೂಲರಾದ ಪ್ರಜೆಗಳನ್ನು ತಮ್ಮ ಬಲೆಗೆ ಹಾಕಿಕೊಳ್ಳಲು ಹೊಂಚು ಹಾಕುತ್ತಿರುವರು — ಮಳೆ ಸುತರಾಂ ಇಲ್ಲ. ನಿತ್ಯವೂ ಮೋಡವಾದುತ್ತಾ, ಸಿಡಿಲು ಗುಡುಗು ವಗೈರೆ ಶಬ್ದಗಳು ಮಾತ್ರ ಇವೆ ರೈತರು ತಮ್ಮ ಹೊಲಗದ್ದೆಗಳನ್ನು ಹಸನು ಮಾಡಿ ಉತ್ತು ಬಿತ್ತಿ ಆಕಾಶವನ್ನೇ ನೋಡುತ್ತಿರುವರು ಅಕ್ಕಿ ರೂಪಾಯಿಗೆ 6 7 ಸೇರು, ರಾಗಿ 16 16 ಸೇರು ಇದರಲ್ಲೂ ಅಳತೆಯಲ್ಲಿ ಮೋಸ ಸರ್ಕಾರದವರು ಹೊಟ್ಟೆಗಿಲ್ಲದೆ ಕ್ರಮವಾಗಿ ನಶಿಸುತ್ತಿರುವ ಈ ಮಲ್ನಾಡು ಪ್ರಾಂತ್ಯದಲ್ಲಿ ಯಾವುದಾದರೂ ಒಂದು ರಿಲೀಫ್ ಕಾಮಗಾರಿ ಪ್ರಾರಂಭಿಸದಲ್ಲಿ ಬಹು ಮಂದಿ ಜೀವಿಸಿ ಪ್ರಾಣ ಕಾಪಾಡಿಕೊಳ್ಳುವರು ಮನುಷ್ಯರಿಗೂ ಜಾನ್ವಾರುಗಳಿಗೂ ಮಾನಕ್ಕೂ ಅನುಕೂಲವಾಗಿಲ್ಲದೆ ಅನೇಕ ಗೋವುಗಳು ಮೃತಪಟ್ಟವು ಇದರಿಂದಲೇ ಸಿಡುಬು, ಆಮಶಂಕೆ ಹುಟ್ಟಿ ಬಹು ಮಂದಿ ಅಕಾಲಮರಣವನ್ನು ಹೊಂದುತ್ತಿದಾರೆ ಸರ್ಕಾರದವರು ಮೊದಲು ಈ ಮಲ್ನಾಡು ಪ್ರಜೆಗಳಿಗೆ ಅನುಕೂಲವಾದ ಜಲಾಶ್ರಯವನ್ನು ಕಲ್ಪಿಸಿ ಅವರ ಆರೋಗ್ಯವನ್ನು ಕಾಪಾಡಬೇಕಾಗಿದೆ — ತಾ 20ನೇ ಬುಧವಾರ ಸರ್ಕಲ್ ಇನ್ಸ್‌ಪೆಕ್ಟರವರೊಂದಿಗೆ ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಈ ಊರಿಗೆ ಸಾಯಂಕಾಲ ೨ ಗಂಟೆಗೆ ಮೂಡಿಗೆರೆ ಮಾರ್ಗವಾಗಿ ದಯಮಾಡಿಸಿ ಈ ಊರಿನ ಸ್ಕೂಲುಗಳನ್ನು ಪರಾಂಬರಿಸಿ ಸಂತೋಷಪಟ್ಟರು ಹಿಂದೀ ಬಾಯ್ಸ್ ಮತ್ತು ಗರ್ಲ್ಸ್ ಸ್ಕೂಲುಗಳನ್ನು ಟವನ್ ಹಾಲಿನ ಪಕ್ಕದಲ್ಲಿ ಕಟ್ಟಬೇಕೆಂದೂ, ಅದಕ್ಕಾಗಿ ಕೊಡ್ಲೆ ತಕ್ಕ ಏರ್ಪಾಡು ಮಾಡುವುದಾಗಿಯೂ ಅಪ್ಪಣೆ ಕೊಡಿಸಿದರು ಇದರಿಂದ ಪ್ರಜೆಗಳಿಗೂ ಹೆಚ್ಚು ಪ್ರಯೋಜನವಾಗಿ ಪ್ರತಿ ವರುಷವೂ ಪ್ಲೇಗಿಗಾಗಿ ಮುಚ್ಚಲ್ಪಟ್ಟು ಬಾಲಕರಿಗೆ ವಿದ್ಯವಿಲ್ಲದೆ ಪಡುವ ಹಿಂಸೆಯು ತಪ್ಪಿ ಸರ್ಕಾರಕ್ಕೆ ಒಳ್ಳೇ ಹೆಸರು ಬರುವುದು

ಕಾನಕಾನಹಳ್ಳಿ ತಾ ದಾವಣೇಹಳ್ಳಿ — ತಾ 17ನೇ ಬಾನುವಾರ ಶ್ರೀ ಶಿವಗಂಗಾ ಸ್ವಾಮಿಗಳ ಸವಾರಿಯು ಈ ಗ್ರಾಮಕ್ಕೆ ದಯಮಾಡಿಸಿತ್ತು ಗ್ರಾಮಸ್ಥರು ಈ ಗ್ರಾಮದಲ್ಲಿ 11 ವರುಷದಿಂದ ಮಳೆಯಿಲ್ಲದೆ ಬಹು ಶ್ರಮಪಡುತ್ತೇವೆಂದು ಶ್ರೀಗಳ ಸಾನ್ನಿಧ್ಯದಲ್ಲಿ ಅರಿಕೆ ಮಾಡಲು ಅವರು — ಈ ದಿವಸವೇ ಮಳೆಬರುತ್ತೆ ಇನ್ನುಮೇಲೆ ಸುಭಿಕ್ಷವಾಗುತ್ತೆ ಎಂಬದಾಗಿ ಅಭಯವನ್ನಿತ್ತರು ಅದೇ ರೀತಿ ಆ ದಿನ 3 ಅಂಗುಲ ಮಳೆ ಸುರಿದು ಪ್ರಜೆಗಳಿಗೆ ಮಹದಾನಂದ ಉಂಟಾಯ್ತು ಮೊದಲನೇ ದಿನ ಎರಡು ರೂಪಾಯಿ ಕೊಡಲು ಹಿಂತೆಯ ತ್ರಿಪದಿ ಎರಡನೇ ದಿನ ನೂರಾರು ರೂಪಾಯಿ ಒಟ್ಟುಗೂಡಿಸಿ ವೆಚ್ಚಮಾಡಿ ಪಾದಪೂಜೆ ಮಾಡಿಸಿದರು ಮತ್ತು ಈ ಗ್ರಾಮದಲ್ಲಿ ಬಹು ಕಾಲದಿಂದಲೂ ಮತಸ್ಪರ್ಧೆಗಳಿರುವದನ್ನು ಶ್ರೀಯವರು ತಿಳಿದು, ಅಮಲ್ದಾರ್ರವರ ಸಹಾಯದಿಂದ ಎಲ್ಲಾ ಮತಸ್ಥರನ್ನೂ ಮಠಕ್ಕೆ ಒರಮಾಡಿಕೊಂಡು, ಇತರರ ಎಲ್ಲರೂ ದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯವಾಗಿರಬೇಕೆಂದು ಬೋಧಿಸಿದರು ಸರ್ವರೂ ಶ್ರೀಗಳವರ ಆಜ್ಞೆಯಂತೆ ಐಕಮತ್ಯವಾಗಿರಲು ಒಪ್ಪಿಕೊಂಡರು ಅಮಲ್ದಾರ್ ಮ॥ ಎಸ್ ಚಕ್ರಪಾಣಿ ಅಯ್ಯಂಗಾರ್ರವರು ಶ್ರೀಗಳವರ ಸವಾರಿಯು ಹಿಂದೆಯೇ ಈ ತಾಲ್ಲೂಕು ಸರಹದ್ದು ದಾಟುವ ತನಕ ಇದ್ದು ಪ್ರಜೆಗಳಿಗೆ ಮಹದುಪಕಾರ ಮಾಡಿ ಪ್ರಜೆಗಳ ಪ್ರೀತಿಗೂ ಶ್ರೀಗಳವರ ಅನುಗ್ರಹಕ್ಕೂ ಪಾತ್ರರಾಗಿರುತ್ತಾರೆ ಇಂಥಾ ಅಮಲ್ದಾರ್ರವರು ಈ ತಾಲ್ಲೂಕಿಗೆ ಲಭಿಸಿದುದಕ್ಕಾಗಿ ಇಲ್ಲಿನವರು ಬಹಳ ಸಂತೋಷಪಡುತ್ತಾರೆ — ತಾ 20ನೇ ಬುಧವಾರ ಸ್ಕೂಲ್ ಡೆಪುಟಿ ಇನ್ಸ್‌ಪೆಕ್ಟರವರು ಈ ಗ್ರಾಮಕ್ಕೆ ದಯಮಾಡಿಸಿ ಸ್ಕೂಲುಗಳನ್ನು ಇನ್ಸ್‌ಪೆಕ್ಷನ್ ಮಾಡಿ, ರೀಡಿಂಗ್ ರೂಮನ್ನು ಪರಾಂಬರಿಸಿ ಸಂತೋಷಪಟ್ಟರು ಈಗಿರುವ ಬಾಯ್ಸ್ ಸ್ಕೂಲ್ ಕಟ್ಟಡವು ಸಾಲದಿರುವದರಿಂದ ಬೆಂಗಳೂರು ಕ ನೆಲಮಂಗಲ? ರೋಡ್ ಪಕ್ಕದಲ್ಲಿ ಸರ್ವೆ 702ನೇ ನಂಬರು ಜಮೀನಿನಲ್ಲಿ ಹೊಸದಾಗಿ ಕಟ್ಟಡ ಕಟ್ಟಲು ನಿರ್ಧರಮಾಡಿದರು ನಂತರ ಅಮಲ್ದಾರ್ರವರು, ಡೆಪ್ಯುಟಿ ಇನ್ಸ್‌ಪೆಕ್ಟರವರು ಸಹ ಸ್ಕೂಲಿನಲ್ಲಿ ವಿಚಾರಿಸಿ ಗುನಡಿ ಸ್ಕೂಲ್ ಕಟ್ಟಡವನ್ನು ಜಾಗ್ರತೆಯಾಗಿ ಕಟ್ಟುವುದಕ್ಕೆ ಗ್ರಾಮಸ್ಥರು ದ್ರವ್ಯಸಹಾಯ ಮಾಡಿದಲ್ಲಿ ಸರ್ಕಾರದಿಂದ ವಿಶೇಷವಾಗಿ ದ್ರವ್ಯವನ್ನು ಕೊಡಿಸಿ ಕಟ್ಟಡದ ಏರ್ಪಾಡು ಜಾಗ್ರತೆಯಾಗಿ ನಡೆಯುವಂತೆ ಶಿಫಾರಸು ಮಾಡುವದಾಗಿ ಅಪ್ಪಣೆ ಕೊಡಿಸಿದ್ದಲ್ಲದೆ, ಒಬ್ಬ ಸ್ವಾರಸ್ಯವಾಗಿ ಧರ್ಮ ಬೋಧನೆಯನ್ನು ಮಾಡಿದರು ಈ ದಿನ ನಮ್ಮ ಶ್ರೀಮನ್ ಯುವರಾಜರವರ ಜನ್ಮದಿನವಾದದ್ದರಿಂದ ಈ ದಿನವೇ ಕಾರ್ಯಾರಂಭವಮಾಡಬೇಕೆಂದು ಹೇಳಲು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮ ರಾಮಯ್ಯನವರು ಮೇಲ್ಕಂಡ ಸರ್ವೆ ನಂಬರಿನಲ್ಲಿ ಅರ್ಧ ಎಕರೆ ಜಮೀನನ್ನು ಸ್ಕೂಲಿಗೆ ಧರ್ಮಾರ್ಥವಾಗಿ ಈ ದಿನ ಕೊಟ್ಟಿರುತ್ತೇನೆಂದು ಹೇಳಿದ್ದಲ್ಲದೆ ಅದರಂತೆಯೇ ಸರ್ಕಾರಕ್ಕೆ ಮುಚ್ಚಳಿಕೆ ಬರೆದು ಕೊಟ್ಟಿರುತ್ತಾರೆ ಮ॥ ಅತ್ತಿಬೆಲೆ ರುದ್ರಪ್ಪನವರು 50 ರೂ ಮ॥ ಚಿಲ್ಲರೆ ಅಂಗಡಿ ರಾಮಯ್ಯನವರು 50 ರೂ, ಮ॥ ಮಲ್ಲಶೆಟ್ಟರು 25 ರೂ ಮ॥ ಗಳಾದ ಯಜಮಾನ್ ಬಸವಲಿಂಗಯ್ಯನವರು, ಪಟೇಲ್ ವೀರರಾಜೆ ಅರಸಿನವರು, ಶ್ಯಾ॥ ಜ ರಾಮಣ್ಣನವರು ಸಹ ತಲಾ 10 ರೂ ಮ॥ ಗಳಾದ ಕಂಠಿನ ನಾರಣಪ್ಪನವರು, ದಫೇದಾರ್ ವೆಂಕಟದೇಶಯ್ಯನವರು, ಶ್ಯಾ ಅನಂತಯ್ಯನವರು, ಶ್ಯಾ ವೆಂಕಟನಾರಣಪ್ಪನವರು, ಶ್ಯಾ ವೆಂಕಟಪ್ಪನವರು, ಕಟ್ಟೆರ ವೆಂಕಟಪ್ಪನವರು ಸಹ ತಲಾ 5 ರೂ ಮೇರಿಗೆ ಚಂದಾ ಕೊಟ್ಟರು. ಇನ್ನೂ ಚಂದಾ ಕೊಡುವ ಮಹನೀಯರುಗಳು ಇರುತ್ತಾರೆ

ಶೃಂಗೇರಿ — ಮಳೆಯಿಲ್ಲದೆ ಬಿಸಿಲ ಬೇಗೆಯನ್ನು ಸಹಿಸಲು ಕಷ್ಟವಾಗಿದೆ. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರಾವ್ ಬಹದ್ದೂರ್ ಮ॥ ಎಂ ಶಾಮರಾಯರು ಮೈಸೂರು ಸರ್ಕಲ್ ಇನ್ಸ್‌ಪೆಕ್ಟರ್ ಮ॥ ಶ್ರೀನಿವಾಸರಾಯರ ಕೂಡ ಕೊಪ್ಪ ತಾಲ್ಲೂಕು ಎಜುಕೇಷನಲ್ ಕಾನ್‌ಫರೆನ್ಸ್ ಮೆಂಬರ್ ಮ॥ ಹೊಸಕೊಪ್ಪದ ಕೃಷ್ಣರಾಯರ ಪ್ರಾರ್ಥನೆಯಂತೆ ದಯಮಾಡಿಸಿ ಕೊಪ್ಪ ತಾಲ್ಲೂಕು ಹೊಸಕೊಪ್ಪದಲ್ಲಿ ಸ್ಕೂಲನ್ನು ಪ್ರತಿಷ್ಠೆ ಮಾಡಿ ಕೃಷ್ಣರಾಯರು ಮುಂತಾದವರ ಔದಾರ್ಯವನ್ನು ಶ್ಲಾಘಿಸಿ ಮಾರ್ಗದಲ್ಲಿ ಕಾದಿದ್ದ ರೈತರ, ಗ್ರಾಮಸ್ಥರ ಅಹವಾಲುಗಳನ್ನು ಕೇಳಿ ಅವರಿಗೆ ಬುದ್ಧಿವಾದಗಳನ್ನು ಹೇಳುತ್ತಾ, ಇದೇ ತಾ 18ನೇ ಸಾಯಂಕಾಲ 5 ಗಂಟೆಗೆ ಶೃಂಗೇರಿಗೆ ದಯಮಾಡಿದರು ಮರುದಿನ ಬೆಳಗ್ಗೆ ಶ್ರೀ ಮಠಕ್ಕೆ ಹೋಗಿ ದೇವಸ್ಥಾನ ಕಟ್ಟಡವನ್ನು ನೋಡಿಕೊಂಡು ದೇವರ ಸಂದರ್ಶನವನ್ನು ಮಾಡಿ ಹೊಳೆ ಆಚೆ ನರಸಿಂಹ ವನಕ್ಕೆ ಹೋಗಿ ಅಲ್ಲಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ದರ್ಶನವನ್ನು ಮಾಡಿ ಶ್ರೀಗಳವರು ಮಾಡಿದ ವಿದ್ಯೆಯ ಉಪನ್ಯಾಸವನ್ನು ಕೇಳಿ ಸಂತೋಷಪಟ್ಟು ಅನುಜ್ಞೆಯನ್ನು ಪಡೆದು, ಟೌನ್‌ನಲ್ಲಿರುವ ಭತ್ತದ ಮಿಷನ್, ಎಣ್ಣೆ ಮಿಷನ್ ಮುಂತಾದ ಕಾರ್ಖಾನೆಯ ಕಾರ್ಯಗಳನ್ನು ಪರಿಶೀಲನೆ ಮಾಡಿ 10 ಗಂಟೆಗೆ ಚಪ್ಪರದಿಂದ ಅಲಂಕಾರವುಳ್ಳ ಎ ವಿ ಸ್ಕೂಲಿಗೆ ದಯಮಾಡಿಸಿದರು ಸ್ಕೂಲಿನಲ್ಲಿ ಸೇರಿದ್ದ ವಿದ್ವಾಂಸರು, ವರ್ತಕರು ಮುಂತಾದವರು ಆದರದಿಂದ ಬರಮಾಡಿಕೊಂಡರು ಎ ವಿ ಸ್ಕೂಲ್ ಮಾಸ್ಟರುಗಳೂ, ಗರಲ್ಸ್ ಸ್ಕೂಲ್, ಹಿಂದುಸ್ತಾನಿ ಸ್ಕೂಲ್ ಮಾಸ್ಟರುಗಳೂ, ಬಾಲಕಬಾಲಕಿಯರೂ ವಂದಿಸಿದರು ಬಾಲಕಬಾಲಕಿಯರ ಗಾನವೂ, ಆಟಗಳೂ, ಡ್ರಿಲ್ ಮುಂತಾದ ವಿನೋದಗಳೂ ನಡೆದವು ಹೊಸಕೊಪ್ಪದ ಕೃಷ್ಣರಾಯರು ವಿಜ್ಞಾಪನೆಮಾಡಿಕೊಂಡ ತರುವಾಯ ಮ॥ ಕೃಷ್ಣಶಾಸ್ತ್ರಿಗಳು ಉಪನ್ಯಾಸ ಮಾಡಿದರು ಮ॥ ಶಾಮರಾಯರು ಮಲೆನಾಡಿನ ಅಭಿವೃದ್ಧಿಯನ್ನು ಕುರಿತು ಜನಗಳನ್ನು ಪ್ರೋತ್ಸಾಹಪಡಿಸಿದರು ಜನಗಳೂ ಪ್ರಯತ್ನ ಮಾಡಬೇಕೆಂದೂ, ಸರ್ಕಾರದವರು ಸಹಾಯಮಾಡುತ್ತಾರೆಂದೂ ಅಪ್ಪಣೆ ಕೊಡಿಸಿದರು ಸಭಿಕರಿಗೆ ತಾಂಬೂಲವು ಹಂಚಲ್ಪಟ್ಟಿತು ಬಾಲಕರಿಗೆ ಲಾಡು, ಬೊಂಬೆಗಳು ಕೊಡಲ್ಪಟ್ಟವು ಸಭಿಕರ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು ಆ ದಿನ ಮಧ್ಯಾಹ್ನವೇ ಅವರು ಹಾಸನದ ಕಡೆ ಪ್ರಯಾಣ ಬೆಳಸಿದರು ಸ್ಕೂಲ್ ಹೆಡ್ ಮಾಸ್ಟರ್ ಮ॥ ವೆಂಕಟರಾಯರೂ, ಮಾಸ್ಟರುಗಳೂ ಮಾಡಿದ ಏರ್ಪಾಟು ಸ್ತುತ್ಯವಾಗಿತ್ತು — ಶ್ರೀ ಮಠದಲ್ಲಿದ್ದ ಬೆಳ್ಳಿ ಮಕರತೋರಣವು ಕಳುವಾಗಿದೆ ಎಂದೂ, 3 4 ಧಡಿಯ ತೂಕ ಬೆಳ್ಳಿ ಇತ್ತೆಂದೂ ತಿಳಿಯುತ್ತದೆ. ಇನ್ನೂ ಪತ್ತೆ ಆಗಿಲ್ಲ ಆಗಾಗ್ಗೆ ಇಂಥಾ ಕೃತ್ಯಗಳು ನಡೆಯುತ್ತವೆ ಈಗ್ಗೆ 7 8 ತಿಂಗಳ ಕೆಳಗೆ ದೇವಸ್ಥಾನದಲ್ಲಿ ಚಿನ್ನದ ಸರಿಗೆಯು ಕಳುವಾದಾಗ ಕಳವು ಮಾಡಿದವರನ್ನು ಪತ್ತೇ ಕ್ರಮ ನಡಿಸದೆ ನೌಕರರಿಂದ ಅದರ ಮಾಬಲಗನ್ನು ವಸೂಲ್ಮಾಡಿಕೊಂಡು ಬಿಟ್ಟದ್ದರಿಂದ ಕಳ್ಳರಿಗೆ ಧೈರ್ಯ ಹೆಚ್ಚಿತು ಶಿಕ್ಷೆ ಆದವರನ್ನೂ, ಕಳ್ಳತನ ಮಾಡಿದವರನ್ನೂ ಜವಾಬ್ದಾರಿ ಕೆಲಸಗಳಿಗೆ ಸೇರಿಸಿಕೊಳ್ಳುವದರಿಂದ ಮೋಸ ಕೃತ್ಯಗಳೂ, ಕಳ್ಳತನಗಳೂ ಹೆಚ್ಚುತ್ತಿವೆ 6 ವರ್ಷದ ಬಾಲಕರಿಂದಲೂ ನಶ್ಯ ಹಾಕಿಕೊಳ್ಳುವದೂ, ಜುಗಾರಿ ಆಡುವದೂ ಕೆಲಸವಾಗಿದೆ ಈಗಿನ ಅಮಲ್ದಾರ್ರ ಕಾಲದಲ್ಲಿ ಪುಂಡು ಜನಗಳಿಗೆ ಭೀತಿಯಿಲ್ಲ ಸರ್ಕಾರದವರು ಕ್ರಮಪಡಿಸುವರೆಂತ ನಂಬಿದೇನೆ ಈ ಊರು ಕೆಲವು ವಿಷಯದಲ್ಲಿ ಅಭಿವೃದ್ಧಿಸ್ಥಿತಿಗೆ ಬಂದರೂ ಪ್ರೋಜಾರಿ ಮಾಡುವದೂ, ಸಾಹುಕಾರರು ಬಡವರನ್ನು ಅಲಕ್ಷ್ಯ ಮಾಡುವದೂ, ಕುಚುಕತನವೂ ತಪ್ಪಿಲ್ಲ ಗ್ರಾಮಗಳಲ್ಲಿ ಪಾರ್ಟಿ ವ್ಯಾಜ್ಯಗಳು ಬೆಳೆಯುತ್ತಲೇ ಇವೆ ಈ ಮಲೆನಾಡು ಜನಗಳಿಗೆ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದರೆ ಕ್ರಮೇಣ ಉತ್ತಮಸ್ಥಿತಿಗೆ ಬರಬಹುದು — ಗಿರಿಜಾಕಲ್ಯಾಣ ಉತ್ಸವವು ಚೆನ್ನಾಗಿ ನಡೆಯಿತು

ತುಮಕೂರು — ಈ ಪ್ರಾಂತ್ಯ ಮಳೆಬಾರದೆ ರೈತರೆಲ್ಲಾ ಬಹಳ ವ್ಯಸನಭರಿತರಾಗಿದಾರೆ ಗೋವುಗಳಿಗೆ ಸುತರಾಂ ನೀರು ಸಿಕ್ಕುವುದೇ ಇಲ್ಲ ಈ ಊರಿನಲ್ಲಿ ಶೇಂದಿಗೂ ಉಪ್ಪುನೀರಿಗೂ ತುಂಬಾ ಅನನುಕೂಲವಾಗಿದೆ ಮ॥ ಜವಳಿ ಅಂಗಡಿ ವೈಕ್ಯರದಂತಿ ತಿಪ್ಪಯ್ಯನವರು ಬಹಳ ಹಣ ಖರ್ಚುಮಾಡಿ ಕೆರೆಯೊಳಗೆ ಶೇಂದಿನ ಬಾವಿ ತೆಗಿಸಿದ್ದಾಗ್ಯೂ ಈ ವರ್ಷಮಾತ್ರ ಶೇಂದಿಗೆ ಸ್ವಲ್ಪ ತೊಂದರೆಯಾಯಿತು ಊರೊಳಗಿನ ಭಾವಿಯಲ್ಲಿ ಉಪ್ಪುನೀರು ಸುತರಾಂ ಸಿಕ್ಕುವುದೇ ಇಲ್ಲ ಮೊನ್ನೆ ದಿವಾನ್ ಸಾಹೇಬರವರ ಸವಾರಿಯು ಈ ಊರಿಗೆ ಚಿತ್ತೈಸಿದ್ದಾಗ ಇಲ್ಲಿನ ದೊಡ್ಡ ವರ್ತಕರು, ಅನೇಕ ಪ್ರಜೆಗಳು ಸಹ ಈ ಊರಿನಲ್ಲಿ ವರ್ಷ ವರ್ಷ ನೀರಿನ ಅಭಾವವನ್ನು ಅರಿಕೆ ಮಾಡಿಕೊಂಡದ್ದಕ್ಕೆ ಅವರು ಈ ಊರಿನಲ್ಲಿ ಇಡಿಸುವ ಪ್ರಯತ್ನದಲ್ಲಿದೇವೆ ಎಂಬದಾಗಿ ಪ್ರತ್ಯುತ್ತರ ದಯಪಾಲಿಸಿದರು ಸರ್ಕಾರದವರು ಬಾರ್ ಲೈನಿನಲ್ಲಿದ್ದ ಮುಸಲ್ಮಾನರ ಮನೆಗಳನ್ನು ಕೆಡವಿಸಿ ಬಾರ್ ಸಿಪಾಯಿಗಳಿಗೆ ಹೊಸ ಮನೆಗಳನ್ನು ಕಟ್ಟಿಸಿ ವಾಸಕ್ಕೆ ಅನುಕೂಲಿಸುವುದಕ್ಕೆ ಈಗ್ಗೆ ಸುಮಾರು 1-2 ವರ್ಷಗಳಿಂದ ಪ್ರಾರಂಭಿಸಿ ಸದ್ಯ 20 ಮನೆಗಳವರೆಗೆ ತಯಾರು ಮಾಡಿಸಿರುತ್ತಾರೆ ನಂತರ 4 5 ತಿಂಗಳಿಂದ ಹೊಸ ಕಟ್ಟಡಕ್ಕೆ ಪ್ರಯತ್ನವಾದದೆ 10 15 ದಿವಸಗಳಿಂದೀಚೆಗೆ ಕಾಮಗಾರಿ ಶುರುಮಾಡಿದಾರೆ — ಹಿಂದ ಇದ್ದ ಡೆಪ್ಟಿ ಕಮಿಷನರ್ ಮ ಕೆ ಎಸ್ ದೊರೆಸಾಮಯ್ಯರವರ ಕಾಲದಿಂದಲೂ ಅವರ ನಂತರ ಆ ಸ್ಥಾನಕ್ಕೆ ಬಂದ ಡೆ ಕ॥ ಸಾಹೇಬರುಗಳು ಕೂಡ ಚಿಕ್ಕಪೇಟೆಯಲ್ಲೂ, ಅರಳೇಪೇಟೆಯಲ್ಲೂ ರಸ್ತೆಗಳು ಸರಿಯಾಗಿಲ್ಲದ್ದರಿಂದ ಹೊಸ ರಸ್ತೆ ಮಾಡಿಸಲು ಆಲೋಚನೆಯಾಯ್ತು ಈ ವರಿವಿಗೂ ಮ್ಯುನಿಸಿಪಾಲಿಟಿಯಿಂದ ಅಳತೆ ಮಾಡಿಸುವುದರಲ್ಲೇ ಇದೆ ಯಾವ ರಸ್ತೆಯೂ ಹೊಸದಾಗಿ ಆಗಲಿಲ್ಲ ಹಿಂದೆ ಇದ್ದ ಡೆ॥ ಕ॥ ಮ॥ ಸಿ ಎಸ್ ಬಾಲಸುಂದರಂ ಅಯ್ಯರವರ ಕಾಲದಲ್ಲಿ ಚಿಕ್ಕಪೇಟೆಯ ಜನಗಳು ಹೊಸ ರಸ್ತೆ ವಿಷಯವಾಗಿ ಅವರಿಗೆ 1 2 ಅರ್ಜಿಗಳು ಸಹ ಕೊಟ್ಟಿದ್ದಕ್ಕೆ ಅವರು ರೂಬರೂಬು ಬಂದು ಪರಾಂಬರಿಸಿ ಉದಾರ ಪೂರ್ವಕವಾಗಿ ನಿಮ್ಮಗಳಿಗೆ ಕ್ಷೇಮವಾಗುವಂತೆ ಹೊಸ ರಸ್ತೆ ಮಾಡಿಸುತ್ತೇವೆ ಎಂಬದಾಗಿ ಅಪ್ಪಣೆ ದಯಪಾಲಿಸಿದರು ಕಡೆಗೆ ಮಾಡಿಸಲಿಲ್ಲ ಈಗ ಒಂದಿರುವ ಡೆ॥ ಕ॥ ಮ ಬಿ ಜಿ ಕುಮಾರಸ್ವಾಮಿನಾಯಕರವರು ಈಗ್ಗೆ ಸುಮಾರು 1 2 ತಿಂಗಳ ಕೆಳಗೆ ಚಿಕ್ಕಪೇಟೆಗೆ ಬಂದಿದ್ದಾಗ್ಗೆ ಜನರೆಲ್ಲಾ ತಮ್ಮ ಅಹವಾಲನ್ನು ಹೇಳಿಕೊಂಡದ್ದಕ್ಕೆ ಅವರು ರೂಬರೂಬು ರಸ್ತೆ ಆಗತಕ್ಕ ಗಲ್ಲಿಗಳನ್ನು ಪರಾಂಬರಿಸಿ ಅಹವಾಲು ನಿಶ್ಚಯಮಾಡಿ ತಿಳಿದು ಚಿಕ್ಕಪೇಟೆಯಲ್ಲೂ ಅರಳೇಪೇಟೆಯಲ್ಲೂ ಹೊಸ ರಸ್ತೆಗಳನ್ನು ಮಾಡಿಸುತ್ತೇವೆಂಬದಾಗಿ ಅಪ್ಪಣೆ ದಯಪಾಲಿಸಿದರು ಈಗ ಹೊಸದಾಗಿ ಆಗತಕ್ಕ ಗಲ್ಲಿಗಳನ್ನು ಮ್ಯುನಿಸಿಪಾಲಿಟಿಯವರು ಅಳತೆ ಮಾಡುತ್ತಾ ಇದಾರೆ ಸರ್ಕಾರದವರು ಪ್ರಜೆಗಳ ಅನುಕೂಲಕ್ಕೆ ಯಾವಾಗ ಹೊಸ ರಸ್ತೆ ಮಾಡಿಸುತ್ತಾರೋ ತಿಳಿಯದು — ಈ ಡೆ ಕ॥ ಸಾಹೇಬರ ಕಾಲದಲ್ಲಿ ಚಿಕ್ಕಪೇಟೆ ಹೊರಪೇಟೆಯಲ್ಲಿ ಒಂದು ಹೊಸ ಮಾರ್ಕೆಟ್ಟನ್ನು, ಡಿಸ್ಟ್ರಿಕ್ಟ್ ಕಚೇರಿ ಬಳಿ ಅರ್ಜಿದಾರರಿಗೂ ಕಕ್ಷಿಗಾರರಿಗೂ ನೆರಳಿಲ್ಲದೆ ಬಿಸಿಲಿನಲ್ಲಿಯೂ ಮಳೆಯಲ್ಲೂ ತೊಂದರೆ ಪಡುತ್ತಿದ್ದದ್ದನ್ನು ತಪ್ಪಿಸುವದಕ್ಕೆ ಒಂದು ಸುಂದರವಾದ ಹೊಸ ಕಟ್ಟಡವನ್ನೂ ಕಟ್ಟಿಸಿದ್ದಕ್ಕಾಗಿ ಜನಗಳು ಬಹಳವಾಗಿ ಕೊಂಡಾಡುತ್ತಾರೆ ಅವರ ಕಾಲದಲ್ಲೇ ರಸ್ತೆ ವಿಷಯ ಸರಿಪಡಿಸಿದರೆ ಇವರ ಕೀರ್ತಿಯು ಬಹಳ ಕೊಂಡಾಡತಕ್ಕದಾಗಿದೆ — ದೇವಾಂಗದ ಚೆನ್ನಯ್ಯನ ಮಗ ಗೋವಿಂದಯ್ಯನೆಂಬುವನು ಸುಮಾರು 1-2 ತಿಂಗಳ ಕೆಳಗೆ ತನ್ನ ಸ್ವಜಾತಿಯ ಹೆಂಗಸಿನ ಮೇಲೆ ಒಂದು ಸುಳ್ಳು ಅಪವಾದವನ್ನು ಹೊರಿಸಿದ್ದರಿಂದ ಆ ಹೆಂಗಸು ಡೆ॥ ಕಮಿಷನರವರ ಕೋರ್ಟಿನಲ್ಲಿ ಫಿರ್ಯಾದು ಮಾಡಿದಾಗಿ ವಿಚಾರಣೆಯಿಂದ ಅಪರಾಧಿ ಗೋವಿಂದ

ಯ್ಯನಿಗೆ ಜಾರಿನ್ ಮೇಲೆ ಖುಲಾಸಾಯಿತು.—ದಿನಸಿನ ಧಾರಣೆ ಚಡಾವಾಗುತ್ತಾ ಇದೆ. ಅಕ್ಕಿ ರೂಪಾಯಿಗೆ 6½ ಸೇರು, ರಾಗಿ 14 ಸೇರು ಮಾರಾಟವಾಗಿದೆ ಹಿಟ್ಟಿ ಸೇರಿನಿಂದ ಅಳತೆಮಾಡುವುದು ಇಲ್ಲಿನ ವರ್ತಕರು ಬಿಡಲಿಲ್ಲ

ವಿದೇಶ ವೃತ್ತಾಂತಗಳು.

ಇಂಗ್ಲಾಂಡಿಗೆ ಸೇರಿದ ಲಾಂಕೆಷೀರಿನಲ್ಲಿ ಒಂದು ಹತ್ತಿ ಕಾರ್ಖಾನೆಗೂ ಅವರ ಉಗ್ರಾಣಕ್ಕೂ ಬೆಂಕಿಬಿದ್ದು 15,000 ರೂಪಾಯಿ ನಷ್ಟವಾಗಿ, ಸುಮಾರು 700 ಮಂದಿ ಕೆಲಸಗಾರರಿಗೆ ಜೀವನ ತಪ್ಪಿಹೋಯಿತು

* * *

ಬ್ರಿಟಿಷ್ ಗಯಾನಾದಲ್ಲಿ ಚೀಫ್ ಜಡ್ಜರಾಗಿದ್ದ ಸರ್ ಟಿ ಸಿ ರೈನರ್ ಎಂಬವರು ಕಳೆದ ಶುಕ್ರವಾರ ಕೋರ್ಟಿನಲ್ಲಿ ಮೊಕದ್ದಮೆ ವಿಚಾರಣೆ ಮಾಡುತ್ತಿದ್ದಾಗ ಕುರ್ಚಿಯಲ್ಲಿ ಕುಳಿತಿದ್ದ ಹಾಗೇ ಪ್ರಾಣಬಿಟ್ಟರು

* * *

ಜರ್ಮನಿಯ ಒಬ್ಬ ಕಾರೀಗಾರನು ಒಂದು ದಿವ್ಯವಾದ ವಿಮಾನ ಯಂತ್ರವನ್ನು ರಚಿಸಿ ಅದರಲ್ಲಿ ಕುಳಿತು 36 ಗಂಟೆಗಳಲ್ಲಿ ಜರ್ಮನಿ ರಾಜ್ಯವನ್ನೆಲ್ಲಾ ಅಂತರಿಕ್ಷದಲ್ಲೇ ಸಂಚಾರ ಮಾಡಿಕೊಂಡು ಬಂದನು ಅದು ಗಂಟೆಗೆ 93 ಮೈಲಿಯಂತೆ ಹೋಯಿತು

* * *

ಜಪಾನ್‌ಗೆ ಸೇರಿದ ಹೊಕ್ಕೈಡೋ ದ್ವೀಪದಲ್ಲಿ ಕಿಟಾಮಿ ಎಂಬ ಅಡವಿಯೊಳಗೆ ಅಗಾಧವಾದ ಬೆಂಕಿ ಹುಟ್ಟಿ ಉರಿಯುತ್ತಿದೆ ಎಂದು ತಿಳಿದು ಬಂದಿದೆ ಆರು ಮೈಲಿ ಅಗಲ ಅರವತ್ತು ಮೈಲಿ ಉದ್ದದಷ್ಟು ಪ್ರದೇಶವು ಹತ್ತಿಕೊಂಡು ಸುಡುತ್ತಿರುವುದು ಮಳೆ ಇಲ್ಲದೆ ಜಲಾಶಯಗಳೆಲ್ಲಾ ಬರಿದಾಗಿಹೋಗಿರುವುದರಿಂದ ನೀರು ಒದಗುವುದು ಕಷ್ಟವಾಗಿದ್ದರೂ ಆ ಪ್ರಾಂತ್ಯಗಳ ಪ್ರಜೆಗಳು ಬೆಂಕಿಯನ್ನಾರಿಸಬೇಕೆಂದು ಬಹಳ ಸಾಹಸಪಡುತ್ತಿದ್ದಾರೆ ಇದುವರೆಗೆ ಹದಿಮೂರು ಜನರು ಸುಟ್ಟು ಹೋದರೆಂದು ವರ್ತಮಾನ ಬಂದಿದೆ

* * *

ಹಿಂದೆ ಜಾನ್ ಎಂಬವರು ಇಂಗ್ಲಾಂಡಿನ ದೊರೆಯಾಗಿದ್ದಾಗ ಅವರು ತಮ್ಮ ಕಿರೀಟ ಮೊದಲಾದ ರಾಜ ಬಿರುದುಗಳ ಸಮೇತ ಕ್ರೋಲೆಂಡಿಗೆ ಹೋಗುತ್ತಿರುವಲ್ಲಿ ಆ ಆಭರಣಗಳೆಲ್ಲಾ ಕಳೆದು ಹೋದವು ಆ ಪ್ರದೇಶದಲ್ಲಿದ್ದ ನೀರನ್ನೆಲ್ಲಾ ಹೊರಡಿಸಿ ಈಗ ಅಲ್ಲಿ ಜಮೀನುಗಳು ಮಾಡಿ ವ್ಯವಸಾಯಕ್ಕೆ ಕೊಟ್ಟಿದ್ದಾರೆ ಆ ಜವಾಹಿರಿಗಳು ಅಲ್ಲಿ ಸಿಕ್ಕಬಹುದೆಂದು ಕೆಲವು ಜನರು ಸೇರಿ ಒಂದು ಕಂಪನಿಮಾಡಿ ಷೇರು ಮೂಲಕ ಹಣವನ್ನು ಕೂಡಿಸಿ, ಶೋಧನೆಮಾಡಲಾರಂಭಿಸಿದ್ದಾರೆ ಅವು ಲಭ್ಯವಾದರೆ ಕಂಪನಿಗೆ ಕೋಟ್ಯಾಂತರ ದ್ರವ್ಯ ಲಾಭವಾಗುವುದು

* * *

ಪೂರ್ವದೇಶದ ರಾಜ್ಯಗಳ ಭಾಷೆಗಳನ್ನು ಅಭ್ಯಾಸಮಾಡುವುದಕ್ಕಾಗಿ ಲಂಡನ್ ಪಟ್ಟಣದಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವುದರಲ್ಲಿದ್ದಾರೆ ಇದರ ಖರ್ಚಿಗೆ ಪ್ರತಿ ವರುಷವೂ ಇಂಗ್ಲಿಷ್ ಗವರ್ನಮೆಂಟಿನವರು 60,000 ರೂಪಾಯಿಗಳನ್ನು, ಇಂಡಿಯಾ ಆಫೀಸಿನವರು 18,750 ರೂಪಾಯಿಯನ್ನೂ, ಲಂಡನ್ ಕೌಂಟಿ ಕೌನ್ಸಿಲ್‌ನವರು 30,000 ರೂಪಾಯಿಯನ್ನೂ ಕೊಡುವುದಾಗಿ ವಾಗ್ದಾನವಾಗಿದೆ ಇನ್ನೂ ಅದರ ಖರ್ಚಿಗೆ ಒಂದು ಲಕ್ಷ ರೂಪಾಯಿ ವರಮಾನ ಪ್ರತಿ ವರುಷವೂ ಬರುವಂತಾಗಬೇಕೆಂದೂ, ಇದಕ್ಕೆ ದ್ರವ್ಯ ಸಹಾಯಮಾಡಬೇಕೆಂದೂ ಆ ವಿದ್ಯಾಶಾಲೆಯ ಕಮಿಟಿ ಮೆಂಬರುಗಳು ಕೇಳಿದ್ದಾರೆ ಅವರು ಅದರ ಮೂಲಧನಕ್ಕೆ 15 ಲಕ್ಷ ರೂಪಾಯಿ ಕೂಡಿಸಬೇಕೆಂದು ಪ್ರಯತ್ನಪಡುತ್ತಿರುವರು

* * *

ಆಫ್ರಿಕಾ ಖಂಡಕ್ಕೆ ಸೇರಿದ ಸೋಮಾಲಿಲ್ಯಾಂಡ್ ಎಂಬ ವಿಭಾಗದಲ್ಲಿ ಮುಲ್ಲಾ ಎಂಬ ಮುಖಂಡನು ಜನಗಳನ್ನು ಕಟ್ಟಿ ಇಂಗ್ಲಿಷ್ ಸ್ವಾಸ್ಥ್ಯಗಳಲ್ಲಿ ಆಗಾಗ್ಗೆ ದಾಂಧಲೆ ನಡೆಸುತ್ತಾ ಬಂದಿದ್ದಾನೆ ಆತನ ಕೃತ್ಯಗಳನ್ನು ಅಡಗಿಸುವದಕ್ಕೆ ಅನೇಕ ವೇಳೆ ಇಂಗ್ಲಿಷ್ ಸೈನ್ಯಗಳು ಹೋಗಿ ಹೋರಾಟ ಕೆಲವು ಸಲ ಸೋಲಿಸಿಯೂ ಬಂದಿವೆ ಆದರೆ ಆತನ ಹಾವಳಿ ಕಡಮೆಯಾಗಲಿಲ್ಲ ಈಗ ಇದಕ್ಕಾಗಿ ಇಂಗ್ಲಿಷ್ ಸರ್ಕಾರದವರು 30 ಲಕ್ಷ ಪೌಂಡು ಖರ್ಚಿಟ್ಟು ಅಲ್ಲಿಗೆ ಒಂದು ದೊಡ್ಡ ಸೈನ್ಯವನ್ನು ಕಳುಹಿಸಬೇಕೆಂದು ಯೋಚಿಸುತ್ತಿದ್ದರು ಇದಕ್ಕೆ ಪ್ರತಿಯಾಗಿ ಈಗ ಇನ್ನೊಂದು ಹೊಸ ಏರ್ಪಾಟು ಸೂಚಿಸಲ್ಪಟ್ಟಿದೆ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನ ಯಂತ್ರಗಳನ್ನು ಜೊತೆಮಾಡಿ ಅಲ್ಲಿಗೆ ಕಳುಹಿಸಿ ಆ ದೇಶದ ಮೇಲ್ಗಡೆ ಆರು ತಿಂಗಳ ಕಾಲ ಸಂಚರಿಸುತ್ತಾ ಇದ್ದು ಆ ಮುಲ್ಲಾನ ಮತ್ತು ಅವನ ಸೈನಿಕರ ಠಾಣ್ಯಗಳನ್ನು ತಿಳಿದು ಅವುಗಳಿಗೆ ಪ್ರತೀಕಾರ ಮಾಡುತ್ತಾ ಬಂದರೆ ಆ ದೇಶವು ವಶಕ್ಕೆ ಬರಲು ಅನುಮಾನವಿಲ್ಲವೆಂದು ಹೇಳಲಾಗಿದೆ ಈ ಏರ್ಪಾಟಿಗೆ ಒಂದು ಲಕ್ಷ ಪೌಂಡಿಗಿಂತ ಹೆಚ್ಚು ತಗಲುವುದಿಲ್ಲವೆಂದು ತಿಳಿಸಲಾಗಿದೆ

NOW READY

Full Notes with Summary and Numerous useful questions on Circe's Palace, The Golden Fleece and Fairy Tales (L. S. Text for 1915) by Mr. A S Rangaswamiengar, B A, Asst Master Maharaja's College, Mysore Price four annas only Yate's Primer 0-4-0 Yate's Second Reader 0-9-0 King Second Reader 0-6-0 King Third Reader 0-8-0 Macmillan's New No IV Reader 0-12-0 Hydes Practical English Grammar—First 0-15-0, Second 0-15-0, Longmans School Geography 1-4-0 Marrison's Junior Geography of India 0-12-0

We supply you any books in English or Canarese.

[23-20] The General Agency, Mysore

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ



ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗೆಜೆಗಳನ್ನು ತಯಾರಿಸಿ ಸುಂದರವಾಗಿ ಹೂಬುಗಳನ್ನು ಮತ್ತು ತುಮನ ಪುಗಳನ್ನು ಇಟ್ಟು ಗಟ್ಟಿಯಾಗಿ ಅಪರಂಜಿಯ ಮುಲಾಮನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ ಇದು ಗಾಜಿನಮಣಿಗಳಲ್ಲ ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರಿಗೂ ಹುಡುಗಿಯರಿಗೂ ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖ್ಖಾದದ್ದು ಅನೇಕರು ಸುಳ್ಳು ಪ್ರಕಟನೆಗಳನ್ನು ಪ್ರಕಟಿಸಿ ಜನಗಳಲ್ಲಿ ನಂಬಿಕೆಯನ್ನು ಕೆಡಿಸಿಕೊಂಡಿರುವದರಿಂದ ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಬಗ್ಗೆ ಒಂದನ್ನು ತರಿಸಿ ಪರೀಕ್ಷಿಸಿರಿ ಮತ್ತು ಇದರ ಸಂಗಡ ಒಂದು ಸಪ್ಪೆ ಚಿನ್ನದ ಮುಲಾಮನ್ನು ಉಚಿತವಾಗಿ ಕಳುಹಿಸುತ್ತೇವೆ [120-1]

ವಿಳಾಸ—ಎಸ್. ಎನ್. ಮೂರ್ತಿ, ತಿರುವಲ್ಲಿಕೇಣಿ, ಮದರಾಸು.

ಮಿಡ್‌ವೈಫರಿ—Midwifery

ಗರ್ಭಿಣೀಶಿಶುಸಂರಕ್ಷಣಾ

ಕ್ರಯ 12 ಆಣೆ ಬಕರಿಸ್ಟ್ ಳ —

ಮೈಸೂರು—ಮಿಷನ್ ಬುಕ್ ಡಿಪೊ

ಮೈಸೂರು—ಜನರಲ್ ಯೇಜನ್ಸಿ.

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚಿಕ್ಕಗಳು—ಶೀರೆಗಳು, ಖಣಗಳು.

ಹೊಸ ನಮೂನೆಯ ತರಹವಾರಿ ಚಿಕ್ಕಗಳು, ಶೀರೆಗಳು, ಖಣಗಳು, ಕಿಂಗೆಗಳು, ಚಿಲ್ಲರೆಯಾಗಿಯೂ ಬೇಲುಗಳಲ್ಲಿಯೂ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು ಹಣ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕಾಂದು ಕೊಂಡಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಆವಶ್ಯಕವಿಲ್ಲ ಸನಗುಗಳ ಮೇಲಿನ ನಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು ಸೋಲಾಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಫಾಯಿದೆ ಹೊಂದುತ್ತಿರುವರು [58-18]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

S U. N. & Co.,

BENARES CITY, U. P

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಶೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುತ್ತದೆ [69-11]

ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರೆಜಿಸ್ಟರ್ ಆಗಿದೆ ಈಗಿನ ಕಾಲದಲ್ಲಿ ಇದೇ ಸಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ !

ಕ್ರಯ ¼ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ 2-0-0

,, 1 ಡ್ರಾಂ ಕೊಳವೆ ,, ,, ,, 0-12-0.

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0-12-0

ಎಲ್ಲರಲ್ಲೂ ವಿಕರಿಗ ಇಟ್ಟಿದೆ.

ಮದರಾಸ್ ಆಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚತೂರಿಲಾಲ್ ಕಂಪನಿ,

[251-21] ೧೩೩, ಜೈನಾಬಜಾರ್ ರೋಡ್, ಮದ್ರಾಸ್

ಗ್ರಹಕೃತ್ಯದ ನೋಟೀಸು

ಚನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳಗುಳದ ಹೋಬಳಿ ಮೋಟನಹಳ್ಳಿ ಗ್ರಾಮದಲ್ಲಿರುವ ಗಿರಿಗೌಡನ ಸಂಜೀಗೌಡನು ಇದರಿಂದ ತಿಳಿಸುವದೇನಂದರೆ ಈ ಗ್ರಾಮದಲ್ಲಿ ಜನರೆಗೌಡನ ತಾಳೀಗೌಡನೆಂಬ ನನ್ನ ದೂರವಾಯಾದಿ ಇದ್ದನು ಅವನ ಆಸ್ತಿಗಳೆಲ್ಲಾ ಮೊದಲೇ ಕಳಕೊಳ್ಳಲ್ಪಟ್ಟು ಜೀವನಕ್ಕೆ ಮಾರ್ಗವಿಲ್ಲದೆ ನನ್ನೊಡನೆ ಕೆಲವು ಕಾಲದಿಂದ ಸೇರಿಕೊಂಡಿದ್ದು ಈಗ್ಗೆ ಎರಡು ತಿಂಗಳಲ್ಲಿ ಮೃತನಾದನು ಇವನ ಹೆಂಡತಿ ಪುಟ್ಟಬೋರಿ, ಎರಡು ವರುಷದ ಒಂದು ಹೆಣ್ಣುಮಗು ಸಹಾ ಇರುತ್ತಾರೆ ನನ್ನ ಪಿತ್ರಾರ್ಜಿತವಾಗಿ ಈ ಗ್ರಾಮದಲ್ಲಿ 10 ತಾಕಿನ ಜಮೀನುಗಳು, ಹೆಂಚಿನಮನೆ, ಪಾಳು ನಿವೇಶನ ಸಹಾ ಇರುತ್ತೆ ಇವುಗಳು ನನ್ನ ಸ್ವಾಧೀನಾನುಭವದಲ್ಲೇ ಇರುತ್ತವೆ ಕಂದಾಯ ಸಹಾ ನಾನೇ ಕೊಡುತ್ತಾ ಇದ್ದೇನೆ ಈ ಆಸ್ತಿಗಳನ್ನು ಕ್ರಯ ಭೋಗ್ಯಾಧಾರಗಳ ಮೂಲಕ ಅಪಹರಿಸಬೇಕೆಂದು ನನಗೆ ಆಗದ ದ್ವೇಷೀ ಜನರು ಸದರಿ ಪುಟ್ಟಬೋರಿಗೂ, ಇವಳ ಭಾವ ರಂಗನ ಹೆಂಡತಿ ಸಿಂಗಿಗೂ ಸಹಾ ದುರ್ಬೋಧೆಪಡಿಸುತ್ತಿರುತ್ತಾರೆ ಇದರಿಂದ ಮುಂದೆ ನನ್ನನ್ನು ಕಷ್ಟ ನಷ್ಟಗಳಿಗೆ ಗುರಿಪಡಿಸಬೇಕೆಂಬ ದುರಾಲೋಚನೆಯಲ್ಲಿದ್ದಾರೆ ಮೇಲ್ಕಂಡವರಿಂದ ನನ್ನ ಸ್ವಾಧೀನಾನುಭವದಲ್ಲಿರತಕ್ಕ ಚರಸ್ಥಿರ ಮೊದಲಾದ ಯಾವ ಸ್ವತ್ತುಗಳನ್ನೂ ಯಾರೂ ಯಾವ ವಿಧವಾಗಿಯೂ ಹೊಂದಬಾರದು ಹಾಗೆ ಹೊಂದಿದರೆ ಅದು ಊರ್ಜಿತವಾಗತಕ್ಕದಲ್ಲ ನನಗೆ ಉಂಟಾಗುವ ಎಲ್ಲಾ ವಿಧವಾದ ನಷ್ಟಗಳಿಗೂ ಗುರಿಯಾಗಿರಬೇಕಾಗುತ್ತಲ್ಲದೆ ಮೇಲ್ಕಂಡವರಿಂದ ಯಾರೇ ಆಗಲಿ ಯಾವವಿಧವಾದ ದಸ್ತಾವೇಜನ್ನು ಮಾಡಿಕೊಂಡಾಗ್ಯೂ ಸರ್ಕಾರದಲ್ಲಿ ಅಂಗೀಕಾರಾರ್ಹವಾಗುವದಿಲ್ಲವೆಂಬುವದನ್ನು ಈ ಮೂಲಕ ತಿಳಿಸಿರುತ್ತೆ. ಮತ್ತು ಪನ್ನ ಎಲ್ಲಾ ನಷ್ಟಗಳಿಗೂ ಗುರಿಯಾಗುತ್ತಾರೆ

[119-1] ಸಂಜೀಗೌಡನ ಗುರುತಿನ ರುಜು.

ಭಕ್ತವಿಜಯ

ಎರಡನೆಯ ಆವೃತ್ತಿ ಮುದ್ರಿತವಾಗುತ್ತಿದ್ದ ಈ ಗ್ರಂಥವು ಪೈಂಡಾಗಿ ಸಿದ್ಧವಾಗಿದೆ ಬೆಲೆ ಪೋಸ್ಟೇಜ್ ಸಹಿತ ರೂ 3-6-0 ಅಪೇಕ್ಷಕರು ದಯಯಿಟ್ಟು ಒಡನೆಯೆ ಬರೆದುಕೊಳ್ಳಬೇಕು ವಿಲಂಬಿಸಿದರೆ ಪ್ರತಿಗಳು ದೊರೆಯಲಾರವು

[110-3] ವಿಳಾಸ —ಭಕ್ತವಿಜಯ ಆಫೀಸ್, ಮೈಸೂರ್

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು........... ರೂ. 4,15,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ಶೇಷಗಿರಿರಾವ್ ಕೂ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್ ಸಂಜಪ್ಪನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194-35] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಆನಂದನಾಮಸಂವತ್ಸರದ ಕೈಗಡಿಯಾರ.



ಅರ್ಧ ಕ್ರಯ ರೂ. 1-14-0.

ಆನಂದನಾಮಸಂವತ್ಸರದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ ವಿಳಾಸ—ಜ ಆರ್ ರಾವ್, ನಂ 55, ಆಫೀಸು ವೆಂಕಟಾಚಲಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ಹಾರಮೋನಿಯಂ ಕಲಿಯುವ ಪುಸ್ತಕ

ಕ್ರಯ 0-8-0.

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 10 ಪಾರಸೀಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಪ್ಯಗುರ್ತು ಮೊದಲಾದವುಗಳು ವಿರಳವಾಗಿ ತಿಳಿಪಿಸಲ್ಪಟ್ಟಿರುತ್ತೆ ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ, ಹಾಡುವದನ್ನೂ ಕಲಿಯಬಹುದು

ವಿಳಾಸ—ಜಿ ಆರ್ ರಾವ್, ನಂ 55 ಆಫೀಸು

[120-1] ವೆಂಕಟಾಚಲ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-17

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಹಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಹಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ ,

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಹಾರದ ಟೋಪಿಗಳು ೧ ರೂ. ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ.

"In addition to cap making we are giving special attention to knitting stockings All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply —

MANAGER, CAP WORKS,

GIRLS' INDUSTRIAL SCHOOL, HASSAN.

ದ್ರವ್ಯನಾಶ

ನಮ್ಮ ಇಂಡಿಯಾದೇಶದಲ್ಲಿ ಸರ್ವರೂ ತಮ್ಮ ತಮ್ಮ ಸಂಸಾರದೊಡನೆ ಸುಖವಾಗಿ ಜೀವಿಸಬೇಕೆಂದು ಅಪೇಕ್ಷಿಸುವದು ಸ್ವಾಭಾವಿಕವಾಗಿದೆ. ಸರಿಯಾದ ರೀತಿಯಲ್ಲಿ ನಡೆದುಕೊಂಡರೆ ಈ ಇಷ್ಟಾರ್ಥವನ್ನು ಹೊಂದಬಹುದು. ಆದರೆ ಈ ದೇಶದಲ್ಲಿ ಜನಗಳು ಹಾಗೆ ಮಾಡುವದಿಲ್ಲ. ಅನೇಕರು ವ್ಯಸನವೆಂಬ ಸಾಗರದಲ್ಲಿ ಮುಳುಗಿ ಮರಣಾವಧಿ ಕಷ್ಟ ಪರಂಪರೆಯನ್ನು ತಾವೇ ಅನುಭವಿಸುವದಲ್ಲದೆ ತಮ್ಮ ಮಕ್ಕಳನ್ನು ಸಹ ಕಷ್ಟ ಜೀವನಕ್ಕೆ ಗುರಿಮಾಡುತ್ತಾರೆ. ಇದಕ್ಕೆ ಅನೇಕ ಕಾರಣಗಳುಂಟು. ಆದರೆ ಸರ್ವ ಸಾಧಾರಣವಾಗಿರುವ ಸಾಲಮಾಡುವ ಪದ್ಧತಿಯು ಇವುಗಳಲ್ಲಿ ಮುಖ್ಯವಾದದ್ದು.

ಸಾಲಕ್ಕೆ ಕಾರಣಗಳು:—ನಮ್ಮ ಇಂಡಿಯಾ ದೇಶದಲ್ಲಿ ಜನಗಳು ಆದಾಯದ ಎರಡರಷ್ಟು ಖರ್ಚುಮಾಡುವದು, ಇತರರಿಗೆ ಹೊಣೆಯಾಗುವದು, ಆಲಸ್ಯ, ಹಾದರ, ಜೂಜು, ಮದ್ಯಪಾನ, ದುರ್ವ್ಯಾಪಾರ, ಇವೇ ಮೊದಲಾದವುಗಳಿಂದ ಸಾಲಗಾರರಾಗುತ್ತಾರೆ. ಆದರೆ ನಮ್ಮ ಹಿಂದುಗಳಲ್ಲಿ ಮುಖ್ಯವಾಗಿ ಎರಡು ಅವಿವೇಕಗಳಿಂದ ಬಹಳ ಮಟ್ಟಿಗೆ ಸಾಲಗಾರರಾಗುತ್ತಾರೆ. ಅವು ಯಾವವೆಂದರೆ—

(1) ಕೆಲವು ಜನಗಳು ವರ್ಷಾಂತರ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ವಿವಾಹ ಕಾಲದಲ್ಲಿ ಮುಳುಗಿ ಬೀಳುವಂತೆ ನಿರ್ಲಕ್ಷ್ಯವಾಗಿ ಖರ್ಚುಮಾಡುತ್ತಾರೆ. ಮತ್ತೆ ಕೆಲವರು ರೂಪಾಯಿಗೆ 6 ಕಾಸಿನಂತೆ ಅಥವಾ ಶೇಕಡ ವರ್ಷಕ್ಕೆ 36 ರೂಪಾಯಿ ಬಡ್ಡಿಯಂತೆ ಸಾಲಮಾಡಿ ವಿವಾಹ ಮಾಡುತ್ತಾರೆ. ವಿವಾಹದಿಂದ ಈ ರೀತಿಯಲ್ಲಿ ಉಂಟಾಗುವ ಕೇಡುಗಳನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಕೆಲವು ಕೆನಾ ರತ್ನಗಳು ಬಂಗಾಳಾ ಆದಿಪತ್ರದಲ್ಲಿ ಆತ್ಮಹತ್ಯ ಮಾಡಿಕೊಂಡಿರುವದು ವಾಚಕರಿಗೆ ಗೊತ್ತಾದ ಸಂಗತಿಯಾಗಿರುತ್ತದೆ. (2) ನಮ್ಮ ಭರತಖಂಡವು ದಾರಿದ್ರ್ಯವನ್ನು ಅನುಭವಿಸುತ್ತಲಿದೆ ಎಂದು ಬುದ್ಧಿವಂತರು ಹೇಳುತ್ತಾರೆ. ಆದರೆ ಪ್ರಪಂಚದಲ್ಲಿ ಉತ್ಪನ್ನವಾಗುವ ಒಟ್ಟು ಭಂಗಾರದಲ್ಲಿ ನಾಲ್ಕರಲ್ಲೊಂದು ಭಾಗವೂ, ಒಟ್ಟು ಬೆಳ್ಳಿಯಲ್ಲಿ ಮೂರರಲ್ಲೊಂದು ಭಾಗವೂ ನಮ್ಮ ಇಂಡಿಯಾ ದೇಶಕ್ಕೆ ಬರುತ್ತದೆ. ನಮ್ಮ ಇಂಡಿಯಾ ದೇಶದಲ್ಲಿ ಬೆಳ್ಳಿಯ ನಾಣ್ಯಗಳು ಚಲಾವಣೆಯಲ್ಲಿರುವದರಿಂದ [illegible] ಬೆಳ್ಳಿಯಲ್ಲಿ ಮುಕ್ಕಾಲು ಪಾಲನ್ನು ತೆಗೆದುಕೊಳ್ಳುವದು ಸಾಧಾರಣವಾಗಿ ನಮ್ಮ ಇಂಡಿಯಾ ದೇಶದಲ್ಲಿ ನಾಲ್ಕು [illegible] ಜನ ಅಕ್ಕಸಾಲಿಗರಿರಬಹುದೆಂದು ಊಹಿಸೋಣ. ಚಿನ್ನವನ್ನೂ ಬೆಳ್ಳಿಯನ್ನೂ ಆಭರಣವಾಗಿ ಮಾಡಿ ಅನುಪಯುಕ್ತಮಾಡುವದೇ ಇವರ ಕಸಬು. ಪ್ರತಿ ಒಬ್ಬ ಅಕ್ಕಸಾಲಿಗನೂ ಕನಿಷ್ಠಪಕ್ಷ ತಿಂಗಳು ಒಂದಕ್ಕೆ [illegible] ಸಂಪಾದಿಸುತ್ತಾನೆಂದು ಊಹಿಸೋಣ. ಹೀಗೆ ಸಂಪಾದಿಸುವ ಹಣವು ಈ ಜನಗಳ ವ್ಯಸನಗಳಿಗಾಗಿ ವರ್ಷಕ್ಕೆ [illegible] ಕೋಟಿ ರೂಪಾಯಿ ಖರ್ಚಾದಹಾಗೆ ಆಗುತ್ತೆ.

ಆಭರಣಗಳು ನಮ್ಮ ಹಣವನ್ನು ಯಾವ ರೀತಿಯಲ್ಲಿಯೂ ವೃದ್ಧಿ ಪಡಿಸುವದಿಲ್ಲ. ಅವು ದಿನಕ್ರಮೇಣ ಸವೆದುಹೋಗುವವಲ್ಲದೆ ಇತರರಿಂದ ಅಪಹರಿಸಲ್ಪಡಬಹುದು. ಅನೇಕ ಗಂಡಸರೂ ಹೆಂಗಸರೂ ಮಕ್ಕಳೂ ಒಡವೆಗಾಗಿ ಕೊಲ್ಲಲ್ಪಟ್ಟಿರುವದನ್ನು ವಾಚಕರು ನೋಡಿಯೂ ಕೇಳಿಯೂ ಇರಬಹುದು.

ನಮ್ಮ ಇಂಡಿಯಾ ದೇಶದಲ್ಲಿ ಕೇವಲ [illegible] ಕೋಟಿ ರೂಪಾಯಿ ನಷ್ಟವಾಗುವದಾಗಿ ಹೇಳುತ್ತಾರೆ. [illegible] 12 ರೂಪಾಯಿನಂತೆ 200 ಕೋಟಿ ರೂಪಾಯಿಗೂ 24 ಕೋಟಿ ರೂಪಾಯಿ; ಆದರೆ ನಮ್ಮ [illegible] ಒಟ್ಟು [illegible] ಪ್ರತಿ [illegible] ವೃದ್ಧಿ [illegible] ಅಭರಣ [illegible] ವೃದ್ಧಿಯಾಗಿ ಮಾಡಿ ಆ ಹಣವನ್ನು ದೇಶದ ಏಳಿಗೆಗೆ ಅಂಗಗಳಾಗಿರುವ ವಿದ್ಯಾಭ್ಯಾಸಕ್ಕೂ ಕೈಗಾರಿಕೆಗಳ ವ್ಯವಸಾಯಕ್ಕೂ ಉಪಯೋಗಿಸಿದ ಪಕ್ಷದಲ್ಲಿ ನಮ್ಮ ಇಂಡಿಯಾ ದೇಶವು ಎಷ್ಟು ಮಟ್ಟಿಗೆ ಅಭಿವೃದ್ಧಿಗೆ ಬರುವದೋ ಅದನ್ನು ವರ್ಣಿಸಲರಿದು.

ಬಿ. ಎಸ್. ಲಿಂಗಪ್ಪ, ಮೈಸೂರು.

ನಿನಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—ನಿನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತಿದೆಯೋ [illegible] ಎಂದು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ಸ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರನ್ನೋ ರಾತ್ರಿ ಮಲಗುವಾಗ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಲಭವಾಗಿ ಶೌಚಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲವು ಹೊರಗೆ ಬಾರದೆ ಒಳ್ಳೆಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುವನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಮೂಳೆತೀಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ಸ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿ ರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ಕಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181-37]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು, ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಹೊಸ ಬಂಗಾಳಿ ನಾವಿಲ್ಸ್—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಸ್ತ್ರೀ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಅಹಲ್ಯಾಬಾಯಿ 9 ಆ. ಇತ್ಯಾದಿ. ಚಿತ್ರವಿಚಿತ್ರಾವಳಿ 2ನೆ ಭಾಗ ಮತ್ತು ಮಾಯಾವಿ ಪ್ರಿಂಟಾಗುತ್ತಿವೆ. ನ್ಯಾಯದರ್ಪಣ 1½ ರೂಪಾಯಿ.

[53-14] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಅಮೃತಾಂಜನ ರಿಜಿಸ್ಟರ್ಡ್

ಕಳೆದ ಭಾನುವಾರ ಸಾಯಂಕಾಲ ಶ್ರೀಮನ್ ಮಹಾರಾಜರವರೂ ಅರಮನೆಯ ರಾಣಿವಾಸದವರೂ ಸೀಲಗಿರಿಯಿಂದ ಮೋಟರುಗಳಲ್ಲಿ ರಾಜಧಾನಿಗೆ ದಯಮಾಡಿದರು

ಸಂಸ್ಥಾನದಲ್ಲಿ ಮಳೆ ಆದ ವರ್ತಮಾನವೇ ಇಲ್ಲದೆ ಬಿಸಿಲ ಬೇಗೆ ಹೆಚ್ಚುತ್ತಿರುವುದು ಪ್ರಜೆಗಳಲ್ಲಿ ಚಿಂತೆಯನ್ನುಂಟುಮಾಡಿದೆ ಪ್ರಜೆಗಳೂ ಗೋಕಾಯಿಗಳೂ ಅನೇಕಾನೇಕ ಸ್ಥಳಗಳಲ್ಲಿ ನೀರಿಗಾಗಿ ಬಹಳ ಶ್ರಮಪಡುತ್ತಿರುವುದನ್ನು ತಿಳಿಸು ವ್ಯಥೆಪಡುತ್ತೇವೆ

ಕಳೆದ ವಾರವೂ ಎರಡು ಮೂರು ದಿನ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳು ಸ್ವಲ್ಪ ಸ್ವಲ್ಪ ಹೊತ್ತು ನಿಂತುಹೋಗಿದ್ದವು ಇದರಿಂದ ಪಟ್ಟಣದಲ್ಲಿ ಸಂಚರಿಸುವವರಿಗೂ, ಮನೆಗಳಲ್ಲಿ ಈ ದೀಪಗಳನ್ನು ಇಡಿಸಿಕೊಂಡಿರುವವರಿಗೂ ಅನನುಕೂಲವಾಯಿತು

ಕುರುಬರ ಸಂಘದವರು ಬೆಂಗಳೂರು ಒಕ್ಕಲಿಗರ ಪತ್ರಿಕೆಯ ಮೇಲೆ ಹಾಕಿರುವ ಮಾನನಷ್ಟದ ಮೊಕದ್ದಮೆಯನ್ನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಕಳೆದ ವಾರ ವಿಚಾರಿಸ್ತಿಮಾಡಿ, ನಾಳೆ ೮ನೇ ತಾ ಸೋಮವಾರ ತೀರ್ಮಾನ ಹೇಳುವುದಾಗಿ ತಿಳಿಸಿದಾರೆ

ಮೈಸೂರು ಸಂಪದಭಿವೃದ್ಧಿ ಸಮಾಜದ ಸೆಕ್ರೆಟರಿಗಳು ರಿಪೋರ್ಟನ್ನೂ, ಈ ವಾರ ರಾಜಧಾನಿಯಲ್ಲಿ ನಡೆಯತಕ್ಕ ಸಭೆಯ ವಿಷಯಗಳನ್ನೂ ಅಚ್ಚುಹಾಕಿಸಿ ಒಂದೊಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟು ಇರುತ್ತಾರೆ. ಈ ವಿಚಾರಗಳನ್ನು ಮುಂದೆ ಪ್ರಕಟಮಾಡುವೆವು

ಒಬ್ಬ ಬಾತ್ಮೀದಾರರಿಂದ.—ಅರಕಲಗೂಡಿನಲ್ಲಿರುವ ಮ|| ಸಾಹುಕಾರ್ ಸೂರ್ಯನಾರಾಯಣ ಶೆಟ್ಟರು ಕಳೆದ ತಿಂಗಳು ತಾ 27 ನೇ ಬುಧವಾರ ತಮ್ಮ ಕುಮಾರರಿಗೆ ಉಪನಯನವನ್ನು ಮಾಡಿದರು. ಅದೇ ದಿನ ಸ್ವಜನದ ಐದು ಮಂದಿ ವಿದ್ಯಾರ್ಥಿಗಳಿಗೂ ಉಪನಯನವನ್ನು ಉದಾರ ಮನಸ್ಸಿನಿಂದ ನಡಿಸಿದರೆಂದು ತಿಳಿಸಲು ಸಂತೋಷಪಡುತ್ತೇವೆ.

ಕಳೆದ ಶುಕ್ರವಾರ ರಾಜಧಾನಿಯಲ್ಲಿ ಸಾ|| ವರ್ಧಮಾನಯ್ಯನವರ ವಿದ್ಯಾರ್ಥಿನಿಲಯದಲ್ಲಿ ಬಾಲಕರು ಸ್ವತಜಂಬವಿಯ ನಿಮಿತ್ತವಾದ ಪೂಜಾದಿಗಳನ್ನು ನಡಿಸಿದರು ಸ್ವಾಮಿಗಳು ಈ ಹಬ್ಬದ ಪೂರ್ವೋತ್ತರವನ್ನು ಕುರಿತು ಸ್ವಚ್ಛವೂ ಲಲಿತವೂ ಆದ ಕನ್ನಡ ಸರಣಿಯಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು ಮ|| ರಾಜಗೋಪಾಲಾಚಾರ್ಯರ ಮನೋಹರವಾದ ಹಾಡುಗಾರಿಕೆಯುನಡೆದು ಗಂಧ ಪುಷ್ಪಾದಿಗಳು ಹಂಚಲ್ಪಟ್ಟು ಉತ್ಸವವು ಮುಕ್ತಾಯ ಮಾಡಲ್ಪಟ್ಟಿತು

ಹುಣಸೂರು ಬಾತ್ಮೀದಾರರಿಂದ.—ಕಳೆದ ವಾರ ಹುಣಸೂರು ವ್ಯಾಥಿಸರ್ಸ್ ಕಾರ್ಖಾನೆಯ ಯೂರೋಪಿಯನ್ ಯಜಮಾನರಾದ ಮಿ|| ಜಾರ್ಜ್ ಎ ಬ್ರೀಡಿ ಎಂಬವರು ಹುಣಸೂರಿಗೂ ಕಳ್ಳಬೆಟ್ಟಕ್ಕೂ ಮಧ್ಯದಲ್ಲಿ ಒಂದು ಭಾರೀ ಕಿರುಬನನ್ನು ಬಂದೂಕಿನಿಂದ ಹೊಡೆದರು ಈ ಕಿರುಬನು ಜನಗಳಿಗೂ, ಜಾನುವಾರುಗಳಿಗೂ ತುಂಬಾ ತೊಂದರೆ ಕೊಡುತ್ತಾ ಇತ್ತು ಇದರ ಹಾವಳಿಯನ್ನು ತಪ್ಪಿಸಿದ್ದರಿಂದ ಸರ್ವರಿಗೂ ತುಂಬಾ ಸಂತೋಷವಾಗಿದೆ ಇವರ ಸಾಹಸವು ಶ್ಲಾಘ್ಯವಾದದ್ದೇ ಸರಿ

1911 ನೇ ಜನವರಿಯಲ್ಲಿ ಕೂಡಿಸಿದ ಸೆನ್ಸಸ್ ಗಣತಿಯ ಪ್ರಕಾರ ಸಕಲೇಶಪುರದ ಟೌನ್ನಲ್ಲಿ ಪ್ರಜಾಸಂಖ್ಯೆ 801 ಎಂದು ಗೊತ್ತಾಯಿತು. ಹತ್ತು ವರುಷದ ಹಿಂದೆ ನಡೆದ ಸೆನ್ಸಸ್ ಪ್ರಕಾರ ಅಲ್ಲಿ 2,140 ಪ್ರಜೆಗಳಿದ್ದರೆಂದು ಲೆಕ್ಕವಿದೆ ಸುಮಾರು 1,300 ಪ್ರಜೆಗಳು ಕಡಮೆಯಾದದ್ದನ್ನು ತಿಳಿದು ಹಾಸನದ ಡೆಪ್ಯುಟಿ ಕಮಿಷನರ್ ರವರು ಸರ್ಕಾರದ ಅಪ್ಪಣೆಯನ್ನು ಪಡೆದು 1914ನೇ ಏಪ್ರೆಲ್ ತಾ 11ರಲ್ಲಿ ಸೆನ್ಸಸ್ ಗಣತಿ ಮಾಡಿಸಿದಾಗ ಸಕಲೇಶಪುರದ ಪ್ರಜಾಸಂಖ್ಯೆ 2,052 ಎಂದು ಗೊತ್ತಾಯಿತು ಸರ್ಕಾರದವರು ಅದನ್ನು ಒಪ್ಪಿ ಈ ಲೆಕ್ಕವನ್ನು ರಿಕಾರ್ಡಿನಲ್ಲಿಟ್ಟು ಕಾಪಾಡಬೇಕೆಂದು ಹುಕುಂ ಕೊಟ್ಟಿರುತ್ತಾರಲ್ಲದೆ ಹಾಗೆ ಪ್ರಜಾಸಂಖ್ಯೆಯನ್ನು 800 ಎಂದು ಗೊತ್ತುಮಾಡಿದ್ದು ಹ್ಯಾಗೋ, 1,300 ಪ್ರಜೆಗಳು ಗಣತಿಯಲ್ಲಿ ಯಾಕೆ ಬಿಟ್ಟುಹೋದರೋ ಇದರ ಪೂರ್ವೋತ್ತರವನ್ನು ಪ್ರಕಟಮಾಡಲಿಲ್ಲ

ಈ ತಿಂಗಳು ತಾ 10 11 ರಲ್ಲಿ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ನ್ಯಾಯಸ್ಥಾನಗಳ ಸಂಬಂಧವಾದ ವಿಚಾರಗಳನ್ನು ಕುರಿತು ಚರ್ಚೆಮಾಡುವದಕ್ಕಾಗಿ ಒಂದು ಮಹಾ ಸಭೆ ಜರುಗುತ್ತದೆ ಈ ಸಭೆಗೆ ಮ|| ಎಚ್ ವಿ ನಂಜುಂಡಯ್ಯನವರು ಪ್ರೆಸಿಡೆಂಟರಾಗಲು ಒಪ್ಪಿಕೊಂಡಿರುವರು ಜಡ್ಜಿಗಳೂ, ಮ್ಯಾಜಿಸ್ಟ್ರೇಟರುಗಳೂ, ಸಕ್ರೆಟರಿಗಳೂ, ಡೆಪ್ಯುಟಿ ಕಮಿಷನರುಗಳೂ, ನ್ಯಾಯವಿಧಾಯಕ ಸಭೆಯ ಪ್ರಜಾಪಕ್ಷದ ಮೆಂಬರುಗಳು, ಕೆಲವು ಪೆನ್ಷನ್ ಆಫೀಸರುಗಳೂ, ರಾಜಧಾನಿಯಲ್ಲಿರುವ ಕೆಲವು ದೊಡ್ಡ ಮನುಷ್ಯರೂ, ಅಡ್ವೋಕೇಟರೂ ಸೇರಿ ಸುಮಾರು 75 ಮಂದಿ ಈ ಸಭೆಯ ಮೆಂಬರುಗಳಾಗಿ ನಿಂತು ತಮ್ಮ ಅಭಿಮತವನ್ನು ತಿಳಿಸುವವರಾಗಿದಾರೆ ಈ ಸಭೆಯಲ್ಲಿ ಚರ್ಚೆಯಾಗುವ ವಿಷಯಗಳ್ಯಾವವೆಂದರೆ—(1) ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಎಂಥವರನ್ನು ಜಡ್ಜಿಗಳಾಗಿ ಸೇರಿಸಿಕೊಳ್ಳಬೇಕು? (2) ರೆವಿನ್ಯೂ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸುವದು (3) ಸಮ್ಮರಿ ದರ್ಯಾಪ್ತಿಗಳು (4) ವಕೀಲರೂ ಮೊಖ್ತ್ಯಾರರೂ (5) ಕೋರ್ಟುಗಳಲ್ಲಿ ಮೊಕದ್ದಮೆಗಳೂ, ಜಾರಿ ಅಮಲುಗಳೂ ಬೇಗನೆ ವಿಲೇವಾರಿಯಾಗುವದಕ್ಕೆ ಮಾಡಬೇಕಾದ ಕಾರ್ಯಗಳು (6) ಹೊಸ ಕಾನೂನುಗಳು (7) ಸಿವಿಲ್, ಕ್ರಿಮಿನಲ್ ಕೋರ್ಟುಗಳ ಆಚರಣೆಗಳು (8) ಸರ್ಕಾರಿ ಲಾ ಆಫೀಸರುಗಳು (9) ಈ ಸಭೆಯ ರಚನೆ (10) ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ಚಟುವಟಿಕೆಯನ್ನು ಹೆಚ್ಚಿಸುವ ಇತರ ವಿಚಾರಗಳು.

ರೇಷ್ಮೆ ವ್ಯವಸಾಯ ಶಾಸ್ತ್ರಜ್ಞರಾದ ಸೇನಾರ್ ಮರಿ ಎಂಬುವರು ಹೇಳಿದ ಪ್ರಕಾರ ಚನ್ನಪಟ್ಟಣ ತಾಲ್ಲೂಕು ಹೊಂಡರಗುಪ್ಪೆ ದಾಸಶೆಟ್ಟಿಯೂ ಆತನ ಹೆಂಡತಿಯೂ ರೇಷ್ಮೆ ವ್ಯವಸಾಯವನ್ನು ನಡಿಸಿದ್ದರಲ್ಲಿ ಕಂಡುಬಂದ ಅನುಭವಗಳು — ನಾವು ೧೯೧೪ನೇ ಇಸವಿ ಜನವರಿ ತಿಂಗಳ ಕೊನೆಯಲ್ಲಿ ಬೀಜದ ಹುಳಗಳನ್ನು ತೆಗೆದುಕೊಂಡು ವ್ಯವಸಾಯವನ್ನು ಆರಂಭಿಸಿದೆವು ಶಾಸ್ತ್ರಜ್ಞರು ಹೇಳಿದ ರೀತಿ ಎರಡು ದಿನಕ್ಕೊಂದಾವರ್ತಿ ಎರಡನೇ ಪರೆ ಬಿಡುವುದಕ್ಕೆ ಮುಂಚೆ ಹಾಸಿಗೆಯನ್ನು ಬದಲಾಯಿಸಿದೆವು, ಮತ್ತು ಈ ಕಾಲದಲ್ಲಿ ಆರು ಸಲ ಮೇವು ಹಾಕಿದೆವು ತಟ್ಟೆಗಳಲ್ಲಿ ಹುಳಗಳನ್ನು ಒಟ್ಟಿಗೆ ಇಡಲಿಲ್ಲ ಚೆನ್ನಾಗಿ ಗಾಳಿ ಆಡುವ ಹಾಗೆ ಕಿಟಕಿ ಬಾಗಿಲುಗಳನ್ನು ತೆರೆದಿದ್ದೆವು ಪರೆ ಬಿಡುವ ಸಮಯದಲ್ಲಿ ಮೇವು ಹಾಕಲಿಲ್ಲ ಪರೆ ಬಿಟ್ಟ ಹುಳಗಳನ್ನು ಇತರ ಹುಳಗಳಿಂದ ಪ್ರತ್ಯೇಕ ಮಾಡಿ ಬೇರೆ ತಟ್ಟೆಗಳಲ್ಲಿ ಇಟ್ಟಿದ್ದೆವು ಎರಡನೇ ಸಲ ಪರೆ ಬಿಟ್ಟನಂತರ ಪ್ರತಿ ದಿನವೂ ಹಾಸಿಗೆಯನ್ನು ಬದಲಾಯಿಸಿದೆವು, ಮತ್ತು ಮೇವನ್ನು ೭ ಸಲ ಹಾಕಿದೆವು ಶಾಸ್ತ್ರಜ್ಞರು ಹೇಳಿದ ರೀತಿ ಪೂರ್ಣವಾಗಿ ಬೆಳೆದ ಮರಗಳ ಒಣಗಿದ ಕಡ್ಡಿಗಳ ಮೇಲೆ ಗೂಡು ಕಟ್ಟುವುದಕ್ಕೆ ಬಿಟ್ಟೆವು ಈ ರೀತಿ ಮಾಡಿದ್ದರಲ್ಲಿ ಚಂದ್ರಿಕೆಗಳಿಗೆ ಕೊಡಬೇಕಾಗಿದ್ದ ಬಾಡಿಗೆ ಹಣವು ಮಿಕ್ಕಿತಲ್ಲದೆ ಗೂಡುಗಳು ಗಟ್ಟಿಯಾಗಿಯೂ ಚೆನ್ನಾಗಿಯೂ ಆದವು ಈ ಫಸಲನ್ನು ನೋಡಲು ಅನೇಕರು ಬಂದಿದ್ದರು ಇವರಲ್ಲಿ ೩೬೦ ಗೂಡುಗಳನ್ನು ಶಾಸ್ತ್ರಜ್ಞರಿಗೆ ಕೊಟ್ಟೆವಲ್ಲದೆ ೩,೨೫೦ ಗೂಡುಗಳನ್ನು ಮಾರಿ ಒಳ್ಳೇ ಲಾಭವನ್ನು ಸಂಪಾದಿಸಿದೆವು

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಡಿಸ್ಟ್ರಿಕ್ಟ್ ಟ್ರೆಜರಿ ಅ|| ಕಮಿಷನರ್ ಮ|| ಎ ಮೃತ್ಯುಂಜಯ ಅಯ್ಯರವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ

ರೆವಿನ್ಯೂ ಸರ್ವೆ ಇಲಾಖಾ ಸಬ್ ಅ|| ಸೂಪರಿಂಟೆಂಡೆಂಟ್ ಮ|| ವೈ ನಂಜುಂಡಯ್ಯನವರಿಗೆ ಮೇ ತಾ 7 ರಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮ|| ವಿ ಎಸ್ ರಾಜಗೋಪಾಲಾಚಾರ್ಯರಿಗೆ ಜೂನ್ ತಾ 1 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮಿ|| ಮಹಮ್ಮದ್ ಜಹಿರುದ್ದೀನ್ ಮಕ್ಕೆ ಯವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಅ|| ಸರ್ಜನ್ ಮ, ಕೆ. ಆರ್ ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ಮೇ ತಾ 25 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮುಂದೆ ಹೇಳುವವರು ಡೆಪ್ಯುಟಿ ಅಮಲ್ದಾರರಾಗಿ ಖಾಯಂ ಮಾಡಲ್ಪಟ್ಟಿದಾರೆ:—ಮ|| ಗಳಾದ ಹೊಳೇನರಸಿಪುರದ ಅಮಲ್ದಾರಿ ನೋಡುವ ಜಿ ವೆಂಕಟರಾಯರು; ತರೀಕೆರೆ ಅಮಲ್ದಾರಿ ನೋಡುವ ಸಿ ಲಕ್ಷ್ಮಣರಾಯರು; ಚನ್ನರಾಯಪಟ್ಟಣದ ಅಮಲ್ದಾರಿ ನೋಡುವ ಎಸ್ ಸುಂದರರಾಜಯ್ಯಂಗಾರ್ರು.

ಅ|| ಸರ್ಜನ್ ಮ|| ಎನ್ ಎಸ್ ನಂಜುಂಡಯ್ಯನವರನ್ನು ಹಂಗಾಮಿಯಾಗಿ ಹೊಳೇನರಸಿಪುರದಲ್ಲಿ ಡೈಲೆಟ್ ಆಸ್ಪತ್ರೆಯ ಛಾರ್ಜಿಗೆ ವರ್ಗಮಾಡಿದೆ

ಸರ್ಜನ್ ಮ|| ಇ ಎಸ್. ಕೃಷ್ಣಸ್ವಾಮಿ ಅಯ್ಯರವರು ಸ್ಪೆಷಲ್ ಡ್ಯೂಟಿ ಕಾರ್ಯಗಳು ಪೂರೈಸಿದ ತರುವಾಯ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಛಾರ್ಜಿನ ವೈದ್ಯರಾಗಿ ವರ್ಗಮಾಡಲ್ಪಟ್ಟಿದಾರೆ

ಅ|| ಕಮಿಷನರುಗಳಾದ ಮಿ|| ಎಸ್. ಅಬ್ದುಲ್ ವಜಿದ್ ಯವರನ್ನೂ, ಮ|| ಎಚ್ ವಿ. ರಾಮಸ್ವಾಮಿಯವರನ್ನೂ ಇದೇ ಜನವರಿ ತಾ 5 ರಿಂದ 4 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಯಡತೊರೆ ತಾಲ್ಲೂಕ್ ಅಮಲ್ದಾರ್ ಮ|| ಜಿ ನಾರಾಯಣರಾಯರಿಗೆ ಮೇ ತಾ 18 ರಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮ|| ಎಸ್. ಶ್ರೀನಿವಾಸಮೂರ್ತಿಯವರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಸಾಗರದ ತಾಲ್ಲೂಕ್ ಅಮಲ್ದಾರ್ ಮ|| ಬಿ ಟಿ ಸೀತಾರಾಮಯ್ಯನವರಿಗೆ ಮೇ ತಾ 12 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಮ|| ಕೆ. ಸುಬ್ಬರಾವ್ ನಾಯಕರವರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ಹುಣಸೂರು ತಾಲ್ಲೂಕ್ ಅಮಲ್ದಾರ್ ಮ|| ಆರ್. ಎ ನರಸಿಂಹ ಅಯ್ಯಂಗಾರ್ರಿಗೆ ಮೇ ತಾ 16 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ|| ಕೆ ಎನ್. ವೆಂಕಟಕೃಷ್ಣಯ್ಯನವರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ನಂಜನಗೂಡು ತಾಲ್ಲೂಕ್ ಅಮಲ್ದಾರ್ ಮ|| ಬಿ ಭೀಮರಾಯರಿಗೆ ಮೇ ತಾ, 16 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮಿ|| ಡಾರ್ನರವರು ನಂಜನಗೂಡು ತಾಲ್ಲೂಕ್ ಅಮಲ್ದಾರರಾಗಿರತಕ್ಕದ್ದು.

ದೊಡ್ಡ ಜಹಜು ಮುಳುಗಿಹೋಯಿತು.

1,000 ಜನರ ತನಕ ಅಕಾಲ ಮರಣ ಹೊಂದಿದರು.

ಉತ್ತರ ಅಮೇರಿಕದ ಉತ್ತರ ವಿಭಾಗವಾದ ಕ್ಯಾನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯದಿಂದ ಇಂಗ್ಲೆಂಡಿಗೆ ಸೇರಿದ ಲಿವರ್‌ಪೂಲ್ ಎಂಬ ಪಟ್ಟಣಕ್ಕೆ ಹೋಗಬೇಕೆಂದು ಕಳೆದ ತಾ. 27 ನೇ ಬುಧವಾರ ಹೊರಟು ಅಟ್ಲಾಂಟಿಕ್ ಮಹಾಸಾಗರದ ಮೇಲೆ ಪ್ರಯಾಣ ಮಾಡುತ್ತಿದ್ದ "ಎಂಪ್ರೆಸ್ ಆಫ್ ಐರ್ಲೆಂಡ್" ಎಂಬ ಇಂಗ್ಲಿಷ್ ಜಹಜು ಒಂದು ದಿನ ಪ್ರಯಾಣ ಮಾಡುವಷ್ಟರೊಳಗೇ ಅದಕ್ಕೆ ಅಂತ್ಯಕಾಲ ಪ್ರಾಪ್ತವಾಯಿತು, ಬೆಳಗಿನ ಝಾಮದಲ್ಲಿ ಸಾಗರದ ಮೇಲೆ ವಿಶೇಷ ಮಂಜು ಬೀಳುತ್ತಿದ್ದದ್ದರಿಂದ ಆ ಜಹಜು ದಾರಿಯಲ್ಲೇ ಸ್ವಲ್ಪ ನಿಂತಿತ್ತು ಆ ಕಸ್ತಲಲ್ಲಿ ಇನ್ನೊಂದು ಜಹಜು ಎದುರುಗಡೆಯಿಂದ ಹೋಗಿ, ನಿಂತಿದ್ದ ಜಹಜಿಗೆ ಬಹಳ ಬಲವಾಗಿ ಢಿಕ್ಕಿ ಹೊಡೆಯಿತು ಇದರಿಂದ ಆ ಭಾರೀ ಜಹಜಿನ ಹೊರಪಾರ್ಶ್ವದ ಕಬ್ಬಿಣದ ಹೊದ್ದಿಕೆಯು ಪೂರಾ ಸೀಳಿ, ಜಹಜಿನ ಇಂಜನ್ನು ಮಹಾ ಶಬ್ದದೊಡನೆ ಒಡೆದು, ಹತ್ತು ನಿಮಿಷಗಳೊಳಗಾಗಿ ಸಾಗರದೊಳಕ್ಕೆ ಸೆಳೆಯಲ್ಪಟ್ಟು ಅನಾಮತ್ತು ಮುಳುಗಿಕೊಂಡಿತು ಆ ಸ್ಥಳದಲ್ಲಿ 114 ಅಡಿ ನೀರು ಇದ್ದಿತೆಂದು ತಿಳಿಯುತ್ತದೆ.

ಅದು ಮುಳುಗಿದಾಗ್ಗೆ ಆ ಭಾರೀ ಜಹಜಿನಲ್ಲಿ 1,200 ಜನರು ಇದ್ದರೆಂದು ಒಂದು ವರ್ತಮಾನ; 1,360 ಜನರಿದ್ದರೆಂದು ಇನ್ನು ಕೆಲವರು ಹೇಳುವರು, ಇನ್ನೊಂದು ವರ್ತಮಾನದ ಪ್ರಕಾರ ಅದರಲ್ಲಿ 78 ಜನ ಒಂದನೇ ಕ್ಲಾಸ್ ಪ್ರಯಾಣಿಕರೂ, 210 ಮಂದಿ 2 ನೇ ಕ್ಲಾಸಿನವರೂ, 190 ಜನ 3 ನೇ ಕ್ಲಾಸಿನಲ್ಲೂ, ಜಹಜಿನ ಸೇವಕಾಳಿಗಳು 413 ಮಂದಿಯೂ ಇದ್ದರೆಂದು ತಿಳಿಯುತ್ತದೆ ಈ ಪೈಕಿ ಸುಮಾರು 931 ಜನರು ಸಮುದ್ರದಲ್ಲಿ ಮುಳುಗಿ ಅಕಾಲಮರಣ ಹೊಂದಿದರೆಂದು ಮೊದಲು ವರ್ತಮಾನ ಬಂತು ಈಚೆಗೆ 1,032 ಜನರು ಈ ಅನಾಹುತದಲ್ಲಿ ಪ್ರಾಣ ಕಳೆದುಕೊಂಡರೆಂದು ಎರಡನೇ ವರ್ತಮಾನ ಬಂದಿದೆ. [ಹಿಂದೆ ಅಟ್ಲಾಂಟಿಕ್ ಸಾಗರದಲ್ಲಿ ಟೈಟಾನಿಕ್ ಎಂಬ ಜಹಜು ಮುಳುಗಿ ಹೋದಾಗ 1,503 ಜನರು ಕಾಲವಾದರು] ಇದಲ್ಲದೆ ಆ ಜಹಜಿನಲ್ಲಿ 10 ಲಕ್ಷ ರೂಪಾಯಿನ ಬೆಳ್ಳಿ ಗಟ್ಟಿಗಳದ್ದು ಸಮುದ್ರದ ಪಾಲಾಗಿರುತ್ತವೆ ಸಾಲ್ವೇಷನ್ ಆರ್ಮಿಯ ಪ್ರತಿನಿಧಿಗಳು ಅದರಲ್ಲಿ 160 ಮಂದಿ ಇದ್ದರೆಂದೂ, ಈ ಪೈಕಿ 20 ಜನರು ಮಾತ್ರ ಬದುಕಿ ಬಂದರೆಂದೂ ತಿಳಿಯುವುದು

ಈ ಅನಾಹುತ ನಡೆದ ವೃತ್ತಾಂತವನ್ನು ಆ ಜಹಜಿನ ಅಧಿಪತಿಯಾಗಿದ್ದು ಬದುಕಿ ಬಂದಿರುವ ಕ್ಯಾಪ್ಟನ್ ಕೆಂಡಾಲ್ ಎಂಬಾತನು ಹೇಳುವುದೇನೆಂದರೆ— ಮುಳುಗಿದ ಎಂಪ್ರೆಸ್ ಆಫ್ ಐರ್ಲೆಂಡ್ ಎಂಬ ಜಹಜು ತಾ 27 ರಲ್ಲಿ ಕ್ವಿಬೆಕ್ ನಗರದಿಂದ ಹೊರಟು ತಾ 29 ನೇ ಶುಕ್ರವಾರ ಸೇಂಟ್ ಲಾರೆನ್ಸ್ ನದಿಯೊಳಗೆ ಪ್ರಯಾಣ ಮಾಡಿಕೊಂಡು ಸುಮಾರು 70 ಮೈಲಿ ದೂರದಲ್ಲಿರುವ ರುಮುಸ್ಕಿ ಎಂಬ ತೀರಪಟ್ಟಣವನ್ನು ತಲುಪಿ, ಅಲ್ಲಿಂದ ಮುಂದಕ್ಕೆ ಸುಮಾರು 8-10 ಮೈಲಿ ದೂರದಲ್ಲಿರುವ ಫಾದರ್ ಪಾಯಿಂಟ್ ಎಂಬ ಸ್ಥಳದಲ್ಲಿರುವಾಗ್ಗೆ ಎದುರಿಗೆ ಎರಡು ಮೈಲಿ ದೂರದಲ್ಲಿ ಕಲ್ಲಿದ್ದಲು ಭರ್ತಿಯಾಗಿದ್ದ ಸ್ಟೋರ್ಸ್ಟಾಟ್ ಎಂಬ ಜಹಜು ಬರುತ್ತಿದೆ ಎಂದು ಗೊತ್ತಾಯಿತು ಮುಳುಗಿದ ಜಹಜಿನಿಂದ ತುತೂರಿಯನ್ನು ಊದಿ ಆ ಎದುರಿಗೆ ಬರುವ ಜಹಜನ್ನು ನಿಲ್ಲಿಸಬೇಕೆಂದು ಪ್ರಯತ್ನಪಡಲಾಯಿತು ಆ ಜಹಜು ಅದೇ ರೀತಿ ನಿಲ್ಲುವುದಾಗಿ ಜವಾಬೂ ಕೊಟ್ಟಿತು. ಆದರೆ ಎರಡು ಜಹಜುಗಳೂ ಮಹಾ ವೇಗದಿಂದ ಓಡುತ್ತಿದ್ದಕಾರಣ ಕಲ್ಲಿದ್ದಲ ಜಹಜು ಆ ಜಹಜಿನ ಹೊಟ್ಟೆಗೆ ಬಲವಾಗಿ ಬಡಿದು ದೊಡ್ಡ ತೂತುಮಾಡಿ ಹಿಂದಕ್ಕೆ ಹೋಯಿತು ಇದಾದ ಮೂರೇ ನಿಮಿಷಗಳಲ್ಲಿ ಆ ಜಹಜಿನೊಳಕ್ಕೆ ನೀರು ತುಂಬಲಾರಂಭವಾಯಿತು ಪ್ರಯಾಣಿಕರೆಲ್ಲಾ ಸುಮಾರಾಗಿ ನಿದ್ದೆಯಲ್ಲಿದ್ದರು ಆದರೂ ಅನೇಕರು ತಮ್ಮ ಜಹಜಿನ ಇಂಜನ್ ಒಡೆದದ್ದೇ ಮೊದಲಾದ ಶಬ್ದಗಳನ್ನು ಕೇಳಿ ಎದ್ದುಬಂದಾಗ್ಗೆ ಜಹಜು ಮುಳುಗುತ್ತಿತ್ತು ಆಗ ಆ ಜಹಜಿನೊಳಗುಂಟಾದ ಕಳವಳವೂ ಗೋಳಾಟವೂ ವಿವರಿಸಲಶಕ್ಯವಾಗಿತ್ತು. ಜೀರ ದ್ವಾರಿಯು ಜಹಜು ಮುಳುಗಿದ ಕೂಡಲೆ ಹುಟ್ಟಿ, ತಕ್ಷಣವೇ ಸ್ವಲ್ಪ ಹೊತ್ತು ನಿಶ್ಚಲ್ಪವಾಯಿತು. ಅನೇಕರು ಸಮುದ್ರದಲ್ಲಿ ಎಸೆಯಲ್ಪಟ್ಟರು ಹಲವರು ಜಹಜಿನಲ್ಲಿ ಮುರಿದುಹೋದ ತುಂಡುಗಳನ್ನು ಬಲವಾಗಿ ತಬ್ಬಿಕೊಂಡು ಒದ್ದಾಡುತ್ತಿದ್ದು ಕಾಲವಾದರು ಈ ಪೈಕಿ ಕೆಲವರನ್ನು ಬೇರೆ ಜಹಜು ಹೋಗಿ ಎತ್ತಿ ಕರೆಸಿಕೊಂಡು ಬಂದಿದೆ ಯಾವ ಜಹಜಿನಿಂದ ಈ ಅನಾಹುತ ಸಂಭವಿಸಿತೋ ಅದು 350 ಜನರನ್ನು ಎತ್ತಿಕೊಂಡು ಬದುಕಿಸಿತ್ತೆಂದು ಹೇಳುವರು ಈಗ ತೇಲುವ ಹೆಣಗಳನ್ನೆಲ್ಲಾ ಕೂಡಿಸಿ ಗುರುತು ಹಿಡಿಯುವುದಕ್ಕಾಗಿ ಸಾಗಿಸಿಕೊಂಡು ಹೋಗುತ್ತಿದಾರೆ

ಈ ದುಃಖಕರವಾದ ಸುದ್ದಿಯು ಪ್ರಪಂಚದ ಎಲ್ಲಾ ರಾಜ್ಯಗಳಲ್ಲೂ ಅಪಾರವಾದ ಸಂತಾಪವನ್ನುಂಟುಮಾಡಿರುತ್ತದೆ ದೊರೆಗಳೂ ರಾಣಿಗಳೂ, ಅಧಿಪತಿಗಳೂ, ಪ್ರಜಾಪ್ರತಿನಿಧಿ ಸಂತಾಪಸೂಚಕವಾದ ವರ್ತಮಾನಗಳನ್ನು ಕಳುಹಿಸಿಕೊಡುತ್ತಿದಾರೆ. ಅಕಾಲ ಮರಣಕ್ಕೆ ಗುರಿಯಾದ ಆ ಸಾವಿರಾರು ಜನರ ಸಂಸಾರದವರ ಜೀವನಾದಿಗಳಿಗೆ ಸಹಾಯಮಾಡುವುದಕ್ಕಾಗಿ ಲಂಡನ್ ಪಟ್ಟಣದಲ್ಲಿ ಒಂದು ಧರ್ಮ ಫಂಡು ಏರ್ಪಾಡಾಗಿ ಚಂದಾ ಕೂಡಿಸಲ್ಪಡುತ್ತಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಮೇ 21 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1) ಷೇರು ಮೊಬಲಗು	...	ರೂ 9,77,395
,, (2) ಡಿಪಾಜಿಟ್ಟುಗಳು	...	,, 13,82,068
,, (3) ಇತರೆ	...	,, 25,897
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 23,85,360
ದೇಣೆ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 1,69,815
,, (2) ಬಾಕಿ ಮತ್ತು ಇತರ ಸಾಲಗಳು	...	,, 13,57,626
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,45,175
,, (4) ಇನ್ವೆಸ್ಟ್‌ಮೆಂಟುಗಳು	...	,, 3,01,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	...	,, 85,724
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...	,, 8,250
,, (7) ಇತರೆ	...	,, 17,770
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 23,85,360

ಡಬ್ಲಿಯು ಸಿ ರೋಜ್, ಮ್ಯಾನೇಜರ್

ವಿಷಯವಾರ್ತಾ ಬೋಧಕ ಸಮಾಜ.

ಈ ಸಮಾಜವು ಕೋಲಾರ ತಾಲ್ಲೂಕು ವೇಮಗಲ್ಲು ಹೋಬಳಿ ಕ್ಯಾಲನೂರಲ್ಲಿ 1914 ನೇ ಇಸವಿ ಮಾರ್ಚಿ 23 ನೇ ತಾ ಅಲ್ಲಿನ ಸ್ಕೂಲ್ ಹೆಡ್ ಮಾಸ್ಟರು ಬಿ ಕೃಷ್ಣಶಾಸ್ತ್ರಿಗಳ ಪ್ರೋತ್ಸಾಹದ ಮೇಲೆ ಪಟೇಲ್ ಅಬ್ದುಲ್ ಬಾಸಿತು ಖಾನರವರು, ಶ್ಯಾ ರಾಮಪ್ಪನವರು, ಚಕ್ರಪಾಣಿರಾಯರೇ ಮುಂತಾದ ದೊಡ್ಡ ಮನುಷ್ಯರ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟಿತು ಈ ಸಮಾಜಕ್ಕೆ ಸಾ|| ದೊಂತಿ ಮುನಿರಾಮಯ್ಯಶೆಟ್ಟರು, ಪೋ ಕೈ ವರದಪ್ಪನವರು, ಪಟೇಲ್ ಸೈಯದ್ ಇಬ್ರಾಹಿಂ ಸಾಹೇಬರು, ಸಾ|| ವೀರಭದ್ರಾಚಾರ್ಯರೇ ಮುಂತಾದ ದೊಡ್ಡ ಮನುಷ್ಯರು ಮುಂದಾಳುಗಳಾಗಿ ನಿಂತು ಸಕಲ ಕಾರ್ಯಗಳನ್ನೂ ನಡಿಸುತ್ತಲಿದ್ದಾರೆ ಈ ಸಭೆಗೆ 24 ಜನ ಮೆಂಬರುಗಳು ಸೇರಿರುತ್ತಾರೆ ಈ ಸಭೆಯ ಮುಖ್ಯ ಉದ್ದೇಶವೇನಂದರೆ, ಈ ಗ್ರಾಮದಲ್ಲಿರುವ ಎಲ್ಲಾ ಜನರನ್ನೂ ಸಾಧ್ಯವಾದಷ್ಟು ವಿದ್ಯಾವಂತರನ್ನಾಗಿ ಮಾಡಬೇಕೆಂಬುವದು ಇದಕ್ಕಾಗಿ ಈ ಸಭೆಯವರು ಮಾಡುತಲಿರುವ ಪ್ರಯತ್ನಗಳೇನಂದರೆ —

(1) ಚಂದಾ ಮೂಲಕ ಮೆಂಬರುಗಳು ಕೊಂಚಕೊಂಚವಾಗಿ ಹಣವನ್ನು ಜಮಾಯಿಸಿಕೊಂಡು, ವಾರ ಪತ್ರಿಕೆಗಳನ್ನೂ ಮಾಸಿಕ ಪುಸ್ತಕಗಳನ್ನೂ ತರಿಸಿಕೊಂಡು ಪ್ರತಿ ಶುಕ್ರವಾರ, ಮಂಗಳವಾರಗಳಲ್ಲಿ ಗ್ರಾಮಸ್ಥರಿಗೆ ಅವುಗಳ ಸಾರಾಂಶವನ್ನು ವಿಶದಪಡಿಸುವದು (2) ಸಾಧ್ಯವಾದಾಗಲೆಲ್ಲಾ ರೈತರಿಗೆ ವ್ಯವಸಾಯ, ಕೈಗಾರಿಕೆಗಳಲ್ಲಿ ಪ್ರೋತ್ಸಾಹವನ್ನುಂಟುಮಾಡುವದು (3) ಸ್ಕೂಲಿಗೆ ಸೇರಬಹುದಾದ ಹುಡುಗರನ್ನು ಅವರ ತಂದೆತಾಯಿಗಳು ಮನೆಯಲ್ಲಿ ನಿಲ್ಲಿಸಿಕೊಳ್ಳದೆ ಸ್ಕೂಲಿಗೆ ಕಳುಹಿಸುವಂತೆ ಪ್ರೋತ್ಸಾಹಪಡಿಸುವದು (4) ಎಲ್ಲರಿಗೂ ತಕ್ಕಂತೆ ಸಾಧ್ಯವಾದಷ್ಟು ಸ್ಕೂಲುಗಳನ್ನು ಸ್ಥಾಪಿಸುವದು

ಈ ರೀತಿ ಪ್ರಯತ್ನಪಟ್ಟು ಈಗಾಗಲೇ 15 ಹುಡುಗಿಯರಿಂದ ಕೂಡಿದ ಒಂದು ಗರಲ್ಸ್ ಸ್ಕೂಲನ್ನೂ, 50 ಹುಡುಗರಾದ ರೈತರಿಂದ ಕೂಡಿದ ರಾತ್ರಿ ಕಾಲದ ಒಂದು ಪಾಠಶಾಲೆಯನ್ನೂ ಸ್ಥಾಪಿಸಿರುವರಲ್ಲದೆ ಮುಂದೆ ಇಂಗ್ಲಿಷ್ ವಿದ್ಯಾಭಿವೃದ್ಧಿ ವಿಚಾರವಾಗಿ ಯೋಚಿಸುತ್ತಿರುವರು ಇದೇ ರೀತಿ ಎಲ್ಲಾ ಗ್ರಾಮಗಳವರೂ ಪ್ರಯತ್ನಪಟ್ಟಲ್ಲಿ ನಮ್ಮ ಮೈಸೂರು ದೇಶವು ಎಷ್ಟೋ ಅಭಿವೃದ್ಧಿಗೆ ಬರಬಹುದು

ಅ ಬ ಕ

ಇಂಗ್ಲಿಷ್ ಸ್ತ್ರೀಯರ ಹೋರಾಟವು

ಇಂಗ್ಲಾಂಡಿನಲ್ಲಿ ಹೆಂಗಸರಿಗೆ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯ ಹಕ್ಕು ಕೊಡಬೇಕೆಂದು ಅನೇಕ ವಿದ್ಯಾವತಿಯರೂ ಗಣ್ಯರೂ ಆದ ಸ್ತ್ರೀಯರು ಹೋರಾಡುತ್ತಿದ್ದಾರೆ ಇವರಲ್ಲಿ ಮುಂದಾಳಾದ ಕೆಲವು ಸ್ತ್ರೀಯರು ಕಳೆದ ವಾರ ದೊರೆಯವರನ್ನು ಕಂಡು ಅವರ ಕೂಡ ತಮ್ಮ ಇಷ್ಟಾರ್ಥವನ್ನು ಅರಿಕೆ ಮಾಡಿಕೊಳ್ಳಬೇಕೆಂದು ಬಕಿಂಗ್‌ಹಾಂ ಅರಮನೆಗೆ ಹೊರಟರು ಇವರಿಗೆ ಅವಕಾಶ ಕೊಡದಂತೆ ತಡೆಯುವುದಕ್ಕಾಗಿ ಅರಮನೆಯ ಸುತ್ತಲೂ ಸಾವಿರಾರು ಪೋಲೀಸಿನವರೂ ಸೈನಿಕರೂ ಪಹರೆ ನೇಮಕವಾದರು ಸ್ತ್ರೀಯರು ಮೆರವಣಿಗೆ ಮಾಡಿಕೊಂಡು ಹೋದರು ಅವರಿಗೂ ಕಾವಲಿನವರಿಗೂ ಹೋರಾಟವಾಯಿತು ಕೆಲವರಿಗೆ ಗಾಯಗಳೂ ಆದವು ಪೋಲೀಸಿನವರು 67 ಮಂದಿಯನ್ನು ದಸ್ತಗಿರಿಮಾಡಿ ಅವರಿಗೆಲ್ಲಾ ಕೋರ್ಟಿನಲ್ಲಿ ಶಿಕ್ಷೆಮಾಡಿಸಿದರು ಇನ್ನೊಂದು ಕಡೆ ಪೋಲೀಸಿನವರು ಒಂದು ಮನೆಗೆ ನುಗ್ಗಿ ಐದು ಜನ ಹೆಂಗಸರನ್ನು ಹಿಡಿದರು ಇವರು ನಾನಾ ಅಕೃತ್ಯಗಳನ್ನು ಮಾಡುವುದಕ್ಕಾಗಿ ಕೂಡಿಸಿ ಇಟ್ಟುಕೊಂಡಿದ್ದ ಕಲ್ಲುಗಳಿಂದ ಭರ್ತಿಯಾದ ಚೀಲಗಳೂ, ಸುತ್ತಿಗೆಗಳೂ, ಕಡತಕತ್ತಿಗಳೂ, ಕೆಲವು ಕಾಗದಪತ್ರಗಳೂ ಆ ಮನೆಯಲ್ಲಿ ಸಿಕ್ಕಿದವು ಅತ್ತಲಾಗಿ ನ್ಯಾಷನಲ್ ಗ್ಯಾಲರಿ ಎಂಬ ಚಿತ್ರಶಾಲೆಯಲ್ಲಿ ಐದು ತಸ್ವೀರುಗಳನ್ನು ಕೆಡಿಸುತ್ತಿದ್ದ ಹೆಂಗಸರಿಬ್ಬರನ್ನು ಜನರು ಹಿಡಿದು ಪೋಲೀಸಿಗೆ ಒಪ್ಪಿಸಿದರು ಈ ಹೆಂಗಸರನ್ನೆಲ್ಲಾ ವಿಚಾರಣೆಮಾಡುತ್ತಿದ್ದಾಗ ಬೇರೆ ಹೆಂಗಸರು ಹೊರಗೆ ನಿಂತು ತುಂಬಾ ಗಲಭೆಯೆಬ್ಬಿಸಿದ್ದರಿಂದ ಮ್ಯಾಜಿಸ್ಟ್ರೇಟರು ಕೋರ್ಟಿನಿಂದ ಹೊರಟುಹೋದರು ಹೆಂಗಸರು ಹಿಟ್ಟು ಮುಂತಾದವನ್ನು ತುಂಬಿದ ಸಣ್ಣ ಚೀಲಗಳನ್ನು ಮ್ಯಾಜಿಸ್ಟ್ರೇಟರ ಮೇಲೆ ಎಸೆದರು ಒಬ್ಬ ಲಾಯರಿಗೂ ಏಟು ತಗಲಿದೆ ಮತ್ತೊಂದು ಕಡೆ ರಾಜ ದಂಪತಿಗಳು ಸೇರಿದ್ದ ಒಂದು ಸಂತೋಷಕೂಟಕ್ಕೆ ಈ ಸ್ತ್ರೀಯರು ನುಗ್ಗಿ ಉಪನ್ಯಾಸ ಮಾಡಬೇಕೆಂದು ಸಾಹಸಪಟ್ಟರು ಅವರೆಲ್ಲರನ್ನೂ ಹಿಡಿದು ಆಚೆಗೆ ದೊಬ್ಬಬೇಕಾಯಿತು ಎಡಿಂಬರೋ ನಗರದ ಒಂದು ದೇವಾಲಯದೊಳಗೆ ಒಂದು ಸಿಡಿಮದ್ದಿನ ಗುಂಡು ಸಿಕ್ಕಿತು ಅದರಿಂದ ಕೇಡುಕೇನೂ ಆಗಲಿಲ್ಲ ಲಿಸ್ಬರ್ನ್ ಎಂಬ ನಕ್ಕೆ ಈ ಸ್ತ್ರೀಯರು ಬೆಂಕಿ ಹಾಕಿದರು

ಇತ್ತಲಾಗಿ ಗ್ಲಾಸ್ಗೋ ಪಟ್ಟಣದ ಅರ್ಧಭಾಗದ ಪ್ರಜೆಗಳಿಗೆ ನೀರು ಸರಬರಾಯಿ ಮಾಡುವ ಕೊಳಾಯಿಯನ್ನು ಒಡೆಯಬೇಕೆಂದು ಸ್ತ್ರೀಯರು ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು ಆ ಗುಂಡುಗಳ ಬತ್ತಿಮಾತ್ರ ಸೀದುಹೋಗಿತ್ತು ಅವರ ಈ ದುಷ್ಪ್ರಯತ್ನವು ಸಾರ್ಥಕವಾಗಲಿಲ್ಲ ಎಡಿಂಬರೋ ಪಟ್ಟಣದ ರಾಯಲ್ ಅಕಾಡೆಮಿ ಎಂಬ ಚಿತ್ರಶಾಲೆಯೊಳಗೆ ಒಬ್ಬ ಸ್ತ್ರೀಯು ನುಗ್ಗಿ ದೊರೆಯವರ ತಸ್ವೀರನ್ನು ಒಡೆದು ಹಾಕಿದಳು ಇವಳನ್ನು ದಸ್ತಗಿರಿಮಾಡಿದಾರೆ ಬ್ರಿಟಿಷ್ ಮ್ಯೂಜಿಯಂ ಎಂಬ ವಸ್ತುಪ್ರದರ್ಶನದೊಳಗೆ ಎರಡು ಬೆಲೆಬಾಳುವ ಗಾಜಿನ ವಸ್ತುಗಳನ್ನು ಈ ಸ್ತ್ರೀಯರ ಗುಂಪಿನವರು ಒಡೆದು ಹಾಕಿದರು ಇಬ್ಬರನ್ನು ಪೋಲೀಸಿನವರು ಹಿಡಿದಿಟ್ಟಿದ್ದಾರೆ ಇನ್ನು ಮುಂದೆ ಸ್ತ್ರೀಯರನ್ನು ಆ ಕಟ್ಟಡಕ್ಕೆ ಬಿಡದಂತೆ ಹುಕುಂ ಆಗಿದೆ ಕಿಂಗ್ಸ್‌ವೇ ಎಂಬಲ್ಲಿ ಪೋಲೀಸಿನವರು ಆ ಸ್ತ್ರೀಯರ ಸಂಘದ ಆಫೀಸಿಗೆ ನುಗ್ಗಿ ಕೆಲವು ಪುಸ್ತಕ ಕಾಗದಗಳನ್ನು ಜಪ್ತಿಮಾಡಿದ್ದಲ್ಲದೆ ಒಬ್ಬಳನ್ನು ಹಿಡಿದುಕೊಂಡರು ಸ್ತ್ರೀಯರು ಬಂಗಲೆಗಳ ಕಿಟಕಿ ಕನ್ನಡಿಗಳನ್ನು ಒಡೆಯಲಾರಂಭಿಸಿದ್ದಾರೆ ಹೈಡ್ ಪಾರ್ಕ್, ವಿಕ್ಟೋರಿಯ ಪಾರ್ಕ್, ಹಾಂಪ್‌ಸ್ಟೆಡ್ ಹೀತ್ ಎಂಬ ಮೈದಾನಗಳಲ್ಲಿ ಸ್ತ್ರೀಯರು ದೊಡ್ಡ ಸಭೆಗಳನ್ನು ನಡಿಸುವುದಕ್ಕಾಗಿ ಸೇರಿದ್ದರು ಪೋಲೀಸಿನವರು ನುಗ್ಗಿ ಆ ಸ್ತ್ರೀಯರ ಗುಂಪುಗಳನ್ನು ಚದರಿಸಿಬಿಟ್ಟರು ಪ್ರಿನ್ಸ್ ಹೀತ್ ಎಂಬ ಮೈದಾನದಲ್ಲಿ ಕೆಲವು ಸ್ತ್ರೀಯರಿಗೆ ಪೆಟ್ಟುಗಳೂ ಬಿದ್ದವು ಕುದುರೆಗಳ ಜೂಜು ಕಳೆದ ವಾರ ನಡೆದಾಗ ಈ ಸ್ತ್ರೀಯರ ದಾಂಧಲೆ ನಡೆಯದಂತೆ ನೋಡಿಕೊಳ್ಳುವುದಕ್ಕಾಗಿ ಸರ್ಕಾರದವರು 3,000 ಪೋಲೀಸನ್ನು ಸುತ್ತಲೂ ಪಹರೆ ನೇಮಿಸಿದ್ದರು

ಒಬ್ಬ ಸತ್ಪುರುಷನ ಮರಣ

ಚಿತ್ರದುರ್ಗದಲ್ಲಿ ಜನರಂಜಕರಾಗಿಯೂ, ಪರೋಪಕಾರಿಯಾಗಿಯೂ, ಪ್ರಸಿದ್ಧರಾಗಿಯೂ, ಆಯುರ್ವೇದ ಪಂಡಿತರಾಗಿಯೂ ಇದ್ದ ಮ|| ವೆಂಕಟರಮಣಪ್ಪನವರು ಕಳೆದ ಮೇ ತಾ 18ನೇ ಸೋಮವಾರ ಬೆಳಗಿನ 10 ಘಂಟೆ ಸಮಯದಲ್ಲಿ ದೈವಾಧೀನರಾದರೆಂಬ ವಾರ್ತೆಯನ್ನು ತಿಳಿಸಲು ವಿಷಾದಿಸುತ್ತೇನೆ ಇವರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು ಇವರು ವಂಶಪಾರಂಪರ್ಯವಾಗಿ ವೈದ್ಯವೃತ್ತಿಯಿಂದಲೇ ಜೀವಿಸಿಕೊಂಡು ಬಂದವರಾದಾಗ್ಯೂ ಈ ನೂತನದಲ್ಲಿ ಇವರು ವಿವೇಕ, ವಿನಯಸಂಪನ್ನರಾಗಿ ತಮ್ಮ ಕರ್ತವ್ಯವನ್ನು ಚೆನ್ನಾಗಿ ಅರಿತು ಸಮಸ್ತ ಜನರ ಪ್ರೀತಿಯನ್ನು ಪಡೆದು ವೈದ್ಯಶಾಲೆಯನ್ನು ಸ್ಥಾಪಿಸಿಕೊಂಡು ಪರೋಪಕಾರಿಗಳಾಗಿ ಇದ್ದರು ಈ ಚಿತ್ರದುರ್ಗದ ಜನರಿಗಲ್ಲದೆ ಈ ಡಿಸ್ಟ್ರಿಕ್ಟಿನ ಗ್ರಾಮಾಂತರ ಜನರಿಗೂ ಔಷಧಿಯನ್ನು ಕೊಟ್ಟು ಕೀರ್ತಿಸಿ ತುಂಬಾ ಖ್ಯಾತಿವಂತರಾಗಿದ್ದರು ಸರ್ಕಾರದವರು ಇವರ ವೈದ್ಯಶಾಲೆಗೆ ಮಾಹೆಯಾನಾ 20 ರೂಪಾಯಿ ಗ್ರ್ಯಾಂಟು ಮಂಜೂರು ಮಾಡಿದ್ದಾರೆ ಅನಾಥರಾಗಿಯೂ, ಬಡವರಾಗಿಯೂ ಇದ್ದ ರೋಗಿಗಳಿಗೆ ಇವರು ತಮ್ಮ ಕೈಯಿಂದ ಪಥ್ಯ ಮುಂತಾದ್ದಕ್ಕೆ ಏರ್ಪಾಡು ಮಾಡಿ ಉಚಿತವಾಗಿ ಔಷಧಿಯನ್ನು ಕೊಡುತ್ತಿದ್ದಲ್ಲದೆ ಬಡವರ ವಿಷಯದಲ್ಲಿ ತುಂಬಾ ಕರುಣಾಶಾಲಿಗಳಾಗಿ ಬೇಕಾದ ಸಹಾಯವನ್ನು ಕಲ್ಪಿಸಿಕೊಡುತ್ತಿದ್ದರು ಸಾಧುಸಜ್ಜನರಲ್ಲಿಯೂ, ದೇವತಾರಾಧನೆಯಲ್ಲಿಯೂ ಇವರಿಗೆ ತುಂಬಾ ಭಕ್ತಿಯಿತ್ತು ಈ ಸತ್ಪುರುಷರ ಮರಣವಾರ್ತೆಯನ್ನು ಕೇಳಿ ಸಮಸ್ತ ಪ್ರಜೆಗಳೂ ದುಃಖಪೀಡಿತರಾಗಿ ಆ ದಿವಸ ಅವರ ಶವವನ್ನು ಹಿಂಬಾಲಿಸಿ ಸಮಾಧಿ ಮಾಡುವವರೆಗೂ ಸಾವಿರಾರು ಜನರು ಗುಂಪುಗುಂಪಾಗಿ ಬಂದು ದುಃಖಿಸುತ್ತಿದ್ದರು

ಇವರಿಗೆ 2 3 ತಿಂಗಳಿಂದ ಬೇಧಿಯ ಗುಳ್ಮ ಬಳಲಿ ತುಂಬಾ ಅಶಕ್ತರಾಗಿದ್ದರು ಕಡೆಗೆ ಈ ಅಶಕ್ತಿಯಲ್ಲಿಯೇ ಪ್ರಾಣಹೋಯಿತು ಇವರಿಗೆ 6 ಜನ ಗಂಡುಮಕ್ಕಳು, 2 ಹೆಣ್ಣುಮಕ್ಕಳು, ಹೆಂಡತಿಯೂ ಇದ್ದಾರೆ ಗಂಡುಮಕ್ಕಳನ್ನು ವಂಶಪಾರಂಪರ್ಯವಾಗಿ ಬಂದಿರುವ ತಮ್ಮ ವೈದ್ಯವೃತ್ತಿಯಲ್ಲಿ ತರಬೇತಿಯನ್ನು ಮಾಡಿದಾರೆ ಆಗಲೇ ಹಿರಿಯ ಮಗನಾದ ಲಕ್ಷ್ಮಪ್ಪನವರು ಈ ಊರಲ್ಲಿ ಇವರ ವೈದ್ಯಶಾಲೆಯ ಭಾರದಲ್ಲಿರುತ್ತಾರೆ 2ನೆಯವರಾದ ಹನುಮಂತಪ್ಪನವರು ಈ ಡಿಸ್ಟ್ರಿಕ್ಟಿಗೆ ಸೇರಿದ ನಾಯಕನಹಟ್ಟಿ ಎಂಬ ಗ್ರಾಮದಲ್ಲಿನ ವೈದ್ಯಶಾಲೆಯ ಭಾರದಲ್ಲಿರುತ್ತಾರೆ ಮಿಕ್ಕ ಮೂರು ಜನ ಆ ಕೆಲಸದಲ್ಲಿಯೇ ಅಭ್ಯಾಸಿಗಳಾಗಿ ಇದಾರೆ ಈ ಸತ್ಪುರುಷನ ಹೆಸರನ್ನು ಶಾಶ್ವತಪಡಿಸಬೇಕೆಂದು ಈ ಡಿಸ್ಟ್ರಿಕ್ಟಿನ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ ಎಂ ಕೆ ತಿರುಮಲಾಚಾರ್ಯರು, ಅಡ್ವೊಕೇಟ್ ಮ ಬಿ ಶಿ ಶ್ಯಾಮಣ್ಣನವರು, ಅಡ್ವೊಕೇಟ್ ಮೆ ಅಬ್ದುಲ್ ಗನೀಸಾಹೇಬರವರೇ ಮುಂತಾದ ದೊಡ್ಡ ಮನುಷ್ಯರು (ಅವರು ಜೀವಂತರಾಗಿದ್ದಾಗಲೇ ಅಂದರೆ ತಾ 17-5-1914ನೆ ಭಾನುವಾರ ಅವರ ಮನೆಯಲ್ಲಿ ಸಭೆ ಸೇರಿ) ಪಂಡಿತರ ಅಭಿಪ್ರಾಯಾನುಸಾರ ಅವರ ವೈದ್ಯಶಾಲೆಗೆ ಬರುವ ಅನಾಥರೂ, ಬಡವರೂ ಆದ ರೋಗಿಗಳಿಗೆ ಉಪಚರಿಸಲು ಅವರ ಜ್ಞಾಪಕಾರ್ಥವಾಗಿ ಒಂದು ಧರ್ಮದ ಫಂಡು ಏರ್ಪಾಡುಮಾಡಬೇಕೆಂದು ತೀರ್ಮಾನಮಾಡಿದಾರೆ ಈ ಸತ್ಪುರುಷನ ಆತ್ಮಕ್ಕೆ ಶಾಂತಿಯುಂಟಾಗುತ್ತೆ ದುಃಖಿತರಾಗಿರುವ ಇವರ ಕುಟುಂಬದವರಿಗೆಲ್ಲಾ ಧೈರ್ಯೋತ್ಸಾಹಗಳನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ

ಸಜ್ಜನ ಹಿತೈಷಿ

ಹಾಸನ ಡಿಸ್ಟ್ರಿಕ್ಟ್ ಕನ್ನಡ ಉಪಾಧ್ಯಾಯರ ಸಂಘ

ಕಳೆದ ಮೇ ತಾ 22 23 ನೇ ಶುಕ್ರವಾರ ಶನಿವಾರಗಳಲ್ಲಿ ಈ ಸಂಘವು ಈ ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿ ಸಮಾಜ ಶಾಖೆಯ ಮೂಲಕ ಉಪಾಧ್ಯಾಯರ ಪ್ರೋತ್ಸಾಹಕೋದ್ದೇಶದಿಂದ ಸೇರಿಸಲ್ಪಟ್ಟಿತು ಸಂಸ್ಥಾನದ ವಿದ್ಯಾಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರವರಾದ ರಾವ್ ಬಹದ್ದೂರ್ ಮ ಎಂ ಶಾಮರಾಯರವರು ಮ|| ಸಿ ಕೃಷ್ಣರಾಯರೊಡನೆ ದಯಮಾಡಿಸಿದ್ದರು ಸರ್ಕಲ್ ಇನ್‌ಸ್ಪೆಕ್ಟರ್ ಮ|| ಎಂ ಶ್ರೀನಿವಾಸರಾಯರೂ ಬಂದಿದ್ದರು ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಮುಖ್ಯ ಶಾಖೆಗಳ ಢಣಾ ಇಲಾಖೆ ಮಾಡಲ್ ತರಿಸಲ್ಪಟ್ಟಿದ್ದ ಉಪಾಧ್ಯಾಯರ ಪಿ ಕೆ ಸರ್ಕಾರದ ನಮ್ರ ವಿಜ್ಞಾಪನೆ ಇಲಾಖೆಗಳಿಗೆ ಸಂಬಂಧಪಟ್ಟ 115 ಮಂದಿ ಉಪಾಧ್ಯಾಯರೂ, ಉಪಾಧ್ಯಾಯಿನಿಯರೂ ಬಂದಿದ್ದರು ಪರಗ್ರಾಮದವರೆಲ್ಲಾ ಸಂಪದಭಿವೃದ್ಧಿ ಸಮಾಜ ಶಾಖೆಯವರಿಂದಲೇ ಸ್ಥಳದ ಶಿಯೂ, ಭೋಜನಾದಿ ಸತ್ಕಾರಗಳೂ ಬಹು ಅನುಕೂಲವಾಗಿ ಕಲ್ಪಿಸಲ್ಪಟ್ಟಿದ್ದುವು ಈ ಸಂಘದ ಅಂಗವಾಗಿ ಇದೇ ಕಾಲದಲ್ಲಿ ವಿದ್ಯಾಭ್ಯಾಸ ಸಂಬಂಧವಾದ ವಸ್ತುಪ್ರದರ್ಶನವೂ ಏರ್ಪಾಡಾಗಿದ್ದಿತು ಉಪಾಧ್ಯಾಯ ಸಂಘವು ಇಲ್ಲಿನ ಮಹಾರಾಣಿ ವಿಲಾಸ ಬಾಲಿಕಾ ಪಾಠಶಾಲೆಯಲ್ಲೂ, ವಸ್ತುಪ್ರದರ್ಶನವು ಜೂಬಿಲಿ ಹಾಲಿನಲ್ಲೂ ನಡೆದುವು ಈ ಎರಡು ಭವನಗಳೂ ಒಳಗೂ ಹೊರಗೂ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದುವು

ತಾ 22 ನೇ ಶುಕ್ರವಾರ ಬೆಳಿಗ್ಗೆ 9 ಘಂಟೆಗೆ ಉಪಾಧ್ಯಾಯರೂ ಅಧಿಕಾರಿಗಳೂ ಮಹಾರಾಣಿ ವಿಲಾಸ ಶಾಲಾ ಭವನದಲ್ಲಿ ಸೇರಿದ್ದಾಗ, ಇನ್‌ಸ್ಪೆಕ್ಟರ್ ಜನರಲ್ ರವರು, ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರಾದ ಎ ವೆದರಾಲ್ ಸಾಹೇಬರವರು, ಸೆಷನ್ಸ್ ಜಡ್ಜ್ ಮ|| ವಿರಾಲ್ ಹುಂಡಾ ಹುಸೇನ್ ಸಾಹೇಬರವರು, ಅ|| ಕಮಿಷನರುಗಳು, ಪ್ಲೀಡರುಗಳು, ದೊಡ್ಡಮನುಷ್ಯರು, ಇವರೇ ಮುಂತಾದ ಮಹನೀಯರೆಲ್ಲರೂ ಹಾಜರಾಗಿದ್ದರು ಸಂಘದ ಕಾರ್ಯದರ್ಶಿಯವರಾದ ರೆವ್ ಎ ಬ್ರೋಕ್‌ಬ್ಯಾಂಕ್ ಧೊರೆಯವರು ಇನ್‌ಸ್ಪೆಕ್ಟರ್ ಜನರಲ್ ರವರನ್ನು ಸವಿನಯ ಪೂರ್ವಕವಾಗಿ ವಂದಿಸಿ, ತಾವು ಅಗ್ರಾಸನಾಧಿಪತ್ಯವನ್ನು ವಹಿಸಿ, ಈ ಸೇವೆಯನ್ನು ಪ್ರಾರಂಭಿಸಿಕೊಡಬೇಕೆಂದು ಕೇಳಿಕೊಂಡ ಮೇಲೆ ಅವರು ಸಂತೋಷದಿಂದ ಅಂಗೀಕರಿಸಿ,—ಅವಿಚ್ಛಿನ್ನ ಸಾರ್ವತ್ರಿಕವಾದ ಈ ವಿದ್ಯಾಭ್ಯಾಸ ಕ್ರಮವನ್ನು ಈ ದೇಶದಲ್ಲಿ ಪ್ರಾರಂಭ ಮಾಡುವಲ್ಲಿ ತಂಘದವರೇ ಮೊದಲಿಗರು ಈಗ ಈ ಸಂಘ ಸೇರಿದರೇ ಇದರ ಪ್ರಮುಖವಾಗಿ ನಿಂತದ್ದು ನಮಗೆಲ್ಲಾ ಎಷ್ಟೋ ಸಂತೋಷಕರವಾಗಿದೆ ಈ ಪ್ರಾಂತದಿಂದ ಇಷ್ಟು ಮಂದಿ ನನ್ನ ದೇಶೀಯೋಪಾಧ್ಯಾಯರನ್ನು ಇಲ್ಲಿ ಸೇರಿಸಿ ನನಗೆ ಇವರ ಭೇಟಿಯನ್ನು ಮಾಡಿಸಿರುವುದಲ್ಲದೆ, ನನ್ನನ್ನು ಹೀಗೆ ಗೌರವಿಸಿರುವುದಕ್ಕೋಸ್ಕರವೂ ವಂದಿಸುತ್ತೇನೆ ಇದೇ ಪ್ರಕಾರ ಆಗಾಗ್ಗೆ ಉಪಾಧ್ಯಾಯರು ಸೇರಿ, ಉಪನ್ಯಾಸಾದಿಗಳನ್ನು ನಡಿಸುವುದರಿಂದ ತಿಳಿದವರಿಗೂ ತಿಳಿಯದವರಿಗೂ ಪ್ರಯೋಜನವುಂಟು ಎಂಬಿತ್ಯಾದಿ ರೀತಿಯಲ್ಲಿ ಸಮಯೋಚಿತ ಭಾಷಣವನ್ನು ಮಾಡಿದರು ಅನಂತರ ಇಲ್ಲಿನ ಮಿ॥ ಎಚ್ ಎಚ್ ಅಯ್ಯಂಗಾರ್ ಅಮ್ಮನವರು ಉಪಾಧ್ಯಾಯಿನೀ ಉದ್ಯೋಗದ ಮಹಿಮೆ ಎಂಬ ವಿಷಯವಾಗಿಯೂ, ಇಲ್ಲಿನ ಹೈ ಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ ಶಿವರಾಮಕೃಷ್ಣಯ್ಯನವರು ಉಪಾಧ್ಯಾಯರ ಸ್ವಭಾವ, ಗುಣಾತಿಶಯ ಮತ್ತು ನಡೆನುಡಿಗಳಿಂದ ಮಕ್ಕಳಲ್ಲಿ ಹುಟ್ಟುವ ಪ್ರೇರಣೆಗಳು ಎಂಬ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿದರು ಅನಂತರ ವಿದ್ಯಾವಿಷಯಕವಾದ ಚರ್ಚೆಗಳೂ ಸಮಾಧಾನಗಳೂ ಜರುಗಿದವು ಇವಾದ ಮೇಲೆ ಅಗ್ರಾಸನಾಧಿಪತಿಗಳೂ ಅದೇ ವಿಷಯಗಳನ್ನು ಕುರಿತು ಸಕಾರಣವಾಗಿಯೂ, ಸರ್ವ ಸಮ್ಮತವಾಗಿಯೂ, ದೃಷ್ಟಾಂತಪೂರ್ವಕವಾಗಿಯೂ ಸರ್ವಹಿತಕರವಾದ ಭಾಷಣವನ್ನು ಮಾಡಿದರು

ಡೆಪ್ಯುಟಿ ಇನ್‌ಸ್ಪೆಕ್ಟರ್ ಮ ವೀರಭದ್ರಯ್ಯನವರು ಅದೇ ಕಾಲದಲ್ಲಿ ನಮ್ಮ ಇನ್‌ಸ್ಪೆಕ್ಟರ್ ಜನರಲ್‌ರವರಿಂದ ಪ್ರವೇಶೋತ್ಸವ ನಡಿಸಲ್ಪಟ್ಟ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ರಿಪೋರ್ಟನ್ನು ಇಂಗ್ಲಿಷಿನಲ್ಲಿ ಓದಿದರು ಇದರಿಂದ ಈ ಡಿಸ್ಟ್ರಿಕ್ಟಿನಲ್ಲಿರುವ ವಿ ಇ ಸ್ಕೂಲುಗಳ ಒಟ್ಟು ಸಂಖ್ಯೆಯು 146 ಎಂತಲೂ, ಅವುಗಳಲ್ಲಿ ಪ್ರದರ್ಶನ ವಸ್ತುಗಳನ್ನು ಕಳುಹಿಸಿದ್ದವರು 36 ಸ್ಕೂಲುಗಳವರು ಮಾತ್ರವೇ ಎಂತಲೂ, ಪ್ರದರ್ಶಿಸಲ್ಪಟ್ಟ ವಸ್ತುಗಳು 370 ಎಂತಲೂ, ಅವುಗಳಲ್ಲಿ 21 ವಸ್ತುಗಳಿಗೆ ಬಹುಮಾನವೂ, 13 ವಸ್ತುಗಳಿಗೆ ಗೌರವ ಅಂಕಿತವೂ, 10 ವಸ್ತುಗಳಿಗೆ ಸರ್ಟಿಫಿಕೇಟುಗಳೂ ಗೊತ್ತುಮಾಡಲ್ಪಟ್ಟವೆ ಎಂತಲೂ ವ್ಯಕ್ತವಾಯಿತು ಆ ಮೇಲೆ ಅಗ್ರಾಸನಾಧಿಪರುಗಳು ಇದರ ವಿಷಯವಾಗಿ ತಮ್ಮ ಅಭಿಮತವನ್ನು ಅಂದರೆ ಇದು ಇನ್ನೂ ಆರಂಭವಾಗಿ ಶೈಶವಾವಸ್ಥೆಯಲ್ಲಿದೆ ಹೀಗೆಯೇ ಮುಂದರಿಯಬೇಕು ಎಂದು ಅಪ್ಪಣೆ ಕೊಡಿಸಿದರು ಸಭಿಕರೆಲ್ಲರೂ ಇದನ್ನು ಕೇಳಿದ ಮೇಲೆ ಜೂಬಿಲಿ ಹಾಲ್ ಎಂಬ ಭವನಕ್ಕೆ ಬಿಜಯಂಗೈದು, ಅಲ್ಲಿ ನೇತ್ರಾನಂದಕರವಾಗಿ ಪ್ರದರ್ಶಿತಗಳಾಗಿದ್ದ ವಸ್ತುಗಳನ್ನು ಸುಮಾರು ಒಂದು ಗಂಟೆಹೊತ್ತು ಇದ್ದು ನೋಡಿಕೊಂಡು ತೆರಳಿದರು

ಆ ದಿನ ಮಧ್ಯಾಹ್ನ ಯಥಾಪ್ರಕಾರ ಸಭೆ ಸೇರಿತು ಸರ್ಕಲ್ ಇನ್‌ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿದ್ದರು ಇಲ್ಲಿನ ಮಿಷನ್ ಸ್ಕೂಲ್ ಮುಖ್ಯೋಪಾಧ್ಯಾಯರಾದ ಮ ಬಿ ಕೆ ವೆಂಕಟಾಚಾರ್ಯರು ಉಪಾಧ್ಯಾಯರ ಉದ್ದೇಶ ಕರ್ತವ್ಯಗಳನ್ನು ಕುರಿತೂ, ಡೆ|| ಇನ್‌ಸ್ಪೆಕ್ಟರವರು ಉಪಾಧ್ಯಾಯರ ಸ್ವಂತ ವಾಚನಗಳ ಅಗತ್ಯವನ್ನು ಕುರಿತೂ ಉಪನ್ಯಾಸಗಳನ್ನು ಮಾಡಿದರು ಆ ಸಮಯಕ್ಕೆ ಡೆಪ್ಯುಟಿ ಕಮೀಷನರವರ ಅಧ್ಯಕ್ಷತೆಯಲ್ಲಿ ಮ|| ಸಿ ಕೃಷ್ಣರಾಯರು ಮಕ್ಕಳ ಭ್ಯಾಸದ ವಿಷಯವಾಗಿ ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿದರು ಅನಂತರ ರಾಮನಾಥಪುರದ ಮ ಕೃಷ್ಣಪ್ಪನವರು, ಕೊಣ್ಣೂರಿನ ಮ ಶ್ರೀಕಂಠಯ್ಯನವರು ಸಂಗೀತ ಹಾಡಿ ಸದಸ್ಯರಿಗೆಲ್ಲಾ ಕರ್ಣಾನಂದವನ್ನುಂಟುಮಾಡಿದರು ಇದರೊಡನೆ ಮೊದಲನೇ ದಿನದ ಕಾರ್ಯವು ನೆರವೇರಿತು

ತಾ 23ನೇ ಶನಿವಾರ ಬೆಳಿಗ್ಗೆ ಮತ್ತೆ ಸಭೆ ಸೇರಿತು ಮ|| ಸಿ ಕೃಷ್ಣರಾಯರವರು ಅಗ್ರಾಸನಾಧಿಪತ್ಯವನ್ನು ವಹಿಸಿದರು ಬೆಂಗಳೂರಿನ ಮಿ॥ ಬಟ್ಲರ್ ಅಮ್ಮನವರು ಬರೆದು ಕಳುಹಿಸಿದ್ದ ಮಕ್ಕಳ ಶಿಕ್ಷಣವೆಂಬ ಉಪನ್ಯಾಸವನ್ನು ಇಲ್ಲಿನ ಮ ಲಕ್ಷ್ಮೀನಾರಾಯಣಯ್ಯನವರೂ, ತುಮಕೂರಿನ ಮಿಸ್ ಪೇಟ್ ಅಮ್ಮನವರು ಬರೆದಿದ್ದ ಪಾಠಶಾಲೆಯ ಬೋಧನ ಕ್ರಮದಲ್ಲಿರುವ ಕೆಲವು ಸಾಮಾನ್ಯ ಕೊರತೆಗಳೂ, ಅವುಗಳ ನಿವಾರಣೋಪಾಯಗಳೂ ಎಂಬ ಉಪನ್ಯಾಸವನ್ನು ಮ|| ಟಿ ಎಸ್ ರಾಘವಾಚಾರ್ಯರೂ ಓದಿದರು ಬಳಿಕ ಆಯಾ ಸಂಗತಿಗಳಿಗೆ ಸಂಬಂಧಪಟ್ಟ ಚರ್ಚೆಗಳೂ ಸಮಾಧಾನಗಳೂ ಜರುಗಿದುವು ಅನಂತರ ಮಧ್ಯಾಹ್ನ 21 ಘಂಟೆವರೆಗೆ ಪ್ರದರ್ಶನ ನೋಡಲಿಕ್ಕೆ ಅವಕಾಶ ಕೊಡಲ್ಪಟ್ಟಿದ್ದಿತು

ಆ ದಿನ ಮಧ್ಯಾಹ್ನವೂ ಮರುದಿನವೂ ಮೈಸೂರು ಅಕ್ಷರಶಾಲಾ ಮ|| ಶ್ರೀಕಂಠಯ್ಯನವರು ಬಳೆಪೂರು ಮತ್ತು ಕಡ್ಡಿಗಳ ಮೂಲಕ ಸಣ್ಣ ಮಕ್ಕಳಿಗೆ ವಿನೋದಕರವಾಗಿ ಅಕ್ಷರಗಳೂ ಕಲಿಸುವ ಮಾದರೀ ಪಾಠವನ್ನು ತಿಳಿಸಿ ಉಪನ್ಯಾಸ ಮಾಡಿದರು ಇದಾದ ಮೇಲೆ ಯಥಾಪ್ರಕಾರ ಸಭೆಯು ಸೇರಿತು ಇನ್‌ಸ್ಪೆಕ್ಟರ್ ಜನರಲ್‌ರವರೇ ಅಗ್ರಾಸನಾಧಿಪತಿಗಳಾದರು ಬೆಂಗಳೂರು ಮಿಸ್ ಎಲ್ಲಿಮಾರ್ಸ್ ಅಮ್ಮನವರು ಬರೆದು ಕಳುಹಿಸಿದ್ದ ಪಾಠಶಾಲೆಯ ಕ್ರಮ, ಶಿಕ್ಷೆ, ಆಟಗಳು ಎಂಬ ಉಪನ್ಯಾಸವನ್ನು ಇಲ್ಲಿ ಮ ಎಂ ಎ ತಿರುಮಲಾಚಾರ್ಯರು ಓದಿದರು ಹೊಳೆನರಸೀಪುರದ ಮ ಎ ಸಂಪತ್ತಯ್ಯಂಗಾರ್ಯ ಮಕ್ಕಳಿಗೆ ಪಾಠಗಳನ್ನು ಕೈಗಾರಿಕೆ ಕಲಿಸುವ ಹೊಸ ಪದ್ಧತಿ ಎಂಬ ವಿಷಯವಾಗಿ ತಮ್ಮ ಅನುಭವವನ್ನು ದೃಷ್ಟಾಂತ ಕೊಟ್ಟು ವಿವರಿಸಿದರು ಅನಂತರ ಪಾರೆಸ್ಟ್ ಆಫೀಸರ್ ಮ|| ಎಚ್ ಶ್ರೀನಿವಾಸರಾಯರವರೂ ಎಲಿಯೂರಿನ ಮ ಕ ರಂಗಸ್ವಾಮಿ ಗೌಡರೂ ಓದಿದ ಉಪನ್ಯಾಸಗಳು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂಬ ಕುತೂಹಲವನ್ನು ಹಳ್ಳಿಯ ಜನಗಳ ಮನಸ್ಸುಗಳಲ್ಲಿ ಉಂಟುಮಾಡುವುದಕ್ಕೆ ಉಪಾಧ್ಯಾಯರು ಅನುಸರಿಸಬೇಕಾದ ಉಪಾಯಗಳು ಎಂಬ ಉಪನ್ಯಾಸಗಳನ್ನು ಓದಿದರು ಇವುಗಳಲ್ಲಿ ಎರಡನೆಯದಕ್ಕೆ ಈ ಕೆ ರಾಜನ್ ಮ ಎ ಶ್ರೀನಿವಾಸಮೂರ್ತಿಯವರು 10 ರೂಪಾಯಿ ಬಹುಮಾನ ಕೊಟ್ಟಿದ್ದಾರೆ ಕಡೆಯಲ್ಲಿ ಸಭಾಧ್ಯಕ್ಷರು ಈ ಮೇಲಿನ ಉಪನ್ಯಾಸ ವಿಷಯಗಳನ್ನೆಲ್ಲಾ ಇನ್ನು ವಿವರಿಸಿ, ವಿದ್ಯಾಪ್ರಸರಣಕ್ಕೆ ಕೈಗಾರಿಕೆಯೇ ಹೆಚ್ಚು ಸಹಕಾರಿಯೆಂದು ಬೇರೆ ಇರುವಂತೆ ಹೇಳಿ, ಈ ಉಪದೇಶದಿಂದ ಈಗಿನ ಪಾಠಗಳ ಕರ್ತವ್ಯ ಪಟ್ಟಿಯನ್ನು ಪರಿಷ್ಕರಿಸಿ ಎಂತಲೂ ಮಹಾಜನಗಳವರು ಎಲ್ಲರೂ ತಮ್ಮಬೇಕೆ ತಲೂ, ನಾರ್ಮಲ್ ಪಾಠಶಾಲೆಗಳಲ್ಲಿ ಇದಕ್ಕೆ ಬಹು ಅನುಕೂಲಗಳು ಕಲ್ಪಿಸಲ್ಪಡಬೇಕೆಂದು ಇಷ್ಟವು ಅಲ್ಲಿಗೆ ಹೋಗಿ ಸಂಗವಾದ ಬಹುದೆಂತಲೂ, ಹೀಗೆ ವ್ಯಾಸಂಗಮಾಡಿ ಸಂಗದ ಯಾದವರು ಸರ್ಕಾರದವರಿಂದ ಎಲ್ಲಿಗೆ ಕಳುಹಲ್ಪಟ್ಟರೂ ಹೋಗಿ ಸ್ವಂತವಾಗಿ ಇರುವ ಅಲ್ಲಿ ವಿದ್ಯೆ ಪರದೇಶದಲ್ಲಿ ಸ್ಥಿರವಾಗಿರಬೇಕೆಂತಲೂ, ಜೀವನಪಟ್ಟು ವರ್ತನಾದಬೇಕೆ ತ ಕೇಳಿಕೊಳ್ಳುತ್ತಾ ಒರೆವುದು ಸರ್ಕಾರದವರಿಗೆ ತುಂಬಾ ಅವಮಾನಕರವೆಂತಲೂ ಮುಂತಾಗಿ ಎಲ್ಲರಿಗೂ ಅಗತ್ಯವಾದ ಹಿತೋಕ್ತಿಗಳನ್ನು ಹೇಳಿ, ಈ ಸಭಾ ಕಾರ್ಯಪ್ರವರ್ತಕರೆಲ್ಲರನ್ನೂ ಶ್ಲಾಘಿಸಿ ವಂದನೆಯನ್ನು ತಿಳಿಸಿದರು ಬಳಿಕ ಸಂಘದ ಸೆಕ್ರೆಟರಿಯವರಾದ ರೆವ್ ಎ ಬ್ರೋಕ್‌ಬ್ಯಾಂಕ್ ಸಾಹೇಬರವರು ಇನ್‌ಸ್ಪೆಕ್ಟರ್ ಜನರಲ್ ರವರನ್ನೂ, ಇತರ ದೊಡ್ಡಮನುಷ್ಯರೆಲ್ಲರನ್ನೂ ಸಭೆಯು ಇಷ್ಟು ಪ್ರಯೋಜನಕರವಾಗಿ ನೆರವೇರುವುದಕ್ಕಾಗಿ ವಂದಿಸಿ, ನೆರೆದಿದ್ದ ಉಪಾಧ್ಯಾಯರೆಲ್ಲರೂ ಇದುವರೆಗೆ ಕೇಳಿದ ಉಪನ್ಯಾಸಗಳ ಮತ್ತು ಚರ್ಚೆಗಳ ಸೂತನ ಭಾಗಗಳನ್ನು ಗ್ರಹಿಸಿ ಆಯಾ ರೀತಿಯಲ್ಲಿಯೇ ತಮ್ಮ ತಮ್ಮ ಪಾಠಶಾಲೆಗಳಲ್ಲಿ ವಿದ್ಯಾಭಿವೃದ್ಧಿ ಕಾರ್ಯಗಳು ಇನ್ನೂ ಉತ್ತಮವಾಗಿ ನಡೆಯುವ ಹಾಗೆ ಮಾಡುವರೆಂದು ನಂಬಿರುವುದಾಗಿ ಕನ್ನಡದಲ್ಲಿಯೂ, ಇಂಗ್ಲಿಷಿನಲ್ಲಿಯೂ ಭಾಷಣಮಾಡಿ ಎಲ್ಲರನ್ನೂ ವಂದಿಸಿದರು ಇದರೊಡನೆ ಎರಡನೇ ದಿನದ ಸಭಾ ಕಾರ್ಯವು ಮುಕ್ತಾಯವಾಯಿತು

ಈ ಸಮಯಕ್ಕೆ ಸರಿಯಾಗಿ ಈ ನಗರದಲ್ಲಿರುವ ಎಲ್ಲಾ ಪಾಠಶಾಲೆಗಳ ಉಪಾಧ್ಯಾಯರೂ ತಮ್ಮ ತಮ್ಮ ವಿದ್ಯಾರ್ಥಿಗಳನ್ನು ಅದೇ ಮಂದಿರದ ಮುಂಭಾಗದ ಮೈದಾನದಲ್ಲಿ ಸೇರಿಸಿದ್ದರು ಅಲ್ಲಿ ಕೂಡಿದ್ದ ಬಾಲಕ ಬಾಲಿಕೆಯರ ಒಟ್ಟು ಸಂಖ್ಯೆಯು ಸುಮಾರು 500 ರ ವರೆಗೂ ಇದ್ದಿತು ಇನ್‌ಸ್ಪೆಕ್ಟರ್ ಜನರಲ್ ರವರು ಸಭಿಕರೊಡನೆ ಮೈದಾನಕ್ಕೆ ದಯಮಾಡಿ ಆ ಮಕ್ಕಳ ಸಮೂಹವನ್ನು ನೋಡಿ ಸಂತೋಷಪಟ್ಟರು ಬಾಲಕಿಯರು ಚಕ್ರವರ್ತಿಯವರ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನಾ ಗೀತಗಳನ್ನು ಹಾಡಿದರು ಮಕ್ಕಳಿಗೆಲ್ಲಾ ಸಕ್ಕರೆಯು ವಿನಿಯೋಗಿಸಲ್ಪಟ್ಟಿತು ಸರ್ವರೂ ಹರ್ಷಾನ್ವಿತರಾಗಿ ಸಭಾ ಕಾರ್ಯಗಳನ್ನೆಲ್ಲಾ ಪೂರೈಸಿದರು

ಈ ಸಭೆಯು ನಡೆದ ಎರಡು ದಿನಗಳಲ್ಲಿಯೂ ಅತಿಥಿಗಳಿಗೆಲ್ಲಾ ಊಟ ಉಪಚಾರಗಳು ತೃಪ್ತಿಕರವಾಗಿ ನಡೆದುವು ಇಷ್ಟು ಮಾತ್ರವಲ್ಲದೆ ಅ|| ಕಮಿಷನರುಗಳಾದ ಮ|| ಅಪ್ಪಣ್ಣಯ್ಯಂಗಾರ್ಯರೂ, ಮಿ|| ಜಹಿರುದ್ದೀನ್ ಮಕ್ಕಿಯವರೂ ಅಡ್ವೊಕೇಟ್ ಮ|| ವೆಂಕಟೇಶಯ್ಯನವರೂ ವಿಶಿಷ್ಟರಿಗೂ ಉಪಾಹಾರಗಳನ್ನು ಏರ್ಪಡಿಸಿ ಸತ್ಕರಿಸಿದರು ಸ್ಥಳ ಪರಸ್ಥಳಗಳ ಸಮಸ್ತ ಉಪಾಧ್ಯಾಯರೂ ಈ ಸಂಘದಿಂದ ತಮಗುಂಟಾದ ಸತ್ಕಾರ ಪ್ರೋತ್ಸಾಹಗಳಿಗೆ ಮೆಚ್ಚಿ, ಸಂತುಷ್ಟರಾಗಿ ತೆರಳಿದರು.

ಪ್ರತ್ಯಕ್ಷದರ್ಶಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪ್ರತ್ಯಕ್ಷದರ್ಶಿ, ಕೃಷ್ಣರಾಜಪೇಟೆ —ವಿಷಯವನ್ನು ನೀವು ಯಾವ ಪತ್ರಿಕೆಯಲ್ಲಿ ಓದಿದಿರೋ ಆ ಪತ್ರಿಕೆಗೇ ನಿಮ್ಮ ಜವಾಬನ್ನು ಬರೆಯುವುದು ಉತ್ತಮ

ಕೆಂ. ಚಿಕ್ಕನಂಜೆಗೌಡ, ಸೋಗಳ —ನೀವು ಹೇಳುವ ನೆಪಕದ್ದುವ ವಿಷಯವನ್ನು ಸಂಕ್ಷೇಪವಾಗಿ ಪ್ರಕಟಿಸಿದ್ದಾಯಿತು ನಿಮ್ಮ ಬಾತ್ಮಿಯನ್ನು ವಿಶೇಷವೇ ಇತ್ಯರ್ಥವಾಗುವುದಕ್ಕೆ ಮುಂಚೆ ಪ್ರಕಟಿಸುವುದು ನ್ಯಾಯವಿರುದ್ಧ

—ಎಡಿ]

ಕರೆಸ್ಪಾಂಡೆನ್ಸ್.

ಚೇಳಿನ ಔಷಧ.

ಅಯ್ಯಾ,—ಶ್ರೀರಂಗಪಟ್ಟಣದಲ್ಲಿರುವ ಪ್ಲೀಡರು ಮ|| ದೇವರಾಜರಾಯರ ಚೇಳಿನ ಔಷಧದಿಂದ ನನ್ನಲ್ಲಿ ಬಹಳ ಜನ ಗುಣಹೊಂದಿದಾರೆ ಇವರು ಇಂಥಾ ಅಮೋಘವಾದ ಔಷಧ ಕಂಡುಹಿಡಿದು ಧರ್ಮಾರ್ಥವಾಗಿ ಕೊಡತಕ್ಕ ವಿಚಾರಕ್ಕೆ ಇವರಿಗೆ ಈ ಪತ್ರಿಕಾ ಮೂಲಕ ಅನೇಕ ವಂದನೆಗಳನ್ನು ಅರ್ಪಿಸುತ್ತೇನೆ ಸರ್ವರೂ ತರಿಸಬಹುದು

ಎ ಪದ್ಮನಾಭ, ದೊಡ್ಡಬಳ್ಳಾಪುರ.

ಗ್ರಾಮಗಸ್ತು—ವಿಷಯ ತಿಳಿಯಬೇಕು

ಅಯ್ಯಾ,—ಪ್ರತಿ ದಿನವೂ ಗ್ರಾಮ ನೌಕರರು ಗ್ರಾಮಗಸ್ತು ಮಾಡಬೇಕೆಂದು ಜನಗಳನ್ನು ನೇಮಿಸುವದರಲ್ಲಿ ಸ್ವೇಚ್ಛೆಯಾಗಿ ವರ್ತಿಸುತ್ತಿದಾರೆ ಈ ನಡತೆಯಿಂದ ಉಂಟಾಗುವ ತೊಂದರೆ ಗ್ರಾಮಸ್ಥರಿಗೆ ಗೊತ್ತಿರುತ್ತೆ ದಯವಿಟ್ಟು ನನ್ನ ಮತ್ತು ತಮ್ಮ ವಾಚಕರ ತಿಳುವಳಿಕೆಗಾಗಿ ತಾವಾಗಲಿ, ತಮ್ಮ ವಾಚಕರಾಗಲಿ ಕೆಳಗಿನ ಪ್ರಶ್ನೆಗಳಿಗೆ ಜವಾಬು ಕೊಡುವದರ ಮೂಲಕ ಸಂಶಯವನ್ನು ನಿವಾರಣೆ ಮಾಡಲು ಪ್ರಾರ್ಥನೆ—ಗ್ರಾಮಗಸ್ತನ್ನು ಪ್ರತಿ ಒಬ್ಬರೂ ಕಡ್ಡಾಯವಾಗಿ ಮಾಡಬೇಕೇ ? ಗಸ್ತಿನಿಂದುಂಟಾಗುವ ಪ್ರಯೋಜನ ಮತ್ತು ಆವರವರ ಗಸ್ತಿನಲ್ಲಿ ಸಂಭವಿಸಬಹುದಾದ ಕಳ್ಳತನ ವಗೈರೆಗೆ ಗುರಿಯಾಗುವವರ್ಯಾರು ? ಗಸ್ತಿನವರು ಯೋಗ್ಯರಲ್ಲದಿದ್ದರೆ ಇವರಿಂದ ಪ್ರಯೋಜನವೇನು ? ಇವರಿಂದ ಪ್ರಜೆಗಳಿಗೆ ಹಿತವೇ, ಯಾ ಅಹಿತವೇ ?

ಸತ್ಯಾಭಿಲಾಷಿ,

ತಕಾವಿ ಸಾಲ

ಅಯ್ಯಾ,—ನಾನು ನನ್ನ ಜಮೀನನ್ನು ಅಬಾದಿಗೆ ತರುವುದಕ್ಕೋಸ್ಕರ ತಕಾವಿ ಸಾಲಕ್ಕಾಗಿ ನಮ್ಮ ಡೆಪ್ಯುಟಿ ಕಮಿಷನರವರಿಗೆ ಬರೆದುಕೊಂಡು ಸುಮಾರು 8 10 ತಿಂಗಳುಗಳಾದವು ಅದರ ಮೇಲೆ 3-4 ಆವರ್ತಿ ಪುನಹ ಬರೆದರೂ "ಇನ್ನೂ ವಿಚಾರಣೆಯಲ್ಲಿದೆ," "ಜನರಲ್ ಅಸಿಸ್ಟೆಂಟರಿಗೆ ಬರೆದಿದೆ" ಎಂದು ಜವಾಬು ಕೊಡುತ್ತಿದಾರೆ ಆರಂಬದ (ವ್ಯವಸಾಯದ) ಕಾಲವು ಬಹಳ ಸಮೀಪಿಸಿರುವುದರಿಂದ ಇನ್ನು ಮುಂದೆ ಏನು ಮಾಡಬೇಕು ? ಅಥವಾ ಯಾರಿಗೆ ಬರೆಯಬೇಕೆಂಬುವದನ್ನು ತಾವಾದರೂ ದಯವಿಟ್ಟು ತಮ್ಮ ಪತ್ರಿಕೆಯ ಮೂಲಕ ತಿಳಿಸಬೇಕೆಂದು ಬೇಡುತ್ತೇನೆ ಮತ್ತು ಇಂಥಾ ಕಾಗದ ಪತ್ರಗಳ ವಿಲೇವಾರಿಯನ್ನು ವಿಳಂಬಿಸುವುದರಿಂದ ರೈತರುಗಳಿಗೆ ಆಗುವ ಕಷ್ಟಗಳಿಗೆ ಸರ್ಕಾರದವರು ಗಮನಕೊಡುವರೆಂದು ಕೋರುತ್ತೇನೆ

ಅರಸೀಕೆರೆ ತಾ|| ಹಾರ್ನಹಳ್ಳಿ

ಒಬ್ಬ ಬಡ ರೈತ

[ಈ ರೀತಿ ಸಾವಕಾಶಮಾಡಿದರೆ ವ್ಯವಸಾಯ ಅಭಿವೃದ್ಧಿ ಹೊಂದುವುದು ಹ್ಯಾಗೆ ? ಗ್ರಾಮಾಂತರಗಳಲ್ಲಿ "ಬಡ ರೈತರು ಮಾರ್ವಾಡಿಗಳಿಂದ ಹೆಚು ಬಡ್ಡಿಗೆ ಸಾಲವನ್ನು ತಂದು ಮನೆಮಾರುಗಳನ್ನು ಕಳೆದುಕೊಳ್ಳುವ ಸಮಯವು ಒದಗುತ್ತದೆ" ಎಂಬ ಮಾತು ತಪ್ಪುವದು ಎಂದಿಗೆ ?—ಎಡಿ]

ಟ ನರಸೀಪುರದ ಕೋಆಪರೇಟಿವ್ ಸೊಸೈಟಿ

ಅಯ್ಯಾ,—ಈ ಸಂಘವು 1908 ನೇ ವರ್ಷದ ಆದಿಯಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಹೆಸರಿನ ಮೇಲೆ ಪ್ರಾರಂಭವಾಗಿ ಸಂಘದ ಕಾರ್ಯವು ತೃಪ್ತಿಕರವಾಗಿ ಮತ್ತು ವ್ಯಾಪಾರಗಳಿ ದ ಬೆಳೆಯುತ್ತಿದ್ದಿತು ಈ ರೀತಿ ಸುಮಾರು ಮೂರು ವರ್ಷ ನಡೆದ ಮೇಲೆ ಸಂಘದಲ್ಲಿ ಕೆಲವು ದ್ರವ್ಯನಷ್ಟ ಸಂಭವಿಸಿದುದರಿಂದ ಅವನ್ನು ಬಿಟ್ಟು, ಮುಂದೆ ಸಂಘದಲ್ಲಿ ಲೇವಾದೇವಿ ಮಾತ್ರ ನಡಿಸುವುದು ಉತ್ತಮವೆಂದು ಮೆಂಬರುಗಳೆಲ್ಲಾ ಸಭೆ ಸೇರಿ ತೀರ್ಮಾನ ಮಾಡಿದರು ಆ ರೀತಿ ಈ ವರಿಗೆ ನಡಿಸಿದ ಸೊಸೈಟಿ ಕೆಲಸಗಳಲ್ಲಿ ಕೆಲವು ಲೋಪಗಳು ಕಂಡುಬಂದವು ಈ ತಿಂಗಳು 24 ರಲ್ಲಿ ಕೋಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರ್‌ರವರು, ಪುಟ್ಟಸ್ವಾಮಿಯವರು ಬಂದು ಸೊಸೈಟಿಯನ್ನು ಇನ್ಸ್‌ಪೆಕ್ಷನ್ ಮಾಡಿ ಲೋಪಗಳನ್ನು ಹೋಗಲಾಡಿಸುವ ಉದ್ದಿಶ್ಯ ಜನರಲ್ ಮೀಟಿಂಗ್ ನಡಿಸಿ ಮುಂದೆ ಸೊಸೈಟಿಯಲ್ಲಿ ಯಾವ ಲೋಪಗಳೂ ಉಂಟಾಗದ ಮಟ್ಟಿಗೆ ತಕ್ಕ ಏರ್ಪಾಡುಗಳನ್ನು ಮಾಡಿಸಿ ಪ್ರಜೆಗಳಿಗೆ ಸೊಸೈಟಿಯಿಂದ ಉಂಟಾಗುವ ಪ್ರಯೋಜನಗಳನ್ನು ಉಪನ್ಯಾಸ ಮೂಲಕ ವ್ಯಕ್ತಪಡಿಸಿದರು ಇವರ ಪ್ರೋತ್ಸಾಹದಿಂದ ಈ ಗ್ರಾಮದಲ್ಲಿ ಸೊಸೈಟಿ ವಿಚಾರದಲ್ಲಿ ಅಪನಂಬಿಕೆ ಪಡುತಿದ್ದ ಅನೇಕ ಜನಗಳು ತಮಗೆ ಉಂಟಾಗುವ ಪ್ರಯೋಜನಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಸುಮಾರು 120 ಷೇರು (1 ಷೇರಿಗೆ 10 ರೂ) ಗಳನ್ನು ಹೊಸದಾಗಿ ತೆಗೆದುಕೊಂಡರು ಇವರ ಬೋಧನಾ ಶಕ್ತಿಯು ತುಂಬಾ ಪ್ರಯೋಜನಕರವಾದದ್ದು ಇವರು ತಿಳಿಸಿದ ವಿಚಾರಗಳೆಲ್ಲಾ ಜ್ಞಾಪಕದಲ್ಲಿಡತಕ್ಕದ್ದಾಗಿರುತ್ತೆ

ಒಕಪಾದಿ

ದೆವ್ವಗಳ ಪ್ರಸಂಗ

ಅಯ್ಯಾ,—ಬೆಂಗಳೂರು ತಾಲ್ಲೂಕು ಯಲಹಂಕಕ್ಕೆ ನಾನು ತಾ 22ನೇ ಶುಕ್ರವಾರ ಹೋಗಿದ್ದೆ ಈ ಊರಿಗೆ ಸಮೀಪದಲ್ಲಿ ಬೆಳ್ಳಹಳ್ಳಿ ಎಂದು ಒಂದು ಗ್ರಾಮವಿರುತ್ತೆಂತಲೂ, ಅಲ್ಲಿ ದೆವ್ವಗಳು ಬಿಡಿಸುತ್ತಾರೆಂತಲೂ, ನೂರಾರು ಜನ ಬರುತ್ತಾರೆಂತಲೂ, ಈ ದಿವಸ ಮಂತ್ರಿಸತಕ್ಕ ದಿನವೆಂತಲೂ ತಿಳಿದು ನೋಡಲು ಕುತೂಹಲ ಉಳ್ಳವನಾಗಿ ಹೋದೆನು. ಆ ದಿನ ಮಧ್ಯಾಹ್ನ 12 ಗಂಟೆಗೆ ಮುಸಲಮಾನರ ಮತದ ಒಬ್ಬ ಮಂತ್ರವಾದಿ ಬಂದು ಊರು ಮುಂದಿನ ಮಂಟಪದಲ್ಲಿ ಬಂದು ಕೂತುಕೊಳ್ಳಲು 10-40 ಜನರು ಪ್ರಶ್ನೆಗಳು ಕೇಳಲು ಶಕ್ತ್ಯಾನುಸಾರ ದಕ್ಷಿಣೆಗಳನ್ನು ಅರ್ಪಿಸಿದರು ಆ ಮಂತ್ರವಾದಿ ಅವರ ಕೆಲಸ ಆಗುತ್ತೆ, ಇಲ್ಲ ಎಂದು ತಾತ್ಕಾಲಿಕ ಸಂದರ್ಭವನ್ನರಿತು ಜವಾಬುಗಳು ಹೇಳುತ್ತಿರುವಾಗ್ಗೆ ಒಬ್ಬ ರೈತ ಬಂದು ತಾನು ಒಬ್ಬರ "ಎಮ್ಮೆ" ಮುರಿದು ಹಾಕಿದಂತೆಯೂ, ಕೇಸು ತನ್ನ ಮೇಲೆ ಬಂದಿರುತ್ತೆಂತಲೂ, ಬಚಾವಾಗಲು ಏನು ಪ್ರತೀಕಾರವೆಂದು ಪ್ರಶ್ನೆಮಾಡುವಾಗ್ಗೆ ಮಂತ್ರವಾದಿ—380 ಐ. ಪಿ. ಸಿ ಸೆಕ್ಷನ್ ಮೇರೆಗೆ ಪೋಲೀಸಿನವರು ಕೇಸುಮಾಡಿದಾರೆ ರಾಜಿ ಮಾಡಿಕೋ ನಾನು ಹೇಳುವೆನು ತಪ್ಪಿದರೆ ಸಜಾ ಆಗುತ್ತೆಂದು ಜವಾಬು ಹೇಳುವಾಗ್ಗೆ ಮಂತ್ರವಾದಿಗೆ ಎಷ್ಟರ ವ್ಯವಹಾರಜ್ಞಾನವಿದೆಯೋ, ಪ್ರಶ್ನೋತ್ತರ ಎಷ್ಟರ ನಂಬಿಕೆಯಾದದ್ದೋ ವಾಚಕರೇ ಊಹಿಸಿಕೊಳ್ಳಬೇಕು.

ಆ ಸಮಯದಲ್ಲೇ ಕೆಲವು ಹಿಂದೂ ಹೆಂಗಸರೂ, ಮುಸಲಮಾನರ ಹೆಂಗಸರೂ ಬಂದು ತಮಗೆ ದೆವ್ವಗಳು ಹಿಡಿದಿರುತ್ತೆಂದು ಹೇಳಿಕೊಳ್ಳಲು ಮಂತ್ರವಾದಿ ತನ್ನಮುಂದೆ ಕೂಡಿಸಿಕೊಂಡು ತಲೆ ಬಿಚ್ಚಿಸಿ ದೆವ್ವಗಳನ್ನು ಪ್ರತ್ಯಕ್ಷದಲ್ಲಿ ಮಾತಾಡಿಸುವಂತೆ ಮಾತಾಡಿಸುತ್ತಾ ಇರುವಾಗ್ಗೆ ಆ ಹೆಂಗಸರಿಗೆ ತಲೆಗಳು ತಿರುಗಲು ಷುರು ಆಯ್ತು ಮಂತ್ರವಾದಿಯಿಂದ ಚಿತ್ತದ ಏಟುಗಳು ಜೋರು ಆದ ಹಾಗೆಲ್ಲಾ ತಲೆ ಮೈ ತಿರುಗುವದು ಜಾಸ್ತಿ ಆಗಿ ಆ ಅಜ್ಞಾನದ ದೆವ್ವ ಹೋಗುತ್ತೇನೆ ಎಂದು ಹೇಳುವದು, ತಲೆ ನಿಲ್ಲಿಸಿದಾಗ ಇನ್ನೂ 10 ದಿನ ಇರುತ್ತೇನೆ ಅನ್ನುವದು ಹೀಗೆಲ್ಲಾ ಪರಿಣಮಿಸಿತು. ಆ ಬಿಸಿಲುಕಾಲದ ಬಿಸಿಲಿಗೂ, ಹೆಂಗಸರು ಉಪವಾಸದಿಂದ ತಲೆ ಮೈ ಬೀಸೋಕಲ್ಲಿನಂತೆ 3 4 ಗಂಟೆ ತಿರುಗಿಸುವದಕ್ಕೂ, ಆ ಚಿತ್ತದ ಏಟುಗಳಿಗೂ ಮಂತ್ರವಾದಿಗೆ ಅರ್ಪಿಸತಕ್ಕ ದಕ್ಷಿಣೆ, ಕೋಳಿಗಳು ವಗೈರೆ ಶಾಂತಿಗೂ ಇವರ ಹಣೇಲಿ ಏನು ಬರೀತೋ ಎಂದು ಸಂಕಟಪಟ್ಟೆ ಆ ಹೆಂಗಸರ ತಂದೆತಾಯಿ ವಗೈರೆ ದೊಡ್ಡವರು ಸಾಕುವಾಗ್ಗೆ ಒಂದು ಏಟೂ ಹಾಕದೆ ಸಾಕಿ ಈ ಮಂತ್ರವಾದಿ ಬಳಿ ಬಂದಾಗ ಆತ ಹೊಡೀತಾ ಇರುವಾಗ್ಗೆ ಇನ್ನೂ ಹೊಡೀರಿ, ಜೋಡಿನಿಂದ ಹೊಡೀಬೇಕು ಎಂದು ಮಂತ್ರವಾದಿಗೆ ಪ್ರೋತ್ಸಾಹಿಸುತ್ತಾ ಇದ್ದ ವಿಚಾರನೋಡಿ ಆಶ್ಚರ್ಯವಾಯ್ತು. ಈ ಸಂಗತಿ ಪ್ರತ್ಯಕ್ಷದಲ್ಲಿ ನೋಡಿದ ನಾನು ನನಗೆ ಭರವಸೆ ಆದಂತೆ ಈ ಪತ್ರಿಕಾ ಮೂಲಕ ತಿಳಿಸಲಾರೆ ಒಬ್ಬರಿಗೆ ದೆವ್ವ, ದೆವ್ವ ಎಂದು ನಿನ್ನ ಮನಸ್ಸಿಗೆ ಭಯವಾಗಿ ಮೆದುಳಿಗೆ ಹತ್ತಿ ನಿನ್ನ ಬುದ್ಧಿ ಭ್ರಮಣೆ ಆಗಿದೆ ಇದು ಸುಳ್ಳು ಎಂದು ದೃಢಪಡಿಸಿಕೊಂಡಿರು ಆ ದೆವ್ವ ಓಡಿ ಹೋಗುತ್ತೆಂದು ನಾನು ಹೇಳಿದ ಬುದ್ಧಿವಾದ ಒಬ್ಬರು ಕೇಳಿ ನನ್ನ ಆಕ್ಷೇಪಿಸಿದರು ಇಷ್ಟು ನಾಗರಿಕ ಕಾಲದಲ್ಲಿ ಜನರ ಮೌಢ್ಯತೆ ಹೋಗಲಿಲ್ಲ ಇದರಿಂದ ಬಹಳ ಜನರ ನೆಮ್ಮದಿಗೆ ಭಂಗ ಉಂಟಾಗಿ ನಷ್ಟಪಡುತ್ತಾರೆ ಘನವುಳ್ಳ ಸರ್ಕಾರದವರು ಈ ವಿಚಾರಕ್ಕೆ ಗಮನಕೊಟ್ಟು ಬಡ ರೈತರನ್ನು ಕಾಪಾಡಬೇಕೆಂದು ಬೇಡುವೆನು

ಪ್ರತ್ಯಕ್ಷದರ್ಶಿ.

ಪುರಾತನ ವೈಷಮ್ಯದ ಪರಿಹಾರ.

ಅಯ್ಯಾ,—ಚನ್ನಪಟ್ಟಣದ ತಾಲ್ಲೋಕು ಕಸಬಾದಲ್ಲಿರುವ ರೇಷ್ಮೆ ಕೋರಿ ಹ|| ಸಾಹುಕಾರ್‍ರುಗಳಾದ ಹೈದರ್ ಸಾಹೇಬರೂ, ಅಬ್ದುಲ್ ಖುದೂಸ್ ಸಾಹೇಬರೂ, ಮ|| ರಂಗಯ್ಯಂಗಾರ್‍ರವರೂ ಇದೇ ಕಸಬಾದಲ್ಲಿರುವ ದಾಸವೈಷ್ಣವ ಜಾತಿಯವರಾದ ಸುಮಾರು 100 ಮನೆಗಳುಳ್ಳವರು ಸ್ವಜಾತಿಯಲ್ಲಿ ಎರಡು ಪಾರ್ಟಿಗಳಾಗಿ ಸುಮಾರು 50 ವರ್ಷಗಳ ಲಾಗಾಯ್ತು ನಡೆದು ಬಂದ ಮನಃಕ್ಲೇಶದಿಂದ ಆಗಿಂದಾಗ್ಗೆ ಒಬ್ಬರಿಗೊಬ್ಬರು ವ್ಯಾಜ್ಯಗಳನ್ನು ಮಾಡಿಕೊಂಡು ಮಾನ, ಪ್ರಾಣ, ಧನಗಳನ್ನು ಸರ್ಕಾರಕ್ಕೆ ಸೂರೆ ಕೊಡುತ್ತಿದ್ದರು ಈಗ ಒಂದು ವಾರದ ಹಿಂದೆ ಉಭಯ ಪಾರ್ಟಿಗಳಿಗೆ ಮಧ್ಯಸ್ಥಗಾರರಾಗಿ ಅಲ್ಲದೆ ಸರ್ಕಾರಕ್ಕೆ ಹತ್ತುವ ಸೂಚನೆಗಳಷ್ಟು ಮೇಲೆ ಸೂಚಿಸಿರುವ ಮಹನೀಯರುಗಳು ಈ ವಿಷಯವನ್ನು ತಿಳಿದು, ತಾಯಿಯು ಮಗುವನ್ನು ಬೆಂಕಿಯ ಅನಾಹುತದಿಂದ ತಪ್ಪಿಸುವ ಪ್ರಕಾರ ಉಭಯ ಪಾರ್ಟಿಯವರಲ್ಲಿ ಮುಖ್ಯಸ್ಥರಾದ ಸಾಹುಕಾರ್ ಯಜಮಾನ್ ನರಸಿಂಹಅಯ್ಯನವರನ್ನೂ, ಸರಾಫ್ ವೇಂಕಟರಮಣಯ್ಯನವರನ್ನೂ, ಸಾಹುಕಾರ್ ಗುರಿಕಿಟ್ಟಪ್ಪನವರನ್ನೂ ಮತ್ತು ಮುಖ್ಯರಾದ ಅನೇಕರನ್ನೂ ಕರೆಸಿಕೊಂಡು, ತಮ್ಮ ರೇಷ್ಮೆ ಕೋಠಿಯಲ್ಲಿ ಒಂದು ವಾರದ ಮಟ್ಟಿಗೂ ತಮ್ಮ ಕೆಲಸಕಾರ್ಯಗಳನ್ನೆಲ್ಲ ಬಿಟ್ಟು ನಮ್ಮಗಳಿಗೆ ಬುದ್ಧಿವಾದವನ್ನು ಹೇಳಿ, ಉಭಯ ಪಾರ್ಟಿಯವರನ್ನೂ ಒಂದೇ ಪಾರ್ಟಿ ಮಾಡಿ, ನಮ್ಮ ಮಾನ ಪ್ರಾಣ ಧನಗಳನ್ನು ಕಾಪಾಡಿದ್ದಕ್ಕಾಗಿ ಆ ಮಹನೀಯರುಗಳನ್ನು ಸರ್ವದಾ ಸ್ಮರಿಸುತ್ತಾ ಇರುತ್ತೇವೆ ಅವರು ಇನ್ನೂ ಅನೇಕವಾಗಿ ಶ್ರಮ ತೆಗೆದುಕೊಂಡು ಲೋಕೋಪಕಾರವಾದ ಕೆಲಸಗಳನ್ನು ಮಾಡುತ್ತಾ ಇರಾರೆ.

ಚನ್ನಪಟ್ಟಣ

ಜವಳಿ ಅಂಗಡಿ ಶ್ರೀನಿವಾಸಯ್ಯ.

ಮೇಲುಕೋಟೆ ನೇಯಿಗೆ ಸೊಸೈಟಿ

ಅಯ್ಯಾ,—ಈ ಸೊಸೈಟಿಯು ಸ್ಥಾಪಿತವಾಗಿ ಎಂಟು ವರ್ಷಗಳಾಗಿದ್ದರೂ ಸಂಸ್ಥಾನದ ಹೆಸರುವಾಸಿಯಾದವುಗಳಲ್ಲಿ ಒಂದಾಗಿ ಅಭಿವೃದ್ಧಿಕರವಾಗಿ ನಡೆಯುತ್ತಾ ಬಂತು ಹಿಂದೆ ಇದ್ದ ಸೆಕ್ರೆಟರಿಯವರು ರೂಲ್ಸಿನಂತೆ ಆಡಳಿತ ನಡಿಸುವುದಿಲ್ಲವೆಂದು ಕೆಲವು ಮೆಂಬರುಗಳು ಆಕ್ಷೇಪಿಸಿದ್ದರಿಂದ ಅವರಲ್ಲಿ ಒಬ್ಬರಿಗೆ ಸೆಕ್ರೆಟರಿ ಕೆಲಸವನ್ನು ಕಳೆದ ಜನರಲ್ ಮೀಟಿಂಗಿನಲ್ಲಿ ಕೊಟ್ಟು, ಅಭಿಮಾನ ಶಾಲಿಗಳಾಗಿ ಕೆಲಸಮಾಡುತ್ತಿದ್ದ ಕೆಲವು ಮೆಂಬರುಗಳು ವಿಶ್ರಾಂತಿಪಡೆಯಬೇಕಾಯಿತು ಈಚೆಗೆ ಸಂಘದ ಆಡಳಿತಗಳು ಬೈಲಾ ಪ್ರಕಾರ ನಡಿಯುತ್ತಿಲ್ಲ. ವರ್ತಕರೆಲ್ಲರೂ ನಂಬಿಕೆಯಿಂದ ಇಲ್ಲೇ ಸರಕುಗಳನ್ನು ತೆಗೆಯುತ್ತಿದ್ದರು ಈಚೆಗೆ ಅವರಿಗೆ ಬಹಳ ನಷ್ಟ ಉಂಟಾಗುತ್ತಲಿದೆ ಕಮ್ಮಿ ಬೆಲೆ ಸಿಲ್ಕಿಗೆ ಹೆಚ್ಚು ಬೆಲೆ ಕೊಡಬೇಕಾಗುತ್ತೆ. ಇಂಥಾ ಒಂದು ಸರಕು ಸಿಕ್ಕಿದೆ ಈ ರೀತಿಯಾದರೆ ನಂಬಿಕೆಗೆ ಕಾಲವೆಲ್ಲಿ ? ಕಮಿಟಿಯವರು ಸರಿಯಾಗಿ ಕೆಲಸ ಕೊಡುತ್ತಿರುವಂತಿಲ್ಲ ಮೆಂಬರುಗಳ ಪರವಾದ ಆಡಿಟರು ಈ ವಿಷಯಗಳನ್ನು ಚೆನ್ನಾಗಿ ಪರಿಶೋಧಿಸಿ ಕೆಲವು ಸಲಹೆಗಳನ್ನು ಕೊಟ್ಟಿದ್ದಕ್ಕೆ ಸಬಾಲ್ ಜವಾಬಿನಂತೆ ಕೆಲವು ತೀರ್ಮಾನವನ್ನು 5 ಜನ ಕಮಿಟಿಯವರು ಮಾತ್ರ ರಿಕಾರ್ಡುಮಾಡಿರುತ್ತಾರೆ ಕಮಿಟಿಯವರು ಕೈಫಿಯತ್ತನ್ನು ಚೆನ್ನಾಗಿ ಓದಿ ನೋಡಿಕೊಂಡು, ಆಡಿಟರವರು ಸಂಘದ ಏಳಿಗೆಗಾಗಿ ಕೊಟ್ಟಿರತಕ್ಕ ಸಲಹೆಗಳನ್ನು ಜಾರಿಗೆ ತಂದು, ಸಂಘದ ಮೆಂಬರುಗಳಿಗೆ ಅನುಕೂಲವಾದ ಏರ್ಪಾಡುಗಳನ್ನು ಮಾಡಿ, ಸಂಘವು ಹೊಂದಿರತಕ್ಕ ಹೆಸರನ್ನು ಉಳಿಸಿಕೊಳ್ಳುವಂತೆಯೂ, ಪೂರ್ವದಂತೆ ಸಂಘದ ಆಡಳಿತವು ವರ್ತಕರಲ್ಲಿ ನಂಬಿಕೆಯನ್ನು ಉಂಟುಮಾಡುವಂತೆಯೂ ಏರ್ಪಾಡು ಮಾಡುತ್ತಾರೆಂದು ನಂಬಿರುವ

ಈ ಸೊಸೈಟಿಯ ಮೆಂಬರು.

ತಾಲ್ಲೋಕು ವರ್ತಮಾನಗಳು.

ಅರಕಲಗೂಡು.—ಮೇ ತಿಂಗಳು 22 ನೇ ತಾ. ಶುಕ್ರವಾರ ರಾತ್ರಿ ದಿವ್ಯವಾದ ಒಂದು ಹದ ಮಳೆ ಬಂದು ಸುತ್ತುಮುತ್ತಿನ ಗ್ರಾಮಗಳ ಕೆರೆಗೆ ಮುಕ್ಕಾಲು ಭಾಗ, ಈ ಊರಿನ ಕೆರೆಗೆ ಒಂದೆರಡು ಅಡಿ ನೀರು ಬಂದಿದೆ ಜನಗಳಿಗೂ ದನಗಳಿಗೂ ತುಂಬಾ ಆನಂದ ಉಂಟಾಗಿದೆ ರೈತರೆಲ್ಲಾ ಹೊಲಗಳನ್ನು ಉತ್ತು ಬಿತ್ತುತ್ತಲಿದಾರೆ ಬಿಸಿಲಿನ ಧಗೆ ಕಡಿಮೆಯಾಗಿದೆ—ಅದೇ 22 ನೇ ತಾ ಶುಕ್ರವಾರ ಊರಿಗೆ 5 ಮೈಲು ದೂರದಲ್ಲಿರುವ ಹೆಬ್ಬಾಳ ಗ್ರಾಮದ ಲಕ್ಕಿಪುರದ ಕೆಂಪಣ್ಣನ ಹೆಂಡತಿಗೆ ಸಿಡಿಲು ಬಡಿದು ತಕ್ಷಣವೇ ಮೃತಳಾದಳು ಮಕ್ಕಳ ಗೋಳನ್ನು ಹೇಳತೀರದು ಬೆಳಿಗ್ಗೆ ಸರ್ಕಾರದವರು ಬಂದು ಕ್ರಮಪ್ರಕಾರ ಮಹಜರು ಮಾಡಿ ದಫನ್ ಮಾಡಿಸಿದರು

ತರೀಕೆರೆ.—ಇದು ಮಲೆನಾಡು ಎಂದು ಹೇಳಿದರೂ ಬಿಸಿನಾಡು ಎಂದು ಹೇಳಬೇಕು ಈ ಮಾತನ್ನು ಓದಿ ನಗುವುದಕ್ಕಿಂತಲೂ ನಮ್ಮ ವಿಷಯದಲ್ಲಿ ತುಂಬಾ ಕನಿಕರಭಾವವುಳ್ಳವರಾಗಬೇಕೆಂದು ಪ್ರಾರ್ಥಿಸುತ್ತೇವೆ. ಯಾಕೆಂದರೆ ಕಳೆದ ಸಾರಿ ಸಾಕಾದಷ್ಟು ಮಳೆಯಾಗಲಿಲ್ಲ ಈಗಲೂ ತಕ್ಕಷ್ಟು ಮಳೆ ಬರಲಿಲ್ಲ ಮೊದಲು ಮೊದಲು ಸ್ವಲ್ಪ ಮಳೆ ಬಂದು, ಈಗ ಬರಿ ಗಾಳಿ ಮಾತ್ರ ಬೀಸುತ್ತೆ ನೀರಿನ ವಿಷಯದಲ್ಲಿ ಜನರೂ ದನಕರುಗಳೂ ಹೇಳಲಾರದ ಕಷ್ಟಪಡುತ್ತಾ ಇರಬೇಕಾಗಿದೆ ಕುಡಿಯುವ ನೀರಿನ ಕ್ಷಾಮ ಬಹಳವಾಗುತ್ತಾ ಬರುತ್ತೆ ಕುಡಿಯುವ ನೀರಿನ ಏರ್ಪಾಡು ಜನಗಳಿಗೆ ಸಾಕಾಗಿಲ್ಲ, ಮತ್ತು ತೃಪ್ತಿಕರವಾಗಿಲ್ಲ. ಈ ಏರ್ಪಾಡನ್ನು ಇನ್ನೂ ಸರಿಪಡಿಸಿಕೊಟ್ಟರೆ ತುಂಬಾ ಉಪಕಾರವಾಗುತ್ತೆ ಭಾವಿಗಳಲ್ಲಿ ನೀರು ಕೆಂಪು ಬಣ್ಣಕ್ಕೆ ತಿರುಗಿದೆ ಕುಡಿಯುವ ನೀರಿನ ಕೆರೆಯಲ್ಲಿ ಸ್ವಲ್ಪ ಕೆಸರಿನ ಮಣ್ಣು ತೆಗೆಸಿದರು ಇನ್ನೂ ನೀರಿನ ಈ ನೀರು ದುರ್ವಾಸನೆಯಾಗಿದೆ ದಯಾಳು ಸರ್ಕಾರದವರು ಕೃಪೆಯಿಟ್ಟು ಹಣ ದಯಪಾಲಿಸಿ ಸಾಲದಕ್ಕೆ ಮನೆ 1ಕ್ಕೆ 4-6 ಆಣೆಯಂತೆ ವಸೂಲ್ಮಾಡಿ ಆ ಹಣವನ್ನೆಲ್ಲಾ ಚಿಕ್ಕ ಕೆರೆಗೂ, ಭಾವಿಗಳಿಗೂ ಉಪಯೋಗಿಸಿದರೆ ಒಳ್ಳೇದು ಜನರು 4-6 ಆಣೆ ಕೊಡುವದಕ್ಕಿಂತಲೂ ಈಗ ನೀರಿಗೆ ಪಡುವ ಕಷ್ಟ ಅಧಿಕವಾಗಿದೆ ನೀರಿನ ವಿಷಯದಲ್ಲಿ ಈ ಊರಿನ ಜನರ ದಿಷಯ. ಯಾರು ಗಮನಿಸುವರೋ, ಕೆಲಸ ನಡಿಸುವರೋ ಅವರ ಹೆಸರು ಚಿರಸ್ಮರಣೀಯವಾಗುವದೆಂದು ಹೇಳುವುದರಲ್ಲಿ ಸಂದೇಹವಿಲ್ಲ —ಮಾಂಸದ ಅಂಗಡಿಗಳಲ್ಲಿ ಬಿಕರಿಯಾಗುವ ಮಾಂಸದಲ್ಲಿ ಕೆಲವು ವೇಳೆ ಹುಳಗಳಿರುವದೂ, ಕೆಲವು ಸಮಯಗಳಲ್ಲಿ ಅದು ಅನಾರೋಗ್ಯಕರವಾಗಿರುವುದೂ ಉಂಟು. ಇದಕ್ಕೆ ಯಾತಕ್ಕೆ ಗಮನಕೊಡಬಾರದು ?—ಕತ್ತೆಗಳ ಗೋಳಾಟದಿಂದ ರಾತ್ರಿ ನಿದ್ರೆ ಬರುವದಿಲ್ಲ. ದನಗಳು ರಾತ್ರಿ ರಸ್ತೆಗಳಲ್ಲೂ, ಮನೆಗಳ ಮುಂಭಾಗದಲ್ಲೂ ಮಲಗುವದರಿಂದ ತಿರುಗಾಡಲು ತುಂಬಾ ಭಯವಿದೆ —ಕೆಲವು ದಿನಗಳಿಂದ ರೈಲ್‌ಗಾಡಿಯು ಸಕಾಲಕ್ಕೆ ಬರುವದಿಲ್ಲ

ಕಡೂರು —ಪ್ರತಿ ದಿನವೂ ಮೋಡ ಗಾಳಿಯಿಂದ ಮಳೆ ಆಡಂಬರ ತೋರುವದೇ ಹೊರ್ತು ಒಂದು ಹದ ಮಳೆ ಕೂಡ ಈ ವರಿಗೆ ಬರಲಿಲ್ಲ. ಈ ಊರಿನಲ್ಲಿ ಕುಡಿಯುವ ನೀರಿನ ಅನನುಕೂಲ ಹೇಳತೀರದು. ಕೋಟೆಯಲ್ಲಿರತಕ್ಕ ಒಂದು ಕೊಳದ ನೀರೇ ಈ ಟವನ್ ಮತ್ತು ಆಸ್‌ಪಾಸ್ ಗ್ರಾಮಗಳಿಗೆ ಆಶ್ರಯವಾಗಿರುತ್ತೆ. ಈ ಟವನ್‌ಗೆ ಯಾವಾಗಲೂ ಶುದ್ಧವಾದ ಪಾನದ ನೀರು ದೊರೆಯುವದಿಲ್ಲ ನಮ್ಮ ಅಮಲ್ದಾರ್‍ರವರು ಯಾವದಾದರೂ ಒಂದು ಶಾಶ್ವತವಾದ ಪಾನದ ನೀರಿನ ಅನುಕೂಲತೆಯನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ —ಈಗ 3-4 ದಿವಸದಲ್ಲಿ ಇಲ್ಲಿಗೆ 3 ಮೈಲಿ ದೂರದಲ್ಲಿ ದೊಂಬರಹಳ್ಳಿ ಹತ್ತಿರ ಅಪಾರವಾದ ಗಾಳಿ ಬಂದು ಸುಮಾರು 30 40 ಫಸಲಿನ ತೆಂಗಿನ ಮರಗಳು ಬುಡಮಟ್ಟಕ್ಕೂ, ಅರ್ಧಕ್ಕೂ ಮುರಿದು ಬಿದ್ದು ಮಾಲೀಕರಿಗೆ ತುಂಬಾ ನಷ್ಟವನ್ನೂ ನೋಡುವವರಿಗೆ ತುಂಬಾ ಪರಿತಾಪವನ್ನೂ ಉಂಟುಮಾಡಿದೆ. ಈ ಗಾಳಿಯ ಹೊಡೆತದಿಂದ ಕೆಲವು ಜಾನುವಾರುಗಳು ಮೃತಪಟ್ಟಂತೆ ತಿಳಿಯುತ್ತೆ. ಈ ರೀತಿ ಆಡಂಬರವಾದ ಗಾಳಿಯೂ, ಮಳೆ ಇಲ್ಲದೆ ಇರುವದೂ ಜನಗಳಿಗೆ ತುಂಬಾ ಗಾಬರಿಯನ್ನು ಉಂಟುಮಾಡಿದೆ —ಈ ಮಾಹೆ ತಾ 13 ರಲ್ಲಿ ಮೈಸೂರು ಸೀಮೆಯ ಕೋಆಪರೆಟಿವ್ ಸೊಸೈಟಿಗಳ ರೆಜಿಸ್ಟ್ರಾರ್‍ರವರು ದಯಮಾಡಿಸಿ ಈ ಸೊಸೈಟಿಯು ಮೂರು ಮಂದಿ ಬಾಕೀದಾರರ ಮೇಲೆ ಮಾಡಿದ್ದ ದಾವಾ ವಿಚಾರಮಾಡಿ ಡಿಕ್ರಿ ದಯಪಾಲಿಸಿ ತಣ ವಸೂಲಿ ಕ್ರಮ ನಡಿಸುವಂತೆ ಹುಕುಂ ದಯಪಾಲಿಸಿದರು. ಅದೇ ದಿವಸ ಅವರು ಸ್ಕೂಲಿಗೆ ದಯಮಾಡಿಸಿ ಬಾಲಕ ಬಾಲಕಿಯರಿಗೆ ಹಣವನ್ನು ಶೇಖರಮಾಡತಕ್ಕ ವಿಚಾರ, ವಿದ್ಯಾಭ್ಯಾಸ ವಿಚಾರಗಳಲ್ಲಿ ಉಪನ್ಯಾಸ ಮಾಡಿದ್ದರ ಮೇಲೆ ಅದೇ ದಿವಸ 70-80 ಬಾಲಕ ಬಾಲಕಿಯರು 20 ರೂಪಾಯಿ ವರಿಗೆ ಡಿಪಾಜಿಟ್ಟು ಮಾಡಿ ಆ ಲಾಗಾಯ್ತು ಜಮಾಮಾಡುತ್ತಿರುವದು ಸಂತೋಷಕರವಾಗಿದೆ —ಈ ಸೊಸೈಟಿ ಆಡಳಿತವು 1913 ನೇ ಆಗಸ್ಟ್ ಮಾಹೆಯಿಂದ ಷುರುವಾಗಿ ಏಪ್ರೀಲ್ ಆಖೈರು ವರಿಗೆ 10,280 ರೂ. ಸುಮಾರು ಜಮಾ ಆಗಿ ಲೇವಾದೇವಿ ನಡೆದಿರುವದು ನೋಡಿದರೆ ಈ ಭಾಗದಲ್ಲಿ ಮೆಂಬರುಗಳ ಏಕಮತ್ಯವೇ ಕಾರಣವಾಗಿದೆ. ನಮ್ಮ ಅಮಲ್ದಾರ್‍ರವರು ಪ್ರೆಸಿಡೆಂಟ್ ಸ್ಥಾನವನ್ನು ಅಂಗೀಕರಿಸಿ ಆಗಾಗ್ಗೆ ತನಿಖೆ ಮಾಡುತ್ತಿರುವದರಿಂದಲೂ, ಈ ಭಾಗದಲ್ಲಿ ಹೆಚ್ಚಾಗಿ ಪ್ರೋತ್ಸಾಹಪಡಿಸುತ್ತಿರುವದರಿಂದಲೂ ಜನಗಳಿಗೆ ನಂಬಿಕೆಯು ಕಂಡುಬಂದು ಇನ್ನೂ ಹೊಸದಾಗಿ ಸೇರಲು ಆತುರರಾಗಿ ಇರುತ್ತಾರೆ. ಈ ಹಿಂದೆ ಈ ಸೊಸೈಟಿಯ ಆಡಳಿತವನ್ನು ನಮ್ಮ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರೂ, ನಮ್ಮ ಕಡೂರು ಸಬ್ ಡಿವಿಜನ್ ಅ|| ಕಮಿಷನರ್ ಮ|| ಬಿ ಟಿ ಕೇಶವಯ್ಯಂಗಾರ್‍ರವರೂ ಪರಾಂಬರಿಸಿ ಒಳ್ಳೇ ಅಭಿಪ್ರಾಯಪಟ್ಟಿರುತ್ತಾರೆ. ಎಲ್ಲಾ ಕಡೆಗಳಲ್ಲೂ ಕಾನ್‌ಫರೆನ್ಸು ನಡೆಯುತ್ತಾ ಇರುತ್ತೆ ಈ ಡಿಸ್ಟ್ರಿಕ್ಟು ಸೊಸೈಟಿಗಳವರು ಒಂದು ಕಾನ್‌ಫರೆನ್ಸು ಮಾಡುವ ವಿಚಾರದಲ್ಲಿ ಆಲೋಚನೆಗೆ ತರಬೇಕಾಗಿ ಪ್ರಾರ್ಥನೆ.

ದೊಡ್ಡಬಳ್ಳಾಪುರ.—ಕಾಲಸ್ಥಿತಿ ಬಹಳ ತೀಕ್ಷ್ಣವಾದ ಬಿಸಿಲಿನಿಂದ ಕೂಡಿದೆ. ರೋಗಾದ್ಯುಪದ್ರಗಳು ಅಧಿಕವಾಗಿವೆ ಮಳೆ ಸುತರಾಂ ಇಲ್ಲವು ಭಾವಿಗಳಲ್ಲಿ ನೀರು ಕಮ್ಮಿಯಾಗಿದೆ —ರುಮಾಲೆ ರುದ್ರಪ್ಪನವರ ಮನೆಯಲ್ಲಿ 6 ಮದುವೆಗಳು ವಿಜೃಂಭಣೆಯಿಂದ ನಡೆದವು —ಮುನ್‌ಸಿಫ್ ಕೋರ್ಟು ಈ ಊರಿಗೆ ಬಂದಿರುವದರಿಂದ ಅಲ್ಲಿನ ಉದ್ಯೋಗಸ್ಥರಿಗೆ ಮನೆಗಳಿಗೆ ಕೇವಲ ಅಭಾವವಾಗಿ ಬಾಡಿಗೆ ದರಗಳು ಬಹಳ ಹೆಚ್ಚಾಗಿವೆ ಹಣಗಾರರು ಕೆಲವು ಹೊಸ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟರೆ ಉಭಯತ್ರರಿಗೂ ಬಹಳ ಸಹಾಯವಾಗಿರುವದು —ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ —ಮ್ಯುನಿಸಿಪಲ್ ದೀಪಗಳು ನಿಮಿಷಮಾತ್ರಕ್ಕೆ ಉರಿಯುತ್ತಿವೆ, ಬೆಳಕು ಸಾಲದು ಮತ್ತು ಅನೇಕ ದೀಪಗಳು ರಾತ್ರಿ ಕತ್ತಲೆಯಲ್ಲಿ ಕಾಣುವದೇ ಇಲ್ಲ ರಸ್ತೆಗಳು ಬರಬರ ದುಸ್ಥಿತಿಗೆ ಬರುತ್ತವೆ ಜನಗಳೂ ಜಟಕಾ ಗಾಡಿಗಳೂ ಅಲ್ಲಲ್ಲಿ ಮುಗ್ಗರಿಸುವದು ಆಶ್ಚರ್ಯವಲ್ಲ —ಗ್ರಾಮಾಂತರಗಳಲ್ಲಿ ಅಮಲ್ದಾರ್‍ರು ಆಗಾಗ್ಗೆ ಸಂಚಾರಮಾಡಿ ಜನಗಳನ್ನು ಪ್ರೋತ್ಸಾಹಿಸಿ ಸ್ಕೂಲುಗಳಿಗೆ ರೈತರಿಂದ ಹಣವನ್ನು ಒದಗಿಸುತ್ತಲೂ, ತೂಬಗೆರೆ ಮುಂತಾದ ಪ್ರಾಂತ್ಯಗಳಲ್ಲಿ ಗ್ರಾಮಾಭಿವೃದ್ಧಿಗೆ ಸಾಕಾದಷ್ಟು ಪ್ರೋತ್ಸಾಹ, ಕೆಲಸಗಳಿಗೆ ಸೌಲಭ್ಯವನ್ನು ಕಲ್ಪಿಸುತ್ತಲೂ ಇದಾರೆ. ಪಟೇಲ್ ಶ್ಯಾನುಭೋಗರು, ಇತರ ಮುಖಂಡರು ಮುತುವರ್ಜಿ ವಹಿಸಿ ಗ್ರಾಮಾಭಿವೃದ್ಧಿಗೆ ಹಣ ಸಹಾಯ ಒದಗಿಸುತ್ತಲಿದಾರೆ ತೂಬಗೆರೆ, ಅರಳುಮಲ್ಲಿಗೆ, ಹಾಡೋನಹಳ್ಳಿ ಗ್ರಾಮಗಳಲ್ಲಿ ಸರ್ಕಾರದಿಂದ ಕಟ್ಟಿಸಿರುವ ದಿವ್ಯವಾದ ಕಟ್ಟಡಗಳು ಸ್ಕೂಲುಗಳ ಕೆಲಸಕ್ಕೆ ಸಿದ್ಧವಾಗಿವೆ ಆದರೆ ಇಂಜನಿಯರ್ ಸಾಹೇಬರು ಇನ್ನೂ ಅವುಗಳನ್ನು ವಿದ್ಯಾ ಇಲಾಖೆಗೆ ಒಪ್ಪಿಸಿಲ್ಲ.—ತಾಲ್ಲೋಕು ಅಧಿಕಾರಿಗಳೂ ಉದ್ಯೋಗಸ್ಥರೂ ಗ್ರಾಮಗಳ ಮೇಲೆ ತಿರುಗಿ ಮೊಕ್ಕಾಂ ಮಾಡುವಾಗ್ಗೆ ಅವರಿಗೆಲ್ಲಾ ಕ್ರಮವಾಗಿ ದಿನಗಟ್ಟಿ ಬತ್ಯದ ಖರ್ಚು ಸರ್ಕಾರದಿಂದ ಸಿಕ್ಕುವದರಿಂದ ಗ್ರಾಮ ನೌಕರರು ಅವರಿಗೆ ಮುಫತ್ತಾಗಿ ಆಹಾರಸಾಮಗ್ರಿಗಳನ್ನಾಗಲಿ, ಮತ್ತಾವದನ್ನಾಗಲಿ ಪುಗಸಟ್ಟೆ ಕೊಡಲವಶ್ಯವಿಲ್ಲ.—ಈ ಊರು ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಸರಹದ್ದು ಕಟಕಟೆ ಮೊದಲು ಇದ್ದ ಜಾಗದಿಂದ ಕಿತ್ತು ಪೂರ್ವಕ್ಕೆ 4-5 ಮಾರು ಅಟ್ಟಿ ಕಟ್ಟಿ, ಮೊದಲು ಕಟಕಟೆ ಇದ್ದ ಜಾಗದಲ್ಲಿ 2 ಅಡಿ ಅಗಲ, 4-5 ಅಡಿ ಆಳವುಳ್ಳ ಚರಂಡಿ ಉತ್ತರ ದಕ್ಷಿಣಕ್ಕೆ ಉದ್ದಕ್ಕೂ ಅಗೆದಿರುತ್ತಾರೆ. ರಾತ್ರಿ ಬರತಕ್ಕ ಪ್ರಯಾಣಿಕರು ಈ ಹೊಸ ಕಟಕಟೆ ನಿಗಾ ಇಟ್ಟು ಹೋಗುವದರಿಂದ ಮೇಲ್ಕಂಡ ಚರಂಡಿಯಲ್ಲಿ ಬಿದ್ದುಹೋಗಲು ಅವಕಾಶವಾಗಿ ಒಪ್ಪಿಬ್ಬರಿಗೆ ತುಂಬ ಅಪಾಯವಾಗಿದೆ. ಇದು ಕಂಪನಿಯವರ ತಪ್ಪೋ, ಕಂಟ್ರಾಕ್ಟರ ತಪ್ಪೋ ಗೊತ್ತಿಲ್ಲ. ಇನ್ನು ಮುಂದಾದರೂ ಇವರು ತಮ್ಮ ಪ್ಲಾಟುಫಾರಂ ಚರಂಡಿ ಬಳಿ ಜನರು ಬಾರದಂತೆ ಬೆಳಕು ಹಾಕಿ ಆಗಲಿ, ಮತ್ಯಾವ ರೀತಿಯಲ್ಲಾಗಲಿ ಏರ್ಪಾಡು ಮಾಡಿದರೆ ಜನರಿಗೆ ಅನುಕೂಲ. ರೈಲ್ವೆಯವರು ಇದಕ್ಕೆ ಪೂರಾ ಗಮನಿಸತಕ್ಕದ್ದು —ಟಿಕೀಟು ಕಳೆದುಕೊಳ್ಳುವ ನೌಕರರು ಪ್ರಯಾಣಿಕರು ಇಳಿದೊಡನೆ ಜಾಗ್ರತೆ ಟಿಕೀಟು ತಕ್ಕೊಳ್ಳದೆ 1/4 ಗಂಟೆ, 1/2 ಗಂಟೆ ಹೀಗೆ ನಿಲ್ಲಿಸುವದರಿಂದ ಜನರಿಗೆ ತೊಂದರೆ —ಈ ಊರಲ್ಲಿ 29 ನೇ ತಾ ಶುಕ್ರವಾರ ಮ|| ರುಮಾಲೆ ರುದ್ರಪ್ಪನವರ ಛತ್ರದಲ್ಲಿ ಆಸ್ಥಾನ ಪಂಡಿತರಾದ ಬಕ್ಷಿ ಮ|| ಸುಬ್ಬಣ್ಣನವರ ವೀಣೆ ಕಚೇರಿಯನ್ನು ಈ ಗ್ರಾಮದ ವರ್ತಕರೂ, ಇತರ ದೊಡ್ಡ ಮನುಷ್ಯರೂ ಸೇರಿ ಮಾಡಿಸಿದರು. ಮುನ್‌ಸಿಫರು, ಅಮಲ್ದಾರರು, ಮ್ಯುನಿಸಿಪಲ್ ಮೆಂಬರುಗಳು, ಇತರ ದೊಡ್ಡ ಮನುಷ್ಯರು ಸೇರಿದ್ದರು. ಈ ವಿದ್ವಾಂಸರು ತಮ್ಮ ಅತಿಶಯವಾದ ಕುಶಲತೆಯಿಂದ ವೀಣಾಗಾನವನ್ನು ಮಾಡಿ ಸಭೆಯನ್ನು ಆನಂದಪಡಿಸಿದರು ನಂತರ ಮುನ್‌ಸಿಫ್ ಮ|| ಮಹದೇವಯ್ಯನವರು ನಮ್ಮ ಆಸ್ಥಾನ ಪಂಡಿತರೂ, ನಮ್ಮ ದೇಶದವರೂ ಆಗಿರುವ ಇವರನ್ನು ಈ ಗ್ರಾಮದವರು ಆದರಿಸಿ ಪ್ರೋತ್ಸಾಹಮಾಡಿರುವ ಕಾರಣ ನಮ್ಮ ಮಹಾರಾಜರವರನ್ನೇ ಈ ಸಭಿಕರು ಭಕ್ತಿಪೂರ್ವಕ ವಂದಿಸಿದಂತೆ ಆಯ್ತೆಂದು ಮುಂತಾಗಿ ಅಪ್ಪಣೆ ಕೊಡಿಸಿದರು.

ಹೊಳೆನರಸಿಪುರ — ಈ ಊರಿಗೆ ಮಳೆ ಒಂದೆರಡು ಹದ ಆಗಿದ್ದಾಗ್ಯೂ ಬಿಸಿಲಿನ ಕಾವು ಸಹಿಸುವುದು ಕಷ್ಟವಾಗಿದೆ ಸುತ್ತುಮುತ್ತಿನ ಗ್ರಾಮಗಳಲ್ಲಿ ಸಹ ಕೆಲವು ಗ್ರಾಮಗಳಲ್ಲಿ ಆರಂಬ ಕೆಲಸಕ್ಕೆ ಅನುಕೂಲವಾಗಿ ಒಂದೆರಡು ಹದ ಮಳೆಯಾಗಿರುತ್ತೆ ಇನ್ನೂ ಕೆಲವು ಗ್ರಾಮಗಳಿಗೆ ಸುತರಾಂ ಮಳೆ ಇಲ್ಲದೆ ಆರಂಬ ಕೆಲಸ ನಿಂತುಹೋಗಿರುತ್ತೆ — ಈ ಕಸಬಾದಲ್ಲಿ ಮಾತ್ರ ಹೊಳೇ ನೀರು ವಿನಹ ಭಾವಿ ನೀರು ಇಲ್ಲದೆ ಅನೇಕ ಜನರು ತೊಂದರೆ ಅನುಭವಿಸುತ್ತಲಿದ್ದಾರೆ ಈ ಟೌನ್‌ನಲ್ಲೂ, ಸುತ್ತುಮುತ್ತಿನ ಗ್ರಾಮಗಳಲ್ಲೂ ಸ್ಯಾನಿಟರಿ ರೂಲ್ಸು ಜಾರೀಲಿ ತಂದಿರುತ್ತಾರೆ ಈ ವಿಚಾರದಲ್ಲೂ, ಪೊಲೀಸಿನವರ ಕೆಲಸಗಳ ವಿಚಾರದಲ್ಲೂ, ರೆವಿನ್ಯೂ ಇಲಾಖೆಯಲ್ಲೂ, ಇತರ ಮುಜರಾಯಿ ವಗೈರೆ ಇಲಾಖೆಗಳಲ್ಲೂ ನಮ್ಮ ಅಮಲ್ದಾರ್ ಮ|| ವೆಂಕಟರಾಯರವರು ಬಹಳ ನಿಸ್ಪೃಹರಾಗಿ ಕೆಲಸ ಮಾಡುತ್ತಿದ್ದಾರಲ್ಲದೆ ಸಂತೆಯಲ್ಲಿ ಪ್ರತಿ ಸೋಮವಾರ ಅಂಗಡಿಗಳ ಮುಂದೆ ಹೋಗಿ ವ್ಯಾಪಾರಸ್ಥರು ಮಾಡುತ್ತಿದ್ದ ಮೋಸಕರವಾದ ಅಳತೆ, ತೂಕ ವಗೈರೆ ಅಜಮಾಯಿಷಿಮಾಡಿ ಬಹಳ ಮಟ್ಟಿಗೆ ಪ್ರಜೆಗಳಿಗೆ ಅನುಕೂಲ ಉಂಟುಮಾಡುತ್ತಲಿರುವರು ಅಲ್ಲದೆ ಈ ಊರು ಸಂತೆಗೆ ಬರುತ್ತಿದ್ದ ಬಹಳ ದಿವಸದಿಂದ ದನಕರುಗಳನ್ನು ಚಿಕ್ಕೆಳ ಮಂಡಿಯವರು ಅನೇಕಾನೇಕ ಬಡ ರಾಸುಗಳನ್ನು ಕೊಲ್ಲಿಸುತ್ತಿದ್ದರು ಇದನ್ನು ಸಹ ನಿಲ್ಲಿಸಿ ಅಮೋಘವಾದ ಪುಣ್ಯಸಂಪಾದನೆ ಮಾಡಿರುತ್ತಾರೆ — ಹೊಳೆ, ಕಾಲ್ವೆ ಪಕ್ಕಗಳಲ್ಲಿ ಹೇಸಿಗೆ ಮಾಡಕೂಡದೆಂದು ನಿರ್ಬಂಧಿಸಿರುವುದು ಸರ್ವೋತ್ಕೃಷ್ಟವಾದದ್ದು, ಆದರೆ ಅಲ್ಲಲ್ಲಿ ಕಕ್ಕಸುಗಳು ಏರ್ಪಾಡಾದರೆ ಪ್ರಜೆಗಳ ತೊಂದರೆ ತಪ್ಪೀತು ಕೋಟೆಯ ಅನೇಕ ಪ್ರಜೆಗಳು ಬಳಸುವ ಭಾವಿ ಪಕ್ಕದಲಿನ ಕಕ್ಕಸನ್ನು ನಮ್ಮ ಅಮಲ್ದಾರರು ತಪ್ಪಿಸುತ್ತಾರೆಂತಲೂ, ಆ ಭಾವಿಯನ್ನು ಮೊದಲಿನಂತೆ ರಿಪೇರಿ ಮಾಡಿಸಿಕೊಟ್ಟಾರೆಂತಲೂ ಹಾರೈಸಲ್ಪಟ್ಟಿದೆ — ಸಂತೆಯಲ್ಲಿ ವ್ಯಾಪಾರಿಗಳು ಬಾಜು ಬಿಡದೆ ಬಹು ಇಕ್ಕಟ್ಟಾಗಿ ಅಂಗಡಿಗಳನ್ನು ಇಡುವದರಿಂದ ವ್ಯಾಪಾರಕ್ಕೆ ಬರತಕ್ಕ ಹೆಂಗಸರು ಮಕ್ಕಳಿಗೆ ಬಹಳ ತೊಂದರೆಯಾಗಿ ಒಬ್ಬರ ಮೇಲೊಬ್ಬರು ಬೀಳುತ್ತಾರೆ ಇದು ಬಹಳ ನಾಚಿಕೆಯೊದದ್ದು ಮತ್ತು ಅಲ್ಲಿ ಬಡ ಹಳ್ಳಿ ಜನಗಳಿಗೆ ಪಸಿಕೆ ಎತ್ತತಕ್ಕವರಿಂದ ಹೆಚ್ಚು ತೊಂದರೆ ಉಂಟು ಮುನಿಸ್ಪಾಲಿಟಿ ನಿರ್ಬಂಧದಾಡಿ ಟೆಲ್ಲಿ ತರಕಾರಿ ತರತಕ್ಕ ಹಳ್ಳಿ ಜನರಿಂದ ಪದಾರ್ಥಗಳನ್ನು ಕಿತ್ತುಕೊಳ್ಳುವದು ಬಹಳ ಅನ್ಯಾಯ ಕೆಳಗಿನ ಸಂತೆಯಲ್ಲಿ ಟೆಲ್ಲಿ ತಂದ ಒಬ್ಬ ಬಡವನು ಅವರು ಕೇಳಿದ ಕ್ರಯಕ್ಕೆ ಕೊಡದೆ ಸಂತೆ ಪೂರ್ವದಿಂದ ಅವನನ್ನು ಎದೆಗೆ ಒದ್ದು ಕೆಡಿಸಿದರು ಅವನ ಗತಿ ಏನಾಯಿತೋ ಆಗ್ಗೆ ಯಾವ ಪೊಲೀಸ್ ಕಾನ್‌ಸ್ಟೇಬಲೂ ಸಂತೆಯಲ್ಲಿರಲಿಲ್ಲವೆಂದು ಜನರು ಹೇಳುತ್ತಾರೆ ಅಮಲ್ದಾರರು ಈ ಭಾಗಗಳನ್ನು ದಯದಿಂದ ಕ್ರಮಪಡಿಸಿ ಸಂತೆ ಜನವಾಡಿ ಕೀರ್ತಿ ಪಡೆಯಬೇಕು

ಶಂಕರ ತಾ|| ಟುಕ್ಕಾಂಬುಧಿ — ಕಿಸಬ ಇದೇ ಟುಕ್ಕಾಂಬುಧಿ ದೊಡ್ಡ ಕೆರೆ ಎಂತಲು ಹೆಸರಿತ ವಿಂಕಲು ಒಂದು ಹೆಸರು ಆಗಿರುತ್ತೆ ಈ ಕೆರೆಯಲ್ಲಿ 35 ಅಡಿ ನೀರ್ ತುಂಬಿದರೆ 17 ಅಡಿ ನೀರು ನಿಲ್ಲುತ್ತೆ ಇಂಥಾ ದೊಡ್ಡ ಕೆರೆಯು ಈ ವರುಷ ನೀರು ಇಲ್ಲದೆ ಬತ್ತಿ ಗೋಕಾಯಿಗಳಿಗೂ ಕಾಡಮೃಗ ಪಕ್ಷಿಪಕ್ಷಿಗಳಿಗೂ ಒಂದು ತೊಟ್ಟು ನೀರು ಗತಿ ಇಲ್ಲದೆ ಹೋಗಿರುತ್ತೆ ಈ ಕಾಲದಲ್ಲಿಯೂ ಬಿಂಬ ಎನ್ನಿಸಿಕೊಂಡಿರಲಿಲ್ಲ ಈ ಕಾಲದಲ್ಲಿ ಬಿಂಬ ಎಂಬೋ ಹಾಗೆ ಕಂಡುಬರುತ್ತೆ ಇಂಥಾ ಕೆರೆಯು ಈ ಅವಸ್ಥೆ ಆಗಬೇಕಾದರೆ ಮೀಸ್ಸಾದ ಕೆರೆಗಳ ಪಾಡೇನಾಗಿರ ಬಹುದೋ ವಾಚಕರೇ ತಿಳಿಯಬೇಕು ಈ ಕೆರೆ ಹಿಂದೆ ಬಹಾ ಮ್ಯತ ಅಡಿಕೆ, ತೆಂಗು, ಬಾಳೆ ಮಿಶ್ರವಾದ ತೋಟಗಳಿಗೆ ನಮ್ಮ ಸರ್ಕಾರಕ್ಕೆ 5,000 ರೂಪಾಯಿ ಕಂದಾಯ ತೆರುತ್ತಾರೆ ಈ ಸಾಲಿನಲ್ಲಿ ಇಂಥಾ ದೊಡ್ಡ ಸಾಗು ಒಣಗಿ ಹಾಳಾಗಿ ರಟ್ಟಿಗಳು ಹಕ್ಕಿಗಳು ರೆಕ್ಕೆ ಅಲ್ಲಾಡಿಸುವದಾಗಿ ಹಾದ್ದುಬಿಟ್ಟುತ್ತು ಇದ್ದು ತಾ 25ರಲ್ಲಿ ಹದ ಮಳೆ ಆಗಿರುತ್ತೆ ಜನಗಳಿಗೆ ಆರೋಗ್ಯವಾಗಿದೆ ಈಗಿನವುಟ್ಟಿಗೆ ಕೆರೆಕಟ್ಟೆಗೆ ನೀರು ಇಲ್ಲ ಈ ಕೆರೆಯಲ್ಲಿ ಕೆಸರಿನೊಳಗೆ ಸಿಕ್ಕಿಕೊಂಡ 5 ಎಮ್ಮೆ, 1 ಕರುವು, 1 ಕಂಚಿನ ಮೃತಪಟ್ಟಿರುತ್ತವೆ ಈ ವರುಷ ಅಡಿಕೆ ಫೈರು ಸುತರಾಂ ಇರುವದಿಲ್ಲ — ಈ ತಿಂಗಳು ತಾ 16ರಲ್ಲಿ ಇದೇ ತಾಲೋಕಿಗೆ ಸೇರಿದ ಬಿಲ್ಲಹಳ್ಳಿ ಎಂಬೋ ಗ್ರಾಮಕ್ಕೆ ಬೆಂಕಿಬಿದ್ದು 40 ಮನೆಗಳು ಸುಟ್ಟುಹೋಗಿರುತ್ತವೆ ಈ ಗ್ರಾಮದಲ್ಲಿ ಇನ್ನು 5 6 ಮನೆಗಳು ಉಳಿದಿರುತ್ತವೆ ಇದರಿಂದ ಗ್ರಾಮಕ್ಕಿರಿಗೆ 25 ಸಾವಿರ ರೂಪಾಯಿನ ಮಾಲು ನಷ್ಟವಾಗಿರುತ್ತೆ — ಚನ್ನಗಿರಿ ತಾಲ್ಲೋಕು ಉಬ್ರಾಣಿ ಎಂಬೋ ಗ್ರಾಮದಲ್ಲಿ ಕರಿಮುಗಾಬಚನ್ನುವ ಹಿಂದುಮುಸಲ್ಮಾನರನ್ನು ಧಾರಿಷ್ಟ ಇಲಾಖೆಯಲ್ಲಿ ಜವಾನ ಚಾಕರಿಗೆ ಇದ್ದನಂತೆ ಈ ಇಲಾಖೆಯವನು ಕಲ್ಲು ಒಡಿಸುವದಕ್ಕೆ ತೋಟಾಗಳನ್ನು ತಂದಿದ್ದರಂತೆ ಆ ತೋಟಾಗಳನ್ನು ಇವನ ಕೈಯಲ್ಲಿ ಕೊಟ್ಟಿದ್ದರಂತೆ ಅವನು ಎದ್ದಿಹೀನನಾದ್ದರಿಂದ ಇವರ ಗುಂಡನ್ನು ತೆಗೆಯದೆ ಮಂಚದ ಮೇಲೆ ಇಟ್ಟು ಕಾಲಿ ಆಳುಗಳನ್ನು ಕರೆಯುವದಕ್ಕೆ ಹೋದನಂತೆ 17ನೇ ತಾ ಅಷ್ಟರಲ್ಲಿ ಇವನ ತಮ್ಮನು ಬಂದು ಇದು ಏನು ಎಂದು ಬಿಚ್ಚಿ ನೋಡಿದನಂತೆ ನೋಡುವಲ್ಲಿ ಅವರ ತಂದೆ ಮಂಚದ ಮೇಲೆ ಮಗು ಆಡಿಸುತ್ತ ಕೂತಿದ್ದವನುಯಲು, ಅದು ಆಗ ಬಂದೆಯನ್ನು ಒದೆಯಪಕ್ಕ ತೋಟಿಟುತ್ತ ಮನೆ ಅದನ್ನು ತಟ್ಟಬೇಕೆಂದು ಹೇಳಿದನಂತೆ ಆ ಮಾತನ್ನು ಮನಸ್ಸಿಗೆ ತಂದುಕೊಳ್ಳದೆ ಈ ಹುಡುಗನು ಒಳಗಾಗಿಲ್ಲಿ ಹಾಡಿದ್ದ ಕಲ್ಲಿನ ಮೇಲೆ ಈ ಮಂಚದ ಮೇಲೆ ಇದ್ದ ಗಂಟನ್ನು ಬಿಚ್ಚಿ ಒಂದು ತೋಟ ದನ್ನು ಮಡಿಯನ್ನು ಸುರಿದು ಒಲೆಯಲ್ಲಿ ಇದ್ದ ಬೆಂಕಿಯನ್ನು ತಂದು ಮೇಗೆ ತಾಗಿಸಿದನಂತೆ ಅದು ಯಾವ ವಿಧದಿಂದಲೋ ಹತ್ತಿಲಿಲ್ಲ ವ ನೆ ಒಳಗಾಗಿಲ್ಲಿ ಇದ್ದ ಬೆಂಕಿ ಪೊಟ್ಟಣವ ತೆಗೆದುಕೊಂಡು ವನ್ನಗ್ಗ ಮಡಿಯನ್ನು ಸುರಿದು ಹಚ್ಚಿದನಂತೆ ಅಷ್ಟರಲ್ಲಿ ಅದ್ಭುತ ಶಬ್ದವಾಗಿ ವಿ ಕೆ ಎದ್ದು ಕನಾಟಕಾಧಿಪನನ್ನು ಮುಟ್ಟಿ ಬಿಟ್ಟಿತು ಮಂಚದ ಮೇಲೆ ಪುನಃ ಇಟ್ಟಿದ್ದ 11 ತೋಟಗಳು ಹತ್ತಿ ಮಂಚದ ಮೇಲೆ ಮಲಗಿದ್ದ ಇವನ ತಂದೆಗೆ ಉರಿ ತಾಕಿ ಮೇಲಕ್ಕೆ ನಿಲುವಷ್ಟರಲ್ಲಿ ಅಕಾಶವೇ ಭೂಮಿಗೆ ಬಿದ್ದ ಹಾಗೆ ಆ ಹಾಗೇ ಮೂರ್ಛೆ ಬಂದವಾಗಿ ದೇಶವೂ ಹಿಡಿದು ಕನಾಟ ಎನ್ನುವುದಾದ್ದು ಕಣ್ಣಿಗೆ ಕಾಣದಂತೆ ಆಯಿತು ಮತ್ತು ಹಲಿಗೆ, ಹೆಂಚು, ಗಳಗಳೂ ಈ ತೋಟಾಗಳು ಹಾರುವ ರಭಸಕ್ಕೆ ಸುತ್ತು ಸುಮಾರು 5 ಮೈಲಿ ದೂರದಲ್ಲಿ ಗಿಡಿ ವಗೈರೆ ಎಸೆದಾಡತಕ್ಕ ಮನುಷ್ಯರು ನೂರಾರು ಅಸ್ಥಿಯುಕ್ತವಾದ ಸ್ಥಿತಿಯಲ್ಲಿ ಎಂತ ಹೋಗುವರ್ ಸಲ್ಲ ಮನೆಯೊಳಗಿದ್ದ 4 ಜನ, ಒಳಗಿದ್ದ ಹೆಣ್ಣುಮಕ್ಕಳು, ಮತ್ತು ಹೆಂಚು, ಹಲಿಗೆ, ತೊಲೆ ಜಂತಿಗಳ ಎಲ್ಲಾ ಹಾರೋ ರಭಸಕ್ಕೆ ಎಲ್ಲಾ ಅಧಿದೃಶವಾಗಿದ್ದು ಹಚ್ಚಿದವನ ಮಾತ್ರ ಪೂರಾ ಘಾಯವಾಗಿರುತ್ತೆ ಮತ್ತು ಈ ಜನಗಳ ಅವಸ್ಥೆಯು ಮನುಷ್ಯರು ಹತ್ತಿರ ಹೋಗುವದಕ್ಕೆ ವಾಸನೆಯು ಬಂದಿರುತ್ತೆ ಈ ಜನಗಳಿಗೆ ಚನ್ನಗಿರಿ ಆಸ್ಪತ್ರೆಯವರು ಬಂದು ಇಲಾಜು ಮಾಡಿದರುತ್ತಾರೆ ಅವರ ಗುಣ ಆ ದೇವರನ್ನು ಭಗವಂತನೇ ಬಲ್ಲ ಯಾರೂ ಮುಟ್ಟುವ ಹಾಗೆ ಇಲ್ಲ

WANTED

An active and influential Taluk Agent in every Taluk of Mysore Province and Coorg on a salary of Rs 20 per mensem rising to Rs 40 by annual increments of Rs 2 Cash security required from each Agent is Rs 50 For particulars see in person or apply to

Messrs VENKATACHALAM & SONS,
Chief Agents,
Hindustan Co operative Insurance Society Ltd
166, Dodpet, Near Old Taluk Cutchery,
243-26 MYSORE

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಿಮತ್ಕಾರವಾಗಿಯೂ ಸರಸವಾಗಿಯೂ ಇವೆ ಕ್ರಯ 12 ಆಣೆ "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ ಪತ್ತೇದಾರಿಯ ಕಥೆ ಕ್ರಯ 6 ಆಣೆ "ಸಂತಾಪಕ" ಮನೋಹರವಾದ ನವೀನ ಕಾದಂಬರಿ ಎಲ್ಲರೂ ಆಗತ್ಯವಾಗಿ ಓದಬೇಕಾದುದು ಕ್ರಯ 1 ೮ "ಮಹಾನ್ಯಾಯಾಧಿಪತ್ಯ" 4 ೮ "ಪಶುಲೋಕ ರಹಸ್ಯ" 2 ೮ "ಕೇಲಾಸ್ಪ್ರಿಯಾಪ್ರಹಸನ" 2 ೮ "ಯೋಗಿನಾಪ್ರಹಸನ" 2 ಆಣೆ — ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ

[266-2a] ವಿಳಾಸ — ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಕುಂತಳಾನಂದ ತೈಲವು

192 37

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದ ಮುಖ್ಯವಾದ ಎಲ್ಲಾ ವರ್ಗ

ಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಕೃಶವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಎದ್ದುಕಾಂತವನ್ನು ಪರಿಹರಿಸಿ ಹಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಕೀರ್ತಿಯೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟ್ಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ — ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಆಬಾಲವೃದ್ಧರಿಗೂ ಅಮೋದವನ್ನುಂಟುಮಾಡುತ್ತಿರುವ

150 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳು 1 2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಗಿದ್ದರೂ ಜೀರ್ಣವಾಗದಂತ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವವು ಬಾಯಿ ನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ಶಾಂತಿಯಾವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು ದಮ್ಮು ಅತೀಸಾರ ಜೆಟ್ಟಿಹೋವು ಮಲಬಂಧ ಶರೀರದ ದೌರ್ಬಲ್ಯ ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವುದು ಮಹನೀಯರಿಲ್ಲರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅತ್ಯವಶ್ಯಕ ನಿಮಾನಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ [220 32]

ಶ್ರೀಕರ ಕಸ್ತೂರಿ ಮಾತ್ರೆ — ಅನುಪಾನಪತ್ರ ಸಹಿತ 200 ಮಾತ್ರೆ 4 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ — ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸುವದಕ್ಕೆ ತಪ್ಪುತ್ತಿರುವವರಿಗೂ ಶರೀರಾರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಿದಿರದ ಹೊರತೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಒಳ್ಳಗಾಗಿಕೊಂಡವರೆ ಬೆನ್ನಿನಲ್ಲಿ ಥಳುಕು, ನಿದ್ರೆಯಲ್ಲಿ ಅಡ್ಡಿ ಬರುವುದು ಮೂತ್ರವು ಸ್ವಲ್ಪವಾಗಿಯೋ ವಿನಹಾಗಿಯೋ ಬೆಳುವಾಗಿಯೋ ಇಳಿಯುವುದು ಎದೆ ಬಾಧಿಸಿಕೆ ಬಳಿಕ, ಎದೆ ತಲ್ಲಣಿಸುವುದು ತಲೆಸೋವು ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುಟಿಕೆ, ಮೈನೋವು ಗಾಲಿನೋವು ಮರವು ನಿದ್ರಾ ಇವೇ ಮೊದಲಾದವು ಅಲಕ್ಷ್ಯ ಮಾಡಿದರೆ ಮೂತ್ರಜಲೋದರವು, ವಾಯು, ಕೀಲುಬಾವು, ಉರುಮೂತ್ರ, ಮೂತ್ರಕೋಶ ಕ್ಷಯರೋಗವು, ಸ್ಥೂಲವಾಗಿ ಮಂಜಿಂದ್ರವಾದ ರೋಗಗಳಿಂದ ಸಂದೇಹಿಸತಕ್ಕದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ , ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-30]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವುವು



ರೂ ೨-೦-೦, ಅಥವಾ ೬ ಬುದ್ದಿಗಳಿಗೆ ರೂ ೧೦-೮-೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು

ಭಕ್ತವಿಜಯ

ಎರಡನೆಯ ಅವೃತ್ತಿ ಮುದ್ರಿತವಾಗುತ್ತಿದ್ದ ಈ ಗ್ರಂಥವು ಪ್ರಕಟವಾಗಿದೆ ಬೆಲೆ ಪೋಸ್ಟೇಜ್ ಸಹಿತ ರೂ 3 6 0 ಅಪೇಕ್ಷಕರು ದಯೆಯಿಟ್ಟು ಒಡನೆಯೆ ಬರೆದುಕೊಳ್ಳಬೇಕು ಎಲ್ಲರಿಗೂ ಪ್ರತಿಗಳು ದೊರೆಯಲಾರವು

[110 3] ವಿಳಾಸ — ಭಕ್ತವಿಜಯ ಆಫೀಸ್, ಮೈಸೂರ್

ಹೊಸ ಬಂಗಾಳಿ ನಾವೆಲ್ಸ್ — ವಿಷವಿರಿಕ್ಷ 1 ೮ ಸನ್ಯಾಸಿ 1 ೮ ಅನಾಥಪ್ರೇತ 1 ೮ ಬಿ ವಂಕಿಮಚಾರ್ಯ ಜೀವ ಚರಿತೆ 1-10 ಪಂಚ್ರಿಕಾವತಿ 1 10 ರಜನಿ 13 ೮ ಅಹಲ್ಯಾಬಾಯಿ 9 ೮ ಇತ್ಯಾದಿ ಚಿತ್ರವಿಚಿತ್ರಾವಳಿ 2ನೆ ಭಾಗ ಮತ್ತು ಮಾಯಾವಿ ಪ್ರಿಂಟಾಗುತ್ತಿವೆ ನ್ಯಾಯದರ್ಪಣ 1! ರೂಪಾಯಿ

[53 16] ಎಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

NOW READY

Full Notes with Summary and Numerous useful questions on Circe's Palace The Golden Fleece and Fairy Tales (L S Text for 1915) by Mr A S Rangaswami Iyengar B A Asst Master, Maharaja's College, Mysore Price four annas only Yates Primer 0 4 0 Yates Second Reader 0 9 0 King Second Reader 0 6 0 King Third Reader 0 8 0 Macmillan's New No IV Reader 0 12 0, Hyde's Practical English Grammar—First 0 15 0, Second 0 15 0 Longman's School Geography 1 4 0 Morrison's Junior Geography of India 0 1 0

We supply you any books in English or Canarese

[23 21] The General Agency, Mysore

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚಿಕ್ಕಗಳು ತೀರೆಗಳು, ಖಣಗಳು

ಹೊಸ ಮಾದರಿಯ ತರೆವಾರಿ ಚಿಕ್ಕಗಳು ಸೀರೆಗಳು, ಖಣಗಳು, ಕಿರಿಗೆಗಳು, ಚಿಲ್ಲರೆಯಾಗಿಯೂ ಬೀಲ ಗಲ್ಲೆಯಾಗಿ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು ಈ ಮುಂದಣ ಕಳುಹಿಸ ನಾಲ್ಕಾರು ತಿಂಗಳು ಇದು ಇರದು ಕೊಂಡ ನಮೂನೆಗಳು ಬಂದರೆ ನಷ್ಟಪಡಬೇಕಾದ ಅವಶ್ಯತವಿಲ್ಲ ಒಸಗಳ ಮೇಲಿನ ನಂಬರುಗಳನ್ನು ತಿಳಿಸಬೇಕಾದ್ದು ತರಿಸಿಕೊಳ್ಳಬಹುದು ಸೋಲಾಪುರದಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ವಲ್ಪ ಮತ್ತು ಪದಸ್ಥಳು ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಘಾಯಿದ ಹೊಂದುತ್ತಿರುವರು [-8 11]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

ಇಂಡಿಯನ್ ಕೊಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 109 ಚಿಲಂ ರೋಡ್ (ಕುಂಬಾರ ಪೇಟೆ), ಬೆಂಗಳೂರು ಸಿಟಿ.

"ಪಾಶ್ಚಿಮಾತ್ಯೋಪಕ್ರಿಯೋಷ್ಣಸುಮ ತೈಲ"

ಎಂಥಾ ಶೋಚಿದ್ದರೂ ವಾಸಿಮಾಡತಕ್ಕದ್ದೆಂದು ಹೇಳು ವಾಯು ಕೀಲು, ಆರತಿ, ಸಲಿಕೋಡಗಳು ಯಾವ ಕಾರಣದಿಂದ ಕಟ್ಟಿನ ಬಾಧೆಯಾಗಲಿ, ಉಳುಕು, ಹಲ್ಲುನೋವು, ಗಂಟ್ಲು ಗಾರೆನ್ನುವುದು ಕಿರುಗಗಳ, ಕೀಸಗಡ ಕ್ಯಾನ್ಸರ್ಗಳ, ಜಜ್ಜು ಗಾಯ, ಥಳಕು ಬೇಳು ಇವಿನ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೇನು. ಅಂತ 1 ದಿಂದ 5 ಕೀಲುಗಳ ಕೆಲಸ ಮಾಡು!ನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ವೆಂಟೆರ ಮ್ಯಾಜಿಕ್ ಒಂದು ಬಾಟ್ಲ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತೆಗೆದುಕೊಳ್ಳಬೇಡ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಷಧಿ ನಾಲ್ಕೂವರೆ ಔನ್ಸಿನ ದೊಡ್ಡ 12 ಆಣೆಗೆ ಸಿಕ್ಕುತ್ತದೆ ನಮ್ಮ ವಿದವು ನೋವುಗಳ ಧೇಗಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [122 1]

"ಕ್ವೆಂಟೆರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವ್ಹಿ ಆಣೆ 3 ಒಂದೇ ಬಾಟ್ಲ ಬೇಕ ದರೆ ಪ್ಯಾಕಿಂಗ್ ಪೋಸ್ಟೇಜ್ ವಾಕಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೈಪಿಳ್ಳೆ ಬೀದಿ, ಪುಸೀಪಾಳೆಂ, ವೇಪೇರಿ, ಮದರಾಸ್, (2) ಟಿ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶಾಲಿವಾಹನ ಶಕ ವರುಷಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಗ್ರೀಷ್ಮ ಋತೌ ಜ್ಯೇಷ್ಠ ಶುದ್ಧ ದ್ವಾದಶಿ ಶುಕ್ರವಾರದಿಂದ ಜ್ಯೇಷ್ಠ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ ತೇದಿ
5	ಶುಕ್ರ *	ದ್ವಾದಶಿ	29 31	ಸ್ವಾತಿ	19 13	23
6	ಶನಿ ‡	ತ್ರಯೋದಶಿ	22 30	ವಿಶಾಖ	11 19	24
7	ಭಾನು §	ಚತುರ್ದಶಿ	16 08	ಅನೂರಾಧ	40 51	25
8	ಸೋಮ †	ಪೌರ್ಣಮಿ	11 07	ಜ್ಯೇಷ್ಠ	36 4	26
9	ಮಂಗಳ	ಪಾಡ್ಯಮಿ	7 11	ಮೂಲ	36-8	27
10	ಬುಧ	ಬಿದಿಗೆ	1 20	ಪೂರ್ವಾಷಾಢ	35-10	28
11	ಗುರು ,	ತದಿಗೆ	2 2	ಉತ್ತರಾಷಾಢ	35 11	29

* ದ್ವಾದಶೀತಿಥಿ, ಪ್ರದೋಷ ಕೂರ್ಮಜಯಂತಿ ‡ ತಿಥಿದ್ವಯಂ, ಕಂಚಿ ಗರುಡೋತ್ಸವ § ಪೂರ್ಣಿಮಾತಿಥಿ, ಸೌರ ವೈಷ್ಣವ ಶ್ರೀನೃಸಿಂಹಜಯಂತಿ, ವ್ಯತಿಪಾತಯೋಗಃ † ಸಾವಿತ್ರೀ ವ್ರತಂ, ಭಾವಿಪೂರ್ಣಿಮಾ, ಮಳೆ ನಕ್ಷತ್ರ — ಮೃಗಶಿರ 1 ನೆ ಪಾದ ನಾರದಹಳ್ಳಿ ನೃಸಿಂಹಸ್ವಾಮಿ ರಥ, ಕಂಚಿ ವರದರಾಜಸ್ವಾಮಿ ರಥ , ಮಳೆ ನಕ್ಷತ್ರ — ಮೃಗಶಿರ 2 ನೆ ಪಾದ

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಿನಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಒಳ್ಳೆಯ ನೇಗಲು —ಸೀಮೆಯ ಅಥವಾ ಕಬ್ಬಿಣದ ನೇಗಲು

ಮುಂಗಾರುಮಳೆಗಳು ಇಷ್ಟರಲ್ಲೇ ಪ್ರಾರಂಭವಾಗುವಂತಿದೆ ಆದ್ದರಿಂದ ರೈತರು ತಮ್ಮ ನೇಗಲುಗಳನ್ನು ಹೊರಕ್ಕೆ ತೆಗೆದು ಮುರಿದುಹೋದ ಭಾಗಗಳನ್ನು ಸರಿಮಾಡಿ ಸವೆದುಹೋದ ಗುಳಗಳನ್ನು ಬದಲಾಯಿಸಿ ಸಕಾಲದಲ್ಲಿ ಕೆಲಸಕ್ಕೆ ಒದಗುವಂತೆ ತಮ್ಮ ಮುಖ್ಯ ಸಾಧನವಾಗಿರುವ ಈ ಯಂತ್ರವನ್ನು ಸಿದ್ಧಪಡಿಸಿಕೊಳ್ಳಬೇಕು ಮಳೆಗಳು ಬಿದ್ದು ಜಮೀನುಗಳು ಮೆತುವಾದ ಹಾಗೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಎರಡು ತಿಂಗಳ ಕಾಲವೂ ತನ್ನ ಮತ್ತು ತಮ್ಮ ಎತ್ತುಗಳ ಶಕ್ತ್ಯನುಸಾರ ನೇಗಲನ್ನು ಉಪಯೋಗಿಸುತ್ತಲೇ ಇರಬೇಕು ರೈತರು ಮಾಡುವ ಕೆಲಸದಲ್ಲೆಲ್ಲಾ ಉಳುಮೆ ಕೆಲಸವು ಬಹಳ ಕಷ್ಟವಾದದ್ದು ಮತ್ತು ಮುಖ್ಯವಾದದ್ದು ಹೊಲದಲ್ಲಿ ರೈತರು ಮಾಡುವ ಕೆಲಸದಲ್ಲೆಲ್ಲಾ ಶೇಕಡ 60 ರಷ್ಟು ಭಾಗ ಉಳುಮೆಯ ಕೆಲಸ, ಮತ್ತು ಇತರ ಅನುಕೂಲಗಳು ಒಂದೇ ರೀತಿಯಾಗಿದ್ದರೆ ಒಂದು ವರ್ಷದಲ್ಲಿ ಉಳುಮೆಯು ಎಷ್ಟರಮಟ್ಟಿಗೆ ಚೆನ್ನಾಗಿ ಮಾಡಿದರೆ ಆ ವರ್ಷದ ಫಸಲೂ ಅಷ್ಟರಮಟ್ಟಿಗೆ ಚೆನ್ನಾಗಿ ಆಗುವದು ಈ ಮುಖ್ಯವಾದ ಕೆಲಸವನ್ನು ಮಾಡುವದರಲ್ಲಿ ರೈತರು ತಮ್ಮ ಸ್ವಂತ ಶಕ್ತಿಯನ್ನೂ, ತಮ್ಮ ಎತ್ತುಗಳ ಶಕ್ತಿಯನ್ನೂ ಸಂಪೂರ್ಣವಾಗಿ ಉಪಯೋಗಿಸುವದಕ್ಕೆ ಸ್ವಲ್ಪಮಾತ್ರವೂ ಹಿಂಜರಿಯುವದಿಲ್ಲ ಆದರೆ ತಮ್ಮ ಹೊಲಗಳೆಲ್ಲವನ್ನೂ ಸಕಾಲದಲ್ಲಿ ತಮ್ಮ ಮನಸ್ಸಿಗೆ ಸಮರ್ಪಕವಾಗಿರುವಷ್ಟು ಚೆನ್ನಾಗಿ ಉಳುವ ಕೆಲಸವನ್ನು ಮುಗಿಸಬಲ್ಲರೇ ? ಇಲ್ಲ ಯಾಕೆಂದರೆ ರೈತರು ಸಾಧಾರಣವಾಗಿ ಉಪಯೋಗಿಸುವ ನಾಟು ನೇಗಲು ಅಷ್ಟು ಒಳ್ಳೆಯ ಸಾಧನವಲ್ಲ

ನಾಟುನೇಗಲಿನ ಕೆಲಸದ ರೀತಿ

ನಾಟುನೇಗಲಿನಲ್ಲಿ ಮುಖ್ಯವಾಗಿ ಕೆಲಸಮಾಡುವ ಭಾಗವು ಒಂದು ಮರದ ಬಾಳು ಮತ್ತು ಅದಕ್ಕೆ ಜಂಟಿಸಿರುವ ಕಬ್ಬಿಣದ ಗುಳ ಈ ನೇಗಲಿನಿಂದ ಉತ್ತ ಸಾಲುಗಳು V ಆಕಾರವಾಗಿರುತ್ತವೆ ಆದ್ದರಿಂದ ಸಾಲುಗಳ ನಡುವೆ ಉಳದೆ ಇರುವ ಭೂಮಿಯು ನಿಂತುಹೋಗುತ್ತದೆ ಅಂದರೆ ಸಾಲುಗಳ ಮಧ್ಯೆ ದಿಂಡು ನಿಲ್ಲುತ್ತದೆ (1 ನೆಯ ಚಿತ್ರವನ್ನು ನೋಡಿ)



1

ಕೂಲಿ ಆಳುಗಳನ್ನು ಇಟ್ಟು ಉಳುಮೆಯ ಕೆಲಸವನ್ನು ಮಾಡಿದಾಗ ಹೀಗೆ ದಿಂಡು ನಿಲ್ಲುವದು ಬಹಳ ಹೆಚ್ಚಾಗಿರುತ್ತದೆ ಮತ್ತು ರೈತರು ತಮ್ಮ ಸ್ವಂತ ಜಮೀನುಗಳನ್ನು ಮುತುವರ್ಜಿಯಿಂದ ತಾವೇ ಉತ್ತಾಗಲೂ ಕೂಡ ಸ್ವಲ್ಪಮಟ್ಟಿಗೆ ದಿಂಡು ನಿಲ್ಲದೆ ಇರುವುದಿಲ್ಲ ಈ ದಿಂಡುಗಳನ್ನು ಕರಗಿಸಬೇಕಾದರೆ ಭೂಮಿಯನ್ನು ಎರಡನೆಯ ಸಲ ಅಡ್ಡಡ್ಡವಾಗಿ ಉಳಬೇಕ ಇದರಿಂದಲೂ ಭೂಮಿಯು ಸಂಪೂರ್ಣವಾಗಿ ಹಸನಾಗುವುದಿಲ್ಲ ಯಾಕೆಂದರೆ ಉಳದೆ ಇರುವ ಭೂಮಿಯು ಚಿಕ್ಕ ಚಿಕ್ಕ ಚವರಗಳಾಗಿ ಮಧ್ಯ ನಿಂತಿರುವವು ಇವುಗಳನ್ನು ಕರಗಿಸಿ ಭೂಮಿಯನ್ನೆಲ್ಲಾ ತೃಪ್ತಿಕರವಾಗಿ ಹಸನು ಮಾಡುವದಕ್ಕಾಗಿ ಮೂರನೆಯದಾಗಿಯೋ ಅಥವಾ ಇನ್ನೂ ಹೆಚ್ಚಾದರೂ ಒಂದು ವಕ್ರಮಾರ್ಗವಾಗಿಯೋ ಮತ್ತೊಂದು ಸಲ ಉಳಬೇಕು ಇಲ್ಲವಾದರೆ ಕುಂಟೆ ಎಂಬ ಸಾಧನವನ್ನು ಉಪಯೋಗಿಸುವ ಪ್ರದೇಶಗಳಲ್ಲಿ ಒಂದು ಸಲ ಚೆನ್ನಾಗಿ ಕುಂಟೆಯನ್ನು ಹೊಡೆಯುವುದರಿಂದ ಈ ದಿನ್ನೆಗಳು ಸ್ವಲ್ಪಮಟ್ಟಿಗೆ ಕಮ್ಮಿ ಆಗುವವು ಹೀಗೆ ಭೂಮಿಯನ್ನು ಚೆನ್ನಾಗಿ ಹಸನುಮಾಡಬೇಕಾದರೆ ಮೂರು ನಾಲ್ಕು ಸಲ ಉಳುಮೆಯನ್ನು ಮಾಡಬೇಕು ಇದಕ್ಕೆ ಬಹಳ ಹೆಚ್ಚುಕಾಲ ಹಿಡಿಯುವದು ರೈತರು ಸ್ವಾಭಾವಿಕವಾಗಿ ತಮ್ಮ ಭೂಮಿಗಳೆಲ್ಲವನ್ನೂ ಉತ್ತು ಎಲ್ಲಕ್ಕೂ ಸಕಾಲದಲ್ಲಿ ಬೀಜ ಹಾಕಬೇಕೆಂಬ ಕುತೂಹಲವುಳ್ಳವರಾಗಿದ್ದರೂ ಈ ನಾಟುನೇಗಲಿನಿಂದ ಆ ಕೆಲಸವನ್ನು ತಮ್ಮ ಮನಸ್ಸಿಗೆ ಸಮರ್ಪಕವಾಗಿರುವಂತೆ ಸಕಾಲದಲ್ಲಿ ಮಾಡಲು ಆಗುವದಿಲ್ಲ ಆದ್ದರಿಂದ ಬೀಜ ಬಿತ್ತುವ ಕಾಲ ಮುಗಿದುಹೋದೀತೆಂಬ ಭಯದಿಂದ ಚೆನ್ನಾಗಿ ಹಸನಾಗದೆ ಇರುವ ಭೂಮಿಗೂ ಕೂಡ ಬೀಜವನ್ನು ಹಾಕಬೇಕಾಗಿ ಬರುವದು ನಿಜವಾಗಿಯೂ ಕೆಲವು ವೇಳೆ ಬಿತ್ತನೆಯ ಕಾಲದಲ್ಲಿ ಕೆಲವು ಭೂಮಿಗಳನ್ನು ಉಳದೆ ಹಾಗೆಯೇ ಬಿಟ್ಟು ಕಾಲಮೀರಿದ ಮೇಲೆ ಹಿಂಗಾರುಮಳೆಗಳಲ್ಲಿ ಮೇಲೆ ಮೇಲೆ ಸ್ವಲ್ಪಮಟ್ಟಿಗೆ ಉತ್ತು ಅವಕ್ಕೆ ಹುರುಳಿಯನ್ನು ಚೆಲ್ಲುತ್ತಾರೆ

ಮೇಲೆ ಹೇಳಿದ ಕಾರಣಗಳಿಂದ ಆಗುತ್ತದೇನೆಂದರೆ, ಭೂಮಿಯು ಚೆನ್ನಾಗಿ ಹಸನುಮಾಡಲ್ಪಡದೆಹೋಗುವುದು ಮತ್ತು ಅಂಥಾ ಭೂಮಿಯಿಂದ ಬರುವ ಫಸಲು ಬಹಳ ಕಮ್ಮಿಯಾಗಿರುವುದು ಇದೂ ಅಲ್ಲದೆ ಸ್ವಲ್ಪ ಭೂಮಿಯನ್ನು ಬೀಳು ಬಿಡಬೇಕಾಗಿ ಬರುವುದು ಈ ಎರಡು ವಿಷಯಗಳೂ ರೈತರು ಹೆಚ್ಚಾಗಿ ಗಮನ ಕೊಡಬೇಕಾದ ವಿಷಯಗಳಾಗಿವೆ ಇವೆಲ್ಲಾ ತೃಪ್ತಿಕರವಾಗಿ ಕೆಲಸಮಾಡಲಾರದ ನೇಗಲಿನಿಂದುಂಟಾಗುವ ಅನನುಕೂಲಗಳಾಗಿರುವುದರಿಂದ ಇವನ್ನು ಹೋಗಲಾಡಿಸಬೇಕೆಂದರೆ ಉತ್ತಮತರವಾದ ನೇಗಲನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ ರೈತರ ಅನುಕೂಲಕ್ಕಾಗಿ ಈಗ ಒಂದು ಒಳ್ಳೇ ಮಾದರಿಯ ನೇಗಲು ಮಾಡಲ್ಪಟ್ಟು ವ್ಯವಸಾಯದ ಇಲಾಖೆಯವರಿಂದ ವಿಶೇಷವಾಗಿ ವಿಕ್ರಯಿಸಲ್ಪಡುತ್ತಿರುವುದು ಇದರ ಆಕಾರವನ್ನು 2 ನೆಯ ಚಿತ್ರದಲ್ಲಿ ತೋರಿಸಿದೆ

ಇದರಿಂದ ಕೆಲಸಮಾಡುವ ಕ್ರಮ ಸ್ವಲ್ಪಮಟ್ಟಿಗೆ ವಿಚಾರಿಸಿ ನೋಡಿದಲ್ಲಿ ಇದು ನಾಟು ನೇಗಲಿಗಿಂತ ಹೇಗೆ ಉತ್ತಮವಾದದ್ದೆಂದು ವಿಶದವಾಗುತ್ತದೆ



2

ಸೀಮೆಯ ನೇಗಿಲು ಕೆಲಸ ಮಾಡುವ ಕ್ರಮ

ಈ ನೇಗಿಲು ಮೇಲಿನ ಚಿತ್ರದಲ್ಲಿ ತೋರಿಸಿರುವಂತೆ ಆಕಾರವಿರುವದರಿಂದ ಇದರಿಂದ ಉತ್ತ ಸಾಲುಗಳು ಸಮಕೋಣಾಕಾರವುಳ್ಳದ್ದಾಗಿರುವವಲ್ಲದೆ, ಕಳಚಲ್ಪಟ್ಟ ಮಣ್ಣಿನ ಹೆಂಟೆಯು ತಿರುಗಿಸಲ್ಪಡುವದು ನೇಗಲಿನಿಂದ ಉತ್ತುಕೊಂಡು ಹೋದಹಾಗೆಲ್ಲಾ ಮಣ್ಣು ಸಡಲಿಸಲ್ಪಟ್ಟು ಪಕ್ಕದ ಸಾಲಿನ ಮೇಲಕ್ಕೆ ಮಗುಚಿ ಹಾಕಲ್ಪಡುವದು ಆದ್ದರಿಂದ ಸಡಿಕೆಯಿಂದ ಅಗೆದರೆ ಹೇಗೋ ಹಾಗೆಯೇ ನೆಲವೆಲ್ಲವೂ ಚೆನ್ನಾಗಿ ಹದವಾಗುವುದು ಈ ರೀತಿಯಲ್ಲಿ ಹೊಲವನ್ನೆಲ್ಲಾ ಒಂದು ಸಲ ಉತ್ತ ಮಾತ್ರಕ್ಕೆ ನೆಲವೆಲ್ಲವೂ ಚೆನ್ನಾಗಿ ಕಲಕಲ್ಪಟ್ಟು ಉಳುಮೆಯು ಬಹಳ ತೃಪ್ತಿಕರವಾಗಿ ಆಗುವುದು (ಮೂರನೆಯ ಚಿತ್ರವನ್ನು ನೋಡಿ) ನಾಟು



3

ನೇಗಲಿನಲ್ಲಿ ಇಷ್ಟೇ ಕೆಲಸಮಾಡಬೇಕಾದರೆ 3 4 ಸಾರಿ ಉಳಬೇಕಾಗುವುದು ಹೊಸ ನೇಗಲಿನ ಇನ್ನೊಂದು ಅನುಕೂಲವೇನೆಂದರೆ ನಾಟು ನೇಗಲಿನಿಂದ ತೆಗೆದುಕೊಳ್ಳುತ್ತಿದ್ದ ಕಾಲದ ನಾಲ್ಕನೆಯ ಭಾಗದಲ್ಲಿ ಭೂಮಿಗಳೆಲ್ಲವನ್ನೂ ಉಳಬಹುದು ಆದ್ದರಿಂದ ರೈತರು ತಮ್ಮ ಭೂಮಿಗಳೆಲ್ಲವನ್ನೂ ಸಕಾಲದಲ್ಲಿ ಉತ್ತು ಹಸನುಮಾಡಿ ಬೀಜಹಾಕುವದಕ್ಕೆ ಸಿದ್ಧಮಾಡಿಕೊಳ್ಳಬಹುದು ಇದೂ ಅಲ್ಲದೆ ನಾಟು ನೇಗಲಿನಿಂದ ಉಳುತ್ತಿದ್ದರ ಮೂರರಷ್ಟು ಭೂಮಿಯನ್ನು ಸುಲಭವಾಗಿ ಸಾಗುವಳಿ ಮಾಡಬಹುದು

ಹೊಸ ನೇಗಲಿನ ಅನುಕೂಲಗಳಲ್ಲಿ ಇದು ಮುಖ್ಯವಾದದ್ದಾದರೂ ಇದರ ವಿಷಯದಲ್ಲಿ ನಾವು ತಿಳಿಯಬೇಕಾದ ಅಂಶಗಳು ಇನ್ನೂ ಇರುವವು ನಾಟು ನೇಗಲಿಗಿಂತ ಈ ನೇಗಲು ಆಳವಾಗಿ ಉಳುತ್ತದೆ " ಹೆಚ್ಚು ಆಳವಾಗಿ ಉತ್ತ ಹಾಗೆಲ್ಲಾ ಬೆಳೆಯೂ ಹೆಚ್ಚುವುದು ಎಂಬುವದು ರೈತರ ಅನುಭವಕ್ಕೆ ಬಂದ ವಿಷಯವೇ ಸಾಧಾರಣವಾಗಿ ರೈತರು ತೋಟಗಳಲ್ಲಿ ಯಾವಾಗಲೂ ಆಳವಾಗಿಯೇ ಅಗೆಯುವರು ಮತ್ತು ಚಿಕ್ಕ ಭೂಮಿಗಳನ್ನು ಸಾಧ್ಯವಾಗಿದ್ದ ಪಕ್ಷದಲ್ಲಿ ಹಾಗೆಯೇ ಮಾಡುತ್ತಿದ್ದರು ತೋಟದಲ್ಲಿ ಭೂಮಿಯನ್ನು ಅಗೆಯುವ ಹಾಗೆ ಇತರ ಭೂಮಿಗಳನ್ನು ಅಗೆಯುವದು ಸಾಧ್ಯವಲ್ಲವಾದುದರಿಂದ ಕೈಲಾದ ಮಟ್ಟಿಗೂ ಆಳವಾಗಿ ಉಳುಮೆಯನ್ನಾದರೂ ಮಾಡಬೇಕು ಈ ಕೆಲಸಕ್ಕೆ ನಾಟು ನೇಗಲಿಗಿಂತ ಸೀಮೆಯ ನೇಗಲು ಬಹಳ ಉತ್ಕೃಷ್ಟವಾದದ್ದು

ಆಳವಾಗಿ ಉಳುವುದರಿಂದ ಭೂಮಿಯು ಮಳೆಯ ನೀರನ್ನು ಹೆಚ್ಚಾಗಿ ಹೀರುವುದು ಹೀಗೆ ಹೀರಿ ಸೇರಿಸಲ್ಪಟ್ಟ ನೀರು ಮುಂದೆ ಒಂದೆರಡು ಮಳೆಗಳು ಸಕಾಲದಲ್ಲಿ ಬಾರದಿದ್ದಾಗ್ಯೂ ಬೆಳೆಗಳಿಗೆ ಬಹಳ ಸಹಾಯವಾಗುವುದು ಈ ವಿಷಯವನ್ನು ಕಾರ್ಯತಃ ಹೆಬ್ಬಾಳದ ಪರೀಕ್ಷಾ ಕ್ಷೇತ್ರದಲ್ಲಿ ಹೋದ ವರುಷ ನೋಡಿದಂತಾಯಿತು ಈ ಪರೀಕ್ಷಾ ಕ್ಷೇತ್ರದಲ್ಲಿ ಉಳುಮೆಯ ಕೆಲಸಕ್ಕೆಲ್ಲಾ ಸೀಮೆಯ ನೇಗಲುಗಳನ್ನೇ ಉಪಯೋಗಿಸುವದು ವಾಡಿಕೆ ಹೋದ ವರುಷ ಮಳೆಗಳು ಬೀಳದೆ ಬೆಳೆಗಳು ಬಹಳ ನಷ್ಟವಾದುವೆಂದು ಎಲ್ಲರಿಗೂ ತಿಳಿದೇ ಇದೆ ಹೀಗಿದ್ದರೂ ಹೆಬ್ಬಾಳದ ಪರೀಕ್ಷಾ ಕ್ಷೇತ್ರದಲ್ಲಿರುವ ಸುತ್ತುಮುತ್ತಲಿನ ನಾಟು ನೇಗಲಿನಿಂದ ಉಳಲ್ಪಟ್ಟ ರೈತರ ಭೂಮಿಗಳ ಮೇಲೆ ರಾಗಿಯ ಪೈರು ಮಳೆ ಸಾಲದೆ ಒಣಗಿಹೋದರೂ ಪರೀಕ್ಷಾ ಕ್ಷೇತ್ರಕ್ಕೆ ಸೇರಿದ ಭೂಮಿಗಳ ಮೇಲಿನ ಪೈರು ಮಾತ್ರ ಒಣಗಿಹೋಗಲಿಲ್ಲ

ಸೀಮೆಯ ನೇಗಲಿನ ಅನುಕೂಲವು ಇನ್ನೊಂದಿರುವದು ಉತ್ತ ಮೇಲೆ ಮಣ್ಣು ಚೆನ್ನಾಗಿ ಮಗುಚಿಹಾಕುವದು ಇದು ನಾಟು ನೇಗಲಿನಿಂದ ಆಗುವುದಿಲ್ಲ ಆದ್ದರಿಂದ ಸೀಮೆಯ ನೇಗಲಿನಿಂದ ಉಳಲ್ಪಟ್ಟ ಭೂಮಿಯಲ್ಲಿ ಇರುವ ಕಳೆಗಳ ಬೇರುಗಳು ಬಿಸಲಿಗೆ ಬಿದ್ದು ಒಣಗಿಹೋಗುವವು ಮತ್ತು ಹುಳುಗಳ ಮೊಟ್ಟೆಗಳು ಕೂಡ ಹೊರಕ್ಕೆ ಹಾಕಲ್ಪಡುವುದರಿಂದ ಪಕ್ಷಿಗಳಿಂದ ನಾಶಮಾಡಲ್ಪಡುವವು ಮಣ್ಣೆಲ್ಲಾ ಬಿಸಿಲು ಗಾಳಿಗಳಿಂದ ಚೆನ್ನಾಗಿ ಹಸನಾಗುತ್ತದೆ

ಸೀಮೆಯ ನೇಗಲಿನಿಂದ ಆಗುವ ಮೇಲೆ ಹೇಳಿರುವ ಅನುಕೂಲಗಳ ವಿಷಯವಾಗಿ ವಿಶೇಷವಾಗಿ ಚರ್ಚಿಸಬೇಕಾದ ಅವಶ್ಯಕವೇನೂ ಇರುವುದಿಲ್ಲ ಯಾಕೆಂದರೆ ಬೇಸಾಯವನ್ನೇ ಮುಖ್ಯ ಕಸುಬಾಗಿ ಇಟ್ಟುಕೊಂಡಿರುವ ರೈತರು ಈ ವಿಷಯಗಳನ್ನು ಸುಲಭವಾಗಿ ಗ್ರಹಿಸಬಲ್ಲರು ವ್ಯವಸಾಯದ ಇಲಾಖೆಯವರು ಸೀಮೆಯ ನೇಗಲಿಂದ ಉಳುವುದನ್ನು ರೈತರಿಗೆ ತೋರಿಸಿರುವ ಕಡೆಗಳಲ್ಲೆಲ್ಲಾ ನಮ್ಮ ನಾಟು ನೇಗಲಿಗಿಂತ ಸೀಮೆಯ ನೇಗಲು ಉತ್ಕೃಷ್ಟವಾದದ್ದೆಂದು ಎಲ್ಲರೂ ಒಪ್ಪಿಕೊಂಡಿರುತ್ತಾರೆ ಆದ್ದರಿಂದ ಈ ನೇಗಲುಗಳನ್ನು ವಿಶೇಷವಾಗಿ ಪ್ರಚುರಪಡಿಸುವುದು ನಮ್ಮ ವ್ಯವಸಾಯಗಾರರ ಏಳಿಗೆಗೆ ಅವಶ್ಯಕ

ಕೆಲವರು ಸೀಮೆಯ ನೇಗಲುಗಳು ತಮ್ಮ ಎತ್ತುಗಳಿಗೆ ಬಹಳ ಭಾರವೆಂದು ಹೇಳುವರು ಯೋಗಿಸುವುದು ಸೀಮೆಯ ನೇಗಲುಗಳಲ್ಲಿ ಮಾತ್ರವೇ ಅಲ್ಲ ನಾಟು ನೇಗಲುಗಳಲ್ಲಿಯೂ ಅನೇಕ ವಿಧಗಳುಂಟು ಭತ್ತವನ್ನು ವಿಶೇಷವಾಗಿ ಬೆಳೆಯುವ ಕಡೆಗಳಲ್ಲಿ ಚಿಕ್ಕಚಿಕ್ಕ ಎತ್ತುಗಳಿಂದಲೂ ಎಳೆಯಬಹುದಾದ ಹಗುರವಾದ ನೇಗಲುಗಳು ವಾಡಿಕೆಯಲ್ಲಿರುವವು ಕುಷ್ಕಿ ಜಮೀನುಗಳನ್ನು ಉಳುವುದಕ್ಕೆ ಸ್ವಲ್ಪ ಭಾರವಾದವುಗಳೂ, ಎರೇ ಜಮೀನುಗಳಲ್ಲಿ ಉಳುವುದಕ್ಕೆ ಇನ್ನೂ ಹೆಚ್ಚು ಭಾರವಾದವುಗಳೂ ಮತ್ತು ಬೇಸಗೆಯಲ್ಲಿ ಗರಿಕೆಗಳನ್ನು ಹೋಗಲಾಡಿಸುವುದಕ್ಕೆ ಎರೇ ಜಮೀನುಗಳಲ್ಲಿ 5 6 ಜೊತೆ ಎತ್ತುಗಳನ್ನು ಕಟ್ಟಿ ಕೆಲಸ ಮಾಡುವ ಭಾರೀ ನೇಗಲುಗಳೂ ಇವೆ ಹಾಗೆಯೇ ಸೀಮೆಯ ನೇಗಲುಗಳಲ್ಲಿಯೂ ಅನೇಕ ವಿಧಗಳುಂಟು ಆದ್ದರಿಂದ ಸೀಮೆಯ ನೇಗಲುಗಳನ್ನು ಕೊಂಡುಕೊಳ್ಳಲು ಅಪೇಕ್ಷಿಸುವವರು ಯಾವ ಕೆಲಸಕ್ಕಾಗಿ ನೇಗಲು ಬೇಕಾಗಿದೆ ಎಂಬುವುದನ್ನು ನಮಗೆ ಬರೆದು ತಿಳಿಸುವುದು ಆವಶ್ಯಕ ಭತ್ತದ ಭೂಮಿಗಳಿಗೆ ಬೇಕಾದ ಚಿಕ್ಕ ನೇಗಲುಗಳೂ, ಕುಷ್ಕಿ ಭೂಮಿಗಳಿಗೆ ಬೇಕಾದ ಸ್ವಲ್ಪಮಟ್ಟಿಗೆ ಭಾರವಾದ ಕೋಲಾರದ ಮಿಷನ್ ನೇಗಲುಗಳೂ ನಮ್ಮಲ್ಲಿರುವವು ಕುಷ್ಕಿ ಜಮೀನುಗಳನ್ನು ಹೆಚ್ಚಾಗಿ ಸಾಗುವಳಿಮಾಡುವ ನಮ್ಮ ರೈತರು ಸಾಧಾರಣವಾಗಿ ಇಟ್ಟುಕೊಂಡಿರುವ ಎತ್ತುಗಳಿಂದ ಸುಲಭವಾಗಿ ಉಳಲು ಅನುಕೂಲವಾಗಿರುವುದರಿಂದ ಕೋಲಾರದ ಮಿಷನ್ ನೇಗಲುಗಳನ್ನು ರೈತರು ಬಹಳವಾಗಿ ಅಪೇಕ್ಷಿಸುತ್ತಿದಾರೆ ಎರೇ ಜಮೀನುಗಳು ಇರುವ ಪ್ರದೇಶಗಳಲ್ಲಿ ಭಾರೀ ಎತ್ತುಗಳಿಂದ ಮಾತ್ರ ಉಳಲಾಗುವ ದೊಡ್ಡ ದೊಡ್ಡ ನೇಗಲುಗಳು ಕೂಡ ನಮ್ಮಲ್ಲಿರುವವು

ನಾಟುನೇಗಲಿಗೆ ಬದಲಾಗಿ ನಮ್ಮ ರೈತರೆಲ್ಲರೂ ಬಹಳ ಫಾಯಿದೆಯಿಂದ ಉಪಯೋಗಿಸಬಹುದಾದ ನೇಗಲನ್ನು ಎರಡನೆಯ ಚಿತ್ರದಲ್ಲಿ ತೋರಿಸಿದೆ

ಈ ನೇಗಲುಗಳಲ್ಲಿ ಸವೆಯಬಹುದಾದ ಭಾಗಗಳು ಬಹಳ ಚೆನ್ನಾಗಿ ಹದಮಾಡಿದ ಉಕ್ಕಿನಿಂದ ಮಾಡಲ್ಪಟ್ಟಿವೆ ಆದ್ದರಿಂದ ಈ ನೇಗಲುಗಳು ಬಹಳ ದಿವಸ ಬಾಳಿಕೆ ಬರುವುದಲ್ಲದೆ ಉಳುವಾಗ ಮಣ್ಣು ನೇಗಲಿಗೆ ಹತ್ತಿಕೊಳ್ಳದೆ ಚೆನ್ನಾಗಿ ಮಗುಚಿ ಹಾಕಲ್ಪಡುವುದು ಈ ನೇಗಲಿನಿಂದ ಸಾಧಾರಣವಾಗಿ ನಾಲ್ಕು ಅಂಗುಲದಷ್ಟು ಆಳವಾಗಿ ಉಳಬಹುದು ಬೇಕಾದರೆ 5 ಅಂಗುಲದಷ್ಟು ಉಳುವ ಹಾಗೂ ಮಾಡಬಹುದು ಇದರಿಂದ ಉಳುಮೆಮಾಡಿದ ಸಾಲುಗಳು 5ರಿಂದ 7 ಅಂಗುಲದಷ್ಟು ಅಗಲವಾಗಿರುವವು

ಇದೂ ಅಲ್ಲದೆ ಈ ನೇಗಲಿನ ರಚನೆಯು ಸುಲಭವಾಗಿಯೇ ಇದೆ ಇದರ ಈಚು ಮರದಿಂದ ಮಾಡಲ್ಪಟ್ಟಿರುವುದರಿಂದ ಆಕಸ್ಮಾತ್ತಾಗಿ ಮುರಿದರೂ ಹಳ್ಳಿಯ ಬಡಗಿಯಿಂದ ಸುಲಭವಾಗಿ ಸರಿಮಾಡಲು ಸಾಧ್ಯವಾಗಿರುವುದು ಹೆಚ್ಚಾದ ಉಪಯೋಗದಿಂದ ಸವೆದುಹೋಗುವ ಗುಳವನ್ನು ಆಗಾಗ್ಗೆ ಬದಲಾಯಿಸಬೇಕಾಗುವುದು ಇದಕ್ಕಾಗಿ ಗುಳಗಳು ವ್ಯವಸಾಯದ ಇಲಾಖೆಯಿಂದ ಮಾರಲ್ಪಡುವವು ನೇಗಲನ್ನು ಕೊಂಡುಕೊಳ್ಳುವವರೆಲ್ಲಾ ಪ್ರತಿ ನೇಗಲಿನ ಜೊತೆಯಲ್ಲಿ ಒಂದೆರಡು ಗುಳಗಳನ್ನು ಹೆಚ್ಚಾಗಿ ಕೊಂಡುಕೊಳ್ಳುವುದು ಅನುಕೂಲ ಈ ಗುಳಗಳನ್ನು ನೇಗಲಿಗೆ ಹಾಕುವದು ಬಹಳ ಸುಲಭ ಸವೆದುಹೋದ ಗುಳವನ್ನು ನೇಗಲಿಗೆ ಕೂಡಿಸಿರುವ ತಿರುಪು ಸಡಲಿಸಿ ತೆಗೆದು ಹೊಸ ಗುಳವನ್ನು ಸುಲಭವಾಗಿ ಜಂಟಿಸಬಹುದು

ಇದುವರೆಗೂ ಗುಳದ ಮೊನೆಯು ಸವೆದು ಹೋದಾಗ ಗುಳವನ್ನೇ ಬದಲಾಯಿಸಬೇಕಾಗಿತ್ತು ಇದರಿಂದ ಪ್ರತಿ ಸಲವೂ ರೂ 1 8 0 ರಿಂದ ರೂ 2 12-0 ವರೆಗೂ ಖರ್ಚು ಆಗುತ್ತಿತ್ತು ಈಗಲಾದರೋ ಈ ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ ಮೊನೆಯನ್ನು ಮಾತ್ರ ಬೇರೆ ತೆಗೆಯುವ ಹಾಗೆ ಇರುವ ಗುಳಗ



4



5

ಳನ್ನು ಮಾಡಿಸಿ ಮಾರುತ್ತಿರುತೇವೆ ಆದ್ದರಿಂದ ಒಂದು ಮೊನೆಯು ಸವೆದು ಹೋದರೆ ಬೇರೊಂದು ಮೊನೆಯನ್ನು ಸುಲಭವಾಗಿ ಹಾಕಬಹುದು ಈ ಮೊನೆಗಳಿಗೆ ಒಂದೊಂದಕ್ಕೆ ಸುಮಾರು ಮೂರು ಆಣೆಯಾಗುತ್ತದೆ ಈ ಮೊನೆಗಳನ್ನು ಗುಳಗಳಿಗೆ ಹಾಕುವುದೂ ಬಹಳ ಸುಲಭ ಮೊನೆಯನ್ನು ಅದರ ಸ್ಥಳದಲ್ಲಿ ನಿಲ್ಲುವ ಹಾಗೆ ಇಟ್ಟು ಒಂದು ಕಬ್ಬಿಣದ ಮೊಳೆಯಿಂದ ಭದ್ರಪಡಿಸಬೇಕು ಮೇಲೆ ಕೊಟ್ಟಿರುವ ಚಿತ್ರಗಳಲ್ಲಿ ಇವೆಲ್ಲಾ ಚೆನ್ನಾಗಿ ತೋರಿಸಿದೆ

ನೇಗಲೆಲ್ಲಾ ಸೇರಿ ಒಬ್ಬ ರೈತನು ಸುಲಭವಾಗಿ ಹೆಗಲಿನ ಮೇಲೆ ಇಟ್ಟುಕೊಂಡು ಹೋಗುವಷ್ಟು ಹಗುರವಾಗಿಯೇ ಇದೆ ಇದನ್ನು ಉಪಯೋಗಿಸುವುದನ್ನು ಒಂದು ಸಲ ತೋರಿಸಿದರೆ ರೈತರು ಸುಲಭವಾಗಿ ತಿಳಿದುಕೊಳ್ಳುವರು ನಾಟುನೇಗಲಿಗೆ ಇರುವಂತೆ ಇದಕ್ಕೆ ಒಂದು ಹಿಡಿಯಲ್ಲ, ಎರಡು ಹಿಡಿಗಳು ಇರುತ್ತವೆ ಇದರಿಂದಲೂ ಬಹಳ ಅನುಕೂಲವುಂಟೆಂಬುದನ್ನು ಈ ನೇಗಲನ್ನು ಉಪಯೋಗಿಸಿರುವವರೆಲ್ಲರೂ ಹೇಳಬಲ್ಲರು ಒಂದೇ ಹಿಡಿ ಇರುವ ನಾಟು

ನೇಗಲಿನಂತೆ ಬಲವಾಗಿ ಅಮುಕಿ ಹಿಡಿದುಕೊಳ್ಳ ಆವಶ್ಯಕವಿಲ್ಲದಿರುವುದರಿಂದ ಈ ನೇಗಲಿನಿಂದ ಕೆಲಸಮಾಡುವದರಲ್ಲಿ ಆಯಾಸ ಕಡಮೆ

ಈ ನೇಗಲಿನಿಂದ ಉಳುಮೆಯ ಕೆಲಸ ಮಾಡುವುದನ್ನು ಸಾಧ್ಯವಾದಷ್ಟು ಕಡೆಗಳಲ್ಲೆಲ್ಲಾ ವ್ಯವಸಾಯದ ಇಲಾಖೆಯವರಿಂದ ಕಾರ್ಯತಃ ತೋರಿಸಲ್ಪಡುವುದು ನೇಗಲನ್ನು ಸರಿಯಾಗಿ ಉಪಯೋಗಿಸುವುದನ್ನೂ ಗುಳವನ್ನೂ ಮೊನೆಯನ್ನೂ ಬದಲಾಯಿಸುವುದನ್ನೂ ರೈತರಿಗಾಗಲಿ ಅವರ ಆಳುಗಳಿಗಾಗಲಿ ಕಲಿಸಲಾಗುವುದು ಆದರೂ ಕೆಳಗೆ ತೋರಿರುವ ಸಂಗತಿಗಳನ್ನು ಓದಿದರೆ ಸ್ವಲ್ಪ ಮಟ್ಟಿಗೆ ಉಪಯೋಗವಾಗಬಹುದು

ಉಳಬೇಕಾದ ಜಮೀನನ್ನೆಲ್ಲಾ ಎಷ್ಟೆಷ್ಟು ಅಗಲವಾಗಿದ್ದರೆ ಅನುಕೂಲವೋ ಆ ರೀತಿ ವಿಂಗಡಿಸಿಕೊಂಡ ನಂತರ ಉಳುಮೆ ಕೆಲಸವನ್ನು ಎರಡು ವಿಧವಾಗಿ ಮಾಡಬಹುದು ನೇಗಿಲನ್ನು ಬಲಸುತ್ತಾಗಲಿ, ಎಡಸುತ್ತಾಗಲಿ ತಿರುಗಿಸಿಕೊಂಡು ಅನುಕೂಲವಿದ್ದಂತೆ ಜಮೀನನ್ನು ಎರಡು ವಿಧವಾಗಿ ಉಳಬಹುದು ತುಕಡಿಯ ಮಧ್ಯದಲ್ಲಿ ಒಂದು ಸಾಲನ್ನು ಮೊದಲು ಹೊಡೆದುಕೊಂಡು ಎತ್ತುಗಳನ್ನು ಯಾವಾಗಲೂ ಬಲಕ್ಕೇ ತಿರುಗಿಸುತ್ತಾ ಮೊದಲನೇ ಸಾಲನ್ನು ಸುತ್ತಿಕೊಂಡು ಉಳುತ್ತಾ ಹೋಗುವುದೊಂದು ವಿಧ ತುಕಡಿಯನ್ನೆಲ್ಲಾ ಈ ರೀತಿಯಾಗಿ ಉತ್ತನಂತರ ತುಕಡಿಯ ಮಧ್ಯದಲ್ಲಿ ಒಂದು ದಿಬ್ಬವೂ, ಆಚೀಚೆ ಕೊನೆಗಳಲ್ಲಿ ಸಾಲು ತೆಗೆದು ಹಳ್ಳಗಳೂ ನಿಲ್ಲುವವು ಎತ್ತುಗಳನ್ನು ಎಡಸುತ್ತು ತಿರುಗಿಸಿಕೊಂಡು ಉಳಬೇಕಾದರೆ ತುಕಡಿಯ ಮಧ್ಯದಲ್ಲಿ ಮೊದಲನೇ ಸಾಲನ್ನು ಹೊಡೆಯಕೂಡದು ಜಮೀನಿನ ಒಂದು ಕೊನೆಯಲ್ಲಿ (ಬಲಗೈ ಕೊನೆಯಲ್ಲಿ) ಒಂದು ಸಾಲನ್ನು ಹೊಡೆದು ಎತ್ತುಗಳನ್ನು ಎಡಕ್ಕೆ ತಿರುಗಿಸಿಕೊಂಡು ಇನ್ನೊಂದು ಕೊನೆಯ ವರೆಗೂ ಬಂದು ಆ ಕೊನೆಯಲ್ಲಿ ಒಂದು ಸಾಲನ್ನು ಹೊಡೆದು ತಿರುಗಿ ಮೊದಲು ಹೊಡೆದ ಸಾಲಿನ ಪಕ್ಕಕ್ಕೆ ಬಂದು ಇನ್ನೊಂದು ಸಾಲನ್ನು ಹೊಡೆಯಬೇಕು ಹೀಗೆಯೇ ಸಾಲಿನ ಪಕ್ಕದಲ್ಲಿ ಸಾಲನ್ನು ಹೊಡೆಯುತ್ತಾ ಹೋದರೆ ಹಾಕಿನ ಮಧ್ಯಕ್ಕೆ ಸರಿಯಾಗಿ ಕೊನೇ ಸಾಲು ಬರುವುದು ಈ ರೀತಿಯಾಗಿ ನೇಗಿಲನ್ನು ಎಡಕ್ಕೆ ತಿರುಗಿಸಿಕೊಂಡು ಉಳ್ಳೆ ಹೊಡೆದಾಗ ಹಾಕಿನ ಮಧ್ಯದಲ್ಲಿ ಒಂದು ಸಾಲೂ, ಕೊನೆಗಳಲ್ಲಿ ಎರಡು ದಿಬ್ಬಗಳೂ ಕಾಣುವವು ನೇಗಲಿಂದಾಗುವ ಸಾಲಿನ ಹಳ್ಳಗಳನ್ನೂ, ದಿಬ್ಬಗಳನ್ನೂ ಜಮೀನಿನಲ್ಲಿ ಖಾಯಂ ಆಗಿ ನಿಲ್ಲಿಸದೆ ಇರಬೇಕಾದರೆ ಜಮೀನನ್ನು ಒಂದು ವರ್ಷ ಬಲಗೈಚಾರಿಯಾಗಿ ಉಳಬೇಕು, ಎರಡನೇ ವರ್ಷ ಎಡಗೈಚಾರಿಯಾಗಿ ಉಳಬೇಕು

ನೇಗಲುಗಳ ಮತ್ತು ಗುಳ, ಮೊನೆ ಮುಂತಾದ ಭಾಗಗಳ ಖರೀದಿಗಳನ್ನು ಕೆಳಗೆ ಕೊಟ್ಟಿರುತ್ತೆ —ಕೋಲಾರದ ಮಿಷನ್ ನೇಗಿಲು —ಕೋಲಾರದ ಮಿಷನ್ ನೇಗಿಲು 7 ಅಂಗುಲ ಅಗಲವಾಗಿ ಸಾಲುಗಳಿರುವಂತೆ ಉಳುವುದಕ್ಕೆ ರೂ 17 ಗುಳ—ಎರಕದ್ದು ರೂ 1 8 0 ಉಕ್ಕಿನದು ರೂ 2 12 0 ಮೊನೆ ಬೇರೆ ತೆಗೆಯುವುದಕ್ಕೆ ಆಗುವ ಗುಳ ರೂ 2 ಬೇರೆ ಮೊನೆಗಳು—ಸ್ಟೀಲಿನ ತಯಾರಿ ೮ ಆಣೆ ನಾಟು ತಯಾರಿ 3 ಆಣೆ ಗುಳ ಮೊದಲಾದವುಗಳನ್ನು ರೈತರು ಸುಲಭವಾಗಿ ಕೊಂಡುಕೊಳ್ಳಲು ಸಾಧ್ಯವಾಗುವಂತೆ ಕೆಲವು ಮುಖ್ಯವಾದ ಹಳ್ಳಿಗಳಲ್ಲಿ ಪರಸ್ಪರಸಹಾಯ ಸಂಘಗಳಿರುವ ಕಡೆ ಆಫೀಸುಗಳಲ್ಲಿಯೂ ಪಟೇಲರಲ್ಲಿಯೂ, ಇತರ ಕಡೆಗಳಲ್ಲಿಯೂ ಮಾರಾಟಕ್ಕಾಗಿ ಇಡಲು ಏರ್ಪಾಟು ಮಾಡಲ್ಪಡುವುದು ಇದುವರೆಗೆ 100 ನೇಗಲುಗಳ ತನಕ ಮಾರಲ್ಪಟ್ಟಿವೆ ಮತ್ತು ಈಗ ಇನ್ನೂ ಕೆಲವು ನೇಗಲುಗಳು ಬೇಕೆಂದು ರೈತರು ಬರೆಯುತ್ತಿರುವದರಿಂದ ವ್ಯವಸಾಯದ ಇಲಾಖೆಯಿಂದ ಇನ್ನೂ ಹೆಚ್ಚಾಗಿ ನೇಗಲುಗಳು ತರಿಸಲ್ಪಡುವುದು ಆದ್ದರಿಂದ ನೇಗಲುಗಳನ್ನು ಕೊಂಡುಕೊಳ್ಳಲಪೇಕ್ಷಿಸುವವರು ಜಾಗ್ರತೆಯಾಗಿ ಇಲಾಖೆಗೆ ಬರೆದುಕೊಳ್ಳಬೇಕು ಇವಲ್ಲದೆ ಕೆಳಗೆ ತೋರಿರುವ ಇತರ ವಿಧವಾದ ನೇಗಲುಗಳೂ ಇಲಾಖೆಯಿಂದ ಮಾರಲ್ಪಡುವವು —(1) ತರಿ ಭೂಮಿಗಳಿಗೆ ಉಪಯೋಗಿಸುವ ಮಯುರೇಕಾ ನೇಗಲು, ಹಗುರವಾದ ಒಂದೇ ಹಿಡಿ ಇರುವ ನೇಗಲು ಕ್ರಯ ರೂ ೨ (2) ಒಣ ಭೂಮಿಗಳಿಗೆ ಉಪಯೋಗಿಸಬಹುದಾದ ಭಾರವಾದ ನೇಗಿಲು ಕ್ರಯ ರೂ 30

S U. N. & Co.,

BENARES CITY, U P

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪೆನಿಯಲ್ಲಿ ನೆಯಿಸು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕೌ, ಪೇಟಾ ಕಾಶ್ಮೀರ್ ಶಾಲು ದುಪ್ಪಟ್ಟ, ಮುಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು ೯ ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುತ್ತದೆ [69 13]

ಎಸ್ ಯು ಎನ್ ಮತ್ತು ಕಂಪೆನಿ, ಕಾಶಿ

ಯಾಕೆ ಪರೀಕ್ಷಿಸಬಾರದು ? ಬಂಗಾರದ ಪದಕ ಬಂದಿದೆ

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರಜಿಸ್ಟರ್ ಆಗಿದೆ ಈಗಿನ ಕಾಲದಲ್ಲಿ ಇವೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ

ಕ್ರಯ ½ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ 2–0 0

,, 1 ಡ್ರಾಂ ಕೊಳವೆ ,, ,, ,, 0–12–0

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0 12 0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[251 20] ೧೩೩, ಚೈನಾಬಜಾರ್ ರೋಡ್, ಮದರಾಸ್

ಡೋಂಗರೆ

ಇವರ ಬಾಲಾಮೃತ

[160 10]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅತಿ ಭಾರತ್ವ ಬೆಳೆಯುತ್ತಾರೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಒಳ್ಳೆ ಸಮಯ.

" ಅತ್ಯುತ್ತಮವಾದ ಪಾರಸಿ ಫ್ಲೂಟ್ ಹಾರ್ಮೋನಿಯಂಗಳು "

ಸುಲಭಕ್ರಯ ಅಮೋಘವಸ್ತು



ನಮ್ಮ ಹಾರ್ಮೋನಿಯಂಗಳು —ಅಲ್ಪಖರೀದಿ, ಬಾಳಿಕೆ ಬರತಕ್ಕ ಸಾಮಾನುಗಳು, ಸಂಗೀತಗಾರರ ಕೈಕಸ್ನಡಿ ಮಕುಬಲ್ಲಟಗಳು ಇವುಗಳಿಗೆ ಹಾಕಿರತಕ್ಕ ಮರದಲ್ಲಿ ವ್ಯತ್ಯಾಸ ಉಂಟುಮಾಡುವದಿಲ್ಲ ಇವುಗಳ ತಿದಿಯಾದರೋ ಇಂಗ್ಲಾಂಡ್ ತೊಗಲು ನಮ್ಮ ಹಾರ್ಮೋನಿಯಂಗಳ ಸಮಾನದ ಇತರ ಹಾರ್ಮೋನಿಯಂಗಳ ಬೆಲೆಯನ್ನು ಯೋಚಿಸಿದರೆ ನಮ್ಮ ಹಾರ್ಮೋನಿಯಂಗಳ ಖರೀದಿಯು ಕಾಲಂಶ ಕಡಮೆಯಾಗಿರುವದು ನಮ್ಮ ಪ್ರಸಿದ್ಧವಾದ ಹಾರ್ಮೋನಿಯಂಗಳನ್ನು ಒಂದು ಸಲ ತರಿಸಿಕೊಂಡು ಪರೀಕ್ಷಿಸಿದರೆ ಎಲ್ಲಾ ವಿಷಯಗಳಲ್ಲಿಯೂ ನಿಮಗೆ ತೃಪ್ತಿಕರವಾಗುವುದು ಸಾದಾ ಪಾರಸಿ ಫ್ಲೂಟ್ ಹಾರ್ಮೋನಿಯಂಗಳನ್ನು ತಯಾರುಮಾಡತಕ್ಕವರೇ ನಾವು

3½ ಅಕ್ಟೇವಗಳು, 1 ಸ್ಟಾಪುಗಳು (one set of reeds) ಬೆಲೆ ರೂಪಾಯಿ (29) ಇಪ್ಪತ್ತೊಂಬತ್ತು ಮಾತ್ರ ಸಾಮಾನಲು— ಐದು ರೂಪಾಯಿ ಮುಂಗಡ ಇಲ್ಲದೆ ಯಾವ ಆರ್ಡರನ್ನೂ ಅಂಗೀಕರಿಸಲಾಗದು ಪೋಸ್ಟೇಜು ಪ್ರತ್ಯೇಕ ನಮ್ಮ ವಿಳಾಸ —

[-2 3] ದಿ ಬೊಂಬಾಯಿ ಪ್ರೋಪ್ರಯಿಟರ್ ಏಜನ್ಸೀ ೨೦೧ ಬಜಾರ್ ಗೇಟ್ ಸ್ಟ್ರೀಟ್ ಫ್ರೋರ್ಟ್, ಬೊಂಬಾಯಿ

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ ಅರ್ಧಾಂಗವಾಯು, ಉಳುಕು ಕೆಮ್ಮು, ಸೊಂಟದನೋವು ಕೀಟ ಚರ್ಮವ್ಯಾಧಿ ಹಲ್ಲುನೋವು ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು ರಿ ೨ ವಿಧಗಳನ್ನು ಪಡೆಕೊಳಬೇಡಿರಿ ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಾಗಿರುವ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತ್ತು 0 8 0 ಡಜನ್ 1 ಕ್ಕೆ 5 1 0 ವಿ ಪಿ ಪ್ರತ್ಯೇಕ ಗಜಕರ್ಣದ ಮುಲಾಮು 0 6 0 ದಂತಮಂಜನ 0 2 0 ಮೊಡವಿನ ತೈಲ 0 1 0 ಖಿಚ್ಚಿ ಮುಲಾಮು 0 3 0 ಜುಲಾಬು ಮಾತ್ರೆ 0 8 0 ಸುಂದರಿ ಮುಲಾಮು 0 8 0 ಕ್ಯಾಟಲಾಗಿಗೆ ಬರೆಯಿರಿ [52 13]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ

ಅಮೃತಾಂಜನ ಡಿಪ್ಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಬೊಂಕ ನೋವು (ಭಾರ), ಮೈ ನಡುಕ, ತೀಟಬಾಧೆಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ನಿರ್ಶಕ್ತಿ, ಆರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಕಾಯಿಲೆಗೂ ದಾರಿಕೊಡದೆ ನರಗಳ ಹವಾ ಬಲ ನಷ್ಟವನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು ಜ್ವರ ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕಪ್ಪಿಗೆ 1 ಆಣೆ ೦ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 1೦ ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [179 31]



ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಬೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಾರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ; ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಅಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 4,10,00,000

ಕಂಪನಿಯಿಂದ ಪಾವತಿ ಆಗಿರುವದು , 1 0 00 000

ಸಂಪೂರ್ಣವಾದ ಖಾತರಿಯುಳ್ಳದ್ದು ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತಾರೆ —ಮಿ॥ ಎಂ ಎಸ್ ರಟಿ ಕೊ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[194 36] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ಸ್ಕಾರ್ಪಿಯಾನಿಯೊ.

ಚೇಳು ಕಡಿತಕ್ಕೆ ಮಹೌಷಧ

ಕೊಲಾರದ ಪೋಲೀಸ್ ಇನ್ಸ್‌ಪೆಕ್ಟರವರು ರಾ॥ ರಾ॥ ಜಿ ಕೆ ಮಾಧವರಾವ್ ಯವರು ಹೇಳುವದೇನೆಂದರೆ— ನಿಮ್ಮ ಸ್ಕಾರ್ಪಿಯಾನಿಯೋ ಚೇಳಿನ ಔಷಧಿಯು ಅತಿ ಶೀಘ್ರದಲ್ಲಿಯೇ ಗುಣಕೊಟ್ಟದ್ದರಿಂದ ಇನ್ನು ಮೂರು ಬಾಟ್ಲಿಗಳನ್ನು ಕಳುಹಿಸಿಕೊಡಿರಿ ಬಾಟ್ಲಿ ಒಂದರ ಬೆಲೆ ಎಂಟಾಣೆ ಮಾತ್ರವೇ ಮತ್ತು ಪೋಸ್ಟು ವಿ ಪಿ ಛಾರ್ಜು ವಗೈರೆ ಮೂರು ಬಾಟ್ಲಿ ವರೆಗೆ ನಾಲ್ಕಾಣೆ ಮಾತ್ರವೇ

[113 3] ವಿಳಾಸ—ಸ್ಕಾರ್ಪಿಯಾನಿಯೋ ಡಿಪೋ, ಹರಿಹರ

Printed and Published by the Rev H GULLIFORD, Proprietor and Manager Wesleyan Mission Press Mysore 4/6/1914

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಜೂನ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೨

ಒಳ್ಳೆ ಸಮಯ.

" ಅತ್ಯುತ್ತಮವಾದ ಪಾರಸಿ ಫ್ಲೂಟ್ ಹಾರ್ಮೋನಿಯಂಗಳು "

ಸುಲಭಕ್ರಯ ಅಮೋಘವಸ್ತು



ನಮ್ಮ ಹಾರ್ಮೋನಿಯಂಗಳು —ಅಲ್ಪ ಖರೀದಿ, ಬಾಳಿಕೆ ಬರತಕ್ಕ ಸಾಮಾನುಗಳು, ಸಂಗೀತಗಾರರ ಕೈಚಳಕ ಮುತುಸಲ್ಪಟಗಳು, ಇವುಗಳಿಗೆ ಹಾಕಿರತಕ್ಕ ಮರದಲ್ಲಿ ವ್ಯತ್ಯಾಸ ಉಂಟುಮಾಡುವದಿಲ್ಲ ಇವುಗಳ ಕಿದಿಯಾದರೋ ಇಂಗ್ಲಾಂಡ್ ಕೆಡಿಗಳು ನಮ್ಮ ಹಾರ್ಮೋನಿಯಂಗಳ ಸಮಾನದ ಇತರ ಹಾರ್ಮೋನಿಯಂಗಳ ಬೆಲೆಯನ್ನು ಯೋಚಿಸಿದರೆ ನಮ್ಮ ಹಾರ್ಮೋನಿಯಂಗಳ ಖರೀದಿಯು ಕಾಲಂಶ ಕಡಮೆಯಾಗಿರುವದು ನಮ್ಮ ಪ್ರಸಿದ್ಧವಾದ ಹಾರ್ಮೋನಿಯಂಗಳನ್ನು ಒಂದು ಸಲ ತರಿಸಿಕೊಂಡು ಪರೀಕ್ಷಿಸಿದರೆ ಎಲ್ಲಾ ವಿಷಯಗಳಲ್ಲಿಯೂ ನಿಮಗೆ ತೃಪ್ತಿಕರವಾಗುವುದು ಇದಾ ಪಾರಸಿ ಫ್ಲೂಟ್ ಹಾರ್ಮೋನಿಯಂಗಳನ್ನು ಕಮಾವರ್ತಕ್ಕವರೇ ಸಾಕ್ಷಿ

1½ ಆಕ್ಟೇವಗಳು, 1 ಸ್ಟಾಪುಗಳು (one set of reeds) ಬೆಲೆ ರೂಪಾಯಿ (28) ಇಪ್ಪತ್ತೆಂಟು ಮಾತ್ರ ಸಾಚಾಕಲಂ—ಐದು ರೂಪಾಯಿ ಮುಂಗಡ ಇಲ್ಲದೆ ಯಾವ ಆರ್ಡರನ್ನೂ ಅಂಗೀಕರಿಸಲಾಗದು ಪೋಸ್ಟೇಜು ಪ್ರತ್ಯೇಕ ನಮ್ಮ ವಿಳಾಸ —

[22-1]

ದಿ ಬೊಂಬಾಯಿ ಪ್ರೊಪ್ರೈಯಲರ್ ಏಜನ್ಸೀ, 251 ಬಜಾರ್ ಗೇಟ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊರೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಬಲಹೀನತೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179 40]

೨. ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈನಿಂದಿತೆಂದು ತೋರಿಬಂದರೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುಡ್ಡಿಯು ಇಟ್ಟುಕೊಳ್ಳಿರಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಪ್ರೊಫೆಸರ್ ಬೇಸ್ಲರ್
ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಬರುವವೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತ

ಎಲೆಕ್ಟ್ರೊಪೆಯಿನಾಡೈನ್ ತೈಲದಿಂದ ಗುಣವಡುವ ವ್ಯಾಧಿಗಳು —

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕರಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರತಲೆ ನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಕೃತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12—23]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. ೧—8—0. ವಿ. ಪಿ. ಖರ್ಚು 0—4—0 ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ

ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ " ಕಾಮಿನಿಯಾ ತೈಲ " ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ " ಸರ್ಟಿಫಿಕೇಟ್ ಒಫ್ ಮೆರಿಟ್ " ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ " ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ " ಕಾಮಿನಿಯಾ " ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು ಸೀಸೆಯೊಂದರ ಕ್ರಯ ರೂ 1 0-0, ಅ ವೆ 0 1-0 ಬೇರೆ, 3 ಸೀಸೆಗಳ ಕ್ರಯ ರೂ 2 10 0, ಅ ವೆ 0-7 0 ಬೇರೆ

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅಲ್ಪ ನಫೆಯೇ ದೊರಕುತ್ತದೆಂದು, ನೀವು " ಕಾಮಿನಿಯಾ ತೈಲ " ವನ್ನು ಕೇಳಿದರೆ, " ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ " ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ " ಕಾಮಿನಿಯಾ ಓಯಿಲ್ " ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ-ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೊ ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ [19 22]

ಸಣ್ಣ ಸೀಸೆಯ ಬೆಲೆ ರೂ ೦-8 0 ಒಂದು ಡ್ರಾಮಿನ (ವಿಳಿಡಿಯಂ) ಸೀಸೆ 1ಕ್ಕೆ 0 12-0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0-0 ಅಂಚೆಯ ವೆಚ್ಚ ಬೇರೆ ರೂ 0-4-0 ಒಟ್ಟೊ ದಿಲ್ ಬಹಾರ್ ಪರಿಮಳದ ಕಾಗದಗಳು ಡಜನ್ ಒಂದಕ್ಕೆ 0 12 0

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ —

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾ ಮಸ್‌ಜಿದ್, ಬೊಂಬಾಯಿ.

ಏಜಂಟ್, ದಿ ಕಾಲಿಕ್ ಮಾರ್ಟ್, ಮಂಗಳೂರು

ಜೈನ್‌ರವರ ಉತ್ತಮೋತ್ತಮ ಆಯಿಂಟ್ ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಎಷ್ಟು ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ಬಣಗಳು,

ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಕರಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಲಕ್ಷಣವುಂಥಾ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರು ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವವನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1 ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಛಾರ್ಜು ಬೇರೆ ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ ಕ್ರಯ ಬಾಟ್ಲಿಗೆ ರೂ 1 0 0 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ [25 20]

ವಿಳಾಸ—ಜಿ ಗುಲಾಬ್ ಚಂದ್ ಪೌವಾರ್‌ಳ್,

50 ಸ್ವಿನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಯಾಕೆ ಪರೀಕ್ಷಿಸಬಾರದು ? ಬಂಗಾರದ ಪದಕ ಬಂದಿದೆ

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರಿಜಿಸ್ಟರ್ ಆಗಿದೆ ಈಗಿನ ಕಾಲದಲ್ಲಿ ಇದೇ ಹಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವನಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ।

ಕ್ರಯ 1 ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ 2–0–0

,, 1 ಡ್ರಾಂ ಕೊಳವೆ ,, ,, , 0–12–0

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ 0 12 0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[261-20] ೧೨೩, ಚೈನಾಬಜಾರ್ ರೋಡ್, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 20

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಳೆಯುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇರ್ಪಗ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ಬಹಳ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾಗಿದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ,

ಚುಕ್ಕಿಯುಳ್ಳ ಟೋಪಿಗಳು ರೂ ೧–೮, ರೂ ೧–೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

"In addition to cap making we are giving special attention to knitting stockings. All our stockings, for adults and children, are hand made Prices will be sent on enquiry"

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply —

MANAGER, CAP WORKS,

GIRLS' INDUSTRIAL SCHOOL, HASSAN

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



3 21

ಕೆಳ ಹೊಟ್ಟೆಯ ನೋವು, ಬಹಳ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ಗುಣಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲಿ ಇನ್ನಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷದವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುತ್ತದೆ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

Mellin's Food

ಮೆಲಿನ್ಸ್ ಆಹಾರವು

ಕೈಸೋಕದ ಮಾಡಿದ

ಶಿಸುಗಳಿಗೂ ರೋಗಿಷ್ಟರಿಗೂ

ಮಲಿನ್ಸ್ ಆಹಾರದ ಪುಸ್ತಕಗಳು [424]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು

Messrs OAKES & Company, Mount Road, Madras

ವಿಳಾಸ-ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು,

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೆಟ್ಟು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ಬದುಕುವವರು ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ— ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ,

ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು ಧಾತುವನ್ನು ಕೆಟ್ಟಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿ ಕುಶಲತೆಯೂ, ಶರೀರಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ... ರೋಗಗಳನ್ನು ನಿರ್ಮೂಲಪಡಿಸುವುದು ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲ್, ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುತ್ತಿದ್ದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು 10 ತೋಲಾ ಮುರಬ್ಬಾ ಇರುವ ಡಬ್ಬಾ 1 ಕ್ಕೆ ರೂ 1 8-0 ಟಪಾಲ್ ಖರ್ಚು ಅಲಾಯದ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಈ ದಿವಸವು ಮತ್ತು ನಾಳೆಯೂ ಬಹಳ ಜನರು ಉಪಯೋಗಕ್ಕೆ ಬಾರದ ಔಷಧಗಳನ್ನು ಬಹಳವಾಗಿ ಹೊಗಳಿ ಪ್ರಕಟನೆಗಳ ಮೂಲಕ ಪ್ರಚಾರಪಡಿಸಿ ಜನರಿಗೆ ಬಹಳ ಮೋಸಪಡಿಸುವರು ಇದು ನಮಗೆ ಸರಿಯಲ್ಲ ಒಂದಾವರ್ತಿ ನಮ್ಮ ಔಷಧಗಳನ್ನು ತರಿಸಿ ಪರೀಕ್ಷಿಸಿರಿ ಸುಳ್ಳು ನಿಜ ಎಂಬುದು ತಿಳಿಯಬರುತ್ತೆ

ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು,

೫, ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ನಮಗೆ ಕಾಗದವನ್ನು ಬರೆಯಬೇಕಾದರೆ ಹೆಸರು, ಗ್ರಾಮ, ತಾಲ್ಲೂಕು, ಡಿಸ್ಟ್ರಿಕ್ಟ್ ಮುಂತಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಬರೆಯಬೇಕು. [91-8]

1 ಧಾತುಪುಷ್ಟಿ ಚೂರ್ಣ —ಬೆಲೆಯು ಡಬ್ಬಾ 1 ಕ್ಕೆ 0-5 0 2 ರೋಮನಾಶಕ ಮತ್ತು ವೃಷ್ಟಿಕದಂಷ್ಟ್ರ ತೈಲವು —ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವದಕ್ಕೂ ಬಹಳ ಒಳ್ಳೆಯದು ಕ್ರಯ 0 2 0 3 ವಾತನಿವಾರಣೆ ತೈಲವು —ಕ್ರಯ ಸೀಸಾಯಿ 1 ಕ್ಕೆ 0-4 0 4 ಹೊಟ್ಟೆನೋವಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 4 0 5 ಕೆಮ್ಮಲು ರೋಗಕ್ಕೆ ಔಷದ —ಕ್ರಯ ಸೀಸಾಯಿ 1 ಕ್ಕೆ 0 4 0 6 ವ್ರಣಕ್ಕೆ ಔಷಧ —ಕ್ರಯ ಡಬ್ಬಿ 1 ಕ್ಕೆ 0 1 0 7 ಆಶ್ಚರ್ಯಕರವಾದ ಭೇದಿ ಮಾತ್ರೆಗಳು —ಕ್ರಯ 0 1 0 8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1 ಕ್ಕೆ 0-2 6 9 ಉಷ್ಣಕಾರಕಕ್ಕೆ ಮಾತ್ರೆಗಳು —ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ 21 ದಿನಗಳು ಸೇವಿಸಲು ಖಂಡಿತವಾಗಿಯೂ ಗುಣವಾಗುವದು ಕ್ರಯ ಸೀಸಾಯಿ 1 ಕ್ಕೆ 1 0 0 10 ಮೂಲವ್ಯಾಧಿಗೆ ಔಷಧ —ಕ್ರಯ ಸೀಸಾಯಿ 1 ಕ್ಕೆ 0 8 0 11 ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1 ಕ್ಕೆ 0-4 0

12 ದಂತ ಚೂರ್ಣವು —ಕ್ರಯ ಡಬ್ಬಿಗೆ 0 1 3 13 ಕೂದಲು ಬೆಳೆಯುವ ಎಣ್ಣೆ (ಬಂಪೋಲಾ ತೈಲ) —ಸೀಸಾಯಿ 1 ಕ್ಕೆ 0 4 0 14 ಆಶ್ಚರ್ಯಕರವಾದ ದ್ರಾವಕ —ಇದನ್ನು ಸ್ವಲ್ಪ ಮೂಸೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ ಕ್ರಯ ಸೀಸಾಯಿ 1 ಕ್ಕೆ 0 4-0 15 ಕಜ ಮತ್ತು ಹುಳಕಡ್ಡಿ ಔಷಧ —ಕ್ರಯ ಸೀಸಾಯಿ 1 ಕ್ಕೆ 0 2 0 16 ಆಶ್ಚರ್ಯಕರವಾದ ಪೆನ್ಸಿಲ್ —ಈ ಪೆನ್ಸಿಲ್‌ನಿಂದ ಕಾಗದದ ಮೇಲೆ ಬರೆದಾಗ ಏನೂ ಕಾಣುವದಿಲ್ಲ ಸಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚೆನ್ನಾಗಿ ಕಾಣುವವು ನೋಡುವವರಿಗೆ ಬಹಳ ಆಶ್ಚರ್ಯವಾಗುತ್ತೆ ಕ್ರಯ 0-4 0 17 ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ —ಈ ಔಷದವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರೆವಿಗೂ ಕರಿಯ ಕೂದಲುಗಳು ಇರುತ್ತೆ ಉಪಯೋಗಿಸುವ ವಿಧಾನವು ಬಾಟ್ಲಿಯ ಜೊತೆಯಲ್ಲಿ ಕಳುಹಿಸುವೆವು ಕ್ರಯ 1 0 0

ಅನುಪಾನ ಪತ್ರಿಕೆಯು ಔಷಧದ ಸಂಗಡ ಕಳುಹಿಸುವೆವು

ನಮ್ಮ ಏಜಂಟರು—ಪಿ ಸೈಯ್ಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು

5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

THE MYSORE ECONOMIC UNION, LIMITED.

೧೯೧೭ ನೇ ಇಸವಿಯ ಮೈಸೂರು ಕಂಪನಿಗಳ ೩ ನೇ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರಾಗಿರುತ್ತೆ.

ಮೂಲಧನ:—ರೂ. ೨,೦೦,೦೦೦.

ಇದು ಷೇರುಗಳಾಗಿ ವಿಭಾಗಿಸಲ್ಪಟ್ಟಿದೆ, ಹೇಗೆಂದರೆ—50 ರೂ. ಕಿಮ್ಮತ್ತಿನ 2,300 ಆರ್ಡಿನರಿ ಷೇರುಗಳು. 50 ರೂ. ಕಿಮ್ಮತ್ತಿನ ಶೇ. 8 ರಂತೆ ಖಾಯಂ ನಫೆಯುಳ್ಳ 2,000 ಪ್ರಿಫರೆನ್ಸ್ ಷೇರುಗಳು ಷೇರ್ ಮೊಬಲಗನ್ನು ಪಾವತಿಮಾಡತಕ್ಕದ್ದು ಹ್ಯಾಗೆಂದರೆ—10 ರೂ ಅಪ್ಲಿಕೇಷನ್ ಸಮೇತ ಬರಬೇಕು ಉಳಿದ 40 ರೂ ಗಳನ್ನು ಕಂತು ಕಂತಾಗಿ. ಎರಡು ತಿಂಗಳುಗಳಿಗೆ ಕಡಮೆಯಿಲ್ಲದೆ ವಿರಾಮವಿಟ್ಟು 10 ರೂ ಮೀರದೆ ನಾಲ್ಕು ಕಂತುಗಳಲ್ಲಿ ಜಮಾ ಮಾಡಿಕೊಳ್ಳಲಾಗುವುದು.

ಡೈರೆಕ್ಟರುಗಳು:—ಮ॥ ರಾ॥ ಗಳಾದ ಬಿ ವಿ ರಾಮಸ್ವಾಮಿಶೆಟ್ಟರು, ಬಿ ಎ, ಅಡ್ವೋಕೇಟ್, ಬೆಂಗಳೂರು (ಚೇರ್‌ಮನ್) ಎ ಆರ್. ನಾಗೇಶ್ವರಯ್ಯ ರವರು, ಬಿ.ಎ, ಬಿ ಎಲ್., ಅಡ್ವೋಕೇಟ್, ಬೆಂಗಳೂರು ಕೆ. ಶೇಷಯ್ಯರವರು, ಇಂಡಿಯನ್ ವೇರ್‌ಹೌಸ್, ಬೆಂಗಳೂರು. ಜಿ. ವೆಂಕಟರಮಣಯ್ಯರವರು, ಪ್ಲೀಡರ್, ಬೆಂಗಳೂರು. ವಿ ವಿ. ನಾರಾಯಣರವರು, ಬಿ ಎ, ಕೆಮಿಕಲ್ ಅಂಡ್ ಟೆಕ್ನಿಕಲ್ ಇಂಜನೀರ್ (ನಾರಾಯಣ್ ಅಂಡ್ ಕಂಪನಿಯ ಭಾಗಸ್ಥರು), ಎಕ್ಸ್ ಅಫಿಷಿಯೋ ಡೈರೆಕ್ಟರು.

ಮ್ಯಾನೇಜಿಂಗ್ ಏಜಂಟರು —ಮೆಸ್ಸರ್ಸ್ ನಾರಾಯಣ್ ಅಂಡ್ ಕಂಪೆನಿ ಬ್ಯಾಂಕರುಗಳು:—ಮೈಸೂರು ಬ್ಯಾಂಕ್, ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು:—ನಂ. 7, ಹೊಸ ತರಗುಪೇಟೆ, ಬೆಂಗಳೂರು ಸಿಟಿ.

ಪ್ರಸಿದ್ಧ ಪತ್ರಿಕೆ.

ಮೈಸೂರು ದೇಶದ ಸಂಪದಭಿವೃದ್ಧಿಗಾಗಿ ಜನರು ಸ್ವತಃ ಸಾಹಸ ಪ್ರಯತ್ನಮಾಡುವುದಕ್ಕೆ ಇದೇ ಅನುಕೂಲವಾದ ಕಾಲವೆಂಬುದು ಎಲ್ಲರಿಗೂ ತಿಳಿದೇ ಇರುವುದು ಸರ್ಕಾರದವರು ದೇಶದಲ್ಲಿರುವ ಸ್ವಾಭಾವಿಕವಾದ ಉತ್ಪತ್ತಿಗಳನ್ನು ಹುಡುಕಿ ಪ್ರಯೋಜನಕ್ಕೆ ತರುವುದರಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗಿ ಈ ಭಾಗದಲ್ಲಿ ಸ್ವಪ್ರಯತ್ನಮಾಡುವ ಜನರಿಗೆ ಸಾಧ್ಯವಾದ ಸಹಾಯವನ್ನೆಲ್ಲಾ ಮಾಡಲು ಸಿದ್ಧರಾಗಿರುತ್ತಾರೆ—ಜನರಿಂದ ಸ್ವತಃ ಸಾಹಸ ಪ್ರಯತ್ನಗಳು ನಡೆಯುವುದಕ್ಕಾಗಿಯೇ ಮೈಸೂರು ಎಕನಾಮಿಕ್ ಯೂನಿಯನ್ ಎಂಬ ಈ ಕಂಪೆನಿಯು ಸ್ಥಾಪಿಸಲ್ಪಟ್ಟಿರುವುದು ಹೆಸರಿಗೆ ತಕ್ಕಂತೆ ಇದು ಕೃಷಿ, ಕೈಗಾರಿಕೆ ಇವೇ ಮೊದಲಾದ ಭಾಗಗಳಲ್ಲಿ ಸಂಪದಭಿವೃದ್ಧಿಗೆ ಅಸ್ಪದವು ವಿಶೇಷವಾಗಿರುವ ಅನೇಕ ಲಾಭಕರವಾದ ಕಾರ್ಯಗಳನ್ನು ಮಾಡಲು ಯತ್ನಿಸುವುದು ಎಣ್ಣೆ, ಸಾಬೂನು, ಮೈಣದಬತ್ತಿ ಇವುಗಳ ಕಾರ್ಖಾನೆಗಳನ್ನು ಸ್ಥಾಪಿಸುವುದು ಈ ಕಂಪೆನಿಯ ಪ್ರಥಮೋದ್ದೇಶವಾಗಿರುವುದು ಇದಕ್ಕಾಗಿ ಕಾಡುಗಳಲ್ಲಿಯೂ, ಇತರ ಕಡೆಗಳಲ್ಲಿಯೂ ಎಣ್ಣೆಯ-ಬೀಜಗಳು ಯಥೇಚ್ಛವಾಗಿ ದೊರೆಯುವುವು ಈ ಕಂಪೆನಿಯು ಮೈಸೂರು ದೇಶದ ಮಲ್ನಾಡು ಪ್ರಾಂತ್ಯದಲ್ಲಿ ಸಾವಿರಗಟ್ಟಲೆ ದೊರೆಯುವ ಧೂಪದಮರದ ಬೀಜವನ್ನು ಮೊದಲು ಉಪಯೋಗಿಸುವುದು ಈ ಬೀಜದಿಂದ ಬರುವ ಎಣ್ಣೆಯು ಸಾಬೂನು, ಮೈಣದ ಬತ್ತಿ, ಗ್ಲಿಸರೀನ್ ಇವುಗಳನ್ನು ತಯಾರಿಸುವುದರಲ್ಲಿ ಉಪಯೋಗವಾಗುವುದಲ್ಲದೆ ನೇಯುವ ಕಾರ್ಖಾನೆಗಳಲ್ಲಿ ಸಹ ಕೆಲಸಕ್ಕೆ ಬರುವುದು ಮೈಸೂರು ಸೀಮೆಯು ಹೊರತದೆ ಸ್ವಲ್ಪವು ಬೇರೆ ಪ್ರಾಂತ್ಯಗಳಲ್ಲಿ ಮಾತ್ರ ಈ ಧೂಪದ ಬೀಜವು ದೊರೆಯುವುದು, ಇದನ್ನು ಬೇರೆ ಎರಡು ಕಂಪೆನಿಯವರು ರೂಢಿಸುತ್ತಿರುವರು —ಯಾವ ಕೈಗಾರಿಕೆಯಾದರೂ ಸಫಲವಾಗಬೇಕಾದರೆ ಮುಖ್ಯವಾದ ಮೂರು ಅಂಶಗಳಿಗೆ ಗಮನ ಕೊಡಬೇಕು, ಯಾವುವೆಂದರೆ —(1) ಕೈಗಾರಿಕೆಗೆ ಬೇಕಾದಷ್ಟು ಸಾಮಾನು ಸಮೀಪದಲ್ಲಿಯೇ ಸುಲಭವಾಗಿ ದೊರೆಯಬೇಕು. (2) ತಯಾರಾದ ಸರಕು ಕೂಡಲೇ ಕ್ರಯವಾಗಬೇಕು. (3) ಕ್ರಮವಾದ ಆಡಳಿತವಿರಬೇಕು—ಈ ಕಂಪೆನಿಯ ವಿಷಯದಲ್ಲಿ ಮೇಲೆ ಹೇಳಿದ ಮೂರು ಅಂಶಗಳೂ ಸರಿಯಾಗಿವೆ ಎಂಬುದು ಈ ಕೆಳಗೆ ಸೂಚಿಸಿರುವುದರಿಂದ ವ್ಯಕ್ತವಾಗುವುದು

(1) ಮೂರು ವರ್ಷಗಳೊಳಗಾಗಿ ಎಣ್ಣೆಯ ಕಾರ್ಖಾನೆಯನ್ನೂ, ಐದು ವರ್ಷಗಳೊಳಗಾಗಿ ಸ್ಟೀರೀನ್ ಮತ್ತು ಮೈಣದ ಬತ್ತಿ ಕಾರ್ಖಾನೆಯನ್ನೂ ಈ ಕಂಪೆನಿಯವರು ಸ್ಥಾಪಿಸಬೇಕೆಂಬ ಷರತ್ತಿನ ಮೇಲೆ ಸರ್ಕಾರದವರು ಮೈಸೂರು ಕಾಡುಗಳಲ್ಲಿರುವ ಧೂಪದ ಮರಗಳನ್ನೆಲ್ಲಾ ವರ್ಷಂಪ್ರತಿ ಮರಕ್ಕೆ 1½ ಆಣೆಯಂತೆ ಗುತ್ತಿಗೆಗೆ ಕೊಟ್ಟು, ಹತ್ತು ವರ್ಷಗಳ ನಂತರ ಮೇಲ್ಕಂಡ ದರವನ್ನು ಕಂಪೆನಿಗೆ ತೊಂದರೆಯಾಗದಂತೆ ಯಥೋಚಿತವಾಗಿ ಹೆಚ್ಚಿಸುವ ಹಕ್ಕನ್ನು ಮಾತ್ರ ಉಳಿಸಿಕೊಂಡಿರುವರು ಇದರಿಂದ ಇತರ ಕಂಪೆನಿಗಳ ಪೋಟಾಪೋಟಿ ಇಲ್ಲದೆ ಕಾರ್ಖಾನೆಗೆ ಬೇಕಾದ ಸಾಮಾನು ಸುಲಭ ಕ್ರಯಕ್ಕೆ ಯಥೇಚ್ಛವಾಗಿ ದೊರೆಯುವುದು.

(2) ಇಂಡಿಯಾ ದೇಶದಲ್ಲಿ ಸಾಬೂನು, ಮೈಣದಬತ್ತಿ ಮೊದಲಾದ ಸಾಮಾನುಗಳು ಎಷ್ಟರ ಮಟ್ಟಿಗೆ ಉಪಯೋಗವಾಗುವುದೆಂಬುದು ವರ್ಷಂಪ್ರತಿ ಸುಮಾರು ಒಂದು ಕೋಟಿ ರೂಪಾಯಿ ಬಾಳುವ ಸರಕುಗಳು ವಿದೇಶದಿಂದ ಆಮದಾಗುವುದರಿಂದಲೇ ತಿಳಿಯಬರುವುದು ಈಗ ಉದ್ದೇಶಿಸಿರುವ ಮೈಸೂರು ಕಾರ್ಖಾನೆಯಲ್ಲಿ ಸುಮಾರು 5 ಲಕ್ಷದಷ್ಟು ಮಾತ್ರವೇ ಸರಕು ತಯಾರಾಗುವುದು ಧೂಪದ ಎಣ್ಣೆಯಿಂದ ತಯಾರಿಸಿದ ಮೈಣದ ಬತ್ತಿಗಳಿಗೆ ವಿದೇಶದಿಂದ ಬರುವ ಹಸನಾದ ಮೈಣದ ಬತ್ತಿಗಳ ಮೇಲೆ ಕೂಡ ಬೆಲೆಯಲ್ಲಿಯೂ ಗುಣದಲ್ಲಿಯೂ ಪೋಟಾಪೋಟಿಯು ಸಾಧ್ಯವಾದ ಕಾರಣ ಇವು ಕೂಡಲೇ ಬಿಕರಿಯಾಗುವುದರಲ್ಲಿ ಸಂಶಯವಿಲ್ಲ ಇನ್ನೊಂದು ಅನುಕೂಲವಾದ ಅಂಶವೇನೆಂದರೆ, ಈ ಮೈಣದಬತ್ತಿಗಳು ವಿದೇಶದ ಬತ್ತಿಗಳಂತೆ ಕೊಬ್ಬಿನಿಂದ ತಯಾರಾಗದಿರುವ ಕಾರಣ ಹಿಂದುಗಳ ನಿಯಮಕ್ಕೆ ಸರಿಹೋಗಿ ದೇವಾಲಯಗಳಲ್ಲಿಯೂ ಮಠಗಳಲ್ಲಿಯೂ ಉಪಯೋಗಿಸಲು ಯೋಗ್ಯವಾಗುವುವು ಇಷ್ಟೇ ಅಲ್ಲದೆ, ಜಂತುಸಂಬಂಧವಾದ ಚರಬಿಯು ಬೆರಕೆಯಿಲ್ಲದೆ ವಿಶೇಷವಾಗಿ ದೊರೆಯುವುದು ದುರ್ಲಭವಾಗುತ್ತಾ ಬರುವ ಕಾರಣ ಇದಕ್ಕೆ ಬದಲಾಗಿ ಧೂಪದ ಎಣ್ಣೆಯು ಉಪಯೋಗಿಸಲ್ಪಡುವುದು; ಆದ್ದರಿಂದ, ಬರೇ ಈ ಎಣ್ಣೆಗೂ ಕೂಡ ಇಂಡಿಯಾ ದೇಶದಲ್ಲಿಯೂ ಇತರ ಕಡೆಗಳಲ್ಲಿಯೂ ಕ್ರಯ ದೊರೆಯುವುದು

(3) ಎಷ್ಟೋ ಉತ್ಸಾಹದಿಂದ ಸ್ಥಾಪಿಸಿದ ಅನೇಕ ಕಾರ್ಖಾನೆಗಳು ಅವುಗಳನ್ನು ನಡಿಸುವ ಏಜಂಟರಿಗೆ ಕಲಾಪರಿಶ್ರಮವಿಲ್ಲದ ಕಾರಣದಿಂದ ಕೆಟ್ಟುಹೋಗಿರುವುದು ಎಲ್ಲರಿಗೂ ತಿಳಿದೇ ಇರುವುದು ಆದರೆ ಈ ಕಂಪನಿಯ ಏಜಂಟರುಗಳು ಇಂಥಾ ಕಾರ್ಖಾನೆಗಳನ್ನು ಇತರ ಕಡೆಗಳಲ್ಲಿಯೂ ಸ್ಥಾಪಿಸಿರುವುದರಿಂದ ಬೇಕಾದ ಕಲಾನೈಪುಣ್ಯವನ್ನೂ ವ್ಯವಹಾರಜ್ಞಾನವನ್ನೂ ಪಡೆದಿರುವರು ಈ ಏಜಂಟರ ಪೈಕಿ ಒಬ್ಬರು ರಸಾಯನ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿ ಜಪಾನ್ ದೇಶಕ್ಕೂ ಯೂರೋಪ್ ಖಂಡಕ್ಕೂ ಹೋಗಿ ಅಲ್ಲಿನ ನವೀನವಾದ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಈ ಕೈಗಾರಿಕೆಯನ್ನು ಕಲಿತಿರುವರು ಇವರು ಹಿಂತಿರುಗಿ ಬಂದ ನಂತರ ಇಂಡಿಯಾ ದೇಶಕ್ಕೆಲ್ಲಾ ಒಂದೇ ಒಂದಾದ ಸ್ಟೀರೀನ್ ಮತ್ತು ಗ್ಲಿಸರೀನ್ ತಯಾರುಮಾಡುವ ಯಂತ್ರವನ್ನು ಜೋಡಿಸಿ ತೃಪ್ತಿಕರವಾಗಿ ನಡೆಯುವಂತೆ ಮಾಡಿರುವರು —ಈ ಕಾರ್ಖಾನೆಯು ಸಾರ್ಥಕವಾಗುವುದೆಂಬ ಭಾಗದಲ್ಲಿ ಏಜಂಟರು ಎಷ್ಟು ಭರವಸೆಯನ್ನಿಟ್ಟುಕೊಂಡಿರುವರೆಂದರೆ, ತಮಗೆ ಸಲ್ಲಬೇಕಾದ ರುಸುಮನ್ನು ಕಂಪೆನಿಗೆ ಲಾಭ ಬಂದರೆ ಮಾತ್ರವೇ ತೆಗೆದುಕೊಳ್ಳುವಂತೆ ಕರಾರು ಮಾಡಿಕೊಂಡಿರುವರು ಇಷ್ಟೇ ಅಲ್ಲದೆ, ಯಾವ ವರ್ಷದಲ್ಲಿಯಾದರೂ, ಷೇರ್ದಾರರಿಗೆ ಹಂಚುವುದಕ್ಕೆ ಉಳಿಯುವ ನಫೆಯು ಮೂಲಧನದ ಶೇ 6 ಕ್ಕೆ ಕಡಮೆಯಾದ ಪಕ್ಷಕ್ಕೆ ದಾಗೆ ಕಡಮೆಯಾದ ಮೊಬಲಗನ್ನು ಆ ವರ್ಷದ ತಮ್ಮ ರುಸುಮಿನಿಂದ ಕೊಡಲು ಕರಾರಿನ ಪ್ರಕಾರ ಒಪ್ಪಿರುವರು. [230-1]

ಅಂದಾಜು ಪಟ್ಟಿ.—ಎಣ್ಣೆಯ ಕಾರ್ಖಾನೆ.

ಖರ್ಚು		ರೂ	ಜಮಾ	ರೂ
2,600 ಟನ್ ಧೂಪದ ಬೀಜ, ದರ ರೂ 75		1,30,000	400 ಟನ್ ಧೂಪದ ಎಣ್ಣೆ, ದರ ರೂ. 500	2,00,000
600 ಟನ್ ಇಪ್ಪೆ ಬೀಜ, ದರ ರೂ 100		60,000	300 ಟನ್ ಇಪ್ಪೆ ಎಣ್ಣೆ, ದರ ರೂ. 400	1,20,000
1,500 ಟನ್ ಸೌದೆ, ದರ ರೂ 6		9,000	1,500 ಟನ್ ಧೂಪದ ಹಿಂಡಿ, ದರ ರೂ. 5	7,500
ಸಿಬ್ಬಂದಿ		4,500	300 ಟನ್ ಇಪ್ಪೆ ಹಿಂಡಿ, ದರ ರೂ 20	6,000
ಇಂಜನೀರ್ ವಗೈರೆ ಹುದ್ದೇದಾರರು		9,000		
ದ್ರಾವಕಗಳು		1,500		
ಆಫೀಸು ಖರ್ಚು		1,000		
ಸಾದಿಲ್‌ವಾರಿ		2,500		
		2,13,500		
	ನಫೆ	90,000		
	ಜುಮ್ಲಾ	3,33,500	ಜುಮ್ಲಾ	3,33,500

ಸ್ಟೀರೀನ್ ಮತ್ತು ಮೈಣದ ಬತ್ತಿಯ ಕಾರ್ಖಾನೆ.

300 ಟನ್ ಧೂಪದ ಎಣ್ಣೆ, ದರ ರೂ 500 ಮತ್ತು 300 ಟನ್ ಇಪ್ಪೆ ಎಣ್ಣೆ, ದರ ರೂ. 100		2,70,000	42,000 ಮೈಣದ ಬತ್ತಿ ಪೆಟ್ಟಿಗೆಗಳು, ತೂಕ 22½ ಪೌಂಡು, ದರ ರೂ. 6½	2,73,000
85 ಟನ್ ಪ್ಯಾರಫೀನ್, ದರ ರೂ 400		34,000	48 ಟನ್ ಔಷಧಕ್ಕೆ ಯೋಗ್ಯವಾದ ಗ್ಲಿಸರೀನ್, ದರ ರೂ 1,400	67,200
ರಸಾಯನ ಸಾಮಗ್ರಿಗಳು		12,000	210 ಟನ್ ಓಲೀನ್ ಎಣ್ಣೆ, ದರ ರೂ 400	84,000
ಬತ್ತಿ, ಪೆಟ್ಟಿಗೆಗಳು ವಗೈರೆ		18,000		
2,000 ಟನ್ ಸೌದೆ, ದರ ರೂ. 6		12,000		
ಹುದ್ದೇದಾರರು		12,000		
ಸಿಬ್ಬಂದಿ		9,000		
ಪ್ರಕಟನೆ ವಗೈರೆ		6,000		
		3,73,000		
	ನಫೆ	51,200		
	ಜುಮ್ಲಾ	4,24,200	ಜುಮ್ಲಾ	4,24,200

ಗೋಷ್ವಾರೆ.

ಎಣ್ಣೆಯ ಕಾರ್ಖಾನೆಯಿಂದ ನಫೆ ರೂ 90,000; ಸ್ಟೀರೀನ್ ಮತ್ತು ಮೋಂಬತ್ತಿ ಕಾರ್ಖಾನೆಯಿಂದ ನಫೆ ರೂ 51,000; ಜುಮ್ಲಾ ರೂ. 1,41,000.

ನಫೆಯ ವಿಲೇವಾರಿ.

ಕಂಪೆನಿಯ ಸಾಲಕ್ಕೆ ರೂ 2,00,000 ದ ಮೇಲೆ ಶೇಕಡ 9 ರಂತೆ ಬಡ್ಡಿ ರೂ 18,000, ಕಾರ್ಖಾನೆಯ ಸಾಮಾನು ವಗೈರೆ ಸವಕಳಿಕ್ಕೆ ಉತ್ತಾರ (ರೂ. 1,50,000 ಕಿಮ್ಮತ್ತಿನ ಯಂತ್ರಗಳ ಮೇಲೆ ಶೇಕಡ 10 ರಂತೆ ರೂ 50,000 ಕಿಮ್ಮತ್ತಿನ ಕಟ್ಟಡಗಳ ಮೇಲೆ ಶೇಕಡ 2½ ರಂತೆ) ರೂ 18,000; ಏಜಂಟರ ರುಸುಂ ರೂ. 25,000; ರಿಸರ್ವ್ ಫಂಡು ರೂ. 30,000, ಷೇರ್ದಾರರಿಗೆ ಹಂಚಲು ಉಳಿಯುವ ನಫೆ (ಮೂಲಧನದ ಶೇಕಡ 25 ರಂತೆ) ರೂ. 50,000, ಜುಮ್ಲಾ ರೂ. 1,41,000.

ಮೇಲೆ ತೋರಿಸಿರುವ ಅಂದಾಜು ಪಟ್ಟಿಯು ಬಹಳ ಎಚ್ಚರಿಕೆಯಿಂದಲೂ ಕಾರ್ಖಾನೆಗಳಲ್ಲಿ ಪಡೆದ ಅನುಭವ ಪೂರ್ವಕವಾಗಿಯೂ ತಯಾರಿಸಿರುತ್ತೆ. ಸವಕಳಿ, ರಿಸರ್ವ್ ಫಂಡು, ಇವೇ ಮೊದಲಾದುವುಗಳಿಗಾಗಿ ವಿಶೇಷ ಧನವನ್ನು ತೆಗೆದಿಟ್ಟೂ ಕೂಡ ಮೂಲಧನದ ಶೇಕಡ 25 ರಷ್ಟು ಲಾಭವು ಕಂಡುಬರುವುದು. ಕಂಪೆನಿಯ ನಿಬಂಧನೆಗಳನ್ನೂ, ಮ್ಯಾನೇಜಿಂಗ್ ಏಜಂಟರೊಂದಿಗೆ ಮಾಡಿಕೊಂಡಿರುವ ಕರಾರನ್ನೂ ಕಂಪೆನಿಯ ರಿಜಿಸ್ಟರ್ ಆಫೀಸಿನಲ್ಲಿ ನೋಡಬಹುದು ಷೇರು ದರಖಾಸ್ತು ನಮೂನೆಗಳನ್ನು ಮ್ಯಾನೇಜಿಂಗ್ ಏಜಂಟರಿಗೆ ಬರೆದು ತರಿಸಿಕೊಳ್ಳಬಹುದು.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ. "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ, ಪತ್ತೇದಾರಿಯ ಕಥೆ ಕ್ರಯ 6 ಆಣೆ. "ಸಂತಾಪಕ" ಮನೋಹರವಾದ ನವೀನ ಕಾದಂಬರಿ ಎಲ್ಲರೂ ಅಗತ್ಯವಾಗಿ ಓದಬೇಕಾದುದು ಕ್ರಯ 4 ಆ "ಮಹಾರಣ್ಯಪುರಾಧಿಪತ್ಯ" 4 ಆ. "ಪಶು ಲೋಕ ರಹಸ್ಯ" 2 ಆ. "ಕಲಹಪ್ರಿಯೂಪ್ರಹಸನ" 2 ಆ. "ಯೋಗನಿದ್ರಾ ಪ್ರಹಸನ" 2 ಆಣೆ —ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ.

[266-26] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,15,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ವರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಬೆಲೊ, ಚೀಫ್ ಏಜೆಂಟ್, ಬೆಂಗಳೂರು; ಮ್ಯ॥ ಎಂ. ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-37] ಆಕ್ಟಿಂಗ್ ಬ್ರಾಂಚ್ ಸೆಕ್ರಿಟರಿ, ಮದರಾಸ್.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು [69-13]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION 5-24

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ. ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಜಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ

ಬಿಕರಿಯಾಗುತ್ತದೆ.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಮೈಸೂರು ಬ್ಯಾಂಕ್, ಲಿಮಿಟೆಡ್. ಬೆಂಗಳೂರು.

1914 ನೇ ಇಸವಿ ಮೇ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ—(1) ಷೇರು ಮೊಬಲಗು	...	ರೂ 9,80,765
,, (2) ಡಿಪಾಜಟ್ಟುಗಳು	...	,, 14,02,860
,, (3) ಇತರೆ	...	,, 28,847
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ. 24,12,462

ದೇಣೆ.—(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 4,39,994
,, (2) ಖಾತೆ ಮತ್ತು ಇತರ ಸಾಲಗಳು	...	,, 13,94,490
,, (3) ಡಿಸ್ಕೌಂಟು ಮಾಡಿದ ನಾಯಿದೆ ಹುಂಡಿಗಳು		,, 1,51,775
,, (4) ಇನ್‌ವೆಸ್ಟ್‌ಮೆಂಟುಗಳು	...	,, 2,01,000
,, (5) ಏಜನ್ಸಿಗಳಲ್ಲಿರುವ ಮೊಬಲಗು	...	,, 1,98,453
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...	,, 8,321
,, (7) ಇತರೆ	...	,, 19,439
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 24,12,462

ಡಬ್ಲಿಯು. A. ರೋಜ್, ಮ್ಯಾನೇಜರ್.

NOTICE

X, who has been advertising for a Coffee **Estate Writer** in these columns, is suited with one. Will all applicants kindly accept this intimation as X finds it impossible, owing to the large number of applications received, to answer each one direct? [128 1]

Full Notes and **Examiner** on L S E Texts (1915)—**Both Tanglewood and Fairy Tales,** with Author's life, meanings, explanations, summaries, constructions and questions. Price **Annas 5 English Papers**—Subscription **Re 1¼ only** Special copy **As. 6 Spelling Book As 4** (Postage extra)

Apply to, **M. N Sitarama Rao,**
[100 6] **Krishnaraja Mohalla, Mysore**

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಕಳೆದ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸಿರುತ್ತದೆ. ನಮ್ಮ ಏಜಂಟರು ಬಿಲ್ ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನೇ ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ವಾರದೊಳಗ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು

ಅಜ್ಮೀರ್ ಜನರಲ್ ಅಷೂರನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆದೇಶಗಳು 1913 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[231-1] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಎಲ್ಲರಿಗೂ ಬೇಕು.

ಬಾಲಸಂಜೀವಿನಿ—ಮಕ್ಕಳಿಗೆ ಒಂದು ಮಾತ್ರೆಯನ್ನು ಎದೆಹಾಲಿನಲ್ಲಿ ಹಾಕಿದರೆ 1-2 ವೇಳೆ ಮಾತ್ರ ಸುಖವಾಗಿ ಭೇದಿ ಮಾಡಿಸಿ ಮಕ್ಕಳ ಸೆಳತ (ಯಳವು), ಜ್ವರ, ಹೊಟ್ಟೆಯುಬ್ಬರ, ಶೀತವಾಯು, ಕೆಮ್ಮು, ನೆಗಡಿ, ಮುಖಕ್ಕುವಿಕೆ ಮುಂತಾದ್ದನ್ನು ಆಶ್ಚರ್ಯವಾಗುವಂತೆ ತಕ್ಷಣ ಗುಣಮಾಡುತ್ತದೆ. ಬೆಲೆ 50 ಮಾತ್ರೆ 1 ಆಣೆ

ಅಮೋಘಿನಿ—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ಸಂಗೀತಗಾರರಿಗೆ ಅತ್ಯಾವಶ್ಯಕವಾದುವು. ಶರೀರದ ಆಯಾಸ, ಬಾಯಾರಿಕೆ, ವಿಧವಿಧವಾದ ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸಿ ರಕ್ತವೃದ್ಧಿಯನ್ನೂ ಮನಸ್ಸಿಗೆ ಅಪೂರ್ವವಾದ ಆನಂದವನ್ನೂ ಉಂಟುಮಾಡುತ್ತದೆ. ಬೆಲೆ 150 ಮಾತ್ರೆ 1 ಆಣೆ

ನಾರಿಕೇಳಾಂಜನ—ಕಣ್ಣಿನೊಳಗೆ ಹಾಕಲು ಅತ್ಯುತ್ತಮವಾದ, ಅತಿ ಸೌಮ್ಯವಾದ, ಇತರ ಎಲ್ಲಾ ನಾರಿಕೇಳಾಂಜನಗಳನ್ನು ಮೀರಿಸಿರುವ ಪೂರ್ವಿಕರಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟ ಸಿದ್ಧಾಮೃತ. ಬೆಲೆ 1 ಆಣೆ

ಶ್ರೀಕರಕಸ್ತೂರಿ ಮಾತ್ರೆ—250 ಮಾತ್ರೆ 1 ಆಣೆ

ಪ್ರತಿ ಔಷಧವೂ ವಿಶದವಾದ ಅನುಪಾನಪತ್ರದೊಡನೆ ಕೂಡಿರುವುದು. ಮೇಲ್ಕಂಡ ಔಷಧಗಳನ್ನು ಪ್ರತ್ಯೇಕ ಅಥವಾ ಒಟ್ಟಿಗೆ ಐದು ಸೀಸೆ ತರಿಸಿದರೆ ಒಂದು ಇನಾಮು. ವಿ ಪಿ ಛಾರ್ಜು ಪ್ರತ್ಯೇಕ. [220-33]

ವಿಳಾಸ—ಬಿ ವಿ ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು

ಮಹಿಳಾಸಖೀ

ಸ್ತ್ರೀಯರಿಗೆ ಉಪಯುಕ್ತವಾದ ಕರ್ಣಾಟಕ ಮಾಸಪತ್ರಿಕೆಯು

ಜೂನ್ ತಿಂಗಳಿನ ಮಾಸಪತ್ರಿಕೆಯ ವಿಷಯಸೂಚನೆ

ವಾಚಕಿಯರಿಗೆ
(1) ಬಾಲ್ಯದಿಂದ ಕ್ಷಯರೋಗದ ಅಪಾಯ, (2) ಇದಕ್ಕೆ ಪರಿಹಾರ, (3) ಹಾಲು ಕೊಡುವವರೂ ಅವರ ವಿಧಾನಗಳೂ, (4) ಚಿಕ್ಕ ಮಕ್ಕಳಿಗೋಸ್ಕರ, (5) ಸೂಲಗಿತ್ತಿಯರು, (6) ನೈರ್ಮಲ್ಯದ ಪ್ರಾಮುಖ್ಯತೆ
ಧರ್ಮಿಷ್ಠನಾದ ಸಂಗೀತಗಾರನು
ಸ್ತ್ರೀಗೌರವ (3)
ನೈರ್ಮಲ್ಯ
ಒಂದು ಕಾಳು ದವಸದ ಧರ್ಮಕ್ಕೆ ಚಿನ್ನದ ಪ್ರತಿಫಲವು
ಚೀನಾ ಜನರ ಕೆಲವು ಸುಗುಣಗಳು
ಮಕ್ಕಳಿಗೆ ಪ್ರೀತಿಯಿಂದ ಸಾಕಿದ ಪಿಶಾನು, ಹೊಲಿಗೆ ಕೆಲಸದ ವಿಷಯವು
ಮೊಂಟೆಸ್ಸೋರಿಯವರ ಬೋಧನೆಯ ವಿಧಾನ
ಕೆಲವು ಬುದ್ಧಿವಾಕ್ಯಗಳು
ವರ್ತಮಾನ ಸಂಗ್ರಹ
ಬಾಯಿಗೆ ಕಡಿವಾಣ ಹಾಕುವುದು
ಪಾಕಶಾಸ್ತ್ರ

ಒಂದು ವರುಷದ ಚಂದಾ 0 6-0
ಒಂದು ವರುಷದ ಚಂದಾ, ಹಾಸಲು ಸಹಿತ 0 9-0

ಮಹಿಳಾಸಖಿಯನ್ನು ತರಿಸಿಕೊಳ್ಳುವುದಕ್ಕೆ ಬರೆಯಬೇಕಾದ ಪತ್ರಕ್ರಮ —
[139-1] ತಾರೀಖು

ಮೈಸೂರಲ್ಲಿರುವ ಸಿ ಎಲ್ ಎಸ್ ಡಿಪೋ ಮ್ಯಾನೇಜರವರಿಗೆ
ಅಯ್ಯಾ,

ಮಹಿಳಾಸಖಿಯ ಒಂದು ವರುಷದ ಚಂದಾ ಮೊಬಲಗು, ಹಾಸಲು ಸಹಿತ 0-9-0 ಆಣೆಗಳಿಗೆ ಸರಿಯಾದ ಪೋಸ್ಟೇಜು ಸ್ಟಾಂಪುಗಳನ್ನು ಇದರಲ್ಲಿ ಇಟ್ಟಿರುತ್ತೇನೆ. ದಯವಿಟ್ಟು ಪತ್ರಿಕೆಯನ್ನು ಕಳುಹಿಸುತ್ತಾ ಬರಬೇಕೆಂದು ಕೋರುತ್ತೇನೆ.

ವಿಳಾಸ — ರುಜು

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೪ ನೇ ಇಸವಿ ಜೂನ್ ತಾ ೧೧ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿ ಸಮಾಜವು

ಕಳೆದ ಶುಕ್ರವಾರ ಮದ್ರಾಸು ಎಕನಾಮಿಕ್ ಕಾನ್ಫರೆನ್ಸಿನ ಐದನೆಯ ಮಹಾಸಭೆಯು ರಾಜಧಾನಿಯಲ್ಲಿ ಪ್ರಾರಂಭವಾಯಿತು. ದಿವಾನ್ ಮ|| ಎಂ ವಿಶ್ವೇಶ್ವರಯ್ಯನವರು ಸಭೆಯ ಅಗ್ರಾಸನವನ್ನು ವಹಿಸಿ ಉಪನ್ಯಾಸಮಾಡಿದರು. ಆ ಉಪನ್ಯಾಸದ ಮುಖ್ಯ ಭಾಗಗಳನ್ನೆಲ್ಲಾ ಸಂಗ್ರಹಿಸಿ ವಾಚಕರ ತಿಳುವಳಿಕೆಗಾಗಿ ಇನ್ನೊಂದು ಕಡೆ ಪ್ರಕಟಮಾಡಿರುತ್ತೇವೆ. ಮೈಸೂರು ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಈ ಸಭೆ ಏರ್ಪಟ್ಟು ಮೂರು ವರುಷಗಳು ಕಳೆದವು. ಕಳೆದ ವಾರ ನಡೆದ ಸಭೆಯು ಮೂರನೆಯದಾಗಿರುತ್ತದೆ. ಇದುವರೆಗೆ ಈ ಸಮಾಜದ ಕಾರ್ಯಗಳಿಗಾಗಿ ನಮ್ಮ ಸರ್ಕಾರದವರು ಎರಡು ಲಕ್ಷ ರೂಪಾಯಿ ತನಕ ಖರ್ಚುಮಾಡಿದಾರೆ. ಇದಕಾರಣ ಅಷ್ಟೊಂದು ಹಣ ವ್ಯಯವೂ, ಅದಕ್ಕೆ ತಕ್ಕಷ್ಟು ಸಾಹಸಪ್ರಯತ್ನಗಳೂ ನಡೆದಿರುವಲ್ಲಿ ಅದರ ಪ್ರತಿಫಲವಾಗಿ ಕಂಡುಬಂದಿರುವ ಪ್ರಯೋಜನಗಳು ಇಂಥವುಗಳೆಂದು ತೋರಿಸಿಕೊಡಬೇಕಾಗಿದೆ. ಅದಕ್ಕೆ ಇನ್ನೂ ಕಾಲ ಒದಗಲಿಲ್ಲವೆಂದು ನಮಗೆ ತೋರುವುದಿಲ್ಲ.

ದಿವಾನರವರಿಗೆ ಉಪನ್ಯಾಸಮಾಡುವದಕ್ಕೆ ಫಲಗಳೆಂದು ತೋರಿಸಿಕೊಡಲು ಗಟ್ಟಿಮುಟ್ಟಾದ ವಿಚಾರಗಳೇನೂ ದೊರಕದ ಹೋದರೂ ಹುರುಳಿಲ್ಲದ ಮತ್ತು ಸಮಯಕ್ಕೆ ಒದಗಿದ ಸಂಗತಿಗಳನ್ನು ಹಿಡಿದು ಬಹು ಸಾಮರ್ಥ್ಯದಿಂದ ಪ್ರಶಂಸಿಸಿರುತ್ತಾರೆ. ಅವರು ವಿವರಿಸಿ ಹೇಳಿರುವ ವಿಷಯಗಳಲ್ಲಿ ಬಹು ಭಾಗವೆಲ್ಲಾ ಖಾಯಂ ಇಲಾಖೆಗಳ ಕಾರುಬಾರುಗಳಿಂದ ನಡೆಯಬೇಕು, ನೆರವೇರಿದ್ದಾಗಿಯೇ ಇರುತ್ತದೆಂದೂ ಹೇಳಬಹುದು. ಈ ಎಕನಾಮಿಕ್ ಕಾನ್ಫರೆನ್ಸಿನ ಸಾಹಸಕಾರ್ಯಗಳಿಂದ ನಮ್ಮ ಸಂಸ್ಥಾನದಲ್ಲಿ ಮೊದಲಿಗಿಂತಲೂ ವಿಶೇಷವಾದ ಪ್ರಯೋಜನವಾಗಿರುವುದೇನೂ ನಮ್ಮ ಕಣ್ಣಿಗೆ ಕಂಡುಬರಲಿಲ್ಲ. ಇದಕಾರಣ ಕಾನ್ಫರೆನ್ಸಿನಲ್ಲಿ ಕೆಲವು ಪ್ರಜಾಪಕ್ಷದ ಮುಖಂಡರುಗಳು ದಿವಾನರವರನ್ನು ಕುರಿತು ಇನ್ನೆಷ್ಟರವರೆಗೂ ಇನ್ನೆಷ್ಟು ಹಣ ವ್ಯಯವಾಗುವಂಥಾ ಈ ಸಭೆಯು ನಡೆಯಬೇಕು ಎಂದಾಗಿ ಪ್ರಶ್ನೆಮಾಡಿದ್ದೇನೂ ಆಶ್ಚರ್ಯವಲ್ಲವೆಂದು ಭಾವಿಸುತ್ತೇವೆ. ಈ ಸಭೆಯ ದೆಸೆಯಿಂದ ಒಂದೇನೋ ಪ್ರಯೋಜನವಾಗಿದೆ ಎಂದು ಒಪ್ಪಿಕೊಳ್ಳುವೆವು. ಪ್ರಜೆಗಳಲ್ಲಿ ಗಣ್ಯರಾದವರು ಸರ್ಕಾರಿ ಅಧಿಕಾರಿಗಳೊಡನೆ ಧಾರಾಳವಾಗಿ ಕಲೆತು ಅವರ ಕೂಡ ನಮ್ಮ ಸೀಮೆಯ ವಿಚಾರಗಳನ್ನು ಕುರಿತು ಸರಾಗದಿಂದ ಚರ್ಚೆಗಳನ್ನು ನಡಿಸುತ್ತಲೂ, ಪರಸ್ಪರ ಪರ್ಯಾಲೋಚನೆ ಮಾಡುತ್ತಲೂ ಬಂದಿದಾರೆ.

ಮೈಸೂರು ಸಂಸ್ಥಾನದ ಪ್ರಜೆಗಳ ಕಣ್ಣುಗಳನ್ನು ತೆರೆಯುವುದಕ್ಕೋಸ್ಕರ ನಮ್ಮ ದಿವಾನರವರು ಪ್ರಜಾ ಸಂಖ್ಯೆಯಲ್ಲಿ ಸುಮಾರಾಗಿ ನಮ್ಮ ಸಂಸ್ಥಾನದಷ್ಟೇ ಇರುವಂಥಾ ಕಾನಡಾ ಮತ್ತು ಆಸ್ಟ್ರೇಲಿಯಾ ಸೀಮೆಗಳನ್ನು ಹಿಡಿದು, ಆ ಎರಡು ಸೀಮೆಗಳ ಸ್ಥಿತಿಗತಿಗಳನ್ನೂ ನಮ್ಮ ಸಂಸ್ಥಾನಕ್ಕೆ ಹೋಲಿಕೆ ಮಾಡಿ ತಮ್ಮ ಉಪನ್ಯಾಸದಲ್ಲಿ ವಿವರಿಸಿರುತ್ತಾರೆ. ಹೀಗೆ ಹೋಲಿಸುವುದರಲ್ಲಿ ಅವರು ಒಂದು ಮುಖ್ಯವಾದ ಭಾಗವನ್ನೇ ಬಿಟ್ಟುಬಿಟ್ಟರು. ಅವರು ಆ ಸೀಮೆಗಳ ವಿಸ್ತೀರ್ಣಗಳು ಎಷ್ಟು ನಮ್ಮ ಸಂಸ್ಥಾನದ ಎಷ್ಟರಷ್ಟು ದೊಡ್ಡದಾಗಿದೆಯೇ ಎಂಬೀ ವಿಚಾರವನ್ನು ದಿವಾನರವರು ಗಣನೆಗೆ ತಂದುಕೊಳ್ಳಲಿಲ್ಲ. ಕ್ಯಾನಡಾ ಸೀಮೆಯಲ್ಲಿ 28,000 ಮೈಲಿ ರೈಲ್ ರಸ್ತೆ ಇರಬಹುದು. ಮೈಸೂರು ಸಂಸ್ಥಾನದಲ್ಲಿ ಅಷ್ಟು ಮೈಲಿ ರೈಲ್ ಕಂಬಿಗಳನ್ನು ಹಾಕಿಕೊಂಡರೆ ಸ್ಥಳವೇನೂ ಕಾಣಲಿಲ್ಲ. ಮೈಸೂರಿಗೂ ಅಷ್ಟು ರೈಲ್ ರಸ್ತೆ ಬೇಕಾಗಿದೆಯೋ? ಆಸ್ಟ್ರೇಲಿಯ, ಕಾನಡಾ, ಮೈಸೂರು ಸೀಮೆಗಳ ಸ್ಥಿತಿಗತಿಗಳು ವಿಶೇಷ ವ್ಯತ್ಯಾಸವಾಗಿರುವಲ್ಲಿ ನಮ್ಮ ಸಂಸ್ಥಾನವನ್ನು ಆ ಸೀಮೆಗಳಿಗೆ ಹೋಲಿಸುವುದು ಸಹಜವೆಂದು ಹೇಳಲಾಗುವುದಿಲ್ಲ. ಮೈಸೂರಿನ ಪ್ರಜೆಯ ವರಮಾನವು ವರುಷಕ್ಕೆ 10 ರೂಪಾಯಿ ಆಗಿರಬಹುದು, ಆಸ್ಟ್ರೇಲಿಯ ಅಥವಾ ಕಾನಡಾ ಪ್ರಜೆಯ ವರಮಾನ 300 ರೂಪಾಯಿ ಆಗಿರಬಹುದು. ಹೀಗಿದ್ದ ಮಾತ್ರಕ್ಕೇ ಮೈಸೂರಿನವನ ಸ್ಥಿತಿಗತಿಯು ಅವರೆಡು ಸೀಮೆಗಳ ಪ್ರಜೆಗಳಿಗಿಂತ ಹೀನವಾಗಿಯೂ, ಪರಿತಾಪಕರವಾಗಿಯೂ ಇದೆ ಎಂದು ನಿಶ್ಚಯಿಸಲಾಗುವುದಿಲ್ಲ. ಅಲ್ಲಿನವರಾಗಲಿ ನಮ್ಮವರಾಗಲಿ ಜೀವನಕ್ಕೆ ಎಷ್ಟು ಖರ್ಚುಮಾಡಬೇಕಾಗಿದೆ ಎಂಬುದನ್ನೂ, ದಿವಾನರವರು ತಖ್ತೆಯಲ್ಲಿ ಕಾಣಿಸದೆ ಇರುವ ಇತರ ಕೆಲವು ಅಂಶಗಳನ್ನೂ ಇಟ್ಟುಕೊಂಡು ಹೋಲಿಕೆಮಾಡಬೇಕಾಗಿರುತ್ತದೆ.

ದಿವಾನರವರ ಉಪನ್ಯಾಸದ ಉದ್ದಕ್ಕೂ ನಮ್ಮ ಸಂಸ್ಥಾನದ ಶ್ರೇಯಸ್ಸೆಂಬುವುದು ಹಣದರಾಶಿ, ಅಟ್ಟಹಾಸವಾದ ಸುಖಜೀವನ, ಇವೇ ಮೊದಲಾದವುಗಳೆಂದೂ, ಅವುಗಳನ್ನು ಸಂಪಾದಿಸಿಕೊಳ್ಳುವುದೇ ಮನುಷ್ಯನ ಇಹಪರಗಳೆಲ್ಲಾ ಪ್ರಾಮುಖ್ಯವಾದದ್ದೆಂದೂ ಭಾವಿಸಿರುವಂತೆ ಅಭಿಪ್ರಾಯವಾಗುತ್ತದೆ. ಮೈಸೂರು ಸಂಸ್ಥಾನವು ಬಡತನದ ಸೀಮೆಯಾಗಿದೆ. ಅದು ಪ್ರಪಂಚದ ವಸ್ತುವಿಶೇಷಗಳಿಲ್ಲದಂಥಾ ಬಡತನವಲ್ಲ, ಮನುಷ್ಯನಿಗೆ ಸಹಜವಾಗಿರಬೇಕಾಗಿ ಸತ್ಯಸಂಧತೆಯೂ ಸಚ್ಚರಿತ್ರೆಯೂ ಇಲ್ಲದೆ ಬಡತನವುಂಟಾಗಿದೆ. ಮೈಸೂರಿನಲ್ಲಿ ಬೇಕಾದಷ್ಟು ಭಂಗಾರ ಉಂಟು, ಆದರೆ ಮೈಸೂರಿನವರಲ್ಲಿ ಬುದ್ಧಿಕುಶಲತೆಯೂ ಸ್ಥಿರವಾದ ಮನಸ್ಸೂ ಇಲ್ಲದಿರೋಣಾದರಿಂದ ಚಿನ್ನದ ಗಣಿಗಳ ಲಾಭಾಂಶವೆಲ್ಲಾ ದೇಶಾಂತರಕ್ಕೆ ಸಾಗಿಹೋಗುತ್ತಿರುವುದು. ನಮ್ಮ ದೇಶದ ತುಂಬಾ ಐಶ್ವರ್ಯವೇನೋ ಇದೆ, ಆದರೆ ನಮ್ಮ ಜನಗಳು ಸೋಮಾರಿತನ, ಆಲಕ್ಷ್ಯಸ್ವಭಾವ, ಅಲ್ಪತೃಪ್ತಿ, ಈ ಬಗೆಯ ಲಕ್ಷಣಗಳನ್ನು ಎಂದಿಗೆ ವರ್ಜಮಾಡಿ ಕಾರ್ಯಾಸಕ್ತರಾಗಿಯೂ, ಸತ್ಯಸಂಧರಾಗಿಯೂ, ಸಚ್ಚರಿತ್ರರಾಗಿಯೂ ಆಗುತ್ತಾರೆಯೋ ಅದುವರೆಗೂ ಬಡತನವು ಹೀನಸ್ಥಿತಿಯೂ ನಮ್ಮ ಸೀಮೆಯನ್ನು ಬಿಟ್ಟುಹೋಗುವುದಿಲ್ಲ. ಇದಕ್ಕಿಂತಲೂ ಪ್ರಧಾನವಾದ ಸಂಗತಿ ಇನ್ನೊಂದಿದೆ. ಮನುಷ್ಯನಿಗೆ ಅನ್ನ ಬಟ್ಟೆ ಹಣ ದೊರೆತ ಮಾತ್ರಕ್ಕೆ ಅವನ [illegible] ಕೈಗೂಡಿತೆಂದು ಊಹಿಸಬಾರದು. ಇವುಗಳಿಗಿಂತಲೂ ಅವನಲ್ಲಿ ಸತ್ಯತೆಯೂ, ಬರವಸೆ ಇಡುವಷ್ಟು ಯೋಗ್ಯತೆಯೂ, ಸಚ್ಚರಿತ್ರೆಯೂ ಇದ್ದ ಪಕ್ಷದಲ್ಲಿ ಇವುಗಳ ದೆಸೆಯಿಂದ ಅವನು ಪ್ರಪಂಚದಲ್ಲಿ ಸನ್ಮಾನವನ್ನೂ ನಂಬಿಕೆಯನ್ನೂ ಸಂಪಾದಿಸಿಕೊಂಡು ಬದುಕುತ್ತಾನೆ. ಇದೇ ಮನುಷ್ಯನಿಗೆ ಅನ್ನ ಬಟ್ಟೆಗಳಿಗಿಂತಲೂ ಪರಮ ವಿಶೇಷವಾದ ವಿಚಾರ. ಇದು ನಮ್ಮ ಕೋಲಾರದ ಚಿನ್ನದ ಗಣಿಗಳ ಭಂಗಾರವನ್ನೆಲ್ಲಾ ಕೊಟ್ಟಾಗ್ಯೂ ದೊರಕುವಂಥಾದಲ್ಲ. ಯಾರು ಸತ್ಯಧರ್ಮಗಳನ್ನು ಪ್ರೀತಿಸಿ ಕಾಪಾಡಿಕೊಂಡು ಬರುತ್ತಾರೆಯೋ, ಯಾರ ನಡತೆಯಲ್ಲಿ ಕನಿಕರವೆಂಬುವುದು ಪ್ರಕಾಶವಾಗುತ್ತಿದೆಯೋ, ಯಾರು ದೇವರ ಮೇಲಣ ಭಕ್ತಿಯಿಂದ ಸ್ವವೃತ್ತಿಯಲ್ಲಿ ನಡೆಸುಕೊಳ್ಳುವರೋ ಅಂಥವರಿಗಲ್ಲದೆ ಅದು ಮತ್ತಾರಿಗೂ ಲಭ್ಯವಾಗತಕ್ಕದ್ದಲ್ಲ.

ಮೈಸೂರು ಸಂಸ್ಥಾನದ 1912-13 ನೇ ಸಾಲಿನ ಜಮಾಖರ್ಚು ಲೆಕ್ಕಗಳು.

ಮೈಸೂರು ಸಂಸ್ಥಾನದ ಖಜಾನಾ ಭಕ್ಷಿಯವರಾದ ಮ|| ಜಿ ಎಸ್ ಚಕ್ರವರ್ತಿಯವರು ಈ ಸೀಮೆಯ 1912-13 ನೇ ಸಾಲಿನ ಹುಟ್ಟುವಳಿ ಖರ್ಚಿನ ಅಖೈರು ಲೆಕ್ಕಗಳನ್ನು ಪ್ರಕಟಮಾಡಿದಾರೆ. ಆ ಸಾಲಿನ ಬಜೆಟಿನ ಅಂದಾಜಾ ಪಟ್ಟಿಗೂ, ಈಗ ತೋರಿಸಿರುವ ನಿಜ ಲೆಕ್ಕಗಳಿಗೂ ತುಂಬಾ ವ್ಯತ್ಯಾಸ ಕಂಡುಬಂದಿದೆ. ಆ ಸಾಲಿನಲ್ಲಿ ಸಂಸ್ಥಾನದ ಒಟ್ಟು ಹುಟ್ಟುವಳಿಯು 2,11,79,000 ರೂಪಾಯಿ ಆಗುತ್ತದೆಂದು ಅಂದಾಜು ಕಟ್ಟಿದ್ದರು, ಈಗ ನೋಡುವಲ್ಲಿ ಒಟ್ಟು ವರಮಾನವಾಗಿರುವುದು 3,19,10,000 ರೂಪಾಯಿ. ಹೀಗೆ ಹುಟ್ಟುವಳಿ ಜಾಸ್ತಿಯಾಗಲು ಫಾರೆಸ್ಟು (11 ಲಕ್ಷ), ಎಕ್ಸೈಸ್ (6 ಲಕ್ಷ), ಗಣಿಗಳ ರಾಜಾದಾಯ (3 ಲಕ್ಷ), ರೈಲ್ವೆ (4 ಲಕ್ಷ) ಈ ಬಾಬುಗಳಲ್ಲಿ ಬಹಳ ಬಂದ ಹಣಗಳು ಹೆಚ್ಚಿದ್ದೇ ಕಾರಣವಾಗಿದೆ. ಅತ್ತಲಾಗಿ ಆ ಸಾಲಿನಲ್ಲಿ ಒಟ್ಟು ಖರ್ಚು 2,1?,35,000 ರೂಪಾಯಿ ಆಗಬಹುದೆಂದು ಬಜೆಟ್ಟು ತಯಾರ್ಮಾಡಿದ್ದರು. ಆದರೆ ಸಂಸ್ಥಾನದ ಎಲ್ಲಾ ಇಲಾಖೆಗಳಿಂದಲೂ 2,03,52,000 ರೂಪಾಯಿ ಮಾತ್ರ ನಿಶ್ಚಿತವಾದ ಖರ್ಚಾಗಿರುತ್ತದೆ. ಸ್ಯಾಂಕ್ಷನ್ ಆಗಿದ್ದ ಹಣಗಳನ್ನು ಖರ್ಚು ಮಾಡಲಾರದೆ ಹೋದ ಇಲಾಖೆಗಳು ಯಾವುವೆಂದರೆ—ದರಬಾರ್ ಇಲಾಖೆ (3 ಲಕ್ಷ), ಇಂಜನಿಯರ್ ಇಲಾಖೆ (ಸುಮಾರು 9 ಲಕ್ಷ), ರೈಲ್ ರಸ್ತೆಗಳು ಟ್ರಾಂವೇ ಕಾಮಗಾರಿ, ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡು (21 ಲಕ್ಷ).

ಈ ವಿಚಾರವನ್ನು ಕುರಿತು ಆಲೋಚಿಸಿ ನೋಡುವಲ್ಲಿ ನಮ್ಮ ಸಂಸ್ಥಾನವು ಏಕಾಏಕಿ ಹಲವು ದೊಡ್ಡ ಕಾರ್ಯಗಳನ್ನು ಪ್ರಾರಂಭಿಸಿ ನಡಿಸಲಾರದೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಭಾರಿ ಕೆಲಸಕಾರ್ಯಗಳನ್ನು ಹಿಡಿದು ಮಾಡುವುದಕ್ಕೆ ವಿದ್ಯಾವಂತರಾಗಿಯೂ, ಬುದ್ಧಿಯುಳ್ಳವರಾಗಿಯೂ ಇರುವ ಜನರಾಗಲಿ ಬಿರುಸು ಕೆಲಸವನ್ನು ಮಾಡತಕ್ಕ ಆಳುಗಳಾಗಲಿ ನಮ್ಮ ಸೀಮೆಯಲ್ಲಿ ದೊರಕುವುದು ಸಾಧ್ಯವಲ್ಲ. ಮೇಲ್ಕಂಡ ಸಾಲಿನ ಬಜೆಟ್ಟಿನಲ್ಲಿ ಸರ್ಕಾರದವರು ನಾನಾ ಕಾರ್ಯಗಳನ್ನು ನಡಿಸುವದಾಗಿ ಭರವಸ ಕೊಟ್ಟಿದ್ದರು, ಆದರೆ ವರುಷಾಂತ್ಯದಲ್ಲಿ ನೋಡಿದರೆ ಕಾರ್ಯಗಳು ನಡೆದಿರುವುದು ಬಹಳ ಸ್ವಲ್ಪವೆಂದೂ, ಇದು ಅಷ್ಟೇನೂ ಸಂತೋಷಪ್ರದವಾಗಿಲ್ಲವೆಂದೂ ಹೇಳಬೇಕಾಗಿದೆ.

ಕ್ರಿಸ್ತನನ್ನು ಕುರಿತು ಸಾಕ್ಷಿನುಡಿದ ಅಧಿಕಾರಿಗಳು

ಮೈಸೂರು ಸೀಮೆಯು ನಮ್ಮ ಶ್ರೀಮನ್ ಮಹಾರಾಜರವರಿಂದ ಆಳಲ್ಪಡುವ ಆಶ್ರಿತ ಸಂಸ್ಥಾನವಾಗಿದೆ. ಅವರು ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟು, ಆ ಚಕ್ರಾಧಿಪತಿಯವರಿಂದ ಹಿಂದೂಸ್ಥಾನದ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿರುವ ವೈಸ್‌ರಾಯ್ ದೊರೆಗಳ ಅಧೀನದಲ್ಲಿದ್ದುಕೊಂಡು ಈ ಸೀಮೆಯನ್ನಾಳುತ್ತಿರುವರು.

ಕ್ರಿಸ್ತನ ಕಾಲದಲ್ಲಿ ಆತನು ಹುಟ್ಟಿದ ಪಾಲೆಸ್ತೀನ್ ಎಂಬ ಸಣ್ಣ ಸೀಮೆಯು ನಮ್ಮ ಮೈಸೂರು ಸೀಮೆಯ ಹಾಗೆ ರೋಮಾಯದ ಚಕ್ರವರ್ತಿಯ ಅಧೀನದಲ್ಲಿದ್ದ ಹೆರೋದನೆಂಬ ಅರಸನಿಂದ ಆಳಲ್ಪಡುತ್ತಿತ್ತು. ಮತ್ತು ಹೆರೋದ ರಾಜನು ರೋಮ ಚಕ್ರಾಧಿಪತ್ಯದವರಿಂದ ನೇಮಿಸಲ್ಪಟ್ಟ ಪೊಂತಿಯ ಪಿಲಾತನೆಂಬ ವೈಸ್‌ರಾಯನ ಕೈಕೆಳಗೆ ದೊರೆಯಾಗಿದ್ದನು. ಹೆರೋದನು ಪಾಲೆಸ್ತೀನ್ ಸೀಮೆಯ ದೊರೆಯಾಗಿದ್ದರೂ ಮರಣದಂಡನೆ ವಿಧಿಸುವ ಅಧಿಕಾರವಿಲ್ಲದವನಾಗಿದ್ದನು. ಮರಣದಂಡನೆಗೆ ಪಾತ್ರನಾದ ಅಪರಾಧಿಯನ್ನು ಚಕ್ರಾಧಿಪತ್ಯದವರ ಕಡೆಯ ವೈಸ್‌ರಾಯರು ವಿಚಾರಿಸಿ ಶಿಕ್ಷೆ ವಿಧಿಸಬೇಕಾತ್ತು.

ಆ ದೇಶದ ನಿವಾಸಿಗಳಾದ ಯೆಹೂದ್ಯರು ತಮ್ಮ ಆಚಾರ, ಮತ, ಸಂಪ್ರದಾಯ, ಪದ್ಧತಿಗಳನ್ನು ಕುರಿತು ತರ್ಕಿಸಿ ತೀರ್ಮಾನಿಸುವ ಹಿರಿಯರೊಂದು ಸಭೆಯನ್ನು ಬಹಳ ಪೂರ್ವಕಾಲದಿಂದ ನಡಿಸುತ್ತಾ ಬರುತ್ತಲಿದ್ದರು. ಈ ಮಂತ್ರಾಲೋಚನಾಸಭೆಗೆ ಸನ್ಹೆದ್ರಿನ್ ಸಭೆಯೆಂಬ ಹೆಸರಿತ್ತು. ಆದರೆ ಈ ಸಭೆಯವರು ಯಾವ ತೀರ್ಮಾನವನ್ನು ಮಾಡಿದರೂ ಅದನ್ನು ಜಾರಿಗೆತರುವದಕ್ಕೆ ವೈಸ್‌ರಾಯರ ಒಪ್ಪಿಗೆಯನ್ನೂ ಅಪ್ಪಣೆಯನ್ನೂ ಪಡೆದು ಅವರ ಕೈಗಳಿಂದ ತಮ್ಮ ತೀರ್ಮಾನವನ್ನು ನೆರವೇರಿಸಿಕೊಳ್ಳಬೇಕೇ ಹೊರತು ತಾವೇ ಸ್ವತಂತ್ರವಾಗಿ ಏನೂ ಮಾಡಲಾರದವರಾಗಿದ್ದರು. ಹೀಗೆ ಪ್ರಾಣಶಿಕ್ಷೆ ರಕ್ಷಣೆಗಳು ವೈಸ್‌ರಾಯರ ಕೈಯಲ್ಲಿದ್ದವು.

ಯೇಸು ಕ್ರಿಸ್ತನನ್ನು ಮರಣದಂಡನೆಗೆ ಪಾತ್ರನಾದವನೆಂದು ಯೆಹೂದ್ಯರ ಮಂತ್ರಾಲೋಚನಾಸಭೆಯವರು ತೀರ್ಮಾನಿಸಿದರು. ಆದರೆ ಮರಣದಂಡನೆಯನ್ನು ಕ್ರಿಸ್ತನಿಗೆ ವಿಧಿಸುವದಕ್ಕೆ ಅಧಿಕಾರವಿಲ್ಲದವರಾಗಿದ್ದುದರಿಂದ ಆ ಕಾಲದಲ್ಲಿ ರೋಮ್ ಚಕ್ರವರ್ತಿಯ ಕಡೆಯ ವೈಸ್‌ರಾಯನಾಗಿದ್ದ ಪೊಂತಿಪಿಲಾತನ

ಬಳಿಗೆ ಆತನನ್ನು ಹಿಡಿಸಿಕೊಂಡುಹೋಗಿ ಅವನ ನ್ಯಾಯಸ್ಥಾನದಲ್ಲಿಯೇ ಯೇಸುವಿಗೆ ವಿರೋಧವಾಗಿ ಫಿರ್ಯಾದಿಮಾಡಿದರು ಯೆಹೂದ್ಯರ ಮಂತ್ರಾಲೋಚನಾ ಸಭೆಯವರು ಯೇಸುವನ್ನು ವಿಚಾರಿಸುವಾಗ ಆತನ ಮೇಲೆ ತಂದ ಅಪರಾಧವೇನಂದರೆ—ದೇವರ ಕಡೆಯಿಂದ ಬರುತ್ತಾನೆಂದು ನಂಬಿ ನಮ್ಮ ಜನಾಂಗದವರು ನಿರೀಕ್ಷಿಸುತ್ತಿರುವ ಕ್ರಿಸ್ತನು ನೀನೋ " ನೀನು ಸರ್ವಸ್ವತ್ತ್ವನ ಕುಮಾರನೆಂದು ಬೋಧಿಸಿ ನಮ್ಮ ಜನಗಳನ್ನು ನಂಬಿಸುವದಕ್ಕೆ ಪ್ರಯತ್ನಿಸಿದೆಯಾ " ಎಂಬುವದೇ ಆದರೆ ಯೇಸುವನ್ನು ಪಿಲಾತನ ಮುಂದೆ ನಿಲ್ಲಿಸಿ ವಿಚಾರಣೆಮಾಡಿಸುವಾಗ—ಇವನು ತನ್ನನ್ನು ಲೋಕರಕ್ಷಕನಾಗಿರುವ ಕ್ರಿಸ್ತನು, ಮತ್ತು ದೇವರ ಕುಮಾರನು ಎಂದು ತನ್ನ ವಿಷಯ ಬೋಧಿಸಿದ್ದಾನೆ ಎಂಬ ದೂರನ್ನು ಆತನ ಮೇಲೆ ತರಲಿಲ್ಲ ಅಂತಹ ದೂರು ಮತಸಂಪ್ರದಾಯಕ್ಕೆ ಸಂಬಂಧಪಟ್ಟದ್ದಾದುದರಿಂದ ಪಿಲಾತನು ಅದನ್ನು ಲಕ್ಷೀಕರಿಸದೆ ಪಿಚಾರಿಸದೆ ಯೇಸುವನ್ನು ಬಿಡುಗಡೆಮಾಡುವನು ಎಂದು ಅವರು ಚೆನ್ನಾಗಿ ತಿಳಿದಿದ್ದರು ಆದುದರಿಂದ ಅವರು ಪಿಲಾತನ ಮುಂದೆ ಯೇಸುವನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಿ—ಈತನು ತಾನೇ ಅರಸನು ಅಂದುಕೊಂಡು ರೋಮ್ ಚಕ್ರಾಧಿಪತ್ಯಕ್ಕೆ ಕಪ್ಪಕೊಡಬಾರದೆಂದು ಪ್ರಜೆಗಳನ್ನು ಪ್ರೇರಿಸಿ ರಾಜದ್ರೋಹಮಾಡಿದ್ದಾನೆ ಎಂದು ದೂರು ಹೇಳಿದರು

ಇತ್ತಲಾ ಪಿಲಾತನು ನ್ಯಾಯವಿಮರ್ಶೆಮಾಡಲಿಕ್ಕೆ ಶಕ್ತನಾಗಿದ್ದನು ಅದ್ದರಿಂದ ಕ್ರಿಸ್ತನು ಪಿತೂರಿಗಾರನೂ ಅಲ್ಲ, ರಾಜದ್ರೋಹಿಯೂ ಅಲ್ಲವೆಂತ ಸುಲಭವಾಗಿ ತಿಳಿದನು ಮತ್ತು ಯೆಹೂದ್ಯರು ಈತನನ್ನು ಹೊಟ್ಟೆಕಿಚ್ಚಿನಿಂದ ಹಿಡಿದು ತಂದಿದ್ದಾರೆಂದು ಕಾವಣಾ ತರಗಳಿಂದ ತಿಳಿದು—ಈ ಮನುಷ್ಯನಲ್ಲಿ ನಾನೇನು ಅಪರಾಧ ಕಾಣೆನು ಎಂದು ನಿರ್ಣಯಿಸಿದನು ಮತ್ತು ಯೆಹೂದ್ಯರು ಕ್ರಿಸ್ತನ ಮೇಲೆ ದೂರು ಹೇಳುತ್ತಿರುವದನ್ನೂ, ಕ್ರಿಸ್ತನು ಶಾಂತಚಿತ್ತನಾಗಿ ಏನೂ ಮಾತನಾಡದೆ ಅವನ ಮುಂದೆ ನಿಂತಿರುವದನ್ನೂ ನೋಡಿ ಬೆರಗಾದನು ಮತ್ತು ಯೇಸುವನ್ನು ನಿರಪರಾಧಿಯೇ ಸರಿಯೆಂದು ನಿಶ್ಚಯಿಸಿ ಆತನನ್ನು ಬಿಡಿಸಬೇಕೆಂದು ತೀರ್ಮಾನಿಸಿದನು ಆದರೆ ಯೆಹೂದ್ಯರು ಪಿಲಾತನ ಸ್ವಭಾವವನ್ನು ಚೆನ್ನಾಗಿ ತಿಳಿದಿದ್ದರು ಅವನು ಪೇಡಿ ಯೆಹೂದ್ಯರು ಅಪವಾದಿಯೆಂದು ತಂದಿದ್ದವನು ನಿರಪರಾಧಿಯೆಂದು ಪರಿಸ್ಫುಟವಾಗಿ ತಿಳಿದಿದ್ದರು ಯೇಸುವನ್ನು ನಿರಪರಾಧಿಯು ಎಂದು ಬಿಡಿಸಿದರೆ ಯೆಹೂದ್ಯರು ತನ್ನ ಮೇಲೆ ಚಕ್ರವರ್ತಿಯಲ್ಲಿ ದೂರು ಹೇಳಿ ತನಗೆ ತೊಂದರೆಯನ್ನುಂಟುಮಾಡುವರೆಂದು ಭಯಪಟ್ಟನು ಮತ್ತು ಆದೇ ಸಮಯದಲ್ಲಿ ಯೆಹೂದ್ಯರು ಪಿಲಾತನಿಗೆ—ನೀನು ಇವನನ್ನು ಬಿಡಿಸಿದರೆ ನೀನು ಚಕ್ರವರ್ತಿಯ ಮಿತ್ರನಲ್ಲ ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವವನು ಚಕ್ರವರ್ತಿಯ ವಿರೋಧಿಯೆಂದು ಹೆದರಿಸಿದರು ಆಗ ಪಿಲಾತನು ಯೇಸುವನ್ನು ಪುನಃ ಪ್ರತ್ಯೇಕವಾಗಿ ಕರೆಸಿ—ನೀನು ಏನು ಅಪರಾಧಮಾಡಿದೀ ಹೇಳು ನೀನು ಯೆಹೂದ್ಯರ ಅರಸನೋ ಎಂದು ಕೇಳಿದನು ಕ್ರಿಸ್ತನು ಅದಕ್ಕೆ—ನಾನು ಅರಸನು ಸರಿ ಆದರೆ ನನ್ನ ರಾಜ್ಯವು ಈ ಲೋಕದ್ದಲ್ಲ ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ ನಾನು ಯೆಹೂದ್ಯರ ಕೈಗೆ ಸಿಕ್ಕದಂತೆ ನನ್ನ ಪರಿವಾರದವರು ಯುದ್ಧಮಾಡುತ್ತಿದ್ದರು ನನ್ನ ರಾಜ್ಯವು ಇಲ್ಲಿಯದಲ್ಲವೆಂದು ಉತ್ತರಕೊಟ್ಟನು ಅದಕ್ಕೆ ಪಿಲಾತನು—ನೀನು ಅರಸನು ಹೌದೋ? ಎಂದು ಕೇಳಿದನು ಕ್ರಿಸ್ತನು ಅವನಿಗೆ—ನಾನು ಅರಸನೇ ಸರಿ ನಾನು ಸತ್ಯಕ್ಕೆ ಸಾಕ್ಷಿಯಾಗುವದಕ್ಕೋಸ್ಕರ ಹುಟ್ಟಿದ್ದೇನೆ ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ ಸತ್ಯಕ್ಕೆ ಸೇರಿದವರೆಲ್ಲರೂ ನನ್ನ ಮಾತಿಗೆ ಕಿವಿಗೊಡುತ್ತಾರೆ ಅಂದನು ಪಿಲಾತನು ಈ ಮಾತುಗಳ ಅರ್ಥವನ್ನು ತಿಳಿಯದೆ ಉಭಯ ಸಂಕಟದಿಂದ ತಿರಿಗಿ ಯೆಹೂದ್ಯರ ಬಳಿಗೆ ಬಂದು ಈ ಮನುಷ್ಯನನ್ನು ದಂಗೆಕೋರನೆಂತ ಹಿಡಿದು ತಂದಿದ್ದೀರಿ ಆದರೆ ನಿಮ್ಮ ಮುಂದೆ ವಿಚಾರಣೆಮಾಡಿದೆನಲ್ಲಾ " ಇವನಲ್ಲಿ ಏನೂ ಅಪರಾಧ ಕಾಣಲಿಲ್ಲ ಹೆರೋದ ಅರಸನು ಇವನನ್ನು ವಿಚಾರಿಸಿ ನಿರಪರಾಧಿಯೆಂದು ತೀರ್ಮಾನಿಸಿದನು ಮರಣದಂಡನೆಗೆ ಯೋಗ್ಯವಾದದ್ದೇನೂ ಇವನು ಮಾಡಲಿಲ್ಲ ಆ ವನು ಯೆಹೂದ್ಯರು ಅದನ್ನು ಕೇಳದೆ ಗಟ್ಟಿಯಾಗಿ ಇವನನ್ನು ಸಿಲುಬೆಗೆ ಹಾಕು, ಸಿಲುಬೆಗೆ ಹಾಕು ಎಂದು ಕೂಗುತ್ತಿದ್ದರು ಮತ್ತು ಕಟ್ಟಕಡೆಗೆ ಇವನು ತನ್ನನ್ನು ದೇವರ ಮಗನೆಂದು ಹೇಳಿಕೊಂಡಿದ್ದಾನೆ ಈ ದೇವದೂಷಣೆಯ ಅಪರಾಧಕ್ಕಾಗಿ ಅವನು ಸಾಯಬೇಕು ಎಂದು ಹೇಳಿದರು ಪಿಲಾತನು ಇವನು ದೇವರ ಕುಮಾರನೆಂದು ಕೇಳಿ ಮತ್ತೂ ಹೆದರಿದಾಗ್ಯೂ ಹೇಡಿಯಾಗಿ ಯೆಹೂದ್ಯರಿಗೆ ಅಂಜಿ—ಇವನನ್ನು ನೀವೇ ಸಂಹರಿಸಿರಿ ಈ ನಿರಪರಾಧಿಯ ರಕ್ತಕ್ಕೆ ನಾನು ಹೊಣೆಗಾರನಲ್ಲವೆಂದು ಅವರೆಲ್ಲರ ಮುಂದೆ ನೀರನ್ನು ತರಿಸಿ ತನ್ನ ಕೈಗಳನ್ನು ತೊಳೆಕೊಂಡು—ಈ ಸತ್ಪುರುಷನನ್ನು ಕೊಂದ ಅಪರಾಧಕ್ಕೆ ನಾನು ಸೇರಿದವನಲ್ಲವೆಂದು ಕಂಠೋಕ್ತವಾಗಿ ಹೇಳಿದನು

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಸರ್ಕಾರದವರು ಚಿಕ್ಕಬಳ್ಳಾಪುರದ ಮ್ಯುನಿಸಿಪಾಲಿಟಿಗೆ ಅಲ್ಲಿನ ಪ್ಲೀಡರ್ ಮ|| ಸಿ ನಾರಾಯಣಸ್ವಾಮಿ ಶೆಟ್ಟರನ್ನು ವೈಸ್ ಪ್ರೆಸಿಡೆಂಟರಾಗಿ ನೇಮಕಮಾಡಿರುತ್ತಾರೆ

ಮ|| ಸಿ ಶ್ರೀಕಂಠೇಶ್ವರ ಅಯ್ಯನವರಿಗೆ ಚೀಫ್ ಕೋರ್ಟಿನ 3 ನೇ ಜಡ್ಜಿ ಕೆಲಸವೂ, ಮಿ|| ಆರ್ ಬಿ ಸ್ಲಮರವರಿಗೆ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಕೆಲಸವೂ ನೇಮಕವಾಗಬಹುದೆಂದು ವರ್ತಮಾನವಿದೆ

ಸಂಸ್ಥಾನದಲ್ಲಿ ರೈಲ್ವೆಯನ್ನೂ ಟ್ರಾಂವೆಯನ್ನೂ ಹಾಕುವುದಕ್ಕೆ ರೆವಿನ್ಯೂ ಕಂದಾಯದ ಮೇಲೆ ರೂಪಾಯಿಗೆ ಆರು ಕಾಸಿನಂತೆ ಸೆಸ್ಸು ಹಾಕಿ ವಸೂಲ್ಮಾಡಬಹುದೆಂಬ ಕಾನೂನನ್ನು ಶ್ರೀಮನ್ ಮಹಾರಾಜರವರು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ

ನಮ್ಮ ಸಂಸ್ಥಾನದ "ಚೀಫ್ ಜಡ್ಜ"ರಾಗಿದ್ದು ಎರಡು ವರುಷಗಳ ಹಿಂದೆ ಕೆಲಸ ಬಿಟ್ಟು ನೀಲಗಿರಿ ಬೆಟ್ಟದ ಮೇಲೆ ವಾಸಮಾಡಿಕೊಂಡಿದ್ದ ಸರ್ ಸ್ಪಾನ್ಲಿ ಇಸ್ಮೆ, ಕೆ ಸಿ ಎಸ್ ಐ ರವರು ಕಳೆದ ಭಾನುವಾರ ಬೆಳಿಗ್ಗೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

ಬೆಂಗಳೂರು ಪೇಟೆಯಲ್ಲಿ ದಿನಕ್ಕೆ 2 ರೂಪಾಯಿ ಮರಗೆಲಸದಲ್ಲಿ ಸಂಪಾದಿಸುತ್ತಿದ್ದ ದೊರೆಸ್ವಾಮಿ ಎಂಬುವನು ಬಹಳವಾಗಿ ಕುಡಿದು ಹೆಂಡತಿಯ ಕೂಡ ಜಗಳವಾಡಿ, ಆತ್ಮಹತ್ಯಮಾಡಿಕೊಳ್ಳಬೇಕೆಂದು ತನ್ನ ಕತ್ತು ಕೊಯಿದುಕೊಂಡನು ಇವನಿಗೆ 1 ತಿಂಗಳ ಸಜಾ ಆಗಿದೆ

ಒಬ್ಬ ಬಾತ್ಮಿದಾರರಿಂದ —ಕೆಲವು ದಿನಗಳ ಕೆಳಗೆ ಮದ್ದಗಿರಿ ತಾಲ್ಲೂಕು ಕೊಡಗೇನಹಳ್ಳಿ ಹ್ಯಾಂಡಿನಲ್ಲಿ ದುಷ್ಕರ್ಮಿಗಳೋ ಒಬ್ಬನನ್ನು ಖೂನಿಮಾಡಿದಾರೆ ಶವದ ಗುರುತು ಸ್ವಲ್ಪವೂ ತಿಳಿಯದಂತೆ ಬಲಭಾಗದ ತೋಳು, ಮೂಗು, ಕೆನ್ನೆ, ಕಿವಿ ಮುಂತಾದ ಅಂಗಗಳನ್ನು ಕೆತ್ತಿ ಬಿಸಾಟಿರುತ್ತಾರೆಂತಲೂ, ಶವದ ವಾರಸ್ಥರಾಗಲಿ, ಅಪರಾಧಿಗಳಾಗಲಿ ಪತ್ತೆ ಇಲ್ಲವೆಂತಲೂ ತಿಳಿದುಬಂದಿದೆ

ಮಂಡ್ಯದ ಬಾತ್ಮಿದಾರರಿಂದ —ಮಂಡ್ಯದ ತಾ|| ಆತಗೂರು ಹೋಬಳಿ ನೌಲಿದಾಖಲೆ ಗಿರೀಗೌಡನ ದೊಡ್ಡಿಯಲ್ಲಿರುವ ಬೋರೇಗೌಡನ ಅಡಕೆ ತೋಟದೊಳಗೆ ಒಂದು ಅಡಕೇ ಮರದಲ್ಲಿ ಮೂರು ಸುಳಿಗಳು ಹುಟ್ಟಿ ಈ ಪೈಕಿ ಒಂದು ಸುಳಿಯಲ್ಲಿ ಬೇರೆ ಮೂರು ಸುಳಿಗಳಾಗುತ್ತಲಿವೆ ಇದನ್ನು ಶೇಕ್ದಾರರು ನೋಡಿ ಅಮಲ್ದಾರರಿಗೆ ತೋರಿಸಿದರು ಜನರು ಹೋಗಿ ನೋಡಿಬರುತ್ತಿದಾರೆ

ರಾಜಧಾನಿಯ ಕೋಟೆ ಹೊರಪಾರ್ಶ್ವದಲ್ಲಿ ಅರಮನೆಯ ಆಸ್ಪತ್ರೆಯ ಪಕ್ಕದಲ್ಲಿರುವ ಖಾಲಿ ನಿವೇಶನವು ಅರಮನೆಯ ಮೋತೀಖಾನೆಯನ್ನು ಕಟ್ಟುವುದಕ್ಕೂ, ಚಾಮರಾಜಪೇಟೆಯಲ್ಲಿ ಲೇಟ್ ಸರ್ ಕೃಷ್ಣಮೂರ್ತಿಯವರಿಗೆ ಸೇರಿದ ಬಂಗಲೆಯೂ ಅವರದ್ದು ಮಹಾರಾಣಿ ಕಾಲೇಜಿಗೆ ಸ್ಟೂಡೆಂಟ್ಸ್ ಹೋಂ ಕಟ್ಟುವುದಕ್ಕೂ, ನಂಜರಾಜ ಬಹದ್ದರವರ ಧರ್ಮ ಛತ್ರದ ಹಿಂಭಾಗದಲ್ಲಿರುವ ತೋಟದ ನಿವೇಶನವು ಪ್ರಜಾಪ್ರತಿನಿಧಿಗಳ ನಿಲಯವನ್ನು ಕಟ್ಟುವುದಕ್ಕೂ ಮಾಲೀಕರಿಂದ ಸರ್ಕಾರಕ್ಕೆ ಕೊಂಡುಕೊಳ್ಳುವಂತೆ ಸ್ಯಾಂಕ್ಷನ್ ಆಗಿರುತ್ತದೆ ಕೋಟೆಯ ಪಶ್ಚಿಮಪಾರ್ಶ್ವದ ಕೋಟೆಗೋಡೆಯನ್ನು ಒಡೆದುಹಾಕಿ ಅಲ್ಲಿರುವ ದಿಡ್ಡೀ ಬಾಗಿಲಿಗೆ ಬದಲಾಗಿ ದೊಡ್ಡ ರಸ್ತೆಯನ್ನು ಹಾಕುವರೆಂದು ಕೇಳುತ್ತೇವೆ

ಶ್ರೀಮನ್ ಮಹಾರಾಜರವರ ವರ್ಧಂತಿ ಕಟ್ಲೆಯ ದಿನವು ಕಳೆದ ಶನಿವಾರ ರಾತ್ರಿ ದರ್ಬಾರ್ ಪೂರೈಸಿದ ಮೇಲೆ ಅರಮನೆ ಕರಿ ಕಲ್ಲು ತೊಟ್ಟಿಯಲ್ಲಿ ನಡಿಯಿತು ಅ|| ಕಮಿಷನರುಗಳೂ, ಅವರ ದರ್ಜೆಗೆ ಮೇಲ್ಪಟ್ಟ ಇತರ ಸಮಸ್ತ ಅಧಿಕಾರಿಗಳೂ, ನ್ಯಾಯವಿಧಾಯಕ ಸಭೆಯ ಪ್ರಜಾಪಕ್ಷದ ಮೆಂಬರುಗಳೂ ಸೇರಿ ಪ್ರತ್ಯೇಕ ಪ್ರತ್ಯೇಕವಾದ ಕೊಟಡಿಗಳಲ್ಲಿ ಕುಳಿತು ಭೋಜನ ಮಾಡಿದರು ದಿವಾನರವರು ನಡಿಸುವ ಮಹಾರಾಜರವರ ವರ್ಧಂತಿ ಕಟ್ಲೆಯ ದಿನವು ಕಳೆದ ಭಾನುವಾರ ರಾತ್ರಿ ಶೇಷಾದ್ರಿಭವನದಲ್ಲೂ ಮರಿಮಲ್ಲಪ್ಪನವರ ಹೈಸ್ಕೂಲ್ ಕಟ್ಟಡದಲ್ಲೂ ನೆರವೇರಿತು ಅಧಿಕಾರಿಗಳೂ ಪ್ರಜೆಗಳಲ್ಲಿ ಗಣ್ಯರಾದವರೂ ಕರೆಸಲ್ಪಟ್ಟಿದ್ದರು ಈ ದಿನಗಳು ಸಂತೋಷಕರವಾಗಿಯೂ, ಏಕರಸೆಯಿಂದಲೂ ಬೆಳೆದವು

ರಾಜಧಾನಿಯ ಒಬ್ಬ ಬಾತ್ಮಿದಾರರು ಬರೆಯುವುದು —ಮೂಗುಜೀವಿಗಳಿಗೆ ಹಿಂಸೆಪಡಿಸುವುದನ್ನೂ ಸಣ್ಣ ಹುಡುಗರಿಗೆ ಬೀಡಿ, ಚುಟ್ಟಾ, ಅಫೀಮು ಮುಂತಾದ ಮಾದಕ ವಸ್ತುಗಳನ್ನು ಮಾರುವುದನ್ನೂ ನಿಲ್ಲಿಸಿದಾಗ್ಯೂ ಅನೇಕರು ಈ ದುಷ್ಟ ಕಾರ್ಯಗಳನ್ನು ನಡಿಸುತ್ತಲೇ ಇರುವರು ಈಚೆಗೆ ಪುಟ್ಟನ ಮಗ ಚನ್ನ, ತಿಮ್ಮಯ್ಯ ಉರುಫ್ ಖಜಾನಿ, ಸಿದ್ಧಯ್ಯನ ಮಗ ಸಿದ್ಧಯ್ಯ ಮೊದಲಾದವರು ಕಾಯಿಲೆಯಾಗಿದ್ದ ಜಾನುವಾರುಗಳನ್ನು ಕೊಲ್ಲಲು ಪ್ರಯತ್ನಿಸಿದ್ದಕ್ಕಾಗಿ ಅವರಿಗೆ ಶಿಕ್ಷೆಯಾಗಿದೆ ಗಫರ್ ಸಾಹೇಬರ ಮಗ ಗೌಸ್ ಪೀರ್ ಸಾಹೇಬರು ಚಲುವನೆಂಬ ಸಣ್ಣ ಹುಡುಗನಿಗೆ ಬೀಡಿ ಮಾರಿದ್ದಕ್ಕಾಗಿ 6 ಆಣೆ ಜುಲ್ಮಾನೆ ತೆತ್ತರು ಶಿಕ್ಷೆಹೊಂದುತ್ತಿರುವವರನ್ನು ನೋಡಿ ಇತರರು ಬುದ್ಧಿ ಕಲಿತುಕೊಳ್ಳುವುದು ಕ್ಷೇಮ

ಒಬ್ಬ ಬಾತ್ಮಿದಾರರಿಂದ —ಕಳೆದ 2 ನೇ ತಾ ಮಂಗಳವಾರ ದೊಡ್ಡಬಳ್ಳಾಪುರಕ್ಕೆ 9 ಮೈಲಿ ದೂರದಲ್ಲಿರುವ ಮಹದೇಶ್ವರ ಬೆಟ್ಟಕ್ಕೆ ಹತ್ತಾರು ಮಂದಿ ಹೋಗಿರಲಾಗಿ ಅಲ್ಲಿ ಬೆಟ್ಟದ ಮೇಲೆ ಕಟ್ಟಿರುವ ಹೆಜ್ಜೇನು ಅವರನ್ನು ಮುತ್ತಿ ಮುಖ ಕಣ್ಣು ಮುಂತಾದವುಗಳನ್ನು ಚುಚ್ಚಿದ್ದರಿಂದ ಅವರು ಕಂಡಾಬಟ್ಟೆ ಓಡಿ ನಾನಾ ವಿಧವಾದ ಗಾಯಗಳನ್ನು ಹೊಂದಿ ಕಡೆಯಲ್ಲಿ ಸತ್ತನರ ಹಾಗಾಗಲು ಸಮೀಪದ ಗ್ರಾಮದ ಕೆಲವರು ಅವರ ದೇಹಗಳಲ್ಲಿ ತುಂಬಿದ್ದ ನೊಣಗಳ ಮುಳ್ಳುಗಳನ್ನೆಲ್ಲಾ ಚಿಮುಟದಿಂದ ಕಿತ್ತು ಉಪಚರಿಸಿದ ಮೇಲೆ ಅವರು ಗಾಡಿಗಳ ಮೇಲೆ ದೊಡ್ಡಬಳ್ಳಾಪುರಕ್ಕೆ ರಾತ್ರಿ 9 ಗಂಟೆಗೆ ಬಂದರು ಇವರು ಕಣ್ಣು ಬಿಡಲಾರರು, ಮಾತಾಡಲಾರರು, ಮುಖವೆಲ್ಲಾ ಬಾತಿದೆ, ಆದರೂ ಪ್ರಾಣಾಪಾಯವೇನೂ ಇಲ್ಲ ಇವರಿಗೆ ಒಂದೆರಡು ವಾರಗಳಲ್ಲಿ ಕ್ಷೇಮವಾಗಬಹುದು

ಧಾರವಾಡದ ಒಂದು ಪತ್ರಿಕೆಯು ಬರೆಯುವುದು —ಈ ಊರಲ್ಲಿ ಎಷ್ಟೋ ದಿವಸ ರೈಲ್ವೆಯ ನೌಕರಿಯಲ್ಲಿದ್ದ ಮ|| ಬೀಲಿ ವೆಂಕೋಬರಾಯರು ಸದ್ಯಕ್ಕೆ ಮದ್ರಾಸ್ ಮತ್ತು ಸದರನ್ ಮರಾಠಾ ರೈಲ್ವೆಯ ಅ|| ಟ್ರಾಫಿಕ್ ಸೂಪರಿಂಟೆಂಡೆಂಟರಾಗಿರುವರು ಇವರನ್ನು ಮೈಸೂರು ಸರ್ಕಾರದವರು ತಮ್ಮ ಸಂಸ್ಥಾನದ ರೈಲ್ವೆಯ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿ ಮಾಡಿಕೊಳ್ಳಬೇಕೆಂದು ಆಲೋಚಿಸಿ ಅವರನ್ನು ಕೇಳಿರುವಂತೆ ತಿಳಿಯುವುದು ಮೈಸೂರು ಸಂಸ್ಥಾನದಲ್ಲಿ ದೇಶೀಯ ಜನರಿಗೆ ಹೆಚ್ಚಿನ ಅಧಿಕಾರಗಳು ದೊರೆಯುವದು ಸ್ವಾಭಾವಿಕವಾಗಿದೆ ಆದರೂ ಮ|| ವೆಂಕೋಬರಾಯರಿಗೆ ಈ ಪದವಿ ದೊರೆಯುವದರಿಂದ ನಾವು ಅವರ ಅಭಿನಂದನ ಮಾಡುತ್ತೇವೆ ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಯಲ್ಲಿ ದೇಶೀಯ ಪ್ರಯಾಣೀಕರ ಅನುಕೂಲತೆಗಾಗಿ ಇವರು ಬಹಳ ಪರಿಶ್ರಮಪಟ್ಟು ಸಾಧ್ಯವಾದಷ್ಟು ಸುಧಾರಣೆಗಳನ್ನು ಮಾಡಿರುತ್ತಾರೆ ಮೈಸೂರು ಸಂಸ್ಥಾನದ ರೈಲ್ವೆಗಳು ಪ್ರತ್ಯಕ್ಷವಾಗಿ ಇವರ ಸ್ವಾಧೀನಕ್ಕೆ ಬಂದ ಬಳಿಕಲಾದರೂ ಪ್ರಯಾಣಿಕರ ಅನೇಕ ತಾಪತ್ರಯಗಳು ದೂರವಾಗಿ ರೈಲ್ವೆ ಪ್ರಯಾಣವು ಸುಖಕರವಾಗುವಂತೆ ವ್ಯವಸ್ಥೆಯಾಗುವದೆಂದು ದೃಢವಾಗಿ ನಂಬುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ.

ಕಾನ್ ಕಾನಹಳ್ಳಿ ತಾಲ್ಲೂಕು ಅಮಲ್ದಾರ್ ಮ|| ಎಸ್ ಚಕ್ರಪಾಣಿ ಅಯ್ಯಂಗಾರ್ರಿಗೆ ಜೂನ್ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಬೌರಿಂಗ್ ಪೇಟೆ ರೇಂಜ್ ಎಕ್ಸೈಸ್ ಇನ್‌ಸ್ಪೆಕ್ಟರ್ ಮಿ|| ಎ ಜಿ ಪಾರ್ಕರವರು ಕಾನ್ ಕಾನಹಳ್ಳಿ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಎಕ್ಸೈಸ್ ಕಮಿಷನರವರ ಅಸಿಸ್ಟೆಂಟ್ ಮ|| ಎಸ್ ರಾಮಣ್ಣನವರಿಗೆ ಮೇ ತಾ 25 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಬೆಂಗಳೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫಿಸರ್ ಮಿ|| ಟಿ ರಾಮಲುಚೆಟ್ಟಿಯವರು ಅಸಿಸ್ಟೆಂಟ್ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು

ಅ|| ಕಂಟ್ರೋಲರ್ ಮ|| ಎಲ್ ಭೀಮ್ಮಪಂತ್ ಬಾದಾಮಿಯವರಿಗೆ ಅವರು ಉಪಯೋಗಿಸಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅ|| ಎಗ್ಸಾಮಿನರ್ ಮ|| ಎಂ ಎ ರಂಗಾಚಾರ್ಯರು ಅ|| ಕಂಟ್ರೋಲರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಅ|| ಸರ್ಜನ್ ಮ|| ಬಿ ಜಿ ಶ್ರೀನಿವಾಸಾಚಾರ್ಯರಿಗೆ ಜೂನ್ ತಾ 7 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸರ್ಜನ್ ಮ|| ಟಿ ಎಸ್ ನಂಜಪ್ಪನವರು ಮಿಂಟೋ ಆಸ್ಪತ್ರೆಯಲ್ಲಿ ಕೆಲಸಮಾಡತಕ್ಕದ್ದು

ಸಿರಾರಿಪುರದ ತಾಲ್ಲೂಕ್ ಅಮಲ್ದಾರ್ ಮ|| ಜಿ ರಾಮಸ್ವಾಮಿಯಪ್ಪನವರಿಗೂ, ಸಾಗರದ ಮುನ್‌ಸಿಫ್ ಮ|| ಬಿ ಗೋಪಾಲಾಚಾರ್ಯರಿಗೂ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಅ|| ಸರ್ಜನ್ ಮ|| ಸಿ ರಾಜಗೋಪಾಲ ಮುದಲಿಯಾರ್ರನ್ನು 1913 ನೇ ಜೂಲೈ ತಾ 6 ರಿಂದ 1 ನೇ ಕ್ಲಾಸಿಗೆ ಬಡ್ತಿಮಾಡಿದೆ ಮ|| ಎಸ್ ಸುಬ್ಬರಾಯರನ್ನು ಫೆಬ್ರವರಿ ತಾ 11 ರಿಂದ 2 ನೇ ಕ್ಲಾಸ್ ಅ|| ಸರ್ಜನ್‌ರಾಗಿ ಖಾಯಂ ಮಾಡಿದೆ ಮ|| ಜಿ ಶ್ರೀನಿವಾಸ ಪಿಂಡಪೆಟ್ ಯವರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಿಸಿದೆ

ನಂಜನಗೂಡು ತಾಲ್ಲೂಕ್ ಅಮಲ್ದಾರ್ ಮ|| ಬಿ ಭೀಮರಾಯರು ರಜದ ಮೇಲಿರುವಾಗ ಶಿರಸ್ತೇದಾರ್ರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು ಅವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ತಾಲ್ಲೂಕು ವರ್ತಮಾನಗಳು.

ಹಂಗೇರಿ —ಮಳೆಯನ್ನೆದುರುನೋಡುತ್ತಿದ್ದ ಈ ಪ್ರಾಂತ್ಯದ ಜನರ ಆಶೆ ಈಡೇರಲು ಪ್ರಾರಂಭಿಸಿದೆ ಕಳೆದ ತಾ 5-6 ರಲ್ಲಿ ಸ್ವಲ್ಪ ಮಳೆ ಬಂತು ಸದ್ಯಕ್ಕೆ ಎಲ್ಲಾ ಕಡೆಯೂ ಬೇಸಾಯಮಾಡುವದಕ್ಕೆ ಆಗದಿದ್ದರೂ ಮಳೆ ಬರುವ ಸೂಚನೆಯಿಂದ ಜನರಲ್ಲಿ ಹರುಷವು ತೋರುತ್ತೆ ನಮ್ಮ ಅಮಲ್ದಾರ್ರು ಪ್ರಜಾಪ್ರೀತಿಯಿಂದ ಭಾವಿಗಳನ್ನು ಶಕ್ತ್ಯಂತೆ ಅನುಕೂಲಪಡಿಸಿದ್ದಲ್ಲದೆ ಕುಡಿಯುವ ನೀರಿನ ಕೆರೆಯಲ್ಲಿದ್ದ ಸ್ವಲ್ಪ ನೀರು ತೆಗೆಯಿಸಿ, ಕೆಸರನ್ನು ಎತ್ತಿಹಾಕಿಸುತ್ತಾರೆ ಇದಕ್ಕೆ ಪ್ರಜೆಗಳು ಅವರನ್ನು ಕೊಂಡಾಡುತ್ತಾರೆ ಮಳೆ ಬರಲು ಮುಂಚಿತವಾಗಿ ಈ ಕೆಲಸ ತೀರಿದರೆ ಇವರ ಮತ್ತು ಸ್ಯಾನಿಟರಿ ಇನ್‌ಸ್ಪೆಕ್ಟರ ಸಾಹಸ ಸಾರ್ಥಕವಾದೀತು —ಈ ಊರಲ್ಲಿ ಪ್ಲೇಗ್ ಪ್ರಾರಂಭಿಸಿ 3-4 ಮರಣಗಳಾದವು ಇಬ್ಬರಿಗೆ ಆಗಿದೆ ಬೇಗನೆ ಶಮನವಾಗದಿದ್ದರೆ ನಿಂತಿರುವ ಮಳೆ ಪ್ರಾರಂಭಿಸಿದಾಗ ಜನರ ಕಷ್ಟ ಅಷ್ಟಿಷ್ಟೆಂದು ಹೇಳಲಾಗದು —ಈ ಊರಲ್ಲಿ ಜನರು ಬಚ್ಚಲು ನೀರನ್ನು ಹಿತ್ತಲ ಕಡೆಗೆ ಬಿಟ್ಟುಕೊಳ್ಳುವದು ಹೆಚ್ಚು. ಇದನ್ನು ತಪ್ಪಿಸಿ ಚರಂಡಿಗಳಿಗೆ ಬರುವಂತೆಯೂ, ಪ್ರತಿ ಮನೆಗಳಲ್ಲಿರುವ ಕಕ್ಕಸುಗಳು ಗುಂಡಿಗಳಾಗಿದ್ದು ತುಂಬುವದಕ್ಕಿಂತ ದಿನವೂ ಝಾಡಮಾಲಿಗಳಿಂದ ಶುದ್ಧವಾಗುವಂತೆಯೂ ನಮ್ಮ ವೈಸ್ ಪ್ರೆಸಿಡೆಂಟರು ಮಾಡಿಸಿದರೆ ಅವರ ಕೀರ್ತಿ ಇನ್ನೂ ಹೆಚ್ಚುತ್ತೆ

ಮಂಡ್ಯ —ಈ ವರೆಗೂ 2-3 ಹದ ಮಳೆಯಾದ್ದರಿಂದ ಕೆರೆ, ಕೊಳ, ಕಟ್ಟೆಗಳಿಗೆ ಮುಕ್ಕಾಲು ಭಾಗ ನೀರು ಬಂದಿದೆ ರೈತರು ಸಂತೋಷದಿಂದ ಬೀಜವನ್ನು ಚೆಲ್ಲಿದಾರೆ —ಅಳತೆ ಸೇರು, ತೂಕದ ಬಟ್ಟುಗಳ ಸಗಟು ವಿಚಾರದಲ್ಲಿ ಊರೊಳಗೆಲ್ಲಾ ಅಲ್ಲಲ್ಲಿ ದೊಡ್ಡ ಅಧಿಕಾರಿಗಳ ರುಜು ಸಹಿತವಾದ ನೋಟೀಸುಗಳು ಅಂಟಿಸಿವೆಯೇ ಹೊರತು ಬಲಾತ್ಕಾರವಾಗಿ ಅವು ಜಾರಿಯಲ್ಲಿ ಬರಲಿಲ್ಲ —ಕಳೆದ ತಿಂಗಳ ಕಡೇ ವಾರದಲ್ಲಿ 3-4 ಮನೆಗಳಲ್ಲಿ ಕಳವುಗಳು ನಡೆದವು ಕಳ್ಳರು ಮ್ಯುನಿಸಿಪಲ್ ಲಾಂದ್ರವನ್ನು ತಂದು ಆ ಬೆಳಕಿನಲ್ಲಿ ತಮ್ಮ ಕಾರ್ಯವನ್ನು ತೀರಿಸಿಕೊಂಡು ಆ ಲಾಂದ್ರವನ್ನು ಚರಂಡಿಗೆ ಬಿಸಾಡಿದ್ದರು ಹೊಸದಾಗಿ ಬಂದಿರತಕ್ಕ ಪೋಲೀಸ್ ಇನ್‌ಸ್ಪೆಕ್ಟರು ಮತ್ತು ಜಮಾದಾರರು ಈ ವಿಷಯಕ್ಕೆ ಇನ್ನು ಮುಂದೆ ಹೆಚ್ಚು ಮುತುವರ್ಜಿ ವಹಿಸುತ್ತಾರೆಂದು ನಂಬಲಾಗಿದೆ —ಈ ವರ್ಷ ಇಲ್ಲಿನ ಎ ವಿ. ಸ್ಕೂಲಿನಲ್ಲಿ ಇಂಗ್ಲಿಷಿನಲ್ಲಿ 12 ಕ್ಕೆ ಮೂವರೂ, ಕನ್ನಡದಲ್ಲಿ 5 ಕ್ಕೆ ಒಬ್ಬನೂ ಕನ್ನಡ ಗರ್ಲ್ಸ್ ಬಾಯ್ಸ್ ಸ್ಕೂಲಿನಲ್ಲಿ 7 ಕ್ಕೆ 5 ಮಂದಿಯೂ ಪ್ಯಾಸಾದರು —ಮಂಡ್ಯದ ಸಾಹುಕಾರ್ ನಾಗೇಂದ್ರಯ್ಯನವರ ಲಗ್ನ ಕಾರ್ಯವು ಬಹು ವಿಜೃಂಭಣೆಯಿಂದ ನಡೆಯಿತು ಸಂಗೀತ ಕಛೇರಿಯೂ ಪ್ರಸಿದ್ಧ ಸುಬ್ರಹ್ಮಣ್ಯಂ ಮೊದಲಿಯಾರ್ರ ತಂಜಾವೂರು ಓಲಗವೂ, ವಿಶೇಷವಾದ ಮೆರವಣಿಗೆಯೂ ನಡೆಯಿತು ಮತ್ತು ಅನೇಕ ಬಡಬಗ್ಗರಿಗೆ ದಾನಗಳೂ ನಡೆದವು

ಚನ್ನರಾಯಪಟ್ಟಣ —ಈ ಊರಿನಲ್ಲಿ ಮಳೆ ಸುತರಾಂ ಆಗಿಲ್ಲ ಈಗ್ಗೆ 15 ದಿವಸಗಳ ಕೆಳಗೆ ಭರಣಿ ಮಳೆ ಕೊಂಚ ಆದ್ದರಿಂದ ರೈತರು ಧಾನ್ಯಗಳನ್ನು ಹೊಲ ಗದ್ದೆಗಳಿಗೆ ಬಿತ್ತಿಬಿಟ್ಟರು, ಆ ಲಾಗಾಯ್ತು ಪ್ರತಿ ದಿನವೂ ಆಕಾಶವನ್ನೇ ಎದುರುನೋಡುತ್ತಿರುವುದೇ ಆಗಿದೆ ಮಳೆ ಆಗದೆ ಬಿತ್ತಿದ ಬೀಜವೆಲ್ಲಾ ಕೆಟ್ಟುಹೋಗುವುದಕ್ಕೆ ಕಾರಣವಾಗಿರುತ್ತೆ ಕೆರೆಯಲ್ಲಿ ಕೊಂಚವೇ ನೀರು ಇರುತ್ತೆ ಜನರಿಗೂ ಜಾನುವಾರುಗಳಿಗೂ ಬಹಳ ತೊಂದರೆಯಾಗುವುದರಲ್ಲಿ ಏನೂ ಸಂದೇಹವಿಲ್ಲ ಈ ಊರಿನಲ್ಲಿ ಒಂದು ಕಾರೋನೇಷನ್ ಹಾಲ್ ಕಟ್ಟಬೇಕೆಂದು ಕೆಲವು ಜನ ದೊಡ್ಡ ಮನುಷ್ಯರು ದ್ರವ್ಯಸಹಾಯಮಾಡುತ್ತೇವೆಂದು ವಾಗ್ದಾನಮಾಡಿರುತ್ತಾರೆಂತಲೂ, ಕೆಲವು ಮೊಬಲಗು ವಸೂಲಾಗಿದೆ ಎಂತಲೂ ತಿಳಿದಿದೆ ಈ ಕೆಲಸಕ್ಕಾಗಿ ನಮ್ಮ ಅಮಲ್ದಾರ್ರವರು ಗಮನಕೊಟ್ಟು ಈ ಶಾಶ್ವತವಾದ ಕೆಲಸವನ್ನು ಮಾಡಿಸಿ ಕೀರ್ತಿ ಪಡೆಯುತ್ತಾರೆಂದು ನಂಬಿದೇವೆ —ಕೋಟೆಯಲ್ಲಿರುವ ಚಿಕ್ಕಬೀದಿಯ ಮಧ್ಯಭಾಗದಲ್ಲಿ ಒಂದು ಪುರಾತನವಾದ ಭಾವಿ ಇರುತ್ತೆ ಅದರ ಮೇಲೆ ಚಪ್ಪಡಿಕಲ್ಲು ಹಾಸಿ, ಘರ್ಗಾಡಿ ವಗೈರೆ ತಿರುಗಾಡುತ್ತಲೇ ಇರುತ್ತವೆ ಈ ಬೀದಿಗೆ ಗ್ರಾವಲ್ ಬಿಚಾವ್ ಮಾಡಿ ಸರಿಯಾಗಿ ರೋಲರ್ ಹೊಡೆದು ದುರುಸ್ ಮಾಡಲು ಭಾವಿ ದೆಸೆಯಿಂದ ಅನಾನುಕೂಲವಾಗಿರುತ್ತೆ ನಮ್ಮ ಅಮಲ್ದಾರ್ರು ಈ ಭಾವಿಯನ್ನು ಮುಚ್ಚಿಸಿ ರಸ್ತೆಯನ್ನು ಸರಿಪಡಿಸಿ ಕೀರ್ತಿ ಪಡೆಯುವರೆಂದು ನಂಬಿರುತ್ತೇವೆ —6 ಜನಗಳು ಈ ಊರಿನ ಎ ವಿ ಸ್ಕೂಲಿನಲ್ಲಿ ಪರೀಕ್ಷೆಗೆ ಹೋಗಿದ್ದ ಬಾಲಕರ ಪೈಕಿ ಕನ್ನಡದಲ್ಲಿ ಮೂವರೂ, ಇಂಗ್ಲಿಷಿನಲ್ಲಿ ಇಬ್ಬರೂ ತೇರ್ಗಡೆ ಹೊಂದಿರುತ್ತಾರೆ ಈ ಸ್ಕೂಲಿಗೆ ಸರಿಯಾದ ಇಂಗ್ಲಿಷ್ ಅ|| ಮಾಸ್ಟರು ಬಂದಲ್ಲಿ ಇನ್ನೂ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ

ಮಂಡ್ಯದ ತಾ|| ಬಸರಾಳು —ಈ ಗ್ರಾಮದಲ್ಲಿ ತಕ್ಕಮಟ್ಟಿಗೆ ಮಳೆ ಆದರೂ ಕೆರೆಗೆ ಮಾತ್ರ ನೀರೂ ಬರಲಿಲ್ಲ ರೈತರು ತಮ್ಮ ಭೂಮಿಯನ್ನು ಹಸನ್ ಮಾಡಿ ಜೋಳವನ್ನು ಬಿತ್ತಿರುತ್ತಾರೆ ಈ ಮಧ್ಯೆ ಮಳೆಯಿಲ್ಲದೆ ಬಿತ್ತನೆಯೆಲ್ಲಾ ಹಾಳಾಗುತ್ತಾ ಇದೆ ಮುಂದೆ ರಾಗಿ ಬಿತ್ತಲು ಭೂಮಿಯನ್ನು ಉಳುವುದಕ್ಕೆ ಮಳೆ ಸಾಲದೆ ಜನಗಳು ಆಕಾಶವನ್ನೇ ನೋಡುತ್ತಾ ಇದಾರೆ, ಬಿಸಲಿನ ತಾಪ ಕೊಂಚ ಕಡಮೆ 2-3 ದಿನಗಳಿಂದ ಮೋಡವಾದುತ್ತಾ ಇದೆ ಗಾಳಿ ಮಾತ್ರ ಜೋರಾಗಿದೆ ಜನಗಳಿಗೂ, ದನಕರುಗಳಿಗೂ ಕುಡಿಯುವ ನೀರಿಗೆ ಅನುಕೂಲವಾಯಿತು ಜಾನುವಾರುಗಳಿಗೆ ಪ್ರಾಪ್ತವಾಗಿದ್ದ ಛಳಿ ಜ್ವರ ಇನ್ನೂ ತಪ್ಪಲಿಲ್ಲ —ಈ ಗ್ರಾಮದಲ್ಲಿ ವಾರಕ್ಕೆ ಒಂದು ಸಾರಿ ಶನಿವಾರ ಸಂತೆ ಕೂಡುತ್ತದೆ ಈ ಸಂತೆಯಲ್ಲಿ ಎಲ್ಲಾ ಸಾಮಾನುಗಳೂ ದೊರೆಯುವುದಿಲ್ಲ ಈ ಊರಿನ ಅಂಗಡಿಗಳಲ್ಲಿ ಸಿಕ್ಕುವ ಪದಾರ್ಥಗಳ ಧಾರಣೆಗಿಂತಲೂ ಕಮ್ಮಿಯಾಗಿ ಸಂತೆಯಲ್ಲಿ ಸಿಕ್ಕುತ್ತದೆ ಸರ್ಕಾರದ ಹೊಸ ಸೇರು, ಪಾವು, ಬಟ್ಟುಗಳನ್ನು ಯಾವ ವರ್ತಕರೂ ಉಪಯೋಗಿಸಿರುವಂತೆ ತೋರುವುದಿಲ್ಲ ಪಿಟ್ಟೆ ಸೇರು ಪಾವುಗಳ ಓಡಾಟವೇ ಜಾಸ್ತಿಯಾಗಿದೆ ಕೂಳವಂತೂ ಹೇಳತೀರದು ಇದು ಇಲ್ಲಿನ ಪೋಲೀಸ್ ಸ್ಟೇಷನ್ ಆಫೀಸರ ನಿಗಾಕ್ಕೆ ಬಿದ್ದರೆ ಬಡರೈತರಿಗೆಲ್ಲಾ ಕ್ಷೇಮವಾದೀತು —ಈ ಗ್ರಾಮದಲ್ಲಿ ಒಂದು ಸೇಂದಿ ದುಕಾನವೂ, ಒಂದು ಶರಾಬ್ ದುಕಾನೂ ಇರುತ್ತೆ ಸೇಂದಿ ದುಕಾನ್ ತಿರುಗಾಡುವ ರಸ್ತೆ ಪಕ್ಕದಲ್ಲಿರುವುದಲ್ಲದೆ ಸ್ಕೂಲ್ ಕಟ್ಟಡಕ್ಕೆ ಸಮೀಪದಲ್ಲಿ ಎದುರಾಗಿರುತ್ತೆ ಮಧ್ಯಾಹ್ನ 2 ಗಂಟೆ ಲಾಗಾಯ್ತು ಸಾಯಂಕಾಲ 6 7 ಗಂಟೆ ವರಿಗೂ ಮದ್ಯಪಾನಕ್ಕೆ ಬರುವ ಜನಗಳ ಗಲಾಟೆಯೂ, ಕೂಗಾಟವೂ ವಿಪರೀತವಾಗಿರುತ್ತೆ ಈ ಗಲಾಟೆಯ ದೆಸೆಯಿಂದ ಸ್ಕೂಲ್ ಕೆಲಸ ನಡೆಯಲು ತುಂಬಾ ಅಡಚಣೆಯಾಗಿರುವುದಲ್ಲದೆ ಇದರ ವಾಸನೆಯು ತಡೆಯಲಾಗದು ಇದು ವಿದ್ಯಾರ್ಥಿಗಳಿಗೂ, ಮಾಸ್ಟರುಗಳಿಗೂ ತುಂಬಾ ಅಸಹ್ಯವಾಗಿದೆ ಇನ್ನೊಂದು ದಿಕ್ಕಿನಲ್ಲಿ ಗುಡುಗೇನಹಳ್ಳಿಗೆ ಹೋಗುವ ಓಣಿ ಮಲಮೂತ್ರಗಳಿಂದಲೂ ದನಗಳ ಮೂಳೆಗಳಿಂದಲೂ ತುಂಬಿ ಸಂಚಾರ ನಿಂತುಹೋಗಿದೆ ಸರ್ಕಾರದವರು ಈ ಎರಡನ್ನೂ ತಪ್ಪಿಸಿಕೊಟ್ಟರೆ ಸ್ಕೂಲಿಗೂ, ಜನಗಳಿಗೂ ತುಂಬಾ ಅನುಕೂಲವಾಗುತ್ತದೆ ಶರಾಬ್ ದುಕಾನಿನಲ್ಲಿ ಶರಾಬ್ ಬಿಕರಿಗೆ ಒಬ್ಬ ಮುದುಕಿ ಇರುವುದಾಗಿಯೂ, ಈಕೆ ಶರಾಬಿಗೆ ನೀರು ಬೆರಸಿ ಮಾರುವಳೆಂತಲೂ, ಧಾರಣೆಯು ಹೆಚ್ಚು ದರ ತೆಗೆದುಕೊಳ್ಳುವಳೆಂತಲೂ ವರ್ತಮಾನವಿದೆ ಲೈಸೆನ್ಸುದಾರರು ಯಾರೋ ಗೊತ್ತಿಲ್ಲ ಎಕ್ಸೈಜ್ ಇಲಾಖೆಯವರು ಈ ವಿಷಯದಲ್ಲಿ ಸಂಪೂರ್ಣ ನಿಗಾ ಇರುವರೆಂದು ನಂಬಿದೇನೆ —ಈ ಗ್ರಾಮಕ್ಕೆ ಸೇರಿದ ಗುಂಡಾಪುರದಲ್ಲಿ ಅಣ್ಣತಮ್ಮಂದಿರಾದ ದಾಯಾದಿಗಳು ಹೊಡೆದಾಡಿ ಇಬ್ಬರೂ ಗಾಯಪಟ್ಟು ಮೊನ್ನೆ ಇಲ್ಲಿನ ಪೋಲೀಸ್ ಸ್ಟೇಷನ್‌ಗೆ ಬಂದಿದ್ದರು —ದೊಡ್ಡ ಹಸಗಾರ ಗ್ರಾಮದಲ್ಲಿ ಹೇಮಗಿರಿ ಗೌಡನೆಂಬಾತನು 7 ವರುಷದ ತನ್ನ ಮಗಳನ್ನು ಹೊಂಬ ಎಂಬ 16 ವರುಷದವನಿಗೆ ಕೊಟ್ಟು ಮದುವೆಮಾಡಿ ಒಂದು ವರುಷವಾಯ್ತೆಂದೂ, ಈಚೆಗೆ ಹೇಗೋ ಸರ್ಕಾರದವರಿಗೆ ತಿಳಿದು ಲಗ್ನವಾದ ಹುಡುಗಿಯನ್ನೂ, ಗಂಡನನ್ನೂ, ಇವರುಗಳ ಪೋಷಕರನ್ನೂ, ಲಗ್ನಕ್ಕೆ ಬಂದಿದ್ದ ಪುರೋಹಿತರನ್ನೂ ಕರೆದುಕೊಂಡುಹೋಗಿ ಮೈಸೂರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಮಾಡುತ್ತಿರುವುದಾಗಿಯೂ ವರ್ತಮಾನವಿದೆ

ಪ್ರಜೆಗಳ ಏಕಮತ್ಯದ ಕೂಟಗಳು

ಅರಸೀಕೆರೆ ತಾಲ್ಲೂಕು ಕಬ್ಬಲರಹಳ್ಳಿ

ಇಲ್ಲಿನ ಕೋಆಪರೇಟಿವ್ ಸೊಸೈಟಿ ಜನರಲ್ ಮೀಟಿಂಗು ತಾ 1 ನೇ ಸೋಮವಾರ ಈ ಸಂಘದ ಆಡಳಿತಕ್ಕೆ ಸೇರಿದ ಕಲ್ಲುಗುಂಡಿಗ್ರಾಮದ ಸ್ಕೂಲ್ ಕಟ್ಟಡದಲ್ಲಿ ನಡಿಸಲ್ಪಟ್ಟಿತು ಸಂಘದ ಮೆಂಬರುಗಳ ಪೈಕಿ ಅನೇಕರು ಹಾಜರಿದ್ದರು ನಮ್ಮ ತಾಲ್ಲೂಕು ಅಮಲ್ದಾರ್ ಮ॥ ಗುಲಾಂ ಮಹಮ್ಮದ್ ಮೆಕ್ಕೆ ಸಾಹೇಬರವರು ದಯಮಾಡಿ ನಮ್ಮಗಳ ಪ್ರಾರ್ಥನೆಯ ಮೇರೆ ಅಗ್ರಾಸನವನ್ನು ವಹಿಸಿದ್ದರು ಸೆಕ್ರಟರಿ ಮ॥ ಲಕ್ಷ್ಮಣರಾಯರು ಸಂಘದ ಆಡಳಿತದ ವಿಷಯದಲ್ಲಿ ಸಂಕ್ಷೇಪವಾದ ರಿಪೋರ್ಟನ್ನು ಓದಿ ಸಂಘದ ಸ್ಥಿತಿಯನ್ನು ಮೆಂಬರುಗಳಿಗೆ ತಿಳಿಸಿದರು ನಂತರ ಅಗ್ರಾಸನಾಧಿಪತಿಗಳು ಬಹಳ ಸ್ವಾರಸ್ಯವಾದ ಉಪನ್ಯಾಸ ಮಾಡಿ ಸಂಘಕ್ಕೆ ಸೇರುವುದರಿಂದ ಆಗತಕ್ಕ ಪ್ರಯೋಜನ ಮತ್ತು ಆವಶ್ಯಕತೆಗಳನ್ನು ಜನಗಳ ಮನಸ್ಸಿಗೆ ನಾಟುವಂತೆ ತಿಳಿಸಿದರು ಹಿಂದೆ ಇದ್ದ ೬೨ ಜನ ಮೆಂಬರುಗಳ ಜೊತೆಗೆ 30 ಜನ ಹೊಸದಾಗಿ ಸೇರಿದರು ಇದಕ್ಕೆ ಅಗ್ರಾಸನಾಧಿಪತಿಗಳ ಉದಾರವಾದ ಪ್ರೋತ್ಸಾಹವೇ ಕಾರಣವಾಗಿರುತ್ತೆ

ನಂತರ ಸೊಸೈಟಿ ಸೆಕ್ರಟರಿ ಮ॥ ಲಕ್ಷ್ಮಣರಾಯರು ಗ್ರಾಮಾಭಿವೃದ್ಧಿ ವಿಷಯದಲ್ಲಿ ಕೇವಲ ಮುತುವರ್ಜಿ ವಹಿಸಿ ಜನಗಳಿಗೆ ಉಪಕಾರವಾಗಬೇಕೆಂಬ ಅಭಿಲಾಷೆಯಿಂದ ಒಂದು ವಾಚನಾಲಯವನ್ನು ಏರ್ಪಡಿಸಬೇಕೆಂದು ಮತ್ತು ಇದಕ್ಕಾಗಿ ಅಮಲ್ದಾರ್ರವರು ಪ್ರೋತ್ಸಾಹಕೊಟ್ಟು ಪೋಷಕರಾಗಿರಬೇಕೆಂದೂ ಕೇಳಿಕೊಂಡದ್ದರಮೇಲೆ ಅಗ್ರಾಸನಾಧಿಪತಿಗಳು ತುಂಬಾ ಸಂತೋಷಪಟ್ಟು ಗ್ರಾಮಾಭಿವೃದ್ಧಿ ವಿಷಯದಲ್ಲಿ ದೀರ್ಘಕಾಲ ಉಪನ್ಯಾಸಮಾಡಿ, ಗ್ರಾಮಸ್ಥರು ಅವಶ್ಯಕವಾಗಿ ಮಾಡಬೇಕಾದ ಕೆಲಸಗಳನ್ನು ಸೂಚಿಸಿದರು ಇದಕ್ಕೆ ಗ್ರಾಮಸ್ಥರು ಸದರಿ ಕೆಲಸಗಳನ್ನು ನಡಿಸುತ್ತೇವೆಂದು ಹೇಳಿದ್ದಲ್ಲದೆ ಪ್ರತಿ ಸೋಮವಾರವೂ ಒಂದು ಹೊತ್ತು ಕೆಲಸಮಾಡುತ್ತೇವೆಂದು ಒಪ್ಪಿಕೊಂಡರು ಈ ಗ್ರಾಮವು ಕೇವಲ ಹೀನಸ್ಥಿತಿಯಲ್ಲಿದ್ದದ್ದು ಈಗ ಕೊಂಚ ಅಭಿವೃದ್ಧಿಗೆ ಬರುತ್ತಿರುವುದು ಸಂತೋಷಕರವಾಗಿದೆ ಈಗ ಹೊಸದಾಗಿ ಸ್ಥಾಪಿಸಲ್ಪಟ್ಟ ವಾಚಕಾಲಯವು ಪ್ರಜೆಗಳಿಗೆ ತುಂಬಾ ಪ್ರಯೋಜನಕರವಾದ್ದಾಗಲೆಂದು ಹಾರೈಸುವೆವು ಈ ವಾಚಕಾಲಯಕ್ಕೆ ಬೇರೆ ಒಂದು ಮನೆ ಕಟ್ಟುವ ತರದೂದು ನಡೆಸಲ್ಪಟ್ಟಿದೆ ಇವಕ್ಕೆಲ್ಲಾ ನಮ್ಮ ಅಮಲ್ದಾರ್ರವರು ಜನಗಳಿಗೆ ಪ್ರೋತ್ಸಾಹಕೊಟ್ಟು ಅಭಿವೃದ್ಧಿಗೆ ತರುತ್ತಿರುವುದು ಸ್ತೋತ್ರಾರ್ಹವಾಗಿದೆ ಇಷ್ಟೆಲ್ಲಾ ನಡೆದನಂತರ ಸಭಿಕರಿಗೆ ತಾಂಬೂಲ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು

ತುಮಕೂರು ತಾಲ್ಲೂಕು ಶೀಕಲ್ಲು

ಕಳೆದ ತಿಂಗಳು 19 ನೇ ತಾ ತುಂಕೂರು ತಾಲ್ಲೂಕು ಅಮಲ್ದಾರ್ರವರಾದ ಮ॥ ಎಂ ಎಸ್ ರಾಮಚಂದ್ರರಾಯರವರು ಇಲ್ಲಿಗೆ ದಯಮಾಡಿಸಿ ಬಸವಣ್ಣ ದೇವಸ್ಥಾನದಲ್ಲಿ ಗ್ರಾಮದ 80 ಜನಗಳನ್ನು ಸಭೆ ಸೇರಿಸಿ ಪತ್ರಿಕೆಗಳ ಉಪಯೋಗವನ್ನು, ಗ್ರಾಮಾಭಿವೃದ್ಧಿ ವಿಚಾರಗಳನ್ನೂ ವಿವರಿಸಿ ತಿಳುವಳಿಕೆ ಕೊಟ್ಟು ಗ್ರಾಮಾಭಿವೃದ್ಧಿ ಸಂಘವನ್ನು ಸ್ಥಾಪಿಸಿ, ಮ॥ ಗಳಾದ ಶಾನುಭೋಗ ವೆಂಕಟಕೃಷ್ಣಪ್ಪನವರು, ತಿಮ್ಮಣ್ಣನವರು, ಗಂಗಪ್ಪನವರು ಜೀವಣ್ಣನವರು ಸಂಜೀವಶೆಟ್ಟರು, ಹೆಡ್ ಮಾಸ್ಟರ್ ನಾರಣಪ್ಪನವರು, ಈ ಆರು ಮಂದಿಯನ್ನು ಮೆಂಬರುಗಳನ್ನಾಗಿಯೂ, ಪಟೇಲ್ ದೊಡ್ಡ ಗಂಗೇಗೌಡರನ್ನೂ, ಶಾ ಪುಟ್ಟಯ್ಯನವರನ್ನೂ ಈ ಸಂಘದವರಿಗೆ ಸಹಾಯಕರನ್ನಾಗಿಯೂ ನಿಯಮಿಸಿದರು ರೀಡಿಂಗ್ ರೂಮಿಗೆ ನಮ್ಮ ಹೆಡ್ ಮಾಸ್ಟರ್ ನಾರಣಪ್ಪನವರನ್ನು ಸೆಕ್ರೆಟರಿಗಳನ್ನಾಗಿ ನಿಯಮಿಸಿ, ಮೇಲ್ಕಂಡ ಸಂಘದ ಮೆಂಬರುಗಳೇ ಇದಕ್ಕೂ ಮೆಂಬರುಗಳಾಗಿರುವಂತೆ ಅಪ್ಪಣೆಯನ್ನು ಸರ್ಕಾರ ಅನುಮತಿಯಿಂದ ದಯಪಾಲಿಸಿ, ಕೂಡಲೆ ಕೆಲವು ದೇಶೀಯ ವಾರಪತ್ರಿಕೆಗಳನ್ನು ತರಿಸುವಂತೆ ಆಜ್ಞೆ ಮಾಡಿ ಚಂದಾ ಪಟ್ಟಿಯನ್ನು ಸೆಕ್ರೆಟರಿಯವರ ವಶಮಾಡಿದರು ನಮ್ಮ ಹೆಡ್ ಮಾಸ್ಟರ್ ನಾರಣಪ್ಪನವರು ಪರಸ್ಪರಸಹಾಯಕಸಂಘದ ಅ॥ ಸೆಕ್ರೆಟರಿಗಳಾಗಿಯೂ, ಲೈಬ್ರರಿ ಸೆಕ್ರೆಟರಿಗಳಾಗಿಯೂ ಗ್ರಾಮಸ್ಥರಿಂದ ಮೊದಲೇ ನಿಯಮಿತರಾಗಿರುವರು ಸ್ಕೂಲು ಇವರ ದಿವಸದಲ್ಲಿ ಉತ್ತಮಸ್ಥಿತಿಗೆ ಬಂತೆಂಬುದಕ್ಕೆ ಸಾಕ್ಷಿಯಾಗಿ ಸ್ಕೂಲು ಸ್ಥಾಪಿತವಾದ 40 ವರ್ಷಕ್ಕೆ ಮೂವರು ಲೋ ಸೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು

ನಾಗಮಂಗಲದ ತಾಲ್ಲೂಕು ಚಿಕ್ಕದ ಗ್ರಾಮ

ಈ ಗ್ರಾಮದಲ್ಲಿ ತಾ 23 ನೇ ಶನಿವಾರ ಶ್ರೀಕೃಷ್ಣರಾಜರೀಡಿಂಗ್ ರೂಮ್ ಎಂಬ ಹೆಸರಿನಿಂದ ಒಂದು ವಾಚಕ ಶಾಲೆಯನ್ನು ಏರ್ಪಾಟು ಮಾಡಲಾಯಿತು ಆ ದಿವಸ ಗ್ರಾಮದ ಬಹು ಮಂದಿ ಬ್ರಾಹ್ಮಣ, ವಕ್ಕಲ, ಒಕ್ಕಲಿಗ ದೊಡ್ಡಮನುಷ್ಯರು ಸಭೆಯನ್ನು ಅಲಂಕರಿಸಿದ್ದರು ಶೇಕ್‌ದಾರ್ ಮ ನಾಗಪ್ಪನವರು ಸಭಾ ಅಗ್ರಾಸನವನ್ನಲಂಕರಿಸಿದ್ದರು ಈ ವಾಚಕ ಶಾಲೆಯ ಕಾರ್ಯನಿರ್ವಾಹ ಮಾಡಲು ಮ॥ ಏಜೆಂಟ್ ಕೃಷ್ಣಪ್ಪನವರು ಪ್ರೆಸಿಡೆಂಟರಾಗಿಯೂ, ಕಸಬಾ ಶ್ಯಾ ಮ॥ ಸಿ ವಿ ವೆಂಕಟರಮಣಯ್ಯನವರು ಸೆಕ್ರೆಟರಿಯಾಗಿಯೂ, ಮ॥ ಸ್ಕೂಲ್ ಮಾಸ್ಟರು ಅನಂತನರಸಿಂಹಯ್ಯನವರು ಟ್ರೆಜರಾಗಿಯೂ, ಬೇರೆ ಹದಿಮೂರು ಮಂದಿ ಮೆಂಬರುಗಳಾಗಿಯೂ ಇರಬೇಕೆಂದು ತೀರ್ಮಾನವಾಗಿರುತ್ತೆ

ಇದೇ ದಿವಸ ರೀಡಿಂಗ್ ರೂಮಿನ ಜೊತೆಗೆ ಈ ಗ್ರಾಮಕ್ಕೆ ಒಂದು ಕೋಆಪರೆಟಿವ್ ಸೊಸೈಟಿ ಅತ್ಯಾವಶ್ಯಕವೆಂದು ಮ॥ ಸುಬ್ಬರಾಯರು ಅಪ್ಪಣೆ ಕೊಡಿಸಿದ್ದರ ಮೇಲೆ ಮ॥ ಜಕ್ಕದ ಶ್ಯಾ ಸಿ ವಿ ವೆಂಕಟರಮಣಯ್ಯನವರು ಸೊಸೈಟಿಯಿಂದ ಉಂಟಾಗತಕ್ಕ ಪ್ರಯೋಜನವನ್ನೂ, ಇದರ ಒಗಟ್ಟನ್ನೂ ಕುರಿತು ವಿವರಿಸಿದರು ನಂತರ ಇದು ಮಾಡತಕ್ಕದ್ದು ಯುಕ್ತವೆಂತ ಮ॥ ಸೋಮನಹಳ್ಳಿ ಶ್ಯಾ ವೆಂಕಟರಾಮಯ್ಯನವರೂ, ಮ॥ ಕೆಪ್ಪಣ್ಣನವರೂ, ಮ॥ ಏಜೆಂಟ್ ಕೃಷ್ಣಪ್ಪನವರೂ, ಇತರ ದೊಡ್ಡಮನುಷ್ಯರೂ ಅನುಮೋದಿಸಿದರು ಮ॥ ಎಸ್ ಜಿ ರಾಘವೇಂದ್ರಾಚಾರ್, ಮ॥ ಪುಟ್ಟಣ್ಣ, ಮ॥ ನರಸಿಂಹಯ್ಯ ಇವರುಗಳು ಸೊಸೈಟಿ ವಿಷಯದಲ್ಲಿ ಮತ್ತೊಂದು ಮೀಟಿಂಗು ನಡೆಯಿಸಿ ಆ ದಿವಸ ಇನ್ನೂ ಹೆಚ್ಚಿಗೆ ಜನಗಳನ್ನು ಕಮಿಟಿಗೆ ಬರಮಾಡಿಕೊಂಡು ಸೊಸೈಟಿಯಿಂದ ಆಗತಕ್ಕ ಪ್ರಯೋಜನಗಳನ್ನು ಅವಗಾಹನೆಗೆ ತಂದು ಸೊಸೈಟಿ ಏರ್ಪಾಟು ಮಾಡುವುದು ಒಳ್ಳೆಯದೆಂದು ಸಲಹೆ ಕೊಟ್ಟದ್ದರ ಮೇಲೆ ಈ ವಿಷಯದಲ್ಲಿ ಜೂನ್ 3 ನೇ ತಾ ಬುಧವಾರ ಮೀಟಿಂಗ್ ಸೇರಬೇಕೆಂದು ತೀರ್ಮಾನಿಸಲಾಯಿತು ನಂತರ ಶ್ರೀಮನ್ಮಹಾರಾಜರವರ ಮತ್ತು ಜಾರ್ಜ್ ಸಾರ್ವಭೌಮರವರ ಶ್ರೇಯಃಪ್ರಾರ್ಥನೆ ನಡೆದ ಬಳಿಕ ಸಭಿಕರಿಗೆ ಗಂಧ ಪುಷ್ಪಾದಿಗಳು ಹಂಚಿ ಮುಕ್ತಾಯ ಮಾಡಿತು

ಮೈಸೂರು ಎಕನಾಮಿಕ್ ಕಾನ್ಫರೆನ್ಸ್

ಐದನೆಯ ಸಭೆ, 1914

ಕಳೆದ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಉಪ್ಪರಿಗೆಯ ದರ್ಬಾರ್ ಮಂದಿರದಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜದ ಐದನೇ ವಾರ್ಷಿಕ ಸಭೆಯು ಪ್ರಾರಂಭವಾಯಿತು ಈ ಸಭೆಯ ಸರ್ಕಾರಿ ಮತ್ತು ಪ್ರತಿನಿಧಿಗಳ ಮೆಂಬರುಗಳೂ, ಇಲಾಖೆಗಳ ಮುಖ್ಯಾಧಿಕಾರಿಗಳೂ, ಸಮಾಜದ ಮತ್ತೂ ಅದರ ಶಾಖೆಗಳ ಅಧಿಕಾರಿಗಳೂ ಹಾಜರಾಗಿದ್ದರು ದಿವಾನರವರು ಶ್ರೀಮದ್ಯುವರಾಜರವರ ಸಹಿತ ದಯಮಾಡಿ ಪ್ಲಾಟ್‌ಫಾರಮನ್ನು ಅಲಂಕರಿಸಿದರು ಅವರ ಪಕ್ಕದಲ್ಲಿ ಕೌನ್ಸಿಲರುಗಳಿಬ್ಬರೂ, ರೆವಿನ್ಯೂ ಕಮೀಷನರವರೂ ಕುಳಿತುಕೊಂಡರು ಸಭೆಯ ಕಾರ್ಯಗಳನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ದಿವಾನ್ ಮ॥ ಎಂ ವಿಶ್ವೇಶ್ವರಯ್ಯನವರು ಈ ಸಮಾಜದಿಂದ ಇದುವರೆಗೆ ನಡಿಸಲ್ಪಟ್ಟ ವಿಚಾರಗಳೇ ಮುಂತಾದ ಸಂಗತಿಗಳನ್ನು ಕುರಿತು ದೀರ್ಘವಾಗಿ ಉಪನ್ಯಾಸಮಾಡಿದರು ಅವರಲ್ಲಿ ಕಂಡುಬಂದ ಮುಖ್ಯಭಾಗಗಳನ್ನು ಇಲ್ಲಿ ಎತ್ತಿ ಪ್ರಕಟಿಸಿರುತ್ತೇವೆ

ಮಹನೀಯರೇ,—ನಾವುಗಳು ಎಕನಾಮಿಕ್ ಕಾನ್ಫರೆನ್ಸಿನ ಕೆಲಸಗಳನ್ನು ಉಪಕ್ರಮ ಮಾಡಿ ಇಲ್ಲಿಗೆ ಮೂರು ವರ್ಷ ಪೂರ್ತಿಯಾಯಿತು. ಈ ವರ್ಷದ ಐದನೆಯ ಸಭೆಗೆ, ಶ್ರೀಮನ್ಮಹಾರಾಜರವರ ಸರ್ಕಾರದ ಪರವಾಗಿ ನಾವು ತಮ್ಮಗಳಿಗೆ ಸುಖಾಗಮನವನ್ನು ಬಯಸುತ್ತೇವೆ ಹೋದ ವರ್ಷ ಸಭೆ ಸೇರಿದ ಕಾಲದಿಂದೀಚೆಗೆ, ಪ್ರೆಸಿಡೆಂಟರು ವೈಸ್ ಪ್ರೆಸಿಡೆಂಟರುಗಳು ಹೊರತು, ಈ ಕಾನ್ಫರೆನ್ಸಿಗೆ ಸೇರಿದ ಸಾಮಾಜಿಕರ ಸಂಖ್ಯೆಯನ್ನು 12 ರಿಂದ 18ರ ವರೆಗೆ ಹೆಚ್ಚಿಸಲಾಗಿದೆ ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹಾದುರವರು ತಮ್ಮ ಸಹಜವಾದ ಉದಾರ ಸ್ವಭಾವದಿಂದಲೂ ಪ್ರಜೆಗಳಲ್ಲಿ ತಮಗಿರುವ ವಿಶ್ವಾಸದಿಂದಲೂ ಪ್ರೇರಿತರಾಗಿ, ಕಾನ್ಫರೆನ್ಸಿಗೆ ಸರ್ಕಾರೀ ನೌಕರರಲ್ಲದ ಮೆಂಬರುಗಳನ್ನು ನೇಮಿಸುವುದರಲ್ಲಿ ಕೆಲವರನ್ನು ಪ್ರಜೆಗಳೇ ಚುನಾಯಿಸಬಹುದೆಂದು ಅಪ್ಪಣೆ ದಯಪಾಲಿಸಿರುತ್ತಾರೆ ಅದೇ ಪ್ರಕಾರವಾಗಿ ಡಿಸ್ಟ್ರಿಕ್ಟುಗಳಿಂದ ಎಂಟು ಮಂದಿ, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಂದ ಎಂಟುಮಂದಿ, ಅಂತು ಹದಿನಾರು ಮಂದಿಯನ್ನು, ಎಂದರೆ ಒಟ್ಟು ಸಂಖ್ಯೆಯಲ್ಲಿ ಮೂರರಲ್ಲೊಂದು ಭಾಗದವರನ್ನು ಚುನಾವಣೆಯ ಮೂಲಕ ನೇಮಿಸಲಾಗಿದೆ

ಕಾನ್ಫರೆನ್ಸ್ ಏರ್ಪಾಡಿನ ಮೂರು ಶಾಖೆಗಳಲ್ಲಿಯೂ ತಕ್ಕಷ್ಟು ಪುರೋವೃದ್ಧಿ ಕಾರ್ಯಗಳು ನಡೆದಿರುತ್ತವೆ ಎಂಬ ಅಂಶವು ಈಗ ತಮ್ಮಲ್ಲಿ ಕೊಟ್ಟಿರುವ ರಿಪೋರ್ಟುಗಳಿಂದ ಗೊತ್ತಾಗುವುದು

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಕಸಬುದಾರಿ ವಿದ್ಯಾಭ್ಯಾಸವನ್ನೂ ವೃದ್ಧಿಗೊಳಿಸುವುದಕ್ಕೆ ಹೆಚ್ಚು ಸಲಕರಣೆಗಳನ್ನು ಕೊಡುತ್ತಿರಲಾಗಿದೆ ಸಂಸ್ಥಾನದಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ವೃದ್ಧಿಗೊಳಿಸುವುದಕ್ಕೂ, ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ಸಕಲ ಜನೋಪಯುಕ್ತವಾದ ಸರಸ್ವತೀ ಭಂಡಾರಗಳನ್ನು ಸ್ಥಾಪಿಸುವುದಕ್ಕೂ ಬೇಕಾದ ಏರ್ಪಾಡುಗಳನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ ಕಾನ್ಫರೆನ್ಸಿನ ಕೆಲಸಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಪ್ರವೀಣರೆಂದು ಖ್ಯಾತಿಗೊಂಡ ವಿದ್ವಾಂಸರು ಕೆಲವು ಉಪನ್ಯಾಸಗಳನ್ನು ಕೊಟ್ಟಿರುತ್ತಾರೆ ಮೈಸೂರು ಸಂಸ್ಥಾನದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಎಂದರೆ ಯೂನಿವರ್ಸಿಟಿಯನ್ನು ಸ್ಥಾಪಿಸುವ ಏರ್ಪಾಡಿನ ಸಂಬಂಧದಲ್ಲಿ, ಹೊರಗೆ ಬ್ರಿಟಿಷ್ ಕಾಲನಿಗಳಲ್ಲಿಯೂ ಅನ್ಯದೇಶಗಳಲ್ಲಿಯೂ ಸಣ್ಣ ಸಣ್ಣ ವಿಶ್ವವಿದ್ಯಾಲಯಗಳು ಯಾವ ಯಾವ ಕ್ರಮದ ಮೇರೆಗೆ ನಡೆಯುತ್ತಿವೆ ಎಂಬ ವಿಷಯದಲ್ಲಿ ಬೇಕಾದ ಸಮಾಚಾರಗಳನ್ನೆಲ್ಲ ಸಂಗ್ರಹಿಸುತ್ತಲಾಗಿದೆ ಸಂಪದಭಿವೃದ್ಧಿಯ ವಿಷಯದಲ್ಲಿ ವಿದ್ಯಾಭ್ಯಾಸಕಾರ್ಯಗಳು ತುಂಬಾ ಮುಖ್ಯವಾದವುಗಳೆಂದು ಸರ್ಕಾರದವರು ಭಾವಿಸಿರುವರು ಆದುದರಿಂದ ಮುಂದೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸಂಗತಿಗಳಿಗೆ ಹೆಚ್ಚು ಗಮನ ಕೊಡಲಾಗುವುದು

ಕಳೆದ ವರ್ಷದಲ್ಲಿ ವ್ಯವಸಾಯದ ಇಲಾಖೆಯನ್ನು ಪುನಃ ಪರಿಷ್ಕಾರಮಾಡಿ ಅದರಲ್ಲಿ ನಡೆಯಬೇಕಾದ ಕೆಲಸಗಳನ್ನು ಬಹಳವಾಗಿ ಹೆಚ್ಚಿಸಲಾಯಿತು ದೊಡ್ಡ ದೊಡ್ಡ ವ್ಯವಸಾಯ ಕ್ಷೇತ್ರಗಳನ್ನು ಕಲ್ಪಿಸುವುದು, ಕೆರೆಗಳನ್ನು ಆಬಾದು ಮಾಡುವುದು, ಗನ್ನಾ ಸಾಗುವಳಿಯನ್ನು ಹೆಚ್ಚಿಸುವುದು, ಇವೇ ಮುಂತಾದ ರೈತಾಪಿ ಜನಗಳಿಗೆ ಸಂಬಂಧಪಟ್ಟ ವಿಷಯಗಳು ಪರ್ಯಾಲೋಚನೆಯಲ್ಲಿವೆ ರೈತರ ಸ್ಥಿತಿಗತಿಗಳನ್ನು ಕುರಿತ ಸಂಗತಿಗಳ ವಿಚಾರವು ಈಗಲೂ ನಡೆಯುತ್ತಿದೆ ವ್ಯವಸಾಯದ ಮನೆಗಳ ಏರ್ಪಾಡಿಗಾಗಿ ಬೇಕಾದ ಸಾಲಗಳನ್ನು ಕೊಡುವುದಕ್ಕೆ ನಿಯಮಗಳನ್ನು ಕಲ್ಪಿಸಿದೆ ರೇಷ್ಮೆಯ ವ್ಯವಸಾಯವನ್ನು ವೃದ್ಧಿಮಾಡುವುದಕ್ಕೋಸ್ಕರ ಅದರಲ್ಲಿ ನಿಪುಣರಾದ ಇಬ್ಬರು ಅಧಿಕಾರಿಗಳನ್ನು ನೇಮಿಸಿ, ಅದರ ವ್ಯವಸಾಯಕ್ಕೆ ಒಂದು ಮುಖ್ಯ ಕ್ಷೇತ್ರವನ್ನು ರಚಿಸಿರುವುದಲ್ಲದೆ, ಆ ವ್ಯವಸಾಯಕ್ಕೆ ಸಂಬಂಧಪಟ್ಟ ಒಂದು ಸಂಘವನ್ನು ಕಲ್ಪಿಸಲಾಗಿದೆ ರೇಷ್ಮೆ ವ್ಯವಸಾಯದಲ್ಲಿಯೂ ಫಲಪುಷ್ಪ ವ್ಯವಸಾಯದಲ್ಲಿಯೂ ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುತ್ತಿರುವುದಲ್ಲದೆ, ರೇಷ್ಮೆ ವ್ಯವಸಾಯದಲ್ಲಿ ಉಪಯುಕ್ತರಾದವರಿಗೆ ರೋಗವಿಲ್ಲದ ರೇಷ್ಮೆ ಬೀಜವನ್ನು ಹಂಚುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತಲಿದೆ ರೈತರು ತಮ್ಮ ತಮ್ಮ ಜಮಾನುಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನಿಟ್ಟು ತಮ್ಮ ತಮ್ಮ ಲಾಭನಷ್ಟಗಳನ್ನು ತಿಳಿದುಕೊಳ್ಳುವಂತೆ ಮಾಡಬೇಕೆಂಬ ಉದ್ದೇಶದಿಂದ, ಹಳ್ಳಿಗಾಡುಗಳಲ್ಲಿರುತ್ತಾ ಬಾಲ್ಯದಿಂದ ಓದುಬರಹ ಕಲಿಯದ ಜನರಿಗೆ ಈಗ ಓದುಬರಹಗಳನ್ನು ಕಲಿಸಿ ಅವರವರ ಉದ್ಯೋಗದ ವಿಷಯದಲ್ಲಿ ಸರಿಯಾದ ಜ್ಞಾನವನ್ನು ಉಂಟುಮಾಡಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ ಪರಸ್ಪರ ಸಹಾಯಕಸಂಘದ ಏರ್ಪಾಡು ತೃಪ್ತಿಕರವಾಗಿ ವೃದ್ಧಿಹೊಂದುತ್ತಲಿದೆ

ಕೈಗಾರಿಕೆ ಮತ್ತು ವಾಣಿಜ್ಯಗಳ ವಿಚಾರವಾಗಿ, ಹೋದ ವರ್ಷದ ಆದಿಯಲ್ಲಿ, ಒಂದು ಇಲಾಖೆಯನ್ನು ಏರ್ಪಡಿಸಲಾಯಿತೆಂಬ ಸಂಗತಿಯು ತಮಗೆ ಗೊತ್ತೇ ಇದೆ ಹನ್ನೊಂದು ಶೀರೆತ್ತುವ ಪಂಪಿನ ಯಂತ್ರಗಳನ್ನೂ ಗರಗಸವೇ ಮೊದಲಾದವುಗಳಿಂದ ಕೆಲಸಮಾಡಿಸುವ ಐದಾರು ಯಂತ್ರಶಾಲೆಗಳನ್ನೂ ಸ್ಥಾಪಿಸಿರುವುದಲ್ಲದೆ, ತಕಾವಿ ಸಾಲಗಳನ್ನು ಕೊಡುವುದರಿಂದಲೂ ಇತರ ವಿಧಗಳಿಂದಲೂ ಸಾಮಾನ್ಯವಾಗಿ ಸರ್ವರೂ ಯಂತ್ರಗಳು ಉಪಯೋಗಿಸುವಂತೆ ಮಾಡುವುದಕ್ಕೋಸ್ಕರ ತಕ್ಕ ಪ್ರಯತ್ನಗಳು ನಡೆಯುತ್ತಿವೆ ಬೆಂಗಳೂರಿನಲ್ಲಿರುವ ಸರ್ಕಾರೀ ನೇಯಿಗೆ ಕಾರ್ಖಾನೆಯಲ್ಲಿಯೂ ಹೊರಗಣ ಇತರ ಪ್ರದೇಶಗಳಲ್ಲಿಯೂ ನೇಯಿಗೆ ಕಸಬನ್ನು ಕಲಿಸಿಕೊಡುತ್ತಿದೆ ನಾನಾವ ಲಾಳಿಯ ನೇಯಿಗೆಯನ್ನು ಎಲ್ಲೆಲ್ಲಿಯೂ ಬಳಕೆಗೆ ತರುವುದಕ್ಕೋಸ್ಕರ ನಿದರ್ಶನಪೂರ್ವಕ ತೋರಿಸುವುದಕ್ಕಾಗಿ ತಕ್ಕ ಬೋಧಕರನ್ನು ಏರ್ಪಡಿಸಲಾಗಿದೆ ಈಚೆಗೆ ಸ್ಥಾಪಿಸಿದ ಮೂರು ಅಕ್ಕಿಗಿರಣಿ ಯಂತ್ರಗಳೂ ಚೆನ್ನಾಗಿ ಕೆಲಸಮಾಡುತ್ತಿವೆ ಎಂಬದಾಗಿ ತಿಳಿದುಬಂದಿದೆ ಮರಗಳಿಂದ ಚೆಕ್ಕೆ ಇಳಿಸುವ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ಕಮಿಟಿಯವರು ತಮ್ಮ ಶಿಫಾರಸುಗಳನ್ನು ಕಳುಹಿಸಿರುತ್ತಾರೆ ಅಲ್ಲದೆ ಅವರ ಶಿಫಾರಸಿನ ಮೇಲೆ ಶಿಲಾಯಂತ್ರದಲ್ಲಿ ಬಣ್ಣಗಳಿಂದ ಮುದ್ರಿಸುವ ಕಾರ್ಖಾನೆಯನ್ನಿಡುವುದಕ್ಕೆ ಮಂಜೂರಾತಿಯನ್ನು ಕೊಟ್ಟಿದೆ ಹೇಟುಗಳು, ಪಿಂಗಾಣಿ ಸಾಮಾನು, ದೀಪದಕಡ್ಡಿ, ಕಾಗದ, ಹಗ್ಗದ ಚಾಪೆ ಮೊದಲಾದವುಗಳನ್ನು ತಯಾರ್ಮಾಡುವುದು, ಇವು ಎಷ್ಟರ ಮಟ್ಟಿಗೆ ಸಾಧ್ಯವೆಂದು ತಿಳಿಯಲು ನಿಪುಣರಾದವರನ್ನು ನೇಮಿಸಿ ಪರೀಕ್ಷೆಗಳನ್ನು ನಡಿಸಲಾಯಿತು ಕೈಗಾರಿಕೆಗಳ ಸರ್ವೆಯನ್ನು ನಡಿಸುವುದಕ್ಕೋಸ್ಕರವೇ ಒಬ್ಬ ಹುದ್ದೆದಾರರನ್ನು ನೇಮಿಸಿತ್ತು ಆ ವಿಷಯದಲ್ಲಿ ಬಂದ ರಿಪೋರ್ಟನ್ನು ಈಗತಾನೆ ಪ್ರಕಟಿಸಿಯದೆ ಈ ಕಾನ್ಫರೆನ್ಸಿನವರ ಪ್ರಯತ್ನಗಳಿಂದ ಎಂಟುತಿಂಗಳಿಗೆ ಮುಂಚೆ ಸ್ಥಾಪಿತವಾದ ಮೈಸೂರು ಬ್ಯಾಂಕಿನಲ್ಲಿ ಈಗ 23 ಲಕ್ಷ ರೂಪಾಯಿಗಿಂತ ಹೆಚ್ಚಾದ ಲೇವಾದೇವಿಯ ಕೆಲಸವು ನಡೆಯುತ್ತಿದೆ

ಕಮಿಟಿಗಳ ಕೆಲಸಗಳು

ಈಚೆಗೆ ಸ್ಥಾಪಿತವಾದ ಸ್ಟ್ಯಾಂಡಿಂಗ್ ಕಮಿಟಿಯಲ್ಲದೆ, ಮೂರು ಸೆಂಟ್ರಲ್ ಕಮಿಟಿಗಳೂ ಎಂಟು ಡಿಸ್ಟ್ರಿಕ್ಟ್ ಕಮಿಟಿಗಳೂ 1911 ನೆಯ ಇಸವಿಯಿಂದ ಕೆಲಸಮಾಡುತ್ತಿವೆ ಇದಲ್ಲದೆ ಇದುವರೆಗೆ 29 ತಾಲ್ಲೂಕು ಅಭಿವೃದ್ಧಿಯ ಸಮಾಜಗಳೂ ಸ್ಥಾಪಿತವಾಗಿವೆ ಈ ಕಮಿಟಿಗಳವರು ಪರ್ಯಾಲೋಚಿಸಿ ವಿಮರ್ಶೆಮಾಡುತ್ತಿರುವ ಅನೇಕ ಮುಖ್ಯ ವಿಷಯಗಳಿಗೆ ಅವುಗಳನ್ನು ಕಾರ್ಯತಃ ಜಾರಿಗೆ ತರತಕ್ಕ ಸಲಹೆಗಳು ಕ್ರಮೇಣ ಬರುತ್ತಿವೆ

ಕಮಿಟಿಗಳವರು ತಯಾರ್ಮಾಡಿದ ಮುಖ್ಯಮುಖ್ಯಗಳಾದ ಏರ್ಪಾಡುಗಳನ್ನು ಜಾರಿಗೆ ತರತಕ್ಕ ಬಗ್ಗೆ ಅಥವಾ ಅವಶ್ಯಕವಾದ ನಡವಳಿಕೆಯ ಬಗ್ಗೆ ಆಯಾ ಇಲಾಖೆಗಳಿಗೆ ಕಳುಹಿಸಿಕೊಡಬಹುದೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ ಕೆಲವು ವಿಶೇಷ ಸಂದರ್ಭಗಳಲ್ಲಿ, ಏರ್ಪಾಡುಗಳನ್ನು ಜಾರಿಗೆ ತರುವ ಕೆಲಸವನ್ನು ಸರ್ಕಾರದಿಂದ ಕ್ರಮವಾದ ಮಂಜೂರಾತಿಯನ್ನು ಪಡೆದು ಕಮಿಟಿಯ ಚೇರ್‌ಮ್ಯಾನ್‌ರವರಿಗಾಗಲಿ ಸೆಕ್ರೆಟರಿಯವರಿಗಾಗಲಿ ಅಥವಾ ಕಡೆಗೆ ಒಬ್ಬ ಕಮಿಟಿಯ ಮೆಂಬರಿಗೇ ಆಗಲಿ ವಹಿಸಬಹುದು

ಕಮಿಟಿಗಳು ಮಾಡಿದ ಕೆಲಸಗಳನ್ನು ಊರ್ಜಿತಗೊಳಿಸುವುದಕ್ಕೆ ಕಳೆದ ವರ್ಷ ಅನೇಕ ಹೊಸ ನಿಯಮಗಳನ್ನೂ ಹುಕುಮುಗಳನ್ನೂ ಸಾದರ್ಪಡಿಸಲಾಯಿತು ಈ ಸಭೆಯ ಏರ್ಪಾಡು ಕ್ರಮಕ್ರಮೇಣ ವೃದ್ಧಿಗೆ ಬರುವ ಬಾಲ್ಯಾವಸ್ಥೆಯಲ್ಲಿದೆ ಲೋಪಗಳೇನಾದರೂ ಇದ್ದರೆ, ಅವು ಕ್ರಮಕ್ರಮೇಣ ನಿವಾರಣೆಯಾಗುವವು ಪ್ರಯತ್ನಗಳು ನೂತನವಾಗಿರುವುದರಿಂದಲೂ, ಮೆಂಬರುಗಳು ತಮಗೆ ವಹಿಸಿರುವ ಕೆಲಸದ ಉದ್ದೇಶವನ್ನೂ ಸ್ವಭಾವವನ್ನೂ ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಕೆಲವು ಕಾಲ ಬೇಕಾದುದರಿಂದಲೂ, ಈ ಕೆಲಸವನ್ನು ನಡಿಸುವುದಕ್ಕೆ ತರಪೇತಾದವರು ದೊರೆಯುವುದು ಕಷ್ಟವಾಗಿರುವುದರಿಂದಲೂ ಸಹ, ಮೇಲ್ಕಂಡ ಲೋಪಗಳಿಗೆ ಪ್ರಾಯಶಃ ಆಸ್ಪದವುಂಟಾಗಿದೆ

ಯಾವ ದೊಡ್ಡ ಕೆಲಸವನ್ನು ಮಾಡುವಾಗಲೂ ಆರಂಭದೆಸೆಯಲ್ಲಿ ಲೋಪಕ್ಕೆ ಆಸ್ಪದವಿಲ್ಲದೆ ಇರುವಂತೆ ಮಾಡುವುದು ಅಸಾಧ್ಯವು ಪದ್ಧತಿಯನ್ನೂ ಕ್ರಮವನ್ನೂ ಮಾತ್ರ ಪರಿಷ್ಕರಿಸಿಕೊಂಡು ಕಾರ್ಯಗಳನ್ನು ನಡಿಸದೆ ತಟಸ್ಥರಾಗಿರುವುದಕ್ಕಿಂತಲೂ, ಏರ್ಪಾಟಿನಲ್ಲಿ ಏನು ತಪ್ಪುಗಳೂ ಲೋಪಗಳೂ ಇದ್ದರೂ ವೃದ್ಧಿಗೆ ಬರುವಂತೆ ಕಾರ್ಯಗಳನ್ನು ನಡಿಸುತ್ತಿರುವುದು ಅತ್ಯುತ್ತಮ

ಸರ್ಕಾರೀ ನೌಕರರೂ ನೌಕರರಲ್ಲದವರೂ ಒಟ್ಟಿಗೆ ಸೇರಿ ಕೆಲಸಮಾಡುತ್ತಾ ಶಾಶ್ವತವಾದ ದೇಶೋನ್ನತಿಗೆ ಸಂಬಂಧಪಟ್ಟ ಸಂಗತಿಗಳನ್ನು ಏಕಮುಖವಾಗಿ ವಿಚಾರಣೆಮಾಡತೊಡಗಿರುವುದು ಸ್ವಲ್ಪಮಟ್ಟಿಗೆ ಪ್ರಯೋಜನಕರವಾಗಿದೆ ಇದಲ್ಲದೆ ಅನೇಕಜನರು ಅಧೋಗತಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಪರ್ಯಾಲೋಚಿಸುತ್ತಲೂ, ಕೆಲಸಮಾಡುತ್ತಲೂ, ವಿಮರ್ಶೆಮಾಡುತ್ತಲೂ ಇರುವಂತೆ ಮಾಡಿರುವುದೂ ಕೂಡ ತಕ್ಕ ಮಟ್ಟಿಗೆ ತೃಪ್ತಿಕರವಾಗಿದೆ

ಸಂಪದಭಿವೃದ್ಧಿ ಕಾರ್ಯಗಳನ್ನು ವೃದ್ಧಿಗೊಳಿಸುವ ಆವಶ್ಯಕತೆ

ಮೈಸೂರು ಸಂಸ್ಥಾನದಲ್ಲಿ ನಮ್ಮ ಸಂಪತ್ತಿನ ಸ್ಥಿತಿಯನ್ನು ನಾವು ಒಲಪಡಿಸಿಕೊಳ್ಳಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ ಇದಕ್ಕೆ ಮೂರು ಕಾರಣಗಳನ್ನು ಸೂಚಿಸಬಹುದು (1) ನಮ್ಮ ಜನಗಳು ಬಡವರು, ಅವರ ಜೀವನವು ಬಹಳ ಹೀನಸ್ಥಿತಿಯಲ್ಲಿದೆ, ಅವರ ಸಂಪಾದನೆಯು ಕಡಮೆ, ಮಾಡತಕ್ಕ ಕೆಲಸವೂ ಕಡಮೆ ಮಳೆಬೆಳೆಗಳಿಲ್ಲದ ಕಾಲದಲ್ಲಿ ಅವರು ಬಹಳ ಶ್ರಮಪಡುವರು ವಿಶೇಷ ಕ್ಷಾಮಕಾಲದಲ್ಲಿಯಾದರೋ ಪ್ರಾಣ ಉಳಿಸಿಕೊಳ್ಳುವುದೇ ಕಷ್ಟವಾಗುವುದು ಇದೇ ಮುಖ್ಯ ಕಾರಣ (2) ಈಗ ಸಂಚಾರಕ್ಕೆ ಮಾರ್ಗಸೌಕರ್ಯಗಳು ಹೆಚ್ಚುತ್ತಲಿರುವುದರ ದೆಸೆಯಿಂದ ವ್ಯವಹಾರ ಸ್ಥಿತಿಯೂ ವ್ಯಾಪಾರದ ಸ್ಥಿತಿಯೂ ದಿನೇದಿನೇ ಬದಲಾಯಿಸುತ್ತಿರುವುದೂ, ಧಾರಣೆವಾಸಿಗಳು ವಿಶೇಷವಾಗಿ ಹೆಚ್ಚುತ್ತಿರುವುದೂ ಸಹ, ಎರಡನೆಯ ಕಾರಣವಾಗಿರುತ್ತದೆ (3) ಈ ದೇಶದಲ್ಲಿನ ಅನೇಕ ಉತ್ಪತ್ತಿ ಸಾಧನಗಳನ್ನು ಜನಗಳ ಪುರೋಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳಲು ಅವಕಾಶವಿದ್ದರೂ, ಇದುವರೆಗೂ ಅವುಗಳನ್ನು ಉಪಯೋಗಿಸದೆ ವ್ಯರ್ಥಮಾಡಿಕೊಂಡಿರುವುದೇ ಮೂರನೆಯ ಕಾರಣವಾಗಿರುತ್ತದೆ

ಒಳ್ಳೇ ಉನ್ನತಸ್ಥಿತಿಯಲ್ಲಿರುವ ಕೆನಡಾ, ಆಸ್ಟ್ರೇಲಿಯಾ ಎಂಬ ಎರಡು ಬ್ರಿಟಿಷ್ ಕಾಲನಿಗಳೊಡನೆ ಮೈಸೂರು ಸಂಸ್ಥಾನವನ್ನು ಹೋಲಿಸಿ ನೋಡುವುದಕ್ಕಾಗಿ ಸಂಬಂಧಪಟ್ಟ ಕೆಲವು ವಿವರಗಳನ್ನು ಇಲ್ಲಿ ಉದಹರಿಸುತ್ತೇವೆ ಕೆನಡಾ ದೇಶದ ಪ್ರಜಾಸಂಖ್ಯೆಯು 70 ಲಕ್ಷ ಆಸ್ಟ್ರೇಲಿಯಾ ದೇಶದಲ್ಲಿ 50 ಲಕ್ಷ ಪ್ರಜೆಗಳಿರುವರು, ಮೈಸೂರು ಸಂಸ್ಥಾನದಲ್ಲಿ ಅವೆರಡಕ್ಕೂ ಮಧ್ಯಸ್ಥವಾದ 60 ಲಕ್ಷ ಪ್ರಜಾಸಂಖ್ಯೆ ಇರುತ್ತದೆ ಮೈಸೂರು ಸಂಸ್ಥಾನಕ್ಕೂ ಈ ಎರಡು ದೇಶಗಳಿಗೂ ಈ ಮೇರೆಗೆ ಪ್ರಜಾಸಂಖ್ಯೆಯಲ್ಲಿರುವ ಸಾಮ್ಯವನ್ನು ಪರಿಗಣಿಸಿ, ಇತರ ವಿಷಯಗಳಲ್ಲಿಯೂ ಸಾಮ್ಯವಿರಬಹುದೆಂದು ಯಾರಾದರೂ ಭಾವಿಸಬಹುದು ಆದರೆ ಸಂಪದಭಿವೃದ್ಧಿ ಸ್ಥಿತಿಯನ್ನು ಹೋಲಿಸಿ ನೋಡಿದಲ್ಲಿ ಮೈಸೂರು ಸಂಸ್ಥಾನವು ಆ ಎರಡು ದೇಶಗಳಿಗಿಂತ ಕೇವಲ ಹೀನಸ್ಥಿತಿಯಲ್ಲಿರುವುದೆಂದು ಈ ಕೆಳಗೆ ಉದಹರಿಸಿರುವ ವಿವರಗಳಿಂದ ಗೊತ್ತಾಗುತ್ತದೆ

	ಕೆನಡಾ	ಆಸ್ಟ್ರೇಲಿಯಾ	ಮೈಸೂರು
1 ಪ್ರಜಾಸಂಖ್ಯೆ	72,06,000	[illegible],83,050	[illegible]7,06,000
2 ವಿದ್ಯಾಭ್ಯಾಸ—			
ಯೂನಿವರ್ಸಿಟಿಗಳು	20	6	ಇಲ್ಲ
ವರ್ತಮಾನಪತ್ರಿಕೆಗಳು	ಸಂಗತಿ ತಿಳಿಯಲಿಲ್ಲ	1,2[illegible]0	36
ಒಟ್ಟು ಪ್ರತಿಸಂಖ್ಯೆಯ ಶೇಕಡಕ್ಕೆ ಓದುಬರಹ ಬಲ್ಲವರು	80 ರಿಂದ 90		6
ಪ್ರಜಾಸಂಖ್ಯೆಯ ಶೇಕಡಕ್ಕೆ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು	18 6	11 7	2
3 ರೆವಿನ್ಯು (10 ಪೌಂಡುಗಳಲ್ಲಿ)	42	21	1 8
ಖರ್ಚು	38	71	2 1
4 ಪೋಸ್ಟಾಫೀಸುಗಳ ಸಂಖ್ಯೆ	13,859	8,[illegible]25	185
ಟೆಲಿಗ್ರಾಫ್ ಆಫೀಸುಗಳ ಸಂಖ್ಯೆ	624	1180	19
5 ರೈಲ್‌ರಸ್ತೆ ಮೈಲುಗಳು	28 035	18,153	12[illegible]
6 ಸಾಲಿಯಾನಾ ಸರಿಸುಮಾರಾಗಿ ಒಬ್ಬ ಮನುಷ್ಯನ ಸಂಪಾದನೆ	100 ರಿಂದ 700 ರೂಪಾಯಿಗಳು		ರೂ 30
7 ಮರಣ—ಪ್ರಜಾಸಂಖ್ಯೆಯಲ್ಲಿ ಸಾವಿರಕ್ಕೆ	15 12	10 5	ಸುಮಾರು 30
8 ವ್ಯಾಪಾರ ತಲೆಯೊಂದಕ್ಕೆ (ಪೌಂಡುಗಳು)	28 8 1	30 18 8	1 0 4

ಈ ವಿವರಗಳನ್ನು ಸಾಧ್ಯವಾದ ಮಟ್ಟಿಗೂ ಸರಿಯಾದ ಸ್ಥಳಗಳಿಂದ ತಿಳಿದುಕೊಂಡಿದೆಯಾಗಿ ಅವು ಸುಮಾರಾಗಿ ಕರಾರ್ವಾಕ್ಕಾ ಇರುತ್ತವೆ ಎಂದು ಭಾವಿಸಿದೆ

ನಮ್ಮ ಜನಾಂಗಕ್ಕೆ ಮತವೂ ವಿಧಿಯಲ್ಲಿ ನಂಬಿಕೆಯೂ ಆಧಾರವಾಗಿರುತ್ತವೆ ಪಾಶ್ಚಾತ್ಯದೇಶಗಳಲ್ಲಾದರೋ ಅರ್ಥಸಾಧನಗಳೇ ಆಧಾರವಾಗಿವೆ ಪೂರ್ವದಲ್ಲಿ ಎಲ್ಲವೂ ಸರ್ವೋತ್ಕೃಷ್ಟ ಸ್ಥಿತಿಯಲ್ಲಿತ್ತೆಂತಲೂ ಈಗ ಎಲ್ಲವೂ ಕೆಡುತ್ತಾ ಬಂದಿವೆ ಎಂತಲೂ, ಮುಂದೆ ಒಂದಾನೊಂದು ಕಾಲದಲ್ಲಿ ಪೂರ್ವದ ಸ್ಥಿತಿಯು ಪುನಃ ಬರುವುದೆಂತಲೂ ನಂಬತಕ್ಕ ಜನಗಳು ನಮ್ಮಲ್ಲಿ ಈಗಲೂ ಇರುವರು ಪರಲೋಕಸಾಧನೆಗೆ ಮನುಷ್ಯ ಜನ್ಮವು ಸಾಧಕವಾಗಿರತಕ್ಕದ್ದೇ ಹೊರತು ಇಹದಲ್ಲಿಯೇ ಶಾಶ್ವತವಾಗಿ ನಾವು ಸುಖಿಗಳಾಗಿರತಕ್ಕದ್ದಲ್ಲವೆಂಬುದು ಹಿಂದೂ ಜನಗಳ ಭಾವನೆಯಾಗಿದೆ ಯಾವುದೋ ಒಂದು ಆವಶ್ಯಕತೆ ಉಂಟಾದುದರ ದೆಸೆಯಿಂದಲೋ ಅಥವಾ ಸ್ವಪ್ರಯೋಜನದ ಆಶೆಯಿಂದಲೋ ಕೆಲಸಕಾರ್ಯಗಳಲ್ಲಿ ನಾವು ಪಾಶ್ಚಾತ್ಯರ ಮಾರ್ಗಗಳನ್ನೇ ಸ್ವಲ್ಪ ಮಟ್ಟಿಗೆ ಅನುಸರಿಸಿ ಇದ್ದರೂ, ಪ್ರಾಚೀನ ಪುರುಷಾರ್ಥಗಳಲ್ಲಿಯೇ ನಮಗೆ ಹೆಚ್ಚಾಗಿ ಆಸಕ್ತಿ ಇರುತ್ತದೆ ನಮ್ಮ ಜನರಿಗೆ ಪೂರ್ವ ಪಕ್ಷತಿಗಳಲ್ಲಿ ಆದರ ಹೆಚ್ಚು, ಯಾವ ನವೀನ ನಾಗರಿಕ ಪದ್ಧ

ಗಳನ್ನು ಅವರು ಮನಃಪೂರ್ತಿಯಾಗಿ ಆಚರಿಸುವುದಿಲ್ಲ. ಒಟ್ಟಿನಲ್ಲಿ ನೋಡಿದರೆ ಯಾವ ಕೆಲಸವನ್ನೂ ನಡಿಸದೆ ತಟಸ್ಥರಾಗಿರುವುದೇ ಇವರ ಸ್ವಭಾವವಾಗಿ ಪರಿಣಮಿಸಿದೆ.

ಇತರ ದೇಶದವರಂತೆ ನಾವೂ ಹೆಚ್ಚಾದ ಅರ್ಥಸಂಪತ್ತನ್ನು ಪಡೆಯಬೇಕಾದರೆ ನಾವು ಉದ್ದೇಶವಿಲ್ಲದೆ ಪ್ರಯತ್ನ ಮಾಡುವ ಅಭ್ಯಾಸವನ್ನು ಬಿಟ್ಟುಬಿಟ್ಟು, ಪಾಶ್ಚಾತ್ಯರು ಅನುಸರಿಸಿರುವ ಮಾರ್ಗಗಳನ್ನೇ ನಾವೂ ಅನುಸರಿಸಬೇಕು. ಎಲ್ಲಾ ತರಹೆಯ ವಿದ್ಯಾಭ್ಯಾಸವನ್ನೂ ಪ್ರಚಾರಗೊಳಿಸಬೇಕು, ಕಸಬುಗಳನ್ನು ಹೆಚ್ಚಿಸಬೇಕು; ವಸ್ತೂತ್ಪತ್ತಿಯನ್ನೂ ವಾಣಿಜ್ಯವನ್ನೂ ವೃದ್ಧಿಗೊಳಿಸಬೇಕು. ನಮ್ಮ ಪ್ರತಿಯೊಂದು ಇತರ ಪ್ರವರ್ತನೆಯೂ ಸಂಪದಭಿವೃದ್ಧಿಯ ವಿಷಯಕ್ಕೆ ಅನುಗುಣವಾಗಿರಬೇಕು.

ನಮ್ಮ ಜನಗಳು ಮಾಡುವ ಕಾರ್ಯಗಳಲ್ಲಿ ಅನೇಕ ವಿಧವಾಗಿ ನಷ್ಟವುಂಟಾಗುತ್ತಲಿದೆ. ಉತ್ಪತ್ತಿಸಾಧನಗಳನ್ನು ಉಪಯೋಗಿಸಿಕೊಳ್ಳದೆ ಇರುವುದರಿಂದಲೂ, ಒದಗಿದ ಅವಕಾಶಗಳನ್ನು ಕಳೆದುಕೊಳ್ಳುವುದರಿಂದಲೂ ಉಭಯ ವಿಧವಾಗಿಯೂ ನಷ್ಟವುಂಟಾಗುತ್ತಲಿದೆ. ಸಾಮಾನ್ಯವಾಗಿ ವ್ಯವಸಾಯಗಾರರಿಗೆ ವರ್ಷಕ್ಕೆ ಆರೇಳು ತಿಂಗಳ ವರೆಗೆ ಮಾತ್ರ ಕೆಲಸವಿರುತ್ತದೆಯಾಗಿ, ಯಾವತ್ಕಾಲವೂ ಪೂರ್ತಿಯಾಗಿ ಕೆಲಸವಿಲ್ಲದೆ ಇರೋಣದರಿಂದ ಕೆಲಸ ಮಾಡತಕ್ಕ ಶಕ್ತಿಯು ವ್ಯರ್ಥವಾಗುತ್ತಲಿದೆ. ಜನಗಳಲ್ಲಿ ಶೇಕಡ 94 ಜನಗಳು ವಿದ್ಯೆ ಇಲ್ಲದವರಾಗಿರುತ್ತಾರೆಯಾಗಿ, ಹಾಗೆ ವಿದ್ಯೆ ಇಲ್ಲದೆ ಇರೋಣದರಿಂದ ಬುದ್ಧಿಶಕ್ತಿಯು ವ್ಯರ್ಥವಾಗುತ್ತಲಿದೆ. ನಾಗರಿಕ ಜನರು ಸಂಪಾದಿಸಿರುವ ಜ್ಞಾನವನ್ನೂ ಅನುಭವವನ್ನೂ ನಾವು ಉಪಯೋಗಿಸಿಕೊಳ್ಳದೇ ಬಿಟ್ಟುಬಿಡುವುದರಿಂದ, ಅವರ ಮಾರ್ಗಗಳನ್ನು ಸರಿಯಾಗಿ ತಿಳಿದುಕೊಳ್ಳದೇ ನಷ್ಟ ಉಂಟಾಗುತ್ತಲಿದೆ. ನಾಗರಿಕರಾದ ಜನಗಳಲ್ಲಿ ರೂಢಿಯಾಗಿರುವ ಸಾಮಾನ್ಯ ವಿಷಯಗಳೂ ನಮಗೆ ಸರಿಯಾಗಿ ಗೊತ್ತಿಲ್ಲದೆ ಇರೋಣದರಿಂದಲೂ, ಕೆಲಸಕಾರ್ಯಗಳನ್ನು ನಡಿಸುವುದರಲ್ಲಿ ಇಡಬೇಕಾದ ಲಕ್ಷ್ಯವೂ ನಿಕ್ಕವೂ ಅನುಸರಿಸಬೇಕಾದ ಕ್ರಮವೂ ನಮಗೆ ಗೊತ್ತಿಲ್ಲದೆ ಇರೋಣದರಿಂದಲೂ ನಷ್ಟ ಉಂಟಾಗುತ್ತಲಿದೆ. ಜಾತಿ ಕಲಹಗಳ ದೆಸೆಯಿಂದಲೂ ಗ್ರಾಮಗಳಲ್ಲಿ ಕಕ್ಷಿಗಳ ದೆಸೆಯಿಂದಲೂ ಬುದ್ಧಿಶಕ್ತಿಯು ನಷ್ಟವಾಗುತ್ತಲಿದೆ. ಹಣವನ್ನು ಲಾಭಕರವಾದ ಕೆಲಸಗಳಿಗೆ ಒದಗಿಸದೆ ಸುಮ್ಮನೆ ಕೂಡಿಡುವುದರಿಂದ ಬಂಡವಾಳವೂ ವ್ಯರ್ಥವಾಗುತ್ತಲಿದೆ. ಜನಗಳು ಯಥೋಚಿತವಾಗಿ ಜೀವನ ಮಾಡಿಕೊಂಡು ಸರಿಯಾಗಿದ್ದರೂ, ಅವರಲ್ಲಿ ದೇಹಾಭಿಮಾನವಿಲ್ಲದಿರೋಣದರಿಂದಲೂ, ಆರೋಗ್ಯ ವಿಷಯಕವಾದ ಸಾಮಾನ್ಯ ನಿಯಮಗಳಿಗೂ ಅವರು ಗಮನಕೊಡುತ್ತಿಲ್ಲವಾದುದರಿಂದಲೂ, ಗಂಡಸರೂ ಹೆಂಗಸರೂ ಸಹ ಅಕಾಲಿಕವಾಗಿ ಮೃತ್ಯುಗೊಳಗಾಗುತ್ತಿರುವರು. ಆದ್ದರಿಂದ ಸಾಮಾನ್ಯವಾಗಿ ಜನರು ಒಳ್ಳೆ ನಡತೆಯಲ್ಲಿದ್ದರೂ ಆರೋಗ್ಯಭಾಗ್ಯದಲ್ಲಿಯೂ ನಷ್ಟ ಉಂಟಾಗುತ್ತಲಿದೆ. ಸಂಸ್ಥಾನಕ್ಕೆ ವಿಶೇಷ ಪ್ರಯೋಜನಕರವಾದ ವಿಷಯಗಳಲ್ಲಿ ಜನಗಳಿಗೆ ಒಟ್ಟಾಗಿ ಸೇರಿ ಕೆಲಸ ಮಾಡತಕ್ಕ ಶಕ್ತಿಯೂ ಇಲ್ಲ, ಐಕಮತ್ಯವೂ ಇಲ್ಲ, ಪರಸ್ಪರ ಸ್ನೇಹಭಾವವೂ ಇಲ್ಲ, ಏಕರೂಪವಾದ ಮನೋಭಾವವೂ ಇಲ್ಲ. ಈ ಲೋಪಗಳೇ ಎಲ್ಲಕ್ಕಿಂತಲೂ ಹೆಚ್ಚಾದ ನಷ್ಟವಾಗಿರುತ್ತದೆ.

ವಿಷಯಗಳನ್ನು ಮುಂದುಮುಂದಾಗಿ ಆಲೋಚಿಸುವಂತೆಯೂ ಕಾರ್ಯಗಳನ್ನು ಮುಂದುಮುಂದಾಗಿ ಮಾಡುವಂತೆಯೂ ಮನುಷ್ಯಶಕ್ತಿಯನ್ನು ವ್ಯರ್ಥಮಾಡದೆ ಸರಿಯಾಗಿ ಉಪಯೋಗಿಸಿಕೊಳ್ಳುವಂತೆಯೂ ಜನಗಳನ್ನು ಪ್ರೇರಿಸುವುದು ಈ ಕಾನ್ಫರೆನ್ಸಿನ ಮುಖ್ಯ ಕರ್ತವ್ಯವಾಗಿರುತ್ತದೆ. ಮೇಲೆ ಹೇಳಿದ ನಷ್ಟಗಳನ್ನು ನಿವಾರಣೆಮಾಡುವುದೇ ಸದರಿ ಕರ್ತವ್ಯದ ಮುಖ್ಯೋದ್ದೇಶವೆಂದು ಹೇಳಬಹುದು. ಜನಗಳು ತಾವು ಈ ಕಾಲದಲ್ಲಿ ಮುಂದಕ್ಕೆ ಬರಬೇಕಾದರೆ, ತಮ್ಮ ಲಕ್ಷ್ಯವೇ ಇಂಥವುಗಳೆಂದು ನಿಶ್ಚಯಿಸಿಕೊಳ್ಳದೆಯೂ ಶ್ರದ್ಧೆಯಿಂದ ಕೆಲಸಮಾಡದೆಯೂ ಇರುವ ಅಭ್ಯಾಸವನ್ನು ಬಿಟ್ಟು, ತಮ್ಮ ಪುರೋಭಿವೃದ್ಧಿಗೆ ಅವಶ್ಯಕವಾದವು ಇಂಥಾದ್ದೆಂಬುದನ್ನು ನಿಶ್ಚೈಸಿ, ಅವುಗಳನ್ನು ಮುಖ್ಯವಾಗಿ ಲಕ್ಷ್ಯದಲ್ಲಿಟ್ಟುಕೊಂಡು ಕೆಲಸಮಾಡಬೇಕು. ಅನಂತರವೇ ಉಳಿದ ಕಾರ್ಯಗಳಿಗೂ, ಉದ್ದೇಶಗಳಿಗೂ ಗಮನ ಕೊಡಬೇಕು. ಈ ಕರ್ತವ್ಯವನ್ನು ನಮ್ಮ ಜನರು ಚೆನ್ನಾಗಿ ತಿಳಿಯಬೇಕು. ಅವರು ತಮ್ಮ ಕೆಲಸದಲ್ಲಿ ಹೆಚ್ಚು ಕಷ್ಟಪಟ್ಟು ವಿಶೇಷಕಾಲ ಶ್ರಮೆಯನ್ನು ತೆಗೆದುಕೊಂಡು, ನಾಗರಿಕತೆಯನ್ನು ಪಡೆಯಲು ಅವಶ್ಯಕವಾದ ಶಿಕ್ಷೆಗೂ ನಿರ್ಬಂಧಗಳಿಗೂ ಒಳಗಾಗಬೇಕು. ಹೀಗೆ ಮಾಡಿದಲ್ಲಿ, ಅವರಿಗೆ ನಿರಂತರವೂ ಮಾಡುವುದಕ್ಕೆ ಕೆಲಸವು ದೊರೆಯುವುದು, ಇದರಿಂದ ಅವರು ತಮ್ಮ ಸುಖವನ್ನು ಹೆಚ್ಚಿಸಿಕೊಳ್ಳಬಹುದು, ದೀರ್ಘಾಯುಷ್ಯರಾಗಿ ಆರೋಗ್ಯದಿಂದ ಬಾಳಬಹುದು, ವಸ್ತುಗಳ ಉತ್ಪತ್ತಿಯನ್ನು ಹೆಚ್ಚಿಸಬಹುದು, ಮತ್ತು ಪ್ರಪಂಚ ವ್ಯವಹಾರಗಳಲ್ಲಿ ತಾವು ಭಾಗಿಗಳಾಗಿ ಹೆಸರುವಾಸಿಯಿಂದ ಜೀವಿಸಿದೆವು ಎಂಬ ಸಂತೋಷವನ್ನು ಅನುಭವಿಸಬಹುದು.

ಈ ಪ್ರಕಾರ ಉಪನ್ಯಾಸ ಮಾಡಿದ ಬಳಿಕ ದಿವಾನ್‌ರವರು ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳನ್ನು ತೆಗೆದುಕೊಂಡು ಒಂದೊಂದಾಗಿ ಮೆಂಬರುಗಳ ಕೂಡ ಚರ್ಚೆಮಾಡಿ ಅವರ ಅಭಿಪ್ರಾಯಗಳನ್ನು ಗುರುತು ಹಾಕಿಕೊಂಡು, ಪ್ರತಿ ಒಂದು ವಿಷಯದ ಚರ್ಚೆಯೂ ಪೂರೈಸಿದ ಮೇಲೆ ಮೆಂಬರುಗಳ ಸಮ್ಮತಿಯನ್ನು ಕೇಳಿ, ಬೇಕೆಂದವರ ಸಂಖ್ಯೆಯನ್ನೂ ಬೇಡವೆಂದವರ ಸಂಖ್ಯೆಯನ್ನೂ ಬರೆದುಕೊಳ್ಳುತ್ತಾ ಬಂದರು. ಈ ಸಭೆಯಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಹ್ಯಾಗೋ ಹಾಗೆ ಮೆಂಬರುಗಳು ವಿಷಯಗಳನ್ನು ಸೂಚಿಸಿ ಚರ್ಚೆಗಳನ್ನು ನಡಿಸುವರು, ಅವುಗಳಿಗೆ ದಿವಾನ್‌ರವರು ಉತ್ತರ ಹೇಳುವುದಕ್ಕೆ ಪ್ರತಿಯಾಗಿ ಮೆಂಬರುಗಳ ಸಮ್ಮತಿಯನ್ನು ಕೇಳಿ, ಇದು ಸಭೆಯಲ್ಲಿ ಪಾಸಾಗಿದೆ ಎಂದೂ, ಇದು ಮೆಂಬರುಗಳು ಒಪ್ಪಲಿಲ್ಲವೆಂದೂ ತೀರ್ಮಾನ ಮಾಡಿಕೊಳ್ಳುತ್ತಾರೆ. ಸಭೆಯು ನೆನ್ನೇ ತನಕ ಪ್ರತಿನಿತ್ಯವೂ ನಡೆಯಿತು.

ಶ್ರೀಮನ್ಮಹಾರಾಜರವರ ವರ್ಧಂತಿಯು.

ಸಂಸ್ಥಾನದಲ್ಲಿ ನಡೆದ ಉತ್ಸವಗಳು.

ರಾಜಧಾನಿಯಲ್ಲಿ ನಡೆದ ಉತ್ಸವಗಳು

ಕಳೆದ ಗುರುವಾರ ಬೆಳಿಗ್ಗೆ 7 ಗಂಟೆಗೆ ನಮ್ಮ ಮಹಾರಾಜರವರ ವರ್ಧಂತಿ ಉತ್ಸವದ ನಿಮಿತ್ತ ಕೋಟೆಕೊತ್ತಲದಿಂದ 31 ತೋಪುಗಳು ಹಾರಿಸಲ್ಪಟ್ಟವು. ಬಳಿಕ ಅಂಬಾವಿಲಾಸದಲ್ಲಿ ವರ್ಧಂತಿ ಕಟ್ಲೆಯ ದರ್ಬಾರು ಜರುಗಿತು. ಸಂಸ್ಥಾನದ ಮುಖ್ಯ ಅಧಿಕಾರಿಗಳೂ ರಿಟೈರ್ಡ್ ಆಫೀಸರುಗಳೂ ಸರದಾರರೂ ಅರಸುಗಳೂ ವೈದಿಕಮಂಡಲಿಯವರೂ ಪ್ರಮುಖರಾದ ಪ್ರಜೆಗಳೂ ಸಮಸ್ತ ಕೋಮುಗಳ ಮತ್ತು ಕಸಬುಗಳ ಪ್ರಮುಖರೂ ದರ್ಬಾರಿನಲ್ಲಿ ಹಾಜರಾಗಿದ್ದರು. ಬ್ಯಾಂಡು ಮಂಗಳವಾದ್ಯ ತಾಳ ಮೇಳಗಳೂ ತುತೂರಿಗಳೂ ಮೊರೆಯುತ್ತಿರುವಲ್ಲಿ ಶ್ರೀಮನ್ಮಹಾರಾಜರವರು ದಿವ್ಯಾಲಂಕಾರಗಳಿಂದ ಭೂಷಿತರಾಗಿ ಶ್ರೀಮದ್ಯುವರಾಜರ ಸಮೇತ 10 ಗಂಟೆಗೆ ದರ್ಬಾರ್ ಮಂದಿರಕ್ಕೆ ಚಿತ್ತೈಸಿ, ಅಲ್ಲಿ ಶ್ರೀಸ್ವಾಸನವನ್ನಲಂಕರಿಸಿದ್ದ ಪರಕಾಲಸ್ವಾಮಿಗಳವರ ಪಾದಪೂಜಾದಿಗಳನ್ನು ನಡಿಸಿ ಅವರ ಆಶೀರ್ವಾದವನ್ನು ಶಿರಸಾವಹಿಸಿ ಬೀಳ್ಕೊಂಡು, ಸ್ವಾಮಿಗಳು ದರ್ಬಾರಿನಿಂದ ತೆರಳಿದಮೇಲೆ, ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ಸೋಫಾದಲ್ಲಿ ಕುಳಿತುಕೊಂಡರು. ದರ್ಬಾರಿಗಳು ಸಾಲುಕಟ್ಟಿ ಮುಜರೆಮಾಡಿ ಕ್ರಮವಾಗಿ ಕುಳಿತುಕೊಂಡರು. ರಾಜಪುರೋಹಿತರು ಪದ್ಧತಿಯ ಪ್ರಕಾರ ಪೂಜಾದಿಗಳನ್ನು ಮಾಡಿಸಿದರು. ಸುವಾಸಿನಿಯರು ಫಲಾದಿಗಳನ್ನು ಒಪ್ಪಿಸಿ ಆರತಿಯೆತ್ತಿದರು. ದರ್ಬಾರ್ ಭಕ್ಷಿಯವರ ಮುಖೇನ ಮಠ ದೇವಸ್ಥಾನಗಳ ಮರ್ಯಾದೆಗಳು ಆಶೀರ್ವಾದಪೂರ್ವಕವಾಗಿ ಒಪ್ಪಿಸಲ್ಪಟ್ಟವು; ವೈದಿಕಮಂಡಲಿಯವರು ಫಲಗಳನ್ನೊಪ್ಪಿಸಿ ಮಂತ್ರಾಕ್ಷತೆಗಳನ್ನು ಶಿರಸ್ಸಿನ ಮೇಲೆ ಹಾಕಿದರು. ದರ್ಬಾರ್ ಮಧ್ಯರಂಗದಲ್ಲಿ ಮನೋಹರವಾದ ಸಂಗೀತವಾಗುತ್ತಿತ್ತು. ಅಷ್ಟರಲ್ಲೇ ಶ್ರೀಮದ್ಯುವರಾಜರವರು ದರ್ಬಾರ್‌ಭಕ್ಷಿಯವರ ಸಹಾಯದಿಂದ ಮಹಾರಾಜರವರಿಗೆ ಹಾರ ಪನ್ನೀರುಗಳನ್ನು ಒಪ್ಪಿಸಿದ ಬಳಿಕ ಸರ್ದಾರ್ ಕಾಂತರಾಜೆಅರಸಿನವರು ಯುವರಾಜರವರಿಗೆ ಪುಷ್ಪಮಾಲಿಕೆ ಮುಂತಾದವುಗಳನ್ನು ಒಪ್ಪಿಸಿದರು. ಅರಮನೆ ಇಲಾಖೆಯವರು ದರ್ಬಾರಿಗಳಿಗೂ ವೈದಿಕ ಮಂಡಲಿಗೂ ಹಾರ ಪಾಕ ಅಡಕೆಲೆ ಕೊಟ್ಟದ್ದಾಯಿತು. ದರ್ಬಾರಿಗಳೆಲ್ಲಾ ಮಹಾರಾಜರವರಿಗೆ ಮುಜರೆ ಮಾಡಿದ ಮೇಲೆ ಸವಾರಿಯು ದರ್ಬಾರನ್ನು ಮುಕ್ತಾಯಮಾಡಿ ಯುವರಾಜರವರ ಸಮೇತ ಅರಮನೆಯೊಳಕ್ಕೆ ಚಿತ್ತೈಸಿತು. ಈ ಸಲ ಶ್ರೀಮನ್ಮಹಾರಾಜರವರು ಸರ್ದಾರರುಗಳಾದ ಎಂ. ಗೋಪಾಲರಾಜೆಅರಸಿನವರಿಗೂ, ಎಂ. ಗೋಪಾಲಕೃಷ್ಣೆಅರಸಿನವರಿಗೂ, ಎ. ವಿ. ಸುಬ್ರಹ್ಮಣ್ಯರಾಜೆಅರಸಿನವರಿಗೂ, ಎಂ. ಎನ್. ಬಾಳರಾಜೆಅರಸಿನವರಿಗೂ ಶ್ರೇಷ್ಠವೂ ನವೀನವೂ ಆದ ದರ್ಬಾರ್ ದಿರಸುಗಳನ್ನು ದಯಪಾಲಿಸಿರುತ್ತಾರೆ.

ಆ ದಿನ ಸಾಯಂಕಾಲ ಶ್ರೀಮನ್ಮಹಾರಾಜರವರು ದಿವ್ಯವಾದ ಪೋಷಾಕನ್ನೂ ಅಮೂಲ್ಯವಾದ ರತ್ನಾಭರಣಗಳನ್ನೂ ಧರಿಸಿದವರಾಗಿ ಶ್ರೀಮದ್ಯುವರಾಜರವರೊಡನೆ ಶ್ರೇಷ್ಠವಾದ ಕುದುರೆಗಳ ಮೇಲೆ ಕುಳಿತು ವರ್ಧಂತಿ ಕಟ್ಲೆಯ ಮೆರವಣಿಗೆಯಲ್ಲಿ ದಯಮಾಡಿದರು. ಸಕಲ ಮರ್ಯಾದೆಗಳೂ, ಸೈನ್ಯಗಳೂ, ಸಮಸ್ತ ಅಧಿಕಾರಿಗಳೂ ಮೆರವಣಿಗೆಯಲ್ಲಿದ್ದರು. ಈ ಉತ್ಸವವು ಗೌರವಾರ್ಥವಾದ ತೋಪುಗಳಾಗುತ್ತಿರುವಲ್ಲಿ ಅರಮನೆಯಿಂದ ಹೊರಟು ದಿವ್ಯವಾಗಿ ನಾನಾ ಪ್ರಕಾರ ಅಲಂಕರಿಸಲ್ಪಟ್ಟಿದ್ದ ರಾಜಬೀದಿಗಳಲ್ಲಿ ಹೊರಟು ಗವರ್ನ್‌ಮೆಂಟ್ ಹೌಸ್ ಬಂಗಲೆಯನ್ನು ತಲುಪಿತು. ರಸ್ತೆಯ ಉದ್ದಕ್ಕೂ ಗಣ್ಯ ಪ್ರಜೆಗಳು ಮಹಾರಾಜರವರಿಗೂ ಯುವರಾಜರವರಿಗೂ ಹಾರ ತುರಾಯಿಗಳನ್ನೂ ಫಲಾದಿಗಳನ್ನೂ ಒಪ್ಪಿಸಿದರು. ಸಾವಿರಾರು ಪ್ರಜೆಗಳು ಕಿಕ್ಕಿರಿಯುವಂತೆ ರಸ್ತೆಗಳಲ್ಲೂ ಕಟ್ಟಡಗಳ ಮೇಲೂ ನಿಂತು ಮೆರವಣಿಗೆಯ ಆಟ್ಟಹಾಸವನ್ನು ನೋಡಿ ಆನಂದಪಡುತ್ತಾ ಮಹಾರಾಜರವರ ಮತ್ತು ಯುವರಾಜರವರ ದರುಶನಹೊಂದಿ ಅವರುಗಳಿಗೆ ದೀರ್ಘಾಯುರಾರೋಗ್ಯಾದಿಗಳನ್ನು ಬಯಸುತ್ತಾ ಕೋಲಾಹಲಧ್ವನಿ ಮಾಡುತ್ತಿದ್ದರು.—ಮಹಾರಾಜರವರು ಯುವರಾಜರವರೊಡನೆ ಗವರ್ನ್‌ಮೆಂಟ್ ಹೌಸಿನ ಮೈದಾನಿನಲ್ಲಿ ಸೈನ್ಯಗಳ ಕವಾತನ್ನು ನಡಿಸಿದರು. ಸೈನ್ಯಗಳು ಸಾಲುಕಟ್ಟಿ ನಿಂತು ಮಹಾರಾಜರವರಿಗೆ ಒಂದೇ ಧ್ವನಿಯಲ್ಲಿ ಶ್ರೇಯಸ್ಸನ್ನು ಬಯಸಿ, ಕುಶಾಲ್ ಫಿರಂಗಿಗಳು ಹಾರಿಸಿದ ಬಳಿಕ ರಾಜಸಹೋದರರು ಮೈದಾನಿನಿಂದ ಬಂಗಲೆಗೆ ಚಿತ್ತೈಸಿದರು. ಮೆರವಣಿಗೆಯಲ್ಲಿ ಹೋಗಿದ್ದ ಅಧಿಕಾರಿಗಳೇ ಮೊದಲಾದವರಿಗೆಲ್ಲಾ ಅರಮನೆ ಇಲಾಖೆಯವರು ಅಲ್ಪಾಹಾರಗಳನ್ನು ಕೊಡಿಸಿದರು. ಪುನಃ ಮಹಾರಾಜರವರು ಮೊದಲಿನಂತೆಯೇ ಮೆರವಣಿಗೆ ಮಾಡಿಕೊಂಡು ದಿವ್ಯವಾದ ದೀಪೋತ್ಸವದ ಮಧ್ಯೆ, ಅಶ್ವಾರೂಢರಾಗಿ ಹಿಂತಿರುಗಿ ದಯಮಾಡಿ ರಾತ್ರಿ ಸುಮಾರು 9 ಗಂಟೆಗೆ ಅರಮನೆಯನ್ನು ತಲುಪಿದರು. ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಇರುವ ರಿಜಮೆಂಟ್ ಕುದುರೆಗಳಿಗೆ ಕಾಯಿಲೆ ಪ್ರಾಪ್ತವಾಗಿ ಚಿಕಿತ್ಸೆ ಹೊಂದುತ್ತಿರುವ ಕಾರಣ ಸವಾರರು ಕುದುರೆಗಳಿಲ್ಲದೆ ಮೆರವಣಿಗೆಯಲ್ಲಿ ಸಿಪಾಯಿಗಳಂತೆ ನಡೆದು ಹೋದರು. ಇದು ಆ ದಿನ ನೋಟಕರಲ್ಲಿ ಸ್ವಲ್ಪ ಚಿಂತೆಯನ್ನುಂಟುಮಾಡಿತು.

ಶುಕ್ರವಾರವೂ ಶನಿವಾರವೂ ರಾತ್ರಿ ಶ್ರೀಮನ್ಮಹಾರಾಜರವರಿಗೆ ಅಂಬಾವಿಲಾಸ ಭವನದಲ್ಲಿ ಆರತಕ್ಷತೆಗಳು ಬೆಳೆದವು. ಈ ದರ್ಬಾರುಗಳಲ್ಲಿ ಲೌಕಿಕರೂ, ಸೈನ್ಯದ ಹುದ್ದೇದಾರರೂ, ಪೋಲೀಸ್ ಹುದ್ದೇದಾರರೂ ಮಹಾರಾಜರವರಿಗೆ ನಜರುಗಳನ್ನು ಒಪ್ಪಿಸಿದರು. ಈ ಮೂರು ದಿನಗಳೂ ಅರಮನೆಯ ಮೇಲ್ಭಾಗದಲ್ಲೂ ಸುತ್ತುಮುತ್ತಣ ಪ್ರದೇಶಗಳಲ್ಲೂ ಸಾವಿರಾರು ವಿದ್ಯುಚ್ಛಕ್ತಿಯ ದೀಪಗಳು ಹಚ್ಚಲ್ಪಟ್ಟು, ಉತ್ಸವಗಳ ವೈಭವವನ್ನು ಅತ್ಯಂತ ಶೋಭಾಯಮಾನ ಮಾಡಿದವು.

ಬೆಂಗಳೂರು ಶ್ರೀನಿವಾಸಮಂದಿರ.

ಬೆಂಗಳೂರು ಶ್ರೀನಿವಾಸಮಂದಿರದಲ್ಲಿ ನಮ್ಮ ಮಹಾರಾಜರವರ ವರ್ಧಂತಿ ಉತ್ಸವದ ನಿಮಿತ್ತ ಸಂತೋಷೋತ್ಸವ ನಡೆಯಿತು. ಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆಗಳೂ ಉತ್ಸವಗಳೂ ಶ್ರೇಯಃ ಪ್ರಾರ್ಥನೆಗಳೂ ನಡಿಸಲ್ಪಟ್ಟವು. ಸ್ತ್ರೀಸಮಾಜದ ಮೆಂಬರುಗಳು ಒಂದು ಸಂತೋಷಕೂಟವನ್ನು ಜರುಗಿಸಿದರು. ಪ್ರೆಸಿಡೆಂಟರೇ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಅನೇಕ ಮೆಂಬರುಗಳು ಮೈಸೂರಿಗೆ ಹೊರಟುಹೋಗಿದ್ದರಾದರೂ ಸಭೆಯಲ್ಲಿ ಬಹುಮಂದಿ ಸ್ತ್ರೀಯರು ಹಾಜರಾಗಿದ್ದರು. ವಾದ್ಯಗಾನವೂ ಹಾಡುಗಾರಿಕೆಯೂ ಬೆಳೆದವು. ಪ್ರೆಸಿಡೆಂಟರೂ ಶ್ರೀಮತಿ ಲಕ್ಷ್ಮಮ್ಮನವರೂ ರಾಜಭಕ್ತಿಪೂರ್ವಕವಾದ ಉಪನ್ಯಾಸಗಳನ್ನು ನಡಿಸಿ ನಮ್ಮ ಮಹಾರಾಜರವರ ಆಳ್ವಿಕೆಯ ವಿಚಕ್ಷಣೆಯನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಗಳನ್ನು ಮಾಡಿದರು. ಕಡೆಯಲ್ಲಿ ಮೈಸೂರು ಸಲಾಂ ಬಾಜಾ ನಡೆದು, ಸಭಿಕರಿಗೆ ಗಂಧಪುಷ್ಪಾದಿಗಳು ವಿನಿಯೋಗಮಾಡಲ್ಪಟ್ಟವು. ಮರುದಿನ ಬಡವರು, ಅಂಗಹೀನರು, ದುರ್ಬಲರು, ಕಂಗಾಳಿಗರು ಮೊದಲಾದ ಸುಮಾರು 2,000 ಜನರಿಗೆ ಸ್ತ್ರೀಸಮಾಜದವರು ಮೃಷ್ಟಾನ್ನ ಭೋಜನವನ್ನು ಮಾಡಿಸಿದರು. ಈ ಪೈಕಿ ಅನೇಕ ಜನರು ಪಂಚಮರಾಗಿದ್ದರು. ಈ ಸಂದರ್ಭದಲ್ಲಿ ಸಹಾಯಮಾಡಿದ ಪೋಲೀಸ್ ನೌಕರರನ್ನೂ ಮ್ಯುನಿಸಿಪಾಲಿಟಿಯವರನ್ನೂ ಮಂದಿರದವರು ಬಹಳವಾಗಿ ವಂದನೆ ಮಾಡುತ್ತಾರೆ.

ಮಧುಗಿರಿ

ಕಳೆದ ತಾ 4 ನೇ ಗುರುವಾರ ನಮ್ಮ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವು ತಕ್ಕ ಮಟ್ಟಿಗೂ ಗಂಭೀರವಾಗಿ ನಡೆಯಿತು. ಇದಕ್ಕಾಗಿ ಎ. ವಿ. ಸ್ಕೂಲನ್ನು ಅಲಂಕರಿಸಿದ್ದರು. ಬೆಳಿಗ್ಗೆ ಎಲ್ಲಾ ಸ್ಕೂಲ್ ಬಾಲಕ ಬಾಲಕಿಯರು ಹಾಜರಾಗಿ ಪ್ರಭುಗಳ ಶ್ರೇಯಃಪ್ರಾರ್ಥನೆಯ ಹಾಡುಗಳನ್ನು ಹೇಳಿದರು. ಸೆಲ್ಯೂಟ್ ಮುಂತಾದದ್ದು ನಡೆದ ನಂತರ ದರ್ಬಾರ್ ಮುಗಿಯಿತು. ಮಧ್ಯಾಹ್ನ 3 ಘಂಟೆಗೆ ಸದರಿ ಹಾಲ್‌ನಲ್ಲಿ ನಮ್ಮ ಅ. ಕಮಿಷನರ್‌ರವರು, ಮುನ್ಸೀಫರವರು, ಡಾಕ್ಟರವರು, ಪ್ಲೀಡರುಗಳು, ಶೆಟ್ಟಿ ವರ್ತಕರೇ ಆದಿಯಾಗಿ ಸೇರಿ, ಸ್ಕೂಲ್ ಬಾಲಕ ಬಾಲಕಿಯರುಗಳಿಂದ ಆಟಪಾಟಗಳನ್ನು ಆಡಿಸಿ ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು. ಮುನ್ಸಿಫ್ ಮ॥ ಶ್ರೀಕಂಠೇಗೌಡರು ಅಗ್ರಾಸನ ಸ್ಥಾನವನ್ನು ಸ್ವೀಕರಿಸಿದ ನಂತರ ಆರ್ಯಬಾಲಿಕಾ ಶಾಲೆಯ ಹೆಣ್ಣು ಮಕ್ಕಳು ಮಹಾರಾಜರವರ ಶ್ರೇಯಃ ಪ್ರಾರ್ಥನಾ ಹಾಡನ್ನು ಹೇಳಿದರು. ಮ॥ ನರಸಿಂಹಯ್ಯನವರೂ ರಾಮರಾಯರೂ ಪ್ರಜೆಗಳಿಗೆ ಪ್ರಭುಗಳ ಮೇಲಿರಬೇಕಾದ ಭಕ್ತಿ ಅನುರಾಗಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಗಳನ್ನು ಓದಿ ಹೇಳಿದರು. ನಂತರ ಬಾಲಕಬಾಲಕಿಯರುಗಳಿಗೆ ಮಿಠಾಯಿ ಹಂಚಿ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲವನ್ನು ಕೊಡುತ್ತಾ, ಮಿಷನ್ ಸ್ಕೂಲ್ ಹೆಣ್ಣು ಮಕ್ಕಳು ಮಂಗಳವನ್ನು ಹಾಡುತ್ತಿರುವಲ್ಲಿ ಸಭೆಯು ಬರ್ಖಾಸ್ತಾಯಿತು. ಈ ಉತ್ಸವ ಕಾರ್ಯದಲ್ಲಿ ನಮ್ಮ ಅ॥ ಕಮಿಷನರ್‌ರವರು ಕೇವಲ ಶ್ರದ್ಧೆಯನ್ನು ವಹಿಸಿ ನಡಿಸಿದಕ್ಕಾಗಿ ಅವರನ್ನು ಬಹಳವಾಗಿ ವಂದಿಸಬೇಕಾಗಿದೆ.

ಹಾಸನ.

ತಾ 4 ನೇ ಗುರುವಾರ ಬೆಳಿಗ್ಗೆ ಈ ಟವನ್‌ನಲ್ಲಿರುವ ವಿವಿಧ ಪಾಠಶಾಲೆಗಳ ವಿದ್ಯಾರ್ಥಿಗಳನ್ನೂ ಆಯಾ ಶಾಲೆಗಳಲ್ಲಿಯೇ ಸೇರಿಸಿ, ನಮ್ಮ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್, ಜಿ. ಸಿ. ಎಸ್. ಐ. ಯವರ ಮಹೋದಾರ ಚರಿತ್ರೆಯನ್ನು ಆಯಾ ಶಾಲೆಗಳ ಉಪಾಧ್ಯಾಯರು ಬಾಲ ಬಾಲೆಯರಿಗೆಲ್ಲಾ ತಿಳಿವಿಗೆ ಬರುವ ರೀತಿಯಲ್ಲಿ ವಿವರಿಸಿ, ಅವರಿಂದ ಶ್ರೇಯಃಪ್ರಾರ್ಥನೆಯ ಗೀತಗಳನ್ನು ಹಾಡಿಸಿ, ಕಡೆಯಲ್ಲಿ ಎಲ್ಲರಿಗೂ ತಿಂಡಿಯನ್ನು ಹಂಚಿ ಸಂತೋಷಪಡಿಸಿದರು. ಸಾಯಂಕಾಲ ಎಲ್ಲಾ ಬಾಲಕ ಬಾಲಕಿಯರನ್ನೂ ಜೂಬಿಲಿ ಹಾಲ್ ಮೈದಾನದಲ್ಲಿ ಸೇರಿಸಿ ಆಟ, ಆಟ ಮುಂತಾದ ಪಂದ್ಯಗಳನ್ನು ಮಾಡಿಸಿ ಗೆದ್ದವರಿಗೆ ಬಹುಮಾನಗಳನ್ನು ಕೊಡಿಸಿದರು. ಈ ಬಹುಮಾನಾಧ್ಯಕ್ಷತೆಯನ್ನು ಟ್ರೆಜರಿ ಚಾರ್ಜ್‌ಲ್ಯಾಂಡ್ ದೊರೆಸಾನಿಯವರು ವಹಿಸಿ ನಡಿಸಿದರು. ಅನಂತರ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಅಲಂಕರಿಸಿ ವಾಣೀವಿಲಾಸ ಪಾಠಶಾಲೆಯಿಂದ ಹೊರಡಿಸಿ ವಿಶಿಷ್ಟ ಮರ್ಯಾದೆಗಳೊಡನೆ ಈ ಟವನಿನ ಎಲ್ಲಾ ಭಾಗಗಳಲ್ಲೂ ಮಂಗಳವಾದ್ಯ ಸಹಿತ ಸಂಭ್ರಮದಿಂದ ಮೆರವಣಿಗೆ ಮಾಡಲಾಯಿತು. ಮಹಾರಾಜರವರ ಶ್ರೇಯಃಪ್ರಾರ್ಥನೆ ನಡಿಸಲಾಯಿತು. ಇದು ಸರ್ವರ ಮನಸ್ಸಿಗೂ ಆನಂದದಾಯಕವಾಗಿ ರಾತ್ರಿ 8 ಗಂಟೆಗೆ ಮುಕ್ತಾಯವಾಯಿತು. ಅಧಿಕಾರಿಗಳೂ ಪ್ರಜೆಗಳೂ ವಿದ್ಯಾರ್ಥಿಗಳೂ ಸೇರಿ ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಜಯಘೋಷಿಸಿದರು. ಬಾಣಬಿರುಸುಗಳೂ ಅಟ್ಟಹಾಸವಾಗಿ ನೆರವೇರಿಸಲ್ಪಟ್ಟವು. ಅನಂತರ ಸಕಲರೂ ಸ್ವಸ್ಥಾನಗಳಿಗೆ ತೆರಳಿದರು.

ತರಿಕೆರೆ.

ಕಳೆದ ತಾ 4 ರಲ್ಲಿ ನಮ್ಮ ಮಹಾರಾಜಾ ಬಹದ್ದೂರರವರ ವರ್ಧಂತಿಯು ಬಹು ಅಟ್ಟಹಾಸದಿಂದ ನೆರವೇರಿತು. ನಮ್ಮ ಅಮಲ್ದಾರರವರು ಬೆಳಿಗ್ಗೆ ಬಾಲಕ ಬಾಲಕಿಯರ ಪಾಠಶಾಲೆಗೆ ಇತರ ಅಧಿಕಾರಿಗಳ ಮತ್ತು ದೊಡ್ಡ ಮನುಷ್ಯರ ಸಮೇತ ದಯಮಾಡಿ ಮಕ್ಕಳಿಗೆ ಮಾವಿನ ಹಣ್ಣುಗಳನ್ನು ಹಂಚಿ ಮಕ್ಕಳಿಗೆ ಆ ದಿನದ ಉತ್ಸವದ ವಿಷಯದಲ್ಲಿ ತಿಳುವಳಿಕೆ ಹೇಳಿ ನಂತರ ಮಹಾರಾಜಾ ಬಹದ್ದೂರರವರ ತಸ್ವೀರುಗಳನ್ನು ಪಾಲಕಿಯಲ್ಲಿಟ್ಟು ರಾಜಮರ್ಯಾದೆಗಳೊಂದಿಗೆ ಊರಲ್ಲಿ ಮೆರವಣಿಗೆ ಮಾಡಿ, ಕಚೇರಿ ಮುಂಭಾಗಕ್ಕೆ ಬಂದು ಸೆಲ್ಯೂಟ್ ಮಾಡಿಸಿದರು. ಮಧ್ಯಾಹ್ನಾನಂತರ ಬಾಲಕಬಾಲಕಿಯರಿಗೆ ತಕ್ಕ ಆಟಗಳನ್ನೇರ್ಪಡಿಸಿದ್ದರು. ಇತರರೂ ಈ ಆಟಗಳಿಗೆ ಸೇರಿದ್ದಲ್ಲದ ಕೆಲವು ಕುಸ್ತಿಗಳೂ ನಡೆದವು. ಮಕ್ಕಳಿಗೆ ಮಿಠಾಯಿಯೂ, ದೊಡ್ಡವರಿಗೆ ಟೀ ಪಾರ್ಟಿಯೂ ನಡೆಯಿತು. ಕಡೆಗೆ ಗೆದ್ದವರಿಗೆ ಇನಾಮು ಕೊಡಲು ಮುಂಚಿತವಾಗಿ ಕೂಡಿಬಂದ ಸಮೂಹದಲ್ಲಿ ಮಿ॥ ಬಾಬಾಸಾಹೇಬರು ಸಂತೋಷವಾಗಿ ಮಹಾರಾಜರ ಗುಣಕಥನವನ್ನು ಮಾಡಿದರು. ತರುವಾಯ ಮಹಮದೀಯ ಸ್ಕೂಲ್ ಬಾಲಕರು ಮಹಾರಾಜರ ಶ್ರೇಯಃ ಪ್ರಾರ್ಥನೆಯ ಹಾಡನ್ನು ಹೇಳಿದರು. ಇನಾಮುಗಳು ಕೊಡಲ್ಪಟ್ಟವು. ಕುಸ್ತಿಯಲ್ಲಿ ಗೆದ್ದವರಿಗೆ ಉಡಿಗೆಗಳೂ, ಮಕ್ಕಳಿಗೆ ದುಡ್ಡು ಇನಾಮು ಸಿಕ್ಕಿತು. ಕಡೆಯಲ್ಲಿ ಕೋರಿಯ ಮ॥ ರಾಮರಾಯರು ಸಮಯೋಚಿತವಾದ ಉಪನ್ಯಾಸಮಾಡಿದರು. ನಂತರ ಪುಷ್ಪ ತಾಂಬೂಲಗಳೊಡನೆ ಸಭೆಯು ಮುಕ್ತಾಯವಾಯಿತು. ಆ ದಿನದ ಈ ಉತ್ಸವಕ್ಕೂ, ಮಕ್ಕಳ ಸಂತೋಷಕ್ಕೂ ಮ್ಯುನಿಸಿಪಲ್ ಮೆಂಬರು ಮ॥ ಹನುಮಂತಯ್ಯನವರೂ, ಮ॥ ಮರಿಶಂಕರಯ್ಯನವರೂ, ಮಿ॥ ಬಾಬಾ ಸಾಹೇಬರೂ, ಇತರ ದೊಡ್ಡ ಮನುಷ್ಯರೂ ಸಹಾಯ ಮಾಡಿ ಜನರ ಹೊಗಳಿಕೆಗೆ ಪಾತ್ರರಾಗಿದ್ದಲ್ಲದೆ ತಮ್ಮ ರಾಜಭಕ್ತಿಯನ್ನು ಈ ಮೂಲಕ ಪ್ರಕಟಪಡಿಸಿದರು.

ಚಿತ್ರದುರ್ಗ

ಜೂನ್ ತಾ. 4 ನೇ ಗುರುವಾರ ಬೆಳಿಗ್ಗೆ ಟವನ್ ಹಾಲ್ ಮಂದಿರವನ್ನು ತೋರಣ ಬಾವುಟಾಗಳಿಂದ ಅಲಂಕರಿಸಿದ್ದರು. ಊರಿನ ದೊಡ್ಡ ದೊಡ್ಡ ಶೆಟ್ಟಿ ವರ್ತಕರು, ಆಫೀಸರುಗಳು, ಸ್ಕೂಲ್ ಮಾಸ್ಟರುಗಳು, ಡಿಸ್ಟ್ರಿಕ್ಟ್ ತಾಲ್ಲೂಕು ನೌಕರರು, ಲಾಯರುಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು, ಮೊದಲಾದ ಅನೇಕ ಜನಗಳು ಸಭಾಮಂದಿರವು ಕಿಕ್ಕಿರಿಯುವಂತೆ ಸೇರಿದರು. ರಿಟೈರ್ಡ್ ಆಫೀಸರು ಮ॥ ಭೀಮಸೇನರಾಯರಿಂದ ಅಗ್ರಾಸನಾಧಿಪತ್ಯವು ವಹಿಸಲ್ಪಟ್ಟಿತ್ತು. ಮುಂದಕ್ಕೆ ಸಭೆಯ ಕಾರ್ಯಗಳು ಅತ್ಯಂತ ವಿಜೃಂಭಣೆಯಿಂದ ನಡೆದವು. ಹೈಸ್ಕೂಲ್ ಪಂಡಿತರು ವೇ॥ ಭೀಮಸೇನಾಚಾರ್ಯರು ರಾಜರಿಗೂ ಪ್ರಜೆಗಳಿಗೂ ಇರುವ ಸಂಬಂಧವನ್ನು ಅವರ ವರ್ಧಂತಿ ಉತ್ಸವದಲ್ಲಿ ಪ್ರಜೆಗಳು ತೋರಿಸಬೇಕಾದ ರಾಜಭಕ್ತಿಯನ್ನು ಕುರಿತು ಉಪನ್ಯಾಸಮಾಡಿದರು. ವಿದ್ಯಾರ್ಥಿನಿಯರು ಮಾಡಿದ ಶ್ರೇಯಃ ಪ್ರಾರ್ಥನೆಗಳೂ, ಸಂಗೀತವಿದ್ವಾಂಸರ ಗಾನವೂ ನಡೆದವು. ನಂತರ ಮ॥ ವೀರಭದ್ರಪ್ಪನವರು ಮಹಾರಾಜರವರ ಗುಣಕಥನ, ಅವರಿಗೆ ಪ್ರಜೆಗಳಲ್ಲಿರುವ ವಿಶ್ವಾಸ, ಅವರಿಂದ ನಡೆದ ಪ್ರಜೋಪಕಾರ ಕಾರ್ಯಗಳು, ಇವುಗಳನ್ನೆಲ್ಲಾ ಚರಿತ್ರರೂಪವಾಗಿ ವಿವರಿಸಿ ಹೇಳಿದರು. ಸರ್ವರೂ ಗಂಧ ಪುಷ್ಪ ತಾಂಬೂಲಾಗಳಿಂದ ಸತ್ಕೃತರಾದರು. ರಾಜ ಮರ್ಯಾದಾರ್ಥವಾಗಿ ಗುಂಡುಗಳು ಹಾರಿಸಲ್ಪಟ್ಟವು. ತರುವಾಯ ರಾಜಾಶೀರ್ವಾದವೂ ಅಗ್ರಾಸನಾಧಿಪತಿಗಳ ಭಾಷಣವೂ ನಡೆದವು. ಆ ದಿನ ಮಧ್ಯಾಹ್ನ ವಿದ್ಯಾರ್ಥಿಗಳಿಗೆ ಪಂದ್ಯಗಳನ್ನೇರ್ಪಡಿಸಿದರು. ಅನೇಕ ಬಾಲಕರಿಗೂ, ಪೋಲೀಸ್, ಬಾರ್‌ಶಿಪಾಯಿಗಳಿಗೂ ಬಹುಮಾನಗಳು ದೊರೆತವು. ಎಲ್ಲರೂ ಜಯಘೋಷಗಳೊಡನೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಎಲ್ಲಾ ದೇವಸ್ಥಾನಗಳಲ್ಲಿಯೂ ಪೂಜಾದಿ ರಾಜಾಶೀರ್ವಾದಗಳು ನಡಿಸಲ್ಪಟ್ಟವು. ಇವುಗಳಿಗೆ ತಕ್ಕ ಉತ್ಸಾಹಕೊಟ್ಟು ಉತ್ಸವವನ್ನು ಬಹು ವಿಜೃಂಭಣೆಯಿಂದ ನಡೆಯುವಂತೆ ಏರ್ಪಡಿಸಿದ ನಮ್ಮ ವೈಸ್ ಪ್ರೆಸಿಡೆಂಟರವರು ಮ. ರಾಮಚಂದ್ರರಾಯರವರಿಗೆ ಸರ್ವರೂ ಕೃತಜ್ಞತರಾಗಿರುತ್ತಾರೆ.

ಆಜಂಪುರ

ತಾ 4 ನೇ ಗುರುವಾರ ಶ್ರೀಮನ್ ಮಹಾರಾಜರವರ ಜನ್ಮದಿನವಾದ ಪ್ರಯುಕ್ತ ಈ ಊರಿನ ಬಾಲಕರೂ ಬಾಲಕಿಯರೂ ಬಾಯ್ಸ್ ಸ್ಕೂಲ್ ಕಟ್ಟಡದಲ್ಲಿ ಸಂತೋಷೋತ್ಸವಗಳನ್ನು ನಡಿಸಿದರು. ಆ ದಿನದ ಕೆಲಸಗಳು ನಡೆಯಲು ರಾಜಭಕ್ತಿಪರಾಯಣರಾದ ಗ್ರಾಮದ ವಿದ್ಯಾಭಿಮಾನಿಗಳೆಲ್ಲರೂ ಪ್ರೋತ್ಸಾಹಕರಾಗಿದ್ದರು. ಈ ಉತ್ಸವದ ಅಂಗವಾಗಿ ಹೊಸದಾಗಿ ಕಟ್ಟಿರುವ ಪಂಚಮರ ಸ್ಕೂಲ್ ಕಟ್ಟಡದಲ್ಲಿ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡಿಸಲ್ಪಟ್ಟಿತು. ಈ ಪ್ರದರ್ಶನವು ಇಲ್ಲಿನ ಡಾಕ್ಟರು ಬಾಲಕೃಷ್ಣಯ್ಯರವರಿಂದ ಪ್ರಾರಂಭಿಸಲ್ಪಟ್ಟಿತಲ್ಲದೆ ಆ ದಿನದ ಎಲ್ಲಾ ಕಾರ್ಯಗಳೂ ಅವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಮಧ್ಯಾಹ್ನ 2 ಗಂಟೆಗೆ ಸ್ಕೂಲ್ ಕಟ್ಟಡಗಳನ್ನು ಧ್ವಜಪಟಗಳು ಮತ್ತು ಮಂಗಳ ತೋರಣಗಳಿಂದಲಂಕರಿಸಿ ಒಳಗಡೆ ಮಧ್ಯದಲ್ಲಿ ಶ್ರೀಮನ್ ಮಹಾರಾಜರವರ ಮತ್ತು ಪಕ್ಕಗಳಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ದಂಪತಿಗಳ ಭಾವಚಿತ್ರಗಳನ್ನಿಟ್ಟಲಂಕರಿಸಿ ಉಪಾಧ್ಯಾಯರುಗಳೆಲ್ಲರೂ ವಿದ್ಯಾರ್ಥಿಗಳೊಂದಿಗೆ ಸೇರಿದ್ದರು. ಆಗ ಅಧ್ಯಕ್ಷರಾದ ಬಾಲಕೃಷ್ಣಯ್ಯರವರೂ ಗ್ರಾಮ ಮುಖಂಡರುಗಳೂ ದಯಮಾಡಿಸಿದರು. ಮ॥ ಎ. ಸೀತಾರಾಮಯ್ಯನವರು ಆ ದಿನ ಎಲ್ಲರೂ ಸೇರಿರುವುದಕ್ಕೆ ಕಾರಣವನ್ನು ತಿಳಿಸಿ ಶ್ರೀಮನ್ ಮಹಾರಾಜರವರ ಗುಣಕಥನಮಾಡಿ ರಾಜಭಕ್ತಿವಿಷಯದಲ್ಲಿ ಕೆಲವು ಮಾತುಗಳನ್ನಾಡಿ ಬಾಲಕರಿಂದ ಭಾವಚಿತ್ರಗಳಿಗೆ ಸೆಲ್ಯೂಟ್ ಮಾಡಿಸಿದರು. ನಂಜುಂಡಯ್ಯನವರು ಬಾಲಕರಿಂದ ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿಗಳ ಶ್ರೇಯಃ ಪ್ರಾರ್ಥನೆಗಳನ್ನು ಹೇಳಿಸಿದರು. ಹೊರಭಾಗದಲ್ಲಿ ಮಂಗಳವಾದ್ಯಗಳು ಘೋಷಿಸುತ್ತಿದ್ದವು. ಅನಂತರ ರಂಗಯ್ಯನವರು ಬಾಲಕರಿಂದ ಸಂತೋಷವಾದ ವಿಧವಿಧವಾದ ಆಟಗಳನ್ನು ಆಡಿಸಿದರು. ವೆಂಕಟರಮಣಾಚಾರ್ಯರೂ, ರಾಮಕೃಷ್ಣಯ್ಯನವರೂ ಬಂದ ದೊಡ್ಡ ಮನುಷ್ಯರುಗಳಿಗೆ ಗಂಧ ಪುಷ್ಪ ತಾಂಬೂಲಗಳನ್ನು ಹಂಚುವುದರಲ್ಲೂ, ಬಾಲಕರಿಗೆ ತಿಂಡಿಗಳನ್ನು ಕೊಟ್ಟು ಆದರಿಸುವುದರಲ್ಲೂ ನಿರತರಾಗಿದ್ದರು. ಆಟಗಳಲ್ಲಿ ಗೆದ್ದವರಿಗೂ, ವಸ್ತು ಪ್ರದರ್ಶನಕ್ಕೆ ಉತ್ತಮವಾದ ಪದಾರ್ಥಗಳನ್ನು ಮಾಡಿಕೊಟ್ಟವರಿಗೂ ಅಧ್ಯಕ್ಷರಿಂದ ಬಹುಮಾನಗಳು ಕೊಡಲ್ಪಟ್ಟವು. ವಸ್ತು ಪ್ರದರ್ಶಕ್ಕೆ ಬಾಲಕರು ಬೆಂಡಿನ ಕೆಲಸ, ಚಿತ್ರ, ಮ್ಯಾಪ್ ಡ್ರಾಯಿಂಗ್, ಮಣ್ಣಿನ ಕೆಲಸ, ಕಾಗದ ಕತ್ತರಿಸುವುದು ಮೊದಲಾದ ಕೆಲಸಗಳನ್ನು ಬಹು ಅಂದವಾಗಿ ಮಾಡಿದ್ದರು. ಪ್ರದರ್ಶನಶಾಲೆಯಲ್ಲಿ ಹಳಿಗೆಯ ನೋಟಿ ಈ ಸ್ಕೂಲ್ ಟೀಚರುಗಳಿಂದಲೂ, ಹುಣಿಸೆ ಗಟ್ಟದ ನರಸಣ್ಣನವರಿಂದಲೂ, ಕೆಲವು ವಿದ್ಯಾರ್ಥಿಗಳಿಂದಲೂ ನೇತ್ರಾನಂದಕರಗಳಾದ ಕೆಲವು ಚಿತ್ರಗಳು ಬರೆಯಲ್ಪಟ್ಟಿದ್ದವು. ಕಡೆಗೆ ಟಿಫನ್ ಪಾರ್ಟಿಯು ನಡೆಯಿತು. ಅನಂತರ ಅಧ್ಯಕ್ಷರು—ಆ ದಿನದ ಕೆಲಸಗಳನ್ನೆಲ್ಲಾ ಸ್ಕೂಲ್ ಮಾಸ್ಟರುಗಳೆಲ್ಲರೂ ಐಕಮತ್ಯದಿಂದ ನೆರವೇರಿಸಿದ್ದಕ್ಕಾಗಿ ಬಹಳವಾಗಿ ಶ್ಲಾಘಿಸಿದರು. ಅದಕ್ಕೆ ಉಪಾಧ್ಯಾಯರುಗಳೆಲ್ಲಲೂ ಅಧ್ಯಕ್ಷರನ್ನು, ಆ ದಿನದ

ಕೆಲಸಗಳಿಗೆ ಸಲಹೆಗಳನ್ನು ಕೊಟ್ಟು ದಯಮಾಡಿದ್ದ ಮ॥ ರಾಘವಾಚಾರ್ರನ್ನೂ, ಸೇರಿದ್ದ ಇತರ ದೊಡ್ಡ ದೊಡ್ಡ ಮನುಷ್ಯರುಗಳನ್ನೂ ಕೃತಜ್ಞತೆಯಿಂದ ವಂದಿಸಿದರು. ಈ ಮಧ್ಯೆ ಈ ವರ್ಷ ಈ ಸ್ಕೂಲಿನಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ 3 ಮಂದಿಯೂ ತೇರ್ಗಡೆಯಾದ ಅಂಶವನ್ನು ಸಭಿಕರೆಲ್ಲರೂ ಕೇಳಿ ತುಂಬಾ ಸಂತೋಷಪಟ್ಟರು. ಅನಂತರ ಬಾಲಕರಿಂದ ಮಂಗಳಾಚರಣೆಯು ನಡಿಸಲ್ಪಟ್ಟು, ಸಾಯಂಕಾಲ 7 ಗಂಟೆಗೆ ಸಭೆಯು ಬರಖಾಸ್ತಾಯಿತು

ಮೈಸೂರು ಲಕ್ಷ್ಮೀಪುರಂ ಬಾಯ್ಸ್ ಸ್ಕೂಲು.

ಇಲ್ಲಿ ಕಳೆದ 4 ನೇ ತಾ. ಶ್ರೀಮನ್ಮಹಾರಾಜರವರ ವರ್ಧಂತೀ ಉತ್ಸವವು ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು ಸ್ಕೂಲು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತಲ್ಲದೆ ಆ ಕಾಲದಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟ್ ಮ॥ ಲಕ್ಷ್ಮೀಪತಿರಾಯರು, ಮ॥ ವೆಂಕಟಕೃಷ್ಣಯ್ಯನವರೇ ಮೊದಲಾದ ದೊಡ್ಡ ಅಧಿಕಾರಿಗಳೂ, ಅನೇಕ ಸಾಹುಕಾರರೂ ದಯಮಾಡಿಸಿದ್ದರು. ಬಾಲಕರು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ನಡಿಸಿದ ಮೇಲೆ ಹೆಡ್ ಮಾಸ್ಟರ್ ಮ॥ ಎಂ ಆರ್. ವರದಾಚಾರ್‍ರು ಸ್ಕೂಲಿನ ರಿಪೋರ್ಟನ್ನೂ, ತಾವು ರಚಿಸಿದ್ದ ಮಹಾರಾಜರ ಶ್ರೇಯಃಪ್ರಾರ್ಥನಾ ಪದ್ಯವನ್ನೂ ಓದಿದರು ವೀಣಾಗಾನವೂ ನಡೆಯಿತು. ಅಗ್ರಾಸನಾಸನ್ನರ ಉಪನ್ಯಾಸವಾದ ಮೇಲೆ ಫಲಪುಷ್ಪತಾಂಬೂಲಾದಿಗಳು ಅರ್ಪಿಸಲ್ಪಟ್ಟವು. ಬಾಲಕರಿಗೆಲ್ಲಾ ತಿಂಡಿಯು ಹಂಚಲ್ಪಟ್ಟಿತು ಈ ವರ್ಷ ಈ ಸ್ಕೂಲಿನಿಂದ 8 ಜನರು ಲೋ ಸೆ ಪರೀಕ್ಷೆಗೆ ಕಳುಹಿಸಲ್ಪಟ್ಟಿದ್ದು ಆ ಪೈಕಿ 7 ಜನರು ತೇರ್ಗಡೆಯಾದರಲ್ಲದೆ ಅವರಲ್ಲೊಬ್ಬನು ಒಂದನೇ ಕ್ಲಾಸಿನಲ್ಲಿ ತೇರ್ಗಡೆಯಾಗಿರುತ್ತಾನೆ ಸಭಿಕರು ಶ್ರೇಯಃಪ್ರಾರ್ಥನೆ ನಡೆದ ವಿಚಾರವನ್ನು ಮಹಾರಾಜರವರಿಗೆ ತಂತಿಯ ಮೂಲಕ ವಿಜ್ಞಾಪಿಸಿದರು.

ತಿಪ್ಪೂರು ತಾಲ್ಲೋಕು ಹೊನ್ನವಳ್ಳಿ.

ತಾ 4 ನೇ ಗುರುವಾರ ಈ ಗ್ರಾಮದ ಸ್ಕೂಲಿನಲ್ಲಿ ಕಾಓಪರೇಟಿವ್ ಸೊಸೈಟಿಯ ಮೆಂಬರುಗಳು ಸಭೆ ಸೇರಿ ಶ್ರೀಮನ್ ಮಹಾರಾಜರವರ ವರ್ಧಂತಿಯ ನಿಮಿತ್ತ ಸಂತೋಷ ಕೂಟವನ್ನು ನಡಿಸಿದರು ಪೋಲೀಸ್ ಇನ್ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿ ಕಾರ್ಯನಿರ್ವಾಹ ಮಾಡಿದರು ಸಭಿಕರ ಪರವಾಗಿ ಅಧ್ಯಕ್ಷರಲ್ಲಿ ಪ್ಲೀಡರ್ ಮ॥ ರಾಮಸ್ವಾಮಯ್ಯನವರು ಸೊಸೈಟಿಗಳಿಂದ ಪ್ರಜೆಗಳಿಗೆ ಉಂಟಾಗುವ ಪ್ರಯೋಜನವನ್ನೂ ಆ ದಿವಸ ಸಭೆ ಸೇರಲು ಕಾರಣವನ್ನೂ ತಿಳಿಸಿದರು ವೇ॥ ಶ್ರೀರಾಮಶಾಸ್ತ್ರಿಗಳವರು ಶ್ರೀಮನ್ ಮಹಾರಾಜರವರ ಪೂರ್ವಿಕರ, ಮಹಾರಾಜರವರ, ಯುವರಾಜರವರ ಗುಣಕಥನವನ್ನು ಮಾಡಿದ್ದಲ್ಲದೆ ಶ್ರೀಮನ್ ಯುವರಾಜರವರು ದೇಶಸಂಚಾರಮಾಡಿ ನಮ್ಮಗಳ ಏಳಿಗೆಗಾಗಿ ನಡಿಸುತ್ತಿರುವ ಪ್ರಯತ್ನಗಳನ್ನೂ, ನಮ್ಮ ಇಂಡಿಯಾ ಚಕ್ರವರ್ತಿಗಳಿಗೆ ನಮ್ಮಲ್ಲಿರುವ ಅಭಿಮಾನವನ್ನೂ ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಸ್ಕೂಲ್ ಮಾ॥ ನರಸಿಂಹಯ್ಯನವರು ಶ್ರೀಮನ್ ಮಹಾರಾಜರವರು ವಿದ್ಯಾಭಿವೃದ್ಧಿಗಾಗಿ ಪ್ರೋತ್ಸಾಹಪಡಿಸುತ್ತಿರುವ ವಿಷಯವನ್ನು ಕುರಿತು ಉಪನ್ಯಾಸಮಾಡಿದರು. ಸೊಸೈಟಿ ಸೆಕ್ರೆಟರಿ ಮ॥ ಟಿ. ತಿಪ್ಪಯ್ಯನವರು ಆ ದಿವಸದ ಏರ್ಪಾಡುಗಳನ್ನು ಬಹಳ ವಿಜೃಂಭಣೆಯಿಂದ ನಡಿಸಿದರು ಇವರು ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿದ ಮೇಲೆ ಸರ್ವರೂ ನಮ್ಮ ಮಹಾರಾಜರಿಗೂ, ಯುವರಾಜರಿಗೂ, ಚಕ್ರವರ್ತಿಯವರಿಗೂ ಶ್ರೇಯಃಪ್ರಾರ್ಥನೆ ಮಾಡಿ ದೇವಸ್ಥಾನಕ್ಕೆ ಹೋಗಿ ಮಂಗಳಾರತಿ ರಾಜಾಶೀರ್ವಾದಗಳು ನಡದ ಮೇಲೆ ಸಭೆ ಬರಖಾಸ್ತಾಯಿತು

ಚಿಕ್ಕಬಳ್ಳಾಪುರದ ತಾಲ್ಲೂಕು ಕೇಶವರ.

ಈ ತಿಂಗಳು 4 ನೇ ತಾ. ಶ್ರೀಮನ್ ಮಹಾರಾಜರವರ ವರ್ಷದ ವರ್ಧಂತಿ ಮಹೋತ್ಸವವು ಈ ಸ್ಕೂಲಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಸ್ಕೂಲು ಕದಳೀ ಸ್ತಂಭಗಳಿಂದಲೂ, ಮಾವಿನ ಚಿಗುರಿನಿಂದಲೂ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿತು ಮತ್ತು ಸ್ಕೂಲು ಒಳಭಾಗದಲ್ಲಿ ಮತ್ತೊಂದು ಚಿತ್ರಮಂಟಪವು ಕಟ್ಟಲ್ಪಟ್ಟು ಅದರ ಮಧ್ಯಭಾಗದಲ್ಲಿ ಶ್ರೀಮನ್ ಮಹಾರಾಜರವರ ಭಾವಚಿತ್ರವು ಇಡಲ್ಪಟ್ಟಿತ್ತು. ಮಧ್ಯಾಹ್ನ ಗ್ರಾಮದ ಸರ್ಕಾರಿ ನೌಕರರು ಮತ್ತು ಇತರ ದೊಡ್ಡ ಮನುಷ್ಯರು ಸ್ಕೂಲು ಬಾಲಕರೊಂದಿಗೆ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಬಾಜಾಬಜಂತ್ರಿಗಳ ಸಮೇತ ಊರಿನಲ್ಲಿ ಮೆರವಣಿಗೆ ಮಾಡಿಸಿಕೊಂಡು ಬಂದು, ಯಥಾಸ್ಥಾನದಲ್ಲಿ ಪಟವನ್ನು ಇರಿಸಿದರು ಊರಿನಲ್ಲಿ ಮೆರವಣಿಗೆಯಾಗುವಾಗ ಬಾಲಕಿಯರು ಮಹಾರಾಜರವರ ಪಟಕ್ಕೆ ಆರತಿಯನ್ನು ಎತ್ತಿದರು. ಬಾಲಕರು ಶ್ರೀಮನ್ ಮಹಾರಾಜರವರ ಪಟಕ್ಕೆ ಸೆಲ್ಯೂಟ್ ಮಾಡಿ ಅವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಸಭೆಯ ಅಗ್ರಾಸನವನ್ನು ಹೊಸ ಉದ್ದೆ ಮ॥ ಜೋಡಿದಾರರು ವಹಿಸಿದ್ದರು ಸ್ಕೂಲ್ ಮಾಸ್ಟರು ಎಸ್ ನಾರಾಯಣರಾಯರು ವಿದ್ಯಾಭ್ಯಾಸದ ವಿಷಯವಾಗಿಯೂ, ಸರ್ಕಾರದವರು ವಿದ್ಯೆಯನ್ನು ಹರಡಲು ಮಾಡುತ್ತಿರುವ ಪ್ರಯತ್ನಗಳನ್ನು ಕುರಿತೂ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಇವರ ಉಪನ್ಯಾಸದಿಂದ ಅನೇಕ ರೈತರಿಗೆ ಬಹು ಪ್ರಯೋಜನವಾಯಿತೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ ನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿ ಅಲ್ಪಾಹಾರದೊಡನೆ ಆ ದಿನದ ಸಭೆಯು ಮುಕ್ತಾಯಕ್ಕೆ ಬಂತು

ಮಂಜರಾಬಾದು ತಾಲ್ಲೋಕು ದೇಸಾಲವಳಿರೆ

ನಮ್ಮ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿ ಮಹೋತ್ಸವದ ಸಂತೋಷಕ್ಕಾಗಿ ಸ್ಕೂಲ್ ಕಟ್ಟಡದಲ್ಲಿ ತಾ. 1ನೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಈ ಗ್ರಾಮದ ಮುಖಂಡರೂ, ಸ್ಕೂಲ್ ಕಮಿಟಿ ಮೆಂಬರುಗಳೂ, ಸುತ್ತಮುತ್ತಲಿನ ಅನೇಕ ಗ್ರಾಮಗಳ ಮಹನೀಯರುಗಳೂ ದಯಮಾಡಿ ಸಭೆಯನ್ನಲಂಕರಿಸಿದ್ದರು ತಳಿರುತೋರಣಗಳಿಂದಲೂ, ಚಿತ್ರಪಟಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಮಂಟಪದ ಮಧ್ಯದಲ್ಲಿ ಶ್ರೀಮನ್ ಮಹಾರಾಜರವರ, ಶ್ರೀಮನ್ ಯುವರಾಜರವರ, ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಭಾವಚಿತ್ರಪಟಗಳು ಇಡಲ್ಪಟ್ಟಿದ್ದವು ಸ್ಕೂಲ್ ಮಾಸ್ಟರ್ ಜಿ. ವೆಂಕಟರಾಮಯ್ಯನವರು ಈ ಸಭೆಯ ಸದುದ್ದೇಶವನ್ನೂ ರಾಜಭಕ್ತಿ ವಿಶ್ವಾಸಗಳನ್ನೂ ಕುರಿತು ಸ್ವಾರಸ್ಯವಾಗಿ ಸೂಚಿಸಿದರು ವೇ॥ ನರಸಿಂಹ ಜೋಯಿಸರು ವಿದ್ಯೆಯ ಮಹಿಮೆ, ವಿದ್ಯಾರ್ಥಿಗಳು ಅನುಸರಿಸಬೇಕಾದ ನಿಯಮಗಳನ್ನು ಕುರಿತು ಇತಿಹಾಸ ರೂಪವಾಗಿ ಉಪನ್ಯಾಸ ಮಾಡಿದ್ದು ಸಭಿಕರು ಮತ್ತು ಬಾಲಕರು ಅನುಮೋದಿಸತಕ್ಕದ್ದಾಗಿತ್ತು ಮ॥ ಶಿವೇಗೌಡರವರುಕ್ಕಳು ಪಟ್ಟೇಗೌಡರೂ, ಬಿಳಿಸಾರೆ ಕಾಫಿ ಪ್ಲಾಂಟರ್ ಮ॥ ಪುಟ್ಟೇಗೌಡರೂ ಈ ಸಭೆ ನೆರೆಯಲು ತುಂಬಾ ಸಹಾಯಕರಾಗಿದ್ದರು ಬಾಲಕರ ವಿದ್ಯಾಭ್ಯಾಸದ ಪ್ರೋತ್ಸಾಹದ ಬಗ್ಗೆ, ಈ ಮಹೋತ್ಸವದ ಬಗ್ಗೆ ಚೆನ್ನಾಗಿ ಓದುತ್ತಾ ಇದ್ದ 4 ಜನ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲ್ಪಟ್ಟಿತು ನಂತರ ನಾರಾಯಣಪೂಜೆಯೂ, ಮಂಗಳಾರತಿಯೂ ಶ್ರೀಮನ್ ಮಹಾರಾಜರವರ, ಶ್ರೀಮನ್ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳು ಬಾಲಕರಿಂದ ಹಾಡಲ್ಪಟ್ಟದ್ದು ಸಭೆಯವರಿಗೆ ಕರ್ಣಾನಂದವನ್ನುಂಟುಮಾಡಿತು ನಂತರ ಸಭೆಯವರಿಗೆ ಗಂಧಪುಷ್ಪತಾಂಬೂಲವೂ, ಬಾಲಕರಿಗೆ ಸಕ್ಕರೆಯೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು

ಶ್ರೀನಿವಾಸಪುರ ತಾಲ್ಲೂಕು ಹಾರೋಹಳ್ಳಿ.

ಈ ಪ್ರಕಾರ ಸಂಸ್ಥಾನದ ರೆವಿನ್ಯೂ ಅಧಿಕಾರಿಗಳು ತಮ್ಮ ಕರ್ತವ್ಯ ಕಾರ್ಯಗಳನ್ನು ತೃಪ್ತಿಕರವಾಗಿ ನಡಿಸದ ಲೋಪಮಾಡಿರುತ್ತಾರೆ. ಇದು ಯಾರ ತಪ್ಪು? ಸರ್ಕಾರದವರು ಈ ಅಧಿಕಾರಿಗಳಿಗೆ ಅವರ ಶಕ್ತಿ ಮೀರಿದಷ್ಟು ಕೆಲಸಗಳನ್ನು ವಹಿಸಿರುತ್ತಾರೆಯೋ? ಇಲ್ಲವೇ, ಈ ಅಧಿಕಾರಿಗಳು ಸೋಮಾರಿತನದಿಂದಲೂ, ಅಲಕ್ಷ್ಯ ಮಾಡಿಯೂ ತಮ್ಮ ಕರ್ತವ್ಯಗಳನ್ನು ನಡಿಸದೆ ಇರುತ್ತಾರೆಯೋ? ಅಥವಾ, ಅವರಿಗೆ ಆ ಕೆಲಸಗಳನ್ನು ಮಾಡುವುದಕ್ಕೆ ಯೋಗ್ಯತೆ ಸಾಲದೋ? ನಮ್ಮ ಅಭಿಮತವನ್ನು ಕೇಳಿದರೆ ಸರ್ಕಾರದವರು ಡೆಪ್ಯುಟಿ ಕಮಿಷನರಿಗೆ ಬಹಳ ಹೆಚ್ಚು ಕೆಲಸಗಳನ್ನು ವಹಿಸಿದಾರೆ. ಡೆಪ್ಯುಟಿ ಕಮಿಷನರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಸಮಸ್ತ ಇಲಾಖೆಗಳ ಕೆಲಸಗಳನ್ನೂ ನೋಡಿಕೊಳ್ಳಬೇಕು; ಅವರು ಡಿಸ್ಟ್ರಿಕ್ಟಿನ ಮುಖ್ಯ ಮ್ಯಾಜಿಸ್ಟ್ರೇಟರಾಗಿಯೂ ಇರುವುದರಿಂದ ಮೊಕದ್ದಮೆಗಳನ್ನೂ ದಯಾರ್ಫ್ತು ಮಾಡಬೇಕು; ಮತ್ತು ಸಂಪದಭಿವೃದ್ಧಿ ಸಮಾಜಕ್ಕೆ ಸಂಬಂಧಪಟ್ಟ ಕಾರ್ಯಗಳನ್ನೂ ವಹಿಸಿಕೊಂಡು ನಡಿಸಬೇಕು. ಡೆಪ್ಯುಟಿ ಕಮಿಷನರ ಸಹಾಯಕ್ಕೆ ಕೆಲವು ಅಸಿಸ್ಟೆಂಟರುಗಳನ್ನು ಸರ್ಕಾರದವರು ಕೊಟ್ಟಿರುವುದೇನೋ ನಿಜ, ಆದರೆ ಡೆಪ್ಯುಟಿ ಕಮಿಷನರು ತಮ್ಮ ಕೆಲಸಗಳನ್ನು ಅವರಿಗೆ ಎಷ್ಟು ಮಟ್ಟಿಗೆ ವಹಿಸಬಹುದೋ ನಮಗೆ ತಿಳಿಯದು. ಒಂದು ವೇಳೆ ಡೆಪ್ಯುಟಿ ಕಮಿಷನರು ಮಾಡಬೇಕಾಗಿರುವ ಕೆಲಸಗಳಿಗೆ ತಕ್ಕಷ್ಟು ಅವರಿಗೆ ಸಿಬ್ಬಂದಿಯನ್ನು ನೇಮಕಮಾಡಿಕೊಟ್ಟಿರುವ ಪಕ್ಷದಲ್ಲಿ ಮತ್ತು ಅದರ ಮೇಲೂ ಅವರ ಕೆಲಸದಲ್ಲಿ ಲೋಪದೋಷಗಳು ಕಂಡುಬಂದರೆ ಅಂಥಾ ಡೆಪ್ಯುಟಿ ಕಮಿಷನರನ್ನು ಸರ್ಕಾರದವರು ಎಂಥಿತವಾಗಿ ಕಂಪರಾ ಮಾಡಿ, ಅವರ ಯೋಗ್ಯತೆಗೆ ತಕ್ಕಂಥಾ ನೌಕರಿಯನ್ನು ಕೊಡಬೇಕಾಗಿದೆ. ಇಲಾಖೆಗಳ ಮೇಲೆ ಸರ್ಕಾರದವರ ನಿರ್ದಾಕ್ಷಿಣ್ಯವಾದ ದರ್ಪವೇ ಕಾಣಿಸುವುದಿಲ್ಲ. ನಮ್ಮ ಮುಂದಿರುವ ಮೇಲ್ಕಂಡ ರಿಪೋರ್ಟಿನಲ್ಲಿ ಕೆಲಸಗಳನ್ನು ನಡಿಸದ ತಪ್ಪಿರುವಂಥಾ ಅಧಿಕಾರಿಗಳ ಪೈಕಿ ಯಾರ ವಿಷಯದಲ್ಲೂ ಸರ್ಕಾರದ ನಿರ್ದಾಕ್ಷಿಣ್ಯವುಳ್ಳ ದಂಡನೆಯು ಅಥವಾ ಖಂಡನೆಯು ಸೇರಿಯೇ ಇರುವುದಿಲ್ಲ. ಗವರ್ನಮೆಂಟಿನಲ್ಲೇ ದರ್ಪವಿಲ್ಲವೆನ್ನುವುದಕ್ಕೆ ಇದೊಂದು ದೃಷ್ಟಾಂತವೆಂದು ನಮಗೆ ತೋರುತ್ತದೆ.

ಇದು ಹಾಗಿರಲಿ. ಈಚೆಗೆ ಸಂಪದಭಿವೃದ್ಧಿ ಸಮಾಜವು ಏರ್ಪಾಡಾಗಿ ಅದರ ಕಾರ್ಯಗಳು ಹಲವು ಬಗೆಯಾಗಿರೋಣದರಿಂದ ರೆವಿನ್ಯೂ ಅಧಿಕಾರಿಗಳಿಗೆ ಅವರ ನ್ಯಾಯವಾದ ಕಾರ್ಯಗಳನ್ನು ಎಂದಿನಂತೆ ಮಾಡಿಕೊಂಡು ಬರುವುದು ಬಹಳ ಕಷ್ಟವಾಗಿದೆ. ಕ್ರಮವಾಗಿ ನಡಯಬೇಕಾದ ಕೆಲಸಗಳಿಗೆ ಈ ರೀತಿ ಅಡಚಣೆಗಳು ಹುಟ್ಟಿ ಹೆಚ್ಚುತ್ತಾ ಬಂದರೆ ಸಂಸ್ಥಾನದಾಮಳಿ ಕೆಲಸಗಳು ಸುಸ್ತಿಗೆ ಬಿದ್ದು, ಕಂದಾಯ ಕೌಲಗೆಗಳು ಸರಿಯಾಗಿ ವಸೂಲಾಗದೆ ಪ್ರಜೆಗಳಲ್ಲಿ ಬಗೆಬಗೆಯ ಅಸಮಾಧಾನಗಳೂ ಹರಡುವವು. ಕ್ರಮವಾಗಿ ನಡೆಯುವುದಕ್ಕಿಂತ ಹೆಚ್ಚಾಗಿ ಹೊಸ ಕೆಲಸಗಳು ಆಗಬೇಕಾಗಿದ್ದಲ್ಲಿ ಅದಕ್ಕೋಸ್ಕರ ಪ್ರತ್ಯೇಕವಾದ ಹೊಸ ಸಿಬ್ಬಂದಿಯನ್ನು ನೇಮಕಮಾಡಬೇಕು. ಆದರಲ್ಲೂ ಅಂಥಾ ಹೊಸ ಕೆಲಸವನ್ನು ಪ್ರಾರಂಭಮಾಡುವುದಕ್ಕಿಂತ ಮುಂಚೆ ಅದರ ಆವಶ್ಯಕತೆಯನ್ನು ಪರಿಷ್ಕಾರವಾಗಿ ತೋರಿಸಿಕೊಡಬೇಕಾಗಿರುತ್ತದೆ.

ಹ್ಯಾಗೂ ನಮ್ಮ ಸಂಸ್ಥಾನದ ಆಳ್ವಿಕೆಯ ದಿನದಿನದ ಕಾರುಬಾರುಗಳು ನಿದಾನಕ್ಕೆ ಬಿದ್ದಿರುತ್ತವೆ; ಇದನ್ನು ಚಟುವಟಿಕೆಯಿಂದ ನಡೆಯುವಂತೆ ಮಾಡಬೇಕಾಗಿದೆ. ಈಗ ಕೆಲಸಗಳು ಅಲಕ್ಷ್ಯವಾಗಿಯೂ, ಸೋಮಾರಿತನದಿಂದಲೂ, ಅತೃಪ್ತಿಕರವಾಗಿಯೂ ನಡೆಯುತ್ತಿರುವುದು ತಪ್ಪಿ ಚೆನ್ನಾಗಿಯೂ ಸರ್ವಸಮರ್ಪಕವಾಗಿಯೂ ನಡೆಯುತ್ತಾ ಬಂದರೆ ನಮ್ಮ ಸೀಮೆಯ ರಾಜ್ಯಭಾರಕ್ರಮಗಳು ಧರ್ಮವಾಗಿಯೂ ವಿವೇಕದಿಂದಲೂ ಜರುಗುವುದಕ್ಕೆ ತುಂಬಾ ಅವಕಾಶವಾಗುವುದು.

ನ್ಯಾಯಸ್ಥಾನ ವಿಚಾರವಾದ ಮಹಾಸಭೆ.

ಮೈಸೂರು ಸಂಸ್ಥಾನದ ನ್ಯಾಯಸ್ಥಾನಗಳಲ್ಲಿ ವ್ಯಾಜ್ಯಗಳನ್ನು ಜಾಗ್ರತೆಯಿಂದಲೂ ನ್ಯಾಯವಾಗಿಯೂ ಇತ್ಯರ್ಥ ಮಾಡುವುದಕ್ಕೆ ಅವಶ್ಯವಾದ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದಕ್ಕೋಸ್ಕರ ನಮ್ಮ ಸರ್ಕಾರದವರು ಒಂದು ಮಹಾಸಭೆಯನ್ನು ಏರ್ಪಾಡುಮಾಡಿದಾರೆ. ಈ ನವೀನವಾದ ಸಭೆಯು ಕಳೆದ ವಾರ ರಾಜಧಾನಿಯಲ್ಲಿ ಎರಡು ದಿನ ಕುಳಿತು ನಾನಾ ವಿಚಾರಗಳನ್ನು ಹಿಡಿದು ಚರ್ಚೆಮಾಡಿತು. ಅದರಲ್ಲಿ ಮುಖ್ಯರಾದ ಜಡ್ಜಿಗಳು, ಮ್ಯಾಜಿಸ್ಟ್ರೇಟರುಗಳು, ಪ್ರಖ್ಯಾತರಾದ ಲಾಯರುಗಳು, ಪ್ರಪಂಚಜ್ಞಾನವುಳ್ಳ ಗಣ್ಯರಾದ ಪ್ರಜೆಗಳು ಮೆಂಬರುಗಳಾಗಿದ್ದರು. ಮೊದಲನೇ ಕೌನ್ಸಿಲರ್ ಮತ್ತೂ ಚೀಫ್ ಜಡ್ಜರಾದ "ರಾಜಮಂತ್ರಪ್ರವೀಣ" ಮ|| ಎಚ್. ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ. ಯವರು ಸಭೆಯ ಪ್ರೆಸಿಡೆಂಟ್ ಪದವಿಯನ್ನು ವಹಿಸಿ, ಸಭೆಯ ಕಾರ್ಯಕ್ರಮಗಳೇ ಮುಂತಾದ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಮೈಸೂರು ಸಂಸ್ಥಾನದಲ್ಲಿ ನ್ಯಾಯಸ್ಥಾನಗಳು ಯಾವ ರೀತಿಯಲ್ಲಿದ್ದವೋ, ಇಂಗ್ಲಿಷ್ ಪ್ರಭುತ್ವದ ದೆಸೆಯಿಂದ ಯಾವ ರೀತಿ ಬದಲಾವಣೆಯನ್ನೊಂದಿದವೋ, ಕಾಲಕ್ರಮೇಣ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಸಂಖ್ಯೆಯು ಹೇಗೆ ಹೆಚ್ಚಿ ಸಂಸ್ಥಾನದಾಮಳಿ ಪರಡಿಕೊಂಡಿತೋ, ಇವೇ ಮೊದಲಾದ ವಿಚಾರಗಳೆಲ್ಲಾ ಅವರ ಉಪನ್ಯಾಸದಲ್ಲಿ ವಿವರಿಸಲ್ಪಟ್ಟಿವೆ.

ಈ ಸಭೆಯಲ್ಲಿ ನ್ಯಾಯಸ್ಥಾನಗಳಿಗೆ ಸಂಬಂಧಪಟ್ಟ ಅನೇಕ ವಿಚಾರಗಳು ಚರ್ಚೆಯಾದವು. ಅವುಗಳಲ್ಲೆಲ್ಲಾ ರೆವಿನ್ಯೂ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ತಪ್ಪಿಸಿ ಪ್ರತ್ಯೇಕ ಮ್ಯಾಜಿಸ್ಟ್ರೇಟರುಗಳನ್ನು ನೇಮಕಮಾಡಿಕೊಡಬೇಕೆಂಬುವುದೇ ಪ್ರಾಮುಖ್ಯವಾದ ವಿಷಯ. ನ್ಯಾಯಾಧ್ಯಾಯಕ ಸಭೆಯ ಮುಂದಾಗಿರುವ ಲೀಡರ್ ಮ|| ಪಿ. ನರಸಿಂಗರಾಯರು ಈ ದೊಡ್ಡ ವಿಷಯವನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ, ಸರ್ಕಾರದವರು ಸುಮಾರು ಇನ್ನೊಂದು ಲಕ್ಷ ರೂಪಾಯಿ ಖರ್ಚಿನಲ್ಲಿ ಈ ಏರ್ಪಾಡನ್ನು ಸಂಸ್ಥಾನದಾಮಳಿ ತೃಪ್ತಿಕರವಾಗಿ ರೂಢಿಸಬಹುದೆಂದು ತೋರಿಸಿಕೊಟ್ಟರು.

ನಮ್ಮ ಸಂಸ್ಥಾನದಲ್ಲಿ ಕಾನೂನುಗಳು ಬಹಳ ಹೆಚ್ಚಾಗಿವೆ ಎಂದೂ, ನ್ಯಾಯವಿಮರ್ಶೆಯು ಬಹಳ ಸ್ವಲ್ಪವಾಗಿದಯೆಂದೂ ನಮಗೆ ತೋರುತ್ತಿದೆ. ಸಂಸ್ಥಾನದಾಮಳಿ ಲಾಯರುಗಳನ್ನು ಜಡ್ಜಿಗಳಾಗಿ ನೇಮಿಸಿ, ಲಾಯರು ವಾದ ವಿವಾದಗಳನ್ನು ನಡಸುತ್ತಾ ಬರುವಂತೆ ಮಾಡಿಟ್ಟರೆ ಈಗಿಗಿಂತ ನ್ಯಾಯತೀರ್ಮಾನವಾಗುವುದೇನೂ ವಿಚಕ್ಷಣೆಯಾಗಲಾರದು. ಸಣ್ಣ ಸಣ್ಣ ವ್ಯಾಜ್ಯಗಳಲ್ಲೂ ಕೆಲವು ಭಾರೀ ಮೊಕದ್ದಮೆಗಳಲ್ಲೂ ನಾನಾ ವಿಧವಾದ ಕಾನೂನುಗಳ ತೊಡಕುಗಳು ತಲೆಹಾಕಿ ನ್ಯಾಯ ಸಿಕ್ಕುವುದೇ ದುರ್ಲಭವಾಗುವಂತೆ ಪರಿಣಮಿಸುತ್ತದೆ. ನ್ಯಾಯವಿಮರ್ಶೆ ಮಾಡುವಂಥಾ ಅಧಿಕಾರಿಗೆ ಬರೀ ಕಾನೂನುಗಳ ಪರಿಶ್ರಮವಿರುವುದೇ ಸಾಲದು, ಅತನಿಗೆ ಪ್ರಜೆಗಳ ಸ್ಥಿತಿಗತಿಯೂ, ಅವರ ಪದ್ಧತಿ ಆಚಾರಗಳೂ, ಪ್ರಾಪಂಚಿಕ ವರ್ತಮಾನಗಳೂ ತಿಳಿದಿರಬೇಕಲ್ಲದೆ, ಅತನ ಮನಸ್ಸು ಧಾರಾಳವಾದದ್ದಾಗಿಯೂ, ಕರಗುವಂಥಾದ್ದಾಗಿಯೂ, ಪಕ್ಷಪಾತವಾದದ್ದಾಗಿಯೂ ಇರಬೇಕು.

ರೆವಿನ್ಯೂ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ತಪ್ಪಿಸತಕ್ಕ ಕಾಲ ಒದಗಿದೆ ಎಂದು ನಮಗೆ ತೋರುವುದಿಲ್ಲ. ಆದರೆ ವ್ಯಾಜ್ಯಗಳನ್ನು ಹಿಡಿದು ಇತ್ಯರ್ಥಮಾಡುವಂಥಾ ಪ್ರತಿ ಒಬ್ಬ ಅಧಿಕಾರಿಯೂ ಕೆಲವು ಕಾಲ ನಮ್ಮ ಗ್ರಾಮಾಂತರಗಳಲ್ಲಿ ನಿಂತು ಕೆಲಸಮಾಡಿರುವುದಾದರೆ ಸಂಸ್ಥಾನಕ್ಕೆ ಎಷ್ಟೋ ಕ್ಷೇಮವಾದೀತು. ಈಗಲಾದರೋ ಅನೇಕ ಜನಗಳು ಪಟ್ಟಣಗಳಲ್ಲಿ ಹುಟ್ಟಿ ಪಟ್ಟಣಗಳಲ್ಲಿ ಬೆಳೆದು ಪಟ್ಟಣಗಳಲ್ಲಿ ವಿದ್ಯಾಬುದ್ಧಿಗಳನ್ನು ಸಂಪಾದಿಸಿಕೊಳ್ಳುತ್ತಿರುವರು. ಇವರಿಗೆ ಗ್ರಾಮಾಂತರಗಳ ಸ್ಥಿತಿಗತಿಯಾಗಲಿ, ಹಳ್ಳಿಹಳ್ಳೀ ಜನರ ಇಂಗಿತಗಳಾಗಲಿ ಸ್ವಲ್ಪವೂ ತಿಳಿಯದು. ಇಂಥವರಿಗೆ ಅನುಭವವುಂಟಾಗುವುದಕ್ಕಿಂತ ಮೊದಲೇ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟು ನೇಮಿಸುವುದು ಸಹಜವಲ್ಲವೆಂದು ನಮಗೆ ತೋರುತ್ತದೆ.

ಮೊಕದ್ದಮೆಗಳು ಬೇಗನೆ ವ್ಯವಸ್ಥೆಯಾಗದೆ ನಾನಾ ಕಷ್ಟನಷ್ಟಗಳಿಗೂ ಮನೋವ್ಯಥೆಗೂ ಅವಕಾಶವಾಗಿದೆ. ಸರ್ಕಾರದವರೂ ಕಕ್ಷಿಗಾರರೂ ಬಹಳ ಸಮಯವನ್ನೂ ಹಣವನ್ನೂ ವಿನಿಯೋಗಿಸಿ ನಷ್ಟಪಡುತ್ತಿದಾರೆ. ಸರ್ಕಾರದವರು ಈ ಭಾಗವನ್ನು ಬೇಗನೆ ಸರಿಪಡಿಸಬೇಕಾಗಿದೆ. ಅನೇಕವೇಳೆ ಜಡ್ಜಿಗಳ ತಪ್ಪೇನೂ ಇರುವುದಿಲ್ಲ; ಕಕ್ಷಿಗಾರರು ಎದುರುಪಾರ್ಟಿಯವರನ್ನು ದಣಿಸಿ ನಷ್ಟಪಡಿಸಬೇಕೆಂದು ಉಪಾಯಗಳನ್ನು ಹುಡುಕುತ್ತಾರೆ, ಕೆಲವು ಸಂದರ್ಭಗಳಲ್ಲಿ ವಕೀಲರಿಂದಲೂ ನಾವಕಾಶವಾಗುವುದುಂಟು.

ಸರ್ಕಾರದವರು ಏರ್ಪಾಡುಮಾಡಿರುವ ಈ ಮಹಾಸಭೆಯ ದೆಸೆಯಿಂದ ನಮ್ಮ ಸೀಮೆಯ ನ್ಯಾಯಸ್ಥಾನಗಳ ಮತ್ತೂ ನ್ಯಾಯವಿಮರ್ಶೆಯ ವಿಚಾರಗಳು ಕ್ರಮಪಟ್ಟು, ಸರ್ಕಾರಕ್ಕೂ ಕಕ್ಷಿಗಾರರಿಗೂ ನಷ್ಟವಾಗಲಿ ದಣುವಾಗಲಿ ಉಂಟಾಗದಂತೆ ಮೊಕದ್ದಮೆಗಳು ಜಾಗ್ರತೆಯಿಂದಲೂ ನ್ಯಾಯವಾಗಿಯೂ ತೀರ್ಮಾನವಾಗುವ ರೀತಿ ಬರೀತೆಂದು ನಂಬಿ ನಿರೀಕ್ಷಿಸುತ್ತೇವೆ.

ಮೈಸೂರು ಸರ್ಕಾರದ ಖಜಾನೆ.

ಮೈಸೂರು ಸಂಸ್ಥಾನದ ಖಜಾನೆ ಇಲಾಖೆಯು ಕಾರುಬಾರುಗಳ ವಾರ್ಷಿಕ ರಿಪೋರ್ಟನ್ನು ಓದಿನೋಡಿದರೆ ಗವರ್ನಮೆಂಟಿನ ಖಾಯಿದೆ ಕಾನೂನುಗಳನ್ನು ಜಾರಿಮಾಡುವುದರಲ್ಲಿ ಈ ಇಲಾಖೆಯು ಬಹಳ ತಾಮಸವಾಗಿಯೂ, ಅಲಕ್ಷ್ಯದಿಂದಲೂ ಕೆಲಸಮಾಡುವುದೆಂದೂ ಗೊತ್ತಾಗುತ್ತದೆ. ಸರ್ಕಾರದವರು ವಿಧಿಸುವ ರೂಲಸಿನ ಪ್ರಕಾರ ಜಾಕಾದು ಖಿರ್ಚುಗಳಿಗೆ ಬೇಕಾದದ್ದು ಪರಮಾವಶ್ಯಕ; ಆದರೆ ಕೆಲವು ಸಂದರ್ಭಗಳಲ್ಲಿ ಅಕ್ಕಲ್ಪವಾದ ಜವಾ ಖರ್ಚುಗಳನ್ನು ಹಿಡಿದು ಬಹು ದೀರ್ಘವಾಗಿ ಕಾಗದಪತ್ರಗಳನ್ನು ನಡಿಸುವುದರಲ್ಲಿ ಕಾಲಹರಣವಾಗುತ್ತದೆ. ಹ್ಯಾಗೂ ಸರ್ಕಾರದ ಖಜಾನೆಗಳ ಜಮಾ ಖರ್ಚು ಲೆಕ್ಕಗಳು ಅನುಮಾನಕ್ಕೆ ಆಸ್ಪದವಿಲ್ಲದಂತೆ ಇರಬೇಕೆಂದು ಒತ್ತಿ ಹೇಳುತ್ತೇವೆ.

ರೇಷ್ಮೆ ವ್ಯವಸಾಯ.

ಮೈಸೂರು ಸರ್ಕಾರದವರು ತಮ್ಮ ಸೀಮೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಈ ಕೆಲಸದಲ್ಲಿ ನಿಪುಣರಾಗಿರುವ ಸಿನ್ಯೋರ್ ಮಾರಿ ಎಂಬ ಇಟಲಿ ದೇಶಸ್ಥರನ್ನು ಕರಸಿಕೊಂಡಿರುತ್ತಾರಷ್ಟೆ. ಸಿನ್ಯೋರ್ ಮಾರಿಯವರು ಚನ್ನಪಟ್ಟಣದಲ್ಲಿ ರೇಷ್ಮೆ ಹುಳಗಳನ್ನು ಕೆಲವು ಕಾಲ ಸಾಕಿ ಬೆಳಸಿ ಪರೀಕ್ಷೆಮಾಡಿ ಅದರ ಮೇಲೆ ತಮ್ಮ ಅಭಿಪ್ರಾಯವನ್ನು ರಿಪೋರ್ಟಿನಂತೆ ಬರೆದು ಪ್ರಕಟಮಾಡಿರುತ್ತಾರೆ. ಅದರಲ್ಲಿ ಇವರು ಅನೇಕ ಹುಳಗಳು ರೋಗಹಿಡಿದವುಗಳೆಂದೂ, ಇದರಿಂದ ಅವುಗಳಲ್ಲಿ ಒಳ್ಳೆಯ ರೇಷ್ಮೆಯನ್ನು ತೆಗೆಯುವುದು ಸಾಧ್ಯವಲ್ಲವೆಂದೂ ತಿಳಿಸಿರುವರು. ಹುಳಗಳ ಸ್ಥಿತಿಯನ್ನು ದುರ್ಬೀನು ಹಿಡಿದು ಪರೀಕ್ಷಿಸಬೇಕಾಗಿದೆ. ಸಾಮಾನ್ಯವಾಗಿ ರೇಷ್ಮೆ ವ್ಯವಸಾಯ ಮಾಡತಕ್ಕವನಿಗೆ ಅಂಥಾ ದುರ್ಬೀನು ಕೊಂಡಿಟ್ಟುಕೊಳ್ಳುವುದಕ್ಕೆ ಬೈತನ್ಯ ಸಾಲದು, ಒಂದು ವೇಳೆ ಕೊಂಡಿಟ್ಟುಕೊಂಡರೂ ಅದನ್ನು ಉಪಯೋಗಿಸಿ ಹುಳಗಳ ಅಜಮಾಯಿಸಿ ಮಾಡುವ ಕ್ರಮ ಅವನಿಗೆ ತಿಳಿಯದು. ಇಟಲಿ ದೇಶದಿಂದ ತರಿಸಿ ಸಾಕಿದ ಕೆಲವು ರೇಷ್ಮೆ ಹುಳಗಳು ಚನ್ನಪಟ್ಟಣದಲ್ಲಿ ಚೆನ್ನಾಗಿ ಬೆಳೆದು ಒಳ್ಳೆಯ ರೇಷ್ಮೆ ಉತ್ಪತ್ತಿಯಾಯಿತೆಂದು ತಿಳಿದು ಬಂದಿದೆ. ಇದರಿಂದ ಹೊಸ ಮೊಟ್ಟೆಗಳನ್ನು ತರಿಸಿ ಸಾಕೋಣದರಿಂದ ಈ ವ್ಯವಸಾಯವು ತುಂಬಾ ಲಾಭಕರವಾದೀತೆನ್ನುವುದಕ್ಕೆ ಸಂಶಯವಿಲ್ಲ. ನಮ್ಮ ರೈತರಿಗೆ ಹುಳಗಳನ್ನು ಸಾಕಿ ಬೆಳಸುವ ಭಾಗದಲ್ಲಿ ಒಳ್ಳೆಯ ಕ್ರಮಗಳನ್ನು ಕಲಿಸಿಕೊಡಬೇಕಾದದ್ದೇ ಈಗ ಆಗಬೇಕಾಗಿರುವುದು. ಇದು ಸಾರ್ಥಕಹೊಂದಬೇಕಾದರೆ ಕೆಲವು ವರುಷಗಳಾದರೂ ಹಿಡಿದೀತೆಂದೂ, ಆಖೈರದಲ್ಲಿ ಅಗಲಾಭದೆಂದೂ ನಂಬುತ್ತೇವೆ.

ಮೈಸೂರಿನಲ್ಲಿ ಕಸಬುದಾರೀ ಕಾರ್ಖಾನೆಗಳು.

ಮೈಸೂರು ಸಂಪದಭಿವೃದ್ಧಿ ಸಮಾಜದಲ್ಲಿ ಕಳೆದ ಮೂರು ವರುಷಗಳಿಂದಲೂ ಹಲವು ವಿಚಾರಗಳನ್ನು ಕುರಿತು ಚರ್ಚೆಗಳು ನಡೆದಿರುತ್ತವೆ. ಈ ಚರ್ಚೆಗಳಿಂದ ಪ್ರಯೋಜನವೇನಾದರೂ ಆಗಬೇಕಾಗಿದ್ದರೆ ನಮ್ಮ ಸಂಸ್ಥಾನದ ಕಸಬುಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನಗಳು ಕಾರ್ಯದಲ್ಲಿ ನಡೆಯಬೇಕು. ಪರಸ್ಪರ ಸಹಾಯದಿಂದ ಇಲ್ಲವೆ ಕಂಪನಿಗಳ ಮೂಲಕ ಕಸಬುದಾರಿ ಕಾರ್ಖಾನೆಗಳು ಪ್ರಾರಂಭಮಾಡಲ್ಪಟ್ಟರೆ ಚೆನ್ನಾಗಿ ನಡೆಯಬಹುದು. ಈಗಾಗಲೇ ಈ ರೀತಿಯಾದ ಪ್ರಯತ್ನಗಳು ನಡೆದು ಕೆಲವು ಕಂಪನಿಗಳು ಏರ್ಪಾಡಾಗುವುದರಲ್ಲಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತಿದೇವೆ. ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ "ಮೈಸೂರು ಎಕನಾಮಿಕ್ ಯೂನಿಯನ್" ಎಂಬ ಒಂದು ಹೊಸ ಕಂಪನಿಯ ಇಸ್ತಿಹಾರನ್ನು ಪ್ರಕಟಮಾಡಿರುವೆವು. ಈ ಕಂಪನಿಯು ಸರ್ಕಾರದಲ್ಲಿ ರೆಜಿಸ್ಟರ್ ಮಾಡಲ್ಪಟ್ಟಿದೆ ಎಂದೂ, ಅದು ಮೂರು ವರುಷಗಳಲ್ಲಿ ಒಂದು ಎಣ್ಣೆಯ ಕಾರ್ಖಾನೆಯನ್ನು ಪ್ರಾರಂಭಮಾಡುವುದೆಂದೂ, ಐದು ವರುಷಗಳಲ್ಲಿ ಸೋಪು ಸಂಥಾವಸ್ತು (ಸ್ಟಿಯರಿನ್) ವನಸ್ಪತಿ ಮೋಂಬತ್ತಿಗಳನ್ನೂ ತಯಾರುಮಾಡಿಸುವುದೆಂದೂ ತಿಳಿಯಪಡಿಸಿದೆ. ಆದರೆ ಈ ಕಾರ್ಖಾನೆಯು ಯಾವ ಊರಿನಲ್ಲಿ ಏರ್ಪಾಡಾದೀತೋ ಕಂಪನಿಯು ತಿಳಿಸಿಲ್ಲ.

ನಮ್ಮ ಸೀಮೆಯ ಕಸಬುಗಳನ್ನು ಹೆಚ್ಚಿಸುವುದಕ್ಕೆ ಮಾಡುವ ಪ್ರತಿ ಒಂದು ಪ್ರಯತ್ನವನ್ನೂ ನಾವು ಸಂತೋಷದಿಂದ ಪ್ರೋತ್ಸಾಹಮಾಡುತ್ತೇವೆ. ಆದರೆ ಈಗ ಪ್ರಕಟಮಾಡಿರುವ ಮೇಲ್ಕಂಡ ಹೊಸ ಕಂಪನಿಯ ವಿಷಯದಲ್ಲಿ ಷೇರುಗಳನ್ನು ಪಡೆಯಬೇಕೆಂದು ಅಪೇಕ್ಷಿಸುವಂಥಾ ಸಾಮಾನ್ಯ ಪ್ರಜೆಗಳಿಗೆ ಕೆಲವು ವಿಚಾರಗಳು ಪರಿಷ್ಕಾರವಾಗಿ ತಿಳಿಯುವಂತೆ ಕಾಣಿಸಿಲ್ಲ. ಆದಕಾರಣ ಈ ಕಂಪನಿಯ ಮೂಲಕರ್ತರು (ಡೈರೆಕ್ಟರು)ಗಳು ಎರಡು ವಿಷಯಗಳನ್ನು ಸರಿಯಾಗಿ ಗೊತ್ತಾಗುವಂತೆ ತಿಳಿಸಿದ ಪಕ್ಷದಲ್ಲಿ ಪ್ರಜೆಗಳು ತೃಪ್ತಿಪಟ್ಟು ಬೇಗನೆ ಹೆಚ್ಚಾಗಿ ಷೇರುಗಳನ್ನು ತೆಗೆದುಕೊಳ್ಳುವುದಕ್ಕೆ ತುಂಬಾ ಸಹಾಯವಾಗುವುದೆಂದು ನೆನಸುತ್ತೇವೆ.

ಮೊದಲನೆಯದಾಗಿ ಈ ಕಂಪನಿಯವರು ಪ್ರಕಟಮಾಡಿರುವ ಹಣ ಕಾಸಿನ ಜಮಾಖರ್ಚು ಲೆಕ್ಕಗಳನ್ನು ಸ್ವಲ್ಪ ನೋಡೋಣ. ಕಂಪನಿಯ ಮೂಲಧನ ಎರಡು ಲಕ್ಷ ರೂಪಾಯಿ. ಷೇರ್ ಒಂದಕ್ಕೆ 50 ರೂಪಾಯಿನ 2,000 ಸಾಮಾನ್ಯ ಷೇರುಗಳೂ, ಷೇರ್ ಒಂದಕ್ಕೆ 50 ರೂಪಾಯಿನ ಶೇಕಡಾ 9 ರೂಪಾಯಿ ಬಡ್ಡಿ ಪಡೆಯುವ ವಿಶೇಷತರದ 2,000 ಷೇರುಗಳೂ ಇರುತ್ತವೆ. ಈ ಎಣ್ಣೆಯ ಮತ್ತು ಇತರ ಕಾರ್ಖಾನೆಗಳ ಖರ್ಚುಪಟ್ಟಿಯಲ್ಲಿ ಕಟ್ಟಡಗಳಿಗಾಗಲಿ, ಯಂತ್ರ ಮುಂತಾದ ಮುಟ್ಟುಗಳಿಗಾಗಲಿ ಬೇಕಾಗುವ ಹಣಗಳನ್ನು ಕಾಣಿಸಿಲ್ಲ, ಕೆಳಗಡೆ ಲಾಭವನ್ನು ಹಂಚಿಹಾಕಿರುವ ಭಾಗದಲ್ಲಿ ನೋಡಿದರೆ ಕಟ್ಟಡಗಳಿಗೆ 50,000 ರೂಪಾಯಿ ಆದೀತೆಂದೂ, ಯಂತ್ರ ಮುಂತಾದದ್ದಕ್ಕೆ 1,50,000 ಬೇಕಾಗುವುದೆಂದೂ ತೋರಿಸಿದಾರೆ. ಇದನ್ನು ನೋಡುವಲ್ಲಿ ಕಂಪನಿಯ ಷೇರುಗಳ ಮೂಲಕ ಕೂಡಿಸುವಂಥಾ ಎರಡು ಲಕ್ಷ ರೂಪಾಯಿಗಳೂ ಮೇಲ್ಕಂಡ ಎರಡು ಬಾಬುಗಳಿಗೇ ಖರ್ಚಾಗಿ ಹೋಗುವವು. ಈ ರೀತಿ ಕೂಡಿಸಿದ ಹಣವೆಲ್ಲಾ ಕಟ್ಟಡಕ್ಕೂ ಯಂತ್ರಗಳಿಗೂ ಸರಿಹೋದರೆ ಡೈರೆಕ್ಟರುಗಳು ಕಾರ್ಖಾನೆ ನಡೆಯುವುದಕ್ಕೆ ಬೇಕಾಗುವ ಸಾಮಾನು ಮುಂತಾದವುಗಳಿಗೆ ಬೇಕಾಗುವ ಹಣವನ್ನು ಎಲ್ಲಿಂದ ಹೇಗೆ ಒದಗಿಸುವರು? ಇದಕ್ಕೆಲ್ಲಾ ಅವರಿಗೆ ಹಣವೆಲ್ಲಿದೆ?

ಎರಡನೆಯದಾಗಿ ಕಾರ್ಖಾನೆ ಪ್ರಾರಂಭವಾದ ಮೇಲೆ ಅದರಲ್ಲಿ ಕೂಲಿ ಮುಂತಾದ ಕೆಲಸಗಳನ್ನು ಮಾಡತಕ್ಕವರಿಗೆ ಎಷ್ಟು ಹಣ ಖರ್ಚುಮಾಡುವರೋ ಈ ಪಟ್ಟಿಯಲ್ಲಿ ತೋರಿಸಿಲ್ಲ. ಅದರಲ್ಲಿ ಡೈರೆಕ್ಟರುಗಳು ಕಾಣಿಸಿರುವಂತೆ ಕೆಲಸ

...ರಿಗೆ ಒಂದು ವರುಷ ಕೆಲಸ ಮಾಡುವುದಕ್ಕೆ 4,500 ರೂಪಾಯಿ ಮಾತ್ರ ಚುಕ್ತ ಮಾಡಿದರೆ ವರುಷಾಂತ್ಯದಲ್ಲಿ ಕಂಪನಿಗೆ 80,000 ರೂಪಾಯಿ ಲಾಭ ದೊರೆಯುವುದೆಂದು ಹೇಳಿರುವ ಮಾತು ನಿಜವೇ? ಈ ಭಾಗ ನಮಗೆ ಸರಿಯಾಗಿ ಅರ್ಥವಾಗಲಿಲ್ಲ ಇದರಲ್ಲಿ ಏನೋ ತಪ್ಪಿರಬೇಕೆಂದು ತೋರುತ್ತದೆ ನಮ್ಮ ದೇಶದಲ್ಲಿ ಕೂಲಿಯಾಳಿನ ಪ್ರಜೆಗಳ ಸ್ಥಿತಿಗತಿಯು ಚೆನ್ನಾಗಿ ಬೇಕೆಂಬುವುದೇ ಇಂಥಾ ಕಸಬು ಗಾರಿ ಕಾರ್ಖಾನೆಗಳ ಉದ್ದೇಶವಾಗಿದೆ ಹೀಗಿರುವಲ್ಲಿ ಈ ಕಾರ್ಖಾನೆಯೊಳಗೆ ಕೂಲಿಯಾಳು ಮಾಡತಕ್ಕವರಿಗೆ ತಿಂಗಳಿಗೆ ಸುಮಾರು 375 ರೂಪಾಯಿಗಿಂತ ಹೆಚ್ಚಾಗಿ ದೊರೆಯುವಂತಿಲ್ಲ, ಅಂದರೆ ತಲಾ ತಿಂಗಳಿಗೆ 10 ರಿಂದ 15 ರೂಪಾಯಿವರೆಗೆ ಕೂಲಿ ಮಾಡು ಮಾಡತಕ್ಕವರು ಸುಮಾರು 30 ಜನರಾಗಬಹುದೆಂದು ತೋರುತ್ತದೆ ಅಂತಲಾಗಿ ಈ ಕೂಲೀ ಜನರಿಗೆ ಪಾವತಿ ಆಗುವುದರಲ್ಲಿ ಅರ್ಥಕ್ಕಿಂತ ಹೆಚ್ಚಾಗಿಯೇ ಸಾದಿಲವಾರು ಖರ್ಚು 3,600 ರೂಪಾಯಿ ಎಂದು ಈ ಪ್ರಕಟನೆಯಲ್ಲಿ ತೋರಿಸಿರುತ್ತಾರೆ. ಇದರ ವಿವರವೇನೋ ತಿಳಿಯಲಿಲ್ಲ

ಈ ಕಂಪನಿಯ ಪ್ರಕಟನೆಯು ಸಮರ್ಪಕವಾಗಿಯೇ ಇದೆಯೋ ಏನೋ, ನಮಗೆ ಅದನ್ನು ಓದುವುದರಲ್ಲಿ ಕೆಲವು ಸಂಶಯಗಳು ಕಂಡು ಬಂದಿರುತ್ತವೆ ಡೈರೆಕ್ಟರುಗಳು ಈ ನಮ್ಮ ಸಂಶಯಗಳ ಪರಿಹಾರಕ್ಕಾಗಿ ತಕ್ಕ ಸಮಾಧಾನಗಳನ್ನು ತಿಳಿಸುವರೆಂದು ಕೋರುತ್ತೇವೆ

ಪತಾಧಿಪತಿಯು ಕ್ರಿಸ್ತನನ್ನು ಕುರಿತು ನುಡಿದ ಸಾಕ್ಷಿ.

ರೋಮಾಯ ಚಕ್ರವರ್ತಿಯ ಕಡೆಯ ವೈಸರಾಯಿಯಾಗಿ ಪಾಲೆಸ್ತೈನ್, ದೇಶವನ್ನು ಆಳುತ್ತಿದ್ದ ಪಿಲಾತನು ಯೇಸು ಕ್ರಿಸ್ತನನ್ನು ತನ್ನ ನ್ಯಾಯಸ್ಥಾನದಲ್ಲಿ ಫಿರ್ಯಾದಿಗಳ ಎದುರಿಗೆ ನಿಲ್ಲಿಸಿ ವಿಚಾರಿಸಿದನು ಅವನ ವಿಚಾರಣೆಯಲ್ಲಿ ಕ್ರಿಸ್ತನು ನಿರಪರಾಧಿಯೆಂದು ನಿರ್ಣಯವಾಯಿತು ಆದರೂ ಪಿಲಾತನು ಕ್ರಿಸ್ತನ ವೈರಿಗಳಾದ ಯೆಹೂದ್ಯರು ತನ್ನ ಮೇಲೆ ಚಕ್ರವರ್ತಿಗೆ ದೂರು ಬರೆದು— ಇವನು ರಾಜದ್ರೋಹಿಯನ್ನು ಶಿಕ್ಷಿಸದೆ ಬಿಡುಗಡೆ ಮಾಡಿದನೆಂದು ಕ್ಷುದ್ರ ಹೇಳಿ ತನ್ನ ವೈಸರಾಯಿ ಪದವಿಯನ್ನು ಎಲ್ಲಿ ತಪ್ಪಿಸ್ಯಾರೋ ಎಂದು ಅವರಿಗೆ ಹೆದರಿ ಯೇಸುವನ್ನು ಶಿಲುಬೆಗೆ ಜಡಿಸಿ ಅವರ ಆಗ್ರಹವನ್ನು ಶಾಂತಿಪಡಿಸಿದನು

ಯೇಸುವನ್ನು ಶಿಲುಬೆಗೆ ಜಡಿದು ಸಂಹರಿಸುವದಕ್ಕೆ ರೋಮಾಯ ಸೈನ್ಯದ ಕೆಲವು ಸಿಪಾಯಿಗಳು ನೇಮಕವಾದರು ಕಠಿಣ ಚಿತ್ತರಾದ ಈ ಸಿಪಾಯಿಗಳು ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟು ತಮ್ಮ ಕೈಗೆ ಸಿಕ್ಕಿದ ಖೈದಿಗಳನ್ನು ಹಾಸ್ಯ ಮಾಡುವದು, ಹೊಡೆಯುವದು, ಬೈಯುವದು ಅವರಲ್ಲಿ ಸಾಧಾರಣವಾಗಿದ್ದವು ಆ ಸಿಪಾಯಿಗಳು ಯೇಸುವನ್ನು ರಾಜದ್ರೋಹಿಯೆಂದು ಭಾವಿಸಿ ಆತನ ಮೇಲೆ ಆಪಾದಿತವಾದ "ಯೆಹೂದ್ಯರ ಅರಸನು" ಎಂಬ ಫಿರ್ಯಾದನ್ನು ಅನುಸರಿಸಿ ಆತನನ್ನು ಹಾಸ್ಯಮಾಡುವದಕ್ಕೆ ಯೇಸು ಕ್ರಿಸ್ತನಿಗೆ ಜೋರೆಯು ಸೋಗು ಹಾಕಿದರು ಇವರ ವಿಷಯ ಬರೆದಿರುವದೇನಂದರೆ— ವಿಚಾರಣೆಯಾದ ಮೇಲೆ ದೇಶಾಧಿಪತಿಯ ಸಿಪಾಯಿಗಳು ಯೇಸುವನ್ನು ಅರಮನೆಗೆ ಸೇರಿದ ಅಂಗಳದೊಳಕ್ಕೆ ಹಿಡಿದುಕೊಂಡು ಹೋಗಿ ಪಾವಲುಗಾರರನ್ನೆಲ್ಲಾ ಒಟ್ಟಿಗೆ ಆತನ ಸುತ್ತಲು ಅವರನ್ನು ಕೂಡಿಸಿಕೊಂಡು ಯೇಸುವಿನ ದೇಹದ ಮೇಲಿದ್ದ ಬಟ್ಟೆಗಳನ್ನು ತೆಗೆದುಹಾಕಿ ರಾಜವಸ್ತ್ರದ ಹಾಗೆ ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿ ಮುಳ್ಳಿನ ಬಳ್ಳಿಯಿಂದ ಒಂದು ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಬಲಗೈಯಲ್ಲಿ ರಾಜದಂಡದ ಹಾಗೆ ಒಂದು ಬೆತ್ತವನ್ನು ಕೊಟ್ಟು ಆತನ ಮುಂದೆ ಹಾಸ್ಯಕ್ಕಾಗಿ ಮೊಣಕಾಲೂರಿ—ಯೆಹೂದ್ಯರ ಅರಸನೇ ನಿನಗೆ ನಮಸ್ಕಾರವೆಂದು ಆತನನ್ನು ಪರಿಹಾಸ್ಯಮಾಡಿದರು ಅನಂತರ ಆತನ ಮೇಲೆ ಉಗುಳಿ ಆತನ ಕೈಯಲ್ಲಿದ್ದ ಬೆತ್ತವನ್ನು ಕಿತ್ತುಕೊಂಡು ಆತನ ತಲೆಯ ಮೇಲೆ ಹೊಡೆದು ಆ ಕಿರೀಟದ ಮುಳ್ಳುಗಳು ತಲೆಗೆ ಚುಚ್ಚುವಂತೆ ಮಾಡಿದರು ಇದಾದ ನಂತರ ಆ ಒಲ್ಲಿಯನ್ನು ಆತನ ದೇಹದಿಂದ ತೆಗೆದು ಆತನ ಸ್ವಂತ ಬಟ್ಟೆಗಳನ್ನು ಆತನಿಗೆ ತೊಡಿಸಿ ಶಿಲುಬೆಗೆ ಹಾಕುವದಕ್ಕೆ ಹಿಡುಕೊಂಡು ಹೋದರು

ಆತನು ಶಿಲುಬೆಯ ಮರವನ್ನು ಹೊರಲಾರದೆ ಬೀಳುತ್ತ ಎದ್ದು ಪುನಃ ಪ್ರಯಾಸದಿಂದ ಮುಂದೆ ಸಾಗುತ್ತಿದ್ದನು ಆತನಿಗೆ ರಾತ್ರಿ ಮಾಡಿದ ಊಟವೇ ಹೊರತು ಮಾರನೆ ಮಧ್ಯಾಹ್ನದ ವರೆಗೆ ಏನೂ ಇರಲಿಲ್ಲ ಮತ್ತು ರಾತ್ರಿಯಲ್ಲಿ ಮೂರು ಸರ್ತಿ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಯಾಗಿದ್ದನು ಆತನ ಪಕ್ಷವನ್ನು ವಹಿಸಿದವರು ಯಾರೂ ಇರಲಿಲ್ಲ ಶಿಷ್ಯರೆಲ್ಲರೂ ಆತನನ್ನು ತ್ಯಜಿಸಿ ಓಡಿ ಹೋಗಿದ್ದರು ಒಬ್ಬ ಶಿಷ್ಯನು ಗುರುದ್ರೋಹಮಾಡಿ ಸ್ವಲ್ಪ ಲಾಭಕ್ಕಾಗಿ ಆತನನ್ನು ಶತ್ರುಗಳಿಗೆ ಹಿಡುಕೊಟ್ಟಿದ್ದನು ಆತನ ಶಿಷ್ಯರಲ್ಲಿ ಅತ್ಯಂತ ಧೈರ್ಯಶಾಲಿಯಾದವನು ಯಾವಳೋ ಒಬ್ಬ ದಾಸಿಯ ಮಾತಿಗೆ ಇವನೂ ಸಹ ಯೇಸುವಿನ ಶಿಷ್ಯನೆಂತ ಹೇಳಿದ್ದಕ್ಕೆ ಅವನು ಅಂಜಿಕೆಯಿಂದ— ನಾನು ಯೇಸುವಿನ ಶಿಷ್ಯನಲ್ಲ, ನಾನು ಆತನನ್ನು ಕಾಣೆ ಕಾಣೆನು ಅವನನ್ನು ನೋಡಿದ್ದೇ ಇಲ್ಲವೆಂದು ಆಣೆ ಇಟ್ಟುಕೊಂಡು ವಿಚಾರಣೆಗೆ ನಿಂತಿದ್ದ ಕ್ರಿಸ್ತನ ಎದುರಿಗೇನೆ ಆತನನ್ನು ತಿರಸ್ಕರಿಸಿದ್ದನು ಕ್ರಿಸ್ತನು ಆಗ ದೇಹದ ಬಾಧೆಯಿಂದಲೂ ಮನೋವ್ಯಥೆಯಿಂದಲೂ ಸಂಕಟಪಡುತ್ತಿದ್ದನು ಆತನ ಮಿತ್ರರೂ ಶತ್ರುಗಳೂ ಅಧಿಕಾರಿಗಳೂ ಆತನಿಗೆ ಕೊಟ್ಟ ಮನೋಬಾಧೆಯನ್ನೂ ದೇಹದ ನೋವನ್ನೂ ಆತನು ನೆನೆದುಕೊಂಡು ವ್ಯಸನಾಕ್ರಾಂತನಾಗಿದ್ದದರಿಂದ ಆತನ ದೇಹದಿಂದ ಬೆವರು ಬರುವದಕ್ಕೆ ಬದಲಾಗಿ ರಕ್ತದ ಬೆವರು ಬೀಳುತ್ತಿರುವ ರಕ್ತದ ದೊಡ್ಡ ಹನಿಗಳ ಹಾಗಿಯಲ್ಲಿ ಆಯಿತು.

ಇಂತಹ ಸಂಕಟಪಡುತ್ತಾ ಯೇಸು ಶಿಲುಬೆಗೆ ಜಡಿಯುವದಕ್ಕೆ ಗೊತ್ತಾದ ಸ್ಥಳಕ್ಕೆ ಬಂದನು ಆತನ ಹಿಂದೆ ತಂಡೋಪತಂಡವಾಗಿ ಜನಗಳು ಬಂದು ಆ ಸ್ಥಳದಲ್ಲಿ ಮಹಾ ಸಮೂಹವು ನೆರೆದಿತ್ತು ಅಲ್ಲಿ ಆಗ ಸಿಪಾಯಿಗಳು ಬಂದು ಆತನನ್ನು ಶಿಲುಬೆಯ ಮೇಲೆ ಮಲಗಿಸಿ ಕೈಕಾಲುಗಳಿಗೆ ಮೊಳೆಗಳನ್ನು ಜಡಿದು ಶಿಲುಬೆಯ ಮೇಲೆ ಆತನು ನೇತಾಡುತ್ತಿರುವಂತೆ ಅದಕ್ಕೆ ಅವನನ್ನು ಭದ್ರಪಡಿಸಿ ಅನಂತರ ಆತನಿಂದೊಡಗೂಡಿದ ಶಿಲುಬೆಯನ್ನು ಎತ್ತಿ ಭೂಮಿಯ ಮೇಲೆ ನಿಲ್ಲಿಸಿದರು ಈ ಘೋರಕೃತ್ಯವನ್ನು ನೋಡುತ್ತಿದ್ದವರು ಸ್ವಲ್ಪವಾದರೂ ಕರುಣೆಯಿಲ್ಲದೆ ಆತನನ್ನು ಹಾಸ್ಯಮಾಡಿ—ನೀನು ಯೆಹೂದ್ಯರ ಅರಸನೋ? ದೇವರ ಕುಮಾರನೋ? ಎಂದು ಜರಿದರು ಕ್ರಿಸ್ತನನ್ನು ಶಿಲುಬೆಗೆ ಜಡಿದ ಸಿಪಾಯಿಗಳು ಆತನ ಬಟ್ಟೆಗಳನ್ನು ಸುಲಿದುಕೊಂಡು ಆತನ ಎದುರಿಗೆ ಹಂಚಿಕೊಳ್ಳುತ್ತಿದ್ದರು

ಯೇಸು ಶಿಲುಬೆಯ ಮೇಲೆ ನೇತಾಡುತ್ತಾ ಮರಣವೇದನೆಯನ್ನನುಭವಿಸುತ್ತಿದ್ದರೂ ಆತನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಸುಳ್ಳು ದೂರನ್ನು ಹೊರಿಸಿ ಈಗ ಕೊಲ್ಲುತ್ತಿದ್ದ ಆ ಜನಗಳ ದುಷ್ಕೃತ್ಯವನ್ನು ಯೋಚಿಸಿ ತನ್ನ ಕಷ್ಟವನ್ನು ಮರೆತು ಅವರ ಮೇಲೆ ಕನಿಕರಪಟ್ಟು ದೇವರನ್ನು ಅವರಿಗಾಗಿ ಪ್ರಾರ್ಥಿಸಿ—ತಂದೆಯೇ, ಇವರಿಗೆ ಮನ್ನಿಸು ತಾವೇನು ಮಾಡುತ್ತಾರೋ ತಿಳಿಯರು ಎಂದು ಬೇಡಿದನು ಮತ್ತು ಯಾರನ್ನಾದರೂ ದೂಷಿಸದೇ ದೇವರನ್ನು ಸ್ಮರಿಸಿ—ತಂದೆಯೇ, ನಿನ್ನ ಕೈಗೆ ನನ್ನ ಆತ್ಮವನ್ನು ಒಪ್ಪಿಸುತ್ತೇನೆಂದು ಹೇಳಿ ಪ್ರಾಣಬಿಟ್ಟನು

ಇದೆಲ್ಲಾ ನಮ್ಮ ಕಣ್ಣು ಮುಂದೆ ನಡೆದು ನಾವು ಸ್ವತಃ ಒಳಹೊಕ್ಕು ಯೇಸುವನ್ನು ಹಿಡಿದ ಸಮಯದಿಂದ ಮರಣದ ವರೆಗೂ ಆತನಿಗೆ ಸಂಭವಿಸಿದ್ದನ್ನೂ ಆತನು ಈ ಕಷ್ಟದಲ್ಲಿ ಪ್ರಕಟಿಸಿದ ಸದ್ಗುಣವನ್ನೂ ನೋಡಿದ್ದರೆ ನಾವು ಆತನನ್ನು ಕುರಿತು ಏನನ್ನುತ್ತಿದ್ದೆವು? ಊಹಿಸಿರಿ ಒಬ್ಬ ಶತಾಧಿಪತಿಯು (ಅಂದರೆ ರೋಮಾಯ ಸೈನ್ಯಾಧಿಪತಿಯು ಇವನು ಕ್ರಿಸ್ತನ ಶಿಷ್ಯನಲ್ಲ ಪರದೇಶಿ ಅನ್ಯಮತದವನು) ಇದನ್ನೆಲ್ಲಾ ಆ ಮೂಲಾಗ್ರವಾಗಿ ನೋಡುತ್ತಿದ್ದು—ಈತನು ಸತ್ಪುರುಷನು ಹೌದು ಈತನು ನಿಜವಾಗಿ ದೇವರ ಕುಮಾರನೇ ಸರಿಯೆಂದು ಸಾಕ್ಷಿ ನುಡಿದನು

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

∴

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಮಾವಿನ ಹಣ್ಣುಗಳ ಪ್ರದರ್ಶನ ನಡೆದು ಶ್ರೇಷ್ಠವಾದ ಹಣ್ಣುಗಳಿಗೂ, ಪರಬತ್ತುಗಳಿಗೂ ಬಹುಮಾನಗಳನ್ನು ಕೊಟ್ಟರು.

∴

ಮ॥ ಸಿ ಶ್ರೀಕಂಠೇಶ್ವರಯ್ಯರವರಿಗೆ ಚೀಫ್ ಕೋರ್ಟಿನ ಜಡ್ಜಿ ಕೆಲಸವೂ, ಮಿ॥ ಪ್ಲುಮರ್ ಸಾಹೇಬರಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಕೆಲಸವೂ ನೇಮಕವಾಗಬಹುದೆಂಬ ವರ್ತಮಾನದಲ್ಲಿ ನಿಜವೇನೂ ಇಲ್ಲ.

∴

ಬೆಂಗಳೂರು ಸಿಟಿಯಲ್ಲಿ ಎಸ್ ಆರ್ ಶ್ರೀನಿವಾಸಯ್ಯಂಗಾರ್ ಎಂಬ 13 ವರುಷದ ಬಾಲಕನು ಚಿನ್ನ ಬೆಳ್ಳಿ ನಗಗಳನ್ನು ಕಳುವುಮಾಡಿ ಒಬ್ಬ ವರ್ತಕನಲ್ಲಿ ಅಡವಿಟ್ಟಿದ್ದನೆಂದು ಪತ್ತೆ ಆಗಿ ಸಿಟಿ ಮ್ಯಾಜಿಸ್ಟ್ರೇಟರು ಆ ಬಾಲಕನಿಗೆ ಆರು ಛಡಿ ಏಟು ಹೊಡಿಸಿ ಬಿಟ್ಟುಬಿಟ್ಟರು

∴

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳಿಗಾಗಿ ರಾಜಧಾನಿಗೆ ದಯಮಾಡಿದ ಗಣ್ಯಪ್ರಜೆಗಳೂ ಅಧಿಕಾರಿಗಳೂ ಕಳೆದ ವಾರ ವಾಪಸು ತೆರಳಿದರು ದಿವಾನ್‌ರವರು ಈ ತಿಂಗಳ 27 ನೇ ತಾ ತನಕ ರಾಜಧಾನಿಯಲ್ಲೇ ಇದ್ದು ಬೆಂಗಳೂರಿಗೆ ದಯಮಾಡುವವರಾಗಿದ್ದಾರೆ

∴

ರಾಯಬಹದೂರ್ ಮಿ॥ ಎಂ ಮುತ್ತಣ್ಣನವರು ಈ ತಿಂಗಳ ಆಖೈರಿಗೆ ಪೆನ್ಷನ್ ಮೇಲೆ ನಿವೃತ್ತರಾಗುವರೆಂದೂ, ಸರ್ಕಾರದವರು ಮ॥ ಎಂ ಜಿ ರಾಮರಾಯರನ್ನು ನಮ್ಮ ಸಂಸ್ಥಾನದ ಫಾರೆಸ್ಟ್ ಕನ್ಸರ್ವೇಟರಾಗಿ ಕೆಲವು ಕಾಲದ ವರೆಗೆ ಬದಲಿ ನೇಮಕಮಾಡುತ್ತಾರೆಂದೂ ಕೇಳುತ್ತೇವೆ

∴

ಕಳೆದ ಶನಿವಾರ ನಮ್ಮ ಮಹಾರಾಜರವರು ಮಹಾಮಾತೃಶ್ರೀಯವರ ಸಮೇತ ರಾಜಧಾನಿಯಿಂದ ನೀಲಗಿರಿಗೆ ಪ್ರೋಗ್ರಾಮಿನಲ್ಲಿ ಚಿತ್ತೈಸಿದರು ಅವರು ಈ ವಾರ ವಾಪಸು ದಯಮಾಡುತ್ತಾರೆ ಮಹಾಮಾತೃಶ್ರೀಯವರು ಇನ್ನು ನಾಲ್ಕಾರು ವಾರಗಳ ತನಕ ನೀಲಗಿರಿಯಲ್ಲಿದ್ದು ದಯಮಾಡುವರೆಂದು ಕೇಳುತ್ತೇವೆ

∴

ಬೊಂಬಾಯಿ ಅಧಿಪತ್ಯದ ಗವರ್ನರ್ ಲಾರ್ಡ್ ವಿಲ್ಲಿಂಗ್‌ಡನ್ ರವರು ಪರಿವಾರ ಸಮೇತ ಕಳೆದ ವಾರ ರಾಜಧಾನಿಗೆ ಚಿತ್ತೈಸಿದ್ದು ಪಟ್ಟಣದ ಎಲ್ಲಾ ಭಾಗಗಳನ್ನೂ ಪರಾಂಬರಿಸಿಕೊಂಡು, ಶ್ರೀರಂಗಪಟ್ಟಣ, ಕನ್ನೆಗಲು, ಶಿವಸಮುದ್ರ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಸಂಚಾರಮಾಡಿ, ಪೂನಾ ಪಟ್ಟಣಕ್ಕೆ ದಯಮಾಡಿದರು

∴

ಹಿಂದಿನ ಸೋಮವಾರ ಸಾಯಂಕಾಲ ಶ್ರೀಮದ್ಯುವರಾಜರವರು ಎಲ್ಲಾ ಅಧಿಕಾರಿಗಳನ್ನೂ ಸಂಸತ್ತಿನ ಸಮಾಜದ ಮೆಂಬರುಗಳನ್ನೂ ಕುದುರೆ ಜೂಜಿನ ಬೋರಿಗೆ ಬರಮಾಡಿಕೊಂಡು ಟೀಪಾರ್ಟಿಯನ್ನು ಮಾಡಿಸಿ ಸಂತೋಷಪಡಿಸಿದರು ಅಧಿಕಾರಿಗಳಿಗೆ ನಾನಾ ವಿನೋದಕರವಾದ ಪಂದ್ಯಗಳನ್ನು ಕಲ್ಪಿಸಿ ಅವರಿಂದ ಆಡಿಸಿ ಗೆದ್ದವರಿಗೆ ಶ್ರೀಮನ್ ಮಹಾರಾಜರವರ ಹಸ್ತದಿಂದ ಬಹುಮಾನಗಳನ್ನು ಕೊಡಿಸಿದರು

∴

ಈ ತಿಂಗಳ ಆಖೈರಿನಲ್ಲಿ ಅಂದರೆ ತಾ 29 ನೇ ಸೋಮವಾರ ಬೆಂಗಳೂರಿನಲ್ಲಿ ನ್ಯಾಯವಿಧಾಯಕ ಸಭೆ ನಡೆಯುವುದು ಕಂಟ್ರೋಲರ್ ಮ॥ ಜಿ ಎಸ್ ಚಕ್ರವರ್ತಿಯವರು ಸಂಸ್ಥಾನದ ಮುಂದಿನ ಸಾಲಿನ ಜಮಾಖರ್ಚಿನ ಅಂದಾಜುಪಟ್ಟಿ (ಬಡ್ಜೆಟ್) ಗಳನ್ನು ಆ ಸಭೆಯಲ್ಲಿ ವಿವರಿಸಿ ಹೇಳುವರು ಮೆಂಬರುಗಳು ಅದರ ಮೇಲೆ ತಮ್ಮ ಸಲಹೆಗಳನ್ನು ಜುಲೈ ತಾ 2 ನೇ ಗುರುವಾರದಿಂದ ತಿಳಿಸಿ ಚರ್ಚೆಗಳನ್ನು ನಡಿಸುತ್ತಾರೆ

∴

ಚನ್ನಪಟ್ಟಣದಲ್ಲಿ ಈಡಿಗರ ಬಸಮ್ಮನೆಂಬಾಕೆಯು 7 ವರುಷದ ರಾಚಮ್ಮನೆಂಬ ಹೆಣ್ಣು ಮಗುವು ಒಡವೆಗಳನ್ನು ಹಾಕಿಕೊಂಡು ತಾ 6 ರಲ್ಲಿ ಆಡುತ್ತಿದ್ದವಳು ಹಾಗೇ ಮಾಯವಾದಳು ಮರುದಿನ ಆ ಹುಡುಗಿಯ ಶವವು ಒಂದು ಕೋಟೆದ ಭಾವಿಯಲ್ಲಿ ತೇಲುತ್ತಿತ್ತು ಲಾಸ್ ಮಹಜರಿನಲ್ಲಿ ಯಾರೋ ಆ ಮಗುವಿನ ಬಾಯಿಗೆ ಬಟ್ಟೆ ತುರುಕಿ ಕತ್ತು ಸುಲಿದಿರಬೇಕೆಂದು ಗೊತ್ತಾಯಿತು ಪೊಲೀಸಿನವರು ಪತ್ತೆ ತರದೂದು ನಡಿಸುತ್ತಿದ್ದಾರೆ

∴

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಮೈಸೂರಿಗೆ ದಯಮಾಡುವರೆಂದು ಅವರ ಆತಿಥ್ಯದ ಏರ್ಪಾಡುಗಳು ನಡೆದಿದ್ದವು ಆದರೆ ಅವರಿಗೆ ಈ ಮಧ್ಯೆ ದೇಹಾಲಸ್ಯವುಂಟಾಯಿತೆಂದೂ, ಈ ಕಾರಣದಿಂದ ಅವರು ದಯಮಾಡುವುದಿಲ್ಲವೆಂದೂ ಕಳೆದ ವಾರ ಗೊತ್ತಾಯಿತು ಬರೋಡಾ ಸಂಸ್ಥಾನದ ಗಾಯಕವಾಡ ರಾಜಕುಮಾರರು ಪರಿವಾರ ಸಮೇತ ದಯಮಾಡಿ ಬಾಸ್ ಬಂಗಲೆಯಲ್ಲಿ ಇಳುಕೊಂಡು ಅರಮನೆಯ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ

∴

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ ಡೆಪ್ಟಿ ಇನ್ಸ್‌ಪೆಕ್ಟರಾಗಿದ್ದು ಪೆನ್ಷನ್ ಪಡೆಯುತ್ತಾ ಬೆಂಗಳೂರಿನಲ್ಲಿರುವ ಮ॥ ಕೆ ರಂಗಪ್ಪನವರ ಕುಮಾರರಾದ ಮ॥ ಕೆ ಸುಬ್ಬರಾಯರು ಬೊಂಬಾಯಿನ ವಿಕ್ಟೋರಿಯಾ ಕಸಬುಗಳ ಕಲಾಶಾಲೆಯಲ್ಲಿ ನೆಯ್ಗೆಯನ್ನು ಅಭ್ಯಾಸಮಾಡಿ, ಈಗ ತಿರುಚನೂರು ಪಟ್ಟಣದ ಸೀತಾರಾಂ ಎಂಬ ಕಾರ್ಖಾನೆಯೊಳಗೆ ನೆಯ್ಗೆಯನ್ನು ಕಲಿಸುವುದಕ್ಕೆ ನೇಮಕವಾಗಿದ್ದಾರೆ ಇವರು ಇತ್ತಲಲ್ಲೇ ಜಪಾನಿಗೆ ಪ್ರಯಾಣಮಾಡಿ ಅಲ್ಲಿ ರೇಷ್ಮೆ ನೆಯ್ಗೆಯನ್ನೂ ಬಣ್ಣಹಾಕುವುದನ್ನೂ ಕ್ಯಾಲಿಕೋ ಪ್ರಿಂಟಿಂಗನ್ನೂ ಕಲಿತುಕೊಂಡು ಬರುವವರಾಗಿದ್ದಾರೆಂದು ಕೇಳುತ್ತೇವೆ ಇವರು ಈ ಕಸಬುಗಳನ್ನು ಯಥಾರ್ಥವಾಗಿ ಕಲಿತು ನಿಪುಣತೆಯನ್ನು ಪಡೆದು ಬಂದರೆ ಇವರಿಗೆ ನಮ್ಮ ಸೀಮೆಯಲ್ಲೇ ಆ ಸಂಬಂಧದ ಉದ್ಯೋಗ ದೊರಕುವುದರಲ್ಲಿ ಸಂಶಯವಿಲ್ಲ.

∴

ನಮ್ಮ ಮಹಾರಾಜರವರ ಯೂರೋಪಿಯನ್ ಅತಿಥಿಗಳು ಸುಮಾರು 60 ಜನರು ನಾಳೆ ಶನಿವಾರ ರಾಜಧಾನಿಗೆ ದಯಮಾಡುವರು. ಗವರ್ನ್‌ಮೆಂಟ್ ಹೌಸ್ ಬಂಗಲೆಯೊಳಗೂ, ಮೈದಾನಿನಲ್ಲಿ ಹಾಕಿರುವ ಡೇರೆಗಳಲ್ಲೂ ಇವರಿಗೆ ಸ್ಥಳವನ್ನು ಕಲ್ಪಿಸಿರುತ್ತಾರೆ ಅವರ ಸಂತೋಷಕ್ಕಾಗಿ ಪೋಲೋ ಪಂದ್ಯಗಳೂ, ಕುದುರೆ ಜೂಜುಗಳೂ, ಅಟ್‌ಹೋಂ ಪಾರ್ಟಿಗಳೂ ಈ ತಿಂಗಳ ಆಖೈರಿನ ತನಕ ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಚಾಮುಂಡಿ ಜಂಖಾನಾ ಮೈದಾನಿನಲ್ಲಿ ನಡೆಯುತ್ತವೆ

∴

ಕಳೆದ ಬುಧವಾರ ಸಾಯಂಕಾಲ ಮ॥ ಕೆ. ಸುಬ್ರಹ್ಮಣ್ಯ ಅಯ್ಯರವರು ದಿವಾನ್ ಬಹದೂರ್ ಮ॥ ಕೆ ಪಿ ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಬ್ಯಾಂಕುಗಳ ಮತ್ತು ಅಂಗಡಿಗಳ ಜಮಾಖರ್ಚುಗಳನ್ನು ಆಡಿಟ್ ಮಾಡುವ ಸ್ವತಂತ್ರವಾದ ಜೀವನೋಪಾಯವನ್ನು ನಮ್ಮ ಯೌವನಸ್ಥರು ಕಲಿತುಕೊಳ್ಳಬೇಕೆಂಬ ವಿಷಯವಾಗಿ ಉಪನ್ಯಾಸಮಾಡಿ, ಇಂಥಾ ಉದ್ಯೋಗಕ್ಕೆ ಈಗಲೂ, ಇನ್ನು ಮುಂದೆಯೂ ತುಂಬಾ ಪ್ರಾಶಸ್ತ್ಯವು ಇರುವುದೆಂದೂ, ಇದರಲ್ಲಿ ಅನೇಕರು ಗಂಭೀರವಾದ ಜೀವನವನ್ನು ಸಂಪಾದಿಸಿಕೊಳ್ಳಬಹುದೆಂದೂ ಉಪನ್ಯಾಸಮಾಡಿದರು

∴

ಟಿ ನರಸೀಪುರದ ತಾಲ್ಲೂಕಿನಲ್ಲಿ ಯುಗಾದಿ ಹಬ್ಬದ ದಿನ ಅಲ್ಲಿ ನಾಲ್ವರು ಪೊಲೀಸಿನವರು ಒಬ್ಬ ಮರಗೆಲಸದವನನ್ನು ದಸ್ತಗಿರಿಮಾಡಿ ಅವನು ಅವರ ಸ್ವಾಧೀನದಲ್ಲಿರುವಾಗ್ಗೆ ಮೃತಪಟ್ಟನೆಂದೂ, ಆ ಪೊಲೀಸಿನವರ ಮೇಲೆ ಕೊಲೆಯ ಅಪರಾಧ ಹೊರಿಸಲ್ಪಟ್ಟು ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಪ್ರಥಮ ವಿಚಾರಣೆ ನಡೆಯುತ್ತಿದೆ ಎಂದೂ ತಿಳಿಸಿದ್ದೆವಷ್ಟೆ ಈ ಮೊಕದ್ದಮೆಯಲ್ಲಿ ಪೊಲೀಸಿನವರ ಮೇಲೆ ಅಪರಾಧ ರುಜುವಾತಾಗುತ್ತದೆ ಎಂದು ಹೇಳಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಅವರನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದ್ದಾರೆ ಈ ಮೊಕದ್ದಮೆಯು ಮೈಸೂರು ಅ॥ ಸೆಷನ್ಸ್ ಜಡ್ಜ್ ಮ॥ ಬಿ ಸುಬ್ಬಣ್ಣನವರ ಕೋರ್ಟಿನಲ್ಲಿ ಜುಲೈ ತಾ 1 ರಿಂದ ವಿಚಾರಣೆಯಾಗುವುದು

∴

ದಿವಾನ್‌ರವರು ಕಳೆದ ವಾರ ಸುಮಾರು 20 25 ಮಂದಿ ಸಾಹೇಬ್ ಜನಗಳನ್ನು ತಮ್ಮ ಬಂಗಲೆಗೆ ಕರೆಸಿಕೊಂಡು, ಮಹಾರಾಜರವರ ವರ್ಧಂತಿ ಕಾಲದ ಸಂತೋಷಕ್ಕಾಗಿ ಅವರಿಗೆಲ್ಲಾ ದಿವ್ಯವಾದ ಔತಣವನ್ನು ಮಾಡಿಸಿದರು ಭೋಜನಾನಂತರ ಅತಿಥಿಗಳು ಮಹಾರಾಜರವರ ಮತ್ತೂ ದಿವಾನ್‌ರವರ ಶ್ರೇಯಸ್ಸನ್ನು ಬಯಸಿದರು ಪ್ರೊಫೆಸರ್ ಎಂ ಬಿ ಕೃಷ್ಣಸ್ವಾಮಯ್ಯಂಗಾರ್ರ ಕುಮಾರನಾದ ಚಿ॥ ಕೃಷ್ಣಸ್ವಾಮಯ್ಯಂಗಾರ್ ಎಂಬ ಸುಮಾರು 10 ವರುಷದ ಹುಡುಗನು ಆ ರಾತ್ರಿ ಅತಿಥಿಗಳ ಮುಂದೆ ಯುಕ್ತಿಣಿ ವಿದ್ಯೆಯನ್ನು ಮಾಡಿ ತೋರಿಸಿದಾಗ ಅವರೆಲ್ಲಾ ಅವನ ಸಾಮರ್ಥ್ಯವನ್ನು ಮೆಚ್ಚಿ ಕೊಂಡಾಡಿದರು ಈ ಬಾಲಕನು ಮುಂಡ್ಯದಲ್ಲಿ ಲೋವರ್ ಸೆಕೆಂಡರಿ ತರಗತಿಯ ವಿದ್ಯಾರ್ಥಿಯಾಗಿ ಓದುತ್ತಿದ್ದಾನೆ ಇದುವರೆಗೆ ಈ ಹುಡುಗನು ಅನೇಕ ದೊಡ್ಡಮನುಷ್ಯರ ಮುಂದೆ ತನ್ನ ಯುಕ್ತಿಣಿ ವಿದ್ಯೆಯ ಸಾಮರ್ಥ್ಯವನ್ನು ತೋರಿಸಿರುವನು

∴

ಬಾಡಿಗೆ ಗಾಡಿಗಳ ಮತ್ತು ಎತ್ತು ಕುದುರೆಗಳ ಸ್ಥಿತಿಗತಿಯನ್ನು ಚೆನ್ನಾಗಿ ಮಾಡಬೇಕೆಂದು ಸರ್ಕಾರದವರು ಒಂದು ಕಾನೂನ್ ಮಾಡಿ, ಈಗ ಕೆಲವು ರೂಲುಗಳನ್ನು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿ ಈ ರೂಲು ಸಂಸ್ಥಾನದ ಮೂಲೆ ಕೆಲವು ದೊಡ್ಡ ಪಟ್ಟಣಗಳಿಗೆ ಮಾತ್ರ ಜಾರಿಯಲ್ಲಿ ತರತಕ್ಕದೆಂದು ವಿಧಿಸಿದಾರೆ ಗಾಡಿ, ಕುದುರೆ, ಎತ್ತು ಚೆನ್ನಾಗಿರಬೇಕು, ಗಾಡಿ ಹೊಡೆಯುವವನಿಗೆ 18 ವಯಸ್ಸಾದರೂ ಆಗಿರಬೇಕು ಎಂಬುವುದೇ ಈ ರೂಲಿನ ಅಭಿಪ್ರಾಯವಾಗಿದೆ ಸಂಸ್ಥಾನದ ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲೂ ಈ ರೂಲನ್ನು ಜಾರಿಗೆ ಬರುವಂತೆ ಮ್ಯುನಿಸಿಪಲ್ ಕೌನ್ಸಿಲರುಗಳು ಮಾಡಿಕೊಂಡರೆ 8-10 ವರುಷದ ಹುಡುಗರು ಬಾಡಿಗೆ ಗಾಡಿ ಹೊಡೆಯುವುದೂ, ಆಗಾಗ್ಗೆ ಅಪಾಯಗಳು ಸಂಭವಿಸುವುದೂ ತಪ್ಪೀತು ಮೊದಲು ಮೈಸೂರು, ಬೆಂಗಳೂರು ಪಟ್ಟಣಗಳಲ್ಲಾದರೂ ಈ ರೂಲನ್ನು ಜಾರಿಗೆ ತರಬೇಕಾಗಿದೆ

∴

ಕಳೆದ 10 ನೇ ತಾ ಬುಧವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಸಂಸ್ಕೃತ ವಿದ್ಯಾಶೋಧನಾ ನಿಲಯದ ಸ್ಥಾಪನೆಯ ವಿಷಯದಲ್ಲಿ ಉಪನ್ಯಾಸಗಳು ನಡೆದವು ಈ ಸಭೆಯಲ್ಲಿ ಮ ಎಂ ರಾಮರಾಯರು ಚೇರ್‌ಮನ್‌ರಾಗಿದ್ದರು ಪಂಡಿತ ರಘುಪತ್ಯಾಚಾರ್ರು ಕೆಲವು ಕವನಗಳನ್ನು ಓದಿದ ಮೇಲೆ ಚೀಫ್ ಇಂಜನಿಯರ್ ಮ ಕಪೂರ್ ಶ್ರೀನಿವಾಸರಾಯರೂ, ಮ॥ ಎಂ ವೆಂಕಟಕೃಷ್ಣಯ್ಯನವರೂ ಇಂಗ್ಲಿಷಿನಲ್ಲೂ ವೇ ಕುರುಡ್ಕೋಟಿ ಮಹಾಭಾಗವತರೂ, ವೇ। ಶಾಸ್ತ್ರಿ ವೆಂಕಟಾಚಲಶಾಸ್ತ್ರಿಗಳೂ ಸಂಸ್ಕೃತದಲ್ಲೂ ಉಪನ್ಯಾಸಗಳನ್ನು ಮಾಡಿ, ಈ ವಿದ್ಯಾನಿಲಯವು ಬೆಂಗಳೂರಿನಲ್ಲಿ ಸ್ಥಾಪನೆಯಾಗಿದೆ ಎಂದೂ, ಅದಕ್ಕೆ ಆರ್ಯ ಭಾಷಾಭಿಮಾನಿಗಳೆಲ್ಲಾ ದ್ರವ್ಯ ಸಹಾಯ ಮಾಡಿ ಆ ನಿಲಯವನ್ನು ಶಾಶ್ವತಗೊಳಿಸಬೇಕೆಂದೂ, ಇದಕ್ಕೆ ಶ್ರೀ ಶೃಂಗೇರಿ ಮಠದವರೂ ಕೆಲವು ದೇಶೀಯ ದೊಡ್ಡ ಮನುಷ್ಯರೂ ಆಗಲೇ ಸಹಾಯಮಾಡಿರುತ್ತಾರೆಂದೂ ತಿಳಿಸಿದರು

∴

ಕಳೆದ ಶುಕ್ರವಾರ ಬೆಳಗ್ಗೆ ದಿವಾನ್‌ರೂ ಕೌನ್ಸಿಲರುಗಳೂ ಸೇರಿ ವಿಚಾರಿಸಿ ಮುಂದೆ ಹೇಳುವ ಅಧಿಕಾರಿಗಳ ಬದಲಾವಣೆಯನ್ನು ತೀರ್ಮಾನ ಮಾಡಿರುತ್ತಾರೆ — ಗವರ್ನ್‌ಮೆಂಟ್ ಸೆಕ್ರೆಟರಿಯವರಾಗಿದ್ದ ಮ॥ ಕೆ ಆರ್ ಶ್ರೀನಿವಾಸಯ್ಯಂಗಾರ್ರು "ಮೈಸೂರ್ ಗೆಜೆಟಿಯರ್" ಎಂಬ ಮೈಸೂರು ಚರಿತ್ರೆಯನ್ನು ತಿದ್ದಿ ಈಗಿನ ಕಾಲಕ್ಕೆ ತಕ್ಕಂತೆ ರಚಿಸುವುದು ಮ॥ ಡಿ ಎಂ ನರಸಿಂಗರಾಯರು ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿಯಾಗಿಯೂ, ಮಿ॥ ಪಿ ಜಿ ಡಿಸೋಜಾರವರು ಡೆಪ್ಟಿ ಸೆಕ್ರೆಟರಿಯಾಗಿಯೂ, ಮ॥ ಎಸ್ ಸಿ ರಾಜಗೋಪಾಲಾಚಾರ್ರು ದಿವಾನ್‌ರವರ ಒಳ ಅಂಡರ್ ಸೆಕ್ರೆಟರಿಯಾಗಿಯೂ ಇರತಕ್ಕದ್ದು ಡಾಕ್ಟರ್ ಪಲ್ಪು ಯವರು ಬರೋಡಾ ಸಂಸ್ಥಾನದಲ್ಲಿ ಹೆಲ್ತ್ ಇಲಾಖೆಯನ್ನು ಏರ್ಪಾಡು ಮಾಡುವುದಕ್ಕೆ ಹೋಗೋಣದರಿಂದ ಡೆಪ್ಟಿ ಸೆಕ್ರೆಟರಿ ಮ॥ ಸಿ ವೆಂಕಟರಾಯರು ಡಾ॥ ಪಲ್ಪು ಯವರಿಗೆ ಬದಲಾಗಿ ಜೈಲ್ ಸೂಪರಿಂಟೆಂಡೆಂಟರಾಗಿರತಕ್ಕದ್ದು ಮಿ॥ ಜಸ್ಟಿಸ್ ಇ ಎಚ್ ವಾಲೆಸ್ ರವರು ವಾಪಸು ಮದರಾಸ್ ಸರ್ವಿಸಿಗೆ ಹೋಗೋಣದರಿಂದ ಡಿಸ್ಟ್ರಿಕ್ಟ್ ಜಡ್ಜ್ ಮ॥ ಪರಮಶಿವ ಅಯ್ಯರವರು ಚೀಫ್ ಕೋರ್ಟ್ ಜಡ್ಜಿಯಾಗಿರತಕ್ಕದ್ದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂನ್ 4 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣೆ —(1)	ಷೇರು ಮೊಬಲಗು	ರೂ 9,81,305
,, (2)	ಡಿಪಾಜಟ್ಟುಗಳು	,, 13,88,765
,, (3)	ಇತರೆ	,, 29,502
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ	ರೂ 23,99,572
ದೇಣೆ —(1)	ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ 4,64,142
,, (2)	ಖಾತೆ ಮತ್ತು ಇತರ ಸಾಲಗಳು	,, 13,56,563
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1,52,925
,, (4)	ಇನ್‌ವೆಸ್ಟ್‌ಮೆಂಟುಗಳು	,, 2,01,009
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 1,77,027
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 8,321
,, (7)	ಇತರೆ	,, 19,596
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 23,99,572

ಡಬ್ಲಿಯು ಸಿ ರೋಜ್, ಮ್ಯಾನೇಜರ್.

ಓಲ್ಡ್ ಸ್ಟೂಡೆಂಟ್ಸ್ ಅಸೋಸಿಯೇಷನ್, ನಗರ.

ಈ 1914 ನೇ ಮೇ ತಾ 31 ರಲ್ಲು ಇಲ್ಲಿನ ಬಾಯ್ಸ್ ಸ್ಕೂಲಿನಲ್ಲಿ ಮುಂಚೆ ಕಲಿತ ಮಹನೀಯರು ಸೇರಿ ಮೇಲ್ಕಂಡ ಸಂಘವನ್ನು ಸ್ಥಾಪಿಸಿ ತಾವು ಮುಂಚೆ ಕಲಿತಿದ್ದ ಶಾಲೆಯ ಜ್ಞಾಪಕಾರ್ಥವಾಗಿ ವರುಷಕ್ಕೊಮ್ಮೆ ಸ್ಪೋರ್ಟ್ಸ್ ಮತ್ತು ಸಂಘದ ಮೆಂಬರುಗಳ ಜನರಲ್ ಮೀಟಿಂಗು ನಡೆಯಬೇಕೆಂದು ಈ ಮುಂಚೆ ನಿರ್ಧರಿಸಿದ ಪ್ರಕಾರ ನಡೆಯಿತು ಸ್ಕೂಲಿನಲ್ಲಿ ಈಗ ಕಲಿಯುವ ವಿದ್ಯಾರ್ಥಿಗಳು ಉಪಾಧ್ಯಾಯರೊಂದಿಗೆ ಸ್ಕೂಲಿನಿಂದ ಫ್ಲಾಗ್‌ಗಳೊಡನೆ ವಾಲಗದಿಂದ ದೇವಡಿ ಬೈಲಿನಲ್ಲಿ ಪತಾಕೆಗಳಿಂದಲೂ, ವೆಲ್‌ಕಂ ಬೋರ್ಡುಗಳಿಂದಲೂ ಅಲಂಕರಿಸಲ್ಪಟ್ಟ ಸ್ಥಳಕ್ಕೆ ಬಂದರು ಅವರೊಡನೆ ಊರಿನ ಮುಖಂಡರೂ, ಪಾಲೀಸ್ ಹೆಡ್‌ಕ್ವಾರ್ಟರ್‌ನಿಂದ ಬರಮಾಡಿಕೊಂಡವರೂ ಬಂದರು ಇವರನ್ನು ರಿಸೆಪ್ಷನ್ ಕಮಿಟಿಯವರು ಸ್ವಾಗತಮಾಡಿದರು ಪಾಲೀಸ್ ಶಿರಸ್ತೆದಾರರನ್ನು ಪ್ರೆಸಿಡೆಂಟರನ್ನಾಗಿ ಮಾಡಿದ ನಂತರ ಸಂಘದ ಕಾರ್ಯದರ್ಶಿಗಳಾದ ಮ॥ ಸಿ ಕೃಷ್ಣರಾಯರು ಈ ಸಂಘವನ್ನು ಸ್ಥಾಪಿಸಿದ ಉದ್ದೇಶವನ್ನು ವಿವರಿಸಿದರು ನಂತರ ಹೈ ಜಂಪ್, ಲಾಂಗ್ ಜಂಪ್, ಸ್ಯಾಕ್ ರೇಸ್, ಚೆಟ್ಟಿ ರೇಸ್, ಆಬ್‌ಸ್ಟಕಲ್ ರೇಸ್ ಯಾನೆ ಅಡಗಡದ ಓಟ, ಟಗ್ ಆಫ್ ವಾರ್, ಫುಟ್ ಬಾಲ್ ಮ್ಯಾಚ್ ಮುಂತಾದುವು ನಡೆದವು ಆ ಮೇಲೆ ಇಂಗ್ಲಿಷ್‌ನಲ್ಲಿ ಪದ್ಯಗಳು ಹಾಡಲ್ಪಟ್ಟವು ಆರೋಗ್ಯ ಸೂತ್ರ ಸಂಗ್ರಹವೆಂಬ ಪುಸ್ತಕದಿಂದ ಆರೋಗ್ಯ ಶಾಸ್ತ್ರವನ್ನು ತಿಳಿಯಬೇಕಾದ ಆವಶ್ಯಕತೆಯೂ, ಅದರ ಪ್ರಯೋಜನವೂ ಮತ್ತು ಅವುಗಳನ್ನು ತಿಳಿಯದೇ ಇರುವುದರಿಂದ ಸಂಭವಿಸುವ ಹಾನಿಗಳ ವಿಷಯವಾಗಿ ಮ॥ ಸಿ ವೆಂಕಟರಾಯರು ಪ್ರಸ್ತಾಪಿಸಿದರು ಇಂಗ್ಲಿಷ್ ವಿದ್ಯಾಭ್ಯಾಸದ ಆವಶ್ಯಕತೆಯ ವಿಷಯವಾಗಿ ಸೆಕ್ರೆಟರಿಯವರಾದ ಮ॥ ಸಿ ಕೃಷ್ಣರಾಯರು ಇಂಗ್ಲಿಷ್‌ನಲ್ಲಿ ಉಪನ್ಯಾಸಮಾಡಿದರು ಪ್ರೆಸಿಡೆಂಟರಿಂದ ಬಹುಮಾನಗಳು ಗೆದ್ದವರಿಗೆ ಹಂಚಲ್ಪಟ್ಟ ನಂತರ ಮಿಠಾಯಿ ಎಲ್ಲರಿಗೂ ಕೊಡಲ್ಪಟ್ಟಿತು ನಂತರ ಸಂಗೀತವು ನಡೆಯಿತು ಪ್ರೆಸಿಡೆಂಟರು ಇಂಥಾ ಸಂಘವನ್ನು ಸ್ಥಾಪಿಸಿದ್ದಕ್ಕೋಸ್ಕರ ಶ್ಲಾಘಿಸಿದರು ಆಗಂತುಕರನ್ನು ಮ॥ ಶ್ರೀನಿವಾಸ ಉಡುಪರು ವಂದಿಸಿದರು ಪ್ರೆಸಿಡೆಂಟರನ್ನು ಸೆಕ್ರೆಟರಿಯವರಾದ ಮ॥ ಸಿ ಕೃಷ್ಣರಾಯರು ವಂದಿಸಿ, ಬಾಯ್ಸ್ ಸ್ಕೂಲಿನ ಹೆಡ್ ಮಾಸ್ಟರ್ ಮ॥ ಸುಬ್ರಾಯರು ಸಹಕಾರಿಗಳಾಗಿ ಕೆಲಸವನ್ನು ನಿರ್ವಹಿಸಿದ್ದಕ್ಕೆ ತುಂಬಾ ಸಂತೋಷಪಟ್ಟರು ಶ್ರೀಮದ್ ಇಂಡಿಯಾ ಚಕ್ರವರ್ತಿಯವರಿಗೂ, ಶ್ರೀಮನ್ ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆ ಬೆಳೆದ ನಂತರ ಮೀಟಿಂಗು ಬರಖಾಸ್ತಾಯಿತು

ನಾಗರಿಕ

ಮೈಸೂರು ಸಂಪದಭಿವೃದ್ಧಿ ಸಮಾಜವು

ಮೆಂಬರುಗಳು ತೀರ್ಮಾನಮಾಡಿದ ವಿಚಾರಗಳು

ಕಳೆದ 5 ನೇ ತಾ ನಿಂದ ಮೈಸೂರು ಸಂಪದಭಿವೃದ್ಧಿ ಸಮಾಜವು ರಾಜಧಾನಿಯಲ್ಲಿ ಪ್ರಾರಂಭವಾಗಿ ತಾ 10 ನೇ ಬುಧವಾರ ಬೆಳಿಗ್ಗೆ ಮುಕ್ತಾಯವಾಯಿತು ಪ್ರತಿ ದಿನವೂ ಶ್ರೀಮನ್ ಯುವರಾಜರವರು ಸಭೆಯಲ್ಲಿ ದಯಮಾಡಿದ್ದರು ಪ್ರಾರಂಭದಲ್ಲಿ ನಮ್ಮ ದಿವಾನ್ ರವರು ಸಭೆಯಲ್ಲಿ ಮಾಡಿದ ಉಪನ್ಯಾಸದಲ್ಲಿ ಮುಖ್ಯಾಂಶಗಳನ್ನು ಎತ್ತಿ ಕಳೆದ ವಾರ ಪ್ರಕಟಿಸಿರುತ್ತೇವೆ ಈ ಸಭೆಯಲ್ಲಿ ಮೆಂಬರುಗಳು ಸೂಚಿಸಿ ಚರ್ಚೆಯಿಂದ ತೀರ್ಮಾನಮಾಡಿರುವ ಮುಖ್ಯ ವಿಷಯಗಳನ್ನು ಈಗ ಪ್ರಕಟಮಾಡುವೆವು

1. ವಿದ್ಯಾಭ್ಯಾಸದ ವಿಚಾರಗಳು

1 ಕಸಬುಗಳನ್ನು ಪ್ರಜೆಗಳಿಗೆ ಕಲಿಸುವುದಕ್ಕೆ ಸಂಸ್ಥಾನದೊಳಗೆ ಸರಿಯಾದ ಶಿಕ್ಷಕರನ್ನು ನೇಮಿಸಬೇಕೆಂದೂ, ಈ ಶಿಕ್ಷಣವನ್ನು ಕ್ರಮಪಡಿಸಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಬ್ಬ ಅಧಿಕಾರಿಯನ್ನು ಗೊತ್ತುಮಾಡಬೇಕೆಂದೂ ಮ॥ ರಂಗಯ್ಯಂಗಾರ್ರು ಸೂಚಿಸಿದರು — ಈ ವಿಚಾರದಲ್ಲಿ ಸರ್ಕಾರದವರು ಆಗಲೇ ಒಬ್ಬ ಅಧಿಕಾರಿಯನ್ನು ನೇಮಿಸುವಂತೆ ತೀರ್ಮಾನಮಾಡಿರುವುದರಿಂದ ಅದನ್ನು ಚರ್ಚಿಸಿ ಪ್ರಯೋಜನವಿಲ್ಲವೆಂದು ಮ॥ ನಂಜುಂಡಯ್ಯನವರು ಜವಾಬು ಕೊಟ್ಟರು

2 ಕಸಬುದಾರಿ ವಿದ್ಯೆ ಕಲಿಯುವುದಕ್ಕೆ ಎಲ್ಲಾ ತಾಲ್ಲೂಕುಗಳಿಂದಲೂ ವಿದ್ಯಾರ್ಥಿಗಳನ್ನು ಚುನಾವಣೆಮಾಡಿ ಕರಸಿಕೊಂಡು ಆ ಮಂದಿಗೆ 8 10 ರೂಪಾಯಿನಂತೆ ವೇತನಗಳನ್ನು ಕೊಟ್ಟು ಅವರುಗಳನ್ನು ಕಸಬುಗಳಲ್ಲಿ ತರಪೇತು ಮಾಡಬೇಕೆಂದು ಮ॥ ಬಾಲಕೃಷ್ಣರಾಯರು ತಿಳಿಸಿದರು ಇದು ಸ್ವಲ್ಪ ದೀರ್ಘಕಾಲ ಚರ್ಚೆಯಾಯಿತು ದಿವಾನ್ ರು, ಮ॥ ನಂಜುಂಡಯ್ಯನವರು, ಮಿ॥ ಚಾಟರ್‌ಟನ್ ರವರು ಸಮ್ಮತವಾದ ಅಭಿಪ್ರಾಯವನ್ನು ಹೇಳಲಿಲ್ಲ ಇನ್ನೊಂದಾವರ್ತಿ ಈ ವಿಷಯವನ್ನು ಚರ್ಚಿಸೋಣವೆಂದು ತೆಗೆದಿಟ್ಟರು

3 ಮ॥ ರಂಗಯ್ಯಂಗಾರ್ರು ಮೈಸೂರು ಸರ್ಕಾರದವರು ಬಿ ಎ ಪ್ಯಾಸ್ ಮಾಡಿರುವ ಇಬ್ಬರನ್ನು ಸೀಮೆಗೆ ಕಳುಹಿಸಿ ಇಂಗ್ಲೆಂಡ್ ಮತ್ತು ಜರ್ಮನಿ ರಾಜ್ಯಗಳೊಳಗೆ ಪ್ರಥಮ ವಿದ್ಯೆಯನ್ನು ಯಾವ ರೀತಿ ಜರುಗುತ್ತಿದಾರೆಂದು ತಿಳಿದು ಬಂದು ಆ ರೀತಿ ನಮ್ಮ ಸೀಮೆಯಲ್ಲೂ ಆಚರಣೆಗೆ ತರುವಂತೆ ಮಾಡಿಸಬೇಕೆಂದು ಸೂಚಿಸಿದರು ಇದು ಸ್ವಲ್ಪ ಹೊತ್ತು ಚರ್ಚೆಯಾದ ಮೇಲೆ ವಿದ್ಯಾ ಇಲಾಖೆಯಲ್ಲಿ ಚುರುಕುಬುದ್ಧಿಯುಳ್ಳಂಥಾ ಒಬ್ಬನನ್ನು ಯೂರೋಪಿಗೆ ಕಳುಹಿಸಿಕೊಡಬೇಕೆಂದು ಸೂಚಿಸಿದ್ದು ಒಪ್ಪಲಾಯಿತು

4 ಮಿ॥ ಕೆ ಚಾಂಡಿಯವರು ಮಕ್ಕಳ ಮತ್ತು ದೊಡ್ಡವರ ದೇಹಗಳು ಗಟ್ಟಿಯಾಗುವಂತೆ ಅವರು ಕಸರತ್ತು ಮೊದಲಾದ ವ್ಯಾಯಾಮಗಳನ್ನು ಮಾಡುವುದಕ್ಕೋಸ್ಕರ ಸಂಘಗಳನ್ನು ಮಾಡಿಕೊಂಡರೆ ಇಂಥಾ ಸಂಘಗಳಿಗೆ ಸರ್ಕಾರದಿಂದ ಅರ್ಧ ಹಣವನ್ನು ಸಹಾಯ ಮಾಡಬೇಕೆಂದು ಸೂಚಿಸಿದರು ಇದು ಮೊದಲು ಸ್ವಲ್ಪ ಹೊತ್ತು ಚರ್ಚೆಯಾಗಿ ತೆಗೆದಿಟ್ಟರು, ಎರಡನೆಯ ದಿನ ಇದನ್ನು ಮತ್ತೆ ಚರ್ಚಿಸಿ ಪ್ಯಾಸ್‌ಮಾಡಿದರು

5 ಅಂಗಗಳು ಗಟ್ಟಿಯಾಗುವ ಆಟಗಳೂ ವ್ಯಾಯಾಮಗಳೂ ಚೆನ್ನಾಗಿ ಅಭ್ಯಾಸ ಮಾಡಿದಂಥಾ ಗಂಡಸರನ್ನೂ, ಹೆಂಗಸರನ್ನೂ ಸ್ಕೂಲುಗಳಲ್ಲಿ ಆಟಗಳನ್ನು ಮಕ್ಕಳಿಗೆ ಕಲಿಸುವುದಕ್ಕೆ ನೇಮಕ ಮಾಡಬೇಕೆಂದು ಮ॥ ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಮೆಂಬರುಗಳು ಚರ್ಚೆಯಿಂದ ಒಪ್ಪಿಕೊಂಡು ಪ್ಯಾಸ್ ಮಾಡಿದರು

6 ಕನ್ನಡ ಭಾಷೆಯನ್ನು ಕ್ರಮಪಡಿಸಿ ಗ್ರಂಥಗಳನ್ನು ರಚಿಸುವುದಕ್ಕೆ ಸರ್ಕಾರದ ಸಹಾಯವಾಗಬೇಕೆಂದು ಚರ್ಚೆಯಾಯಿತು ಈ ಉದ್ದೇಶದಿಂದ ಪ್ರಜೆಗಳು ಒಂದು ಸಂಘವನ್ನು ಮಾಡಿಕೊಂಡರೆ ಅದಕ್ಕೆ ಸರ್ಕಾರದಿಂದ ದ್ರವ್ಯ ಸಹಾಯ ಮಾಡತಕ್ಕದ್ದೆಂದು ಮೆಂಬರುಗಳು ಒಪ್ಪಿಕೊಂಡರು

7 ಸಣ್ಣವಯಸ್ಸಿನವರಿಗೆ ಓದುವುದರಲ್ಲೂ, ವಿಷಯಗಳನ್ನು ತಿಳಿದುಕೊಳ್ಳುವುದರಲ್ಲೂ ಉತ್ಸಾಹವುಂಟಾಗುವಂತೆ ಒಳ್ಳೆಯ ಚಿತ್ರಗಳನ್ನು ಹಾಕಿ ನಾನಾ ಉಪಯುಕ್ತ ವಿಷಯಗಳನ್ನು ಸುಲಭವಾದ ಕನ್ನಡದಲ್ಲಿ ಬರೆದು ಮಾಸ ಪತ್ರಿಕೆಗಳನ್ನು ಚೆನ್ನಾಗಿ ಅಚ್ಚುಹಾಕಿಸಿ ಪ್ರಕಟಿಸಬೇಕಾದದ್ದು ಅವಶ್ಯವೆಂದು ಚರ್ಚೆನಡೆದು, ಇದನ್ನು ಮಾಡಬೇಕೆಂದು ಒಪ್ಪಲಾಯಿತು

8 ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳ ಮೇಲ್ವಿಚಾರಣೆ ಮುಂತಾದ್ದನ್ನು ವಿದ್ಯಾ ಇಲಾಖೆಗೆ ತಪ್ಪಿಸಿ, ಲೋಕಲ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ವಹಿಸಿದರೆ ವಿದ್ಯೆ ಹರಡುವುದಕ್ಕೆ ತುಂಬಾ ಸಹಾಯವಾದೀತೆಂದು ಕೋಲಾರದ ಕಮಿಟಿಯವರ ಪರವಾಗಿ ಮ॥ ಬಿ ರಾಮಸ್ವಾಮಯ್ಯನವರು ಸೂಚಿಸಿದರು ಈ ವಿಚಾರವು ಸ್ವಲ್ಪ ಹೊತ್ತು ಚರ್ಚೆಯಾಗಿ ಕಡೆಗೆ ದಿವಾನ್ ರವರು ಅದನ್ನು ವಿದ್ಯಾಶಾಖೆಯ ಕಮಿಟಿಯವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿಯೋಣವೆಂದು ತೆಗೆದಿಟ್ಟರು

9 ಬರೋಡೆಗೆ ಒಬ್ಬ ಅಧಿಕಾರಿಯನ್ನು ಸರ್ಕಾರಿಯಾಗಿ ಕಳುಹಿಸಿ ಅಲ್ಲಿ ಪ್ರಥಮವಿದ್ಯೆಯನ್ನು ಹೇಗೆ ಹರಡುತ್ತಿದಾರೆಯೋ ತಿಳಿಯಬೇಕೆಂದು ಚರ್ಚೆ ನಡೆದು ಇದು ಸದ್ಯದಲ್ಲಿ ಅವಶ್ಯವಿಲ್ಲವೆಂದು ಇತ್ಯರ್ಥವಾಯಿತು

10 ಐದು ವರುಷಗಳ ತನಕ ಪ್ರತಿವರುಷವೂ 600 ಉಪಾಧ್ಯಾಯರಂತೆ ತರಪೇತು ಮಾಡುವುದಕ್ಕೋಸ್ಕರ ನಾರ್ಮಲ್ ಸ್ಕೂಲುಗಳನ್ನು ಹೆಚ್ಚಿಸಬೇಕೆಂದೂ, ಈಗಿರುವ ನಾರ್ಮಲ್ ಸ್ಕೂಲುಗಳಿಗೆ ಹೆಚ್ಚು ಸಿಬ್ಬಂದಿಕೊಟ್ಟು ಕ್ರಮಪಡಿಸಬೇಕೆಂದೂ ಚರ್ಚೆಯಾಯಿತು ಸಭಿಕರು ಇದನ್ನು ಒಪ್ಪಿ ಪ್ಯಾಸ್‌ಮಾಡಿದರು

11 ವ್ಯವಸಾಯವನ್ನು ಶಾಸ್ತ್ರವತ್ತಾಗಿ ಕಲಿಯುವುದಕ್ಕೆ ಬೆಂಗಳೂರು ವ್ಯವಸಾಯ ಪಾಠಶಾಲೆಗೆ ಹೋಗುವ ಹುಡುಗರಿಗೆ ತಲಾ 15 ರೂಪಾಯಿ ವೇತನ ಕೊಡಬೇಕೆಂದು ಮ॥ ನಾರಾಯಣಯ್ಯಂಗಾರ್ರು ಸೂಚಿಸಿದರು ಕಡೆಗೆ ಇದು ಅವಶ್ಯವಿಲ್ಲವೆಂದು ತೀರ್ಮಾನವಾಯಿತು

12 ಯಾವ ಗ್ರಾಮದಲ್ಲಿ ಗ್ರಾಮಸ್ಥರು ಸೇರಿ ಸ್ಕೂಲನ್ನೂ ಉಪಾಧ್ಯಾಯನ ಮನೆಯನ್ನೂ ಕಟ್ಟಿಸಿಕೊಡುತ್ತಾರೆಯೋ ಆ ಗ್ರಾಮಕ್ಕೆ ವಿದ್ಯಾ ಇಲಾಖೆಯವರು ಮೊದಲು ಸ್ಕೂಲನ್ನು ಇಟ್ಟುಕೊಡಬೇಕೆಂಬದನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು

13 ಪ್ರಜೆಗಳಿಗೆ ನಾನಾ ವಿಷಯಗಳಲ್ಲಿ ಪರಿಜ್ಞಾನ ಉಂಟಾಗುವುದಕ್ಕೋಸ್ಕರ ಒಂದು ಕಮಿಟಿಯವರು ದೇಶೀಯ ವರ್ತಮಾನ ಪತ್ರಿಕೆಗಳ ಪ್ರಚಾರವನ್ನು ಗ್ರಾಮಾಂತರಗಳಲ್ಲಿ ಹರಡುವುದಕ್ಕೆ ಪ್ರೋತ್ಸಾಹಮಾಡಬೇಕೆಂದು ಚರ್ಚೆನಡೆದು ಕಡೆಗೆ ಪ್ಯಾಸಾಯಿತು

14 ದೇಶಭಾಷೆಯ ವರ್ತಮಾನ ಪತ್ರಿಕೆಗಳನ್ನು ಪ್ರಚುರಪಡಿಸಿ ಅವುಗಳ ಮೂಲಕ ಗ್ರಾಮಗಳಲ್ಲಿರುವ ಜನರಿಗೆ ಶಾಸ್ತ್ರ, ಕೈಗಾರಿಕೆ ಮುಂತಾದ ವಿಷಯಗಳಲ್ಲಿ ಪ್ರೀತಿಹುಟ್ಟುವಂತೆ ಮಾಡಬೇಕೆಂಬ ಭಾಗವನ್ನು ವಿದ್ಯಾಕಮಿಟಿಗೆ ತಿಳಿಸುವುದಾಗಿ ದಿವಾನ್ ರವರು ಹೇಳಿದರು

15 ವಿಷಯಗಳನ್ನು ಚೆನ್ನಾಗಿ ತಿಳಿದಿರುವಂಥವರನ್ನು ಗ್ರಾಮಾಂತರಗಳ ಮೇಲೆ ಕಳುಹಿಸಿ ಪ್ರಜೆಗಳಿಗೆ ಉಪನ್ಯಾಸಗಳನ್ನು ಮಾಡಿಸಬೇಕೆಂದು ಮ॥ ಕುಮಾರಸ್ವಾಮಿ ನಾಯಕರವರು ಸೂಚಿಸಿದ್ದಕ್ಕೆ ದಿವಾನ್ ರವರು ಈ ವಿಷಯದಲ್ಲಿ ಸರ್ಕಾರದವರು ಆಗಲೇ ಆಲೋಚನೆ ಮಾಡುತ್ತಿದಾರೆ ಎಂದು ತಿಳಿಸಿದರು

16 ಪ್ರತಿ ಒಂದು ತಾಲ್ಲೂಕಿನಲ್ಲೂ, 1,000 ಪ್ರಜೆಗಿಂತ ಹೆಚ್ಚಿರುವ ಪ್ರತಿ ಸ್ಥಳದಲ್ಲೂ ಮಕ್ಕಳಿಗೆ ಕೈಗಾರಿಕೆಗಳನ್ನು ಕಲಿಸುವಂಥಾ ಪಾಠಶಾಲೆಗಳನ್ನು ಇಡಿಸಿಕೊಡಬೇಕೆಂದು ಚರ್ಚೆಯಾಯಿತು ಕಸಬುಗಳ ಕಮಿಟಿಗೆ ಇದನ್ನು ತಿಳಿಸುವುದಾಗಿ ತೆಗೆದಿಟ್ಟರು

17 ಚೈತನ್ಯಸ್ಥರಾಗಿರುವ ತಂದೆತಾಯಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಫೀಜನ್ನು ಕೊಡುವಂತೆ ಮಾಡಬಹುದೆಂದೂ, ಪ್ರೌಢವಿದ್ಯಾಲಯಗಳು ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಏರ್ಪಾಡಾದ ಬಳಿಕ ಮೈಸೂರು ಯೂನಿವರ್ಸಿಟಿಯನ್ನು ಸ್ಥಾಪನೆಮಾಡಬಹುದೆಂದೂ ಮೆಂಬರುಗಳು ಅಭಿಪ್ರಾಯಪಟ್ಟರು

2 ವ್ಯವಸಾಯದ ವಿಷಯಗಳು

1 ಪ್ರಜೆಗಳಿಗೆ ಒಳ್ಳೆಯ ಹಾಲು ಒದಗಿಸುವುದಕ್ಕೆ ಆರೋಗ್ಯ ಸೂತ್ರಗಳಿಗೆ ಅನುಸಾರವಾದ ಹೈನದ ಮನೆಗಳನ್ನು ಕಟ್ಟಿಸಿ ಅದನ್ನು ನಡಿಸುವುದಕ್ಕೆ ಒಬ್ಬ ನಿಪುಣನನ್ನು ನೇಮಕಮಾಡಬೇಕೆಂದೂ, ಆತನ ಮೂಲಕ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಹೈನದ ಮನೆಗಳನ್ನು ಸ್ಥಾಪಿಸುವಂತೆ ಮಾಡಬೇಕೆಂದೂ ಚರ್ಚೆ ಮಾಡಿದರು ಇದು ಸರ್ಕಾರದವರು ಮಾಡುವುದು ಸಹಜವಲ್ಲವೆಂದು ಕೆಲವರೂ, ಸರ್ಕಾರದವರು ಪ್ರಜೆಗಳಿಗೆ ಪ್ರೋತ್ಸಾಹಕೊಟ್ಟು ಸಹಾಯಮಾಡಬೇಕೆಂದು ಕೆಲವರೂ ಹೇಳಿದರು ಕಡೆಯಲ್ಲಿ ಸಭಿಕರ ಅಭಿಮತವನ್ನು ಕೇಳಿದಾಗ ಹೆಚ್ಚು ಮಂದಿ ಇದನ್ನು ಒಪ್ಪದೆಹೋದರು

2 ಸಂಸ್ಥಾನದ ಅನೇಕ ಭಾಗಗಳಲ್ಲಿ ಪ್ರಜೆಗಳಿಗೂ ಗೋಕಾಯಿಗಳಿಗೂ ನೀರು ಒದಗದೆ ತುಂಬಾ ಕಷ್ಟವಾಗಿರೋಣದರಿಂದ ಕೊಳವೆ ಯಂತ್ರಗಳನ್ನು ತರಿಸಿ ಅವುಗಳ ಮೂಲಕ ನೀರನ್ನು ಎತ್ತಿ ಒದಗಿಸುವಂತೆ ಏರ್ಪಾಡುಮಾಡಬೇಕೆಂದು ಕೆಲವು ಮೆಂಬರುಗಳು ಚರ್ಚೆಮಾಡಿ, ಕಡೆಗೆ ಇದು ಅವಶ್ಯವೆಂದು ಬಹು ಮಂದಿ ಒಪ್ಪಿ ಪ್ಯಾಸ್ ಮಾಡಿದರು

3 ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕೆ ಮೆಂಬರುಗಳು ಹಲವು ಸಲಹೆಗಳನ್ನು ಸೂಚಿಸಿ, ಹೊಸದಾಗಿ ಏರ್ಪಾಡುಮಾಡಿರುವ ಚನ್ನಪಟ್ಟಣದ ಸಂಘಕ್ಕೆ ಸರ್ಕಾರದ ಸಹಾಯವಾಗಬೇಕೆಂದು ಅರಿಕೆ ಮಾಡಿದರು ಈ ವಿಚಾರವು ಕಡೆಗೆ ಚರ್ಚೆಯಲ್ಲೇ ಪರಿಣಾಮವಾಯಿತು

4 ಮಾರಿಕಣಿವೆ ತಲ ವಿನ ಕಾಮಗಾರಿಗೆ 50 ಲಕ್ಷ ರೂಪಾಯಿಗಳ ಖರ್ಚಾಗಿರುವುದರಿಂದ ಅದರ ಕೆಳಗೆ ತರಿ ವ್ಯವಸಾಯವನ್ನು ಹೆಚ್ಚು ಮಾಡಬೇಕೆಂದು ಸೂಚಿಸಲಾಯಿತು ಡೆಪ್ಯುಟಿ ಚೀಫ್ ಇಂಜನಿಯರವರು ಆ ಕೆರೆಯ ಕೆಳಗೆ 50,000 ಎಕರೆ ಜಮೀನು ವ್ಯವಸಾಯಕ್ಕೆ ಬರಬಹುದೆಂದೂ, ಈಗ 8,000 ಎಕರೆ ಮಾತ್ರ ವ್ಯವಸಾಯದಲ್ಲಿದೆ ಎಂದೂ, ಜನರಿಗೆ ಬೈಕನ್ನ ಸಾಲದ್ದೂ ಹವಾಗುಣವೂ ಅಡ್ಡಿಯಾಗಿದೆ ಎಂದೂ ತಿಳಿಸಿದರು ಕಡೆಯಲ್ಲಿ ಆ ಬಳಿ ವ್ಯವಸಾಯವನ್ನು ಹೆಚ್ಚಿಸಬೇಕೆಂದು ಮೆಂಬರುಗಳು ಒಪ್ಪಿ ಪ್ಯಾಸ್ ಮಾಡಿದರು

5 ನೇಗಲು ಮುಂತಾದ ವ್ಯವಸಾಯದ ಹೊಸತರಹಾ ಮುಟ್ಟುಗಳಿಂದ ಗ್ರಾಮಾಂತರಗಳಲ್ಲಿ ಕೆಲಸಮಾಡಿಸಿ ರೈತರಿಗೆ ಸಾಕ್ಷಾತ್ತಾಗಿ ತೋರಿಸಿ, 100 ರೂಪಾಯಿನ ಮುಟ್ಟುಗಳನ್ನು ಗ್ರಾಮಾಂತರ ಡಿಪೋಗಳಲ್ಲಿ ಇಡಿಸಿ ರೈತರಿಗೆ ಬಳಕೆಮಾಡಿಸಬೇಕೆಂದೂ, ಇದಕ್ಕಾಗಿ ಹಾಲಿ ಸಾಲಿನಲ್ಲಿ 12,000 ರೂಪಾಯಿ ಖರ್ಚುಮಾಡಬೇಕೆಂದೂ ಹೆಚ್ಚುಮಂದಿ ಮೆಂಬರುಗಳು ಒಪ್ಪಿಕೊಂಡರು

6 ಹಾಲಿ ಸಾಲಿನಲ್ಲಿ 10,000 ರೂಪಾಯಿ ಖರ್ಚುಮಾಡಿ ಯಂತ್ರಗಳ ಮೂಲಕ ಧಾನ್ಯಗಳನ್ನು ಕಣಗಳಲ್ಲಿ ತೂರುವ ಕೆಲಸಮಾಡಿಸಿ ರೈತರಿಗೆ ತೋರಿಸಿಕೊಡಬೇಕೆಂದು ಸೂಚಿಸಿದ್ದು ಅವಶ್ಯವೆಂದು ಕಂಡುಬಂದರೂ ಬಹುಮತವು ಅದಕ್ಕೆ ವಿರೋಧವೆಂದು ಗೊತ್ತಾಯಿತು

7 ಜಾತ್ರೆಗಳಲ್ಲೂ, ಪ್ರದರ್ಶನಗಳಲ್ಲೂ, ಉತ್ಸವಗಳಲ್ಲೂ ಪ್ರಜಾ ಹಿತಕ್ಕೆ ಅನುಕೂಲವಾದ ನಾನಾ ವಿಚಾರಗಳನ್ನು ಕುರಿತು ತಿಳಿದವರಿಂದ ಉಪನ್ಯಾಸಗಳನ್ನು ಮಾಡಿಸಿ, ವ್ಯವಸಾಯದ ಹೊಸ ಕ್ರಮಗಳನ್ನು ಪ್ರಜೆಗಳಿಗೆ ಆಗಾಗ್ಗೆ ಹೇಳಿಸುತ್ತಾ ಬರಬೇಕೆಂದು ಮ॥ ನಾರಣಯ್ಯಂಗಾರ್ರು ಸೂಚಿಸಿದ್ದನ್ನು ಮೆಂಬರುಗಳು ಚರ್ಚೆಮಾಡಿ ಆ ರೀತಿ ಮಾಡಬಹುದೆಂದು ಒಪ್ಪಿಕೊಂಡರು

8 ಕೆರೆಗಳ ಮೇಜರ್, ಮೈನರ್ ಎಂಬ ವ್ಯತ್ಯಾಸವನ್ನು ತೆಗೆದುಹಾಕಿ ಸಂಸ್ಥಾನದೊಳಗೆ ಇರುವ ಕೆರೆಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು ದುರಸ್ತುಮಾಡಿಸಿ ಒಳ್ಳೆಯ ಸ್ಥಿತಿಯಲ್ಲಿಟ್ಟು ನೋಡಿಕೊಳ್ಳಬೇಕಾಗಿದೆ ಎಂದೂ, ಅನೇಕ ಕೆರೆಗಳು ಪಾಳುಬಿದ್ದು ಪ್ರಜೆಗಳಿಗಾಗಲಿ ಗೋಕಾಯಿಗಳಿಗಾಗಲಿ ನೀರು ಸಿಕ್ಕದೆ ಕಷ್ಟ ಪ್ರಾಪ್ತವಾಗಿದೆ ಎಂದೂ ಮಿ॥ ಚಾಂಡಿಯವರು ಸೂಚಿಸಿದರು ದಿವಾನ್ ರವರು ಈ ಭಾಗದಲ್ಲಿ ಸರ್ಕಾರದ ಕಷ್ಟವನ್ನು ವಿವರಿಸಿದಾಗ ಇತರ ಅನೇಕ ಮೆಂಬರುಗಳು ಈ ವಿಚಾರವನ್ನು ಪರಿಷ್ಕಾರವಾಗಿ ಚರ್ಚೆಮಾಡಿ ಇತ್ಯರ್ಥಪಡಿಸಬೇಕಾಗಿದೆ ಎಂದು ಅರಿಕೆಮಾಡಿದರು ಸಣ್ಣ ಕೆರೆಗಳ ರಿಪೇರಿ ಮುಂತಾದ್ದನ್ನು ಸರ್ಕಾರದವರು ವಹಿಸಿಕೊಂಡರೆ ಮುಂದೆ ಹಣ ಒದಗಿಸುವುದು ತುಂಬಾ ಕಷ್ಟವಾದೀತೆಂದು ಮ॥ ಚಕ್ರವರ್ತಿಯವರು ಹೇಳಿದರು ಪ್ರಜಾ ಪಕ್ಷದ ಮೆಂಬರುಗಳು ಇದನ್ನು ಒಪ್ಪದೆಹೋದರು ಕಡೆಯಲ್ಲಿ ಮಿ॥ ಚಾಂಡಿಯವರು ಸೂಚಿಸಿದ್ದನ್ನೇ ಸಭಿಕರೆಲ್ಲಾ ಒಪ್ಪಿ ಸಮ್ಮತಿ ಹಾಕಿದರು

9 ಬಾಗರ ಕಣಿವೆಯನ್ನು ವ್ಯವಸಾಯ ಶಾಸ್ತ್ರಜ್ಞರಿಂದ ಪರೀಕ್ಷೆಮಾಡಿಸಿ ಅಲ್ಲಿ ಟೀಸೊಪ್ಪು, ಕರ್ಪೂರ ಮೊದಲಾದವುಗಳನ್ನು ಬೆಳೆಮಾಡುವಂತೆ ಪ್ರೋತ್ಸಾಹ ಕೊಡಬೇಕೆಂದು ಮ॥ ಶ್ರೀನಿವಾಸರಾಯರು ಸೂಚಿಸಿದರು ಮೆಂಬರುಗಳು ಈ ವಿಚಾರವನ್ನು ಮಲೆನಾಡು ಅಭಿವೃದ್ಧಿ ಕಮಿಟಿಯವರ ವಿಚಾರಣೆಗೆ ತಿಳಿಸತಕ್ಕದ್ದೆಂದು ಒಪ್ಪಿಕೊಂಡರು

10 ಜಾವಾ ದ್ವೀಪದಲ್ಲಿ ಕಬ್ಬು, ತೆಂಗು, ಭತ್ತ ಮುಂತಾದ ಬೆಳೆಗಳನ್ನು ಬಹು ಉತ್ಕೃಷ್ಟವಾಗಿ ಮಾಡುತ್ತಾರಾದ್ದರಿಂದ ನಮ್ಮ ಸೀಮೆಯಿಂದ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಆ ವಿಧಾನಗಳನ್ನು ಕಲಿತು ಬರುವಂತೆ ಮಾಡಬೇಕೆಂದು ಮ॥ ಶ್ರೀನಿವಾಸರಾಯರು ಸೂಚಿಸಿದರು ದಿವಾನ್ ರವರು ಇದನ್ನು ಪೂನಾದಲ್ಲೇ ಚೆನ್ನಾಗಿ ತಿಳಿದುಕೊಂಡು ಬರಬಹುದೆಂದು ಹೇಳಿದರು ಮಿ॥ ಚಾಟರ್‌ಟನ್ ರವರು ಪೂನಾಕ್ಕಿಂತಲೂ ಸಮೀಪದಲ್ಲಿರುವ ಸಿಲ್ಲೋನಿಗೆ ಹೋದರೆ ಆ ಕ್ರಮಗಳನ್ನು ತಿಳಿದುಕೊಂಡು ಬರಬಹುದೆಂದು ಅಭಿಪ್ರಾಯಪಟ್ಟರು ಮ॥ ಪುಟ್ಟಣ್ಣಶೆಟ್ಟರು ಜಾವಾಕ್ಕೆ ಹೋಗಿ ಬರುವುದು ಉತ್ತಮವೆಂದು ಹೇಳಿದರು ಇನ್ನು ಕೆಲವರು ಹೀಗೆಯೇ ನಾನಾ ಪ್ರಕಾರ ಚರ್ಚೆಗಳನ್ನು ನಡಿಸಿದರು ಕಡೆಯಲ್ಲಿ ಜಾವಾಕ್ಕೆ ನಮ್ಮ ಜನರನ್ನು ಕಳುಹಿಸಬೇಕಾದದ್ದು ಅವಶ್ಯವೆಂದು ಮೆಂಬರುಗಳು ಒಪ್ಪಿದರು

11 ಸೌದೆಗೋಸ್ಕರ ಗಿಡಗಳನ್ನು ಹಾಕಿ ಬೆಳೆಯುವುದಕ್ಕೆ ಸರ್ಕಾರದವರು ಪ್ರಜೆಗಳಿಗೆ ಕೆಲವು ರಿಯಾಯತಿಗಳನ್ನು ತೋರಿಸಬೇಕೆಂದು ಮಿ॥ ಚಾಟರ್‌ಟನ್ ರವರು ಸೂಚಿಸಿದ್ದನ್ನು ಪ್ರೆಸಿಡೆಂಟರು ವ್ಯವಸಾಯದ ಕಮಿಟಿಯ ಅಭಿಪ್ರಾಯದ ಬಗ್ಗೆ ತೆಗೆದಿಟ್ಟರು

3 ಕಸಬುದಾರಿಗಳ ವಿಷಯಗಳು

1 ಮೈಸೂರು, ಬೆಂಗಳೂರು, ದಾವಣಗೆರೆ ಟೌನ್ ಗಳಲ್ಲಿ ಕಸಬುದಾರಿ ಕಾರ್ಖಾನೆಗಳು ಇನ್ನು ಕೆಲವು ಕಾಲದೊಳಗೇ ಏರ್ಪಾಡಾಗಬಹುದಾದ್ದರಿಂದ ಅಂಥಾ ಕಾರ್ಖಾನೆಗಳಿಗೋಸ್ಕರಲೇ ರೈಲ್ವೆ ಸ್ಟೇಷನ್ ಗಳ ಹತ್ತಿರ ಪ್ರತ್ಯೇಕವಾದ ನಿವೇಶನಗಳನ್ನು ಈಗಿನಿಂದ ಬಿಡಿಸಬೇಕೆಂದು ಮಿ॥ ಚಾಟರ್‌ಟನ್ ರವರು ತಿಳಿಸಿದ್ದನ್ನು ಮೆಂಬರುಗಳೆಲ್ಲಾ ಅವಶ್ಯವೆಂದು ಒಪ್ಪಿಕೊಂಡರು

2 ಕಡೂರಿನಿಂದ ಚಿಕ್ಕಮಗಳೂರಿಗೆ ಕೂಡಲೇ ರೈಲ್ ರಸ್ತೆ ಹಾಕುವುದು ಅವಶ್ಯವೆಂದು ಎಲ್ಲಾ ಮೆಂಬರುಗಳೂ ಸಮ್ಮತಿ ಹಾಕಿದರು

3 ಹಾರುವ ಲಾಳಿ ಮಗ್ಗಗಳಲ್ಲಿ ನೇಯುವುದು, ಕಂಚಿನ ಪಾತ್ರೆಗಳ ತಯಾರಿ, ಹತ್ತಿ ಬಿಡಿಸುವುದು, ನೀರೆತ್ತಿ ವ್ಯವಸಾಯಕ್ಕೆ ಉಪಯೋಗಿಸುವುದು, ಭತ್ತ ಕುಟ್ಟುವ ಯಂತ್ರಗಳು, ಈ ಮೊದಲಾದ ಕಸಬುಗಳನ್ನು ಪರಸ್ಪರ ಸಹಾಯದ ಮೂಲಕ ಜನರು ಆಚರಣೆಗೆ ತರುವುದಕ್ಕೋಸ್ಕರ ಕಸಬುಗಳ ಕಮಿಟಿಯವರು ತಿಳಿದವರನ್ನು ಗ್ರಾಮಾಂತರಗಳಿಗೆ ಕಳುಹಿಸಿ ಜನರಿಗೆ ಆಗಾಗ್ಗೆ ಉಪನ್ಯಾಸಗಳ ಮೂಲಕ ತಿಳುವಳಿಕೆ ಕೊಡುತ್ತಾ ಬರುವಂತೆ ಮಾಡಬೇಕೆಂದು ಮ॥ ನಾರಣಯ್ಯಂಗಾರ್ರು ಸೂಚಿಸಿದರು ಇದು ಕೂಡದೆಂದು ಮಿ॥ ಚಾಟರ್‌ಟನ್ ರವರೇ ಮುಂತಾದ ಕೆಲವರು ವಾದಿಸಿದರು ಕಡೆಗೆ ಮ॥ ನಾರಣಯ್ಯಂಗಾರ್ರು ಸೂಚಿಸಿದಂತೆ ಆಚರಣೆಗೆ ತರಬೇಕೆಂದು ಮೆಂಬರುಗಳೆಲ್ಲಾ ಒಪ್ಪಿಕೊಂಡರು

4 ಕಸಬುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಸುಲಭ ದರದಲ್ಲಿ ಬಿಕರಿಮಾಡಬೇಕೆಂದು ಸೂಚಿಸಲಾಯಿತು ಇದು ಸಾಧ್ಯವಲ್ಲವೆಂದು ಆ ಇಲಾಖೆಯ ಮುಖ್ಯಾಧಿಕಾರಿಯು ತಿಳಿಸಿದ ಮೇಲೆ ಆದಷ್ಟು ಸುಲಭ ದರದಲ್ಲಿ ಶಕ್ತಿಯನ್ನು ಕೊಡಬೇಕೆಂದು ಮೆಂಬರುಗಳು ಒಪ್ಪಿ ತೀರ್ಮಾನಿಸಿದರು

5 ಕಸಬುಗಳ ಕಮಿಟಿಯ ಒಬ್ಬ ಅಧಿಕಾರಿಯನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ನೇಮಕಮಾಡಿಕೊಟ್ಟರೆ ಆತನ ಮೂಲಕ ಡಿಸ್ಟ್ರಿಕ್ಟ್ ಅಧಿಕಾರಿಗಳು ಬೇಕಾದ ಸಲಹೆಗಳನ್ನು ಪಡೆಯಲು ಅನುಕೂಲವಾದೀತೆಂದು ಮಿ॥ ಪುತ್ತಾರ್ದರವರು ಸೂಚಿಸಿದ್ದನ್ನು ಮಿ॥ ಚಾಟರ್‌ಟನ್ ರವರು ಒಪ್ಪಿಕೊಂಡರು ಈ ವಿಚಾರವು ಸ್ವಲ್ಪ ಮಟ್ಟಿಗೆ ಚರ್ಚೆಯಾಗಿ ಹಾಗೇ ನಿಲ್ಲಿಸಲ್ಪಟ್ಟಿತು

6 ವಿದ್ಯಾಶಾಖೆಯ ಕಮಿಟಿಗೆ ಮೆಂಬರುಗಳ ಚುನಾವಣೆ ನಡೆಯಿತು ಮ॥ ಎಚ್ ವಿ ನಂಜುಂಡಯ್ಯನವರು ಅಧ್ಯಕ್ಷರಾದರು ಮ॥ ಗಳಾದ ಎಂ ರಾಮರಾಯರು, ಕೆ ಶ್ರೀನಿವಾಸರಾಯರು, ಕೆ ಚಾಂಡಿಯವರು, ಕೆ ವೀರಬಸವಯ್ಯನವರು, ಡಾ॥ ಪಿ ಎಸ್ ಅಚ್ಯುತರಾಯರು ಮೆಂಬರುಗಳಾದರು ವ್ಯವಸಾಯದ ಕಮಿಟಿಗೆ ಮ॥ ಕೆ ಎಸ್ ದೊರೆಸ್ವಾಮಯ್ಯರವರು ಅಧ್ಯಕ್ಷರಾಗಿಯೂ, ಮಿ॥ ಕೆ ಪಿ ಪುಟ್ಟಣ್ಣಶೆಟ್ಟರು, ಮಿ॥ ಕೋಲ್‌ಮನ್ ರವರು, ಮಿ॥ ಜಿ ಎಚ್ ಕ್ರಂಬಿಗಲ್‌ರವರು, ಮಿ॥ ಅಬ್ದುಲ್ ಖುದುಸ್‌ರವರು, ಮ॥ ಸಿ ಶ್ರೀಕಂಠೇಶ್ವರಯ್ಯರವರು ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು ಕಸಬುಗಳ ಕಮಿಟಿಗೆ ಮ॥ ಎಂ ಕಾಂತರಾಜೆಅರಸಿನವರು ಚೇರ್‌ಮನ್ ರಾಗಿಯೂ, ಮಿ॥ ಎ ಚಾಟರ್‌ಟನ್ ರವರು, ಮ॥ ಗಳಾದ ಸಿ ಶ್ರೀನಿವಾಸಯ್ಯಂಗಾರ್ರು, ಜಿ ಎಸ್ ಚಕ್ರವರ್ತಿಯವರು, ಸಾಂಬಶಿವಯ್ಯರವರು, ಎಂ ಎ ನಾರಣಯ್ಯಂಗಾರ್ರು ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು

7 ದಿವಾನ್ ರವರು ಮಿ॥ ಸ್ಮಿತ್ ರವರನ್ನು ಕರೆದು ಮೈಸೂರು ಸಂಸ್ಥಾನದಲ್ಲಿ ಕಬ್ಬಿಣವನ್ನು ಬಿಡಿಸುವ ವಿಚಾರವನ್ನು ಕುರಿತು ಎಲ್ಲಾ ಸಂಗತಿಗಳನ್ನೂ ತಿಳಿಸಬೇಕೆಂದು ಕೇಳಿದರು ಈ ವಿಚಾರದಲ್ಲಿ ಚರ್ಚಿಸಲ್ಪಟ್ಟ ವಿಷಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಕೂಡದೆಂದು ತಿಳಿಸಿದಾರೆ

8 ಪರಸ್ಪರ ಸಹಾಯವನ್ನು ಸಂಸ್ಥಾನದೊಳಗೆ ಇನ್ನೂ ಚೆನ್ನಾಗಿ ಹರಡುವುದಕ್ಕೋಸ್ಕರ ಪ್ರತ್ಯೇಕವಾದ ಒಂದು ಕಮಿಟಿ ಏರ್ಪಾಡಾಗಬೇಕೆಂದೂ, ಈ ಕಮಿಟಿಯ ಸಿಬ್ಬಂದಿ ಖರ್ಚಿಗೆ ಸರ್ಕಾರದಿಂದ ಸಾಲಿಯಾನಾ ಸುಮಾರು 25,000 ರೂಪಾಯಿ ಖರ್ಚುಮಾಡಬೇಕೆಂದೂ ಮ॥ ನಾರಣಯ್ಯಂಗಾರ್ರು ಸೂಚಿಸಿದರು ಸ್ವಲ್ಪ ಹೊತ್ತು ಮೆಂಬರುಗಳು ಇದರ ಸಾಧಕ ಬಾಧಕಗಳನ್ನು ಕುರಿತು ಚರ್ಚೆ ಮಾಡಿ, ಕಡೆಗೆ ಇದು ಅವಶ್ಯವೆಂದು ಒಪ್ಪಿ ಪ್ಯಾಸ್‌ಮಾಡಿದರು

9 ಸಂಪದಭಿವೃದ್ಧಿ ಸಮಾಜದವರು ಆಗಾಗ್ಗೆ ಒಂದು ಪುಸ್ತಕವನ್ನು ಪ್ರಕಟಿಸುತ್ತಾ, ಅದರಲ್ಲಿ ಸಮಾಜದ ಕಾರ್ಯ ವಿಶೇಷಗಳನ್ನೂ ಕಾರ್ಯಕ್ರಮಗಳನ್ನೂ ಇತರ ಹೊಸ ಸಂಗತಿಗಳನ್ನೂ ಕುರಿತು ಬರೆಯುತ್ತಾ ಬರಬೇಕೆಂದು ಮ॥ ರಂಗಯ್ಯಂಗಾರ್ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿ ಪ್ಯಾಸ್ ಮಾಡಿದರು.

10 ಕಬ್ಬನ್ನು ಅರೆಯುವ ಬೆಲ್ಲವನ್ನು ತಯಾರುಮಾಡುವುದಕ್ಕೆ ಹೊಸ ಯಂತ್ರಗಳನ್ನು ತರಿಸಿ ಶಿಕಾರಿಪುರದ ತಾಲ್ಲೂಕಿನಲ್ಲಿ ಇಟ್ಟು ರೈತರಿಗೆ ಸಾಲಕ್ಕಾಗಿ ಕೊಡಿಸಿಕೊಡಬೇಕೆಂದು ಮ|| ಮತ್ತಾರ್ಕರವರು ಸೂಚಿಸಿದರು ದಿವಾನರವರು ಹಾಗೆ ಕೊಡಬೇಕೆಂಬ ರೈತರಿಗೆ ರೈಲ್ ಛಾರ್ಜು ಕೊಟ್ಟು ಅಲ್ಲಿಂದ ಮೈಸೂರಿಗೆ ಕರೆಸುವುದು ಸುಲಭವೆಂದು ಹೇಳಿದರು ಮಿ|| ಚಾಟರ್ಟನ್‌ರವರು ಈಗ ಇಂಥಾ ಕೆಲಸಕ್ಕೆ ಸರ್ಕಾರದವರು ಇದುವರೆಗೆ 40,000 ರೂಪಾಯಿ ತನಕ ಖರ್ಚುಮಾಡಿರುತ್ತಾರೆಂದೂ, ಇನ್ನು ಇದೇ ಒಬಗೆ ಹೆಚ್ಚು ಹಣ ಖರ್ಚು ಮಾಡುವುದಕ್ಕಾಗದೆಂದೂ ಹೇಳಿ, ಬೇರೆ ಮೂರು ಕಡೆಗಳಲ್ಲಿ 30,000 ರೂಪಾಯಿ ಖರ್ಚಿಟ್ಟು ಕಬ್ಬಿನ ಯಂತ್ರಗಳನ್ನು ಸರ್ಕಾರದವರು ಇಡಿಸಬಹುದೆಂದು ಸೂಚಿಸಿದರು ರೈತರ ಕಬ್ಬನ್ನು ಈ ಯಂತ್ರಗಳಿಗೆ ಕೊಟ್ಟು ಹಾಲು ತೆಗೆಯುವುದಕ್ಕೂ ಬೆಲ್ಲ ತಯಾರುಮಾಡುವುದಕ್ಕೂ ಸ್ವಲ್ಪ ರುಸುಮನ್ನು ವಸೂಲ್ಮಾಡಲಾಗುತ್ತೆಂದೂ ಮಿ|| ಚಾಟರ್ಟನ್ ಸಾಹೇಬರು ತಿಳಿಸಿದರು ಈ ಚರ್ಚೆಯು ಅಷ್ಟಕ್ಕೇ ನಿಲ್ಲಿಸಲಾಯಿತು

11 ಕಬ್ಬಿನದ ತುಕ್ಕನ್ನು ಕರಗಿಸಿ ಕಬ್ಬಿಣ ತೆಗೆಯುವ ಕಸಬಿಗಾಗಿ ಬೇಕಾದಷ್ಟು ಇದ್ದಿಲು ಸಿಕ್ಕುವುದಿಲ್ಲವಾದದ್ದರಿಂದ ಕಾಡುಮರಗಳಲ್ಲಿ ಇದ್ದಿಲು ತಯಾರುಮಾಡುವುದಕ್ಕೆ ಯಂತ್ರ ಮುಂತಾದದ್ದನ್ನು ತರಿಸಬೇಕೆಂದು ಚರ್ಚೆಯಾಯಿತು ಇದನ್ನು ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು

12 ಸಾಗರ, ಸೊರಬಗಳಲ್ಲಿರುವ ಗುಡಿಗರ ಮಕ್ಕಳನ್ನು ನಲ್ಲಿ ಬರೆಯುವುದರಲ್ಲೂ, ಮರಗೆಲಸವೇ ಮುಂತಾದದ್ದರಲ್ಲೂ ತರಪೇತು ಮಾಡಬೇಕೆಂಬ ವಿಚಾರವು ಶದ್ಯದಲ್ಲಿ ಸಾಧ್ಯವಲ್ಲವೆಂದು ಮೆಂಬರುಗಳು ಅಭಿಪ್ರಾಯಪಟ್ಟರು

13 ನದಿ ಮತ್ತು ಕಪಿಲೆ ಭಾವಿಗಳಿಂದ ಯಂತ್ರಗಳ ಮೂಲಕ ನೀರು ಎತ್ತಿ ವ್ಯವಸಾಯದ ಜಮೀನುಗಳಿಗೆ ಹಾಯಿಸುವುದನ್ನು ಅಲ್ಲಲ್ಲಿ ರೈತರಿಗೆ ದೃಷ್ಟಾಂತಪಡಿಸಿ ತೋರಿಸಿದರೆ ವ್ಯವಸಾಯವು ವೃದ್ಧಿಯಾಗುವುದಕ್ಕೆ ಬಹಳ ಅನುಕೂಲವಾದೀತೆಂದು ಮ|| ಮಹದೇವರಾಯರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿ ಪ್ಯಾಸ್ ಮಾಡಿದರು

14 —ಯಂತ್ರಗಳ ರಚನೆಯನ್ನು ಕಲಿತು ಬರುವುದಕ್ಕಾಗಿ ಮೈಸೂರಿನಿಂದ ಬುದ್ಧಿವಂತರಾದ ಹುಡುಗರನ್ನು ಜಪಾನ್, ಇಂಗ್ಲೆಂಡ್, ಜರ್ಮನಿ, ಅಮೇರಿಕ ಮುಂತಾದ ಕಡೆಗಳಿಗೆ ಕಳುಹಿಸಬೇಕೆಂದು ಮ|| ಮಹದೇವರಾಯರು ಸೂಚಿಸಿದ್ದಕ್ಕೆ ದಿವಾನ್‌ರವರು ಇದಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳಿಂದ ದ್ರವ್ಯ ಸಹಾಯವಾದೀತೇ ಎಂದು ಕೇಳಿದರು ಇದಕ್ಕೆ ಪ್ರತ್ಯುತ್ತರವೇ ಬರಲಿಲ್ಲ ಮಿ|| ಚಾಟರ್ಟನ್‌ರವರು ಇದು ಕೂಡದೆಂದು ಎದುರು ವಾದಿಸಿದರು ಕಡೆಗೆ ಇದು ಅವಶ್ಯವೆಂದು ಪ್ಯಾಸಾಯಿತು.

15 ಮೈಸೂರು ಸಂಸ್ಥಾನದಲ್ಲೇ ಬರೆಯುವ ಸ್ಟೀಲ್ ಮುಳ್ಳುಗಳನ್ನು ತಯಾರುಮಾಡಿಸಬೇಕೆಂದು ಸೂಚಿಸಿದ್ದು ಅಷ್ಟಕ್ಕೇ ನಿಂತುಹೋಯಿತು ಬಳಿಕ ಮೂಳೆ ಗೊಬ್ಬರವನ್ನು ತಯಾರುಮಾಡುವುದಕ್ಕೆ ಕಾರ್ಖಾನೆ ಇಡಿಸಬೇಕೆಂಬ ವಿಚಾರವನ್ನು ದಿವಾನ್‌ರವರು ಗುರುತು ಹಾಕಿಕೊಂಡರು

16 ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಯಂತ್ರಗಳಿಂದಾಗುವ ಪ್ರಯೋಜನಗಳನ್ನು ಪ್ರಜೆಗಳಿಗೆ ತಿಳಿಸುತ್ತಾ ಬರುವುದಕ್ಕಾಗಿ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಬೇಕೆಂಬ ವಿಚಾರವನ್ನು ದಿವಾನ್‌ರವರು ಆಗಬಹುದೆಂದು ಒಪ್ಪಿದರು

17 ಸರ್ಕಾರದ ಲೈಫ್ ಇನ್ಷೂರೆನ್ಸ್ ಏರ್ಪಾಡನ್ನು ಸಂಸ್ಥಾನದ ಎಲ್ಲಾ ಪ್ರಜೆಗಳಿಗೂ ಅನ್ವಯಿಸುವಂತೆಯೂ, ನೌಕರರಲ್ಲದ ಸಾಮಾನ್ಯ ಪ್ರಜೆಗಳನ್ನೂ ಈ ಕಂಪನಿಗೆ ಸೇರಿಸಿಕೊಳ್ಳುವಂತೆಯೂ ಏರ್ಪಾಡಾಗಬೇಕೆಂದು ಮ|| ಚಕ್ರವರ್ತಿಯವರು ಸೂಚಿಸಿದ್ದನ್ನು ಮ|| ಕರ್ಪೂರ ಶ್ರೀನಿವಾಸರಾಯರು ಒಪ್ಪಿ, ಈಗ ಮೈಸೂರು ಸೀಮೆಯ ಹಣ ಹೊರಗಿನ ಜೀವವಿಮೆ ಕಂಪನಿಗಳಿಗೆ ಸಾಗಿಹೋಗುತ್ತಿದೆ ಎಂದೂ, ನಮ್ಮ ಜನಗಳ ಹಣ ನಮ್ಮಲ್ಲಿಯೇ ಇರುವುದಕ್ಕೆ ಈ ಏರ್ಪಾಡು ಸಹಾಯವಾದೀತೆಂದೂ ಹೇಳಿದರು ಮ|| ಗರುಡಾಚಾರ್ಯರು ಇಂಥಾ ಕಂಪನಿಯನ್ನು ಸರ್ಕಾರದವರು ಇಡಬಾರದೆಂದೂ, ಖಾಸಗಿ ಕಂಪನಿಗಳಿಗೆ ಅವಕಾಶ ತಪ್ಪಿಹೋಗುವುದೆಂದೂ ಅಭಿಪ್ರಾಯಪಟ್ಟರು ಇನ್ನೂ ಇತರ ಮೆಂಬರುಗಳು ಈ ವಿಷಯವನ್ನು ಚರ್ಚಿಸಿದರು ಕಡೆಗೆ ಈ ವಿಚಾರವನ್ನು ಕಸಬುಗಳ ಕಮಿಟಿಯಲ್ಲಿ ಚರ್ಚೆಯಾಗಬೇಕೆಂದು ತೆಗೆದಿಟ್ಟರು

ಬಳಿಕ ಇನ್ನು ಕೆಲವು ವಿಚಾರಗಳನ್ನು ಮೆಂಬರುಗಳು ಚರ್ಚಿಸಿದರು ಈ ಚರ್ಚೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದೆಂದು ತಿಳಿಸಿದಾರೆ

ಈ ಸಮಾಜವು ಕಾರ್ಯಗಳಿಂದ ಅಲ್ಲಿಗೆ ಮುಗಿಸಿದವು ಕಡೆಯಲ್ಲಿ ದಿವಾನ್‌ರವರು ಮೆಂಬರುಗಳನ್ನು ಕುರಿತು ಕೆಲವು ಎಚ್ಚರಿಕೆಗಳನ್ನು ಹೇಳಿ ಸಭೆಯನ್ನು ಮುಕ್ತಾಯಕ್ಕೆ ತಂದರು

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಉಪಕಾರಿ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಪ್ರತ್ಯಕ್ಷದರ್ಶಿ, ಚಾಮರಾಜಪೇಟೆ, ಮೈಸೂರು —ಅಂಥಾ ದುರಾಗತ ಕೃತ್ಯ ನಡೆದದ್ದನ್ನು ನೀವು ಅಲ್ಲಿದ್ದ "ಸಾವಿರಾರು ಜನಗಳೂ ಪೋಲೀಸಿನವರು ಸಹಾ" ನೋಡಿದರೆಂದು ಬರೆಯುತ್ತೀರಿ ಅಷ್ಟೊಂದು ಜನರಿದ್ದೂ ಆ ದುಷ್ಟನನ್ನು ಹಿಡಿದು ಶಿಕ್ಷೆಗೆ ಗುರಿಮಾಡಲಾರದೆ ಹೋದ ಮೇಲೆ ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಫಲವೇನು? ಪರರ ಕಷ್ಟ ನಷ್ಟಗಳನ್ನು ನೋಡಿ ಕನಿಕರಪಟ್ಟು ನಿವಾರಣೆಮಾಡುವುದರಲ್ಲಿ ಉತ್ಸಾಹವೂ ಆನಂದವೂ ಹುಟ್ಟುವ ತನಕ ದುಷ್ಕಾರ್ಯಗಳು ಅಡಗುವುದಿಲ್ಲ

ಪುರವಾಸಿ, ಚನ್ನಪಟ್ಟಣ —ಪೋಲೀಸ್ ತನಿಖೆಯು ಪೂರೈಸುವ ತನಕ ಆ ಅತ್ಯಾಚಾರಕ್ಕೆ ನೀವು ಬರೆಯುವ ಕಾರಣಗಳನ್ನು ಪ್ರಕಟಮಾಡುವುದು ಕ್ಷೇಮವಲ್ಲ

ಪರೋಪಕಾರಾಕಾಂಕ್ಷಿ, ದೊಡ್ಡಬಳ್ಳಾಪುರ —ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

—ಎಡಿಟರ್]

ಕರೆಸ್‌ಪಾಂಡೆನ್ಸ್.

ಹೊಟ್ಟೆಗಿಲ್ಲದೆ ಮಗುವನ್ನು ಮಾರಿದರಂತೆ

ಅಯ್ಯಾ,—ತುಮಕೂರು ತಾಲ್ಲೂಕು ಅದೇ ಹೋಬಳಿ ಹಣ್ಣೆನಹಳ್ಳಿ ಗ್ರಾಮದಲ್ಲಿ ಇರುವ ದೊಡ್ಡಗೌಡರು ಬಾತ್ಮಿ ಬರೆದುಕೊಂಡಿರುವ ವಿವರ ಏನೆಂದರೆ—ಇದೇ ಊರಲ್ಲಿ ಹಾಲಿ ವಾಸವಾಗಿರುವ ನಾಯ್ಕ ಜಾತಿಯವಳಾದ ಈರನಾಗಿ, ಇವಳ ಮಗಳು ಶಿದ್ದಿ, ಇವರ ಶಿದ್ದಿ ಮಕ್ಕಳು 1 ಹೆಣ್ಣು, 1 ಗಂಡು, ಈ ನಾಲ್ಕು ಜನವೂ ತುಮಕೂರು ತಾಲ್ಲೂಕು ಕೋರದ ಸಮ್ಮತು ಬೆಳ್ಳಗೊಲ್ಲಳ್ಳಿಯಲ್ಲಿ ಇದ್ದು ಈಗ್ಗೆ ಸುಮಾರು ಒಂದು ವರುಷದ ಕೆಳಗೆ ಈ ಗ್ರಾಮಕ್ಕೆ ಬಂದರು. ಇವರಿಗೆ ಜೀವನಮಾಡಿಕೊಳ್ಳುವುದಕ್ಕೆ ಹೊಲವಿಲ್ಲದ್ದರಿಂದ ಕೂಲಿಯಿಂದ ಜೀವಿಸಲು ಬಹಳ ಕಷ್ಟವಾದ್ದರಿಂದಲೂ, ಇಲ್ಲಿ ಈ ಸಲ ಮಳೆ ಬೆಳೆ ಇಲ್ಲವಾಗಿರುತ್ತೆ ಆದ್ದರಿಂದ ಸದರಿ ಶಿದ್ದಿಯು ಈ ಗ್ರಾಮಕ್ಕೆ ಬಂದ ನಂತರ 1 ಹೆಣ್ಣು ಮಗು ನಾಲ್ಕು ತಿಂಗಳು ವಯಸ್ಸಾದ್ದು ಆಗಿತ್ತು ಈ ಮಗುವನ್ನು ತುಮಕೂರು ಟೌನ್‌ನಲ್ಲಿರುವ ದೊಂಬರ ಪುಟ್ಟಿ ಎಂಬುವಳಿಂದ ನಗದು ಹತ್ತು ರೂಪಾಯಿ, ಒಂದು ಶೀರೆ, ಎರಡು ಕಣ ತೆಗೆದುಕೊಂಡು ಶುದ್ಧ ಕ್ರಯಕ್ಕೆ ಕೊಟ್ಟಿರುತ್ತಾಳೆ ಈ ಹಳ್ಳಿಗಳಲ್ಲಿ ಕೂಲಿಯಿಂದ ಜೀವನಮಾಡುವವರಿಗೆ ಜೀವಿಸುವದು ಬಹಳ ಕಷ್ಟವಾಗಿರುತ್ತೆ. ತನ್ನ ಜೀವನಕ್ಕೋಸ್ಕರ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಮಾರಿ ಜೀವನಮಾಡುವ ಕಾಲ ಬಂದಿರುತ್ತೆ ಇದೇ ರೀತಿಯಾಗಿ ಮಳೆ ಬೆಳೆ ತಪ್ಪಿಹೋದರೆ ಇಂಥಾ ಕಾರ್ಯ ಇನ್ನೂ ಅನೇಕ ನಡೆಯುವದಕ್ಕೆ ಯಾವ ಅಭ್ಯಂತರವೂ ಇಲ್ಲದ ಹಾಗೆ ಕಾಣುತ್ತೆ ದನಗಳಿಗೂ ಜನಗಳಿಗೂ ಪಾನಕ್ಕೆ ತೊಂದರೆ ಅಪಾರವಾಗಿರುತ್ತೆ ಭಾವಿಗಳೆಲ್ಲಾ ಒಣಗಿಹೋಗಿವೆ ಜನಗಳೆಲ್ಲಾ ಮೇಘವನ್ನೇ ನೋಡುವವರಾಗಿದಾರೆ

ದೊಡ್ಡಗೌಡ, ಬಾತ್ಮಿದಾರ್

ಮಲೆನಾಡಿನ ಅಭಿವೃದ್ಧಿ ಎಂಬುದಕ್ಕೆ ಕೆಲವು ಸೂಚನೆಗಳು

ಅಯ್ಯಾ,—ನಮ್ಮ ಮಹಾರಾಜಾ ಬಹದ್ದೂರವರು ದಯಾ ದೃಷ್ಟಿಯಿಟ್ಟು ಮಲೆನಾಡು ಪ್ರಾಂತ್ಯದ ಜನರಿಗೆ ತುಂಬಾ ಹಿತವನ್ನು ಉಂಟುಮಾಡಬೇಕೆಂದು ಯೋಚಿಸಿ, ಇದಕ್ಕಾಗಿ ಹಣ ವ್ಯಯ ಮಾಡುವುದು ಸ್ತೋತ್ರಾರ್ಹವಾಗಿದೆ ಈ ಕಾರ್ಯಕ್ಕೆ ನೇಮಕವಾದವರು ಕೆಲವು ಕಡೆ ಸಂಚರಿಸಿ ಕೆಲವು ಸೂಚನೆ ಕೊಟ್ಟಿರುವುದು ಅನೇಕರಿಗೆ ತಿಳಿದಿದೆ ಇದಕ್ಕೆ ನೇಮಕವಾಗಿರುವ ಅಧಿಕಾರಿಗಳು ತುಂಬಾ ದಯಾಳುಗಳೂ, ಯೋಚನಾಪರರೂ, ತಮಗೆ ನೇಮಕವಾದ ಕೆಲಸಕ್ಕೆ ದೇಹ, ಬಲ, ಬುದ್ಧಿಯನ್ನು ವಿನಿಯೋಗಿಸುವವರೂ ಆಗಿರುತ್ತಾರೆ. ಮುಂದೆ ಇನ್ನೂ ಹೆಚ್ಚಾಗಿ ಹಾಗೆ ವಿನಿಯೋಗ ಮಾಡುವರೆಂದು ನಂಬುತ್ತೇವೆ ಇವರು ಈಗ ತೀರ್ಥಹಳ್ಳಿಗೆ ಬಂದು ಕೆಲವು ಕಡೆ ಹೋಗಿ ಬರುತ್ತಾ ಇದ್ದರು ಇವರು ಸೂಚಿಸುವ ಕೆಲವು ಕಾರಣಗಳ ಜೊತೆಗೆ ನಾನೂ ಕೆಲವನ್ನು ಈ ಮೂಲಕ ಅರಿಕೆ ಮಾಡಿರುತ್ತೇನೆ ಅವು ಯಾವವೆಂದರೆ —(1) ಜ್ವರಗಡ್ಡೆ ಪರಿಹಾರಕ್ಕೆ ಈಗ ಔಷಧ ಕೊಡುತ್ತಾರೆ ಆದರೂ ಬಹು ನಿಧಾನವಾಗಿ ಈ ಗಡ್ಡೆ ಕರಗುತ್ತೆ ದೀರ್ಘಕಾಲ ಬಡಜನರು ಆಸ್ಪತ್ರೆಗಳಿಗೆ ಹೋಗಿ ಔಷಧ ತೆಗೆದುಕೊಂಡು ವಾಸಿ ಮಾಡಿಕೊಳ್ಳುವುದು ಅನೇಕರಿಗೆ ಅನನುಕೂಲವಾಗಿದೆ ಆದ್ದರಿಂದ ಬೇಗ ಈ ಗಡ್ಡೆ ಕರಗುವ ಔಷಧ ಕೊಟ್ಟರೆ ತುಂಬಾ ಉಪಕಾರ (2) ನ್ಯೂಮೋನಿಯಾ ಯಾನೆ ರೇಷ್ಮೆ ಜಾಡ್ಯವೆಂಬ ಕಾಯಿಲೆ ಈ ಪ್ರಾಂತ್ಯ ಹತ್ತು ಇದು ಬಾರದಂತೆ ಜನರಿಗೆ ತಕ್ಕ ತಿಳುವಳಿಕೆಯೂ, ಅದು ಬಂದರೆ ಉದಾರವಾದ ಚಿಕಿತ್ಸೆಯೂ ಆಗಬೇಕು (3) ಕುಡಿಯುವ ನೀರು ಅನೇಕ ಕಡೆ ಅನಾರೋಗ್ಯಕರವಾಗಿದೆ ಈ ನೀರು ಜನರಿಗೆ ರೂಢಿಯಾಗಿರುವದರಿಂದ ಸ್ವಲ್ಪ ಮಟ್ಟಿಗೆ ಸರಿಹೋಗುತ್ತೆ ದೊಡ್ಡ ಗ್ರಾಮ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ವಿಷಯ ಬಹಳ ಕೊರತೆ, ಮತ್ತು ಅಲಕ್ಷ್ಯ ನಲ್ಲೀ ನೀರು ಬರುವವೆಂದು ಕೆಲವು ಕಡೆ ಹೇಳಿದರೂ ಅದು ಒದಗುವದು ಯಾವ ಕಾಲಕ್ಕೋ ? ಇದನ್ನು ಯೋಚಿಸಿ ಅನುಕೂಲ ಪಡಿಸಬೇಕು (4) ಕೆಲವರು ಕೀಳಾದ ತ್ವವನ್ನು ಬೆಳೆ ಮಾಡುವುದುಂಟು ಇದು ಆರೋಗ್ಯಕರವಾದ್ದಲ್ಲ ಇದನ್ನು ತಪ್ಪಿಸಬೇಕು (5) ಗಾಂಜ, ಅಫೀಮು, ಹೊಗೆಸೊಪ್ಪು ಸೇಂದಿ ಇವುಗಳಲ್ಲಿ ಕೆಲವು ದುಶ್ಚಟಗಳನ್ನು ರಾಜಾದಿಯರ ಮೇಲೆ ದೃಷ್ಟಿ ಇವರ ಮುಟ್ಟಿಸಬೇಕು ಇವುಗಳ ಕ್ರಯ ಹೆಚ್ಚಿಸಬೇಕು ಇವುಗಳನ್ನು ವಿರಳವಾಗಿ ಕೊಡುವಂತಾಗಬೇಕು (6) ಸರ್ಕಾರಿ ಆಸ್ಪತ್ರೆಗಳಲ್ಲಿ ವಾರ್ಡುಗಳನ್ನು ಕಟ್ಟಿಸಿ, ರೋಗಿಗಳಿಗೆ ಸ್ಥಳ ಮಾಡಿಕೊಡಬೇಕು, ಮತ್ತು ಆಸ್ಪತ್ರೆಗಳನ್ನು ಹೆಚ್ಚಿಸಬೇಕು (7) ಈಗ ಗೋಕಾಯಿಗಳ ಮರಣ ಹೆಚ್ಚು ಇದಕ್ಕೆ ಪರಿಹಾರವನ್ನು ತೋರಿಸಬೇಕು (8) ಗೊಬ್ಬರವನ್ನು ಊರ ಹೊರಗೆ ಹಾಕಬೇಕು ಬಾವಿ, ಕರೆ (ಕುಡಿಯುವ ನೀರು) ಗೆ ದೂರದಲ್ಲಿರುವಂತೆ ಮಾಡಬೇಕು ಊರಿನಲ್ಲಿ, ಸಮೀಪದಲ್ಲಿ ಇರುವ ಗುಂಡಿಗಳನ್ನು ಮುಚ್ಚಿಸಬೇಕು ಬೀದಿ ಸವೆಂಪಸಗಳು ಗಿಡಗಳಿಲ್ಲದಂತೆಯೂ, ಹುಲ್ಲುಗಾವಲಿಗಳಿಲ್ಲದಂತೆಯೂ ಇರುವ ಹಾಗೆ ಸವೆಂಪಸವುಳ್ಳವರಿಗೆ ಅಪ್ಪಣೆಯಾಗಬೇಕು ಪ್ರತಿ ಮನೆಯ ಕಕ್ಕಸು ಪ್ರತಿ ದಿನವೂ ಶುದ್ಧವಾಗ ಮಾಡುವಂತೆ ಏರ್ಪಡಿಸಬೇಕು ಯಾಕಂದರೆ ಮಳೆಗಾಲದಲ್ಲಿ ಗಲೀಜು ಭೂಮಿಯಲ್ಲಿ ಇಂಗುವದರಿಂದ ಅನಾರೋಗ್ಯವಾಗುತ್ತೆ ಮ್ಯುನಿಸಿಪಾಲಿಟಿಗಳಿರುವ ಕಡೆಗಳಲ್ಲಿ ಬಚ್ಚಲುಗಳದ್ದರೂ ಅವು ಶುದ್ಧವಾಗಿಯೂ, ಅನುಕೂಲವಾಗಿಯೂ, ಎಲ್ಲಾ ಬೀದಿಗಳಲ್ಲೂ ಇಲ್ಲ ನಾನು ಸೂಚಿಸುವ ಎಲ್ಲಾ ಭಾಗಗಳನ್ನೂ ಗೌರ್ನಮೆಂಟಿನವರೇ ವಹಿಸಿ ಮಾಡಬೇಕೆಂದು ಹೇಳುವದಿಲ್ಲ ಇವುಗಳಲ್ಲಿ ಗೌರ್ನಮೆಂಟಿನವರು ವಹಿಸಿಕೊಳ್ಳುವ ಕೆಲವು ಕಾರ್ಯಗಳೂ, ಗ್ರಾಮದವರು ವಹಿಸಿಕೊಳ್ಳುವ ಕೆಲವು ಕಾರ್ಯಗಳೂ, ಸಂತೆಯವರು ವಹಿಸಿಕೊಳ್ಳುವವುಗಳೂ ಇರುತ್ತವೆ ಆದರೂ ಇವೆಲ್ಲವೂ ಸರಿಯಾಗಿ ನಡೆಯಬೇಕಾದರೆ ಗೌರ್ನಮೆಂಟಿನವರೇ ಮುಂದಾಗಿ ನಿಂತು ಬಲಾತ್ಕರಿಸುವದರಿಂದ ಎಲ್ಲವೂ ನೆರವೇರುತ್ತವೆಯೋ ಹೊರತು ಪ್ರಜೆಗಳಿಗೆ ವಹಿಸಿದರೆ ಅವು ಅಷ್ಟಾಗಿ ಸಾರ್ಥಕವಾಗುವದಿಲ್ಲ ಯಾಕಂದರೆ ಇವೆಲ್ಲಾ ಗೌರ್ನಮೆಂಟಿನವರಿಂದಲೇ ಆಗಬೇಕೆಂಬ ಅಭಿಪ್ರಾಯ ಜನರಲ್ಲಿದೆ ಈ ತಪ್ಪಾದ ತಿಳುವಳಿಕೆಯನ್ನು ಗೌರ್ನಮೆಂಟಿನವರು ಪ್ರೀತಿಯಿಂದಲೂ, ಸ್ಥಿರತೆಯಿಂದಲೂ, ಕೆಲವು ಸಾರಿ ಬಲಾತ್ಕರಿಸಿಯೂ ಜನರಿಗೆ ತಿಳುವಳಿಕೆ ಕೊಡಬೇಕಾಗಿದೆ

ಒಬ್ಬ ಮಲೆನಾಡು ಪ್ರಜೆ

ತಾಲ್ಲೂಕು ವರ್ತಮಾನಗಳು

ಯಡತೊರೆ ತಾ|| ಮಿರ್ಲೆ —ತಾ 1 ರಲ್ಲೂ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದೂರ್‌ರವರ ವರ್ಷ ವರ್ಧಂತಿ ಮಹೋತ್ಸವವನ್ನು ಇಲ್ಲಿನ ಪರಸ್ಪರ ಸಹಾಯ ಸಂಘದ ಮೆಂಬರುಗಳು, ಗ್ರಾಮದ ಶ್ಯಾನುಭೋಗರು, ಪಟೇಲರು, ಯೂನಿಯನ್ ಮೆಂಬರುಗಳು ಸಹ ಸೇರಿ ಆ ದಿವಸ ಸಾಯಂಕಾಲ 6 ಗಂಟೆಗೆ ಮಹಾರಾಜರವರ ಭಾವಚಿತ್ರವನ್ನು ದಿವ್ಯವಾದ ಮಲ್ಲಿಕಾಪುಷ್ಪಗಳಿಂದ ಅಲಂಕರಿಸಿ ಸುಗಂಧವಸ್ತುಗಳಿಂದೊಡಗೂಡಿದ ಪರಿಮಳ ದ್ರವ್ಯ ಪಲ್ಲಕ್ಕಿಗಳಿಂದೊಡಗೂಡಿ ರಾಜಮರ್ಯಾದೆಗಳಿಂದಲೂ, ಮಂಗಳವಾದ್ಯಗಳಿಂದಲೂ ಅತಿ ವಿಜೃಂಭಣೆಯಿಂದ ಉತ್ಸವವನ್ನು ನಡಿಸಿದರು ನೋಡುವವರ ಕಣ್ಣುಗಳಿಗೆ ಈ ಉತ್ಸವವು ವಿಸ್ಮಯವನ್ನುಂಟುಮಾಡುತ್ತಿತ್ತು ನಂತರ ಗಂಧ ಪುಷ್ಪ ತಾಂಬೂಲ ತಿಂಡಿಯು ಹಂಚಲ್ಪಟ್ಟಿತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದವು

ಅರಕಲಗೂಡು —ಇಲ್ಲಿ ಮಳೆ ಇಲ್ಲದೆ ಜನಗಳೆಲ್ಲಾ ಆಕಾಶವನ್ನೇ ನೋಡುತ್ತಿದ್ದರು. 1 3 ದಿನಗಳಿಂದ ಮೋಡವಾಡುತ್ತಾ ಸೋನೆ ಮಳೆ ಹಿಡಿದಿದೆ ಮುಂದೆ ಯಾವರೂ ಒಳ್ಳೇ ಮಳೆಗಳಾಗಿ ರೈತರ ಕಷ್ಟ ನಿವಾರಣೆ ಆಗುತ್ತೆಂದು ನಿರೀಕ್ಷಿಸುತ್ತೇವೆ —ತಾ 1 ರಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತಿ ಮಹೋತ್ಸವವು ಈ ಊರಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ನಮ್ಮ ಅಮಲ್ದಾರ್ ಮ|| ಜಿ ಎಸ್ ರಾಮಸ್ವಾಮಯ್ಯಂಗಾರ್ಯರು ಗ್ರಾಮಸ್ಥರಿಂದ ಚಂದಾ ವಸೂಲ್ ಮಾಡಿ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಂದ ಆಟಪಾಟಗಳನ್ನು ಮಾಡಿಸಿದ ನಂತರ ಮಂಗಳಕರವಾದ ವಾದ್ಯ ಘೋಷದೊಡನೆ ಎ ವಿ ಸ್ಕೂಲ್ ಹಾಲ್ ಪ್ರವೇಶಿಸಿ, ಪುರಜನಗಳ ಮಧ್ಯೆ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟು, ಶ್ರೀಮನ್ ಮಹಾರಾಜರವರ ಗುಣಕಥನವನ್ನು ಇಂಗ್ಲೀಷ್‌ನಲ್ಲಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ವಿದ್ಯಾರ್ಥಿಗಳಿಗೆಲ್ಲಾ ಸಕ್ಕರೆ ಹಂಚಿದ ನಂತರ ಸಭೆಯು ಬರಖಾಸ್ತಾಯಿತು

ಕಡೂರು —ಈ ವರೆಗೂ ಮಳೆ ಬರಲಿಲ್ಲ ದಿನವೂ ಸೆಖೆ, ಗಾಳಿ ಆಡಂಬರವೇ ಆಗಿರುತ್ತೆ ಮುಂಗಾರು ಎಳ್ಳು, ಜೋಳ ವಗೈರೆ ಹಾಕಿದ್ದೆಲ್ಲಾ ಒಣಗಿ ಹೋಗುತ್ತಾ ಬಂತು ಧಾರಣೆಗಳು ದಿನೇ ದಿನೇ ಪ್ರಿಯವಾಗುತ್ತಾ ಬಂತು. ಕಾರಣ ಬಡವರು ಆಕಾಶವನ್ನೇ ಎದುರುನೋಡುತ್ತಿರುವರು —ಪಟೇಲ್ ಮ|| ಶ್ಯಾಮಣ್ಣನವರು 60,000 ಗುಣಿ ಕಬ್ಬನ್ನು ಸಾವಿರಾರು ರೂಪಾಯಿ ವ್ಯಯಮಾಡಿ ಹಾಕಿಸಿದ್ದು ಕೆರೆ ನೀರು ಇಲ್ಲದೇಲೂ, ಮಳೆ ಇಲ್ಲದೇಲೂ ಪೈರು ದಿನೇ ದಿನೇ ಕುಗ್ಗುತ್ತಿರುವುದು —ತಾ 4 ರಲ್ಲಿ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವು ಅನೇಕ ಹಳ್ಳಿ ಸ್ಕೂಲುಗಳಲ್ಲೂ ಚೆನ್ನಾಗಿ ನಡೆದದ್ದು ಹತ್ತು ಪತ್ರಿಕೆಯಲ್ಲಿ ಓದಿ ಸಂತೋಷವಾಯಿತು —ಈ ಊರಲ್ಲಿ ಎ ವಿ ಸ್ಕೂಲು, ಗರಲ್ಸ್ ಸ್ಕೂಲುಗಳಲ್ಲಿ ಯಾವ ವಿಜೃಂಭಣೆಯೂ ನಡೆಯದಿರುವದು ವಿಷಾದಕರವಾಗಿದೆ —ನಮ್ಮ ಕೋಆಪರೇಟಿವ್ ಸೊಸೈಟಿ ವಿಷಯವಾಗಿ ತಾ 12 ರಲ್ಲಿ ಪ್ರೆಸಿಡೆಂಟ್ ಮ|| ಎಂ ರಂಗನಾಥರಾಯರ ಅಧ್ಯಕ್ಷತೆಯಿಂದ ಸಭೆಯಾಗಿ ಈ ಆಕ್ಟೋಬರ್ ವರೆಗೆ 11,440 ರೂಪಾಯಿ ಜಮಾ ಆಗಿ, ಲೇವಾದೇವಿ ನಡೆದಿರುತ್ತೆ. ಇದಕ್ಕೆ ನಮ್ಮ ಅಮಲ್ದಾರ್ರು ಮುಂತಾದವರ ಪ್ರೋತ್ಸಾಹ ಸಂತೋಷಕರವಾಗಿದೆ

ದೇವನಹಳ್ಳಿ ತಾ|| ಚಿಕ್ಕತುಮಕೂರು —ಬಿಸಿಲಿನ ಝಳ ಹೆಚ್ಚಾಗಿದೆ ಮಳೆ ಇಲ್ಲದೆ ಜನಗಳು ಆಕಾಶವನ್ನೇ ನೋಡುತ್ತಿದಾರೆ ಧಾರಣೆಯು ದಿನೇ ದಿನೇ ಹೆಚ್ಚುತ್ತಿದೆ ಬಡವರ ಗೋಳಾಟವು ಹೇಳತೀರದು —ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿಯ ಕಾಮಗಾರಿಯು ಈ ಪ್ರಾಂತ್ಯ ಪೂರೈಸುತ್ತಾ ಬಂದು, ರೈಲ್ ಕಂಬಿಗಳನ್ನು ಹಾಕುತ್ತಿದಾರೆ ಈ ರೈಲ್ ರಸ್ತೆಗಾಗಿ ತೆಗೆದುಕೊಂಡ ಜಮೀನುಗಳ ಕಂಪೆನ್‌ಸೇಷನ್ ಮೊಬಲಗು ಇದುವರೆಗೂ ದಾವತಿಯಾಗಿಲ್ಲ ಜಮೀನು ತೆಗೆದುಕೊಂಡು ಒಂದು ವರುಷಕ್ಕೆ ಮೇಲ್ಪಟ್ಟರೂ ಕಂಪೆನ್‌ಸೇಷನ್ ಮೊಬಲಗನ್ನು ದಯಪಾಲಿಸಲು ಸರ್ಕಾರದವರ ಚಿತ್ತಕ್ಕೆ ಬಾರದ್ದರಿಂದ ಜಮೀನು ಕಳಕೊಂಡ ಜನರಿಗೆ ಬೆಳೆಯೂ ಇಲ್ಲದೆ ಹಣವೂ ಇಲ್ಲದೆ ಈ ಕ್ಷಾಮಕಾಲದಲ್ಲಿ ತೊಂದರೆಪಡುವಂತಾಗಿದೆ —ಇಲ್ಲಿ ಒಂದು ಸ್ಟೈಲ್ ಸ್ಟೇಷನ್ ಆಗುವುದೆಂಬ ವಿಷಯವು ಮಾತಿನಲ್ಲಿ ಪರಿಣಮಿಸಿದೆಯೇ ಹೊರತು ಕಾರ್ಯದಲ್ಲಿ ಇಲ್ಲ ಇದು ಸಂತೆ ನಡೆಯತಕ್ಕ ಮತ್ತು ವ್ಯಾಪಾರಕ್ಕೆ ಅನುಕೂಲವಾದ ಸ್ಥಳವಾಗಿರುವುದರಿಂದ ಇಲ್ಲಿ ಸ್ಟೇಷನ್ ಆದರೆ ಜನಗಳಿಗೆ ಸೌಕರ್ಯವೂ, ಕಂಪನಿಯವರಿಗೆ ಲಾಭವೂ ಉಂಟಾಗುವುದರಲ್ಲಿ ಸಂಶಯವಿಲ್ಲ

ಗೌರಿಬಿದನೂರು ತಾ|| ತೊಂಡೆಭಾವಿ —ಈ ಗ್ರಾಮದಲ್ಲಿ ಮ|| ಶೇಕ್ದಾರ್ ಕೆ ನಾರಾಯಣರಾಯರ ಪೋಷಣೆಗೆ ಒಳಪಟ್ಟು ಯುಗಾದಿಯ ದಿನ ಒಂದು ವಾಚಕಶಾಲೆಯನ್ನು ಸ್ಥಾಪಿಸಲಾಯಿತು ಮ|| ನಂಜಯ್ಯನವರು ತಮ್ಮ ಕಟ್ಟಡವನ್ನು ಇದಕ್ಕಾಗಿ ಕೊಟ್ಟು ಇದಾರೆ ಇದುವರೆಗೆ 5 ಪತ್ರಿಕೆಗಳನ್ನು ತರಿಸುತ್ತಾ ಇದೆ ಸ್ಥಳೀಯ ಪರಸ್ಥಳೀಯ ವಾಚಕಮಹಾಶಯರು ಪ್ರತಿದಿನವೂ ಈ ಮಂದಿರಕ್ಕೆ ಬಹಳ ಆಸಕ್ತಿಯಿಂದ ಬಂದು ಪತ್ರಿಕೆಗಳನ್ನು ಓದುತ್ತಲೂ, ಇದರ ಪುರೋಭಿವೃದ್ಧಿಗೆ ಆಗಬೇಕಾದ ಸಲಹೆಗಳನ್ನು ಕೊಡುತ್ತಲೂ, ಕೈಲಾದ ಸಹಾಯವನ್ನು ಮಾಡುತ್ತಲೂ ಇದಾರೆ ತಾ 21 ರಲ್ಲಿ ನಮ್ಮ ಅಮಲ್ದಾರ್ರವರು ಪ್ರಜೆಗಳ ಮೇಲೆ ಅಭಿಮಾನವಿಟ್ಟು ಈ ಮಂದಿರಕ್ಕೆ ದಯಮಾಡಿಸಿ ಆಡಳಿತಗಳ ಪರಾಮರಿಕೆಯಿಂದ ಮೈಸೂರು ಗೆಜೆಟ್ ಮೊದಲಾದವುಗಳನ್ನು ಉಚಿತವಾಗಿ ತರಿಸಿಕೊಡುವಂತೆ ಹೇಳಿದ್ದಲ್ಲದೆ ಕಾರ್ಯನಿರ್ವಾಹಕರ ಸಹವಾಳಿಗೋಸ್ಕರ ಕೆಲವು ತಿಳುವಳಿಕೆಗಳನ್ನೂ ಕೊಟ್ಟರು ಈ ವಾಚಕಶಾಲೆಯು ಉತ್ತರೋತ್ತರ ಮತ್ತಷ್ಟು ಉನ್ನತಸ್ಥಿತಿಗೆ ಬರುವುದರಲ್ಲಿ ಅಡ್ಡಿಯಿಲ್ಲ ಪ್ರೆಸಿಡೆಂಟ್ ಮ|| ಕೆ ಮಾಸ್ಟರ್ ಸುಬ್ಬಯ್ಯನವರು ಈ ವಿಷಯದಲ್ಲಿ ಪ್ರಜೆಗಳಿಗೆ ತಕ್ಕ ತಿಳುವಳಿಕೆಯನ್ನು ಕೊಡುತ್ತಾ, ಎಲ್ಲಾ ಕೆಲಸಗಳನ್ನೂ ಮುಂದಾಳಾಗಿ ನಿಂತು ನಿರ್ವಹಿಸುತ್ತಿದಾರೆ

ಪ್ರದರ್ಶನ ಶಾಲೆಯ ಬಳಿ ಹೊಸತರಹಾ ವ್ಯವಸಾಯ ಕ್ರಮಗಳು ನಡೆಯುತ್ತಿರುವ ಮಾದ್ರಿ ಫಾರಮನ್ನು ಏರ್ಪಾಡುಮಾಡಿಡುವುದು ಒಳ್ಳೆಯದೆಂದು ನಮಗೆ ತೋರುತ್ತದೆ ಇದು ಸಾಧ್ಯವಲ್ಲದಿದ್ದರೆ ಸಮೀಪದಲ್ಲೇ ಸಾಧಾರಣವಾದ ಬೆಳೆಗಳನ್ನು ಉತ್ಕೃಷ್ಟವಾದ ರೀತಿಯಲ್ಲಿ ಬೆಳೆ ಮಾಡಿರುವಂಥಾ ಜಮೀನುಗಳು ರೈತರಿಗೆ ನೋಡುವುದಕ್ಕಾಗಿ ಮಾಡಿದ್ದರೂ ತುಂಬಾ ಸಹಾಯವಾದೀತು. ಹೊಸತರಹಾ ನೇಗಲು, ಧಾನ್ಯವನ್ನು ಬಿಡಿಸಿಕೊಡುವ ಯಂತ್ರ, ಕಬ್ಬಿನ ಗಾಣ, ಈ ಮೊದಲಾದವುಗಳನ್ನು ಪ್ರದರ್ಶನದಲ್ಲಿಟ್ಟು, ಅವು ಕೆಲಸಮಾಡುತ್ತಿರುವುದನ್ನು ರೈತರೇ ಮೊದಲಾದ ಜನರಿಗೆ ತೋರಿಸಬೇಕು ಈ ಯಂತ್ರಗಳ ಸಮೀಪದಲ್ಲೇ ಅವುಗಳ ಕ್ರಯ, ಉಪಯೋಗಿಸತಕ್ಕ ವಿಧಾನ, ಪ್ರಯೋಜನಾಂಶ, ಈ ಮುಂತಾದ ಸಂಗತಿಗಳನ್ನು ಬಹಳ ಚೆನ್ನಾಗಿಯೂ ಸುಲಭವಾಗಿಯೂ ಗೊತ್ತಾಗುವಂತೆ ಬರೆದಿಟ್ಟು ತೋರಿಸಬೇಕು ಹೀಗೆ ಮಾಡಿಟ್ಟಪಕ್ಷದಲ್ಲಿ ಪ್ರದರ್ಶನದಿಂದ ಈ ಸೀಮೆಯ ರೈತನಿಗೆ ಈಗಿಗಿಂತ ತುಂಬಾ ಸಹಾಯವಾಗುತ್ತದೆ ಈಗ ಈ ಪ್ರದರ್ಶನದ ಏರ್ಪಾಡನ್ನೆಲ್ಲಾ ಸಂಪದಭ್ಯುದಯ ಸಮಾಜದ ಕೈಗಾರಿಕೆ ಮತ್ತು ವ್ಯಾಪಾರದ ಕಮಿಟಿಯವರು ವಹಿಸಿಕೊಂಡು ನಡಿಸುತ್ತಾರಾದಕಾರಣ ಈ ಕಮಿಟಿಯವರು ಅನೇಕ ಬದಲಾವಣೆಗಳನ್ನು ಮಾಡಿಡಬಹುದಾಗಿದೆ ಇದರಿಂದ ಪ್ರದರ್ಶನದ ಖರ್ಚು ಬಾಬು ಸ್ವಲ್ಪ ಹೆಚ್ಚಾಗಬಹುದು, ಆದರೆ ರೈತನು ತಾನು ಸಾಮಾನ್ಯವಾಗಿ ಬೆಳೆಯುವ ಧಾನ್ಯಗಳನ್ನೇ ಇನ್ನೂ ಹುಲುಸಾಗಿಯೂ, ಕಮ್ಮಿ ಖರ್ಚಿನಿಂದಲೂ ಬೆಳೆದುಕೊಳ್ಳುವ ಭಾಗದಲ್ಲಿ ಅವನಿಗೆ ಎಷ್ಟು ಸಹಾಯಮಾಡಿದರೂ, ಅದಕ್ಕಾಗಿ ಎಷ್ಟು ಖರ್ಚುಮಾಡಿದರೂ ಆ ಖರ್ಚು ವ್ಯರ್ಥವೆನಿಸುವುದಿಲ್ಲ

ಪ್ರದರ್ಶನದಲ್ಲಿ ಸ್ತ್ರೀಯರಿಂದ ಮಾಡಲ್ಪಡುವ ಪದಾರ್ಥಗಳನ್ನೇ ಪ್ರತ್ಯೇಕವಾಗಿ ಇಡತಕ್ಕದ್ದೆಂದು ಗೊತ್ತುಮಾಡಿದಾರೆ ಈ ಭಾಗವನ್ನು ಸ್ತ್ರೀಯರ ಒಂದು ಕಮಿಟಿಗೆ ವಹಿಸಿರುವರು. ಆ ಕಮಿಟಿಗೆ ಸೇರಿಸಿರುವ ಸ್ತ್ರೀಯರನ್ನೆಲ್ಲಾ ಅವರು ಮೆಂಬರಾಗಿರಲು ಒಪ್ಪುವರೋ ಎಂದು ಮೊದಲೇ ಕೇಳಿ ಗೊತ್ತುಮಾಡಿಕೊಂಡರೋ ನಮಗೆ ಸಂಶಯವಾಗಿದೆ ಪ್ರದರ್ಶನಶಾಲೆಗೆ ವಸ್ತುಗಳನ್ನು ಕಳುಹಿಸಬೇಕೆಂಬುವರು ೧೯೧೪ನೇ ಆಗಸ್ಟ್ ೨೫ ನೇ ತಾರೀಖಿನೊಳಗ ವಸ್ತುಗಳನ್ನು ಪ್ರದರ್ಶನದ ಕಮಿಟಿ ಸೆಕ್ರೆಟರಿಯವರ ಹೆಸರಿನಲ್ಲಿ ಮೈಸೂರಿಗೆ ಕಳುಹಿಸಬೇಕೆಂದು ವಿಧಾಯಕಮಾಡಿದಾರೆ

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಸ್ತುಗಳನ್ನೂ ಈ ಪ್ರದರ್ಶನದಲ್ಲಿ ಒಂದು ಕಡೆ ಪ್ರತ್ಯೇಕವಾಗಿಟ್ಟು ತೋರಿಸುವರು. ಈ ಭಾಗದಲ್ಲಿ ಸಾಮಾನ್ಯವಾಗಿ ಮಕ್ಕಳು ಮಾಡಿರುವ ಕೆಲಸಗಳೇ ವಿಶೇಷವಾಗಿರುತ್ತವೆ ನೆಯ್ಗೆ, ಉಳುಮೆ, ಕುಂಬಾರ ಕೆಲಸಗಳನ್ನು ಮಾಡುವವರಿಗೋಸ್ಕರ ಪೋಟಾಪೋಟಿಗಳು ನಡೆದು ಬಹುಮಾನಗಳು ಕೊಡಲ್ಪಡುವವು ಈ ಪ್ರದರ್ಶನಕ್ಕೆ ಸಂಬಂಧಪಡುವ ಎಲ್ಲಾ ವಿಚಾರಗಳಿಗೂ ಸೆಕ್ರೆಟರಿ ಮ॥ ಸಿ. ರಂಗನಾಥರಾವ ಸಾಹೇಬ, ಮೈಸೂರು ಎಂಬೀ ವಿಳಾಸಕ್ಕೆ ಕಾಗದಬರೆದರೆ ಅವರು ಜವಾಬುಕೊಡುತ್ತಾರೆ.

ಸಕಲ ಆಜ್ಞೆಗಳಲ್ಲಿ ಶ್ರೇಷ್ಠವಾದದ್ದು ಯಾವದು

ನಮ್ಮ ನಡತೆಯನ್ನು ತಿದ್ದಿ ಕ್ರಮಪಡಿಸಿಕೊಳ್ಳುವದಕ್ಕೆ ತಕ್ಕ ನಡತೆಯ ಸೂತ್ರಗಳು ಇರಬೇಕೆಂದು ಸಕಲ ನೀತಿಜ್ಞರು ಒಪ್ಪಿಕೊಳ್ಳುತ್ತಾರೆ ಮೆಟ್ಟಿಲ್ಲದೆ ಕರಡು ಬರೆಯುವ ಬಾಲಕನ ಬರವಣಿಗೆಯು ತಕ್ಕ ಕ್ರಮರೂಪಾಂಟನ್ನು ಹೊಂದಲಾರದು ಹಾಗೆಯೆ ನಾವು ನಡತೆಯಲ್ಲಿ ಅನುಸರಿಸುವುದಕ್ಕೆ ತಕ್ಕ ಕ್ರಮ, ಕಟ್ಟಳೆ, ನಮೂನೆಗಳು ಇರಬೇಕು ಇಲ್ಲದಿದ್ದರೆ ನಡತೆ ತಕ್ಕ ನಮೂನೆ ಇರಲಾರದು

ಚಿಕ್ಕ ಆಸಿಯದಲ್ಲಿ ಪಾಲೆಸ್ತೀನ್ ಯೆಂಬ ಒಂದು ಸಣ್ಣ ಸೀಮೆಯಿದೆ ಅದರಲ್ಲಿ ಈಗ ಎರಡು ಸಾವಿರ ವರುಷಗಳಿಗೆ ಮುಂಚೆ ಯೆಹೂದ್ಯರೆಂಬ ಒಂದು ಜಾತಿಯ ಜನರು ವಾಸಮಾಡುತ್ತಿದ್ದರು ಇವರು ದೇವಭಕ್ತರು, ಮತಾಭಿಮಾನಿಗಳು ಬಾಲ್ಯದಿಂದಲೇ ತಮ್ಮ ಮಕ್ಕಳಿಗೆ ಆರಾಧನೆ, ಅರ್ಚನೆ, ಬಲಿ, ಹೋಮ, ಸ್ನಾನ, ಜಪ ತಪ, ದಾನಧರ್ಮಗಳಲ್ಲಿ ತಕ್ಕ ಗೌರವವೂ ಶ್ರದ್ಧೆಯೂ ಆಗುವಂತೆ ಅಭ್ಯಾಸವನ್ನು ಮಾಡಿಸುತ್ತಿದ್ದರು ಇವರಲ್ಲಿ ಫರಿಸಾಯರೆಂಬ ಪಂಗಡಕ್ಕೆ ಸೇರಿದವರಂತೂ ಕೇವಲ ಸೂಕ್ಷ್ಮವಾದ ಕಟ್ಟಳೆಗಳನ್ನು ಕಲ್ಪಿಸಿ ಅವುಗಳನ್ನು ಅತಿ ಜಾಗ್ರತೆಯಿಂದಲೂ ಕೇವಲ ಭಕ್ತಿಯಿಂದಲೂ ಕೈಕೊಳ್ಳುತ್ತಿದ್ದರು ಆದರೆ ಅವುಗಳೆಲ್ಲಾ ಆರಾಧನೆ, ಸ್ನಾನ, ಮಡಿ ಮುಂತಾದ ಬಹಿರಾಚಾರಗಳಾಗಿದ್ದವೇ ಹೊರತು ನಡತೆಯನ್ನು ಶೋಧಿಸಿ ದೋಷಗಳನ್ನು ತಿದ್ದಿ ನೀತಿಯನ್ನೂ ಸನ್ಮಾರ್ಗವನ್ನೂ ಕಲಿಸುವುದಕ್ಕೆ ಸಾಧಕಗಳಾಗಿರಲಿಲ್ಲ ಫರಿಸಾಯರೂ ಯೆಹೂದ್ಯರೆಲ್ಲರೂ ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಹಿಡಿದು ತಮ್ಮ ಕೈಗಳನ್ನು ಆಚಾರಶುದ್ಧಿಯಾಗಿ ತೊಳಕೊಂಡ ಹೊರತು ಆಹಾರ ತೆಗೆದುಕೊಳ್ಳುವದಿಲ್ಲ ಮತ್ತು ಪೇಟೆಗೆ ಹೋಗಿ ಬಂದರೆ ಸ್ನಾನಮಾಡದೆ ಆಹಾರ ತೆಗೆದುಕೊಳ್ಳುವುದಿಲ್ಲ ಇದಲ್ಲದೆ ಅವರಲ್ಲಿ ತಂಬಿಗೆ ತಪ್ಪಲೆ ಬಟ್ಟಲುಗಳನ್ನು ಬೇಗ ತೊಳೆಯುವದೇ ಮೊದಲಾದ ಅನೇಕಾಚಾರಗಳನ್ನು ನಡಿಸುವ ನೇಮಕವುಂಟು ದೇವರ ಆಜ್ಞೆಗಳನ್ನು ತ್ಯಜಿಸಿ ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದು ಸಂಪ್ರದಾಯಗಳನ್ನು ನಡಿಸುವುದರಲ್ಲಿ ದೇವರ ಆಜ್ಞೆಗಳನ್ನು ಮೂಲೆಗೆ ಒತ್ತುವರು ಮನಸ್ಸಾ ತಂದೆತಾಯಿಗಳನ್ನು ಸನ್ಮಾನಿಸಿ ಅವರ ಮುಪ್ಪಿನಲ್ಲಿ ಅವರನ್ನು ಪರಾಮರಿಸಬೇಕು ಈ ಆಜ್ಞೆಯನ್ನು ತಿರಸ್ಕರಿಸುವವನು ಮರಣದಂಡನೆಗೆ ಗುರಿಯಾಗಬೇಕೆಂದು ದೇವರು ಅವರ ಧರ್ಮಶಾಸ್ತ್ರದಲ್ಲಿ ಬರೆಸಿಕೊಟ್ಟಿದ್ದಾನೆ ಈ ಮಾತು ಯೆಹೂದ್ಯರೆಲ್ಲರಿಗೂ ತಿಳಿಯುವದು ಆದರೆ ಅವರು ದೇವರು ಕೊಟ್ಟ ಈ ಆಜ್ಞೆಯನ್ನು ಬಡಪಡಿಸಿ ತಂದೆತಾಯಿಗಳನ್ನು ತಿರಸ್ಕರಿಸುವುದಕ್ಕೆ ಒಂದು ಸುಲಭೋಪಾಯವಾದ ಸಂಪ್ರದಾಯವನ್ನು ತಮಗೆ ತಾವೇ ಕಲ್ಪಿಸಿಯಿಟ್ಟಿದ್ದರು ಅದೇನೆಂದರೆ—ಒಬ್ಬನು ತನ್ನ ತಂದೆಯಲ್ಲಿರುವ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ನಿನ್ನ ಸಂರಕ್ಷಣೆಗಾಗಿ ಕೊಡತಕ್ಕ ಸಹಾಯವನ್ನು ಕೊರ್ಬಾನ್ ಮಾಡಿದ್ದೇನೆ ಅಂದರೆ ದೇವರಿಗಾಗಿ ಇಟ್ಟಿದ್ದೇನೆ ಎಂದು ಹೇಳಿದರೆ ಅವನು ತನ್ನ ತಂದೆಗಾಗಲಿ ತಾಯಿಗಾಗಲಿ ಇನ್ನೇನು ಸಹಾಯ ಮಾಡುವುದು ಅಗತ್ಯವಿಲ್ಲವೆನ್ನುವರು ಹೀಗೆ ದೇವರ ಆಜ್ಞೆಯನ್ನು ನಿರರ್ಥಕಪಡಿಸಿ ಮನುಷ್ಯರ ಸಂಪ್ರದಾಯಗಳನ್ನು ಕೈಕೊಳ್ಳುವರು ಸಬ್ಬತ್ ಅಂದರೆ ಶನಿವಾರ ಯಾವ ಕೆಲಸವನ್ನೂ ಮಾಡಕೂಡದೆಂಬ ಕಟ್ಟಳೆ ಇತ್ತು ಕೆಲಸವೆಂದರೆ ನಡೆಯುವದು, ಹೊರೆ ಹೊರುವದು, ಅಲ್ಲದೆ ಈ ಕಡು ಸಂದರ್ಭದಲ್ಲಿ ಒಬ್ಬ ದರ್ಜಿಯು ತನ್ನ ರುಮಾಲಿನ ಮಗಲಿನಲ್ಲಿ ಸಿಕ್ಕಿಕೊಂಡಿದ್ದ ಸೂಜಿಯನ್ನು ಮರೆತು ಸಬ್ಬತ್ತಿನಲ್ಲಿ ಹಾಗೆಯೇ ರುಮಾಲು ಧರಿಸಿಕೊಂಡರೆ ಅಥವಾ ಒಬ್ಬನು ನೇಮಕವಾದ ಎರಡು ಮೈಲಿಗಳಿಗಿಂತ ಆ ದಿನ ಸ್ವಲ್ಪ ಹೆಚ್ಚಾಗಿ ನಡೆದರೆ ಅದು ಪಾಪವೆಂದು ಸಂಪ್ರದಾಯವು ನಿರ್ಣಯಿಸಿದರೆ ಪರಿಹಾರಕ್ಕೆ ಪ್ರಾಯಶ್ಚಿತ್ತವನ್ನು ಕಲ್ಪಿಸಿತು ಇಂತಹ ಸಂಪ್ರದಾಯಗಳು ಅವರಲ್ಲಿ ಸುಮಾರು ೬೦೦ ಇದ್ದವಂತೆ

ಇಂಥಾ ತಾರತಿಕಡಿ ತೊಡಕುಗಳೆಂಬ ಸಂಪ್ರದಾಯಗಳಿಂದ ದೇವರ ಧರ್ಮಪ್ರಮಾಣವು ಸಾಮಾನ್ಯ ಜನರ ದೃಷ್ಟಿಗೆ ಬೀಳದಂತೆಯಾಗಿ ಅವು ಗ್ರಹಣ ಹಿಡಿದ ಸೂರ್ಯನಂತೆ ಮಬ್ಬಾಗಿದ್ದವು ಪಕ್ಷರ ಕಾಲವೂ ಶ್ರಮವೂ ಈ ದುರ್ಬಲ ಪ್ರಸಂಗಗಳನ್ನನುಸರಿಸುವದರಲ್ಲಿ ವ್ಯಯವಾದವು

ಈ ಸಂದರ್ಭದಲ್ಲಿ ಒಬ್ಬಾನೊಬ್ಬ ಶಾಸ್ತ್ರಿಯು ಪುರುಳಿಲ್ಲದ ಈ ಸಂಪ್ರದಾಯಗಳಲ್ಲಿ ಬೇಸರಪಟ್ಟು ಕ್ರಿಸ್ತನ ಬಳಿಗೆ ಬಂದು ಎಲ್ಲಾ ಆಜ್ಞೆಗಳಲ್ಲಿ ಸರ್ವೋತ್ಕೃಷ್ಟವಾದುದು ಯಾವದು ಎಂದು ಕೇಳಿದನು ಯೇಸು ಸ್ವಾಮಿಯು ಈ ಅವಕಾಶವನ್ನು ಪ್ರಯೋಗಿಸಿ ಅಲ್ಲಿದ್ದ ಸರ್ವರನ್ನು ತನ್ನ ಸಮೀಪಕ್ಕೆ ಕರೆದು— ಎಲೈ ಜನರೇ, ಕೇಳಿರಿ ನನ್ನ ದೇವರಾದ ಸರ್ವೇಶ್ವರನು ಒಬ್ಬನೇ ನಮೆಲ್ಲರ ದೇವರು ನನ್ನ ದೇವರಾಗಿರುವ ಈ ಸರ್ವೇಶ್ವರನನ್ನು ನಿನ್ನ ಪೂರ್ಣಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕೆಂಬುವದೇ ಮೊದಲನೇ ಆಜ್ಞೆ ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನೀನು ನಿನ್ನ ನೆರೆಯವನನ್ನು ಪ್ರೀತಿಸಬೇಕೆಂಬುವದೇ ಎರಡನೇ ಆಜ್ಞೆ, ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಅಂದನು ಆಗ ಶಾಸ್ತ್ರಿಯು—ಬೋಧಕನೇ, ಚೆನ್ನಾಗಿ ಹೇಳಿದೆ ಒಬ್ಬನೇ ದೇವರಿದ್ದಾನೆ ಆತನ ಹೊರತು ಮತ್ತೊಬ್ಬ ದೇವರಿಲ್ಲವೆಂದು ನೀನು ಹೇಳಿದ್ದು ಸತ್ಯ ಆತನನ್ನು ಪೂರ್ಣ ಮನಸ್ಸಿನಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿಸುವದೂ ಇವೆರಡು ಆಜ್ಞೆಗಳು ಎಲ್ಲಾ ಸರ್ವಾಂಗ ಹೋಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನವು ಎಂದು ಒಪ್ಪಿಕೊಂಡನು

ನಮ್ಮ ನಡತೆಯನ್ನು ತಿದ್ದಿ ಕ್ರಮಪಡಿಸುವ ಆಜ್ಞೆಗಳು ನಮಗೆ ಬೇಕು ಆದರೆ ನಮ್ಮನ್ನು ಬೇಸರಗೊಳಿಸುವ ಅಥವಾ ಭಯಪಡಿಸುವ ಆಜ್ಞೆಗಳು ನಮಗೆ ಸಹಾಯ ಮಾಡಲಾರವು ಚಿಲ್ಲರೆ ವಿಷಯಗಳಲ್ಲಿ ನೇಮಕವಾದ ಪಲವು ಬಹಿರಾಚಾರಗಳು ಪ್ರಯೋಜನವಿಲ್ಲ ಅವು ಹೊರಲಾರದ ಹೊರೆಗಳಂತೆ ನಮ್ಮನ್ನು ನಿಲಕ್ಕೆ ಅಮುಕುವವು ಆದರೆ ಕ್ರಿಸ್ತನು ಉಪದೇಶ ಮಾಡಿದ ಎರಡು ಆಜ್ಞೆಗಳನ್ನು ಸ್ಮರಿಸಿ ಅವು ಸಕಲ ಆಜ್ಞೆಗಳನ್ನು ಒಳಗೊಂಡ ಸಂಗ್ರಹವೆನ್ನಬಹುದು ದೇವರನ್ನು ಪೂರ್ಣ ಮನಸ್ಸು, ಬುದ್ಧಿ, ಶಕ್ತಿಯಿಂದ ಪ್ರೀತಿಸು ಮತ್ತು ನಿನ್ನನ್ನು ನೀನು ಪ್ರೀತಿಸಿಕೊಳ್ಳುವಂತೆ ಸಕಲ ಜನರನ್ನೂ ಪ್ರೀತಿಸು ಇದಕ್ಕಿಂತ ಸಂಕ್ಷೇಪವಾದ ಕಟ್ಟಳೆ ಇರಬಾರದು ಇದು ಸುಲಭವಾಗಿಯೂ ಲಲಿತವಾಗಿಯೂ ಇದೆ ಇವೆರಡನ್ನು ತಪ್ಪದೆ ಕೈಕೊಳ್ಳುವವನು ಯಾವ ನೀತಿಸೂತ್ರವನ್ನೂ ಭಂಗಪಡಿಸದೆ ಇರುವನು ಯಾಕೆಂದರೆ ಸಕಲ ನೀತಿಸೂತ್ರಗಳು ಇವುಗಳ ಆಧಾರದ ಮೇಲೆ ಇವುಗಳ ಆಶ್ರಯದಲ್ಲಿ ನಿಂತಿವೆ ಸಕಲ ಧರ್ಮದ ಸಾರಾಂಶವು ಈ ಎರಡು ಆಜ್ಞೆಗಳಲ್ಲಿ ಅಡಕವಾಗಿದೆ.

ಅನ್ಯದೇಶದ ವಿದ್ಯಮಾನಗಳು

ಅಮೇರಿಕ ಸಂಯುಕ್ತ ಸಂಸ್ಥಾನಗಳಿಗೂ ಮೆಕ್ಸಿಕೋಗೂ ಇದ್ದ ವ್ಯಾಜ್ಯಗಳು ಇನ್ನೂ ಸಮಾಧಾನಕ್ಕೆ ಬಂದಿರುವದಿಲ್ಲ ದಕ್ಷಿಣ ಅಮೇರಿಕದ ದೇಶಗಳ ಪ್ರತಿನಿಧಿಗಳು ನಯಾಗರ ಫಾಲ್ಸ್ ದಲ್ಲಿ ಈ ವಿಷಯವಾಗಿ ಇನ್ನೂ ವಿಚಾರಮಾಡುತ್ತಲೇ ಇದ್ದಾರೆ ಇಷ್ಟರಲ್ಲೇ ಇವರ ವ್ಯಾಜ್ಯವು ಕೊನೆಗಂಡೀತೆಂದು ನಿರೀಕ್ಷಿಸಲ್ಪಟ್ಟಿದೆ. ಈ ಮಧ್ಯ ಸಂಯುಕ್ತ ಸಂಸ್ಥಾನಗಳವರು ಮೆಕ್ಸಿಕೋದವರ ಮುಖ್ಯ ರೇವುಪಟ್ಟಣವಾದ ವೇರಕ್ರೂಸನ್ನು ಹಿಡಿದುಕೊಂಡಿರುವರು ಮತ್ತು ಈ ಉಭಯ ಪಕ್ಷಗಳವರಿಗೂ ಯುದ್ಧಗಳು ಮೆಕ್ಸಿಕೋದಲ್ಲಿ ನಡೆಯುತ್ತಿವೆ ಈ ದುರಾದೃಷ್ಟವುಳ್ಳ ದೇಶವು ಸ್ವದೇಶೀಯರಿಂದಲೇ ಲಯವಾಗುತ್ತಾ ಬರುತ್ತದೆ.

* * * *

ಬಾಲ್ಕನ್ ಸಂಸ್ಥಾನಗಳವರಿಗೂ ತುರ್ಕಿಯವರಿಗೂ ಯುದ್ಧವು ನಡೆದ ಮೇಲೆ ಬಾಲ್ಕನ್ ಸಂಸ್ಥಾನಗಳಲ್ಲಿ ಅಲ್ಬೇನಿಯಾ ಎಂಬ ಒಂದು ಹೊಸ ರಾಜ್ಯವು ಸ್ಥಾಪಿಸಲ್ಪಟ್ಟಿತ್ತಷ್ಟೆ ಆ ರಾಜ್ಯದಲ್ಲಿ ಈಗ ಗಲಭೆಗಳು ಹುಟ್ಟಿರುತ್ತವೆ ಹೊಸದಾಗಿ ನಿಯಾಮಕವಾದ ಅರಸನಿಗೆ ಎಲ್ಲರೂ ಸುಖಾಗಮನವನ್ನು ಬಯಸಿರುವದಿಲ್ಲ ಕಲವು ಮಹಮ್ಮದೀಯರು ದಂಗೆ ಎದ್ದು ರಾಜಧಾನಿಯಾದ ಡ್ಯುರಾಸ್ಸೋ ಪಟ್ಟಣವನ್ನು ಮುತ್ತಿಗೆ ಹಾಕಿರುವರು ಘೋರವಾದ ಯುದ್ಧಗಳು ನಡೆದು ನೂರಾರು ಪ್ರಾಣಗಳು ಹತವಾಗಿರುವವು ಈ ಹೊಸ ಧೊರೆಯ ಸಹಾಯಕ್ಕಾಗಿ ಯೂರೋಪಿನಿಂದ ಕಲವು ಸೈನ್ಯಗಳು ಬಂದು ಗಲಭೆಯನ್ನು ನಿಲ್ಲಿಸಿ, ದೇಶದಲ್ಲಿ ಸಮಾಧಾನವನ್ನು ಕಾಪಾಡುವದು ಸಾಧ್ಯವಾಗಿದೆ ಜನಗಳ ಅಪೇಕ್ಷೆಯು ಹೀಗೇ ಇದಯೆಂದು ಕಂಡುಹಿಡಿಯುವದು ಸುಲಭಸಾಧ್ಯವಲ್ಲ

* * * *

ಗ್ರೀಸ್ ದೇಶಕ್ಕೂ ತುರ್ಕಿಗೂ ವಿರೋಧವು ಹುಟ್ಟಿರುತ್ತದೆ ಅನೇಕ ಮಂದಿ ಗ್ರೀಕರು ತುರ್ಕಿಯಿಂದಲೂ ಚಿಕ್ಕ ಆಸ್ಯದಿಂದಲೂ ಹೊರಡಿಸಲ್ಪಟ್ಟಿರುವರು ಇವರು ತಮ್ಮ ಮನೆಗಳನ್ನೂ ಆಸ್ತಿಪಾಸ್ತಿಗಳನ್ನೂ ಕಳೆದುಕೊಂಡು ನಿರ್ಗತಿಕರಾಗಿ ಹಿಂದಿರುಗಿ ಗ್ರೀಕ್ ದೇಶಕ್ಕೆ ಬಂದಿರುತ್ತಾರೆ ಗ್ರೀಸ್ ದೇಶದವರು ಈ ವಿಷಯವನ್ನು ತುರ್ಕಿಯವರಿಗೆ ಬಹು ಖಂಡಿತವಾಗಿ ತಿಳಿಸಿರುತ್ತಾರೆ ಈಚೆಗೆ ಬಂದಿರುವ ತಂತಿವರ್ತಮಾನಗಳನ್ನು ನೋಡಿದರೆ ಗ್ರೀಸ್‌ನವರು ತುರ್ಕಿಯರ ಮೇಲೆ ಯುದ್ಧಕ್ಕೆ ಹೊರಡಲು ಸಿದ್ಧಪಡಿಸಿಕೊಳ್ಳುತ್ತಿರುವಂತೆ ತೋರುವದು ಯುದ್ಧವು ಪ್ರಾರಂಭವಾಗುವ ಪಕ್ಷಕ್ಕೆ ಹಿಂದಿನ ಕರಾರಿನ ಪ್ರಕಾರ ಸರ್ವಿಯರು ಗ್ರೀಕರ ಜೊತೆಗೆ ಸೇರಿಕೊಳ್ಳಬೇಕಾಗುವದು ಈಚೀಚೆಗೆ ನಡೆದಿರುವ ಯುದ್ಧದ ದೆಸೆಯಿಂದ ಈ ದೇಶಗಳವರೆಲ್ಲರೂ ಬಹಳವಾಗಿ ಬಳಲಿಹೋಗಿರುವರು ಆದಕಾರಣ ಅವರು ತಿರಿಗಿ ಯುದ್ಧಕ್ಕೆ ಸನ್ನದ್ಧರಾಗುವಂತೆ ತೋರುವದಿಲ್ಲ ಹೀಗಿದ್ದರೂ ಅಲ್ಲಿನ ವಿದ್ಯಮಾನಗಳು ಬಹಳ ಬಿರುಸಾಗಿರುತ್ತವೆ ಒಂದು ವೇಳೆ ಯುದ್ಧವು ಬೇಗ ಪ್ರಾರಂಭವಾದರೂ ಆಗಬಹುದು

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

* * *

ಕಳೆದ ಭಾನುವಾರ ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿರುತ್ತಾರೆ

* * *

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮ॥ ಗಳಾದ ಹೆಚ್ ಕೃಷ್ಣಶಾಸ್ತ್ರಿಗಳನ್ನೂ ಸಿ ನರಸಿಂಹಯ್ಯನವರನ್ನೂ ತಮ್ಮ ಪ್ರತಿನಿಧಿಗಳಾಗಿ ಪ್ರತಿನಿಧಿ ಸಭೆಗೆ ಹೋಗುವದಕ್ಕೆ ಚುನಾಯಿಸಿರುತ್ತಾರೆ

* * *

ಮುನಿಸಿಪಾಲಿಟಿ ಇಲಾಖೆಯ ನಾಗರತ್ನಮೊದಲಿಯಾರ್, ಬಿ ನರಸಿಂಗರಾವ್ ಎಂಬುವರು ಆ ಇಲಾಖೆಯ ಹಣವನ್ನು ತಿಂದುಹಾಕಿದರೆಂಬ ವಿಚಾರಣೆಯ ಮೇಲೆ ಬೆಂಗಳೂರು ಸಿಟಿ ಮೇಜಿಸ್ಟ್ರೇಟರವರು ಇವರುಗಳನ್ನು ಸೆಷನ್ಸ್‌ಗೆ ಕಮಿಟ್ ಮಾಡಿರುವರು

* * *

ರಾಜಧಾನಿಯಲ್ಲಿ ಕಳೆದ ಸೋಮವಾರದಿಂದ ಕುದುರೆಯ ಜೂಜೂ, ಪೋಲೋ ಆಟಗಳೂ ನಡೆಯುತ್ತಿವೆ ಇದಕ್ಕಾಗಿ ಅನೇಕ ಯೂರೋಪ್ಯ ಸರದಾರರುಗಳು ಬರಿಸಲ್ಪಟ್ಟಿದಾರೆ ಈ ವಿನೋದಗಳು ಮುಂದಿನ ಭಾನುವಾರದವರೆಗೂ ನಡೆಯುವವು

* * *

ಶಿವನಸಮುದ್ರ ಕೋರ್ಟಿನವರು ಈರೇಗೌಡನೆಂಬುವನು ಖೂನಿಮಾಡಿದನೆಂದು ಅವನಿಗೆ ಫಾಸಿಯನ್ನು ವಿಧಿಸಿದ್ದರು ಕಳೆದ ವಾರ ಈ ಮೊಕದ್ದಮೆಯು ಬೆಂಗಳೂರು ಚೀಫ್ ಕೋರ್ಟಿನಲ್ಲಿ ವಿಚಾರಣೆ ನಡೆದು ರುಜುವಾತು ಸಾಲದ್ದರಿಂದ ಅವನು ತಪ್ಪಿತಸ್ಥನಲ್ಲವೆಂದು ಖುಲಾಸೆಮಾಡಿರುತ್ತಾರೆ

* * *

ಕಾಂತಾ ಸಿಲ್ಕ್ ವಾರಂಬಿನ ಸಾಹ್ವೀಕರ್ ಅವಿರ್ ಯವರು ಹರಳಿಯಿಂದ ಸಾಕಲ್ಪಟ್ಟ ಈರಿ ರೇಷ್ಮೆ ಹುಳುಗಳನ್ನು ಕೊಂಡುಕೊಳ್ಳುವವರಾಗಿದಾರೆ ಇವುಗಳು ಶುಚಿಯಾಗಿಯೂ, ಒಳ್ಳೇದಾಗಿಯೂ ಇರಬೇಕು ಈ ದೇಶದಲ್ಲಿ ಇಂಥಾ ರೇಷ್ಮೆ ವ್ಯವಸಾಯಗಾರರಿಗೆ ಬಿಕರಿ ಜಾರಿ ಇಲ್ಲದುದರಿಂದ ಇದರಿಂದ ಬಹಳ ಅನುಕೂಲವಾದಂತೆ ಇತ್ತು

* * *

ಕಳೆದ ಗುರುವಾರ ಲೇಟ್ ನಂಜರಾಜೇ ಅರಸಿನವರ ಕುಟುಂಬ ವೆಂಕಟ ಸುಬ್ಬಮ್ಮಣ್ಣಿಯವರು ಟೆಂಕಸಾಲೆ ಸುಬ್ಬರಾಜೆ ಅರಸಿನವರ ಜ್ಯೇಷ್ಠ ಕುಮಾರರನ್ನು ದತ್ತುಸ್ವೀಕಾರಮಾಡಿಕೊಂಡರು ರಾಜಧಾನಿಯ ಅನೇಕ ದೊಡ್ಡಮನುಷ್ಯರು ದಯಮಾಡಿಸಿ ಬಹಳ ವಿಜೃಂಭಣೆಯಿಂದ ನಡೆದ ಈ ಶುಭಕಾರ್ಯವನ್ನು ನೋಡಿ ಸಂತೋಷದಿಂದ ತೆರಳಿದರು

* * *

ಕಳೆದ 21 ನೇ ತಾ ಭಾನುವಾರ ಲೇಡಿ ಸಾಂಡೊ ಮಿಸ್ ತಾರಾಬಾಯಿಯವರು ಬೆಂಗಳೂರು ಪೇಟೆಯಲ್ಲಿರುವ ದೊಡ್ಡಣ್ಣನವರ ಹಾಲಿನಲ್ಲಿ ಅಂಗಸಾಧನೆಗಳ ಮೂಲಕವಾಗಿ ತಮ್ಮ ಅದ್ಭುತವಾದ ಶಕ್ತಿಯನ್ನು ಪ್ರಕಾಶಪಡಿಸಿದ್ದಕ್ಕಾಗಿ ಅಲ್ಲಿ ಸೇರಿದ್ದ ಸ್ತ್ರೀಮಂಡಲಿಯ ಬಹು ಸಂತೋಷಪಟ್ಟು ಅವರಿಗೆ ಒಂದು ಭಂಗಾರದ ಮೆಡಲನ್ನು ಬಹುಮಾನವಾಗಿ ಕೊಟ್ಟರು

* * *

ಒಬ್ಬ ಬಾತ್ಮಿದಾರರಿಂದ—ಚಟ್ಟಹಳ್ಳಿಯಿಂದ ಮಾನಂದವಾಡಿಗೆ ಹೋಗುವ ಮಾರ್ಗದಲ್ಲಿ ಮುಸಲ್ಮಾನರ ಹುಡುಗಿಯೊಬ್ಬಳು ದಾರಿತಪ್ಪಿ ಚಟ್ಟಹಳ್ಳಿ

ಸ್ಪೆಷಲ್ ಡಫೇದಾರರ ವಶದಲ್ಲಿರುತ್ತೆ. ಅದರ ಹೆಸರೂ ಅಮ್ಮದ್‌ಖಾ. ತಂದೆಯ ಹೆಸರು ಸೈಯ್ಯದ್. ಗಾಡಿಕೆಲಸದಲ್ಲಿರುತ್ತಾನೆ. ವಾರೀಸ್‌ದಾರ್ರು ಕಳುಹಿಸ ಬಗ್ಗೆ ಮೈಸೂರು ತಾಲ್ಲೂಕು ಆಫೀಸಿಗೆ ರಿಪೋರ್ಟು ಮಾಡಿದೆ.

* * *

ಬೆಂಗಳೂರಿನ ಶೇಷಾದ್ರಿ ರಸ್ತೆಯಲ್ಲಿ ಮುನಿಸಿಪಾಲಿಟಿಯವರು ರಸ್ತೆಯ ಕಾಮಗಾರಿಗಾಗಿ ಬೋಂಡುಗಳಿಂದ ಕಟಿಕಟಿಯನ್ನು ಕಟ್ಟಿದ್ದರು. ಅಪಾಯ ಸೂಚಕವಾದ ದೀಪವಾಗಲಿ, ಇನ್ಯಾವ ಗುರುತಾಗಲಿ ಇರಲಿಲ್ಲ. ಕರ್ನಲ್ ಜೋನ್ಸ್ ರವರು ಅದೇ ಮಾರ್ಗವಾಗಿ ತಮ್ಮ ಮೋಟರ್ ಗಾಡಿಯಲ್ಲಿ ಬಂದಾಗ ಆ ಗಾಡಿಯು ಕಟಕಟೆಗೆ ಬಡಿದು ನಷ್ಟಹೊಂದಿತು. ಇದಕ್ಕಾಗಿ ಜೋನ್ಸ್ ರವರು ಮುನಿಸಿಪಾಲಿಟಿಯ ಮೇಲೆ ದಾವಾ ತಂದಾಗ ಅವರ ಮೋಟರ್ ಗಾಡಿಯ ರಿಪೇರಿಗಾಗಿ 130 ರೂಪಾಯನ್ನು ಕೊಟ್ಟರು.

* * *

ನಮ್ಮ ೫ ನೇ ಜಾರ್ಜ್ ಚಕ್ರವರ್ತಿಯವರು ಎರಡನೇ ಕೌನ್ಸಲರಾದ ಮ. ಸರ್ದಾರ್ ಎಂ. ಕಾಂತರಾಜೆ ಅರಸ್ ಬಿ. ಎ. ಯವರಿಗೆ ಸಿ. ಎಸ್. ಐ. ಎಂಬ ಬಿರುದನ್ನೂ ಬೆಂಗಳೂರು ಸಿಟಿ ಪ್ರೆಸಿಡೆಂಟ್ ಮತ್ತು ರಿಟೈರ್ಡ್ ಕೌನ್ಸಿಲರ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ. ಕೆ. ಪುಟ್ಟಣ್ಣ ಚೆಟ್ಟಿಯವರಿಗೆ ಕೈಸರಿ ಹಿಂದ್ ಎಂಬ ಚಿನ್ನದ ಮೆಡಲನ್ನೂ, ರಿಟೈರ್ಡ್ ಕೌನ್ಸಿಲರ್ ರಾಜಮಂತ್ರಪ್ರವೀಣ ಮ. ಸಿ. ಶ್ರೀನಿವಾಸಯ್ಯಂಗಾರರಿಗೆ ದಿವಾನ್ ಬಹದ್ದೂರ್ ಎಂಬ ಬಿರುದನ್ನೂ ದಯಪಾಲಿಸಿರುವುದನ್ನು ಕೇಳಿ ಆನಂದಪಡುತ್ತೇವಲ್ಲದೆ ಇವರುಗಳು ಈ ದಯಾಪೂರಿತವಾದ ಬಿರುದುಗಳನ್ನು ವಹಿಸಿಕೊಂಡು ಅನೇಕ ಕಾಲ ಸುಖಿಪಡಲೆಂದು ಪ್ರಾರ್ಥಿಸುತ್ತೇವೆ.

* * *

ನಮ್ಮ ಫಾರೆಸ್ಟ್ ಕನ್ಸರ್ವೇಟರವರಾದ ರಾಜಕಾರ್ಯಪ್ರಸಕ್ತ ಮ॥ ಎಂ. ಮುತ್ತಣ್ಣನವರು ಮುಂದಿನ ತಿಂಗಳಿಂದ ರಿಟೈರಾಗುವರು. ಇವರು ಕೊಡಗಿನ ದೊಡ್ಡ ವಂಶೀಯರು. ಬೆಂಗಳೂರು ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿ ಕೊಡಗಿನ ಫಾರೆಸ್ಟ್ ಇಲಾಖೆಯಲ್ಲಿ ಒಂದು ಉದ್ಯೋಗಕ್ಕೆ ಸೇರಿ ಕ್ರಮೇಣ ಅಸಿಸ್ಟೆಂಟ್ ಕನ್ಸರ್ವೇಟರಾದರು. ನಮ್ಮ ಮೈಸೂರು ಸರ್ಕಾರದವರು ಅವರನ್ನು ಅಸಿಸ್ಟೆಂಟ್ ಕನ್ಸರ್ವೇಟರಾಗಿ ನಿಯಮಿಸಿಕೊಂಡರು. ಮ॥ ಮುತ್ತಣ್ಣನವರು ಸ್ವಲ್ಪ ಕಾಲದಲ್ಲಿಯೇ ಕನ್ಸರ್ವೇಟರಾಗಿಯೂ, ಈ ಖಾತೆಯ ಗವರ್ನಮೆಂಟ್ ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟರು. ತಮ್ಮ ಬ್ರಿಟಿಷ್ ಸರ್ವಿಸಿಗೋಸ್ಕರ ಇಂಡಿಯಾ ಗವರ್ನಮೆಂಟಿನಿಂದ ರಾವ್ ಬಹದ್ದೂರ್ ಎಂಬ ಬಿರುದನ್ನೂ, ಶ್ರೀಮನ್ ಮಹಾರಾಜರವರಿಂದ ರಾಜಕಾರ್ಯಪ್ರಸಕ್ತ ಎಂಬ ಬಿರುದನ್ನೂ ಪಡೆದಿದ್ದಾರೆ.

* * *

ಧೂಪದ ಮರಗಳ ಗುತ್ತಿಗೆ.—ಮೈಸೂರು ಗವರ್ನಮೆಂಟಿನವರು ಮೈಸೂರು ಎಕನಾಮಿಕ್ ಯೂನಿಯನ್ ಯವರಿಗೆ ವರುಷಕ್ಕೆ ಮರ ಒಂದಕ್ಕೆ 1½ ಆಣೆ ಮೇರೆಗೆ ಐದು ವರುಷಗಳ ವರೆಗೂ ಧೂಪದ ಮರಗಳ ಫಲವನ್ನು ಗುತ್ತಿಗೆ ಕೊಟ್ಟಿರುತ್ತಾರೆ. ಈ ಕಂಪನಿಯವರು ಮೂರು ವರುಷದೊಳಗಾಗಿ 3,000 ರೂಪಾಯಿಗಳನ್ನು ಶೇಖರಮಾಡಿಕೊಂಡು ಒಂದು ಕಾರ್ಖಾನೆಯನ್ನು ಏರ್ಪಡಿಸಬೇಕಾಗಿದೆ. ಅವರು ಈ ಕಾರ್ಖಾನೆಯನ್ನು ಕಟ್ಟುವದಕ್ಕೆ ಬೇಕಾದ ನಿವೇಶನವನ್ನು ಉಚಿತಾರ್ಥವಾಗಿ ಪಡೆಯುವದಕ್ಕೆ ನಿರೀಕ್ಷಿಸಬಾರದು. ಐದು ವರುಷಗಳ ತರುವಾಯ ಗುತ್ತಿಗೆಯ ಕರಾರು ಇನ್ನೂ ಮುಂದೆ ಸಾಗಬಹುದು. ಈ ಕರಾರು ಬಹಳ ಧಾರಾಳವಾಗಿ ಮಾಡಿದ್ದಾಗಿದೆ. ಮೈಸೂರು ಎಕನಾಮಿಕ್ ಯೂನಿಯನ್ ಯವರು ಮೂರು ವರುಷದೊಳಗಾಗಿ ತಮಗೆ ಬೇಕಾದಷ್ಟು ಮೂಲಧನವನ್ನೂ ಕಾರ್ಖಾನೆಯನ್ನು ನಡಿಸುವದಕ್ಕೆ ಸಮರ್ಥರಾದವರನ್ನೂ ಒದಗಿಸಿಕೊಂಡು, ಗುತ್ತಿಗೆ ಕರಾರಿನಂತೆ ನಡೆದುಕೊಳ್ಳ ಬಲ್ಲರೋ ಏನೋ ಎಂದು ನೋಡಬೇಕಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ತಿರುಪತಿಯಲ್ಲಿ ಶಾಂತಿಬೇಧಿ ಉಪದ್ರವಿದೆ ಎಂದು ನಮ್ಮ ಸರ್ಕಾರದವರು ಅಲ್ಲಿಗೆ ಹೋಗುವ ಯಾತ್ರಿಕರಿಗೆ ತಿಳಿಸಿ ಎಚ್ಚರಿಕೆ ಹೇಳಿದಾರೆ.

ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆ ಯೂನಿಯನ್ ಪಂಚಾಯತಿಗೆ ಮ॥ ತಿಮ್ಮಶೆಟ್ಟರೂ, ಹುಣಸೂರು ತಾಲ್ಲೂಕು ಕಂಪಲಾಪುರದ ಯೂನಿಯನ್ ಪಂಚಾಯತಿಗೆ ಮ॥ ಮುದ್ದಣ್ಣಶೆಟ್ಟರೂ ಮೆಂಬರರಾಗಿ ನೇಮಿಸಲ್ಪಟ್ಟಿದಾರೆ.

ಹಾಸನದ ಪ್ರೊ. ಅ॥ ಕಮಿಷನರ್ ಮ॥ ಪಿ. ಗೋಪಾಲರಾಜೇ ಅರಸಿನವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತುದಿನ ಜಾಸ್ತಿಮಾಡಿದೆ.

ಶೃಂಗೇರಿ ಜಹಗೀರಿಯ ಡೆಪ್ಟಿ ಅಮಲ್ದಾರ್ ಮ॥ ಕೆ. ಕೆನ್ನಯ್ಯ ಶಾಸ್ತ್ರಿಗಳಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಡೂರು ಡೆಪ್ಟಿ ಕಮಿಷನರ್ ರ ಆಫೀಸ್ ರೆವಿನ್ಯೂ ಹೆಡ್ ಮುನ್ಷಿ ಮ॥ ಎನ್. ಗರುಡಯ್ಯಂಗಾರ್ರು ಶೃಂಗೇರಿಜಹಗೀರಿಯ ಡೆಪ್ಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮ॥ ಎಂ. ಪಿ. ವಿಶ್ವನಾಥರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಎಂ. ವೆಂಕಟನಾರಣಪ್ಪನವರು ಎಕ್ಸೈಸ್ ಆಫೀಸ್ ಛಾರ್ಜನ್ನು ವಹಿಸತಕ್ಕದ್ದು.

ಮ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ರು ರಜಾ ಪೂರೈಸಿದ ಬಳಿಕ ಸ್ಪೆಷಲ್ ಡ್ಯೂಟಿಗೆ ನೇಮಿಸಲ್ಪಟ್ಟಿದಾರೆ.

ಮುಂದೆ ಹೇಳುವ ಎಕ್ಸೈಸ್ ಆಫೀಸರುಗಳ ವರ್ಗಾವರ್ಗೀ ಹುಕುಂ ಮಾಡಿದೆ—ಮ॥ ಗಲಾಧ ಟಿ. ರಾಯಲುಚೆಟ್ಟಿಯವರು ಎಕ್ಸೈಸ್ ಕಮಿಷನರ್ ರ ಅಸಿಸ್ಟೆಂಟ್ ಕೆಲಸಕ್ಕೆ, ರಜದ ಮೇಲಿರುವ ಜಿ. ರಾಮಣ್ಣನವರು ಹಾಸನಕ್ಕೆ, ಇವರು ಕೆಲಸದ ಮೇಲೆ ಹಾಜರಾಗುವ ತನಕ ಪಿ. ಎಸ್. ರಾಜಗೋಪಾಲಾಚಾರ್ರು ಹಾಸನದ ಎಕ್ಸೈಸ್ ಆಫೀಸರಾಗಿರತಕ್ಕದ್ದು; ಮ॥ ಜಹಿರುದ್ದೀನ್ ಮೆಕ್ಕೆಯವರು ಶಿವಮೊಗ್ಗ ಡಿಸ್ಟ್ರಿಕ್ ಖಜಾನೆ ಛಾರ್ಜಿಗೆ, ಮ॥ ಎಸ್. ವೆಂಕಟರಂಗಂ ರವರು ಚಿತ್ರದುರ್ಗದ ಎಕ್ಸೈಸ್ ಆಫೀಸರಾಗಿರತಕ್ಕದ್ದು, ಮ॥ ರೊಜಾರಿಯೋರವರು ಚಿತ್ರದುರ್ಗದಿಂದ ಕೋಲಾರಕ್ಕೆ, ಮ॥ ಎಂ. ರಂಗರಾಯರು ಕೋಲಾರದಿಂದ ಬೆಂಗಳೂರಿಗೆ.

ಬಲಾತ್ಕರಿಸಿ ಪ್ರಥಮ ವಿದ್ಯೆಯನ್ನು ಕಲಿಸುವುದಕ್ಕಾಗಿ ಸ್ಯಾಂಕ್ಷನ್ ಮಾಡಿರುವ ಕಾನೂನನ್ನು ಎಂಟು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಮಾತ್ರವೇ ಅಲ್ಲ, ದೊಡ್ಡಬಳ್ಳಾಪುರ, ನಂಜನಗೂಡು, ಶ್ರೀರಂಗಪಟ್ಟಣ, ಹೊಳೆನರಸೀಪುರ, ದಾವಣಗೆರೆ, ಮದ್ದಗಿರಿ, ಚಿಕ್ಕಬಳ್ಳಾಪುರ, ಈ ಸ್ಥಳಗಳಲ್ಲೂ ಜೂಲೈ ೧ ತಾ. ರಿಂದ ಜಾರಿಗೆ ತರಲಾಗುತ್ತದೆಂದು ತಿಳಿಯತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಮ. ಎಸ್. ಶ್ರೀನಿವಾಸ ಅಯ್ಯಂಗಾರ್ರಿಗೆ ಜೂನ್ ತಾ. 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ॥ ಎಂ. ನರಸಿಂಹಚಾರ್ಯರವರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ತಾಲ್ಲೂಕು ವರ್ತಮಾನಗಳು.

ಫ್ರೆಂಚ್‌ರಾಕ್ಸ್.—ಮಳೆ ಇಲ್ಲದೆ ಜೋಳದ ಪೈರೆಲ್ಲಾ ಖಾಲಿ ಹೋಗುತ್ತಿದೆ. ಭಾವಿಗಳಲ್ಲಿ ಇದ್ದ ನೀರು ಸಹ ಬತ್ತಿಹೋಯಿತು. ದಾಮವಾರುಗಳಿಗೂ, ಜನಗಳಿಗೂ ನೀರಿನ ತೊಂದರೆ ಹೇಳತೀರದು. ಈಗ ಜನಗಳು ಕೆರೆಯ ಹೊಕ್ಕಳ ಹೂಡಿನ ಬಳಿ ಇರುವ ಜನಿದ ನೀರನ್ನು ತಂದು ಕುಡಿಯುವರು.—ಶ್ರೀಮನ್ ಮಹಾರಾಜರವರ ವರ್ಧಂತಿಯ ದಿನ ನಮ್ಮ ಅಮಲ್ದಾರ್ ಮ॥ ಮಲ್ಲರಾಜೆ ಅರಸಿನವರು ಖುದ್ದಾಗಿ ನಿಂತು ಇಲ್ಲಿರತಕ್ಕ ಸ್ಕೂಲ್ ಮಕ್ಕಳನ್ನೆಲ್ಲಾ ಸಂತೆಯ ಮೈದಾನಕ್ಕೆ ಬರಮಾಡಿಕೊಂಡು, ಬಾಲಕರಿಗೆ ಆಟಪಾಠದ ಪಂದ್ಯಗಳನ್ನು ಏರ್ಪಡಿಸಿ, ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟಿದಲ್ಲದೆ ಅವರೆಲ್ಲಾ ರಿಗೂ ಹಣ್ಣು ಹಂಪಲುಗಳನ್ನು ಹಂಚಿಸಿದರು. ಈ ಸಂತೋಷೋತ್ಸವಕ್ಕೆ ಇಲ್ಲಿನ ಅಧಿಕಾರಿಗಳಲ್ಲಿ ನಮ್ಮ ಡಾಕ್ಟರವರೊಬ್ಬರೇ ಬಂದಿದ್ದರು. ಇಂಥಾ ಸಂತೋಷ ಕೂಟವು ಇಲ್ಲಿ ಇದುವರೆಗೂ ನಡೆದಿಲ್ಲ.—ಸಂತೆಯಲ್ಲಿ ಕಾಳಿನ ಹಣ್ಣು ಹಂಪಲನ್ನು ಧೈರ್ಯವಾಗಿ ಮಾರುತ್ತಿದಾರೆ. ಇದರ ವಿಷಯ ಸಿಗಾ ತೆಗೆದುಕೊಂಡರೆ ಒಳ್ಳೇದು. ನಿಂತುಹೋಗಿದ್ದ ಜೋಂಪರ ಆಟವು ಮತ್ತೆ ಎರಡು ವಾರಗಳಿಂದ ಶುರುವಾಗಿದೆ. ಇದನ್ನು ಕೇಳುವವರೇ ಇಲ್ಲ. ವಾರಕ್ಕೊಂದು ಸಾರಿ ನಡೆಯುವ ಈ ಸಂತೆಯಲ್ಲಿ ಈ ರೀತಿ ಅಕ್ರಮಗಳು ಹೆಚ್ಚಿದಲ್ಲಿ ಬಡ ಹಳ್ಳೀ ಜನಗಳು ಇಲ್ಲಿಗೆ ಬಂದು ವ್ಯಾಪಾರ ಮಾಡುವದನ್ನೇ ನಿಲ್ಲಿಸಿ ಬಿಟ್ಟಾರೆಂದು ನಂಬುತ್ತೇವೆ. ಸರ್ಕಾರದವರು ಈ ವಿಷಯಕ್ಕೆ ತುಂಬಾ ಗಮನಕೊಟ್ಟು, ಸಂತೆಯಲ್ಲಿ ನಡೆಯುವ ಎಲ್ಲಾ ಅಕ್ರಮಗಳನ್ನೂ ನಿಲ್ಲಿಸಿ ಪ್ರಜೆಗಳಿಗೆ ಅನುಕೂಲ ಪಡಿಸುವದು ಶ್ರೇಯಸ್ಕರವಾಗುತ್ತದೆ.

ಶಿವಮೊಗ್ಗ.—ಈಗಿನ ವೈಸ್ ಪ್ರೆಸಿಡೆಂಟರಾದ ಮ॥ ವೆಂಕಟರಂಗಂ ಯವರಿಗೆ ಚಿತ್ರದುರ್ಗಕ್ಕೆ ವರ್ಗವಾಗಿದೆ. ಇವರು ಬಹಳ ಒಳ್ಳೆಯವರಾಗಿ ಸರ್ಕಾರದ ಕೆಲಸವನ್ನು ಮುತುವರ್ಜಿಯಿಂದ ನೋಡುತ್ತಿದ್ದರು. ಸುಂಕದಕಟ್ಟೆಗಳಲ್ಲಿ ಎಂದೂ ಏರ್ಪಾಡಾಗದಿದ್ದ ಟೈಂಬುಕ್ಕು ಮತ್ತು, ವಿಜಿಟರ್ಸ್ ಬುಕ್ಕುಗಳನ್ನು ಏರ್ಪಡಿಸಿ ನೌಕರರ ನ್ಯೂನತೆಗಳನ್ನು ಕ್ರಮಪಡಿಸಿದರು. ಇವರು ಇನ್ನೂ ಕೆಲವು ಕಾಲ ಇಲ್ಲಿದ್ದರೆ ಸಂತೋಷವಾಗಿತ್ತು.—ಮ॥ ಸರಾಫ್ ಸುಬ್ಬರಾಯರು ಕೊಲ್ಲೂರಯ್ಯನಕೇರಿಯಲ್ಲಿ ಕಟ್ಟಿಸಿದ ಹೊಸಮನೆಯನ್ನು ಕಳೆದವಾರ ಪ್ರವೇಶಮಾಡಿದರು. ಮತ್ತು ಈ ಗೃಹಪ್ರವೇಶವು ಬಹಳ ವಿಜೃಂಭಣೆಯಿಂದ ನಡಿಯಿತು.—ಈ ವಾರವೆಲ್ಲಾ ಮಳೆಯಾಗಲಿಲ್ಲ. ಗದ್ದೆಗೆ ಬೀಜಹಾಕಲು ಮಾರ್ಗವಿಲ್ಲದೆ ರೈತರು ಪೇಚಾಡುತ್ತಿದಾರೆ.—ಈ ಟವನಿನ ಲಾಲ್‌ಬಾಗಿನಲ್ಲಿ ಭಾವಿಯಿಂದ ತೋಟಕ್ಕೆ ನೀರು ಎತ್ತುವ ಬಗ್ಗೆ ಸಲ್ಲಿಹಾಕಿ ಯಂತ್ರ ತರಿಸಿಟ್ಟಿದಾರೆ. ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಗಿಡಗಳನ್ನು ಕಾಪಾಡಲು ಬಹಳ ಅನುಕೂಲವಾಯಿತು. ನೀರುಹೊರುತ್ತಿದ್ದವರ ಆಯಾಸ ಕಡಮೆಯಾಗಿ ಅವರೆಲ್ಲಾ ಬಹಳ ಸಂತೋಷಪಡುತ್ತಿದಾರೆ. ಬೇಲಿಮುಟ್ಟಗೆ ಮುರಿದುಹೋಗಿದೆ. ದನ, ಮೇಕೆಗಳ ಕಾಟ ಬಹಳವಾಗಿದೆ. ಗೋಡೆಹಾಕಿದರೆ ಈ ತೊಂದರೆ ತಪ್ಪುತ್ತೆ.—ಈ ಟವನ್ನಲ್ಲಿ ಸಾರಾಯಿ ಕುಡಿಯುವವರಿಗೆ ಪೆಂಡರುಗಳು ಸರಿಯಾಗಿ ಅಳೆದುಕೊಡುವುದಿಲ್ಲವೆಂದೂ, ಎರಡಾಣೆಮಾಲಿಗೆ ಒಂದೂವರೆಆಣೆ ಮಾಲು ಬರುತ್ತೆಂದೂ ಹೇಳಿಕೊಳ್ಳುತ್ತಾರೆ. ಆಫೀಸರುಗಳು ಕಂಡುಹಿಡಿದು ವಿಚಾರಿಸುವದು ಉತ್ತಮ.—ರೈಲ್ವೆಸ್ಟೇಷನಿಗೆ ಹೊಸದಾಗಿ ವರ್ಗಪಟ್ಟು ಬಂದಿರುವ ನಾಗೋಜಿರಾಯರಿಗೆ ಬುಕಿಂಗ್ ಅನುಭವ ಸಾಲದು. ಟಿಕೆಟ್‌ಲೆಕ್ಕವನ್ನು ಗಲಿಬಿಲಿಮಾಡಿಕೊಂಡಿದಾರೆ. ಮೇಲ್ಪಟವರು ತನಿಖೆಗೆ ಬಂದಿರುತಾರೆ. ಬದ್ಲಿಯವರು ಬರುವರೆಂದೂ, ಇವರಿಗೆ ವರ್ಗವಾಗುವದೆಂದೂ ವದಂತಿ ಇದೆ.

ಚಿಕ್ಕಮಗಳೂರ ತಾಲ್ಲೂಕು ಕೋಟೇವು.—ಈ ಪ್ರಾಂತ್ಯ ಮೋಡ ಮಾತ್ರ ಗಾಳಿಯಿಂದ ಆಡಂಬರ ತೋರಿಸುವುದೇ ಹೊರತು ಜ್ಯೇಷ್ಠಮಾಸ ಆದ್ಯೆರಾದರೂ ಒಂದು ಹದ ಮಳೆ ಸಹ ಇದುವರೆಗೂ ಬರದೆ ಇರುವದರಿಂದಲೂ ಮತ್ತು ಕಳೆದ ಸಾಲಿನಲ್ಲಿ ಸಾಕಾದಷ್ಟು ಮಳೆ ಬಾರದೆಯಿದ್ದದ್ದರಿಂದಲೂ ದಿನಸಿಯ ಧಾರಣೆವಾಸಿಗಳು ಜಾಸ್ತಿಯಾಗುತ್ತಲೇ ಇರುವದರಿಂದಲೂ ಬಡಜನರಿಗೆ ಜೀವನ ನಡೆಯುವದು ಕಷ್ಟವಾಗಿರುತ್ತದೆ. ಮತ್ತು ಮ॥ ರಾ॥ ಸ್ಕೂಲ್ ಡೆಪ್ಟಿ ಇನ್ಸ್‌ಪೆಕ್ಟರವರು ತಾ. 12 ನೆ ಶುಕ್ರವಾರ ಬೆಳಗ್ಗೆ 9 ಗಂಟೆಗೆ ನಮ್ಮ ಗ್ರಾಮಕ್ಕೆ ದಯಮಾಡಿಸಿ ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿದನಂತರ ನಮ್ಮ ಗ್ರಾಮದ ಕೆಲವು ದೊಡ್ಡ ಮನುಷ್ಯರನ್ನು ಕರೆಸಿ ಸ್ಕೂಲಿನಲ್ಲಿ ಸಭೆಯನ್ನು ಮಾಡಿ ಹಳ್ಳಿಗಳಲ್ಲಿ ವಿದ್ಯಾಭಿವೃದ್ಧಿಗೆ ಇರುವ ಅನನುಕೂಲಗಳ ವಿಷಯವಾಗಿಯೂ, ಮತ್ತು ವಿದ್ಯಾಭಿವೃದ್ಧಿಗೆ ತಕ್ಕ ಏರ್ಪಾಟಿನ ವಿಷಯವಾಗಿಯೂ ಸ್ವಲ್ಪ ಹೊತ್ತು ಸಂಭಾಷಣೆ ಮಾಡಿ ನಂತರ ತೇರ್ಗಡೆಯಾದ ಹುಡುಗರಿಗೆ ಬಹುಮಾನವಾಗಿ ಪುಸ್ತಕಗಳನ್ನು ತಮ್ಮ ಸ್ವಹಸ್ತದಿಂದ ಹಂಚಿದರು. ತರುವಾಯ ಬಾಲಕರಿಂದ ಪಾಠಗಳನ್ನು ಹಾಡಿಸಿ ಆ ದಿವಸ ಬಾಲಕರಿಗೆಲ್ಲಾ ರಜವನ್ನು ದಯಪಾಲಿಸಿ ನಂತರ ಸಭೆಯನ್ನು ಬರಖಾಸ್ತು ಮಾಡಿದರು. ಮಹರಾಜೇ ಶ್ರಿ ಗೊಂಚಿಕಾರ ಕೆಂಗಣ್ಣನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಮುಹೂರ್ತವಾದ ಮರು ದಿವಸ ಮಧ್ಯಾಹ್ನ ಎರಡು ಗಂಟೆಯ ಲಾಗಾಯ್ತು ನಾಲ್ಕು ಗಂಟೆಯವರೆವಿಗೂ ತಮ್ಮ ಮನೆಯಲ್ಲಿ ಸಭೆಯನ್ನು ಮಾಡಿದರು. ಮ॥ ರಾ॥ ಡೆಪ್ಟಿ ಇನ್ಸ್‌ಪೆಕ್ಟರವರನ್ನು ಸನ್ಮಾನದಿಂದ ಕರೆದುಕೊಂಡು ಹೋಗಿ ಸಭಾಧ್ಯಕ್ಷತೆಯನ್ನು ವಹಿಸಿದರು. ತರುವಾಯ ಅಧ್ಯಕ್ಷರ ಅನುಮತಿಯಂತೆ ನೀರಭಿಕ್ಷಾವರ್ತಿ ವೀರಭದ್ರಪ್ಪಯ್ಯನವರು ಲಗ್ನಗಳಲ್ಲಿ ದುಂದು ವಿರ್ಚನ್ನು ಮಾಡುವದರಿಂದುಂಟಾಗುವ ನಿಷ್ಪ್ರಯೋಜನವನ್ನು ಕುರಿತು ಸ್ವಲ್ಪಹೊತ್ತು ಸಂಭಾಷಣೆ ನಡಿಸಿದ ನಂತರ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳನ್ನು ಹಂಚಿದರು. ನಂತರ ಸಭಿಕರೆಲ್ಲಾ ವಧೂವರರಿಗೆ ಆಶೀರ್ವದಿಸಿ ಮ॥ ರಾ॥ ಡೆಪ್ಟಿ ಇನ್ಸ್‌ಪೆಕ್ಟರವರನ್ನು ಸನ್ಮಾನದಿಂದ ಅವರ ಬಿಡಾರಕ್ಕೆ ಕಳುಹಿಸಿ ತಮ್ಮ ತಮ್ಮ ಮನೆಗಳಿಗೆ ಹೋದರು. ತರುವಾಯ ಇನ್ಸ್‌ಪೆಕ್ಟರವರು ತುರುವನೂರು ಮೊಕ್ಕಾಂಗೆ ಪ್ರಯಾಣವನ್ನು ಬೆಳಸಿದರು.

ಮಂಡ್ಯ.—ಜೋಳದ ಪೈರಿಗೆ ತಕ್ಕ ಮಳೆಯಾಗದ್ದರಿಂದ ಬಾಡಿಹೋಗುವ ಸ್ಥಿತಿಯಲ್ಲಿವೆ. ಧಾರಣೆವಾಸಿಗಳು ಯಥಾಸ್ಥಿತಿಯಲ್ಲಿವೆ.—ಇನ್ನೂ ನಗದಿ ಕೇರು ಪಟ್ಟಿಗಳು ಜಾರಿಯಲ್ಲಿ ಬರಲಿಲ್ಲ. ಸರ್ಕಾರದವರ ತಾಮಸಕ್ಕೆ ಕಾರಣವೂ ಜಾರಿಯಲ್ಲಿ ಬರುವದಕ್ಕೆ ಅಡ್ಡಿಯೂ ಯಾವದೆಂದು ಗೊತ್ತಾಗಲಿಲ್ಲ.—ಈ ಊರಲ್ಲಿ ಆಗಿಂದಾಗ್ಗೆ ಕಳ್ಳತನಗಳು ನಡಿಯುತ್ತಲೇ ಇರುತ್ತವೆ. ಕಳೆದ ತಿಂಗಳು 3-4 ಸ್ಥಳಗಳಲ್ಲಿ ಕಳವು ನಡೆದದ್ದಲ್ಲದೆ ಕಳೆದ 8-10 ದಿನಗಳಿಂದೀಚೆಗೆ ರೈಲ್ವೆ ಸ್ಟೇಷನ್ ಮಾಸ್ಟರ್ ಮನೆಯಲ್ಲೂ, ರೈಲ್ವೆ ಗೇಟ್ ಕಾವಲಿನವನ ಮನೆಯಲ್ಲೂ ಪೂರ್ಣಯ್ಯನ ಛತ್ರದಲ್ಲೂ ಒಬ್ಬ ಜವಳಿವಾರನ್ನು ದ್ದ ಪಂಚಮಾನನ ಮನೆಯಲ್ಲೂ ಮತ್ತು ವಿಡ್‌ವೈಫ್ ಮನೆಯಲ್ಲೂ ಕಳುವು ನಡೆದು ನೂರಾರು ರೂಪಾಯಿಗಳ ಮಾಲು ಹೋಗಿದೆ. ಇದರಿಂದ ಪೋಲೀಸ್ ಉಸ್ತುವಾರಿ ಎಷ್ಟರಮಟ್ಟಿಗೆ ಇದೆಯೆಂದೂ ರಾತ್ರಿ ಬೀಟ್ ಎಂಥಾದ್ದೆಂದೂ ಗೊತ್ತಾಗುತ್ತದೆ. ಈ ವರೆಗೂ ಒಂದೂ ಪತ್ತೆಯಾಗಲಿಲ್ಲ. ಜಮೇದಾರ್ ಸುಬ್ರಾಯರು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲ್ಪಟ್ಟು ಮದ್ದೂರು ಜಮೇದಾರ್ರು ಮಂಡ್ಯದ ಟೌನ್‌ಗೆ ವರ್ಗಾಯಿಸಲ್ಪಟ್ಟರು. ಇವರು ಬಂದು ಕೆಲವು ದಿನಗಳಾದರೂ ಸಸ್ಪೆಂಟ್ ಆಯಿತೆಂದು ಕೇಳಲು ವಿಷಾದವಾಗುತ್ತದೆ. ಅಲ್ಲದೆ ದಫೇದಾರ್ ಸಹ ಕನ್ನಂಬಾಡಿಗೆ ವರ್ಗಾಯಿಸಲ್ಪಟ್ಟಿದ್ದಲ್ಲದೆ ಕೆಲವು ಕಾನಸ್ಟೇಬಲುಗಳೂ ಬೇರೆಬೇರೆ ಕಡೆಗೆ ವರ್ಗಾಯಿಸಲ್ಪಟ್ಟರು. ಈ ಬದಲಾವಣೆಗಳಿಂದ ಕೆಲವು ದಿನಗಳಿಂದೀಚೆಗೆ ಪೋಲೀಸ್ ಇಲಾಖೆಯಲ್ಲಿ ತಾರುಮಾರುಗಳು ಇವೆಯೆಂದು ಗೊತ್ತಾಗುತ್ತದೆ. ಈಗ ಹೊಸದಾಗಿ ಬಂದಿರತಕ್ಕ ಪೋಲೀಸ್ ಇನ್ಸ್‌ಪೆಕ್ಟರ್ ಲಕ್ಷ್ಮಣರಾಯರು ಖಂಡಿತವಾಗಿ ಕೆಲಸಮಾಡತಕ್ಕವರಾದರೂ ಮೇಲಿನ ಸಂಗತಿಗಳಿಂದ ದರ್ಪವು ಬಹು ಸಡಿಲವಾಗಿದೆಯೆಂಬು ತಿಳಿದುಕೊಳ್ಳದೆ ಇರಲಾರರು. ಇನ್ಮಾಂದರೂ ಪ್ರಜೆಗಳ ಸಮಾಧಾನಗಳನ್ನು ಕಾಪಾಡುವಂತೆ ಒಳ್ಳೇ ಉಸ್ತುವಾರಿಯನ್ನು ವಹಿಸುವರೆಂದು ಹಾರೈಸುತ್ತೇವೆ. ಮಂಡ್ಯಕ್ಕೆ ಸುಮಾರು ೬ ಮೈಲು ದೂರವಿರುವ ಹಲಗೂರು ಎಂಬ ಗ್ರಾಮದಲ್ಲಿ ಒಂದು ತಿಂಗಳ ಹಿಂದೆ ಲಿಂಗಾಯಿತರ ಮದುವೆಕಾಲದಲ್ಲಿ ಪರಸ್ಪರ ವ್ಯಾಜ್ಯಗಳುಂಟಾಗಿ ಒಂದು ಪಾರ್ಟಿಗೆ ಸೇರಿದವನು ಇನ್ನೊಂದು ಪಾರ್ಟಿಗೆ ಸೇರಿದ ಮತ್ತು ಅಗ್ನಿದಹನೆಯ ಯಾತಮಾಧಾರಾದ ಮರಿಅಣ್ಣಯ್ಯನೆಂಬುವವನನ್ನು ಕಲ್ಲಿನಿಂದ ಹೊಡೆದನೆಂಬುದೂ ಆತನು ತುಂಬಾ ಪೆಟ್ಟುತಿಂದವನಾಗಿ ಮಂಡ್ಯದ ಡಾಕ್ಟರವರಿಂದ ಇಲಾಜನ್ನು ಹೊಂದಿದರೂ 10-12 ದಿನಗಳ ಮೇಲೆ ಸತ್ತುಹೋದನೆಂಬುದೂ ಮೃತಪಟ್ಟವನ ಮತ್ತು ಇತರರ ಹೇಳಿಕೆಯಮೇರೆ ಅದೇ ಗ್ರಾಮದ ಪಟೇಲ್ ಮಾದಯ್ಯನನ್ನು ದಸ್ತಗಿರಿಮಾಡಿ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಲಾಕಪ್ಪಿನಲ್ಲಿಟ್ಟಿದಾರೆಂಬುದೂ ಆ ಮೊಕದ್ದಮೆಯನ್ನು ಕುರಿತು ತಾಲ್ಲೂಕು ಸಬ್‌ಡಿವಿಜನ್ ಡಿಸ್ಟ್ರಿಕ್ಟ್ ಕಛೇರಿಗಳಿಗೆ ಅರ್ಜಿಗಳನ್ನು ಹಾಕಿರುವದಾಗಿಯೂ ತಿಳಿದು ಬಂತು. ವಿಚಾರಣೆಯು ಈ ತಿಂಗಳ 27 ಕ್ಕೆ ನಡೆಯುತ್ತದೆ.—ತಾರೀಖು 22 ನೇ ಸೋಮವಾರ ಚಕ್ರವರ್ತಿಗಳ ವರ್ಧಂತಿ ಉತ್ಸವಾರ್ಥವಾಗಿ ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಕಿಯರ ಪಾಠಶಾಲೆಯಲ್ಲಿ ಸಂತೋಷ ಕೂಟಗಳು ನಡೆದವು. ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ನಂಜಪ್ಪಶೆಟ್ಟರು ಅಗ್ರಾಸನವನ್ನು ವಹಿಸಿ ಸಮಯೋಚಿತವಾದ ಸಂಗತಿಗಳನ್ನು ತಿಳಿಯಪಡಿಸಿದರು. ಈ ಕಾಲದಲ್ಲಿ ಸಾಹುಕಾರ್ ಎಂ. ಎನ್. ನಾಗೇಂದ್ರಯ್ಯನವರ ಗ್ರಾಮೋಫೋನ್ ಹಾಡುಗಾರಿಕೆಯೂ ಬಾಲಕಿಯರ ಸಂಗೀತವೂ ಎಲ್ಲರಿಗೂ ಕರ್ಣಾನಂದಕರವಾಗಿದ್ದವು. ಏಪ್ರೆಲ್ ತಿಂಗಳ ಪ್ರಾರಂಭದಲ್ಲಿ ನಮ್ಮ ದಿವಾನರವರು ಮಂಡ್ಯಕ್ಕೆ ದಯಮಾಡಿಸಿದ ವೇಳೆಯಲ್ಲಿ ಸದರಿ ಸ್ಕೂಲನ್ನು ನೋಡಿ ತುಂಬಾ ಸಂತೋಷಪಟ್ಟವರಾಗಿ ಹೆಣ್ಣುಮಕ್ಕಳ ತಿಂಡಿಗಾಗಿ ಕೊಟ್ಟಹಣದಿಂದ ಇದೇ ಸಮಯದಲ್ಲಿ ಮಕ್ಕಳಿಗೆಲ್ಲಾ ತಿಂಡಿಹಂಚಿದ್ದಲ್ಲದೆ ಬಂದಂಥ ಎಲ್ಲಾ ಮಹನೀಯರುಗಳಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಶ್ರೀ ಜಾರ್ಜ್ ಪ್ರಭುಗಳಿಗೂ ಶ್ರೀಮನ್ ಮಹಾರಾಜರಿಗೂ, ಮತ್ತು ಮಂತ್ರಿವರ್ಯರಿಗೂ ಶ್ರೇಯಃ ಪ್ರಾರ್ಥನೆಗಳನ್ನು ಮಾಡಿ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಹೊಸಕೋಟೆ.—ಇಲ್ಲಿ ಪ್ರತಿ ದಿನವೂ ಮೋಡವಾದುತ್ತಾ ಇದೆಯೇ ಹೊರ್ತು ಮಳೆ ಬರಲಿಲ್ಲ, ರೈತರು ಆಕಾಶವನ್ನೇ ನೋಡುತ್ತಾ ವ್ಯಸನಾಕ್ರಾಂತರಾಗಿದಾರೆ. ಕೆರೆಗಳು ಒಣಗಿಹೋದವು, ದನಗಳ ಮೇವಿಗೆ ಬಹಳಕಷ್ಟ. ಧಾರಣೆವಾಸಿಗಳು ದಿನದಿನಕ್ಕೆ ಹೆಚ್ಚುತ್ತಾ ಇವೆ. ಈ ದುರ್ಭಿಕ್ಷದ ಕಾಲದಲ್ಲಿ ಕಮ್ಮಿ ತಲಬಿನ ನೌಕರರಿಗೂ, ಬಡಬಗ್ಗರಿಗೂ ಜೀವನ ನಡೆಯುವದು ದುರ್ಲಭವಾಗಿದೆ.—ತಾ. 13 ರಲ್ಲು ಚೀಫ್ ಇಂಜನಿಯರಾದ ಮ॥ ಕರ್ಪೂರ ಶ್ರೀನಿವಾಸರಾಯರು ಇಲ್ಲಿಗೆ ಬಂದು ತಮ್ಮ ನಾದಿನಿಯ ಕುಮಾರರ ವಿವಾಹವನ್ನು ಬಹು ವಿಜೃಂಭಣೆಯಿಂದ ನಡಿಸಿದರು. ವಧೂವರರನ್ನು ಮೋಟರ್ ಗಾಡಿಯಲ್ಲಿ ಕೂರಿಸಿ ಬಹು ಅಟ್ಟಹಾಸದಿಂದ ಮೆರವಣಿಗೆ ಮಾಡಿಸಿದರು. ಆಗ ನೂರಾರು ಜನರು ಮೆರವಣಿಗೆಯನ್ನು ಹಿಂಬಾಲಿಸಿದ ತರುವಾಯ ಎಲ್ಲಾ ಕೋಮಿನವರಿಗೂ ಭಕ್ಷ್ಯ ಭೋಜ್ಯಾದಿಗಳು ಬಡಿಸಿದ ಕಾಲದಲ್ಲಿ ತಾವೇ ಮುಖಂಡರಾಗಿ ನಿಂತು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಿರುಗಾಡುತ್ತಾ ಅತಿಥಿಗಳನ್ನು ಬಹು ಆದರ ಪೂರ್ವಕವಾಗಿ ವಿಚಾರಿಸಿ ಗಂಧ, ಪುಷ್ಪ, ತಾಂಬೂಲಾದಿಗಳಿಂದ ಎಲ್ಲರನ್ನೂ ತೃಪ್ತಿಪಡಿಸಿ ಸಂತೋಷವಾಗಿ ಕಳುಹಿಸಿಕೊಟ್ಟರು. ಈ ವಿವಾಹದ ದೆಸೆಯಿಂದ ಇಲ್ಲಿರುವ ಹೆಡ್‌ಮುನ್ಷಿ ಮ॥ ವೆಂಕೋಬರಾಯರು ಚೀಫ್ ಇಂಜನಿಯರಿಗೆ ಬೀಗರಾದರು.—ಚೀಫ್ ಇಂಜನಿಯರು ತಮ್ಮ ಸ್ವಂತ ಕಾರ್ಯಕ್ಕಾಗಿ ಇಲ್ಲಿಗೆ ಬಂದದ್ದು ಇಲ್ಲಿನ ಜನಗಳಿಗೂ, ಪ್ರಯಾಣಸ್ಥರಿಗೂ, ಬಂಡಿಗಳಿಗೂ ಅನುಕೂಲವಾಯಿತು. ಮುಸಾಫರ್ ಬಂಗಲೆಯಿಂದ ಸೂಲಿಬೆಲೆಗೆ ಹೋಗುವ ರಸ್ತೆಯಲ್ಲಿ ಕಂದಕದ ಮೇಲೆ ಕಟ್ಟಿದ್ದ ಸೇತುವೆಯು ಮುರಿದು ಹೋಗಿ ಸುಮಾರು ಹದಿನೇಳು ವರ್ಷಗಳಾಗುತ್ತಾ ಬಂತು. ಆಲಾಗಾಯಿತು ಎಷ್ಟು ಅರ್ಜಿಗಳು ಬರೆದಾಗ್ಯೂ ಯಾರೂ ಗಮನಕ್ಕೆ ತಾರದೆ ಪ್ರಯಾಣಸ್ಥರಿಗೂ ಬಂಡಿಗಳಿಗೂ ಬಹಳ ಅನನುಕೂಲವಾಗಿತ್ತು. ಇಂಥಾ ಸಮಯದಲ್ಲಿ ಜನಗಳ ಅಹವಾಲನ್ನು ಅಂಗೀಕರಿಸಿ ಮ॥ ರಾಯರು ಅಸ್ಥಳಕ್ಕೆ ಹೋಗಿನೋಡಿ ಮೇಲ್ಕಂಡ ತೊಂದರೆಯು ಸಹಜವೆಂದು ತಿಳಿದು ಮೊದಲಿನಂತೆ ಸೇತುವೆಯನ್ನು ಕಟ್ಟುವ ಬಗ್ಗೆ ಏರ್ಪಾಟು ಮಾಡುತ್ತೇವೆಂದು ವಾಗ್ದಾನ ಮಾಡಿದರು. ಪುನಃ ಬಂದ ಮೇಲೆ ಜನಗಳಿಗಿರುವ ನೀರಿನ ದುರವಸ್ಥೆಯನ್ನು ತಪ್ಪಿಸುವದಕ್ಕೆ ನಲ್ಲಿಹಾಕುವ ಏರ್ಪಾಡು ಮಾಡಿಸುತ್ತೇವೆಂದು ಹೇಳಿದರು. ಇದಕ್ಕಾಗಿ ಊರಿನವರು ಅವರನ್ನು ಬಹಳ ವಂದಿಸುವದಲ್ಲದೆ ಬಹಳ ಸಂತೋಷಪಡುತ್ತಾರೆ.—ತಾ. 20 ನೇ ಶನಿವಾರ ಬೆಳಗ್ಗೆ ಇಲ್ಲಿನ ಸಾರ್ವಜನಿಕ ರೀಡಿಂಗ್ ರೂಮ್‌ನಲ್ಲಿ ನಮ್ಮ ಅಮಲ್ದಾರ್ ಮ॥ ಟಿ. ಕೆ. ಸೋಮೇಶ್ವರಯ್ಯರವರಿಂದ ಸ್ಥಾಪಿಸಲ್ಪಟ್ಟ ಕೋಆಪರೆಟಿವ್ ಸೊಸೈಟಿಯ ಪ್ರಥಮ ವಾರ್ಷಿಕ ಕೂಟವು ನಡೆಸಲ್ಪಡುವದಕ್ಕಿಂತ ಮುಂಚೆ ಬ್ಯಾಂಡುವಾದ್ಯದಿನಲ್ಲಿ ಎಲ್ಲರಿಗೂ ಕಾಫಿ, ಫಲಹಾರ ಕೊಡಲ್ಪಟ್ಟಿತು. ತರುವಾಯ ಷೇರ್‌ದಾರರುಗಳಾಗಿರುವ ವರ್ತಕರು, ರೈತರು, ಸರ್ಕಾರಿನೌಕರರು, ಸ್ಕೂಲ್‌ಮಾಸ್ಟರುಗಳೇ ಮುಂತಾದವರು ಸಭೆಯನ್ನಲಂಕರಿಸಿದರು. ಸಭೆಯು ಪ್ರಾರಂಭವಾಗಿ ಸಬ್‌ರಿಜಿಸ್ಟ್ರಾರ್ ಮ॥ ನಿಸಾರ್‌ಬಾಸಿಂಅಲಿಯವರು ಸೂಚಿಸಿದ ಪ್ರಕಾರ ವ್ಯವಸಾಯದ ಇಲಾಖಾ ಡೆಪ್ಟಿ ಡೈರೆಕ್ಟರ್ ಮ॥ ಯಜ್ಞನಾರಾಯಣಯ್ಯರವರು ಅಗ್ರಾಸನವನ್ನು ವಹಿಸಿದರು. ವಾರ್ಷಿಕ ರಿಪೋರ್ಟನ್ನು ಸಭೆಯಲ್ಲಿ ಹಂಚಿಸಿ, ಸೆಕ್ರೆಟರಿ ಮ॥ ಹ. ರುದ್ರಪ್ಪನವರು ರಿಪೋರ್ಟನ್ನು ಓದಿದರು. ಆಮೇಲೆ ಛೆರ್‌ಮನ್ ರು ಸಭಿಕರನ್ನು ಕುರಿತು ನಿಮಗೆ ಇದರ ವಿಷಯದಲ್ಲಿ ಏನಾದರೂ ಆಕ್ಷೇಪಣೆಗಳು ಇದ್ದರೆ ಧಾರಾಳವಾಗಿ ಚರ್ಚಿಸಬಹುದೆಂದು ಹೇಳಿದರು. ಅದಕ್ಕೆ ಶೇಕ್ದಾರ್ರು ಎದ್ದು ಮೊದಲಿನಂತೆಯೇ ದಿನಸಿಗಳನ್ನು ಇಡುವದಾದರೆ ಈ ಕಾಲದಲ್ಲಿ ಅಂಗಡಿಗಳಿಗಿಂತ ಸೊಸೈಟಿಯು ಷೇರುದಾರರಿಗೆ ಬಹಳ ಅನುಕೂಲವೆಂದು ಹೇಳಿದರು. ಅದಕ್ಕೆ ಸೆಕ್ರೆಟರಿಯವರು ದಿನಸಿ ತೆಗೆದುಕೊಂಡ ಬಾಕಿ 105 ಚಿಲ್ಲರೆ ರೂಪಾಯಿ ವಸೂಲಾದ ಮೇಲೆ ಆಗಬಹುದೆಂದು ಹೇಳಿದರು. ಅಗ್ರಾಸನದವರು ಎದ್ದು ಜನರು ಸೊಸೈಟಿಗೆ ಸೇರುವದರಿಂದಾಗುವ ಪ್ರಯೋಜನಗಳನ್ನೂ ಅನುಕೂಲಗಳನ್ನೂ ಕುರಿತು ಬಹು ಸ್ವಾರಸ್ಯವಾಗಿ ತಿಳಿಸಿದ್ದಲ್ಲದೆ ಸಾಹುಕಾರರು ಕೊಡುವ ಬಡ್ಡಿಗಿಂತ ಸೊಸೈಟಿಯಲ್ಲಿ ಕಮ್ಮಿ ಬಡ್ಡಿಗೆ ಹಣ ಕೊಡುತ್ತಾರೆಂದು ಸಾಹುಕಾರರು ಸೊಸೈಟಿಯನ್ನು ವಿರೋಧಿಸಕೂಡದೆಂದು ಅವರು ಸಹ ಡಿಪಾಜಿಟ್ ಇಡುವದು ಒಳ್ಳೇದೆಂದೂ ಉಪನ್ಯಾಸ ಮಾಡಿದರು. ಕೂಡಲೇ ಅಗ್ರಾಸನದವರು ಎದ್ದು ಸಭಿಕರನ್ನು ಇನ್ನು ಸ್ವಲ್ಪ ಹೊತ್ತು ಇರುವ ಹಾಗೆ ಕೇಳಿಕೊಂಡು ವ್ಯವಸಾಯ ಸಂಬಂಧವಾದ ಕಾರ್ಯಗಳನ್ನು ಕುರಿತು ಹೇಳಿದ್ದೇನಂದರೆ—ಸೀಮೆಯ ನೇಗಲಿಗೂ ಸ್ವದೇಶಿ ನೇಗಲಿಗೂ ಇರುವ ವ್ಯತ್ಯಾಸ, ಅನುಕೂಲ ಪ್ರತಿಕೂಲ ಮತ್ತು ಕಾಲದ ಲಾಭನಷ್ಟಗಳನ್ನು ಕುರಿತು ರೈತರಿಗೆಲ್ಲಾ ಗ್ರಹಿಕೆಯಾಗುವ ಹಾಗೆ ಕೂಡತಂದಿದ್ದ ಸೀಮೆನೇಗಲು, ಹತ್ತಿಯ ಬೀಜ, ಎರಡು ಮೂರು ತರಹ ಗೊಬ್ಬರದ ಪುಡಿ, ಭತ್ತ ಮುಂತಾದವುಗಳ ಉದಾಹರಣೆಗಳಿಂದ ಸುಲಭವಾಗಿ ವಿವರಿಸಿದರು. ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಯಾವ ವಿಷಯ ತಿಳಿಯಬೇಕೆಂದು ಕೇಳಿದರೂ ತಿಳಿಸುವದಕ್ಕೆ ಸಿದ್ಧವಾಗಿದೇನೆಂದು ಹೇಳಿದರು. ಮೂರು ನಾಲ್ಕು ಮಂದಿ ಸೀಮೆಯ ನೇಗಲುಗಳನ್ನು ಕೊಂಡು ಉಪಯೋಗಿಸುತ್ತೇವೆಂದು ಹೇಳಿದರು. ಮೇಲ್ಕಂಡ ವಿವಾಹ ಮತ್ತು ಕೋಆಪರೆಟಿವ್ ಸೊಸೈಟಿಯ ಕೂಟಗಳಿಗೂ, ಇತರ ಕಾರ್ಯಗಳಿಗೂ ಮುಖಂಡರಾಗಿ ನಿಂತು ಸಹಾಯ ಮಾಡಿದ ನಮ್ಮ ಶ್ಯಾ. ಮ॥ ಶೀನಪ್ಪನವರಿಗೆ ಎಲ್ಲರೂ ವಂದನೆಗಳನ್ನು ಸಲ್ಲಿಸುತ್ತಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂನ್ 11 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ.—(1) ಷೇರು ಮೊಬಲಗು	...	ರೂ. 9,83,560
,, (2) ಡಿಪಾಜಟ್ಟುಗಳು	...	,, 15,37,315
,, (3) ಇತರೆ	...	,, 30,330
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ 25,51,205

ದೇಣೆ.—(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ 6,28,052
,, (2) ಖಾತೆ ಮತ್ತು ಇತರ ಸಾಲಗಳು	...	,, 13,62,408
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,47,950
,, (4) ಇನ್‌ವೆಸ್ಟ್‌ಮೆಂಟುಗಳು	...	,, 2,51,000
,, (5) ಏಜನ್ಸಿಗಳಲ್ಲಿರುವ ಮೊಬಲಗು	...	,, 1,70,778
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...	,, 8,166
,, (7) ಇತರೆ	...	,, 23,053
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 25,51,205

ಡಬ್ಲಿಯು ಸಿ. ರೋಜ್, ಮ್ಯಾನೇಜರ್

ಒಂದು ಹೊಸ ಸ್ಕೂಲ್ ಕಟ್ಟಡದ ಪ್ರವೇಶ ಮಹೋತ್ಸವ.

ಚಿತ್ರದುರ್ಗ ತಾಲ್ಲೂಕು ತುರುವನೂರಲ್ಲಿ ಈಗ ಒಂದು ಬಾಯ್ಸ್ ಸ್ಕೂಲು, ಒಂದು ಗರಲ್ಸ್ ಸ್ಕೂಲು ಇರುತ್ತವೆ. ಬಾಯ್ಸ್ ಸ್ಕೂಲಿನಲ್ಲಿ 150 ಜನಗಳವರಿಗೂ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಈ ವರ್ಷ ಲೋಸೆ ಪರೀಕ್ಷೆಗೆ ಮೂರು ಜನಗಳು ಹೋಗಿದ್ದಕ್ಕೆ ಒಬ್ಬನು ಮಾತ್ರ ಪ್ಯಾಸ್ ಆದನು. ಹಾಲಿ ಇರತಕ್ಕ ಬಾಯ್ಸ್ ಸ್ಕೂಲ್ ಹಳೇ ಕಟ್ಟಡವು 4 ಜನ ಟೀಚರುಗಳು ಕೆಲಸ ಮಾಡುವುದಕ್ಕೆ ಸಾಲದೆ ಇದ್ದದ್ದರಿಂದ ನಮ್ಮ ಸರ್ಕಾರದವರು 2,800 ರೂಪಾಯಿ ಸ್ಯಾಂಕ್ಷನ್ ಮಾಡಿ ಮತ್ತೊಂದು ಹೊಸ ಬಿಲ್ಡಿಂಗನ್ನು ತಯಾರು ಮಾಡಿಸಿದರು. ಅದರ ಪ್ರವೇಶ ಮಹೋತ್ಸವವು ತಾ. 14 ನೇ ಭಾನುವಾರ ನಡೆಯಿತು. ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಎಂ. ಕೆ. ತಿರುಮಲಾಚಾರ್ಯರವರು ಅಗ್ರಾಸನವನ್ನು ವಹಿಸಿದ್ದರು. ಸಭಾಮಂದಿರವು ಅನೇಕ ವಿಧವಾದ ಚಿತ್ರವಿಚಿತ್ರಗಳಿಂದಲೂ, ತಳಿರುತೋರಣಗಳಿಂದಲೂ, ಕದಳೀವೃಕ್ಷಗಳಿಂದಲೂ ಅಲಂಕೃತವಾಗಿತ್ತು. ಡೆಪ್ಯುಟಿ ಇನ್‌ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿದ ಮೇಲೆ ದೇವರ ಸ್ತೋತ್ರವೂ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ನಡೆದವು. ಅನಂತರ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರವರು ಸ್ಕೂಲ್ ರಿಪೋರ್ಟನ್ನು ಓದಿದರು. ತರುವಾಯ ಇನ್‌ಸ್ಪೆಕ್ಟರವರು ಹಿಂದಿನ ದಿನ ಪರೀಕ್ಷಿಸಲ್ಪಟ್ಟು ತೇರ್ಗಡೆಯಾದ ಬಾಲಕ ಬಾಲಕಿಯರಿಗೆ ಇನಾಂ ಪುಸ್ತಕಗಳನ್ನು ಸ್ವಹಸ್ತ ದಯಪಾಲಿಸಿ, ಅಲ್ಲಿ ನೆರೆದಿದ್ದ ಸಾವಿರಾರು ಪುರ ಪ್ರಮುಖರಿಗೆಲ್ಲಾ ಈಗಿನ ನೂತನ ವಿದ್ಯಾಭ್ಯಾಸ ಕ್ರಮದಿಂದ ಉಂಟಾಗತಕ್ಕ ಪ್ರಯೋಜನಾಂಶಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ನಂತರ ಗರಲ್ಸ್ ಸ್ಕೂಲ್ ಬಾಲಕಿಯರು ಸಭಾಸದರಿಗೆಲ್ಲಾ ಆನಂದ ಉಂಟಾಗುವಂತೆ ಹಾಡುಗಳನ್ನು ಹೇಳಿದರು. ತರುವಾಯ ವಾದ್ಯಘೋಷಗಳು ಮೊಳಗಿದವು. ಬಾಲಕಿಯರ ಜಯಧ್ವನಿಗಳು ಉಂಟಾದವು. ಇದಾದ ಮೇಲೆ ಸಭೆಯವರೆಲ್ಲರೂ ಎದ್ದು ನಿಂತು ನಮ್ಮ ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೇಯಸ್ಸನ್ನು ಬಯಸಿದರು. ಕಡೆಗೆ ಬಾಲಕ ಬಾಲಕಿಯರಿಗೆ ಮಿಠಾಯಿಯೂ, ಸಭಾಸದರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟು, ಜನಗಳ ಕೋಲಾಹಲಧ್ವನಿಯಿಂದ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ

ಬೆಂಗಳೂರಿನಲ್ಲಿ ದೇವೀಯಾಗ ನಡೆದದ್ದು.

ಬೆಂಗಳೂರು ಶಂಕರಮಠದಲ್ಲಿ ದೇವನಹಳ್ಳಿ ತಾಲ್ಲೂಕು ಬೂದಿಗೆರೆ ವೇ॥ ನಂಜುಂಡ ದೀಕ್ಷಿತರು ಶ್ರೀದೇವೀಯಾಗವನ್ನು ಮಾಡಲು 12 ನೇ ತಾ ಶುಕ್ರವಾರ ಶಾಲಾ ಪ್ರವೇಶಮಾಡಿ ಋತ್ವಿಗ್ವರಣಾದಿ ಕೃತ್ಯಗಳನ್ನೆಲ್ಲಾ ಶಾಸ್ತ್ರೀಯವಾಗಿ ಶ್ರದ್ಧಾಭಕ್ತಿಗಳೊಡನೆ ನೆರವೇರಿಸಿ ಮರುದಿನ ಯಥಾವಿಧಿಯಾಗಿ ಅರ್ಹರಾದ ಋತ್ವಿಜರ ಸಹಾಯದಿಂದ ಜಪ, ಹೋಮ, ಪೂಜಾ, ಪಾರಾಯಣ, ಮಹಾಮಂಗಳಾರತಿ ಸಂತರ್ಪಣೆಗಳನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಈ ಕಾರ್ಯಕ್ಕೆ ಈ ಊರಿನವರೂ, ಇತರ ದೇಶೀಯರೂ ಋತ್ವಿಜರಾಗಿದ್ದರು. ಇವರ ಮಂತ್ರಶಾಸ್ತ್ರ ಪ್ರಾವೀಣ್ಯವು ಅನ್ಯಾದೃಶವಾದುದು. ಋತ್ವಿಜರು, ಸುವಾಸಿನಿಯರು, ಕುಮಾರಿಯರು ಸಹ ತಮ್ಮ ತಮ್ಮ ಮನೆಗಳನ್ನು ಬಿಟ್ಟು ಈ ಯಾಗಶಾಲೆಯಲ್ಲಿಯೇ 5 ದಿವಸಗಳವರಿಗೂ ಸಾತ್ವಿಕವಾದ ಕ್ಷೀರಾಹಾರವನ್ನು ಮಿತವಾಗಿ ಪರಿಗ್ರಹಿಸಿ ನಿಯಮದಿಂದಿದ್ದರು. ಪ್ರತಿನಿತ್ಯವೂ ಸಾಯಂಕಾಲ ಶ್ರೀದೇವಿ ವಿಷಯಕವಾದ ಉಪನ್ಯಾಸವು ನಡೆಸಲ್ಪಟ್ಟಿತು. ತ್ರಿಕಾಲದಲ್ಲಿಯೂ ಯಾಗಶಾಲೆಯಲ್ಲಿ ಸಾವಿರಾರು ಮಂದಿ ಬ್ರಾಹ್ಮಣರೂ, ಸುವಾಸಿನಿಯರೂ ನಾನಾ ಗ್ರಾಮಗಳಿಂದ ಬಂದು ನೆರೆದಿರುತ್ತಿದ್ದರು. ಪ್ರತಿನಿತ್ಯವೂ ಮೇಲ್ಕಂಡ ಋತ್ವಿಜರು ಮೊದಲಾದವರಿಗೂ, ಇನ್ನೂ ಸಾವಿರಾರು ಮಂದಿ ಬ್ರಾಹ್ಮಣರಿಗೂ, ಸುವಾಸಿನಿಯರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಸಂತರ್ಪಣೆಯು ಬಹಳ ವೈಭವದಿಂದ ನಡೆಯಿತು. ಈ ಕಾರ್ಯಕ್ಕೆ ನಮ್ಮ ದೇಶಬಾಂಧವರನೇಕರೂ, ಇತರ ದೇಶೀಯ ಮಹನೀಯರೂ ಕೂಡ ಸಹಾಯಮಾಡಿದ್ದರು. ತಾ 15 ನೇ ಸೋಮವಾರ ಸಾಯಂಕಾಲ 6 ಘಂಟೆಗೆ ನಡೆದ ಪೂರ್ಣಾಹುತಿ ಮಹೋತ್ಸವವು ನೋಡತಕ್ಕದಾಗಿದ್ದಿತು. ಈ ಮಹೋತ್ಸವಕ್ಕೆ ಅನೇಕಮಂದಿ ಅಧಿಕಾರಿಗಳೂ, ಪಂಡಿತರೂ, ವರ್ತಕರು ಸಹ ನೆರೆದಿದ್ದರು. ತಾ 16 ನೇ ಸಾಯಂಕಾಲ ಉಪನ್ಯಾಸವು ನಡೆದ ಬಳಿಕ ಋತ್ವಿಜರೇ ಮೊದಲಾದವರಿಗೆಲ್ಲಾ ಯಥಾಯೋಗ್ಯವಾಗಿ ಸಂಭಾವನೆಯು ವಿತರಣೆಯಿಂದ ನಡೆಯಿತು. ಈ ಎರಡು ದಿನಗಳಲ್ಲಿಯೂ ಅಲ್ಲಿ ನೆರೆದಿದ್ದ ಪಂಡಿತವರ್ಯರು ನಮ್ಮನ್ನಾಳುವ ಶ್ರೀಮನ್ಮಹಾರಾಜರು, ಯುವರಾಜರು, ದಿವಾನ್‌ರವರು ಇವರಿಗೂ, ರಿಟೈರ್ಡ್ ಅ॥ ಸೆಕ್ರೆಟರಿ ಹೆಚ್ ರಾಮಯ್ಯನವರಿಗೂ ಸಹ ಆಶೀರ್ವಾದ ರೂಪವಾದ ಶ್ಲೋಕಗಳನ್ನು ಪ್ರೀತಿಪುರಸ್ಸರವಾಗಿ ಪಠನಮಾಡಿದರು. ಈ ಶ್ಲೋಕಗಳು ಶ್ರಾವ್ಯಗಳಾಗಿಯೂ ಪುಷ್ಕಲಾರ್ಥಗಳಾಗಿಯೂ ಇದ್ದವು. ಮುಖ್ಯವಾಗಿ ಯಾಗವು ನೆರವೇರುವಂತೆ ಬಹು ಮಹದ್ವಿಜಯದಿಂದ ಬದ್ಧಕಂಕಣರಾಗಿದ್ದ ಮ॥ ಹೆಚ್ ರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದುದರಿಂದಲೇ ಇದು ಅಷ್ಟು ವಿಜೃಂಭಣೆಯಿಂದ ನೆರವೇರಿತೆಂದು ಹೇಳುವುದಕ್ಕೆ ಯಾವ ಸಂಶಯವೂ ಇಲ್ಲ. ಈ ಯಾಗಕ್ಕೆ ಆಚಾರ್ಯರಾಗಿದ್ದ ಮಂತ್ರಮೂರ್ತಿ ಕಡಬದ ವೇ॥ ಅಹೋಬಲ ಶಾಸ್ತ್ರಿಗಳವರ ಪಾಂಡಿತ್ಯವು ಅಸಮಾನವಾದದ್ದಾಗಿದೆ.

ಎಸ್ ಜಿ ಕಾಲೇಜ್, ಬೆಂಗಳೂರು — ಪಿ ಸುಂದರಶಾಸ್ತ್ರಿ, ಪಂಡಿತ್

ಮೈಸೂರು ನವರಾತ್ರಿ ಪ್ರದರ್ಶನವು.

ಈ ವರುಷದ ಇಸ್ತಿಹಾರು

ಮೈಸೂರು ದಸರಾ ಕಸುಬುಗಳ ಮತ್ತೂ ವ್ಯವಸಾಯ ವಸ್ತು ಪ್ರದರ್ಶನದ ಕಮಿಟಿ ಸೆಕ್ರೆಟರಿಯವರಾದ ಮ॥ ಸಿ. ರಂಗನಾಥರಾವ್ ಸಾಹೇಬರವರು ಈ ವರುಷ ಸೆಪ್ಟಂಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆಯುವ ಪ್ರದರ್ಶನದ ವೃತ್ತಾಂತವನ್ನು ಕುರಿತ ಪ್ರಾಸ್ಪೆಕ್ಟಸ್ ಪುಸ್ತಕವನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಈ ಕಮಿಟಿಗೆ ಕೌನ್ಸಿಲ್ ಮೆಂಬರಾದ ಸರ್ದಾರ್ ಎಂ ಕಾಂತರಾಜೆ ಅರಸಿನವರು ಅಧ್ಯಕ್ಷರಾಗಿರುವರು. ಈ ಪುಸ್ತಕದಲ್ಲಿ ಕಂಡ ಮುಖ್ಯಾಂಶಗಳನ್ನು ಇಲ್ಲಿ ಪ್ರಕಟಮಾಡುವೆವು.

ಈ ವರುಷ ಪ್ರದರ್ಶನವು ಸೆಪ್ಟಂಬರ್ ತಾ 21 ಅಥವಾ ಆ ಸುಮಾರಿನಲ್ಲಿ ಪ್ರಾರಂಭವಾಗಿ ಅಕ್ಟೋಬರ್ ತಾ 5 ರ ತನಕ ನಡೆಯುವದು. ಸ್ಥಳೀಯ ದನಗಳ ಮತ್ತೂ ಕೋಳಿ ಮುಂತಾದವುಗಳ ಪ್ರದರ್ಶನವೂ, ನೆಯ್ಗೆಯ ಪೋಟಾಪೋಟಿಯೂ ಅಕ್ಟೋಬರ್ ತಾ 1 ರಿಂದ 3 ದಿನ ನಡೆಯುತ್ತವೆ. ಮರದ ಕೆತ್ತನೆ ಕೆಲಸದ ಮತ್ತೂ ಲೋಹದ ಕೆಲಸದ ಪೋಟಾಪೋಟಿಗಳು ಸೆಪ್ಟಂಬರ್ ತಾ 21 ರಿಂದ ಹತ್ತು ದಿನಗಳ ತನಕ ನಡೆಯುತ್ತವೆ. ಕುಂಬಾರ ಕೆಲಸದ ಪೋಟಾಪೋಟಿಯೂ, ಉಳುಮೆಯ ಪೋಟಾಪೋಟಿಯೂ ಅಕ್ಟೋಬರ್ ತಾ 2 ರಿಂದ ಎರಡು ದಿನ ನಡೆಯುತ್ತವೆ.

ಈ ಪ್ರದರ್ಶನದ ಮೂಲಕ ರೈತರು, ಶಿಲ್ಪಿಗಳು ಮುಂತಾದ ಈ ಸಂಸ್ಥಾನದ ಪ್ರಜೆಗಳಿಗೆ ನಾನಾ ಬಗೆಯ ಪದಾರ್ಥಗಳನ್ನೂ ಯಂತ್ರಗಳನ್ನೂ ಸಾಧನಗಳನ್ನೂ ತೋರಿಸಿಟ್ಟು ತೋರಿಸಿ, ಅವುಗಳ ಪ್ರಯೋಜನಗಳನ್ನೂ ಮತ್ತು ತಯಾರಿಯ ಕ್ರಮವನ್ನೂ ತಿಳಿಸಿ, ಜನರನ್ನು ವಿಚಾರಪರರನ್ನಾಗಿ ಮಾಡಬೇಕೆಂಬುವದೇ ಪ್ರದರ್ಶನದ ಉದ್ದೇಶವಾಗಿದೆ. ಪ್ರದರ್ಶನದಲ್ಲಿ ಮಾದ್ರಿಗೆ ಒಂದೊಂದೇ ವಸ್ತುವನ್ನು ಇಡೋಣದರಿಂದ ಅವುಗಳ ತಯಾರಿ ಮುಂತಾದದ್ದು ತಿಳಿಯುವುದು ಕಷ್ಟವೆಂದು ಯೋಚಿಸಿ ಬಿಕರಿಗಾಗಿ ವಸ್ತುಗಳನ್ನು ಕಳುಹಿಸಬಹುದೆಂದು ಏರ್ಪಾಡು ಮಾಡಿದಾರೆ.

ಪ್ರದರ್ಶನಶಾಲೆಯಲ್ಲಿ ವ್ಯವಸಾಯ, ವಾಣಿಜ್ಯ, ಕೈಗಾರಿಕೆ, ಯಂತ್ರ ಮತ್ತು ಮುಟ್ಟುಗಳ ಉಪಯೋಗ, ಬೆಲೆ, ತಯಾರಿ, ರಿಪೇರಿ, ಈ ವಿಷಯಗಳನ್ನು ಕುರಿತ ಉಪನ್ಯಾಸಗಳನ್ನು ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಸಮರ್ಥರಾದವರಿಂದ ಬರಸಿ ಅಚ್ಚುಹಾಕಿಸಿ ಹಂಚಲ್ಪಡುತ್ತವೆ. ಪೋಟಾಪೋಟಿಗೆ ಮೂರು ಜನವಾದರೂ ಬಾರದಿದ್ದರೆ ಅಂಥಾದ್ದನ್ನು ನಡಿಸುವುದಿಲ್ಲ. ಪ್ರದರ್ಶನಕ್ಕೆ ಸಂಸ್ಥಾನದ ಒಳಾಯದಲ್ಲಿರುವ ಎಲ್ಲಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕುಗಳಿಂದಲೂ, ಸಂಸ್ಥಾನದ ಹೊರ ಸ್ಥಳಗಳಿಂದಲೂ ವಸ್ತುಗಳನ್ನು ಕಳುಹಿಸುತ್ತಾರೆಂದು ಕಮಿಟಿಯವರು ನಿರೀಕ್ಷಿಸಿಕೊಂಡಿದಾರೆ.

ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸತಕ್ಕವರು ಆಗಸ್ಟ್ ತಾ 25 ರೊಳಗೆ ಸೆಕ್ರೆಟರಿಯವರಿಗೆ ದರಖಾಸ್ತು ಹಾಕಬೇಕು. ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳೂ, ಸಬ್ ಡಿವಿಜನ್ ಆಫೀಸರುಗಳೂ, ಅಮಲ್ದಾರರೂ ತಮ್ಮ ಸರಹದ್ದಿಗೆ ಒಳಪಟ್ಟ ಪ್ರಜೆಗಳಲ್ಲಿ ಮುಖ್ಯರಾದ ಕೈಗಾರಿಕೆಯವರನ್ನೂ, ರೈತರನ್ನೂ ಬರಮಾಡಿಕೊಂಡು ಸಭೆಗಳನ್ನು ನಡಿಸಿ, ಈ ಪ್ರದರ್ಶನದ ಎಲ್ಲಾ ವಿದ್ಯಮಾನಗಳನ್ನೂ ತಿಳಿಸಬೇಕೆಂದೂ, ದರಖಾಸ್ತು ನಮೂನೆಗಳನ್ನು ಜನರಿಗೆ ಹಂಚಿ, ಸಾಮಾನುಗಳನ್ನು ಕೊಡಿಸಿ ಮೈಸೂರಿಗೆ ಕಳುಹಿಸಬೇಕೆಂದೂ ಕಮಿಟಿಯವರು ಹಾರೈಸುತ್ತಾರೆ. ತಾಲ್ಲೂಕು ಮತ್ತೂ ಡಿಸ್ಟ್ರಿಕ್ಟುಗಳಿಂದ ಬಗತಕ್ಕ ವಸ್ತುಗಳೆಲ್ಲಾ ಆಯಾ ಡೆಪ್ಯುಟಿ ಕಮಿಷನರುಗಳ ಮೂಲಕ ಸೆಪ್ಟಂಬರ್ ತಾ 5 ರೊಳಗೆ ಮೈಸೂರು ತಲಪುವಂತೆ ಕಳುಹಿಸಬೇಕಾಗಿದೆ. ಒಂದಾವರ್ತಿ ಬಹುಮಾನಪಡೆದ ವಸ್ತುವಿಗೆ ಮತ್ತೆ ಬಹುಮಾನ ಸಿಕ್ಕುವುದಿಲ್ಲ. ಮೈಸೂರು ಸಂಸ್ಥಾನದ ಅಥವಾ ಹೊರಗಿನ ರೈತರಾಗಲಿ ಕಸಬುದಾರರಾಗಲಿ ರುಸುಂ ಕೊಡಲಾರದವರಾಗಿದ್ದರೆ ಆ ರೀತಿ ತಮ್ಮ ತಾಲ್ಲೂಕು ಅಧಿಕಾರಿಗಳಿಂದ ಕಾಗದ ಬರಸಿಕೊಂಡು ಬಂದರೆ ಅಂಥವರನ್ನು ಮುಫತ್ತಾಗಿ ಪ್ರದರ್ಶನವನ್ನು ನೋಡಲು ಬಿಡುತ್ತಾರೆ.

ವಿದ್ಯಾಭ್ಯಾಸದ ವಿಚಾರವಾದ ಪ್ರದರ್ಶನವೂ, ಸ್ತ್ರೀಯರ ಕೈಗಾರಿಕೆವಸ್ತುಗಳ ಪ್ರದರ್ಶನವೂ ನಡೆಯುತ್ತವೆ.

ಈ ಪ್ರದರ್ಶನದಲ್ಲೆಲ್ಲಾ ಅತ್ಯುತ್ತಮವೆಂದು ತೀರ್ಮಾನವಾಗುವ ವಸ್ತುಗಳಿಗೆ ಬಹುಮಾನ ಹಂಚುವುದಕ್ಕೋಸ್ಕರ 51 ಚಿನ್ನದ, 112 ಬೆಳ್ಳಿಯ, 172 ಕಂಚಿನ ಮೆಡಲುಗಳನ್ನೂ 3,312 ರೂಪಾಯಿಯನ್ನೂ ಕಮಿಟಿಯವರು ತೆಗೆದಿಟ್ಟಿದಾರೆ.

ಕೋಆಪರೇಟಿವ್ ಸೊಸೈಟಿ ಮೀಟಿಂಗು.

ಹೊಸದುರ್ಗ ತಾಲ್ಲೂಕು ಅಲಗಟ್ಟೆ

ಬೆಲಗೂರು ಶ್ರೀ ಪ್ರಸನ್ನರಾಮೇಶ್ವರ ಕೋಆಪರೇಟಿವ್ ಸೊಸೈಟಿಯವರು ಅಲಗಟ್ಟೆ ಗ್ರಾಮದಲ್ಲಿ ಒಂದು ಸ್ಪೆಷಲ್ ಮೀಟಿಂಗು ನಡಿಸಿದರು. ಈ ಸೊಸೈಟಿಯು 11 ತಿಂಗಳಿಂದ 5 ರೂ ಬಾಬ್ತು 2,000 ಷೇರುಗಳ ಪೈಕಿ 130 ಮೆಂಬರುಗಳಿಂದ 1,007 ಷೇರುಗಳು ಖಚಾಗಿ ಇದುವರಿಗೆ 11½ ಸಾವಿರ ರೂಪಾಯಿ ಜಮಾಖರ್ಚು ನಡೆದಿರುತ್ತದೆ. ಈ ಸಂಘಕ್ಕೆ ಸೇರಿರುವ 10 ಗ್ರಾಮಗಳ ಪೈಕಿ ಅಲಗಟ್ಟೆ ಗ್ರಾಮದ ಜನರು 10 ಜನ ಮೆಂಬರುಗಳು ಸೇರಿರುತ್ತಾರೆ. ಇವರೆಲ್ಲಾ ಅಲಗಟ್ಟೆಗ್ರಾಮದಲ್ಲಿ ಸ್ಪೆಷಲ್ ಮೀಟಿಂಗ್ ನಡಿಸಿ ಸೊಸೈಟಿಯಿಂದ ಉಂಟಾಗುವ ಅನುಕೂಲ ವಗೈರೆ ಬೋಧಿಸಬೇಕೆಂದು ಕೇಳಿಕೊಂಡ ಮೇರೆ ತಾ 15 ರಲ್ಲಿ ಈ ಸಂಘದ ಪ್ರೆಸಿಡೆಂಟ್, ಸೆಕ್ರೆಟರಿಗಳು, ಪಂಚಾಯಿತದಾರರು, ಷೇರುದಾರರು ವಗೈರೇರೆಲ್ಲಾ ಅಲಗಟ್ಟೆಗ್ರಾಮಕ್ಕೆ ಹೋಗಿ ಮೀಟಿಂಗು ನಡಿಸಿದರು. ಮ॥ ಗಳಾದ ಚನ್ನಬಸವಾರಾಧ್ಯ ಸ್ವಾಮಿಯವರು, ಪ ಚನ್ನಬಸವೇಗೌಡರು, ಗಡದಯ್ಯನವರು ಸಾಹಸಪಟ್ಟು ಆ ಗ್ರಾಮದ ಜನರನ್ನು ಸೇರಿಸಿದ್ದರು. ಮತ್ತು ಆಸ್‌ಪಾಸ್ ಗ್ರಾಮಸ್ಥರು ಬಲ್ಲಾಳಸಮುದ್ರದ ಮ ತಿಮ್ಮನಾಯುಡು ವಗೈರೇರೂ, ಮತ್ತೂರು ಗ್ರಾಮದ ಮ॥ ಹನುಮಣ್ಣ ವಗೈರೇರೂ, ತಂಗುವಳ್ಳಿ ಗ್ರಾಮದ ಮ॥ ಮಹದೇವಯ್ಯನವರು ವಗೈರೇರೂ, ಕೊರಟಗೆರೆ ಪ ಚಂದ್ರೇಗೌಡ ವಗೈರೇರೂ, ಕಿಟ್ಟಹಳ್ಳಿ, ಒಕ್ಕಲಿಗೆರೆ, ಈ ಗ್ರಾಮದ ಪಟೇಲರು ವಗೈರೆ ರೂ 200 ಜನಗಳವರೆಗೆ ಸೇರಿದ್ದರು. ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ತಳಿರುತೋರಣಾದಿಗಳಿಂದ ಅಲಂಕರಿಸಿದ್ದ ಬಹಿರಂಗವಾದ ಸ್ಥಳದಲ್ಲಿ ಮಧ್ಯಾಹ್ನ 3 ಗಂಟೆಯಿಂದ ಸಾಯಂಕಾಲ 6 ಘಂಟೆ ತನಕ ಸಭೆ ನಡೆಯಿತು. ಪ್ರೆಸಿಡೆಂಟ್ ಮ॥ ಸಾಹುಕಾರ್ ಶಿವಲಿಂಗಪ್ಪನವರೂ, ಅಲಗಟ್ಟೆದ ಗ್ರಾಮಾಭಿವೃದ್ಧಿ ಸಮಾಜದ ಪ್ರೆಸಿಡೆಂಟ್ ಮ॥ ಗಡದಯ್ಯನವರೂ ಸಭಾಧ್ಯಕ್ಷರಾಗಿದ್ದರು. ಈ ಸಭೆಗೆ ಸರ್ವರೂ ದಯಮಾಡಿಸಿದ ವಿಷಯದಲ್ಲಿ ಮ॥ ಚನ್ನಬಸವಾರಾಧ್ಯ ಸ್ವಾಮಿಯವರು ಸುಸ್ವಾಗತವನ್ನು ಬಯಸಿ, ಈ ಸೊಸೈಟಿಗೆ ಅಲಗಟ್ಟೆ ಗ್ರಾಮದ ಮೆಂಬರುಗಳು ಸೇರಿದಾರಭ್ಯ ಉಂಟಾಗಿರುವ ಪ್ರಯೋಜನವನ್ನು ಕುರಿತು ಉಪನ್ಯಾಸ ಓದಿ ಹೇಳಿದರು.

ಈ ಸಂಘದ ಸೆಕ್ರೆಟರಿ ಮ॥ ಕೆ ವೆಂಕಟರಾಯಶೆಟ್ಟಿಯವರು ಆ ಮೀಟಿಂಗಿನ ಉದ್ದೇಶ, ಕೋಆಪರೇಟಿವ್ ಸೊಸೈಟಿಯಿಂದ ಆಗುವ ಪ್ರಯೋಜನ, ಗವರ್ನ್‌ಮೆಂಟಿನವರು ಈ ಸೊಸೈಟಿಗಳಿಗೆ ಕೊಟ್ಟಿರುವ ರಿಯಾಯಿತಿಗಳು, ಇವುಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರಲ್ಲದೆ ಈಗ ಇದುವರಿಗೆ ಸಂಘದಲ್ಲಿ ನಡೆದ ಜಮಾಖರ್ಚು ಮತ್ತು ಹೆಚ್ಚು ವಿಷಯಗಳನ್ನು ಕುರಿತು ಕೆಲವು ವಿಷಯಗಳು, ಹಾಲಿ ಇಡಲ್ಪಟ್ಟಿರುವ ಪುಸ್ತಕಗಳು, ರಶೀದಿ ವಗೈರೆ ದಾಖಲೆಗಳು, ಇವನ್ನೆಲ್ಲಾ ಎಲ್ಲರಿಗೂ ತೋರಿಸಿ ವಿವರಿಸಿದರು. ಮ॥ ಬಿ ರುದ್ರಪ್ಪನವರು ಸಾಲದ ವಿಷಯವಾಗಿ ಉಪನ್ಯಾಸಮಾಡಿದರು. ಮುಂದಾಲೋಚನೆಯಿಲ್ಲದೆ ಸಾಲ ಮಾಡುವದು ಕೇಡೆಂತಲೂ. ಹಾಲಿ ಈ ಡಿಸ್ಟ್ರಿಕ್ಟಿನಲ್ಲಿ ದೊರೆಯುವ ಸಾಲದ ಬಡ್ಡಿ ದರ ಮತ್ತು ಸೊಸೈಟಿಯಲ್ಲಿ ದೊರೆಯುವ ಬಡ್ಡಿ ದರ ಇವುಗಳ ತಾರತಮ್ಯವನ್ನು ಕುರಿತು ವಿವರಿಸಿ ಉಪನ್ಯಾಸಮಾಡಿದರು. ಅನಂತರ ಬೆಲಗೂರು ಶ್ಯಾನರಸಿಂಹಯ್ಯನವರು ಕೋಆಪರೇಟಿವ್ ಮ್ಯಾನ್ಯುಯಲ್ ಮತ್ತು ಬೈಲಾಗಳನ್ನು ಓದಿ ತಿಳಿಸಿ ವಿವರಿಸಿದರು. ಸಂಘದಲ್ಲಿ ಹಾಲಿ ಇಡಲ್ಪಟ್ಟಿರುವ ಸಾಲದ ತ… ಬಡ್ಡಿಯ ದರ, ಸಂಘದಲ್ಲಿ ಡಿಪಾಜಟ್ಟು ಇಡುವ ವಿಷಯ, ಇದಕ್ಕೆ ಒಡ್ಡಿಯ ದ… ಇವುಗಳನ್ನು ಕುರಿತು ಉಪನ್ಯಾಸಮಾಡಿ ತಿಳಿಸಿದರು. ಅನಂತರ ಅಲ… ಪ್ರಾಂತ್ಯದ ಮೆಂಬರುಗಳಲ್ಲಿ ಮ॥ ಸಾಹುಕಾರ್ ಗಡದಯ್ಯನವರನ್ನೂ ಮ… ಚನ್ನಬಸವಾರಾಧ್ಯಸ್ವಾಮಿಯವರನ್ನೂ ಪಂಚಾಯತದಾರರ್ ತೀರ್ಮಾನಿಸ್ಪಟ್ಟ… ಮ॥ ಶಿವಲಿಂಗಪ್ಪನವರು ಪ್ರತಿಪಾದಿಸಿದರು. ಸಮಯೋಚಿತವಾದ ವಿಷಯಗಳ… ಸಮಾಧಾನೋಕ್ತಿಗಳನ್ನು ತಿಳಿಸಿ ಒಡನೆಯೇ ಸರ್ವರೂ ಸೊಸೈಟಿಗೆ ಸೇರಿ ಪ್ರಯೋಜನ ಹೊಂದಬೇಕೆಂದು ಹೇಳಿದರು. ಕೆಲವು ಜನರು ಅಪ್ಲಿಕೇಷನ್‌ಗಳನ್ನು ಕೊಟ್ಟರು. ಬಳಿಕ ಇಂಥಾ ಅನುಕೂಲವಾದ ಏರ್ಪಾಡುಗಳನ್ನು ನಮ್ಮ ದೇ… ದಲ್ಲಿ ಕಲ್ಪಿಸಿಕೊಟ್ಟದ್ದರಿಂದ ನಮ್ಮ ಶ್ರೀಮನ್ ಮಹಾರಾಜ ರಾಜಾಸಾಹೇ… ಬಹದೂರರವರಿಗೂ, ರಿಜಿಸ್ಟ್ರಾರವರಿಗೂ, ಈ ಸೊಸೈಟಿಗೆ ಸಹಾಯಕರಾಗಿರು… ಅಮಲ್ದಾರ್ ಮ॥ ಕೆ ಶ್ರೀನಿವಾಸರಾಯರಿಗೂ ಸರ್ವರೂ ಶ್ರೇಯಸ್ಸನ್ನು ಕೋ… ಮೀಟಿಂಗು ಬರಖಾಸ್ತು ಮಾಡಲಾಯಿತು. ನಂತರ ಸಭೆಯವರನ್ನು ಗಂಧ ಪುಷ್ಪ ತಾಂಬೂಲಾದಿಗಳಿಂದ ಸನ್ಮಾನಿಸಿ, ಸರ್ವರನ್ನೂ ಮ॥ ಚನ್ನಬಸವಾರಾಧ್ಯರವ… ಏರ್ಪಡಿಸಿದ್ದ ಟೀ ಪಾರ್ಟಿಗೆ ಕರೆದುಕೊಂಡು ಹೋಗಿ ಸರ್ವರನ್ನೂ ಸಂತೋ… ಪಡಿಸಿ ಕಳುಹಿಸಿಕೊಟ್ಟರು. ಈ ಗ್ರಾಮದಲ್ಲಿ ಇಂಥಾ ದೊಡ್ಡ ಮೀಟಿಂಗು ನ… ದದ್ದು ಮತ್ತು ಆಗಾಗ್ಗೆ ನಡಿಸುತ್ತಾ ಬರುವದು ಸಹ ಅಭಿವೃದ್ಧಿಗೆ ಕಾರಣವಾ… ಇರುತ್ತೆ.

ಕೆ ಸೀರಪ್ಪ, ಷೇರುದಾರ್

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊಬಾಬ್ದಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಒಳ್ಳೇ ಹಾಲು ಸಿಕ್ಕುವ ಬಗೆ ಹ್ಯಾಗೆ?

ಅಯ್ಯಾ,—ಈಚೆಗೆ ನಮ್ಮ ದೇಶದ ದೊಡ್ಡ ದೊಡ್ಡ ಊರುಗಳಲ್ಲಿ ಅ… ಟವಾದ ಹಾಲು ಸಿಕ್ಕುವದು ದುರ್ಲಭವಾಗಿದೆ. ಕಾಲುಪಾಲು ಹಾಲಿಗೆ ಮುಕ್ಕಾಲುಪಾಲು ನೀರನ್ನು ಸೇರಿಸಿ ಪಾಪು ಹಾಲೆಂದು ಮಾರುವುದು ವಾಡಿಕೆಗೆ ಬಂದಿತ್ತದೆ. ಈ ರೀತಿ ವ್ಯಾಪಾರಮಾಡುವವರು ತಮ್ಮ ತಲೆಯ ಮೇಲೆ ತಾವೇ ನಾ… ವನ್ನು ಬರಮಾಡುವವರಾಗಿದಾರೆ. ನಮ್ಮ ಊರುಗಳಲ್ಲಿ ಹಾಲಿನ ವ್ಯಾಪಾರ ಈ ರೀತಿಯಲ್ಲಿರುವಾಗ್ಗೆ ಜನಸಮುದಾಯದ ಗತಿಯೇನು? ನನಗೆ ಬೇಕಾದವ… ಬ್ಬರು ವಿಲಾಯಿತಿಯಿಂದ ಬರುವ ಟಿನ್ ಹಾಲನ್ನೇ ಕೊಂಡು ಉಪಯೋಗಿ… ವುದು ಉತ್ತಮವೆಂದು ತಿಳಿಸಿದರು. ಟಿನ್ ಹಾಲು ಒಂದು ಸೇರಿಗೆ ನಾಲ್ಕು ಆ… ಯಾಗುವುದಂತೆ. ನೀರು ಬೆರಸಿದ ಕೆಟ್ಟಹಾಲಿಗೆ ಸೇರು ಒಂದಕ್ಕೆ ಎರಡು ಇ… ವೇ ಮೂರಾಣೆ ಕೊಡುವುದಕ್ಕೆ ಬದಲು ಅಪ್ಪಟವಾದ ಟಿನ್ ಹಾಲಿಗೆ ಸೇ… ನಾಲ್ಕು ಆಣೆ ಕೊಡುವುದು ನಷ್ಟವಲ್ಲ. ಟಿನ್ ಹಾಲಿನಲ್ಲಿ ಮೋಸವನ್ನು ಮ… ಬಹುದೆಂದು ಹೇಳುತ್ತಾರೆ. ಇದು ನಿಜವೆ? ನಿಮ್ಮ ಪತ್ರಿಕೆ ವಾಚಕಮಹಾ… ಯರಲ್ಲಿ ಯಾರಾದರೂ ತಮ್ಮ ಅನುಭವವನ್ನು ತಿಳಿಸಿದರೆ ಸಾವಿರಾರು ಜನ ಪ್ರಯೋಜನವಾದೀತು. ನಡತೆಯಿಲ್ಲದ ಸ್ವದೇಶೀ ವ್ಯಾಪಾರದಿಂದ ಜನರಿಗೆ ಕೇ… ಹೊರತು ಲಾಭವಿಲ್ಲ.

ಹಿತಚಿಂತಕ.

ಕೂಲಿಪಾಡು ಜನಗಳ ಏಳಿಗೆ

ಅಯ್ಯಾ,—ಚನ್ನಪಟ್ಟಣದ ತಾಲ್ಲೂಕು ಕನ್ನಡ ಬಾಯ್ಸ್ ಸ್ಕೂಲ್ ಮಾಸ್ಟರ್ ಮ ಬಿ ಗೋವಿಂದರಾಯರು ತುಂಬಾ ಮುತುವರ್ಜಿಮಾ… ಕೋಟೆಯಲ್ಲಿ ಒಂದು ರಾತ್ರಿ ಪಾಠಶಾಲೆಯನ್ನು ಸ್ಥಾಪಿಸುವ ಉದ್ದೇಶ… ತಿಂಗಳು 14 ನೇ ತಾ ಸಾಯಂಕಾಲ ಪುರಪ್ರಮುಖರನ್ನು ಕರಸಿ ಸಭೆ… ದರು. ಪೋಲೀಸ್ ಇನ್‌ಸ್ಪೆಕ್ಟರ್ ಮ॥ ಮಂಗೇಶರಾಯರು ಅಗ್ರಾಸನವ… ವಹಿಸಿದ್ದರು. ವೇ॥ ಕೋದಂಡಶಾಸ್ತ್ರಿಗಳವರು ವಿದ್ಯೆಯ ಪ್ರಾಮುಖ್ಯತೆಯ ಕುರಿತು ಭಾಷಣ ಮಾಡಿದರು. ಸಬ್ ರಿಜಿಸ್ಟ್ರಾರ್ ಮ॥ ಸುಬ್ಬರಾವ್ ಬಾ… ರವರು ಸಮಯೋಚಿತವಾಗಿ ವಿದ್ಯೆ ಇಲ್ಲದೆ ಮನುಷ್ಯರ ನಡತೆಯೋ ಪ್ರಾಣಿಯಂತಾದದ್ದೆಂದು ಸ್ವಾರಸ್ಯವಾದ ಉಪನ್ಯಾಸ ಮಾಡಿ, ಸಭೆಯವರನ್ನು ಸಂತೋಷಪಡಿಸಿದರು. ತರುವಾಯ ಮ ಮಂಗೇಶರಾಯರು ಕೂಲಿಪ ಪುರಜನಗಳ… ವಿದ್ಯಾರ್ಥಿಗಳಾಗಬೇಕೆಂಬವರಿಗೂ ಬುದ್ಧಿವಾದಗಳನ್ನು ಹೇಳಿದರು. ಗ… ಪುಷ್ಪ, ತಾಂಬೂಲಾದಿಗಳಿಂದ ಸಭೆಯು ಬರಖಾಸ್ತಾಯಿತು. ಮ॥ ಗೋವಿ… ರಾಯರ ಹಾಗೆಯೇ ಇನ್ನು ಕೆಲವರು ಮುತುವರ್ಜಿವಹಿಸಿ ರಾತ್ರಿಯ ಪಾ… ಲೆಗಳನ್ನು ಈ ಕಸಬಾದಲ್ಲಿ ಬೇರೆ ಕಡೆಗಳಲ್ಲೂ ಸ್ಥಾಪಿಸೋಣದರಿಂದ ಕೂಲಿ… ದಿನ ಜನಗಳಿಗೆ ವಿದ್ಯಾದಾನವನ್ನು ಮಾಡಿದಂತಾಗುತ್ತದೆ. ಇಂಥಾ ಸ್ಕೂ… ಳನ್ನು ಸ್ಥಾಪಿಸಿ, ವಿದ್ಯೆ ಹೇಳುವುದರಿಂದ ಜನಗಳ ಗುಣ, ನಡತೆಗಳು ಬೇಗ… ಪುನಃ ಉಚ್ಛ್ರಾಯಸ್ಥಿತಿಗೆ ಬರುವುದರಲ್ಲಿ ಅನುಮಾನವಿಲ್ಲ.

ಪ್ರತ್ಯಕ್ಷದರ್ಶಿ

ಚಿತ್ರದುರ್ಗದ ವಿಚಾರಗಳು

ಅಯ್ಯಾ,—ಇಲ್ಲಿ ನೀರಿನ ಕ್ಷಾಮ ಹೇಳತೀರದು. ನೀರು ಕಷ್ಟ್ರೀರ ಪ್ರಜೆಗಳು ಇಷ್ಟು ಕಷ್ಟಪಡುತ್ತಿದ್ದರೂ ಸರ್ಕಾರದವರು ಯಾವ ಏರ್ಪಾಡು ಮಾಡಿಲ್ಲ. ಇಲ್ಲಿನ ಕೆರೆಗೆ ನೀರು ಬರತಕ್ಕ ಕಾಲುವೆ ಕೆಟ್ಟಿದೆ ಎಂದು ರಿಪೋರ್ಟು ಬಂದನಂತರ ಮೇಲೆ 300 ಚಿಲ್ಲಾನು ರೂಪಾಯಿ ಸ್ಯಾಂಕ್ಷನ್ ಆದದ್ದು ರೂಪಾಯಿಗೆ ಇಳಿದು ಕೆಲಸ ಪೂರೈಸಿತು. ಇದನ್ನು ತನಿಖೆಮಾಡಲು ಪ್ರೆಸಿಡೆಂಟ್ ಮ॥ ರಾಮಚಂದ್ರರಾಯರು ಹೋಗಿ 1 6 ಮೈಲಿ ಸುತ್ತಿ ಕಾ… ಕೆಟ್ಟಿಲ್ಲ, ಮಳೆ ಬಾರದ್ದಕ್ಕೆ ನೀರು ಬರಲಿಲ್ಲ, ಅನ್ಯಾಯವಾಗಿ ಖಚಾ… ಕೆಂದು ಅಭಿಪ್ರಾಯಪಟ್ಟರೆಂದು ತಿಳಿಯಬಂತು. ದೊಡ್ಡ ಆಫೀಸರು ಕೆ… ಇರುವ ನೌಕರರ ಅಭಿಪ್ರಾಯಕ್ಕೆ ಒಳಗಾದರೆ ಪ್ರಜೆಗಳಿಗೂ ಸರ್ಕಾರ… ಉಕ್ಸಾನು ಅಲ್ಲವೇ?

ಮ್ಯುನಿಸಿಪಾಲಿಟಿಯಲ್ಲಿ ಅನೇಕ ವರುಷಗಳ ಲಗಾಯ್ತು ನೆಲೆ ನಿಂತು ಇರುವ ನೌಕರರನ್ನು ಪ್ರಜಾ ಕ್ಷೇಮಕ್ಕಾಗಿ ಆಗಾಗ್ಗೆ ವರ್ಗಾಯಿಸುವುದು ಉತ್ತಮವಲ್ಲವೇ! ಹಿಂದೆ ಇದ್ದ ಡೆಪ್ಯುಟಿ ಕಮಿಷನರ್ ಮ॥ ಚಾಂಡಿ ರ… ಇಲ್ಲಿನ ಮ್ಯುನಿಸಿಪಾಲಿಟಿಯ ಒಬ್ಬ ನೌಕರನನ್ನು ಬೇರೆ ತಾಲ್ಲೋಕಿಗೆ

ಮುಸಿದ್ದರು. ಯಾವ ಕಾರಣದ ಮೇಲೋ ಆತನು ಪುನಃ ಬಂದು ನೆಲೆಯಾಗಿ ನಿಂತಿರುತ್ತಾನೆ

ಈ ಟವರ್ ಚಿಕ್ಕದಾಗಿಯೂ, ವ್ಯಾಪಾರ ಕೈಗಾರಿಕೆಗಳು ಇಲ್ಲದೇಲೂ ಇರುವದರಿಂದ ಸೋವಕಾರಿಗಳೂ, ತುಂಟರೂ ಹೆಚ್ಚು ಗೌರವಸ್ಥರನ್ನು ಅಪಮಾನ ಪಡಿಸಲಿಕ್ಕೆ ಬನಾವಟ್ಟು ಕೇಸು ಮೊದಲಾದವುಗಳನ್ನು ಮಾಡಿ ಅದರ ಮೂಲಕ ದ್ರವ್ಯಾರ್ಜನೆಮಾಡಿ ಜೀವನಮಾಡುತ್ತಿರುವರು ಇಂಥವರಿಗೆ ಕೆಲವು ಸರ್ಕಾರಿ ನೌಕರರು ಮತ್ತು ದೊಡ್ಡಮನುಷ್ಯರೆಂದು ನಟಿಸುವ ಕೆಲವರು ಅಂತರಂಗವಾಗಿ ಸಹಾಯಮಾಡುತ್ತಿರುವರು ಸರ್ಕಾರದವರು ಇಂಥವುಗಳಿಗೆ ಅವಕಾಶ ಕೊಡದಂತೆ ಮಾನಸ್ಥರನ್ನು ಕಾಪಾಡುತ್ತಾರಾಗಿ ನಂಬಿರುತ್ತೇನೆ

ಹಿಂದಿದ್ದ ಮುನ್ಸಿಫರಾದ ಮಿ|| ಹೋಲ್ಕರವರು ಮತ್ತು ಮೊನ್ನೆ ವರ್ಗವಾದ ಮುನ್ಸಿಫರು ಮಾರ್ವಾಡಿ ವರ್ತಕರ ಹಿಂಸೆಯಿಂದ ಪ್ರಜೆಗಳನ್ನು ಕೈಲಾದ ಮಟ್ಟಿಗೂ ತಪ್ಪಿಸಿ ಅವರ ಹಣ ಫೈಸಲಾತಿಗಳಿಕ್ಕೆ ಏರ್ಪಾಡು ಮಾಡಿದ್ದರು ಈಗ ಬಂದಿರುವ ಮುನ್ಸಿಫರು ಸಹ ಹಿಂದಿನವರ ಮೇಲ್ಪಂಕ್ತಿಯನ್ನೇ ಅನುಸರಿಸಿ ರೈತರಿಗೆ ತಕ್ಕ ರಿಯಾಯತಿ ತೋರಿಸುತ್ತಾರೆಂದು ನಂಬುತ್ತೇನೆ

ಚಿತ್ರದುರ್ಗ ಸತ್ಯವಾದಿ

ಮೊಖ್ತಾರುಗಳು

ಅಯ್ಯಾ,—ಮೊನ್ನೆ ಅಂದರೆ 10-6-14 ರಲ್ಲಿ ಮೈಸೂರು ರಂಗಾಚಾರ್ಲುವರ ಮೆಮೋರಿಯಲ್ ಹಾಲ್‍ನಲ್ಲಿ ನಡೆದ ಜುಡಿಷಿಯಲ್ ಕಾನ್‍ಫರೆನ್ಸಿನಲ್ಲಿ ಮೊಖ್ತ್ಯಾರುಗಳ ವಿಷಯವು ಚರ್ಚೆಗೆ ಬಂತು ಲಾಯರುಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬಂದದ್ದರಿಂದಲೂ, ಅವರುಗಳೇ ಕಕ್ಷಿಗಾರರಿಗೆ ಸುಲಭವಾಗಿ ಸಿಕ್ಕುತ್ತಾರೆಂಬ ಅಭಿಪ್ರಾಯದಿಂದಲೂ ಮೊಖ್ತ್ಯಾರುಗಳ ಸಂಖ್ಯೆಯನ್ನು ದಿನಕ್ರಮೇಣ ಕಮ್ಮಿ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿರುತ್ತೆ ಆದರೆ ಇನ್ನು ಮುಂದೆ ಮೊಖ್ತ್ಯಾರುಗಳಿಗೆ ಹೊಸದಾಗಿ ಬರತಕ್ಕವರಿಗೆ ಅವಕಾಶ ಕೊಡಬಾರದೆಂಬುವ ಉದ್ದೇಶವೇ ಹೊರತು ಇರುವವರನ್ನು ಏತಕ್ಕೆ ತೆಗೆದುಹಾಕಬೇಕೆಂಬ ಇರಾದೆ ಇಲ್ಲ

ಚೀಫ್ ಕೋರ್ಟಿನವರು ಈಗ್ಗೆ ಸುಮಾರು 4 ವರುಷಗಳಿಗೆ ಮುಂಚೆ ಸಂಸ್ಥಾನದಲ್ಲಿ ಇರತಕ್ಕ ಒಟ್ಟು ಸುಮಾರು 40-65 ಜನ ಮೊಖ್ತ್ಯಾರುಗಳ ಹೆಸರುಗಳನ್ನು ತರಿಸಿಕೊಂಡು ಇರುತ್ತಾರೆ ಇವರುಗಳಿಗೆ ಒಂದು ಕ್ರಿಮಿನಲ್ ಕಚೇರಿ ಒಂದು ಇಟ್ಟಲ್ಲಿ ಅನೇಕರು ವಯಸ್ಸಾಗಿರುವದರಿಂದಲೂ, ಅನೇಕರಿಗೆ ಇಂಗ್ಲೀಷು ತಿಳಿಯದೆ ಇರುವದರಿಂದಲೂ ವ್ಯವಹಾರ ಮಾಡತಕ್ಕವರ ಸಂಖ್ಯೆ ಇದರಿಂದ ಬಹಳ ಕಡಮೆ ಆಗ ಬಹುದು ಈ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿ ಸೂಕ್ತವಾಗಿ ಆದೇಶ ಮಾಡತಕ್ಕದ್ದಾಗಿರುತ್ತೆ ಆದಾಗ್ಯೂ ಚೀಫ್ ಕೋರ್ಟಿನವರು ಕೊಟ್ಟ ಇಂತಕ್ಕೆ ಶಕೀಲರಿನ ಉದ್ದೇಶವು ಮೊಖ್ತ್ಯಾರುಗಳಿಗೆ ಅ ವರೆ ಪುನಃ ಹೊಸದಾಗಿ ಸೇರತಕ್ಕವರಿಗೆ ಪ್ರೋತ್ಸಾಹ ಕಮ್ಮಿಮಾಡಬೇಕೆಂದು ಇದಾಗಿಯೂ ಅನೇಕ ಮ್ಯಾಜಿಸ್ಟ್ರೇಟುಗಳು ತಾಲ್ಲೂಕುಗಳಲ್ಲಿ ಹಳಬರಾದ ಮೊಖ್ತ್ಯಾರುಗಳು ಇದ್ದಾಗ್ಯೂ ರಿಟೈರ್ ಆದ ನೌಕರರಿಗೂ ಮತ್ತು ಇತರ ತರದಿಂದ ಸರ್ಕಾರದ ಕೆಲಸದಿಂದ ನಿವೃತ್ತರಾದ ಇತರ ಜನರಿಗೂ, ಅನಭ್ಯಾಸ ಜ್ಞಾನವೇ ಇಲ್ಲದಂಥಾ ಬುದ್ಧಿವೈದಿಕರಿಗೂ ಅವರ ಅಪೇಕ್ಷೆಮೇರಿಗೆ ಮೊಖ್ತ್ಯಾರಿಗಳು ಅವರು ಕೊಟ್ಟಲ್ಲಿ ಅದು ಚೀಫ್ ಕೋರ್ಟಿನವರ ಉದ್ದೇಶಕ್ಕೆ ತಪ್ಪು ವಿರೋಧವಾಗಿರುತ್ತೆ ಅಲ್ಲದೆ ಇಂಥವರಿಂದ ಕಕ್ಷಿಗಾರರಿಗೆ ಎಷ್ಟರಮಟ್ಟಿಗೆ ಸಹಾಯವಾಗುತ್ತೆಂಬ ಅಂಶ ಸಹ ಯೋಚಿಸತಕ್ಕದ್ದಾಗಿರುತ್ತೆ

ಆದ್ದರಿಂದ ಈಗಿನ ಪಂಡಿತ ವಿದ್ವಾಂಸರುಗಳಾದ ಮ್ಯಾಜಿಸ್ಟ್ರೇಟುಗಳು ಹೊಸದಾಗಿ ಸನ್ನದ್ ಅಪೇಕ್ಷೆಪಡತಕ್ಕ ಜನರ ಯೋಗ್ಯತೆಯನ್ನೂ, ನಡತೆಯನ್ನೂ ವಿಚಾರಿಸಿ, ಅವರುಗಳಿಂದ ಕಕ್ಷಿಗಾರರಿಗೆ ನ್ಯಾಯ ದೊರಕಿತೇ ಎನ್ನುವುದನ್ನು ಪರ್ಯಾಲೋಚಿಸಿ, ಕಾನೂನು ಮತ್ತು ಚೀಫ್ ಕೋರ್ಟಿನವರ ರೂಲಿಗೆ ವಿರೋಧವಿಲ್ಲದಂತೆ ನಡೆಸತಕ್ಕದ್ದಾಗಿರುತ್ತೆ

ಮೈಸೂರು, ಟಿ ಎನ್ ರಾಮಚಂದ್ರರಾವ್,

[illegible] ಮೆಂಬರ್

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ಮಂಗಳವಾರ ಲಕ್ನೋ ಪಟ್ಟಣದಲ್ಲಿ ಬಿಸಿಲ ತಾಪವು 114 ಡಿಗ್ರಿ ಇತ್ತು, ದೂರದಲ್ಲಿ 117 ಡಿಗ್ರಿ ಇಷ್ಟು ಏರಿದು ಬಂದಿದೆ

ವಾಯುವ್ಯ ಸರಹದ್ದಿನಲ್ಲಿರುವ ಪಿಶಾಕ್ ಡಿಸ್ಟ್ರಿಕ್ಟಿನ ತಹಶೀಲ್‍ದಾರ ನಾದ ಖಾನ್ ಬಹದ್ದೂರ್ ನಾಯಬ್ ಖಾನನನ್ನು ಯಾರೋ ಗುಂಡಿನಿಂದ ಹೊಡೆದು ಕೊಂದುಹಾಕಿದರು ಪೋಲೀಸಿನವರು ಪತ್ತೆಹಚ್ಚುತ್ತಿದ್ದಾರೆ

ಲಾಹೋರ್ ಪಟ್ಟಣದಲ್ಲಿ ಮಲೇರಿಯ ಹೊಂದುವವರ ಪೈಕಿ ಅರ್ಧ ಭಾಗಕ್ಕಿಂತಲೂ ಹೆಚ್ಚು ಜನರು 15 ವಯಸ್ಸಿಗೆ ಒಳಪಟ್ಟವರೆಂತಲೂ, ಅವರೆಲ್ಲರೂ ಕ್ಷಯರೋಗದ ಪಾಲಾಗುತ್ತಾರೆಂತಲೂ ಅಲ್ಲಿನ ಹೆಲ್ತ್ ಆಫೀಸರವರು ತಿಳಿಸಿರುತ್ತಾರೆ

ಸಾರಾ ಎಂಬ ಸ್ಥಳದಲ್ಲಿ ಗಂಗಾ ನದಿಯ ಮೇಲೆ ಕಟ್ಟುತ್ತಿರುವ ದೊಡ್ಡ ರೈಲ್ವೆ ಸೇತುವೆಯು ಈ ವರುಷದ ಅಂತ್ಯದಲ್ಲಿ ಪೂರೈಸಿ ರೈಲಿನ ಮತ್ತು ಜನಗಳ ಉಪಯೋಗಕ್ಕೆ ಬಿಡಲಾಗುವುದೆಂದೂ, ಮೊದಲು ಅದನ್ನು ನಮ್ಮ ವೈಸ್‍ರಾಯರವರು ಪ್ರತಿಷ್ಠೆ ಮಾಡುವರೆಂದೂ ಪ್ರಕಟವಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ಮಾರ್ವಾಡಿಗಳು ಸುಮಾರು ಎಂಟು ಲಕ್ಷ ರೂಪಾಯಿ ಕೂಡಿಸಿ ತಮ್ಮ ಮಕ್ಕಳಿಗೆ ವ್ಯಾಪಾರದ ವಿದ್ಯೆಯನ್ನು ಕಲಿಸುವಂಥಾ ಪ್ರತ್ಯೇಕವಾದ ಸ್ಕೂಲು ಏರ್ಪಾಡು ಮಾಡಿಕೊಂಡಿದ್ದಾರೆ ಈ ಶಾಲೆಯನ್ನು ಗವರ್ನರವರು ಸ್ವತಹ ದಯಮಾಡಿ ಪ್ರಾರಂಭಿಸಿರುತ್ತಾರೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಢಕ್ಕಾನಗರದ ಬಳಿ ಸತ್‍ಮಸ್‍ಜಿದ್ ಎಂಬ ಗ್ರಾಮದಲ್ಲಿ ಒಂದು ಜಮೀನಿನ ವಿಷಯವಾಗಿ ಹಿಂದುಗಳಿಗೂ ಮಹಮದೀಯರಿಗೂ ಕಳೆದ ಶನಿವಾರ ಮಾರಾಮಾರಿ ನಡೆಯಿತು ಅದರಲ್ಲಿ ಹದಿನೈದು ಜನರಿಗೆ ಗಾಯಗಳಾಗಿವೆ ಸರ್ಕಾರದವರು 19 ಮುಸಲ್ಮಾನರನ್ನು ಹಿಡಿದು ಮೊಕದ್ದಮೆ ನಡಸುತ್ತಿದ್ದಾರೆ

ಟಿಬೆಟ್ ದೇಶದಲ್ಲಿ ಸಂಚಾರಮಾಡಿ ಅಲ್ಲಿನ ವಿದ್ಯಮಾನಗಳನ್ನು ತಿಳಿದು ಬಂದು ಪ್ರಪಂಚಕ್ಕೆಲ್ಲಾ ತಿಳಿಯಪಡಿಸುವುದರಲ್ಲಿ ಶ್ರಮವನ್ನು ವಹಿಸಿದ ಮಿ ಶಿಂಗ್ ಎಂಬಾತನು ಈಗ ತುಂಬಾ ದರಿದ್ರಾವಸ್ಥೆಯಲ್ಲಿರುವುದನ್ನು ನೋಡಿ ಇಂಡಿಯಾ ಗವರ್ನಮೆಂಟಿನವರು ಆತನಿಗೆ 1,000 ರೂಪಾಯಿ ಬಹುಮಾನ ಕೊಡುವಂತೆ ಅಪ್ಪಣೆಕೊಟ್ಟಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ 15 ವಯಸ್ಸಿನೊಳಗಿರುವ ಹುಡುಗರು ಅಪರಾಧಗಳನ್ನು ಮಾಡಿದರೆ ಅಂಥವರನ್ನು ದಯಾರ್ಹರನ್ನಾಗಿ ಮಾಡುವುದಕ್ಕಾಗಿಯೇ ಸರ್ಕಾರದವರು ಪ್ರತ್ಯೇಕವಾದ ಒಂದು ಮ್ಯಾಜಿಸ್ಟ್ರೇಟ್ ಕೋರ್ಟನ್ನು ಏರ್ಪಾಡುಮಾಡುವುದರಲ್ಲಿದ್ದಾರೆ ಹುಡುಗರು ಸತ್ಪ್ರಜೆಗಳಾಗುವಂತೆ ಮಾಡಬೇಕೆನ್ನುವುದೇ ಈ ಕೋರ್ಟಿನ ಮುಖ್ಯ ಉದ್ದೇಶವೆಂದು ತಿಳಿಸಿರುವರು

ರಾಜಾಬಜಾರ್ ಸಿಡಿಮದ್ದಿನ ಮೊಕದ್ದಮೆಯಲ್ಲಿ ಜಡ್ಜಿಯವರು ಕಳೆದ ವಾರ ತೀರ್ಮಾನವನ್ನು ಹೇಳಿದರು. ಅಪರಾಧಿಗಳ ಪೈಕಿ ಖಗೇಂದ್ರನಾಥ ಚಾಧುರಿ ಎಂಬವನನ್ನು ಖುಲಾಸೆ ಮಾಡಿದರು. ಅಮೃತ ಲಾಲನಿಗೆ 15 ವರುಷವೂ, ದಿನೇಶಚಂದ್ರ, ಚಂದ್ರಸರ್ಕಾರ್, ಶಾರದಾಚರಣ, ಕಲಿಪಾದ, ಈ ನಾಲ್ವರಿಗೂ ತಲಾ 10 ವರುಷವೂ ದ್ವೀಪಾಂತರ ಸಜವೂ ವಿಧಿಸಲ್ಪಟ್ಟಿತು

ಲಾರ್ಡ್ ಮಾರ್ಲೆಯವರಿಗೆ ಹಿಂದುಸ್ಥಾನದ ಮೇಲಿರುವ ಪ್ರೀತಿಗೂ, ಅವರು ರಾಜ್ಯಭಾರಕ್ರಮದಲ್ಲಿ ಮಾಡಿರುವ ತಿದ್ದುಪಾಟುಗಳಿಗೂ ಈ ರಾಷ್ಟ್ರದ ಕೆಲವು ಜನರು ಮೆಚ್ಚಿ ಅವರ ಭಾವಚಿತ್ರವನ್ನು ತಯಾರುಮಾಡಿಸಿ ಅವರಿಗೆ ಒಪ್ಪಿಸಬೇಕೆಂದು ನಿಶ್ಚಯಿಸಿರುತ್ತಾರೆ ಈ ಚಿತ್ರಪಟಕ್ಕೆ ಸುಮಾರು 22,500 ರೂಪಾಯಿ ಖರ್ಚಾಗುವುದೆಂದು ತಿಳಿದುಬಂದಿದೆ

ಮದರಾಸ್ ಪಟ್ಟಣಕ್ಕೆ ಸೇರಿದ ತಿರುವಲಿಕ್ಕೇಣಿ ಹೈಸ್ಕೂಲ್ ವಿದ್ಯಾರ್ಥಿಯಾದ ಪಿ ವೆಂಕಟಕೃಷ್ಣುಡು ಎಂಬ ಹುಡುಗನಿಗೆ ಕಳೆದ ವಾರ ಅಲ್ಲಿನ ಪೋಸ್ಟ್ ಆಫೀಸಿನ ನೆಲದ ಮೇಲೆ ಸುಮಾರು 200 ರೂಪಾಯಿನ ಭಂಗಾರದ ಒಡವೆ ಸಿಕ್ಕಿತು ಅವನು ಅದನ್ನು ತೆಗೆದುಕೊಂಡು ಹೋಗಿ ಮಾಲೀಕರಿಗೆ ವಾಪತಿ ಮಾಡಬೇಕೆಂದು ಹೇಳಿ ಪೋಸ್ಟ್ ಮಾಸ್ಟರ ಮೂಲಕ ಒಬ್ಬ ಪೋಲೀಸಿನವನಿಗೆ ಕೊಟ್ಟುಬಿಟ್ಟನು

ಕಳೆದ ಸೋಮವಾರ ರಾತ್ರಿ ಸುಮಾರು 9 ಗಂಟೆ ಹೊತ್ತಿನಲ್ಲಿ ಮದರಾಸ್ ಪಟ್ಟಣ ಪೊಫಾಂಸ್ ಬ್ರಾಡ್‍ವೇ ಎಂಬ ಬೀದಿಯೊಳಗೆ ಶಿವಜಕಂಪನಿಯ ಅಂಗಡಿಗೂ, ವಿನಾಗ್‍ಮಹಮದ್ ಎಂಬ ವರ್ತಕನ ಅಂಗಡಿಗೂ ಬೆಂಕಿಬಿದ್ದು ಸುಮಾರು 50,000 ರೂಪಾಯಿನ ವ್ಯಾಪಾರಸರಕುಗಳು ಸುಟ್ಟು ನಷ್ಟವಾದವು ಆ ಅಂಗಡಿಗಳ ಮಾಲೀಕರು 16 ಮತ್ತು 60 ಸಾವಿರ ರೂಪಾಯಿನ ಸರಕು ನಷ್ಟವಾಯಿತೆಂದು ಹೇಳುತ್ತಾರೆ

ಹಿಂದುಸ್ಥಾನದಲ್ಲಿ ದೇಶೀಯ ಸಿಗರೆಟ್ಟುಗಳ ಬೆಳೆಯು ದಿನೇ ದಿನೇ ಬಹಳವಾಗಿ ಹೆಚ್ಚುತ್ತಿದೆ ದೇಶೀಯ ಕಾರ್ಖಾನೆಗಳಲ್ಲಿ ಎಷ್ಟು ಸಿಗರೆಟ್ಟುಗಳು ತಯಾರಾಗುವವೋ ಗೊತ್ತುಮಾಡಿ ಹೇಳುವುದು ಬಹಳ ಕಷ್ಟವಾಗಿದೆ ಆದರೆ ಉತ್ತರ ದೇಶಕ್ಕೆ ಸೇರಿದ ಒಂದು ರೈಲ್ ಕಂಪನಿಯವರು ಕಳೆದ ವರುಷ 5,100 ಟನ್‍ಗಳ ಹೊಗೆಸೊಪ್ಪು ಅಂದರೆ 100 ಕೋಟಿ ಸಿಗರೆಟ್ಟುಗಳನ್ನು ಸಾಗಿಸಿರುತ್ತಾರೆಂದು ತಿಳಿಯುವುದು

ಕಳೆದ ತಾ 13 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 1,171 ಜನರಿಗೆ ಪ್ಲೇಗ್ ಉಪದ್ರ ತಗಲಿತು, 1,110 ಜನರು ಆ ರೋಗದಲ್ಲಿ ಸತ್ತುಹೋದರು ಈ ಮರಣ ಸಂಖ್ಯೆಯು ಹಂಚಿಕೆ ಹ್ಯಾಗಂದರೆ—ಬೊಂಬಾಯಿ 109, ಮದರಾಸ್ 2, ಬಂಗಾಳ 117, ಬೀಹಾರ್ ಮತ್ತು ಒರಿಸ್ಸಾ 116, ಸಂಯುಕ್ತ ಆಧಿಪತ್ಯಗಳು 116, ಪಂಜಾಬ್ 467, ಬರ್ಮಾ 63, ಮೈಸೂರು 11, ಈ ರೀತಿ ಮರಣಗಳಾದವು

ಮದರಾಸ್ ಗವರ್ನಮೆಂಟಿನವರು ದಕ್ಷಿಣ ದೇಶದಲ್ಲಿ ಅನೇಕ ದೇಶೀಯ ವಿದ್ಯಾರ್ಥಿಗಳು ಜಲಬಾಧೆ ಉಪದ್ರದಲ್ಲಿ (ಮೂತ್ರಬಾಧ್ಯ) ಚಿಕ್ಕವಯಸ್ಸಿನೊಳಗೆ ಅನಾರೋಗ್ಯ ಹೊಂದುವುದಕ್ಕೆ ಕಾರಣವೇನೆಂಬುವನ್ನು ತನಿಖೆ ಮಾಡಿಸುತ್ತಿದ್ದಾರೆ ಈ ಕೆಲಸವನ್ನು ಸರ್ಕಾರದವರು ಮಿ. ಪಾಟರ್‍ಸನ್ ಎಂಬ ಡಾಕ್ಟರಿಂದ ಪರೀಕ್ಷೆಮಾಡಿಸುತ್ತಾರೆಂದೂ, ಈಗ ಈ ಡಾಕ್ಟರವರು ಸೇವೆಯಲ್ಲಿ ಈ ಸಂಕ್ಷೇಪ ಪೂರ್ವೋತ್ತರವನ್ನು ಪರಿಷ್ಕಾರವಾಗಿ ತಿಳಿದುಬರಬೇಕೆಂದು ಸಾಧಕ ಪಡುತ್ತಿದ್ದಾರೆಂದೂ ಪ್ರಕಟವಾಗಿದೆ

ಕಲ್ಕತ್ತಾ ಪಟ್ಟಣದ ಬಂದೀಖಾನೆಯಲ್ಲಿ ಸುಜಾಕ್ ಎಂಬ ಮಹಮದೀಯ ಖೈದಿಯು ಮಿ ಓಲ್ ಎಂಬ ಜೈಲರನ್ನು ಹಿಂದಿನಿಂದ ಬೇಗ ಕಬ್ಬಿಣದ ಸಟ್ಟುಗದಿಂದ ತಲೆಯ ಮೇಲೆ ಹೊಡೆದದ್ದಕ್ಕೆ ಜೈಲರನ ಕಣ್ಣಿಗೆ ಪೆಟ್ಟು ಬಿದ್ದು ಎರಡು ಮೂರು ವಾರ ಚಿಕಿತ್ಸೆ ಮಾಡಿಕೊಳ್ಳಬೇಕಾಯಿತು ಆ ಖೈದಿಯನ್ನು ಹಿಡಿದು ವಿಚಾರಿಸಿದಾಗ ಅವನು ಬಂದೀಖಾನೆಗೆ ಒಳ್ಳೇ ಆಹಾರ ಕೊಡಲಿಲ್ಲವೆಂದೂ ಕಲ್ಲುಬೆರಸಿದ ಅನ್ನವನ್ನು ಹಾಕುತ್ತಿದ್ದರೆಂದೂ ದೂರಿದನು ಮ್ಯಾಜಿಸ್ಟ್ರೇಟರು ಆ ಖೈದಿಗೆ ಎರಡು ವರುಷ ಕಠಿಣಸಜಾ ವಿಧಿಸಿದರು.

ಕಲ್ಕತ್ತೆಯ ವರ್ತಕರಲ್ಲಿ ಕೆಲವರು ಅಲ್ಲಿನ ಸುಂಕದ ಅಧಿಕಾರಿಗಳಿಗೆ ತಿಳಿಯದಂತೆ ನವಿಲು ಪಕ್ಷಿಯ ಗರಿಗಳನ್ನು ಯೂರೋಪಿಗೆ ರಫ್ತು ಮಾಡಿ ವಿಶೇಷ ಲಾಭ ಪಡೆಯುತ್ತಿದ್ದರು ಕಳೆದ ವಾರ ಸುಂಕದವರು ಅನುಮಾನದ ಮೇಲೆ 14 ಭಾರಿ ಪೆಟ್ಟಿಗೆಗಳನ್ನು ಒಡೆದು ನೋಡಿದರು ಅವುಗಳಲ್ಲೆಲ್ಲಾ ಗರಿಗಳೇ ತುಂಬಿದ್ದವು ಒಬ್ಬ ವರ್ತಕನು ಕಳೆದ ಎರಡು ವರ್ಷಗಳಿಂದ ಇದೇ ವ್ಯಾಪಾರ ಮಾಡಿ ಐದು ಲಕ್ಷ ರೂಪಾಯಿ ಸಂಪಾದಿಸಿರುತ್ತಾನೆ ಇದರಿಂದ ಗರಿಗಳ ವ್ಯಾಪಾರವು ಎಷ್ಟು ಲಾಭಕರವಾದದ್ದೆಂದು ತಿಳಿದು ಬರುತ್ತದೆ

ಕಾಶ್ಮೀರ ಸಂಸ್ಥಾನದ ರಾಜಧಾನಿಯಾದ ಶ್ರೀನಗರಪಟ್ಟಣದಲ್ಲಿ ಮಹಾರಾಜರವರು 65,000 ರೂಪಾಯಿ ವೆಚ್ಚದಿಂದ ಒಂದು ಕಸಬುಗಾರಿ ಪಾಠಶಾಲೆಯನ್ನು ಕಟ್ಟಿಸಿ, 12,000 ರೂಪಾಯಿನ ಸಾಮಾನುಗಳನ್ನು ಸಿದ್ಧಪಡಿಸಿ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದನ್ನು ನೋಡಿ ಮಹಾರಾಜರವರು ಈಚೆಗೆ 48,000 ರೂಪಾಯಿ ಸ್ಯಾಂಕ್ಷನ್ ಮಾಡಿ ಕಟ್ಟಡವನ್ನು ಬದಲಾವಣೆಮಾಡಬೇಕೆಂದು ತಿಳಿಸಿದ್ದಾರೆ ಬ್ರಿಟಿಷ್ ರೆಸಿಡೆಂಟರಾದ ಮಿ ಎಚ್ ವಿ ಕಾಬ್‍ರವರು ಈ ಕಟ್ಟಡವನ್ನು ಪ್ರತಿಷ್ಠೆ ಮಾಡಿ ನಾಲ್ಕು ವಾರಗಳಾದವು

ಷೋಲಾಪುರ ಜಿಲ್ಲೆಗೆ ಸೇರಿದ ಮಾದ್ರಿ ಎಂಬ ಊರಿನಲ್ಲಿ ಮಾದಪ್ಪ ಶೆಟ್ಟಿಯೆಂಬವನಿಗೂ ಇನ್ನೊಬ್ಬನಿಗೂ ಅವನು ತನ್ನ ಮೇಲೆ ಸಾಕ್ಷಿ ಹೇಳಿದನೆಂಬ ಕಾರಣಕ್ಕಾಗಿ ದ್ವೇಷಹುಟ್ಟಿತು ಈ ದ್ವೇಷಕ್ಕಾಗಿ ಮಾದಪ್ಪನು ಆ ತನ್ನ ದ್ವೇಷಿಗಳ ಮನೆಗಳಿಗೆ ಹೋಗಿ ಅವರ ನಾಲ್ಕು ಮಂದಿ ಸಣ್ಣ ಮಕ್ಕಳನ್ನು ಕೊಡಲಿಯಿಂದ ಹೊಡೆದು ಕೊಂದುಬಿಟ್ಟನು ಗ್ರಾಮದಲ್ಲಿ ಈ ಕೊಲೆಗಳು ತುಂಬಾ ಗಲಭೆಯನ್ನುಂಟುಮಾಡಿದಾಗ ಜನರು ಸೇರಿ ಆ ದುಷ್ಟನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು ಸೆಷನ್ಸ್ ಜಡ್ಜರು ಈಗ ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡುತ್ತಿದ್ದಾರೆ

ಮುಜಫರ್‍ಪೂರದಲ್ಲಿ ಹಾಲು ಮಾರುವವರು ಕಳೆದ ವರ್ಷ ಒಂದು ಸಂಘವನ್ನು ಏರ್ಪಡಿಸಿದರು ಇದರಿಂದ ತಮ್ಮಲ್ಲಿ ಯಾವ ವ್ಯಾಜ್ಯ ಹುಟ್ಟಿದರೂ ಸರ್ಕಾರಕ್ಕೆ ತಿಳಿಸದೆ ತಾವೇ ಇತ್ಯರ್ಥ ಮಾಡಿಕೊಳ್ಳಬೇಕೆಂದೂ ಗೊತ್ತುಮಾಡಿಕೊಂಡರು. ಇವರ ಪೈಕಿ ಒಬ್ಬನು ಈ ಕಟ್ಟನ್ನು ಮೀರಿ ಮತ್ತೊಬ್ಬನ ಮೇಲೆ ಪೋಲೀಸಿನಲ್ಲಿ ಫಿರ್ಯಾದು ಮಾಡಿದ್ದರಿಂದ ಹಾಲಿನವರಲ್ಲಿ ಗೊತ್ತುಮಾಡಲ್ಪಟ್ಟ ಪಂಚಾಯಿತರು ಅವನಿಗೆ 500 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು, ಈ ವಿಚಾರವು ಸರ್ಕಾರದವರಿಗೆ ತಿಳಿದುಬಂದಾಗ ಅವರು ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ

ಕಥ್ಯವಾಡದ ಕೆಲವು ಭಾಗಗಳಲ್ಲಿ ಒಂದೂವರೆ ವರುಷದಿಂದಲೂ ಆಗಾಗ್ಗೆ ಕೊಳ್ಳೆ ಹೊಡೆಯುತ್ತಾ ಇದ್ದ ಕಳ್ಳರ ಗುಂಪನ್ನು ಜಾಮ್‍ನಗರದ ಪೋಲೀಸಿನವರು ಬಹಳ ಶ್ರಮಪಟ್ಟು ಹಿಡಿದಿರುತ್ತಾರೆ ಇವರ ಮುಖಂಡರಾದ ಭೂಟ, ಕಾಳ ಎಂಬವರು ಅನೇಕಾವರ್ತಿ ಶಿಕ್ಷೆಯನ್ನು ಅನುಭವಿಸಿರುವ ಈ ಕಳ್ಳರ ಪೈಕಿ ಒಬ್ಬನಾದ ತೀಡನೆಂಬವನು ಸ್ವಲ್ಪ ದಿನದ ಹಿಂದೆ ಬಂದೀಖಾನೆಯಿಂದ ತಪ್ಪಿಸಿಕೊಂಡು ಮಾರ್ಗದಲ್ಲಿ ಸಿಕ್ಕಿದ ಒಬ್ಬ ಹುಡುಗನನ್ನು ಅಪಹರಿಸಿಕೊಂಡು ಹೋದನು ಕುದುರೆಯ ಸವಾರರು ಅವನನ್ನು ಹುಡುಕಿಕೊಂಡು ಹೋಗಿ ಗುಂಡಿನಿಂದ ಹೊಡೆದು ಕೊಂದುಹಾಕಿ ಆ ಹುಡುಗನನ್ನು ಕರೆದು ತಂದರು.

ಗ್ವಾಲಿಯರ್ ಸಂಸ್ಥಾನದಲ್ಲಿ ಮಣ್ಣಿನ ಪಾತ್ರೆಪದಾರ್ಥಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಸಿಂಧಿಯಾ ಮಹಾರಾಜರವರು ಉತ್ಕೃಷ್ಟವಾದ ಸ್ಥಿತಿಗೆ ತಂದಿಡಬೇಕೆಂದು ಕುತೂಹಲಪಟ್ಟಿದ್ದಾರೆ ಅರೆಗಾಜಿನ ಪಾತ್ರೆಗಳೂ, ಹೆಂಚುಗಳೂ, ಚದರ ಬಿಲ್ಲೆಗಳೂ ಬಹಳ ನಾಜೂಕಾಗಿ ತಯಾರಾಗುತ್ತಿವೆ ಈ ಕಾರ್ಖಾನೆಯನ್ನು ಇನ್ನೂ ದೊಡ್ಡದುಮಾಡಿ, ಹೆಚ್ಚಾಗಿ ಪದಾರ್ಥಗಳು ತಯಾರಾಗುವಂತೆ ಮಾಡಿಸಬೇಕೆಂದು ಮಹಾರಾಜರವರು ಉತ್ಸಾಹವುಳ್ಳವರಾಗಿದ್ದಾರೆ. ಇದಕ್ಕೆ ಬೇಕಾಗುವ ಹೊಸ ತರಹಾ ಯಂತ್ರ ಮುಂತಾದವುಗಳನ್ನು ಇಂಗ್ಲೆಂಡಿನಿಂದ ತರಿಸುವುದಕ್ಕೆ ಏರ್ಪಾಡಾಗಿ, ಅವು ಜಹಜಿನ ಮೇಲೆ ಬರುತ್ತಿವೆ ಎಂದೂ ತಿಳಿದು ಬರುತ್ತದೆ

ಬಂಗಾಳಾದಲ್ಲಿ ವಿಷ್ಣುಚರಣದಾಸನೆಂಬ ವೈದ್ಯನು ತನ್ನ ಮಗಳು ದಿವಪ್ರಭಾದೇವಿ ಎಂಬವಳಿಗೆ ವಿವಾಹ ಮಾಡಬೇಕೆಂದು ಪ್ರಾರಂಭ ಮಾಡಿದನು ಆದರೆ ಅವನ ಪ್ರಯತ್ನವು ಸಫಲವಾಗಲಿಲ್ಲ ಮತ್ತೊಂದು ಸಲ ಗೊತ್ತುಮಾಡಲ್ಪಟ್ಟ ವರನು ವಿದ್ಯಾವಂತನೂ ಐಶ್ವರ್ಯವಂತನೂ ಅಲ್ಲದ್ದರಿಂದ ದಿವಪ್ರಭಾದೇವಿಯು ಅವನನ್ನು ಮದುವೆಯಾಗಲು ಇಷ್ಟಪಡಲಿಲ್ಲ ಕಳೆದ ಭಾನುವಾರ ಆ ಹುಡುಗಿಯು ತನ್ನ ಬಟ್ಟೆಗೆಲ್ಲಾ ಸೀಮೆಯೆಣ್ಣೆಯನ್ನು ಸುರಿದುಕೊಂಡು ಬೆಂಕಿ ಹಚ್ಚಿದಳು ಆ ಉರಿಯನ್ನು ಕಂಡು ಎಲ್ಲರೂ ಓಡಿಹೋಗಿ ಬಹಳ ಪ್ರಯತ್ನಪಟ್ಟು ಉರಿಯನ್ನು ಆರಿಸಿದರು ಆದರೂ ಆ ಹುಡುಗಿಯು ಮೃತಪಟ್ಟಿದ್ದಳು

ಹೌರಾಪಟ್ಟಣದ ಪೋಲೀಸ್ ಕೋರ್ಟಿನಲ್ಲಿ ಜಡ್ಜಿಯವರು ಲಾಲ್ ಮಹಮ್ಮದ್ ಎಂಬ ಅಪರಾಧಿಯನ್ನು ವಿಚಾರಣೆ ಮಾಡಿ ಒಂದು ವರುಷ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು ತೀರ್ಮಾನವನ್ನು ಓದಿ ಹೇಳಿದ ಮೇಲೆ ಅಪರಾಧಿಯು ಜಡ್ಜಿಯವರ ಮೇಲೆ ನುಗ್ಗುವುದಕ್ಕೆ ಪ್ರಯತ್ನಿಸಿದನು ಕಟಕಟೆಯು ಎತ್ತರವಾಗಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ತಕ್ಷಣವೇ ಅವನು ಮೇಜಿನ ಮೇಲಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಜಡ್ಜಿಯವರಿಗೆ ಗುರಿಯಿಟ್ಟು ಹೊಡೆದನು ಅವರು ಕೈಯನ್ನು ಅಡ್ಡವಾಗಿ ಹಿಡಿದದ್ದರಿಂದ ಅವರಿಗೆ ಯಾವ ವಿಧವಾದ ಅಪಾಯವೂ ಆಗಲಿಲ್ಲ ಮ್ಯಾಜಿಸ್ಟ್ರೇಟರು ಈ ತಪ್ಪಿತಕ್ಕಾಗಿ ಅವನಿಗೆ ಒಂದು ವರುಷ ಕಠಿಣ ಸಜಾ ವಿಧಿಸಿದರು.

ಹಿಂದುಸ್ಥಾನದ ವೈಸ್‍ರಾಯಿ ಪದವಿಯನ್ನು ವಹಿಸಿರುವ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಅಧಿಕಾರದ ಅವಧಿಯು ಪೂರೈಸುತ್ತಾ ಬಂದಿದೆ ಇವರ ಪ್ರಭುತ್ವದಲ್ಲಿ ಈ ರಾಷ್ಟ್ರದ ಪ್ರಜೆಗಳಿಗೂ ಸಾಮಂತ ರಾಜರುಗಳಿಗೂ ಅನೇಕ ಹಿತಕರವಾದ ತಿದ್ದುಪಾಟುಗಳು ನಡೆದಿರುವುದನ್ನೂ, ಪ್ರಜೆಗಳ ಏಳಿಗೆಯ ವಿಷಯದಲ್ಲಿ ಆ ಪ್ರಭುಗಳಿಗೆ ಇರುವ ಪ್ರೀತಿ ವಿಶ್ವಾಸಗಳನ್ನೂ ನೋಡಿ, ಅವರಿಗೆ ಇನ್ನೂ ಎರಡು ವರುಷದ ತನಕ ಆ ಪದವಿಯನ್ನು ತಪ್ಪಿಸದೆ ಅವರನ್ನೇ ಹಿಂದುಸ್ಥಾನದ ವೈಸ್‍ರಾಯಿ ಪದವಿಯಲ್ಲಿ ಇಟ್ಟಿರಬೇಕೆಂದು ಉತ್ತರ ದೇಶದ ಹಲವು ಪಟ್ಟಣಗಳಲ್ಲಿ ಮುಖಂಡರಾದ ಪ್ರಜೆಗಳು ಸಭೆಗಳನ್ನು ನಡಿಸಿ ತೀರ್ಮಾನಮಾಡುತ್ತಿದ್ದಾರೆ ಉತ್ತರ ದೇಶದ ಅನೇಕ ವರ್ತಮಾನ ಪತ್ರಿಕೆಗಳು ಲಾರ್ಡ್ ಹಾರ್ಡಿಂಗ್ ರವರೇ ಇನ್ನು ಕೆಲವು ಕಾಲ ವೈಸ್‍ರಾಯಿ ಆಗಿರಬೇಕೆಂದು ಕೋರಿ ಚಾತ್ರಗಳನ್ನು ಪ್ರಕಟಿಸುತ್ತಿರುವವು

ಬಂಗಾಳ ಅಧಿಪತ್ಯಕ್ಕೆ ಸೇರಿದ ಢಕ್ಕಾ ನಗರದಲ್ಲಿ ಸೆಷನ್ಸ್ ಕೋರ್ಟಿನೊಳಗೆ ಒಂದು ಕೊಲೆಯ ಮೊಕದ್ದಮೆ ದರ್ಯಾಪ್ತಿ ಆಯಿತು ಜೂರಿಯ ಪಂಚಾಯಿತರಲ್ಲಿ ನಾಲ್ವರು ಅಪರಾಧಿ ತಪ್ಪಿತಸ್ಥನೆಂದೂ, ಏಳು ಮಂದಿ ಅವನ ಮೇಲೆ ರುಜುವಾತಾಗಲಿಲ್ಲವೆಂದೂ ಹೇಳಿದರು ಸೆಷನ್ಸ್ ಜಡ್ಜರು ಆ ಏಳು ಮಂದಿಯ ಅಭಿಮತವನ್ನು ಒಪ್ಪದೆ ಈ ಮೊಕದ್ದಮೆಯನ್ನು ಹ್ಯಾಗೆ ತೀರ್ಮಾನ ಮಾಡಬೇಕೆಂದು ಕಲ್ಕತ್ತಾ ಹೈ ಕೋರ್ಟಿಗೆ ಬರೆದು ಕೇಳಿದರು ಹೈ ಕೋರ್ಟಿನ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ವಿದ್ಯಮಾನಗಳನ್ನು ರೆಕಾರ್ಡಿನಿಂದ ತಿಳಿದುಕೊಂಡು ಅಪರಾಧಿಯು ಕೊಲೆಮಾಡಿದ್ದು ರುಜುವಾತಾಗಿದೆ ಎಂದೂ, ಆದರೆ ಸೆಷನ್ಸ್‍ಕೋರ್ಟಿನ ಜಡ್ಜಿಯವರು ಅವನ ಮೇಲೆ ಅಪರಾಧ ರುಜುವಾತಾಗಿಲ್ಲವೆಂಬ ಅಭಿಪ್ರಾಯಪಟ್ಟದ್ದನ್ನು ನೋಡಿ ಅವನಿಗೆ ಫಾಸೀ ಸಜ ವಿಧಿಸುವುದಕ್ಕೆ ಹಿಂಜರಿಯುತ್ತೇವೆಂದೂ ಹೇಳಿ, ಅವನಿಗೆ ಜೀವಾಂತ ಶಿಕ್ಷೆಯನ್ನು ವಿಧಿಸಿರುತ್ತಾರೆ

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಿಲ್‍ಹಟ್ ಪಟ್ಟಣದಲ್ಲಿ ಓಜಮುದ್ದೀನ್ ಮುಲ್ಲಾ ಎಂಬ ಮಹಮದೀಯನು ಆ ಪ್ರಾಂತ್ಯದಲ್ಲೆಲ್ಲಾ ಸಂಚಾರಮಾಡುತ್ತಾ ಪ್ರಜೆಗಳನ್ನು ಕೂಡಿಸಿ ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿ ಗವರ್ನಮೆಂಟಿನವರ ವಿಷಯದಲ್ಲಿ ಪ್ರಜೆಗಳ ಭಕ್ತಿಪ್ರೀತಿಗಳನ್ನು ಕೆಡಿಸುತ್ತಾ ಇರುವನೆಂದು ಸರ್ಕಾರದವರು ಆತನನ್ನು ಹಿಡಿದು ಅವನ ಮೇಲೆ ಮೊಕದ್ದಮೆ ಮಾಡಿದ್ದಾರೆ ಅವನು ಜನರಿಗೆ ಹೇಳುವ ನಾಲ್ಕು ವಿಷಯಗಳೇನೆಂದರೆ—(1) ಹಿಂದುಗಳನ್ನೆಲ್ಲಾ ಮುಸಲ್ಮಾನ್ ಮತಕ್ಕೆ ತಿರುಗಿಸಿ, (2) ಗವರ್ನ್‍ಮೆಂಟಿಗೆ ಯಾವ ಕಂದಾಯಕಪ್ಪವನ್ನೂ ಪಾವತಿಮಾಡಬೇಡಿ, (3) ಯಾವ ಫರಂಗಿಯವನನ್ನು ಕಂಡರೂ ಸಲಾಂ ಮಾಡಬೇಡಿ, (4) ಗವರ್ನಮೆಂಟಿಗೆ ಎನೆಂದು ಬಿದ್ದು ಕಡಿವಾಡಿ ಡಾಕ್ಟರು ಈ ಮುಲ್ಲಾನ ತಲೆ ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸಿನೋಡಿ, ಅವನಿಗೆ ಬುದ್ಧಿ ಸರಿಯಾಗಿದೆ ಎಂದು ಅಭಿಪ್ರಾಯಪಟ್ಟದ್ದರಿಂದ ಕೋರ್ಟಿನಲ್ಲಿ ಅವನ ಮೇಲೆ ಮೊಕದ್ದಮೆ ಮಾಡಿದ್ದಾರೆ ವಿಚಾರಣೆ ಈ ದಿನದಿಂದ ಪ್ರಾರಂಭವಾಗಿದೆ

ಬೊಂಬಾಯಿಪಟ್ಟಣದಲ್ಲಿ ಹತ್ತಿಯ ಗಟ್ಟಿಗಳು ಅಡಕಿರುವ ಭಾರೀ ಉಗ್ರಾಣಗಳಿಗೆ ಈ ವರುಷ ಬೆಂಕಿಬಿದ್ದು ಅನೇಕ ಲಕ್ಷ ರೂಪಾಯಿನ ಹತ್ತಿ ನಷ್ಟವಾದ್ದರಿಂದ ಈ ಬೆಂಕಿ ಬೀಳಲು ಕಾರಣವೇನೆಂದು ಸರ್ಕಾರದವರು ತನಿಖೆಮಾಡಿಸುತ್ತಿದ್ದಾರೆ ಹತ್ತಿಯ ಧಾರಣೆಯು ಕೆಲವು ವಾರಗಳ ಹಿಂದೆ ಮಣಕ್ಕೆ ? ರೂಪಾಯಿ ಇದ್ದದ್ದು ಈಗ 21 ರೂಪಾಯಿ ಆಗಿದೆ ಕೆಲವು ಸಂದರ್ಭಗಳಲ್ಲಿ ಕಾರ್ಖಾನೆಗಳ ಮಾಲೀಕರೂ ಸರ್ಕಾರದವರೂ ಬೆಂಕಿಹಾಕಿದವರನ್ನು ಪತ್ತೆಮಾಡಿಕೊಡುವವರಿಗೆ ಬಹುಮಾನಕೊಡುವುದಾಗಿ ಇಶ್ತಿಹಾರು ಹಾಕಿಸಿದರು 10-11 ವಯ

ಸ್ಕಿನ ಮೂರು ಹುಡುಗರು ಹಣವನ್ನು ಸಂಪಾದಿಸಬೇಕೆಂತಲೋ, ಅಥವಾ ತಮಾಷೆಗಾಗಿಯೋ ಕಳೆದ ಭಾನುವಾರ ಒಂದು ಸಿಡಂಗಿನ ಹತ್ತಿ ಮೂಟೆಗಳಿಗೆ ಬೆಂಕಿ ಹಾಕಿ ಪೋಲೀಸಿಗೆ ಹೋಗಿ ತಿಳಿಸಿದರು ತನಿಖೆಯಲ್ಲಿ ಆ ಹುಡುಗರೇ ಬೆಂಕಿಹಾಕಿದವರೆಂದು ಗೊತ್ತಾಯಿತು ಮ್ಯಾಜಿಸ್ಟ್ರೇಟರು ಆ ಹುಡುಗರ ತಂದೆತಾಯಿಗಳಿಂದ ಜಾಮೀನು ಪತ್ರಗಳನ್ನು ಬರಸಿಕೊಂಡು, ಅವರನ್ನು ಶಿಕ್ಷಿಸದೆ ಬಿಟ್ಟು ಬಿಟ್ಟರು ಇವರು ಹಾಕಿದ ಬೆಂಕಿಯಿಂದ ಸುಮಾರು 90 ರೂಪಾಯಿನ ಹತ್ತಿ ಮಾತ್ರ ನಷ್ಟವಾಯಿತು

* * *

ಹಿಂದುಸ್ಥಾನದಿಂದ ಕಳೆದ 1912 13 ನೇ ಸಾಲಿನಲ್ಲಿ ಮಕ್ಕಾ ಮದೀನಾಗಳಿಗೆ ಯಾತ್ರೆ ಹೋಗುವವರ ವಿಷಯದಲ್ಲಿ ಜಿಡ್ಡಾ ನಗರದಲ್ಲಿರುವ ರಾಯಭಾರಿಯಾದ ಡಾಕ್ಟರ್ ಅಬ್ದುಲ್ ರಹಮಾನ್ ರವರು ತಿಳಿಸುವುದೇನೆಂದರೆ—ಹಿಂದುಸ್ಥಾನದಿಂದಲೂ ಅಫ್ಘಾನಿಸ್ಥಾನದಿಂದಲೂ 13,401 ಮಹಮದಿಯರು ಯಾತ್ರೆಗಾಗಿ ಬಂದರು ಈ ಪೈಕಿ ಸಾವಿರಾರು ಯಾತ್ರಿಕರು ಕಟ್ಟ ನೀರು ಕುಡಿದು ಒಳ್ಳೇ ಆಹಾರವಿಲ್ಲದೆ ಸತ್ತುಹೋದರು ಹಿಂತಿರುಗಿ ಪ್ರಯಾಣಮಾಡಲು ಹಡಗಿನ ಛಾರ್ಜು ಕೊಡಲಾರದೆ ಸಾವಿರಾರು ಜನರು ಕಷ್ಟಪಟ್ಟರು ಇಂಡಿಯಾ ಗವರ್ನಮೆಂಟಿನವರೂ, ಹಿಂದುಸ್ಥಾನದ ದೊಡ್ಡಮನುಷ್ಯರೂ ದ್ರವ್ಯಸಹಾಯ ಮಾಡಿದ್ದರಿಂದ 1,827 ಜನರಿಗೆ ಟಿಕೇಟುಗಳನ್ನು ಕೊಂಡು ಕೊಟ್ಟದ್ದಾಯಿತು ಸರ್ಕಾರದವರು 500 ಜನರಿಗೆ ಟಿಕೇಟುಗಳನ್ನು ಧರ್ಮಾರ್ಥವಾಗಿ ಕೊಡಿಸಿದರು ಆದಕಾರಣ ಯಾತ್ರೆ ಬರುವಂಥಾ ಮಹಮದಿಯರೆಲ್ಲಾ ಹಿಂತಿರುಗಿ ಹೋಗುವ ದಕ್ಕೂ ಟಿಕೇಟುಗಳನ್ನು ಹಿಂದುಸ್ಥಾನದಲ್ಲೇ ಕೊಂಡಿಟ್ಟು ತೋರಿಸಿದಲ್ಲದೆ ಯಾರನ್ನೂ ಯಾತ್ರೆಗೆ ಕಳುಹಿಸಬಾರದೆಂದು ಪ್ರಕಟಿಸಿದ್ದಾರೆ ಕಳೆದ ವಾರ ಬೊಂಬಾಯಿನಿಂದ ಸುಮಾರು 1,629 ಮಹಮದಿಯರು ಮೂರು ಜಹಜುಗಳನ್ನು ಹತ್ತಿ ಮಕ್ಕಾಕ್ಕೆ ಪ್ರಯಾಣಮಾಡಿದರು ಈ ಜಹಜುಗಳಲ್ಲಿ ಅವರಿಗೆ ಬೇಕಾದ ಅನುಕೂಲಗಳನ್ನೆಲ್ಲಾ ಕಲ್ಪಿಸಿದ್ದರೆಂದು ತಿಳಿದು ಬಂದಿದೆ

* * *

ಪೂನಾಪಟ್ಟಣದಲ್ಲಿ ಮ|| ಬಾಲಗಂಗಾಧರ ತಿಲಕರವರು ತಮ್ಮ « ಕೇಸರಿ » ಎಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾಕ್ಯಗಳನ್ನು ಬರೆದು ಪ್ರಕಟಮಾಡಿದರೆಂದು ತೋರಿದ್ದನು ಆಗ ಸರ್ಕಾರದವರು ಅವರನ್ನು ಬೊಂಬಾಯಿನಲ್ಲಿ ಕಳೆದ 1908 ನೇ ಇಸವಿಯಲ್ಲಿ ವಿಚಾರಣೆ ಮಾಡಿದಾಗ ಮ್ಯಾಜಿಸ್ಟ್ರೇಟರು ಅವರಿಗೆ ಆರು ವರುಷದ ಐಲಂಡ್ ಶಿಕ್ಷೆಯನ್ನು ವಿಧಿಸಿದರು ಆದರೆ ಮ|| ತಿಲಕರವರ ದೇಹಸ್ಥಿತಿಯು ಚೆನ್ನಾಗಿಲ್ಲದ್ದನ್ನು ನೋಡಿ ಗವರ್ನಮೆಂಟಿನವರು ಆ ಶಿಕ್ಷೆಯನ್ನು ಬದಲಾಯಿಸಿ ಅವರನ್ನು ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇಪಟ್ಟಣದಲ್ಲಿ ಬಂದೀಖಾನೆಯಲ್ಲಿಟ್ಟು ಸಾದಾಸಜಾ ಅನುಭವಿಸಬೇಕೆಂದು ವಿಧಿಸಿದರು ಅವರು ಈ ಶಿಕ್ಷೆಯನ್ನು ಆರು ವರುಷದಿಂದ ಅನುಭವಿಸಿ ಮುಗಿಸಿದ್ದರಿಂದ ಸರ್ಕಾರದವರು 8 ನೇ ತಾರೀಖು ಅವರನ್ನು ಬಂದೀಖಾನೆಯಿಂದ ಬಿಡುಗಡೆ ಮಾಡಿ, ಜಹಜಿನಮೇಲೆ ಕರೆದುತಂದು ಬೊಂಬಾಯಿಗೆ ಬಿಟ್ಟರು ಅಲ್ಲಿ ಮ|| ತಿಲಕರವರನ್ನು ಪೋಲೀಸ್ ಅಧಿಕಾರಿಗಳು ರೈಲಿನ ಮೇಲೆ ಪೂನಾಪಟ್ಟಣದ ತನಕ ಕರೆದುತಂದು ಒಂದು ಸಣ್ಣ ಸ್ಟೇಷನ್ನಿನಲ್ಲಿ ಇಳಿಸಿ ಮೋಟರಿನಲ್ಲಿ ಕೂಡಿಸಿಕೊಂಡು ಕಳೆದ 15 ನೇ ತಾ ರಾತ್ರಿ 1 ಗಂಟೆಗೆ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟರು ಮಾರನೇ ದಿನದಿಂದ ಅವರಿಗೆ ಬಿಡುಗಡೆಯಾಯಿತೆಂಬ ವರ್ತಮಾನ ಊರಲ್ಲಿ ಹಬ್ಬಿ ಜನರು ತಂಡತಂಡವಾಗಿ ಹೋಗಿ ಮ|| ತಿಲಕರನ್ನು ಕಂಡುಬರುತ್ತಿದ್ದಾರೆ ಅವರು ಬಂದೀಖಾನೆಯಲ್ಲಿದ್ದಾಗ ಕೆಲವು ಗ್ರಂಥಗಳನ್ನು ಬರೆದಿದ್ದಾರೆಂದೂ, ಈಗ ಅವು ಅಚ್ಚಿಗೆ ಹಾಕಲ್ಪಡುವವೆಂದೂ, ಇಷ್ಟರೊಳಗೇ ಮ|| ತಿಲಕರವರು ಸೀಮೆಗೆ ತೆರಳುವವರಾಗಿದ್ದಾರೆಂದೂ ವರ್ತಮಾನ ಹುಟ್ಟಿದೆ ಅವರು ತಮ್ಮ ಜೈಲಿನ ಅನುಭವವನ್ನು ಕುರಿತು ಇನ್ನು ಕೆಲವು ಕಾಲ ಏನೂ ಹೇಳುವುದಿಲ್ಲವೆಂದು ಮೌನವಾಗಿರುತ್ತಾರೆ

ವಿದೇಶ ವೃತ್ತಾಂತಗಳು

ಮ್ಯಾಸಿಡೋನಿಯಾದಲ್ಲಿ ಮಹಮದೀಯರಿಗೆ ಉಂಟಾದ ತೊಂದರೆಗಳನ್ನು ವಿಚಾರಿಸುವದಕ್ಕಾಗಿ ಟರ್ಕಿಯ ರಾಯಭಾರಿಯು ಹೋಗಿರುತ್ತಾನೆ

* * *

ಆಸ್ಟ್ರೇಲಿಯಾದಲ್ಲಿ ಕಲ್ಲಿದ್ದಲಿನ ಗಣಿಗಳಲ್ಲಿ ಕೂಲಿಮಾಡುವ 3 500 ಜನರು ಕೆಲಸಕ್ಕೆ ಬರದೆ ನಿಂತಿರುತ್ತಾರೆ ಇದಲ್ಲದೆ 3 300 ಕಾರೀಗಾರರೂ ಕೆಲಸಮಾಡುವದಿಲ್ಲವೆಂದು ಹಟಹಿಡಿದಿರುತ್ತಾರೆ

* * *

ಸ್ವಾವೇ ರಾಜ್ಯದ ಒಬ್ಬ ಮತಬೋಧಕರನ್ನು ಚೀನಾದಲ್ಲಿ ಅನ್ಯಾಯಕ್ಕೆ ಹಾಳ್ದವರು ಕೊಂದುಹಾಕಿದರು ಆದಕ್ಕಾಗಿ ಚೀನಾ ರಾಜ್ಯದವರು 1,36,000 ರೂಪಾಯಿ ಪ್ರತಿಫಲವನ್ನು ಕೊಟ್ಟರು

* * *

ಇಂಗ್ಲೆಂಡಿಗೆ ಸೇರಿದ ಸ್ಟ್ರಾಫರ್ಡ್‌ಷೈರ್ ಎಂಬ ಡಿಸ್ಟ್ರಿಕ್ಟಿನಲ್ಲಿ ಒಬ್ಬ ದೊಡ್ಡ ಮನುಷ್ಯನ ಬಳಿ ಇರುವ ಒಂದು ವಿಶೇಷ ತರದ ಹಸ್ತ ಪ್ರತಿಯು 10 ಲಕ್ಷ ರೂಪಾಯಿ ಕ್ರಯವಾಗುವದೆಂದು ಪ್ರಕಟವಾಗಿದೆ

* * *

ದಕ್ಷಿಣ ಅಮೇರಿಕದ ಲೀಮಾ ರಾಜ್ಯದಲ್ಲಿ 15 ಜನ ಸೋಜರುಗಳು ದಂಗೆಯೆದ್ದರು ಸರ್ಕಾರದವರು ಅವರೆಲ್ಲರನ್ನೂ ಒಂದು ದೋಣಿಯಲ್ಲಿ ಕೂರಿಸಿ ನದಿಯಲ್ಲಿ ಬಿಟ್ಟು ದಡದ ಮೇಲಿನಿಂದ ಗುಂಡುಹೊಡೆದು ಅವರನ್ನು ಕೊಂದುಹಾಕಿದರು

* * *

ನೇಪಲ್ಸ್ ಪಟ್ಟಣದಲ್ಲಿ ಸುಮಾರು 60 ಜನರು ಕಪಟವಾಗಿಯೂ ನಿಜವಾಗಿಯೂ ಗಾಯಗಳನ್ನು ಮಾಡಿಕೊಂಡು ಇನ್ಷೂರೆನ್ಸ್ (ಜೀವವಿಮೆ) ಕಂಪನಿಯವರಿಗೆ ಮೋಸಪಡಿಸಿದರೆಂದು ಅವರೆಲ್ಲರನ್ನೂ ದಸ್ತಗಿರಿಮಾಡಿರುತ್ತಾರೆ ಇದರಿಂದ ಕಂಪನಿಯವರಿಗೆ ಹದಿನೆಂಟು ಲಕ್ಷ ರೂಪಾಯಿ ನಷ್ಟವಾಗಿದೆ

* * *

ಕಳೆದ ಬುಧವಾರ ಇಂಗ್ಲಾಂಡಿನ ಚಕ್ರವರ್ತಿಯವರ ವರ್ಧಂತಿಯು ಬಹಳ ವಿಜೃಂಭಣೆಯಿಂದ ಬಕಿಂಗ್ಹಾಂ ಅರಮನೆಯಲ್ಲಿ ನಡೆಯಿತು ಪ್ರಪಂಚದ ಎಲ್ಲಾ ಭಾಗಗಳಿಂದಲೂ ಸಂತೋಷಸೂಚಕವಾದ ಸಮಾಚಾರಗಳು ಚಕ್ರವರ್ತಿಯವರಿಗೆ ತಲುಪಿದವು ಇಂಗ್ಲಾಂಡಿನ ಬಾಲಕರು 60,000 ಕಾಗದಗಳನ್ನು ಬರೆದು ಚಕ್ರವರ್ತಿಯವರ ಕ್ಷೇಮವನ್ನು ಬಯಸಿ ಅವರಿಗೆ ಬಹಳ ಆನಂದವನ್ನುಂಟುಮಾಡಿರುತ್ತಾರೆ

* * *

ಟೈಟಾನಿಕ್ ಎಂಬ ಜಹಜಿನಲ್ಲಿ ಮುಳುಗಿಹೋದ ಸಾವಿರಾರು ಜನರ ಹೆಂಡಿರು ಮಕ್ಕಳಿಗೆ ಜೀವನವನ್ನು ಕಲ್ಪಿಸಬೇಕೆಂದು ಲಂಡನ್ ಪಟ್ಟಣದಲ್ಲಿ ಒಂದು ಫಂಡನ್ನು ಪ್ರಾರಂಭಿಸಿದರಷ್ಟೆ ಈ ಫಂಡಿಗೆ 61,98,180 ರೂಪಾಯಿ ಚಂದಾ ವಸೂಲಾಯಿತು ಈ ಫಂಡಿನಿಂದ 1,534 ಜನರನ್ನು (ಇವರಲ್ಲಿ 314 ಮಂದಿ ವಿಧವೆಯರು ಇರುತ್ತಾರೆ) ಸಾಕಬೇಕಾಗಿದೆ ಇವರಿಗೆಲ್ಲಾ ಫಂಡಿನಿಂದ ವರುಷಕ್ಕೆ 3 ಲಕ್ಷ ರೂಪಾಯಿ ಜೀವನಾಂಶ ಹಂಚಿಕೊಡುವರು

ಇಂಗ್ಲಾಂಡಿನ ಸ್ತ್ರೀಯರ ಪೈಕಿ ಅನೇಕರು ತಮಗೆ ಚುನಾವಣೆಯ ಹಕ್ಕನ್ನು ಕೊಡಬೇಕೆಂದು ಹಟಹಿಡಿದು ಹಲವು ದುಷ್ಕಾರ್ಯಗಳನ್ನು ಮಾಡಿರುತ್ತಾರೆ ಕಳೆದ ಬುಧವಾರ ಒಬ್ಬ ಹೆಂಗಸು ಒಂದು ಪ್ರದರ್ಶನಶಾಲೆಗೆ ನುಗ್ಗಿ ಅಲ್ಲಿದ್ದ ಎರಡು ತಸ್ವೀರುಗಳನ್ನು ಒಡೆದುಹಾಕಿ ಕಾವಲುಗಾರನನ್ನು ಪೂರಾ ಗಾಯಪಡಿಸಿದಳು ಮೂರು ಜನ ಹೆಂಗಸರು ಸೇರಿ ಒಬ್ಬ ಬಂದೀಖಾನೆಯ ಡಾಕ್ಟರನ್ನು ಕುದುರೆಯ ಚಾವಟಿಯಿಂದ ಚೆನ್ನಾಗಿ ಹೊಡೆದರು ಇಬ್ಬರು ವರ್ತಮಾನ ಪತ್ರಿಕೆಯ ಎಡಿಟರುಗಳ ಮೇಲೆ ಗೋಂದಿನ ಕುಡಿಕೆಗಳನ್ನು ಎಸೆದರು ಬೆಲ್ಫಾಸ್ಟ ಪಟ್ಟಣದಲ್ಲಿ ಒಂದು ದೊಡ್ಡ ಕಟ್ಟಡವನ್ನು ಸುಟ್ಟುಹಾಕಿದರು

* * *

ಅಮೇರಿಕಕ್ಕೆ ಸೇರಿದ ಕ್ಲೀವ್‌ಲೆಂಡಿನಲ್ಲಿ ಸೆಂಟ್ ಇಗ್ನೇಷಿಯಸ್ ಎಂಬ ಸರ್ವ ಕಲಾಶಾಲೆಯಲ್ಲಿ ಭೌತಿಕಶಾಸ್ತ್ರ ಬೋಧಕನಾದ ಫಾದರ್ ಓಡೆನ್‌ಬಾಕ್ ಎಂಬಾತನು ಬೈಸಿಕಲ್ ಗಾಡಿಯ ಮೇಲೆ ಹೇಗೆ ಉಪಾಯದಿಂದ ಜನರು ಸಂಚರಿಸುತ್ತಾರೆಯೋ ಅದೇ ರೀತಿ ಬುದ್ಧಿವಂತಿಕೆಯಿಂದ ನೀರಿನ ಮೇಲೂ ನಡೆದು ಹೋಗಬಹುದೆಂದು ಹೇಳುತ್ತಾನೆ ಮತ್ತು ಆತನು ತನ್ನ ಮಾತನ್ನು ಸಿದ್ಧಾಂತಪಡಿಸುವುದಕ್ಕಾಗಿ ಒಂದು ಈಜುವ ಕಟ್ಟೆಯಲ್ಲಿ ನೀರಿನ ಮೇಲೆ ಉಪಾಯದಿಂದ ಕೈ ತೋಳು, ತಲೆಗಳನ್ನು ಅಲುಗಿಸದೆ ಒಂದೇ ಕ್ರಮದಲ್ಲಿಟ್ಟುಕೊಂಡು ನೀರಿನ ಮೇಲೆ ನಡೆದು ತೋರಿಸಿದನು ಅನೇಕ ಜನರು ಅದನ್ನು ನೋಡಿ ಸಂತೋಷಪಟ್ಟರು

* * *

ಉತ್ತರ ಅಮೇರಿಕದಿಂದ ಇಂಗ್ಲೆಂಡಿಗೆ ಪ್ರಯಾಣಮಾಡುತ್ತಿದ್ದ ಒಂದು ದೊಡ್ಡ ಜಹಜು ಮುಳುಗಿಹೋಯಿತೆಂದು ಕಳೆದ ವಾರ ತಿಳಿಸಿದ್ದೆವಷ್ಟೆ ಅದರಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ 1,024 ಜನರು ಮೃತಪಟ್ಟರೆಂದೂ, 453 ಮಂದಿ ಬದುಕಿಬಂದರೆಂದೂ ತಿಳಿದುಬಂದಿದೆ ಮರಣಹೊಂದಿದವರ ಪೈಕಿ 200 ಜನರಿಗೆ ಕಳೆದ ಶುಕ್ರವಾರ ಕ್ವಿಬೆಕ್ ಪಟ್ಟಣದಲ್ಲಿ ಉತ್ತರಕ್ರಿಯಾದಿಗಳು ನಡೆದವು ಮುಳುಗಿಹೋದ ಜಹಜಿನ ಕಂಪನಿಯವರು ನಷ್ಟಹೊಂದಿದ ಜನಗಳ ಸಹಾಯಾರ್ಥವಾಗಿ ಒಂದೂವರೆ ಲಕ್ಷ ರೂಪಾಯನ್ನೂ, ಆ ಕಂಪನಿಯ ಮ್ಯಾನೇಜರು 15,000 ರೂಪಾಯನ್ನೂ ಚಂದಾ ಕೊಟ್ಟಿರುತ್ತಾರೆ ಎರಡು ಕಂಪನಿಯವರೂ ತಮಗೆ ಉಂಟಾದ ನಷ್ಟಕ್ಕೂ ಅನ್ಯಾಯಕ್ಕೂ ಮತ್ತೊಬ್ಬರು ಕಾರಣಭೂತರೆಂದು ಒಂದು ಕಂಪನಿಯ ಮೇಲೆ ಮತ್ತೊಂದು ಕಂಪನಿಯವರು ಪರಿಹಾರದ್ರವ್ಯಕ್ಕೆ ದಾವಾ ಹಂಡಿರುತ್ತಾರೆ

ತಾಲ್ಲೂಕು ವರ್ತಮಾನಗಳು

ಚನ್ನಪಟ್ಟಣ —ಹಿಂದೆ ಒಂದೆರಡು ಹದ ಮಳೆಯಾದದ್ದೇ ಹೊರ್ತು ಪುನಃ ಮಳೆಯೇ ಇಲ್ಲ ರೈತರು ಆಕಾಶವನ್ನೇ ನೋಡುವಂತಾಗಿದೆ ಮೋಡಗಳು ಆದುತ್ತಿದ್ದರೂ ಈ ವರಿಗೂ ಏನೂ ಪ್ರಯೋಜನವಾಗಲಿಲ್ಲ ಬಿತ್ತನೆಯ ಕೆಲಸಗಳಂತೂ ಷುರುವಾಗಿಯೇ ಇಲ್ಲ ಧಾರಣೆವಾಸಿಗಳು ಕ್ಷಾಮಕಾಲವನ್ನು ಸೂಚಿಸುತ್ತಾ ಇವೆ —ಈಗಿನವರಿಗೂ ಸರ್ಕಾರದಿಂದ ಬಿಡುಗಡೆಯಾಗುವ ಅಳತೆ ಪಾತ್ರೆಗಳು ಇಲ್ಲಿ ಚಲಾವಣೆಯಲ್ಲಿ ಇಲ್ಲ ಅವುಗಳು ಚಲಾವಣೆಗೆ ಬರುವ ಹಾಗೆ ಮೇಲ್ಪಟ್ಟ ಅಧಿಕಾರಿಗಳು ಗಮನ ಕೊಟ್ಟರೆ ತುಂಬಾ ಉಪಕಾರವಾದೀತು

ಕೃಷ್ಣರಾಜಪೇಟೆ ತಾ|| ಅಕ್ಕಿಹೆಬ್ಬಾಳು —ಮಳೆ ಇಲ್ಲ ಧಾರಣೆ ಜಾಸ್ತಿಯಾಗಿದೆ ಈ ಗ್ರಾಮದಲ್ಲಿ 3/4 ಭಾವಿಗಳ ವರಿವಿಗೂ ಇರುತ್ತೆ ಒಂದರಲ್ಲೂ ನೀರೇ ಇಲ್ಲ ಕುಡಿಯುವುದಕ್ಕೂ ಸ್ನಾನಕ್ಕೂ ಹೊಳೆಯಿಂದಲೇ ನೀರು ತರಬೇಕಾಗಿದೆ ಎಲ್ಲರೂ ಮಳೆಯೇ ಎದುರು ನೋಡುತ್ತಾ ಇದ್ದಾರೆ ಈ ಪ್ರಾಂತ್ಯ ನಾಲೆಗಳಿಗೆ ಮಾಮೂಲಾಗಿ ಜೂನ್ 10 ನೇ ತಾ ನೀರು ಬಿಡುತ್ತಾ ಇದ್ದವರು ತಾ 20 ಆದಾಗ್ಯೂ ನೀರೇ ಬಿಟ್ಟಿಲ್ಲ ಈ ಊರಿನಲ್ಲಿ ಜನ ಜಾನುವಾರುಗಳು ಅರ್ಧ ಮೈಲಿಯಿಂದ ನದಿ ನೀರನ್ನು ಒದಗಿಸಿಕೊಳ್ಳುವ ಕಷ್ಟವು ಪ್ರಾಪ್ತವಾಗಿದೆ —ಅಲ್ಲದೆ ಮಂದಗೆರೆ ಹೇಮಗಿರಿ ನಾಲೆ ಬಡಾವಣೆ ಉದ್ದಿಶ್ಯ ಮಧ್ಯಪ್ರದೇಶವಾಗಿರತಕ್ಕ ಈ ಗ್ರಾಮದಲ್ಲಿ ಒಂದು ಎಗ್ಜಿಕ್ಯುಟಿವ್ ಇಂಜನಿಯರ ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ ಇದಕ್ಕಾಗಿ ಆಗಲೇ 10 ಮನೆಗಳ ವರಿಗೆ ತಯಾರಾಗುತ್ತಾ ಇವೆ ಈ ಗ್ರಾಮದಲ್ಲಿ ಕೆಲವರು ಕಟ್ಟಡಗಳ ಕಂಟ್ರಾಕ್ಟನ್ನು ಆಫೀಸರ ಭರವಸೆ ಮೇಲೆ ದಾಕ್ಷಿಣ್ಯಕ್ಕೆ ಒಳಪಟ್ಟು ಕೆಲಸ ಮಾಡಿಸುತ್ತಾ ಇದ್ದಾರೆ ಮಳೆ ಮತ್ತು ರೇಟಿನ ಅಭಾವದಿಂದ ಕಂಟ್ರಾಕ್ಟುದಾರುಗಳು ವೆಚ್ಚ ಮಾಡಿದ ಮೊಬಲಗಿಗೆ ಶೇಕಡಾ 70 ರೂಪಾಯಿ ಕೂಡ ಕೈಗೆ ಬರುವ ಭರವಸೆ ಇಲ್ಲದೆ ಪೇಚಾಡುತ್ತಾ ಇದ್ದಾರೆ ಈ ಗ್ರಾಮದ ಸಮೀಪದಲ್ಲಿ ಮೈಸೂರು ಅಡ್ಜಸ್ಟರ್ ರೈಲ್ವೆ ಕಾಮಗಾರಿ ನಡೆಯುತ್ತಾ ಇವೆ ಕೂಲಿಗಳ ಅಭಾವವು ಜಾಸ್ತಿಯಾಗಿದೆ —ಈ ಗ್ರಾಮದಲ್ಲಿ ಈಗ್ಗೆ 3 ವರುಷದ ಹಿಂದೆ ಗ್ರಾಂಟ್ ಇನ್ ಏಡ್ ಇಂಗ್ಲಿಷ್ ಸ್ಕೂಲನ್ನು ಸ್ಥಾಪಿಸಿರುತ್ತಾರೆ ಎರಡನೆ ವರ್ಷದ ಗ್ರಾಂಟು ಗ್ರಾಮಸ್ಥರು ಸರ್ಕಾರಕ್ಕೆ ಕಟ್ಟಿ 9 ತಿಂಗಳಾದಾಗ್ಯೂ ಅದಾಗಾಯ್ತು ಮಾಸ್ಟರಿಗೆ ಸಂಬಳವನ್ನೇ ಪಾವತಿ ಮಾಡುತ್ತಾ ಇಲ್ಲ ವಿದ್ಯಾ ಇಲಾಖೆಗೆ 5 6 ಸಲ ಅರ್ಜಿ ಹಾಕಿಕೊಂಡರೂ ಯಾವ ಜವಾಬೂ ದೊರೆಯಲಿಲ್ಲ ಕೂಡಲೆ ನಿಗಾ ತೆಗೆದುಕೊಂಡು ಗ್ರಾಮಸ್ಥರ ತೊಂದರೆಯನ್ನು ನಿವಾರಣೆ ಮಾಡುತ್ತಾರೆಂದು ನಂಬಿದೆ

ನೂತನವಾಗಿ ತಯಾರಾಗಿ ಬಂದ ಮನೋಭ್ರಮೆಯನ್ನುಂಟುಮಾಡುವ

ವಿಚಿತ್ರ ಎಲೆಕ್ಟ್ರಿಕ್ ಪಾಕೆಟ್ ದೀಪವು.

ಇದರ ಕ್ರಯ ದೀಪ 1 ಕ್ಕೆ ರೂ 3 0-0 ಮಾತ್ರ

ಎತ್ತಿದ ಕ್ಷಣವೇ ಆರಿಹೋಗುವ ದೀಪಗಳ ಡಂಭೀಕ ಪ್ರಕಟನೆಗಳನ್ನು ನೋಡಿ ಮೋಸಹೋಗಬೇಡಿ

ಪವನಂತರೀ, ಈ ಯಂತ್ರದಿಂದ ನಾವು ಬೆಳಕು ಬೇಕಾದಾಗ ಇದರ ಗುಂಡಿ (ಬಟನ್) ಅದುಮಿದಲ್ಲಿ ಕಾಂತಿಯುಳ್ಳ ಮತ್ತು ಅಧಿಕ ತೇಜಸ್ಸುಳ್ಳ ಬೆಳಕು

ಉಂಟುಮಾಡುತ್ತೆ ರಾತ್ರಿ ಅಕಸ್ಮಾತ್ತು ಜರುಗುವ ಅಪಾಯಗಳಿಗೂ ಪ್ರಯಾಣಕರಿಗೂ ವಿಶೇಷ ಸಹಕಾರಿಯಾದ ಆಶ್ಚರ್ಯ ದೀಪವು ಬೆಂಕಿಕಡ್ಡಿ, ಎಣ್ಣೆ, ಲಾಂದ್ರ ಮುಂತಾದ್ದನ್ನು ಹುಡುಕಬೇಕಾದ ಕೆಲಸವಿಲ್ಲ ಬೇಕಾದಾಗ ಅದುಮಿದಲ್ಲಿ ತನ್ನಷ್ಟಕ್ಕೆ ತಾನೇ ಪ್ರಕಾಶ ಉಂಟಾಗುವದು ಇದನ್ನು ಉಪಯೋಗಿಸುವ ಕ್ರಮ ಅಚ್ಚು ಪತ್ರಿಕೆಯನು ದೀಪದ ಜೊತೆಯಲ್ಲಿ ರವಾನಿಸುತ್ತೇವೆ ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ—ಎನ್ ಎಂ ಸ್ವಾಮಿ ಅಂಡು ಕಂಪೆನಿ,

[109 7] ನಂ 44, ಸಂಬುಳಯ್ಯರ್ ಬೀದಿ, ಮದರಾಸು

ಗೃಹಕೃತ್ಯದ ನೋಟೀಸು

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಕ್ಲೋಸ್‌ಪೇಟೆ ಟೌನಿನಲ್ಲಿದ್ದ ನನ್ನ ದೊಡ್ಡಪ್ಪನಾದ ಅಯುತಾ ರಾಮಯ್ಯಶೆಟ್ಟಿಯವರು ಕಾಲವಾಗಿರುವದರಿಂದ ಕ್ಲೋಸ್‌ಪೇಟೆಯಲ್ಲಿರುವ ನನಗೆ ಸೇರಿದ ಅರ್ಧಭಾಗದ ಮನೆಯನ್ನು ಬಿಟ್ಟು ಮಿಕ್ಕ ಅರ್ಧಭಾಗವನ್ನು ಸದರಿಯವರ ಹೆಂಡತಿ ಮುಯಿತಾ ಪುಟ್ಟಲಕ್ಷ್ಮಮ್ಮನು ಪರಭಾರೆ ಮಾಡುವದಾಗಿ ಕೇಳುತ್ತೇನೆ ನನ್ನ ಅನುಮತಿಯಿಲ್ಲದೆ ಅವರಿಂದ ಪರಭಾರೆ ಮಾಡಿಕೊಳ್ಳುವವರು ನನಗಾಗುವ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುತ್ತೆ ಮೇಲ್ಕಂಡ ಮನೆಯ ವಿಷಯವಾಗಿ ನನಗೂ ಅವರಿಗೂ ತಕರಾರಿದೆ

ಕ್ಲೋಸ್‌ಪೇಟೆ [141 1]

23 6 1914 ಅಯುತಾ ಸಂಜೀವರಾಯಶೆಟ್ಟಿ

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ

ಅಡ್ಡಿಗೆ ಮಾದರಿ ನೋಡಬೇಕಾದರೆ ಬರದರೆ ಉಚಿತವಾಗಿ ಕಳುಹಿಸುತ್ತೇವೆ ಇದು ಎಲೆಕ್ಟ್ರಿಕ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕುಸ್ರುತಿಗಳುಳ್ಳ ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಿರುತ್ತೆ ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾಗಿದ್ದು ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ [139 1]

ವಿಳಾಸ—ಎಸ್ ಎನ್ ಮೂರ್ತಿ ಅಂಡ್ ಕಂಪೆನಿ,

ತಿರುವಲಿಕ್ಕೇಣಿ, ಮದರಾಸು

ಮಧುರೆ ಜುನ್ನಡಿ ಅಂಚಿನ ಸೀರೆ ಅಸ್ಸಲ್ ರಬಿಂ ರೂ 1-10-0

ಇದು 18 ಮೊಳ ಧಾರಾಳವಾಗಿದೆ ಉಡಲು ಲಾಯಖಾದದ್ದು ಬಣ್ಣ ಹೋಗದು ಸುಂದರವಾದ ಸೆರಗು ಫೋಟೋ ಪ್ರಕಟನೆಗಳ ಮೂಲಕ ಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ

ವಿಳಾಸ— ರಾಮರಾವ್, ಎಸ್ ಎಂ ಕೋಯಿಲ್ ಬೀದಿ,

ತಿರುವಲಿಕ್ಕೇಣಿ, ಮದರಾಸು

ಹೊಸ ಪದಾರ್ಥವನ್ನು ಓದಿ ನೋಡಿ ಲಾಭಪಡೆಯಿರಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ!



ಭಾರೀಕ್ರಯದ ಕನ್ನಡಕಗಳು ಕ್ರಯ ರೂ 2 8 0 ಬೆಲೆಯ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ ಅಲ್ಪಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ ನಮ್ಮಲ್ಲಿ ಸ್ಟೀಲ್ ಕದ ಕನ್ನಡಕಗಳು ಕ್ರಮವಾಗಿ ದೊರೆಯುತ್ತೆ ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀಕ್ರಯದ ಪಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ ಬಾಕೀ ವಿಷಯವೆಲ್ಲಾ ನಿಮ್ಮ ಪೋಸ್ಟು ಬಂದಮೇಲೆ ಬರೆದು ತಿಳಿಸುತ್ತೇವೆ [131 1]

ವಿಳಾಸ —ನೀಲಕಂಠ ಅಂಡ್ ಬ್ರದರ್ಸ್,

ಎಸ್ ಎಂ ಕೋಯಿಲ್ ಬೀದಿ ತಿರುವಲ್ಲಿಕ್ಕೇಣಿ ಮದರಾಸು

ವಾತಕ ಮಹಾಶಯರೇ ಈ ಕೆಳಗೆ ಕಂಡ ಆಭರಣಗಳನ್ನು ಆಸ್ಟ್ರೇಲಿಯಾ ದೇಶದ ಬಿಳಿ ಕಂಬಿಯಿಂದ ತಯಾರಿಸಿರುತ್ತೆ ಇದರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು ಇದಕ್ಕೆ ವಿ ಪಿ ಟಪಾಲು ಚಾರ್ಜು ಸಂಬಳ ತಿಂಗಳಿಗೆ ರೂ 1 ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ಸುಂದರವಾದ ಕಾಲುಕಡಗ

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1 8 0	1 3 0	0 11-0	0 10-0



ಸುಂದರವಾದ ಡಾಬು (ವಡ್ಯಾಣ)

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1 8-0	1 3 0	0 15 0

ಸುಂದರವಾದ ಪದುಮೇರಿ ರುಳಿ (ಕಾಲುಗೊಲಸು)



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1 12 0	1 10 0	1 6-0	1 4 0

ತಾಕೀತು —ಒಂದು ರೂಪಾಯಿಗೆ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಸುಂದರವಾದ ಎಲೆಕ್ಟ್ರಿಕ್ ಚಿನ್ನದ ಮೈಸೂರು ಕಪ್ಪವನ್ನು ಪ್ರತಿ ಒಂದು ರೂಪಾಯಿಗೂ 1 ಕಪ್ಪವನ್ನು ಉಚಿತವಾಗಿ ಕೊಡುತ್ತೇವೆ ಮತ್ತು ರೂಪಾಯಿ ಎರಡು ಆಣೆ ಕಮಿಷನ್ ಕೊಡುತ್ತೇವೆ

ವಿಳಾಸ—ಎಸ್ ಎನ್ ಮೂರ್ತಿ ಕಂಪೆನಿ,

[131-1] ತಿರುವಲಿಕ್ಕೇಣಿ, ಮದರಾಸು.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘ.

ಈಗ ಮೂರು ತಿಂಗಳಿಂದಲೂ ಬೇಸಿಗೆಕಾಲವಾದ್ದರಿಂದ ನಿಂತುಹೋಗಿದ್ದ ಮೀಟಿಂಗುಗಳು ಪುನಹ ಜುಲೈ ಆಗಾಯಿತು ಪ್ರತಿ ತಿಂಗಳ ಮೊದಲನೇ ಭಾನುವಾರ ನಡೆಸಲ್ಪಡುವುದು. ಈ ಜುಲೈ ೫ ನೇ ತಾ ಭಾನುವಾರ ಮಧ್ಯಾಹ್ನ 3 ಘಂಟೆಗೆ ಈ ಸಂಘದ ಎಲ್ಲಾ ಮೆಂಬರುಗಳೂ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಸೇರತಕ್ಕದ್ದೆಂದು ಗೊತ್ತಾಗಿದೆ. ಕೆಲಸಗಳ ವಿವರ—(೧) ಖಗೋಳಶಾಸ್ತ್ರಕ್ಕೂ, ಭೂಗೋಳಶಾಸ್ತ್ರಕ್ಕೂ ಇರುವ ಸಂಬಂಧದ ಉಪನ್ಯಾಸ, (೨) ಗ್ರಾಮದ ಜನಗಳಿಗೆ ವಿದ್ಯಾಭಿಮಾನ ಉಂಟಾಗುವಂತೆ ಉಪಾಧ್ಯಾಯರುಗಳು ಮಾಡಬೇಕಾದ ಕರ್ತವ್ಯ, (೩) ಉಪಾಧ್ಯಾಯರಲ್ಲಿ ಮುಖ್ಯವಾಗಿರಬೇಕಾದ ಗುಣಗಳ ವಿಷಯವಾಗಿ, (೪) ಪುರೋಭಿವೃದ್ಧಿ ವಿಷಯವಾಗಿ ಮ|| ರಾಮಯ್ಯನವರ ಉಪನ್ಯಾಸ; (೫) ಇತರ ಅಂಶಗಳು.

ವಿದ್ಯಾಭಿವೃದ್ಧಿ ಸಂಘ,
ಚಿತ್ರದುರ್ಗ.

ವೀರಭದ್ರಪ್ಪ,
ಜಾಯಿಂಟ್ ಸೆಕ್ರೆಟರಿ.

ಸುರಾಪಾನ ನಿಷೇಧಕ ಬೋಧಿನಿ.

ಎಲ್ಲರಿಗೂ ವಿಶೇಷವಾದುದು.

ಭೂಮಂಡಲದಲ್ಲಿ ಮದ್ಯಪದಾರ್ಥಗಳ ಸೇವನೆಯಿಂದ (ಅಂದರೆ—ಬ್ರಾಂದಿ, ಸಾರಾಯಿ, ಹೆಂಡ, ಅಫೀಮು, ಗಾಂಜಾ ಮುಂತಾದವುಗಳಿಂದ) ದೇಹಕ್ಕೂ, ಜ್ಞಾನಕ್ಕೂ, ಆತ್ಮಕ್ಕೂ ಉಂಟಾಗತಕ್ಕ ಭಯಂಕರವಾದ ಅನಾಹುತಗಳಿಗಿಂತ ಬೇರೆ ಯಾವುದರಿಂದಲೂ ಆಗುವುದಿಲ್ಲ.

ಮದ್ಯವು ಮನುಷ್ಯನ ಭಯಂಕರವಾದ ಶತ್ರುವಾಗಿರುತ್ತದೆ. ಏಕೆಂದರೆ ಅದು ಮನುಷ್ಯನ ಆರೋಗ್ಯ, ಸುಖ, ಸಂಸಾರ, ಮಾನ, ಮರ್ಯಾದೆಗಳನ್ನು ಹಾಳುಮಾಡುತ್ತದೆ.

ಒಬ್ಬ ಯೋಗ್ಯನಾದ ಮನುಷ್ಯನು ಮದ್ಯಪಾನದ ಅಭ್ಯಾಸಕ್ಕೆ ಬಿದ್ದರೆ ಅಂಥವನು ತನ್ನ ಸಹೋದರ, ಸಹೋದರಿಯರಿಗೆ ಅಯೋಗ್ಯನಾಗಿಯೂ, ತಂದೆತಾಯಿಗಳಿಗೆ ಅವಿಧೇಯನಾಗಿಯೂ, ಹೆಂಡತಿಗೆ ಕ್ರೂರಿಯಾಗಿಯೂ, ಕೆಲಸ ಕಾರ್ಯಗಳಲ್ಲಿ ಅತೃಪ್ತನಾಗಿಯೂ, ಸೇವಕರುಗಳಲ್ಲಿ ನಿರ್ದಯನಾಗಿಯೂ ಪರಿಣಮಿಸುವನು.

ಮದ್ಯವನ್ನು ಸೇವಿಸುವುದರಿಂದ ಬಲಬರುತ್ತದೆಂದು ಕೆಲವರು ಭಾವಿಸುತ್ತಾರೆ. ಆದರೆ ಅದು ಬಲಕೊಡುವುದಕ್ಕೆ ಬದಲು ಮನುಷ್ಯನನ್ನು ಬಲಹೀನನನ್ನಾಗಿ ಮಾಡುತ್ತದೆ. ಅದನ್ನು ಸೇವಿಸಿದ ಹಾಗೆ ಮನುಷ್ಯನು ನೆಟ್ಟಗೆ ನಿಂತು, ನೆಟ್ಟಗೆ ನಡೆಯಲಾರನು.

ಮದ್ಯವನ್ನು ಸೇವಿಸಿದರೆ ಸುಖವುಂಟಾಗುವುದೆಂದು ಕೆಲವರು ಭಾವಿಸುತ್ತಾರೆ. ಆದರೆ ಅದರಿಂದ ಸುಖಬರುವುದಕ್ಕೆ ಬದಲು ತಲೆನೋವು, ಮುಖ್ಯವಾಗಿ ಎಡೆಬಿಡದ ಮನೋವ್ಯಾಕುಲ ಉಂಟಾಗುವುದು.

ಮದ್ಯವು ಮನುಷ್ಯನಿಗೆ ಚಟುವಟಿಕೆಯನ್ನುಂಟುಮಾಡಿ ಜೀವಕ್ಕೆ ಕಾಂತಿಯನ್ನು ಕೊಡುವುದೆಂದು ಕೆಲವರು ಭಾವಿಸುತ್ತಾರೆ. ಆದರೆ ಅದು ಮನುಷ್ಯನನ್ನು ಹುಚ್ಚನನ್ನಾಗಿ ಮಾಡಿಬಿಡುತ್ತದೆ.

ಒಬ್ಬ ಮನುಷ್ಯನು ತನ್ನನ್ನು ಪ್ರೀತಿಸುವಂಥ ಬಂಧುಬಳಗದವರನ್ನೆಲ್ಲಾ ಕ್ರೂರವಾಗಿ ಹಿಂಸೆಮಾಡುವಂತೆಯೂ, ಕಡೆಯದಾಗಿ ತನ್ನನ್ನೇ ನಷ್ಟಪಡಿಸಿಕೊಳ್ಳುವಂತೆಯೂ ಈ ಮದ್ಯವು ಪ್ರೇರೇಪಿಸುವುದು.

ಈ ಮದ್ಯಪಾನಾಭ್ಯಾಸದಿಂದ ಲಕ್ಷೋಪಲಕ್ಷವಾಗಿ ಯೌವನಸ್ಥರು ಕೆಟ್ಟುಹೋದರು. ಸಾವಿರಾರು ಕುಟುಂಬಗಳು ನಿರ್ನಾಮವಾಗಿ ಹೋದುವು.

“ನೀನು ವಿವೇಕಿಯಾಗಿದ್ದು, ಸುಖಸೌಖ್ಯದಿಂದ ಬಾಳಿ, ಅನ್ಯರಿಗೆ ಪ್ರಯೋಜಕನಾಗಬೇಕಾದರೆ ವಿಷಪಾನಕ್ಕೆ ಸಮಾನವಾದ ಮದ್ಯವನ್ನು ಸಂಪೂರ್ಣವಾಗಿ ತ್ಯಜಿಸು.”

ನಮ್ಮ ಜನರಲ್ಲಿ ಮದ್ಯಪಾನಮಾಡುವುದು ಈಚೆಗೆ ಹೆಚ್ಚುತ್ತಾ ಬಂತು. ಈ ದುರಭ್ಯಾಸವು ಅನೇಕರನ್ನು ನಾನಾ ಬಗೆಯ ಸಂಕಟಗಳಿಗೆ ಗುರಿಮಾಡಿರುತ್ತದೆ ಮತ್ತು ದೇಶದ ಸಂಪತ್ತು ವೃದ್ಧಿಹೊಂದಲು ಈ ದುರಭ್ಯಾಸವು ಬಲು ದೊಡ್ಡ ಅಡಚಣೆಯಾಗಿರುವುದು. ಮದ್ಯವನ್ನು ಕುಡಿಯುವವರು ತಮ್ಮ ಹಣವನ್ನೂ, ತಮ್ಮ ಮಾನವನ್ನೂ, ಅನೇಕ ವೇಳೆ ತಮ್ಮ ಪ್ರಾಣಗಳನ್ನೂ ಕಳೆದುಕೊಂಡಿದ್ದಾರೆನ್ನುವುದು ಯಾರಿಗೂ ತಿಳಿಯದೆ ಇಲ್ಲ. ಈ ದುರಭ್ಯಾಸದ ದೆಸೆಯಿಂದ ಕಳುವು, ವ್ಯಭಿಚಾರ, ಜಗಳ, ಹಾದರ, ಇವೇ ಮೊದಲಾದ ಅಕೃತ್ಯಗಳು ಹಬ್ಬುತ್ತಿರುವವು. ಇದನ್ನು ನೋಡಿ ಸಭ್ಯರೂ, ಭಕ್ತರೂ ಆದ ಅನೇಕ ಜನರು ಬಹಳವಾಗಿ ವ್ಯಥೆಪಟ್ಟು, ಇಂಥಾ ದುರಭ್ಯಾಸವು ಹರಡದಂತೆಯೂ, ಕುಡುಕರಿಗೆ ವಿವೇಕ ಹೇಳಿ ಅವರನ್ನು ಸನ್ಮಾರ್ಗಕ್ಕೆ ತರುವಂತೆಯೂ ಮಾಡಬೇಕೆಂದು ನಿಶ್ಚಯಿಸಿಕೊಂಡು, ಮೇಲ್ಕಂಡ ಹೆಸರಿನಿಂದ ರಾಜಧಾನಿಯಲ್ಲಿ ಒಂದು ಸಂಘವನ್ನು ಪ್ರಾರಂಭಮಾಡಿರುತ್ತಾರೆ. ಸಹೋದರ ಪ್ರೀತಿ, ದೇಶವಾತ್ಸಲ್ಯಗಳನ್ನು ಪಡೆದಿರುವ ಮಹಾಶಯರೆಲ್ಲಾ ಈ ಸಂಘದವರಿಗೆ ತಮ್ಮ ಕೈಲಾಗುವಷ್ಟು ಸಹಾಯಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ.

ಈ ಸಂಘದವರು ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಎಲ್ಲಾ ಭಾಷೆಗಳಲ್ಲೂ ಸುರಾಪಾನದಿಂದುಂಟಾಗುವ ಕೇಡುಪರಂಪರೆಗಳನ್ನು ವಿವರಿಸುವ ಹಸ್ತಪತ್ರಗಳನ್ನು ಸಿದ್ಧಮಾಡಿ ಎಲ್ಲರಿಗೂ ಹಂಚಿಕೆ ಮಾಡುವುದೇ ಮೊದಲಾದ ಮಾರ್ಗಗಳಲ್ಲಿ ಪ್ರಯತ್ನಪಡುವರಾಗಿದ್ದಾರೆ. ಇದಕ್ಕೆ ಸಂಹಿತಚಿಂತಕರಾದವರೆಲ್ಲಾ ಸಹಾಯಮಾಡಿ ಪುಣ್ಯಕೀರ್ತಿಗಳನ್ನು ಪಡೆಯಬೇಕೆಂದು ವಿಜ್ಞಾಪಿಸಿದೆ.

ತಾ. ಕ.—ಈ ವಿಚಾರವಾಗಿ ಕಾಗದಪತ್ರಗಳನ್ನು ಬರೆಯತಕ್ಕವರೂ, ದ್ರವ್ಯಸಹಾಯಮಾಡತಕ್ಕವರೂ ಮುಂದಿನ ವಿಳಾಸಕ್ಕೆ ಬರೆಯಬೇಕು.—ಮ|| ಎಂ. ಡಿ. ತಿರುವೆಂಗಡಂ, ರಥೇ ಬೀದಿ, ಮೈಸೂರು ಸಿಟಿ.

ಕುಂತಳಾನಂದ ತೈಲವು.

192 40

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಇಂದ್ರಾಖ್ಯಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಮಾಡಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.



**ಸರ್ವ ವಿಳಾಸ:—ಪಿ. ಎಮ್. ನಾಥ ಮತ್ತು ಕಂಪೆನಿ,
ಸೌಕಾರ್ಪೇಟೆ, ಮದರಾಸ್.**

ಜ್ವೇರರವರ ಉತ್ತಮೋತ್ತಮ ಆಯಿಂಟ್‌ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಣಗಳು, ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಗುಣವಾಗುತ್ತವೆ.

ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕಾಯಿಗಳ ಹಾಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಉತ್ಕೃಷ್ಟವಾದಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತಿರುವುದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ. 1; ಸಣ್ಣ ಬಾಟ್ಲಿಗೆ 10 ಆಣೆ. ವಿ. ಪಿ. ಛಾರ್ಜು ಬೇರೆ. ಗುಲಾಬ್‌ಸುಂದರ ಪ್ರಕಾಶ ಕೊಡದಿಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-8-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ. [26-32]

ವಿಳಾಸ—ಜಿ. ಗುಲಾಬ್ ಚಂದ್ ವೌವಾಳ್,
50 ಮೈಸಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1913 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 2-8-0.

ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [136-2]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು,
ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್,
ಕೋಟೆ, ಬೆಂಗಳೂರು ಸಿಟಿ.

MELLIN'S FOOD

TRADE MARK. TRADE MARK.

ಮೆಲಿನ್ಸ್ ಆಹಾರವು

[4-26]

ಕೈಸೋಕದ ಹಾಲಿಡಿ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000

(INCORPORATED UNDER THE MYSORE COMPANIES' REGULATION No. III OF 1895)

CAUTION:—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present-day provident companies in India, and enables you to select a good institution, where your hard earned money will be safe.

Absolute Security, Attractive Schemes, Soundest Principles.

Wanted Chief Agents and agents throughout India on Commission and Salary. For prospectuses, etc., please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895.)

BANKING:—Every sort of banking business transacted. The company's shares are most valuable and are within the reach of all.

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments.

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc., please apply to

It is to be kindly noted by the public that Mr. B. C. Gopalaswamy has been appointed as our District Agent for Hassan District. Our policy-holders in Hassan taluk can pay their premia to our above district agent as Mr. G. S. Ramakrishniah's services were already dispensed with.

Mr. M. L. NAGANNAH,
Managing Agent, MYSORE.

[181-47]

ಅನಾಹುತಗಳು ಸಂಭವಿಸುವವು!

ಕೆಲಸಮಾಡುವ ಯಾವ ಮನುಷ್ಯನಾದ ರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾ ದರೂ ಅನಾಹುತಗಳು ಆಗುತ್ತವೆ. ಪ್ರತಿ ದಿನವೂ ಯಾರಿಗಾದರೂ ಸಂಭವಿಸುತ್ತೆ. ಏ ದಾದರೂ ಒಂದು ದಿನ ಅದು ನಿನಗೂ ಆ ದೀತು.

ಐಲಿನಾಯ್ಸಿನ ಕಿಮ್ಮಿಡಿಮಲ್ಲಿರುವ ಮೆ॥ ಓ. ಎಸ್. ಸ್ಟ್ಯಾಂಟನ್ ಹೇಳುವದು — “ಮಹಡಿಯಿಂದ ಇಳಿಯುತ್ತಿರುವಾಗ ನನ್ನ ಪೆಂಡತಿಯು ಹಿಂತುಕೊಳ್ಳಲಾರದಷ್ಟು ಕಠಿಣ ವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೆಲವು ದಿವಸಗಳ ವರೆಗೆ ನರಳಿ ಕೊಂಡು, ಮುಟ್ಟಿದರೆ ನೋವುಂಟಾಗುತ್ತಿತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತಕ್ಕ ಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂ ಡಳು.

ಚೆಂಬರ್‌ಲೇನ್ಸ್ ಓರಿಯೆಂಟಲ್ ಬಾಂ ಎಂಬದ ನ್ನು ಕುರಿತು ಕೇಳಿ, ಅದನ್ನು ಉಪಯೋಗಿಸ ಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು.”

ಸೀಸೆ 1ಕ್ಕೆ 1 ರೂ. ಮಾರಿಗೆ ಎಲ್ಲಾ ಔ ಷಧಿಗಾರರಲ್ಲಿಯೂ ಸಿಗುತ್ತೆ. 101 8

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷ ಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು

(2) ಹಾಡುವವರಿಗೆ ವರಪ್ರಸಾದವಾದದ್ದು

(3) ಬಾಯಿ ದುರ್ಗಂಧ, ಗಂಟ್ಲು ಗಾರೆಸ್ಸುವುದು, ಉಬ್ಬಸ, ಸಮುದ್ರಯಾನದ ಒಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ [73-15]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ

ಮುತ್ತಿನಂತಿರುವ 15 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.

,, 95 ,, ,, ,,	,,	4 ,,
,, 200 ,, ,, ,,	,,	7 ,,
,, 300 ,, ಸುಂದರವಾದ ಟಿನ್ ಡಬ್ಬಾ		9 ,,
,, 80 ,, ,, ,,	,,	1 ,,
,, 100 ,, ಬಾಟ್ಲಿಯಲ್ಲಿ		1½ ,,

ಈ ಕ್ರಯದಷ್ಟು ಸ್ಟ್ಯಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಬೊಂಬಾಯಿ 3;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯುವ ಕಮಾ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಣ, ಪೀತಾ, ಕಾಶ್ಮೀರ ಶಾಲು, ದುಪ್ಪಟ್ಟ, ನಗಗಳು, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವ ವರಿಗೆ 100 ಫೋಟೋಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ಚಿತ್ರಪಟಗಳನ್ನು ಇನಾಮ್ ಆಗಿ ಕಳುಹಿಸಲಾಗುತ್ತದೆ [60-16]

ಎಸ್. ಯು ಎನ್ ಮತ್ತು ಕಂಪೆನಿ, ಕಾಶಿ

BRAHMAPPA TAVANAPPANAVAR,

Merchant & Commission Agent

Agent to Messrs Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿ ಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಟೋಪೊಡಲ್ಲಾಳಿ, ಮೊಕ್ಕಾಮು, ಗಂಟುಕಟ್ಟುವದು ಸ್ಟೇಷನ್ನಿಗೆ ಸೇರಿಸುವದು ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚಿನ ತಗಲುವ ವಿನಾವದರಿಂದ ಮುಂಬೈಯಿಂದ ಹಸುವು ದಕ್ಕಿಂತಲೂ ಸುಲಭ ಪದದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಮಜೂರಿ ಉಳಿಯುತ್ತೆ ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ [97 10]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು

ಹೆಡ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ ಬ್ರಾಂಚ್ ಆಫೀಸು —ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 22

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ! ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವಿಲ್ಲ ಬಿಳಿಯದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತಿಳಿದುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(1) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (2) ಟೋಪಿಗಳನ್ನು ಬುದ್ಧಿವಂತರಾಗಿ ನಾವೇ ಸಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪ್ಲೇನುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲ ತಕ್ಕ ಬೆಲೆಬಾಳುವ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ,

ಚುಕ್ಕೆಯುಳ್ಳ ಟೋಪಿಗಳು ರೂ ೧—೮, ರೂ ೧—೧೨.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ , ೧ ರೂ ೮ ಆ., ೧ ರೂ ೬ ಆ

ಮುಟುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ.

"In addition to cap making we are giving special attention to knitting stockings All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply.—
MANAGER, CAP WORKS,
GIRLS' INDUSTRIAL SCHOOL, HASSAN.

ಶ್ರೇಷ್ಠವಾದ ವಾಚ್ ' ನೂತನವಾದ ವಾಚ್ ' ಸಾಧ್ಯವಾದ ವಾಚ್ '

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ 1 8 0 ಮಾತ್ರ,

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್ —(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಸೆ, (7) ಕರವಸ್ತ್ರ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.— [117-4]

ಟಿ ಸೀತಾರಾಮ ಮೊದಲಿಯಾರ್, ನಂ 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಕೇಣಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5—6—1914 ರಿಂದ 12—6—1914 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		0	0	0	0
ಮೈಸೂರು	,,	0	0	0	0
ಕೋಲಾರ್	,,	0	0	11	3
ಕೋಲಾರ್ ಚಿನ್ನದ ಗಣಿಗಳು		1	1	0	0
ತುಂಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	2	0	0	0
ಶಿವಮೊಗ್ಗ	,,	4	4	0	0
	ಜುಮ್ಲಾ	7	6	11	3

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ಆಷಾಢ ಶುದ್ಧ ತದಿಗೆ ಶುಕ್ರವಾರದಿಂದ ಆಷಾಢ ಶುದ್ಧ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜೂನ್ ಮತ್ತು ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
26	ಶುಕ್ರ	ತದಿಗೆ	31 1	ಪುಷ್ಯ	31-2	13
27	ಶನಿ ,,	ಚೌಂ	30-53	ಆಶ್ಲೇಷ	30 17	14
28	ಭಾನು §	ಪಂಚಮಿ	26-39	ಮಖಾ	27-37	15
29	ಸೋಮ ‡	ಷಷ್ಠಿ	21-46	ಪುಬ್ಬಾ	24-39	16
30	ಮಂಗಳ †	ಸಪ್ತಮಿ	16-15	ಉತ್ತರ	21-7	17
1	ಬುಧ	ಅಷ್ಟಮಿ	10-17	ಹಸ್ತ	17-10	18
2	ಗುರು *	ನವಮಿ	4 10	ಚಿತ್ತ	53-45	19

ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ , ದೇವರಾಜೇ ಅರಸಿನ ಕುಮಾರರ ವರ್ಧಂತಿ § ಪಂಚಮಾತಿಥಿ, ಮಳೆ ನಕ್ಷತ್ರ—ಆರಿದ್ರಾ 3 ನೇ ಪಾದ ‡ ತಿಥಿದ್ವಯಂ † ಅಷ್ಟಮೀ ತಿಥಿ * ಅವಮಃ, ವೈವಸ್ವತಮನ್ವಾದಿ, ಮಳೆ ನಕ್ಷತ್ರ- ಆರಿದ್ರಾ 4 ನೇ ಪಾದ

Printed and Published by the Rev. H. GULLIFORD Proprietor and Manager, Wesleyan Mission Press Mysore 25/6/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸ ೧೯೧೫ ನೇ ಇಸವಿ ಜೂಲೈ ತಾರೀಖು ೨ ನೇ ಗುರುವಾರ. ಸಂಚಿಕೆ ೩

ಸ್ತ್ರೀಯರ ಖುಷ್‌ಖಬರು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಕೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾವ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ತೃಪ್ತಿಪೂರ್ತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವ ದಕ್ಕಿಂತ ಒಂದೇಯೊಂದು ಬಾರಿ ಈ " ಕಾಮಿನಿಯಾ ತೈಲ " ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ " ಸರ್ಟಿಫಿಕೇಟ್ ಒಫ್ ಮೆರಿಟ್ " ಅಥವಾ ಯೋಗ್ಯತಾಪತ್ರವೂ, ಇತರ ನಾನಾರು ಪುರಸ್ಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ " ಕಾಮಿನಿಯಾ " ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ ರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವದು. ಸೀಸೆಯೊಂದರ ಕ್ರಯ ರೂ 1-0-0, ಅ ವೆ 0-1 0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ ವೆ 0-7 0 ಬೇರೆ

ಸೂಚನೆ —ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು " ಕಾಮಿನಿಯಾ ತೈಲ " ವನ್ನು ಕೇಳಿದರೆ, " ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ " ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ " ಕಾಮಿನಿಯಾ ಓಯಿಲ್ " ಹಾಗೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ-ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಘ್ರಾಣಾದಿಕೆಯು ಆವರಿಸಿಕೊಳ್ಳುತ್ತದೆ ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ [19 25]

ಸಣ್ಣ ಸೀಸೆಯ ಬೆಲೆ ರೂ 0 8 0 ಒಂದು ದ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0, ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0-0 ಅಂಚೆಯ ವೆಚ್ಚ ಬೇರೆ ರೂ. 0-4 0 ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಏಜೆಂಟ್, ಡಿ. ಉಲ್ಲನ್ ಮಾರ್ಕೆಟ್, ಮಂಗಳೂರು.

Full Notes and Examiner on L. S. E. Texts (1915)—**Both Tanglewood and Fairy Tales**, with Author's life, meanings, explanations, summaries, constructions and questions Price **Annas 5 English Papers**—Subscription **Re. 1½ only**. Special copy **As 6 Spelling Book As. 4.** (Postage extra)

Apply to, **M. N Sitarama Rao,**
[100 9] **Krishnaraja Mohalla, Mysore.**

NOW READY

Full Notes with Summary and Numerous useful questions on Circe's Palace, The Golden Fleece and Fairy Tales (L. S. Text for 1915) by Mr A S Rangaswamiengar, B A, Asst Master, Maharani's College, Mysore Price four annas only. Yate's Primer 0-4-0, Yate's Second Reader 0-9-0, King Second Reader 0 6 0 King Third Reader 0-8-0, Macmillan's New No IV Reader 0-12-0, Hydes Practical English Grammar—First 0-15-0, Second 0-15-0, Longman's School Geography 1-4-0, Marrison's Junior Geography of India 0 12-0

We supply you any books in English or Canarese

[23 25] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು —ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1 25 ಕ್ಕೆ 3, 50 ಕ್ಕೆ 8, 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗ ಪಾಠಕ್ರಮಕ್ಕೆ ... ಸದಾಗಿ ಆಗಿದೆ ಇದರಲ್ಲಿ ಮೈಸೂರು ದೇಶದ ಬೆಟ್ಟ ಪತ್ರದ, ನದಿ ಪರ್ವತಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ ... ಕ್ರಯ 2 ಆಣೆ [19-20]

ಇಲ ... 2 ನೇ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ ಡಿಟೊ 1 ನೇ ಪುಸ್ತಕದ ನೋಟ್ಸು 1¾ ಆಣೆ ಡಿಟೊ 5 ನೇ ಪುಸ್ತಕದ ನೋಟ್ಸು 1 ಆಣೆ ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ Notes on ' Tanglewood Tales," English Lower Secondary Text for 1915—As. 3 Notes on Fairy Tales—As 2

ನಮ್ಮ ವಿಳಾಸ—ಯನ್. ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಮಹಿಳಾಸಖೀ

ಸ್ತ್ರೀಯರಿಗೆ ಉಪಯುಕ್ತವಾದ ಕರ್ಣಾಟಕ ಮಾಸಪತ್ರಿಕೆಯು

ಜೂನ್ ತಿಂಗಳಿನ ಮಾಸಪತ್ರಿಕೆಯ ವಿಷಯಸೂಚನೆ

ವಾಚಕಿಯರಿಗೆ
(1) ಬಾಲಿಸಿಂದ ಕ್ಷಯರೋಗದ ಅಪಾಯ, (2) ಇದಕ್ಕೆ ಪರಿಹಾರ, (3) ಹಾಲು ಮಾರುವವರೂ ಅವರ ವಿಧಾನಗಳೂ, (4) ಚಿಕ್ಕ ಮಕ್ಕಳಿಗೋಸ್ಕರ, (5) ಸೂಲಗಿತ್ತಿಯರು, (6) ನೈರ್ಮಲ್ಯದ ಪ್ರಾಮುಖ್ಯತೆ
ಧರ್ಮಪತ್ನಿಯಾದ ಸಂಗೀತಗಾರನು
ಸ್ತ್ರೀಗೌರವ (1)
ನೈರ್ಮಲ್ಯ
ಒಂದು ಕಾಳು ದವಸದ ಪರ್ಮಕ್ಕೆ ಚಿನ್ನದ ಫಲವು
ಚೀನಾ ಜನರ ಕೆಲವು ಸುಗುಣಗಳು
ಮಕ್ಕಳಿಗೆ ಪ್ರೀತಿಯಿಂದ ಸಾಕಿದ ಮಿನಾನು, ಹೊವಿಗೆ ಕೇಳಿದ ವಿಷಯವು
ಮೊಂಟೆಸ್ಸೋರಿಯವರ ಬೋಧನೆಯ ವಿಧಾನ
ಕೆಲವು ಬುದ್ಧಿವಾಕ್ಯಗಳು
ವರ್ತಮಾನ ಸಂಗ್ರಹ
ಬಾಯಿಗೆ ರುಚಿಯಾದ ಪಾಳುವುದು — ಪಾಕಶಾಸ್ತ್ರ

ಒಂದು ವರುಷದ ಚಂದಾ ... ... 0—6—0
ಒಂದು ವರುಷದ ಚಂದಾ, ಹಾಸಲು ಸಹಿತ ... 0—9—0

ಮಹಿಳಾಸಖಿಯನ್ನು ತರಿಸಿಕೊಳ್ಳುವುದಕ್ಕೆ ಬರೆಯಬೇಕಾದ ಪತ್ರಕ್ರಮ —
[129 1] ತಾರೀಖು

ಮೈಸೂರಲ್ಲಿರುವ ಸಿ ಎಲ್. ಎಸ್. ಡಿಪೋ ಮ್ಯಾನೇಜರವರಿಗೆ

ಅಯ್ಯಾ,

ಮಹಿಳಾಸಖಿಯ ಒಂದು ವರುಷದ ಚಂದಾ ಮೊಬಲಗು, ಹಾಸಲು ಸಹಿತ 0—9—0 ಆಣೆಗಳಿಗೆ ಸರಿಯಾದ ಪೋಸ್ಟೇಜು ಸ್ಟಾಂಪುಗಳನ್ನು ಇದರಲ್ಲಿ ಇಟ್ಟಿರುತ್ತೇನೆ ದಯವಿಟ್ಟು ಪತ್ರಿಕೆಯನ್ನು ಕಳುಹಿಸುತ್ತಾ ಬರಬೇಕೆಂದು ಕೋರುತ್ತೇನೆ
ವಿಳಾಸ — ರುಜು

WANTED

Agents for the sale of Steel Cash and Treasure Safes, in Mysore District, for terms and other particulars, apply to

Basel Mission Mechanical Establishment,
[142 1] **Mangalore.**

ಹೊಸ ಬಂಗಾಳಿ ನಾವೆಲ್ಸ್ —ವಿಷವೃಕ್ಷ 4 ಆ ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ ಬಿ ವೆಂಕಟಾಚಾರ್ಯರಿಂದ ವಂಗವಿಜೇತ 1-4 0. ಚಂದ್ರಶೇಖರ 1-1-0 ರಜನಿ 13 ಆ ಅಹಲ್ಯಾಬಾಯಿ 9 ಆ ಇತ್ಯಾದಿ ಚಿತ್ರವಿಚಿತ್ರಾವಳಿ 11 8 ಆಣೆ ಮಾಯಾವಿ ಪ್ರಿಂಟಾಗುತ್ತಿದೆ ನ್ಯಾಯದರ್ಪಣ 1½ ರೂಪಾಯಿ.
[53-19] ಎಂ ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಕಳವು, ದರೋಡೆ.

ಠಕಾಯಿತಿ, ಅಕ್ರಮ ಸ್ತ್ರೀಸಂಗಮ, ಅಪಾಯಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಸುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ " ಕನ್ನಡ ಇಂಡಿಯನ್ ಪೆನಲ್ ಕೋಡ್ " ಎಂಬ ಅಭಿದಾನದಿಂದ ಜಾರೀಲಿ ತಂದಿರುವರು ಈ ಆಕ್ಟಿಗೆ ಅನೇಕ ಜಡ್ಜಿಗಳು ತೀರ್ಪುಗಳನ್ನು ಬರೆದಿರುವರು ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಧಪ್ಪ ಕಾಗದದ್ದು 2 ರೂಪಾಯಿ, ಹಸನುಕಾಗದದ್ದು ರೂ 2 8-0.
[143-1] ವಿಳಾಸ—ಬಿ. ನರಸಿಂಗರಾವ್,
ಎಡಿಟರ್, ದಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

" ನಿರುಪಮಾ " ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ " ಕುಮುದಿನಿ " ಬಂಗಾಳಿಯ ನಾವೆಲಿನ ಭಾಷಾಂತರ, ಪತಿವ್ರತೆಯ ಕಥೆ ಕ್ರಯ 6 ಆಣೆ " ಸಂತಾಪಕ " ಮನೋಹರವಾದ ನವೀನ ಕಾದಂಬರಿ. ಎಲ್ಲರೂ ಅಗತ್ಯವಾಗಿ ಓದಬೇಕಾದುದು ಕ್ರಯ 1 ಆ " ಮಹಾರಣ್ಯಪುರಾಧಿಪತ್ಯ " 4 ಆ " ಪರಲೋಕ ರಹಸ್ಯ " 2 ಆ. " ಕಲಹಪ್ರಿಯಾಪ್ರಹಸನ " 2 ಆ " ಯೋಗನಿದ್ರಾ ಪ್ರಹಸನ " 2 ಆಣೆ,—ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ
[206-29] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance None but those who can guarantee good business need apply to

Messers VENKATACHALAM & SONS,
Chief Agents,
Hindustan Co-operative Insurannce Society, Ltd.,
166, Dodpet, near Old Taluk Cutcherry,
[224-30] *MYSORE.*

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಒದಗಾಯಿಸಿದೆ

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಉದಾರವಾಗಿ ಪಾವತಿ ಮಾಡಿದೆ

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ 1, 2 ನೇ ಕ್ಲಾಸ್ ರೂ 3-8-0.
ಮದುವೆ ಫಂಡು—ತಿಂಗಳ ಚಂದಾ ರೂ 1 0-0

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ [138-1]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ—

ವಿ ಬಿ. ಶ್ರೀಕಂಠಯ್ಯನವರು,
ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್,
ಕೋಟೆ, ಬೆಂಗಳೂರು ಸಿಟಿ.

VOL-12
4-6-1914
27-5-1915

CONTINUED
ON
REEL NO-10

VRITTANTAPATRIKE

(IN KANNADA)

REEL NO 9

END

EXPOSURES 707

ಅವಶ್ಯವಾದ ಕೆಲವು ಪುಸ್ತಕಗಳು.

18-1

ಸ್ವಲ್ಪ ಪ್ರತಿಗಳೇ ಉಳಿದಿವೆ ಜಾಗ್ರತೆ ತರಿಸಿಕೊಳ್ಳಿರಿ ಮುಗಿದ ನಂತರ ಸಿಂಡಿಕ ದೊರೆಯಲಾರದು —೩ ನೇ ಬಾಗ ಇಂಗ್ಲೀಷ್ ಕಲಿಯುವ ಪುಸ್ತಕ, ಕ್ರಯ. 1-8-0 ಇಂಗ್ಲೀಷ್ ಭಾಷೆಯನ್ನು ವ್ಯಾಕರಣಾನು ಸಾರವಾಗಿ ಓದುವದಕ್ಕೂ, ಬರೆಯುವದಕ್ಕೂ, ಮಾತನಾಡುವದಕ್ಕೂ, ಭಾಷಾಂತರ ಮಾಡುವದಕ್ಕೂ, ಬೋಧಕರ ಸಹಾಯವಿಲ್ಲದೆ ಇನ್ನೂ ಅನೇಕ ಉಪಯೋಗವಾದ ವಿಷಯಗಳನ್ನು 1 ನೇ ಭಾಗದ ಸುಲಭವಾಗಿ ಇಂಗ್ಲಿಷ್ ಕಲಿಯುವಿಕೆ ಎಂಬ ಪುಸ್ತಕವನ್ನು ತರಿಸಿಕೊಂಡವರಿಗೂ ಕೇವಲ ಸುಲಭವಾಗಿ 1 2 ತಿಂಗಳಲ್ಲಿ ತಾನಾಗಿ ಕಲಿಯುವ ಉತ್ತಮ ಪುಸ್ತಕವಿದು ಕ್ರಯ ರೂ 1-4-0 ೧ ನೇ ಸಂಪುಟ ಕನ್ನಡ ಕಥಾಸರಿತ್ಸಾಗರ, 1-8 0.—ಶ್ರೀಕಂಠ ಪ್ರಣೀತವಾಗಿ ಮ|| ಭಾರತಿ ಸಂಪಂಗಿ ರಾಮಯ್ಯನವರಿಂದ ಹೊರತಂದದ್ದು. ಅರೇಬಿಯನ್ ನೈಟ್ಸ್ ಇದಕ್ಕಿಂತಲೂ ಉತ್ತಮವಾದ ಪುಸ್ತಕವಿದು. ಕ್ರಯ 1 ೨ ಸಂಪುಟ ಸೇರಿದ್ದು ರೂ. 1-0-0 1 ನೇ ಸಂಪುಟ ಮಾತ್ರವಾದರೆ ರೂ 1-8 0 ಗೀತಾಮೃತಮಹೋದದಿ, ಕ್ರಯ 8 ಆಣೆ.—ಶ್ರೀ ಕೃಷ್ಣಾರ್ಜುನಸಂವಾದವೆಂಬ ಗೀತಾಮೃತಪಾನ ಮಾಡಬೇಕೆಂಬ ಮಹಾಶಯರಿಗಿದು ಅತ್ಯಂತ ಉಪಕಾರಿ ಪುಸ್ತಕವು ಕ್ರಯ ೮ ಆಣೆ

ವಿಳಾಸ—ಬಿ ಕೆ ಮೂರ್ತಿ ಕಂಪನಿ

ಲಕ್ಕೂರು ಪೋಸ್ಟ್ ಕೋಲಾರ

ಚಿಕ್ಕಬಳ್ಳಾಪುರ ಮುನ್ಸಿಫ್ ಕೋರ್ಟು

19 1

ಒ ಎಸ್. ನಂಬರು 371 1909 10 ನೇ ಸಾಲ್

ವಾದಿಗಳು —ದೊಡ್ಡಬಳ್ಳಾಪುರದ ಕಸಬೆಯಲ್ಲಿರುವವರು —(1) ಅಮಾಳೆ ಸಂಜುಂಡಪ್ಪ ತಂದೆ ಮಲ್ಲಪ್ಪ (2) ದಾನಪ್ಪನವರ ಮಾಪಣ್ಣ ತಂದೆ ದಾನಪ್ಪ ಇವರಿಗಾಗಿಯೂ ಮತ್ತು ಇವರ ಗುಂಪಿಗೆ ಸೇರಿದವರಿಗಾಗಿಯೂ ದಾವಾದೇವಸ್ಥಾನದಲ್ಲಿ ವಾದ್ಯತೆಯುಳ್ಳ ಎಲ್ಲಾ ದೇವಾಂಗದವರು

ಪ್ರತಿವಾದಿಗಳು —ದೊಡ್ಡಬಳ್ಳಾಪುರದಲ್ಲಿರುವವರು—(1) ದಾನಪ್ಪ ಶೆಟ್ಟಿ ತಂದೆ ಗೂಳಶೆಟ್ಟಿ (2) ಕದರಪ್ಪನವರ ಮಗ ನರಸಪ್ಪ, ಮಗ್ಗದ ಕಸಬು (3) ರಾಮಯ್ಯ ತಂದೆ ಸಂಜುಂಡಪ್ಪ ಇವರಿಗಾಗಿಯೂ ಇವರ ಗುಂಪಿಗೆ ಸೇರಿದವರಿಗಾಗಿಯೂ ದಾವಾದೇವಸ್ಥಾನದಲ್ಲಿ ಪ್ರತಿವಾದಿಗಳಿಗೆ ಇರುವ ವಾದ್ಯತೆಯಂತೆ ಬಾಧ್ಯತೆಯುಳ್ಳ ಎಲ್ಲಾ ದೇವಾಂಗದವರು

ಮೇಲ್ಕಂಡ ನೊಕದ್ದಮೆಯಲ್ಲಿ ವಾದಿಗಳು ಮತ್ತು ಇವರ ಪಾರ್ಟಿಯವರು ದಾವಾದೇವಸ್ಥಾನಕ್ಕೆ ಹೋಗಿ ಪೂಜೆ ವಗೈರೆ ಮಾಡುವದಕ್ಕೂ ಮತ್ತು ಅದರ ಮ್ಯಾನೇಜ್‌ಮೆಂಟಿನಲ್ಲಿ ಸೇರುವದಕ್ಕೂ ಇರುವ ಹಕ್ಕನ್ನು ಸ್ಥಿರಪಡಿಸಬೇಕೆಂತಲೂ, ಈಗ ಅರ್ಚಕತನ ಮಾಡುವ ದೇವಾಂಗದವನಾದ 1 ನೇ ಪ್ರತಿವಾದಿಯನ್ನು ನಿವೃತ್ತಿ ಮಾಡಿ ಬ್ರಾಹ್ಮಣ ಅರ್ಚಕನನ್ನು ನೇಮಿಸಬೇಕೆಂತಲೂ, ಮತ್ತು ಮುಂಚೆ ಎರಡು ಪಾರ್ಟಿಗಳೂ ಕಲಹವಿಲ್ಲದೆ ಇರುವದಕ್ಕಾಗಿ, ಆಯಾಯ ಪಾರ್ಟಿಗಳವರು ಕೋರ್ಟಿನವರು ನೇಮಿಸುವ ಕಾಲಗಳಲ್ಲಿ ಅಥವ ಸರದಿ ಮೇರೆಗೆ ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ಇಷ್ಟವುಳ್ಳ ಬ್ರಾಹ್ಮಣ ಅರ್ಚಕನ ಮೂಲಕ ಪೂಜೆ ಮಾಡಿಸಿಕೊಳ್ಳುವದಕ್ಕೂ ಮತ್ತು ಮ್ಯಾನೇಜ್‌ಮೆಂಟು ಮಾಡುವದಕ್ಕೂ ಒಂದು ಸ್ಕೀಮ್ ಮಾಡಿಸಿಕೊಡಬೇಕೆಂತಲೂ ದಾವಾದೇವಸ್ಥಾನದ ಪೂರ್ವಪದ್ಧತಿಗೆ ವಿರೋಧವಾಗಿ 1 ನೇ ಪ್ರತಿವಾದಿ ಮತ್ತು ಈತನ ಪಾರ್ಟಿಯವರು ಈ ದೇವಸ್ಥಾನದಲ್ಲಿ ದೇವಾಂಗದವರ ಮೂಲಕ ಅರ್ಚಕತನವನ್ನು ಮಾಡಿಸುತ್ತಾ ಇರುವ ಕಾರಣ ದೇವಸ್ಥಾನಕ್ಕೆ ಮಾಡಬೇಕಾದ ಸಂಪ್ರೋಕ್ಷಣೆ ಖರ್ಚಿಗಾಗಿ ರೂ 100 ಮತ್ತು ಕೋರ್ಟು ಖರ್ಚುಗಳು ಸಹ ಪ್ರತಿವಾದಿಗಳಿಂದ ಬರಮಾಡಿಕೊಳ್ಳಬೇಕೆಂದು ದಾವಾ ಮಾಡಿರುತ್ತಾರೆ

ಆದಕಾರಣ ಸದರಿ ವಾದಿಗೆ ಉದಾಹರಣೆ ಕೊಡುವ ಬಗ್ಗೆ ನೀವು ಖುದ್ದಾಗಲಿ ವ್ಯಾಜ್ಯದ ಸಂಬಂಧವಾದ ಸಮಸ್ತ ಮುಖ್ಯ ಸವಾಲ್‌ಗಳಿಗೂ ಜವಾಬು ಕೊಡತಕ್ಕ ಕ್ರಮವಾಗಿ ಅಧಿಕಾರ ಹೊಂದಿರುವ ಪ್ಲೀಡರ್ ಮೂಲಕವಾಗಿ ಆಗಲಿ ಅವರು ಅಂಥಾ ಪ್ರಶ್ನೆಗಳನ್ನೆಲ್ಲಾ ಜವಾಬು ಕೊಡಲಿಕ್ಕೆ ಶಕ್ತಿಯುಳ್ಳ ಮತ್ತೊಬ್ಬರ ಸಮೇತ ಆಗಲಿ 1910 ನೇ ಇಸವಿ ಫೆಬ್ರವರಿ ತಿಂಗಳು 7 ನೇ ತಾರೀಖು ಪೂರ್ವಾಹ್ನ 11 ಘಂಟೆಗೆ ಹಾಜರಾಗಲಿಕ್ಕೆ ಇದರಿಂದ ಸಮನ್ ಕೊಡೋಣವಾಗಿದೆ ನೀವು ಸದರಿ ತಾರೀಖಿನಲ್ಲಿ ಹಾಜರಾಗದೆ ಇದ್ದರೆ ವ್ಯಾಜ್ಯವನ್ನು ನಿಮ್ಮ ಗೈರ್ಹಾಜರಿನಲ್ಲಿ ಕೇಳಿ ಫೈಸಲ್ ಕೊಡಲ್ಪಟ್ಟೀತೆಂದು ನೀವು ಗ್ರಹಿಸತಕ್ಕದ್ದು ಮತ್ತು ವಾದಿ ನೋಡಬೇಕೆಂದು ಅಪೇಕ್ಷಿಸುವಂಥ ದಸ್ತೈವಜನ್ನು ಮತ್ತು ನಿಮ್ಮ ಉದಾಹರಣೆಗೆ ಬಲವಾಗಿ ಆಧರಿಸುವಂಥ ಯಾವ ದಸ್ತೈವಜನ್ನು ಆಗಲಿ ನಿಮ್ಮ ಸಂಗಡ ತರಬೇಕು, ಯ ನಿಮ್ಮ ಪ್ಲೀಡರ್ ಸಂಗಡ ಕಳುಹಿಸಬೇಕು

ಸನ್ 1910 ನೇ ಇಸವಿ ಜನವರಿ ತಾರೀಖು 21 ರಲ್ಲು ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ಕತ್ತಿನೊಡನೆ ಕೊಡಲ್ಪಟ್ಟಿದೆ

T VENKOBA RAO,
Munsiff

ವೃತ್ತಾಂತ ಪತ್ರಿಕೆ.

ಸನ್ ೧೯೧೦ ನೇ ಇಸವಿ ಫೆಬ್ರವರಿ ತಾ ೩ ನೇ ಗುರುವಾರ

ಹಿಂದುಸ್ಥಾನವೂ ಅರಾಜಕ ಕಾರ್ಯಗಳೂ

ಒಬ್ಬ ಚಿಕ್ಕ ವಯಸ್ಸಿನ ಬಂಗಾಳಿಯು ಕಳೆದ ವಾರ ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನ ಆವರಣದೊಳಗೆ ಸ್ಯಾಂಸುಲ್ ಅಲಂ ಎಂಬೊಬ್ಬ ಪೊಲೀಸ್ ಅಧಿಕಾರಿಯನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದ ಸುದ್ದಿಯು ಹಿಂದುಸ್ಥಾನದಲ್ಲೆಲ್ಲಾ ವಿಸ್ಮಯವನ್ನುಂಟುಮಾಡಿತು ಈ ಪೊಲೀಸ್ ಅಧಿಕಾರಿಯು ಬಂಗಾಳದಲ್ಲಿ ಒಂದು ಫಿತೂರಿಕೋರರ ಗುಂಪನ್ನು ಪತ್ತೆಮಾಡುವುದರಲ್ಲಿ ಬಹಳ ಚಟುವಟಿಕೆಯನ್ನೂ ಚತುರತೆಯನ್ನೂ ಪ್ರಕಾಶಪಡಿಸಿದ್ದನು ಈತನು ಹೈ ಕೋರ್ಟಿನಲ್ಲಿ ಕೆಲಸ ತೀರಿಸಿಕೊಂಡು ಮೆಟ್ಲು ಇಳಿದು ಬರುತ್ತಿದ್ದ ಸಮಯದಲ್ಲಿ ಆ ಹಿಂದೂ ಬಾಲಕನು ಸ್ವಲ್ಪವೂ ಗಾಬರಿಪಡದೆ ನೆಟ್ಟಗೆ ಹೋಗಿ ಗುಂಡು ಹೊಡೆದು ಆತನನ್ನು ಕೊಂದು ಹಾಕಿರುವನು. ಆದರೆ ಅಲ್ಲಿದ್ದವರು ಸಾಹಸಪಟ್ಟು ಅವನನ್ನು ತಪ್ಪಿಸಿಕೊಳ್ಳದಂತೆ ತಡೆದು ಹಿಡಿದಿಟ್ಟುಕೊಂಡಿದ್ದಾರೆ ಮತ್ತು ಈಚೆಗೆ ದರ್ಯಾಪ್ತಿಯೂ ನಡೆದು ಅವನನ್ನು ಹೈ ಕೋರ್ಟ್ ಸೆಷನ್ಸ್ ವಿಚಾರಣೆಗೆ ಗುರಿಮಾಡಿರುವರು

ಅತ್ತಲಾಗಿ ನಾಸಿಕದಲ್ಲಿ ಒಬ್ಬ ಹಿಂದುವು ಕಲೆಕ್ಟರಾಗಿದ್ದ ಮ ಜಾಕ್ಸನ್ ಸಾಹೇಬರನ್ನು ಕೊಂದುಹಾಕಿದನು ಇವೆರಡು ಕೊಲೆಗಳೂ ಒಂದರ ಹಿಂದೊಂದು ಬೇಗನೆ ನಡೆದಿರುವುದನ್ನು ನೋಡಿದರೆ ಇಂಥಾ ದುರ್ಮಾರ್ಗಿಗಳಾದ ಸಣ್ಣ ಪ್ರಾಯದ ಹುಡುಗರು ಅಲ್ಲಲ್ಲಿ ಅನೇಕರಿರಬಹುದೆಂದು ಕಾಣುತ್ತಿದೆ. ಯಾವ ಕಾರ್ಯದಿಂದ ತಮ್ಮ ದೇಶಕ್ಕೆ ಹಿತವಾಗುವುದೋ ಅವರು ತಿಳಿಯಲಾರದೆ ದುರಾತ್ಮರ ಚಿತಾವಣೆ ದುರ್ಬೋಧನೆಗಳಿಗೆ ಒಳಗಾಗಿದ್ದಾರೆ ಮತ್ತು ಸರ್ಕಾರದ ನೌಕರಿಯನ್ನು ಧರ್ಮವಾಗಿಯೂ ಯಥಾರ್ಥವಾಗಿಯೂ ನಡಿಸಿಕೊಂಡು ಬರುತ್ತಿರುವವರನ್ನು ಕ್ರೂರತನದಿಂದ ಕೊಂದುಹಾಕಿದರೆ ದೇಶದ ಪಳಿಗಾಯೋ ಹಿತವೂ ಕೈಗೂಡುವದೆಂದು ಈ ಯೌವನಸ್ಥರು ತಿಳಿದುಕೊಂಡಿರುವರು ಮ|| ಜಾಕ್ಸನವರು ಪ್ರಜೆಗಳ ಪ್ರೀತಿಗೌರವಗಳಿಗೆ ಪಾತ್ರರಾಗಿದ್ದರೆಂಬುವುದನ್ನು ಎಲ್ಲರೂ ತಿಳಿದಿದ್ದರು. ಇದಲ್ಲದೆ ಅವರನ್ನು ತಿಳಿದು ಅವರಲ್ಲಿ ಹೋಗಿಬರುತ್ತಿದ್ದವರು ಅವರ ಮೇಲೆ ತುಂಬಾ ಪ್ರೇಮವನ್ನಿಟ್ಟುಕೊಂಡಿದ್ದರು ಆದರೆ ಅವರು ಮಾಡಿದ ಅಪರಾಧವೇನೆನ್ನಬಹುದು ಅವರು ತಮ್ಮ ಕೋರ್ಟಿಗೆ ಬಂದ ಒಂದು ಮೊಕದ್ದಮೆಯನ್ನು ವಿಚಾರಣೆಮಾಡಿ ಅಪರಾಧಿಗೆ ಶಿಕ್ಷೆಯನ್ನು ವಿಧಿಸಿದರು ಅವರು ನ್ಯಾಯಸ್ಥಾನದಲ್ಲಿ ಕುಳಿತು ತಮ್ಮ ಕರ್ತವ್ಯವನ್ನು ನಡೆಯಿಸಿದ್ದೇ ಅವರು ಮಾಡಿದ ಅಪರಾಧ. ಸ್ಯಾಂಸುಲ್ ಅಲಂ ಎಂಬ ಪೊಲೀಸ್ ಇನ್ಸ್‌ಪೆಕ್ಟರೂ ಕೂಡ ತನ್ನ ನೌಕರಿಯನ್ನು ಬಹು ಸಾಮರ್ಥ್ಯದಿಂದಲೂ ಚಟುವಟಿಕೆಯಾಗಿಯೂ ಮಾಡುತ್ತಿದ್ದನು ಈತನು ತನ್ನ ಕರ್ತವ್ಯವನ್ನು ಮಾಡುತ್ತಾ ರಾಜ್ಯಶಾಸನಕ್ಕೆ ವಿರೋಧವಾದ ಕೃತ್ಯಗಳನ್ನು ನಡೆಸಿದ್ದ ಅಪರಾಧಿಗಳನ್ನು ಹಿಡಿದು ನ್ಯಾಯಾಧಿಪತಿಗೆ ಒಪ್ಪಿಸಿ ಅವರ ಮೇಲೆ ರುಜುವಾತುಗಳನ್ನು ಒದಗಿಸಿದನು ಇದಕ್ಕಾಗಿ ಈತನು ದುರಾತ್ಮನ ಗುಂಡಿಗೆ ಸಿಕ್ಕಿ ಪ್ರಾಣಕೊಡಬೇಕಾಯಿತು

ಪ್ರತಿ ಒಬ್ಬ ವಿವೇಕಶಾಲಿಯೂ ಇಂಥಾ ಹೀನವೂ ನಿಷ್ಪ್ರಯೋಜನವೂ ಆದ ಕೊಲೆಗಳನ್ನು ಹಗೆಮಾಡಬೇಕು ನಾವು ಅವನ್ನು ಹಗೆಮಾಡುವುದೊಂದೇ ಸಾಲದು ಇಂಥಾ ಕ್ರೂರವಾದ ಮತ್ತು ಹೇಯವಾದ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವಂಥಾ ಯುವಕರನ್ನು ನಾವು ಹುಡುಕಿ ಸಿಕ್ಕಿದ ಒಡನೆಯೇ ಸರ್ಕಾರದವರಿಗೆ ಒಪ್ಪಿಸಿಬಿಡಬೇಕು ಇದರಿಂದ ಅವರಿಗೂ ದೇಶಕ್ಕೂ ಬಹಳ ಮೇಲಾದೀತು ಆ ಜನರು ತಾವು ಮಾಡುವ ಕ್ರೂರಕೃತ್ಯಗಳ ದೆಸೆಯಿಂದ ದೇಶಕ್ಕೆ ಒಳ್ಳೇದಾಗುವುದೆಂದು ಊಹಿಸುತ್ತಾರೆ. ಇದಕ್ಕಿಂತಲೂ ದೊಡ್ಡ ತಪ್ಪು ಇನ್ನಾವುದೂ ಇರುವುದಿಲ್ಲ ಯಾಕೆಂದರೆ ಈ ರೀತಿಯಾದ ಕೊಲೆಗಳೂ ಕ್ರೂರಕೃತ್ಯಗಳೂ ಅರಾಜಕ ಕಾರ್ಯಗಳೂ ನಡೆದಷ್ಟೂ ದೇಶದಲ್ಲಿ ಪ್ರಜಾ ಸ್ವಾತಂತ್ರ್ಯವು ಕಡಿಮೆಯಾಗುತ್ತಾ ಬಂದೀತೆನ್ನುವುದಕ್ಕೆ ಸಂಶಯವೇ ಇಲ್ಲ ಅಂಥಾ ದುರ್ಮಾರ್ಗಿಗಳು ಮಾಡುವ ಅಪರಾಧಕ್ಕೆ ಸತ್ಯವಂತರಾಗಿಯೂ ಯೋಗ್ಯರಾಗಿಯೂ ಇರುವವರು ಕೂಡ ನಾನಾ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗುವುದು ತುಪಾಕಿ ಪಿಸ್ತೂಲು ಮದ್ದು ಮುಂತಾದವುಗಳನ್ನು ಪ್ರಜೆಗಳು ಉಪಯೋಗಿಸುವ ವಿಷಯದಲ್ಲಿ ಸರ್ಕಾರದವರು ಇನ್ನೂ ಕಠಿಣತರವಾದ ಕಾನೂನುಮಾಡಿ ಜಾರಿಗೆ ತಂದಾರು ಅನೇಕವೇಳೆ ಸಭ್ಯರಾದ ಪ್ರಜೆಗಳ ಮನೆಗಳಿಗೂ ಸರ್ಕಾರದವರು ನುಗ್ಗಿ ಜಪ್ತಿಮಾಡಬೇಕಾದ ಸಂಭವ ಬಂದೀತು ಕೆಲವು ಅಧಿಕಾರಿಗಳನ್ನು ಕೊಂದುಹಾಕಿದ ಮಾತ್ರಕ್ಕೇ ಗವರ್ನಮೆಂಟಿನವರು ಪ್ರಜಾಪಾಲನೆಯನ್ನು ಬಿಟ್ಟುಬಿಡದೆ ಇನ್ನೂ ಕಠಿಣತರವಾದ ಕಾನೂನುಗಳನ್ನು ರೂಢಿಸುತ್ತಾರೆ ಆಗ್ಗೆ ಸಭ್ಯರೂ ರಾಜಭಕ್ತಿಪೂರಿತರೂ ಆದ ಪ್ರಜೆಗಳು ಕಷ್ಟವನ್ನನುಭವಿಸಬೇಕಾಗುವುದು.

ಇಂಥಾ ದುರಭಿಪ್ರಾಯಗಳನ್ನುಳ್ಳ ದುರ್ಮಾರ್ಗಿಗಳನ್ನು ಕಂಡುಹಿಡಿಯುವುದೂ, ಅವರನ್ನು ಫಿತೂರಿಕೋರರ ವಶಕ್ಕೂ ಚಿತಾವಣೆಗೂ ಸಿಕ್ಕದಂತೆ ತಪ್ಪಿಸುವುದೂ ಪ್ರಜೆಗಳಾದ ನಾವು ಮಾಡಬೇಕಾದ ಕಾರ್ಯವಾಗಿರುತ್ತದೆ ಸಣ್ಣ ವಯಸ್ಸಿನವರು ಸೇರಿಕೊಂಡು ಮಸಲತ್ತುಗಳನ್ನು ನಡಿಸುವಂಥಾ ಅಂತರಂಗವಾದ ಸಭೆಗಳು ಇದ್ದೇ ಇರಬೇಕು ಇವರು ಗುಟ್ಟಾಗಿ ಮದ್ದುಗುಂಡನ್ನು ತರಿಸಿಕೊಂಡು ನಿರಪರಾಧಿಗಳನ್ನು ಕೊಂದುಹಾಕುವುದಕ್ಕೆ ಏರ್ಪಾಡು ಮಾಡುತ್ತಾರೆ ನಾವು ಇಂಥಾ ಸಂದರ್ಭಗಳನ್ನು ನಿಗಾ ಇಟ್ಟು ಪತ್ತೆಮಾಡಿ ಬೇರುಸಹಿತವಾಗಿ ಮುರಿದುಹಾಕಬೇಕು ಇವುಗಳಿಂದ ನಮ್ಮ ದೇಶಕ್ಕೆ ಬಹಳವಾದ ಕೇಡು ಸಂಭವಿಸುತ್ತದೆ ಈ ಫಿತೂರಿಕೋರರ ಗುಂಪು ನಮ್ಮ ಮಧ್ಯೆ ಇದ್ದುಕೊಂಡು ಕ್ರೂರಕೃತ್ಯಗಳನ್ನು ನಡಿಸುತ್ತಿರುವಲ್ಲಿ ನಮಗೆ ನೆಮ್ಮದಿಯಾಗಲಿ ಸುಖಸಂತೋಷಗಳಾಗಲಿ ಲಭಿಸಲಾರವು, ಮತ್ತು ಅವನ್ನು ಬಯಲಿಗೆ ತಂದು ಹಾಕುವುದು ನಮ್ಮ ಮೇಲೆ ಬಿದ್ದ ಭಾರವಾಗಿದೆ

ನಮ್ಮ ಮೈಸೂರು ಸೀಮೆಯಲ್ಲಿ ಇಂಥಾ ಅರಾಜಕರ ಚಿತಾವಣೆಗೆ ಸಿಕ್ಕಿರುವ ಹುಡುಗರ್ಯಾರೂ ಇರಲಾರರೆಂದು ನೆನಸುತ್ತೇವೆ ಆದರೂ ಹೊರಗಿನವರ್ಯಾರೂ ನಮ್ಮ ಬಾಲಕರನ್ನು ಅಂಥಾ ದುರ್ಮಾರ್ಗಕ್ಕೆ ಎಳೆದು ಕೆಡಿಸದಂತೆ ಪ್ರಜೆಗಳೆಲ್ಲಾ ಬಹು ಜಾಗರೂಕರಾಗಿ ನೋಡಿಕೊಳ್ಳಬೇಕು

ಮೈಸೂರು ಸಂಸ್ಥಾನದಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ಮಾಡುತ್ತಿರುವ ಕೆಲಸ

ಮೈಸೂರು ಸಂಸ್ಥಾನದಲ್ಲ ವೆಸ್ಲಿಯನ್ ಮಿಷನ್ ಕ್ರೈಸ್ತ ಸಂಘದವರು ಅನೇಕ ವರುಷಗಳಿಂದಲೂ ನಾನಾತರವಾದ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿರುವರೆಂಬ ಸಂಗತಿಯು ವಾಚಕರಿಗೆ ಗೊತ್ತಿರುತ್ತದೆ ಅವರು ಸ್ಥಾಪಿಸಿರತಕ್ಕ ಪಾಠಶಾಲೆಗಳಲ್ಲಿ ಸಾವಿರಾರು ಬಾಲಕರೂ ಬಾಲೆಯರೂ ಓದುತ್ತಿರುವರು ಅವರು ಏರ್ಪಡಿಸಿರುವ ಚಿಕಿತ್ಸಾಲಯಗಳಲ್ಲಿ ಅನೇಕ ಸಹಸ್ರ ರೋಗಿಗಳು ಗುಣಹೊಂದಿ ನೆಮ್ಮದಿ ಸಂಪಾದಿಸುತ್ತಿರುವರು [illegible] ಪ್ರಯೋಜನಕ್ಕಾಗಿ ಈ ಸಂಘದವರು ಅನೇಕ ಪುಸ್ತಕಗಳನ್ನು ರಚಿಸಿರುವುದಲ್ಲದೆ ವಾರವಾರಕ್ಕೂ ಲೋಕದ ವರ್ತಮಾನಗಳನ್ನು ತಿಳಿಸುವ ವೃತ್ತಾಂತ ಪತ್ರಿಕೆಯನ್ನು ಪ್ರಕಟಿಸುತ್ತಾ ಬರುವರು ಮೇಲ್ಕಂಡ ಪ್ರಯೋಜನಗಳನ್ನು ನಮ್ಮ ದೇಶೀಯರು ಚಿರಕಾಲ ಅನುಭವಿಸಲೆಂದು ಹಾರೈಸುತ್ತೇವೆ [illegible] ವೆಸ್ಲಿಯನ್ ಮಿಷನ್ ಸಂಘದ ಪ್ರತಿನಿಧಿಗಳಾಗಿರುವ ದೇಶೀಯ ಮತ್ತು ವಿದೇಶೀಯ ಪಾದ್ರಿಗಳು ಬೆಂಗಳೂರಿನಲ್ಲಿ [illegible] ಕೂಟವನ್ನು ನಡಿಸಿ [illegible] ವರುಷದಲ್ಲಿ [illegible] ಕೆಲಸಗಳನ್ನು ಕುರಿತು ವಿರ್ಚಿಸುವರು [illegible] ಕೆಲಸಗಳನ್ನು ಪರಾಮರ್ಶಿಸಿ ನೇಮಕ ಮಾಡುವರು [illegible] ತಕ್ಕ ಸಂಗತಿಗಳು ಹೇರಳವಾಗಿದ್ದುದರಿಂದ ಈ ವರುಷದ [illegible] ಬಹು ಹೆಚ್ಚಾಗಿ [illegible]

ಮೈಸೂರು ದೇಶದಲ್ಲಿ ಕ್ರಿಸ್ತುಮತ ಪ್ರಸ್ತಾಪವಾಗಿ [illegible] ಜನರಿಗೆ ಪಾಠಶಾಲೆಗಳಿಗೂ ದೊಂದು ಸಂಘಟಿತವಾದ [illegible] ಕಟ್ಟಡವು ಸರಾಗವಾಗಿ ನಡೆದುಕೊಂಡು ಬಂತೆಂದು [illegible] ತೋರುತ್ತದೆ. ಪಾಠಶಾಲೆಗಳಿಂದಲೂ ಆಸ್ಪತ್ರೆಗಳಿಂದಲೂ ಅನೇಕರಿಗೆ ಹೇರಳವಾದ ಪ್ರಯೋಜನ ಉಂಟಾಯಿತು [illegible] ಯೇಸು ಕ್ರಿಸ್ತರ ಸಂಘವು ಹೆಚ್ಚುತ್ತಿರುವುದಲ್ಲದೆ ಅವರ ಸ್ಥಿತಿಗತಿಗಳು ಸಹ ಅಭಿವೃದ್ಧಿಯಾಗುತ್ತಿರುವುದರಲ್ಲಿ ಸಂಶಯವಿಲ್ಲ [illegible] ಅನೇಕರು ಕ್ರೈಸ್ತ ಮತದ ಬೋಧನೆಯನ್ನು ಕೇಳಲು [illegible] ಹಂಬಲಿಸುತ್ತಿರುವರು.

ದೇಶೀಯ ಪಾದ್ರಿಗಳಲ್ಲಿಯೂ ಉಪದೇಶಿಗಳಲ್ಲಿಯೂ ಅನೇಕ ಬದಲಾವಣೆಗಳು ನಡೆದಿವೆ ಯೂರೋಪಿಯನ್ ಪಾದ್ರಿಗಳ ಬದಲಾವಣೆ [illegible] ಬರುವ ವರುಷದಲ್ಲಿ [illegible] ಕೆಲವು [illegible] ಚಿತ್ರದುರ್ಗದಲ್ಲಿ ಪಾದ್ರಿಗಳಾಗಿದ್ದ ಮ|| [illegible] ಯವರು ಚಿಕ್ಕಮಗಳೂರಿಗೆ [illegible] ಗುಬ್ಬಿಯಲ್ಲಿ ಪಾದ್ರಿಗಳಾಗಿದ್ದ ಮ|| [illegible] ನವರು [illegible] ಕೂರಿಗೂ [illegible] ಪಾದ್ರಿಗಳಾಗಿದ್ದ ಮ|| [illegible] ಪಾಲ್ [illegible] ನವರು ಗುಬ್ಬಿಗೂ [illegible] ಪಾದ್ರಿಗಳಾಗಿದ್ದ ಮ|| [illegible] ಮಾರ್ಗಯ್ಯನವರು ಬೆಂಗಳೂರು [illegible] ವರ್ಗವಾಗಿರುತ್ತಾರೆ ಉಪದೇಶಿಗಳಲ್ಲಿ ಮ|| [illegible] ಅಪ್ಪಯ್ಯನವರು [illegible] ದಿಂದ [illegible] ರಾಯಪಟ್ಟಣಕ್ಕೂ [illegible] ನವರು [illegible] ಪುರದಿಂದ [illegible] ಕೂರಿಗೂ [illegible] ಯ್ಯನವರು ಬೆಂಗಳೂರು ಪೇಟೆಯಿಂದ ಚನ್ನಪಟ್ಟಣಕ್ಕೂ [illegible] ಮಾರ್ಟಿನ್ ಅಯ್ಯನವರು ಬೆಂಗಳೂರು ದಂಡಿನಿಂದ [illegible] ಗೂ [illegible] ಅಯ್ಯನವರು ಬೆಂಗಳೂರು ದಂಡಿನಿಂದ ಕೋಲಾರದ ಚಿನ್ನದ ಗಣಿಗೂ [illegible] ದಾನಯ್ಯ ಅಯ್ಯನವರು ಕೋಲಾರದ ಚಿನ್ನದ ಗಣಿಯಿಂದ ಬೆಂಗಳೂರು ದಂಡಿಗೂ [illegible] ಅಯ್ಯನವರು ತುಮಕೂರಿಂದ ತಿಪಟೂರಿಗೂ [illegible] ಭಕ್ತಿವತ್ಸಲಂ ಅಯ್ಯನವರು [illegible] ಕೆರೆಯಿಂದ ದೊಡ್ಡಬಳ್ಳಾಪುರಕ್ಕೂ [illegible] ಅಮೃತಯ್ಯನವರು [illegible] ದಿಂದ ಮೈಸೂರಿಗೂ [illegible] ಭಕ್ತವತ್ಸಲಯ್ಯನವರು ಚಾಮರಾಜನಗರದಿಂದ [illegible] ಮಾರ್ಟಿನ್ ಅಯ್ಯನವರು ಚನ್ನರಾಯಪಟ್ಟಣದಿಂದ [illegible] ಪುರಕ್ಕೂ [illegible] ಜ್ಞಾನಸಂಜೀವಯ್ಯನವರು ಚಿಕ್ಕಮಗಳೂರಿಂದ ದಾವಣಗೆರೆಗೂ [illegible] ಸಂದಪ್ಪನವರು ಶಿವಮೊಗ್ಗೆಯಿಂದ ಮಂಡಗದ್ದೆಗೂ [illegible] ಜಾನ್ ಅಯ್ಯನವರು [illegible] ರದಿಂದ ಬೆಂಗಳೂರು ಪೇಟೆಗೂ [illegible] ಸತ್ಯನಾದಯ್ಯನವರು ತೀರ್ಥಹಳ್ಳಿಯಿಂದ ಚಾಮರಾಜನಗರಕ್ಕೂ [illegible] ಕ್ರೋಮಯ್ಯನವರು ಮಂಡಗದ್ದೆಯಿಂದ ಶಿವಮೊಗ್ಗೆಗೂ ಎಸ್ ಜಾನ್ ಅಯ್ಯನವರು ದಾವಣಗೆರೆಯಿಂದ [illegible] ಕ್ಕೂ [illegible] ಯನವರು [illegible] ದಿಂದ ಚಿತ್ರದುರ್ಗಕ್ಕೂ ವರ್ಗವಾಗಿರುತ್ತಾರೆ

ಈ ದೇಶದಲ್ಲಿ ಅನೇಕರು ಭೂಲೋಕದ ಮಹಾತ್ಮರಲ್ಲಿ ಯೇಸು ಕ್ರಿಸ್ತನು ಒಬ್ಬನಾಗಿರುವನೆಂದು ನಂಬುತ್ತಾರೆ [illegible] ವರ ಮುಂದೆ ಆತನ ಬೋಧನೆಯನ್ನು ಇನ್ನೂ ಸ್ಪಷ್ಟವಾಗಿ ಇಡಬೇಕೆಂದು ಮೇಲ್ಕಂಡ ಸಂಘದವರು ಕುತೂಹಲಪಡುತ್ತಿರುವರು ಜನರೆಲ್ಲರೂ ದೇವರನ್ನು ತಿಳಿದು ಪರೋಪಕಾರದಲ್ಲಿ ಜೀವಿಸಬೇಕೆಂದು ಯೇಸು ಕ್ರಿಸ್ತನು ಬೋಧಿಸಿದನು ಆತನಲ್ಲಿ ಜಾತಿಭೇದವಾದರೂ ಕುಲಭೇದವಾದರೂ ಇರಲಿಲ್ಲ ಸರ